MICROFILMED BY
NEHRU MEMORIAL MUSEU
AND LIBRARY
TEEN MURTI HOUSE
NEW DELHI

REEL-15

SWADESHA BHIMANI

CONTD FROM:

28 FEBRUARY-1936

D.V
31.3.80

Registered No. M.3406

For Quality Snuff
H. Rama Rao and Sons.
High Class Snuff Manufacturers.
Mangalore, S. I.
ASK FOR:—
RAMA SNUFF
The charm of Snuff Users!

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY.
Buy a policy in
THE BOMBAY LIFE
Madras Branch Secretaries:
Kochikar Brothers,
Udipi, Mangalore, Bangalore, Madras, Bombay and Calicut.

ಸ್ವದೇಶಾಭಿಮಾನಿ
SWADESHABHIMANI

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೩೦. | ಮಂಗಳೂರು ತಾ. ೨೮ನೇ ಶುಕ್ರವಾರ ಫೆಬ್ರವರಿ ೧೯೩೬. (28–2–'36) | ಸಂಚಿಕೆ ೯

ಜರ್ಮನಿಯ ಯುದ್ಧಸಿದ್ಧತೆಗಳು:

ಜರ್ಮನಿಯ ಏಕಾಧಿಪತಿಯಾದ ಹಿಟ್ಲರನೂ, ಮತ್ತು ಸಂಗ್ರಾಮ ನಾಯಕರಾದ ಜನರಲ್ ಗೋವರಿಂಗರೂ, ಜರ್ಮನಿಯ ವಾಯುಬಲದ ಪರೀಕ್ಷೆಯನ್ನು ಮಾಡುತ್ತಿದ್ದಾರೆ. ಸಮಸ್ತ ಜರ್ಮನಿಯು ಯುದ್ಧಸಿದ್ಧತೆಯ ಚಟುವಟಿಕೆಯಲ್ಲಿ ಮಗ್ನವಾಗಿರುತ್ತದೆ. ವಾಯುಬಲವನ್ನು ಜಗತ್ತಿನಲ್ಲಿ ಅತಿ ಶ್ರೇಷ್ಠತರದ್ದಾಗಿ ನಿರ್ಮಿಸಬೇಕೆಂದೂ, ನಾಜಿ ಸರಕಾರದ ಧ್ಯೇಯ. ಇತ್ತೀಚೆಗೆ, ಬ್ರಿಟಿಷರ ವಾಯುಬಲರಚನೆಯನ್ನು ಗುಟ್ಟಿನಿಂದ ತಿಳಿಯಲು ಹೋದ ಜರ್ಮನಿ ಗೂಢಾಚಾರನನ್ನು ಸೆರೆಹಿಡಿದಿರುತ್ತಾರೆ. ಈ ಬಾರಿಯ ಮಹಾಯುದ್ಧವು ಈ ವಿಮಾನಗಳಿಂದಾಗಿ, ಭಯಂಕರವಾಗಿ ಪರಿಣಮಿಸುವುದು. ಅನೇಕ ದೇಶಗಳು ಭಯಂಕರ ಭೂಕಂಪಗಳ ಪ್ರಭಾವಗಳಿಗೆ ಸಿಲುಕಿದಂತೆ, ನುಚ್ಚುನೂರಾಗಿ ಹೋಗುವ ಸಂಭವಗಳಿವೆ.

ಇವರು ಆಫ್ರಿಕಾದ ಜಂಜಿಭಾರಿನ ಪ್ರಸಿದ್ಧ ಎಡ್ವೋಕೇಟರು. ಈಗ ಹಿಂದೂದೇಶಕ್ಕೆ ಬಂದಿರುವರು. ಭಾರತೀಯರಿಗೆ; ಜಂಜಿಬಾರಿನಲ್ಲಿ ಅನೇಕ ಅನುಸಂಕಟಗಳು ಒದಗಿವೆ. ಇವುಗಳನ್ನು ಇಂಡಿಯಾ ಸರಕಾರಕ್ಕೆ ತಿಳಿಸಲು ಇವರು ಇಲ್ಲಿಗೆ ಬಂದಿರುವರು.

ಶ್ರೀ ಶಾಬ ಅಲಿಗಳವರು.

ನೋಟಗಳು.
NOTE....S.

...ಎಷ್ಟೋ ಬಗೆಯ ಕಾಫಿ ಹುಡಿಗಳು, ಹಾಲು ..., ತುಪ್ಪಗಳು, ತಂಬಾಕುಗಳು ನಮ್ಮಲ್ಲಿ ...ರಾಟಕ್ಕೆ ದೊರೆಯುತ್ತಲಿವೆ. ಇವುಗಳಲ್ಲಿ ...ಷ್ಟೋ ಬಗೆಯ ಹಾಳು ಪದಾರ್ಥಗಳು ಸೇರಿ ...ವಂತೆ, ಉಪಯೋಗಿಸಿದ ಕೂಡಲೇ ಗೊತ್ತಾ ...ತ್ತದೆ ಆರೋಗ್ಯ ಇಲಾಖೆಯವರು ಮುದ ...ಸಿನಲ್ಲಿ ಇವನ್ನು ಪರೀಕ್ಷಿಸಿ, ಬೆರಕೆ ಮಾಡಿ ...ರನ್ನು ದಂಡಿಸುವಂತೆ ಇಲ್ಲಿಯೂ ಸ್ವಲ್ಪ ...ಯತ್ನಿಸಬಹುದಾಗಿದ್ದಿತು. ಸಾಧ್ಯವಿಲ್ಲವಾ ..., ಕಾಫಿ—ಹಾಲು ಕುಡಿದು, ತುಪ್ಪದೋಸೆ ...ದು, ತಂಬಾಕು ವೀಳೆಯ ಜಗಿದು ವಿಷ ...ಯೋಗವನ್ನು ಸಾವಕಾಶವಾಗಿ ಮಾಡಿ ...ಳ್ಳುತ್ತಿರದಂತೆ, ಬಾಳುವ ಆಸೆಯುಳ್ಳವರಾ ...ಊ ಸ್ವಲ್ಪ ಎಚ್ಚರಿಕೆ ತೆಗೆದುಕೊಂಡರಾಗದೇ?

* * *

ಬಿಹಾರದಲ್ಲಿ ಕ್ವೆಟ್ಟದಲ್ಲಿ ಭೂಕಂಪವಗಳಾ ...ವು ಈ ವಿಷಯವಾಗಿ ವಿಜ್ಞಾನಿಗಳೊಬ್ಬರು ...ಷಣ ಮಾಡುತ್ತ, ದಕ್ಷಿಣದಲ್ಲಿ ಭೂಕಂಪ ...ಗವು ಎಂದರು ಸಂತೋಷಪೂರ್ವಕ ...ದ ಧನ್ಯವಾದಗಳು ಆದರೆ, ಧಾರ್ವಾ ...ಂತ್ಯದಲ್ಲಿ ಮುಂದಿನ ಸರ್ತಿ ಎಂದರು ಅಲ್ಲಿ ...ವರಿಗೆ ಈಗಣಿಂದಲೂ ಭಯಕ್ಕಾರಂಭ ಇಲ್ಲಿ ...ವರಿಗೆ ಈಗಣಿಂದಲೂ ಮುಂದಣ ಪಂಕ್ತಿಗೆಗೆ ...ಣ ಮಡಗಲು ನೋಟೀಸು

* * *

ಗ್ರಾಮಜೀವನದಲ್ಲಿ, ಎಲ್ಲ ವೃತ್ತಿಗಳೂ ತಂದೆ ...ಂದ ಮಗನಿಗೆ,—ಪಿತ್ರಾರ್ಜಿತ ಗ್ರಾಮ ...ದ್ಯೋಗಗಳೂ ಹಾಗೆಯೇ ಈಗ ಅಸ್ಪೃಶ್ಯ ...ಯಾಧಿಕಾರಿಗಳೊಬ್ಬರು ಗ್ರಾಮ ಉದ್ಯೋಗಗಳನ್ನು ...ತ್ರಾರ್ಜಿತವಾಗಿಡದೆ, ಯೋಗ್ಯರಿಗೆ ಕೊಡ ...ಕೆಂದು ಸೂಚಿಸಿದ್ದಾರೆ ಅಸ್ಪೃಶ್ಯತಾ ನಿವಾ ...ಣೆಗೆ ಇದು ಸಹಾಯವಾದೀತೆಂದು ಅವರ ...ಶ್ವಾಸ ಅಸ್ಪೃಶ್ಯತಾ ನಿವಾರಣೆಯಾಗದಂತೆ ...ಗ್ರಾಮಗಳಲ್ಲಿ ಇದು ಆತಂಕಿಸುವ್ರದಾಗಿ ಗ್ರಾಮ ...ದ್ಯೋಗಸ್ಥರ ಮನೋವೃತ್ತಿ ತಿಳಿದವರು ಹೇಳ ...ಲಾರರ. ಮುಳ್ಳು ಕೀಳುವುದಕ್ಕೆ ಕೊಡಲಿ ...ಉಪಯೋಗಿಸುವುದೇ?

* * *

ಮಧ್ಯಪ್ರಾಂತ್ಯಗಳ ಗವರ್ನರರು ಕೊಂಗ್ರೆಸ್ ...ವರೂ ಮುಂದಣ ಕೌನ್ಸಿಲುಗಳಲ್ಲಿ ಸೇರಿ ...ಧಿಕಾರ ನಿರ್ವಹಿಸಬೇಕಾಗಿ ಸ್ವಾಗತಮಾಡು ...ರುವರು ಇನ್ನೂ ಹಿಂತೆಗೆವುದೇ!

* * *

ಎಸೆಂಬ್ಲಿಯಲ್ಲಿ ನೋಡಬಾರದೆ? ನೀವು ...ಮಂತ್ರಿಗಳಾದ ಬಳಿಕ ನೀವು ಬೇರೆಯಾಗುವಿ ...ರೆಂದು ಸತ್ಯಮೂರ್ತಿಯವರಿಗೆ ಲೋ ಮೆಂಬ ...ರು ಹೇಳಿದರು 'ಅವರು ಬೇರೆಯಾಗದಂತೆ ...ನಾವು ನೋಡಿಕೊಳ್ಳುವೆವು' ಎಂದು ಕಾಂಗ್ರೆಸ್ ...ಮೆಂಬರರು ತಿಳಿಸಿದರು ಒಬ್ಬರಾರಾದರೂ ...ಅಲ್ಲಿ ಇಲ್ಲಿ ವಿಶ್ವಾಸಘಾತಕಿಗಳಿದ್ದರೇನಾ ...ಯಿತು?' ಎಂದು ಸತ್ಯಮೂರ್ತಿಗಳೆಂದರು ...ನೀವೇ ಮಾತ್ರವೇ ಜನತೆಯ ಪ್ರತಿನಿಧಿಗಳೋ' ಎಂದು ಸರ್ ಹೆನ್ರಿ ಕ್ರೇಕ್‌ರವರು ಕೇಳಲು, ಸತ್ಯಮೂರ್ತಿಗಳು 'ನೀವಾದರೆ ಯಾರ ಪ್ರತಿನಿಧಿಗಳೂ ಅಲ್ಲವಷ್ಟೆ'' ಎಂದರು ಮುಂದಣ ಚುನಾವಣೆಗಳಲ್ಲಿ ವೋಟು ಸೆಳೆಯಲು ಈ ಉಪಾಯಗಳೇ?'' ಎಂದು ಲೋ ಮೆಂಬರರೆನ್ನಲು, ವೋಟು ಸೆಳೆವುದಕ್ಕಾಗಿ ಈ ರೀತಿಯಾದರೂ (ದಬ್ಬಾಳಿಕೆಯ ಕಾನೂನುಗಳನ್ನು ರದ್ದುಪಡಿಸಲು ಯತ್ನಿಸಿ) ನಾನು ದೇಶಸೇವೆ ಮಾಡುವೆನು, ಹೊರತು, ಗವರ್ನರರ ಅಥವಾ ವೈಸ್ರಾಯರ ಸೆರಗು ಹಿಡಿದು ಇರಲಾರೆ' ಎಂದರು ಸತ್ಯಮೂರ್ತಿಗಳು. ಮುಂದಣ ಸಂಭಾಷಣೆ ಎಪ್ರಿಲ್ ತಿಂಗಳಲ್ಲಿ

* * *

ಯುದ್ಧರಂಗದಿಂದ ನಾಲ್ಕು ದಿನಗಳಿಂದಲೂ ವಾರ್ತೆಯಿಲ್ಲ ಇನ್ನು ಘನ್ಯನೆ,—ಇಥಿಯೋಪಿಯದ 50000 ಜನರು ಸತ್ತಂತಹ, ಅರ್ಧ ರಾಜ್ಯ ಬಲಿಬಿದ್ದಂತಹ ವಾರ್ತೆಯೊಂದು ಪ್ರಕಟವಾಗಿ, ರೋಮಿನಲ್ಲಿ ದಿಗ್ವಿಜಯವಾದಂತೆಯೋ, ಅದೇ ದಿನ 150 ಇಥಿಯೋಪಿಯನರು ಸತ್ತಂತೆಯೂ, ಇಟಲಿಯವರು 4000 ಗುಂಡುಗಳನ್ನು ಚೆಲ್ಲಿದಂತೆಯೂ ಇಟಲಿ ಸೈನ್ಯವು 50 ಮೈಲು ಹಿಂದಕ್ಕೆ ಸರಿದುದರಿಂದ ಅಡ್ಡಿಸ್ ಅಬಾಬದಲ್ಲಿ ದಿಗ್ವಿಜಯೋತ್ಸವವಾದಂತೆಯೋ ತಾಜಾ ಸುದ್ದಿಯು ಪ್ರಕಟವಾಗಲಿದೆ, ಮುಂದಿನ ವಾರ

\+ \+ \+ \+

ಜಿಲ್ಲಾ ಬೋರ್ಡಿನ ಪ್ರೆಸಿಡೆಂಟ, ವಾಯ್ಸ್ ಪ್ರೆಸಿಡೆಂಟ, ಸೆನೆಟ್ ಮೆಂಬರೆ ಇತ್ಯಾದಿಯರ ಚುನಾವಣೆಯು ಇನ್ನು ಆಗಲಿದೆಯಷ್ಟೆ ಇವೆಲ್ಲವೂ ವಿವಾಹ ಸಂಭ್ರಮದಂತಾಗುತ್ತಲಿದೆ ಮದುವೆ ಕಾಲದಲ್ಲಿ ಎಷ್ಟೋ ಸುಳ್ಳು ಕೃತ್ರಿಮಗಳಿಗೆ ಮಾಫಿ, ಪಾಪವಿಲ್ಲವಂತೆ ಇಲ್ಲಿಯೂ ಹಾಗೆಯೇ ಎಂಬಂತೆ ಏನೇನೋ ಪಾಳೆಯಗಳಲ್ಲಿ ನಡೆಯುತ್ತಲೇ ಇದೆಯಂತೆ. ಪತ್ರಿಕೆಗಳಲ್ಲಿ ಸುದ್ದಿ, ಉಮೇದ್ವಾರರಿಗೂ ವೋಟರರಿಗೂ ಬುದ್ಧಿ

ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಭಾ, ಬೆಂಗಳೂರು ಸಿಟಿ.

ಅಖಿಲ ಕರ್ನಾಟಕ ಹಿಂದೀ "ಪ್ರಚಾರ ಸಭೆಯ ಮಹಾಧಿವೇಶನವು ತಾ ೨೦-೩-೩೬ಕ್ಕೆ ಬೆಂಗಳೂರಿನ ನ್ಯಾಶನಲ್ ಹೈಸ್ಕೂಲ್ ಭವನದಲ್ಲಿ ಜರಗಿತು ಸಭೆಯ ಅಧ್ಯಕ್ಷರಾದ ಮರಾ ನವರತ್ನ ರಾಮರಾವ್ ಬಿ ಎ ಬಿ ಎಲ್ ಅವರು ಅಗ್ರಾಸನವನ್ನು ಅಲಂಕರಿಸಿದ್ದರು ದೇಶಭಕ್ತ ಕಾರ್ನಾಡ ಸದಾಶಿವರಾಯರು, ಮಂಗಳೂರಿನ ಕೆ ಪದ್ಮನಾಭ ಕಿಣಿ ಬಿ ಎ, ಎಲ್ ಟಿ, ಧಾರವಾಡದ ಗೋವಿಂದರಾವ್ ಕಲಘಟಗಿ, ಮಹಿಳಾ ಸೇವಾ ಸಮಾಜದ ಕಾರ್ಯದರ್ಶಿ ಶ್ರೀಮತಿ ಕಮಲಮ್ಮ ದಾಸಪ್ಪ ಬಿ ಎ ಮುಂತಾದ ಮಹನೀಯ ಮಹಿಳೆಯರೂ ಸುಮಾರು ೭೮ ಜನ ಹಿಂದೀ ಪ್ರಚಾರ ಪ್ರವರ್ತಕರೂ ಈ ಅಧಿವೇಶನಕ್ಕೆ ಬಂದಿದ್ದರು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಸಂಚಾಲಕರಾದ ಪಂಡಿತ ಸತ್ಯನಾರಾಯಣಜಿಯವರು ವಿಶೇಷ ಆಮಂತ್ರಣದ ಮೇರೆಗೆ ಹಾಜರಾಗಿದ್ದರು ಸಭಾರಂಭದಲ್ಲಿ ಗೌ। ಕಾರ್ಯದರ್ಶಿಗಳಾದ ಮ ರಾ ಕೆ ಸಂಪದ್ಗಿರಿರಾವ್ ಎಂ ಎ, ಅವರು ತಾತ್ಕಾಲಿಕ ಕೇಂದ್ರ ಸಮಿತಿಯ ಕಾರ್ಯ ವರದಿಯನ್ನು ಒಪ್ಪಿಸಿದರು ಅನಂತರ ಸಭೆಯ ನಿಯಮ ವಿಧಾನವು ಚರ್ಚಿಸಲ್ಪಟ್ಟು ಸ್ವೀಕೃತವಾಯಿತು. ನಿಯಮಾನುಸಾರವಾಗಿ ಸದಸ್ಯರನ್ನು ಸೇರಿಸಿಕೊಳ್ಳಬೇಕಾದ ಪ್ರಯುಕ್ತ ಹೊಸ ಕಾರ್ಯಾಧಿಕಾರಿಗಳ ಚುನಾವಣೆಯು ಕೆಲವು ಕಾಲದ ವರೆಗೆ ಮುಂದರಿಸಲ್ಪಟ್ಟಿತು. ಕರ್ನಾಟಕದ ಸಮಸ್ತ ಹಿಂದೀ ಪ್ರೇಮಿಗಳು ಸಭೆಯ ಸದಸ್ಯರಾಗಿ ಈ ರಾಷ್ಟ್ರೀಯ ಕಾರ್ಯಕ್ಕೆ ಬೆಂಬಲ ಕೊಡಬೇಕೆಂದು ವಿನಂತಿ ಸಭೆಯ ನಿಯಮಾವಲಿ ಮತ್ತು ಸದಸ್ಯ ಪತ್ರಗಳು ನ್ಯಾಶನಲ್ ಹೈಸ್ಕೂಲಿನಲ್ಲಿರುವ ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಭೆಯ ಕಾರ್ಯಾಲಯದಲ್ಲಿ ದೊರೆಯುತ್ತವೆ ಎಂದು ಸಂಚಾಲಕರಾದ ಪಂಡಿತ ಸಿದ್ಧನಾಥ ಪಂತರು ತಿಳಿಸುತ್ತಾರೆ

ಸಾಹೇಬಿಣಿ "ನನಗೆ ಹಿಂದಾದರೂ ಒಳ್ಳೆಯ 'ಪ್ರೈಕ್' ಇಲ್ಲ."
ಸಾಹೇಬ. "ಹೌದು, ನನಗೆ ಎಲ್ಲವೂ ಕಾಣುತ್ತಿದೆ.



ದೇಹಪುಷ್ಟಿಯನ್ನೂ
ನವಚೈತನ್ಯವನ್ನೂ
ಓವಲ್‌ಟಿನ್ ಕೊಡುತ್ತದೆ.

ಧಾತ್ರಿಯ ದಿವ್ಯ ಆಹಾರಗಳ ಸತ್ವಗಳಿಂದ ತಯಾರಿಸಲ್ಪಟ್ಟದ್ದು
ಇದರಲ್ಲಿ ಬೆಳೆದ ಬಾರ್ಲಿ ದನದ ಕೆನೆ ಹಾಲು ಮತ್ತು ಕೊಕ್ಕೋವಿನ ಸತ್ವ ಇವೆಲ್ಲವೂ ಕೂಡಿವೆ ದೇಹಕ್ಕೆ ಶಕ್ತಿಯನ್ನೀಯುವ ಆಹಾರಗಳೆಲ್ಲವೂ ಇದರಲ್ಲಿ ತುಂಬಾ ಇವೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ದೇಹದ ದೈರ್ಯ ಶಕ್ತಿ ಮಿದುಳಿನ ಶಕ್ತಿ ಇವುಗಳನ್ನು ಒದಗಿಸಿಕೊಡುವುದರಲ್ಲಿ ಇದಕ್ಕೆ ಸರಿಸಮಾನವಾದ ಪಾನೀಯವು ಮತ್ತೊಂದಿಲ್ಲ ದೇಶದ ಪ್ರಖ್ಯಾತ ಜಟ್ಟಿಗಳೂ ಆಟಗಾರರೂ ಇದನ್ನು ಸೇವಿಸುತ್ತಾರೆ ಇದು ಪ್ರಾಣವನ್ನೂ ಸಹನಾ ಶಕ್ತಿಯನ್ನೂ ಕೊಡುವುದು ಎಂದು ಅವರಿಗೆ ಗೊತ್ತು

ಜಗತ್ತಿನಲ್ಲಿ ಸುಖಸಂತೋಷದಿಂದಿರಬೇಕೆ? ಆರೋಗ್ಯವಂತರಾಗಿರಬೇಕೆ? ಕೆಲಸದಲ್ಲಿ ಉತ್ಸಾಹವಿರಬೇಕೆ? ನಿದ್ರೆಯು ಸರಿ ಬೇಕಬೇಕೆ? ಹಾಗಾದರೆ—ಓವಲ್ಟಿನ್ನನ್ನು ನಿಮ್ಮ ದಿನನಿತ್ಯದ ಆಹಾರವಾಗಿ ತೆಗೆದುಕೊಳ್ಳಿರಿ ಆದರೆ ಪರಕೀಯರ ಮೋಸದ ವ್ಯಾಲನ್ನು ಕಳೆದು ನಿರಾಶರಾಗಬೇಡಿ ಜಾಗರೂಕರಾಗಿರಿ

ಓವಲ್‌ಟಿನ್
ಮೆದುಳು, ನರ ಮತ್ತು ದೇಹಗಳನ್ನು ವೃದ್ಧಿಸುತ್ತದೆ.

OVALTINE



ಇದರ ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ
ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ
ಏಜಂಟರು ಜೈಮ್ಸ್ ರೈಟ್ ೩೭ಎ ರಿಪನ್ ಸ್ಟ್ರೀಟ್, ಕಲ್ಕತ್ತಾ,
ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ

—ಹಿಂದೂದೇಶದ ಮಾಜಿ ವೈಸರಾಯರಾದ ಲಾರ್ಡ್ ಇರ್ವಿನರು, ಹಿಂದೂದೇಶದ ರಾಜಶಾಸನ ಸುಧಾರಣೆಯ ವಿಚಾರದಲ್ಲಿ "ಹಿಂದೂದೇಶದ ನವ ರಾಜಶಾಸನದ ಪ್ರಶ್ನೆಗೆ ಆಂಗ್ಲೇಯರು ಹೆಚ್ಚಿನ ಮಹತ್ವ ಕೊಡಬೇಕು. ಭಾರತೀಯರ ಈ ಸುಧಾರಣೆಗಳು ಯಾಕೆ ಕೋರುತ್ತಾರೆ, ಈ ವಿಚಾರದಲ್ಲಿ ಅವರ ಅಂತರ್ಯವೇನಿರುವುದು, ಎಂಬುದನ್ನು ನಾವು ತಿಳಕೊಳ್ಳಬೇಕು ಅವರ ಕೋರಿಕೆಗಳನ್ನು ನೋಡಿ ನಿರ್ಣಯಿಸುವುದು ನ್ಯಾಯವಲ್ಲ ಅವರ ಮೇಲೆ ಅಧಿಕಾರ ನಡೆಯಿಸುವ ಬದಲಾಗಿ, ಅವರೊಡನೆ ಚರ್ಚೆ ನಡೆಯಿಸಿ, ಅವರ ಅಭಿಪ್ರಾಯಗಳನ್ನು ಪಡೆದು, ಈ ನವ ರಾಜಶಾಸನವನ್ನು ರೂಪಿಸತಕ್ಕದ್ದು. ಅವರು ನಮ್ಮ ಸರಿಸಮಾನರೆಂದು ಭಾವಿಸಿ, ಅವರೊಡನೆ ನಾವು ವರ್ತಿಸಿದರೆ, ಈ ಕುರಿತಾದ ನಮ್ಮ ಕಷ್ಟಗಳು ನಿರ್ನಾಮವಾಗುವುವು" ಎಂದು ಜಾಯಿಂಟ್ ಸಿಲೆಕ್ಟ್ ಕಮಿಟಿಯ ವರದಿಯ ಮೇಲೆ ಭಾಷಣಮಾಡುತ್ತಿರುವಾಗ ಸೂಚಿಸಿದ್ದರು. ಇವರು ೧೯೨೯ ಅಕ್ಟೋಬರ ೩೧ರಲ್ಲಿ ಹಿಂದೂದೇಶಕ್ಕೆ ಡೊಮಿನಿಯನ್‌ಸ್ಟೇಟಸನ್ನು ದುಡಿಯಲು ಅನುಕೂಲವಾಗುವ ರಾಜಶಾಸನ ಸುಧಾರಣೆಯು ಕೊಡಲಾಗುವದೆಂದು ಬ್ರಿಟಿಷ ಸರಕಾರದ ಅನುಮತಿ ಪಡೆದು, ಪ್ರಕಟ ಮಾಡಿದ್ದರು. ಆದರೆ, ಮಾಜಿ ವೈಸರಾಯರ ಈ ಅಭಿಪ್ರಾಯವನ್ನು ಬ್ರಿಟಿಷ ಸರಕಾರವು ಪೂರೈಸಲಿಲ್ಲ. ವೈಸರಾಯರಿಗೆ ಮಾಡಿದ ವಾಗ್ದಾನಗಳಿಗೆ, ಪಾರ್ಲಿಮೆಂಟು ಹೊಣೆಗಾರರಲ್ಲವೆಂಬ ಅಭಿಪ್ರಾಯದಿಂದ ಬ್ರಿಟಿಷರು ವರ್ತಿಸದಂತೆ ಭಾಸವಾಗುತ್ತದೆ ಹಿಂದೂದೇಶಕ್ಕೆ ಬ್ರಿಟಿಷ ಸಾಮ್ರಾಜ್ಯದಲ್ಲಿ ಒಂದು ಡೊಮಿನಿಯನ ಯೋಗ್ಯತೆಯನ್ನು ಕೊಡುವುದಾಗಿ, ಹಿಂದೆ ಹಲವು ಭಾರಿ ವಾಗ್ದಾನಗಳಾಗಿದ್ದರೂ, ಬ್ರಿಟಿಷ ಪಾರ್ಲಿಮೆಂಟಿನ ಕಾನ್ಸರ್‌ವೇಟಿವ್ ಪಕ್ಷದವರಲ್ಲಿ ಈ ವಾಗ್ದಾನಗಳನ್ನು ಪೂರೈಸುವ ಇಚ್ಛೆ ಇದ್ದಂತೆ ಕಾಣುವುದಿಲ್ಲ ಆದುದರಿಂದಲೇ ಭಾರತೀಯರು ಅವರ ಮೇಲೆ ಅಷ್ಟು ಅವಿಶ್ವಾಸವನ್ನು ತೋರಿಸಿದುದು ಕಳೆದ ಮೂರು ವರ್ಷಗಳಲ್ಲಿ ಹಿಂದೂದೇಶದ ರಾಜಶಾಸನ ಸುಧಾರಣೆಯ ಕುರಿತಾಗಿ, ಇಂಗ್ಲಾಂಡಿನಲ್ಲಿ ನಡೆದ ರೌಂಡ್‌ಟೇಬಲ್ ಕಾನ್ಫರೆನ್ಸ್ ಇತ್ಯಾದಿಗಳಲ್ಲಿ ಬ್ರಿಟಿಷರ ಈ ವರ್ತನೆಯು ಕಂಡುಬಂದುದರಿಂದ, ಕೆಲವು ಭಾರತೀಯ ಮುಖಂಡರು, ಬ್ರಿಟಿಷ ಸರಕಾರವು ರಾಜಶಾಸನ ಸುಧಾರಣೆಯ ವ್ಯವಹಾರ ನಡೆಯುವ ಮೊದಲು, ಭಾರತಖಂಡಕ್ಕೆ ಡೊಮಿನಿಯನ್ ಸ್ಟೇಟ್ಸಿನ ಹಕ್ಕುಗಳನ್ನು ದುಡಿಯುವ ಸುಧಾರಣೆಗಳನ್ನು ಕೊಡಲಾಗುವುದೆಂದು ಪ್ರಕಟಮಾಡಬೇಕಾಗಿ ಆಗ್ರಹಮಾಡಿದ್ದರು. ಆದರೆ, ಬ್ರಿಟಿಷ ಸರಕಾರವು ಯಾರನ್ನೂ ಮನ್ನಿಸದೆ, ಮುಂದುವರಿದು, ತಮಗೆ ಬೇಕಾದ ರೀತಿಯಲ್ಲಿ ಹಿಂದೂದೇಶದ ನವ ರಾಜಶಾಸನವನ್ನು ರಚಿಸಿ, ಈಗ ಅವುಗಳನ್ನು ಅನುಸರಿಸಿ, ಇಲ್ಲಿ ನವ ರಾಜಸ್ಥಾಪನೆ ಮಾಡುವ ಕಾರ್ಯದಲ್ಲಿ ನಿರತರಾಗಿರುವರು

ಹಿಂದೂದೇಶದ ಸರಕಾರಕ್ಕೆ ಬೇಕಾಗಿರುವ ಪೋಲಿಸ್ ಮತ್ತು ಸಿವಿಲ್ ಅಧಿಕಾರಿಗಳನ್ನು ನೇಮಕ ಮಾಡುವ ಹಕ್ಕು ಆ ಸರಕಾರಕ್ಕಾಗಲೀ ಅದರ ವೈಸರಾಯರಿಗಾಗಲಿ ಇಲ್ಲ ಈ ಹಕ್ಕು ಸಾವಿರಾರು ಮೈಲು ದೂರದಲ್ಲಿರುವ ಲಂಡನಿನಲ್ಲಿ ಸೆಕ್ರೆಟರಿ ಒಫ್ ಸ್ಟೇಟ್ಸಿನವರಿಂದ ಆಗಬೇಕೆಂದೂ ನವ ರಾಜಶಾಸನದಲ್ಲಿ ಒಂದೆ ಕ್ರಮವಾಗಿರುತ್ತದೆ ಭಾರತೀಯರು ಇದನ್ನು ಹೇಗೆ ಸಹಿಸಬಲ್ಲರು? ಆದರೆ, ಲಾ ಎಂಡ್ ಒರ್ಡರ್ ಇಲಾಖೆಯ ಅಧಿಕಾರವು ನವ ರಾಜಶಾಸನದ ಪ್ರಕಾರ ಇನ್ನು ಇಂಡಿಯಾ ಸರಕಾರದ ಮಂತ್ರಿವರ್ಯರಿಗೆ ಸಲ್ಲುವುದು ಈ ಅಧಿಕಾರವನ್ನು ಪಡೆದು, ಭಾರತೀಯರು ತಮ್ಮ ಸ್ವಾತಂತ್ರ್ಯ ರಾಜ್ಯಧೋರಣೆಯ ಯೋಗ್ಯತೆಗಳನ್ನು ಪ್ರಕಟ ಮಾಡಲು ಅವಕಾಶ ದೊರಕುವುದೆಂದೂ, ಬ್ರಿಟಿಷ ಸರಕಾರದ ಅಭಿಪ್ರಾಯ ಪೋಲೀಸರಿಗೂ ಇದು ಯೋಗ್ಯವಾದುದು

ನವರಾಜ ಶಾಸನವು ನಮಗೆ ಒಪ್ಪುವುದೆ?

ಅನೇಕ ವರ್ಷಗಳಿಂದ, ಹಲವು ಕಮಿಟಿಗಳು, ಸಬ್ ಕಮಿಟಿಗಳು ಕಾರ್ಯ ನಡೆಯಿಸಿ ಕೊನೆಗೆ ಹಿಂದೂ ದೇಶದ ಒಂದು ತರದ ರಾಜ ಶಾಸನ ಕೊಡಬೇಕಾಗಿ ಬ್ರಿಟಿಷ ಪಾರ್ಲಿಮೆಂಟು ಮಂಜೂರು ಮಾಡಿರುತ್ತದೆ ಅದು ನಮಗೆ ಒಪ್ಪದಿದ್ದರೂ, ನಾವು ಅದನ್ನು ಅನುಭವಿಸಬೇಕಾಗಿದೆ ಇಲ್ಲಿ ಅದರ ಸಂಕ್ಷಿಪ್ತ ಚಿತ್ರವನ್ನು ಕೊಡಲಾಗಿದೆ

'ಶಂಕರ'

ಯಾಕೆಂದರೆ, ಅವರು ಬಹೀರ್ ಪ್ರಭುತ್ವದ ಅಧಿಕಾರಕ್ಕೆ ಒಳಗಾಗಿ ಜನರನ್ನು ಪೀಡಿಸುತ್ತಿರುವರೆಂಬ ಅಪವಾದನೆಯು ಬರಲಾರದು ಇವೆ ಮೊದಲಾದುವುಗಳು ಲಾ ಮತ್ತು ಓರ್ಡರನ್ನು ಟ್ರಾನ್ಸ್‌ಫರ್ ಮಾಡಲು ಕಾರಣಗಳಂತೆ ಬಂಗಾಳದ ವಿಷಯ ಅಷ್ಟು ಭರವಸೆ ಇದ್ದಂತೆ ಕಾಣುವುದಿಲ್ಲ ಇಲ್ಲಿಯ ಗವರ್ನರರಿಗೆ ಕೆಲವು ವಿಶೇಷ ತರದ ಹಕ್ಕುಗಳು (ಪಾರ್ಲಿಮೆಂಟಿನವರು ಅದನ್ನು ಬದಲಾಯಿಸುವ ವರೇಗೆ) ಕೊಡಲಾಗಿವೆ ಕಾರಣ, ಇಲ್ಲಿನ ಕ್ರಾಂತಿಮಯ ಚಳವಳ

ಕೇಂದ್ರ ಶಾಸನಸಭೆಗೆ, ಈ ಮೊದಲು, ಪ್ರಜೆಗಳ ಮತಗಳನ್ನು ಅನುಸರಿಸಿ, ಸದಸ್ಯರ ಚುನಾವಣೆಯು ನಡೆಯುತ್ತಿತ್ತು ಪತಿಯೊಂದು ಸರಕಾರದ ಕೇಂದ್ರ ಶಾಸನಸಭೆಯು ಬಹುಮತದಿಂದ ಪ್ರಜೆಗಳಿಂದಲೆ ಆರಿಸಲ್ಪಡುವುದು ಪಾರ್ಲಿಮೆಂಟರಿ ಸರಕಾರದ ಕ್ರಮವು ನವ ರಾಜಶಾಸನದಲ್ಲಿ ನಾವು ಇಷ್ಟರ ತನಕ ಅನುಭವಿಸಿಕೊಂಡಿರುವ ಈ ಹಕ್ಕು ತೆಗೆಯಲಾಗಿದೆ ಕೇಂದ್ರ ಸಭೆಯು ಪ್ರಾಂತಿಕ ಸಭೆಗಳಿಂದ ಆರಿಸಲಾಗುವುದು ಇದಕ್ಕೆ ಒಂದ ವಿಚಿತ್ರ ತರದ ಕಾರಣವು ಕೊಡಲಾಗಿದೆ ಕೇಂದ್ರ ಸಭೆಯ ಕ್ಷೇತ್ರವು ಬಹಳ ಕೋಸುವಾರು ಬೇದಗಳನ್ನು ಸ ... ಆರಿಸಿದಂತಾಗುವುದೆಂದ ಪ್ರಾಂತಿಕ ಸರಕಾರಗಳ ಚುನಾವಣೆಯು ಪ್ರಜೆಗಳಿಂದಲೆ ನಡೆಯುವುದು ಕೇಂದ್ರ ಶಾಸನ ಸಭೆಯನ್ನು ಪ್ರಜೆಗಳೆ ಆರಿಸುವ ಕ್ರಮವು ಇಲ್ಲಿ ಅನೇಕ ವರ್ಷಗಳಿಂದ ವಾಡಿಕೆಯಲ್ಲಿದೆ ಇದರಿಂದ ಯಾವ ತೊಡಕುಗಳು ಉಂಟಾಗಲಿಲ್ಲವಾದರೂ, ಈ ತರದ ಬದಲಾವಣೆ ಇದು ಹಿಂದೂದೇಶದ ಅಭಿಪ್ರಾಯಕ್ಕೆ ವಿರೋಧವಾಗಿದ್ದರೂ, ಅದು ನವರಾಜಶಾಸನದ ಕ್ರಮವಾಗಿರುತ್ತದೆ ಈಗ ವಾಡಿಕೆಯಲ್ಲಿರುವ ರಾಜಶಾಸನದಲ್ಲಿ ಭಾರತೀಯ ಸ್ವಯಂ ಪ್ರಭುತ್ವದ ಸರಕಾರವನ್ನು ನಡೆಯಿಸಲು, ತಮ್ಮ ಯೋಗ್ಯತೆಗಳನ್ನು ವ್ಯಕ್ತಿ ಮಾಡಿರುತ್ತಾರೆ ಈ ವಿಚಾರದಲ್ಲಿ ಇವರ ಯೋಗ್ಯತೆಗಳು ಶ್ಲಾಘನೀಯವುಗಳು ಭಾರತೀಯರು ಪಾಶ್ಚಾತ್ಯ ಜನಾಂಗಗಳಂತೆ ಆಧುನಿಕ ಕಾಲದ ರಾಜನೀತಿ ವೈಭವಗಳನ್ನು ಅನುಭವಿಸುವ ಯೋಗ್ಯತೆವುಳ್ಳವರು ಆದರೆ ಬ್ರಿಟಿಷರು ನಮ್ಮಿಂದ ಈ ವಿಶೇಷ ಹಕ್ಕನ್ನು ಕಸಗೊಂಡಿರುವರು ಈ ರೀತಿಯಲ್ಲಿ ಹಕ್ಕು ಕಳೆದುಹೋಗುವಂತೆ ಮಾಡುವ ನವರಾಜ ಶಾಸನವು ನಮಗೆ ಯೋಗ್ಯವಾದುದೆ?

ಈಗಿನ ಶಾಸನದ ಪ್ರಕಾರ ಕೇಂದ್ರ ನ್ಯಾಯವಿಧಾಯಕ ಸಭೆಗಳ ಮಂದಿರದ ೧೪೫ ಸದಸ್ಯರಲ್ಲಿ ೪೦ ಮಂದಿಗಳು ಸರಕಾರದಿಂದ ಆರಿಸಲ್ಪಡುವರು ಅಂದರೆ, ಶೇಕಡಾ ೨೭.೫ ಆದರೆ, ನವ ರಾಜಶಾಸನದ ಈ ಕೆಳಮಂದಿರದ ೩೭೫ ಸದಸ್ಯತನಗಳಲ್ಲಿ ೧೨೫, ಮಂದಿಗಳು ಅಂದರೆ ಶೇಕಡಾ ೩೩⅓ ಆಶ್ರಿತ ರಾಜರಿಂದ ನೇಮಕವಾಗುವರು ಇದು ಆಶ್ರಿತ ರಾಜರ ಹಿತಕ್ಕಾಗಿ ಎಂದು ಕಾರಣ ಕೊಟ್ಟಿರುತ್ತಾರೆ ಇದರಿಂದ ಪ್ರಜಾ ಪ್ರಾತಿನಿಧ್ಯ ಇಲ್ಲಿ ಎಷ್ಟರ ಮಟ್ಟಿಗೆ ಆಗುವುದೆಂದು ನೀವೇ ಊಹಿಸಬಹುದು ಯಾಕಂದರೆ, ಉಳಿದ ಸದಸ್ಯತನಗಳಲ್ಲಿ ಕೆಲವು ಇಂಡಿಯಾ ಸರಕಾರಕ್ಕೆ ಸೇರಬೇಕಾಗಿವೆ ಈ ತರದ ಕೇಂದ್ರ ಸಭೆಯು ಯಾವ ರೀತಿಯಲ್ಲಿ ನಮಗೆ ಸ್ವಾತಂತ್ರ್ಯ ರಾಜ್ಯ ಧೋರಣೆಯ ಯೋಗ್ಯತೆಗಳನ್ನು ತರಬಲ್ಲದು ಸಾಲದುದಕ್ಕೆ ಈ ಕೇಂದ್ರ ಸಭೆಯ ಚುನಾವಣೆಯು ಪ್ರಜೆಗಳಿಂದ ನಡೆಯುವುದಲ್ಲ ಪ್ರಜೆಗಳಿಂದ ಚುನಾಯಿತರಾದ ಪ್ರಾಂತಿಕ ಸಭೆಗಳಿಂದ

ಹಿಂದೂದೇಶದ ರಕ್ಷಣಾ ಕಾರ್ಯವು ಭಾರತೀಯರ ಸಮಸ್ಯೆಯಾಗಬೇಕು ಇದನ್ನು ಪ್ರಥಮ ಭಾರಿಯ ಪರಿಷತ್ತಿನಲ್ಲಿ ರೌಂಡ್‌ಟೇಬಲ್ ಅಂಗೀಕರಿಸಲಾಯಿತು ವ್ಹಾಯಿಟ್ ಪೇಪರಿನಲ್ಲೂ ಸೂಚಿತವಾಗಿತ್ತು ಜೊಯಿಂಟ್ ಸಿಲೆಕ್ಟ್ ಕಮಿಟಿಯೂ ಹೀಗೆ ಶಿಫಾರಸುಮಾಡಿತ್ತು ರಕ್ಷಣ ಅಧಿಕಾರವು ಸಂಪೂರ್ಣ ಗವರ್ನರ್ ಜನರಲ್‌ರ ಕೈಯಲ್ಲಿರತಕ್ಕದು ಭಾರತೀಯರು ಸ್ವತಃ ತಮ್ಮನ್ನು ರಕ್ಷಿಸಿಕೊಳ್ಳುವ ಯೋಗ್ಯತೆ ಪಡಕೊಳ್ಳದಿದ್ದರೆ ಅವರು ಸ್ವತಂತ್ರರಾಗಿ ರಾಜಧೋರಣೆ ಮಾಡುವ ಬಗೆಯೆಂತು? ಆದರೆ, ನವ ರಾಜ ಶಾಸನದಲ್ಲಿ ಇದಕ್ಕೆ ಎಡೆ ಸಿಕ್ಕುವುದಿಲ್ಲ ರಕ್ಷಣಾ ಕಾರ್ಯಕ್ರಮದಲ್ಲಿ ಭಾರತೀಯರಿಗೆ ಯಾವ ತರದ ಕೈ ಇರುವಂತಿಲ್ಲ (ಸರಕಾರದ ಹೆಚ್ಚಿನ ಉತ್ಪತ್ತಿಯು ಇದಕ್ಕೆ ವ್ಯಯವಾಗುತ್ತಿದ್ದರೂ). ಆದರೆ, ರಕ್ಷಣಾ ಸಮಿತಿಯೊಂದು ಕೇಂದ್ರ ನ್ಯಾಯವಿಧಾಯಕ ಸಭೆಯವರು ನೇಮಕಮಾಡಬಹುದೆಂದಾಗಿದೆ ಹಿಂದೂದೇಶದ ರಕ್ಷಣಾ ಕಾರ್ಯವು ಹಿಂದೂದೇಶದಲ್ಲೇ ನಡೆಯುವಂತೆ ಆ ಕುರಿತು ಭಾರತೀಯರಿಗೆ ಕ್ರಮ ಪಡಬೇಕೆಂದು ಅದರ ವ ತ ಸಂಪೂರ್ಣ ಸ್ವಸ್ಥ ... ಭಾರತೀಯರಾಗಿ ಮಾಡಲು ಈ ಮೊದಲು ಗೊತ್ತಾಗಿರುತ್ತದೆ ಇನ್ನು ೩೦ ವರ್ಷಗಳ ಸಮಯದಲ್ಲಿ ಈ ಕಾರ್ಯವು ಸಂಪೂರ್ಣವಾಗಬೇಕು ಬ್ರಿಟಿಷ ಪಾರ್ಲಿಮೆಂಟಿನ ಲೇಬರ್ ಪಂಗಡದವರು ಒಂದು ನಿಯಮಿತ ಸಮಯದ ನಂತರ ಈ ರಕ್ಷಣಾ ಕಾರ್ಯವನ್ನು ಸಂಪೂರ್ಣವಾಗಿ ಭಾರತೀಯರಿಗೆ ಬಿಟ್ಟುಕೊಡಬೇಕೆಂದು ಸೂಚನೆ ಕೊಟ್ಟಿದ್ದರು ಅಂದರೆ ಇನ್ನು ೩೦ ವರ್ಷಗಳಲ್ಲಿ ಹಿಂದೂದೇಶವು ಸಂಗ್ರಾಮ ಕಾರ್ಯಗಳಿಗಾಗಿ ಬ್ರಿಟಿಷ ಸಾಮ್ರಾಜ್ಯದ ಇತರ ದೇಶಗಳಿಗಿಂತ ೩ ಪಾಲಷ್ಟು ಹೆಚ್ಚು ವ್ಯಯಿಸುತ್ತಿದೆ ಕೇಂದ್ರ ಸರಕಾರದ ಜಮಾದ ಖರ್ಚಿನ ಶೇ ೬೦ ಸಲೆಯು ಸಂಗ್ರಾಮ ಇಲಾಖೆಗೆ ಸಲ್ಲುತ್ತಿದೆ ಹೀಗಿರುವಾಗ ಈ ಸರಕಾರವು ಬೇರೆ ದೇಶಹಿತ, ಸಮಾಜಸೇವೆ ಇತ್ಯಾದಿ ಕಾರ್ಯಗಳನ್ನು ಮಾಡುವುದು ಸಾಧ್ಯವೆ! ಜನರು ವಿದ್ಯಾಭ್ಯಾಸವಿಲ್ಲದೆ, ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಿರುವಾಗ ಅವರನ್ನು ಭದ್ರಪಡಿಸಲು ಇಷ್ಟು ಖರ್ಚು! ಹಾಗೆಯೇ ಪ್ರಾಂತ್ಯಗಳಲ್ಲಿ ಪಾಶ್ಚಾತ್ಯ ಜನಾಂಗಗಳೂ ಕೂಡ ತಮ್ಮ ಸಂಗ್ರಾಮ ಇಲಾಖೆಗಳಿಗಾಗಿ ಈ ರೀತಿ ವ್ಯಯ ಮಾಡುವುದಿಲ್ಲ ೧೯೩೩-೩೪ರಲ್ಲಿ ರಕ್ಷಣಾ ಯೋಜನೆಗಾಗಿ ಖರ್ಚಾದ ರೂಪಾಯಿ ೪೬,೦೩,೬೦,೦೦೦ರಲ್ಲಿ ೧೧,೪೮,೬೮,೦೦೦ ಇಂಗ್ಲಾಂಡಿನಲ್ಲಿ ಖರ್ಚಾಗಿರುತ್ತದೆ ಸಾಧಾರಣ ನಾಲ್ಕನೇ ಒಂದಂಶ. ಇದೇ ರೀತಿಯಲ್ಲಿ ಧರ್ಮ ಸಂಬಂಧ ಇಲಾಖೆಯು ನವದಲ್ಲಿ (ಇದನ್ನು ಕಡಿಮೆ ಮಾಡಬೇಕಾಗಿ ವ್ಹಾಯಿಟ್ ಪೇಪರಿನಲ್ಲಿ ಆದ ಸೂಚನೆಗಳು ನಿರಾಕರಿಸಲ್ಪಟ್ಟಿವೆ) ಇಂಗ್ಲಾಂಡಿನಲ್ಲಿ ವಾಸವಾಗಿರುವ ನಿವೃತ್ತ ಬಿಶೋಪ್ ಇತ್ಯಾದಿಯವರಿಗೆ ೨೪೦,೦೦೦ ಪೌಂಡ್ ಪೆನ್ಶನುಗಳ ರೂಪದಲ್ಲಿ ಸಲ್ಲುತ್ತಿದೆ.

ಬ್ರಿಟಿಷ ಸಾರ್ವಭೌಮರಿಗೆ ಹಿಂದೂದೇಶದ ನ್ಯಾಯವಿಧಾಯಕ ಸಭೆಗಳು ಮಂಜೂರು ಮಾಡಿದ (ಮಂಜೂರು ಮಾಡಿದ ೧೨ ತಿಂಗಳುಗಳಲ್ಲಿ) ರದ್ದುಮಾಡುವ ಹಕ್ಕುಗಳು ಈ ಶಾಸನದಲ್ಲಿ ಕೊಟ್ಟಿವೆ ಬ್ರಿಟಿಷ ಸಾಮ್ರಾಜ್ಯದ ಇತರ ಡೊಮಿನಿಯನ್ಸ್‌ಗಳಲ್ಲಿ ಇರುವ ಈ ತರದ ಅಧಿಕಾರವನ್ನು ಪಾರ್ಲಿಮೆಂಟಿನವರಿಂದ ತೆಗೆದು ಹಾಕಲ್ಪಟ್ಟಿದೆ

ಹಿಂದೂದೇಶದ ಹ್ಯಾಕಮಿಶನರ ನೇಮಕವು ಹಿಂದೂದೇಶದಿಂದಲೇ ನಡೆಯುವುದು ನ್ಯಾಯವು ಈ ಹ್ಯಾಕಮಿಶನರರ ಸೆಕ್ರೆಟರಿ ಒಫ್ ಸ್ಟೇಟರ ಬದಲಾಗಿ ಇಂಡಿಯಾ ಸರಕಾರಕ್ಕೆ ಎಲ್ಲಾ ವಿಚಾರಕ್ಕೂ ಹೊಣೆಗಾರರಾಗಬೇಕು ಬ್ರಿಟಿಷ ಸಾಮ್ರಾಜ್ಯದ ಇತರ ಡೊಮಿನಿಯನ್ಸ್‌ಗಳು ತಮ್ಮ ಹ್ಯಾಕಮಿಶನರನ್ನು ತಾವೇ ನೇಮಕ ಮಾಡುತ್ತಿದ್ದಾರೆ ಈ ಹಕ್ಕು ಹಿಂದೂದೇಶಕ್ಕೆ ಸಿಕ್ಕಬೇಕಾಗಿತ್ತು ಅಲ್ಲದೆ, ಈ ಹ್ಯಾಕಮಿಶನರು ಇಂಡಿಯಾ ಸರಕಾರದ ಅಪ್ಪಣೆಗಳನ್ನನುಸರಿಸಿ ವರ್ತಿಸತಕ್ಕದು ಬ್ರಿಟಿಷ ಸರಕಾರದ ನವ ರಾಜಶಾಸನದಲ್ಲಿ ಹ್ಯಾಕಮಿಶನರ ಕುರಿತು ಯಾವ ಸುಧಾರಣೆಗಳೂ ಆಗಲಿಲ್ಲ

ಹ್ಯಕೋರ್ಟು ಜಡ್ಜರನ್ನು ಸಿವಿಲ್ ಸ್ಥಾನಗಳಿಂದ ನೇಮಕ ಮಾಡುವುದು ಈಗಿನ ಕ್ರಮ ಆದರೆ ಚೀಫ್ ಜಸ್ಟಿಸ್‌ರನ್ನು ಮಾತ್ರ ಅವರಿಂದ ಚುನಾಯಿಸುವುದಿಲ್ಲ ನವರಾಜ ಶಾಸನದಲ್ಲಿ ಈ ಕುರಿತು ಯಾವಸುಧಾರಣೆಗಳು ಆಗುವಂತಿಲ್ಲ ಹ್ಯಕೋರ್ಟಿನ ನ್ಯಾಯಾಧೀಶರನ್ನು ವಕೀಲರಿಂದಲೂ, ಬೆರಿಸ್ಟರರಿಂದಲೂ, ಎಡ್ವೋಕೇಟರಿಂದಲೂ ಚುನಾಯಿಸುವುದು ಯೋಗ್ಯವು. ಯಾಕೆಂದರೆ ಇವರು ನ್ಯಾಯವ್ಯವಹಾರದಲ್ಲಿ ಹೆಚ್ಚಿನ ಜಾಣ್ಮರು ಆದರೆ ನವರಾಜಶಾಸನದಲ್ಲಿ ಈ ತರದ ಯಾವತರ ಸುಧಾರಣೆಗಳಿಲ್ಲ

ಜಮೀನುದಾರರಿಗೆ, ವ್ಯಾಪಾರಿಗಳಿಗೆ, ಕೈಗಾರಿಕವರ್ಗಕ್ಕೆ ಮತ್ತು ವಿಶ್ವವಿದ್ಯಾಲಯಗಳಿಗೆ ಪ್ರಾತಿನಿಧ್ಯ ಸಿಗುವ ಏರ್ಪಾಡುಗಳು ನವ ರಾಜ ಶಾಸನದಲ್ಲಿ ಆಗಿವೆ ಆದರೆ ಮಜೂರರಿಗೆ ಮಾತ್ರ ಸರಿಯಾದ ಪ್ರಾತಿನಿಧ್ಯ ಸಿಗುವ ಏರ್ಪಾಡು ಇದರಲ್ಲಿ ಮಾಡಲಿಲ್ಲ ಯಾವತರ ಚುನಾವಣೆಗಳು ಕೋಮುವಾರು ಭೇದದಲ್ಲಿ ನಡೆಯಬೇಕಾಗಿದೆ ಹೀಗಾಗಿ ಮುಸ್ಲಿಮರಿಗೆ, ಹಿಂದುಗಳಿಗೆ ಹರಿಜನರಿಗೆ ವಿವಿಧ ಮತಗಳಿಗೆ, ವಿವಿಧ ನಿಯಮಿತ ಸದಸ್ಯ ಸ್ಥಾನಗಳು ಸಲ್ಲಬೇಕೆಂಬುದು ಈ ಶಾಸನದ ಕ್ರಮವು ಆದರೆ, ವಿವಿಧ ಉದ್ಯೋಗಗಳಿಗೂ ಪ್ರಾತಿನಿಧ್ಯದ ಅವಕಾಶ ಕೊಟ್ಟುದರಿಂದ, ಕೆಲವು ಬಾರಿ ಒಂದೆ ಪಕ್ಷದವರಿಗೆ ಯಾ ಜಾತಿಯವರಿಗೆ ಹೆಚ್ಚಿನ ಮತ ದೊರಕುವ ಸಂಭವಗಳುಂಟಾಗುವುವು

ನವರಾಜ ಶಾಸನದ ಪ್ರಕಾರ ಪ್ರತಿ ಪ್ರಾಂತ್ಯದ ಗವರ್ನರರಿಗೆ ರಾಜಕೀಯ ವಿಚಾರಗಳಲ್ಲಿ ಆಲೋಚನೆಗಳನ್ನು ಕೊಡಲು ಒಂದು ಮಂತ್ರಿಮಂಡಳವನ್ನು ಕೊಟ್ಟಿರುತ್ತಾರೆ ಆದರೆ ಈ ಮಂತ್ರಿಮಂಡಳವನ್ನನುಸರಿಸಿ ಗವರ್ನರರು ವರ್ತಿಸಬೇಕಾಗಿಲ್ಲ ಗವರ್ನರರಿಗೆ ಸ್ವೇಚ್ಛಾಪರರಾಗಿ ವರ್ತಿಸುವ ಹಕ್ಕುಗಳು ತುಂಬಾ ಇವೆ ಅಂತೆಯೇ ಕೇಂದ್ರ ಸರಕಾರದ ಮಂತ್ರಿವರ್ಯರೂ ವೈಸರಾಯರೂ ಈ ವಿಚಾರದಲ್ಲಿ ಈಗಿರುವ ಶಾಸನವು ನವರಾಜ ಶಾಸನಕ್ಕಿಂತ ಉಚಿತವೆನ್ನಬಹುದು

ಕೊನೆಯದಾಗಿ ಎಲ್ಲದಕ್ಕಿಂತ ಮುಖ್ಯವಾಗಿರುವ ದೇಶದ ವ್ಯಾಪಾರದ ಸ್ಥಿತಿಯನ್ನು ರೂಪಿಸುವಹಕ್ಕು ಭಾರತೀಯರಿಗೆ ಸಿಗಲಿಲ್ಲ. ಬಹೀರ್ ವ್ಯಾಪಾರದ ನಿಮಿತ್ತ ಯಾವತ್ತು ಕರಾರು ಇತ್ಯಾದಿಗಳನ್ನು ಮಾಡಲು ಭಾರತೀಯರಿಗೆ ಅಧಿಕಾರವಿಲ್ಲ

ಈಗ ಅಧಿಕಾರದಲ್ಲಿರುವ ಕನ್ಸರ್‌ವೇಟಿವ್ ಪಕ್ಷದಿಂದಾಗಿ, ಬ್ರಿಟಿಷ ಹಿತಗಳನ್ನು ರಕ್ಷಿಸಿ, ಭಾರತೀಯರ ಅನೇಕ ಹಕ್ಕುಗಳನ್ನು ಕಸಗೊಳ್ಳುವ, ನವರಾಜ ಶಾಸನವು, ಬ್ರಿಟಿಷ ಪಾರ್ಲಿಮೆಂಟಿನ ಒಂದು ಆಕ್ಟಾಗಿ ಪಾಸಾಗಿರುತ್ತದೆ ಅದನ್ನು ಅನುಸರಿಸಿ ರಾಜಧೋರಣವನ್ನು ಪ್ರಾರಂಭ ಮಾಡುವ ಕಾರ್ಯವು ಬಿರುಸಾಗಿ ನಡೆಯುತ್ತದೆ ಭಾರತೀಯರಿಗೆ ಅದು ಒಪ್ಪಲಿ ಒಪ್ಪದಿರಲಿ, ಇದನ್ನೆ ಅವರು ನಮಗೆ ಕೊಡಬೇಕಾಗಿ ಸಿದ್ಧಪಡಿಸಿರುವರು ಅಂದರೆ, ಭಾರತೀಯರ ಸ್ವಾತಂತ್ರ್ಯ ಸಾಧನೆಯ ಪರಿಶ್ರಮಗಳು ಇಲ್ಲಿಗೆ ಕೊನೆಗೊಂಡಂತಾಗಲಿಲ್ಲ ಇನ್ನು ಹೆಚ್ಚಿನ ಉತ್ಸಾಹಪಟ್ಟು ಅವುಗಳನ್ನು ಮುಂದುವರಿಯಬೇಕಾಗಿದೆ

(ಜೋಸೆಫ್ ಗ್ರೀಹೆಮ್ ಪೋಲರ ಒಂದು ಲೇಖನದ ಆಧಾರದಿಂದ ಬರೆದುದ)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 1 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಅಟ್ಟಾಲೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ಸಾರು ನಿಶ್ಚಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯವಾಗುತ್ತೇವೆ. ಈ ಧರ್ಮಸಂಸ್ಥೆಯ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ. ಕ.

ಚಿತ್ರಾದಿ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಸಹಿತ

ಬೆಲೆ ಆಣೆ 3.

80, 60, 100 ಪ್ರತಿಗಳನ್ನು ಒಮ್ಮೆಲೆ ಪಡೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು.

ಒಂದು ತಿಂಗಳಲ್ಲಿ ಅಮೋಘವಾದ ಗುಣ; ಇದು ಜಾಡ್ಯವನ್ನು ಗುಣಪಡಿಸವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ.

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬಾಕ್ಸ್ 387, ಮದರಾಸು
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು.— ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Ested 1920] **THE** [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,
PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್

ಪುತ್ತೂರು.

ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.
ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು
ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935.

G. N. Lakshman Pai,
Secreatry.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK
LIMITED.

ಸೈಂಟಿಫಿಕ್
ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ,

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲಿ ಮಾಡಿರಿ.

[ಹೊಸ ಕೆಟಲಾಗು ಧರ್ಮಾರ್ಥ]

ವಿಳಾಸ:-
The Scientific Gold Bangles Co., Ltd
Head Office:-48, Byragimatam Street,
Post Box No. 203, Madras

ನಮ್ಮ ಸಾಪ್ತಾಹಿಕ ಕಥೆ:

ಮಿಥ್ಯಾಜೀವನದ ಸತ್ಯ ಕಥೆಗಳು

(All Rights Reserved)

ಲೇಖಕ—ಶ್ರೀ 'ರಸಿಕರಂಜನ'

"Truth is stranger than Fiction"

೬. 'ಸಾಧು'ವಿನ 'ಸಾಧ್ವಿ'ಯರು.

'ಸಾಧ್ವಿ' ರಾಧಾಬಾಯಿಯು ಒಂದು ದಿನ ಬೆಳಿಗ್ಗೆ ತನ್ನ ಮನೆಯ ಹೊರಬಾಗಿಲನ್ನು ತೆರೆಯುತ್ತಲೇ 'ಸಾಧು' ಸದಾನಂದನು ಅಲ್ಲೇ ಜಗಲಿಯ ಮೇಲೆ ಧ್ಯಾನಮಗ್ನನಾಗಿ ಕುಳಿತಿದ್ದುದು ಗೋಚರಿಸಿ, ಅವಳ ಸಂತೋಷಕ್ಕೆ ಮಿತಿಯಿಲ್ಲದಂತಾಯಿತು ಒಡನೆ ಅವಳು ಆತನ ಕಾಲಿಗೆ ಸಾಷ್ಟಾಂಗ ಎರಗಿ, ಪಾದಧೂಳಿಯನ್ನು ಶಿರಸಾ ಧರಿಸಿಕೊಂಡಳು

"ಮಹಾಸ್ವಾಮಿ! ಇಷ್ಟು ಸಮಯದ ಬಳಿಕಲಾದರೂ ತಿರುಗಿ ತಮ್ಮ ಅಪೂರ್ವದರ್ಶನ ಲಾಭದಿಂದ ನಮ್ಮನ್ನು ಕೃತಾರ್ಥರಾಗಿ ಮಾಡಿದಿರಲ್ಲಾ! ಅದಕ್ಕಾಗಿ ನಾವು ಪೂರ್ವಜನ್ಮದಲ್ಲಿ ಎಷ್ಟು ಪುಣ್ಯ ಗಳಿಸಿದ್ದೆವೋ! ದಯಮಾಡಿ ಒಳಗೆ ಚಿತ್ತೈಸಿ ನಮ್ಮ ಅಲ್ಪಸೇವೆಯನ್ನು ಕೈಕೊಂಡು ನಮ್ಮ ಜನ್ಮವನ್ನು ಸಾರ್ಥಕಪಡಿಸಬೇಕು!" ಎಂದು ರಾಧಾಬಾಯಿಯು ಬಹಳ ನಮ್ರತೆಯಿಂದ ಆತನನ್ನು ಕೇಳಿಕೊಂಡಳು

ಆದರೆ 'ಸಾಧು'ವು ಮೌನವ್ರತವನ್ನು ಭಂಗಮಾಡಲಿಲ್ಲ ಒಳಕ್ಕೆ 'ಚಿತ್ತೈಸಲು' ಯಾವ ರೀತಿಯಿಂದಲೂ ಸಮ್ಮತಿಯನ್ನು ಸೂಚಿಸಲಿಲ್ಲ

ರಾಧಾಬಾಯಿಯು ಬಹಳವಾಗಿ ಹೇಳಿಕೊಂಡಳು ಆತನು ಕಾಣೆಯಾಗಿ ಹೋದ ಮೇಲೆ ಜನರು ಆತನ ಮೇಲೆ ಅಪವಾದ ಹೊರಿಸಿದ್ದುದರಿಂದ ಆತನು ತಮ್ಮ ಮೇಲೆ ರೇಗಿಕೊಂಡಿರುವನೆಂದು ತಿಳಿದು ಆ ಮಹಾ 'ಸಾಧ್ವಿ'ಯು, ಜನಾಪವಾದವು ಎಂತಹುದಿದ್ದರೂ ತಾವು ಅದಕ್ಕೆ ಅಂಜಿಕೊಂಡಿಲ್ಲನೆಂದೂ, ಆತನು ಮಹಾ'ಸಾಧು'ವೆಂಬುದು ತಮಗೆಲ್ಲರಿಗೂ ಪೂರ್ತಿಯಾಗಿ ಮನದಟ್ಟಾಗಿರುವುದರಿಂದ ತಾವು ತಿರುಗಿ ಆತನ ಸರ್ವ ರೀತಿಯ ಸೇವೆಗೆ ನಿರ್ಭೀತರಾಗಿ ಸಿದ್ಧರಾಗಿರುವೆವೆಂದೂ ವಿಜ್ಞಾಪಿಸಿಕೊಂಡಳು ಆತನ ನಿಜವಾದ 'ಯೋಗ್ಯತೆ'ಯನ್ನೂ, 'ಮಹತ್ವ'ವನ್ನೂ ಲೋಕಕ್ಕೆ ಸಾರಲು ತಾವೆಲ್ಲರೂ ಪ್ರತಿಯೊಂದು ರೀತಿಯಿಂದ ಪ್ರಯತ್ನಿಸುವೆವೆಂದೂ, ತಮ್ಮ ಮೇಲಿನ ಕೋಪವನ್ನು ಬಿಟ್ಟು, ಆತನು ತನ್ನ ದಯಾದೃಷ್ಟಿಯನ್ನು ಬೀರಿ ಲೋಕವನ್ನು ಉದ್ಧಾರ ಮಾಡಬೇಕೆಂದೂ, ಬಹಳ ಆರ್ತಸ್ವರದಿಂದ, ಬೇಡಿಕೊಂಡಳು.

ಕಡೆಗೆ, ಈ ನಾಟಕವು ಹಲವು ಮಂದಿ ಹಾದಿಗರನ್ನೂ, 'ಸಂತೆ'ಯರ ಕೂಟದ 'ಸಾಧ್ವಿ'ಯರನ್ನೂ ಆಕರ್ಷಿಸಿ, 'ಸಾಧು'ವಿಗೆ ತನ್ನ 'ಮಹತ್ವ'ವೂ, 'ಯೋಗ್ಯತೆ'ಯೂ ವ್ಯಕ್ತವಾಗುತ್ತಿರಲು, ರಾಧಾಬಾಯಿಯ ಕಣ್ಣುಗಳಿಂದ ಧಾರಾಕಾರವಾಗಿ ಹರಿಯುತ್ತಿದ್ದ ಕಣ್ಣೀರಿನ ಪ್ರವಾಹವು ಆತನ ನಿಷ್ಠುರತೆಯನ್ನು ಕೊಚ್ಚಿಕೊಂಡು ಹೋಯಿತು ಆತನು, "ಹೂಂ!" ಎಂಬ ಒಂದೇ ಶಬ್ದದಿಂದ, "ಬರೀ ನಿನ್ನ ಸಲುವಾಗಿ ಲೋಕದ ಈ ಅಕ್ಷಮ್ಯವಾದ ಅಪರಾಧವನ್ನು ಕ್ಷಮಿಸಿರುವೆನು" ಎಂದಾಗಲಿ, "ನನ್ನ ಯೋಗ್ಯತೆ, ಮಹತ್ವಗಳನ್ನು ಲೋಕಕ್ಕೆ ಸಾರಲು ನಿಮಗೆ ಇನ್ನೊಂದೇ ಬಾರಿ ಅವಕಾಶಕೊಟ್ಟಿರುವೆನು!" ಇಲ್ಲವೇ, "ನಿನ್ನ ಕಡೆಗೆ ನೋಡಿ ಇದೊಂದು ಬಾರಿ ಮಾತ್ರ ಲೋಕವನ್ನು ಉದ್ಧಾರಮಾಡುವೆನು!" ಎಂದಾಗಲಿ ವ್ಯಕ್ತಪಡಿಸಿ, ಕುಳಿತಲ್ಲಿಂದ ಗಂಭೀರವಾಗಿ ಎದ್ದು ರಾಧಾಬಾಯಿಯ ಮನೆಯೊಳಕ್ಕೆ ಹೋದನು

ರಾಧಾಬಾಯಿಯೂ, ಇತರ ನೋಟಕರೂ ಆತನನ್ನು ಹಿಂಬಾಲಿಸಿದರು.

ಒಡನೆ ಲೋಕೋಪಕಾರದ ಪ್ರಾರ್ಥನೆಗೆ ಒಳ್ಳೆ-ಗಾಗಿ ಬಂದ 'ಸಾಧು' ಸದಾನಂದನು, ಪುಟಕ್ಕೆ ಇಡಾಗಿ ಬಂದ ಚಿನ್ನದಂತೆ, ಮೊದಲಿಗಿಂತಲೂ ಹೆಚ್ಚಿನ ತೇಜಸ್ಸಿನಿಂದ ಕೂಡಿ, 'ಸಾಧ್ವಿ'ಯರ ಸೇವೆಯನ್ನು ಮುಂಚಿಗಿಂತಲೂ ಹೆಚ್ಚಿದ ಶ್ರದ್ಧೆಯಿಂದ ಪಡೆಯುವಂತಾಯಿತು.

೨

ಸದಾನಂದನು ಈ ಸಲ ಯಾರೊಬ್ಬರೊಡನೆಯೂ ಒಂದೇ ಮಾತನ್ನಾದರೂ ಆಡುತ್ತಿರಲಿಲ್ಲ ಅವನ ಸೇವೆಯಲ್ಲಿ ತತ್ಪರರಾದ ರಾಧಾಬಾಯಿ ಮತ್ತು ಇತರ 'ಸಾಧ್ವಿ'ಯರ ಯಾವ ಮಾತಿಗೂ ಆತನು ಬರೀ ಕೈಸನ್ನೆಯಿಂದಲೇ ಉತ್ತರಕೊಡುತ್ತಿದ್ದನು. ತನ್ನ ಎಂತಹ ಬಯಕೆಯನ್ನೂ ಸಂಜ್ಞಾಮೂಲಕವೇ ಅವರಿಗೆ ತಿಳಿಯಪಡಿಸುತ್ತಿದ್ದನು. ಹೀಗಾಗಿ ಬಹುದಿನಗಳವರೆಗೆ 'ಸಾಧ್ವಿ'ಯರೆಲ್ಲರಿಗೂ ಆತನ ಸೇವೆಯೊಂದೇ ಲಾಭವಾಯಿತಲ್ಲದೆ, ಆತನ ದಿವ್ಯವಾಣಿಯ ತತ್ವೋಪದೇಶವು ಒಮ್ಮೆಯಾದರೂ ಪ್ರಾಪ್ತವಾಗಲಿಲ್ಲ ಆದರೂ ಅವರೆಲ್ಲರೂ ಹತಾಶರಾಗದೆ, ತಮ್ಮ ಸೇವೆಯನ್ನು ಫಲಾಪೇಕ್ಷೆಯೇ ಇಲ್ಲದವರಂತೆ, ಒಳ್ಳೇ ಶ್ರದ್ಧೆಯಿಂದ ಮುಂದೊತ್ತಿದರು

ಈಗ 'ಸಾಧು'ವಿನ ತತ್ವೋಪದೇಶವಿಲ್ಲದ ಕಾರಣದಿಂದ ಸ್ನಾನ, ಭೋಜನ, ಫಲಾಹಾರ ಮತ್ತು ಇತರ ರೀತಿಯ ಉಪಚಾರಗಳೇ ಆತನ ದಿನಚರಿಯ ಮುಖ್ಯ ಕಾರ್ಯಕ್ರಮಗಳಾಗಿದ್ದವು ಇವುಗಳಿಗೆ ಬೇಕಾಗುವ ಸಮಯವನ್ನು ಬಿಟ್ಟು ಉಳಿದ ಕಾಲವನ್ನೆಲ್ಲಾ 'ಸಾಧು'ವು ನಿದ್ರೆಯಲ್ಲೇ ಕಳೆಯುತ್ತಿದ್ದನು. ಹಾಗಾಗಿ 'ಸಾಧ್ವಿ'ಯರೆಲ್ಲರೂ ಇಡೀ ದಿನ ಆತನ ಬಳಿಯಲ್ಲೇ ಇರುವ ಆವಶ್ಯಕತೆಯಿರಲಿಲ್ಲ ಆತನಿಗೆ ಒಬ್ಬೊಬ್ಬರು ಒಂದೊಂದು ಸಲ ಮೀಯಿಸುವುದು, ಊಟಮಾಡಿಸುವುದು, ತಿಂದಿ ತಿನ್ನಿಸಿ ಪಾನಕಗಳನ್ನು ಕುಡಿಸುವುದು, ಕೈಕಾಲು ಒತ್ತುವುದು, ಗಾಳಿ ಬೀಸುವುದು ಮುಂತಾದುವನ್ನು ಸರದಿಯಿಂದ ಮಾಡತೊಡಗಿದರು

ಒಂದು ದಿನ ಸದಾನಂದನಿಗೆ ಮಧ್ಯಾಹ್ನದ ಊಟ ಮಾಡಿಸಿ, ಗಾಳಿ ಬೀಸಿ, ಕಾಲೊತ್ತಿ ಮುಗಿಸುವ ಸರದಿಯು ರಾಧಾಬಾಯಿಯದಾಗಿತ್ತು ನಾಲ್ಕು ಘಂಟೆಗೆ ಆತನಿಗೆ ಫಲಾಹಾರ ಮಾಡಿಸುವುದು ಸೀತಾಬಾಯಿಯ ಸರದಿಯಾಗಿತ್ತು ಸೀತಾಬಾಯಿಯು ತನ್ನ ಕರ್ತವ್ಯ ಪಾಲನೆಗಾಗಿ ಸಮಯಕ್ಕೆ ಸರಿಯಾಗಿ ಹರಿವಾಣದಲ್ಲಿ ತಿಂದಿಗಳನ್ನೂ, ಲೋಟೆಯಲ್ಲಿ ಕಾಫಿಯನ್ನೂ ತೆಗೆದುಕೊಂಡು ಬಂದಳು

ಸದಾನಂದನ ಕೋಣೆಯ ಬಾಗಿಲು ಯಾವಾಗಲೂ ತೆರೆದುಕೊಂಡೇ ಇರುತ್ತಿತ್ತಾದರೂ ಆ ದಿನವೇಕೋ ಅದು ಮುಚ್ಚಿಕೊಂಡಿತ್ತು

ಸೀತಾಬಾಯಿಯು ಬಾಗಿಲನ್ನು ದೂಡಿ ನೋಡಲು ಅದಕ್ಕೆ ಅಗುಳಿಯನ್ನೂ ಹಾಕಿದ್ದರೆಂದು ತಿಳಿದುಬಂತು. ಎಷ್ಟು ಯೋಚಿಸಿ ನೋಡಿದರೂ ಅವಳಿಗೆ ಅದರ ಕಾರಣ ತಿಳಿಯದಾಯಿತು ಒಂದರ್ಧ ಘಂಟೆಯವರೆಗೆ ಅವಳು, ಏನು ಮಾಡುವುದೆಂದು ಊಹಿಸಲಾರದೇ, ಹಾಗೆಯೇ ನಿಂತಳು ಅಷ್ಟರಲ್ಲಿ ಬಾಗಿಲು ತೆರೆಯಲ್ಪಟ್ಟು, ರಾಧಾಬಾಯಿಯು ಹೊರಗೆ ಬಂದಳು. ಸದಾನಂದನು ಹಾಸಿಗೆಯ ಮೇಲೆ ಕುಳಿತು ಏನೋ ಮಣ ಮಣ ಮಾಡುತ್ತಿದ್ದನು.

ಸೀತಾಬಾಯಿಯನ್ನು ನೋಡುತ್ತಲೇ ರಾಧಾಬಾಯಿಯ ಮೋರೆಯು, ಪ್ರಾಯ ಹೋದವಳಾದರೂ, ಕೆಂಪೇರಿತು ಸೀತಾಬಾಯಿಯ ಮುಖದ ಚಹರೆಯೇ ಕೇಳುತ್ತಿದ್ದ ಪ್ರಶ್ನೆಗೆ ಉತ್ತರವಾಗಿ ಅವಳು, "ಸೀತೂ, ಈ ದಿನ ನಮ್ಮ ಅದೃಷ್ಟವು ಫಲಿಸಿರುವುದು! ಸಾಧುಗಳು ನಮ್ಮ ಮೇಲೆ ಕೃಪೆದೋರಿರುವರು: ಅವರು ತಮ್ಮ ಮೌನವನ್ನು ಬದಿಗೊತ್ತಿರುವರು. ನಮಗೆಲ್ಲರಿಗೂ ತಮ್ಮ ಅಮೋಘವಾದ ಉಪದೇಶವನ್ನು ಕೊಡಲು ಸಮ್ಮತಿಸಿರುವರು. ಆದರೆ ಇದಕ್ಕಾಗಿ ಸಾಧು ಪ್ರತಿಯೊಬ್ಬರೂ ಬೇರೆಬೇರೆಯಾಗಿಯೇ, ಒಬ್ಬೊಬ್ಬರೇ, ಅವರನ್ನು ಕೋಣೆಯಲ್ಲಿ ಗೂಢವಾಗಿ ಕಾಣಬೇಕಾಗಿರುವುದು. ಬಹಿರಂಗವಾಗಿ ಉಪದೇಶಕೊಟ್ಟರೆ ಪ್ರೇಕ್ಷಕರೊಳಗೆ ತಮ್ಮಲ್ಲಿ ವಿಶ್ವಾಸವಿಲ್ಲದವರಾರಾದರೂ, ದುರುದ್ದೇಶ ಸಾಧನೆಗಾಗಿ, ಇದ್ದರೆ ಅದನ್ನು ತಮಗೆ ತಿಳಿದುಕೊಳ್ಳಲು ಅಸ್ಪದವಿರುವುದಲ್ಲವೆಂಬುದೇ ಇದಕ್ಕೆ ಕಾರಣವಂತೆ!" ಎಂದಳು ಇದರಿಂದ ಸೀತಾಬಾಯಿಯ ಮುಖದ ಮೇಲೆ ಕವಿದ ಮೋಡಗಳೆಲ್ಲವೂ ಮರೆಯಾಗಿ ಸಂತೋಷದ ಪ್ರಕಾಶವು ತಲೋರಿತು.

ಒಡನೆ ಅವಳು ಕೈಯೊಳಗಿನ ಫಲಾಹಾರ ಸಾಮಗ್ರಿಗಳೊಡನೆ ಸದಾನಂದನ ಕೋಣೆಯನ್ನು ಸೇರಿ ಬಾಗಿಲು ಭದ್ರಮಾಡಿದಳು

೩

ಉಪದೇಶಾಮೃತದ ಚಾತಕಗಳಾದ 'ಸಂತೆ'ಯರೆಲ್ಲರೂ ಆ ದಿನದಿಂದ 'ಸಾಧು'ವಿನ ಕೋಣೆಯನ್ನು ಒಬ್ಬರ ಹಿಂದೆ ಒಬ್ಬರಂತೆ, ದಾಳಿಯಿಟ್ಟರು. ಪ್ರತಿಯೊಬ್ಬಳೂ ತನಗೆ ಅವಕಾಶ ದೊರಕುತ್ತಲೇ ಒಬ್ಬಳಾಗಿಯೇ 'ಸಾಧು'ವಿನ ಕೋಣೆಯಲ್ಲಿ, ಬಾಗಿಲಿಕ್ಕಿಕೊಂಡು, ಗಂಟೆಗಟ್ಟಳೆ ಆತನ 'ಉಪದೇಶ'ಪಾನದಲ್ಲೇ ನಿಮಗ್ನಳಾಗಿ ಇರತೊಡಗಿದಳು

ಸದಾನಂದನ 'ಮಹತ್ವ'ವನ್ನು ಕೇಳಿ ಕುತೂಹಲಗೊಂಡು ನೋಡಬಂದ ಊರ ಗರತಿಯರನೇಕರು 'ಸಂತೆ'ಯರ ಈ ವಿಧಾನವನ್ನು ಕಂಡು ಆವಾಕ್ಕಾದರು "ಸಾಧುಗಳು ಏನು ಉಪದೇಶವನ್ನು ಕೊಡುವರು?" ಎಂದು ಯಾರಾದರೂ ಆ 'ಸಂತೆ'ಯರನ್ನು ಕೇಳಿದರೆ, "ಅದನ್ನು ಹೇಳಲಿಕ್ಕಾಗುವುದಿಲ್ಲ, ನೀವೇ ಹೋಗಿ ನೋಡಿರಿ," ಎನ್ನುವರು ಇದನ್ನು ಕೇಳಿ ಕೆಲವರು, ಹೆಚ್ಚಾಗಿ ದೊಡ್ಡದೊಡ್ಡ ವಜ್ರದ ಕಿವಿಯೋಲೆಗಳನ್ನು ಧರಿಸಿದಂತಹವರು, ಧೈರ್ಯದಿಂದ ಮುಂದೊತ್ತಿ, ಒಬ್ಬೊಬ್ಬರೇ ಸದಾನಂದನನ್ನು ರಹಸ್ಯವಾಗಿ ಕಂಡು, ಒಂದೆರಡು ತಾಸಿನ ವರೆಗೆ ಆತನ ದಿವ್ಯ 'ಉಪದೇಶ'ವನ್ನು ಪಡೆದು, ಸಂತುಷ್ಟಾಂತರಂಗರಾಗಿ ಮನೆಗೆ ಹೋದರು, ಮತ್ತು ತಿರುಗಿತಿರುಗಿ, ಆಗಿಂದಾಗ, ಬಂದುಹೋಗತೊಡಗಿದರು ಮತ್ತೆ ಕೆಲವರು ಹೆಚ್ಚಾಗಿ ಬಡವೆಯರು, ಅಷ್ಟು ಗೂಢವಾಗಿ ದೊರೆಯುವ ಉಪದೇಶವನ್ನು ಆಶಿಸದೆ, ಬಂದಂತೆಯೇ ಮರಳಿ ಹೋದರು, ಮತ್ತು ತಿರುಗಿ ಎಂದೆಂದೂ ಅಲ್ಲಿ ಕಾಲಿಡಲಿಲ್ಲ

ಸದಾನಂದನ ಈ 'ಉಪದೇಶ'ದ ಪರಿಣಾಮವಾಗಿ ಅನೇಕರ ನಾನಾ ತರದ ರೋಗಗಳು ವಾಸಿಯಾದುವಂತೆ ಅನೇಕರ ಗಂಡಂದಿರಿಗೆ ಧನಲಾಭ, ಅಧಿಕಾರಲಾಭ, ಕೀರ್ತಿಲಾಭ ಆಯಿತಂತೆ ಅನೇಕರಿಗೆ ಮಿತ್ರಲಾಭವೂ, ಪುತ್ರಲಾಭವೂ ಆಯಿತಂತೆ ಇದನ್ನು ಕೇಳಿ ಈತರದ ಲಾಭಗಳ ಅಪೇಕ್ಷೆಯಿಂದ ಹೊರವೂರುಗಳಿಂದಲೂ ಹೆಂಗಸರು ತಂಡ ತಂಡವಾಗಿ ಬಂದು ಹೋದರು

೪

ತಂಡೋಪತಂಡವಾಗಿ ಬರುತ್ತಿದ್ದ ಹೆಂಗಸರಿಗೆಲ್ಲಾ ಈರೀತಿ 'ಉಪದೇಶ'ಕೊಡಲು ಅನನುಕೂಲವಾದುದರಿಂದ ರಾಧಾಬಾಯಿಯು 'ಸಂತೆ' ಕೂಟದವರು ಅವರನ್ನು ಸಮಾಧಾನಪಡಿಸಲು ಬೇರೆ ಉಪಾಯವನ್ನು ಹುಡುಕತೆಗೆಯಬೇಕಾಯಿತು ಅದೂ ಅಲ್ಲದೆ ಅವರನ್ನೆಲ್ಲಾ ಸೇರಿಸಲು ರಾಧಾಬಾಯಿಯ ಮನೆಯೂ ಸಾಲದಾಯಿತು ಅದಕ್ಕಾಗಿ ಸದಾನಂದನಿಗಾಗಿ ಒಂದು ಮಠವನ್ನೇ ಸ್ಥಾಪಿಸಿದರೆ ಆಗಬಹುದೆಂದು ಅವರಿಗೆ ತೋರಿತು ಆದರೆ ಅದಕ್ಕೆ ಧನಸಹಾಯದ ಆವಶ್ಯಕತೆಯಿತ್ತು.

ಕಡೆಗೆ ರಾಧಾಯಿಯು, ಬಹಳ ದಿನಗಳ ಯೋಚನೆಯಿಂದ, ಒಂದು ಯುಕ್ತಿಯನ್ನು ಕಂಡುಹಿಡಿದಳು.

ಸದಾನಂದನು ಮಹಾ 'ಸಾಧು', ಆತನ ಕೈಯ ಸ್ಪರ್ಶ ಹೊಂದಿದ ಯಾವುದೇ ಮರದೆಲೆಗೂ ಎಂತೆಂತಹ ರೋಗಗಳನ್ನೂ ಗುಣಪಡಿಸುವ ಶಕ್ತಿ ಬರುವುದು. ಆತನ 'ಉಪದೇಶ'ವನ್ನು ಶಿವಿಯಾರಿ ಕೇಳಿದವರಿಗೆ ಅನೇಕ ಮಹತ್ತರ ಪ್ರಯೋಜನಗಳು ಉಂಟಾಗುವುವು. ಹಾಗಿರುವಾಗ ಆತನು ಒರೇ ಕೈಯಿಂದ ಮುಟ್ಟಿದರೆ ಎಂತಹ ಅದ್ಭುತವುಂಟಾಗಬಾರದು?

ಲಾಭದ ಆಕಾಂಕ್ಷೆಯಿಂದ ಬಂದವರೆಲ್ಲ ಆತನಿಂದ ಮುಟ್ಟಿಸಿಕೊಳ್ಳಬೇಕು ಅದರಿಂದ ಅವರಿಗೆ ನಿಸ್ಸಂಶಯವಾಗಿಯೂ ಮಹತ್ತಾದ ಲಾಭ ದೊರೆಯುವುದಾದುದರಿಂದ, ಅದರ ಕಿಂಚಿತ್ತಾದ ಪ್ರತಿಫಲವಾಗಿ ಪ್ರತಿಯೊಬ್ಬರೂ ಒಂದಿಷ್ಟು ಕಾಣಿಕೆಯನ್ನು ಸಲ್ಲಿಸಬೇಕು

ರಾಧಾಬಾಯಿಯ ಈ ಸೂಚನೆಯನ್ನು ಎಲ್ಲರೂ ಒಪ್ಪಿದರು ಸದಾನಂದನ ಭಕ್ತೆಯರೆಲ್ಲರೂ ಗುಂಪುಗುಂಪಾಗಿ ಬಂದು ಆತನಿಗೆ ಕಾಣಿಕೆ ಒಪ್ಪಿಸಿ, ಆತನಾಗಿಯೇ ಮುಟ್ಟಲು ಕೈಯೆತ್ತದಿರುತ್ತಿದ್ದುದರಿಂದ, ತಾವಾಗಿಯೇ ಆತನ ಕೈಗಳನ್ನು ಎತ್ತಿ, ತಮ್ಮ ಅಂಗಾಂಗಗಳಿಗೆ ಒತ್ತಿ ಹಿಡಿದು, ತೃಪ್ತರಾಗಿ ಹೋದರು.

ಇದರಿಂದ ಬರುತ್ತಿದ್ದ ಕಾಣಿಕೆಯು ಅಲ್ಪವೆಂದು ರಾಧಾಬಾಯಿಯ 'ಸಂತೆ' ಕೂಟಕ್ಕೆ ತೋರಿಬರಲು ಇದೇ ಚರ್ಯೆಯಲ್ಲಿ ಇನ್ನೊಂದ ವಿಧಾನವನ್ನು ನಿರ್ಧರಿಸಿ ಪ್ರಚುರಪಡಿಸಿದರು ಮೂರು ರೂಪಾಯಿಗಳ ಕಾಣಿಕೆಯನು ಕೊಡುವ ಹೆಂಗಸರೆಲ್ಲಾ 'ಸಾಧು'ವಿಗೆ ಐದು ನಿಮಿಷಗಳ ವರೆಗೆ ಆಲಿಂಗನ ಮಾಡಿಕೊಂಡ ಬರಬಹುದೆಂಬುದೇ ಈ ನಿರ್ಧಾರ.

೫

ವೆಂಕಟಗಿರಿಯು ಬೆಳಿಗ್ಗೆ ಫಲಾಹಾರ ತೀರಿಸಿ ಹಣದ ಥೈಲಿಯನ್ನು ಜೇಬಿನಲ್ಲಿಟ್ಟುಕೊಂಡ ಅಂಗಡಿಗೆ ಹೊರಟಿದ್ದನು

ಕಮಲೆಯು ಗಂಡನನ್ನು ಅಡ್ಡಕಟ್ಟಿ ನೈಯಾರದಿಂದ, "ನಾನು ಎಷ್ಟೋ ದಿನಗಳಿಂ ಕೇಳಿದರೂ ನೀವು ಕಿವಿಗೇ ಸೇರಿಸಿಕೊಳ್ಳು ದಿಲ್ಲ ಆ ಸಾಧು ನಿಜವಾಗಿಯೂ ದೊ ಮಹಾತ್ಮನಂತೆ ಲಕ್ಷ್ಮಿ, ಸುಲೋಚನೆ, ಸುಬ ಪಾರ್ವತಿ ಎಲ್ಲರೂ ಹೋಗಿ ಆತನ ಉಪದೇ ವನ್ನು ಪಡೆದು ಬಂದಿರುವರು ಈ ದಿನ ಸಾಧುವಿನ ಆಲಿಂಗನ ಇರುವುದಂತೆ, ಹೋಗುವವ ಮೂರುಮೂರು ರೂಪಾಯಿ ಕಾಣಿಕೆ ಕೊ ಬೇಕಂತೆ ನನಗೆ ಈಹೊತ್ತು ಹೋಗಲೆ ಬೇಕು. ಕಾಣಿಕೆ ಮೂರೇ ರೂಪಾಯಿ ಹೆಚ್ಚಿಲ್ಲ" ಎಂದು ಒತ್ತಿ ಹೇಳಿದಳು

ರಾಮರಾಯರ 'ನೋಟಿ'ನ ವಾಯಿ ಇನ್ನೆಷ್ಟು ತಿಂಗಳಿರುವುದೆಂಬ ಗಾಢವಾ ಯೋಚನೆಯಲ್ಲಿದ್ದ ವೆಂಕಟಗಿರಿಯು, ಹೆಂ ತಿಯ ನಿತ್ಯದ ಕಾಟದಿಂದ ತಪ್ಪಿಸಿಕೊಳ್ಳಲೆಂದ ಮೂರು ರೂಪಾಯಿಗಳನ್ನು ಅವಳ ಕೈ ಬಿಸುಟು, ಬೀದಿಗಿಳಿದನು.

ಅಂಗಡಿಯ ಬೆಳಗ್ಗಿನ ವ್ಯವಹಾರ ಮು ಯಿಸಿ, ಮಧ್ಯಾಹ್ನ ಊಟಕ್ಕೆ ಬರುವಾಗಲೇ ಆ ನಿಗೆ, ತಾನು ಕಮಲೆಗೆ ಎಷ್ಟು ರೂಪಾಯಿ ಕೊಟ್ಟಿದ್ದೆ? ಯಾಕೆ ಕೊಟ್ಟಿದ್ದೆ?—ಎಂಬ ಯೋಚನೆಯು ತಲೆದೋರಿತು "ಓಹೋ, ಹೌದು ಮೂರು ರೂಪಾಯಿ ಸಾಧುವಿನ 'ಆಲಿಂಗನ'ಕ್ಕಾಗಿ ಕಾಣಿಕೆಯಂತೆ 'ಆಲಿಂಗನ' ಎಂ ಎಂತಹ ಪೂಜೆಯೋ, ದೇವರೇ ಬಲ್ಲ ಕೇ ನೋಡಬೇಕು," ಎಂದುಕೊಂಡ.

ಮಿಂದು, ಎಲೆಯ ಮುಂದೆ ಕೂತು ಎರ ತುತ್ತು ಗಂಟಲೊಳಕ್ಕೆ ಒಯ್ಯುವಷ್ಟರಲ್ಲಿ ವೆಂ ಟಗಿರಿಗೆ ನೆನಪಾಯಿತು.

"'ಆಲಿಂಗನ' ಎಂದರೆ ಎಂತಹ ಪೂಜೆಯೆ. ಕಮಲು?" ಎಂದು ಕೇಳಿದ

'ಕಮಲು' ಮಾತಾಡಲಿಲ್ಲ; ಆ ಮೋರೆಯೆಲ್ಲಾ ಕೆಂಪೇರಿತು

ಆಗ ವೆಂಕಟಗಿರಿಯ ಹಿರೇ ಮಗ, ನಾ ಯಣ, "'ಆಲಿಂಗನ' ಎಂದರೆ ಗೊತ್ತಿಲ್ಲವೆ ಅಪ್ಪಾ? 'ಆಲಿಂಗನ' ಎಂಧರೆ ಅಪ್ಪಿಕೊ ವುದು ನಮಗೆ ಆ ಶಬ್ದವನ್ನು ಮಾಸ್ತರ ನಿನ್ನೆಯೇ ಕಲಿಸಿರುವರು" ಎಂದು ಕೊಚ್ಚಿ ವೆಂಕಟಗಿರಿಯ ಕೈಯೊಳಗಿನ ಮೊ ತುತ್ತು ಬಾಯನ್ನು ಸೇರಲೇ ಇಲ್ಲ. ರೋ ವೇಶದಿಂದ ಕಿಡಿಕಿಡಿಯಾದ ಅವನು ಕಮ

(ಮುಂದಿನ ಕಥೆಯನ್ನು ನೋಡುವಾ.)

ಸ್ತನೋ ಸ್ತೇಧಃ

STHANO STHEDAH — THE MALAYALA OUSHADHA CO. POST CHALAPURAM, MALABAR

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು ಮನುಷ್ಯರನ್ನು ಆಶ್ಚರ್ಯಗೊಳಿಸುವಂತಹುದು ಏನೆಂದು ಅವರಿಗೆ ಗೊತ್ತು ಮನುಷ್ಯನು ಹೆಂಗಸರ ಸೌಂದರ್ಯವನ್ನು ಕಂಡೊಡನೆಯೇ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವದು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೇ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯಿರಿ. ಇಲ್ಲವಾದರೆ ಹಣವಾಪಸ.

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ ಸ್ತನೋ ಸ್ತೇಧಾದಿಂದ ಸಾಧ್ಯ ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದಾರುಣವಾದ ಚಿಂತೆಯಿಂದಲೂ ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲು ಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಪುಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪೌಷ್ಟಿಕತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು ಇದರಿಂದ ಸಾಧಕ ವಿನಹ ಬಾಧಕವಿಲ್ಲ ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣ ಲಾಭವನ್ನು ಹೊಂದಿರ ವರು ಅಂತಹ ಗುಣವನ್ನು ನೀವೂ ಪಡೆಯಿರಿ

ಸ್ತನೋ ಸ್ತೇಧ ನಂಬ್ರ 20 (ತಿನ್ನುವ ಔಷಧಿ) ರೂ 3 ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ 3

ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ

1 ಮುಟ್ಟಿನದೋಷ 2 ಸಂತತಿ ಪ್ರತಿಬಂಧಕ, 3 ಧಾತುಪುಷ್ಟಿ, 4 ಲಿಂಗವೃದ್ಧಿ 5 ಸ್ತ್ರೀರೋಗ 6 ಕ್ಷಯ ಸಂಹಾರಿ, 7 ವಾತರೋಗ

ಇಂಡಿಯನ್ ಎಂಪಾಯರ್ ಪ್ರದರ್ಶನ, ಬೆಂಗಳೂರು ಸಿಟಿ.

ಬರುವ ಎಪ್ರಿಲ್ ತಾ. 10ರಿಂದ 25ರ ವರೆಗೆ

ಎಲ್ಲರೂ ನಮ್ಮೊಡನೆ ಸಹಕರಿಸುವದಾಗಿ ಕೋರಿಕೆ

ನೀವು ಇದರಲ್ಲಿ ಹೇಗೆ ಭಾಗವಹಿಸಬಹುದು?

ನಿಮ್ಮ ಸಾಮಾನುಗಳನ್ನು ಕಳುಹಿ ನಮ್ಮ ಪ್ರದರ್ಶನವನ್ನು ಯಶಸ್ವಿಯನ್ನಾಗಿ ಮಾಡಬಹುದು

ಅಲ್ಲಿ ನಡೆಯುವ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಬರಬಹುದು

ಅಗ ನಡೆಯಲಿರುವ ಪಂದ್ಯಾಟಗಳಲ್ಲಿ ಸೇರಿ ನಮ್ಮ ಕಾರ್ಯವನ್ನು ಚಂದಗಾಣಿಸಬಹುದು.

ಎಲ್ಲಾ ವಿಷಯಗಳಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ —

ಕಾರ್ಯದರ್ಶಿ, ನಂ. 1 ಆಲ್ಬರ್ಟ ವಿಕ್ಟರ್ ರೋಡ್, ಬೆಂಗಳೂರ ಸಿಟಿ

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 4	3—10
ಹೊಸ ಮಸ್ಕತಿ	3—10	4— 2
ಗುದ್ದು ಸುಗ್ಗಿ	3— 6	3—14
ಊರ ಅವ್ವಲ್ ಬೆಳ್ತಿಗೆ	4— 0	4— 8
ರಂಗೂನು ಬೆ ಗೋ ಗಳ್ಳೆ	6— 4	7— 0
ಎಲ್ಲಾ ಗುಬೆ ಮು ಗಳ್ಳೆ	4— 4	4— 8
ಗೋದಿ ಗೋಣಿ ಗಳ್ಳೆ	8 — 8	10— 4
ತೊಗರಿ ಗೋಣಿ ಗಳ್ಳೆ	9 —0	9 — 8
ಹುರುಳಿ ಗೋಣಿ ಗಳ್ಳೆ	5— 4	6 — 9
ಕಡಲೆ ಗೋಣಿ ಗಳ್ಳೆ	7 — 4	9 — 8
ತೊಗರಿಬೇಳೆ ಗೋಣಿ ಗಳ್ಳೆ	11— 0	5— 8
ಉದ್ದು ಗೋಣಿ ಗಳ್ಳೆ	9— 8	10 — 0
ಹೆಸರು ಗೋಣಿ ಗಳ್ಳೆ	9— 4	9— 12
ಊರುಬೆಲ್ಲ ಖಂಡಿ ಗಳ್ಳೆ	30— 0	35— 0
ಉಪ್ಪು ಗೋಣಿ ಗಳ್ಳೆ	4— 8	4— 8
ಕೊಬ್ಬರಿ ಖಂಡಿ ಗಳ್ಳೆ	60— 0	70— 0
ಕೊಬ್ಬರಿ ಹಿಂಡಿ ಖಂಡಿ ಗಳ್ಳೆ	28— 0	29— 0
ಎಳ್ಳಿಂಡಿ ಖಂಡಿ ಗಳ್ಳೆ	33 —12	35— 0
ಕೊಬ್ಬರಿ ಎಣ್ಣೆ ಮುಡಿ ಗಳ್ಳೆ	5— 0	6— 0
ಎಳ್ಳೆಣ್ಣೆ ಮುಡಿ ಗಳ್ಳೆ	7— 0	7— 0
ಚಕ್ಕೋತಿಎಣ್ಣೆ ಪಟ್ಟಿಗೆ ಗಳ್ಳೆ	6— 5	6— 5
ಮಾರಿಸ ಸಕ್ಕರೆ ಮು. ಗಳ್ಳೆ	3— 9	3 — 9
ಮೆಣಸು	2— 8	4— 0
ಸಾಸಿವೆ ಮುಡಿ ಗಳ್ಳೆ	5 — 8	6— 0
ಕಾಳುಮೆಣಸು ಖ ಗಳ್ಳೆ	102— 8	105—
ಯೇಲಕ್ಕಿ ಬೀಜ ಮಣ ಗಳ್ಳೆ	38— 0	39— 0
ಗೇರುಬೀಜ ಮು. ಗಳ್ಳೆ	4 — 6	4 — 8
ಕಬ್ಬಿಣ ಖಂಡಿ ಗಳ್ಳೆ	35— 0	37— 8
ತಾಂಮ್ರತಗಡು ಮ ಗಳ್ಳೆ	9— 12	9— 14
ತಾಂಮ್ರಪಾತ್ರೆಗಳು ಮ ಗಳ್ಳೆ	12— 8	14— 0
ಚೀನಿಬೆಳ್ಳಿ ಸೇರು ಗಳ್ಳೆ	17— 8	18— 0
ಹಿತ್ತಾಳೆ ತಗಡು ಮ. ಗಳ್ಳೆ	10— 0	10—
ಹವನು ಗಳ್ಳೆ	22— 8	22— 8
ಹುಣಿಸೆ ಹುಳಿ ಖಂಡಿ ಗಳ್ಳೆ	20— 0	25— 8
ನೇಟಿವ್ ಕಾಫಿ ಖಂಡಿ ಗಳ್ಳೆ	145— 0	150— 0
ಫಟೇರಿ ಕಾಫಿ ಖಂಡಿ ಗಳ್ಳೆ	185— 0	190— 8
ಮಡಿಕೇರಿ ಏಲಕ್ಕಿ	25— 0	26 — 1

Shiromani Narayanacharya & Co.,

Silk Lace & Cloth Manufacturers

Choukhamba Benares City

WISHES HE HAD THIS MAN

THIS MAN OUR CUSTOMER

ಕೃಷ್ಣರಾಯರು—ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು ಆ ಶೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು ಅದೇ ನಮೂನೆಯ ಶೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು—ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ, ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು—ಅದರ ಕ್ರಯವೆಷ್ಟು?

ಆನಂದರಾಯರು—ಎಲ್ಲಾ ಅಂಗಡಿಗಳಿಗಿಂತ ಶೇಕಡಾ 25 ಕಡಮೆ ಧರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಸಿಂಧಿಕ ಜರಿ, ರಂಗು ಹೊದಲಾದ ಶೀರೆಗಳು ಸಿಗುತ್ತವೆ. 18 ಮೊಳ ಉದ್ದ 2½ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ. ಪದಲು ಬುಟ್ಟಿ ಇರುವುದು 18 ಮೊಳ ಶೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಪದಲು ಸಹ ಶೀರೆ 1ಕ್ಕೆ ರೂ 10ರಿಂದ 55ರ ವರೆಗೆ ರವಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ. 8 ಮೊಳದ ಸರಮಡಿ 1ಕ್ಕೆ ರೂ 7ರಿಂದ 15ರ ವರೆಗೆ 8 ಮೊಳದ ಜರಿ ಮಡಿ 1ಕ್ಕೆ ರೂ 10ರಿಂದ 35ರ ವರೆಗೆ. 5 ಮೊಳದ ಪಮರಿ 1ಕ್ಕೆ ರೂ 4ರಿಂದ 16ರ ವರೆಗೆ 6 ಮೊಳದ ಪಮರಿ 1ಕ್ಕೆ ರೂ 6ರಿಂದ 35ರ ವರೆಗೆ ಬೇರೆಯಲ್ಲಾ ತರದ ಮ್ಯಾಲುಗಳು, ಕ್ರಯದ ಪಟ್ಟಿ ಇನಾಂ 1 ಅಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.

ಅಲಭ್ಯ ಲಾಭ!   ಸುವರ್ಣ ಸಂದರ್ಭ!

ಪ್ರಥಮ ಬಹುಮಾನ ರೂ. 5000   ಎರಡನೇ ಬಹುಮಾನ ರೂ. 2500

ಹಿಂದೂ ವಿದ್ಯಾದಾಯಿನೀ ಸಭೆಯವರು ತಮ್ಮ ಆಡಳಿತೆಯೊಳಗಿರುವ ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

"ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ"

ತೆಗೆಯುವ ತಾರೀಖು 3-6-1936   ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ

ಸೋಡ್ತಿಯ ಮೊಬಲಗು. ರೂ. 50,000.

ಒಟ್ಟು ಬಹುಮಾನಗಳ ಸಂಖ್ಯೆ 1778.   ಮೌಲ್ಯ ರೂ 20,000

ಸಂಪೂರ್ಣ ಪುಸ್ತಕಗಳನ್ನು ಮಾರಾಟ ಮಾಡುವವರಿಗೆ ಯಾ ಕೊಂಡುಕೊಳ್ಳುವವರಿಗೆ ವಿಶೇಷ ಬಹುಮಾನಗಳಿವೆ

ಸಂಪೂರ್ಣ ಪುಸ್ತಕಗಳನ್ನು ಮಾರಾಟ ಮಾಡುವವರಿಗೆ ಪ್ರತ್ಯೇಕ ನಗದು ಕಮಿಶನ್ ಕೂಡಾ ಇದೆ

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಟಿಕೇಟು ಪುಸ್ತಕಗಳ ಮಾರಾಟಕ್ಕಾಗಿ ಪರಸ್ಥಳದ ಉತ್ಸಾಹಿಗಳಾದ ಏಜಂಟರು ಬೇಕಾಗಿದೆ

ಹೆಚ್ಚಿನ ವಿವರಗಳಿಗೆ ಮತ್ತು ಪುಸ್ತಕಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್— ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

ಎಚ್ಚರ!!   —   ಎಚ್ಚರ!!!

ರೋಗ ಬಂದ ಮೇಲೆ ನರಳಬೇಡಿರಿ!

ಸುಖಾನಂದ (ಗಂಡಸರಿಗೆ) ಸೋಗಸಾದ ರಬ್ಬರು ಸಾಧನ ರತಿ ಕ್ರೀಡೆಗೆ ಆತಂಕವಿಲ್ಲ ಅವರೂ ಪ್ರೇಯಸಿಯರ ಗರ್ಭೋತ್ಪತ್ತಿಯುಂಟಾಗದು ಮೇಹ ರೋಗಗಳಂತೂ ಬರುವಂತೆಯೇ ಇಲ್ಲ

ಬೆಲೆ 1ಕ್ಕೆ ರೂ 1-8-0

ಪೆಸಾರಿಸ್ (ಹೆಂಗಸರಿಗೆ) ಸರ್ವೋತ್ಕೃಷ್ಟವಾದ ರಬ್ಬರು ಸಾಧನ ಗರ್ಭಧಾರಣವಾಗ ವಂತಿಲ್ಲ ಉಪಯೋಗಿಸುವಾಗ ಗೊತ್ತಾಗುವಂತಿಲ್ಲ ಬಹುಕಾಲ ಬಾಳಿಕೆ ಬರುವುದು   ಬೆಲೆ 1ಕ್ಕೆ ರೂ 2—4—0

ಆರ್ಡರಿನೊಡನೆ 4 ಆಣೆಯ ಸ್ಟಾಂಪಿಡಬೇಕು

ಸಿಗ ನ ವಿಳಾಸ —ಸ್ಟಾರ್ ಅಂಡ್ ಕಂಪೆನಿ,

ಕ್ರಿಷ್ಣಪ್ಪ ನಾಯಕನ ಟೇಂಕ್ ಬೀದಿ ಮದರಾಸು

೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು ಅಲ್ಲದೆ ಕಾಂತಿಯುತವಾದುದು ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ ಇದು ನಿಮ್ಮ ಬಳಿ ಇದ್ದರೆ ನಿಮ್ಮನ್ನು ಯಾರಲ್ಲಿ ಸಿಟ್ಟದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ ಗಂಡು ಮಕ್ಕಳಾಗುತ್ತವೆ ಧನ ಸಿಗುತ್ತದೆ ರೋಗ ವಾಸಿಯಾಗುತ್ತದೆ ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ, ಇದೊಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಶ್ರಮವಿಲ್ಲ ಇನ್ನೊಬ್ಬರಿಗೆ ದಾಸರಾಗಿ ಬೇಕಾದ ಅವಶ್ಯಕವಿಲ್ಲ ಇದು ನಿಮ್ಮ ಸಂಗಡ ಇದ್ದರೆ ಸಾಕು ತಿಳಿಯಿ, ಬೆಲೆ ರೂ ೨ ಮಾತ್ರ.

೦೬.೯.೩   Bengal Mesmarism House
5-7   Panchpota, Bengal (ಇ. ಬ)

WANTED

A manager for the Srimad Anantheshwar Temple Manjeshwar Pay according to qualifications Security for Rs 3000 essential Applications to reach the undersigned by the 15th of March 1936

K. P Madhav Rau M L

Trustee, Srimad Anantheshwar Temple,

MANJESHWAR

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಫಾಲ್ಗುಣ ಶು। ೭ ಶನಿವಾರದಿಂದ ಫಾಲ್ಗುಣ ಶು। ೧೩ ಶುಕ್ರವಾರದ ವರೆಗಿನ ಪಂಚಾಂಗ (೧೯೩೬ನೇ ಯ ಕುಂಭ ಮಾಯಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
29	*ಶನಿ	೭	೮	ಕೃತ್ತಿಕ	೭	೧೬	*ಹಿರಿಯ ಕೃತ್ತಿಕೆ ಮಹೋತ್ಸವ
1	ರವಿ	೮	೫	ರೋಹಿಣೀ	೪	೧೮	
2	ಸೋಮ	೯	೩	ಮೃಗಶಿರಾ	೩	೧೯	
3	ಮಂಗಳ	೧೦	೧	ಆರ್ದ್ರ	೩	೨೦	
4	ಬುಧ	೧೧	೦	ಪುನರ್ವಸು	೪	೨೦	
5	ಗುರು	೧೨	೨	ಪುಷ್ಯ	೭	೨೨	
6	ಶುಕ್ರ	೧೩	೪	ಆಶ್ಲೇಷಾ	೧೦	೨೩	—

ಜಾನುವಾರುಗಳ ಆರೈಕೆ

ಬ್ರಿಟಿಷ ಪಾರ್ಲಿಮೆಂಟಿನವರು ಹಾಲಿನ ಉಪಯೋಗವು ಹೆಚ್ಚಾಗುವಂತೆ, ಜಾನುವಾರುಗಳನ್ನು ಸಾಕುವವರಿಗೆ ದ್ರವ್ಯ ಸಹಾಯ ಮಾಡಲು, ಠರಾವುಗಳನ್ನು ಮಾಡಿರುತ್ತಾರೆ ಸತ್ವವು ಹಾಲಿನಲ್ಲಿ ದೊರಕಿದಷ್ಟು ಇತರ ಯಾವ ಆಹಾರದಲ್ಲೂ ದೊರಕುವುದಿಲ್ಲ ನಮ್ಮ ಆರೋಗ್ಯವನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳಬೇಕಾದರೆ, ನಾವು ತುಂಬಾ ಹಾಲನ್ನು ಸೇವಿಸಬೇಕು ಅದಕ್ಕಾಗಿಯೇ ಬ್ರಿಟಿಷ ಪಾರ್ಲಿಮೆಂಟಿನವರು, ತಮ್ಮ ದೇಶದ ಆರೋಗ್ಯವು ಕೆಡದಂತೆಯೂ, ಪ್ರಜೆಗಳು ಪುಷ್ಟಿವಂತರಾಗಿ ಬಾಳುವಂತೆಯೂ, ಹಾಲಿನ ಉಪಯೋಗವು ಧಾರಾಳವಾಗುವಂತೆ ಮೇಲಿನ ಠರಾವನ್ನು ಮಾಡಿರುವರು ಒಂದು ದೇಶದ ಸ್ಥಿತಿಯು ಅದರ ಆರೋಗ್ಯದ ಮೇಲೆ ಹೊಂದಿಕೊಂಡಿದೆ. ಆದುದರಿಂದಲೇ, ಬ್ರಿಟಿಷರು ತಮ್ಮ ಆಹಾರದ ದೃಷ್ಟಿಗೆ ಅಷ್ಟು ಮಹತ್ವವನ್ನು ಕೊಡುವುದು ಹಾಲು ಒಂದು ಶ್ರೇಷ್ಠವಾದ ಆಹಾರವೆಂದೂ ಸಮಸ್ತ ಜಗತ್ತೆಲ್ಲಾ ತಿಳಿದಿರುತ್ತದೆ

ಆದರೆ, ಒಂದಾನೊಂದು ಕಾಲದಲ್ಲಿ ಶ್ರೇಷ್ಠವಾಗಿದ್ದ ನಮ್ಮ ಜಾನುವಾರುಗಳು, ಈಗ ದುರ್ಲಭವಾಗತೊಡಗಿವೆ ಒಳ್ಳೆ ಆಕಳುಗಳ ಸಂಖ್ಯೆಯು ದಿನೆ ದಿನೆ ಕಡಿಮೆಯಾಗುತ್ತಿದೆ ಎಲ್ಲೆಲ್ಲೂ, ನಿರ್ಬಲ ಆಕಳುಗಳು ನಮ್ಮ ದೃಷ್ಟಿಗೆ ಗೋಚರವಾಗುತ್ತವೆ ನಮ್ಮಲ್ಲಿ ಯೋಗ್ಯ ಮೇಯುವ ಸ್ಥಳಗಳಿದ್ದರೂ, ಅರಣ್ಯಗಳಿದ್ದರೂ, ಈ ಸ್ಥಿತಿಯು ಸಂಭವಿಸಿರುತ್ತದೆ ಜಾನುವಾರುಗಳ ಸ್ಥಿತಿಯು ಹೀಗಾಗಲು, ಅದರ ಮೇಲೆ ಹೊಂದಿರುವ ಪ್ರಜೆಗಳ ಸ್ಥಿತಿಯು ಹಾಳಾಗಿರದು. ನಮ್ಮ ದೇಶದಲ್ಲಿ ಶಿಶುಮರಣಗಳ ಸಂಖ್ಯೆಯು ಅತಿರೇಕವಾಗಿ ಹೆಚ್ಚಲು ಇದೂ ಒಂದು ಕಾರಣವು ಹಾಲು ಬಹಳ ಕಡಿಮೆಯಾದುದರಿಂದ ಅನೇಕ ದುಷ್ಪರಿಣಾಮಗಳಾಗಿವೆ. ಸಾಂಕ್ರಾಮಿಕ ರೋಗಗಳ ಹಾವಳಿಯು ಪ್ರಬಲವಾಗುತ್ತಿದೆ. ಜನರ ಪೌಷ್ಟಿಕವು ಕಡಿಮೆಯಾಗಿ ಅನೇಕ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ ಇದಕ್ಕೆಲ್ಲಾ ಕಾರಣ, ಹಾಲಿನ ಉಪಯೋಗ ಕಡಿಮೆಯಾದುದರಿಂದ, ಜಾನುವಾರುಗಳ ಕಡೆಗೆ ನಿರ್ಲಕ್ಷ್ಯ ಕೊಟ್ಟು ಅವುಗಳು ಯೋಗ್ಯ ರೀತಿಯಲ್ಲಿ ಬಾಳದೆ ಇದ್ದುದರಿಂದ ಜಾನುವಾರುಗಳ ಆರೈಕೆಯ ಕಡೆಗೆ ನಮ್ಮ ಸರಕಾರವಾಗಲಿ, ನಾವಾಗಲಿ ಹೆಚ್ಚಿನ ಗಮನವನ್ನು ಕೊಡುವುದಿಲ್ಲ ಒಳ್ಳೇ ಜಾನುವಾರುಗಳ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತಿದೆ ಈಗ ಹಿಂದೂದೇಶದಲ್ಲಿ, ಸರಾಸರಿ ಒಂದು ದನವು, ದಿನ ಒಂದಕ್ಕೆ ೮ ರಾತ್ತಲ ಹಾಲು ಮಾತ್ರ ಕೊಡುತ್ತದೆ ಇತರ ದೇಶಗಳಲ್ಲಿ ಈ ಸಂಖ್ಯೆಯು ೯೦ ರಾತ್ತಲುಗಳಾಗಿರುತ್ತದೆ. ಎಲ್ಲಾ ಪಾಶ್ಚಾತ್ಯ ದೇಶಗಳಲ್ಲಿ, ಪ್ರಜೆಗಳೂ, ಸರಕಾರದವರೂ ಜಾನುವಾರುಗಳ ಆರೈಕೆಯ ವಿಚಾರದಲ್ಲಿ ಹೆಚ್ಚಿನ ನಿಗಾ ತೆಗೆದುಕೊಳ್ಳುತ್ತಿದ್ದಾರೆ

ನಮ್ಮ ದೇಶದಲ್ಲಿ ಜಾನುವಾರುಗಳ ಸಲಹುವಿಕೆಯ ಕೆಲಸವು ಬಹಳ ಉದ್ಧಾರವಾಗಬೇಕಾಗಿದೆ ದೇಶೋದ್ಧಾರವು ಇದರ ಮೇಲೆ ಹೊಂದಿಕೊಂಡಿದೆ ಪ್ರಜೆಗಳು ಈ ವಿಚಾರದಲ್ಲಿ ಬಹಳ ಶ್ರಮಪಡಬೇಕು ಸರಕಾರವು ಇತರ ದೇಶಗಳಂತೆ, ಜಾನುವಾರುಗಳ ಆರೈಕೆ ಇತ್ಯಾದಿಗಳು ಯೋಗ್ಯವಾಗಿ ನಡೆಯುವಂತೆ, ಕ್ರಮಗಳನ್ನು ಮಾಡಬೇಕು. ದೇಶೋದ್ಧಾರವಾಗಲು ಇದು ಕೂಡ ಒಂದು ಸೋಪಾನವಾಗಿರುತ್ತದೆ. ಜಾನುವಾರುಗಳು ಜಾತಿಯನ್ನು ಉಚ್ಚಗೊಳಿಸುವ ಪ್ರಯತ್ನಗಳಾಗಬೇಕು. ಡಾಯರಿಫಾರ್ಮುಗಳೆಂಬ ಸಂಸ್ಥೆಗಳು ನಮ್ಮಲ್ಲಿ ಜನಿಸಬೇಕು. ಇವುಗಳು ಜಾನುವಾರುಗಳ ಉದ್ಧಾರದ ಸ್ಥಳಗಳಾಗಿರಬೇಕು. ರೈತರು ತಮ್ಮ ವ್ಯವಸಾಯ ಕಾರ್ಯಗಳೊಡನೆ ಜಾನುವಾರುಗಳ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡಬೇಕು ಇದರಲ್ಲಿ ಅವರು ದೇಶಸೇವೆ ಮಾಡಿದಂತಾಗುವುದಲ್ಲದೆ, ಸ್ವಲ್ಪ ಹಣವನ್ನೂ ಗಳಿಸಬಹುದು ಅಖಿಲಭಾರತ ಗ್ರಾಮಾಭ್ಯುದಯ ಸಂಘದವರು, ಈ ವಿಚಾರವನ್ನು ಹಳ್ಳಿಗಳ ಉದ್ಧಾರ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳತಕ್ಕದು. ದನವನ್ನು ಪೂಜಿಸುವ ಕ್ರಮವು ಹಿಂದೂ ಧರ್ಮದಲ್ಲಿದೆ. ಇದಕ್ಕೆ ಕಾಮಧೇನು ಎಂತಲೂ ಏಕೆ ಕರೆಯುತ್ತಿದ್ದಾರೆ ಇದರ ಹಾಲಿನಿಂದ ನಮಗೆ ಜೀವ ಸಿಕ್ಕುವುದು ನಮ್ಮ ಸಾಗುವಳಿಗೆ ಬೇಕಾದ ಗೊಬ್ಬರವನ್ನು ಇದು ಒದಗಿಸಿಕೊಡುತ್ತದೆ. ಪ್ರಾಚೀನ ಕಾಲದಲ್ಲಿ ಜಾನುವಾರುಗಳ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡುತ್ತಿದ್ದರು

ನಮ್ಮ ಜಿಲ್ಲೆಯು ಈ ವಿಚಾರದಲ್ಲಿ ಬಹು ಹಿಂದುಳಿದಿದೆ ಜನರ ಆರೋಗ್ಯವು ಇದರಿಂದಾಗಿ ಹಾಳಾಗಿರುತ್ತದೆ ಜನರು ಧಾರಾಳ ಹಣವನ್ನು ಔಷಧಿಗಳಿಗಾಗಿಯೂ, ವೈದ್ಯಕೀಯ ಸಹಾಯಕ್ಕಾಗಿಯೂ ವ್ಯಯಿಸುತ್ತಿದ್ದಾರೆ ನಾವು ಜಾನುವಾರುಗಳ ಕಡೆಗೆ ಹೆಚ್ಚಿನ ಲಕ್ಷ್ಯ ಕೊಟ್ಟರೆ ನಮ್ಮ ಅನೇಕ ಸಂಕಟಗಳು ನಿವಾರಣೆಯಾಗುವುವು ಹಳ್ಳಿಗರು, ಎಂದರೆ ನಮ್ಮ ರೈತರು, ಅವರ ಫಲಗಳ ಧಾರಣೆಯು ಬಹಳವಾಗಿ ಬಿದ್ದುದರಿಂದ, ಸಾಲಗಳಿಗೆ ಒಳಗಾಗಿರುವರು ಅವರ ಜೀವನದ ಹಾದಿಯು ಕಷ್ಟವಾಗಿರುತ್ತದೆ ಆದರೆ ಇವರ ಆಕಳುಗಳ ಸಾಕುವಿಕೆಯನ್ನು ಯಾಕೆ ಕೈಗೊಳ್ಳಬಾರದು? ನಮ್ಮ ಹಳ್ಳಿಗಳಲ್ಲಿ ಜಾನುವಾರುಗಳಿಗೆ ಮೇಯಲು ಯೋಗ್ಯವೆನಿಸುವ ಅನೇಕ ಮೈದಾನು ಸ್ಥಳಗಳಿವೆ ನಮ್ಮ ಹಳ್ಳಿಗರು ದನಗಳನ್ನು ಯೋಗ್ಯ ರೀತಿಯಲ್ಲಿ ಸಾಕಿ, ಹಾಲಿನಿಂದಲೂ, ಬೆಣ್ಣೆ ತುಪ್ಪದಿಂದಲೂ, ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಬಹುದು ಈ ಕುರಿತ ನಮ್ಮ ಜಿಲ್ಲೆಯ ಹಳ್ಳಿಗಳಲ್ಲಿ ಚಳವಳ ನಡೆಯಬೇಕಾಗಿದೆ ಆಗ, ನಮ್ಮ ಜಿಲ್ಲೆಯು ಈಗ ಅನುಭವಿಸುತ್ತಿರುವ ಸಿಕ್ಕಿಷ್ಟ ಸ್ಥಿತಿಯಿಂದ ಹೊರಗಾಗಬಹುದು

ಬ್ರಿಟಿಷರು ಮತ್ತು ಜನಾಂಗಸಭೆಯು

ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಬಹಿರ್ ವ್ಯವಹಾರಗಳ ಕಾರ್ಯದರ್ಶಿಗಳಾದ ಮಿ। ಅಂತೋನಿ ಏಡನ್ನರು, ಬಹೀರ್ ವ್ಯವಹಾರದ ಕುರಿತು ಭಾಷಣ ಮಾಡಿದರು. ಗುಪ್ತವಾಗಿ ರಚನೆಯಾದ ಮಾಫೆ ರಿಪೋರ್ಟು ಇಟೆಲಿಯಾನರಿಗೆ ಹೇಗೆ ಸಿಕ್ಕಿತ್ತೆಂಬುದನ್ನು ಕಂಡುಹಿಡಿಯಲು ಪ್ರಯತ್ನಗಳು ನಡೆಯುತ್ತದಂತೆ ಈ ರಿಪೋರ್ಟಿನ ಪ್ರಕಾರ ಬ್ರಿಟಿಷರು ಸ್ವಾರ್ಥಪರಾಯಣರಾಗಿ ವರ್ತಿಸುತ್ತಿದ್ದಾರೆಂದು ಜನಾಂಗ ಸಭೆಯು ಗೌರವವನ್ನು ಕಾಯಲು, ಅವರು ಇಟೇಲಿಯ ಕಡೆಗೆ ಈಗಿನ ವರ್ತನೆ ಹೊಂದಿದಲ್ಲವೆಂದು ವ್ಯಕ್ತವಾಗುತ್ತದೆಂದು. ಇಟೇಲಿಯಾನರ ವಾದ ಈ ಮಾಫೆರಿ ಪೋರ್ಟು ಹೋರ್ ಲಾವಲ ಸಂಧಿ ಪ್ರಸ್ತಾಪದ ಸಮಯ ಹೊರಬಿದ್ದಿರುತ್ತದೆಂದು, ಈ ರೀತಿ ಗುಟ್ಟು ರಟ್ಟಾಗಿದೆ. ಎಂದು, ಇನ್ನುಮುಂದಕ್ಕೆ ಗುಪ್ತ ವಿಚಾರದಲ್ಲಿ ಹೆಚ್ಚಿನ ಜಾಗ್ರತೆ ತಗೆದುಕೊಳ್ಳಲಾಗುವುದೆಂದು ಮಿ। ಏಡಿನ್ನರು ತಿಳಿಸಿದರು. ಇಟೇಲಿ ಹಬಸಿ ಕಲಹದ ಮೇಲೆ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯಿತು. ಇಟೇಲಿಯ ಮೇಲೆ ಎಣ್ಣೆಯ ಸೇಂಕ್ಷನುಗಳನ್ನು ಜ್ಯಾರಿಮಾಡಬೇಕೆಂದು, ಹಲವರು ಪತ್ತಾಯ ಮಾಡಿರುವರು ಮಿ। ಏಡನ್ನರು, ಬ್ರಿಟನು ಪ್ರಪಂಚದ ಶಾಂತಿವಿಚಾರದಲ್ಲಿ ಜನಾಂಗ ಸಭೆಯೊಡನೆ ಸಹಕರಿಸುವುದೆಂದೂ ಇತರ ಜನಾಂಗಗಳು ಸಂಗ್ರಾಮ ಸಿದ್ಧತೆಗಳನ್ನು ಮಾಡುವುದರಿಂದ ತಾನೂ ಯುದ್ಧ ಸಿದ್ಧತೆಗಳನ್ನು ಮಾಡುತ್ತಿದ್ದೆ ಎಂದೂ ಆದರೆ ತನ್ನ ಧ್ಯೇಯವನ್ನು ಎಂದಿಗೂ ಬಿಡೆನೆಂದೂ ಪಾರ್ಲಿಮೆಂಟಿನ ಸದಸ್ಯರಿಗೆ ಭರವಸೆ ಕೊಟ್ಟಿರುತ್ತದೆ. ಎಂದರೆ ಈ ಭಾರಿ ಯುದ್ಧವು ಶಾಂತಿಯ ರಕ್ಷಣೆಗಾಗಿ ಹೂಡಲಾಗುವುದು.

ಹಿಂದೂದೇಶದ ರೇಶ್ಮೆಯ ವ್ಯಾಪಾರ

ಆಮದಿನಲ್ಲೂ ರಫ್ತಿನಲ್ಲೂ ಇಳಿತ ಉಂಟಾಗಿರುತ್ತದೆ.

ಕೆಳಗಿನದು ಬ್ರಿಟಿಷ ಹಿಂದೂದೇಶದಿಂದ ಹೊರಗೆ ಹೋದ ಮತ್ತು ಬಹೀರ್ ದೇಶಗಳಿಂ ಬ್ರಿಟಿಷ ಹಿಂದೂಸ್ಥಾನಕ್ಕೆ ಬಂದ ರೇಶ್ಮೆಯ ಮೌಲ್ಯದ ಪಟ್ಟಿ.—

ವರ್ಷ	ರಫ್ತು	ಆಮದು
	ರೂ.	ರೂ.
1922—23	10,60,000	4,74,42,000
1923—24	54,16 003	4,49,24,000
1924—25	41,02,000	4,90,20,000
1925—26	38,76 000	3,74,64,000
1926—27	35,08,000	4,38,81,000
1927—28	42,69,000	5,05,70,000
1928—29	32,17,000	5,00,64,000
1929—30	32,31,000	4,58,43,000
1930—31	10,06,000	2,99,92,000
1931—32	8,85,000	2,73,56,000
1932—33	3,18,000	4,33,37,000
1933—34	3,29,000	3,58,60,000
1934—35	4,60,000	3 37,09,000

ಹಿಂದೂದೇಶದ ಮೀನಿನ ವ್ಯಾಪಾರ

ಆಮದಿನಲ್ಲೂ, ರಫ್ತಿನಲ್ಲೂ, ಇಳಿತ ಉಂಟಾಗಿರುತ್ತದೆ.

ಕೆಳಗಿನದು ಬ್ರಿಟಿಷ ಹಿಂದೂದೇಶದಿಂದ ಹೊರಗೆ ಹೋದ ಮತ್ತು ಬಹೀರ್ ದೇಶಗಳಿಂ ಬ್ರಿಟಿಷ ಹಿಂದೂಸ್ಥಾನಕ್ಕೆ ಬಂದ ಮೀನಿನ ಮೌಲ್ಯದ ಪಟ್ಟಿ —

ವರ್ಷ	ರಫ್ತು	ಆಮದು
	ರೂ	ರೂ
1923—24	68,61,000	29,67,000
1924—25	72,32,000	31,27 000
1925—26	76,14,000	37,72,000
1926—27	75,38,000	38,66,000
1927—28	87,13,000	36,98 000
1928—29	78,64,000	25,76 000
1929—30	73,81,000	26 31,000
1930—31	68,85,000	23,86,000
1931—32	54,24 000	1[illegible],12,000
1932—33	45,71,000	13,66,000
1933—34	44,87 000	15,05,000
1934—35	44,55,000	16,57,000

ಹಿಂದೂದೇಶ ರೈಲ್ವೆಗಳ ಆರ್ಥಿಕ ಸ್ಥಿತಿ.

ಈ ವಾರದ ಅಸೆಂಬ್ಲಿ ಅಧಿವೇಶನದಲ್ಲಿ ಹಿಂದೂದೇಶದ ರೈಲ್ವೆಗಳ ಆರ್ಥಿಕ ಸ್ಥಿತಿಯು ಚರ್ಚೆಗೆ ಬಂತು. ರೈಲ್ವೆ ಇಲಾಖೆಯ ಖರ್ಚನ್ನು ಕಡಿಮೆ ಮಾಡುವ ವಿಚಾರ ಸೂಚನೆಗಳನ್ನು ಕೊಟ್ಟು, ಕಾಂಗ್ರೆಸ್ ಪಕ್ಷದವರಿಂದ ಅನೇಕ ಭಾಷಣಗಳಿದ್ದುವು ರೈಲ್ವೆ ಇಲಾಖೆ ಹೊಣೆಗಾರರಾಗಿರುವ ಸರ್ ಜಾಫ್ರುಲ್ಲಾಖಾನರು, ಈ ಚರ್ಚೆಯನ್ನು ಯೋಗ್ಯವಾದ ರೀತಿಯಲ್ಲಿ ಎದುರಾಯಿಸಿದಂತೆ ಕಾಣುವುದಿಲ್ಲ ನಷ್ಟಗಳು ಉಂಟಾಗಲು ಕೊಟ್ಟ ಇವರ ಕಾರಣಗಳು ಅಷ್ಟು ಯೋಗ್ಯತೆವಾದುವುಗಳೆಂದು ಸದಸ್ಯರಿಗೆ ತೋರಲಿಲ್ಲ ಶ್ರೀ ಪಂತರು, ತಂಡ ರೈಲ್ವೆ ಖರ್ಚಿನ ಕಡಿತದ ಠರಾವ್ ಮಂಜೂರಾತಿ ಹೊಂದಿರುತ್ತವೆ ಈ ಪ್ರಶ್ನೆಯು ಅಸೆಂಬ್ಲಿಯ ಚರ್ಚೆಗೆ ಒಳಗಾಗಿರುತ್ತದೆ ರೈಲ್ವೆ ಖರ್ಚನ್ನು ಕಡಿಮೆ ಮಾಡುವ, ಉತ್ಪತ್ತಿಯನ್ನು ಹೆಚ್ಚಿಸುವ ಅನೇಕ ಹಾದಿಗಳು ಅನೇಕ ಸದಸ್ಯರಿಂದ ತೋರಿಸಲಾದುವು ಆ ವಿಚಾರ ಸರಕಾರವು ಪಡಕೊಂಡ ಕ್ರಮಗಳನ್ನು ಖಾನರು ವಿವರಿಸಿದರು. ಸರಕಾರದ ಅಧಿಕಾರದಲ್ಲಿರುವ ಎಲ್ಲಾ ರೈಲ್ವೆ ಸಂಸ್ಥೆಗಳನ್ನು ಬೆರೆಸಿ, ನಡೆಯುಸುವ ಸೂಚನೆಗಳು ಬಂದಿವೆ. ಯಾಕೆಂದರೆ ಇವುಗಳು ಬೇರೆ ಬೇರೆ ಕಾರ್ಯಿಸುವುದರಿಂದ, ಒಂದೇ ಕಾರ್ಯಕ್ಕಾಗಿ ಅನಾವಶ್ಯಕವಾಗಿ ಹಲವು ಕಡೆಗಳಲ್ಲಿ ಖರ್ಚ ಮಾಡಿದಂತಾಗುತ್ತದೆ. ರೈಲ್ವೆ ಉದ್ಯೋಗಸ್ಥರಿಗೆ ಮುಖ್ಯವಾಗಿ, ಮೇಲ್ಮಟ್ಟದ ಗತಿಯ ಉದ್ಯೋಗಸ್ಥರ ಸಂಬಳವನ್ನು ಕಡಿಮೆ ಮಾಡಿ, ರೈಲ್ವೆಗಳ ಸಲಕರಣೆ ಬೀಳುವ ಸಾಮಾನುಗಳ ಮೌಲ್ಯ ಕಡಿಮೆ ಮಾಡಬೇಕಾಗಿ ಠರಾವುಗಳಾದವು ಕಾಂಗ್ರೆಸ್ ಸದಸ್ಯರು, ಮಾಸಿಕ್ಕೆ ಸದಸ್ಯರಿಗೆ ರೂ ೨೦೦೦ ಮೇಲಿನ ಸಂಬಳವನ್ನು ಕೊಡಬಾರದಾಗಿ, (ಕೆಲವರ ರೂ ೫೦೦) ಸೂಚನೆಗಳನ್ನು ಮಾಡಿದರು. ರೈಲ್ವೆಗಳ ಮೇಲಿನ ಚರ್ಚೆಯು ಮುಂದುವರಿಯುತ್ತಿದೆ

ಹಬಸಿ ರಣರಂಗದ ವಾರ್ತೆಗಳು.

೪೦೦ ಇಟೇಲಿಯಾನರು ಮಡಿದಿರುವರು.

ಅಕ್ಸುಮ್ಮದ ಹತ್ತಿರ ಹಬಸಿಗರಿಗೂ ಇಟೇಲಿಯನರಿಗೂ ಒಂದು ಘೋರ ಯುದ್ಧವು ನಡೆಯಿತು ಸಾದಣ ೪೦೦ ಮಂದಿ ಇಟೇಲಿಯನರು ಮಡಿದಿರುವರು ಅನೇಕರು ಗಾಯಹೊಂದಿರುವರು. ಹಬಸಿಯರು ಇಟೇಲಿಯನರ ಎಲ್ಲಾ ಯುದ್ಧೋಪಕರಣಗಳನ್ನು ವಶಮಾಡಿಕೊಂಡಿರುತ್ತಾರೆ ಎಂಬ ವಾರ್ತೆಯು ಅಡಿಸ್ ಅಬಾಬದಿಂದ ಬಂದಿರುತ್ತದೆ ಆದರೆ ಈದಿನ ದಿವಸ ಯುದ್ಧದ ವಿಷಯ ತರತರದ ಸುದ್ದಿಗಳು ಬರುತ್ತಿವೆ. ಇಟೇಲಿಯಾನರ ಸುದ್ದಿ ಒಂದು ವಿಧ. ಅದೇ ವರ್ತಮಾನವು ಹಬಸಿಯವರಿಂದ ಬೇರೆ ರೂಪದಲ್ಲಿ ಬರುತ್ತಿವೆ ಒಂದು ಕಡೆಯಲ್ಲಿ ಇಟೇಲಿಯಾನರು ಸಂಪೂರ್ಣ ಜಯವಾದ ವಾರ್ತೆ, ಇನ್ನೊಂದೆಡೆಯಿಂದ ಅರ್ಧೂದಾಗಲ್ಲವೆಂದೂ ಹಬಸಿಯವರು ಜಯಶಾಲಿಗಳಾಗುತ್ತಿದ್ದಾರೆಂದೂ, ಇಟೇಲಿಯಾನರು ಹತಾಶರಾಗಿರುವರೆಂದು ವಾರ್ತೆಗಳು ಬರುತ್ತವೆ. ನಿಜವಾದ ವಾರ್ತೆಗಳು ಬರಬೇಕಾದರೆ ಯುದ್ಧವು ಕೊನೆಗೊಳ್ಳಬೇಕು.

ಸರ್ ಸಾಮುವೇಲ್ ಹೋರರ ಪತ್ರ

ಸರ್ ಸಾಮುವೇಲ್ ಹೋರರು ತನ್ನನ್ನು ಆರಿಸಿದ ಚೆಲ್ಸೀ ಡಿವಿಜನಿನ ಕನ್ಸರ್‌ವೇಟಿವ್ ಸಂಘದವರಿಗೆ, ಬಹೀರ್ ವ್ಯವಹಾರಗಳ ಕಾರ್ಯದರ್ಶಿಯ ಹುದ್ದೆಯನ್ನು ತಾನು ಕಳೆಗೊಳ್ಳಲು ಕಾರಣಗಳನ್ನು ಒಂದು ಪತ್ರದಲ್ಲಿ ಸೂಚಿಸಿರುವರು. ನಿನ್ನೆ ಇಂಡಿಯಾ ಸೆಕ್ರೆಟರಿಗಳಾದ ಹೋರರು, ಈಗ ಸ್ವಲ್ಪ ದೇಹಾಲಸ್ಯವುಳ್ಳವರಾಗಿದ್ದು, ಹವೆಗಾಗಿ ಸ್ವಿಟ್ಜರ್‌ಲೆಂಡಿನ ಗುಡ್ಡ ಪ್ರದೇಶದಲ್ಲಿ ವಾಸವಾಗಿರುವರು. ಜರ್ಮನಿಯು ದಿನೆ ದಿನೆ ಪ್ರಬಲ ಹೊಂದುತ್ತಿದೆ. ಅವರ ಸಂಗ್ರಾಮ ಯೋಗ್ಯತೆಯು ದಿನೆ ದಿನೆ ವೃದ್ಧಿಯಾಗುತ್ತಿದೆ. ಪೂರ್ವದಲ್ಲಿ ಜಾಪಾನು ಹೇಗೆ ವರ್ತಿಸುತ್ತದೊ ಅಂತೆಯೆ ಪಾಶ್ಚಾತ್ಯದಲ್ಲಿ ಜರ್ಮನಿ. ಸಾಧ್ಯವಾದರೆ ಸಮಸ್ತ ಯುರೋಪು ಖಂಡವನ್ನು ಹಿಡಿಯುವುದು ಇವರ ಉದ್ದೇಶ. ನಾಜಿ ಸರಕಾರವು ಇದೇ ಧ್ಯೇಯದಿಂದ, ಜರ್ಮನಿಯಲ್ಲಿ ಪ್ರತಿಯೊರ್ವನೂ ಸಂಗ್ರಾಮ ಶೂರನಾಗುವಂತೆಯೂ, ಕೈಗಾರಿಕೆ, ವ್ಯಾಪಾರ ಇತ್ಯಾದಿಗಳಿಂದ ಒಂದು ಮಹಾಯುದ್ಧಕ್ಕೆ ಸಿದ್ಧಮಾಡುತ್ತಿದೆ. ಇಟೇಲಿಯು ಕಳೆದ ಮಹಾಯುದ್ಧದಲ್ಲಿ ಬ್ರಿಟಿಷರೊಡನೆ ಸಹಕರಿಸಿದವರು. ಹೀಗಿರುವಾಗ, ಇಟೆಲಿ-ಹಬಸಿ ಕಲಹವು ಯೋಗ್ಯ ರೀತಿಯಲ್ಲಿ ನಿವಾರಣೆಯಾಗದಿದ್ದರೆ, ಜರ್ಮನಿಯೊಡನೆ ಯುದ್ಧದ ಸಂಭವದಲ್ಲಿ, ಇಟೆಲಿಯ ಸಹಾಯವು ಬಿದ್ದು ಹೋಗದ ಹಾಗೆ, ಸಾಮುವೇಲ್ ಹೋರರು ಆ ತರದ ಸಂಧಿ ಪ್ರಸ್ತಾಪಗಳನ್ನು ಮಾಡಿದಂತೆ. ಒಂದು ಜರ್ಮನಿಯಿಂದಾಗಿ ಪಾಶ್ಚಾತ್ಯದಲ್ಲಿ ಮಹಾ ಕ್ಷೋಭೆಯುಂಟಾಗಿರುತ್ತದೆ. ಸರ್ ಸಾಮುವೇಲ್ ಹೋರರು ಕೂಡ ದಿಕ್ಕು ಕಾಣದವರಾಗಿ, ನ್ಯಾಯವನ್ನು ತ್ಯಜಿಸಿ, ಇಟೆಲಿಗೆ ಹಿತವಾಗುವ ರೀತಿಯಲ್ಲಿ ಶಾಂತಿಸ್ಥಾಪನೆ ಮಾಡಲು ಪ್ರಯತ್ನ ಪಟ್ಟರು. ಅದು ಮಾತ್ರವಲ್ಲ, ಎಲ್ಲಾ ಪಾಶ್ಚಾತ್ಯ ಜನಾಂಗಗಳ ಸರಕಾರಗಳು, ದೊಡ್ಡ ಸಾಲಗಳನ್ನು ಎತ್ತಿ, ಯುದ್ಧ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಸಂಗ್ರಾಮ ಸಿದ್ಧತೆಗಾಗಿ ಬ್ರಿಟಿಷ ಬಜೆಟಿನಲ್ಲಿ ಧಾರಾಳ ದ್ರವ್ಯವು ವಿಂಗಡಿಸಲಾಗಿದೆ. ಸಾಮ್ರಾಜ್ಯದ ಎಲ್ಲಾ ಯುದ್ಧಕಾರ್ಯಕ್ಕೆ ಯೋಗ್ಯವೆನಿಸುವ ಸ್ಥಳಗಳಲ್ಲಿ, ಬ್ರಿಟಿಷರು ತಕ್ಕಬದ್ರತಾ ಏರ್ಪಾಡುಗಳನ್ನು ಮಾಡುತ್ತಿದ್ದಾರೆ. ಈ ಭಾರಿ ಕಲಹ ಪ್ರಾರಂಭವಾಗುವುದು, ಜರ್ಮನಿ ರಷ್ಯಾ ಭೇದದಿಂದ. ಜರ್ಮನಿಯು ರಷ್ಯಾದ ಮೇಲೆ ಬೀಳುವುದು. ಅಲ್ಲದೆ ಹತ್ತಿರವಿರುವ ಪೋಲೆಂಡ, ಜೆಕೊಸ್ಲೊವೆಕಿಯಾ ಇತ್ಯಾದಿಗಳ ಮೇಲೆ ಬಹಳ ಸಿಗಿರುತ್ತದೆ ಜರ್ಮನಿಯಿಂದ ಸಂಪೂರ್ಣ ಪಾಶ್ಚಾತ್ಯದಲ್ಲಿ ಈ ತರದ ದಿಗಿಲು ಉಂಟಾದಾಗ ಹೋರರು ಆ ರೀತಿ ವರ್ತಿಸಿದುದು ನ್ಯಾಯವಲ್ಲವೆ ಎಂದವರ ವಾದ ಹೋರರು ಸ್ವಾಗೂ ಮಾತಾಡಬಲ್ಲರು. ನಮ್ಮ ನವ ರಾಜ ಶಾಸನಕ್ಕೆ ಇವರೆ ಕಾರಣರು ನವರಾಜ ಶಾಸನದ ಕಲ್ಪನಾ ಕಾರ್ಯವು ಸಾಗುತ್ತಿರುವಾಗ, ಇವರ ಪರಿಚಯವು ನಮಗೆ ಸಂಪೂರ್ಣವಾಗಿ ಆಗಿರುತ್ತದೆ. ಇವರು ಸಂಪೂರ್ಣ ಗುಣಹೊಂದಲಿಲ್ಲವಂತೆ. ಇನ್ನೂ ಎರಡು ಮೂರು ತಿಂಗಳು ಅಲ್ಲಿ ನಿಂತು, ಕೊನೆಗೆ ಇಂಗ್ಲಾಂಡಿಗೆ ಮರಳುವರಂತೆ. ಬ್ರಿಟಿಷ ಕೆಬಿನೆಟ್ಟನ್ನು ಹೋಮ್ ಸೆಕ್ರೆಟರಿಗಳಿಗೆ ಸೇರುವರೆಂದು ವಾರ್ತೆ,

ಇದ್ದವರು ಮತ್ತು ಇಲ್ಲದವರು

—ತಾ. ೫ರಲ್ಲಿ, ಮಿ। ಜೋರ್ಜ ಲೆನ್ಸಬರಿಯವರು, ಈಗಣ ಯುದ್ಧಪ್ರಿಯತೆಗೆ, ಸಾಮಗ್ರಿಗಳ ತುಟ್ಟಿಯೇ, ಕಾರಣವೆಂದು ತೋರಿಸಿಕೊಟ್ಟು, ಜಗತ್ತಿನ ಸಮಸ್ತ ರಾಷ್ಟ್ರಗಳು ತಮತಮಗೆ ಬೇಕಾಗುವ ಸರಕುಗಳನ್ನು ಎಲ್ಲೆಲ್ಲಿಂದ ಪಡೆಯಬಹುದೋ ಆ ಪ್ರಾಂತ್ಯಗಳನ್ನು ತಮ್ಮೊಳಗೆ ಒಪ್ಪಂದವಾಗಿ ಹಂಚಿಕೊಳ್ಳುವಂತೆ ಲೀಗ್ ಒಫ್ ನೇಶನ್ಸ್ ಮೂಲಕ ಪ್ರಯತ್ನಿಸಲು ಒಂದು ಪರಿಷತ್ತು ಸೇರಬೇಕೆಂದು ಪಾರ್ಲಿಮೆಂಟಿನಲ್ಲಿ ಸೂಚಿಸಿದರು. ಪಾರ್ಲಿಮೆಂಟಿನಲ್ಲಿ ಇದು ಪರ್ಯಾಲೋಚನೆಗೆ ಅನುಮತಿ ಹೊಂದುದೇ ವಿಶೇಷ. ಆದರೆ ಇದೇ ರೀತಿಯಾದ ಸೂಚನೆಯನ್ನು ಹಿಂದೆ ಸರ್ ಸಾಮುವೆಲ್ ಹೋರರೂ ಜಿನೀವದಲ್ಲಿಯೇ ಮಾಡಿದ್ದರು. ಪರಂತು, ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಲು, ಕನ್ಸರ್‌ವೇಟಿವರು "ಇದ್ದವರಿಗೆ ಇನ್ನೂ ಅವರ ಬದುಕು ಹೆಚ್ಚಬೇಕಾಗಿದೆ; ಇಲ್ಲದವರು, ಇಲ್ಲವೆಂದು ಗುಲ್ಲೆಬ್ಬಿಸಿಯೆ ಇರಬೇಕಾಗಿದೆ" ಎಂಬ ತತ್ವವನ್ನು ಅನುಸರಿಸಿ, ಈ ಸೂಚನೆಯನ್ನು ತಳ್ಳಿ ಹಾಕಿದರು. ಈ ತರ್ಕದಲ್ಲಿ ಕೆಲ ವಿಷಯಗಳು ಹೊರಬಿದ್ದವೆ. "ಯುದ್ಧ ನಂತರದಲ್ಲಿ ಪ್ರತಿಯೊಬ್ಬರು ಸ್ವಾರ್ಥದಿಂದ ನುಂಗಲಿಕ್ಕೇ ಹೊರಟರು; ಜರ್ಮನಿಯ ವಸಾಹತುಗಳು ಇತರರಿಗಾದುವು; ಇಟಲಿಯು ಮಾಡಿದ ಸಹಾಯಕ್ಕೆ ಮರುಭೂಮಿಗಳು ದೊರೆತುವು, ವಾರ್ಸೇಲ್ಸ ಒಪ್ಪಂದದಿಂದ ಹೊಸ ಯುದ್ಧಗಳಿಗೆ ಮೂಲವಾಯಿತು; ಅರಬರು ದಂಗೆಯೆದ್ದು ಸಹಾಯ ಮಾಡಿದುದಕ್ಕೆ ಅವರಿಗೆ ಸ್ವಾತಂತ್ರ್ಯ ಸಿಗಲೇ ಇಲ್ಲ; ಯೆಹೂದಿಯರಿಂದ ಹಣ ದೊರೆತುದಕ್ಕೆ ಅವರಿಗೆ ಪೆಲಿಸ್ತೀನ ಪ್ರಾಂತ್ಯವು ಸಿಗಬೇಕಾಗಿತ್ತು (ನಂಬಿಕೆ ಕೊಟ್ಟಂತೆ); ಅದು ಸಿಗಲಿಲ್ಲ." ಎಂಬೀ ವಿಚಾರಗಳು ಹೊರಬಿದ್ದುವು ಆದರೆ, ಯುದ್ಧಕಾಲದಲ್ಲಿ ವಿಥ್ಯಕ್ಕೆ ವ್ಯವಹಾರಮುಖ್ಯದ ಇದೆ ಎಂದು ಏಕೆ ಮರೆಯಬೇಕು?

(೫ನೇ ಪುಟದಿಂದ ಮುಂದುವರಿದುದು)

ಯನ್ನು ಜುಟ್ಟಿಗೆ ಹಿಡಿದೆಳೆದು, ಬೀದಿಯ ಬಾಗಿಲಿಗೆ ಒಯ್ದು, ಒಂದೇ ಒದೆಯಿಂದ ಹೊರಕ್ಕೆ ದೂಡಿಬಿಟ್ಟನು

× × × × ×

ಕಮಲೆಯು ಈಗಲೂ ತವರ್ಮನೆಯಲ್ಲಿ ಇರುವಳು. ವೆಂಕಟಗಿರಿಗೆ ಎರಡನೆ ಸಂಬಂಧವಾಗಿ ತಿರುಗಿ ಮೂರು ಮಕ್ಕಳಾಗಿರುವುವು

× × × × ×

'ಸಾಧು'ವಿನ ಮರದ ಕೆಲಸ ಮಾತ್ರ ಧನಾಭಾವದಿಂದ ಕಾರ್ಯರೂಪಕ್ಕೆ ಬರಲಿಲ್ಲ 'ಸಾಧು'ವೂ ಕಾರಣಾಂತರದಿಂದ ಕಣ್ಮರೆಯಾದನು. ಆದರೂ ಇಂದಿಗೂ ಆತನ ಭಕ್ತಿಯುಳ್ಳವರನೇಕರು ತಂತಮ್ಮ ಮನೆಗಳನ್ನೇ ಮಠವಾಗಿ ಮಾಡಿಕೊಂಡು, ಸದಾನಂದನ ಭಾವಚಿತ್ರವನ್ನೇ ಮೂರ್ತಾಧಿಪತಿಯಾಗಿಟ್ಟು ಪೂಜಿಸಿ, 'ಸಂತಜೀವನ'ವನ್ನು ಸಾಗಿಸುತ್ತಿರುವರು. ಸ್ವಸ್ತಿ

ಬರುವ ವಾರ:

ಮಿಥ್ಯಾಜೀವನದ ಸತ್ಯಕಥೆಗಳು:

೭. "ಕಂಟಕ ಪರಿಹಾರ"

ಓದಲು ಮರೆಯಬೇಡಿ!

TENDER.

Sealed tenders are invited for the construction of a two storied block for the School, at St. Cecily's Convent, Udipi. The tender must reach the Correspondent of the said school by 3 p.m. March 6th and will be opend on the same day at 4-30 p. m. in the Office of the Correspondent

The Correspondent is not bound to accept the lowest tender or any tender at all. The accepted tender shall enter into a legal bond and deposit an earnest money of Rs. 5000, which will be refunded to the depositor on the completion of the building and the production of a satisfactory Certificate from the Engineer concerned

The plan and specification for work can be had at the office of the Correspondent for perusal.

Udipi, 18-2-36. Correspondent. St Cecily's Convent

ಕಾಸ ಮತ್ತು ಇನ್ನಿತರ ಹೃದ್ರೋಗಿಗಳಿಗೆ.

ಹೃದಯವೇದನೆಯಾಗುವಂತಹ ಕೆಮ್ಮು, ದೇಹಾಲಸ್ಯ ಸರಿಯಾಗಿ ಉಸಿರಾಡಲು ಆಗದಿರುವಿಕೆಯು ಶ್ವಾಸಕೋಶಗಳ ನಿರ್ಬಲತೆಯನ್ನು ಸೂಚಿಸುತ್ತದೆ. ಇನ್ನು ಇನ್ನೂ ಬೇರೆ ಔಷಧಿಗಳನ್ನು ಸೇವಿಸಿ ರೋಗವನ್ನು ಹೆಚ್ಚಿಸಿಕೊಳ್ಳಬೇಡಿ ಕೂಡಲೆ ವಿಷಹಾರಿ, ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿ ಕಾಸವನ್ನು ಕ್ಷಣದಲ್ಲಿ ಹೋಗಲಾಡಿಸಿರಿ ಪೆಪ್ಸ್ ಗುಳಿಗೆಯನ್ನು ಬಾಯಲ್ಲಿ ಹಾಕಿದ ಒಡನೆ ಅದರಿಂದ ಹೊರಟ ಸುವಾಸನೆಯು ಶ್ವಾಸಕೋಶಗಳಲ್ಲಿ ಹಬ್ಬಿ ಅಲ್ಲಿಯ ಕ್ರಿಮಿಗಳನ್ನು ನಾಶಗೊಳಿಸುತ್ತದೆ ಪೆಪ್ಸ್ ಗಂಟಲುನೋವನ್ನೂ ಇನ್ನಿತರ ಹೃದ್ರೋಗಗಳನ್ನು ಗುಣಪಡಿಸಲು ದಿವ್ಯೌಷಧಿ ಬೆಲೆ ಸೀಸೆಯೊಂದಕ್ಕೆ ರೂ 1. ಎಲ್ಲಾ ಔಷಧಿಯ ಅಂಗಡಿಗಳಲ್ಲೂ ಕ್ರಯಕ್ಕೆ ಸಿಗುತ್ತದೆ

ಪೆಪ್ಸ್ ವಿಷಹಾರಿ ಶ್ವಾಸನೀಯ ಗುಳಿಗೆಗಳು.

ಪೆಪ್ಸ್
PEPS

ಯೂರೋಪು ಖಂಡದಲ್ಲಿ ಯುದ್ಧ ಮೋಡಗಳು ಕವಿಯುತ್ತಿವೆ.

ಜರ್ಮನಿಯಿಂದ ಪಾಶ್ಚಾತ್ಯ ಜನಾಂಗಗಳು ಭೀತಿಯುಳ್ಳವಾಗಿವೆ.

ಜರ್ಮನಿ—ಜಪಾನು ಒಪ್ಪಂದವಾಗುವುದೆ?

ಇಟೇಲಿಯ ಮೇಲೆ ಎಣ್ಣೆಯ ನಿರ್ಬಂಧಗಳು ಸದ್ಯಕ್ಕೆ ಜ್ಯಾರಿಯಾಗುವುದಿಲ್ಲ.

ಶ್ರೀ ರಾಮಕೃಷ್ಣಪರಮಹಂಸರ ಶತಾಬ್ದ ಮಹೋತ್ಸವ.

ಶ್ರೀ ರಾಮಕೃಷ್ಣ ಪರಮಹಂಸರ ಶತಾಬ್ದ ಸಮಾರಂಭವನ್ನು ಒಂದು ವರ್ಷದ ತನಕ ಜರಗಿಸಲು ಈ ಒಂದು ವರ್ಷದ ಕಾರ್ಯಕ್ರಮಗಳು ಮೊನ್ನೆ ತಾ ೨೪ರಲ್ಲಿ ಜರಗಿದ ಶ್ರೀ ರಾಮಕೃಷ್ಣ ಮಿಶನಿನ ಸಭೆಯಲ್ಲಿ ನಿರ್ಣಯವಾಗಿರುತ್ತದೆ. ಹಿಂದೂದೇಶದ ಹಿಂದೂಧರ್ಮ ಉದ್ಧಾರಣೆ ಮಾಡಿದವರು ಪ್ರಸಿದ್ಧ ಪುರುಷರು ಮೂವರು, ದಯಾನಂದ ಸರಸ್ವತಿ, ಕೇಶವ ಚಂದ್ರಸೇನ್ ರಾಮಕೃಷ್ಣ ಪರಮಹಂಸರು ಇವರು ೧೯೩೩ರಲ್ಲಿ ಒಂದು ದಿವಸ ಕಲ್ಕತ್ತಾದಲ್ಲಿ ಒಟ್ಟಾಗಿದ್ದರು ಇವರಲ್ಲಿ, ದಯಾನಂದ ಸರಸ್ವತಿಯವರು ಆರ್ಯಸಮಾಜ ಸ್ಥಾಪನಾಚಾರ್ಯರು, ಪವಿತ್ರ ಉಪನಿಷದಗಳಿಂದ ಹಿಂದೂಧರ್ಮವನ್ನು ಭದ್ರಪಡಿಸಿದವರು. ಎರಡನೆಯವರು ಬ್ರಹ್ಮಸಮಾಜದ ನಾಯಕರು. ಮೂರನೆಯವರು ಸರ್ವಜನ ಧರ್ಮವೇ ಹಿಂದೂ ಧರ್ಮದ ಬೋಧನೆ ಎಂದು ಪ್ರಕಟಮಾಡಿದವರು. ಈ ಮೂವರು ಮಹಾ ವ್ಯಕ್ತಿಗಳು ಅಂಧಶ್ರದ್ಧೆಯಿಂದ ನಿಕೃಷ್ಟಸ್ಥಿತಿಯನ್ನು ಹೊಂದಿದ ಹಿಂದೂಧರ್ಮವನ್ನು ಚೇತರಿಸುವಂತೆ ಮಾಡಿದವರು. ಶ್ರೀ ರಾಮಕೃಷ್ಣ ಪರಮಹಂಸರ ಜೀವನಚರಿತ್ರೆಯನ್ನು ಸರ್ವರೂ ತಿಳಿದು ಸಾಧಾರಣೆ ಹೊಂದುವಂತೆ ಅದನ್ನು ಎಲ್ಲಾ ಭಾಷೆಗಳಲ್ಲಿ ಪ್ರಕಟಿಸಿ ಪ್ರಚಾರಮಾಡುವರಾಗಿ ತಿಳಿದು ಬರುತ್ತದೆ.

ಭಾರತೀಯ ವಿಮಾ ಕಂಪೆನಿಗಳ ಅಧಿಕಾರದಲ್ಲಿ ಸರಕಾರವು ಹೆಚ್ಚಿನ ಭಾಗವಹಿಸಬೇಕು

ಭಾರತಖಂಡದಲ್ಲಿ ಅನೇಕ ವಿಮಾಕಂಪೆನಿಗಳು ಇರುತ್ತವೆ. ಆದರೆ ಇವುಗಳ ತನಕ ಅವುಗಳ ವ್ಯವಹಾರದಲ್ಲಿ ಸರಕಾರಕ್ಕೆ ಯಾವ ಅಧಿಕಾರವೂ ಇರಲಿಲ್ಲ. ಆದರೆ ಬಹಳವಾಗಿ ಮುಂದುವರಿಯುತ್ತಿರುವ ಜನರ ಹಣವನ್ನು ಕೂಡಿಸುತ್ತಿರುವ ಈ ಸಂಸ್ಥೆಗಳಲ್ಲಿ ಸರಕಾರವು ಹೆಚ್ಚಿನ ಅಧಿಕಾರವನ್ನು ವಹಿಸಬೇಕಾಗಿಯೂ ನಮ್ಮಲ್ಲಿ ಇಷ್ಟು ಸಂಸ್ಥೆಗಳಿದ್ದರೂ ಕೆಲವು ಬಹಿರ್ ಕಂಪೆನಿಗಳು ಒಳ ಬಂದು ಸ್ಪರ್ಧೆ ನಡೆಯುತ್ತಿದೆ. ಈ ವ್ಯಾಪಾರವು ಕೆಡುವಂತೆ ಮಾಡುತ್ತಿದ್ದಾರೆ. ಹಾಗಾಗದ ಹಾಗೆ ಅವುಗಳು ಹಿಂದೂದೇಶದಲ್ಲಿ ಕಾರ್ಯನಿರ್ವಹಿಸದಂತೆಯೂ ಸರಕಾರವು ಕ್ರಮಗಳನ್ನು ಮಾಡಬೇಕಾಗಿ ವಿಮಾಸಂಘದವರು ಸರಕಾರಕ್ಕೆ ಒಂದು ಮನವಿಮಾಡಿರುವರು.

ಹಿಂದೂದೇಶದ ಕುರಿತು ಹಂಗೇರಿಯಾದ ಕಲಾಜ್ಞರ ಅಭಿಪ್ರಾಯ.

ಹಂಗೇರಿಯಾದ ಪ್ರಸಿದ್ಧ ಕಲಾಜ್ಞರಾದ ಮಿ ಬನ್ನರ್ನರವು, ಕೆಲಕಾಲ ಹಿಂದೂದೇಶದಲ್ಲಿ ಪ್ರವಾಸ ಬೆಳೆಸಿ ಈಗ ಹಿಂತಿರುಗಿರುವರು. ಹಿಂದೂ ದೇಶದ ಅನೇಕ ತತ್ವಜ್ಞಾನಗಳ ಮಹತ್ವವನ್ನು ಬಹಳ ಕೊಂಡಾಡುತ್ತಿದ್ದಾರೆ. ಜಗತ್ತಿನಲ್ಲಿ ಹಿಂದೂದೇಶದಲ್ಲಿ ಕಲ್ಪನೆಯಾದ ತತ್ವಜ್ಞಾನವು ಶ್ರೇಷ್ಠವಾದುದು. ಅದನ್ನು ಪಡಿಸಲು ಅನುಭವಿಸಿದರೆ ಮಾತ್ರ ತಿಳಿಯುವುದು ಎಂದು ಸಾರುತ್ತಿದ್ದಾರೆ. ಮಹಾತ್ಮಾಗಾಂಧಿ, ಕವಿ ರವೀಂದ್ರನಾಥ ಠಾಕೂರರು, ಶ್ರೀಮತಿ ಸರೋಜಿನಿ ನಾಯುಡುರವರು ಇವೇ ಮೊದಲಾದ ಮಹಾ ವ್ಯಕ್ತಿಗಳ ಪರಿಚಯ ಮಾಡಿರುವರು. ಅವರೊಡನೆ ಅನೇಕ ದಿವಸಗಳನ್ನು ಕಳೆದಿದ್ದರು. ಮಹಾತ್ಮಾ ಗಾಂಧಿಯವರ ತತ್ವ ಇತ್ಯಾದಿಗಳನ್ನು ನೋಡಿ ಅವರ ಗುಣಗಳನ್ನು ಪರಿಶೀಲಿಸಿ ಅವರನ್ನು ಬಹಳವಾಗಿ ಗೌರವ ಪೂರ್ವಕ ಮಾತುಗಳಿಂದ ಶ್ಲಾಘಿಸುತ್ತಿದ್ದಾರೆ. ಅನೇಕ ವಿಚಾರಗಳಲ್ಲಿ ಮಹಾತ್ಮಾಜಿಯವರ ಪ್ರೇರಣೆಯು ಇವರ ಮೇಲೆ ಪರಿಣಮಿಸಿರುತ್ತದೆ. ಕವಿರವೀಂದ್ರರ ಕಲಾಜ್ಞಾನ, ಕವಿತೆ ಇತ್ಯಾದಿಗಳನ್ನು ನೋಡಿ ಬೆರಗಾಗಿರುವರು. ಶ್ರೀ ಸರೋಜಿನಿ ದೇವಿಯವರಲ್ಲಿ ಒಂದು ಮಹಾ ಸ್ತ್ರೀರತ್ನವನ್ನು ಕಾಣುವರು.

ಪಂಡಿತ ಜವಾಹರಲಾಲನೆಹರೂರವರು.

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಜವಾಹರಲಾಲರು ವಿಮಾನದಲ್ಲಿ ಪ್ರಯಾಣ ಬೆಳೆಸುತ್ತ ಬರುವ ತಿಂಗಳ ತಾ. ೭ರಲ್ಲಿ ಹಿಂದೂದೇಶಕ್ಕೆ ಬರುವರು. ಇವರ ಪತ್ನಿಯವರ ಆರೋಗ್ಯವು ದಿನೇ ದಿನೇ ವೃದ್ಧಿಹೊಂದುತ್ತಿದೆ. ಹಿಂದೂದೇಶಕ್ಕೆ ಬಂದವರು ಕೆಲವು ಸಮಯ ಪ್ರಯಾಗ ದಲ್ಲಿ ನಿಂತು, ನಂತರ ಮಹಾತ್ಮಾಜಿ, ಶ್ರೀ ಬಾಬೂ ರಾಜೇಂದ್ರ ಪ್ರಸಾದ ಮತ್ತು ಇನ್ನಿತರ ಕಾಂಗ್ರೆಸ್ ಮುಖಂಡರ ಭೇಟಿಮಾಡಿ, ಕಾಂಗ್ರೆಸ್ ವರ್ಕಿಂಗ್ ಕಮಿಟಿ ಕಾರ್ಯಕ್ರಮವನ್ನು ಗೊತ್ತುಮಾಡುವರು. ಇವರ ಲಂಡನ್ ಪ್ರವಾಸವು ಫಲಕಾರಿಯಾಗಿರುತ್ತದೆಂದು ಇವರ ಅಭಿಪ್ರಾಯ.

ಪೋಸ್ಟಾಫೀಸಿನಲ್ಲಿ ಮಿತವ್ಯಯ

ಅಖಿಲ ಭಾರತ ಅಂಚೆ ಮತ್ತು ಆರ್ ಎಂ ಎಸ್ ಸಂಘದ ಪ್ರತಿನಿಧಿಗಳಿಗೂ ಹಿಂದೂದೇಶದ ಪೋಸ್ಟ್ ಮತ್ತು ಟೆಲಿಗ್ರಾಫ್ ಇಲಾಖೆಯ ಡೈರೆಕ್ಟರ್ ಜನರಲ್ ರಾದ ಮಿ ಬೆವೂರರಿಗೂ ಪೋಸ್ಟಾಫೀಸಿನ ಮಿತವ್ಯಯ ಕುರಿತು ಚರ್ಚೆ ನಡೆಯಿಸಲು ಒಂದು ಪರಿಷತ್ತು ಜರಗುವುದು. ಶ್ರೀ ವಿ ವಿ ಗಿರಿ ಮತ್ತು ಎಸ್ ಸಿ ಜೋಶಿಗಳು ಯೂನಿಯನ್ನಿನ ಪರವಾಗಿ ವಾದಿಸುವರು. ಪೋಸ್ಟಾಫೀಸಿನಲ್ಲಿ ಅನೇಕ ಕೆಲಸಗಳ ಕುರಿತು ಉದ್ಯೋಗಿಗಳ ಕುರಿತೂ ಚರ್ಚೆ ನಡೆಯುವುದೆಂದು ತಿಳಿದುಬರುತ್ತದೆ.

ಶ್ರೀ ನವಲ್ ರಾಜರು ತಮ್ಮ ಸದಸ್ಯತನಕ್ಕೆ ರಾಜಿನೆ ಕೊಡಬಾರದೇ'

ಶ್ರೀ ನವಲ್ ರಾಜರ ನೇತೃತ್ವದಲ್ಲಿ ಸಂಗೀತದ ಹೈದರಾಬಾದಿ (ಸಿಂಧ್) ಮುನಿಸಿಪಲ್ ಸದಸ್ಯರು ಮೊನ್ನೆ ಬಿ. ದಾಸರು ತಂದ ಕ್ರಿಮಿನಲ್ ಕೇಸಿನ ಬಿಲ್ಲು ಓಟಿಗೆ ಹಾಕಲಾಗಿ ಎರಡು ಪಕ್ಷ ಸರಿಸಮಾನವಾದ ಮತಗಳು ದೊರಕಿದುದರಿಂದ ಅಧ್ಯಕ್ಷರು ಬಿಲ್ಲಿಗೆ ವಿರೋಧವಾಗಿ ತಮ್ಮ ವೋಟನ್ನು ಉಪಯೋಗಿಸಿದುದರಿಂದ ಆ ಬಿಲ್ಲು ಬಿದ್ದುಹೋಯಿತು. ಶ್ರೀ ನವಲ್ ರಾಜರು ಈ ಸಮಯ ಸಭೆಯಿಂದ ಹೊರಗೆ ಹೋಗಿದ್ದರು. ಇವರ ಓಟು ದೊರೆಯುತ್ತಿದ್ದರೆ ಬಿಲ್ಲು ಮಂಜೂರಾಗುತ್ತಿತ್ತು. ನೇತೃತ್ವ ವಹಿಸಿದ ಇವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರಾದ್ದರಿಂದ ಅವರ ಸದಸ್ಯತ್ವ ಉಳಿದಿದೆ. ಅವರ ಮೇಲೆ ದೋಷಾರೋಪಣೆ ಮಾಡಿ ಅವರು ತಮ್ಮ ಸದಸ್ಯತನಕ್ಕೆ ರಾಜಿನಾಮೆಯನ್ನು ಕೊಡಬೇಕೆಂದು ಕರೆಗಳಾಗಿವೆ. ನವಲ್ ರಾಜರು ತಮ್ಮ ವರ್ತನೆಗೆ ಸರಿಯಾದ ಕಾರಣವನ್ನು ಕೊಡಲಿಲ್ಲ.

ಹಿಂದೂದೇಶದಲ್ಲಿ ಬ್ರಿಟಿಷ—ಫ್ರೆಂಚ್ ವಿವಾದ

ಪಾಂಡಿಚೇರಿಯ ಮುಸಲೀಪಟ್ಟಣದ ಹತ್ತಿರವಿರುವ ಫ್ರೆಂಚರ ಪೇಟೆಯ ವಿಚಾರದಲ್ಲಿ ಬ್ರಿಟಿಷರಿಗೂ ಫ್ರೆಂಚರಿಗೂ ವಿವಾದ ಉಂಟಾಗಿರುತ್ತದೆ. ಅಲ್ಲಿನ ನಿವಾಸಿಗಳು ಫ್ರೆಂಚ್ ಇಂಡಿಯಾ ಸರಕಾರದ ಮೇಲೆ ತಮಗೆ ಸಂಪೂರ್ಣ ಭರವಸೆ ಉಂಟೆಂದು ಠರಾವು ಮಾಡಿರುವರು. ಈ ವಿವಾದವನ್ನು ಜನಾಂಗಸಭೆಯ ಕೋರ್ಟ್ ಆಫ್ ಇಂಟರ್ನೇಶನಲ್ ಲೋ ದಲ್ಲಿ ಇತ್ಯರ್ಥವಾಗುವುದು.

ಮದ್ಯಪಾನ ನಿಷೇಧವೂ, ದಿವಂಗತ ಚಕ್ರವರ್ತಿ ಐದನೇ ಜೋರ್ಜರೂ

ದಿವಂಗತ ಚಕ್ರವರ್ತಿ ಐದನೇ ಜೋರ್ಜರು ಮದ್ಯಪಾನ ನಿಷೇಧಚಳವಳದಲ್ಲಿ ಕುತೂಹಲವನ್ನು ವಹಿಸಿದ್ದರು. ಕಳೆದ ಮಹಾ ಯುದ್ಧದ ನಂತರ, ಈ ಕೆಟ್ಟಚಾಳಿಯನ್ನು ತಮ್ಮ ದೇಶದಿಂದ ಹೋಗಲಾಡುವ ಕಾರ್ಯದಲ್ಲಿ ನಿರತರಾಗಿದ್ದರು ಮತ್ತು ಸಮಸ್ತ ಬ್ರಿಟಿಷ ಸಾಮ್ರಾಜ್ಯಕ್ಕೆ ಒಂದು 'ದೃಷ್ಟಾಂತವಾಗುವಂತೆ, ತಾನೂ ತನ್ನ ಕುಟುಂಬವು ಮದ್ಯಪಾನಗಳನ್ನು ಸೇವಿಸುವುದಿಲ್ಲವೆಂದು ನಿರ್ಧಾರ ಮಾಡಿದ್ದರು. ಇದರಿಂದಾಗಿ ಬ್ರಿಟನಿನಲ್ಲಿ ಈ ಮದ್ಯಪಾನ ನಿಷೇಧ ಕಾರ್ಯ ಚಳವಳವು ಬಹಳ ಯಶಸ್ವಿಯಾಗಿ ನಡೆದಿರುತ್ತದೆ. ಇನ್ನು ಮುಂದಕ್ಕೂ ಈ ಚಳವಳವು ಜಯಶಾಲಿಯಾಗುವಂತೆ, ಸರಕಾರವು ಸಹಕರಿಸುವಂತೆ, ಹಿಂದೂದೇಶದಲ್ಲೂ ಸರಕಾರವು ಮದ್ಯಪಾನ ನಿಷೇಧ ಚಳವಳ ಕಾರ್ಯವನ್ನು ನಡೆಯಿಸುವ ರೀತಿ ತಿಳಿದುಬರುತ್ತದೆ.

ನಮ್ಮನ್ನು ಹಿಯಾಳಿಸುವ ಇಂಗ್ಲೆಂಡಿನಲ್ಲಿ ಏನು ನಡೆಯುತ್ತದೆ?

ಭಾರತೀಯರು ಬರೇ ಅಂಧಶ್ರದ್ಧೆಯಿಂದ ನಡೆಯುವವರು ಎಂದು ಆಂಗ್ಲೇಯರ ಅಭಿಪ್ರಾಯ. ನಮ್ಮ ಕೆಲವು ನಂಬಿಕೆಗಳನ್ನು ಇವರು ಹಿಯಾಳಿಸುತ್ತಿದ್ದಾರೆ. ಆದರೆ ಇಂಗ್ಲೆಂಡಿನಲ್ಲಿ ಎರಡು ಘಟನೆಗಳನ್ನು ಇಲ್ಲಿ ಕೊಡಲಾಗಿದೆ. ಅದ್ದರಿಂದ ಆಂಗ್ಲೇಯರೂ ಅಂತಹ ನಂಬಿಗೆಗಳಿಂದ ಹೊರಗಿಲ್ಲವೆಂದೂ, ನಮ್ಮನ್ನು ಅವರು ಹಿಯಾಳಿಸುವುದರಲ್ಲಿ ಅರ್ಥವಿಲ್ಲವೆಂದೂ ವ್ಯಕ್ತವಾಗುತ್ತದೆ. ಅಲ್ಲಿ ದೊಡ್ಡದೊಂದು ಆಸ್ಪತ್ರೆಯನ್ನು ಕಟ್ಟಿಸಲಾಯಿತು. ಇದರ ಮೇಲೆ ಒಂದು ಕೋಲಿಗೆ ಸರ್ಪವು ಸುತ್ತಿರುವ ಒಂದು ಚಿತ್ರವನ್ನು ಇಡಲಾಯಿತು. ಪ್ರಾಚೀನ ಗ್ರೀಕರಿಗೆ ಇದು ರೋಗಗಳನ್ನು ಉಪಶಮನಗೊಳಿಸುವ ಸಂಕೇತ. ಆದರೆ ಈ ಆಸ್ಪತ್ರೆಯು ಪ್ರಾರಂಭೋತ್ಸವ ನಡೆದ ಎರಡು ದಿವಸಗಳಲ್ಲಿ ಬಂದ ಬಲವಾದ ಗಾಳಿ ಮಳೆಯಿಂದಾಗಿ ಅಲ್ಲಿನ ಕೆಲವರು ಮೃತರಾದರು. ಅಲ್ಲಿನ ಜನರು ಈ ದುರ್ಘಟನೆಯು ಆ ಕಟ್ಟಡದ ಮೇಲಿರುವ ಕುರುಹಿನಿಂದಾಗಿ ಎಂದು ವಾದಿಸತೊಡಗಿದರು. ಅದನ್ನು ಅಲ್ಲಿಂದ ತೆಗೆಯಲಾಯಿತು. ಹಾಗೆಯೆ ಅಲ್ಲಿನ ವೇಲ್ಸ್ ಎಂಬಲ್ಲಿಂದ ಭೂತಗಳ ಕಾಟವಿರುವುದೆಂಬ ವಾರ್ತೆಯೂ ಬಂದಿರುತ್ತದೆ.

ಜರ್ಮನಿಯೊಡನೆ ಅದಲುಬದಲು ವ್ಯಾಪಾರ.

ಜರ್ಮನ್ ಸರಕಾರವು ತಮ್ಮ ವ್ಯಾಪಾರವು ಅದಲು ಬದಲು ಕ್ರಮದಲ್ಲಿ ಆಗಬೇಕೆಂದು ಇತ್ಯರ್ಥಮಾಡಿರುತ್ತದೆ. ಇವರು ಹಿಂದೂದೇಶದಿಂದ ಅನೇಕ ಕಚ್ಚಾ ಸಾಮಗ್ರಿಗಳನ್ನು ಪಡೆಯುತ್ತಿದ್ದಾರೆ. ಅವುಗಳ ಹಣದ ರೂಪದಲ್ಲಿ ಕ್ರಯಕೊಡುವ ಬದಲಾಗಿ ಅವರಲ್ಲಿ ತಯಾರಾದ ಸಾಮಾನುಗಳಲ್ಲೇ ಕ್ರಯಕೊಡುತ್ತಿದೆ. ಇವರ ವ್ಯಾಪಾರದ ಕ್ರಮವಾಗಿರುತ್ತಿದೆ. ಈ ತರದ ವ್ಯಾಪಾರ ನಡೆಸುವ ಹಿಂದೀ ವರ್ತಕರಿಗೆ ಕೆಲವು ಕ್ರಮಗಳ ಹೆಂಬರ್ಗ ನಲ್ಲಿರುವ ಇಂಡಿಯನ್ ಟ್ರೇಡ್ ಕಮಿಶನರರಿಂದ ಮಾಡಲಾಗಿದೆ.

ಹರಿಜನರಿಗೆ ಗುರುಮಂತ್ರವು ಕೊಡಲಾಯಿತು

ಮೊನ್ನೆ ಶಿವರಾತ್ರಿ ದಿವಸ ಪಂಡಿತ ಮಾಳವೀಯರು ಕಾಶಿಯ ಗಂಗಾ ತೀರದಲ್ಲಿ ಹರಿಜನರೊಡನೆ ಕೂಡಿ ಅನೇಕ ಹರಿಜನರಿಗೂ ಮತ್ತು ಇತರ ಹಿಂದೂಗಳಿಗೂ ಪವಿತ್ರ ಗುರುಮಂತ್ರ ಧಾರಣೆಯನ್ನು ಮಾಡಿರುವರು. ಅವರು ಬಹಳ ಪಟುವಾಗಿ ಜೀವರ್ಮಾನ ನಡೆಯಿಸಬೇಕಾಗಿ ಕೋರಿ ಭಾಷಣಮಾಡಿದರು.

ಹಿಂದೂದೇಶದ ವ್ಯಾಪಾರವು

ಸಂಯುಕ್ತ ಪ್ರಾಂತ್ಯಗಳ ವರ್ತಕಸಂಘದ ವಾರ್ಷಿಕೋತ್ಸವ ಸಮಯದಲ್ಲಿ ಅದರ ಅಧ್ಯಕ್ಷರು ಹಿಂದೂದೇಶದ ವ್ಯಾಪಾರಸ್ಥಿತಿಯು ಅಷ್ಟು ಉತ್ತಮವಾಗಲಿಲ್ಲವೆಂದೂ, ಈಗ ಭಂಗಾರವು ಹೊರಗೆ ಹೋಗುವುದರಿಂದ ವ್ಯಾಪಾರದ ನಿಜವಾದ ಸ್ಥಿತಿಯು ತಿಳಿಯಲಿಲ್ಲವೆಂದೂ ಸ್ವಲ್ಪ ಸಮಯದಲ್ಲಿ ವ್ಯಾಪಾರವನ್ನು ಉದ್ಧರಿಸುವ ಕೆಲವು ಕರಾರು ಇತ್ಯಾದಿಗಳನ್ನು ಮಾಡದಿದ್ದರೆ ರಿಸರ್ವ್ ಬ್ಯಾಂಕಿಗೂ ಸರಕಾರಕ್ಕೂ ಬಹಳ ಭಯಂಕರ ಸ್ಥಿತಿ ಒದಗುವುದೆಂದೂ ಹಿಂದೂದೇಶದ ಘಾರಾಕ ಹಣವು ಹೊರಗೆ ಹರಿದು ಹೋಗುವುದೆಂದು ಭಾಷಣಮಾಡಿದರು.

ಮುಸ್ಲಿಮರಿಗೆ ವಿದ್ಯಾಭ್ಯಾಸ.

ಅಖಿಲ ಭಾರತ ಮುಸ್ಲಿಮ ವಿದ್ಯಾಭ್ಯಾಸ ಪರಿಷತ್ತಿನ ೪೭ನೇ ಅಧಿವೇಶನವು ರಾಮಪುರದಲ್ಲಿ ಆಘಾಖಾನರ ಅಧ್ಯಕ್ಷತೆಯಲ್ಲಿ ಜರಗಿತು. ಭರತಖಂಡದ ಎಲ್ಲಾ ದಿಕ್ಕುಗಳಿಂದ ಸಾಧಾರಣ ೫೦೦೦ ಪ್ರತಿನಿಧಿಗಳು ಬಂದು ನೆರೆದಿದ್ದರು. ಮುಸ್ಲಿಮರ ವಿದ್ಯಾಭ್ಯಾಸದ ಕುರಿತು ಅನೇಕ ಠರಾವುಗಳಾದುವು.

ಇಟೇಲಿಯ ಮೇಲೆ ಎಣ್ಣೆಯ ನಿರ್ಬಂಧನಗಳು ಜ್ಯಾರಿಯಾಗುವವೆ?

ಇಟೇಲಿಯ ಮೇಲೆ ಎಣ್ಣೆಯ ನಿರ್ಬಂಧನಗಳನ್ನು ತರುವುದೊ ಬೇಡವೊ, ಎಂದು ಜನಾಂಗ ಸಭೆ ೧೯೩೫ರ ಡಿಶಂಬರದಿಂದ ಆಲೋಚಿಸ ತೊಡಗಿದೆ. ಇಟೇಲಿಯು ಬೇಸರಗೊಳ್ಳುವಂತೆ ನಿರ್ಬಂಧನಗಳು ಸಂಪೂರ್ಣ ಫಲಕಾರಿಯಾಗುವಂತೆ ಎಣ್ಣೆಯ ನಿರ್ಬಂಧನಗಳು ಅತಿಗತ್ಯವೆಂದೂ ಸಮಸ್ತ ಜಗತ್ತು ಅಭಿಪ್ರಾಯಪಡುತ್ತದೆ. ಈ ಎಣ್ಣೆ ನಿರ್ಬಂಧನ ಹೇಗೆ ಪರಿಣಮಿಸುವವೆಂದು ಪರಿಶೀಲಿಸಲು ಅನುಭವಶಾಲಿಗಳ ಒಂದು ಸಮಿತಿಯು ಅನೇಕ ಸಮಯದಿಂದ ಶ್ರಮಪಡುತ್ತಿದೆ. ಈ ವಿಚಾರದಲ್ಲಿ ಅನೇಕ ಅತಂಕಗಳು ಬರುವ ಸಂಭವಗಳಿವೆ. ಆದುದರಿಂದ ಸದ್ಯಕ್ಕೆ ಎಣ್ಣೆಯ ನಿರ್ಬಂಧನಗಳು ಜೀವಕ್ಕೆ ಬರುವ ಹಾಗಿಲ್ಲ.

ಜರ್ಮನಿ ಮತ್ತು ಪಾಶ್ಚಾತ್ಯದ ಇತರ ಜನಾಂಗಗಳು

ಕಳೆದ ಮಹಾ ಯುದ್ಧದ ನಂತರ ಜರ್ಮನಿಯು ನಿಶಸ್ತ್ರರಾಗಬೇಕೆಂದು, ಯುದ್ಧ ಸನ್ನಾಹಗಳನ್ನು ಮಾಡದಂತೆಯೂ ನಿರ್ಬಂಧಗಳನ್ನು ಹಾಕುವ ಲೋಕಾರ್ನೊ ಒಪ್ಪಂದವು ಜರ್ಮನಿಗೂ ಪಾಶ್ಚಾತ್ಯದ ಇತರ ಜನಾಂಗಗಳಿಗೂ ಆಗಿತ್ತು. ಈ ಪೆಕ್ಟಿನಿಂದಲೆ ಜರ್ಮನಿಯು ಜನಾಂಗ ಸಭೆಯ ಸದಸ್ಯತನವನ್ನು ಪಡೆದುದು. ಇದರಿಂದ ಜರ್ಮನಿಯು ತನ್ನ ರ್‍ಹೈನ್‌ಲೇಂಡ ಪ್ರದೇಶದಲ್ಲಿ ಸೈನ್ಯಸಮೂಹವನ್ನು ಇಡಬಾರದೆಂದು ಶರ್ತಗಳಾಗಿದ್ದವು. ಆದರೆ ನಾಜಿ ಸರಕಾರವು ಇತ್ತೀಚೆಗೆ ಮೂರು ವರ್ಷಗಳಿಂದ ತನ್ನ ಸಂಗ್ರಾಮ ಯೋಗ್ಯತೆಯನ್ನು ಬಹಳವಾಗಿ ಹೆಚ್ಚಿಸಿದೆ. ಈ ಲೋಕಾರ್ನೊ ಪೆಕ್ಟನ್ನು ಅವರು ಈಗ ಮನ್ನಿಸುವುದಿಲ್ಲ. ಜರ್ಮನಿಯಿಂದ ಕಳೆದುಹೋದ ವಸಾಹತುಗಳು ಪ್ಲೆಬಿಸ್ಯಟಿನಿಂದ (ಮತಗಣನೆ) ಅವರಿಗೆ ಕೊಡಲಾಗುವುದೆಂದು ತಿಳಿದು ಬರುತ್ತದೆ. ಆದರೆ ಜರ್ಮನಿಯು ವರ್ಸೇಲ್ ಒಪ್ಪಂದವನ್ನು, ಇತರ ಪೆಕ್ಟುಗಳನ್ನು ಮುರಿದುದು. ಪಶ್ಚಿಮ ಯೂರೋಪಿನ ಕೆಲವು ಜನಾಂಗಗಳು ಸಹಿಸುವಂತಿಲ್ಲ. ಆದರೆ ಜನಾಂಗಸಭೆಯ ಹೊರಗೆ ಹೋದ ಜರ್ಮನಿಯು ಈ ಒಪ್ಪಂದಗಳನ್ನು ಮನ್ನಿಸುವುದೆ? ಹೀಗಾಗಿ, ಈ ಜನಾಂಗಗಳಿಗೆ ಸಮಾಧಾನವಾಗುವ ರೀತಿ ಜರ್ಮನಿಯು ಒಪ್ಪಂದಗಳನ್ನು ಮಾಡುವ ಹಾಗಿಲ್ಲ. ಜರ್ಮನಿಯ ಈ ವರ್ತನೆಯನ್ನು ಇಂಗ್ಲೆಂಡು ಸಹಿಸುವುದೆ? ಜರ್ಮನಿಯು ಪುನಹ ಶಸ್ತ್ರಧಾರಿಯಾಗುವ ಕಾರ್ಯವನ್ನು ಪ್ರಾರಂಭಮಾಡಿದಾಗ ಬ್ರಿಟಿಷರು ಮತ್ತು ಫ್ರೆಂಚರ ಬರೆ ಒಂದು ಪ್ರತಿಕೂಲೆಯನ್ನು ಕಳುಹಿಸಿ ಸುಮ್ಮನೆ ಕುಳಿತರು. ಆದರೆ ನಂತರ ಬ್ರಿಟಿಷರು ಇವರೊಡನೆ ಒಂದು ಒಪ್ಪಂದವನ್ನು ಮಾಡಿದರು. ಇದರಿಂದ ಜರ್ಮನಿಯು ತನ್ನ ನೌಕಾಬಲವನ್ನು ವೃದ್ಧಿಮಾಡಲು ಅವಕಾಶ ದೊರಕಿದಂತಾಯಿತು. ಬ್ರಿಟಿಷರ ಈ ವರ್ತನೆಯನ್ನು ಫ್ರೆಂಚರು ಖಂಡಿಸಿದ್ದರು. ಆದರೆ ಈಗಿನ ಅವಸ್ಥೆಯಲ್ಲಿ ರಷ್ಯಾ—ಜರ್ಮನ್ ಕಲಹ. ಜರ್ಮನಿಯು ಆಸ್ಟ್ರಿಯಾವನ್ನು ನುಂಗುವ ಪ್ರಯತ್ನಗಳನ್ನು ಮಾಡುತ್ತಿರುವಾಗ ತನ್ನ ಸುತ್ತಮುತ್ತಲಿರುವ ಅಲ್ಪ ಸಂಖ್ಯಾತ ಜನಾಂಗಗಳನ್ನು ತನ್ನ ಬದಿಗೆ ಸೇರಿಸಿಕೊಂಡು ಜರ್ಮನಿಯು ಗಡಿಯನ್ನು ಪ್ರಸರಿಸುವಂತೆ ಪ್ರಯತ್ನಗಳು ನಡೆಯುತ್ತಿವೆ. ಜಪಾನ—ಜರ್ಮನಿ ಈ ಕಕ್ಷೆಯನ್ನು ಯ ಪ್ರಾತಿನಿಧ್ಯವಾಗಿರಲು ಇಂಗ್ಲೆಂಡಿನ ರೀತಿಯಲ್ಲಿ ಪ್ರಸಾರ ಮಾಡುವುದೆಂದು ಹೇಳಲು ಆಗದು. ಜಪಾನು ಹೇಗ್ ನೌಕಾಪರಿಷತ್ತಿನಿಂದ ಹೊರಗೆ ಹೋಗಿರುತ್ತದೆ. ಮಾತ್ರವಲ್ಲದೆ ಪೂರ್ವದಲ್ಲಿ ಕಷ್ಟವನ್ನು ಕೊಡಲು ಪ್ರಾರಂಭ ಮಾಡಿರುತ್ತದೆ. ಅಲ್ಲದೆ ಮೊನ್ನೆ ನಡೆದ ನೌಕಾಪರಿಷತ್ತಿನಲ್ಲಿ ಕೆಲಸಗಳು ಹೆಚ್ಚಿವೆ. ಕರಾರು ಯಾವತ್ತು ಒಪ್ಪಂದಗಳಾಗಲಿಲ್ಲ. ಇದನ್ನೆಲ್ಲಾ ನಿರೀಕ್ಷಿಸಿದರೆ ಭೂಗೋಳವು ಇನ್ನೊಂದು ಮಹಾ ಯುದ್ಧಕ್ಕೆ ಸಿದ್ಧವಾಗುತ್ತಿದೆಂದು ವ್ಯಕ್ತವಾಗುತ್ತದೆ. ಈ ಭಾರ ಜರ್ಮನಿಯವರಿಗೆ ಜಪಾನಿಯರ ಸಹಕಾರವು ಸಿಗುವುದು ಖಂಡಿತ. ಸಂಯುಕ್ತ ಅಮೇರಿಕವು ಹಾಗೂ ನ್ಯೂಟ್ರಲ್ ಇಲ್ಲಬೇಕಾಗಿ ಕರಾರುಗಳಾಗಿವೆ. ಇವರೆಲ್ಲರೂ ಹಬಸಿ ಇಟೇಲಿ ಕಲಹದ ಮಹತ್ವವು ಕಳೆದು ಹೋಗಿರುತ್ತದೆ.

ಅನುಕ್ರಮಣಿಕೆ.

ಸೋಟಗಳು
ನವರಾಜ ಶಾಸನವು ನಮಗೆ ಒಪ್ಪುವ
ಸಾಧುವಿನ ಸಾಧ್ವಿಯರು
ಜಾನುವಾರುಗಳ ಅಕ್ಕೆ
ವಿವಿಧ ಸಮಾಚಾರಗಳು
ಗ್ರಲೇಖ
ಅಥ ಕಂದಾಯ ಫಲಂ
ಮಂಗಳೂರು, ತಾಲೂಕುಗಳಿಂದ
ಸ್ಫುಟವಿಚಾರಗಳು
ರ್ತಮಾನ ಸಂಗ್ರಹ
ವನಿತಾ ವಿಭಾಗ
ನಿಮಗೆ ತಿಳಿದಿರುವುದೇ?

ಸ್ವದೇಶಾಭಿಮಾನಿ.

೨೮ನೇ ಶುಕ್ರವಾರ ಫೆಬ್ರವರಿ ೧೯೩೬

'ಅಥ ಕಂದಾಯ ಫಲಂ'

ಶಾಲಿವಾಹನ ಶಕವರ್ಷಕ್ಕಿನ್ನು ಮೂರು ವಾರಗಳಿವೆ, ಆಗ ತಾನೆ ಹೊಸ ಸಂವತ್ಸರದ ಪಂಚಾಂಗದಲ್ಲಿ ಕಂದಾಯ ಫಲವನ್ನು ಓದುವ ಹಿಂದುಗಳ ವಾರ್ಷಿಕ ಸರಕಾರದ ಕಂದಾಯ ವರ್ಷವು ಎಪ್ರಿಲ್ ತಿಂಗಳಲ್ಲಿ ಪ್ರಾರಂಭಿಸುವುದಾದ ಕಾರಣ, ಆಯಾ ಪ್ರಾಂತಿಕ ಸರಕಾರಗಳು ತಮ್ಮ ಆಡಳಿತಕ್ಕೊಳಪಟ್ಟ ಪ್ರಾಂತದ ಕಂದಾಯ ಫಲಗಳನ್ನು ಈಗಲೆ ಪ್ರಕಟಪಡಿಸಲು ಪ್ರಾರಂಭಿಸಿವೆ ಸಂವತ್ಸರ ಪಂಚಾಂಗ ಫಲವೂ ಗುಣಿತ ದೋಷದಿಂದ ಹೆಚ್ಚು ಕಡಮೆ ತೋರುವುದಿರುವಂತೆಯೆ, ಸರಕಾರದ ಕಂದಾಯ ಸಂವತ್ಸರದ ಫಲವೂ ಗುಣಿತ ದೋಷದಿಂದ, ಅಂದಾಜು ಒಂದು ಬಗೆ, ವಾಸ್ತವವೊಂದು ಬಗೆಯಾಗುವುದು. ಸಾಮಾನ್ಯವೇ ಆಗಿದೆ ಆಯವನ್ನು ಕಡಮೆಯಾಗಿ ಗುಣಿಸಿ, ವ್ಯಯವನ್ನು ಹೆಚ್ಚಾಗಿ ತೋರಿಸುವುದೂ ಇದೆ ಹೀಗಿದ್ದರೂ, ವರ್ಷಾಂತ್ಯದಲ್ಲಂತೂ ಸ್ಥಿತಿ ವಿಧಿಕವೇ ಆಗುವುದಷ್ಟೆ ಸದ್ಯಕ್ಕೆ ಹೊರಬಿದ್ದ ಅಲ್ಪಪ್ರಾಂತಿಕ ಸರಕಾರಗಳ ಬಜೇಟುಅಂದಾಜುಗಳನ್ನು ನೋಡುವ

೧೯೩೬-೩೭ನೆ ವರ್ಷದಲ್ಲಿ ಸ್ವಲ್ಪವಾದರೂ ಮಿಗತೆ ಹಣವಿರುವಂತೆ ತೋರಿಸುವ ಸರಕಾರವು ಮುಂಬಾಯಿ ಪ್ರಾಂತದ್ದು, ವರ್ಷಾಂತ್ಯದಲ್ಲಿ ೪೧೯೦೦ ರೂಪಾಯಿ ಉಳಿತಾಯವಿರಬಹುದು. ಹಾಗೆಂದು ಖಜಾನಾ ಮಂತ್ರಿಗಳು ತಮ್ಮ ಸಂಕಷ್ಟಗಳನ್ನೇ ಹೇಳುತ್ತ, ಮೆಸ್ಟನ್ ಎವಾರ್ಡಿನ ಪರಿಣಾಮದಿಂದ ನಾವಿನ್ನೂ ಸರಿಯುತ್ತ ಅನ್ಯಾಯ ಹೊಂದಿಯೇ ಇದ್ದೇವೆ ಎನ್ನುತ್ತಾರೆ ಅದರಲ್ಲೂ ವ್ಯಾಪಾರದ ಮುಗ್ಗಟ್ಟು [ಇದು ಎಲ್ಲ ಪ್ರಾಂತಗಳಿಗೂ ಇದೆಯಷ್ಟೆ, ಮುಂಬಾಯಿಗೇನು ವಿಶೇಷ?] ಮುಂಬಾಯಿಯ ಬೆನ್ನೆಲುಬುವನ್ನು ಮುರಿದಿದೆಯಂತೆ ಎಲ್ಲಕ್ಕೂ ವಿಪರೀತವಾಗಿ ಖಜಾನಾ ತುಂಬಾ ಹಣ ಕೂಡಿಸಿಟ್ಟ ನಮ್ಮ ಪ್ರಾಂತದವರ ಮೇಲೆಯೆ ಆ ಎವಾರ್ಡಿನ ಏಟು ಬಲವತ್ತಾಗಿ ಬಿದ್ದಿದೆ, ಆದರೂ, ನಾವೇಕೆ ಅಷ್ಟು ಜೋರಾಗಿ ದೂರುತಿಲ್ಲವೊ ತಿಳಿಯದು

ಬಂಗಾಳ ಸರಕಾರವು, ಆಯವ್ಯಯಗಳನ್ನು ಸರಿಪಡಿಸಲು ಪ್ರಯತ್ನಿಸುವುದೆ ಇಲ್ಲ, ಅದು ಸಾಧ್ಯವಲ್ಲ. ಎಣಿಕೆಯ ಪ್ರಕಾರ ಎಪ್ಪತ್ತು ಲಕ್ಷ ರೂಪಾಯಿ ನಷ್ಟವಾಗಬೇಕಾಗಿದ್ದಿತು,—ಪುಣ್ಯದಿಂದ ಅದು (ಐದು ಲಕ್ಷಕ್ಕಿಳಿದಿದೆ) ಹದಿನೈದು ವರ್ಷಗಳ ನಷ್ಟಗಳ ಅನುಭವದಿಂದ, ಖಜಾನಧಿಪರು ಮುಂದಣ ವರ್ಷವೂ ಸುಮಾರು ೫೧ ಲಕ್ಷ ರೂಪಾಯಿ ನಷ್ಟ ತೋರುವ ರೀತಿಯ ಬಜೇಟನ್ನು ತಯಾರಿಸಿರುವರು. ಕಳೆದ ವರ್ಷದ ಬಜೇಟಿನಲ್ಲಿ ಲೆಕ್ಕ ಹಿಡಿದದ್ದ ೪೦ ಲಕ್ಷ ಕಡಮೆ ಆಯವೇನು ಸ್ವಾಮಾನ್ಯದ್ದೇ? ಹಾಗೆಯೇ, ಈಗ ೫೧ ಲಕ್ಷ ವ್ಯಯಾಧಿಕ್ಯ ತೋರಿಸಿರುವುದೇಕೆ? "ಇಂಡಿಯಾ ಸರಕಾರವು ತನ್ನ ಬೊಕ್ಕಸದಿಂದ ಈ ಗುಂಡಿಯನ್ನು ಭರ್ತಿಮಾಡಲು ಹಣ ಒದಗಿಸಲೆಂದು" ಕಾರಯಿಕೆಯಿದೆ.

ಸಂಯುಕ್ತಪ್ರಾಂತದಲ್ಲಿ ೭೩ಲಕ್ಷರೂಪಾಯಿ ನಷ್ಟವಾಗುವಂತಿದೆ, ಅದಕ್ಕೆ ಒಂದು ಸಾಲ ಎತ್ತುವರಂತೆ. ಅಲ್ಲಿಯ ಸರಕಾರಗಳಿಗೆ ಸಾಲ ಎತ್ತುವ ಅಭ್ಯಾಸ ಬಹಳವಿದೆ, ಇದು ಉತ್ತಮವಾದುದಲ್ಲ ಆದರೆ ಬೇರೆ ತೆರಿಗೆ ವಿಧಿಸಲು ಅವಕಾಶವಿಲ್ಲ ಹೊಸ ತೆರಿಗೆಯನ್ನು ಕೌನ್ಸಿಲು ಮಂಜೂರು ಮಾಡುವುದಿಲ್ಲ, ಇಂಡಿಯಾ ಸರಕಾರವು ಸಹಾಯ ಮಾಡಬಹುದೋ ಎಂಬ ಆಸೆಯಿದೆ, ಅಷ್ಟೆ

ಬಿಹಾರ–ಒರಿಸಾ ಸರಕಾರವು ಸುಮಾರು ೧೨ ಲಕ್ಷ ರೂಪಾಯಿ ಹೆಚ್ಚಿನ ವ್ಯಯವನ್ನೇ ತೋರಿಸಿದೆ ಸಾಲವಿಲ್ಲ, ಆದರೂ, ಅತ್ಯಾವಶ್ಯಕವಾದ ಇಲಾಖೆಗಳನ್ನೂ ಉಪವಾಸವಿರಿಸಿ ಈ ಪ್ರಾಂತವು [ಮದ್ರಾಸಿನಂತೆಯೆ] ಉಳಿದುಕೊಂಡಿದೆ ಮದ್ರಾಸು ಪ್ರಾಂತವೂ ಹೀಗೆಯೆ ಲೆಕ್ಕಪತ್ರ ಪ್ರಕಟಿಸಬಹುದು ಪ್ರಾಂತದಲ್ಲಿ ಎತ್ತಲಾಗುವ ಇನ್ಕಂಟೇಕ್ಸ ಹಣದಿಂದ ಇಂಡಿಯ ಸರಕಾರವು ಸ್ವಲ್ಪ ಮೊಬಲಗನ್ನು ಹಿಂದಕ್ಕೆ ಕೊಟ್ಟರೆ, ವ್ಯಯಕ್ಕೆ ಬಹಳ ಆಧಾರವಾದೀತು? ಮದ್ರಾಸು ಪ್ರಾಂತದಲ್ಲಿ ಇಲಾಖೆಗಳು ವ್ಯಯಿಸುವುದು, ಬಂಗಾಳ, ಮುಂಬಾಯಿ ಪ್ರಾಂತಗಳಲ್ಲಿರುವ ವ್ಯಯಕ್ಕಿಂತ ತೀರ ಕಡಮೆ ಪ್ರಜಾಹಿತಕರವಾದ ಇಲಾಖೆಗಳಲ್ಲಿ ಖರ್ಚು ಸರಕಾರದ ಜಿಪುಣತನದಿಂದ, ನಡೆಯುತ್ತಿದೆ ಸರಿಯಾಗಿ ವ್ಯಯಕ್ಕೆ ಕೈಹಾಕಿದರೆ, ಖಜಾನೆಗೆ ದೇವರೇ ಗತಿ ಹೀಗೆ ಅರೆ ಉಪವಾಸಿ, ನಿತ್ಯ ಸಂತುಷ್ಟಿಯಾಗಿಯೆ, ನಮ್ಮ ಪ್ರಾಂತವು ಬೇಕಾದುದನ್ನು ಪಡೆಯದೆ ಇತರರಿಗೆ ಉಂಬಳಿ ಸಿಗುವಂತೆ ಸಹಾಯಮಾಡುತ್ತಿದೆ ನಾವು ಬಂಗಾಳದವರಂತೆ ಅಖಂಡ ಖರ್ಚಿಗೆ ಕೈಹಚ್ಚಿ, ಇಂಡಿಯಾ ಸರಕಾರದಿಂದ ಸಹಾಯ ದ್ರವ್ಯವನ್ನೇಕೆ ಸೆಳೆಯಬಾರದು? ಪ್ರಜಾ ಹಿತಕರ ಖಾತೆಗಳಿಗೆ ಸರಿಯಾಗಿ ವ್ಯಯಿಸಿದ್ದರೆ, ಬಂಗಾಳಕ್ಕಿಂತಾ ಹೆಚ್ಚಿನ ಸಾಲವನ್ನೊ ವಂತಿಗೆಯನ್ನೊ ಗ್ರೇಂಟನ್ನೊ ನಮ್ಮ ಸರಕಾರವು ಎಷ್ಟೋ ವರ್ಷಗಳಿಂದ ಪಡೆಯಬೇಕಾಗಿದ್ದಿತು ಆದರೆ, ಬಜೇಟನ್ನು ಸರಿಗೊಳಿಸುವ ಅಪ್ರತಿಮ ನಿಪುಣತೆಯನ್ನು ಪ್ರದರ್ಶಿಸುವುದಕ್ಕಾಗಿ, ಎಷ್ಟೋ ಇಲಾಖೆಗಳು ಅರೆಹೊಟ್ಟೆಯಿಂದಿವೆ ಇನ್ನಾದರೂ ಸುವ್ಯವಸ್ಥೆ ನಮಗೊಲ್ಲದೆ?

ಸ್ಫುಟವಿಚಾರಗಳು

ಬರ್ಮಾದಲ್ಲಿ ಕ್ರಾಂತಿಕಾರರು

೫೦೦ಕ್ಕಿಂತ ಹೆಚ್ಚಿರುವ ಕಾರಣ, ಅವರನ್ನು ಅಣಗಿಸಲು, ಒಂದು ಹೊಸ ಮಸೂದೆಯನ್ನು ಅಲ್ಲಿನ ಕೌನ್ಸಿಲು ಮುಂದೆ ತರಲು ಮೊದಲನೆ ಸಲ ಅದು ಬೆಂಬಲ ದೊರೆಯದೆ ಬಿದ್ದುಹೋಯಿತು. ಗವರ್ನರರೇ ಸ್ವಲ್ಪ ತಿದ್ದುಪಡಿ ಸೂಚಿಸಿ, ಪುನಃ ಅದೇ ಮಸೂದೆಯನ್ನು ಮುಂತರಲು, ಎರಡನೆ ಸಲವೂ ಕೌನ್ಸಿಲು ಅದಕ್ಕೇನೂ ಸಮ್ಮತಿ ಕೊಡಲಿಲ್ಲ ಕ್ರಾಂತಿಕಾರರನ್ನು ಅಣಗಿಸುವ ಬರ್ಮಾ ಬಿಲ್ಲು ಎಂದ ಕೂಡಲೆ, ಬರ್ಮದ ಹೆಸರಿಗೆ ಕಲಂಕ ತಗಲುವುದಾಗಿ ಪ್ರತಿನಿಧಿಗಳ ಆಕ್ಷೇಪ ಆದರೆ, ಬರ್ಮವನ್ನು ಪ್ರತ್ಯೇಕಿಸಬೇಕಾಗಿ ಆಗ್ರಹಪೂರ್ವಕ ಸೂಚಿಸಿದ ಆಗಣ ಗವರ್ನರರಾದ ಸರ್ ಚಾರ್ಲ್ಸ್ ಇನ್ನೆಸ್‌ರವರನ್ನೆ ಕೊಂದಿಕ್ಕುವುದೇ ಮೊದಲಾದ ನಾನಾ ಭಯಂಕರ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದು ಬಂಗಾಳದಿಂದ ಪ್ರೇರಿತರಾದ ನೂರಾರು ಕ್ರೂರ ಸಮುದಾಯಗಳು ಬರ್ಮವನ್ನು ನುಗ್ಗಿ, ಮುಖ್ಯವಾಗಿ ಪ್ರೌಢ ವಿದ್ಯಾರ್ಥಿಗಳಲ್ಲಿ ರಾಜದ್ರೋಹವನ್ನು ಬಿತ್ತಿ ದುಷ್ಪರಿಣಾಮಗಳನ್ನು ಉಂಟುಮಾಡುತ್ತಿರುವರಾಗಿ ಪೋಲಿಸ್ ಖಾತೆಯ ಅಧಿಕಾರಿಗಳು ವಿವರಿಸಿ ಈ ಮಸೂದೆಯ ಅಗತ್ಯವನ್ನು ವಿವರಿಸಿದರೂ, ಎರಡನೆ ಸಲವೂ ಮಸೂದೆಯು ಬೆಂಬಲವಿಲ್ಲದೆ ವ್ಯರ್ಥವಾಯಿತು. ಇನ್ನು ಅದಕ್ಕೆ ಗವರ್ನರರ ಒರ್ಡಿನೆನ್ಸೇ ಗತಿಯಾಗುವುದೆ?

ಹಿಂದೀ ಕನ್ನಡ ವಾದವು

ಹಿಂದೂ ಮುಸ್ಲಿಮ ವಾದದಂತೆ ಅದೇಕೆ ಆಗಾಗ ಕೇಳಿಸುತ್ತಿರಬೇಕೊ ತಿಳಿದಿಲ್ಲ ಹಿಂದೀ ಪಕ್ಷಪಾತಿಗಳು ಸಿಕ್ಕಲ್ಲೆಲ್ಲ ಹಿಂದಿಯ ಪ್ರಾಮುಖ್ಯತೆಯನ್ನು ಸಾರುತ್ತಿರುವುದೂ, ಕನ್ನಡವೇ ಮೊದಲಾದ ಪ್ರಾಂತಿಕ ಭಾಷಾಪ್ರಿಯರು ತಮ್ಮ ಭಾಷಾ ಸಂಪತ್ತು ಯಾವಾವ ವಿಧಗಳಲ್ಲಿ ಅಚ್ಚಳಿಯದೆ ಉಳಿಯಬಹುದೊ ಎಂದು ಆಗಾಗ ಸಾರುತ್ತಿರುವುದೂ ಕೇಳಿಸುತ್ತಲೇ ಇದೆ ಕನ್ನಡ ಪ್ರಾಂತ್ಯದಲ್ಲಿ ಕನ್ನಡವೇ ಪ್ರಾಮುಖ್ಯ, ರಾಷ್ಟ್ರದ ದೃಷ್ಟಿಯಿಂದ ಹಿಂದೀಯು ಅಗತ್ಯ, ಅಂತರ ರಾಷ್ಟ್ರೀಯ ದೃಷ್ಟಿಯಿಂದ ಇಂಗ್ಲಿಷು ಸಂಗ್ರಹಯೋಗ್ಯ ಎಂದಷ್ಟೇ ಒಮ್ಮೆಲೇ ಹೇಳಬಹುದು ಹೀಗಿದ್ದರೂ, ಅದೇಕೆ ಬೇಕೆಂದೇ ಅಲ್ಲಲ್ಲಿ ಉದ್ರೇಕಗೊಳ್ಳುವಂತೆ ವಾದಗಳಾಗಬೇಕೋ ತಿಳಿದಿಲ್ಲ ಕೆಲವೇಳೆ ಲೇಖಕರೂ ಭಾಷಣಕರ್ತರೂ ತಾವು ಚೆನ್ನಾಗಿ ತಿಳಿದ ಭಾಷೆಯೇ ಅತಿ ಪ್ರಾಮುಖ್ಯವಾದುದೆನ್ನುವ ರೀತಿಯೊಂದಿದೆ ಅದನ್ನುಳಿದು ಯಥಾರ್ಥ ವಿಚಾರ ಮಾಡುವ ಯಾರೂ [ಇಂಗ್ಲಿಷರೇ ಅಥವಾ ಅಚ್ಚ ಹಿಂದೀ ಪ್ರೇಮಿಗಳೇ ಆದರೂ) ಕನ್ನಡಿಗರು ಕನ್ನಡವನ್ನು ಮೂಲೆ ಸಾಲು ಮಾಡಿ, ಹಿಂದೀ ಅಥವಾ ಇಂಗ್ಲಿಷು ಕಲಿತು ಕನ್ನಡ ಮರೆಯಬೇಕೆನ್ನುವವರಲ್ಲ ಏಕೆ? ಅದು ಸ್ವಾಭಾವಿಕ ರೀತಿಯೂ ಅಲ್ಲ, ಅವರೆಂದಂತೆ ಮಾಡುವವರೂ ಯಾರೂ ಇಲ್ಲ'

ಟಪ್ಪಾಲು ಇಲಾಖೆ

ಶ್ರೀ। ಬೇವೂರರವರು ಡೈರೆಕ್ಟರ ಜನರಲ್ ರಾಗಿ ಬಂದಂದಿನಿಂದ, ಇಲಾಖೆಯಲ್ಲಿ ನಾನಾ ತಿದ್ದುಪಾಟುಗಳು ಆಗುತ್ತಲೇ ಇವೆ ಎಂಬುದು ಕನ್ನಡಿಗರೆಲ್ಲರಿಗೆ ಒಂದು ಹೆಮ್ಮೆಯ ಮಾತಾಗಿದೆ ಈ ವಾರದಲ್ಲಿ ಇಲಾಖಾ ನೋಕರರ ಸಂಘಗಳ ಪ್ರತಿನಿಧಿಗಳನ್ನು ಶ್ರೀ। ಬೇವೂರರವರು ಕರೆಯಿಸಿ, ಎಷ್ಟೋ ವಿಷಯಗಳಲ್ಲಿ ಅವರ ವಿಚಾರಗಳನ್ನು ಸ್ವೀಕರಿಸಿದರು ಇದೇ ರೀತಿಯಾಗಿ ಆರು ತಿಂಗಳಿಗೊಮ್ಮೆ ಅಧಿಕಾರಿಗಳೂ ನೋಕರರೂ ಏಕತ್ರಿತರಾಗಿ ಇಲಾಖಾ ಪರಾಮರ್ಶೆ ಮಾಡುತ್ತಿರುವುದರಿಂದ ಉಭಯತರಿಗೂ ಪ್ರಯೋಜನವಿದೆ ರೈಲ್ವೇ ಇಲಾಖೆಯವರೂ ಇದೇ ಕಾರ್ಯಕ್ರಮಗಳನ್ನು ಕೈಕೊಂಡುದರಿಂದ ಹೆಚ್ಚಿನ ಪ್ರಯೋಜನ ಪಡೆದಿರುವರು ಈಗ ಈ ಇಲಾಖೆಯಲ್ಲಿ ಕಿಂಚಿತ್ತಾದರೂ ಲಾಭವು ತೋರಿಬರಲು ಆರಂಭಿಸಿರುವ ಪ್ರಯುಕ್ತ, ನೋಕರರ ಕಲಬು ಇತ್ಯಾದಿಗಳು ಹೆಚ್ಚಬಹುದಾಗಿಯೂ, ಕೆಳತರಗತಿಯವರಿಗೆ ಪೆನ್ಶನುಗಳ ದರಗಳು ಹೆಚ್ಚಬಹುದಾಗಿಯೂ ನಂಬಬಹುದಾಗಿದೆ ಮೂರು ತಾಸುಗಳ ನಡೆದ ಈ ಪರಾಮರ್ಶೆಯಿಂದ ಇಂತಹ ಫಲವು ಉಂಟಾಗಬಹುದಾಗಿ, ನೋಕರರ ಪ್ರತಿನಿಧಿಗಳೂ ಅಭಿಪ್ರಾಯಪಟ್ಟಿರುವರು

ಸರ್ ರಾಜಾಅಲಿಯವರ ವಿವಾಹ

ಇದರ ಫಲವಾಗಿ ನೆಟಾಲ ಇಂಡಿಯನ್ ಕೋಂಗ್ರೆಸ್ ಸಂಘದವರೆಲ್ಲರು ತಮ್ಮ ಹುದ್ದೆಗಳಿಗೆ ರಾಜಿನಾಮೆ ಕೊಟ್ಟಿರುವರು ಇದೇ ಕೋಂಗ್ರೆಸ್ ಸಂಸ್ಥೆಯೆ, ಹಿಂದೂ ಸ್ತ್ರೀಯೊಡನೆ ಇವರು ಅಧಿಕಾರಿಗಳಾಗಿರುವಾಗಲೇ ವಿವಾಹವಾದ ಕಾರಣ, ಹಿಂದೂಮುಸ್ಲಿಮ ಸದಸ್ಯರೊಳಗೆ ಇದು ವರೆಗೆ ಇದ್ದ ಐಕ್ಯವು ಮಾಯವಾಗುವ ಸಂಭವವುಂಟೆಂದು ತಿಳಿಸಿದುದ್ದನ್ನು ಅಲಿಯವರು ಗಣನೆಗೆ ತಾರದೆ ಹೀಗೆ ಒಂದೇ ಆಗಿದ್ದ ಸಂಸ್ಥೆಯಲ್ಲಿ ಒಡಕನ್ನು ಉಂಟುಮಾಡಲೂ, ಪಂಗಡಗಳಲ್ಲಿ ನಾನಾ ಭೇದಬುದ್ಧಿಗಳಿಗೆ ಅವಕಾಶ ಉಂಟುಮಾಡಲು ಕಾರಣವಾಗಿದೆಯೆಂದು ಕಾಂಗ್ರೆಸ್ಸಿನವರು ಅವರಿಗೂ ಇಂಡಿಯಾ ಸರಕಾರಕ್ಕೂ ಬರೆದುಕೊಂಡಿದ್ದಾರೆ. ಇಡೀ ಜನಾಂಗಕ್ಕೆ ಒಂದು ಕಠಿಣವಾದ ದಶಾಸಂಧಿಯನ್ನು ಈ ವಿವಾಹವು ಉಂಟುಮಾಡಿಯದೆ ಎಂದು ಸಂಸ್ಥೆಯ ಅಧ್ಯಕ್ಷರು ಮಿ। ಜೆ. ಡಬ್ಲ್ಯೂ. ಗೊಡ್‌ಫ್ರೆ ಎಂಬವರು ಈಗ ಪ್ರಕಟಿಸಿ, ತಾವೂ ತಮ್ಮ ಅಧ್ಯಕ್ಷ ಪದವಿ ರಾಜಿನಾಮೆ ಕೊಟ್ಟಿರುವರು ದಕ್ಷಿಣಾಫ್ರಿಕ ಸರಕಾರದವರು ನಾನಾ ಬಗೆಯಾಗಿ ಹೀನದೃಷ್ಟಿಯಿಂದ ಹಿಂದೀಯರನ್ನು ನೋಡುತಿದ್ದನ್ನು ತುಂಬಾ ಎದುರಾಡುತ್ತಿದ್ದ ಹಿಂದೀಯರ ಒಮ್ಮತದ ಸಂಸ್ಥೆಯಾಗಿದ್ದ ಈ ಕೊಂಗ್ರೆಸ ಈಗ ಮೋದಂಡ ಸ್ಥಿತಿಯಲ್ಲಿರುವುದರಿಂದ ಹಿಂದೀಯರಿಗೆ ಇನ್ನೆಷ್ಟೋ ಕೆಡುಕಿಗೆ ಕಾರಣವಿದೆ

ಜಮೀನು ಹಿಡುವಳಿದಾರರ ಸಂಘಗಳ

ಎಲ್ಲೆಲ್ಲಿಯೂ ಹುಟ್ಟಬೇಕು, ಪದೇಪದೇ ಬಗೆಬಗೆಯ ದರಗಳಲ್ಲಿ ತೀರ್ವೆಯು ಬೆಳೆದು ಬಂದಂತೆ ತಿದ್ದಲು ಈ ಸಂಘಗಳು ಪ್ರಯತ್ನಿಸುತ್ತಲೇ ಇರಬೇಕು ಸರಕಾರದ ಕ್ರಮವನ್ನು ತಿದ್ದುಪಡಿಮಾಡಿಕೊಳ್ಳುವುದು ಸುಲಭ ಸಾಧ್ಯವಾಗಿಲ್ಲ. ಸಂಘಗಳು ನಿರಂತರವಾಗಿ ಏಕಕಂಠವಾಗಿ ಒಂದೇ ಪಲ್ಲವಿಯನ್ನು ಹಾಡುತಿದ್ದರೆ ಮಾತ್ರ ಸರಕಾರವು ಕಿಂಚಿತ್ತಾದರೂ ತನ್ನ ಸೂತ್ರಗಳನ್ನು ಶಿಥಿಲಗೊಳಿಸಲು ಅವಶ್ಯಕತೆಯನ್ನು ತಿಳಿಯಬಹುದು ಈ ಸಂಘಗಳು ಶಿಕ್ಷಣ, ಆರೋಗ್ಯ ಪಾಲನೆ, ಸಾಲನಿವಾರಣೆ, ಹೆದ್ದಾರಿಗಳ ಅನುಕೂಲತೆಗಳು, ದವಸ ಮಾರಾಟದ ಸೌಕರ್ಯಗಳು ಮೊದಲಾದುವುಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗಿದೆ. ರೈತರಿಗೆ ಇಂತಹ ಸಂಘಗಳಿಂದ ತುಂಬ ಸಹಾಯವಾಗುತ್ತಲೇ ಇರುವಲ್ಲಿ, ಸಂಘಗಳು ಬೆಳೆವುವು, ಬಾಳುವುವು, ಅವುಗಳ ಯೋಗ್ಯತೆಯೂ ಹೆಚ್ಚುವುದು ಆಗ ಅವುಗಳು ಪ್ರಜೆಗಳಿಗೂ ಸರಕಾರಕ್ಕೂ ಅತ್ಯಾವಶ್ಯಕ ಸಂಘಗಳಾಗಿ ಗೌರವ ಹೊಂದುವುವು ಪ್ರಾಂತಿಕ ಸ್ವರಾಜ್ಯವು ನಮಗೆ ಇನ್ನಿಷ್ಟರಲ್ಲಿ ದೊರೆವಂತಿರುವಾಗ, ಈ ಸಂಘಗಳು ಕೂಡಲೆ ಕಾರ್ಯಾರಂಭ ಮಾಡುತ್ತಲಿರಬೇಕಾಗಿ ಆಗ್ರಹಪೂರ್ವಕವಾಗಿ ರೈತರ ಮಹಾಸಭೆಯೊಂದರಲ್ಲಿ ಭಾಷಣಗಳಾಗಿವೆ

ಕಲ್ಕತ್ತ ವಿಶ್ವವಿದ್ಯಾಲಯ

ಬಂಗಾಳದ ೫೦ ಮಿಲ್ಲಿಯ ಅಸ್ಸಾಮಿನ ೯ ಮಿಲ್ಲಿಯ ಜನಸಂಖ್ಯೆಯಲ್ಲಿ, ಈಗ ತಾನೆ ಕಲ್ಕತ್ತ ವಿಶ್ವವಿದ್ಯಾಲಯಕ್ಕೆ ಸಂಬಂಧವಿರುವ ಕೊಲಿಜುಗಳಲ್ಲಿ ೩೧೦೦೦ ವಿದ್ಯಾರ್ಥಿಯರು ಓದುತ್ತಿರುವರು ಇವರಿಗಾಗಿ ೮೬ ಲಕ್ಷ ರೂಪಾಯಿಗಳು ಪ್ರತಿವರ್ಷವೂ ವ್ಯಯವಾಗುತ್ತಿರುವುದು ಕಳೆದ ವಾರ, ಈ ವರ್ಷ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ೩೬೫ ಎಮ್. ಎ., ೧೧೨ ಎಮ್. ಎಸ್ ಸಿ, ೨೦೦೬ ಬಿ. ಎ, ೫೮೦ ಬಿ. ಎಸ್. ಸಿ., ೩೨೯ ಬಿ ಎಲ್., ೪೦ ಬಿ ಟಿ. ಇತ್ಯಾದಿ ೩೮೪೫ ಮಂದಿಗೆ ಡಿಗ್ರಿಗಳನ್ನು ಕೊಡಲಾಯಿತು. ಇಷ್ಟು ಮಂದಿಯು ಉತ್ತೀರ್ಣರಾಗಿ ಡಿಗ್ರಿ ಪಡೆದರೆ ಎಷ್ಟೋ ವರ್ಷಗಳಿಂದ ವಿದ್ಯಾಭ್ಯಾಸ ಮಾಡುತಿದ್ದರಲ್ಲವೇ? ಇವರಿಗೆ ವಾರ್ಷಿಕವಾಗಿ, ೮೬ ಲಕ್ಷ ರೂಪಾಯಿಗಳಂತೆ. ಎಷ್ಟು ಧನವು ವ್ಯಯವಾಯಿತು? ಇದನ್ನು ಇನ್ನೆಷ್ಟು ನೂರು ವರ್ಷಗಳಲ್ಲಿ ತಾನೆ ಗಳಿಸಲಾಪರು? ಇದು ಒಂದು ವಿಶ್ವವಿದ್ಯಾಲಯದ ಕಥೆಯಾದರೆ, ಇಂತಹವು ಎಷ್ಟು ಈ ದೇಶದಲ್ಲಿ ಇಲ್ಲ? ಈ ಅಪಾರ ಧನವು ಶಿಕ್ಷಣಕ್ಕಾಗಿ ವ್ಯಯವಾಗುವುದು ಕಡಮೆಯೋ ಎನ್ನುವುದೂ ಸಹಜವಾದ್ದರೂ ಇದನ್ನು ಶಿಕ್ಷಿತರು ಗಳಿಸಲಾರದಂತಾಗುವುದು ಯಾವ ದುರ್ದಶೆಯ ಕಾರಣದಿಂದ? ಎಂಬೀ ವಿಚಾರವನ್ನು ಯೂನಿವರ್ಸಿಟಿ ಬೋರ್ಡಿನವರು ವಿಮರ್ಶಿಸಬಾರದೆಂದಿದೆಯೋ?

ಮಂಗಳೂರು.

ಪ್ರಕಟಣೆ.

ದಕ್ಷಿಣ ಕನ್ನಡ ಜಿಲ್ಲೆಯ ಅಧ್ಯಕ್ಷರು ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನಂದರೆ ಯಾವ ರಸ್ತೆಯ ಬಳಿ X ಈ ಗುರುತಿನ ಕೈಯುಳ್ಳ ಕಂಬವಿರು ತ್ತದೋ ಅದರ ಹತ್ತಿರ ಸಂಕವಿಲ್ಲದ ನದಿಯಿದೆಯೆಂದು ತಿಳಿಯಬೇಕಲ್ಲದೆ, ಅತ್ತಣಿಂದ ಮಳೆಗಾಲದಲ್ಲಿ ವಾಹನ ಗಳಿಗೆ ದಾರಿಯಿಲ್ಲವೆಂದು ತಿಳಿಯಬೇಕಾಗಿದೆ ಬೇಸಿಗೆ ಕಾಲದಲ್ಲಿ ವಾಹನಗಾರರು ಅದರ ಶೋಧನೆಯ ವಿಷಯ ತಾವೇ ಪರಿಶ್ರಮ ಪಡಬೇಕಾಗಿರುವುದು

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾ ಇಲಾಖೆಯ ಸಭೆ ಯೊಂದು ಫೆಬ್ರವರಿ ತಾ ೨೯ನೇ ಶನಿವಾರ ಅಪರಾಹ್ನ ಗಂಟೆ ೩ಕ್ಕೆ ಕಲೆಕ್ಟರರ ಆಫೀಸಿನಲ್ಲಿ ಜರಗುವುದು

ಹಿಂದೀ ಪ್ರೇಮಿಗಳಿಗೆ ಸುಸಂದರ್ಭ

ಈ ಮೊದಲು ನಾವು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕ ಟಿಸಿದಂತೆ ಇಲ್ಲಿಯ ಚಿತ್ರಾ ಟಾಕೀಸಿನ ಎದುರುಗಡೆಯ ಅಳಕೆರಸ್ತೆಯಲ್ಲಿರುವ ಸಿಟಿ ಆರ್ಯಸಮಾಜ ಯಾ ಸದ್ಧರ್ಮ ಪ್ರಚಾರಕ ಕಾರ್ಯಾಲಯದಲ್ಲಿ ಇದೇ ಬರುವ ಮಾರ್ಚ ತಾ ೧ರಿಂದ ಹಿಂದೀ ಕ್ಲಾಸುಗಳು ಪ್ರಾರಂಭಿಸಲ್ಪಡುವವು ಸೇರಬೆಕ್ಕೆನ್ನುವವರು ಇದೇ ತಿಂಗಳ ತಾ ೨೯ರೊಳಗಾಗಿ ನಮಗೆ ತಿಳಿಸತಕ್ಕದ್ದು ಕ್ಲಾಸುಗಳ ವಿವರ - ರಾತ್ರಿ ಕ್ಲಾಸು ಸೋಮವಾರ, ಬುಧವಾರ, ಶುಕ್ರವಾರ ಗಂಟೆ ೭ರಿಂದ ೮ರ ವರೆಗೆ ಪ್ರಾಥಮಿಕ ಹಗಲು ಕ್ಲಾಸು ಶನಿವಾರ ಮತ್ತು ಆದಿತ್ಯ ವಾರ ಅಪರಾಹ್ನ ಗಂಟೆ ೨ರಿಂದ ೪ರ ವರೆಗೆ ಮಧ್ಯಮ ಸದ್ಯ ದಿವಸಗಳಲ್ಲಿ ಗಂಟೆ ೪ರಿಂದ ೮ರ ವರೆಗೆ ಪ್ರಾಥ ಮಿಕ ಸಾಕಷ್ಟು ವಿದ್ಯಾರ್ಥಿಗಳು ದೊರೆತಲ್ಲಿ ಅನು ಕೂಲಸಮಯ ನಿಶ್ಚಯಿಸಿ ರಾಷ್ಟ್ರಭಾಷಾ ಕ್ಲಾಸುಗಳೂ ತೆರೆಯಲ್ಪಡುವವು ಹಿಂದೀ ಕಲಿಯಲಪೇಕ್ಷಿಸುವ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಈ ಸುಸಂಧರ್ಭವನ್ನು ಉಪಯೋಗಿಸಿಕೊಳ್ಳಬೇಕಾಗಿ ವಿನಂತಿ ಅಸಹಾಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಇಲ್ಲಿಂದಲೇ ಪಾಠಪುಸ್ತಕಗಳನ್ನು ಒದಗಿಸಿಕೊಡಲಾಗುವುದು ಹೆಚ್ಚಿನ ವಿಷಯ ಒಗ್ಗೆ ಕೆ ದೇವಪ್ಪಾಳ್ಯ (ಅಧ್ಯಾಪಕ), ಬಿ ಲಕ್ಷ್ಮಣದೇವ ವಿದ್ಯಾರ್ಥಿ, (ವ್ಯವಸ್ಥಾಪಕ), ಹಿಂದೀ ಭಾಷಾ ಹಿಂದೀ ಶಾಲೆ, ಸಿಟಿ ಆರ್ಯಸಮಾಜ ಮಂಗಳೂರು ಇವರಲ್ಲಿ ತಿಳಿದುಕೊಳ್ಳುವುದು

ಶ್ರೀ ಕೃಷ್ಣ ಸಿನೇಮಾ ಮಂಗಳೂರು.

ಶ್ರೀ ಕೃಷ್ಣಾ ಸಿನೇಮದಲ್ಲಿ ತಾ ೨೨-೨-೩೬ರಿಂದ ಸುಪ್ರಸಿದ್ಧ ನಟರಾದ ಕಾಬೂಲಿ ಶಾಂತಾರಾಂ ಒಳಗೊಂಡ ಪ್ರಭಾತ್ ಕಂಪನಿಯವರು ತಯಾರಿಸಿದ ಮನಸ್ಸಿಗೆ ಬಲು ಹಿತಕರವಾದ ಹಾಡುಗಳಿಂದ ರೋಮಾಂಚನಗೊಳಿಸುವ ದೃಶ್ಯಗಳಿಂದ ತುಂಬಿದ ಹೊಸ ಮಾದರಿಯ ಚಿತ್ರವಾದ "ಟೈಪಿಸ್ಟ್ ಗರ್ಲ್" ಎಂಬ ಚಿತ್ರವು ಪ್ರದರ್ಶಿಸಲ್ಪಡುತ್ತದೆ. ಅನಂತರ ಪತಿವ್ರತಾ ಭಕ್ತಿ ದಿವ್ಯಪ್ರೇಮ ದೇವನಾದ ಸೂರ್ಯದೇವನ ತನ್ನ ಯೋಗ್ಯತೆಯ ಕುರಿತು ಅಹಂಭಾವ ತನ್ನ ಭಯಂಕರ ಶಕ್ತಿಯ ಪ್ರದರ್ಶನ, ಸೂರ್ಯಲೋಕದ ಸೌಂದರ್ಯ, ಮನಮೋಹಿಸುವ ನರ್ತನ ಮನ ಮುಗ್ಧಕರ ಹಾಡುಗಳು ಮುಂತಾದುವುಗಳಿಂದ ಕೂಡಿದ "ಸೂರ್ಯ ಕುಮಾರಿ" ಎಂಬ ಪ್ರಸಿದ್ಧ ಪೌರಾಣಿಕ ಚಿತ್ರವು ಪ್ರದರ್ಶಿಸಲ್ಪಡುವುದು

ಶಾಲಾ ವರ್ಧಂತ್ಯುತ್ಸವ.

ಕುಲಶೇಖರ್ ಇಲ್ಲಿಯ ಸೈಂಟ್ ಜೋಸೆಫ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾರೀಕು ೨೪-೨-೩೬ರಲ್ಲು ಮ ೦.೧೦ ರಾ ಕೆ ಶ್ರೀನಿವಾಸರಾವ್ ರಿಟಾಯರ್ಡ್ ಡಿಪ್ಯುಟಿ ಕಲೆಕ್ಟರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು ಸ್ವಾಗತ ಗೀತ, ವರದಿ ವಾಚನ, ಶಾಲಾ ಹಿತವನ್ನು ಬಯಸೋಣ ಅಧ್ಯಕ್ಷರ ಭಾಷಣವಾದ ಬಳಿಕ ಶಾಲಾ ಮಕ್ಕಳು "ಕಿಂಗ್ ಆರ್ಥರ್" ಎಂಬ ಕೊಂಕ್ಣಿ ನಾಟಕವನ್ನು, ಕನ್ನಡ ಇಂಗ್ಲಿಷ್ ಕೊಂಕಣಿ ಭಾಷೆಯಲ್ಲಿ ರಾಗ, ಹಾಸ್ಯಗಳನ್ನು ಆಭಿನಯಿಸಿ ಸಭಿಕ ರನ್ನು ಆನಂದಗೊಳಿಸಿದರು ಅಧ್ಯಕ್ಷರು ಪಳ್ಳಿಗೆ ಹಾಯರ್ ಎಲಿಮೆಂಟರಿ ಶಾಲೆಯ ಅವಶ್ಯಕತೆಯನ್ನು ಶಾಲೆಗೆ ಊರವರ ಸಹಾಯದ ಅಗತ್ಯವನ್ನು ವಿಷಯ ಸಮಂಜಸವಾದ ಭಾಷಣವನ್ನಿತ್ತರು ರೆ ಫಾ ಪೀಟರ್ ಆರ್. ಡಿ ಸೋಜರು ನಾಟಕದ ಕೊನೆಗೆ ಶಾಲೆಯು ಈಗ ೫ ವರ್ಷಗಳಿಂದ ಉನ್ನತ ಸ್ಥಿತಿಗೆ ಬಂದ ವಿವರ ವನ್ನು ಹೇಳಿ ಧೋರಣೆಯನ್ನುದವನ್ನು ಸ್ಥಾಪಿಸಿ ಕೊಂಕಣಿ ಭಾಷೆಯಲ್ಲಿ ಚಿಕ್ಕ ಭಾಷಣವಿತ್ತು, ರಾಜಗೀತದೊಂದಿಗೆ ಸಭೆಯು ಮುಕ್ತಾಯವಾಯಿತು.

ಬರುವ ಜಿಲ್ಲಾ ಬೋರ್ಡಿನ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ.

ನಮ್ಮ ಜಿಲ್ಲೆಯ ಮಹಾಜನರಿಗೆ ತಿಳಿದಿರುವಂತೆ ಮೇಲಿನ ಚುನಾವಣೆಗಳು ಇದೇ ಬರುವ ಮಾರ್ಚ ತಾ ೨ನೇ ಸೋಮವಾರ ನಡೆಯಲಿದೆ ಜಿಲ್ಲಾ ಬೋರ್ಡಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಬೋರ್ಡಿನ ಕಾಂಗ್ರೆಸ್ ಪಕ್ಷದಿಂದ ಶ್ರೀಗಳಾದ ಎ ಬಿ ಶೆಟ್ಟರು ಮತ್ತು ಮೊಳಹಳ್ಳಿ ಶಿವರಾಯರನ್ನು ಉಮೇದ್ವಾರ ನ್ನಾಗಿ ಚುನಾಯಿಸಿರುವದು ಎಲ್ಲರಿಗೂ ತಿಳಿದ ವಿಷಯ ಬೋರ್ಡಿನಲ್ಲಿರುವ ಕಾಂಗ್ರೆಸ್ಸು ಪಕ್ಷದ ಮತ್ತು ಕಾಂಗ್ರೆ ಸ್ಸಿನ ಮೇಲೆ ಅಭಿಮಾನವುಳ್ಳ ಸ್ವತಂತ್ರ ಸದಸ್ಯರು ಕೂಡಾ ಒಮ್ಮತದಿಂದ ಮೇಲೆ ಹೇಳಿದ ಮಹನೀಯರೀರ್ವರನ್ನು ಚುನಾಯಿಸಬೇಕಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿ ಬೋರ್ಡಿನ ಅಧ್ಯಕ್ಷನಾಗಿ ನಾನು ಕೋರುವುದಲ್ಲದೆ ಅವರಲ್ಲಿ ಈ ಸಲುವಾಗಿ ನನ್ನ ಮನಃಪೂರ್ವಕ ಪ್ರಾರ್ಥನೆ ಯನ್ನು ಈ ಮೂಲಕ ಅರ್ಪಿಸುತ್ತೇನೆ

ನಮ್ಮ ಮೇಲಿನ ವಿ ಙ್ಞಾಪನೆಗೆ ಬಂದೆರಡು ಮಾತು ಗಳನ್ನು ಹೇಳಬೇಕಾಗಿರುತ್ತದೆ ಈಗ ಬೋರ್ಡಿನಲ್ಲಿ ರುವ ಕಾಂಗ್ರೆಸ್ ಪಕ್ಷದ ಹೆಚ್ಚಿನ ಸದಸ್ಯರು ಒರೇ ನಾಲ್ಕು ಅಣೆ ವಂತಿಗೆ ಕೊಟ್ಟು ಮಾತ್ರ ಸದಸ್ಯರೆಂದು ಆವರಲ್ಲಿ ನಿಜವಾಗಿ ದೇಶಾಭಿಮಾನಿಗಳು ಇಲ್ಲವೆಂದಲ್ಲ ಅವರು ಯಥಾರ್ಥವಾದ ರಾಷ್ಟ್ರಭಕ್ತರಾಗಿದ್ದರೆ ಅವರಿಗೆ ಸ್ಥಾನಗಳನ್ನು ಸುಲಭದಿಂದ ಬಿಟ್ಟುಕೊಡಬಹುದು [illegible] ಯಲ್ಲಿದ ಕೇಳಬಹುದು [illegible]

[illegible] ಕಾಂಗ್ರೆಸ್ ಪಕ್ಷದ [illegible]

ಕೋಟಿ ರಾಮಕೃಷ್ಣ ಕಾರಂತ

ಮಹಿಳಾ ಸಭಾ ಮಂಗಳೂರು

ಫೆಬ್ರವರಿ ತಾ ೨೩ನೇ ಆದಿತ್ಯವಾರ ಮಹಿಳಾ ಸಭೆ ಯವರು ಮಕ್ಕಳ ಪ್ರದರ್ಶನವನ್ನು ಬಹು ಚಲೋ ದಾಗಿ ಆಚರಿಸಿದರು ಸುಮಾರು ೧೦೦ ಮಂದಿ ಮಕ್ಕಳು ನೆರೆದಿದ್ದರು ಬಹಳವೂ ಇದರಲ್ಲಿ ಸಮ್ಮಿಶ್ರಿತರಾಗಿ ದ್ದರು ಆದರೆ ಇವರಲ್ಲಿ ಯಾರಿಗಾದರೂ ೬ ವರ್ಷ ಕ್ಕಿಂತ ಮಿಕ್ಕಿ ಪ್ರಾಯವಾಗಿರಲಿಲ್ಲ ಬಾಲಾ ಸಮೂಹ ನೆಯ ಪೇಪರುಗಳನ್ನು ಹಲವು ಚಾಟಿಕೆಯಲಿ ಧರಿಸಿದ್ದರು ಮುಖ್ಯವಾಗಿ ಹಾಲುಮಾರುವವಳು, ಶ್ರೀ ಕೃಷ್ಣ ನಾಗ ಕನ್ನೆ ವೈದ್ಯ ಇವರ ವೇಷವು ಚಿತ್ತಾಕರ್ಷಕವಾಗಿತ್ತು ಮಕ್ಕಳಿಗೆ ತಿಂಡಿತೀರ್ಥಗಳನ್ನು ಹಂಚಿದ ನಂತರ ಸ್ಪರ್ಧೆ ಏರ್ಪಡಿಸಲ್ಪಟ್ಟು ಅವುಗಳಲ್ಲಿ ಗೆದ್ದವರಿಗೆ ಪ್ರಥಮ, ದ್ವಿತೀಯ ತೃತೀಯ ಬಹುಮಾನಗಳು ಹಂಚಲ್ಪಟ್ಟುವು ಅನಂತರ ಮಕ್ಕಳ ಗಾಯನ, ನರ್ತನ, ಬಾಯಿಪಾಠ ವರ್ಣನೆ ಮೊದಲಾದುವುಗಳು ಇದ್ದುವು ಮಿಸೆಸ್ ಸದಾಶಿವರಾಯರ ಅಧ್ಯಕ್ಷತನದಲ್ಲಿ ಈ ಮಕ್ಕಳ ದಿನಾ ಚರಣೆಯು ಬಹಳ ವಿಜೃಂಭಣೆಯಿಂದ ಜರಗಿತು

ಮಂಗ್ಳೂರು ಬಂದರದಲ್ಲಿ ಸ್ಟೀಮರುಗಳು

ಬೊಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿಯವರ ನೇತ್ರಾವತಿ ಎಂಬ ಸ್ಟೀಮರು ಶುಕ್ರವಾರ ರಾತ್ರಿ ಕಲ್ಲಿ ಕೋಟೆಗೆ ಬಂದು ಮರುದಿವಸ ಬೆಳಿಗ್ಗೆ ಮುಂಬಾಯಿಗೆ ತೆರಳಿ ವುದು

ತಾಲೂಕುಗಳಿಂದ

ಮೂಲ್ಕಿ:—ಸ್ಥಳೀಕ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ ೧೫-೨-೩೬ನೇ ಶನಿವಾರ ಅಪರಾಹ್ನ ಗಂಟೆ ೨ಕ್ಕೆ ಚಿತ್ರಾಪು ಬೋರ್ಡ ಹುಡುಗಿಯರ ಶಾಲೆಯಲ್ಲಿ ಕೂಡಿ ಬಂತು. ಅಂದು ಮೂಲ್ಕಿ ಬೋ ಹಾ ಎ ಶಾಲೆಯ ಸಹಾಯಕ ಉಪಾಧ್ಯಾಯ ಶ್ರೀ ಎಚ್ ಶೀನಶೆಟ್ಟು ಸಭಾಧ್ಯಕ್ಷರಾಗಿದ್ದರು ಶಾಲಾ ಟೀಚರರ ಶ್ರೀ ದೇವತಾ ಪ್ರಾರ್ಥನೆ, ವರದಿವಾಚನ ಅಭಿನಯ ಗೀತ ಗೀತಗಳು ವಿದ್ಯೆಯ ಶಿಕ್ಷಣ ಎಂಬ ಶಿರೋನಾಮದ ಲೇಖನವಾಚನ (ಸದರಿ ಶಾಲಾ ಅಧ್ಯಾಪಕ ಶ್ರೀ ಎನ್. ಸಂಜೀವಯ್ಯರಿಂದ) ವರ್ತಮಾನ ದರ್ಜೆಗೆ ಕಥಾಪಾಠ, (ಸದರಿ ಶಾಲಾ ಮುಖ್ಯ ಉಪಾಧ್ಯಾಯಿನಿ ಮಿಸ್ ಮೇರಿ ಡಿಸೋಜರಿಂದ) ಸಭಾಧ್ಯಕ್ಷರ ಭಾಷಣ, ಉಪಕಾರ ಸ್ಮರಣೆ ಇತ್ಯಾದಿ ಕಾರ್ಯಕ್ರಮಗಳು ನಡೆದುವು ಮುಂದಿನ ಸಭೆಯು ತಾ ೧೪-೩-೩೬ನೇ ಶನಿವಾರ ಚಿತ್ರಾಪು ಸಮಯಕ್ಕೆ ಕೊಳಚಿಕಂಬಳ ಬೋರ್ಡ ಹುಡುಗಿ ಯರ ಶಾಲೆಯಲ್ಲಿ ಕೂಡಲಿರುವುದು

ನೆನ್ನೆ ತಾ ೧೯ರಲ್ಲು ನೆರವೇರಿದ ಶ್ರೀ ಬಪ್ಪನಾಡು ಸುಬ್ಬರಾಯರ ಪುತ್ರಿಯ ವಿವಾಹ ಮಹೋತ್ಸವಕ್ಕೆ ಬಂದಿದ್ದ ಪುತ್ತೂರಿನ ಬಾಲಯಕ್ಷಗಾನ ಮಂಡಳಿ ಪಡ್ನಾ ಯನು ಮರುದಿನ ಪೂರ್ವಾಹ್ನ "ಶ್ರೀ ಸೀತಾಸ್ವಯಂ ವರ" ಎಂಬ ಹರಿಕಥಾವ್ಯಾಖ್ಯಾನವನ್ನು ಮಾಡಿ ಕೂಡಿದ ಸರ್ವರನ್ನು ಆನಂದಗೊಳಿಸಿದರು ಇದರ ರಾಗ ಸಂಗೀತ ಸದ್ಯದಲ್ಲೇ ಇಲ್ಲಿ ಕೆಲವು ಕಥೆಗಳ ಏರ್ಪಾಡು ನಡೆಯಲಿಕ್ಕಿವೆ ಎಂದು ಕೇಳುತ್ತೇವೆ

ಇಲ್ಲಿ ಇದೇ ಬರುವ ತಾ ೯ನೇ ಜರಗಲಿರುವ ಬೋರ್ಡ ಸ್ಕೂಲಿನ ವಾರ್ಷಿಕೋತ್ಸವಕ್ಕೆ ಜಿಲ್ಲಾ ಎಜ್ಯುಕೇಶನಲ್ ಆಫೀಸರ್ ಶ್ರೀ [illegible] [illegible] [illegible]

ಇದೇ ಕಳೆದ [illegible] ಜರಗಿದ ಒಂದು ಪಂಗ್ತಿಗೆ ಈ ಕೇಂದ್ರದಿಂದ [illegible] ರಾಷ್ಟ್ರಭಾಷಾ [illegible] [illegible] ಪ್ರಥಮ [illegible] ಬಂದಿದ್ದಾರೆ

ಮೂಡಬಿದ್ರೆ:—ಈ ಸೆಂಟರಿನ ಉಪಾಧ್ಯಾಯರ ಸಂಘದ ಒಂದು ಸಾಮಾನ್ಯ ಸಭೆಯು ಇದೇ ಫೆಬ್ರವರಿ ತಾ ೧೫ನೇ ಶನಿವಾರ ಅಪರಾಹ್ನ ಗಂಟೆ [illegible] ಹೊಸ ಬೆಟ್ಟು ಶಾಲೆಯಲ್ಲಿ ಬೆಳ್ವಾಯಿ ಬೋರ್ಡ ಶಾಲಾ ಸಹಾಯಕ ಉಪಾಧ್ಯಾಯರಿಂದ [illegible] ಐವಸ್ಸರ ಪ್ರಬೋಧಿನಿ ಅಧ್ಯಕ್ಷತೆಯಲ್ಲಿ ಜರಗಿತು ೨೫ ಶಾಲೆಗಳ ೬೦ ಮಂದಿ ಉಪಾಧ್ಯಾಯರು ಹಾಜರಿದ್ದರು ಅಂದು ಸ್ಕೌಟು ಸಂಘಗಳ ಮೂಲಸ್ಥಾಪಕರಾದ ಲಾರ್ಡ್ ಬೇಡನ್ ಪೊವೆಲ್ಲರ ೮೦ನೇ ಜನ್ಮದಿನಾಚರಣೆಯು ಸ್ಕೌಟು ಬಾಲರಿಂದ ಆಚರಿಸಲ್ಪಟ್ಟಿತು.

ಕುಂದಾಪುರ:—ಇದೇ ತಾ ೨೬-೨-೩೬ನೇ ಬುಧವಾರ ರಾತ್ರಿ ಗಂಟೆ ೯ಕ್ಕೆ ವಿಲ್ಸನ್ ಕ್ಲಬ್ಬರು ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸದರಿ ಶಾಲಾ ವಿದ್ಯಾರ್ಥಿಗಳು "ನವಜೀವನ"ವೆಂಬ ಒಂದು ನವೀನ ಸಾಮಾಜಿಕ ನಾಟಕವನ್ನು ಪ್ರೇಕ್ಷಕರ ಆನಂದ ಕರವಾಗಿ ರೀತಿಯಿಂದ ಆಡಿತೋರಿಸಿದರು

ಕಾರ್ಕಳ:—ಸ್ವಸವಾಜಕ್ಕೆ ಜನ ಜಾಗ್ರತಿ ಮತ್ತು ಸಮಾಜ ಸಂಘಟನೆಯನ್ನುಂಟುಮಾಡುವ ಉದ್ದೇಶದಿಂದ ಜಿಲ್ಲಾ ಪ್ರವಾಸವನ್ನು ಕೈಕೊಂಡ ಶ್ರೀ ಸದ್ವಸಾಲಿ ವೈದ್ಯಸಮಾಜ ಸೇವಾಯುವಕ ಸಂಘದ ಪ್ರತಿ ನಿಧಿಗಳು, ಸುರತ್ಕಲ್ ಶ್ರೀ ವೀರಭದ್ರಸ್ವಾಮಿ ದೇವಾ ಲಯದ ರಥೋತ್ಸವದ ಸಮಯ ಮೀರಾರಿನ ಸಂಘದ ಪ್ರತಿನಿಧಿಗಳೊಂದಿಗೆ ಸುರತ್ಕಲ್ಲನ್ನು ಸಂದರ್ಶಿಸಿ, ನೀರು ಮಾರ್ಗ ಪಾವಂಜೆ ನಾರಾಯಣ ಭಟ್ಟರವರ ಅಧ್ಯಕ್ಷತೆ ಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಸುರತ್ಕಲ್ಲಿ ನಲ್ಲಿಯೂ ಒಂದು ಸಂಘವ ನ್ನು ಕರೆದು ಬಂದಿರುತ್ತಾರೆ

ಇಲ್ಲಿನ ಬೋರ್ಡು ಹೈಸ್ಕೂಲಿನ ವಾರ್ಷಿಕೋತ್ಸವವು ಕಳೆದ ಶನಿವಾರ ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈ ಪ್ರೆಸಿಡೆಂಟ್ ಕೆನರಾ ಬೇಂಕು ಇವರ ಅಧ್ಯಕ್ಷತೆಯಲ್ಲಿ ಜರಗಿತು ಅಂದು ಬೆಳಿಗ್ಗೆ ಅನೇಕ ಪಂದ್ಯಾಟಗಳು ನಡೆ ದುವು ನಂತರ ಶಾಲಾ ವಿದ್ಯಾರ್ಥಿಗಳಿಗೆ ಫಲಾಹಾರ ಸತ್ಕಾರವಿತ್ತು ಸಾಯಂಕಾಲ ೫ ಗಂಟೆಗೆ ವಾರ್ಷಿಕೋ ತ್ಸವ ಸಮಾರಂಭವು ಶ್ರೀ ಶ್ರೀನಿವಾಸ ಪೈಗಳವರ ಅಧ್ಯ ಕ್ಷತೆಯಲ್ಲಿ ಜರಗಿತು ಮುಖ್ಯ [illegible]

ಶ್ರೀ ಪುರಾಣಿಕರು ಶಾಲೆಯ ವರದಿಯನ್ನು ಓದಿದರು ನಂತರ ಅಧ್ಯಕ್ಷರ ಭಾಷಣವಿತ್ತು ಸಭೆಯು ವಿದ್ಯಾರ್ಥಿ ಗಳ ನಾಟಕದೊಂದಿಗೆ ಸಮಾಪ್ತಿಯಾಯಿತು.

ಸಾಂಪ್ರತ, ಮೂಲ್ಕಿ ಸ್ವಸಮಾಜದ ಶ್ರೀ ದೇವೀ ಮಂದಿರದಲ್ಲಿ ಜರಗಲಿರುವ ದೇವೀಜಾತ್ರೆಯ ಸಮಯ ಮೂಲ್ಕಿಯನ್ನು ಸಂದರ್ಶಿಸಿ, ಆಹಿಂಸಾಪ್ರಚಾರ, ಸಸ್ಯಾಹಾರ ಸ್ಥಾಪನಾದಿ ಕಾರ್ಯಗಳನ್ನು ಮಾಡಲಿದ್ದಾರೆ

ಸಂಘದ ಚತುರ್ಥ ವಾರ್ಷಿಕ ಪ್ರಥಮ ಕ್ರೈಮಾಸಿಕ ಸಭೆಯು ಇದೇ ತಾ ೨೯ಕ್ಕೆ ಸಂಘದ ಸೇವಾಸದನದಲ್ಲಿ ಜರಗಲಿದೆ ಕಾರಣ ನಿಶ್ಚಯಿಸಲ್ಪಟ್ಟದರಿಂದ ಊರ ಪರವೂರ ಸರ್ವ ಸದಸ್ಯರೂ ಚಿತ್ತೈಸಿ ಸಹಭಾಗಿಗಳಾಗಬೇಕಾಗಿ ವಿನಂತಿ

ಹರಂಗಿಪೇಟೆ:—ಸ್ಥಳೀಯ ಮಹಮ್ಮದೀಯ ಬೋರ್ಡ ಶಾಲೆಯ ವಾರ್ಷಿಕೋತ್ಸವವು ಮಾರ್ಚ ತಾ ೫ನೇ ಗುರುವಾರ ಸಂಜೆ ಗಂಟೆ ೫ಕ್ಕೆ [illegible] ಎ ಪಹಾಶಿವ ಅಡಿಗ ಅವರ್ಗಳ್ ಎಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿ ಜರಗುವುದು ಎಲ್ಲರೂ ಬರಬೇಕೆಂದು ವಿನಂತಿ [illegible] ಕರ ಬೋರ್ಡ ಶಾಲೆಯ ಮುಖ್ಯೋಪಾ ಧ್ಯಾಯರಾದ ಶ್ರೀ ಎಸ್ ನರಸಿಂಹಯ್ಯರವರು ಈ ಮೂಲಕ ತಿಳಿಸುತ್ತಾರೆ

ಉಡುಪಿ:—ಶ್ರೀ ಕೋರಗಶೆಟ್ಟಿ, ವ್ಯಾಯಾಮ ಶಿಕ್ಷಕರು ಪ್ರಕಟಿಸಿದಂತೆ ಇದೇ ತಾ ೩೧ನೇ ೮ ದಿವಸ ಜರುಗಲಿರುವುದರಲ್ಲಿ ವ್ಯಾಯಾಮ ಶಿಕ್ಷಣ ತರಬೇತಿ ವರ್ಗವು ತೆರೆಯಲಾಗಿದೆ ೧೫ ಮಂದಿ ಉಪಾಧ್ಯಾ ಯರು ಇದ್ದರು ಈ ಸದಸ್ಯರು ಸೇರಿರುತ್ತಾರೆ ಇವರ ಕಡೆಗಳಿಂದ ಬೋರ್ಡ ಅಥವಾ ಬೇರೆ ಶಾಲೆಗಳ ಉಪಾಧ್ಯಾಯರು ಈ ತರಬೇತಿಗೆ ಸೇರಲು ಬಯಸುವ ಬೇರೆ [illegible] ಆಧಾರದಿಂದ [illegible] [illegible] ಪ್ರಾಥಮಿಕ ಶಾಲೆಗಳ ಅಧ್ಯಾಪಕರು ಪ್ರತ್ಯೇಕವಾಗಿ ವ್ಯಾಯಾಮ ಡ್ರಿಲ್ ಶಿಕ್ಷಣಕ್ಕೊಂದಷ್ಟೆ ಇರುವ [illegible] ಬಗೆಯ [illegible] ಆದ [illegible] ಉಪಾಧ್ಯಾಯ ರನ್ನು ತರಬೇತಿ ಮಾಡಿಸುವುದು ಅವಶ್ಯ

ಮಂಗಳೂರಿನ ಬಿಶೋಪರಿಂದ ರೆವರೆಂಡ್ ವಿ ಆರ್ ಫೆರ್ನಾಂಡಿಸರನ್ನು [illegible] ಕಥೋಲಿಕ ದೇವಾಲಯದ [illegible] ಕಾರ್ಯಭಾರ [illegible] [illegible] ಸ್ಥಳೀಯ [illegible] ಸದಸ್ಯ [illegible] ಪೂರ್ವ ಮಂದಿ [illegible] ಆಮಂತ್ರಿಸ [illegible] [illegible]

ತಾ ೨೫ಕ್ಕೆ ಕಥೋಲಿಕ್ ಬೇಂಕ್ ಲಿಮಿಟೆಡಿನ ಶಾಖೆಯೊಂದು ಇಲ್ಲಿ ರೋಮನ್ ಕೆಥೋಲಿಕ್ ದೇವಾಲ ಯದ ಎದುರುಗಡೆಯ ಕಟ್ಟಡದಲ್ಲಿ ಮಂಗಳೂರು ಬಿಶೋಪರಿಂದ ತೆರೆಯಲಾಯಿತು ಊರ ಹಲವು ಗೃಹಸ್ಥರು ಆಮಂತ್ರಿತರಿದ್ದ ಸಭೆಯಲ್ಲಿ ಸಭಾಕಾರ್ಯವು ನೆರವೇರಿತು ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡಿನ ಅಧ್ಯಕ್ಷರಾದ ಡಾ ಟಿ ಮಾಧವ ಪೈ ಎಂ ಬಿ ಬಿ ಎಸ್ ಇವರ ಉಪಸ್ಥಿತಿಯಿತ್ತು ಸಭೆಯಲ್ಲಿ ಉಪಹಾರದಿಂದ ಸತ್ಕರಿಸಲಾಯಿತು

ಸ್ವೀಕಾರ

ದಿ ಪ್ಯೋನಿಯರ್ ಇನ್ಷುರೆನ್ಸ್ ಕಂಪೆನಿ, ಲಿಮಿಟೆಡ್, ಇವರ ೧೯೩೬ನೇ ಇಸವಿಯ ಎರಡು ಸುಂದರವಾದ ಕೆಲೆಂಡರ್‌ಗಳು ನಮ್ಮ ಹಸ್ತಗತವಾಗಿವೆ

ನಮ್ಮ ನಗರದ ಆರೋಗ್ಯ.

ನಮ್ಮ ಮಂಗಳೂರು ಮುನಿಸಿಪಾಲಿಟಿಯಲ್ಲಿ ಕಳೆದ ವಾರ ೧೫ ಮರಣಗಳಾಗಿವೆ. ಇದು ಕಳೆದ ವಾರಕ್ಕಿಂತ ಕಡಿಮೆಯಾಗಿರುತ್ತದೆ ಸಿಡುಬುರೋಗವು ಉಡುಪಿ ಯಿಂದ ಇಲ್ಲಿಗೆ ಬಂದಿರುತ್ತದೆ ಈಗ ಒಬ್ಬನು ಮಾತ್ರ ಈ ರೋಗದಿಂದ ಪೀಡಿತನಾಗಿರುವನು. ಇವನನ್ನು ಉವಕೆದ ಕ್ವಾರಂಟ್ಯೂನಿನಲ್ಲಿ ಹಾಕಿರುತ್ತಾರೆ.

ಕರ್ನಾಟಕ ಸಾಹಿತ್ಯ ಪರಿಷತ್ತು

ಕೃಷ್ಣರಾಜೇಂದ್ರ ಪರಿಷನ್ಮಂದಿರ, ಚಾಮರಾಜಪೇಟೆ, ಬೆಂಗಳೂರು ಸಿಟಿ

ಅಧ್ಯಕ್ಷರು.

ಮೈಸೂರು ಸಂಸ್ಥಾನದ ಶ್ರೀಮದ್ಯುವರಾಜ

ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್, ಜಿ. ಸಿ. ಐ. ಇ.

ವಿಶೇಷ ಸಾಹಿತ್ಯೋತ್ಸವ.

ಬರುವ ಮೇ ತಿಂಗಳಲ್ಲಿ.

ಮಹಾಶಯರೆ ಕಳೆದ ಎರಡು ವರ್ಷಗಳಲ್ಲೂ ಈ ಪರಿಷತ್ತು ಬೇಸಗೆಯ ಕಾಲದಲ್ಲಿ ವಿಶೇಷ ಸಾಹಿತ್ಯೋತ್ಸವವನ್ನು ನಡೆಸಿದ್ದು ತಮಗೆ ನೆನಪಿನಲ್ಲಿರಬಹುದು ಆ ಉತ್ಸವದ ಭಾಗವಾಗಿ ಪ್ರಕೃತಿ ವಿಜ್ಞಾನ ಶಾಸ್ತ್ರಗಳು ಮೊದಲಾಗಿ ಸಾಂಪ್ರತಲೋಕಕ್ಕೆ ಉಪಯುಕ್ತಗಳಾದ ಅನೇಕ ವಿಚಾರಗಳನ್ನು ಕುರಿತು ಉಪನ್ಯಾಸಗಳೂ, ಕಾವ್ಯ ವಾಚನ, ಕನ್ನಡ ಗ್ರಂಥಪ್ರದರ್ಶನ ಮೊದಲಾದ ಸಾಹಿತ್ಯ ಪ್ರಚಾರ ಕಾರ್ಯಗಳೂ ವಿಜ್ಞಾನಶಾಲೆಗಳು, ಯಂತ್ರ ಕರ್ಮಶಾಲೆಗಳು ಮೊದಲಾದವುಗಳ ಸಂದರ್ಶನವೂ ನಡೆದುವು, ಆ ಉತ್ಸವಕ್ಕೆ ಪರಸ್ಥಳಗಳಿಂದ ಒಂದೊಂದು ಸಲವೂ ೪೦೦—೫೦೦ ಮಂದಿ ಉಪಾಧ್ಯಾಯರೂ ಇತರ ಮಹಾಜನಗಳೂ ಬಂದು, ಈ ಜ್ಞಾನ ಸಮಾರಾಧನೆಯಲ್ಲಿ ಭಾಗಿಗಳಾಗಿದ್ದರು, ಮೊದಲ ಬಾರಿಯ ಉತ್ಸವವನ್ನು ಮೈಸೂರು ಸಂಸ್ಥಾನದ ದಿವಾನರಾದ ಅಮೀನ್ ಉಲ್ ಮುಲ್ಕ್ ಸರ್ ಮಿರ್ಜಾ ಎಂ ಇಸ್ಮಾಯಿಲ್ ಕೆ ಸಿ ಐ ಇ, ಇವರೂ, ಎರಡನೆಯ ಸಾರಿಯ ಉತ್ಸವವನ್ನು ರಾಜಮಂತ್ರಪ್ರವೀಣ ಶ್ರೀ ಎಸ್ ಪಿ ರಾಜಗೋಪಾಲಾಚಾರ್ಯ, ಬಿ ಎ ಬಿ ಎಲ್ ಅವರೂ ಪ್ರಾರಂಭಗೊಳಿಸಿ ಈ ಉತ್ಸವದ ಬೆಲೆಯನ್ನೂ ಉಪಯೋಗವನ್ನೂ ಮಹಾಜನರ ಗಮನಕ್ಕೆ ತಂದರು, ಇತರ ಪ್ರಜಾಪ್ರಮುಖರೂ ವಿದ್ಯಾಭಿಮಾನಿಗಳೂ ಬಹು ಮಂದಿ ಈ ಪ್ರಯತ್ನವನ್ನು ಮೆಚ್ಚಿ ಪರಿಷತ್ತು ಇಂಥ ಕೆಲಸವನ್ನು ಪದೇ ಪದೇ ನಡೆಸಬೇಕೆಂದು ಸೂಚನೆ ಕೊಟ್ಟಿರುತ್ತಾರೆ

ಆದರಿಂದ ಈ ಸಲವೂ ಎದುರಿಗಿರುವ ಮೇ ತಿಂಗಳ ಮೊದಲನೇ ಭಾಗದಲ್ಲಿ ಪರಿಷತ್ತು ವಿಶೇಷ ಸಾಹಿತ್ಯೋತ್ಸವವನ್ನು ನಡೆಸಬೇಕೆಂದು ನಿಶ್ಚಯಿಸಿರುತ್ತದೆ ಈ ವರ್ಷದ ಉತ್ಸವದಲ್ಲಿ ಕೆಲವು ಹೊಸ ಏರ್ಪಾಟುಗಳನ್ನು ಸೇರಿಸಬೇಕೆಂದು ಉದ್ದೇಶವಿದೆ ಅಲ್ಲದೆ ಕಳೆದ ವರ್ಷ ನಡೆಸಿದಂತೆ ಈ ವರ್ಷವೂ ಬೇಸಗೆಯ ರಜಾ ಕಾಲದಲ್ಲಿ ಗಮಕ (ಕಾವ್ಯವಾಚನ) ಕಲಾಭ್ಯಾಸಕ್ಕಾಗಿಯೂ ಮತ್ತು ದೇವರ ನಾಮಗಳು ಮೊದಲಾದ ಕನ್ನಡ ಹಾಡುಗಳ ಗಾಯನಾಭ್ಯಾಸಕ್ಕಾಗಿಯೂ ಒಂದು ಗೋಷ್ಠಿಯನ್ನು ಏರ್ಪಡಿಸಿ, ಕೆಲವು ತಿಂಗಳುಗಳ ಕಾಲ ಹಲವು ಮಂದಿ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕಾಗಿ ನಿಶ್ಚಯಿಸಿದೆ

ಈ ವಿಶೇಷೋತ್ಸವವು ಬಹು ಜನದಿಂದ ಸಾಧ್ಯವಾಗುವ ಕೆಲಸ ಮೊದಲನೆಯ ಉತ್ಸವಕ್ಕೆ ಸುಮಾರು ೧೩೦೦ ರೂಪಾಯಿಗಳ ವೆಚ್ಚ ತಗಲಿತು ಎರಡನೇ ಸಾರಿಯ ಉತ್ಸವಕ್ಕೆ ೧೪೦೦ ರೂಪಾಯಿಯಷ್ಟು ವೆಚ್ಚ ತಗಲಿತು, ಈ ಸಾರಿ ಮೇಲೆ ಸೂಚಿಸಿರುವಂತೆ ಕೆಲವು ಹೊಸ ಏರ್ಪಾಟುಗಳನ್ನು ಮಾಡಬೇಕೆಂದಿರುವುದರಿಂದ ವೆಚ್ಚವು ೧೫೦೦—೧೬೦೦ ರೂಪಾಯಿಗಳ ವರೆಗೂ ಆದೀತೆಂದು ಅಂದಾಜಾಗಿದೆ

ಈ ವೆಚ್ಚದಲ್ಲಿ ಮುಖ್ಯ ಭಾಗ ಪರಸ್ಥಳಗಳಿಂದ ಬರುವ ಉಪಾಧ್ಯಾಯರಿಗೂ ಇತರ ಸಾಮಾನ್ಯ ಜನರಿಗೂ ಅವರಿಂದ ಕೇವಲ ನಾಮಮಾತ್ರದ್ದಾದ ರುಸುಮನ್ನು ತೆಗೆದುಕೊಂಡು, ಬಸ್ಸುವುಟ್ಟಿಗೆ ಉಚಿತವಾಗಿಯೇ ಭೋಜನ ವಸತಿಗಳ ಸೌಕರ್ಯವನ್ನು ಉಂಟುಮಾಡಿ ಕೊಡುವುದಕ್ಕೆ ತಗಲತಕ್ಕದ್ದು ಇದರ ಜೊತೆಗೆ ಉಪನ್ಯಾಸಕರ ಮತ್ತು ಗಮಕಿಗಳ ಪ್ರಯಾಣದ ವೆಚ್ಚ ವಿಜ್ಞಾನ ಪ್ರದರ್ಶನಗಳಿಗೆ ಬೇಕಾಗುವ ಸಲಕರಣೆಗಳನ್ನು ಒದಗಿಸುವುದು, ಮುದ್ರಣಕಾರ್ಯದ ಖರ್ಚು ಇವೇ ಮುಂತಾದುವು ಸೇರಿರುತ್ತವೆ

ಹೀಗೆ ಹೆಚ್ಚು ರೂಪದಲ್ಲಿ ನಡೆಯಬೇಕಾದ ವೆಚ್ಚಕ್ಕೆ ತಕ್ಕ ಉತ್ಪತ್ತಿ ಪರಿಷತ್ತಿಗೆ ಎಷ್ಟು ಮಾತ್ರವೂ ಇರುವುದಿಲ್ಲ, ಕಳೆದ ಎರಡು ವರ್ಷಗಳಂತೆಯೇ ಈ ವರ್ಷ ಈ ದೊಡ್ಡ ಕೆಲಸ ಮಹಾಜನರ ಸಹಾಯದಿಂದಲೇ ನಡೆಯಬೇಕಾಗಿದೆ, ಆದ್ದರಿಂದ ಬಹು ಆಶೆಯಾಗಿ

ಸಂಪಾದಕರ ಟಪ್ಪಾಲು ಪೆಟ್ಟಿಗೆ.

(ಬಾಹ್ಯದಾತರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಮುಂದಾಳುಗಳ ಕರ್ತವ್ಯ.

ಕಳೆದ ಶನಿವಾರ ತಾರೀಕು ೪ರಲ್ಲು ಮೂಡಬಿದ್ರೆಯ ಬೋರ್ಡು ಮಿಡ್ಲ್ ಸ್ಕೂಲಿನ ಶಾಲಾ ವರ್ಧಂತ್ಯುತ್ಸವವು ಅತೀ ವಿಜೃಂಭಣೆಯಿಂದ ನಡೆಯಿಸಲ್ಪಟ್ಟಿತು ಅದರಿ ಶಾಲೆಯ ದುರದೃಷ್ಟದಿಂದಲೋ ಅಥವಾ ಮೂಡಬಿದ್ರೆಯವರಿಗೆ ಸುಯೋಗವಿಲ್ಲದುದರಿಂದಲೋ ನಿಶ್ಚಿತ ಅಧ್ಯಕ್ಷರಾದ ಮಂಗಳೂರು ಮುನಿಸಿಪಾಲಿಟಿಯ ಚೆಯರ್ಮೇನರಾಗಿರುವ ಡಾಕ್ಟರ ಕೆ. ವಿಟ್ಟಲ ಶೆಟ್ಟರು ಸಾಯಂಕಾಲ ಕತ್ತಲಾಗುವ ವರೇಗೆ ಎಲ್ಲರೂ ಕಾದಿದ್ದರೂ ಬರಲಿಲ್ಲವಾದ ಕಾರಣ ಅಂದಿನ ಸಭೆಗೆ ದಯಮಾಡಿಸಿದ್ದ ಸುಪ್ರಸಿದ್ಧ ಸಾಹಿತ್ಯಜ್ಞರಾದ ಶ್ರೀಯತ ಎಂ ಎನ್ ಕಾಮತರು ಅಧ್ಯಕ್ಷ ಸ್ಥಾನವನ್ನು ವಹಿಸಿ ಕಾರ್ಯಕಲಾಪಗಳು ಸುಗಮವಾಗಿ ನೆರವೇರಿದುವು.

ಇದೇ ರೀತಿಯಲ್ಲಿ ಕಳೆದ ವರ್ಷವೂ ಜರಗಿದ ಶಾಲೆಯ ಮಕ್ಕಳ ಹಬ್ಬದ ಸಮಯದಲ್ಲಿಯೂ ಆಗಿತ್ತು, ಶ್ರೀಯುತ ಉಳ್ಳಾಲ ಮಂಗೇಶರಾಯರು ಸಾಹಿತ್ಯ ಪೂಜೆಯ ಅಧ್ಯಕ್ಷ ಸ್ಥಾನವನ್ನು ವಹಿಸಲು ಒಪ್ಪಿಕೊಂಡಿದ್ದರು ಶ್ರೀಯುತ ಕೋಟ ಶಿವರಾಮ ಕಾರಂತರು ಅದರ ಮರುದಿನ ಜರಗಲಿದ್ದ ಹಳೇ ವಿದ್ಯಾರ್ಥಿ ಸಂಘೋತ್ಸವಕ್ಕೆ ಅಧ್ಯಕ್ಷರಾಗಲು ಒಪ್ಪಿಕೊಂಡು ಆಮಂತ್ರಣ ಪತ್ರಿಕೆಗಳು ಅವರ ಹೆಸರುಗಳಿಂದ ಅಲಂಕೃತವಾದುವು ಆದರೆ ಶ್ರೀಯುತ ಮಂಗೇಶರಾಯರು ತನ್ನ ಅಸಾಸು ಖಲತೆಯನ್ನು ಅದೇ ದಿನ ಬೆಳಗ್ಗೆ ಒಂದು ಕಾರ್ಡಿನ ಮೂಲಕ ತಿಳಿಸಿದರು ಶ್ರೀಯುತ ಕಾರಂತರು ಟೆಲಿಗ್ರಾಮು ಮೂಲಕ ತನ್ನ ತೊಂದರೆಗಳನ್ನು ಮುಂಚಿನ ದಿನವೇ ತಿಳಿಸಿದ್ದರು ಈ ವರುಷ ಮಾತ್ರ ಶ್ರೀಯುತ ಡಾಕ್ಟರ ಶೆಟ್ಟರವರು ಸಂಜೆ ೫ ಗಂಟೆಯಿಂದ ೭ ಗಂಟೆಯ ವರೇಗೆ ಬಂದು ನೆರೆದ ಸಭಿಕರನ್ನು ಕಾಯುವಂತೆ ಮಾಡಿ ನಂತರವೂ ಬಾರದೆ ಸಭಿಕರನ್ನೆಲ್ಲಾ ನಿರಾಶರನ್ನಾಗಿ ಮಾಡಿದುದು ತುಂಬಾ ಶೋಚನೀಯ ಶ್ರೀಯುತ ಶೆಟ್ಟರಿಗೆ ಎಂತಹ ಅನಾನುಕೂಲತೆಗಳಿದ್ದರೂ ಅವನ್ನೆಲ್ಲಾ ಮೂಲೆಗೊತ್ತಿಟ್ಟು ಒಂದೇ ಗಂಟೆಯ ದಕ್ಷಿಣವಿರುವ ನಮ್ಮ ಮೂಡಬಿದ್ರೆಯವರಿಗೆ ಮುಂಚಿತವಾಗಿ ತಿಳಿಸುವುದು ನಮ್ಮ ಜಿಲ್ಲೆಯ ಆದರ್ಶ ಪುರುಷರಲ್ಲೊಬ್ಬರೆಂದೆನಿಸಿಕೊಳ್ಳುವ ಶ್ರೀಯುತ ಡಾಕ್ಟರರ ಸಜಕರ್ತವ್ಯವಿದ್ದಿತ್ತಲ್ಲವೇ?

ಇನ್ನು ಮುಂದೆ ಆಮಂತ್ರಣ ಪತ್ರಿಕೆಗಳನ್ನು ಅಧ್ಯಕ್ಷರ ಹೆಸರುಗಳನ್ನು ಪ್ರಕಟಿಸಿ ನಮ್ಮ ದಕ್ಷಿಣ ಕನ್ನಡದ ಯಾವತ್ತು ಸಂಘಗಳು ನಮ್ಮ ಮುಂದಾಳುಗಳೆಂದೆನಿಸಿಕೊಳ್ಳುವವರನ್ನು ನಂಬಿ ಮೋಸಹೋಗದಂತೆ ಜಾಗ್ರತೆಯಿಂದಿರಲೆಂದು ಆಶಿಸುತ್ತೇನೆ

ಪ್ರತ್ಯಕ್ಷದರ್ಶಿ

...ದ್ದೀ ದೇಶಕ್ಕೆ ಅತ್ಯಂತ ಉಪಯುಕ್ತವಾಗಿರುವ ಈ ಕೆಲಸವನ್ನು ಕೈಬಿಡುವುದು ಉಚಿತವಲ್ಲವೆಂದು ತಿಳಿದು ತಮ್ಮ ಔತ್ಸಾಹ ನಂಬಿಕೆಯನ್ನಿಟ್ಟುಕೊಂಡು, ಪರಿಷತ್ತು ಈಗ ಈ ಕೆಲಸಕ್ಕೆ ಕೈಹಾಕಿರುತ್ತದೆ, ತಾವು ದೊಡ್ಡ ಮನಸ್ಸು ಮಾಡಿ, ಈ ಪ್ರಯತ್ನಕ್ಕೆ ಉದಾರವಾಗಿಯೂ ಮತ್ತು ಕ್ಷಿಪ್ರವಲ್ಲಿಯೂ ದ್ರವ್ಯಸಹಾಯ ಮಾಡಬೇಕೆಂದು ಬೇಡುತ್ತೇವೆ

ಎಲ್ಲಾ ಬಗೆಯ ಸಹಾಯವನ್ನೂ ಪರಿಷತ್ತು ಕೃತಜ್ಞತೆಯಿಂದ ಸ್ವೀಕರಿಸಿ ಆ ಬಗ್ಗೆ ತಕ್ಕ ರಶೀದಿ ಕೊಟ್ಟು, ಕ್ರಮವಾಗಿ ಲೆಕ್ಕಗಳನ್ನಿರಿಸಿ ಸಕಾಲದಲ್ಲಿ ವರದಿಯನ್ನು ಮಹಾಜನರಿಗೆ ಪ್ರಕಟಪಡಿಸುವುದಲ್ಲದೆ, ತಮ್ಮ ಉಪಕಾರವನ್ನು ಚಿರಕಾಲ ಸ್ಮರಿಸಿ ತಮ್ಮನ್ನು ವಂದಿಸುತ್ತಿರುವುದು ಇತಿ ತಮ್ಮ ವಿಧೇಯರು,

ಡಿ. ವಿ. ಗುಂಡಪ್ಪ,

(ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲಿನ ಮತ್ತು ಯುನಿವರ್ಸಿಟಿ ಕೌನ್ಸಿಲ್ ಸೆನೆಟ್ಟುಗಳ ಮೆಂಬರರು)

ಉಪಾಧ್ಯಕ್ಷ

ಸಿ. ಕೆ ವೆಂಕಟರಾಮಯ್ಯ, ಎಂ ಎ ಎಲ್ ಎಲ್ ಬಿ

(ಸರಕಾರದ ಪ್ಲೀಡರು)

ಪರಿಷತ್ತಿನ ಗೌರವ ಕಾರ್ಯದರ್ಶಿ

ಎಂ. ಆರ್. ಶ್ರೀನಿವಾಸ ಮೂರ್ತಿ, ಬಿ ಎ

(ಹೆಡ್ ಮಾಸ್ಟರ್ ನಾರ್ಮಲ್ ಸ್ಕೂಲ್)

ಸಿ. ಆರ್. ಮಾಧವರಾವ್, ಬಿ. ಎ.

(ಸ್ಕೂಲ್ ಬೋರ್ಡು ಆಫೀಸರರು)

ವ್ಯವಸ್ಥಾಪಕರು—ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವ.

ಬಡವರ ಗೋಳು.

ಸ್ವದೇಶಾಭಿಮಾನಿಯೇ,

ಕೋಟೇಶ್ವರ ಹಾ। ಎ। ಶಾಲೆಯಿಂದ ೩ ಮೈಲು ದೂರವೂ, ಕಾರ್ಕಡ ಹಾ। ಎ। ಶಾಲೆಯಿಂದ ೪ ಮೈಲು ದೂರವೂ ಇದ್ದು ತೆಕ್ಕಟ್ಟೆ, ಕುಂಭಾಶಿ, ಗೋಪಾಡಿ, ವಕ್ವಾಡಿ, ಉಳ್ತೂರು, ಕೆದೂರು, ಗಿಳಿಯಾರು, ಮಣೂರು ಈ ಎಲ್ಲಾ ಗ್ರಾಮಗಳಿಗೆ ಕೇಂದ್ರಸ್ಥಾನವಾಗಿ ೨ ಮೈಲುಗಳೊಳಗೆ ನೆಲಸಿದ್ದ ಈ ತೆಕ್ಕಟ್ಟೆ ಹಾ। ಎ। ಶಾಲೆಯ ಮೇಲಿನ ಮೂರು ಕ್ಲಾಸುಗಳನ್ನು ಥಟ್ಟನೆ ತೆಗೆದುಹಾಕಿದ್ದು ಈ ಎಲ್ಲಾ ಗ್ರಾಮಸ್ಥರಿಗೂ ಕಲಿಯುವ ಹುಡುಗರಿಗೂ ಸಿಡಿಲು ಬಡಿದಂತಾಗಿರುವುದು. ಸಂದರ್ಶಿಸಿದ ಮಹನೀಯರಿಂದ ಒಂದು ಉತ್ತಮ ತರದ ಹೆಗ್ಗಳಿಕೆಯನ್ನು ಹೊಂದಿ ಯೋಗ್ಯ ರೀತಿಯಿಂದ ನಡೆಯುತ್ತಾ ಬಂದಿರುವ ಈ ಶಾಲೆಯು ಈಗಿನ ಪ್ರೆಸಿಡೆಂಟರ ಕಾಲದಲ್ಲಿ ಥಟ್ಟನೇ ಮರಣಶಯ್ಯೆಯನ್ನು ಹೊಂದಿದ್ದು ತುಂಬಾ ಶೋಚನೀಯ ಪ್ರತಿ ಪತ್ರಿಕೆಗಳಲ್ಲಿಯೂ ಮೊದಲಿನ ಪ್ರೆಸಿಡೆಂಟರ ನ್ಯೂನತೆಗಳನ್ನೂ, ಈಗಿನ ಪ್ರೆಸಿಡೆಂಟರ ಹೆಗ್ಗಳಿಕೆಯನ್ನೂ ಸಾರುತ್ತಿರುವ ಕಂಠೀರವನು ಅಲ್ಪಮತಿಯಾದ ನನಗೆ ಕೆಳಗಿನ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ನೀಡಲಾರನೇ?

೧ ವರ್ಷಾವಧಿ ಪರೀಕ್ಷೆಯಾಗದೆ ಮಧ್ಯಕಾಲದಲ್ಲಿ ೩ ಕ್ಲಾಸುಗಳ ಹುಡುಗರನ್ನು ಹೊರಗೆ ತಳ್ಳಲ್ಪಟ್ಟಿರುವುದು ಯಾವ ನ್ಯಾಯ? ೨ ಆ ಹುಡುಗರ ಮುಂದಿನ ಗತಿಯೇನು? ೩ ಹಣದ ಅಭಾವವಿರುವುದಾದರೆ ಒಂದೆರಡು ಉಪಾಧ್ಯಾಯರನ್ನು ವರ್ಗಾಯಿಸಿದರೆ ಸಾಲದಿತ್ತೆ? ೪ ಮಕ್ಕಳ ಸಂಖ್ಯೆ ಕಡಿಮೆಯೆನ್ನುವುದಾದರೆ, ಅಂಥಾ ಎಲ್ಲಾ ಶಾಲೆಗಳನ್ನು ತೆಗೆದಿರುವುದೆ? ೫ ಇಲ್ಲಿಯ ೩ ಸೆಕೆಂಡ್ರಿ ಟ್ರೈನ್ಡ್ ಉಪಾಧ್ಯಾಯರ ಪೈಕಿ ಒಬ್ಬರನ್ನು ಬೇರೆ ದೊಡ್ಡ ಶಾಲೆಗಳಲ್ಲಿದ್ದ ೨ನೇ ಕ್ಲಾಸುಗಳಿಗೆ ವಒಂದು ಸಣ್ಣ ಹಾ ಎ ಶಾಲೆಗೆ ಕಳುಹಿಸಿದ್ದು ಯಾವ ನ್ಯಾಯ? ೬ ಇನ್ಸ್ಪೆಕ್ಟರನ್ನು ಮೀರಿದ ತರದ ಶಾಲೆಗನೇ ರೂಪಾಯಿ ೩೦ರ ಸಂಬಳದ ಮೇಲೆ ಕಳುಹಿಸಿದ್ದು ಏಕೆ? ಅಂಥಾ ಯೋಗ್ಯತೆಯು ಎಲ್ಲರಿಗೂ ಅಂತೆಯೇ ವರ್ತಿಸಿದೆಯೇ? ೭ ಇನ್ಸ್ಪೆಕ್ಟರನ್ನು—ಹೈಯರ್ ಗ್ರೇಡ್ ಉಪಾಧ್ಯಾಯರ ಕೈಕೆಳಗೆ ಅಸಿಸ್ಟೆಂಟರನ್ನಾಗಿ ಮಾಡಿದ್ದು ಯಾವ ಕಾರಣದಿಂದ? ೮ ಇದೀ ನಮ್ಮ ತಾಲೂಕಿನಲ್ಲಿ ಸಂಪೂರ್ಣ ಹಾ। ಎ। ಶಾಲೆಗಳು ಎರಡೇ ಇರುತ್ತ ಅದರಲ್ಲೂ ಒಂದನ್ನು ತೆಗೆದುಬಿಡುವುದು ಯೋಗ್ಯವೇ? ೯ ಇನ್ನಾದರೂ ಬಡ ಹಳ್ಳಿಗರ ಗೋಳನ್ನು ತಕ್ಕ ಕಾಲದಲ್ಲಿ ವಿದ್ಯಾದಾನದ ಮೂಲಕ ನಿವಾರಿಸಲು ಸಾಧ್ಯವಿಲ್ಲವೇ? ೧೦ ಇದಕ್ಕೆಲ್ಲಾ ಉತ್ತರ ಕೊಡದ ನನ್ನ ಸಂಶಯ ನಿವಾರಿಸಿ ಸರಕಾರವು ನಿಜವಾಗಿ ಪ್ರಜೆಗಳ ಬಂಧುವೆಂಬುದನ್ನು ವ್ಯಕ್ತಪಡಿಸಬೇಕಾಗಿ ಬೇಡಿಕೊಳ್ಳುವ 'ಸಜ್ಜನಹಿತಾಭಿಲಾಷಿ'

ಮಂಗಳೂರು ಸಿಟಿ ಆರ್ಯಸಮಾಜದ ಎಲ್ಲಾ ಮೆಂಬರರ ಅವಗಾಹನೆಯ ಬಗ್ಗೆ

ಈ ಸಮಾಜದ ಎಲ್ಲಾ ಸದಸ್ಯರ ಒಂದು ವಿಶೇಷ ಮಹಾಸಭೆಯು ಇದೇ ಬರುವ ಆದಿತ್ಯವಾರ ತಾರೀಕು ೨೬—೨—೩೩ನೇ ಪ್ರಾತಃಕಾಲ ೯ ಗಂಟೆ ಆರ್ಯ ಸಮಾಜ ಮಂದಿರದಲ್ಲಿ ಜರಗುವುದು ಅತ್ಯಗತ್ಯವಾದ ಕೆಲವು ವಿಷಯಗಳು ಚರ್ಚಿಸಲ್ಪಡುವವು ಮತ್ತು ಅವುಗಳ ಕುರಿತು ತಕ್ಕ ನಿರ್ಣಯಗಳನ್ನು ಮಾಡಲೇಬೇಕಾಗಿದೆ ಆದುದರಿಂದ ಆ ದಿನದ ಸಭೆಗೆ ಪ್ರತಿಯೊಬ್ಬ ಸದಸ್ಯರೂ ತಪ್ಪದೆ ಬರಬೇಕಾಗಿ ವಿನಂತಿ, ೧ ಸದಸ್ಯರಿಗೆ ಸಮಾಜದ ಕುರಿತು ಏನಾದರೂ ತಿಳುಕೊಳ್ಳತಕ್ಕ ಅಥವಾ ಚರ್ಚಿಸತಕ್ಕ ವಿಷಯಗಳಿದ್ದರೆ ಅವುಗಳನ್ನು ಪತ್ರ ಮುಖೇನ ಎರಡು ದಿವಸಕ್ಕೆ ಮುಂಚಿತವಾಗಿ ಅಧ್ಯಕ್ಷರಿಗೆ ತಿಳಿಸತಕ್ಕದ್ದು ೨ ಈ ದಿನದ ಸಭೆಗೆ ಸದಸ್ಯರ ಪೈಕಿ ಯಾರಾದರೂ ಕಾರಣಾಂತರಗಳಿಂದ ಬಾರದಿದ್ದಲ್ಲಿ ಸದರಿ ಸಭೆಯಲ್ಲಿ ತೀರ್ಮಾನಿಸಲ್ಪಡುವ ವಿಷಯಗಳಿಗೆ ಅವರ ಒಪ್ಪಿಗೆ ಇದೆಯೆಂದೂ ತೀರ್ಮಾನಿಸಲಾಗುವುದು. ೩. ಇಂದಿನ ಸಭೆಗೆ ಸಮಾಜದ ಸದಸ್ಯರಿಗೆ ಮಾತ್ರ ಆಮಂತ್ರಣವಿದೆಯೆಂದು ಪ್ರಕಾರ್ಯದರ್ಶಿಗಳು ತಿಳಿಸುತ್ತಾರೆ.

ಬೆಂಗಳೂರು

ದಿ ಮೈಸೂರು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್ ಈ ಸಂಸ್ಥೆಯ ಎರಡನೇ ಮಹಾಸಭೆಯು ಸದ್ರಿ ಆಫೀಸಿನಲ್ಲಿ ಫೆಬ್ರುವರಿ ೨೬ ೨೫ನೇ ಶನಿವಾರ ಅಪರಾಹ್ನ ೧ಕ್ಕೆ ಜರಗಲಿರುವುದು.

ಮಂಗಳೂರು ಆರ್ಯಸಮಾಜದ ಹದಿನೆಂಟನೇ ವಾರ್ಷಿಕೋತ್ಸವವು ಮತ್ತು ಋಷಿ ಬೋಧೋತ್ಸವವು

ಕಳೆದ ವಾರ ಬಹು ವಿಜೃಂಭಣೆಯಿಂದ ಜರಗಿತು ತಾ೨ ೧೭ನೇ ಶುಕ್ರವಾರ, ಲೈಸು ನ್ಯುದಾನಿಸನಲ್ಲಿ ಶ್ರೀಯುತ ಎಂ. ಮಾಧವರಾವ್ ಬಿ ಎ. ಬಿ. ಎಲ್‌ರವರ ಅಧ್ಯಕ್ಷತೆಯಲ್ಲಿ ಕಾರ್ಕಳ ಆರ್ಯಸಮಾಜದ ಸೆಕ್ರೆಟರಿ ಶ್ರೀ ಕೇಶವ ಶೆಣೈರವರು ಮತ್ತು ಶ್ರೀ ಮೋಹನಪ್ಪ ತಿಂಗಳಾಯರ ಶಿವರಾತ್ರಿಯ ಕುರಿತು ಸಾರ್ವಜನಿಕ ವ್ಯಾಖ್ಯಾನಗಳ ನಡೆದವು, ತಾ೨ ೨೦ನೇ ಸೂರ್ಯೋದಯಕ್ಕೆ ಶ್ರೀ ಜ್ಞಾನೋದಯ ಸಮಾಜ ಮಂದಿರದಿಂದ ಸ್ತ್ರೀ ಪುರುಷ ದೊಡ್ಡ ಸಮೂಹವು ನಗರ ಸಂಕೀರ್ತನೆ ಮಾಡುತ್ತ ಸನ್ಯಾಸಿಗುಡ್ಡೆಯ ಆರ್ಯಸಮಾಜ ಮಂದಿರಕ್ಕೆ ತಲ್ಪಿತು ಆರ್ಯ ಮಹಿಳೆಯರು ವೈದಿಕ ಧ್ವಜಾರೋಹಣ ಗೀತೆಗಳನ್ನು ಹಾಡುತ್ತಾ ಧ್ವಜವನ್ನೇರಿಸಿದರು, ಮತ್ತು ಕಾರ್ಕಳ ಶೆಣೈಯವರ ಪೌರೋಹಿತ್ಯದಿಂದ ಬೃಹದ್ಯಜ್ಞವು ನಡೆಯಿತು ಶ್ರೀಯುತ ಉಳ್ಳಾಲ ಗೋಪಾಲಕೃಷ್ಣ ನಾಯಕರು ಈಶ್ವರ ಉಪಾಸನವನ್ನು ಮಾಡಿದರು ಪೂರ್ವಾಹ್ನ ೯॥ ಘಂಟೆಗೆ ಬ್ರಹ್ಮ ಶ್ರೀ ನಿಡ್ಲೆ ಅನಂತ ಉಪಾಧ್ಯಾಯರು ವೇದೋಪದೇಶಕ್ಕೆ ತೊಡಗಿ ವೇದಗಳು ಮಾನವ ಸಮಾಜದ ಸುಖಶಾಂತಿಗೆ ಅಗತ್ಯವಿರುವ ಎಲ್ಲಾ ವಿಷಯಗಳನ್ನು ಸ್ಫೂರ್ತಿದಾಯಕವಾದ ವಾಣಿಗಳಿಂದ ಹೇಗೆ ಬೋಧಿಸುತ್ತವೆ ಎಂಬುದನ್ನು ತೋರಿಸಿ ಚಿತ್ತಾಕರ್ಷಕವಾದ ಭಾಷಣವನ್ನು ಮಾಡಿದರು ತರುವಾಯ ಶ್ರೀಯುತ ಮೋಹನಪ್ಪ ತಿಂಗಳಾಯರು ಹಿಂದುಗಳ ಪತನ ಮತ್ತು ಶುದ್ಧಿಯ ಅವಶ್ಯಕತೆಗಳ ಕುರಿತು ಮಾತಾಡಿ ಒಂದು ಮುಸಲ್ಮಾನ ಕುಟುಂಬದ ಶುದ್ಧಿ ಸಂಸ್ಕಾರವನ್ನು ಮಾಡಿದರು ಮತ್ತು ಅವರಿಗೆ ಗಾಯತ್ರೀ ಮಂತ್ರೋಪದೇಶವನ್ನೂ, ಧರ್ಮಬೋಧೆಯನ್ನೂ ಕೊಟ್ಟು ಆಶೀರ್ವದಿಸಿದರು

ಮಧ್ಯಾಹ್ನ ೧೨॥ ಘಂಟೆಗೆ ಹಿಂದುಗಳ ಎಲ್ಲಾ ಪಂಗಡದ ಸುಮಾರು ಮುನ್ನೂರು ಜನರು ಒಟ್ಟುಗೂಡಿ ಸಹಭೋಜನ ಮಾಡಿದರು ಸಾಯಂಕಾಲ ೪॥ ಗಂಟೆಗೆ ದಕ್ಷಿಣ ಕನ್ನಡ ಜಿಲ್ಲಾ ಸಬೋರ್ಡಿನೇಟ್ ಜಡ್ಜರಾದ ಶ್ರೀಮಾನ್ ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ಋಷಿ ಬೋಧೋತ್ಸವದ ಸಭೆಯು ಜರಗಿ ಎಜ್ಯುಕೇಶನಲ್ ಆಫೀಸರ್ ಆರ್ ವೆಂಕಯ್ಯಗಾರು ಬಿ ಎ. ಯಲ್ ಟಿ ಹಿಂದೀ ಪ್ರಚಾರಕ ಶ್ರೀ ದೇವಪ್ಪ ಆಳ್ವರು ಮತ್ತು ಶ್ರೀ ಮೋಹನಪ್ಪ ತಿಂಗಳಾಯರು ಋಷಿಬೋಧ ವಿಸ್ತಾರವಾಗಿ ಭಾಷಣಗಳನ್ನು ಕೊಟ್ಟರು ಅಧ್ಯಕ್ಷರು ದಯಾನಂದರ ಮತ್ತು ಅವರ ಕಾರ್ಯಗಳನ್ನು ಕೊಂಡಾಡಿ ವೇದಗಳ ಕಡೆಗೆ ಹಿಂತಿರುಗಿರಿ (Back to Vedas) ಎಂಬ ಅವರ ಬೋಧನೆಯನ್ನು ಕಾರ್ಯರೂಪಕ್ಕೆ ತರುವುದೇ ಲೋಕೋದ್ಧಾರದ ಹಾದಿ ಎಂದು ವಿಚಾರಪೂರ್ಣವಾದ ಮಾತುಗಳನ್ನಾಡಿದರು ಅನಂತರ ಶ್ರೀ ಗೋಪಾಲ ನಾಯಕರಿಂದ ಉಪಕಾರ ಸ್ಮರಣೆಯಾಗಿ ಉತ್ಸವವು ಕೊನೆಗೊಂಡಿತು ಈ ಉತ್ಸವಕ್ಕೆ ಆರ್ಯಸಮಾಜಿಕರು ತಮ್ಮ ತಮ್ಮ ಕುಟುಂಬಗಳೊಂದಿಗೆ ಬಂದಿದ್ದು ತಮ್ಮ ಇಡೀ ದಿವಸವನ್ನು ಧಾರ್ಮಿಕ ವಾತಾವರಣದಲ್ಲಿಯೇ ಕಳೆದರು ಈ ಉತ್ಸವದ ಸಮಯ ನಡುವೆ ಶ್ರೀ ಜ್ಞಾನೋದಯ ಸಮಾಜದ ವೈದಿಕ ಭಜನ ಮಂಡಲಿಯವರು ಭಕ್ತಿರಸ ಪೂರ್ಣವಾದ ಭಜನೆಗಳನ್ನು ಹಾಡಿ ಧರ್ಮೋತ್ಸಾಹ ಮತ್ತು ಮನೋರಂಜನೆಗೊಳಿಸುತ್ತಿದ್ದರು

ಶರೀರ ಮರ್ಮಶಾಸ್ತ್ರ.

ಇದರಲ್ಲಿ ಅನೇಕ ಜಾತಿ ಸ್ತ್ರೀಯರ ಲಕ್ಷಣದ ವರ್ಣನೆಗಳೂ, ಗರ್ಭದಾನ ಸಂತಾನನಿರೋಧ, ಅತಿಸಂಭೋಗದಿಂದಾಗುವ ಹಾನಿ, ಸಂಭೋಗದಲ್ಲಿ ಬಿಳ್ಳ ನಷ್ಟ, ಗರ್ಭಚಿಹ್ನೆ, ಗರ್ಭಾಶಯ ವೃದ್ಧಿ ರೋಗ, ಶಿಶು ರಕ್ಷಣೆ, ಪಥ್ಯ, ಸ್ತ್ರೀಯರ ಜನನೇಂದ್ರಿಯ ವರ್ಣನೆ, ಇವಲ್ಲದೆ ಇನ್ನು ಸ್ತ್ರೀಪುರುಷರಿಗೆ ಬೇಕಾದ ಅನೇಕ ತರದ ಗುಪ್ತ ರಹಸ್ಯಗಳನ್ನು ೩೪ ಚಿತ್ರಗಳೊಡನೆ ೧೩೦ ಪುಟಗಳಲ್ಲಿ ಕನ್ನಡದಲ್ಲಿ ವಿವರಿಸಿ ಬರೆದಿದೆ, ಬೆಲೆ ೧ಕ್ಕೆ ರೂ. ೧, ಪೋ. ಖ. ಬೇರೆ

ನಮ್ಮಲ್ಲಿರುವ ಗ್ರಂಥಗಳು—ಸ್ತ್ರೀಗಾಂಗಿಕೆಯ ಮರ್ಮಶಾಸ್ತ್ರ ರೂ. ೧, ಕಾಕಶಾಸ್ತ್ರ ೦—೬—೦, ಗೃಹಸ್ಥಾಶ್ರಮ ರಹಸ್ಯ ೧—೮—೦, ರತಿಮನ್ಮಥ ರಹಸ್ಯ ೦—೧೨—೦,

ವಿಳಾಸ:—ಕರ್ನಾಟಕ ಏಜನ್ಸಿ,

ಕೃಷ್ಣಪ್ಪನಾಯಕನ ಅಗ್ರಹಾರ, ಪೋ. ಬೆ. ಮದರಾಸು

ತುರಿಸುವಿಕೆ, ಕಜ್ಜಿ, ಸುಟ್ಟ ಗಾಯಗಳು, ಪೆಟ್ಟಿನ ಗಾಯಗಳನ್ನು ಗುಣಪಡಿಸಿಕೊಳ್ಳಬೇಕೆ?

ಹಾಗಾದರೆ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟ ಸಾಂಬಕನ್ನುಪಯೋಗಿಸಿರಿ.

ದೇಹದ ಸೌಂದರ್ಯ ಚರ್ಮದಿಂದಾಗಿ ಒಡೆದುಕಾಣುತ್ತದೆ. ಅದನ್ನು ಕರಿಕಜ್ಜಿಗಳು ಗಾಯಗಳು ಮುಂತಾದವುಗಳ ಕಲೆಗಳಿಲ್ಲದಂತೆ ಇಡುವುದು ನಿಮ್ಮ ಕರ್ತವ್ಯ. ಆದಕ್ಕಾಗಿ ಸಾಂಬಕನ್ನುಪಯೋಗಿಸಿರಿ. ಅಂದರೆ ಯಾವ ಚರ್ಮರೋಗವಿದ್ದರೂ ಅದರ ಮುಟ್ಟಿದ ಕೂಡಲೆ ಸಾಂಬಕ್ ದೇಹದ ರಂಧ್ರಗಳ ಮೂಲಕ ಚರ್ಮವನ್ನು ಸೇರಿ ಅದರಲ್ಲಿರುವ ವಿಷಕರವಾದ ಅಣುಗಳನ್ನು ನಾಶಪಡಿಸಿ ಚರ್ಮಕ್ಕೆ ನೂತನ ಸೌಂದರ್ಯವನ್ನು ಕೊಡುತ್ತದೆ. ಹುಳ ಹೋಗುವುದು ಬಹುಕಾಲದಿಂದಲೂ ಗುಣವಾಗದ ಹುಣ್ಣುಗಳು ನೋವುಗಳು ಕಜ್ಜಿ ಇವಕ್ಕೆಲ್ಲಾ ಸಾಂಬಕ್ ದಿವ್ಯೌಷಧಿ. ಎಲ್ಲಾ ಔಷಧಿ ಮಾರಾಟ ಮಾಡುವ ಅಂಗಡಿಗಳಲ್ಲಿ ವಿಕ್ರಯಿಸಲ್ಪಡುತ್ತದೆ.

ಬೆಲೆ ರೂ 1 ಅಥವಾ ಪೆಟ್ಟಿಗೆಗೆ ರೂ 2-0-0

ಇದರಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರವಿಲ್ಲ

ಸಾಂಬಕ್

Zam Buk

'ಸ್ವದೇಶಾಭಿಮಾನಿ'

ವಾರಪತ್ರಿಕೆಗೆ

ಇಂದೇ ಚಂದಾದಾರರಾಗಿರಿ

ಗೊಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊಡ್ರೆಜ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರರೂ ಕೊಂಡಾಡಿದುದನ್ನು ಕೇಳಿ ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು

ಗೊಡ್ರೆಜ್

ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ಸ್ ಒಫ್ ಕೊಮರ್ಸ್ ಇದಕ್ಕೂ ಜರ್ಮನ್ ಸಪ್ಲೈ ಲೆಬೊರೇಟರಿ ಫೋರ್ ಎಕ್ಸಪರಿಮೆಂಟಲ್ ಕೆಮಿಸ್ಟ್ರಿ ಮೈಕ್ರೊಸ್ಕೊಪಿ ಎಂಡ್ ಬೆಕ್ಟೀರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಜ್ಞರಾಗಿರುವ

ಡಾ। ಔಫ್ರೆಚ್ಟ್ ಎಂಬವರು:—"ನಾನು ಗೊಡ್ರೆಜ್ ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು. ನನ್ನ ಅಭಿಪ್ರಾಯದಂತೆ ಅವುಗಳು ಸ್ಟೆಫೈಲೊಕೊಕಸ್ ಮತ್ತು ಸ್ಟ್ರೆಪ್ಟೊಕೊಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ. ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ಸ್ ಎಂಬವರು.—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧನೆ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್‌ಸನ್‌ರವರು.—"ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ" ಎಂದರು

ರಾಷ್ಟ್ರಸಭೆಯ ಮಾಜಿಅಧ್ಯಕ್ಷರಾದ

ಡಾ। ಎಂ ಎ ಅನ್ಸಾರಿ, ಎಂ ಡಿ ಎಂ ಎಸ್ ರವರು:—"ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ. ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ. ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ. ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು

ತಯಾರಿ—**ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ

ಸೋಲ್ ಏಜಂಟರು—**ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು

Motor Accessories Of Approved Manufacture Always in Stock.

Exide Batteries Uncharged	...	**Rs. 20-0-0**
" Fully Charged.		**Rs. 24-0-0**
Genuine Lockheed Hydraulic Brake fluid Quart tins factory Sealed		**Rs. 2-12-0**
Genuine Lockheed " locally filled		**Rs 2-4-0**

All Hydraulic Brake parts held in stock and available at Bombay Prices less 5% discount.

Chevrolet Springs of approved American Make available at less than Bombay Prices

Brake liners, Automobile lamp bulbs, Bronze bushings and bars, Bolts and Nuts of S. A. E threads, Special tools, Drilling Machines, Spanner sets of all types

An Enquiry with us will save you money

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಕೊಡಿಯಾಲಬೈಲು, ಮಂಗಳೂರು.

The Canara Public Conveyance Company Ltd., Kodialbail Mangalore

ಹಿಂದೂದೇಶದ ಕೆಲವು ಪ್ರಾಂತ್ಯಕೀಯ ಸರಕಾರಕ್ಕೆ ನಷ್ಟಸಂಭವಿಸುವುದು.

ಸೋವಿಯೆಟ್ ಜಪಾನ್ ಸಂಬಂಧ.

ಫ್ರೆಂಚರಿಗೂ ರಷ್ಯಾದವರಿಗೂ ಒಪ್ಪಂದ.

ಸ್ಪೈನ್ ದೇಶದಲ್ಲಿ ಹೊಸ ಸರಕಾರದ ರಚನೆಯಾಗುವುದು

ಸ್ಪೈನ್ ದೇಶದಲ್ಲಿ ಸಮತಾವಾದಿಗಳು ಎಲ್ಲರೂ ಸೇರಿ ಈ ಮುಂಚೆ ಇರುವ ಧನಾಢ್ಯರಿಂದ ಕೂಡಿದ ಸರಕಾರವನ್ನು ನೆಲಕ್ಕೆ ಕೆಡವಿರುತ್ತಾರೆ ಧನಾಢ್ಯರು ಭೀತರಾಗಿ ಪ್ರಾಣವನ್ನು ಉಳಿಸಿಕೊಳ್ಳಲು ದೇಶಬಿಟ್ಟು ಪಲಾಯನವಮಾಡುತ್ತಿದ್ದಾರೆ ಹೀಗೆ ಪಲಾಯನ ಮಾಡುವವರಲ್ಲಿ ಹಿಂದಿನ ಮುಖ್ಯ ಮಂತ್ರಿವರ್ಯರಿರುವರು, ಗತಿಸಿದ ಸರಕಾರದ ಅಧಿಕಾರದಲ್ಲಿ ಸೆರೆಮನೆಯನ್ನು ಸೇರಿದ ೩೦,೦೦೦ ಮಂದಿ ಸಮತಾವಾದಿಗಳು ಬಿಡುಗಡೆ ಹೊಂದುವರು ಸಮತಾವಾದಿಗಳು ತಮಗುಂಟಾದ ಜಯಕ್ಕಾಗಿ, ಎಲ್ಲೆಲ್ಲೂ ಕುಡಿಯುವಿಕೆ, ನರ್ತನ ಇತ್ಯಾದಿಗಳಿಂದ ಕೂಡಿದ ಹಬ್ಬದಲ್ಲಿ ಕಾಲ ಕಳೆಯುತ್ತಿದ್ದಾರೆ ನವಸರಕಾರ ರಚನೆಯು ಬೇಗನೇ ಆಗುವುದು

ಜಪಾನಿಗೆ ಸೋವಿಯೆಟ್ ರಷ್ಯಾದ ಎಚ್ಚರಿಕೆ.

ಸೋವಿಯೆಟ ಸರಕಾರವು, ಜಪಾನೀಯರು ಆಗಿಂದಾಗ್ಗೆ ಮಂಚೂಕ್ವೊ ಸೈಬೀರಿಯನ್ ಗಡಿಯ ಹತ್ತಿರ ನಡೆಯಿಸುವ ಚಟುವಟಿಕೆಗಳು ಪೌರ್ವಾತ್ಯದ ಶಾಂತಿಭಂಗಕ್ಕೆ ಕಾರಣವಾಗುವುದೆಂದು ಎಚ್ಚರಿಕೆ ಕಳುಹಿಸಿಕೊಟ್ಟಿರುತ್ತದೆ ರಷ್ಯಕ್ಕೆ ಪ್ರತ್ಯಕ್ಷಕ್ಕೆ ಜರ್ಮನಿಯನ್ನು ತಡೆಯುವ ಕಾರ್ಯವು ಮುಖ್ಯವೆಂದೂ ಕಂಡುದುದರಿಂದ ತನ್ನ ಪೂರ್ವದ ಗಡಿಯಲ್ಲಿ ಜಪಾನೀಯರೊಡನೆ ಇನ್ನೊಂದು ಕಲಹವನ್ನು ಬೆಳೆಯಿಸುವ ಆಲೋಚನೆಯು ಇರುವುದಿಲ್ಲ ಆದ್ದರಿಂದ ಜಪಾನೀಯರೊಡನೆ ಉಂಟಾದ ಕಲಹ ನಿವಾರಣೆಗಾಗಿ ಕೆಲವು ಉಪಾಯಗಳನ್ನು ಹುಡುಕುತ್ತಿದ್ದಾರೆ

ಫ್ರೆಂಚರಿಗೂ ಸೋವಿಯೆಟ ರಷ್ಯಾದವರಿಗೂ ಒಪ್ಪಂದವಾದರೆ

ಜರ್ಮನಿಯು ಹೇಗೆ ವರ್ತಿಸುವುದೆಂದು ಅನೇಕ ಊಹೆಗಳು ಯೂರೋಪು ಖಂಡದಲ್ಲಿ ಆಗಿವೆ ಜರ್ಮನಿಯ ಶಸ್ತ್ರವಾದುದು ರಷ್ಯದವರಿಗೂ ಫ್ರೆಂಚರಿಗೂ ಸ್ವಲ್ಪ ಸಂಶಯವನ್ನು ಉಂಟುಮಾಡಿರುತ್ತದೆ ಆದುದರಿಂದಲೆ ಅವರು ಪರಸ್ಪರ ಒಪ್ಪಂದವನ್ನು ಮಾಡುವ ಯತ್ನದಲ್ಲಿದ್ದಾರೆ ಆದರೆ ಜರ್ಮನಿಯು, ಈ ಒಪ್ಪಂದವನ್ನು ಎಷ್ಟುಕಾಲ ಸಹಿಸದು ಈ ಒಪ್ಪಂದವಾದರೆ ಹಿಟ್ಲರನು, ರಷ್ಯಾದ ಗಡಿಯ ಹತ್ತಿರವಿರುವ ಪ್ಲಾನ್ ಟೆಂಡಿನಲ್ಲಿ ಸೈನ್ಯ ಸಮೂಹವನ್ನು ಕಳುಹಿಸಿ ಕೊಡುವನು ತನ್ನ ಎಲ್ಲಾ ಗಡಿಗಳಲ್ಲಿ ಯುದ್ಧ ಸಿದ್ಧತೆಗಳನ್ನು ಮಾಡುವನು ಅಂದರೆ ಇದು ಇನ್ನೊಂದು ಮಹಾ ಯುದ್ಧದ ಸಿದ್ಧತೆಗಳೇ, ಇತರ ಜನಾಂಗಗಳಂತೆ ತಾನೂ ಸಂಗ್ರಾಮ ಯೋಚನೆಗಳನ್ನು ಮಾಡುತ್ತಿರುವನೆಂದೂ ಇದಕ್ಕೆ ಇತರ ಜನಾಂಗಗಳು ಯಾಕೆ ಆಕ್ಷೇಪ ತರುವುದೆಂದು ಹಿಟ್ಲರನ ಮಾತು. ಒಟ್ಟಾರೆ ಪ್ರಪಂಚದ ಶಾಂತಿಯು ಭಯಂಕರ ಸ್ಥಿತಿಯಲ್ಲಿದೆ.

ಕಲ್ಕತ್ತಾದ ಟ್ರೋಪಿಕಲ್ ಮೆಡಿಸಿನ್ ಸ್ಕೂಲ್

ಇದು ಇಂಡಿಯಾ ಸರಕಾರದಿಂದ ಹಿಂದೂದೇಶದ ಅನೇಕ ಟ್ರೊಪಿಕಲ್ (ಉಷ್ಣವಲಯದ) ರೋಗಗಳ ಕುರಿತು ಶೋಧೆ ನಡೆಸಲು ಸ್ಥಾಪನೆಯಾದ ಸಂಸ್ಥೆಯು ಈ ಶಾಲೆಯ ವಾರ್ಷಿಕೋತ್ಸವವು ಮೊನ್ನೆ ಜರಗಿತು ಈ ಶಾಲೆಯಲ್ಲಿ ನಡೆದ ವಿವಿಧ ಶೋಧೆಗಳ ಕುರಿತು ಪ್ರದರ್ಶನಗಳಿದ್ದುವು ಕರ್ನಲ್ ಚೋಪ್ರಾ ಎಂಬವರ ಇಲಾಖೆಯ ಅನೇಕ ಪ್ರದರ್ಶನಗಳಿದ್ದುವು, ಇವರಿಂದ ಸಾಧಾರಣ ೨೫೦ ವಿಧದ ಔಷಧಿಗೆ ಉಪಯುಕ್ತವಾಗುವ ಗಿಡಮೂಲಿಕೆಗಳು ಕಂಡುಹಿಡಿಯಲ್ಪಟ್ಟವೆ ಇವುಗಳೆಲ್ಲಾ ಪ್ರದರ್ಶಿಸಲ್ಪಟ್ಟಿದ್ದುವು ಇವು ಕರ್ನಲ್ ಚೋಪ್ರಾ ಇವರ ಕಳೆದ ಎರಡು ವರ್ಷಗಳ ಶ್ರಮದ ಫಲಗಳು, ಕುಷ್ಠರೋಗದ ಕುರಿತು ಅನೇಕ ಪ್ರದರ್ಶನಗಳಿದ್ದುವು ಮೈಕ್ರೊಸ್ಕೋಪಿನಿಂದ ತೆಗೆದ ರೋಗಗಳ ಚಿತ್ರಗಳೂ, ನಿವಾರಣಾ ಔಷಧಿಗಳೂ ಪ್ರದರ್ಶಿಸಲ್ಪಟ್ಟಿದ್ದವು ಕುಷ್ಠರೋಗದ ಕುರಿತು ಈ ಸಂಸ್ಥೆಯು ಭಾರೀ ಶೋಧೆ ನಡೆಯಿಸಿರುತ್ತದೆ ಗುಣವಾಗುವದನ್ನು ನಮಗೆ ಬೇಕಾದ ರೀತಿಯಲ್ಲಿ ಉಂಟುಮಾಡಲು ಸಾಧ್ಯವಾಗುವ

ಒಂ ... ಕರ್ನಲ್ ಚೋಪ್ರಾರವರ ರಿಸರ್ಚ್ ಇಲಾಖೆಯ ಅನೇಕ ಶೋಧೆಗಳು ಪ್ರದರ್ಶಿಸಲ್ಪಟ್ಟಿದ್ದವು ಹಿಂದೂದೇಶದ ಅನೇಕ ಕಡೆಗಳಲ್ಲಿ ಪೀಡಿಸುತ್ತಿರುವ ಮಲೇರಿಯಾ, ಕಾಲಾಜರ್ ಮೊದಲಾದ ಮಹಾ ಸಾಂಕ್ರಾಮಿಕ ರೋಗಗಳ ವಿಚಾರದಲ್ಲಿ ಇವರು ತುಂಬಾ ಶೋಧೆಗಳನ್ನು ನಡೆಯಿಸಿರುತ್ತಾರೆ ಈ ಸಂಸ್ಥೆಯಿಂದ ಭಾರತೀಯರಿಗೆ ಸಾಂಕ್ರಾಮಿಕ ರೋಗಗಳನ್ನು ತಡೆಯುವ, ಗುಣಪಡಿಸುವ ಅನೇಕ ಉಪಾಯಗಳೂ ಔಷಧಿಗಳೂ ಹೊರಬಂದಿವೆ ಅನೇಕ ಸಾಂಕ್ರಾಮಿಕ ರೋಗಗಳ ನಿಲಯವಾಗಿರುವ ನಮ್ಮ ಹಿಂದೂದೇಶಕ್ಕೆ ಇದೊಂದು ಮಹಾವರವೇ ಸರಿ.

ಬಹೀರ್ ದೇಶಗಳಿಂದ ಹಿಂದೂದೇಶಕ್ಕೆ ಬಂದ ಸಾಬೂನಿನ ಮೌಲ್ಯ.

ಸಾಬೂನಿನ ಆಮದು ಬಹಳವಾಗಿ ಇಳಿದಿರುತ್ತದೆ

ವರ್ಷ		ಆಮದಿನ ಮೌಲ್ಯ.
1922	23	ರೂ 1,13,95,000
1923	24	1,19,27,000
1924	25	1,32,18,000
1925	26	1,46,11,000
1926	27	1,52,11,000
1927	28	1,61,37,000
1928	29	1,58,10,000
1929	30	1,66,68 000
1930	31	1,11,98 000
1931	32	88,72,000
1932	33	82,63,000
1933	34	78 37,000
1934	35	63,21,030

ಶಾಂತಿಸ್ಥಾಪನೆಗೆ ಇನ್ನೊಂದು ಪ್ರಯತ್ನ.

ಜೆಕೊಸ್ಲೊವೆಕಿಯಾದ ಪ್ರೆಸಿಡೆಂಟರಾದ ಡಾ| ಬೆನ್ನೆಸ್ಸರನ್ನು ಇಟೇಲಿಗೂ ಜನಾಂಗಸಭೆಯ ಇತರ ಸದಸ್ಯ ಜನಾಂಗಗಳಿಗೂ ಹಬಷಿ—ಇಟೇಲಿ ಕಲಹವಿಚಾರದಲ್ಲಿ ಮಾತುಕತೆಗಳನ್ನು ನಡೆಯಿಸುವ ಕಾರ್ಯವನ್ನು ವಹಿಸಬೇಕೆಂದು ಕೆಲವರು ಸೂಚನೆಕೊಟ್ಟಿರುವರು, ಡಾ| ಬೆನ್ನೆಸ್ಸರು ಇಟೇಲಿಯ ನ್ಯಾಯವಾದ ಸಲಹೆಗಳನ್ನು ಕೊಟ್ಟರೆ ಮತ್ತು ಎಲ್ಲರೂ ಮಾತುಕತೆಯಿಂದ ಉಂಟಾಗಬಹುದಾದ ಕಟ್ಟಕಡೆಗೆ ಒಪ್ಪುವ ವಾಗ್ದಾನವಮಾಡಿದರೆ ಮಾತ್ರ ತಾನು ಈ ಕಾರ್ಯವನ್ನು ಕೈಕೊಳ್ಳುವನೆಂದು ತಿಳಿಸಿರುವರು

ಇಂಗ್ಲಾಂಡಿನಲ್ಲಿ

ಜನರು ಹೆಚ್ಚು ಹಾಲನ್ನು ಸೇವಿಸುವಂತೆ ಪಾರ್ಲಿಮೆಂಟಿನವರು ಒಂದು ಹೊಸ ಕ್ರಮವನ್ನು ಮಾಡಿರುವರು, ಆಕಳುಗಳನ್ನು ಸಾಕುವವರಿಗೆ ಸಹಾಯದ್ರವ್ಯವನ್ನು ಕೊಟ್ಟು, ಹಾಲು ಮತ್ತು ಅದರಿಂದ ತಯಾರಾಗುವ ಇತರ ವಸ್ತುಗಳು ಧಾರಾಳವಾಗುವಂತೆ ಮಾಡಲೂ ನಿರ್ಧರಿಸಿರುವರು ಹಾಲಿಗೆ ಗಿರಾಕಿಗಳನ್ನು ಹೆಚ್ಚಿಸಲು ಉಪಾಯಗಳನ್ನು ಮಾಡಿರುವರು, ಈ ಕಾರ್ಯಕ್ಕೆ ಲಕ್ಷಾಂತರ ಹಣವನ್ನು ವ್ಯಯಿಸಬೇಕಾಗಿದೆ.

ಬ್ರಿಟಿಷರು ತಮ್ಮ ಸ್ವಾರ್ಥಕ್ಕಾಗಿ ಇಟೇಲಿಯ ಮೇಲೆ ಸೆಂಕ್ಷನುಗಳನ್ನು ಜ್ಯಾರಿಮಾಡಿರುವರು.

ಎಂದು ಇಟೇಲಿಯನ ಪತ್ರಿಕೆಗಳು ಸಾರುತ್ತಿದ್ದಾವೆ ಇಟೇಲಿ—ಹಬಷಿ ಕಲಹದ ಮೇಲೆ ಬ್ರಿಟಿಷರು ಗುಪ್ತವಾಗಿ ಸಿದ್ಧಪಡಿಸಿದ ಮಾಫೆ ರಿಪೋರ್ಟಿನಿಂದ ಕೆಲವು ಅಂಶವನ್ನು ಇದಕ್ಕೆ ಆಧಾರವಾಗಿ ಕೊಟ್ಟಿರುವರು, ಗುಪ್ತವಾದ ಆ ರಿಪೋರ್ಟ ಅವರಿಗೆ ಹೇಗೆ ಸೇರಿತ್ತೆಂದು ಬ್ರಿಟಿಷರು ಆಶ್ಚರ್ಯಪಡುತ್ತಿದ್ದಾರೆ. ಬ್ರಿಟಿಷರು ಇಟೇಲಿಯ ಮೇಲಿನ ತಮ್ಮ ವರ್ತನೆಯು ಜನಾಂಗಸಭೆಯ ಗೌರವವನ್ನು ರಕ್ಷಿಸುವುದಕ್ಕೆಂದು ಸಾರಿರುವರು, ಇದೊಂದಲ್ಲದೆ, ಅವರ ಯಾವ ಹಿತಗಳಿಗಲ್ಲವೆಂದೂ ಈಗಲೂ ಹೇಳುತ್ತಿರುವರು ಆದರೆ ನಿಜವಾಗಿಯೂ ಬ್ರಿಟಿಷರಿಗೆ ಎಬಿಸೀನಿಯಾದಲ್ಲಿ ಕೆಲವು ಹಿತಗಳು ಇವೆ, ಇದರಲ್ಲಿ ಈಜಿಪ್ತದ ಹತ್ತಿಯ ತೋಟಗಳಿಗೆ ನೀರು ಒದಗಿಸುವ ನ್ಯಾಲ್ ನದಿಯ ಮೂಲಸ್ಥಾನವಾಗಿರುವ ಟಾನಾ ಸರೋವರವು ಒಂದಾಗಿರುತ್ತದೆ, ಮಿ| ಎಂತೋನಿ ಎಡೆನ್ನರು ಈ ಕುರಿತು ಒಂದು ಪ್ರಕಟಣೆಯನ್ನು ಬೇಗನೇ ಮಾಡುವರಂತೆ.

ಸಿಂಧ್‌ನಲ್ಲಿ ನವೀನ ಪ್ರಾಂತ್ಯರಚನಾ ಸಿದ್ಧತೆಗಳು

ಸಿಂಧ್ ದೇಶದಲ್ಲಿ ಪ್ರಾಂತ್ಯ ರಚನಾಕಾರ್ಯಗಳು ಭರದಿಂದ ನಡೆಯುತ್ತಿವೆ ಈ ಪ್ರಾಂತ್ಯಕ್ಕೆ ನೇಮಕವಾದ ಗವರ್ನರರು ಸರ್ ಲೆನ್ಸಲೋಟ್ ಗ್ರೆಹೇಮರು ಬರುವ ಮಾರ್ಚಿ ತಿಂಗಳ ಒಳಗಾಗಿ ಮುಂಬಾಯಿಯಲ್ಲಿ ಇಳಿಯುವರು ನಂತರ ಈ ಪ್ರಾಂತ್ಯದ ಸರಕಾರ ರಚನಾಕಾರ್ಯವು ನಡೆಯುವುದು ಗವರ್ನರರ ಮಿಲಿಟರಿ ಸೆಕ್ರೆಟರಿಯವರು ಮಾರ್ಚ ಪ್ರಥಮಾರ್ಧದಲ್ಲಿ ಬರುವರು ಇಲ್ಲಿಯ ಸೆಕ್ರೆಟರಿಯೇಟಿಗೆ ೯೨ ಮಂದಿ ಗುಮಾಸ್ತರ ಕೆಲಸಕ್ಕೆ ೩೦೦೦ ಅರ್ಜಿಗಳು ಬಂದಿವೆ ಗವರ್ನರರಿಗೆ ಉಳಕೊಳ್ಳಲು ೩ ೩೦ ೦೦೦ ರೂ ವೆಚ್ಚ ಮಾಡಿ ಒಂದು ನಿಲಯವನ್ನೂ, ೧೦ ೫೦ ೦೦೦ ವೆಚ್ಚ ಮಾಡಿ ಅದಕ್ಕೆ ಪೀಠೋಪಕರಣಗಳನ್ನು ತಯಾರಿಸುವರಂತೆ

ಕೆಲವು ಪ್ರಾ| ಸರಕಾರಗಳ ಬಜೆಟ್ಟುಗಳು.

ಪಂಜಾಬು ಸರಕಾರದಲ್ಲಿ ರೂ ೬೦ ೦೦೦ ಉಳಿತಾಯವಾಗಿದೆಯೆಂದೂ, ಮಧ್ಯಪ್ರಾಂತ್ಯಗಳ ಬಜೆಟ್ಟಿನಲ್ಲಿ ರೂ ೫೦ ಲಕ್ಷ ನಷ್ಟವಾಗುವುದೆಂದೂ, ಬಂಗಾಳ ಸರಕಾರದ ಬಜೆಟಿನಲ್ಲಿ ರೂ ೫೧ ೭೫,೦೦೦ ನಷ್ಟವಾಗುವುದೆಂದೂ (ಇದನ್ನು ಗತ ವರ್ಷದಲ್ಲಿ ಉಳಿದ ಮೊಬಲಗಿನಿಂದಲೂ, ಇಂಡಿಯಾ ಸರಕಾರದೊಡನೆ ಓವರ್ ಡ್ರಾಫ್ಟಿನಿಂದಲೂ ಭರ್ತಿಮಾಡುವರೆಂದೂ) ಸಂಯುಕ್ತ ಪ್ರಾಂತ್ಯದ ಬಜೆಟಿನಲ್ಲಿ ರೂ ೭೭,೬೦,೦೦೦ ನಷ್ಟವಾಗಿರುತ್ತದೆಂದೂ, ಇದನ್ನು ೭೭ ಲಕ್ಷದ ಒಂದು ಸಾಲದಿಂದ ಭರ್ತಿಮಾಡುವರಾಗಿಯೂ ತಿಳಿದುಬರುತ್ತದೆ ಮದ್ರಾಸು ಸರಕಾರಕ್ಕೆ ಈ ಭಾರಿ ನಷ್ಟಬರಬಹುದೆಂದೂ ತಿಳಿದುಬರುತ್ತದೆ

ಅಮೇರಿಕಾದಲ್ಲಿ ಬೇಸಾಯದ ಕುರಿತು ನವೀನ ಕ್ರಮಗಳು

ಸಂಯುಕ್ತ ಅಮೇರಿಕಾದ ಹೌಸ್ ಒಫ್ ರೆಪ್ರಸೆಂಟೇಟಿವ್ಸನವರು ಪ್ರೆಸಿಡೆಂಟ ರೂಸೆವೆಲ್ಟರ ಬೇಸಾಯ ಬಿಲನ್ನು ಮಂಜೂರು ಮಾಡಿರುವರು ಈ ಬಿಲ್ಲಿನಿಂದಾಗಿ ಸಾಗುವಳಿಯ ಫಲದ ಧಾರಣೆಯೂ ಹಾಸಿಕದ ರೀತಿಯಲ್ಲಿ ಇಳಿಯದಂತೆ ಮಾಡಬಹುದಂತೆ ಪ್ರೆಸಿಡೆಂಟರಿಗೆ, ಬಹೀರ್ ದೇಶದ ಸಾಗವಳಿ ಫಲಗಳು ಈ ದೇಶವನ್ನು ಸೇರಿ ಸ್ಪರ್ಧೆನಡೆಯಿಸಿ, ವ್ಯಾಪಾರ ಸ್ಥಿತಿಯನ್ನು ಕೆಡಿಸದಂತೆ ಅವುಗಳ ಮೇಲೆ ನಿರ್ಬಂಧ ಬರುವ ಹಾಗೆ, ಅತಿ ಹೆಚ್ಚಾದ ಡ್ಯೂಟಿಯನ್ನು ವಿಧಿಸುವ ಹಕ್ಕುಗಳು ಈ ಬಿಲಿನಿಂದ ದೊರಕಿವೆ.

ಇಟೆಲಿ—ಹಬಷಿ ಯುದ್ಧ.

ಹಬಷಿಗಳು ಬಹಳ ಬುದ್ಧಿವಂತರೆನ್ನಬಹುದು ಇವರು ನವೀನ ಯಂತ್ರೋಪಾಯಗಳಿಂದ ನಡೆಯುವ ಯುದ್ಧೋಪಕರಣಗಳನ್ನು ಎದುರಾಯಿಸಿ ಯುದ್ಧಮಾಡುವುದು ಬಹಳ ಕಡಿಮೆ ಆದರೆ, ಯುಕ್ತಿಯಿಂದ, ಇಟೇಲಿಯಾನರ ಮುಂದುವರಿಕೆಗೆ ಅನೇಕ ಮಹಾತಡೆಗಳನ್ನು ಉಂಟುಮಾಡುತ್ತಿದ್ದಾರೆ ಅಲ್ಲದೆ, ಅಲ್ಲಲ್ಲಿ ಕೆಲಬರಿಸಿದ ಇಟೇಲಿಯಾನ ಸೈನ್ಯ ಮಂಡಳಗಳಿಗೆ ಸರಿಯಾದ ಆಹಾರ ಇತ್ಯಾದಿಗಳು ಸಿಗದಂತೆ ಮಾಡುತ್ತಿದ್ದಾರೆ, ಇದರಿಂದ ಶೀಘ್ರಗೆ ಹಿತವಾಗದ ಆ ಹಬಷಿ ದೇಶದ ಪೀಡೆಗಳಿಂದ ಹತಾಶರಾದ ಇಟೇಲಿಯಾನರ ಸಂಕಷ್ಟಗಳು ಇನ್ನೂ ಹೆಚ್ಚಿದಂತಾಗುತ್ತವೆ, ಒಂದು ಕಡೆಯಲ್ಲಿ ಮಳೆಯು ಬರುತ್ತದೆ ಮಾರ್ಗೋಪಾಯಗಳಲ್ಲಿ ವಾಹನ ಚಲಾವಣೆಗೂ ಸೈನ್ಯ ಸಮೂಹಗಳಿಗೆ ನಡೆಯಲೂ ಸಾಧ್ಯವಾಗುವುದಿಲ್ಲ ಹಬಷಿ ಸೇನಾಪತಿಗಳು ಬಹಳ ಯುಕ್ತಿಯಿಂದ ತಮ್ಮ ಯುದ್ಧಕಾರ್ಯವನ್ನು ನಡೆಯಿಸುತ್ತಿದ್ದಾರೆ, ಹೀಗಾಗಿ ಜನಾಂಗಸಭೆಯು, ಎಣ್ಣೆಯ ಸೆಂಕ್ಷನುಗಳನ್ನು ಜ್ಯಾರಿ ಮಾಡಿದರೆ ಇಟೆಲಿಯು ತನ್ನ ವರ್ತನೆಯನ್ನು ಬದಲಾಯಿಸದೆ ಇರದು.

ಕಾಂ| ಎಸೆಂಬ್ಲಿ ಮೆಂಬರರಿಗೆ ಹೊಸ ಕ್ಲಬ್ ಮತ್ತು ಆಫೀಸು

ಡಿಲ್ಲಿಯ ಪ್ರಸಿದ್ಧ ಉಪ್ಪಿನ ವ್ಯಾಪಾರಿಗಳಾದ ದಿವಂಗತ ಲಾಲಾ ದಿವಾನಚಂದರು ನೇಶನಲಿಸ್ಟ್ ಪಂಗಡದವರಿಗೋಸ್ಕರ ವಿನಿಯೋಗಿಸಿದ, ಫಿರೋಜ ಷಹಾ ರಸ್ತೆಯಲ್ಲಿ ನಂಬ್ರ ೩ನೇ ಮಂದಿರದಲ್ಲಿ, ಕಾಂಗ್ರೆಸ್ ಪಂಗಡಕ್ಕೆ ಒಂದು ಕ್ಲಬ್ ಮತ್ತು ಆಫೀಸು ತೆರೆಯಲಾಗಿದೆ ರೈಲ್ವೇಯ ಕುರಿತು ಅನೇಕ ಸುಧಾರಣೆಗಳನ್ನು ಮಾಡುವ ಕುರಿತು ಕಾಂಗ್ರೆಸ್ ಪಕ್ಷದವರು ಎಸೆಂಬ್ಲಿಯಲ್ಲಿ ಕ್ರಮ ವಹಿಸಲು ನಿರ್ಧಾರಮಾಡಿರುತ್ತಾರೆ ಶ್ರೀ| ಅಣೆಯವರು ಮೂರನೇ ತರಗತಿಯ ಪ್ರಯಾಣಿಕರ ಕುರಿತು ಚರ್ಚಿಸುವರು ಶ್ರೀ| ವಿ ವಿ ಗಿರಿಯವರು ರೈಲ್ವೇ ಕೆಲಸಗಾರರ ವಿಚಾರದಲ್ಲಿ ಚರ್ಚೆ ನಡೆಸುವರು. ಶ್ರೀ| ಗೋವಿಂದ ಭುಲಾಭಾಯಿ ದೇಸಾಯಿ ಮತ್ತು ಸತ್ಯಮೂರ್ತಿಯವರು ರೈಲ್ವೇ ವಿಚಾರದ ಪ್ರಶ್ನೆಯ ಚರ್ಚೆಯಲ್ಲಿ ಭಾಗವಹಿಸುವರು

ಸಮತಾವಾದಿಗಳು ಕಾಂಗ್ರೆಸ್ಸಿನೊಡನೆ ಇರುವರು

ಅಖಿಲ ಭಾ| ಕಾಂಗ್ರೆಸ್ಸಿನ ಸಮತಾವಾದಿಗಳ ಪಂಗಡವು ಕಾಂಗ್ರೆಸಿನೊಡನೆ ಮರೆತು ಕಾರ್ಯ ನಡೆಸುವುದಾಗಿ ಅವರ ಕಾರ್ಯದರ್ಶಿಯವರಾದ ಶ್ರೀ ಮಸಾನಿಯವರು ಪ್ರಕಟಮಾಡಿರುವರು ಕೆಳಸಮಯದ ಹಿಂದೆ ಮಜೂರರ ಕೂಲಿಯ ವಿಚಾರದಲ್ಲಿ ಒಂದು ಮಸೂದೆಯು ಎಸೆಂಬ್ಲಿಯ ಮುಂದೆ ಬರಲು, ಅಗ್ಗ ಮಜೂರರಿಗಾಗಿ ಪ್ರಮುಖನ್ನು ಕಾಂಗ್ರೆಸ್ ಸಂಗಡವು ಟ್ರೇಡ್ ಯೂನಿಯನ್ ಚಳವಳವನ್ನೂ ಮಜೂರರ ಚಳವಳವನ್ನೂ ವ್ಯವಸ್ಥೆಗೊಳಿಸುವ ಕಾರ್ಯಗಳನ್ನು ಕಾಂಗ್ರೆಸ್ ವಹಿಸಬೇಕೆಂದು ಶ್ರೀ| ಮಸಾನಿಯವರ, ಮಾತು ಮಧ್ಯಮ ತರಗತಿ ಕೆಲಸ ಮಾಡುವ ತರಗತಿ ಮತ್ತು ರೈತ ತರಗತಿ ಇವೆಲ್ಲವೂ ಈ ಸಮಯದಲ್ಲಿ ಒಂದಾಗಬೇಕೆಂದು ಇವರ ವಿನಂತಿ

ಬಂಗಾಳದ ಕಾಂಗ್ರೆಸ್ ವಿವಾದ

ಬಂಗಾಳದ ಕಾಂಗ್ರೆಸ ವಿವಾದವು ಶ್ರೀ| ಜವಾಹರಲಾಲರಿಂದ ಕೊನೆಗೊಳಿಸಲ್ಪಡುವುದೆಂದು ದೇಶದಲ್ಲೆಲ್ಲಾ ಊಹೆ ಶ್ರೀ ನೆಹರುಗಳವರು ಶ್ರೀ ಸುಭಾಷ್ಚಂದ್ರ ಬೋಸರನ್ನು ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಗಳವರಾಗಿ ಮಾಡಿ ಈ ಕಾರ್ಯವನ್ನು ನಡೆಯಿಸುವರಂತೆ ಬಂಗಾಳದ ಭೇದಭಿಪ್ರಾಯಗಳನ್ನು ನಾಶಮಾಡಲು ಶ್ರೀ| ನೆಹರೂರವರಲ್ಲಿ ಒಳ್ಳೇ ಯೋಗ್ಯತೆಯಿದೆಯೆಂದು ಅನೇಕರ ಅಭಿಪ್ರಾಯ ಅಂತೂ ಇಂತೂ ಲಕ್ನೋ ಕಾಂಗ್ರೆಸ್ಸಿನಲ್ಲಿ ಬಂಗಾಳದ ಕಲಹ ನಿವಾರಣೆಯಾಗುವುದು.

ಆಂಗ್ಲೇಯ ಐರಿಷ್ ಸಂಬಂಧ.

ಆಂಗ್ಲೇಯ—ಐರಿಷ್ ಸಂಬಂಧವು ಉತ್ತಮಗೊಳ್ಳುವಂತೆ ಐರಿಷ್ ಜನರಿಗೆ ತಮ್ಮ ಸರಕಾರವನ್ನು ರಚಿಸುವ ಹಕ್ಕುಗಳು ಬೇಕೆಂಬಲ್ಲದೆ ಬ್ರಿಟಿಷರೊಡನೆ ಸಂಬಂಧ ಬೆಳೆಯಿಸುವ ವಿಚಾರದಲ್ಲೂ ಸ್ವಾತಂತ್ರ್ಯವಿರಬೇಕೆಂದು ಡಿ ವೆಲರಾ ಇವರ ಮಾತು ಇವರಿಗೂ ಬ್ರಿಟಿಷರಿಗೂ ಅವರು ಲೇಂಡ್ ಅನ್ಯೂಟಿಗಳನ್ನು ಸಲ್ಲಿಸುವ ವಿಚಾರದಲ್ಲಿ ವಿವಾದವು ಎದ್ದಿರುತ್ತದೆ ಈ ವಿವಾದವು ನ್ಯಾಯವಾದ ರೀತಿಯಲ್ಲಿ ಇತ್ಯರ್ಥವಾದರೆ, ಅವರು ಬ್ರಿಟಿಷರೊಡನೆ ಇತರ ವ್ಯಾಪಾರ ಸಂಬಂಧಗಳನ್ನು ಮಾಡುವರಂತೆ ಆದರೆ, ಒಂದು ವರ್ಷದಲ್ಲಿ, ಬ್ರಿಟಿಷರಿಂದ ಇವರ ಕೈಗಾರಿಕೆಗಳಿಗೆ ಯಾವ ತರದ ಹಾನಿಯೂ ಬರಬಾರದು, ಐಯರ್‌ಲೇಂಡನ್ನು ಸ್ವಾತಂತ್ರ್ಯವಾಗಿ ಮಾಡುವುದು ಡಿ. ವೆಲರಾ ಇವರ ಉದ್ದೇಶ ಆದ್ದರಿಂದ, ಬ್ರಿಟಿಷರು ನ್ಯಾಯವಾದ ರೀತಿಯಲ್ಲಿ ವರ್ತಿಸಿದರೆ ಮಹಾಯುದ್ಧದಿಂದೂ (ಇನ್ನೊಂದು ಯುದ್ಧಸಂಭವದಲ್ಲಿ ಯಾವತ್ತೂ ಹಾನಿ ಬಾರದಂತೆ) ಅದೇ ಪ್ರಕಾರ ವರ್ತಿಸುವುದಂತೆ, ಡಿವೆಲರಾರವರು, ಬ್ರಿಟಿಷರನ್ನು ಕೆಡಲು, ವೈರಿಗಳಿಗೆ ಐಯರ್‌ಲೇಂಡು ಒಂದು ನಿಲ್ದಾಣವಾಗದಂತೆ ನೋಡುತ್ತೇನೆಂದು ಭರವಸೆ ಕೊಟ್ಟಿರುವರು ಆದರೆ, ಬ್ರಿಟಿಷರು ಮಾತ್ರ ಮೇಲಿನ್ನ ಶರ್ತಗಳಿಗೆ ಒಪ್ಪಬೇಕು



HASAG
ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದುದು ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ ಎಲ್ಲವೂ ಹೊಸ ಮಾದರಿ ಈಗಾಗಲೆ ಸಾವಿರಗಳ್ಳಳೆ ಜನರ ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ. ಹಸಾಗ್ ದೀಪದ ಪ್ರಜ್ವಲನವು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚುಮಾಡುವುದರಲ್ಲಿ ಇದರಷ್ಟು ಉತ್ತಮವಾದ ದೀಪವು ಮತ್ತೊಂದಿಲ್ಲ ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು

EFAR
ಎಫಾರ್



ಎಂಬುದು ಇನ್ನೊಂದು ಅಪೇಕ್ಷಿತ ದೀಪ ಇದು ಎಲ್ಲರ ಮೆಚ್ಚುಗೆಗೂ ಪಾತ್ರವಾಗಿ ಬಹಳ ಕಮ್ಮಿ ಎಣ್ಣೆಯಿಂದ ಉಜ್ವಲ ಪ್ರಕಾಶವನ್ನು ಕೊಡುವುದರಲ್ಲಿ ಅದ್ವಿತೀಯವಾಗಿದೆ ಕ್ರಯವು ಬಹಳ ಕಡಿಮೆ ಮನೆಯ ಶೃಂಗಾರಕ್ಕೆ ಬಹಳ ಯೋಗ್ಯವಾಗಿರುವದು

Sole Representative F Racek & Co.,

Bombay	Calcutta	Madras	Colombo
P O Box	P O Box	P O Box	P O Box
2006	2121	1218	860

![Ford]

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA——AND——MANGALORE.



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನೂ ಪರಿಹಾರವಮಾಡುವ ಟೋನಿಕ್ಕು

21 ಔನ್ಸ ರೂ 2   16 ಔನ್ಸ ರೂ. 1-8-0   8 ಔನ್ಸ ರೂ. 0-14-0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಅಯೊಡೈಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ಶೀಘ್ರ ಗುಣಕಾರಿ

4 ಔನ್ಸ ರೂ. 1—0—0   8 ಔನ್ಸ ರೂ 1—8—0

ದಕ್ಷಿಣ ಕನ್ನಡದ ಏಜಂಟರು—ಪ್ರೊಷ್ಯುಲರ ಸ್ಟೋರ್ಸ್, ಮಂಗಳೂರು.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes Wounds Cuts Colds Headache It is a complete substitute for the domestic medicine chest Try once this unequalled remedy In ½oz tin As 3/ In oz jar As 12/-

Superior Red Balm For relieving pains in muscles and on skin Directions for use with the bottle Price As 12/- only

Wurmteufel Is a sovereign remedy against all sorts of worms in stomach and in the intestines Physicians enjoying authoritativeness describe it as radical remedy and warmly recommend it All those who suffer from worms, children and adults try this unique remedy and be freed from your ailment Price As 10 per packet

Pocket Inhaler For coughs and hoarseness, headache catarrh, colds, use this inhaler and you will be relieved immediately Price per inhaler As 6/ & As 8/-

Po-Ho Fluid For Asthma colds, indigestion, toothache lumbago, a sure remedy in all cases Price As 6/- and Re. 1/- per phial

Cough Cure An infallible remedy for coughs of all kinds bronchitis, hoarseness Particulars in bottle. Price As 12/- for 3 oz bottle

The New Curative Earth a Radium cure for incurable diseases

Mithra Toilet Soaps—Scientifically prepared German soaps excellent for health. Price As 1/3, 2/6, 3/-, 4/

Basel Mission Book Depot

Mangalore, Branches in Codialbail, Hubli, Calicut

ನಿಮ್ಮ ಜಾಹೀರಾತನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ

ವನಿತಾ ವಿಭಾಗ.

ಮಂಗಳೂರು ಮಹಿಳಾ ಸಭೆ.

(ಬರೆದವರು—ಶ್ರೀಮತಿ ಕೃಷ್ಣಾಬಾಯಿ ಪಣಂಬೂರಕರ)

ಈ ಸಂಸ್ಥೆಯು ಸ್ಥಾಪನೆಯಾಗಿ ೧೬ ವರುಷಗಳಾದವು. ಇವರ ಮುಖ್ಯ ಉದ್ದೇಶಗಳು ಸ್ತ್ರೀಯರ ಮನೆ ರಂಜನೆ, ಶಾರೀರಿಕ ಮತ್ತು ಬೌದ್ಧಿಕ ಉನ್ನತಿಗಳು, ಹಾಗು ಸಮಾಜಸೇವೆ. ಕಳೆದ ವರ್ಷದ ವರದಿಯಿಂದ ಸಭೆಯು ಎಲ್ಲ ತರದ ಉನ್ನತಿಯು ಕಂಡುಬರುತ್ತದೆ.

ಸಭೆಯ ಅನೇಕ ಚಟುವಟಿಕೆಗಳಲ್ಲಿ ಆಸ್ಪತ್ರೆಗಳ ಸೇವೆಯೂ ಒಂದಾಗಿರುವದು. ನೂತನ ವರ್ಷದ ದಿನ ಸಭೆಯ ಸದಸ್ಯೆಯರು ವೆನ್‌ಲಾಕ್, ಗೋಷೆನ್ ಮತ್ತು ಲಂಕನಾಡಿ ಆಸ್ಪತ್ರೆಗಳಿಗೆ ಹಾಗೂ ಸ್ಥಾನಿಕ ಜೈಲಿಗೆ ಹಣ್ಣು ಮಿಠಾಯಿಗಳನ್ನು ಒಯ್ದು ಸ್ವತಃ ಹಂಚಿದರು. ಅವರನ್ನು ಅಲ್ಲಿಯ ನಿವಾಸಿಗಳು ಹರ್ಷ ನಿರ್ಭರರಾಗಿ ಸ್ವಾಗತಿಸಿದರೆಂಬುದು ಬೇರೆಯಾಗಿ ಹೇಳಬೇಕಿಲ್ಲ.

ಪ್ರತಿ ವರ್ಷದಂತೆ ಸಭೆಯ ೧೬ನೇ ಜನ್ಮೋತ್ಸವವು ತಾ ೨೯-೧೧-೩೫ನೇ ದಿನ ಬಹಳ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು. ಡಾ। ಶ್ರೀಮತಿ ಡಿಸೋಜಾರವರು ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದರು. ಅವರು ಭಾಷಣದಲ್ಲಿ ಸಭೆಯು ಮಾಡಿದ ವಿವಿಧಕಾರ್ಯಗಳಿಗಾಗಿ ಅಭಿನಂದಿಸಿ, ಜಾತಿಧರ್ಮಗಳ ಭೇದವಿಲ್ಲದೆ ಸದಸ್ಯೆಯರು ಸಹಕರಿಸಿದ್ದಕ್ಕಾಗಿ ಆನಂದವನ್ನು ವ್ಯಕ್ತಪಡಿಸಿದರು.

ಸಭೆಯವರು ಬಹಳೇ ಶ್ರಮಪಟ್ಟು ಕ್ವೆಟ್ಟಾ ಭೂಕಂಪ ನಿಧಿಗಾಗಿ ರೂ ೨೦೦೦ ಕೂಡಿಸಿದರು. ಕಳೆದ ನಾತಾಳದಲ್ಲಿ ಆದ ಶೇತಕೀ ಮತ್ತು ಔದ್ಯೋಗಿಕ ಪ್ರದರ್ಶನದಲ್ಲಿ ಸದಸ್ಯೆಯರು ಕಳಿಸಿದ ದರ್ಶನೀಯ ವಸ್ತುಗಳಿಗಾಗಿ ಸುವರ್ಣ ಪದಕಗಳೂ, ಅನೇಕ ಪಾರಿತೋಷಕಗಳೂ ದೊರೆತವು. ಕಸೂತಿಯಂಥ ಕಲಾಕೌಶಲ್ಯದ ಸಾಮಾನುಗಳಷ್ಟೇ ಅಲ್ಲದೆ ಸ್ತ್ರೀಯರ ಸಾಮ್ರಾಜ್ಯವೆಂಬ ಅಭಿದಾನ ಪಡೆದ ಮನೆಗಳಲ್ಲಿಯ ಉಪ್ಪಿನಕಾಯಿ, ಹಪ್ಪಳ, ಶಾವಿಗೆ ಮೊದಲಾದ ಅನೇಕ ವಸ್ತುಗಳು ಪ್ರದರ್ಶನದಲ್ಲಿ ಇಡಲ್ಪಟ್ಟವು. ಇದರಿಂದ ಸ್ತ್ರೀಯರು ಮನೆಯಲ್ಲಿಯೇ ಉದ್ಯೋಗವನ್ನು ಮಾಡಿ ಕುಟುಂಬ ಪೋಷಣೆಕ್ಕೆ ಅಲ್ಪಸ್ವಲ್ಪ ಅನುವಾಗಬಹುದೆಂಬುದನ್ನು, ಮತ್ತು ಗ್ರಾಮೋದ್ಯೋಗಕ್ಕೆ ಯಾವ ಬಗೆ ಬೆಂಬಲವನ್ನೀಯಬಹುದೆಂಬುದನ್ನು ಜನತೆಯ ಮುಂದೆ ಇಟ್ಟಂತಾಯಿತು.

ಈ ವರ್ಷ ಮೊದಲನೇ ಸಲ ಸರಕಾರವು ಈ ಸಂಸ್ಥೆಯ ವಾಚನಾಲಯಕ್ಕೆ ೨೦೦ ರೂಪಾಯಿ ಗ್ರಾಂಟನ್ನು ದಯಪಾಲಿಸಿತು.

ಜಪಾನಿನ ವೀರ ಸ್ತ್ರೀ

ಮಿಸೆಸ್ ಸುಮಾಕೊ ಕವಾಜೊ ಎಂಬಾಕೆಯು ಮಾಂಚೂಕೊದಲ್ಲಿದ್ದ ಒಬ್ಬ ಜಪಾನ್ ಪೋಲೀಸ್ ಕಾನ್‌ಸ್ಟೇಬಲ್‌ನ ಹೆಂಡತಿ. ಅವನಿದ್ದ ಹಳ್ಳಿಗೆ ರಾತ್ರಿ ಢಕಾಯಿತಗಳು ನುಗ್ಗಿದರು. ಹಳ್ಳಿಗರನ್ನು ಕಾಪಾಡುವದಕ್ಕಾಗಿ ಆಕೆಯು ಬಂದೂಕನ್ನು ಹಿಡಿದು ಗಂಡನ ಬಳಿಗೆ ನಿಂತು ಢಕಾಯಿತಗಳೊಡನೆ ಕಾದಾಡಿ ಪ್ರಾಣ ಬಿಟ್ಟಳು. ಇಂದು ಆ ವೀರಳು ಜಪಾನಿನ ಹೆಂಗುಸರಿಗೆಲ್ಲ ಮಾದರಿ. ಆಕೆಯ ಹೆಸರನ್ನು ಕೇಳುತ್ತಲೇ ಜಪಾನಿನ ಹೆಂಗಸರೆಲ್ಲ ಹಲವಾಗಿ ಗೌರವಿಸುವರು. ಮಾಂಚುಕೊದಲ್ಲಿ ಆಕೆಯು ಕೊಲ್ಲಲ್ಪಟ್ಟ ಕಡೆ ಒಂದು ಆಲಯವನ್ನು ಕಟ್ಟಿ ಪ್ರತಿ ಡಿಸೆಂಬರ್ ೧೨ನೇ ತಾರೀಕು ಹೆಂಗಸರು ಹೋಗಿ ಗೋರಿಯ ಮೇಲೆ ಹೂಗಳನ್ನರ್ಪಿಸುವರು.

ಜೆ. ಓ. ಕಂಪೆನಿಯವರು ಢಕಾಯಿತಗಳೊಡನೆ ಮಿಸೆಸ್ ಸುಮಾಕೊ ನಡೆಸಿದ ಯುದ್ಧದ ಸಂಗತಿಯನ್ನು ಟಾಕಿ ಚಿತ್ರವನ್ನಾಗಿ ಸಹ ಮಾಡಿ ಊರಿಂದೂರಿನಲ್ಲಿ ಪ್ರದರ್ಶಿಸುತ್ತಿದ್ದಾರೆ.

ಜಪಾನಿನ ಹೆಂಗಸರು

ಅವರ ಜೀವನದ ಕೆಲವು ಸಂಗತಿಗಳು.

"ಜಪಾನಿನ ಹೆಂಗಸರ ಜೀವನದ ಕೆಲವು ಕಥೆಗಳು ನಮ್ಮ ಹೆಂಗಸರಿಗೆ ಮಾರ್ಗದರ್ಶಿಗಳಾಗಿಯೂ ಪ್ರೋತ್ಸಾಹಕವಾಗಿಯೂ ಇರಲೆಂದು ಕಳುಹಿಸಿದ್ದೇನೆ" ಎಂದು ಜಪಾನಿನಲ್ಲಿ ಸಂಚರಿಸುತ್ತಿರುವ ಒಬ್ಬ ಹಿಂದೀ ಹೆಂಗಸು ಬರೆಯುತ್ತಾಳೆ.

ಬಡವರಿಗೆ ಮನೆಗಳು

ಇಲ್ಲಿ ವಿಮೆನ್ಸ್ ಸೋಷಿಯಲ್ ವೆಲ್ಫೇರ್ ಸೊಸೈಟಿ ಎಂಬ ಒಂದು ಹೆಂಗಸರ ಸಂಸ್ಥೆ ಇದೆ. ಅವರು ಓಸಾಕಾ, ಟೋಕಿಯೋ ಎಂಬವುಗಳಲ್ಲಿ ೧೫೦ ವಾಸಗೃಹಗಳನ್ನು ಕೆಲಸಗಾರರಿಗೆಂದು ತೆರೆದಿದ್ದಾರೆ. ದಿನ ಕೂಲಿ ಸಂಪಾದಿಸುವ ಕೆಲಸಗಾರರು ಆ ಮನೆಗಳಲ್ಲಿ ವಾಸಮಾಡುತ್ತ ತಿಂಗಳಿಗಿಂತಿಷ್ಟೆಂದು ಸಣ್ಣ ಕಂತುಕೊಟ್ಟು ೧೫ ವರ್ಷಗಳಲ್ಲಿ ತಾವಿರುವ ಮನೆಗಳ ಯಜಮಾನರಾಗಬಹುದು. ಈ ವಾಸಗೃಹಗಳನ್ನು ಅನಾವರಣ ಮಾಡಿದಾಗ ಸುಮಾರು ೧೫೦೦ ಜನ ಹೆಂಗಸರು ಸೇರಿದ್ದರು. ನಮ್ಮಲ್ಲಿ ವಿದ್ಯಾವಂತೆಯರಾದ ಎಷ್ಟು ಜನ ಹೆಂಗಸರು ಬಡವರಿಗೆಂದು ಕಷ್ಟಪಡುವರು?

ಇನ್ನೊಂದು ಕಥೆ ಇದು. ಮಿಸೆಸ್ ರಿನ್‌ಸುಜುಕಿ ಎಂಬ ಹೆಂಗಸು ಸಾಯುವಾಗ ತಾನು ಕೂಡಿಟ್ಟ ಹಣವು ಅನಾಥರಿಗೆ ಹೋಗಬೇಕೆಂದು ವಿಲ್ ಬರೆದಿಟ್ಟಳು. ಅವಳ ಗಂಡ ಆ ಊರಿನ ಪೋಲೀಸ್ ಸ್ಟೇಷನಿಗೆ ಹೋಗಿ ೩೫೦ ಎನ್‌ಗಳನ್ನು (ಎನ್ ೧ರೂ ಸುಮಾರು) ಅಲ್ಲಿನ ಅಧಿಕಾರಿಗೆ ಅರ್ಪಣೆಮಾಡಲು ಹೋದನು. ಅಧಿಕಾರಿಗೆ ಈ ಮನುಷ್ಯನು ಏತಕ್ಕೆ ಈ ಹಣವನ್ನು ತಂದಿದ್ದಾನೆಂದು ತಿಳಿಯಲಿಲ್ಲ. ಆ ಹಣವು ಅವನ ಹೆಂಡತಿ ರಿನ್‌ಸುಜುಕಿಯು ಹೇಳಿದಂತೆ ಅವಳು ಒಂದುಸಲವೂ ಆಯುಷ್ಯದಲ್ಲಿ ಶಾಲೆಗೆ ಹೋಗದೆ ೧೫ ವರ್ಷ ಕಾಲ ತನ್ನ ಕೂದಲನ್ನು ತಾನೇ ಕತ್ತರಿಸಿಕೊಂಡು ಕೂಡಿಹಾಕಿ ಬಡವರಿಗೆ ಕೊಡಬೇಕೆಂದಿಟ್ಟಿದ್ದ ಹಣವಂತೆ ಇದು.

ಪ್ರ ಮ

ಭಾರತೀಯ ಮಹಿಳೆಯರಿಗೆ ವಿದ್ಯಾಭ್ಯಾಸ ಬೇಡವೇ?

(ಲೇಖಕ ಶ್ರೀ। ಕೆ ಕೇಶವ ಕುಡ್ವ, ಅಧ್ಯಾಪಕ, ಉಡುಪಿ)

ದಿನೇ ದಿನೇ ಅಧಃಪತನವನ್ನು ಹೊಂದುತ್ತಿರುವ ನಮ್ಮ ಮಾತೃಭೂಮಿಯ ಉದ್ಧಾರದ ಕುರಿತಾದ ಘಂಟಾಘೋಷವು ಅಷ್ಟದಿಕ್ಕುಗಳಿಂದಲೂ ಕೇಳಬರುತ್ತಿದೆ. ಅದನ್ನು ಪೂರ್ವದ ಉನ್ನತಪದವಿಗೆ ತರುವ ವಿಧಾನ ಯಾವುದು? ಯಾವುದನ್ನು ನಿರ್ಮೂಲಗೊಳಿಸಿದರೆ ಅದು ಅಂದಿನ ಉತ್ಕೃಷ್ಟಿತಿಯನ್ನು ಪಡೆದೀತು? ಎಂಬ ವಿಚಾರ ಮಾಡುವುದಾದರೆ ಒಬ್ಬೊಬ್ಬರ ಅಭಿಪ್ರಾಯವು ಒಂದೊಂದು ತೆರನಾಗಿದೆ. ಆದರೆ ಸಹಜವಾದ ದೃಷ್ಟಿಯಿಂದ ಹೇಳುವುದಾದರೆ ನಾವಿಂದು ಈ ತೆರನಾದ ಶೋಚನೀಯ ಸ್ಥಿತಿಗೆ ಬಂದಿಳಿಯಲು ನಮ್ಮಲ್ಲಿಯ ಭೇದಭಾವಗಳೇ ಕಾರಣವಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು. ಯಾವ ಕಾರಣಗಳು ನಮ್ಮ ದೇಶವನ್ನು ದಿನೇ ದಿನೇ ದೀನದುರ್ಬಲವನ್ನಾಗಿ ಮಾಡುವುವೋ ಅವುಗಳನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸುವುದೇ ಸರ್ವೋತ್ಕೃಷ್ಟವಾದ ಸಾಧನವಾಗಿದೆ.

ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಈ ಭೂಮಿಯಲ್ಲಿ ಗಂಡಸರೂ ಹೆಂಗಸರೂ ಒಂದೇ. ನರನಾರಿಯರೇ ಮಾನವಸಂಸಾರದ ಎರಡು ಅಂಗಗಳು. ಸಂಸಾರವೆಂಬ ರಥದ ಒಂದು ಚಕ್ರವು ಮಾತ್ರ ತಿರುಗಿ, ಮತ್ತೊಂದು ಮಾತ್ರ ತಿರುಗದೆಹೋದಲ್ಲಿ ಆ ರಥವು ಯಾವ ರೀತಿಯಲ್ಲಿ ಮುನ್ನಡೆಯುವುದಿಲ್ಲವೋ ಅಂತೆಯೇ ಸ್ತ್ರೀಪುರುಷರಲ್ಲಿ ಪುರುಷರು ಯೋಗ್ಯ ವಿದ್ಯಾಭ್ಯಾಸವನ್ನು ಪಡೆದು, ಅವರ ಸಹವಾಸದಲ್ಲಿರುವ ನಾರಿಯರು ಮಾತ್ರ ಶಿಕ್ಷಣವನ್ನು ಗಳಿಸದೆಹೋದರೆ ಆ ಸಂಸಾರವು ರಥದ ಗಾಲಿಗಳೋಪಾದಿಯಲ್ಲಿ ಎಂದಿಗೂ ಸುಖಮಯವಾಗಿ ಪರಿಣಮಿಸದು.

ಮಹಿಳೆಯರೇ ಲೋಕದ ವೃದ್ಧಿಗೆ ಕಾರಣರಾಗಿರುವರಲ್ಲದೆ ಅವರೇ ರಾಷ್ಟ್ರೋನ್ನತಿಯ ಅಡಿಗಲ್ಲಾಗಿರುವರೆಂಬುದು ಜನಜನಿತವಾದ ಸಂಗತಿಯಾಗಿರುತ್ತದೆ. ಅಂತಹ ಹಿಂದೂಮಹಿಳೆಯರ ಇಂದಿನ ಸ್ಥಿತಿಯೇನು? ಅವರು ಜ್ಞಾನಶೂನ್ಯೆಯರಾಗಿ, ಅವರ ಜೀವನವು ಅತ್ಯಂತ ಶೋಚನೀಯ ಸ್ಥಿತಿಗೆ ಬಂದಿಳಿದಿರುತ್ತದೆ. ಅವರು ತಮ್ಮ ಬುದ್ಧಿಬಲದಿಂದ ಇಹಪರ ಸಾಧನ ವಿಷಯಗಳನ್ನು ಚೆನ್ನಾಗಿ ಆಲೋಚಿಸಿ, ತಾವು ಮಾಡತಕ್ಕ ಕಾರ್ಯಗಳನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಿ, ಕೃತಕೃತ್ಯರಾಗತಕ್ಕ ಬುದ್ಧಿಬಲವು ಅವರಲ್ಲಿಲ್ಲದೆ, ಅಜ್ಞಾನಾಂಧಕಾರದಲ್ಲಿ ಮುಳುಗಿ ಪೇಚಾಡುತ್ತಿರುವರು. ಅಂದಮೇಲೆ ಹಿಂದೂಮಹಿಳೆಯರ ಅಜ್ಞಾನನಿವಾರಣೆಗೆ ಸಾಧನವಾಗಿರುವ ವಿದ್ಯಾಭ್ಯಾಸಕ್ಕೆ ತಕ್ಕ ಪ್ರೋತ್ಸಾಹವನ್ನೀಯದಿದ್ದರೆ, ನಮ್ಮ ಹಿಂದೂದೇಶವು ಪೂರ್ವದ ಉನ್ನತಪದವಿಗೆ ಬರುವುದಾದರೂ ಎಂತು?

ವಿದ್ಯಾಭ್ಯಾಸದ ವಿಷಯದಲ್ಲಿ ಸ್ತ್ರೀಪುರುಷರಿಗಿರತಕ್ಕ ತಾರತಮ್ಯವನ್ನು ಗಣನೆಗೆ ತರುವಷ್ಟಕ್ಕೆಲ್ಲಾ ಸುಜ್ಞಾನಿಗಳಾದ ವಿದ್ವಾಂಸರಿಗೆಲ್ಲ ಹಿಂದೂದೇಶದ ಭವಿಷ್ಯದ ಮೇಲೆ ನಿರಾಶೆಯುಟ್ಟುವುದರಲ್ಲಿ ಸಂದೇಹವಿರದು. ಈ ಜುಗುಪ್ಸೆಯುಂಟುಮಾಡುವ ದುಃಖವೇದನೆಯುಂಟಾಗಲೇ ಸ್ತ್ರೀಸಮಾಜವು ಅಜ್ಞಾನದ ಬಂಧನದಿಂದ ವಿಮೋಚನವಾದೀತೇ? ಇಂದಿನ ನಾರಿಯರೆಂದರೆ ವಿದ್ಯಾವಿಹೀನೆಯರಾಗಿ ಅಜ್ಞಾನದ ಬಂಧನಕ್ಕೆ ಸಿಲುಕಿಕೊಂಡು, ವಿದ್ಯಾಸಂಪನ್ನರಾಗಿಯೂ, ಹಿತಾಹಿತ ಪರಿಜ್ಞಾನವುಳ್ಳವರಾಗಿಯೂ ಇರುವ ಪುರುಷರಿಗೆ ಅನುಕೂಲರಾಗಿರದೆ, ಪುರುಷರು ಇವರನ್ನು ಒಂದು ಮಾರ್ಗಕ್ಕೆ ಎಳೆದರೆ ಅವರು ಮತ್ತೊಂದು ಹಾದಿಯನ್ನು ಹಿಡಿದೆಳೆಯುವರು. ಮಾತ್ರವಲ್ಲದೆ ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನೀಯದಿರುವುದರಿಂದ ಆ ವಿದ್ಯಾಭ್ಯಾಸದ ಮಹತ್ವಿಕೆಯು ಅವರಿಗೆ ಲಭಿಸಲಿಕ್ಕಿಲ್ಲ. ಅವರ ಅಜ್ಞಾನದ ಫಲವನ್ನು ಅವರೇ ಅನುಭವಿಸುವುದು ಮಾತ್ರವಲ್ಲದೆ ಅವರ ಸಹವಾಸದಲ್ಲಿರುವ ಪುರುಷರೂ ಕೂಡ ಅನುಭವಿಸಬೇಕಾದ ಕಠಿಣ ಪ್ರಸಂಗವು ಬಂದೊದಗುವುದರಿಂದ, ಮುಖ್ಯವಾಗಿ ಸ್ತ್ರೀಸಮಾಜದ ಅಜ್ಞಾನವನ್ನು ನಿರ್ಮೂಲಗೊಳಿಸಲು ಅವರ ಶಿಕ್ಷಣಕ್ಕೆ ತಕ್ಕ ಪ್ರೋತ್ಸಾಹವನ್ನೀಯುವುದು ವಿದ್ಯಾಭಿಮಾನಿಗಳ ಅದ್ಯಕರ್ತವ್ಯವಾಗಿರುತ್ತದೆ.

ಒಂದು ಕಾಲದಲ್ಲಿ ಮಹಿಳೆಯರೇ ರಾಜಧುರೀಣರಾಗಿದ್ದು ಗಂಡಸರನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಆಳುತ್ತಿದ್ದರೂ, ಆ ಸಮಯದಲ್ಲಿ ಸ್ತ್ರೀಪುರುಷರಿಬ್ಬರಿಗೂ ಸರಿಸಮಾನ ಹಕ್ಕುಗಳಿದ್ದುವೆಂದು ಹೇಳಬಹುದು. ಆದರೆ ಇಂದು ಮಾತ್ರ ಅವರು ಪುರುಷರ ಆಟದ ಗೊಂಬೆಗಳಂತಾಗಿ ಅವರಿಗೆ ಯಾವುದರ ಹಕ್ಕೂ ಇಲ್ಲದಂತಾಗಿ ದಾಸಿಯರಂತೆ ಜೀವಿಸಬೇಕಾಗಿದೆ. ಅವರಿಗೆ ತಮ್ಮ ಕರ್ತವ್ಯವೇನು? ತಮ್ಮ ಹಕ್ಕುಗಳ್ಯಾವುವು? ಎಂಬ ವಿಷಯವೊಂದು ತಿಳಿಯದಾಗಿದೆ. ನಾವು ನಿಜವಾಗಿಯೂ ಭರತಭೂಮಿಯ ಉದ್ಧಾರವನ್ನು ಗೈಯಲು ಬಯಸುವುದಾದರೆ, ನಮ್ಮ ಅಧಃಪತನದ ಕಾರಣಗಳನ್ನು ಕಿತ್ತೊಗೆಯುವುದು ಅತ್ಯಾವಶ್ಯಕವಾಗಿದೆ. ಸ್ತ್ರೀಯರಿಗೆ ಪುರುಷರ ತೆರದಲ್ಲಿ ಯೋಗ್ಯ ರೀತಿಯಲ್ಲಿ ವಿದ್ಯಾಭ್ಯಾಸವನ್ನು ಕೊಡಿಸಿ, ಪುರುಷರ ಸರಿಸಮಾನವಾದ ಅಧಿಕಾರವನ್ನು ಕೊಟ್ಟು ಅವರನ್ನು ನಮ್ಮ ವಾಸ್ತವಿಕ ಸಹಯೋಗಿನಿಯರನ್ನಾಗಿ ಮಾಡತಕ್ಕದ್ದಾಗಿದೆ. ಆದರೆ ಮಹಿಳೆಯರಿಗೆ ಶಿಕ್ಷಣವನ್ನಿತ್ತರೆ ದುರಹಂಕಾರ, ಪುರುಷರ ಕಡೆಗೆ ಅಲಕ್ಷ್ಯಭಾವ ಮುಂತಾದ ದುರ್ಗುಣಗಳು ವ್ಯಾಪಿಸಿ ಸಂಸಾರದ ಕಾರ್ಯಗಳೆಲ್ಲಾ ಕೆಟ್ಟುಹೋಗುವುವೆಂದು ನಮ್ಮವರಲ್ಲಿ ಅನೇಕರು ಅಭಿಪ್ರಾಯಪಟ್ಟವರಾಗಿ ಅವರಿಗೆ ಏನೊಂದೂ ಶಿಕ್ಷಣವನ್ನೀಯದಿರುವುದರಿಂದ ಅವರು ಮೂಢೆಯರಾಗಿ ಯಾವುದರ ಅರಿವೂ ಇಲ್ಲದವರಾಗಿ ಅವರ ಜೀವನವು ಪಶುಸಮಾನವಾಗಿ ಪರಿಣಮಿಸುವುದೂ ಅತ್ಯಂತ ವ್ಯಸನಾಸ್ಪದಕರವಾದ ಸಂಗತಿಯಲ್ಲವೇ?

ಮತ್ತೂ ಹೆಚ್ಚಾಗಿ ಹೇಳುವುದಾದರೆ ಇಂದಿನ ಬಾಲಕರೇ ಮುಂದಿನ ರಾಷ್ಟ್ರವೀರರಾಗತಕ್ಕವರಾಗಿ, ರಾಷ್ಟ್ರದ ಭಾವೀ ಉನ್ನತಿಯು ಇಂದಿನ ಮಕ್ಕಳನ್ನೇ ಅವಲಂಬಿಸಿಕೊಂಡಿರುವುದು. ಯಾವ ಮಕ್ಕಳು ತಾವು ಜನ್ಮವೆತ್ತಂದಿನಿಂದ ಯಾರ ಬಳಿಯಲ್ಲಿ ಬೆಳೆದು ಬಾಳುವವೋ ಅಂತಹ ಮಕ್ಕಳ ಪೋಷಣೆಯನ್ನು ಯಾವ ರೀತಿಯಲ್ಲಿ ನಿರ್ವಹಿಸಬೇಕೆಂಬ ಜ್ಞಾನಶಕ್ತಿಯು ಮಾತೆಯರಾದ ಸ್ತ್ರೀಯರಿಗೆ ಬಾರದೆ ಇದ್ದರೆ, ಆ ಮಕ್ಕಳ ಮುಂದಿನ ಜೀವನವು ದುಷ್ಪರಿಣಾಮವನ್ನು ತಾಳಿ ನಮ್ಮ ರಾಷ್ಟ್ರಕ್ಕೆ ಬಹಳ ನಷ್ಟವು ಸಂಭವಿಸಿರುವುದರಿಂದ, ಸ್ತ್ರೀಯರು ತಮ್ಮ ಮಕ್ಕಳಿಗೆ ಯೋಗ್ಯ ರೀತಿಯಲ್ಲಿ ಬಾಲಶಿಕ್ಷಣವನ್ನೀಯಬೇಕಾದರೆ, ಮುಖ್ಯವಾಗಿ ಅವರು ವಿದ್ಯಾಸಂಪನ್ನೆಯರಾಗಬೇಕೆಂದು ಹೇಳಿದರೆ ತಪ್ಪಾಗಲಾರದು. ಇಲ್ಲದಿದ್ದಲ್ಲಿ ಆ ನಾರಿಯರು ಮಾರಿಯರಾಗಿ ಪರಿಣಮಿಸುವರು. ಆದಪ್ರಯುಕ್ತ ನಮ್ಮ ಸ್ತ್ರೀಸಮಾಜಕ್ಕೆ ಧರ್ಮಾರ್ಥಧರ್ಮಗಾಹನೆಗೆ ಸಾಧಕವಾದ ವಿದ್ಯಾಭ್ಯಾಸವನ್ನೀಯುವುದು ಎಷ್ಟರಮಟ್ಟಿನ ಅಗತ್ಯಕರವೆಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಪ್ರಾಚೀನ ಇತಿಹಾಸಗಳಿಂದ ತಿಳಿಯಬರುವುದೇನೆಂದರೆ, ರಜಪೂತನಾರಿಯರು ವಿದ್ಯಾಸಂಪನ್ನೆಯರಾಗಿದ್ದು, ಶೌರ್ಯಪೂರ್ಣ ಕಾರ್ಯವನ್ನು ಗೈದ ವೀರರಿಗೆ ಸ್ತುತಿಯನ್ನೂ, ಆದರವನ್ನೂ ತೋರಿಸಿ ರಣರಂಗದಲ್ಲಿ ಹೇಡಿಗಳ ತೆರದಲ್ಲಿ ಹಿಂಬಂದವರಿಗೆ ಧಿಕ್ಕಾರವನ್ನೂ ತೋರಿಸುತ್ತಿದ್ದರೆಂದು. ಹಿಂದೂ ಮಹಿಳೆಯರೂ ಕೂಡ ಸುಶಿಕ್ಷಿತರಾಗಿಯೂ ಸ್ವಾವಲಂಬಿಗಳಾದರೆ ಅವರು ತಮ್ಮ ಪತಿವರ್ಯರನ್ನೂ ಭ್ರಾತೃಗಳನ್ನೂ ಪುತ್ರಪೌತ್ರರನ್ನೂ ತಥಾ ಅನ್ಯಪುರುಷ ಬಂಧುಗಳನ್ನೂ ಪ್ರೋತ್ಸಾಹಿಸುವರು. ಆದಪ್ರಯುಕ್ತ ದೇಶಾಭಿಮಾನಿಗಳು ಅಬಲೆಯರಿಗನುಗುಣವಾದ ವಿದ್ಯೆಯು ಪ್ರತ್ಯೇಕ ಹಿಂದೂಸ್ಥಾನದಲ್ಲೆಲ್ಲಾ ಸರಾಗವಾಗಿ ನಡೆಯುವಂತೆ ಪ್ರಯತ್ನಮಾಡುವುದರಿಂದ ಹಿಂದೂ ಮಹಿಳಾಮಣಿಗಳು ಸ್ವದೇಶದ ಮೇಲಿನ ಅಭಿಮಾನದಿಂದ, ತಮ್ಮ ಮನೆಯಲ್ಲಿ ಬಂಧಿತರಾಗದೆ, ನಿರ್ಭೀತರಾಗಿ ಪುರುಷರೊಂದಿಗೆ ಎಲ್ಲಾ ವ್ಯವಹಾರಗಳಲ್ಲಿಯೂ ಭಾಗವಹಿಸಿಕೊಂಡು ಜನನೀ ಸ್ವರೂಪವಾದ ನಮ್ಮ ಮಾತೃಭೂಮಿಯ ಪ್ರಾಚೀನ ಗೌರವವನ್ನು ಪಡೆಯುವುದೆಂಬುದರಲ್ಲಿ ಸಂದೇಹವೇನು?

ಶ್ರೀಮತಿ ಕಮಲಾದೇವಿಯವರ ಪ್ರತಿಭಟನೆ.

ಕವಿಲುನಾಡು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಸತ್ಯಮೂರ್ತಿಯವರು ಸಂತಾನ ನಿರೋಧದ ವಿರುದ್ಧವಾಗಿ ಭಾಷಣವನ್ನು ಮಾಡಿದ್ದರಷ್ಟೆ. ಆ ವಿಚಾರವಾಗಿ ಶ್ರೀಮತಿ ಕಮಲಾದೇವಿಯವರು ಕೆಳಗಿನಂತೆ ಒಂದು ಲೇಖವನ್ನು ಬರೆದಿರುವರು

ಶ್ರೀ ಸತ್ಯಮೂರ್ತಿಯವರು ಜಸ್ಟಿಸ್ ಪಾರ್ಟಿಯನ್ನು ಬಯ್ಯುವ ತಮ್ಮ ಕಸುಬನ್ನು ಬಿಟ್ಟು ಸಂತಾನ ನಿರೋಧದ ಕಡೆ ಗಮನವನ್ನು ತಿರುಗಿಸಿದ್ದಾರೆ. ಶ್ರೀ ಸತ್ಯಮೂರ್ತಿಯವರು ಜನ್ಮ ಸಂಪ್ರದಾಯ ಬದ್ಧರೆಂದು ಎಲ್ಲರಿಗೂ ತಿಳಿದಿದೆ. ಅವರ ದೇಹದ ಒಂದೊಂದು ರಕ್ತನಾಳದಲ್ಲಿಯೂ ಸಂಪ್ರದಾಯತೆಯ ರಕ್ತವು ಹರಿಯುತ್ತದೆ. ಸಮಾಜ ಸುಧಾರಣೆಯ ಪ್ರತಿಯೊಂದು ಕಾರ್ಯವನ್ನು ವಿರೋಧಿಸುವುದೇ ಅವರ ಸಾಮಾನ್ಯ ರೀತಿ.

ಅವರಿಗೆ ಜಾತಿ ಬೇಕು, ಬಾಲ್ಯವಿವಾಹಬೇಕು, ಎಲ್ಲವೂ ಧರ್ಮದ ಮತ್ತು ನೀತಿಪಾಲನೆಯ ಹೆಸರಿನಲ್ಲಿ. ಈಗ ಅವರು ನೀತಿಪಾಲನೆಯ ನೆವದಿಂದ ಸಂತಾನ ನಿರೋಧ ಪ್ರಚಾರದ ಮೇಲೆ ತಮ್ಮ ದ್ವೇಷವನ್ನೆಲ್ಲ ಕಾರುತ್ತಿದ್ದಾರೆ. ಧರ್ಮ ಮತ್ತು ನೀತಿಯ ಪರ್ವತಾಗ್ರದಲ್ಲಿ ನಿಂತು ಸಂತಾನ ನಿರೋಧ ಪ್ರಚಾರದ ಮೇಲೆ ತಮ್ಮ ವಿಷಪೂರಿತವಾದ ಬಾಣಗಳನ್ನೆಸೆಯುತ್ತ ಸತ್ಯಮೂರ್ತಿ ನಾಮವನ್ನು ಸಾರ್ಥಕ ಪಡಿಸಿಕೊಂಡಿದ್ದಾರೆ.

The Kalyanpur Sugar Mills, Ltd. Mangalore.

ದಿ ಕಲ್ಯಾಣಪುರ ಶುಗರ್ ಮಿಲ್ಸ್ ಲಿಮಿಟೆಡ್ ಮಂಗಳೂರು.

NOTICE

ಜಾಹೀರು

ದಿ ಕಲ್ಯಾಣಪುರ ಶುಗರ್ ಮಿಲ್ಸ್ ಲಿಮಿಟೆಡ್‌ನ ಪಾಲುಗಳ ಬಗ್ಗೆ ಮಾಡೋಣಾಗುವ ಅರ್ಜಿಗಳಲ್ಲಿ ಇದೇ ಫೆಬ್ರವರಿ ತಿಂಗಳ 29ನೇ ತಾರೀಕು ಸಾಯಂಕಾಲ ಘಂಟೆ 5ರ ವರೆಗೆ ಆಫೀಸಿಗೆ ಬಂದು ತಲ್ಪಿಸುವ ಅರ್ಜಿಗಳನ್ನು ಮಾತ್ರವೇ ಸ್ವೀಕರಿಸೋಣಾಗುವುವು ಮತ್ತು ಪಾಲುಗಳನ್ನು ಎಲಾಟ್ ಮಾಡುವುದನ್ನು ಆಲೋಚಿಸಲಾಗುವುದು

Mangalore 20-2-1936 — B Vaikunta Baliga, Vice President

ಬೀಜಗಳು.

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ರೂ ೪
೨೫ ,, ಯುರೋಪ ,, ,, ೫,
೨೫ ,, ಹೂವಿನ ಬೀಜಗಳು ,, ೫

ಗಿಡಗಳು.

೧೨ ಜಾತಿ ಹೂವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ರೂ ೧೦

ನಿಂಬೆ ಕೊಡಗು ಕಿತ್ತಳೆ ಚೇಪೆ, ಪನ್ನೇರಳೆ, ದಾಳಿಂಬ, ಚಕ್ರವರ್ತಿ, ಸೀತಾ, ಬಟ್ರೇಸ್, ಅಂಜೂರ, ದ್ರಾಕ್ಷಿ ಗಿಡಗಳು ಡಜನ್ ೧ಕ್ಕೆ ರೂ. ೯ ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ರೂ ೧೨.

ಪಾರಿಜಾತ, ನಂದಿವರ್ಧನ, ದಾಸವಾಳ, ಮಲ್ಲಿಗೆ ಹೂವಿನ ಗಿಡಗಳು ಡಜನ್ ೧ಕ್ಕೆ ರೂ. ೬.

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕೆಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್,

ಇಂಟರ್‌ನ್ಯಾಷನಲ್ ಸೀಡ್ ಕಂಪೆನಿ,

ಲಾಲ್‌ಬಾಗ್ ಫೋರ್ಟ್ ರೋಡ್,

ಬೆಂಗಳೂರು ಸಿಟಿ.

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ—(ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.



Distributors for South Kanara —

Raghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ

ಕಾಫಿ ಎಸ್ಟೇಟುಗಳಿಗೆ

ಬೇಕಾಗಿರುವ

ಚಕ್ ರೋಲು,

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆಗೆ

ಬರೆಯಿರಿ,

ಅಥವಾ

ಬನ್ನಿರಿ

ತಯಾರಾಗಿದೆ!

ಗ್ರಾ. ಹಾ. ಎ. ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೋಶಿಯೋಲೋಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ. ಇದನ್ನು ೧೯೩೪ರ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜ ಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ.

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದ

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ

ಚರಿತ್ರೆ ಮತ್ತು ಕಥೆಗಳು.	ರೂ	ಅ	ಪೈ	ಸಾಮಾನ್ಯ ವಿಜ್ಞಾನ.			
				ಎರಡನೇ ದರ್ಜೆ	0	8	0
ನಾಲ್ಕನೇ ದರ್ಜೆ	0	6	0	ಮೂರನೇ ,,	0	8	0
ಮೂರನೇ ,,	0	4	6	ನಾಲ್ಕನೇ ,,	0	6	0
ಎರಡನೇ ,,	0	4	0	ಐದನೇ ,,	0	5	0
ಸಮಾಜಶಾಸ್ತ್ರ.							
ಐದನೇ ದರ್ಜೆ	0	8	0				
ನಾಲ್ಕನೇ ,,	0	8	0	ಆರನೇ ದರ್ಜೆ	0	4	0
ಮೂರನೇ ,,	0	2	6	ಏಳನೇ ,,	0	5	0
				ಎಂಟನೇ ,,	0	6	0

ಅಜ್ಜ ಕಥೆಗಳು (ಸಚಿತ್ರ.)

ಮೂರು ಕರಡಿಗಳು
ಹೇನ ಸತ್ತು ಕಾಗೆ ಬಡವಾಯಿತು.
ಮೊಲಸಿನ ಕಾಳಪ್ಪ.
ಅರಗಿನ ಮುದ್ದೆ
ಇಲಿಗಳ ಧಕ್ಕ ಧೈ.
ಅಂಗಳ ದುಗ್ಗ.
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ. 1ಕ್ಕೆ 0–0–9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಶಿಯೋಲೋಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ನರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ರೈಲು ಬಂಡಿಗಳ ಸಮಯ

ಗಾಡಿಗಳು,	ಹೊರಡುವ ಘಂಟೆ	ತಲಪುವ ಘಂಟೆ
~~ಮೈಲು~~	~~ಬೆಳಿಗ್ಗೆ 9-50~~	~~ಸಂಜೆ 4-20~~
ಮಿಕ್ಸೆಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12-45	ಮ. 2-40
ಶಟಲ್	ಸಂಜೆ 5-25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ. 8-25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 8.20	ಸಂಜೆ 6-15

! ನಿಮಗೆ ತಿಳಿದಿರುವುದೆ? ?

ವಿಜ್ಞಾನದ ಅರಿವು

ಬಹಳಕಾಲ ಬದುಕುವ ಜೀವಿಗಳು

ಆಯುಷ್ಯವನ್ನು ವೃದ್ಧಿಮಾಡಿಕೊಳ್ಳುವುದು ಪ್ರತಿಯೊರ್ವ ಮನುಷ್ಯನ ಕಾಂಕ್ಷೆ- ಎಲ್ಲರಲ್ಲೂ ಸಾವಿನ ಅಂಜಿಕೆ ಬಹಳ. ಈ ವಿಚಾರದಲ್ಲಿ ಕೆಲವು ಮೃಗಾದಿಗಳು, ಮಾನವನಿಗಿಂತ ಹೆಚ್ಚಿನ ಯೋಗ್ಯತೆವುಳ್ಳವುಗಳಾಗಿವೆ. ಇವುಗಳಿಗೆ ಆಯುಷ್ಯ ತುಂಬಾ. ನಮ್ಮಲ್ಲಿ ಅನೇಕರು, ೧೫೦ ವರ್ಷ ಕಾಲದ, ಒಂದು ಆನೆಯಾಗಲೂ ಸಿದ್ಧರಿರುವರು ಅನೇಕ ಶತಮಾನಗಳ ತನಕ ಬದುಕಲು ಗೋಳಿಮರಗಳಾಗಲೂ ಸಿದ್ಧರಿರುವರು. ಮನುಷ್ಯರಿಗೆ ಮೃಗಗಳಿಗಿಂತ ಶ್ರೇಷ್ಠವಾದ ಗುಣಗಳಿದ್ದರೂ, ಈ ಆಯುಷ್ಯ ವಿಚಾರದಲ್ಲಿ, ಅವುಗಳನ್ನು ತ್ಯಜಿಸಿ, ಮೃಗಗಳ ಸ್ಥಳಗಳನ್ನು ಸ್ವೀಕರಿಸಲು ಸಿದ್ಧರಿರುವರು

ಹೀಗೆಯೆ ಕೆಲವು ಪಕ್ಷಿಗಳು ಮನುಷ್ಯರಿಗಿಂತ ಹೆಚ್ಚು ಕಾಲ ಬದುಕಿರುವವು ಸಹಜವಾಗಿಯೂ ಅವರ ಆಯುಷ್ಯವು ಅಷ್ಟಲ್ಲ ಒಂದು ಬಾತುಕೋಳಿಯು ೧೫೦ ವರ್ಷ ಬಾಳಿರುತ್ತದೆ. ಹಾಗೆಯೆ, ಗಿಳಿ ಗಿಡುಗ, ಇತ್ಯಾದಿ ಕೆಲವು ಪಕ್ಷಿಗಳು ಒಂದು ಶತಮಾನಕ್ಕಿಂತ ಹೆಚ್ಚು ಬಾಳಿವೆ ಒಂದು ಮಂಡೆ ಕಾಗೆಯು ೧½ ಶತಮಾನ ಬಾಳಿರುತ್ತದೆ ಗುಬ್ಬಿಗಳು ಅರ್ಧ ಶತಮಾನ ಬಾಳಿದ ಅನೇಕ ದೃಷ್ಟಾಂತಗಳಿವೆ

ಅಮೇರಿಕದಲ್ಲಿ!

ವಚನವು ಮಾನವನಿಗೆ ದೊರೆತ ಮಹಾವರವು ನಾವು ಮಾತಾಡುತ್ತಿದ್ದೇವೆ ಆದರೆ ಈ ವಿಚಾರದಲ್ಲಿ ಕೆಲವು ಅದ್ಭುತಗಳು ನಮಗೆ ತಿಳಿದೆ ಇಲ್ಲ ಮನುಷ್ಯನು ಎಷ್ಟು ಬಾರಿ ಮಾತಾಡಿದ್ದನೆಂಬುದು ಕಂಡು ಹಿಡಿಯುವುದು ಸಾಧ್ಯವೆ? ಎಷ್ಟಕ್ಕೂ ಸಾಧ್ಯವಾಗಲಿಕ್ಕಿಲ್ಲ ಆದರೂ, ಕೆಲವರು ಇದನ್ನು ತಿಳಕೊಳ್ಳುವ ಹಾದಿಯನ್ನು ಕಂಡುಹಿಡಿದಿರುವರು ನಾವು ನಮ್ಮ ನಮ್ಮೊಳಗೆ ಮಾತಾಡುವುದು, ಹೊರತು, ಅತೀ ದೂರದಲ್ಲಿದ್ದರೂ ಸಂಭಾಷಣೆಯನ್ನು ನಡೆಯಿಸಿ, ಟೆಲಿಫೋನ್ ಎಂಬ ಸಾಧನೆಯಿಂದ, ಸಾಧ್ಯವಾಗುತ್ತದೆ ಅಮೇರಿಕಾದ ಸಂಯುಕ್ತ ರಾಜ್ಯದಲ್ಲಿ (ಯುನೈಟೆಡ್ ಸ್ಟೇಟ್ಸ್) ಟೆಲಿಫೋನಿನ ಉಪಯೋಗ ಬಹಳ ದೂರದಲ್ಲಿದ್ದು ಇಲ್ಲಿನ ಜನರು ಈ ಯಂತ್ರಸಾಧನೆಯಿಂದ, ೭೫ ಮಿಲಿಯ ಸಂಭಾಷಣೆಗಳನ್ನು, ಒಂದು ದಿವಸಕ್ಕೆ ಮಾಡುತ್ತಿದ್ದಾರೆ ಒಂದು ಸೆಕುಂದಿಗೆ, ಸಾಧಾರಣ ಸರಾಸರಿ, ೯೦೦ ಸಂಭಾಷಣೆಗಳು ನಡೆಯುತ್ತವೆ!

ಸಿಮೆಂಟಿನ ನೆಲದ ಮೇಲಿಂದ ಕಲೆಗಳನ್ನು ತೆಗೆಯುವ ಬಗೆ

ನಮ್ಮಲ್ಲಿ ಈಗ ಸಿಮೆಂಟಿನ ನೆಲಗಳೆ ಹೆಚ್ಚಾಗಿ ಪ್ರಸಿದ್ಧಿಗೆ ಬರುತ್ತಿವೆ ಆದರೆ, ಅವುಗಳ ಮೇಲೆ, ಎಣ್ಣೆ ಇತ್ಯಾದಿ ಅನೇಕ ಕಾರಣಗಳಿಂದಾದ ಕಲೆಗಳನ್ನು ನಾಶಗೊಳಿಸಲು ಸಾಧ್ಯವಾಗುವುದಿಲ್ಲ ನೆಲದ ಸೌಂದರ್ಯವು ಕಳೆದು ಹೋದಂತಾಗುತ್ತದೆ ಎಣ್ಣೆ ಇತ್ಯಾದಿಗಳು, ನೆಲದ ಬಹಳ ಒಳಗೆ ಸೇರಿದುದರಿಂದ, ಕಲೆಗಳನ್ನು ಮಾಸಲು ಸಾಧ್ಯವಾಗ ವುದಿಲ್ಲ ಆದರೆ ಈ ಕಲೆಗಳನ್ನು ತೆಗೆಯುವ ಒಂದು ನವೀನ ಉಪಾಯವನ್ನು ಕಂಡು ಹಿಡಿದಿರುವರು ಸಿಮೆಂಟಿನಿಂದಲೇ ಸಿಮೆಂಟಿನ ನೆಲದ ಮೇಲಿನ ಕಲೆಗಳನ್ನು ಮಾಸಬಹುದು ಸಿಮೆಂಟನ್ನು ಈ ಕಲೆಗಳ ಮೇಲೆ ಹರಡಬೇಕು ಒಂದು ವಾರದ ತನಕ ಈ ಸಿಮೆಂಟು ಅಲ್ಲಿ ಇರಬೇಕು ಆಗಿಂದಾಗ್ಗೆ ಮಾತ್ರ ಹಾಕಿದ ಒಣಸಿಮೆಂಟನ್ನು ಸ್ವಲ್ಪ ಕೆಳಗೆ ಮೇಲೆ ಮಾಡಬೇಕು ಹಾಗೆ ಮಾಡಿದರೆ ಯಾವತ್ತೂ ಕಲೆಗಳು ಮಾಯವಾಗುವುವಂತೆ

ಅಮೇರಿಕಕ್ಕೆ ಒಂದು ಭೂಮಾರ್ಗವನ್ನು ನಿರ್ಮಿಸಬಹುದೆ?

ಭೂಮಿಯು ಗೋಳಾಗಿರುವುದೆಂದು ಎಲ್ಲರೂ ತಿಳಿದಿರುವ ಸಂಗತಿ ಈ ಗೋಳಾಕೃತಿಯ ಭೂಮಿಯ ಹಿಂದೂದೇಶಕ್ಕೆ ಸರಿ ಕೆಳಗಾಗಿ ಅಮೇರಿಕಾ ಖಂಡವು ಇರುವುದೆಂದೂ ಭೂಗೋಳ ಶಾಸ್ತ್ರದಿಂದ ವ್ಯಕ್ತವಾಗುತ್ತದೆ. ಆದುದರಿಂದ ಅಮೇರಿಕಾವನ್ನು ಒಂದು ಭೂಮಾರ್ಗವಾಗಿ ಸೇರಬಹುದೆಂದು ನಮ್ಮಲ್ಲಿ ಊಹನೆಗಳಾಗುವುದು ಸಹಜ ಆದರೆ ಹೀಗೆ ಮಾಡಲು ಸಾಧ್ಯವಿಲ್ಲ ಭೂಮಿಯ ಒಳಗಿನ ಪ್ರತಿ 70 ಅಡಿ ತಂಕಕ್ಕೆ ಶಾಖವು 1°F ಹೆಚ್ಚುವುದು ಅಂದರೆ ಸುರಂಗವು ಭೂಮಿಯ ನಡುವಿಗೆ ಹೋಗುವುದರೊಳಗೆ, ಅಲ್ಲಿನ ಶಾಖವು ಸಾಧಾರಣ 9,00,000°F ಆಗುವುದು. ಈ ಶಾಖವನ್ನು ಅನುಭವಿಸುವವರು ಯಾರು ಅಲ್ಲಿ ಯಾವ ಲೋಹಗಳು ಉಳಿಯುವುವು ಈ ಉಷ್ಣವನ್ನು ತಪ್ಪಿಸಿಕೊಳ್ಳಲು ಯಾವ ಉಪಾಯಗಳೂ ಇಲ್ಲ

ಒಂದು ವಿಚಿತ್ರ ವ್ಯಕ್ತಿ

ಆಸ್ಟ್ರೇಲಿಯಾದ ಮೆಲ್ಬೋರ್ನಿನ ಚಾರ್ಲ್ಸ್ ಬೈಯಿಲೆ ಎಂಬವರು ಕೆಲವು ಕೌತುಕಗಳನ್ನು ಮಾಡಬಲ್ಲರು ಈ ಕೌತುಕದ ಪ್ರದರ್ಶನಗಳನ್ನು ಪ್ರಪಂಚದ ಅನೇಕ ದೇಶಗಳಲ್ಲಿ ಮಾಡಿ ತೋರಿಸಿರುವರು ಒಂದು ಬಾರಿ ಇವರನ್ನು, ವಾಯರ್ ನೆಟ್ಟಿನ ಗೂಡಿನಲ್ಲಿ ಹಾಕಿದರು ಜನಸಂದಣಿಯು ತುಂಬಾ ನೆರೆದಿತ್ತು ಪ್ರದರ್ಶನವನ್ನು ಒಳ್ಳೇ ಬೆಳಕಿನಲ್ಲಿ ನಡೆಯಿಸಿದ್ದರು ಈ ಗೂಡನ್ನು ಬೀಗ ಮುದ್ರೆಗಳನ್ನು ಹಾಕಿ ಭದ್ರಮಾಡಿದ್ದರು. ಗೂಡಿನೊಳಗೆ ಬೈಲಿಯವರು ಒಂದು ಮರದ ಕುರ್ಚಿಯಲ್ಲಿ ಕುಳಿತಿದ್ದರು ಗೂಡಿನಲ್ಲಿ ಹಾಕುವ ಮೊದಲು ಇವರನ್ನು ಸಂಪೂರ್ಣ ಜಪ್ತಿ ಮಾಡಿದ್ದರು ಒಂದು ವಿಚಿತ್ರ ಶಕ್ತಿಯಿಂದ, ಇವರು ಉಷ್ಣವಲಯದ ಪಕ್ಷಿಗಳನ್ನು, (ಕೆಲವುಗಳನ್ನು ಗೂಡು ಮತ್ತು ಮೊಟ್ಟೆಗಳ ಸಮೇತ) ಜೀವಿತ ಮೀನ ಗಳನ್ನು, ಆ ಪ್ರದೇಶದ ತರ ತರದ ಆಭರಣಗಳನ್ನು ತನ್ನ ಕೈಯಲ್ಲಿ ಬರಮಾಡಿದರು ನೆರೆದವರು ಇವರ ಈ ವಿಚಿತ್ರ ಘಟನೆಯಲ್ಲಿ ಯಾವತ್ತೂ ಕಪಟ ಮೋಸವನ್ನು ಕಾಣದೆ ಹೋದರು ಈ ಬೈಲಿಯವರನ್ನು ತಲಬುಕೊಟ್ಟು ಸಾಕುವ ಸ್ಪಿನೋರ್ಡರು, ಇವರು ಈ ತರದಲ್ಲಿ ಸಾವಿರಾರು ಮೈಲು ದೂರದಿಂದ-ಹಿಂದೂದೇಶ, ಆಫ್ರಿಕಾ ದೇಶಗಳಿಂದ ಬರಮಾಡಿದ ಪಕ್ಷಿ, ಮೃಗ, ಇತ್ಯಾದಿಗಳನ್ನು ಸೇರಿಸಿ ಒಂದು ಮ್ಯೂಸಿಯಮನ್ನು ಮಾಡಿತೋರಿಸಿರುವರು ಈ ಒಡವೆಗಳು ಈತನ ಕೈಗಳಿಗೆ ಬರುವಾಗ ಸ್ವಲ್ಪ ಬಿಸಿಯಾಗಿವೆ ಎಂದು ನಿರೀಕ್ಷಿಸಲಾಗಿದೆ ಈ ತರದ ಪ್ರದರ್ಶನಗಳನ್ನು ಇವನು ಅನೇಕ ಕಡೆಗಳಲ್ಲಿ ಕೊಟ್ಟಿರುವನು ಅನೇಕ ಪ್ರಸಿದ್ಧ ಪುರುಷರು ಇದಕ್ಕೆ ಸಾಕ್ಷ್ಯರಾಗಿದ್ದರು

ಕೆಲವು ಪ್ರಜಾನಿಧಿ ಸಭೆಗಳ ಹೆಸರು.

ಈ ಪ್ರಪಂಚದ ವಿವಿಧ ದೇಶಗಳಲ್ಲಿ ವಿವಿಧ ತರದ ಪ್ರಜಾನಿಧಿ ಸಭೆಗಳು ಈಗ ಅಧಿಕಾರ ನಡೆಯಿಸುತ್ತವೆ ಸಮುದ್ರದ ಅಲೆಗಳಂತೆ ಇವು ಆಗಿಂದಾಗ್ಗೆ ಬದಲಾವಣೆಯಾಗುತ್ತಿವೆ ಆದುದರಿಂದಲೇ ಹೆಚ್ಚಾಗಿ ಪಾಶ್ಚಾತ್ಯರಲ್ಲಿ ಯಾವಾಗಲೂ ಒಂದಲ್ಲ ಒಂದು ಕ್ರಾಂತಿಯು ಇದ್ದೇ ಇರುವುದು ಇತ್ತೀಚೆಗೆ ಸ್ವೀಡನ್‌ನಲಿ ಈ ತರದ ಬದಲಾವಣೆಯಾಗಿರುತ್ತದೆ ಮುಂಚಿನ ಸರಕಾರವು ಸಂಪೂರ್ಣ ನಾಶವಾಗಿರುತ್ತದೆ ಈಗ ಮಿಲಿಟರಿಯವರ ಸರಕಾರ ಸ್ಥಾಪನೆಯಾಗಿರುತ್ತದೆ

ಇಂಗ್ಲೆಂಡ್	-	ಪಾರ್ಲಿಮೆಂಟ್
ಸ್ಪೈನ್	-	ಕೊರ್ಟೆಸ್
ಜರ್ಮನಿ	-	ರಿಸ್ಟಾಗ್
ಡೆನ್‌ಮಾರ್ಕ್	-	ರಿಗ್ಸಡಾಗ್
ಹಾಲೆಂಡ್	-	ಸ್ಟೇಟ್ಸ್ ಜನರಲ್
ಸ್ವೀಡನ್	-	ರಿಕ್ಸಡಾಗ್.
ನಾರ್ವೆ	-	ಸ್ಟೋರ್ಡಿಂಗ್
ಜುಗೊಸ್ಲೆವಿಯಾ	-	ಸ್ಕುಪ್ಸ್ತಿನ್
ಪೋಲೆಂಡ್	-	ಸೆಮ್
ಸಂಯುಕ್ತ ಅಮೇರಿಕಾ	-	ಕಾಂಗ್ರೆಸ್

ಬಣ್ಣದ ವಿಷಯ ನಿಮಗೆ ಏನು ತಿಳಿರುವುದು?

ನಮ್ಮ ಸುತ್ತುಮುತ್ತಲಿರುವ ಗಿಡ, ಮರ, ಹೂ, ಬಳ್ಳಿಗಳು, ಮನೆ ಇತ್ಯಾದಿಗಳು ತರ ತರದ ಬಣ್ಣಗಳಿಂದ ಶೋಭಾಯಮಾನವಾಗಿ ನಮಗೆ ಗೋಚರವಾಗುತ್ತವೆ ಇದಕ್ಕೆ ಕಾರಣವೇನು? ಸೂರ್ಯನ ಪ್ರಕಾಶವು ಯಾ ಇನ್ನಿತರ ಪ್ರಕಾಶಗಳು ಅವುಗಳ ಮೇಲೆ ಬಿದ್ದು ಪ್ರತಿಫಲಿಸಿ, ನಮ್ಮ ಕಣ್ಣುಗಳನ್ನು ಸೇರಿದುದರಿಂದಲೆ, ಆ ಒಡವೆಗಳೆಲ್ಲಾ ನಮಗೆ ಕಾಣಿಸುತ್ತವೆ ಆದರೆ, ಅವುಗಳ ಬಣ್ಣಗಳಿಗೆ ಕಾರಣ? ನಾವು ಕಾಣುವ ಪ್ರಕಾಶದಲ್ಲಿ ಸಪ್ತ ವರ್ಣಗಳಿವೆ ಸೂರ್ಯನಪ್ರಕಾಶವನ್ನು ಗಾಜಿನ ಲೋಲಕದ ಮೂಲಕ ಹಾದುನಂತೆ ಮಾಡಿದರೆ ಈ ಸಪ್ತ ವರ್ಣಗಳನ್ನು ಕಾಣಬಹುದು ಹಾಗೆ ನೀರು ಈ ಸಪ್ತ ವರ್ಣಗಳನ್ನು ವಿಂಗಡಿಸಬಲ್ಲುದು ಕಾಮನ ಬಿಲ್ಲು ವಾಯುಮಂಡಲದಲ್ಲಿರುವ ನೀರಿನ ಪಸೆಯಿಂದ ಉಂಟಾದ ಒಂದು ಸಪ್ತ ವರ್ಣದ ಬಿಂಬವಾಗಿರುತ್ತದೆ ಈ ಹಸುರಾಗಿ ಕಾಣಿಸುವ ವಸ್ತುಗಳು ಸಪ್ತ ವರ್ಣದ ಒಂದು ಹಸುರು ಬಣ್ಣದ ಹೊರತು ಮಿಕ್ಕ ಆರು ಬಣ್ಣಗಳನ್ನು ಕದ್ದು ಬಿಡುತ್ತವೆ ಈ ವಸ್ತುವು ನಮ್ಮ ಕಣ್ಣುಗಳಿಗೆ ಹಸುರು ಬಣ್ಣಗಳನ್ನು ಮಾತ್ರ ಪ್ರತಿಫಲಿಸುತ್ತವೆ ಹಾಗೆಯೆ ಕೆಂಪು ಬಣ್ಣದ ಗುಲಾಬಿ ನೀಲ ವರ್ಣದ ಹೂಗಳು ಹೀಗೆ ಪ್ರಕಾಶದಿಂದ ಯಾವ ವರ್ಣಗಳನ್ನು ವಸ್ತುಗಳು ಪ್ರತಿಫಲಿಸಬಲ್ಲವೋ ಅದೇ ವರ್ಣದಲ್ಲಿ ನಮಗೆ ಅವುಗಳ ಗೋಚರವಾಗುವುವು

ಪೆಟ್ರೋಲು

ಸಾಧಾರಣ ಕಾಲು ಶತಮಾನದ ಹಿಂದೆ ನಮ್ಮ ಮನೆಗಳಲ್ಲಿ ಕಾಳೆಣ್ಣೆಯ ದೀಪಗಳು ಉರಿಯುತ್ತಿದ್ದುವು ಈಗಿನ ಸೀಮೆ ಎಣ್ಣೆಯು ಆಗ್ಗೆ ಪ್ರಚಾರಕ್ಕೆ ಬಂದಿಲ್ಲ. ಆದರೆ, ಕ್ರಮೇಣ ಸೀಮೆ ಎಣ್ಣೆಯು ನಮ್ಮ ದೇಶಕ್ಕೆ ಬರಲಾಗಿ ಕಾಳೆಣ್ಣೆಯ ದೀಪಗಳು ಮಾಯವಾಗಿವೆ ಈ ಯುಗವು ಪೆಟ್ರೋಲಿನ ಯುಗವು. ಈ ಎಣ್ಣೆಯು ಭೂಮಿಯೊಳಗೆ ಸಿಗುತ್ತದೆ. ಭಾರವಾದ ಬೈರಿಗೆ (Drill) ಮತ್ತು ಪಾಡಂಗಿಗಳಿಂದ ಈ ಬಾವಿಗಳನ್ನು ಕೊರೆಯುವರು ಕೆಲವು ಭಾರಿ ೬೦-೮೦ ಅಡಿ ಕೊರೆಯುವಷ್ಟರಲ್ಲಿ ಈ ಎಣ್ಣೆಯು ದೊರಕುವುದು ಕೆಲವು ಕಡೆ ಸಾವಿರಾರು ಅಡಿ ಕೆಳಗೆ ಕೊರೆಯಬೇಕಾಗಿದೆ ಈಗಿನ ಕಾಲದ ಅನೇಕ ಕೈಗಾರಿಕೆಗರಣಿಗಳೂ, ಮೋಟರು ವಾಹನಗಳೂ, ನೌಕೆಗಳೂ, ವಿಮಾನಗಳೂ ಇತ್ಯಾದಿ, ಇತ್ಯಾದಿ ಈ ಪೆಟ್ರೋಲಿನಿಂದಲೆ ನಡೆಯಬೇಕಾಗಿದೆ. ಆದುದರಿಂದಲೆ ಇವುಗಳ ವಿಚಾರದಲ್ಲಿ ವಿವಿಧ ಜನಾಂಗಗಳಲ್ಲಿ ಓಟಗಳು ಉಂಟಾಗುತ್ತವೆ ಪ್ರಥಮವಾಗಿ ಈ ಎಣ್ಣೆಯು ಜಿಡ್ಡೆಣ್ಣೆ ರೂಪದಲ್ಲಿ ಸಿಗುತ್ತದೆ ಈ ಎಣ್ಣೆಯನ್ನು ಬಟ್ಟಿಗಳಲ್ಲಿ ವಾಯು ರಹಿತ ಕುದಿಸಿ, ತರತರದ ಲುಬ್ರಿಕೇಟಿಂಗ್ ಎಣ್ಣೆಗಳನ್ನೂ ಪೆಟ್ರೋಲನ್ನೂ, ಗ್ರೀಸನ್ನೂ ತಯಾರಿಸುವರು ಈ ಎಣ್ಣೆಯು ರಷ್ಯಾ, ರೊಮೇನಿಯಾ, ಸಂಯುಕ್ತ ಅಮೇರಿಕ, ಪರ್ಸಿಯಾ ಇರೇಕ್, ಬರ್ಮ ದೇಶಗಳಲ್ಲಿ ಧಾರಾಳವಾಗಿ ದೊರಕುತ್ತದೆ ಚೀನದಲ್ಲಿ ಈ ತರದ ಎಣ್ಣೆಯು ತುಂಬಾ ಸಿಗಬಹುದೆಂದು ಪ್ರಾಜ್ಞರು ಹೇಳುತ್ತಿದ್ದಾರೆ ಪೆಟ್ರೋಲು ವ್ಯಾಪಾರವು ಒಂದು ದೊಡ್ಡ ವ್ಯಾಪಾರವಾಗಿರುತ್ತದೆ ಈ ಪ್ರಪಂಚದಲ್ಲಿ ಒಂದು ವರ್ಷಕ್ಕೆ ೧೯೦,೦೦೦,೦೦೦ ಟನ್ನುಗಳು ಖನಿಜ ಎಣ್ಣೆಯು ಉತ್ಪತ್ತಿಯಾಗುತ್ತದೆ ನಮ್ಮ ದೇಶದಲ್ಲಿ ಅಲ್ಲಲ್ಲಿ ಉಕ್ಕಿನ ದೊಡ್ಡ ದೊಡ್ಡ ಟಾಂಕಿಗಳಲ್ಲಿ ಶೇಖರಿಸಿಟ್ಟು, ಇದನ್ನು ಮಾರಾಟಮಾಡುತ್ತಿದ್ದಾರೆ

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.

ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

WANTED

Energetic, Active and Influential men to work as organisers and ents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

New Era Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟದ್ದು.)
ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್,

ಮಡಿಕೇರಿಗುಡ್ಡೆ, ಮಂಗಳೂರು.

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಉಪಯೋಗಕ್ಕೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು—ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ. ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ. ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕು ದರದಲ್ಲಿ ಒದಗಿಸಿಕೊಡಬಹುದು.

ಎಲ್ಲಾ ಜವಳಿ ಬೆಲೆಗೆ ಮೀರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ ಪವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ.

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಪೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಯಂ. ವೆಂಕಟೇಶ ರಂಗ ಪೈ, ಪ್ರೊಪ್ರೈಟರ್.

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಡ್ಡ ಸಾರ್ಸಪರಿಲಾ ಶೆಟ್ಟು ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ. ಉಪಯೋಗಿಸಿದವರೇ ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ ಫೊಸ್ಫರಸ್ ಗುಳಿಗೆಗಳು ಅಶಕ್ತತೆ ... ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೨

ಸ್ಟಾಕಿಸ್ಟು ... ಮಂಗಳೂರು

(ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ)

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 3 0—0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ 2-8-0. ½ಕ್ಕೆ ರೂ 1 5-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ. 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಫ್ಲುಯಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.

ಬಾಟ್ಲಿ 1ಕ್ಕೆ ರೂ. 1—8—0.

ಮೇಹ ಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8—0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—

ಡಬ್ಬಿ 1ಕ್ಕೆ ರೂ. 0-2-6. 12ಕ್ಕೆ ರೂ. 1-12-0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:

1. ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಪೈ, ಪುತ್ತೂರು.
4. ವಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ESTD. 1906.

The Canara Banking Corporation Udipi Ltd.

The First Indigenous & Cosmopolitan Bank of S. K. District.

Subscribed Capital	Rs.	3,50,000	0	0
Paid up Capital	,,	2,71,555	0	0
Reserves	,,	3,57,288	0	7

24-2-1936

Head office:—UDIPI, S. K.

Branches:—1. Udipi, 2 Coondapoor, 3 Car Street, Mangalore, 4 Shimoga, 5. Madras 6. Bunder Mangalore, 7. Mercara & 8 Virarajendrapet.

TO INSURE OR TO REPRESENT.

CONSULT.—

The Bombay Life Assurance Company Ltd.

ESTD 1908

Offers
(1) Attractive Schemes of Assurances to suit individual needs
(2) Rebate for yearly payment of premiums
(3) Additional Rebate for larger assurances
(4) Permanent Disability Benefits without extra.
(5) Increased rate of Bonuses
(6) Accident Risk on a small extra payment

Attractive Rates of Commission & Bonuses to Agents

For particulars apply to any of our Offices

Kochikar Brothers. Branch Secretaries

OFFICES (1) "Gautam Nivas" Charni Rd., Girgaum, Bombay No 4 (2) P B 337 Mount Road Madras (3) Visveshwarapuram Circle, Bangalore City (4) Hazur Road Calicut (5) Car Street, Mangalore, S K (6) Udipi, (S India)

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಜೋಡಿಮೆ ಮೊದಲಾದ

ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ——— ಯಥೋಚಿತವಾದ ಪುರಸ್ಕಾರಗಳಿವೆ. ——— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವರ್ಷಕ್ಕೆ 2 ರೂಪಾಯಿ.
ಬಿಡಿ ಸಂಚಿಕೆ 1 ಆಣೆ.

Registered No. M.3406

ಟಪ್ಪಾಲು ಹಾಸಲು ಸೇರಿ ರೂ. 2-13-0

For Quality Snuff
H. Rama Rao and Sons.
1st Class Snuff Manufacturers
Mangalore, S. I.
ASK FOR —
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT, AN INVESTMENT."
Safeguard yourself & your family TODAY
Buy a policy in the
THE BOMBAY LIFE
Madras Branch Secretaries
Kochikar Brothers,
Udipi, Mangalore, Bangalore, Madras, Bombay and Calicut

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಳಕವರಂಜಿದರೆ ಸ ಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೨ ॥

ಪುಸ್ತಕ ೩೦. ಮಂಗಳೂರು ತಾ. ೬ನೇ ಶುಕ್ರವಾರ ಮಾರ್ಚಿ ೧೯೩೬. (6–3–'36) ಸಂಚಿಕೆ ೧೦

ದಿವಂಗತ ಐದನೇ ಜೋರ್ಜ್ ಸಾರ್ವಭೌಮರನ್ನು ಸಮಾಧಿಕ್ರಿಯೆ
ಕೊಂಡುಹೋಗುವ ಮೆರವಣಿಗೆಯ ಒಂದು ದೃಶ್ಯ.

ನೋಟಗಳು.
NOTES.

ನಾಲ್ಕು ತಿಂಗಳು ಜಲಾಧಿವಾಸವಾಗಿಟ್ಟ ಮೇಲೆ ವಿಗ್ರಹವು ಪೂಜಾಯೋಗ್ಯವಾಗದಿರುವುದೆ?

* * *

ದಮಯಂತಿಯ ಸ್ವಯಂವರಕ್ಕಾಗಿ, ಅವಳ ಮನಸ್ಸು ನಳನಲ್ಲಿಯೆ ನಾಟಿದ್ದಿತೆಂದು ತಿಳಿದು, ಇಂದ್ರ ಅಗ್ನಿ ಯಮ ವಾಯು ವರುಣರೆಲ್ಲರು ನಳ ಸ್ವರೂಪ ಧರಿಸಿ, ಮಾಲೆಗಾಗಿ ಕೊರಳೊಡ್ಡಿ ಕೂತಿದ್ದರಂತೆ. ಅವಳು ಪತಿವ್ರತೆಯಾಗಿದ್ದ ಕಾರಣವೆ ಮಾತ್ರ, ದೇವತೆಗಳು ನಿಜರೂಪ ಧರಿಸಿದರೆಂದು ತಿಳಿದುಬರುವುದು. ಹಾಗೆಯೆ,—ಬೋರ್ಡಿನ ಒಳಸೇರಲು ಎಂತೆಂತಹರೂ ಸಹ ಕೊಂಗ್ರೆಸ್ ಸದಸ್ಯರ ರೂಪ ತಳೆದು ಸುಲಭವಾಗಿ, ಸ್ವಯಂವರ ಮಂಟಪದಲ್ಲಿ ನೆರೆದಿದ್ದರಾದರೂ, ೨೮—೨೦ =೮ ಮಂದಿ ಮಂಟಪದಲ್ಲಿನ ಪಾತಿವ್ರತ್ಯ ಪ್ರಭಾವದಿಂದ ಪುನಃ ನಿಜರೂಪ ಧರಿಸಿದರೆಂದೂ, ಈ ಎಂಟು, ಉಳಿದ ೧೪ಕ್ಕೆ ಗಂಟುಬಿದ್ದು ೨೨ ಆಗಿ, ೨೦ಕ್ಕಿಂತ ೨೨ ಹೆಚ್ಚಾಗುವುದರಿಂದ, ಅಸಾಧ್ಯವೆಂದೆಣಿಸಿದ್ದ ೧೪ಕ್ಕೇ ಮಾಲೆ ಬೀಳುವಂತಾಯಿತೆಂದೂ ಮೊನ್ನೆ ತಿಳಿದುಬಂತು. ಈ ಯುಗಕ್ಕೆ ಸುಮ್ಮನೆ ಕಲಿಯುಗವೆನ್ನುತ್ತಾರೆಯೆ? ಅಥವಾ, ಇದರಲ್ಲಿ ಸತ್ಯಯುಗದ ವಿಚಾರಗಳಿಗೆ ಎಡೆಯುಂಟೆ?

ಜಸ್ಟಿಸ್ ಪಕ್ಷದವರಿಗ ಬ್ರಹ್ಮಾಂಡದಲ್ಲಿ ಸೋಲು ಎಂಬುದು ಬೊಬ್ಬಿಲಿ ರಾಜರ ಮುಖಕ್ಕೆ ಥಪರಾಕು ಬಡಿದ್ಹಾಂಗೆ ಎಂದು ಸತ್ಯಮೂರ್ತಿಯವರ ಮಾತು ನಡೆದಿತ್ತೆಂದು ಕೇಳಿದ್ದೆವು. ೨೮ ಎಂದರೆ ೨೦+೮ ಎಂದು ಈಗ ಒಡೆದು ಕಾಣಿಸಿ, ೨೮ರಿಂದ ಹೇಗೆ ಬೊಬ್ಬಿಲಿಗೆ ಥಪರಾಕು ಹೊಡೆದಿದ್ದರೋ ಅದರಂತೆ, ಈ ೮ ಈಗ ಕೊಂಗ್ರೆಸಿನ ಸತ್ಯಮೂರ್ತಿಯವರಿಗೇ ಥಪರಾಕು ಬಡಿದಂತಾಗಲಿಲ್ಲವೆ? ಆ ೨೮ರಲ್ಲಿ ಎಂಬುದೇ ದೊಡ್ಡದು!

ಜಸ್ಟೀಸಿನ ನಿಜತತ್ವಗಳನ್ನು ತಿಳಿದಿರುವ ಶ್ರೀ ಡಿ. ಬಿ. ಹೆಗ್ಗಡೆಯವರು, ಬೊಬ್ಬಿಲಿಯ ಮಂತ್ರಿಮಂಡಲಕ್ಕೂ ಮೇಲಾಗಿ, ಆಚ್ಚ ಜಸ್ಟೀಸಿನ ಮಾದರಿಯನ್ನು ಎಂದಿನಂತೆ ಇಲ್ಲಿ ನೆಲೆಗೊಳಿಸಲು ಯತ್ನಿಸಿದರೆ,- ಯಾವಾಗಲು ಏಕಮುಖವಾದ ಜಸ್ಟೀಸು ಉತ್ತಮವಲ್ಲದೆ, ೨೦ ಮತ್ತು ೮ ಆಗಿ ಒಡೆಯುವ ಕಾಂಗ್ರೆಸು ಅಲ್ಲವೆಂದು ಸರ್ವರಿಗೂ ಖಚಿತವಾದೀತು.

* * *

ಆ–ದ–ರೂ,—ಬೋರ್ಡು ಸಭೆಗಳಲ್ಲಿ ಈ ಎರಿಳಿತದ ಎಂಟು ಯಾವ ಕಡೆಗೆ ತೇಲಿಹೋದೀತೆಂದು ಹೇಳುವುದಕ್ಕೆ ಯಾರಿಗೂ ಧೈರ್ಯ ಬಾರದು. ೧೪–೨೦ಗಳನ್ನೆ ಲೆಕ್ಕಕ್ಕೆ ಹಿಡಿದು ಹೋಗೋಣವೆಂದರೂ, ಈ ೮ರ ಸಂಶಯವಿದೆ; ದಿನಹೋಗುತ್ತ ೮ಕ್ಕೆ ಸುತ್ತಿಕೊಂಡು ಇನ್ನೆಂಟು, ದಿಕ್ಪಾಲಕರಿಗೆ ಅವರ ಪರಿವಾರವಿರುವಂತೆ. ಹೋಗಲಾರದೆಂದು ಯಾರೂ ಖಂಡಿತ ಹೇಳಬಲ್ಲರೇ?

* * *

ಹೀಗಾಗಿ,— ಕೊಂಗ್ರೆಸುಪಕ್ಷ ಎಂಬುದು ಯಾವುದು? ಅದರ ಸದಸ್ಯರು ಎಂದರೆ ಯಾರು? ಎಂಬುದು ಆ ಪರದವರ ಮನಸ್ಸಾಕ್ಷಿಗೂ ತಿಳಿದಿರುವುದು ಸರಿಯಾಗಿಲ್ಲವೇನೋ! ಮನಸ್ಸಾಕ್ಷಿ ಎಂಬುದೂ ಒಂದು ಉಂಟೇ? ಉಳಿದಿದೆಯೆ?

* * *

ಎಸೆಂಬ್ಲಿಯಲ್ಲಿ, ದಬ್ಬಾಳಿಕೆಯ ಕಾನೂನುಗಳನ್ನು ರದ್ದುಮಾಡಬೇಕೆಂದಾಗ, ಕೊಂಗ್ರೆಸಿನವರಾಗಿ ಕಾಂಗ್ರೆಸಿನೊಡನೆ ಸೇರದ ಇಬ್ಬರಂತೆ, ನಮ್ಮಲ್ಲಿ- ಯಾವಾಗಲೂ ಈ ಬೋರ್ಡು ಮುಗಿವ ತನಕ ಎಂಟರ ತಂಟೆ ಇದ್ದೇ ಇರಬಹುದು. ಅದೂ ಒಂದು ಪಕ್ಷವೇ,— ವಿಪರೀತ ಪಕ್ಷ.

ಸೆಕೆಕಾಲದ ಆರೋಗ್ಯಕರವಾದ ಪಾನೀಯ.

ಸೆಕೆಯು ನಿಮ್ಮನ್ನು ಬಳಲಿಸುತ್ತಿರುವಾಗ ಶಾಂತಿದಾಯಕ ಓವಲ್ಟಿನ್ನನ್ನು ಕುಡಿಯಿರಿ. ಅಂದರೆ, ದೇಹದ ಉರಿಯು ಕಡಿಮೆಯಾಗಿ ನಿಮಗೆ ಆನಂದ ಉಂಟುಮಾಡುವುದು. ಮಾತ್ರವಲ್ಲ, ದೇಹಪುಷ್ಟಿಯ ಆಹಾರಗಳೆಲ್ಲವೂ ಅದರಲ್ಲಿ ಸಮ್ಮಿಶ್ರಿತವಾಗಿರುವುದರಿಂದ ನೀವು ಬಲಯುತರೂ ಸಂತೋಷಿಯರೂ ಆಗುವಿರಿ.

ಓವಲ್ಟಿನ್ನಿನಲ್ಲಿ ಬೆಳೆದ ಬಾರ್ಲಿ, ದನದ ಕೆನೆ ಹಾಲು, ಕೊಕ್ಕೋವಿನ ಸತ್ವ ಇವುಗಳೆಲ್ಲವೂ ಸೇರಿವೆ. ದೇಹಪುಷ್ಟಿಗೆಲ್ಲಾ ಇವನ್ನು ಮಿಕ್ಕಿದ ಆಹಾರಗಳಿಲ್ಲ. ಆದರೆ ಹಣದ ಆಶೆಗಾಗಿ ಪರಕೀಯರ ಮೋಸಕ್ಕೆ ಗುರಿಯಾಗಬೇಡಿ. ನಮ್ಮ ವಸ್ತುವು ಅತ್ಯುತ್ಕೃಷ್ಟವಾದುದು.

ಓವಲ್ಟಿನ್.
ಪುಷ್ಟಿದಾಯಕ ಆಹಾರ.

OVALTINE COLD

ಮಿದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ಇದರ ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ.
ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.
ಏಜೆಂಟರು:—ಜೇಮ್ಸ್ ರ್ಯಾಟ್, ೪೭ ಎ ಲೋಯರ್ ಸ್ಟ್ರೀಟ್ ಕಲ್ಕತ್ತ, ಮತ್ತು ಬೊಂಬಾಯಿ, ಮದ್ರಾಸುಗಳಲ್ಲೂ ದೊರಲ್ಪಡುತ್ತದೆ.

ನಾಗಪುರದಲ್ಲಿ ಪ್ರಾಣತ್ಯಾಗ!

ನಾಗಪುರ ತರುಣಿಯೊಬ್ಬಳು ತನ್ನ ತಂದೆತಾಯಿಗಳ ಮಾತುಗಳಿಗೆ ವಿರೋಧವಾಗಿ, ಸ್ಥಳೀಕ ಒಂದು ಕಾಲೇಜಿನ ಓರ್ವ ಪ್ರೊಫೆಸರರನ್ನು ವಿವಾಹ ಮಾಡಿಕೊಂಡಳು. ಅವರ ಇಚ್ಛೆಗೆ ವಿರೋಧವಾಗಿ ಆಕೆಯು ವರ್ತಿಸಿದರೆ ತಾವು ಪ್ರಾಣತ್ಯಾಗ ಮಾಡಿಕೊಳ್ಳುವೆವೆಂದು ಎಚ್ಚರಿಕೆ ಕೊಟ್ಟಿದ್ದರು. ಪ್ರಣಯದ ಮುಂದೆ ಹುಡುಗಿಯು ಇದರ ಗಣ್ಯಮಾಡದೆ ವಿವಾಹವಾದಳು. ಇದನ್ನು ಕಂಡು ತಂದೆ ತಾಯಿಗಳಿಬ್ಬರೂ ವಿಷ ತಿಂದು ಪ್ರಾಣತ್ಯಾಗಮಾಡಿರುವರು.

ಸಂಯುಕ್ತ ಅಮೇರಿಕಾದ

ರಾಜಶಾಸನದ ಬದಲಾವಣೆ ಮಾಡಲು ಈಗ ಚಳವಳ ನಡೆಯುತ್ತಿದೆ. ಇನ್ನು ಸುಪ್ರೀಮ್ ಕೋರ್ಟಿಗೆ ಸರಕಾರದ ಮೇಲಿರುವ ಅಧಿಕಾರವನ್ನು ತೆಗೆಯಲಾಗುವುದೆಂದು ತಿಳಿದುಬರುತ್ತದೆ.

ಲಾಹೋರಿನಲ್ಲಿ
ಶ್ರೀ ಸತ್ಯಮೂರ್ತಿಯವರು.

ಶ್ರೀ ಸತ್ಯಮೂರ್ತಿಯವರು ಶಾಂತಿಸ್ಥಾಪನಾ ಕಾರ್ಯಕ್ಕಾಗಿ ಶ್ರೀ ಜಿನ್ನಾರೊಡನೆ ಲಾಹೋರಿಗೆ ತೆರಳಿ ಅಲ್ಲಿ ಸರ್ವ ಜಾತಿಗಳಲ್ಲೂ ಐಕ್ಯವುಂಟಾಗಬೇಕೆಂದು ಗಂಭೀರ ಭಾಷಣ ಮಾಡಿದರು.

NOTICE.

In the Court of the District Munsif of Kasaragod.

O. P. No. 17/1936.

1. Bava Beary, son of Leshyada Abdulla Beary.
2. Ummaleema, wife of 1st petitioner. } Petitioners.

Both are residing at Chemnad village, Kasaragod Taluq.

Please take notice that the petitioners have filed an application for the grant of a succession certificate in the name of the 1st petitioner for recovering the loans standing in the name of their son deceased C. B. Abdulla, at the Canara Bank and the Jayalaxmi Bank, and the said petition stands posted to 11–3–1936. Persons having objections for the same are requested to appear before this Court on or before that date and file their objections, failing which the petition shall be decided exparte.

Kasaragod, 3rd March 1936. } K. P. Anantha Rao
Advocate for Ptrs.

ಶರೀರ ಮರ್ಮಶಾಸ್ತ್ರ.

ಇದರಲ್ಲಿ ಅನೇಕ ಹಾವ ಸ್ತ್ರೀಯರ ಲಕ್ಷಣದ ವರ್ಣನೆಗಳೂ, ಗರ್ಭದಾನ ಸಂತಾನನಿರೋಧ, ಅತಿಸಂಭೋಗದಿಂದಾಗುವ ಹಾನಿ, ಸಂಭೋಗದಲ್ಲಿ ಬೆಳ್ಳ ನಷ್ಟ, ಗರ್ಭರಕ್ಷೆ, ಗರ್ಭಾಭಿವೃದ್ಧಿ ರೂಪ; ಶಿಶು ಉತ್ಪತ್ತಿ ವಿಧ, ಸ್ತ್ರೀಯರ ಜನನೇಂದ್ರಿಯ ವರ್ಣನೆ ಇವಲ್ಲದೆ ಇನ್ನು ಸ್ತ್ರೀಪುರುಷರಿಗೆ ಬೇಕಾದ ಅನೇಕ ತರದ ಗುಪ್ತ ರಹಸ್ಯಗಳನ್ನು ೩೪ ಚಿತ್ರಪಟಗಳೊಡನೆ ೧೩೦ ಪುಟಗಳಲ್ಲಿ ಕನ್ನಡದಲ್ಲಿ ವಿವರಿಸಿ ಬರೆದಿದೆ. ಬೆಲೆ ೧ಕ್ಕೆ ರೂ. ೧; ಟ. ಕ. ಬೇರೆ.

ಇನ್ನಿತರ ಗ್ರಂಥಗಳು:—ಕೈಗಾರಿಕೆಯ ಮರ್ಮಶಾಸ್ತ್ರ ರೂ. ೧; ಕಾಮಶಾಸ್ತ್ರ ೦–೬–೦, ಗೃಹಸ್ಥಾಶ್ರಮ ದರ್ಪಣ ೧–೮–೦, ರತಿಮಂತ್ರ ಸಿದ್ಧಿ ರಹಸ್ಯ ೦–೧೨–೦.

ವಿಳಾಸ: ಕರ್ನಾಟಕ ಏಜನ್ಸಿ,
ಶ್ರೀಕೃಷ್ಣನಾಯಕನ ಬೀದಿ, ಕೆ. ೩೩, ಮದರಾಸು.

ಶ್ರೀ ರಾಮಕೃಷ್ಣ ಪರಮಹಂಸ

ಭಾರತಖಂಡದಲ್ಲಿ ಅನೇಕ ಸುಧಾರಕರುಗಳು ತಲೆದೋರುವ ಸಮಯ ೧೮ನೇ ಫೆಬ್ರವರಿ ೧೮೩೬ನೇ ದಿವಸ ಬಂಗಾಳದ ಒಂದು ಸಣ್ಣ ಹಳ್ಳಿಯಲ್ಲಿ ಒಬ್ಬ ಬ್ರಾಹ್ಮಣ ಹುಡುಗನು ಜನಿಸಿದನು. ಆತನ ಅತೀ ಸಣ್ಣ ಪ್ರಾಯದಲ್ಲೇ ತಂದೆಯು ಮೃತನಾದನು. ಬ್ರಾಹ್ಮಣ ಪದ್ಧತಿಯಂತೆ ಹುಡುಗನನ್ನು ವಿದ್ಯಾಭ್ಯಾಸಂಗಕ್ಕಾಗಿ ಒಂದು ಆಶ್ರಮಕ್ಕೆ ಕಳುಹಿಸಲಾಯಿತು. ಪ್ರಾಚೀನಕಾಲದ ಹಿಂದೂ ವಿದ್ಯಾಶ್ರಮಗಳು ಆಗಲೂ ಇದ್ದುವು. ಈ ಆಶ್ರಮಗಳಲ್ಲಿ ವಿದ್ಯೆಗೆ ಹಣ ಕೊಡಬೇಕಾಗಿದ್ದಿಲ್ಲ. ಪವಿತ್ರವಾದ ಜ್ಞಾನವನ್ನು ವಿಕ್ರಯಮಾಡಲು ಯಾವಾತನಿಗೂ ಹಕ್ಕಿಲ್ಲ ಎಂಬುದು ಆಗಿನ ದೃಢವಾದ ನಂಬುಗೆ. ಈ ಆಶ್ರಮದ ಗುರುಗಳು ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಖರ್ಚಿನಿಂದಲೇ ಸಾಕಿ ಸಲಹುತ್ತಿದ್ದರು. ಇವರಿಗೆ ಬೇಕಾದ ದ್ರವ್ಯ ಸಹಾಯವು ಧನಾಢ್ಯ ಪುರುಷರಿಂದ ವಿವಾಹದ ಸಮಯದಲ್ಲಿ, ಶ್ರಾದ್ಧ ಸಮಯದಲ್ಲಿ ದಾನದ ರೂಪದಲ್ಲಿ ಸಿಗುತ್ತಿತ್ತು. ಹೀಗೆ ದುಡಿದ ಹಣವನ್ನು ತಮ್ಮ ಆಶ್ರಮಗಳನ್ನು ನಡೆಯಿಸಲು ಉಪಯೋಗಿಸುತ್ತಿದ್ದರು. ಇಲ್ಲಿನ ಗುರುಗಳು ಹಣಕ್ಕಾಗಿ ವಿವಾಹೋತ್ಸವಗಳ ಸಮಯ ಯಾ ಶ್ರಾದ್ಧ ಸಮಯ, ಇತರ ಶುಭ ಕಾರ್ಯಗಳ ಸಮಯ ಅಷ್ಟು ಪರಿಶ್ರಮಪಡುವುದು ಈ ಬ್ರಾಹ್ಮಣ ಬಾಲಕನ ಮನಸ್ಸಿಗೆ ನಾಟಿತು. ಸಂಪೂರ್ಣ ಜೀವಮಾನದ ಸಮರವು ನಡೆಯುವುದು ಏತಕ್ಕಾಗಿ? ಬರೇ ಹಣಕ್ಕಾಗಿ. ಮನುಷ್ಯನು ಸುಖಜೀವಿಯಾಗಿ ಬಾಳಬೇಕಾದರೆ ಹಣವು ಬೇಕಾಗಿದೆ. ಇಷ್ಟೇ ಪ್ರಪಂಚದ ಮರ್ಮವಾಗಿರುತ್ತದೆ. 'ಇಂತಹ ಸಂಸ್ಥೆಯಲ್ಲಿ ನಾನಿರಲಾರೆನು' ಎಂಬುದನ್ನು ಈ ಬಾಲಕನು ದೃಢಮಾಡಿದನು. ವಿದ್ಯಾಭ್ಯಾಸವನ್ನೇ ತ್ಯಜಿಸಿದನು. ಅತೀ ಚಿಕ್ಕಂದಿನಲ್ಲಿ ಮುಂದಕ್ಕೆ ಭರತಖಂಡದ ದಿವ್ಯ ಜ್ಯೋತಿಯಾಗುವ ಶ್ರೀ ರಾಮಕೃಷ್ಣ ಪರಮಹಂಸರಲ್ಲಿ ಲೌಕಿಕ ಸಂಗತಿಗಳ ಮೇಲೆ ಒಂದು ತರದ ಜಿಗುಪ್ಸೆಯು ಕಾಣಬಂದಿತು. ಇದರ ನಂತರ ತನ್ನ ಅಗ್ರಜನೊಡನೆ ಕಲ್ಕತ್ತಕ್ಕೆ ಹೋಗುವವರಾದರು. ಅಲ್ಲೂ ವಿದ್ಯಾಭ್ಯಾಸದ ಮಹತ್ವ ಇವರ ಮನಸ್ಸಿಗೆ ನಾಟದೆ ಹೋಯಿತು. ತಂದೆಯು ಮೃತನಾಗಿದ್ದುದರಿಂದ ಬಡಸ್ಥಿತಿಯನ್ನು ಅನುಭವಿಸುತ್ತಿದ್ದ ಹುಡುಗನು ಕೊನೆಗೆ ಒಂದು ದೇವಾಲಯದ ಅರ್ಚಕನ ಹುದ್ದೆಯನ್ನು ಸ್ವೀಕರಿಸಿದನು.

ಅಗ್ಗ ಅರ್ಚಕನ ಸ್ಥಳಕ್ಕೆ ಅಷ್ಟೊಂದು ಗೌರವವಿದ್ದಿಲ್ಲ. ಇಲ್ಲಿ ಕೂಡ ಪ್ರತಿಯೊಂದು ದೇವತಾ ಕಾರ್ಯವನ್ನು ಮಾಡಿ ಹಣ ಗಳಿಸಬೇಕಾಗಿತ್ತು. ಆದರೂ ಶ್ರೀರಾಮಕೃಷ್ಣರು ಇಲ್ಲಿ ಕೆಲವು ಸಮಯವನ್ನು ಕಳೆದರು.

ಆದರೆ, ದೇವಾಲಯದ ಅರ್ಚಕನಾಗಿರುವಾಗಿರುವಾಗಲೇ, ಇವರಲ್ಲಿ ದೈವಜ್ಞಾನದ ಜ್ಯೋತಿಯು ಅರಳಿದುದು. ಆ ದೇವಾಲಯದಲ್ಲಿ ಒಂದು ದೇವಿಯ ಮೂರ್ತಿ ಇತ್ತು. ದಿನಂಪ್ರತಿ ಈ ವಿಗ್ರಹದ ಪೂಜೆಯನ್ನು ಮಾಡುತ್ತಿರುವಾಗ "ಈ ವಿಗ್ರಹದ ಅರ್ಥವೇನು? ನಿಜವಾಗಿಯೂ ಈ ವಿಶ್ವದಲ್ಲಿ ಪರಮ ಸುಖವನ್ನು ಒದಗಿಸುವ ದೇವಿಯೋರ್ವಳು ಇರುವಳೇ? ಈಕೆಯು ಈ ಸೃಷ್ಟಿಯ ಕಾರಣಭೂತಳೇ—ಈಕೆಯಿಂದಲೇ ಸಮಸ್ತ ವಿಶ್ವವು ನಡೆಯುತ್ತಿದೆಯೋ-ಅಥವಾ ಇದೆಲ್ಲಾ ಒಂದು ಭ್ರಮೆಯೋ?" ಎಂಬುದಾಗಿ ಈ ಬ್ರಾಹ್ಮಣ ಅರ್ಚಕನ ಮನಸ್ಸಿನಲ್ಲಿ ಚರ್ಚೆ ನಡೆಯುತ್ತಿತ್ತು. ಇದರಿಂದ ದೇವರೆಂಬುದು ನಿಜವೇ? ದೇವರಿರುವುದು ನಿಜವಾದರೆ ಆತನನ್ನು ಕಾಣಬಹುದೆ? ಈ ತರದ ಸತ್ಯಜ್ಞಾನವು ತನ್ನಲ್ಲಾಗುವುದೆ? ಎಂಬ ಭಾವವು ಶ್ರೀ ರಾಮಕೃಷ್ಣರ ದಿವ್ಯ ಜೀವನದ ಅಡಿಕಲ್ಲಾಯಿತು. ದಿನೇ ದಿನೇ ದೈವಜ್ಞಾನದ ತೃಷೆಯು ಹೆಚ್ಚಲಾರಂಭಿಸಿತು. ಅರ್ಚನೆ ಸಮಯದಲ್ಲಿ ಧ್ಯಾನಮಗ್ನನಾಗಲಾರಂಭಿಸಿದರು. ದೇವಾಲಯದ ಅನೇಕ ಕೃತ್ಯಗಳನ್ನು ಮರೆತುಬಿಟ್ಟರು. ದೇವರನ್ನು ಹುಡುಕುವ ಕಾರ್ಯದಲ್ಲೇ ನಿರತರಾದರು.

ದಿನೇ ದಿನೇ ದೇವರಿದ್ದಾನೆ ಎಂಬ ಜ್ಞಾನವು ಇವರಲ್ಲಿ ವಿಕಾಸವಾಗಲಾರಂಭಿಸಿತು. ಅರ್ಚಕನ ಕೆಲಸವನ್ನು ತ್ಯಜಿಸಿ, ಧ್ಯಾನಧಾರಣೆಗಾಗಿ ಒಂದು ಸಣ್ಣ ಅರಣ್ಯವನ್ನು ಸೇರಿದರು. ಇಲ್ಲಿ ಬಾಯಾರಿಕೆ, ಹಸಿವೆ ಇತ್ಯಾದಿಗಳನ್ನು ಮರೆತುಬಿಟ್ಟು ಧ್ಯಾನಪರಾಯಣರಾದರು. ಹೀಗೆ ಎಷ್ಟು ಸಮಯವನ್ನು ಕಳೆದಿದ್ದರು ಒಂದು ತಿಳಿಯಲು ಇವರಿಗೆ ಅಸಾಧ್ಯವಾಯಿತು. ಈ ಧ್ಯಾನ ಧಾರಣೆಯ ಸಮಯ ಇವರನ್ನು ಪ್ರೀತಿಸುವವರೊಬ್ಬರು ಇವರ ಬಾಯಿಯಲ್ಲಿ ಆಗಿಂದಾಗ್ಗೆ ಬೇಕಾದ ಹಾಲನ್ನೂ ನೀರನ್ನೂ ಆಹಾರವನ್ನೂ ಹಾಕಿ ಇವರನ್ನು ಕಾಪಾಡಿದರು. ಯಂತ್ರದಂತೆ ಇವುಗಳನ್ನು ಶ್ರೀ ರಾಮಕೃಷ್ಣರು ನುಂಗಿಬಿಡುತ್ತಿದ್ದರು. ಹೀಗೆ ಬಹಳ ಸಮಯವನ್ನು ಕಳೆದರು. ಈ ದೈವಜ್ಞಾನ ಸಾಧನೆ ಕಾರ್ಯದಲ್ಲಿ ಅನೇಕ ಭಾರಿ ನಿರಾಶರಾಗಿದ್ದರು. "ಸತ್ಯವು ನನಗೆ ಇನ್ನೂ ಹೊಳೆಯಲಿಲ್ಲವಲ್ಲಾ" ಎಂದು ಕೆಲವು ಭಾರಿ ರೋಧಿಸುತ್ತಿದ್ದರು. "ದೇವಿಯೇ ನಿನ್ನನ್ನು ನಾನು ಅಪೇಕ್ಷಿಸುತ್ತೇನೆ. ನನ್ನಲ್ಲಿ ಬೇಗನೇ ತೋರಿಸಿಕೊಳ್ಳು. ನಾನು ನಿನಗಾಗಿ ಹಂಬಲಿಸುತ್ತಿರುವುದು ನಿನಗೆ ಗೋಚರವಾಗುವುದಿಲ್ಲವೇ?" ಎಂದು, ಈ ಧ್ಯಾನಧಾರಣೆಯ ಸಮಯ ಇವರು ಹಂಬಲಿಸಿದುದುಂಟು. ಸಮಸ್ತ ಜಗತ್ತು ದೇವಿಯ ದರ್ಶನಮಾಡುವ ಕುತೂಹಲದಿಂದ ಕೂಡಿದೆ. ಆದರೆ, ನಿಜವಾದ ದೇವಿಯನ್ನು ಬರಮಾಡಿಕೊಳ್ಳಲು ಇವರಿಗೆ ಸಾಧ್ಯವಾಗದುದರಿಂದಲೇ ಜನರು ಆಕೆಯ ವಿಗ್ರಹ ಮಾಡಿ ಆಕೆಯನ್ನು ಪೂಜಿಸುತ್ತಿದ್ದಾರೆ. ಅದರಿಂದ ದೇವಿಯನ್ನು ಬರಮಾಡಿಕೊಳ್ಳಲು ತನ್ನಲ್ಲಿ ಯಾವ ಯೋಗ್ಯತೆಗಳಿರಬೇಕೆಂಬುದು ಆಲೋಚನೆ ಇವರಲ್ಲಿ ಮೂಡಿತು. ತನ್ನದಾಗಿರುವ ಒಂದು ಸಣ್ಣ ಆಸ್ತಿಯನ್ನು ತ್ಯಜಿಸಿದರು. ಹಣವನ್ನು ಮುಟ್ಟಲೊಲ್ಲೆನೆಂದು ದೃಢಸಂಕಲ್ಪ ಮಾಡಿದರು. ತನ್ನ ಇಡೀ ಜೀವಮಾನದಲ್ಲಿ ಈ ಜಿಗುಪ್ಸೆ ಇವರಲ್ಲಿ ಯಾವಾಗಲೂ ಪ್ರಕಟವಾಗುತ್ತಿತ್ತು. ಒಂದಾನೊಂದು ದಿವಸ ಇವರು ನಿದ್ರಿತರಾಗಿರುವಾಗ ಯಾರೋ ಇವರ ಕೈಯಲ್ಲಿ ಹಣದ ಒಂದು ನಾಣ್ಯವನ್ನು ಇರಿಸಿದರು. ಕೂಡಲೇ ಇವರ ಶರೀರವೆಲ್ಲಾ ಡೊಂಕಾಯಿತು. ಪಕ್ಷವಾತ ಹಿಡಿದಂತಾಯಿತು. ಇನ್ನೊಂದು ವಿಚಾರ ಇವರಲ್ಲಿ ಹೊಳೆದುದು ಕಾಮನೆಯ ಮೇಲೆ ವೈರತ್ವ. ಇದೊಂದು ಹಾದಿಯಲ್ಲಿ ಮುಕ್ತಿಯ ಮಹಾ ಆತಂಕವೆಂದು ಅವರು ತಿಳಿದಿದ್ದರು. "ಮನುಷ್ಯನು ಆತ್ಮನು. ಆತ್ಮಕ್ಕೆ ಇಂದ್ರಿಯಗಳಿಲ್ಲ." "ಈ ಸಮಸ್ತ ಪ್ರಪಂಚವು ಮಹಾದೇವಿಯ ಅವತಾರವು. ಆಕೆಯು ಪ್ರತಿಯೋರ್ವ ಸ್ತ್ರೀಯಲ್ಲಿ ವಾಸವಾಗಿರುವಳು. ಪ್ರತಿಯೋರ್ವ ಸ್ತ್ರೀಯು ದೇವಿಯು. ಆದುದರಿಂದ ಇಂದ್ರಿಯ ಭೇದಗಳಿಂದ ಸ್ತ್ರೀಯರನ್ನು ನಾನು ಹೇಗೆ ಕಾಣಲಿ?" ಇದು ಅವರ ಅಭಿಪ್ರಾಯ. ಪ್ರತಿಯೊಂದು ಸ್ತ್ರೀಯು ತನ್ನ ತಾಯಿಯು. ಪ್ರತಿಯೊಂದು ಸ್ತ್ರೀಯಲ್ಲಿ ಮಹಾತಾಯಿಯನ್ನು ಕಾಣುವ ಸ್ಥಿತಿಗೆ ಬರಲು ಶ್ರಮಪಡುವವರಾದರು. ಈ ಸಂಕಲ್ಪವು ಅವರಲ್ಲಿ ಸದಾ ಕಾಲವಿತ್ತು. ಹೀಗೆ ಕಾಲಚಕ್ರವು ಉರುಳುತ್ತಾ ನಡೆಯಿತು. ಶ್ರೀ ರಾಮಕೃಷ್ಣರ ಎದುರಿದ್ದ ಅಂಧಕಾರದಲ್ಲಿ ಸ್ವಲ್ಪ ಸ್ವಲ್ಪ ಪ್ರಕಾಶವು ಕಾಣಲಾರಂಭಿಸಿತು. ಇವರು ಅನೇಕ ವಿಚಿತ್ರ ಸಂಗತಿಗಳನ್ನು ಕಾಣುವವರಾದರು. ವಿಶ್ವದ ಮರ್ಮದ ಜ್ಞಾನೋದಯವು ಇವರಲ್ಲಿ ಮೂಡಲಾರಂಭಿಸಿತು. ಈ ಸಮಯದಲ್ಲಿ ಇವರಿಗೆ ಓರ್ವ ಸೌಂದರ್ಯವತಿಯಾದ ಸನ್ಯಾಸಿನಿಯ ಪರಿಭೇಟಿಯಾಯಿತು. ಇವರಂತೆ ಸಮಸ್ತ ಪ್ರಪಂಚವನ್ನು ತ್ಯಾಗಮಾಡಿದವಳು. ದಿವ್ಯಜ್ಞಾನಕ್ಕಾಗಿ ಆಗಿನ ಕಾಲದಲ್ಲಿ ಅನೇಕ ರೀತಿಯ ಬಂಧನಗಳಿಗೆ ಒಳಗಾದ ಭಾರತೀಯ ಸ್ತ್ರೀಲೋಕದಲ್ಲಿ ಈ ಮಹಾವ್ಯಕ್ತಿಯೊಂದು ನಿರ್ಮಿತವಾದುದು ಒಂದು ಪರಮ ಆಶ್ಚರ್ಯ. ಆಗ ಶ್ರೀರಾಮಕೃಷ್ಣ ಪರಮಹಂಸರನ್ನು ಅವರ ಅನೇಕ ವರ್ತನೆಗಳಿಂದ ಹುಚ್ಚರೆಂದು ಕಾಣುತ್ತಿದ್ದರು. ಈಕೆಯು ಶ್ರೀ ರಾಮಕೃಷ್ಣರನ್ನು ಕುರಿತು "ಈ ತರದ ಹುಚ್ಚು ಅನುಭವಿಸುವವನು, ನಿಜವಾಗಿಯೂ ಒಳ್ಳೆಯ ಅದೃಷ್ಟಶಾಲಿ. ಈ ವಿಶ್ವವೇ ಒಂದು ದೊಡ್ಡ ಹುಚ್ಚು. ಕೆಲವರಿಗೆ ಐಶ್ವರ್ಯ ಗಳಿಸುವ ಹುಚ್ಚು. ಕೆಲವರಿಗೆ ಸುಖವಿಲಾಸಗಳ ಹುಚ್ಚು. ಹೀಗೆ ಈ ಲೋಕದಲ್ಲಿ ಅನೇಕ ತರದ ಹುಚ್ಚುಗಳಿವೆ. ಎಲ್ಲರಲ್ಲೂ ಭಂಗಾರದ ವಿಚಾರ, ಸ್ತ್ರೀಯರ ವಿಚಾರ, ಕುತಂತ್ರಗಳಿಂದ ಒಬ್ಬರನ್ನು ಒಬ್ಬರನ್ನು ಒಬ್ಬರು ವಂಚಿಸುವುದರಲ್ಲಿ—ಇತ್ಯಾದಿಗಳಲ್ಲಿ ಹುಚ್ಚಿರುವಾಗ,—ದೇವರನ್ನು ಹುಡುಕುವ ಹುಚ್ಚು ಯಾರಲ್ಲೂ ಬರುವುದಿಲ್ಲ. ಅವರ ಈ ತರದ ಹುಚ್ಚು ಯಾರಾದರೂ ಒಬ್ಬನಲ್ಲಿ ಅವರಿಗೆ ಕಂಡುಬಂದರೆ ಮಾತ್ರ ಅವನು ಒಂದು ಸಹಜವಾದ ಸ್ಥಿತಿ ಎಂದು ಕಾಣುವರು. ಆದರೆ ಇದೊಂದು ಬೇರೆ ತರದ ಹುಚ್ಚು. ಅವರಲ್ಲಿ ಹೆಚ್ಚಾಗಿ ವಾಡಿಕೆಯಲ್ಲಿರುವುದಿಲ್ಲ. ದೇವರ ಹುಚ್ಚು. ಈ ಹುಚ್ಚು ಕೆಲವರಿಗೆ ಮಾತ್ರ ಇರುವುದು' ಎಂದು ರಾಮಕೃಷ್ಣರ ಆಗಿನ ಸ್ಥಿತಿಯ ವಿಚಾರದಲ್ಲಿ ತನ್ನ ಅಭಿಪ್ರಾಯವನ್ನು ಕೊಟ್ಟಳು. ನಂತರ ಅಲ್ಲಿಗೆ ಒಬ್ಬ ಸನ್ಯಾಸಿಗಳು ಬಂದರು. ಇವರಿಂದ ಶ್ರೀ ರಾಮಕೃಷ್ಣರಿಗೆ ವೇದಗಳ ಜ್ಞಾನವು ಸಿಕ್ಕಿತು. ಅಲ್ಲಿ ಅನೇಕ ತಿಂಗಳುಗಳಿದ್ದು, ಹುಡುಗ ಶ್ರೀ ರಾಮಕೃಷ್ಣರಿಗೆ ಸಂಪೂರ್ಣ ವೇದಜ್ಞಾನವನ್ನು ಕೊಟ್ಟು, ನಂತರ ಅವರನ್ನು ಒಂದು ಸನ್ಯಾಸಿಗಳನ್ನಾಗಿ ಮಾಡಿ ಹೊರಟುಹೋದರು.

ಶ್ರೀ ರಾಮಕೃಷ್ಣ ಪರಮಹಂಸರು

ಶ್ರೀರಾಮಕೃಷ್ಣರು ಹೀಗೆ ಹುಚ್ಚರಂತೆ ವರ್ತಿಸುತ್ತಿರಲು, ಅವರನ್ನು ಸರಿಪಡಿಸುವ ಉದ್ದೇಶದಿಂದ ಅವರಿಗೆ ವಿವಾಹ ಮಾಡಲಾಯಿತು. ಆಗಿನ ಕಾಲದ ವಿವಾಹವಲ್ಲವೋ? ಬಾಲ್ಯವಿವಾಹವು ಆಗಿನ ಪದ್ಧತಿ. ದಂಪತಿಗಳು ಪ್ರಾಯ ಬಂದ ಮೇಲೆ ಮಾತ್ರ ಒಟ್ಟುಗೂಡುತ್ತಿದ್ದರು. ಅಷ್ಟರ ತನಕ ಅವರವರ ಮನೆಗಳಲ್ಲಿ ಬೇರೆ ಬೇರೆಯಾಗಿ ಇರುತ್ತಿದ್ದರು. ಈ ರೀತಿಯಾಯಿತು ಶ್ರೀರಾಮಕೃಷ್ಣರ ವಿವಾಹ. ಆದರೆ, ವಿವಾಹದಿಂದ ಶ್ರೀರಾಮಕೃಷ್ಣರಲ್ಲಿ ಯಾವ ರೀತಿಯ ಬುದ್ಧಿ ಬದಲಾವಣೆಯಾಗದೆ ಹೋಯಿತು. ತನಗೊಂದು ವಿವಾಹವಾಗಿದೆ, ಒಬ್ಬಾಕೆಯು ತನ್ನ ಹೆಂಡತಿ ಎಂಬುದನ್ನು ಮರೆತೇ ಬಿಟ್ಟರು. ಆದರೆ, ಇವರ ಪತ್ನಿಯರು ಮಾತ್ರ, ತನ್ನ ಪತಿಯವರು, ಧಾರ್ಮಿಕ ಜೀವನವನ್ನು ಹೊಂದಿರುತ್ತಾರೆಂದೂ, ಅವರನ್ನು ಹುಡುಕಿಕೊಂಡು ಹೋಗಬೇಕೆಂದೂ ನಿಶ್ಚಿತ ಮಾಡಿಕೊಂಡರು. ಪತಿಯಲ್ಲಿಗೆ ಕಾಲ್ನಡೆಯಿಂದ ಹೋದರು. ತನ್ನ ಪತಿಯವರನ್ನು ನೋಡಿ, ಪರಮಾನಂದಗೊಳ್ಳುವವರಾದರು. ಈ ತರದ ಪತಿಯರ ಸೇವೆಯನ್ನು ಕೈಕೊಳ್ಳಬೇಕೆಂದು ದೃಢಸಂಕಲ್ಪ ಮಾಡಿದರು. ಆದರೆ ಲೌಕಿಕವನ್ನು ತ್ಯಾಗಮಾಡಿದ ರಾಮಕೃಷ್ಣರು ಇವರನ್ನು ಹೇಗೆ ಬರಮಾಡಿಕೊಳ್ಳಲಿ? "ಪ್ರತಿಯೊಂದು ಸ್ತ್ರೀಯಲ್ಲಿ ಆ ಮಹಾತಾಯಿ ಇರುವಳೆಂದು, ಅದರಿಂದ ಪ್ರತಿಯೋರ್ವ ಸ್ತ್ರೀಯನ್ನು ಮಹಾತಾಯಿ ಎಂದು ಕಾಣುವುದೆ ನನ್ನ ಸಂಕಲ್ಪ. ಆದರೆ, ನಮಗೆ ವಿವಾಹವಾದುದರಿಂದ ನಿನ್ನ ಅಪ್ಪಣೆಗಳಿಗೆ ಒಳಗಾಗಲು ನಾನು ಸಿದ್ಧನಿದ್ದೇನೆ" ಆದರೆ, ಆ ಶ್ರೇಷ್ಠ ಸ್ತ್ರೀಯು ಇವರನ್ನು ಈ ಸಂಸಾರದಲ್ಲಿ ಸೆಳೆಯುವ ಬದಲಾಗಿ, ಅವರ ಧರ್ಮವನ್ನು ಅರಿತುಕೊಳ್ಳಲು ಅವರ ಸೇವೆಮಾಡಲು, ಒಂದು ಆಶ್ರಮದ ಸೇವಕಿಯರಾಗಿ ಶ್ರೀರಾಮಕೃಷ್ಣರ ಹತ್ತಿರ ಉಳಕೊಂಡರು. ಪಾರಮಾರ್ಥಿಕವನ್ನು ಹುಡುಕುವ ಕಾರ್ಯದಲ್ಲಿ ಮಗ್ನರಾದರು.

ಶ್ರೀರಾಮಕೃಷ್ಣರಲ್ಲಿ ದೇವನೆಂಬನೊಬ್ಬ ಇದ್ದಾನೆಂದು ದೃಢವಾಯಿತು. ಅವನನ್ನು ಒಲಿಸಿಕೊಳ್ಳುವ ಕಾರ್ಯವನ್ನು ತೊಡಗಿದರು. ಈ ಉದ್ದೇಶದಿಂದ ಇತರ ಧರ್ಮಗಳ ಅರಿವನ್ನು ಮಾಡುವ ಆಶೆಯು ಅವರಲ್ಲಿ ಹೊಳೆಯಿತು. ಓರ್ವ ಮುಸ್ಲಿಮ ಗುರುಗಳೊಡನೆ ಅವರ ಶಿಷ್ಯರಾಗಿ ವಾಸಮಾಡಿದರು. ಹಾಗೆಯೆ ಕ್ರೈಸ್ತಮತವನ್ನು ಅನುಭವಿಸಿದರು. ಭರತಖಂಡದಲ್ಲಿರುವ ಎಲ್ಲಾ ಧರ್ಮಗಳನ್ನು ರುಚಿಸಿ ನೋಡಿದರು. ಕೊನೆಗೆ ಈ ಎಲ್ಲಾ ಧರ್ಮಗಳ ಮೂಲತತ್ವವು ಒಂದೆ, ಎಂಬ ಅಭಿಪ್ರಾಯಪಡುವವರಾದರು. ಎಲ್ಲಾ ಧರ್ಮಗಳು ಒಂದೆ ತರದ ತತ್ವವನ್ನು ಬೋಧಿಸುತ್ತಿದ್ದಾವೆಂದೂ, ವಿಧಗಳಲ್ಲಿ ಮಾತ್ರ ವ್ಯತ್ಯಾಸವಿರುವುದೆಂದೂ ಕಂಡುಹಿಡಿದರು. ವಿವಿಧ ಧರ್ಮಗಳಲ್ಲಿ ಉಂಟಾಗುವ ಕಲಹಗಳು, ಧರ್ಮಪ್ರಸಾರಿಗಳ ಸ್ವಾರ್ಥಫಲವೆಂದು ಇವರಲ್ಲಿ ಹೊಳೆಯಿತು. ಪರಮಾತ್ಮನನ್ನು ಒಲಿಸುವುದು ಪ್ರತಿಯೊಂದು ಧರ್ಮದ ತತ್ವವು. ಒಂದೇ ಉದ್ದೇಶವನ್ನು ಸಾಧಿಸಲು ಈ ವಿವಿಧ ಧರ್ಮಗಳು ವಿವಿಧ ರೀತಿಗಳನ್ನು ಅನುಸರಿಸುತ್ತಿವೆ. ತನ್ನ ರೀತಿಯು ಶ್ರೇಷ್ಠ, ತನ್ನದೇ ಶ್ರೇಷ್ಠ ರೀತಿ ಎಂದು ಕೆಲವು ಧರ್ಮಪ್ರಸಾರಕರು ವಾದಿಸುವುದರಲ್ಲಿ ಅರ್ಥವಿಲ್ಲವೆಂದು ಶ್ರೀ ರಾಮಕೃಷ್ಣರು ಅಭಿಪ್ರಾಯಪಡುವವರಾದರು.

ಆದರೆ, ಶ್ರೀರಾಮಕೃಷ್ಣರು ಯಾವಾತನಲ್ಲೂ 'ನಾನು' ಎಂಬ ಭಾವನೆಯುಂಟಾದರೆಂದೂ, ಈ ಭಾವನೆಯು ಯಾರಲ್ಲಿ ಕಡಿಮೆಯಾಗಿದೆಯೋ ಆತನಲ್ಲಿ ಪರಮಾತ್ಮನ ಅಂಶವು ಹೆಚ್ಚಾಗಿರುವುದೆಂದೂ, ಎಲ್ಲರೂ ಈ ಭಾವನೆಯನ್ನು ತೊರೆದ 'ಪರಮಾತ್ಮನನ್ನು ಒಲಿಸಿಕೊಳ್ಳುವುದು ಪ್ರತಿಯೊಂದು ಧರ್ಮ ಉದ್ದೇಶವೆಂದೂ, ಶ್ರೀರಾಮಕೃಷ್ಣರು ತಿಳಕೊಂಡರು. ಶ್ರೀರಾಮಕೃಷ್ಣರು ಬರೇ ಸೂತ್ರಗಳನ್ನು ಹೊರಡಿಸುವವರಲ್ಲ. ಅವುಗಳನ್ನು ಕಾರ್ಯರೂಪದಲ್ಲಿ ವ್ಯಕ್ತಪಡಿಸುವವರು. ನಮ್ಮಲ್ಲಿ ಅನೇಕ ದಾನಧರ್ಮದ ವಿಚಾರ, ಸಮತಾವಾದದ ವಿಚಾರ ಇತ್ಯಾದಿ ಹಲವು ವಿಚಾರಗಳಲ್ಲಿ ತರ ತರದ ಸೂತ್ರಗಳನ್ನು ಹೊರಡಿಸುವವರಿದ್ದಾರೆ. ಆದರೆ, ಅವುಗಳನ್ನು ಕಾರ್ಯರೂಪದಲ್ಲಿ ಮಾಡಿ ತೋರಿಸುವುದು ಬಹಳ ಕಡಿಮೆ. ಶ್ರೀರಾಮಕೃಷ್ಣರು ತಾನು ತಿಳಿದ ಪ್ರತಿಯೊಂದು ಸೂತ್ರವನ್ನು (ಯೋಗ್ಯವೆಂದು ಕಂಡಲ್ಲಿ) ಅದನ್ನು ಕಾರ್ಯರೂಪಕ್ಕೆ ತರುತ್ತಿದ್ದರು. ಮೇಲಿನ ತನ್ನ ಸೂತ್ರವನ್ನು ಕಾರ್ಯದಲ್ಲಿ ಪ್ರದರ್ಶಿಸ ತೊಡಗಿದರು.

"ಯಾರು ನನ್ನನ್ನು ಆರಾಧಿಸುವವರನ್ನು ಪೂಜಿಸುವರೋ, ಅಂತವರ ಆರಾಧನೆಯೇ ನನಗೆ ಶ್ರೇಷ್ಠವಾದುದು. ಎಲ್ಲರೂ ನನ್ನ ಮಕ್ಕಳು, ನನ್ನ ಮಕ್ಕಳ ಸೇವೆಯನ್ನು ಮಾಡುವುದು ನನ್ನ ಕೃತ್ಯವು" ಎಂದು ಹಿಂದೂ ಧರ್ಮಶಾಸ್ತ್ರದಲ್ಲಿ ಹೇಳಿದೆ. ಈ ತತ್ವವು ಶ್ರೀ ರಾಮಕೃಷ್ಣರಲ್ಲಿ ಬಹಳವಾಗಿ ನಾಟಿತು. ಹೊಲೆಯರೆಂದರೆ ಬಹಳ ಕೀಳು ಜಾತಿ, ಬ್ರಾಹ್ಮಣರೆಂದರೆ ಶ್ರೇಷ್ಠರೆಂದೂ, ಆಗ ನಮ್ಮ ಹಿಂದೂಗಳ ಭಾವನೆ. ಹೊಲೆಯರ ಸ್ಪರ್ಶವಾದರೆ, ಬ್ರಾಹ್ಮಣರು ಶುದ್ಧಿಸಂಸ್ಕಾರ ಹೊಂದಬೇಕಾಗಿತ್ತು. ಹೊಲೆಯರು ಬ್ರಾಹ್ಮಣರು ನಡೆಯುವ ಮಾರ್ಗದಲ್ಲಿ ನಡೆಯಬಾರದಿತ್ತು. ಬ್ರಾಹ್ಮಣರು, ಹೊಲೆಯರು ಇರುವ ಪಟಾರದಲ್ಲಿ ಸಂಚರಿಸುತ್ತಿರಲಿಲ್ಲ. ಇದರಿಂದ ಹೊಲೆಯರು ಕೀಳುತನ ಪಡೆದುದಲ್ಲದೆ, ಶುಚಿತ್ವ ಮಹತ್ವವನ್ನು ತಿಳಿಯದವರಾಗಿ, ಕೆಸರು ಕೊಳೆಯಲ್ಲಿ ಜೀವನ ಸಾಗಿಸುವವರಾದರು. ಸಾವಿರಾರು ವರ್ಷ ಈ ಸ್ಥಿತಿಯನ್ನು ಹೊಲೆಯರು ಅನುಭವಿಸಬೇಕಾಯಿತು. ಅವ

([illegible]ನೇ ಪುಟವನ್ನು ನೋಡುವುದು)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್
ಸ್ತ್ರೀಯರಿಗೊಂದು ಮಹಾ ವರ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟಿನ ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ನಾವು ನಿಶ್ಚಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ. ಕ.

ಚಿತ್ರಾಹುತಿ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ ಮಂಗಳೂರು

ಅಪರಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ. ಅದು ಅರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ — ಅದು ಪೂರ್ಣವಾದ ಟೋನಿಕ್ ಆಹಾರ ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ
ರೂ 3-4-0 ಮತ್ತು ರೂ 1-12-0

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು
ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Ested 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್

ಪುತ್ತೂರು

ಠೇವಣಾತಿಗಳ ದರ

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ
"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ
"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ
ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು
ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು
ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur, Dated 10—4—1935

G. N. Lakshman Pai,
Secreatry

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK

LIMITED.

ಬೀಜಗಳು.

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ರೂ ೪
೨೫ ಯುರೋಪು ,, ೫
೨೫ ಹೂವಿನ ಬೀಜಗಳು ,, ೫

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ಗಳ್ಳೆ ರೂ ೧೦

ನಿಂಬೆ ಕೊಡಗು ಕಿತ್ತಳೆ ಚೇಪೆ, ಪನ್ನೀರಳೆ ದಾಳಿಂಬ ಚಕ್ರವರ್ತಿ, ಸೀಬೆ, ಪಿಚ್ಚೀಸ್, ಅಂಜೂರ ದ್ರಾಕ್ಷಿ ಗಿಡಗಳು ಡಜನ್ ಗಳ್ಳೆ . ರೂ. ೬
ಕಟ್ಟಿದ ಸಂಪಿಗೆ ಗಿಡಗಳು ಡಜನ್ ಗಳ್ಳೆ ರೂ ೧೨

ಪಾರಿಜಾತ ನಂದಿವರ್ಧನ, ದಾಸಿವಾಳ, ಮಲ್ಲಿ ಹೂವಿನ ಗಿಡಗಳು ಡಜನ್ ಗಳ್ಳೆ ರೂ. ೩

ನಮ್ಮಲ್ಲಿ ದೊರೆಯುವ ಗಿಡ, ಬೀಜ, ತರಕಾರಿ ಹೂವು, ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು

ಮ್ಯಾನೇಜರ್,
ಇಂಟರ್‌ನ್ಯಾಷನಲ್ ಸೀಡ್ ಕಂಪೆನಿ
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರು ಸಿಟಿ.

BUY ADVERTISED GOODS.

ನಮ್ಮ ಸಾಪ್ತಾಹಿಕ ಕಥೆ:

ಮಿಥ್ಯಾಜೀವನದ ಸತ್ಯ ಕಥೆಗಳು

(All Rights Reserved)

ಲೇಖಕ —ಶ್ರೀ 'ರಸಿಕರಂಜನ'

"Truth is stranger than Fiction"

೭. "ಕಂಟಕ ಪರಿಹಾರ"

ನಾನು ನನ್ನ ದವಾಖಾನೆಯನ್ನು ಮುಚ್ಚುವ ಮುಂಚಿನ ವಾಡಿಕೆಯಂತೆ ಡ್ಯಾರಿಯಲ್ಲಿ ದಿನಚರಿಯನ್ನು ದಾಖಲು ಮಾಡುತ್ತಾ ಕುಳಿತಿದ್ದೆ ನಾಮಣಿಯು ಈಝಿಚೆಯರಿನಲ್ಲಿ ಹಾಯಾಗಿ ಬಿದ್ದುಕೊಂಡು, ಮೂಗುಬಾಯಿಗಳಿಂದ ಸಿಗರೇಟಿನ ಹೊಗೆಯ ಮೋಡಗಳನ್ನು ಬುಸುಬುಸನೆ ಹೊರಕ್ಕೆ ಅಟ್ಟಿ, ಅವುಗಳೊಡನೆ ಊರಿಗೆ ಎಂತಹ ಸಂದೇಶವನ್ನು ಕಳುಹಿಸವುದೆಂಬ ಯೋಚನೆಯಲ್ಲೀ ಮಗ್ನನಾಗಿದ್ದನು *

"ಸ್ವಾಮೀ, ಡಾಕ್ಟರರೆ, ನಮಸ್ಕಾರ"

ನಾನು ತಲೆಯೆತ್ತಿ ನೋಡಿದೆ ರೌಳಪ್ಪನು ಮೆಟ್ಟಲು ಹತ್ತಿ ಬರುತ್ತಿದ್ದನು

"ನಮಸ್ಕಾರ ಏನು ಬಂದೆ, ರೌಳಪ್ಪಾ? ಬಾ, ಕೂತುಕೊಂಡು, ನಿನ್ನ ಪುರಾಣ ಬಿಚ್ಚು,' ನಾನು ಸಾವಧಾನದಿಂದ ಹೇಳಿದೆ

"ಬಡವರ ಪುರಾಣ ಏನು ಹೇಳಲಿ ಸ್ವಾಮಿ,' ತಾವು ಒಮ್ಮೆ ದಯಮಾಡಿ ನಮ್ಮ ಬಿಡಾರಕ್ಕೆ ಬಂದರೆ ಬಹಳ ಉಪಕಾರವಿತ್ತು ಲಕ್ಷ್ಮಿ ಎಂಟು ದಿನದಿಂದ ತಲೆಸಿಡಿತವೆಂದು ವಟಗುಟ್ಟುತ್ತಿದ್ದವಳು ಈಹೊತ್ತು ಹಾಸಿಗೆಯನ್ನೇ ಹಿಡಿದಬಿಟ್ಟಿರುವಳ ಮೈಯು, ಭತ್ತ ಹಾಕಿದರೆ ಅರಳಾಗುವಷ್ಟು, ಬಿಸಿಯೇರಿದೆ ಗಂಟೆಗಂಟೆಗೂ ಜ್ವರವು ಕಡಿಮೆಯಾದೀತೆಂಬ ಭರವಸೆ ತಪ್ಪುವಂತೆ, ಏರುತ್ತಾ ಹೋಗಿದೆ ಸಂಜೆಯಿಂದಲೂ ಅವಳಿಗೆ ಈಚೆಯ ಪರಿವೆಯೇ ಇಲ್ಲ ತಾವು ದೊಡ್ಡ ಮನಸ್ಸು ಮಾಡಿ ಎನ್ನುವಂತೆಯೇ ಅವನ ಗಂಟಲ ನರಗಳು ಬಿಗಿದುಕೊಂಡು ಸ್ವರವೇ ಹೊರಡದಂತಾಯಿತು ಅವನು ಕೈಚೆಲ್ಲಿದಿಸಿ, ತಲೆಯನ್ನು ಒಂದು ಪಾರ್ಶ್ವಕ್ಕೆ ವಾಲಿಸಿ ಆರ್ತದೃಷ್ಟಿಯಿಂದ ನನ್ನನ್ನೇ ನೋಡುತ್ತಾ ನಿಂತನು

ನಾನು ನಾಮಣಿಯನ್ನು ನೋಡಿದೆನ ಅವನು ರೌಳಪ್ಪನನ್ನು ಏನು ನುಂಗಿ ಬಿಡುವನೋ ಎಂಬಂತೆ, ಬಾಯಿಯನ್ನು ಅಗಲವಾಗಿ ತೆರೆದು, ಕಣ್ಣುಗಳನ್ನು ದೊಡ್ಡದಾಗಿ ಅರಳಿಸಿ, ಎವೆಯಿಕ್ಕದೆ ದಿಟ್ಟಿಸುತ್ತಿದ್ದನು ನಮ್ಮ ದೃಷ್ಟಿ ಒಂದಾಗುತ್ತಲೇ ನಾಮಣಿಯು ಎಚ್ಚತ್ತು, ಅವನಿಂದ ನನ್ನನ್ನೂ, ನನ್ನಿಂದ ಅವನನ್ನು ದುರದುರನೆ ನೋಡತೊಡಗಿದನು

"ನೀನು ಅವರಲ್ಲಿಗೆ ಹೋಗಿಕೊಂಡೇ ಮನೆಗೆ ಬಾ ನಾನು ಒಬ್ಬನೇ ಹೋಗುವೆನು," ನಾಮಣಿಯು ವ್ಯಕ್ತಪಡಿಸಿದನು

"ಹಾಗೇನೂ ಮಾಡಬೇಕಾಗಿಲ್ಲ ಅವನ ಬಿಡಾರ ನಮ್ಮ ದಾರಿಯಲ್ಲೇ ಬೀಳುವುದು ನಾವು ಒಟ್ಟಿಗೆ ಹೋಗೋಣ ನಮ್ಮ ಕಡೆಯವನೇ ಆದ ರೌಳಪ್ಪನ ಬಿಡಾರವನ್ನೂ ನೀನು ನೋಡಿದಂತಾಗಲಿ," ನಾನು ವಿವರಿಸಿದೆನು

"ಈ ರಾಯರೂ ನಮ್ಮೂರಿನವರೇ ಏನು' ಬಹಳ ಸಂತೋಷ ತಾವು ಅವರನ್ನು ಕೂಡಿಕೊಂಡೇ ಬರಬೇಕು ಆದರೆ ಅವರನ್ನು ಉಪಚರಿಸುವ ಭಾಗ್ಯವು ನಮಗಿಲ್ಲ!" ಎನ್ನುತ್ತಲೇ ರೌಳಪ್ಪನ ಕಣ್ಣುಗಳು ತುಂಬಿಬಂದುವು

"ನೀನೇನೂ ಚಿಂತಿಸಬೇಡವೋ ರೌಳಪ್ಪಾ ದೇವರಿದ್ದಾನೆ ನೀನು ಮುಂದೆ ಹೋಗು. ನಾವು, ದವಾಖಾನೆಯನ್ನು ಮುಚ್ಚಿಸಿ, ನಿನ್ನ ಬೆನ್ನ ಮೇಲೆಯೇ ಬರುವೆವು," ನಾನು ಸಮಾಧಾನ ಹೇಳಿದೆನು

* ನಾಮಣಿಯ ಮತ್ತು ನನ್ನ ಪರಿಚಯಕ್ಕಾಗಿ "ಸ್ವದೇಶಾಭಿಮಾನಿ"ಯ 3—1—36ನೇ ಸಂಚಿಕೆಯಲ್ಲಿ ಪ್ರಕಟವಾದ "ಲಕ್ಷಾಧೀಶನ ಪೂರ್ವಾರ್ಜಿತ" ಎಂಬ ಕಥೆಯನ್ನು ನೋಡುವುದು—ಲೇಖಕ

ರೌಳಪ್ಪನು, ಬಲಿಕೊಡಲು ಕೊಂಡೊಯ್ಯುವ ಕುರಿಯಂತೆ, ಸಾವಕಾಶವಾಗಿ ನಡೆಯುತ್ತಾ ಹೊರಟುಹೋದನು.

೨

"ಏನು, ರೌಳಪ್ಪನಲ್ಲಿ ದೆವ್ವವನ್ನು ಕಂಡೆಯಾ?" ನಾಮಣಿಯ ವಿಚಿತ್ರ ವರ್ತನವನ್ನು ನೆನೆದು ಅವನನ್ನು ಕೇಳಿದೆನು

"ಅವನಲ್ಲಿ ದೆವ್ವವಲ್ಲ, ದೆವ್ವಗಳ ಹಿಂಡೇ ನೆಲಸಿರುವುದು, ಅಥವಾ ಕೆಲವು ವರ್ಷಗಳ ಹಿಂದೆ ನೆಲಸಿತ್ತು," ನಾಮಣಿಯು ಆ ದೆವ್ವಗಳ ಹಿಂಡನ್ನು ಚೆದರಿಸಲೆಂಬಂತೆ ಮೇಲಿಂದ ಮೇಲೆ ಸಿಗರೇಟಿನ ಹೊಗೆಯನ್ನು ಊದುತ್ತಾ ಎಂದನು

"ಏನಂದಿ, ಅವನನ್ನು ನೀನು ಬಲ್ಲೆಯಾ?" ಆಶ್ಚರ್ಯದಿಂದ ಕೇಳಿದೆನು

"ಅವನನ್ನು?-ಅವನ ಇಡೀ ಜಾತಕವನ್ನೇ ಬಲ್ಲೆನು ಯಾಕೆ?-ಇಡೀ ಮಂಗಳೂರಿಗೇ ಅದು ಕರತಲಾಮಲಕವಾಗಿರುವುದು"

"ಎಂದರೆ?" ವಿಸ್ಮಯದಿಂದ ಕೇಳಿದೆನು ನಾಲ್ಕೈದು ವರ್ಷಗಳಿಂದ ನನ್ನನ್ನು ತನ್ನ ಇಡೀ ಕುಟುಂಬದ ಚಿಕಿತ್ಸಕನಾಗಿ ಮಾಡಿಕೊಂಡಿದ್ದ ರೌಳಪ್ಪನಲ್ಲಿ ವಿಶೇಷವೇನನ್ನೂ ಕಾಣದವನಾದ ನನಗೆ ನಾಮಣಿಯ ಈ ಮಾತುಗಳು ವಿಸ್ಮಯಗೊಳಿಸಿದುದರಲ್ಲಿ ಆಶ್ಚರ್ಯವೇನೂ ಇರಲಿಲ್ಲ

"ನೀನು ನಮ್ಮೂರಿನ ತಗಣೆ ಶಂಕರರಾಯನನ್ನು ಬಲ್ಲೆಯಾ? ನಾಮಣಿಯು ನನ್ನ ಮಾತನ್ನೇ ಅಲ್ಲಗಳೆದ, ಬೇರೆಯೊಂದ ಪ್ರಸ್ತಾಪವನ್ನೇ ಎತ್ತಿದನ

ಅವರನ್ನು ಬಲ್ಲೆನು ಆದರೆ ಅದಕ್ಕೂ, ಇದಕ್ಕೂ ಎಲ್ಲಿಯ ಗಂಟು, ಮಹಾರಾಯ?' ನಾನ ವಿಜ್ಞಾಪನಾಗಿ ಕೇಳಿದೆನು

ಎಲ್ಲಿಯ ಗಂಟೆಂದೇನು?—ಬ್ರಹ್ಮಲೋಕದ ಗಂಟು

"ನನ್ನ ಸಮಸ್ಯೆಯ ನನ್ನ ದ ಬಿಚ್ಚಲಾಗದಲ್ಲ ವಿವರಿಸಿ ಹೇಳಲಾಗದೇ'

'ವಿವರಿಸಿ ಹೇಳುವೇಕೆ? ಆದರೆ ಅದೇ ಒಂದು ದೊಡ್ಡ ಕಥೆಯಾಗುವುದಲ್ಲ

ದೊಡ್ಡದಿಲ್ಲ ರೌಳಪ್ಪನ ಬಿಡಾರಕ್ಕೆ ಎರಡು ಮೈಲಿಯಷ್ಟು ದೂರವಿದೆ ದಾರಿಯಲ್ಲೇ ಅದನ್ನು ಹೇಳ ಪ್ರಕಿಂಗು ಒಳ್ಳೆಯ ಸ್ವಾರಸ್ಯವಾಗಲಿ ನಾವಿನ್ನು ಹೊರಡುವ

"ಒಳ್ಳೆಯದು' ನಾಮಣಿಯು ಒಪ್ಪಿದನು

೩

"ನೀನು ಹತ್ತು ವರ್ಷಗಳ ಹಿಂದೆ ಡಾಕ್ಟರ್ ಪರೀಕ್ಷೆ ಪಾಸಾಗಿ, ಕಲ್ಕತ್ತೆಯಲ್ಲಿ ವೈದ್ಯವೃತ್ತಿಯನ್ನು ಪ್ರಾರಂಭಿಸಲು ಮಂಗಳೂರನ್ನು ಬಿಡುವಾಗ ಶಂಕರರಾಯನಿಗೆ ಇನ್ನೂ ಮದುವೆಯಾಗಿರಲಿಲ್ಲ ಅಲ್ಲವೇ? ಬೀದಿಗೆ ಇಳಿಯುತ್ತಲೇ ನಾಮಣಿಯು ಮೊದಲುಮಾಡಿದ

'ಹೌದು, ಆದರೆ ಅವನು ಆಗಲೇ ಮದುವಣಿಗನಾಗಲು ಯೋಗ್ಯ ಪ್ರಾಯ ಹೊಂದಿದ್ದನು"

"ನಿಜ ಆದರೆ ವ್ಯಾಪಾರದ ಗೊಂದಲದಲ್ಲಿ ಲಾಭಾದಾಯವನ್ನೇ ಎಣಿಸುವ ಹವ್ಯಾಸದಲ್ಲಿ, ಬಿದ್ದ ಶಂಕರನು ಮದುವೆಯ ಪ್ರಸ್ತಾಪವನ್ನು ಆದಷ್ಟು ವರ್ಷ ಮುಂದರಿಸಿದನು ಕಡೆಗಂತೂ ಅವನ ಸಂಬಂಧಿಕರು ಅವನ ಉದ್ದೇಶಕ್ಕೆ ವಿರೋಧವಾಗಿ ಮದುವೆ ಮಾಡಿಯೇ ಬಿಟ್ಟರು

"ಆದರೆ ವ್ಯಾಪಾರದಲ್ಲೇ ಹುದುಗಿಕೊಂಡಿದ್ದ ಶಂಕರನು ಮದುವೆಯಾದರೂ ಆಗದವನಂತೆಯೇ ಇರತೊಡಗಿದನು ಪ್ರತಿದಿನವೂ ಬೆಳಿಗ್ಗೆ ಎದ್ದು ಭಂಡಸಾಲೆಗೆ ಹೋದವನು. ಮಧ್ಯಾಹ್ನ ಊಟಕ್ಕೆ ಬಂದರೆ ಬಂದ, ಇಲ್ಲದಿದ್ದರೆ ಇಲ್ಲ ರಾತ್ರಿ ಮನೆಗೆ ಬರುವಾಗ ಅಂತೂ ನಿತ್ಯವೂ ಹನ್ನೊಂದು ಘಂಟೆ ಆ ಮೇಲೆ ಊಟವಾಗಿ ಹಾಸಿಗೆಯ ಮೇಲೆ ಬಿದ್ದರೆ ಹೊಡೆದುಹಾಕಿದವನಂತೆ ನಿದ್ದೆ ಬರುವುದು. ತಿರುಗಿ ಎಚ್ಚರವಾದವನಿಗೇ ಕೈಯು ಭಂಡಸಾಲೆಯ ಬೀಗದಕೈಯ ಮೇಲೆ ಹೋಗುವುದು ಗೌರಿಯು ಮಾಲೆಯನ್ನು ಇಂತಹವನ ಕೊರಳಿಗೆ ಹಾಕುವ ಬದಲಿಗೆ ಒಂದು ಮರದ ಕೊರಡಿಗಾದರೂ ಹಾಕಬಾರದಿತ್ತೇ? ಅದನ್ನಾದರೂ ಯಾವಾಗಲೂ ಹತ್ತಿರವೇ ತೆಗೆದುಕೊಂಡಿರಬಹುದಿತ್ತು.

"ಶಂಕರನ ಈ ನಡತೆಯು ಮೂರು ನಾಲ್ಕು ವರ್ಷ, ಸ್ವಲ್ಪವೂ ಬದಲಾವಣೆಯಿಲ್ಲದೆ, ಮುಂಬರಿಯಿತು ಈ ಅವಧಿಯಲ್ಲಿ ಗೌರಿಯು ಮಾತ್ರ ಪ್ರಕೃತಿನಿಯಮವನ್ನು ಅನುಸರಿಸಿ ಸ್ಫೂರ್ತಿಯಾಗಿ ಬೆಳೆದಳು, ಮತ್ತೂ ಬೆಳೆದಳು, ಇನ್ನೂ ಬೆಳೆದಳು ಅದರೊಂದಿಗೇ ಅವಳ ರೂಪವೂ ಬೆಳೆಯಿತು, ಮನಸ್ಸೂ ಬೆಳೆಯಿತು, ಆಕಾಂಕ್ಷೆಗಳೂ ಬೆಳೆದುವು ಬೆಳೆಯದೆ ಏನು? —ಅವಳು ತಿನ್ನುತ್ತಿದ್ದುದು ಒಣ ಬೈಹುಲ್ಲೇ?

"ಮನೆಯಲ್ಲಿ ಇಡೀ ದಿನ ಅವಳೂ ಆದಳು, ಅವಳ ಮುದಿ ಅತ್ತೆಯೂ ಆದಳು ಯೌವನದಿಂದ ಭರಿತಳಾಗಿ ಪ್ರಣಯದ ಸರಸಸಲ್ಲಾಪವನ್ನು ಬಯಸುವ ಗೌರಿಗೆ ಆ ಮುದಿಗೊಡ್ಡಿನ ಜತೆಯಿಂದ ಏನು ಪುರುಷಾರ್ಥ ದೊರಕೀತಪ್ಪ ಸುಂದರ ನೋಟಗಳನ್ನು ಅಪೇಕ್ಷಿಸುವ ಆ ಚಂಚಲದೃಷ್ಟಿಗೆ ಆ ಸೊರಗಿ ಸುಕ್ಕು ಹಿಡಿದ ಅತ್ತೆಯ ದೃಶ್ಯವು ಎಂತಹ ಸಂತೋಷವನ್ನು ಉಂಟುಮಾಡೀತು? ಹಾಗಾಗಿ ಅವಳು ಸಮಯ ಸಿಕ್ಕಿದಾಗಲೆಲ್ಲಾ, ಕಣ್ಣಿನ ಹಬ್ಬವನ್ನಾದರೂ ಆಚರಿಸುವ ಸಲುವಾಗಿ, ಮನೆಯ ಹೊರಜಗಲಿಯ ಮೇಲೆ ಕುಳಿತು ರಾಜಬೀದಿಯಲ್ಲಿ ಹೋಗುತ್ತಿದ್ದ ದಾರಿಗರನ್ನು ನೋಡಿ ತೃಪ್ತಿಪಡುತ್ತಿದ್ದುದರಲ್ಲಿ ತಪ್ಪೇನು?

೪

"ಗೌರಿಯ ಅದೃಷ್ಟದಿಂದಲೋ, ದುರದೃಷ್ಟದಿಂದಲೋ, ಅವರ ಮನೆಯ ನಡುವೆಯೇ ಒಂದು ಬೀದಿ—ಬೀಡಾ ಅಂಗಡಿಯಿತ್ತು ಆ ಮಹಾ ಸಂಸ್ಥೆಯ ಅಧಿಪತಿಯೇ ನನ್ನ ರೌಳಪ್ಪನಾಗಿದ್ದನ ಈಗಲಾದರೂ ಕಂಡೆಯಾ ಎಲ್ಲಿಯ ಗಂಟೆಂದು? ನಾಮಣಿಯು ಕೇಳಿದನು

'ಓಹೊ' ಹೊ! ಹೊ' ಸರಿ ತಿಳಿಯಿತು, ನಾನೆಂದೆ ಮುಂದೇನಾಯಿತು?"

ಮುಂದೇನಾಗುವುದು? ನನಗೆ ಕನ್ನಡ ಕಾವ್ಯ ಓದಲು ಬರುವುದೇ? ಹಾಗಾದರೆ ರತ್ನಾಕರ ಸಿದ್ಧನ 'ಭರತೇಶವೈಭವ' ವನ್ನು ನೋಡು ತರುಣಿಯ, ತರುಣನೂ ಒಬ್ಬರನ್ನೊಬ್ಬರು ನೋಡಿದರೆ ಅದರಲ್ಲಿ ಪರಿಣಾಮವಾಗಿ ಏನೇನಿಲ್ಲ ನಡೆಯುವುದೆಂದು ಅದರಲ್ಲಿದೆ"

'ಅದರಲ್ಲಿದ್ದರೆ ಅದು ನಿನಗಾಯಿತು ನನಗೆಲ್ಲಿಯ ಕಾವ್ಯಪಾಂಡಿತ್ಯ? ಇದರಲ್ಲೇನಾಯಿತೆಂದು ಹೇಳುವಿಯಾದರೆ ಹೇಳು' ನಾನು ಜುಗುಪ್ಸೆಯಿಂದ ಕೇಳಿದೆ

"ಸರಿ ನೋಡುವವರ ಕಣ್ಣು ಕುಕ್ಕುವ ಬೆಡಗುಬಿನ್ನಾಣಗಳಿಂದ ಕೂಡಿ, ಇಡೀ ದಿನವೆಂಬಂತೆ, ಎದುರಲ್ಲೇ ಕೂತುಕೊಳ್ಳುವುದಲ್ಲ ಸ್ವೈರ ಮಾರ್ಗದಲ್ಲಿ ಯಾರೂ ಸುಳಿಯದ ಸಮಯದಲ್ಲಿ, ಸೂಕ್ಕಿದ ಗೂಳಿಯಂತಿದ್ದ ರೌಳಪ್ಪನ ಸಂಜ್ಞಾವಿಶೇಷಗಳಿಗೆ ಮೊದಲಾಯಿತಂತೆ ಕೆಲವು ಸಲ ಅಂಜಿಕೆಯಿಂದಾಗಲಿ, ಅವನು ಹೀನ ಜಾತಿಯವನೆಂಬ ಅಸಹ್ಯತೆಯಿಂದಲಾಗಲಿ, ಅವಳು ಅದನ್ನು ಅಲಕ್ಷಿಸಿದರೂ, ಕಡೆಗೆ ದೇಹದ ಕೊಬ್ಬು ಅವನ ಸನ್ನೆಗಳಿಗೆ ಅವಳಿಂದ ಮರುಸನ್ನೆಗಳನ್ನು ಮಾಡಿಸಿತಂತೆ ಕಡೆಗೆ ಎಲ್ಲವೂ ಅಂತೆಯ ಕಂತೆ

"ಮಾಡಿದ ಪಾಪ ಬಯಲಿಗೆ ಬಾರದಿರುವುದೇ? ಗೌರೀರೌಳಪ್ಪರ ನಾಟಕ ಮೆಲ್ಲಗೆ ಒಬ್ಬಿಬ್ಬರ ಗೋಚರಕ್ಕೆ ಬಿದ್ದು, ಕಥೆಯು ಹಲವು ವರ್ಣಗಳಿಂದ ರಂಜಿತವಾಗಿ ಶಂಕರನ ಕಿವಿಯನ್ನೂ ಸೇರಿತು

"ಶಂಕರನು ಸಾಧನೆವಷಡಿ ಗೌರಿಯ ಪಾಪವರ್ತನೆಯ ಪ್ರಮಾಣಗಳನ್ನೂ ಪಡೆದನು, ತನ್ನಿಂದಲೇ ಘಟಿಸಿದ ಈ ಅನಾಹುತಕ್ಕಾಗಿ ಆ ಪಾಪದವಳನ್ನು ಯೋಗ್ಯರೀತಿಯಿಂದ ಶಿಕ್ಷಿಸಬೇಕೆಂದು ಪ್ರತಿಜ್ಞೆಮಾಡಿಕೊಂಡನು ಹೇಗೆಂದು ಮಾತ್ರ ಯೋಚಿಸಲಾರದೇ ಹೋದನು

೫

"ಶಂಕರನ ತಾಯಿಗೆ ಕಾಶೀಯಾತ್ರೆ ಮಾಡಬೇಕೆಂಬ ಲವಲವಿಕೆ ಅಷ್ಟಿಷ್ಟಲ್ಲ. ಮಗನನ್ನು ಇದಕ್ಕಾಗಿ ಎಷ್ಟೋ ಸಲ ಕೇಳಿಕೊಂಡಿದ್ದರೂ ಅವನು ಅದನ್ನು ಕಿವಿಗೇ ಹಾಕಿಕೊಂಡಿರಲಿಲ್ಲ ಆದರೆ ಈ ವರ್ಷ ಅವನಾಗಿಯೇ ಈ ಪ್ರಸ್ತಾಪವನ್ನೆತ್ತಿದುದರಿಂದ ಅವಳ ಸಂತೋಷಕ್ಕೆ ಎಲ್ಲೆಯುಲ್ಲದಂತಾಯಿತು. ಅಂತೂ ಎಲ್ಲಾ ಏರ್ಪಾಡುಗಳು ಬಹಳ ಅವಸರದಿಂದ ನಡೆದು, ಶಂಕರನು ಒಂದು ಸುಮುಹೂರ್ತದಲ್ಲಿ ಹೆಂಡತಿಯನ್ನೂ, ತಾಯಿಯನ್ನೂ ಕರೆದುಕೊಂಡು ಕಾಶಿಗೆ ಹೊರಟು ಹೋದನು

"ಇಬ್ಬರನ್ನು ಕರೆದುಕೊಂಡು ಹೋದ ಶಂಕರನು ಯಾತ್ರೆ ಮುಗಿಸಿ ಬರುವಾಗ ಒಬ್ಬಳನ್ನೇ ಹಿಂದೆ ತಂದಿದ್ದನು"

"ಅವನ ಮುದಿ ತಾಯಿ ಗಂಗಾಪ್ರವೇಶ ಮಾಡಿದಳೇ?" ನಾನು ಕುತೂಹಲದಿಂದ ಕೇಳಿದೆನು

"ಇಲ್ಲ, ಮಹಾರಾಯ ಆ 'ಪುಣ್ಯಾತ್ಗಿತ್ತಿ' ಈಗಲೂ ಭದ್ರಕಾಯಳಾಗಿ ಮಗನ ಸಂಸಾರವನ್ನು ನೋಡಿಕೊಂಡಿರುವಳು'

"ಎಂದರೆ" ನಾನು ಕೇಳಿದೆ

"ಎಂದರೆ, ಗೌರಿಗೆ ಬಂತು ತೊಂದರೆ ಅವಳು ಗಂಗಾಸ್ನಾನ ಮಾಡುವಾಗ, ಕಾಲು ಜಾರಿ ಬಿದ್ದು, ನೀರಪಾಲಾದಳಂತೆ

"ಹಿಂದೆ ಬಂದವನು ತಿರುಗಿ ಮದುವೆ ಮಾಡಿಕೊಂಡನು, ಈಗಿನವಳನ್ನಾದರೆ ತನ್ನ ಕಣ್ಮಣಿಯಾಗಿಯೇ ಕಾಣುತ್ತಿರುವನು ಇಡೀ ದಿನವೆಂಬಂತೆ ಅವಳ ಸೆರಗನ್ನು ಬಿಡನು. ಅವಳ ತಮ್ಮನನ್ನೂ ತನ್ನ ವ್ಯಾಪಾರದಲ್ಲೇ ಸೇರಿಸಿಕೊಂಡಿದ್ದುದರಿಂದ ಇದಕ್ಕೆಲ್ಲಾ ಅನುಕೂಲ ಅಂತೂ ಕೈಸುಟ್ಟುಕೊಂಡ ಮಗುವಲ್ಲವೇ?-ಬೆಂಕಿಯನ್ನು ಹೆದರದಿರಲು"

ರೌಳಪ್ಪನು ಅಲ್ಲಿಂದ ಯಾವಾಗ ಹೊರಟ?' ನನ್ನ ಪ್ರಶ್ನೆ

'ಅವರು ಕಾಶೀಯಾತ್ರೆಗೆ ಹೋದಾಗಲೇಯೋ, ಅದಕ್ಕಿಂತ ಕೆಲವು ದಿನಗಳ ಮೇಲೆಯೋ, ಸರಿಯಾಗಿ ಯಾರಿಗೂ ಗೊತ್ತಿಲ್ಲ, ಅಂತೂ ಆಮೇಲೆ ಇವನನ್ನು ಮಂಗಳೂರಲ್ಲಿ ಯಾರೂ ಕಾಣಲಿಲ್ಲ'

ಅವನು ಇಲ್ಲಿ ಹೆಂಡತಿ ಮಕ್ಕಳೊಂದಿಗೆ ಇರುವನಲ್ಲ, ಅವನಿಗೆ ಮದುವೆ ಅಲ್ಲೇ ಆಗಿತ್ತೇ?' ನಾನು ಕೇಳಿದೆ

"ಅಲ್ಲಿಂದ ಹೋಗುವಾಗ ಅವನಿಗೆ ಮದುವೆಯಾಗಿರಲಿಲ್ಲ ಇಲ್ಲೇ ಯಾರನ್ನಾದರೂ

'ಛೆ ಅದು ಹೇಗೆ? ಅವನ ಹೆಂಡತಿ ಅವನ ಭಾಷೆಯಲ್ಲೇ ಮಾತಾಡುತ್ತಿರುವಳು. ಅವನ ಜಾತಿಯ ಹೆಣ್ಣು ಇಲ್ಲಿ ದೊರೆಯುವುದು ತೀರ ಅಸಾಧ್ಯ' 'ನಾನೆಂದೆ

ಇಷ್ಟರಲ್ಲಿ ರೌಳಪ್ಪನು ಉಳಕೊಂಡಿದ್ದ ಕಟ್ಟೋಣವು ಕಂಡುಬರಲು ನಾವಿಬ್ಬರೂ ಅವನ ಕೊಠಡಿಯನ್ನು ಹುಡುಕಿಕೊಂಡು ಹೋದೆವು

೬

ರೌಳಪ್ಪನ ಕೊಠಡಿಯ ಪಕ್ಕಕ್ಕೆ ಕಾಲಿಡುವಾಗಲೇ ನಮಗೆ ಗಟ್ಟಿಯಾದ ಅಳು ಕೇಳತೊಡಗಿತು ಅವನ ಕೋಣೆಯನ್ನು ಹೊಗುತ್ತಲೇ ಅವನೂ, ಅವನ ಎರಡು ಮಕ್ಕಳೂ ಜೋರಿನಿಂದ ಅಳುತ್ತಿದ್ದುದು ಕಂಡುಬಂತು ರೌಳಪ್ಪನು ನಿಶ್ಚೇಷ್ಟಿತಳಾಗಿ ಬಿದ್ದಿದ್ದ ಲಕ್ಷ್ಮಿಯ ದೇಹದ ಮೇಲೆ ತಲೆಯನ್ನು ಬಡಿದುಕೊಳ್ಳುತ್ತಿದ್ದನು, ಮಕ್ಕಳು ಆ ದೇಹವನ್ನು ಅಪ್ಪಿಕೊಳ್ಳುತಿದ್ದುವು ಲಕ್ಷ್ಮಿಯ ಆಟವು ಮುಗಿದಿತ್ತೆಂದು ತಿಳಿಯಲು ನಮಗೆ ಹೆಚ್ಚು ವಿಳಂಬವಾಗಲಿಲ್ಲ

ಲಕ್ಷ್ಮಿಯ ಮುಖವನ್ನು ನೋಡುತ್ತಲೇ ನಾಮಣಿಯು ಹೌಹಾರಿ ಬಿದ್ದಿದ್ದನು. "ಎಲಾ! ಗೌರಿ!!" ಎಂಬ ಮಾತುಗಳು ಅವನ ಬಾಯಿಯಿಂದ ತಾವಾಗಿಯೇ ಬಂದುವು.

ನನಗೆ ಎಲ್ಲವೂ ಸ್ಪಷ್ಟವಾಯಿತು.

(೭ನೇ ಪುಟವನ್ನು ನೋಡುವುದು)

ಸ್ತನೋ ಸ್ತೇಧಃ

STHANO STHEDAH THE MALAYALA OUSHADHA Co.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಿಳಿಸಿ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವು—ಅವುಗಳು ಉಬ್ಬಿ ಗೋಲಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣಪರತ.

ಇದೆಲ್ಲವೂ ಮಲೆಯಾಳಿಗರ ರಹಸ್ಯಮಯ ಔಷಧವಾದ 'ಸ್ತನೋಸ್ತೇಧಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದಾರುಣವಾದ ಚಿಂತೆಯಿಂದಲೂ, ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲು ಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ**, ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು. ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪುಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿದವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ. 3 ನಂಬ್ರ 21. (ಹೊರಗೆ ಲೇಪಿಸುವ ಮದ್ದು) ರೂ. 3

ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.

1. ಮುಟ್ಟಿದೋಷ, 2. ಸಂತತಿ ಪ್ರತಿಬಂಧಕ, 3 ಧಾತುಪುಷ್ಟಿ, 4 ಲಿಂಗವೃದ್ಧಿ, 5. ಸ್ತ್ರೀರೋಗ, 6. ಕ್ಷಯ ಸಂಹಾರಿ, 7. ವಾತರೋಗ.

ಇಂಡಿಯನ್ ಎಂಪಾಯರ್ ಪ್ರದರ್ಶನ, ಬೆಂಗಳೂರು ಸಿಟಿ.

ಬರುವ ಎಪ್ರಿಲ್ ತಾ. 10ರಿಂದ 25ರ ವರೆಗೆ

ಎಲ್ಲರೂ ನಮ್ಮೊಡನೆ ಸಹಕರಿಸುವದಾಗಿ ಕೋರಿಕೆ.

ನೀವು ಇದರಲ್ಲಿ ಹೇಗೆ ಭಾಗವಹಿಸಬಹುದು?

ನಿಮ್ಮ ಸಾಮಾನುಗಳನ್ನು ತಂದು ನಮ್ಮ ಪ್ರದರ್ಶನವನ್ನು ಯಶಸ್ವಿಯನ್ನಾಗಿ ಮಾಡಬಹುದು.

ಆಗ ನಡೆಯುವ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಬರಬಹುದು.

ಆಗ ಜರಗಲಿರುವ ಪಂದ್ಯಾಟಗಳಲ್ಲಿ ಸೇರಿ ನಮ್ಮ ಕಾರ್ಯವನ್ನು ಚಂದಗಾಣಿಸಬಹುದು.

ಎಲ್ಲಾ ವಿಷಯಗಳಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ -

ಕಾರ್ಯದರ್ಶಿ, ನಂ. 1 ಆಲ್ಬರ್ಟ ವಿಕ್ಟರ್ ರೋಡ್, ಬೆಂಗಳೂರು ಸಿಟಿ.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ.	ರೂ. ಅ.
ಹೊಸ ರಾಶಿ ಅಕ್ಕಿ ...	3— 4	3— 10
ಹೊಸ ಮಸ್ಕತಿ ...	3—10	4— 2
ಗುಡ್ಡೆ ಸುಗ್ಗಿ ...	3— 8	3—14
ಊರ ಅವಲ್ ಬೆಸ್ತಿಗೆ ...	4— 0	1— 8
ರಂಗೂನು ಬೆ. ಗೋ. ಒಕ್ಕೆ ..	6— 4	7— 0
ಎಲ್ಲೂರು ಬೆ. ಮು. ಒಕ್ಕೆ...	4— 4	4— 8
ಗೋದಿ ಗೋಣಿ ಒಕ್ಕೆ .	8 — 8	10— 4
ತೊಗರಿ ಗೋಣಿ ಒಕ್ಕೆ ...	9 —0	9 — 8
ಹುರುಳಿ ಗೋಣಿ ಒಕ್ಕೆ ...	5— 4	6 — 0
ಕಡಲೆ ಗೋಣಿ ಒಕ್ಕೆ . .	7 — 4	9 — 8
ತೊಗರಿಬೇಳೆ ಗೋಣಿ ಒಕ್ಕೆ...	11— 0	15— 8
ಉದ್ದು ಗೋಣಿ ಒಕ್ಕೆ .	9— 8	10 — 0
ಹೆಸರು ಗೋಣಿ ಒಕ್ಕೆ ...	9— 4	9—12
ಊರುಬೆಲ್ಲ ಖಂಡಿ ಒಕ್ಕೆ ...	30— 0	35— 0
ಉಪ್ಪು ಗೋಣಿ ಒಕ್ಕೆ ...	4— 8	4— 8
ಕೊಬ್ಬರಿ ಖಂಡಿ ಒಕ್ಕೆ ...	60— 0	70— 0
ಕೊಬ್ಬರಿ ಹಿಂಡಿ ಖಂಡಿ ಒಕ್ಕೆ...	28— 0	29— 0
ಎಳ್ಳಿಂಡಿ ಖಂಡಿ ಒಕ್ಕೆ ..	83 —12	85— 0
ಕೊಬ್ಬರಿ ಎಣ್ಣೆ ಮಣ ಒಕ್ಕೆ...	5— 0	6— 0
ಎಳ್ಳೆಣ್ಣೆ ಮಣ ಒಕ್ಕೆ ...	7— 0	7— 0
ಚಿಮಣಿಎಣ್ಣೆ ಪೆಟ್ಟಿಗೆ ಒಕ್ಕೆ...	6— 5	6— 5
ಮೋರಿಸ ಸಕ್ಕರೆ ಮ. ಒಕ್ಕೆ...	3— 9	3 — 9
ಮೆಣಸು ...	2— 8	4— 0
ಸಾಸಿವೆ ಮುಡಿ ಒಕ್ಕೆ ...	5 — 8	6— 0
ಕಾಳುಮೆಣಸು ಖ ಒಕ್ಕೆ ...	102— 8	105—
ಯೇಲಕ್ಕಿಬೀಜ ಮಣ ಒಕ್ಕೆ...	38— 0	39— 0
ಗೇರುಬೀಜ ಮು. ಒಕ್ಕೆ ...	4— 6	4 — 8
ಕಬ್ಬಿಣ ಖಂಡಿ ಒಕ್ಕೆ ...	35— 0	37— 8
ತಾಂಬ್ರಕಗಡು ಮ. ಒಕ್ಕೆ...	9— 12	9— 14
ತಾಂಬ್ರಪಾತ್ರಗಳು ಮ. ಒಕ್ಕೆ	12— 8	14— 0
ಹಿತ್ತಾಳೆ ನೀರು ಒಕ್ಕೆ ...	17— 8	18— 0
ಹಿತ್ತಾಳೆ ಕಗಡು ಮ. ಒಕ್ಕೆ...	10— 0	10—
ಸತುವು ಒಕ್ಕೆ ...	22— 8	22— 8
ಹೊಗೆ ಸೊಪ್ಪು ಖಂಡಿ ಒಕ್ಕೆ	20— 0	25— 8
ನೇಟಿವ್ ಕಾಫಿ ಖಂಡಿ ಒಕ್ಕೆ	145— 0	150— 0
ಪ್ಲಂಟೇಶನ್ ಕಾಫಿ ಖಂಡಿ ಒಕ್ಕೆ ..	185— 0	190— 8
ಮುಡಿಕೇರಿ ಏಲಕ್ಕಿ ...	25— 0	26 — 1

Shiromani Narayanacharya & Co.,

Silk Lace & Cloth Manufacturers

Choukhamba Benares City

THIS MAN

OUR CUSTOMER

ಕೃಷ್ಣರಾಯರು — ಸ್ವಾಮಿ ಆನಂದರಾಯರೆ, ತಾವು ನಿಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು, ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು. ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು.

ಆನಂದರಾಯರು. ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ, ಸಾಕಾಗಿ, ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ.

ಕೃಷ್ಣರಾಯರು — "ಅದರ ಕ್ರಯವೆಷ್ಟು?"

ಆನಂದರಾಯರು — ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಮೆ ದರದಲ್ಲಿ ಸಿಕ್ಕಿತು. ತಾವು ಸಹ ಅಲ್ಲಿಗೆ ಬರೆದು ತರಿಸಿರಿ. ಕ್ರಯಕ್ಕೆ ತಕ್ಕ ಮಾಲು ಖಂಡಿತ ಸಿಕ್ಕು, ರಂಗು ಜೊದಲಾದ ಶೀರೆಗಳು ಸಿಗುತ್ತವೆ. 18 ಮೊಳ ಉದ್ದ 2½ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ. ದಡಲು ಬುಟ್ಟಿ ಇರುವುದು 18 ಮೊಳ ಶೀರೆ 1ಕ್ಕೆ ರೂ. 45ರಿಂದ 150ರ ವರೆಗೆ. 16 ಮೊಳ ದಡಲು ಇದ ಶೀರೆ 1ಕ್ಕೆ ರೂ. 10ರಿಂದ 55ರ ವರೆಗೆ ರವಿಕೆ ತುಂಡಕ್ಕೆ ರೂ 1-8-0ರಿಂದ 4ರ ವರೆಗೆ, ಬುಟ್ಟಿಹಾಕಿದ ರವಿಕೆ ಕಣ 1ಕ್ಕೆ ರೂ. 3ರಿಂದ 10ರ ವರೆಗೆ. 8 ಮೊಳದ ಧೋತರ ಮುಡಿ 1ಕ್ಕೆ ರೂ. 7ರಿಂದ 15ರ ವರೆಗೆ 8 ಮೊಳದ ಸರ ಮುಡಿ 1ಕ್ಕೆ ರೂ. 10ರಿಂದ 35ರ ವರೆಗೆ. 5 ಮೊಳದ ಪಂಚೆ 1ಕ್ಕೆ ರೂ. 4ರಿಂದ 16ರ ವರೆಗೆ. 6 ಮೊಳದ ಪಂಚೆ 1ಕ್ಕೆ ರೂ. 6ರಿಂದ 85ರ ವರೆಗೆ. ಬೇರೆಯೆಲ್ಲಾ ತರದ ಮಾಲುಗಳ ಕ್ರಯದ ಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ್ಟೆ 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.

ಅಲಭ್ಯ ಲಾಭ! ಸುವರ್ಣ ಸಂದರ್ಭ!

ಪ್ರಥಮ ಬಹುಮಾನ ರೂ. 5000 ಎರಡನೇ ಬಹುಮಾನ ರೂ. 2500

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

"ಗ್ರ್ಯಾಂಡ್ ವಿದ್ಯಾದಾಯಿನೀ ಸೋಟ್ರಿ"

ತೆಗೆಯುವ ತಾರೀಖು. 3-6-1936. ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ.

ಸೋಟ್ರಿಯ ಮೊಬಲಗು: ರೂ. 50,000.

ಒಟ್ಟು ಬಹುಮಾನಗಳ ಸಂಖ್ಯೆ: 1778. ಮೌಲ್ಯ ರೂ. 20,000.

ಸಂಪೂರ್ಣ ಪುಸ್ತಕಗಳನ್ನು ಮಾರುವವರಿಗೆ ಯಾ ಕೊಂಡುಕೊಳ್ಳುವವರಿಗೆ ವಿಶೇಷ ಬಹುಮಾನಗಳಿವೆ

ಸಂಪೂರ್ಣ ಪುಸ್ತಕಗಳನ್ನು ಮಾರಾಟ ಮಾಡುವವರಿಗೆ ಪ್ರತ್ಯೇಕ ನಗದಿ ಕಮಿಶನ್ ಕೂಡಾ ಇದೆ.

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಟಿಕೇಟು ಪುಸ್ತಕಗಳ ಮಾರಾಟಕ್ಕಾಗಿ ದಕ್ಷರೂ ಉತ್ಸಾಹಿಗಳೂ ಆದ ಏಜಂಟರು ಬೇಕಾಗಿದೆ.

ಹೆಚ್ಚಿನ ವಿವರಗಳಿಗೆ ಮತ್ತು ಪುಸ್ತಕಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್ — ಗ್ರ್ಯಾಂಡ್ ವಿದ್ಯಾದಾಯಿನೀ ಸೋಟ್ರಿ, ಸುರತ್ಕಲ್ (ದ. ಕ.)

ಎಚ್ಚರ!! — ಎಚ್ಚರ!!!

ರೋಗ ಬಂದ ಮೇಲೆ ನರಳಬೇಡಿರಿ!



ಸುಖಾನಂದ (ಗಂಡಸರಿಗೆ) ಸೊಗಸಾದ ರಬ್ಬರು ಸಾಧನ ರತಿ ಕ್ರೀಡೆಗೆ ಅತಂಕವಿಲ್ಲ. ಆದರೂ ಪ್ರೇಮಕರ, ಗರ್ಭೋತ್ಪತ್ತಿಯುಂಟಾಗದು. ಮೇಹ ರೋಗಗಳಂತೂ ಬರುವಂತೆಯೇ ಇಲ್ಲ.

ಬೆಲೆ 1ಕ್ಕೆ ರೂ. 1- 8-0

ಪೆಸಾರಿಸ್ (ಹೆಂಗಸರಿಗೆ) ಸರ್ವೋತ್ತಮವಾದ ರಬ್ಬರು ಸಾಧನ. ಗರ್ಭಧಾರಣವಾಗುವದಿಲ್ಲ. ಉಪಯೋಗಿಸುವಾಗ ಗೊತ್ತಾಗುವದಿಲ್ಲ. ಬಹುಕಾಲ ಬಾಳಿಕೆ ಬರುವುದು ಬೆಲೆ 1ಕ್ಕೆ ರೂ 2—4—0

ಆರ್ಡರಿನೊಡನೆ 4 ಆಣೆಯ ಸ್ಟಾಂಪಿರಬೇಕು.

ಸಿಗುವ ವಿಳಾಸ.— ಸ್ಟಾರ್ ಅಂಡ್ ಕಂಪೆನಿ,

ಕೃಷ್ಣಪ್ಪ ನಾಯಕನ ಟೇಂಕ್ ಬೀದಿ ಮದರಾಸು

೧೦೦ ರೂಪಾಯಿ ಬಹುಮಾನ

(ಮ್ಯಾಜಿಕ್ ಉಂಗುರ)

ಬಹು ಶಕ್ತಿಯುತವಾದುದು; ಅಲ್ಲದೆ ಕಾಂತಿಯುತವಾದುದು, ಬಹಳ ಕಷ್ಟಕರವಾದ ಕೆಲಸವೂ ಸುಲಭವಾಗಿ ಆಗುತ್ತದೆ ಇದು ನಿಮ್ಮ ಬಳಿ ಇದ್ದರೆ ನಿಮ್ಮ ಮನಸ್ಸು ಯಾರಲ್ಲಿ ನೆಟ್ಟಿದೆಯೋ, ಅವರು ಸುಲಭವಾಗಿ ವಶರಾಗುತ್ತಾರೆ. ಪರೀಕ್ಷೆಯಲ್ಲಿ ವಿಜಯವಾಗುತ್ತದೆ. ವ್ಯವಹಾರದಲ್ಲಿ ಜಯ. ಗಂಡು ಮಕ್ಕಳಾಗುತ್ತವೆ. ಧನ ಸಿಗುತ್ತದೆ. ರೋಗ ವಾಸಿಯಾಗುತ್ತದೆ. ಅಲ್ಲದೆ ಯಾವ ಕಾರ್ಯಕ್ಕೆ ಕೈಹಾಕಿದರೂ ಜಯವಾಗುತ್ತದೆ. ಇದರಿಂದೂ ಆಗುವುದಿಲ್ಲವೆಂದು ಸಿದ್ಧಾಂತ ಮಾಡುವವರಿಗೆ ಮೇಲ್ಕಂಡ ಬಹುಮಾನ, ಕ್ರಮವಿಲ್ಲ. ಇನ್ನೊಬ್ಬರಿಗೆ ದಾಸರರಾಗಿ ಬೇಕಾದ ಅವಶ್ಯಕವಿಲ್ಲ. ಇದು ನಿಮ್ಮ ಸಂಗಡ ಇದ್ದರೆ ಸಾಕು ಜಯ. ಬೆಲೆ ರೂ. ೨ ಮಾತ್ರ.

01.P.8	Bengal Mesmarism House
5-7	Panchpota, Bengal (s. n)

Notice.

In the Court of the Subordinate Judge of South Kanara.

O. S. No 102 of 1935.

Jaya Laxmi Bank Ltd. . . Plaintiff

Versus

1 Vasudeo Vittal Bhhu. 2. Shroff Shri Vallabha Shivappa Shet— Defendants.

Please take notice that the above mentioned suit filed for the recovery of Rs. 3,575—2—9; and costs etc due under a Promissory note dated 30—4—'35 is posted for trial and appearance of Defendants 1 and 2 before His Honour, The Sub Judge, Mangalore on 20-3-'36 and it will be disposed off exparte, if they fail to do so.

Mangalore, 29-2-1936 **U. RAMA RAO,** *Plaintiffs Vakil.*

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಫಾಲ್ಗುಣ ಶು॥ ೧೪ ಶನಿವಾರದಿಂದ ಫಾಲ್ಗುಣ ಬ॥ ೬ ಶುಕ್ರವಾರದ ವರೆಗಿನ ಪಂಚಾಂಗ. (೧೮೩೬ನೇಯ ಕುಂಭ ಮಾಯಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
7	ಶನಿ	೧೪	೬	ಮಖ	೧೬	೨೪	
8	ರವಿ	೧೫	೧೨	ಹುಬ್ಬ	೨೨	೨೫	
9	ಸೋಮ	೧	೧೬	ಉತ್ತರ	೨೮	೨೬	
10	ಮಂಗಳ	೨	೨೨	ಹಸ್ತ	೩೪	೨೭	
11	ಬುಧ	೩	೨೭	ಚಿತ್ರ	೪೧	೨೮	
12	ಗುರು	೪	೩೨	ಸ್ವಾತಿ	೪೬	೨೯	
13	ಶುಕ್ರ	೫	೩೫	ವಿಶಾಖಾ	೫೧	೩೦	

ಹೋಳಿಹುಣ್ಣಿಮೆ

ಜಿಲ್ಲಾ ಬೋರ್ಡಿನ ಅಧ್ಯಕ್ಷ ಚುನಾವಣೆ.

ಕಾರ್ಕಳದ ಶ್ರೀ। ಮಂಜಪ್ಪ ಅಡ್ಯಂತಾಯರನ್ನು ಜಿಲ್ಲಾ ಬೋರ್ಡಿನ ಸದಸ್ಯತನಕ್ಕೆ ಕಾಂಗ್ರೆಸ್ಸಿನ ಕಡೆಯ ಉಮೇದ್ವಾರರೆಂದು ಜಿಲ್ಲಾ ಸಿವಿಕ ಬೋರ್ಡಿನಲ್ಲಿ ನಾಮಕರಣವಾದಾಗ ಸಿವಿಕ್ ಬೋರ್ಡು ಮತ್ತು ಜಿಲ್ಲಾ ಬೋರ್ಡಿನಲ್ಲಿ ಕೊಂಗ್ರೆಸ್ ಪಾರ್ಟಿಯ ಭವಿಷ್ಯವೇನಾದೀತೆಂದು ಊಹಿಸಿದ್ದೆವೋ ಅದರಂತೆ ಈ ವರೆಗಿನ ಎಲ್ಲಾ ಘಟನೆಗಳು ನಡೆದು ಹೋದುವು. ಜಿಲ್ಲಾ ಬೋರ್ಡಿನ ಅಧ್ಯಕ್ಷ ಚುನಾವಣೆಯು ಕೂಡಲೇ ಆಗದ ಸಂಬಂಧ ವಿರೋಧವನ್ನು ಸೂಚಿಸಿ ಸಭಾ ಕಾರ್ಯವನ್ನು ಮುಂದರಿಸಿಡುವ ಠರಾವು ಜಿಲ್ಲಾ ಬೋರ್ಡಿನ ಕಳೆದ ಸಭೆಯಲ್ಲಿ ಬಂದಾಗ ಶ್ರೀ। ಅಡ್ಯಂತಾಯರು ತಮ್ಮ ಪಾರ್ಟಿಯ ನಿಯಮಕ್ಕೆ ವಿರೋಧವಾಗಿ ತಮ್ಮ ಮತವನ್ನು ಕೊಟ್ಟರು. ಆ ಕೂಡಲೇ ಸಿವಿಕ ಬೋರ್ಡು ಜಾಗ್ರತವಾಗಿ ತನ್ನ ಸ್ಥಾನಮಾನಗಳನ್ನು ಕಾಯ್ದುಕೊಳ್ಳುವುದ ಕ್ಕೋಸ್ಕರ ತನ್ನ ಪಾರ್ಟಿಯೊಳಗಣ ಗೋಮುಖ ವ್ಯಾಘ್ರರನ್ನು ಪಾರ್ಟಿಯಿಂದ ಹೊರ ಹಾಕಿ ತಿಸ್ತು ವ್ಯವಸ್ಥೆಗಳನ್ನು, ಕಾಪಾಡುವ ಉಚಿತ ಏರ್ಪಾಡು ಮಾಡಿದ್ದರೆ, ಈಗ ಜಿಲ್ಲಾ ಬೋರ್ಡಿನಲ್ಲಿ ಕೊಂಗ್ರೆಸ್ ಪಕ್ಷಕ್ಕೆ ಸುಮಾರು ೩ ವೋಟುಗಳ ಬಹುಮತವಿದ್ದು, ಆ ಪಾರ್ಟಿಯಿಂದ ನಿಯೋಜಿತರಾದ ಶ್ರೀ ... ಶೆಟ್ಟರು ಅಧ್ಯಕ್ಷಸ್ಥಾನದ ಚುನಾವಣೆಯಲ್ಲಿ ಸೋಲುವ ಪ್ರಸಂಗವಿರುತ್ತಿದ್ದಿಲ್ಲ. ಶ್ರೀ। ಶಿವರಾಯರು ಕೊಂಗ್ರೆಸ್ ಪಾರ್ಟಿಯ ಕಡೆಯು ದ ಉಪಾಧ್ಯಕ್ಷಸ್ಥಾನಕ್ಕೆ ನಿಯೋಜಿತರಾಗಿದ್ದರೂ ಚುನಾವಣೆಯ ಕಾಲದಲ್ಲಿ ಮಾತ್ರ ಅವರೇಕೆ ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದರೋ ಇದೂ ಒಂದು ಸಖೇದಾಶ್ಚರ್ಯಕರ ಸಂಗತಿಯಾಗಿದೆ. ಜಿಲ್ಲೆಯಲ್ಲಿ ಅಲ್ಲಲ್ಲಿ ವರ್ತಮಾನ ಪದ್ಧಂತೆ, ಕೊಂಗ್ರೆಸ್ ಪಾರ್ಟಿಗೆ ಜಿಲ್ಲಾ ಬೋರ್ಡಿನಲ್ಲಿ ಸೋಲು ಹೇಗೆ ಆಗಬೇಕಿತ್ತೋ ಹಾಗೆ ಆಗಿಹೋಯಿತು. ಜಾತಿ ಅಭಿಮಾನ, ವ್ಯಕ್ತಿ ಪ್ರತಿಷ್ಠೆ, ಅಧಿಕಾರ ಮದ ಮೊದಲಾದ ಕಾರಣಗಳಿಂದ ಉಂಟಾದ ಪಾಳೆಯ ಕೊಳಗಣ ಕಚ್ಚಾಟದ ಕಿಚ್ಚು ಪ್ರಜ್ವಲಿಸಿ, ಪಾರ್ಟಿಯ ಅಸ್ತಿತ್ವವನ್ನೇ ಸುಟ್ಟು ಬಿಸ ಮಾಡಿತು. ಇನ್ನು ಮುಂದೆ ನಮ್ಮ ಜಿಲ್ಲೆಯಲ್ಲಿ ಯಾರೂ ಕೊಂಗ್ರೆಸ್ ಪಾರ್ಟಿ ಕಟ್ಟಿಕೊಂಡು ಚುನಾವಣೆಗೆ ನಿಲ್ಲದಂತಾಯಿತು. ಕೊಂಗ್ರೆಸ್ಸಿನ ಸ್ಥಾನಮಾನ ಗೌರವಗಳಿಗೂ ಕುಂದುಂಟಾಯಿತು. ಜಾತಿ ಅಭಿಮಾನ, ವ್ಯಕ್ತಿಸ್ವಾರ್ಥ ಅಧಿಕಾರ ಮದಗಳಿಲ್ಲದ ಕೊಂಗ್ರೆಸ್ ಅಭಿಮಾನಿಗಳನ್ನೇ ಚುನಾವಣೆಗೆ ನಿಲ್ಲಿಸುವ ಮುಂದಾಲೋಚನೆ ಸೂಕ್ಷ್ಮಾಲೋಚನೆಗಳನ್ನು ಸಿವಿಕ್ ಬೋರ್ಡು ಮಾಡಿದ್ದರೆ, ಅವಕ್ಕೂ ಜಿಲ್ಲೆಯ ಕೊಂಗ್ರೆಸ್ಸಿಗೂ ಇಂತಹ ದುರ್ಗತಿಯೂ, ದುಷ್ಕೀರ್ತಿಯೂ ಪ್ರಾಪ್ತವಾಗುತ್ತಿರಲಿಲ್ಲ

ಈಗ ಸಿವಿಕ್ ಬೋರ್ಡು ಮಾಡಬೇಕಾದ ಕರ್ತವ್ಯವು ಸ್ಪಷ್ಟವಾಗಿದೆ. ಜಿಲ್ಲಾ ಬೋರ್ಡಿನ ಕೊಂಗ್ರೆಸ್ ಪಾರ್ಟಿಗೆ ಸೇರಿದ ಬಹುರೂಪೀ ಸಾಧುಗಳ ಪರಿಚಯವು ಅದಕ್ಕೆ ಈಗಾಗಲೇ ಉಂಟಾಗಿದೆ. ಆದರೆ ಅವರನ್ನು ಯಾವ ಸರ್ಕಲಿನವರು ಹೇಗೆ ಚುನಾಯಿಸಿ ಮೋಸಹೋದರೆಂದ ತಿಳಕೊಳ್ಳುವ ಕುತೂಹಲವು ಜಿಲ್ಲೆಯ ಪ್ರತಿಯೊಬ್ಬ ಮತದಾರನಿಗೂ ಇರುವುದು. ಇಂಥ ಮೋಸದಿಂದ ಒಂದ ಪಾಠ ಕಲಿತು ಮುಂದಿನ ಚುನಾವಣೆಗಳಲ್ಲಾದರೂ ಮತದಾರರ ಜಾಗ್ರತರಾಗಿರ ನಂತೆ ಈ ಬಹುರೂಪೀ ಸಾಧುಗಳ–ಗೋವ್ಯಾಘ್ರರ ಪರಿಚಯವು ಮತದಾರರಿಗೂ ಆಗುವದಾವಶ್ಯಕ. ತಮ್ಮ ನಿಸ್ಪೃಹತೆಯನ್ನೂ ಕೊಂಗ್ರೆಸ್ಸಿನ ಮೇಲೆ ತಮಗಿರುವ ನಿಸ್ಸೀಮ ಭಕ್ತಿ ವಿಶ್ವಾಸ ಆದರಗಳನ್ನೂ ಪ್ರಕಟಪಡಿಸುವುದಕ್ಕೋಸ್ಕರ ಕೊಂಗ್ರೆಸ್ಸಿನ ಟಿಕೇಟಿನ ಮೇಲೆ ಜಿಲ್ಲಾ ಬೋರ್ಡಿಗೆ ಚುನಾವಣೆ ಹೊಂದಿದ ಸದಸ್ಯರ ಕೂಡಲೇ ತಮ್ಮ ಸದಸ್ಯತನಕ್ಕೆ ರಾಜಿನಾಮೆಯನ್ನು ಕೊಟ್ಟು ಹೊರಬರುವಂತೆ ಸಿವಿಕ್ ಬೋರ್ಡು ನಿರ್ಣಯ ಮಾಡಿ ಅವರಿಗೆ ಸೂಚಿಸಬೇಕು. ಆಗ ಅಂತರಂಗ ಬಹಿರಂಗಗಳಲ್ಲಿ ಕೊಂಗ್ರೆಸ್ಸವಾದಿಗಳಾಗಿದ್ದವರು ರಾಜಿನಾಮೆ ಕೊಡಲಿಕ್ಕೆ ಹಿಂದುಮುಂದೆ ನೋಡಲಾರರು. ಅವರಿಗೆ ಕೊಂಗ್ರೆಸ್ ಹಿತ ಸ್ವಾರ್ಥವಲ್ಲದೆ ಜಿಲ್ಲಾ ಬೋರ್ಡಿನಲ್ಲಿ ಯಾವ ಸ್ವಾರ್ಥವೂ ಇರುವುದಿಲ್ಲ. ಅಂಥವರು ರಾಜಿನಾಮೆ ಕೊಟ್ಟು ಪುನಃ ಚುನಾವಣೆಗೆ ನಿಂತದ್ದಾದರೆ ಅವರಿಗೆ ವಿಜಯ ಸಿಕ್ಕಿಯೇ ಸಿಕ್ಕುವುದು. ಸ್ವಾರ್ಥಿ ಬಹುರೂಪೀ ಸಾಧುಗಳು ಮಾತ್ರ ಜಿಲ್ಲಾ ಬೋರ್ಡಿನಲ್ಲಿ ಉಳಿಯುವರು ಉಳಿದುಕೊಳ್ಳಲಿ, ಅವರ ವಿಷಯ ಹೇಗೆ ನಡೆಕೊಳ್ಳಬೇಕೆಂಬುದನ್ನು ಮತದಾರರು ಹಿಂದಿನಿಂದ ಆಲೋಚಿಸುವರು. ನಮಗೆ ಜಿಲ್ಲಾ ಬೋರ್ಡಿನಲ್ಲಿ ನಾಮಪೂರ್ತಿಯ ಕೊಂಗ್ರೆಸ್ ಬಹುಮತದ ಅಗತ್ಯವಿರುವುದಿಲ್ಲ. ಅಂಥ ನಾಮಪೂರ್ತಿಯ ಬಹುಮತವುಳ್ಳ, ಗಾಳಿ ಬಂದಂತೆ ಹಾಯಿ ಬಿಡಿಸುವ ಕೊಂಗ್ರೆಸ್ ಸದಸ್ಯರಿಂದ ಬೋರ್ಡಿನಲ್ಲಿ ಯಾವ ಪುರುಷಾರ್ಥ ಸಾಧನೆಯೂ ಆಗಲಾರದು. ಪುತ್ಥಳಿ ಚಿನ್ನದಂತೆ ಶುದ್ಧ ಕೊಂಗ್ರೆಸ್ ಮೆಂಬರನು ಜಿಲ್ಲಾ ಬೋರ್ಡಿನಲ್ಲಿ ಒಬ್ಬನೇ ಒಬ್ಬನಿದ್ದರೂ ಅವನ ಕಾರ್ಯದಿಂದ ಬೋರ್ಡು ಕಟ್ಟಡದ ಮೇಲೆ ಕೊಂಗ್ರೆಸ್ಸಿನ ಕೀರ್ತಿಧ್ವಜವು ಹಾರಾಡುವುದು. ಗಿಲೀಟು ಕೊಂಗ್ರೆಸ್ ವಾಲರಿಂದ ಏನಾಗಬೇಕು?

ಆದ್ದರಿಂದ ಸಿವಿಕ್ ಬೋರ್ಡು ನನ್ನ ಸೂಚನೆಯನ್ನು ಮನ್ನಿಸುವುದಾಗಿ ನಂಬಿದ್ದೇನೆ. ಅದು ತನ್ನ ಕಡೆಯ ಜಿಲ್ಲಾ ಬೋರ್ಡು ಸದಸ್ಯರೆಲ್ಲರೂ ಒಮ್ಮೆಗೇ ರಾಜಿನಾಮೆ ಕೊಟ್ಟು ಹೊರಗೆ ಬರುವಂತೆ ಅವರಿಗೆ ನೋಟೀಸು ಕೊಡಬೇಕು. ಮುಂದಿನ ಕಾರ್ಯಕ್ರಮವೇನಾಗಬೇಕೆಂದು ಹಿಂದೆ ಆಲೋಚಿಸೋಣ.

ಸಿ. ಮಂಜುನಾಥ ಕಾಮತ್

ಎಲ್ಲಾ ಔಷಧಿಗಳು ಸೋತ ಮೇಲೆ ಅಜೀರ್ಣರೋಗವು ಗುಣವಾಯಿತು

ನಿಮ್ಮ ವರ್ಷಗಟ್ಟಲೆಯಾಗಿ ಅನಭವಿಸುತ್ತಿರುವ ಅಜೀರ್ಣರೋಗದ ಬಾಧೆಯಿಂದೆಯಾದರೆ ನಿಮಗೆ ಗುಣ ಕೊಡುವ ಯಾವ ಔಷಧವು ಇಲ್ಲವಾದರೆ ಕೊನೆಯ ದ್ಯಾಗ ಉಪಯೋಗಿಸಿದ ಒಂದು ಔಷಧಿಯು ಒಂದೇ ಡೋಜು ನಿಮ್ಮನ್ನು ಗುಣಪಡಿಸಿತೆಂದು ಕಂಡುಬಂದರೆ ಅದೆಂದು ಅದ್ಭುತವಲ್ಲವೇ?

ಆದೀಗ ಒಬ್ಬನಿಗಾಗಿದೆ. ಅವನು ನಮಗೆ ಬರೆದಿರುವನು. ಆತನ ಸುದಿಗಳನ್ನೇ ಓದಿ. ನನಗೆ ಗುಣ ಕೊಟ್ಟದ ಮೆಕ್‌ಲೀನ್ ಬ್ರೇಂಡ್ ಸ್ಟೊಮೆಕ್ ಪೌಡರ್ ಒಂದೇ ... ಅಜೀರ್ಣರೋಗದಿಂದ ನಾನು ... ಅಜೀರ್ಣರೋಗನಿವಾರಕ ವಾದ ಎಲ್ಲಾ ಔಷಧಿಗಳನ್ನು ಉಪಯೋಗಿಸಿದೆ. ಆದರೆ ಸಂತೃಪ್ತಿಕರ ಪರಿಣಾಮವು ದೊರೆಯಲಿಲ್ಲ. ಮೆಕ್‌ಲೀನ್ ಬ್ರೇಂಡ್ ಸ್ಟೊಮೆಕ್ ಪೌಡರನ್ನು ಕೆಲವು ವಾರಗಳ ಹಿಂದೆ ಪ್ರಾರಂಭಿಸಿದೆ. ಅದರ ಪರಿಣಾಮವು ಅತ್ಯದ್ಭುತಕರ. ಈಗ ನಾನು ನನ್ನ ದೀರ್ಘ ಸಮಯದ ರೋಗಸಂಹಾರಕ ಔಷಧಿಯನ್ನು ಕಂಡುಹಿಡಿದಿರುವೆನು.

ನೀವು ಅಜೀರ್ಣದಿಂದಾಗಲೀ ಉದರವೇದನೆಯಿಂದಾಗಲೀ ಬಳಲುತ್ತಿರುವುದಾದರೆ ನಿಮಗೆ ಕೂಡಾ ... ದೊರೆತಷ್ಟೇ ಗುಣವು ದೊರೆಯುವುದೆಂಬುದನ್ನು ಮರೆಯಬೇಡಿ. ಆದರೆ ನಿಮ್ಮ ಕೆಮಿಸ್ಟರಿಂದ ... ಮೆಕ್‌ಲೀನ್ ಬ್ರೇಂಡ್ ಸ್ಟೊಮೆಕ್ ಪೌಡರನ್ನೇ ಕೇಳಿರಿ. ಅದರಲ್ಲಿ ಒಂದು ಕೆಂಪು ಮುದ್ರೆ ಇದೆ ಮುದ್ರೆಯ ...

Alex. C. Maclean

... ಎಂಬ ದಸ್ಕತು ಇದೆ. ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವದೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೨ ಸಂಕರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸ,

ಇಲ್ಲಿಗೆ ಬರೆಯಿರಿ



(ಹಿಂದೆ ಪುಟದಿಂದ ಮುಂದುವರಿದುದು)

ನಾಮಣಿಯ ಮಾತುಗಳೂ, ನಡತೆಯೂ ಗೌಳಪ್ಪನ ಲಕ್ಷ್ಯವನ್ನು ಸೆಳೆಯದಿರಲಿಲ್ಲ

"ಅಪ್ಪಾ! ನನ್ನ ಲಕ್ಷ್ಮಿ ಮರೆಯಾದಳು. ಇನ್ನು ನನ್ನ ಗುಟ್ಟು ರಟ್ಟಾದರೆ ದೊಡ್ಡದಲ್ಲ. ನೀವು ಹೇಳಿದ್ದು ಸರಿ. ಈಕೆ ಗೌರಿ ಎಂಬುದು ನಿಜ. ಅಯ್ಯೋ ಗೌರಿ! ಅಯ್ಯೋ ಲಕ್ಷ್ಮಿ! ನನ್ನ ಕೈ ಬಿಟ್ಟೆಯಾ?" ಎಂದು ಹಲುಬಿದನು

"ಹಾಗಾದರೆ ಅವಳು ಗಂಗೆಯಲ್ಲಿ ಜಾರಿ ಬಿದ್ದುದು ಸುಳ್ಳು" ನಾನು ನಾಮಣಿಯೊಡನೆ ಎಂದೆ

"ಅಪ್ಪಾ! ಅವಳು ಗಂಗೆಯಲ್ಲಿ ಬಿದ್ದುದು ಸುಳ್ಳಲ್ಲ, ನಿಜ. ಆದರೆ, ಜಾರಿ ಬಿದ್ದುದಲ್ಲ, ಅವಳ ಆ ಗಂಡನಿಂದ ವಂಚಿಸಿದೂಡಲ್ಪಟ್ಟು ಬಿದ್ದುದು. ಆ ದುಷ್ಟ, ಚಂಡಾಲ ಶಂಕರನಿಂದಲೇ ಇಷ್ಟೆಲ್ಲಾ ಆದದ್ದು. ಅವನಿಂದಲೇ ನನ್ನ ಲಕ್ಷ್ಮಿ ನನ್ನನ್ನು ಬಿಟ್ಟುಹೋದಳು. ಅಯ್ಯೋ! ಹಾಯ್" ಎಂದು ಅತ್ತನು.

"ಹಾಗಾದರೆ ಅವಳು ನಿನಗೆ ಹೇಗೆ ಸಿಕ್ಕಿದಳು?" ನಾವಿಬ್ಬರೂ ಒಟ್ಟಿಗೆ ಕೇಳಿದೆವು

"ಶಂಕರನು ಮೋಸ ಮಾಡುವ ಇರಾದೆಯಿಂದಲೇ ಅವಳನ್ನು ಕಾಶಿಗೆ ಒಯ್ಯುವನೆಂದು ನನಗೂ, ಗೌರಿಗೂ ಅನುಮಾನವಿತ್ತು. ಹಾಗಾಗಿ ನಾನೂ ಅವಳ ಅಪೇಕ್ಷೆಯಂತೆ ಅವರನ್ನು ಹಿಂಬಾಲಿಸಿಕೊಂಡೆ ಬಂದು. ಎನಾದಿಗೂ ತಿಳಿದಂತೆ ಗೌರಿಯು ಜಾಗ್ರತೆ ತಗೆದುಕೊಳ್ಳದಾಗಿ ... ದಿನ ... ಅವಳನ್ನು ಗಂಗಾನದಿಗೆ ತಳ್ಳಿ ... ದನು. ಇನ್ನು ತನ್ನ ಕಂಟಕ ಪರಿಹಾರವಾಯಿತೆಂದೂ, ಯಾರಾದರೂ ತನ್ನ ಕೆಲಸವನ್ನು ಕಂಡಿದ್ದರೆ ಮೋಸವಾದೀತೆಂದೂ ಎಣಿಸಿ ಹಿಂದೆಮುಂದೆ ನೋಡದೆ, ಅಲ್ಲಿಂದ ಪರಾರಿಯಾದನು. ನಾನು ಆಗ ಹತ್ತಿರವೇ ಇದ್ದು ಅವಳನ್ನು ಪ್ರಯತ್ನವನ್ನು ಒದಗಿಸಿದೆ. ಅದು ಫಲವಾಗಿ ಇಷ್ಟು ದಿನ ನಿಂವು ಗ ಇಷ್ಟೆ ... ಕಳೆದೆವು. ಇನ್ನು ಹಾಗಿರುವುದು ದೇವರ ... ನಲ್ಲವೆಂದ ಕಾಣುತ್ತದೆ ... ಅತನ ಇಚ್ಛೆ" ಎಂದು ತತ್ತರಿಸಿದನು.

"ಹಾಗಾದರೆ ಇನ್ನೆಲ್ಲಿ ಹೇಳು?" ನಾವಿಬ್ಬರೂ ಒಂದಾಗಿ ಎಂದೆವು

ಬರುವ ವಾರ

ಮಿಥ್ಯಾಜೀವನದ ಸತ್ಯಕಥೆಗಳು:

೮ "ಮಾಯಾ ಜಾಲ"

ಓದಲು ಮರೆಯಬೇಡಿ

ಚಿಕ್ಕ ಮಕ್ಕಳು ಅಳುವುದೇಕೆ?

ಎಂಬುದನ್ನು ತಿಳಿಯದೆ, ಅನೇಕ ಹೆತ್ತವರು, ತಮಗಿಚ್ಛೆ ಬಂದಂತೆ ಅವುಗಳನ್ನು ಸಮಜಾಯಿಸಲು ನೋಡುವರು.

ಅವುಗಳಿಗೆ ಅಜೀರ್ಣವಿದೆ ಉದರಶೂಲೆ ಇದೆ–
ಅಮವಾತದ ಉಪದ್ರವೂ ಇರಬಹುದು–

ಎಂಬುದನ್ನು ಬಲ್ಲಿರಾ?

ಬೆಬೂಲಿನ್

ಇದು ಚಿಕ್ಕ ಶಿಶುಗಳಿಗಾಗಿಯೇ ತಯಾರಿಸಲ್ಪಟ್ಟುದ. ಸೋಡಿಯಮಿನ ಅಲ್ಕಲಾಯಿನ್ ಲವಣ, ಮೆಗ್ನೆಶಿಯಮ್, ಪೊಟೇಶಿಯಮ್, ಮತ್ತು ಓಡಿಶೇಪ, ಓಮ ಮತ್ತು ಮೆಂಥಲ್ ಇವುಗಳ ಮಧುರವೂ ರುಚಿಕರವೂ ಆದ ಮಿಶ್ರಣದಿಂದ ತಯಾರಿಸಲ್ಪಟ್ಟಿವೆ. ಚಿಕ್ಕ ಮಕ್ಕಳ ಉದರಶೂಲೆಯನ್ನು ನಿವಾರಿಸಿ, ಮಕ್ಕಳ ಕರುಳುಗಳನ್ನು ಸ್ವಚ್ಛವಿರಿಸಿ, ಬಲಗೊಳಿಸಿ ಕಾಪಾಡುವುದು

ವಾಂತಿ, ನಾಯಿಕೆಮ್ಮು–ಇವುಗಳಿಗೂ ಉಪಯೋಗಿಸಲ್ಪಡಬಹುದಾದ ಅಮೂಲ್ಯ ಔಷಧ. ಮಕ್ಕಳಿಗೆ ಹಲ್ಲು ಮೂಡುವ ಕಾಲದಲ್ಲಾಗುವ ವಿಕಾರಗಳನ್ನೆಲ್ಲ ನಿಲ್ಲಿಸುವುದು. ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ! ಅನುಪಾನ ಪತ್ರ, ಸೀಸೆಯೊಂದಿಗಿದೆ.

ಬೊಂಬಾಯಿಯ ಬೇಬ್ ಕೆಮಿಕಲ್ ವರ್ಕ್ಸನವರು ತಯಾರಿಸಿದ್ದು

ದಕ್ಷಿಣ ಕನ್ನಡ ಜಿಲ್ಲೆಗೆ ಏಜಂಟರು:–ಪೋಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು.

ಶುದ್ಧೀಕರಿಸಿದ

ಸ್ವಸ್ತಿಕಾ ಪ್ರೊಪ್ರಿಯಟರ್

... ಶುದ್ಧೀಕರಿಸಿದ ... ಇದು ... ಉಪಯೋಗಿಸುವದೆ ... ಗುಣಗಳೆಲ್ಲ ...

ದಿ ಸ್ವಸ್ತಿಕಾ ಓಯಿಲ್ ಮಿಲ್ಸ್,

ಲಿಮಿಟೆಡ್, ವಡಾಲಾ ಬೊಂಬಾಯಿ ೧೦

(೩ನೇ ಪುಟದಿಂದ ಮುಂದುವರಿದುದು)

ರನ್ನು ಸುಧಾರಿಸಲು, ಯಾರೂ ಮುಂಬರುತ್ತಿರಲಿಲ್ಲ. ಹೊಲೆಯರು ಹೊಲೆಯರಾಗಿಯೇ ಬೆಳೆಯಬೇಕಾಯಿತು. ಕಸ ಕಡ್ಡಿಗಳನ್ನು ಗುಡಿಸುವುದೆ ಇತ್ಯಾದಿ ಹಾಳು ವೃತ್ತಿಗಳನ್ನು ಇವರು ಅನುಸರಿಸಬೇಕಾಯಿತು. ಶ್ರೀ ರಾಮಕೃಷ್ಣರು, ಹೊಲೆಯರ ಸೇವಾ ಕಾರ್ಯವನ್ನು ಕೈಕೊಂಡರು. ಅವರ ಮನೆಗಳನ್ನು ಗುಡಿಸುವುದು ಇತ್ಯಾದಿ ಅವರ ಸೇವಾಚರಣೆ ಮಾಡತೊಡಗಿದರು. ಬ್ರಾಹ್ಮಣರು ಹೊಲೆಯರ ಕೆಲಸ ಮಾಡಿದರೆ, ಹೊಲೆಯರು ನಾಶ ಹೊಂದುವರೆಂದು ಆಗಿನ ನಂಬಿಕೆ. ಆದುದರಿಂದ ಹೊಲೆಯರು ಶ್ರೀ ರಾಮಕೃಷ್ಣರಿಗೆ ಆ ತರದ ಕೆಲಸಗಳನ್ನು ಮಾಡಲಿಕ್ಕೆ ಬಿಡುತ್ತಿರಲಿಲ್ಲ. ಆದರೂ ಶ್ರೀ ರಾಮಕೃಷ್ಣರು ರಾತ್ರಿ ಅವರು ಮಲಗಿದ ಸಮಯ, ತಮ್ಮ ಕೂದಲುಗಳಿಂದ ಅವರ ಮನೆಗಳನ್ನೂ ಪಟಾರಗಳನ್ನೂ ಗುಡಿಸಿ, ಶುಚಿಮಾಡುತ್ತಿದ್ದರು.

ಇದೆ ರೀತಿಯಲ್ಲಿ, ತನ್ನ ಪವಿತ್ರ ಜೀವಮಾನಕ್ಕಾಗಿ ಅನೇಕ ಸಿದ್ಧತೆಗಳನ್ನು ಮಾಡಿದರು. ಅವುಗಳನ್ನಿಲ್ಲಿ ವಿವರಿಸಲಸಾಧ್ಯ. ಪ್ರಥಮತವಾಗಿ ಇಂದ್ರಿಯ ಬೇಧ ಭಾವನೆಯನ್ನು ತನ್ನಿಂದ ತೊರೆದುಬಿಟ್ಟರು ಇದೇ ರೀತಿಯಲ್ಲಿ ಹಲವು ಸಾಧನೆಗಳನ್ನು ನಡೆಸಿ ಪವಿತ್ರತೆಯನ್ನು ಪಡೆದರು ತನ್ನ ಜೀವಮಾನದ ಮುಕ್ಕಾಲಂಶವನ್ನು ಅಧ್ಯಾತ್ಮಿಕ ರತ್ನಗಳನ್ನು ಪಡೆಯಲು ಕಳೆದರು ಅವುಗಳನ್ನು ನಮಗೆ ಕೊಡುವವರಾದರು. ಶ್ರೀ ರಾಮಕೃಷ್ಣರು ಒಂದು ಮಹಾ ತತ್ವಬೋಧೆಗಳಾದರು "ನನ್ನ ಬಾಯಿಯಿಂದ ಬರುವ ಮಾತುಗಳು ನನ್ನದಲ್ಲ ಅವುಗಳು ಆ ಮಹಾತಾಯಿಯ ವಚನಗಳು" ಎಂಬುದು ಅವರ ಭಾವನೆ ಈ ವಿಚಾರದಲ್ಲಿ ಈ ಭಾವನೆಯು ಅವರಲ್ಲಿ ಅಂತ್ಯದ ತನಕ ವಿತ್ತು "ತಾವರೆಯು ಅರಳಿದರೆ, ಅದರಲ್ಲಿರುವ ಮಧುರ ರಸವನ್ನು ಹೀರಲು, ಭ್ರಮರಗಳು ತಮ್ಮಷ್ಟಕ್ಕೇನೆ ಬರುವುವು ಅಂತೆಯೆ, ಒಬ್ಬ ಮನುಷ್ಯನ ಗುಣವೆಂಬ ತಾವರೆಯು ವಿಕಾಸವಾದರೆ, ಪ್ರತಿಫಲಗಳು ತನ್ನಷ್ಟಕ್ಕೆನೆ ಉಂಟಾಗುವುವು" ಎಂದು ಶ್ರೀ ಗುರುಗಳ ಮಾತು ಈ ತತ್ವವು ಅವರ ಎಲ್ಲಾ ಬೋಧೆಗಳಲ್ಲಿ ಪ್ರತಿಫಲಿಸುತಿತ್ತು ಒಬ್ಬ ಮನುಷ್ಯನಲ್ಲಿ ಎಲ್ಲಾ ಉತ್ತಮ ಗುಣಗಳು ಮಿಶ್ರವಾಗಿ, ಜನತೆಯ ಉದ್ಧಾರಕಾರ್ಯವು ನಡೆಯಬೇಕೆಂದು ಶ್ರೀ ರಾಮಕೃಷ್ಣರ ಬೋಧೆ- ಅವರ ಜೀವಮಾನವು ಅದೇ ತರದ್ದಾಗಿತ್ತು ಯಾರನ್ನೂ ಅವರು ಇಷ್ಟರ ತನಕ ದೂಷಿಸಿದಿಲ್ಲ ಎಲ್ಲರಲ್ಲೂ ಒಳ್ಳೆದನ್ನು ಕಾಣುವವರಾದರು

ಇಷ್ಟರೊಳಗೆ, ಇವರ ಪ್ರತಿಭೆಯ ಕಿರಣಗಳು,ಸುತ್ತುಮುತ್ತಲಿಗೆ ಹರಡಲಾರಂಭಿಸಿದ್ದವು ಅಸಂಖ್ಯಾತ ಜನರು ಇವರ ದರ್ಶನಕ್ಕೆ ಬರುವವರಾದರು ಪ್ರಕಾಶಮಾನವಾದ ಇವರ ನುಡಿಗಳು ಇವರನ್ನು ಶ್ರೀ ಗುರುಗಳ ಕಡೆಗೆ ಆಕರ್ಷಿಸುವಂತೆ ಮಾಡಿದುವು ಶ್ರೀ ರಾಮಕೃಷ್ಣರಲ್ಲಿ ಒಂದು ತರದ ದೈವ ಶೋಭೆಯು ಉಂಟಾಯಿತು ಗುರುಗಳು ಕಲ್ಕತ್ತಾದ ಸಮೀಪದಲ್ಲಿ ವಾಸ ಮಾಡಲು ಹೋದರು. ವಿಶ್ವವಿದ್ಯಾಲಯದ ಕೇಂದ್ರಸ್ಥಳವಾಗಿದ್ದು ಅನೇಕ ವಿದ್ಯಾ ಕುಶಲರಾದ, ಪ್ರಸಿದ್ಧ ಪುರುಷರಿಂದ ಕೂಡಿದ ಈ ಊರಿನ ಮೇಲೂ, ಶ್ರೀ ಗುರುಗಳ ಪ್ರತಿಭೆಯು ಹೊಳೆಯಲಾರಂಭಿಸಿತು ಶ್ರೀ ಗುರುಗಳನ್ನು ವಂದಿಸಲು, ಇವರ ಅತ್ಯಂತ ರುಚಿಕರವಾದ ಬೋಧನಾಮೃತವನ್ನು ಸೇವಿಸಲು, ಕಲ್ಕತ್ತಾದ ಅನೇಕ ಮಹದ್ ಪುರುಷರು ಹೋಗುವವರಾದರು. (ಇಲ್ಲಿ ಸ್ವಾಮಿ ವಿವೇಕಾನಂದರ ಸಂದರ್ಶನವಾಯಿತು ಶ್ರೀ ವಿವೇಕಾನಂದರು ಇವರ ಶಿಷ್ಯರಾದರು) "ದೇವರಿರುವನೇ" ಎಂದು ವಿವೇಕಾನಂದರು ಕೇಳಿದ ಪ್ರಶ್ನೆಗೆ "ಇರುವನು" ಎಂದು ಉತ್ತರವಿತ್ತರು ಅದನ್ನು ಹೇಗೆ ವ್ಯಕ್ತಪಡಿಸುತ್ತೀರಿ ಎಂದು ಕೇಳಲಾಗಿ, "ನಾನು ಅವನನ್ನು ನಿನ್ನನ್ನು ಕಾಣುವಂತೆ ಕಾಣುತ್ತಿದ್ದೇನೆ" ಎಂಬ ಉತ್ತರವು ಅವರಿಂದ ಬಂತು ಈ ಮಾತುಗಳು ವಿವೇಕಾನಂದರನ್ನು ವಿವೇಕಗೊಳಿಸಿದುವು. ಅಂದಿನಿಂದ ಅಲ್ಲಿಗೆ ಪ್ರತಿನಿತ್ಯವೂ ಬರುವವರಾದರು. ಧರ್ಮ ವಿಚಾರವಾಗಿ, "ಧರ್ಮವು ಬರೀ ಮಾತುಗಳಿಂದ, ಪೂಜೆಗಳಿಂದ, ದೇವಾಲಯಗಳಿಂದ ಕೂಡಿದ ಸಮಸ್ಯೆಯಲ್ಲ. ಬರೀ ನೀತಿ ಬೋಧೆಯ ಪುಸ್ತಕವಲ್ಲ. ಪರಮಾತ್ಮನ ಕುರಿತು ಜ್ಞಾನಾಭ್ಯುದಯ ಮಾಡಿಕೊಳ್ಳುವುದೆ ಧರ್ಮವು" ಎಂಬ ಶ್ರೀರಾಮಕೃಷ್ಣರ ತತ್ವವು ಸ್ವಾಮಿ ವಿವೇಕಾನಂದರಿಗೆ ಒಪ್ಪುವಂತಾಯಿತು. ಈ ಪ್ರಪಂಚದ ಧರ್ಮಗಳಲ್ಲಿ ಯಾವ ತರದ ಭೇದ ವ್ಯತ್ಯಾಸಗಳೂ ಇರುವುದಿಲ್ಲವೆಂದು ಶ್ರೀ ರಾಮಕೃಷ್ಣರು ಕಂಡುಹಿಡಿದಿರುವರು ಇದರ ಮಹತ್ವವು ಸ್ವಾಮಿ ವಿವೇಕಾನಂದರಿಗೆ ಹೊಳೆಯಿತು ಅವುಗಳಿಗೆಲ್ಲಾ ಒಂದೇ ಉದ್ದೇಶವಿದು,-ಮಹಾ ಉದ್ದೇಶ-ಪರಮಾತ್ಮನನ್ನು ಒಲಿಸುವುದು. ಅದರಿಂದ ನಾವು ಈ ಪ್ರಪಂಚದ ಎಲ್ಲಾ ಧರ್ಮಗಳನ್ನು ವಂದಿಸಬೇಕು ಎಂಬ ಶ್ರೇಷ್ಠ ತತ್ವವು ಶ್ರೀ ಗುರುಗಳಿಂದ ಜನಿಸಿತು. ಭರತಖಂಡದಲ್ಲಿ ಕವಿದಿರುವ ಅಂಧಕಾರದಲ್ಲಿ ಇದೊಂದು ಜ್ಯೋತಿಯಾಯಿತು ಇದೇ ಭರತಖಂಡಕ್ಕೆ ಅತ್ಯಗತ್ಯವಾಗಬೇಕಾದುದು ನದಿಗಳು ವಿವಿಧ ರೂಪಗಳ ಹೆಸರುಗಳಲ್ಲಿ ಹರಿದು ಕೊನೆಗೆ ಸಮುದ್ರವನ್ನು ಸೇರುವಂತೆ, ಎಲ್ಲರಿಗೂ ಒಬ್ಬನೇ ಪರಮಾತ್ಮನಿರುವನು ಎಲ್ಲರ ವಂದನೆಗಳನ್ನೂ ಒಬ್ಬನೇ ದೇವರು ಪೂರೈಸುತ್ತಿದ್ದಾನೆ ಎಲ್ಲರೂ ಮುಕ್ತಿಗೂ, ಆತ್ಮ ಶುದ್ಧಿಗೂ ಅತನೊಬ್ಬನೇ ಕಾರಣಭೂತನಾಗಿರುವನು ಪರಮಾತ್ಮನು ಆದುದರಿಂದ ಧರ್ಮನಿಮಿತ್ತ ನಮ್ಮಲ್ಲಿ ಇಷ್ಟು ಭೇದ ವ್ಯತ್ಯಾಸಗಳು ಜನಿಸಿದುದು ದೊಡ್ಡ ಆಶ್ಚರ್ಯ,—ಇಂತಹ ಭೇದಗಳನ್ನು ಅನುಭವಿಸುವವರು ದೇವರನ್ನು ಹೇಗೆ ಕಾಣಬಹುದು." ಹಾಗಾದರೆ ಇವುಗಳಿಗೆ ಧರ್ಮವೆಂಬ ಹೆಸರುಗಳು ಒಪ್ಪುವವೆ? ಇವುಗಳಿಂದ ರಾಜಕೀಯ ವಾತಾವರಣಗಳಲ್ಲೂ ಭೇದಗಳು ಉಂಟಾದುದು ವಿಶೇಷತರವು ಈ ತರದ ಫಲವುಳ್ಳವುಗಳಿಗೆ ಧರ್ಮವೆನ್ನುತ್ತಾರೊ?

ಶ್ರೀ ರಾಮಕೃಷ್ಣರ ತುಟಿಗಳಿಂದ ಇಷ್ಟರ ತನಕ ಒಂದೇ ಒಂದು ಹಾಳು ಮಾತು ಹೊರಟದ್ದಿಲ್ಲ ಕೆಟ್ಟದ್ದನ್ನು ಆಲೋಚಿಸುವ ಶಕ್ತಿ ಅವರ ಮನಸ್ಸಿಗೆ ಇರಲೇ ಇಲ್ಲ ಅವರ ಕಣ್ಣುಗಳಿಗೆ ಕೆಟ್ಟದ್ದನ್ನು ಕಾಣುತ್ತಿರಲಿಲ್ಲ ಎಲ್ಲೆಲ್ಲೂ ಒಳ್ಳೆದೇ ಕಾಣುವವರಾದರು ಇಷ್ಟು ಪವಿತ್ರತೆಯನ್ನು ಅವರ ಭಯಂಕರ ತ್ಯಾಗದ ಪ್ರತಿಫಲವೆನ್ನಬಹುದು "ಐಶ್ವರ್ಯದಿಂದಾಗಲಿ, ಇತರ ಯಾವತ್ತೂ ಕಾರಣಗಳಿಂದಾಗಲಿ, ಮುಕ್ತಿ ಪಡೆಯಲು ಸಾಧ್ಯವಿಲ್ಲ ತ್ಯಾಗಮೂರ್ತಿಗಳಾದರೆ ಮಾತ್ರ ನಾವು ಮುಕ್ತಿ ಪಡೆಯಬಹುದು" ಎಂದು ವೇದಗಳಲ್ಲಿ ಹೇಳಿದೆ ಶ್ರೀ ರಾಮಕೃಷ್ಣರು ಇದೇ ರೀತಿ ತ್ಯಾಗಮೂರ್ತಿಗಳಾಗಿ ಅಷ್ಟು ಶ್ರೇಷ್ಠವಾದ ಪವಿತ್ರತೆಯನ್ನು ಪಡೆದರು 'ನಿನ್ನ ಸರ್ವಸ್ವವನ್ನು ಮಾರಿ, ಅದನ್ನು ಬಡವರ ಸೇವೆಗೆ ವಿನಿಯೋಗಿಸಿ ನನ್ನೊಡನೆ ಬಾ' ಎಂದು ಶ್ರೀ ಯೇಸುಕ್ರಿಸ್ತರ ಬೋಧನೆ ಅದರಿಂದ ಅಧ್ಯಾತ್ಮಿಕ ಲೋಕದಲ್ಲಿ ಶ್ರೇಷ್ಠ ಪದವಿಯನ್ನು ಹೊಂದಬೇಕಾದರೆ ತ್ಯಾಗವೆ ಮುಖ್ಯವಾದ ಸೋಪಾನವು ಭರತಖಂಡದಲ್ಲಿ ಒಬ್ಬನು ಸನ್ಯಾಸಿಯಾಗಬೇಕಾದರೆ ಲೌಕಿಕವನ್ನು ತ್ಯಾಗಮಾಡಬೇಕೆಂದಿತ್ತು ಶ್ರೀರಾಮಕೃಷ್ಣರು ಈ ಬಗೆಯ ಸನ್ಯಾಸಿಗಳು ಈ ಪ್ರಪಂಚದ ಅನೇಕ ದುಷ್ಟ ಪ್ರೇರಣೆಗಳನ್ನು, ಹಣ, ಕಾಮನೆ ಇತ್ಯಾದಿಗಳನ್ನು ಧ್ವಂಸ ಮಾಡಿದವರು

ಪ್ರೇಮವು ಶ್ರೀ ರಾಮಕೃಷ್ಣರ ಇನ್ನೊಂದು ಭಾವವು ಎಲ್ಲರಲ್ಲೂ ಇವರಿಗೆ ಪ್ರೇಮ ಬಹಳ ಇವರನ್ನು ಕಾಣಲು, ಇವರಿಂದ ಮುಕ್ತಿಯ ಹಾದಿಯನ್ನು ತಿಳಕೊಳ್ಳಲು ಅಸಂಖ್ಯಾತ ಜನರು ಬರುವವರಾದರು ಇವರಿಗೆ ದರುಶನ ಕೊಡುವುದರಲ್ಲಿ ಶ್ರೀ ಗುರುಗಳು ತನ್ನ ಸಮಯ ಕಳೆಯಬೇಕಾಯಿತು ಕಾಲಿ ಪರುಶನವಲ್ಲ ಇವರಲ್ಲಿ ಮುಕ್ತಿ ವಿಚಾರದಲ್ಲಿ ಬೋಧಪರ ನುಡಿಗಳನ್ನು ಆಡಬೇಕಾಯಿತು

ನಿಮ್ಮ ಪಾದಗಳೂ,
ಕೈಕಾಲುಗಳ
ಗಂಟುಗಳೂ
ಗಾಯಗೊಂಡಿ
ವೆಯೇ, ಬಾತು
ಹೋಗಿವೆಯೆ?
ಹಾಗಾದರೆ
ವನಸ್ಪತಿಗಳಿಂದಲೇ ತಯಾರಿ
ಸಲ್ಪಟ್ಟ
ಸಾಂಬಕನ್ನುಪಯೋಗಿಸಿರಿ.

ಕಾಲುಗಳು ಗಾಯಗೊಂಡು, ಒಡೆದು ಹೋಗಿದ್ದರೆ, ಅಲ್ಲಲ್ಲಿ ಬಾತುಹೋಗಿದ್ದರೆ, ಹುಣ್ಣಿನಿಂದಾಗಿ ಅಸಹ್ಯವಾಗಿ ಕಂಡುಬಂದರೆ, ಇದರಿಂದಾಗಿ ಕೃಶ್ರರಾಗಿ, ನೀವು ಬಾಡಿ ಬೆಂಡಾಗಿ ಹೋಗುವಿರಿ ನಿಮ್ಮ ಸುಖವನ್ನೆ ಆ ನೋವು ಹಾಳುಗೆಡುವುದು ಈಗ ಆ ಸಂಕಷ್ಟದಿಂದ ಪಾರಾಗಬೇಕೆ? ಹಾಗಾದರೆ ದೃಢನಿಶ್ಚಯ ಮಾಡಿಕೊಳ್ಳಿ, ಸಾಂಬಕನ್ನು ಕೊಂಡುಕೊಳ್ಳಿ ಅದನ್ನು ದಿನಾಲೂ ರಾತ್ರಿ ಪಾದಗಳಿಗೂ, ನೋಡಿರುವ ಪ್ರತಿ ಸಂದುಗಳಿಗೂ ತಿಕ್ಕಿಕೊಳ್ಳಿ ನಿಮ್ಮ ವೇದನೆಯು ಪರಿಹಾರವಾಗಿ ಬೇಗನೆ ಗುಣಲಾಭವನ್ನು ಪಡೆಯುವಿರಿ ಸಾಂಬಕ್ ಚರ್ಮರಂಧ್ರಗಳ ಮೂಲಕ ಒಳಹೊಕ್ಕು ಅಲ್ಲಿರುವ ಕ್ರಿಮಿಗಳನ್ನು ನಿರ್ಮೂಲಗೊಳಿಸಿ ನಿಮಗೆ ಸುಖವನ್ನೀಯುವುದು ನಿಮ್ಮ ಚರ್ಮವನ್ನು ಮನೋಹರವಾಗಿ ಮಾಡುವುದು ಹುಣ್ಣುಗಳನ್ನೂ, ಕುಂಕಜ್ಜಿಗಳನ್ನೂ ಕೀವು ಸೋರುವುದನ್ನೂ ಅಲ್ಲದೆ, ಸುಟ್ಟ ಗಾಯಗಳು, ಇವುಗಳನ್ನು ನಿಮಿಷಮಾತ್ರದಲ್ಲಿ ಗುಣಪಡಿಸುತ್ತದೆ

ಎಲ್ಲಾ ಔಷಧಿಯ ಅಂಗಡಿಗಳಲ್ಲೂ ರೂ. 1 ಅಥವಾ ರೂ. 2-4-0ಕ್ಕೆ ದೊರೆಯುತ್ತದೆ.

ಸಾಂಬಕ್
Zam Buk

ಒಂದು ದಿವಸದಲ್ಲಿ ಸಾಧಾರಣ 20 ತಾಸುಗಳು ಮಾತಾಡುವುದರಲ್ಲೆ ಕಳೆಯುತ್ತಿದ್ದರು. ಒಂದೇ ದಿವಸದಲ್ಲಿ ಹೀಗೆ ವರ್ಷಗಟ್ಲೆ ಸಮಯವನ್ನು ಕಳೆದಿರವರು. ಈ ದಣುವಿನಿಂದಲೇ ಇವರ ಶರೀರವು ಬಲಗುಂದಿತು ಆದಗೂ ಜನತೆಯ ಮೇಲೆ ಇವರಿಗಿದ್ದ ಪ್ರೇಮವು ಇವರನ್ನು ವಿಶ್ರಾಂತಿಪಡಕೊಳ್ಳಲು ಬಿಡದು ತನಗೆ ಯಾವತ್ತು ಸಂಕಟಗಳು ಒದಗಿದರೂ ಜನತೆಯ ಸೇವಾ ಕಾರ್ಯವನ್ನು ಒಂದಿಷ್ಟು ನಿಲ್ಲಿಸದೆ ಮುಂದುವರಿಸಿದರು ಒಬ್ಬರು ಅವರಿಗೆ ತನ್ನ ದೇಹಾಲಸ್ಯವನ್ನು ತನ್ನ ದೈವ ಜ್ಞಾನದಿಂದ ಸುಧಾರಿಸಿಕೊಳ್ಳಲು ಬೋಧನೆಯಿತ್ತರು ಆಗ ಅವರು ತನ್ನ ಮನಸ್ಸು ಆ ಪರಮಾತ್ಮನಿಗೆ ಒಪ್ಪಿಸಲ್ಪಟ್ಟಿದೆ ಅದನ್ನು ತನ್ನ ದೇಹಕ್ಕಾಗಿ ಉಪಯೋಗಿಸಲು ನನ್ನಿಂದೆ ಸಾಧ್ಯವಾಗದು. ದೇಹವೆಂದರೆ, ಆತ್ಮದ ಬರೆ ಒಂದು ಗೂಡು ಎಂದು ಉತ್ತರವಿತ್ತರು

ಹೀಗೆ ತನ್ನ ಬೋಧನಾ ಕಾರ್ಯವನ್ನು ಸಾಗಿಸಿದರು ಇವರ ದೇಹ ಪ್ರಕೃತಿಯ ಬಲವು ಕುಂದುತ್ತಾ ಬರುತ್ತಿದೆಯೆಂದು ವಾರ್ತೆ ಹರಡಿತು ಇವರು ಬೇಗನೆ ಈ ಲೋಕವನ್ನು ತ್ಯಜಿಸುವರಾಗಿ ಭಯವು ಉಂಟಾಯಿತು ಆಗ ಜನರು ಕಿಕ್ಕಿರಿದು ಬರಲು ಆರಂಭಿಸಿದರು. ಧರ್ಮಜ್ಞಾನದಲ್ಲಿ ಭಾರತೀಯರಿಗೆ ಪ್ರೀತಿ ಬಹಳ ಶ್ರೀಗುರುಗಳ ಕೊನೆಯ ದಿವಸಗಳಲ್ಲಿ ಭರತಖಂಡದ ಎಲ್ಲಾ ಕಡೆಗಳಿಂದ ಮಹಾಜನಸ್ತೋಮವು ಅವರ ಬದಿಯಲ್ಲಿ ನೆರೆಯುವಂತಾಯಿತು ಶ್ರೀಗುರುಗಳು ಅವರ ಆರೋಗ್ಯದ ಲಕ್ಷವಿಡದೆ, ಇವರಿಗೆ ತನ್ನ ತತ್ವ ಬೋಧನೆಯನ್ನು ಮಾಡಿದರು "ನನಗೆ ಮಾತನಾಡಲು ಸಾಧ್ಯವಾಗುವ ವರೇಗೆ ಅವರನ್ನು ಬೋಧಿಸುವುದು ನನ್ನ ಕರ್ತವ್ಯವು" ಎಂದು ಶ್ರೀಗುರುಗಳ ಆಗಿನ ಮಾತು ಒಂದಾನೊಂದು ದಿವಸ, ವೇದದಲ್ಲಿರುವ ಅತೀ ಪವಿತ್ರವಾದ ಮಂತ್ರದ ಉಚ್ಚಾರ ಮಾಡಿ, ಸಮಾಧಿ ಗೈದು, ಶ್ರೀಗುರುಗಳು ಈ ಲೋಕವನ್ನು ತ್ಯಜಿಸಿ, ಸ್ವರ್ಗಾಧಿಮುಖಿಗಳಾದರು.

ಇಂದಿಗೆ ಶ್ರೀ ರಾಮಕೃಷ್ಣ ಕೀರ್ತಿಯು ಎಲ್ಲೆಲ್ಲೂ ಹರಡಿರುತ್ತದೆ ಮಿಲಿಯಗಟ್ಟಲೆ, ಭಾರತೀಯರಿಗೆ ಇವರ ಪರಿಚಯವಾಗಿರುತ್ತದೆ ಭರತಖಂಡದ ಹೊರಗೂ ಇವರ ಕೀರ್ತಿಯು ಹಬ್ಬಿರುತ್ತದೆ ಶ್ರೀ ರಾಮಕೃಷ್ಣರ ಕೀರ್ತಿಯ ಕುರುಹುಗಳು ಭರತಖಂಡದಲ್ಲೂ ಅಮೇರಿಕದಲ್ಲೂ, ಅನೇಕ ಪಟ್ಟಣಗಳಲ್ಲೂ ಹಳ್ಳಿಗಳಲ್ಲೂ, ವಿವಿಧ ಧರ್ಮ ಸಂಸ್ಥೆಗಳ ರೂಪದಲ್ಲಿ ಈಗಲೂ ಕಾಣಬಹುದು ಹಿಂದೂ ದೇಶದ ಐಕ್ಯತೆಗೆ ಹಾದಿಯು ಇವರ ತತ್ವದಲ್ಲಿ ಅಡಕವಾಗಿರುತ್ತದೆ

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

R E P No. 1069/193[illegible]
O 8 78/8[illegible]

ದಿ ಸೆಕ್ರೆಟರಿ ಆಫ್ ಸ್ಟೇಟ್ ಫೋರ ಇಂಡಿಯಾ ರಿಪ್ರಸೆಂಟೆಡ್ ಬೈ ದಿ ಕಲ್ಲೆಕ್ಟ ಆಫ್ ಸೌತ್ ಕೆನರಾ ಮಂಗಳೂರು—ಅರ್ಜಿದಾರರು

1. ವಾದಿ ತಿಮ್ಮಪ್ಪ ಶೆಟ್ಟಿ—ಮುತ್ತಯಶೆಟ್ಟಿ ಅಳಿಯ ಉಡುಪಿ ತಾಲೂಕು ಬಡಗಬೆಟ್ಟು ಗ್ರಾಮ. 2 1ನೇ ಪ್ರತಿವಾದಿ ಅನಂಪದ್ಮನಾಭ ಉಪಾಧ್ಯ—ಪುತ್ತೂರು ತಾಲೂ[illegible] ಚಾರ್ಮಾಡಿ ಗ್ರಾಮದಲ್ಲಿರುವರ— ಎದ್ರಿರು ಅರ್ಜಿದಾರರು ಸದ್ರಿ ಡಿಕ್ರಿ ಬಗ್ಗೆ ನಡೆಸಿ ಮಜ್ಕೂರು ಅನ್ನಬಾರಿಯಲ್ಲಿ 1ನೇ ಎದ್ರಿಯ 2ನೇ ಎದ್ರಿಯ ಮೇಲೆ ಪಡೆದ ಡಿಕ್ರಿ ಹ[illegible] ನಸೂಲು ಹಕ್ಕು ಜಪ್ತಿ ಕುರಿತು ಎದ್ರಿರಿಗೆ ಪ[illegible] ಆರ್ಡರ ಬಗ್ಗೆ ಹುಕುಂ ಆಗಿ ತನಿಗೆ ತಾರೀ[illegible] 9-8-1936ಕ್ಕೆ ಇಟ್ಟಿರುವುದರಿಂದ ಈ ಬಾ[illegible]ನಲ್ಲಿ ಎದ್ರಿರ ಆಕ್ಷೇಪಣೆಗಳೇನಾದರೂ ಇರುವಪಕ್ಷದಲ್ಲಿ ತನ್ನಿ ದಿವಸ ಈ ಕೋರ್ಟು ಮುಂ ಪೂರ್ವಾಹ್ನ 11 ಘಂಟೆಗೆ ಹಾಜರಾಗಿ ಸ್ಥಾ[illegible] ಮಾಡಿಕೊಳ್ಳತಕ್ಕದ್ದು.

ಕುಂದಾಪುರ 26-2-'36

S. A. Udpa, B.A.B[illegible]
Advocate for Pe[illegible]

ಶ್ರೀಮತಿ ಕಮಲಾನೆಹರುಗಳವರು ದಿವಂಗತರಾದರು.

ಇಂಡಿಯಾ ಸರಕಾರದ ಬಜೆಟ್ಟು.

ಫ್ರಾನ್ಸು ರಷ್ಯಾ ಒಪ್ಪಂದವು ಸ್ಥಿರವಾಗುವುದು. ಇಟೇಲಿ-ಜರ್ಮನಿ ಒಪ್ಪಂದವಾಗುವುದೆ?

ಜಪಾನಿನಲ್ಲಿ ಕ್ರಾಂತಿ.

ಈ ವರ್ಷ ಯಾವ ಹೊಸ ತೆರಿಗೆಗಳಿಲ್ಲ. ಆದಾಯ ತೆರಿಗೆ ತೆರುವವರಿಗೆ ರಿಯಾಯ್ತಿ.

ಶ್ರೀಮತಿ ಕಮಲಾನೆಹರುರವರು ದಿವಂಗತರಾದರು.

ಶ್ರೀಮತಿ ಕಮಲಾನೆಹರುಗಳವರು ಕೆಲವು ದಿವಸಗಳ ಹಿಂದೆ ಬದಲಾದ ಆರೋಗ್ಯಸ್ಥಿತಿಯಿಂದಾಗಿ ಕಳೆದ ೨೮ ತಾರೀಖಿನಲ್ಲಿ ಮುಂಜಾನೆ ೫ ಗಂಟೆ ಹೊತ್ತಿಗೆ ದಿವಂಗತರಾದರು. ಶ್ರೀಮತಿಯವರ ಆರೋಗ್ಯ ಸ್ಥಿತಿಯು ಉತ್ತಮಗೊಳ್ಳುತ್ತಿದೆಯೆಂದು ಇಷ್ಟರ ತನಕ ವಾರ್ತೆಗಳು ಬರುತ್ತಿದ್ದು, ಈ ಮರಣವಾರ್ತೆಯನ್ನು ಕೇಳಿ ಸಮಸ್ತ ಪ್ರಪಂಚವು (ಮುಖ್ಯವಾಗಿ ಭರತಖಂಡವು) ವಿಸ್ಮಿತವೂ ದುಃಖಿತವೂ ಆಗಿರುತ್ತದೆ. ಇದರಿಂದ ಶ್ರೀ ಜವಾಹರಲಾಲರ ಹಿಂದೂದೇಶದ ಪ್ರಯಾಣವು ಮುಂದೆ ಹಾಕಲ್ಪಟ್ಟಿದೆ. ಶ್ರೀಮತಿ ಕಮಲಾನೆಹರುಗಳವರು ತಮ್ಮ ದಿವ್ಯ ಪತಿಯವರೊಡನೆ ದೇಶಸೇವಾ ಕಾರ್ಯದಲ್ಲಿ ನಿರತರಾಗಿ, ತನ್ನ ದೇಶದ ವಿಮೋಚನೆ ಕಾರ್ಯದಲ್ಲಿ ಭಾಗಿಯಾಗಿ, ವೈಭವ ಮತ್ತು ಸುಖದ ಲೋಕದಲ್ಲಿ ಬೆಳೆದವರಾದರೂ ತ್ರೀಮಂತಿಕೆಯನ್ನು ತ್ಯಜಿಸಿ ಅನೇಕ ಅನುಸಂಕಷ್ಟಗಳನ್ನು ಅನುಭವಿಸಿದವರು. ಭರತ ಖಂಡದ ಸ್ತ್ರೀಲೋಕದಲ್ಲಿ ಇವರು ಒಂದು ಪ್ರಜ್ವಲಿಸುವ ರತ್ನದಂತೆ ಇದ್ದರು. ಇವರ ಜೀವನವನ್ನು ಅನೇಕ ಸ್ತ್ರೀಯರು ಅನುಸರಿಸದೆ ಇರರು. ಶ್ರೀ ಜವಾಹರಲಾಲರು ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಈ ಸಮಯದಲ್ಲಿ, ದೇಶದ ರಾಜಕೀಯ ವಿಚಾರದಲ್ಲಿ ಬಹಳ ಸಂದಿಗ್ಧ ಸಮಯವೊದಗಿರುವಾಗ ಶ್ರೀಮತಿ ನೆಹರುರವರ ಮರಣವು ಜವಾಹರಲಾಲರಿಗೆ ಮಹಾ ನಷ್ಟವಾಗಿದೆ. ಅಲ್ಲದೆ ಸಮಸ್ತ ಭರತ ಖಂಡಕ್ಕೂ ಆಗಿರುತ್ತದೆ. ಇಡೀ ಭರತಖಂಡವೇ ಶೋಕಾನ್ವಿತವಾಗಿರುತ್ತದೆ. ನಮ್ಮ ದೇಶದ ಸಾಧಾರಣ ಎಲ್ಲಾ ರಾಜಕೀಯ ನಾಯಕರಿಂದ ಸಂತಾಪಸೂಚಕ ತಂತಿಗಳು ಹೋಗಿವೆ. ಅಷ್ಟಲ್ಲದೆ ಆಂಗ್ಲೇಯ ಮಹಾಪುರುಷರನೇಕರು ತಮ್ಮ ಸಂತಾಪವನ್ನು ಸೂಚಿಸಿ, ಶ್ರೀಮತಿಯವರ ಗುಣಶ್ರೇಷ್ಠತೆಯನ್ನು ಹೊಗಳಿ, ತಂತಿಗಳನ್ನು ಶ್ರೀ ಜವಾಹರಲಾಲರಿಗೆ ಕಳುಹಿಸಿಕೊಟ್ಟಿರುವರು. ಮಹಾತ್ಮಾ ಗಾಂಧಿಯವರು ಈ ವಾರ್ತೆಯನ್ನು ಕೇಳಿ ಬಹಳ ಖಿನ್ನರಾಗಿರುವರು. ಜವಾಹರಲಾಲರನ್ನು ಸಂತಯಿಸಿ ತಂತಿಯನ್ನು ಕಳುಹಿಸಿರುವರು. ಶ್ರೀ ಬಾಬೂರಾಜೇಂದ್ರ ಪ್ರಸಾದರು "ಶ್ರೀಮತಿ ನೆಹರುರವರು ದೇಶಸೇವಾ ಕಾರ್ಯಕ್ಕಾಗಿ ತನ್ನ ತನುಮನಧನಗಳನ್ನು ವಿನಿಯೋಗಿಸಿದವರೆಂದೂ, ಅವರನ್ನು ಗೌರವಿಸಲು ಇದೇ ೮ನೇ ತಾರೀಖನ್ನು ಸಮಸ್ತ ಭರತಖಂಡವು ಅವರ ಮರಣದ ಸಂತಾಪ ದಿನವನ್ನಾಗಿ ಪ್ರಾರ್ಥನೆಗಳಿಂದಲೂ ಭಾಷಣಗಳಿಂದಲೂ ಆಚರಿಸಬೇಕೆ"ಂದು ಪ್ರಕಟನೆ ಮಾಡಿರುವರು. ನಮ್ಮ ಜಿಲ್ಲೆಯೂ ಈ ಕಾರ್ಯದಲ್ಲಿ ಮುಂದೆ ಬಂದು, ಭಾರತ ರಮಣಿಯರ ಈ ಶ್ರೇಷ್ಠರತ್ನವನ್ನು ಗೌರವಿಸುವರೆಂದು ನಮ್ಮ ಆಶೆ.

ಇಂಡಿಯಾ ಸರಕಾರದ ೧೯೩೬-೩೭ರ ಬಜೆಟ್ಟು.

ಅರ್ಥಿಕ ಸದಸ್ಯರಾದ ಸರ್ ಜೇಮ್ಸ್ ಗ್ರಿಗ್ಗರು ಇಂಡಿಯಾ ಸರಕಾರದ ೧೯೩೬-೩೭ರ ಬಜೆಟ್ಟನ್ನು ಅಸೆಂಬ್ಲಿ ಸಭೆಯಲ್ಲಿ ಪ್ರಕಟಿಸಿದರು. ಈ ಕೆಳಗಿನ ಟಿಪ್ಪಣಿಗಳಿಂದ ತಿಳಿಯಬರುತ್ತದೆ. ಇನ್‌ಕಮ್ ಟೇಕ್ಸನ್ನು ವಿಧಿಸುವ ಆದಾಯವನ್ನು ೧೦೦೦ದಿಂದ ೨೦೦೦ಕ್ಕೆ ಏರಿಸಲಾಯಿತು. ಈಗಿರುವ ಸರ್‌ಚಾರ್ಜನ್ನು ಮತ್ತು ಸೂಪರ್‌ಟೇಕ್ಸನ್ನು ೩ನೇ ಅಂಶಕ್ಕೆ ಇಳಿಸಲಾಯಿತು. ಒಂದಾಣೆ ಅಂಚೆಯ ತೂಕವನ್ನು ½ ತೊಲೆಯಿಂದ ೧ ತೊಲೆಗೆ ಏರಿಸಲಾಯಿತು ಮತ್ತು ಇದಕ್ಕಿಂತ ಮೇಲಿನ ಪ್ರತಿಯೊಂದು ತೊಲೆಗೆ ಅರ್ಧಾಣೆಯ ದರ ವಿಧಿಸಬೇಕೆಂದಾಯಿತು. ೧೯೩೫-೩೬ರ ಉಳಿತಾಯವನ್ನು ಕೆಳಗಿನ ರೀತಿಯಲ್ಲಿ ವಿನಿಯೋಗಿಸಲಾದೀತು. ಹಳ್ಳಿಗಳ ಸುಧಾರಣೆಗಾಗಿ, ಶೋಧನಾಕಾರ್ಯಗಳಿಗಾಗಿ (ರೂ ೩೦ ಲಕ್ಷದ ಗ್ರಾಂಟು) ಬಾರತೀಯ ರಿಸರ್ಚ್ ಫಂಡಿಗೆ ರೂ ೧೦ ಲಕ್ಷದ ಗ್ರಾಂಟು ಉಣ್ಣೆಯ ಕುರಿತು ಶೋಧನೆಗೆ ರೂ ೫ ಲಕ್ಷ, ೨೦ ರೂ ಲಕ್ಷ ರೇಡಿಯೋ ಪ್ರಸಾರಕ್ಕಾಗಿ ನಡೆಯುವ ವರ್ಷದ ಉಳಿತಾಯವನ್ನು ಪ್ರಾಂತ್ಯಕೀಯ ಸರಕಾರಗಳ ನಷ್ಟವನ್ನು ಭರ್ತಿಮಾಡಲು ಉಪಯೋಗಿಸಲಾಗುವುದು. ಮತ್ತು ಉಳಿದ ಹಣವನ್ನು ಸಮಾಜವಾದ ನಿವೃತ್ತ ಬರ ಬಹುದಾದ ಕೊರತೆಗಾಗಿ ಮೀಸಲಿಡಲಾಗುವುದು. ೧೯೩೪-೩೫ನೇ ವರ್ಷದಲ್ಲಿ ೪೫೦ ಲಕ್ಷದ ಉಳಿತಾಯವಾಗಿರುತ್ತದೆ. ೧೯೩೫-೩೬ರಲ್ಲಿ ೩೫೩ ಲಕ್ಷದ ಉಳಿತಾಯವಾಗುವುದೆಂದು ಊಹಿಸಲಾಗಿದೆ. ೧೯೩೬-೩೭ರಲ್ಲಿ ಬಹಳ ಉಳಿತಾಯವಾಗುವುದೆಂದು ಅರ್ಥಿಕ ಸದಸ್ಯರು ಮಾಡಿದ ಬಜೆಟ್ಟಿನ ಭಾಷಣದಿಂದ ವ್ಯಕ್ತವಾಗುತ್ತದೆ. ಈ ಎಲ್ಲಾ ವರ್ಷಗಳಲ್ಲಿ ಇಷ್ಟು ಉಳಿತಾಯವಾಗಿದ್ದರೂ ಬರೇ ಸಣ್ಣ ಸಣ್ಣ ರಿಯಾಯಿತಿಗಳು ನಮಗೆ ಕೊಡಲಾಗಿದೆ. ನಮ್ಮ ದೇಶದ ವ್ಯಾಪಾರದ ಮೇಲಿರುವ ಅನೇಕ ತೆರಿಗೆಗಳ ಹೊರೆಯನ್ನು ತೆಗೆಯಬಹುದಿತ್ತು. ನೂತನ ತರದ ಯಾವತ್ತೂ ತೆರಿಗೆಗಳನ್ನು ವಿಧಿಸಲಾಗುವುದಿಲ್ಲವೆಂದು ಅರ್ಥಿಕ ಸದಸ್ಯರ ಸಮಾಧಾನಕರವು. ಈ ಬಜೆಟ್ಟಿನಿಂದ ಭರತಖಂಡವು ತೃಪ್ತಿಗೊಂಡುದಾಗಿಲ್ಲ.

ಲೋಕದಲ್ಲಿ ಅತೀ ಸಣ್ಣ ಕುಬುಜ

ದಕ್ಷಿಣ ಆಫ್ರಿಕದಲ್ಲಿರುವ ಸೋಮಿಯ ... ಕುಬುಜನು ಜಗತ್ತಿನಲ್ಲಿ ಅತೀ ಸಣ್ಣದಾಗಿರುವನು. ಅವನ ಉದ್ದವು ಒರೇ ೨೦ ಇಂಚುಗಳು. ಇತರ ಕುಬುಜಗಳಂತೆ ಸೋಮರಿಯು ಜನನದಲ್ಲಿ ... ಕೈಕಾಲುಗಳು ಆಗಿರುವನು. ಕಳೆದ ನಾಲ್ಕು ವರ್ಷಗಳಿಂದ ಅರ್ಧ ಇಂಚು ಕೂಡಾ ಬೆಳೆಯಲಿಲ್ಲವಂತೆ.

ಶಾಹಿದ್‌ಗಂಜ್ ಕಲಹ ನಿವಾರಣೆ.

ಶ್ರೀ ಜಿನ್ನರು ಈ ಕಲಹ ನಿವಾರಣೆ ಪ್ರಯತ್ನಕ್ಕಾಗಿ ಮೊನ್ನೆ ಲಾಹೋರಿಗೆ ಪ್ರವಾಸ ಮಾಡಿದ್ದರು. ಅವರು ಕೈಗೊಂಡ ಕಲಹ ನಿವಾರಣಾ ಕಾರ್ಯವು ಜಯಪ್ರದವಾಗಿದೆಯೆಂದು ವಾರ್ತೆ ಬಂದಿರುತ್ತದೆ. ಮುಸ್ಲಿಮರು ತಮ್ಮ ಎಲ್ಲಾ ಚಳವಳಿಯನ್ನು ನಿಲ್ಲಿಸಲು ಸಮ್ಮತಪಟ್ಟಿರುವರು. ಸರಕಾರವು ಈ ಗಲಭೆಯಲ್ಲಿ ಸೆರೆಮನೆ ಸೇರಿರುವವರನ್ನು ಬಿಡುಗಡೆ ಮಾಡಿರುವರು. ಶ್ರೀ ಜಿನ್ನರು ಸಿಖ್ಖ ಮುಖಂಡರ ಭೇಟಿಯನ್ನು ಮಾಡಿ ಶಾಹಿದ್‌ಗಂಜ್ ಮಸೀದಿ ಇರುವ ಸ್ಥಳವನ್ನು ಯಾವ ಕೆಲಸಕ್ಕೂ ಉಪಯೋಗಿಸಬಾರದೆಂಬ ಶರ್ತ ಮಾಡುವ ವಿಚಾರ ಪರ್ಯಾಲೋಚಿಸುವರು. ಇದಕ್ಕೆ ಸಿಖ್ಖರ ಅನುಮತಿ ದೊರೆಕಿರುತ್ತದೆಂದು ವಾರ್ತೆ. ಶ್ರೀ ಜಿನ್ನರು ಈ ಕಾರ್ಯವನ್ನು ಬೇಗನೆ ಪೂರ್ಣಗೊಳಿಸುವರು.

ಮದ್ರಾಸು ಸರಕಾರ ಬಜೆಟ್ಟು

ಮದ್ರಾಸು ಸರಕಾರದ ಬಜೆಟ್ಟು ಕೆಲವು ದಿವಸಗಳ ಹಿಂದೆ ಕೌನ್ಸಿಲ್ ಕರೆಯಿತು. ಈ ಬಾರಿಯ ಬಜೆಟ್ಟಿನಲ್ಲಿ ನಷ್ಟವೂ ಇಲ್ಲ, ಲಾಭವೂ ಇಲ್ಲ. ಪ್ರಾಂತ್ಯಕೀಯ ಸರಕಾರಗಳಲ್ಲಿ ಯಾವಾಗಲೂ ಉಳಿತಾಯವಾಗುವುದು ಮದ್ರಾಸ ಸಂಸ್ಥಾನಕ್ಕೆ ಮಾತ್ರ. ಪ್ರತಿ ವರ್ಷವು ನಷ್ಟ ಬರುವುದೆಂದು ಸೂಚಿಸಿ, ಉಳಿತಾಯವಾಗುವುದು ನಮ್ಮಲ್ಲಿ ಕ್ರಮವಾಗಿರುತ್ತದೆ. ಇತರ ಪ್ರಾಂತೀಯ ಸರಕಾರಗಳು ತಮ್ಮ ನಷ್ಟಗಳನ್ನು ಭರ್ತಿಮಾಡಲು ಕೇಂದ್ರ ಸರಕಾರದವರ ಆಶ್ರಯ ಕೋರುತ್ತಿರೆ. ಆಗ ನಮ್ಮ ಮದ್ರಾಸು ಸರಕಾರವು, ಇಂಡಿಯಾ ಸರಕಾರಕ್ಕೆ ಯಾವ ಹೊರೆಯನ್ನು ಕೊಡುವುದಿಲ್ಲ. ಕಂದಾಯದಲ್ಲಿ ರಿಯಾಯಿತಿ ಮಾಡಿರುತ್ತಾರೆ. ಆದರೆ ಅದರಿಂದ ರೈತರಿಗೆ ಅಷ್ಟೊಂದು ಉಪಕಾರವಾದೀತೆಂದು ಹೇಳಲು ಅಸಾಧ್ಯ. ಈ ಬಜೆಟ್ಟಿನಲ್ಲಿ ಪ್ರಾಂತ್ಯದ ಉದ್ಧಾರ ಕಾರ್ಯಗಳಿಗಾಗಿ ಹೆಚ್ಚಿನ ಖರ್ಚು ಕಾಣುತ್ತದಿಲ್ಲ.

ಸಂಯುಕ್ತ ಅಮೇರಿಕದ ಸರಕಾರಕ್ಕೆ ಹೆಚ್ಚಿನ ಹಣ ಬೇಕಾಗಿದೆ

ಪ್ರೆಸಿಡೆಂಟ್ ರೂಸವೆಲ್ಟರು ಈ ಬಾರಿ ಕೊಂಗ್ರೆಸಿನೊಡನೆ ಹೆಚ್ಚಿನ ಹಣವನ್ನು ಕೇಳಿರುವರಂತೆ. ಇವರಿಗೆ ೧೧೩ ಮಿಲಿಯ ಡೊಲ್ಲರಿನ ಒಂದು ಹೊಸ ಗ್ರಾಂಟು ಬೇಕಂತೆ. ಇದು ಮುಖ್ಯವಾಗಿ ಸೈನಿಕರ ಬೋನಸ್ ಫಂಡಿಗಂತೆ. ಈ ಹೆಚ್ಚಿನ ಹಣವನ್ನು ಧನಾಢ್ಯರಿಂದ ಹೆಚ್ಚಿಸಿದ ಆದಾಯ ತೆರಿಗೆಯ ರೂಪದಲ್ಲಿ ತೆರುವ ಕ್ರಮವನ್ನು ಮಾಡುವರಂತೆ.

ಫ್ರಾನ್ಸು ರಷ್ಯಾ ಒಪ್ಪಂದವು ಸ್ಥಿರವಾಯಿತು

ಫ್ರಾನ್ಸ್ ರಷ್ಯಾ ಒಪ್ಪಂದವು ... ಫ್ರೆಂಚ್ ಸರಕಾರವು ನಿರ್ಧರಿಸಿದೆ. ಇದರಿಂದ ಈ ಮುಂದೆ ಈ ಒಪ್ಪಂದ ಸ್ಥಿರವಾಗಬಹುದು. ಹಾಗಾದರೆ ನಾವು ಸಂಗ್ರಾಮಯೋಜನೆಗಳನ್ನು ಮಾಡಬೇಕಾಗುವುದೆಂದು ಜರ್ಮನಿಯ ಹಿಟ್ಲರರು ಎಚ್ಚರಿಕೆ ಕಳುಹಿಸಿಕೊಟ್ಟಿದ್ದರು. ಫ್ರೆಂಚರು ಅದನ್ನು ಗಣಿಸದೆ ಈ ರೀತಿ ಒಪ್ಪಂದವನ್ನು ಸ್ಥಿರಮಾಡುತ್ತಿರಲು ಜರ್ಮನಿಯು ಯಾವ ರೀತಿ ವರ್ತಿಸುವುದೆಂದು ನೋಡಬೇಕಿದೆ.

ಇಟೆಲಿಗೂ ಜರ್ಮನಿಗೂ ಒಪ್ಪಂದವಾಗುವುದು

ನೆಟ್ಟಿ ಹೇಳಿದಂತೆ ಫ್ರಾನ್ಸಿಗೂ ರಷ್ಯಕ್ಕೂ ಒಪ್ಪಂದ ಸ್ಥಿರವಾಗಲು ಇಟೇಲಿಯು ಜರ್ಮನಿಯೊಡನೆ ಒಪ್ಪಂದ ಬೆಳೆಸುವ ಪ್ರಸಂಗ ತಿಳಿದುಬರುತ್ತದೆ. ಇಟೇಲಿಯು ಈ ವರ್ತನೆಗೆ ... ರಾಷ್ಟ್ರಸಂಘದ ಸಂಕಷ್ಟಗಳಂತೆ ಇಟೇಲಿಯು ಜರ್ಮನಿಯೊಡನೆ ಸೇರಿದಂತೆ ಅದರ ಮೇಲೆ ಜ್ಯಾರಿಯಾದ ಸಂಕಷ್ಟಗಳು ... ಬೇಕಾಗುವುದೋ ಏನೋ? ಇಟೇಲಿಯು ನೌಕಾಘಟ್ಟದಲ್ಲಿ ಯಾವ ಒಪ್ಪಂದಗಳಿಗೂ ಒಪ್ಪಲಿಲ್ಲವೆಂದು ವಾರ್ತೆ ಬಂದಿರುತ್ತದೆ. ಸರ್ ಸಾಮುವೇಲ್ ಹೋರರು ಬಯಸಿದಂತೆ ಜರ್ಮನಿಯು ಈಗಿನ ಆರ್ಥಿಕ ಸಮಯ ... ಸಭೆಗೆ ಇಟೇಲಿಯು ಸಹಕಾರವು ನಿಂತುಹೋಗಿರುತ್ತದೆ. ಅಂದರೆ ಜರ್ಮನಿಗೆ ಸ್ವಲ್ಪ ಬಲವು ಹೆಚ್ಚಿದಂತಾಗಿದೆ.

ಜರ್ಮನಿಯೊಡನೆ ಒಪ್ಪಂದಗಳಾಗುವವೆ?

ಫ್ರಾನ್ಸ್ ರಷ್ಯದೊಡನೆ ಒಪ್ಪಂದ ಸ್ಥಿರ ಮಾಡಿದ್ದರೂ ಜರ್ಮನಿಯೊಡನೆ ಒಪ್ಪಂದ ಮಾಡಲು ಸಿದ್ಧವಿದೆಯೆಂದು ತಿಳಿದುಬರುತ್ತದೆ. ಒಪ್ಪಂದದ ಶರ್ತಗಳು, ಜರ್ಮನಿಯು ಜನಾಂಗಸಭೆಯ ಸದಸ್ಯರಾಗಬೇಕು, ಸಂಗ್ರಾಮಸಿದ್ಧತೆ ಕಾರ್ಯಗಳಿಗೆ ಒಂದು ನಿಯಮಿತ ಗಡಿಯನ್ನು ಹಾಕಬೇಕು. ಇವೇ ಮೊದಲಾದ ಶರ್ತಗಳನ್ನು ಫ್ರಾನ್ಸ್ ಕಳುಹಿಸಿಕೊಟ್ಟಿದೆಯಂತೆ. ಜರ್ಮನಿಯು ಆಂಗ್ಲೇಯರೊಡನೆ ನೌಕಾಬಲದ ಕುರಿತು ಒಪ್ಪಂದಮಾಡಲು ಸಿದ್ಧವಿದೆಯೆಂದು ವಾರ್ತೆ.

ಬ್ರಿಟನಿನ ಸಂಗ್ರಾಮ ಸಿದ್ಧತೆಗಳು,

ಸಂಗ್ರಾಮ ... ಮತ್ತು ಬ್ರಿಟನಿನ ರಕ್ಷಣಾ ಯೋಜನೆಯು, ಬ್ರಿಟಿಷ ಪಾರ್ಲಿಮೆಂಟಿನ ಒಂದು ಪ್ರಾಮುಖ್ಯ ಪ್ರಶ್ನೆಯು. ಮಿಲಿಯ ಹಣವನ್ನು ಸಂಗ್ರಾಮ ಸಿದ್ಧತೆಗಾಗಿ ವಿಂಗಡಿಸಲಾಗಿದೆ. ಈ ಕಾರ್ಯಗಳು ಸರಿಯಾಗಿ ನಡೆಯುವಂತೆ ನೋಡಲು, ಒಬ್ಬ ಮಂತ್ರಿಪರ್ಯರ ನೇಮಕವಾಗುವುದೆಂತೆ. ಯುದ್ಧ ಮಾಡುವುದು ಬ್ರಿಟನಿಗೆ ಒಪ್ಪುವುದಿಲ್ಲವಾದರೂ, ಜನಾಂಗಸಭೆಯ ಗೌರವವನ್ನು ಕಾಯಲು ಶಾಂತಿರಕ್ಷಣೆಗಾಗಿ, ಇವರಿಗೆ ಯುದ್ಧಮಾಡಬೇಕಾಗುವುದಂತೆ.

A A A. ಬದಲಾಗಿ ಇನ್ನೊಂದು ಕ್ರಮ.

ಸಂಯುಕ್ತ ಅಮೇರಿಕಾದ ಸಾಗುವಳಿ ಧಾರಣೆಯನ್ನು ಸರಿಗೊಳಿಸುವ, ಎಂದರೆ ರೈತರ ಸ್ಥಿತಿ ಸುಧಾರಿಸುವಂತೆ ಮಾಡುವ A A A. ಕಾನೂನು ಕೆಲ ಸಮಯ ಹಿಂದೆ ಅಲ್ಲಿನ ಸುಪ್ರೀಮ್ ಕೋರ್ಟಿನವರು ಶಾಸನಸಮ್ಮತವಲ್ಲವೆಂದು ತೆಗೆದು ಹಾಕಿದ್ದರು. ಆದರೆ, ಅದರ ಬದಲಾಗಿ ಅದೇ ಉದ್ದೇಶದಿಂದ ಕೂಡಿದ ಬೇರೊಂದು ಬಿಲ್ಲು ಪಾಸಾಗಿರುತ್ತದೆ. ಈ ಬಿಲ್ಲಿನಿಂದ ರೈತರ ಸಾಗುವಳಿ ಫಲ ದರ್ದಿನ... ಇಳಿದ ದಂತೆ ನೋಡುವ ... ಹಾಗುವುದಲ್ಲದೆ, ರೈತರ ಸಾಮಾನುಗಳನ್ನು ಯೋಗ್ಯವಾದ ಬೆಲೆಯಲ್ಲಿ ವಿಕ್ರಯಿಸುವ ಏರ್ಪಾಡುಗಳು ಸರಕಾರದಿಂದ ಮಾಡಲ್ಪಡುವವು.

(ಜಪಾನಿನಲ್ಲಿ ಮಹಾಕ್ರಾಂತಿ)
ಕ್ರಾಂತಿಯನ್ನು ಸಂಪೂರ್ಣವಾಗಿ ತಡದಿರುತ್ತಾರೆ

ಸೇನಾಪತಿ ಜನರಲ್ ಕೌಶಿಯವರು ಟೋಕಿಯೋದಲ್ಲೆದ್ದ ಕ್ರಾಂತಿಯು ಈಗ ಸಂಪೂರ್ಣ ಸಮಾಪ್ತವಾಗಿದೆಂದು ಪ್ರಕಟಿಸಿದ್ದಾರೆ. ಕ್ರಾಂತಿಯಲ್ಲಿ ಭಾಗವಹಿಸಿದ ಸೈನಿಕರನ್ನು ಮತ್ತು ಸಂಗ್ರಾಮೋದ್ಯೋಗಸ್ಥರನ್ನು ಕ್ರಾಂತಿಗಾರರಾಗಿ ಎಣಿಸಲಾಗುವುದೆಂದು ಈ ಪ್ರಕಟಣೆಯಲ್ಲಿ ಸೂಚಿಸಿರುವರು. ಇವರು ಶಿಕ್ಷೆಗೊಳಗಾಗಲೇಬೇಕೆಂದು. ಇದರಿಂದ ವ್ಯಕ್ತವಾಗುತ್ತದೆ.

ಜಪಾನಿನ ಮುಖ್ಯ ಮಂತ್ರಿಯವರಾದ ಓಕಾಡಾರು ಕೊಲೆಮಾಡಲ್ಪಡಲಿಲ್ಲ.

ಜಪಾನಿನ ಮುಖ್ಯ ಮಂತ್ರಿಗಳಾದ ಓಕಾಡಾರನ್ನು ಕ್ರಾಂತಿಗಾರರು ಕೊಲೆಮಾಡಿದರೆಂದು ಈ ಮೊದಲು ವಾರ್ತೆ ಬಂದಿತ್ತು. ಆದರೆ, ಅವರು ಜೀವಿತರಾಗಿರುವರೆಂದು ಜಪಾನಿನ ಮುಖ್ಯ ಪಟ್ಟಣವಾದ ಟೋಕಿಯೋದಿಂದ ವಾರ್ತೆ ಬಂದಿರುತ್ತದೆ. ಕ್ರಾಂತಿಗಾರರು ಓಕಾಡಾರ ಬದಲಾಗಿ ಅವರ ಭಾವನನ್ನು ಕೊಲೆಮಾಡಿದ್ದರೆಂದು ತಿಳಿದುಬರುತ್ತದೆ. ಓಕಾಡಾರ ಭಾವನವರು ರೂಪದಲ್ಲಿ ಅವರಂತೇ ಇದ್ದರಂತೆ. ಹಾಗೇನೋರೆಯಿಂದ ಇವರನ್ನು ಮುಖ್ಯ ಮಂತ್ರಿಯ ಬದಲಾಗಿ ಕೊಲೆ ಮಾಡಿರುವರು. ಇವರು ಕ್ರಾಂತಿಯ ದಿವಸ ಓಕಾಡಾರ ಮನೆಯಲ್ಲಿದ್ದರಂತೆ. ಮುಖ್ಯ ಮಂತ್ರಿ ಓಕಾಡಾರು ಎರಡು ದಿವಸಗಳಲ್ಲಿ ಅವಿತುಕೊಂಡಿದ್ದು ಮೊನ್ನೆ ಹೊರಗೆ ಬಂದಿರುತ್ತಾರೆ. ಇವರು ಅವಿತಿದ್ದುದು ಯಾರಿಗೂ ತಿಳಿದಿರಲಿಲ್ಲ. ಕಳೆದ ಶುಕ್ರವಾರ ಇವರು ತನ್ನ ಪದ್ದಿಗೆ ರಾಜಿನಾಮೆ ಕೊಟ್ಟಿರುವರೆಂದು. ಚಕ್ರವರ್ತಿಯವರು ಇದನ್ನು ಸ್ವೀಕರಿಸದಿದ್ದುದರಿಂದ ಅವರೇ ಈಗ ಮುಖ್ಯಮಂತ್ರಿಗಳಾಗಿರುತ್ತಾರೆ.

ಕ್ರಾಂತಿಯ ನಾಯಕರು ಪ್ರಾಣತ್ಯಾಗ ಮಾಡಿರುವರು

೩ ಕೆಪ್ಟನರು ೭ ಲೆಫ್ಟನೆಂಟರು ಮತ್ತು ೫ ಇತರ ಉದ್ಯೋಗಸ್ಥರು, ಕ್ರಾಂತಿಗೆ ಕಾರಣಭೂತರಾದುದರಿಂದ ತಮ್ಮ ಉದ್ಯೋಗಗಳನ್ನು ಕಳಕೊಂಡಿರುವರು. ಕ್ರಾಂತಿಯ ನಾಯಕರ ಮೇಲೆ ಕ್ರಿಮಿನಲ್ ವ್ಯವಹಾರ ನಡೆಯಿಸಿ ಪ್ರಾಣದಂಡನೆ ವಿಧಿಸುವ ಬದಲಾಗಿ ಅವರು ಪ್ರಾಣತ್ಯಾಗ ಮಾಡಿಕೊಳ್ಳಬಹುದಾಗಿ ಸರಕಾರವು ಅಪ್ಪಣೆಕೊಟ್ಟಿರುತ್ತದೆ.

ಯುರೋಪಿನ ಶ್ರೇಷ್ಠವಾದ ವಾಯುಬಲ.

ಬ್ರಿಟನು ಇತರ ಜನಾಂಗಗಳ ದೃಷ್ಟಾಂತವನ್ನು ಅನುಸರಿಸಿ ಪ್ರಪಂಚದ ಶಾಂತಿಗಾಗಿ ಈ ವರೆಗೆ ಶಸ್ತ್ರತ್ಯಾಗ ಯೋಜನೆಯನ್ನು ಕೈಕೊಂಡಿತ್ತಂತೆ. ಜರ್ಮನಿಯು ಈಗ ವರ್ಸೇಲ್ ಒಪ್ಪಂದವನ್ನು ಮುರಿದಿರುತ್ತದೆ. ಜನಾಂಗಸಭೆಯ ಶಾಂತಿರಕ್ಷಣೆಯ ಪ್ರಯತ್ನಗಳು ನಿಷ್ಫಲವಾಗಿವೆ. ಜರ್ಮನಿಯು ಶಸ್ತ್ರಧಾರಿಯಾಗಿದೆ. ಭಯಂಕರ ಸೇನಾಬಲವನ್ನು ರಚಿಸುತ್ತದೆ. ಅವರ ವಾಯುಬಲವು ಜಗತ್ತಿನಲ್ಲಿ ಅತೀ ಶ್ರೇಷ್ಠವಾದುದಾಗಿದೆ. ಪ್ರಪಂಚದ ಎಲ್ಲಾ ಜನಾಂಗಗಳು ಯುದ್ಧಕ್ಕೆ ಸಿದ್ಧವಾಗುವಾಗ ಬ್ರಿಟನು ಜನಾಂಗಸಭೆಯ ಗೌರವಕ್ಕಾಗಿ ಹೋರಾಡುವುದು ತಪ್ಪು. ಅದ್ದರಿಂದ ಬ್ರಿಟನಿನ ಸಂಗ್ರಾಮಯೋಗ್ಯತೆಯನ್ನು ಹೆಚ್ಚಬೇಕು" ಎಂದು ಮಿ ಚೆಂಬರ್‌ಲಿನ್ನರ ಅಭಿಪ್ರಾಯ.

ಅನುಕ್ರಮಣಿಕೆ

ನೋಟಗಳು ೩
ಶ್ರೀ ರಾಮಕೃಷ್ಣ ಉತ್ಸವ ೪
ಕಂಟಕ ಪರಿಹಾರ ೫
ಜಿಲ್ಲಾ ಬೋರ್ಡಿನ ಅಧ್ಯಕ್ಷ ಚುನಾವಣೆ ೭
ವಿವಿಧ ಸಮಾಚಾರಗಳು ೯
ಅಗ್ರಲೇಖ
ಇಂಡಿಯಾ ಸರಕಾರದ ಬಜೇಟು ೧೦
ಮಂಗಳೂರು, ತಾಲೂಕುಗಳಿಂದ ೧೦
ಸ್ಫುಟವಿಚಾರಗಳು ೧೧
ವರ್ತಮಾನ ಸಂಗ್ರಹ
ವನಿತಾ ವಿಭಾಗ ೧೨
ನಿಮಗೆ ತಿಳಿದಿರುವುದೇ? ೧೪

ಸ್ವದೇಶಾಭಿಮಾನಿ.

ತಾ ೬ನೇ ಶುಕ್ರವಾರ ಮಾರ್ಚಿ ೧೯೩೬

ಇಂಡಿಯಾ ಸರಕಾರದ ಬಜೇಟು

ಇಂಡಿಯಾ ಸರಕಾರದ ಬಜೇಟನ್ನು ಎಸೆಂಬ್ಲಿಯಲ್ಲಿ ವಿವರಿಸುತ್ತಾ ಈ ವರ್ಷ ಸರ್ ಜೇಮ್ಸ್ ಗ್ರಿಗ್‌ರವರು ಭಾಷಣ ಮಾಡಿದರೇ ವಿನಾ, ಅವರ ಭಾಷಣವನ್ನು ಮೊದಲೇ ಮುದ್ರಿಸಿಲ್ಲ. ಹೀಗೆ ಮುದ್ರಿಸಿರದ ಪ್ರಯುಕ್ತ, ವಿಶೇಷವಾಗಿ ತೆರಿಗೆ, ಸುಂಕ ಮೊದಲಾದ ವುಗಳಲ್ಲಿ ಬದಲಾವಣೆಗಳು ಇರಬಹುದಾಗಿ ಜನರು ಭಾವಿಸಿದ್ದರು (ಈ ರಿಯಾಯತಿಗಳು ಜನರಿಗೆ ಮೊದಲೇ ಭಾಷಣಾನೆಯ ಮೂಲಕ ವ ಇತರೆ ಮುಖದಿಂದ ತಿಳಿದು ಬಂದಲ್ಲಿ, ಹಲವರು ಹಣ ಮಾಡುವದಾಗಿ ಒಂದು ಊಹೆ ಇದೆಯಷ್ಟೆ.) ಆದರೆ, ಭಾಷಣದಲ್ಲಿ ಅಂತಹ ವಿಶೇಷ ಗೋಪ್ಯನವಾಗಿಡತಕ್ಕದ್ದೇನೂ ಇಲ್ಲ,—ಕೇಳಿದವರಲ್ಲಿ ಅತೃಪ್ತಿಯು ಉಂಟಾಗುವಂತಹ ಬಜೇಟನ್ನು ಕುರಿತಾದ ಭಾಷಣವಿದು. ಇಂತಹದನ್ನು ಗೋಪನದಲ್ಲಿಟ್ಟು ದೊರೆತ ಪ್ರಯೋಜನವೆಂದರೆ, ಅತೃಪ್ತಿಗೆ ಇನ್ನಷ್ಟು ಪುಟ ಕೊಟ್ಟಂತಾಗಿದೆ, ಅಷ್ಟೆ.

ಕಳೆದ ಎರಡು ವರ್ಷಗಳಲ್ಲಿ ಇಂಡಿಯಾ ಖಜಾನೆಯಲ್ಲಿ ೪೧೫ ಲಕ್ಷ ರೂಪಾಯಿ ಜಮೆಯಿದೆ, ಮುಂದಣ ವರ್ಷದಲ್ಲಿ ೨೦೫ ಲಕ್ಷ ರೂಪಾಯಿ ಉಳಿತಾಯವಾಗಬಹುದೆಂದು ಅಂದಾಜು. ಈ ಬಗೆಯಾಗಿ ಉಳಿತಾಯವಾದುದು ಅನಿರೀಕ್ಷಿತವೆಂದೇ ಈ ಖಜಾನಜಿಯವರು ತಾವೂ ವಿಚಿತ್ರ ರೀತಿಯಲ್ಲಿ ಆಶ್ಚರ್ಯ ಪಡುತ್ತಾ, ಇತರರೇಕೆ ಅಷ್ಟು ಚಕಿತರಾಗಿಲ್ಲ ಎಂದೂ ಆಶ್ಚರ್ಯ ಪಡುತ್ತಾರೆ. ಕಳೆದ ವರ್ಷ ಬಜೇಟನ್ನು ಕುರಿತು ಎಸೆಂಬ್ಲಿಯಲ್ಲಿ ಚರ್ಚೆಯಾಗುತ್ತಿದ್ದಾಗ,—ಹೆಚ್ಚಾಗಿ ವಿಧಿಸಿದ ಇನ್ಕಮ್‌ಟೇಕ್ಸನ್ನು ರದ್ದುಮಾಡಿರಿ, ಎಂಬಿತ್ಯಾದಿಯಾಗಿ ಸಾರುವವರಿರಲಿಲ್ಲವೆ? ಆಗ ಅವರ ಮಾತಿಗೆ ಕಿವಿ ಕೊಟ್ಟವರು ಯಾರು?

ನೋಕರರ ತಲಬಿಗೆ ಕಡಿತ ವಿಧಿಸಿದಾಗಲೆ, ಇನ್ಕಮ್‌ಟೇಕ್ಸನ್ನು ಹೆಚ್ಚಿಸಿ,—ಖಜಾನೆಯಲ್ಲಿ ಸಿಲ್ಕು ಹೆಚ್ಚುವಂತೆ, ಇವನ್ನು ರದ್ದು ಮಾಡುತ್ತೇವೆಂದ ಖಜಾನಜಿಯವರು, ಕಳೆದ ವರ್ಷ, ನೋಕರರ ತಲಬನ್ನು ಮಾತ್ರ ಪೂರ್ಣ ಕೊಡಿಸಿಕೊಟ್ಟರೇ ವಿನಾ ಇನ್ಕಮ್‌ಟೇಕ್ಸನ್ನು ಕಳೆಯಲಿಲ್ಲ! ಎರಡು ವರ್ಷದಿಂದಲೂ ಇದೇ ಸ್ಥಿತಿಯಾಗಿದೆ ಎಂಬುದನ್ನು ಎಸೆಂಬ್ಲಿ ಮೆಂಬರರು ತಿಳಿದುಕೊಂಡು, ಈ ವರ್ಷದಲ್ಲಾದರೂ ಈ ಅಧಿಕ ಲಾಭಗಳ ಮೇಲೆ ವಿಧಿಸಿದ ಲಾಭಾದಾಯದ ಅಧಿಕ್ಯವನ್ನು-ಕೂಡಲೇ ರದ್ದು ಮಾಡಿ ... [illegible]

ಆರು ಕೋಟಿ ರೂಪಾಯಿ ಸಿಲ್ಕನ್ನು ಖಜಾನೆಯಲ್ಲಿ ಈ ವರ್ಷದ ಅಂತ್ಯಕ್ಕೆ ತೋರಿಸಿಕೊಟ್ಟ ಕೂಡಲೇ, ಸ್ವರ್ಗಭೇನೂ ಯಾರ ಕೈಗೂ ಸೇರುವುದಿಲ್ಲ! ತೆರಿಗೆಯ ಆಧಿಕ್ಯವು ಕಡಮೆಯಾಗಲಿ ಅಗಲಿ ಇಹದಲ್ಲಿಯಾದರೂ ಸ್ವಲ್ಪವು ಸೌಖ್ಯವು ಪ್ರಜೆಗಳಿಗೆ ಹೆಚ್ಚುವುದಲ್ಲ? ದುಡ್ಡಿನ ಗಂಟು ಖಜಾನೆಯಲ್ಲಿ ಉಳಿದರೆ, ಅದು ಪ್ರಜೆಗಳಿಗೆ ಕನಸಿನ ಗಂಟು ಹೊರತು ಹೆಚ್ಚೇನೂ ಎನಿಸಲಾರದು.

ಆದರೂ, ೨೦೦೦ ರೂಪಾಯಿ ವಾರ್ಷಿಕ ಉತ್ಪನ್ನಕ್ಕೆ ಕಡಮೆಯುಳ್ಳವರ ಮೇಲೆ ವಿಧಿಸಿದ ತೆರಿಗೆಯನ್ನು ರದ್ದುಮಾಡಿದುದೂ ಪುಣ್ಯ, ಆದರೆ ಇದು ಕಳೆದ ವರ್ಷದಲ್ಲಿ ರದ್ದಾಗಬೇಕಾಗಿದ್ದಿತು. ಏಕೆಂದರೆ, ನೋಕರರಿಗೆ ಸಂಬಳದ ಕಡಿತವನ್ನು ರದ್ದುಮಾಡಿದ್ದುದು ಆಗ-ಇವೆರಡು ರದ್ದಿಯಾತಿಗಳು ಅವಳಿ ಜವಳಿಯಾಗಿಯೆ ಹುಟ್ಟಬೇಕಾಗಿತ್ತು, ಹೋಗಲಿ ಈಗಲಾದರೂ ಆಗಿವೆ. ಆದರೆ, ಪುನಃ ಅಧಿಕಾದಾಯಗಳ ಮೇಲಣ ಲಾಭಾದಾಯದ ದರವನ್ನೇಕೆ ಇಳಿಸಿಲ್ಲವೊ ತಿಳಿಯದು.

ಇನ್ನೊಂದು ಸಾಧಾರಣ ಸುಖವಾರ್ತೆ ಎಂದರೆ, ಇನ್ನು ಲಕೋಟೆಗಳಿಗೆ ಅವುಗಳ ಪ್ರತಿಯೊಂದು ತೊಲಾ ತೂಕಕ್ಕೆ ಒಂದೊಂದಾಣೆಯಂತೆ ದಸ್ತೂರಿ ಹೊರಿಸುವ ಸೂಚನೆ. ಈಗ ಅರೆ ತೊಲೆಯಿಂದ ೨॥ ತೊಲೆ ತೂಕದ ತನಕ ಒಂದೂ ಕಾಲಾಣೆ ತೆರಬೇಕಾಗಿದೆ, ಆದರೆ ಅರ್ಧಾಣೆಯ ಕಾರ್ಡು ಈ ಬಜೇಟ ಕಾಲದಲ್ಲೂ ರೂಢಿಗೆ ಬರುವಂತಿಲ್ಲ. 'ಅರ್ಧಾಣೆಯ ಕಾರ್ಡಿನ ಯುಗವೇ ಮುಗಿಯಿತು' ಎಂಬ ವಾಕ್ಯವು ಕೇಳಬರುತ್ತಿದೆ. ಜನತೆಯಲ್ಲ ಅದನ್ನೇ ನಿರೀಕ್ಷಿಸಿದ್ದಿತು, ಖಜಾನೆಯಲ್ಲಿ ಹಣವೂ ಹೆಚ್ಚು ಉಳಿದಿದೆ, ಆದರೆ ಅರ್ಧಾಣೆಯ ನಾಣ್ಯದಂತೆ ಈ ಕಾರ್ಡು.

ಆಡಚಣೆಯ ದಿನಗಳು ಕಳೆದುವು ಎನ್ನುವ ಖಜಾನಜಿಯವರು, ಮೂರು ವರ್ಷಗಳಿಂದಲೂ ವರ್ಷಾಂತ್ಯದಲ್ಲಿ ಉಳಿತಾಯವನ್ನೆ ಕಂಡರೂ, ಬಜೇಟಿನ ಅಂದಾಜು ಅಂಕೆಗಳನ್ನು ಹಾಕುವಾಗ, ಆಯವನ್ನು ಸ್ವಲ್ಪ ಕಡಿಮೆಯಾಗಿಯೆ ಎಣಿಸುವ ಅಭ್ಯಾಸ ಇಟ್ಟುಕೊಂಡಿರುವರು. ಹೀಗಾಗಿ, ಮುಂದಣ ವರ್ಷದಲ್ಲಿ ಎರಡೇ ಕೋಟಿ ಸಿಲ್ಕಿನ ಅಂದಾಜು ಹಾಕಿ, ಇನ್ನು ರಿಯಾಯತಿಗಳಿಲ್ಲ ಎನ್ನುವರು. ೧೯೩೪ ೩೫ರಲ್ಲಿ, ಅಂದಾಜಿಗಿಂತಲೂ ಹೆಚ್ಚಾಗಿ ಸುಂಕವು ಒಂದೂವರೆ ಕೋಟಿ ರೂಪಾಯಿ ಜಮೆಯಾಯಿತು. ಕಳೆದ ವರ್ಷವೂ ೩೮೭ ಲಕ್ಷ ರೂಪಾಯಿ ಸುಂಕವು ಅಂದಾಜು ಮೀರಿ ಕೂಡಿ ಬಂದಿದೆ. ಇನ್ಕಮ್‌ಟೇಕ್ಸ್ ಹಣವು ಅಂದಾಜಿಗಿಂತ ಕ್ರಮವಾಗಿ ೩೦ ಮತ್ತು ೪೦ ಲಕ್ಷ ರೂಪಾಯಿ ಹೆಚ್ಚಾಗಿ ವಸೂಲಾಗಿದೆ. ಟಪ್ಪಾಲು, ಟೆಲಿಫೋನ್ ಇಲಾಖೆಗಳೂ ಹಾಗೆಯೆ. ಕ್ವೆಟ್ಟಾವನ್ನು (ಭೂಕಂಪವಾದ ಸ್ಥಳ) ಪುನಃ ರಚಿಸಲು ಸಾಲ ತೆಗೆದು ಉಪಕ್ರಮಿಸಬಹುದಾಗಿದ್ದಿತು. ಬರ್ಮವು ಪ್ರತ್ಯೇಕವಾದುದರಿಂದ ನಷ್ಟವೆನ್ನುವ ಬದಲಾಗಿ, ಉಳಿತಾಯವೇ ಉಂಟು.

ಹೀಗಿರುತ್ತ, ಖಜಾನೆಯಲ್ಲಿ ಜಮಾ ತೋರುವ ಹಣವನ್ನು ಜನತೆಯ ಸಂಕಷ್ಟ ನಿವಾರಣೆಗೂ ಅನುಕೂಲತೆಗಳ ಅಭಿವೃದ್ಧಿಗೂ ವಿನಿಯೋಗಿಸುವುದು ಸಮಂಜಸವೇ ಆಗುತ್ತಿದ್ದಿತು. ಕೃಷಿ, ಗ್ರಾಮೋದ್ಧಾರ ಕಾರ್ಯ ಮೊದಲಾದುವುಗಳಿಗೆ ಈ ವರ್ಷವೂ ಹೆಚ್ಚಿನ ಮೊಬಲಗುಗಳನ್ನು ಪ್ರತ್ಯೇಕಿಸಿ ಇಡಲಾಗಿದೆ ಎಂಬುದು ನಿಜ ಸ್ತುತ್ಯ. ಪ್ರಾಂತಿಕ ಸರಕಾರಗಳು ತೆರಿಗೆ ಎತ್ತುವುದಕ್ಕೂ ಒಂದು ಮಿತಿ ಇರುವ-ಕಾರಣ ಅಗತ್ಯವುಳ್ಳ ಪ್ರಾಂತ್ಯಗಳಿಗೆ ಅಗತ್ಯ-ಕಾಣುವಷ್ಟು ಸಹಾಯ ಧನವನ್ನು ಈ ಬಜೇಟಿನಲ್ಲಿ ಕೈಯೆತ್ತಿಕೊಡುವ ಸೂಚನೆಗಳಿದ್ದಲ್ಲಿ, ದೂರ ದೂರದ ಹಳ್ಳಿಗಳಲ್ಲಿನ ರೈತರೂ ಸುಖವಡುವಂತಾಗಿದ್ದಿತು. ತೆರಿಗೆಗಳನ್ನು ಒಂದೇ ಕ್ರಮಕ್ಕೆ ಒಳಪಡಿಸುವವರಂತೆ, ಅದನ್ನು ನೋಡಬೇಕು. ಆ ಬಳಿಕವಾದರೂ, ಈ ಸಿಲ್ಕುಗಳು ಹಳ್ಳಿಗರಿಗೆ ಒದಗಬಹುದೋ?

ನಮ್ಮ ಆಧಿಪತ್ಯದ ಆಯವ್ಯಯ

೧೯೩೬—೩೭

ಬಾಪ್ಪೆ, ನೋಡಿ ಕಾಲು ನೀಡುವ ಅತ್ಯುತ್ತಮ ಸಾಧುಸಂಪ್ರದಾಯ ಬದ್ಧವಾದ ಮದ್ರಾಸು ಸರಕಾರದ ಬಜೇಟು, ಈ ವರ್ಷವೂ ಹಾಗೆಯೆ ಚಾಪೆಯಂಚಿಗೆ ಕಾಲ್ಬೆರಳು ಅಂಟಿಸಿ, ಪೆಟ್ಟಿಯಲ್ಲಿ ಮುದುರಿಕೊಂಡು ಮಲಗಿರುವ ಸಿದ್ಧಪುರುಷನ ನಿದ್ರಾವಸ್ಥೆಯನ್ನು ಹೋಲುವುದು. ಅದರಲ್ಲೂ, ಮುಂದಣ ರಾಜ್ಯಭಾರ ಕ್ರಮದಂತೆ ಹೊಸ ಸರಕಾರವು (ಬಹುಶಃ) ಇನ್ನೊಂದು ವರ್ಷದ ಅವಧಿಯಲ್ಲಿ ರೂಪಗೊಳ್ಳಬೇಕಾಗಿರುವಾಗ ಈ ಯಜಮಾನನು ಆಡಳಿತವನ್ನು ಕೈವರ್ತಿಸಿಕೊಡುವಾಗ, ಇಂತಹ ಆಯ ೧, ವ್ಯಯ ೧, ಎಂದು ಉಳಿತಾಯದ ಸೊನ್ನೆಯನ್ನೂ ಕೈವರ್ತಿಸಿಕೊಡುವ ನಂಬಿಕೆ ತೋರುತ್ತಿದೆ. ಜಗತ್ತಿನ ಕಷ್ಟ ನೋಡಿರಿ, ಎನು ತಾಪತ್ರಯಗಳು! ನಾವು ಸಿಲ್ಕನ್ನೇನೂ ಇಟ್ಟಿಲ್ಲವಾದರೂ, ಆಯಕ್ಕೆ ಸರಿಯಾದ ವ್ಯಯವನ್ನಿಟ್ಟುಕೊಂಡು, ಬೇಕಾದರೆ ಸಾಲವೂ ಸುಸೂತ್ರವಾಗಿ ಸಿಗುವಂತೆ, ನಮ್ಮ ಆರ್ಥಿಕತೆಯನ್ನು ಕಿರಿದಾಗಿಸದೆ ಇಟ್ಟುಕೊಂಡಿದ್ದೇವೆ ಎಂದೇ ನಮ್ಮ ಖಜಾನಾ ಮಂತ್ರಿಗಳ ಭಾಷಣದ ಸಾರ ಒಳ್ಳೇದು.

ಆದರೆ,—ಆಯದಲ್ಲಿ ೮ ಲಕ್ಷ ರೂಪಾಯಿಗಳನ್ನು ಹೊಗೆಸೊಪ್ಪಿನ ಮೇಲೆ ದೊರೆವ ತೆರಿಗೆ ಎಂದು ಲೆಕ್ಕ ಎಣಿಸಿದೆ. ಆ ತೆರಿಗೆಯನ್ನು ವಿಧಿಸಬಾರದಾಗಿ, ಅದನ್ನು ಕುರಿತಾದ ವ ಸೂದೆಯನ್ನು ಟೀಕಿಸಿದ್ದಾರೆ, ಮಸೂದೆ ಇನ್ನೂ ಮಂಜೂರಾಗಿಲ್ಲ. ಅದು ಮಂಜೂರಾಗದೆ, ಈ ಎಂಟು ಲಕ್ಷ ಲಾಭವಾಗದಿದ್ದರೆ,—ತೀರ್ವೆ ರಿಯಾಯತಿಗಾಗಿ ಬಿಟ್ಟ ಮೊಬಲಗಿನಲ್ಲಿ ಎಂಟು ಲಕ್ಷ ಕಡಿಮೆಯಾಗುವುದಂತೆ. ಇಲ್ಲವೆ ಹೊಗೆಸೊಪ್ಪಿನ ಮೇಲ್ ಸುಂಕ ಹೆಚ್ಚಿಸಿಕೊಡಿರಿ, ಇಲ್ಲವೆ ತೀರ್ವೆರಿಯಾಯತಿ ಬಿಡಿರಿ ಎಂಬಂತಾಗಿದೆ ಈ ಮಾತುಗಳ ಅರ್ಥ. ಇದು ಸರಿಯೆ?

ಆಯವನ್ನು ತಾನು ಕಡಮೆಯಾಗಿಯೆ ಎಣಿಸಿದ್ದೇನೆ, ದವಸಗಳ ಬೆಲೆ ಏರಿದೆ, ಆದು ಹೆಚ್ಚಲೂ ಬಹುದು, ಪೈರಾ ಮತ್ತು ವಿದ್ಯುಚ್ಛಕ್ತಿ ಇಲಾಖೆಗಳಿಂದ ಹೆಚ್ಚಿಗ ಆಯ ದೊರೆಯಬಹುದು, ಎಂದೂ ಅವರೆನ್ನುವಾಗ, ಈ ಹೊಗೆಸೊಪ್ಪಿನ ಸುಂಕ ಮತ್ತು ತೀರ್ವೆಯ ರಿಯಾಯತಿಗಳಿಗೆ ಒಂದು ಗಂಟನ್ನೇಕೆ ಹಾಕಬೇಕಾಗಿದ್ದಿತು.

ಕಳೆದ ವರ್ಷ (೧೯೩೪ '೩೫)ರಲ್ಲಿ, ವ್ಯಯವಾಗಬೇಕಾಗಿದ್ದ ೩೦ ಲಕ್ಷ ರೂಪಾಯಿ, ವ್ಯಯ ಮಾಡಲಾರದೆ ಉಳಿಯಿತು. ಅದಕ್ಕಾಗಿ, ಈ ವರ್ಷ ಅಂದಾಜು ಹಾಕುವಾಗಲೆ, ಸುಮಾರು ೧೮ ಲಕ್ಷ ರೂಪಾಯಿಗಳನ್ನು ವ್ಯಯದ ಮೊಬಲಗು ಸಂಕ್ಷನಾಗುವ ಮೊದಲೇ ಕಳೆಯಲಾಗಿದೆ! ಹೀಗಿರುತ್ತಾ, ಇಲ್ಲಿಯೂ ಒಂದು ವೇಳೆ ಇನ್ನು ೮ ಲಕ್ಷದಷ್ಟು ವ್ಯಯವಾಗದೆ ಉಳಿಯಲು ಆಸ್ಪದವಿರುವುದಾಗಿ ತೋರುವುದರಿಂದ, ತೀರ್ವೆಯ ರಿಯಾಯತಿಯನ್ನು ರದ್ದುಗೊಳಿಸುವ ಮಾತಿಗೆ ಅಥವಾ ಶರ್ತಕ್ಕೆ ಆಸ್ಪದ ಕಾಣುವುದಿಲ್ಲ.

ಒರಿಸ್ಸ ಪ್ರಾಂತ್ಯವನ್ನು ವಿಂಗಡಿಸಿದ ಕಾರಣ, ನಮ್ಮ ಸರಕಾರಕ್ಕೆ ೩೦ ಲಕ್ಷ ಉಳಿತಾಯವಾಗಿದೆ. ಇದನ್ನು ಬಲು ಸಾಧನೆಯಿಂದ ತಾನೆ, ನಮ್ಮ ಖಜಾನೆಗೆ ಉಳಿಸಿಕೊಳ್ಳುವಂತಾಗಿದೆ ಎಂಬುದಕ್ಕೆ ಖಜಾನಾ ಮಂತ್ರಿಗಳನ್ನು ವಂದಿಸಬೇಕು.

"ಸರಕಾರವು ವ್ಯಯಿಸಬೇಕಾದ ರೀತಿಯಲ್ಲಿ ವ್ಯಯಿಸಿದ್ದರೆ, ಶಿಕ್ಷಣಕ್ಕಾಗಿ ಮೂಲ ಖರ್ಚು ೫ ಕೋಟಿ, ವಾರ್ಷಿಕ ಚಾಲ್ತಿ ಖರ್ಚು ೩॥ ಕೋಟಿ; ವೈದ್ಯಸಹಾಯಕ್ಕೆ ೮ ಲಕ್ಷ ಮತ್ತು ~~೧೨ ಲಕ್ಷ, ಕ್ಷೇಮಸಾಧನೆಗೆ ೫॥ ಕೋಟಿ;~~ ಕೃಷಿಗೆ ೫೮ ಲಕ್ಷ, ಹೀಗೆ ಮೊಬಲಗು ಬೇಕು. ಅದಕ್ಕಾಗಿ, ಇನ್ನು ಮೂಲಖರ್ಚಿಗೆ ೬೦ ಲಕ್ಷ, ವಾರ್ಷಿಕ ಚಾಲ್ತಿ ಖರ್ಚಿಗೆ ೫೦ ಲಕ್ಷದಂತೆ ಇನ್ನು ಪ್ರತಿ ವರ್ಷವೂ ವಿನಿಯೋಗಿಸಬೇಕಾಗಿದೆ" ಎಂದು ಇವರು ಸೂಚಿಸಿ, ಮುಂದಣ ಮಂತ್ರಿಗಳಿಗೆ ಈ ರಗಳೆ ತಯಾರಿಸಿಟ್ಟಿರುವಾಗ, ಈಗಲೆ ಸ್ವಲ್ಪ ಖರ್ಚಿಗೆ ತಾವು ಕೈಯಿಕ್ಕದ, ಜನಾಭ್ಯುದಯದ ಈ ಇಲಾಖೆಗಳ ವಿಷಯವೂ ತಟಸ್ಥರಾಗಿ,—ಚಾಪೆಯುದ್ದಷ್ಟೆ ಕಾಲು ನೀಡಿಕೊಂಡಿದ್ದೇವೆನ್ನುತ್ತಾರಲ್ಲ! ಪೆಟ್ಟಿ ಸ್ವಸ್ಥವಾಗಿ ಆರಾಮವಾಗಿ" ಇದೆಯೋ ಎಂದೇಕೆ ಹೇಳುವುದಿಲ್ಲ?

ಸ್ಫುಟವಿಚಾರಗಳು

1933-'34ರ ವಿದ್ಯಾ ಇಲಾಖಾ ವರದಿ

ಈ ವಾರ ಪ್ರಕಟವಾಗಿದೆ! ಐವತ್ತು ವರ್ಷಗಳ ಹಿಂದೆ ನಮ್ಮಲ್ಲಿದ್ದ ವಿದ್ಯಾಪ್ರಚಾರ ಸ್ಥಿತಿಯನ್ನು ಈಗಣ ಸ್ಥಿತಿಯೊಡನೆ ಹೋಲಿಸಿದರೆ ಎಷ್ಟೋ ಹಿಂದುಳಿದ ಸಮಾಜಗಳವರು ಯೂನಿವರ್ಸಿಟಿ ತರಗತಿಗಳಲ್ಲಿ ಸಹ ವಿದ್ಯಾರ್ಥಿಗಳನ ಕಳುಹುತ್ತಿರುವುದು ವ್ಯಕ್ತವಾಗುತ್ತಿದೆ. ಹಲವು ಪ್ರಾಂತ್ಯಗಳಲ್ಲಿ ಶಾಲೆಗಳ ಮಟ್ಟಿಗೆ ಅಸ್ಪೃಶ್ಯತೆಯ ಮಾತೇ ಇಲ್ಲವಾಗಿದೆಯಾದುದರಿಂದ ಅಸ್ಪೃಶ್ಯರಲ್ಲಿ ಪ್ರಗತಿ ಬಹಳ ಚೆನ್ನಾಗಿ ಸಾಗುತ್ತಿದೆ. ಹೆಣ್ಣುಮಕ್ಕಳ ವಿದ್ಯಾಭ್ಯಾಸದಲ್ಲಿಯು ವಿಶೇಷವಾದ ಆಸಕ್ತಿ ತೋರಿಬರುತ್ತಿದ್ದು ಮುಸ್ಲಿಮ ಸ್ತ್ರೀಯರು ಸಹ ವಿದ್ಯಾ ಪರಿಣತೆಯರಾಗಲು ಮುಂದೆ ಬರುತ್ತಿದ್ದಾರೆ. ವ್ಯಾಯಾಮ ಶಿಕ್ಷಣ, ಸ್ಪರ್ಧೆಯ ಆಟಗಳು ಇವು ಮಿತಿಮೀರಿ ಬೆಳೆದು, ಹಿಂದೆ ಹೆಸಗೊಂಡಿದ್ದ ಡ್ರಿಲ್ಲು ನಾಮಾವಶೇಷವಾಗಿದೆ. ಬೋಯ್ ಸ್ಕೌಟ್ ಗರ್ಲ್ ಗಾಯ್ಡ್ ಸಂಸ್ಥೆಗಳೂ ಚೆನ್ನಾಗಿ ಸ್ಥಾಪನೆ ಹೊಂದಿವೆ. ರೆಡ್‌ಕ್ರೋಸ್ ಎಂಬ ಉಪಚಾರದ ಮಂಡಲದ ಶಾಖೆಗಳೂ ಹುಟ್ಟಿವೆ. ಗ್ರಾಮಜೀವನವು ಗ್ರಾಮಾಭ್ಯುದಯ ಸಾಧನೆಗಳು ಜರಗಿರುವ ಪ್ರಯುಕ್ತ ಸುಧಾರಣೆ ಹೊಂದುತ್ತಲಿದೆ. ಗ್ರಾಮಸಂಘಗಳೂ ಹೆಚ್ಚಿವೆ. ಹಳ್ಳಿಗಳಲ್ಲೂ ರೇಡಿಯೆ ಸಿನಿಮಗಳ ಪ್ರಸ್ತಾಪಗಳು ತಿಳಿಯದೆ ಇಲ್ಲ. ಆದರೆ ಈ ರೀತಿಯಾಗಿ ಕೇವಲ ಸಂಖ್ಯಾಬಲ ಸೂಚಿಸುವಂತಹ ವಿದ್ಯಾಪ್ರಚಾರಕ್ಕಿಂತಲೂ ಶಿಕ್ಷಣವು ನೆಲೆ ನಿಲ್ಲುವ ಹಾಗೆ ಮಾಡತಕ್ಕ ಉಪಾಯಗಳನ್ನು ಸರಕಾರವು ಆಲೋಚಿಸುತ್ತಿದೆ. ಇವುಗಳ ತೀರ್ಮಾನದಿಂದ ಈ ಇಪ್ಪತ್ತು ವರ್ಷಗಳಲ್ಲಿ ಪಡೆದ ಅನುಭವ ಜನಗಳ ಶಿಕ್ಷಣಾಭ್ಯುದಯಕ್ಕೆ ಹೆಚ್ಚಿನ ಉತ್ತೇಜನ ಕೊಡುವುದಾಗಿ ಹಾರಯಿಸಲಾಗಿದೆ.

ಸಂಧಾನಕ್ಕೊಪ್ಪುವಂತೆ

ಇಟಲಿಯ ಮನೋಸ್ಥಿತಿಯು ತಿರುಗಿತಾದರೆ, ಇಟಲಿಯು ಯುದ್ಧಸಾಮಗ್ರಿಗಳ ಮುಖ್ಯವಾಗಿರುವ ಎಣ್ಣೆಯನ್ನು (ಪೆಟ್ರೋಲ ತಡೆಯುದಂತೆ ಮಾಡಬೇಕಾಗಿದೆ. ಲೀಗ್ ಒಫ್ ನೇಶನ್ಸಿಗೆ ಸಂಬಂಧಪಟ್ಟ ಸಮಸ್ತ ಇತರ ರಾಷ್ಟ್ರಗಳು ಈ ವಿಷಯ ಹೇಗೆ ವರ್ತಿಸುವವೊ ತಿಳಿದಿಲ್ಲ. ಆದರೆ ಇದುವರೆಗೂ ನಾಲ್ಕು ತಿಂಗಳಿಂದಲೂ ಇದೊಂದು ವಿಚಾರವು ಒಂದಲ್ಲ ಮತ್ತೊಂದು ಕಮಿಟಿಯಲ್ಲಿ ನಡೆಯುತ್ತಲೇ ಇದೆ. ಈಗ ಹದಿನೆಂಟು ರಾಷ್ಟ್ರಗಳ ಕಮಿಟೀ ಮುಂದೆ ಇಂಗ್ಲೆಂಡು ಎಣ್ಣೆಯ ನಿರ್ಬಂಧವನ್ನು ಮಂಜೂರು ಮಾಡಬೇಕಾಗಿ ಸೂಚಿಸಿ ಫ್ರಾನ್ಸು ಇಂಗ್ಲೆಂಡಿನ ಜತೆಯಲ್ಲಿದೆ, ಆದರೂ, ಮುಂದೆ ಪ್ರಸಂಗ ಒದಗಿದಾಗ, ಇಟಲಿಯು ತನಗೆ ಇದಿರಾದೀತೆಂದು, ಸಂಧಾನದ ಪ್ರಸ್ತಾಪವೆತ್ತಲು ಸೂಚಿಸಿಕೊಂಡಿದೆ, ರೋಮಿನಲ್ಲೂ ಇದೆ. ಬೇಡವೆನಿಸಿಲ್ಲ. ಈ ನಿರ್ಬಂಧವನ್ನು ಜ್ಯಾರಿಗೆ ತರಲು, ಯುನೈಟೆಡ್ ಸ್ಟೇಟ್ಸ್ ಮತ್ತು ಜರ್ಮನಿ (ಇವೆರಡೂ ಲೀಗಿನ ಹೊರಗಿವೆ) ಒಪ್ಪದೆ, ಇಟಲಿಗೆ ಬೇಕಾಗುವಷ್ಟು ಪೆಟ್ರೋಲನ್ನು ಒದಗಿಸಿಕೊಡಬಹುದು. ಇದರಿಂದ ಲೀಗಿಗೆ ಸೇರಿದವರಿಗೆ ನಷ್ಟ, ಲೀಗಿನ ನಿರ್ಬಂಧ ವ್ಯರ್ಥವಾಗುವಿಕೆ—ಇತ್ಯಾದಿ ಪರಿಣಾಮಗಳಾಗುವುವು. ನಿರ್ಬಂಧನನ್ನು ಜ್ಯಾರಿಗೆ ತರಲಾರದವರಲ್ಲಿ, ಅದು ವ್ಯರ್ಥ, ಹಾಸ್ಯಕರವಾದೀತು. ಸ್ವಸಿಕ ವ್ಯವಸ್ಥೆಯೂ ಇದರ ಬೆಂಬಲಕ್ಕೆ ಇರಬೇಕಾಗುವುದೇನೋ!

ಈ ಇಲಾಖೆಗಳಿಗೆ ಸಾಲದಿಂದಾದರೂ ಸಾಕುವ ಇತರ ಸರಕಾರಗಳು ಕೇಂದ್ರ ಸರಕಾರದ ಸಹಾಯ ಪಡೆಯುತ್ತವೆ. ನಮಗೆ ಸಾಲ ಎತ್ತಿ ಸಾಕುವ ವ್ಯಥೆಯೂ ಇಲ್ಲ. ಕೇಂದ್ರ ಸರಕಾರದ ಸಹಾಯವೂ ದೊರೆಯುವುದಿಲ್ಲ. ಕೇಂದ್ರ ಸರಕಾರದ ಖಜಾನಾ ಮಂತ್ರಿಗಳು ನಮ್ಮ ಸಂಸ್ಥಾನದ ಕಡೆಗೆ ಕಾಲು ನೀಡಿ ಸಹ ನಿದ್ದೆ ಹೋಗುವುದಿಲ್ಲ. ಅವರ ಸಂದರ್ಶನೆಯಂತೂ ತೀರ ಅಪರೂಪ.

ಜನರ ಮೇಲೆ ವಿಧಿಸಲಾಗಿರುವ ಕಂದಾಯದ ಕ್ರಮ ಮೊದಲಾದುವನ್ನು ಎಲ್ಲಿ ಏರಿಸಿ ಎಲ್ಲಿ ಇಳಿಸಬೇಕು ಎಂಬುದನ್ನು, ಈ ಮಂತ್ರಿಗಳು ಇಷ್ಟರಲ್ಲೇ ವಿವರಿಸಿ ಪ್ರಕಟಿಸಲಿರುವರು ಎಂದು ತಿಳಿಯುತ್ತೇವೆ. ಇದರಿಂದ ಜನತೆ ಬಾಧೆಯದನ್ನು ತೀರ್ವೆಯ ಅಂಶವು ಮಾತ್ರ ವಾದೀತೆಂದೂ, ಹಲವು ಜಿಲ್ಲೆ ತೆರಿಗೆಗಳು ಅಂಗಗಳಾಗುವವೆಂದೂ ನಂಬಲಾಗಿದೆ.

ಶ್ರೀ ರಾಮಕೃಷ್ಣ ಪರಮಹಂಸ ಶತಮಾನೋತ್ಸವ.

ಒಂದು ನೂರು ವರ್ಷಗಳ ಹಿಂದೆ, ಬಂಗಾಳದ ಕಾಮಾರಪುರ ಹಳ್ಳಿಯಲ್ಲಿ ಜನ್ಮವೆತ್ತಿದವನೊಬ್ಬ ಮಹಾ ಪುರುಷನ ದೆಸೆಯಿಂದ ಜಗತ್ತಿನ ಸ್ತ್ರೀಪುರುಷರ ಜೀವನದ ಮೇಲೆ ವಿಶೇಷ ಪರಿಣಾಮಗಳು ಉಂಟಾಗಿವೆ. ದೀನ ಕುಟುಂಬದಲ್ಲಿ ಜನ್ಮವೆತ್ತಿ, ೧೭ನೇ ವಯಸ್ಸಿನ ತನಕ ಸಂಸಾರದಲ್ಲಿ ಸೇರಿದ್ದು, ದೇವಪೂಜಾದಿ ನಿತ್ಯನಿಯಮಗಳನ್ನು ಮಾಡಿ, ೧೯ರಲ್ಲಿ ದಕ್ಷಿಣೇಶ್ವರದಲ್ಲಿನ ಕಾಳೀ ದೇವಾಲಯದಲ್ಲಿ ಇತನು ಅರ್ಚಕನಾದನು. ಅಲ್ಲಿಯೆ, ಪಾರಲೌಕಿಕ ವಿಚಾರದಲ್ಲಿ ಈತನಿಗೆ ಬಹಳವಾಗಿ ಆಸಕ್ತಿ ತೋರಿತು. ಕಠಿಣ ತಪಸ್ಸು ಇವನ ಅನುನಿತ್ಯದ ನಿಯಮವಾಯಿತು. ಹನ್ನೆರಡು ವರ್ಷ ಇಂತಹ ಜೀವನದಲ್ಲಿ ನಿರತನಾಗಿ, ಶಿಷ್ಯವರ್ಗವನ್ನು ಈತನು ಮಾಡಿಕೊಂಡನು. ಅವರೂ ಅವರ ಶಿಷ್ಯರೂ ಎಷ್ಟೋ ನೂರು ಸ್ವಾಮಿಯರಾಗಿ, ಶ್ರೀ ವಿವೇಕಾನಂದರ ಕಾಲದಿಂದ ಜಗತ್ತಿನಲ್ಲಿ ಎಲ್ಲೆಲ್ಲಿಯೂ ಭಕ್ತಿಶ್ರದ್ಧೆ ಸೇವಾಧರ್ಮಗಳನ್ನು ಸೇರುತ್ತಲಿದ್ದಾರೆ. ನಿಸ್ವಾರ್ಥ ಸೇವಾ ಧರ್ಮವೇ ಇವರ ಮತ. ದೇಹದಂಡಿಸಿ ಸ್ವರ್ಗವೆಂದು ಇತನೆಂದುದಿಲ್ಲ. ದುಃಖವನ್ನು ಕಡಿಮೆ ಮಾಡುವುದಕ್ಕಾಗಿಯೇ ಈತನ ಹೋರಾಟವಾಗಿದ್ದಿತು. ಸಾಧನೆ ಮುಕ್ತಿಯ ರೀತಿ ಎಂದೇ ಈತನ ಬೋಧೆ. "ಬೆಣ್ಣೆ ಬೇಕಾದವನು ಮೊಸರು ಕಡೆಯಬೇಕು ಎನ್ನುವ ಹಾಗೆಯೆ, ಬೆಣ್ಣೆ ಮೊಸರಲ್ಲಿದೆ ಎಂದೇ ಕೂತರೆ ಅದೇನೂ ದೊರೆಯದೆನ್ನುವ ಹಾಗೆಯೆ, ದೇವರಲ್ಲಿ ನಂಬಿ ಆತನು ಇದ್ದಾನೆ ಎಂದರೇನೂ ಆತನ ಪರಿಚಯ ತಿಳಿಯದು. ಸ್ವಕರ್ತವ್ಯವನ್ನು ಪ್ರಸನ್ನ ಮಾಡುತ್ತಿದ್ದರೆ ದೇವರು ಪ್ರಸನ್ನನಾಗುವನು" ಎಂಬುದ ಆತನ ಬೋಧನೆಗಳಲ್ಲೊಂದು. ದೀನರಿಗೂ ದೀನನಾದವನಿಗೆ ದೇವರು ದೊರೆಯುವನು, ಎಂಬಾತನ ತತ್ವವು ತೀರ ಸಾಮಾನ್ಯರಿಗೂ ಸುಲಭವಾಗಿ ತಿಳಿಯಲು ಅನುಕೂಲವಾಗಿದೆ. ಸಾಮಾನ್ಯರು ಕಾರ್ಯ ಪ್ರಚುರ, ವಾಚಾಲರಲ್ಲಿ ದೂರದಿಂದಲೇ ರಾಮಕೃಷ್ಣರ ಬೋಧೆ ಸವಿ ಸ್ತುತ್ಯ ಹರಡಿದೆ. ಅದು ಕಾರಣವೇ ಎಲ್ಲೆಲ್ಲಿಯೂ ಈ ಶತಮಾನೋತ್ಸವವು ತಕ್ಕಂತೆ ಜರುಗಿತು. ಏಳು ಲಕ್ಷ ರೂಪಾಯಿ ಕೂಡಿಸಿ ಸರ್ವಧರ್ಮ ಸಮನ್ವಯವು ಕೈಗೂಡುವಂತೆ ಸಾಧನೆಮಾಡಿ ಸ್ವಾಮಿಯರ ಶಿಷ್ಯವೃಂದದ ನಿರ್ಧಾರವಾಗಿದೆ. ಕೀರ್ತಿಗಲ್ಲ, ಕರ್ತವ್ಯಕ್ಕಾಗಿ ದುಡಿಯುವವರಿವರು.

ಮಂಗಳೂರು

ಸ್ಟೀಮರುಗಳು.

ದಿ ಬೊಂಬೈ ಸ್ಟೀಮ್ ನೇವಿಗೇಶನ್ ಕಂಪೆನಿ ಲಿಮಿಟೆಡ್ ಮಂಗಳೂರು — ಈ ಕಂಪೆನಿಯ ಕಾರ್ವಾರ ಎಂಬ ಸ್ಟೀಮರು ಮಾರ್ಚ ತಾ ೬ನೇ ಶುಕ್ರವಾರ ಮಂಗಳೂರಿಗೆ ಬಂದು, ತಾ. ೭ನೇ ಶನಿವಾರ ಬೆಳಗ್ಗೆ ೯ ಗಂಟೆಗೆ ಬೊಂಬಾಯಿಗೆ ತೆರಳುವುದು.

ಪ್ರಕಟಣೆ

ಕೌನ್ಸಿಲ್ ಆಫ್ ಸ್ಟೇಟಿಗೆ ಕಾಂಗ್ರೆಸ್ ಉಮೇದ್ವಾರರನ್ನು ನಿಲ್ಲಿಸಬೇಕಾಗಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ನಿರ್ಣಯಿಸಿರುವರು. ಮದ್ರಾಸ್ ಅಧ್ಯಕ್ಷ ನಾಲ್ಕು ಸ್ಥಾನಗಳಿವೆ. ಚುನಾವಣೆಯು ಸಿಂಗಲ್ ಟ್ರಾನ್ಸ್‌ಫರೇಬಲ್ ವೋಟಿನ ಕ್ರಮದಲ್ಲಿ ನಡೆಯುವುದು. ದಕ್ಷಿಣ ಕನ್ನಡ ಮತ್ತು ಮಲಬಾರಿನಿಂದ ಉಮೇದ್ವಾರರಾಗಿ ನಿಲ್ಲಲು ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯಬೇಕಾಗಿ ಅಪೇಕ್ಷಿಸಲಾಗುತ್ತದೆ ಎಂದು ಕಾರ್ಯದರ್ಶಿ, ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಮಂಗಳೂರು ಇವರು ತಿಳಿಸುತ್ತಾರೆ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ.

ತಾ. ೧—೩—೩೫ರಿಂದ ತಾ ೩೧—೧—೩೬ರ ವರೆಗಿನ ಜಮಾ ಖರ್ಚಿನ ಪಟ್ಟಿ. ಜಮಾ: ತಾಲೂಕು ಕಾಂಗ್ರೆಸ್ ಕಮಿಟಿಗಳಿಂದ ... ತ್ತಿನ ಶಿಲ್ಕು ಜಮಾ ರೂ. ೨೭೯—೯—೩, ಜಿಲ್ಲಾ ಕಮಿಟಿಯ ಸದಸ್ಯರ ವರ್ಗಣಿ ರೂ. ೧೪—೦—೦, ಜುಮುಲಾ ರೂ. ೧೦೫೯—೪—೩.

ಖರ್ಚು — ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಸಂದದ್ದು ರೂ ೩೫೩—೧೧—೦, ಪ್ರಯಾಣದ ಖರ್ಚು (ಪ್ರಚಾರ ಇತ್ಯಾದಿ ಬಗ್ಗೆ) ರೂ ೧೪೭—೭—೦, ಮುದ್ರಣ ಮತ್ತು ಟೈಪಿಂಗ್ ರೂ ೧೪೫—೧೩—೦, ಸ್ಟೇಶನರಿ ಕುರ್ಚಿ ಮೇಜು ಇತ್ಯಾದಿಗಳು ರೂ ೯೯—೮—೦, ಆಫೀಸು ಬಾಡಿಗೆ ರೂ ೪೦—೦—೦, ಸಂಬಳ ಮತ್ತು ವಾಲಂಟಿಯರುಗಳಿಗೆ ರೂ ೫೫—೦—೦. ವರ್ಗಣಿ ವಸೂಲು ಮಾಡಿದವರಿಂದ ಬರಲಿಕ್ಕಿರುವ ಮೊಬಲಗು ರೂ ೫೧—೦—೦, ಟಪ್ಪಾಲು ತಂತಿ ಇತ್ಯಾದಿ ರೂಪಾಯಿ ೧೬—೬—೧೧, ಇತರ ಖರ್ಚು ರೂ. ೪೧—೧೩—೧. ಜುಮುಲಾ ಖರ್ಚು ರೂ ೧೦೨೦—೧೨—೦. ಶಿಲ್ಕು ರೂ ೩೮—೯—೩.

ಸಿಟಿ ಆರ್ಯಸಮಾಜದಲ್ಲಿ ಭಾಷಣ

ಇದೇ ತಿಂಗಳ ತಾ ೮ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮ ೩೦ಕ್ಕೆ ಇಲ್ಲಿಯ ಸಿಟಿ ಆರ್ಯಸಮಾಜದ ಮಂದಿರದಲ್ಲಿ "ಅದ್ವೈತ"ದ ಕುರಿತು ಭಾಷಣಗಳೂ ಪ್ರಶ್ನೋತ್ತರಗಳೂ ಜರಗುವವು. ಸರ್ವರೂ ಸಹಕರಿಸಬೇಕಾಗಿ ವಿನಂತಿ ಎಂದು ಪತ್ರೋಪಮಾರ್ಗದರ್ಶಿಯವರು ತಿಳಿಸುತ್ತಾರೆ.

ಸಿಲೋನ್, ಮದ್ರಾಸ್ ವ ಧರ್ಮ ಸೇಲಂ ಕೊಚ್ಚಿ ತಿರುಚಿನಾಪಳ್ಳಿ ಬೆಂಗಳೂರು ಮೈಸೂರು ಮುಂತಾದ ಪ್ರಾಮುಖ್ಯ ಪ್ರದೇಶಗಳಲ್ಲಿ ಅನೇಕ ಬಹುಮಾನ ಪತ್ರಗಳನ್ನೂ ಸುವರ್ಣ ಪದಕಗಳನ್ನೂ ಪಡೆದು ಕೀರ್ತಿಶಾಲಿಯಾಗಿ ಈಗ ತಾ ೭ನೇ ... ಬಂದ (೧ ಮಂದಿ ಶಿಷ್ಯವರ್ಗ) ಶ್ರೀ ... ತನಂದಿಬ ... ಇವರು ಇಲ್ಲಿನ ಸ್ಥಳೀಕ ಹಲವು ಮಹನೀಯರು ಸಂಗೀತಪ್ರೇಮಿಗಳೂ ಆಗಿರುವ ವಿದ್ವಜ್ಜನರ ಮನೋಭಿಪ್ರಾಯದಂತೆ ಇಲ್ಲಿಯ ಮಹಿಳೆಯರಿಗೆ ಒಂದು ಸ್ಥಾಪಿಸ ವರಾರಿ ಬಾಲೆ ... ಗಳ ವನ್ನು ಹಾರ್ಮೋನಿಯಂ ಕಲಿಸುವ ಶಾಲೆಯನ್ನು ತೆರೆದು ವರೆ ಒ ... ಕೇಳಬ ... ತ್ತದೆ. ಗಾಯನ ಕಲಾಭಿಮಾನಿಗಳು ಸಂಗೀತಶಾಲೆಯ ಪ್ರಾರಂಭದ ತಾರೀಕನ್ನು ಗಮನಿಸಿ.

ವಿದ್ಯಾರ್ಥಿನಿಯರಿಗಾಗಿ ಹಿಂದೀ ಸಂಗೀತ ಸ್ಪರ್ಧೆ

ಇದೇ ಎಪ್ರಿಲ್ ತಾ ೧೦—೪—೩೬ರಲ್ಲಿ ಇಲ್ಲಿಯ ಬೆಸೆಂಟ್ ಹೆಣ್ಣುಮಕ್ಕಳ ಶಾಲೆಯಲ್ಲಿ ೧೫ ವರ್ಷಕ್ಕೆ ಕೆಳಗಿನ ನಾಲ್ಕನೆ ಫಾರ್ಮ ಅಥವಾ ಆರನೇ ಕ್ಲಾಸುಗಳಿಗೆ ಮೇಲ್ಪಡದ ತರಗತಿಗಳಲ್ಲಿ ಓದುವ ವಿದ್ಯಾರ್ಥಿನಿಯರಿಗಾಗಿ ಒಂದು ಹಿಂದೀ ಸಂಗೀತ ಸ್ಪರ್ಧೆಯನ್ನು ಇಲ್ಲಿಯ ಥಿಯೊಸೋಫಿಕಲ್ ಸಂಘದ ಕಡೆಯಿಂದ ಜರಗಿಸುವದು. ಇದಕ್ಕೆ ಶಂಕರ್ ವ್ ಎಸ್ ಕಾಮತರವರ ಸಂಗೀತದ ಕಪ್ ಬಹುಮಾನವಾಗಿದೆ.

ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನ ಸಭೆ

ಕಳೆದ ಶನಿವಾರ ಅಪರಾಹ್ನ ಕಲೆಕ್ಟರರ ಆಫೀಸಿನಲ್ಲಿ ನಮ್ಮ ಡಿ। ಎ। ಕೌನ್ಸಿಲಿನ ರಾವ್ ಬಹದ್ದೂರ್ ಎನ್ ವೆಂಕಟರಾಯರ ಅಧ್ಯಕ್ಷತೆಯಲ್ಲಿ ಜರಗಿತು. ೧೨ ಜನ ಗಳಾದ ಮೆಂಬ್ರರಿದ್ದವರೂ ಹಾಜರಿದ್ದರು. ಮೆಂಬ್ರರ ಸಂಖ್ಯೆ ಕಡಿಮೆಯಾಗಿದ್ದರೂ ಚರ್ಚೆಯು ಗಂಟೆಗಳು ದೊಡ್ಡದಾಗಿದ್ದುವು. ಶಾಲೆಗಳನ್ನು ಇಡುವುದು ತೆಗೆಯುವುದು ಮಂಜೂರಾತಿ ಕೊಡುವುದು ಬಿಡುವುದು ಇವೆಲ್ಲ ಚರ್ಚೆಗಳು ಜೋರಾಗಿ ನಡೆದುವು.

ಶ್ರೀ। ಚೆಟ್ಟೂರರು ದಿವಂಗತರಾದರು

ಇಲ್ಲಿಯ ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ। ಟಿ ಕೆ ಚೆಟ್ಟೂರರವರು ಮದ್ರಾಸಿನಲ್ಲಿ ದಿವಂಗತರಾದರು. ಇವರ ಬದಲಿಗೆ ಅನಂತಪುರ ಕಾಲೇಜಿನ ಕೆಮಿಸ್ಟ್ರಿ ಲೆಕ್ಚರರಾದ ಮಿ। ನಾರಾಯಣ ಗೌಂಡರ್ ಬಿ ಎಸ್ ಸಿ (ಆಕ್ಸ್‌ಫರ್ಡ್) ಇವರು ಸದ್ಯದಲ್ಲೇ ಬರಲಿರುವರು.

ಸಂತಾಪಸೂಚಕ ಸಭೆ.

ಶ್ರೀಮತಿ ಕಮಲಾ ನೆಹರೂರವರ ಅಕಾಲಮರಣದ ಸಂಬಂಧ ಕಳೆದ ಆದಿತ್ಯವಾರ ಛಪ್ಪನ್ ಮೈದಾನಲ್ಲಿ ಒಂದು ಸಾರ್ವಜನಿಕ ಸಭೆ ಸೇರಿ ಸಂತಾಪಸೂಚನೆಯ ಪ್ರಸಕ್ತಿಗಳು ನಡೆದುವು.

ಸಿನೆಟ್ ಸದಸ್ಯರ ಚುನಾವಣೆ

ಮಂಗಳೂರು ಮುನಿಸಿಪಾಲಿಟಿಯಿಂದ ಮದ್ರಾಸು ಸೆನೆಟಿಗೆ ಸದಸ್ಯರನ್ನು ಆರಿಸುವ ಸಂಬಂಧವಾದ ಓಟುಗಳು ತಾ ೨೮ನೇ ಮಧ್ಯಾಹ್ನ ಖಜಾನಾ ಡಿಪ್ಯುಟಿ ಕಲೆಕ್ಟರರ ಸಮಕ್ಷಮ ಎಣಿಸಲ್ಪಟ್ಟುವು. ಉಮೇದ್ವಾರರುಗಳಾಗಿದ್ದ ರಾ। ಗಳಾದ ಎಂ. ಮಾಧವರಾವ್ ಎಂ ಎ ತೆಳ್ಳಿಕರ್ ಮತ್ತು ರಾ। ಬ ನ ವೆಂಕಟರಾವ್ ಇವರಿಗೆ ... ಯವರೇ ಆರಿಸಲ್ಪಟ್ಟರು. ಈ ಚುನಾವಣೆಯಲ್ಲಿ ಕೆಲವು ದೋಷಗಳಿವೆಯೆಂದು ರಾವ್ ಬಹದ್ದೂರರು ಆಕ್ಷೇಪಣೆಯನ್ನೆತ್ತಿರುವರು.

ಡಿ। ಬೋ। ಅಧ್ಯಕ್ಷರ ಚುನಾವಣೆ

ಇದೇ ತಾ ೨ನೇ ಸೋಮವಾರ ಮಧ್ಯಾಹ್ನ ೧೨ ಗಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಬೋರ್ಡ ಮೆಂಬರರ ಸಭೆ ಅದರ ಆಫೀಸಿನಲ್ಲಿ ನೆರೆಯಿತು. ಕಮ್ಮ ಕಲೆಕ್ಟರ್ ಪ್ರೆಸಿಡೆಂಟರು ಅಧ್ಯಕ್ಷಸ್ಥಾನ ವಹಿಸಿದ್ದರು. ಪ್ರಥಮತಃ ದಿವಾನ್ ಬಹದ್ದೂರ್ ಬಿ. ಮಹಾಬಲ ಹೆಗ್ಗಡೆಯವರೂ ಶ್ರೀ। ತಿರುನಂಬುಯವರೂ ರಾಜಭಕ್ತಿಯ ಪ್ರಮಾಣ ಮಾಡಿದ ಮೇಲೆ, ಅಧ್ಯಕ್ಷರ ಚುನಾವಣೆಯ ಕುರಿತಾದ ನಿಯಮಾವಳಿಗಳನ್ನು ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಓದಿ ಹೇಳಲಾಯಿತು. ಅಧ್ಯಕ್ಷಸ್ಥಾನಕ್ಕೆ ಶ್ರೀ। ಎ ಬಿ ಶೆಟ್ಟಿರ ಹೆಸರನ್ನು ಶ್ರೀ। ಎಂ ಸದಾಶಿವರಾಯರು ಸೂಚಿಸಿದರು. ಮಿಸ್ಟರ್ ಜೆ ಈಶ್ವರದು ಅದನ್ನು ಅನುಮೋದಿಸಿದರು. ದಿವಾನ್ ಬಹದ್ದೂರ್ ಬಿ ಎಂ ಹೆಗ್ಗಡೆಯವರ ಹೆಸರನ್ನು ಮಿ। ಶ್ರೀಕೃಷ್ಣರು ಸೂಚಿಸಿದರು. ಶ್ರೀ। ಕೆ ಸದಾಶಿವ ಅಡಿಗರು ಅದನ್ನು ಅನುಮೋದಿಸಿದರು. ಹೀಗೆ ಈ ಸ್ಥಾನಕ್ಕೆ ಇಬ್ಬರು ಉಮೇದ್ವಾರರ ಸಂಬಂಧ, ಮೆಂಬರರ ಮತ ತೆಗೆಯಲಾಗಿ, ಶ್ರೀ। ಎ ಬಿ ಶೆಟ್ಟರಿಗೆ ೨೦ ಓಟುಗಳೂ ಶ್ರೀ। ಹೆಗ್ಗಡೆಯವರಿಗೆ ೨೨ ಓಟುಗಳೂ ದೊರಕಿ ಹೆಗ್ಗಡೆಯವರೇ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. (ಕಾಂಗ್ರೆಸ್ ಡಿ। ಬೋ। ಮೆಂಬರರು ೨೮ ಮಂದಿ ಇದ್ದರೂ ಹೆಗ್ಗಡೆಯವರಿಗೆ ೧೪ ಓಟುಗಳ ಬದಲು ೨೨ ಓಟು ಎಲ್ಲಿಂದ ಸಿಕ್ಕಿತೆಂದು ಗೊತ್ತಿಲ್ಲ.) ಆ ಮೇಲೆ ಕಲೆಕ್ಟರರು ಡಿ। ಬೋರ್ಡಿಗೆ ಕಲೆಕ್ಟರರ ಆಫೀಸು ಕಾಣ್ಪವಲ್ಲವೆಂದೂ ಬೋರ್ಡಿನೊಡನೆ ಸಹಕರಿಸಿ ಮ ನ್ನಣೆಯ ಆಫೀಸೇ ಆದೆಂದೂ ಎರಡು ಗೌರವದ ಮಾತುಗಳಾಡಿ ಹೆಗ್ಗಡೆಯವರಿಗೆ ಹಸ್ತಲಾಘವವನ್ನು ಕೊಟ್ಟು ತೆರಳಿದರು. ಆ ಮೇಲೆ ವೈಸ್ ಪ್ರೆಸಿಡೆಂಟರ ಚುನಾವಣೆಯು ಚುನಾಯಿಸಲ್ಪಟ್ಟ ಪ್ರೆಸಿಡೆಂಟರಾದ ಶ್ರೀ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ। ಕೆ ಜೆ ಬಲ್ಲಾಳರವರ ಶ್ರೀ। ... ಜೆ ಗೋನ್ಸಾಲ್ವಿಸರ ಹೆಸರನ್ನು ಉಪಾಧ್ಯಕ್ಷರ ಸ್ಥಾನಕ್ಕೆ ಸೂಚಿಸಿದರು. ಶ್ರೀ ಮಂಜಯ್ಯ ಹೆಗ್ಗಡೆಯವರು ಅದನ್ನು ಅನುಮೋದಿಸಿದರು. ಇದಕ್ಕೆ ಪ್ರತಿಸ್ಪರ್ಧಿಯಾಗಿ ಬೇರೆ ಯಾರೂ ನಿಲ್ಲದಿದ್ದುದರಿಂದ ಶ್ರೀ ಗೋನ್ಸಾಲ್ವಿಸರೇ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು. ಸಭೆ ಮುಕ್ತಾಯವಾಗುವ ಮೊದಲು ಶ್ರೀ ಹೆಗ್ಗಡೆಯವರು ತಮ್ಮನ್ನು ಚುನಾಯಿಸಿದ ಎಲ್ಲಾ ಮೆಂಬರರಿಗೂ ಕಾಂಗ್ರೆಸ್ ಮೆಂಬರರಿಗೂ ಕೂಡ ಧನ್ಯವಾದಗಳನ್ನು ಅರ್ಪಿಸಿದರು.

ಕದ್ರಿಯಲ್ಲಿ ಬೆಂಕಿ.

ಕಳೆದ ಆದಿತ್ಯವಾರ ಸಾಯಂಕಾಲ ಕದ್ರಿಯ ಒಂದು ಮನೆಯು ಬೆಂಕಿ ಹತ್ತಿ ಉರಿದು ಹೋಯಿತು. ಆಸುಪಾಸಿನ ಜನರ ಬಹಳವಾದ ಪ್ರಯತ್ನ ... ಫೈರ್ ಬ್ರಿಗೇಡಿನವರ ಪ್ರಯತ್ನದಿಂದ ಬೆಂಕಿ ಭಯಂಕರ ರೂಪವನ್ನು ತಾಳದ್ದು ಈ ಬೆಂಕಿಯು ನಂದಿಸಲ್ಪಟ್ಟು ಎರಡನೇದೂ ನಷ್ಟಸಂಭವಿಸಿಲ್ಲ. ವ ದಿವಾರಿಯ ... ರುವ ನಮ್ಮ ಮುನಿಸಿಪಾಲಿಟಿಯು ಫಾಯರ್ ಎಂಜಿನ್ ವಿಷಯವಾಗಿ ಎಂದು ಆಲೋಚಿಸುವುದೋ!

ಶ್ರೀ ರಾಮಕೃಷ್ಣರ ಸ್ಮಾರಕ ದಿನ.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘದವರು (ತಾ. ೧—೩—೩೬)ನೇ ದಿನ ಶ್ರೀ ರಾಮಕೃಷ್ಣ ಪರಮಹಂಸರ ಜಯಂತಿ ದಿನಾಚರಣೆಯನ್ನು ಆಚರಿಸಿ ಬೆಳಗ್ಗೆ ಗಂಟೆ ೭ಕ್ಕೆ ಶ್ರೀ ರಾಮನಾಮ ಭಜನಾ ಮಂಡಲಿಯವರ ಭಜನಾ ಒಡಗೂಡಿ ನಗರ ಸಂಕೀರ್ತನೆ ಹೊರಟು ಸಂಘದ ಕೊಡಿಯಾಲಬೈಲ್ ಆಫೀಸಿಗೆ ಬಂದು ಭಜನೆ ಪೂಜಾರಾಧನೆ, ಫಲಾಹಾರಾದಿಗಳಿಂದ ಕಾರ್ಯಕ್ರಮಗಳನ್ನು ನಡೆಸಿದರು. ನಂತರ ಮಧ್ಯಾಹ್ನ ಗಂಟೆ ೧೨ ತನಕ ಸುಮಾರು ೧೨೦೦ ಜನ ಬಡಬಗ್ಗರಿಗೆ ಸದರಿ ಆಶ್ರಮದವರು ಮತ್ತು ವಿವೇಕಾನಂದ ಭಿಯವರು ಕೂಡ ಸೇರಿ ಅಕ್ಕಿ ಮತ್ತು ಬಾಳೆಹಣ್ಣುಗಳನ್ನು ಹಂಚಿದರು.

ಶೋಕ ಪ್ರದರ್ಶನ ಸಭೆ.

ಇದೇ ತಾ ೨ರಲ್ಲು ದಿವಂಗತ ಟಿ. ಕೆ ಚೆಟ್ಟೂರರವರ ಸ್ಮಾರಕಕ್ಕಾಗಿ ಒಂದು ಶೋಕಪ್ರದರ್ಶನದ ಸಭೆ ಗ। ಕಾಲೇಜಿನಲ್ಲಿ ಜರಗಿ ಕಾಲೇಜಿನ ಅಧ್ಯಾಪಕರಾದ ಶ್ರೀ। ಕೆ ವೆಂಕಟರಾವ್, ಯು ಮಂಗೇಶರಾವ್ ಶ್ರೀನಿವಾಸಾಚಾರ್ ಮೊದಲಾದವರ ಮತ್ತು ಹೊಸ ಹಳೆಯ ವಿದ್ಯಾರ್ಥಿಗಳು ಕೆಲವರು ಮೃತರ ಸಂಬಂಧದ ಗುಣಕಥನದ ಭಾಷಣಗಳಾಗಿ ಸಂತಾಪ ಸೂಚನೆಯ ಒಂದು ಠರಾವು ಮಂಜೂರಾಯಿತು. ಚೆಟ್ಟೂರರವರ ಒಂದು ಪ್ರತಿಮೆಯನ್ನು ನಿರ್ಮಿಸಿ ಇಡಬೇಕಾಗಿಯೂ ಆಲೋ...

ಟೆನ್ನಿಸ್ ಪಂದ್ಯಾಟವು.

ಸ್ಥಳೀಯ ಕೊಸ್ಮೊಪೊಲಿಟನ್ ಕ್ಲಬ್ಬಿನ ವಾರ್ಷಿಕ ಟೆನ್ನಿಸ್ ಪಂದ್ಯಾಟವು ಇದೇ ಮಾರ್ಚ ತಾ. ೨೪ರಿಂದ ಪ್ರಾರಂಭಿಸಲ್ಪಡುವುದು. ಆಟದಲ್ಲಿ ಚೆನ್ನಾಗಿ ಪರಿಚಿತರಾದವರು ಇದರಲ್ಲಿ ಭಾಗವಹಿಸಿ ಪ್ರೋತ್ಸಾಹಿಸಬೇಕಾಗಿ ಸದರಿ ಕ್ಲಬ್ಬಿನ ಸೆಕ್ರಿಟರಿಯವರು ಸರ್ವರಿಗೂ ತಿಳಿಸುತ್ತಾರೆ.

ವಿದ್ಯುತ್ ದೀಪಗಳು

ಮಂಗಳೂರು ಮುನಿಸಿಪಾಲಿಟಿಯಲ್ಲಿ ಮಾರ್ಚ ತಿಂಗಳಲ್ಲಿ ದೀಪ ಹೊತ್ತಿಸುವ ತಖ್ತೆ — ಇದೇ ತಾ ೧ರಿಂದ ೯ರ ವರೆಗೆ ಇಲೆಕ್ಟ್ರಿಕ್ ದೀಪಗಳು ಸಾಯಂಕಾಲ ಗಂಟೆ ೭ರಿಂದ ೮ರ ವರೆಗೆ. ತಾ ೧೦ರಿಂದ ೧೧ರ ವರೆಗೆ ಸಾಯಂಕಾಲ ೭ರಿಂದ ೧೦ರ ವರೆಗೆ. ತಾ ೧೨ರಿಂದ ೧೩ರ ವರೆಗೆ ಸಾಯಂಕಾಲ ೭ರಿಂದ ೧೧ರ ವರೆಗೆ. ತಾ ೧೪ರಿಂದ ೧೫ರ ವರೆಗೆ ಸಾಯಂಕಾಲ ೭ರಿಂದ ೧೨ರ ವರೆಗೆ. ತಾ ೧೬ರಿಂದ ೩೧ರ ವರೆಗೆ ಸಾಯಂಕಾಲ ೭ರಿಂದ ೧೮ ವರೆಗೆ. ವೆಬಿಸ್ಟರ್ ಮಾರ್ಕೆಟಿನ ಬಳಿ ಮಾತ್ರ ಸದರಿ ದೀಪಗಳು ಪ್ರತಿಯೊಂದೂ ಸಾಯಂಕಾಲ ೬॥ಯಿಂದ ೧೦ ಗಂಟೆಯ ವರೆಗೆ ಉರಿಸಲ್ಪಡುವುದು.

ಚಿಮಿಣಿ ಎಣ್ಣೆಯ ದೀಪಗಳು.

ಮಾರ್ಚ ತಾ ೧ರಿಂದ ೯ರ ವರೆಗೆ ಚಿಮಿಣಿ ಎಣ್ಣೆಯ ದೀಪಗಳು ಉರಿಸಲ್ಪಡುವುದಿಲ್ಲ. ತಾ ೧೦ರಿಂದ ೧೨ರ ವರೆಗೆ ಸಾಯಂಕಾಲ ೭ರಿಂದ ೧೦ರ ವರೆಗೆ. ತಾ ೧೩ರಿಂದ ೧೫ರ ವರೆಗೆ ಸಾಯಂಕಾಲ ೭ರಿಂದ ೧೧ರ ವರೆಗೆ. ತಾ ೧೬ರಿಂದ ೩೧ರ ವರೆಗೆ ಸಾಯಂಕಾಲ ೭ರಿಂದ ೧೨ರ ವರೆಗೆ ಈ ರೀತಿ ಉರಿಸಲ್ಪಡುವುವು.

ಜನನ ಮರಣ.

ಇದೇ ಕಳೆದ ಫೆಬ್ರುವರಿ ತಾ ೨೯ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗಣ ೩೩ ಮರಣಗಳೂ ೩೯ ಜನನಗಳೂ ಆಗಿರುತ್ತವೆ.

ತಾಲೂಕುಗಳಿಂದ.

ಹಿರಿಯಡ್ಕ:— ಇದೇ ಕಳೆದ ತಾ ೮—೩—೩೬ನೇ ರವಿವಾರ ಮಧ್ಯಾಹ್ನ ಗಂಟೆ ೨ಕ್ಕೆ ಈ ಕೇಂದ್ರದ ಅಧ್ಯಾಪಕರ ಮಾಸಿಕ ಕೂಟವು ಶ್ರೀ। ಕಟಪಾಡಿ ಶ್ರೀನಿವಾಸ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯ ಕಾರ್ಯಕ್ರಮಗಳು ಒಂದೊಂದಾಗಿ ಮುಗಿದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಭೆಯಲ್ಲಿ ನಡೆದ ವಿಷಯಗಳ ಕುರಿತು ಸುದೀರ್ಘವಾಗಿ ವಿಮರ್ಶೆ ಮಾಡಿ ಹಿಂದಿಯ ಪ್ರಯೋಗದ ಕುರಿತು ಬಹಳ ಅಭಿಪ್ರಾಯಪಟ್ಟರು. ಆದಾಗಿ ಕೆಲವು ಸಮಯದಿಂದೀಚೆ ಸ್ಥಳೀಯ ಆರ್ಯ ಸಮಾಜದವರ ಪ್ರೋತ್ಸಾಹದಲ್ಲಿ ಶ್ರೀ ಶೆಣೈಯವರಿಂದಲೇ ತೆರೆಯಲ್ಪಟ್ಟ ಹಿಂದೀ ವರ್ಗದ ವಿದ್ಯಾರ್ಥಿಗಳು ಮತ್ತು ಹಿಂದೀ ಶಿಕ್ಷಕರಿಂದೊಡಗೂಡಿದ "ಗ್ರೂಪ್ ಫೋಟೋ" ತೆಗೆಯಲಾಯಿತು.

ಮರುದಿನ ತಾ. ೯—೩—೩೬ನೇ ರವಿವಾರ ಈ ಕೇಂದ್ರದ ಹಿಂದೀ ಪ್ರಾಥಮಿಕ ಪರೀಕ್ಷೆಯು ಇಲ್ಲಿಯ ಬೋರ್ಡ ಹಾ ಎ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ। ಯು ಗೋವಿಂದಾಚಾರ್ಯರ ನೇತೃತ್ವದಲ್ಲಿ ಸಾಂಗವಾಗಿ ನೆರವೇರಿತು. ಪ್ರಾಥಮಿಕಕ್ಕೆ ಆರು ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು. ಅಲ್ಲದೆ ತಾ ೧೬—೩—೩೬ರಿಂದ ಪುನಃ ಪ್ರಾಥಮಿಕ ಹಾಗೂ ಮಾಧ್ಯಮಿಕ ಕ್ಲಾಸುಗಳು ತೆರೆಯಲ್ಪಟ್ಟವೆ.

ಕಲ್ಲಡ್ಕ:— ಇಲ್ಲಿಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯ ೪೪ನೇ ವರ್ಷದ ವರ್ಧಂತಿಮಹೋತ್ಸವವು ತಾ ೨೯—೨—೩೬ನೇ ರವಿವಾರ ಅಪರಾಹ್ನ ಗಂಟೆ ೫ ೩೦ಕ್ಕೆ ಮಂಗಳೂರು ಗವರ್ನಮೆಂಟು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲಾ ಮುಖ್ಯೋಪಾಧ್ಯಾಯರಾದ ರಾಜಶ್ರೀ ಕೆ ಗೋಪಾಲ್‌ರಾವ್ ಬಿ ಎ. ಎಲ್. ಟಿ ಇವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ತಾರೀಕು ೨೨—೨—೩೬ನೇ ಶನಿವಾರ ದಿವಸ ಇದೇ ಶಾಲೆಯ ಸ್ತ್ರೀಯರ ದಿನವನ್ನು ಗವರ್ನಮೆಂಟ್ ಟ್ರೈನಿಂಗ್ ಶಾಲಾ ವಿದ್ಯಾರ್ಥಿನಿ ಶ್ರೀಮತಿ ಸುಶೀಲಾಬಾಯಿ ಇವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು.

ಕಾರ್ಕಳ:— ಶ್ರೀ ವೆಂಕಟರಮಣ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವನ್ನು ಕೆಲವು ಅನಿವಾರ್ಯ ಕಾರಣಗಳಿಂದ ಇದೇ ತಿಂಗಳ ಕಡೇ ವಾರಕ್ಕೆ ಮುಂದುವರಿಸಲಾಗಿದೆ. ಸರಿಯಾದ ತಾರೀಕನ್ನು ಹಿಂದಿನಿಂದ ತಿಳಿಸಲಾಗುವುದು. ಶಾಲೆಯ ಹಳೇ ವಿದ್ಯಾರ್ಥಿಗಳೂ ಹಿತಚಿಂತಕರೂ ಸಮಯೋಚಿತ ಸೂಚನೆಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಎಸೆಂಬ್ಲಿಯಲ್ಲಿ ಕೇಳಲಾದ ಕೆಲವು ಪ್ರಶ್ನೆಗಳು

ಶ್ರೀ ಜಿ. ಬಿ. ಪಂತರು, ನವಭಾರತ ಶಾಸನವು ಪ್ರಚಾರಕ್ಕೆ ಬಂದ ಮೇಲೆ ಉಪಯೋಗಮಾಡಲು ಆರ್ಥಿಕ ಇಲಾಖೆಯ ಕೆಲಸದಲ್ಲಿ (ಪ್ರಾಂತ್ಯಕೀಯ ಸರಕಾರಗಳಿಗಾಗಿ) ಎಷ್ಟು ಜನರನ್ನು ಚುನಾಯಿಸಿದ್ದಾರೆಂದೂ ಕೇಳಿದ ಪ್ರಶ್ನೆಗೆ, ಇಂಡಿಯಾ ಸರಕಾರವು,—ಆ ತರಬೇತಿಗೆ ೧೦ ಜನರನ್ನು ಚುನಾಯಿಸಿದ್ದಾರೆಂದೂ, ಇವರಲ್ಲಿ ೬ ಜನರು ಭಾರತೀಯರೆಂದೂ ತಿಳಿಸಿದರು. ಈ ಪ್ರಶ್ನೆಯ ಚರ್ಚೆಯಲ್ಲಿ ಸರಕಾರದ ಆರ್ಥಿಕ ಸದಸ್ಯರಿಗೂ ಇತರ ಕಾಂಗ್ರೆಸ್ ಪಕ್ಷದ ಸದಸ್ಯರಿಗೂ ಎಸೆಂಬ್ಲಿಯಲ್ಲಿ ಸದಸ್ಯರ ಹಕ್ಕುಗಳ ವಿಷಯ ವಾಗ್ವಾದಗಳ ಸಮರವು ನಡೆಯಿತು.

ಇಟಲಿಯ ಮೇಲೆ ಹಾಕಿದ ಸಂಕ್ಷನುಗಳಲ್ಲಿ ಹಿಂದೂದೇಶವು ಭಾಗವಹಿಸಿದುದರಿಂದ, ಅದು ಹಿಂದೂದೇಶದ ವ್ಯಾಪಾರದ ಮೇಲೆ ಹೇಗೆ ಪರಿಣಮಿಸಿದುದೆಂದು ಶ್ರೀ ಪಂತರು ಕೇಳಿದ ಪ್ರಶ್ನೆಗೆ, ಆ ವಿಚಾರದ ಕುರಿತು ತತ್ಕ್ಷಣ ಯಾವ ಅಭಿಪ್ರಾಯಗಳನ್ನೂ ಕೊಡಲು ಸಾಧ್ಯವಿಲ್ಲವೆಂದೂ, ಆ ಕುರಿತು ಪರಿಶೀಲನಾಕಾರ್ಯವು ನಡೆಯುತ್ತದೆಂದೂ, ಈ ಸೆಂಕ್ಷನುಗಳಿಂದಾಗಿ ಬಿದ್ದ ಹಿಂದೂದೇಶದ ವ್ಯಾಪಾರದ ನಷ್ಟವು ಎಷ್ಟಾಗಿರುವುದು, ಅದನ್ನು ಬೇರೆ ಯಾವ ರೀತಿಯಲ್ಲಿ ತುಂಬಿಸಿಕೊಳ್ಳಬಹುದು ಎಂಬುದನ್ನು ನೋಡಲು, ಸರಕಾರವು ಮೇಲಿನ ಕಾರ್ಯವನ್ನು ನಡೆಸುತ್ತದೆಂದು ತಿಳಿದುಬಂತು. ಈ ಪ್ರಶ್ನೆಯೊಂದಿಗೆ ಇದೇ ವಿಚಾರದಲ್ಲಿ ಅನೇಕ ಪ್ರಶ್ನೆಗಳು ಕೇಳಲಾದುವು.

ಡಿಲ್ಲಿಯಲ್ಲಿ ನವೀನವಾಗಿ ರಚನೆಯಾದ ರೇಡಿಯೋ ಬ್ರೋಡ್‌ಕಾಸ್ಟಿಂಗ್ (ಧ್ವನಿ ಪ್ರಸಾರಣ) ಸ್ಟೇಷನಿನಲ್ಲಿ ಹಚ್. ಜಿ ಫ್ರೆಂಚ್ ಎಂಬವರನ್ನು ವಾರ್ತೆಯ ಸಂಪಾದಕರಾಗಿ ನೇಮಕ ಮಾಡಿದ್ದರು. ಈ ಫ್ರೆಂಚರು ಹಿಂದೂದೇಶವನ್ನು ಕುರಿತು ಒಂದು ಗ್ರಂಥವನ್ನು ಬರೆದಿರುತ್ತಾರೆಂದೂ ಹಾಗೆ ನಮ್ಮ ದೇಶವನ್ನು ದೂಷಿಸಿದವರನ್ನು ಸರಕಾರದವರು ನೇಮಿಸಲು [illegible] ನೆಂದೂ, ಅವರನ್ನು [illegible] ಕೇಳಲಾದ ಪ್ರಶ್ನೆಗೆ [illegible] ಸರಕಾರವು [illegible] ವ್ಯವಸ್ಥೆಯನ್ನು ಮಾಡಿದ [illegible] ಈ [illegible] ಸನ್ನದಲ್ಲೇ [illegible] ಮಾಡುವರೆಂದೂ ತಿಳಿದುಬಂತು. ಆದರೆ, ಮಿ. ಫ್ರೆಂಚ್ ತನ್ನ ಕಾರ್ಯದಲ್ಲಿ [illegible] ಅವರ ಕಾರ್ಯದಲ್ಲಿ ಯಾವ ತೊಂದರೆಗಳು ಕಾಣಬಾರದೆಂದೂ ತಿಳಿದುಬಂತು.

ಲಂಡನಿನಲ್ಲಿ, ಒಂದು ನಾಟಕದ [illegible] ವರ್ಗಕ್ಕೆ ಒಪ್ಪಿದನೆಂದು [illegible] ಆದರೆ ಅವರ್ಣನೀಯ ಆಕ್ಷೇಪಣೆಗಳು ಬರಲು, ಅದನ್ನು ಗಾಂಧಿ ಎಂದು ಬದಲಾಯಿಸುವರೆಂದು ಕೆಲಸಮಯದ ಹಿಂದೆ ವಾರ್ತೆಯು ಹರಡಿತ್ತು. ಈ ಕುರಿತು ಎಸೆಂಬ್ಲಿಯಲ್ಲಿ ಪ್ರಶ್ನೆಗಳು ಕೇಳಲಾದುವು. ಆದರೆ [illegible] ಹೆಸರು ಬದಲಾಯಿಸಬೇಕೆಂದು ಆಲೋಚನೆಮಾಡಿದ್ದು ಮಾತ್ರವಲ್ಲದೆ, ಹೆಸರು ಗಾಂಧಿಯೆಂದು ಇಡಲಾಗಲಿಲ್ಲವೆಂದೂ ತಿಳಿದುಬಂತು.

ಆನೆಯು ಮಾವಟಿಗನನ್ನೆ ಕೊಂದಿತು

ಜೋಧಪುರ ಎಂಬಲ್ಲಿಂದ ಒಂದು ವಿಚಿತ್ರ ಘಟನೆಯ ವರದಿ ಬಂದಿದೆ. ಮಾವಟಿಗನನ್ನು ಅವನ ಆನೆಯೇ ಕೊಂದಿತು. ಮೊನ್ನೆ ದಿನ ಬೆಳಿಗ್ಗೆ ಆ ಮಾವಟಿಗನು ನೆರೆಕರೆಯವರು ಮನೆಯಿಂದ ಬೀದಿಗಿಳಿಯುವಾಗ ಆನೆಯು ರೌದ್ರವೇಷವನ್ನು ತಾಳಿ, ಮರಗಳನ್ನು ಕಿತ್ತೊಗೆಯುತ್ತಿತ್ತು. ಅದೇ ಕಾಲಖಂಡದಲ್ಲಿ ಅದರ ಮಾವಟಿಗನ ಪ್ರಾಣವಿರುವವನ್ನು [illegible] ನೆರೆಹೊರೆಯವರು ಅದನ್ನು ಶಾಂತಗೊಳಿಸಲು ಪ್ರಯತ್ನಿಸಿದಾಗ್ಯೂ ಸಾಧ್ಯವಾಗದೆ ಹೋಯಿತು. ಅದು ಅಲ್ಲಿಂದೋಡಿ ಕೆಲವು ತೆಂಗಿನ ಮರಗಳನ್ನೂ, ಒಂದು ತಂತಿಕಂಬವನ್ನೂ ಭೂಮಿಯಿಂದ ಕಿತ್ತೊಗೆಯಿತು. ಒಂದೇಸಮನೆ ನೂರು ಗಜ ಓಡಿತು. ನಂತರ ಶಾಂತಚಿತ್ತವಾಗಿ ಒಂದೆಡೆಯಲ್ಲಿ ಬಿದ್ದುಕೊಂಡಿತು.

ಶ್ರೀ ರವೀಂದ್ರನಾಥಠಾಗೂರರು ಸಿನೆಮಾನಟರಾಗುವರು.

'ಚಿತ್ರಾಂಗದೆ'ಯೆಂಬ ತನ್ನ ಸಂಗೀತ ಕತೆಯನ್ನು ಸಿನೇಮಾ ಚಿತ್ರವಾಗಿ ಮಾಡಬೇಕೆಂದು ಶ್ರೀ ಠಾಗೂರರು ಎಣಿಸಿರುವರು. ಅದರಲ್ಲಿ ತಾನೇ ಪಾತ್ರವನ್ನು ಧರಿಸಿ, ನಾಟಕದ ಸವಿಯನ್ನು ಪ್ರತಿಯೊಬ್ಬರಿಗೂ ಉಣಿಸಬೇಕೆಂದೇ ಅವರ ಅಪೇಕ್ಷೆ.

ಜಪಾನಿನಲ್ಲಿ ಭಯಂಕರ ಕ್ರಾಂತಿ

ಜಪಾನಿನ ರಾಜಮಂಡಳದ ಚುನಾವಣೆಯು ನಡೆದು, ಓಕಡಾ ಮಿನಿಸ್ಟ್ರಿಯು ಮತ್ತೊಮ್ಮೆ ಅಧಿಕಾರಕ್ಕೆ ಬಂದ ವಾರ್ತೆಯನ್ನು ನೀವು ಕಳೆದ ವಾರ ಕೇಳಿರುವಿರಿ. ಅನಂತರ ಅಲ್ಲಿ ಭಯಂಕರ ಕ್ರಾಂತಿಮಯ ಘಟನೆಗಳು ನಡೆದುವು. ಸೈನ್ಯಸಮೂಹವು ಒಂದು ದಂಗೆ ಎಬ್ಬಿಸಿ, ರಾಜಮಂಡಳದ ಅನೇಕ ಮಂತ್ರಿವರ್ಯರನ್ನು ಕೊಲೆ ಮಾಡಿದರು. ಮುಖ್ಯ ಮಂತ್ರಿಯಾದ ಓಕಡಾರವರು ಚುನಾವಣೆಯ ನಂತರ, ಸಂತೃಪ್ತರಾಗಿ ಮಲಗಿದವರನ್ನು ರಾತ್ರಿಯಲ್ಲಿ ಎಚ್ಚರಗೊಳಿಸಿ ಕೊಲೆಮಾಡಿದರು. ಹಾಗೆಯೇ, ವಿಸ್‌ಕೌಂಟ್ ಸೈಟೊ, ರಾಜಮುದ್ರೆಗಳ ಅಧಿಕಾರಿಗಳನ್ನು ಮತ್ತು ಆರ್ಥಿಕ ಮಂತ್ರಿಗಳಾದ ತಾಕಹಾಸಿಯವರನ್ನು ಕೊಲೆಮಾಡಿರುವರು. ಇತರ ಅನೇಕ ರಾಜಾಧಿಕಾರಿಗಳನ್ನು ಗಾಯಗೊಳಿಸಿರುವರು. ಮಂಚೂಕ್ಯೂದಲ್ಲಿ, ಈಗಿನ ಸೋವಿಯಟ್ ಮಂಗೋಲಿಯದ ಗಡಿನಾಡಿನ ಭದ್ರತೆಗಾಗಿ ಒಂದು ಸೈನ್ಯಮಂಡಳವನ್ನು ಕಳುಹಿಸಬೇಕಾಗಿ ಆಜ್ಞೆಗಳು ಸಿದ್ಧವಾದ ಯುದ್ಧ ಸಾಮಗ್ರಿಗಳು ಕೊಡಲ್ಪಟ್ಟಿದ್ದುವು. ಆದರೆ ಮಂಚೂಕ್ಯೂ ಪ್ರಾಂತ್ಯಕ್ಕೆ ಹೋಗುವ ಬದಲು ಈ ಸೈನ್ಯಸಮೂಹವು ದಂಗೆಯೆಬ್ಬಿಸಿತು. ಈ [illegible] ದಂಗೆಯಲ್ಲಿ ಅನೇಕ ಸಂಗ್ರಾಮಾಧಿಕಾರಿಗಳಿಗೆ ಕೈಗಳಿರುವುದೆಂದು ತಿಳಿದುಬರುತ್ತದೆ. ಜಪಾನಿನ ಮಿಲಿಟರಿ ಪಂಗಡವು ದಿನೇ ದಿನೇ ಪ್ರಬಲಗೊಂಡುತ್ತದೆ. ತಮ್ಮ ದೇಶದ ಕೆಲವು ರಾಜಕೀಯ ನಾಯಕರು ತಮ್ಮ ಇಚ್ಛೆಗೆ ವಿರೋಧವಾಗಿ ನಡೆಯುತ್ತಿದ್ದಾರೆಂದೂ ಇವರ ದೆಸೆಯಿಂದ ಅನೇಕ ಜಪಾನಿಯ ರೈತರು ನರಳುತ್ತಿದ್ದಾರೆಂದೂ ಇದರ ಸಮಾಚಾರಗೋಸ್ಕರ [illegible] ಈ [illegible] ಪಂಗಡದವರ [illegible] ಕ್ರಾಂತಿ ನಡೆಯಿತು. [illegible] ದಂಗೆಯ [illegible]

[illegible] ದೇಶದ್ರೋಹಿಗಳಾದ ದಂಗೆಗಾರರಲ್ಲಿ [illegible] ಶಿಕ್ಷೆಗೆ [illegible] ಸಂಪೂರ್ಣ ಅಧಿಕಾರವನ್ನು ಕಿತ್ತುಕೊಂಡುಕೊಳ್ಳುವ [illegible] ಸೆಣಸು [illegible] ಮೇಲೆ, ಈ [illegible] ಪರಿಶೀಲನೆ [illegible] ಜಪಾನಿನಲ್ಲಿ [illegible] ಹಿಂದಿನ ಹಲವು ದೇಶದಲ್ಲಿ ನಡೆದಂತೆ ರಾಜ್ಯಘೋಷಣೆಯು ಸಂಪೂರ್ಣ [illegible] ಇಲ್ಲಿ [illegible] ಪ್ರಜೆಗಳಿಗೆ ಅವಿಶ್ವಾಸವುಂಟಾಗಿದೆ. ಆದರೆ ಈ ಕ್ರಾಂತಿಯಿಂದ ಜಪಾನು ಬ್ರಿಟಿಷ್ ವ್ಯವಹಾರದ [illegible] ತನ್ನ ವರ್ತನೆಯನ್ನು ಬದಲಾಯಿಸುವುದಿಲ್ಲವಂತೆ. ಅಂದರೆ ಸಾಮ್ರಾಜ್ಯ ರಚನಾಕಾರ್ಯವನ್ನು [illegible] ದವನ್ನು [illegible] ಸಾಮ್ರಾಜ್ಯವನ್ನು ವಿಸ್ತರಿಸುವುದು ಜಪಾನಿನ ಸಾಂಪ್ರದಾಯಿಕ [illegible] ಇವೇ ಈಗ ದಂಗೆಯೆದ್ದ ಮಿಲಿಟರಿಯವರ ಮುಖ್ಯ ಉದ್ದೇಶ. ತಮ್ಮ ಮಂತ್ರಿವರ್ಗದಲ್ಲಿ ತಮ್ಮ ಈ ಉದ್ದೇಶಪೂರ್ತಿಗೆ ಆತಂಕಗಳನ್ನು ಕಂಡುದರಿಂದ ಇವರು ದಂಗೆಯೆಬ್ಬಿಸಲು ಕಾರಣವಾಯಿತು. ಈ ಕ್ರಾಂತಿಮಯ ಘಟನೆಗಳಿಂದ ಸಮಸ್ತ ಪ್ರಪಂಚವು ದಿಗಿಲುಗೊಂಡಿದೆ. ಈಗ ಜಪಾನಿನಲ್ಲಿ ಮಾರ್ಶಲ್ ಲಾ ಜ್ಯಾರಿಯಾಗಿರುತ್ತದೆ. ಸರಕಾರದ ವ್ಯವಹಾರವು ಮಿಲಿಟರಿ ಅಧಿಪತಿಗಳ ಕೈಗಳಲ್ಲಿದೆ. ಇಷ್ಟರ ತನಕ ಸಾಧಾರಣ ೮೦ ಜನರನ್ನು ಕೊಲೆಮಾಡಿರುವರೆಂದು ವಾರ್ತೆ. ಇದರ ನಿಜವಾದ ವಿವರಗಳು ಸಿಗಲು ಈಗ ಅಸಾಧ್ಯವಾಗಿದೆ. ಯಾವ ವಾರ್ತೆಗಳೂ ಹೊರಗೆ ಹೋಗದಂತೆ ಅನೇಕ ನಿರ್ಬಂಧಗಳನ್ನು ಹಾಕಲಾಗಿದೆ. ಈ ಕ್ರಾಂತಿಯಿಂದಾಗಿ ದೇಶದ ವ್ಯಾಪಾರದಲ್ಲಿ ಸ್ವಲ್ಪ ಮಂದಗತಿಯು ಕಂಡುಬರುತ್ತದೆ. ಈಗ ಜಪಾನಿನ ಸ್ಥಿತಿಯು ಸ್ವಲ್ಪ ಸಮಾಧಾನಕರವಾಗಿದೆಯೆಂದೂ ನಿತ್ಯದ ವ್ಯವಹಾರಗಳು ಸರಿಯಾಗಿ ನಡೆಯುತ್ತವೆಯೆಂದೂ ಹಿಂದೂದೇಶದಲ್ಲಿದ್ದ ಜಪಾನೀಯ ಪ್ರತಿನಿಧಿಗಳು ತಿಳಿಸುತ್ತಾರೆ. ಮುಂದಕ್ಕೆ ಏನಾಗುವುದೆಂದು ಬೇಗನೆ ತಿಳಿಸಲಾಗುವುದು.

ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ಅನೀತಿಯನ್ನು ಹಬ್ಬಿಸುವುದು!

ಕಟ್ಪಾಡಿ ಶ್ರೀನಿವಾಸ ಶೆಟ್ಟಿ, ಕಾರ್ಕಳ.

ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ಅನೀತಿಯನ್ನು ಹಬ್ಬಿಸುವುದಾದ್ದರಿಂದ ಅದು ಅನಾಹುತಕಾರಿ ಎಂದು ಹಳೆ ಸಾಂಪ್ರದಾಯದವರು ಹೇಳುತ್ತಿರುವುದನ್ನು ಕೇಳಿ, ಅಥವಾ ಅವರು ಲೇಖನಗಳನ್ನು ಬರೆದು, ಭಾಷಣಗಳನ್ನು ಕೊಟ್ಟು ಪ್ರಚಾರ ಮಾಡುತ್ತಿರುವುದನ್ನು ನೋಡಿ, ಅವರನ್ನು ಬಿಟ್ಟು ಉಳಿದೆಲ್ಲರಿಗೂ ಸಖೇದಾಶ್ಚರ್ಯವಾಗುವುದು ಸ್ವಾಭಾವಿಕವು. ಆದರೆ ಅಂಥ ಸಾಂಪ್ರದಾಯವಾದಿಗಳು ಈಗಲೂ ಕೆಲವು ಮಂದಿ ಇದೇ ಈ ಪ್ರಪಂಚದಲ್ಲಿ ಇರುತ್ತಾರೆ. ಅವರು ಅಂಥ ಇಂಥ ಸಾಮಾನ್ಯ ಜನರಾಗಿರದೆ ದೊಡ್ಡ ದೊಡ್ಡ ಪದವೀಧರರೂ ಆಗಿದ್ದಾರೆ. 'ಪ್ರಾಥಮಿಕ ಶಿಕ್ಷಣವೆಂಬುದು ಅಪೂರ್ಣ ಶಿಕ್ಷಣವು. ಅಲ್ಪವಿದ್ಯೆ ಎನ್ನಿಸುವದು. ಅಲ್ಪವಿದ್ಯಾ ಮಹಾಗರ್ವಿ ಎನ್ನುತ್ತಾರೆ. ಪ್ರಾಥಮಿಕ ಶಿಕ್ಷಣವನ್ನಷ್ಟೇ ಪಡೆದವರು ತಾವಿನ್ನು ತಿಳಿಯಬೇಕಾದ್ದು ಕಲಿಯಬೇಕಾದ್ದು ಏನೂ ಇನ್ನಾವದಿಲ್ಲವೆಂದೆಣಿಸುವ ದುರಭಿಮಾನಿಗಳಾಗಿರುತ್ತಾರೆ. ಹಳೆಯ ರೀತಿನೀತಿ ಆಚಾರ ವಿಚಾರಗಳ [illegible] ಅವರಿಗೆ ಅಸಡ್ಡೆ ಇರುತ್ತದೆ. ಹಿಂದಿನದನ್ನೆಲ್ಲ ತೆಗಳುತ್ತಿರುವವರು [illegible] ಪ್ರತಿಯೊಂದು ವಿಷಯಕ್ಕೂ ಹೇಗೆ ಯಾಕೆ ಏನು ಎಲ್ಲಿ ಎಂದು ಪ್ರಶ್ನಿಸುವರು. ಅವರು ಸ್ವೇಚ್ಛಾಚಾರಿಗಳೂ ಪ್ರಾಯಶಃ ದುರ್ಮಾರ್ಗಿಗಳೂ [illegible] ಅನೀತಿವಂತರೂ ವ್ಯಭಿಚಾರಿಗಳೂ ಆಗುತ್ತಾರೆ. [illegible] ತಮ್ಮ ಕೈಯಲ್ಲೇ ತೆಗೆದುಕೊಂಡು ಮನಬಂದಂತೆ ವರ್ತಿಸುವರು. ಆದ್ದರಿಂದ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಪ್ರಚಾರ ಮಾಡದ ದೇಶ [illegible] ದುರ್ನೀತಿಗಳು ಆಗುವದಕ್ಕಿಂತ ಕೆಲವರು ಮಾತ್ರ ಪ್ರೌಢ ಶಿಕ್ಷಣವನ್ನು ಪಡೆಯುವುದು ಮೇಲು [illegible] ಮಾತ್ರ ಶ್ರೇಯಸ್ಕರವು. [illegible] ಶಿಕ್ಷಣ ಪಡೆಯದ್ದರಿಂದ ಅವರು [illegible] ದುರ್ಮಾರ್ಗದ ಸೆರೆಯಿಂದಷ್ಟೆ ತಪ್ಪುತ್ತಾರೆ [illegible] ಆದರಿಂದ ಅವರಿಗೆ [illegible] ಹೀಗೆ ಆ ಸಾಂಪ್ರದಾಯವಾದಿಗಳು ಉಪದೇಶಿಸುತ್ತಾರೆ.

ನಾಸಿಕೆಯನ್ನು ತುಂಬಿಕೊಂಡ ಯಷ್ಟು ದೊಡ್ಡದ ಮಾಡಿ ತೋರಿಸಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಪ್ರಚಾರ ಮಾಡಿದರೆ ಪ್ರಳಯವೇ ಆದೀತೆಂದು ಈ ಸಾಂಪ್ರದಾಯವಾದಿಗಳು ಗುಡುಗಾಡಿದರೂ ಪ್ರಾಥಮಿಕ ಶಿಕ್ಷಣ ಪ್ರಚಾರವೇನೋ ಯಥಾಪ್ರಕಾರ ಆಗುತ್ತಲೇ ಇದೆ. [illegible] ಪ್ರಾಥಮಿಕ ಶಿಕ್ಷಣ ಪ್ರಚಾರವೇನೋ [illegible] ಆಗುತ್ತಲೇ ಇದೆ. ಹಲವನ್ನು ದೇಶಗಳ ಉನ್ನತಿಗೆ ಪ್ರಾಥಮಿಕ ಶಿಕ್ಷಣ ಪ್ರಚಾರವು ಮುಖ್ಯ ಸಾಧನವಾಗಿರುವುದೆಂದು ಸಭ್ಯ ದೇಶಗಳೆಲ್ಲ ಒಪ್ಪಿವೆ. ಪ್ರಾಥಮಿಕ ಶಿಕ್ಷಣದ ಸ್ವರೂಪವನ್ನು ತಿಳಿಯದೆ ಅಥವಾ ತಿಳಿದೂ ಸ್ವಾರ್ಥಪರರಾಗಿ ಸಾಂಪ್ರದಾಯವಾದಿಗಳು ಹೀಗನ್ನುತ್ತಿದ್ದಾರೆಂದು ಊಹಿಸಬೇಕಾದದ್ದಿರುತ್ತದೆ. ಪ್ರಾಥಮಿಕ ಶಿಕ್ಷಣವು ಅದರಷ್ಟಕ್ಕೆ ಸಂಪೂರ್ಣವೂ ಸಮಾಜಕ್ಕೆ ಉಪಯುಕ್ತವೂ ಆಗಿರುತ್ತದೆಂದು ತಿನ್ನಾಗಿ ಅಲೋಚಿಸಿದವರಿಗೆ ಗೊತ್ತಾದೀತು. ಹುಡುಗರಿಗೆ ತಿಳಿಯದಷ್ಟು ಅರ್ಥವಾಗದ [illegible] ಶಿಕ್ಷಣವನ್ನು ದೂಡುವುದು ಮೂರ್ಖತನವನ್ನು ತೋರಿಸುತ್ತದೆ. ದೇಶಕಾಲ ಪರಿಸ್ಥಿತಿಗೆ ಅನುಸಾರವಾಗಿ ಶಿಕ್ಷಣದ ಸ್ವರೂಪವು ಬೇರೆ ಬೇರೆಯಾಗುವುದು. ಅದನ್ನು ತಿಳಿಯದೆ ಒಂದು ದೇಶಕಾಲ ಪರಿಸ್ಥಿತಿಯ ಕೈಕೊಂಡ ಶಿಕ್ಷಣ ಕ್ರಮವನ್ನು ಇನ್ನೊಂದು ದೇಶಕಾಲ ಪರಿಸ್ಥಿತಿಯಲ್ಲಿ ಅನುಸರಿಸುವುದರಿಂದ ದುಷ್ಪರಿಣಾಮಗಳನ್ನು ಅನುಭವಿಸಬೇಕಾಗುತ್ತದೆ. ಅಂಥ ಕೆಲವು ದುಷ್ಪರಿಣಾಮಗಳನ್ನು ನಾವೀಗ ಅನುಭವಿಸುತ್ತಲಿರಬಹುದು. ಅಷ್ಟಮಾತ್ರಕ್ಕೆ ಶಿಕ್ಷಣಕ್ಕೇ ಎಲ್ಲಾ ದೋಷವನ್ನು ಕೊಡುವುದು ಅಕ್ಷಮ್ಯ ಅಪರಾಧವೆನಿಸುವುದು. ನಮಗೆ ಬೇಕಾದಂತೆ ಶಿಕ್ಷಣಕ್ರಮ ಸ್ವರೂಪಗಳನ್ನು ತಿದ್ದಿಕೊಳ್ಳುವ ಸ್ವಾತಂತ್ರ್ಯವು ನಮ್ಮ ಕೈಯಲ್ಲೇ ಇರುತ್ತದೆ. ಅದನ್ನು ಬಿಟ್ಟು ಶಿಕ್ಷಣವನ್ನು ದೂರಿಡುವದರಲ್ಲಿ ಅರ್ಥವಿಲ್ಲ. ಸಾಂಪ್ರದಾಯವಾದಿಗಳು ಯಾವ ತೋರಿಕೆಗೆ ಕಳೆಗೆ ಬೆದರಿ ಹೀಗಾಡ್ತಾರೋ ಅವು ವಾಸ್ತವಿಕ ಪ್ರಾಥಮಿಕ ಶಿಕ್ಷಣ ಪ್ರಚಾರದಿಂದ ದೂರವಾಗತಕ್ಕುವಾಗಿವೆ. ಅನೀತಿ ವ್ಯಭಿಚಾರಾದಿಗಳ

ಪ್ರಕಟಣೆ

ಮಂಗಳೂರು ಶಹರ ಬೋಳೂರು ಗ್ರಾಮದ ಶಾಲಿಂಗೇಶ್ವರ ದೇವರ ದೇವಸ್ಥಾನದ ಬಳಿ ಗುಡ್ಡೆಹಿತ್ತಲಲ್ಲಿರುವ ಬಿಲ್ಲವರ ಜಾತಿಯ ಜಾರಪ್ಪ ಪೂಜಾರಿಯವರ ಅಳಿಯಂದಿರು— ರಾಮಪ್ಪ ಪೂಜಾರಿ ಒಂದು ಮತ್ತು ವಾಸು ಪೂಜಾರಿ ಒಂದು ಕೂಡಾ 2 ಜನರು ಈ ಮೂಲಕ ಪ್ರಕಟಿಸುವುದೇನೆಂದರೆ — ಸದ್ರಿ ಮಂಗಳೂರು ಶಹರು ಬೋಳೂರು ಗ್ರಾಮದ ನಂಬ್ರ 90ನೇ ಮೂಲಗೇಣಿ ಆಸ್ತಿಯಲ್ಲಿ 8 ಮುಡಿ ಗದ್ದೆ ಬಾಗ್ಯಾತು ಮತ್ತು 480, 481ನೇ ಮನೆಗಳು ಹಿತ್ಲು ಕಂಪೌಂಡು ಸ್ವಂತ ವರ್ಗಸ್ಥಳ ಸಹ ನಮ್ಮ ಹಿರಿಯ ಕುಟುಂಬದ 30 ಜನ ಮೆಂಬರರ ಹೆಸರಲ್ಲಿರುತ್ತದೆ. ನಮ್ಮ ಪೈಕಿ 1ನೇ ಜಾರಪ್ಪ ಪೂಜಾರಿಯವರ ಸೊಸೆ ಕಮಲ ಹೆಂಗ್ಸು 1 ಮತ್ತು [illegible] ಪೂಜಾರಿಯವರ ಅಳಿಯ ಜಾರಪ್ಪ ಪೂಜಾರಿ 1, ಮತ್ತು ಜಾರಪ್ಪ ಪೂಜಾರಿ ಅಳಿಯ ಸೋಮಯ್ಯ ಪೂಜಾರಿ 1 ಕೂಡಾ 3 ಜನರು ಒಗ್ಗಟ್ಟಾಗಿ ಮೇಲೆ ತೋರುವ ನಮ್ಮ ಹಿರಿಯ ಕುಟುಂಬದ ಆಸ್ತಿಯನ್ನು ಅನ್ಯಮಾಗಿ ಇರಾಧೆಯಿಂದ ಸದ್ರಿ ಆಸ್ತಿಯನ್ನು ತಮ್ಮ ಸ್ವಂತಕ್ಕೆ ಉಪಯೋಗಿಸಿ ಪರಾಧೀನ ವಗೈರೆ ಮಾಡುವ ದುರಾಲೋಚನೆಯಲ್ಲಿರುತ್ತಾರೆ. ಈ ಸಂಗತಿಯು, ನಾವು ಸಹ ಆಸ್ತಿಗೆ ಹಕ್ಕುದಾರರಾಗಿರುವುದರಿಂದ ಸದ್ರಿ ಆಸ್ತಿಯನ್ನು ನಮ್ಮ ಒಪ್ಪಿಗೆ ದಸ್ಕತು ಇಲ್ಲದೆ ಯಾವ ವಿಧದಿಂದಲೂ [illegible] ಯಾವಾಗ ಅದನ್ನು ಕ್ರಯ, ದಾನಪತ್ರ ವ್ಯಾದಿ [illegible] ಇವುಗಳನ್ನು [illegible] ವಗೈರೆ ಪರಾಧೀನ ಮಾಡಿದರೆ ಸಿಂಧುವಾಗತಕ್ಕದ್ದಲ್ಲ. ಈ ಸಂಗತಿ ಪಬ್ಲಿಕ್‌ಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ಇದಕ್ಕೆ ವಿರೋಧವಾಗಿ ಸದ್ರಿ ಆಸ್ತಿಯನ್ನು ಪಡಕೊಂಡವರು, ಮಾಡಿದವರು ನಮ್ಮ ನಷ್ಟಕ್ಕೆ [illegible] ಸಿವಿಲ್ ವ್ಯವಹಾರಗಳಿಗೆ ಬದ್ಧರಾಗಿರುತ್ತಾರೆ. [illegible]

III ಈ 3 ಗೆರೆ ರಾಮಪ್ಪಪೂಜಾರಿ ರುಜು.
III ಈ 3 ಗೆರೆ ವಾಸುಪೂಜಾರಿ ರುಜು.

ಬೆಳವಣಿಗೆಗೂ, ಯುವಕ ಯುವತಿಯರು ಸ್ವೇಚ್ಛಾಚಾರಿಗಳೂ ಅನೀತಿವಂತರೂ ಆಗಲಿಕ್ಕೂ ಪ್ರಾಥಮಿಕ ಶಿಕ್ಷಣವು ಕಾರಣವಾಗಿರದೆ ಸಾಮಾಜಿಕ ಧಾರ್ಮಿಕ ಅಂಧವಿಶ್ವಾಸ, [illegible] ಪರಂಪರೆ, ವಿಶೇಷ ಪರಿಸ್ಥಿತಿಗಳು ಕಾರಣವಾಗುತ್ತವೆ. ಮಕ್ಕಳ ಓದಿಯೂ ಲೋಕವ್ಯವಹಾರ ಜ್ಞಾನ ವಿದ್ಯಾವಂತರೆ ಮಕ್ಕಳು ಕುತೂಹಲದಿಂದ ಕೇಳುವ ಹೇಗೆ ಯಾಕೆ ಎಲ್ಲಿ ಏನು ಮೊದಲಾದ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟು ಅವರನ್ನು ಸಮಾಧಾನ ಮಾಡುವದು ಮಾತ್ರವಲ್ಲ ಮಾನಸಿಕ ನೈತಿಕ ಅಭಿವೃದ್ಧಿಯನ್ನು ಸಾಧಿಸಬಹುದು. ಒಬ್ಬರ ಅಪರಾಧಕ್ಕೆ ಇನ್ನೊಬ್ಬರನ್ನು ಗುರಿಮಾಡುವದು ಅನ್ಯಾಯವು.

ಸಂಪೂರ್ಣ ವಿದ್ಯೆ ಅಪೂರ್ಣ ವಿದ್ಯೆ ಎಂಬವು ಪರ್ಯಾಯವಾಚಿ ಶಬ್ದಗಳು. ಸಂಪೂರ್ಣ ವಿದ್ಯೆಯನ್ನು ಪಡೆದವರು ಒಬ್ಬರೂ ಇರುವದಿಲ್ಲ. ಕಲಿತದ್ದು ಇಂತಿಷ್ಟು ಕಲಿಯಬೇಕು ಇಲ್ಲವಾದರೆ ಏನೂ ಕಲಿಯದ ನಿರಕ್ಷರ [illegible] ಎನ್ನುವದು, ಆದರೆ ಸಾಮ್ರಾಜ್ಯದ [illegible] ಪತ್ರವನ್ನು ಕೈಯಲ್ಲಿ ಹಿಡಕೊಂಡ ಸ್ವತಂತ್ರ ಅರಸ ಆಗಬೇಕು ಇಲ್ಲವಾದರೆ ಹೇಳಿದರ ಚಾಕರಿ ಮಾಡುವ ಗುಲಾಮನಾಗಿಯೇ ಇರಬೇಕೆಂದು ಹೇಳಿದ ಹಾಗಾಯಿತು. ಕೆಲವರು ಮಾತ್ರ ವಿದ್ಯಾವಂತರಾಗಿ ಉಳಿದವರು ಅವರು ಹೇಳಿದಂತೆ ಕೇಳುವ ದಾಸದಾಸಿಯರಾಗುವದಕ್ಕಿಂತ ಎಲ್ಲರೂ ಅಲ್ಪಸ್ವಲ್ಪ ವಿದ್ಯೆಯನ್ನು ಪಡೆಯುವದು ಮೇಲು. ಅನುಕೂಲತೆ ಯೋಗ್ಯತೆ ಇದ್ದವರ ಬೇಕಾದಷ್ಟು ಕಲಿಯಲಿ. ಪರಂತು ಸಾರ್ವತ್ರಿಕ ಉಪಯುಕ್ತ ಶಿಕ್ಷಣವನ್ನು ಪ್ರತಿಯೊಬ್ಬ ಸ್ತ್ರೀ ಪುರುಷನೂ ಬಾಲ ಬಾಲಕಿಯೂ ಪಡೆಯುವಂತೆ ಸಮಾನವಕಾಶಗಳನ್ನು ಒದಗಿಸಿ ಕೊಡುವದು ನಮ್ಮ ಧ್ಯೇಯವಾಗಿರಲಿ. ಸಾಂಪ್ರದಾಯಕವಾದಿಗಳ ಮರುಳುಗಟ್ಟಿದ ಮಾತುಗಳಿಗೆ 'ಸೈ' ಅನ್ನುವದರಿಂದ ಯಾವ ಪುರುಷಾರ್ಥ ಸಾಧನೆಯೂ ಆಗುವದಿಲ್ಲ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 41/1935
R. I. A. No. 364/1936

1. ಬೀಪಾತುಮ್ಮ, P. A. ಮುಹಮ್ಮದ್‌ನ ಹೆಂಡ್ತಿ ವ, ಪಳೆಲಿ ಅಬ್ದುಲ್ಲ ರಹಿಮಾನ್ ಬ್ಯಾರಿ ಮಗಳು. 2. ಅಬ್ದುಲ್ಲ, ಸದ್ರಿ P. A. ಮುಹಮ್ಮದ್‌ನ ಮ್ಯಾನರ ಮಗ, ಈತನ ಕ್ಷೇಮ ಚಿಂತಕಳು 1ನೇ ಅರ್ಜಿದಾರಳು–ಕಾಸರಗೋಡು ತಾಲೂಕು ಮುಳಿಯಾರು IIನೇ ಗ್ರಾಮದ ಪಳೆಲಿಯಲ್ಲಿರುವವರು–ಅರ್ಜಿದಾರರು.

ಪುತ್ತೂರು ಗ್ರಾಮದಲ್ಲಿರುವ ಗುಡ್ಡೆ ಅಬ್ದುಲ್ಲ ಖಾದರ ಬ್ಯಾರಿ ಮಗನಾದ ವ, 1ನೇ ಅರ್ಜಿದಾರಳ ಗಂಡ ಮೃತಪಟ್ಟ P. A. ಮುಹಮ್ಮದಗೆ ಹೊರಗಿನಿಂದ ಬರತಕ್ಕ ಐವಜನ್ನು ವಸೂಲು ಮಾಡುವರೆ ಮೊದಲು O. P. ನಂಬ್ರ 41/35ನೇಗೆ ಪಡೆದ ಸರ್ಟಿಫಿಕೇಟಿನಲ್ಲಿ ಬೇರೆ ಸಾಲವನ್ನು ಸಹಾ ಕೂಡಿಸಿ ಕೊಡಬೇಕಾಗಿ ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾರೀಕು 18–3 1936ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆಕ್ಷೇಪವುಳ್ಳವರು ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

Kasaragod 20–2–1936

P Ahamad,
Advocate for Ptlrs.

'ಸ್ವದೇಶಾಭಿಮಾನಿ'

ವಾರಪತ್ರಿಕೆಗೆ
ಇಂದೇ ಚಂದಾದಾರರಾಗಿರಿ

ಗೊದ್ರೇಜರ ಭಾರತಸಿದ್ಧವಾದ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊದ್ರೆಜ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ: ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊದ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು.

ಗೋದ್ರೇಜ್

ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:
ಬರ್ಲಿನ್ ಚೇಂಬರ್ ಒಫ್ ಕೊಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲೆಬೋರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ,
ಮೈಕ್ರೊಸ್ಕೊಪಿ ಎಂಡ್ ಬೆಕ್ಟೀರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಿಗಳಾಗಿರುವ

ಡಾ। ಡಿಫ್ರೆಟ್ಸ್ ಎಂಬವರು:—"ನಾನು ಗೊದ್ರೆಜ್ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ ಅಭಿಪ್ರಾಯದಂತೆ ಅವುಗಳು ಸ್ಟ್ರೆಪ್ಟೊಕೊಕಸ್ ಮತ್ತು ಸ್ಟೆಫಿಲೊಕೊಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ. ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು.

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ಡ್ ಎಂಬವರು:—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧೆ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು.

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್‌ಸನ್‌ರವರು:—"ಗೋದ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ" ಎಂದರು.

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

ಡಾ। ಎಂ ಎ. ಅನ್ಸಾರಿ, ಎಂ ಡಿ ಎಂ. ಎಸ್ ರವರು:—"ಗೋದ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ. ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ. ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು

ಫೆಕ್ಟರಿ:— **ಗೋದ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ.

ಸೋಲ್ ಏಜಂಟರು:— **ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್‌ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವಿಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತದೆ.

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಅದೇ ದಿನ ಮಧ್ಯಾಹ್ನ ಘಂಟೆ ೪॥ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ. ಮಂಗಳೂರು, ಬಂಟವಾಳ, ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ.

ಅಲ್ಲದೆ,

ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದೆ.

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚೆಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ, ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲಪಲು ಅತೀ ಅನುಕೂಲವಾಗಿದೆ.

The Canara Public Conveyance Co., Ltd., Kodialbail Mangalore.

The Sakaleshwara Motor Service Ltd., Saklaspur.

ಸ್ವರ್ಗೀಯ

ಶ್ರೀಮತಿ ಕಮಲಾನೆಹರೂರವರು.

... ಪ್ರೀತಿಯ ... ಪುತ್ರಿಯನ್ನು ಕಳೆದುಕೊಂಡಳು. ಪ್ರಜಾಕೀಯ ಭಾರತದಲ್ಲಿ ಅನೇಕ ಮಹಿಳಾ ಮಣಿಗಳು ರಾಷ್ಟ್ರಸೇವೆಯನ್ನು ಮಾಡಿರಬಹುದು, ಹಾಗೂ ಮಾಡುತ್ತಿರಬಹುದು. ಆದರೆ ಕೀರ್ತಿಶೇಷ ಕಮಲಾ ನೆಹರೂರವರು ಮಾಡಿದ ಸ್ವಾರ್ಥತ್ಯಾಗ, ನಿಸ್ಸೀಮ ದೇಶ ಸೇವೆಯು ಎಷ್ಟುರಿಗೆ ಮಿಕ್ಕವರ ದೇಶಸೇವೆಯು ... ಅಪ್ಪೆಂದೇ ಹೇಳಬಹುದು. ಗಂಭೀರ ಹಾಗೂ ಹಸನ್ಮುಖ ಮೌನ ಸ್ವಭಾವದ ಮುಂದಾಳುತನ, ಮನಸ್ಪೂರ್ವಕ ವಾದ ಕಾರ್ಯಚತುರತೆ, ರಾಷ್ಟ್ರಭಕ್ತಿ ಇವು ಮೂರ್ತಿ ಮತ್ತಾಗಿತ್ತು. ಪತಿಯಾದರೋ ಭಾರತದ ಏಕಮಾತ್ರ ಆಶಾಂಕುರವು. ಅಂಥಾ ಪತಿಯ ಪ್ರೀತಿಯ ಯೋಗ್ಯ ಸತಿಯೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

ರಾಜವೈಭವದಲ್ಲಿ ಬೆಳೆದು, ರಾಜಕುಮಾರನ ಪತ್ನಿಯಾಗಿದ್ದು, ಭಾಗ್ಯಶಾಲಿಯಾಗಿ ಬೆಳೆದ ಆ ಸ್ತ್ರೀರತ್ನವು ಇಂದಿಗೆ ಕಣ್ಮರೆಯಾಗಿದ್ದರೂ, ಆವರ ಪವಿತ್ರ ಕೀರ್ತಿಯು ಭಾರತೀಯರಲ್ಲಿ ಅಚ್ಚಳಿಯದೆ ವಿರಾಜಮಾನವಾಗಿರುವಂಥಾದ್ದಾಗಿರುತ್ತದೆ. ಏಕಮಾತ್ರ ಪುತ್ರಿಯನ್ನು ಭಾರತ ಮಾತೆಗಿತ್ತು ದೇಶದ ಸ್ವಾತಂತ್ರ್ಯ ಯುದ್ಧದಲ್ಲಿ ತನ್ನ ಪಾಲಿನ ಕರ್ತವ್ಯವನ್ನು ಮಾಡಿದವರು. ಆನಂದ ಭವನದ ಸುಖ ವಿಲಾಸದ ನಿಲ್ದಾಣವನ್ನು ತ್ಯಜಿಸಿದಾಗ, ಪತಿ ಹಾಗೂ ಮಾವನು ದೇಶಕ್ಕಾಗಿ ಜೈಲುವಾಸವನ್ನು ಅನುಭವಿಸುತ್ತಿರುವಾಗ್ಗೆ ತಾನೂ ಮುಂದಾಳಾಗಿ ಸೆರೆಮನೆಯನ್ನು ಸೇರಿದರು. ಅಂದಿನಿಂದ ಆ ಕೋಮಲ ಶರೀರವು ತರತರದ ರೋಗಗಳಿಗೆ ತುತ್ತಾಗಿ ಕಷ್ಟ ತೊಂದರೆಗಳನ್ನು ಹೊಂದಿ ಆ ಬಗ್ಗೆ ಹಣದ ರಾಶಿಯನ್ನೇ ಕಳಕೊಂಡದ್ದಲ್ಲದ್ದೆ ಕಡೆಗೆ ಇಹಲೋಕವನ್ನು ತ್ಯಜಿಸುವ ಸ್ಥಿತಿಗೆ (ಈ ತರುಣ ಪ್ರಾಯದಲ್ಲಿ) ಬರುತ್ತದೆಂದು ಯಾರು ಭಾವಿಸಿದ್ದರು?

ಈಗ ದೇಶಕ್ಕೆ ದೇಶವೇ ಶೋಕಾತುರವಾಗಿರುವುದು ಇತ್ತೀಚೆಗೆ ರಾಷ್ಟ್ರಪತಿ ಜವಾಹರಲಾಲರು ಸ್ವದೇಶಕ್ಕೆ ಹಿಂತಿರುಗುವರು ಎಂದು ಕೇಳಿದ ಮರುದಿವಸವೇ ಕಮಲಾ ನೆಹರೂರವರನ್ನು ಕಳಕೊಳ್ಳುವಲ್ಲಿಗೆ ಬಂದು ಪುನಹ ತನ್ನ ಸ್ವದೇಶಾಗಮನವನ್ನು ಕೆಲವು ಸಮಯಕ್ಕೆ ಹಿಂದಿಕ್ಕಿದ್ದೆ ಸಂಗತಿ. ಅವೆಸ್ಟು ... ಭಾರತಾಂಬೆಯೇ ನಿನ್ನ ಸ್ವಾತಂತ್ರ್ಯದ ಹಾದಿಯು ಇಂತಹ ದುಃಖ್ಖಕಂಟಕಗಳಿಂದಲೇ ತುಂಬಿರುತ್ತದೆಂದು ಯಾರು ನೆನಸಿದ್ದರು? ಕಳೆದ ಕೆಲವೇ ವರ್ಷಗಳಲ್ಲಿ ಅದೆಷ್ಟು ಸುಪುತ್ರರನ್ನೂ ಸುಪುತ್ರೀಯರನ್ನೂ ಕಳಕೊಂಡಿರುವೆ? ಅಂಥಹ ರಾಷ್ಟ್ರಭಕ್ತರ ಯಜ್ಞದಲ್ಲೇ ನಿನ್ನ ಭಾಗ್ಯಶೃಂಖಲೆಯು ಬಿಚ್ಚಲ್ಪಡಬೇಕೆಂಬ ಭಗವಂತನ ಇಚ್ಛೆಯೇ? ಆ ರೀತಿ ಆಗುವುದಾದರೆ ಅದರಿಂದ ತಪ್ಪಿಸಲು ಸಾಧ್ಯ?

ಆನಂದ ಭವನದ ಶೋಕ, ಮಹಾತ್ಮಾಜಿಯವರ ಹೃದಯವೇದನೆ, ರಾಷ್ಟ್ರಪತಿ ಬಾಬುರಾಜೇಂದ್ರ ಪ್ರಸಾದರ ಆಶ್ಚರ್ಯ, ದೇಶದ ದೀನರ ಹೃದಯದ್ರಾವಕ ಚಿಂತನೆ, ಭಾರತಾಂಬೆಯ ಗೋಳು ಮಹಿಳಾಮಣಿಯರ ಕಣ್ಣೀರ ಕೋಡಿ ಇವೆಂದು ಶಾಂತವಾಗಬಹುದು?

ರೋಗಶಯ್ಯೆಯಲ್ಲಿ ಪತಿಯು ಹಂಬಲಪಟ್ಟಿದ್ದ ಆಶೆಯನ್ನು ಪೂರೈಸಲು ಆಳಿದವರ ಹೃದಯಪರಿವರ್ತನ ವಾಯಿತು. ಅವಧಿಯ ಮುಂಚೆಯೇ ಪತಿಯು ಬಿಡುಗಡೆಯಾಗಿ ಪತಿಯ ದರ್ಶನವು ದೊರೆಕಿತ್ತು. ಭಾರತ ಮಾತೆಯನ್ನು ಅಗಲಿ ವಿದೇಶದಲ್ಲಿ ತನ್ನ ಅಂತ್ಯಕ್ರಿಯೆಯನ್ನು ಮಾಡಿದ್ದಲ್ಲಿ ಮಾತೆಯ ಸೇವೆಗೆ ಧಕ್ಕೆಯಾಗಬಹುದೆಂದು ಗ್ರಹಿಸಿದಳಾ ಪತಿವ್ರತೆ. ಕಡೆಗೆ ವಿವೇಕದಿಂದ 'ಪತಿಯೇ ಸ್ವದೇಶಕ್ಕೆ ಹಿಂತಿರುಗಿ ಜವಾಬ್ದಾರಿಯನ್ನು ಹೊತ್ತು ದೇಶಮಾತೆಯ ಸೇವೆಮಾಡಿರಿ. ತಮ್ಮ ಬರೋಣವನ್ನು ಭಾರತಮಾತೆಯು ಕಾಯುತ್ತಿರುವಳು. ನನ್ನ ಅಂತ್ಯಕ್ರಿಯೆಯ ನೆವದಲ್ಲಿ ಭಾರತಾಸೇವೆಯ ಕಾರ್ಯಗಳು ವಿಳಂಬವಾಗಬಹುದು. ಜಾಗ್ರತೆಯಾಗಿರಿ. ದೇಹವನ್ನು ತ್ಯಜಿಸಿರಿ. ಆದಷ್ಟು ತ್ವರಿತದಲ್ಲಿ ಸ್ವದೇಶವನ್ನು ಸೇರಿರಿ" ಎಂದು ಪತಿಯನ್ನು ಹುರಿದುಂಬಿಸಿದ್ದರು.

ಹಾ, ಪತಿವ್ರತೆಯೇ ನೀನೇ ಧನ್ಯೆ! ಮರುದಿವಸಕ್ಕೆ ಸ್ವದೇಶಕ್ಕೆ ತೆರಳುವ ಪತಿಯ ದರ್ಶನವು ಸದ್ಯಕ್ಕೆ ತನಗೆ ದೊರಕಲಾರದೆಂದೂ ಇನ್ನು ಹೆಚ್ಚು ಸಮಯ ತಾನು ಬದುಕಲಾರೆನೆಂದೂ ಖಚಿತವಾದುದರಿಂದಲ್ಲವೇ ಪತಿಯ ಸಮಕ್ಷಮವೇ ಇಹಲೋಕವನ್ನು ತ್ಯಜಿಸಿದ್ದು? ಸಂಧ್ಯಾಮಣಿಯೂ ಸತ್ಯಶೀಲಳೂ ದೈವಿಭಕ್ತಳೂ ಪತಿವ್ರತೆಯೂ ಆದ ನಿಮಗಿದು ಭೂಷಣವೇ ಸರಿ. ಅಮರ ಕೀರ್ತಿಯನ್ನು ಹೊಂದಿದಿರಿ. ಶ್ರೀ ... ಯುಗದಲ್ಲಿ ಚಂದ್ರಮತಿಯು ಪತ್ನೀ ವ್ರತದಿಂದ ಕರ್ತವ್ಯವಿಮುಖನಾಗುತ್ತಿರುವ ತನ್ನ ಪತಿ ಸತ್ಯಹರಿಶ್ಚಂದ್ರನನ್ನು ವಿವೇಕದಿಂದ ಎಚ್ಚರಿಸಿ ಕರ್ತವ್ಯನಿಷ್ಠನಾಗುವಂತೆ ಮಾಡಿದ ಆ ರಸನ್ನಾ ಶ್ರೀಕೃಷ್ಣ ಸಂಕ್ತಿಗೆ ನಿಮ್ಮನ್ನು ಹೋಲಿಸಲು ಅಡ್ಡಿಯೇನು? ಸೇನಾಪತಿ ಡಾ॥ ಪಟ್ಟಾಭಿಯವರು ಹೇಳಿದಂತೆ ನೀವೇ "ಆಧುನಿಕ ಸೀತೆಯೂ ..." ನಿಮ್ಮ ಆತ್ಮಕ್ಕೆ ಚಿರಶಾಂತಿ ದೊರಲಿ.

ಯಂ. ಬಿ. ನರ್ಸಪ್ಪ.

ಬ್ರಿಟಿಷ ಸಾಮ್ರಾಜ್ಯದ ಕೆನಡಾದ ಶಾಸನವು ಬದಲಾಗುವುದೆ?

ಈಗ ಇದ್ದಂತೆ ಡೊಮಿನಿಯನ್ಸ್ ಆಫ ಕೆನಡಾದ ಸರಕಾರವು ಅನೇಕ ತರದಲ್ಲಿ ಬ್ರಿಟಿಷ ಪಾರ್ಲಿಮೆಂಟಿನ ಅಡಿಯಲ್ಲಿರುತ್ತದೆ. ಇದರಿಂದ ಅವರಿಗೆ ರಾಜ್ಯಭಾರವನ್ನು ಕೆಲವು ತಡೆಗಳು ಬರುವವೆಂದು ಆದ್ದರಿಂದ ತನ್ನ ಈಗಿನ ಶಾಸನ ಬದಲಾಯಿಸಬೇಕೆಂದೂ, ಇಲ್ಲಿನ ಅನೇಕ ಪ್ರಾಂತ್ಯಗಳ ಪ್ರತಿನಿಧಿಗಳ ಪರಿಷತ್ತು ನಡೆದಿರುತ್ತವೆಂದು ವಾರ್ತೆ.

ಹಬಸಿ ರಣರಂಗದ ವಾರ್ತೆ

ತೆಂಬಿಯನ್ ಪ್ರಾಂತ್ಯದಲ್ಲಿ ಭಯಂಕರ ಸಮರ ನಡೆಯುತ್ತಿದೆ. ಕೆಲವು ಕಡೆಗಳಿಂದ ಹಬಸಿಗಳು ಸೋತ ವಾರ್ತೆಗಳು ಬರುತ್ತಿವೆ. ಆದರೆ ಇವುಗಳಲ್ಲಿ ಸತ್ಯಾಂಶವಿದೆಯೆಂದು ಹೇಳಲು ಅಸಾಧ್ಯ. ಹಬಸಿಯರು ತಕ್ಕ ರಕ್ಷಣಾಯೋಜನೆಯು ಮಾಡುತ್ತಿರುವರೆಂದೂ, ದೇಶದ ಎಲ್ಲಾ ಭಾಗಗಳಿಗೆ ಯೋಗ್ಯ ಸೇನಾಬಲವನ್ನು ಕಳುಹಿಸಿರುವರೆಂದೂ ತಿಳಿದುಬರುತ್ತದೆ. ಹಲವು ಕಡೆಗಳಲ್ಲಿ ಇಟೇಲಿಯಾನರಿಗೂ ಇವರಿಗೂ ಕೈ ಕೈ ಯುದ್ಧ ನಡೆದಿರುತ್ತದೆ. ತೆಂಬಿಯನ್ ಪ್ರಾಂತ್ಯ ತಮಗೆ ಅನೇಕ ಜಯಗಳು ಲಭಿಸಿದ್ದಾವೆಂದು ಇಟೇಲಿಯ ರೋಮ್ ನಗರದಿಂದ ಬಂದ ವಾರ್ತೆ. ಹಬಸಿಯರ ಪ್ರಖ್ಯಾತ ಸೇನಾನಾಯಕರಾದ ರಾಸ್ ಕಾಸಾರವರು ಪ್ರಾಣತ್ಯಾಗಮಾಡಿರುವರಂತೆ. ತಮ್ಮ ಸೈನಿಕರು ಜಯಶಾಲಿಗಳಾಗಿಯೇ ಮುಂದುವರಿಯುತ್ತಿದ್ದರೆಂದು ಮುಸಲೋನಿಯವರ ಸಂತೋಷದಿಂದ ಕೂಡಿದ ಪ್ರಕಟಣೆ ಹೊರಟಿರುತದೆ.

ಹಬಸಿ ಚಕ್ರವರ್ತಿಯವರು ಸಂಧಾನಕ್ಕೆ ಸಿದ್ಧರಿರುವರು.

ಹಬಸಿ ಚಕ್ರವರ್ತಿಯವರು, ಬ್ರಿಟನಿನ ಬಹಿರ್ವ್ಯವಹಾರದ ಕಾರ್ಯದರ್ಶಿಗಳಿಗೆ ಬ್ರಿಟಿಷ ಚಕ್ರವರ್ತಿಗಳು ಮಧ್ಯಸ್ಥಿಗಾಗುವುದಾದರೆ, ಸಂಧಾನಕ್ಕೆ ಸಿದ್ಧನಿರುವೆನೆಂದೂ ಪೂರ್ವಸ್ಥಿತಿಯಲ್ಲಿದ್ದಂತೆ ಇಟೇಲಿಯಾನರು ನೆಲಸಿದ ಪ್ರದೇಶವನ್ನು ಅವರಿಗೆನೆ ಬಿಟ್ಟುಕೊಡಲು ಸಿದ್ಧನಿರುವೆನೆಂದೂ ಒಂದು ಸಂದೇಶವನ್ನು ಕಳುಹಿಸಿಕೊಟ್ಟಿರುವರೆಂದು ವಾರ್ತೆ. ಈ ಸಂದೇಶವನ್ನು ಜಿನಿವಾದಲ್ಲಿರುವ ಬಹಿರ್ವ್ಯವಹಾರದ ಕಾರ್ಯದರ್ಶಿಗಳಿಗೆ ಮಿ॥ ಎಂಟೋನಿ ಎಡಿನ್ನರಿಗೆ ಕಳುಹಿಸಲಾಗುವುದು. ಇವರು ಇದಕ್ಕೆ ಯೋಗ್ಯ ಉತ್ತರವನ್ನು ಕಳುಹಿಸಿಕೊಡುವರೆಂದು ವಾರ್ತೆ ಇದೆ.

ಜೋಗೇಶಚಂದ್ರ ಚಟರ್ಜಿಯವರು

ಕಳೆದ ನವಂಬರ ೧೯ರಲ್ಲಿ ಸೆರೆಮನೆಗಳಲ್ಲಿ ರಾಜಕೀಯ ಕೈದಿಗಳ ಸ್ಥಿತಿಯನ್ನು ಸುಧಾರಣೆಗೊಳಿಸುವ ಉದ್ದೇಶದಿಂದ ಹಿಡಿದ ಉಪವಾಸಾಚರಣೆಯನ್ನು ಮೊನ್ನೆ ೩೦ರಲ್ಲಿ ನಿಲ್ಲಿಸಿರುವರೆಂದು ತಿಳಿದು ಬರುತ್ತದೆ. ಸಂಯುಕ್ತ ಪ್ರಾಂತ್ಯದ ಸರಕಾರವು ಇವರ ಸಲಹೆಗಳನ್ನು ವಿಚಾರಿಸುವರೆಂದು ಅಲ್ಲಿನ ಹೋಮ್ ಮೆಂಬರರು ಕೌನ್ಸಿಲಿನಲ್ಲಿ ಕೊಟ್ಟ ಭರವಸೆಯು ಇದಕ್ಕೆ ಕಾರಣವಂತೆ.

ಸಿಕ್ಖ—ಮುಸ್ಲಿಮ ಗಲಭೆ.

ರಾವಲ್‌ಪಿಂಡಿಯಿಂದ ಸಾಧಾರಣ ೩೦ ಮೈಲು ದೂರವಿರುವ ಕೋಠಸಾರು ಸಿಂಗ್ ಎಂಬಲ್ಲಿ ಕೋಮುವಾರು ಬೇಧದಿಂದಾಗಿ ಸಿಕ್ಖರಿಗೂ ಮುಸ್ಲಿಮರಿಗೂ ಚಕಮಕಿಯಾಗಿರುತ್ತದೆ. ೧೩ ಜನರಿಗೆ ಭಯಂಕರ ತರದ ಹಾನಿಯೊದಗಿರುವುದು.

ನಿಮಂಗಳ

ಶ್ರೀ ಗೋವಿಂದಕೃಷ್ಣ ಚೆಟ್ಟೂರರವರು

(ಶ್ರೀ ರಾಮಚಂದ್ರ ರಾವ್ ಮೊಚಲನೆಯ ಎಂ. ಎ. ಬಿ. ... ...)

ವೃತ್ತಂ ॥
ಮೆರೆವೀಭಾರತವರ್ಷದೊಳ್ ನೆಲಸಿಹಾ ನೂರಾರಿಂ ಮಿಕ್ಕಸಾ ।
ಯಿರ ಸದ್ವಂಶದಿ ಜನ್ಮಮಂ ತಳೆದು ವಿದ್ಯಾಸಂಪದಾಧಿಕ್ಯದಿಂ ॥
ಸಿರಿಯಿಂದುಜ್ವಗದುಜ್ವಲ ಪ್ರತಿಭೆಯಿಂ ಮೈವೆತ್ತ ತಾನಿಂದುನ ।
ಸ್ವರವೀ ದೇಹವನೀಗ ಕೀರ್ತಿತನುವಿಂ ಸಾರ್ದಂ ಪರಂಧಾಮಮಂ ॥

೨.
ಆವಂ ಸಜ್ಜನಸಂಗತಂ ವಿನಯದಿಂ ವಿದ್ಯಾರ್ಜನೌತ್ಸುಕ್ಯದಿಂ ।
'ತಾವೇ ಪಾಲಿಸಬೇಕುದಾನು ಬಡವಂ ಕಾರುಣ್ಯದಿಂ' ಎಂದೆನ ।
ಲ್ಕೀವಂ ಸಾಧ್ಯ ಸಹಾಯಮಂ ಸುಹೃದಯಂ ಗೋವಿಂದ ಕೃಷ್ಣಂ ವಲಂ ।
ಜೀವಾತ್ಮಂ ಪರಮಾತ್ಮನೊಳ್ ಲಯಿಸಿತೇ ಸನ್ಮಾನ್ಯ ಚೆಟ್ಟೂರನಾ ॥

೩.
ಪೂವಂ ಪೊಕ್ಕು ಸುಗಂಧಮಂ ಸವಿವವೊಲ್ ಭೃಂಗಂಬೊಲಾಂಗ್ಲ ಪ್ರಭಾ
ಭಾವಂತರ್ಗತಮಾದ ಭಾಷೆಯೊಳವಂ ತಾಂತಳ್ತದೊಳ್ಗೆಯ್ದು ಸಲ್ ।
ಭಾವೋದ್ರೇಕವನಾಪ್ತ ವಾಚಕ ಜನಸ್ತೋಮಂ ಮನಂಗಾಂಬೊಲೀ ।
ಕಾವ್ಯಂ ಪದ್ಯಮನೇಕಮಂ ರಚಿಸಿದಂ ಸುಶ್ರಾವ್ಯ ಮೆಂಬಂದದಿಂ ॥

೪.
ದೇವಂ ಮಾನವ ವರ್ಗದಿಂದಮಿನಿತೀ ಮಾನಾರ್ಹನಂ ಕೊಳುತ ।
ನ್ಯಾಯವನ್ಯಾಯವಗೈದನೇಕ ಕಿರಿಯಂ ಒಗೆದೊಲ್ ಲಾರಿಲ್ಲ ನಲ್ ॥
ಮಾವಂ ಬಿತ್ತಿ ಫಲಗಳಂ ಪಸಿಯವೇ ಕುಯ್ದೊಯ್ವ ತೋಟಿಂಗಳಂ ।
ತಾನಾತಂ ಕಹಿಬೇವಕಾಯಿಯನಿತುಂ ಪಣ್ಣಾದೊಡಂ ಕುಯ್ವವೇ?"

೫
ವರವಿದ್ಯಾ ಬಲದಿಂದ ಮಾನ್ಯತೆಯುಮಂ ವಾಕ್ಪ್ರೌಢಿಯಿಂ ಕೀರ್ತಿಯಂ
ಪಿರಿದುದ್ಯೋಗದಿ ಬಿಂಕಮಂ ಸುಕವಿತಾದಿನ್ನಾಣಮಂ ಬೀರಿಜ
ನ್ಮೆರಡಟ್ಟಂ ತವೆ ಮಾಗಳೂರ ಸರಕಾರೀ ವಿಶ್ವವಿದ್ಯಾಲಯಾಂ ।
ತರದೊಳ್ ಸದ್ವಿನಿಯೋಗದಿಂ ಸವೆ ವಿಶ್ರಾಂತಿಗೇಹಕೆಂದೈದಿದಂ

ಸ್ಥಳೀಯ ಸಂಸ್ಥೆಗಳು.

ದಿ ಕೆನರಾ ಬೇಂಕ್ ಲಿಮಿಟೆಡ್ ಮಂಗಳೂರು. ಇದರ ೧೯೩೫ನೇ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿರುತ್ತದೆ. ಈ ಬೇಂಕಿನ ಈಗಿನ ಮೂಲಧನವು ರೂ ೬೩ ೪೦,೬೪೩—೭—೧೦ ಆಗಿರುತ್ತದೆಂದು ಬೇಲೆನ್ಸ್‌ಶೀಟಿನಿಂದ ವ್ಯಕ್ತವಾಗುತ್ತದೆ. ಇದರ ಕ್ಷೇಮನಿಧಿಯು ರೂ ೪ ೫೦ ೦೦೦ ಆಗಿರುತ್ತದೆ. ಗತ ವರ್ಷದಲ್ಲಿ ಇವರು ರೂ ೬೫,೧೩೩—೭ ೫ ಲಾಭಗಳಿಸಿರುವರು. ಪಾಲುದಾರರಿಗೆ ಶೇಕಡಾ ೧೨ ಸಲ ಡಿವಿಡೆಂಡು ಹಂಚಲಾಗಿದೆ. ಬೇಂಕಿನ ನೌಕರರಿಗೂ ಬೋನಸ್ಸು ಹಂಚಲಾಗಿದೆಯೆಂದು ತಿಳಿದುಬರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಲ್ಲಿ ಸ್ಥಾಪನೆಯಾಗಿ, ಒಡೇ ಜಿಲ್ಲಾ ಬೇಂಕಾಗಿದ್ದ ಈ ಸಂಸ್ಥೆಯು ಇವತ್ತಿಗೆ ಅನೇಕ ಶಾಖೆಗಳ ಮೂಲಕ ಭಾರತಖಂಡದ ಮೂಲೆಮೂಲೆಗಳಲ್ಲಿ ತನ್ನ ಕಾರ್ಯವನ್ನು ನಡೆಸುತ್ತಿದೆ. ಕಳೆದ ವರ್ಷ ಇದರ ಶಾಖೆಗಳ ಸಂಖ್ಯೆಯು ಬಹಳವಾಗಿ ಹೆಚ್ಚಿರುತ್ತದೆ. ಈ ಶಾಖೆಗಳಿಂದಾಗಿ ನಮ್ಮ ಜಿಲ್ಲೆಯ ಎಲ್ಲಾ ವರ್ತಕರಿಗೂ ಉಪಯುಕ್ತವಾಗುತ್ತಿದೆ. ನಮ್ಮ ಸಾಹುಕಾರರಿಗೆ ಬಹಿರ್ ದೇಶಗಳೊಡನೆ ವ್ಯಾಪಾರ ವಹಿವಾಟುಗಳನ್ನು ನಡೆಯಿಸಲು ಈ ಬೇಂಕಿನಲ್ಲಿ ಏರ್ಪಾಡುಗಳಾಗಿವೆ. ವ್ಯಾಪಾರವು ಅತಿರೇಕವಾಗಿ ಅಭಿವೃದ್ಧಿಹೊಂದುತ್ತಿರುವುದರಿಂದ, ಈ ಬೇಂಕಿನ ಡೈರೆಕ್ಟರರು ಇದರ ಮೂಲಧನವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ. ಬೇಗನೇ ೩ರ ಸಲೆ ಕೊಮ್ಯೂಲೇಟಿವ್ ಡಿವಿಡೆಂಡು ಕೊಡುವ ೬ ಲಕ್ಷದ ಮೂಲಧನವನ್ನು ತೆರೆಯುವರಾಗಿ ತಿಳಿದುಬರುತ್ತದೆ. ಈ ಬೇಂಕಿನ ಈಗ ಇರುವ ವರ್ಕಿಂಗ ಕೆಪಿಟಲು ೬೩ ಲಕ್ಷದಿಂದ ಬೇಗನೇ ಒಂದು ಕೋಟಿಯಾಗಲೆಂದೂ ನಮ್ಮ ಹಾರೈಕೆ.

ಕೆನರಾ ಬೇಂಕಿಂಗ್ ಕಾರ್ಪರೇಶನ್ ಉಡುಪಿ. ಇದರ ೧೯೩೫ರ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ಇದರ ವರ್ಕಿಂಗ್ ಕೆಪಿಟಲು ರೂ. ೩೫,೬೬ ೭೦೩—೮—೧೧ ಆಗಿರುತ್ತದೆ. ಕ್ಷೇಮನಿಧಿ ರೂ ೩೬,೦೯೭, ಗತವರ್ಷದ ಜಮಾ ಖರ್ಚು ವಹಿವಾಟು ರೂ. ೩,೦೫,೦೦೦ ಲಾಭ ರೂ ೪೫ ೭೦೫. ಪಾಲುದಾರರಿಗೆ ಶೇಕಡಾ ೧೨ರ ಸಲೆ ಡಿವಿಡೆಂಡು ಹಂಚಲಾಗಿದೆ. ದಕ್ಷಿಣ ಕನ್ನಡದ ಉಡುಪಿಯಲ್ಲಿ ಕಾರ್ಯ ನಡೆಸುತ್ತಿದ್ದ ಈ ಸಂಸ್ಥೆಯು ನಮ್ಮ ಜಿಲ್ಲೆಯ ಕೆಲವು ಉತ್ಸಾಹಿ ಪುರುಷರ ಬೆಸೆಯಿಂದ ನಮ್ಮ ಜಿಲ್ಲೆಯೊಳಗೂ ಹೊರಗೂ ಅನೇಕ ಶಾಖೆಗಳಿಂದಕೂಡಿ ಬಹಳ ಶ್ರೇಯಸ್ಸು ಮೇಲೆ ಕೊಟ್ಟ ಅಂಕೆಸಂಖ್ಯೆಗಳಿಂದ ವ್ಯಕ್ತವಾಗುತ್ತದೆ. ಅದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ದಕ್ಷಿಣ ಕನ್ನಡದ ಅನೇಕ ಪ್ರಮುಖ ವರ್ತಕರು ಅಧ್ಯಪುರುಷರೂ ಇದರ ಪ್ರವರ್ತಕರಾಗಿದ್ದು, ಈ ಸಂಸ್ಥೆಯು ಮುಂದಕ್ಕೂ ಪ್ರಗತಿ ಹೊಂದಿ ಬಹಳ ಶ್ರೇಯೋವಂತವಾಗಿ ಬಾಳಲೆಂದು ನಮ್ಮ ಹಾರೈಕೆ.

ಡಾ॥ ನಾಗೆಪ್ಪ ಪೈಗಳ ಸಾರ್ವಜನಿಕ ಧರ್ಮಾರ್ಥ ದವಾಖಾನೆ

ಈ ಸಂಸ್ಥೆಯು ಕಳೆದ ವರ್ಷದಲ್ಲಿ ಓರ್ವ ಉದಾರ ಮಹನೀಯರ ಕೃಪೆಯಿಂದ ಜನಿಸಿತು. ಅದು ಕಾರ್ಯ ಪ್ರಾರಂಭಿಸಿ ಇವತ್ತಿಗೆ ಒಂದು ವರ್ಷವಾಗಿರುತ್ತದೆ. ಈ ಒಂದು ವರ್ಷದ ವರದಿಯು ನಮ್ಮ ಕೈಸೇರಿರುತ್ತದೆ. ನಾವು ಈ ಸಂಸ್ಥೆಯನ್ನು ಸಂದರ್ಶಿಸಿ ನೋಡಿರುತ್ತೇವೆ. ಈ ಸಂಸ್ಥೆಯನ್ನು ನಿರ್ಮಿಸಿದ ಉದಾರಿಮಹನೀಯರ ಉದ್ದೇಶವು ಯೋಗ್ಯರೀತಿಯಲ್ಲಿ ನೆರೆದಿರುತ್ತದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸುಮಾರು ಬಡಜನರಿಗೆ ಜಾತಿಮತಬೇಧಗಳಿಲ್ಲದೆ ಸಮದೃಷ್ಟಿಯಿಂದ ಇಲ್ಲಿ ಚಿಕಿತ್ಸೆ ನಡೆಸಲಾಗಿದೆ. ಚಿಕಿತ್ಸೆ ಹೊಂದಿದವರ ಪಟ್ಟಿಯಲ್ಲಿ ಹರಿಜನರ ಹೆಸರು ತುಂಬಾ ಗೋಚರವಾಗುತ್ತಿದೆ. ಶ್ರೀ॥ ಡಾ॥ ನಾಗಪ್ಪಪೈಗಳವರು ಬಹಳ ಉತ್ಸಾಹದಿಂದ ಈ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ... ಈ ಸಂಸ್ಥೆಯು ಅತ್ತಕಡೆಯವರಿಗೆ ಎಂದರೆ ಪಂಟ್ಲಿಂಡ್‌ಪೇಟೆ ಬೋಳೂರು ಇತ್ಯಾದಿ ಸುತ್ತಮುತ್ತಲಿನ ಸ್ಥಳದ ಜನರಿಗೆ ಇದೊಂದು ಸಾರ್ವಜನಿಕ ಧರ್ಮಾರ್ಥ ಆಸ್ಪತ್ರೆಯೆನ್ನಬಹುದು. ಈ ಸಂಸ್ಥೆಯನ್ನು ಏರ್ಪಡಿಸಿದ ಉದಾರಿ ಮಹನೀಯರು ಯೋಗ್ಯ ದಾನಧರ್ಮ ಮಾಡಿದಂತಾಗಿದೆ. ದಿನೇ ದಿನೇ ರೋಗಿಗಳ ಸಂಖ್ಯೆಯು ವೃದ್ಧಿಯಾಗುತ್ತಿದೆಯೆಂದು ನಾವು ತಿಳಿಯುತ್ತೇವೆ. ಈ ಸಂಸ್ಥೆಗೆ ತಕ್ಕ ಔಷಧಿಯ ಏರ್ಪಾಡಾಗಲು ಈ ಮಹನೀಯರೂ ಇತರ ಆಢ್ಯಪುರುಷರೂ ಕೂಡಿ, ಈ ಸಂಸ್ಥೆಗೆ ಬೇಕಾದ ಧನಸಹಾಯವಾಗುವಂತೆ ಏರ್ಪಾಡುಮಾಡಿದರೆ ಉಚಿತವು. ಕಳೆದ ವರ್ಷದಲ್ಲಿ, ಈ ಸಂಸ್ಥೆಯಲ್ಲಿ ಒಟ್ಟು ೧೫೧೧೬ ರೋಗಿಗಳು ಚಿಕಿತ್ಸೆಹೊಂದಿರುವರು. ಉದಾರತ್ವವನ್ನು ವ್ಯಕ್ತಪಡಿಸಲು ಈ ಸಂಸ್ಥೆಯೊಂದು ಯೋಗ್ಯ ಸ್ಥಾನವಾಗಿದೆ. ಆದ್ದರಿಂದ ಡಾ॥ ಪೈಗಳವರು ನಡೆಸುವ ಈ ಸಾರ್ವಜನಿಕ ಉಪಕಾರದ ಕಾರ್ಯವು ಶ್ರೇಯೋವಂತವಾಗಿ ನಡೆಯುವಂತೆ, ಮುಂದಕ್ಕೆ ಹಲವರು ಅವರೊಡನೆ ಈ ಪುಣ್ಯಕಾರ್ಯದಲ್ಲಿ ಭಾಗಿಗಳಾಗುವರೆಂದು ನಮ್ಮ ಹಾರೈಕೆ ಮಾತ್ರವಲ್ಲದೆ, ರೋಗಪೀಡಿತರಾದವರು ಈ ಸಂಸ್ಥೆಯ ಉಪಯೋಗ ಪಡೆಯಬೇಕೆಂದು ನಮ್ಮ ವಿನಂತಿ.



HASAG

ಹಸಾಗ್

ದೀಪಗಳಲ್ಲಿ ಅತ್ಯುಜ್ವಲವಾದುದು. ಭದ್ರವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ. ಎಲ್ಲವೂ ಹೊಸ ಮಾದರಿ. ಈಗಾಗಲೆ ಸಾವಿರಗಳ್ಟಳೆ ಜನರು ಅದನ್ನು ಮನೆಯಲ್ಲಿ ಉಪಯೋಗಿಸುತ್ತಿದ್ದಾರೆ. ಹಸಾಗ್ ದೀಪದ ಪ್ರಜ್ವಲನವು ಬಹಳ ಸುಖದಾಯಕವೂ ಸಂತೋಷಕರವೂ ಆಗಿದೆ. ಎಣ್ಣೆಯನ್ನು ಬಹಳ ಸಾವಧಾನದಿಂದ ಖರ್ಚುಮಾಡುವುದರಲ್ಲಿ ಇದರಷ್ಟು ಉತ್ತಮವಾದ ದೀಪವು ಮತ್ತೊಂದಿಲ್ಲ. ಅಂತೆಯೇ ಎಲ್ಲರಿಗೂ ಉಪಯುಕ್ತವಾಗುವಂತೆ ಕ್ರಯವು ಬಹಳ ಕಡಿಮೆಯಾಗಿರುವುದು

EFAR



ಎಫಾರ್

ಎಂಬುದು ಇನ್ನೊಂದು ಅಮೋಘ ದೀಪ ಇದು ಎಲರ ಮೆಚ್ಚುಗೆಗೂ ಪಾತ್ರವಾಗಿ ಬಹಳ ಕಮ್ಮಿ ಎಣ್ಣೆಯಿಂದ ಉಜ್ವಲ ಪ್ರಕಾಶವನ್ನು ಕೊಡುವುದರಲ್ಲಿ ಅದ್ವಿತೀಯವಾಗಿದೆ ಕ್ರಯವು ಬಹಳ ಕಡಿಮೆ ಮನೆಯ ಶೃಂಗಾರಕ್ಕೆ ಬಹಳ ಯೋಗ್ಯವಾಗಿರುವದು

Sole Representatives **F. Racek & Co.,**

Bombay.	Calcutta	Madras	Colombo
P. O. Box	P. O. Box	P. O Box	P. O. Box
3006	2121	1248	189

THE 1935 MODEL

HEAVY DUTY TRUCK



For Your Haulage

U SUBRAYA NAYAK,

FORD DEALER

SHIMOGA——AND——MANGALORE.



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು

24 ಔನ್ಸ್ ರೂ 2 16 ಔನ್ಸ್ ರೂ. 1-8-0 8 ಔನ್ಸ್ ರೂ. 0 14-0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ.

ಅಯೊಡ್ಯಾಸ್ಡ್ ಸರ್ಸಪರ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ.

4 ಔನ್ಸ್ ರೂ. 1—0—0 8 ಔನ್ಸ್ ರೂ 1—8—0.

ದಕ್ಷಿಣ ಕನ್ನಡದ ಏಜಂಟರು—ಪೊಪ್ಯುಲರ ಸ್ಟೋರ್ಸ್, ಮಂಗಳೂರು.

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes Wounds, Cuts, Colds, Headache It is a complete substitute for the domestic medicine chest Try once this unequalled remedy In ½oz tin .As 3/- In oz jar As. 12/-

Superior Red Balm For relieving pains in muscles and on skin. Directions for use with the bottle Price As. 12 - only

Wurmteufel Is a soverign remedy against all sorts of worms in stomach and in the intestines Physicians enjoying authoritativeness describe it as redical remedy and warmly recommed it. All those who suffer from worms, children and adults, try this unique remedy and be freed from your ailment. Price As. 10 per packet.

Pocket-Inhaler. For coughs and hoarseness, headache catarrch, colds, use this inhaler and you will be relieved immediately. Price per inhaler As. 6/- & As 8/-

Po-Ho Fluid For Asthma, colds, indigestion, toothache lumbago, a sure remedy in all cases Price As. 6/- and Re. 1/- per phial

Cough Cure An infallible remedy for coughs of all kinds bronchitis, hoarseness. Particulars in bottle. Price As. 12/- for 3 oz bottle.

The New Curative Earth: A Radium cure for incurable diseases.

Mithra Toilet Soaps—Scientifically prepared German soaps excellent for health. Price As. 1/3; 2/6; 3/-; 4;

Basel Mission Book Depot

Mangalore, Branches in Codialbail, Hubli, Calicut

ನಿಮ್ಮ ಜಾಹೀರಾತನ್ನು ಸ್ವದೇಶಾಭಿಮಾನಿಯಲ್ಲಿ ಕೊಡಿರಿ

ವನಿತಾ ವಿಭಾಗ.

ಪಾಶ್ಚ್ಯದೇಶದ ಮಹಿಳೆಯರ ಸ್ಥಿತಿಗತಿ.

ಹೊಲ್ಲೆಂಡ್ ದೇಶದಲ್ಲಿ

ಹೊಲ್ಲೆಂಡ್ ದೇಶದ ಸ್ತ್ರೀಯರಿಗೆ ರಾಜ[illegible] [illegible]ದ್ಯೋಗಗಳಲ್ಲಿ ಪುರುಷರಿಗಿರುವಷ್ಟು ಹಕ್ಕುಗಳು ದೊರೆತಿ[illegible] ಮನೆವಾರ್ತೆಗಳಲ್ಲೂ ಇನ್ನಿತರ ಕೆಲಸಗಳಲ್ಲೂ ಅವ[illegible] ಸಮಾನ ಸ್ವಾತಂತ್ರ್ಯವಿಲ್ಲ. ಸಮಾಜದಲ್ಲೂ [illegible]ರಿಗೆ ಬೇರೆ ರೀತಿನೀತಿಗಳನ್ನು ಅನುಸರಿಸಬೇಕಾಗಿದೆ [illegible]ಧುವೆಯ ವಿಚಾರದಲ್ಲಿ ಅವರಿಗೇನೂ ಹಕ್ಕಿಲ್ಲ. [illegible]ವೂ ಪುರುಷರ ಅಂಬೋಣದಂತಾಗಬೇಕು. ದೊಡ್ಡ [illegible]ದ್ಯೋಗಗಳನ್ನು ನೋಡುವಾಗಲೂ ಪುರುಷರ ಅನುಮತಿ [illegible]ತಹ ಸಾಧ್ಯವಿಲ್ಲ. ಕೆಲಸದಿಂದ ತಳ್ಳುವಾಗಲೂ [illegible]ಮೊದಲು ಸ್ತ್ರೀಯರನ್ನು ತೆಗೆದು ಹಾಕುವರು. ಸಂಬಳ[illegible]ಲ್ಲೂ ಕುಂದಾ ವ್ಯತ್ಯಾಸ. ಪುರುಷರಿಗಿಂತ ಎಷ್ಟೋ [illegible]ಲಿಗೆ ಕಡಿಮೆ ಸಂಬಳಕ್ಕೆ ಅವರು ಕೆಲಸ ಮಾಡುತ್ತಿರ[illegible]. ಇದೆಲ್ಲವನ್ನೂ ಕಂಡು ಜಾಗ್ರತಿಯುಳ್ಳಂತ [illegible]ಮಹಿಳೆಯರು ಬಹಳ ಪ್ರಯಾಸ ಪಟ್ಟಾಗ್ಯೂ ಸ್ವಾರ್ಥ[illegible]ರಾದ ಪುರುಷರು ಅವರ ಮನವಿಗಳನ್ನು ಹಿಂದಕ್ಕೆ [illegible]ತ್ತಲೆ ಇದ್ದಾರೆ. ಆದರೆ ಇತ್ತೀಚೆಗೆ ಸ್ವಲ್ಪ ಸುಧಾ[illegible]ಕ ಹಕ್ಕುಗಳು ಅವರಿಗೆ ದೊರೆತಿವೆಯಂತೆ ಸ್ವಾತ್ಯ.

ಇಟೇಲಿ ಮತ್ತು ಸ್ವಿಜರ್‌ಲೇಂಡಿನಲ್ಲಿ

ಇಟೇಲಿಯಲ್ಲಾದರೆ ಕಾರ್ಯಧುರಂಧರನಾದ ಮುಸ[illegible]ಲಿನಿಯ ನಿಮಿತ್ತ ಬಲನೆಯರಿಗೆ ಸರ್ವಸಾಧಾರಣವಾಗಿ [illegible]ಪೂರ್ಣ ಸ್ವಾತಂತ್ರ್ಯವಿದೆ. ಮುಸಲೀನಿಯೇ ಅನೇಕ [illegible]ಮಹಿಳೆಯರನ್ನು ಒಟ್ಟುಗೂಡಿಸಿ ದೇಶದ ಎಲ್ಲಾ ಯುವ[illegible]ರನ್ನು ರಣರಂಗಕ್ಕೆ ಕಳುಹಲು ಪ್ರೋತ್ಸಾಹಕೊಡುವಂತೆ [illegible]ಕೇಳಿಕೊಂಡದ್ದಲ್ಲದೆ ಅವರಲ್ಲೂ ಯುದ್ಧ ವಿದ್ಯಾಭ್ಯಾಸದ [illegible]ದ್ದರೆ ಜಗಳಕ್ಕಾಗಿ ಮುಂದೊತ್ತಿ ಬರಬೇಕಾಗಿ ಬೇಡಿ[illegible]ನು. ಸ್ವಿಜರ್‌ಲೆಂಡಿನಲ್ಲಿ ಸ್ತ್ರೀ ಪೋಲೀಸರು ಬಹಳ [illegible]ದಕ್ಷತೆಯಿಂದ ಕೆಲಸವನ್ನು ಸಾಗಿಸುತ್ತಿರುವರು. ಇವರ [illegible]ಮುಖ್ಯ ಧ್ಯೇಯವು ಹೆಂಗಸರನ್ನೂ ಚಿಕ್ಕ ಮುಕ್ಕ ಮಕ್ಕ[illegible]ನ್ನೂ ಸಂಕಷ್ಟದಿಂದ ಪಾರುಮಾಡುವುದು. ಇವರು [illegible]ಮಕ್ಕಳು ಚಿಕ್ಕ ಪ್ರಾಯದಲ್ಲೇ ಅನೇಕಾನೇಕ ದುರ್ಗು[illegible]ಣಗಳಿಗೆ ಬಲಿಬೀಳದಂತೆ ನೋಡಿಕೊಳ್ಳಬೇಕಾಗಿರುವುದು [illegible]ಲ್ಲದೆ ಪ್ರಸ್ತುತ ಸ್ತ್ರೀಯರೂ ಸಹಾ ವಿಷಯಲಂಪಟತನ[illegible]ದಿಂದ ಕೆಡುವ ಕಾಲದಲ್ಲಿ ಅವರನ್ನು ತಡೆಗಟ್ಟಬೇಕಾ[illegible]ಗುತ್ತದೆ. ಇವರ ಈ ಕಾರ್ಯವು ಜನಮನ್ನಣೆಗೆ [illegible]ಯಾಗಿದೆ.

ಬೆಲ್ಜಿಯಮ್ ದೇಶದಲ್ಲಿ:—

ಈ ದೇಶದ ಸ್ತ್ರೀಯರಲ್ಲಿ ಸ್ವಾತಂತ್ರ್ಯದ ಬಿಸಿ ನೆತ್ತರು ಸರಿಯಾಗಿ ಹರಿಯುತ್ತದೆಂದು ನಿಶ್ಚಂಕವಾಗಿ ಹೇಳಬಹುದು. ಕಾರಣ ಅವರು ಆಗಾಗ ಪುರುಷರೊಡನೆ ತಮ್ಮ ಹಕ್ಕುಗಳಿಗಾಗಿ ಚಳವಳಿಯನ್ನೆಬ್ಬಿಸಿ ಕಡೆಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದರು. ಇದರಿಂದಾ! ಇಟೇಲಿ ದೇಶದವರು ಅನ್ಯಾಯವಾ! ಅಬಿಸೀನಿಯಾ ನರ ಮೇಲೆ ಧಾಳಿಯನ್ನೆತ್ತಿ ಹೋದಾಗ ಇಲ್ಲಿಯ ಸ್ತ್ರೀ ಮಂಡಳಿಯವರು ಇಟೇಲಿಯವರ ಕಾರ್ಯದ ಕುರಿತು ತಮ್ಮ ತಾತ್ಸಾರವನ್ನು ಸೂಚಿಸಲು ತಕ್ಕುದೊಂದು ದೊಡ್ಡ ಸಭೆಯನ್ನು ಜರಗಿಸಿದರು. ಈ ಸಭೆಗೆ ಕ್ರೈಸ್ತ ಹೆಂಗಸರು ಇದು ಮತಕ್ಕೆ ಸಂಬಂಧಪಟ್ಟ ಸಂಗತಿಯಾದ್ದರಿಂದ ತಾವು ಬರಲೊಲ್ಲೆವೆಂದರೂ, ಇನ್ನೂ ಕೆಲವರು ಸಭೆ ಜರಗಿಸಲು ಇದು ತಕ್ಕುದಾದ ಸಮಯವಲ್ಲವೆಂದು ಹಿಂದೆಯೇ ಕೂತರು. ಬ್ರುಸೆಲ್ಸಿನ ವೀರ ರಮಣಿಯರ ಸಭೆಸೇರಿ, ಅವರ ಅಹಿತ ಸೂಚಕ ನಿರಾವುಗಳನ್ನು ಮಂಜೂರು ಮಾಡಿದರು. ಅಲ್ಲದೆ ಅಬಿಸೀನಿಯಕ್ಕೆ ತಮ್ಮಿಂದಾದಷ್ಟು ಸಹಾಯ ಮಾಡಬೇಕೆಂದು ಲೀಗ್ ಆಫ್ ನೇಶನ್ಸಿಗೆ ಬರೆದುಕೊಂಡರು.

ಇದೇ ಸಮಯದಲ್ಲೇ ಅವರು ಇನ್ನೊಂದು ಠರಾವನ್ನೂ ಮಂಜೂರು ಮಾಡಿದರು. ಅದಾವದೆಂದರೆ ಪುರುಷರು, ಮದುವೆಯಾದ ಒಲನೆಯರನ್ನು ಕೆಲಸದಿಂದ ಬಹಿಷ್ಕರಿಸಬೇಕೆಂಬ ಕಾನೂನನ್ನು ಜಾರಿಮಾಡಿದ್ದರು. ಇಂತಹ ಅಬದ್ಧವಾದ ಕಠಾವನ್ನು ಖಂಡಿಸಿ, ಹಾಗೆ ಎಂದಿಗೂ ಮಾಡಲಾಗದೆಂದೂ, ಹಾಗೇ ಮಾಡಿದ್ದಲ್ಲಿ ತಾವು ಭಯಂಕರ ಚಳವಳವನ್ನು ಹೂಡುತ್ತೇವೆಂದೂ ಸರಕಾರಕ್ಕೆ ಬರೆಕೊಂಡರು. ಅಂತೆಯೇ ಈಗ ಅವರ ಮೇಲೆ ಆ ಶಾಸನದ ಬಂಧವಿಲ್ಲ.

ಬೆಲ್ಜಿಯನ್ ಹೆಂಗುಸರಿಗೆ ಇನ್ನೂ ಪ್ರತಿಸ್ಪರ್ಧಿಗಳಾಗಿ ನಿಂತು ಓಟುಕೊಡುವ ಹಕ್ಕು ಸಿಕ್ಕಿಲ್ಲ. ಇದರ ವಿಷಯ ಒಂದು ಚಳವಳಿಯನ್ನು ಹೂಡಬೇಕೆಂದು ಅವರು [illegible]

ಪೋಲೆಂಡ್ ದೇಶದಲ್ಲಿ:—

ಪೋಲೆಂಡ್ ದೇಶದ ಸ್ತ್ರೀಯರು ವಿಚಿತ್ರ ಧೋರಣೆಯನ್ನು ಪ್ರಾರಂಭಿಸಿದರು. ಕಾರಣ ಅವರಲ್ಲೂ ಈ ಸಮಸಮಾನ ಹಕ್ಕಿನ ಜಾಗ್ರತಿಯುಂಟಾಯಿತು. ಅವರ ವಿಷಯವಾಗಿ ಪುರುಷರೊಡನೆ ಮನವಿಮಾಡಿದಾಗ ಅವರು ಒಲ್ಲೆನೆಂದು ಹೇಳಲು ಇಲ್ಲಿಯ ಹೆಂಗಸರು ಕ್ರೋಧಾಸ್ವಿತರಾಗಿ ಬಹಿಷ್ಕಾರ ಚಳವಳವನ್ನು ಪ್ರಾರಂಭಿಸಿದರು. ತಾವು ಯಾವ ಕೆಲಸಗಳನ್ನೂ ಮಾಡದೆ ಸುಮ್ಮನೆ ಕೂತುಕೊಂಡರು. ಇದರಿಂದ ಪುರುಷರ ಪ್ರಗತಿಯು ವಿಚಿತ್ರ ತೆರನಾಗಿ ಅವರು ಬಹಳ ತೊಂದರೆಗೀಡಾದುದರಿಂದ ಕಡೆಗೆ ಸ್ತ್ರೀಯರಿಗೆ ಸ್ವಲ್ಪಸ್ವಲ್ಪವಾಗಿ ಸ್ವಾತಂತ್ರ್ಯವನ್ನು ಕೊಡತೊಡಗಿದರು. ಸ್ತ್ರೀಯರ ಈ ವಿಚಿತ್ರ ವರ್ತನೆಯು ದೇಶವನ್ನೇ ಬೆರಗುಗೊಳಿಸಿದೆ. ಈಗ ಅವರು ಸ್ತ್ರೀಸಂಸ್ಥೆಯೊಂದನ್ನು ನಿರ್ಮಿಸಿ ಅದರಲ್ಲಿ ತಮಗೆ ಬೇಕುಬೇಕಾದ ಠರಾವುಗಳನ್ನು ಮಂಜೂರು ಮಾಡಿ ಸರಕಾರದೊಡನೆ ಅದರ ಜಾರಿಗಾಗಿ ಅನುಮತಿಯನ್ನು ಪಡೆಯುತ್ತಿದ್ದಾರೆ. ಇತ್ತೀಚೆಗೆ ಅವರ ಮಂಡಲದ ಜನ್ಮದಿನೋತ್ಸವವು ಬಹಳ ಸಂಭ್ರಮದಿಂದ ಜರಗಿತು.

ರಷ್ಯಾ ದೇಶದಲ್ಲಿ:—

ರಷ್ಯಾ ದೇಶದಲ್ಲಿ ಗಂಡಸು ಹೆಂಗಸು ಎಂಬ ಬೇಧವೆ ಇಲ್ಲ. ಅದು ಹೇಗೆ ನಾಗರೀಕತೆಯ ಪರಮಾವಧಿಯನ್ನು ಮುಟ್ಟುತ್ತದೋ ಹಾಗೆಯೇ ಜಾತೀಯತೆಯು ಮತ್ತು ಸಮಾಜದ ರೀತಿನೀತಿಗಳಿಂದ ಬಹಳ ದೂರ ನಡೆಯಲು ಪ್ರಾರಂಭಿಸಿದೆ. ಅಲ್ಲೀಗ ೨೦ ೦೦೦ ಸ್ತ್ರೀ ಸೈನಿಕರಿದ್ದಾರೆ, ೪೦೦ ೦೦೦ ಸ್ತ್ರೀಯರು ಗುಂಡಿಕ್ಕುವ ಕ್ರಮವನ್ನು ಕಲಿಯ ತೊಡಗಿದ್ದಾರೆ. ಅನೇಕ ರಷ್ಯಾದ ತರುಣಿಯರು ವಿಮಾನ ಸೈನಿಕರಾಗಿದ್ದಾರೆ. ಅವರ ಅಭಿಪ್ರಾಯದಂತೆ ಹೆಂಗಸರೂ ಗಂಡಸರಷ್ಟೆ ಶಕ್ತಿಯುತರೂ ಕಾರ್ಯಧುರಂಧರರೂ ಆಗಿದ್ದಾರೆ. ಸಮಾಜದಲ್ಲಿ ಅವರಿಗೆ ಪ್ರತ್ಯೇಕ ಸ್ಥಾನಮಾನಗಳ ಅವಶ್ಯಕತೆ ಇಲ್ಲ. ಜನತೆಯು ಜಾಗ್ರತವಾಗಿದೆ.

ಮಕ್ಕಳ ವಿಷಯ ಹೆತ್ತವರ ಕರ್ತವ್ಯ

(ಲೇಖಕ [illegible] [illegible] ರೀಟನ [illegible] ಅಧ್ಯಾಪಕ [illegible])

ಒಬ್ಬ ಮನುಷ್ಯನಲ್ಲಿ ಕೆಟ್ಟ ಗುಣಗಳೆಂದು ತೋರಿಬರುವ ಅನೇಕ ದುರ್ಗುಣಗಳಿಗೆ ಆತನು ಜನ್ಮವೆತ್ತಿದಂದಿನಿಂದ ಯಾರು ಆತನ ಮುಂದಣಾಭಿವೃದ್ಧಿಯನ್ನು ಕೋರಿ ಆತನನ್ನು ಲಾಲಿಸಿ ಪಾಲಿಸಿ ಅಕ್ಕರೆಯಿಂದ ಸಾಕಿ ಸಲಹುವರೋ ಅಂತಹ ಮಾತಾಪಿತೃಗಳು ಆತನ ಬಾಲ್ಯಾವಸ್ಥೆಯಲ್ಲಿ ಮನೆಯಲ್ಲಿಯೇ ಯೋಗ್ಯರೀತಿಯಲ್ಲಿ ತಿದ್ದಲು ಸಾಧ್ಯವಿದ್ದ ಅನೇಕ ದುರ್ಗುಣಗಳ ವ್ಯಾಪನಕ್ಕೆ ಎಡೆಯೀಯುತ್ತಾರೆ ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ.

ಇಂದಿನ ಮಕ್ಕಳೇ ಮುಂದಿನ ರಾಷ್ಟ್ರಪೀಠಾಂಗಕರ್ತರು. ರಾಷ್ಟ್ರದ ಬಾಳೀ ಉನ್ನತಿಯು ಇಂದಿನ ಮಕ್ಕಳನ್ನೇ ಅವಲಂಬಿಸಿಕೊಂಡಿರುವಾಗ ಇಂದಿನ ಮಕ್ಕಳು ವಿದ್ಯಾಬುದ್ಧಿಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದು, ಒಳ್ಳೆಯ ದೇಹಾರೋಗ್ಯವನ್ನು ಸಂಪಾದಿಸಿ ಮುಂದೆ ಪ್ರಾಯಕ್ಕೆ ಬಂದ ತರುವಾಯ ಜೀವನ ಸಂಗ್ರಾಮದಲ್ಲಿ ಹೆಣಗಾಡುವ ಶಕ್ತ್ಯುತ್ಸಾಹಾದಿಗಳಿರಬೇಕು. ಇಂದಿನ ಮಕ್ಕಳೇ ಮುಂದಿನ ಜನಾಂಗವೆಂಬ ಲೋಕ ಪ್ರಸಿದ್ಧವಾಗದೆ ಇರುತ್ತ ಹಲವು ಮಂದಿ ಹೆತ್ತವರು ತಮ್ಮ ಮಕ್ಕಳ ದೇಹಾರೋಗ್ಯದ ಕಡೆಗೆ ಅಲಕ್ಷ್ಯತನವನ್ನು ತೋರಿಸಿ ಅವರ ನಡೆನುಡಿಗಳನ್ನು ಯೋಗ್ಯ ರೀತಿಯಲ್ಲಿ ತಿದ್ದದಿರುವುದರಿಂದ ಅವರು ವಿದ್ಯಾವಿಹೀನರಾಗಿಯೂ ಆರೋಗ್ಯಶೂನ್ಯರಾಗಿಯೂ, ಅವರ ಮುಂದಿನ ಜೀವನವು ದುಷ್ಪರಿಣಾಮವನ್ನು ತಾಳಿ ನಮ್ಮ ರಾಷ್ಟ್ರಕ್ಕೆ ಬಹಳ ನಷ್ಟವು ಸಂಭವಿಸುವುದಲ್ಲದೆ ಅವರು ಜೀವಂತ ಹೆಣಗಳಾಗಿದ್ದು ದೇಶಕ್ಕೊಂದು ಹೊರೆಯಂತಾಗುತ್ತಾರೆ.

ಮುಖ್ಯವಾಗಿ ಒಂದು ಮಗುವು ಜನ್ಮವೆತ್ತಿದಂದಿನಿಂದ ಅದರ ಮನಸ್ಸು ಶಿಕ್ಷಣ ಕಾರ್ಯಕ್ಕೆ ಪ್ರಾರಂಭಿಸುವುದು. ಅದು ಬಾಲ್ಯದಲ್ಲಿ ಕಲಿತುಕೊಳ್ಳುವ ವಿಷಯಗಳೇ ಅದರ ಮುಂದಿನ ಬೆಳವಣಿಗೆಗೆ ಮುಖ್ಯವಾದುವುಗಳು. ಒಂದು ಮಗುವಿನ ಬಾಲ್ಯದಲ್ಲಿ ಅಂಟಿಕೊಂಡ ಸದ್ಗುಣಗಳಾಗಲೀ ದುರ್ಗುಣಗಳಾಗಲೀ, ಅವು ಸಾಯುವ ತನಕವೂ ಅಳಿಯದೆ ಉಳಿಯುವುದೆಂಬ ಮನಃಶಾಸ್ತ್ರವಾದ ಸಂಗತಿ ಆದರೆ ಕೆಲವು ಮಂದಿ ಹೆತ್ತವರ ಅಭಿಪ್ರಾಯವಿರುತ್ತದೆ. ನಮ್ಮ ಮಕ್ಕಳ ವಿಷಯ ನಮಗೇನೂ ಜವಾಬ್ದಾರಿ ಇರುವುದಿಲ್ಲ. ಅವರ ಶಿಕ್ಷಣ ಸಂಸ್ಕಾರವು ಪಾಠಶಾಲೆಯಲ್ಲಿಯೇ ಪ್ರಾರಂಭಿಸುವುದೆಂದು. ಆದರೆ ತಪ್ಪು ಅಭಿಪ್ರಾಯವುಳ್ಳವರಾದ ಈ ಹೆತ್ತವರು ತಮ್ಮ ಮಕ್ಕಳ ವಿಷಯವಾಗಿ ಏನೊಂದೂ ಜಾಗ್ರತೆಯನ್ನು ತೆಗೆದುಕೊಳ್ಳದಿದ್ದುದೇ ಈಗೀಗ ಹಲವು ಮಂದಿ ನವತರುಣರ ಶೋಚನೀಯ ಸ್ಥಿತಿಗೆ ಕಾರಣವಾಗಿದೆ. ದೇಹದಲ್ಲಿ ಆರೋಗ್ಯವಿಲ್ಲ, ಚೈತನ್ಯವಿಲ್ಲ, ಉತ್ಸಾಹವಿಲ್ಲ, ಸ್ವಾವಲಂಬನ ಶಕ್ತಿಯಿಲ್ಲ. ಅವರ ಯೌವನವು ವಿಕಾಸಗೊಳ್ಳುತ್ತಲೇ ವೃದ್ಧತ್ವವು ಬೆನ್ನು ಹತ್ತುವುದು. ಇದಕ್ಕಾಗಿಯಲ್ಲವೇ, ರಾಷ್ಟ್ರದ ಭಾವೀ ಉನ್ನತಿಗಾಗಿ ಮುಂದಾಳುಗಳಾಗಿ ಬರುವ ಇಂದಿನ ಮಕ್ಕಳ ದೇಹಾರೋಗ್ಯವನ್ನು ರಕ್ಷಿಸಿಕೊಳ್ಳಲಿಕ್ಕೂ ಅವರ ನಡೆನುಡಿಗಳನ್ನು ತಿದ್ದುವುದಕ್ಕೂ, ಅವರ ಬುದ್ಧಿ ಬಲ ಮತ್ತು ದೇಹಶಕ್ತಿಗಳು, ಚೆನ್ನಾಗಿ ಅಭಿವೃದ್ಧಿಗೆ ಬರಲು ಅವರಿಗೆ ಯೋಗ್ಯ ರೀತಿಯಲ್ಲಿ ಬಾಲಶಿಕ್ಷಣವನ್ನೀಯುವ ಮಾತೆಯರಾದ ಸ್ತ್ರೀಯರಿಗೆ ವಿದ್ಯಾಭ್ಯಾಸವು ಅತ್ಯಾವಶ್ಯಕವಾದುದೆಂದು ವಿದ್ವನ್ಮಣಿಗಳು ಉದ್ಘೋಷಿಸುತ್ತಿರುವುದು?

ನಾವೂ ನಮ್ಮ ಮಕ್ಕಳೂ ಸೇರಿದರೆ ಒಂದು ಸಂಸಾರವಾಗುವುದೆಂಬ ಭಾವನೆಯು ಪ್ರತೀ ಹೆತ್ತವರಲ್ಲಿಯೂ ಹುಟ್ಟಬೇಕು. ಒಂದು ಮಗುವು ಅದರ ಅಜ್ಞಾನದಿಂದ ಯಾವುದಾದರೊಂದು ತಪ್ಪು ಮಾಡಿತೆಂದರೆ ಅದನ್ನು ನಾನಾ ವಿಧವಾಗಿ ಬೈಯ್ಯುವುದನ್ನೂ ನಿಂದಿಸುವುದನ್ನೂ ಕಟ್ಟಕಡೆಗೆ ಸಿಟ್ಟಿಗೇರಿ ದಂಡಿಸುವುದನ್ನೂ ನಾವು ಅನೇಕ ಹೆತ್ತವರಲ್ಲಿ ಕಣ್ಣಾರೆ ಕಾಣಬಹುದು. ಅದರ ಅಜ್ಞಾನದ ತಪ್ಪಿಗಾಗಿ ಅದನ್ನು ಈ ತೆರನಾಗಿ ದಂಡಿಸುವುದರಿಂದ ಅದರ ಮನಸ್ಸಿನಲ್ಲಿ ಭಯವು ಉತ್ಪನ್ನವಾಗಿ ಅದು ದಿನೇ ದಿನೇ ದೇಹದಲ್ಲಿ ಕ್ಷೀಣವಾಗಿ ಬರುವುದರಿಂದ ಅದರ ಆರೋಗ್ಯಭಾಗ್ಯಕ್ಕೆ ಕುಂದುಬರುವುದು. ಅದಕ್ಕೆ ಮುದ ಹಿರಿಯರ ಮೇಲಿನ ಪೂಜ್ಯಭಾವವು ಲೋಪವಾಗತೊಡಗುವುದು. ಅದಕ್ಕಾಗಿ ಹೆತ್ತವರು ಮಾಡತಕ್ಕುದ್ದೇನು? ಆ ಮಗುವು ಅಜ್ಞಾನದಿಂದ ಮಾಡಿದ ತಪ್ಪನ್ನು ಉದಾಹರಣೆ ಮೂಲಕ ಯೋಗ್ಯ ರೀತಿಯಲ್ಲಿ ತಿದ್ದಬೇಕು. ಅದು ಅಂತಹ ತಪ್ಪನ್ನು ಮತ್ತೊಮ್ಮೆ ಮಾಡದಂತೆ ಚಿಕ್ಕ ಚಿಕ್ಕ ಕಥೆಗಳ ಮೂಲಕ ದೃಷ್ಟಾಂತರೂಪವಾಗಿ ಹೇಳಿ, ಅದರ ಮನಸ್ಸಿನಲ್ಲಿ ಉತ್ಕೃಷ್ಟವಾದ ಭಾವನೆಗಳನ್ನು ಹುಟ್ಟಿಸಿದರೇನೇ ಆ ಮಗುವು ಆತ್ಮಾನುಭವಪಟ್ಟು ಮುಂದೆಂದಿಗೂ ಅಂತಹ ತಪ್ಪನ್ನು ಮಾಡಲು ಅದರ ಮನಸ್ಸು ಒಡಂಬಡುವುದಿಲ್ಲ. ಹಿರಿಯರಲ್ಲಿ ಪೂಜ್ಯತೆಯೂ, ಮೂಕಪ್ರಾಣಿಗಳಲ್ಲಿ ದಯೆಯೂ, ಅನ್ಯರಲ್ಲಿ ಸೋದರಪ್ರೇಮವೂ, ಯೋಗ್ಯ ರೀತಿಯಲ್ಲಿ ಬೆಳೆಯಲು ಹೆಚ್ಚಿನ ಸಹಕಾರಿಯಾಗಿರುವ ಅವರ ಪ್ರಾಯಕ್ಕೂ ಸ್ವಭಾವಕ್ಕೂ ಸಮಂಜಸವಾದ ನೀತಿಬೋಧಕ ಕಥೆಗಳನ್ನು ಅವರಿಗೆ ಆಗಾಗ್ಗೆ ಹೇಳುತ್ತಲೇ ಇರಬೇಕು. ಆಗ ತಾನೇ ಆ ಮಕ್ಕಳ ನಡೆ, ನುಡಿ ಸ್ವಭಾವಾದಿಗಳು ಅಭಿವೃದ್ಧಿಯನ್ನು ಹೊಂದಿ, ಅವರ ಮನಸ್ಸೂ ಕೂಡ ಆರೋಗ್ಯ ಸ್ಥಿತಿಯನ್ನು ತಾಳುವುದು. ಒಂದು ಎಳೇ ಸಸಿಯ ಬೆಳವಣಿಗೆಗೆ ನೀರು ಮತ್ತು ಸೂರ್ಯರಶ್ಮಿಯು ಅದೆಷ್ಟು ಅವಶ್ಯಕರವೋ ಅಷ್ಟೇ ಒಂದು ಎಳೆಯ ಮಗುವಿನ ಮಾನಸಿಕೋನ್ನತಿಗೆ ಬೋಧಪರ ವಿಷಯಗಳು ಅತ್ಯಾವಶ್ಯಕವಾಗಿವೆ.

ಮಕ್ಕಳಿಗೆ ಉಚಿತಪದ್ಧತಿಯನ್ನು ಬೋಧಿಸುವುದೂ ಆರೋಗ್ಯಕರವಾದ ಆಹಾರವನ್ನು ಕೊಡುವುದೂ ಶ್ರೇಯಸ್ಕರವಾಗಿದೆ. ಕೆಲವು ಹೆಂಗಸರು ಮೊಲೆಹಾಲು ಇಲ್ಲದ ಸಂದರ್ಭದಲ್ಲಿ ತಮ್ಮ ಮಕ್ಕಳ ಶರೀರ ಸೌಂದರ್ಯವು ಕೆಡುವುದೆಂಬ ಭಯದಿಂದ, ಆ ಎಳೆಯ ಮಕ್ಕಳ ದೇಹಕ್ಕೆ ಅಪಾಯಕರವಾದ ಪರಿಣಾಮವನ್ನುಂಟುಮಾಡುವ ಚಾ, ಕಾಫಿ ಕೊಕ್ಕೋ ಮೊದಲಾದ ಪಾನೀಯಗಳನ್ನು ಕುಡಿಸುವುದು ನಾವು ಕಣ್ಣಾರೆ ಕಾಣಬಹುದು. ಈ ಪಾನೀಯಗಳು ಆ ಮಕ್ಕಳ ದೇಹದಲ್ಲಿ ವಿಷದಂತೆ ಪರಿಣಮಿಸಿ, ನರಗಳನ್ನೆಲ್ಲಾ ದುರ್ಬಲಪಡಿಸಿ ಶರೀರ ಸೌಂದರ್ಯವು ಹೆಚ್ಚುವುದಲ್ಲ—ಸಂಪೂರ್ಣವಾಗಿ ನಾಶಗೊಳಿಸುವುದು. ಅವರ ಶರೀರವು ನಾನಾ ದುರ್ವ್ಯಾಧಿಗಳ ತವರ್ಮನೆಯಾಗಿ ಪರಿಣಮಿಸುವುದು. ಆ ಪ್ರಯುಕ್ತ ಮಾದಕ ಪದಾರ್ಥಗಳಿಗೆ ಸರಿಹೋಲುವ ಈ ಪಾನೀಯಗಳನ್ನು ಮಕ್ಕಳಿಗೆ ಸರ್ವಥಾ ಕೊಡಬಾರದು.

ಮಕ್ಕಳನ್ನು ಹೆತ್ತ ತಂದೆತಾಯಿಗಳೇ! ಇತ್ತ ತೀವ್ರ ಗಮನವನ್ನೀಯುವಿರಾ? ನಿಮ್ಮ ಮಕ್ಕಳಿಗೆ ಅನಾರೋಗ್ಯಕರವಾದ ಆಹಾರವನ್ನು ಕೊಡಬೇಡಿರಿ. ನಿಮ್ಮ ಮಕ್ಕಳ ಶರೀರದಲ್ಲಿ ವಿಷದಂತೆ ಪರಿಣಮಿಸುವ ಚಾ, ಕಾಫಿ, ಕೊಕ್ಕೋ ಮೊದಲಾದ ಪಾನೀಯಗಳ ಅಭ್ಯಾಸವನ್ನು ವರ್ಜಿಸಿರಿ. ಶರೀರದಾರೋಗ್ಯವನ್ನು ಕಾಪಾಡುವ ಅಮೃತತುಲ್ಯವಾದ ಗೋಕ್ಷೀರವನ್ನು ಕುಡಿಸಿರಿ. ಇದೇ ರೀತಿಯಲ್ಲಿ ಪ್ರತಿಯೊಬ್ಬ ಹೆತ್ತವರಾದರೂ ತಮ್ಮ ಮಕ್ಕಳ ಅಭಿವೃದ್ಧಿಯ ಕಡೆಗೆ ಹೆಚ್ಚಿನ ಗಮನವನ್ನಿತ್ತು ಅವರ ಲಾಲನೆಪಾಲನೆಗಳನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸಿ ಅವರಲ್ಲಿ ಕೆಟ್ಟ ಗುಣಗಳ ವ್ಯಾಪನಕ್ಕೆ ಎಡೆಕೊಡದೆ ಅವರ ನಡೆನುಡಿಗಳನ್ನು ತಿದ್ದುವುದಕ್ಕಾಗಿ ದಿನ ಒಂದಕ್ಕೆ ಕೆಲವು ತಾಸುಗಳ ಸಮಯವನ್ನಾದರೂ ವ್ಯಯಪಡಿಸಿ, ಉತ್ತಮರೀತಿಯಲ್ಲಿ ಬಾಲಶಿಕ್ಷಣವನ್ನೀಯುತ್ತಾ ಬಂದರೆ, ನಿಮ್ಮ ಮಕ್ಕಳ ಮುಂದಿನ ಜೀವನವು ಸುಖಮಯವಾಗಬಹುದಲ್ಲವೇ?

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಅಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ್" ವಜ್ರಗಳೂ "ಎಕ್ಸ್‌ಟ್ರಾ ವ್ಹಾಹಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು' ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು'

ಮೃಧ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ–(ಪಕ್ಷಪಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ–(ಗರ್ಭಶೂಲೆ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ– (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ ಕಟಪಾಡಿ ದ. ಕನ್ನಡ

Distributors for South Kanara —

Rghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ

ಕಾಫಿ ಎಸ್ಟೇಟುಗಳಿಗೆ

ಬೇಕಾಗಿರುವ

ಚೆಕ್ ರೋಲು,

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆಗೆ

ಬರೆಯಿರಿ ...

ತಯಾರಾಗಿದೆ!

ಗ್ ... ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೊಸಿಯೋಲೊಜಿ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ ಇದನ್ನು ... ಪಾಠಪಟ್ಟಿಗನುಸಾರವಾಗಿ ... ದೆ

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು ಏಳ ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧ ... ದ

ಅಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಓಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸು ಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ   ಅಜ್ಜಿ ಕಥೆಗಳು (ಸಚಿತ್ರ)

ಚರಿತ್ರೆ ಮತ್ತು ಕಥೆಗಳು.	ರೂ ಅ ಪೈ	ಸಾಮಾನ್ಯ ವಿಜ್ಞಾನ		ಅಜ್ಜಿ ಕಥೆಗಳು
		ಎರಡನೇ ದರ್ಜೆ	0 8 0	ಮೂರು ಕರಡಿಗಳ
ನಾಲ್ಕನೇ ದರ್ಜೆ	0 6 0	ಮೂರನೇ ,,	0 8 0	ಹೇನು ಸತ್ತು ...
ಮೂರನೇ ,,	0 4 6	ನಾಲ್ಕನೇ ,,	0 6 0	ಮೊಲದ ಕಾಳಪ್ಪ
ಎರಡನೇ ,,	0 4 0	ಐದನೇ ,,	0 5 0	ಅಗಸನ ಮುದ್ದೆ
ಸಮಾಜಶಾಸ್ತ್ರ				ಇಲಿಗಳ ಥಕ್ಕ ಥೈ
ಐದನೇ ದರ್ಜೆ	0 3 0			ಜಂಗಳ ದುಗ್ಗ
ನಾಲ್ಕನೇ ,,	0 8 0	ಆರನೇ ದರ್ಜೆ	0 4 0	ಗುಡುಗುಡು ಗುಮ್ಮಟ ದೇವರ
ಮೂರನೇ ,,	0 2 6	ಏಳನೇ ,,	0 5 0	ಒಡ್ಡನ ಓಟ
		ಎಂಟನೇ ,,	0 6 0	(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 6 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಶಟಲ್	ಸಂಜೆ 5 25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ. 8 25	ಮ 1 20
ಕಾಸರಗೋಡು ಪೆಸೆಂಜರು	ಸಂಜೆ 3 20	ಸಂಜೆ 6 15

! ನಿಮಗೆ ತಿಳಿದಿರುವುದೇ? ?

ವಿಜ್ಞಾನದ ಅರಿವು

ಮಾಂಸಾಹಾರಿ ಗಿಡಗಳು

ಸಸ್ಯವರ್ಗದಲ್ಲಿ ಅನೇಕ ಜಾತಿಗಳಿವೆ ಇವುಗಳಲ್ಲಿ ಕೆಲವು ಮಾಂಸಾಹಾರಿಗಳಾಗಿವೆ. ತಮ್ಮ ನಿತ್ಯದ ಆಹಾರದೊಡನೆ ಮಾಂಸಾಹಾರವನ್ನು ಸೇವಿಸುತ್ತವೆ ಈ ತರದ ಸಸ್ಯಗಳು ನಮ್ಮ ದೇಶದಲ್ಲೂ ಇವೆ. ಅಮೇರಿಕಾ ಮತ್ತು ಚೀನಾ ದೇಶಗಳಲ್ಲಿ ಈ ತರದ ಗಿಡಗಳಿಗೆ ಹೂಜಿಗಿಡ (Pitcher plant) ಎಂದು ಕರೆಯುತ್ತಾರೆ. ಇದಕ್ಕೆ ಹೂಜಿ ಆಕಾರದ ಎಲೆಗಳಿವೆ. ಇವು ಬಾಯಿ ತೆರೆದ ಹೂಜಿಗಳಂತಿವೆ. ಇದಕ್ಕೆ ಒಂದು ಮುಚ್ಚಳದಂತಿರುವ ಬೇರೊಂದು ಎಲೆ ಇದೆ. ಈ ಎಲೆಯಿಂದ ಯಾವಾಗಲೂ ಒಂದು ತರದ ಅಂಟು ಒಸರುತ್ತದೆ. ಇದರ ವಾಸನೆಗೆ, ಕೆಲವು ಕ್ರಿಮಿಕೀಟಗಳು ಇದರ ಕಡೆಗೆ ಆಕರ್ಷಿಸಲ್ಪಡುತ್ತವೆ. ಎಲೆಯ ಅಂಟಿನಲ್ಲಿ ಅವು ಸಿಕ್ಕಿಬೀಳುವವು ಹೀಗೆ ಸಿಕ್ಕಿಬಿದ್ದ ಕ್ರಿಮಿಕೀಟಗಳು ಆ ಗಿಡವು ಜೀರ್ಣ ಮಾಡಿ ಆಹಾರವಾಗಿ ಉಪಯೋಗಿಸುವುದು ಹೀಗೆ ಮುತ್ತಿನ ಚಿಪ್ಪಿನಂತಿರುವ ಎಲೆಗಳಿಂದ ಕೂಡಿದ ಗಿಡವು ಕೆರೊಲಿನಾದಲ್ಲಿದೆ ಈ ಎಲೆಗೆ ಮುಚ್ಚಳಗಳಿವೆ ಈ ಮುಚ್ಚಳದ ಬದಿಗಳಲ್ಲಿ ಮುಳ್ಳುಗಳು ಸಾಲುಸಾಲಾಗಿವೆ ಇದರ ಮೇಲೆ ಯಾವುದಾದರೊಂದು ಹುಳುವು ಕೂತರೆ ಸರಿ, ಕೂಡಲೆ ಎಲೆಯು ಮುಚ್ಚಲ್ಪಡುವುದು. ಗಿಡವು ಆ ಹುಳವನ್ನು ನುಂಗಿಬಿಡುವುದು ಹುಳವು ಸಂಪೂರ್ಣ ಜೀರ್ಣವಾದ ವಿನಹ ಎಲೆಯು ಬಾಯಿ ತೆರೆಯುವುದಿಲ್ಲ, ಹೀಗೆಯೆ ತರತರದ ವಿಧದಲ್ಲಿ ಗಾಳಿಯಲ್ಲಿ ಸಂಚರಿಸುತ್ತಿರುವ ಕ್ರಿಮಿಕೀಟಗಳನ್ನು ಉಪಾಯದಿಂದ ಹಿಡಿದುಕೊಂಡು ಜೀವಿಸುವ ಅನೇಕ ಸಸ್ಯಗಳಿವೆ. ಮನುಷ್ಯ, ಮೃಗಗಳು ಮಾತ್ರ ಬೇರೆ ಜೀವಾದಿಗಳನ್ನು ತಮ್ಮ ಆಹಾರಕ್ಕಾಗಿ ಉಪಯೋಗಿಸುವುದು, ಸಸ್ಯಗಳಲ್ಲೂ ಈ ತರದ ಅಭ್ಯಾಸವಿದೆ

ಮನುಷ್ಯನು ಹಕ್ಕಿಗಳಂತೆ ಹಾರಬಲ್ಲನೆ?

ಅಂತರಿಕ್ಷದಲ್ಲಿ ಹಾರಾಡುವ ಕಾಂಕ್ಷೆಯು ಮಾನವನಲ್ಲಿ ಅತಿ ಹಿಂದಿನಿಂದಿತ್ತು ಅನೇಕರು ಹಕ್ಕಿಗಳಂತೆ ರೆಕ್ಕೆಗಳನ್ನು ಧರಿಸಿಕೊಂಡು ಆಕಾಶಗಾಮಿಗಳಾಗಲು ಪ್ರಯತ್ನಪಟ್ಟರು ಅವರ ಪ್ರಯತ್ನಗಳು ಫಲಕಾರಿಯಾಗಿವೆ 1871ನೇ ಇಸವಿಯಲ್ಲಿ ಒಟೋಲಿಯಂಥಾಲ್ ಎಂಬ ಪ್ರಾಜ್ಞನು ಹಕ್ಕಿಗಳ ಚಲನೆಯನ್ನು ಪರೀಕ್ಷಿಸುವ ಕಾರ್ಯವನ್ನು ಕೈಗೊಂಡನು ಅವನು ಹಲವು ಶೋಧೆಗಳನ್ನು ನಡೆಯಿಸಿದನು 27 ಅಡಿ ಉದ್ದ 4 ಅಡಿ ಅಗಲದ ರೆಕ್ಕೆಗಳನ್ನು ಮಾಡಿದನು ಅದರ ಮಧ್ಯ ಒಂದು ತೂತುಮಾಡಿ ರೆಕ್ಕೆಗಳ ಮೇಲೆ ಆಚೀಚೆಗೆ ಕೈಗಳನ್ನು, ಚಾಚಿ ಬೆಟ್ಟಗಳ ಮೇಲಿಂದ ಗಾಳಿಯಲ್ಲಿ ತೇಲುವ ಪ್ರಯತ್ನಗಳನ್ನು ಮಾಡಿದನು ಸಾಧಾರಣ 100-200 ಅಡಿ ತೇಲಲು ಈತನಿಗೆ ಸಾಧ್ಯವಾಯಿತು ಈ ಯೋಜನೆ ಇನ್ನೂ ಸುಧಾರಣೆಗೊಳಿಸುವ ಕಾರ್ಯದಲ್ಲಿ, ಮೃತನಾದನು ಹೀಗೆ ಅನೇಕ ಪ್ರಾಜ್ಞರು ಈ ತರದ ಪ್ರಯತ್ನಗಳನ್ನು ಮಾಡಿ ಅಂತರಿಕ್ಷದಿಂದ ಕೆಳಗೆ ಬಿದ್ದು ಕೈಕಾಲು ಮುರಿದುಕೊಂಡು ಮೃತರಾದರು. ಹಾರಾಡಲು ಉಪಯೋಗಿಸಲ್ಪಡುವ ಈ ರೆಕ್ಕೆಗಳಿಗೆ ಗ್ಲೈಡರ್ ಎಂದು ಹೆಸರು. 1900ರಲ್ಲಿ ಅಮೇರಿಕಾದಲ್ಲಿ ಇಬ್ಬರು ಸಹೋದರರು ಹಾರಾಡುವ ಪ್ರಯತ್ನಗಳನ್ನು ಮಾಡಿದರು. ಇವರ ಹೆಸರು ರ‍್ಯಾಟ್ ಸಹೋದರರೆಂದು ಓರ್ವ ಪ್ರಸಿದ್ಧ ಗಣಿತ ಶಾಸ್ತ್ರಜ್ಞರು, ಮನುಷ್ಯನನ್ನು ಗಾಳಿಯು ಎತ್ತಿ ಹಿಡಿಯುವಂತೆ ವಿಶಾಲವಾದ ರೆಕ್ಕೆಗಳು ಬೇಕಾಗಿವೆ ಎಂದು ಕಂಡುಹಿಡಿದನು ರೈಟ್ ಸಹೋದರರು 305 ಚದರ ಅಡಿ ವಿಶಾಲ ರೆಕ್ಕೆಗಳನ್ನು ತಯಾರಿಸಿ ಅದರ ಮೇಲೆ ಮಲಗಿ, ಸಾಧಾರಣ ಒಂದು ಫರ್ಲಾಂಗ್ ಹಾರಾಡಿದರು ನಂತರ ಈ ಯೋಜನೆಯಲ್ಲಿ ಒಂದು ಯಂತ್ರವನ್ನು ಇಡುವ ಪ್ರಯತ್ನಗಳಾದವು. 1908ರಲ್ಲಿ ರ‍್ಯಾಟ್ ಸಹೋದರರು, ನಂಬಲಿಕ್ಕೆ ಸಾಧ್ಯವಾಗದ ಅದ್ಭುತವನ್ನು ನಡೆಯಿಸಿದರು ತಾವು ರಚಿಸಿದ ಯಂತ್ರದಿಂದ ಅಂತರಿಕ್ಷದಲ್ಲಿ 400 ಅಡಿ ಮೇಲೆ ಎರಡು ತಾಸುಗಳ ವರೇಗೆ ಹಾರಾಡಿ ತೋರಿಸಿದರು ತಮ್ಮೊಡನೆ ಕೆಲವು ಪ್ರಯಾಣಿಕರನ್ನು ಕೊಂಡೊಯ್ದಿದ್ದರು ಇದರ ಸೂತ್ರವನ್ನನುಸರಿಸಿ ಈಗಿನ ಅದ್ಭುತ ವಿಮಾನಗಳೂ, ವಾಯುನಾವೆಗಳೂ ರಚನೆಯಾದವು

ಈಜಿಪ್ಟಿನ ಪಿರಮಿಡ್ಡುಗಳು.

ಪಿರಮಿಡ್ಡುಗಳು ಈಜಿಪ್ಟಿನಲ್ಲಿ ತುಂಬಾ ಇವೆ ಇವುಗಳನ್ನು ಗೋರಿಗಳಂತೆ. 5-6 ಸಾವಿರ ವರ್ಷಗಳ ಹಿಂದೆ ಕಟ್ಟಿದವುಗಳು ಇವುಗಳ ಆಕಾರ, ಚಚ್ಚೌಕದ ಆಕಾರದ ಪಂಚಾಂಗ, ಇದರ ಮೇಲೆ ಚೋಪಾದ ಶಿಖರ ಇವುಗಳು ಅಷ್ಟು ಪ್ರಖ್ಯಾತ ಹೊಂದಲು ಕಾರಣವೇನು? ಇವುಗಳ ಭಯಂಕರ ಪ್ರಮಾಣ. ಒಂದು ಪಿರಮಿಡ್ಡಿನ ತಳವು ೧೩॥ ಎಕ್ರೆ ೪೫೧ ಅಡಿ ಎತ್ತರ ಈ ಪಿರಮಿಡ್ಡಿನ ನಿರ್ಮಾಣದಲ್ಲಿ ಸಾಧಾರಣ 85,000,000 ಘನ ಅಡಿಗಟ್ಟು ಕಲ್ಲುಗಳು ಉಪಯೋಗವಾಗಿವೆ ಈ ಪಿರಮಿಡ್ಡುಗಳನ್ನು ರಚಿಸಲು ಕಲ್ಲುಗಳನ್ನು 8-10 ಮೈಲು ದೂರದಿಂದ ಸಾಗಿಸಿ ತಂದಿರುತ್ತಾರೆ 20 ವರುಷ ಕಾಲ ಇದರ ಕೆಲಸ ನಡೆದಿರುತ್ತದೆ ಸಾಧಾರಣ ಮೂರುಲಕ್ಷ ಮಂದಿಗಳು ದಣಿದಿರುವರು ಇವರೆಲ್ಲಾ ಈಜಿಪ್ಟಿನ ಅರಸರು ಹಿಡಿದು ತಂದ ಗುಲಾಮರು ಇವುಗಳು ಬರಿ ಪೀಠಗಳಲ್ಲ ಒಳಗೆ ಚಾವಡಿಗಳಿವೆ ಇವುಗಳು ಇಜಿಪ್ಟಿನ ಅರಸರ ಸಮಾಧಿಗಳು ಔಷಧಿಗಳಿಂದ ಸವರಲ್ಪಟ್ಟ ಅವರ ಕಳೇಬರಗಳನ್ನು ಇಲ್ಲಿ ಹೂಳಿದ್ದರು ಅವುಗಳು ಕೊಳೆಯುತ್ತಿರಲಿಲ್ಲ ಇಂಥಾ ಕಳೇಬರಗಳು ಇಲ್ಲಿ ಅನೇಕ ದೊರಕಿವೆ

ಪಕ್ಷಿಗಳು ಪ್ರಯಾಣಗಯ್ಯುವವೆ?

ಪಕ್ಷಿಗಳು ಒಂದು ದೇಶದಲ್ಲಿ ಕೆಲ ಸಮಯ ಮಾತ್ರವಿದ್ದು ನಂತರ ಕೆಲಕಾಲ ಅದೃಷ್ಯವಾಗುವುದು ನಮಗೆ ತಿಳಿದಿದೆ ಈ ಹಕ್ಕಿಗಳು ಎಲ್ಲಿಗೆ ಹೋಗುವವು ಹಕ್ಕಿಗಳು ತನಗೆ ಒಪ್ಪುವ ಹವಾಗುಣ ಇದ್ದ ದೇಶದಲ್ಲಿ ಮಾತ್ರ ನಿಲ್ಲುವವು ಹವಾಗುಣವು ಬಹಳವಾಗಿ ಬದಲಾವಣೆ ಹೊಂದಲು ಅವುಗಳು ತಮ್ಮ ಸ್ಥಾನವನ್ನು ಬದಲಾಯಿಸುವವು. ಈ ರೀತಿ ಹಕ್ಕಿಗಳು ಯೋಗ್ಯ ಹವಾಗುಣಗಳನ್ನು ಹುಡುಕಿಕೊಂಡು ಸಾವಿರಾರು ಮೈಲು ಹಾರುವವು ಇಂಗ್ಲಾಂಡಿನ ಹಕ್ಕಿಗಳು ದಕ್ಷಿಣ ಆಫ್ರಿಕಾಕ್ಕೂ, ಆಸ್ಟ್ರೇಲಿಯಕ್ಕೂ, ದಕ್ಷಿಣ ಆಫ್ರಿಕದ ಹಕ್ಕಿಗಳು ಸೈಬೀರಿಯಾಕ್ಕೂ ಹೋಗುವುದುಂಟು ಇವುಗಳು ಒಂದೊಂದು ಬಾರಿ 6-8000 ಮೈಲು ಪ್ರಯಾಣ ಮಾಡುವವು ಈ ಪ್ರಯಾಣದ ಸಮಯ ಈ ಪಕ್ಷಿಗಳು ವಿಶ್ರಾಂತಿಗಾಗಿಯೂ, ಆಹಾರಕ್ಕಾಗಿಯೂ ಅಲ್ಲಲ್ಲಿ ತಂಗುವುದುಂಟು ಕೆಲವು ಒಂದೆರಡು ಸಾವಿರ ಮೈಲು ದೂರ ಇಳಿಯದೆ ಪ್ರಯಾಣ ಮಾಡುವುದೂ ಉಂಟು ಹವೆಯನ್ನು ಬದಲಾಯಿಸಲು ಈ ತರದ ಶಕ್ತಿಯು ಅವರಲ್ಲಿ ಸ್ವಾಭಾವಿಕವು

ಉಷ್ಣಪ್ರವಾಹದ ಕುರಿತು ನಿಮಗೆ ಏನು ತಿಳಿದಿದೆ?

ಅಮೇರಿಕಾದ ಮೆಕ್ಸಿಕೊ ಪ್ರಾಂತ್ಯವು ಉಷ್ಣವಲಯದಲ್ಲಿದೆ. ಈ ಪ್ರದೇಶದಲ್ಲಿ ಸೂರ್ಯನ ಪ್ರತಾಪ ಬಾರಿ. ಸೂರ್ಯನ ಅತಿರೇಕವಾದ ಈ ಉಷ್ಣದಿಂದ ಅಲ್ಲಿನ ಸಮುದ್ರದ ನೀರು ಬಿಸಿಯಾಗುವುದು ಇದರಿಂದ ಸಮುದ್ರದಲ್ಲಿ (Convection current) ಎಂಬ ಪ್ರವಾಹಗಳು ಉಂಟಾಗುವವು. ಈ ಪ್ರವಾಹಗಳು ಬಹಳ ದೂರಕ್ಕೆ ಸರಿಯುವವು ಒಂದು ಪ್ರವಾಹವು ಆಫ್ರಿಕಾದತ್ತ ಕಡೆ, ಹರಿಯುವುದು ಶೀತವಲಯದ ನಾರ್ವೆ, ಗ್ರೀನ್‌ಲೆಂಡಿನ ಕಡೆಗೂ ಹೋಗುವವು ಇಂಗ್ಲಾಂಡಿನ ವರೆಗೂ ಸರಿಯುತ್ತವೆ. ಈ ಪ್ರವಾಹಗಳ ದೆಸೆಯಿಂದ ಈ ದೇಶಗಳಲ್ಲಿ ಚಳಿಗಾಲದಲ್ಲಿ ಸ್ವಲ್ಪ ಉಷ್ಣತೆಯು ಸಿಕ್ಕಿದಂತಾಗುತ್ತದೆ ಇದಕ್ಕೆ ಗಲ್ಫ್ ಸ್ಟ್ರೀಮ್ ಎಂದು ಕರೆಯುವರು

ಆಯುಷ್ಯವು ಹೆಚ್ಚು ಯಾರಿಗೆ?

ಆನೆಯು ಬಹಳ ಹೆಚ್ಚು ಕಾಲ ಬದುಕುವ ಪ್ರಾಣಿ ಇದರ ಆಯುಷ್ಯವು ಸಾಧಾರಣ 200 ವರ್ಷ ಕಡಲಿನ ಆಮೆಗಳು ಇದಕ್ಕಿಂತ ಹೆಚ್ಚಿನ ಸಮಯ ಬದುಕುವುವು ಇವುಗಳ ಆಯುಷ್ಯವು 300 ವರ್ಷವಂತೆ ಮೊಸಳೆಗಳಿಗೂ ತಿಮಿಂಗಿಲಗಳಿಗೂ, ಇದಕ್ಕಿಂತ ಹೆಚ್ಚಿನ ಆಯುಷ್ಯವಿದೆಯಂತೆ ನಮ್ಮಲ್ಲಿ ಎಷ್ಟು ಜನರು ತಿಮಿಂಗಿಲಗಳಾಗಲು ಇಚ್ಛಿಸುವರು

ಮೀನುಗಳು ಹೇಗೆ ಉಸಿರಾಡುತ್ತವೆ

ನಾವು ಶ್ವಾಸಕೋಶದ ಸಹಾಯದಿಂದ ಉಸಿರಾಡುತ್ತೇವೆ ಹೊರಗಿನ ಗಾಳಿಯನ್ನು ನಾವು ಒಳಗೆ ಸೆಳೆಯುತ್ತೇವೆ. ಶ್ವಾಸಕೋಶದ ಅನೇಕ ಕೊಟಡಿಗಳನ್ನು ಈ ಗಾಳಿಯು ಸೇರಿ, ಮಲೀನ ರಕ್ತವನ್ನು ಶುದ್ಧಪಡಿಸಿ, ಹೊರಗೆ ಬರುವುದು ಅಲ್ಲಿರುವ ರಕ್ತವು ಬೇಕಾದ ಆಮ್ಲವನ್ನು ಈ ಗಾಳಿಯಿಂದ ಹೀರುವವು

ಆದರೆ ಮೀನುಗಳಿಗೆ ನಮ್ಮ ಹಾಗೆ ಶ್ವಾಸಕೋಶವಿಲ್ಲ ಅದರ ಮೂತಿನಲ್ಲಿ ಎರಡು ಟೊಳ್ಳುಗಳಿವೆ ಈ ಟೊಳ್ಳುಗಳು ಅಂಚನ್ನು ಆಗಾಗ ತೆರೆಯಲು ಮಡಚಲು ಆಗುವುದು. ಇವುಗಳಿಂದ ಅವುಗಳು ಗಾಳಿಯನ್ನು ಒಳಗೆ ಸೇರಿಸುವವು, ಮತ್ತು ಹೊರಗೆ ಬಿಡುವವು. ಈ ಟೊಳ್ಳುಗಳಲ್ಲಿ ನೀರಿನಲ್ಲಿ ಕರಗಿದ ಆಮ್ಲಜನಕವನ್ನು ತೆಗೆಯುವ ಒಂದು ಇಂದ್ರಿಯ ಕೂಡ ಇವೆ ಈ ಕಾರಣದಿಂದಲೆ ಮೀನುಗಳು ಸುಖವಾಗಿ ನೀರಡಿಯಲ್ಲಿ ವಾಸಿಸಬಲ್ಲವು.

ಶ್ವಾಸಕೋಶವಿಲ್ಲದ ಪ್ರಾಣಿಗಳು.

ಶ್ವಾಸಕೋಶವಿಲ್ಲದ ಜೀವಗಳೆಂದರೆ, ಕೆಲವು ಕ್ರಿಮಿಕೀಟಗಳು ಇವುಗಳಿಗೆ ಶ್ವಾಸಕೋಶಗಳ ಬದಲಾಗಿ ಟೊಳ್ಳುಗಳೂ ಕೂಡ ಇಲ್ಲ, ಆದರೆ ಇವುಗಳಿಗೆ ಉಂಗುರಾಕಾರದ ಭಾಗಗಳು ಜೋಡಣೆಯಾದ ದೇಹಗಳಿವೆ ಈ ಉಂಗುರಗಳು ಜೋಡಣೆಯಾಗುವಲ್ಲಿ ಉಸಿರಾಡುವ ರಂಧ್ರಗಳಿವೆ ಈ ರಂಧ್ರಗಳು ನಮ್ಮ ಶ್ವಾಸಕೋಶದಂತೆ ಕೆಲಸಮಾಡಬಲ್ಲವು.

ವಾತದ ನೋವಿನಿಂದಾಗಿ ಮಲಗಲಾಗುತ್ತಿರಲಿಲ್ಲ

ಇಡೀ ಜೀವಮಾನದಲ್ಲೂ ಈ ರೋಗದಿಂದ ನರಳಬೇಕೋ ಎಂಬ ಶಂಕೆಯು ಅವಳಿಗಿತ್ತು

ಊಹಿಸಲಸಾಧ್ಯವಾದ ಗುಣವು ಕ್ರುಶ್ಚನ ಲವಣದಿಂದ ದೊರಕಿತು.

ಈ ಹೆಂಗಸು ವಾತರೋಗದಿಂದ ದಿನಾಲೂ ಎಷ್ಟು ನರಳುತ್ತಿದ್ದಳೆಂದರೆ, ಅವಳಿಗೆ ರಾತ್ರಿ ನಿದ್ದೆ ಕೂಡಾ ಸರಿಯಾಗಿ ಬೀಳುತ್ತಿರಲಿಲ್ಲ ಬೇರೆಯವರಿಗೂ ಇವಳ ಕತೆಯನ್ನು ಕೇಳಬೇಕೆಂಬ ಲವಲವಿಕೆ ಇರಬಹುದು ಅದನ್ನು ಅವಳ ಮಾತುಗಳಿಂದಲೆ ಕೇಳಿರಿ —

ಕೆಲವು ಇರುಷಗಳ ಹಿಂದೆ ನನಗೆ ಭಯಂಕರವಾದ ರೋಗವು ಇತ್ತು ನನ್ನೆರಡು ಕೈಗಳನ್ನು ಅದು ಅಲ್ಲಾಡ ಬಿಡುತ್ತಿರಲಿಲ್ಲ ಕೈಗಳಿದ್ದೂ, ಅವುಗಳ ಸುಖವನ್ನನುಭವಿಸಲು ದಯಾಮಯನು ಬಿಡಲಿಲ್ಲವೆಂದು ಚಿಂತಿಸಿದೆ ಈ ವಾತದ ನೋವಿನಿಂದ ರಾತ್ರಿ ನಿದ್ರೆಯೂ ಕೂಡ ಬೀಳುತ್ತಿರಲಿಲ್ಲ ಹಲವು ಮದ್ದುಗಳನ್ನು

ಕುಡಿದೆನು, ಎಣ್ಣೆಗಳನ್ನು ಕೈಗಳಿಗೆ ಸವರಿದೆನು ಆದರೂ ಪ್ರಯೋಜನಕಾರಿಯಾಗಲಿಲ್ಲ ಕಟ್ಟಕಡೆಗೆ ನನ್ನ ಬಲಗೈಯ ನೋವು ಎಷ್ಟು ಪ್ರಬಲವಾಯಿತೆಂದರೆ ಅದೊಂದು ಮರದ ತುಂಡಿನಂತೆ ಗಟ್ಟಿಯಾಗಿ ಹೋಯಿತು. ನನ್ನ ಕೆಲಸವನ್ನೂ ಬಿಟ್ಟು ಡಾಕ್ಟರನನ್ನು ಕಂಡೆನು, ಅವರು ದಿನಾಲೂ ಬೆಳಿಗ್ಗೆ ಸ್ವಲ್ಪ ಕ್ರುಶ್ಚೆನ್ ಲವಣವನ್ನು ಸೇವಿಸಲು ಹೇಳಿದರು ಅಂತೆಯೇ ನಾನು ಮಾಡಲು ಕೆಲವು ದಿನಗಳಲ್ಲಿ ಊಹಿಸಲಸಾಧ್ಯವಾದ ಗುಣಲಾಭವು ಕಂಡುಬಂತು ಅದನ್ನು ನಾನೀಗ ಯಾವಾಗಲೂ ಸೇವಿಸುತ್ತಿರುವೆನು ಮಿಸ್ E W B

ಈ ವಾತರೋಗವು ಬಹು ಭಯಂಕರವಾದ ರೋಗ ಇದರ ಕಾರಣವು ನರಗಳಲ್ಲಿ ಸೂಜಿಯ ಮೊನೆಯ ಹಾಗಿರುವ ಕೊಳೆ ಕಣ್ಮಲಗಳು ಕೂತು ಅವುಗಳು ನರಗಳನ್ನು ಭೇದಿಸಿ ಹೊರಬಂದು ತುಂಬಾ ವೇದನೆಗೆ ಗುರಿಮಾಡುತ್ತವೆ ಕ್ರುಶ್ಚೆನ ಲವಣದಲ್ಲಿರುವ ಪದಾರ್ಥಗಳು ಈ ಕೊಳೆ ಕಣ್ಮಲಗಳನ್ನು ಸಂಪೂರ್ಣವಾಗಿ ನಾಶಗೊಳಿಸಿ ಅವನ್ನು ಹೊರಗೆಡಹುತ್ತವೆ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ

ಕ್ರುಶ್ಚೆನ್ ಸೋಲ್ಟ್ ದೊರೆಯುತ್ತದೆ

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

New Era Technical School.

Near Market Square, Udipi.

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)
ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment Details may be had on application to the Manager

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc, in guaranteed colours Silk Sarees & Coatings a Speciality Work is conducted under the supervision of Textile experts. We undertake special orders to suit individual tastes.

Please inspect our goods at:

Raghavendra Ranga Pai, Car Street, Mangalore.

We deal in grey & Coloured Yarns Dyes Chemicals & Handloom accessories.

M. Venkatesha Ranga Pai,
Proprietor

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಡ್ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಸರ್ವೌಷಧ
೪೫ ವರ್ಷದ ಅನುಭವ
ಉಪಯೋಗಿಸಿದವರೇ ಹೇಳ್ತಾರೆ
ಡಾ॥ ಗೌತಮ ರಾವ್ ಕೇಶವರವರ
ಪ್ರೊಸ್ಟರಸ್ ಗುಳಿಗೆಗಳು
[illegible]
ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, [illegible] ಮುಂಬಾಯಿ ೨
[illegible] ಮಂಗಳೂರು
[illegible]

ನಿಮ್ಮ ಮಿತ್ರರನ್ನು
ಸ್ವದೇಶಾಭಿಮಾನಿಯ
ಚಂದಾದಾರರನ್ನಾಗಿ
ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 3 - 0—0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ 2-8-0. ½ಕ್ಕೆ ರೂ 1 5-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ. 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಫ್ಲುಯೆಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ

ಬಾಟ್ಲಿ 1ಕ್ಕೆ ರೂ. 1 - 8—0

ಮೇಹ ಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8—0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—

ಡಬ್ಬಿ 1ಕ್ಕೆ ರೂ. 0-2-6. 12ಕ್ಕೆ ರೂ 1-12-0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ ೨ ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:

1. ಡಾಕ್ಟರ್ ಬಿ. ಎಚ್. ಪದ್ಮನಾಭ ಶೈ, ಚಿಕ್ಕಮಂಗಳೂರು. 2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 3. ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು. 4. ವಿ. ಬಿ. ಕಾಮತ್ ಮಡಿಕೇರಿ. 5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ESTD. 1906.

The Canara Banking Corporation Udipi Ltd.

The First Indigenous & Cosmopolitan Bank of S. K. District.

Subscribed Capital	Rs.	3,50,000	0	0
Paid up Capital -	,,	2,78,805	0	0
Reserves	,,	3,63,088	0	0

26-2-1986

Head office:—UDIPI, S. K.

Branches:—1. Udipi, 2 Coondapoor, 3. Car Street, Mangalore, 4. Shimoga, 5. Madras 6. Bunder Mangalore, 7. Mercara & 8. Virarajendrapet.

TO INSURE OR TO REPRESENT

CONSULT –

The Bombay Life Assurance Company Ltd.

ESTD 1908

Offers.
(1) Attractive Schemes of Assurances to suit individual needs.
(2) Rebate for yearly payment of premiums
(3) Additional Rebate for larger assurances
(4) Permanent Disability Benefits without extra.
(5) Increased rate of Bonuses
(6) Accident Risk on a small extra payment

Attractive Rates of Commission & Bonuses to Agents

For particulars apply to any of our Offices

Koppikar Brothers. Branch Secretaries

OFFICES (1) "Gautam Nivas" Charni Rd., Girgaum, Bombay No 4. (2) P. B. 337 Mount Road Madras (3) Visveshwarapuram Circle, Bangalore City (4) Hazur Road, Calicut (5) Car Street, Mangalore, S K (6) Udipi, (S India).

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಜೇನು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತಾಮ್ರಜ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ – ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ. ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ– ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

Edited Printed & Published By A. S. Kamath at the Sharada Press, Car Street, Mangalore.

ವಾರ್ಷಿಕ ಚಂದಾ 2 ರೂಪಾಯಿ.
ಬಿಡಿ ಸಂಚಿಕೆ 1 ಆಣೆ.

Registered No. M.3406

ಟಪ್ಪಾಲು ಹಾಸಲು ಸೇರಿ ರೂ. 2-12-0

for Quality Snuff
H. Rama Rao and Sons.
High Class Snuff Manufacturers
Mangalore S. I.
ASK FOR —
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in the
THE BOMBAY LIFE
Kochikar Brothers,
Bombay

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲು ಬಹು ಸಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ॥
ಗರಳಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳಬಲ್ಲರೆ? ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಕ ೩೦ ಮಂಗಳೂರು ತಾ. ೧೩ನೇ ಶುಕ್ರವಾರ ಮಾರ್ಚ ೧೯೩೬ (13-3-'36) ಸಂಚಿಕೆ ೧೧

ಜಪಾನಿನ ಮಂಡಲದ ಪ್ರಧಾನ ಮಂತ್ರಿಯಾದ
ಒಕೊಡಾರವರು.

ಇತ್ತೀಚೆಗೆ ಜಪಾನಿನಲ್ಲಿ ಬಲವತ್ತಾಯಿಸಿದ ಯುದ್ಧ ಧೋರಣೆಯನ್ನು ವಿರೋಧಿಸಿ ನವೀನ ಸೈನಿಕರ ಕ್ರಾಂತಿಕರ ಬಂಡಾಯದಲ್ಲಿ ಕೊಲ್ಲಲ್ಪಟ್ಟ ಅನೇಕ ಮುಖಂಡರೊಳಗೆ ಇವರ ಹೆಸರೂ ತಪ್ಪಾಗಿ ಪ್ರಕಟವಾಗಿತ್ತು. ಇವರು ದೈವವಶಾತ್ತಾಗಿ ಸಜೀವರಾಗಿರುವರೆಂದು ತಿಳಿದುಬರುತ್ತದೆ

ಪ್ರಯತ್ನಪೂರ್ವಕವಾಗಿ ಸೈನಿಕರ ಬಂಡಾಯವನ್ನು ಸಂಪೂರ್ಣವಾಗಿ ಅಡಗಿಸಿ
ದೇಶದಲ್ಲಿ ಶಾಂತತೆಯನ್ನು ಸ್ಥಾಪಿಸಿದ
ಜನಪ್ರೀತರಾದ ಜಪಾನಿನ ಸಾಮ್ರಾಟರವರು.

ಚಕ್ರವರ್ತಿಯವರ ಅಪೇಕ್ಷೆಯಂತೆ ಜಪಾನಿನ ಪ್ರಧಾನ
ಮಂತ್ರಿಯಾಗಲು ಸಮ್ಮತಿಸಿರುವ
ಹಿರೋಟಾರವರು.

ನೋಟಿಗಳು
NOTE......S.

ಸೆನೆಟ್ ಸಭೆಗೊಂದು ಚುನಾವಣೆ: ಬೋರ್ಡಿನಿಂದ ಒಬ್ಬರು, ಮ್ಯುನಿಸಿಪಾಲಿಟಿಯಿಂದ ಒಬ್ಬರು ನಮ್ಮ ಜಿಲ್ಲೆಯ ಪರವಾಗಿ ಮಹಾ ಮತದ ನಿರ್ಧಾರದಂತೆ.

× × ×

ಬೋರ್ಡಿನಿಂದ ಚುನಾವಣೆ ನಡೆಯಲಿಕ್ಕೆ ಮೊದಲೇ ಆಸ್ಪದವಿರಲಿಲ್ಲ. ಉಮೇದು ಪ್ರಕಟಿಸಿ ಬಂದರೇ ಒಬ್ಬರಿಂತಾದರೆ, ಚುನಾವಣೆಗೇನು ಉಳಿದಿದೆ? ಸರಿ. ಅವರ ಚುನಾವಣೆಯಾಯ್ತೆಂದು ಪ್ರಕಟವಾಯಿತು.

× × ×

ಆಗಲೆ, ಇವರು ಹೇಗಾಗಬಹುದು ಎಂದು, ಚುನಾವಣೆಗೆ ತಾವೂ ಸ್ವತಂತ್ರವಾಗಿ ಕೊರಲೊಡ್ಡಿ ನಿಂತವರು ಎದುರು ಬಂದರು. ಅವರ ನೊಮಿನೇಶನನ್ನು ಸಕಾಲದಲ್ಲಿ ತಲಪಿದ್ದರೂ, ನೋಡಿದ್ದಿಲ್ಲವಂತೆ ಕೊಂಗ್ರೆಸು ಪಕ್ಷದವರು, ಆದರೆ, ಅವರು ಚುನಾವಣೆಗೆ ನಿಂತುದು ಕೊಂಗ್ರೆಸಿನವರಿಗೇ ತಿಳಿದಿರಲಿಲ್ಲ ಹೇಗೂ ಇರಲಿ ಇದು ಮರಳಿ ಒಮ್ಮೆ ಜರುಗಬೇಕಾಗಿದೆ.

× × ×

ಮ್ಯುನಿಸಿಪಾಲಿಟಿಯಿಂದ ಸೆನೆಟಿಗೆ ಚುನಾವಣೆ. ಯಾರು ಮೆಂಬರಾಗಿ ಹೋದರೂ, ಸ್ವಕೀಯವಾದ ತಾಪತ್ರಯ ನೀಗಿ, ಲೇವಾದೇವಿ ಅಥವಾ ವಿಹಾರ ಮುಗಿಸಿ, ಇತರರ ಖರ್ಚಿನಲ್ಲಿ ತಾನು ಸುಖಪಡಲು ಅನುಕೂಲ ಎಂದು ಎಲ್ಲರೂ ಬಲ್ಲರು ಉಮೇದವಾರರು ಮೂವರು, ಗೆದ್ದವರು ಯಾರು? ಇನ್ನೂ ಪ್ರಕಟವಾಗಲು ಸ್ವಲ್ಪ ವಿಳಂಬ. ವೋಟಿನ ಪತ್ರಗಳಲ್ಲಿ ಗೀಟುಗಳಿರಬಹುದೆ? ಯಾರ್‍ಯಾರು ಎಲ್ಲಿ, ಯಾವಾಗ, ಏಕೆ? ಎಂದು ಉಮೇದುವಾರರೊಬ್ಬರ "ಪ್ರತಿಕೋಲಾಹಲ" ಹೇಗಾಗುವುದೋ!

ಎಲಿಮೆಂಟರಿ ಶಾಲೆಗಳಿಗೆ ಕಳೆದ ವರ್ಷ ಗ್ರೇಂಟು ಕಡಿತಾಯವಾದಷ್ಟೆ ಈ ವರ್ಷವೂ ಆಗುವುದು ಆದರೆ ಮೊಬಲಗು ಹೆಚ್ಚಿದೆ, ಕಳೆದ ವರ್ಷಕ್ಕಿಂತ ಮೂರು ಲಕ್ಷ ರೂಪಾಯಿ ಕೊಡಲಾಗಿದೆ. ಕಡಿತವು ಆದುದರಿಂದ ಅಷ್ಟು ಹೆಚ್ಚಾಗಿ ತೋರದು

ದೇವರ ರಾಜ್ಯವನ್ನು ಭೂಮಿಯ ಮೇಲೆ ಹರಡಿಸುವ ಶಾಲೆಗಳಿಗೆ ದೇವರ ದಯೆಯಿಂದ ಈ ಹೆಚ್ಚಿನ ಮೊಬಲಗಿನ ಹೆಚ್ಚಿನ ಅಂಶವು ಹೆಚ್ಚಿನ ಬಡ್ತಿಯಾಗಿ ಸಿಗಲಾರದಾದರೆ, ದೇವರ ರಾಜ್ಯದಲ್ಲಿ ನಾವೆಂದೂ ಸೇರುವ ಭರವಸೆ ಹೇಗಿರಬಹುದು?

ಗ್ರೇಂಟು ಎಷ್ಟು ಬಡ್ತಿಯಾಗಿ ಸಿಕ್ಕಿದರೂ, ದೇವರ ರಾಜ್ಯವು ಇನ್ನೂ ದೂರವೆ ಹೋಗುವುದೇಕೆ? ದೇವರ ರಾಜ್ಯದಲ್ಲಿ ದುಡ್ಡು ದುಗ್ಗಾಣಿಗಳ ಚಲಾವಣೆಯಿಲ್ಲ.

ಇಗರ್ಜಿ, ..., ..., ...ಗಿ ಟಿಪ್ಪಾಲು ಮಾಸ್ತರನಾಗಿ, ಶಾಲಾ ಅಸಿಸ್ಟಾಂಟನಾಗಿ, ಇವೆಲ್ಲ ಕೆಲಸಗಳನ್ನು ಮುಗಿಸಿಯೂ ಕೃಷಿಜೀವನ ಮಾಡುತ್ತ ಎಲ್ಲ ವ್ಯಕ್ತಿಗಳಿಂದ ಸುಮಾರು ಮೂವತ್ತು ರೂಪಾಯಿ ತಲಬು ಸಿಕ್ಕುವಂತೆ ತೋರಿದರೂ, ಎರಡು ಊಟ ಮತ್ತು ಐದು ರೂಪಾಯಿಗಳಲ್ಲಿಯೆ ತೃಪ್ತನಾಗಿ ದೇವರ ರಾಜ್ಯವನ್ನು ಕಾಯುತ್ತಿದ್ದ ಉಪಾಧ್ಯಾಯನೂ ಒಬ್ಬನಿದ್ದನೆಂದು ಕಥೆಯಿದೆ. ಅವನ ಪಂಗಡವೆಷ್ಟು ದೊಡ್ಡದುಂಟೋ ಯಾರು ಬಲ್ಲರು?



ಶಾಲೆ, ಮಿಶ್ಯನ್ ಶಾಲೆ ಈ ಕ್ರಮವಾಗಿ ಮುಂಜೂರಾತಿ ಹೊಂದುವುದು ಒಂದು ಕ್ರಮವಿದೆ ಇದಕ್ಕೆ ತೀರ ಉಲಟಾ ಕ್ರಮವಾದರೆ ಏನೆನ್ನಬೇಕು?

ನಗೆಗಡಲು.

ಒಬ್ಬ: ಈ ದಿನ ಟೈನ್ಸ್ಮಿದಾಸಿನಲ್ಲಿ ಧರ್ಮಾರ್ಥಕ್ಕೆ ಸರ್ಕಸು ತೋರಿಸುತ್ತಾರಂತೆ!

ಇನ್ನೊಬ್ಬ: ಹೌದೇ, ಯಾಕಪ್ಪಾ ಹಾಗೆ?

ಒಬ್ಬ: ಸರ್ಕಸಿನವರು ನಿನ್ನೆಯೇ ಕಣ್ಣಾನೂರಿಗೆ ಹೋಗಿದ್ದಾರಂತೆ.

× × × × ×

ಪ್ರೇಕ್ಷಕ: ಸ್ವಾಮಿ, ಈ ನಾಟಕದ ಸ್ಟೇಜಿನೊಳಗೆ ಗರಗಸದ ಶಬ್ದ ಕೇಳಿಸುತ್ತದೆ. ಇನ್ನೂ ೨ನೇ ಅಂಕ ಪ್ರಾರಂಭವಾಗಲಿಲ್ಲ.

ಮಿತ್ರ: ರಾತ್ರಿ ಹೆಚ್ಚಾಯಿತೆಂದು ನಾಟಕದ ೨ನೇ ಅಂಕವನ್ನು ಕೊಯ್ದು ೩ನೇ ಅಂಕವನ್ನು ಪ್ರದರ್ಶಿಸುತ್ತಿರಬೇಕು. ಅದೇ ೨ನೇ ಅಂಕವನ್ನು ಕೊಯ್ಯುವಾಗ ಗರಗಸದ ಶಬ್ದ ಕೇಳಿಸುವುದು ಸ್ವಾಮಿ!

Ested 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,
PUTTUR
ದಿ ಕೆನರಾ ಎಂಟರ್‌ಪ್ರ್ಯಾಜ್ ಲಿಮಿಟೆಡ್
ಪುತ್ತೂರು.
ಠೇವಣಾತಿಗಳ ದರ.

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.
"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.
ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.
ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು
ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur,
Dated 10—4—1935.

G. N. Lakshman Pai,
Secretry.

ಭಾರತೀಯರಿಗೆ ಔದ್ಯೋಗಿಕ ಶಿಕ್ಷಣ

(ಲೇಖಕ—ಶ್ರೀ ಕೆ. ಕೇಶವ ಕುಡುವ, ಅಧ್ಯಾಪಕ, ಉಡುಪಿ)

ಯಾವ ಕಾಲದಲ್ಲಿ ಇತರ ರಾಷ್ಟ್ರಗಳು ದ್ರಾವಸ್ಥೆಯಲ್ಲಿದ್ದವೋ ಆ ಕಾಲದಲ್ಲಿ ಭರತ ಭೂಮಿಯ ಪ್ರತಾಪ ಸೂರ್ಯನು ತನ್ನ ಪ್ರಖರ ಕಿರಣಗಳಿಂದ ಇಡೀ ವಿಶ್ವವನ್ನೇ ಬೆರಗುಗೊಳಿಸುತ್ತಿದ್ದನು. ಆ ಕಾಲದಲ್ಲಿ ಭರತಭೂಮಿಯು ಕಲಾಕೌಶಲ್ಯದ ತವರುಮನೆಯಾಗಿತ್ತು. ಸರ್ವ ವಿಧದ ವ್ಯಾಪಾರಗಳ ಕೇಂದ್ರವಾಗಿತ್ತು. ಎಲ್ಲಾ ನಿಸರ್ಗಿಕ ಉತ್ಪತ್ತಿ ಮತ್ತು ಬುದ್ಧಿಚಾತುರ್ಯದಿಂದ ತಯಾರಿಸಲ್ಪಟ್ಟ ವಸ್ತು ಒಡವೆಗಳ ಭಾಂಡಾಗಾರವಾಗಿತ್ತು. ಸಕಲ ವಿದ್ಯೆಗಳ ದಿವ್ಯ ಮಂದಿರವಾಗಿತ್ತು. ಸರ್ವ ವಿಧದ ವಿದ್ವಾಂಸರ ವಸತಿಸ್ಥಾನವಾಗಿತ್ತು. ಇವುಗಳಿಂದೊಡಗೂಡಿ, ಕುಬೇರನ ನಗರಿಯಂತೆ, ವೈಭವಾತಿಶಯದಿಂದ ಮೆರೆದಾಡಿಕೊಂಡಿತ್ತು. ಅಂದು ಹಿಂದೂದೇಶದ ಬಟ್ಟೆಬರೆಗಳೂ, ವಸ್ತು ಒಡವೆಗಳೂ, ಹಿಂದೂಸ್ಥಾನದ ಪ್ರತಿಯೋರ್ವ ಮಹಾರಾಜ ಮತ್ತು ಮಹಾರಾಣಿಯ ಪೋಷಾಕಾಗಿದ್ದುವು. ಹೆಚ್ಚೇಕೆ? ಗ್ರೀಸ್, ಇಟಲಿ, ಈಜಿಪ್ತ, ಇಂಗ್ಲೆಂಡ್ ಮೊದಲಾದ ರಾಷ್ಟ್ರಗಳ ಕೋಮಲಾಂಗಿಯರ ಶರೀರಗಳನ್ನು ಶೋಭಾಯಮಾನಗೊಳಿಸುತ್ತಿದ್ದುವು. ಅಂತಹ ಹಿಂದೀ ರಾಷ್ಟ್ರವಿಂದು ಹೊರಳುತ್ತ, ತೊರಳುತ್ತ, ಬಳಲುತ್ತ, ದಿನೇ ದಿನೇ ದೀನ ದುರ್ಬಲತೆಯನ್ನು ತಾಳುತ್ತಿರುವುದು. ಆರ್ಯ ಮಾತೆಯು ಇಂದು ಹರಿಹೊಟ್ಟೆ ಹರಕುಬಟ್ಟೆಯಿಂದ ನರಳುತ್ತಿದ್ದಾಳೆ. ಅವಳ ಕೂಳುಗೇಡಿತನ, ತಿಳಿಗೇಡಿತನಗಳ ರೋದನ ಕೂಗು ನಭೋಮಂಡಲವನ್ನು ಸೀಳಿ ಸ್ಪರ್ಶಿಸುವಂತಿದ್ದಿತು. ಅದಿಂದು ಕಾನನದ ಕೂಗಾಗಿ ಪರಿಣಮಿಸಿದೆ. ಅಂದು ಚಿನ್ನದ ಸರಿಸುರಿದ ಈ ನಾಡಿನಲ್ಲಿಂದು ಕಣ್ಣೀರ ಕೋಡಿ ಹರಿಯುತ್ತಿದೆ. ಅಹ ಆರ್ಯಮಾತೆಯೇ! ವೀರ ಜನನಿಯೇ! ಸ್ವಾತಂತ್ರ್ಯ ದೇವಿಯೇ! ಅಂದು ನಿನ್ನ ಪವಿತ್ರ ಗರ್ಭದಲ್ಲಿ ಜನ್ಮವೆತ್ತಿ, ನಿನ್ನ ಉದ್ಧಾರವನ್ನು ಗೈದ, ಸಾಮರ್ಥ್ಯ ಸಂಪನ್ನರೂ, ಸ್ವಾತಂತ್ರ್ಯಾಭಿಮಾನಿಗಳೂ, ಪರಾಕ್ರಮಶಾಲಿಗಳೂ, ಆತ್ಮ ತೇಜಸ್ವಿಗಳೂ, ಆದ ವೀರ, ಶೂರ, ಧೀರ, ಗಂಭೀರ ಮತ್ತು ಸಂಜ್ಞಾನಿಗಳಾದ ಆ ನಿನ್ನ ಅಂದಿನ 'ಸುಪುತ್ರ'ರಿಂದೆಲ್ಲಿಹರು? ನಿನ್ನ ಅಂದಿನ ಅತುಲನೀಯ ಸೌಭಾಗ್ಯವು ಇಂದೆಲ್ಲಿ ಮಾಯವಾಗಿ ಹೋಯಿತು? ನಿನ್ನನ್ನೀ ತೆರನಾದ ದುರ್ಧರವಾದ ದಾಸತ್ವಕ್ಕೆ ಗುರಿಪಡಿಸಿದವರಾರು? ಇದೀಗ ಇಂದು ಕೇವಲ ಭಿಕ್ಷಾಟನ ವೃತ್ತಿಯನ್ನು ಕೈಕೊಂಡವನನ್ನು, ನಾಳೆ ಐಶ್ವರ್ಯವಂತನನ್ನಾಗಿ ಮಾಡಿಬಿಡುವ ಶ್ರೀ ದೇವರ ವಿಧಿಯೋ? ಅಥವಾ ಭಾರತೀಯರ ಅದೃಷ್ಟವೋ? ಕಾಲಗತಿಯೇ ಹಾಗಾಗಿದೆ ಎಂದರೆ ಹೆಚ್ಚಾಗಲಿಕ್ಕಿಲ್ಲವೇ?

ಭರತಭೂಮಿಯು ಇಂದಿನ ಈ ತೆರನಾದ ಶೋಚನೀಯ ಸ್ಥಿತಿಗೆ ಭಾರತೀಯರೇ ಕಾರಣರಾಗಿರುತ್ತಾರೆಂದು ಕಂಠೋಕ್ತವಾಗಿ ಹೇಳಬಹುದು. ಗತವೈಭವೆಯಾದ, ಸಹಾಯವಿಲ್ಲದ ಓರ್ವ ವಿಧವೆಯು, ಇದ್ದ ಒಬ್ಬನೇ ಸುತನ ಮೇಲೆ, ಭಾವೀ ಸುಖದಾಶೆಯನ್ನಿಟ್ಟುಕೊಂಡು ದಾಸ್ಯದಲ್ಲಿ, ದಾರಿದ್ರ್ಯದಲ್ಲಿ, ತನ್ನ ಕಷ್ಟಮಯವಾದ ಕಾಲವನ್ನು ಕಳೆಯುವ ತೆರದಲ್ಲಿ, ಯಾವ ಭೂಮಾತೆಯು, ಯಾರನ್ನು ನಂಬಿ, ಭಾವೀ ಸಾಮ್ರಾಜ್ಯದ ಸುಖದಾಶೆಯನ್ನಿಟ್ಟುಕೊಂಡಿರುವಳೋ, ಅಂತಹ ಇಂದಿನ ಭಾರತ ಯುವಕರ ಸ್ಥಿತಿಗತಿಗಳನ್ನು ವಿಚಾರಿಸಿದರೆ, ವೀರಭಾರತಿಯನ್ನು ದುರ್ಧರವಾದ ದಾಸತ್ವಕ್ಕೆ ಗುರಿಪಡಿಸಿದವರಾರೆಂದು ವ್ಯಕ್ತವಾಗುವುದು.

ಸರ್ವ ಸಾಮಾನ್ಯವಾಗಿ ಯಾವುದಾದರೊಂದು ದೇಶದ ಸುಖ ಸಂಪತ್ತು, ಆಯಾ ದೇಶಗಳ ಜನರ ಬುದ್ಧಿಚಾತುರ್ಯ ಮೊದಲಾದ ಕರ್ತೃತ್ವಶಕ್ತಿಗಳನ್ನವಲಂಬಿಸಿಕೊಂಡಿರುತ್ತದೆ. ಯಾವ ದೇಶದ ಬಹುಜನ ಸಮಾಜವು ವಿದ್ಯಾವಿಹೀನವಾಗಿಯೂ, ನಿರುತ್ಸಾಹಿಯಾಗಿಯೂ, ಚೈತನ್ಯಶೂನ್ಯವಾಗಿಯೂ, ದುರ್ಭಿಕ್ಷಪೀಡಿತವಾಗಿಯೂ, ಪುರುಷಾರ್ಥ ಹೀನವಾಗಿಯೂ ಇರುವುದೋ, ಆ ರಾಷ್ಟ್ರವು ದಾರಿದ್ರ್ಯ, ಪರದಾಸ್ಯ, ಸದಾ ರೋಗಪೀಡಿತ ಮೊದಲಾದ ಪೀಡೆಗೊಳಗಾಗುವುದರಲ್ಲಿ ಅಚ್ಚರಿಯೇನು? ನಮ್ಮ ಮಾತೃಭೂಮಿಯ ಬಹುಜನ ವಿದ್ಯಾವಂತ ಸುಪುತ್ರ ಸುಪುತ್ರಿಯರಿಂದು, ಕಾಲ್ಪನಿಕ ಸುಧಾರಣೆಗಳ ಕಡೆಗೆ ತಮ್ಮ ದೃಷ್ಟಿಯನ್ನು ಬೀರಿ, ಸ್ವದೇಶದ ನಿಜವಾದ ಸುಖ ಸಂಪತ್ತುಗಳ ಕಾರಣಗಳನ್ನು ಮರೆತು, ಬರೇ ಇಂಗ್ಲಿಷ್ ವಿದ್ಯಾಭ್ಯಾಸ, ಸಾಹಿತ್ಯ ವಿಚಾರ, ರಾಜಕೀಯ ಸುಧಾರಣೆ, ಮೊದಲಾದ ವಿಚಾರಗಳಲ್ಲಿ ಮಗ್ನರಾಗಿ, ತಮ್ಮ ಯಾವತ್ತೂ ದೇಹಶಕ್ತಿಯನ್ನು ಕುಂದಿಸಿಕೊಂಡು, ಪರಸೇವಾ ವೃತ್ತಿಯನ್ನೇ ಅಪೇಕ್ಷಿಸುವರಲ್ಲದೆ, ತಮ್ಮ ಜೀವನವನ್ನು ಸುಖಮಯ ಹಾಗೂ ಸ್ವತಂತ್ರವಾಗಿ ನಿರ್ವಹಿಸಿ, ಸ್ವಾತಂತ್ರ್ಯ ಸೌಖ್ಯವನ್ನು ಪಡೆಯಲು ನಮಗೆ ಪೂರ್ವದಿಂದಲೂ ಮಾರ್ಗದರ್ಶಕವಾಗಿರುವ ಕೃಷಿ ಕೈಗಾರಿಕೆ ಗೋರಕ್ಷಣೆ ಮೊದಲಾದ ಆದರ್ಶನೀಯ ವಿಷಯಗಳೆಡೆಗೆ ಅಲಕ್ಷ್ಯಭಾವ ತೋರಿಸಿದುದೇ ಮಾತೃಭೂಮಿಯ ಇಂದಿನ ಈ ತೆರನಾದ ಶೋಚನೀಯ ಸ್ಥಿತಿಗೆ ಕಾರಣವಾಗಿದೆ ಎಂದು ಹೇಳಬಹುದು.

ನಮ್ಮ ಹಿಂದೂದೇಶದಲ್ಲೀಗ ನಾಲ್ಕು ವರ್ಷದ ಬಾಲಕರಿಂದ ತೊಡಗಿ ಯುವಕರವರೆಗಿನವರೆಲ್ಲರೂ ಪಾಶ್ಚಾತ್ಯರ ವೇಷದಿಂದ ಅಲಂಕೃತರಾಗತೊಡಗಿದ್ದಾರೆ. ಪ್ರೌಢ ವಿದ್ಯಾಭ್ಯಾಸವೇ ತಮ್ಮ ಸರ್ವಸ್ವವೆಂದು ಭಾವಿಸಿಕೊಂಡಿರುತ್ತಾರೆ. ಆದರೆ ಕಾಲೇಜುಗಳಲ್ಲಿ ಪ್ರೌಢ ವಿದ್ಯಾಭ್ಯಾಸವನ್ನು ಗಳಿಸಿದ ಇಂದಿನ ನವತರುಣರ ಸ್ಥಿತಿಯನ್ನು ಏನೆಂದು ವರ್ಣಿಸಲಿ? ಸ್ವಾರ್ಥನ್ಯಾದಿ ದುರ್ಗುಣಗಳಿಗೆ ಬಲಿಬಿದ್ದು, ಏನೊಂದೂ ಉದ್ಯೋಗವಿಲ್ಲದೆ, ಮೋರೆಯಲ್ಲಿ ಕಾಂತಿವಿಹೀನರಾಗಿ, ಬರೇ ಅಸ್ಥಿಪಂಜರವನ್ನು ಕಟ್ಟಿಕೊಂಡು, ದಾರಿಯಲ್ಲಿ ಅಲೆದಾಡುವುದನ್ನು ಕಂಡ ಮಾತೃಶ್ರೀ ಮೈಗೆ ಮುಳ್ಳು ಬರುವುದರಲ್ಲಿ ಸಂದೇಹವಿರದು. ಇದಕ್ಕೆಲ್ಲಾ ಕಾರಣವೇನು? ಪ್ರೌಢ ವಿದ್ಯಾಭ್ಯಾಸ ಪ್ರೌಢ ವಿದ್ಯಾಭ್ಯಾಸವನ್ನು ಗಳಿಸಿದರೆ ಸರಕಾರಿ ನೌಕರಿಗಳನ್ನು ಪಡೆಯಬಹುದಲ್ಲವೇ? ಕಲಿತ ಹಾಗೆಲ್ಲ ನೌಕರಿಗಳು ದೊರೆಯುವ ಕಾಲವು ಎಂದೋ ಸಂದು ಹೋಗಿದೆ. ಈಗ ಶಿಕ್ಷಿತರ ಸಂಖ್ಯೆಯು ಹೆಚ್ಚಾಗಿ ಉದ್ಯೋಗಗಳು ಕಡಿಮೆಯಾಗಿವೆ. ಈ ಕಾರಣದಿಂದಲೇ ಶಿಕ್ಷಿತ ತರುಣರ ನಿರುದ್ಯೋಗ ಸಮಸ್ಯೆಯು ಶುಕ್ಲಪಕ್ಷದ ಚಂದ್ರನ ಬೆಳವಣಿಗೆಯೋಪಾದಿಯಲ್ಲಿ ದಿನೇ ದಿನೇ ಭರದಿಂದ ವೃದ್ಧಿಯಾಗುತ್ತಲಿದೆ. ಆದರೂ ಇಂದಿಗೂ ಕೂಡ ಸಾವಿರಾರು ವಿದ್ಯಾರ್ಥಿಗಳು, ತಾವು ಜನ್ಮವೆತ್ತಿದಂದಿನಿಂದ ಯಾರು ತಮ್ಮನ್ನು ಅಕ್ಕರೆಯಿಂದ ಸಾಕಿ ಸಲಹಿದರೋ, ಅಂತಹ ಜನನೀ ಜನಕರನ್ನು ಅನೇಕ ತೆರನಾದ ಸಂಕಷ್ಟಗಳಿಗೆ ಗುರಿಪಡಿಸಿ, ತಮ್ಮ ಮನೆಯ ಮೇಲಿನ ಮಮತೆಯನ್ನು ತೊರೆದು, ವಿದೇಶಿಯ ಮೋಹಕ್ಕೆ ಮನಸೋತು ಅನೇಕಾನೇಕ ದುರ್ವ್ಯಸನಗಳಿಗೆ ಬಲಿಬಿದ್ದು, ಹೆತ್ತ ತಂದೆತಾಯಿಗಳು ಹಗಲಿರುಳು ಶ್ರಮಪಟ್ಟು ಬೆವರಿಳಿಸಿ, ದುಡಿದ ಹಣವನ್ನೆಲ್ಲ ಮನಬಂದ ತೆರದಲ್ಲಿ ಅಪವ್ಯಯಪಡಿಸಿ, ಪ್ರೌಢ ವಿದ್ಯಾಭ್ಯಾಸವನ್ನು ಗಳಿಸಿ, ಏನೊಂದೂ ಉದ್ಯೋಗವನ್ನು ದೊರಕಿಸಿಕೊಳ್ಳಲಾರದೆ, ಸಿಗರೇಟಿಗಾಗಿ ಬಾಯಿ ಬಿಡುತ್ತಿರುವರಲ್ಲ! ವೀರಭಾರತ ಸುಪುತ್ರ ಸುಪುತ್ರಿಯರೇ! ಪ್ರೌಢ ವಿದ್ಯಾಭ್ಯಾಸ ಗಳಿಸಿದರೆ ಸುಖಮಯವಾದ, ಕುರ್ಚಿ ಮೇಜುಗಳುಳ್ಳ, ಉದ್ಯೋಗವನ್ನು ಪಡೆಯುವೆನೆಂಬ ಭಾವನೆಯು ನಿಮ್ಮಿಂದ ಇನ್ನಾದರೂ ತೊಲಗಲಿ! ನೀವು ಆರ್ಯಾವರ್ತದಲ್ಲಿ ಜನಿಸಿ, ದುರ್ಧರವಾದ ದಾಸತ್ವಕ್ಕೆ ಸಿಲುಕಿಕೊಂಡು ನೇಚಾಡುತ್ತಿರುವ ಆರ್ಯಮಾತೆಯನ್ನು ಮುಕ್ತಳನ್ನಾಗಿ ಮಾಡಿ, ಅವಳ ಋಣವನ್ನು ಅವಳಿಗೆ ತಿರುಗಿ ಮುಟ್ಟಿಸಿರಿ!

ಮುಖ್ಯವಾಗಿ ಭಾರತೋದ್ಧಾರವಾಗಬೇಕಾದರೆ, ದೇಶದಲ್ಲಿ ತಾಂಡವ ನರ್ತನವಾಡುವ ಶಿಕ್ಷಿತ ತರುಣರ ನಿರುದ್ಯೋಗ ನಿವಾರಣೆಯಾಗಬೇಕು. ಶಿಕ್ಷಿತ ಯುವಕರ ನಿರುದ್ಯೋಗ ನಿವಾರಣೆಗೆ ಸಾಧಕವಾದ ಔದ್ಯೋಗಿಕ ಶಿಕ್ಷಣವು ಅವರಿಗೆ ದೊರೆಯಬೇಕು. ದೇಶದ ಸಂಪದಭಿವೃದ್ಧಿಗೆ ಕಾರಣವಾಗಿರುವ ಕೃಷಿ ಕೈಗಾರಿಕಾದಿಗಳ ಶಿಕ್ಷಣವೇ ನಮ್ಮ ತರುಣರಿಗಿಂದು ಅತ್ಯಾವಶ್ಯಕವಾಗಿದೆ.

ಇನ್ನು ಔದ್ಯೋಗಿಕ ಶಿಕ್ಷಣವೆಂದರೇನೆಂಬುದನ್ನು ವಿಚಾರಮಾಡಬೇಕಾಗುವುದು. ಮಾನಸಿಕ ಮತ್ತು ಭೌತಿಕ ಶಿಕ್ಷಣವೇ ರಾಷ್ಟ್ರೀಯ ಶಿಕ್ಷಣವು! ಯಾವ ಕಾರಣದಿಂದ ಕೈಕಾಲು ಮೊದಲಾದ ಅವಯವಗಳ ಶಕ್ತಿಯ ವಿಕಾಸ ಉಂಟಾಗುವುದೋ ಅದೇ ಔದ್ಯೋಗಿಕ ಶಿಕ್ಷಣವು! ಸಾಮುದಾಯಿಕ ಮತ್ತು ವ್ಯಾಪಕ ದೃಷ್ಟಿಯಿಂದ ಸಂಪತ್ತಿನ ಉತ್ಪತ್ತಿಯ (Production) ಮತ್ತು ಹಂಚುವಿಕೆಯ (Distribution) ಜ್ಞಾನವು ಸಿಗುವುದೋ, ಅದೇ ಔದ್ಯೋಗಿಕ ಶಿಕ್ಷಣವು. ಸಂಪತ್ತು ಎಂಬ ಶಬ್ದದ ಅರ್ಥವನ್ನು ಬರೇ ದ್ರವ್ಯವೆಂದು ಭಾವಿಸದೆ, ಅರ್ಥಶಾಸ್ತ್ರ ವಿಚಾರದಂತೆ, ಯಾವುದಕ್ಕೆ ಬೆಲೆ ಇದೆಯೋ ಆ ವಸ್ತು ಅಥವಾ ಆ ಸಂಪತ್ತು ಎಂಬುದಾಗಿ ತಿಳಿಯಬೇಕು. ಈ ರೀತಿಯಲ್ಲಿ ವಿಚಾರ ಮಾಡಿದರೆ, ಭೂಮಿ, ಶರೀರ, ಸಾಮರ್ಥ್ಯ (ಕಾಯಕಷ್ಟ) ಭಂಡವಾಲ ಮತ್ತು ಸಂಯೋಜಕ, ಇವುಗಳ ಸಮಾವೇಶವಾಗುತ್ತದೆ. ಆದ ಪ್ರಯುಕ್ತ ಔದ್ಯೋಗಿಕ ಶಿಕ್ಷಣದಲ್ಲಿ ಕೃಷಿ ಇಂಜಿನಿಯರಿಂಗ್, ಮೊದಲಾದ ಹಸ್ತಕೌಶಲ್ಯದ ಕೆಲಸ ಮೊದಲಾದುವುಗಳ ಶಿಕ್ಷಣ, ಬ್ಯಾಂಕು ಇನ್ಶ್ಯೂರೆನ್ಸ್, ಮೊದಲಾದ ಸಂಸ್ಥೆಗಳ ಶಿಕ್ಷಣ ಮತ್ತು ಇತರ ಸರ್ವ ವಿಧದ ವ್ಯಾಪಾರ ಶಿಕ್ಷಣವೂ ಕೂಡ ಇದರಲ್ಲಿ ಸೇರುತ್ತದೆ. ಮಾಲು ಎಲ್ಲಿ ಕಡಿಮೆ ದರದಲ್ಲಿ ತಯಾರಾಗುತ್ತದೆ, ಮತ್ತು ಅದನ್ನು ಎಲ್ಲಿ, ಯಾವ ಪೇಟೆ ಅಥವಾ ಊರಿನಲ್ಲಿ ಮಾರಿದರೆ ಹೆಚ್ಚು ಮುನಾಫೆಯಾಗಬಹುದು, ಇತ್ಯಾದಿ ಪ್ರಾಮುಖ್ಯ ವಿಷಯಗಳು ಔದ್ಯೋಗಿಕ ಶಿಕ್ಷಣದ ಅಂಗಗಳಾಗಿರುತ್ತವೆ.

ಆದರೆ ನಮ್ಮ ಹಿಂದೂಸ್ಥಾನದಲ್ಲಿ ವ್ಯವಸ್ಥಿತ ಔದ್ಯೋಗಿಕ ಶಿಕ್ಷಣವನ್ನೀಯುವ ಕ್ರಮವು ಇನ್ನೂ ಜಾರಿಗೆ ತರಲಾಗಿರುವುದಿಲ್ಲ. ಕೇಳಿದರೆ ಬ್ರಿಟಿಷ್ ಸರಕಾರವು ಆ ಬಗ್ಗೆ ಬೇಕಾಗಿರುವ ದ್ರವ್ಯವು ತನ್ನಲ್ಲಿಲ್ಲವೆಂದು ಹೇಳುತ್ತದೆ. ವಿದ್ಯೆಗಾಗಿ ವ್ಯಯಪಡಿಸಲು ಹಣವಿಲ್ಲವೆಂದು ಹೇಳುವ ಅದೇ ಸರಕಾರವು ಶಾಂತಿಯ ದಿನಗಳಲ್ಲಿ ತನ್ನ ಸೈನ್ಯರಕ್ಷಣೆಗಾಗಿ ಭಾರತದಲ್ಲಿ ದೊರೆಯುವ ಕಂದಾಯದ ಅರೆಪಾಲು ಮೌಲ್ಯವನ್ನು ವ್ಯಯಪಡಿಸುತ್ತದೆ. ನಮ್ಮಲ್ಲಿ ಬ್ರಿಟಿಷರ ಸಂಖ್ಯೆ ಹೆಚ್ಚಾಗಿರುವ ಅಧಿಕಾರಿಗಳಿಗೆ ಸಂಬಳವನ್ನು ಹೆಚ್ಚಿಗೆ ಕೊಡ[illegible] ಬರುತ್ತದೆ. ಸಾರ್ವಜನಿಕ ಕೇಳಿಕೆಗಳು ಹೆಚ್ಚುತ್ತಿವೆಯಾದರೂ, ಸರಕಾರದ ಮನೋಪರಿವರ್ತನೆಯಾಗಿರುವುದು ಬಹಳ ಕಡಿಮೆಯೆಂದು ಹೇಳಬಹುದು. ಇನ್ನಾದರೂ ಸರಕಾರವು ತನ್ನ ಉದಾರದೃಷ್ಟಿಯನ್ನು ಈ ಕಡೆಗೆ ಬೀರುವುದು ಅತ್ಯಾವಶ್ಯಕವಾಗಿದೆ.

ಈಗ ಔದ್ಯೋಗಿಕ ಶಿಕ್ಷಣಾಸಂಸ್ಥೆಗಳು ಅತೀ ಕಡಿಮೆ, ಇರುವ ಕೆಲವು ಶಾಲೆಗಳು ಸಮರ್ಪಕವಾಗಿ ಕೆಲಸವನ್ನು ನಿರ್ವಹಿಸು[illegible]ದಿಲ್ಲ. ಆದಪ್ರಯುಕ್ತ ನಮ್ಮ ಹಿಂದೂ[illegible]ದಲ್ಲಿ ಸಾಕಷ್ಟು ಔದ್ಯೋಗಿಕ ಶಿಕ್ಷಣವನ್ನೀಯುವ ಶಾಲೆಗಳನ್ನು ಸ್ಥಾಪಿಸುವುದುಚಿತ. ಶಿಕ್ಷಣವನ್ನೀಯುವವರು ಅತ್ಯಂತ ಪ್ರಾವೀಣ್ಯವನ್ನು ಸಂಪಾದಿಸಿದವರೂ, ವಿದೇಶೀ ಕಾರ್ಖಾನೆಗಳ ಸಕಲ ಮಾಹಿತಿಯನ್ನು ಪಡೆದವರೂ ಆಗಿರಬೇಕು. ಈ ಶಿಕ್ಷಣವನ್ನೀಯುವುದೆಂದರೆ ಆಯಾ ವಿದ್ಯಾರ್ಥಿಯ ವ[illegible] ಗುಣಗಳಿಗನುಗುಣವಾಗಿ ಉದ್ಯೋಗಗಳ[illegible] ಅತನಿಗೆ ಯೋಗ್ಯ ರೀತಿಯ ತರಬೇತಿ [illegible]ಯಬೇಕು. ಒಬ್ಬೊಬ್ಬನು ಪ್ರತ್ಯೇಕ [illegible] ಉದ್ಯೋಗಗಳನ್ನವಲಂಬಿಸಿ, ಅದರಲ್ಲಿ ಪೂರ್ಣತೆಯನ್ನು ಪಡೆಯಬೇಕು. ಇದರಿಂದ ಯುವಕರಿಗೆ ಅವರ ಮುಂದಿನ ಜೀವನ[illegible] ಸ್ವತಂತ್ರ ಹಾಗೂ ಸುಖಮಯವಾಗಿ ನಿರ್ವಹಿಸಲು ಸಹಕಾರಿಯಾಗುವುದಲ್ಲದೆ, ಪರದೇಶಿಯರ ಸೂರೆಯಿಂದ ನರಳುತ್ತಿರುವ ಕೈಗಾ[illegible] ದೇವಿಯು ಧನ್ಯಳಾಗಿ, ಜನನೀ ಸ್ವರೂಪ[illegible] ಹಿಂದೀ ರಾಷ್ಟ್ರವು ಸಂತೋಷಾಂಬುಧಿ[illegible] ತೇಲಾಡುವುದರಲ್ಲಿ ಸಂದೇಹವೇನು?



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ, ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧತೆಯನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು.

24 ಔನ್ಸ್ ರೂ. 3 16 ಔನ್ಸ್ ರೂ. 1-8-0 8 ಔನ್ಸ್ ರೂ. 0-14-0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ

ಆಯೊಡ್ಯಾಸ್ಟ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ

4 ಔನ್ಸ್ ರೂ. 1-0-0, 8 ಔನ್ಸ್ ರೂ. 1-8-0.

ದಕ್ಷಿಣ ಕನ್ನಡದ ಏಜಂಟರು—ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಲೋಧ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. ೧ ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ನಾವು ನಿಶ್ಚಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯವಾಗುತ್ತಿದೆ. ಈ ಧರ್ಮಸಂಸ್ಥೆಯ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕೆಂದು ಕೋರಿಕೆ.

ಸೆಕ್ರೆಟರಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ. ಕ.

ಚಿಕ್ಕಾಪುಸ್ತಕ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಸಹಿತ

ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

CANARA BANK, LIMITED.

ABSTRACT BALANCE SHEET

AS AT 31ST DECEMBER 1935

CAPITAL		**FIXED CAPITAL EXPENDITURE**	
Subscribed	6,00,000-0-0	Lands, buildings & furniture	3,22,020-15—2
Paid up	3,33,240-0-0	**ADVANCES TO CUSTOMERS**	
RESERVE FUNDS	4,50,000-0-0	Secured by vluable Securities	29,59 098-13-11
Reserve Fund 3,26,500-0-0		Secured by bills of Exchange etc	15,58,531—2—7
Investment Reserve 46,500-0-0		**INVESTMENTS:**	
Bad & Doubtful Debts Reserve 77,000-0-0		Government Securities	10,97,160-0-0
		Shares of joint Stock Companies	73,500—0—0
DEPOSITS ..	61,92,923-11-1	**SUNDRIES**	2,17,102-13-8
SUNDRIES ...	2,99,535—5-4	**CAHS ON HAND AND WITH BANKERS**	11,13,418-10—6
CURRENT YEAR'S PROFITS .	65,133—7-5		
	Rs. 73,40,882-7-10		Rs 73,40,882—7-10

ಬೀಜಗಳು

೨೫ ಪ್ಯಾಕೆಟ್ ಇಂಡಿಯನ್ ತರಕಾರಿ ಬೀಜಗಳು ರೂ ೧
೨೫ ,, ಯುರೋಪ ,, ೩
೨೫ ,, ಹೂವಿನ ಬೀಜಗಳು ೩

ಗಿಡಗಳು.

೧೨ ಜಾತಿ ಮಾವಿನ ಗಿಡಗಳು ಕಟ್ಟಿದ್ದು ಡಜನ್ ೧ಕ್ಕೆ ರೂ ೧

ಸಂಪೆ ಕೊಡಗು ಕಿತ್ತಳೆ ಚೀಪೆ ಸನ್ನೀಪು ದಾಳಿಂಬ ಚಕ್ರವರ್ತಿ ಲೀವು ಸಿಟ್ರೀಸ್ ಅಂಜೂರ ಚಾಕ್ಕೆ ಗಿಡಗಳು ಡಜನ್ ೧ಕ್ಕೆ . ರೂ
ಕಟ್ಟಿದ ಸಂಪಿಗೆ ಗಿಡಗಳು ಡಜನ್ ೧ಕ್ಕೆ ರೂ ೧
ಪಾರಿಜಾತ ನಂದಿವರ್ಧನ, ಪಾಚಿವಾಳ, ಮಲ್ಲಿ ಹೂವಿನ ಗಿಡಗಳು ಡಜನ್ ೧ಕ್ಕೆ ರೂ

ನಮ್ಮಲ್ಲಿ ದೊರೆಯುವ ಗಿಡ ಬೀಜ, ತರಕಾರಿ ಹೂವು ಹಣ್ಣುಗಳ ಬೆಲೆ ತೋರಿಸುವ ಕನ್ನಡ ಕೆಟಲಾಗನ್ನು ಅಪೇಕ್ಷಿಸುವವರು ಬರೆದು ತರಿಸಿಕೊಳ್ಳಬಹುದು.

ಮ್ಯಾನೇಜರ್
ಇಂಟರ್ ನ್ಯಾಷನಲ್ ಸೀಡ್ಸ್ ಕಂಪೆನಿ
ಲಾಲ್ ಬಾಗ್ ಫ್ರೂಟ್ಸ್ ರೋಡ್,
ಬೆಂಗಳೂರು ಸಿಟಿ

ಶರೀರ ಮರ್ಮಶಾಸ್ತ್ರ

ಇದರಲ್ಲಿ ಅನೇಕ ಜಾತಿ ಸ್ತ್ರೀ ಲಕ್ಷಣದ ವರ್ಣನೆಗಳೂ, ಗರ್ಭ ಸಂತಾನನಿರೋಧ, ಅತಿಸಂಭೋಗದಿಂದಾಗುವ ಹಾನಿ, ಸಂಭೋಗ ಶುಕ್ಲ ನಷ್ಟ, ಗರ್ಭಚಿನ್ಹೆ, ಗರ್ಭವೃದ್ಧಿ ರೂಪ, ಶಿಶು ಉತ್ಪತ್ತಿ ಸ್ತ್ರೀಯರ ಜನನೇಂದ್ರಿಯ ವರ್ಣನೆ ಇವಲ್ಲದೆ ಇನ್ನು ಸ್ತ್ರೀಪುರುಷರು ತಿಳಿಯಬೇಕಾದ ಅನೇಕ ತರದ ಗುಪ್ತ ರಹಸ್ಯಗಳನ್ನು ೩೦ ಚಿತ್ರಗಳೊಡನೆ ೧೩೦ ಪುಟಗಳಲ್ಲಿ ಕನ್ನಡದಲ್ಲಿ ವಿವರಿಸಿ ಬರೆದಿದೆ. ಬೆಲೆ ೧ಕ್ಕೆ ರೂ ೧ ಟ ೪ ಬೇರೆ.

ಇನ್ನಿತರ ಗ್ರಂಥಗಳು—ಶೃಂಗಾರಕೇಯ ಮರ್ಮ ರೂ ೧, ಬಾಲಶಾಸ್ತ್ರ ೦—೬—೦, ಗೃಹಸ್ಥಾಶ್ರಮ ೧-೮—೦, ರತಿಮನ್ಮಥ ರಹಸ್ಯ ೦-೧೨-೦.

ವಿಳಾಸ: ಕರ್ನಾಟಕ ವಿಜಪ್ತಿ,
ಕೃಷ್ಣಪ್ಪನಾಯಕನ ಬೀದಿ, ಜಿ. ಟಿ. ಮದರಾಸು

BUY ADVERTISED GOODS.

ನಮ್ಮ ಸಾಪ್ತಾಹಿಕ ಕಥೆ:

ಮಿಥ್ಯಾಜೀವನದ ಸತ್ಯಕಥೆಗಳು

(All Rights Reserved)

ಲೇಖಕ —ಶ್ರೀ 'ರಸಿಕರಂಜನ'

"Truth is stranger than Fiction"

೮. "ಮಾಯಾ ಜಾಲ"

ಮೀನಾಕ್ಷಿಗೆ ಇಂದಿನ ದಿನವು ಸಾವಿರದಲ್ಲಿ ಒಂದು ಯಾಕೆ, ಅವಳ ಇಡೀ ಜೀವಮಾನದಲ್ಲೇ ಇಂತಹ ಇನ್ನೊಂದು ದಿನ ಇರದೆನ್ನಲು ಸಂಶಯವೆಲ್ಲಿ? ಅಷ್ಟು ದೊಡ್ಡ, ಅಂತಹ ಘನಸ್ಥ ಹುದ್ದೇದಾರ ಚಂದ್ರಶೇಖರಯ್ಯರ ಮಗಳು ಅವಳನ್ನು ತನ್ನ ಜನ್ಮದಿನೋತ್ಸವಕ್ಕೆ ಆಮಂತ್ರಿಸಿದ್ದಳಲ್ಲ! ಅದರಲ್ಲಿಯೂ ತುಂಗಭದ್ರೆಯು ತನ್ನ ಇತರ ಗೆಳತಿಯರಿಗೆಲ್ಲಾ ಬರೀ ಆಮಂತ್ರಣವನ್ನಷ್ಟೆ ಕೊಟ್ಟಿರುವಾಗ, ತಮಗೆ ಪರಸ್ಥಳವಾದ 'ಈ ಊರ'ಲ್ಲಿ ಒಬ್ಬಳೇ ಸ್ವಜಾತಿಯವಳಾದ ಮೀನಾಕ್ಷಿಗೆ ನೂರುನೂರು ಸಲ ಬರಲೇಬೇಕೆಂದು ಒತ್ತಿ ಒತ್ತಿ ಹೇಳಿ, ಅವಳು ತಪ್ಪಿಸಿಕೊಳ್ಳದಂತೆ, ತನ್ನ ತಂದೆಯ ಮೋಟರ್ ಕಾರನ್ನೇ ಕಳುಹಿಸುವೆನೆಂದಿದ್ದಳು. ನೀವೇ ಹೇಳಿ, ಇಂತಹ ದಿನ ನಿಮ್ಮ ಜನ್ಮಾವಧಿಯಲಿ ಎಷ್ಟು ಸಲ ಬಂದಿರುವುದು?

ನಾಲ್ಕು ಘಂಟೆಗೆ ಜರಗಲಿದ್ದ ಈ ಸಮಾರಂಭಕ್ಕೆ ಹೊರಡಲು ಮೀನಾಕ್ಷಿಯು ಎರಡು ಘಂಟೆಗೇ ಅಣಿಯಾಗತೊಡಗಿದಳು. ಮೊದಲು 'ಕೂದಲನ್ನು ಗುಂಗುರು ಗುಂಗುರಾಗಿಯೂ, ಕಪ್ಪುಕಪ್ಪಾಗಿಯೂ, ಉದ್ದ ಉದ್ದವಾಗಿಯೂ ರಾಶಿರಾಶಿಯಾಗಿಯೂ ಬೆಳೆಸುವ' ಸುಗಂಧಮಯ ಕೇಶರಂಜನ ತೈಲವನ್ನು ತಲೆಗಿಟ್ಟು ಮುಂಗುರುಳು ಕಿವಿಗಳನ್ನು ಮುಚ್ಚುವಂತೆ ಬಾಚಿ, ಜಡೆ ಹೆಣೆದುಕೊಂಡಳು. ಬಳಿಕ 'ಹತ್ತರಲ್ಲಿ ಒಂಭತ್ತು ಮಂದಿ ಸಿನೆಮಾ ನಟಿಯರ ಪ್ರೀತಿಗೆ ಪಾತ್ರವಾಗಿರುವ' 'ಲಕ್ಸ್' ಸಾಬೂನಿನಿಂದ ಮುಖ ತೊಳೆದುಕೊಂಡಳು. ಅನಂತರ ಒಂದು ಸಲ ಪೂರ್ತಿಯಾಗಿ ಮುಗಿಯದಿದ್ದ 'ಪೌಡರ್' ಪೊಟ್ಟಣವನ್ನು ಸಾಕಿಕೊಂಡ ಅದರ ಮೇಲೆ, ನೂರರಲ್ಲಿ ತೊಂಭತ್ತೊಂಬತ್ತು ಮಂದಿ ನವಯೌವನೆಯರ ಆದರದಿಂದ ಪ್ರೋತ್ಸಾಹಿತವಾಗಿರುವ ಸೂಕ್ಷ್ಮವಾದ 'ಫೇಸ್ ಪೌಡರ'ನ್ನು ಬಳಿದು, ಅದರಿಂದೇ 'ಬ್ಲೌಸ'ನ್ನೂ ತೊಟ್ಟುಕೊಂಡಳು. ಮತ್ತೆ ಹಿಮಾಲಯ ಪರ್ವತಶಿಖರದಿಂದ ಕರೆದು ತೆಗೆದು ಕರಡಿಗೆಯಲ್ಲಿ ತುಂಬಿಸಿಟ್ಟ ಹಿಮದಂತಿರುವ "ಸ್ನೋ"ವನ್ನು ಅರ್ಧ ಘಂಟೆಯ ವರೆಗೆ ಮುಖಕ್ಕೆಲ್ಲಾ ಚೆನ್ನಾಗಿ ತಿಕ್ಕಿಕೊಂಡು ಮಾಲೀಸು ಮಾಡಿ, ನೂರ್‌ಜಹಾನಳ ಅಂತಃಪುರದ ಸುಗಂಧ ದ್ರವ್ಯ ಭಂಡಾರದಲ್ಲಿ ಮಿಕ್ಕಿ ಉಳಿದ ಪೀಪಾಯಿಗಳಿಂದ ತೆಗೆದು ಹಂಚಿದ್ದ (ಕ್ರಯಕ್ಕೆ) 'ಸೆಂಟ್'ಗಳನ್ನು ಬಟ್ಟೆಗೂ, ಮೈಗೂ ಅಲ್ಲಲ್ಲಿ ತಾಗಿಸಿಕೊಂಡಳು. ಕೊನೆಯದಾಗಿ, ಈಗಲೋ, ಇನ್ನೊಂದು ಕ್ಷಣದಲ್ಲೋ ಎಂಬಂತೆ ಮರೆಯಾಗಲು ಹೊಂಚುವ ಪ್ರಾಣಚಿಹ್ನೆಯಷ್ಟು ಸೂಕ್ಷ್ಮವಾದ ಒಂದು ಬೊಟ್ಟನ್ನು ಹಣೆಗೆ ಇಟ್ಟುಕೊಂಡು, ಕಾಲಲ್ಲಿ 'ಸ್ಯಾಂಡಲ್'ಗಳನ್ನು ಮೆಟ್ಟುವಷ್ಟರಲ್ಲಿ ತುಂಗಭದ್ರೆ ಕಳುಹಿಸಿದ ಕಾರು ಹೊರಗೆ ಬೀದಿಬಾಗಿಲಲ್ಲಿ "ಪೊಂ' ಪೊಂ'" ಎಂದಿತು.

ಮೀನಾಕ್ಷಿಯು, ಮುಖವನ್ನು ಮೊರದಗಾತ್ರಕ್ಕೆ ಅಗಲಿಸಿ, ಕಾರನ್ನು ಏರುವಾಗ ಆ ದಿನದ ಸಮಾರಂಭಕ್ಕೆ ಐದೇ ನಿಮಿಷ ಉಳಿದಿತ್ತು.

೨

ತುಂಗಭದ್ರೆಯ ಜನ್ಮದಿನಾಚರಣೆಯು ಬಹಳ ಸಂಭ್ರಮದಿಂದ ಜರಗಿತು. ಚಂದ್ರಶೇಖರಯ್ಯರು ಈ ವಿಷಯದಲ್ಲಿ ತನ್ನ ಸ್ಥಾನಕ್ಕಾಗಲಿ, ಮಾನಕ್ಕಾಗಲಿ ಸ್ವಲ್ಪವೂ ಕುಂದು ಬಾರದಂತೆ ನಡೆದರು; ಸಂಗೀತ ಕಛೇರಿ, ಫಲಾಹಾರ ಮುಂತಾದವುಗಳಿಂದ ಅತಿಥಿಗಳೆಲ್ಲರಿಗೂ ತನ್ನ ಯೋಗ್ಯತೆಯನ್ನೂ ಭಾಗ್ಯತೆಯನ್ನೂ ಪ್ರದರ್ಶಿಸಿದರು. ಕತ್ತಲೆಯಾಗುವಾಗ ಎಲ್ಲರೂ 'ಶಹಬಾಸ್' ಎಂದು ತಲೆದೂಗುತ್ತಾ ಮನೆಗೆ ಹಿಂತೆರಳಿದರು.

ಎಲ್ಲರೂ ಎನ್ನುವಾಗ, 'ಮೀನಾಕ್ಷಿ ಹೊರತು' ಎನ್ನಬೇಕಿತ್ತು. ಯಾಕೆಂದರೆ ಅವಳೊಬ್ಬಳು ಮಾತ್ರ, ತುಂಗಭದ್ರೆಯು ಕೇಳಿಕೆಯಂತೆ ಕಾರಿನಲ್ಲೇ ಬಂದವಳು ಕಾರಿನಲ್ಲೇ ಹೋಗುವುದಕ್ಕಾಗಿ, ಕಾದು ನಿಂತಿದ್ದಳು. ಕಾರು ಯಾರೋ ಒಬ್ಬ ಮಹನೀಯರ ಸೇವೆಗೆ ಹೋಗಿದ್ದು, ಇಷ್ಟರಲ್ಲೇ ಬರುವುದರಲ್ಲಿತ್ತು.

ತುಂಗಭದ್ರೆಯು ಮೀನಾಕ್ಷಿಯನ್ನು ಕೂಡಿಕೊಂಡು ಮಾಳಿಗೆಯ ಮೇಲಿನ ತನ್ನ ಕೋಣೆಯಲ್ಲಿ ಕೂತಿದ್ದಳು. ಸಮಯ ಕಳೆಯುವುದಕ್ಕಾಗಿ ಇಬ್ಬರೂ ಏನೇನೋ ಮಾತುಕತೆ ಬೆಳೆಸಿದರು. ಈ ಸಂದರ್ಭದಲ್ಲಿ ಬಂದವರ-ಬಾರದವರ ಟೀಕಾಟಿಪ್ಪಣಿಗಳೆಲ್ಲಾ ಆದುವು. ಎಷ್ಟೋ ಮಂದಿಗೆ ಕಿರೀಟ ಕಟ್ಟಿದರು. ಎಷ್ಟೋ ಕಿರೀಟಧಾರಿಗಳನ್ನು ಸಿಂಹಾಸನಭ್ರಷ್ಟರಾಗಿ ಮಾಡಿದರು. ಹಾಗೆ ಹೀಗೆನ್ನುವಾಗ ಏಳು ಘಂಟೆ ಬಡೆಯಿತು. ಇನ್ನೂ ಕಾರಿನ ವಾರ್ತೆಯಿಲ್ಲ. ತುಂಗಭದ್ರೆಯು ಮೆಲ್ಲಗೆ ಅದರ ಅವಸ್ಥೆ ಏನಾಗಿರುವುದೆಂದು ತಿಳಿದು ಬರುವುದಕ್ಕೆಂದು ಕೆಳಗಿಳಿದು ಹೋದಳು. ಮೀನಾಕ್ಷಿಯು ಅಲ್ಲೇ ಮೇಜಿನಲ್ಲಿ ಬಿದ್ದಿದ್ದ ಒಂದು 'ಪಿಕ್ಚರ್ ಪೋಸ್ಟ್ ಕಾರ್ಡ್ ಆಲ್ಬಮ್' ನೋಡುತ್ತಾ ಕುಳಿತಳು.

ಸ್ವಲ್ಪ ಸಮಯದಲ್ಲೇ ಏನೋ ಶಬ್ದವಾಗಲು ಮೀನಾಕ್ಷಿ ತಲೆಯೆತ್ತಿ ನೋಡಿದಳು. ಒಡನೆ ಹೌಹಾರಿ ಎದ್ದು ನಿಂತಳು. ಎದ್ದ ಭರದಲ್ಲಿ ಕೂತ ಕುರ್ಚಿಯು ತಲೆಕೆಳಗಾಯಿತು. ಕೈಯೊಳಗಿನ ಆಲ್ಬಮ್ ನೆಲವನ್ನು ಚುಂಬಿಸಿತು. ಇದಕ್ಕೆ ಸಾಕಷ್ಟು ಕಾರಣವಾದರೂ ಇರದಿರಲಿಲ್ಲ. ಮೀನಾಕ್ಷಿ ಏಕಾಂಗಿಯಾಗಿದ್ದುದನ್ನು ತಿಳಿದೂ ಚಂದ್ರಶೇಖರಯ್ಯರು ಅಲ್ಲಿಗೆ ಬಂದಿದ್ದರು ಮಾತ್ರವಲ್ಲ, ಕೋಣೆಯ ಬಾಗಿಲನ್ನೂ ಮುಚ್ಚಿ ಕೀಲು ಹಾಕಿದ್ದರು. ಇದಕ್ಕೂ ಸಾಕಷ್ಟು ಕಾರಣವಿದ್ದಿರಬಹುದು.

೩

ಗಡಿಯಾರವು ಎಂಟು ಬಡಿಯುವಾಗ ತುಂಗಭದ್ರೆಯು ತಿರುಗಿ ತನ್ನ ಕೋಣೆಗೆ ಬಂದಳು. ಆಗ ಮೀನಾಕ್ಷಿಯು ಒಬ್ಬಳೇ ಇದ್ದು, ತನ್ನ ಮುಖವನ್ನು ಕೈಬೊಗಸೆಯಿಂದ ಮುಚ್ಚಿಕೊಂಡು ಮೆಲ್ಲನೆ ಬಿಕ್ಕುತ್ತಿದ್ದಳು. ತುಂಗಭದ್ರೆಯನ್ನು ಕಾಣುತ್ತಲೇ ಅವಳು ಆಯಾಸದಿಂದ ಎದ್ದು ನಿಂತು, ಮುಖವನ್ನು ಆಚೆಗೆ ತಿರುಗಿಸಿದಳು. ಅವಳ ಎರಡು ಕಣ್ಣುಗಳಿಂದಲೂ ನೀರು ನಿರರ್ಗಳವಾಗಿ ಸುರಿಯತೊಡಗಿತು.

ತುಂಗಭದ್ರೆಯು ಬಂದು ಅವಳ ಹೆಗಲ ಮೇಲೆ ಕೈಯಿಟ್ಟಳು. ಮೀನಾಕ್ಷಿಯು ಹೆಡೆ ತೆರೆದ ಹಾವಿನಂತೆ, ಬುಸುಗುಟ್ಟುತ್ತಾ ಅವಳ ಕೈಯನ್ನು ಆಚೆಗೆ ಕೊಡಹಿ, ಬಾಗಿಲ ಕಡೆಗೆ ಸಟಸಟನೆ ನಡೆದು ಹೋದಳು.

ತುಂಗಭದ್ರೆಯು, ಅವಳನ್ನು ಹಿಂಬಾಲಿಸಿ, "ಮೀನಾ, ಕಾರು ಬಂದಿದೆ, ಅದರಲ್ಲೇ ಹೋಗು," ಎಂದಳು.

ಮೀನಾಕ್ಷಿಯು, "ಛೀ! ತಾಟಕಿ! ನೀನೋ, ನಿನ್ನ ಕಾರೋ! ಅದನ್ನು ನಂಬಿಯೇ ನನಗೆ ಈ ದಿನ ಈ ಅವಸ್ಥೆ ಬರುವಂತಾಯಿತು. ಇನ್ನೂ ಕಾರೇ?" ಎನ್ನುತ್ತಾ ಹಿಂದೆಮುಂದೆ ನೋಡದೆ ಹೊರಗೆ ಹೋಗಿ, ಬೀದಿಗೆ ಇಳಿದಳು.

ತುಂಗಭದ್ರೆಯು ಬಹಳ ಹೊತ್ತಿನ ವರೆಗೆ ಅವಳ ದಾರಿಯನ್ನೇ ನೋಡುತ್ತಾ ನಿಂತುಬಿಟ್ಟಳು. ಅವಳ ಮುಖದ ಮೇಲಿನಿಂದ ಒಂದು ತರದ ವಿಜಯಹಾಸವು ಮೂಡಿ ಮರೆಯಾಯಿತು. ತಮ್ಮ ಮಾಯಾಜಾಲದಲ್ಲಿ ಸಿಲುಕಿಬಿದ್ದು, ರೆಕ್ಕೆ ಮುರಿದು ಒದ್ದಾಡುತ್ತಾ ಆಸರೆ ಹುಡುಕಿಕೊಂಡು ಹೋಗುವ ಹಕ್ಕಿಯಂತೆ, ಅದೇ ರೀತಿಯಲ್ಲಿ ಬೀಳ್ಕೊಂಡು, ಅದೇ ಹಾದಿಯಾಗಿ ಹೋದ ಇನ್ನು ಎಷ್ಟೋ ಬಡ ನಿಸ್ಸಹಾಯಕ ಪ್ರಾಣಿಗಳ ಛಾಯಾಚಿತ್ರವು ಅವಳ ಮನಸ್ಸಿನ ಕಣ್ಣುಗಳ ಮುಂದಿನಿಂದ ಹಾಯ್ದು ಹೋಯಿತೋ ಏನೋ!

೪

ಚಂದ್ರಶೇಖರಯ್ಯರ ಮಗ ಸುಂದರೇಶನು ಐ. ಸಿ. ಎಸ್. ಪಾಸಾಗಿ ಬಂದಂದಿನಿಂದಲೂ, ಎಷ್ಟೋ ಮಂದಿ ಅತಿರಥ, ಮಹಾರಥರು ಅವನನ್ನು—ತಮ್ಮ ಅಳಿಯನಾಗಿ—ಗೆಲ್ಲಲು ಪ್ರಯತ್ನಿಸಿದರು. ಆದರೆ ಎಲ್ಲರೂ ತಮ್ಮ ಮನೋರಥವನ್ನು ಭಗ್ನ ಮಾಡಿಕೊಂಡೇ ಹೋಗುವಂತಾಯಿತು. ಸುಂದರೇಶನು ಎಳೆಯ ವರ್ಷಗಳ ವರೆಗೆ ತನಗೆ ಬೇಡಿಸಿದ ಸಾವಿರಗಟ್ಟಳೆ ರೂಪಾಯಿ ವರದಕ್ಷಿಣೆಯನ್ನೂ ಅಂಗ್ಯೆಯಲ್ಲಿಟ್ಟು ಊದಿಬಿಟ್ಟನು. ಎಂತೆಂತಹ ರಂಭೆ, ಊರ್ವಶಿಯರನ್ನೂ ಕಣ್ಣೆತ್ತಿ ಸಹ ನೋಡಲು ಒಪ್ಪಲಿಲ್ಲ. ಯಾವುದಕ್ಕೂ, ಯಾರ ಮಾತಿಗೂ ಇನ್ನೂ ಸ್ವಲ್ಪ ಸಮಯ ಹೋಗಲೆಂದೇ ಅವನು ಎನ್ನುತ್ತಿದ್ದನು.

ಮದುವೆಯ ಮಾರ್ಕೆಟಿನಲ್ಲಿ ಅಷ್ಟು ಯೋಗ್ಯ 'ಮಾಲು' ತಯಾರಿರುವಾಗ ಸುಮ್ಮನಿರಲು ಯಾರಿಗೆ ಮನಸ್ಸು ಬರುತ್ತದೆ? ಕೆಲವರು ಅವನ ತಂದೆಯಿಂದಲೂ, ಕೆಲವರು ಅವನ ಹಳೆಯ ಗುರುವಿನಿಂದಲೂ, ಕೆಲವರು ಅವನ ಮೇಲಾಫೀಸರರಿಂದಲೂ, ಕೆಲವರು ಅವನ ಸ್ನೇಹಿತರಿಂದಲೂ ಹೇಳಿಸಿ ನೋಡಿದರು. ಎಲ್ಲರಿಗೂ ಸಿಕ್ಕಿತು ಮಾತ್ರ ಒಂದೇ ಜವಾಬು. ಪ್ರತಿಯೊಬ್ಬರಿಗೂ ತಿಳಿದುಬಂತು ಗಂಟೆಗೆ ಒಂದೇ ಸ್ವರವೆಂದು.

ಇನ್ನೂ ಕೆಲವರ ಭಗೀರಥ ಪ್ರಯತ್ನದ ಬಳಿಕ ಪರ್ವತವು ಪ್ರಸವಿಸಿತು. ತನ್ನೊಡನೆ ಯುರೋಪೀಯ ರೀತ್ಯಾ 'ಕೋರ್ಟ್‌ಶಿಪ್' ನಡೆಯಿಸಿ ಗೆಲ್ಲುವಂತಹವಳನ್ನಾದರೆ ಮದುವೆಯಾಗುವನೆಂದು. ಇದು ಪ್ರಕಟವಾದೊಡನೆ ಪರ್ವತವನ್ನು ಮುತ್ತಿದ ಜನಸ್ತೋಮವೆಲ್ಲಾ ಚೆದರಿ, ಚಲ್ಲಾಪಿಲ್ಲಿಯಾಗಿ, ಅಂಜನ ಹಾಕಿ ಹುಡುಕಿದರೂ ಸಿಕ್ಕದಂತಾಗಿಬಿಟ್ಟಿತು. ಯೋಗ್ಯ ವರನ ಆಶೆಯಿಂದ ತಲೆಕೆಳಗೆ-ಕಾಲು ಮೇಲೆ ಮಾಡಿದವರೆಲ್ಲಾ ತ್ರಿಶಂಕು ಸ್ವರ್ಗವನ್ನು ಬಯಸಲಾರದೇ ಹೋದರು.

೫

ವೆಂಕಟರಾಮಯ್ಯರು 'ಈ ಊರ'ಲ್ಲಿ ಒಳ್ಳೇ ಕಾರುಭಾರಿ ಮನುಷ್ಯ. ಸಂತಾನೋತ್ಪತ್ತಿಯೂ ಯಥೇಷ್ಟವಿತ್ತು. ಅವರ ಹಿರಿಯ ಮಗಳನ್ನು ದೊಡ್ಡ ಸರಕಾರಿ ನೌಕರನೊಬ್ಬನಿಗೆ ಕೊಟ್ಟು ಮದುವೆಯಾಗಿತ್ತು. ಕಿರಿಯ ಇಬ್ಬರು ಹೆಣ್ಣುಮಕ್ಕಳಿಗೂ ಉಚ್ಚತರಗತಿಯ ವಿದ್ಯಾಭ್ಯಾಸ ಕೊಟ್ಟಿದ್ದರು. ಅವರಿಬ್ಬರೂ ಸಾಮಾಜಿಕ ವಿಷಯಗಳಲ್ಲಿ ಬಹಳ ಮುಂದುವರಿದಿದ್ದು ಇನ್ನೂ ಮದುವೆಯಾಗದೇ ಇದ್ದರು. ಸ್ಥಳೀಯ 'ವನಿತಾವಿಹಾರ'(Ladies' Club)ದಲ್ಲಿ ಇವರಿಬ್ಬರೂ ಮುಂದಾಳುಗಳಾಗಿದ್ದು ಊರಿನ ಮಹಿಳೆಯರಿಗೆಲ್ಲಾ ಅನೇಕ ವಿಷಯಗಳಲ್ಲಿ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದರು.

'ಈ ಊರಿ'ಗೆ ಬಂದ ಪ್ರಮುಖ ವ್ಯಕ್ತಿಗಳನ್ನೆಲ್ಲಾ 'ವನಿತಾವಿಹಾರ'ಕ್ಕೆ ಆಮಂತ್ರಿಸಿ, ಅವರಿಂದ ಮಹಿಳಾಲೋಕಕ್ಕೆ ಭಾಷಣಗಳನ್ನು ಕೊಡಿಸಿ, ಜನಜಾಗೃತಿಯನ್ನುಂಟುಮಾಡಲು ಹೆಣಗುವುದು ಅವರ ವಾಡಿಕೆಯಾಗಿತ್ತು. 'ವನಿತಾವಿಹಾರ'ದ ಧನಾಭಾವವನ್ನು ನಿವಾರಿಸುವುದಕ್ಕಾಗಿಯೂ, ಇತರ ಧರ್ಮಕಾರ್ಯಗಳಿಗಾಗಿಯೂ ಅವರ ನಾಯಕತ್ವದಲ್ಲಿ ಎಷ್ಟೋ ನಾಟಕಗಳು, ನಾನಾ ಭಾಷೆಗಳಲ್ಲಿ ಬಹು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿದ್ದುವು. ಇವರಿಂದ ಅಲ್ಲಿಯ ಮಹಿಳಾಲೋಕಕ್ಕೆ ನಾಗರಿಕತೆಯ ಬಹುತರ ಪ್ರಯೋಜನವು ದೊರೆಯುವಂತಾಯಿತು.

ಸುಂದರೇಶನಿಗೆ 'ಈ ಊರಿ'ಗೆ ವರ್ಗವಾಗಲು, ಅವನ ಪ್ರತಿಭೆಯನ್ನು ಕೇಳಿಬಲ್ಲ 'ವನಿತಾವಿಹಾರ'ದವರು ಅವರನ್ನು ಒಂದು ಭಾಷಣ ಕೊಡುವುದಕ್ಕಾಗಿ ಆಮಂತ್ರಿಸಿದರು. ಸುಂದರೇಶನು ಅವರಿಗೆ 'ಹಿಂದೂ ಸ್ತ್ರೀಯರ ವೈಯಕ್ತಿಕ ಸ್ವಾತಂತ್ರ್ಯ'ವನ್ನು ಕುರಿತು ಒಂದು ಉಜ್ವಲವಾದ ಭಾಷಣವನ್ನು ಕೊಟ್ಟನು. ಅದರಲ್ಲಿ ಅವನು ನಮ್ಮೊಳಗಿನ ವಿವಾಹಪದ್ಧತಿಯನ್ನು ತೀವ್ರವಾಗಿ ಖಂಡಿಸಿ ಮಾತಾಡಿದನು. ನಮ್ಮ ಸ್ತ್ರೀಯರಿಗೆ, ತಂತಮ್ಮ ಸ್ವಕೀಯವರಾನ್ವೇಷಣದಲ್ಲಿ ಪೂರ್ಣ ಸ್ವಾತಂತ್ರ್ಯ ಕೊಡುವುದು ಧರ್ಮವೆಂದೂ, ಇದರಿಂದ ಈಗ ನಡೆಯುತ್ತಿರುವ ಎಷ್ಟೋ ಅನಾಹುತಗಳನ್ನು ತಪ್ಪಿಸಬಹುದೆಂದು ಎಲ್ಲರಿಗೂ ಖಚಿತಪಡಿಸಿದನು.

೬

ಸುಂದರೇಶನ ಭಾಷಣವನ್ನು ಕೇಳಿ ವೆಂಕಟರಾಮಯ್ಯರು ಅವನನ್ನು ತಮ್ಮ ಮನೆಗೆ ಕರೆಯಿಸಿ ಒಂದು ಸಂಭ್ರಮದ ಊಟ ಕೊಟ್ಟರು. ಈ ಸಂದರ್ಭದಲ್ಲಿ ಅವರು ಅವನಿಗೆ ತಮ್ಮ ಇಬ್ಬರೂ ಹೆಣ್ಣು ಮಕ್ಕಳ ವೈಯಕ್ತಿಕ ಪರಿಚಯ ಮಾಡಿಕೊಟ್ಟರು.

ಅವರ ಶಿಕ್ಷಣವೂ, ಸ್ವಭಾವವೂ ಸುಂದರೇಶನನ್ನು ತೀವ್ರವೇ ಅವರ ಸ್ನೇಹಿತನನ್ನಾಗಿ ಮಾಡಿಬಿಟ್ಟುವು.

ಅಂದಿನಿಂದ ಸುಂದರೇಶನು ಅವರಲ್ಲಿಗೆ ಆಗಿಂದಾಗ ಬಂದು ಅವರೊಡನೆ ಆಟಪಾಟ ಮುಂತಾದುವುಗಳಲ್ಲಿ ಆಸಕ್ತನಾಗ ತೊಡಗಿದನು.

ಒಂದು ಶುಭದಿನದಲ್ಲಿ ಸುಂದರೇಶನು ವೆಂಕಟರಾಮಯ್ಯನವರೊಡನೆ ಅವರ ನಡುವಿನ ಮಗಳ ಕೈಯನ್ನು ಬೇಡಿ ಪಡೆದನು. ಅಂತೂ ಇಷ್ಟು ಕಾಲ ತಡೆದರೂ, ಅವನ ಮನಸ್ಸಿನಲ್ಲಿದ್ದಂತೆ 'ಕೋರ್ಟ್‌ಶಿಪ್' ಮಾಡಿಕೊಂಡೇ ಹೆಣ್ಣನ್ನು ಪಡೆದನೆಂದು ಬಹಳ ಹಿಗ್ಗಿದನು.

ಸಕಾಲದಲ್ಲಿ ವಾರ್ತೆಯು ಚಂದ್ರಶೇಖರಯ್ಯರಿಗೂ ಮುಟ್ಟಿತು. ಅವರ ಸಂತೋಷಕ್ಕೂ ಮೇರೆಯಿಲ್ಲವಾಯಿತು. ಒಡನೆ ಲಗ್ನವನ್ನೂ ನಿಶ್ಚಯಿಸಿದರು, ಮದುವೆಯ ತಯಾರಿಯೂ ಎರಡೂ ಕಡೆಗಳಲ್ಲಿ ಭರದಿಂದ ಸಾಗಿತು.

೭

ಅಭಿಜನ್ಮಮುಹೂರ್ತದಲ್ಲಿ ಸುಂದರೇಶನ ಮದುವೆಯು ಬಹು ವೈಭವದಿಂದ ನೆರವೇರಿತು. ಎರಡೂ ಕಡೆಯವರ ಅತಿಥಿ ಅಭ್ಯಾಗತರೂ ಆದರ, ಉಪಚಾರ, ಸತ್ಕಾರ ಫಲಾಹಾರಗಳಿಂದ ಸಂತುಷ್ಟರಾಗಿ ಹೊರಟುಹೋದರು. ಹೆಂಗಸರ ವಾದದಿಂದ ಹೊರಟ ವಧೂವರರ ಯೋಗ್ಯತೆಯ ವಿಷಯಕವಾದ ಪರಿಹಾಸ ಸ್ತುತಿವಾದಗಳಿಂದ ಎಲ್ಲರ ಕಿವಿ ಕಿವುಡಾಯಿತು.

ಲಗ್ನದ ಮಂಟಪದಲ್ಲಿ ವೆಂಕಟರಾಮಯ್ಯರು ಚಂದ್ರಶೇಖರಯ್ಯರೊಡನೆ ಕ್ಷೇಮ ಚಿಂತನೆಯ ಮಾತಾಡುತ್ತಿರುವಾಗ, "ನಾವೇನೂ ನಿಮಗೆ ಹೊಸಬರಲ್ಲ. ನೀವು ಈ ಊರಲ್ಲಿ ಹುದ್ದೆಯ ಮೇಲಿರುವಾಗ ನನ್ನ ಅಳಿಯನೂ ಆಫೀಸರಾಗಿ ಕೆಲಸದಲ್ಲಿದ್ದನು. ನನ್ನ ಹುಡುಗಿಯಂತೂ ನಿಮಗೆ ಪರಿಚಿತಳೇ ಆಗಿರುವಳಂತೆ. ಅವಳೂ ಆ ವರ್ಷ ರಜೆಯ ಸಮಯದಲ್ಲಿ ನನ್ನ ಅಳಿಯನಲ್ಲಿಗೆ ಹೋಗಿ ನಿಂತಿದ್ದಳು. ನಿಮ್ಮ ಮಗಳಿಗೂ ಅವಳಿಗೂ ಸ್ನೇಹವಾಗಿ ನಿಮ್ಮಲ್ಲಿಗೂ ಆಗಾಗ ಹೋಗುತ್ತಿದ್ದಳಂತೆ," ಎಂದಿದ್ದರು.

ಚಂದ್ರಶೇಖರಯ್ಯರು, ಹಾಗಾದರೆ ಈ ಹುಡುಗಿ ಯಾರಿರಬಹುದೆಂದು ಯೋಚಿಸುತ್ತಾ ಇದ್ದರು.

ಲಗ್ನವಾದ ಮೇಲೆ ವಧೂವರರು ವಾಡಿಕೆಯಂತೆ ತಂದೆತಾಯಿಂದಿರ ಕಾಲಿಗೆ ಎರಗುವುದಕ್ಕೆ ಮುಂದೆಬಂದರು. ವರನು ತನ್ನ ತಂದೆಯ ಕಾಲಿಗೆ ಎರಗಿ ಆಶೀರ್ವಾದ ಪಡೆದು ತಾಯಿಯ ಕಾಲಿಗೆ ಎರಗುವುದಕ್ಕಾಗಿ ಅತ್ತ ಸರಿದನು. ವಧುವೂ ಅವನನ್ನು ಅನುಸರಿಸಿ ತನ್ನ ಮಾವನ ಕಾಲಿಗೆ ಎರಗಿ ಎದ್ದಳು. ಅವಳನ್ನು ಆಶೀರ್ವದಿಸಲು ಕೈಯೆತ್ತುವಾಗ ಚಂದ್ರಶೇಖರಯ್ಯರ ದೃಷ್ಟಿಯು ಅವಳ ಮುಖದ ಕಡೆಗೆ ಸರಿಯಿತು.

(೧೩ನೇ ಪುಟವನ್ನು ನೋಡುವುದು)

ಸ್ತನೋಸ್ತೇಧಃ

STHANO STHEDAH — THE MALAYALA OUSHADHA CO. POST CHALAPURAM MALABAR

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವು—ಅವುಗಳು ಉಬ್ಬಿ ಗೋಲಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯಿರಿ. ಇಲ್ಲವಾದರೆ ಹಣಪರತ.

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ ಸ್ತನೋಸ್ತಧಾದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದಾರುಣವಾದ ಚಿಂತೆಯಿಂದಲೂ, ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲು ಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಪುಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲುದು. ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪುಷ್ಟಿಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋಸ್ತಧ ನಂಬ್ರ 20 (ತಿನ್ನುವ ಔಷಧ) ರೂ. 3. ನಂಬ್ರ 21. (ಹೊರಗೆ ಲೇಪಿಸುವ ಮದ್ದು) ರೂ. 3.

ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ.

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು.

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.

1. ಮುಟ್ಟಿನದೋಷ, 2. ಸಂತತಿ ಪ್ರತಿಬಂಧಕ, 3 ಧಾತುಪುಷ್ಟಿ 4 ಲಿಂಗವೃದ್ಧಿ, 5. ಸ್ತ್ರೀರೋಗ, 6. ಕ್ಷಯ ಸಂಹಾರಿ, 7 ವಾತರೋಗ.

ಇಂಡಿಯನ್ ಎಂಪಾಯರ್ ಪ್ರದರ್ಶನ, ಬೆಂಗಳೂರು ಸಿಟಿ.

ಬರುವ ಏಪ್ರಿಲ್ ತಾ. 10ರಿಂದ 25ರ ವರೆಗೆ

ಎಲ್ಲರೂ ನಮ್ಮೊಡನೆ ಸಹಕರಿಸುವದಾಗಿ ಕೋರಿಕೆ.

ನೀವು ಇದರಲ್ಲಿ ಹೇಗೆ ಭಾಗವಹಿಸಬಹುದು?

ನಿಮ್ಮ ಸಾಮಾನುಗಳನ್ನು ತಂದು ನಮ್ಮ ಪ್ರದರ್ಶನೆವನ್ನು ಯಶಸ್ವಿಯನ್ನಾಗಿ ಮಾಡಬಹುದು.

ಆಗ ನಡೆಯುವ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಬರಬಹುದು.

ಆಗ ಜರಗಲಿರುವ ಪಂದ್ಯಾಟಗಳಲ್ಲಿ ಸೇರಿ ನಮ್ಮ ಕಾರ್ಯವನ್ನು ಚಂದಗಾಣಿಸಬಹುದು.

ಎಲ್ಲಾ ವಿಷಯಗಳಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿ.

ಕಾರ್ಯದರ್ಶಿ, ನಂ. 1 ಆಲ್ಬರ್ಟ ವಿಕ್ಟರ್ ರೋಡ್, ಬೆಂಗಳೂರು ಸಿಟಿ.

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ರಾಶಿ ಅಕ್ಕಿ ...	3—4	3—10
ಹೊಸ ಮುಸ್ಕಿ ...	3—10	4—1
ಗುಡ್ಡು ಸುಗ್ಗಿ ...	3—8	3—12
ಊರ ಅವ್ವಲ್ ಬೆಳ್ತಿಗೆ ...	4—0	4—8
ರಂಗೂನು ಬೆ. ಗೋ. ೧ಕ್ಕೆ...	6—4	7—0
ಎಲ್ಲೂರು ಬೆ. ಮು. ೧ಕ್ಕೆ...	4—4	4—8
ಗೋದಿ ಗೋಣಿ ೧ಕ್ಕೆ ...	8—8	10—4
ತೊಗರಿ ಗೋಣಿ ೧ಕ್ಕೆ ...	9—0	9—8
ಹುರುಳಿ ಗೋಣಿ ೧ಕ್ಕೆ	5—4	6—0
ಕಡಲೆ ಗೋಣಿ ೧ಕ್ಕೆ	7—4	9—8
ತೊಗರಿಬೇಳೆ ಗೋಣಿ ೧ಕ್ಕೆ...	11—0	15—8
ಉದ್ದು ಗೋಣಿ ೧ಕ್ಕೆ ...	9—8	10—0
ಹೆಸರು ಗೋಣಿ ೧ಕ್ಕೆ	9—4	9—12
ಊರುಬೆಲ್ಲ ಖಂಡಿ ೧ಕ್ಕೆ ...	30—0	35—0
ಉಪ್ಪು ಗೋಣಿ ೧ಕ್ಕೆ ...	4—8	4—8
ಕೊಬ್ರಿ ಖಂಡಿ ೧ಕ್ಕೆ ...	60—0	70—0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	28—0	29—0
ಎಳ್ಳಿಂಡಿ ಖಂಡಿ ೧ಕ್ಕೆ	33—12	35—0
ಕೊಬ್ರಿ ಎಣ್ಣೆ ಮಣ ೧ಕ್ಕೆ...	5—0	6—0
ಎಳ್ಳೆಣ್ಣೆ ಮಣ ೧ಕ್ಕೆ ...	7—0	7—0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ...	6—5	6—5
ಮೋರಿಸ ಸಕ್ಕರೆ ಮು. ೧ಕ್ಕೆ...	3—9	3—9
ಮೆಣಸು ...	2—8	4—0
ಸಾಸಿವೆ ಮುಡಿ ೧ಕ್ಕೆ	5—8	6—0
ಕಾಳುಮೆಣಸು ಖ. ೧ಕ್ಕೆ ...	102—8	105—
ಯೇಲ್ಲಿಬೀಜ ಮುಡಿ೧ಕ್ಕೆ...	38—0	39—0
ಗೇರುಬೀಜ ಮು. ೧ಕ್ಕೆ ...	4—6	4—8
ಕಬ್ಬಿಣ ಖಂಡಿ ೧ಕ್ಕೆ ...	35—0	37—8
ತಾಂಬ್ರತಗಡು ಮ ೧ಕ್ಕೆ...	9—12	9—14
ತಾಂಬ್ರಪಾತ್ರೆಗಳು ಮು.೧ಕ್ಕೆ	12—8	14—0
ಬೆಳ್ಳಿ ಸೇರು ೧ಕ್ಕೆ ...	17—8	18—0
ಹಿತ್ತಾಳೆ ತಗಡು ಮು. ೧ಕ್ಕೆ...	10—0	10—
ಪವನು ೧ಕ್ಕೆ ...	22—8	22—8
ಹುಣಸೆ ಹುಳಿ ಖಂಡಿ ೧ಕ್ಕೆ	20—0	25—0
ನೇಟಿವ್ ಕಾಫಿ ಖಂಡಿ ೧ಕ್ಕೆ	145—0	150—4
ಪ್ಲಾಂಟೇರ ಕಾಫಿ ಖಂಡಿ ೧ಕ್ಕೆ..	185—0	190—0
ಮಡಿಕೇರಿ ಏಲಕ್ಕಿ .	25—0	26—8

Shiromani Narayanacharya & Co.,

Silk Lace & Cloth Manufacturers

Choukhamba Benares City

THIS MAN
OUR CUSTOMER

ಕೃಷ್ಣರಾಯರು:—ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು. ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು. ಅದೇ ನಮೂನೆಯ ಶೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು.

ಆನಂದರಾಯರು:—ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ, ಸಾಕಾಗಿ, ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ.

ಕೃಷ್ಣರಾಯರು:—"ಅದರ ಕ್ರಯವೆಷ್ಟು?"

ಆನಂದರಾಯರು:—ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಿಮೆ ದರದಲ್ಲಿ ಸಿಕ್ಕಿತು. ತಾವು ಸಹ ಅಲ್ಲಿಗೆ ಬರೆದು ತರಿಸಿರಿ. ಕ್ರಯಕ್ಕೆ ತಕ್ಕ ಮಾಲು ಖಂಡಿತ ಇರಿ, ರಂಗು ಮಾಸಲಾಗದ ಶೀರೆಗಳು ಸಿಗುತ್ತವೆ. 18 ಮೊಳ ಉದ್ದ 2¼ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ. ಪದಲು ಬುಟ್ಟಿ ಇರುವುದು 18 ಮೊಳ ಶೀರೆ 1ಕ್ಕೆ ರೂ. 45ರಿಂದ 150ರ ವರೆಗೆ. 16 ಮೊಳ ಪದಲು ಸಹ ಶೀರೆ 1ಕ್ಕೆ ರೂ. 10ರಿಂದ 55ರ ವರೆಗೆ. ರವಿಕೆ ಕಣಕ್ಕೆ ರೂ 1—8—0ರಿಂದ 4ರ ವರೆಗೆ. ಬುಟ್ಟಿಹಾಕಿದ ರವಿಕೆ ಕಣ 1ಕ್ಕೆ ರೂ. 3ರಿಂದ 10ರ ವರೆಗೆ. 8 ಮೊಳದ ಸರಮುಡಿ 1ಕ್ಕೆ ರೂ. 7ರಿಂದ 15ರ ವರೆಗೆ. 8 ಮೊಳದ ಜರಿ ಮುಡಿ 1ಕ್ಕೆ ರೂ. 10ರಿಂದ 35ರ ವರೆಗೆ. 5 ಮೊಳದ ಪಮರಿ 1ಕ್ಕೆ ರೂ. 4ರಿಂದ 16ರ ವರೆಗೆ, 6 ಮೊಳದ ಪಮರಿ 1ಕ್ಕೆ ರೂ. 6ರಿಂದ 35ರ ವರೆಗೆ. ಬೇರೆಯೆಲ್ಲಾ ತರದ ಮಾಲುಗಳ ಕ್ರಯದ ಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.

ಅಲಭ್ಯ ಲಾಭ! ಸುವರ್ಣ ಸಂದರ್ಭ!

ಪ್ರಥಮ ಬಹುಮಾನ ರೂ. 5000 ಎರಡನೇ ಬಹುಮಾನ ರೂ. 2500

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

"ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ"

ತೆಗೆಯುವ ತಾರೀಕು 3-6-1936. ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ.

ಸೋಡ್ತಿಯ ಮೊಬಲಗು: ರೂ. 80,000.

ಒಟ್ಟು ಬಹುಮಾನಗಳ ಸಂಖ್ಯೆ: 1778. ಮೌಲ್ಯ ರೂ. 20,000.

ಸಂಪೂರ್ಣ ಪುಸ್ತಕಗಳನ್ನು ಮಾರುವವರಿಗೆ ಯಾ ಕೊಂಡುಕೊಳ್ಳುವವರಿಗೆ ವಿಶೇಷ ಬಹುಮಾನಗಳಿವೆ.

ಸಂಪೂರ್ಣ ಪುಸ್ತಕಗಳನ್ನು ಮಾರಾಟ ಮಾಡುವವರಿಗೆ ಪ್ರತ್ಯೇಕ ನಗದಿ ಕಮಿಶನ್ ಕೂಡಾ ಇದೆ.

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಟಿಕೇಟು ಪುಸ್ತಕಗಳ ಮಾರಾಟಕ್ಕಾಗಿ ದಕ್ಷರೂ ಉತ್ಸಾಹಿಗಳೂ ಆದ ಏಜಂಟರು ಬೇಕಾಗಿದೆ.

ಹೆಚ್ಚಿನ ವಿವರಗಳಿಗೆ ಮತ್ತು ಪುಸ್ತಕಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಮೆನೇಜರ್— ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

NOTICE.

In the Court of the District Munsiff of Mangalore.

Small Cause Suit No 1209/1935

Between—

Vithalji Madhavji Plaintiff.

and

1 Mulya Thimmappayya.
2. Mulya Keshava Bhatta—Residing at Vittla Kasba, Puttur Taluk—Defendants.

Is hereby given that the above suit filed by Plaintiff against the defendants for recovery of Rupees 286—15—6 and future interest and costs of suit is posted to 20-3-1936 at 11 A M, for hearing before the above court. The 1st defendant may appear in person or by Pleader on or before the said date and contest the suit, failing which the same will be heard and decided in his absence.

Mangalore 5—3—'36 **B. Vaikunta Baliga,** VAKIL FOR PLAINTIFF.

ಹೊಸ ನಮೂನೆ! ಹೊಸ ನಮೂನೆ!

New Design

ಶ್ರೀ ಶೃಂಗೇರಿ ಜಗದ್ಗುರುಗಳಾದ

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಮತ್ತು

ಕರಕಮಲಸಂಜಾತರಾದ

ಶ್ರೀಮದಭಿನವ ವಿದ್ಯಾತೀರ್ಥ ಸ್ವಾಮಿಗಳವರ

10 × 16" ಸೈಜಿನಲ್ಲಿ ಸುಂದರವಾದ ಫೋಟೋಗಳು ಕಲ್ಕತ್ತ ಲಕ್ಷ್ಮೀ ವಿಲಾಸ ಪ್ರೆಸ್ಸಿನಲ್ಲಿ 60 ಪೌಂಡ್ ಇಂಗ್ಲಿಷ್ ಆರ್ಟ ಪೇಪರಿನಲ್ಲಿ 6 ಬಣ್ಣಗಳಲ್ಲಿ ಅಚ್ಚಾಗಿರುತ್ತೆ. 1 ಡಜನ್ ಕಾಟಗಳಿಗೆ ಬೆಲೆ ರೂ. 3. ಕಾಲುಭಾಗ ಅಡ್ವಾನ್ಸು ಸಹಿತ ಆರ್ಡರ್ ಕೊಡುವವರಿಗೆ ಮೇಲ್ಕಂಡ ಗುರುಶಿಷ್ಯರು ಮತ್ತು ಶ್ರೀ ಗಣೇಶ ಶ್ರೀಮಾನ್ ಮೈಸೂರು ಮಹಾರಾಜರವರು ವಗೈರೆ ಫೋಟೋಗಳಿರುವ 1936ನೇ ಇಸವಿಯ ಕ್ಯಾಲೆಂಡರು ಒಂದು. ಪ್ಯಾಕಿಂಗ್ ಮತ್ತು ಪೋಸ್ಟೇಜು ಫ್ರೀಯಾಗಿ ಕಳಿಸಲ್ಪಡುತ್ತೆ. ಮೇಲ್ಕಂಡ ಪ್ರೆಸ್ಸಿನಲ್ಲಿ ಅಚ್ಚಾದ ಇತರ ಫೋಟೋಗಳೂ ಸಹ ದೊರೆಯುತ್ತೆ.

Sree Sharada Frame Works,
Sringeri—Kadur Mysore State.

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಫಾಲ್ಗುಣ ಬ॥ ೬ ಶನಿವಾರದಿಂದ ಫಾಲ್ಗುಣ ಬ॥ ೧೨ ಶುಕ್ರವಾರದ ವರೆಗಿನ ಪಂಚಾಂಗ. (೧೯೩೬ನೇಯ ಮಾರ್ಚ ಸುಗ್ಗಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಹಬ್ಬ
14	ಶನಿ	೬	೪೮	ಅನುರಾಧ	೫೫	೧	
15	ರವಿ	೭	೪೯	ಜ್ಯೇಷ್ಠ	೫೭	೨	
16	ಸೋಮ	೮	೪೯	ಮೂಲ	೫೮	೩	
17	ಕುಜ	೯	೪೭	ಪೂ. ಷಾಢ	೫೯	೪	
18	ಬುಧ	೧೦	೪೫	ಉ. ಷಾಢ	೫೭	೫	
19	ಗುರು	೧೧	೪೨	ಶ್ರವಣ	೫೫	೬	
20	[illegible]	[illegible]	[illegible]	[illegible]	[illegible]	[illegible]	

'ಸ್ವದೇಶಾಭಿಮಾನಿ'

ವಾರಪತ್ರಿಕೆಗೆ

ಲೊಕಾರ್ನೊ ಒಪ್ಪಂದವು ಕೊನೆಗೊಂಡಿತು.

(ಲೊಕೊರ್ನೊ ಒಪ್ಪಂದವು ಕಳೆದ ಮಹಾ ಯುದ್ಧದ ನಂತರ ವಾರ್ಸೆಲಿ ಸಂಧಿಯೊಂದಿಗೆ ಚನೆಯಾದುದು ಇದು ಜರ್ಮನಿ, ಬೆಲ್ಜಿಯಮ್, ಫ್ರಾನ್ಸು ಮತ್ತು ಬ್ರಿಟನು ಇವರೊಗೆ ಪರಸ್ಪರ ಭರವಸೆಯುಂಟಾಗುವ (ಶಾಂತಿ ಚಾರದಲ್ಲಿ) ಶರ್ತಗಳಿಂದ ಕೂಡಿರುತ್ತದೆ ದಲ್ಲದೆ ಈ ಒಪ್ಪಂದದಲ್ಲಿ ಜರ್ಮನಿಯ ತ್ತಲಿರುವ ಕೆಲವು ಸಣ್ಣ ಪ್ರದೇಶಗಳು ಕೂಡಿವೆವು ಈ ಒಪ್ಪಂದಕ್ಕೆ ಬ್ರಿಟನರು ಮತ್ತು ಟೇಲಿಯಾನರು ಜಾಮೀನುದಾರರಾಗಿದ್ದರು, ಈ ಒಪ್ಪಂದದಿಂದ ಜರ್ಮನ್, ಬೆಲ್ಜಿಯಮ್ ಡಿಯಲ್ಲಿಯೂ, ಜರ್ಮನ್ ಫ್ರೆಂಚ್ ಗಡಿಯ ಯೂ ಯಾವ ತರದ ದಂಡ ಯೋಜನೆಗಳು ಡೆಯಬಾರದೆಂದೂ, ಈ ಒಪ್ಪಂದಕ್ಕೆ ಸಹಿ ಹಾಕಿದ ಜನಾಂಗಗಳು ರಕ್ಷಣಾ ಕಾರ್ಯಕ್ಕೆ ನಹ ಇತರ ಯಾವ ಕಾರಣಗಳಿಂದಲೂ ಯುದ್ಧ ಮಾಡಬಾರದೆಂಬ ನಿರ್ಬಂಧಗಳು ಹಾಕಲ್ಪಟ್ಟಿದ್ದುವು ಇದರ ಶರ್ತಗಳನ್ನು ಮುರಿದವರು ಜನಾಂಗ ಸಭೆಯ ಇತ್ಯರ್ಥದ ಮೇಲೆ ಹೊಂದಿಕೊಂಡಿರುವ ಪ್ರಾಯಶ್ಚಿತ್ತಕ್ಕೆ ದ್ಧರಿರಬೇಕಾಗಿ ಗೊತ್ತಾಗಿತ್ತು ಈ ವಾರ್ಸೆಲಿ ಸಂಧಿಯೂ ಈ ಲೊಕೊರ್ನೊ ಒಪ್ಪಂದದಿಂದ ಜರ್ಮನಿಯವರು ರ್‍ಹೈನ್ ನದಿಯ ಪೂರ್ವದ ತೀರು ಪ್ರದೇಶವನ್ನು ಸಂಗ್ರಾಮಿಕವಾಗಿ ಮಾಡ ಬಾರದಾಗಿತ್ತು ದಂಡ ಯೋಜನೆಗೆ ಒಳ ಗಾದ ಎಲ್ಲಾ ತರದ ಕೋಟೆ ಕೊತ್ತಲಗಳನ್ನು ಕೆಡ ವಬೇಕಾಗಿತ್ತು)

ಈ ಮೇಲಿನ ಒಪ್ಪಂದವನ್ನು ಜರ್ಮನಿಯು ಈಗ ಮುರಿದಿರುತ್ತದೆ ತನ್ನ ಈ ವರ್ತನೆಯನ್ನು ಇತರ ಎಲ್ಲಾ ಜನಾಂಗಗಳಿಗೆ ತಿಳಿಸುವಂತೆ ಜರ್ಮನಿಯಲ್ಲಿರುವ ಇತರ ಜನಾಂಗಗಳ ಪ್ರತಿನಿಧಿಗಳಿಗೆ ತಾನು ಮೇಲಿನ ಒಪ್ಪಂದವನ್ನು ನಿರಾಕರಿಸಿದ್ದೇವೆಂದೂ ಅದಕ್ಕೆ ಕಾರಣಗಳೂ ಇನ್ನೊಂದು ಯೋಗ್ಯ ಒಪ್ಪಂದಕ್ಕೆ ತನ್ನ ಶರ್ತಗಳೂ ಕೂಡಿದ ಒಂದು ಪ್ರಕಟಣಾ ಪತ್ರಗಳನ್ನು ಕೊಡಲಾಗಿದೆ ಕೆಳಗಿನದು ಜರ್ಮನಿಯ ಏಕಾಧಿಪತಿಯಾದ ಹಿಟ್ಲರನ ಪ್ರಕಟಣಾ ಪತ್ರವಾಗಿರುತ್ತದೆ

ಫ್ರಾನ್ಸು-ರಷ್ಯಾ ಒಪ್ಪಂದದ ದೆಸೆಯಿಂದ ಜರ್ಮನಿಯು ಲೊಕೊರ್ನೊ ಒಪ್ಪಂದವನ್ನು ನಿರಾಕರಿಸುತ್ತದೆ

ಅದರ ರ್‍ಹೈನ್ ನದಿಯ ಪ್ರದೇಶದಲ್ಲಿ ದಂಡ ಯೋಜನೆಗಳನ್ನು ಮಾಡಬಾರದಾಗಿರುವ ಶರ್ತದಿಂದ ನಾವು ಹೊರಗಾಗಿರುತ್ತೇವೆ

ಫ್ರಾನ್ಸು ಮತ್ತು ಬೆಲ್ಜಿಯಮ್ ತಮ್ಮ ದೇಶದ ಕೆಲವು ನಿಯಮಿತ ಪ್ರದೇಶಗಳನ್ನು ಅಸಂಗ್ರಾಮಿಕವಾಗಿ ಮಾಡುವುದಾದರೆ, ತಾವೂ ಅದೇ ರೀತಿಯಲ್ಲಿ ವರ್ತಿಸಲು ಸಿದ್ಧರಿದ್ದೇವೆ

೨೫ ವರ್ಷಗಳ ತನಕ ಯುದ್ಧ ಸನ್ನಾಹಕರಾಗುವುದಿಲ್ಲವೆಂದು ಒಂದು ಕರಾರಿಗೆ ಸಹಿ ಹಾಕಲು ನಾವು ಸಿದ್ಧರಿದ್ದೇವೆ ಆದರೆ ಇದಕ್ಕೆ ಬ್ರಿಟನು ಮತ್ತು ಇಟೇಲಿ ಜಾಮೀನುದಾರರಾಗತಕ್ಕದು

ಈ ಸಂಧಿಯೊಳಗೆ ಹೊಲ್ಲೆಂಡನ್ನು ಕೂಡಿಸಿಕೊಳ್ಳಲು ಜರ್ಮನಿಗೆ ಆಕ್ಷೇಪಗಳಿಲ್ಲ

ರಾಜಿಯಿಂದ ವಸಾಹತುಗಳ ಪ್ರಶ್ನೆಯು ಅತೀ ಬೇಗನೇ ಇತ್ಯರ್ಥವಾಗುವುದಾಗಿ ಜರ್ಮನಿಯು ಕೋರುತ್ತದೆ ವಸಾಹತುಗಳ ಪ್ರಶ್ನೆಯು ಯೋಗ್ಯರೀತಿಯಲ್ಲಿ ತೀರ್ಮಾನವಾಗತಕ್ಕದು

ಮೇಲಿನ ಸಲಹೆಗಳಿಗೆ ಎಲ್ಲರೂ ಸಮ್ಮತಿಗಳಾಗುವುದಾದರೆ ಮತ್ತು ಜರ್ಮನಿಯ ಮೇಲೆ ಕಳೆದ ಮಹಾಯುದ್ಧದ ನಂತರ ಜ್ಯಾರಿಯಾದ ಶರ್ತಗಳು ಜನಾಂಗ ಸಭೆಯಿಂದ ತೆಗೆಯುವುದಾದರೆ ಜರ್ಮನಿಯು ಮತ್ತೊಮ್ಮೆ ಜನಾಂಗ ಮಂಡಳದ ಸದಸ್ಯನಾಗಲು ಸಿದ್ಧವಿದೆ

ಫ್ರೆಂಚರಿಗೂ ರಷ್ಯಾಕ್ಕೂ ನಡೆದ ಒಪ್ಪಂದದಿಂದಲೂ ಮತ್ತು ಫ್ರೆಂಚರು ಚೆಕೊಸ್ಲೋವೆಕಿಯಾದೊಡನೆ ಮಾಡಿದ ಕೆಲವು ಒಪ್ಪಂದಗಳು ಮೇಲಿನ ಒಪ್ಪಂದಕ್ಕೆ ವಿರುದ್ಧವಾಗಿವೆ. ಈ ಒಪ್ಪಂದಗಳು ಶಾಂತಿಭಂಗಕ್ಕೆ ಕಾರಣಗಳು. ಎಂಬ ಏಳು ಶರ್ತಗಳು ಹಿಟ್ಲರನ ಪ್ರಕಟಣೆಯಲ್ಲಿದ್ದುವು.

ಹಿಟ್ಲರನ ಪ್ರಚಂಡ ಭಾಷಣ

ಬಹಳ ವೈಭವದಿಂದ ಕೂಡಿದ ಜರ್ಮನಿಯ ರೈಚ್‌ಸ್ಟ್ಯಾಗಿನ ಮುಂದೆ ಹಿಟ್ಲರನು ಭಾಷಣ ಮಾಡಿದನು ಕಳೆದ ಮಹಾಯುದ್ಧದ ನಂತರ ಇದೊಂದು ಫ್ರಾನ್ಸಿಗೆ ಜರ್ಮನಿಯ ಆಹ್ವಾನವಾಗಿರತ್ತದೆ ಜರ್ಮನಿಯು ಶಸ್ತ್ರಾರೂಢರಾದುದು ಯುರೋಪಿನ ಶಾಂತ ಭಂಗಕ್ಕಲ್ಲ ಯುರೋಪಿನಲ್ಲಿ ಮಹಾ ಪ್ರಶ್ನೆಯ ಯೋಗ್ಯ ಇತ್ಯರ್ಥಕ್ಕಾಗಿ ಸೋವಿಯಟರನ್ನು ಖಂಡಿಸಿ ರಷ್ಯಾ ಫ್ರಾನ್ಸು ಒಪ್ಪಂದವನ್ನು ದೂಷಿಸಲಾಯಿತು ಲೊಕೊರ್ನೊ ಪಕ್ಷದ ಜನಾಂಗಗಳಿಗೆ ಕಳುಹಿಸಿಕೊಟ್ಟ ಪ್ರಕಟಣಾ ಪತ್ರವು ಇಲ್ಲಿ ವಿವರಿಸಲಾಯಿತು. ರ್‍ಹೈನ್ ನದಿಯ ಪ್ರದೇಶದಲ್ಲಿ ದಂಡಯೋಜನೆಗಳನ್ನು ಮಾಡುವುದನ್ನು ಪ್ರಕಟವಾಯಿತು ಕೊನೆಗೆ ರಾಷ್ಟ್ರೀಯ ಗೌರವವನ್ನು ಕಾಯ್ದುಕೊಳ್ಳಲು ಸವಸ್ವ ಜರ್ಮನಿಯು ಸಿದ್ಧವಿದೆಯೆಂದೂ, ಈ ವಿಚಾರದಲ್ಲಿ ಇತರ ಜನಾಂಗಗಳಿಗೆ ಬಗ್ಗುವ ಬದಲಾಗಿ ಪ್ರಾಣತ್ಯಾಗ ಮಾಡಲೂ ಸಿದ್ಧವಿದ್ದೇವೆಂದೂ ರ್‍ಹೈನ್ ನದಿಯ ಪ್ರದೇಶಕ್ಕೆ ಹೋಗುವ ಸೇನಾ ದಳದೊಡನೆ ಭೀಷ್ಮ ಪ್ರತಿಜ್ಞೆಯನ್ನು ಮಾಡಿ, ಭಾಷಣವನ್ನು ಕೊನೆಗೊಳಿಸಿದನು

"ಸಂಧಿ ಶರ್ತಗಳು, ದ್ವೇಷದಿಂದಲೂ, ಭಯದಿಂದಲೂ ಮಾಡಿದ್ದಾಗಿವೆ ಯೋಗ್ಯ ರಾಜಕೀಯ ರೀತಿಯವುಗಳಲ್ಲ ಹತ್ತಿರವಿರುವ ಜನಾಂಗಗಳೊಡನೆ ಶಾಶ್ವತವಾದ ವೈಕ್ರಿಯಿಂದಿರಲು, ಇವರಲ್ಲಿ ಯೋಗ್ಯ ಅಡಿಕಟ್ಟಿಲ್ಲ ಜರ್ಮನಿಯು ಎಂದಿಗೂ ಯುರೋಪಿನ ಶಾಂತಿ ಭಂಗ ಮಾಡದು. ಆದರೆ, ಯುರೋಪಿನ ಈಗಿನ ಪ್ರಶ್ನೆಯು ಒಳ್ಳೆ ಯೋಗ್ಯ ರೀತಿಯಲ್ಲಿ ಇತ್ಯರ್ಥವಾಗಬೇಕು ೬೬ ಮಿಲಿಯ ಜರ್ಮನಿಯರಿಗೆ ಫ್ರೆಂಚ ಮತ್ತು ಬ್ರಿಟಿಷರಿಗಿರುವಂತೆ ಸಲಹೆಗಳು ಬೇಡವೆ?"

ಅಂದಿನ ಸಭೆಯು ಹಿಟ್ಲರನಿಗೆ ಜಯ ಘೋಷಗಳಿಂದ ಮುಕ್ತಾಯವಾಯಿತು ಈ ತಿಂಗಳ ಅಂತ್ಯದಲ್ಲಿ ಜರ್ಮನಿಯು ಹಳೆ ಸರಕಾರವು ರದ್ದಾಗಿ ಹೊಸ ಸರಕಾರವು ಚುನಾಯಿಸಲ್ಪಡುವುದು.

ಜರ್ಮನಿ ಸೇನಾ ಮಂಡಳಗಳು ರ್‍ಹೈನ್ ಪ್ರದೇಶವನ್ನು ಸೇರಿರುತ್ತವೆ

ಮೇಲಿನ ಪ್ರಕಟಣೆ ಮೇರೆಗೆ, ಜರ್ಮನಿ ಸೈನಿಕರು ರ್‍ಹೈನ್ ನದಿಯ ಪ್ರದೇಶವನ್ನು ಪ್ರವೇಶಿಸಿದರು. ಇವರನ್ನು ಅಲ್ಲಿನ ನಿವಾಸಿಕರು ಜಯಘೋಷಗಳಿಂದಲೂ, ಬಹಳ ಆನಂದದಿಂದಲೂ, ಸ್ವಾಗತೀಕರಿಸಿದರು ಯುದ್ಧ ವಿಮಾನಗಳು, ಈ ಪ್ರದೇಶದ ಮೇಲೆ ಹಾರಾಡಿದವು ರ್‍ಹೈನ್ ನದಿಯ ಪ್ರದೇಶದ ಕೊಲೋನ್ ಡ್ಯುಸಲ್‌ಡೊರ್ಫ ಫ್ರಾಂಕ್‌ಫರ್ಟ್ ಮತ್ತು ಮೆನ್ನಹೀಮು, ಈ ನಗರಗಳಲ್ಲೆಲ್ಲಾ ಮತ್ತೊಮ್ಮೆ ಸೇನಾಬಲವು ಶೇಖರಿಸಲ್ಪಟ್ಟಿದೆ ಅಲ್ಲಲ್ಲಿ ರಕ್ಷಣೆಯ ಕೋಟೆಕೊತ್ತಳಗಳು ನಿರ್ಮಾಣವಾಗಿವೆ ಕೊಲೊನ್ ಮತ್ತು ಮೆನ್ನಹೀಮುದಲ್ಲಿ ಎರಡು ಯುದ್ಧವಿಮಾನಗಳ ನಿಲ್ದಾಣಗಳನ್ನು ಮಾಡಿರುವರು

ಕಳೆದ ಮಹಾಯುದ್ಧದಲ್ಲಿ ಜರ್ಮನಿಯು ಕೈತಪ್ಪಿದ ರ್‍ಹೈನ್ ಪ್ರಾಂತ್ಯವನ್ನು ಬಲಾತ್ಕಾರದಿಂದ ಪುನಃ ಆಕ್ರಮಿಸಿದ

ಜರ್ಮನಿಯ ಏಕಾಧಿಪತಿಯಾದ ಹಿಟ್ಲರನೂ, ಸೇನಾಧಿಪತಿಯಾದ ಜನರಲ್ ಗೋವರಿಂಗನೂ

ಈ ಘಟನೆಯು ಪುನಃ ಯುರೋಪಿನಲ್ಲಿ ಇನ್ನೊಂದು ಘೋರ ಯುದ್ಧವನ್ನು ತಂದೊಡ್ಡುವುದೆಂದು ಎಲ್ಲಿಲ್ಲಿಯೂ ದಿಗ್ಭ್ರಮೆಯುಂಟಾಗಿದೆ ಇದರ ಇತ್ಯರ್ಥವು ಜಿನೆವಾದಲ್ಲಿ ಬರುವ ೩ ನೇ ದಿನ ಕೂಡಲಿರುವ ರಾಷ್ಟ್ರಸಂಘದ ಸಭೆಯಲ್ಲಿ ನಿಶ್ಚಯಿಸಲ್ಪಡಲಿದೆ

"ಈ ಸಭೆಯು ತನ್ನ ಅಪ್ಪಣೆ ಮೇರೆಗೆ ಕರೆಯಲಾಗಿದೆ ಈ ಸಭೆಯು ಅತೀ ಪ್ರಾಮುಖ್ಯವಾದುದು ಜರ್ಮನಿಯು ಜನಾಂಗ ಸಭೆಯ ಸ್ಥಾಪನೆಗೋಸ್ಕರ ಮತ್ತು ಅಂದು ವಿಲ್ಸನ್ನರು ನಿರ್ಮಿಸಿದ ಸಂಧಿಯ ಹದಿಮೂರು ಶರ್ತಗಳನ್ನು ಕಾಪಾಡಲು ಅನೇಕ ತ್ಯಾಗಗಳನ್ನು ಮಾಡಿರುತ್ತದೆ. ಆದರೆ ಜನಾಂಗ ಸಭೆಯ ಕಾರ್ಯಗಳು ಫಲಕಾರಿಯಾದಂತೆ ಕಾಣುವುದಿಲ್ಲ ಜನಾಂಗಗಳಲ್ಲಿ ಪರಸ್ಪರ ಕಚ್ಚಾಟವು ಇದ್ದೇ ಇದೆ. ಸಂಗ್ರಾಮ ದೇವತೆಯ ಪ್ರತಾಪವು ಇನ್ನೂ ಕಡಿಮೆಯಾಗಲಿಲ್ಲ. ಸಂಗ್ರಾಮ ಯೋಜನೆಯು ದಿನೇ ದಿನೇ ವೃದ್ಧಿ ಹೊಂದುತ್ತಿದೆ ಪ್ರತಿಯೊಬ್ಬರೂ ಅತಿರೇಖವಾದ ಸಂಗ್ರಾಮ ಸಿದ್ಧತೆಗಳನ್ನು ಮಾಡಿರುವರು ನಾವು ಅದಕ್ಕೆ ಹೊಣೆಗಾರರಲ್ಲ. ಕಳೆದ ೧೫ ವರ್ಷದ ಸಮಯ ಜರ್ಮನಿಯು ಭಯಂಕರ ಶೀಲುಸ್ಥಿತಿಯನ್ನು ಅನುಭವಿಸಿದೆ.

ಫ್ರೆಂಚ ಗಡಿಯಲ್ಲಿ ಶಾಂತಿ

ಫ್ರೆಂಚರ ಪೂರ್ವಗಡಿಯಲ್ಲಿ, ಎಂದರೆ ರ್‍ಹೈನ ಪ್ರದೇಶದ ಹತ್ತಿರ, ಜರ್ಮನಿಯ ಮೇಲಿನ ಚಟುವಟಿಕೆಯಿಂದಾಗಿ, ಯಾವುದೊಂದೂ ತರದ ಗಡಿಬಿಡಿ ಉಂಟಾಗಲಿಲ್ಲ. ಜರ್ಮನಿಯದ ಮೇಲಿನ ಪ್ರಕಟಣೆಯನ್ನು ಬಹಳ ಶಾಂತತೆಯಿಂದ ಕೇಳಿದರು. ಜರ್ಮನಿಯು ರ್‍ಹೈನ್ ಪ್ರದೇಶದಲ್ಲಿ ಸೇನಾಪಡೆಯನ್ನ ಕಳುಹಿಸಿದುದು, ಆಕಾಶವಾಣಿಯ ಮೂಲಕ ಪ್ರಸಾರವಾಗಿತ್ತು, ತನ್ನ ವರ್ತನೆಯ, ಕುರಿತು ಜರ್ಮನಿಯು ಬ್ರಿಟಿನಿಗೆ ಮುಂದಾಗಿ ಎಚ್ಚರಿಕೆ ಕೊಡಲಿಲ್ಲವೆಂದು ತಿಳಿದುಬರುತ್ತದೆ ಜನಾಂಗ ಮಂಡಳದ ಸಭೆ ಇದೇ ತಿಂಗಳ ತಾ ೧೩ರಲ್ಲಿ ಸೇರುವುದು ಜರ್ಮನಿಗೂ ಆಮಂತ್ರಣ ಹೋಗಿರುತ್ತದೆ

ಜಿನಿವಾದಿಂದ ಬಂದ ವಾರ್ತೆ

ಜರ್ಮನಿಯ ಈಗಿನ ವರ್ತನೆಯಿಂದ, ಸಂಗ್ರಾಮ ಪರಿಣಾಮಗಳು ಉಂಟಾಗುವುದಿಲ್ಲವೆಂದು, ಜನಾಂಗ ಮಂಡಳದ ವಿಶೇಷ ಸಭೆಯಲ್ಲಿ ಈ ಕಲಹ ನಿವಾರಣೆಯಾಗುವುದೆಂದು ತಿಳಿದು ಬರುತ್ತದೆ ಜರ್ಮನಿಯ ಈ ವರ್ತನೆಯಿಂದ, ಯುರೋಪಿನ ಸ್ಥಿತಿಯು ಸುಧಾರಣೆಯಾಗುವುದೆಂದೂ, ಹಿಟ್ಲರನ ಭಾಷಣವು, ಆಂಗ್ಲೇಯರ ಮತ್ತು ಫ್ರೆಂಚರ ಸ್ನೇಹಕ್ಕೆ ಒಂದು ಆತಂಕ ತಂದು ಹಾಕಿರುತ್ತದೆಂದೂ, (ರಷ್ಯಾ ಫ್ರಾನ್ಸು ಒಪ್ಪಂದವನ್ನು ವಿರೋಧಿಸಿ) ಇಲ್ಲಿ ಕೆಲವರ ಅಭಿಪ್ರಾಯ.

ಫ್ರಾನ್ಸಿನಲ್ಲಿ

ಫ್ರಾನ್ಸಿನ ರಾಜಕೀಯ ವಾತಾವರಣದಲ್ಲಿ ಶಾಂತತೆಯು ಕಾಣಬರುತ್ತಿದೆ ಸರಕಾರವು ಎರಡು ಠರಾವುಗಳನ್ನು ಮಾಡಿರುತ್ತದೆ

೧ ಈ ಮೇಲಿನ ಸಂಗತಿಯನ್ನು ಜನಾಂಗ ಸಭೆಯ ಮುಂದೆ ತರುವುದು.

೨ ಸೈನಿಕರ ರಜೆಯನ್ನು ಕೆನ್ಸಲ್ ಮಾಡುವುದು

ಫ್ರೆಂಚ ಪತ್ರಿಕೆಗಳಲ್ಲಿ, ಜರ್ಮನಿಯ ವರ್ತನೆಯನ್ನು ಖಂಡಿಸಿ ದೊಡ್ಡ ದೊಡ್ಡ ಶಿರೋನಾಮೆಗಳಿಂದ ಲೇಖಗಳು ಹೊರಟಿವೆ ಫ್ರೆಂಚರು ತಮ್ಮ ವರ್ತನೆಯನ್ನು ಆಂಗ್ಲೇಯ, ಬೆಲ್ಜಿಯಮ್ ಮತ್ತು ಇಟಲಿಯೊಡನೆ, ಪರ್ಯಾಲೋಚಿಸಿ, ರೂಪಿಸುವುದಾಗಿ ತಿಳಿದು ಬರುತ್ತದೆ

ಹಿಟ್ಲರನ ಶರ್ತಗಳನ್ನು ಫ್ರೆಂಚರು ತಿರಸ್ಕರಿಸಿದ್ದಾರೆ ಲೊಕಾರ್ನೊ ಒಪ್ಪಂದಕ್ಕೆ ಸಹಿ ಹಾಕಿದ ಜನಾಂಗಗಳಸಭೆಯು ಬೇಗನೆ ಪಾರಿಸ್ ನಗರದಲ್ಲಿ ಸೇರುವುದಂತೆ ಫ್ರೆಂಚರು ಯೋಗ್ಯ ಸಂಗ್ರಾಮ ಸಿದ್ಧತೆಗಳನ್ನು ಮಾಡಿರುವರಾಗಿ ತಿಳಿದುಬರುತ್ತದೆ

ಜರ್ಮನಿಯ ವರ್ತನೆಯನ್ನು ಖಂಡಿಸಿ, ಫ್ರಾನ್ಸಿನ ಪ್ರಮುಖ ಮಂತ್ರಿಯವರು ಯುರೋಪಿನ ಎಲ್ಲಾ ಜನಾಂಗಗಳಿಗೆ ಆಕಾಶವಾಣಿಯ ಭಾಷಣ ಮಾಡಿರುವರು

ಜರ್ಮನಿಯ ಈ ವರ್ತನೆಯಿಂದ ಜರ್ಮನಿ ಮತ್ತು ಫ್ರೆಂಚ ಸೈನಿಕರು, ಈಗ ಬರಿ ಒಂದು ಸಂಕರದಷ್ಟು ದೂರವಾಗಿರುವರು. ಈ ಮೊದಲು ಅವರು ೩೦ ಮೈಲು ದೂರವಾಗಿದ್ದರು. ಅದುದರಿಂದ ಫ್ರಾನ್ಸು ತಕ್ಕ ರಕ್ಷಣಾ ಏರ್ಪಾಡುಗಳನ್ನು ಮಾಡಿರುತ್ತದೆ

ಅಂತಾದರೂ ಲೊಕಾರ್ನೊ ಒಪ್ಪಂದದಿಂದ, ಫ್ರಾನ್ಸು ಮತ್ತು ಬೆಲ್ಜಿಯಮ್ ಸುರಕ್ಷಿತವಾಗಿರುವಂತೆ ಫ್ರಾನ್ಸು ಸಾಹಸ ಪಡದು ತಿಳಿದುಬರುತ್ತದೆ ಫ್ರೆಂಚರು ತಮ್ಮ ಪ್ರತಿಕಾಲಿಗಳನ್ನು ಜನಾಂಗ ಮಂಡಳಕ್ಕೆ ಕಳುಹಿಸಿಕೊಟ್ಟಿರುವರು ಜರ್ಮನಿಯ ಮೇಲೆ ಈ ವರ್ತನೆಗಾಗಿ ಸೇನ್ಕ್ಷನುಗಳನ್ನು ಜ್ಯಾರಿ ಮಾಡಬೇಕಾಗಿ, ಕೆಲವು ಫ್ರೆಂಚ ಪತ್ರಿಕೆಗಳ ಸಲಹೆ ಕೊಟ್ಟಿವೆ

ಫ್ರಿನ್ಸಿಯಾವಿ ನಲ್ಲಿ ಇದರಿಂದ ಸ್ವಲ್ಪ ಉದ್ರೇಕ ಉಂಟಾಗಿದೆ ಇಟಲಿಯು ಲೊಕಾರ್ನೊ ಒಪ್ಪಂದದ ಜಾಮೀನುದಾರರಾಗಿದ್ದರು, ಅವರ ಅಷ್ಟು ಅಸಮಾಧಾನ ಹೊಂದಿದಂತೆ ಕಾಣುವದಿಲ್ಲ ಆದರೆ, ಇಟಲಿಯು ಈ ವಿಚಾರದಲ್ಲಿ ಜನಾಂಗಸಭೆಯೊಡನೆ ಇರುವುದಂತೆ.

ಆಂಗ್ಲೇಯ ಬಹಿರ್ ವ್ಯವಹಾರ ಕಾರ್ಯದರ್ಶಿಗಳಾದ, ಮಿ| ಈಡನ್ನರು, ಈ ಕುರಿತು ಆಲೋಚಿಸಲು, ತಮ್ಮ ಮಂತ್ರಿಗಳಾದ ಬಾಲ್ಡವಿನ್ನರ ಭೇಟಿ ಮಾಡಿರುವರೆಂದು ತಿಳಿದುಬರುತ್ತದೆ ಆಂಗ್ಲೇಯರು ಜರ್ಮನಿಯ ಈ ವರ್ತನೆಯಿಂದ ಸಿಟ್ಟಾಗಿ ಹೊಂದಿದಂತೆ ಕಾಣುವುದಿಲ್ಲ ಪೊಲೆಂಡ್ ಫ್ರಾನ್ಸಿನೊಡನೆ ಸಹಕರಿಸುವುದೆಂದು ಭರವಸೆ ಕೊಟ್ಟಿರುತ್ತದೆ.

ಮಂಗಳೂರು ಗವರ್ನಮೆಂಟ್ ಕಾಲೇಜಿನ ಕನ್ನಡ ಕರ್ನಾಟಕ
— ಪಂಡಿತರಾದ

ಬ್ರಹ್ಮಶ್ರೀ ವಿದ್ವಾನ್ ಉಡ್ಪಿ ಸೀತಾರಾಮಾಚಾರ್ಯರು

ಪಡುಬಿದ್ರೆಯಲ್ಲಿ ತಾನು ಕಂಡ ವಿಶೇಷಗಳ ಕುರಿತು ಹೀಗೆ ಬರೆಯುತ್ತಾರೆ:—

ಪಡುಬಿದರೆಯಲ್ಲಿ ಇತ್ತೀಚೆಗೆ ಪ್ರಸಿದ್ಧಿಗೆ ಬಂದ ದೇವೀ ಭಕ್ತೆಯಾದ ಹೆಂಗಸಿನ ಸಮಾಚಾರವು ಪತ್ರಿಕೆಗಳಲ್ಲಿ ವಿವಿಧ ರೀತಿಯಿಂದ ಪ್ರಕಟವಾಗುತ್ತಿರುವುದನ್ನು ನೋಡಿದ ನಾನು ಆ ವಿಷಯವನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬ ಕುತೂಹಲದಿಂದ ಮೊನ್ನೆ ಎಂಟನೇಯ ತಾರೀಕಿನಲ್ಲಿ ಹನ್ನೆರಡು ಘಂಟೆಗೆ ಆ ಸ್ಥಳಕ್ಕೆ ಹೋದೆನು. ಆಗ ಆ ಹೆಂಗಸು ಸ್ನಾನ ಮಾಡಿ ಬಂದು ತಾನು ಆರಾಧಿಸುವ ಕೋಣೆಯೊಳಗೆ ಜನರು ತಂದುಕೊಟ್ಟ ಹಣ್ಣುಕಾಯಿ, ಹೂ ಮುಂತಾದುವನ್ನು ತಾನೇ ತೊಳೆದು ಇಡುತ್ತಿದ್ದಳು. ಆ ಕೋಣೆಯು ಉತ್ತರದಲ್ಲಿ ಬಾಗಿಲಿದೆ. ಅದರ ಇದಿರಿಗೆ ಚಿಕ್ಕ ಚಾವಡಿ ಇದೆ. ದಕ್ಷಿಣ ಗೋಡೆಯಲ್ಲಿರುವ ಕಿಟಿಕಿಯಿಂದ ಕೋಣೆಯೊಳಗೆ ಚೆನ್ನಾಗಿ ಬೆಳಕು ಬೀಳುತ್ತದೆ. ಈಶಾನ್ಯ ಮೂಲೆಯಲ್ಲಿ ಒಳಗೆ ಅಂತರಕ್ಕೆ ಹೋಗುವ ಚಿಕ್ಕ ಬಾಗಿಲು ಇದೆ. ಕೋಣೆಯ ಅಟ್ಟಕ್ಕೆ ರೀಪು ಕಟ್ಟಿ ತಗಡು ಮುಚ್ಚಿದೆ. ಆ ರೀಪಿಗೆ ನಾಲ್ಕು ದೀಪಗಳನ್ನು ತೂಗಹಾಕಿದೆ. ಪಶ್ಚಿಮದ ಗೋಡೆಯಲ್ಲಿ ಕೆಲವು ದೇವರ ಪಟಗಳು ಇವೆ. ಇವುಗಳ ನಡುವೆ ಸುಮಾರು ಆರೇಳು ಅಂಗುಲ ಉದ್ದ, ಮೂರು ನಾಲ್ಕು ಅಂಗುಲ ಅಗಲ, ಒಂದೂವರೆ ಅಂಗುಲ ದಪ್ಪದ ಒಂದು ಹಲಿಗೆಯ ತುಂಡು ಮಧ್ಯದ ಕೈಯಲ್ಲಿ ನಾಗಂದಿಗೆ ಇಡುವಂತೆ ಉದ್ದವಾದ ಎರಡು ಕಬ್ಬಿಣದ ಮೊಳೆಗಳ ಮೇಲೆ ಇಡಲ್ಪಟ್ಟಿದೆ. ಇದೇ ಆಕೆಯು ಪೂಜಾ ಸಾಧನವಾಗಿ ಮಾಡಿಕೊಂಡ ವಿಗ್ರಹವಂತೆ. ನಾನು ಪರೀಕ್ಷಿಸುವುದಕ್ಕಾಗಿಯೇ ಹೋದುದರಿಂದ ಆ ಕೋಣೆಯ ಬಾಗಿಲಲ್ಲೇ ಪೂರ್ವಮುಖವಾಗಿ ಕುಳಿತು ಒಳಗೆ ನಡೆಯುವುದನ್ನೆಲ್ಲಾ ನೋಡುತ್ತಿದ್ದೆನು. ಕೋಣೆಯೊಳಗೆ ಆವಳು ಹೊರತು ಮಿಕ್ಕವರು ಯಾರೂ ಇರಲಿಲ್ಲ. ಅಂತರದ ಚಿಕ್ಕ ಬಾಗಿಲಿನಿಂದ ಇವಳಿಗೆ ಬೇಕಾದ ನೀರನ್ನು ಮಾತ್ರ ತಂದುಕೊಡುತ್ತಿದ್ದರು. ನಾನು ಕುಳಿತಿದ್ದ ಬಾಗಿಲ ಎರಡು ಪಾರ್ಶ್ವಗಳ ಗೋಡೆಯ ಒಳಭಾಗ ಮಾತ್ರ ನನಗೆ ಕಾಣದೆ ಇದ್ದರೂ ಆ ಭಾಗವನ್ನು ಸಹ ಒಂದು ಸಾರಿ ಇಣಿಕಿ ನೋಡಿದ್ದೆನು. ಅಲ್ಲಿ ಜನರು ನಿಲ್ಲುವಷ್ಟು ಸ್ಥಳವಿಲ್ಲ. ಅಲ್ಲಿ ಒಂದು ಕಡೆಯಲ್ಲಿ ಹೂವಿನ ಬುಟ್ಟಿಯೂ, ಇನ್ನೊಂದು ಕಡೆಯಲ್ಲಿ ನೀರಿನ ಬಿಂದಿಗೆಯೂ ಇದ್ದಿತು. ಕೋಣೆಯ ಒಳಗಡೆಯಲ್ಲಿ ಹಣ್ಣುಕಾಯಿಯ ತಟ್ಟೆಗಳೇ ತುಂಬಿಹೋಗಿದ್ದವು. ಈ ಹಣ್ಣುಕಾಯಿಗಳನ್ನೆಲ್ಲಾ ತೊಳೆದು ಆದ ಮೇಲೆ ಪಶ್ಚಿಮದ ಗೋಡೆಯ ಬದಿಯಲ್ಲಿಟ್ಟಿದ್ದ ಬೆಂಚಿಯ ಮೇಲೆ ಹತ್ತಿ ಪಟಗಳಿಗೂ ಆ ಹಲಿಗೆಗೂ ಹಾಕಿದ ಹೂಮಾಲಿಕೆಗಳನ್ನೆಲ್ಲಾ ತೆಗೆದು, ಆ ಹಲಗೆಯನ್ನು ಒಂದು ಪಾತ್ರೆಯಲ್ಲಿಟ್ಟು ನೀರಿನಿಂದ ತೊಳೆದು ಹಾಲನ್ನು ಅಭಿಷೇಕಮಾಡಿದಳು. ತಿರಿಗಿ ನೀರಿನಿಂದ ಚೆನ್ನಾಗಿ ತೊಳೆದು ಒರಸಿ ಮೊದಲಿನಂತೆಯೇ ಗೋಡೆಯ ಮೊಳೆಗಳ ಮೇಲಿಟ್ಟು ಚಿಕ್ಕ ಎರಡು ಪಂಚಪಾತ್ರೆಗಳಲ್ಲಿ ಹಾಲನ್ನೂ ನೀರನ್ನೂ ಇಟ್ಟು ಆ ಹಲಿಗೆಗೂ ಮಿಕ್ಕ ಪಟಗಳಿಗೂ ಹೂಗಳಿಂದ ಅಲಂಕಾರ ಮಾಡಿದಳು. ಮತ್ತೆ ತಾನು ಮೇಲೆ ಹತ್ತಿದ ಬೇಂಚಿಯನ್ನು ಒರಸಿ ಅದರ ಮೇಲೆ ಒಡೆದ ತೆಂಗಿನ ಕಾಯಿಗಳನ್ನಿಟ್ಟ ಹರಿವಾಣಗಳನ್ನೆಲ್ಲಾ ಒಂದರ ಮೇಲೆ ಮತ್ತೊಂದರಂತೆ ಅಡಕಿದ್ದಳು. ಸುಮಾರು ಐವತ್ತರ ಮೇಲೆ ತಟ್ಟೆಗಳಿದ್ದು ಒಂದೊಂದರಲ್ಲಿ ಮೂರು ನಾಲ್ಕು ತೆಂಗಿನಕಾಯಿಗಳಿದ್ದುವು. ಇಷ್ಟನ್ನೂ ತಾನೇ ಒಡೆದು ಇಡುತ್ತಿದ್ದಳು. ಹೀಗೆ ಎಡದ ಕೈಯಲ್ಲಿ ತೆಂಗಿನ ಕಾಯಿಯನ್ನು ಹಿಡಿದು ಕತ್ತಿಯಿಂದ ಹೊಡೆದು ತುದಿಯಿಂದ ಬಿಡಿಸುವಾಗ ಒಂದು ತೆಂಗಿನಕಾಯಿಯ ಹೋಳಿನಲ್ಲಿ ಒಂದು ದುಂಡಾದ ಘನ ಪದಾರ್ಥವು ಕಾಣಿಸಿತು. ಅದೇನೆಂದು ಕೇಳಿದಾಗ ಆ ತೆಂಗಿನಹೋಳನ್ನೇ ಬಾಗಿಲ ಬಳಿ ತಂದಿಟ್ಟಳು. ಅದನ್ನು ನಾನು ತೆಗೆದು ನೋಡಿದೆನು. ಅಲ್ಲಿದ್ದವರೆಲ್ಲರೂ ಕೈಯಲ್ಲಿ ಹಿಡಿದು ನೋಡಿದರು. ಅದು ದೊಡ್ಡ ನೆಲ್ಲಿಕಾಯಿಯ ಆಕಾರವುಳ್ಳದ್ದಾಗಿಯೂ, ಸ್ವಚ್ಛವಾಗಿಯೂ ಇತ್ತು. ಅದು ಶಿವಲಿಂಗವೆಂದು ಅಲ್ಲಿದ್ದವರೆಲ್ಲ ಹೇಳಿದರು. ಹೀಗೆಯೇ ಮತ್ತೊಂದು ಕಾಯಿಯ ಒಳಗೆ ಸೇವಂತಿಗೆ ಹೂ ಕಾಣಿಸಿತೆಂದು ನನ್ನ ಹತ್ತರ ಕುಳಿತವರು ಹೇಳಿ ಅದನ್ನು ತೆಗೆದು ಎಲ್ಲರಿಗೆ ತೋರಿಸಿದರು. ಆದರೆ ಶಿವಲಿಂಗವು ಕಾಯಿಸ್ಸೊಡೆಯುವಾಗಲೇ ಒಳಗಿನಿಂದ ಕಾಣಿಸಿದಂತೆ ಇದು ನನಗೆ ಕಾಣಿಸಲಿಲ್ಲವಾದುದರಿಂದ ಆ ವಿಷಯವನ್ನು ಮಾತ್ರ ಏನೆಂದು ಹೇಳಲಾರೆನು. ಕಾಯನ್ನೆಲ್ಲಾ ಒಡೆದು ಇಟ್ಟ ಮೇಲೆ ಆ ಬೆಂಚಿನ ಇದಿರಲ್ಲಿ ಒಂದು ಕಾಲುಮಣೆಯ ಮೇಲೆ ಒಂದು ತಟ್ಟೆಯಲ್ಲಿ ಸುಮಾರು ಒಂದು ಸೇರಾಗುವಷ್ಟು ಕರ್ಪೂರವನ್ನು ಹಾಕಿಟ್ಟು ಒಂದು ತುಂಡನ್ನು ಹಚ್ಚಿ ಆ ತಟ್ಟೆಯಲ್ಲಿಟ್ಟು ತಾನು ಪಶ್ಚಿಮಾಭಿಮುಖವಾಗಿ ಮೊಣಕಾಲೂರಿ ನಮಸ್ಕಾರ ಮಾಡಿದಳು. ಕೋಣೆಯ ಹೊರಗೆ ಚಾವಡಿಯಲ್ಲಿ ಸಾಲಿಗೆ ಕರ್ಪೂರ ಹಚ್ಚಿ ಜನರು ಭಜನೆಯನ್ನು ಮಾಡುತ್ತಿದ್ದರು. ಒಳಗೆ ತಟ್ಟೆಯಲ್ಲಿ ಹಚ್ಚಿದ ಕರ್ಪೂರ ಜ್ವಾಲೆಯು ಆರುವ ವರೆಗೆ ಕೈಮುಗಿದುಕೊಂಡು ಪೂರ್ವದ ಗೋಡೆಗೆ ಒರಗಿ ನಿಂತಿದ್ದಳು. ಆವಳು ಮಾಡಿದ ಪೂಜೆಯೆಂದರೆ ಇಷ್ಟೇ. ಇಷ್ಟಾಗುವಾಗ ಘಂಟೆ ಮೂರಾಯಿತು. ಇಷ್ಟು ಸಮಯದಲ್ಲಿಯೂ ಒಂದು ಕ್ಷಣ ವಿಶ್ರಾಂತಿಯಿಲ್ಲದೆ ಈಕೆಯೊಬ್ಬಳೇ ಕೆಲಸಮಾಡುತ್ತಿದ್ದಳು. ಹೊರಗೆ ಒಂದು ಕಡೆ ಭಜನೆಯವರ ಗದ್ದಲ, ಮತ್ತೊಂದು ಕಡೆ ಸ್ಥಳ ಸಂಕೋಚವಿದ್ದ ಬಂದು ನೋಡಿಕೊಂಡು ಹೋಗುವವರ ನೂಗ್ಗಾಟ, ಇವು ನಡುವೆ ಪರಸ್ಪರ ಜಗಳ ಹೀಗೆಲ್ಲಾ ಗೊಂದಲವಾಗುತ್ತಲೇ ಇತ್ತು. ಇವುಗಳೊಂದರ ಗೊಡವೆಯೇ ಇಲ್ಲದೆ ಆಕೆಯು ತನ್ನ ಪಾಡಿಗೆ ಕೆಲಸವನ್ನು ಮಾಡುತ್ತಿದ್ದಳು. ಕೆಲವರು ತಾವು ಮಾಡುವ ಕೆಲಸವನ್ನು ಹಲವರು ನೋಡುತ್ತಾರೆಂದರೆ ಜನರಿಗೆ ರಂಜನೆಯಾಗುವಂತೆ ತಮ್ಮ ಚೇಷ್ಟೆಗಳನ್ನು ಹೆಚ್ಚಿಸುವುದುಂಟು. ಮತ್ತೆ ಕೆಲವರು ಹೆದರಿಕೆಯಿಂದ ಮಾಡುವ ಕೆಲಸದಲ್ಲಿಯೂ ತಪ್ಪಿ ಬೀಳುವುದುಂಟು. ಇವಳು ಆ ವಿಧವಾದ ವಿಕಾರವೊಂದೂ ಇಲ್ಲದೆ ಚಿಕ್ಕ ಮಕ್ಕಳು ಗೊಂಬೆ ಮುಂತಾದುವುಗಳನ್ನು ಹಿಡಿದು ಅತೀ ಶ್ರದ್ಧೆಯಿಂದ ತಮ್ಮ ಆಟದ ಕೆಲಸವನ್ನು ಹೇಗೆ ಮಾಡುತ್ತಿರುವುವೋ ಹಾಗೆಯೇ ಹಲವರು ತನ್ನ ಪೂಜೆಯನ್ನು ನೋಡುವರೆಂದು ಹೆಮ್ಮೆಪಡದೆ ಅವರಿಗೆ ರಂಜನೆಯಾಗಬೇಕೆಂದು ಯಾವ ಕೃತ್ರಿಮಭಾವವನ್ನೂ ತೋರಿಸದೆ ಜನರೇನು ಹೇಳುವರೋ ಎಂಬ ಭೀತಿಯೂ ಇಲ್ಲದೆ, ನಿರ್ವಿಕಾರವಾದ ಮನೋವೃತ್ತಿಯಿಂದಲೇ ಇದ್ದಳು. ಅಷ್ಟರಲ್ಲಿ ಅಲ್ಲಿಯವರೊಬ್ಬರು ಬಂದು ದರ್ಶನವಾಗಬೇಕೆಂದು ಬಹಳ ಜನರು ಅಪೇಕ್ಷಿಸುತ್ತಾರೆ, ಆಗಿದ್ದರೆ ಅವರಿಗೆಲ್ಲಾ ಸಂತೋಷವಾಗುತ್ತಿತ್ತೆಂದು ಹೇಳಿದರು. ಅವಳೇನೂ ಉತ್ತರ ಹೇಳಲಿಲ್ಲ. ಮೇಲೆ ತೂಗಹಾಕಿದ ದೀಪಗಳನ್ನು ಸರಿಮಾಡುತ್ತಿದ್ದಳು. ಹೀಗೆ ದಕ್ಷಿಣ ದೀಪದ ಕರಿಯನ್ನು ತೆಗೆಯುತ್ತಿದ್ದವಳು ಥಟ್ಟನೆ ಕೈಯಿಂದ ಕಣ್ಣನ್ನು ಮುಚ್ಚಿಕೊಂಡು ಅಲ್ಲಿಯೇ ತಲೆಬಾಗಿ ನಿಂತು ಕಷ್ಟದಿಂದ ಮೆತ್ತಗೆ ಹೂಂಕರಿಸುತ್ತಾ ಇದ್ದಳು. ಕಣ್ಣಿಗೇನಾದರೂ ದೀಪದ ಕಿಡಿ ಹಾರಿತೋ ಎಂದು ನಾನು ಭಾವಿಸಿದೆ. ಅಷ್ಟರಲ್ಲಿ ಕಣ್ಣಿಗೆ ಒತ್ತಿ ಹಿಡಿದ ಬಲಗೈಯ ಮೊಣಗಂಟಿನಿಂದ ಕೆಳಗೆ ಕಾಲುಕುಡ್ತೆಯಾಗುವಷ್ಟು ಬಿಳಿ ದ್ರವವು ಸುರಿಯಿತು. ಅದು ಕಣ್ಣಿನಿಂದ ಹಾಲು ಸುರಿಯುವುದೆಂದು ಅಲ್ಲಿಯವರು ಹೇಳಿದರು. ನಮಗೆ ಹಿಮ್ಮೊಗವಾಗಿ ಅವಳು ನಿಂತುಕೊಂಡುದರಿಂದ ಅದು ಕಣ್ಣಿನಿಂದ ಸುರಿದುದೋ ಬಾಯಿಯಿಂದ ಉಗುಳಿದುದೋ ಎಂದು ಸಂದೇಹವಾಯಿತು. ಪತ್ರಿಕೆಗಳಲ್ಲಿ "ವಂಚನೆ, ವಂಚನೆ" ಎಂಬ ಘೋಷಣೆಯನ್ನು ಓದಿದ್ದ ನನ್ನ ಮನಸ್ಸಿಗೆ ವಿಶ್ವಾಸ ಉಂಟಾಗಲಿಲ್ಲ. ಆದರೂ ನಾನು ಆ ಕಡೆಗೆ ನೋಡುತ್ತಿದ್ದೆನು. ಐದಾರು ನಿಮಿಷದ ಮೇಲೆ ಒಳಗಿನಿಂದ ಒಬ್ಬನು ಬಂದು ಕೆಳಗೆ ಬಿದ್ದ ದ್ರವವನ್ನು ಒರಸಿದನು. ಆಗ ಆಕೆಯು ಕೈನೀಡಲು ಈತನು ನೀರನ್ನು ಕೊಟ್ಟನು. ಅವಳು ಕೈಯನ್ನೂ ಕಣ್ಣನ್ನೂ ತೊಳೆದುಕೊಂಡು ಪೂರ್ವದ ಗೋಡೆಯನ್ನು ಆಧರಿಸಿ ನಿಂತುಕೊಂಡು ಕೈಯಿಂದ ಬಲಕಣ್ಣನ್ನು ಹಿಸುಕುತ್ತಾ ಇದ್ದಳು. ಕಣ್ಣು ತೆರೆಯುವುದಕ್ಕೆ ಕಷ್ಟವಾಗಿತ್ತು. ಹುಬ್ಬಿನ ಬದಿಗಳು ಉಬ್ಬಿದಂತೆ ಇದ್ದುವು. ಸ್ವಲ್ಪ ತೆರೆಯುವಾಗ ಕಣ್ಣು ನೋವಿನವರ ಕಣ್ಣಿನಂತೆ ಕೆಂಪಾಗಿತ್ತು ಮತ್ತು ಅಂಗೈಯಿಂದ ಕಣ್ಣನ್ನು ತಿಕ್ಕುತ್ತಲೇ ಇದ್ದಳು. ಆಗ ಮತ್ತೊಮ್ಮೆ ಹಾಗೆಯೇ ಬಿಳಿ ದ್ರವವು ಸುರಿಯಿತು. ಈಗ ಅವಳು ಪಶ್ಚಿಮಕ್ಕೆ ಮುಖವಾಗಿ ನಿಂತುಕೊಂಡಿದ್ದುದರಿಂದ ಅವಳ ಮೂಗೂ ಬಾಯಿಯೂ ಸರಿಯಾಗಿ ಕಾಣುತ್ತಿದ್ದುವು. ಆದುದರಿಂದ ಕಣ್ಣಿನಿಂದಲೇ ಸುರಿದುದೆಂದೂ ನಾನೂ ನಂಬಬೇಕಾಯಿತು. ಆ ಮೇಲೆ ಹೇಗೋ ಸುಧಾರಿಸಿಕೊಂಡು ತಿರಿಗಿ ಕಣ್ಣನ್ನೂ, ಕೈಯನ್ನೂ ತೊಳೆದುಕೊಂಡು 'ಪ್ರಸಾದವಾಗಿದೆ ಎಲ್ಲರಿಗೆ ಕೊಟ್ಟು ಬಿಡುವ' ಎಂತ ಅವಳ ಭಾಷೆಯಿಂದಾಗಿ ಹೇಳಿದಳು. ಆಗ ಒಬ್ಬರು ಪ್ರಸಾದಕ್ಕಿಂತಲೂ ಜನರಿಗೆ ದರ್ಶನದ ಅಪೇಕ್ಷೆ ಹೆಚ್ಚಾಗಿದೆ, ಕೊಟ್ಟಿದ್ದರೆ ಆಗುತ್ತಿತ್ತೆಂದು ಹೇಳಿದರು. ಅವಳು ಏನೊಂದೂ ಉತ್ತರವನ್ನು ಹೇಳದೆ ಸ್ವಲ್ಪ ಸಮಯದ ಮೇಲೆ ತಿರಿಗಿ 'ಪ್ರಸಾದ ಕೊಟ್ಟು ಬಿಡುವ, ದೂರದಿಂದ ಬಂದವರು ಮತ್ತೆ ಬಿಟ್ಟೇ ಹೋಗುತ್ತಾರೆ ಆದುದರಿಂದ ಬೇಗನೇ ಕೊಡೋಣ' ಎಂತ ಹೇಳಿದಳು. ಹಾಗೆಯೇ ಬೇಂಚಿನ ಮೇಲೆ

— ೧೩ನೇ ಪುಟವನ್ನು ನೋಡುವುದು —

Look Out! Follow the Crowd!

Grand Indo-English Alternative Programme.

Daily 3 Shows at 5-15, 7-30, 9-30 P.M.
Matinee show on Sunday at 2-30 P.M.

From 11-3-1936

Sri Krishna Cinema
(Theatre magnificent of Mangalore)
Proudly presents
M G M S Stupendous long awaited master piece comedy

'SONS of the DESERT'
Headed by
Laurel .....& Hardy
the new shaik Charly Chase (who increase the art of the twin)

You wil laugh until the sands of the desert grow cold. You will dance to their tunes. You will be made to recapture the fun even in the dream. AND

Kumar Movitones Stunt Subject

'DESERT QUEEN'
Starring **JAL MERCHANT**
Krishna Kumari . . . & . . . Sitara.

Ah! The stunts in it, Oh! The love in it. Wee! The fun in it. Zoom! The Speed of it.

Readers Don't miss the chance. Reserve the Seats. Don't feel after disappointmet. Only for few days.

ಓಡಿ ಬನ್ನಿರಿ! ಕೂಡಿ ಬನ್ನಿರಿ ನೋಡ ಬನ್ನಿರಿ

ಆಂಗ್ಲ-ಹಿಂದೂ ಸಿನೆಮಗಳನ್ನು ಅದಲುಬದಲಾಗಿ ತೋರಿಸುವ ದಿವ್ಯ ಏರ್ಪಾಡು ಇಂದೀಗ ಮಾಡಲ್ಪಟ್ಟಿದೆ.

ತಾ 11—3—1936ರಿಂದ

ದಿನಂಪ್ರತಿ 3 ದೇಖಾವೆಗಳು 5-15, 7-30 9-30ಕ್ಕೆ
ರವಿವಾರ ಮೆಟಿನಿ ದೇಖಾವೆ 2-30ಕ್ಕೆ.

ಶ್ರೀ ಕೃಷ್ಣಾ ಸಿನೆಮ

ಮಂಗಳೂರಿನ ಭವ್ಯವೂ ಸುಮನೋಹರವೂ ಆದ ಮಂದಿರದಲ್ಲಿ

ಮೆಟ್ರೋ ಗೋಲ್ಡ್ವಿನ್ ಕಂಪೆನಿಯವರ ಬಹು ಕಾಲದಿಂದಲೂ ನಿರೀಕ್ಷಿಸಲ್ಪಟ್ಟು ಅನಿರೀಕ್ಷಿತವಾಗಿ ಬಂದ ಜಗತ್ತನ್ನೇ ಕೋಲಾಹಲದಲ್ಲಿ ಮುಳುಗಿಸಿದ

ಸನ್ಸ್ ಒಫ್ ದಿ ಡೆಸರ್ಟ್

ಲೋರೆಲ್ ಮತ್ತು ಹಾರ್ಡಿ

ಯವರು ತಮ್ಮ ವಿಚಿತ್ರ ನಟನೆಯ ದರ್ಶನವನ್ನು ಇದರಲ್ಲಿ ತೋರಿಸುವರು.

ಕ್ಷಣಕ್ಷಣಕ್ಕೂ ನಗುವಿನ ಸುಗ್ಗಿ!

ಮತ್ತು ಕುಮಾರ ಮುವಿಟೋನ್ ಕಂಪೆನಿಯವರ

ಡೆಸರ್ಟ್ ಕ್ವೀನ್ ಅಥವಾ

ರೆಗಿಸ್ಥಾನ್ ಕಿ-ರಾಣಿ ಎಂಬ ಸ್ಟಂಟ್ ಚಿತ್ರ

ತರುಣ ಉತ್ಸಾಹಿ **ಜಾಲ್ ಮರ್ಚೆಂಟ**

ಮತ್ತು ಕೃಷ್ಣ ಕುಮಾರಿ, ಇವರೀರ್ವರೂ

ಈ ಚಿತ್ರದಲ್ಲಿ ಭಾಗವಹಿಸಿರುವರು

ವಿನೋದಮಯ! ಸಂಗೀತಮಯ.

ನೋಡಲು ಎಂದೆಂದಿಗೂ ತಪ್ಪದಿರಿ!

ಕೋತಿಯು ಹತ್ತು ಸಾವಿರ ರೂಪ್ಯಾಗಳನ್ನು ಕದ್ದು ಮಾಯವಾಯಿತು.

ಸಿರಿಯಾದಲ್ಲಿನ ಗಲಭೆ ನಿವಾರಣೆಯಾಗಿರುತ್ತದೆ.

ಗುಟ್ಟು ರಟ್ಟಾಯಿತು!

ಜಪಾನು ಇನ್ನೊಂದು ಪೆಸಿಯಿಸ್ಟ ಇಟೇಲಿಯೆ?

ಸಿರಿಯಾದಲ್ಲಿನ ಗಲಭೆ ನಿವಾರಣೆಯಾಗಿರುತ್ತದೆ

ಕಳೆದ ಮಹಾಯುದ್ಧದ ನಂತರ ಜನಾಂಗಸಭೆಯು ಮಾಂಡೇಟಿನಿಂದಾಗಿ, ಫ್ರೆಂಚರ ಅಧಿಕಾರಕ್ಕೆ ಸೇರಿದ ಅರೇಬಿಯಾದ ಸಿರಿಯಾದಲ್ಲಿ ಕೆಲ ದಿವಸಗಳ ಹಿಂದೆ ರಾಜಕೀಯ ಕಾರಣಗಳಿಂದ ದೊಡ್ಡ ಗಲಭೆಯು ಉಂಟಾಗಿತ್ತು. ಅಲ್ಲಿನ ಇರೇಕು ಬ್ರಿಟಿಷರಿಂದ ಸ್ವತಂತ್ರ ಪಡೆದಂತೆ, ಸ್ವಾತಂತ್ರ್ಯ ಪಡೆಯಬೇಕಾಗಿ ಈ ಚಳವಳದ ಉದ್ದೇಶವಾಗಿತ್ತು. ಈ ಚಳವಳದಲ್ಲಿ ಅನೇಕ ಅನರ್ಥಗಳು ಉಂಟಾಗಿದ್ದವು. ಸಾವಿರಾರು ಮಂದಿಗಳು ಸೆರೆಮನೆ ಸೇರಿದ್ದರು. ಈಗ ಈ ಗಲಭೆಯು ನಿವಾರಣೆಯಾಗಿದು ವುದೆಂದು, ಫ್ರೆಂಚ ಸರಕಾರವು ಇವರ ಸಲಹೆಗಳನ್ನು ಪೂರೈಸುವೆವೆಂದು ಭರವಸೆ ಕೊಟ್ಟಿದ್ದಾರೆಂದೂ ಇಲ್ಲಿನವರ ಪ್ರಖ್ಯಾತಸಿದ್ಧ ಮುಂಡಳವೊಂದು ಪೇರಿಸ್ ನಗರಕ್ಕೆ ಬೇಗನೆ ಹೋಗುವುದೆಂದೂ, ಮೊನ್ನೆ ಚಳವಳದಲ್ಲಿ ಸೆರೆಮನೆ ಸೇರಿದ ಅನೇಕ ರಾಜಕೀಯ ಕೈದಿಗಳ ಬಿಡುಗಡೆಯಾಗಿರುತ್ತದೆಂದೂ ತಿಳಿದುಬರುತ್ತದೆ.

ಪೌರ್ವಾತ್ಯದಲ್ಲಿ ಮಹಾಯುದ್ಧ!

ಪೌರ್ವಾತ್ಯದಲ್ಲಿ ಭಯಂಕರ ಯುದ್ಧ ಸಿದ್ಧತೆಗಳು ನಡೆಯುತ್ತಿವೆಯೆಂದೂ ಅತ್ತಕಡೆ ಪ್ರಯಾಣ ಮಾಡಿದ ಓರ್ವ ಅಮೇರಿಕನ್ ಪತ್ರಿಕಾ ಪ್ರತಿನಿಧಿಯಿಂದ ತಿಳಿದು ಬರುತ್ತದೆ. ಈ ಯುದ್ಧವು ಜಪಾನಿಗೂ ರಷ್ಯಕ್ಕೂ ನಡೆಯುವುದು. ಮಂಚೂಕಿಯಾ ಮತ್ತು ಸೋವಿಯಟ್ ಗಡಿನಾಡಿನಲ್ಲಿ ಎಲ್ಲೆಲ್ಲೂ ಸಂಗ್ರಾಮ ಸಿದ್ಧತೆಗಳು ಕಾಣಸುತ್ತಿವೆಯಂತೆ. ೧೯೧೪ರಲ್ಲಿ ಇಡೀ ಯುರೋಪ ಖಂಡದಲ್ಲಿ ನಡೆದಂತೆ ಜಪಾನೀಯರ ಪಂಚವಾರ್ಷಿಕ ಯೋಜನೆಗಳಿಂದ ಕೂಡಿದ ೫೦-೬೦ ರೈಲ್ವೆ ಗಾಡಿಗಳನ್ನೂ ಇಲ್ಲಿನ ಎಲ್ಲಾ ಟ್ರೈನುಗಳಲ್ಲಿ ಜಪಾನೀಯ ಸಂಗ್ರಾಮ ಸಾಯುಕರು ಅತ್ತಿತ್ತ ಪ್ರವಾಸ ಮಾಡುವುದನ್ನೂ ಕಂಡಿರುವರಂತೆ. ರಷ್ಯದ ಮೊಸ್ಕೋ ನಗರದಿಂದ, ಮಂಚೂಕ್ಯ ಗಡಿಗೆ ದಿವಸಕ್ಕೆ ೩೪ ಟ್ರೈನುಗಳು ೭೫ ಗಾಡಿಗಳಿಂದ ಕೂಡಿದ ಸೈನಿಕರನ್ನೂ ಯುದ್ಧ ಸಾಮಗ್ರಿಗಳನ್ನೂ ಸಾಗಿಸುವುದು ಇವರು ನೋಡಿರುವರು. ಅಲ್ಲದೆ ಗಡಿನಾಡಿನ ಹತ್ತಿರದಲ್ಲಿ ಸಾಧಾರಣ ೧೦೦೦ ವಿಮಾನಗಳನ್ನೂ ರಷ್ಯದವರು ಕಂದಿರಿಸಿದ್ದಾರಂತೆ.

ಜಪಾನು ಇನ್ನೊಂದು ಪೆಸಿಯಿಸ್ಟ ಇಟೇಲಿಯೆ?

ಮೊನ್ನೆ ಜಪಾನಿನಲ್ಲಿ ನಡೆದ ಕ್ರಾಂತಿಯಿಂದ ಏನು ವ್ಯಕ್ತವಾಗುತ್ತದೆ. ಜಪಾನಿನಲ್ಲಿ ಸಂಗ್ರಾಮಿಕರ ಪ್ರೇರಣೆಯು ಬಹಳವಾಗಿದೆಂದು. ಈ ಸಂಗ್ರಾಮಿಕರಿಗೆ ಪೆಸಿಯಿಸ್ಟ ಇಟೇಲಿಯಾನರಂತೆ, ತಮ್ಮ ಸಾಮ್ರಾಜ್ಯವನ್ನು ಬೆಳೆಯಿಸುವುದು ಒಂದು ದೊಡ್ಡ ಹುಚ್ಚು. ಇವರಲ್ಲಿ ರಾಷ್ಟ್ರೀಯ ಹೆಮ್ಮೆ ಬಹಳ. ಆದರಿಂದಲೆ ಜಪಾನೀಯರು ಈಗ ಚೀನಾದ ಮೇಲೂ ರಷ್ಯದ ಮೇಲೂ ಕೈಮಾಡಿರುತ್ತಾರೆ. ಇದರ ಪರಿಣಾಮವೇನಾಗುವುದು? ಚೀನಾದಲ್ಲಿ ಹಿತವಿದ್ದ ಪಾಶ್ಚಾತ್ಯ ಜನಾಂಗಗಳೂ, ಅಮೇರಿಕಾನರೂ, ಇವರ ಮೇಲೆ ರೇಗುವರು. ತಮ್ಮ ಕಲಹವನ್ನು ಸದ್ಯಕ್ಕೆ ಬದಿಗಿಟ್ಟು, ತಮ್ಮ ಪೌರ್ವಾತ್ಯದಲ್ಲಿನ ಶ್ರೇಯಸ್ಸಿಗೆ ಆತಂಕಗಳನ್ನು ತರುವ ಜಪಾನಿನ ಮೇಲೆ ಎಲ್ಲರೂ ಒಂದಾಗಿ ಬೀಳಬಹುದು. ಜಪಾನಿಯು ಪೆಸಿಯಿಸ್ಟರಾದ ಈ ಸಂಗ್ರಾಮ ಪ್ರಿಯರಿಗೆ ತಮ್ಮ ಹೆಮ್ಮೆ ಎದುರು, ಈ ಪರಿಣಾಮಗಳನ್ನು ಕಾಣಿಸುವುದಿಲ್ಲ. ಪಶ್ಚಿಮದಲ್ಲೂ, ಯ ಎದ್ದ ಮೋಡಗಳು ಕವಿಯುತ್ತಿವೆ. ಸದ್ಯದಲ್ಲಿ ಈ ಪ್ರಪಂಚದ ಸ್ಥಿತಿಯು ಹೇಗೆ ನಿಲ್ಲುವುದೆಂದು ಹೇಳಲು ಸಾಧ್ಯವಾಗುವುದಿಲ್ಲ.

ಹಿಂದೂದೇಶದ ವಿದ್ಯಾಭ್ಯಾಸ.

ಹಿಂದೂದೇಶದ ವಿದ್ಯಾಭ್ಯಾಸದ ಕುರಿತು ಇಂಡಿಯಾ ಸರಕಾರದ ವರದಿಯು ಹೊರ ಬಿದ್ದಿರುತ್ತದೆ. ಎಲ್ಲಾ ಪ್ರಾಂತಕೀಯ ಸರಕಾರಗಳಿಗೆ ವಿದ್ಯಾಭ್ಯಾಸಕ್ಕಾಗಿ ತಗಲಿದ ವೆಚ್ಚದ ಪಟ್ಟಿಯು ಕೊಡಲಾಗಿದೆ. ಇದು ಸರಾಸರಿ [illegible] ವಿದ್ಯಾವಂತರ ಸಂಖ್ಯೆಯು ವೃದ್ಧಿಯಾಗಿರುವುದಂತೆ,— ಆದರೆ, ನಿರುದ್ಯೋಗ ಮಾತ್ರ ಹೆಚ್ಚಿರುವುದು. ವಿದ್ಯಾಭ್ಯಾಸಂಗರ್ಮಾಡುವ ಸ್ತ್ರೀಯರ ಸಂಖ್ಯೆಯು ಹೆಚ್ಚಿರುತ್ತದೆ. ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಂಗ ಮಾಡುವವರ ಸಂಖ್ಯೆಯೂ ಹೆಚ್ಚುತ್ತಿದೆ. ಇದರಿಂದ ಪದವೀಧರ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು ಮಾತ್ರ ಹೆಚ್ಚಾಗುತ್ತಿದೆ. ಒಟ್ಟಾರೆ ಸರಕಾರವು ವಿದ್ಯಾಭ್ಯಾಸಕ್ಕಾಗಿ ಒಂದಿಷ್ಟು ದ್ರವ್ಯವನ್ನು ಖರ್ಚುಮಾಡಿರುತ್ತದೆ. ಆದರೆ ಪ್ರತಿಫಲಗಳು ಅಷ್ಟು ಸಮಾಧಾನಕರವಲ್ಲ. ಹಿಂದೂದೇಶದ ವಿದ್ಯಾಭ್ಯಾಸಕ್ರಮದಲ್ಲಿ ಅನೇಕ ಸುಧಾರಣೆಗಳು ಬೇಕಾಗಿವೆ. ಜುದ್ದಾ ಖರ್ಚಿನ ಕೆಲವು [illegible] ಸಲೆಯಾದರೂ, ವಿದ್ಯಾಭ್ಯಾಸ ಪ್ರಚಾರಕ್ಕೆ ವಿನಿಯೋಗವಾಗಬೇಕು. ನಮ್ಮ ದೇಶದಲ್ಲೂ, ವಿದ್ಯಾಭ್ಯಾಸವು, ಫಿಲಿಪ್ಪಾನ ದ್ವೀಪಗಳಲ್ಲಿ, ಜಪಾನು ರಷ್ಯ ಇತ್ಯಾದಿ ದೇಶಗಳಲ್ಲಿ ನಡೆದಂತೆ ನಡೆಯಬೇಕು. ಪ್ರತಿಯೊಬ್ಬ ಭಾರತೀಯನು ವಿದ್ಯಾವಂತನಾಗಬೇಕು. ಭರತಖಂಡದ ಸಾಂಪತ್ತಿಕ ಸ್ಥಿತಿಯು ಉತ್ತಮಗೊಳ್ಳಬೇಕು.

ನ್ಯೂಯೋರ್ಕಿನಲ್ಲಿ ಕಳೆದ ವಾರ ನಡೆದ ಘಟನೆ

ನ್ಯೂಯೋರ್ಕಿನ ಕಟ್ಟಡಗಳೆಲ್ಲಾ ಮುಗಿಲನ್ನು ಮುಟ್ಟುತ್ತವೆ. ಅಂದರೆ ಇವುಗಳಿಗೆ ಮಹಡಿಗಳು ಹೆಚ್ಚು. ಈ ಕಟ್ಟಡಗಳ ಕಾಮಗಾರರ ಮುಷ್ಕರ ಹಿಡಿದಿರುವರು. ಸಾಧಾರಣ ೧೫೦ ೦೦೦ ಈ ಕಟ್ಟಡದಲ್ಲಿ ಕೆಲಸ ಮಾಡುತ್ತಿರುವವರು (ಲಿಫ್ಟುಗಳನ್ನು ಚಲಿಸುವವರು ಇತ್ಯಾದಿಗಳು) ಮುಷ್ಕರ ಹಿಡಿದಿರುವರು ಎಂದರೆ ಸಾಧಾರಣ ೧೧ ೦೦೦ ಕಟ್ಟಡಗಳ ವ್ಯವಹಾರವು ನಿಂತಂತೆ. ಜನರು ಮಹಡಿಗಳ ಮೇಲೆನೆ ಇರಬೇಕಾಗಿದೆ. ಇವರನ್ನು ಸಾಗಿಸುವವರಿಲ್ಲ. ಅಲ್ಲಿನ ಆಸ್ಪತ್ರೆಯ ಮೇಲೆ ಮಾತ್ರ ಸಾವನ ನಿಯಾಮಕ ಮಾಡಿರುವರಂತೆ. ಮುಷ್ಕರವು ಬೇಗನೆ ನಿವಾರಣೆಯಾಗದೆ ನಿವಾರಣವಿಲ್ಲ. ತಮ್ಮ ಸ್ಥಿತಿಯನ್ನು ಸುಧಾರಣೆಗೊಳಿಸುವುದು ಈ ಮುಷ್ಕರದ ಉದ್ದೇಶವಂತೆ.

ಗುಟ್ಟು ರಟ್ಟಾಯಿತು!

ಇಟೇಲಿಯು ಎಬಿಸೀನಿಯಾದ ಮೇಲೆ ಬೀಳಲು ಬ್ರಿಟಿಷ ಸರಕಾರದವರು ಇಟೇಲಿಯು, ಎಬಿಸೀನಿಯವನ್ನು ಪಡೆದರೆ ತಮಗೆ ಅದು ಹೇಗೆ ಪರಿಣಮಿಸುವದೆಂದು ಪರಿಶೀಲಿಸಿ, ವರದಿ ಮಾಡಲು ಮಿ| ಜೋನ್ ಮಾಫೆ ಎಂಬವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದರು. ಈ ಸಮಿತಿಯು ಗುಪ್ತವಾದ ರೀತಿಯಲ್ಲಿ ಕಾರ್ಯ ನಡೆಯಿಸುತ್ತಿತ್ತು. ಆದರೆ ಈ ಸಮಿತಿಯವರಿಂದ ಗುಪ್ತವಾಗಿ ತಯಾರಾದ ವರದಿಯು ಹೇಗೊ ಇಟೇಲಿಯ ಕೈ ಸೇರಿರುತ್ತದೆ. ಇದರಲ್ಲೇನಿದೆ? 'ಇಟೇಲಿಯರು ಎಭಿಯೋಪಿಯಾದನ್ನು ವಶೀಕರಿಸಿದರೆ, (ಟಾನಾ ಸರೋವರದ ಮತ್ತು ಕೆಲವು ನೀಲಿಯ ನದಿಯ ಮೈದಾನುಗಳ ವಿಚಾರದಲ್ಲಿ ಕೆಲವು ಒಪ್ಪಂದಗಳನ್ನು ಮಾಡಿದರೆ) ಎಲ್ಲಾ ವಿಚಾರಗಳಲ್ಲೂ ಅಪ್ರಿಯವಾದ ನಮ್ಮ ದೇಶಗಳಿಗೆ ಯೋಗ್ಯವೆನಿಸುವುದು. ಆದುದರಿಂದ ಇಟೇಲಿಯ ಮೇಲೆ ಕಠಿಣಗಳು ಹಾಕಬೇಕಾಗಿಲ್ಲ"ವೆಂದು ಸೂಚನೆಗೆಳದ್ದವರಂತೆ. ಆದರೆ ಈ ವರದಿಯು, ಬೇಕಾದ ಸಮಯದಲ್ಲಿ ಪ್ರಕಟವಾಗಲಿಲ್ಲ. ಹೀಗಿದ್ದರೂ ಬ್ರಿಟನು ಬೇರೆ ವರ್ತನೆಯನ್ನು ಅನುಸರಿಸಿತು. ಇದಕ್ಕೆ ಕಾರಣವೇನು? ಗುಟ್ಟುರಟ್ಟಾದ್ದು ಹೇಗೆ? ಎರಡು ಪ್ರಶ್ನೆಗಳಿಗೆ ಉತ್ತರ ದೊರಕುವುದು ಬಹಳ ಕಷ್ಟ.

ಪ್ರಪಂಚದಲ್ಲಿ ಯುದ್ಧಭಾವವು ಸಹಜವಾದುದಾಗಿದೆ!

೧೯೧೪-೧೮ರ ವರೆಗೆ ನಡೆದ ಮಹಾಯುದ್ಧದ ನಡೆದ ಭೀಕರತೆಯು ಸಮಸ್ತ ಪ್ರಪಂಚವನ್ನು ಕಂಗಾಲುಗೊಳಿಸಿತು. ಈ ಯುದ್ಧದಿಂದ ಉಂಟಾದ ಹಾನಿಯನ್ನು ಉಪಶಮನ ಮಾಡುವಂತೆಯೂ, ಇನ್ನು ಮುಂದಕ್ಕೆ ಪ್ರಪಂಚದಲ್ಲಿ ಅಷ್ಟು ಕ್ರೂರ ಘಟನೆಗಳು ನಡೆಯದಂತೆ, ವಾರ್ಸಾಯಿ ಒಪ್ಪಂದ, ಲೋಕಾರ್ನೋ ಒಪ್ಪಂದ, ಇತ್ಯಾದಿ ಒಪ್ಪಂದಗಳು ಮಾಡಲಾದುವು. [illegible] ಪನಾಗಿರುತ್ತದೆ. ಕೆಲವು ಜನಾಂಗಗಳು ಬರಿ ರಕ್ಷಣೆಗಾಗೆಂದು ದಂಡಯೋಜನೆ ಮಾಡಲು ಪ್ರಾರಂಭಿಸಿದ್ದವು. ದಿನೇ ದಿನೇ ಈ ಹುಚ್ಚು ಎಲ್ಲಾ ಜನಾಂಗಗಳಿಗೆ ಹರಡಿತು. ಜರ್ಮನಿಯು ಇದಕ್ಕಾಗಿ ವಾರ್ಸೇಲ್ ಒಪ್ಪಂದವನ್ನು ಮುರಿಯಿತು. ಮುಖ್ಯ ಒಪ್ಪಂದಗಳು ಕೆಟ್ಟುಹೋಗುತ್ತಿವೆ. ಸಮಗ್ರ ಯುರೋಪ ಖಂಡದಲ್ಲೂ, ಅಮೇರಿಕಾ ಜಪಾನು ದೇಶಗಳಲ್ಲೂ ದಂಡಯೋಜನೆ ಕಾರ್ಯಗಳು ಹಗಲಿರುಳು ನಡೆಯುತ್ತಿವೆ. ಇದರ ನಿಮಿತ್ತವಾಗಿ, ಅನೇಕ ಕೈಗಾರಿಕೆ ಸಂಸ್ಥೆಗಳು ಬಹಳ ವೃದ್ಧಿಯಾಗಿವೆ. ಇವುಗಳಿಗೆ ಸರಕಾರದಿಂದ ಸಹಾಯ ದ್ರವ್ಯವು ದೊರಕುತ್ತಿದೆ. ಈ ಸಂಸ್ಥೆಗಳ ಶೇರುಗಳ ಮೌಲ್ಯವು ಬಹಳವಾಗಿ ಏರುತ್ತದೆ. ಸಂಗ್ರಾಮ ಯೋಜನೆ ಕಾರ್ಖಾನೆಗಳಂತೂ ರಾತ್ರಿ ಹಗಲೂ ಕಾರ್ಯಗೈಸುತ್ತಿವೆ. ಸಾವಿರಾರು ವಿಮಾನಗಳು, ಯುದ್ಧೋಪಕರಣಗಳಿಂದ ಕೂಡಿದ ನೌಕೆಗಳು ಯಂತ್ರೋಪಕರಣಗಳು ತಯಾರಾಗುತ್ತಿವೆ. ಎಲ್ಲಾ ಸರಕಾರಗಳೂ ಈ ಕಾರ್ಯಕ್ಕಾಗಿ ಭಯಂಕರ ಸಾಲಗಳನ್ನು ಎತ್ತುತ್ತಾರೆ. ಎಲ್ಲವೂ ನಡೆಯುವುದು—ಬರಿ ರಕ್ಷಣೆಗಾಗಿ ಎಂದರೆ ಜನರಲ್ಲಿ ಯುದ್ಧಭಾವವು ಸಹಜವೆಂಬುದಾದ ಭಾವನೆಯು ಹುಟ್ಟುತ್ತದೆ. ಬ್ರಿಟಿಷ ಮಹಾ ಮಂತ್ರಿ ಬಾಲ್ಡವಿನ್ನರು ರಾಷ್ಟ್ರೀಯ ಅನುಮತಿಯಿಂದ ಆರ್ಮಾಮೆಂಟ್ ಸಂಸ್ಥೆಗಳು ಲಾಭಗಳಿಸುವುದು ಅವಮಾನಕರವೇ ಆದರೂ ಈ ಸ್ಥಿತಿಯು ಬಂದಂತೆ ತನ್ನ ಸರಕಾರವು ಎತ್ತರದಿಂದಿಳುವುದೆಂದು ಎಂದಾದರೊಂದು ಕಾಲದಲ್ಲಿ ಆಡಿದ್ದರು. ಆದರೆ ಈಗ ನಡೆಯುವುದೇನು? ಇವರ ವಚನಗಳಿಗೆ ವಿರೋಧವಾಗಿ ಕೆಲಸಗಳು ನಡೆಯುತ್ತಿವೆ. ಬ್ರಿಟಿಷ ಸರಕಾರವು ತನ್ನ ಗೌರವವನ್ನು ಕಾಯ್ದುಕೊಳ್ಳಲು ಏನು ಮಾಡುವುದೆಂದು ನೋಡಬೇಕು.

ತೆಂಗಿನಿಂದ ಏನೆಲ್ಲಾ ಮಾಡಬಹುದು?

ಸಿಲೋನಿನ ತೆಂಗಿನ ಬೋರ್ಡಿನವರು ತೆಂಗಿನ ಎಗ್ಜಿಬಿಶನ ಎಂಬ ಒಂದು ಪ್ರದರ್ಶನವನ್ನು ಜರಗಿಸಿದರು. ಇದರಲ್ಲಿ ತೆಂಗಿನಿಂದ ತಯಾರಾದ ಎಲ್ಲಾ ಸಾಮಾನುಗಳು ಪ್ರದರ್ಶಿಸಲ್ಪಟ್ಟಿದ್ದವು. ಸಾಮಾನುಗಳು—ಚಿಪ್ಪು ತೆಂಗಿನ ಎಣ್ಣೆ ತೆಂಗಿನ ಸಾಬೂನು ಒಣಗಿದ ಕಾಯಿ ಇತ್ಯಾದಿಗಳು) ಬಿಸ್ಕೀಟುಗಳು. ಸೋಪು ಬೆಲ್ಲ ತೆಂಗಿನ ಹೂಗಳಿಂದ ತಯಾರಾದ ಸುಗಂಧ ವಸ್ತುಗಳು ಸ್ತ್ರೀಯರ ಆಭರಣಗಳು (ತೆಂಗಿನ ಚಿಪ್ಪಿನಿಂದ ಮತ್ತು ಬೆಳ್ಳಿ ಬಂಗಾರ, ಇತ್ಯಾದಿ ಲೋಹಗಳಿಂದ) ಗುಂಡಿಗಳು, ತೆಂಗಿನ ಗೆಲ್ಲುಗಳಿಂದ ಬೆಂಚಿ ಪೆಟ್ಟಿಗೆಗಳು (ಇದಕ್ಕೆ ಬೇಕಾಗುವ ಕಡ್ಡಿಗಳು ಮಾತ್ರ). ಇದೇ ರೀತಿಯಲ್ಲಿ ನಮ್ಮ ದೇಶದಲ್ಲೂ ತೆಂಗಿನ ಪ್ರಯೋಜನಗಳನ್ನು ಈ ರೀತಿಗಳಲ್ಲಿ ಯಾಕೆ ಮಾಡಿಕೊಳ್ಳಬಾರದು.

ನಮ್ಮ ಜಿಲ್ಲೆಯಲ್ಲಿ ಧಾರಾಳ ತೆಂಗಿನ ತೋಟಗಳಿವೆ. ಇವುಗಳನ್ನು ಬರಿ ತೆಂಗಿನಕಾಯಿಗಳಿಗಾಗಿ ಮತ್ತು ನೀರು ಕಾಯಿಸಲು ಕಟ್ಟಿಗೆಯಾಗಿ ಉಪಯೋಗಿಸುವ ಬದಲಾಗಿ ಮೇಲಿನ ಕೆಲವು ಉದ್ಯಮಗಳನ್ನು ನಮ್ಮವರು ಕೈಗೊಳ್ಳಬಹುದು. ನಿರುದ್ಯೋಗವು ಇದರಿಂದ ಸ್ವಲ್ಪ ಮಟ್ಟಿಗೆ ನಿವಾರಣೆಯಾಗಬಹುದು.

ರೂ 10 000 ಕದ್ದ ಕೋತಿ!

ಕಾನ್‌ಪುರದ ಪಂಡಿತ ವಿಶ್ವಾಧರನೆಂಬ ವರ್ತಕನು ತನ್ನ ಮನೆ ಮಾಡಿನ ಸಿಲಿಂಗಿನಲ್ಲಿ ರೂ ೧೦ ೦೦೦ವನ್ನು ಗುಪ್ತವಾಗಿ ಇಟ್ಟಿದ್ದನು. ಈ ಊರಿನಲ್ಲಿ ಕೋತಿಗಳ ಬಾಧೆ ಬಹಳ. ಒಂದು ಕೋತಿಯು ಈ ಮನೆಗೆ ಬಂದು ಸಿಲಿಂಗಿನ ಅಡಿಯಲ್ಲಿರುವ ನೋಟಿನ ಕಟ್ಟವು ಇದರ ದೃಷ್ಟಿಗೆ ಗೋಚರವಾಯಿತು. ಅದನ್ನು ಹಿಡಕೊಂಡು ಪಲಾಯನಮಾಡಿತು. ಮಾಯವಾಯಿತು. ದಿಗಿಲುಗೊಂಡ ವರ್ತಕನು ಈ ವಾರ್ತೆಯನ್ನು ಪೋಲೀಸರಿಗೆ ತಿಳಿಸಿದನು. ಕೋತಿಯನ್ನು ಹಿಡಿಯಲು ಪ್ರಯತ್ನಗಳಾಗುತ್ತಿವೆ. ಕೋತಿಯನ್ನು ಹಿಡಿದು ಕಳೆದುಹೋದ ಹಣವನ್ನು ತಂದವರಿಗೆ ಬಹುಮಾನ ಕೊಡಲಾಗುವುದಂತೆ.

ನಮ್ಮ ನಗರ ಸಭೆಯು ಇದನ್ನು ಅನುಸರಿಸಬಾರದೆ?

ಅಮೃತಸರದ ನಗರ ಸಭೆಯವರು ಟೊಳ್ಳಾದ ರಬ್ಬರಿನ ಟಾಯರುಗಳನ್ನು ಉಪಯೋಗಿಸುವ ಜಟ್ಕಾಗಳು ಇನ್ನು ಮುಂದೆ ನಗರಗಳ ಕರ ತೆರಿಗೆ ಕೊಡಬೇಕಾಗಿಲ್ಲವೆಂದು ಠರಾವು ಮಾಡಿರುತ್ತಾರೆ. ರಾವಲ್ ಪಿಂಡಿಯಲ್ಲೂ ಈ ತರದ ನಿಯಮವು ಜಾರಿಯಲ್ಲಿದೆ ಎಂದು ತಿಳಿದುಬರುತ್ತದೆ. ಕಬ್ಬಿಣದ ಚಕ್ರಗಳಿಂದ ರಸ್ತೆಗಳು ನಾಶವಾಗುವುದು ಈ ಯೋಜನೆಯಿಂದ ಅದು ಕಡಿಮೆಯಾಗುತ್ತದೆ. ನಗರದ ರಸ್ತೆಗಳ ಸ್ಥಿತಿಯು ಉತ್ತಮಗೊಳ್ಳುವುದು. ಈ ಕುರಿತು ನಗರ ಸಭೆಯ ಲೆಕ್ಕದ ಖರ್ಚಿನಲ್ಲಿ ಕಡಿಮೆಯಾಗುವುದು. ನಮ್ಮ ನಗರ ಸಭೆಯವರು ಹೀಗೆಯೆ ರಬ್ಬರ ಟಾಯರುಗಳನ್ನು ಉಪಯೋಗಿಸುವ ಗಾಡಿಗಳ ವಾಹನಗಳ ಮೇಲೆ ಸೋಡಿಸಿ ರಿಯಾಯಿತಿಯನ್ನು ಮಾಡಿದರೆ ಅಗ್ಗೆ ನಮ್ಮ ರಸ್ತೆಗಳ ಸ್ಥಿತಿ ಉತ್ತಮವಾಗುವುದು. ನಮ್ಮ ನಗರ ಸಭೆಯು ಇದನ್ನು ಗಮನಿಸಲಿ.

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒಪ್ಪಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1958ರಲ್ಲಿ ಸ್ಥಾಪಿತವಾದ್ದು)

ನೂಲು ಮತ್ತು ಜವುಳಿ ವ್ಯಾಪಾರಸ್ಥರು.

ಮಂಗಳೂರು ಗವರ್ನ್ಮೆಂಟ್ ಕಾಲೇಜಿನ ಹಿರಿಯ ಕರ್ಣಾಟಕ ಪಂಡಿತರಾದ

ಬ್ರಹ್ಮಶ್ರೀ ವಿದ್ವಾನ್ ಉಡ್ಪಿ ಸೀತಾರಾಮಾಚಾರ್ಯರು

ಪಡುಬಿದ್ರೆಯಲ್ಲಿ ತಾನು ಕಂಡ ವಿಶೇಷಗಳ ಕುರಿತು ಹೀಗೆ ಬರೆಯುತ್ತಾರೆ:—

ಪಡುಬಿದ್ರೆಯಲ್ಲಿ ಇತ್ತೀಚೆಗೆ ಪ್ರಸಿದ್ಧಿಗೆ ಬಂದ ದೇವೀ ಭಕ್ತೆಯಾದ ಹೆಂಗಸಿನ ಸಮಾಚಾರವು ಪತ್ರಿಕೆಗಳಲ್ಲಿ ವಿವಿಧ ರೀತಿಯಿಂದ ಪ್ರಕಟವಾಗುತ್ತಿರುವುದನ್ನು ನೋಡಿದ ನಾನು ಈ ವಿಷಯವನ್ನು ಪ್ರತ್ಯಕ್ಷವಾಗಿ ನೋಡಬೇಕೆಂಬ ಕುತೂಹಲದಿಂದ ಮೊನ್ನೆ ಎಂಟನೆಯ ತಾರೀಖಿನಲ್ಲಿ ಹನ್ನೆರಡು ಘಂಟೆಗೆ ಆ ಸ್ಥಳಕ್ಕೆ ಹೋದೆನು. ಆಗ ಆ ಹೆಂಗಸು ಸ್ನಾನ ಮಾಡಿ ಬಂದು ತಾನು ಆರಾಧಿಸುವ ಕೋಣೆಯೊಳಗೆ ಜನರು ತಂದುಕೊಟ್ಟ ಹಣ್ಣುಕಾಯಿ, ಹೂ ಮುಂತಾದುವನ್ನು ತಾನೇ ತೊಳೆದು ಇಡುತ್ತಿದ್ದಳು. ಆ ಕೋಣೆಯ ಉತ್ತರದಲ್ಲಿ ಬಾಗಿಲಿದೆ. ಅದರ ಇದಿರಿಗೆ ಚಿಕ್ಕ ಚಾವಡಿ ಇದೆ. ದಕ್ಷಿಣ ಗೋಡೆಯಲ್ಲಿರುವ ಕಿಟಕಿಯಿಂದ ಕೋಣೆಯೊಳಗೆ ಚೆನ್ನಾಗಿ ಬೆಳಕು ಬೀಳುತ್ತದೆ. ಈಶಾನ್ಯ ಮೂಲೆಯಲ್ಲಿ ಒಳಗೆ ಅಂತರಕ್ಕೆ ಹೋಗುವ ಚಿಕ್ಕ ಬಾಗಿಲು ಇದೆ. ಕೋಣೆಯ ಅಟ್ಟಕ್ಕೆ ರೀಪು ಕಟ್ಟಿ ತಗಡು ಮುಚ್ಚಿದೆ. ಆ ರೀಪಿಗೆ ನಾಲ್ಕು ದೀಪಗಳನ್ನು ತೂಗಹಾಕಿದೆ. ಪಶ್ಚಿಮದ ಗೋಡೆಯಲ್ಲಿ ಕೆಲವು ದೇವರ ಪಟಗಳು ಇವೆ. ಇವುಗಳ ನಡುವೆ ಸುಮಾರು ಆರೇಳು ಅಂಗುಲ ಉದ್ದ, ಮೂರು ನಾಲ್ಕು ಅಂಗುಲ ಅಗಲ, ಒಂದೂವರೆ ಅಂಗುಲ ದಪ್ಪದ ಒಂದು ಹಲಿಗೆಯ ತುಂಡು ಮದನ ಕೈಯಲ್ಲಿ ನಾಗಂದಿಗೆ ಇಡುವಂತೆ ಉದ್ದವಾದ ಎರಡು ಕಬ್ಬಿಣದ ಮೊಳೆಗಳ ಮೇಲೆ ಇಡಲ್ಪಟ್ಟಿದೆ. ಇದೇ ಆಕೆಯ ಪೂಜಾ ಸಾಧನವಾಗಿ ಮಾಡಿಕೊಂಡ ವಿಗ್ರಹವಂತೆ. ನಾನು ಪರೀಕ್ಷಿಸುವುದಕ್ಕಾಗಿಯೇ ಹೋದುದರಿಂದ ಆ ಕೋಣೆಯ ಬಾಗಿಲಲ್ಲೇ ಪೂರ್ವಮುಖವಾಗಿ ಕುಳಿತು ಒಳಗೆ ನಡೆಯುವುದನ್ನೆಲ್ಲಾ ನೋಡುತ್ತಿದ್ದೆನು. ಕೋಣೆಯೊಳಗೆ ಅವಳು ಹೊರತು ಮಿಕ್ಕವರು ಯಾರೂ ಇರಲಿಲ್ಲ. ಅಂತರದ ಚಿಕ್ಕ ಬಾಗಿಲಿನಿಂದ ಇವಳಿಗೆ ಬೇಕಾದ ನೀರನ್ನು ಮಾತ್ರ ತಂದುಕೊಡುತ್ತಿದ್ದರು. ನಾನು ಕುಳಿತಿದ್ದ ಬಾಗಿಲ ಎರಡು ಪಾರ್ಶ್ವಗಳ ಗೋಡೆಯ ಒಳಭಾಗ ಮಾತ್ರ ನನಗೆ ಕಾಣದೆ ಇದ್ದರೂ ಆ ಭಾಗವನ್ನು ಸಹ ಒಂದು ಸಾರಿ ಇಣುಕಿ ನೋಡಿದ್ದೆನು. ಅಲ್ಲಿ ಜನರು ನಿಲ್ಲುವಷ್ಟು ಸ್ಥಳವಿಲ್ಲ. ಅಲ್ಲಿ ಒಂದು ಕಡೆಯಲ್ಲಿ ಹೂವಿನ ಬುಟ್ಟಿಯೂ, ಇನ್ನೊಂದು ಕಡೆಯಲ್ಲಿ ನೀರಿನ ಬಿಂದಿಗೆಯೂ ಇದ್ದಿತು. ಕೋಣೆಯ ಒಳಗಡೆಯಲ್ಲಿ ಹಣ್ಣುಕಾಯಿಯ ತಟ್ಟೆಗಳೇ ತುಂಬಿಹೋಗಿದ್ದವು. ಈ ಹಣ್ಣುಕಾಯಿಗಳನ್ನೆಲ್ಲಾ ತೊಳೆದು ಆದ ಮೇಲೆ ಪಶ್ಚಿಮದ ಗೋಡೆಯ ಬದಿಯಲ್ಲಿಟ್ಟಿದ್ದ ಬೆಂಚಿಯ ಮೇಲೆ ಹತ್ತಿ ಪಟಗಳಿಗೂ ಆ ಹಲಿಗೆಗೂ ಹಾಕಿದ ಹೂಮಾಲೆಗಳನ್ನೆಲ್ಲಾ ತೆಗೆದು, ಆ ಹಲಗೆಯನ್ನು ಒಂದು ಪಾತ್ರೆಯಲ್ಲಿಟ್ಟು ನೀರಿನಿಂದ ತೊಳೆದು ಹಾಲನ್ನು ಅಭಿಷೇಕಮಾಡಿದಳು. ತಿರಿಗಿ ನೀರಿನಿಂದ ಚೆನ್ನಾಗಿ ತೊಳೆದು ಒರಸಿ ಮೊದಲಿನಂತೆಯೇ ಗೋಡೆಯ ಮೊಳೆಗಳ ಮೇಲಿಟ್ಟು, ಚಿಕ್ಕ ಎರಡು ಪಂಚಪಾತ್ರೆಗಳಲ್ಲಿ ಹಾಲನ್ನೂ ನೀರನ್ನೂ ಇಟ್ಟು, ಆ ಹಲಿಗೆಗೂ ಮಿಕ್ಕ ಪಟಗಳಿಗೂ ಹೂಗಳಿಂದ ಅಲಂಕಾರ ಮಾಡಿದಳು. ಮತ್ತೆ ತಾನು ಮೇಲೆ ಹತ್ತಿದ ಬೆಂಚಿಯನ್ನು ಒರಸಿ ಅದರ ಮೇಲೆ ಒಡೆದ ತೆಂಗಿನ ಕಾಯಿಗಳನ್ನಿಟ್ಟ ಹರಿವಾಣಗಳನ್ನೆಲ್ಲಾ ಒಂದರ ಮೇಲೆ ಮತ್ತೊಂದರಂತೆ ಅಡಕಿಸಿದ್ದಳು. ಸುಮಾರು ಐವತ್ತರ ಮೇಲೆ ತಟ್ಟೆಗಳಿದ್ದು ಒಂದೊಂದರಲ್ಲಿ ಮೂರು ನಾಲ್ಕು ತೆಂಗಿನಕಾಯಿಗಳಿದ್ದವು. ಇಷ್ಟನ್ನೂ ತಾನೇ ಒಡೆದು ಇಡುತ್ತಿದ್ದಳು. ಹೀಗೆ ಎಡದ ಕೈಯಲ್ಲಿ ತೆಂಗಿನ ಕಾಯಿಯನ್ನು ಹಿಡಿದು ಕತ್ತಿಯಿಂದ ಹೊಡೆದು ತುದಿಯಿಂದ ಮಾಟುವಾಗ ಒಂದು ತೆಂಗಿನಕಾಯಿಯ ಹೋಳಿನಲ್ಲಿ ಒಂದು ದುಂಡಾದ ಘನ ಪದಾರ್ಥವು ಕಾಣಿಸಿತು. ಅದೇನೆಂದು ಕೇಳಿದಾಗ ಆ ತೆಂಗಿನಹೋಳನ್ನೇ ಬಾಗಿಲ ಬಳಿ ತಂದಿಟ್ಟಳು. ಅದನ್ನು ನಾನು ತೆಗೆದು ನೋಡಿದೆನು. ಅಲ್ಲಿದ್ದವರೆಲ್ಲರೂ ಕೈಯಲ್ಲಿ ಹಿಡಿದು ನೋಡಿದರು. ಅದು ದೊಡ್ಡ ನೆಲ್ಲಿ ಹಣ್ಣಿನ ಆಕಾರವುಳ್ಳದ್ದಾಗಿಯೂ, ಸ್ವಚ್ಛವಾಗಿಯೂ ಇತ್ತು. ಅದು ಶಿವಲಿಂಗವೆಂದು ಅಲ್ಲಿದ್ದವರೆಲ್ಲ ಹೇಳಿದರು. ಹೀಗೆಯೇ ಮತ್ತೊಂದು ಕಾಯಿಯ ಒಳಗೆ ಸೇವಂತಿಗೆ ಹೂ ಕಾಣಿಸಿತೆಂದು ನನ್ನ ಹತ್ತಿರ ಕುಳಿತವರು ಹೇಳಿ ಅದನ್ನು ತೆಗೆದು ಎಲ್ಲರಿಗೆ ತೋರಿಸಿದರು. ಆದರೆ ಶಿವಲಿಂಗವು ಕಾಯನ್ನೊಡೆಯುವಾಗಲೇ ಒಳಗಿನಿಂದ ಕಾಣಿಸಿದಂತೆ ಇದು ನನಗೆ ಕಾಣಿಸಲಿಲ್ಲವಾದುದರಿಂದ ಆ ವಿಷಯವನ್ನು ಮಾತ್ರ ಏನೆಂದು ಹೇಳಲಾರೆನು. ಕಾಯನ್ನೆಲ್ಲಾ ಒಡೆದು ಇಟ್ಟ ಮೇಲೆ ಆ ಬೆಂಚಿನ ಇದಿರಲ್ಲಿ ಒಂದು ಕಾಲುಮನೆಯ ಮೇಲೆ ಒಂದು ತಟ್ಟೆಯಲ್ಲಿ ಸುಮಾರು ಒಂದು ಸೇರಾಗುವಷ್ಟು ಕರ್ಪೂರವನ್ನು ಹಾಕಿಟ್ಟು ಒಂದು ತುಂಡನ್ನು ಹಚ್ಚಿ ಆ ತಟ್ಟೆಯಲ್ಲಿಟ್ಟು ತಾನು ಪಶ್ಚಿಮಾಭಿಮುಖವಾಗಿ ಮೊಣಕಾಲೂರಿ ನಮಸ್ಕಾರ ಮಾಡಿದಳು. ಕೋಣೆಯ ಹೊರಗೆ ಚಾವಡಿಯಲ್ಲಿ ಸಾಲಿಗೆ ಕರ್ಪೂರ ಹಚ್ಚಿ ಜನರು ಭಜನೆಯನ್ನು ಮಾಡುತ್ತಿದ್ದರು. ಒಳಗೆ ತಟ್ಟೆಯಲ್ಲಿ ಹಚ್ಚಿದ ಕರ್ಪೂರ ಜ್ವಾಲೆಯು ಆರುವ ವರೆಗೆ ಕೈಮುಗಿದುಕೊಂಡು ಪೂರ್ವದ ಗೋಡೆಗೆ ಒರಗಿ ನಿಂತಿದ್ದಳು. ಅವಳು ಮಾಡಿದ ಪೂಜೆಯೆಂದರೆ ಇಷ್ಟೇ. ಇಷ್ಟಾಗುವಾಗ ಘಂಟೆ ಮೂರಾಯಿತು. ಇಷ್ಟು ಸಮಯದಲ್ಲಿಯೂ ಒಂದು ಕ್ಷಣ ವಿಶ್ರಾಂತಿಯಿಲ್ಲದೆ ತಾನೊಬ್ಬಳೇ ಕೆಲಸಮಾಡುತ್ತಿದ್ದಳು. ಹೊರಗೆ ಒಂದು ಕಡೆ ಭಜನೆಯವರ ಗದ್ದಲ. ಮತ್ತೊಂದು ಕಡೆ ಸ್ಥಳ ಸಂಕೋಚದಿಂದ ಬಂದು ನೋಡಿಕೊಂಡು ಹೋಗುವವರ ನೂಗಾಟ, ನಡು ನಡುವೆ ನರಸ್ತ್ರೀ ಜನಗಳ ಗಲ್ಲಾ ಗೊಂದಲವಾಗುತ್ತಲೇ ಇತ್ತು. ಇವುಗಳೊಂದರ ಗೊಡವೆಯೇ ಇಲ್ಲದೆ ಆಕೆಯು ತನ್ನ ಪಾಡಿಗೆ ಕೆಲಸವನ್ನು ಮಾಡುತ್ತಿದ್ದಳು. ಕೆಲವರು ತಾವು ಮಾಡುವ ಕೆಲಸವನ್ನು ಹಲವರು ನೋಡುತ್ತಾರೆಂದರೆ ಜನರಿಗೆ ರಂಜನೆಯಾಗುವಂತೆ ತಮ್ಮ ಚೇಷ್ಟೆಗಳನ್ನು ಹೆಚ್ಚಿಸುವುದುಂಟು. ಮತ್ತೆ ಕೆಲವರು ಹೆದರಿಕೆಯಿಂದ ಮಾಡುವ ಕೆಲಸದಲ್ಲಿಯೂ ತಪ್ಪಿ ಬೀಳುವುದುಂಟು. ಇವಳು ಆ ವಿಧವಾದ ವಿಕಾರವೊಂದೂ ಇಲ್ಲದೆ ಚಿಕ್ಕ ಮಕ್ಕಳು ಗೊಂಬೆ ಮುಂತಾದುವುಗಳನ್ನು ಹಿಡಿದು ಅತೀ ಶ್ರದ್ಧೆಯಿಂದ ತಮ್ಮ ಆಟದ ಕೆಲಸವನ್ನು ಹೇಗೆ ಮಾಡುತ್ತಿರುವುವೋ ಹಾಗೆಯೇ ಹಲವರು ತನ್ನ ಪೂಜೆಯನ್ನು ನೋಡುವರೆಂದು ಹೆಮ್ಮೆಪಡದೆ ಅವರಿಗೆ ರಂಜನೆಯಾಗಬೇಕೆಂದು ಯಾವ ಕೃತ್ರಿಮಭಾವವನ್ನೂ ತೋರಿಸದೆ ಜನರೇನು ಹೇಳುವರೋ ಎಂಬ ಭೀತಿಯೂ ಇಲ್ಲದೆ, ನಿರ್ವಿಕಾರವಾದ ಮನೋವೃತ್ತಿಯಿಂದಲೇ ಇದ್ದಳು. ಅಷ್ಟರಲ್ಲಿ ಅಲ್ಲಿಯವರೊಬ್ಬರು ಬಂದು ದರ್ಶನವಾಗಬೇಕೆಂದು ಬಹಳ ಜನರು ಅಪೇಕ್ಷಿಸುತ್ತಾರೆ, ಆಗದ್ದರೆ ಅವರಿಗೆಲ್ಲಾ ಸಂತೋಷವಾಗುತ್ತದೆಂದು ಹೇಳಿದರು. ಅವಳೇನೂ ಉತ್ತರ ಹೇಳಲಿಲ್ಲ. ಮೇಲೆ ತೂಗಹಾಕಿದ ದೀಪಗಳನ್ನು ಸರಿಮಾಡುತ್ತಿದ್ದಳು. ಹೀಗೆ ದಕ್ಷಿಣ ದೀಪದ ಕರಿಯನ್ನು ತೆಗೆಯುತ್ತಿದ್ದವಳು ಥಕ್ಕನೆ ಕೈಯಿಂದ ಕಣ್ಣನ್ನು ಮುಚ್ಚಿಕೊಂಡು ಅಲ್ಲಿಯೇ ತಲೆಬಾಗಿ ನಿಂತು ಕಷ್ಟದಿಂದ ಮೆತ್ತಗೆ ಹೂಂಕರಿಸುತ್ತಾ ಇದ್ದಳು. ಕಣ್ಣಿಗೇನಾದರೂ ದೀಪದ ಕಿಡಿ ಹಾರಿತೋ ಎಂದು ನಾನು ಭಾವಿಸಿದೆ. ಅಷ್ಟರಲ್ಲಿ ಕಣ್ಣಿಗೆ ಒತ್ತಿ ಹಿಡಿದ ಬಲಗೈಯ ಮೊಣಗಂಟಿನಿಂದ ಕೆಳಗೆ ಕಾಲುಕುಡ್ತೆಯಾಗುವಷ್ಟು ಬಿಳಿಯ ದ್ರವವು ಸುರಿಯಿತು. ಅದು ಕಣ್ಣಿನಿಂದ ಹಾಲು ಸುರಿಯುವುದೆಂದು ಅಲ್ಲಿಯವರು ಹೇಳಿದರು. ನನಗೆ ಹಿಮ್ಮೊಗವಾಗಿ ಅವಳು ನಿಂತುಕೊಂಡುದರಿಂದ ಅದು ಕಣ್ಣಿನಿಂದ ಸುರಿದುದೋ ಬಾಯಿಯಿಂದ ಉಗುಳಿದುದೋ ಎಂದು ಸಂದೇಹವಾಯಿತು. ಪತ್ರಿಕೆಗಳಲ್ಲಿ "ವಂಚನೆ, ವಂಚನೆ" ಎಂಬ ಘೋಷಣೆಯನು ಓದಿದ್ದ ನನ್ನ ಮನಸ್ಸಿಗೆ ವಿಶ್ವಾಸ ಉಂಟಾಗಲಿಲ್ಲ. ಆದರೂ ನಾನು ಆ ಕಡೆಗೆ ನೋಡುತ್ತಿದ್ದೆನು. ಐದಾರು ನಿಮಿಷದ ಮೇಲೆ ಒಳಗಿನಿಂದ ಒಬ್ಬನು ಬಂದು ಕೆಳಗೆ ಬಿದ್ದ ದ್ರವವನ್ನು ಒರಸಿದನು. ಆಗ ಆಕೆಯು ಕೈನೀಡಲು ಈತನು ನೀರನ್ನು ಕೊಟ್ಟನು. ಅವಳು ಕೈಯನ್ನೂ ಕಣ್ಣನ್ನೂ ತೊಳೆದುಕೊಂಡು ಪೂರ್ವದ ಗೋಡೆಯನ್ನು ಆಧರಿಸಿ ನಿಂತುಕೊಂಡು ಕೈಯಿಂದ ಬಲಕಣ್ಣನ್ನು ಹಿಸುಕುತ್ತಾ ಇದ್ದಳು. ಕಣ್ಣು ತೆರೆಯುವುದಕ್ಕೆ ಕಷ್ಟವಾಗಿತ್ತು, ಹುಬ್ಬಿನ ಬದಿಗಳು ಉಬ್ಬಿದಂತೆ ಇದ್ದುವು. ಸ್ವಲ್ಪ ತೆರೆಯುವಾಗ ಕಣ್ಣು ನೋವಿನವರ ಕಣ್ಣಿನಂತೆ ಕೆಂಪಾಗಿತ್ತು ಮತ್ತು ಅಂಗೈಯಿಂದ ಕಣ್ಣನು ತಿಕ್ಕುತ್ತಲೇ ಇದ್ದಳು. ಆಗ ಮತ್ತೊಮ್ಮೆ ಹಾಗೆಯೇ ಬಿಳಿ ದ್ರವವು ಸುರಿಯಿತು. ಈಗ ಅವಳು ಪಶ್ಚಿಮಕ್ಕೆ ಮುಖವಾಗಿ ನಿಂತುಕೊಂಡಿದ್ದುದರಿಂದ ಅವಳ ಮೂಗೂ ಬಾಯಿಯೂ ಸರಿಯಾಗಿ ಕಾಣುತ್ತಿದ್ದುವು. ಆದುದರಿಂದ ಕಣ್ಣಿನಿಂದಲೇ ಸುರಿದುದೆಂದೂ ನಾನೂ ನಂಬಬೇಕಾಯಿತು. ಆ ಮೇಲೆ ಹೇಗೋ ಸುಧಾರಿಸಿಕೊಂಡು ತಿರಿಗಿ ಕಣ್ಣನ್ನೂ, ಕೈಯನ್ನೂ ತೊಳೆದುಕೊಂಡು 'ಪ್ರಸಾದವಾಗಿದೆ ಎಲ್ಲರಿಗೆ ಕೊಟ್ಟು ಬಿಡುವ' ಎಂತ ಅವಳ ಭಾಷೆಯಿಂದಾಗಿ ಹೇಳಿದಳು. ಆಗ ಒಬ್ಬರು ಪ್ರಸಾದಕ್ಕಿಂತಲೂ ಜನರಿಗೆ ದರ್ಶನದ ಅಪೇಕ್ಷೆ ಹೆಚ್ಚಾಗಿದೆ, ಕೊಟ್ಟದ್ದರೆ ಆಗುತ್ತಿತ್ತೆಂದು ಹೇಳಿದರು. ಅವಳು ಏನೊಂದೂ ಉತ್ತರವನ್ನು ಹೇಳದೆ ಸ್ವಲ್ಪ ಸಮಯದ ಮೇಲೆ ತಿರಿಗಿ "ಪ್ರಸಾದ ಕೊಟ್ಟು ಬಿಡುವ, ದೂರದಿಂದ ಬಂದವರು ಮತ್ತೆ ಬಿಟ್ಟು ಹೋಗುತ್ತಾರೆ ಆದುದರಿಂದ ಬೇಗನೇ ಕೊಡೋಣ" ಎಂತ ಹೇಳಿದಳು. ಹಾಗೆಯೇ ಬೆಂಚಿನ ಮೇಲೆ

— ೧೩ನೇ ಪುಟವನ್ನು ನೋಡುವುದು —

Look Out! Follow the Crowd!

Grand Indo-English Alternative Programme.

Daily 3 Shows at 5-15, 7-30, 9-30 P.M.
Matinee show on Sunday at 2-30 P.M. From 11-3-1936

Sri Krishna Cinema

(Theatre magnificent of Mangalore)

Proudly presents

M. G. M.'s Stupendous long awaited master piece comedy

'SONS of the DESERT'

Headed by **Laurel & Hardy**

the new shaik Charly Chase (who increase the art of the twin)

You wil laugh until the sands of the desert grow cold. You will dance to their tunes. You will be made to recapture the fun even in the dream. AND

Kumar Movitones Stunt Subject

'DESERT QUEEN'

Starring **JAL MERCHANT**
Krishna Kumari & Sitara.

Ah! The stunts in it, Oh! The love in it. Wee! The fun in it. Zoom! The Speed of it.

Readers Don't miss the chance. Reserve the Seats. Don't feel after disappointmet. Only for few days.

Hal Roach presents
STAN LAUREL and **OLIVER HARDY**

ಓಡಿ ಬನ್ನಿರಿ! ಕೂಡಿ ಬನ್ನಿರಿ ನೋಡ ಬನ್ನಿರಿ

ಆಂಗ್ಲ-ಹಿಂದೂ ಸಿನೆಮಗಳನ್ನು ಬದಲುಬದಲಾಗಿ ತೋರಿಸುವ ದಿವ್ಯ ಏರ್ಪಾಡು ಇಂದೀಗ ಮಾಡಲ್ಪಟ್ಟಿದೆ.

ತಾ 11-3-1936ರಿಂದ

ದಿನಂಪ್ರತಿ 3 ದೇಖಾವೆಗಳು 5-15, 7-30 9-30ಕ್ಕೆ
ರವಿವಾರ ಮೆಟಿನಿ ದೇಖಾವೆ 2-30ಕ್ಕೆ.

ಶ್ರೀ ಕೃಷ್ಣಾ ಸಿನೆಮ

ಮಂಗಳೂರಿನ ಭವ್ಯವೂ ಮನೋಹರವೂ ಆದ ಮಂದಿರದಲ್ಲಿ

ಮೆಟ್ರೋ ಗೋಲ್ಡ್ವಿನ್ ಕಂಪೆನಿಯವರ ಬಹು ಕಾಲದಿಂದಲೂ ನಿರೀಕ್ಷಿಸಲ್ಪಟ್ಟು ಅನಿರೀಕ್ಷಿತವಾಗಿ ಬಂದ ಜಗತ್ತನ್ನೇ ಕೋಲಾಹಲದಲ್ಲಿ ಮುಳುಗಿಸಿದ

ಸನ್ಸ್ ಒಫ್ ದಿ ಡೆಸರ್ಟ್

ಲೋರೆಲ್ ಮತ್ತು ಹಾರ್ಡಿ

ಯವರು ತಮ್ಮ ವಿಚಿತ್ರ ನಟನೆಯ ಪರ್ವವನ್ನು ಇದರಲ್ಲಿ ತೋರಿಸುವರು.

ಕ್ಷಣಕ್ಷಣಕ್ಕೂ ನಗುವಿನ ಸುಗ್ಗಿ!

ಮತ್ತು ಕುಮಾರ ಮುವಿಟೋನ್ ಕಂಪೆನಿಯವರ

ಡೆಸರ್ಟ್ ಕ್ವೀನ್ ಅಥವಾ

ರೆಗಿಸ್ತಾನ್ ಕಿ-ರಾಣಿ ಎಂಬ ಸ್ಟಂಟ್ ಚಿತ್ರ

ತರುಣ ಉತ್ಸಾಹಿ **ಜಾಲ್ ಮರ್ಚೆಂಟ್**

ಮತ್ತು ಕೃಷ್ಣ ಕುಮಾರಿ, ಸಿತಾರೀ ದೇವಿಯರೂ ಈ ಚಿತ್ರದಲ್ಲಿ ಭಾಗವಹಿಸಿರುವರು.

ವಿನೋದಮಯ! ಸಂಗೀತಮಯ!

ನೋಡಲು ಎಂದೆಂದಿಗೂ ತಪ್ಪದಿರಿ!

ಕೋತಿಯು ಹತ್ತು ಸಾವಿರ ರೂಪಾಯಿಗಳನ್ನು ಕದ್ದು ಮಾಯವಾಯಿತು.

ಸಿರಿಯಾದಲ್ಲಿನ ಗಲಭೆ ನಿವಾರಣೆಯಾಗಿರುತ್ತದೆ.

ಗುಟ್ಟು ರಟ್ಟಾಯಿತು !

ಜಪಾನು ಇನ್ನೊಂದು ಪೆಸಿಯಿಸ್ಟ ಇಟೇಲಿಯು?

ಸಿರಿಯಾದಲ್ಲಿನ ಗಲಭೆ ನಿವಾರಣೆಯಾಗಿರುತ್ತದೆ

ಕಳೆದ ಮಹಾಯುದ್ಧದ ನಂತರ ಜನಾಂಗಸಭೆಯು ಮಾಂಡೇಟಿನಿಂದಾಗಿ, ಫ್ರೆಂಚರ ಅಧಿಕಾರಕ್ಕೆ ಸೇರಿದ ಪ್ರದೇಶವಾದ ಸಿರಿಯಾದಲ್ಲಿ ಕೆಲ ದಿವಸಗಳ ಹಿಂದೆ ರಾಜಕೀಯ ಕಾರಣಗಳಿಂದ ದೊಡ್ಡ ಗಲಭೆಯು ಉಂಟಾಗಿತ್ತು. ಅಲ್ಲಿನ ಅರೇಬರು ಬ್ರಿಟಿಷರಿಂದ ಸ್ವತಂತ್ರ ಪಡೆದಂತೆ, ಸ್ವಾತಂತ್ರ ಪಡೆಯಬೇಕಾಗಿ ಈ ಚಳವಳದ ಉದ್ದೇಶವಾಗಿತ್ತು. ಈ ಚಳವಳದಲ್ಲಿ ಅನೇಕ ಅನರ್ಥಗಳು ಉಂಟಾಗಿದ್ದವು. ನಾವಿರಾರು ಮಂದಿಗಳು ಸೆರೆಮನೆ ಸೇರಿದ್ದರು. ಈಗ ಈ ಗಲಭೆಯು ನಿವಾರಣೆಯಾಗಿರುವುದೆಂದು, ಫ್ರೆಂಚ ಸರಕಾರವು ಇವರ ಸಲಹೆಗಳನ್ನು ಪೂರೈಸುವೆನೆಂದು ಭರವಸೆ ಕೊಟ್ಟಿದ್ದಾರೆಂದೂ, ಇಲ್ಲಿನವರ ಪ್ರಾತಿನಿಧ್ಯ ಮಂಡಳವೊಂದು ಪೇರಿಸ್ ನಗರಕ್ಕೆ ಬೇಗನೆ ಹೋಗುವುದೆಂದೂ, ಮೊನ್ನೆ ಚಳವಳದಲ್ಲಿ ಸೆರೆಮನೆ ಸೇರಿದ ಅನೇಕ ರಾಜಕೀಯ ಕೈದಿಗಳ ಬಿಡುಗಡೆಯಾಗಿರುತ್ತದೆಂದು ತಿಳಿಯಬರುತ್ತದೆ.

ಪೌರ್ವಾತ್ಯದಲ್ಲಿ ಮಹಾಯುದ್ಧ!

ಪೌರ್ವಾತ್ಯದಲ್ಲಿ ಭಯಂಕರ ಯುದ್ಧ ಸಿದ್ಧತೆಗಳು ನಡೆಯುತ್ತಿವೆಯೆಂದೂ, ಅತ್ತಕಡೆ ಪ್ರಯಾಣ ಮಾಡಿದ ಓರ್ವ ಅಮೇರಿಕನ್ ಪತ್ರಿಕಾ ಪ್ರತಿನಿಧಿಗಳಿಂದ ತಿಳಿದು ಬರುತ್ತದೆ. ಈ ಯುದ್ಧವು ಜಪಾನಿಗೂ ರಷ್ಯಾಕ್ಕೂ ನಡೆಯುವುದು. ಮಂಚೂರಿಯಾ ಮತ್ತು ಸೋವಿಯಟ್ ಗಡಿನಾಡಿನಲ್ಲಿ ಎಲ್ಲೆಲ್ಲೂ ಸಂಗ್ರಾಮ ಸಿದ್ಧತೆಗಳು ಕಾಣಸುತ್ತಿವೆಯಂತೆ. ಇಗಲಲ್ಲಿ ಇರೋವು ಖಂಡದಲ್ಲಿ ನಡೆದಂತೆ ಜಪಾನೀಯರ ಮಂಚೂಕ್ಯೊದಲ್ಲಿ ದಂಡಯೋಜನೆಗಳಿಂದ ಕೂಡಿದ, ೫೦-೬೦ ಕೈಲ್ ಗಾಡಿಗಳನ್ನೂ ಇಲ್ಲಿನ ಎಲ್ಲಾ ಟ್ರೈನುಗಳಲ್ಲಿ ಜಪಾನೀಯ ಸಂಗ್ರಾಮ ನಾಯಕರು ಅತ್ತಿತ್ತ ಪ್ರವಾಸ ಮಾಡುವುದನ್ನೂ, ಕಂಡಿರುವರಂತೆ. ರಷ್ಯಾದ ಮೊಸ್ಕೊ ನಗರದಿಂದ, ಮಂಚೂಕ್ಕೊ ಗಡಿಗೆ ದಿವಸಕ್ಕೆ—೩೫ ಟ್ರೈನುಗಳು ೩೫ ಗಾಡಿಗಳಿಂದ ಕೂಡಿದ, ಸೈನಿಕರನ್ನೂ ಯುದ್ಧ ಸಾಮಗ್ರಿಗಳನ್ನೂ ಸಾಗಿಸುವುದು ಇವರು ನೋಡಿರುವರು. ಅಲ್ಲದೆ ಗಡಿನ್ಯಾಡಿನ ಪಕ್ಕದಲ್ಲೆ ಸಾವಾರಣ ೧೫೦೦ ವಿಮಾನಗಳನ್ನೂ ರಷ್ಯಾದವರು ತಂದಿರಿಸಿದ್ದಾರಂತೆ.

ಜಪಾನು ಇನ್ನೊಂದು ಪೆಸಿಯಿಸ್ಟ ಇಟೇಲಿಯೆ?

ಮೊನ್ನೆ ಜಪಾನಿನಲ್ಲಿ ನಡೆದ ಕ್ರಾಂತಿಯಿಂದ ಏನು ವ್ಯಕ್ತವಾಗುತ್ತದೆ. ಜಪಾನಿನಲ್ಲಿ ಸಂಗ್ರಾಮಿಕರ ಪ್ರೇರಣೆಯು, ಬಹಳವಾಗಿದೆಂದು ಈ ಸಂಗ್ರಾಮಿಕರಿಗೆ, ಪೆಸಿಯಿಸ್ಟ ಇಟೇಲಿಯಾನರಂತೆ, ತಮ್ಮ ಸಾಮ್ರಾಜ್ಯವನ್ನು ಬೆಳೆಯಿಸುವುದು ಒಂದು ದೊಡ್ಡ ಹುಚ್ಚು. ಇವರಲ್ಲಿ ರಾಷ್ಟ್ರೀಯ ಹೆಸ್ಸು ಬಹಳ ಇದರಿಂದಲೆ ಜಪಾನೀಯರು ಈಗ ಚೀನಾದ ಮೇಲೂ, ರಷ್ಯಾದ ಮೇಲೂ ಕೈಮಾಡಿರುತ್ತಾರೆ. ಇದರ ಪರಿಣಾಮವೇನಾಗುವುದು? ಚೀನಾದಲ್ಲಿ ಹಿತವಿದ್ದ ಪಾಶ್ಚಾತ್ಯ ಜನಾಂಗಗಳೂ, ಅಮೇರಿಕಾ ಸರಕು, ಇವರ ಮೇಲೆ ರೇಗುವರು. ತಮ್ಮ ಕಲಹವನ್ನು ಸದ್ಯಕ್ಕೆ ಬದಿಗಟ್ಟು, ತಮ್ಮ ಪೌರ್ವಾತ್ಯದಲ್ಲಿನ ಶ್ರೇಯಸ್ಸಿಗೆ ಆತಂಕಗಳನ್ನು ತರುವ ಜಪಾನಿನ ಮೇಲೆ ಎಲ್ಲರೂ ಒಂದಾಗಿ ಬೀಳಬಹುದು. ಜಪಾನಿಯ ಪೆಸಿಯಿಸ್ಟರಾದ ಈ-ಸಂಗ್ರಾಮ ಪುರುಷರಿಗೆ ತಮ್ಮ ಹೆಸ್ಸು ಎದುರು, ಈ ಪರಿಣಾಮಗಳನ್ನು ಕಾಣಸುವುದಿಲ್ಲ. ಪಶ್ಚಿಮದಲ್ಲೂ, ಯುದ್ಧ ಮೋಡಗಳು ಕವಿಯುತ್ತಿವೆ. ಸದ್ಯದಲ್ಲಿ ಈ ಪ್ರಪಂಚದ ಸ್ಥಿತಿಯು ಹೇಗೆ ನಿಲ್ಲುವುದೆಂದು ಹೇಳಲು ಸಾಧ್ಯವಾಗುವುದಿಲ್ಲ.

ಹಿಂದೂದೇಶದ ವಿದ್ಯಾಭ್ಯಾಸ.

ಹಿಂದೂದೇಶದ ವಿದ್ಯಾಭ್ಯಾಸದ ಕುರಿತು ಇಂಡಿಯಾ ಸರಕಾರದ ವರದಿಯು ಹೊರ ಬಿದ್ದಿರುತ್ತದೆ. ಎಲ್ಲಾ ಪ್ರಾಂತೀಯ ಸರಕಾರಗಳಿಗೆ ವಿದ್ಯಾಭ್ಯಾಸಕ್ಕಾಗಿ ತಗಲಿದ ವೆಚ್ಚದ ಪಟ್ಟಿಯು ಕೊಡಲಾಗಿದೆ. ಇದು ಸರಾಸರಿ ಅವುಗಳ ಜುಮ್ಲಾ ಖರ್ಚಿನ ಸೇಕಡಾ ೧೩ ಆಗುತ್ತದೆ. ವಿದ್ಯಾವಂತರ ಸಂಖ್ಯೆಯು ವೃದ್ಧಿಯಾಗಿರುವುದಂತೆ,—ಆದರೆ, ನಿರುದ್ಯೋಗ ಮಾತ್ರ ಹೆಚ್ಚಿರುವುದು. ವಿದ್ಯಾಭ್ಯಾಸಂಗಮಾಡುವ ಸ್ತ್ರೀಯರ ಸಂಖ್ಯೆಯೂ ಹೆಚ್ಚುತ್ತದೆ. ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಂಗ ಮಾಡುವವರ ಸಂಖ್ಯೆಯು ಹೆಚ್ಚುತ್ತಿದೆ. ಆದರಿಂದ ಪದವೀಧರ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು ಮಾತ್ರ ಹೆಚ್ಚಾಗುತ್ತಿದೆ. ಒಟ್ಟಾರೆ ಸರಕಾರವು ವಿದ್ಯಾಭ್ಯಾಸಕ್ಕಾಗಿ ಇಂದಿಷ್ಟು ದ್ರವ್ಯವನ್ನು ಖರ್ಚುಮಾಡಿರುತ್ತದೆ. ಆದರೆ ಪ್ರತಿಫಲಗಳು ಅಷ್ಟು ಸಮಾಧಾನಕರವಲ್ಲ. ಹಿಂದೂದೇಶದ ವಿದ್ಯಾಭ್ಯಾಸಕ್ರಮದಲ್ಲಿ ಅನೇಕ ಸುಧಾರಣೆಗಳು ಬೇಕಾಗಿವೆ. ಜುಮ್ಲಾ ಖರ್ಚಿನ ಸೇಕಡಾ ೨೫ ಸಲೆಯಾದರೂ, ವಿದ್ಯಾಭ್ಯಾಸ ಪ್ರಚಾರಕ್ಕೆ ವಿನಿಯೋಗವಾಗಬೇಕು. ನಮ್ಮ ದೇಶದಲ್ಲೂ, ವಿದ್ಯಾಭ್ಯಾಸವು, ಫಿಲಿಪ್ಪಾನ ದ್ವೀಪಗಳಲ್ಲಿ, ಜಪಾನು, ರಷ್ಯ ಇತ್ಯಾದಿ ದೇಶಗಳಲ್ಲಿ ನಡೆದಂತೆ, ನಡೆಯಬೇಕು. ಪ್ರತಿಯೊಬ್ಬ ಭಾರತೀಯನು ವಿದ್ಯಾವಂತನಾಗಬೇಕು— ಭರತಖಂಡದ ಸಾಂಪತ್ತಿಕ ಸ್ಥಿತಿಯು ಉತ್ತಮಗೊಳ್ಳಬೇಕು.

ನ್ಯೂಯೋರ್ಕಿನಲ್ಲಿ ಕಳೆದ ವಾರ ನಡದ ಘಟನೆ

ನ್ಯೂಯೋರ್ಕಿನ ಕಟ್ಟಡಗಳಲ್ಲಿ ಮುಷ್ಕರವು ಮೊದಲಾಗಿದೆ. ಅಂದರೆ ಇವುಗಳ ಪಹರೆಗಳು ತಂಬಾ ಈ ಕಟ್ಟಡಗಳ ಕಾವಲುಗಾರರ ಮುಷ್ಕರ ಹಿಡಿದಿರುವರು. ಸಾಧಾರಣ ೧೫೦ ೨೦೦ ಈ ಕಟ್ಟಡದಲ್ಲಿ ಕೆಲಸ ಮಾಡುತ್ತಿರುವವರು (ಲಿಫ್ಟುಗಳನ್ನು ಚಲಿಸುವವರು ಇತ್ಯಾದಿಗಳು) ಮುಷ್ಕರ ಹಿಡಿದಿರುವರು. ಎಂದರೆ ಸಾಧಾರಣ ೧೧ ೦೦೦ ಕಟ್ಟಡಗಳ ವ್ಯವಹಾರವು ನಿಂತಂತೆ ಜನರು ಮಹಡಿಗಳ ಮೇಲೆನೆ ಇರಬೇಕಾಗಿದೆ. ಇವರನ್ನು ಸಾಗಿಸುವವರಿಲ್ಲ. ಅಲ್ಲಿನ ಆಸ್ಪತ್ರೆಯ ನೋಟ ಮಾತ್ರ ಇವರು ರಿಯಾಯಿತಿ ಮಾಡಿರುವರಂತೆ. ಮುಷ್ಕರವು ಬೇಗನೆ ನಿವಾರಣೆಯಾಗದೆ ನಿರ್ವಾಹವಿಲ್ಲ. ತಮ್ಮ ಸ್ಥಿತಿಯನ್ನು ಸುಧಾರಣೆಗೊಳಿಸುವುದು ಈ ಮುಷ್ಕರದ ಉದ್ದೇಶವಂತೆ.

ಗುಟ್ಟು ರಟ್ಟಾಯಿತು!

ಇಟೇಲಿಯ—ಎಬಿಸೀನಿಯಾದ ಮೇಲೆ ಬೀಳಲು ಬ್ರಿಟಿಷ ಸರಕಾರದವರು ಇಟೇಲಿಯು, ಎಬಿಸೀನಿಯವನ್ನು ಪಡೆದರೆ ತಮಗೆ ಅದು ಹೇಗೆ ಪರಿಣಮಿಸುವುದೆಂದು ಪರಿಶೀಲಿಸಿ, ವರದಿ ಮಾಡಲು ಮಿ। ಜೋನ್ ಮಾಫೆ ಎಂಬವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದರು. ಈ ಸಮಿತಿಯು ಗುಪ್ತವಾದ ರೀತಿಯಲ್ಲಿ ಕಾರ್ಯ ನಡೆಯಿಸುತ್ತಿತ್ತು. ಆದರೆ ಈ ಸಮಿತಿಯವರಿಂದ ಗುಪ್ತವಾಗಿ ತಯಾರಾದ ವರದಿಯು ಹೇಗೊ ಇಟೇಲಿಯ ಕೈ ಸೇರಿರುತ್ತದೆ. ಇದರಲ್ಲೇನಿದೆ? "ಇಟೇಲಿಯರು ಎಥಿಯೋಪಿಯಾವನ್ನು ವಶೀಕರಿಸಿದರೆ, (ಟಾನಾ ಸರೋವರದ ಮತ್ತು ಕೆಲವು ನೀರಿಯುವ ನೈಲ್‌ನದಿಗಳ ವಿಚಾರದಲ್ಲಿ ಕೆಲವು ಒಪ್ಪಂದಗಳನ್ನು ಮಾಡಿದರೆ) ಎಲ್ಲಾ ವಿಚಾರಗಳಲ್ಲೂ ಆಕ್ರಮಿತವಾದ ನಮ್ಮ ದೇಶಗಳಿಗೆ ಯೋಗ್ಯವೆನಿಸುವುದು, ಆದುದರಿಂದ ಇಟೇಲಿಯ ಮೇಲೆ ತಡೆಗಳು ಹಾಕಬೇಕಾಗಿಲ್ಲ"ವೆಂದು ಸೂಚನೆಗಳಿದ್ದವಂತೆ. ಆದರೆ ಈ ವರದಿಯು, ಬೇಕಾದ ಸಮಯದಲ್ಲಿ ಪ್ರಕಟವಾಗಲಿಲ್ಲ. ಹೀಗಿದ್ದರೂ ಬ್ರಿಟನು ಬೇರೆ ವರ್ತನೆಯನ್ನು ಅನುಸರಿಸಿತು, ಇದಕ್ಕೆ ಕಾರಣವೇನು? ಗುಟ್ಟುರಟ್ಟಾದ್ದು ಹೇಗೆ? ಎರಡು ಪ್ರಶ್ನೆಗಳಿಗೆ ಉತ್ತರ ದೊರಕುವುದು ಬಹಳ ಕಷ್ಟ.

ಪ್ರಪಂಚದಲ್ಲಿ ಯುದ್ಧಭಾವವು ಸಹಜವಾದುದಾಗಿದೆ!

೧೯೧೪—೧೯೧೮ ವರೆಗೆ ನಡೆದ ಮಹಾಯುದ್ಧದ ನಡೆದ ಭೀಕರತೆಯು ಸಮಸ್ತ ಪ್ರಪಂಚವನ್ನು ಕಂಗಾಲುಗೊಳಿಸಿತು. ಈ ಯುದ್ಧದಿಂದ ಉಂಟಾದ ಹಾನಿಯನ್ನು ಉಪಶಮನ ಮಾಡುವಂತೆಯೂ, ಇನ್ನು ಮುಂದಕ್ಕೆ ಪ್ರಪಂಚದಲ್ಲಿ ಅಷ್ಟು ಕ್ರೂರ ಘಟನೆಗಳು ನಡೆಯದಂತೆ, ವಾರ್ಸಲೆ ಒಪ್ಪಂದ, ಲೋಕಾರ್ನೊ ಒಪ್ಪಂದ, ಇತ್ಯಾದಿ ಒಪ್ಪಂದಗಳು ಮಾಡಲ್ಪಟ್ಟವು. ಹೀಗೆ ಕೆಲವು ವರ್ಷಗಳು ದಾಟಿದವು. ಈಗಿನ ಅವಸ್ಥೆ ವಿನಾಗಿರುತ್ತದೆ. ಕೆಲವು ಜನಾಂಗಗಳು ಬರಿ ರಕ್ಷಣೆಗಾಗೆಂದು ದಂಡಯೋಜನೆ ಮಾಡಲು, ಪ್ರಾರಂಭಿಸಿದ್ದವು. ದಿನೇ ದಿನೇ ಈ ಹುಚ್ಚು ಎಲ್ಲಾ ಜನಾಂಗಗಳಿಗೆ ಹಿಡಿಯಿತು. ದರ್ಮನಿಯು ಇದಕ್ಕಾಗಿ ವಾರ್ಸೆಲ್ ಒಪ್ಪಂದವನ್ನು ಮುರಿಯಿತು. ಮಿಕ್ಕ ಒಪ್ಪಂದಗಳು ಕಳಚಿಹೋಗುತ್ತಿವೆ. ಸಮಗ್ರ ಯೂರೋಪು ಖಂಡದಲ್ಲೂ, ಅಮೇರಿಕಾ, ಜಪಾನು ದೇಶಗಳಲ್ಲೂ, ದಂಡಯೋಜನೆ ಕಾರ್ಯಗಳು ಹಗಲಿರುಳು ನಡೆಯುತ್ತಿವೆ. ಇದರ ನಿಮಿತ್ತವಾಗಿ, ಅನೇಕ ಕೈಗಾರಿಕ ಸಂಸ್ಥೆಗಳು ಬಹಳ ವೃದ್ಧಿಯಾಗಿವೆ. ಇವುಗಳಿಗೆ ಸರಕಾರದಿಂದ ಸಹಾಯ ದ್ರವ್ಯವು ದೊರಕುತ್ತಿದೆ. ಈ ಸಂಸ್ಥೆಗಳ ಶೇರುಗಳ ಮೌಲ್ಯವು ಬಹಳವಾಗಿ ಏರಿರುತ್ತದೆ. ಸಂಗ್ರಾಮ ಯೋಜನೆ ಕಾರ್ಖಾನೆಗಳಂತೂ ರಾತ್ರಿ ಹಗಲೂ ಕಾರ್ಯಸುತ್ತಿವೆ. ಸಾವಿರಾರು ವಿಮಾನಗಳು ಯುದ್ಧೋಪಕರಣಗಳಿಂದ ಕೂಡಿದ ನೌಕೆಗಳು ಯಂತ್ರೋಪಕರಣಗಳು ತಯಾರಾಗುತ್ತಿವೆ. ಎಲ್ಲಾ ಸರಕಾರಗಳೂ ಈ ಕಾರ್ಯಕ್ಕಾಗಿ ಭಯಂಕರ ಸಾಲಗಳನ್ನು ಎತ್ತುತ್ತಾರೆ. ಎಲ್ಲೆಲ್ಲೂ ನಡೆಯುವುದು—ಬರೆ ರಕ್ಷಣೆಗಾಗಿ ಎಂಬರೆ ಜನರಲ್ಲಿ ಯುದ್ಧಭಾವವು ಸಹಜವೆಂಬುದಾದ ಭಾವನೆಯು ಹುಟ್ಟುತ್ತದೆ. ಬ್ರಿಟಿಷ ಪ್ರಧಾನ ಮಂತ್ರಿ ಬಾಲ್ಡವಿನ್ನರು ರಾಷ್ಟ್ರೀಯ ಅನುಕೂಲ್ಯದಿಂದ ಪ್ರ್ಯಾಬಾವ ಸಂಸ್ಥೆಗಳು ಲಾಭಗಳಿಸುವುದು ಅವಮಾನಕರವೆಂದೂ ಈ ಸ್ಥಿತಿಯು ಉಂಟಾಗದಂತೆ ತನ್ನ ಸರಕಾರವು ಎಚ್ಚರದಿಂದಿರುವುದೆಂದು ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಆಡಿದ್ದರು. ಆದರೆ ಈಗ ನಡೆಯುವುದೇನು? ಇವರ ವಚನಗಳಿಗೆ ವಿರೋಧವಾಗಿ ಕೆಲಸಗಳು ನಡೆಯುತ್ತವೆ. ಬ್ರಿಟಿಷ ಸರಕಾರವು ತನ್ನ ಗೌರವವನ್ನು ಕಾಪಾಡಿಕೊಳ್ಳಲು ಏನು ಮಾಡುವುದೆಂದು ನೋಡಬೇಕು.

ತೆಂಗಿನಿಂದ ಏನೆಲ್ಲಾ ಮಾಡಬಹುದು?

ಸಿಲೋನಿನ ತೆಂಗಿನ ಬೋರ್ಡಿನವರು 'ತೆಂಗಿನ ಎಂಪೋರಿಯಮ' ಎಂಬ ಒಂದು ಪ್ರದರ್ಶನವನ್ನು ಏರ್ಪಡಿಸಿದರು. ಇದರಲ್ಲಿ ತೆಂಗಿನಿಂದ ತಯಾರಾದ ಎಲ್ಲಾ ಸಾಮಾನುಗಳು ಪ್ರದರ್ಶಿಸಲ್ಪಟ್ಟಿದ್ದವು. ಸಾಮಾನುಗಳು (ಬಿಸ್ಕಿಟು, ತೆಂಗಿನ ಎಣ್ಣೆ, ತೆಂಗಿನ ಸಾಬೂನು, ಬ್ರಷ್ಷು, ಪಿಷ್ಟ ಇತ್ಯಾದಿಗಳು) ಬಿಸ್ಕೀಟುಗಳು ಮೊಳಕೆ ಬೆಲ್ಲ ತೆಂಗಿನ ಹೂಗಳಿಂದ ತಯಾರಿಸಿದ ಸುಗಂಧ ದ್ರವ್ಯಗಳು ಸ್ತ್ರೀಯರ ಆಭರಣಗಳು (ತೆಂಗಿನ ಚಿಪ್ಪಿನಿಂದ ಮತ್ತು ಬೆಳ್ಳಿ ಬಂಗಾರ, ಇತ್ಯಾದಿ ಲೋಹಗಳಿಂದ) ಗುಂಡಿಗಳು ತೆಂಗಿನ ಗೆಲ್ಲುಗಳಿಂದ ಬೆಂತಪೆಟ್ಟಿಗೆಗಳು (ಇದಕ್ಕೆ ಬೇಕಾದ ಗುಣ ಕಡ್ಡಿಗಳು ಮಾತ್ರ). ಇದೇ ರೀತಿಯಲ್ಲಿ ನಮ್ಮ ದೇಶದಲ್ಲೂ ತೆಂಗಿನ ಪ್ರಯೋಜನಗಳನ್ನು ಈ ರೀತಿಯಲ್ಲಿ ಯಾಕೆ ಮಾಡಿಕೊಳ್ಳಬಾರದು.

ನಮ್ಮ ಜಿಲ್ಲೆಯಲ್ಲಿ ದಾರಾಳ ತೆಂಗಿನ ತೋಟಗಳಿದ್ದು ಇವುಗಳನ್ನು ಬರೆ ತೆಂಗಿನಕಾಯಿಗಳಿಗಾಗಿ ಮತ್ತು ನೀರು ಕಾಯಿಸಲು ಕಟ್ಟಿಗೆಯಾಗಿ ಉಪಯೋಗಿಸುವ ಬದಲಾಗಿ, ಮೇಲಿನ ಕೆಲವು ಉದ್ಯಮಗಳನ್ನು ನಾವು ಕೈಗೊಳ್ಳಬಹುದು. ನಿರುದ್ಯೋಗವು ಇದರಿಂದ ಸ್ವಲ್ಪ ಮಟ್ಟಿಗೆ ನಿವಾರಣೆಯಾಗಬಹುದು.

ರೂ 10,000 ಕದ್ದ ಕೋತಿ!

ಕಾಸ್‌ಪ್ರಿಂದ ಪಂಡಿತ ವಿದ್ಯಾಧಾರನೆಂಬ ವರ್ತಕನು ತನ್ನ ಮನೆ ಮಾಳಿಗೆ ಸಿಲಿಂಗಿನಲ್ಲಿ ರೂ ೧೦,೦೦೦ವನ್ನು ಗುಪ್ತವಾಗಿ ಇಟ್ಟಿದ್ದನು. ಈ ಊರಿನಲ್ಲಿ ಕೋತಿಗಳ ಬಾದೆ ಬಹಳ. ಒಂದು ಕೋತಿಯು ಈ ಮನೆಗೆ ಬಂತು. ಸಿಲಿಂಗಿನ ಅಡಿಯಲ್ಲಿದ್ದ ನೋಟಿನ ಕಟ್ಟವು ಅದರ ದೃಷ್ಟಿಗೆ ಗೋಚರವಾಯಿತು. ಅದನ್ನು ಹಿಡಕೊಂಡು ಕದ್ದುಬಿಟ್ಟಿತು ಮಾಯವಾಯಿತು. ದಿಗಿಲುಗೊಂಡ ವರ್ತಕನು ಈ ವಾರ್ತೆಯನ್ನು ಪೋಲೀಸರಿಗೆ ತಿಳಿಸಿದನು. ಕೋತಿಯನ್ನು ಹಿಡಿಯಲು ಪ್ರಯತ್ನಗಳಾಗುತ್ತಿವೆ. ಕೋತಿಯನ್ನು ಹಿಡಿದು ಕಳೆದುಹೋದ ಹಣವನ್ನು ತಂದವರಿಗೆ ಬಹು ಮಾನ ಕೊಡಲಾಗುವುದಂತೆ.

ನಮ್ಮ ನಗರ ಸಭೆಯು ಇದನ್ನು ಅನುಸರಿಸಬಾರದೆ?

ಅಮೃತಸಾರದ ನಗರ ಸಭೆಯವರು, ಬೋಳಾದ ರಟ್ಟಿನ ಟಾಯರುಗಳನ್ನು ಉಪಯೋಗಿಸುವ ಜಟ್ಕಾಗಳು ಇನ್ನು ಮೂರು ವರ್ಷಗಳ ತನಕ ತೆರಿಗೆ ಕೊಡಬೇಕಾಗಿಲ್ಲವೆಂದು ಠರಾವು ಮಾಡಿರುತ್ತಾರೆ. ರಾಹಲ್ ಟಾಯರುಗಳಿಂದ ಈ ಕರದ ರಿಯಾಯಿತಿ ಕೊಡಲಾಗಿದೆಂದು ತಿಳಿದುಬರುತ್ತದೆ. ಕಬ್ಬಿಣದ ಚಕ್ರಗಳಿಂದ ರಸ್ತೆಗಳು ಹಾಳಾಗುವುದು, ಈ ಯೋಜನೆಯಿಂದ ಅದು ಕಡಿಮೆಯಾಗುವುದು. ನಗರದ ರಸ್ತೆಗಳ ಸ್ಥಿತಿಯು ಉತ್ತಮಗೊಳ್ಳುವುದು. ಈ ಕಾರಣ ನಗರ ಸಭೆಯ ಖರ್ಚು ಬಹಳವಾಗಿ ಕಡಿಮೆಯಾಗುವುದು. ನಮ್ಮ ನಗರ ಸಭೆಯ ಸಾರ್ವಜನಿಕರು, ರಟ್ಟಿನ ಟಾಯರುಗಳನ್ನು ಉಪಯೋಗಿಸುವ ಯಾವತ್ತು ವಾಹನಗಳ ಮೇಲೆ ತೆರಿಗೆ ರಿಯಾಯಿತಿಯನ್ನು ಮಾಡಿದರೆ ಆಗ್ಗೆ ನಮ್ಮ ರಸ್ತೆಗಳ ಸ್ಥಿತಿ ಹೀನವಾಗುವುದೆ? ನಮ್ಮ ನಗರ ಸಭೆಯು ಇದನ್ನು ಗಮನಿಸಲಿ.

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವರ್ಗದ "ಬ್ಲು ಜಾಗ್ಗರ" ವಜ್ರಗಳೂ "ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1858ರಲ್ಲಿ ಸ್ಥಾಪಿತವಾದದ್ದು)

ಚಿನ್ನ, ಬೆಳ್ಳಿ ಜವುಳಿ ವ್ಯಾಪಾರಸ್ಥರು.

ಅನುಕ್ರಮಣಿಕೆ

ಟಿಪ್ಪಣಿಗಳು:
ಭಾರತೀಯರಿಗೆ ವಿದೇಶೀಗಳ ತಿಳಿವು
ಮಾಯಾಜಾಲ
ಲೋಕಾರ್ನೋ ಒಪ್ಪಂದವು ಕೊನೆಗೊಂಡಿತು
ವಿವಿಧ ಸಮಾಚಾರಗಳು
ಅಗ್ರಲೇಖ
ಯುರೋಪಿನಲ್ಲಿ ಜರ್ಮನಿಯಿಂದ ಚಳವಳಿ
ಮಂಗಳೂರು, ತಾಲೂಕುಗಳಿಂದ
ಸ್ಫುಟವಿಚಾರಗಳು ೪
ವರ್ತಮಾನ ಸಂಗ್ರಹ
ವನಿತಾ ವಿಭಾಗ ೧೩
ನಿಮಗೆ ತಿಳಿದಿರುವುದೇ? ೧೮

ಸ್ವದೇಶಾಭಿಮಾನಿ
ತಾ. ೬ನೇ ಶುಕ್ರವಾರ ಮಾರ್ಚಿ ೧೯೩೬

ಯೂರೋಪಿನಲ್ಲಿ ಜರ್ಮನಿಯಿಂದ ಚಳವಳಿಕ್ಕಾರಂಭ

1935ನೇ ಇಸ್ವಿ ಮಾರ್ಚಿ ತಾ. 16ರಲ್ಲಿ ಜರ್ಮನಿಯು ಅದುವರೆಗೆ ಯಾವ್ಯಾವ ಒಪ್ಪಂದಗಳಲ್ಲಿ ಸೇರಿದ್ದಾಗ ಎಂತಹ ಶರ್ತಗಳಿಗೆ ಒಪ್ಪಿಕೊಂಡಿದ್ದಿತೋ ಅವನ್ನು ಬದಿಗಿಟ್ಟು, ತನ್ನ ಯುದ್ಧಸನ್ನಾಹವನ್ನು ಸಿದ್ಧಪಡಿಸಲು ತೊಡಗಿತು. ಕಳೆದ ಮಹಾಯುದ್ಧದಿಂದೀಚೆಗೆ, ವಾರ್ಸೆಲ್ಸ್ ಒಪ್ಪಂದವನ್ನು ದೂರುವವರು ಬಹಳ ಮಂದಿ ಇರುವರಾದರೂ, ಲೊಸಾನದಲ್ಲಿ ಆ ಒಪ್ಪಂದದ ಶರ್ತಗಳನ್ನು ತಿದ್ದಿದ್ದರೂ, ಜರ್ಮನಿಯು ತನ್ನ ಮನಸ್ಸಿಗೆ ಆಗಲೆ ಸರಿದೋರಿದಂತಹ ಕಾರ್ಯಕ್ರಮವನ್ನು, ಅದೆಂಥ ಶರ್ತಗಳಿಗೆ ಹೊರಗಾಗಿ ಅಥವಾ ವಿರುದ್ಧವಾಗಿ ಇದ್ದರೂ, ಕೈಕೊಂಡಿತು. ಇದರ ಫಲವಾಗಿ ಪ್ರಮುಖ ರಾಷ್ಟ್ರಗಳೆಲ್ಲ ಯುದ್ಧ ಸನ್ನಾಹದ ಕಡೆಗೆ ಲಕ್ಷ್ಯಕೊಡುವಂತಾಯಿತು. ಎಷ್ಟೆಂದರೂ ಮಹಾಕಾಳಿಗೆ ತೃಪ್ತಿಯಾಗಿಲ್ಲ; ಆ ದೇವತೆಯು ಇನ್ನೂ ರಣರಂಗದಲ್ಲಿ ರಕ್ತಪಾನ ಮಾಡಲು ಆಸೆಗೊಂಡಿದ್ದಾಳೆ ಎಂದೇ ಹಿಟ್ಲರನ ಡಂಗುರ. ಮಹಾಕಾಳಿಯನ್ನು ಪುನರುತ್ಥಾನಮಾಡಿದ ಹಿಟ್ಲರನೇ ಈ ರಕ್ತಪಾನದ ಪಿಪಾಸೆಗೆ ಕಾರಣನಾಗಿರುವನು ಎಂದು ಜರ್ಮನಿಯ ನೆರೆ ರಾಷ್ಟ್ರಗಳು ಅಭಿಪ್ರಾಯ ಕೊಟ್ಟಿವೆ.

ಈಗ ಪುನಃ ಒಂದು ವರ್ಷದೊಳಗಾಗಿ, ಮತ್ತೊಮ್ಮೆ ಹಿಟ್ಲರನು ಒಪ್ಪಂದಗಳಲ್ಲಿನ ಮತ್ತೊಂದು ಶರ್ತವನ್ನು ತಾನೇ ರದ್ದುಪಡಿಸಿರುವನು. ಇಡೀ ಜಗತ್ತು ವಿಸ್ಮಯ ಹೊಂದುವ ಹಾಗೆ, ಆತನು ರ್ಹೈನ್ ನದಿಯ ತೀರದಲ್ಲೆಲ್ಲ ಜರ್ಮನ್ ಸೇನೆಗಳ, ಶಿಬಿರಗಳನ್ನು ಸ್ಥಾಪಿಸಿರುವನು. ಲೊಕಾರ್ನೊ ಒಡಂಬಡಿಕೆಯಲ್ಲಿ ಹೀಗೆ ಮಾಡದಂತೆ ಶರ್ತಗಳಿದ್ದುವಕ್ಕೆ ಆತನು ಒಪ್ಪಿಕೊಂಡು, ಅದನ್ನು ಯಾವಾಗಲು ಪಾಲಿಸಬೇಕಾಗ ಪದೇ ಪದೇ ಸಾರುತ್ತಿದ್ದನು. ರ್ಹೈನ್ ನದಿಯ ಆಚೆಯ ದಡದ ಮೇಲೆ ಫ್ರಾನ್ಸು ಪ್ರಬಲವಾದ ಕೋಟೆಗಳನ್ನು ಕಟ್ಟಿಸಿ ತನ್ನ ರಕ್ಷಣೆಗಾಗಿ ಸರ್ವಸನ್ನಾಹವನ್ನು ಮಾಡಿಕೊಂಡಿದೆ. ಬೆಲ್ಜಿಯಮ್ ರಾಜ್ಯವೂ ಅಷ್ಟೇ ಬಲವಾದ ಕೋಟೆಗಳನ್ನು ನಿರ್ಮಾಣಮಾಡಿಕೊಂಡಿದೆ. ಇಂತಹ ಗಡಿನಾಡಿನಲ್ಲಿ ಜರ್ಮನಿಯು ಸ್ವಸೈನ್ಯಗಳನ್ನು ನಿಲ್ಲಿಸಿರುವುದರಿಂದ, ಶಾಂತಿಪಾಲನೆಗಾಗಿ ತಾನು ಹೋರಾಡುವುದಾಗಿ, ಕೇವಲ ದೇಶಗೌರವವನ್ನು ಪ್ರದರ್ಶಿಸುವುದಕ್ಕಾಗಿ ಹೀಗೆ ಮಾಡುವೆನೆಂಬ ಹಿಟ್ಲರನ ಮಾತಿಗೆ ಬೆಲೆಬಾರದೆ ಲೀಗ್ ಆಫ್ ನೇಶನ್ಸಿನಲ್ಲಿ ಇಂತಹ ಪ್ರಸಂಗಗಳು ಯುದ್ಧಾರಂಭದ ವೀಳೆಗಳೆಂದೇ ಹೆಸರು ಪಡೆಯುವುವು. ಇದೇ ರೀತಿ ಪ್ರತಿಯೊಂದು ರಾಷ್ಟ್ರವೂ ಯುದ್ಧಸನ್ನಾಹ ಮಾಡಿಕೊಂಡು, ಗಡಿನಾಡುಗಳಲ್ಲಿ ಸೈನ್ಯಗಳನ್ನು ನಿಲ್ಲಿಸಿದರೆ, ಈ ಜಗತ್ತಿನಲ್ಲಿ ಶಾಂತಿಯ ಭಾವನೆಯು ನಿಮಿಷದೊಳಗೆ ಮಾಯವಾಗಲಾರದೆ?

ಫ್ರೆಂಚರು ರಷ್ಯದ ಸರಕಾರದೊಡನೆ ಒಪ್ಪಂದ ಮಾಡಿಕೊಂಡುದು ಜರ್ಮನಿಗೆ ಒಪ್ಪಿದುದಲ್ಲ; ಇಂಗ್ಲೆಂಡಿನ ಮುಖ್ಯಮಂತ್ರಿಗಳು ಇಂಗ್ಲೆಂಡಿನ ಎಲ್ಲೆ ಕಟ್ಟು ರ್ಹೈನ್ ನದಿಯೆಂದುದೂ ಜರ್ಮನಿಗೆ ಒಪ್ಪತಕ್ಕುದಲ್ಲ. ಫ್ರಾನ್ಸು ರಷ್ಯದೊಡನೆ ಒಪ್ಪಂದ ಮಾಡಿಕೊಳ್ಳುವಾಗ ಅದು ಲೊಕಾರ್ನೊ ಒಪ್ಪಂದಕ್ಕೆ ವಿರುದ್ಧವಾಗಬಹುದೆಂದು ತಿಳಿದೇ ಇದ್ದಿತು; ಅಂತಹ ವಿರುದ್ಧ ಕಲ್ಪನೆಗಳು ಉಂಟಾಗದ ಹಾಗೆ ಫ್ರಾನ್ಸು ಬಹಳ ತಿದ್ದುಪಡಿಗಳನ್ನು ಮಾಡಿಯೇ ಆ ಕರಾರನ್ನು ಸಹಿ ಮಾಡಿತು. "ಈ ದಿನ ಜಾರಿಯಲ್ಲಿರುವ ಯಾವುದೊಂದು ಕರಾರಿನ ಶರ್ತಗಳಿಗೆ ಈ ಕರಾರು ವಿರುದ್ಧವಾಗಿ ವರ್ತಿಸಲು ಸಹಾಯಕವಾಗಬಾರದು" ಎಂದು ಒಂದು ಕೊನೆಯ ಮಾತಾಗಿ ಫ್ರಾನ್ಸು ಬರೆದುದುಂಟು. ಆದರೆ, ಜರ್ಮನಿಗೆ ರಷ್ಯದ ಹೆಸರೆತ್ತಿದರೆ, ಹೊಟ್ಟೆನೋವು; ತಲೆಶೂಲೆ; ಅದೇಕೆ ಈ ಫ್ರಾನ್ಸಿನ ಅರ್ಥವನ್ನು ಸ್ವೀಕರಿಸಬೇಕು? ಜರ್ಮನಿಯು ಯಾವುದೊಂದು ರಾಜ್ಯದ ಮೇಲೆ ತಾನಾಗಿ ರೇಗಿ ಬೀಳದಿರುವಲ್ಲಿ, ಎಂತಹ ವಿರುದ್ಧ ಕರಾರೂ ಅದನ್ನು ಪೀಡಿಸಲಾರದಷ್ಟೆ?

ಈಗ, ಈ ವರ್ತನೆಯಿಂದ ತಾನೆ, ಜರ್ಮನಿಯು ಕಾಲುಕೆದರಿ ಜಗಳಕ್ಕೆ ಬರುತ್ತಿದೆ ಎಂದು ರಾಷ್ಟ್ರಸಭೆಯು ಅರ್ಥಮಾಡಿಕೊಳ್ಳಬಹುದು. ಅಕಾರಣವಾಗಿ ಸೈನ್ಯಗಳನ್ನು ಎಲ್ಲೆಕಟ್ಟಿಗೆ ತಂದಿಟ್ಟ ಕಾರಣದಿಂದ, ಲೊಕಾರ್ನೊ ಒಪ್ಪಂದದಲ್ಲಿ ಸೇರಿರುವ ರಾಜ್ಯಗಳೆಲ್ಲವು ಸ್ವಾಭಾವಿಕವಾಗಿ ಜರ್ಮನಿಗೆ ವಿರುದ್ಧವಾಗಿ ನಿಲ್ಲಬೇಕಾಗುವುದು. ಕಳೆದ ವರ್ಷವೇ, ಜರ್ಮನಿಯು ಹಟತೊಟ್ಟು, ಜನಾಂಗ ಸಂಘವನ್ನು ತೊರೆದು ಯುದ್ಧಸನ್ನಾಹಕ್ಕೆ ಕರಾರು ವಿರುದ್ಧವಾಗಿ ಕೈ ಹಚ್ಚಿದಾಗಲೇ ಇನ್ನು ಮುಂದೆ ಇತರ ಪ್ರಮುಖ ರಾಷ್ಟ್ರಗಳು ಹೀಗೆ ವರ್ತಿಸಬೇಕೆಂದು ನಿರ್ಧರಿಸಲು ಕಮಿಟಿಯು ಏರ್ಪಟ್ಟು ವರದಿ ಬರೆದುದುಂಟು. ಆ ವರದಿಯು ಪ್ರಕಟವಾಗಿಲ್ಲವಾದರೂ, ವ್ಯಾಪಾರ ಸಂಪರ್ಕವನ್ನು (ಜರ್ಮನಿಯಿಂದ) ತೊರೆದು ಬಿಡಲು ಉಳಿದ ಜನಾಂಗಗಳು ಸಾಧಿಸಬಹುದಾಗಿದೆ.

ಜರ್ಮನಿಯು ಏಳು ಶರ್ತಗಳನ್ನು ಪ್ರಕಟಿಸಿ, ಅವುಗಳ ಇತ್ಯರ್ಥವಾಗದೆ ತನಗೆ ಸಮಾಧಾನವಿಲ್ಲವೆನ್ನುತ್ತಿದೆ. ಆದರೆ, ಗಡಿನಾಡನ್ನು ಶಿಬಿರವನ್ನಾಗಿ ಮಾಡಿಕೊಂಡ ಜರ್ಮನ್ ಸೈನ್ಯಗಳು ಹಿಂತೆರಳುವ ತನಕ, ಈ ಶರ್ತಗಳನ್ನು ಯಾರೂ ಚರ್ಚಿಸಲಾರರು; ಗಮನಕ್ಕೆ ತಂದು ಕೊಳ್ಳಲಾರರು.

ಕರಾರುಗಳಿಗೆ ಸಹಿಹಾಕಿ, ಅವುಗಳ ಶರ್ತಗಳಿಗೆ ವಿರುದ್ಧವಾಗಿ ಆಚರಿಸುವ ಸ್ವೇಚ್ಛಾಪ್ರವರ್ತನೆಯ ಜನಾಂಗದೊಡನೆ ಮತ್ತಾರು ತಾನೆ ಇನ್ನಾವ ಹೊಸ ಕರಾರು ಮಾಡಿಲಿಚ್ಛಿಸಬಹುದು?

ಅಂತೂ, ಯೂರೋಪಿನ ಇತಿಹಾಸದಲ್ಲಿ, ಇದಿನ್ನೊಂದು ಸಂಧಿಕಾಲ ಬಂದಗಿದ್ದಂತಿದೆ.

ಸ್ಫುಟವಿಚಾರಗಳು

ಯುದ್ಧತ್ಯಾಗ.

ಸದ್ಯಕ್ಕೆ ಅಬಿಸೀನಿಯಾ ಇಟೇಲಿಗಳೊಳಗೆ ನಡೆವ ಯುದ್ಧವನ್ನು ಇದೀಗ ತಡೆಯಲಾಗದು. ಒಂದು ಕಡೆ, ಇಟೇಲಿಯು ಎಷ್ಟು ಪಡೆಯುವ ಹಾಗೆ ಸಿರ್ಬಂಧವನ್ನು ನಿರ್ಣಯಿಸುವ ಸಭೆ ಸೇರುತ್ತಿದ್ದ; ಆಗಲೆ ಜರ್ಮನಿಯು ಸೇನೆಗಳನ್ನು ಫ್ರಾನ್ಸಿನ ಗಡಿಯ ಬಳಿ, ಕರಾರು ಮೀರಿ, ನಿಲ್ಲಿಸಿದೆ. ಇಟೇಲಿಯ ವಿಮಾನಗಳು ಸೈನಿಕರಿಲ್ಲದವರಿರುವ ಠಾಣ್ಯಗಳನ್ನು ನಾಶಗೊಳಿಸಿ ಜನರನ್ನು ಕೊಲ್ಲುತ್ತ, ಇತರ (ಬ್ರಿಟಿಷರ ಸಹ) ಜನಾಂಗಗಳ ಶುಶ್ರೂಷಾ ಪಾಳೆಯಗಳನ್ನು ಸುಟ್ಟಿವೆ: ಈಗ ಯುದ್ಧವನ್ನು ಕೊಂಚಕಾಲ ತಡೆದು, ಯಾವುದೊಂದು ವಿಧಾನದಿಂದ ಸಂಧಾನವನ್ನೂ ಸಮಾಧಾನವನ್ನೂ ಮಾಡಬರುವುದೇ ಎಂಬುದನ್ನು, ಫ್ರಾನ್ಸು ಇಟೇಲಿಯ ಹಿತಚಿಂತನೆಯಿಂದ ಸೂಚಿಸಿಯದೆ. ಯುದ್ಧವನ್ನು ತಡೆದಲ್ಲಿ, ಸಂಧಾನದ ಪ್ರಸ್ತಾವವನ್ನೆತ್ತುವುದಕ್ಕೆ ಅಗತ್ಯವಾದ ಅವಕಾಶವು ದೊರೆವುದು. ಜನಾಂಗ ಸಂಘದ ಕಮಿಟಿಯು ಪಂಚಾಯತಿಯ ನಿಯಮಗಳನ್ನೂ ಶರ್ತಗಳನ್ನೂ ಸೂಚಿಸಿರುವುದು. ಯುದ್ಧದಿಂದ ದಣಿದ ಇತ್ತಂಡಗಳೂ ಈ ಸಂಧಾನ ಸಾಧನೆಗಳು ಸಫಲವಾಗುವ ತನಕ ಪುನಃ ಸಿಡಿಮದ್ದಿಗೆ ಕೈಯಿಕ್ಕುವಂತಿಲ್ಲ. ಅಬಿಸೀನಿಯವು ಕೂಡಲೆ 'ಕಬೂಲ್' ಎಂದು ಜನಾಂಗ ಸಂಘಕ್ಕೆ ತಿಳಿಸಿಯದೆ. ಹಾಗೆಂದು ಆ ರಾಜ್ಯದ ಒಂದಂಶವನ್ನಾದರೂ ಇಟೇಲಿಗೆ ಕೈಯೆತ್ತಿಕೊಡಲು ಸಮ್ಮತಿ ಸೂಚಿಸಿಲ್ಲ. ಆದರೆ ಜನಾಂಗ ಸಂಘದ ಇತ್ಯರ್ಥದಂತೆ ಅಬಿಸೀನಿಯವು ಖಂಡಿತ ನಡೆವುದು. ಈ ಮಧ್ಯೇ, ಇಜಿಪ್ತಿನಲ್ಲಿ ಇಂಗ್ಲೆಂಡಿನೊಡನೆ ನಡೆಯುತ್ತಿರುವ ಹೊಸ ಒಡಂಬಡಿಕೆಗೆ ಮಾತ್ರ ಸಾಕಷ್ಟು ತ್ವರೆಯಾಗಿ ಮಹತ್ವವುಂಟಾಗಬಹುದೇ? ಅಂತೆಯೆ, ಜರ್ಮನಿ ಫ್ರಾನ್ಸುಗಳೊಳಗೆ ನಡೆವ ಕಿರುಕುಳಗಳ ಇದಿರಲ್ಲಿ ಯುದ್ಧತ್ಯಾಗವು ಖಂಡಿತವಾಗಿಯೂ ಶಾಶ್ವತವಾಗುವಂತೆ ಪ್ರಯತ್ನಗಳಾಗುವುವೆ? ಯೂರೋಪಿನಲ್ಲಿ ಯುದ್ಧವಾಗಬೇಕೆಂದು ಜರ್ಮನಿಯ ಇಚ್ಛೆಯೇನೂ ಇಲ್ಲವೆನಿತೆ. ಆದರೆ, ಇಟೇಲಿಯು ಆಗ ಜರ್ಮನಿಗೆ ವಿರುದ್ಧವಾಗುವುದೆ? ಫ್ರಾನ್ಸು ಇಂಗ್ಲೆಂಡುಗಳೊಡನೆ ಜತೆಗೂಡಿ ನಿಲ್ಲುವುದೆ?

ಎಸ್. ಎಸ್. ಎಲ್. ಸಿ. ಪರೀಕ್ಷೆ.

ಕಳೆದ ವರ್ಷ ವಿಶ್ವವಿದ್ಯಾಲಯದ ಅಧಿಕಾರಿಗಳು ಈ ಪರೀಕ್ಷೆಯಲ್ಲಿ ಇಂಗ್ಲೀಷ ಭಾಷಾ ವಿಷಯದಲ್ಲಿ ಸೇಕಡಾ 40ರಷ್ಟು ಮಾರ್ಕು ದೊರೆತವರನ್ನು ಮಾತ್ರ, ವಿಶ್ವವಿದ್ಯಾಲಯಕ್ಕೆ ಸೇರಿಸಿಕೊಳ್ಳಬಹುದೆಂದು ನಿರ್ಣಯ ಮಾಡಿದ್ದರೂ, ಹಲವು ಶಾಲೆಗಳಿಗೆ ಈ ನಿರ್ಣಯವು ಕೆಲವೇ ದಿನಗಳ ಹಿಂದೆ ಮಾತ್ರ ತಿಳಿದು ಬಂತೆಂದೂ; ಶ್ರೀ। ಸತ್ಯಮೂರ್ತಿಯವರು ಇಂಗ್ಲಿಷಿನಲ್ಲೆಷ್ಟೋ ದೇಶಭಾಷೆಯಲ್ಲೂ ಅಷ್ಟೇ ಮಾರ್ಕು ಸಿಗಬೇಕೆಂಡ ಕಾರಣ, ಕನ್ನಡದಲ್ಲೂ ಸೇಕಡ 40ರಷ್ಟು ಸಿಗದೆ ವಿಶ್ವವಿದ್ಯಾಲಯದೊಳಗೆ ಪ್ರವೇಶ ಸಿಗದೆಂದು ಎಣಿಸಬೇಕಾಗಿದೆ ಎಂದೂ; ಇಂತಹ ನಿಯಮಗಳು ವಿದ್ಯಾರ್ಥಿಗಳಿಗೆ ಈ ವರ್ಷವೇ ಬಲು ದೊಡ್ಡ ಅಭ್ಯಂತರಗಳಾಗಿ ಪರಿಣಮಿಸುವ ಕಾರಣ, ಅದನ್ನು ಯುನಿವರ್ಸಿಟಿಯವರು ಜ್ಯಾರಿಗೆ ತರದಂತೆ ಡೈರೆಕ್ಟರು ಕೇಳಿಕೊಳ್ಳಬೇಕೆಂದೂ ಮದ್ರಾಸು ನಗರದ ಶಾಲೆಗಳ ಹೆಡ್ ಮಾಸ್ತರರು ಸಭೆಗೂಡಿ ಒಂದು ನಿರ್ಣಯವನ್ನು ಮಂಜೂರು ಮಾಡಿ ಡೈರೆಕ್ಟರರಿಗೆ ಒಪ್ಪಿಸಿರುವರು, ಮುಂದಣ ಜೂನ್ ತಿಂಗಳಿಂದ ಹೊಸ ಸ್ಕೀಮು ಜ್ಯಾರಿಗೆ ಬರಲಿರುವುದರಿಂದ ಈ ನಿಮಯವನ್ನು ಆಗಣಿಂದಲೇ ಮಂಜೂರು ಮಾಡಿದರಾಗದೆ?

ಹಳ್ಳೀ ಸಾಲೆಗಳ ಉಪಾಧ್ಯಾಯರು.

ತಾವಿರುವ ಗ್ರಾಮಗಳಲ್ಲಿನ ಜನಗಳ ಜೀವನವನ್ನು ಸಂತೃಪ್ತಿಯಿಂದ ಇರಗೊಳಿಸಲು ಶಕ್ತರಾಗಿರುವರು. ಆದರೆ, ಎಷ್ಟೋ ಸಲ, ಗ್ರಾಮಗಳಲ್ಲಿ ತಂಡಗಳು ಇರುವಲ್ಲಿ, ಈ ಉಪಾಧ್ಯಾಯರು ಒಂದಲ್ಲ ಮತ್ತೊಂದು ತಂಡವನ್ನು ಸೇರಿ, ಇತ್ತಂಡಗಳಿಗೂ ಹೊಸ ಆದುದರಿಂದಲೇ ಗ್ರಾಮಕ್ಕೂ ಹಾನಿಯನ್ನು ಉಂಟುಮಾಡುತ್ತಿರುವರು ಎಂಬುದು ಶೋಚನೀಯವಾಗಿದೆ. ಹಳ್ಳೀ ಉಪಾಧ್ಯಾಯನು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬರಬೇಕು; ತನ್ನ ಜ್ಞಾನವನ್ನು ಹೆಚ್ಚಿಸಿಕೊಂಡು ಬರಬೇಕು; ಮಕ್ಕಳ ಅಥವಾ ರಕ್ಷಕರ ಅಸಡ್ಡೆಯಿಂದ ತನ್ನ ಉತ್ಸಾಹವನ್ನು ಕುಂದಿಸಿಕೊಳ್ಳಬಾರದು. ನಗರಗಳಲ್ಲಿಯಾದರೆ, ಉಪಾಧ್ಯಾಯನ ಕೈಯಿಂದ ಕಲಿತು ಪಾಸಾದವರ ಸಂಖ್ಯೆಯಿಂದಲೇ ಆತನಿಗೆ ಗೌರವ ಕೊಡುವ ವಾಡಿಕೆಯಿದೆ. ಹಳ್ಳಿಯಲ್ಲಾದರೆ, ಇದಕ್ಕಿಂತಲೂ ಹೆಚ್ಚಾಗಿ ಇಡೀ ಗ್ರಾಮದ ಮಕ್ಕಳು ಅವರಂತೆ ಅವರ ಹಿರಿಯರೂ ಆತನಿಂದಲೇ ತಮ್ಮ ಸದ್ಗುಣಗಳನ್ನೂ ತಿಳಿವಳಿಕೆಯನ್ನೂ ಹೆಚ್ಚಿಸಿಕೊಳ್ಳುವರು,—ಎಂದು ಬಳ್ಳಾರಿಯ ಕಲೆಕ್ಟರರು ಅಲ್ಲಿನ ಶಾಲೆಯಲ್ಲಿ ತರಬೇಕಾದ ಉಪಾಧ್ಯಾಯರನ್ನು ಕಳುಹಿಕೊಡುವಾಗ ಭಾಷಣ ಮಾಡಿರುವರು.

ಪ್ರಕಟನೆಗಳಿಗೆ ಆತಂಕ

ಕೌನ್ಸಿಲು ಅಥವಾ ಎಸೆಂಬ್ಲಿಗಳಲ್ಲಿ ನಡೆವ ಭಾಷಣಗಳನ್ನು ಪತ್ರಿಕೆಗಳು ಪ್ರಕಟಿಸುವಾಗ, ಅಂಥವುಗಳು ಆಕ್ಷೇಪಕರವೆಂದು ಸರಕಾರಕ್ಕೆ ತಿಳಿದು ಬಂದಲ್ಲಿ ಪತ್ರಿಕಾಕರ್ತರೇ ಮೊದಲಾದವರ ಮೇಲೆ ದಂಡನೆ ವಿಧಿಸಲಾಗುವುದು ಎಂಬೀ ತತ್ವವನ್ನು ಎಸೆಂಬ್ಲಿಯ ಅಧ್ಯಕ್ಷರೂ ಮೊನ್ನೆ ಖಂಡಿತವಾಗಿ ತೀರ್ಮಾನಿಸಿದುದನ್ನು ಪತ್ರಕರ್ತರ ಸಂಘವು ಯೋಚಿಸಿ, ವಿಮರ್ಶೆ ಬರೆದಿದೆ. ನಾನಾ ಬಗೆಯ ಕಾನೂನುಗಳಿಂದ ಪತ್ರಿಕಾ ಪ್ರಚಾರವೇ ಕಷ್ಟಮಯವಾಗಿರುವಾಗ, ಪಾರ್ಲಿಮೆಂಟು ಸಭೆಯ ಹಾಗೆಯೆ ನಮ್ಮ ದೇಶದಲ್ಲಿ ರೂಢಿ ಹೊಂದಿರುವ ಈ ಸಭೆಗಳಲ್ಲಿ ನಡೆವ ಭಾಷಣಾದಿಗಳನ್ನು ಪ್ರಕಟಿಸುವುದು, ಇಂಗ್ಲೆಂಡಿನಲ್ಲಿ ನ್ಯಾಯಸಮ್ಮತವಾಗಿಯೂ, ಇಲ್ಲಿ ಆಕ್ಷೇಪಕರವಾಗಿಯೂ ಇರುವುದಕ್ಕೆ ಕಾರಣವೇನೋ ತಿಳಿಯದು. 'ಅಭ್ಯುದಯ' ಪತ್ರಿಕಾಕರ್ತರೇ ಎಸೆಂಬ್ಲಿಯಲ್ಲಿ ಮಾಡಿದ ಭಾಷಣವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದುದಕ್ಕೆ ದಂಡವಾಗಿ ಎಷ್ಟೋ ಹಣ ತೆರಬೇಕಾಯಿತು. ಎಸೆಂಬ್ಲಿಯ ಮೆಂಬರರು ಈ ವಿಷಯವನ್ನು ಸರಿಯಾಗಿ ಎಸೆಂಬ್ಲಿಯಲ್ಲಿ ಚರ್ಚಿಸಿ, ಪಾರ್ಲಿಮೆಂಟಿನ ಮೆಂಬರರಿಗೆ ಇರುವಷ್ಟೆ ಸ್ವಾತಂತ್ರ್ಯವನ್ನು ಇಲ್ಲಿಯೂ ಪಡೆಯುವರೆ ಪ್ರಯತ್ನಿಸಬೇಕೆಂದು ಈ ಸಂಘದ ಸೂಚನೆಯಾಗಿದೆ.

ಪಾರ್ಲಿಮೆಂಟಿಗೆ ರಿಪೋರ್ಟು

ಬರೆದುದರಲ್ಲಿ,—ಮಹಾತ್ಮಾಜೀಯವರು ಅಲ್ಲಲ್ಲಿ ಹರಿಜನರ ಉದ್ಧಾರಕ್ಕಾಗಿ ಭಾಷಣ ಕೊಡುವಾಗ, ಜನರು ಅವರನ್ನು ನೋಡಲು ಹೆಚ್ಚಾಗಿ ಬರುತ್ತಿದ್ದರಲ್ಲದೆ, ಪದೇ ಪದೇ ತಿಂಗೆಯಂತೆ ವಂತಿಗ ತೆರುವುದಕ್ಕಾಗಿರಲಿಲ್ಲ. ಅದೂ ಅಲ್ಲದೆ, ಅಸ್ಪೃಶ್ಯ ಸಮುದಾಯದಲ್ಲಿ ಕೆಲವರು ಮಹಾತ್ಮಾಜೀಯವರ ಅಭಿಪ್ರಾಯಗಳಿಗೆ ವಿರುದ್ಧರಾಗಿದ್ದುದರಿಂದ, ಜನರಲ್ಲಿ ಹರಿಜನೋದ್ಧಾರ ಸಂಘಕ್ಕೆ ವಿರೋಧವೇ ಹೆಚ್ಚಾಗುತ್ತ ಬಂದಿತು, ಎಂಬರ್ಥದಲ್ಲಿ ಮಾತುಗಳಿದ್ದುವನ್ನು ಎಸೆಂಬ್ಲಿಯಲ್ಲಿ ಆಕ್ಷೇಪಿಸಲು, ಮಹಾತ್ಮಾಜೀಯವರ ಕಾರ್ಯಕ್ರಮವನ್ನು ಕುರಿತಾಗಿ ಸರಕಾರವು ಆಕ್ಷೇಪವೆತ್ತುದಿಲ್ಲವೆಂದೂ, ರಾವ್ ಬಹದ್ದೂರ ಶ್ರೀನಿವಾಸನ್ ರವರೇ, ತಮ್ಮ ಸಮಾಜದ ಅನುಮತಿ ಪಡೆಯದೆ ಅಸ್ಪೃಶ್ಯರನ್ನು ಹರಿಜನರೆಂದು ಮಹಾತ್ಮರು ಕರೆದುದು ಸರಿಯಲ್ಲ ಎಂದಂತಹ ಮಾತುಗಳಿಂದ ಸರಕಾರದ ರಿಪೋರ್ಟಿನಲ್ಲಿ ಅಂತಹ ಅಭಿಪ್ರಾಯ ಬರೆಯಲು ಕಾರಣವಾಯಿತು ಎಂದು ಹೋಮ್ ಮೆಂಬರರೆಂದರು. ಹೇಗೂ ಇರಲಿ. ಹೊಸ ಆಕ್ಟಿನನ್ವಯ ಪ್ರತಿವರ್ಷವೂ ಇಂತಹದೊಂದು ವರದಿಯನ್ನು ಸರಕಾರವು ಬರೆಯಿಸಿ ಪ್ರಕಟಿಸಬೇಕೆಂಬ ಸೂಚನೆಯೇನೂ ಇಲ್ಲದಿರುವುದರಿಂದ, ಇದೇ ಕೊನೆಯ ವಾರ್ಷಿಕ ವರದಿಯಾಗಿರುವುದರಿಂದ ಹೋಮ್ ಮೆಂಬರರ ಮಾತಿನಿಂದ ತೃಪ್ತಿಹೊಂದಿ ಎಸೆಂಬ್ಲಿಯು ತನ್ನ ನಿಷೇಧಸೂಚನೆಯನ್ನು ಮಂಜೂರ್ಮಾಡಿಲ್ಲ. ಬಿಹಾರ್ ಭೂಕಂಪದ ಹಾವಳಿ ನಿವಾರಣೆಗಾಗಿ ಕೊಂಗ್ರೆಸ್ ಪಕ್ಷವು ಕೂಡಿಸಿದ ಹಣದ ವಿನಿಯೋಗವನ್ನು ಕುರಿತು ಅದೇ ರಿಪೋರ್ಟಿನಲ್ಲಿ ಬರೆದ ಒಕ್ಕಣೆಗೆ ಎತ್ತಿದ ಆಕ್ಷೇಪವನ್ನು ಸಹ, ಉದ್ದೇಶರಹಿತವಾಗಿಯೆ ಅಂತಹ ಅಭಿಪ್ರಾಯವು ಆ ಕಾಲದ ವಿದ್ಯಮಾನಗಳಿಂದ ಹುಟ್ಟಿದಂತೆ ವರದಿ ಬರೆದವನಿಗೆ ಸೂಚಿತವಾಯಿತೆಂದು ಮಾತ್ರ ಹೋಮ್ ಮೆಂಬರರೆಂದರು. ಆ ಆಕ್ಷೇಪವನ್ನು ಸಹ ಹಿಂತೆಗೆಯಲಾಯಿತು.

ಇನ್ನೊಂದು ವಾರದೊಳಗಾಗಿ

ವಿಲಾಯತಿಯಲ್ಲಿ, ಮುಂದೆ ಯುದ್ಧವೋ ಶಾಂತಿಯೋ ಎಂಬ ಪ್ರಶ್ನೆಗೆ ಉತ್ತರ ದೊರೆವುದು. ಹಿಟ್ಲರನು ತನ್ನ ಜನಾಂಗವು ಸ್ವತಂತ್ರವಾದುದೆಂಬುದನ್ನು ಪ್ರತ್ಯಕ್ಷ ತೋರಿಸಲು ತನ್ನ ರಾಜ್ಯದೊಳಗೆ ತಾನೇನು ಮಾಡಿದರೇನು ಎಂದೇ ಸೈನ್ಯಗಳನ್ನು ಫ್ರಾನ್ಸು ಬೆಲ್ಜಿಯಮುಗಳ ಗಡಿಯ ಬಳಿ ತಂದು ನಿಲ್ಲಿಸಿರುವನು ಗಡಿಯಲ್ಲಿ 30 ಮೈಲು ದೂರಕ್ಕೆ ಸೈನ್ಯಗಳನ್ನಿಡಬೇಕಾಗಿ ಕರಾರಿನ ಮಾತು ಇತ್ತು ಅದನ್ನು ಜರ್ಮನಿಯು ಮನ್ನಿಸುತ್ತಿಲ್ಲ ಕರಾರಿಗೆ ವಿರುದ್ಧ ನಡೆದವರ ಮೇಲೆ, ಅನ್ಯಾಯ ಹೊಂದಿದವರು ಜನಾಂಗ ಸಂಘದಲ್ಲಿ ದೂರಿಟ್ಟು, ಇತರ ಜನಾಂಗಗಳು ಅಂತಹನನ್ನು ಆ ಸಂಪರ್ಕದಿಂದ ದೂರವಿಡಲು ಪ್ರಾರ್ಥಿಸಬೇಕಾಗಿದೆ ಫ್ರಾನ್ಸು ಇದಕ್ಕೆ ಕೈಹಚ್ಚುವುದು ಇಂಗ್ಲೆಂಡು ಖಂಡಿತವಾಗಿಯೂ ಫ್ರಾನ್ಸಿನ ಬೆಂಬಲಕ್ಕಿದೆ ಫ್ರಾನ್ಸು ಈಗಲೇ ರಷ್ಯದೊಡನೆ ಒಪ್ಪಂದವನ್ನು ಮಾಡಿಕೊಂಡಿದೆ ಇಟೇಲಿಯು ತನ್ನಾಸೆ ಪೂರಯಿಸುವ ತನಕ ಅಬಿಸೀನಿಯದಲ್ಲಿ ಯುದ್ಧವನ್ನು ತಡೆವುದಿಲ್ಲ, ಎರಡು ದಿನವೂ ಬ್ರಿಟಿಷ ಆಸ್ಪತ್ರೆಯ (ಶುಶ್ರೂಷೆಯ ನಾಳ್ವದ) ಮೇಲೆ ಬೊಂಬು ಚೆಲ್ಲಿದೆ ಇನ್ನು ತನ್ನ ಹಿಂದಣ ವಸಾಹತುಗಳನ್ನು ತನಗೆ ಕೊಡಬೇಕಾಗಿ ಜರ್ಮನಿಯ ಅಂಬೋಣವಿದೆ. ಅದು ಇಟೇಲಿಯು ಈಗ ಯುದ್ಧ ಮಾಡಲು ಉದ್ದೇಶವಾಗಿಟ್ಟುಕೊಂಡಿರುವ ಅಭಿಪ್ರಾಯಕ್ಕೆ ಸರಿಯಾಗಿದೆ ಹೀಗಾಗಿ ಜನಾಂಗ ಸಂಘವು ಇದೊಂದು ವಾರದಲ್ಲಿ ಅತಿ ಕಠಿನವಾಗಿರುವ ಎರಡು ರನ ಸ್ಯಗಳನ್ನು ಇತ್ಯರ್ಥಿಸಬೇಕಾಗಿದೆ ಈ ಇತ್ಯರ್ಥವನ್ನು ಅವಲಂಬಿಸಿಯೆ ಮುಂದೆ ಶಾಂತಿಯು ಉಳಿಯಬಹುದಾಗಿದೆ. ಇನ್ನೊಂದು ತಿಂಗಳಲ್ಲಿ ಯುದ್ಧವಾದೀತೆ? ಎಂದು ಪಾರ್ಲಿಮೆಂಟಿನಲ್ಲೂ ಪ್ರಶ್ನೆ ಹಾಕಿದವರಿದ್ದಾರೆ

ಮಂಗಳೂರು.

ಸ್ಥಳೀಯ ಸುದ್ದಿಗಳು

ದಿ ಬೋರ್ಡ್ ಟ್ರೇನ್ ಸೇವಿಂಗ್ಸಿನ ಕಂಪೆನಿ [illegible] — ಈ ಕಂಪೆನಿಯ ಎಸ್ ಎಸ್ ಭಾರತಿ ಎಂಬ ಸ್ಟೀಮರು ಮಾರ್ಚ ೫ನೇ ಗುರುವಾರ ರಾತ್ರಿ ೯ ಗಂಟೆಗೆ ಬಂದು, ೧೦ನೇ ಶುಕ್ರವಾರ ಬೆಳಿಗ್ಗೆ ಮುಂಬಯಿಗೆ ಹೊರಡುವುದು ಎಸ್ ಎಸ್ ಭದ್ರಾವತಿ ಎಂಬ ಸ್ಟೀಮರು ೨೧ನೇ ಸೋಮವಾರ ಮುಂಬಯಿಯನ್ನು ತಲಪಿ, ಮಂಗಳವಾರ ಬೆಳಿಗ್ಗೆ [illegible] ಗಂಟೆಗೆ ಇಲ್ಲಿಂದ ತೆರಳುವುದು

ಬೋರ್ಡ್ ಲ್ಯಾಂಡ್ ಎಲೆಕ್ಟ್ರಿಕ್ ಕಂಪೆನಿ ಲಿಮಿಟೆಡ್ ಇವರ ಬ್ರಾಂಚ್ ಸೆಕ್ರಿಟೆರಿಯವರ ಕೊಟ್ಟ ಕಾರ್ ಬ್ರಿಡ್ಜನ ಕಲ್ಲಿಕೋಟೆಯಲ್ಲಿಯ ಹಳಯ ಆಫೀಸು ಮಾರ್ಚ ಸ್ನ ೧೬ರಿಂದ ಇಲ್ಲಿಯ ಬ್ರಾಂಚ್ ಆಫೀಸನ್ನು ಮಾರ್ಚ ೩೧ ರಿಂದ ಫಳ್ನೀರ ರಸ್ತೆಯ ಆಫೀಸಿನ ಎದುರಲ್ಲಿ ಹೊಸತಾಗಿ ಕಟ್ಟಿಸಿದ ಸೌಮ್ಯಾಲಯಕ್ಕೆ ಎಂಬ ಬಿಲ್ಡಿಂಗಿಗೆ ಬದಲಾಯಿಸುವರು ಇನ್ನು ಪ್ರತಿಬೆಳವಣಿಗೆ ಈ ಹೊಸ ಸ್ಥಳಕ್ಕೆ ಪತ್ರವ್ಯವಹಾರ ನಡೆಸಬೇಕಾಗಿ ಅವರ ವಿನಂತಿ.

ಮಂಗಳೂರು ಲೇಡೀಸ್ ಕ್ಲಬ್.

ಮಾರ್ಚ ೫ನೇ ಗುರುವಾರ ಲೇಡೀಸ್ ಕ್ಲಬ್ಬಿನ ವರ್ಧಂತಿ ಉತ್ಸವವು ಮಿಸೆಸ್ ಮಹಾಬಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಟೆನ್ನಿಸ್ ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದ ನಂತರ ಅಧ್ಯಕ್ಷರು ಕ್ಲಬ್ಬಿನ ಸದಸ್ಯರು ತನ್ನ ಚೊಕ್ಕವೂ ಚಿಕ್ಕವೂ ಆದ ಭಾಷಣದಿಂದ ಸಭಿಕರನ್ನು ಸಂತೋಷಪಡಿಸಿದರು. ಆನಂತರ ಕ್ಲಬ್ಬಿನ ಅಧ್ಯಕ್ಷಿಣಿಯಾದ ಮಿಸೆಸ್ ವೆಂಕಟರಾಯರು, ಮಿಸೆಸ್ ಮಹಾಬಲ ಹೆಗ್ಡೆಯವರನ್ನು ಅಭಿನಂದಿಸಿ, ಕ್ಲಬ್ಬಿನ ಕೆಲಸದಲ್ಲಿಯೂ ಉತ್ಸವದಲ್ಲಿಯೂ ನೆರವಾದವರೆಲ್ಲರಿಗೂ ಕೃತಜ್ಞತಾ ವಂದನೆಗಳನ್ನು ಅರ್ಪಿಸಿದರು. ಇದಾದ ಮೇಲೆ ಫಲಾಹಾರವೂ, ಸಂಗೀತಗಳೂ, ನೃತ್ಯಗಳೂ ನಡೆದವು.

ಸಿಟಿ ಆರ್ಯಸಮಾಜ.

ಇದೇ ತಿಂಗಳ ೮ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮-೩೦ಕ್ಕೆ ಇಲ್ಲಿಯ ಸಿಟಿ ಆರ್ಯಸಮಾಜ ಮಂದಿರದಲ್ಲಿ "ತ್ರೈತವಾದ"ದ ಕುರಿತು ಭಾಷಣಗಳಾಗುವವು ಸರ್ವರೂ ಸಹಕರಿಸಬೇಕಾಗಿ ಕಾರ್ಯದರ್ಶಿಯವರ ವಿನಂತಿ

ಶ್ರೀ ಕೃಷ್ಣಾ ಸಿನೇಮದಲ್ಲಿ.

೩ನೇ ೧೧ರಿಂದ ಜಗತ್ಪ್ರಸಿದ್ಧ ಹಾಸ್ಯಗಾರರಾದ ಜಗತ್ತನ್ನೆ ತಮ್ಮ ಹಾಸ್ಯದಿಂದ ನಮ್ಮೆಡೆಗೆ ಸೆಳೆದ ಅಭಿನಯ ಕಲಾಕಾರರಾದ ಲೋರೆಲ್ ಮತ್ತು ಹಾರ್ಡಿಯವರಿಂದ ಅಭಿನಯಿಸಲ್ಪಟ್ಟ "ಸನ್ಸ್ ಆಫ್ ದಿ ಡಸರ್ಟ್" ಮತ್ತು ಭಗತ್‌ಸಿಂಗರ ಪ್ರಖ್ಯಾತ ಹಿಂದೀ ಅಭಿನಯಕಾರನಾದ ಜಾಲ್ ಮರ್ಚೆಂಟ್ ಮತ್ತು ಕೃಷ್ಣಕುಮಾರಿ ಸಿತಾರಾ ದ ಎಂತಾವಿದರಿಂದ ಅಭಿನಯಿಸಲ್ಪಟ್ಟ 'ದೆಸರ್ಟ್ ಕ್ವೀನ್' ಎಂಬ ರೋಮಾಂಚನಗೊಳಿಸುವ, ದೃಶ್ಯಗಳಿಂದ ಕೂಡಿದ ಹಿಂದೀ ಚಿತ್ರವು ಪ್ರದರ್ಶಿಸಲ್ಪಡುವುದು.

ಹಿಂದೀ ವರ್ಗಗಳು

ಇದೇ ತಿಂಗಳ ೫ನೇ ೬ರಿಂದ ಸ್ಥಳೀಯ ಕಾಂಗ್ರೆಸ್ ಹಾಲಿನಲ್ಲಿ ಹಿಂದೀ ವರ್ಗಗಳು ಪ್ರಾರಂಭವಾಗಿವೆ ವರ್ಗಗಳು ಮಂಗಳವಾರ, ಗುರುವಾರ ಮತ್ತು ಶನಿವಾರಗಳಲ್ಲಿ ಸಂಜೆ ಗಂಟೆ ೫ರಿಂದ ೬ರ ತನಕ ನಡಿಸಲ್ಪಡುವವು ಮಧ್ಯಮ ವರ್ಗವು ಸೋಮವಾರ, ಬುಧವಾರ ಮತ್ತು ಶುಕ್ರವಾರಗಳಲ್ಲಿ ಬೆಳಿಗ್ಗೆ ಗಂಟೆ [illegible] ರಿಂದ [illegible] ವರೆಗೆ ನಡೆಸಲ್ಪಡುವವು [illegible] ಇಲ್ಲಿಯ [illegible] ಸಭೆಯಲ್ಲಿ ಸೋಮ ವಾರ, ಬುಧವಾರ ಮತ್ತು ಶನಿವಾರಗಳಲ್ಲಿ ಪ್ರಥಮ, ಮತ್ತು ಆದಿತ್ಯವಾರ, ಮಂಗಳವಾರ ಮತ್ತು ಶುಕ್ರವಾರಗಳಲ್ಲಿ ಮಧ್ಯಮ ವರ್ಗಗಳು, ಸಂಜೆ ಗಂಟೆ ೪ರಿಂದ ೫ರ ವರೆಗೆ ನಡೆಯುತ್ತವೆ [illegible] ಒಂದು ಕಲಿಯಬೇಕಾಗಿ [illegible] ಪ್ರಚಾರಕರು ವಿನಂತಿಸುತ್ತಾರೆ

ಜನನಮರಣ.

ಇದೇ ೫ನೇ [illegible] ಅಂತ್ಯವಾದ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ೮ಟ್ಟು ೫೮ ಮರಣಗಳೂ ೪೮ ಜನನಗಳೂ ಆಗಿವೆ ಎಂದು ತಿಳಿದು ಬರುತ್ತದೆ

ದಿಸ್ಟ್ರಿಕ್ಟ್ ಬೋರ್ಡ [illegible] ಪ್ರಯಾಣಿಕರ [illegible] ಕಛೇರಿಗೆ ಅಧಿಕಾರಿಗಳು [illegible] ಈ ಮೂಲಕ ತಿಳಿಯಪಡಿಸ [illegible] ಸ್ಟೇಷನು ಮತ್ತು ದ ವರ್ಗದ [illegible] ಟಿಗೆ ಮಾರ್ಚ ೫ನೇ ೧ [illegible] ರಿಂದ ೫ [illegible] ವರೆಗೆ ಬಂದುದಾಗಲಾಗಿದೆ

ತಾಲೂಕುಗಳಿಂದ

ಹಿರಿಯಡ್ಕ—ಇಲ್ಲಿಯ ಮೇಲ ಹುಸ್ಸೈನಾರರಾದ ಶ್ರೀಯುತ ಪಡುಗ, ಬೆಂಕಟೇಶ [illegible] ಸಕಲ ಮೇಲಗಳಲ್ಲಿರುವ ಹಸ್ತಾಗ್ರಾರರಿಗೆಂತಲೂ ಅತ್ಯಂತ ಜಿಯುಸಿಸಿಕೊಂಡು. ವಿದ್ಯಾಂಸರಿಂದ ಸುವರ್ಣಪದಕಗಳನ್ನು ಪಡೆದವರಾಗಿದ್ದು ಇದೇ ೫ನೇ ಆನೇ ಬುಧವಾರ ರಾತ್ರಿ ಘಂಟೆ ೭-೩೦ಕ್ಕೆ ಪ ಂಗಳೂರಲ್ಲಿ ಪರಲೋಕವಾಸಿಯಾದ ವಿಷಾದಕರ ವಾರ್ತೆಯನ್ನು ತಿಳಿಸಲು ನಮಗೆ ಬಹಳ ದುಃಖ ಸಂತಾಪವಾಗುತ್ತದೆ ಶ್ರೀಯುತರು ವಿದ್ಯಾಸಾಗರರು, ಜನತೆಯ ಮೆಚ್ಚುಗೆಗೆ ಪಾತ್ರರಾದವರೂ ಆಗಿದ್ದರು ಇವರ ನಿಧನ ವಾರ್ತೆಯು ನಮಗೆ ತಿಳಿದೊಡನೆಯೇ ಇಲ್ಲಿ ಇಡೀ ಪೇಟೆಯಲ್ಲಿ ವ್ಯವಹಾರ ನಿಧನದ ದುಃಖಸೂಚಕವಾಗಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು

ಕಟಪಾಡಿ—ಇಲ್ಲಿಯ ಸುಪ್ರಸಿದ್ಧ ಡಾಕ್ಟರ್ ಮನೆತನಕ್ಕೆ ಸೇರಿ ಸಜ್ಜನ ಮುಖಂಡರಾದ ಆನಂದ ಬಂಧುಗಳೂ, ಸಾರ್ವಜನಿಕ ಕಾರ್ಯಗಳಲ್ಲಿ ಭಾಗಿಯಾಗುವವರೂ ಆಗಿದ್ದ ಮೊಗವೀರ ಪಂಚಾಯತ ಕೋರ್ಟಿನಲ್ಲಿ ದೀರ್ಘಕಾಲದ ವರೆಗೆ ಪ್ರಸಿಡೆಂಟರಾಗಿ ಅದನ್ನು ಬೆಳೆಸಿದವರಾಗಿ ಅವರ ಮರಣದ ಪ್ರಯುಕ್ತ ಮತ್ತು ಸ್ಥಳೀಯ ಹಾಯರ್ ಎಲಿಮೆಂಟರಿ ಶಾಲೆಯ ಏಳಿಗೆಗೆ ಹಣವನ್ನಿತ್ತು ಧನಗಳಿಂದ ಸಹಾಯ ಮಾಡಿದ ದಿವಂಗತ ಬಾಂಗಾರ ಶ್ರೀನಿವಾಸ ನಾಯಕರ ಸ್ಮರಣಾರ್ಥ ಮತ್ತು ಅನಾವರಣ ಸಮಾರಂಭವು ಮೊಗವೀರ ಪಂಚಾಯತ ಕೋರ್ಟಿನ ಆಶ್ರಯದಲ್ಲಿ ೫ನೇ, ೧೫ನೇ ಆದಿತ್ಯವಾರ ಕುಂದಾಪುರದ ಸಬ್ ಕಲೆಕ್ಟರರಾದ ಎಸ್. ವೆಂಕಟೇಶ್ವರನ್, ಎಸ್ಕ್ವಾಯರ್, ಐ. ಸಿ. ಎಸ್., ಇವರ ಅಧ್ಯಕ್ಷತೆಯಲ್ಲಿ ಶ್ರೀಮತಿಶೋಭಾಯಮಾನೆಗಳಿಂದಲಂಕೃತವಾದ ಶ್ರೀ ಸ್ವಾಮಿ ಸಾಹೇಬ ಪಟ್ಟಣದಲ್ಲಿ ಜರಗಿತು.

೫, ೪—೩—೩೬ನೇ ಬುಧವಾರ ಇಲ್ಲಿಗೆ ಕೃಷಿ ಇಲಾಖೆಯ ವಸ್ತುಪ್ರದರ್ಶನದ ಮೋಟಾರು ಬಂದಿಯ ಬಂದಿತ್ತು. ಕೃಷಿ ಇಲಾಖೆಯ ಮತ್ತು ಕೃಷಿ ಇಲಾಖಾ ಅಧಿಕಾರಿಗಳು ಮೊದಲಾದವರು ಶೇಖ್ರನ್ ಭಾಷಣಗಳಿತ್ತ, ಕರುಣಾಕರು ಡಿ. ಸಿ. ಟೇಲರ್, ಕೋ ಓಪರೇಟಿವ್ ಯೂನಿಯನ್ ಕಾರ್ಯದರ್ಶಿ ಶ್ರೀ ಕೆ. ಆರ್. ಶೆಣೈಯವರು ಸಹಕಾರ ಸಂಘಗಳ ಮೂಲಕ ಕೃಷಿ ಮತ್ತು ಪಶು ಇಲಾಖೆಯವರ ಉಪಯುಕ್ತ ತತ್ವಗಳನ್ನು ಜೊತೆಗೆ ಕಾರ್ಯರೂಪಕ್ಕೆ ತರಬಹುದೆಂದು ಸೂಚಿಸಿದರು

ಕುಂದಾಪುರ:—ಇಲ್ಲಿಯ ರೇಂಜಿನ ಶಾಲಾ ಡೆಪ್ಯುಟಿ ಇನ್ಸ್ಪೆಕ್ಟರರಾದ ಶ್ರೀಯುತ ಎಚ್ ಸಂಜೀವರಾವ್ ಬಿ ಎ ಎಲ್ ಟಿ ಯವರಿಗೆ ಮಂಗಳೂರಿಗೆ ವರ್ಗವಾಗಿ ಅವರ ಸ್ಥಾನಕ್ಕೆ ಮಂಗಳೂರಿನ ಶ್ರೀಯುತ ಸುಬ್ಬಯ್ಯನವರಿಗೆ ನೇಮಕವಾಗಿರುತ್ತದೆ ಶ್ರೀಯುತ ಸುಬ್ಬಯ್ಯನವರು ಕಳೆದ ೩ನೇ ಇದಲ್ಲು ಬಂದು ಚಾರ್ಜ ವಹಿಸಿಕೊಂಡಿರುವರು

ಒಡೇರಹೋಬಳಿ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಶ್ರೀಯುತ ವಾಸುದೇವರಾಯರ ಅಧ್ಯಕ್ಷತೆಯಲ್ಲಿ ೫ನೇ ೫—೩—೩೬ರಲ್ಲು ಸಂಭ್ರಮದಿಂದ ಜರಗಿತು ಕುಂದಾಪುರ ಯೂನಿಯನ್ನಿನ ಡೈರೆಕ್ಟರರಾದ ಶ್ರೀಯುತ ವಕೀಲ್ ಕೆ ಎಚ್ ಭಂಡಾರಿ ಬಿ ಎ ಯವರು ಸಹಕಾರ ಸಂಘದ ಅಭ್ಯುದಯವನ್ನು ಹಾರೈಸಿ ಉತ್ತಮ ಭಾಷಣವನ್ನು ಮಾಡಿದರು. ಆರ ಜನ ಮೆಂಬರರು ಸಭೆಗೆ ರಾಜರಿದ್ದರು ಬಂದ ಮಹನೀಯರಿಗೆಲ್ಲಾ ಟೀಪಾರ್ಟಿಯ ಸತ್ಕಾರವಿತ್ತು ಈ ಸಂಘದಲ್ಲಿ ೧೪೭ ಮೆಂಬರರಿದ್ದು ಸುಮಾರು ೧೪ ಸಾವಿರದ ವರೆಗಿನ ಲೇವಾದೇವಿ ಇರುತ್ತದೆ ಸಂಘದ ಕಾರ್ಯಕಲಾಪಗಳಲ್ಲಿ ಪ್ರತಿಸುತ್ತಿರುವ ಸಂಘದ ಕಾರ್ಯದರ್ಶಿಗಳಾದ ಶ್ರೀಯುತ ಶೇಷ [illegible] ಪ್ರಯತ್ನವು ಪ್ರಶಂಸನೀಯವಾಗಿರುತ್ತದೆ

ಡಿಸ್ಟ್ರಿಕ್ಟ ಇನ್ಸ್ಪೆಕ್ಟರರಾದ ಶ್ರೀಯುತ ಎಚ್ ಸಂಜೀವರಾವ್ ಬಿ ಎ ಎಲ್ ಟಿ ಯವರು ವರ್ಗವಾಗಿ ಹೋಗುವುದಕ್ಕೆ ಸಂಭ್ರಮದಿಂದ ಸತ್ಕರಿಸುವ ಸಲುವಾಗಿ ಕುಂದಾಪುರ ೮ ಮುಖ್ಯೋಪಾಧ್ಯಾಯರು ಸೇರಿ ೫ನೇ ೭—೩—೩೬ರಲ್ಲು ಅಪರಾಹ್ನ ಗಂಟೆ ೩ಕ್ಕೆ ಪಡೇರಿ ಬೋರ್ಡ ಹಿರಿಯ ಶಾಲೆಯಲ್ಲಿ ಒಂದು ಟೀ ಪಾರ್ಟಿ ಕೊಟ್ಟಿದ್ದರು [illegible] ಅನೇಕ ಮಂದಿ ಉಪಾಧ್ಯಾಯರು ಹಾಗೂ ಬೋರ್ಡಿನ ಪ್ರೆಸಿಡೆಂಟ ಶ್ರೀ [illegible] ಪಡೇರಿ ಬೋರ್ಡ [illegible] ಅಧ್ಯಕ್ಷರಾಗಿದ್ದರು. ಅಧ್ಯಕ್ಷರ ಹಾಗೂ ಕೆಲವು ಸಭಿಕರ [illegible] ಪ್ರೈಮರಿ [illegible] ಯಿತು [illegible] ಸತ್ಕಾರವೂ ಇತ್ತು

ಶ್ರೀ ಮಹಾಲಕ್ಷ್ಮಿ ಪ್ರಿಂಟಿಂಗ್ ವರ್ಕ್ಸ್ ಎಂಬ ಹೊಸ ಮುದ್ರಣಾಲಯವು ಇಲ್ಲಿ ಸದ್ಯದಲ್ಲಿ ತೆರೆಯಲ್ಪಡುವುದೆಂದು ತಿಳಿದುಬರುತ್ತದೆ

ಪಡುಬಿದ್ರೆ:—ಇದೇ ಕಳೆದ ಆದಿತ್ಯವಾರ ಮಂಗಳೂರು ಗವರ್ನಮೆಂಟ್ ಕಾಲೇಜಿನ ಪಂಡಿತರಾದ ವಿದ್ವಾನ್ ಸೀತಾರಾಮಾಚಾರ್ಯರು ಸೈಂಟ್ ಎಲೋಸಿಯಸ್ ಕಾಲೇಜಿನ ಪಂಡಿತರಾದ ವಿದ್ವಾನ್ ಕೃಷ್ಣ ಭಟ್ಟರು, ಕಾಸರಗೋಡಿನ ಶ್ರೀಮಾನ್ ಗೋವಿಂದಪೈಯವರು ಮತ್ತು ಇತರ ಮಹನೀಯರುಗಳೆಲ್ಲರು ಇಲ್ಲಿಗೆ ಬಂದು ಕಿನ್ನಿಗೋಳಿ [illegible] ಶ್ರೀ ಸನ್ನಿಧಿಯನ್ನು ಸಾರಿಗೆ [illegible] ಜೀರ್ಣೋದ್ಧಾರ [illegible] ದೇವಸ್ಥಾನದ [illegible] ಶಿಲಾಲೇಖನಗಳನ್ನು ಓದಿದರು [illegible] ಪ್ರಸಾದವಾಗುವುದನ್ನು ಕಣ್ಣಾರೆ ನೋಡಿ [illegible] ವುದನ್ನು ಕಂಡು [illegible] ಸಂದರ್ಶಕರ ವಿಸ್ಮಯಾನಂದವಾದ ಅತ್ಯದ್ಭುತ ಕಾರ್ಯಗಳನ್ನು ಪ್ರತ್ಯಕ್ಷ ಕಂಡು ಸಮಾಧಾನಗೊಂಡಿರುವರು ಅದೇ ದಿನ ರಾತ್ರಿ ಉಡುಪಿಯಲ್ಲಿರುವ ಶ್ರೀ ಅನಂತ ಪದ್ಮನಾಭಾಚಾರ್ಯರ ಹರಿಕಥೆಯೂ ಮತ್ತು ಯಾಗಿ ಜರಗಿತು

ಪಡುಬಿದ್ರೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಂಪ್ರತಿ ಆಗುವ ಉತ್ಸವಾದಿಸಂಬಂಧವಾದ ಧ್ವಜಾರೋಹಣವು ಇದೇ ಯುವ ಸಂವತ್ಸರದ ಫಾಲ್ಗುಣ ಶುದ್ಧ (೫ನೇ ೧೩-೩-೩೬)ನೇ ಶುಕ್ರವಾರ ದಿವಸವು [illegible] ನೆರವೇರುವದು ಮತ್ತು ತಂತುದಿಟ್ಟು ಪ ಬಡಗುದಿಟ್ಟು ಯೆಕ್ಷಗಾನ ತಾಳಮದ್ದಳೆ ಕೂಡಾ ೫ನೇ ೧೫-೩-೩೬ನೇ ಆದಿತ್ಯವಾರ ರಾತ್ರಿಗೆ ರಥಾರೋಹಣ ಉತ್ಸವವು ೫ನೇ ೨೦-೩-೩೬ನೇ ಶುಕ್ರವಾರ ದಿವಸವು ಬಾಗಲು ತೆಗೆಯುವುದು ಮತ್ತು ಚೆಂಡಾಟ ಉತ್ಸವವು ೫ನೇ ೨೧-೩-೩೬ನೇ ಶನಿವಾರ ದಿವಸವು ಜರಗುವುದು

ಹೆರ್ಗ್ಯದೂರು:—೧೯೩೬ನೇ ಇಸವಿ ಮಾರ್ಚ ೫ನೇ, ೧೧ನೇ ಬುಧವಾರ ರಾತ್ರಿ ಧೀರೆಕಾಣಿಕೆ, ಮತ್ತು ಶ್ರೀ ಕಾಂತ್ರಯ, ಅಂಕುರಾರೋಹಣ, ೫ನೇ ೧೨ನೇ ಗುರುವಾರ ಪ್ರಾತಃಕಾಲ ಧ್ವಜಾರೋಹಣ, ಈ ರಾತ್ರಿ ಪನ್ನಂಗ ಉತ್ಸವ, ೫ನೇ ೧೩ನೇ ಶುಕ್ರವಾರ ಸಂಕ್ರಾಂತಿ, ರಾತ್ರಿ ರಂಗಪೂಜೆ, ಕರಿದೀಪೋತ್ಸವ, ೫ನೇ ೧೪ನೇ ಶನಿವಾರ ವಸಂತೋತ್ಸವ ೫ನೇ ೧೫ನೇ ಆದಿತ್ಯವಾರ ಶ್ರೀಮನ್ ಮಹಾರಥೋತ್ಸವ, ಮಹಾಭೂತಬಲಿ ಮತ್ತು ಶಯನೋತ್ಸವ ೫ನೇ ೧೬ನೇ ಸೋಮವಾರ ಕವಾಟೋದ್ಘಾಟನ, ರಾತ್ರಿ ಅವಭೃತಸ್ನಾನ, ಧ್ವಜಾರೋಹಣ, ರಂಗಪೂಜೆ, ೫ನೇ ೧೭ನೇ ಮಂಗಳವಾರ ಓಕುಳಿ, ೫ನೇ ೧೮ನೇ ಬುಧವಾರ ಪ್ರತ್ಯಕ್ಷಂಭಾಭಿಷೇಕ ಈ ಪ್ರಕಾರ ಶ್ರೀ ಸ್ವಾಮಿಯ ಸನ್ನಿಧಿಯಲ್ಲಿ ವಿವಿಧ ಮಹೋತ್ಸವಗಳಿಗೆ ಬಂದು "ಸಾಂಗವಾಗಿ ನಡೆಸಿಕೊಟ್ಟು" ಶ್ರೀಯುತ ಗಂಧಪ್ರಸಾದ ಸ್ವೀಕರಿಸಿಕೊಳ್ಳಬೇಕಾಗಿ ಆಡಳಿತ ಮೊಕ್ತೇಸರರಾದ ಕೆ. ರಂಗಪ್ಪನವರು ತಿಳಿಸುತ್ತಾರೆ

ಫರಂಗಿಪೇಟೆ—ಸ್ಥಳೀಯ ಮ. ಬೋ. ಬೋರ್ಡ ಶಾಲೆಯ ವರ್ಧಂತಿ ಉತ್ಸವವು ಮಾರ್ಚ ೫ನೇ ೫ನೇ ಗುರುವಾರ ದಿ ಬೋರ್ಡ ಮೆಂಬರರಾದ ಶ್ರೀ ಸದಾಶಿವ ಆಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಬಾಲಕರ ಆಟಗಳೂ ನಾಟಕವೂ ನಡೆದ ನಂತರ ಸಭಾಧ್ಯಕ್ಷರು ಶಾಲಾ ಚಟುವಟಿಕೆಗಳ ವಿಷಯ ತಿಳಿದು ಹೊಗಳಿದರು ಶಾಲೆಯ ಸ್ಥಿತಿಯನ್ನು ಸಂಪೂರ್ಣವಾಗಿ ಸೂಚಿಸುತ್ತದೆ

ಕಂಜಾಲು:—ಇಲ್ಲಿಯ ಶಾಲೆಯು ವೆಂಕಟರಮಣ [illegible] ಸಂಬಂಧಿಸಿದ [illegible] ಅರ್ಚಕರಾದ ಶ್ರೀ [illegible] ಬದಲಾಗಿ ಬ್ರಿಟಿಷ್ ಇಂಡಿಯ [illegible] ದಿನೇ ದಿನೇ ಅಭಿವೃದ್ಧಿಹೊಂದುತ್ತಿರುವುದರಿಂದ ಹಣದ ಅಭಾವದಿಂದ ಅದು ಇಲ್ಲಿ [illegible] ಮುಂದುವರಿಯಲು ಕಷ್ಟವಿದ್ದಪ್ರಯುಕ್ತ [illegible] ಕಟ್ಟಡ [illegible] ದಿವ್ಯ [illegible] ಶ್ರೀ [illegible] ವಿದ್ಯಾಭಿಮಾನಿಗಳ ಧರ್ಮಾಭಿಮಾನಿಗಳ ಅದ ಮಹನೀಯರು ತಮ್ಮ ಶಕ್ತ್ಯಾನುಸಾರ ಸಹಾಯವನ್ನೀಯಬೇಕು [illegible] ವಿನಂತಿಯೂ ಮಾಡಿಸುತ್ತದೆ

ಉಡುಪಿ:—ಕಳೆದ ೩ನೇ [illegible] ಉಡುಪಿ ಮುನ್ಸಿಪಾಲಿಟಿಯಲ್ಲಿ [illegible] ಸಂಘದ ನೇತೃತ್ವದಲ್ಲಿ [illegible] ವಿಶೇಷರಾದ [illegible] ವಿವೇಕ [illegible] ಶ್ರೀ [illegible] ಅಧ್ಯಕ್ಷರಾದ ಶ್ರೀ [illegible] ಬೀದಿ ದೀಪಗಳು [illegible] ಶ್ರೀ [illegible] ಸಂಜೀವರಾಯರು [illegible] ಕಾರ [illegible] ಪ್ರಸ್ತಾಪಿಸಿ [illegible] ಶ್ರೀ ಬಿ ಸಂಜೀವರಾಯರು ಸ್ಥಳೀಯ ಪ್ರತಿ [illegible] ಶ್ರೀ [illegible] ಆಮಂತ್ರಿತರಾಗಿದ್ದರು. [illegible] ಬಿ ಎ ಎಲ್ ಟಿ, ಮತ್ತು ಶೇಷ [illegible] ಬಿ ಎ ಬಿ ಎಲ್ [illegible] ಭಾಷಣ ಗಳಾದವು ಮೇಲಾಗಿ ಶ್ರೀ ಬಿ ಸಂಜೀವರಾಯರು ತಮ್ಮ ಇಂದಿನ ಹಲವು ವರ್ಷಗಳಿಂದ ಪ್ರಯತ್ನಪಟ್ಟು ಮ್ಯುನಿಸಿಪಲ್ ವ್ಯವಹಾರದಲ್ಲಿ ಸಹಾಯಿಸಿದುದನ್ನು ಉಲ್ಲೇಖಿಸಿ ಮಾಡುವುದಲ್ಲದೆ ಹಿಂದಿನ ದಿವಸ ನಿಮ್ಮನ್ನೆಂದೂ ಮರೆಯಲಿಲ್ಲವೆಂದು, ಜನಾಂಗದ ಏಳ್ಗೆಗೆ ಅಂಗೀಕರಿಸಿಯೂ ಒಂದು ಪ್ರಬಲಸಾಧನವಾಗಿರುತ್ತ ಇನ್ನುಮುಂದಕ್ಕೂ ದೇಶದ ಹಿತಕ್ಕಿನ ಉತ್ಸುಕತೆ ಬೆಳೆಸಲು ಮತ್ತು ಸಹಕಾರವನ್ನು ದೇಶಬಾಂಧವರಲ್ಲಿ ತೋರಿಸಬೇಕಾಗಿ ಅತಿ ಭಾವಪೂರ್ವಕವಾಗಿ ಭಾಷಣ ಮಾಡಿದರು.

೫ನೇ ಆರ್ಕೆ ಸಾಯಂಕಾಲ ಘಟ್ಟದಲ್ಲಿ ಬಿ. ಸಿ. ಮಿಷನ್ಸಿನಿಂದ ನಡೆಸಲಾದ [illegible] ಗೆಂಡು ನಡೆದಿದ್ದಾಗ "ಕಟ್ಟಿಸಲಿಕ್ಕೆ" ಬೋರ್ಡಿಗೆ ಬೇಲಿ ಕಟ್ಟಿದವು ಮಂಗಳೂರಿನ ವಕೀಲರಾದ ಶ್ರೀ ಎ. ಶ್ರೀನಿವಾಸ ಪೈ ಬಿ. ಎ ಬಿ ಎಲ್., ಇವರಿಂದ ಪ್ರವೇಶನಮಾಡಲ್ಪಟ್ಟಿತು. ಇದುವರೆಗೆ ಸುಸಜ್ಜಿತ ಕಟ್ಟಡದ ಅಭಾವದಿಂದ ಅಡಚಣೆಗೊಂಡಿದ್ದ ವಿದ್ಯಾಪ್ರಚಾರ ಕಾರ್ಯಕ್ಕೆ ಅನುಕೂಲತೆಯೊಂದಾಯಿತು. ಆದರ ಪರವೂರ ಹಲವು ಗೃಹಸ್ಥರು ಹಾಜರಿದ್ದರು ಕೊನೆಗೆ ಮಕ್ಕಳ ಚಟುವಟಿಕೆಗಳು ಸಭಿಕರನ್ನು ಹರ್ಷಗೊಳಿಸಿದುವು. ಅಲ್ಲಿದ್ದ ಬಂದವರು ತೋರಿಗೆ [illegible] ಸಹಾಯಿಸಿದರೆ ಉತ್ತಮ [illegible] ಗ್ರಾಮಸ್ಥರ ಸಹಾಯ ಅಗತ್ಯವು ಇದ್ದುದೆ

ಹಿಂಗಿದ ೧ ನೇ ಮುಖಾಂದವರೆ

ಪ್ರಾಣಿಬಲಿಯನ್ನು ನಿಷೇಧಿಸಿರಿ!

ಕ್ಷೇಪಣಕ್ಕೆ ಅಥವಾ ನಮ್ಮ ಆಟಕ್ಕೆಂದು ಅವುಗಳನ್ನು ಕೊಲ್ಲುವುದು ಎಷ್ಟು ನ್ಯಾಯವೆಂಬುದನ್ನು ಬುದ್ಧಿಯುಳ್ಳ ಮನುಷ್ಯರು ತಿಳಿಯದಿರಲಾರರು. ವಿಚಾರಶೀಲರು ದೇವಿಗೆ ಸಾಧು ಪ್ರಾಣಿಗಳನ್ನು ಕೊಂದು ಬಲಿ ಅರ್ಪಿಸುವದು ಯಾವ ನೀತಿಯೆಂದು ಯೋಚಿಸಬೇಕು. ಎಂದೆಂದಿಗೂ ಉತ್ತಮಳಾದ ದೇವಿಯು ಇಂಥಾ ನೀಚ ಕೆಲಸಕ್ಕೆ ತೃಪ್ತಿಪಟ್ಟು ನಮಗೆ ಪ್ರಸನ್ನಳಾಗಿ ನಮ್ಮ ಸಕಲ ಇಷ್ಟಗಳನ್ನು ನೆರವೇರಿಸಿ ಕೊಡುವಳೆಂಬ ನಂಬುಗೆ ಕೇವಲ ನಿರಾಧಾರವಾಗಿದೆ. ಪ್ರಾಣಿಬಲಿಯಂಥ ನೀಚ ಬಾಹ್ಯ ವಿಷಯವನ್ನು ಪುಷ್ಟೀಕರಿಸಿ ಕೆಲವು ಪುರಾಣ ಶಾಸ್ತ್ರಗಳಲ್ಲಿ ಅಂಧಶ್ರದ್ಧೆಯುಳ್ಳ ವ್ಯಕ್ತಿಗಳು ಜನಸಾಮಾನ್ಯರಿಗೆ ಮಂಕುಮಾಡಲು ಅನುಕೂಲಿಸುವಂತೆ ಸ್ವಕಪೋಲಕಲ್ಪಿತ ಶಾಸ್ತ್ರಗಳನ್ನು ರಚಿಸಲ್ಪಟ್ಟಿರುವರು. ಆದರೂ ಅದನ್ನು ವಿಚಾರಶೀಲರು ಮಾನ್ಯಮಾಡಲಾರರು. ಮಾತ್ರವಲ್ಲ ಅದು ಉತ್ತಮವಾದ ಹಿಂದೂಧರ್ಮಕ್ಕೆ ಕಳಂಕಪ್ರಾಯವಾಗಿದೆ.

ಅಹಿಂಸಾಪರಮೋಧರ್ಮ ಎಂಬೀ ಮೇಲಿನ ಸುಪ್ರಸಿದ್ಧ ಅಭಿಯೋಕ್ತಿ ಯಾರಿಗೆ ಗೊತ್ತಿಲ್ಲ? ಇದನ್ನರಿಯದವರು ಯಾರು ಅರಿಯದವರಿಲ್ಲೆಂದರೂ ಅತಿಶಯೋಕ್ತಿಯಾಗಲಾರದು. ಪ್ರಾಸಂಗಿಕ ಧರ್ಮಕ್ಕೆ ಅಡಿಗಲ್ಲಿನಂತಿದ್ದ ಈ ಅತ್ಯುಜ್ವಲ ಅಹಿಂಸಾತತ್ತ್ವದಿಂದ ಪರಪ್ರಭಾವನ್ನಾಗಿ ಮೂಲೆ ಹಿಡಿದುಕೊಂಡಿದೆ. ಹಿಂಸಾ ಪಿಶಾಚಿ ಪ್ರೀತರಾಗಿ ಲಕ್ಷೋಪಲಕ್ಷ ಮಾನವ ವ್ಯಕ್ತಿಗಳು ಜಗದಾಂಬೆಯ ಪಾವನ ಪದತಲದಲ್ಲಿ ಮೂಕ ಪ್ರಾಣಿಗಳ ದೀನ ಬಾವದ ಕಡೆ ಎಳ್ಳಷ್ಟೂ ಲಕ್ಷ್ಯವಿಲ್ಲದೆ ಬಲಾತ್ಕಾರದಿಂದ ಅವುಗಳ ರಕ್ತಮಯ ಓಕುಳಿಯನ್ನು ಎರಚಲು ಹೇಸದವರಾಗಿರುವರು! ಎಂತಹ ಅನ್ಯಾಯ! ಇದೆಂತಹ ವಿಪರ್ಯಾಯ!!!

ಭವಾನಿ ದೇವಿಯನ್ನು ಜಗದಂಬಾ ಮೊದಲಾದ ನಾಮದಿಂದ ಕರೆಯುವುದು ರೂಢಿ ತಾನೇ ಜಗಳ ಮಾತಾ ಅಂದರೆ ಸಂಪೂರ್ಣ ಜಗತ್ತಿನ ಮಾತೆ. ಯಾವಳು ಸಂಪೂರ್ಣ ಜಗತ್ತಿಗೆ ತಾಯಿಯೋ ಅವಳು ಮೂಕ ಪಶುಪಕ್ಷಿಗಳ ತಾಯಿಯಲ್ಲವೇ? ಹಾಗಾದರೆ ಈ ರಕ್ತವು ದೇವಿಗೆ ತೃಪ್ತಿಕರ ಎಂಬ ಮಾತಿಗೆ ಬೇರೆ ಯಾವ ನಿರ್ಧಾರವೂ ಕಾಣುವುದಿಲ್ಲ. ಪ್ರಾಣಸಂಹಾರಕ ಯಂತ್ರದಲ್ಲಿ ಒಂದು ಕ್ಷಣ ಹೊತ್ತಿನಲ್ಲಿ ಸಹಸ್ರಾರು ಪ್ರಾಣಿಗಳ ಪ್ರಾಣಾಂತ್ಯವಾಗುವುದು. ಈ ರೀತಿ ಮನುಷ್ಯರನ್ನು ಮಾಡಿದರೂ ಕೊಂದರೆ ಅವನು ಶಾಸಿಶಿಕ್ಷೆಗೆ ಗುರಿಯಾಗುವನು." ಆದರೆ ಇಂತಹ ಪಶುಹತ್ಯೆಗೆ ಯುಕ್ತವಾದ ದಂಡನೆಯು ಮರಣಾಂತ್ಯದಲ್ಲಿ ನಮ್ಮನ್ನು ಬಿಟ್ಟುಹೋಗಲಾರವು.

ಪಶೂನ್ಸ್ರಕ್ಷ ಚಂಡಿಕೆ । ಎಂದು ದೇವಿ ಕವಚ ಸ್ತೋತ್ರದಲ್ಲಿ ಹೇಳಿದೆ. ಅರ್ಥಾತ್ ಭವಾನೀ ಪಶುಗಳನ್ನು ರಕ್ಷಿಸು ಇದರಿಂದ ದೇವಿಯು ಪ್ರಾಣಿಗಳ ರಕ್ಷಕಳಲ್ಲದೆ ಭಕ್ಷಕಳಲ್ಲವೆಂದು ಸಿದ್ಧವಾಗುವುದು. ದೇವಿ ಸಂಬಂಧ ಪ್ರಮಾಣಿಕ ಗ್ರಂಥದ ದುರ್ಗಾ ಸಪ್ತಶತಿಯಲ್ಲಿ ಇಂದ್ರಿಯಾದಿ ಮೊದಲಾದ ಪ್ರಾಣಬಲಿಯು ನಿಷೇಧವಾಗಿದೆ. ಪ್ರಾಣಾ ಯಥಾತ್ಮನೋ ಭೂತಾನಾಮಪಿತೇತಥಾ । ಆತ್ಮೌಪಮ್ಯೇನ ಭೂತಾನಾಂ ದಯಾಂಕುರ್ವೀತ ಮಾನವಾ । ಹೇಗೆ ನಮ್ಮ ಜೀವನವು ನಮಗೆ ಪ್ರಿಯಂಕರವೋ ಹಾಗೆಯೇ ಪ್ರತಿಯೊಂದು ಪ್ರಾಣಿಗೂ ತನ್ನ ಜೀವವು ಪ್ರಿಯವಾದುದೆಂಬುದನ್ನು ಯೋಚಿಸಿಯಾದರೂ ಮಾನವನು ಪ್ರಾಣಿಗಳ ಮೇಲೆ ದಯೆ ಇಡುವವನಾಗಲಿ ಎಂದು ಹೇಳಿದೆ. ವ್ಯವಹಾರಿಕ ಕಾರ್ಯದಲ್ಲಿ ಪ್ರಾಣಿಹಿಂಸೆಯು ಪಾಪಕರವೆಂದು ಧರ್ಮಶಾಸ್ತ್ರಗಳು ಘೋಷಿಸುತ್ತಿರುವಾಗ ದೇವದೇವತಾ ಧಾರ್ಮಿಕ ಸಂಬಂಧ ಮಾಡಿದ ಪ್ರಾಣವಧೆಯು ಪಾಪಕರವಲ್ಲೆಂದು ವಾದಿಸುವವನಿಗೆ ಮೂರ್ಖನೆನ್ನಬೇಕೋ ಹುಚ್ಚನೆನ್ನಬೇಕೋ! ಧರ್ಮದ ಮೂಲವಾದ ದಯೆಯೇ ಇಲ್ಲದ ಮೇಲೆ ಧರ್ಮದ ಸಿದ್ಧತೆಯು ಹೇಗೆ? ಪ್ರಾಣಿಸಂಹಾರದಿಂದಲೂ ಧರ್ಮಸಂಗ್ರಹವಾವುದೆಂದು ಹೇಳುವುದಾದರೆ ಬುಡವಿಲ್ಲದಿದ್ದರೂ ವೃಕ್ಷದ ಸ್ಥಿತಿಯನ್ನು ಒಪ್ಪಿಕೊಂಡಂತಾದೀತು. ಬೊಡ್ಡೆಯಿಲ್ಲದೆ ವೃಕ್ಷವು ನಿಲ್ಲದೆಂದು ಚಿಕ್ಕ ಮಕ್ಕಳು ಕೂಡಾ ಅರಿತಿರುವ ವಿಷಯವಾಗಿದೆ. ಪರೋಪಕಾರಾಯ ಪುಣ್ಯಾಯ ಪಾಪಾಯ ಪರಪೀಡನಂ ।

ಅರ್ಜಿತವಾಗುವದೆಂಬ ಪ್ರಸಿದ್ಧ ನೀತಿಕಾರರ ವಚನವು ಸುಳ್ಳೆಂತ ಗ್ರಹಿಸುವದೋ (ಯೋನೋ) ತಾನು ಸುಖಿಯಾಗಬೇಕೆಂದಿಚ್ಛಿಸಿ ಮತ್ತೊಂದು ಪ್ರಾಣಿಯ ಸುಖವನ್ನು ಮಣ್ಣುಪಾಲು ಮಾಡುವುದು ಯಾವ ತರದ ನ್ಯಾಯ, ದೇವಿಯು ಹೇಗೆ ಸಹನ ಮಾಡುವಳೋ (ಪಾ)

ಕೆಲವರು ರಕ್ತವು ದೇವಿಗಲ್ಲ ಗಣಾದಿಗಳಿಗೆ ಎಂದು ಹೇಳುವರು (ಯಕ್ಷನಾಚ ಪ್ರಿಶಾಚಾನಾ ಮದ್ಯಮಾಂಸ ಭುಜಾಂತಥಾ । ದಿವಕಸಾಂತು ಭಜನಂ ಸುರಪಾನ ಸಮಂ ಸ್ಮೃತಂ ॥) ಪದ್ಮಪುರಾಣ ಅಧ್ಯಾಯ ೩೪೦ ಶ್ಲೋಕ ೧೯೦ರಲ್ಲಿ ಅರ್ಥಾತ್ ಯಕ್ಷ ಪಿಶಾಚಿ, ಭೂತಗಣಾದಿ ಇನ್ನಿತರ ಮಾಂಸ ಭಕ್ಷಕ ದೇವತೆಗಳನ್ನು ಪೂಜಿಸುವದು ಹೆಂಡ ಕುಡಿಯುವುದಕ್ಕೆ ಸಮ. ಅಂದರೆ ಮದ್ಯಪಾನದಿಂದ ಎಷ್ಟು ಪಾಪವು ಸಂಭವಿಸುವದೋ ಅಷ್ಟೇ ಪಾಪವು ಆ ನೀಚ ದೇವತೆಗಳನ್ನು ಪೂಜಿಸುವದರಿಂದ ಸಂಭವಿಸುವವು. ಪುಣ್ಯಕ್ಕೆ ಬದಲು ಪಾಪಾರ್ಜಿತವಾಗುವವು. (ಪ್ರಾಣಾಘಾತಾತ್ತು ಯೋ ಧರ್ಮಮೀಹತೇ ಮೂಢ ಮಾನಸಃ । ಸವಾಂಛತಿ ಸುಧಾವೃಷ್ಟಿಂ ಕೃಷ್ಣಾಹಿಮುಖಕೋಟರಾತ್ ।) ಅರ್ಥಾತ್ ಯಾವಾತನು ಪ್ರಾಣಿಘಾತದಿಂದ ಧರ್ಮವನ್ನಿಚ್ಛಿಸುವನೋ ಅಂಥವನು ಕೃಷ್ಣಸರ್ಪದ ಮುಖವಿವರದಿಂದ ಅಮೃತ ವೃಷ್ಟಿಯನ್ನಿಚ್ಛಿಸಿದಂತೆಯೇ ಸರಿ. ಪಶುಗಳನ್ನು ಕೊಂದು ರಕ್ತವನ್ನು ಚೆಲ್ಲಿಯೂ ಸ್ವರ್ಗಕ್ಕೆ ಹೋಗುವುದಾದರೆ ನರಕಕ್ಕೆ ಯಾರು ಹೋಗುವುದು, ದೇವತಾ ಬಲಿ ನೈವೇದ್ಯದಿಂದಾಗಲಿ ಯಜ್ಞ ನಿಮಿತ್ತವಾಗಿಯಾಗಲಿ ಯಾರು ಪ್ರಾಣಿಗಳನ್ನು ಕೊಲ್ಲುವರೋ ಅಂಥವರು ಘೋರ ದುರ್ಗತಿಯನ್ನು ಹೊಂದುತ್ತಾರೆ. ಲೋಕದ ಜನರು ದರಿದ್ರರಾಗಿಯೂ ವಿದ್ಯಾವಿಹೀನರಾಗಿಯೂ ಹುಟ್ಟುವುದಕ್ಕೆ ಈ ಹಿಂಸೆಯೇ ಕಾರಣವು. ಮನುಷ್ಯ ಜನ್ಮವೆತ್ತಿದ ನಾವು ಸ್ವರ್ಗಲೋಕವಾಸಿಗಳಾದ ದೇವತೆಯರೇ ಆಗಿರುವೆವು, ನಾವು ಮಾಡಿದ ಧರ್ಮನಿಷ್ಠೆ ಕ್ಷಯವಾದೊಡನೆಯೇ ಧರ್ಮ ಸಂಗ್ರಹಕ್ಕಾಗಿ ಮನುಷ್ಯ ಜನ್ಮವನ್ನು ಪಡೆಯಬೇಕಾಗಿರುತ್ತದೆ. ಅದುದರಿಂದ ಇದು ಹಿತಕರ ಇದು ಅಹಿತವು ಎಂಬ ಅಂಶವನ್ನು ವಿಂಗಡಿಸಿಕೊಳ್ಳುವ ಮೇಧಾ ವಿಶೇಷವನ್ನು ತಿಳಿದುಕೊಳ್ಳುವ ಶಕ್ತಿಯುಳ್ಳವರಾದ ನಾವು ಅದಕ್ಕು ಬೇಗನೆ ಪುನಃ ಸ್ವರ್ಗವನ್ನು ಸೇರುವ ಪ್ರಯತ್ನವನ್ನು ಮಾಡಬೇಕು. ಭಕ್ತಿಯು ಮನುಷ್ಯನಿಗೆ ೯ ವಿಧವಾಗಿರುವುದು. ದೇವರ ಯಾ ದೇವಿಯ ದಿವ್ಯ ಚರಿತ್ರೆಯನ್ನು ಕೇಳುವುದು, ೨. ಚರಿತ್ರೆ ಮತ್ತು ನಾಮಪಠನವು ೩ ಧ್ಯಾನವು, ೪ ಚರಣಕಮಲ ಸೇವೆ ೫ ಷೋಡಶೋಪಚಾರ"ದಿಂದ ಪೂಜಿಸುವುದು ೬ ಸಾಷ್ಟಾಂಗ ನಮಸ್ಕರಿಸುವುದು, ೭ ಕಿಂಕರ ಎಂಬ ಭಾವದಿಂದ ವರ್ತಿಸುವುದು ೮ ಸ್ನೇಹವನ್ನು ಬೆಳೆಸುವುದು, ೯ ಸರ್ವಸ್ವವನ್ನರ್ಪಿಸುವುದು. ಹೀಗೆ ಅನೇಕ ವಿಧದಲ್ಲಿ ಭಕ್ತವಂತರಿಗೆ ಭಕ್ತಿಯನ್ನ ಸಮರ್ಪಿಸುವ ವಿಧಾನವಿರುವಾಗ ದೇವಿ ಪವಿತ್ರ ಸ್ಥಾನದಲ್ಲಿ ಕುರಿ, ಕೋಳಿ, ಹಂದಿ, ಕೋಣ ಮುಂತಾದುವುಗಳನ್ನು ಬಲಿಯಾಗಿ ಅರ್ಪಿಸಿದರೆ ದೇವಿಯು ಕೋಪಗೊಳ್ಳುವುದೇ ಹೊರತು ನಮ್ಮ ಮೇಲೆ ಅನುಗ್ರಹವನ್ನಿಡಲಾರಳು. ದೇವಿಯು ತನ್ನ ಮಹಾತ್ಮೆಯನ್ನು ತೋರಿಸುವಾಗ ಚಂಡಿಕಾ ರೂಪದಲ್ಲಿ ರಕ್ತ ಮಾಂಸವನ್ನು ಭಕ್ಷಣೆ ಮಾಡಿದ್ದು ಸರಿ. ದುಷ್ಟದಾನವರನ್ನು ಕೊಲ್ಲಲು ತನ್ನ ಯಥಾರ್ಥವಾದ ರೂಪದಲ್ಲಿ ಅಸಾಧ್ಯವಿದ್ದುದರಿಂದ ಘೋರರೂಪವನ್ನು ತನ್ನ ಮಹಾತ್ಮೆಯಿಂದ ಧರಿಸಬೇಕಾಯಿತು. ಸಿಟ್ಟಿನ ಭರದಿಂದ ದಾನವರ ರಕ್ತವನ್ನು ಪಾನಮಾಡುವ ಸಂದರ್ಭ ದೊರಕಿತು. ಈ ಕಾರ್ಯವನ್ನು ದೇವಿಯು ಮಾಡಿ ದೇವತೆಗಳನ್ನು ಕ್ಷೇಮ ಮಾಡಿದಳು. ಆಗ ದೇವಿಯು ಇನ್ನು ಮುಂದಕ್ಕೂ ನೀವು ನನ್ನನ್ನು ರಕ್ತಮಾಂಸದಿಂದ ತೃಪ್ತಿಪಡಿಸಿರೆಂದು ದೇವಿಯು ದೇವತೆಗಳಿಗೆ ಹೇಳಿದ್ದು ದೇವಿ ಮಹಾತ್ಮೆಯಲ್ಲಿ ಕಂಡು ಬರುವುದಿಲ್ಲ. ದೇವತೆಗಳು ಯಾವ ವಿಧದಿಂದ ನಿನ್ನನು ಭಜಿಸಬೇಕು ಎಂದು ಕೇಳಿದ್ದಕ್ಕೆ ಮೇಲೆ ಹೇಳಿದ ೯ ವಿಧಾನದ ಭಕ್ತಿಯನ್ನೇ ಹೇಳಿದ್ದು ಹೊರತು ರಕ್ತಮಾಂಸದಿಂದ ಸಂತೋಷಪಡಿಸಿರೆಂದು ಹೇಳಿದ್ದು ಕಂಡುಬರುವುದಿಲ್ಲ. ಆದುದರಿಂದ ಪ್ರಿಯ ಬಂಧುಭಗಿನಿಯರಲ್ಲಿ ಪ್ರಾರ್ಥಿಸುವುದೇನಂದರೆ,-

ದೇವಸ್ಥಾನದಲ್ಲಿ ನಡೆಯುವ ಪ್ರಾಣಿಬಲಿಯನ್ನು ನಿಷೇಧಮಾಡುವಿರೆಂಬುದಾಗಿ ನಂಬುತ್ತೇವೆ. ಪ್ರಾಣಿಬಲಿಯ ಬದಲಾಗಿ ಬೇರೆ ವಿಧದ ಹಣ್ಣು ಕಾಣಿಕೆಗಳನ್ನು ಅರ್ಪಿಸಿ ದೇವಿ ಅನುಗ್ರಹಕ್ಕೆ ಪಾತ್ರರಾಗಬೇಕೆಂತ ಬೇಡಿಕೊಳ್ಳುತ್ತೇವೆ. ಮೋಕ್ಷಸ್ಥಾನವಾದ ಅಮೃತಪದವಿಯನ್ನು ನೆಲೆಗೊಳಿಸುವ ಮಹಾಮೃತವೆಂದರೆ ಇದೇ. ಇದನ್ನು ವಾಚಕ ಮಹಾಶಯರು ಅನುಗ್ರಹಿಸಬೇಕೆಂದೂ ಮತ್ತು ಇದನ್ನು ತಮ್ಮ ನೆರೆಕೆರೆಯ ಇಷ್ಟಮಿತ್ರರಿಗೆ ಬೋಧಿಸಿ ಪ್ರಾಣಿಬಲಿ ನಿಷೇಧ ಮಾಡುವಿರೆಂದೂ ನಾವು ನಮ್ಮ ಹಾರ್ದಿಕಭಾವವನ್ನು ವ್ಯಕ್ತಪಡಿಸುತ್ತೇವೆ.

ಇತೀ ತಮ್ಮೆಲ್ಲರ ಶುಭೇಚ್ಛುಗಳಾದ,

ಪ್ರಾಣಿಬಲಿ ನಿಷೇಧಕ ಮಂಡಲ,

ಮಂಗಳೂರು.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

(ಬಾತ್ಮಿದಾರರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

ಮಾನ್ಯ ಡಿ। ಬೋ। ಪ್ರೆಸಿಡೆಂಟರ ಅವಗಾಹನೆಗೆ—

ನಮ್ಮ ತೆಕ್ಕಟ್ಟೆ ಗ್ರಾಮದಲ್ಲಿ ೧೯೩೭ನೇ ಇಸ್ವಿಯಲ್ಲಿ ಹಾ। ಎಲಿಮೆಂಟರಿ ಶಾಲೆಯು ಬೋರ್ಡಿನವರಿಂದ ಸ್ಥಾಪಿಸಲ್ಪಟ್ಟು ಸಂದರ್ಶಿಸಿದ ಮಹನೀಯರಿಂದ ಉತ್ತಮ ಅಭಿಪ್ರಾಯಪಟ್ಟು ಉತ್ತಮ ರೀತಿಯಲ್ಲಿ ನಡೆಯುವ ಈ ಶಾಲೆಯಲ್ಲಿ ಎಂಟು ಜನ ಉಪಾಧ್ಯಾಯರೂ ಒಕ್ಕಟ್ಟಾಗಿ ತಮ್ಮ ತನುಮನಧನಗಳಿಂದ ಯಾವ ರೀತಿಯ ಕುಂದಕವು ಬಾರದಂತೆ ಒಳ್ಳೆಯ ಹುರುಪಿನಿಂದ ಇರುತ್ತಿರುವ ಸಮಯ ನಮ್ಮ ಕುಂದಾಪುರ ರೇಂಜಿಗೆ ಮಾ। ರಾ। ಸಂಜೀವರಾಯರು ಡಿಪ್ಯೂಟಿ ಇನ್ಸ್‌ಪೆಕ್ಟರರಾಗಿ ನೇಮಕ ಹೊಂದಿಬಂದು ಮತ್ತು ಇತರ ಶಾಲೆಗಳನ್ನು ಸಂದರ್ಶಿಸಿದ್ದಲ್ಲಿ ನಮ್ಮ ತೆಕ್ಕಟ್ಟೆ ಶಾಲೆಯಲ್ಲಿ ನಡೆಯುವ ಚಟುವಟಿಕೆಗಳನ್ನೂ ಇಲ್ಲಿಯ ಉಪಾಧ್ಯಾಯರ ಒಕ್ಕಟ್ಟನ್ನೂ ನೋಡಿ, ಇವರಿಗೆ ಉದರಶೂಲೆಗೆ ಪ್ರಾರಂಭವಾಯಿತು (ಇದು ಇವರ ಹುಟ್ಟುಗುಣವಂತೆ) ಹಾಗೂ ಕೋಟೇಶ್ವರ ಹಾ। ಪ್ರಾ। ಶಾಲೆಯಲ್ಲಿ ಮುಖ್ಯೋಪಾಧ್ಯಾಯರು ಇವರ ಪ್ರೀತಿಯ ಸ್ನೇಹಿತರಾಗಿರುವವರ ಸ್ಥಾನದ ಭದ್ರತೆ ಗೋಸ್ಕರವಾಗಿ ಇವರು ಬಹಳ ಪ್ರಯತ್ನಪಟ್ಟು ಸುಮಾರು ಒಂಭತ್ತು ವರ್ಷಗಳಿಂದ ಒಕ್ಕಟ್ಟಾಗಿ ನಡೆದುಬರುತ್ತಿರುವ ಈ ಶಾಲೆಯ ಉಪಾಧ್ಯಾಯರನ್ನು ವರ್ಗಾಯಿಸಲಿಕ್ಕೂ ಮೇಲಿನ ಅಂದರೆ ೬, ೭, ನೇ ತರಗತಿಗಳನ್ನು ರದ್ದುಮಾಡಲಿಕ್ಕೂ ಇವರು ಸೂಚಿಸಿ ತನ್ನ ಪ್ರಯತ್ನಗಳನ್ನು ಸಾಫಲ್ಯವಾಡಿಕೊಂಡದ್ದಲ್ಲದೆ ತನ್ನ ಅಧಿಕಾರ ದರ್ಪದಿಂದ, ತಾನು ಮಾಡುವ ಕಾರ್ಯವು ಜನತೆಯಲ್ಲಿ ಯಾವ ಪರಿಣಾಮ ಉಂಟಾದೀತೆಂಬುದನ್ನು ಸಹಾ ಈ ರಾಯರು ಗ್ರಹಿಸಿಕೊಳ್ಳದೆ, ತನ್ನ ಹಟವನ್ನು ಸಾಧಿಸಿಯೇ ಬಿಟ್ಟರು. ಇವರು ಮಾಡಿದ ಕಾರ್ಯಕ್ಕೆ ಇವರನ್ನು ಎಷ್ಟು ಹೊಗಳಿದರೂ ಸಾಲದು. ಇವರ ಅಭಿಪ್ರಾಯವನ್ನು ಆಲೋಚಿಸಿ ನೋಡುವುದಾದರೆ, ಈ ಹಿಂದೆ ಒಂದು ಪತ್ರಿಕೆಯಲ್ಲಿ "ಸಿಂದಗಡದ ರಾಜು" ಎಂಬ ಲೇಖನವು ಪ್ರಕಟವಾಗಿದ್ದಿತು. ಅಂತೆಯೇ ಈ ಗ್ರಾಮದ ಮತ್ತು ಇದರ ಆಸುಪಾಸಿನ ಹಳ್ಳಿಗರ ಸ್ಥಿತಿಯೂ ಇರಲೆಂಬುವದೇ. ಆದರೆ - ಈ ಮಹಾನುಭಾವರೇ ಇಲ್ಲಿಯ ಜನರು ಮರೆಯದೆ ಇರುವ ಹಾಗೆ ಶಾಶ್ವತವಾದ ಕೀರ್ತಿಯನ್ನು ಘಳಿಸಿದರೆಂಬುದರಲ್ಲಿ ಸಂದೇಹವೇ ಇಲ್ಲ. ಇನ್ನಾದರೂ ನಮ್ಮ ಡಿ। ಬೋ। ಪ್ರೆಸಿಡೆಂಟರು ನಮ್ಮ ಹಳ್ಳಿಗರ ಸ್ಥಿತಿಯನ್ನು ಪರ್ಯಾಲೋಚಿಸಿ, ಮುಂಚಿನಂತೆಯೇ ನಮ್ಮ ಶಾಲೆಯನ್ನು ಇರಗೊಡಿಸಬೇಕಾಗಿ ನನ್ನ ಅತೀ ವಿನಯಪೂರ್ವಕ ವಿನಂತಿ.

—ಬಡಹಳ್ಳಿಗ.

ಪುದುಗ್ರಾಮದ ಪಟೇಲರ ಅವಗಾಹನೆ ಬಗ್ಗೆ—

ಫರಂಗಿಪೇಟೆಯಲ್ಲಿರುವ ಪುದು ಮಾಪಿಳ್ಳಾ ಬೋ। ಶಾಲೆಯ ವರ್ಷಂತ್ಯುತ್ಸವವು ಕಳದ ಗುರುವಾರ ಮಾರ್ಚಿ ೫ನೇ ತಾ. ಜರಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಅದರೆ ವಿಷಾದಕರ ಸಂಗತಿಯೆಂದರೆ, ಹಿತಬಯಸೋಣದ ವಿಚಾರ ಸದ್ರಿ ಶಾಲೆಯ ಹಿತಬಯಸಲು, ಶಾಲಾ ಮುಖ್ಯೋಪಾಧ್ಯಾಯರು ಅದೇ ಶಾಲೆಯ ಹಳೇ ವಿದ್ಯಾರ್ಥಿಯೂ, ಪ್ರಸ್ತುತ ಪುದು ಬೋರ್ಡಿನ ಪಟೇಲರೂ ಆದ ಇಬ್ರಾಹಿಮ್ ಎಂಬವರನ್ನು ಕೇಳಿಕೊಂಡಾಗ, ಬಹಳ ಉತ್ಸಾಹದಿಂದ ಪಟೇಲರು ಒಪ್ಪಿಕೊಂಡರು. ಆದರೆ, ಅಷ್ಟೇ ವಹಿಸಿರುವ ಈ ಮಹನೀಯರು ಶಾಲಾ ವರ್ಷಾಂತಿ ಉತ್ಸವದ ದಿನ ಮಧ್ಯಾಹ್ನದ ವರೆಗೂ ಅಲ್ಲಿ ಇದ್ದು, ಸಂದಿಗ್ಧ ಸಮಯವು ಸನ್ನಿಹಿತವಾದ ಕೂಡಲೇ ಸದ್ರಿ ಪಟೇಲರು ಆ ವಠಾರವನ್ನೇ ಬಿಟ್ಟುಹೋದದ್ದು ಬಹಳೇ ವಿಷಾದಕರ ಸಂಗತಿಯಾಗಿದೆ. ಮುಖ್ಯೋಪಾಧ್ಯಾಯರೂ ಸಭಿಕರೂ ಹಿತಬಯಸುವವರನ್ನು ಕಾದು ನಿಂತು, ಕಡೆಗೆ ನಿರಾಶೆಪಟ್ಟು ಬೇರೊಬ್ಬ ಹಳೇ ವಿದ್ಯಾರ್ಥಿಯಾದ ಹಸನಬ್ಬ ಎಂಬವರಿಂದ ಆ ಕೆಲಸವನ್ನು ಅಂದವಾಗಿ ನೆರವೇರಿಸಿದರು. ಗ್ರಾಮಾಧಿಪತಿಗಳೂ, ಪರರಿಗೆ ಮಾರ್ಗದರ್ಶಕರಾಗಿ ಇರಬೇಕಾದವರೂ ಇಂತಹ ಅಮೋಘ ಕಾರ್ಯಗಳಲ್ಲಿ ಮೋಸವನ್ನು ತಂದೊಡ್ಡಿದರೆ ಮತ್ತಿನ್ನಿತರ ಪಾಡೇನು? ಆದುದರಿಂದ ಇನ್ನಾದರೂ ಇಂತಹ ಮಹನೀಯರು ಸ್ವಲ್ಪ ಪರ್ಯಾಲೋಚಿಸಿ ಕಾರ್ಯಾನ್ವಿತರಾಗುವುದು ಶ್ರೇಯಸ್ಕರವೆಂದೇ ನನ್ನ ಭಾವನೆ.

'ಪ್ರೇಕ್ಷಕರಲ್ಲೊಬ್ಬ'

ಕರ್ನಾಟಕ ನೂತನ ಸಂಗೀತ ಸಭಾ

(ಎಮೆಚೂರ್ಸ್) ಮುಂಬಾಯಿ.

ಇವರು

ಮುದ್ದಣ್ಣ ವಾಚನಾಲಯದ ಸಹಾಯಾರ್ಥವಾಗಿ

ವಿಕ್ರಮ ವಿಜಯ ಅಥವಾ **ಶನಿಪ್ರಭಾವ**

ಎಂಬ ನವರಸಭರಿತವಾದ ಧರ್ಮೋಜ್ವಲವಾದ ನಾಟಕವನ್ನು ತಾ 31—3—36ನೇ ಮಂಗಳವಾರ ದಿನ 8 30ಕ್ಕೆ ಸರಿಯಾಗಿ ಕಲ್ಬಾದೇವಿಯಲ್ಲಿರುವ ಭಾಂಗವಾಡಿ ಥಿಯೇಟರಿನಲ್ಲಿ ಅಭಿನಯಿಸುವರು. ಮಹಾಜನರು ಉದಾರಾಶ್ರಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ವಿನಂತಿ

ಅವರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತಂ

ನಿಮ್ಮ ನರಗಳನ್ನೂ ದೇಹಸ್ಥಿತಿಯನ್ನೂ ಅತ್ಯದ್ಭುತಕರವಾಗಿ ಬೆಳಗಿಸಿ, ಶಾಶ್ವತವೂ ಪೂರ್ಣವೂ ಆದ ಶಕ್ತಿದಾನಮಾಡುತ್ತದೆ. ಅದು ಅರೆಕ್ಷಣದ ಸೌಖ್ಯದ ಬಗ್ಗೆ ಅಮಲು ಪದಾರ್ಥವಲ್ಲ — ಅದು ಪೂರ್ಣವಾದ ಟೋನಿಕ್ ಆಹಾರ. ಶೀಘ್ರವಾಗಿಯೂ ಶಾಶ್ವತವಾಗಿಯೂ ದೇಹದ ಅಂಗಾಂಗಗಳನ್ನು ಪುಷ್ಟಿಗೊಳಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಎರಡು ಸೈಜುಗಳಲ್ಲಿ ಮಾರಲ್ಪಡುತ್ತದೆ

ರೂ. 3—4—0 ಮತ್ತು ರೂ. 1—12—0.

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು:—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,

92, ಚಿಕ್ಕಪೇಟೆ, ಬೆಂಗಳೂರು ಸಿಟಿ.

— ...ಲನೇ ಪುಟದಿಂದ ಮುಂದುವರಿದುದು —

...ಟ್ಟಿದ್ದ ತಟ್ಟೆಗಳನ್ನು ಎಲ್ಲರೆದುರಿಗೆ ಒಂದೊಂದಾಗಿ ತೆಗೆದು ಹೊರಗೆ ಕೊಟ್ಟಳು ಪ್ರತಿಯೊಂದು ತಟ್ಟೆಗಳಲ್ಲಿಯೂ ಕುರುಡು ...ಂಪು ಬಣ್ಣದ ಪಚ್ಚೆಕರ್ಪೂರದ ಪರಿಮಳ ...ರುವ ಪುಡಿಯು ಹಾಕಿತ್ತು ಇದನ್ನು ...ವಳು ಹಾಕಿದಳೆಂದು ಹೇಳುವ ಹಾಗಿಲ್ಲ, ...ಗೆದುಕೊಡುವ ಸ್ಥಳಕ್ಕೂ ನಾವು ಕುಳಿತಿರುವ ...ಳಕ್ಕೂ ಒಂದು ಮಾರು ದೂರ ಕೂಡಾ ಇಲ್ಲ ...ದುದರಿಂದ ಆವಳು ಹಾಕುವದಾದರೆ ನಮಗೆ ...ಣುತ್ತಿತ್ತು ಮೇಲಿಂದ ಬೀಳುವುದಕ್ಕೂ ...ಧ್ಯವಿಲ್ಲ ಅಟ್ಟಕ್ಕೆ ತಗಡು ಮುಚ್ಚಿದೆ ...ದು ವೇಳೆ ಮೇಲಿಂದ ಬಿದ್ದರೂ ಬೆಂಚಿನ ...ಲೆ ಇಟ್ಟ ಹರಿವಾಣಗಳಲ್ಲಿ ಮಾತ್ರವೇ ಯು, ...ಲವು ಹರಿವಾಣಗಳಲ್ಲಿ ಬೀಳಬಹುದಾದರೂ ...ಡಿಯಲ್ಲಿರುವ ಹರಿವಾಣಗಳಿಗೆ ಬೀಳಲಿಕ್ಕಾ ...ಕಾಶವಿಲ್ಲ ಒಂದು ಹೋಳಿನ ಮೇಲೆ ...ನ್ನೊಂದು ಹೋಳನ್ನಿಟ್ಟು ತೆಂಗಿನಕಾಯಿಯ ...ಡಿಯು ಹೋಳಿನಲ್ಲಿಯೂ ಈ ಪುಡಿಯಿದ್ದು ...ಂಟು ಇದು ಯಾವ ರೀತಿಯಿಂದಲೂ ...ಲಿನಿಂದ ಬಿದ್ದುದೆಂದು ಹೇಳಲಿಕ್ಕಾ ...ವುದಿಲ್ಲ [illegible] ...ದ ನಮಗೆ ಕಾಣಿಸಲಿಲ್ಲವೆಂದು ಹೇಳ[illegible] ...ದರೆ ನಮ್ಮೆದುರಿಗೆ ತೆಗೆದುಕೊಡ[illegible] ...ಂದ್ರಜಾಲಿಕದಂತೆ ಯಾ[illegible] ಕೈಚಾಟವನ್ನಾ ...ಲೀ ದೇವಸ್ಥಾನದಲಿ ಪ್ರಸಾದ ಕೊಡುವಾಗ

N.I.P.
PETROL
READY DELIVERY
ORDERS ARE BOOKED
FOR ALL PARTS OF INDIA
FOR RATES AND AGENCY TERMS APPLY
INTERNATIONAL OIL CO LTD
J.n House Revelin Street Fort
BOMBAY

ಗಂಧವಾಗಿಯೂ, ಕೆಲವರಿಗೆ ಇನ್ನು ಕೆಲವು ಪದಾರ್ಥವಾಗಿಯೂ ಬೀಳುವುದುಂಟಂತೆ ಹೀಗೊಂದು ಆಶ್ಚರ್ಯಕರವಾದ ಸಂಗತಿಯಿದೆ ಯೆಂದು ನನಗೆ ಮೊದಲೇ ತಿಳಿದಿದ್ದರೆ ಕೊಡುವ ಮೊದಲೇ ಆಕೆಯ ಕೈಯನ್ನು ಚೆನ್ನಾಗಿ ನೋಡಿಯೇ ಕೈಸೇಡುತ್ತಿದ್ದೆನು ಹಾಗೆ ನೋಡದೆ ಇದ್ದುದರಿಂದ ಈ [illegible] ದಲ್ಲಿ ಹೀಗೆಯೇ ಎಂದು ಧೈರ್ಯದಿಂದ ಹೇಳಲು ಈಗ [illegible] ಸಮಯದಲ್ಲಿ ನಡೆಯುವ ಕೆಲವು ಸಂಗತಿಗಳನ್ನು ಜನರು ವಿಚಿತ್ರವಾಗಿ ಹೇಳ[illegible]

ಕೆಲಿಫೊರ್ನಿಯದಲ್ಲಿರುವ ಶ್ರೀ ರಾಮಕೃಷ್ಣ ಮಿಶನಿನ ದಿವ್ಯ ಭವನ.

ಮಾಡಿದಂತೆ ದೇವರ ಪ್ರಾರ್ಥನೆಯನ್ನಾಗಲೀ ಮತ್ತಾವುದನ್ನೂ ಮಾಡದೆ ಸುಮ್ಮನೆ ತೆಗೆದು ತೆಗೆದು ತಟ್ಟೆಗಳನ್ನು ಕೊಡುತ್ತಿದ್ದಳು. ಇದ ರಲ್ಲಿ ಯಾವ ವಂಚನೆಯೂ ಇದ್ದಂತೆ ನನಗೆ ತೋರಲಿಲ್ಲ ಆ ಮೇಲೆ ಹೊತ್ತಾಯಿತೆಂದು ಹೊರಟು ಅಂಗಳಕ್ಕೆ ಬಂದೆನು ಐದು ನಿಮಿಷದ ವರೆಗೆ ಅಲ್ಲಿ ಕೆಲವರೊಂದಿಗೆ ಆ ಸ್ಥಳ ಆ ಮನೆ, ಇವುಗಳ ವಿಷಯ ಮಾತಾಡಿ ಮುಂದೆ ಹೊರಡುವಾಗ ಅಲ್ಲಿಯವ ರೊಬ್ಬರು ಬಂದು ಪ್ರಸಾದ ತೆಗೆದುಕೊಂಡ ಹೋಗಿರಿ ಎಂದರು ನನ್ನ ಕಣ್ಣುಕಾಯಿ ತಟ್ಟೆಯಲ್ಲಿ ಪ್ರಸಾದ ಸಿಕ್ಕಿದೆಯೆಂದು ನಾನು ಹೇಳಿದೆನು ನೀವು ಪರಸ್ಥಳದವರು ಪ್ರತ್ಯೇಕ ವಾಗಿ ಪ್ರಸಾದ ತೆಗೆದುಕೊಂಡು ಹೋಗಬೇ ಕೆಂದರು ಆಗಲಿ, ಎಂದು ನಾನು ಕೋಣೆಯ ಬಾಗಿಲಿಗೆ ಹೋಗಿ ಕೈಯೊಡ್ಡಿದೆನು ಅವಳು ಎಡಕೈಯಲ್ಲಿ ಕುಂಕುಮದ ಹರಿವಾಣ ವನ್ನು ಹಿಡಿದುಕೊಂಡಿದ್ದು ಅದರಿಂದ ಮುಷ್ಟಿ ಕುಂಕುಮವನ್ನು ನನ್ನ ಕೈಗೆ ಹಾಕಿ ದಳು ನಾನು ಹಾಗೆಯೇ ಕೈಮುಗಿದು ಈಚೆ ಬಂದು ಬಂದು ನೋಡುವಾಗ ನನ್ನ ಕೈಗೆ ಬಿದ್ದುದು ಕುಂಕುಮವಲ್ಲ ಮೇಲೆ ಬರೆದ ಮೂಲಪ್ರಸಾದವಾಗಿತ್ತು. ನಾನು ಅದನ್ನು ಅಲ್ಲಿದ್ದವರೆಲ್ಲರಿಗೂ ತೋರಿಸಿದೆನು ಹೀಗೆಯೇ ಅವಳು ಕುಂಕುಮವನ್ನು ಕೊಡು ವಾಗ ಕೆಲವರಿಗೆ ಭಸ್ಮವಾಗಿಯೂ, ಕೆಲವರಿಗೆ

ನಾನು ಹೋದ ದಿವಸ ದರ್ಶನವಿಲ್ಲದೆ ಇದ್ದುದ ರಿಂದ ಅದರ ನಿಜಾಂಶವು ನನಗೆ ತಿಳಿಯಲಿಲ್ಲ ಅದನ್ನು ಇನ್ನೊಮ್ಮೆ ಹೋಗಿ ನೋಡಬೇಕೆಂದಿ ರುವೆನು ನೋಡಿ ನನಗೆ ತಿಳಿದರೆ ಹಾಗೆಯೇ ಪ್ರಕಟಿಸುವೆನು ಈಗ ನಾನು ನೋಡಿದುದ ರಲ್ಲಿ ಮೇಲೆ ಬರೆದಂತೆ ತೆಂಗಿನಕಾಯಿಯೊ ಳಗ ಶಿವಲಿಂಗವೂ, ಕಣ್ಣಿನಲ್ಲಿ ಬಿಳಿ ದ್ರವ ಸುರಿಯುವುದೂ, ಹರಿವಾಣದಲ್ಲಿ ಮೂಲ ಪ್ರಸಾದ ಬೀಳುವುದೂ ಒಂದೋ ಇಂದ್ರ ಜಾಲ ವಿದ್ಯೆಯಿಂದ—ಇಲ್ಲವಾದರ- ಆಕೆಯಲ್ಲಿರುವ ಯಾವುದೋ ಒಂದು ದೈವಶಕ್ತಿಯಿಂದ—ಅಥವಾ ಯೋಗಶಕ್ತಿ ಯಿಂದ ಆಗಿರಬೇಕಲ್ಲದೆ ಬೇರೆ ಯಾವ ಕಾರಣದಿಂದಲೂ ಸಾಧ್ಯವಲ್ಲವೆಂದು ನನಗೆ ತೋರುತ್ತದೆ ಇಂದ್ರಜಾಲಿಕರ ಚೇಷ್ಟೆಯಾಗಲೀ ಅಂತಹ ಚಟುವಟಿಕೆ ಯಾಗಲೀ ಯಾವುದೂ ಇಲ್ಲದೆ ಕೇವಲ ನಿಸ್ಪೃಹ ಮನೋವೃತ್ತಿಯೇ ಆಕೆಯಲ್ಲಿ ಎದ್ದು ಕಾಣುತ್ತಿರುವಾಗ "ಇದು ಕಣ್ಣು ಕಟ್ಟು" ಎಂದು ಹೇಳುವುದು ಸಾಹಸವೇ ಸರಿ ಆ ತರದ ಸಾಹಸಿಗಳು ಅದೆಲ್ಲ ವಂಚನೆ ಯೆಂದು ಊಹಿಸುವಾಗ ಈ ವಂಚನೆಯಿಂದ ಆಕೆಗೇನು ಫಲವೆಂಬುದನ್ನು ಏಕೆ ಊಹಿಸುವು ದಿಲ್ಲವೋ ನಾನರಿಯೆನು ಆಕೆಯು ಜನರು ಕೊಟ್ಟ ತೆಂಗಿನಕಾಯಿಗಳನ್ನು ಒಡೆದು ಹಿಂದೆ ಕೊಡುವುದೊಂದು ಹೊರತು, ಒಬ್ಬರಿಂದ ಒಂದು

ಚಳಿ ಹಿಡಿಯುವುದನ್ನು ತಪ್ಪಿಸಿ
ಶ್ವಾಸಕೋಶದ ಅಪಾಯು
ಗಳಿಂದ ಸುರಕ್ಷಿತರಾಗಿರಿ.

ವಿಷಹಾರಿ ಶ್ವಾಸನೀಯ ಪೆಪ್ಸ್
ಗುಳಿಗೆಗಳನ್ನು ಸೇವಿಸಿರಿ

ಇಲ್ಲಿನ ಹವಾಗುಣವು ಆಗಾಗ್ಗೆ ಬದಲಾವಣೆಯಾಗುವುದರಿಂದ, ನೀವು ಪಕ್ಕನೆ ಚಳಿಯನ್ನು ಹಿಡಿದು ನರಳಬೇಕಾಗುವುದು. ಈ ಚಳಿಯ ದೆಸೆಯಿಂದ, ನಿಮ್ಮ ಶ್ವಾಸಕೋಶಕ್ಕೆ ಹಾನಿ ಉಂಟಾಗುವಲ್ಲದೆ ಪ್ಲೂರೀ ನಿಮೋನಿಯಾ, ಬ್ರಾಂಕೈಟಿಸ್ ಮೊದಲಾದುವು ನಿಮಗೆ ಬಾಧಿಸುವುವು ಆದರೆ, ಪೆಪ್ಸ್ ಗುಳಿಗೆಗಳನ್ನು ಆಗಾಗ್ಗೆ ತೆಗೆದುಕೊಂಡಲ್ಲಿ ಅವುಗಳಿಂದ ಹೊರಡುವ ಧೂಮವು ನಿಮ್ಮ ಶ್ವಾಸಕೋಶವನ್ನು ಸಂಚರಿಸಿ, ರೋಗದ ಕ್ರಿಮಿಗಳನ್ನು ನಾಶಮಾಡಿ ನಿಮ್ಮ ಗಂಟಲನ್ನೂ ಎದೆಯನ್ನೂ ಮತ್ತು ಶ್ವಾಸ ಕೋಶಗಳನ್ನೂ ಹಾನಿಯಿಂದ ಸುರಕ್ಷಿತವಾಗಿ ಮಾಡುವುದು.

ಎಲ್ಲಾ ದವಾಖಾನೆಗಳಲ್ಲಿ ಬಾಟ್ಲಿ ಒಂದು ರೂ. 1 ಕ್ಕೆ ಪೆಪ್ಸ್ ದೊರಕುತ್ತದೆ.

ಪೆಪ್ಸ್ PEPS

ಕಾಸನ್ನಾಗಲೀ ಒಂದು ತೆಂಗಿನಕಾಯಿಯ ಹೋಳನ್ನಾಗಲೀ, ಒಂದು ಹಣ್ಣನ್ನಾಗಲೀ [illegible] ದ್ದಲ್ಲ ಅಲ್ಲಿ ಇರುವ ಅಂಗಡಿ ಹೊಟೇಲು ಗಳ [illegible] ಹೀಗಿದ್ದರೆ ಹೀಗಿದ್ದರೂ ಈ ಕಾರ್ಯವನ್ನು ವಂಚನೆ ಯೆಂದು ಹೇಳುವುದರಲ್ಲಿ ನ್ಯಾಯವಿಲ್ಲ ಇನ್ನು ಲಿಂಗೋದ್ಭವದ ವಿಷಯದಲ್ಲಿ ಸತ್ಯ ವೆಂದಾಗಲೀ ಸುಳ್ಳೆಂದಾಗಲೀ ನನಗೆ ಹೇಳ ಲಿಕ್ಕೆ ಸಾಧ್ಯವಿಲ್ಲ ಉದ್ಭವದ ಸಮಯದಲ್ಲಿ ನೋಡಿದವರ ಮನಸ್ಸೇ ಸಾಕ್ಷಿ ಮೇಲೆ ಬರೆದ ಮಿಕ್ಕ ವಿಷಯಗಳನ್ನೆಲ್ಲಾ ಪರಿಯಾ ಲೋಚಿಸುವಾಗ ಹಳೆಯ ಗ್ರಂಥಗಳಲ್ಲಿ ರುವ ಮುಗ್ಧ ಭಕ್ತಿಯ ಕಥೆಗಳಂತೆ ಇದೂ ಒಂದು ನಿಸ್ಪೃಹತೆಯಿಂದ ಕೂಡಿದ ಮುಗ್ಧ ಭಕ್ತಿಯ ಕಾರ್ಯವೇ ಎಂತ ನನಗೆ ತೋರಿತು ಇದನ್ನು ವಿಚಾರಶೀಲರಾದವರು ಸ್ವತಃ ನೋಡಿ ನಿರ್ಧರಿಸಿಕೊಳ್ಳಲೆಂದು ಸ್ವಲ್ಪ ದೀರ್ಘವಾದರೂ ಕಂಡುದನ್ನು ಹಾಗೆಯೇ ಬರೆದು ಇಲ್ಲಿಂದ ಪ್ರಸಿದ್ಧ ಪತ್ರಿಕೆಗಳಿಗೆಲ್ಲಾ ಕಳುಹಿಸಿರುವೆನು ಬೇಕಾದವರು ಪ್ರಕಟಿಸಲಿ ಬೇಡವಾದವರು ಬಿಡಲಿ

ಉಡುಪಿ ಸೀತಾರಾಮಾಚಾರ್ಯ,
ಗವರ್ನಮೆಂಟ್ ಕೊಲೇಜ್,
ಮಂಗಳೂರು

(೫ನೇ ಪುಟದಿಂದ ಮುಂದುವರಿದುದು)

ಒಡನೆ, ಅಕಸ್ಮಾತ್ತಾಗಿ, ಅವರು, "ವಿಶಾಲಾಕ್ಷಿ' ನಾರಾಯಣ ನಾರಾಯಣ!'' ಎಂದು ಎತ್ತಿದ ಕೈ ಕೆಳಕ್ಕಿಳಿಸದೆಯೆ ಧೊಪ್ಪನೆ ನೆಲದ ಮೇಲೆ ಬಿದ್ದುಬಿಟ್ಟರು

ಹತ್ತಿರವೇ ನಿಂತಿದ್ದ ಪುರೋಹಿತರು, "ನೀರು! ನೀರು!!'' ಎಂದು ಗಾಬರಿಯಿಂದ ಬೊಬ್ಬಿಟ್ಟರು

ಚಂದ್ರಶೇಖರಯ್ಯನು ತನ್ನ ಮಾಯಾಜಾಲ ಕ್ಕಿಂತಲೂ ದೊಡ್ಡದಾದ ಮಾಯಾಜಾಲವನ್ನು ಹರಡಿದಾತನನ್ನು ಕಾಣಲು ಆಗಲೇ ಹೊರಟು ಹೋಗಿದ್ದರು

ಬರುವ ವಾರ

ಮಿಥ್ಯಾಜೀವನದ ಸತ್ಯಕಥೆಗಳು:

೯, ಉಪದೇಶಕನ ಉಪಾಸನೆ

ಓದಲು ಮರೆಯಬೇಡಿ!

ಹನ್ನೆರಡು ವರ್ಷಗಳ ಭಯಂಕರ ಜಠರವೇದನೆ

12 ವರ್ಷಗಳಿಂದಲೂ [illegible]

[illegible]

ಕಳೆದ 12 ವರ್ಷಗಳಿಂದಲೂ [illegible] ಮೆಕ್ಲೀನ್ ಬ್ರೆಂಡ್ ಸ್ಟೊಮಕ್ ಪೌಡರು [illegible] ಶಿಫಾರಸು ಮಾಡಿದರು. [illegible] ಮೆಕ್ಲೀನ್ ಬ್ರೆಂಡ್ ಸ್ಟೊಮಕ್ ಪೌಡರನ್ನು ಶಿಫಾರಸು ಮಾಡುವೆನು

ಒಂದು ಬಾಟ್ಲಿಯನ್ನು ಇಂದೇ ಪಡೆದರೆ ಅದರ [illegible] ಮೆಕ್ಲೀನ್ ಬ್ರೆಂಡ್ ಸ್ಟೊಮಕ್ ಪೌಡರನ್ನೇ ಕೇಳಿ [illegible]

Alex. C. Maclean

ಎಂಬ ಸಹಿಯು ಇದ್ದ [illegible] ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮೋರ್ಟನ್ಸ್ ಎಂಡ್ ಹೆರಿಸ್ ಲಿಮಿಟೆಡ್
[illegible] ಸ್ಟ್ರೀಟ್, ಫೋರ್ಟ್,
ಇಲ್ಲಿಗೆ ಬರೆಯಿರಿ.

ಜರ್ಮನಿಯು ಲೋಕಾರ್ನೋ ಒಪ್ಪಂದವನ್ನು ಮುರಿಯಿತು

ಇಟಲಿಯೂ ಲೋಕಾರ್ನೋ ಒಪ್ಪಂದವೂ.

ಸಾಧುಗಳ ಕಾಟ

'ಹಿಂದೂ ಮುಸ್ಲಿಮ್ ಐಕ್ಯವಾಗಬೇಕು'

ಎರಡಾಣೆ ಕಿಮ್ಮತ್ತಿನ ಟೆಲಿಗ್ರಾಮುಗಳು.

ಹದಿನೈದು ಶಬ್ದಗಳಿಂದ ಕೂಡಿದ ಟೆಲಿಗ್ರಾಮು (ಎಡ್ರೆಸು ಕೂಡ) ಬರೀ ಎರಡಾಣೆ ಕೊಟ್ಟಲ್ಲಿ ಜಪಾನಿನ ಟೋಕಿಯೋದಿಂದ ಜಪಾನಿನ ಯಾವತ್ತೂ ಭಾಗಗಳಿಗೂ, ನಾಲ್ಕಾಣೆ ಕೊಟ್ಟಲ್ಲಿ ಬಹಿರ್‌ದೇಶಗಳಾದ ಮಂಚೂರಿಯಾ ಇತ್ಯಾದಿಗಳಿಗೂ ಕಳುಹಿಸಲಾದುವಂತೆ! ಇದನ್ನು ನೀವು ನಂಬುವಿರೋ? ನಾಲ್ಕಾಣೆ ಕೊಟ್ಟಲ್ಲಿ ಟೆಲಿಗ್ರಾಮುಗಳನ್ನು ರೇಡಿಯೋ ಮೂಲಕ ಅಲ್ಲಲ್ಲಿ ಸಂಚರಿಸುತ್ತಿರುವ ಜಪಾನೀಯ ನೌಕೆಗಳಿಗೆ ಕಳುಹಿಸಬಹುದಂತೆ. ಮೇಲಿನದು ನವವರ್ಷದ ಸಂದೇಶಗಳನ್ನು ಕಳುಹಿಸಲು ಜಪಾನೀಯ ಸರಕಾರದ ವಿಶೇಷ ರಿಯಾಯಿತಿ. ಅಲ್ಲಿಯ ಸಹಜವಾದ ದರವು ನಾಲ್ಕಾಣೆ (೧೫ ಶಬ್ದಗಳು ಮತ್ತು ಎಡ್ರೆಸು). ಈ ರಿಯಾಯಿತಿ ಉಪಯೋಗವನ್ನು ಅನೇಕರು ಮಾಡಿರುವರೆಂದು ತಿಳಿದುಬರುತ್ತದೆ. ಸಾವಿರಗಟ್ಟಲೆ ತಂತಿಗಳು ಕಳುಹಿಸಲಾದವು. ಸರಕಾರಿ ಖಜಾನೆಗೆ ಧಾರಾಳ ಹಣವನ್ನು ಸುರಿಸಿತು.

ಕೋಣೆಯ ಬಾಡಿಗೆ ಬರೇ ಎರಡಾಣೆ!

ಎಲ್ಲಿ–ಜಪಾನಿನಲ್ಲಿ! ಇದರಲ್ಲಿ ಮಲಗಿಕೊಳ್ಳಲು ಹಾಸಿಗೆ ಇದೆ, ಸ್ನಾನ ಮಾಡಲು ವ್ಯವಸ್ಥೆ ಇದೆ. ಇತರ ಎಲ್ಲಾ ಸೌಕರ್ಯಗಳಿವೆ. ಇಷ್ಟೆಲ್ಲಾ ದಿನ ಒಂದರ ಬರೇ ಎರಡಾಣೆಯಲ್ಲಿ ದೊರಕುತ್ತವೆ. ಈ ತರದ ಯೋಜನೆ ಜಪಾನಿನ ಟೋಕಿಯೋದ ನಗರ ಸಭೆಯವರು ಬಡ ಸ್ತ್ರೀಯರ ಸವಲತ್ತಿಗಾಗಿ ಮಾಡಿರುವರೆಂದು ತಿಳಿದುಬರುತ್ತದೆ. ಹಾಗೆಯೇ ಬಡಬಗ್ಗರ ಉಪಯೋಗಕ್ಕಾಗಿ ಕಟ್ಟಡಗಳಿವೆ. ಕೆಲವು ವಿಚಾರಗಳಲ್ಲಿ ಅವರು ಅದರ ಉಪಯೋಗಕ್ಕೆ ಬಾಡಿಗೆ ಕೊಡಬೇಕಾಗಿಲ್ಲ. ಹಿಂದೂ ದೇಶದ ನಗರ ಸಭೆಗಳು ಹೀಗೇಕೆ ಮಾಡಬಾರದು?

ಕಳ್ಳರೇ ಸ್ವಲ್ಪ ಜಾಗ್ರತರಾಗಿರಿ.

ದೇವಾಲಯಗಳಿಂದ ದ್ರವ್ಯ ಕದಿಯುವವರು ಸ್ವಲ್ಪ ಜಾಗ್ರತರಾಗಬೇಕಾಗಿದೆ. ಜಪಾನಿನ ಒಂದು ಬೌದ್ಧ ದೇವಾಲಯದಿಂದ, ಒಬ್ಬನು ದೇವರ ಕೋಣೆಯಿಂದ ಹಣ ಕದಿಯಲು ಪ್ರಯತ್ನ ಮಾಡಿದನು. ಕೂಡಲೇ ದೇವಾಲಯದಲ್ಲೆಲ್ಲಾ ಒಂದು ಶಬ್ದ ಉಂಟಾಯಿತು. ಎಲ್ಲರಿಗೂ ಎಚ್ಚರವಾಯಿತು. ಕಳ್ಳನನ್ನು ಹಿಡಿದರು. ಇಂಥಾ ಯೋಜನೆಗಳು ನಮ್ಮ ದೇವಾಲಯಗಳಿಗೆ ಬೇಕಾಗಿವೆ.

ಇಟಲಿ– ಹಬಸಿ ಒಪ್ಪಂದ.

ಒಂದೆಡೆಯಲ್ಲಿ ಜನಾಂಗಸಭೆಯು ಸಂಕ್ಷನುಗಳ ವಿಚಾರ ಆಲೋಚಿಸುತ್ತಿರುವಾಗ ಇನ್ನೊಂದೆಡೆಯಲ್ಲಿ ಸಂಧಿ ಪ್ರಸ್ತಾಪದ ಪ್ರಯತ್ನಗಳನ್ನು ಮಾಡುತ್ತಿದೆ. ಈ ಕುರಿತು ಶರ್ತಗಳು ಇತ್ತಂಡಗಳವರಿಗೂ ಕಳುಹಿಸಲಾಗಿದೆ. ಜನಾಂಗಸಭೆಯ ಶರ್ತಗಳನ್ನನುಸರಿಸಿ ಸಂಧಾನ ಮಾಡಲು ಹಬಸಿ ಚಕ್ರವರ್ತಿಯವರು ಸಮ್ಮತಿಕೊಟ್ಟಿರುವರು. ಇಟೇಲಿಯೂ ಫೆಸಿಯಿಸ್ಟ ಗ್ರೇಂಡ್ ಕೌನ್ಸಿಲೂ ಈ ಕುರಿತು ಆಲೋಚಿಸಲು ಸಭೆ ಸೇರುವರಂತೆ. ಈ ಕುರಿತು ಮಾತುಕತೆ ನಡೆಸಲು ಸಿದ್ಧತೆಗಳಾಗುತ್ತಿವೆ

ಇಟೇಲಿಯೂ ಲೋಕಾರ್ನೋ ಒಪ್ಪಂದವೂ

ಜರ್ಮನಿಯು ಮುರಿದಿರುವ ಲೋಕಾರ್ನೋ ಒಪ್ಪಂದಕ್ಕೆ ಇಟೇಲಿಯು ಸದಸ್ಯರಾಗಿರುತ್ತದೆ. ಆದರೆ, ತನ್ನ ಮೇಲೆ ಸಂಕ್ಷನುಗಳನ್ನು ಜ್ಯಾರಿಮಾಡಿದುದರಿಂದ, ತಾನು ಅದನ್ನು ತ್ಯಜಿಸುವೆನೆಂದೂ,–ಅಂದರೆ ಜರ್ಮನಿಯ ಕಡೆ ಸೇರುವೆನೆಂದೂ ಎಚ್ಚರಿಕೆಯನ್ನು ಕಳುಹಿಸಿಕೊಟ್ಟಿರುತ್ತದೆ. ಜನಾಂಗಸಭೆಯವರು ಆದಷ್ಟು ಬೇಗನೇ ಇವರ ಮೇಲಿನ ಈ ವರ್ತನೆಯನ್ನು ಬದಲಾಯಿಸಬೇಕಂತೆ

ಸಾಧುಗಳ ಕಾಟ

ಲಕ್ನೋ ನಗರದ ಹತ್ತಿರವಿರುವ ಚಂದ್ರಾವಲಿ ಎಂಬ ಹಳ್ಳಿಯಲ್ಲಿ ೪೦೦ ಮಂದಿ ದೇಶಾಟನ ಮಾಡುವ ಸಾಧುಗಳಿಗೆ, ಆ ಹಳ್ಳಿಗರು ಬೇಕಾದ ಕಟ್ಟಿಗೆ ಇತ್ಯಾದಿಗಳನ್ನು ಕೊಡಲು ಒಪ್ಪದಿರಲು, ಸಾಧುಗಳು ಆ ಹಳ್ಳಿಗೆ ಮುತ್ತಿಗೆ ಹಾಕಿ ಅವರ ಮೇಲೆ ದಂಗೆ ನಡೆಸಿದರು. ಹಳ್ಳಿಗರ ಅನೇಕ ಗುಡಿಸಲುಗಳನ್ನು ಸುಟ್ಟುಬಿಟ್ಟರು. ಕೆಲವರ ಮನೆಗಳನ್ನು ಬಲಾತ್ಕಾರದಿಂದ ಸೂರೆಮಾಡಿದರು. ಹಳ್ಳಿಗರನ್ನೂ ಅವರ ಮಡದಿಮಕ್ಕಳನ್ನೂ ಅನೇಕ ರೀತಿಗಳಿಂದ ಪೀಡಿಸಿದರು. ಈ ವಾರ್ತೆಯು ಹತ್ತಿರದಲ್ಲೇ ಸಂಚಾರಾರ್ಥವಾಗಿ ಬಂದ ಡಿವಿಜನಲ್ ಮೆಜಿಸ್ಟ್ರೇಟರ ಕಿವಿಗೆ ಸೇರಲು, ಅವರು ಪೋಲೀಸ್ ಫೌಜಿನೊಡನೆ ಬರುವಷ್ಟರಲ್ಲಿ ಈ ಸಾಧುಗಳು ಪಲಾಯನಮಾಡಿದರು. ಶೋಧೆ ನಡೆಯುತ್ತಿದೆ. ಹಳ್ಳಿಯನ್ನು ಪೋಲೀಸಿನವರು ಕಾಯುತ್ತಿರುವರು

ಚಿಂದಿಗಳಿಂದ ಮಿಲಿಯಾಧಿಪತಿಯಾಗಬಹುದು!

ಚಿಂದಿಗಳೆಂದರೆ ಅವುಗಳು ಯಾರಿಗೂ ಬೇಕಾಗಿಲ್ಲ. ಚಿಂದಿಗಾಗಿ ಮನೆ ಎದುರು ಬಂದವನನ್ನು ನಾವು ಹಿಯಾಳಿಸುವೆವು. ಚಿಂದಿ ಒಟ್ಟುಗೂಡಿಸುವನೇಕ ಸ್ತ್ರೀ ಪುರುಷರು ಜಪಾನಿನಲ್ಲಿರುವರು. ಇವರನ್ನು ಎಲ್ಲರೂ ದಿಕ್ಕರಿಸುವರು. ಆದರೆ, ಹೀಗೆ ಒಟ್ಟುಗೂಡಿಸಿದ ಚಿಂದಿಗಳೂ, ಜಪಾನಿನ ಬಹಿರ್ ವ್ಯಾಪಾರದ ಸಾಮಾನುಗಳಲ್ಲಿ ಒಂದು ಮುಖ್ಯ ಸ್ಥಾನವನ್ನು ಪಡೆದಿರುತ್ತವೆ. ಇಲ್ಲಿಂದ ಸಂಯುಕ್ತ ಅಮೇರಿಕಕ್ಕೆ ರೂ ೭೦೦೦,೦೦ ಕ್ರಯ ಬಾಳುವ ಚಿಂದಿ ಕಳುಹಿಸಲ್ಪಟ್ಟಿತು. ಈ ಚಿಂದಿಗಳನ್ನು ಇದ್ದ ಹಾಗೆ ಕಳುಹಿಸಿಕೊಡುವುದಲ್ಲ. ಅವುಗಳನ್ನು ಶುದ್ಧಗೊಳಿಸಬೇಕು. ಶುದ್ಧಗೊಳಿಸಿದ ಮೇಲೆ ಅವುಗಳನ್ನು ಹೊರಗೆ ಕಳುಹಿಸಲಾಗುವುದು. ಈ ತರದ ಚಿಂದಿಗಳು ಅಮೇರಿಕದ ಕಾರ್ಖಾನೆಗಳಲ್ಲಿ–ಅಲ್ಲಿನ ಮೆಶಿನುಗಳನ್ನು ತಿಕ್ಕಲು ಉಪಯೋಗಿಸುತ್ತಾರಂತೆ. ಈ ಉದ್ಯೋಗವನ್ನು ನಮ್ಮಲ್ಲೂ ಕೆಲವರು ಕೈಗೊಳ್ಳಬಹುದು. ಬಡ ಚಿಂದಿಗಳಿಂದ ಮಿಲಿಯಾಧಿಪತಿಗಳೂ ಆಗಬಹುದು. ಚಿಂದಿಗಳನ್ನು ಕಳಕೊಳ್ಳಬೇಡಿರಿ

ಯುದ್ಧವಾಗಲು ಸಾಂಪತ್ತಿಕ ಕಾರಣಗಳು

"ಪ್ರಪಂಚದ ಸಾಂಪತ್ತಿಕ ಸ್ಥಿತಿಯು ಯೋಗ್ಯ ರೀತಿಯಲ್ಲಿ ವ್ಯವಸ್ಥೆಗೊಳ್ಳದಿರುವುದರಿಂದಲೇ ಯುದ್ಧಗಳು ಸಂಭವಿಸುತ್ತವೆ. ಮೂವತ್ತು ವರ್ಷಗಳ ಹಿಂದೆ ಪ್ರಸಿದ್ಧಿಯಲ್ಲಿದ್ದ ಸ್ವೇಚ್ಛಾಪರವಾಗಿ ಸಂಚರಿಸುವ ಹಕ್ಕು ಕಳೆದು ಹೋದುದರಿಂದಲೇ ದಂಡಯೋಜನೆಯು ದಿನೇ ದಿನೇ ಪ್ರಬಲಹೊಂದುತ್ತಿದೆ. ಯೂರೋಪು ಖಂಡದಲ್ಲೂ ಏಸ್ಯಾಖಂಡದಲ್ಲೂ ಜನರು ಆಹಾರಕ್ಕಾಗಿಯೂ, ಉಳಕೊಳ್ಳಲು ಭೂಮಿಗಾಗಿಯೂ ಹವಣಿಸುತ್ತಿರುವುದು ನಮಗೆ ಕಾಣುತ್ತಿದೆ. ಜಪಾನಿಗೆ ತನ್ನ ಜನರನ್ನು ಸಲಹಲು ಅಸಾಧ್ಯವಾಗಿದೆ. ಅದಕ್ಕೆ ಸಾಗುವಳಿ ನಡೆಸಲು ಹೆಚ್ಚಿನ ಬಯಲುಪ್ರದೇಶವು ಬೇಕಾಗಿದೆ. ಅವರಲ್ಲಿ ಹೆಚ್ಚು ಲೋಹಗಳು ಸಿಗುವುದಿಲ್ಲ. ಬಹಿರ್ ವ್ಯಾಪಾರ ಲೋಕದಲ್ಲಿ ತುಂಬಾ ನಿರ್ಬಂಧಗಳು ಕಾಣಿಸುತ್ತಿವೆ. ಆದರಿಂದಾಗಿ ಅವರ ದೃಷ್ಟಿಗೆ ಆಸ್ಟ್ರೇಲಿಯಾದ ಕಡೆಗೂ, ನ್ಯೂಗಿನಿಯಾದ ಕಡೆಗೂ ಹರಿಯಿತು. ಆದರೆ ತನ್ನಲ್ಲಿ ಜಾಸ್ತಿಯಾಗಿರುವ ಜನರನ್ನು ಅಲ್ಲಿಗೆ ಕಳುಹಿಸಲು ಅವರಿಗೆ ಸಾಧ್ಯವಾಗದೆ ಹೋಯಿತು. ಈಗ ಅವರು ಚೀನಾವನ್ನು ಸೇರಿರುವರು. ಮಂಚೂರಿಯಾವನ್ನು ಮತ್ತು ಉತ್ತರ ಚೀನಾವನ್ನು ಹಿಡಿಯುವ ಕಾರ್ಯದಲ್ಲಿ ನಿರತರಾಗಿರುವರು. ಕ್ರಮಶಃ ಇವರು ಮಿಲಿಯಗಟ್ಟಲೆ ಚೀನಿಯರನ್ನೂ, ಮಂಚುಕಕ್ಕ ಜನರನ್ನೂ, ಒಂದು ಸೇನಾ ದಂಡನ್ನಾಗಿ ಮಾಡಿ, ಸಮಸ್ತ ಏಸ್ಯಾಖಂಡದಲ್ಲಿ ಪ್ರಸರಿಸುವಂತೆ ಮಾಡುವರು. ಯೂರೋಪು ಖಂಡದ ಇಟಲಿಯೂ ಜರ್ಮನಿಯೂ ಇದೇ ಸ್ಥಿತಿಯಲ್ಲಿವೆ. ಅವರ ಸಾಮ್ರಾಜ್ಯದ ಬೆಳವಣಿಗೆಯು ಆಗಲೇ ಬೇಕು. ಜರ್ಮನಿಗೆ ಅಷ್ಟು ಶತಪ್ರಯತ್ನಗಳನ್ನು ಮಾಡಿದರೂ, ತನಗೆ ಬೇಕಾದ ಆಹಾರವನ್ನೂ ಕಾರಖಾನೆ ಸಾಮಗ್ರಿಗಳನ್ನೂ ಒದಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಜಗತ್ತಿನ ಕೈಗಾರಿಕೆಗಳಿಗೆ ೨೫ ಲೋಹಗಳು ಬೇಕಾಗಿವೆ. ಇವುಗಳಲ್ಲಿ ೧೮ ಬ್ರಿಟಿಷರ ಅಧಿಕಾರದಲ್ಲಿವೆ. ಇವರಿಗೆ ಧಾರಾಳ ಲೋಹಗಳು ಸಿಗುತ್ತವೆ. ಜಪಾನು ೩, ಜರ್ಮನಿ ೪, ಇಟಲಿ ೪. ಈ ತರದಲ್ಲಿ ಅನ್ಯಾಯಕರ ರೀತಿಯಲ್ಲಿ ಕಾರಖಾನೆ ಸಾಮಗ್ರಿಗಳು ಹಂಚಿಕೊಳ್ಳುವಾಗ, ಉತ್ಸಾಹವಂತ ಜನಾಂಗಗಳಾದ ಜಪಾನು, ಇಟೇಲಿ, ಜರ್ಮನಿ ಮೊದಲಾದವರು ಸುಮ್ಮನೆ ಕುಳಿತುಕೊಳ್ಳುವರೇ?" ಎಂದು ಡಾ। ಆಲ್ಬರ್ಟ್ ಸಾಲ್ಟರ್ (ಪಾರ್ಲಿಮೆಂಟಿನ ಸದಸ್ಯರು) ಇವರು ಒಂದೆಡೆಯಲ್ಲಿ ಮಾಡಿದ ಭಾಷಣದ ಸಾರಾಂಶ.

ತತ್ವಶಾಸ್ತ್ರವೂ ಮತ್ತು ಜೀವಮಾನವೂ.

"ಮನೆವಾರ್ತೆ ಸಾಮಾನುಗಳಲ್ಲಿನ ಉಪ್ಪಿನಂತೆ, ತತ್ವಶಾಸ್ತ್ರವೂ ಮಾನವನ ಜೀವಮಾನದ ಒಂದು ಪ್ರಾಮುಖ್ಯ ವಿಚಾರವಾಗಿರುತ್ತದೆಂದೂ, ಅದಲ್ಲದೆ ಅದರ ರುಚಿಯು ಕೆಡುವುದೆಂದೂ, ತತ್ವಶಾಸ್ತ್ರವು ನಮಗೆ ಅತಿ ಅಗತ್ಯವಾದುದೆಂಬ" ಅಭಿಪ್ರಾಯದಿಂದೊಡಗೂಡಿದ ಮೇಲಿನ ವಿಚಾರದ ಮೇಲೆ ಡಾ। ಹೋಗ್, ಪ್ರಿನ್ಸಿಪಾಲ್ ಕ್ರಿಶ್ಚನ್ ಕಾಲೇಜು ಮದ್ರಾಸು, ಇವರು ಅಲ್ಲಿನ ರೋಟರಿ ಕ್ಲಬ್ಬಿನಲ್ಲಿ ಭಾಷಣಮಾಡಿದರು

ವರ್ಣಸಮಸ್ಯೆ.

ಶ್ರೀ। ಕರಿಯನ್ ಎಂಬವರು ಮದ್ರಾಸು ವಿಶ್ವವಿದ್ಯಾನಿಲಯದ ರೀಡರ್‌ಶಿಪ್ಪಿನ ಒಂದು ಭಾಷಣವನ್ನು ವರ್ಣಸಮಸ್ಯೆಯ ಮೇಲೆ ಮಾಡಿರುವರು. "ಪ್ರಪಂಚದ ಎಲ್ಲಾ ಜನಾಂಗಗಳನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಬಹುದು. ಬಿಳಿ, ಕಪ್ಪು, ಹಳದಿ ಮತ್ತು ಕಂದು. ಕಪ್ಪು ಜನರು ಉಷ್ಣ ವಲಯದವರು. ಬಿಳಿ ಜನರು ಸಮಶೀತೋಷ್ಣವಲಯದವರು. ಜಗತ್ತಿನ ಜನಸಂಖ್ಯೆಯಲ್ಲಿ ಮೂರನೇ ಒಂದಂಶವಾಗಿರುವ ಬಿಳಿ ಜನರಿಗೆ ಮಾತ್ರ ಈಗ ರಾಜಕೀಯ ಅಗ್ರಗಣ್ಯತೆಯು ದೊರಕಿರುತ್ತದೆ. ಈ ಪ್ರಪಂಚದ ೪/೫ನೇ ಜನಸಂಖ್ಯೆಯು ಇವರ ಅಧಿಕಾರದಲ್ಲಿರುತ್ತದೆ. ಸಂಯುಕ್ತ ಅಮೇರಿಕಾದಲ್ಲಿರುವ ಕಪ್ಪಗಿನ ಜನರಾದ ನಿಗ್ರೋಗಳನ್ನು ಹಿಂಗಡಿಸಲು ಬಹಳ ಪ್ರಯತ್ನಗಳು ನಡೆದು, ಅವುಗಳು ಯಾವತ್ತೂ ಫಲಕಾರಿಯಾಗದೆ ಈಗ ಅವರು ಬಿಳಿಜನರೊಡನೆ ಬೆರೆತಿರುವರು. ಆಫ್ರಿಕಾದ ದೇಶಗಳಲ್ಲಿ ಕಪ್ಪು ಜನರ ಸಂಖ್ಯೆಯು ಅಧಿಕವಾಗಿದ್ದರೂ, ಅಲ್ಲಿ ಬಿಳಿ ಜನರ ಪ್ರತಾಪ ಬಹಳ. ಇಲ್ಲಿ ಕೂಡಾ ಕಪ್ಪು ಜನರನ್ನು ಕೆಳಗಿಡಲು ಬಹಳ ಪ್ರಯತ್ನಗಳು ನಡೆಯುತ್ತಿವೆ. ಜಾವಾದಲ್ಲಿ ಮಾತ್ರ ಎಲ್ಲಾ ವರ್ಣದ ಜನರು ಬೆರತು, ದಿನಕಳೆಯುತ್ತಿದ್ದಾರೆ. ಆಸ್ಟ್ರೇಲಿಯಾದ ವಿಚಾರದಲ್ಲಿ,–ಅಲ್ಲಿ ಬಿಳಿ ವರ್ಣವು ಹಳದಿ ವರ್ಣವನ್ನು ಹೊರಗಿಟ್ಟಿರುತ್ತದೆ. ಚೀನಿಯರಿಗೂ ಜಪಾನೀಯರಿಗೂ ಇಲ್ಲಿ ಉಳಕೊಳ್ಳಲು ನಿರ್ಬಂಧವಿದೆ. ಪೌರ್ವಾತ್ಯದಲ್ಲಿ ಈ ವರ್ಣಭೇದಕ್ಕೆ ಅಷ್ಟು ನೆಲೆಸಿಕ್ಕಿಲ್ಲ. ಆದರೆ, ಚೀನಾ ಮತ್ತು ಜಪಾನರನ್ನು ಇತರ ಜನಾಂಗದವರು ಕಾಣುವುದರಲ್ಲಿ ಸ್ವಲ್ಪ ಭೇದವಿದೆ. ಬಹುಶ, ಅವುಗಳು ಜಪಾನಿನ ರಾಜಕೀಯ ಶ್ರೇಯಸ್ಸಿನ ಕಾರಣದಿಂದಾಗಿರಬಹುದು"

"ಹಿಂದೂಮುಸ್ಲಿಂ ಐಕ್ಯವಾಗಬೇಕು"

ಕಳೆದ ವಾರದ ಬಕ್ರೀದ್‌ನ ಸಮಯ, ಮದ್ರಾಸಿನ ಕ್ರಿಸೆಂಟ್ ಸಂಘದ ನೇತೃತ್ವದಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿತು. ಅನೇಕ ಜಾತಿ ಮತ್ತು ಮತದ ಜನರು ಮುಸ್ಲಿಮರೊಡನೆ ಕೂಡಿದ್ದರು. ಹಿಂದೂ ಮುಸ್ಲಿಂ ಐಕ್ಯವಾಗಬೇಕೆಂದೂ, ಭಾರತೀಯರು ಕೋಮುವಾರು ಭೇದವನ್ನು ಮರೆತುಬಿಡಬೇಕೆಂದೂ ಭಾಷಣಗಳಾದುವು. ಅಲ್ಲಿನ ಪ್ರಮುಖರಾದ ಡಾ। ಪಿ. ವರದರಾಜುಲು ನಾಯುಡುರವರು ಸಭೆಯ ಅಧ್ಯಕ್ಷರಾಗಿದ್ದರು

ಹಿಂದೂದೇಶದಲ್ಲಿ ಅಮೇರಿಕನ್ ಪ್ರವಾಸಿಗಳು.

ಅಮೇರಿಕಾದ ಅನೇಕ ಅಧ್ಯಾಪಕರು ಈಗ ಹಿಂದೂದೇಶವನ್ನು ಸಂಚರಿಸುತ್ತಿದ್ದಾರೆ. ಇವರ ತಂಡವೊಂದು ಮೊನ್ನೆ ಒಂದು ಸ್ಪೆಶಲ್ ಟ್ರೈನಿನಲ್ಲಿ ಮದ್ರಾಸಿಗೆ ಬಂದಿತ್ತು. ಹಿಂದೂದೇಶವನ್ನು ಕಂಡು ಬಹಳ ತೃಪ್ತಿಪಡೆದಿರುತ್ತಾರೆ. ಇವರೆಲ್ಲಾ ಬ್ಬರು ಹಿಂದೂದೇಶದ ಕುರಿತು ಅಮೇರಿಕಾದಲ್ಲಿ ಪ್ರಸಿದ್ಧಿಯಲ್ಲಿರುವ ಗ್ರಂಥಗಳು ಅದರ ನಿಜವಾದ ಚಿತ್ರ ಕೊಡುವುದಿಲ್ಲವೆಂದೂ, ಹಿಂದೂದೇಶದ ನಿಜವಾದ ಚಿತ್ರಗಳನ್ನು ಕೊಡುವ ಗ್ರಂಥಗಳು ಬೇಕಾಗಿವೆ ಎಂದೂ, ಮಿಸ್ ಮೆಯೋಳ ಪುಸ್ತಕವು ಅವರಲ್ಲಿ ಅನೇಕ ತಪ್ಪಭಿಪ್ರಾಯಗಳನ್ನು ಉಂಟುಮಾಡಿರುತ್ತದೆಂದೂ' ತಿಳಿಸಿದರು. ಅಮೇರಿಕಾವು ಪೌರ್ವಾತ್ಯದ ಕಲಹದಲ್ಲಿ ಕೈಹಾಕುವುದಿಲ್ಲವೆಂದು ಇವರಿಂದ ತಿಳಿದುಬಂತು. ಹಿಂದೂದೇಶದ ಪತ್ರಿಕೆಗಳನ್ನು (ಆಂಗ್ಲೇಯ ಮಾತ್ರ) ಬಹಳ ಕೊಂಡಾಡಿದರು. ಮಹಾತ್ಮಾಗಾಂಧಿಯವರ ಅರಿವು ಸಮಸ್ತ ಅಮೇರಿಕಾ ಖಂಡಕ್ಕೂ ಇರುವುದೆಂದು ಇವರಿಂದ ತಿಳಿದುಬಂತು. ಹಿಂದೂದೇಶದ ಪ್ರಾಚೀನ ವೈಭವಗಳನ್ನು ನೋಡಿ ಇವರು ಬೆರಗಾಗಿರುವರು.

ಜರ್ಮನಿಯು ಲೋಕಾರ್ನೋ ಒಪ್ಪಂದವನ್ನು ಮುರಿಯಿತು!

ಕಳೆದ ಮಹಾ ಯುದ್ಧದ ನಂತರ, ಜರ್ಮನಿಯ ಸಂಗ್ರಾಮಯೋಜನೆಗಳನ್ನು ಮಾಡದಂತೆ, ಯೂರೋಪು, ಬ್ರಿಟಿಷ ರಷ್ಯಾ, ಫ್ರೆಂಚ ಜರ್ಮನಿ ಇತ್ಯಾದಿಗಳಲ್ಲಿ 'ಲೋಕಾರ್ನೋ ಒಪ್ಪಂದ" ಎಂಬ ಒಪ್ಪಂದವಾಗಿತ್ತು. ಆದರೆ ಈ ಮೊದಲೇ ಎಚ್ಚರಿಕೆ ಕೊಟ್ಟ ಮೇರೆಗೆ ಜರ್ಮನಿಯ ಹಿಟ್ಲರನು ಅದನ್ನು ಈಗ ಮುರಿದುಬಿಟ್ಟು, ಅವನ ರ್‍ಯಾನ್‌ಲೆಂಡ್ ಪ್ರದೇಶದಲ್ಲಿ ದಂಡುಗಳನ್ನು ನಿಲ್ಲಿಸಿರುವನು. ರಷ್ಯಾ–ಫ್ರಾನ್ಸು ಒಪ್ಪಂದವನ್ನು ಸ್ವೀಕರಿಸಿದ್ದು ಇದಕ್ಕೆ ಕಾರಣವಂತೆ. ಇದರಿಂದ ಜರ್ಮನಿಯು ಕಳೆದ ಮಹಾಯುದ್ಧದ ನಂತರ ಆದ ಎಲ್ಲಾ ಒಪ್ಪಂದಗಳನ್ನು ಮುರಿದಂತಾಗಿದೆ. ಇದರಿಂದ ಯೂರೋಪು ಖಂಡದಲ್ಲಿ ಮಹಾ ಕ್ಷೋಭೆಯುಂಟಾಗಿರುತ್ತದೆ. ಜರ್ಮನಿಯು ರ್‍ಯಾನ್ ಲೇಂಡಿಗೆ ದಂಡನ್ನು ಕಳುಹಿಸಿದರೆ ಯುದ್ಧವು ಪ್ರಾರಂಭವಾಗುವುದು. ಹಿಟ್ಲರನ ಈ ವರ್ತನೆಯು ಸಂಗ್ರಾಮಾಧಿಕಾರಿಗಳಿಗೆ ಒಪ್ಪದೆ ಇದ್ದರೂ ಸರಕಾರದ ದೃಢವಾದ ಆಜ್ಞೆಗಳು ಹೊರಬಿದ್ದಿವೆ

೧೧ನೇ ಪುಟದಿಂದ ಮುಂದರಿಸಿದ್ದು

ತಾಲೂಕುಗಳಿಂದ.

ಮೂಲ್ಕಿ — ಸ್ಥಳೀಕ ಬೋರ್ಡು ಸ್ಕೂಲಿನ ವರ್ಧಂತಿಯು ಕಳೆದ ದಿವಸದ ಕಾರ್ಯಭಾಗವು ಇದೇ ತಾ ೧೪–೩–೩೬ನೇ ಶನಿವಾರ ಅಪರಾಹ್ನ ಗಂಟೆ ೩ಕ್ಕೆ ದ. ಕ. ಜಿಲ್ಲಾ ಎಜ್ಯುಕೇಶನಲ್ ಆಫೀಸರ್ ಮ। ರಾ। ಯು. ಕೃಷ್ಣಪ್ಪ ಅವರ್ಗಳ್ ಎಂ ಎ ಎಲ್ ಟಿ. ರವರ ಅಧ್ಯಕ್ಷತೆಯಲ್ಲಿ ಜರಗಿತು

ಸ್ಥಳೀಕ ಬಿಲ್ಲವ ಸಮಾಜ ಸೇವಾ ಸಂಘದ ವರ್ಧಂತಿಯು ಯಾನೆ ವರ್ಷಾವಧಿ ಮಹಾಸಭೆಯು ಇದೇ ಬರುವ ತಾ ೨೯–೩–೩೬ನೇ ರವಿವಾರ ಅಪರಾಹ್ನ ಗಂಟೆ ೩ಕ್ಕೆ ಸ್ಥಳೀಕ ಬೋರ್ಡುಶಾಲಾ ಕಟ್ಟಡದಲ್ಲಿ ಮಂಗಳೂರಿನ ಸಾಹುಕಾರ್ ಮ। ರಾ। ರಾ। ಎಚ್ ಕೊರಗಪ್ಪ ಅವರ್ಗಳ್‌ರವರ ಅಧ್ಯಕ್ಷತೆಯಲ್ಲಿ ಜರಗಲಿರುವುದಾಗಿ ತಿಳಿದುಬರುತ್ತದೆ

ಮ। ರಾ। ರಾ। ದಿವಾನ್ ಬಹದ್ದೂರ್ ಬಿ ಎಮ್. ಹೆಗ್ಡೆ ಅವರ್ಗಳ್ ಬಿ ಎ. ಬಿ ಎಲ್ ರವರು ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಸದರಿ ಮಹನೀಯರನ್ನು ಅಭಿನಂದಿಸುವರೆ ಇದೇ ಕಳೆದ ತಾ ೯ರಲ್ಲಿ ಸ್ಥಳೀಕ ಯೂನಿಯನ್ ಕ್ಲಬ್ಬಿನಲ್ಲಿ ರೆವೆರೆಂಡ್ ಜೋರ್ಜ್ ಮಿನೇಜಸ್ ಬಿ. ಡಿ ರವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿತ್ತು. ಅದೇ ಸಂದರ್ಭದಲ್ಲಿ ವೈಸ್ ಪ್ರೆಸಿಡೆಂಟರಾಗಿ ಚುನಾಯಿಸಲ್ಪಟ್ಟ ಬಗ್ಗೆ ಎ ಸಿ. ಗೋನ್ಸಾಲ್ವಿಸ್ ಬಿ. ಎ ಬಿ. ಎಲ್. ರವರನ್ನು ಅಭಿನಂದಿಸುವ ಕಾರ್ಯವು ಸಾಗಿಸಲಾಯಿತು

ಇಲ್ಲಿಯ ಸಬ್ ರಿಜಿಸ್ಟ್ರಾರ್ ಶ್ರೀ। ಬಿ. ರಾಮಕೃಷ್ಣ ರಾವ್ ಬಿ. ಎ. ರವರಿಗೆ ಕುಂದಾಪುರಕ್ಕೆ ವರ್ಗವಾದ ಹುಕುಂ ರವಾನಾಗಿದೆ ಎಂದು ತಿಳಿದುಬರುತ್ತದೆ.

ಮುಂಬಾಯಿಯಲ್ಲಿರುವ ನಮ್ಮ ಜಿಲ್ಲೆಯವರಾದ ಪ್ರೊಫೆಸರ್ ಶೇಷಪ್ಪನವರ ಶಿಷ್ಯರಲ್ಲಿ ಕೆಲವರು ರಜೆಯ ಮೇಲೆ ಊರಿಗೆ ಬಂದಿದ್ದು, ಸದ್ಯದಲ್ಲಿ ಇಲ್ಲಿ ಒಂದು ದೇಹಾಪೆಯನ್ನು ತೋರಿಸಲಿರುವರಾಗಿ ಕೇಳುತ್ತೇವೆ.

ಶ್ರೀ ರಾಮೇಶ್ವರ ಕ್ಷೇತ್ರದಿಂದ ಇಲ್ಲಿಗೆ ಚಿತ್ತೈಸಿ ಪರ್ಯಟನೆಕ್ಕಾಗಿ ಹೋಗಿದ್ದ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀ ಪಾದಂಗಳವರು ಇಲ್ಲಿಗೆ ವಿಜಯಂಗೈದಿದ್ದು ತಿರುಗಿ ಉಳ್ಳಾಲಪಟ್ಟಣಕ್ಕೆ ಸವಾರಿ ಚಿತ್ತೈಸಿರುತ್ತಾರೆ.

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA===AND===MANGALORE

Now For Sale.

Poholatum (Balm) (German make) This is a home remedy for Rheumatism, Asthma, Sciatica, Lumbago, Insect bites, Herpes Wounds, Cuts, Colds, Headache. It is a complete substitute for the domestic medicine chest. Try once this unequalled remedy. In ½oz tin......As. 3/- In oz. jar......As. 12/-

Superior Red Balm For relieving pains in muscles and on skin. Directions for use with the bottle. Price As. 12/- only

Wurmteufel: Is a soverign remedy against all sorts of worms in stomach and in the intestines. Physicians enjoying authoritativeness describe it as radical remedy and warmly recommed it. All those who suffer from worms, children and adults, try this unique remedy and be freed from your ailment. Price As. 10 per packet.

Pocket-Inhaler: For coughs and hoarseness, headache catarrch, colds, use this inhaler and you will be relieved immediately. Price per inhaler As. 6/- & As. 8/-

Po-Ho Fluid" For Asthma, colds, indigestion, toothache lumbago, a sure remedy in all cases. Price As. 6/- and Re. 1/- per phial.

Cough Cure An infallible remedy for coughs of all kinds bronchitis, hoarseness. Particulars in bottle. Price As. 12/- for 3 oz bottle.

The New Curative Earth: A Radium cure for incurable diseases.

Mithra Toilet Soaps—Scientifically prepared German soaps excellent for health. Price As. 1/3; 2/6; 3/-; 4;

Basel Mission Book Depot

Mangalore, Branches in Codialbail, Hubli, Calicut

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸು,

ಚಿಕ್ಕಮಗಳೂರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬ್ಯಾ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟರ ಸರ್ವೀಸುಗಳು.

ಮುಂಬಾಯಿಯಿಂದ–ಪೂನಾ–ಬೆಳಗಾಂವ–ಧಾರವಾಡ–ಹುಬ್ಬಳ್ಳಿ–ಗೋವಾ ಇವೆಲ್ಲ ಕಡೆಗಳಿಂದ,

ಮಂಗಳೂರಿಗೆ–ಪುತ್ತೂರು–ಉಡುಪಿ–ಕಾರ್ಕಳ–ಬೆಳ್ತಂಗಡಿ–ವೇಣೂರು–ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

ಶೀಘ್ರ ಪ್ರಯಾಣ- ಅನುಕೂಲ ಸೌಕರ್ಯ- ಅತ್ಯಲ್ಪ ಖರ್ಚು- ಸುಂದರವಾದ ನೋಟ.

ಅಲ್ಲದೆ

ಮೈಸೂರಿನ ಅರಸರ ಶೆಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯೂದ ಕೆಮ್ಮಣ್ಣು ಗುಂಡಿ–ಯಾತ್ರಾಸ್ಥಳವಾದ ಬಾಬಾ ಬುಡಾನಗಿರಿ–ಕೈಗಾರಿಕೆಯ ಕೇಂದ್ರವಾದ ಭದ್ರಾವತಿ–ಶಿಲಾಶಿಲ್ಪದ ಬೇಲೂರು, ಹಳೆಬೀಡು–ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪಶ್ಚಿಮ ಘಟ್ಟಗಳು–

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ.

Chikmagalur Public Conveyance Motor Service,

CHIKMAGaLUR.

ವನಿತಾ ವೈಭವ

ಹಿಟ್ಲರ ಶಾಸನವೇನು?

ಹಿಟ್ಲರನು ಜರ್ಮನಿಯಲ್ಲಿ ಬಳಸುತ್ತಿರುವ ಮೇಲೆ ಕ ಪರಿವರ್ತನೆಗಳಾಗಿವೆ. ಅವರಲ್ಲಿ ಸ್ತ್ರೀಯ ಹಕ್ಕುಗಳಿಗೆ ಸಂಬಂಧಪಟ್ಟವು ಮುಖ್ಯವಾದವು. ಹೆಂಗಸಿಗೂ ಒಬ್ಬ ಗಂಡನನ್ನು ಗಂಟುಹಾಕಿ, ಪ್ರತಿ ಸಿಗೂ ಒಂದು ಉದ್ಯೋಗವನ್ನು ಕೊಡು, ಅಂದರೆ ವು ಉದ್ಧಾರವಾಗುತ್ತದೆ'—ಇದು ಹಿಟ್ಲರನ ಜೀವನ ಯದ ಸೂತ್ರ. ಅದರಂತೆ ಹೆಂಗಸರಿಗೆ ಗಂಡನ ಗಂಟುಹಾಕಿ, ಅವರನ್ನು ಅಡಿಗೆಮನೆಗಟ್ಟು, ಇಗೋ ನಿಮ್ಮ ಸ್ಥಾನ ಎಂದು ಹೇಳುತ್ತಿದ್ದಾನೆ.

ಇದು ಹಿಟ್ಲರನು ಅಧಿಕಾರಕ್ಕೆ ಬಂದ ಕಾಲದಿಂದ ನಡೆ ತ್ತಿದೆ. ಆದರೆ ಇದರ ನಿಷ್ಕೃಷ್ಟ ಪರಿಣಾಮವನ್ನು ಕಿಗಳಿಂದ ನೋಡೋಣ. ೧೯೩೩ರಲ್ಲಿ ಎಲ್ಲ ಕೆಲಸ ಲ್ಲಿ ಸ್ತ್ರೀಕೆಲಸಗಾರರ ಸಂಖ್ಯೆ ಶೇಕಡ ೩೬ ೭೦೦ದ ಕ್ಕೆ ಇಳಿದಿದೆ. ಅದರೆ, ಬಟ್ಟೆಬರೆಗಳು, ಕಾಗದ, ದ ಸಾಮಾನುಗಳು, ಆಹಾರ ಮತ್ತು ಲೋಹ ಈ ರಿಕೆಗಳಲ್ಲಿ ಸ್ತ್ರೀಯರ ಸಂಖ್ಯೆಯು ೩ ಲಕ್ಷದಷ್ಟು ದೆ. ಇನ್ನೂ ಹೆಚ್ಚಾಗುವ ಲಕ್ಷಣಗಳು ಕಾಣಬರು ವೆ.

ವಿಲಾಯತಿಯಲ್ಲಿ.

ಸ್ತ್ರೀ ಸ್ವಾತಂತ್ರ್ಯ ಚಳವಳಿಯು ಹುಟ್ಟಿ ಈಗಿಗೆ ೫ ಶತಮಾನವಾಗಿದೆ ತತ್ಪರಿಣಾಮವಾಗಿ ಉದ್ಧವಾದ ಲಂತೂ ಸ್ತ್ರೀಯರ ಅಭಿವೃದ್ಧಿಯು ಉಚ್ಛ್ರಾಯ ಗೆ ಬಂದಿದೆ. ಇಂಗ್ಲೆಂಡಿನಲ್ಲಿ ಸ್ತ್ರೀಯರು ಗಂಡಸು ದ್ಯೋಕ್ತವಾಗಿರುವ ಪ್ರತಿಯೊಂದು ಜೀವನೋಪಾ ಕ್ಕೂ ಕೈ ಹಾಕಿ 'ಸೈ' ಎನಿಸಿಕೊಳ್ಳುತ್ತಿದ್ದಾರೆ. ಗಸು ಅಸಾಧ್ಯವೆಂದು ಬಿಟ್ಟುಬಿಟ್ಟ ಕಾರ್ಯವೇ ಳ.

ಉದಾಹರಣೆಗೆ ನೋಡಿ ಇಂದು ವಿಲಾಯತಿಯಲ್ಲಿ ೬ ಮಂದಿ ಸ್ತ್ರೀಯರು ಕಬ್ಬಿಣ ಕೈಗಾರಿಕೆಯಲ್ಲಿ ನಿರತ ರಾಗಿದ್ದಾರೆ. ೫೦೦ ಮಂದಿ ಹೊಗೆಸೊಪ್ಪು ಕೈಗಾರಿಕೆ ಯನ್ನು ನೋಡಿಕೊಳ್ಳುತ್ತಿದ್ದಾರೆ. ೬೦ ಮಂದಿ ಸ್ತ್ರೀಯರು ಮೋಟಾರು ಉದ್ಯೋಗದಲ್ಲಿದ್ದಾರೆ. ಇಟ್ಟಿಗೆ ಮಾಡು ವುದು ಮಡಿಕೆ ಮಾಡುವುದು ಇತ್ಯಾದಿ ಕೆಲಸಗಳನ್ನು ಹೆಂಗಸರು ನಡೆಸುತ್ತಿದ್ದಾರೆ. ನಾಟಕ ವ್ಯಾಪಾರ ಸು ಬರದಿದ್ದಾರೆ.

ಚೀನಕ್ಕೂ ಗಾಳಿಬೀಸಿತು.

ಚೀನಕ್ಕೂ ಪಾಶ್ಚಿಮಾತ್ಯರ ಗಾಳಿ ಬೀಸಿದೆ. ಹೆಂಗ ಪೋಲೀಸು ಪಡೆಯೊಂದನ್ನು ಕ್ಯಾಂಟನ್ ನಗರದಲ್ಲಿ ನಡಿಸುತ್ತಿದ್ದಾರೆ. ಈ ದೇಶದಲ್ಲಿ ಪ್ರಥಮ ಪ್ರಯುಕ್ತ ಸ್ತ್ರೀ ಪೋಲೀಸು ಪಡೆಗೆ ಕೆಲವು ತಿಂಗಳ ಕಾಲ ಶಿಕ್ಷಣ ಕೊಟ್ಟು ಅನಂತರ ರಾತ್ರಿ ಹಗಲು ರಸ್ತೆಗಳನ್ನು ರಕ್ಷಿ ಸುವ ಕಾರ್ಯಕ್ಕೆ ಹಾಕುತ್ತಾರಂತೆ.

ನ್ಯಾಯಾಧೀಶರ ನಿರ್ಧಾರ

ಅಮೇರಿಕದ ಸಾನ್‌ಫ್ರಾನ್ಸಿಸ್ಕೋ ನಗರ ಅಲ್ಲಿನ ನ್ಯಾಯಸ್ಥಾನಕ್ಕೆ ಫೆರೀ ಸಮ್ಯುಕಲ್ ಎಂಬಾತನು ನ್ಯಾಯಾಧೀಶನು ಪ್ರತಿಶತ ಅನುಭವಸ್ಥ ಆತನು ನ ಅನುಭವದಿಂದ ಕೆಲವು ಸ್ತ್ರೀ ಸ್ವಭಾವಗಳನ್ನು ಎರತು ಸ್ವಾರಸ್ಯವಾಗಿ ನಿಷ್ಕರ್ಷಿಸಿ ಹೇಳುತ್ತಾರೆ.

ದಿನ ಬೆಳಗಾದರೆ ಸ್ತ್ರೀ ಅಪರಾಧಿಗಳನ್ನು ವಿಚಾರಣೆ ಮಾಡಿ ಪಡೆದಿರುವ ಅನುಭವದಿಂದ ಈ ಮಾತುಗಳನ್ನು ಹುತ್ತೇನೆ. ಇಷ್ಟು ಕಾಲ ವಿದ್ಯಾಪ್ರಚಾರವು ಸ್ತ್ರೀ ಪ್ರಪಂ ಚದಲ್ಲಾಗಿದ್ದರೂ ಹೆಂಗಸರಿನ್ನೂ ತಮ್ಮ ದೌರ್ಬಲ್ಯಗ ಳಿಂದ ಪಾರಾಗಿಲ್ಲ. ಯಾವುದಾದರೊಂದು ಮಾರ್ಗ ವನ್ನು ಹಿಡಿಯಬೇಕಾದರೆ ಅವರು ಕಾರಣಕ್ಕೆ ಕಟ್ಟು ಬೀಳುವುದಿಲ್ಲ. ರಾಗರಸ ಪ್ರೇರಿತವಾದ ಇಷ್ಟಾನಿಷ್ಟಗಳ ನ್ನಾಶ್ರಯಿಸುತ್ತಾರೆ.

''ಅವರಿಗೆ ತಮ್ಮ ಇಷ್ಟಾನಿಷ್ಟಗಳೇ ದೊಡ್ಡವು ನ್ಯಾಯ, ಕಾರಣಬೇಕಿಲ್ಲ. ತಮ್ಮ ಇಷ್ಟಾನಿಷ್ಟಗಳನ್ನು ಸಾಧಿಸಲು ಸಹಕಾರಿಯಾದಾಗ ಮಾತ್ರ ಅವರು ನ್ಯಾಯ ಕಾರಣದ ಹೆಸರನ್ನು ಎತ್ತುತ್ತಾರೆ.

''ಗಂಡಸಿಗೆ ನ್ಯಾಯ ಕಾರಣಬೇಕು. ಅವುಗಳ ಅರ್ಥ ಮತ್ತು ಶಕ್ತಿಗಳನ್ನು ಅವರು ಬಲ್ಲರು. ಹೆಂಗ ಗೆ ಬೇಕಾದುದು ತನ್ನ ಹಕ್ಕು. ಅದನ್ನು ಸಾಧಿಸುವ ಪೆಟ್ಟು ಅಕೆಗಿದೆ.

''ಗಂಡಸೊಬ್ಬನು ತಪ್ಪಿತಸ್ಥನಾಗಿ ಶಿಕ್ಷೆ ಹೊಂದಿದರೆ ಲ್ಲಿ, ತನಗಾಗುವ ಶಿಕ್ಷೆಗಾಗಿ ಅವನು ತನ್ನ ಮನೋಭಾ ವನ್ನು ತೋರ್ಪಡಿಸಿಕೊಳ್ಳುವುದಿಲ್ಲ. ಲಕ್ಷಿಸದಂತೆ ಸಂತಸನಾಗಿರುತ್ತಾನೆ. ಆದರೆ ಹೆಂಗಸು ಗೋಳಿಡುವ

ಮುಂದಿಟ್ಟು ಅವುಗಳ ಹೆಸರಿನಲ್ಲಿ ಕ್ಷಮೆಯನ್ನು ಸೆರೆ ಗೊಡ್ಡಿ ಬೇಡುತ್ತಾಳೆ. ಅಂತಹ ಪಾರಾಗುವುದಕ್ಕೆ ನೋಡು ತ್ತಾಳೆ.

''ನಾನೂ ಹೆಂಗಸೇ. ಈ ದೌರ್ಬಲ್ಯಗಳಿಂದ ದೂಷಿ ತೆಯಾಗದಿರಲು ನಾನು ಎಚ್ಚರಿಕೆಯಿಂದಿರುತ್ತೇನೆ.

''ಗಂಡನನ್ನು ಬಿಟ್ಟೋಡುವವರ ವಿಚಾರವಾಗಿ ಇಷ್ಟು ಹೇಳುತ್ತೇನೆ. ಅವರ ವರ್ತನವು ಅನೇಕ ಸಂದರ್ಭಗ ಳಲ್ಲಿ ಅರ್ಥವೇ ಆಗುವುದಿಲ್ಲ. ಮತ್ತು ಆಶ್ಚರ್ಯವಾ ದುದು.

ಇನ್ನು ಗಂಡನು ಬಿಟ್ಟ ಹೆಂಗಸರ ನೂರು. ಅಂತಹ ವರಿಗೆ ವಸ್ತ್ರಭೂಷಣಗಳು ಬೇಡ, ಶೃಂಗಾರಬೇಡ ಯಾವಾಗ ನೋಡಿದರೂ ದೂರುತ್ತಿರುತ್ತಾರೆ. ಹಣ ಸಾಲದೆಂದು ಶಂಖ ಹೊಡೆಯುತ್ತಿರುತ್ತಾರೆ.

ಯುವತಿಯು ಯುವಕನಾದ.

ಜೆಕೋಸ್ಲೊವೇಕಿಯದ ಕೌಕೋವಾ ಎಂಬಾಕೆಯು ಓರ್ವ ಸ್ತ್ರೀಯಾಗಿದ್ದಳು. ಇತ್ತೀಚೆಗೆ ಶಸ್ತ್ರಚಿಕಿತ್ಸೆಯ ಸಹಾಯದಿಂದ ಆ ವ್ಯಕ್ತಿಯು ಪುರುಷನಾದಂತೆ ಗಂಡ ಸಿನ ಅಂಗಗಳೆಲ್ಲವೂ ನಿರ್ಮಿಸಲ್ಪಟ್ಟಿವೆ. ಆತನು ಸೇನ್ಕಾ ಕೌಬೆಕ್ ಎಂಬ ನಾಮಧೇಯವನ್ನು ಪಡೆದಿರುವನು.

ಇದು ನಿಮಗೆ ಧರ್ಮವೆ?

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಹೆಸರಿಕ್ಕ ಕಾಂಗ್ರೆಸ್ ಮುಂದಾಳುಗಳು. ಪ್ರಖ್ಯಾತರಾದ ಸಮಾಜ ಸಮುತಾವಾದಿಗಳು. ಮೊನ್ನೆ ಅಲೀಘರ್ ಮುಸ್ಲಿಂ ವಿಶ್ವವಿದ್ಯಾನಿಲಯ ಸಂಘದವರು ಅವರನ್ನು ಆಹ್ವಾನಿಸಿ ಭಾರತದ ಪ್ರಕೃತ ಸಂಸ್ಕೃತಿ ಮತ್ತು ವಿದ್ಯ ಮಾನಗಳನ್ನು ಕುರಿತು ಭಾಷಣ ಮಾಡುವಂತೆ ಪ್ರಾರ್ಥಿ ಸಿದರು.

ಶ್ರೀಮತಿಯವರು ಭಾಷಣ ಮಾಡುತ್ತಾ ಭಾರತ ಹಿಂದೂಗಳಿಗೂ ವಿಶ್ವಹಿಂದೂಗಳಿಗೂ ಎರಡು ಸಂಬಂಧವೈರುವು ದನ್ನು ಸೂಚಿಸುತ್ತಾ, ಭಾರತದ ಉದ್ಧಾರ ಕಾರ್ಯ

ನನ್ನು ಕೈಕೊಂಡು ಜನಸಾಧಾರಣ ಮಾಡಿಕೊಳ್ಳುವಂತೆ ಅವರಿಗೆ ಬೋಧಿಸಿದರು. ಅನಂತರ ಭಾರತೀಯ ಸ್ತ್ರೀಯರ ಮಹತ್ವ, ಭಾರತೀಯರನ್ನೂ ಸಂಪ್ರದಾಯ ತರುಣರಾಗಿದ್ದಾರೆ. ಸತ್ಯ ಭಾವನೆಗಳ ದಾಸರಾಗಿ ದ್ದಾರೆ. ಹೆಂಗಸರು ಅಬಲೆಯರು, ಅವರನ್ನು ರಕ್ಷಿಸುವ ಭಾರವು ತಮಗೇ ಬಿದ್ದಿದೆ. ಅವರು ತಮ್ಮ ಆಸ್ತಿಗಳು ಎನ್ನುವ ಭಾವವು ಇನ್ನೂ ಭಾರತೀಯ ಪುರುಷರಿಗಿರು ವುದೇ ಇದಕ್ಕೆ ಸಾಕ್ಷಿ. ಇದರಿಂದ ಎರಡು ಅನ್ಯಾಯಗ ಳಾಗಿವೆ. ರಾಷ್ಟ್ರೀಯ ಪುನರುಜ್ಜೀವನ ಕಾರ್ಯಕ್ಕೆ ನೆರ ವಾಗುತ್ತಿದ್ದ ಸ್ತ್ರೀ ಸಹಾಯವನ್ನೇ ಕಳೆದುಕೊಂಡಿರುವುದು ಒಂದು. ಮತ್ತು ಮತಶಾಸ್ತ್ರಗಳ ಹೆಸರಿನಲ್ಲಿ ಈ ಅಧ ರ್ಮವನ್ನು ಮಾಡಿರುವುದೊಂದು. ರಾಷ್ಟ್ರೋನ್ನತಿಯ ಕಾರ್ಯಕ್ಕೆ ನೆರವಾಗುವ ಈ ಸ್ತ್ರೀಯರನ್ನು ಬಚ್ಚಿಟ್ಟಿರು ವುದು ಗಂಡಸರಾದ ನಿಮಗೆ ಧರ್ಮವೇ? ಹೆಂಗಸರನ್ನು ಆಳುವ ಚಕ್ರವರ್ತಿಗಳು ಗಂಡಸರೆಂದು ನೀವು ಭಾವಿಸು ವುದು ಯೋಗ್ಯವೆ? ಎಂದು ಘೋಷಿಸಿದರು.

ಭಾರತ ಸ್ತ್ರೀಯರು

ರಾಜಮಹೇಂದ್ರಿಯಲ್ಲಿರುವ ವಿಧುರ ನಗರದ ಶ್ರೀಮತಿ ಮೇರಿ ವಸಂತಳ್ಳವನ್ನರವರನ್ನು ಮದರಾಸು ಸರಕಾ ರವು ಅಲ್ಲಿನ ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಿದ್ದಾರೆ. ತಿನ್ನವೆಲ್ಲಿ ಜಿಲ್ಲಾ ಬೋರ್ಡಿನ ಅಧ್ಯಕ್ಷ ಸ್ಥಾನಕ್ಕೆ [illegible]

ಚುನಾಯಿಸಲ್ಪಟ್ಟಿದ್ದಾರೆ. ಭಾರತ ಸರಕಾರದ ಕೇಂದ್ರ ಶಿಕ್ಷಣ ಬೋರ್ಡಿಗೆ ಶ್ರೀಮತಿ ರಾಜಕುಮಾರಿ ಅಮೃತ ಕೌರ್‌ರವರನ್ನು ಭಾರತ ಸರಕಾರವು ಸದಸ್ಯರನ್ನಾಗಿ ನಿಯಮಿಸಿದೆ.

ಡಾ। ಶ್ರೀಮತಿ ಇಂದುಮತಿ ಅಡರ್ಕರ್‌ರವರನ್ನು ಕಾಶಿ ಹಿಂದೂ ವಿಶ್ವವಿದ್ಯಾನಿಲಯದವರು ಗೃಹವಿಜ್ಞಾನ ಭಾಗದ ಅಧ್ಯಾಪಕರನ್ನಾಗಿ ನಿಯಮಿಸಿದ್ದಾರೆ. (ವಿ ಳ)

ಮೇಬಲ್ ಪ್ರೆಸ್ಟನ್.

ಪಾಶ್ಚಾತ್ಯ ದೇಶದ ಎಸೆಕ್ಸ್ ಪ್ರಾಂತದಲ್ಲಿರುವ ಕೇವಲ ೧೩ ವರ್ಷ ಪ್ರಾಯದ ಮೇಬಲ್ ಪ್ರೆಸ್ಟನ್ ಎಂಬ ಬಾಲ ಕಿಯು ಈಗಾಗಲೇ ಅನೇಕ ಗ್ರಂಥಗಳನ್ನೂ ನಾಟಕ ಗಳನ್ನೂ ಬರೆದು ಸುವಿಖ್ಯಾತ ಕಾದಂಬರಿಕಾರರಲ್ಲಿ ಒಬ್ಬಳೆಂದಾಗಿ ಖ್ಯಾತಿಯನ್ನು ಪಡೆದಿರುವಳು.

ಇವಳಿಗೆ ನಾಟ್ಯವಾಡಲೂ ಚೆನ್ನಾಗಿ ಹಾಡಲೂ ಬರು ತ್ತದೆ.

ಮಧ್ಯ ಆಫ್ರಿಕಾವನ್ನು ದಾಟಿಬಂದ ಪ್ರಥಮ ಆಂಗ್ಲ ಮಹಿಳೆ

ಮಧ್ಯ ಆಫ್ರಿಕಾವನ್ನು ಕಾಲ್ನಡೆಯಿಂದಾಗಿ ದಾಟಿ ಬಂದ ಆಂಗ್ಲ ಮಹಿಳೆಯಾದ ಮಿಸೆಸ್ ಚಾರ್ಲೆಟ್ ಮ್ಯಾನ್ಸ್ ಫೀಲ್ಡ್ ಎಂಬವಳು ಲಂಡನಿನಲ್ಲಿ ೬ ತನ್ನ ವ ನೆ ಯಲ್ಲಿ ಪರಂಧಾಮವನ್ನೈದಿದಳು. ಅವಳು ಪ್ರಸಿದ್ಧ ಗ್ರಂಥಕರ್ತಳೂ ಪ್ರಯಾಣಿಕಳೂ ಆಗಿದ್ದಳು. ಅನೇಕಾ ನೇಕ ಹೊಸ ಪ್ರದೇಶಗಳಲ್ಲಿ ಸಂಚಾರಗೈದು ಅವುಗಳ ಚರಿತ್ರೆಯನ್ನು ಸವಿಸ್ತಾರವಾಗಿ ಬರೆದಿರುವಳು. ಮಧ್ಯ ಆಫ್ರಿಕಾವನ್ನು ಹೆಚ್ಚಾಗಿ ಕಾಲ್ನಡೆಯಲ್ಲಿಯೇ ಸಂಚರಿಸಿ ದಳು. ಇವಳಿಗೆ ಈ ದೇಶವನ್ನು ಸಂಚರಿಸುವಾಗ ಮಿ ಸ್ಟಿಲ್ ರೋಡ್ಸ್ ಎಂಬವರ ಚಿತ್ರಪಟವು [illegible] ಸಹಾಯವನ್ನಿತ್ತಿದೆ. ಅಲ್ಲಿಯ ಅನಾಗರಿಕರು ಇವ ಳಿಗೆ ತುಂಬ ಸಹಾಯವನ್ನಿತ್ತಿದ್ದರು. ವಾರಗಟ್ಟಲೆ ನ ಡೆಯುತ್ತಿರುವಾಗ್ಗೆ ಅನೇಕಾನೇಕ ಕಷ್ಟಗಳು ಬಂದಾಗ್ಗ್ಯೂ

ಅವುಗಳನ್ನೆಲ್ಲಾ ಸಹಿಸಿ ಮುಂದೊತ್ತಿದ್ದಳು. ಪರ್ಯಟನದ ಚರಿತ್ರೆಯನ್ನು ಸವಿಸ್ತಾರವಾಗಿ ೧ ಪುಸ್ತಕದಲ್ಲಿ ಬರೆದಿಟ್ಟಿರುವಳು.

ದಕ್ಷಿಣ ಆಫ್ರಿಕದಲ್ಲಿರುವಾಗಲೇ ಇವಳಿಗೆ ಕ. ಡಬ್ಲ್ಯು ಆರ್ ಮೆನ್ಸ್‌ಫೀಲ್ಡ್‌ರ ಭೇಟಿಯಾಯಿತು. ಕಡೆಗೆ ಅವರನ್ನೆ ಅವಳು ಲಂಡನಿನಲ್ಲಿ ಮದುವೆಯಾ ದಳು. ಇವರು ಪ್ರಸಿದ್ಧ ಇಂಜಿನಿಯರಾಗಿದ್ದರು. ಮದುವೆಯಾದ ನಂತರ ಪತಿಪತಿಗಳಿಬ್ಬರೂ ದಕ್ಷಿಣ ಆಫ್ರಿಕಕ್ಕೆ ಬಂದು ವಾಸಿಸತೊಡಗಿದರು. ೧೯೩೭ರಲ್ಲಿ ಪುನಃ ತನ್ನ ಪತಿಯೊಡನೆ ಸ್ವಿಸ್ ದೇಶಕ್ಕೆ ತೆರಳಿ ತಾನು ನೋಡಿದ ಹೊಸ ವಿಷಯಗಳನ್ನೆಲ್ಲಾ ಅವರಿಗೂ ತಿಳಿಸಿ ದಳು. ಕಟ್ಟಕಡೆಗೆ ಅವಿಶ್ರಾಂತವಾಗಿ ಕೆಲಸಮಾಡಿದ್ದ ರಿಂದ ಆಸ್ಪತ್ರೆಯಲ್ಲಿ ಬಿದ್ದು ಇಹಲೋಕವನ್ನು ತ್ಯಜಿ ಸಿದಳು.

ಭೀಕರ ಅತ್ಯಾಚಾರ.

ಕಾಪೂರ ಎಂಬಾತನು ರಂಗನಾಯಕಿ ಎಂಬ ಅವಿ ವಾಹಿತೆಯನ್ನು ಕದ್ದುಕೊಂಡು ಹೋಗಿ ಅತ್ಯಾಚಾರ ನಡೆಸಿದನೆಂದು ಆದ ಮೊಕದ್ದಮೆಯಲ್ಲಿ ಕಾಪೂರನಿಗೆ ನಾಲ್ಕು ತಿಂಗಳ ಕಠಿಣ ಶಿಕ್ಷೆ ಮತ್ತು ರೂ ೧೫೦ಗಳ ದಂಡ. ದಂಡಕೊಡಲು ತಪ್ಪಿದರೆ ಮತ್ತೆ ನಾಲ್ಕು ತಿಂಗಳ ಶಿಕ್ಷೆ ವಿಧಿಸಲಾಗಿದೆ.

ಇಟೇಲಿಯಲ್ಲಿ ಕೋಲಾಹಲ

ಆಂಗ್ಲೇಯ ವೃತ್ತಪತ್ರಿಕೆಗಳಲ್ಲಿ ಈ ವಿಚಿತ್ರ ಸುದ್ದಿ ಯನ್ನು ಪ್ರಕಟಿಸಿದ್ದಾರೆ. ಅದು ನಿಜವೇ ಎಂದು ಸಂಶಯಬಂದರೂ ಮಾತ್ರ ನೋಡುವ ಮುಂದೆ ಯಾವ ಸರ್ವಾಧಿಕಾರವೂ ನಡೆಯಲಾರದೆಂದು ಸ್ಪಷ್ಟವಾಗಿದೆ.

ಇಟೇಲಿಯ ರಾಜಧಾನಿಯಾದ ರೋಮಿನಲ್ಲಿಯೂ ಇತರ ಮುಖ್ಯ ನಗರಗಳಲ್ಲಿಯೂ ಇಟೇಲಿಯ ಹೆಂಗ ಸರ ಪ್ರತಿಭಟನಾ ಮೆರವಣಿಗೆಗಳನ್ನು ನಡೆಸುತ್ತಿದ್ದಾರೆ. ತಾನು ಎಂದೆ ತಮ್ಮ ಗಂಡಂದಿರನ್ನು ಯುದ್ಧಕ್ಕೆ ಹೊರಡಿಸಲೆಂದು ಸಂಕಲ್ಪ ಅವರು ರಣಗೀತೆಗಳ ಘೋಷಣೆಯೊಂದಿಗೆ ಹ ರತ್ತಿದ್ದಾರೆ. ಪೋಲೀಸ ಕಷ್ಟಕರವಾಗಿ ದಂಡಿಸಿದರೂ ಹೆಂಗಸರ ಜಗಳ

ಆಂಗ್ಲದೇಶದ ಸ್ತ್ರೀಯರ ಅಬ್ಬರ

ಹೆಂಗಸರು ಪುರುಷರಂತೆ ತಮಗೆ ಸಿಕ್ಕಬೇಕಾದ ಇತ್ತ ಉದ್ಯೋಗಗಳಿಗೂ ಕಲ್ಲೋಲವೆಬ್ಬಿಸಿದೆ ಎಂದು ಗಂಡ ಸರು ದೂರುತ್ತಿದ್ದ ವರದಿ ಲಂಡನಿನಲ್ಲಿ ಹೆಂಗಸರು ತ ತ್ತ ವರ್ತನೆಗೆ ಹೆಂಗಸರು ಮಾಡುತ್ತಿರುವ ! ಗಳಿಗೂ ಸ್ಥಿತಿ ಹಾಳಿ ಸಿಕ್ಕಿದರೂ ಲಕ್ಷಿಸದ ಬ ಕ ಬೆಳಕಿನ [illegible] ತವ್ಯ ಒ ಗೆ ವ ಹಾಕುತ್ತಿದ್ದರೆಂದು ಆಂಗ್ಲ ಸ್ತ್ರೀಯರು ಅಬ್ಬರ ದಕ್ಕೆ ಪ್ರತಿಭಟನಾ [illegible] [illegible] ದಲ್ಲಿಯೇ ಅವರ ಕೊಂದಿಲ್ಲ. ಆಂಗ್ಲ [illegible] [illegible] [illegible] [illegible] [illegible] ಕಾಯ ಗಳಿಗೆ ಗಂಡಸರ ಅ ಲಿಖಿತವಾಗಿ ಮಾಡಬೇ ಪ್ರಚಂಡ ಚಳವಳಿಯನ್ನು ನಡೆಸುತ್ತಿದ್ದಾರಂತೆ.

ಗೆಳತಿಗೆ

ಶ್ರೀ ಬಡಕಿಲ ಕೃಷ್ಣಭಟ್ ಮಂಗಳೂರು

ಎನ್ನ ಬಾಳುವೆಯ ನಡ ಹಗಲಲ್ಲಿ ಮೂಡಿದಾ ಜ್ಯೋತಿ
ಬಾಲೆ ಓ ಎನ್ನ ಜೀವನದ ತುತ ಸೂತ್ರ
ಅಧ್ವದಾರಿಯೊಳಾನು ಅಡಿಯಿಡುತಿರಲು ನಚ್ಚಿನ ಗೆಳತಿ
ನೀ ಮನದಿಬೇಸರವಾಂತು, ಉಪದೇಶವಿತ್ತೆ.
ಕೈಪಿಡಿದ ಕರಕೊಂಡ ಮುದಿತ್ತಿದಾ ತಾರೆ!
ಎನ್ನ ಮನದ ದುಗುಡಂಗಳಂ ತಣಿಸಿದವಳೇ!
ಜೀವನದ ತೊರೆಯಲ್ಲಿ ಮುಂದುಗಾಣದೆ ಬಿದ್ದ
ಎನ್ನನುಳಿಸಲು ಬಂದ ನವನೌಕೆ ಎಲ್ಲಿ ಪೋದೇ?
ಮನ ಸೆಳೆಯುವಾ ವೈಸಿರಿಯೆಲ್ಲಿ ಪೋಯಿತ್ತು?
ಮೊಗದಲ್ಲಿ ಮಿರುಗುವೆಳನಗೆ ಏನಾಯ್ತು?
ಬಟ್ಟೆ ತೋರುವ ಎನ್ನ ಸೊಡರೆಲ್ಲಿಗೋಯಿತ್ತು?
ಹಾ! ನಿರಿಯೊಡಗೂಡಿನಲಿವಾಸೆ ನೀರಾಯ್ತು.
ಕಸಿದೆಯಾ ದೇವ, ಬಾಳುವೆಯ ಹುತ್ತನ್ನು?
ಎಲ್ಲಿರುವೆ ಗೆಳತಿ? ಮುಳಿದರಸಲೆಲ್ಲಿ ನಿನ್ನಾ?

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು — ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ – (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ – (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ – (ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ – (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ – (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ – (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.



Distributors for South Kanara —

Rghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು: — ಕಾಮತ್ಸ್ ಸ್ವದೇಶೀ ಎಂಪೋರಿಯಂ

ಕಾಫಿ ಎಸ್ಟೇಟುಗಳಿಗೆ

ಬೇಕಾಗಿರುವ

ಚಕ್ ರೋಲು,

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆಗೆ

ಬರೆಯಿರಿ,

ಅಥವಾ

ಬನ್ನಿರಿ

ತಯಾರಾಗಿದೆ!

ಗೌ. ಹಾ. ಎ ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೋಸಿಯೊಲೊಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ ರೂ 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ. ಇದನ್ನು ಗವರ್ನಮೆಂಟ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗಲಿದೆ

ಇಲ್ಲಿಗೆ ಕೂಡಲೇ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ. — ಅಜ್ಜಿ ಕಥೆಗಳು (ಸಚಿತ್ರ.)

ಚರಿತ್ರೆ ಮತ್ತು ಕಥೆಗಳು.	ರೂ	ಆ.	ಪೈ.	ಸಾಮಾನ್ಯ ವಿಜ್ಞಾನ.				ಮೂರು ಕರಡಿಗಳು
				ಎರಡನೇ ದರ್ಜೆ	0	8	0	ಹೇನು ಸತ್ತು ಕಾಗೆ ಒಡವಾಯಿತು.
ನಾಲ್ಕನೇ ದರ್ಜೆ	0	6	0	ಮೂರನೇ ,,	0	3	0	ಮೆಣಸಿನ ಕಾಳಪ್ಪ
ಮೂರನೇ ,,	0	4	6	ನಾಲ್ಕನೇ ,,	0	6	0	ಅರ್ಗಳೆ ಮುದ್ದೆ
ಎರಡನೇ ,,	0	4	0	ಐದನೇ ,,	0	5	0	ಇಲಿಗಳ ಧರ್ಮ ಧ್ವೆ.
ಸಮಾಜಶಾಸ್ತ್ರ.								ಅಂಗಳ ದುಗ್ಗ
ಐದನೇ ದರ್ಜೆ	0	3	0					ಗುಡುಗುಡು ಗುಮ್ಮಟ ದೇವರು.
ನಾಲ್ಕನೇ ,,	0	3	0	ಆರನೇ ದರ್ಜೆ	0	4	0	ಒಡ್ಡನ ಓಟ.
ಮೂರನೇ ,,	0	2	6	ಏಳನೇ ,,	0	5	0	
				ಎಂಟನೇ ,,	0	6	0	(ಇವುಗಳ ಕ್ರಯ: 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೊಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ' ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ರೈಲು ಬಂಡಿಗಳ ಸಮಯ

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9-50	ಸಂಜೆ 4-20
ಮಿಕ್ಸೆಡ್	,, 5-55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12-45	ಮ. 2-40
ಶಟಲ್	ಸಂಜೆ 5-25	ಬೆಳಗ್ಗೆ 9-25
ಕಾಂಞಂಗಾಡ್		
ಪೆಸೆಂಜರು	ಬೆ. 8-25	ಮ. 1-20
ಕಾಸರಗೋಡು		
ಪೆಸೆಂಜರು	ಸಂಜೆ 3.20	ಸಂಜೆ 6-15

! ನಿಮಗೆ ತಿಳಿದಿರುವುದೇ? ?

ಜಗತ್ತಿನ ಶ್ರೇಷ್ಠವಾದ ಜ್ವಾಲಾಮುಖಿಗಳು

ವಿಸೂವಿಯಸ್, ಇಟೇಲಿಯ ನೇಪಲ್ಸ್ ಕೊಳ್ಳಿಯ ಹತ್ತಿರ; ಎಟ್ನಾ, ಸಿಸಿಲಿಯಲ್ಲಿ; ಸ್ಟ್ರಾಂಬೋಲಿ ಅಫಾರಿ ದ್ವೀಪಗಳಲ್ಲಿ; ಹೆಕ್ಲಾ ಮತ್ತು ಸ್ಕೆಹಾರ್ ಐಸ್‍ಲೆಂಡಿನಲ್ಲಿ; ಪೊಪೊಕಟಿ ಪೆಟ್ಲ್, ಮೆಕ್ಸಿಕೊದಲ್ಲಿ; ಕೊಟೊಪಾಕ್ಸಿ, ಇಕ್ವಿಡರದಲ್ಲಿ; ಮೊಂಟಪೇಲಿ ಮತ್ತು ಲಾಸಾಪ್ರೆ, ವೆಸ್ಟ್ ಇಂಡಿಸ್‍ನಲ್ಲಿ; ಕಿಲಾಯುವೆ, ಹವೈಯಲ್ಲಿ; ಮತ್ತು ಇರಿಬಸ್ಸ್, ಎಂಟಾರ್ಕಟಿಕ್‍ನಲ್ಲಿ. ವಿಸೂವಿಯಸಿನಿಂದ ಕ್ರಿ. ಶ. ೭೯ರಲ್ಲಿ ಎರಡು ಪ್ರಖ್ಯಾತ ಪಟ್ಟಣಗಳು ನಾಶವಾಗಿವೆ. ನಂತರ ಈ ಜ್ವಾಲಾಮುಖಿ ಅನೇಕ ಭಾರಿ ಕಾಣಿಸಿಕೊಂಡಿದೆ. ಈಗ ಇದರ ತಲೆಯಲ್ಲಿ ಅರಣ್ಯ ಬೆಳೆದಿರುತ್ತದೆ. ಎಟ್ನಾವು ಅನೇಕ ಲಾವಾದ ನದಿಗಳನ್ನು ಕಳುಹಿಸಿಯದೆ. ಮೊಂಟಪೇಲಿಯು ೧೯೦೨ರಲ್ಲಿ ಬರೀ ಕೆಲವು ನಿಮಿಷಗಳಲ್ಲಿ ೪೦,೦೦೦ ನಿವಾಸಿಕರನ್ನು ಆಹುತಿಯಾಗಿ ತೆಗೆದುಕೊಂಡಿದೆ. ಕೋಟೋಪಾಕ್ಸಿ, ಜಗತ್ತಿನಲ್ಲಿ ಬಹಳ ಎತ್ತರವಾದ ಜ್ವಾಲಾಮುಖಿಯು. (೧೯೯೧೩ ಅಡಿ) ಈಗಲೂ ಜೀವದಲ್ಲಿರುತ್ತದೆ. ಕಿಲಾಯುವೆ ಜ್ವಾಲಾಮುಖಿಯ ಬಾಯಿಯು ೮-೧೦ ಮೈಲು ಅಗಲವಾಗಿರುತ್ತದೆ. ಇದಕ್ಕೆ ಸುತ್ತಲೂ ೮೦೦ ಅಡಿ ಎತ್ತರ ಗೋಡೆಗಳಿವೆ. ಇವರಲ್ಲಿ ಕುದಿಯುವ ಲಾವಾದ ಸರೋವರವಿದೆ.

ಭೂಕಂಪದ ಕಾರಣಗಳೇನು?

ಭೂಗರ್ಭದಲ್ಲಿ ಬಂಡೆಗಳು ಒಡೆಯುವುದರಿಂದ ಭೂಕಂಪಗಳು ಉಂಟಾಗುತ್ತವೆ. ಅದಲ್ಲದೆ, ಒಳಗಿರುವ ಮಹತ್ತಾದ ಬಂಡೆಗಳು ಕುಸಿಯುವುದರಿಂದಲೂ ಭೂಕಂಪನಗಳಾಗುವುದುಂಟು. ಈ ಭೂಮಿಗೆ ಎರಡು ಭೂಕಂಪದ ಪ್ರದೇಶಗಳಿವೆ. ಒಂದು ಸ್ಪೈನ್, ದಕ್ಷಿಣ ಇಟೇಲಿ, ಕೊಕಸಸ್ಸ ಪರ್ವತ, ಹಿಮಾಲಯ ಪರ್ವತ ಮತ್ತು ಚೀನಾದಿಂದಾಗಿ ಹಾದು ಹೋಗುತ್ತದೆ. ಇನ್ನೊಂದು ಉತ್ತರ ಮತ್ತು ದಕ್ಷಿಣ ಅಮೆರಿಕಾ, ಜಾಪಾನು ಮತ್ತು ನ್ಯೂಜಿಲೆಂಡಿನಿಂದ ಹಾದುಹೋಗುತ್ತದೆ.

ಸೋವಿಯಟರ ಹೊಸ ಹಾದಿ

ತಮ್ಮ ಪಾಶ್ಚಿಮಾತ್ಯ ಬಂಧುಗಳೊಡನೆ ಪೌರ್ವಾತ್ಯದ ವ್ಯಾಪಾರವು ಸಾಂಗವಾಗಿ ನಡೆಯುವಂತೆ (ಜಾಪಾನೀಯ ತಡೆಗಳಿಲ್ಲದ) ಒಂದು ಹೊಸ ಹಾದಿಯನ್ನು ಸೋವಿಯಟ್ ರಷ್ಯಾದವರು ಹುಡುಕಿರುವರು. ಈ ಹಾದಿಯು ಹಿಮಗಟ್ಟಿದ ಸಮುದ್ರದಿಂದ ಹಾದು ಹೋಗುತ್ತದೆ. ಸಾಧಾರಣ ೮೦೦೦ ಮೈಲು ಹಿಮಗಟ್ಟಿದ ಆರ್ಕಟಿಕ್ ಸಾಗರವನ್ನು ದಾಟಬೇಕಾಗುವುದು. ಆದರೆ, ಇದೊಂದು ಸುಲಭತರದ ಉಪಾಯವಾದರೂ ಹಿಮಗಟ್ಟುಗಳನ್ನು ದಾಟಲು ಇವರಿಗೆ ಅತಿರೇಕವಾದ ಖರ್ಚು ತಗಲುವುದು. ಸಾಮಾನು ತುಂಬಿದ ಆರು ವ್ಯಾಪಾರ ನೌಕೆಗಳು ಬೇಗನೇ ಈ ಹಾದಿಯಾಗಿ ಹೋಗಲಿವೆ ಎಂದು ತಿಳಿದುಬರುತ್ತದೆ. ಆದರೆ, ಇವುಗಳು ಸುರಕ್ಷಿತವಾಗಿ ಆ ಹಿಮಗಟ್ಟಿದ ಸಾಗರವನ್ನು ದಾಟುವುದರಲ್ಲಿ ತುಂಬಾ ಸಂದೇಹಗಳಿವೆ.

ಇಂಗ್ಲೆಂಡಿನ ತೇಮ್ಸ ನದಿಯ ಸುರಂಗ

ಇಂಗ್ಲೆಂಡಿನಲ್ಲಿ ೩,೦೦೦,೦೦೦ ಪೌಂಡು ವೆಚ್ಚ ಮಾಡಿ, ೧ ಮೈಲಿಗೆ ಹೆಚ್ಚಾಗಿ ಉದ್ದವಿರುವ ೨೦ ಅಡಿ ವ್ಯಾಸವುಳ್ಳ ಒಂದು ಸುರಂಗವನ್ನು ಅಲ್ಲಿನ ಎರಡು ಪಟ್ಟಣಗಳನ್ನು ರೈಲ್ವೆಯ ಮೂಲಕ ಜೋಡಿಸಲು ತೋಡುವರಾಗಿ ತಿಳಿದುಬರುತ್ತದೆ. ಈ ಸುರಂಗವು ಅಲ್ಲಿನ ತೇಮ್ಸ ನದಿಯ ಅಡಿಯಿಂದ ಹಾದುಹೋಗುವುದು. ಇದೊಂದು ಇಂಜಿನಿಯರಿಂಗಿನ ಸಾಹಸವೆನ್ನಬಹುದು. ಈ ಸುರಂಗದಲ್ಲಿ ಬೇಕಾದ ಗಾಳಿಯನ್ನು ಹೊರಗಿನಿಂದ ಒದಗಿಸುತ್ತಿರುವರಂತೆ.

ಜಗತ್ತಿನ ಪ್ರಖ್ಯಾತವಾದ ನದಿ

ದಕ್ಷಿಣ ಅಮೇರಿಕದ ಎಮೊರ್ಝೋನ್ ನದಿಯು ಜಗತ್ತಿನಲ್ಲಿ ಅತೀ ಶ್ರೇಷ್ಠವಾದುದು. ಈ ನದಿಯು ದಕ್ಷಿಣ ಅಮೇರಿಕಾ ಖಂಡದ ೨,೭೦೦,೦೦೦ ಚದರಮೈಲು ವಿಸ್ತೀರ್ಣದ ಪ್ರದೇಶಕ್ಕೆ ನೀರನ್ನು ಒದಗಿಸುತ್ತದೆ. (ಬ್ರೆಜಿಲ್, ಬೊಲೀವಿಯಾ, ಇಕ್ವೇಡರ್, ಪೇರು ಮತ್ತು ಕೊಲೆಂಬಿಯಾ) ಇದರ ಉದ್ದ ೪೦೦೦ ಮೈಲುಗಳು. ಮಿಸ್ಸಿಸಿಪ್ಪಿ ಮತ್ತು ಮಿಸ್ಸೋರಿಗಳನ್ನು ಒಟ್ಟುಮಾಡಿದರೆ ಇವುಗಳ ಉದ್ದವು ೪೨೦೦ ಮೈಲುಗಳಾಗುತ್ತದೆ. ಆದರೆ, ಈ ನದಿಯಿಂದ ಧಾರಾಳ ನೀರು ಸಮುದ್ರಕ್ಕೆ ಸೇರುತ್ತದೆ. ಅಟ್ಲಾಂಟಿಕ್ ಸಾಗರಕ್ಕೆ ಸೇರುವಲ್ಲಿ ಇದರ ಬಾಯಿಯು ೨೦೦ ಮೈಲು ಅಗಲವಾಗಿರುತ್ತದೆ. ಈ ನದಿಯಿಂದ ಧಾರಾಳ ನೀರು ಸಾಗರಕ್ಕೆ ಸೇರುವುದರಿಂದ ಅಟ್ಲಾಂತಿಕ್ ಸಾಗರದಲ್ಲಿ ಈ ಭಾಗದಲ್ಲಿ ದಡದಿಂದ ೧೫೦ ಮೈಲುಗಳವರೆಗೆ ಉಪ್ಪಾರವು ಬಹಳ ಕಡಿಮೆಯಾಗಿರುತ್ತದೆ. ಸಾಗರಗಳನ್ನು ಚಲಿಸುವ ಅತೀ ದೊಡ್ಡ ನೌಕೆಗಳು ಈ ನದಿಯಲ್ಲಿ ಇದರ ಬಾಯಿಯಿಂದ ಸಾಧಾರಣ ೧೦೦೦ ಮೈಲುಗಳ ತನಕ ಚಲಿಸಬಲ್ಲವು. ಸಾಧಾರಣದ ನೌಕೆಗಳು ಸಾಧಾರಣ ೨೫೦೦ ಮೈಲು ಹೋಗಬಲ್ಲವು. ಈ ನದಿಯು ತಾನು ಹಾದುಹೋಗುತ್ತಿರುವ ಪ್ರದೇಶದ ವ್ಯಾಪಾರಕ್ಕೆ ಬಹಳ ಅನುಕೂಲವಾಗಿರುತ್ತದೆ.

ಪ್ರಕೃತಿಯು ಇಂಗ್ಲೆಂಡಿನ ಮಹತ್ವಿಕೆಗೆ ಹೇಗೆ ಕಾರಣವಾಯಿತು?

ಪ್ರಕೃತಿಯಿಂದ ಇಂಗ್ಲೆಂಡಿಗೆ ಉದ್ದವಾದ ಕರಾವಳಿಯ ಗಡಿಯು ಸಿಕ್ಕಿರುತ್ತದೆ. ಇದರ ಪ್ರಮಾಣವು ಸುಮಾರು ೫೦೦೦ ಮೈಲುಗಳಾಗಿರುತ್ತವೆ. ನೌಕೆಗಳು ಒಳಸೇರಲು ಇಲ್ಲಲ್ಲಿ ಅನೇಕ ಒಡಕುಗಳಿವೆ. ಇಂಗ್ಲೆಂಡಿನ ಒಟ್ಟು ಪ್ರಮಾಣವು ೫೦೦೦ ಮೈಲುಗಳಿಲ್ಲದಿದ್ದರೂ ಒಬ್ಬನು ಕಾಲ್ನಡೆಯಿಂದ ಕರಾವಳಿಯನ್ನು ಸಂಚರಿಸುವುದಾದರೆ ಈತನು ೫೦೦೦ ಮೈಲು ನಡೆಯಬೇಕಾಗುವುದು. ಇದರ ದೆಸೆಯಿಂದ ನೌಕಾ ರಚನಾ ಕೇಂದ್ರಗಳನ್ನು ಮಾಡಲು ಆ ದೇಶವು ಯೋಗ್ಯವೆನಿಸಿತು.

ಸಮುದ್ರದಲ್ಲಿ ಉಪ್ಪಾಗಲು ಕಾರಣವೇನು? ಸಮುದ್ರದಲ್ಲಿ ಎಷ್ಟು ಉಪ್ಪಿದೆ?

ಸಮುದ್ರದ ನೀರು ಉಪ್ಪಾಗಲು ಕಾರಣ ಅದಕ್ಕೆ ಸೇರುವ ನದಿಗಳಿಂದ. ಈ ನದಿಗಳು ಭೂಮಿಯ ಮೇಲಿಂದ ಹರಿದುಕೊಂಡು ಬರುತ್ತಿರುವಾಗ ಅನೇಕ ಲವಣಗಳನ್ನು ಕರಗಿಸಿ ಬರುತ್ತವೆ. ಸೂರ್ಯನ ಬಿಸಿಲಿಗೆ ಸಮುದ್ರದ ನೀರು ಆವಿಯಾಗಲು ಸಮುದ್ರದ ಉಪ್ಪಿನಂಶವು ಅಧಿಕವಾಗುತ್ತದೆ. ಸಮುದ್ರದ ಪ್ರತಿಯೊಂದು ಗೆಲನ್ ನೀರಿನಲ್ಲಿ ೪ ಔನ್ಸು ಉಪ್ಪಿರುತ್ತದೆ. ಸಮುದ್ರದಿಂದ ಎಲ್ಲಾ ಉಪ್ಪು ತೆಗೆಯುವುದಾದರೆ ಅದನ್ನು ಶೇಖರಿಸಿ ಇಡಲು ೫,೦೦೦,೦೦೦ ಕ್ಯೂಬಿಕ್ ಮೈಲುಗಳ ಪ್ರಮಾಣವಿರುವ ಉಗ್ರಾಣ ಬೇಕಾಗುವುದು.

ನಿಷೇಧಿಸಲ್ಪಟ್ಟ ಪ್ರದೇಶವು!

ಆಸ್ಯಾ ಖಂಡದ ಟಿಬೇಟ ನಾಟ ಪ್ರದೇಶವು (ಹಿಂದೂ ದೇಶದ ಮೇಲಿರುವ) ಬಹೀರ್ ಜನರಿಗೆ ನಿಷೇಧಿಸಲ್ಪಟ್ಟ ಊರಾಗಿತ್ತು. ೧೯೦೪ರ ವರೆಗೆ ಎಂದರೆ, ಬ್ರಿಟಿಷ್ ಮಿಲಿಟರಿ ಸಾಹಸ ಮಂಡಳಿವು ಅದನ್ನು ಸೇರುವ ವರೇಗೆ ಆ ದೇಶದ ಅಂತರ್ಭಾಗವು ಯಾರಿಗೂ ತಿಳಿದಿರಲಿಲ್ಲ. ಇದರ ಮುಖ್ಯ ಪಟ್ಟಣವಾದ ಲ್ಹಾಸಾದ ಮೇಲೆ ದೃಷ್ಟಿ ಹಾಕಲು ಒಬ್ಬನೇ ಒಬ್ಬ ಆಂಗ್ಲೇಯ ಪುರುಷನಿಗೆ (ತೊಮಸ್ ಮೆನಿಂಗ್) ಮಾತ್ರ ಸಾಧ್ಯವಾಯಿತು. ಇಲ್ಲಿ ಬೌದ್ಧ ಮತಾವಲಂಬಿಗಳ ಪೋಪ್ ಸಾಹೇಬರಾದ ದಾಲೈಲಾಮರು ವಾಸವಾಗಿರುವರು. ಇದು ಅತ್ಯಂತ ಸೌಂದರ್ಯಮಯ ಮತ್ತು ಅದ್ಭುತಕರ ಕಟ್ಟಡವಾಗಿರುತ್ತದೆ. ಹಿಂದೂಗಳಿಗೆ ಕಾಶಿಯು ಹೇಗೋ, ಮುಸ್ಲಿಮರಿಗೆ ಮಕ್ಕವು ಹೇಗೋ ಹಾಗೆಯೇ ಬೌದ್ಧಿಗಳಿಗೆ ಲ್ಹಾಸವು.

ಪ್ರಪಂಚದ ಪ್ರಚಂಡ ಜಲಪಾತಗಳು

ವಿಕ್ಟೋರಿಯಾ ಜಲಪಾತ, ಜೆಂಬೆಜಿ ನದಿಯ ಮೇಲೆ, ದಕ್ಷಿಣ ಆಫ್ರಿಕದಲ್ಲಿ; ನ್ಯಾಗಾರಾ ಜಲಪಾತ, ಕೈಯೆಟೂರ್ ಜಲಪಾತ, ಪೊಟಾರೊ ನದಿಯ ಮೇಲೆ ಬ್ರಿಟಿಷ ಗಿನಿಯಾದಲ್ಲಿ; ಗೊಯ್ಮ್ಯಾರಾ ಜಲಪಾತ, ಬ್ರೆಜಿಲಿನ (ದಕ್ಷಿಣ ಅಮೇರಿಕದ) ಪರನಾ ನದಿಯ ಮೇಲೆ, ಇಗೌಸೊ (ಪರನಾ ನದಿಯ ಶಾಖೆಯ ಮೇಲೆ), ಲ್ಯಾಬ್ರಡೋರಿನ ಪ್ರಚಂಡ ಜಲಪಾತ ಹೆಮಿಲ್ಟನ್ ನದಿಯ ಮೇಲೆ, ಗೆರೆಸೊಪ್ಪಾ ಜಲಪಾತ (ಮೈಸೂರಿನಲ್ಲಿ) ಇದರಲ್ಲಿ ಗೆರೆಸೊಪ್ಪಾ ಜಲಪಾತವು ಬಹಳ ಎತ್ತರವಾದುದು. (೮೩೦ ಅಡಿ) ಗೊಯ್ಮ್ಯಾರಾ ಜಲಪಾತದಲ್ಲಿ ಹರಿಯುವಷ್ಟು ನೀರು ಬೇರೆ ಎಲ್ಲಿಯೂ ಹರಿಯುವುದಿಲ್ಲ. ಹೀಗೆ ಅನೇಕ ಜಲಪಾತಗಳು ಸಂಯುಕ್ತ ಅಮೇರಿಕದಲ್ಲಿವೆ. ಈ ಜಲಪಾತಗಳಿಂದ ಈಗಿನ ಕೈಗಾರ ಯುಗಕ್ಕೆ ಧಾರಾಳ ವಿದ್ಯುತ್ ಚಕ್ತಿಯು ಒದಗಿರುತ್ತದೆ.

ಸ್ಕೊಟ್‍ಲೆಂಡಿನಲ್ಲಿ ಬೆಂಕಿಯ ಆರಾಧನೆ.

ಅನಿಷ್ಟಗಳಿಂದ ಹೊರಗಾಗಲು, ಬೆಂಕಿಯ ಆರಾಧನೆ ಮಾಡುವುದು ಸ್ಕೊಟ್‍ಲೆಂಡಿನ ಒಂದು ಹಳ್ಳಿಯಲ್ಲಿನ ಕ್ರಮವಾಗಿರುತ್ತದೆ. ಒಂದು ಪೀಪವನ್ನು ಎರಡು ಸೀಳಾಗಿ ಮಾಡಿ, ಅದನ್ನು ಒಂದು ಕೋಲಿನ ಮೇಲಿರಿಸಿ, ಅದರಲ್ಲಿ ಕಲ್ಲಿದ್ದಲು ಹಾಕಿ ಬೆಂಕಿ ಉರಿಸಿ, ಮಾರ್ಗಗಳಿಂದ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುವರು. ಅಲ್ಲಲ್ಲಿ ಮನೆಗಳ ಬಾಗಿಲುಗಳನ್ನು ವಿಶಾಲವಾಗಿ ತೆರೆದಿಡುವರು. ಉರಿಯುವ ಆ ಬೆಂಕಿಯಿಂದ ಕೆಂಡಗಳು ತಮ್ಮ ಮನೆಯೊಳಗೆ ಬಿದ್ದು, ತಮಗೆ ಒಳ್ಳೆ ಅದೃಷ್ಟವು ಸಿಕ್ಕುವಂತೆ. ಕೊನೆಗೆ ಒಂದು ಗುಡ್ಡೆಯನ್ನು ಸೇರಿ, ಅಲ್ಲಿ ಅದನ್ನು ಒಂದು ಪೀಠದ ಮೇಲೆ ಇರಿಸಿ, ಇನ್ನೂ ಹೆಚ್ಚಿನ ಕಲ್ಲಿದ್ದಲು ಸೇರಿಸಿ, ಬೆಂಕಿಗೆ ದೊಡ್ಡದಾಗಿ ಮಾಡಿ, ಹಲವರು ಇದರ ಸುತ್ತಲೂ ಸೇರಿ, ಪುಣ್ಯವಿರುವ ಇದರ ಕೆಂಡಗಳನ್ನು ಒದಗಿಸಿಕೊಳ್ಳುವ ಆತುರದಲ್ಲಿ ತಮ್ಮ ಕೈಬೆರಳುಗಳನ್ನು ಸುಟ್ಟುಕೊಳ್ಳುವರು. ಇವುಗಳಿಂದ ಅವರ ಅದೃಷ್ಟವು ಒಳ್ಳೇದಾಗುವುದೆಂದು ಅವರ ನಂಬುಗೆ. ಈ ಆರಾಧನೆಯನ್ನು ನಡೆಯಿಸಲು ಪೂಜಾರಿಗಳಿರುವರು.

ಫ್ರಾನ್ಸಿನಲ್ಲಿ ಅಫೀಮಿನ ಹಾವಳಿ

ಫ್ರಾನ್ಸಿನಲ್ಲಿ ಅಫೀಮನ್ನು ಗುಪ್ತವಾದ ರೀತಿಯಲ್ಲಿ ಮಾರಾಟ ಮಾಡುವ ಅನೇಕ ಮನೆಗಳು ಸರಕಾರದ ಗೋಚರಕ್ಕೆ ಬಂದಿವೆ. ಅಲ್ಲಿನ ನಾಂಟಿಸ್ ಎಂಬ ನಗರದಲ್ಲಿ ಈ ತರದ ಅನೇಕ ಮನೆಗಳನ್ನು ಪೋಲಿಸರು ಹಿಡಿದಿರುವರು. ಇವುಗಳಲ್ಲಿ ಸಿಕ್ಕಲೂ ವೈಭವದ ಮೋಟಾರು ವಾಹನಗಳು ತಂಡ ತಂಡವಾಗಿ ಬರುತ್ತಿರುವ ಒಂದು ದೊಡ್ಡ ಮಂದಿರವು ಕೂಡಿರುತ್ತವೆ. ಅನೇಕ ಪುರುಷರನ್ನೂ ಸ್ತ್ರೀಯರನ್ನೂ ಸೆರೆಹಿಡಿದಿರುತ್ತಾರೆ. ಅಫೀಮನ್ನು ಸೇದಿ ಉಪಯೋಗ ಮಾಡುತ್ತಿದ್ದಾರಂತೆ. ಇಲ್ಲಿನ ಈ ಅಫೀಮಿನ ಸಂಸ್ಥೆಗೆ ಅಲ್ಲಿನ ಇತರ ಮುಖ್ಯ ನಗರಗಳೊಡನೆ (ಪೇರಿಸ್ ಇತ್ಯಾದಿ) ಸಂಬಂಧವಿರಬಹುದೆಂದು ಊಹಿಸಲಾಗಿದೆ. ಒಂದು ಅನಾಮಧೇಯ ಪತ್ರವು ಈ ಶೋಧನೆಗೆ ಕಾರಣವಂತೆ. ಧಾರಾಳ ಜನರು ಅಫೀಮಿನ ಹಾವಳಿಗೆ ತುತ್ತಾಗಿರುವರೆಂದು ತಿಳಿದುಬರುತ್ತದೆ. ಈ ಅನಿಷ್ಟವನ್ನು ಹೋಗಲಾಡಿಸಲು ಸರಕಾರವು ಪ್ರಯತ್ನಗೊಳ್ಳುವುದೆಂದು ತಿಳಿದು ಬರುತ್ತದೆ.

ಸೆಕೆಯ ದಾಹದಿಂದ ತಪ್ತವಾದ ದೇಹಕ್ಕೆ ನಿಜವಾದ ಶಾಂತಿಯು ಇಲ್ಲಿದೆ

ಸೆಕೆಯ ದಾಹದ ಬಳಲುವಿಕೆ ಇಲ್ಲದವರಂತೆ ಅದರ ಬವಣೆಗಳು ತಿಳಿಯಲಾರವು. [ಅದರಿಂದ ಇನ್ನು ಅಷ್ಟು ಕಷ್ಟಪಡಬೇಕಾಗಿಲ್ಲ. ಸೆಕೆಯಿಂದ ಬಳಲುವ ಮಾನವರೇ ಇತ್ತ ಕಡೆ ಗಮನ ಕೊಡಿ. ನಿಮಗೆ ದಾಹವು ಉಂಟಾದ ಕೂಡಲೆ ಇರಾಸ್ಮಿಕ್ ಕಾರ್ಬೋಲಿಕ್ ಗ್ಲಿಸರಿನ್ ಸಾಬೂನಿನಿಂದ ನಿಮ್ಮ ಮೈಯನ್ನು ತಿಕ್ಕಿ ಸ್ನಾನಮಾಡಿ. ಅದರ ಅದ್ಭುತವಾದ ನೊರೆಯು ರಂಧ್ರಗಳ ಮೂಲಕ ದೇಹದೊಳಗಿಳಿದು ನಿಮಗೆ ಸುಖದಾಯಕವಾದ ತಂಪನ್ನೀಯುವುದು. ಇರಾಸ್ಮಿಕ್ ಕಾರ್ಬೋಲಿಕ್ ಸಾಬೂನಿನಲ್ಲಿ ಕಾರ್ಬೋಲಿಕ್ ದ್ರಾವಕವೂ, ಗ್ಲಿಸರಿನೂ ಸೇರಿಕೊಂಡಿವೆ. ತುರಿಸುವಿಕೆ, ಹುಳಮೇಯುವಿಕೆ ಮುಂತಾದ ಚರ್ಮವ್ಯಾಧಿಗಳಿಗೆ ಇದು ದಿವ್ಯೌಷಧ.

ಇರಾಸ್ಮಿಕ್ ಕಾರ್ಬೋಲಿಕ್ ಗ್ಲಿಸರಿನ್ ಸಾಬೂನನ್ನು ತೈಲಾಭ್ಯಂಜನಕ್ಕೂ ಉಪಯೋಗಿಸಬಹುದು. ತಲೆಯ ಎಲ್ಲಾ ಕೊಳೆಯನ್ನು ನಾಶಗೈದು, ಸುಖವಾದ ನಿದ್ರೆಯನ್ನೀಯುವುದು.

ERASMIC
36% CARBOLIC GLYCERINE SOAP

X-ECG 482-403

THE ERASMIC CO. LTD., LONDON, ENGLAND

WANTED

Energetic, Active and Influential men to work as organisers and Agents on very attractive terms in areas mentioned below—

1 Mysore, Hassanand Kadur districts.
2. Coorg, South Canara, Shimoga and Chitaldrug districts.
3 Tumkur, Kolar, Mangalore and civil and Military Stations, Bangalore Cantonment

Please apply in person or by letter,

C H. SHAMBULINGAPPA,
The South Indian General Assurance Co Ltd.
1 Purnial Chatram Road, Balepet,
BANGALORE CITY

New Era Technical School.

Near Market Square, Udipi.

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ)
ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ

Join our 'Special Commercial Course' and insure against unemployment Details may be had on application to the Manager

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್

ಮಡಿಕೇರಿಗುಡ್ಡೆ, ಮಂಗಳೂರು

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ...ರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು-ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ...ತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ ಸಿಲ್ಕ್ ಶೀರೆಗಳೂ, ಸಿಲ್ಕು ಕೋಟಿಂಗುಗಳೂ ...ಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ...ಯೋಗ್ಯ ದರದಲ್ಲಿ ಒದಗಿಸಿಕೊಡಬಹುದು

...ಲ್ಲಾ ಜವಳಿ ಬೆಲೆಗೆ ಏರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ ಪವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಪೈಯವರಲ್ಲಿ ಬಂದು ನೋಡಿಕೊಳ್ಳಿರಿ

ಯಂ. ವೆಂಕಟೇಶ ರಂಗ ಪೈ, ಪ್ರೊಪ್ರೈಟರ್.

ಡಾಕ್ಟರ ವಾಮನ ಗೋಪಾಳರವರ

ಬಹಿರಾಯಿಟ್ಟ
ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೫೦ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಫ್ರೊಸ್ಫರಸ್ ಗುಳಿಗೆಗಳು
ಅಶಕ್ತರಿಗೆ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಫಾಕುರದ್ವಾರ, ಮುಂಬಾಯಿ ೩
ಸ್ಟಾಕಿಸ್ಟ ಶಾ ಕಂಪನಿ ಮಂಗಳೂರು
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ]

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು.

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು

ಡಬ್ಬಿ 1ಕ್ಕೆ ರೂ. 3—0—0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕ ರೂ 2-8-0, ½ಕ್ಕೆ ರೂ 1 5-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಫ್ಲುಯೆಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.

ಬಾಟ್ಲಿ 1ಕ್ಕೆ ರೂ. 1—8—0.

ಮೇಹ ಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8—0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—

ಡಬ್ಬಿ 1ಕ್ಕೆ ರೂ. 0-2-6. 12ಕ್ಕೆ ರೂ 1-12-0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:

1. ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಪೈ, ಪುತ್ತೂರು. 4. ವಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ESTD. 1906.

The Canara Banking Corporation Udipi Ltd.

The First Indigenous & Cosmopolitan Bank of S. K. District.

Capital. Authorised, issued & Subscribed	**Rs.**	**3,50,000**	**0**	**0**
Paid up Capital	,,	**2,81,035**	**0**	**0**
Reserves	,,	**3,64,872**	**0**	**0**

6-3-1936

Head office:—UDIPI, S K

Branches:—1 Udipi, 2 Coondapoor, 3 Car Street, Mangalore, 4 Shimoga, 5 Madras 6 Bunder Mangalore, 7 Mercara & 8 Virarajendrapet.

TO INSURE OR TO REPRESENT

CONSULT —

The Bombay Life Assurance Company Ltd.

ESTD 1908

Offers: (1) Attractive Schemes of Assurances to suit individual needs
(2) Rebate for yearly payment of premiums
(3) Additional Rebate for larger assurances
(4) Permanent Disability Benefits without extra
(5) Increased rate of Bonuses
(6) Accident Risk on a small extra payment

Attractive Rates of Commission & Bonuses to Agents

For particulars apply to any of our Offices

Kochikar Brothers Branch Secretaries

OFFICES (1) Gautam Nivas Charni Rd, Girgaum Bombay N 4 (2) P B 987 M[illegible] Road Madras (3) Visveshvarapuram Circle Bangalore City (4) H[illegible] Road Calicut (5) Car Street, Mangalore S K (6) Udipi (S India)

Regd)

ಅಮೃತಾಂಜನ

ತಲೆವೇದನೆ, ಶಿರೋವೇದನ ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯ ಗಳು, ವಾತುಕೊಳ್ಳುವುದು ಚೇಳು ವಿಷ ಮುಂತಾದ ನೋವು, ಪಕ್ಷವಾತ, ನೆಗಡಿಮ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, [illegible] ಹುಳುಕಡ್ಡಿ, ಸಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ–ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ

ಮೊದಲನೇ 5 ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, 'ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು'

ಅವರಿಗೆ ವಿಪುಲವಾದ ಸೌಕರ್ಯಗಳಿವೆ. —— ಯಥೋಚಿತವಾದ ಪುರಸ್ಕಾರಗಳಿವೆ —— ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವರ್ಷಕ್ಕೆ ಚಂದಾ 2 ರೂಪಾಯಿ.
ಬಿಡಿ ಸಂಚಿಕೆ 1 ಆಣೆ

Registered No. M.3406

ಟಪ್ಪಾಲು ಹಾಸಲು ಸೇರಿ ರೂ. 2-13-0

for Quality Snuff
H. Rama Rao and Sons
High Class Snuff Manufacturers
ASK FOR —
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in
THE BOMBAY LIFE
Kochikar Brothers

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವು ಮಂಗಳೂರಿನ ಶ್ರೀರಾಮ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಶಕ್ತ್ಯೈರ್ಮಾಗಾರ್ಹೈಸ್ತು ಕುರ್ಮಾನ ದೀವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುಃ ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥
ದೊರೆಯಲನುಪಮರತ್ನಗಳು ಸಾಗರದ ಮಥಿಸಲು ಸುರರಿಗದರಿಂ ಹರುಷವಾಯಿತೆ ಮತ್ತೆ ವಿಷ್ಯದ ಸುಡುಕ ಬರುತಿರುವ ।
ಗರಲಕವರಂಜಿದರೆ ಸುಧೆಯನು ಮರೆತು ಕ್ಷುದ್ರ ತೆರದಿ ಕುಳಿತರೆ, ತೆರಳ ಬಲ್ಲರೆ ಕೊರೆದ ಧೀರರು ನಿಶ್ಚಿತಾರ್ಥವನು ॥

ಪುಸ್ತಕ ೩೦ ಮಂಗಳೂರು ತಾ. ೨೦ನೇ ಶುಕ್ರವಾರ ಮಾರ್ಚಿ ೧೯೩೬ (20-3-'36) ಸಂಚಿಕೆ ೧೨

ಗ್ರೀನ್‌ಲೇಂಡ್ ದೇಶದ ಒಲ್ಲಾಫ್ ಸ್ವೆನ್ಸರಿನ
ಶಕ್ತಿಬಲ ಪ್ರದರ್ಶನದ ಒಂದು ದೃಶ್ಯ.

ಟೋಕಿಯೋದಲ್ಲಿ ಜುಟ್ಸು ವ್ಯಾಯಾಮ ಮಂದಿರದಲ್ಲಿ ವಿದ್ಯಾರ್ಥಿಗಳ ವ್ಯಾಯಾಮ ಪ್ರದರ್ಶನದ ಒಂದು ದೃಶ್ಯ.

ನೋಟಗಳು

...ನು, ಜಾತಿಯನ್ನೂ ತ್ಯಜಿಸಲಾರನು, ವಾ...ೀಯ ಜಯ ಬೋಧನೆ ಹಾಗೆ. ಹನುಮಾಲ...ಗ್ಗಿಯೇ ಹಂದಿಯಂತೆ ಜೀವಿಸಲೂ ಒಲ್ಲನು. ...ೋದಾವರಿ ನದಿಯ ಮೇಲಣ ಸೇತುವೆ...ಿಂದ ಅರುವತ್ತು ಅಡಿ ಆಳಕ್ಕೆ ಹಾರಿ ಮೃತ...ಾದನು.

* * *

ಅವನ ಅಂಗೀಕಿಸೆಯಲ್ಲಿ ಮತಗೆಡಿಸಿ...ೊಳ್ಳಲಾರೆ ಎಂದು ಬರೆದ ಚೀಟು ಇತ್ತು. ...ಸೆಯಲ್ಲಿ ಅಂಬೇಡ್ಕರರ ಭಾಷಣಗಳುಳ್ಳ ...ತ್ರಿಕೆಗಳ ಚೂರುಗಳು ಇದ್ದುವು. ಧರ್ಮ...ಯನಾದ ಯುವಕನು, ಆತ್ಮಗೌರವಕ್ಕಾಗಿ ...ಪ್ರಾಣತ್ಯಾಗಮಾಡಿದನು ಅಂಬೇಡ್ಕರರು ...ನಂತೆ? ಮಾಲವೀಯರೂ ಏನಂತೆ?

* * *

ಕ್ಷಣದೊಳಗಾಗಿ ಕೊಂಗ್ರೆಸ್ ವಾಲರಾಗಿ ...ಂತರ ಕೊಂಗ್ರೆಸಿನ ಹೆಸರನ್ನೇ ಮರೆತು, ತಮ್ಮ ...ಕ್ಷೀಯ 'ಜಾತಿ' ಕೆಡಿಸಿಕೊಳ್ಳುತ್ತ, ಇದೀ ...ಂಗಡದ ಗೌರವವನ್ನೆ ವಿನಾಶಗೊಳಿಸುವವರು ... ಅಸ್ಪೃಶ್ಯನಾಗಿ ಹುಟ್ಟಿದರೂ ಆತ್ಮಗೌರವ ...ಪ್ಪಾಡಿಕೊಳ್ಳುವೆನೆಂದು ಯುವಕನ ಬಲಿದಾ...ದಿಂದ ಒಂದು ಪಾಠ ಕಲಿತುಕೊಳ್ಳಲಾರರೆ?

\+ \+ \+ \+

ಸಿಂಧ ಪ್ರಾಂತ್ಯವು ಪ್ರತ್ಯೇಕವಾಗುತ್ತಿದೆ ...ಷ್ಟರಲ್ಲೇ ಹಿಂದುಗಳು ತಮಗೆ ಉಳಿಗಾಲವೇ ...ಲ್ಲ ಎನ್ನುವಷ್ಟು ಬೆದರಿರುವರು. ಸಾಮಾ...ಕ ಚಳವಳಿಕ್ಕೆ ಆರಂಭವಾಗಿದೆ. ಹಿಂದು...ಳು ಅಲ್ಲಿ 'ಮೈನೋರಿಟಿ' ಹಾಗೆಂದು ಸರಕಾ...ಕ್ಕೆ ಹತ್ತಿರವಾಗಲು ಭಕ್ತಿ ತೋರಿಸಿ, ಮುಸ್ಲಿಮ...ನ್ನು ದೂರವಿರಿಸಬೇಡಿರಿ ಎಂದೇ ಹಿಂದುಗಳ...ಯಕರೆನ್ನುತ್ತಾರೆ

* * *

ಮೆಜೊರಿಟಿ ವಂಗಡವನ್ನು ತನ್ನ ಕಡೆಗೆ ...ಲಿಸಿಕೊಂಡು, ಅವರ ಮನೋಧರ್ಮವನ್ನು ...ಎದಲಾಯಿಸುವ ಭಾರವು ಯಾವಾಗಲು ...ಮೈನೊರಿಟಿ ವಂಗಡಗಳ ಮೇಲೆ ಇದೆ ಈ ...ತತ್ವವನ್ನು ದುರಹಂಕಾರಿಗಳು ಮಾತ್ರ ಒಪ್ಪುವು...ಲ್ಲ. ಅದಕ್ಕೆ ಬರಲು, ಅಧಿಕಾರಿಗಳನ್ನು ...ಲಿಸಿಕೊಂಡು ಮೆಜೋರಿಟಿ ವಂಗಡವನ್ನು ...ಕೆಣಕುತ್ತಾರೆ ಇದರಿಂದ, ಕೊನೆಗೆ ಇವರೇ ...ಎರಡೂ ತಂಡಗಳವರು ಹಾಳಾಗಿ, ಅಧಿಕಾರಿ...ಗಳೇ ಮೇಲ್ಮೈಯಾಗುವರು

* * *

ಶಾಂತಿಸ್ಥಾಪನೆಗಾಗಿಯೆ ಪ್ರಚಂಡ ಪ್ರಯತ್ನ ಮಾಡುವವರಲ್ಲಿ ಹಿಟ್ಲರನೂ ಒಬ್ಬನು ಫ್ರೆಂಚರೊಡನೆ ಅತಿ ಮೈತ್ರಿಯಿಂದಲೇ ಇರಬೇಕೆಂದು ಅವನ ಪ್ರಯತ್ನ ತನ್ನ ಗೌರವವನ್ನು ಮಾತ್ರ ತ್ಯಜಿಸಲಾರನು ಆದಕಾರಣ ಜನಾಂಗದಲ್ಲಿ ನೂರಕ್ಕೆ 20ರಂತೆ ವಾಸವಾಗಿರುವ ಎಲ್ಲಿಕಟ್ಟಿನಲ್ಲಿ ತನ್ನ ಸೈನ್ಯ ಸಿಲ್ಲಿಸಿರುವನು ಮೂವತ್ತು ಸಾವಿರ ಸೈನಿಕರು'

× × ×

ಫ್ರೆಂಚರಲ್ಲಿ ಕೂಡಲೆ ಕೋಲಾಹಲ ಎದ್ದಿದೆ. ಅದೇ ಸಂದಿನಲ್ಲಿ ಇವರು 2-3000 ಸೈನಿಕರನ್ನು ತಂದಿರಿಸಿದ್ದಾರೆ. ಯಾವಾಗಲು ಈ ತಿಂಗಳಲ್ಲಿ ಹಾಗೆ ಅತ್ತ ಸೈನಿಕರನ್ನು ವರ್ಗಾಯಿಸುತ್ತಿದ್ದರಂತೆ,—ಹಾಗೆಯೆ ಈಗ ಹೊರತು ಹಿಟ್ಲರನ ಸೈನಿಕರಿಗೆ ವಿರುದ್ಧವಾಗಿ ಅಲ್ಲ! ಅಂತೆ.

× × ×

ಮುಸೊಲಿನಿಯ ಯುದ್ಧ ಹಡಗುಗಳು ಆಫ್ರಿಕದ ಕಡೆಗೆ ಹೋಗುತ್ತಲೆ, ಬ್ರಿಟಿಷ ಹಡಗುಗಳೂ ಅದೇ ಕಡೆಗೆ ಚಲಿಸಿದ್ದವು. ಎಂದರೆ, ಇಟಿಲಿಯ ನಾವೆಗಳಿಗೆ ಎದುರಾಗಿ ಅಲ್ಲ,— ಯಾವಾಗಲು ಆ ತಿಂಗಳಲ್ಲಿ ನಡೆಯುತ್ತಿದ್ದ ವರ್ಗಾವರ್ಗೆಯ ಕ್ರಮದಂತೆ ಮಾತ್ರ, ಎಂದು ಆಗ ತಿಳಿಸಿದ್ದರು. ಮುಂಜಾಗ್ರತೆ ಎಂದು ಇದರ ಹೆಸರು.

ಸುಖವಾದ ನಿದ್ರೆಯೇ ಸೌಖ್ಯದ ಹಾದಿ.

ಆರೋಗ್ಯದಿಂದಿರಬೇಕಾದರೆ ಸುಖವಾದ ನಿದ್ರೆಯು ಆವಶ್ಯಕ ನಿದ್ರೆಯು ಸರಿಬೀಳದಿದ್ದರೆ ಸುರಂಗವು ನೆಲವನ್ನು ಹೇಗೆ ಕೊರೆಯುತ್ತದೋ, ಹಾಗೆಯೇ ದೇಹವನ್ನು ಕ್ಷಯಿಸುತ್ತದೆ ಸುಖವಾದ ನಿದ್ರೆಯು ಬರಬೇಕಾದರೆ ಮೆದುಳಿಗೆ ತಂಪನ್ನೂ ನರಗಳಿಗೆ ಶಕ್ತಿಯನ್ನೂ ಕೊಡಬೇಕು ಇದೆಲ್ಲವೂ ಪುಷ್ಟಿಕರವಾದ ಆಹಾರದಿಂದ ಸಾಧ್ಯ ಇದಕ್ಕೆಲ್ಲಾ ಸರಿಬೀಳುವ ಆಹಾರವೆಂದರೆ ಓವಲ್ಟಿನ್ ಅದು ಮೆದುಳಿಗೆ ತಂಪನ್ನಿತ್ತು ನರಗಳಿಗೆ ಶಕ್ತಿಯನ್ನಿತ್ತು ಸುಖವಾದ ನಿದ್ರೆಯನ್ನು ಕೊಡುತ್ತದೆ ಇದನ್ನು ಸೃಷ್ಟಿಯಲ್ಲಿರುವ ಉತ್ತಮವಾದ ಪದಾರ್ಥಗಳಿಂದ ಅಂದರೆ ಬೆಳೆದ ಬಾರ್ಲಿ, ದನದ ಕೆನೆ ಹಾಲು ಮತ್ತು ಕೊಕ್ಕೋ ಇವುಗಳಿಂದ ತಯಾರಿಸಲ್ಪಟ್ಟಿರುತ್ತದೆ

ಆದರೆ ಪರಕೀಯರ ಮೋಸಕ್ಕೆ ಗುರಿಯಾಗಬೇಡಿ ನಮ್ಮ ಮಾಲು ಅತೀ ಸ್ವಚ್ಛವಾದುದು

ಓವಲ್‌ಟಿನ್

ಸುಖವಾದ ನಿದ್ರೆಯನ್ನೀಯುವುದು

OVALTINE

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ವಿಕ್ರಯಿಸಲ್ಪಡುತ್ತದೆ

ಇದು ತಯಾರಿಯಲ್ಲಿ ಹಸ್ತಸ್ಪರ್ಶಿತವಾಗಿಲ್ಲ

ಏಜೆಂಟರು—ಜೇಮ್ಸ್ ರೈಟ್ ೪೯ಎ ರಿಪನ್ ಸ್ಟ್ರೀಟ್, ಕಲ್ಕತ್ತಾ

ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ ಸಿಗುತ್ತದೆ

OV/422

ಗೋನ್ ಸಾಹೇಬರು ರಜೇ ಮೇಲೆ ತೆರಳಿದರು ನಾಲ್ಕು ತಿಂಗಳಲ್ಲಿ ನಾಲ್ಕು ವರ್ಷದ ಕಾರ್ಯಭಾರವನ್ನು ಬೋರ್ಡ್ ಆಫೀಸಿನಲ್ಲಿ ಜರುಗಿಸಿದರು ಆಫೀಸಿನಲ್ಲಿ ತುಂಬಿದ್ದ ಜೇಡರ ಬಲೆಗಳನ್ನು ಗುಡಿಸಿ, ಸ್ವಚ್ಛಂದಗೊಳಿಸಿದರು ಬೋರ್ಡು ಆಫೀಸಿನಲ್ಲಿ ಮಂಡದ ಪೂಜೆಯಾಯಿತು. ದಿವಾಳಿಯಾಗದಂತೆ ಅದನ್ನುಳಿಸಿ, ಸುಸೂತ್ರಗೊಳಿಸಿ, ಕೈವರ್ತಿಸಿಕೊಟ್ಟರು

× × ×

ದುಬಾರಿ ಜಿಲ್ಲೆಗಳನ್ನು ಆಳುವರೆ ಯೋಗ್ಯರೆಂದು ಗೋನ್ ಸಾಹೇಬರಿಗೆ ಶಿಫಾರಸು ಇದ್ದಿತಾಗಿ ಕೇಳಿದ್ದೆವು. ಜಿಲ್ಲೆಯಲ್ಲಿಯೆ ದುಬಾರಿ ಆಡಳಿತವನ್ನು ಮಾಡಿ ತೋರಿಸಿದರು ಅವರ ಕ್ರಮವನ್ನೆ ಮುಂದಣ ಆಡಳಿತವು ಮುಂದರಿಸಿದರೆ, ಗೋನರ ನವೀನ ಶಾಸನವನ್ನು ಊರ್ಜಿತವಿರಿಸಿದ ಪುಣ್ಯವು ಆಡಳಿತದವರಿಗೆ ಬರುವುದು.

× × ×

ಫೊರೆಸ್ಟ್ ಆಡಳಿತದಲ್ಲಿ ಸರಕಾರವು ಈಗ ಇರಿಸಿರುವ ಮೇಲಧಿಕಾರಿಗಳು 75ರಷ್ಟು ಇದ್ದಾರೆ. ಇವರು 50 ಇದ್ದರೆ ಸಾಕು, ಎಂದು ಕೌನ್ಸಿಲಿನಲ್ಲಿ ವಾದಿಸಿದವರೇ ತಮ್ಮ ಸರಹದ್ದಿನೊಳಗೆ ಇರುವ ಅಧಿಕಾರಿಗಳಲ್ಲಿ, ನೌಕರರಲ್ಲಿ ಕನಿಷ್ಠಸಂಖ್ಯೆಯ ಮಂದಿಯನ್ನೇ ಏಕೆ ಇಟ್ಟುಕೊಳ್ಳಲಿಲ್ಲವೋ ತಿಳಿಯದು ಮಾಡಿ ತೋರಿಸುವವನೇ ಜಾಣ

\+ \+ \+

ಮೂಡುಪೆರಾರ ಶಾಲೆ, ಕಿನ್ನಿಕಂಬಳ ಶಾಲೆ, 'ಶಾಲಾಧ್ಯಯಂ ಭ್ರಾತೃ ವಿನಾಶ ಕಾರಣಂ' ಇದ್ದ ಬೋರ್ಡು ಶಾಲೆ ಹೋದರೆ ಹೋಗಲಿ, ಹತ್ತಿರವೇ ಮತ್ತೊಂದೆದ್ದು ನಿಲ್ಲಲಿ ಎಂದು ಎಡ್ಯುಕೇಶನ ಕೌನ್ಸಿಲಿನ ಆಶೀರ್ವಾದ

\+ \+ \+

ಕಿನ್ನಿಕಂಬಳ ಎಂದರೆ ಯಾವುದೆಂದು ಖಂಡಿತ ತಿಳಿದ ಮೆಂಬರರೇ ಕಡಮೆಯಂತೆ; ಹತ್ತಿರವೆ ಎರಡು ಶಾಲೆಗಳೇಕೆ ಎಂದರೆ, ಒಂದು ಶಾಲೆಯಿಂದ ಮತ್ತೊಂದಕ್ಕೆ ಇರುವ ದೂರವನ್ನು ಅಳತೆ ಮಾಡಿ, ಹೋದ ಮೆಂಬರರು, 25000 ಮೈಲು ಭೂಪ್ರದಕ್ಷಿಣೆ ಮಾಡಿ ಕೊಲುಂಬಸನಂತೆ ಮೂಡುಪೆರಾರ ಅಮೇರಿಕವನ್ನು ಕಂಡು ಹಿಡಿದರು.

× × ×

ಆ ಶಾಲೆ ಕೆಥೋಲಿಕ್ ಶಾಲೆಯಾಗಿದ್ದುದು ತಪ್ಪೆ? ಡಿ. ಇ. ಓ ಕೆಥೋಲಿಕರಾದುದು ತಪ್ಪೆ? ಸುಮ್ಮನೆ ಒಂದಕ್ಕೊಂದು ಕೂಡಿಸಿ ಎರಡು ಎಣಿಸಬಾರದಯ್ಯಾ.

\+ \+ \+

ಗೋನ್ ಸಾಹೇಬರಂಥವರೊಬ್ಬರು ಜಿ. ಎಡ್ಯುಕೇಶನಲ್ ಕೌನ್ಸಿಲು ಆಫೀಸನ್ನು ನಾಲ್ಕು ತಿಂಗಳ ಮಟ್ಟಿಗಾದರೂ ನೋಡಬಾರದೇ?

\+ \+ \+

ಜಸ್ಟಿಸ್ ಪಂಚಾಯಿತವು ಇಲ್ಲಿ ಸ್ಥಾಪನೆ ಹೊಂದಿದೆ ಇನ್ನು ಆ ಪಕ್ಷದ ಸಾರ್ಥಕ್ಯವನ್ನು ನೋಡಬೇಕು ಕೊಂಗ್ರೆಸ್ಸಿನವರು ಏನೇನೋ ಮಾಡಿಕೊಂಡರು, ಜಸ್ಟಿಸಿನವರು ಏನೇನು ಮಾಡಲಿರುವರು?

TYPEWRITING

ಯಾವತ್ತೂ ಪತ್ರವ್ಯವಹಾರ ಅರ್ಜಿ ಧಗೈರೆಯಾದವುಗಳನ್ನು ಟೈಪರೈಟ್ ಮಾಡಿಕೊಡುವರು. ಹೊಸ ಮೆಶಿನ್, ದರ ಅತೀ ಕಡಮೆ

ಬಂಗ್ರ ರಮಾನಾಥ ಶ್ಯಾನಭೋಗ್,

ಮೊಡರ್ನ್ ಕಮರ್ಶಿಯಲ್ ಹೌಸ್, ಫೆರ್ನಾಂಡಿಸ್ ಬಿಲ್ಡಿಂಗ್ ಮಿಶನ್ ಶಾಪಿನ ಬಳಿ, ಹಂಪನಕಟ್ಟೆ, ಮಂಗಳೂರು

ವಿಮಾ—ವಾಣಿಜ್ಯ.

ಮೈಸೂರು ಶ್ರೀಮನ್ಮಹಾರಾಜರ ಜನ್ಮದಿನೋತ್ಸವದ ದಿನ (೧—೪—೩೬), ಇನ್ಶೂರೆನ್ಸ್ ಕಂಪೆನಿಗಳ ವಿಷಯವಾಗಿ ಲೇಖನಗಳನ್ನು ಪ್ರಕಟಿಸುತ್ತಿರುವ ವಿಮಾ-ವಾಣಿಜ್ಯ ಎಂಬ ಮಾಸಪತ್ರಿಕೆಯ ನವವರ್ಷದ ಸ್ಮಾರಕ್ಯಯುಕ್ತ ಪ್ರತಿಯೊಂದು ಹೊರಡುವುದು, ಸಮುಸ್ತರೂ ಸಹಕರಿಸಬೇಕಾಗಿ ಅಪೇಕ್ಷೆ.

ಜಗತ್ತಿನ ಅತ್ಯಂತ ಶ್ರೀಮಂತ ಕುಟುಂಬ

(ಜಪಾನು ಪ್ರವಾಸಿ)

ಅಮೇರಿಕಾದ ಹೆನ್ರಿಫೋರ್ಡರೂ, ರೋಕ್‌ಫೆಲ್ಲರರೂ, ಜಕೋಸ್ಲೋವೇಕಿಯಾದ ಬಾಟಾರವರೂ, ಹೈದರಾಬಾದಿನ ನಿಜಾಮರೂ, ಅಫಘಾನರೂ ಇವರೆಲ್ಲಾ ಜಗತ್ತಿನ ಪ್ರಸಿದ್ಧ ಶ್ರೀಮಂತರೆಂಬ ಬಿರುದನ್ನು ಪಡೆದಿರುವರು. ಆದರೆ, ಇವರೆಲ್ಲರಿಗಿಂತಲೂ ಶ್ರೇಷ್ಠವೆನಿಸುವ ಶ್ರೀಮಂತರು—ಶ್ರೀಮಂತರಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದವರು ಜಪಾನಿನ ಶ್ರೇಷ್ಠ ಮಿಟ್‌ಶೂಯಿ ಕುಟುಂಬವು. ಜಪಾನಿನ ಆರ್ಥಿಕ ಸಂಸ್ಥೆಗಳು, ವ್ಯಾಪಾರಿ ಸಂಸ್ಥೆಗಳು, ಕಲ್ಲಿದ್ದಲು ವ್ಯಾಪಾರ, ಲೋಹಗಳ ವ್ಯಾಪಾರ, ನೌಕಾ ಸಂಸ್ಥೆಗಳು, ಸಿಲ್ಕ್, ಹತ್ತಿ, ರಬ್ಬರು, ಚಾ ಮತ್ತು ಕಾಗದದ ಕಾರ್ಖಾನೆಗಳೂ,—ಇವುಗಳಲ್ಲಿ ಹೆಚ್ಚಿನವುಗಳು ಈ ಮಿಟ್‌ಶೂಯಿ ಕುಟುಂಬದವುಗಳು. ಇವತ್ತಿಗೆ ೩೦೦ ವರ್ಷಗಳಿಂದ,—ಅನೇಕ ರಾಜಕೀಯ ಬದಲಾವಣೆಗಳು ನಡೆದಿದ್ದರು,— ಇವರು ಈ ವೃತ್ತಿಯನ್ನು ನಡೆಯಿಸುತ್ತಿದ್ದಾರೆ. ಬಹಳ ಶ್ರೇಯಸ್ಸನ್ನು ಪಡೆದಿರುವರು. ಈ ಜಗತ್ತಿನಲ್ಲಿ ಅತ್ಯಂತ ಶ್ರೀಮಂತ ಕುಟುಂಬವೆಂಬ ಕೀರ್ತಿಯನ್ನು ಗಳಿಸಿರುವರು. ಈಗಲೂ ಇವರಷ್ಟು ಸಿರಿವಂತರು ಬೇರೆ ಯಾರೂ ಇಲ್ಲ.

ಜರ್ಮನಿಯಲ್ಲಿ ಬೇಗನೆ ನಡೆಯಲಿರುವ ಪ್ರಖ್ಯಾತ ಒಲಿಂಪಿಕ್ ಪಂದ್ಯಾಟದ ಸಮಿತಿಯವರು ಮಳೆಯ ಸಂಭವದಲ್ಲಿ ಪ್ರೇಕ್ಷಕರಿಗೆ ಧರ್ಮಾರ್ಥವಾಗಿ ಹಂಚಲು ಅರ್ಧ ಮಿಲಿಯ ರೈನ್ ಕೋಟುಗಳನ್ನು ಜಪಾನಿಯವರಿಂದ ಪಡಕೊಂಡಿರುವರು. ಈ ವರ್ತನೆಯಿಂದ ಸಮಸ್ತ ಜಗತ್ತು ವಿಸ್ಮಯಗೊಂಡಿರುತ್ತದೆ. ಕಾರಣ, ಈ ರೈನುಕೋಟುಗಳು ಆ ಪಂದ್ಯಾಟ ಸಮಿತಿಯವರಿಗೆ ಅತೀ ಸುಲಭ ದರದಲ್ಲಿ ಸಿಕ್ಕಿವೆ. ಒಂದಕ್ಕೆ ಸಾಧಾರಣ ೭ ಆಣೆಗಳ ಕ್ರಯ ಬೀಳುವುದಂತೆ. ಇಷ್ಟು ಸುಲಭ ದರದಲ್ಲಿ ರೈನುಕೋಟುಗಳನ್ನು ಯಾವ ದೇಶಗಳು ಮಾರಾಟ ಮಾಡಬಲ್ಲವು? ಈ ಕೋಟುಗಳು ಎಣ್ಣೆಯಲ್ಲಿ ಮುಳುಗಿಸಿದ ಕಾಗದದಿಂದ ತಯಾರು ಮಾಡಲ್ಪಟ್ಟವುಗಳು. ಆದರೂ, ಇಂಗ್ಲೆಂಡಿನಲ್ಲಿ ಈ ಕೋಟನ್ನು ಕಟ್ಟಲು ಪೇಕಿಂಗ್ ಪೇಪರ್ ಕೂಡ ಮೇಲಿನ ದರಕ್ಕೆ ಸಿಕ್ಕುವುದು ಕಷ್ಟವಂತೆ. ಜಪಾನಿನ ಈ ಯೋಗ್ಯತೆಯನ್ನು ನೋಡಿ, ಇತರ ಜನಾಂಗಗಳೆಲ್ಲಾ ದಿಗಿಲುಗೊಂಡಿವೆ. ಇದರಿಂದ ವ್ಯಾಪಾರ ಲೋಕದಲ್ಲಿ ಇವರೊಡನೆ ಪ್ರತಿಸ್ಪರ್ಧಿಸಲು ಯಾರಿಗೆ ತಾನೆ ಸಾಧ್ಯವಾಗುವುದು. ಇವುಗಳು ಮೇಲಿನ ಮಿಟ್‌ಶೂಯಿ ಕುಟುಂಬದಿಂದ ತಯಾರಿಸಲ್ಪಟ್ಟವು. ಇವರು ತಮ್ಮ ಗಿರಾಕಿಗಳಿಗೆ ಈ ತರದ ಕೋಟುಗಳನ್ನು ಧರ್ಮಾರ್ಥವಾಗಿ ಕೊಡುವುದು ವಾಡಿಕೆಯಂತೆ. ಆದರೆ, ಇದರಿಂದ ಭಯಂಕರ ಜಾಹೀರಾತು ನಡೆಯುವುದಂತಾಗುತ್ತದೆ. ಪ್ರತಿಯೊಂದು ಕೋಟಿನ ಮೇಲೆ ಮಿಟ್‌ಶೂಯಿಗಳ ಹೆಸರು ಕಂಗೊಳಿಸುತ್ತದೆ.

ಈ ಮಿಟ್‌ಶೂಯಿ ಕುಟುಂಬಕ್ಕೆ ಜಪಾನಿನಲ್ಲಿ ಮಾತ್ರವಲ್ಲದೆ, ಪ್ರಪಂಚದ ಇತರ ಕಡೆಗಳಲ್ಲೂ ವ್ಯಾಪಾರ ಸಂಸ್ಥೆಗಳಿವೆ. ಹೊರಗಿನ ದೇಶಗಳಲ್ಲಿ ಇವರಿಗೆ ಕಲ್ಲಿದ್ದಲಿನ ಗಣಿಗಳೂ ಲೋಹದ ಗಣಿಗಳೂ ಇವೆ. ಜಪಾನಿನಲ್ಲಿ ಮಿಟ್‌ಶೂಯಿಗಳ ದೊಡ್ಡದೊಂದು ಬೇಂಕಿಂಗ್ ಸಂಸ್ಥೆಯು ನಡೆಯುತ್ತದೆ. ಜಪಾನಿನ ಪ್ರಾಮುಖ್ಯ ನೌಕಾ ಸಂಸ್ಥೆಗಳು ಈ ಮಿಟ್‌ಶೂಯಿ ಕುಟುಂಬದವುಗಳು. ಇವರಿಗೆ ವಸ್ತ್ರ, ಉಣ್ಣೆ, ಕಾಗದ ಇತ್ಯಾದಿಗಳನ್ನು ತಯಾರಿಸುವ ಅಸಂಖ್ಯಾತ ಕಾರ್ಖಾನೆಗಳಿವೆ. ಜಪಾನಿನ ಆಮದಿನ ಮತ್ತು ರಫ್ತಿನ ಹೆಚ್ಚಿನಂಶವು ಇವರ ಕೈಗಳಲ್ಲಿದೆ. ಜಪಾನಿನ ಸಾಂಪತ್ತಿಕ ಸ್ಥಿತಿಯ ಸುಧಾರಣೆಯೊಂದಿಗೆ ಈ ಕುಟುಂಬದ ಶ್ರೀಮಂತಿಗೆ ವೃದ್ಧಿಯಾಗಿರುತ್ತದೆ. ಈಗ ಅವರು ಅಲ್ಲಿನ ಒಂದು ಪ್ರಖ್ಯಾತ ಮತ್ತು ಪ್ರಾಮುಖ್ಯ ಕುಟುಂಬವಾಗಿರುತ್ತದೆ.

ಕೊಲಂಬಸ್ಸನು ಅಮೇರಿಕವನ್ನು ಕಂಡುಹಿಡಿದ ಸಮಯದಲ್ಲಿ ಈ ಮಿಟ್‌ಶೂಯಿ ಕುಟುಂಬದವರು ವ್ಯಾಪಾರಕ್ಕೆ ಪ್ರಾರಂಭ ಮಾಡಿರುವರು. ಇವತ್ತಿನ ವರೆಗೆ ಯಾವ ಆತಂಕಗಳಿಲ್ಲದೆ, ವರ್ಷ ವರ್ಷವೂ ವೃದ್ಧಿ ಹೊಂದುತ್ತಾ ಬಂದು, ಇವತ್ತಿಗೆ ಈ ಪ್ರಪಂಚದ ಶ್ರೀಮಂತರಲ್ಲಿ ಒಂದನೇ ಸ್ಥಾನವನ್ನು ಪಡೆದಿರುವರು. ಒಂದಾನೊಂದು ಕಾಲದಲ್ಲಿ ಈ ಕುಟುಂಬಕ್ಕೆ ತಮ್ಮದೇ ಸ್ವಂತ ನಾಣ್ಯಗಳಿದ್ದವಂತೆ. ೧೭ನೇ ಶತಮಾನದಲ್ಲಿ ಜಪಾನಿನ ಟೋಕಿಯೊದಲ್ಲಿ ಈ ಮಿಟ್‌ಶೂಯಿಗಳಿಗೆ ಒಂದು ಗುದಾಮವಿತ್ತು. ಆಗಲೂ ಇವರ ಸಂಸ್ಥೆಯೂ, ಒಳ್ಳೇ ಕ್ರಮದಿಂದ ನಡೆಯುತ್ತಿತ್ತು ಲೆಕ್ಕಾಚಾರಗಳು ಒಳ್ಳೇ ರೀತಿ ಇಡಲ್ಪಟ್ಟಿದ್ದವು. ೧೯ನೇ ಶತಮಾನದಲ್ಲಿ ಸಮಸ್ತ ಯುರೋಪು ಖಂಡವು ಕೊಳೆಯಲ್ಲಿ ಮುಳುಗಿ ನರಳುತ್ತಿರುವಾಗ, ಮಿಟ್‌ಶೂಯಿ ಸಂಸ್ಥೆಗಳಲ್ಲಿ ಶುಚಿತ್ವದ ಕುರಿತು ಅನೇಕ ಒಳ್ಳೇ ಕ್ರಮಗಳಿದ್ದುವು. ತಮ್ಮ ಕೆಲಸಗಾರರ ಸ್ವಚ್ಛದ ಕಡೆಗೆ ಹೆಚ್ಚಿನ ಗಮನವನ್ನು ಕೊಡುತ್ತಿದ್ದರು. ಅವರು ಆರೋಗ್ಯವಂತರಾಗಿ ಬಾಳುವಂತೆ ಅವರಿಗೆ ಅನೇಕ ಸೌಕರ್ಯಗಳನ್ನು ಕೊಟ್ಟಿದ್ದರು. ಈಗಲೂ, ಕೆಲಸಗಾರರ ಹಿತವೆ ಈ ಕುಟುಂಬದ ಮುಖ್ಯ ಧ್ಯೇಯವು. ಕೆಲಸಗಾರರಿಗೆ ಒಳ್ಳೇ ವಿಶ್ರಾಂತಿಯನ್ನು ಕೊಡುತ್ತಿದ್ದಾರೆ. ಒಂದು ವರ್ಷದಲ್ಲಿ ಯೋಗ್ಯವಾದ ರಜೆಯೂ ಇದೆ. ಕಾರಣ, ಕೆಲಸಗಾರರು ಆರೋಗ್ಯವಂತರಾಗಿ, ಸಂತುಷ್ಟರಾದರೆ ಮಾತ್ರ ತಮ್ಮ ಸಂಸ್ಥೆಗಳು ಸಾಂಗವಾಗಿ ನಡೆಯುವವು ಎಂಬುದು ಈ ಕುಟುಂಬದ ದೃಢವಾದ ನಂಬುಗೆ.

ಜೆಕೋಸ್ಲೋವೇಕಿಯಾದ ಪ್ರಸಿದ್ಧ ಬೂಟ್ಸಿನ ವ್ಯಾಪಾರಿಯಾದ ಬಾಟನು ತನ್ನ ಜೀವನವನ್ನು ಕೇವಲ ಒಬ್ಬ ಚಮ್ಮಗಾರನಾಗಿ ಪ್ರಾರಂಭ ಮಾಡಿದ್ದನು. ಕ್ರಮೇಣ ಇವನ ವ್ಯಾಪಾರವು ವೃದ್ಧಿಯಾಯಿತು. ಇವನ ಒಂದು ಕಾರ್ಖಾನೆ ಉಂಟಾಗಿ ಬೆಳೆಯಲಾರಂಭಿಸಿತು. ಸಾಧಾರಣ ೨೫-೩೦ ವರ್ಷಗಳ ಸಮಯದಲ್ಲಿ ಬಾಟಾನ ಸಂಸ್ಥೆಯು ಜಗತ್ಪ್ರಸಿದ್ಧವಾಯಿತು. ಈಗ ಅವನ ಸಂಸ್ಥೆಯ ಶಾಖೆಗಳೂ ಜಗತ್ತಿನ ಎಲ್ಲಾ ನಗರಗಳಲ್ಲಿವೆ. ಇವನ ಕಾರ್ಖಾನೆಯಲ್ಲಿ ತಾಸಿಗೆ ೩೦೦ ಜೋಡಿ ಬೂಟ್ಸುಗಳನ್ನು ಹೊಲಿಯುವ ಯಂತ್ರಗಳಿವೆ. ಇವನ ಕಾರ್ಖಾನೆಯಲ್ಲಿ ಈಗ ಬೂಟ್ಸುಗಳು ಮಾತ್ರವಲ್ಲದೆ, ಮೋಟರ್ ಟಾಯರ್ ಇತ್ಯಾದಿ ರಬ್ಬರಿನ ಸಾಮಗ್ರಿಗಳು ತಯಾರಾಗುತ್ತಿವೆ. ವಿಮಾನಗಳನ್ನು ತಯಾರಿಸುವ ಕಾರ್ಖಾನೆ ಒಂದು ಸ್ಥಾಪನೆಯಾಗಿದೆ. ಬಾಟಾ ಮೋಟಾರು ಕಾರುಗಳು ತಯಾರಾಗುತ್ತಿವೆ. ಇವನಿಂದ ಜೆಕೋಸ್ಲೋವೇಕಿಯಾದಲ್ಲಿ ಒಂದು ಕೈಗಾರ ನಗರವೇ ಜನಿಸಿದೆ. ಬಾಟನು ಜಗತ್ತಿನ ಶ್ರೀಮಂತನಾದನು. ಇದಕ್ಕೆ ಕಾರಣಗಳೇನು? ಮಿಟ್‌ಶೂಯಿಗಳ ಶ್ರೇಯಸ್ಸಿನ ಮರ್ಮವೇನು? ಅದು ಇಷ್ಟೆ. ಬಾಟನು ತನ್ನ ಸಂಸ್ಥೆಯಲ್ಲಿ ತನ್ನ ಕೆಲಸಗಾರರಿಗೆ ಒಂದು ತರದ ಸ್ವಯಂಪ್ರಭುತ್ವದ ಹಕ್ಕುಗಳನ್ನು ಕೊಟ್ಟನು. ಈತನು ಸಮತಾವಾದದ ಸೂತ್ರಗಳನ್ನು ಅನುಸರಿಸಿದನು. ಕೆಲಸಗಾರರನ್ನು ತನ್ನ ಸಂಸ್ಥೆ ಪಾಲುಗಾರರಂತೆ ಎಣಿಸಿದನು. ವರ್ಷಂಪ್ರತಿ ಗಳಿಸುವ ಲಾಭದಲ್ಲಿ ಅವರಿಗೂ ಒಂದು ಪಾಲನ್ನು ಕೊಟ್ಟನು. ಕೆಲಸಗಾರರಿಂದ ಸಂಸ್ಥೆಗೆ (ಸಾಲದ ಅಗತ್ಯವಿಲ್ಲದಿದ್ದರೂ) ಸಾಲವನ್ನು ಪಡೆದಿದ್ದನು. ಹೀಗೆ ಅವರಿಗೆ ಹಿತಕರವೆನಿಸುವ ಅನೇಕ ಕ್ರಮಗಳನ್ನು ಮಾಡಿದನು. ಇವೆಲ್ಲಾ ವಿಧಾನದಿಂದ ಕೆಲಸಗಾರರಲ್ಲಿ ಶ್ರದ್ಧೆಯು ಹೆಚ್ಚಿತು. ಈತನ ಸಂಸ್ಥೆಯು ಪ್ರಜಾಪ್ರಭುತ್ವದ ಸೂತ್ರವನ್ನು ಅನುಸರಿಸಿ ನಡೆದವು. ಹಾಗಾದುದರಿಂದಲೇ ಬಾಟಾನು ಬಹಳ ಪ್ರಸಿದ್ಧಿಗೆ ಬಂದನು. ಹಾಗೆಯೇ ಮಿಟ್‌ಶೂಯಿಗಳಲ್ಲಿ ಕೆಲಸಗಾರರಿಗೆ ಲಾಭದಲ್ಲಿ ಒಂದಂಶವು ಸಿಕ್ಕುತ್ತದೆ. ಆದರಿಂದ ಕೆಲಸಗಾರರು ಬಹಳ ಶ್ರದ್ಧೆಯಿಂದ ಸಂಸ್ಥೆಯ ಏಳ್ಗೆಗಾಗಿ ದಣಿಯುತ್ತಾರೆ. ಕೆಲಸಗಾರರನ್ನು ಕೆಲಸದಿಂದ ಹೊರದೂಡುವ ಸಂಭವಗಳು ಈ ಸಂಸ್ಥೆಯಲ್ಲಿಲ್ಲ. ಮೃತರಾದ ಕೆಲಸಗಾರ ಕುಟುಂಬದ ಸಂರಕ್ಷಣೆಯು ಸಂಸ್ಥೆಯಿಂದ ನಡೆಯುತ್ತದೆ. ಆದುದರಿಂದಲೇ ಮಿಟ್‌ಶೂಯಿ ಸಂಸ್ಥೆಗಳಲ್ಲಿ ಮುಷ್ಕರ ನಡೆದ ವಾರ್ತೆಯು ಇಷ್ಟರ ತನಕ ಬಂದಿಲ್ಲ. ಈಗ, ಇವರ ಸಂಸ್ಥೆಗಳಲ್ಲಿ [illegible]೦,೦೦೦ ಜನರು ಕೆಲಸ ಮಾಡುತ್ತಿದ್ದಾರೆ.

ಈ ಕುಟುಂಬವು ಅಷ್ಟು ಶ್ರೀಮಂತವಾದರೂ, ಅದರ ಸದಸ್ಯರು ಐಶ್ವರ್ಯದ ಉಪಭೋಗವನ್ನು ಹೆಚ್ಚಾಗಿ ಮಾಡುವುದಿಲ್ಲ. ಇವರಿಗೆ ಕುಟುಂಬದ ಅನೇಕ ನಿರ್ಬಂಧಗಳಿವೆ. ಇವುಗಳಿಗೆ ಇವರು ಮನ್ನಣೆ ಕೊಡುತ್ತಾರೆ. ಕುಟುಂಬದ ಸದಸ್ಯರಿಗೆ ಸ್ವೇಚ್ಛಾಪರರಾಗಿ ವರ್ತಿಸುವ ಹಕ್ಕುಗಳಿಲ್ಲ. ಎಲ್ಲಾ ವಿಚಾರಗಳಲ್ಲಿ ಯಜಮಾನನು ಸರ್ವಶ್ರೇಷ್ಠನು. ಇವರು ಮಕ್ಕಳನ್ನು ಧಾರಾಳವಾಗಿ ಪಡೆಯದಂತೆ ಕುಟುಂಬದ ನಿರ್ಬಂಧಗಳಿವೆ. ಕುಟುಂಬವು ಬಹಳವಾಗಿ ಬೆಳೆಯುವುದು ಹಾನಿಕರವೆಂದು ಜಪಾನಿಯರ ನಂಬುಗೆ.

ಯುರೋಪು ಖಂಡದ ಈಗಿನ ಕಲಹ ನಿವಾರಣೆಯು ಯಾವ ರೀತಿಯಲ್ಲಾಗುವುದು

...ರ್ಮನಿಯ ನ್ಯಾಯವಿಚಾರಣೆಯು ...ದಲ್ಲಿ ನಡೆಯುತ್ತದೆ. ಲೊಕಾರ್ನೋ ಒಪ್ಪಂದದ ಸದಸ್ಯ ಜನಾಂಗಗಳ ಪರಿಷತ್ತು ಇಲ್ಲಿ ಸೇರಿರುತ್ತದೆ. ಜರ್ಮನಿಯು ವಾರ್ಸಲೆ ಸಂಧಿಯನ್ನೂ ಲೊಕಾರ್ನೋ ಒಪ್ಪಂದವನ್ನೂ ಮುರಿದಿರುತ್ತದೆಂದೂ ಈ ಪರಿಷತ್ತಿನಲ್ಲಿ ನಿರ್ಧಾರವಾಯಿತು. ಲೀಗ್ ಕೌನ್ಸಿಲಿನ ಸಭೆಯು ಇಲ್ಲಿ ಸೇರಿರುವುದು; ಜರ್ಮನಿಯ ಮೇಲೆ ತಪ್ಪುಸ್ಥಾಪನೆ ಮಾಡಿ, ಈಗಿನ ಕಲಹವನ್ನು ಸರಿಯಾಗಿ ಪರೀಕ್ಷಿಸಿ ವರದಿ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಿರುವರು. ಜನಾಂಗ ಸಭೆಯು ಅತೀ ಸಮಾಧಾನದಿಂದಲೂ ಜಾಗರೂಕತೆಯಿಂದ ವರ್ತಿಸುವುದೆಂದು ತಿಳಿದುಬರುತ್ತದೆ. ಅನೇಕ ಪ್ರಭುತ್ವಗಳ ಸಭೆಗಳು ಈಗ ಲಂಡನ್ ನಗರದಲ್ಲಿ ನಡೆಯುತ್ತಿವೆ. ಜರ್ಮನಿಯ ಪ್ರತಿನಿಧಿಗಳು ಬ್ರಿಟಿಷ ಬಹಿರಂಗ ವ್ಯವಹಾರದ ಆಫೀಸನ್ನು ಸಂದರ್ಶಿಸಿದರಾಗಿ ತಿಳಿದುಬರುತ್ತದೆ. ಇದರಿಂದ ಅನೇಕರಲ್ಲಿ ಆಶ್ಚರ್ಯವೂ ಕುತೂಹಲವೂ ಉಂಟಾಗಿರುತ್ತದೆ. ಇವರು ಅಲ್ಲಿಗೆ ಬಂದುದು ಬರೆ ಚಿಲ್ಲರೆ ಸಂಗತಿಗಾಗಿ ಬಂದರೆಂದು, ಆದರಲ್ಲಿ ಕೆಲವರ ಮಾತು ಸತ್ಯಾಂಶವಿದೆಯೆಂದು ತಿಳಿಯಲಸಾಧ್ಯ. ಗುಪ್ತವಾಗಿ ಕೆಲವು ಮುಖ್ಯ ಆಲೋಚನೆಗಳು ನಡೆಸಿವೆಯೆಂದು ಕೆಲವರ ಊಹೆ. ಜನಾಂಗ ಸಭೆಯು, ಮೇಲಿನ ವಿವಿಧ ಪರಿಷತ್ತುಗಳ ಮತ್ತು ಸಭೆಗಳ ಇತ್ಯರ್ಥಗಳನ್ನು ಕಾಯುತ್ತಿದೆ. ಲೊಕಾರ್ನೋ ಕಮಿಟಿಯ ಎಲ್ಲಾ ಸದಸ್ಯರಲ್ಲಿ ಈ ವಿಚಾರದ ಕುರಿತು ಒಮ್ಮನಸ್ಸಾಗಿದಂತೆ. ಎಲ್ಲಾ ಪ್ರಭುತ್ವಗಳು ಜರ್ಮನಿಯ ಈಗಿನ ವರ್ತನೆಯನ್ನು ಎಂದರೆ ರ್ಹೈನ್‌ಲೆಂಡಿನಲ್ಲಿ ಸೈನ್ಯಮಂಡಳವನ್ನು ಇಟ್ಟದ್ದು ತಮಗೆ ಒಪ್ಪುವಂತಹದಲ್ಲವೆಂದೂ ಹಿಟ್ಲರನಿಗೆ ಕಾಣುವಂತೆ ಮಾಡಬೇಕಾಗಿ ನಿಶ್ಚಯಮಾಡಿರುವರು. ಯುದ್ಧವಿಲ್ಲದೆ ಈ ಪ್ರಶ್ನೆಯು ಇತ್ಯರ್ಥವಾಗಬೇಕೆಂದು ಬ್ರಿಟನು ಆತುರಪಡುತ್ತಿದೆ. ಎಲ್ಲಾ ಸಭೆಗಳು ಲಂಡನಿನಲ್ಲಿ ನಡೆಯುವುದರಿಂದ ಬ್ರಿಟನಿನ ಆಲೋಚನೆಗಳಿಗೆ ಹೆಚ್ಚಿನ ಬಹುಮತ ಸಿಕ್ಕುವುದೆನ್ನಬಹುದು. ಈ ಕಲಹದ ಮುಖ್ಯ ನಟರಾದ ಫ್ರಾನ್ಸ ಮತ್ತು ಬೆಲ್ಜಿಯಮ್—ಈ ವಿಷಯದಲ್ಲಿ ಯಾವತ್ತೂ ಸಂಗ್ರಾಮ ಕಾರ್ಯಗಳು ನಡೆಯಬಾರದಾಗಿ ಸಂಕಲ್ಪಮಾಡಿರುವರೆಂದು ತಿಳಿದುಬರುತ್ತದೆ. ಕೆಲವು ದಿವಸಗಳ ಹಿಂದೆ ಇದೇ ಜನಾಂಗಗಳು ಹಿಟ್ಲರನ ವರ್ತನೆಯನ್ನು ಖಂಡಿಸಿ, ಅವನಿಗೆ ತಕ್ಕ ಪ್ರಾಯಶ್ಚಿತ್ತವಾಗದಿದ್ದರೆ ತಾವು ಜನಾಂಗ ಸಭೆಗಳನ್ನು ತ್ಯಜಿಸುವೆವು—ಇತ್ಯಾದಿ ರಣಗರ್ಜನೆ ಹಾಕಿದವರು ಇವರೀಗ ಸಮಾಧಾನ ತಾಳಿದ್ದು ಬಹಳ ಉತ್ತಮವಾಯಿತು. ಜರ್ಮನಿಯು ರ್ಹೈನ್‌ಲೆಂಡಿಗೆ ಕಳುಹಿಸಿದ ೧೯ ಸೈನ್ಯಮಂಡಳಗಳನ್ನು ಹಿಂತೆಗೆಯಬೇಕೆಂದು ಛಲಹಿಡಿದ ಫ್ರಾನ್ಸು ಈಗ ಸ್ವಲ್ಪ ಬುದ್ಧಿ ಬದಲಾವಣೆ ಮಾಡಿರುತ್ತದೆ. ಶಾಂತ ರೀತಿಯಲ್ಲಿ ಇತ್ಯರ್ಥವಾಗುವ ಸಂಭವಗಳು ಇದರಿಂದ ಹೆಚ್ಚಿವೆ. ಜರ್ಮನಿಯು, ಎರಡು ಮುಖ್ಯ ಸಂಧಿಗಳು ಮುರಿದುದು ಖಂಡಿತ. ಈ ಸಂಧಿಗಳು, ಯುರೋಪು ಪೂರ್ವಸ್ಥಿತಿಯಲ್ಲಿರಲು ಅತ್ಯಗತ್ಯವಾದುದೆಂಬುದು ನಿಜ. ಹಿಟ್ಲರನು, ಮೊನ್ನೆ ಫ್ರಾನ್ಸು ವಿವಿಧ ಒಪ್ಪಂದಗಳಿಂದ ಜರ್ಮನಿಯನ್ನು ಸುತ್ತುಹಾಕುತ್ತಿದೆಯೆಂದೂ, ೬೫ ಮಿಲಿಯ ಜನರಿರುವ ಜರ್ಮನಿಗೆ ಕಳೆದ ಮಹಾಯುದ್ಧದ ನಂತರ ಬಹಳ ಕೀಳು ಪದವಿ ದೊರಕಿರುತ್ತದೆಂದೂ, ಭಾಷಣ ಮಾಡಿರುವನು. ರ್ಹೈನಲೆಂಡಿಗೆ ಕಳುಹಿಸಿದ, ಸೈನ್ಯಮಂಡಳದಿಂದ ಫ್ರಾನ್ಸಿಗೆ ಯಾವ ಹಾನಿಯೂ ಬರಲಾರದೆಂದೂ ಆತನ ಈ ವರ್ತನೆಗೆ ಯಾವ ನೀಚ ಉದ್ದೇಶಗಳಿಲ್ಲವೆಂದೂ ಭರವಸೆ ಕೊಟ್ಟಿರುವನಂತೆ. ಆತನ ಈ ಭರವಸೆಯು ಇಂಗ್ಲೆಂಡು ಅನುಮೋದಿಸುತ್ತದೆ, ಮತ್ತು ಮಿ। ಏಡನ್ನರು, ಜರ್ಮನಿಯು, ಹೆಸರಿಗೆ ಮಾತ್ರ ಸೈನ್ಯವನ್ನು ರ್ಹೈನ್‌ಲೆಂಡಿನಲ್ಲಿ ಇರಿಸಿ, ಹೆಚ್ಚಿನದುದನ್ನು ಹಿಂತೆಗೆಯಬೇಕೆಂದೂ ಈ ಪರಿಷತ್ತುಗಳು, ಕಾರ್ಯ ನಡೆಸುತ್ತಿರುವಾಗ ಜರ್ಮನಿಯು ಇಲ್ಲಿ ತನ್ನ ಸೈನ್ಯಬಲವನ್ನು ಹೆಚ್ಚಿಸಬಾರದಾಗಿಯೂ, ಭದ್ರತಾ ಏರ್ಪಾಡುಗಳನ್ನು ಮಾಡಬಾರದಾಗಿಯೂ, ಸೂಚನೆಗಳನ್ನು ಕಳುಹಿಸಿಕೊಟ್ಟಿದ್ದರು. ಬ್ರಿಟಿಷರ ಮೇಲಿನ ಸೂಚನೆಗಳನ್ನು ಜರ್ಮನಿಯು ಮನ್ನಿಸಲು ಸಿದ್ಧವಿಲ್ಲದಿದ್ದರೂ, ಬ್ರಿಟನು, ಹಿಟ್ಲರನ ವರ್ತನೆಯು ಒಂದು ಮಹಾಯುದ್ಧದ ಪ್ರಸ್ತಾಪನೆಯಾಗಿಲ್ಲವೆಂದು ಭಾವಿಸಿರುವುದೆಂದು ವ್ಯಕ್ತವಾಗುತ್ತದೆ. ಇವರ ಸಲಹೆಗಳಿಗೆ, ರ್ಹೈನ್‌ಲೆಂಡಿನಲ್ಲಿ ಹೆಸರಿಗೆ ಮಾತ್ರ ಸೈನ್ಯಮಂಡಳಗಳು ಕಳುಹಿಸಲಾಗಿವೆ ಎಂದೂ, ಭದ್ರತಾಯೋಗ್ಯತೆಗಳು, ಇನ್ನು ವೃದ್ಧಿಕರಿಸುವುದಿಲ್ಲವೆಂದೂ ಉತ್ತರ ಬಂದಿರುತ್ತದೆ. ಈ ಉತ್ತರವು ಲೋಕಾರ್ನೋ ಸಮಿತಿಗೆ ತಿಳಿಸಲಾಗಿದೆ. ಇದು ಫ್ರೆಂಚರಿಗೆ ಮಾತ್ರ ಒಪ್ಪುವುದಿಲ್ಲವಂತೆ. ಜರ್ಮನಿಯು ಮೇಲಿನ ಪರಿಷತ್ತುಗಳ ಕಾರ್ಯಕ್ರಮವನ್ನು ತಿಳಕೊಂಡು, ಲೋಕಾರ್ನೋ ಒಪ್ಪಂದದ ಪ್ರಭುತ್ವಗಳೊಡನೆ, ಬೇಗನೆ ಮಾತುಕತೆಗಳನ್ನು ನಡೆಸುವ ಏರ್ಪಾಡುಗಳನ್ನು ಮಾಡುವುದಾಗಿ ತಿಳಿದುಬರುತ್ತದೆ. ಅಂದರೆ, ಯುರೋಪಿನ ಕಲಹ ನಿವಾರಣೆಯು ಬರೆ ಮಾತುಗಳಿಂದ ಇತ್ಯರ್ಥವಾಗಬಹುದು. ಆದರೆ ಇನ್ನೊಂದು ಮಹಾಯುದ್ಧ ಸಂಭವಗಳು ಕಡಿಮೆಯಾಗಿದೆಂದು ಈಗ ಹೇಳಲಸಾಧ್ಯ. ಲೋಕಾರ್ನೋ ಸಮಿತಿಯವರ ಕಾರ್ಯದ ಇನ್ನೊಂದು ವಾರವು ದಾಟಬೇಕು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ.   ರೂ. 3 ಮತ್ತು 1-10-0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗ ದೇಶದ ಏಜಂಟರು,

ಪೋಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ-ಗಮನಕ್ಕೆ.

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ನಾವು ನಿಶ್ಚಯಿಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ

ಸೆಕ್ರೆಟರಿ,

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ ಕ

ಚಿತ್ರಾದಿ ಸಮೇತ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ_ಊರ್ಧ್ವಪುಂಡ್ರ_ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ_ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ ಎ., ಎಂ. ಎಲ್

ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಿಸಹಿತ

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— **ಶಾರದಾ ಛಾಪಖಾನೆ,**
ರಥಬೀದಿ ಮಂಗಳೂರು.

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ

ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗಳನ್ನು

ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು

ಒಂದು ತಿಂಗಳಲ್ಲಿ ಅವೆ ಸ್ವಭಾವ ಗುಣ ಎದ ಚಿಂತ್ಯ ಸ್ವ ಗುಣಪಡಿಸುವುದಲ್ಲದೆ

ವ್ಯಾಧಿಯು ಬಾರದಂತೆ ತಡೆಗಾಡ ವುದು.

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ

ತಯಾರಿಸುವವರು — ಆಯುರ್ವೇದಾಶ್ರಮ, ಪ್ರೋ: ಬೋಕ್ಸ್ ೩೩೯, ಮದರಾಸು

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು —ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,

92, ಚಿಕ್ಕಪೇಟೆ, ಬೆಂಗಳೂರು ಸಿಟಿ

Estd 1921   THE   [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್

ಪುತ್ತೂರು

ಠೇವಣಾತಿಗಳ ದರ

ನಿರಖು ಠೇವಣಾತಿಗಳು.—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"— ಎಂಬ ಸಂಚಯ ಠೇವಣಾತಿಗಳು ಶೇಕಡಂ 4ರಂತೆ

"ಚಾಲ್ತಿ ಠೇವಣಾತಿಗಳು"— ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರಕೊಳ್ಳುವುದು

Puttur
Dated 10—4—1935

G V Lakshman Pai,
Secreatry

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK

LIMITED.

BUY ADVERTISED GOODS.

ನೋಟೀಸು.

ಕಾರ್ಕಳ ಡಿ. ಮುನ್ಸೀಫ್ ಕೋರ್ಟಿನಲ್ಲಿ.

O S No 622/35

ಡಾ। ಎಸ್ ಮಹಾಬಲ ಅಡ್ಯಂತಾಯ—ವಾದಿ

ಮೈದಿನ್ ಬ್ಯಾರಿ ಹೊಸಂಗಡಿ ಬೆಯ್ಯಬ್ಯಾರಿ ಮಗ, ಕ ಟ್ರಾಕ್ಟರ್ ಕಾರ್ಕಳ ತಾಲೂಕು ಕಾರ್ಕಳ ಕಸಬಾ ಪುಲ್ಕೇರಿಯಲ್ಲಿರುವವ—

ಪ್ರತಿವಾದಿ

ಪ್ರತಿವಾದಿಯು ವಾದಿಗೆ ತಾ 12-12-32 ರಲ್ಲಿ ರೂಪಾ 167—8—0ಕ್ಕೆ ಬರಕೊಟ್ಟ ಡಿಮಾಂಡು ಪ್ರೊಮಿಸರಿ ನೋಟಿನ ಪ್ರಕಾರ ಬಹ ಅಸಲು ಬಡ್ಡಿ ವಗೈರೆ ಬರಮಾಡುವ ಬಗ್ಗೆ ವಾದಿಯು ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾಖಲುಮಾಡಿದ ದಾವೆಯು ತಾ 26-8-36ಕ್ಕೆ ಮುಟ್ಟಿರುವ ಬಗ್ಗೆ ಇಟ್ಟಿರುತ್ತದೆ ಆದುದರಿಂದ ಸದ್ರಿ ತಾರೀಕಿನ ಬೆಳಿಗ್ಗೆ 10 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಪ್ರತಿವಾದಿಯು ಹಾಜರಾಗಿ ಆತನ ಆಕ್ಷೇಪಣೆಗಳನ್ನು ಜಾಹೀರುಮಾಡದಿದ್ದರೆ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ಈ ಮೂಲಕ ಪ್ರತಿವಾದಿಗೆ ತಿಳಿಸಲಾಗುತ್ತದೆ

ಕೋರ್ಟಿನ ಹುಕುಂ ಪ್ರಕಾರ

ಕಾರ್ಕಳ,
14-4-36

ಕೆ ಮಹಾಬಲ ಹೆಗ್ಡೆ,
ವಾದಿಯ ವಕೀಲ್

ವ್ಯಾಯಾಮ

ಲೇಖಕರು. ಎಚ್ ಟಿ ಆರ್, ಆಚಾರ್ಯ, ಹೆಜಮಾಡಿ.

ವ್ಯಾಯಾಮವೆಂದರೆ ಅಂಗಸಾಧನೆ. ರೀರಕ್ಕೆ ಆಯಾಸವನ್ನುಂಟುಮಾಡುವ ಕೆಲ ವೆಂಬ ಅಭಿಪ್ರಾಯ. ಮನುಷ್ಯನ ಆರೋಗ್ಯಕ್ಕೆ ವ್ಯಾಯಾಮವೂ ಸಹ ಒಂದು ಸಾಧನ ಗಿದೆ. ವ್ಯಾಯಾಮದಿಂದ ಶರೀರವು ಲಘು ಗುವುದು, ಯಾವ ಕೆಲಸವೇ ಆಗಲಿ; ವನ್ನು ಪೂರೈಸುವರೆ ತಕ್ಕಷ್ಟು ಶಕ್ತಿಯು ಬರು ದು. ಜಠರಾಗ್ನಿಯು ಜ್ವಲಿಸುವುದು. ದೇಹ ಲ್ಲಿ ತುಂಬಿರುವ ಮೇದಸ್ಸು ನಾಶವಾಗಿ ಹೋಗುವುದು. ಶರೀರದ ಯಾವ ಯಾವ ಗವು ಎಷ್ಟೆಷ್ಟು ದಪ್ಪವಿರಬೇಕೋ, ಯಾವ ಯಾವ ಭಾಗವು ಕಿಳ್ಳಗಿರಬೇಕೋ ಆಯಾಯ ಗವನ್ನು ಹಾಗೆಯೇ ಇರಗೊಡಿಸಲು ವ್ಯಾಯಾಮವು ಸಹಕಾರಿಯಾಗಿರುತ್ತದೆ. ಅದ ರಿಂದ ದೇಹದಲ್ಲಿರುವ ಮಾಂಸಪೇಶಿಗಳು (Muscles) ಬೆಳೆಯುತ್ತವೆ. ಇದರಿಂದ ದೇಹಕ್ಕೆ ಒಂದು ವಿಧದ ಸೌಂದರ್ಯವುಂಟಾ ಗುತ್ತದೆ.

ವ್ಯಾಯಾಮದಲ್ಲಿ ಅನೇಕ ಭೇದಗಳಿವೆ. ವುಗಳ ಮಧ್ಯೆ ಯಾವುದೊಂದು ರೀತಿಯನ್ನು ವಲಂಬಿಸುತ್ತಿದ್ದರೂ ಆಗಬಹುದು ಆದರೆ ಮುಖ್ಯವಾಗಿ ಆಹಾರ ಜೀರ್ಣಾಂಗಗಳು ಚುರುಕಾಗಿ ಕೆಲಸ ಮಾಡುವಂತಿರಬೇಕು. ಎಂದರೆ ಏನು ತಿಂದರೂ ಸುಲಭವಾಗಿ ಜೀರ್ಣ ವನ್ನು ಅಗ್ನಿ ಬಲವು ಬರುವಂತಿರಬೇಕು. ಮಾತ್ರವಲ್ಲದೆ ಅದನ್ನು ಮಿತವಾಗಿ ಮಾಡುತ್ತಿರ ಬೇಕು ಅದರ ಕೆಲವು ನಿಯಮಗಳನ್ನು ಮಾತ್ರ ಅನುಸರಿಸಲು ಮರೆಯಬಾರದು ಇದ ರಿಂದ ಆರೋಗ್ಯ ಲಾಭವಾಗುವುದರಲ್ಲಿ ಸಂಶ ಯವಿಲ್ಲ ವ್ಯಾಯಾಮ ಮತ್ತು ಯೋಗಾ ಭ್ಯಾಸಗಳೊಳಗೆ ಪರಸ್ಪರ ಸಂಬಂಧವು ಇದ್ದೇ ಇದೆ ಯೋಗ ಶಾಸ್ತ್ರಾನುಸಾರವಾಗಿ ಕೊಡ ಲ್ಪಡುವ ಪ್ರತಿಯೊಂದು ಆಸನವು ಸಹ ಶರೀ ರದ ಒಂದೊಂದು ಭಾಗಕ್ಕೆ ಕೆಲಸ ಕೊಡುವ ದಾಗಿದೆ ಅದುವಿನಹ ಹಾಗೆಯೇ ಸಾಧಿಸು ವುದರಿಂದ ಆಯಾಯ ಭಾಗದಲ್ಲಿರುವ ಅಸಾಧ್ಯ ರೋಗಗಳನ್ನು ಸಮೂಲವಾಗಿ ನಿವೃತ್ತಿಪಡಿಸಲು ಸಾಧ್ಯವಿದೆ ಎಷ್ಟೋ ಜನರು ಇಂತಹ ಸಾಧನೆ ಯಿಂದ ತಮಗಿರುವ ಕ್ಷಯಬೇನೆಯನ್ನು ನಿವೃತ್ತಿ ಪಡಿಸಿದುದು ಪ್ರತ್ಯಕ್ಷವಾಗಿದೆ ಆದುದರಿಂದ ಆಸನ ವ್ಯಾಯಾಮವೇ ಒಂದನೇ ವ್ಯಾಯಾ ಮವು ಉಳಿದವುಗಳೆಲ್ಲವೂ ಇದರ ನಂತರ ದವುಗಳಾದವು. ಜಪತಪೋನುಷ್ಠಾನಾದಿ ಶಾಸ್ತ್ರೀಯ ಆಚಾರಗಳಲ್ಲಿಯೇ ಆಸಕ್ತನಾದವ ನಿಗೆ ಸಹ ಆಸನವಿಧಾನದಿಂದ ಯಾವುದೊಂದು ಕೊರತೆಯೂ ಇಲ್ಲ. ಆತನಿಗೆ ಅನುಕೂಲವಾ ಗುವ ಇನ್ನೂ ಒಂದೆರಡು ರೀತಿಗಳಿವೆ ಆರೋ ಗ್ಯದ ಸಲುವಾಗಿ ಸೂರ್ಯನನ್ನು ನಮಸ್ಕರಿಸ ಬೇಕೆಂದು ಶಾಸ್ತ್ರಗಳು ಸಾರುತ್ತಿವೆ. ಕ್ರಮ ವಾಗಿ ಮಾಡಲ್ಪಡುವ ಸೂರ್ಯ ನಮಸ್ಕಾ ರವೂ ಕೂಡ ಒಂದು ಉತ್ತಮ ವ್ಯಾಯಾಮ ವಾಗಿದೆ. ಮಾತ್ರ ಅದನ್ನು ಒಂದೆರಡು ನಮ ಸ್ಕಾರಗಳಲ್ಲಿಯೇ ತೀರಿಸಬಾರದು ಕನಿಷ್ಠ ಪಕ್ಷಕ್ಕೆ ನೂರು ನಮಸ್ಕಾರಗಳನ್ನಾದರೂ ಮಾಡ ಬೇಕು. ಆಸ್ತಿಕರಾದವರು ಮಾಡುವ ದೇವರ ಪ್ರದಕ್ಷಿಣೆ ಅಥವಾ ತುಳಸಿ ಪ್ರದಕ್ಷಿಣೆಯನ್ನೂ ಶಾಸ್ತ್ರೋಕ್ತವಿಧಿಯಿಂದ ಮಾಡುವ ಸಾಷ್ಟಾಂಗ ನಮಸ್ಕಾರವನ್ನೂ ಸಹ ಈ ವ್ಯಾಯಾಮ ಖಾತೆ ಯಲ್ಲಿ ಸೇರಿಸಬಹುದು ಸಾಷ್ಟಾಂಗ ನಮ ಸ್ಕಾರದಲ್ಲಿ ಎದೆ, ಶಿರಸ್ಸು, ಪಾದ, ಕೈ, ಮೊಣ ಕಾಲು ಮೊದಲಾದುವುಗಳಿಗೆ ತುಂಬಾ ಕೆಲಸ ಕೊಟ್ಟಂತಾಗುತ್ತದೆ. ನೇರವಾಗಿರುವ ಮಾರ್ಗ ದಲ್ಲಿ ಬೆಳಗ್ಗೆ ಬಹುದೂರದ ವರೆಗೆ ಒಂದೇ ಸವನೆ ಓಡುತ್ತಿರುವ ನಿಯಮವೂ ಬಹಳ ಒಳ್ಳೆ ಯದು. ಹೀಗೆಯೇ ಕುಸ್ತಿ ಮಾಡುವುದು, ಲಾಠಿ ಪ್ರಯೋಗ, ಲಿಜೇಮು, ಕುಣಿಯುವುದು ಹಾರುವುದು, ಬೇಗ ಬೇಗನೆ ನಡೆಯುವುದು, ಯಾತದಿಂದ ನೀರು ಸೇದುವುದು, ಸೈಕಲ್ ಸವಾರಿ, ಕುದುರೆ ಸವಾರಿ, ಯುದ್ಧ ಮಾಡು ವುದು, ದೋಣಿ ನಡೆಸುವುದು, ನೀರಲ್ಲಿ ಈಜು ವುದು, ಬಡಗಿ ಕೆಲಸ ಮಾಡುವುದು ಮೊದಲಾ

ಗುತ್ತವೆ. ಆದುದರಿಂದ ಈ ಕಸಬುದಾರರು ಬೇರೆ ವ್ಯಾಯಾಮವನ್ನು ಮಾಡಬೇಕಾಗಿಲ್ಲ. ಟಪ್ಪಾಲ ಪೇದೆ, ಪೋಲೀಸ್ ನೌಕರನು, ಕಮ್ಮಾರನು, ಬೇಸಾಯಗಾರನು, ಕಲ್ಲು ಕಟಿ ಯುವವನು, ನಾಲಗದದನು, ಅಗಸರವನು, ಶಿಕಾರಿ ಮಾಡುವವನು, ಚಿಸ್ತ್ರವನು, ಸಂಗೀತ ಗಾರನು, ದಲಾಲಿ ಕೆಲಸದವನು ಮೊದಲಾದ ಕಸಬುದಾರರು ಹೆಚ್ಚಿನ ವ್ಯಾಯಾಮ ಮಾಡುವ ಅವಶ್ಯವಿಲ್ಲ ಅವರವರ ಕಸುಬಿನಿಂದಲೇ ಅವರ ದೇಹವು ಬೆವರನ್ನು ಸುರಿಸುತ್ತಿರುವುದು ಮಾತ್ರವಲ್ಲದೆ ಜಠರಾಗ್ನಿಯೂ ಬಹು ತೀಕ್ಷ್ಣ ವಾಗಿರುತ್ತದೆ. ಚಿಕ್ಕ ಮಕ್ಕಳು ಓಡಾಡುತ್ತಾ ಸಿಕ್ಕಿದ ಹಾಗೆ ತುಂಟೆ ಮಾಡುತ್ತಾ ಚುರುಕಾ ಗಿರುವುದು ಅವರ ದೇಹಕ್ಕೆ ಸಾಕಷ್ಟು ವ್ಯಾಯಾ ಮವೇ ಆಗಿದೆ ಆದುದರಿಂದ ಅವುಗಳು ಏನನ್ನು ತಿಂದರೂ ಸುಲಭವಾಗಿ ಜೀರ್ಣಿಸು ತ್ತದೆ ಮಾತ್ರವಲ್ಲದೆ ದೇಹವು ದುಂಡಗೆ ಇದ್ದು ನೋಟಕ್ಕೆ ಚೆನ್ನಾಗಿರುತ್ತದೆ

ಈಗ ವಿವರಿಸಿದ ಕಸಬುಗಳೆಲ್ಲವೂ ಈಗಿನ ವಾತಾವರಣದಲ್ಲಿ ಗ್ರಾಮವೃತ್ತಿಗಳಾಗಿ ಪರಿಣಮಿಸಿವೆ ನಾಗರೀಕ ಕಸಬುಗಳೇ ಬೇರೆ ಆ ಕಸಬುದಾರರು ತಮಗೆ ಆರೋ ಗ್ಯವು ಬೇಕೆಂದಿದ್ದರೆ ವ್ಯಾಯಾಮವನ್ನು ಮಾಡಿಯೇ ತೀರಬೇಕು. ಸರಕಾರಿ ಉದ್ಯೋಗ, ವೈದ್ಯಾ ವೃತ್ತಿ, ಲೆಕ್ಕ ಬರೆಯುವಿಕೆ, ಉಪನ್ಯಾಸ ಬರೆಯುವಿಕೆ, ಚಿತ್ರ ಬರೆಯುವುದು ಕವಿತೆ ಮಾಡುವುದು, ಫೋಟೋ ತೆಗೆಯುವುದು, ಛಾಪ ಖಾನೆ ಕೆಲಸ, ಮೋಹರು ಕೆತ್ತುವುದು, ಬೆತ್ತದ ಕೆಲಸ, ಸರಾಫ ವೃತ್ತಿ, ಜೀನಸು, ಜವಳಿ ಮೊದಲಾದ ವ್ಯಾಪಾರಗಳೇ ನಾಗರೀಕತನದ ಕಸಬುಗಳಾಗಿವೆ ಇವರೆಲ್ಲರೂ ಮನಸ್ಸು, ಬುದ್ಧಿ, ಕಣ್ಣು ಮತ್ತು ಕೆಲವಂಶದಲ್ಲಿ ಕೈಗಳಿಗೆ ಸಹ ಕೆಲಸ ಕೊಡುವರಲ್ಲದೆ ಉಳಿದ ಅಂಗಗ ಳಿಗೆ ಕೊಡುವ ಕೆಲಸವು ಎಷ್ಟಕ್ಕೂ ಸಾಲದು. ಆಹಾರ ಜೀರ್ಣಾಂಗಗಳನ್ನು ಉದ್ದೀಪಿಸು ವಂತಹ ಕೆಲಸವೇ ಇಲ್ಲ ಸಾಮಾನ್ಯತಃ ಇವರು ಒಂದು ಆಸನವನ್ನೇರಿ ತಮ್ಮ ಕಸಬನ್ನು ಮಾಡತೊಡಗಿದರೆ ಆ ಮಧ್ಯಾಹ್ನದಲ್ಲಿ ಅನ್ನಪಾನ ಗಳನ್ನು ಸೇವಿಸುವರೆ ಸಹ ಸಂದರ್ಭವಿಲ್ಲ ದಂತಾಗುವದನ್ನು ನಾವೆಷ್ಟೋ ಕಾಣಬಹುದು ಅಥವಾ ಅಂತಹ ತೀವ್ರ ಕಾರ್ಯಗಳಿಲ್ಲದಿ ದ್ದರೂ ದೊಡ್ಡಸ್ತಿಕೆಯಿಂದಾಗಲೀ ಔದಾಸೀನ್ಯ ದಿಂದಾಗಲೀ ಗೌರವಕ್ಕೆ ಕುಂದು ಬಂದೀತೆಂದಾ ಗಲೀ ಕಾಫಿ, ತಿಂಡಿ ಮೊದಲಾದುದನ್ನು ತಾವಿ ದ್ದಲ್ಲಿಗೇನೇ ತರಿಸಿಕೊಳ್ಳುವ ಸುಹಾನುಭಾವ ರಾಗಿರುವರು. ಇಂತಹವರ ದೇಹದಿಂದ ಒಂದು ತೊಟ್ಟು ಬೆವರು ಸಹ ಹೊರ ಹೊರಡ ದಿರುವದರಿಂದ ಅವರ ದೇಹದಲ್ಲಿ ಬೊಜ್ಜು ಬೆಳೆಯುವದು ಮಾತ್ರವಲ್ಲದೆ ಒಂದೆರಡು ಮುಷ್ಟಿ ಅಕ್ಕಿ ಅನ್ನವನ್ನುಣ್ಣುವಷ್ಟು ಜೀರ್ಣ ಶಕ್ತಿ ಸಹ ಇಲ್ಲದಂತಾಗುವದು. ಕಾಲಕ್ರ ಮೇಣ ಬೊಜ್ಜು ಬೆಳೆಯುತ್ತಾ ಹೋದ ಹಾಗೆ ಕೂತಲ್ಲಿಂದ ಏಳಬೇಕಾದರೆ ಇನ್ನೊಬ್ಬರು ಕೈ ಯಿಂದ ಹಿಡಿದು ಎಬ್ಬಿಸಬೇಕಾಗಿಯೂ ಬರ ಬಹುದು. ಈ ಭೀತಿಯಿಂದಲಾದರೂ ವ್ಯಾಯಾಮ ಮಾಡಬೇಕೆಂಬ ಉದ್ದೇಶದಿಂದ ಯಾವುದಾದರೊಂದು ಕ್ಲಬ್ಬಿಗೆ ಹಿಂದಿಷ್ಟು ವಂತಿಗೆ ಕೊಟ್ಟು ಟೆನ್ನಿಸ್ ಹಾಕಿ, ಕ್ರಿಕೆಟ್, ಫೂಟ್‌ಬೋಲ್ ಮೊದಲಾದುದನ್ನು ಆಡುತ್ತಿರು ವರು. ಅಂತೂ ಇವೆಲ್ಲವೂ ಕ್ರಮವಾಗಿ ಗೌರವಾಸ್ಪದವಾದ ಒಂದೊಂದು ವಿಧದ ವ್ಯಾಯಾಮವೇ ಆಗಿದೆ. ಆದರೆ ಇದನ್ನು ಆಡುವರೆ ಸ್ವಲ್ಪ ಮುಂದಿಯೇ ಸಾಕಾಗುತ್ತದೆ. ಸಾವಿರಾರು ಜನರು ಸುಮ್ಮನೆ ಕುಳಿತು ನೋಡು ತ್ತಿರುವ ಸೋಮಾರಿತನವು ಬಹು ಶೋಚನೀ

ವ್ಯಾಯಾಮ / ಮಾಡುವುದರಲ್ಲಿಯೂ ಕ್ರಮಗಳಿವೆ. ಅದು ದೇಹಾರೋಗ್ಯಕ್ಕೆ ಬಹಳ ಒಳ್ಳೆಯದೆಂದು ಅದನ್ನು ಎಲ್ಲರೂ ಯಾವಾ ಗಲೂ ಮಿತಿಮೀರಿಯೂ ಮಾಡಬಾರದು. ವಾಯು ಮತ್ತು ಪಿತ್ತ ವಿಕಾರವುಳ್ಳವನೂ, ಮುದುಕನೂ, ಬಾಲಕನೂ, ಹೊಟ್ಟೆ ತುಂಬ ಉಂಡವನೂ ವ್ಯಾಯಾಮವನ್ನು ಮಾಡಿದರೆ ಅದರಿಂದ ಆರೋಗ್ಯಕ್ಕೆ ಹಾನಿಯಾಗಬಹುದು. ಹಾಲು, ತುಪ್ಪ ಮೊದಲಾದಸ್ನಿಗ್ಧಾಹಾರಗಳನ್ನೆ ಸೇವಿಸುತ್ತಿರುವ ಬಲಿಷ್ಠನೂ ಸಹ ಅರ್ಧ ಶಕ್ತಿ ಯಿಂದ ವ್ಯಾಯಾಮವನ್ನು ಮಾಡಬೇಕು ಎಂದರೆ ಸರ್ವಾಂಗಗಳೂ ಒಮ್ಮೆ ಬೆವರಿತೆಂದರೆ ಕ್ಷಣ ನಿಲ್ಲಿಸಬೇಕು ಎಂಬ ಅರ್ಥ. ಹೇಮಂತ, ಶಿಶಿರ, ವಸಂತ ಋತುಗಳಲ್ಲಿ ವ್ಯಾಯಾಮ ವನ್ನು ಕ್ರಮವಾಗಿ ಮಾಡಬೇಕು ಉಳಿದ ಕಾಲಗಳಲ್ಲಿ ಸ್ವಲ್ಪ ಕಡಿಮೆ ಮಾಡಬೇಕು. ಯಾವಾಗಲೂ ಸರಿಯೇ, ವ್ಯಾಯಾಮವನ್ನು ಮಿತಿಮೀರಿ ಮಾಡಲೇ ಬಾರದು ಅದರಿಂದ ತುಂಬಾ ಅನರ್ಥಗಳುಂಟಾಗುವುವು. ಬಾಯಾ ರಿಕೆ, ಕಾಸ, ಶ್ವಾಸ, ರಕ್ತಪಿತ್ತ, ಶ್ರಮ, ವಾಂತಿ, ಜ್ವರ, ಕಡೆಗೆ ಕ್ಷಯ ರೋಗವೂ ಸಹ ಸಂಭ ವಿಸಬಹುದು ಮಿತವಾದ ವ್ಯಾಯಾಮದಿಂದ ಗುಣಗಳೆಷ್ಟು ಇವೆಯೋ? ಅದಕ್ಕಿಂತ ಅಧಿಕ ದೋಷಗಳು ಅತಿ ವ್ಯಾಯಾಮದಿಂದ ತಲೆದೋ ರುವುವು ವ್ಯಾಯಾಮದಿಂದ ಜಠರಾಗ್ನಿಯು ಜ್ವಲಿಸುತ್ತಿರುವಾಗ ಪೌಷ್ಟಿಕ ಆಹಾರವನ್ನು ಸೇವಿಸದೆ ಹೋದರೆ ರಸಾದಿ ಸಪ್ತ ಧಾತುಗಳೇ ಜಠರಾಗ್ನಿಗೆ ತುತ್ತಾಗಿ ದೇಹವು ಕ್ಷೀಣವಾಗು ವುದು ಕ್ಷಯರೋಗದಲ್ಲಿ "ವ್ಯಾಯಾಮ ಶೋಷ" ಎಂಬ ಪ್ರಭೇದವು ಈ ಒಂದೇ ಕಾರ ಣದಿಂದ ವ್ಯಕ್ತವಾಗಿದೆ ಆದುದರಿಂದ ಮಿತ ವ್ಯಾಯಾಮದಲ್ಲೇ ಪ್ರತಿಯೊಬ್ಬನೂ ಗಮನಿಸು ವುದು ಮುಖ್ಯ ಕರ್ತವ್ಯವಾಗಿದೆ

ಇಲ್ಲೇ ಮೊದಲು ಸೂಚಿಸಲ್ಪಟ್ಟ ಕಸಬು ದಾರರು ಯಾವ ಒಂದು ವಿಧದ ವ್ಯಾಯಾಮ ವನ್ನೂ ಮಾಡಬೇಕಾಗಿಲ್ಲ ಅವರ ಕಸಬೇ ವ್ಯಾಯಾಮವಾಗಿರುವುದರಿಂದ ಪುನಃ ಪ್ರತ್ಯೇಕ ವಾಗಿ ಮಾಡಲು ಪ್ರಾರಂಭಿಸಿದರೆ ಆಗ ಮಿತಿ ಮೀರಿದಂತಾಗುವುದು ಈ ಎಲ್ಲಾ ಕಾರ ಗಳಿಂದ ವ್ಯಾಯಾಮಕ್ಕೆ ಅರ್ಹನಾದವನು ಕ ಬುದ್ಧಿಯನ್ನುಪಯೋಗಿಸಿ ಮಿತವಾಗಿ ಯಾ ದಾದರೊಂದು ವಿಧದ ವ್ಯಾಯಾಮವನ್ನು ಸಾ ಸುತ್ತಿದ್ದಾರೆ ಅದ ಆತನ ಆರೋಗ ತುಂಬಾ ಸಹಕಾರಿಯಾಗುಹುದೆಂದು ನಂಬಿಕೆ ಇದೆ

ಕ್ರಿಮಿಗಳ ಅಥವಾ ಭ್ರಮರಗಳ ಕಡಿತವಾದರೆ

ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟ

ಝಾಂಬಕನ್ನುಪಯೋಗಿಸಿರಿ.

ಸೊಳ್ಳೆಗಳು, ಇರುವೆಗಳು, ಚಾಟ್ಟೆ, ಜೇನು ನೊಣಗಳು ಅಥವಾ ಚೇಳುಗಳು ನಿಮ್ಮನ್ನು ಕಚ್ಚಿದಲ್ಲಿ, ಚರ್ಮವು ಭಯಂಕರವಾದ ರೀತಿಯಲ್ಲಿ ಉಬ್ಬಿಬಂದು ಉರಿಯು ನೋವನ್ನು ಸಹಿಸಲಾರದೆ ಬಹಳಾಗುವಿರಿ. ಇಂತಹ ಸಂದರ್ಭಗಳಲ್ಲಿ ಝಾಂಬಕನ್ನು ಆದಕ್ಕೆ ಹಚ್ಚಿದರೆ ತುಂಬಾ ಒಳ್ಳೆ, ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟ ಈ ಮುಲಾಮು ವಿಷವನ್ನೆಳೆದು ಬಿಡುವ ಕಲೆ ಗಳಿಲ್ಲದಂತೆ ನಿಮಗೆ ಸುಖವನ್ನೀಯುವುದು. ಎಲ್ಲಾ ಔಷಧಿಯ ಅಂಗಡಿಗಳಲ್ಲೂ ಮಾರಾಟಕ್ಕೆ ಸಿಗುತ್ತದೆ

ಬೆಲೆ ರೂಪಾಯಿ 1 ಅಥವಾ

ರೂ. 2—4—0.

ಝಾಂಬಕ್

Zam Buk

ಚಿಕ್ಕಮಕ್ಕಳು ಅಳುವುದೇಕೆ?

ಎಂಬುದನ್ನು ತಿಳಿಯದೆ, ಅನೇಕ ಹೆತ್ತವರು, ತಮಗಿಚ್ಛೆ ಕಂಡಂತೆ ಅವು ಗಳನ್ನು ಸಮಜಾಯಿಸಲು ನೋಡುವರು.

ಅವುಗಳಿಗೆ ಅಜೀರ್ಣವಿದೆ ಉದರಶೂಲೆ ಇದೆ— ಅನುವಾತದ ಉಪದ್ರವೂ ಇರಬಹುದು—

ಎಂಬುದನ್ನು ಬಲ್ಲಿರಾ?

ಬೆಬೂಲಿನ್

ಇದು ಚಿಕ್ಕ ಶಿಶುಗಳಿಗಾಗಿಯೇ ತಯಾರಿಸಲ್ಪಟ್ಟುದು ಸೋಡಿಯಮಿನ ಆಲ್ಕಲಾಯಿನ್ ಲವಣ, ಮೆಗ್ನೆಶಿಯಮ್, ಪೊಟೇಶಿಯಮ್, ಮತ್ತು ಒಮಿರೇಮ, ಓಮ ಮತ್ತು ಮೆಂಥಲ್ ಇವುಗಳ ಮಧುರವೂ ರುಚಿಕರವೂ ಆದ ಮಿಶ್ರಣದಿಂದ ತಯಾರಿಸಲ್ಪಟ್ಟಿದೆ. ಚಿಕ್ಕ ಮಕ್ಕಳ ಉದರಶೂಲೆಯನ್ನು ನಿವಾರಿಸಿ, ಮಕ್ಕಳ ಕರುಳುಗಳನ್ನು ಸ್ವಚ್ಛ ವಿರಿಸಿ, ಬಲಗೊಳಿಸಿ ಕಾಪಾಡುವುದು.

ವಾಂತಿ, ನಾಯಿಕೆಮ್ಮು—ಇವುಗಳಿಗೂ ಉಪಯೋಗಿಸಲ್ಪಡಬಹುದಾದ ಅಮೂಲ್ಯ ಔಷಧ. ಮಕ್ಕಳಿಗೆ ಹಲ್ಲು ಮೂಡುವ ಕಾಲದಲ್ಲಾಗುವ ವಿಕಾರಗಳನ್ನೆಲ್ಲ ನಿಲ್ಲಿಸುವುದು. ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ! ಅನುಪಾನ ಪತ್ರ, ಸೀಸೆಯೊಂದಿಗಿದೆ.

ಬೊಂಬಾಯಿ ಬೆಬ್ ಕೆಮಿಕಲ್ ವರ್ಕ್ಸ್‌ನವರು ತಯಾರಿಸಿದ್ದು

ದಕ್ಷಿಣ ಕನ್ನಡ ಜಿಲ್ಲೆಗೆ ಏಜಂಟರು—ಫೋಮ್ಯಲರ್ ಸ್ಟೋರ್ಸ್ ರಥಬೀದಿ ಮಂಗಳೂರು.

ಸ್ತನೋ ಸ್ತೇಧಃ

STHANO STHEDAH — THE MALAYALA OUSHADHA CO. CHALAPURAM, MALABAR

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವು—ಅವುಗಳು ಉಬ್ಬಿ ಗೋಲಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣವಪರತ.

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ ಸ್ತನೋಸ್ತೇಧಾದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದೀರ್ಘವಾದ ತೊಂದರೆಯಿಂದಲೂ, ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲು ಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಪುಷ್ಟ ಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲುದು. ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ, ಸ್ತನಗಳ ಪೌಷ್ಟಿಕತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣ ಲಾಭವನ್ನು ಹೊಂದಿದವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ. 3 ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ 3

ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ ಮಲಬಾರು

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ

1. ಮುಟ್ಟಿನದೋಷ 2 ಸಂತತಿ ಪ್ರತಿಬಂಧಕ, 3 ಧಾತುಪುಷ್ಟಿ, 4 ಲಿಂಗವೃದ್ಧಿ 5 ಸ್ತ್ರೀರೋಗ, 6 ಕ್ಷಯ ಸಂಹಾರಿ 7 ವಾತರೋಗ

Shiromani Narayanacharya & Co.,

Silk Lace & Cloth Manufacturers

Choukhamba Benares City

THIS MAN
OUR CUSTOMER

ಕೃಷ್ಣರಾಯರು — ಸ್ವಾಮಿ ಆನಂದರಾಯರೆ, ತಾವು ತಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು. ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು. ಅದೇ ನಮೂನೆಯ ಶೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು.

ಆನಂದರಾಯರು — ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ

ಕೃಷ್ಣರಾಯರು — 'ಅದರ ಕ್ರಯವೆಷ್ಟು?"

ಆನಂದರಾಯರು — ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಮೆ ದರದಲ್ಲಿ ಸಿಕ್ಕಿತು. ತಾವು ಸಹ ಅಲ್ಲಿಗೆ ಬರೆದು ತರಿಸಿರಿ. ಕ್ರಯಕ್ಕೆ ತಕ್ಕ ಮಾಲು ಕಳುಹಿಸುತ್ತಾರೆ, ರಂಗು ಮಾಸದಿರುವ ಶೀರೆಗಳು ಸಿಗುತ್ತವೆ 16 ಮೊಳ ಉದ್ದ 2½ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ ಜರಿಯು ಬುಟ್ಟಿ ಇರುವುದು 18 ಮೊಳ ಶೀರೆ 1ಕ್ಕೆ ರೂ 45ರಿಂದ 150ರ ವರೆಗೆ 16 ಮೊಳ ಜರಿಯ ಶೀರೆ 1ಕ್ಕೆ ರೂ. 10ರಿಂದ 55ರ ವರೆಗೆ ರವಿಕೆ ಕಣಕ್ಕೆ ರೂ 1-8-0ರಿಂದ 4ರ ವರೆಗೆ ಬುಟ್ಟಿಹಾಕಿದ ರವಿಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ 8 ಮೊಳದ ಪಂಚೆ 1ಕ್ಕೆ ರೂ. 7ರಿಂದ 15ರ ವರೆಗೆ 8 ಮೊಳದ ಜರಿ ಮಡಿ 1ಕ್ಕೆ ರೂ. 10ರಿಂದ 35ರ ವರೆಗೆ. 5 ಮೊಳದ ಪಟಕ 1ಕ್ಕೆ ರೂ. 4ರಿಂದ 16ರ ವರೆಗೆ 6 ಮೊಳದ ಪಟಕ 1ಕ್ಕೆ ರೂ. 6ರಿಂದ 35ರ ವರೆಗೆ, ಬೇಕಾದಲ್ಲಿ ತರದ ಮ್ಯಾಲುಗಳ ಕ್ರಯಪಟ್ಟಿ ಇನಾಂ 1 ಆಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್.

ಅಲಭ್ಯ ಲಾಭ! ಸುವರ್ಣ ಸಂದರ್ಭ!

ಪ್ರಥಮ ಬಹುಮಾನ ರೂ. 5000 ಎರಡನೇ ಬಹುಮಾನ ರೂ. 2500

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಆದ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

"ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ"

ತೆಗೆಯುವ ತಾರೀಕು 30-6-1936. ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ.

ಸೋಡ್ತಿಯ ಮೊಬಲಗು: ರೂ. 50,000

ಒಟ್ಟು ಬಹುಮಾನಗಳ ಸಂಖ್ಯೆ: 1778. ಮೌಲ್ಯ ರೂ. 20,000.

ಸಂಪೂರ್ಣ ಪುಸ್ತಕಗಳನ್ನು ಮಾರುವವರಿಗೆ ಯಾತೊಂದ ಕೊಳ್ಳುವವರಿಗೆ ವಿಶೇಷ ಬಹುಮಾನಗಳಿವೆ.

ಸಂಪೂರ್ಣ ಪುಸ್ತಕಗಳನ್ನು ಮಾರಾಟ ಮಾಡುವವರಿಗೆ ಪ್ರತ್ಯೇಕ ನಗದಿ ಕಮಿಶನ್ ಕೂಡಾ ಇದೆ

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಟಿಕೇಟು ಪುಸ್ತಕಗಳ ಮಾರಾಟಕ್ಕಾಗಿ ದಕ್ಷರೂ ಉತ್ಸಾಹಿಗಳೂ ಆದ ಏಜಂಟರು ಬೇಕಾಗಿದ್ದಾರೆ

ಟಿಕೆಟಿನ ವಿವರಗಳಿಗೆ ಮತ್ತು ಪುಸ್ತಕಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ದಿ ಮೇನೇಜರ್ — ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

ವಿ. ಸೂ. ಯಾವ ಕಾರಣದಿಂದಲಾದರೂ ಸೋಡ್ತಿ ತೆಗೆಯುವ ತಾರೀಕನ್ನು ಮುಂದುಗೊಳಿಸಲಾಗುವುದಿಲ್ಲ

ನೋಟೀಸು.

Canara Bank Limited,
City Mangalore

ಕೆನರಾ ಬೇಂಕ್ ಲಿಮಿಟೆಡ್,
ಸಿಟಿ ಮಂಗಳೂರು,

ಒಂಟಿನ್ನಳ ಪೋಸ್ಟು ಇರ್ವತ್ತೂರು ಮಾಗಣೆ ಬೊಳಿಯಾರು ಗ್ರಾಮದಲ್ಲಿರುವ ಮಾರಪ್ಪ ಮೂಡ್ಯರ ಅಳಿಯ ತ್ಯಾ-ವಣ್ಣ ಭಂಡಾರಿಯವರು ಸದರಿ ಬೇಂಕಿನಿಂದ ತಾ 10-11-1933 ರಲ್ಲು ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗನ್ನಾಗಲೀ ಅದರ ಬಡ್ಡಿಯನ್ನಾಗಲೀ, ಅವರಿಗೆ ಟಪ್ಪಾಲು ರಿಜಿಸ್ಟ್ರಿ ನೋಟೀಸು ಮೂಲಕವಾಗಿ ತಿಳಿಸಿದರೂ, ಕ್ಲಪ್ತ ವಾಯಿದೆಗೆ ಕೊಟ್ಟು ತೀರಿಸದಿರುವುದರಿಂದ, ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ — ಸದರಿ ಸಾಲಗಾರರು ಬೇಂಕಿಗೆ ಬಹಾ ಅಸಲು ಬಡ್ಡಿಯನ್ನಾಗಲೀ, ಯಾ ಬಡ್ಡಿಯನ್ನಾಗಲೀ ಇದೇ 1936ನೇ ಮಾರ್ಚ 25ರ ಒಳಗೆ ಸಲ್ಲಿಸಿ ಆಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದಲ್ಲಿ, ಸದರೀ ನಗಗಳನ್ನು 1936ನೇ ಇಸ್ವಿ ಮಾರ್ಚ ತಾ 26ನೇ ಗುರುವಾರ ಮಧ್ಯಾಹ್ನ 2 ಘಂಟೆಗೆ ಯಾ ಬೇಂಕಿಗೆ ಯುಕ್ತ ತೋರುವ ಇತರ ಸಮಯ ಏಲಂ ಮಾಡಲಾದೀತು

ಲೋನು ನಂಬ್ರ 1,293/33 ಮೊಬಲಗು ರೂ 60—0—0 ಏಲಂ ತಾರೀಕು ವರೆಗೆ ಬಡ್ಡಿ ಟಪ್ಪಾಲು ಖರ್ಚು ಕೂಡಾ ರೂ. 7—2—3 ಈ ನೋಟೀಸಿನ ಖರ್ಚು ಅಲ್ಲಾದಾ.

ಆಫೀಸು, 18—3—'36

P Krishna Kamath, *Agent*

ಹೊಸ ನಮೂನೆ ಹೊಸ ನಮೂನೆ

New Design

ಶ್ರೀ ಶೃಂಗೇರಿ ಜಗದ್ಗುರುಗಳಾದ
ಶ್ರೀ ಚಂದ್ರಶೇಖರ ಭಾರತೀ ಸ್ವಾಮಿ
ಗಳವರು ಮತ್ತು
ಕರಕಮಲಸಂಜಾತರಾದ
ಶ್ರೀಮದಭಿನವ ವಿದ್ಯಾತೀರ್ಥ
ಸ್ವಾಮಿಗಳವರ

10 × 15 ಸೈಸಿನಲ್ಲಿ ಸುಂದರವಾದ ಫೊಟೋಗಳು ಕಲ್ಕತ್ತ ಲಕ್ಷ್ಮೀವಿಲಾಸ ಪ್ರೆಸ್ಸಿನಲ್ಲಿ 60 ಪೌಂಡ್ ಇಂಗ್ಲಿಷ್ ಆರ್ಟ್ ಪೇಪರಿನಲ್ಲಿ 6 ಬಣ್ಣಗಳಲ್ಲಿ ಅಚ್ಚಾಗಿರುತ್ತೆ 1 ಡಜನ್ ಕಾಪಿಗಳಿಗೆ ಬೆಲೆ ರೂ 3. ಕಾಲುಭಾಗ ಅಡ್ವಾನ್ಸು ಸಹಿತ ಆರ್ಡರ್ ಕೊಡುವವರಿಗೆ ಮೇಲ್ಕಂಡ ಗುರುಶಿಷ್ಯರು ಮತ್ತು ಶ್ರೀ ಗಣೇಶ ಶ್ರೀನಿವಾಸ್ ಮೈಸೂರು ಮಹಾರಾಜರವರು ವಗೈರೆ ಫೊಟೋಗಳಿರುವ 1936ನೇ ಇಸವಿಯ ಕ್ಯಾಲೆಂಡರು ಒಂದು ಪ್ಯಾಕಿಂಗ್ ಮತ್ತು ಪೋಸ್ಟೇಜು ಫ್ರೀಯಾಗಿ ಕಳಿಸಲ್ಪಡುತ್ತೆ. ಮೇಲ್ಕಂಡ ಪ್ರೆಸ್ಸಿನಲ್ಲಿ ಅಚ್ಚಾದ ಇತರ ಫೊಟೋಗಳೂ ಸಹ ದೊರೆಯುತ್ತೆ.

Sree Sharada Frame Works,
Sringeri—Kadur Mysore State.

ನೋಟೀಸು

ಉಡುಪಿ ತಾಲ್ಲೂಕು ಹಿರೆಹಳ್ಳಿ ಗ್ರಾಮದ ನಲ್ಕಾದ್ರು ಮಂಜಮ್ಮ ಸೆಟ್ಟಿಯರ ಮಗಳು ದಾರಮ್ಮ ಸೆಟ್ಟಿಯು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ:—

ನನಗೆ ಕುಟುಂಬದ ಆಸ್ತಿ ಅಲ್ಲದೆ ಸ್ವಂತಕ್ಕೆ ೩೦ ಮುಡಿ ಅಕ್ಕಿ ಹುಟ್ಟುವರಿ ಆಸ್ತಿ ಇರುತ್ತದೆ. ಪ್ರಕೃತ ಸಾಲ ವಗೈರೆ ಮಾಡುವ ಅಗತ್ಯ ಇರುವುದಿಲ್ಲ. ಆದರೆ ಇತ್ತಲಾಗೆ ನನ್ನ ಗಂಡ ಬೂದಾಡಿ ಸಂಕೈ ಸೆಟ್ರು ಸದ್ರಿ ಆಸ್ತಿಯನ್ನು ತನ್ನ ಹಕ್ಕಿನದೆಂತ ಮಾಡಿಕೊಳ್ಳುವ ದುರಾಭಿಲಾಷೆಯಿಂದಲೂ ಮತ್ತು ಸೃಷ್ಟಿನೋಟು ಕರಾರು ತಯಾರು ಮಾಡುವ ಉದ್ದೇಶದಿಂದ ರಾತ್ರಿಕಾಲದಲ್ಲಿ ನಾನು ನಿದ್ದೆಮಾಡುವ ಸಮಯ ನನ್ನ ಹೆಬ್ಬೆಟ್ಟು ಮುದ್ರೆ ತೆಗೆಯುವ ಅಭಿಪ್ರಾಯದಲ್ಲಿ ಇದ್ದದ್ದಾಗಿ ನನ್ನ ತಿಳುವಳಿಕೆಗೆ ಬಂದಿರುತ್ತದೆ. ಆದ್ದರಿಂದ ನನ್ನ ಹೆಸರಿನ ಯಾವುದೊಂದು ರಿಕಾರ್ಡುಗಳು ರಿಜಿಸ್ಟ್ರಿ ಆದ ವಿನಹ ಮಾಜೂರು ಆಗತಕ್ಕದ್ದಲ್ಲವೆಂಬ ಸಂಗತಿ ಈ ಮೂಲಕ ತಿಳಿಸಿರುತ್ತೇನೆ

III ಈ ಮೂರು ಗೆರೆ ದಾರಮ್ಮ ಸೆಟ್ಟಿಯ ರುಜು.

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 4	3— 1[illegible]
ಹೊಸ ಮುಡ್ಡಿ	3—10	4— [illegible]
ಗುಡ್ಡು ಸುಗ್ಗಿ	3— 8	3—1[illegible]
ಊರ ಅವ್ವಲ್ ಬೆಳ್ತಿಗೆ	4— 0	1— [illegible]
ರಂಗೂನು ಬೆ. ಗೋ. ಗಳ್ಳೆ	6— 4	7— [illegible]
ಎಲ್ಲೂರು ಬೆ ಮು. ಗಳ್ಳೆ	4— 4	4— [illegible]
ಗೋದಿ ಗೋಣಿ ಗಳ್ಳೆ	8 — 8	10— [illegible]
ತೊಗರಿ ಗೋಣಿ ಗಳ್ಳೆ	9 — 0	9 — [illegible]
ಹುರುಳಿ ಗೋಣಿ ಗಳ್ಳೆ	5— 4	6 — 0
ಕಡಲೆ ಗೋಣಿ ಗಳ್ಳೆ	7 — 4	9 — 8
ತೊಗರಿಬೇಳೆ ಗೋಣಿ ಗಳ್ಳೆ	11— 0	15— 8
ಉದ್ದು ಗೋಣಿ ಗಳ್ಳೆ	9— 8	10 — 0
ಹೆಸರು ಗೋಣಿ ಗಳ್ಳೆ	9— 4	9—12
ಊರುಬೆಲ್ಲ ಖಂಡಿ ಗಳ್ಳೆ	30— 0	35— 0
ಉಪ್ಪು ಗೋಣಿ ಗಳ್ಳೆ	4— 8	4— 8
ಕೊಪ್ರ ಖಂಡಿ ಗಳ್ಳೆ	60— 0	70— 0
ಕೊಪ್ರ ಹಿಂಡಿ ಖಂಡಿ ಗಳ್ಳೆ	28— 0	20— 0
ಎಳ್ಳಿಂಡಿ ಖಂಡಿ ಗಳ್ಳೆ	33 —12	30— 0
ಕೊಪ್ರ ಎಣ್ಣೆ ಮುಡಿ ಗಳ್ಳೆ	5— 0	6— 0
ಎಳ್ಳೆಣ್ಣೆ ಮುಡಿ ಗಳ್ಳೆ	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳೆ	6— 5	6— 5
ಮೋರಿಸ ಸಕ್ಕರೆ ಮು. ಗಳ್ಳೆ	3— 9	3 — 9
ಮೆಣಸು	2— 8	4— 0
ಸಾಸಿವೆ ಮುಡಿ ಗಳ್ಳೆ	5 — 8	6— 0
ಕಾಳುಮೆಣಸು ಖಂ ಗಳ್ಳೆ	102— 8	105—
ಯೇಲಕ್ಕಿ ಬೀಜ ಮುಡಿಗಳ್ಳೆ	38— 0	39— 0
ಗೇರುಬೀಜ ಮು. ಗಳ್ಳೆ	4— 6	4 — 8
ಕಬ್ಬಿಣ ಖಂಡಿ ಗಳ್ಳೆ	35— 0	37— 8
ತಾಂಬ್ರತಗಡು ಮು. ಗಳ್ಳೆ	9— 12	9— 14
ತಾಂಬ್ರಪಾತ್ರಗಳು ಮು ಗಳ್ಳೆ	12— 8	14— 0
ಬೆಳ್ಳಿ ಸೇರು ಗಳ್ಳೆ	17— 8	18— 0
ಹಿತ್ತಾಳೆ ತಗಡು ಮು. ಗಳ್ಳೆ	10— 0	10—
ಪವನು 1ಕ್ಕೆ	22— 8	22— 8
ಹುಣಸೆ ಹುಳಿ ಖಂಡಿ ಗಳ್ಳೆ	20— 0	25— 0
ನೇಟಿವ್ ಕಾಫಿ ಖಂಡಿ ಗಳ್ಳೆ	145— 0	150— 1
ಫ್ಲಟೇರು ಕಾಫಿ ಖಂಡಿ ಗಳ್ಳೆ	185— 0	190— 0
ಬೀಡಿಯೆಲೆ ಖಲ್ಲಿ	25— 0	26 — 8

ಶಾಲಿವಾಹನ ಶಕ ೧೮೫೭ನೆಯ ಯುವ ಸಂವತ್ಸರದ ಫಾಲ್ಗುಣ ಬ ೧೩ ಶನಿವಾರದಿಂದ ಚೈತ್ರ ಶು ೫ ಶುಕ್ರವಾರದ ವರೆಗಿನ ಪಂಚಾಂಗ (ಗಳಿಗೆ ವಿಘಳಿಗೆ ವಿನ ಸುಗ್ಗಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
21	ಶನಿ	೧೩	೩೩	ಶತಭಿಷ	೪೮	೮	*ಚಾಂದ್ರಮಾನ ಯುಗಾದಿ
22	ರವಿ	೧೪	೧೭	ಪೂ. ಭಾದ್ರ	೪೪	೯	
23	ಸೋಮ	೩೦	೧೧	ಉ. ಭಾದ್ರ	೪೦	೧೦	
24	*ಮಂಗಳ	೧	೫೪	ರೇವತಿ	೩೭	೧೧	
25	ಬುಧ	೨	೫೨	ಅಶ್ವಿನಿ	೩೬	೧೨	
26	ಗುರು	೪	೪೮	ಭರಣಿ	೩೯	೧೩	
27	ಶುಕ್ರ	೫	೪೪	ಕೃತ್ತಿಕ	೩೩	೧೪	

ಯುರೋಪಿನ ಕಲಹವು ಶಾಂತಿಯಿಂದ ನಿವಾರಣೆಯಾಗುವುದೆ?

ಜರ್ಮನಿಗೆ ರಾಷ್ಟ್ರಾಭಿಮಾನ ಮಾತ್ರ ಬೇಕಾಗಿದೆ!

ಜರ್ಮನಿಯ ಮೇಲೆ ತಪ್ಪು ಹೊರಿಸಲಾಯಿತು.

ಜನಾಂಗ ಮಂಡಳದ ಸಮಿತಿಯ ಅಧಿವೇಶನಗಳು ಲಂಡನ್ ನಗರದ ಸೆಂಟ್ ಜೇಮ್ಸ್ ಅರಮನೆಯಲ್ಲಿ ಪ್ರಾರಂಭವಾಗಿವೆ. ಪ್ರಥಮ ವೇ ಫ್ರೆಂಚ ಮತ್ತು ಬೆಲ್ಜಿಯಮ್ ಸರಕಾರಗಳಿಂದ ಜರ್ಮನಿಯ ವರ್ತನೆಯಿಂದ ವಾರ್ಸಲೆ ಸಂಧಿ ಮತ್ತು ಲೋಕಾರ್ನೊ ಒಪ್ಪಂದಗಳು ಮುರಿಯಲ್ಪಟ್ಟಿತಾಗಿದೆಂಬ ಬಂದ ತಂತಿಗಳು ಓದಲಾಗಿ ಈ ಮೇಲೆ ವಿಷಯವನ್ನು ಚೆನ್ನಾಗಿ ಪರಿಶೀಲಿಸಿ ಜರ್ಮನಿಯ ಮೇಲೆ ತಪ್ಪು ಹೊರಿಸಲಾಯಿತು. ಆದುದರಿಂದ ಈಗಿನ ಕಲಹವು ಜನಾಂಗ ಸಭೆಯ ಇತ್ಯರ್ಥಕ್ಕೆ ಒಳಗಾಗಿರುತ್ತದೆ. ಬ್ರಿಟಿಷರು ಈ ವಿಚಾರದಲ್ಲಿ ಯುರೋಪು ಖಂಡದ ಶಾಂತಿಸ್ಥಿರವಾಗುವಂತೆ ಲೋಕಾರ್ನೊ ಒಪ್ಪಂದಕ್ಕೆ ಸಹಿಹಾಕಿದ ಜನಾಂಗಗಳೊಡನೆಯೂ, ಜನಾಂಗ ಮಂಡಳದೊಡನೆಯೂ, ಸಂಪೂರ್ಣವಾಗಿ ಸಹಕರಿಸುವರೆಂದು ಬಹಿರಂಗ ವ್ಯವಹಾರದ ಕಾರ್ಯದರ್ಶಿಗಳಾದ ಮಿ| ಎಡನ್ನರು ತಿಳಿಸಿದರು. ಈ ಕಲಹದ ಭವಿಷ್ಯವು ಜನಾಂಗ ಮಂಡಳದ ಮೇಲೆ ಹೊಂದಿಕೊಂಡಿದೆ.

ಫ್ರೆಂಚರ ಆರೋಪ

ಜರ್ಮನಿಯು, ರ್‍ಹೈನ್‌ಲೆಂಡಿನಲ್ಲಿ ಮಾಡಿದ ದಂಡಯೋಜನೆಯು ಸಂಕೇತಿಕವಾದುದೆಂದೂ, ಎಡನ್ನರಿಗೆ ಅವರು ಕಳುಹಿಸಿ ಕೊಟ್ಟ ಸೂಚನೆಗಳಿಗೆ ಉತ್ತರಬಂದಿತು. ಆದರೆ ಫ್ರೆಂಚರ ಆರೋಪವೆ ಬೇರೆ. ರ್‍ಹೈನ್‌ಲೆಂಡಿನಲ್ಲಿ ಈಗ 36000 ಸೈನಿಕರಿರುವ ಮಹಾ ದಂಡು ಸೇರಿರುತ್ತದೆ, ಅನೇಕ ತರದ ಯುದ್ಧ ಸಿದ್ಧತೆಗಳು ನಡಿದಿವೆ. ತನ್ನ ವರ್ತನೆಯ ಕ್ರಮ ಸಿದ್ಧವಾದುದೆಂದು ತೋರಿಸಲು, ಇದಕ್ಕೆ ಫ್ರೆಂಚ ರಷ್ಯಾ ಒಪ್ಪಂದದ ಸ್ಥಿರತ್ವವೇ ಕಾರಣವೆಂದಿರುವರ, ಇದರಲ್ಲಿ ನ್ಯಾಯವಿಲ್ಲ. ಆ ಒಪ್ಪಂದದ ಸ್ಥಿರತ್ವ ಮಾತುಕತೆಗಳು ನಡೆದುದು ಅನೇಕ ತಿಂಗಳ ಹಿಂದೆ. ಜರ್ಮನಿಯು ಈ ವಿಚಾರ ಇತರ ಜನಾಂಗಗಳ ಮುಂತರದೆ ಏಕಾಏಕಿ ಹೀಗೆ ವರ್ತಿಸಿದುದು ನ್ಯಾಯಸಮ್ಮತವಲ್ಲ. ಆದ್ದರಿಂದ ಈ ವಿಚಾರವನ್ನು ಲೋಕಾರ್ನೊ ಒಪ್ಪಂದದ ಜನಾಂಗಗಳೊಡನೆ ಚರ್ಚಿಸಬಹುದಿತ್ತು. ಇವರ ಈ ವರ್ತನೆಯಿಂದ ಯುರೋಪು ಖಂಡದ ಶಾಂತಿರಕ್ಷಣೆಗಾಗಿ ಮಾಡಿದ ಒಪ್ಪಂದಗಳನ್ನು ತಿರಸ್ಕರಿಸಿದಂತಾಗಿದೆ. ಲೋಕಾರ್ನೊ ಒಪ್ಪಂದದ ಇತರ ಜನಾಂಗಗಳು, ಫ್ರೆಂಚರ ಮತ್ತು ಬೆಲ್ಜಿಯಮ್ಮಿನ ರಕ್ಷಣ ಕಾರ್ಯವನ್ನು ವಹಿಸಬೇಕಾಗಿದೆ ಎಂದು ಫ್ರೆಂಚ ಪ್ರತಿನಿಧಿಗಳ, ಭಾಷಣ.

ಜರ್ಮನಿಗೆ ಆಮಂತ್ರಣ ಕಳುಹಿಸಲಾಯಿತು.

ಲೀಗ್ ಕೌನ್ಸಿಲಿನವರು ಕೆಲವರು ಕೂಡಿ ಜರ್ಮನಿಗೆ ಈ ಪ್ರಶ್ನೆಯ ಚರ್ಚೆಯಲ್ಲಿ ಭಾಗವಹಿಸಲು, ಆಮಂತ್ರಣ ಕಳುಹಿಸಿಕೊಡುವ ಏರ್ಪಾಡುಗಳನ್ನು ಮಾಡಿದರು. ಇದಕ್ಕೆ ಜರ್ಮನಿಗೆ, ಕೆಳಗಿನ ಉತ್ತರವು ಬಂದಿರುತ್ತದೆ.

ಜರ್ಮನಿಯು ಆಮಂತ್ರಣವನ್ನು ಈ ಎರಡು ಶರ್ತಗಳ ಮೇಲೆ ಸ್ವೀಕರಿಸುತ್ತದೆ.

(೧) ಈ ಪ್ರಶ್ನೆಯ ಚರ್ಚೆಯಲ್ಲಿ ತಮಗೆ ಇತರ ಜನಾಂಗಗಳೊಡನೆ ಸರಿಸಮಾನತೆ ದೊರಕಬೇಕು.

(೨) ಈ ಸಭೆಯಲ್ಲಿ ಲೋಕಾರ್ನೊ ಒಪ್ಪಂದವನ್ನು, ಹಿಟ್ಲರನು ಕೊಟ್ಟ ಶಾಂತಿ ಸೂಚನೆಗಳೊಡನೆ ಚರ್ಚಿಸಬೇಕು.

ಅಂದರೆ, ಜರ್ಮನಿಯು, ಈಗಿನ ಕಲಂಕ ನಿವಾರಣೆಯನ್ನು ಶಾಂತತೆಯಿಂದ ಮಾಡಲು ಸಿದ್ಧವೆಂದು ವ್ಯಕ್ತವಾಗುತ್ತದೆ. ಆದರೆ, ಇವರಿಗೆ ಇತರರಂತೆ ಈ ಸಭೆಯಲ್ಲಿ ಸರಿಸಮಾನವಾದ ಹಕ್ಕುಗಳು ದೊರಕಬೇಕಾಗಿದೆ. ದೊರಕಬೇಕಾಗಿದೆ. ಆದರೆ ಈ ಪ್ರಭುತ್ವವನ್ನು ಪಡೆಯಲು ಇವರಿಗೆ ಯುರೋಪಿನ ಶಾಂತಿ ಭಂಗಮಾಡುವ ಇಚ್ಛೆಯಿಲ್ಲವೆಂದು ತಿಳಿದು ಬರುತ್ತದೆ. ಜರ್ಮನಿಗೆ ಮೇಲಿನ ರಾಜಕೀಯ ಯೋಜನೆ ಅತಿಗತ್ಯವಾದುದೆಂದೂ, ಅದನ್ನು ನೆರವೇರಿಸುವದರಲ್ಲಿ ಯಾವ ರೀತಿಯಲ್ಲೂ ದುಡುಕದೆ ಮುಂದುವರಿಯಬೇಕಾಗಿ ದೃಢ ಸಂಕಲ್ಪ ಮಾಡಿರುವರು. ಆದುದರಿಂದಲೆ, ಲೀಗ್ ಕೌನ್ಸಿಲಿನವರು ತಮ್ಮ ಚರ್ಚೆಯನ್ನು ಅವರ ಸೂಚನೆಗಳ ಮೇಲೆ ಆಧರಿಸಿ ನಡೆಯಿಸಬೇಕೆಂದು ಇವರು ಛಲ ಹಿಡಿದಿರುವರು.

ಜರ್ಮನಿಯ ಉತ್ತರದ ಪರಿಣಾಮವೇನಾಗಿದೆ?

ಈ ಉತ್ತರದಿಂದ ಫ್ರೆಂಚರು ಬಹಳವಾಗಿ ರೇಗಿರುವರು. ಹಿಟ್ಲರನ ಮೇಲಿನ ಶರ್ತಗಳನ್ನು ಒಪ್ಪಿಕೊಳ್ಳಲು ಅವರು ಎಷ್ಟಕ್ಕೂ ಸಿದ್ಧರಿಲ್ಲವಂತೆ. ಜರ್ಮನಿಗೆ ಸರಿಸಮಾನತ್ವಕೊಡಲು ಇತರ ಕೆಲವು ಸದಸ್ಯ ಜನಾಂಗಗಳು ಸಿದ್ಧರಿಲ್ಲವಂತೆ. ಜರ್ಮನಿಯು ಈಗಿನ ವರ್ತನೆಯಿಂದ, ಒಂದು ಅಪರಾಧಿ ಜನಾಂಗವಾಗಿದೆ. ಇದರ ಒದ್ದು ನೆಟ್ಟಗೆ ನೋಡುವುದು ಲೋಕಾರ್ನೊ ಒಪ್ಪಂದದ ಜನಾಂಗಗಳ ಮತ್ತು ಜನಾಂಗ ಮಂಡಳವು ಕೃತವ್ಯವೆಂದು ಹಲವರು ವಾದಿಸುತ್ತಿದ್ದಾರೆ.

ಶ್ರೀ: ಪಂಡಿತ ಜವಾಹರಲಾಲರು ಡಿಲ್ಲಿಗೆ ತೆರಳಿದರು

ಶ್ರೀ| ಪಂಡಿತ ಜವಾಹರಲಾಲರು, ಮಹಾತ್ಮಾ ಗಾಂಧಿ ಮೊದಲಾದ ಕಾಂಗ್ರೆಸ್ ಮುಖಂಡರೊಡನೆ, ಕಾಂಗ್ರೆಸ್ಸಿನ ಮುಂದಿನ ವರ್ತನೆಯ ಕುರಿತು ಮಾತುಕತೆ ನಡೆಸಲು, ಮೊನ್ನೆ ದಿವಸ ಡಿಲ್ಲಿಗೆ ತೆರಳಿರುವರು. ಡಿಲ್ಲಿ ರೈಲ್ವೆ ಸ್ಟೇಷನಿನಲ್ಲಿ, ಶ್ರೀ| ಜವಾಹರಲಾಲರ ಆಗಮನವನ್ನು ನಿರೀಕ್ಷಿಸಲು ದೊಡ್ಡ ಜನಸ್ತೋಮವು ನೆರೆದಿತ್ತು, ಪಂಡಿತರ, ಇಳಿದ ಕೂಡಲೆ, ಜಯಘೋಷಗಳು ನಡೆದುವು. ಜವಾಹರಲಾಲರನ್ನು ನೋಡುವ ಕುತೂಹಲವು ಜನಸ್ತೋಮಕ್ಕೆ ಬಹಳವಾಗಿದ್ದುದರಿಂದ, ಜನರ ಗೊಂದಲವನ್ನು ತಡೆಯಲು ಪೋಲೀಸರಿಗೂ ಸ್ವಯಂಸೇವಕರಿಗೂ ಅಸಾಧ್ಯವಾಯಿತು. ಬಹಳ ಕಷ್ಟದಿಂದ ಕಾರನ್ನು ಸೇರಿ, ತನ್ನ ಮಾವನ ಮನೆಗೆ ನಡೆದರು. ಇವರನ್ನು ಬಹಳ ವಿಜೃಂಭಣೆಯಿಂದ ಮೆರವಣಿಗೆಯಲ್ಲಿ ಕೊಂಡುಹೋಗಲು ಸಿದ್ಧತೆಗಳಾಗಿದ್ದುವು. ಪಂಡಿತರು ಅದಕ್ಕೆ ಸಮ್ಮತಿಸಲಿಲ್ಲ. ನಂತರ ಮಹಾತ್ಮಾಜೀಯವರಿರುವ ಹರಿಜನ ಕೊಲೊನಿಗೆ ನಡೆದರು. ರಾಮಾಯಣವನ್ನು ಕೇಳಿ ಕುಳಿತಿದ್ದ ಮಹಾತ್ಮಾಜೀಯವರು, ಎದ್ದು ಬಹಳ ವಿನಯದಿಂದ ಇವರನ್ನು ಅಪ್ಪಿಕೊಂಡರು. ಸಂತಾಪಸೂಚಕ ಮಾತುಕತೆಗಳು ನಡೆದ ತರುವಾಯ, ಶ್ರೀ| ಪಂಡಿತರೂ ಮಹಾತ್ಮಾಜೀಯವರೂ ಗುಪ್ತವಾಗಿ ಒಂದು ತಾಸು ಮಾತಾಡಿದರಾಗಿ ತಿಳಿದು ಬರುತ್ತದೆ. ಡಿಲ್ಲಿಯ ಆ ಹರಿಜನ ಕೊಲೊನಿಯಲ್ಲಿ ಮುಂದಕ್ಕೆ ಮುಖ್ಯ ಸಂಗತಿಗಳು ನಿಷ್ಕರ್ಷೆಯಾಗಲಿವೆ. ನವರಾಜ ಶಾಸನದಲ್ಲಿ ಅಧಿಕಾರ ಸೂತ್ರವನ್ನು ವಹಿಸುವ ವಿಚಾರವು ಚರ್ಚಿಸಲಾಗುವುದೆಂದೂ, ಶ್ರೀ| ಭುಲಾಭಾಯಿ ದೇಸಾಯಿ, ಸತ್ಯಮೂರ್ತಿ ಇತ್ಯಾದಿ ಮುಖಂಡರಿಗೆ, ಅಧಿಕಾರ ಸೂತ್ರವನ್ನು 'ವಹಿಸುವುದರಲ್ಲಿ ಸಮ್ಮತವಿರುವುದೆಂದೂ ಅವರ ಈ ಮತವನ್ನು ಮಹಾತ್ಮಾಜೀಯವರಿಗೆ ತಿಳಿಸಲಾಗಿದೆಯೆಂದು ತಿಳಿದುಬರುತ್ತದೆ. ಜವಾಹರಲಾಲರ ಮತವೇನಿರುವುದೆಂದು ನೋಡಲಿದೆ. ಈ ವಿಚಾರ ಶ್ರೀ| ಪಂಡಿತರಿಗೂ ಇತರ ಕಾಂಗ್ರೆಸ್ ಮುಖಂಡರು ಮತಭೇದವಿಬರುವ ಸಂಭವಗಳಿವೆ. ಆದರೆ, ಮಹಾತ್ಮಾ ಗಾಂಧಿಯವರು ಈ ಪ್ರಶ್ನೆಯು ಯೋಗ್ಯ ರೀತಿಯಲ್ಲಿ ಇತ್ಯರ್ಥವಾಗುವಂತೆ ಮಾಡುವರೆಂದು ತಿಳಿದುಬರುತ್ತದೆ. ಸಮಯ ಸಿಲ್ಲುವರಂತೆ. ಕಾಂಗ್ರೆಸ್ ಬಿನ್ನವವನ್ನು ಬರೆಯಲು ರಾಜಕೀಯ ಸ್ಥಿತಿಯನ್ನು ನಿರೀಕ್ಷಿಸುತ್ತಿದ್ದಾರೆ. ಬಿನ್ನಪವನ್ನು ಬರೆಯುವ ಕಾರ್ಯವನ್ನು ಬೇಗನೆ ಪ್ರಾರಂಭಿಸುವರು. ಪ್ರಯಾಣದಲ್ಲಿ ಪ್ರತಿಯೊಂದೆಡೆಯಲ್ಲಿ ಶ್ರೀ| ಜವಾಹರಲಾಲರನ್ನು ನೋಡಲು ತಂಡೋಪತಂಡ ಜನರು ನೆರೆದಿದ್ದರಂತೆ.

ಜರ್ಮನಿಯು ಫ್ರೆಂಚರೊಡನೆ ಸಂಧಿಗೆ ಸಿದ್ಧವಿದೆ

"ನನ್ನ ರಾಷ್ಟ್ರೀಯ ಗೌರವವನ್ನು ಫ್ರೆಂಚರಿಗೆ ಒಪ್ಪಿಸುವುದು ನಿಮಗೆ ಬೇಕಾಗಿದೆಯೆ?" ಎಂದು ಹಿಟ್ಲರನನ್ನು ಇವತ್ತಿಗೆ ಹತ್ತು ದಿನಗಳಲ್ಲಿ ಮಾಡಿದ ಮೂರನೇ ಭಾಷಣದಲ್ಲಿ ಅಂದನು. ಇದಕ್ಕೆ ಯಾರೂ ಸಿದ್ಧರಿಲ್ಲವೆಂದು ಎಲ್ಲರೂ ಏಕಕಂಠದಿಂದ ಉತ್ತರವಿತ್ತರು. "ವಾರ್ಸಲೆ ಸಂಧಿ ಮತ್ತು ಲೋಕಾರ್ನೊ ಒಪ್ಪಂದವು ನಿಜವಾಗಿಯೂ ಈ ಕಲಹದ ಸಮಸ್ಯೆ ಅಲ್ಲ. ೬೬ ಮಿಲಿಯ ಜನರಿರುವ ಒಂದು ಜನಾಂಗವನ್ನು ಹೊರಗಿಡುವುದು ನ್ಯಾಯವೆ?" ಎಂದು ಹಿಟ್ಲರನ ಮಾತು! ಕೊನೆಗೆ, ತಾನು ಫ್ರೆಂಚರೊಡನೆ ಯೋಗ್ಯ ತರದ ಸಂಧಿ ಮಾಡಿಕೊಳ್ಳಲು ಸಿದ್ಧನಿದ್ದೇನೆಂದು ತಿಳಿಸಿದನು.

ಜರ್ಮನಿಯು ಲೀಗ್ ಕೌನ್ಸಿಲಿಗೆ ಬರಬಹುದು

ಜರ್ಮನಿಯು ಕಳುಹಿಸಿದ ಎರಡು ಶರ್ತಗಳ ವಿಷಯ ಆಲೋಚಿಸಲು ಲೀಗ್ ಕೌನ್ಸಿಲಿನ ಗುಪ್ತವಾದ ಸಭೆಯೊಂದು ಸೇರಿ ಚರ್ಚೆ ನಡೆದು, ಆತನ ಮೊದಲನೆಯ ಶರ್ತವು ಈ ರೂಪದಲ್ಲಿ ಸ್ವೀಕರಿಸಲಾಗಿದೆ. 'ಅವರು ಇತರ ಲೋಕಾರ್ನೊ ಒಪ್ಪಂದದ ಜನಾಂಗಗಳಂತೆ ಓಟು ಕೊಡುವ ಹಕ್ಕುಗಳಿದ್ದಿದೆ, ಲೀಗ್ ಕೌನ್ಸಿಲಿನ ಸಭೆಯಲ್ಲಿ ಭಾಗವಹಿಸಬಹುದು. ಅವರ ಎರಡನೇ ಶರ್ತದ ವಿಚಾರದಲ್ಲಿ "ಜರ್ಮನಿಯು ಕೊಟ್ಟ ಸಂಧಿ ಸೂಚನೆಗಳನ್ನು ಚರ್ಚೆಯ ವಿಷಯದಲ್ಲಿ ಕಾಪಾಡಿಕೊಳ್ಳಬೇಕ ಎಂಬುದಕ್ಕೆ ಅದು ಲೋಕಾರ್ನೊ ಒಪ್ಪಂದದ ಸದಸ್ಯಜನಾಂಗ ಸಭೆಯಲ್ಲಿ ಚರ್ಚಿಸಲಾಗುವುದಂತೆ. ಆದರೆ ಇಲ್ಲಿ ನಡೆಯುವ ಚರ್ಚೆಯಲ್ಲಿ ಫ್ರಾನ್ಸಿಗೂ ಬೆಲ್ಜಿಯಮಿಗೂ ಓಟು ಕೊಡುವ ಹಕ್ಕುಗಳಿಲ್ಲ. ಈ ಒಪ್ಪಂದದ ಜಾಮೀನುದಾರರಾದ ಜನಾಂಗಗಳಿಗೆ ಮಾತ್ರ ಯಾವತ್ತೂ ನಿಷ್ಕರ್ಷೆಯ ಮೇಲೆ ಓಟು ಕೊಡುವ ಹಕ್ಕುಗಳಿವೆ. ಈ ಜನಾಂಗಗಳು ಇಟೆಲಿ ಮತ್ತು ಬ್ರಿಟನು. ಆದರಿಂದ ಮುಂದಿನ ಸ್ಥಿತಿಯು ಈ ಎರಡು ಜನಾಂಗಗಳ ಮೇಲೆ ಹೊಂದಿಕೊಂಡಿದೆ. ಆದರೆ ಈಗಿನ ಸ್ಥಿತಿಯಲ್ಲಿ ಇಟೆಲಿಯು ಹೇಗೆ ವರ್ತಿಸುವುದೆಂದು ಎಲ್ಲರಿಗೂ ತಿಳಿದೇ ಇದೆ. ಅಂದರೆ ಇನ್ನೊಂದು ಮಹಾ ಯುದ್ಧದ ಸಂಭವಗಳು ಬ್ರಿಟಿಷರ ಮೇಲೆ ಹೊಂದಿಕೊಂಡಿದೆ. ಜರ್ಮನಿಯು ಅವರ ಎರಡನೆಯ ಶರ್ತವನ್ನು ಬೇರೆಯಾಗಿ ಚರ್ಚಿಸಲ್ಪಡುವುದೆಂದು ಭರವಸೆ ಪಡೆದು, ಲೀಗ್ ಸಭೆಗೆ ಪ್ರಾತಿನಿಧ್ಯ ಮಂಡಳವನ್ನು ಕಳುಹಿಸುವುದೆಂದು ತಿಳಿದುಬರುತ್ತದೆ.

ಜನಾಂಗ ಮಂಡಳದ ಗತಿ ಏನಾಗುವುದು?

ಬ್ರಿಟಿಷರ ದಂಡಯೋಜನೆ ಕಾರ್ಯಗಳು ಹಿಟ್ಲರನ ರ್‍ಹೈನ್‌ಲೆಂಡಿನ ದಂಡಯೋಜನೆ, ಇಟೆಲಿಯ, ಆಫ್ರಿಕದ ಸಮರ, ಇವೆಲ್ಲಾ ಎಲ್ಲರಲ್ಲಿ ಜನಾಂಗಸಭೆಯು ಪ್ರಪಂಚದ ಶಾಂತಿಸ್ಥಾಪನೆಯ ವಿಚಾರದಲ್ಲಿ ಎಷ್ಟರ ಮಟ್ಟಿಗೆ ಫಲಕಾರಿಯಾಗಬಹುದು ಎಂಬ ಭೀತಿಯು ಆಲೋಚನೆಗೆ ಉಂಟಾಗಿವೆ. ಜನಿವದಲ್ಲಿ ಎಲ್ಲರೂ ಈ ...

ಜನಾಂಗ ಮಂಡಳವು ಈಗಿನ ಸ್ಥಿತಿಯಲ್ಲಿ ಮೇಲಿನ ವಿಚಾರಗಳನ್ನು ಯೋಗ್ಯ ರೀತಿಯಲ್ಲಿ ಇತ್ಯರ್ಥಗೊಳಿಸುವುದೆಂದು ಹೇಳುವುದು ಅಸಾಧ್ಯ. ಅಂದರೆ ಜನಾಂಗ ಮಂಡಳದಿಂದ ಮುಂದಿನ ಶಾಂತಿರಕ್ಷಣೆಯಾಗುವುದೆಂಬುದು ಬರೇ ಕನಸಿನ ಮಾತಾಗಿರುತ್ತದೆ. ಜನಾಂಗ ಮಂಡಳವು ಪ್ರಪಂಚದಲ್ಲಿ ಇತ್ತೀಚೆಗೆ ನಡೆದ ಅನೇಕ ಸಂಗ್ರಾಮ ಘಟನೆಗಳ ಸಮಯ ಶಾಂತಿ ಸ್ಥಾಪನೆ ಯೋಜನೆಯಾಗಿ ಅಷ್ಟೊಂದು ಉಪಯೋಗವಾದುದು ಕಂಡುಬರುವುದಿಲ್ಲ. ಈ ಭಾರಿ ಯುದ್ಧಾಗ್ನಿಯು ಪೌರ್ವಾತ್ಯದಲ್ಲಿ ಜನಿಸಿ ಸಮಸ್ತ ಯುರೋಪು ಖಂಡಕ್ಕೆ ಪ್ರಸರಿಸಬಹುದು. ಜನಾಂಗ ಸಭೆಯು ವ್ಯರ್ಥರೂಪವಾಗುವುದರಲ್ಲಿ ಏನೂ ಸಂದೇಹಗಳಿಲ್ಲ. ಈ ಭಯಂಕರ ಪರಿಸ್ಥಿತಿಯನ್ನು ಹೇಗೆ ನಿವಾರಿಸಬಹುದು? ಈಗ ಇರುವ ಜನಾಂಗ ಮಂಡಳಗಳ ಕ್ರಮಗಳು ಯೋಗ್ಯ ರೀತಿಯಲ್ಲಿ ಬದಲಾವಣೆಯಾಗಿ, ಪ್ರಪಂಚದ ಶಾಂತಿಯ ವಿಚಾರ ಸಂಪೂರ್ಣ ಗ್ಯಾರಂಟಿ ಕೊಡುವ ನವ ಜನಾಂಗ ಮಂಡಳವು ಸೃಷ್ಟಿಯಾಗಬೇಕು.

ನೋಟೀಸು

ದಿ ಕೆನರಾ ಬೇಂಕ್ ಲಿಮಿಟೆಡ್, ಪುತ್ತೂರು.

ಈ ಕೆಳಗ ಹೆಸರ ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಆಧಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ನ ಅದರ ಮೇಲಿಣ ಬಡ್ಡಿಯನ್ನಾಗಲಿ, ಸರಿಯಾಗಿ ವ್ಯಾದೆಗೆ ಕೊಡದೆ ಬಾಕಿ ಮಾಡಿದುದರಿಂದಲೂ ಅವರಿಗ ಕ್ರಮವಾಗಿ ಕಳಿಸಿ ರಿಜಿಸ್ಟ್ರಿ ನೋಟಿಸು ಅವರು ನಿರಾಕರಿಸಲ್ಪಟ್ಟದ್ದಾಗಿ ಮರಳಿ ಬಂದಿರುವುದರಿಂದಲೂ, ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದರಿ ಮೊಬಲಗಿನ ಬೇಂಕಿಗೆ ಸಲತಕ್ಕ ಸಾಲದ ಅಸಲು ಬಡ್ಡಿ, ರಿಜಿಸ್ಟ್ರಿ ನೋಟಿಸು ವಗೈರೆ ಖರ್ಚು ವ ಈ ಖರ್ಚು ಸಹ ಕಾಣಿಸಿ ಇದೇ ಬರುವ ಎಪ್ರಿಲ್ ತಿಂಗಳ ತಾರೀಕು ಮೂವತ್ತ (30–4–1936) ರೊಳಗೆ, ಸದರಿ ಮೃತಪಟ್ಟ ಸಾಲಗಾರರ ನ್ಯಾಯವಾದ ಹಕ್ಕುದಾರರು, ಬ್ಯಾಂಕಿಗೆ ತಂದು ಸಲ್ಲಿಸಿ, ಅಡವಿಟ್ಟ ಸದರಿ ನಗಗಳನ್ನು ಬಿಡಿಸಿಕೊಂಡು ಹೋಗದೆ ಬಾಕಿಯಿಟ್ಟ ಪಕ್ಷದಲ್ಲಿ ಈ ಮಿದ್ದ ಸದ್ರಿ ನಗಗಳನ್ನು ತಾ 5–5–36ನೇ ಮಂಗಳವಾರ ಯಾ ಅದರ ನಂತರ ಬೇಂಕಿನವರಿಗೆ ಸಾಧ್ಯವಾದಷ್ಟು ಯುಕ್ತತೋರುವ ಬೇರೆ ತಾರೀಕಿನಲ್ಲಿ ಪುನಃ ಯಾವ ತರದ ನೋಟೀಸೂ ಕೊಡದೆ ಅಪರಾಹ್ನ ಗಂಟೆ 3ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು

ಲೋನು ನಂಬ್ರ 70 38, ಕುಂಬಣ್ಣ ಶೆಟ್ಟಿಯವರ ಅಳಿಯ ಅತ್ರಬೈಲ್ ಭಂಡಾರಿ ಕೈನಾರ ಗ್ರಾಮ ಉಪ್ಪಿನಂಗಡಿ ಪೋಸ್ಟ್ ಅಸಲು ರೂಪಾಯಿ 140.

ಲೋನು ನಂಬ್ರ 131/34, ಮೊಹಿಸ್ ಪಾಲಣ್ಣರ ಮಗ ಬರ್ನಾಲಸ್ ಪಾಲಣ್ಣ ವ್ಯಾಪಾರಿ ಪುತ್ತೂರು; ಅಸ್ಲು ರೂ 200

M. Anantha Bhandary,

ಕೆನರಾ ಬೇಂಕ್ ಲಿಮಿಟೆಡ್, ಏಜಂಟ್.

ಪುತ್ತೂರು, 17–3–36.

ಸಾಮಾಜಿಕ ಕಥೆ

ನಿರಂಜನನ ಸಂಕಟ

(ಏಕಾಂಕ ನಾಟಕ)

"ರಸಿಕರಂಜನ"

(Rights Reserved)

ಪಾತ್ರಗಳು:

ವೆಂಕಟು: ಒಬ್ಬ ಬಿ ಎ ವಿದ್ಯಾರ್ಥಿ, ಕರ್ನಾಟಕ ವಿದ್ಯಾರ್ಥಿಭವನದ ಒಬ್ಬ ನಿವಾಸಿ

ರಾಮು:
ವಾಸು:
ನಾಣು: } ಬಿ ಎ. ವಿದ್ಯಾರ್ಥಿಗಳು; ವೆಂಕಟನ ಸ್ನೇಹಿತರು, ಕರ್ನಾಟಕ ವಿದ್ಯಾರ್ಥಿಭವನದ ನಿವಾಸಿಗಳು.
ಮಾಧು:
ಶೀನು:

ರಾಮಚಂದ್ರರಾಯರು: ಹೊರವೂರಿನ ಒಬ್ಬ ಸಜ್ಜನ ಗೃಹಸ್ಥ.

ಸ್ಥಳ:

ಕರ್ನಾಟಕ ವಿದ್ಯಾರ್ಥಿಭವನ: ವೆಂಕಟನ ಕೋಣೆ

ಸಮಯ:

ಒಂದು ಆದಿತ್ಯವಾರ. ಸಾಯಂಕಾಲ ೪॥ ಗಂಟೆ

ದೃಶ್ಯ ೧.

[ವೆಂಕಟು, ರಾಮು, ಮಂಚದ ಮೇಲೆ ಕುಳಿತಿರುವನು. ನಾಣು ಕುರ್ಚಿಯ ಮೇಲೆ, ವಾಸು ಮಂಚದ ಅಂಚಿನಲ್ಲಿ, ಮಾಧು ಮೇಜಿನ ಮೇಲೆ ಟ್ರಂಕಿನ ಮೇಲೆ ಕುಳಿತಿರುವರು. ಎಲ್ಲರ ಕೈಯಲ್ಲಿ ಸಿಗರೇಟುಗಳು ಉರಿಯುತ್ತಿವೆ. ಮೇಜಿನ ಮೇಲೆ ಒಂದು ಪತ್ರಿಕೆಯಲ್ಲಿ ಕಡಲೆ ಬೀಜ, ಬಾಳೆಯ ಹಣ್ಣುಗಳ ಸಿಪ್ಪೆಗಳ ರಾಶಿಯು ತುಂಬಿದೆ]

ವೆಂಕಟು:—ಹೊಟ್ಟೆ ಗಟ್ಟಿಯಾಯಿತು. ಇನ್ನು ನಡೆಸಿ ರಿಹರ್ಸಲ್ ನನಗೆ ಓದಬೇಕಿದೆ.

ವಾಸು—ವ್ಹಾ, ನಿನಗೊಬ್ಬನಿಗೇ ಪರೀಕ್ಷೆಯಿದೆ ಸು ... ನಾವೆಲ್ಲರೂ ಉಡಾಳರು, ಅಲ್ಲವೇ?

ರಾಮು—ಚೀ, ವಾಸು! ಇಷ್ಟು ತಿಳಿಯದೆ ಇರುವೆಯಾ? ಅವನಿಗೆ ಓದಲಿಕ್ಕಿದೆ ಎಂಬುದು ರಾಮಚಂದ್ರರಾಯರ ಕಾಗದ, ಕಾಣದೋ? ಸರಿಯಾಗಿ ಎಷ್ಟು ಪತ್ರಗಳು ಬರುತ್ತಾರೆಂಬುದನ್ನು ಇನ್ನೊಮ್ಮೆ ತಿಳಿದುಕೊಳ್ಳಲಿಕ್ಕೆ

ನಾಣು—ಇಲ್ಲವೇ, ಆ ಪುಷ್ಪಕಾಂತಿ ರಂಭೆಯೋ, ಊರ್ವಶಿಯೋ, ತಾನೂ ಒಂದು ಕಾಗದವನ್ನು ತನ್ನ ಭಾವೀ ಪತಿಗೆ ಈಗಲೇ ಬರೆದು ಕಂದೆಯ ಒಕ್ಕೋಟೆಯಲ್ಲೇ ಸೇರಿಸಿರುವಳೋ ಏನು ಕರ್ಮವೋ!

ಎಲ್ಲರೂ—ಹ ಹ್ಹ ಹ ಹ್ಹ ಹ!

ವೆಂಕಟು—ಆಗಲಿ, ಆಗಲಿ, ನಿಮ್ಮ ತಮಾಷೆ! ಪುಣ್ಯಕ್ಕೆ 'ಶೂರ್ಪನಖಿ' ಇಲ್ಲವೇ 'ಹಿಡಿಂಬೆ' ಎನ್ನದುದಕ್ಕೆ ನಾನು ನಿಮಗೆಲ್ಲರಿಗೂ ಋಣಿಯಾಗಿರಬೇಕಾಗಿದೆ.

ಮಾಧು—ಋಣಿಯೋ ಗಿಣಿಯೋ ಇನ್ನು ರಾಣಿಯು ಬಂದ ಮೇಲೆಯೇ ತಿಳಿಯುವುದು

ವಾಸು—ಎಂದರೆ ರಾಣಿಯ ಕೈಯಲ್ಲಿ ಗಿಣಿಯಾಗಿ ಕುಣಿಯುವನೆಂದೋ ನಮ್ಮ ವೆಂಕಟ?

ಮಾಧು—ಹಾಗೆಂದು ನೀವೇ ಎನ್ನಿ ನಾನೇಕೆ ಎನ್ನಲಿ?

ರಾಮು.—ಅಂತೂ, ಅವಳು ಕಾಗದ ಬರೆದಿರುವಳೆಂಬುದು ನಿಜವೇ?

ವೆಂಕಟು—ಕಾಗದ? ಬರೆಯುವುದು? ಅಂತಹ ಅದೃಷ್ಟವು ಆ ಹಳ್ಳಿಗಾಡಿನ ಹುಡುಗಿಯ ಹಣೆಯಲ್ಲಿ ಬರೆದಿರುವುದಾದರೆ, ನಮ್ಮ ಭಾಗ್ಯಕ್ಕೆ ಎಣೆಯಲ್ಲಿದೆ?

ವಾಸು.—ವೆಂಕಟು! ಹಳ್ಳಿಯ ಹೂವೆಂದು ಅಷ್ಟು ಧಿಕ್ಕಾರವೇ? ಪಟ್ಟಣದ ಪುಷ್ಪವು ನಡುಹಗಲ ಮುಂಚಿನ ಎಳೆಬಿಸಿಲಿಗೇ ಬಾಡುತ್ತಿರುವಾಗ, ಸಂಜೆಯಾದರೂ ಹೊಳೆಯುತ್ತ ನಲಿಯುವ ಹಳ್ಳಿಯ ಹೂವಿನ ನಟಮುಟನು ನೀನೇನು ಬಲ್ಲೆ?

ರಾಮು:—ಎಂತಹ ಮಾಂಕನೋ ನೀನು, ವಾಸು! ವೆಂಕಟನಿಗೆ ಬೇಕಾದುದು ಗಟ್ಟಿ ಮುಟ್ಟಿಲ್ಲ, ಥಳಕು ಬಳಕೋ!—ಘಮಘಮ ಅದೆಲ್ಲಿದೆಯೋ, ಹಳ್ಳಿಯ ಹೂವಿನಲ್ಲಿ?

ಶೀನು.—ಸರಿ, ಸರಿ! ಬೆಡಗು-ಬಿನ್ನಾಣ, ಒನಪು-ಒಯ್ಯಾರ, ಥಳಕು-ಬೆಳಕು ಇಲ್ಲದ ಹೂವಿಗೆ ಬರೀ ವಾಸನೆಯಿದ್ದು ಫಲವೇನು? ಸಂತೋಷಪಡಿಸಲಾರದೇ ಇರುವಂತಹ ಹೂವನ್ನು ಹೂವೆಂದು ಕರೆಯುವುದೂ ಅಪರಾಧವಾದೀತು, ಅಲ್ಲವೇ, ವೆಂಕಟು?

ಮಾಧು—ಶಹಬಾಸ್, ಶಹಬಾಸ್! ನವನಾಗರಿಕತೆಗೆ ಜಯವಾಗಲಿ! ಹಳ್ಳಿಯ ಹೂಗಳು ಹಳ್ಳಿಯಲ್ಲೇ ಉಳಿಯಲಿ, ಪಟ್ಟಣದವರೆಲ್ಲರೂ ಪಟ್ಟಣದ ಪುಷ್ಪಗಳನ್ನೇ ಮುಡಿದುಕೊಳ್ಳಲಿ!

ವಾಸು—ಅದೇನು ಕೇಳಿಬರುತ್ತಿದೆ?—ಜಟಕಾ ಗಾಡಿಯ ಶಬ್ದವೇ?

ಶೀನು.—ಹೌದು, ಹೌದು. ನಮ್ಮ ಗೇಟಿನ ಮುಂದೆಯೇ ನಿಂತಂತೆ ತೋರುತ್ತದೆ

ನಾಣು—ಒಳ್ಳೆಯ ವ್ಯಾಪಾರ, ವೆಂಕಟು! ನಮಗೆ ತಿಳಿಸಲೇ ಬೇಡವೇ, ರಾಮಚಂದ್ರರಾಯರು ಇಷ್ಟು ಬೇಗನೇ ಬರುವರೆಂದು?

ವೆಂಕಟು—ತಪ್ಪಾಯಿತು, ಕ್ಷಮಿಸಿ ನಿಮಗೆ ಡಂಗುರ ಬಡೆದು ತಿಳಿಸಬೇಕಿತ್ತು

ಮಾಧು:—ಇನ್ನು ಗಾಬರಿ ಬೇಡ, ರೆಪ್ಪೆ ಅಲುಗುತ್ತಿವೆ!

ನಾಣು.—ನೋಡಿ, ಮೂಗಿಗೆ ಖಾರವು ಹೆಚ್ಚಾದಂತಿದೆ, ಇಗೋ ಮುಖವನ್ನೂ ಆಚೆಗೆ ತಿರುಗಿಸಿದನು!

ರಾಮು.—ಇಗೋ, ಕಣ್ಣು ಬಿಡಲಿಕ್ಕೆ ನೋಡುತ್ತಿರುವನು! ಆ ನೀರನ್ನು ಸ್ವಲ್ಪ ಸವರಿ ತೆಗೆ. ಹಾಂ, ಸರಿ ಈಗ ಸರಿಯಾಗಿ ಬಿಡಲಿಕ್ಕೆ ಆಗುತ್ತದೆ!

ಶೀನು.—ಬಹಳ ದಿನಗಳಿಂದ ರಾತ್ರಿ ನಿದ್ದೆ ಕೆಡುತ್ತಿರುವೆಯಾ? ಕಣ್ಣು ಕತ್ತಲು ಬಂತೇ?

ವೆಂಕಟು—ಊಂ ಽ ಽ ಽ—ಊಂ ಽ ಽ ಽ ನಾನೆಲ್ಲಿದ್ದೇನೆ? ಏನಾಯಿತು?

[ಎದ್ದು ಕೂತುಕೊಳ್ಳುವನು]

ಮಾಧು—ಏನೂ ಇಲ್ಲ, ಕಾಣೆಯೋ, ಹುಶ್ಯಾರಿರುವಿ ಏಳಬೇಡ, ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳು [ಅವನನ್ನು ಒತ್ತಾಯದಿಂದ ಮಲಗಿಸ ತೊಡಗುವನು]

[ನಾಣು ಮೂಸುಪ್ಪಿನ ಸೀಸೆಯನ್ನು ಮೇಜಿನ ಮೇಲಿಟ್ಟು, ಅಲ್ಲಿನ ಇನ್ನೊಂದು ಸೀಸೆಯೊಳಗಿಂದ ಒಂದು ಮಾತ್ರೆಯನ್ನು ತಂದು ವೆಂಕಟನ ಬಾಯಲ್ಲಿ ಹಾಕುವನು]

ಮಾಧು—ಇನ್ನು ಸರಿಯಾಗಿ ಮಲಗು ಚೆನ್ನಾಗಿ ವಿಶ್ರಾಂತಿ ಪಡೆಯದ ಏಳಬೇಡ.

N.I.P.
PETROL
READY DELIVERY
ORDERS ARE BOOKED
FOR ALL PARTS OF INDIA
FOR RATES AND AGENCY TERMS APPLY
INTERNATIONAL OIL CO LTD
Jiji House, Revelin Street Fort
BOMBAY

ಮಾಧು ವೆಂಕಟನನ್ನು ಒತ್ತಾಯದಿಂದ ಮಲಗಿಸತೊಡಗುವನು. ನಾಣು ಒಂದು ಮಾತ್ರೆಯನ್ನು ತಂದು ಅವನ ಬಾಯಲ್ಲಿ ಹಾಕುವನು.

ಬಹುಶಃ ನಿದ್ದೆಗೆಟ್ಟು ಓದುವುದರಿಂದಲೋ ಏನೋ. ಆದರೆ ಕೂಡಲೇ ಸ್ಮೃತಿಗೆ ಬರುವರು ಸಾಲದ್ದಕ್ಕೆ ತಕ್ಕ ಔಷಧಿಗಳನ್ನೂ ಬಳಿಯಲ್ಲೇ ಇಟ್ಟುಕೊಳ್ಳುತ್ತಾರೆ

ರಾಯರು:—ನಿಮಗೆ ನಾನು ಬಹಳ ಕೃತಜ್ಞನಾಗಿರುವೆನು ಹೋಗಿಬರುತ್ತೇನೆ

ರಾಮು:—ಎಲ! ನಿಮಗೆ ವೆಂಕಟರಾಯರ ಬಳಿಯಲ್ಲಿ ಕೆಲಸವಿದ್ದು ಇಷ್ಟು ದೂರ ಬಂದೆನೆಂದಿದ್ದಿರಲ್ಲ?

ರಾಯರು:—ಕೆಲಸವಿದ್ದುದೇನೋ ನಿಜ ಆದರೆ ಇದನ್ನು ನೋಡಿದ ಮೇಲೆ ಕೆಲಸವೆಲ್ಲ ಮುಗಿಯಿತಪ್ಪ!

ಎಲ್ಲರೂ—ಎಂದರೆ?

ರಾಯರು:—ಅದೆಲ್ಲಾ ಸ್ವಲ್ಪ ನಾಜೂಕಿನ ವಿಚಾರ ಆದರೂ ನೀವು ನಮಗೆ ಮಾಡಿದ ಉಪಕಾರಕ್ಕಾಗಿ ಅದನ್ನು ನಿಮ್ಮೊಡನೆ ಹೇಳಲು ನನಗೆ ಆಕ್ಷೇಪವೇನೂ ಇಲ್ಲ

ಎಲ್ಲರೂ—ಹಾಗಾದರೆ ಹೇಳಿಯೇ ಬಿಡಿ, ಸ್ವಾಮಿ

ರಾಯರು:—ನಮ್ಮ ಹುಡುಗಿಯನ್ನು ನಿಮ್ಮ ವೆಂಕಟರಾಯರಿಗೆ ಕೊಡಬೇಕೆಂದಿದ್ದೆವು. ಇವರನ್ನೊಮ್ಮೆ ನೋಡಿಕೊಂಡು ಹೋಗ ಬೇಕೆಂದೇ ಬಂದಿದ್ದೆ ಇನ್ನು ಆ ವಿಚಾರ ಬಿಡಬೇಕಾಯಿತು.

ರಾಮು:—ಅಯ್ಯೋ ಹಾಗಾದರೆ, ನಮ್ಮಿಂದಲೇ ನಮ್ಮ ವೆಂಕಟನ ಸಂಬಂಧ ತಪ್ಪುವಂತಾಯಿತೇ

ರಾಯರು: ಎಂದ್ದರೂ, ನಮ್ಮ ಹುಡುಗಿಯು ಬದುಕಿಕೊಂಡಳಲ್ಲ! ಅದಕ್ಕಾಗಿ ನಿಮಗೆ ನನ್ನ ನಮಸ್ಕಾರಗಳು, ಹೋಗಿ ಬರುತ್ತೇನಪ್ಪ

[ಹೋಗುವರು]

ರಾಮು—ಬೇಡಪ್ಪ, ವೆಂಕಟು! ಇನ್ನು ನಾವೇ ಡಂಗುರ ಬಡೆಯುವೆವು ಸ್ನೇಹಿತರಿಂದಾದಮೇಲೆ ಅಷ್ಟಾದರೂ ನೆರವಾಗದಿರಬಹುದೇ?

[ಕಿಟಕಿಯ ಹೊರಗಿನಿಂದ ರಾಮಚಂದ್ರರಾಯರು ಇಣಕಿ ನೋಡುವರು]

ರಾಮಚಂದ್ರ ರಾಯರು—ವೆಂಕಟರಾಯರ ಕೋಣೆಯು ಇದೇಯೋ?

ನಾಣು.—ಹೌದು, ಸ್ವಾಮಿ! ಈಚೆಗೆ ಬನ್ನಿ

[ರಾಮಚಂದ್ರರಾಯರು ಬಾಗಿಲ ಬಳಿಗೆ ಬರುವರು]

ವೆಂಕಟು—ಉಂ ಽ ಽ ಹಾಂ ಽ ಽ ಽ

[ಸ್ಮೃತಿ ತಪ್ಪಿ ಕೆಳಗೆ ಬೀಳುವನು]

ಎಲ್ಲರೂ—ಅಂ ಅಂ ಅಂ, ಹಿಡಿಯಿರಿ, ಹಿಡಿಯಿರಿ!

[ರಾಮು ಶೀನ ವೆಂಕಟನನ್ನು ಹಿಡಿದುಕೊಳ್ಳುವರು]

ದೃಶ್ಯ ೨.

[ರಾಮಚಂದ್ರ ರಾಯರು ಬಾಗಿಲ ಹೊರಗೇ ತಟಸ್ಥರಾಗಿ ನಿಂತು ನೋಡುವರು ಇತರರು ವೆಂಕಟನನ್ನು ಮೇಲೆತ್ತಿ ಮಂಚದ ಮೇಲೆ ಮಲಗಿಸಿದ ಹಾಸಿಗೆಯಲ್ಲಿ ಮಲಗಿಸುವರು ನಾಣು ಒಂದು ಬಟ್ಟೆಯಿಂದ ವೆಂಕಟನಿಗೆ ಗಾಳಿ ಬೀಸುವನು. ರಾಮು ಅವನ ಮುಖದ ಮೇಲೆ ನೀರು ಚಿಮುಕಿಸುವನು ವಾಸು ಮೇಜಿನ ಮೇಲಿಂದ ಒಂದು ಮೂಸುಪ್ಪಿನ ಸೀಸೆಯನ್ನು ತೆಗೆದು ವೆಂಕಟನ ಮೂಗಿನ ಮುಂದೆ ಹಿಡಿಯುವನು. ಮಾಧು ವೆಂಕಟನ ಕೈಯನ್ನು ಎತ್ತಿಕೊಂಡು ನಾಡಿಯ ಬಡಿತವನ್ನು ಪರೀಕ್ಷಿಸುತ್ತಿರುವನು]

[ವೆಂಕಟನು ಮಲಗಿ ನಿದ್ರೆ ಹೋಗುವನು ಎಲ್ಲರೂ ಸರಿಯಾಗಿ ಕುಳಿತುಕೊಳ್ಳುವರು. ರಾಮಚಂದ್ರ ರಾಯರು ಮೆಲ್ಲಗೆ ಕೋಣೆಯೊಳಗೆ ಬರುವರು]

ವಾಸು:—ಸ್ವಾಮಿ, ಬಹಳ ಸಮಯ ತಮ್ಮನ್ನು ದಣಿಸಿದೆವು ಆದರೆ ಮಾಡುವುದೇನನ್ನು? ಉಪಾಯವಿರಲಿಲ್ಲ

ರಾಮಚಂದ್ರರಾಯರು:—ಹೌದಪ್ಪ, ಆದರೆ ಶೀನು ನನಗೂ ಕಣ್ಣಿಲ್ಲವೇ? ಕಣ್ಣಿನಲ್ಲಿ ನೆತ್ತರಿಲ್ಲವೇ?

ರಾಮು.—ಆದರೂ, ಮೊದಲೇ ಪರಸ್ಥಳದಿಂದ ದಣಿದು ಬಂದವರು ಆದ ಕ್ಕಾಗಿಯೇ ಹಾಗೆಂದೆವು.

ರಾಯರು:—ಚಿಂತೆಯಿಲ್ಲ ಆದರೆ ನನಗೆ ವೆಂಕಟರಾಯರನ್ನು ಕಾಣಬೇಕಿತ್ತು ಅದಕ್ಕಾಗಿಯೇ ಇಷ್ಟು ದೂರ ದಣಿದು ಬಂದುದು!

ನಾಣು: ನೀವು ಅವರನ್ನು ಆಗಿನಿಂದಲೇ ನೋಡುತ್ತಿರುವಿರಲ್ಲ ಅವರ ಶುಶ್ರೂಷೆಯನ್ನು ನಾವು ಇಷ್ಟು ಸಮಯ ಮಾಡುತ್ತಿದ್ದೆವು

ರಾಯರು:—ಏನ ಇವರೇ ವೆಂಕಟರಾಯರೇ?

ಶೀನು:—ಅಷ್ಟೇಕೆ ಗಾಬರಿಯಾದಿರಿ, ಸ್ವಾಮಿ? ಅವರು ಪೂರ್ತಿ ಸೌಖ್ಯದಲ್ಲೇ ಇದ್ದಾರೆ

ರಾಯರು:—ಆದೇ ನಾಗಿತ್ತು ಅವರಿಗೆ? ಹಾಗೇನು ಥಕ್ಕನೆ ಬಿದ್ದುಬಿಟ್ಟರು?

ವಾಸು:—ಅದೇನೂ ದೊಡ್ಡ ಸಂಕಟವಲ್ಲ. ಏನೋ ಒಂದೊಂದು ಸಲ ಥಕ್ಕನೆ ಬಿದ್ದುಬಿಡುವರು, ಎಲ್ಲಿ, ಯಾವಾಗ ಎಂದಿಲ್ಲ

ದೃಶ್ಯ ೩.

[ಬಿದ್ದು ನಿಮಿಷಗಳ ಮೇಲೆ ವೆಂಕಟನು ಎದ್ದು ಕೂತುಕೊಳ್ಳುವನು]

ಎಲ್ಲರೂ—ಹ ಹ್ಹ ಹ್ಹ! ಹ ಹ್ಹ ಹ್ಹ! ಹ ಹ್ಹ ಹ್ಹ

ನಾಣು:—ಹೇಗೆ ನಮ್ಮ ಉಪಾಯ?

ವೆಂಕಟು:—ಭಲೇ! ನಿಮ್ಮನ್ನೆನ್ನಬೇಕು ನಿಜವಾದ ಸ್ನೇಹಿತರೆಂದು!

ರಾಮು:—ಏನಿದ್ದರೂ ನಮ್ಮ ಉಪಾಯದಿಂದ ನಿನ್ನ ಮೇಲೆ ಒಂದಿದ್ದ ಸಂಕಟವು ಪೂರ ಪಾರಾದುದಕ್ಕೆ ನಾವು ಸಂತೋಷಪಡಲೇಬೇಕು

ಶೀನು: ಇನ್ನು ನಿನ್ನ ತಂದೆಯವರ ಒತ್ತಾಯಕ್ಕೆ ಎಡೆಯುದೆಯೇ? ಮುಂದೆ ಪಟ್ಟಣದ ಪುಷ್ಪವೊಂದನ್ನೇ ಆಯ್ದು ಮುಡಿದುಕೊಂಡು ಬಿಡು

ಮಾಧು:—ಆ ಮುದಿಗೂಬೆಯು ನೋಡುತ್ತಿದ್ದ ರೀತಿಯನ್ನು ಕಂಡು ಅವನೆಲ್ಲಿ ನಮ್ಮ ಗುಟ್ಟನ್ನು ತಿಳಿದುಬಿಡುವನೋ ಎಂದು ಹೆದರಿದ್ದೆ

ನಾಣು:—ಅತನು ನನ್ನ ಕೈಯೊಳಗಿನ ಮೂಸುಪ್ಪಿನ ಸೀಸೆಯು ಬರಿದಾದುದೆಂದು ಎಲ್ಲಿ ಕಂಡುಹಿಡಿಯುವನೋ ಎಂದು ನನಗೆ ಒಳ ಒಳವುಂಟಾಗಿತ್ತು. ಅಲ್ಲದೆ ನಾನು ವೆಂಕಟನಿಗೆ ಕೊಟ್ಟ ಮಾತ್ರೆಯು ಪೆಪ್ಪರ್‌ಮಿಂಟ್

(ಇನ್ನೇ ಪುಟವನ್ನು ನೋಡುವುದು.)

ಬಾಹ್ಯಪ್ರಪಂಚ

ಪೌರ್ವಾತ್ಯದ ಸುಯೇಜ ಕಾಲುವೆ.

(ಜಪಾನೀಯರು ಬ್ರಿಟಿಷರ ಮೇಲೆ ಒಂದು ಅಸ್ತ್ರ ಹೂಡಿರುತ್ತಾರೆ.)

ಮಲಯಾ ಪೆನಿನ್‌ಸುಲದ, ಸಾಯಾಮ್ ಪ್ರದೇಶದಲ್ಲಿ, ಸಾಯಾಮು ಸರಕಾರವು ಸುಯೇಜ ಕಾಲುವೆಯಂತಹ ಒಂದು ಕಾಲುವೆಯನ್ನು ತೋಡಬೇಕೆಂದು ನಿರ್ಧಾರಮಾಡಿರುತ್ತದೆಂದು ತಿಳಿದುಬರುತ್ತದೆ. ಒಂದು ಶತಮಾನ ಹಿಂದಿನ ಆಲೋಚನೆ ಇದು. ಯಾವುದೋ ಕಾರಣಾಂತರಗಳಿಂದ ಕಾರ್ಯರೂಪಕ್ಕೆ ಬರಲಿಲ್ಲವಾಗಿತ್ತು. ಬಂಗಾಳಕೊಲ್ಲಿಗೂ, ಗಲ್ಫ ಒಫ್ ಸಾಯಾಮಿಗೆ ಇದೊಂದು ಹತ್ತಿರದ ಹಾದಿಯಾಗುವುದು. ಶಾಂತಸಾಗರದಿಂದ, ಹಿಂದೂ ಸಾಗರಕ್ಕೆ ನೌಕಾಹಾದಿಯು, ಮಲಯಾ ಪೆನಿನ್‌ಸುಲಾದ ಸುತ್ತಾಗಿ ಹೋಗುತ್ತದೆ. ಅದರಿಂದ ಬ್ರಿಟಿಷರ ಸಿಂಗಾಪುರ ಬಂದರಕ್ಕೆ ಬಹಳ ಮಹತ್ವವಿದೆ. ಆದರೆ ಮೇಲಿನ ಕಾಲುವೆಯ ರಚನೆಯಿಂದ, ಇದರ ಈ ಯೋಗ್ಯತೆಯೂ ಕಳೆದು ಹೋಗುವುದು. ಈ ಯೋಜನೆಯಲ್ಲಿ ಜಪಾನೀಯರಿಗೆ ಹೆಚ್ಚಿನ ಕೈವಾಡವು ಇದೆಯೆಂದು ತಿಳಿದುಬರುತ್ತದೆ. ಈ ಕಾಲುವೆಯು ಜಪಾನೀಯರಿಂದಲೆ, ತೋಡಲಾಗುವುದು. ಜಪಾನೀಯರೆ ಇದರ ಅಧಿಕಾರ ವಹಿಸುವರೆಂದಾಗಿ ತಿಳಿಯಬರುತ್ತದೆ. ಇದರ ಪರಿಣಾಮವೇನಾಗುವುದು — ಈ ಪ್ರದೇಶದ ಸುತ್ತುಮುತ್ತಲೂ, ಫ್ರೆಂಚರ ಮತ್ತು ಬ್ರಿಟಿಷರ ಅಧೀನದಲ್ಲಿರುವ ಪ್ರದೇಶಗಳಿವೆ. ಜಪಾನೀಯರು ಇವರ ಮಧ್ಯೆ ಯಾವದೊಂದು ಉದ್ದೇಶವಿಲ್ಲದೆ ಕಾಲಿಡುವುದಿಲ್ಲ. ೧೮೯೦ರಲ್ಲಿ ಪ್ರಾರಂಭದಿಂದ ಜಪಾನೀಯ ಕ್ರಿಯಾಸ್ಪರ್ಧೆ, ಅದು ಇನ್ನೂ ಮುಗಿಯಲಾಗುವಂತೆ, ಇದೊಂದು ಸೋಪಾನವೆನ್ನಬಹುದು. ಫ್ರೆಂಚರ ಮತ್ತು ಬ್ರಿಟಿಷರ ಪೌರ್ವಾತ್ಯದ ಹಿತಗಳಿಗೆ ಇವರು ಅಪಾಯಪ್ರಾಯರಾಗುವರು. ೧೮೯೪—೯೫ ಚೀನಾ—ಜಪಾನು ಯುದ್ಧ ನಡೆದು ಜಪಾನೀಯರಿಗೆ ಚೀನಾದ ಫರ್ಮೋಸಾ ಪ್ರದೇಶವು ದೊರಕಿತು. ೧೯೦೨ರಲ್ಲಿ ನಡೆದ ಆಂಗ್ಲೋ ಜಪಾನ್ ಒಪ್ಪಂದದಿಂದಲೂ, ೧೯೦೪—೦೫ರಲ್ಲಿ ನಡೆದ ರಷ್ಯೋ ಜಪಾನ್ ಯುದ್ಧದಿಂದಲೂ ಪೋರ್ಟ್ಸ್‌ಮೌತ ಒಪ್ಪಂದದಿಂದಲೂ, ೧೯೧೦ರಲ್ಲಿ ಜಪಾನೀಯರಿಗೆ ಚೀನಾದೇಶದ ಕೋರಿಯಾವು ದೊರಕಿತು. ೧೯೧೯ರಲ್ಲಿ ಜಪಾನು ಜನಾಂಗಸಭೆಯ ಸದಸ್ಯತನವನ್ನು ಪಡೆಯಿತು. ೧೯೧೪ ೧೮ರ ಯುದ್ಧದ ಕೊನೆಯಿಂದ, ಜನಾಂಗ ಸಭೆಯ ಮ್ಯಾಂಡೇಟುಗಳೆಂದಾಗಿ ಇವರಿಗೆ, ಶಾಂತಸಾಗರದ ಕೆಲವು ದ್ವೀಪಗಳು ದೊರಕಿದವು. ೧೯೩೧ರಲ್ಲಿ ನಡೆದ ಮಂಚೂರಿಯಾದ ಕಲಹದಿಂದಲೂ ೧೯೩೨ರಲ್ಲಿ ನಡೆದ ಶಾಂಗಾಯಿ ಗಲಭೆಯಿಂದ ಜಪಾನೀಯರ ಆಶ್ರಯದಲ್ಲಿ ಮಂಚೂಕ್ಯುದಲ್ಲಿ ಸ್ವಯಂಪ್ರಭುತ್ವದ ರಾಜ್ಯರಚನೆಯಾಗಿ ೧೯೩೪ರಲ್ಲಿ ಮಂಚೂಕ್ಯು ಸಮ್ರಾಜ್ಯ ರಚನೆ ಹೊಂದಿತು. ಜನಾಂಗ ಸಭೆಯು ಇವರು ಮಂಚೂರಿಯಾವನ್ನು ಕಾಡುತ್ತಿರುವಾಗ ಮೌನವಾಗಿ ಕುಳಿಯಿತು. ಈಗ ಜಪಾನು, ಪೌರ್ವಾತ್ಯದಲ್ಲಿ ಒಂದು ಸುಯೇಜ ಕಾಲುವೆಯನ್ನು ತೋಡುವುದಾದರೆ, ಅವರು ಅಗ್ರಗಣ್ಯರಾಗಲು ಹಿಡಿದ ಕಾರ್ಯ ಸಂಪೂರ್ಣವಾಗುವುದೆನ್ನಬಹುದು. ಅಷ್ಟಲ್ಲದೆ, ಮೇಲಿನ ಪ್ರಗತಿಯೊಂದಿಗೆ ಜಪಾನಿನ ಕೈಗಾರಿಕೆ, ವ್ಯಾಪಾರ, ಆರ್ಥಿಕ ವ್ಯವಸ್ಥೆ, ರಕ್ಷಣಾ ಯೋಜನೆ, ಸಂಗ್ರಾಮಯೋಗ್ಯತೆ, ಇವುಗಳೂ ಬಹಳವಾಗಿ ಉತ್ತಮಗೊಂಡಿವೆ. ಮೇಲಿನ ವಿಚಾರಗಳಲ್ಲಿ ಇತರ ಮಹಾಪ್ರಭುತ್ವದ ಜನಾಂಗಗಳ ಪದವಿಯನ್ನು ಪಡೆದಿರುತ್ತದೆ. ಜನಾಂಗ ಸಭೆಗೆ ಪ್ರಪಂಚದ ಶಾಂತಿರಕ್ಷಣೆ ಮಾಡಲು ಒಂದು ನವೀನ ಉಪಾಯವನ್ನು ತೋರಿಸಿಕೊಟ್ಟಿರುತ್ತದೆ. ವಿವಿಧ ಜನಾಂಗಗಳು, ಸರಿಸಮಾನವಾದ, ಅಥವಾ ಸಮಾಧಾನಕರವಾದ ಸಾಂಪತ್ತಿಕ ಸ್ಥಿತಿಯನ್ನು ಪಡೆಯುವುದು. ವ್ಯಾಪಾರದ ನಿಮಿತ್ತವಾಗಿ, ಜಪಾನು ತನ್ನ ಸಾಮ್ರಾಜ್ಯವನ್ನು ಹರಡಿಸುತ್ತದೆ. ಅವರು ಮುಂದಕ್ಕೆ ಸಾಗುತ್ತಿದ್ದಾರೆ.

ಈ ನವೀನ ಕಾಲುವೆಯ ದೆಸೆಯಿಂದ, ಬ್ರಿಟಿಷರ ಸಿಂಗಾಪುರ ಬಂದರದ ರಾಜಕೀಯ ಸಾಂಗ್ರಾಮಿಕ, ಮತ್ತು ಇತರ ಎಲ್ಲಾ ಮಹತ್ವವೂ,—ಸುಯೇಜ ಕಾಲುವೆಯಿಂದಾಗಿ, ಕೇಫ್ ಒಫ್ ಗುಡ್ ಹೋಪಿನ ಮಹತ್ವ ಕಳೆದು ಹೋದಂತೆ —ಪೌರ್ವಾತ್ಯದ ವ್ಯಾಪಾರದಲ್ಲಿ ಬ್ರಿಟಿಷರು ಪಡೆದ ಅಗ್ರಗಣ್ಯ ಪದವಿಯು, ಕಣ್ಮರೆಯಾಗುವುದು. ಸಿಂಗಾಪುರವು, ಬ್ರಿಟಿಷರ ವ್ಯಾಪಾರಕ್ಕೆ ಒಂದು ಪ್ರಮುಖ ಬಂದರವಾಗಿತ್ತು. ದೊಡ್ಡ ದೊಡ್ಡ ವ್ಯಾಪಾರ ನೌಕೆ ಇಲ್ಲಿ ತಂಗಲು, ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ ಖರ್ಚಿಯಾದ ಹಣವನ್ನು ವ್ಯಯಿಸಿ, ಇಲ್ಲಿ ಪ್ರಪಂಚದಲ್ಲಿ ಅತಿ ಶ್ರೇಷ್ಠವಾದ ನೌಕಾ ಬಲದ ಸಿಲ್ಪಾಣವನ್ನು ರಚಿಸಿದ್ದರು. ಆದರೆ ಇವುಗಳು ವ್ಯರ್ಥರೂಪವಾಗುವವು

ಮೇಲಿನ ಸಂಸ್ಥಿತಿಗೆ, ಹೊಣೆಗಾರರು ಬ್ರಿಟಿಷರೆ. ಜಪಾನು, ತನ್ನ ಕೈಕಾಲುಗಳನ್ನು ಚೀನಾದಲ್ಲಿ ಚಾಚುವ ಸಮಯವು—ಅಂದರೆ ಮಂಚೂರಿಯಾದ ಮೇಲೆ ಬಿದ್ದಿರುವಾಗ, ಬ್ರಿಟಿಷ ನ್ಯಾಶನಲ್ ಸರಕಾರದವರು ವರ್ತನೆಯು ಸೆಟ್ಟಗಿರಲಿಲ್ಲ. ಪೌರ್ವಾತ್ಯದಲ್ಲಿನ ಈ ಹೊಸ ಪ್ರೇರಣೆಯ ಗಣನೆ ಮಾಡದೆ ಹೋದರು. ಜನಾಂಗ ಸಭೆಯು ಪ್ರಪಂಚ ಶಾಂತಿ ರಕ್ಷಿಸಲು ಶ್ರಮಪಡುವ ಕಾರ್ಯದಲ್ಲಿ ಇವರು ಭಾಗಿಗಳಾಗದೆ ಹೋದರು. ಇದರ ಪರಿಣಾಮವೇನಾಯಿತು.—ಮೇಲೆ ಕೊಟ್ಟಿದೆ. ಅಷ್ಟಲ್ಲದೆ ಜಪಾನು ಈಗ ಜನಾಂಗ ಸಭೆಯನ್ನು ತ್ಯಜಿಸಿರುತ್ತದೆ

ಈ ಕಾಲುವೆಯಿಂದಾಗಿ ಅನೇಕರಿಗೆ ಹೆಚ್ಚಿನ ನಷ್ಟವು ಸಂಭವಿಸುವದಾಗಿಲ್ಲ. ಲಾಭವೂ ಕೂಡ ಇಲ್ಲ. ಆದ್ದರಿಂದ ಇವರು ಅವರ ಗೋಜಿಗೆ ಹೋಗಲಾರರು. ಸಾಯಾಮಿನಲ್ಲಿ ನವೀನವಾಗಿ ನಿರ್ಮಾಣವಾಗುವ ಈ ಕಾಲುವೆಯಿಂದ ಬ್ರಿಟಿಷರಿಗೆ ಮಹಾ ಹಾನಿ ಒದಗುವುದು. ಯೂರೋಪು ಖಂಡದಲ್ಲಿ ಈಗಂತೂ ೧೯೧೪ರ ಸ್ಥಿತಿಯು ಕವಿದಿರುತ್ತದೆ. ಹೀಗಿರುವಾಗ, ಈ ಕಾಲುವೆಯಿಂದಾಗಿ ಇನ್ನೊಂದು ದೊಡ್ಡ ಕಲಹವು ಜನಿಸುವುದು

ಜಪಾನೀಯ ಕ್ರಾಂತಿಯ ಕಾರಣಗಳು.

ಜಪಾನಿನಲ್ಲಿ ಮೊನ್ನೆ ನಡೆದ ಕ್ರಾಂತಿಯು ಹೆಚ್ಚಿನವರಲ್ಲಿ ಆಶ್ಚರ್ಯವನ್ನು ಉಂಟುಮಾಡಲಿಲ್ಲ. ಕಾರಣ, ಅಲ್ಲಿ ಇತ್ತೀಚೆಗಿನ ರಾಜಕೀಯ ಧೋರಣೆಯನ್ನು ಸರಿಯಾಗಿ ಪರೀಕ್ಷಿಸಿದವರಿಗೆ,—ಜಪಾನಿನ ರಾಜಕೀಯ ಧೋರಣದಲ್ಲಿ ಸಂಗ್ರಾಮಿಕಪ್ರೇರಣೆಯು ಬಹಳವೆಂದು ಹೊಳೆದಿತ್ತು. ಪೌರ್ವಾತ್ಯದಲ್ಲಿ ಪ್ರಜಾಪ್ರಭುತ್ವದ ಸೂತ್ರಗಳು ಹುಟ್ಟಲು ಜಪಾನಿನಲ್ಲಿ ಎರಡು ಪಂಗಡಗಳು ಉಂಟಾದವು. ೧ ಲಿಬರಲ್ ಪಂಗಡ ೨ ಸಂಗ್ರಾಮಿಕರ ಪಂಗಡ. ದೇಶದ ಸರಕಾರದಲ್ಲಿ ಹೆಚ್ಚಿನ ಅಧಿಕಾರವನ್ನು ಧರಿಸಿ, ತಮ್ಮ ತಮ್ಮ ಉದ್ದೇಶಗಳನ್ನು ಜರಗಿಸುವ ಪರಸ್ಪರ ಕಚ್ಚಾಟವು, ಈ ಎರಡು ಪಂಗಡಗಳಲ್ಲಿ ನಡೆಯುತ್ತದೆ. ಕಳೆದ ಮಹಾ ಯುದ್ಧದ ನಂತರ ಜಪಾನು ಬೇಗನೆ ತನ್ನ ಸಾಂಪತ್ತಿಕ ಉದ್ಧರಣೆಯನ್ನು ಕೈಕೊಂಡದರಿಂದ, ಅದು ಸಂಗ್ರಾಮಗಳನ್ನು ಮಾಡದೆ ಶಾಂತತೆಯಲ್ಲಿ ಕಾಲಹರಣ ಮಾಡುತ್ತಿರುವ ಸಮಯ ಅಲ್ಲಿನ ಲಿಬರಲ್ ಪಂಗಡಕ್ಕೆ ಮೇಲಿನ ಕೈಯು ದೊರಕಿತು. ಲಿಬರಲ್ ಪಂಗಡವೆ ಕೆಲಸಮಯ ಸಂಪೂರ್ಣ ಅಧಿಕಾರದಲ್ಲಿತ್ತು. ಲಿಬರಲ್ ಪಂಗಡದವರು ಯಾವ ಕಾರ್ಯಗಳನ್ನು ಅತಿ ಜಾಗರೂಕತೆಯಿಂದಲೂ, ಸಮಾಧಾನದಿಂದಲೂ ಮಾಡುವವರು. ಸಮಾರಣ ಇವರ ಮತವು ಬ್ರಿಟನ್ನಿನ ಕಾನ್ಸರ್‌ವೇಟಿವರಂತೆ. ಆದರೆ ಇತ್ತೀಚೆಗೆ ಜಪಾನು ತನ್ನ ಸಾಮ್ರಾಜ್ಯವನ್ನು ಬೆಳೆಸುವ ಕಾರ್ಯವನ್ನು ಕೈಕೊಳ್ಳಲು,—ಚೀನಾದಲ್ಲಿ ಅವರು ಕಾಲೂರಲು ಅಲ್ಲಿನ ಪ್ರದೇಶಗಳನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳುವ, ಪ್ರಯತ್ನಗಳನ್ನು ಮಾಡಲು, ಸಂಗ್ರಾಮಿಕರು ಪ್ರಸಿದ್ಧಿಗೆ ಬಂದರು. ರಷ್ಯದೊಡನೆ ಯುದ್ಧ, ಮಂಚೂರಿಯಾವನ್ನು ಒಡೆಯುವುದು, ಚೀನಾ ದೇಶದಲ್ಲಿ ಕೆಲವು ಪ್ರಾಂತ್ಯಗಳಲ್ಲಿ ಸ್ವಯಂಪ್ರಭುತ್ವದ ರಾಜ್ಯರಚನೆ, ಇವೇ ಮೊದಲಾದ ಕಾರ್ಯಗಳನ್ನು ನಡೆಸಲು, ಸಂಗ್ರಾಮಿಕರು ಮುಂದೆ ಬರಲಾರಂಭಿಸಿದರು. ಹೀಗಾಗಿ ಸಂಗ್ರಾಮಿಕ ಪಂಗಡವು ದಿನೇ ದಿನೇ ವೃದ್ಧಿಹೊಂದುತ್ತಾ ಬಂದು ಇವತ್ತಿಗೆ ಅತಿ ಬಲಿಷ್ಟ ಪಂಗಡವಾಗಿರುತ್ತದೆ. ಈ ಪಂಗಡಕ್ಕೆ ಜಪಾನೀಯ ಸಾಮ್ರಾಜ್ಯವನ್ನು ಬೆಳೆಸುವುದೆ ಮುಖ್ಯೋದ್ದೇಶ. ಪಂಚಯೋಜನೆಯು ಇವರ ಮುಖ್ಯಮತ. ರಾಷ್ಟ್ರೀಯ ಗೌರವದ ಹೆಸರಿನಲ್ಲಿ, ಇವರಲ್ಲಿ ಅಧಿಕವಾಗಿರುತ್ತದೆ. ಇವರು ಜಪಿಸುತ್ತಿರುವರು. ತಮ್ಮ ಉದ್ದೇಶಗಳಿಗೆ ಬರುವ ಆತಂಕಗಳನ್ನು, ಕ್ರಾಂತಿಯಿಂದಲೂ, ಕೊಲೆಯಿಂದಲೂ ನಿವಾರಣೆ ಮಾಡುವುದು ಇವರಿಂದಾಗಿ ಅನೇಕ ಜಪಾನೀಯ ರಾಜಕೀಯ ಮಹಾಪುರುಷರು ಕೊಲೆಮಾಡಲ್ಪಟ್ಟರು. ಮೊನ್ನೆ ನಡೆದ ಚುನಾವಣೆಯಲ್ಲಿ ಸಾಧಾರಣ ಲಿಬರಲ್ ಪಂಗಡವು ಹೆಚ್ಚಿನ ಸದಸ್ಯತನಗಳನ್ನು ಪಡೆದುದರಿಂದ —ಜಪಾನೀಯ ಪಡೆಯುಳ್ಳರಾದ ಸಂಗ್ರಾಮಿಕರು ಕ್ರಾಂತಿ ನಡೆಯಿಸಿಬಿಟ್ಟರು. ಅನೇಕ ಪ್ರಸಿದ್ಧ ಪುರುಷರ ಕೊಲೆಯು ನಡೆಯಿತು.

ರಷ್ಯಾದ ಸೇನಾಬಲ

ಮಂಚೂರಿಯ ಮತ್ತು ರಷ್ಯಾದ ಗಡಿನಾಡಿನಲ್ಲಿ ಜಪಾನೀಯರಿಗೂ ರಷ್ಯಾದವರಿಗೂ, ಬಹಳ ಕಲಹ ಬಿದ್ದಿರುತ್ತದೆ. ರಷ್ಯಾದ ಪಂಚಯೋಜನೆಯು ಬಹಳವಾಗಿ ವೃದ್ಧಿ ಹೊಂದಿರುತ್ತದೆ. ಜಪಾನು ಮಂಚೂರಿಯಾವನ್ನು ಸೇರಿರುತ್ತದೆ. ರಷ್ಯಾದಲ್ಲಿ 'ರೆಡ್ ಆರ್ಮಿ' ಎಂಬ ಭಯಂಕರ ಸೇನಾಬಲವು ತಯಾರಾಗುತ್ತಿದೆ. ಈ ಸೇನಾಬಲಕ್ಕೆ ಇತರ ಮಹಾ ಪ್ರಭುತ್ವದ ಜನಾಂಗಗಳ ಸೇನಾಬಲದಷ್ಟು ಯೋಗ್ಯತೆಯಿರುವುದೆಂತೆ. ಅದರ ಯೋಗ್ಯತೆಯ ಪರೀಕ್ಷೆಯು, ಜಪಾನೀಯರೊಡನೆ ನಡೆಯುವುದೋ ಎಂದು ಕೆಲವರ ಭಾವನೆ. ೧೯೩೧ರಿಂದ ಅಂದರೆ, ಜಪಾನು ದೇಶಗಳನ್ನು ಹಿಡಿಯಲು ಪ್ರಾರಂಭ ಮಾಡಿದಂದಿನಿಂದ ಅಂದರೆ ಮಂಚೂರಿಯಾವನ್ನು ವಶೀಕರಿಸಿದಂದಿನಿಂದ ರಷ್ಯವು ತನ್ನ ಮಂಗೋಲಿಯಾದ ಗಡಿಯ ಹತ್ತಿರ ವಿಶೇಷ ಸಂಗ್ರಾಮ ಸಿದ್ಧತೆಗಳನ್ನು ಮಾಡಲು ಪ್ರಾರಂಭಿಸಿದೆ. ಅನೇಕ ಭಯಂಕರ ಯುದ್ಧ ನೌಕೆಗಳು ಸಿದ್ಧವಾಗಿವೆ. ಗಡಿನಾಡುಗಳು ಬಲ್ಲಕರಿಸಲ್ಪಟ್ಟಿವೆ. ಅನೇಕ ಯುದ್ಧ ವಿಮಾನಗಳು ರಚನೆಯಾಗಿವೆ. ಎರಡು ವರ್ಷದ ಹಿಂದೆ, ಮಂಚೂಕ್ಯು ಮತ್ತು ಕೋರಿಯಾದ ಹತ್ತಿರದಲ್ಲಿ ರಷ್ಯಾದವರ 'ರೆಡ್ ಆರ್ಮಿ' ಸೇನಾಬಲವು [illegible]. ಅದನ್ನು ಈಗ ಇನ್ನೂ ವೃದ್ಧಿಮಾಡಿರುವರು. ಸೇನಾಬಲದಲ್ಲಿ ಒಂದು ಮಿಲಿಯ ಸೈನಿಕರಿದ್ದಾರೆ. ರಷ್ಯಾದವರು ವಾಯುಬಲವು ಮೂರು ಪಾಲಷ್ಟು ಹೆಚ್ಚಿಸಲಾಗಿದೆ. ರಷ್ಯಾದ ನವೀನ ಬಜೆಟಿನಲ್ಲಿ ಸಂಗ್ರಾಮ ಯೋಜನೆಗಳನ್ನು ಇನ್ನೂ ವೃದ್ಧಿಗೊಳಿಸಲು ಹಣ ಒಂಗಡಿಸಲಾಗಿದೆ. ಜಪಾನಿನ ಯುದ್ಧರಂಗಕ್ಕೆ ಬೇಕಾದ ಸೈನ್ಯಬಲವನ್ನು ಒಂದು ವರೆ ಮಿಲಿಯಕ್ಕೆ ಮಿಂಚುವರೆಂದು ತಿಳಿದುಬರುತ್ತದೆ. ಯುದ್ಧವು ಸಂಭವಿಸಿದರೆ ಆಗತ್ಯಬಿದ್ದರೆ ಸಾಧಾರಣ ೬ ಮಿಲಿಯ ಸೈನಿಕರನ್ನು ಬರಮಾಡಿಕೊಳ್ಳಲು ತಕ್ಕ ಏರ್ಪಾಡುಗಳಾಗುವವಂತೆ. ಜಪಾನು ಸಂಗ್ರಾಮಿಕರ ಪ್ರೇರಣೆ ಒಳಗಿದ್ದು ಸುಮ್ಮನಿರುವುದೆಂದು ಹೇಳಲಾಗದು. ಆದ್ದರಿಂದ ಪಾಶ್ಚಾತ್ಯದಲ್ಲಿ ಜರ್ಮನಿಯಿಂದ ಯುದ್ಧ ಕೋಲಾಹಲವು ಉಂಟಾಗಲು ಅದರೊಡನೆ ಪೌರ್ವಾತ್ಯದಲ್ಲೂ ಅದೇ ತರದ ಘಟನೆಗಳು ನಡೆಯುತ್ತವೆ. ಎರಡು ಕಡೆಗಳಲ್ಲಿ ಒಂದೇ ಬಾರಿ ಯುದ್ಧ ಪ್ರಾರಂಭವಾಗುವಂತಿದೆ. ಈ ಒಂದು ಕಲಹದಿಂದಾಗಿ (ರಷ್ಯಾ—ಜಪಾನು—ಕಲಹ) ಜಪಾನೀಯರ ಚಟುವಟಿಕೆಗಳನ್ನು ಸಹಿಸದ ಸಂಯುಕ್ತ ಅಮೇರಿಕಾವು ಮುಂದಕ್ಕೆ ನಡೆಯಲಿರುವ ಮಹಾಯುದ್ಧದಲ್ಲಿ ಸೇರುವ ಸಂಭವಗಳಿವೆ

ರಷ್ಯಾ—ಜಪಾನು ಯುದ್ಧದ ಪರಿಣಾಮವೇನಾಗುವುದು.

ಒಂದು ವೇಳೆ, ರಷ್ಯಾ ಜಪಾನು ಯುದ್ಧವುಂಟಾದರೆ ಅದರ ಫಲಿತಾಂಶವೇನಾಗಬಹುದು ರಷ್ಯಾದ ವಿಶೇಷ ಸಿದ್ಧತೆಗಳ ವಿಷಯ ಕೇಳಿದವರೂ ನೋಡಿದವರೂ, ಅವರು ಜಪಾನೀಯರನ್ನು ಸದೆಬಡೆಯುವರೆಂದು ಊಹಿಸುತ್ತಾರೆ. ಜಪಾನಿಗೆ ರಷ್ಯಾದ ಸೇನಾಬಲ, ವಾಯುಬಲ ನೌಕಾಬಲ ಇತ್ಯಾದಿ ಬಲಗಳು, ಅಂಕೆ ಸಂಖ್ಯೆಯ ದೃಷ್ಟಿಯಿಂದ ನೋಡಿದರೆ, ಈಗಿನ ಮಹಾ ಪ್ರಭುತ್ವದ ಜನಾಂಗಗಳಷ್ಟೆ ಯೋಗ್ಯವಾದುದೆಂದು ಹೇಳಬಹುದು. ಆದರೆ, ಜಪಾನೀಯರೂ ಇದ್ದಲ್ಲಿಯೆ ಯುದ್ಧಮಾಡಬೇಕಾಗುವುದು. ರಷ್ಯಾದವರು ಸಾವಿರಾರು ಮೈಲು ಪ್ರದೇಶವನ್ನು ರೈಲಿನಲ್ಲಿ ದಾಟಬೇಕಾಗಿದೆ. ಹೀಗಾಗಿ ಮುಸಲೋನಿಗೆ, ಆಫ್ರಿಕಾದ ಎಬಿಸೀನಿಯಾದಲ್ಲಿ ಒದಗಿದ ಅವಸ್ಥೆಯು, ಇವರಿಗೆ ಒದಗಬಹುದು. ಜಪಾನೀಯರು ಬಹಳ ಧೈರ್ಯವಂತರು. ಸಾವಿಗೆ ಅಂಜುವವರಲ್ಲ. ಬಹಳ ಯುಕ್ತಿಯಿಂದ ಕಾದಾಡುವವರು, ರಷ್ಯಾದ ಸೇನಾಬಲದ ಅಂಕೆ ಸಂಖ್ಯೆಗಳು ನಮ್ಮ ಕಣ್ಣಿಗೆ ಸಾಟುತ್ತಿದ್ದರೆ, ಅವರಲ್ಲಿ ಅಷ್ಟು ಉತ್ತಮ ತರದ ಸಂಗ್ರಾಮ ಯೋಗ್ಯತೆಗಳು ಇಲ್ಲವಂತೆ. ಆದರೆ ಒಟ್ಟಿನ ಮೇಲೆ ಹೇಳುವುದಾದರೆ, ಹೇಗಾದರೂ ಒಪ್ಪಂದಗಳನ್ನು ಮಾಡಿ ಶಾಂತತೆಯಿಂದಿರುವುದು ಇಕ್ಕಡೆಯವರಿಗೆ ಒಪ್ಪುವಂತಾದ್ದು. ಇಬ್ಬರಿಗೂ ಸಂಧಿ ಮಾಡಿಕೊಳ್ಳುವುದೂ ಇಷ್ಟವಿಲ್ಲವೆಂದು ಕೇಳಬರುತ್ತದೆ

ಕೈಸರನು ಜರ್ಮನಿಗೆ ಹಿಂತಿರುಗುವನೇ?

"ಕೈಸರನು ಹಿಂತಿರುಗುವನೇ" ಎಂಬ ಪ್ರಶ್ನೆಯು ಇಷ್ಟರ ದಿವಸಗಳಲ್ಲಿ ಜರ್ಮನಿಯಲ್ಲೂ ಸಮಸ್ತ ಯೂರೋಪು ಖಂಡದಲ್ಲೂ ಅನೇಕರ ಮನಸ್ಸುಗಳಲ್ಲಿದೆ. ಜರ್ಮನಿಯ ಭವಿಷ್ಯವು ಇಬ್ಬರ ಮೇಲೆ ಹೊಂದಿಕೊಂಡಿದೆ—ಕೈಸರನು ಮತ್ತು ಹಿಟ್ಲರ್. ೧೯೩೩ರಲ್ಲಿ ಹಿಟ್ಲರನು ಅಧಿಕಾರಕ್ಕೆ ಬರುವಾಗ ಅನೇಕ ಪ್ರತಿಜ್ಞೆಗಳನ್ನು ಮಾಡಿದ್ದನು. ಜರ್ಮನಿಯನ್ನು ಸಂತೋಷದ ನೆಲೆಯಾಗಿ ಮಾಡುವೆನೆಂದು ಹೇಳಿದ್ದನು. ಈಗ ೧೯೩೬ರಲ್ಲಿ ಜರ್ಮನಿಯಲ್ಲಿ ಅನೇಕರು "ಈ ಮನುಷ್ಯನಿಂದಾಗಿ ಜರ್ಮನಿಗೆ ಏನು ಸಾರ್ಥಕವಾಗಿದೆ ನಮಗೆ ಇವನಿಂದ ಯಾವ ಹಿತಗಳಾಗಿವೆ" ಎಂಬ ಪ್ರಶ್ನೆಯನ್ನು ತಮ್ಮ ತಮ್ಮ ಚಿತ್ತಗಳಲ್ಲೇ ಚರ್ಚಿಸುತ್ತಿದ್ದಾರೆ. ಹಿಟ್ಲರನು ಅಧಿಕಾರಕ್ಕೆ ಬಂದು ಮೂರು ವರ್ಷಗಳಾದವು. ಆದರೆ ಜರ್ಮನಿಯು ಇವನ ಪ್ರತಿಜ್ಞೆಗಳ ಪ್ರಕಾರ [illegible] ಜರ್ಮನಿಯು ಕಳೆದ ಮಹಾಯುದ್ಧದ ದೆಸೆಯಿಂದ ಕಳೆದುಕೊಂಡ ರಾಷ್ಟ್ರೀಯ ಗೌರವವು ಮಾತ್ರ ಮತ್ತೊಮ್ಮೆ ಬಂದಿರುತ್ತದೆ. ಹಿಟ್ಲರನು ಅನೇಕ ತಪ್ಪುಗಳನ್ನು ಮಾಡಿರುವನು. ಜರ್ಮನಿಯಲ್ಲಿರುವ ಯೆಹೂದ್ಯರಿಗೆ ಮೃತ್ಯುವಾದನು. ಜರ್ಮನಿಯ ವ್ಯಾಪಾರವು ಬಹಳವಾಗಿ ಕುಂದಿರುತ್ತದೆ. ಸಾಂಪತ್ತಿಕ ಮುದಗಳು ಹೆಚ್ಚುತ್ತಿವೆ. ಹೀಗಾಗಿ ಜರ್ಮನಿಯವರು ತಮ್ಮ ಸ್ಥಿತಿಸ್ಥಾಪನೆಯ ಕುರಿತು ಯೋಚಿಸುತ್ತಿರುವರು. ನಾಜಿಯವರು ಕೀರ್ತಿಗೊಂಡದ್ದು ಇವರಿಗೆ ಬೇಕಾಗಿಲ್ಲ. ರಕ್ತಚೆಲ್ಲಾಟವನ್ನು ಇವರು

(೧೬ನೇ ಪುಟಕ್ಕೆ ಮುಂದುವರಿಯುವದು.)

ವಜ್ರಗಳು ——— ವಜ್ರಗಳು!

ನಮ್ಮಲ್ಲಿ 'ಆಂಟವರ್ಪ್'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ

ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಲೆಗಳಿಲ್ಲದ ಉತ್ತಮವಾಗಿರುವ "ಬ್ಲೂ ಜಾಗ್ಗರ್" ವಜ್ರಗಳೂ

"ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ.

ಬೆಲೆಗೆ ತಕ್ಕ ಒಡವೆ ಒದಗಿಸಿಕೊಡುವವರು

ಸಾವಕಾರ ಶ್ರೀನಿವಾಸ ರಂಗ ಪೈ,

ಸಾವಕಾರ ಮಹಾಲ್, ರಥಬೀದಿ ಮಂಗಳೂರು.

(ಸನ್ 1855ರಲ್ಲಿ ಸ್ಥಾಪಿತವಾದದ್ದು)

ನೂಲ ಮತ್ತು ಜವುಳಿ ವ್ಯಾಪಾರಸ್ಥರು.

ಅನುಕ್ರಮಣಿಕೆ.

ಸಂಪುಟ
ಜಗತ್ತಿನ ಅತ್ಯಂತ ಶ್ರೀಮಂತ ಕುಟುಂಬ
ವ್ಯಾಯಾಮ
ವೆಂಕಟನ ಸಂಕಟ
ವಿವಿಧ ಸಮಾಚಾರ
ಅಗ್ರಲೇಖ
ಹಿಟ್ಲರ್ ಮಹಾಶಯ
ಮಂಗಳೂರು, ತಾಲೂಕುಗಳಿಂದ ೧೧
ಸ್ಫುಟವಿಚಾರಗಳು ೧೧
ವರ್ತಮಾನ ಸಂಗ್ರಹ
ವನಿತಾ ವಿಭಾಗ ೨೬
ನಿಮಗೆ ತಿಳಿದಿರುವುದೇ ೧೮

ಸ್ವದೇಶಾಭಿಮಾನಿ.

ತಾ. ೨೦ನೇ ಶುಕ್ರವಾರ ಮಾರ್ಚಿ ೧೯೩೬.

ಹಿಟ್ಲರ್ ಮಹಾಶಯನು

ಹಿಟ್ಲರ್ ಮಹಾಶಯನು ಮಾರ್ಚಿ ತಾ ೭ರಲ್ಲಿ, ಯಾವ ಭಾಷಣವನ್ನು ತನ್ನ ದೇಶದ ಪರಿಷ್ಕ ಸಭೆಯಲ್ಲಿ ಮಾಡಿದನೋ, ಆ ಭಾಷಣದಲ್ಲಿ ಸೂಚಿತವಾದ ಪ್ರಸ್ತಾಪಗಳು ಇಡೀ ಜಗತ್ತಿನಲ್ಲಿ ಅಂದಿನಿಂದ ಇಂದಿನ ತನಕ ಪ್ರತಿಧ್ವನಿ ಕೊಡುತ್ತಲಿವೆ. ಏಕೆಂದರೆ ಜರ್ಮನ ಜನತೆಗೆ ಮಾತ್ರವೆ ಅಲ್ಲದೆ, ಜಗತ್ತಿನಲ್ಲಿ ಸಭ್ಯಜೀವನ ನಡೆಸುತ್ತಿರುವವರೆಲ್ಲರಿಗೂ ಈ ಅಭಿಪ್ರಾಯಗಳೆಲ್ಲವನ್ನೂ ಕೇಳಿ, ಯೋಚನೆಗೆ ಪ್ರಾರಂಭವಾಗಿದೆ. ಜರ್ಮನಿಯು ಎಳ್ಳಷ್ಟರಲ್ಲಿ ಯಾವ ತೆರದ ಸೇನಾಂಗವೂ ಇರಬಾರದೆಂದು ಐವತ್ತು ಮೈಲು ವಿಸ್ತೀರ್ಣದ ಸರಹದ್ದಿನಲ್ಲಿ, [illegible] ತ್ತೈದು ಸಾವಿರ ಜರ್ಮನ ಸೈನಿಕರು ಶಿಬಿರಗಳನ್ನು ಈಗ ಸ್ಥಾಪಿಸಿರುವರು. ಲೋಕಾರ್ನೊ ದಲ್ಲಾದ ಕರಾರಿಗೆ ತೀರ ವಿರುದ್ಧವಾದ ಕೃತಿಯಿದು, ಫ್ರಾನ್ಸು ತಾನು ಅಂಗೀಕರಿಸಿದ್ದ ಶರ್ತಗಳನ್ನೇಕೆ ಮುರಿದು ರಷ್ಯದೊಡನೆ ಕರಾರು ಮಾಡಿತು? ಅದು ಕಾರಣವೇ ಆ ಕರಾರನ್ನು ಅಗತ್ಯವಾಗಿ ರದ್ದುಗೊಳಿಸಿ, ಜರ್ಮನಿಯು ತನ್ನ ಸ್ವತ್ವವನ್ನು ತಾನು ಕಾಪಾಡಿಕೊಳ್ಳಲೆತ್ನಿಸುವುದರಲ್ಲಿ ತಪ್ಪಿಲ್ಲವೆಂದು ಹಿಟ್ಲರನ ಅಭಿಮತ.

ತೀರ ಮೂಢರೇ ಮಾತ್ರವಲ್ಲದೆ, ಇತರರೆಲ್ಲರು, ಜರ್ಮನಿಯು ತನ್ನಲ್ಲಿ ಹಣವಿದ್ದಷ್ಟಕ್ಕೆ ಸರಿಯಾಗಿ ತುಂಬ ಶಸ್ತ್ರಸನ್ನಾಹವನ್ನು ಮಾಡಿಯೇ ಮಾಡುವುದಾಗಿ ತಿಳಿದೇ ಇದ್ದರು. ಕೋಟೆಗಳನ್ನು ಪುನಃ ರಚಿಸುವುದಕ್ಕೆ ಸ್ವಲ್ಪ ವರ್ಷಗಳು ಬೇಕಾಗುವುವಾದರೂ, ಯುದ್ಧವು ತೊಡಗುವುದಕ್ಕೆ ಹೆಚ್ಚಿನ ಅವಧಿಯೇನೂ ಅಗತ್ಯವಿಲ್ಲ ಎಂದೇ ಬಲ್ಲವರು ಪ್ರಸಾದ ನುಡಿಯುತ್ತಿದ್ದರು. ಜರ್ಮನ್ ನಾಜೀ ಸರಕಾರವು ಒಮ್ಮೆಲೇ ಸರ್ವ ಸರಂಜಾಮುಗಳನ್ನೇನೂ ಸಂಗ್ರಹ ಮಾಡಿಲ್ಲ, ಒಂದೊಂದಾಗಿಯೆ ಸನ್ನಾಹಗಳನ್ನು ಕೂಡಿಸಿಯೆ ಬಂದಿದೆ. ಜನತೆಗಂತೂ ಆಗಾಗ ಮುಖಂಡರು ಮಾಡುತ್ತಿದ್ದ ಭಾಷಣಗಳಲ್ಲಿ, ಜರ್ಮನಿಯ ಕಾರ್ಯೋದ್ದೇಶವೂ ಕಾರ್ಯಕ್ರಮವೂ ತಿಳಿದು ಬಂದಿದೆ. ಹೀಗಾಗಿ ಎಂತಹ ವಿಶೇಷ ಕಾರ್ಯಕ್ರಮಕ್ಕೆ ಈಗ ಕೈಹಚ್ಚಿದರೂ, ಅದು ಮೊದಲೇ ನಿರೀಕ್ಷಿತವಾದುದೆಂದೇ ಜನರು ಎನ್ನುವಂತಾಯಿತು.

ಜನಾಂಗ ಸಂಘದ ಇತಿಹಾಸ ಬಲ್ಲವರೊಬ್ಬರು ಹೀಗೆನ್ನುತ್ತಾರೆ.–ಯಾವ ಸರಕಾರವೆ ಆಗಲಿ, ತಾನು ಖಂಡಿತವಾಗಿಯೆ ಹೀಗೆಯೆ ಒಂದು ರೀತಿಯ ಕಾರ್ಯಕ್ರಮಕ್ಕೆ ಕೈಹಚ್ಚುವೆನು ಎಂದು ಈ ಸಂಘವು ತಿಳಿಯುವಂತೆ ನುಡಿದರೆ ಸರಿ. ಅದು ಖಂಡಿತವಾಗಿಯೂ ನೆರೆಯಲ್ಲಿರುವ ಹಾಗಾಗುವುದು. ಯುದ್ಧಕ್ಕೆ ಸಿದ್ಧನೇ ಎಂದು ಯಾವನೊಬ್ಬ ಸೇನಾನಿಯು ಖಂಡಿತ ನುಡಿದರೆ, ಅವನನ್ನು ನಿರಾಕ್ಷೇಪವಾಗಿ ಎಲ್ಲರೂ ಯುರೋಪಿನಲ್ಲಿ ಹಿಂಬಾಲಿಸುವರು! ಇದು ೧೯ನೇ ಇಸವಿಯಿಂದ ಇದು ವರೇಗೂ ಯುರೋಪಿನ ಇತಿಹಾಸದಲ್ಲಿ ಸತ್ಯವಾಗಿಯೆ ಇದೆ.

ಹಿಟ್ಲರನು ರ್‍ಹೈನ್ ನದೀ ಪ್ರದೇಶ ಸೈನ್ಯಬಲದಿಂದ ತುಂಬಿರುವನು, ಇಟಲಿಯವು ಅಬಿಸೀನಿಯಾದೊಳಗೆ ನುಗ್ಗಿಯೇ ಕಾದಾಡುತ್ತಿರುವುದು,–ಇವೆರಡು ವಿಷಯಗಳನ್ನು ಎಣಿಸಿಯೆ ಜನಾಂಗ ಸಂಘದ ಮಂದಿರದಲ್ಲಿ ವಾತಾವರಣವೆಲ್ಲ ಭ್ರಾಮಕವಾಗಿರುವುದು. ಯುದ್ಧ ನಿವಾರಣೆಗಾಗಿ ಸಂಘವು ಏನು ಮಾಡಬಹುದೋ ಎಂದು ಆಲೋಚಿಸುತ್ತಿರುವುದೇ ಅಲ್ಲಿ ಒಂದು ಉದ್ಯೋಗವಾಗಿದೆ. ಯುಗೋಸ್ಲಾವಿಯದ ಅಲೆಕ್ಸಾಂಡರ ರಾಜನನ್ನು ಕೊಂದಿಕ್ಕಿದಾಗಲೇ ಒಂದು ಉತ್ಪಾತವುಂಟಾಗುವುದಿತ್ತು, ಮಿಕ್ಕ ರಾಷ್ಟ್ರಗಳೆಲ್ಲ ಒಂದುಗೂಡಿ, ಯುದ್ಧಮಾಡುವವರ ವಿರುದ್ಧ ನಿಲ್ಲುವೆವಾಗಿ ನಿರ್ಧರಿಸುವಂತೆ ಜನಾಂಗ ಸಂಘವು ಒಂದು ನಿರ್ಣಯ ಮಾಡಿದುದರಿಂದ, ಯುದ್ಧವಾಗಲಿಲ್ಲ. ಈಗ, ಯುದ್ಧಕ್ಕೆ ತೊಡಗುವವನು ಸೋಲುವವನು ಎಂಬ ಅಭಿಪ್ರಾಯವು ಈ ಸಂಘದವರಲ್ಲಿ ಇದ್ದಿತು. ಈಗ? ಜಪಾನಿನಲ್ಲಿ ಯುದ್ಧಪ್ರಿಯರು ಹೇಗೆ ದಿಗ್ವಿಜಯ ಹೊಂದುತ್ತಿದ್ದಾರೆ, ಮಂಚೂಕೊವೊ ರಷ್ಯದ ಸರಹದ್ದಿನಲ್ಲಿ ವಿಷಮ ಸ್ಥಿತಿ ಪ್ರಾಪ್ತವಾಗಿದೆ, ಬ್ರಿಟಿಷರ ತೀರ್ಮಾನಗಳಾಗಲಿ ಸೂಚನೆಗಳಾಗಲಿ ಅಷ್ಟು ಜೋರಾಗಿ ಕಾರ್ಯರೂಪದಲ್ಲಿ ಪರಿಣಮಿಸುತ್ತಿಲ್ಲ, ಅಬಿಸೀನಿಯದಲ್ಲಿ ಯುದ್ಧಾರಂಭವಾದಂದಿನಿಂದ ಸಂಘದ ಕೀರ್ತಿಗೆ ಮುಬ್ಬು ಕವಿದಿದೆ, ಚೀನಾ ಜಪಾನುಗಳೊಳಗೆ ಕಾದಾಟವಾಗಿಯೆ [illegible] –ಇತ್ಯಾದಿ ವಿಚಾರಗಳನ್ನು [illegible] ಶಾಂತಿಯು ಎಂದಿಗೆ ಭಂಗವಾದೀತೊ ಎಂದೇ [illegible] ತ್ತಿರುವರು. ಯುರೋಪಿನಲ್ಲೇ ಅಲ್ಲ, ಅನ್ಯ ಖಂಡದಲ್ಲಾದರೂ ಯುದ್ಧಕ್ಕೆ ತಾತ್ಕಾಲಿಕವಾಗಿರುವ ಒಂದು ಕಾರಣವು ಉಂಟಾಗಬಹುದ, ಅದು ಎಲ್ಲಿ ಉಂಟಾದರೂ ಯುದ್ಧವು ಯುರೋಪಿಗೆ ಹರಡಿ [illegible] ವಿಮಾನವು ಯಾವು [illegible] ರಾಷ್ಟ್ರದ ಹತಗಿನ ವೇಳೆ ಒಂದು [illegible] ಎಷ್ಟು, ಈ ಯುದ್ಧವನ್ನು [illegible]–ಎಂದು ಜನಾಂಗ ಸಂಘದಲ್ಲಿ ಬೆದರಿ ನುಡಿಯುವವರಿದ್ದಾರೆ.

ಹೀಗಾದರೆ ಉಳಿಗಾಲವೇ ಇಲ್ಲವೆ? ಜನಾಂಗ ಸಂಘದ ಘಟನಾ ಸೂತ್ರಗಳಲ್ಲಿ ೧೬ನೆಯ ನಿಬಂಧನೆಯಂತೆ ಸದಸ್ಯ ಸರಕಾರಗಳು ವಿನಾಕಾರಣ ಶಸ್ತ್ರಕ್ಕೆ ಸರಿಯಾಗಿ ವರ್ತಿಸಿದರೆ, ಎಂದೂ ಯುದ್ಧವಾಗಲಾರದು. ಯುದ್ಧ ಕುವರನನ್ನು ಜಯಿಸಲು ಇತರರೆಲ್ಲರೂ ಸರ್ವ ಪ್ರಕಾರವಾಗಿ ಬಹಿಷ್ಕರಿಸಿದರೆ ಮಾತ್ರ, ಯುದ್ಧವಾಗಲಾರದು. ಹಿಟ್ಲರನು ಇದನ್ನು ಚೆನ್ನಾಗಿ ಬಲ್ಲನು, ಅದರಿಂದಲೇ, ಹಾಗೆ ಭಾಷಣ ಮಾಡಿದನು. ರ್‍ಹೈನ್ ಪ್ರದೇಶದಲ್ಲಿ ಸೈನ್ಯ ಸರಂಜಾಮುಗಳನ್ನು ತಂದು ನಿಲ್ಲಿಸಿರುವನು, ಜನಾಂಗ ಸಂಘವು ಏನಂತೆ?

ಸ್ಫುಟ ವಿಚಾರಗಳು

ಪರೀಕ್ಷೆ ಬೇರೆ, ನಿರೀಕ್ಷೆ ಬೇರೆ

ಈ ವಾರದಿಂದ ನಾನಾ ವಾರ್ಷಿಕ ಪರೀಕ್ಷೆಗಳಿಗಾರಂಭ. ವರ್ಷ ತುಂಬಾ ಕೆಲಸ ಮಾಡಿದ ಕುಂಬಾರರ ಕೈಕೆಲಸವನ್ನೆಲ್ಲ, ನಿಮಿಷದಲ್ಲಿ ಒಡೆದಿಕ್ಕುವ ದೊಣ್ಣೆಗಳ ಕಾರ್ಯಭಾರಕ್ಕೀಗಲೇ ಪ್ರಾರಂಭ. ಪರೀಕ್ಷೆಗಳಲ್ಲಿ ದೂರ ಫಲವಿಲ್ಲ. ಅವಿಲ್ಲದೆ ಬೇರೆ ಗತಿಯುಲ್ಲ ಎಂದೆನ್ನುವ ಪಂಗಡದ ಇದಿರಲ್ಲಿ,–ಪರೀಕ್ಷೆಗಳ ಫಲಿತಾಂಶದಿಂದ ದೊರೆಯುವ ಪ್ರಯೋಜನಗಳೇನು ಎಂದು ಕೇಳುವವರಿದ್ದಾರೆ. ಸ್ಕೂಲ್ ಫೈನಲ್ ಮತ್ತು ಮೆಟ್ರಿಕ್ಯುಲೇಶನ್ ಪರೀಕ್ಷೆಗಳೆಂದರೆ ಬ್ರಿಟಿಷ ಸಾಮ್ರಾಜ್ಯದಲ್ಲಿ ಎಲ್ಲೆಲ್ಲಿಯೂ ಹೆಸರಾಂತ ಪರೀಕ್ಷೆಗಳು. ಲಕ್ಷಾನುಲಕ್ಷ ವಿದ್ಯಾರ್ಥಿಗಳ ಆಶಯಗಳು ನಿರ್ಮೂಲವಾಗುವುದು ಇಲ್ಲಿಂದಲೇ. ಆಹರೆ, ಈ ಪರೀಕ್ಷೆಗಳೇ ಈಗ ವಿದ್ಯಾರ್ಥಿಗಳ ಜೀವನಕ್ಕೆ ಕೊಡಲಿಯಂತಾಗಿವೆ. ನಿರ್ಮಲಚಿತ್ತರೆಲ್ಲರು ಇದನ್ನು ಬಲ್ಲರು; ಯಾರೇನು ಮಾಡುವರು? ಮಕ್ಕಳುಳ್ಳವರ ಅಪೇಕ್ಷೆಯು ಎಸ್ ಎಸ್ ಎಲ್ ಸೀ ಮಗುವೊಂದಿರಲೆಂದು, ಸೆಕೆಂಡರಿ ವಿದ್ಯಾಭ್ಯಾಸದ ಸ್ವರ್ಗವನ್ನೇರಬೇಕಾದರೆ, ಈ ಹೆಬ್ಬಾಗಿಲಿಂದಲೇ ಪ್ರವೇಶ. ವಿದ್ಯಾರ್ಥಿಯು ಅಥವಾ ಜನತೆಯು ಈಗಣ ಅಥವಾ ಮುಂದಣ ಜೀವನಕ್ಕೂ ಈ ವಿದ್ಯಾಭ್ಯಾಸಕ್ಕೂ ಸಂಬಂಧವೇನೂ ಇಲ್ಲ. ಶಾಲೆಯ ಚತ್ರಗಡಿ, ಪುಸ್ತಕಗಳ ರಟ್ಟುಗಳು ಇವುಗಳ ಹೊರಗಣ ವಿಚಾರಗಳೊಂದೂ ತಿಳಿಯದೆ ಇರುವ ವಿದ್ಯಾರ್ಥಿಗಳು ಸಹ, ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾಗಿದೆ, ಹಾಗೆ ಆಗುತ್ತಾರೆ.

ವಿಶ್ವವಿದ್ಯಾಲಯದ ಗೇಟು

ಈ ಪರೀಕ್ಷೆಯೂ ತಡವೆ ದಾಟಿದ ಬಳಿಕ, ವಿಶ್ವವಿದ್ಯಾಲಯದ ಗೇಟು ಬಳಿ ನಿಂತು, ಉಮೇದುವಾರನು ತನ್ನ ಜಾತಕವನ್ನು ಹೊರ ತೆಗೆದು ಸರಸ್ವತಿಯ ಅನುಗ್ರಹಕ್ಕಾಗಿ ಕಾದು ನಿಲ್ಲುವನು. ಇಪ್ಪತ್ತು ಸಾವಿರ ಉಮೇದುವಾರರು ಎಸ್ ಎಸ್ ಎಲ್ ಸೀ ಪರೀಕ್ಷೆಗೆ ಹಾಜರಾಗುವರು, ನಾಲ್ಕು ಸಾವಿರ ವೇನೋ ಮುಂದಣ ವಿದ್ಯಾಭ್ಯಾಸ ಹೊಂದಲು ಯುನಿವರ್ಸಿಟಿ ಸೇರುವರು. ಮಿಕ್ಕುಳಿದ ೧೬,೦೦೦ಕ್ಕೆ ಇಹಪರಗಳೆರಡೂ ಇಲ್ಲ. ಇವರಿಗಾಗಿ ವ್ಯಯವಾದ ಧನ, ಆಯುಷ್ಯ, ಪ್ರಯತ್ನಗಳೆಲ್ಲವೂ ಯಾವ ಕೆಲಸಕ್ಕೂ ಬಾರದ ಅಪವ್ಯಯ, ಅನ್ಯಾಯವಾಗಿವೆ ಎಂದೇ ವಿಮರ್ಶಕರು ದೂರುತ್ತಿರುವರು. ಮುಂದೆ ನಡೆಸುವ ಜೀವನಕ್ಕೆ ಸಂಬಂಧವೇ ಇಲ್ಲದ ಈ ವಿದ್ಯಾಭ್ಯಾಸದಿ ದೇಶ?

ಕಾಲ, ದುಷ್ಕಾಲ

ಪರೀಕ್ಷೆಯ ಸಮಯ ನನ್ನು ನೋಡಬಾರದೆ. ಸೆಕೆಯ ರಭಸ ಅತ್ಯಲ್ಪ ಪ್ರಯತ್ನ ಮಾಡ ಪುಹರೊಳಗೆ ದಣಿವಾಗುವ ಸಂಭವ [illegible] ದ ಆರಂಭದ ತನಕ ತಲೆಯಿಂಗಿ ಪರೀಕ್ಷಾ ತೀರ್ಥಸ್ನಾನ, ಸಂಜೆ ಹೊರಗಣ ಹವೆಯಲ್ಲಿ ಅಡ್ಡಾಡಲೂ ರಾತ್ರಿಯಲ್ಲಿ ವಿರಾಮ ಹೊಂದಲೂ ಅವಕಾಶವಿಲ್ಲ, ನಾಳಿನ ಯುದ್ಧಕ್ಕೆ ಸನ್ನಾಹ ಮಾಡಲೇ ಬೇಕಾಗಿ, ರಾತ್ರಿಯೆಲ್ಲ ಗ್ರಂಥವಾಚನ, ಎಡೆಬಿಡದೆ ನಿದ್ದೆ ಹಿಡಿಯುವುದರೊಳಗೆ ಬೆಳಗಾಗುವುದು, ಎದ್ದೊಡನೆ ರಣರಂಗದಲ್ಲಿ ಹಾಜರಾಗವುದೊಂದೇ ಜೀವನೋದ್ದೇಶ. ಪರೀಕ್ಷೆಯು ಒಂದು ತಿಂಗಳ ಹಿಂದೆನಂದ, ಶೀಕಡಾ ೨೦ ಜನರಷ್ಟು ದೇಹಭಾರವೇ ಕರಗಿಹೋದ ವಿದ್ಯಾರ್ಥಿಗಳಿರುವರು. ಸಾವಿರಾರು ಪರೀಕ್ಷಾರ್ಥಿಗಳ ಮೌಲ್ಯ ಕಟ್ಟಲು ನೂರಾರು ಬರೆಗಲ್ಲುಗಳು. ಒಬ್ಬೊಬ್ಬರದೊಂದು ಬಗೆಯ ಹದವುಳ್ಳ ಬಣ್ಣದ ಪೆನ್ಸಿಲಿನ ಬಗೆ ಬಗೆಯ ಮಾರ್ಕುಗಳು. ನಂತರ ಒಂದೊಂದು ವಿಷಯದಲ್ಲಿ ಒಂದೊಂದು ಶೀಕಡಾ ಇದಲ್ಲ ಮುಗಿದು, ಸಂಸ್ಥಾನದ ಸರಾಸರಿಯು ಹೆಚ್ಚು ಕಡಮೆಯಂತೆ, ಕಡಿತ ಕೂಡಿಕೆಯ ಫಲಿತಾಂಶ ಇಷ್ಟು ಮುಗಿದು ಹೊರಬಿದ್ದನೋ, ಮಹಾಸಾಗರದ ಆದಿಯಿಂದ ದಡದೆಯ ವೇಳೆ ಎಳೆದು ಹಾಕಿದ ಹಾಗೆ ಹಾಗೆ ಬಚಾವಾದರೂ,–ಮುಂದೆ? ಈ ವಿಚಾರವನ್ನೆಲ್ಲಾ ಹೊಸ ವಿದ್ಯಾಭ್ಯಾಸದ ಬೋರ್ಡಾದರೂ ವಿಚಾರಿಸದಿದ್ದರೆ, ಅದು ಹೊಸ ಬೋರ್ಡಾದುದರ–ಅರ್ಥ, ಉದ್ದೇಶಗಳೇನು?

ವಿಶ್ವ ವಿದ್ಯಾಲಯವು ವಿಶ್ವದ ಹೊರಗಿದೆಯೆ?

ಸರ್ ರಾಧಾಕೃಷ್ಣನ್‌ರವರು "ವಿಜ್ಞಾನದಲ್ಲಿ ಪ್ರಗತಿಯನ್ನು ಮಾಡಿರುವುದಕ್ಕಾಗಿ, ಅಥವಾ ನಾನಾ ಹೊಸ ಭಾವನೆಗಳನ್ನು ಹರಡಿಸಿದುದಕ್ಕಾಗಿ ವಿಶ್ವ ವಿದ್ಯಾಲಯವು ಹೆಸರು ಪಡೆಯದೇ ಅಲ. ಈ ವಿಶ್ವ ವಿದ್ಯಾಲಯದಿಂದ ನಾನಾರಂಗಕರಾಗಿ ಹೊರಬೀಳುವವರು ಎಂಥವರು, ಅವರ ಆದರ್ಶಗಳೇನು? ಅವರರಿಂತಹ ಅಭಿರುಚಿಯುಳ್ಳವರು ಎಂಬುದರಿಂದಲೇ ವಿಶ್ವ ವಿದ್ಯಾಲಯವು ಗೌರವ ತಳೆವುದು" ಎಂದರು. ಲಕ್ಷಾನುಲಕ್ಷ ಸುಶಿಕ್ಷಿತರಿಗೆ ಒಪ್ಪೊತ್ತಿಗೆ ಊಟಕ್ಕೆ ಅನುಕೂಲತೆಯನ್ನು ಉಂಟುಮಾಡಿ ಕೊಡಲಾರದ ಈ ವಿಶ್ವ ವಿದ್ಯಾಲಯದ ಶಿಕ್ಷಣದಿಂದ ಶಿಕ್ಷಣಕ್ಕೆ ಮೌಲ್ಯ ಕಟ್ಟಿದರೆ, ವಿದ್ಯಾಲಯದ ಬೆಲೆ ಎಷ್ಟೆಂದು ನೋಡಿರಿ ಎಂದು ಅವರು ಸೂಚಿಸಿರುವರು. ಅವರ ಅಭಿಪ್ರಾಯದಲ್ಲಿ, ಶಿಕ್ಷಣದ ದೋಷಕ್ಕಿಂತಲೂ, ನಮ್ಮ ಜೀವನದಲ್ಲಿ ಸಾಂಪ್ರತಿಕ ವಿಚಾರಗಳ ಕಡೆಗೆ ತಕ್ಕ ಗಮನ ಕೊಡುವುದೇ ಅತ್ಯಗತ್ಯವಾದುದೆಂದು ಸೂಚಿತವಾಗಿದೆ. ಉದ್ದಂಗಿ, ರುಮಾಲು, ಇಜಾರು, ಬೂಟ್ಸು ಧರಿಸಿಕೊಂಡರೆ ಮಾತ್ರ ದುಡಿದು ಜೀವಿಸಬಲ್ಲೆವೆಂಬ ಭಾವನೆಯು ಹಿಂದೀಯರಿಂದ ಮಾಯವಾಗುವ ತನಕ ಎಂಥ ಶಿಕ್ಷಣ ದೊರೆತರೂ ಜೀವನಕ್ಕೆ ತೊಡಕು ಇದ್ದೇ ಇರುವುದೆಂದು ಅವರೆನ್ನುತ್ತಾರೆ.

ಜನಸೇವೆಯು ಅತ್ಯುತ್ತಮ ಉದ್ಯೋಗ

ಎಂಬುದು ಅವರ ಬೋಧನೆ. ಸರಕಾರದ ನೌಕರಿಯಾಗಲಿ, ಇತರ ಎಂಥ ಹುದ್ದೆಯಾಗಲಿ, ಜನಸೇವೆ ಮಾಡಲು ಯಾವುದು ನಿಯೋಜಿಸುತ್ತಿದೆಯೋ ಅದೇ ಉತ್ತಮ ಉದ್ಯೋಗವೆಂದು ನಂಬಲೇಬೇಕಾಗಿದೆಯಾದರೂ, ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವವರು ಎಂಥ ವಿಧದ ಸೇವೆಯನ್ನು ಕೈಕೊಳ್ಳಲು ಸಿದ್ಧರಾಗಿ ಹೊರಬೀಳುತ್ತಾರೆಂದು ವಿಚಾರ ಮಾಡಿದರೆ ಬರಹದಿಂದ ದುಡಿವರೆ ತಿಳಿದವರಲ್ಲದೆ ಇತರ ಯಾವ ರೀತಿಯಲ್ಲೂ ಅವರು ಸುಖಜೀವನ ಮಾಡಲು ಬಲ್ಲವರಲ್ಲ ಮಾತ್ರವಲ್ಲ, ಅದು ನೀಚವೆಂದೂ ಅಭಿಪ್ರಾಯ ಪಡುವುದೆಂದೂ ಸರ್ವರಿಗೂ ತೋರುತ್ತಿದೆ. ಈ ಮನೋಭಾವವು ಶಿಕ್ಷಿತರಲ್ಲಿ ಎತ್ತರಿಂದ ಉಂಟಾಯಿತು? ಎಷ್ಟೆಂದರೂ ತನ್ನ ಜೀವನದ ಸುಖವನ್ನು ಮರೆತು ಜನತೆಗೆ ಜೀವನವೆಲ್ಲವನ್ನು ಒಪ್ಪಿಸಬಲ್ಲ ತಕ್ಕ ಜ್ಞಾನಿಗಳು ಸುಶಿಕ್ಷಿತರಲ್ಲಿ ಎಷ್ಟು ಮಂದಿ ದೊರೆಯರು? ಪ್ರತಿ ಶಿಕ್ಷಿತನಿಗೆ ಅವನ ಸ್ಥಾನ ಯಾವುದು ಎಂದು ತಿಳಿದಿತ್ತಾಗಿದ್ದ ಉತ್ತರ ವಾಗುತ್ತಿತ್ತು. ಈಗ ಮಾನ ಮರ್ಯಾದೆ ತಿಳಿದಿದೆ, ಸ್ಥಾನವಿಲ್ಲವಾಗಿದೆ. ಅದೇ ನಿರುದ್ಯೋಗತೆಯ ಸವಸ್ಯೆಗೆ ಕಾರಣ. ಸರ್ಕಾರ ಇಂಥದನ್ನು ಅರ್ಥೈಸಬಾರದೆ?

'ನಾಳೆ' ಎಂಬುದು ಜೀವಿದ ವಾಯಿದೆ

ಇಡೀ ಜಗತ್ತಿನ ಮೇಲೆಯೇ ಪರಿಣಾಮವನ್ನುಂಟುಮಾಡುವ ಮಹತ್ವದೊಂದು ಇತ್ಯರ್ಥವು ಯಾವಾಗಲೂ ಜಿನೀವದಲ್ಲಿ ಆಗುವುದೆಂದರೆ–ಅದು–ನಾಳೆ. ಇಟಲಿಗೆ ಎಣ್ಣೆ (ಪೆಟ್ರೋಲ್) ಸಿಗದಂತೆ ನಿರ್ಧಾರವಾಗಲಿದೆ ಎಂದು ಮೂರು ತಿಂಗಳಿಂದಲೂ ಜನಾಂಗ ಸಂಘವು ಆಲೋಚಿಸಿ ನಿಷ್ಕರ್ಷೆ ಮಾಡುತ್ತಿದೆ,–ಸೆಕ್ರೆಟರಿ ನಾಳೆ ಹೋರ್ ಸಾಹೇಬರು ಸೆಕ್ರೆಟರಿಯಾಗಿ ಬಹಳ ವಿಳಂಬ ಚತುರರು. ಹೆಸರು ಹೊಂದ ದಕ್ಕೆ ಆಕ್ಷೇಪವಾಗಿ ಇದನ್ನು ಸಾಹೇಬರು ಕೂಡಲೇ ಪ್ರವರ್ತಿಸಲು ತೊಡಗಿ ಸಮಾಧಾನ ಮಾಡಿರಲು,–ಸಂಧಾನದ ವಿಚಾರಗಳನ್ನು ಹಿಂದಿಕ್ಕಿ ಎಣ್ಣೆಯ ನಿರ್ಬಂಧಕ್ಕೆ ಕೂಡಲೆ ತೊಡಗಿ, ತೀರ್ಮಾನ ಮಾಡುವೆವೆಂದರು 'ನಾಳೆ' ಇತ್ತ, ಇಟಲಿಯು (ಪತ್ರಿಕೆಗಳಲಿ) ಅತ್ಯದ್ಭುತವಾದ ಜಯಗಳನ್ನು ಹೊಂದುತ್ತಲೇ ಇದೆ! ಅಬಿಸೀನಿಯದವರು (ಪತ್ರಿಕೆಗಳಲ್ಲಿ) ರಣಸನ್ನಾಹವನ್ನು ಹಿಂದೆ ಹಿಂದೆ ಸಿದ್ಧಪಡಿಸುತ್ತಲಿದ್ದಾರೆ. ಆದರೆ, ಇದೆಲ್ಲ ವಿಚಾರಗಳನ್ನು ನಾಳೆಗೊತ್ತಿ, ಇತ್ಯರ್ಥಗಳೆಲ್ಲ ಸಂಧಾನವಾಗಬೇಕೇ, ಬೇಕಾದರೆ ಹೇಗೆ ಎಂಬ ಪ್ರಶ್ನೆ, ವಿಚಾರ, ಇತ್ಯರ್ಥ ಎಲ್ಲವೂ ಜಿನೀವದಲ್ಲಿ ಆಗುತ್ತಲಿವೆ, ಫಲಿತಾಂಶ,–'ನಾಳೆ'' ಈಗಂತೂ ಹಿಟ್ಲರನ ತೀವ್ರ ವರ್ತನದಿಂದ ಜಿನೀವದಲ್ಲಿ ಎಲ್ಲ ವಿಚಾರಗಳೂ ಮಾಯವಾಗಿ ಯುರೋಪಿನ ಶಾಂತಿ ವಿಚಾರವೊಂದೇ ಅಲ್ಲಿನ ಅವಕಾಶವನ್ನೇ ಆವರಿಸಿದೆ. ಇದಾದರೂ, ಖಂಡಿತ ನಿಷ್ಕರ್ಷೆಯಾಗುವುದು, ಜಿನೀವದಲ್ಲಿ,–ನಾಳೆ! ಜನಾಂಗ ಸಂಘಕ್ಕೊಂದು ಇಷ್ಟದೇವತೆ ಇರುವದಾದರೆ, ಅವನೇ ನಾಳಿನ ಮ ದುವೆಗೆ ಪ್ರಖ್ಯಾತನಾದ ಗಣಪತಿ

ಮಂಗಳೂರು.

ಸಂಪಾದಕರ ಟಿಪ್ಪಣಿಪೆಟ್ಟಿಗೆ

ಕಳೆದ ವಾರದ ನಮ್ಮ ಸಂಚಿಕೆಯಲ್ಲಿ ಡಿ ಬೊ ಪ್ರೆಸಿಂಟರ ಅವಗಾಹನೆಗೆ' ಎಂಬ ಶಿರೋನಾಮೆಯ ಲೇಖನದಲ್ಲಿ, ಅಲ್ಲಿನ ಪಾಠಶಾಲೆ ಡಿಸ್ಟ್ರಿಕ್ಟ ಇನ್ಸಪೆಕ್ಟರರ ಮೇಲೆ ಅನೇಕ ಸಲ್ಲಸಲ್ಲದ ದೂಷಣೆಗಳು ಪ್ರಕಟವಾಗಿವೆಯೆಂದೂ ಅವುಗಳಲ್ಲಿ ಸತ್ಯಾಂಶವಿಲ್ಲವೆಂದೂ, ಅದು ಒರೇ ದ್ವೇಷದಿಂದ ಬರೆದುದಾಗಿದೆಯೆಂದೂ ತಿಳಿದುಬರುತ್ತದೆ ಅದಕ್ಕಾಗಿ ನಾವು ವಿಷಾದಿಸುತ್ತೇವೆ ಈ ವಿಚಾರದ ಪತ್ರವ್ಯವಹಾರವನ್ನು ಇಲ್ಲಿಗೆ ಕೊನೆಗೊಳಿಸಲಾಗಿದೆ ಸಂ ಸ್ವ.

ಇದೇ ತಾ ೧೪ರಲ್ಲಿ ಮಿತ್ರಮಂಡಲಿಯ ೧೧ನೇ ವಾರ್ಷಿಕೋತ್ಸವವು ಶ್ರೀಯುತ ಕೆ ಗೋಪಾಲರಾವ್ ಬಿ, ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ ಜರಗಿತು ಈ ಸಂದರ್ಭದಲ್ಲಿ ಶ್ರೀ ಪಂಡಿತ ದುಳಿಯ ಶಿವಪ್ಪಯ್ಯನವರು ಅಧಿಕಾರವಾಣಿಯಿಂದ 'ವೃಷಭೇಶ್ವರ ವೈರಾಗ್ಯ' ಎಂಬ ಭಾಗವನ್ನೆತ್ತಿ ವಾಚಿಸಿದರು

ಶ್ರೀ ಕೆ. ಪಿ ಪದ್ಮನಾಭಯ್ಯ ಬಿ ಎ ಎಲ್ ಟಿ ಇವರು ಕಳೆದ ಮಾರ್ಚ ತಾ ೧೮ನೇ ಮಂಗಳವಾರ ಸ್ವರ್ಗವಾಸಿಯಾದರು ಇವರು ಸುಮಾರು ೨೫ ವರ್ಷಗಳ ವರೆಗೆ ಇಲ್ಲಿಯ ಕೆನರಾ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದು, ಒಳ್ಳೆಯ ಸೌಜನ್ಯದಿಂದ ಕೆಲಸವನ್ನು ನಡೆಸಿದ್ದರು ಇವರ ಮರಣವೃತ್ತಾಂತವು ತಿಳಿದೊಡನೆ ಶಾಲೆಗೆ ರಜೆಯಿತ್ತಿದ್ದರು

ಇಂಡಿಯಾ ಸರಕಾರದ ಸಿಲೋನ್ ಏಜಂಟ

ರಾಗಿ ನಮ್ಮ ಜಿಲ್ಲೆಯವರಾದ ಶ್ರೀ ಅಪ್ಪಯ್ಯ ಐ ಸಿ ಎಸ್ ಇವರು (ಮದ್ರಾಸ್ ಸರಕಾರದ ಅಂಡರ್ ಸೆಕ್ರಟರಿಯಾಗಿದ್ದವರು) ನೇಮಕಹೊಂದಿದ್ದಾರೆ.

ಜನನ ಮತ್ತು ಮರಣ— ಮಾರ್ಚ ೧೮ ರಲ್ಲಿ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮ್ಯುನಿಸಿಪಾಲಿಟಿಯೊಳಗೆ ಒಟ್ಟು ೨೫ ಮರಣಗಳೂ ೪೮ ಜನನಗಳೂ ಆಗಿವೆ

ಸ್ಥಳೀಯ ಶ್ರೀ ಕೃಷ್ಣ ಸಿನೆಮಾ ಮಂದಿರದಲ್ಲಿ ಈಗ ಮಾದಿಯಾ ಮಹಾ ಕಂಪೆನಿಯವರ ದೇಶದೇಶದ ಚಿತ್ರವು ಪ್ರದರ್ಶಿಸಲ್ಪಡುತ್ತಿದೆ ನಂತರ ದಿ ಇಂಡಿಯನ್ ಹೊಲ್ಲಿವುಡ್ ಫಿಲ್ಮ್ ಸೊಸೈಟಿಯವರ ಚಿತ್ರ ... ಭಟ್ಟನಿಂದ ಅಭಿನಯಿಸಲ್ಪಟ್ಟ "ಸ್ಟ್ಯಾಟಿಂಗ್ ಕೆನೆರಿಯನ್" ಎಂಬ ಅತ್ಯನೋಹ ಚಿತ್ರವು ಪ್ರದರ್ಶಿಸಲ್ಪಡುವುದು

ಡಾ। ಕೆ ಎಮ್ ನಾಡಕರ್ಣಿಯವರು.

ಈ ಮಹನೀಯರು ತಮ್ಮ ೭೦ನೇ ವಯಸ್ಸಿನಲ್ಲಿ ಇವರ ದ್ವಿತೀಯ ಪುತ್ರ ಶ್ರೀ ಎ ಕೆ ನಾಡಕರ್ಣಿಯವರ ಮಂಗಳೂರು ಕೊಡಿಯಾಲಬೈಲ ಮನೆಯಲ್ಲಿ ವೃದ್ಧಾಪ್ಯದ ದೆಸೆಯಿಂದ ೨೦ ದಿನಗಳು ಅಸ್ವಸ್ಥರಾಗಿದ್ದು ಇದೇ ತಾ ೧೬ರಲ್ಲಿ ಸ್ವರ್ಗಸ್ಥರಾದರು

ದಿವಾನ ಬಹದ್ದೂರು ನಯಂಪಳ್ಳಿ ಶಿವರಾಯರ ಸೋದರಳಿಯಂದಿರಾದ ಇವರು (ಈ ಕಾರಣ ದಿವಾನ್ ಬಹದ್ದೂರ ನಯಂಪಳ್ಳಿ ಸುಬ್ರಾಯರ ಭಾವನಾಗಿದ್ದರು) ಇಲ್ಲಿನ ಗವರ್ನಮೆಂಟ ಕಾಲೇಜಿನಲ್ಲಿ ಅನಂತರ ಮದರಾಸು ಪ್ರಸಿಡೆನ್ಸಿ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಶಿಕ್ಷಣಹೊಂದಿದ್ದರು ಮೊದಲಿನಿಂದಲೂ ಇವರಲ್ಲಿ ಧರ್ಮಜೀವನದ ಕಡೆಗೆ ಪಕ್ಷಪಾತವಿದ್ದುದರಿಂದ ಇವರು ಸನಾತನ ಧರ್ಮ ಆರ್ಯಸಮಾಜದ ತತ್ವಗಳು, ಕೊನೆಗೆ ಥಿಯೋಸೊಫಿ ಮುಂತಾದ ಧರ್ಮಸಂಸ್ಥೆಗಳ ತತ್ವಗಳನ್ನು ಬಹಳವಾಗಿ ಅಂಗೀಕರಿಸಿದ್ದರು ಗಾಯನಕಲೆಯಲ್ಲಿ ಧಾರಾಳ ಪರಿಶ್ರಮವುಳ್ಳವರು ವೃತ್ತಪತ್ರಿಕೆಗಳಿಗೆ ಭಾರತೀಯ ಗಾಯನಶಾಸ್ತ್ರವನ್ನು ಕುರಿತಾದ ಲೇಖನಗಳನ್ನು ಬರೆಯುತ್ತ, ತಮ್ಮ ವೈದ್ಯಕೀಯ ವಿಚಾರದ ಲೇಖನಗಳಂತೆಯೇ ಇವುಗಳನ್ನೂ ಪ್ರಕಟಿಸುತ್ತ ಬಂದಿರು. ಅಧ್ಯಾತ್ಮದ ದಕ್ಷಿಣಮಂಡಳಿ ಎಂಬ ಒಂದು ಸಂಘವನ್ನು ಇವರು ಸ್ಥಾಪಿಸಿದರು, ಇವರ ಲೇಖನಗಳಲ್ಲಿ ವಿಶೇಷ ಶೋಧಕಬುದ್ಧಿಯೂ ನವೀನ ವಿಚಾರಗಳೂ ಇದ್ದ ಪ್ರಯುಕ್ತ ಈ ಲೇಖನಾವಳಿಯು ಸಾರಸ್ವತರೊಳಗೆ ಇವರೇ ಮೊದಲಿನವರಾಗಿ ಎಷ್ಟೋ ಇಂಗ್ಲೀಷ ಹಾಗೂ ಫ್ರೆಂಚ ವಿದ್ವತ್ಸಂಘಗಳ ಸದಸ್ಯರಾಗಿ ಚುನಾವಣೆ ಹೊಂದಿ ಬಹುಮಾನ ಪಡೆದರು ವೈದ್ಯಕೀಯ ಪತ್ರಿಕಾ ಪ್ರಚಾರವನ್ನು ಬೊಂಬಾಯಿಯಲ್ಲಿ ಮುದ್ರಿಸಲಿಕ್ಕೆ ಇವರೇ ಪ್ರಾರಂಭಿಸಿದರು ಡಾ। ಸರ್ ಎಸ್ ಎಲ್ ಭೊಳ್ಸೆ ಎಂಬ ಪ್ರಸಿದ್ಧ ಕ್ಷಯರೋಗದ ಡಾಕ್ಟರ ರೊಡನೆ ಇವರು ಸೇರಿ ವೈದ್ಯಕೀಯ ಪತ್ರಿಕೆಗಳನ್ನು ಪ್ರಾರಂಭಿಸಿದ್ದಲ್ಲದೆ, ಇವರೇ ಸ್ವತಃ ರಚಿಸಿದ ಎಷ್ಟೋ ವೈದ್ಯಗ್ರಂಥಗಳನ್ನು ಇದೇ ಭಾರತ ವರ್ಷದಲ್ಲಿ ಡಾಕ್ಟರರಲ್ಲದು ಆತ್ಮಾದರದಿಂದ ಪ್ರಾಮಾಣಿಕ ಗ್ರಂಥಗಳೆಂದು ಮನ್ನಿಸುತ್ತಾರೆ ಇವರ "ಇಂಡಿಯನ್ ಮಟೀರಿಯಾ ಮೆಡಿಕಾ" ಎಂಬುದು ಈ ದೇಶದಲ್ಲಿರುವ ಸಮಸ್ತ ಔಷಧಿಗಳ ಸಂಗ್ರಹವಾಗಿದ್ದು ಸರ್ವ ವೈದ್ಯಪ್ರಮುಖರಿಗೆ ಹೊಂದಿಸಿಕೊಂಡು ಬರುವ ಆತ್ಯವಶ್ಯ ಗ್ರಂಥವಾಗಿದೆ ಇಂತಹ ಸುಪ್ರಸಿದ್ಧ ವೈದ್ಯಶಾಸ್ತ್ರಜ್ಞರು ನಮ್ಮಲ್ಲಿ ಈಗ ಬಹಳ ಕೆಲವೇ ಮಂದಿ ಇದ್ದಾರೆ. ನಮ್ಮ ಜಿಲ್ಲೆಯ ಕೀರ್ತಿಗೆ ವೈದ್ಯಶಾಸ್ತ್ರದಲ್ಲಿ ಕಾರಣರಾಗಿದ್ದ ಈ ಮಹನೀಯರು ಇಬ್ಬರು ಪುತ್ರರನ್ನೂ ಒಬ್ಬಳೇ ಪುತ್ರಿ (ಬರೋಡಾದ ಎಕ್ಸಿಕ್ಯುಟಿವ್ ಇಂಜಿನಿಯರ ಶ್ರೀ ಎಸ್ ಕೆ ನಯಂಪಳ್ಳಿಯವರ ಪತ್ನಿ) ಯನ್ನೂ ಬಿಟ್ಟು ದಿವಂಗತರಾದರು ಇವರ ಆತ್ಮಕ್ಕೆ ಶಾಂತಿಯಾಗಲಿ

ತಾಲೂಕುಗಳಿಂದ

ಪದ್ರೆ:— ಈ ಊರಿನ ಒಬ್ಬ ಬಡ ... ಬಡಿಮಕ್ಕಳ ಸ್ನಾನದ ಸಮಯ ... ಮೊನ್ನೆ ಪದ್ರೆಯಿಂದ ಸ್ವಲ್ಪ ದೂರದ ... ಆಭರಣಗಳನ್ನು ಕ್ರಯಕ್ಕೆ ತೆಗೆಸಿಕೊಡುವುದಾಗಿ ಭರವಸೆ ಕೊಟ್ಟು ಕರೆದುಕೊಂಡು ಬಂದನು. ಇಲ್ಲಿಗೆ ಸಮೀಪ ಕಣ್ಣಡಿಕಾನ ಎಂಬಲ್ಲಿಗೆ ಒಂದಾಗ ಅಲ್ಲೇ ಕೆಲಸ ಆಭರಣವನ್ನು ... ಆಲ್ಲಿಗೆ ತಾನು ಹೋಗಿ ಆಭರಣ ಕನ್ನ ತೆಗೆದುಕೊಂಡು ಬರುವುದಾಗಿ ಹೇಳಿ ಆಭರಣ ಸ್ವಲ್ಪ ಹಣ ತೆಗೆದುಕೊಂಡು ಹೋದವನು ಅಲ್ಲೇ ಎಲ್ಲೋ ಮಾಯವಾದನು

ಬೇಣೆ:— ಕಳೆದ ಬುಧವಾರ ರಾತ್ರಿ ೬ ಗಂಟೆಯಲ್ಲಿ ಕುಂಬಳೆ ಸಕಲ ... ನಿಂತಿದ್ದ ಶ್ರೀಯುತ ... ಕಾರಿನಲ್ಲಿ ... ಬಂದು ... ಗಾಯ ... ಆಸ್ಪತ್ರೆಯಲ್ಲಿ ... ಆದ.

ಪಾಣಾಜೆ.— ಇಲ್ಲಿ ಮೊನ್ನೆ ಮಧ್ಯಾಹ್ನ ... ಒಬ್ಬ ಬಡ ... ಮನೆಯ ... ಸಂಪೂರ್ಣ ಸುಟ್ಟು ಭಸ್ಮವಾಯಿತು ಸುಮಾರು ೧೦೦ ರೂಪಾಯಿಗಳ ನಷ್ಟವಾಗಿರಬಹುದು

ಕಳೆದ ಸೋಮವಾರ ಹಗಲು ಇಲ್ಲಿ ಒಬ್ಬ ಬ್ರಾಹ್ಮಣನ ಮನೆಗೆ ಕೆಲವು ಜನ ಪುಂಡರು ಅಯಾಚಿತವಾಗಿ ನುಗ್ಗಿ ಬಂದು ... ಬ್ರಾಹ್ಮಣನಿಂದ ಬೆದರಿಸಿ ಅಂಗಳದಿಂದ ಆಡಿಕೆ ಎಲ್ಲವನ್ನೂ ಕಟ್ಟಿಕೊಂಡು ಬಂದರು ... ಪೋಲೀಸು ವಿಚಾರಣೆ ನಡೆಯುತ್ತಿದೆ

ಕಾರ್ಕಳ:— ತಾ ೧೧ ರ ೩ನೇ ಸಾಯಂಕಾಲ ೬ ಗಂಟೆಗೆ ಆರ್ಯಸಮಾಜ ಮಂದಿರದಲ್ಲಿ ಶ್ರೀಯುತ ಪಟೇಲ್ ಅಣ್ಣಾಜಿ ಶುದ್ಧರ ಅಧ್ಯಕ್ಷತೆಯಲ್ಲಿ ಕಾರ್ಕಳ ಕಾಂಗ್ರೆಸ್ ಕಮಿಟಿಯ ಕಡೆಯಿಂದ ಒಂದು ಸಾರ್ವಜನಿಕ ಸಭೆ ಸೇರಿ ಶ್ರೀಮತಿ ಕಮಲಾನೆಹರುರವರ ಆತ್ಮ ಶಾಂತಿಗೋಸ್ಕರ ಮೌನವನ್ನು ನಡೆಸುವ ... ಈ ಸಂದರ್ಭದಲ್ಲಿ ಪಂಡಿತ ಜವಾಹರಲಾಲರ ಮತ್ತು ಅವರ ಕುಟುಂಬಸ್ಥರೊಡನೆ ಅಂತಃಕರಣ ಪೂರ್ವಕವಾದ ಸಂತಾಪವನ್ನು ವ್ಯಕ್ತಪಡಿಸುವ ನಿರ್ಣಯ ಎಲ್ಲರೂ ಎದ್ದುನಿಂತು ಮಂಜೂರು. ಮಾಡಲ್ಪಟ್ಟಿತು ಶ್ರೀಮತಿಯವರ ಚರಿತ್ರೆಯನ್ನು ಜೀಜ ಮತ್ತು ಅವರ ಗುಣಕಥನ ಮಾಡಿ ಶ್ರೀಗಳಾದ ಕೆ. ಕೆ. ಶೆಟ್ಟಿ ಪಿ ಎಚ, ಕೇಶವ ಶೆಟ್ಟಿ ಮತ್ತು ಎಂ. ಎಸ್ ಅಧಿಕಾರಿಯವರು ಸಭೆಯಲ್ಲಿ ಮಾತನಾಡಿದರು. ಈ ದುಃಖಸೂಚಕವಾಗಿ ರಾಷ್ಟ್ರಧ್ವಜವು ಅರ್ಧಕ್ಕೆ ಮಾತ್ರ ಏರಿಸಲ್ಪಟ್ಟಿತು

ಸ್ಥಳೀಯ ಆರ್ಯಸಮಾಜ ಮಂದಿರದಲ್ಲಿ ತಾರೀಕು ೧೧–೩–೩೬ರಲ್ಲಿ ಧರ್ಮಾರ್ಥವಾಗಿ ಕಲಿಸುವ ಒಂದು ಹಿಂದೀ ಶಾಲೆಯು ತೆರೆಯಲ್ಪಟ್ಟಿತು ಶ್ರೀಯುತ ಆರ್ ಜಿ ಶೆಣೈಯವರು ಅಧ್ಯಾಪಕರಾಗಿರುತ್ತಾರೆ

ಮಂಜೇಶ್ವರ:— ಇಲ್ಲಿಯ ಶ್ರೀ ಮದನಂತೇಶ್ವರ ದೇವಸ್ಥಾನದ ಪ್ರತಿಷ್ಠಾ ದಿನವು ವರ್ಷಂಪ್ರತಿ ಫಾಲ್ಗುಣ ಬಹುಳ ೩ರ ದಿನ ಆಚರಿಸಲ್ಪಡುವುದು ಶ್ರೀ ದೇವಸ್ಥಾನದಲ್ಲಿ ನಡೆಯುವ ಪೂಜಾದಿಗಳ ಮೇರೆಗೆ, ಅಂದು ಶ್ರೀ ದೇವರಿಗೆ ಕಲಶಾಭಿಷೇಕ, ಪಂಚಾಮೃತಾಭಿಷೇಕ, ಸಮಾರಾಧನೆ, ಉತ್ಸವ ಇತ್ಯಾದಿ ವಿನಿಯೋಗಗಳು ನಡೆಯತಕ್ಕದ್ದಿರುತ್ತವೆ ಇದು ಅನಾದ್ಯತಿಂದ ನಡೆದುಬಂದ ಸಂಪ್ರದಾಯ ಈ ವರ್ಷ ಕಲಶಾಭಿಷೇಕಕ್ಕೆ ಊರ ಯೋಗ್ಯ ... ಹಿನ್ನದ ನಾಲ್ಕಾರ್ಗಳ ಸ್ವಾಧೀನದಾರರಾಗಿರುವ ಮೊಕ್ತೇಸರ ರಾ। ಶ್ರೀನಿವಾಸ ಬಾಳಿಗರು ಆ ಕಲಶಾಭಿಷೇಕದ ನಾಲ್ಕಾರ್ಗಳನ್ನು ಒಪ್ಪಿಸಿಕೊಡಬೇಕೆಂದು ತಿಳಿದ ಕಾರಣ ಇದ್ದುದರಿಂದ ಕಲಶಾಭಿಷೇಕ ಬೇಡವಾಗುವ ಸಂಭವವಿತ್ತು ದೇವರ ಚಿತ್ತವೂ ಕೃತ್ಯವೂ ಬೇರೆಯೇ ಇದೆ ಎಂಬುದನ್ನು ಜನಕ್ಕೆ ತಿಳಿಯುವಂತೆ ಕಲಶಾಭಿಷೇಕಕ್ಕೆ ಬೇಕಾದ ಭಂಗಾರದ ನಾಲ್ಕಾರ್ಗಳನ್ನು ರಾ। ವೈಕುಂಠಭಕ್ತರು ಒದಗಿಸಿಕೊಡುವಂತಾಗಿ ಶ್ರೀ ದೇವರಿಗೆ ಮಾಮೂಲಿನಂತೆ ಕಲಶಾಭಿಷೇಕವು ಸಾಂಗವಾಗಿ ನೆರವೇರಿತು ಈ ವರ್ಷ ಹೆಚ್ಚಿಗೆಯಾಗಿ ಬೆಳಗ್ಗೆ ಸಗಟು ಉತ್ಸವ ನಡೆದಿತ್ತು ಶ್ರೀದೇವರ ಗರ್ಭಗೃಹದಲ್ಲಿ ಪ್ರವೇಶಿಸುವ ವೈದಿಕರಲ್ಲಿ ಸಂದಿಗೆಯು ಇಲ್ಲದಾಗುವುದರಿಂದ ಕಲಶಾಭಿಷೇಕದ ನಾಲ್ಕಾರ್ಗಳನ್ನು ರಾ। ಬಾಳಿಗರು ತೆಗೆದುಕೊಡಲಿಲ್ಲವೆಂತಲೇ ವದಂತಿಯು ಇದೆ ಸತ್ಯವೋ ಮಿಥ್ಯವೋ?

ಕುಂದಾಪುರ:— ಇಲ್ಲಿಯ ಸಬ್ ಕಲೆಕ್ಟರ ರಾದ ಮ। ರಾ। ವೆಂಕಟೇಶ್ವರನ್ ಎಮ್ ಎ ಐ ಸಿ ಎಸ್ ಇವರು ಜಿಲ್ಲಾ ಕಲೆಕ್ಟರರ ಬದಲಿ ಕೆಲಸ ನೋಡುವುದಕ್ಕಾಗಿ ಇದೇ ತಾ ೧೮ನೇ ಬುಧವಾರ ದಿನ ಮಂಗಳೂರಿಗೆ ಹೋಗಿರುವರು ಇಲ್ಲಿಗೆ ಸಬ್ ಕಲೆಕ್ಟರರಾಗಿ ಬಂದಿದ್ದ ಮ ರಾ। ಗುರ್ತಲ್ ಮಹಮ್ಮದ್ ಇವರ ತಾ ೧೮ ರಲ್ಲಿ ಕುಂದಾಪುರಕ್ಕೆ ಬಂದು ಸಬ್ ಕಲೆಕ್ಟರನಿಂದ ಚಾರ್ಜನ್ನು ಸ್ವೀಕರಿಸಿ ಮಾಮೂಲಿನಂತೆ ಊರಿನ ಕಡೆ ತಿರುಗುವರು

ಇಲ್ಲಿಯ ಸಂಸ್ಕೃತ ಸಂಭಾಷಣಸಭೆಯು ಸ್ಥಳೀಯ ಹಿ ದಿ ಸಂ ಶಾಲೆಯಲ್ಲಿ ತಾ ೧೫ನೇ ಭಾನುವಾರ ಮ। ಕರಣೀಕ ರ್ಕರಿಂದ ಶ್ರೀ ಕೆ ರಾಮಕೃಷ್ಣ ಶಾಸ್ತ್ರಿ ಭಾಗವತ ಅಧ್ಯಕ್ಷತೆಯಲ್ಲಿ ಜರುಗಿತು ಪೈಸ್ಕೂಲಿನ ವಿದ್ಯಾರ್ಥಿ ಕೆ ವ ರಾಮಯ್ಯ ಕೆಯ್ಯೂರರು ... ಸಂಸ್ಕೃತ ಭಾಷೆಯಲ್ಲಿ ಉಪನ್ಯಾಸ ... ಸಂಸ್ಕೃತ ... ದರ್ಶಿಗಳ ... ಹೆಟ್ಟ್ಯಾ ಕಿನ್ನರ ಸಂಸ್ಕೃತ ಪಂಡಿತರಾದ ಶ್ರೀ ಪಿ ಕೆ ಉಡುಪ (ವಿದ್ವಾನ್) ರ ... ಗ್ರಾಮದ ಶ್ರೀ ... ದೇವ ಹೆಬ್ಬಾರರು ಸಭೆಯಲ್ಲಿ ಸಾಧ್ಯ ಕೈಕೊಳ್ಳಲೇಕಾದ ಕಾರ್ಯಕ್ರಮವನ್ನು ಕುರಿತು ಭಾಷಣಗಳನ್ನು ಮಾಡಿದರು ತದನಂತರ ಅಧ್ಯಕ್ಷರು ಸಮಯೋಚಿತ ಭಾಷಣವನ್ನು ಮಾಡಿದರು ಈ ಸಂಘದ ಕಾರ್ಯನಿರ್ವಾಹಕ ಮಂಡಳಿಯಲ್ಲಿ ಕಾಲಿದ್ದ ೪ ಸ್ಥಾನಗಳಿಗೆ ಹೊಸದಾಗಿ ೪ ಜನ ಮೆಂಬರರನ್ನು ಚುನಾಯಿಸಿದ ಮೇಲೆ ಅಧ್ಯಕ್ಷರಿಗೂ ಸಭಿಕರಿಗೂ ಸಂಘದ ಪರವಾಗಿ ಧನ್ಯವಾದಗಳನ್ನರ್ಪಿಸಿದ ತರುವಾಯ ಸಭೆಯು ಅಂತ್ಯವಾಯಿತು ಬರುವ ಸಭೆಯು ಇದೇ ತಿಂಗಳ ತಾ ೨೨ರಲ್ಲಿ ಜರಗುವುದು ಆ ದಿನ ಹೈಸ್ಕೂಲಿನ ವಿದ್ಯಾರ್ಥಿಗಳ ಪರವಾಗಿ ಈ ಸಂಘದಲ್ಲಿ ಪ್ರಬಂಧ ಸ್ಪರ್ಧೆಯೊಂದು ನಡೆಯಲಿಕ್ಕಿರುವುದ ಜಯಶೀಲರಾದ ವಿದ್ಯಾರ್ಥಿಗಳಿಗೆ ಬಂದವರೇ ಎಂದವರೆ ಬಹುಮಾನಗಳು, ಕೊಡಲ್ಪಡುವವು ಊರ ಸಂಸ್ಕೃತಾಭಿಮಾನಿಗಳೆಲ್ಲರೂ ಸಭೆಗೆ ಬರಬೇಕಾಗಿ ವಿನಂತಿ.

ಏಪ್ರಿಲ್ ತಾ ೧ರಿಂದ ಪ್ರಸಿದ್ಧವಾದ ಕುಂದಾಪುರ ಸಂತೆಯು ಶನಿವಾರ ಮತ್ತು ಬುಧವಾರಗಳಲ್ಲಿ ವಾರಕ್ಕೆ ಎರಡು ಸಲ ನಡೆಸಲ್ಪಡುವುದಾಗಿ ತಿಳಿದುಬರುತ್ತದೆ

ಉದಯಾವರ— ಈ ಪೇಟೆಯ ಗೌಡಸಾರಸ್ವತ ಬ್ರಾಹ್ಮಣ ಸ್ವಾಮ್ಯದ ಹತ್ತು ಸಮಸ್ತರು ಅನಾದಿಕಾಲದಿಂದ ಭಜಿಸಿಬರುವ ಶ್ರೀ ವೀರವಿಠಲ ದೇವರನ್ನು ಈಗ ಜೀರ್ಣೋದ್ಧಾರಗೊಳಿಸಿದ ದೇವಾಲಯದಲ್ಲಿ ಇದೇ ತಾ ೨೫ನೇ ರವಿವಾರ ಮಧ್ಯಾಹ್ನ ಗಂಟೆ೧೧-೩೫ಕ್ಕೆ ಅಭಿಜಿನ್ಮುಹೂರ್ತದಲ್ಲಿ, ಶ್ರೀ ಕಾಶೀಮಠ ಸಂಸ್ಥಾನದ ಶ್ರೀಮತ್ ಸುಕೃತೀಂದ್ರತೀರ್ಥ ಶ್ರೀ ಪಾದಂಗಳವರ ದಿವ್ಯಕರಕಮಲಗಳಿಂದ ಆಗಮೋಕ್ತ ವಿಧಿಪ್ರಕಾರ ಪ್ರತಿಷ್ಠೆಮಹೋತ್ಸವವು ನಡೆಯುವುದು

ಫರಂಗಿಪೇಟೆ— ಇಲ್ಲಿಯ ಶ್ರೀ ರಾಮಾ ಹಾಯರ ಎಲಿಮೆಂಟರಿ ಶಾಲೆಯ ಪಡ್ವೊಂಭತ್ತನೇಯ ವರ್ಧಂತಿ ದಿನವು ಇದೇ ಬರುವ ಶ್ರೀ ರಾಮನವಮಿ ದಿನ (ಇದೇ ತಾ ೩೧ರಲ್ಲಿ) ಡಿ ಬೋರ್ಡ ಎಜ್ಯುಕೇಶನಲ್ ಆಫೀಸರ್ ಶ್ರೀಯುತ ಕೆ ಸಂಜೀವಭಟ್, ಎಂ ಎ ಎಲ್ ಟಿ ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಉಡುಪಿ— ತಾ ೧೬ನೆಗೆ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಳಿಯ ಸಭೆ ಸೇರಿ ಉಡುಪಿ ತಾಲೂಕಿನಿಂದ ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ಸಿನ ಕಡೆಯಿಂದ ಆರಿಸಲ್ಪಟ್ಟಿರುವ ಸದಸ್ಯರು ಜಿ ಬೋ ಅಧ್ಯಕ್ಷರ ಚುನಾವಣೆಯಲ್ಲಿ ತಮ್ಮ ಮತಗಳನ್ನು ಯಾರಿಗೆ ಕೊಟ್ಟರುವರಾಗಿ ತಿಳಿಸಬೇಕೆಂದು ಆಪೇಕ್ಷಿಸಿ ನಿರ್ಣಯಮಾಡಲ್ಪಟ್ಟಿದೆಯೆಂದು ತಿಳಿಯುತ್ತೇವೆ

ಇದೇ ತಾ ೧೪ಕ್ಕೆ ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನಿ ಸಂಸ್ಕೃತ ಶಾಲೆಯಲ್ಲಿ ಕೇರಳನಾಡಿನ ಶ್ರೀಯುತ ಸುಂದರರ ವಾಚಾರ್ಯರಿಂದ ತ್ರಿಮತ ವೇದ ಕಥನ ಕುರಿತು ಭಾಷಣವಿತ್ತು

ಉಡುಪಿಯ ಕೆಲವು ರೋಮನ್ ಕೆಥೊಲಿಕ್ ಬಂಧುಗಳ ಪರಿಶ್ರಮದಿಂದಾಗಿ ಊರಿಗ್ರಾಮಸ್ಥರೊಳಗಿನ ಕೆಲ ಮಂದಿಯ ಹೆಸರಿನಿಂದೊಂದು ಆರ್ಜಿಯು ದೂರಕಸಿದ ಜಿಲ್ಲೆಯನ್ನರಿಗೊಂದು, ತಯಾರಾಗುತ್ತಿದೆಯೆಂತ ಮುನಿಸಿಪಾಲಿಟಿಯ ಸಂಯೋಜನೆಯಿಂದಾಗಿ ಗೌರವಿಸಲ್ಪಟ್ಟಿರುವ ಉಡುಪಿನಿಂದೊಂದು ಸೆಕೆಂಡರಿ ಶಾಲೆಯು ಅದಕ್ಕಿಂತ ಒಹಳ ಸಮೀಪದಿಂದ ಈ ಒಗ್ಗೆ ಮಾನ್ಯ ಸರಕಾರಕ್ಕೆ ಅಗಿಂದಾಗ ಅರ್ಜಿಗಳು ಮಾಡಲಾಗಿದವು ಅವರಿ ಇದಕ್ಕಾಗಿ ಮನೆಯನ್ನು ಬಾರ್ಡ ಪ್ರೆಸಿಡೆಂಟರಿಗೆ ಮನವಿದ ದರ ಏಟಿಕ್ಕಕ್ಕೋ ಅಗತ್ಯವೋ ಕೋರುವುದಿಲ್ಲ ನಮ್ಮ ನಮ್ಮ ಜಿಲ್ಲೆಯಲ್ಲಿ ಪ್ರೊಟೆಸ್ಟಂಟ ಮತ್ತು ಕೆಥೊಲಿಕ್ ಮಿಶನರಿಗಳಿಂದ ಬಹಳವಾದ ವಿದ್ಯಾಸಂಸ್ಥೆಗಳಿವೆ ಅಲ್ಲದೆ ಇವರ ಧರ್ಮಕ್ಕೆ ಬೇಕಾದ ಸಹಾಯ ದೊರಕುವ ವಿದ್ಯಾದಾನದ ಪ್ರೀತಿಯಾಗಲಿ ಕರ್ತವ್ಯಪರತೆಯಾಗಲಿ ಆಗದಿಯುವುದಿಲ್ಲ ಆದ್ದರಿಂದ ರಿಕ್ತತೆಯಿಂದಾಗಿ ಹಿಂದೂ ಅಥವಾ ಇತರ ಸಮಾಜಗಳ ಅಟ್ಟಗಳು ಶಿಥಿಲವಾಗಿರುತ್ತ ಇನ್ನೂ ಇನ್ನು ಅಂತಹ ಮಾತಿನಾದಿ ವಿದ್ಯಾಸಂಸ್ಥೆಗಳು ಬಗ್ಗಸಕರ ಬರುವುದಿಲ್ಲ ಅನ್ಯಮತೀಯರಲ್ಲಿ ಊರ ಸಮಸ್ತರೂ ಬಿಟ್ಟುಕೊಟ್ಟ ಸರಕಾರದಿಂದಲೇ ಸಾರ್ವಜನಿಕ ಶಾಲೆ ಕೊಡಲೊಂದನ್ನು ಸ್ಥಾಪಿಸುವಂತೆ ಚಳವಳಿ ಮಾಡುವುದು ಲೇಸು.

ಶ್ರೀ ಕವಿ ಮುದ್ದಣನ "ಮ" ಆಶ್ರಮ ... ದ ಎಸ್ಸೆಸ್ಸೆಲ್ಸಿ ಇದೇ ಭರತಖಂಡದಲ್ಲಿ ಸರಕಾರ ಸರ್ಕಾರ ಜಾಗರೂಕ ಧಾತ್ರಿಸಭಾಪರ ಅಪೇಕ್ಷಿಯಂತೆ ಇಲ್ಲಿ ಯಾವ ತರದ ಅಭಿರುಚಿಯೂ ಇದ್ದಿಲ್ಲ ಹ ೧೯ರ ಇಲ್ಲವೆ ಸಭೆಯಾದರೂ ಜರಗಿಸಲಾಗುವುದೇ ಯೆಂದು ನೋಡಿ ಪರಿಶುದ್ಧರ ಕೊನೆಗೆ ಯಾವ ತರದ ವಿಚಾರಣೆಯ ಇಲ್ಲ ಇದೇನ ರಾಷ್ಟ್ರಾಭಿಮಾನ ದೇಶ ಮುಖಂಡರೇ (ಜಿಲ್ಲಾ ಬೋರ್ಡಿನ ಸಲ್ಲದಂತೆ ಮಾತ್ರ ಅಲ್ಲ ನಷ್ಟ!

ತಿರ್ಪ ತಿರ್ಪ ಮಹತ್ತಿಸುವ ಶ್ರೀ ವಿಷ್ಣು ಮೂರ್ತಿ ದೇವಸ್ಥಾನದಲ್ಲಿ ಇದೇ ಬರುವಾತ ಚರ್ತ ವರ್ಷೋದ್ಧಾರ ಸಂಬಂಧ ಬ್ರಹ್ಮಕಲಶ ಮಹೋತ್ಸವವು ನಡೆಯಲಿರುವುದು

ಶ್ರೀಕೃಷ್ಣಾಪುರ— ಇಲ್ಲಿಯ ಸಂಯುಕ್ತ ಉಪಾಧ್ಯಾಯ ಸಂಘದ ಈ ವರ್ಷದ ಪ್ರಥಮ ಸಭೆಯು ಇದೇ ತಾ ೧೪ನೇ ೩ನೇ ಶನಿವಾರ ಮಧ್ಯಾಹ್ನ ಕಂಬಳಕ್ಕೆ ಕಾಲೇಜ ರೋಡ ಹಾ। ಪ್ರಾ। ಶಾಲೆಯಲ್ಲಿ ಶ್ರೀ ಕೆ ಕೆ ಕೃಷ್ಣ ಸಂಬಂಧ ಪಾರ ಅಧ್ಯಕ್ಷತೆಯಲ್ಲಿ ಜರಗಿತು ದೇವತಾ ಪ್ರಾರ್ಥನೆ, ಅಧ್ಯಕ್ಷರ ಉಪಕ್ರಮ ಭಾಷಣ ಕಳೆದ ಫೆಬ್ರವರಿಯಲ್ಲಿ ಜರಗಿಸಲ್ಪಟ್ಟ ವರ್ಧಂತಿ ಉತ್ಸವದ ಜಮಾ ಖರ್ಚಿನ ವಿವರಗಳು ... ಅಧ್ಯಾಪಕರಿಂದ ಶ್ರೀ ಪಿ. ಸಿ ಚಂದು ಎಂಬವರನ್ನು ಸಂಘದ ಕಾರ್ಯದರ್ಶಿಯಾಗಿಯೂ ಜ ಎಸ್ ಅಡಪ್ಪನ್ ಇವರನ್ನು ಉಪಕಾರ್ಯದರ್ಶಿಗಳಾಗಿಯೂ ಪ್ರತಿಸ್ಪರ್ಧೆಯಿಲ್ಲದೆ ಚುನಾಯಿಸಿದರು ಆ ಮೇಲೆ ಅಧ್ಯಕ್ಷರ ಭಾಷಣ ಕಾರ್ಯದರ್ಶಿಗಳ ಉಪಕಾರಸ್ಮರಣೆ ಮುಂತಾದುವು ನಡೆದ ಬಳಿಕ ಬರುವ ಸಭೆಯು ಇದೇ ತಾ ೨೧-೩-೩೬ಕ್ಕೆ ಚಂಪಾನೆ ಬೋ। ಶಾಲೆಯಲ್ಲಿ ಸೇರಲಿಕ್ಕೆ ನಿಶ್ಚಯಿಸಿ ಸಭೆಯು ವಿಸರ್ಜಿಸಲ್ಪಟ್ಟಿತು

...ಸಂಪಾದಕರ ಟಪ್ಪಾಲು ಪೆಟ್ಟಿಗೆ.

(...ತ್ತಾರರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

...ಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ...ಸಿವಿಲ್ ಬೋರ್ಡಿನವರಿಗೊಂದು ಬಹಿರಂಗ ಪತ್ರ.

ಬಾಂಧವರೇ,

...ಂದು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿಗೆ ಸದಸ್ಯರ ...ನಾವಣೆಯು ಪ್ರಾರಂಭಿಸಿದೊಡನೆ, ಸದ್ರಿ ಬೋರ್ಡಿಗೆ ...ಂಗ್ರೆಸು ಉಮೇದ್ವಾರರನ್ನು ಆರಿಸಿ ಕಳುಹಬೇಕೆಂದು ...ಶವಾಗಿ ಮೇಲಣ ಹೆಸರಿನಿಂದ ಸದ್ರಿ ಕಾರ್ಯವನ್ನು ...ವ್ವಹಿಸಲು ಬೋರ್ಡೊಂದು ಸ್ಥಾಪಿತವಾಯಿತಷ್ಟೆ! ...ಯುದರ ಅಭಿಮತದಂತೆ ನಿಯೋಜಿತರಾದ ಪ್ರಭೃತಿ ...ಇಡೀ ಜಿಲ್ಲೆಯನ್ನು ಸಂದರ್ಶಿಸಿಯೂ ಅನೇಕರನ್ನು ...ಡು ಪ್ರಾಕಸಾಡಿಯೂ ಪಕ್ಷಮುಖೇನವೂ ಜನಮತ ...ನ್ನು ಅರಿತು, ಅಲ್ಲಲ್ಲಿ ಹಲವರ ಉಮೇದ್ವಾರಿಕೆ ...ನ್ನು ಅಂಗೀಕರಿಸಿಯೂ, ಹಲವೆಡೆ ಕೆಲವರನ್ನು ...ತ್ತಾಯಪಡಿಸಿಯೂ ಉಮೇದ್ವಾರಿಕೆಗಳನ್ನುಂಟುಮಾಡಿ ...ತು. ಅನಂತರದ ಹವಣಿಕೆಯಂತೆ ಇಡೀ ಜಿಲ್ಲೆ ...ಳಗಿಂದ ಉಮೇದ್ವಾರಿಕೆಗಳನ್ನು ಕ್ರಮಬದ್ಧ ಅರ್ಜಿ ...ಮೂಲಕ ಬರಮಾಡಿಕೊಂಡು, ಆಯಾಯ ತಾಲೂಕು ...ಂಗ್ರೆಸ್ ಕಮಿಟಿಗಳ ಶಿಫಾರಸುಗಳನ್ನು ಕರಿಸಿ ಉಮೇ...ದ್ವಾರರ ಅಂಗೀಕಾರಗಳಾದುವಷ್ಟೆ!

...ಮೊದಲಿನಿಂದಲೂ ಸಿವಿಲ್ ಬೋರ್ಡಿನ ಸಂಘಟನೆ ...ಲ್ಲಾ ಆ ಮೇಲೆ ಇವರು ಆರಿಸಿದ ಉಮೇದ್ವಾರರ ...ಟ್ಟಿಗೂ ಜಿಲ್ಲೆಯೊಳಗೆಲ್ಲ ಅವಿಶ್ವಾಸ ಮತ್ತು ಅಸಮಾ...ಧಾನಗಳಿದ್ದು, ಜಿಲ್ಲೆಯ ವೃತ್ತಪತ್ರಿಕೆಗಳಲ್ಲಿ ಕೂಡಾ ...ಪ್ರಕಟಿಸಲ್ಪಟ್ಟಿದ್ದಿತಷ್ಟೆ! ಚುನಾವಣೆಯ ಕಾಲದಲ್ಲಿ ...ನೇಕರು ಕಾಂಗ್ರೆಸು ಶಿಸ್ತಿಗೆ ವಿರೋಧವಾಗಿ, ಕೋಂಕೆಗೆ ...ಕಾಂಗ್ರೆಸು ಮುಂದಿದ್ದೂ ಬಾಹ್ಯವಾಗಿ ಕಾಂಗ್ರೆಸ್ ...ವಿರೋಧಿಗಳಿಗೆ ಪ್ರೋತ್ಸಾಹನೆ ಸಮರ್ಥನೆಗಳನ್ನಿತ್ತುದೂ ...ಕೇವಲ ಜಾತೀಯತೆಯ ಮತ್ತು ವ್ಯಕ್ತಿಗತ ಅಭಿಮಾನ...ದ ಚುನಾವಣೆಯಾದುದಾದರೂ ಪ್ರತ್ಯಕ್ಷ ಅನುಭವಕ್ಕೆ ...ಬಂದಿತ್ತಷ್ಟೆ! ಹಾಗೆಂದ ಮೇಲೆ ಕಾಂಗ್ರೆಸು ಪರವಾಗಿ ...ಚುನಾವಣೆಹೊಂದಿದ್ದ ಸದಸ್ಯರೆಲ್ಲರನ್ನೂ ಪ್ರಥಮದಲ್ಲಾಗಿ ...ಕಾಂಗ್ರೆಸು ಶಿಸ್ತಿನಂತೆ (ಚುನಾಯಿತರಾದ ಸದಸ್ಯರೆಲ್ಲ ...ಬದ್ಧರಾಗಿಗೊಳ್ಳಬೇಕಾದರೆ ಪ್ರಮಾಣವನ್ನು ಮಾಡ...ಬೇಕಾಗಿರುವಂತೆ), ಅರ್ಜಿಯ ಫಾರ್ಮಿನಲ್ಲಿ ಶರ್ತಗಳ...ಲ್ಲಾ ಒಪ್ಪಿಗೆಯನ್ನು ಕೊಟ್ಟಿದ್ದರೂ ಕೂಡ, ಬಾಯ್ಮಾತಿನ ...ಪ್ರಮಾಣವಚನಗಳಿಂದ ಬಂಧಿಸಲಾಗದಿತ್ತು! ಹಾಗೆ ...ಕಾಂಗ್ರೆಸು ಪಾರ್ಟಿಯವರೆದುರಿನಲ್ಲಿ ಪ್ರಮಾಣಮಾಡಿದ್ದು ...ಸ್ತಿನ ಕ್ರಮಪದ್ಧತಿಗಳನ್ನು ಅತ್ಯನಾ ಸ್ವೀಕರಿಸಿದ್ದಲ್ಲಿ, ...ಹುಮತವಿದ್ದ ಪಾರ್ಟಿಯ ಗತಿಯು ಹೀಗಾಗುತ್ತಿತ್ತೆ? ...ದ್ರಿ ಪಾರ್ಟಿಯ ಸಭೆ ಕರೆದರೆ ಗೈರುಹಾಜರಾದ ಸದಸ್ಯರ ...ಪಟ್ಟಿಗೇನು ಶಿಸ್ತುಪಾಲಿಸಲಾಯಿತು? ಈವಾಗ ...ಊರಲ್ಲೆಲ್ಲಾ ಕಾಂಗ್ರೆಸು ಪಾರ್ಟಿಯವರಲ್ಲಿ ಒಡಕು ...ಉಟ್ಟಾಗಿದೆ, ಪ್ರತಿಪಕ್ಷದ ಕಡೆಗೆ ಕೆಲವು ಸದಸ್ಯರು ...ಸೇರಿಕೊಂಡರೆಂದು ಬಹಿರಂಗವಾಗಿರುವಾಗ, ಪ್ರತಿ...ಯೊಬ್ಬ ಸದಸ್ಯರನ್ನು ಯಾವ ರೀತಿಯಲ್ಲಿ ಬಂಧಿಸಲಾ...ಯಿತು? ಪಾರ್ಟಿಯ ಮೊದಲನೇ ಸಭೆಯಲ್ಲಿ ಹಲ...ರು ಹಾಜರಿಲ್ಲದಿದ್ದ ಮೇಲೆ ಈ ಕುರಿತು ಮುಂದೆ ...ಅಪಾಯಸಂಭವಿಸಬಹುದಾಗಿ ಏಕೆ ತಿಳಿಕಗೊಂಡಿಲ್ಲ?

ಉಡುಪಿಯ ಸರ್ಕಲ್ಲಿಗೆ ಕಾಂಗ್ರೆಸಿನವರಿಂದ ಆರಿಸ...ಲ್ಪಟ್ಟ ಉಮೇದ್ವಾರರಿಗೆ ಪ್ರತಿಯಾಗಿ ಸ್ವತಂತ್ರ ರಾಷ್ಟ್ರಪಕ್ಷ...ದವರಿಗೆ ಯಥಾರ್ಥವಾಗಿಯೂ ಕಾಂಗ್ರೆಸು ಅಭಿಮಾನ ...ವುಳ್ಳವರೂ ಚುನಾಯಿತರಾದರೆ ಖಂಡಿತವಾಗಿಯೂ ...ಕಾಂಗ್ರೆಸು ಪಾರ್ಟಿಯೊಡನೆ ಸಹಕರಿಸುವೆನೆಂದು ಸಿವಿಲ್ ...ಬೋರ್ಡಿನ ಮತ್ತು ತಾಲೂಕು ಕಾಂಗ್ರೆಸು ಕಮಿಟಿಯ ...ಮೇಲಣ ಅವಿಶ್ವಾಸದ ದೆಸೆಯಿಂದಲೇ ಉಮೇದ್ವಾರಿಕೆ...ಯನ್ನು ತೋರಿಸಿದವರನ್ನು ಊರ ಅಧ್ಯಕ್ಷರು ಸೇರಿ, ...ಸಿವಿಲ್ ಬೋರ್ಡಿನಲ್ಲಾಗಲೀ ಕಾಂಗ್ರೆಸು ಕಮಿಟಿಯಲ್ಲಾ...ಗಲೀ ಎಷ್ಟು ದೋಷಗಳಿದ್ದಾಗ್ಯೂ, ವ್ಯಕ್ತಿಯನ್ನು ...ನೋಡದೆ ಅಪ್ಪಟ ಕಾಂಗ್ರೆಸ್ ಧ್ಯೇಯವನ್ನೇ ಮಾತ್ರ ...ಮುಂದಿಟ್ಟು ಸ್ವತಂತ್ರರಾಷ್ಟ್ರಪಕ್ಷ ಉಮೇದ್ವಾರಿಕೆ...ಯನ್ನು ಹಿಂತೆಗೆಯಿಸಿದುದರ ಪರಿಣಾಮವೇನಾಯಿತು? ...ಉಡುಪಿಯ ಕಾಂಗ್ರೆಸು ಸದಸ್ಯರು ಕಾಂಗ್ರೆಸ್ಸಿನ ವಿರೋಧ...ಪಕ್ಷಕ್ಕೆ ಅಧ್ಯಕ್ಷಸ್ಥಾನದ ಪ್ರಾಪ್ತಿಕೊಟ್ಟರೆಂದಾದುದಲ್ಲವೇ? ...ಇದರ ಸತ್ಯಾಸತ್ಯತೆಯನ್ನು ನಿರ್ಧರಿಸುವ ಜವಾಬ್ದಾರಿಯು ... ...

...ವಾಗಿ ಇವರೂ ... ಮುಂದೆ ಕಾಂಗ್ರೆಸ್ಸಿನವರಿಗೆ ಅಥವಾ ಅಭಿಮಾನವನ್ನು ತೋರಿಸಿದ್ದರಿಂದ ಎದುರಿಸಿದು ಮುಂದೆ ಬರುವ ಪ್ರಸಂಗದಲ್ಲಿ ಬೆಲೆಯಿಲ್ಲ? ಇಂತಹ ದೃಷ್ಟಾಂತಗಳಿಲ್ಲ?

ಆದುದರಿಂದ ಸಿವಿಲ್ ಬೋರ್ಡಿನವರು ಜಿಲ್ಲಾ ಬೋರ್ಡಿನೊಳಗಣ ಕಾಂಗ್ರೆಸು ಸದಸ್ಯರಿಂದೊಡಗೂಡಿದ ಒಂದು ಮಹಾಸಭೆಯನ್ನು ಕರೆದು, ಅಗತ್ಯವಿದ್ದಲ್ಲಿ ಜಿಲ್ಲೆಯೊಳಗಣ ಮತ್ತು ಹೊರಗಣ ಪ್ರಮುಖ ಕಾಂಗ್ರೆಸು ಭಕ್ತರನ್ನು ಬರಮಾಡಿ, ಇನ್ನಾದರೂ ಬೋರ್ಡಿನೊಳಗಣ ಕಾಂಗ್ರೆಸು ಪಾರ್ಟಿಯವರ್‍ಯಾರ್‍ಯಾರು, ಕಾಂಗ್ರೆಸು ಪಾರ್ಟಿಯನ್ನು ಬಿಟ್ಟುಹೋದವರ್‍ಯಾರು, ಇವರನ್ನು ಹೇಗೆ ಶಿಸ್ತಿಗೆ ಒಳಗುಮಾಡಬಹುದು, ಮುಂದೆ ಬೋರ್ಡಿನಲ್ಲಿ ಕೈಕೊಳ್ಳತಕ್ಕ ಖಂಡಿತ ಕಾರ್ಯಕ್ರಮವೇನು, ಅದರ ಸಾಧನೋಪಾಯಗಳ್ಯಾವುವು, ಈ ಕಾರ್ಯಕ್ರಮವು ಬೋರ್ಡಿನಲ್ಲಿ ಹೇಗೆಲ್ಲಾ ಮುಂದರಿಯುತ್ತಿದೆಂದು ಕಾಲಕಾಲಕ್ಕೆ ಜಿಲ್ಲೆಯ ಎಲ್ಲ ವೃತ್ತಪತ್ರಗಳಲ್ಲಿ ಪ್ರಕಟಿಸುವ ಏರ್ಪಾಡಿಯೇನು, ಹೀಗೆಯೂ ಕಾಂಗ್ರೆಸ್ ಸದಸ್ಯರ ಬಹುಮತವಿದ್ದರೆ ಅದರಿಂದೇನು ಸಾಧಿಸಲಾದೀತು, ಸದ್ಯ ಹೊಸ ವರ್ಷಕ್ಕೆ ಕಾಂಗ್ರೆಸು ಸದಸ್ಯರನ್ನು ಸೇರಿಸುವ, ಖಾದಿ ಮತ್ತು ಸ್ವದೇಶೀ ಪ್ರಚಾರದ ಮಟ್ಟಿಗೆ ಕಾಂಗ್ರೆಸು ಪಾರ್ಟಿಯ ನಿಶ್ಚಿತವೇನೆಂಬುದಾಗಿ ನಿರ್ಣಯಿಸಿ ಪ್ರಕಟಿಸುವರೇ? ಎಂದು ಅರಿಕೆ ಮಾಡಿಕೊಳ್ಳುವ

ಕಾಂಗ್ರೆಸ್ಸು ಮತದಾರ.

ಡಿಪ್ರೆಸ್ಡ್ ಕ್ಲಾಸಸ್ ಮಿಶನ್, ಮಂಗಳೂರು, ದ. ಕ.

ಮಹನೀಯರೇ,

ಡಿಪ್ರೆಸ್ಡ್ ಕ್ಲಾಸಸ್ ಮಿಶನ್ ಎಂಬ ಸಂಸ್ಥೆಯು ಮಂಗಳೂರಲ್ಲಿ ಹರಿಜನ ಸೇವೆಯನ್ನು ಮಾಡುತ್ತಲಿದೆ ಎಂಬುದು ತಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ಸಂಸ್ಥೆಯನ್ನು ಕುದ್ಮುಲ ರಂಗರಾಯರು ಸುಮಾರು ೪೦ ವರ್ಷಗಳ ಹಿಂದೆ ಸ್ಥಾಪಿಸಿ, ಜಿಲ್ಲೆಯ ಎಲ್ಲಾ ಭಾಗದ ಹರಿಜನರಿಗೆ ವಿದ್ಯೆಯನ್ನು ಕೊಡುವುದು, ಅವರ ಆರ್ಥಿಕ ಸ್ಥಿತಿಯನ್ನು ಉದ್ಧರಿಸುವುದು, ಅವರಿಗೆ ವಸತಿ ಸ್ಥಾನಗಳನ್ನೊದಗಿಸಿ ಕೊಡುವುದು, ಅವರಲ್ಲಿ ಉಚ್ಚ ಮೊದಲಾದ ಅಭ್ಯಾಸಗಳನ್ನು ಮಾಡಿಸುವುದು. ಈ ಮೊದಲಾದ ಕೆಲಸಗಳು ನಡೆಯುತ್ತಲಿವೆ. ಈ ಸಂಸ್ಥೆಯನ್ನು ೧೯...ರಲ್ಲಿ ರಂಗರಾಯರು ಸರ್ವೆಂಟ್ಸ್ ಅಫ್ ಇಂಡಿಯಾ ಸೊಸೈಟಿಯ ವಶಕ್ಕೆ ಬಿಟ್ಟುಕೊಟ್ಟು ಈಗ ಅವರಿಂದ ನಡೆಸಲ್ಪಡುತ್ತದೆ.

ಈಗ ಇದರ ಆಶ್ರಯದಲ್ಲಿ ಕೊಡಿಯಾಲಬೈಲಿನಲ್ಲಿ ಒಂದು ಹಾಯರ್ ಎಲಿಮೆಂಟರಿ ಶಾಲೆ, ಅದಕ್ಕೆ ಸಂಬಂಧಿಸಿದ ಒಂದು ಕಾರ್ಪೆಂಟ್ರಿ ಮತ್ತು ವೀವಿಂಗ್ ಡಿಪಾರ್ಟ್‌ಮೆಂಟು, ಅತ್ತಾವರ ಮತ್ತು ದೇರೆಬೈಲಲ್ಲಿ ಎರಡು ಪ್ರಾಥಮಿಕ ಶಾಲೆಗಳು, ಉಡುಪಿಯ ಸಮೀಪದ ಪುತ್ತೂರಿನಲ್ಲಿ ಕೊರಗರಿಗಾಗಿ ಒಂದು ಶಾಲೆ ಮತ್ತು ಬೋರ್ಡಿಂಗ್ ಹೌಸ್, ಮಂಗಳೂರಲ್ಲಿ ಹುಡುಗರಿಗೊಂದು ಮತ್ತು ಹುಡುಗಿಯರಿಗೊಂದು ಹೀಗೆ ಎರಡು ಬೋರ್ಡಿಂಗ್ ಹೌಸ್, ಅತ್ತಾವರದಲ್ಲಿ ಒಂದು ರಾತ್ರಿ ಶಾಲೆ ಮತ್ತು ಐದು ಕೋಲನಿಗಳಿವೆ. ಇವಲ್ಲದೆ ಉಚ್ಚಶಿಕ್ಷಣಕ್ಕೆ ಹೋಗುವ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಸಹಾಯವನ್ನೂ ಕೊಡಲಾಗುತ್ತದೆ.

ಮೇಲ್ಕಾಣಿಸಿದ ಎಲ್ಲಾ ಶಾಲೆಗಳಲ್ಲಿ ಧರ್ಮಾರ್ಥವಾಗಿ ವಿದ್ಯೆಯನ್ನು ಕೊಡುವುದಲ್ಲದೆ, ಶಾಲಾ ಪುಸ್ತಕಗಳನ್ನೂ ಕೂಡ ಒದಗಿಸಿಕೊಡಬೇಕಾಗುತ್ತದೆ. ಹೆಚ್ಚಿನವರು ಬಹಳ ಬಡವರಾದುದರಿಂದ ಅವರಿಗೆ ಬಟ್ಟೆಯನ್ನು ಕೂಡ ಕೊಡಬೇಕಾಗುತ್ತದೆ. ಮೂರು ಬೋರ್ಡಿಂಗ್ ಹೌಸುಗಳಲ್ಲಿ ಒಟ್ಟಿಗೆ ೬೦ ಬೋರ್ಡರರು ಇದ್ದಾರೆ. ಅವರಿಗೆ ಅನ್ನ, ಬಟ್ಟೆ, ಪುಸ್ತಕ ಮೊದಲಾದ ಎಲ್ಲ ವಿಷಯಗಳನ್ನು ಧರ್ಮಾರ್ಥವಾಗಿ ಕೊಡಲಾಗುತ್ತದೆ. ಹಾಯರ್ ಎಲಿಮೆಂಟರಿ ಶಾಲೆಯ ವಿದ್ಯಾಭ್ಯಾಸವನ್ನು ಮುಗಿಸಿ ಮುಂದೆ ಕಲಿಯಲು ಸಮರ್ಥರಾದ ಹುಡುಗರಿಗೆ ಸಹಾಯವನ್ನು ಕೊಡುವ ಭಾರವೂ ಮಿಶನಿಗಿದೆ. ಈಗ ಮಿಶನಿನ ಆಶ್ರಯದಲ್ಲಿ ೧೧ ವಿದ್ಯಾರ್ಥಿಗಳು ಹೈಸ್ಕೂಲುಗಳಲ್ಲಿ ಓದುತ್ತಲಿದ್ದಾರೆ. ಇವರಲ್ಲಿ ಮೂವರು ಈ ವರ್ಷ S. S. L. C. ಪರೀಕ್ಷೆಗೆ ಕುಳಿತುಕೊಳ್ಳುವವರಿದ್ದಾರೆ.

ಈ ತರದ ಕಾರ್ಯಕಲಾಪಗಳು ಇತ್ತೀಚೆಗೆ ಬೆಳೆಯುತ್ತಾ ಬಂದುದರಿಂದ ಈಗಿರುವ ಸಂಸ್ಥೆಗಳನ್ನು ನಡೆಸುವುದಕ್ಕೂ, ಕಾರ್ಯವನ್ನು ಇನ್ನಷ್ಟು ಬೆಳೆಯಿಸ... ... ...

...ಜನರು ಉದಾ... ...ಗಿ ವಿನಂತಿ.

ಸಹಾಯವನ್ನು ಈ ಕೆಳಗಿನ ರೀತಿಯಿಂದ ಮಾಡಬಹುದು:

೧. ಮಾಸಿಕ ಯಾ ವಾರ್ಷಿಕ ಚಂದಾದಾರರಾಗುವುದು. ೨. ಈಗ ಚಂದಾದಾರರಾಗಿದ್ದರೆ ಚಂದಾಹಣವನ್ನು ಹೆಚ್ಚಿಸುವುದು. ೩. ತಮಗೆ ಪ್ರಿಯರಾದ ಬಂಧುಗಳ ಸ್ಮಾರಕವಾಗಿ ರೂ. ೧೦೦ಕ್ಕೆ ಕಡಿಮೆಯಾಗದ ಒಂದು ಸ್ಮಾರಕ ನಿಧಿಯನ್ನುಂಟುಮಾಡಿ ಅದರ ಬಡ್ಡಿಯಿಂದ ಮಿಶನಿನ ಯಾವುದಾದರೊಂದು ಕಾರ್ಯಕ್ಕೆ ವೆಚ್ಚಮಾಡುವಂತೆ ಪ್ರತ್ಯೇಕಿಸುವುದು. ೪. ಜಿಲ್ಲೆಯಲ್ಲಿ ಅತಿ ಹಿಂದುಳಿದವರಾದ ಕೊರಗರಿಗಾಗಿ ಮನೆ ಕಟ್ಟುವುದಕ್ಕೆ ಸಾಮಗ್ರಿಗಳನ್ನು ಒದಗಿಸಿಕೊಡುವುದಕ್ಕೆ ಸಹಾಯಮಾಡುವುದು.

ನಮ್ಮ ಆಶೆ ಮತ್ತು ವಿನಂತಿಯು ನಿರರ್ಥಕವಾಗಲಿಕ್ಕಿಲ್ಲವೆಂದು ನಂಬುವ,

ಆರ್. ಸೂರ್ಯನಾರಾಯಣ ರಾವ್,
ಗೌರವ ಕಾರ್ಯದರ್ಶಿ.

ಡಿ। ಬೋರ್ಡ್ ಸೆಕೆಂಡರಿ ಉಪಾಧ್ಯಾಯರು.

ಅಯ್ಯಾ ಸ್ವದೇಶಾಭಿಮಾನಿಯೇ,

ನಮ್ಮ ಜಿಲ್ಲೆಯೊಳಗಿನ ಡಿ। ಬೋ। ಸೆಕೆಂಡರಿ ಶಾಲೆಗಳ ಉಪಾಧ್ಯಾಯರ ವರ್ಗಾವರ್ಗಿ ವಿಷಯದಲ್ಲಿ ನನಗೆ ತೋರುವ ಅಭಿಪ್ರಾಯವನ್ನು ಈ ಕೆಳಗೆ ಕೊಟ್ಟಿರುತ್ತೇನೆ. ಇದರ ನ್ಯಾಯಾನ್ಯಾಯವನ್ನು ಪರಿಯಾಲೋಚಿಸಿ ಮಾನ್ಯ ಪ್ರೆಸಿಡೆಂಟರು ಯುಕ್ತಕಂಡ ರೀತಿಯಲ್ಲಿ ವರ್ತಿಸುವಂತೆಯೂ, ಅದಕ್ಕಾಗಿ ಮಾನ್ಯ ಡಿ। ಬೋ। ಮೆಂಬರರು ಸಹಕರಿಸುವಂತೆಯೂ ನನ್ನ ವಿನಯಪೂರ್ವಕ ವಿಜ್ಞಾಪನೆ.

ಪ್ರತಿಯೊಂದು ಶಾಲೆಯಲ್ಲಿನ ಉಪಾಧ್ಯಾಯರ ಸರ್ವಿಸನ್ನು ನೋಡಿದರೆ ಎಷ್ಟೋ ಉಪಾಧ್ಯಾಯರು ಒಂದೇ ಶಾಲೆಯಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುವುದು ತೋರಿಬರುತ್ತದೆ. ಒಂದೇ ಶಾಲೆಯಲ್ಲಿ ಹತ್ತು ಹದಿನೈದು ವರ್ಷಗಳಿಂದಲೂ ಕೆಲಸ ಮಾಡುವವರು ಬರಬಹುದು. ಇಂತಹ ಸಂದರ್ಭದಲ್ಲಿ ಹೆಚ್ಚು ಕಾಲ ಒಂದೇ ಕಡೆಯಲ್ಲಿ ಕೆಲಸವನ್ನು ಮಾಡಿದವರು ವರ್ಗವನ್ನು ಅಪೇಕ್ಷಿಸುವದು ನ್ಯಾಯಸಮ್ಮತವಲ್ಲವೇ? ಇವರ ಇಚ್ಛೆಯನ್ನು ಅಧಿಕಾರಿಗಳು ಸಲ್ಲಿಸುವದು ಉತ್ತಮ. ಆದರೆ ಕಷ್ಟಗಳು ತುಂಬಾ ಬರುವುದು ಸಹಜ. ಒಬ್ಬರ ವರ್ಗಕ್ಕೆ ಕೈಹಾಕಿದರೆ ಅವರಿಗೆ ಬೇಕಾಗುವ ಶಾಲೆಯಿಂದ ವರ್ಗಕ್ಕೆ ಒಪ್ಪುವವರು ಸಿಗುವುದು ದುರ್ಲಭವಾಗಬಹುದು. ನಿಷ್ಪಕ್ಷಪಾತ ಬುದ್ಧಿಯಿಂದ ಯಾರ ದಾಕ್ಷಿಣ್ಯಕ್ಕೂ ಕೇಳದವರಾದರೆ ಆ ಶಾಲೆಯಲ್ಲಿ ಅತಿ ಹೆಚ್ಚು ಸಮಯವಿದ್ದವರನ್ನು ವರ್ಗಾಯಿಸಬಹುದು. ಆ ಸಂದರ್ಭದಲ್ಲಿ ಅವರು ತಮಗೆ ಬೇಕಾದವರನ್ನು ಹಿಡಿದು ವರ್ಗವಾಗದಂತೆ ಹಟಸಾಧನೆ ಮಾಡಿದರೆ ಆಶ್ಚರ್ಯವಲ್ಲ. ಆದುದರಿಂದ ಯಾರ ದಾಕ್ಷಿಣ್ಯಕ್ಕೂ ಕೇಳದೆ ಹೆಚ್ಚು ವರ್ಷ ಒಂದೇ ಶಾಲೆಯಲ್ಲಿರುವವರನ್ನು (ಸಾಧ್ಯವಿದ್ದಲ್ಲಿ ಅವರಿಗೆ ಮನಸ್ಸಿರುವ ಶಾಲೆಗಳಿಗೆ) ವರ್ಗಾಯಿಸುವುದು ಹಿತಕರವು. ಇಂತಹ ವರ್ಗಾವರ್ಗಿಗಳನ್ನು ಮಾತ್ರ ಫಕ್ಕನೆ ಮಾಡುವುದು ಉಚಿತವಲ್ಲ. ಹೆಚ್ಚು ಕಾಲ ಒಂದು ಕಡೆಯಲ್ಲಿದ್ದವರನ್ನು ಅಲ್ಲಿಂದ ವರ್ಗಾಯಿಸುವಾಗ ಅವರಿಗೆ ಸ್ವಲ್ಪ ಸಮಯವನ್ನು ಕೊಡಬೇಕಾಗುತ್ತದೆ. ಆದುದರಿಂದ ಈ ವರ್ಗಾವರ್ಗಿಗಳನ್ನು ಚೆನ್ನಾಗಿ ಆಲೋಚಿಸಿ ಎಪ್ರಿಲಿನಲ್ಲಿ ಮಾಡಿ ಜೂನ್ ತಿಂಗಳಲ್ಲಿ ಜಾರಿಗೆ ಬರುವಂತಾದರೆ ಪ್ರತಿಯೊಬ್ಬರಿಗೂ ಅನುಕೂಲವಾಗುವುದು. ಮಾನ್ಯ ಪ್ರೆಸಿಡೆಂಟರು ಧೈರ್ಯದಿಂದ ಈ ಕೆಲಸಕ್ಕೆ ಕೈಹಾಕುವರೇ?

ಇತಿ,
ಹಿತಚಿಂತಕ.

ಕಾರ್ಕಳದ ಓಟರರ ಸಭೆಯ ಪ್ರೊಸಿಡಿಂಗ್ಸ್.

ಇದೇ ತಾ. ೧೧ರಲ್ಲಿ ಕಾರ್ಕಳದ ಆರ್ಯಸಮಾಜದ ಮಂದಿರದಲ್ಲಿ ಶ್ರೀ ಕೆ. ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು.

೧. ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ ಕಡೆಯ ಉಮೇದ್ವಾರರಾಗಿ ಕಾರ್ಕಳ ಸರ್ಕಲಿನಿಂದ ಹೋದ ಶ್ರೀಯುತ ಸಿಟ್ಟೆಗುತ್ತು ಮುಂಜಪ್ಪ ಅದ್ಯಂತಾಯರವರು ಬೋರ್ಡಿನ ಪ್ರಥಮ ಸಭೆಯಲ್ಲಿ ಕಾಂಗ್ರೆಸ್ ಪಾರ್ಟಿಗೆ ವಿರೋಧವಾಗಿ ತನ್ನ ಮತವನ್ನು ಕೊಟ್ಟದ್ದಕ್ಕಾಗಿ ... ... ಕಾರ್ಕಳದ ಓಟರರ ಈ ...

ಸಭೆಯು ತೀವ್ರವಾಗಿ ಖಂಡಿಸುತ್ತದೆ. ಕಾಂಗ್ರೆಸ್ ಪಾರ್ಟಿಯ ಶಿಸ್ತಿಗೆ ವಿರೋಧವಾಗಿ ನಡೆದ ಇವರನ್ನು ಮತ್ತು ಇತರ ಕಾಂಗ್ರೆಸ್ ಸದಸ್ಯರನ್ನು ಬೋರ್ಡಿನ ಅಧ್ಯಕ್ಷರ ಚುನಾವಣೆಯ ಮುಂಚೆಯೇ ಶಿಸ್ತಿನ ಪಾಶ ನೀಡುವಮಾಡದೆ, ಜಿಲ್ಲೆಯಲ್ಲಿ ಕಾಂಗ್ರೆಸ್ಸಿನ ಯಶಸ್ಸು ಮತ್ತು ಹೆಸರಿಗೆ ಕುಂದು ತರುವರೆ ಸಂದರ್ಭಕೊಟ್ಟ ಕಾಂಗ್ರೆಸ್ ಸಿವಿಲ್ ಬೋರ್ಡಿನ ಅಧ್ಯಕ್ಷರ ಮತ್ತು ಬೋರ್ಡಿನಲ್ಲಿ ಕಾಂಗ್ರೆಸ್ ಪಾರ್ಟಿಯ ಲೀಡರರ ವರ್ತನವನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ. ಮತ್ತು ಈ ಸಭೆಯು ಶ್ರೀಯುತ ಮಂಜಪ್ಪ ಅದ್ಯಂತಾಯರನ್ನು ಜಿಲ್ಲಾ ಬೋರ್ಡಿನಲ್ಲಿ ತನ್ನ ಮೆಂಬರಿಕೆಗೆ ರಾಜಿ ಕೊಡಬೇಕೆಂದು ಕೇಳುತ್ತದೆ.

ಸೂಚಕರು—ಶ್ರೀ ವಕೀಲ ಎಂ. ಎಸ್. ಅಧಿಕಾರಿ. ಅನುಮೋದಕರು—ಶ್ರೀ ಸಿ. ಎಚ್. ಕೇಶವಪ್ಪಾನುಭಾಗ, ಸರ್ವಸಮ್ಮತದಿಂದ ಮಂಜೂರಾಯಿತು.

೨. ಇದೇ ಕಳೆದ ತಾ. ೨-೬-೩೭ನೇ ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರ ಚುನಾವಣೆಯ ಸಭೆಯಲ್ಲಿ ಸದ್ರಿ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದ ಕಡೆಯಿಂದ ಉಮೇದ್ವಾರರನ್ನು ಹಾಕಿರುತ್ತಿದ್ದರೂ ಮತ್ತು ಬೋರ್ಡಿನಲ್ಲಿ ಕಾಂ। ಪಕ್ಷವು ಬಹುಪಕ್ಷವಾಗಿದ್ದರೂ, ಸದ್ರಿ ಕಾಂಗ್ರೆಸ್ ಪಕ್ಷದ ಮೆಂಬರರ ಪೈಕಿ ಕಡಿಮೆಯೆಂದರೂ ೯ ಜನರ ಮೆಂಬರರು ಕಾಂಗ್ರೆಸ್ ತತ್ವ ವ ಪಕ್ಷಕ್ಕೆ ವಿರೋಧವಾಗಿ ವಿಶ್ವಾಸಘಾತಕಮಾಡಿ ಎದುರುಪಕ್ಷದ ಉಮೇದ್ವಾರರಿಗೆ ತಮ್ಮ ಮತಗಳನ್ನು ಕೊಟ್ಟು, ಕಾಂಗ್ರೆಸ್ ಪಕ್ಷದ ಉಮೇದ್ವಾರರಿಗೆ ಅಪಜಯ ಸಿಕ್ಕುವಂತೆ ಮಾಡಿ ನಮ್ಮ ಜಿಲ್ಲೆಯ ಕಾಂಗ್ರೆಸ್ಸಿನ ಯಶಸ್ಸು ವ ಹೆಸರಿಗೆ ಕುಂದುತರುವಂತೆ ಮಾಡಿರುವುದರಿಂದ ಸದ್ರಿ ವಿಶ್ವಾಸಘಾತಕರ ಮಾನಗೇಡಿಗಳ ವರ್ತನೆಯನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ. ಮತ್ತು ಅಂಥವರಲ್ಲಿ ಎಷ್ಟಾದರೂ ಪುರುಷಾರ್ಥ ಇದ್ದರೆ ಅವರು ಕೂಡಲೇ ಸದ್ರಿ ವಂಚನೆಯ ಕೆಲಸವನ್ನು ಮಾಡಿದ್ದಂತ ಜಾಹೀರಾಗಿ ಒಪ್ಪಿಕೊಂಡು ಜಿಲ್ಲಾ ಬೋರ್ಡಿನಲ್ಲಿನ ತಮ್ಮ ಮೆಂಬರಿಕೆಗೆ ಕೂಡಲೇ ರಾಜಿ ಕೊಡಬೇಕಾಗಿ ಸಹಾ ಈ ಸಭೆಯು ಅವರನ್ನು ಕೇಳುತ್ತದೆ. ಸೂಚಕರು—ಶ್ರೀ ವಕೀಲ್ ಕೆ. ಮಹಾಬಲ ಹೆಗ್ಡೆಯವರು, ಅನುಮೋದಕರು—ವಕೀಲ ಶ್ರೀ ಪಿ. ರಾಮಚಂದ್ರರಾಯರು. ಸರ್ವಸಮ್ಮತದಿಂದ ಮಂಜೂರಾಯಿತು.

೩. ಈ ಸಭೆಯ ಪ್ರೊಸೀಡಿಂಗ್ಸಿನ ನಕಲನ್ನು ಸದ್ರಿ ಮುಂಜಪ್ಪ ಅದ್ಯಂತಾಯರಿಗೂ ಕಾಂಗ್ರೆಸ್ ಸಿವಿಲ್ ಬೋರ್ಡಿನ ಅಧ್ಯಕ್ಷರಿಗೂ, ಜಿಲ್ಲಾ ಬೋರ್ಡಿನಲ್ಲಿ ಕಾಂ। ಪಾರ್ಟಿಯ ಲೀಡರರಿಗೂ, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಿಗೂ, ಪತ್ರಿಕೆಗಳಿಗೂ ಕಳುಹಿಸಿಕೊಡುವರೆ ಶ್ರೀ. ಎಂ. ಎಸ್. ಅಧಿಕಾರಿಯವರಿಗೆ ಅಧಿಕಾರ ಕೊಡಲಾಯಿತು.

ಸೂಚಕರು—ಶ್ರೀ. ಕೆ. ಮಹಾಬಲ ಹೆಗ್ಡೆಯವರು. ಅನುಮೋದಕರು—ಶ್ರೀ. ಪಿ. ರಾಮಚಂದ್ರರಾಯರು. ಸರ್ವಸಮ್ಮತದಿಂದ ಮಂಜೂರಾಯಿತು.

ಒಂದು ವಿಶೇಷ ತರದ ಹಿಂದೀಯ ಶಾಸ್ತ್ರೀಯ ಹಬ್ಬ.

ಪೂನೆಯಿಂದ ೫೦ ಮೈಲು ದೂರದಲ್ಲಿರುವ ಕೇಡಗಾಂ ಹಳ್ಳಿಯಲ್ಲಿ ನಾರಾಯಣ ಮಹಾರಾಜರೆಂಬ ಸಾಧುಗಳು (ಇವರು ಸಾಧುಗಳಾಗಿ ಇವತ್ತಿಗೆ ೩೦ ವರ್ಷಗಳಾದವು) ಇದನ್ನು ಜರಗಿಸಿದರು. ಈ ಹಬ್ಬವು ೯ ದಿವಸಗಳ ತನಕ ನಡೆಯಿತು. ಕಳೆದ ಶತಮಾನದಲ್ಲಿ ಈ ಹಬ್ಬವು ಜರಗಿದ್ದು ಇದೇ ಪ್ರಥಮ ಸಲ. ಈ ಸಮಾರಂಭಕ್ಕೆ ಬೇಕಾದ ಪುರೋಹಿತರ ಕೆಲಸಕ್ಕೆ ೧೧,೦೦೦ ಅರ್ಜಿಗಳು ಬಂದಿದ್ದವು. ಅವರಲ್ಲಿ ೨೪೦೦ ಪುರೋಹಿತರನ್ನು ಮಾತ್ರ ಆರಿಸಿದ್ದರು. ಪ್ರತಿಯೊಂದು ಬಾರಿ ಒಂದು ಸಾವಿರ ಅತಿಥಿಗಳಿಗೆ ಭೋಜನ ಮಾಡಲು ಸ್ಥಳವಿರುವ ಒಂದು ಭವ್ಯವಾದ ಚಪ್ಪರವನ್ನು ಹಾಕಿದ್ದರು. ಈ ಸಮಾರಂಭಕ್ಕೆ ಭರತಖಂಡದ ಎಲ್ಲಾ ಕಡೆಗಳಿಂದ ತಂಡೋಪತಂಡ ಹಿಂದುಗಳು ಬಂದಿದ್ದರು. ಸ್ಪೆಶಲ್ ಟ್ರೈನುಗಳು ನಡೆದಿದ್ದವು. ೫೦ ಪೋಲೀಸ್ ಜವಾನರು, ೬ ಮಂದಿ ಪೋಲಿಸ್ ಅಧಿಕಾರಿಗಳು ಇಲ್ಲಿ ಕಾರ್ಯ ನಡೆಯಿಸಬೇಕಾಯಿತು. ಈ ಸಮಾರಂಭಕ್ಕಾಗಿ, ಒಂದು ಸಣ್ಣ ಪೇಟೆಯ ರಚನೆಯಾಗಿತ್ತು. ೨೦೦ ಅಡಿಗೆ ಬಟ್ಟರು ಈ ಸಮಾರಂಭಕ್ಕೆ ಬೇಕಾದ ಅಡಿಗೆಯನ್ನು ತಯಾರಿಸಿದರು. ಈ ಸಮಾರಂಭದಲ್ಲಿ ಸತ್ಯನಾರಾಯಣ ಪೂಜೆಯು ಸಾಧಾರಣ ೧೫೦೦೦ ಸರ್ತಿ ನಡೆದಿದೆಯಂತೆ. ಈ ಹಬ್ಬದ ಶಾಸ್ತ್ರೀಯ ವಿಧಿಗಳಿಗಾಗಿಯೇ ಎರಡು ಲಕ್ಷ ರೂಪಾಯಿ ವೆಚ್ಚವು ತಗಲಿದೆ.

ರ್ಹ್ಯಾನ್‌ಲೆಂಡಿನಲ್ಲಿ ಜರ್ಮನಿಯು

ರ್ಹ್ಯಾನ್‌ಲೆಂಡಿನಲ್ಲಿಳಿದ ಜರ್ಮನ್ ಸೇನಾಬಲವನ್ನು ನೋಡಿ ಫ್ರೆಂಚರು ಬೆರಗುಗೊಂಡಿರುವರು. ಈಗ ಅಲ್ಲಿ ೩೬,೫೦೦ ಸೈನಿಕರಿರುವರೆಂದು ಜರ್ಮನ್ ಸರಕಾರದ ಪ್ರಕಟಣೆಯಾಗಿರುತ್ತದೆ. ಇಲ್ಲಿ ವಿಶೇಷ ತರದ ದಂಡಯೋಜನೆಯು ನಡೆಯಲಿಲ್ಲವೆಂದು–ನವೀನ ಯುದ್ಧ ವಿಮಾನಗಳು, ಯಂತ್ರೋಪಕರಣಗಳು, ಕಳುಹಿಸಲಾಗಲಿಲ್ಲವೆಂದು ಜರ್ಮನಿಯು ಭರವಸೆ ಕೊಟ್ಟಿರುತ್ತದೆ. ಈ ರ್ಹ್ಯಾನ್‌ಲೆಂಡ್ ಪ್ರದೇಶದಲ್ಲಿ ಜರ್ಮನಿಯ ಅನೇಕ ಪ್ರಮುಖ ನಗರಗಳಿವೆ. ಇವುಗಳಿಗೆ ಸಂಕೇತವೆನಿಸುವ ಸೇನಾಬಲ ಮಾತ್ರ ಇಲ್ಲಿಗೆ ಕಳುಹಿಸಲಾಗಿದೆಂದು ಹಿಟ್ಲರನ ವಾದ. ಜರ್ಮನಿಯ ಜನಸಂಖ್ಯೆಯು ಸಾಧಾರಣ ಐದನೆ ಒಂದು ಪಾಲು ಇಲ್ಲಿರುವಾಗ ಅಲ್ಲಿ ಅಷ್ಟು ಸೇನಾಬಲವನ್ನು ಇರಿಸಬಾರದೆ? ಅದು ಅನ್ಯಾಯವಾದುದು ಎಂದು ಜರ್ಮನಿಯ ವಾದ.

ಫ್ರಾನ್ಸಿನಿಂದ

ಜರ್ಮನಿಯು ಈ ಪ್ರದೇಶದಲ್ಲಿ ಭಯಂಕರ ದಂಡಯೋಜನೆ ಮಾಡಿರುವುದೆಂದು ವಾರ್ತೆ ಬಂದಿರುತ್ತದೆ. ದಿನಾಲೂ ಈ ಪ್ರದೇಶದ ಸೇನಾಬಲವು ವೃದ್ಧಿ ಹೊಂದುವುದು ಮಾತ್ರವಲ್ಲದೆ, ವಿಲ್ಲಾ ತರದ ನವೀನ ಯಂತ್ರ ಯುದ್ಧೋಪಕರಣಗಳು ಇಲ್ಲಿಗೆ ಧಾರಾಳ ಹೋಗುತ್ತಿವೆಯಂತೆ. ಕೋಟೆ ಕೊತ್ತಲಗಳ ಭದ್ರತಾಯೋಜನೆಯನ್ನು, ಬಹಳ ಶ್ರದ್ಧೆಯಿಂದ ನಡೆಯುತ್ತಿದ್ದಾರಂತೆ. ಎಂದರೆ, ಜರ್ಮನಿಯು ಇಲ್ಲಿ ಒಂದು ಮಹಾಸಮರಕ್ಕಾಗಿ ಸಿದ್ಧತೆಗಳು ಮಾಡುತ್ತಿದೆಯಂತೆ. ಆದುದರಿಂದ ಫ್ರೆಂಚರು ಕೂಡ ಅದೇ ತೆರದ ಸಿದ್ಧತೆಗಳನ್ನು ಮಾಡಿರುವರೆಂದು ತಿಳಿದುಬರುತ್ತದೆ.

ಲಂಡನ್ ನಗರದಲ್ಲಿ ಕಲಹ ನಿವಾರಣೆ ಉಪಾಯಗಳ ಆಲೋಚನೆಯು ನಡೆಯುತ್ತದೆ. ಇಲ್ಲಿನ ಸೆಂಟ್ ಜೇಮ್ಸ್ ನಗರದಲ್ಲಿ ಲೀಗ್ ಕೌನ್ಸಿಲ್ ಸಭೆಯು ನಡೆಯಿತು. ಜರ್ಮನಿಯನ್ನು ಈ ಸಭೆಗೆ ಆಮಂತ್ರಿಸಿರುವರು.

ಫ್ರೆಂಚರು ಜರ್ಮನಿಯ ವಾರ್ಸಾಲೆ ಸಂಧಿಯನ್ನು ಲೊಕಾರ್ನೋ ಒಪ್ಪಂದವನ್ನು ಮುರಿದುದಕ್ಕಾಗಿ, ಅವರ ಮೇಲೆ ಸಾಂಪತ್ತಿಕ ಸೆಂಕ್ಷನುಗಳನ್ನು ಜ್ಯಾರಿ ಮಾಡಿಸುವ ಪ್ರಯತ್ನದಲ್ಲಿದ್ದಾರೆ.

ಇದರಿಂದ ಪೌರ್ವಾತ್ಯದಲ್ಲಿ

ಪೌರ್ವಾತ್ಯದ ಗಡಿಯಲ್ಲಿ ಜಾಪಾನೀಯರಿಂದ ಕಾಡಲ್ಪಟ್ಟ ರಶ್ಯಾಕ್ಕೆ ಪಾಶ್ಚಾತ್ಯದಲ್ಲಿ ಸಂಗ್ರಾಮಕಾರ್ಯಗಳನ್ನು ನಡೆಯಿಸುವ "ಅಗತ್ಯ ಬೀಳುವುದೋ ಏನೋ?" ಅಂದರೆ, ಇವರಿಗೆ ಎರಡು ಮಹಾ ಕಂಟಕಗಳು ಒದಗಿದಂತಾಗುವುದು. ಯುರೋಪಿನ ಈ ಕಲಹದಿಂದ ಮುಸಲೀನಿಯು ಲಾಭ ಪಡೆಯುವ ಪ್ರಯತ್ನಗಳನ್ನು ಮಾಡುವ ಹಾಗೆ, ಜಾಪಾನು ರಶ್ಯದ ಮೇಲೆ ಕೈಮಾಡಲು ಇದೇ ತಕ್ಕ ಸಮಯವೆಂದು ತಿಳಿಯದೆ ಇರದು. ಜರ್ಮನಿಯು ಜಾಪಾನಿನೊಡನೆ ಒಪ್ಪಂದ ಮಾಡಿಕೊಳ್ಳುವುದಾಗಿ ತಿಳಿದುಬರುತ್ತದೆ. ಇನ್ನು ಒಂದು ವಾರದೊಳಗೆ ಏನೆಲ್ಲಾ ಘಟನೆಗಳು ನಡೆಯುವುವು ಎಂದು ಹೇಳಲು ಅಸಾಧ್ಯ.

ಸಾಬೂನು ತೆಗೆದ ನಂತರ ಇದನ್ನು ಪೀಕ್ದಾನಿಯ ಪೆಟ್ಟಿಗೆಯಾಗಿ ಉಪಯೋಗಿಸಿರಿ

ಹಬಸಿ ರಣರಂಗದ ವಾರ್ತೆಗಳು.

ಕಳೆದ ವಾರ ಹಬಸಿ ರಣರಂಗದಲ್ಲಿ ಯುದ್ಧ ವಿರತಿಯು ಕರೆಯಲ್ಪಟ್ಟಿದೆ ಎಂಬ ವಾರ್ತೆಯು ಶೀಘ್ರ ಸುಳ್ಳೆಂದು ತಿಳಿದುಬರುತ್ತದೆ. ಯುದ್ಧವು ಯಥಾ ಪ್ರಕಾರ ಮುಂದೆ ಸಾಗುತ್ತಿದೆ. ಆದರೆ, ಈಗ ಯುರೋಪಿನಲ್ಲಿ ತಲೆದೋರಿರುವ ಮಹಾ ಕಲಹದ ಮುಂದೆ ಈ ಹಬಸಿ ಪ್ರಶ್ನೆ ಕತ್ತಲೆಗೆ ಹೋಗಿರುತ್ತದೆ. ಮೇಲಿನ ಕಲಹದ ನಿಮಿತ್ತ ಹಬಸಿ ಚಕ್ರವರ್ತಿಯವರಿಗೆ ಪಾಶ್ಚಾತ್ಯ ಜನಾಂಗಗಳ ಸಹಕಾರವು (ಜನಾಂಗ ಮಂಡಲದ ಮೂಲಕ) ತಪ್ಪಿಹೋಗುವ ಸಂಭವಗಳಿವೆ. ಜರ್ಮನಿಯು ರಣಭೇರಿಯನ್ನು ಹೊಡೆಯುತ್ತಿರುವಾಗ ಫ್ರಾನ್ಸಿಗೆ ಇಟೇಲಿಯ ಸಹಕಾರವು ಬೇಕಾಗಿದೆ. ಇಟೇಲಿಯು ಜರ್ಮನಿಯ ಬದಿ ಸೇರಲು ಸಾಕು ಕಾರಣ, ಅವರ ಮೇಲೆ ಜ್ಯಾರಿಯಾದ ಸೆಂಕ್ಷನುಗಳು. ಯುರೋಪಿನ ಈಗಿನ ಕಲಹದಲ್ಲಿ ಇಟೇಲಿಯ ವರ್ತನೆಗೆ ಹೆಚ್ಚು ಮಹತ್ವವಿದೆ. ಅದರಿಂದ ಇಟೇಲಿಯನ್ನು ತನ್ನ ಬದಿಗೆ ಸೆಳೆಯಲು ಫ್ರಾನ್ಸು ಈಗ ಜನಾಂಗ ಸಭೆಯ ಮೂಲಕ ಹಬಸಿ ಇಟೇಲಿ ಪ್ರಶ್ನೆಯು ಬೇಗನೇ ಇತ್ಯರ್ಥವಾಗುವಂತೆ ಸಾಧಿಸುತ್ತದೆ.

ಮುಸಲೀನಿಗೆ ಇದೊಂದು ಸುಸಂಧಿ. ಜರ್ಮನಿಯು ಆಸ್ಟ್ರಿಯಾವನ್ನು ಪಡೆಯುವುದು, ಇಟೇಲಿಗೂ ಫ್ರಾನ್ಸಿಗೂ ಹಾನಿಕರ. ಆದರೆ, ಜರ್ಮನಿಯೊಡನೆ ಕೆಲವು ಯೋಗ್ಯ ಒಪ್ಪಂದಗಳನ್ನು ಮಾಡಿ, ಆಸ್ಟ್ರಿಯಾವನ್ನು ಅವರಿಗೆ ಬಿಟ್ಟುಕೊಡುವುದು ಮತ್ತು ಇತರ ರೀತಿಯಲ್ಲಿ ಜರ್ಮನಿಯೊಡನೆ ಸಹಕರಿಸುವುದು, ಇಟೇಲಿಯ ಈ ವರ್ತನೆಯು ಫ್ರಾನ್ಸಿಗೆ ಹಾನಿಕರವು. ಅದಲ್ಲದೆ, ಇಟೇಲಿಯ ವಾಯುಬಲದ ಶ್ರೇಯಸ್ಸು ಬಹಳ. ಮೆಡಿಟರೆನಿಯನ ಸಾಗರದಲ್ಲಿ ಇವರಿಗೆ ಒಳ್ಳೆ ಸ್ಥಾನವಿದೆ. ಆದುದರಿಂದ ಅಪ್ರಿಕಾದ ಕಲಹಕ್ಕಾಗಿ ತನಗೆ ವಿಶೇಷ ಫಾಯದೆ ಇಲ್ಲದೆ ಇಟೇಲಿಯ ಸಹಕಾರವನ್ನು ಯಾಕೆ ಕಳಕೊಳುವರು? ಹಬಸಿ ಇಟೇಲಿ ಪ್ರಶ್ನೆಯ ಕುರಿತು ಪಾಶ್ಚಾತ್ಯದ ಕುಹೂ ಹಲವು ಕಡಮೆಯಾದಂತೆ ಕಾಣುತ್ತದೆ. ತನ್ನ ಉದ್ದೇಶವನ್ನು ಸಾಧಿಸಲು ಇಟೇಲಿಗೆ ಇದು ಯೋಗ್ಯ ಕ್ಲಪ್ತ ಸಮಯ. ತನ್ನ ಸಹೋದರರನ್ನು ಬೆದರಿಸಿ ಸೆಂಕ್ಷನುಗಳನ್ನು ರದ್ದು ಮಾಡಿ, ಹಬಸಿ ಚಕ್ರವರ್ತಿಯವರನ್ನು ಕೈಕಾಲು ಕಟ್ಟಿ ರೋಮಿಗೆ ತರಬಹುದು. ಎಥಿಯೋಪಿಯಾವನ್ನು ಪಸಿಯಸ್ಸ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಲು ಇದೇ ಅನುಕೂಲ ಸಮಯ.

ಹಬಸಿ ರಣರಂಗದಲ್ಲಿ ಯುದ್ಧವು ಯಥಾ ಪ್ರಕಾರ ನಡೆಯುತ್ತದೆ. ಇಟೇಲಿಯವು ಮಳೆಗಾಲ ಪ್ರಾರಂಭವಾಗುವದರಷ್ಟರಲ್ಲಿ ಆದಷ್ಟು ಪ್ರದೇಶವನ್ನು ಹಿಡಿಯುವ ಸಾಧನದಲ್ಲಿದೆ. ಹಬಸಿ ರಣವೀರರು ಬಹಳ ಸಾಹಸದಿಂದ ಕಾದಾಡುತ್ತಿದ್ದಾರೆ. ಹಬಸಿ ಚಕ್ರವರ್ತಿಯವರು ಅವಿಶ್ರಾಂತ ಶ್ರಮಪಡುತ್ತಿದ್ದಾರೆ. ಇಟೇಲಿಯಾನರು ವಿಶೇಷ ರೀತಿಯಿಂದ ಜಯ ಹೊಂದಿದ ವಾರ್ತೆಗಳು ಬರುವುದಿಲ್ಲ. ಕೆಲವೆಡೆಗಳಲ್ಲಿ ಇಟೇಲಿಯಾನರಿಗೆ ಭಯಂಕರ ಸೋಲು ಪರಿಣಮಿಸಿದೆ. ಹಬಸಿಯ ಪ್ರಕೃತಿಕ ಯುದ್ಧ ಕ್ರಮವು ಇಟೇಲಿಯಾನರಿಗೆ ಮೃತ್ಯುಮುಖವಾಗಿರುತ್ತದೆಂದೂ ವಾರ್ತೆ.

ಹಬಸಿ ಚಕ್ರವರ್ತಿಯವರು ಇಷ್ಟೆಲ್ಲಾ ಭಯಂಕರ ಆತಂಕಗಳ ಎದುರು ಜಯಶೀಲರಾಗಿ, ತನ್ನ ದೇಶವನ್ನು ಸುರಕ್ಷಿತವಾಗಿ ಇಟ್ಟುಕೊಂಡರೆಂದರೆ ಆಗ್ಯೆ ಇವರ ಕೀರ್ತಿಗೆ ಮೆರೆಯೇ ಇರದು.

(ಹಿಂದೇ ಪುಟದಿಂದ ಮುಂದುವರಿದುದು)

ಮಿಂಚಿಹೋಗಿತ್ತು. ನಿಮ್ಮ ಸಾಮರ್ಥ್ಯ ನೀಟಿಯ– ಗಾದರೆ ನೋಡುವಾಗಲೇ ತಿಳಿಯುತಿ...

ಶೀನು: ಆದರೆ ವಾಸು ವೆಂಕಟನಿಗೆ ಈ ರೀತಿಯಲ್ಲಿ ಆಗ ಆಗ ಅಗತಿರ ಪ್ರದೇಶ ಹೇಳುವರಿತ್ತು ಮಾಡುವದರಷ್ಟು ಅಂತಹದನ್ನು ಇತರರಿಗೆ ತಿಳಿಸಿ ಗಟ್ಟಿ ರಟಾಗಿ ಮಾಡುವರೇ? ಅಲ್ಲಿ ಸ್ವಾಭಾವಿಕತೆ ತಪ್ಪಿಹೋಯಿತು.

ವಾಸು: ಅದೆಲ್ಲಾ ಆ ಹಳ್ಳಿಯ ಮುದುಕರ್ಯಾಗೆ ಹೇಗೆ ತಿಳಿಯಬೇಕು? ಆತನಿಗೆ, ಪಾಪ, ಹುಡುಗನಿಗೆ ಅಪಸ್ಮಾರ ರೋಗವುಂಟೆಂದು ಪೂರ್ತಿಯಾಗಿ ಮನದಟ್ಟಾಗಿರುವ ಅಂತಹವರಿಗೆ ನಮ್ಮಾಂಶವಲ್ಲದೆ ಇತರ ವಿಲ್ಯಾಂಶಗಳ ಅನಗತ್ಯ.

(ಹಿಂತಿರುಗಿ ಹೋಗುವರು)

ರಾಮಚಂದ್ರರಾಯರು.–ಆದರೆ ನಿಮ್ಮಂತಹ ಉಪಾಧ್ಯಾಯರುಗಳಿಗೆ ಅಲ್ಪಾಂಶಗಳಲ್ಲದೆ ಮುಖ್ಯಾಂಶವೇ ಅನಗತ್ಯವಾಯಿತಲ್ಲ.

[ಎಲ್ಲರೂ ಬಾಗಿಲ ಬಳಿಗೆ ಓಡಿಹೋಗಿ ಹೊರಗೆ ನೋಡುವರು. ಅಲ್ಲಿ ರಾಮಚಂದ್ರರಾಯರು ಕಿಟಕಿಯ ಹತ್ತಿರ ನಿಂತುಕೊಂಡಿರುವರು.]

ನಾಣು:–ಇದೇನು, ನೀವು ಇಲ್ಲೇ ನಿಂತಿದ್ದಿರಾ?

ರಾಯರು:–ಹೌದು, ಆದರೆ ನಿಮ್ಮ ಮಾತುಗಳನ್ನು ಕೇಳುವ ಉದ್ದೇಶವಲ್ಲ. ನನಗೆ, ಸ್ವಲ್ಪ ದೂರ ಹೋಗುವಷ್ಟರಲ್ಲಿ, ಏನಿದ್ದರೂ ವೆಂಕಟರಾಯರೊಡನೆ ಒಮ್ಮೆ ಮಾತಾಡಿಯೇ ಹೋಗುವುದು ಧರ್ಮವೆಂದೆನಿಸಿತು. ಅದಕ್ಕಾಗಿ ತಿರುಗಿ ಇಲ್ಲಿಗೆ ಬಂದೆನು. ಅಷ್ಟರಲ್ಲಿ ನಿಮ್ಮ ನಗಾಟವು ಕೇಳಿಬಂದು ನಾನು ತಬ್ಬಿಬ್ಬಾಗಿ ಇಲ್ಲೇ ನಿಂತುಬಿಟ್ಟೆನು. ಆ ಮೇಲಿನ ನಿಮ್ಮ ಮಾತುಗಳು ತಾವಾಗಿಯೇ ಕೇಳಿಬಂದುದರಲ್ಲಿ ನನ್ನ ತಪ್ಪೇನಿದೆ?

ಎಲ್ಲರೂ–ತಪ್ಪು ...

ರಾಯರು:–ಮಾವ ... ಈಗ ... ವನ್ನು ತೆರೆಸಿಯೇ ಹೋಗುವೆನು. ವೆಂಕಟರಾಯರೇ, ... ಯೋಗ್ಯರೆಂದು ನನಗೆ ಚೆನ್ನಾಗಿ ... ಗರವು ... ನನ್ನ ... ವನ್ನು ... ನಿಶ್ಚಯ ಮಾಡಿರುವೆನು. ಆದರೆ ... ನನ್ನ ... ಹಳ್ಳಿಯ ... ಯಾಕೆಂದರೆ ... ಪಟ್ಟಣದ ಪುಷ್ಪವೇ ಆಗಿರುವಳು. ... ಪಟ್ಟಣದವನೇ ಆಗಿದ್ದು, ... ನನ್ನನ್ನು ... ಮೇಲಿಯೇ ಹಳ್ಳಿಯಲ್ಲಿ ಹವೆಗಾಗಿ ವಾಸ ಮಾಡಹೋದುದು. ನನ್ನ ... ಈಗಲೂ ಪಟ್ಟಣದಲ್ಲೇ, ನನ್ನ ... ಇದ್ದುಕೊಂಡು ವಿದ್ಯಾಭ್ಯಾಸ ನಡೆಸುತ್ತಿರುವಳು. ಇನ್ನಾದರೂ ... ಆಕ್ಷೇಪವೇದೆಯೇ?

ಎಲ್ಲರೂ–ಇಲ್ಲ, ಇಲ್ಲ ... ಇಲ್ಲ. ಈ ಸಂಬಂಧವಾಗಿ ... ಸಿಕ್ಕಿಯುವಾಗಿಯೂ ಆಕ್ಷೇಪವೇ ಇಲ್ಲ.

ರಾಯರು:–ಹಾಗಾದರೆ ಇಕೊಳ್ಳಿರಿ.

[ಕೈಯೊಳಗಿನ ಬೀಗದ ಕೈಯನ್ನು ಅವರಿಗೆ ಕೊಡುವನು]*

* ಈ ನಾಟಕವನ್ನು ಅಭಿನಯಿಸಲು ಇಚ್ಛಿಸುವವರು "ಸ್ವದೇಶಾಭಿಮಾನಿ"ಯ ಸಂಪಾದಕರ ಮುಖಾಂತರ ಅನುಮತಿ ಪಡೆಯತಕ್ಕದ್ದು.–ಲೇಖಕ

ಹಿಂದೂದೇಶದ ಸೇನಾಬಲದಲಿ ಭಾರತೀಯರಿಗೆ ಹೆಚ್ಚು ಸ್ಥಳ ಕೊಡಬೇಕು.

ಉಪ್ಪಿನ ತಯಾರಿಯು ನಿಷಿದ್ಧ!

'ಕೆನ್ಸರ್' ವ್ಯಾಧಿಯ ಚಿಕಿತ್ಸಾಲಯ.

ಪತ್ರಿಕಾಕರ್ತರ ತರಬೇತಿಗಾಗಿ ವಿಶ್ವವಿದ್ಯಾ...

ಕಾಂಗ್ರೆಸ್ ಮುಖಂಡರ ಸಭೆ.

ಶ್ರೀಗಳಾದ ಜವಾಹರಲಾಲ ನೆಹರು, ಬಾಬುರಾಜೇಂದ್ರ ಪ್ರಸಾದ, ಮಹಾತ್ಮಾ ಗಾಂಧಿ ಮತ್ತು ಇತರ ಕಾಂಗ್ರೆಸ್ ಮುಖಂಡರ ಸಭೆಯೊಂದು ಬೇಗನೇ ಜರಗಲಿರುವುದು. ಕಾಂಗ್ರೆಸ್ಸಿನ ಮುಂದಿನ ವರ್ತನೆಯು ಕುರಿತು ನವರಾಜ ಶಾಸನದಲ್ಲಿ ಅಧಿಕಾರ ಸೂತ್ರವನ್ನು ವಹಿಸ ಕೊಳ್ಳುವ ಇದೆ ಮೊದಲಾದ ಪ್ರಾಮುಖ್ಯ ವಿಚಾರಗಳು ಚರ್ಚಿಸಲಾಗುವುವು. ಈ ವಿಚಾರಗಳಲ್ಲಿ ಮಹಾತ್ಮಾ ಗಾಂಧಿಯವರ ಅಭಿಪ್ರಾಯವನ್ನು ಪಡೆಯುವುದು ಈ ಸಭೆಯ ಮುಖ್ಯ ಉದ್ದೇಶ. ಶ್ರೀ. ನೆಹರುಗಳವರಿಗೆ ಅಧಿಕಾರಸೂತ್ರವನ್ನು ವಹಿಸಬಾರದಾಗಿ ಮತವಿರುವು ದೆಂದೂ, ಹಿಂದೂದೇಶದ ರಾಜಕೀಯ ಚಳವಳವು ಪ್ರಪಂಚದ ಇತರ ದೇಶಗಳಲ್ಲಿ ನಡೆದಂತೆ ನಡೆಯಬೇಕೆಂದೂ ಇವರ ಮತವೆಂದು ತಿಳಿದುಬರುತ್ತದೆ. ಅಂದರೆ ಕಾಂಗ್ರೆಸ್ಸಿನ ಮುಂದಿನ ವರ್ತನೆಯ ಕುರಿತು ಇವರಿಗೂ, ಇತರ ಮುಖಂಡರ ಅನೇಕ ಭಿನ್ನಾಭಿಪ್ರಾಯ ಗಳಿರುವುದೆಂದು ತಿಳಿದುಬರುತ್ತದೆ. ಎಂತಾದರೂ, ಈ ಸಭೆಯಲ್ಲಿ ಮುಂದಿನ ವರ್ತನೆಯನ್ನು ರೂಪಿಸಿ, ಸದ್ಯ ದಲ್ಲಿ ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಿ ಮಂಡ ಳದ ಸಭೆಯಲ್ಲಿ, ಇಲ್ಲಿ ಹೊರ ಬಂದ ವಿಚಾರಗಳನ್ನು ಆಲೋಚಿಸಲಾಗುವುದೆಂದು ತಿಳಿದು ಬರುತ್ತದೆ.

ಶ್ರೀ ಜವಹರಲಾಲರು.

ಕಳೆದ ವಾರ ಹಿಂತಿರುಗಿದ ಶ್ರೀ ನೆಹರೂಗಳು ಮೊನ್ನೆ ಪ್ರಥಮತಃವಾಗಿ ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿಕೊಟ್ಟರು. ಇವರೊಡನೆ ಅನೇಕ ಪ್ರಶ್ನೆಗಳು ಕೇಳಲಾದವು. ಪತ್ನಿಯರನ್ನು ಕಳಕೊಂಡ ಶ್ರೀ ನೆಹರುಗಳವರು, ಈಗಲೂ ಖಿನ್ನರಾಗಿರುವರು. ಇವರನ್ನು ಕಾಣಲು ಅನೇಕರು ಬರುತ್ತಿದ್ದಾರೆ. ಯಾವತ್ತೂ ರಾಜಕೀಯ ವಿಚಾರಗಳ ಮೇಲೆ ಇವರು ಮಾತಾಡುವುದಿಲ್ಲ. ಶ್ರೀಮತಿ ಕಮಲಾ ನೆಹರುಗಳವರು ಅಷ್ಟು ಅಕಸ್ಮಾತ ವಾಗಿ ಸಾಯಲು ಕಾರಣವೇನೆಂದು ಕೇಳಲು, ಅವರ ಆರೋಗ್ಯ ಸ್ಥಿತಿಯು ಅಗಲೂ ನೆಟ್ಟಗಿರಲಿಲ್ಲವೆಂದೂ ಜ್ವರ ಮಾತ್ರ ನಿಂತಿತ್ತೆಂದರು. ಅವರು ಬಹಳ ಶಾಂತ ಚಿತ್ತರಾಗಿ ದೈವಾಧೀನರಾದರಂತೆ. ಕೊನೆಯ ಕವಳ ಪ್ರಶ್ನೆ ಇತ್ತಂತೆ. ರಾಜಕೀಯ ವಿಚಾರ, ಕಾಂಗ್ರೆಸ್ಸು ವಿಚಾರ, ಯಾವತ್ತೂ ಅಭಿಪ್ರಾಯಗಳನ್ನೂ ಇವರು ಕೊಡಲು ಸಮ್ಮತಿಸಲಿಲ್ಲ. ಕಾರಣ, ಇವರಿಗೆ ಈಗಿನ ಸ್ಥಿತಿಯು ಸಂಪೂರ್ಣ ಅರಿವು ಆಗಲಿಲ್ಲವಂತೆ. ಅವೆಲ್ಲ ವನ್ನು ತಿಳಿಕೊಂಡು ಬಳಿಕ್ಕೆ ಕಾಂಗ್ರೆಸ್ಸಿನ ಭಿನ್ನತವನ್ನು ತಯಾರಿಸಿರುವರಂತೆ. ಇಂಗ್ಲಂಡಿನಲ್ಲಿ ಇವರು ಹಿಂದೂ ದೇಶದ ಕುರಿತು ಪ್ರಸಾರಣೆಯ ಫಲಿತಾಂಶದ ವಿಷಯ—ಅವರು ಈ ಬಾರಿ ಯಾವುದೆ ಒಂದು ಉದ್ದೇಶ ದಿಂದ ಈ ಕಾರ್ಯವನ್ನು ನಡೆಯಿಸಿದಲ್ಲವೆಂದೂ ಅವರು ಈ ಸಂಚಾರದಲ್ಲಿ ವಿವಿಧ ಮತಗಳಿರುವ ಅನೇಕ ಆಂಗ್ಲೇಯ ರಾಜಕೀಯ ಪುರುಷರನ್ನು ಕಾಣಿರುವ ರೆಂದೂ, ಇವರೊಡನೆ ಭಾರತೀಯ ಸಮಸ್ಯೆಯನ್ನು ಚರ್ಚಿಸಿದ್ದಾರೆಂದೂ, ಅನೇಕ ಭಾಷಣಗಳನ್ನು ಮಾಡಿದ ವರೆಂದೂ, ಅಲ್ಲಿನ ಪತ್ರಿಕೆಗಳಲ್ಲಿ ಅನೇಕ ಲೇಖಗಳನ್ನು ಬರೆದಿರುವರೆಂದೂ ತಿಳಿದು ಬಂತು. ಯುರೋಪಿನ ಈಗಿನ ಸ್ಥಿತಿಯ ಕುರಿತು, ಅದು ಭಯಂಕರವಾಗಿರುವು ದೆಂದೂ ಶೀಘ್ರದಲ್ಲಿ ಯುರೋಪ ಖಂಡದಲ್ಲಿ ಅಲ್ಲೋಲ ಕಲ್ಲೋಲವಾಗಬಹುದೆಂದರು. ಇವರ ಆರೋಗ್ಯ ಒಳ್ಳೇದಾಗಿರುತ್ತದೆ.

ಕಳೆದ ವಾರದ ಅಸೆಂಬ್ಲಿ.

ಕಳೆದ ವಾರ ಅಸೆಂಬ್ಲಿಯಲ್ಲಿ ಬಜೆಟ್ಟು ಚರ್ಚಿಸ ಲಾಯಿತು. ಸರಕಾರದ ಹಿಂದಿನ ಧೋರಣೆಯನ್ನು ವಿಮರ್ಶಿಸಲು, ಸರಕಾರದ ಗತವರ್ಷದ ಕಾರ್ಯಗಳನ್ನು ವಿಮರ್ಶಿಸಲು ಬಜೆಟಿನ ಅನೇಕ ವಿವರಗಳ ಚರ್ಚೆ ಯಲ್ಲಿ ಕಡಿತದ ಠರಾವುಗಳು ಬಂದು, ಬಹುಮತ ದಿಂದ ಮಂಜೂರಾಗಿವೆ. ಶ್ರೀ. ಸತ್ಯಮೂರ್ತಿಯವರು ಈ ಭಾಷಣಗಳಲ್ಲಿ ಹೆಚ್ಚಿನ ಶ್ರಮ ವಹಿಸಿದರು. ಕಳೆದ ವಾರದ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷದೊಡನೆ ಸದಸ್ಯರಾದ ಶ್ರೀ ಕವಾಸ್ಜಿ ಜಹಂಗೀರರು, ಜಿನ್ನಾರವರು ಸರಕಾರದ ವರ್ತನೆಯನ್ನು ಖಂಡಿಸಿ ಠಂದ ಠರಾವು ಗಳಿಗೆ ತಮ್ಮ ಮತಗಳನ್ನು ಕೊಟ್ಟರು. ಅಸೆಂಬ್ಲಿ ಅಧಿವೇಶನವು ಮುಂದುವರಿಯುತ್ತಿದೆ.

ಸರಕಾರ ಮತ್ತು ನಿರುದ್ಯೋಗ

ಮುಂಬೈ ನ್ಯಾಯವಿಧಾಯಕ ಸಭೆಯಲ್ಲಿ ವಿದ್ಯಾ ವಂತ ಮಧ್ಯಮ ತರಗತಿಯವರಲ್ಲಿ ನಿರುದ್ಯೋಗದ ಕುರಿತು ಬಹಳ ಚರ್ಚೆಯು ನಡೆಯಿತು. ದಿನೇ ದಿನೇ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು ವೃದ್ಧಿ ಹೊಂದುತಿದೆಯೆಂದೂ, ಸರಕಾರವು ಇದರ ನಿವಾರಣೆ ಗಾಗಿ ತಕ್ಕ ಯೋಜನೆಗಳನ್ನು ಮಾಡಬೇಕೆಂದೂ ಕೆಲವರು ಸೂಚಿಸಿದರು. ಈ ದುಃಸ್ಥಿತಿ ನಿವಾರಣೆಗಾಗಿ ಸರಕಾರವು ವಿದ್ಯಾವಂತ ಮಧ್ಯಮ ತರಗತಿಯ ಜನರಿಗೆ ಹಸ್ತಕ್ರಿಯೆ ಗಳಲ್ಲಿ ತರಬೇತು ಪಡಿಸಲು ಒಂದು ಸಂಸ್ಥೆಯನ್ನು ನಿರ್ಮಾಣ ಮಾಡುವುದೆಂದು ತಿಳಿದು ಬರುತ್ತದೆ. ಈ ನಿರುದ್ಯೋಗದ ಸಮಸ್ಯೆಯು ಮುಂಬಯಿಯಲ್ಲಿ ಮಾತ್ರವಲ್ಲ ಸಮಸ್ತ ಭರತಖಂಡವನ್ನು ಕಾಡುತ್ತಿದೆ. ನಿರುದ್ಯೋಗ ನಿವಾರಣೆಗಾಗಿ ಸರಕಾರವು ಹೆಚ್ಚಿನ ಶ್ರಮ ಪಡಬೇಕಾಗಿದೆ.

ಯಾತ್ರಿಕರೇ ಸ್ವಲ್ಪ ಜಾಗ್ರತರಾಗಿರಿ.

ಕಲ್ಕತ್ತೆಕ್ಕೆ ಕೆಲವರು ಯಾತ್ರಿಗಾಗಿ ತೆರಳಿದರು. ಒಬ್ಬ ದಾರಿ ತೋರಿಸುವವನು, ನಗರ ಸಂಚಾರದ ಕಾರ್ಯ ದಲ್ಲಿ ಇವರೊಡನೆ ಸಹಕರಿಸಲು ಮುಂದೆ ಬಂದನು. ನೋಡಲು ಈತನು ಯೋಗ್ಯ ಪುರುಷನಾಗಿದ್ದನು. ಕಾಳಿ ಘಾಟನ್ನು ಸಂದರ್ಶಿಸಲಾಯಿತು. ಒಂದೆಡೆಯಲ್ಲಿ ಈತನು ಇವರಿಗಾಗಿ ಕೆಲವು ಭಕ್ಷಗಳನ್ನು ಪಡೆದನು. ಯಾತ್ರಿ ಕರು ಅವುಗಳನ್ನು ಸೇವಿಸಿದರು. ಛತ್ರವನ್ನು ಸೇರಿ ದೊಡನೆ ಇವರೆಲ್ಲನೇಕರು ಪ್ರಜ್ಞೆತಪ್ಪಿದರು. ಒಬ್ಬನು ವಿಷಪ್ರಯೋಗದಿಂದ ಮೃತನಾದನು. ಸಂಚಾರಕನು ಇವರಲ್ಲಿರುವ ದ್ರವ್ಯವನ್ನು ಕೊಂಡು ಮಾಯವಾಗಿ ದ್ದನು. ಪೋಲೀಸರು ಈಗ ಶೋಧ ನಡೆಯಿಸುತ್ತಿ ದ್ದಾರೆ.

ಕೈನೇಯಿಗೆ ಕೈಗಾರಿಕೆ.

ನವದೆಹಲಿಯಲ್ಲಿ ಕೈನೇಯಿಗೆಯವರ ಪಕ್ಷದ ಗಿರಣಿ ಗಳಲ್ಲದ ಹಿತವುಳ್ಳ ಅಸೆಂಬ್ಲಿ ಸದಸ್ಯರ ಸಭೆಯೊಂದು ಸೇರಿತು. ಕೈನೇಯಿಗೆ ವೃತ್ತಿಯನ್ನು ನಡೆಯಿಸುವವರ ಹಿತವನ್ನು ಸಾಧಿಸುವುದು ಈ ಸಭೆಯ ಮುಖ್ಯ ಉದ್ದೇಶವಾಗಿತ್ತು. ಈ ಕೆಳಗಿನ ವಿಚಾರಗಳ ಮೇಲೆ ಚರ್ಚೆ ನಡೆದಿರುತ್ತದೆ. (೧) ನೇಕಾರರಿಗೆ ಬೇಕಾಗುವ ನೂಲನ್ನು ಲಾಭವಿಲ್ಲದೆ ಮಾರಾಟಮಾಡುವುದು; (೨) ನೇಕಾರರಿಗೆ ಬೇಕಾಗುವ ಸಹಾಯ ದ್ರವ್ಯವನ್ನು ಒದ ಗಿಸಿ ಕೊಡಬೇಕು. (೩) ಕೆಲವು ತರದ ವಸ್ತ್ರದ ತಯಾರಿ ಸುವಿಕೆ ನೇಕಾರರಿಗೆ ಬಿಡುವುದು. (೪) ಜಪಾನೀಯ ಸ್ಪರ್ಧೆಯು ಕಡಿಮೆಯಾಗುವಂತೆ ಮಾಡುವುದು ಮತ್ತು (೫) ಹತ್ತಿಯ ವ್ಯಾಪಾರದ ಉದ್ಧಾರ.

ಹರಿಜನ ಮತ್ತು ಹಿಂದೂಗಳು.

ಅಂಬೇಡ್ಕರರ ನಿರ್ಧಾರವನ್ನು ಅನುಸರಿಸಿ ಹರಿಜನರು ಹಿಂದೂ ಧರ್ಮವನ್ನು ತ್ಯಜಿಸಬೇಕಾಗಿ ಬಹಳ ಚಳವಳ ನಡೆಯುತ್ತದೆ. ಈ ನಿರ್ಧಾರವು ತಪ್ಪು ಭಾವನೆಯಿಂದ ಕೂಡಿದ್ದಾಗಿರುತ್ತದೆ. ಹರಿಜನರು ಇದನ್ನು ಸರಿ ಯಾಗಿ ಪರೀಕ್ಷಿಸಿ ವರ್ತಿಸುವಂತೆ ಅವರ ಬುದ್ಧಿ ವಿಕಾಸ ಮಾಡುವಂತೆ, ಶ್ರೀ. ಮಾಲವೀಯರು, ಶ್ರೀ. ಶಂಕರಾಚಾರ್ಯರು ಮತ್ತು ಅಂಬೇಡ್ಕರರವರಿಂದಿಗಳ ಸಭೆಯು ನಾಸಿಕದಲ್ಲಿ ಜರಗಿತು. ಹಿಂದೂಗಳು ಹರಿ ಜನರ ಸ್ಥಿತಿಗಳನ್ನು ಸುಧಾರಿಸಬೇಕೆಂದೂ ಆದರೆ ಆ ಸುಧಾರಣೆಯು ನಿಮಿಷ ಮಾತ್ರದಲ್ಲಿ ಆಗಲು ಸಾಧ್ಯ ವಿಲ್ಲವೆಂದೂ ಕಾಲಕ್ರಮೇಣ ಅಸ್ಪೃಶ್ಯತೆಯು ಸಂಪೂರ್ಣ ನಾಶವಾಗುವಂತೆ ಹಿಂದೂಗಳು ವರ್ತಿಸಬೇಕೆಂದು ಶ್ರೀ ಮಾಲವೀಯರು ಭಾಷಣಮಾಡಿದರು. ಹರಿಜನರು ಈ ವಿಚಾರದಲ್ಲಿ ಸ್ವಲ್ಪ ವಿವೇಕದಿಂದ ವರ್ತಿಸಬೇಕೆಂದು ಈ ಸಭೆಯಲ್ಲಿ ಸೂಚನೆಗಳಾದವು. ಹಿಂದೂ ಧರ್ಮ ಉದ್ಧಾರವಾಗುವಂತೆ ಈ ಹರಿಜನ ಸಮಸ್ಯೆಯ ಕುರಿತು ಹೆಚ್ಚಿನ ಗಮನ ತೆಗೆದುಕೊಳ್ಳಲಾಗುವುದೆಂದು ತಿಳಿದು

ಕೆನ್ಸರ್ ಮಹಾ ವ್ಯಾಧಿಯ ಚಿಕಿತ್ಸಾಲಯ.

ಕೆನ್ಸರ್ ಎಂಬ ಮಹಾ ವ್ಯಾಧಿಯನ್ನು 'ರೇಡಿಯಂ' ಎಂಬ ನವೀನವಾಗಿ ಕಂಡುಹಿಡಿದ ವಸ್ತುವಿನಿಂದ ಮಾತ್ರ ಸಾಧ್ಯವಾಗುತ್ತದೆ. ಆದರೆ ಈ ತರದ ರೇಡಿಯಂ ಸಂಸ್ಥೆಯು ಹಿಂದೂದೇಶದಲ್ಲಿಲ್ಲ. ಚಿಕಿತ್ಸೆಗಾಗಿ ಪಾಶ್ಚಾತ್ಯಕ್ಕೆ ಹೋಗಬೇಕಿತ್ತು. ಆದರೆ ಟಾಟಾ ಸ್ಮಾರಕ ನಿಧಿ ಟ್ರಸ್ಟಿಯವರು, ಮುಂಬೈಯಲ್ಲಿ ಒಂದು ರೇಡಿಯಂ ಸಂಸ್ಥೆಯನ್ನು ಸ್ಥಾಪಿಸಬೇಕಾಗಿಯೂ ಈ ಸಂಸ್ಥೆಗೆ ಬೇಕಾದ ಸ್ಪೆಶಲಿಸ್ಟರನ್ನು ಪಾಶ್ಚಾತ್ಯದಿಂದ ಬರಮಾಡಬೇಕೆಂದೂ, ಮತ್ತು ಮೇಲಿನ ಸ್ಪೆಶಲಿಸ್ಟರ ತರಬೇತಿಗೆ ೨ ಲಕ್ಷ ರೂಪಾಯಿ ವೆಚ್ಚಮಾಡಬೇಕೆಂದೂ ನಿರ್ಧಾರ ಮಾಡಿರುತ್ತದೆ. ಭರತ ಖಂಡಕ್ಕೆ ಇದೊಂದು ಮಹಾ ವರವಾಗುವುದು.

ಮದ್ರಾಸು ನ್ಯಾಯವಿಧಾಯಕ ಸಭೆ.

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಅಧಿಕತ್ಯ ಅರಣ್ಯಗಳ ವಿಷಯ ಬಹಳ ಚರ್ಚೆಯು ನಡೆಯಿತು. ಕೃಷಿವಲರ ದೃಷ್ಟಿಯಿಂದ ಈ ಅರಣ್ಯಗಳನ್ನು ಸರಿಯಾಗಿ ಕಾಪಾಡಿ ಸಲಹುವ ಏರ್ಪಾಡು ಗಳನ್ನು ಸರಕಾರವು ಮಾಡಬೇಕೆಂದೂ, ರೈತರಿಗೆ ಅವು ಗಳಿಂದ ಹೆಚ್ಚಿನ ಉಪಕಾರವಿದೆಯೆಂದೂ, ಸೂಚನೆಗಳು ಗಳು ಕೊಟ್ಟು ಭಾಷಣಗಳಾದುವು. ಸರಕಾರವು ಯೋಗ್ಯ ಏರ್ಪಾಡುಗಳನ್ನು ಮಾಡುವುದೆಂದು ತಿಳಿದು ಬರುತ್ತದೆ.

ಪತ್ರಿಕಾಕರ್ತರ ತರಬೇತಿಗಾಗಿ ವಿಶ್ವವಿದ್ಯಾಲಯ.

ಶ್ರೀ. ಶ್ರೀನಿವಾಸ ಶಾಸ್ತ್ರೀಯವರು.

"ಪತ್ರಿಕೋದ್ಯಮವು ಯಶಸ್ವಿಯಾಗಬೇಕಾದರೆ ಇಂತಹ ತರಬೇತಿಯು ಅವಶ್ಯಕ" ಎಂದು ರ್ರೈಟ್ ಓನ ರೇಬಲ್ ವಿ. ಎಸ್. ಶಾಸ್ತ್ರಿಯವರ ಅಭಿಪ್ರಾಯ. ದಕ್ಷಿಣ ಆಫ್ರಿಕಾದ ಪತ್ರಿಕಾಕರ್ತರ ಸಂಘದವರು ಇವರಿಗೆ ಸತ್ಕಾರ ಕೂಟವನ್ನಿತ್ತಾಗ ಅವರು ಕೊಟ್ಟ ಭಾಷಣದ ಸಾರಾಂಶ.

ಉಪ್ಪಿನ ತಯಾರಿಯು ನಿಷಿದ್ಧ.

ಫೈನಾನ್ಸ್ ಮೆಂಬರರಾದ ಸರ್ ಜೇಮ್ಸ್ ಗ್ರೀಗರು ಮಿ. ಟಿ. ಎಸ್. ಅವಿನಾಶಿಲಿಂಗಮ್ ಚೆಟ್ಟಿಯಾರ್ ಎಂಬವರಿಗೆ ಹೀಗೆ ಕಾಗದ ಬರೆದಿದ್ದಾರೆ—ಗಾಂಧಿ ಇರ್ವಿನ್ ಒಪ್ಪಂದದ ಪ್ರಕಾರ ಇಡೀ ಹಿಂದೂದೇಶದಲ್ಲಿ ನಾವು ಉಪ್ಪಿನ ತಯಾರಿಗೆ ಅಪ್ಪಣೆಯನ್ನು ಕೊಟ್ಟಿದ್ದೆವು. ಆದರೆ ಕೆಲವು ಪ್ರಾಂತ್ಯಗಳವರು ಆಪ್ಪಣೆಯ ರಿಯಾಯಿತನ್ನು ದುರು ಪಯೋಗಿಸಿದ್ದರಿಂದ ನಾವು ಕೊಟ್ಟ ರಿಯಾಯಿತಿ ಯನ್ನು ಹಿಂತೆಗೆಯಲಾಗಿದೆ. ಆ ಪ್ರಾಂತ್ಯಗಳಾವು ವೆಂದರೆ—ಮದ್ರಾಸು ಸಂಸ್ಥಾನದಲ್ಲಿ ೧. ನೆಲ್ಲೂರು ಡಿಸ್ಟ್ರಿಕ್ಟ್, ೨. ರಾಮ್ನಾಡ್ ಮುದುಕುಲತ್ತೂರು ತಾಲೂಕು, ೩. ಕಡಪಾ ಡಿಸ್ಟ್ರಿಕ್ಟ್, ೪. ಅನಂತಪುರ ಡಿಸ್ಟ್ರಿಕ್ಟ್, ೫. ಬೆಳ್ಳಾರಿ, ಸೇಲಂ, ಎಲ್ಲೂರು, ಅದೋನಿ ಮತ್ತು ರೋಯದ್ರುಗ್, ೬. ಕರ್ನೂಲು, ಕೋಯಿಲ ಕುಂಟ್ಲ, ಕುಂಭಮ್, ಮರ್ಕಾಪುರ್, ಸರ್ವಾಲ್ ನಂದ್ಯಾಲ್, ಧೋನ್ ಪತ್ತಿಕೊಂಡ ಮತ್ತು ನಂದೀ ಕೊಂಡಾ, ೭. ತಂಜಾವೂರ್ ಡಿಸ್ಟ್ರಿಕ್ಟಿನ ತಿರುತ್ತುರೈ ಪೂಂಡಿ, ಊಟಿ, ೮. ಚಿಂಗಲ್ಪಟ್ಟು ಡಿಸ್ಟ್ರಿಕ್ಟಿನ ಬಂಗ

ಹಿಂದೂದೇಶದ ಸೇನಾಬಲದಲ್ಲಿ ಭಾರತೀಯರಿಗೆ ಹೆಚ್ಚು ಸ್ಥಳದೊರಕಬೇಕು.

ಈ ವಿಚಾರ, ಕೌನ್ಸಿಲ್ ಆಫ್ ಸ್ಟೇಟನಲ್ಲಿ ಚರ್ಚೆ ನಡೆಯಿತು. ಇಂಡಿಯಾ ಸರಕಾರವು ಸೇನಾಬಲವನ್ನು ಭಾರತೀಯವನ್ನಾಗಿ ಮಾಡಲು ಯೋಜನೆಗಳನ್ನು ಮಾಡ ಬೇಕೆಂದೂ, ಈಗ, ಈ ವಿಚಾರದಲ್ಲಿ ನಡೆಯುತ್ತಿರುವ ಕಾರ್ಯಗಳು ಅಷ್ಟು ಸಮಾಧಾನಕರವಲ್ಲವೆಂದು ಸೂಚಿಸಿ ಅನೇಕ ಭಾರತೀಯ ಸದಸ್ಯರಿಂದ ಭಾಷಣಗಳು ನಡೆ ದುವು. ಸೇನಾಬಲವನ್ನು ಆರಿಸುವ ಕಾರ್ಯದಲ್ಲಿ ಸೇನಾಪತಿಗಳೊಡನೆ ಸಹಕರಿಸಲು ಒಂದು (ಭಾರತೀಯ ಸದಸ್ಯರಿಂದೊಡಗೂಡಿದ) ಸಮಿತಿಯು ರಚನೆಯಾಗಬೇ ಕೆಂದು ಠಂದ ಠರಾವು, ಸೇನಾಪತಿಗಳು ಆ ಕುರಿತು ಯೋಗ್ಯ ವ್ಯವಸ್ಥೆಗಳು ಮಾಡಲಾಗುವವೆಂದು ಭರವಸೆ ಕೊಡಲು, ಹಿಂತೆಗೆಯಲಾಯಿತು. ಪ್ರತ್ಯುತ್ತರಕ್ಕೆ ಇಂಡಿಯಾ ಸರಕಾರದವರು ತಮಗೆ ಬೇಕಾಗುವ ಸೇನಾಬಲವನ್ನು ಕೆಲವು ನಿಯಮಿತ ಪ್ರಾಂತ್ಯಗಳಿಂದ ಮತ್ತು ವರ್ಗ ಗಳಿಂದ ಆರಿಸಿತೆಗೆಯುತ್ತಿದೆ. ಇವುಗಳಿಗೆ ಮಾತ್ರ ಯೋಗ್ಯ ಸಂಗ್ರಾಮಯೋಗ್ಯತೆಗಳಿರುವವೋ? ಇತರ ಪ್ರಾಂತ್ಯ ಗಳಲ್ಲಿ ಸಂಗ್ರಾಮಶೂರರಾದ ಜನರಿಲ್ಲವೋ? ಮದ್ರಾಸು ಬಂಗಾಳ ಇತ್ಯಾದಿ ಪ್ರಾಂತ್ಯಗಳಿಗೆ ಈ ವಿಚಾರದಲ್ಲಿ ಸ್ಥಾನವು ದೊರಕಲಿಲ್ಲವಂತೆ. ಸೇನಾಬಲವನ್ನು ಭಾರ ತೀಯವಾಗಿ ಮಾಡಲು ಭಾರತೀಯರಾದ ನಾವು ಪರಿಶ್ರಮ ಪಡಬೇಕಾಗಿದೆ. ಜನರಲ್ಲಿ ಸಂಗ್ರಾಮ ಸ್ಫೂರ್ತಿಯು ಉಂಟಾಗಬೇಕಾಗಿದೆ. ವಿದ್ಯಾಭ್ಯಾಸದೊಂದಿಗೆ ದಂಡ ಯೋಜನೆಯಲ್ಲಿ ಭಾರತೀಯರನ್ನು ತರಬೇತಿಗೊಳಿಸು ವುದು ಉಚಿತವು.

ಧರ್ಮಬದಲಾಯಿಸುವ ಬದಲಾಗಿ ಪ್ರಾಣತ್ಯಾಗಮಾಡಿದನು!

ಜ್ಞಾನಾ ವಿಶಾರಾಮ ಜಾದವನೆಂಬ ೧೮ ವಯಸ್ಸಿನ ಹರಿಜನ ಯುವಕನೊಬ್ಬನು ೬೦ ಅಡಿ ಎತ್ತರವಿರುವ ಗೋದಾವರಿ ಸಂಕದ ಮೇಲಿನಿಂದ ನೀರಿಗೆ ಹಾರಿ ಪ್ರಾಣ ತ್ಯಾಗವನ್ನು ಮಾಡಿಕೊಂಡನು. ಅಂಬೇಡ್ಕರರು ಹರಿಜನರು ಹಿಂದೂಧರ್ಮವನ್ನು ತ್ಯಜಿಸಬೇಕಾಗಿ ಮಾಡಿದ ನಿರ್ಧಾ ರದ ವಿಚಾರದಲ್ಲಿ ನಾಸಿಕದಲ್ಲಿ ಮೊನ್ನೆ ನಡೆದ ಪಂಡಿತ ಮಾಲವೀಯರ ಭಾಷಣಗಳೂ ಇವನಿಗೆ ಬಹಳ ವಾಗಿ ನಾಟಿದುದರಿಂದಲೇ ಅವನು ಈ ರೀತಿ ವರ್ತಿಸಲು ಕಾರಣವಂತೆ. ಜಾದವನು ಹಿಂದೂಧರ್ಮ ಪ್ರೇಮಿಯು. ಆದರೆ, ತೋರಿಕೆಯಲ್ಲಿ ನಡೆಯಿಸಲು ಇವನಿಂದ ಇಷ್ಟವಿರಲಿಲ್ಲ. ಆದರೂ ಹಿಂದೂಧರ್ಮವನ್ನು ತ್ಯಜಿ ಸುವುದು ನ್ಯಾಯವಲ್ಲವೆಂದು ಇವನ ದೃಢವಾದ ನಂಬಿಗೆ. ಡಾ। ಅಂಬೇಡ್ಕರರ ಭಾಷಣಗಳಿರುವ ಪತ್ರಿಕೆಗಳು ಇವನ ಕೋಣೆಯೊಳಗೆ ಕಂಡು ಬಂದಿವೆ. ಜಾದ ವನು ಈ ಸಮಸ್ಯೆಯ ಮೇಲೆ ದೀರ್ಘಕಾಲ ಆಲೋಚಿಸಿ, ಕೊನೆಗೆ ಹಿಂದೂಧರ್ಮವನ್ನು ತ್ಯಜಿಸುವುದಕ್ಕಿಂತ ಪ್ರಾಣ ತ್ಯಾಗವೇ ಶ್ರೇಷ್ಠವೆಂದು ಭಾವಿಸಿ ಹೀಗೆ ವರ್ತಿಸಿದನಂತೆ. ಹರಿಜನರು ಹಿಂದೂಧರ್ಮವನ್ನು ತ್ಯಜಿಸುವುದು ಎಂದಿಗೂ ಯೋಗ್ಯವಲ್ಲ. ಆದರೆ, ಹರಿಜನೋದ್ಧಾರಕಾರ್ಯ ವನ್ನು ಬಹಳ ತ್ವರೆಯಿಂದ ನಡೆಯಿಸಬೇಕಾಗಿದೆ.

ಶರತ್ ಭೋಸರು ಗಾಯಗೊಂಡರು.

ಇದೇ ತಾರೀಖು ೧೪ರಂದು ಉತ್ತರ ಕಲ್ಕತ್ತದಲ್ಲಿ ಕೋರ್ಪರೇಶನಿನ ಚುನಾವಣೆಯ ಸಂಬಂಧವಾದ ಸಭೆ ನಡೆದಾಗ ಗಲಾಟೆಯಾಗಿ ಶ್ರೀ ಶರತ್ ಭೋಸರು ಗಾಯಗೊಂಡಿರುವರೆಂದು ತಿಳಿದುಬರುತ್ತದೆ.

ದಿ ಬೊಂಬೇ ಸ್ಟೀಮ್ ನೇವಿಗೇಶನ್ ಕಂಪೆನಿ, ಲಿಮಿಟೆಡ್.

ಸದ್ರಿ ಕಂಪೆನಿಯ ಎಸ್. ಎಸ್. ನೇತ್ರಾವತಿ ಎಂಬ ಹಡಗವು ನಿನ್ನೆ ಬೆಳಿಗ್ಗೆ ಬೊಂಬಾಯಿಂದ ಇಲ್ಲಿಗೆ ಬಂದು ನಿನ್ನೆ ರಾತ್ರಿ ಕಲ್ಲಿಕೋಟೆಗೆ ತೆರಳಿತು. ಇಂದು ರಾತ್ರಿ ಕಲ್ಲಿಕೋಟೆಗೆ ಮುಟ್ಟಿ ಶನಿವಾರ ಬೆಳಿಗ್ಗೆ ಬೊಂಬಾ ಯಿಗೆ ತೆರಳುವುದು. ಎಸ್. ಎಸ್. ದಯಾವತಿ ಎಂಬ ಹಡಗು ಮಾರ್ಚ ೨೪, ೨೫ನೇ ಸೋಮವಾರ ಬೊಂಬಾ ಯಿಯಿಂದ ಇಲ್ಲಿಗೆ ಬಂದು ಮಂಗಳವಾರ ಬೆಳಿಗ್ಗೆ

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA══AND══MANGALORE.



ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ ಸೂತಿಕಾ ವಾಯುಗಳನ್ನು ಹಿಂದಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟೋನಿಕ್ಕು.

24 ಔನ್ಸ್ ರೂ. 2. 16 ಔನ್ಸ್ ರೂ. 1-8-0 8 ಔನ್ಸ್ ರೂ. 0-14-0.

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ.

ಆಯೊಡೈಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧ, ಚರ್ಮವ್ಯಾಧಿಗಳಲ್ಲಿಯೂ, ದೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ.

4 ಔನ್ಸ್ ರೂ. 1 0—0. 8 ಔನ್ಸ್ ರೂ. 1—8—0.

ದಕ್ಷಿಣ ಕನ್ನಡದ ಏಜಂಟರು — ಪ್ರೊಪ್ರೈಟರ ಸ್ಟೋರ್ಸ್, ಮಂಗಳೂರು.

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿ ವಾರಪತ್ರಿಕೆಯಲ್ಲಿ ಕೊಡಿರಿ.

For Your Electrical Requirements

ಇಲೆಕ್ಟ್ರಿಕ್ ಫಿಟ್ಟಿಂಗು ಮಾಡಬೇಕಾದರೆ ಇಲೆಕ್ಟ್ರಿಕ್ ಸಾಮಾನುಗಳು ಬೇಕಾದರೆ

ವಿಶ್ವಾಸಕರ ವ್ಯಾಪಾರವನ್ನು ನಡೆಸಬೇಕೆಂದಿದ್ದರೆ

ನಮ್ಮ ಇಲೆಕ್ಟ್ರಿಕ್ ಸಾಮಾನಿನ ಮಾರಾಟದ ಅಂಗಡಿಯನು ಸಂದರ್ಶಿಸಿರಿ

Estimates Submitted without obligation

ಇಲೆಕ್ಟ್ರಿಕ್ ಫಿಟ್ಟಿಂಗುಗಳ ಅಂದಾಜು ಮೌಲ್ಯದ ಪಟ್ಟಿಯನ್ನು ಉಚಿತವಾಗಿ ತಯಾರಿಸಿಕೊಡುತ್ತೇವೆ.

Electric fans, Household appliances, Table lamps,

Very Attractive chandeliers and other fittings

Everything in Electricity

Goods supplied on Approval and guarantee of Manufacture

~~First class Goods First class Work First class Attendance~~

An Enquiry at our Electrical Show Rooms will cost you Nothing

And

Will gain You excellent Service.

[Th]e Canara Public Conveyance Company Ltd., Kodialbail, Mangalore.

ವನಿತಾ ಸೇವಕ

ಅಬಿಸೀನಿಯದಲ್ಲಿ ವಿವಾಹ.

ಯೂರೋಪಿನ ಈ ಅಬಿಸೀನಿಯದ ಮಾತಿನ್ನಿರಲಿ ಬುಡ್ಡನ ಮಾತೇ ಹೊರತು ಮತ್ತೇನೂ ಇರಲೇ ಇಲ್ಲ ಆ ಇಷ್ಟು ಮುಖ್ಯವಲ್ಲ; ಇನ್ನೂ ಅನೇಕ ಸಂಗತಿಗಳನ್ನು ಆ ದೇಶದಿಂದ ತಿಳಿದುಕೊಳ್ಳಬೇಕಾಗಿದೆ. ಆ ದೇಶದಲ್ಲಿರುವ ವಿವಾಹ ಶಾಸನಗಳು ಬಹಳ ವಿಚಿತ್ರವಾಗಿ ನಮಗೆ ಕಾಣುತ್ತವೆ.

ಇಷ್ಟಬಂದಾಗ ಮದುವೆಯಾಗಬಹುದು, ಇಷ್ಟ ಬಂದಾಗ ಬಿಡಬಹುದು, ದಾಂಪತ್ಯವಿಚ್ಛೇದನಮಾಡಬಹುದು, ದಾಂಪತ್ಯ ಜೀವನದ ಪಡೆಯಬೇಕಾದರೆ ಸತಿಪತಿಯರು ಆಗಮ್ಯಾದುನ ಅಪಾದನೆ ಸ್ಥಾಪನೆ ಮಾಡಬೇಕಾದ ಅಗತ್ಯವೇ ಇಲ್ಲ!

ಆ ದೇಶದಲ್ಲಿ ಧರ್ಮವಿವಾಹಗಳಿವೆ, ಶಾಸನ ಸಿದ್ಧವಾದ ವಿವಾಹಗಳಿವೆ, ಕರಾರುಗಳಿವೆ, ಅಲ್ಲಿನ ಕಾನೂನುಗಳು ಆಚಾರಗಳು ಮಾನವನ ದೌರ್ಬಲ್ಯವನ್ನು ಚೆನ್ನಾಗಿ ಅರಿತು ರೂಪುಗೊಂಡುವವುಗಳಾಗಿವೆ. ಮದುಕೊಟ್ಟ ಗಂಡನಿಗೂ ಗಂಟುಬೀಳದ ಹೆಂಗಸು ಒಬ್ಬ ಪುರುಷನೊಂದಿಗೆ ಸಹವಾಸ ಮಾಡಿ ಸಂತಾನ ಪಡೆಯಬಹುದು. ಧರ್ಮವಿವಾಹಕ್ಕೆ ಬದ್ಧರಾದವರು ಅಜನ್ಮ ಸತಿಪತಿಗಳು. ಅವರಲ್ಲಿ ವಿಧವೆಯರಿಗೂ ವಿಧುರರಿಗೂ ವಿವಾಹವಿಲ್ಲ! ಇದು ಚರ್ಚುಗಳಲ್ಲಿ ಪುರೋಹಿತರ ಮೂಲಕ ನಡೆಯುವ ಮದುವೆಯು. ಈ ಮದುವೆ ಆ ದೇಶದಲ್ಲಿ ಕಡಿಮೆ.

ಎರಡನೆಯದು ಸಿವಿಲ್ ವಿವಾಹ, ಪ್ರಭುತ್ವ ಶಾಸನವೊಂದಿದೆ. ಪತಿಯು ಸತಿಯ ಸಂರಕ್ಷಣೆಗೆ ಜಾಮೀನು ಕೊಡಬೇಕು. ಅವರಿಬ್ಬರೂ ಸಂಸಾರ ನಡೆಸುವ ಕಾಲದಲ್ಲಿ ಸಂಪಾದಿಸಿದ ಆಸ್ತಿಗೆ ಇಬ್ಬರೂ ಸಮನಾಗಿ ಪಾಲುಗಾರರು. ದಾಂಪತ್ಯವಿಚ್ಛೇದನ ಕಾಲದಲ್ಲಿ ಈ ಆಸ್ತಿ ಸಮವಾಗಿ ಹಂಚಿಕೆಯಾಗುವುದು. ಈ ಕಾಲದಲ್ಲಿ ದೊಡ್ಡವರಾದ ಮಕ್ಕಳಿಗೆ ಅಪ್ಪನ ಆಸ್ತಿ ಕಿರಿಯ ಕೂಸುಗಳಿಗೆ ಅಮ್ಮನ ಆಸ್ತಿ!

ಧಾರವಾಡದ ಕರ್ನಾಟಕ ಟೈಮ್ಸ್ ಪತ್ರಿಕೆಯಲ್ಲಿ ಈ ರೀತಿ ಬರೆದಿದೆ

ಹೆಂಗಸಿಗೆ ಹೆಂಗಸೇ ಗಂಡ!

ಒಬ್ಬ ಸ್ತ್ರೀ ೯ ಜನ ಹೆಂಗಸರನ್ನೆ ಮದುವೆಯಾಗಿದ್ದಾಳೆ. ಅವಳನ್ನು ಆ ಬಯಪಕ್ಷಿಗಳ ಅಪಾಧನೆಯ ಮೇಲೆ ಈಗ ಸೆರೆಹಿಡಿದಿದ್ದಾರೆ

ಈ ಸ್ತ್ರೀ ೪೦ ವಯಸ್ಸಿನವಳು ಅವಳ ಹೆಸರು ಜಮಾಹಿನಾ ಎಂದು ಗಂಡಸಿನ ಉಡುಪನ್ನು ಧರಿಸಿಕೊಂಡು ಒಬ್ಬರಿಗೂ ತಿಳಿಯದಂತೆ ೯ ಜನ ಹೆಂಗಸರನ್ನು ಮದುವೆಮಾಡಿಕೊಂಡಿದ್ದಳು ಪ್ರತಿಯೊಂದು ಮದುವೆಯಲ್ಲಿಯೂ ಮದುವೆಯಾದ ಕೂಡಲೆ ತನ್ನ ಪತ್ನಿಯ ಪತ್ರ ಕೂಡಿಟ್ಟ ಹಣವನ್ನೆಲ್ಲ ತೆಗೆದುಕೊಂಡು ಪರಾರಿಯಾಗುವುದು ಇದೇ ಅವಳ ಕೆಲಸ

ವರ-ವಧೂ ಪರೀಕ್ಷೆ, ಆ ಮೇಲೆ ವಿವಾಹ.

ವಿಲಾಯತಿಯಲ್ಲಿ ಕೆಲವು ವೈದ್ಯರು ಮತ್ತು ಮನಶ್ಶಾಸ್ತ್ರ ಪಂಡಿತರು ಸೇರಿ ಒಂದು ಹೊಸ ವಿವಾಹಪದ್ಧತಿಯನ್ನು ಆಚರಣೆಗೆ ತರಬೇಕೆಂದು ಆಲೋಚಿಸಿಕೊಂಡಿದ್ದಾರೆ ಇಂಥ ವಿವಾಹಮಾಡಿಕೊಂಡು ನಾಳೆ ಬಿಡುವುದು ಇತ್ಯಾದಿ ದಾಂಪತ್ಯಜೀವನ ಸಂಬಂಧವಾದ ವೈಮನಸ್ಯಗಳನ್ನು ತಡೆಗಟ್ಟಿ ಜನರಿಗೆ ಸಂಸಾರಸುಖವನ್ನು ಹೆಚ್ಚು ಮಾಡಕೊಡುವುದೂ ಮತ್ತು ದಾಂಪತ್ಯಜೀವನದಿಂದ ಹೀನ ಸಂತಾನಗಳು ಹುಟ್ಟಿ ವ್ಯಕ್ತಿಗೂ ಸಮಾಜಕ್ಕೂ ತಟ್ಟುವ ಹಾನಿಯನ್ನು ನಿವಾರಿಸುವುದೂ ಈ ಪ್ರಯತ್ನದ ಉದ್ದೇಶ

ಈ ಪ್ರಶ್ನೆಗಳು ಮನಃಶಾಸ್ತ್ರಾಲೋಚನೆಯಿಂದ ಕೆಲವು ಪ್ರಶ್ನೆಗಳನ್ನು ಹಾಕುವರಂತೆ. ಆ ಪ್ರಶ್ನೆಗೆ ಉತ್ತರ ಕೊಡುತ್ತಿರುವಲ್ಲಿ, ಉತ್ತರಕೊಡುವ ವ್ಯಕ್ತಿಯ ದೈಹಿಕ ಮಾನಸಿಕ ಲಕ್ಷಣಗಳೆಲ್ಲ ವ್ಯಕ್ತವಾಗುವವಂತೆ ಅವು ಇರುವುದರಿಂದ ಆ ಪ್ರಶ್ನೆಗಳನ್ನು ಪ್ರಯೋಗಿಸುವರಂತೆ ಅನಂತರ ಈ ಪಂಡಿತರು ಯಾರನ್ನು ಯಾರು ಮದುವೆಮಾಡಿಕೊಂಡರೆ ಆಜೀವವೂ ಸುಖಸಂತೋಷಗಳಿಂದ ಬಾಳಬಹುದು ಎನ್ನುವುದನ್ನು ನಿರ್ಧರಿಸುತ್ತಾರಂತೆ; ಆ ಪ್ರಕಾರ ಮದುವೆಯಾಗಬೇಕು

ಇದೇನು ಶಾಸನ ನಿಯಮವನ್ನಾಗಿ ಮಾಡುವುದಿಲ್ಲವಂತೆ, ಸಂತಾನವೃದ್ಧಿಗಾಗಿ ಯಾರು ಯಾರು ಇಷ್ಟಪಡುತ್ತಾರೋ, ಸಂಸಾರ ಸೌಖ್ಯವನ್ನು ಬಯಸುವವರು ಯಾರು ಅಪೇಕ್ಷಿಸುತ್ತಾರೆಯೋ ಅವರು ಹೀಗೆ ಮಾಡಬಹುದು

ಸ್ಪೈನಿನಲ್ಲಿ ಸ್ತ್ರೀ-ಪೋಲೀಸರು

ಸ್ಪೈನ್ ದೇಶದಲ್ಲಿಯೂ ಸ್ತ್ರೀಯರನ್ನು ಪೋಲೀಸು ಪಡೆಗಳಿಗೆ ಸೇರಿಸುತ್ತಿದ್ದಾರೆ. ಅದಕ್ಕೆ ಒಂದು ಕಾರಣವುಂಟು.

ಸ್ಪೈನ್ ದೇಶದಲ್ಲಿ ಬಹಳಷ್ಟು ಸ್ತ್ರೀಯರೇ ವ್ಯಾಪಾರ ಸಾಹಸಾದಿಗಳನ್ನು ನಡೆಸುತ್ತಿರುವರು. ಗಂಡಸರಾದ ಪೋಲೀಸರು ಹೆಚ್ಚಾದ ಆದರದಿಂದ ಅವರೊಡನೆ ನಡೆದುಕೊಳ್ಳುವಂತಿಲ್ಲ ಹೆಣ್ಣು ವ್ಯಾಪಾರಿಗಳಿಗೆ ಇದೊಂದು ಅನುಕೂಲವೇ ಆಯಿತು, ಕಳ್ಳತನ, ಕಳ್ಳಗೆ ಮುಚ್ಚಿರುವ ಪದಾರ್ಥಗಳನ್ನು ಮುಚ್ಚಿಟ್ಟುಕೊಳ್ಳುವುದು ಇತ್ಯಾದಿ ಅನ್ಯಾಯಗಳಿಗೆ ಪ್ರಾರಂಭಿಸಿದರು, ಅದಕ್ಕೋಸ್ಕರ ಈಗ ಸ್ತ್ರೀ ಪೋಲೀಸರನ್ನು ನೇಮಿಸಿದ್ದಾರೆ. ಇನ್ನು ಮೇಲೆ ಅವರ ಪುಂಡಾಟವು ಅಡಗಿಹೋಗುತ್ತದೆಂದು ಸರಕಾರದ ನಿರೀಕ್ಷೆ ಮತ್ತು ಅಡಗಿಹೋಗಬೇಕು ಎಂದು ಉದ್ದೇಶ

ಅಬಲೆಯರು ರಣಮಾರಿಗಳಾಗಿದ್ದಾರೆ!

ಮೆಕ್ಸಿಕೋ ದೇಶದ ಸ್ತ್ರೀಯರು ಸಟಕಿಯರಾಗಿದ್ದಾರೆ ಕಾರಣ, ರಾಜಕೀಯವು ಆ ದೇಶದ ಪ್ರತ್ಯೇಕ ವ್ಯವಸ್ಥೆಯಲ್ಲಿ ಸ್ತ್ರೀಯರು ರಾಜಕಾರಣದ ವ್ಯಕ್ತಿಗಳೆಂದು ಗಣಿಸಲ್ಪಟ್ಟಿಲ್ಲ ಅದುದರಿಂದ ಅವರಿಗೆ ವೋಟು ಕೊಡುವ ಹಕ್ಕಿಲ್ಲ ಇದು ಅವರ ಅಶಾಂತಿಗೆ ಮೂಲಾಂಕುರ

ತಮ್ಮ ಇಷ್ಟಾರ್ಥವು ಕೈಗೂಡಬೇಕಾದರೆ ಅಬಲೆಯರಾಗಿದ್ದರೆ ಅಸಾಧ್ಯವೆಂದು ಮನಗಂಡು ಮೆಕ್ಸಿಕೋ ದೇಶದ ಸ್ತ್ರೀಯರು ಪ್ರಚಂಡವಾದ ರಾಜಕೀಯ ಹಿಂಸಾಯುಕ್ತವಾದ ಚಳವಳಿಗಾರಂಭಿಸಿದ್ದಾರೆ ಕೆಲವು ದಿನಗಳ ಕೆಳಗೆ ಸುಮಾರು ೪೦೦ ಸ್ತ್ರೀಯರು ತಮ್ಮ ರಾಜ್ಯಾಧ್ಯಕ್ಷನ ಮನೆಯನ್ನು ಮುತ್ತಿದರು ತಮಗೆ ರಾಜಕೀಯ ಸ್ಥಾನಮಾನಗಳನ್ನು ಕಲ್ಪಿಸಿಕೊಡದಿದ್ದರೆ ಆತನ ಮನೆಯನ್ನು ಲೂಟಿಹೊಡೆಯುವೆವೆಂದು ಅರ್ಭಟಿಸಿದರು. ಅಷ್ಟರಲ್ಲಿ ಮುಕ್ತಾಯವಾಗಲಿಲ್ಲ, ಗುಂಡು ಹಾರಿಸಿದರು ಪೋಲೀಸರು ಸಿಗ್ಗಿ ಅಲ್ಲಿನ ಸದಸ್ಯರನ್ನೆಲ್ಲ ದಿಕ್ಕಾಪಾಲಿಗೆ ಚದರಿಸಿದರು. ಈ ಹೆಣ್ಣು ಹಾವಳಿಯನ್ನು ತಡೆಯಲು ಸೈನ್ಯ ಬಂತು ಸಾರ್ಥಕವಾಗಲಿಲ್ಲ ಎಲ್ಲರನ್ನೂ ಸೆರೆಹಿಡಿದ್ದಾರೆ

ಈಚೆಗೆ ರಾಜಾಧ್ಯಕ್ಷರಾದ ಲಜಾರೋ ಕಾರ್ಡಿನಾಸ್ ಎಂಬಾತನು ಸ್ತ್ರೀಯರನ್ನು ಸ್ಫೋರಕಂತೆ ಎಡಸಿ, ಅವರಿಗೂ ವೋಟಿನ ಹಕ್ಕನ್ನು ಪಾಲಿಸುವಂತೆ ರಾಷ್ಟ್ರಾಂಗ ರಚನೆಯನ್ನು ತಿದ್ದುವಂತೆ ಭರವಸೆಯನ್ನು ಕೊಟ್ಟಿದ್ದಾನೆ ಇದು ಕಣ್ಣೊರೆಸುವ ಮಾತಲ್ಲ, ನಿಜವಾದ ಹೃದಯ ಪ್ರವರ್ತನೆಯ ಸಂಕೇತ ವಿಕೆಂದರೆ ಸಿಯುದಾಡ್ ವಿಕ್ಟೋರಿಯಾ ಎಂಬ ಪ್ರಾಂತ್ಯದ ಮುಖ್ಯ ಪಟ್ಟಣದಲ್ಲಿ ಅರೋರಮೆಸ ಅಂಡ್ರಸ್ ಎಂಬಾಕೆಯನ್ನು ಪೌರ ಸಭಾಧ್ಯಕ್ಷಸ್ಥಾನಕ್ಕೆ ಆರಿಸಿದ್ದಾರೆ ಆಕೆಯನ್ನು ಪೂರ್ವ ವಯಸ್ಕಳು, ಶಾಂತಿಕಾರರಲ್ಲೊಬ್ಬಳು. ಇದರಿಂದ ಎದ್ದಿದ್ದ ಅಶಾಂತತೆಯ ಕಾರ್ಯವು ಕಡಿಮೆಯಾಗಿದೆ ಇನ್ನು ಕೆಲವು ಕಾಲದೊಳಗೆ ತಮ್ಮ ಇಷ್ಟಾರ್ಥವು ಕೂಡೀತೆಂದು ಬಂಬ ಆಸೆಯು, ಶಾಂತಿಯು ಸಂತೃಪ್ತ ಸ್ತ್ರೀಸಮೂಹದಲ್ಲಿ ಮೂಡಿದೆ

ಶೀಲವಂತರಾಗಬೇಕೆನ್ನುವುದು ಇದಕ್ಕೆ!

ಇಷ್ಟುಕಾಲ ಸ್ವತಂತ್ರ್ಯ ಸಮುದಾಯ ಮತ್ತರಾಗಿದ್ದ ಪಾಶ್ಚಿಮಾತ್ಯರಿಗೆ ಹೆಣ್ಣು ತಂದುಕೊಡಬೇಕಾದರೆ ಮನೆತನದ ಶೀಲ ಸಂಪ್ರದಾಯಗಳನ್ನೇ ನೋಡಬೇಕು, ಅವಳ್ಳೆ ಆತ್ಮಂತ ಪ್ರಾಮುಖ್ಯತೆಯನ್ನು ಕೊಡಬೇಕು ಎನ್ನುವುದು ಈಗೀಗ ಅರ್ಥವಾಗುತ್ತಿರುವಂತೆ ಕಾಣುತ್ತದೆ ಇದನ್ನು ಕಂಡುಹಿಡಿಯಲು ಕೆಲವು ಪಂಡಿತರು ಸಮಾಜ ಪರೀಕ್ಷೆಯನ್ನು ನಡೆಸಬೇಕಾಯಿತು

ಹಾಗೆ ನಡೆಸಿದ ಪರೀಕ್ಷೆಯಲ್ಲಿ ಕಂಡುಬಂದ ಸ್ವಾರಸ್ಯವೇನೆಂದರೆ—ಸಂಸಾರ ಸುಖವನ್ನನ ಭವಿಸುತ್ತಿರುವಲ್ಲಿ ಸೇಕಡಾ ೯೯ ಮಂದಿ ಹೇಳಿದಂತೆ, ತಮ್ಮ ದಾಂಪತ್ಯ ಸೌಖ್ಯಕ್ಕೆ ತಮ್ಮ ಆತ್ತೆಯ ಮನೆಯವರು ಶೀಲವಂತರಾಗಿಯೂ ಸಂಪ್ರದಾಯಸ್ಥರಾಗಿಯೂ ಇದ್ದುದೇ ಕಾರಣವೆಂದು, ಸತ್ಕುಲಪ್ರಸೂತರ ಮನೆಯ ಹೆಣ್ಣನ್ನು ಮದುವೆಯಾದವರೆಲ್ಲರೂ ದಾಂಪತ್ಯ ಸೌಖ್ಯವನ್ನು ಅನುಭವಿಸುತ್ತಿದ್ದಾರೆ. ಈ ಸೌಖ್ಯಕ್ಕೆ ಗಂಡಹೆಂಡಿರ ಪರಿಯೋ ಪ್ರತ್ಯಾಪತಗಳೇ ವಿದ್ಯಾಬುದ್ಧಿಗಳಾಗಲೇ ಕಾರಣವಲ್ಲವೆಂದು ಸ್ಪಷ್ಟವಾಗುತ್ತದೆ. ಶೀಲ ಸಂಪ್ರ

ಉಚ್ಚ ಕುಲದವರ ಆಗಲೂ ಮದುವೆಗಳಲ್ಲಿ ಅನೇಕವು ಹಾಳಾಗಿ ಹೋಗಿವೆ.

ಪಾಶ್ಚಾತ್ಯರ ವಿಷಯವನ್ನು ಕಣ್ಣುಬಿಟ್ಟು ನೋಡಲು ಪಾಶ್ಚಿಮಾತ್ಯರಿಗೆ ಇಷ್ಟುಕಾಲ ಬೇಕಾಯಿತು. ಆದರೂ ಸತ್ಯಾಂಶವನ್ನು ಕಂಡರು ಭಾರತೀಯರು ತಮ್ಮ ದಾರಿಯ ಸರಿಯಾಗಿರಲಾರದೆಂದು ಭ್ರಾಂತರಾಗಿ ಈಗೀಗ ತಪ್ಪುದಾರಿ ಹಿಡಿಯುತ್ತಿದ್ದಾರೆ.

ಈ ಗೋಳು ಎಲ್ಲಾದರೂ ಉಂಟೆ?

ವಿಲಾಯತಿಯಲ್ಲಿ ಸ್ತ್ರೀಯರಿಗೆ ಸರ್ವ ಸೌಕರ್ಯಗಳೂ ಉಂಟು ಅವರು ಸ್ವತಂತ್ರವಾಗಿ ಯಾರ ಕೈಕೆಳಗೂ ಬೀಳದೆ ಜೀವನವನ್ನು ನಡೆಸುತ್ತಿದ್ದಾರೆ ಗಂಡಸಿಗಿಂತ ಒಂದು ಕೈ ಮುಂದಾಗಿರುತ್ತಾರೆ

ಬರಬರುತ್ತ ಅನಿಷ್ಟ ಪದ್ಧತಿಯೊಂದು ಹಬ್ಬಿಕೊಂಡಂತೆ ಕಾಣುತ್ತದೆ ಅದೇನೆಂದರೆ—ಹೆಚ್ಚು ಕಡಿಮೆ ದೊಡ್ಡ ಮಾಲೀಕರು ಬಾಲು ಸಂದರ್ಭಗಳಲ್ಲಿ ೩೦ ವರ್ಷ ವಯಸ್ಸು ಮೀರಿದ ಎಲ್ಲ ಸ್ತ್ರೀಯರನ್ನೂ ಕೆಲಸದಿಂದ ತೆಗೆಯುತ್ತಿದ್ದಾರೆ. ಅದಕ್ಕೆ ಕೊಡುವ ಕಾರಣ—'ಹೆಂಗಸು ೩೦ ವರ್ಷ ವಯಸ್ಸಾದ ಮೇಲೆ ಮುದುಕಿಯಾಗಿ ಹೋಗುತ್ತಾಳೆ ಕೆಲಸಕ್ಕೆ ಬಾರದವಳಾಗುತ್ತಾಳೆ' ಎಂದು ಹೀಗಾಗಿ ಸಾವಿರಾರು ಮಂದಿ ಮಧ್ಯವಯಸ್ಕರಾದ ಸ್ತ್ರೀಯರು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ

ಇವರ ಉದ್ಧಾರಕ್ಕಾಗಿ ಒಂದು ಸಂಘವು ಹುಟ್ಟಿಕೊಂಡಿದೆ ೩೦ ವಯಸ್ಸಾದ ಹೆಂಗಸರನ್ನು ಕೆಲಸದಿಂದ ಕಿತ್ತುಸುವುದು ಅಮಾನುಷಿಕವೆಂದು ಪ್ರತಿಭಟಿಸುತ್ತಾ, ಅವರಿಗೆ ಕೆಲವು ಖಾಸಗೀ ಧರ್ಮಾರ್ಥ ಸೌಕರ್ಯಗಳನ್ನು ಕಲ್ಪಿಸುವುದೇ ಈ ಸಂಘದವರು ಮಾಡುತ್ತಿರುವ ಕೆಲಸ ಧರ್ಮನಿಧಿಯನ್ನು ಸೇರಿಸಿ ಈ ದುರದೃಷ್ಟ ಸ್ತ್ರೀಯರ ಕಷ್ಟಬಟ್ಟಗಳನ್ನು ನೋಡಿಕೊಳ್ಳುವುದಲ್ಲದೆ ಅಂತಹರೆಲ್ಲರೂ ಒಂದು ಕಡೆ ಸೇರಿ ತಮ್ಮ ಕಾಲವನ್ನು ಸಂತೋಷದಿಂದ ಕಳೆಯಲು ಸಮಾಜಗಳನ್ನು ಸ್ಥಾಪಿಸಿದ್ದಾರೆ

೫ ಸಹಸ್ರ ಹುಡುಗಿಯರು.

ವಿಲಾಯತಿಯಲ್ಲಿ ವರ್ಷಂಪ್ರತಿ ಸುಮಾರು ೫ ಸಹಸ್ರ ಮಂದಿಯಂತೆ ವಿದೇಶದ ಹುಡುಗೀಯರು ಬಂದು ತುಂಬಿಕೊಳ್ಳುತ್ತಿದ್ದಾರಂತೆ ಉದ್ಯೋಗ ಹುಡುಕುವುದೇ ಅವರ ಉದ್ದೇಶ ಹೀಗಾಗಿ ಅವರ ಕಾಟವು ಉತ್ಕಟವಕ್ಕೆಗೆ ಬಂದಿದೆ ಹುಟ್ಟು ಆಂಗ್ಲರಿಗೆ ಕೆಲಸಗಳಿಲ್ಲದೆ ಅತಂತ್ರರಾಗಿ ಹೋಗಿದೆ

ಈ ಕಷ್ಟವು ಕಾಟವನ್ನು ತಪ್ಪಿಸಲು ಪಾರ್ಲಿಮೆಂಟಿನಲ್ಲಿ ಚರ್ಚೆ ಪರದೇಶೀಯ ಹುಡುಗಿಯರನ್ನು ಓಡಿಸಿ, ಆ ಸ್ಥಾನಗಳನ್ನು ಆಂಗ್ಲ ಹುಡುಗಿಯರಿಗೇ ಕೊಡಬೇಕೆಂದು ಪಂಥಗಳು ಪ್ರಾರಂಭವಾಗಿವೆ (ವಿ ಕ)

120 ವರ್ಷಗಳ ತನಕ ಬದುಕಿದಳು!

ಟ್ರಾವಂಕೋರ್ ಚಾರ್‌ನಲ್ಲಿಯ ಅವಿನಾಶಿಬೀಬಿ ಎಂಬ ಓರ್ವ ಮುದುಕಿಯು ೧೨೦ ವರ್ಷವಾಗುವ ವರೆಗೆ ವಿನೊಂದೂ ಅಲಸ್ಯ, ಅನಾರೋಗ್ಯವಾಗದೆ ಜೀವಿಸಿದ್ದು ಕಡೆಗೆ ಮಾರ್ಚ ೩೧ ೧೯ರಲ್ಲಿ ಸ್ವರ್ಗಸ್ಥಳಾದಳು ಇವಳಿಗೆ ೫ ಮಂದಿ ಗಂಡು ಮಕ್ಕಳು ಅವರಲ್ಲಿ ಹಿರಿಯವನಿಗೆ ೭೦ ವರ್ಷ ಪ್ರಾಯ ಅವಳ ಸಮಾಧಿಯ ಕಾಲದಲ್ಲಿ ತುಂಬಾ ಜನರು ನೆರೆದಿದ್ದರು

ಹೆಂಗಳ್ಕಸಿಗಾಗಿ ಜಪಾನಿ ಕಸರತ್ತುಗಳು ಉಚ್ಚವಾದುವು—

ಎಂಬುದೇ ಆಂಗ್ಲ ರಮಣಿಯೋರ್ವಳ ಅಭಿಪ್ರಾಯ ಇದಕ್ಕೆ ಪ್ರಾರಂಭದಿಂದಲೂ ಜೂಡೋ ಎಂಬ ಕಸರತ್ತು ಅಭ್ಯಾಸಮಾಡಿದ್ದಾಳೆ ಈ ಕಸರತ್ತಿನ ಅಭ್ಯಾಸದಿಂದ ಅವಳಿಗೀಗ "ಬ್ಲ್ಯಾಕ್ ಬೆಲ್ಟ್" ಎಂಬ ಬಿರುದನ್ನು ಕೊಟ್ಟಿರುವರು ನೋಡುವಾಗ ಹೆಂಗಸರಂತೆ ಕಂಡುಬಂದರೂ ಮನುಷ್ಯರೊಡನೆ ಪಂದ್ಯಾಟಕ್ಕೆ ನಿಂತು ಅವರನ್ನು ಹುಲ್ಲು ಕಡ್ಡಿಗಳಂತೆ ತಿರುಗಿಸಬಲ್ಲಳು ಅವಳೇ ಮಿಸೆಸ್ ಹರಸ್ ಮೆಯುರಳಾಗಿರುವಳು

ಈ ಅಂಗಸಾಧನೆಯಲ್ಲಿ ತರಗತಿಗಳಿದ್ದು ಪ್ರಥಮ ತರಗತಿಯಲ್ಲಿ ಪಾಸಾದವರಿಗೆ ಬಿಳಿ ಬೆಲ್ಟು, ದ್ವಿತೀಯ ತರಗತಿಯಲ್ಲಿ ಪಾಸಾದವರಿಗೆ ನೀಲ ಬೆಲ್ಟು, ತೃತೀಯ ತರಗತಿಯಲ್ಲಿ ಪಾಸಾದವರಿಗೆ ಕೆಂಪು ಬೆಲ್ಟು, ಚತುರ್ಥ ಪಂಚಮ ತರಗತಿಯಲ್ಲಿ ಉತ್ತೀರ್ಣರಾದವರಿಗೆ ಕಪ್ಪು ಬೆಲ್ಟು ಕೊಡಲ್ಪಡುವುದು ಇದು ಕಡೆದಾಗಿ ಕೊಡಲ್ಪಡುವಂತಹದು ಆದ್ದರಿಂದ ಇದಕ್ಕೆ ಕಪ್ಪು ಅಥವಾ ಹುರಟು ಬೆಲ್ಟು ಎಂದು ಹೆಸರು.

ಅವಳ ವ್ಯಾಯಾಮದ ವಿಷಯ ಕೇಳಿದಾಗ, ಅವಳು ಇಂತೆಂದಳು—"ನಾನು ಚಿಕ್ಕಂದಿನಿಂದಲೂ ಈ ವ್ಯಾಯಾಮವನ್ನು ಅಭ್ಯಾಸ ಮಾಡುತ್ತಾ ಬಂದೆ ಇದಕ್ಕೇನೇ ಜೂಡೋ ಅಂಗಸಾಧನ ಎನ್ನುತ್ತಾರೆ. ನನಗೆ ಚಿಕ್ಕಂದಿನಿಂದಲೂ ಜಪಾನಿಯರ ಕಲೆಗಳ ಮೇಲೂ ಆಟಪಾಟಗಳ ಮೇಲೂ ತುಂಬಾ ಶ್ರದ್ಧೆಯಿತ್ತು ಹೀಗೆ ಕಾಲ ಕ್ರಮೇಣ ಆ ಜನಾಂಗದ ಚರಿತ್ರೆಯನ್ನೋದಲು ಬಹಳ ಉತ್ಸುಕಳಾಗಿ ಅದನ್ನೆಲ್ಲವನ್ನೂ ವಿಮರ್ಶಾರ್ಹವಾಗಿ ಕಲಿಯಲು ಪ್ರಾರಂಭಿಸಿದನು ಇದರ ಸಂಗಡಲೇ ನಾನು ಈ ಜೂಡೋ ಅಂಗಸಾಧನೆಯನ್ನು ಕಲಿಯಲು ಪ್ರಾರಂಭಿಸಿದೆನು, ಇದನ್ನು ಹತ್ತು ವರ್ಷ ಲಂಡನಿನಲ್ಲಿಯೇ ಕಲಿತು ಅನಂತರ ಒಂದು ವರ್ಷ ನನ್ನ ಅಧ್ಯಾಪಕರಾದ ಮಿಃ ಜುಡೋಕ್ ವಾಯ್ ಎಂಬವರೊಡನೆ ಜಪಾನಿಗೆ ತೆರಳಿ, ಅಲ್ಲಿ ಅದನ್ನು ಸಂಪೂರ್ಣವಾಗಿ ಅಭ್ಯಾಸಿಸಿಯಾನಂಗೂ ಇಷ್ಟರ ವರೆಗೆ ಸಿಗದ ಈ ಉಚ್ಚ ಬಿರುದನ್ನು ನಾನು ಪಡೆದಿರುವೆನು ಅಲ್ಲಿನ ಗಂಡಸರೊಡನೆ ವಿವಿಧ ಪಂದ್ಯಾಟಗಳಲ್ಲಿ ಭಾಗವಹಿಸಿ ಅವರನ್ನು ಸೋಲಿಸಿದ್ದರಿಂದ ನನಗೀ ಬಿರುದು ಸಿಕ್ಕಲು ಕಾರಣ ಜಪಾನಿನ ನಂತರ ಇಂಗ್ಲೆಂಡ್ ದೇಶದಲ್ಲಿ ಈ ಆಟವು ಪ್ರಚಲಿತವಾಗಿದೆ

(೧ನೇ ಪುಟದಿಂದ ಮುಂದುವರಿದುದು.)

ಸಹಿಸುವವರಲ್ಲ ಕೈಸರ ಕಾಲದಲ್ಲಿ ಜರ್ಮನಿಯ ಸಂಪತ್ತಿಕಸ್ಥಿತಿಯು ಬಹಳ ಉತ್ತಮವಾಗಿತ್ತು ಅಲ್ಲಿ ರೈತರ ಸಂಖ್ಯೆಯು ಹೆಚ್ಚು ಈ ರೈತರು ಕೈಸರನ ಕಾಲದಲ್ಲಿ ಬಹಳ ಸಂತುಷ್ಟರಾಗಿದ್ದರು ಕೈಸರನು ಇನ್ನೊಮ್ಮೆ ಜರ್ಮನಿಗೆ ಹಿಂತಿರುಗ ಬೇಕೆಂದು ಅನೇಕ ರೈತರ ಆಶೆ ಆದರೆ ಇದನ್ನು ವಿರೋಧಿಸ ವವರು ಅಲ್ಲಿ ಅನೇಕರಿದ್ದಾರೆ ಆದರೆ ಇವರ ಈ ಉದ್ದೇಶವು ನಡೆಯುವುದೆ?

ಜರ್ಮನಿಯಲ್ಲಿ ಸಂಗ್ರಾಮಿಕರು ಸರಕಾರದ ಘೋರ ಹೆಸರನ್ನು ನಡೆಯುತ್ತಿದ್ದಾರೆ ಈ ಸಂಗ್ರಾಮಿಕರು ಸಾರ್ವಭೌಮತೆಯ ಮೇಲೆ ಆಧರಿಸಿದವರು ಕೈಸರನ ಆಳ್ವಿಕೆಯಲ್ಲಿ—೧೯೧೪ ವರೆಗೆ ಅಂದರೆ ಆತನ ೨೬ ವರ್ಷಗಳ ಆಳ್ವಿಕೆಯಲ್ಲಿ—ಜರ್ಮನಿಯು ದೊಡ್ಡ ಸಾಮ್ರಾಜ್ಯವಾಗಿ ಜಗತ್ತಿನ ವ್ಯಾಪಾರದ ಕೇಂದ್ರಸ್ಥಾನವನ್ನು ಪಡೆದು ನೌಕಾ ಯೋಜನೆಗಳಲ್ಲಿ ಬಹಳ ಕೀರ್ತಿವಂತರಾಗಿ ಬಹಳ ಶ್ರೇಯಸ್ಸನ್ನು ಪಡೆದಿತ್ತು ಸಮಾಜಾವಾದವನ್ನು ಇವನು ಸಹಿಸುತ್ತಿದ್ದನು ಈಗ ಹಿಟ್ಲರನ ಅಧಿಕಾರದಲ್ಲಿ ಸಮಾಜವಾದವು ಮೃತ್ಯುಶಯ್ಯೆಯಲ್ಲಿದೆ ಕಳೆದ ಮಹಾಯುದ್ಧದ ನಂತರ ಜರ್ಮನಿಯು ಯೂರೋಪಿನ ಇತರ ಜನಾಂಗಗಳ ಕರುಣೆಗೆ ಒಳಗಾಗಬೇಕಾಯಿತು ಆದರೂ ಕೈಸರನ ಕೀರ್ತಿಯು ಎಳ್ಳಷ್ಟಾದರೂ ಕಡಿಮೆಯಾಗಲಿಲ್ಲ ಕೈಸರನು ಯುದ್ಧವೊಡ್ಡಿದುದಕ್ಕಾಗಿ ಜರ್ಮನಿಯಲ್ಲಿ ಅಸಮಾಧಾನಪಡುವವರು ಇರಲಿಲ್ಲ ಆದರೆ, ಈಗ ಅವರಿಗೆ ಇತರ ಸಮಸ್ಯೆಗಳ ಸಂಪಾದಿಸುವ ಕಾರ್ಯವಿದ್ದುದರಿಂದ ಕೈಸರನನ್ನು ಹಿಂದೆ ಕರೆಯುವ ಕಾರ್ಯವನ್ನು ಮರೆತುಬಿಟ್ಟಿದ್ದರು ಜರ್ಮನಿಯಲ್ಲಿ ಈಗಲೂ ಕೈಸರನ ಮೇಲೆ ಪ್ರೇಮ ಬಹಳ ಸಂಗ್ರಾಮಿಕರ ಅಧಿಕಾರವು ಈಗಿನ ರಾಜಧೋರಣೆಯಲ್ಲಿ ಬಹಳ ನಾಗರಿಕರುವುದರಿಂದ ಹಿಟ್ಲರನು ತನ್ನ ಭಾಷಣಗಳಲ್ಲಿ ಕೈಸರನನ್ನು ಹಿಂದೆ ಕರೆಯುವರಾಗಿ ಭರವಸೆಕೊಡಬೇಕಾಯಿತು ಕೈಸರನ ಪತ್ನಿಯು ಈಗಲೂ ಜರ್ಮನಿಯಲ್ಲಿ ಸಂಚರಿಸುತ್ತಿದ್ದಾರೆ ಕೈಸರನು ಜರ್ಮನಿಯ ಮುಖ್ಯ ಪಟ್ಟಣವಾದ ಬರ್ಲಿನ್‌ನೊಡನೆ ಈಗಲೂ ಪತ್ರವ್ಯವಹಾರ ನಡೆಸುತ್ತಿದ್ದಾನೆ ಜನರು ತನ್ನನ್ನು ಮರೆಯದೆ ಮಿನಹ ತಾನು ಜರ್ಮನಿಗೆ ಹಿಂತಿರುಗಲಿಕ್ಕಿಲ್ಲವೆಂದು ಕೈಸರನ ಮಾತು ಈಗ ಜರ್ಮನಿಯ ನಾಜಿಪಕ್ಷದ ಗತಿಯು ಏನಾಗಿದೆ? ನ ಜಗತ್ ಸ್ವಸ್ತಿಕಾ ಧ್ವಜದ ಅಡಿಯಲ್ಲಿ ನಡೆಯಲು ಸಂಗ್ರಾಮಿಕರು ಸಮ್ಮತಿಸುವುದಿಲ್ಲ ಇವರ ಬೇರೊಂದು ಧ್ವಜವು ನಿರ್ಮಾಣವಾಗಬಹುದು ಕೈಗಾರವಂತರು ಹಿಟ್ಲರನ ಮೇಲೆ ರೇಗಿರುವರು ಮಜೂರರು ಉದ್ರೇಕಗೊಂಡಿರುವರು ನಾಜೀಸಂಗಡವರ ಪ್ರತಿಯೊಂದು ಕೃತ್ಯಕ್ಕೆ ಸಂಗ್ರಾಮಿಕರ ಬೆಂಬಲವಿದೆ ಆದರೆ, ಇದರಿಂದ ನಾಜಿಗಳಿಗೆ ಪ್ರಾಣಾಪಾಯಗ ಮಾಡಿಕೊಳ್ಳಲು ಉದ್ದವಾದ ಹಗ್ಗಕೊಟ್ಟಂತಾಗಿದೆ ಸದ್ಯದಲ್ಲೇ ನಾಜಿ ಪಾರ್ಟಿಯ ಕಣ್ಮರೆಯಾಗಿ ಮತ್ತೊಮ್ಮೆ ಕೈಸರನು ಜರ್ಮನಿಯನ್ನು ಸೇರುವ ಸಂಭವಗಳಿವೆ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು!   ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ - (ನಿಶ್ಶಕ್ತಿಗೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.



Distributors for South Kanara:—

Raghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಕಾಫಿ ಎಸ್ಟೇಟುಗಳಿಗೆ

ಬೇಕಾಗಿರುವ

ಚಕ್‌ರೋಲು,

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆಗೆ

ಬರೆಯಿರಿ,

ಅಥವಾ

ಬನ್ನಿರಿ.

ತಯಾರಾಗಿದೆ!

ಗೌ. ಹಾ. ಎ. ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೋಸಿಯೊಲೊಜಿ.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ ರೂ. 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ. ಇದನ್ನು ಗವರ್ನಮೆಂಟ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ.

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗಲಿದೆ.

ಇಲ್ಲಿಗೆ ಕೂಡಲೇ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ರೈಲ್ವೆ ಬಂಡಿಗಳ ಸಮಯ

ಗಾಡಿಗಳು.	ಹೊರಡುವ ಘಂಟೆ	ತಲುಪುವ ಘಂಟೆ
ಮೈಲು	ಬೆಳಗ್ಗೆ 9-50	ಸಂಜೆ 4-2
ಮಿಕ್ಸೆಡ್	,, 5-55	ರಾತ್ರಿ 8-5
ಫಾಸ್ಟ್ ಪೆಸೆಂಜರ್	ಮ. 12-45	ಮ. 2-4
ಶಟಲ್	ಸಂಜೆ 5-25	ಬೆಳಗ್ಗೆ 9-2
ಕಾಂಞಂಗಾಡ್ ಪೆಸೆಂಜರು	ಬೆ. 8-25	ಮ. 1 [illegible]
ನಾಸರಗೋಡು ಪೆಸೆಂಜರು	ಸಂಜೆ 8.20	ಸಂಜೆ 6-1

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.   ಅಜ್ಜಿ ಕಥೆಗಳು (ಸಚಿತ್ರ.)

ಚರಿತ್ರೆ ಮತ್ತು ಕಥೆಗಳು.	ರೂ. ಅ. ಪೈ.	ಸಾಮಾನ್ಯ ವಿಜ್ಞಾನ.		ಅಜ್ಜಿ ಕಥೆಗಳು
		ಎರಡನೇ ದರ್ಜೆ	0 3 0	ಮೂರು ಕರಡಿಗಳು
ನಾಲ್ಕನೇ ದರ್ಜೆ	0 6 0	ಮೂರನೇ ,,	0 3 0	ಹೇನು ಸತ್ತು ಕಾಗೆ ಬಡವಾಯಿತು.
ಮೂರನೇ ,,	0 4 6	ನಾಲ್ಕನೇ ,,	0 6 0	ಮೆಣಸಿನ ಕಾಳಪ್ಪ.
ಎರಡನೇ ,,	0 4 0	ಐದನೇ ,,	0 5 0	ಅರ್ಗಣೆ ಮುದ್ದೆ.
ಸಮಾಜಶಾಸ್ತ್ರ.				ಇಲಿಗಳ ಥಕ್ಕ ಥೈ.
ಐದನೇ ದರ್ಜೆ	0 3 0			ಅಂಗಳ ಮಗ್ಗು.
ನಾಲ್ಕನೇ ,,	0 3 0	ಆರನೇ ದರ್ಜೆ	0 4 0	ಗುಡುಗುಡು ಗುಮ್ಮಟ ದೇವರು.
ಮೂರನೇ ,,	0 2 6	ಏಳನೇ ,,	0 5 0	ಹಕ್ಕಿನ ಓಟ.
		ಎಂಟನೇ ,,	0 6 0	(ಇವುಗಳ ಕ್ರಯ: 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಸಿಯೋಲೊಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ. ಮಂಗಳೂರು.

! ನಿಮಗೆ ತಿಳಿದಿರುವುದೆ? ?

ಉಲ್ಕೆಗಳೆಂದರೇನು

ಅಂತರಿಕ್ಷದಲ್ಲಿ ಭಯಂಕರ ವೇಗದಿಂದ ಚಲಿಸುವ ಒಂದು ಸಣ್ಣ ವಸ್ತು. ಇವುಗಳು ನಮ್ಮ ವಾಯುಮಂಡಳವನ್ನು ಸೇರಿದೊಡನೆ, ಕಾಂತಿಮಾನವಾಗಿ ಶೋಭಿಸುತ್ತವೆ. ಇವು ಗಳು ಬೀಳುವ ನಕ್ಷತ್ರಗಳೆಂದು ನಮ್ಮಲ್ಲಿ ಅತಿ ಪ್ರಾಚೀನದಿಂದ ಭಾವನೆ ಈ ಭಾವನೆಗೆ ಅರ್ಥವಿಲ್ಲ. ನಕ್ಷತ್ರಗಳ ಪ್ರಮಾಣ ಇವುಗಳಿಗಿಂತ ಅಧಿಕವಾಗಿರುತ್ತದೆ. ಇವುಗಳು, ಕೆಲವು ಗ್ರಹಗಳಿಂದ ಅಥವಾ ನಕ್ಷತ್ರಗಳಿಂದ, ಹಾರಿದ ಸಣ್ಣ ಸಣ್ಣ ತುಂಡುಗಳಾಗಿರುತ್ತವೆ. ಈ ತರದ ತುಂಡುಗಳು ಅಂತರಿಕ್ಷದಲ್ಲಿ ತುಂಬಾ ಇವೆ, ಆದರೆ, ಇವುಗಳು ನಮ್ಮ ಭೂಮಿಯನ್ನು ಸೇರುವಷ್ಟರಲ್ಲಿ, ಚಲಿಸುವ ರಭಸದಿಂದ ಉಂಟಾದ ಗಾಳಿ ತಿಕ್ಕಾಟದಿಂದ ಸುಟ್ಟು ಬೂದಿಯಾಗುವುವೆ, ಆದರೆ ಕೆಲವು ತಾರೆಗಳು ಭೂಮಿಯ ಮೇಲೆ ಬಿದ್ದುದುಂಟು ಇವುಗಳಿಂದ ಭೂಮಿಯ ಮೇಲೆ ಹಾನಿ ಉಂಟಾಗುವುದು ಕಡಿಮೆ ಆದರೆ ೧೯೦೮ರಲ್ಲಿ ಜೂನ್ ತಿಂಗಳ ತಾ. ೩೦ನೇ ದಿನ ಮಧ್ಯದ ಸೈಬೇರಿಯಾದಲ್ಲಿ, ೧೩೦ ಟನ್ ಭಾರದ ಒಂದು ತಾರಕೆಯು ಬಿದ್ದಿರುವಾಗ ಅದರ ಬೀಳುವಿಕೆಯಿಂದ ಭೂಮಿಯು ಕಂಪಿಸಿತ್ತು. ಈ ಕಂಪನಗಳು ೩೦೦೦ ಮೈಲು ದೂರಕ್ಕೆ ತಿಳಿದು ಬಂದಿವೆ ಅಲ್ಲಿನ ಸಾಧಾರಣ ೩೫ ಮೈಲು ಸುತ್ತಮುತ್ತಲಿನ ಅರಣ್ಯಪ್ರದೇಶವು ಸಂಪೂರ್ಣ ನಾಶವಾಗಿರುತ್ತದೆ ಈ ತಾರಕೆಯು ಬಿದ್ದ ರಭಸದಿಂದ ಉಂಟಾದ ಗಾಳಿಯು ದೊಡ್ಡ ದೊಡ್ಡ ಮೋಡಗಳು ಉಂಟಾಗಿದ್ದುವು ಇದು ಲಂಡನ್ ನಗರದಲ್ಲಿ ಬೀಳುತ್ತಿದ್ದರೆ, ಸಂಪೂರ್ಣ ನಗರವು ನಾಶವಾಗುತ್ತಿತ್ತು ಹೀಗೆ ಇನ್ನೊಂದು ತಾರಕೆಯು ಸಂಯುಕ್ತ ಅಮೇರಿಕದ ಅರಿಜೋನಾ ಮರುಭೂಮಿಯಲ್ಲಿ ಬಿದ್ದಿತ್ತು ಇದು ಬಿದ್ದಲ್ಲಿ ೪೦೦೦ ಅಡಿ ಅಗಲದ ಮತ್ತು ೫೭೦ ಅಡಿ ತಗ್ಗಿರುವ ಒಂದು ಹೊಂಡವು ಉಂಟಾಗಿರುತ್ತದೆ

ಪ್ರಕೃತಿಗೆ, ಕ್ರಮದ ಮೇಲೆ ತುಂಬಾ ಪ್ರೇಮವಿದೆ!

ನಮ್ಮ ಸುತ್ತಮುತ್ತಲಿನ ಪ್ರಕೃತಿಯನ್ನು ಸರಿಯಾಗಿ ಪರಿಶೀಲಿಸಿದರೆ, ಇದರಷ್ಟು ಕ್ರಮಬದ್ಧವಾಗಿ ನಡೆಯುವಂತಾದ್ದು ಬೇರೊಂದಿಲ್ಲವೆಂಬ ಅಭಿಪ್ರಾಯ ವಾಗುವುದು ಇದನ್ನು ದೃಢೀಕರಿಸಲು ಇಲ್ಲೊಂದು ದೃಷ್ಟಾಂತವಿದೆ ಕೆಲವು ಪದಾರ್ಥಗಳು, ದ್ರಾವಕ ರೂಪದಿಂದ, ನೀಸುರೂಪಕ್ಕೂ, ಘನರೂಪಕ್ಕೂ ಬದಲಾವಣೆ ಹೊಂದುತ್ತಿರುವಾಗ ಅವುಗಳಲ್ಲಿ ಅನೇಕವುಗಳು, ಸ್ಫಟಿಕ ರೂಪವನ್ನು ಹೊಂದುತ್ತವೆ ಅವುಗಳ ಅಣುಗಳು ಒಂದು ನಿಯಮಿತ ಆಕಾರವನ್ನು ಹೊಂದುತ್ತವೆ ಕ್ಷೇತ್ರಗಣಿತದಲ್ಲಿರುವ ಹಲವು ಆಕಾರಗಳನ್ನು ಹೊಂದುತ್ತವೆ ಉಪ್ಪಿನ ಒಂದು ಸೆಚ್ಯುರೇಟೆಡ್ (ನೀರಿಗೆ ಹೀರಿಕೊಳ್ಳಲು ಸಾಧ್ಯವಿದ್ದಕ್ಕಿಂತ ಹೆಚ್ಚಾದ ಉಪ್ಪನ್ನು ನೀರಿಗೆ ಸೇರಿಸುವುದು) ತಯಾರಿಸಿ, ಅದನ್ನು ಬಿಸಿ ಮಾಡಿ, ಕಣ್ಣಿಗಾಗಲು ಬಿಟ್ಟರೆ, ಉಪ್ಪಿನ ಸ್ಫಟಿಕಗಳು ಉಂಟಾಗುತ್ತವೆ ಹೀಗೆ ಅನೇಕ ಪದಾರ್ಥಗಳ ಸ್ಫಟಿಕಗಳನ್ನು ತಯಾರಿಸಬಹುದು ಇವುಗಳಿಗೆ ಕ್ಷೇತ್ರಗಣಿತದ ಆಕಾರಗಳಿವೆ ಅಂದರೆ, ಈ ರಚನೆಯು ಒಂದು ಕ್ರಮವನ್ನನುಸರಿಸಿ, ನಡೆಯುತ್ತದೆ ಈ ಸ್ಫಟಿಕಗಳ ಅನೇಕ ತರದ ಸುಂದರ ರೂಪವನ್ನು ಧರಿಸುತ್ತವೆ ಹೀಗೆ ಪ್ರಕೃತಿಯು, ಕ್ರಮಬದ್ಧವಾಗಿ ವರ್ತಿಸುವ ಸಾವಿರಾರು ದೃಷ್ಟಾಂತಗಳಿವೆ

ಅಂತರಿಕ್ಷದ ಪ್ರಯಾಣದಲ್ಲಿ, ಅಪಾಯದಿಂದ ರಕ್ಷಿಸಿಕೊಳ್ಳುವ ಬಗೆ

ಕೆಲವೆ ವರ್ಷಗಳ ಹಿಂದೆ ಕಂಡುಹಿಡಿಯಲ್ಪಟ್ಟ, ವಾಯುವಿಮಾನಗಳು ದಿನೆ ದಿನೆ, ಬಹಳ ಪ್ರಗತಿ ಹೊಂದುತ್ತಿವೆ ಇವುಗಳನ್ನು ಈಗ ಅನೇಕ ತರದಲ್ಲಿ ಉಪಯೋಗಿಸುತ್ತಿದ್ದಾರೆ ಆದರೆ, ಗಗನದಲ್ಲಿ ಅಷ್ಟು ಎತ್ತರದಲ್ಲಿ ಚಲಿಸುತ್ತಿರುವಾಗ, ಅಪಾಯ ಒದಗಿದಲ್ಲಿ ಆಗ್ಯೆ, ರಕ್ಷಣೆಯ ಬಗ್ಗೆಯಾವುದು ? ಪ್ರತಿಯೊಬ್ಬ ವೈಮಾನಿಕನು ಅಂತರಿಕ್ಷದಲ್ಲಿ ಚಲಿಸುತ್ತಿರುವಾಗ, ಪೆರೆಚ್ಯೂಟನ್ನು (ಕೊಡೆಯಂತಿರುವ) ಯೋಜನೆಯನ್ನು ತಮ್ಮೊಡನೆ ಸಿದ್ಧವಾಗಿಡುತ್ತಾರೆ. ಇವುಗಳನ್ನು ಹೊಟ್ಟೆಯ ಮೇಲೆ, ಅಗತ್ಯಬಿದ್ದಾಗ ಬಿಡಿಸಿ ಉಪಯೋಗ ಮಾಡಿಕೊಳ್ಳಲು (ಸ್ಪ್ರಿಂಗಿ ಯಿಂದ) ಸಾಧ್ಯವಾಗುವ ರೀತಿಯಲ್ಲಿ ಕಟ್ಟಿಕೊಳ್ಳುತ್ತಾರೆ. ಈ ಪರೆಚ್ಯೂಟ್ ಕೊಡೆಯು ವಸ್ತ್ರದಿಂದಲೂ, ಹಗ್ಗಗಳಿಂದಲೂ, ನಿರ್ಮಾಣವಾಗಿರುತ್ತದೆ ಇದನ್ನು ಸುಲಭದಲ್ಲಿ ಬಿಡಿಸಿಕೊಳ್ಳುವಂತೆ ಮಡಚಿ ಹೊಟ್ಟೆಯ ಅಡಿಯಲ್ಲಿ ಇರಿಸಿಕೊಳ್ಳುತ್ತಾರೆ. ವಿಮಾನವು ಅಂತರಿಕ್ಷದಲ್ಲಿ ಚಲಿಸುತ್ತಿರುವಾಗ ಅಪಾಯ ಸಂಭವಿಸಿದರೆ, ವೈಮಾನಿಕರು ವಿಮಾನವನ್ನು ತ್ಯಜಿಸಿ, ಈ ಕೊಡೆಯ ಮೂಟೆಯ ಗಂಟನ್ನು ಬಿಡಿಸಿ ಕೆಳಗೆ ಹಾರಿದರೆ ಸರಿ,ಒಡನೆ ಕೊಡೆಯು ವಿಕಾಸವಾಗಿ, ವೈಮಾನಿಕನು ಮೆಲ್ಲನೆ ಭೂಮಿಗಿಳಿಯುವನು ಈ ಕೊಡೆಯಿಂದ ವೈಮಾನಿಕನ ಬೀಳುವಿಕೆಯ ರಭಸವು ಕಡಿಮೆಯಾಗುವುದು ಎಷ್ಟು ಎತ್ತರದಲ್ಲಿದ್ದರೂ ಈ ಪೆರೆಚ್ಯೂಟ್ ಕೊಡೆಗಳಿಂದ, ವಿಮಾನಗಳ ಅಪಘಡದಿಂದ ತಪ್ಪಿಸಿಕೊಳ್ಳಬಹುದು

ಮನುಷ್ಯನ ಸೃಷ್ಟಿಯಾಗಿ ಎಷ್ಟು ಸಮಯವಾಯಿತು?

ಮನುಷ್ಯನ ನೆಲೆಯು ಈಭೂಮಿಯಲ್ಲಿ ಪ್ರಾರಂಭವಾಗಿ, ಇಂದಿಗೆ ಸಾಧಾರಣ ಅರ್ಧ ಮಿಲ್ಯ ವರ್ಷಗಳಾಗಬಹುದಂತೆ ಇದಕ್ಕಿಂತ ಮೊದಲು ಆತನು ಕೋತಿಯ ರೂಪದಲ್ಲಿ ಭೂಮಿಯಲ್ಲಿ ವಾಸಿಸುತ್ತಿದ್ದನು ಚೀನಾದ ಪೆಕಿಂಗ್‌ನಲ್ಲಿ ಅರ್ಧ ಕೋತಿ, ಅರ್ಧ ಮನುಷ್ಯಾಕೃತಿಯ ಪ್ರಾಣಿಗಳ ತಲೆಬುರುಡೆಗಳು ದೊರಕಿವೆ ಇವುಗಳು ಸಾಧಾರಣ ೭೫೦,೦೦೦-೧,೦೦೦,೦೦೦ ವರ್ಷಗಳ ಹಿಂದೆ ಜೀವಿಸಿರಬಹುದೆಂದು ವಿಜ್ಞಾನಿಗಳ ಮತ. ಈ ಕಳೆದ ೬೦ ವರ್ಷಗಳ ಸಮಯ ಶೋಧನಾ ಕಾರ್ಯವು ನಡೆದಿರುತ್ತದೆ ಈ ಶೋಧೆಗಳ ಪ್ರಕಾರ ಮನುಷ್ಯನು ಈಗ ಇರುವ ರೂಪದಲ್ಲಿ ಸೃಷ್ಟಿಹೊಂದಲಿಲ್ಲವೆಂದೂ, ಇತರ ಕೆಲವು ಪ್ರಾಣಿಗಳಂತೆ, ಕಾಲಕ್ರಮೇಣ ಒಂದು ಶ್ರೇಣಿಯು ಬದಲಾವಣೆ ಹೊಂದಿಕೊಂಡ ಈಗಿನ ಮನುಷ್ಯರೂಪಕ್ಕೆ ಬಂದುದು ಈ ಶೋಧಕರು ದೃಢೀಕರಿಸಿದ್ದಾರೆ ಇದರ ಕೋತಿಯಿಂದ-ಮನುಷ್ಯರೂಪಕ್ಕೆ ಹೇಗೆ ಬದಲಾವಣೆಯಾದನ. ಎಂಬುದು ಮಾತ್ರ ಇವರಿಗೆ ತಿಳಿದಿರಲಿಲ್ಲ ಆದರೆ ಚೀನದಲ್ಲಿ ದೊರೆತ ತಲೆಬುರುಡೆಗಳಿಂದಾಗಿ, ಇದಕ್ಕೆ ತಕ್ಕ ಉದಾಹರಣೆಯು ಸಿಕ್ಕಿರುತ್ತದೆ ಕೋತಿಯು ಕ್ರಮಶಃ ಬದಲಾವಣೆಯಾಗಿ, ಪೆ ದುಳನ್ನು ಪಡಕೊಂಡು ಅನೇಕ ವಿಧದಲ್ಲಿ ರೂಪು ಬದಲಾಯಿಸಿ, ಮನುಷ್ಯನಾಯಿತು.

ಸೈಕಲಿನ ಪೆಡಲಿನ ಒಂದು ಸುತ್ತಿಗೆ ಹಿಂದಿನ ಚಕ್ರವು ಅನೇಕ ಸುತ್ತುಗಳನ್ನು ತೆಗೆಯುವುದು ಹೇಗೆ?

ಸೈಕಲಿನ ಪಡಲಿನ ಚಕ್ರಕ್ಕೆ ಅನೇಕ ಹಲ್ಲುಗಳಿವೆ ಆದರೆ, ಇದಕ್ಕೆ ಚೈನಿನ ಮೂಲಕ ಜೋಡಿಸಲ್ಪಟ್ಟ ಹಿಂದಿನ ಚಕ್ರವನ್ನು ತಿರುಗಿಸುವ ಪ್ರಿವೀಲಿನಲ್ಲಿ ಕಡಿಮೆ ಹಲ್ಲುಗಳಿವೆ ಪೆಡಲಿನ ಚಕ್ರಕ್ಕೆ ೩೧ ಹಲ್ಲುಗಳಿವೆ ಎಂದೂ ಪ್ರಿವೀಲಿಗೆ ೧೪ ಹಲ್ಲುಗಳಿವೆ ಎಂದೂ ಭಾವಿಸುವ ಪೆಡಲಿನ ಒಂದು ಸುತ್ತಿಗೆ ಪ್ರಿವೀಲು $\frac{31}{14}=2\frac{3}{14}$ ಸುತ್ತುಗಳನ್ನು ತೆಗೆಯುವುದು ಹೀಗೆ ಪೆಡಲಿನ ಒಂದು ಸುತ್ತಿಗೆ ಪ್ರಿವೀಲು ಅನೇಕ ಸುತ್ತುಗಳನ್ನು ತೆಗೆಯುತ್ತದೆ ಪಡಲನ್ನು ಮೆಲ್ಲನೆ ತಿರುಗಿಸಿದರೆ, ಸೈಕಲು ವೇಗದಿಂದ ಮುಂದೆ ಸಾಗುತ್ತದೆ

ಭಾರತೀಯ ಮಾಯಾಜಾಲ

ಕೆಲಸಮಯದ ಹಿಂದೆ, ಹಿಂದೂದೇಶದ ಖುದಾಬಕ್ಷರೆಂಬ ಮಾಯಾವಿಗಳು ಇಂಗ್ಲಾಂಡಿನಲ್ಲಿ ಉರಿಯುವ ಕೆಂಡಗಳ ಮೇಲೆ ನಡೆದು ಅನೇಕ ಆಂಗ್ಲೀಯ ವಿಜ್ಞಾನಿಗಳನ್ನು ಬೆರಗುಗೊಳಿಸಿರುವರು ಹಾಗೆಯೆ ಹಿಂದೂದೇಶದಲ್ಲಿ ಅತಿ ಪ್ರಾಚೀನ ಕಾಲದಿಂದ ನಡೆದುಬರುವ 'ರೋಪ್ ಟ್ರಿಕ್' ಎಂಬ ಮಾಯಾಜಾಲವು ಹಲವು ಪಾಶ್ಚಾತ್ಯ ಮಾಯಾವಿಗಳನ್ನು ಬೆರಗುಗೊಳಿಸಿದೆ. ಇದರಲ್ಲಿ ಒಂದು ಹಗ್ಗವು ತನ್ನಷ್ಟಕ್ಕೇನೆ ನೆಲದಿಂದ ಎದ್ದು, ನೇರಾಗಿ ನಿಲ್ಲುವುದು ಇದಕ್ಕೆ ಮೇಲಿನಿಂದ ಯಾವ ಆಧಾರವೂ ಕಾಣಿಸುವುದಿಲ್ಲ ಈ ಹಗ್ಗವನ್ನು ಒಬ್ಬ ಹುಡುಗನು ಹತ್ತುವನು, ಇದರ ತುದಿಗೆ ಮುಟ್ಟಿದಾಕ್ಷಣ ಮಾಯವಾಗುವನು ಈ ಮಾಯಾಜಾಲವನ್ನು ಹೇಗೆ ನಡೆಸುತ್ತಿದ್ದಾರೆ, ಎಂದು ತಿಳಿಯಲು ಅನೇಕ ಪಾಶ್ಚಾತ್ಯ ಮಾಯಾವಿಗಳು ಹಿಂದೂದೇಶಕ್ಕೆ ಪ್ರಯಾಣ ಬೆಳೆಸಿದರು ಒಬ್ಬರು ಈ ಮಾಯಾಜಾಲ ನಡೆಯುತ್ತಿರುವಾಗ ಕೆಲವು ಫೊಟೋಗಳನ್ನು ತೆಗೆದು ಇದರ ಮರ್ಮವನ್ನು ಕಂಡುಹಿಡಿದಿರುವರು 'ರೋಪ್ ಟ್ರಿಕ್' ನಡೆಯುತ್ತಿರುವಾಗ ನೇರಾಗಿ ನಿಂತ ಹಗ್ಗವನ್ನು ಹುಡುಗನು ಹತ್ತುವುದರ ಅನೇಕ ಫೋಟೋಗಳನ್ನು ತೆಗೆಯಲಾಯಿತು ಆದರೆ ತಯಾರಾದ ಫೊಟೋಗಳಲ್ಲಿ ಅದರಲ್ಲಿ ಹಗ್ಗವು ನೇರಾಗಿ ನಿಂತುದು, ಹುಡುಗನು ಹತ್ತುವುದು, ಯಾವುದೆಂದೂ ಕಾಣದೆ ಹೋಯಿತು ಒಂದು ಫೋಟೋದಲ್ಲಿ ಕಾಣೆಯಾಗಿದ್ದ ಹುಡುಗನು ಮತ್ತೊಂದು ಫೋಟೋದಲ್ಲಿ ಕಾಣಿಸಿದನು ಆದುದರಿಂದ ಈ ಅದ್ಭುತವು ನಿಜವಾಗಿಯೂ ನಡೆಯುವುದಿಲ್ಲವೆಂದೂ, ಇದೊಂದು ಮಂತ್ರವಾದಿಯ ವಿಚಿತ್ರ ತರದ ಅಂಜನ ಕೃತ್ಯವೆಂದೂ ಕಂಡುಹಿಡಿದರು. ನಿಜವಾಗಿಯೂ ಈ ರೋಪ್ ಟ್ರಿಕ್ ನಡೆದುದಾದರೆ, ಅದರ ನಕ್ಷೆಯು ಬರುತ್ತಿತ್ತು ಹಾಗೆಯೇ ಒಬ್ಬ ಹುಡುಗನನ್ನು ಒಂದು ಬುಟ್ಟಿಯಲ್ಲಿ ತುಂಬಿಸಿ, ಅದನ್ನು ಹೊರಗಿನಿಂದ ತಿವಿದು ರಕ್ತ ಸುರಿಯುವಂತೆ ಮಾಡಿ, ಕೊನೆಗೆ ಹುಡುಗನನ್ನು ಸುರಕ್ಷಿತವಾಗಿ ಹೊರಗೆ ತೆಗೆಯುವುದು ಇದೊಂದು ಭಾರತೀಯ ಮಾಯಾಜಾಲದ ಅದ್ಭುತವಾಗಿರುತ್ತದೆ ಇದೂ ಕೂಡ ಒಂದು ವಿಶೇಷತರದ ಅಂಜನಕೃತ್ಯವೆಂದು ಕಂಡುಹಿಡಿದಿರುವರು. ಈ ಅಂಜನಶಕ್ತಿಯಿಂದ ಮಾಯಾವಿಗಳು, ಪ್ರೇಕ್ಷಕರ ಸಂಪೂರ್ಣ ಚಿತ್ತದ ಅಧಿಕಾರವನ್ನು ಪಡೆಯುವರಂತೆ ಈ ಪ್ರದರ್ಶನವು ನಡೆಯುತ್ತಿರುವಾಗ ಓರ್ವ ಆಂಗ್ಲೀಯವೈದ್ಯರು ಬುಟ್ಟಿಯಿಂದ ಸುರಿಯುವ ರಕ್ತವನ್ನು ಒಂದು ಕರವಸ್ತ್ರದಲ್ಲಿ ಹಿಡಿದಿದ್ದರು ಪ್ರದರ್ಶನದ ನಂತರ ರಕ್ತವು ಕರವಸ್ತ್ರದಲಿ ಅಗೋಚರವಾಯಿತು

ಜಗತ್ತಿನ ಪ್ರಖ್ಯಾತವಾದ ನೌಕೆ (ತೇಲುವ ನಗರ)

ಜಗತ್ತಿನ ಅತ್ಯಂತ ಪ್ರಖ್ಯಾತವೆನಿಸುವ ನೌಕೆಯ ರಚನೆಯು ಈಗ ಸಂಪೂರ್ಣವಾಗಬರುತ್ತಿದೆ ಇದಕ್ಕೆ 'ಕ್ವೀನ್ ಮೇರಿ' ಎಂದು ನಾಮಾಂಕಿತ ಮಾಡಿರುವರು ಈ ನೌಕೆಯನ್ನು ಬ್ರಿಟನಿನ ಒಂದು ಪ್ರಖ್ಯಾತ ನೌಕಾ ಸಂಸ್ಥೆಯವರು ತಯಾರಿಸುತ್ತಿದ್ದಾರೆ ಇದರ ಉದ್ದ-೩೫೦ ಗಜ ೭೦ ಅಡಿ ಅಗಲ ಎತ್ತರ ೧೮೦ ಅಡಿ, ಇದರ ತೂಕವು ೬೦,೦೦೦ ಟನ್ನುಗಳು ಸಾಧಾರಣ ೭೦೦೦ ಜನರು ಇದರ ನಿರ್ಮಾಣದಲ್ಲಿ ಕೆಲಸ ಮಾಡಿರುವರು ಎಂಟು ಮಿಲಿಯ ಪೌಂಡುಗಳು ಇದಕ್ಕೆ ತಗಲಿದ ವೆಚ್ಚ ಇಂದಿಗೆ ಮೂರು ವರ್ಷಗಳಿಂದ ಇದರ ಕೆಲಸ ನಡೆಯುತ್ತಿದೆ ಇದರಲ್ಲಿ ಸಾಧಾರಣ ೧೫೦,೦೦೦ ಜನರಿರುವ ನಗರಕ್ಕೆ ಬೇಕಾಗುವ ವಿದ್ಯುಚ್ಛಕ್ತಿಯನ್ನು ಒದಗಿಸುವ ಶಕ್ತಿನಿಲಯವಿದೆ ಇದರಲ್ಲಿ ೪೦೦೦ ಮೈಲು ವಿದ್ಯುಚ್ಛಕ್ತಿಯ ಸರಿಗೆಯು ಉಪಯೋಗವಾಗಿದೆ ಈ ನೌಕೆಗೆ ೨೦೦೦ ಕಿಟಕಿಗಳಿವೆ ಈ ನೌಕೆಯ ನಿರ್ಮಾಣಕ್ಕೆ ಅನುಕೂಲವಾಗುವಂತೆ, ಕ್ಲೈಡ್ ನದಿಯ ಮೇಲೆ ೬೦,೦೦೦ ಪವನುಗಳನ್ನು ವ್ಯಯಿಸಿ, ಒಂದು ವಿಶೇಷ ನಿಲ್ದಾಣವನ್ನು ರಚಿಸಿರುತ್ತಾರೆ ಇದು ಜಗತ್ತಿನಲ್ಲಿ ಅತಿ ಭಾರವಾದ, ಉದ್ದವಾದ ಮತ್ತು ವೇಗವಾದ ನೌಕೆಯಾಗುವುದು ಇದರಲ್ಲಿ ೨೫೫೦ ಪ್ರಯಾಣಿಕರಿಗೆ ಸ್ಥಳವಿರುತ್ತದೆ. ಅಲ್ಲದೆ ಇದರಲ್ಲಿ ೧೧೫೦ ಕೆಲಸಗಾರರಿರುವರು 'ಅರೇಬಿಯನ್ ನೈಟ್ಸ್' ಎಂಬ ಕಥೆಗಳಲ್ಲಿ ವಿವರಿಸಲ್ಪಟ್ಟ ವೈಭವಗಳಿಗಿಂತ ಶ್ರೇಷ್ಠವಾದ ವೈಭವಗಳು ಇದರಲ್ಲಿ ಕೂಡಿವೆ. ೭೦,೦೦೦ ಅಶ್ವಶಕ್ತಿಯ ಇಂಜಿನುಗಳು ಇದನ್ನು ಚಲಿಸುವುವು. ಇದರ ಚುಕ್ಕಾಣಿಯ ಭಾರವು ೧೫೦ ಟನ್ನುಗಳಂತೆ ಈ ನೌಕೆಯು ಇಂಗ್ಲಾಂಡ್ ನ್ಯೂಯೋರ್ಕ್ ಮಾರ್ಗದಲ್ಲಿ ಸಂಚರಿಸುವುದು ಜಗತ್ತಿನಲ್ಲಿ ಅತೀ ದೊಡ್ಡದೆನಿಸುವ ವಿಶ್ರಾಂತಿ ಭವನವೊಂದು ಇದರಲ್ಲಿದೆ. ಒಂದು ನಗರದಲ್ಲಿರುವ ಸಾಧಾರಣ ಏರ್ಪಾಡುಗಳನ್ನು ಇದರಲ್ಲಿ ಮಾಡಿವೆ ಇದರಲ್ಲಿ ವಿಹಾರಕ್ಕೆ ಬೇಕಾಗುವ ಎಲ್ಲಾ ಸೌಕರ್ಯಗಳಿವೆ. ಅಷ್ಟಲ್ಲದೆ ಟೆನ್ನಿಸ್, ಕ್ರಿಕೇಟ ಇತ್ಯಾದಿ ಆಟಗಳನ್ನು ಆಡಬಹುದು, ಶೃಂಗಾರ ವನಗಳಿವೆ, ಸಿನೆಮ ನಾಟಕ ಮಂದಿರಗಳಿವೆ, ಜನರಿಗೆ ಸಂಚರಿಸಲು ಅರ್ಧ ಮೈಲು ಮಾರ್ಗವಿರುತ್ತದೆ ಇದು ಸಾಧಾರಣ, ವೈಭವಗಳಿಂದ ಕೂಡಿದ ಒಂದು ತೇಲುವ ನಗರವೆನ್ನಬಹುದು ಪ್ರಯಾಣಿಕರ ಉಪಯೋಗಕ್ಕೆ ಅರವತ್ತು ತರದ ಕೋಣೆಗಳಿವೆ ಇದು ಜಗತ್ತಿನ ಪ್ರಖ್ಯಾತವಾದ ನೌಕೆಯೆಂಬ ಶ್ರೇಯಸ್ಸನ್ನು ಪಡೆಯುವುದೆಂದು ಇದನ್ನು ನಿರ್ಮಿಸುವ ಸಂಸ್ಥೆಯವರ ಭರವಸೆ ಇಷ್ಟು ಭಾರವಾದರೂ, ಈ ನೌಕೆಗೆ ಯಾವುದೇ ಅಪಾಯ ಬಂದರೆ ಸುಲಭವಾಗಿ ರಕ್ಷಿಸಿಕೊಳ್ಳುವ ಯೋಗ್ಯತೆಯು ಇದಕ್ಕಿದೆ

ಉದರ ಬಾಧೆಯಿರುವವರಿಗೆ ಅದ್ಭುತಕರ ವಾರ್ತೆ!

ನಿಮ್ಮ ಹೊಟ್ಟೆಯು ಯಾವ ರೀತಿ ಬಾಧೆಯನ್ನೇ ಕೊಡಲಿ, ಚಿಂತಿಲ್ಲ ನಿಶ್ಚಿತವಾಗಿ ಗುಣಹೊಂದಬಹುದು

ಅದು ಅಜೀರ್ಣವಾಗಲಿ, ಕಟಿನ ವಿರಲಿ, ಅಥವಾ ಉದರಶೂಲೆಯಾಗಲಿ, ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ತೆಗೆದುಕೊಂಡರಾಯಿತು ಹೊಟ್ಟೆ ರೋಗಕ್ಕೆ ಇದು ಮಹಾ ಡಾಕ್ಟರರಿಂದ ಶಿಫಾರಸು ಮಾಡಲ್ಪಟ್ಟಿದೆ ಆಸ್ಪತ್ರೆಗಳಲ್ಲಿ ಉಪಯೋಗಿಸಲ್ಪಡುತ್ತದೆ

ಉದರವಾಯು, ಅಥವಾ ಉದರಶೂಲೆಗಳಿಗೆ ಶೀಘ್ರ ಪರಿಣಾಮ ಕಾರಿಯೋ ಹಾಗೆ ಅಜೀರ್ಣಕ್ಕೂ ಇದು ಅಷ್ಟೇ ಪರಿಣಾಮಕಾರಿ

ನಿಮಗೆ ಯಾವ ರೀತಿಯ ಹೊಟ್ಟೆ ರೋಗಗಳಿದ್ದರೂ ಸಾವಿರಾರು ಜನರು ಪರೀಕ್ಷಿಸಿ ಅದ್ಭುತವೆಂದ ಈ ಔಷಧಿಯನ್ನೇ ಸ್ವೀಕರಿಸಿರಿ ಆದರೆ ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ಪಡೆಯುವಂತೆ ಎಚ್ಚರಿರಿ ಅದಕ್ಕೆ ಕೆಂಪು ಸೀಲ್ ಇದೆ

Alex. C. Maclean

ಎಂಬ ಸಹಿಯು ಅಚ್ಚು ಬಿಲ್ಲೆ ಮತ್ತು ಚೀಟುಗಳಮೇಲಿದೆ ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೫ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,

ಇಲ್ಲಿಗೆ ಬರೆಯಿರಿ,



WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co Ltd.
1, Purniah Chatram Road, Balepet,
BANGALORE CITY

New Era Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಾಗಿದೆ)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager.

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc, in guaranteed colours Silk Sarees & Coatings a Speciality Work is conducted under the supervision of Textile experts. We undertake special orders to suit individual tastes

Please inspect our goods at:-

Raghavendra Ranga Pai, Car Street, Mangalore.

We deal in grey & Coloured Yarns Dyes Chemicals & Handloom accessories

M. Venkatesha Ranga Pai,
Proprietor

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್

ಸಾರಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ

೪೫ ವರ್ಷದ ಅನುಭವ.

ಉಪಯೋಗಿಸಿದವರೇ ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ

ಫ್ರೊಸ್ಫರಸ್ ಗುಳಿಗೆಗಳು

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕೂರದ್ವಾರ, ಮುಂಬಾಯಿ ೨

ಕೆಮಿಸ್ಟ್ಸ ಹಾ ಕಂಪೆನಿ ಮಂಗಳೂರು

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ]

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು.

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 3—0—0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ. 2-8-0. ½ಕ್ಕೆ ರೂ. 1-5-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ. 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಫ್ಲೂಯೆಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.

ಬಾಟ್ಲಿ 1ಕ್ಕೆ ರೂ. 1—6—0.

ಮೇಹ ಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8—0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—

ಡಬ್ಬಿ 1ಕ್ಕೆ ರೂ. 0-2-6. 12ಕ್ಕೆ ರೂ 1-12-0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:

1. ಡಾಕ್ಟರ್ ಬಿ. ಎಚ್. ಪದ್ಮನಾಭ ಶೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು.
4. ವಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ESTD. 1906

The Canara Banking Corporation Udipi Ltd

ದಿ ಕನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

The First Indigenous & Cosmopolitan Bank of S. K. District.

Capital Authorised, issued & Subscribed	Rs.	3,50,000	0	0
Paid up Capital	„	2,81,035	0	0
Reserves	„	3,64,872	0	0

6-3-1936

FIXED DEPOSITS UP TO 5 %

Head office:—UDIPI, S. K

Branches:—1 Udipi, 2 Goondapoor, 3. Car Street, Mangalore, 4 Shimoga, 5 Madras 6. Bunder Mangalore, 7 Mercara & 8 Virarajendrapet.

THE BOMBAY LIFE ASSURANCE COMPANY, LIMITED.

KOCHIKAR BROTHERS, Madras Branch Secretaries and Chief Agents for Bombay City & Suburbs

ANNOUNCEMENT:—We have the pleasure to inform all our Constituents, Agents and Policy holders that we have taken up a Newly Erected Bungalow "Soumyalayam" in Puthiyara on the Taluq Office Road opposite Puthiyara Post Office and are opening our Calicut Branch Office in the said Building on 14—3—1936 The present Office of Mr C Sankaran Nair our Malabar District Agent, situated in Huzur Road, will cease to exist and will merge in our New Branch Office This has been necessitated by the vast expansion of our business in Malabar and the adjacent districts, as the New Premises are very well situated and more spacious and thus we hope to render better service to our Policyholders Our patrons and well wishers are requested to pay a visit to the "Soumyalayam at their early convenience All correspondence and remittances and cheques should be addressed to

Messrs **KOCHIKAR BROTHERS,**
Bombay Life Office, Puthiyara Post (Calicut—Malabar)

We have also registered our telegraphic address as "Kochikar—Calicut" for the convenience of our constituents

ಪ್ರಕಟಣೆ—ಸದರಿ ವಿಮಾ ಕಂಪೆನಿಯು ತನ್ನ ಏಜಂಟರಿಗೂ, ಪೋಲಿಸಿದಾರರಿಗೂ ಈ ಮೂಲಕ ತಿಳಿಯಪಡಿಸುವದೇನೆಂದರೆ—ತಾ 14 3-36ರಿಂದ ಕಲ್ಲಿಕೋಟೆಯಲ್ಲಿರುವ ನಮ್ಮ ಮಲಬಾರ ಏಜೆಂಟರಾದ ಮಿ॥ ಸಿ ಶಂಕರನಾಯರ್ ರವರ ಹಜೂರ ರಸ್ತೆಯ ಬಳಿ ಇರುವ ಆಫೀಸನ್ನು ಪುತಿಯಾರ ಪೋಸ್ಟು ಆಫೀಸಿನ ಎದುರಿರುವ ಹೊಸತಾಗಿ ಕಟಿಸಿದ ದಿವ್ಯವಾದ ಸೌಮ್ಯಲಯಮ್ ಎಂಬ ಬಂಗ್ಲೆಯಲ್ಲಿ ತೆರೆಯೋಣಾಗುವುದು ಇನ್ನುಮುಂದೆ ಸಂಬಂಧಪಟ್ಟ ಲೆಖ್ಖಪತ್ರಗಳನ್ನು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು

ಮೆ॥ಸರ್ಸ್ ಕೊಚ್ಚಿಕಾರ್ ಬ್ರದರ್ಸ್,
ಬೊಂಬೈ ಲೈಫ್ ಆಫೀಸ್, ಪುತಿಯಾರಾ ಪೋಸ್ಟು, (ಕಲ್ಲಿಕೋಟೆ ಮಲಬಾರು)

ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ತಂತಿಯ ವಿಳಾಸವನ್ನು ಕೊಚ್ಚಿಕಾರ್ ಕಲ್ಲಿಕೋಟೆ ಎಂಬುದಾಗಿ ಮಾಡಿದೆ

Regd)

ಅಮೃತಾಂಜನ

ತಲೆವೇದನೆ, ಶಿರೋವೇದನ ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ನೆಗಡಿಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೆ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ

ಮೊದಲನೇ 5 ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ ತಪ್ಪದೆ ವ್ಯವಹಾರ ಬೆಳೆಸಿರಿ.

[illegible]
Regd. No. M. 2408
ಟಪ್ಪಾಲು ಹಾಸಲು ಸೇರಿ ರೂ. 2-13-0.

P
for Quality Snuff
H. Rama Rao and Sons.
HighClassSnuff Manufacturers
Mangalore, S I
ASK FOR —
RAMA SNUFF.
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in THE BOMBAY LIFE
Madras Branch Secretaries.
Kochikar Brothers,
Udupi Mangalore Bangalore Madras, Bombay and Calcutta.

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ । ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಂಗದರಿಂ ಹರುಷವಾಯಿತೆ? ಮತ್ತೆ ವಿಷ್ವದ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು । ೨ ॥

ಪುಸ್ತಕ ೩೦. ಮಂಗಳೂರು ತಾ. ೨೭ನೇ ಶುಕ್ರವಾರ ಮಾರ್ಚ ೧೯೩೬. (27—3—'36) ಸಂಚಿಕೆ ೧೩

ಡಿಲ್ಲಿಯಲ್ಲಿರುವ ಗಾಂಧಿ ಆಶ್ರಮ

ಮಿ। ಜೆ. ಎ. ಪಿಂಟೊ, ಅವರ್ಗಳ್.
ಮದ್ರಾಸಿನ ಪ್ರಥಮ ಎಡ್ವೊಕೇಟರಾಗಿದ್ದು ಈಗ ಸಿಟೀ ಸಿವಿಲ್ ಕೋರ್ಟಿನ ಜಡ್ಜರಾಗಿ ನೇಮಕ ಹೊಂದಿರುವರು

ಶ್ರೀ। ಅಮ್ಮೆಂಬಳ ವಿಟ್ಠಲ ಪೈ,
ಐ. ಸಿ. ಎಸ್.
ಇವರು (ಮದ್ರಾಸ್ ಸರಕಾರದ ಅಂಡರ್ ಸೆಕ್ರೆಟರಿಯಾಗಿದ್ದವರು) ಈಗ ಇಂಡಿಯಾ ಸರಕಾರದ ಸಿವಿಲ್ [illegible] ನೇಮಕ ಹೊಂದಿರುವರು

ನೋಟಗಳು
NOTE S.

ವತ್ಸರ ಫಲ: ಸರ್ವರಿಗೂ ಶುಭವಾಗಲಿ

* * *

ಅರಸು ಕುಜ: ಯುದ್ಧಭಯ, ಪ್ರಜೆಗಳಿಗೆ ಸರ್ವನಾಶ ಭಯ. ಸೈನ್ಯಕ್ಕೆ ದುಬಾರಿ, ಖರ್ಚಿಗಾಗಿ ಹಣ ಸಂಕ್ಷೇಪನಾಗಲಿ.

ಮಂತ್ರಿ ಸೂರ್ಯ: ಇನ್‌ಫ್ಲುಯೆಂಜಾ ಭಯ-ವಿಶೇಷವಾಗಿ, ಬ್ರಾಹ್ಮಣರಿಗೆ ಮತ್ತು ದೇವಾಲಯಗಳಲ್ಲಿನ ಮೂರ್ತಿಗಳಿಗೆ.

ಕಮಾಂಡರು ರವಿ. ಬೆಳೆ ಕೆಂಪು ಹೆಚ್ಚುವುದು; ಕಣ್ಣುಗಳೂ ಕೆಂಪಾಗುವುವು.

ಗಾರ್ಡನರ್ ಬುಧ: ತುಂಬ ನೀರು, ಕಡಲೆ ಪುರಿ ಕಾಸಿಗೆ ಸೇರು.

ಫಾರ್ಮರ್ ಕುಜ ಬಟಾಟೆ ಇಲ್ಲ, ನೀರುಳ್ಳಿ ಕಡಮೆ 'ಭಾಜಿ' ಮಾಯ

ಮಿಟಿರೊಲೊಜಿಸ್ಟ್ ರವಿ ಮಳೆ ಮಂದ.

ಫರ್ಟಿಲೈಸರ್ ಶುಕ್ರ ಹಾಲಿಗೆ ನೀರು ಬೆರಸುವುದು ಯಥೇಷ್ಟ, ತುಪ್ಪ ಎಣ್ಣೆಗಳಲ್ಲಿಯೂ ಬೆರಕೆ ಹೆಚ್ಚು

ಲಿಕ್ವಿಡೇಟರ್ ಬುಧ ಹತ್ತಿ ಬೆಳೆ ಮುಕ್ಕಾಲು ಮಾತ್ರ ಖಾದೀ ಪ್ರಚಾರ ಕುಂದುವುದು ಮಿಲ್ಲಿನ ಬಟ್ಟೆಗೆ ತುಂಬಾ ಗಿರಾಕಿ ಅದು ಖಾದಿಯೆಂದೇ ಮಾರಾಟವಾಗುವುದು

ಫೆನೆನ್ಸ್ ರವಿ ಚಿನ್ನ ಸರಾಗ ಪರದೇಶಕ್ಕೆ ಸೇರುವದು ಗ್ರಿಗ್ ಸಾಹೇಬರಿಗೆ ಹಲವು ಬಿರುದುಗಳು ಬರುವುವು ಅವರ ಮಾತೂ ಬಿರುಸಾಗುವುದು

ಗ್ರಾಮಾಧಿಪ ರವಿ ಅಸತ್ಯ, ಅನ್ಯಾಯ ಚುನಾವಣೆಗೊಂದು ಪಕ್ಷ, ಆದ ಬಳಿಕ ಬೇರೆ ಒಂದು ಪಕ್ಷ

ಸ್ಟೆಟಿಸ್ಟಿಕ್ಸ್ ಬುಧ ಭಾರೀ ಉದ್ಯಮ ಎಲ್ಲಿ ನೋಡಿದರೂ ಅಂಕೆಸಂಖ್ಯೆಗಳು ಜನರೂ ಇಲ್ಲ ಅಭಿಪ್ರಾಯಗಳೂ ಇಲ್ಲ

ಭಾದ್ರಪದ ಮಾಸವು ಅಧಿಕವಾಗಿದೆ ರಜೆಗಳೆಲ್ಲ ಮತ್ತೆ ಮತ್ತೆ ಒಂದೇ ಪಕ್ಷದಲ್ಲಿ ೨ರಡು ಗ್ರಹಣಗಳಾಗುವುವು ಫಲ ಕೊಂಗ್ರೆಸ್ಸಿನಲ್ಲಿ, ಅಧಿಕಾರ ಸ್ವೀಕಾರ ಬೇಕೋ ಬೇಡವೋ ಎಂದು ಚರ್ಚೆ

ಅನಿಷ್ಟ ಫಲ ಬಿಹಾರದಲ್ಲಾಗಿತ್ತು, ಕ್ವೆಟ್ಟದಲ್ಲಾಯಿತು, ಅಸ್ಸಾಮಿನಲ್ಲಿದೆಯೇ ಭೂಕಂಪ? ಎಲ್ಲರಿಗೆ—ಶುಭವಾಗಲಿ

* * *

ಮ್ಯುನಿಸಿಪಾಲಿಟಿಯು ಮುಂದಣ ವರ್ಷದ ಕೆಲ ಸುಧಾರಣೆಗಳಿಗಾಗಿ ಬಜೆಟಿನಲ್ಲಿ ಹಣ ಸಂಕ್ಷೇಪನು ಮಾಡಿದೆಯೆಂದು ವರ್ತಮಾನ –

(೧) ಜೇನುನೊಣಗಳನ್ನು ಸಾಕುವಂತೆಯೇ ನುಸಿಗಳನ್ನು ಸಾಕುವುದಕ್ಕಾಗಿ, ಏಕೆಂದರೆ ಸಾಕುತ್ತಿದ್ದರೆ, ಅವು ಸಿಕ್ಕಲ್ಲಿ ಹೋಗಿ ಪೀಡಿಸಲಾರವಷ್ಟೆ' (೨) ಕೆಲವು ಓಣಿಗಳ ಪ್ರವೇಶ ಮಾಡುವಲ್ಲಿ ಊದುಬತ್ತಿಯ ಡಿಪೋಗಳನ್ನು ಹುಡಗುವರು, ಪ್ರಯಾಣಿಕರಿಗೆ ಒಂದು ಇಂಚು ಉದ್ದದ ಊದುಬತ್ತಿ ತುಂಡನ್ನು ಕೊಟ್ಟು ಹಂಚ ಮವನ ಬೀದಿಗೆ ಇದನ್ನು ಹೊತ್ತಿಸಿಕೊಂಡು ಓಣಿಸಂಚಾರ ಮುಗಿಸಬೇಕಾಗಿದೆ ತೋಡು ಪಾಯಖಾನೆಗಳನ್ನು ನಿವಾರಿಸಲಿಕ್ಕೂ ಶುಚಿಗೊಳಿಸಲಿಕ್ಕೂ ಬೇಕಾಗುವ ಹಣ ಮತ್ತು ಜನಗಳ ನೂರರಲ್ಲಿ ಒಂದಂಶ ವಿನಿಯೋಗದಿಂದ ಇದು ಸಾಧ್ಯವಾಗುವುದಾಗಿ ಅಂದಾಜು ಮಾಡಲಾಗಿದೆ (೩) ಹೆದ್ದಾರಿಗಳಿಗೆ ನೀರು ಚೆಲ್ಲುವ ಕೆಲಸವನ್ನು ರಾತ್ರಿಗಳಲ್ಲಿ ಮಾಡಿಸಿದರೆ, ದಣುವು ಕಡಿಮೆ, ನೀರೂ ಕಡಿಮೆ, ಪ್ರಯಾಣಿಕರ ಬಾಧೆಯೂ ಇಲ್ಲ ಅದಲ್ಲದೆ, ಹಗಲಲ್ಲಿ ಇತರ ಉದ್ಯೋಗದಲ್ಲಿರುವವರನ್ನೆ ಈ ಕೆಲಸಕ್ಕೆ ರಾತ್ರಿಯಲ್ಲಿ ಹಚ್ಚಬಹುದು ಹೀಗಾಗಿ, ಖರ್ಚು ಅರ್ಧಕ್ಕರ್ಧವಾಗುವುದು

(೪) ಲೈನು ಮೈದಾನಿನಲ್ಲಿ ಒಂದು ವಿಚಿತ್ರ ನಂದನವನ ಸೃಷ್ಟಿಯಾಗುವುದು ಇದರಲ್ಲೇ ವಸ್ತುಸಂಗ್ರಹಾಲಯವೂ ಆಗುವುದು. ವಸ್ತುಗಳು ಇಂಗಡಿ ವಿಲಂ ಸಾಕುವ ಹಣ ಮಾರುವ, ಚಿಲ್ಲರೆ ಕಟ್ಟೇರಿ ಇತ್ಯಾದಿ ವಿಕ್ರಯದ ಮದ್ದಿನ ಜಾಹೀರಾತುಗಳ, ವಿದೇಶೀಯ ಅನಾಥರು ಮುಂತಾಗಿ, ನಂದನವನಕ್ಕೆ ಬೇಕಾಗುವ ಜಲಮಲಗಳನ್ನು ಅದಕ್ಕಾಗಿ ಓಡುವ ಗಾಡಿಗಳೇ ತಂದೊಡ್ಡುವುವು ಗೊಬ್ಬರವನ್ನು ಹತ್ತಿರದ ಹೆಂಗುಸರ ಆಸ್ಪತ್ರೆಯ ಹಿಂಭಾಗದಿಂದ ಇಡೀ ವರ್ಷವೂ ಪೂರಯಿಕೆಯಾಗುವಂತೆ ದಾಸ್ತಾನು ಮಾಡಲಾಗುವುದು

\+ × +

ಮಿಶ್ಯನು ಶಾಲೆಗಳು ವಿದ್ಯಾಪ್ರಚಾರಕ್ಕಾಗಿ ಮಾಡಿರುವ ಅಮೋಘವಾದ ಉಪಕಾರಕ್ಕೆ ನಾವು ಕೃತಜ್ಞರಾಗಬೇಡವೆ? ಇತರ ಶಾಲೆಗಳಿಗೆ ಇವುಗಳಿಂದ ಬಾಧೆಯಾಗುತ್ತಿದೆ, ಸ್ಪರ್ಧೆ ಪೀಡೆಗಳೂ ಇವೆ ಎನ್ನಬಾರದು ಮಿಶ್ಯನ್ ಶಾಲೆ ಒಂದು ಕಡೆ ತಲೆಯೆತ್ತಿತೋ, ಇತರ ಶಾಲೆಗಳನ್ನು ಅಲ್ಲಿಂದ ಕೂಡಲೆ ಕೀಳಬೇಕು ಹಾಗೆ ಮಾಡದೆ ಇದ್ದರೆ, ಆ ಊರವರು ಕೃತಘ್ನರು.

\+ + + +

ಅಥವಾ ಇತರ ಶಾಲೆಗಳೂ ಬಾಳಬೇಕೆಂದಾದರೆ, ಮಿಶ್ಯನ್ ಶಾಲೆಗಳ ಕ್ರಮಗಳನ್ನೆ ಅನುಸರಿಸಬೇಕು ಖರ್ಚು ಕಡಿಮೆ ಆದರೂ ನಷ್ಟ ವಿಪರೀತವಾಗಿ ತೋರಬೇಕು ದೇವರ ರಾಜ್ಯವು ಸ್ಥಾಪನೆ ಹೊಂದುವ ಹಾಗೆ, ಸೈತಾನನನ್ನು ಗ್ರಾಮದಿಂದ ಸೆರೆಹಿಡಿದು ತಂದು, ಶಾಲೆಯಲ್ಲಿ ಬಂಧಿಸಿಡಬೇಕು ಯಾವಾಗಲೂ ಅಪ್ರತಿಮವಾದ ಧರ್ಮಗ್ರಂಥವನ್ನು ಓದುತ್ತಲಿರಬೇಕು ನಮ್ಮ ಶ್ರೀಯುತರು ಈ ವಿಚಾರವನ್ನು ಕೌನ್ಸಿಲು ಭಾಷಣದಲ್ಲಿ ಮಂತ್ರಿಗಳಿಗೆ ತಿಳಿಸದೆ ಮೋಸಹೋದರು

ಶ್ರೀ ವಿದ್ಯೋದಯ ಭಜನೆಮಂಡಳಿ, ಚೋಳಕಾರ.

ಇಲ್ಲಿ ತಾ ೨೬–೨–೩೬ನೇ ಬುಧವಾರ ಸೂರ್ಯೋದಯಕ್ಕೆ ಆರಂಭಿಸಿದ ಭಜನಾ ಸಪ್ತಾಹವು ತಾರೀಖು ೪–೩–೩೬ನೇ ಬುಧವಾರ ಪ್ರಾತಃಕಾಲ ಮಂಗಲಾಚರಣೆ ಮತ್ತು ಅವಭೃತ ಸ್ನಾನದೊಂದಿಗೆ ಕೊನೆಗಂಡಿತು ಅಂದೇ ಗಂಟೆ ೧೧ರಿಂದ ಸಾಯಂಕಾಲ ಗಂಟೆ ೪ರ ವರೆಗೆ ಸಾಧಾರಣ ೨೦೦೦ ಸಾವಿರ ಜನರ ಸಂತರ್ಪಣೆಯೂ ಆಯಿತು ಊರ ಮಹನೀಯರಲ್ಲಿ ಕೆಲವರು ನಿಷ್ಕಪಟ ಸೇವೆಯಲ್ಲಿ ಸಂಪೂರ್ಣ ಭಕ್ತಿವಿಶ್ವಾಸವನ್ನಿಟ್ಟು ದಿನ ಒಂದೊಂದರ ಪೂಜಾ ವಿನಿಯೋಗದ ಖರ್ಚನ್ನು ತಮ್ಮ ಪಾಲಿಗೆ ವಹಿಸಿಕೊಂಡು ನಮ್ಮನ್ನು ಪ್ರೋತ್ಸಾಹಗೊಳಿಸಿದ್ದಲ್ಲದೆ ಅನೇಕರು ತಮ್ಮ ಶಕ್ತ್ಯನುಸಾರ ದನಸಹಾಯ ಮಾಡಿ ಈ ಧನಕಾರ್ಯವು ನಿರಾಯಾಸವಾಗಿ ನೆರವೇರುವಂತೆ ಸಹಕರಿಸಿದ್ದು ಸ್ತುತ್ಯಾರ್ಹವಾದದ್ದೇ ಸರಿ ನೆರೆಗ್ರಾಮಗಳಿಂದಲೂ ಹಂಚ ಮತ್ತು ಬಿ.ಫ ಕಾರ್ಯಸ್ಥಗಳ ಜತೆ ಸಮಸ್ತರಿಂದಲೂ ಏರ್ಪಟ್ಟ ಸೇವಾತುರತೆಯ ಮೇಲಾಟದಿಂದ ಧನ ಕಾಣಿಕೆಗಳು ಪ್ರಾಪ್ತವಲ್ಲದೆ ಅಕ್ಕಿ ಮುಡಿ ತರಕಾರಿ ಕಲೆಹೊರೆಗಳೂ ಸಹಾಯಾರ್ಥವಾಗಿ ಬಹಳ ವಿಜೃಂಭಣೆಯಿಂದ ತಂದೊಪ್ಪಿಸಲ್ಪಟ್ಟುವು ಸಂಘದ ಮೇಲಿನ ಅಭಿಮಾನದಿಂದ ಸುಮಾರು ೪೦ ರೂಪಾಯಿ ಕ್ರಯಬಾಳುವ ದೊಡ್ಡ ಕಾಲುದೀಪ ಗಂಧೀಪ, ಶ್ರೀ ಲಕ್ಷ್ಮೀಪತಿ ಹರಿವಾಣ ಇತ್ಯಾದಿ ಸಾಹಿತ್ಯಗಳನ್ನು ಉಚಿತ ವಿತ್ತು ಕೆಲವರು ತಮ್ಮ ಹೆಸರನ್ನು ಸಂಘದಲ್ಲಿ ಊರ್ಜಿತವಾಗಿರಿಸಿಕೊಂಡರು ಭಕ್ತಿಪರಾಯಣರಾದ ಅನೇಕ ಸಂತವಾಂಡಳಿಯುವರು ನಿಯಮಿತ ಕಾಲಕ್ಕೆ ಬಂದೊದಗಿ ಪರಮಪ್ರದವಾದ ಭಗವನ್ನಾಮ ಸಂಕೀರ್ತನೆಯಿಂದ ಅಮೂಲ್ಯ ಕಾಲವನ್ನು ವೆಚ್ಚಗೊಳಿಸಿ ಪ್ರೇಕ್ಷಕರ ಮನಾನಂದಗೊಳಿಸಿದ್ದಲ್ಲದೆ ನಮ್ಮ ಮಹತ್ಕಾರ್ಯವನ್ನು ಸಾರ್ಥಕಗೊಳಿಸಿದರು ಹಾಗೂ ೧೪ ಮುಡಿ ಅಕ್ಕಿ ೧೨೨ ತಲೆಹೊರೆಗಳೂ ೭೨೩ ಚಿಲ್ಲರೆ ರೂಪಾಯಿಗಳೂ ಸಂಘಕ್ಕೆ ಸಹಾಯಧನವಾಗಿ ಕೂಡಿಬಂದುವು. ಅದರಲ್ಲಿ ಖರ್ಚು ಕಳೆದುಳಿದ ಹಣ ೨೦೦ ಮಾತ್ರ ಈ ಪುಣ್ಯಕಾರ್ಯವು ಸರಾಗವಾಗಿ ಕೈಗೂಡುವಂತೆ ಸಹಕರಿಸಿದ ಸಂತಮಂಡಳಿಯವರಿಗೂ ಮಹದಾಶ್ರಯವನ್ನಿತ್ತ ಮಹನೀಯರೆಲ್ಲರಿಗೂ ಚಿರಾಯುರಾರೋಗ್ಯ ಸುಖ ಸಂಪದಾದಿಗಳನ್ನು ಭಗವಂತನು ಅನುಗ್ರಹಿಸಲೆಂದೇ ನಮ್ಮ ಪ್ರಾರ್ಥನೆ

ನಿಮ್ಮವರು ಆರೋಗ್ಯವಂತರೂ ಶಕ್ತಿಯುತರೂ ಆಗಬೇಕೆ, ಹಾಗಾದರೆ ಅವರಿಗೆ ಓವಲ್ಟಿನ್ನನ್ನು ಕೊಡಿರಿ

ನವಚೈತನ್ಯವನ್ನೂ ಶಾಂತ ಚಿತ್ತವನ್ನೂ ಕೊಡುವುದರಲ್ಲಿ ಓವಲ್ಟಿನ್ ಅತ್ಯದ್ಭುತಕರವಾದುದು ಓವಲ್ಟಿನ್ನನ್ನು ತೆಗೆದುಕೊಂಡುದರಿಂದ ಅನಾರೋಗ್ಯವು ನಾಶವಾಗಿ ಶಕ್ತಿಯು ಕುಂದಿ, ಭರಪೂರತ್ರಾಣವು ದೇಹಧಾರ್ಢ್ಯವೂ ಹೆಚ್ಚುವುದು ಜ್ಞಾಪಕಶಕ್ತಿಗೂ ಬಹಳ ಉಪಯೋಗಕಾರಿ

ಓವಲ್ಟಿನ್‌ನಲ್ಲಿ ನಿಸರ್ಗಸಿದ್ಧವಾದ ಅಮೂಲ್ಯ ಸಂಪತ್ತಿದೆ ಬೆಳೆದ ಬಾರ್ಲಿ ದನದ ಕೆನೆಹಾಲು ಅತ್ಯಮೂಲ್ಯ ಪದಾರ್ಥಗಳು ದೇಹದ ಬೆಳವಣಿಗೆಯನ್ನೂ ಮೆದುಳಿನ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಲು ಅತ್ಯಾವಶ್ಯಕವಾದ ಸಾಧನಗಳು ಒಂದು ಸಲ ಸೇವಿಸಿದೊಡನೆ ಅದರ ಚೇತನದಾಯಕ ಗುಣವನ್ನು ನೀವು ಕಂಡುಹಿಡಿಯುವಿರಿ

ದಿನನಿತ್ಯವೂ ಚಹಾಕ್ಕೆ ಓವಲ್ಟಿನ್ ಸೇರಿಸಿರಿ ಅದರಿಂದಾಗಿ ಇಚ್ಛಾಪೂರ್ತಿಯನ್ನು ಹೊಂದಿರಿ ಆದರೆ ಪರಕೀಯರ ಮೋಸದ ಮಸ್ತಾಲನ್ನು ಪಡಕೊಂಡು ನಾಶವನ್ನು ಹೊಂದಬೇಡಿ

'ಓವಲ್‌ಟಿನ್'

ಟೋನಿಕ್ ಆಹಾರ ಪಾನಕ

OVALTINE

ಮೆದುಳು, ನರ, ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಿಲ್ಲ ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಕ್ರಯಕ್ಕೆ ಸಿಗುತ್ತದೆ

ಏಜಂಟ್ಸ್ ಜೇಮ್ಸ್ ರೈಟ್ 85ಎ ಕ್ಲೈವ್ ಸ್ಟ್ರೀಟ್ ಕಲ್ಕತ್ತಾ ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ

O 390

ನಿಮಗೆ ತಿಳಿದಿರುವುದೆ?

ವಿಜ್ಞಾನದ ಮುಂದಿನ ಶತಮಾನ—ಕೆಲವು ನವೀನ ಶೋಧೆಗಳು.

ಸೂರ್ಯ ಪ್ರಕಾಶದಿಂದ ಶಕ್ತಿ

ಸೂರ್ಯನ ಉಷ್ಣದಿಂದ, ಶಕ್ತಿಯನ್ನು ಉಂಟುಮಾಡಬಹುದು. ೩೦ ಚದರ ಅಡಿ ವಿಸ್ತೀರ್ಣದ ಮಾಡಿನ ಮೇಲೆ ಬೀಳುವ ಸೂರ್ಯ ಪ್ರಕಾಶದಿಂದ, ಒಂದು ಅಶ್ವಶಕ್ತಿಯನ್ನು ತಯಾರಿಸಬಹುದು ಅಂದರೆ ಸಾಧಾರಣ ಒಂದು ಮನೆಗೆ ಬೇಕಾಗುವ ವಿದ್ಯುತ್ ಶಕ್ತಿಯನ್ನು ಒದಗಿಸಬಹುದು ೨೦೦ ಚದರ ಮೈಲು ವಿಸ್ತೀರ್ಣದ ಒಂದು ಮರಳುಕಾಡಿನಲ್ಲಿ ಬೀಳುತ್ತಿರುವ ಸೂರ್ಯಪ್ರಕಾಶದಿಂದ, ಸಮಸ್ತ ಸಂಯುಕ್ತ ಅಮೇರಿಕಾ ಯಾ ಹಿಂದೂದೇಶಕ್ಕೆ ಬೇಕಾಗುವ ವಿದ್ಯುತ್‌ಚಕ್ತಿಯನ್ನು ತಯಾರಿಸಬಹುದು ಸಮಸ್ತ ಭೂಮಿಯ ಮೇಲೆ ಒಂದು ನಿಮಿಷ ಸಮಯ ಬೀಳುವ ಸೂರ್ಯ ಪ್ರಕಾಶದಿಂದ, ಈ ಪ್ರಪಂಚಕ್ಕೆ ಒಂದು ವರ್ಷಕ್ಕೆ ಬೇಕಾಗುವ ವಿದ್ಯುತ್‌ಚಕ್ತಿಯನ್ನೂ ಉಷ್ಣಶಕ್ತಿಯನ್ನೂ ಒದಗಿಸಬಹುದು ವಿಜ್ಞಾನಿಗಳು, ಸೂರ್ಯ ಪ್ರಕಾಶದಿಂದ ಚಲಿಸುವ ಇಂಜಿನುಗಳ ತಯಾರಿಯಲ್ಲಿ ನಿರತರಾಗಿರುತ್ತಾರೆ ಇವರ ಶೋಧನಾಲಯಗಳಲ್ಲಿ ಈ ತರದ ಕೆಲವು ಇಂಜಿನುಗಳು ತಯಾರಾಗಿವೆ,—ಆದರೆ ಇವುಗಳ ಮೇಲೆ ಇನ್ನೂ ಶೋಧನ ನಡೆಯಬೇಕಾಗಿದೆ ಇನ್ನೊಂದು ಶತಮಾನದೊಳಗೆ ಸೂರ್ಯನಿಂದ ಶಕ್ತಿ ಪಡೆಯುವ ಇಂಜಿನುಗಳು ವಾಡಿಕೆಗೆ ಬರುವುವು

ಮೋಟಾರು ವಾಹನಗಳು ಇನ್ನೂ ವೃದ್ಧಿಯಾಗಬೇಕಾಗಿದೆ.

ಅಮೇರಿಕಾದಲ್ಲಿ, ೧೯೩೦ರಲ್ಲಿ ಪ್ರತಿಯೋರ್ವನು, ಒಂದು ವರ್ಷಕ್ಕೆ ೬೦೦ ಮೈಲು ಮೋಟಾರು ಸಂಚಾರವನ್ನೂ, ೪೦೦ ಮೈಲು ರೈಲ್ವೆ ಸಂಚಾರವನ್ನೂ ಮಾಡುತ್ತಿದ್ದನು ಈಗ ಅವನ ಮೋಟಾರ ಸಂಚಾರವು ವರ್ಷಕ್ಕೆ ೩೦೦೦ ಮೈಲಗಳಾಗಿರುತ್ತದೆ ರೈಲ್ವೆ ಸಂಚಾರವು ೧೫೦ ಮೈಲುಗಳಿಗೆ ಇಳಿದಿರುತ್ತದೆ ಅಂದರೆ ಮೋಟಾರು ವಾಹನಗಳು, ಅನೇಕ ರೀತಿಗಳಲ್ಲಿ ಸುಧಾರಣೆಹೊಂದಿಕೊಂಡು ಮಾನವನ ಅತ್ಯಗತ್ಯ ಸಂಚಾರದ ಉಪಕರಣವಾಗಿದೆ ಕಾಲು ಶತಮಾನದ ಹಿಂದೆ ಜನಿಸಿದ ಈ ಮೋಟಾರು ವಾಹನವು, ಇಂದಿಗೆ ಅನೇಕ ಅನುಕೂಲಗಳಿಂದ ಕೂಡಿದ್ದಾಗಿ, ಸರ್ವಾಂಗಸುಂದರವಾಗಿ ಬೀದಿ ಬೀದಿಗಳಲ್ಲಿ ಮೆರೆಯುತ್ತಿದೆ ಅಂದರೆ ಮೋಟಾರು ವಾಹನಗಳಲ್ಲಿ ಇನ್ನೂ ಸುಧಾರಣೆಗಳಾಗಲಿರುವುದಿಲ್ಲವೆಂದ ಕೆಲವರಲ್ಲಿ ಭಾವನೆಗಳಾಗಬಹುದು ಅದು ತಪ್ಪು ಅಭಿಪ್ರಾಯವು ಈಗಿನ ಮೋಟಾರು ಇಂಜಿನಿನಲ್ಲಿ ಉಪಯೋಗವಾದ ಪ್ರತಿಯೊಂದು ಗೆಲನು ಪೆಟ್ರೋಲಿನಲ್ಲಿ ಹನ್ನೆರಡನೇ ಒಂದಂಶ ಮಾತ್ರ ಉಪಯೋಗವಾಗುತ್ತದೆ ಈ ಪ್ರಪಂಚದಲ್ಲಿ ಇದರಿಂದಾಗಿ ೩೦೦ ಮಿಲಿಯ ಗೆಲನು ಪೆಟ್ರೋಲು ವ್ಯರ್ಥವಾಗುತ್ತದೆ. ಇಂಜಿನ ಒಳಸೇರಿದ ಗೇಸಿನ ಶೇಕಡಾ ೨೦ ಸೆಲೆ ಅಂಶವು ಉಪಯೋಗವಾಗದೆ ಹೊರಗೆ ಬರುತ್ತದೆ ಇಂಜಿನಿಯರರು, ಈ ಅವಗುಣಗಳನ್ನು ನಿವಾರಿಸಲು ಪ್ರಯತ್ನಪಟ್ಟು ಜಯಶೀಲರಾದರೆ, ಈಗ ಗೆಲನಿಗೆ ೧೫ ಮೈಲುಗಳು ಪ್ರಕಾರ ನಡೆಯುವ ಮೋಟಾರು ವಾಹನಗಳು ಗೆಲನಿಗೆ ೪೫ ಮೈಲುಗಳ ಪ್ರಕಾರ ನಡೆಯಬಹುದು ಕಾರ್ಬನ್ ಮೊನೊಕ್ಸೈಡ್ ಎಂಬ ವಿಷಕರ ಗೇಸೊಂದು ಈಗಿನ ಮೋಟರು ಇಂಜಿನುಗಳಿಂದ ಉಂಟಾಗುತ್ತದೆ ಈ ಗೇಸಿನಿಂದ ಮನುಷ್ಯನಿಗೆ ಬಹಳ ಹಾನಿ ಇದೆ ಇದರಿಂದಲೆ ಮೋಟಾರುಗಳಲ್ಲಿ ಸಂಚರಿಸುತ್ತಿರುವಾಗ, ಕೆಲವರಿಗೆ ಕಾರುವುದು, ತಲೆತಿರುಕ ಇತ್ಯಾದಿ ಉಂಟಾಗುವುದು ಈ ತೊಡಕೊಂದು ಮೋಟಾರುವಾಹನಗಳಿಂದ ಹೋಗಬೇಕಾಗಿದೆ.

ಕೃತಕ ರಬ್ಬರನ್ನು ತಯಾರಿಸುವುದು

ಸಂಯುಕ್ತ ಅಮೇರಿಕಾ ದೇಶಕ್ಕೆ ಮೋಟರು ಟಾಯರು ಇತ್ಯಾದಿ ವಿವಿಧ ಸಾಮಾನುಗಳನ್ನು ತಯಾರಿಸಲು, ಒಂದು ವರ್ಷಕ್ಕೆ ೫ ಮಿಲಿಯ ಟನ್ನು ರಬ್ಬರು ಬೇಕಾಗಿದೆ. ಕೃತಕ ರಬ್ಬರನ್ನು ತಯಾರಿಸಲು, ಉಪಾಯಗಳು ಕಂಡುಹಿಡಿಯಬೇಕಾಗಿ ಇಲ್ಲಿನ ಅನೇಕ ರಸಾಯನ ಶಾಸ್ತ್ರಜ್ಞರು ಶ್ರಮಪಡುತ್ತಿದ್ದಾರೆ ಇದರಲ್ಲಿ ಯಾವ ಮೂಲ ಧಾತುಗಳು ಕೂಡಿವೆ, ಯಾವ ರೀತಿಯಲ್ಲಿ ಕೂಡಿವೆ ಎಂದು ಕಂಡುಹಿಡಿದಿದ್ದಾರೆ ಅದೇ ಪ್ರಕಾರ ಅವುಗಳನ್ನು ಕೂಡಿಸಿ, ರಬ್ಬರನ್ನು ತಯಾರಿಸುವ ಉಪಾಯಗಳನ್ನು ಕಂಡುಹಿಡಿದಿರುವರು ಆದರೆ ಪ್ರಕೃತಿಯ ರಬ್ಬರಿನ ಗುಣಗಳು ಇದಕ್ಕೆ ಬರುವುದಿಲ್ಲ ೧೯೩೫ರಲ್ಲಿ ಜರ್ಮನಿಯ ಓರ್ವ ವಿಜ್ಞಾನಿಯು, ಕೃತಕ ರಬ್ಬರಿಂದ ಒಂದು ಟಾಯರನ್ನು ತಯಾರಿಸಿದ್ದನು ಇದು ಒಂದು ಸಾವಿರ ಮೈಲುಗಳ ತನಕ ಬಾಳಿತು ಹೀಗೆ ಅಮೇರಿಕಾದಲ್ಲಿ ಅನೇಕ ತರದ ಕೃತಕ ರಬ್ಬರು ತಯಾರಾಗುತ್ತದೆ ಅವುಗಳಿಂದ ಒಡವೆಗಳನ್ನೂ ತಯಾರಿಸಿದ್ದಾರೆ ಆದರೆ, ಈ ರಬ್ಬರಿಗೆ ನಿಜವಾದ ರಬ್ಬರಿನ ಗುಣಗಳನ್ನು ತರಿಸಲು ವಿಜ್ಞಾನಿಗಳಿಗೆ ಸಾಧ್ಯವಾಗಲಿಲ್ಲ ಈ ಕುರಿತು ಶೋಧನಾಕಾರ್ಯಗಳನ್ನೂ ಈಗಲೂ ನಡೆಸುತ್ತಿದ್ದಾರೆ ಸಾಧಾರಣ ಇನ್ನೊಂದು ಶತಮಾನದಲ್ಲಿ ಪ್ರಕೃತಿಯ ರಬ್ಬರಿನ ಗುಣಗಳಿಂದ ಕೂಡಿದ ಕೃತಕ ರಬ್ಬರನ್ನು ತಯಾರಿಸಲು ಸಾಧ್ಯವಾಗುವುದು

ಮಿಶ್ರಲೋಹಗಳು

ಕೈಗಾರಿಕಾ ಯುಗವು ಮೂಡಿದಂದಿನಿಂದ ಅನೇಕ ಯಂತ್ರೋಪಕರಣಗಳ ಸಿದ್ಧತೆಯಲ್ಲಿ, ಅನೇಕ ತರದ ಮಿಶ್ರಲೋಹಗಳು ಜನಿಸಿದವು ಅತೀ ವೇಗದಿಂದ ಚಲಿಸುವ ಮೋಟಾರ ಇಂಜಿನಿನಲ್ಲಿ ಅನೇಕ ಮಿಶ್ರಲೋಹಗಳ ಉಪಯೋಗವಾಗುತ್ತವೆ ವಿಮಾನಗಳು ಹಗುರವಾಗಲು, ಕೆಲವು ಮಿಶ್ರಲೋಹಗಳೇ ಹೊಣೆಯಾಗಿರುವುವು ಈಗ ವಾಡಿಕೆಯಲ್ಲಿರುವ ಇಂಜೀನಗಳ ಆಯುಷ್ಯವು ಈ ಮಿಶ್ರಲೋಹಗಳ ಮೇಲೆ ಹೊಂದಿಕೊಂಡಿದೆ ಒಂದು ಇಂಜಿನಿನ ಪಿಸ್ತನು, ಬೇರಿಂಗ್ ಇತ್ಯಾದಿ ಭಾಗಗಳ ಬಾಳ್ವಿಕೆಯು ಅದರ ಅವುಗಳಲ್ಲಿ ಉಪಯೋಗವಾಗುವ ಲೋಹಗಳ ಮೇಲೆ ಹೊಂದಿಕೊಂಡಿದೆ ಆದರೆ ಈಗಿನ ಅನುಭವದಂತೆ, ಇನ್ನೂ ಶ್ರೇಷ್ಠತರದ ಮಿಶ್ರಲೋಹಗಳು ನಮಗೆ ಬೇಕಾಗಿವೆ ಇಷ್ಟರ ತನಕ ೧೦,೦೦೦ ಮಿಶ್ರಲೋಹಗಳು ತಯಾರಾಗಿವೆ ಈ ಬಾಬಿನಲ್ಲಿ ಶೋಧನಾಕಾರ್ಯವು ನಡೆದರೆ, ಇಂಜೀನು ಇತ್ಯಾದಿಗಳ ಆಯುಷ್ಯವನ್ನು ಬಹಳವಾಗಿ ಹೆಚ್ಚಿಸಬಹುದು ಇನ್ನೊಂದು ಶತಮಾನದಲ್ಲಿ ಒಂದು ಶತಮಾನ ಕಾಲ ಬಾಳುವ ಇಂಜೀನು ಇತ್ಯಾದಿ ಯಂತ್ರಗಳು ತಯಾರಾಗಬಹುದು

ಕೈಗಾರ ನಗರಗಳು

ಕೈಗಾರ ನಗರಗಳಲ್ಲಿ ನಡೆಯುತ್ತಿರುವ ಕಾರ್ಖಾನೆಗಳಲ್ಲಿ ಕಲ್ಲಿದ್ದಲಿನ ಉಪಯೋಗ ಬಹಳ ದಿನನಿತ್ಯವೂ ಧಾರಾಳ ಕಲ್ಲಿದ್ದಲನ್ನು ಇಲ್ಲಿ ಉರಿಸುತ್ತಿದ್ದಾರೆ ಈ ಕಾರ್ಖಾನೆಗಳ ಚಿಮಿಣಿಗಳಿಂದ ಕಲ್ಲಿದ್ದಲಿನ ಹೊಗೆಯು, ನಗರಗಳ ವಾಯುಮಂಡಲಗಳಲ್ಲಿ ಪ್ರಸರಿಸುತ್ತದೆ ಈ ನಗರಗಳಲ್ಲಿ ವಾಸಿಸುತ್ತಿರುವ ಜನರ ಶ್ವಾಸಕೋಶಗಳಲ್ಲಿ ಈ ಹೊಗೆಯು ಸೇರುತ್ತದೆ ಇಲ್ಲಿನ ಜನರ ಆಯುಷ್ಯವು ಕಡಿಮೆಯಾಗುತ್ತದೆ ಈ ಹೊಗೆಯಲ್ಲಿ ಅನೇಕ ವಿಷದ್ರಾವಕಗಳು ಕೂಡಿವೆ ಸಂಯುಕ್ತ ಅಮೇರಿಕದ ಚಿಕಾಗೊ ನಗರವು ಒಂದು ದೊಡ್ಡ ಕೈಗಾರ ಪ್ರದೇಶವು. ಇಲ್ಲಿ ಒಂದು ದಿವಸಕ್ಕೆ ೨೫೦೦ ಟನ್ನು ಸಲ್ಫ್ಯೂರಸ್ ಎಸಿಡುಳ್ಳ ಹೊಗೆಯು ಅಲ್ಲಿನ ನಿವಾಸಿಕರ ಮೇಲೆ ಬೀಳುತ್ತದೆ ಹಾಗೆಯೇ ನಮ್ಮಲ್ಲಿನ ಕೈಗಾರಿಕಾ ನಗರಗಳಾದ ಕಲ್ಕತ್ತಾ, ಮುಂಬಾಯಿಯಲ್ಲೂ ಇದೇ ರೀತಿ ವಾಯುಮಂಡಳವು, ಕಾರ್ಖಾನೆಗಳ ಹೊಗೆಗಳಿಂದ ಕೂಡಿವೆ. ವಸ್ತ್ರ ಇತ್ಯಾದಿ ಸಾಮಾನುಗಳು ಬೇಗನೆ ಹಾಳಾಗುವುದು, ಮನೆಗಳ ವರ್ಣವು ಕೆಡುವುದು. ಮನುಷ್ಯನ ಶ್ವಾಸಕೋಶಗಳು ದುರ್ಬಲ ಹೊಂದುವುದು, ಈ ಹೊಗೆಯ ಕೆಲವು ಪರಿಣಾಮಗಳು ಈ ಸಂಕಷ್ಟವನ್ನು ನಿವಾರಿಸಬೇಕಾದರೆ, ಕಲ್ಲಿದ್ದಲನ್ನು ಹೊಗೆ ಬಾರದಂತೆ ಉರಿಸುವ ಉಪಾಯಗಳನ್ನು ಕಂಡುಹಿಡಿಯಬೇಕಾಗಿದೆ ಈ ಕುರಿತು ಶೋಧನಾಕಾರ್ಯಗಳು ಹಲವು ವರ್ಷಗಳಿಂದ ನಡೆಯುತ್ತವೆ ಇನ್ನೊಂದು ಶತಮಾನದಲ್ಲಿ ಹೊಗೆ ಇಲ್ಲದ ಕಾರ್ಖಾನೆ ಚಿಮಿಣಿಗಳು ವಾಡಿಕೆಗೆ ಬರುವುವು.

ಕೃತಕ ವಿಟೆಮಿನ್‌ಗಳು

ಮನುಷ್ಯನು ಆರೋಗ್ಯವಂತನಾಗಿ ಬಾಳಬೇಕಾದರೆ, ಆತನ ವಿಟೆಮಿನುಗಳನ್ನು ಸೇವಿಸಬೇಕೆಂದು, ವೈದ್ಯಕೀಯ ವಿಜ್ಞಾನಿಗಳು ಕಂಡುಹಿಡಿದಿರುವರು ಇಷ್ಟರ ತನಕ ಎಂಟು ವಿಟೆಮಿನುಗಳನ್ನು ಕಂಡುಹಿಡಿದಿದ್ದಾರೆ ಇವುಗಳಲ್ಲಿ ಮನುಷ್ಯನ ಆರೋಗ್ಯಕ್ಕೆ ಅತ್ಯಗತ್ಯವಾದ ೬ ಟು ಆಧಾರಗಳಿವೆ ಇವುಗಳು ಹೆಚ್ಚಾಗಿ ಕಾಯಿಪಲ್ಯಗಳಲ್ಲೂ, ಮಾಂಸ, ಮೀನು ಇತ್ಯಾದಿಗಳಲ್ಲೂ ಕೂಡಿಕೊಂಡಿವೆ ಆದರೆ ಈ ವಸ್ತುಗಳು ಸದಾ ಕಾಲವೂ ಸಿಕ್ಕುವ ದೇಶಗಳಲ್ಲ ಆದರೆ ಅಲ್ಲಿ ವಾಸವಾಗಿರುವ ಮಾನವರ ಆರೋಗ್ಯಕ್ಕಾಗಿ, ಇವುಗಳನ್ನು ಬೇರೆ ಬೇರೆಯಾಗಿ ತಯಾರಿಸಿ ಅವುಗಳು ಯಾವಾಗಲೂ ಎಲ್ಲಿಯೂ, ಮಾನವನ ಉಪಯೋಗಕ್ಕೆ ಸಿಕ್ಕುವ ಹಾಗೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ. ಈಗ ಇವುಗಳಲ್ಲಿ ಎರಡನ್ನು ಬೇರೆಯಾಗಿ ತಯಾರಿಸುತ್ತಿದ್ದಾರೆ ಇನ್ನು ೬ ವಿಟೆಮಿನುಗಳನ್ನು ತಯಾರಿಸುವ ಬಗೆಗಳನ್ನು ಹುಡುಕಬೇಕಾಗಿದೆ ಹಾಗೆಯೆ, ಮಾನವನ ಕೆಲವು ಭಯಂಕರ ರೋಗಗಳನ್ನು ನಿವಾರಿಸಲು, ಆತನ ಇಂದ್ರಿಯಗಳು ಸರಿಯಾಗಿ ಕಾರ್ಯ ನಡೆಸುವ ಹಾಗೆ ಮಾಡಲು, ಆತನಲ್ಲಿರುವ 'ಹಾರ್ಮೋನು' ಎಂಬ ವಸ್ತುಗಳು ಕಾರಣವೆಂದೂ, ಇವುಗಳನ್ನು ಆತನು ಬೇಕಾದಂತೆ ಸೇವಿಸಲು ತಯಾರಿಸುವ ಉಪಾಯವನ್ನು ಕಂಡ ಹಿಡಿದಿರುವರು ಆದರೆ ಈ ವಿಚಾರದಲ್ಲಿ ಇನ್ನೂ ಶೋಧನಾ ಕಾರ್ಯಗಳು ನಡೆಯಬೇಕಾಗಿದೆ ಅಂದರೆ ಇನ್ನೊಂದು ಶತಮಾನದಲ್ಲಿ, ಶ್ರೇಷ್ಠ ಬುದ್ಧಿವಂತರೂ, ಸರ್ವಾಂಗ ಸುಂದರರೂ, ಅಜಾನ ಭಾವ ... ನ ಸುಸ್ವರ ಸಂಖ್ಯೆಯು ಹೆಚ್ಚುವುದು (ಮನಸ್ಸಿನ ಮೇಲಿನ ಗುಣಗಳಿಗೆ ಹಾರ್ಮೋನು'ಗಳೆ ಕಾರಣ)

ಸಮುದ್ರದಿಂದ ಭಂಗಾರವನ್ನು ತಯಾರಿಸುವುದು

ಭೂಮಿಯ ಮೇಲ್ಭಾಗದ ಮುಕ್ಕಾಲಂಶವು ಸಮುದ್ರವು ನಮಗೆ ಬೇಕಾಗುವ ಉಪ್ಪು ಇತ್ಯಾದಿ ಲವಣಗಳು ಸಮುದ್ರದಿಂದ ಬರುತ್ತವೆ ಸಮುದ್ರದ ಶೇಕಡಾ ೩ ಸಲೆ ಅಂಶವು ಘನಪದಾರ್ಥವಾಗಿದೆ ಇದರಲ್ಲಿ ಶೇಕಡಾ ೪೦ ಸಲೆ ಭಾಗವು ನಿತ್ಯವೂ ಉಪಯೋಗಿಸುವ ಉಪ್ಪಾಗಿರುತ್ತದೆ ಸಮುದ್ರದ ನೀರಿನಲ್ಲಿ ಎಲ್ಲಾ ಲೋಹಗಳು ಕೂಡಿವೆ ಕೆಲವು ವರ್ಷಗಳ ಹಿಂದೆ, ಓರ್ವ ಜರ್ಮನ್ ವಿಜ್ಞಾನಿಯು ಅನೇಕ ಕಡೆಗಳ ಸಮುದ್ರದ ನೀರನ್ನು ಪರೀಕ್ಷಿಸಿ ಅವುಗಳಲ್ಲೆಲ್ಲಾ ಭಂಗಾರವಿರುವುವೆಂದು ಕಂಡುಹಿಡಿದಿರುವನು ಶೀತ ಸಾಗರದಲ್ಲಿ ಭಂಗಾರದ ಅಂಶವು ಹೆಚ್ಚಾಗಿದೆ ಸಮುದ್ರದಿಂದ ಭಂಗಾರ ತಯಾರಿಸುವ ಉಪಾಯಗಳು ಮುಂದಿನ ಶತಮಾನದಲ್ಲಿ ಹೊರಬರುವುವು. ಅತಿ ಸುಲಭದಿಂದ, ಸಮುದ್ರದಲ್ಲಿರುವ ಈ ಲೋಹವನ್ನು ಪಡೆಯುವ ಉಪಾಯಗಳು ಜನಿಸಬಹುದು. ಅಂದರೆ ಮುಂದಿನ ಶತಮಾನದಲ್ಲಿ ಸಮುದ್ರವು ವಿಜ್ಞಾನಿಗಳಿಗೆ ಶೋಧನಾಕಾರ್ಯಗಳನ್ನು ನಡೆಸಲು ಒಂದು ಮಹಾವಕಾಶಸ್ಥಳವಾಗುವುದು. ಸುಮ್ಮನೆ ಭೋರ್ಗರೆಯುತ್ತಿರುವ ಸಮುದ್ರವು ಮಾನವನ ಒಂದು ಮಹಾ ಆಸ್ತಿಯಾಗಲೂಬಹುದು.

ಕತ್ತಲೆಯಲ್ಲಿ ಕಾಣಿಸುವುದು

ಕತ್ತಲೆಯಲ್ಲಿ ಕಾಣಿಸುವುದು, ನವೀನವಾಗಿ ಕಂಡುಹಿಡಿದಿರುವ ಒಂದು ಟೆಲಿಸ್ಕೋಪ್ ಯಂತ್ರದಿಂದ ಸಾಧ್ಯವಾಗುತ್ತದೆ. ಈ ಉಪಕರಣದಲ್ಲಿ, ಅಗೋಚರವಾದ 'ಇನ್‌ಫ್ರಾರೆಡ್ ರೆಸ್' ಎಂಬ ಪ್ರಕಾಶ ರಶ್ಮಿಗಳನ್ನು ಗೋಚರ ಮಾಡುವ ಯೋಗ್ಯತೆಗಳಿವೆ ಕತ್ತಲೆಯಲ್ಲಿರುವ ವಸ್ತುಗಳಿಂದ, ಹುಟ್ಟಿದ, ಈ 'ಇನ್‌ಫ್ರಾರೆಡ್' ಪ್ರಕಾಶವು, ಈ ಯಂತ್ರವನ್ನು ಸೇರಿ, ಅದಲ್ಲಿರುವ ವಿದ್ಯುತ್‌ಚಕ್ತಿಯಿಂದ ನಡೆಯುವ ಒಂದು ವಿಚಿತ್ರ ಯೋಜನೆಯಿಂದ, ಪ್ರಕಾಶಗೊಳಿಸಿ ಆ ವಸ್ತುಗಳನ್ನು ನಮ್ಮ ಕಣ್ಣುಗಳಿಗೆ ಗೋಚರವಾಗುವಂತೆ ಮಾಡುತ್ತದೆ ಈ ಯಂತ್ರದಲ್ಲಿ 'ಇನ್‌ಫ್ರಾರೆಡ್ ರೆ'ಗಳು ತಯಾರಾಗುತ್ತವೆ ಕತ್ತಲೆಯಲ್ಲಿ ಚಲಿಸುತ್ತಿರುವ ನೌಕೆಗಳಿಗೂ, ವಿಮಾನಗಳಿಗೂ, ದಾರಿಯನ್ನು ಸರಿಯಾಗಿ ನೋಡಿಕೊಂಡು ಅಪಾಯಗಳಿಂದ ಹೊರಗಾಗಲು ಈ ಯಂತ್ರವು ಸಹಕಾರಿಯಾಗುವುದು ಕಗ್ಗತ್ತಲೆಯ ರಾತ್ರೆಗಳಲ್ಲಿ, ಈ ಯಂತ್ರದಿಂದ 'ಇನ್‌ಫ್ರಾರೆಡ್' ಅಗೋಚರವಾದ ಪ್ರಕಾಶವನ್ನು ಹೊರಡಿಸಿ, ಅತಿ ದೂರದಲ್ಲಿರುವ ವಸ್ತುಗಳನ್ನು ನೋಡಬಹುದು ಈ 'ಇನ್‌ಫ್ರಾರೆಡ್' ಪ್ರಕಾಶದಿಂದ, ಸಾಧಾರಣ ಪ್ರಕಾಶದಿಂದ ನೋಡಲು ಸಿಗದ ವಸ್ತುಗಳನ್ನು ನಾವು ನೋಡಬಹುದು. ಇದರಿಂದ, ರೋಗದ ಕ್ರಿಮಿಗಳ ಮತ್ತು ನಮ್ಮ ಟಿಶ್ಯೂಗಳ ಪರೀಕ್ಷೆ ಚೆನ್ನಾಗಿ ನಡೆಸಲು, ಅಂದರೆ ಎಲ್ಲಾ ಅವಯವಗಳನ್ನು ಸರಿಯಾಗಿ ನೋಡುವ, ಒಂದು ಮಾಕ್ರೊಸ್ಕೋಪ್ ಯಂತ್ರವನ್ನು ತಯಾರಿಸಿ, ಈಗ ಮನುಷ್ಯನ ತಿಳುವಳಿಕೆಯ ಹೊರಗಿರುವ ಅನೇಕ ನವಸಂಗತಿಗಳನ್ನು ತಿಳಿದುಕೊಳ್ಳಬಹುದು. ಈ ಯಂತ್ರವು ಮಾನವವರ್ಗಕ್ಕೆ ಬಹಳ ಉಪಯುಕ್ತವಾಗುವುದು

ಕಣ್ಣುಗಳನ್ನು ಕಟ್ಟಿ ವಿಮಾನವನ್ನು ಚಲಿಸುವುದು

ನವೀನವಾಗಿ ಕಂಡುಹಿಡಿದಿರುವ ರೇಡಿಯೊ ಶಕ್ತಿಯಿಂದ, ನಮಗೆ ಆಕಾಶವಾಣಿ ಟೆಲಿವಿಶ್ಯನ್ (ಇಂಗ್ಲಾಂಡಿನಲ್ಲಿರುವವರನ್ನು ಹಿಂದೂದೇಶದಲ್ಲಿ ಕಾಣುವುದು) ಮಾತಾಡುವ ಚಲಚಿತ್ರ, ತಂತಿಗಳಿಲ್ಲದ ಟೆಲಿಫೋನು—ಇತ್ಯಾದಿ ಹಲವು ಉಪಕರಣಗಳು ದೊರಕಿವೆ ಇಷ್ಟೆ ಅಲ್ಲ, ಈ ರೇಡಿಯೋ ಶಕ್ತಿಯಿಂದ, ಅನೇಕ ಅದ್ಭುತ ಕಾರ್ಯಗಳನ್ನು ನಡೆಸಲು ಸಾಧ್ಯವಾಗುತ್ತದೆ ಮೋಟಾರು ವಾಹನಗಳನ್ನೂ, ರೈಲ್ವೆ ಟ್ರೇನುಗಳನ್ನೂ, ಹಡಗಗಳನ್ನೂ, ಮನುಷ್ಯರ ಸಹಾಯವಿಲ್ಲದೆ, ಒಂದೆಡೆಯಲ್ಲಿ ಕೂತುಕೊಂಡು, ಸುರಕ್ಷಿತವಾಗಿ ಚಲಿಸಬಹುದು. ಹಾಗೆಯೇ, ಕಣ್ಣುಕಟ್ಟಿ ವಿಮಾನಗಳನ್ನು ಚಲಿಸಲೂ ಈ ರೇಡಿಯೋ ಶಕ್ತಿಯಿಂದ ಸಾಧ್ಯವಾಗುತ್ತದೆ ವಿಮಾನಗಳಲ್ಲಿ ಅನೇಕ ಸೂಚನಾ ಯಂತ್ರಗಳಿವೆ ಅದರಲ್ಲಿ ಮುಖ್ಯವಾದುದು ರೇಡಿಯೊ ಗ್ಲೀಮ ... ವಿಮಾನವನ್ನು ಚಲಿಸುವವನಿಗೆ, ವಿಮಾನದ ಒಳಗಿರಿಸಿ, ಆತನ ಕಣ್ಣುಗಳಿಗೆ ಯಾವತ್ತೂ ವಸ್ತುಗಳು ಗೋಚರವಾಗದಂತೆ, ಮುಚ್ಚಿಡುವರು. ಭೂಮಿಯ ಮೇಲಿರುವ ರೇಡಿಯೋ ಸ್ಟೇಶನಿನಿಂದ (ರೇಡಿಯೊ ಗ್ಲಿಮಿನ ಮೂಲಕ) ಬರುವ ಬೋಧನೆಗಳನ್ನನುಸರಿಸಿಯೂ, ಮತ್ತು ಅಲ್ಲಿರುವ ಇತರ ಸೂಚಕ ಯಂತ್ರಗಳ ಸಹಕಾರದಿಂದಲೂ ಒಳಗಿರುವವನು ಏನೂ ಅಪಘಾತಗಳಿಲ್ಲದೆ ವಿಮಾನವನ್ನು ಚಲಿಸುವನು.

ಅರಿಸಿ ತೆಗೆದುದು

೧ ಕಳ್ಳತನಗಳು ಹೆಚ್ಚಾಗಿ ನಡೆಯುವುದು ಚಳಿಗಾಲದಲ್ಲಿ, ಕೊಲೆಗಳು ನಡೆಯುವುದು ಸೆಕೆಗಾಲದಲ್ಲಿ

೨ ಒಬ್ಬ ಮನುಷ್ಯನು ಮೂರು ವರ್ಷಗಳ ಸಮಯ ಮಾತಾಡಿದುದರಿಂದ, ಉಂಟಾದ ಶಕ್ತಿಯು, ಒಂದು ೫೦ ವೇಟಿನ ಇಲೆಕ್ಟ್ರಿಕ್ ಬಲ್ಬನ್ನು ಉರಿಸುವುದು

೩ ಜೇಡರ ಹುಳುಗಳಿಗೆ ರುಚಿಸುವ ಇಂದ್ರಿಯಗಳು ಅವುಗಳ ಕಾಲುಗಳಲ್ಲಿವೆ

೪ ೨೦೦೦ ಬಗೆಯ 'ಚಾ'ವಿದೆ

೫. ಆಲ್ಪ್ಸ್ ಪರ್ವತಗಳಲ್ಲಿ ಇರಿಸಿದ ಫ್ರೆಂಚರ ಸೈನಿಕರ ಟಪ್ಪಾಲು, ನಾಯಿಗಳು ಸಾಗಿಸುತ್ತವೆ

ಲೋಧ್ರ

ಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 1 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ಸಿಫಾಯಿಗಳ ಆಧಾರದಿಂದ ಸಾದ್ಯಶ್ಯಯುಸಿ ಸ್ವಾನುಭವಹೊಂದಿದ ಎಲ್ಲಾ ಔಷಧ ಮೂಲಿಕೆಗಳು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ,
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟು, ಮಂಗಳೂರು, ದ. ಕ.

ಚಿತ್ರಾದಿಸಹಿತ ಸಟೀಕ

ಋಗ್ವೇದೀ ಸಂಧ್ಯಾವಂದನೆ

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ ಪ್ರತಿಪದಾರ್ಥಟೀಕಾ ವಿಧಸಹಿತ

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕಾಂಟು.)

ವಿಳಾಸ— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಅಪರ ಧನ್ವಂತರಿ, ವೈದ್ಯರತ್ನ, ಆಯುರ್ವೇದ ಮಾರ್ತಾಂಡ, ಭಿಷಗ್ಮಣಿ ಪಂಡಿತ
ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಸ್ಪ್ಲೀನ್ ಮತ್ತು ಲಿವರ್ ವ್ಯಾಧಿಗೆ
ಶೀಘ್ರವಾಗಿ ಗುಣಮಾಡುವ ಅತ್ಯುತ್ತಮವಾದ ಔಷಧವು.

ಒಂದು ತಿಂಗಳಲ್ಲಿ ಅಮೋಘವಾದ ಗುಣ; ಇದು ಜಾಡ್ಯವನ್ನು ಗುಣಪಡಿಸವುದಲ್ಲದೆ ವ್ಯಾಧಿಯು ಬಾರದಂತೆ ತಡೆಮಾಡುವುದು.

ಕೋಟ್ಯಾನುಕೋಟಿ ವೈದ್ಯರಿಂದ ಮಕ್ಕಳಿಗೆ ಉಪಯೋಗಿಸಲ್ಪಡುತ್ತಿವೆ.

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.
ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು:—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

Ested 1920] **THE** [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್

ಪುತ್ತೂರು.

ಠೇವಣಾತಿಗಳ ದರ.

ಸಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.
ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur,
Dated 10—4—1935.

G. N. Lakshman Pai,
Secreatry

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK

LIMITED.

BUY ADVERTISED GOODS.

ದುಃಖಸೂಚನೆ.

ಶ್ರೀ ಯನ್. ದತ್ತಾತ್ರೇಯ ಮಲ್ಯರು ಇದೀಗ ಇಪ್ಪತ್ತೈದು ಪ್ರಾಯಕ್ಕೆ ಕಾಲಿಡುವ ನವಯುವಕರರಲ್ಲೊಬ್ಬರಾಗಿದ್ದು, ಸತ್ಯಾಗ್ರಹ ಚಳವಳದಲ್ಲಿ ತನ್ನ ಅಂಗಡಿಯನ್ನೆ ಮುಚ್ಚಿ ತುರಂಗವಾಸವನ್ನನುಭವಿಸಿರುವ ಖಾದೀಪ್ರಿಯ ಮಾತ್ರವಲ್ಲ, ಶುದ್ಧ ಆರ್ಯ ಧರ್ಮಾನುಯಾಯಿ ಶ್ರೀ ಯನ್. ತಿಮ್ಮಪ್ಪ ಮಲ್ಯರ ದಿವಂಗತ ಹಿರಿಯ ಅಣ್ಣನ ಏಕಮಾತ್ರ ಪುತ್ರರಾಗಿದ್ದು, ಬಾಲ್ಯಾರಭ್ಯದಿಂದಲೇ ಸ್ವದೇಶ, ಸ್ವಧರ್ಮಗಳ ಸೇವಾತತ್ಪರರಾಗಿದ್ದು ಕೊಂಗ್ರೆಸ್ ಚಳವಳಿಯ ಸಮಯ ನಾಗಸೇನೆಯ ಸದಸ್ಯನಾಗಿ ಸರಕಾರದ ಅನೇಕ ದಂಡನೆಗಳಿಗೂ ಒಳಗಾಗಿದ್ದರಲ್ಲದೆ, ಸದಾ ಖಾದೀ ವಸ್ತ್ರಭೂಷಿತರಾಗಿಯೂ, ಆರ್ಯ ಧರ್ಮ ಪ್ರಚಾರ ವಾಗ್ವಾದಗಳಲ್ಲಿಯೂ ಶಕ್ತಿಯುತರಾಗಿ ಹಿಂದಿ ಭಾಷೆಯ ಮಾಧ್ಯಮಿಕ ಪರೀಕ್ಷೆಯನ್ನೂ ಕೊಟ್ಟಿದ್ದರು. ಕೆಲವೊಂದು ಸಂಗಾತಿಗಳಿಂದಾಗಿ ಹಲವು ಭಿನ್ನ ಚೋದಗಳು ಇವರಲ್ಲಿದ್ದಾಗಲೂ, ಮುಖ್ಯವಾಗಿ ಇವರು ಗುಣಗ್ರಾಹಿಗಳಾಗಿದ್ದು ಒಂದು ತಿಂಗಳ ಹಿಂದೆ ಸೀರೇಶ್ವರದಲ್ಲಿ ಸ್ಥಾಪಿಸಲ್ಪಟ್ಟ 'ವಿವೇಕೋದಯ ಯುವಕಸಂಘ' ಸ್ಥಾಪಕರಲ್ಲಿ ಇವರೂ ಒಬ್ಬರಾಗಿದ್ದು, ಕೆಲವೊಂದು ಕಾರಣಗಳಿಂದ ಮುಂಬಾಯಿಗೆ ತೆರಳಿ ಅಲ್ಲಿ ಸ್ವಕಾರ್ಯನಿರತರಾಗಿದ್ದು, ಅಕಸ್ಮಿತವಾಗಿ ದೈವಾಧೀನರಾದ ಶ್ರೀ ಮಲ್ಯರವರ ಬಂಧುಮಿತ್ರರೆಲ್ಲರ ದುಃಖವು ದೂರವಾಗಿ ಮೃತರ ಆತ್ಮಕ್ಕೆ ಚಿರಶಾಂತಿಯೊದಗಲೆಂದು ಸೀರೇಶ್ವರ ಶ್ರೀ ವಿ. ಯು. ಸಂಘದ ಹಾರ್ದಿಕ ಪ್ರಾರ್ಥನೆ.

ಚಲನ ಚಿತ್ರಗಳು

ಅಮೇರಿಕದ 'ಹೊಲಿವುಡ್' ನಗರವು ಚಲಚ್ಚಿತ್ರಗಳ ತಯಾರಿಸುವಿಕೆಯಲ್ಲಿ ಈ ಜಗತ್ತಿನಲ್ಲಿ ಅತಿ ಶ್ರೇಷ್ಠವಾದುದಾಗಿರುತ್ತದೆ ಇಲ್ಲಿ ಪ್ರಪಂಚದ ಎಲ್ಲಾ ಜನಾಂಗಗಳ ನಟನಟಿಯರು, ಡೈರೆಕ್ಟರರೂ ಇರುವರು ಇಲ್ಲಿನ ಚಿತ್ರಗಳು ಸಮಸ್ತ ಭೂಮಂಡಲದ ಮೆಚ್ಚುಗೆಗೆ ಪಾತ್ರವಾಗುತ್ತವೆ ಇದರ ಪರಿಣಾಮವಾಗಿ ಇಲ್ಲಿನ ಚಲಚ್ಚಿತ್ರ ಸಂಸ್ಥೆಗಳು ಧಾರಾಳ ಲಂಪತ್ತನ್ನು ಶೇಖರಿಸುತ್ತವೆ ಹೀಗಾಗಿ ನಟನಟಿಯರಿಗೆ ಅತಿರೇಕವಾದ ಸಂಬಳಗಳು ದೊರಕುತ್ತವೆ ಇಲ್ಲಿನ ಓರ್ವ ಪ್ರಖ್ಯಾತ ನಟಿಗೆ ಕಳೆದ ವರ್ಷ ೬೫,೦೦೦ ಪೌಂಡು ಸಂಬಳ ದೊರಕಿರುತ್ತದೆ. ಸಿರಿಯ ಕೃಪಾಕಟಾಕ್ಷಕ್ಕೆ ಪಾತ್ರರಾದ ಇಲ್ಲಿನ ನಟನಟಿಯರು, ಸ್ವರ್ಗಸುಖವನ್ನು ಅನುಭವಿಸುತ್ತಿದ್ದಾರೆ ಹೊಲಿವುಡ್ ನಗರವನ್ನು ಇಂದ್ರಲೋಕವೆನ್ನಬಹುದು ರಾಜವೈಭವಗಳಿಗಿಂತ ಶ್ರೇಷ್ಠವಾದ ವೈಭವಗಳು ಇಲ್ಲಿವೆ ಈ ನಗರಕ್ಕೆ ಇಷ್ಟು ಶ್ರೇಯಸ್ಸು ಬರಲು ಕಾರಣವೇನು? ಇಲ್ಲಿ ಚಲಚ್ಚಿತ್ರಗಳು ಯಾವ ರೀತಿಗಳಲ್ಲಿ ಸಿದ್ಧವಾಗುತ್ತಿವೆ, ಎಂಬುದನ್ನು ಚಿತ್ರಿಸುವುದೆ ಈ ಲೇಖದ ಮುಖ್ಯ ಉದ್ದೇಶವಾಗಿರುತ್ತದೆ

ಹೊಲಿವುಡ್ ನಗರದಲ್ಲಿ ಜಗತ್ತಿನ ಅತ್ಯಂತ ವಿಶೇಷ ತರೆಬ ಮರುಳಾಟಗಳು ನಡೆಯುತ್ತವೆ ಇಲ್ಲಿ ನಡೆಯುವಷ್ಟು ಮರುಳಾಟಗಳು ಬೇರೆಲ್ಲೂ ಘಟಿಸುವುದಿಲ್ಲ ಕುದುರೆಯ ಬಾಲಕ್ಕೆ ಬಣ್ಣ ಹಾಕುವುದು, ಕೋಣದ ಎಲುಬುಗಳನ್ನು ಶುದ್ಧಪಡಿಸುವುದು, ಗಾಜಿನ ಪಾತ್ರೆಗಳನ್ನು ಒಡೆದು ಹಾಕುವುದು, ಅಂಗಿಗಳ ಮೇಲೆ ರಕ್ತದಗುರ್ತುಗಳನ್ನು ಮಾಡುವುದು, ಪ್ರಕೃತಿಯ ಫಲಗಳಿಗೆ ಹೊಳಪು ಕೊಡುವುದು, ಪ್ರಕೃತಿಯ ಹೂಗಳ ಬಣ್ಣಗಳನ್ನು ಬದಲಾಯಿಸುವುದು, ಜೇಡರ ಬಲೆಗಳನ್ನು ನಿರ್ಮಿಸುವುದು ಪಕ್ಷಿಗಳಂತೆ ಕೂಗುವುದು, ಮೃಗಗಳಂತೆ ಗರ್ಜನೆ ಹಾಕುವುದು, ತಿಗಣೆಗಳನ್ನು ಹಿಡಿಯುವುದು, ಸರ್ಪ ಕಡಿತಗಳನ್ನು ಅನುಭವಿಸುವುದು, ಇವುಗಳು ಅಲ್ಲಿ ನಡೆಯುವ ಮರುಳಾಟಗಳಲ್ಲಿ ಕೆಲವು

ಒಂದು ಚಿತ್ರದ ಸಿದ್ಧತೆಯಲ್ಲಿ ಅನೇಕ ವಿಚಿತ್ರಕಾರ್ಯಗಳು ನಡೆಯುತ್ತವೆ ಕೆಮರಾಕ್ಕೆ ಯೋಗ್ಯವಾಗುವಂತೆ ದೃಶ್ಯಗಳನ್ನು ತಯಾರಿಸಲು ಕುದುರೆಯ ಬಾಲಕ್ಕೆ ಬಣ್ಣ ಹಾಕಬೇಕಾಗುವುದು ಪ್ರಕೃತಿಯ ಹೂಗಳ ಬಣ್ಣ ಬದಲಾಯಿಸಬೇಕಾಗುವುದು ಹೆರೊಲ್ಡ್ ಲಾಯಿಡನು ನಟಿಸುತ್ತಿರುವ ಒಂದು ಚಿತ್ರದ ಸಿದ್ಧತೆಯಲ್ಲಿ ಒಂದು ಕುದುರೆಯ ಬಾಲದ ನಿಮಿತ್ತ ಕಲಹವುಂಟಾಯಿತು ಅದು ಕೆಮರಾದಲ್ಲಿ ಸರಿಯಾಗಿ ಚಿತ್ರಿಸಲ್ಪಡುವುದಿಲ್ಲವೆಂದು ಫೊಟೋಗ್ರಾಫರರ ವಾದ, ಹಾಗೂ ಹೀಗೂ ಅರ್ಧ ತಾಸಿನ ಮಾತುಕತೆ ನಡೆದು, ಕೊನೆಗೆ ಕೆಮರಾಕ್ಕೆ ಯೋಗ್ಯವಾದ ರೀತಿಯಲ್ಲಿ ಕುದುರೆಯ ಬಾಲದ ಬಣ್ಣ ಬದಲಾವಣೆಮಾಡಲಾಯಿತು

ಇತರ ಕಡೆಗಳಲ್ಲಿ ವಿಚಿತ್ರವೆನಿಸುವ ಉದ್ಯಮಗಳು, ಹೊಲಿವುಡ್ ನಗರದಲ್ಲಿ ಸಹಜವಾದುವುಗಳಾಗಿವೆ ಇಲ್ಲಿ, ಮೃಗ ಇತ್ಯಾದಿ ಜೀವಾದಿಗಳನ್ನು ಬಾಡಿಗೆ ಕೊಡುವ, ೫೦೦ ಮ್ಯಾನೇಜರಿದ್ದಾರೆ ಕೆಲವು ಪ್ರಾಣಿಗಳಿಗೆ ದಿನ ಒಂದರ ೩೦೦ ರೂಪಾಯಿ ಬಾಡಿಗೆ ಬರುವುದೂ ಉಂಟು ಇಲ್ಲಿನ ಸ್ಟುಡಿಯೊಗಳಿಗೆ (ಚಿತ್ರಗಳನ್ನು ತಯಾರಿಸುವ ಸ್ಥಳ) ಬೇಕಾದ ಯಾವತ್ತು ಜೀವಿತ ವಸ್ತುಗಳನ್ನು ಹಿಡಿದುತರಲು ಅನೇಕರು ಸಿದ್ಧರಿದ್ದಾರೆ ಹಣ ಗಳಿಸುವುದಕ್ಕಾಗಿ. ~~ಕೆಲಸಮಯದ ಹಿಂದೆ ಇಲ್ಲಿನ ಒಂದು ಸಂಸ್ಥೆಗೆ,~~ ಒಂದು ಚಿತ್ರದ ಸಿದ್ಧತೆಗಾಗಿ ೫೦೦ ಮಿಡಿತೆಗಳು, ೨೫೦ ಕಪ್ಪೆಗಳು, ಕೆಲವು ತಿಗಣೆಗಳು, ೧೦೦೦ ಜೇಡರ ಹುಳುಗಳು ಇತ್ಯಾದಿ ಕೆಲವು ಜಂತುಗಳು ಬರೆ ೪೮ ತಾಸಿನೊಳಗೆ ಬೇಕಾದುವು ಮನೆಮನೆಗಳನ್ನು ತಿರುಗಿ ತಿಗಣೆಗಳಿದ್ದ ಮಂಚಗಳನ್ನು ಒಳ್ಳೆ ಮಂಚಗಳಿಗೆ ಬದಲಾಯಿಸಿ, ಮನೆಯ ಮಾಡುಗಳನ್ನು ಸಂಚರಿಸಿ, ಮೈದಾನು ಸ್ಥಳಗಳನ್ನು ಸಂಚರಿಸಿ, ಮೇಲಿನ ಜೀವಾದಿಗಳನ್ನು ಒಟ್ಟುಗೂಡಿಸಿ, ಒದಗಿಸಲಾದುವು ನಮ್ಮನ್ನು ಕಾಡುತ್ತಿರುವ ಸೊಳ್ಳೆಗಳಿಗೂ, ತಿಗಣೆಗಳಿಗೂ ಇಲ್ಲಿ ಒಂದೊಂದು ಸಾರಿ ಭಾರೀ ಕ್ರಯಬರುವ ಸಂಭವಗಳಿವೆ. ತಮ್ಮ ಹಾಸಿಗೆಯಲ್ಲಿರುವ ತಿಗಣೆಗಳಿಂದಲೂ, ಕಪಾಟಿನಲ್ಲಿ ತಿರುಗುತ್ತಿರುವ ಜಿರಳೆಗಳಿಂದಲೂ ಜೇಡರ ಹುಳಗಳಿಂದಲೂ ಶ್ರೀಮಂತರಾಗುವ ಸಂಭವಗಳು ಇಲ್ಲಿ ದೊರಕುತ್ತವೆ ಹೀಗೆ ವಿಚಿತ್ರ ಉದ್ಯಮ ನಡೆಯಿಸಿ ಜೀವನ ಸಾಗಿಸುವವರು ಅನೇಕರು ಹೊಲಿವುಡ್ಡಿನಲ್ಲಿರುವರು

ಸ್ಟುಡಿಯೊದಲ್ಲಿ ನಡೆಯುತ್ತಿರುವಾಗ (ಚಲಚ್ಚಿತ್ರಗಳನ್ನು ತೆಗೆಯುತ್ತಿರುವಾಗ) ಅದರ ಹಲಗೆಗಳಿಂದ ನಿರ್ಮಿತವಾದ ನೆಲದಿಂದ ಯಾವತ್ತೂ ಶಬ್ದವು ಉಂಟಾಗಬಾರದು ಚಿತ್ರದ ಕಾರ್ಯವು ಪ್ರಾರಂಭವಾಗುವ ಮೊದಲು ಒಂದು ಯಂತ್ರದಿಂದ ಶಬ್ದಬರುವ ಸ್ಥಳಗಳನ್ನು ಹುಡುಕಾಡಿ ಸರಿಪಡಿಸುವ ಒಬ್ಬ ಪ್ರವೀಣ ಬಡಗಿಯು ನೆಲವನ್ನು ಸರಿಪಡಿಸುವನು ಈ ಕೆಲಸಕ್ಕಾಗಿ ಆತನಿಗೆ ಒಳ್ಳೇ ಸಂಬಳ ಸಿಕ್ಕುತ್ತದೆ

ಒಬ್ಬನಿಗೆ ಸಾಮಾನುಗಳು ಹಾಳಾಗದಂತೆ ನೋಡುವ ಕೆಲಸವಿರುವಾಗ, ಇನ್ನೊಬ್ಬನಿಗೆ ಅವುಗಳನ್ನು ಚೂರು ಚೂರು ಮಾಡುವ ಕೆಲಸವಿದೆ ಜಗಳಾಟ ಗದ್ದಲ ಇತ್ಯಾದಿ ಚಟಾಪಟಿ, ದೃಶ್ಯಗಳನ್ನು ನಿರ್ಮಿಸಲು ಒಡೆದ ಸಾಮಾನುಗಳು ಬೇಕಾಗಿವೆ ಒಳ್ಳೆ ಸಾಮಾನುಗಳನ್ನು ಇದಕ್ಕಾಗಿ ಒಡೆದುಹಾಕಬೇಕಾಗುವುದು ಈ ದೃಶ್ಯಗಳಿಗೆ ಈ ರೀತಿಯಲ್ಲಿ ಸ್ವಾಭಾವಿಕತ್ವವನ್ನು ಕೊಡುವರು ಈ ಕಾರ್ಯವು ಬಹಳ ನಾಜೂಕಾಗಿ ನಡೆಯುತ್ತದೆ

ಗತಿಸಿದ ಕಾಲದ ದೃಶ್ಯಗಳನ್ನು ತಯಾರಿಸುವುದು, ಇಲ್ಲಿನ ಇನ್ನೊಂದು ವಿಚಿತ್ರ ಹಳೆ ಮನೆಮಠ ಇತ್ಯಾದಿ ಸಾಮಾನುಗಳು ಈ ದೃಶ್ಯಗಳಿಗೆ ಬೇಕಾಗಿವೆ ಇವುಗಳನ್ನು ಬೆಂಕಿಯ ಸಹಾಯದಿಂದಲೂ, ಕೆಲವು ಬಣ್ಣ ಮತ್ತು ಕಪ್ಪು ಕರಿಯ ಸಹಾಯದಿಂದಲೂ ಸಿದ್ಧಪಡಿಸುತ್ತಾರೆ ಬೆಂಕಿಯಿಂದ ಒಂದು ಕಟ್ಟೋಣದ ಗೋಡೆಯ ಮೇಲಿನ ಕೆಲವೆಡೆಗಳ ಬಣ್ಣವನ್ನು ಮಾಸಿ ತೆಗೆಯುತ್ತಾರೆ ಕಟ್ಟೋಣಕ್ಕೆ ಬೇಕಾದ ಹಳೆ ರೂಪವನ್ನು ಬಣ್ಣಗಳಿಂದಲೂ, ಕರಿಯಿಂದಲೂ ಕೊಡುತ್ತಾರೆ ಈ ಕಟ್ಟೋಣಕ್ಕೆ ಬೇಕಾದ ಹಳೆ ಸಾಮಾನುಗಳನ್ನು ಒದಗಿಸಿಕೊಡುವವರಿದ್ದಾರೆ ಅರ್ಧ ಶತಮಾನದ ಹಿಂದಿನ ಒಂದು ಮನೆ, ಅದರ ಒಂದು ಕೋಣೆ ಮೊದಲಾದುವುಗಳನ್ನು ಈ ಮೇಲಿನ ಉಪಾಯಗಳಿಂದ ಸಿದ್ಧಪಡಿಸಬಹುದು. ಈ ಕಾರ್ಯದಲ್ಲಿ ಇವರು ಬಹಳ ಪ್ರವೀಣರಾಗಿರುತ್ತಾರೆ ದೃಶ್ಯಗಳನ್ನು ನೋಡಿದವರು ಅವುಗಳು ಕೃತಕ ದೃಶ್ಯಗಳೆಂದು ಹೇಳಲಾರರು

ಒಂದು ಚಿತ್ರದಲ್ಲಿ ಜೇಡರ ಬಲೆಗಳಿಂದ ಕೂಡಿದ ಒಂದು ಭೂತದ ಬಾಧೆಯಿರುವ ನಿರ್ಜನವಾದ ನಿಲಯವು ಬೇಕಾಗಿದ್ದರೆ, ಅದನ್ನು ಸಿದ್ಧಪಡಿಸುವ ಯೋಗ್ಯತೆಯೂ ಇಲ್ಲಿಯವರಲ್ಲಿದೆ ನಿರ್ಜನವಾದ ಮನೆಯು ಸಿದ್ಧವಾದೊಡನೆ ಮಾನವ ಜೇಡರ ಹುಳುವು ಬೇಕಾದ ಜೇಡರ ಬಲೆಗಳನ್ನು ಬಿಡಿಸುವುದು, ~~ಅಂದರೆ ಕೃತಕ ಜೇಡರ ಬಲೆಗಳನ್ನು ತಯಾರಿ~~ಸುವ ಒಂದು ಯಂತ್ರವನ್ನು ತಯಾರಿಸಿದ್ದಾರೆ. ಇದರಿಂದ ಬೇಕಾದ ಜೇಡರ ಬಲೆಗಳನ್ನು ತಯಾರಿಸಬಹುದು. ಈ ಉಪಾಯಗಳಿಂದ ಸಿದ್ಧವಾದ ಮೇಲಿನ ತರದ ಮನೆಗಳು ಪ್ರೇಕ್ಷಕರಲ್ಲಿ ಮೈ ಜುಮ್ಮೆನ್ನುಂಟುಮಾಡುತ್ತವೆ.

ಕೀರ್ತಿ ಪಡೆಯುವುದು ಪ್ರತಿಯೊಂದು ಫಿಲ್ಮ್ ಡೈರೆಕ್ಟರನ ಮುಖ್ಯ ಉದ್ದೇಶ. ಪ್ರತಿಯೊಂದು ಸಿನೆಮ ಮಂದಿರದಲ್ಲಿ ಕಾಣಿಸಿಕೊಂಡು ಪ್ರೇಕ್ಷಕರ ಪ್ರೀತಿಗೆ ಪಾತ್ರರಾಗುವುದು ಪ್ರತಿಯೋರ್ವ ನಟನಟಿಯರ ಕಾಂಕ್ಷೆ ಆದರೆ ಹೊಲಿವುಡ್ಡಿನಲ್ಲಿ ಅನೇಕ ಚಿತ್ರಗಳನ್ನು ತಯಾರಿಸಿ ಖ್ಯಾತಿಹೊಂದದಿರುವ ಡೈರೆಕ್ಟರಿರುವರು. ಇಪ್ಪತ್ತರ ಪ್ರೇಕ್ಷಕರ ಮುಂದೆ ಬಾರದ ನಟನಟಿಯರಿರುವರು ಇದರಲ್ಲಿ ಮೊದಲಿನವರು ಟೆಸ್ಟ್ ಡೈರೆಕ್ಟರರು. ಚಿತ್ರಗಳಿಗೆ ಬೇಕಾದ ನಟನಟಿಯರನ್ನು ತರಬೇತು ಮಾಡಿ ಪರೀಕ್ಷೆ ಮಾಡುವುದು ಇವರ ಉದ್ಯೋಗ ಅವರ ನಟನೆ ಬಣ್ಣ, ನಸ್ಯ ಮಾತು ಇತ್ಯಾದಿಗಳು ಆಯಾಯ ಕಥೆಗಳಿಗೆ ಒಪ್ಪುವವೆ ಎಂದು ಪರೀಕ್ಷಿಸುವುದು ಇವರ ಕೆಲಸ ಈ ಪರೀಕ್ಷೆಗಾಗಿ ಅತನು ಅನೇಕ ಚಿತ್ರಗಳನ್ನು ತೆಗೆಯುವನು ಇವುಗಳಲ್ಲಿ ಒಂದಾದರೂ ಪ್ರದರ್ಶಿಸಲ್ಪಡುವುದಿಲ್ಲ ಇವರ ಪರೀಕ್ಷೆಯಲ್ಲಿ ಶಿಫಾರಸುಹೊಂದಿದ ನಟನಟಿಯರನ್ನು ಮಾತ್ರ ಮತ್ತೆ ಆರಿಸುವರು ಕೊನೆಗೆ ಇವರು ತಯಾರಿಸಿದ ಚಿತ್ರಗಳು ತಿರಸ್ಕರಿಸಲ್ಪಡುತ್ತವೆ ಎರಡನೇಯವರ ಕುರಿತಾಗಿ ಒಂದು ಚಿತ್ರವನ್ನು ತೆಗೆಯುವ ಮೊದಲು ಕೆಮರಕ್ಕೆ ಸರಿಯಾಗುವಂತೆ ದೃಶ್ಯಗಳನ್ನು ಸರಿಪಡಿಸಬೇಕಾಗಿದೆ ಇದಕ್ಕೆ ಬಹಳ ಸಮಯ ತಗಲುತ್ತದೆ ಆಗ ಚಿತ್ರಗಳು ತೆಗೆಯಲಾಗುವುದಿಲ್ಲ ಬರೆ ಪರೀಕ್ಷಾ ಕಾರ್ಯವು ನಡೆಯುವುದು ಈ ಸಮಯ ನಟನಟಿಯರ ಚಿತ್ತವು ಬೇಸತ್ತು, ಕೊನೆಗೆ ಚಿತ್ರ ತೆಗೆಯುವ ಸಮಯವಲ್ಲವರು ನಿರುತ್ಸಾಹಿಗಳಾಗುವರು ಇದರಿಂದ ಚಿತ್ರವು ಕೆಡುವುದು ಹೀಗಾಗದಂತೆ ಈ ಸಮಯದಲ್ಲಿ ನಟನಟಿಯರ ಸ್ಥಳಗಳನ್ನು ತೆಗೆದುಕೊಳ್ಳಲು ಅವರದೆ ರೂಪವಿರುವ ಸ್ತ್ರೀಪುರುಷರಿರುವರು ಕೆಮರಾಕ್ಕೆ ಯೋಗ್ಯವಾದ ರೀತಿಯಲ್ಲಿ ದೃಶ್ಯಗಳನ್ನು ಸರಿಪಡಿಸುವ ಸಮಯ ದೃಶ್ಯದಲ್ಲಿರುವುದು ಇವರ ಕೆಲಸ ಚಿತ್ರ ತೆಗೆಯುವ ಸಮಯ ನಿಜವಾದ ನಟನಟಿಯರು ಬರುವರು

ಚಲನಚಿತ್ರಗಳಲ್ಲಿ ನಿಜವಾದ ಪುಷ್ಪಗಳ ಉಪಯೋಗವಾಗುವುದು ಬಹಳ ಅಪರೂಪ ದೃಶ್ಯಗಳಿಗೆ ಬೇಕಾದಂತೆ ಕೃತಕ ಪುಷ್ಪಗಳನ್ನು ತಯಾರಿಸುವರು ಈ ಕಾರ್ಯದಲ್ಲಿ ನಿಪುಣರಾದವರು ಅಲ್ಲಿ ಅನೇಕರಿದ್ದಾರೆ ಅವರಲ್ಲಿ ಶ್ರೇಷ್ಠನಾದೊವನೊಬ್ಬನು ಕೆಲವೆ ದಿನಗಳಲ್ಲಿ ವಿವಿಧ ವರ್ಣಗಳ ಮತ್ತು ಜಾತಿಯ ೧೦,೦೦೦ ಸಾವಿರ ಪುಷ್ಪಗಳ ಗೊಂಚಲುಗಳನ್ನು ತಯಾರಿಸಿದನು ಒಂದು ಚಿತ್ರಕ್ಕಾಗಿ ಈತನು ೭೫,೦೦೦ ಪುಷ್ಪಗಳನ್ನು ನಿರ್ಮಿಸಿದ್ದನಂತೆ ಕೆಲವು ಪುಷ್ಪಗಳು ಕೆಮರಾಕ್ಕೆ ಒಪ್ಪದುದರಿಂದಲೆ, ಚಿತ್ರಿಸಲು ಯೋಗ್ಯವಾಗುವಂತೆ ಹೂಗಳನ್ನು ತಯಾರಿಸುತ್ತಿದ್ದಾರೆ ಫಲ ಇತ್ಯಾದಿಗಳು ತೊಡಕುಗಳಿಲ್ಲದೆ ಬರುವಂತೆ ಅವುಗಳಿಗೆ ಹೊಳಪು ಕೊಡಬೇಕಾಗುತ್ತದೆ ಹೀಗಾಗಿ ಚಲನಚಿತ್ರದಲ್ಲಿ ಹೂವಾಗಲೂ, ಕೃತಕ ವಸ್ತುಗಳನ್ನೆ ಉಪಯೋಗಮಾಡಬೇಕಾಗುತ್ತದೆ

ಚಿತ್ರಗಳಿಗೆ ಬೇಕಾಗುವ ವಸ್ತುಗಳನ್ನು ಕೊಡುವ ವ್ಯವಸ್ಥೆಯು ಬಹಳ ವಿಚಿತ್ರವಾದುದು ಇದಕ್ಕಾಗಿ ಒಂದು ಇಲಾಖೆಯು ಕಾರ್ಯಸುತ್ತದೆ ಚಿತ್ರಕ್ಕೆ ಬೇಕಾಗುವ ವಸ್ತುಗಳು, ಯಾವತ್ತೂ ಸಮಯದಲ್ಲಿ ಇಲ್ಲಿ ಸಿಕ್ಕುತ್ತವೆ ಇಲ್ಲಿ ಎಲ್ಲಾ ತರದ ವಸ್ತುಗಳನ್ನು ಶೇಖರಿಸಿದೆ. ~~[illegible] ಒಂದು ಹಳೆ ಗುಂಡಿ ಬೇಕಾದರೂ~~ ಇಲ್ಲಿ ದೊರಕುತ್ತದೆ ನವೀನ ತರದ ವಿಸ್ಕಿ ಬಾಟಲಿಗಳು ದೊರಕುತ್ತವೆ ಯಾವುದಾದರೊಂದು ವಸ್ತು ಇಲ್ಲವೆಂಬ ಮಾತು ಇಲ್ಲಿಂದ ಬರುವುದು ಅತಿ ವಿರಳ.

ಈ ಚಲನಚಿತ್ರ ಸಂಸ್ಥೆಗಳಲ್ಲಿ ಬೆಳ್ಳಿಯ ಸಂಗ್ರಹ ಬಹಳ. ಪಾತ್ರೆ ಆಭರಣ, ಇತ್ಯಾದಿಗಳ ರೂಪದಲ್ಲ. ಕೆಮರಾದ ಫಿಲ್ಮನ್ನು ತೊಳೆಯುತ್ತಿರುವಾಗ, ಬೆಳ್ಳಿಯ ಲವಣಗಳು ನೀರಿನಲ್ಲಿ ತುಂಬಾ ಕರಗುತ್ತವೆ. ಈ ನೀರನ್ನು ಶೇಖರಿಸಿ, ವಿದ್ಯುತ್ ಶಕ್ತಿಯಿಂದ ಬೆಳ್ಳಿಯನ್ನು ವಿಂಗಡಿಸಬಹುದು ಅನೇಕ ಚಿತ್ರಗಳು ತಯಾರಾಗುತ್ತಿರುವಾಗ, ಬೆಳ್ಳಿಯ ರಾಶಿಯು ಹೆಚ್ಚುತ್ತದೆ ಒಂದೊಂದು ಸಂಸ್ಥೆಯಲ್ಲಿ ವರ್ಷ ಒಂದರ ೫೦ ಸಾವಿರ ರೂಪಾಯಿಯ ಬೆಳ್ಳಿಯು ಈ ರೀತಿಯಲ್ಲಿ ದೊರಕುತ್ತದಂತೆ

ಇಲ್ಲಿ ಸೇನಾಸಂಗ್ರಹವಿದೆ ವಿಚಿತ್ರ ಸಂಗ್ರಹವಿದು ಈ ಸೈನಿಕರು ಒಂದೇ ಒಂದು ಸಮರವನ್ನು ನಡೆಸಬೇಕಾದುದಿಲ್ಲ ಚಿತ್ರಗಳಲ್ಲಿ ಸೈನಿಕರಿರುವ ದೃಶ್ಯಗಳಲ್ಲಿ ಮಾತ್ರ ಇವರ ಉಪಯೋಗವಾಗುತ್ತದೆ ಈ ಸೈನ್ಯಮಂಡಳವನ್ನು ಬಹಳ ಶಿಸ್ತಿನಿಂದ ತರಬೇತು ಮಾಡುತ್ತಾರೆ ಇದರಿಂದಲೆ ಇವರ ದೃಶ್ಯಗಳು ನಿಜವಾದ ಘಟನೆಗಳಂತೆ ಕಾಣಿಸುವುವು

ಯಾವತ್ತು ರೀತಿಯಲ್ಲಿ ಪ್ರೇಕ್ಷಕರ ಮುಂದೆ ಬಾರದೆ, ಚಿತ್ರದ ತಯಾರಿಯಲ್ಲಿ ಅನೇಕರು ಭಾಗಿಯಾಗುತ್ತಾರೆ ಒಬ್ಬನು ಒಂದು ಚಿತ್ರಕ್ಕೆ ಬೇಕಾಗುವ ಎಲ್ಲಾ ತರದ ಪ್ರಾಣಿಗಳ ಕೃತಕ ಕೂಗುಗಳನ್ನು ಹಾಕಿ ಧಾರಾಳ ಹಣವನ್ನು ಗಳಿಸುವನು ಪ್ರಾಣಿಗಳನ್ನು ಚಿತ್ರದ ದೃಶ್ಯಗಳಿಗೆ ತಕ್ಕಂತೆ ತರಬೇತು ಮಾಡುವವರಿದ್ದಾರೆ ಈ ಕಾರ್ಯದಲ್ಲಿ ಪ್ರವೀಣರಾದವರು ಅಲ್ಲಿ ಅನೇಕರಿದ್ದಾರೆ ಬಹಳ ಹಿಂದಿನ ಕಾಲದ ತುಪಾಕಿ, ಕತ್ತಿ, ಡಾಲು, ಬಿಲ್ಲುಬಾಣಗಳನ್ನು ಒಟ್ಟುಗೂಡಿಸಿ, ಅವುಗಳನ್ನು ಈ ಸಂಸ್ಥೆಗಳಿಗೆ ಬೇಕಾದ ಸಮಯ ಬಾಡಿಗೆಗೆ ಕೊಡುವವರಿದ್ದಾರೆ

ಹೊಲಿವುಡ್ ನಗರದಲ್ಲಿ ಅನೇಕ ಕಡೆಗಳಲ್ಲಿ ~~ಚೀನಾ, ಜಪಾನ, ಜರ್ಮನಿ, ಫ್ರಾನ್ಸು ಇತ್ಯಾದಿ~~ ದೇಶಗಳ ಮುಖ್ಯ ನಗರಗಳಲ್ಲಿನ ಕೆಲವು ಪಟ್ಟಣಗಳನ್ನು ಹೋಲುವ ಪಟ್ಟಣಗಳಿವೆ ಇವುಗಳಿಂದ ಒಂದು ಕಥೆಯು ಪಟನೆಯು ವೆನಿಸ್ ನಗರದಲ್ಲಿ ನಡೆಯಬೇಕೆಂದಿದ್ದರೆ, ಅದನ್ನು ಕಡಿಮೆ ಕರ್ಚಿನಲ್ಲಿ ಸಮಯ ವಿಳಂಬವಾಗದೆ ಅಲ್ಲಿಯೆ ನಟಿಸುತ್ತಾರೆ.

ಹೊಲಿವುಡ್ಡಿನ ಚಿತ್ರಗಳ ತಯಾರಿಸುವಿಕೆಯ ವಿಷಯದ ಒಂದು ಗ್ರಂಥವನ್ನೆ ಬರೆಯಬಹುದು

೬ನೇ ಪುಟಕ್ಕೆ ಮುಂದಾಗುವುದು

ಶೀತವು ಯಾರಿಗೂ ಬೇಡವಾಗಿದೆ

ಶೀತವು ಸೀನುಗಳಿಗೂ ಕೆಮ್ಮುಗಳಿಗೂ ಉಗಮಸ್ಥಾನವಾಗಿದೆ ಇವೆರಡೂ ನಿಮ್ಮನ್ನು ಅಸ್ವಸ್ಥರನ್ನಾಗಿ ಮಾಡುವುದು ಖಾತ್ರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿ ಇದನ್ನೆಲ್ಲಾ ನೀಗಿರಿ. ಪೆಪ್ಸ್ ಗುಳಿಗೆಗಳನ್ನು ಸೇವಿಸಿದ ಕೂಡಲೆ ಅವುಗಳಿಂದ ಹೊರಡುವ ವಿಷಹಾರಿ ಸುವಾಸನೆಯು ವಾಯುವಿನ ಮೂಲಕ ಶ್ವಾಸಕೋಶಗಳಿಗೆ ಹೋಗಿ, ಅಲ್ಲಿ ವಿಷಾಣುಗಳನ್ನು ನಾಶಗೊಳಿಸಿ ಗಂಟಲು ನೋವನ್ನು ಗುಣಪಡಿಸುತ್ತದೆ ಕೆಮ್ಮು, ಶೀತ ಗಂಟಲುನೋವುಗಳಿಗೆ ಪೆಪ್ಸ್ ದಿವ್ಯೌಷಧಿ

ಬಾಟ್ಲಿ 1ಕ್ಕೆ ರೂ.1 ರಂತೆ ಎಲ್ಲಾ ಔಷಧಿ ಅಂಗಡಿಗಳಲ್ಲೂ ಮಾರಲ್ಪಡುತ್ತದೆ.

ಪೆಪ್ಸ್

PEPS

ಸ್ತನೋ ಸ್ತೇಧಃ

STHANO STHEDAH — THE MALAYALA OUSHADHA CO. POST CHALAPURAM MALABAR

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು ಮನುಷ್ಯನು ಹೆಂಗಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣಪರತ.

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ 'ಸ್ತನೋಸ್ತೇಧಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದಾರುಣವಾದ ಚಿಂತೆಯಿಂದಲೂ, ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲು ಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲುದು ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪೌಷ್ಟಿಕತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸಾಗೊಳಿಸಿ ಸ್ತನಗಳನ್ನು ಚಿತ್ತಾಕರ್ಷಕಗಳನ್ನಾಗಿ ಮಾಡುವುದು ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು ಇದರಿಂದ ಸಾಧಕ ವಿನಹ ಬಾಧಕವಿಲ್ಲ ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು ಅಂತಹ ಗುಣವನ್ನು ನೀವೂ ಪಡೆಯಿರಿ

ಸ್ತನೋ ಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ 8 ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ 8

ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ

1 ಮುಟ್ಟಿನದೋಷ 2 ಸಂತತಿ ಪ್ರತಿಬಂಧಕ, 3 ಧಾತುಪುಷ್ಟಿ, 4 ಲಿಂಗವೃದ್ಧಿ 5 ಸ್ತ್ರೀರೋಗ, 6 ಕ್ಷಯ ಸಂಹಾರಿ, 7 ವಾತರೋಗ

ಜನೇ ಭಟಿದಿಂದ ಮುಂದರಿಸಿದುದು

ಮೇಲೆ ಚಿತ್ರಿಸಿದ ರೀತಿಗಳಲ್ಲಿ ಚಿತ್ರಗಳನ್ನು ಸಿದ್ಧಪಡಿಸಿ, ಜನರನ್ನು ವಿಸ್ಮಯಗೊಳಿಸಿಯೂ, ಆನಂದಗೊಳಿಸಿಯೂ, ಭ್ರಮೆಗೊಳಿಸಿಯೂ ಇಲ್ಲಿನ ಚಿತ್ರಗಳು ಬಹಳ ಶ್ರೇಯಸ್ಸನ್ನು ಪಡೆದಿವೆ ಈ ತರದ ೭೦೦ ಚಿತ್ರಗಳು ಅಲ್ಲಿ ಒಂದು ವರ್ಷದಲ್ಲಿ ಸಿದ್ಧವಾಗುತ್ತವೆ. ಇವುಗಳು ಪ್ರಪಂಚದ ಎಲ್ಲಾ ಕಡೆಗಳಲ್ಲಿ ಪ್ರದರ್ಶಿಸಲ್ಪಟ್ಟು, ವ್ಯಯಿಸಿದ ಹಣಕ್ಕಿಂತ, ಅನೇಕ ಪಾಲು ಹೆಚ್ಚು ಹಣವನ್ನು ಈ ಸಂಸ್ಥೆಗಳು ಗಳಿಸುತ್ತವೆ ಹೊಲಿವುಡ್ಡಿನ ಚಿತ್ರಗಳಿಗೆ ಒಂದು ವಿಚಿತ್ರ ಆಕರ್ಷಣ ಶಕ್ತಿಯು ಇದೆ. ಹೊಲಿವುಡ್ಡಿನ ಚಿತ್ರಗಳು ಅವುಗಳ ವಿಶೇಷ ಯೋಗ್ಯತೆಗಳಿಂದ ಪ್ರಪಂಚದ ಬಾಲಕರಿಂದ ವೃದ್ಧರ ವರೆಗೆ ಎಲ್ಲರ ಪ್ರೀತಿಗೆ ಪಾತ್ರವಾಗಿವೆ ಇದರಿಂದಲೆ, ಹೊಲಿವುಡ್ ನಗರವು ಇಂದ್ರಲೋಕದಂತೆ ಮೆರೆಯುತ್ತಿದೆ

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ ಆ
ಹೊಸ ರಾಶಿ ಅಕ್ಕಿ	3— 4	3— 10
ಹೊಸ ಮುಸ್ಕಿ	3—10	4— 1
ಗುಡ್ಡು ಸುಗ್ಗಿ	3— 8	3—12
ಊರ ಅವ್ವಲ್ ಬೆಳ್ತಿಗೆ	4— 0	4— 8
ರಂಗೂನು ಬೆ. ಗೋ. ೧ಕ್ಕೆ	6— 4	7— 0
ಎಲ್ಲೂರು ಬೆ ಮು. ೧ಕ್ಕೆ	4— 4	4— 8
ಗೋದಿ ಗೋಣಿ ೧ಕ್ಕೆ	8 — 8	10— 4
ತೊಗರಿ ಗೋಣಿ ೧ಕ್ಕೆ	9 —0	9 — 8
ಹುರುಳಿ ಗೋಣಿ ೧ಕ್ಕೆ	5— 4	6 — 0
ಕಡಲೆ ಗೋಣಿ ೧ಕ್ಕೆ	7 — 4	9 — 6
ತೊಗರಿಬೇಳೆ ಗೋಣಿ ೧ಕ್ಕೆ	11— 0	15— 8
ಉದ್ದು ಗೋಣಿ ೧ಕ್ಕೆ	9— 8	10 — 0
ಹೆಸರು ಗೋಣಿ ೧ಕ್ಕೆ	9— 4	9—12
ಊರುಬೆಲ್ಲ ಖಂಡಿ ೧ಕ್ಕೆ	30— 0	35— 0
ಉಪ್ಪು ಗೋಣಿ ೧ಕ್ಕೆ	4— 8	4— 8
ಕೊಬ್ರಿ ಖಂಡಿ ೧ಕ್ಕೆ	60— 0	70— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	28— 0	29— 0
ಎಳ್ಳಿಂಡಿ ಖಂಡಿ ೧ಕ್ಕೆ	33 —12	36— 0
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	5— 0	6— 0
ಎಳ್ಳೆಣ್ಣೆ ಮುಡಿ ೧ಕ್ಕೆ	7— 0	7— 0
ಚಿಮಣಿಎಣ್ಣೆ ಪೆಟ್ಟಿಗೆ ೧ಕ್ಕೆ.	6— 5	6— 5
ಮೋರಿಸ ಸಕ್ಕರೆ ಮು. ೧ಕ್ಕೆ	3— 9	3 — 9
ಮೆಣಸು	2— 8	4— 0
ಸಾಸಿವೆ ಮುಡಿ ೧ಕ್ಕೆ	5 — 8	6— 0
ಕಾಳುಮೆಣಸು ಖ. ೧ಕ್ಕೆ	102— 8	105—
ಯೇಲಕ್ಕಿ ಬೀಜ ಮುಡಿ೧ಕ್ಕೆ	36— 0	39— 0
ಜೀರುಬೀಜ ಮು. ೧ಕ್ಕೆ	4— 6	4 — 8
ಕಬ್ಬಿಣ ಖಂಡಿ ೧ಕ್ಕೆ	35— 0	37— 8
ಕಾಂಪ್ರುಕಗಡು ಮು. ೧ಕ್ಕೆ	9— 12	9— 14
~~ಕಾಂಪ್ರುಕಾಶ್ರುಗಳು ಮು. ೧ಕ್ಕೆ~~	~~12— 8~~	~~14— 0~~
ಜೀರಿಬೆಳ್ಳಿ ಸೇರು ೧ಕ್ಕೆ	17— 8	18— 0
ಹುಣ್ಸೇ ಹಣ್ಣು ಮು. ೧ಕ್ಕೆ	10— 0	10—
ಪವನು ೧ಕ್ಕೆ	22— 8	22— 6
ಹುರುಳಿ ಹೂಳಿ ಖಂಡಿ ೧ಕ್ಕೆ	20— 0	25— 0
ನೇಟಿವ್ ಕಾಫಿ ಖಂಡಿ ೧ಕ್ಕೆ	145— 0	150— 1
ಪ್ಲಾಂಟೇಶನ್ ಕಾಫಿ ಖಂಡಿ ೧ಕ್ಕೆ	185— 0	190— 0
ಮಡಿಕೇರಿ ಏಲಕ್ಕಿ	25— 0	26 — 8

Shiromani Narayanacharya & Co.,

Silk Lace & Cloth Manufacturers

Choukhamba Benares City

THIS MAN OUR CUSTOMER

ಕೃಷ್ಣರಾಯರು — ಸ್ವಾಮಿ ಆನಂದರಾಯರೆ, ತಾವು ನಿಮ್ಮ ಮಗಳ ಮದುವೆಗೆ ಶೀರೆಯನ್ನು ಎಲ್ಲಿಂದ ತರಿಸಿದ್ದು ಆ ಸೀರೆಯನ್ನು ನೋಡಿ ಮದುವೆಗೆ ಬಂದವರೆಲ್ಲಾ ಬಹಳ ಆನಂದಗೊಂಡರು. ಅದೇ ನಮೂನೆಯ ಸೀರೆಯೊಂದು ನನಗೂ ಬೇಕಾಗಿದೆಯೆಂದು ನಿರ್ಣಯಿಸಿರುವೆನು

ಆನಂದರಾಯರು — ಸ್ವಾಮಿ ಆ ಶೀರೆಗೆ ಹತ್ತು ಹದಿನೈದು ಅಂಗಡಿ ನೋಡಿ ಸಾಕಾಗಿ ಕಡೇಗೆ ನಮ್ಮ ಕಾಶೀ ಶಿರೋಮಣಿ ನಾರಾಯಣಾಚಾರ್ಯರ ಕಂಪೆನಿಗೆ ಬರೆದು ತರಿಸಿದೆ.

ಕೃಷ್ಣರಾಯರು— ಅದರ ಕ್ರಯವೆಷ್ಟು?"

ಆನಂದರಾಯರು — ಎಲ್ಲಾ ಕಡೆಗಳಿಗಿಂತ ಶೇಕಡಾ 25 ಕಡಿಮೆ ದರದಲ್ಲಿ ಸಿಕ್ಕಿತು ತಾವು ಸಹ ಅಲ್ಲಿಗೆ ಬರೆದು ತರಿಸಿರಿ ಕ್ರಯಕ್ಕೆ ತಕ್ಕ ಮಾಲು ಖಂಡಿತ ಜರಿ, ರಂಗು ಮೊದಲಾದ ಶೀರೆಗಳು ಸಿಗುತ್ತವೆ. 18 ಮೊಳ ಉದ್ದ 2½ ಮೊಳ ಅಗಲ ಶೀರೆ 1ಕ್ಕೆ 20ರಿಂದ 65ರ ವರೆಗೆ ಪಡಲು ಬುಟ್ಟಿ ಇರುವುದು 18 ಮೊಳ ಶೀರೆ 1ಕ್ಕೆ ರೂ. 45ರಿಂದ 150ರ ವರೆಗೆ, 16 ಮೊಳ ಪಡಲು ಸಹ ಶೀರೆ 1ಕ್ಕೆ ರೂ 10ರಿಂದ 55ರ ವರೆಗೆ ರವಕೆ ಕಣಕ್ಕೆ ರೂ 1–8–0ರಿಂದ 4ರ ವರೆಗೆ ಬುಟ್ಟಿಹಾಕಿದ ರವಕೆ ಕಣ 1ಕ್ಕೆ ರೂ 3ರಿಂದ 10ರ ವರೆಗೆ. 8 ಮೊಳದ ಜರಮುಡಿ 1ಕ್ಕೆ ರೂ. 7ರಿಂದ 15ರ ವರೆಗೆ. 8 ಮೊಳದ ಜರಿ ಮುಡಿ 1ಕ್ಕೆ ರೂ 10ರಿಂದ 35ರ ವರೆಗೆ. 5 ಮೊಳದ ಪಮಾರಿ 1ಕ್ಕೆ ರೂ. 4ರಿಂದ 16ರ ವರೆಗೆ, 6 ಮೊಳದ ಪಟಾರಿ 1ಕ್ಕೆ ರೂ. 6ರಿಂದ 35ರ ವರೆಗೆ, ಬೇರೆಯೆಲ್ಲಾ ತರದ ಮ್ಹಾಲುಗಳ ಕ್ರಯದ ಪಟ್ಟಿ ಇನಾಂ 1 ಅಣೆ ಸ್ಟಾಂಪು ಕಳುಹಿಸಿದವರಿಗೆ 1 ಕಾಶೀ ಪಟ, 1 ಕಾಶೀ ವಿಶ್ವೇಶ್ವರ ಪಟ ಕೆಟಲಾಗಿನೊಂದಿಗೆ ಕಳುಹಿಸುವೆವು. ಇತರ ವಿವರಣೆಗಳಿಗೆ ಬರೆದು ತಿಳಿಯಿರಿ.

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಖಂಬಾ ಬೆನಾರಿಸ್

ಅಲಭ್ಯ ಲಾಭ! ಸುವರ್ಣ ಸಂದರ್ಭ!

ಪ್ರಥಮ ಬಹುಮಾನ ರೂ. 5000 ಎರಡನೇ ಬಹುಮಾನ ರೂ. 2500

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

"ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ"

ತೆಗೆಯುವ ತಾರೀಕು ೬-6-1936. ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ

ಸೋಡ್ತಿಯ ಮೊಬಲಗು: ರೂ, 50,000

ಒಟ್ಟು ಬಹುಮಾನಗಳ ಸಂಖ್ಯೆ. 1778. ಮೌಲ್ಯ ರೂ. 20,000.

ಸಂಪೂರ್ಣ ಪುಸ್ತಕಗಳನ್ನು ಮಾರುವವರಿಗೆ ಯಾ ಕೊಂಡುಕೊಳ್ಳುವವರಿಗೆ ವಿಶೇಷ ಬಹುಮಾನಗಳಿವೆ

ಸಂಪೂರ್ಣ ಪುಸ್ತಕಗಳನ್ನು ಮಾರಾಟ ಮಾಡುವವರಿಗೆ ಪ್ರತ್ಯೇಕ ನಗದಿ ಕಮಿಶನ್ ಕೂಡಾ ಇದೆ

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಟಿಕೇಟು ಪುಸ್ತಕಗಳ ಮಾರಾಟಕ್ಕಾಗಿ ದಕ್ಷರೂ ಉತ್ಸಾಹಿಗಳೂ ಆದ ಏಜಂಟರು ಬೇಕಾಗಿದೆ

ಹೆಚ್ಚಿನ ವಿವರಗಳಿಗೆ ಮತ್ತು ಪುಸ್ತಕಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್— ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

ವಿ ಸೂ ಯಾವ ಕಾರಣದಿಂದಲಾದರೂ ಸೋಡ್ತಿ ತೆಗೆಯುವ ತಾರೀಕನ್ನು ಮುಂದರಿಸಲಾಗುವುದಿಲ್ಲ

ನೋಟೀಸು.

ಸಂ 1936ನೇ ಇಸವಿ ಮಾರ್ಚ ತಿಂಗಳ ತಾರೀಕು 24ರಲ್ಲಿ ಕಾರ್ಕಳ ತಾಲೂಕು ಕೆರ್ವಾಶೆ ಗ್ರಾಮದ ಮೋಗಿನಮನೆ ಎಂಬಲ್ಲಿ ಇರುವ ಪದ್ಮಯ್ಯ ಶೆಟ್ರ ಸೊಸೆ ದರ್ಣಿ ಹೆಂಗ್ಸು 1–ಇವಂಡಳ್ಕನ ಮಗ ಆದಪ್ಪ ಶೆಟ್ಟಿ 1 ಕೂಡಾ 2 ಜನರ ಬಗ್ಗೆ 2ನೇ ಆದಪ್ಪ ಶೆಟ್ಟಿಯು ತಿಳಿಯಪಡಿಸುವುದೇನೆಂದರೆ —

ಸದ್ರಿ ಪೈಕಿ 1ನೇಯವರ ಮೊಮ್ಮಗ 2ನೇಯವರ ಅಳಿಯ ಕಾರ್ಕಳ ತಾಲೂಕು ಕೆರ್ವಾಶೆ ಗ್ರಾಮದಲ್ಲಿರುವ ಚಾಣಶೆಟ್ಟಿಯೆಂಬವರು 3 ಜನರ ಸಮೇತ ಈಗ ಕೆಲವು ದಿವಸಗಳ ಹಿಂದೆ ನಮ್ಮ ಗೆರವಾಶೆ ಮನೆಗೆ ಬಂದು ಮೋಸದಿಂದ ನಮಗೆ ತಕಾಯಿಸಿ 2 ಕಾಗದಗಳಿಗೆ ದಸ್ಕತು ಪಡಕೊಂಡು ಹೋಗಿರುತ್ತಾರೆ ಇತ್ತಲಾಗೆ ವಿಚಾರಿಸಿದಲ್ಲಿ ಇವರ ಪೈಕಿ ಚಾಣ ಶೆಟ್ರು ತನ್ನ ಮೇಲೆ ಆದ ಸ್ವಂತದ ಸಾಲಗಳನ್ನು ಪರಿಹರಿಸುವ ಬಗ್ಗೆ ಕೆಲವು ನೋಟುಗಳನ್ನು ಅನ್ಯಾಯವಾಗಿ ಮಾಡಿಸಿದ್ದಾರೆಂಬುದಾಗಿ ನಾವು ತಿಳಿಯುತ್ತೇವೆ ಈ ರೀತಿ ಅವರ ವಳಸಂಚಿಗೆ ಸೇರಿ ಯಾರಾದರೂ ಈ ನೋಟುಗಳನ್ನು ಬರಸಿಕೊಂಡರೆ ಅವರು, ನಾವು ನಡಿಸುವ ಶಿವಿಲ್ ಮತ್ತು ಕ್ರಿಮಿನೆಲ್ ವ್ಯವಹರಣೆಗೆ ಗುರಿಯಾದಾರು ಎಂಬ ಸಂಗ್ತಿಯನ್ನು ಈ ಮೂಲಕ ತಿಳಿಸುತ್ತೇವೆ

ಶ್ರೀ ಈ ಶ್ರೀಕಾರ ವ ಯಡ ಕೈ ಹೆಬ್ಬೆಟ್ಟಿನ ಮುದ್ರೆ ಕೂಡಾ ಆದಪ್ಪ ಶೆಟ್ಟಿರುಜು.

ಹೊಸ ನಮೂನೆ! ಹೊಸ ನಮೂನೆ!

New Design

ಶ್ರೀ ಶ್ರಿಂಗೇರಿ ಜಗದ್ಗುರುಗಳಾದ

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಮತ್ತು

ಕರಕಮಲಸಂಜಾತರಾದ

ಶ್ರೀಮದಭಿನವ ವಿದ್ಯಾತೀರ್ಥ ಸ್ವಾಮಿಗಳವರ

10 × 15' ಸೈಜಿನಲ್ಲಿ ಸುಂದರವಾದ

ಫೋಟೋಗಳು ಕಲ್ಕತ್ತ ಲಕ್ಷ್ಮೀ ವಿಲಾಸ ಪ್ರೆಸ್ಸಿನಲ್ಲಿ 60 ಪೌಂಡ್ ಇಂಗ್ಲಿಷ್ ಆರ್ಟ್ ಪೇಪರಿನಲ್ಲಿ 6 ಬಣ್ಣಗಳಲ್ಲಿ ಅಚ್ಚಾಗಿರುತ್ತೆ 1 ಡಜನ್ ಕಾಪಿಗಳಿಗೆ ಬೆಲೆ ರೂ 3 ಕಾಲುಭಾಗ ಅಡ್ವಾನ್ಸು ಸಹಿತ ಆರ್ಡರ್ ಕೊಡುವವರಿಗೆ ಮೇಲ್ಕಂಡ ಗುರುಶಿಷ್ಯರು ಮತ್ತು ಶ್ರೀ ಗಣೇಶ ಶ್ರೀಮಾನ್ ಮೈಸೂರು ಮಹಾರಾಜರವರು ವಗೈರೆ ಫೋಟೋಗಳಿರುವ 1936ನೇ ಇಸವಿಯ ಕ್ಯಾಲೆಂಡರು ಒಂದು ಪ್ಯಾಕಿಂಗ್ ಮತ್ತು ಪೋಸ್ಟೇಜು ಫ್ರೀಯಾಗಿ ಕಳಿಸಲ್ಪಡುತ್ತೆ ಮೇಲ್ಕಂಡ ಪ್ರೆಸ್ಸಿನಲ್ಲಿ ಅಚ್ಚಾದ ಇತರ ಫೋಟೋಗಳೂ ಸಹ ದೊರೆಯುತ್ತೆ

Sree Sharada Frame Works,

Sringeri—Kadur Mysore State.

ಶಾಲಿವಾಹನ ಶಕ ೧೮೫೮ನೆಯ ಯುವ ಸಂವತ್ಸರದ ಚೈತ್ರ ಶು॥ ೬ ಶನಿವಾರದಿಂದ ಚೈತ್ರ ಶು॥ ೧೨ ಶುಕ್ರವಾರದ ವರೆಗಿನ ಪಂಚಾಂಗ. (೧೯೩೬ನೇಯ ಮಿಥುನ ಸುಗ್ಗಿ)

[illegible]	[illegible]	[illegible]	[illegible]	[illegible]	[illegible]	[illegible]	[illegible]
28	ಶನಿ	೬	೪೦	ರೋಹಿಣಿ	೩೪	೧೫	* [illegible]
29	ರವಿ	೭	೪೮	ಮೃಗಶಿರ	೩೪	೧೬	
30	ಸೋಮ	೮	೪೬	ಆರ್ದ್ರ	೩೪	೧೭	
31	*ಕುಜ	೯	೪೬	ಪುನರ್ವಸು	೩೪	೧೮	
1	ಬುಧ	೧೦	೪೭	ಪುಷ್ಯ	೩೬	೧೯	
2	ಗುರು	೧೧	೪೯	ಆಶ್ಲೇಷ	೪೦	೨೦	
3	ಶುಕ್ರ	೧೨	೫೪	ಮಘೆ	೪೩	೨೧	

(೧) ಲೋಕಾರ್ನೋ ಒಪ್ಪಂದವನ್ನು ತಿರಸ್ಕರಿಸಿದ ಪರಿಣಾಮವಾಗಿ ನಡೆಯಿಸಬೇಕಾದ ಯೋಜನೆಗಳ ವಿಚಾರ.

(೨) ಪ್ರಪಂಚದ ಶಾಂತಿರಕ್ಷಣೆಗಾಗಿ, ಸಮಸ್ತ ಭೂಮಂಡಳದ ಪರಿಷತ್ತನ್ನು ಕರೆಯುವುದು. ಮೇಲಿನವುಗಳು ಬ್ರಿಟಿಷ ಪಾರ್ಲಿಮೆಂಟಿನ ವ್ಹ್ಯಾಟ್‌ಪೇಪರಿನ ಎರಡು ವಿಭಾಗಗಳಾಗಿವೆ. ಒಂದನೇ ವಿಭಾಗದಲ್ಲಿ ಲೋಕಾರ್ನೋ ಒಪ್ಪಂದವು ಈಗ ತಿರಸ್ಕರಿಸಲ್ಪಟ್ಟದ್ದರಿಂದ ಲೋಕಾರ್ನೋ ಒಪ್ಪಂದಕ್ಕೆ ಸಹಿ ಹಾಕಿದ ಜನಾಂಗಗಳಲ್ಲಿ, ಯುದ್ಧದ ಸಂಭವದಲ್ಲಿ ಪರಸ್ಪರ ಸಹಕಾರಿಗಳಾಗುವಂತೆ ಒಪ್ಪಂದವಾಗಬೇಕು. ಫ್ರೆಂಕೊ-ಸೋವಿಯಟ್ ಒಪ್ಪಂದವು ನ್ಯಾಯಸಮ್ಮತವಾದುದೋ ಎಂಬ ವಿಚಾರವನ್ನು ಇತ್ಯರ್ಥ ಮಾಡಲು ಅಂತರ್‍ರಾಷ್ಟ್ರೀಯ ನ್ಯಾಯಸ್ಥಾನವಾದ ಹೇಗ್ ಕೋರ್ಟಿಗೆ ಕಳುಹಿಸಲಾಗುವುದು. ಜರ್ಮನಿಯು ಈ ಕೋರ್ಟಿನ ಇತ್ಯರ್ಥವನ್ನನುಸರಿಸಿ ವರ್ತಿಸತಕ್ಕದು ಹೇಗ್ ಕೋರ್ಟಿನಲ್ಲಿ ನ್ಯಾಯ ವಿಚಾರಣೆಯಾಗುತ್ತಿರುವಾಗ, ರ್‍ಹೈನ್‌ಲೆಂಡಿನಲ್ಲಿ ಈ ಮುಂಚೆ ಇದ್ದಂತೆ ಅಂತರ್‍ರಾಷ್ಟ್ರೀಯ ಸೇನಾಬಲವನ್ನು ಇರಿಸುವುದು, ರ್‍ಹೈನ್‌ಲೆಂಡಿನ ಈ ಸೇನಾಸಮೂಹವು ಜರ್ಮನಿಯ ಅಧಿಕಾರದ ಹೊರಗಿರಬೇಕು. ಭದ್ರತಾ ಏರ್ಪಾಡುಗಳು ಈಗಿನಂತೆ ಇರಬೇಕು. ಫ್ರೆಂಚ ಮತ್ತು ಬೆಲ್ಜಿಯಮ್ ಗಡಿಗಳಲ್ಲಿ ಅಂತರ್‍ರಾಷ್ಟ್ರೀಯ ಸೇನಾ ಫೌಜಗಳನ್ನು ಇರಿಸಬೇಕು. ಕಡೆಯದಾಗಿ ಮೇಲಿನ ಯೋಜನೆಗಳನ್ನು ಸರಿಯಾಗಿ ನಡೆಯಿಸಲು ಒಂದು ಅಂತರ್‍ರಾಷ್ಟ್ರೀಯ ಸಮಿತಿಯನ್ನು ನೇಮಕ ಮಾಡಬೇಕು.

ಮೇಲಿನದಕ್ಕೆ ಜರ್ಮನಿಯು ಸಮ್ಮತಿಸುವುದಾದರೆ, ಜರ್ಮನಿಯು ಈ ಕೆಳಗಿನ ಆಧಾರದ ಮೇಲೆ ವ್ಯವಹರಿಸಲು ಅವರಿಗೆ ಆಮಂತ್ರಿಸಲಾಗುವುದು.

(೧) ಹಿಟ್ಲರನು ಕೊಟ್ಟ ಏಳು ಶರ್ತಗಳು (ಜನಾಂಗ ಮಂಡಳದ ಸದಸ್ಯತನವನ್ನು ಪಡೆಯುವ ಪ್ರಶ್ನೆವಿರಹಿತವಾಗಿ)

ಪ್ರಪಂಚದ ಶಾಂತಿರಕ್ಷಣೆಗಾಗಿ ಭೂಮಂಡಲದ ಪರಿಷತ್ತೊಂದು ಕರೆಯಲಾಗುವುದೆ?

ಜರ್ಮನಿಯು ಬ್ರಿಟಿಷರ ಶರ್ತಗಳಿಗೆ ಒಪ್ಪುವಂತಿಲ್ಲ.

ಲೋಕಾರ್ನೋ ಕಲಹದ ಮೇಲೆ ಬ್ರಿಟಿಷರ ವ್ಹ್ಯಾಟ್‌ಪೇಪರ್.

ಬ್ರಿಟಿಷ ಪಾರ್ಲಿಮೆಂಟಿನವರು ಯುರೋಪಿನ ಈಗಿನ ಕಲಹದ ವಿಚಾರದಲ್ಲಿ ಈ ಕೆಳಗಿನ ನಿರ್ಧಾರಗಳನ್ನು ಮಾಡಿರುವರು:-

(೨) ರ್‍ಹೈನ್‌ಲೆಂಡಿನ ಗೌರವದ ವಿಚಾರದಲ್ಲಿ ಕೆಲವು ಬದಲಾವಣೆಗಳನ್ನು ಮಾಡುವುದು.

(೩) ಲೋಕಾರ್ನೋ ಒಪ್ಪಂದವನ್ನು ರದ್ದುಮಾಡಿ ಯುರೋಪಿನ ಶಾಂತಿರಕ್ಷಣೆಗಾಗಿ ಅಲ್ಲಿನ ಜನಾಂಗಗಳು ಪರಸ್ಪರ ಸಹಾಯಕರಾಗುವಂತೆ ಇನ್ನೊಂದು ಹೊಸ ಒಪ್ಪಂದವಾಗಬೇಕು.

ಎರಡನೆಯ ಭಾಗದಲ್ಲಿ, ಪ್ರಪಂಚದ ಶಾಂತಿರಕ್ಷಣೆಯು ಎಲ್ಲಾ ಜನಾಂಗಗಳಿಂದ ಒಟ್ಟಾಗಿ ಆಗುವಂತೆ ಯೋಜನೆಗಳನ್ನು ರಚಿಸಲು ಒಂದು ಪ್ರಪಂಚ ಪರಿಷತ್ತನ್ನು ಕರೆಯಬೇಕು, ಜನಾಂಗ ಮಂಡಳದ ೧೬ನೇ ಶರ್ತವು ಮುಂದಕ್ಕೆ ಫಲಕಾರಿಯಾಗಿ ಉಪಯೋಗವಾಗುವಂತೆ, ಅದರ ಕ್ರಮಗಳನ್ನು ಸರಿಯಾಗಿ ವ್ಯಕ್ತಪಡಿಸುವುದು, ದಂಥಯೋಜನೆಗಳಿಗೆ ಒಂದು ನಿಯಮಿತ ಗಡಿಯನ್ನು ಹಾಕುವುದು, ಸಾಂಪತ್ತಿಕ ಸಂಬಂಧವನ್ನು ವೃದ್ಧಿಗೊಳಿಸುವುದು, ಪೂರ್ವ ಯುರೋಪಿಯನ್ ಒಪ್ಪಂದವಾಗುವಂತೆಯೂ, ಜರ್ಮನಿಯು ಜನಾಂಗ ಮಂಡಳವನ್ನು ಸೇರುವ ವಿಚಾರವನ್ನು ಪರಿಶೀಲಿಸುವುದು.

ಜರ್ಮನಿಯು ಈಗಿನ ಕಲಹ ನಿವಾರಣೆಯಾಗುವಂತೆ ಮೇಲಿನ ನಿರ್ಧಾರಗಳನ್ನು ನಡೆಯಿಸಿಕೊಡುವ ಕಾರ್ಯದಲ್ಲಿ ಸಹಕರಿಸಬೇಕೆಂದು ಬ್ರಿಟಿಷರ ವಿನಂತಿ. ಫ್ರಾನ್ಸ್ ಮತ್ತು ಬೆಲ್ಜಿಯಮ್‌ನಲ್ಲಿ ಅಂತರ್‍ರಾಷ್ಟ್ರೀಯ ಸೇನಾಬಲವನ್ನು ಕಳುಹಿಸುವ ವಿಚಾರದಲ್ಲಿ ವಿವಿಧ ಸರಕಾರಗಳೊಡನೆ ಪತ್ರವ್ಯವಹಾರ ನಡೆಯಿಸುವದಾಗಿ ತಿಳಿದುಬರುತ್ತದೆ. ಜರ್ಮನಿಯು ಪ್ರಾರಂಭದಲ್ಲಿ ವ್ಯಕ್ತಪಡಿಸಿದಂತೆ ಕಲಹವು ಬಹಳ ಶಾಂತತೆಯಿಂದ ನಿವಾರಣೆಗೊಳಿಸುವ ಉಪಾಯವು ಮೇಲಿನ ನಿರ್ಧಾರಗಳಲ್ಲಿ ಕೂಡಿದೆ ಎಂದು ಮಿ| ಏಡನ್ನರು ಪಾರ್ಲಿಮೆಂಟಿನಲ್ಲಿ ಈಗಿನ ಅಂತರ್‍ರಾಷ್ಟ್ರೀಯ ಕಲಹದ ಮೇಲೆ ಮಾಡಿದ ಭಾಷಣದಲ್ಲಿ ತಿಳಿಸಿದರು. ಬ್ರಿಟಿಷರ ಮೇಲಿನ ಯೋಜನೆಗಳು ಈಗಿನ ಕಲಹ ನಿವಾರಣೆಮಾಡಲು ಶಕ್ಯವುಗಳಾಗಿವೆ ಎಂದು ಅನೇಕ ಜನಾಂಗಗಳು ಅಭಿಪ್ರಾಯಪಡುತ್ತಿವೆ.

ಬ್ರಿಟಿಷರ ಯೋಜನೆಗಳ ಕುರಿತು ಜರ್ಮನ್ ಅಭಿಪ್ರಾಯ

ಬ್ರಿಟಿಷರ ಯೋಜನೆಗಳಿಗೆ ಜರ್ಮನಿಯ ಸಮ್ಮತವು ಸಿಕ್ಕುವಂತೆ ಕಾಣುವುದಿಲ್ಲ. ಜನಾಂಗ ಮಂಡಳದಲ್ಲಿ ಇತ್ಯರ್ಥವಾಗಬೇಕಾದ ಪ್ರಶ್ನೆ ಹೇಗ್ ಕೋರ್ಟಿನಲ್ಲಿ ಯಾಕೆ ನಡೆಯಬೇಕೆಂಬುದು ಇವರ ವಾದ. ಜರ್ಮನಿಯಲ್ಲಿ ಪರರಾಷ್ಟ್ರಗಳ ಸೈನಿಕರು ಕಾಲಿಡುವುದು ಅವರು ಒಪ್ಪುವಂತಿಲ್ಲ. ಇನ್ನೊಂದು ಪ್ರಪಂಚ ಪರಿಷತ್ತಿನಿಂದ ಜರ್ಮನಿಗೆ ಒಳಿತಾಗುವುದೆಂದು ಅವರಿಗೆ ಭರವಸೆಯಿಲ್ಲ. ಬ್ರಿಟಿಷರ ಲೋಕಾರ್ನೋ ಕಲಹದ ಮೇಲೆ ಹೊರಡಿರುವ ವ್ಹ್ಯಾಟ್‌ಪೇಪರಿಂದ ಶಾಂತಿಸ್ಥಾಪನೆಯಾಗಲು ಅನುಕೂಲವಾಗುವುದೆಂದು ನಂಬಲು ಅಸಾಧ್ಯವಾಗಿದೆ.

ಜರ್ಮನಿಯು ಮೇಲಿನವುಗಳಿಗೆ ಸಂಪೂರ್ಣ ಸಮ್ಮತ ಕೊಡುವುದಿಲ್ಲವಾಗಿ ತಿಳಿದುಬರುತ್ತದೆ. ವ್ಹ್ಯಾಟ್‌ಪೇಪರಿನಲ್ಲಿರುವ ಸೂಚನೆಗಳು ಹಿಟ್ಲರನ ಮತಕ್ಕೆ ವಿರೋಧವಾಗಿವೆ. ರ್‍ಹೈನ್‌ಲೆಂಡಿನಲ್ಲಿ ಯಾವತ್ತೂ ಸಂಗ್ರಾಮಕಾರ್ಯಗಳನ್ನು ನಡೆಯಿಸುವುದಿಲ್ಲವೆಂದು ಭರವಸೆಕೊಡಲು ಹಿಟ್ಲರನು ಸಿದ್ಧನಿದ್ದಾನೆ. ಬ್ರಿಟಿಷರ ವ್ಹ್ಯಾಟ್‌ಪೇಪರಿಗೆ ಉತ್ತರವು ಮೇಲಿನ ಅಭಿಪ್ರಾಯದಿಂದ ಕೊಡುವುದೆಂದೂ, ಈ ಉತ್ತರವು ಜರ್ಮನಿಯ ಪ್ರತಿನಿಧಿಗಳು ಲಂಡನಿಗೆ ತೆರಳಿ ಏಡನ್ನರಿಗೆ ತಿಳಿಸುವರೆಂದು ತಿಳಿದುಬರುತ್ತದೆ. ವ್ಹ್ಯಾಟ್‌ಪೇಪರಿನ ಸೂಚನೆಗಳನ್ನು ಜರ್ಮನಿಯು ಸಂಪೂರ್ಣ ತಿರಸ್ಕರಿಸುವ ಬದಲಾಗಿ ಅವುಗಳ ಮೇಲೆ ಚರ್ಚೆ ನಡೆಯಿಸುವುದಾಗಿ ತಿಳಿದುಬರುತ್ತದೆ. "ಜರ್ಮನಿಗೆ ಗೌರವಮಾನವೆನಿಸುವ ಒಪ್ಪಂದವು ಬೇಕಾಗಿದೆ. ಯುರೋಪಿನ ಎಲ್ಲಾ ಜನಾಂಗಗಳಿಗೆ ಸರಿಸಮಾನವಾದ ಹಕ್ಕು ಬಾಧ್ಯತೆಗಳಿರಬೇಕು. ನನಗೆ ಯುದ್ಧವು ಬೇಕಾಗಿಲ್ಲ. ನನಗೆ ೨೫ ವರ್ಷಗಳ ಶಾಂತಿಯು ಬೇಕಾಗಿದೆ" ಎಂದು ಹಿಟ್ಲರನ ಭಾಷಣ. ಆದರೆ, ಜರ್ಮನಿಗೆ ಅಯೋಗ್ಯವೆನಿಸುವ ಯಾವತ್ತೂ ಶರ್ತಗಳಿಗೆ ಹಿಟ್ಲರನು ಸಮ್ಮತಿಯೀಯುವಂತಿಲ್ಲ.

ಇಟಲಿಯ ವರ್ತನೆ

ತನ್ನ ಮೇಲೆ ಸೆಂಕ್ಷನುಗಳು ಜ್ಯಾರಿಯಾಗಿರುವ ವರೆಗೆ, ತಾನು ಈಗಿನ ಕಲಹ ನಿವಾರಣೆಯಲ್ಲಿ, ಯಾವತ್ತೂ ಒಗೆಯಲ್ಲಿ ಭಾಗವಹಿಸುವುದಿಲ್ಲವೆಂದು ಇಟಲಿಯು ದೃಢ ಸಂಕಲ್ಪ ಮಾಡಿರುತ್ತದೆ. ಅದಲ್ಲದೆ ಆಸ್ಟ್ರಿಯಾ, ಹಂಗೇರಿ, ಇಟಲಿ ಈ ಮೂರು ಜನಾಂಗಗಳು ಪರಸ್ಪರ ಒಪ್ಪಂದ ಮಾಡಿರುವದಾಗಿ ತಿಳಿದುಬರುತ್ತದೆ. ಅಗತ್ಯ ಬಿದ್ದರೆ ಇವರು ಜರ್ಮನಿಯೊಡನೆ ಸಹಕರಿಸಬಹುದು. ಜರ್ಮನಿಯ ಮೇಲೆ ಸೆಂಕ್ಷನುಗಳು ಜ್ಯಾರಿಯಾದರೆ, ಅವುಗಳಲ್ಲಿ ತಾವುಭಾಗವಹಿಸಬಾರದಾಗಿ ಈ ಜನಾಂಗಗಳು ನಿರ್ಧಾರ ಮಾಡಿವೆ.

IT HAS COME!
GREAT SPECTECULAR DRAMA WITH SPLENDOUR OF SPLENDOURS
WILL BE RELEASED AT
Sri Krishna Cinema
PREMIER PERFECT TALKIE PICTURE HOUSE MANGALORE PRESENTS
From 31-3-'36 for 4 days only! ನಾಲ್ಕು ದಿವಸಗಳ ಪರ್ಯಂತ ಮಾತ್ರ!
ಶ್ರೀ ಕೃಷ್ಣಾ ಸಿನೆಮಾ, ಮಂಗಳೂರು
ದಿ ಪ್ರಿಮಿಯರ್ ಪರ್ಫೆಕ್ಟ್ ಟಾಕಿ ಮಂದಿರದಲ್ಲಿ
'USHA' ಉಷಾ 'USHA'
Directed by:- BABURAO PAINTER & GOVINDRAO TEMBE.
ಡ್ಯಾರೆಕರ್:— ಬಾಬೂರಾವ್ ಪೈಂಟರ್ ಮತ್ತು ಗೋವಿಂದರಾವ್ ತೆಂಬೆ.
ಪ್ರಸಿದ್ಧ ನಟರ ಕೂಟ
ಗೋವಿಂದರಾವ್ ತೆಂಬೆ: ಮಹಾವಿಷ್ಣು. ರತ್ನಪ್ರಭಾ: ಚಿತ್ರಲೇಖಾ. ಸುಶೀಲಾದೇವಿ: ಮಹಾರಾಣಿ.
ಉಷಾದೇವಿ: ಉಷಾರಾಣಿ ವಾಸುದೇವ: ಅನಿರುದ್ಧ (ವಿಷ್ಣುವಿನ ಮಗ). ಕರಮರಕರ: ನಾರದ. ಕಾಳೆ: ಶಿವ.
ದಿ. ದುಧಾಳೆ: ದೈತ್ಯ ಬಾಣಾಸುರ.
ಗೋವಿಂದರಾವ್ ತೆಂಬೆ, ರತ್ನಪ್ರಭಾ—ಇವರ ಸುಮಧುರ ಗಾಯನ. ವಾಸುದೇವ್, ಉಷಾ— ಇವರ ಅಭಿನಯನೈಪುಣ್ಯತೆ.
ಸಾವಿರಾರು ವರುಷಗಳ ಹಿಂದೆ—ಬಾಣಾಸುರನ ಪರಾಕ್ರಮ— ಆತನು ಶಿವಭಕ್ತ ಆದರೆ ವಿಷ್ಣುಭಕ್ತರನ್ನು ಕಂಡರಾಗದು—ಅವರನ್ನು ಬಗೆಬಗೆಯಾಗಿ ಹಿಂಸಿಸುತ್ತಿದ್ದ— ವಿಷ್ಣುಭಕ್ತರೂ ನಾರದರೂ ವಿಷ್ಣುವಿನಲ್ಲಿ ಮೊರೆ ಇಟ್ಟರು. ಆದರೆ ವಿಷ್ಣುವು ಒಂದು ಹಂಚಿಕೆ ಹೂಡಿ ತನ್ನ ಮೊಮ್ಮಗ ಅನಿರುದ್ಧನಿಗೂ ಬಾಣಾಸುರನ ಮಗಳು ಉಷಾದೇವಿಗೂ ಪ್ರೇಮ ಉಂಟಾಗುವಂತೆ ಮಾಡಿದನು. ಆದರೆ ಇದನ್ನು ವಿಷ್ಣು ವೈರಿ ಬಾಣಸುರ ಸಹಿಸನು— ಯುದ್ಧವಾಗಿ ಬಾಣಸುರ ಸೋತನು. ಆತನು ಇಬ್ಬರ ವಿವಾಹಕ್ಕೆ ಒಪ್ಪಿದನು. ವಿಷ್ಣುವು, ವಿಷ್ಣು ಮತ್ತು ಶಿವರಲ್ಲಿ ಭೇದವಿಲ್ಲೆಂದು ತೋರಿಸಿದನು.

ಮಿಥ್ಯಾಜೀವನದ

ಸತ್ಯಕಥೆಗಳು

(All Rights Reserved.)

ಲೇಖಕ —ಶ್ರೀ 'ರಸಿಕರಂಜನ'

"Truth is stranger than Fiction"

ಸೂಚನೆ —

ಈ ಕಥಾಮಾಲೆಯಲ್ಲಿ ಕುತೂಹಲವುಳ್ಳವರು 'ಶ್ರೀಕೃಷ್ಣಸೂಕ್ತಿ'ಯ ೧೬—೧—೧೯೩೩ನೇ ಸಂಚಿಕೆಯಲ್ಲಿ ಪ್ರಕಟವಾದ ಮಾಲೆಯ ಮೊದಲನೆಯ ಕಥೆಯಂದಿಗೆ ಕೊಟ್ಟ **ವಿಶೇಷ ಸೂಚನೆ**ಯನ್ನು ಗಮನಿಸತಕ್ಕದ್ದು. ಅಲ್ಲದೆ ಈ ಕೆಳಗಿನ ಅಂಶವನ್ನೂ ಮನನ ಮಾಡಬೇಕು.—

ಕಥೆಗಳೆಲ್ಲವೂ ಯಾವಾಗಲೂ ಕಥೆಗಳೇ; **ಚರಿತ್ರೆ**ಗಳು ಚರಿತ್ರೆಗಳೇ. ಯಾರೂ ಈ **ಕಥಾ** ಮಾಲೆಯೊಳಗಿನ ಕಥೆಗಳೆಲ್ಲವೂ **ಚರಿತ್ರೆ**ಗಳೆಂದು ಭಾವಿಸುವ ಭ್ರಾಂತಿಗೆ ಒಳಗಾಗಬಾರದು. ಇವು ಬರೇ ಕಲ್ಪನೆಯಿಂದ ಹುಟ್ಟಿದುವಲ್ಲ; ಸತ್ಯವೆಂದು ನಂಬಲ್ಪಟ್ಟ ವೃತ್ತಾಂತಗಳ ಮೇಲೆ ಆಧರಿಸಿ ಬರೆದ ಕಥೆಗಳಷ್ಟೆ.

ಇವುಗಳನ್ನು ಬರೆಯುವುದರಲ್ಲಿ ಸಣ್ಣಕಥೆಗಳ ಆವಶ್ಯಕತೆಗಳ ಪೂರೈಕೆ (Fulfilment of the requirements of short stories)ಗಾಗಿ ಮಾನ್ಯವಾದ ಕಥಾಲೇಖಕರ ಹಕ್ಕುಗಳನ್ನು ಉಪಯೋಗಿಸಿಕೊಳ್ಳಲಾಗಿದೆ.

ಈ ಕಥೆಯೊಳಗಿನ ಕೆಲವು ಸನ್ನಿವೇಶಗಳೂ ಕೆಲವು ಸನ್ನಿವೇಶಗಳ ಜೋಡಣೆಗಳೂ ಕೇವಲ ಕಲ್ಪಿತವಾಗದಿರಲು ಕಾರಣವೇ ಇಲ್ಲವೆಂದು ಎಲ್ಲರೂ ಒಪ್ಪಬೇಕಾಗಿದೆ.

ಒಂದೇ ಕಥೆಯಲ್ಲಿ ಕಥಾರಚನೆಯ ಅನುಕೂಲಕ್ಕಾಗಿ ಒಂದಕ್ಕಿಂತ ಹೆಚ್ಚಿನ ಪ್ರತ್ಯೇಕ ಸತ್ಯಘಟನೆಗಳನ್ನು ಸೇರಿಸಿರುವುದೂ ಉಂಟು; ಅಲ್ಲದೆ ಕೆಲವೆಡೆಯಲ್ಲಿ ಕಥಾಸ್ವಾರಸ್ಯ ಪೋಷಣೆಗಾಗಿ ಅಂತ್ಯವನ್ನು ಮಾರ್ಪಡಿಸಿರುವುದೂ ಉಂಟು.

ಈ ಕಥೆಗಳ ಆಧಾರವಾದ ಮೂಲವೃತ್ತಾಂತಗಳೆಲ್ಲವೂ ಕೇವಲ ಹಿಂದೂ ಸಮಾಜಕ್ಕೇ ಆಗಲಿ, ಹಿಂದೂಸ್ಥಾನಕ್ಕೇ ಆಗಲಿ ಸಂಬಂಧಿಸಿದುವೆಂದು ಯಾರೂ ಭಾವಿಸಬಾರದು. ಕೆಲವು ಪಾಶ್ಚಾತ್ಯ ದೇಶಗಳಲ್ಲಿ ನಡೆದಂತಹವುಗಳಾಗಿದ್ದು, ನಮ್ಮ ದೇಶ ಕಾಲ ಸ್ಥಿತಿಗಳಿಗೆ ಹೊಂದಿಸುವಂತೆ ಬರೆಯಲ್ಪಟ್ಟಿವೆ.

ಸತ್ಯಕಥೆಯೆಂದ ಮಾತ್ರಕ್ಕೆ ಇವುಗಳೊಳಗಿನ ಯಾವೊಂದು ಕಥೆಯೂ, ಮೊದಲಿಂದ ಕೊನೆಯ ವರೆಗೆ ಇದ್ದಕ್ಕಿದ್ದಂತೆ ನಡೆದ ಸತ್ಯಚರಿತ್ರೆಯೆಂದು ಯಾರೂ ಭಾವಿಸಿ ನಂಬಿಕೊಂಡಿರಲು ಕಾರಣವಿಲ್ಲ. ಇವುಗಳಲ್ಲಿ ವರ್ಣಿಸಿದ ಮುಖ್ಯ ಘಟನೆಗಳಲ್ಲಿ ವಿಶ್ವಪ್ರಪಂಚದ ಸಮಾಜದ ಮಿಥ್ಯಾಜೀವನದಲ್ಲಿ ಸಾರ್ವತ್ರಿಕವಾಗಿ ನಡೆಯುತ್ತಿರುವಂತಹ ಸತ್ಯಾಂಶವಿರುವುದರಿಂದ ಮಾತ್ರವೇ ಇವುಗಳನ್ನು 'ಸತ್ಯಕಥೆ'ಗಳೆಂದು ಕರೆದಿರುವುದು. ಏನಿದ್ದರೂ, ಇವು ಸತ್ಯಚರಿತ್ರೆಗಳಾಗಲಿ ವೈಯಕ್ತಿಕ ಟೀಕೆಗಳಾಗಲಿ ಎಷ್ಟು ಮಾತ್ರಕ್ಕೂ ಅಲ್ಲ. ಇವು ಬರೇ ಸತ್ಯ ಕಥೆಗಳು; ಇದ್ದಕ್ಕಿದ್ದಂತೆ ಯಾರೊಬ್ಬರಿಗೂ ಅನ್ವಯಿಸುವುದಿಲ್ಲ ಎಂದು ಎಲ್ಲರೂ ಗಮನಿಸತಕ್ಕದ್ದು. ಇವುಗಳೊಳಗಿನ ಎಲ್ಲಾ ಹೆಸರು ವ್ಯಕ್ತಿ, ಜಾತಿ ಮತ ಕುಟುಂಬವು ಕೇವಲ ಕಾಲ್ಪನಿಕವಾಗಿದ್ದು ಯಾವೊಬ್ಬ ಸಜೀವ ವ್ಯಕ್ತಿಗೂ ಅನ್ವಯಿಸುವುದಿಲ್ಲ.

—ಲೇಖಕ.]

೯. ಉಪದೇಶಕನ ಉಪಾಸನೆ

ದಿವಾನ್ ಬಹದ್ದೂರ್ ಲಕ್ಷ್ಮೀಕಾಂತ ರಾಯರಿಗೆ ಸರಕಾರವು ಆ ಮಾನ್ಯ ಬಿರುದನ್ನು ಸುಮ್ಮನೆ ದಯಪಾಲಿಸಿರಲಿಲ್ಲ. ಅವರ ಮೂವತ್ತು ವರ್ಷಗಳ ನಿಃಸ್ವಾರ್ಥಪರ ಲೋಕಸೇವೆಯೇ ಅವರಿಗಾಗಿ ಅದನ್ನು ಆರ್ಜಿಸಿತ್ತೆಂಬುದು ಎಲ್ಲರೂ ಏಕಕಂಠದಿಂದ ಒಪ್ಪಬೇಕಾದ ವಿಷಯವಾಗಿರುವುದು. ಆ ಮೂವತ್ತು ವರ್ಷಗಳಲ್ಲಿ ಜಿಲ್ಲೆಯ ಪ್ರತಿಯೊಂದು ಸಾರ್ವಜನಿಕ ಗೌರವ ಅಧಿಕಾರದ ಮಾಲೆಯೂ ನಿರ್ವಿವಾದವಾಗಿ ರಾಯರ ಕೊರಳಿಗೇ ಬೀಳುತ್ತಿತ್ತೆಂಬುದೇ ಅವರ ಯೋಗ್ಯತೆಯನ್ನು ಘಂಟಾಘೋಷವಾಗಿ ಸಾರುವುದು. ಅವರು ಕೈಕೊಂಡ ಎಲ್ಲಾ ಕೆಲಸಗಳನ್ನು ಎಷ್ಟು ಆಸಕ್ತಿಯಿಂದ ಎಷ್ಟು ಯಶಸ್ವಿತೆಯಿಂದ, ಎಷ್ಟು ನಿಃಸ್ವಾರ್ಥದಿಂದ, ಎಷ್ಟು ಜನಪ್ರಿಯತೆಯಿಂದ ಮಾಡುತ್ತಿದ್ದರೆಂಬುದಕ್ಕೆ ಆ ಜಿಲ್ಲೆಯ ಮೂಲೆಮೂಲೆಗೂ ಅವರು ಹೋದಾಗಲೆಲ್ಲ ಸಾರ್ವಜನಿಕರಿಂದ ಪಡೆಯುತ್ತಿದ್ದ ಸನ್ಮಾನ ಪರಂಪರೆಗಳೇ ಸಾಕ್ಷಿಯಾಗಿರುವುವು. ಹೆಚ್ಚೇಕೆ, ಆ ಮೂವತ್ತು ವರ್ಷಗಳ ಅವಧಿಗೆ ರಾಯರು ಆ ಜಿಲ್ಲೆಯ ಅನಭಿಷಿಕ್ತ ರಾಜರೇ ಆಗಿದ್ದರೆಂದೆನ್ನಲು ಯಾರೂ ಸಂಕೋಚಪಡಲಾರರು.

ಆ ಮೂವತ್ತು ವರ್ಷಗಳಲ್ಲಿ ರಾಯರು ಆ ಜಿಲ್ಲೆಯಲ್ಲಿ ಕನಿಷ್ಠಪಕ್ಷಕ್ಕೆ ಮೂರು ಸಾವಿರ ಸಭೆಗಳ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು; ಮುನ್ನೂರು ಸಂಸ್ಥೆಗಳನ್ನು ಅನಾವರಣ ಮಾಡಿದ್ದರು; ಮೂವತ್ತು ಮಹಾಸಂಸ್ಥೆಗಳ ಪೋಷಕರಾಗಿದ್ದರು, ಮೂರು ಮಹನ್ಮಹಾ ಸಂಸ್ಥೆಗಳ ಜನ್ಮದಾತರಾಗಿದ್ದರು. ಎನ್ನುವಾಗ ರಾಯರ ಇತರ ಕಾರುಭಾರುಗಳನ್ನು ಯೋಚಿಸಿಯೇ ತೀರಬೇಕಲ್ಲದೆ, ಸೂಚಿಸಿ ತೀರದು.

ರಾಯರ ನಿಃಸ್ವಾರ್ಥವೊಂದೇ ಅವರ ಪ್ರತಿಯೊಂದು ಮಹತ್ಕಾರ್ಯದಲ್ಲಿಯೂ ಒಡೆದು ತೋರುವ ಗುಣವಾಗಿತ್ತೆಂಬುದು ಸರ್ವವೇದ್ಯವಾಗಿರುವುದು. ಹಿರಿಯರ ಅಪಾರ ಆಸ್ತಿಯ ಆದಾಯವೇ ಅವರಿಗೆ ಯಥೇಷ್ಟವಾಗಿದ್ದುದರಿಂದ, ಅವರಿಗೆ ಪರಧನವನ್ನು ಕಣ್ಣೆತ್ತಿ ಸಹ ನೋಡುವ ಆವಶ್ಯಕತೆಯಿರದುದೇ ಅವರ ನಿಃಸ್ವಾರ್ಥಬುದ್ಧಿಯ ಪೋಷಕವಾಗಿತ್ತಲ್ಲದೆ, ಅವರಲ್ಲಿ ಪರೋಪಕಾರಬುದ್ಧಿಯನ್ನೂ ಉತ್ಪನ್ನ ಮಾಡಿತ್ತೆಂದು ಎಲ್ಲರೂ ನಂಬಿರುವರು.

ರಾಯರು ಜನ್ಮದಾತರಾಗಿದ್ದ ಮೂರು ಸಂಸ್ಥೆಗಳೂ ಅವರ ಈ ಗುಣಗಳ ಫಲವಾಗಿರುವುವೆಂಬುದರಲ್ಲಿ ಸ್ವಲ್ಪವೂ ಸಂಶಯವಿರದು. ಅವರು ಸ್ಥಾಪಿಸಿದ 'ಲೋಕಲ್ ಬ್ಯಾಂಕ್' 'ಟೌನ್ ಕ್ಲಬ್' ಮತ್ತು 'ಚಂದ್ರಕಲಾ ನಾಟಕ ಮಂಡಳಿ'ಗಳಿಂದ ಇಂದಿಗೂ ಸರ್ವರೂ ತೃಪ್ತಿಯೋ ಜನ ಹೊಂದುತ್ತಿರುವುದೇ ಇದಕ್ಕೆ ತಕ್ಕ ನಿದರ್ಶನವಾಗಿರುವುದು.

ಈ ಮೂರೂ ಸಂಸ್ಥೆಗಳು 'ಲಿಮಿಟೆಡ್' ಆಗಿದ್ದು, ರಾಯರು ಅವುಗಳ ಸ್ಥಾಪನೆಗೆ ಬರೇ ಕಾರಣಭೂತರಾಗಿ ಇತರರ ಒತ್ತಾಯಕ್ಕಾಗಿ ಡೈರೆಕ್ಟರರಲ್ಲೊಬ್ಬರ ಸ್ಥಾನ ವಹಿಸುವುದಕ್ಕೆ ಬೇಕಾಗುವಷ್ಟು ಪಾಲುಗಳನ್ನು ಮಾತ್ರವೇ ಪಡೆದಿದ್ದು, ಉಳಿದ ಪಾಲುಗಳನ್ನೆಲ್ಲಾ ಇತರರ ಪ್ರಯೋಜನಕ್ಕಾಗಿಯೇ ಬಿಟ್ಟುಕೊಟ್ಟಿದ್ದರು. ಜನರಿಗೆ ಭದ್ರತೆಯನ್ನೂ ಮನೋರಂಜನೆಯನ್ನೂ ಒದಗಿಸಿಕೊಟ್ಟುದಕ್ಕಾಗಿ ಬಂದ ಯಶಸ್ಸಿನ ಪಾಲು ಅವರ ಪಾಲಿಗೆ ಇಂದಿಗೂ ಭದ್ರವಾಗಿ ಉಳಿದಿರುವುದು.

೨

ರಾಯರಿಗೆ ಕೀರ್ತಿ ಸಂಪಾದನೆಯಲ್ಲಿದ್ದ ಪ್ರೇಮವು ಎಷ್ಟೆಂದರೆ, ಅದಕ್ಕಾಗಿ ಅವರು ಯಾವಾಗಲೂ ಎಂತಹ ಆತ್ಮತ್ಯಾಗವನ್ನೂ ಮಾಡಲು ಸಿದ್ಧರು. 'ಚಂದ್ರಕಲಾ ನಾಟಕ ಮಂಡಳಿ'ಯ ನಾಟಕಗಳಿಗೆ ಸಂದರ್ಶಕರ ಸಂಖ್ಯೆ ಬೀಳುತ್ತಿರುವುದೆಂದು ತಿಳಿಯುವುದೇ ತಡ, ಹತ್ತಿಪ್ಪತ್ತು ಮಿತ್ರರಲ್ಲಿಗೆ ಕಾರಿನಲ್ಲಿ ಓಡಿ ಮಂತ್ರಮಾಡಿ ತಂತ್ರಹೂಡಿ ಬಂದ ಬಿಡುವರು. ಆ ರಾತ್ರಿ ನಾಟಕವು 'ಧ್ರುವವಿಜಯ'ವೇ ಆಗಿರಲಿ, ಸಭೆಯಲ್ಲಿ ರಿಝರ್ವ್ ಕ್ಲಾಸಿನಲ್ಲಿ ರಾಯರೂ, ಅವರ ಪರಿವಾರ ಮಾತ್ರವಲ್ಲದೆ, ಉಳಿದ ದೊಡ್ಡ ಕ್ಲಾಸುಗಳಲ್ಲೆಲ್ಲಾ ರಾಯರ ಮಿತ್ರರೂ ಅವರ ಕಳತ್ರರೂ, ತುಂಬಿಹೋಗುವರು. ಆ ಮೇಲೆ ಮೂರು ತಿಂಗಳ ವರೆಗೆ ಪ್ರತಿ ನಾಟಕಕ್ಕೂ ಟಿಕೇಟುಗಳೆಲ್ಲಾ ನಾಲ್ಕು ಗಂಟೆಗೇ ಬಂದಾಗುವುವು.

'ಟೌನ್‌ಕ್ಲಬ್ಬಿ'ನಲ್ಲಿ ಸದಸ್ಯರ ಬಲಕಡಿಮೆಯಾಗುತ್ತಿರುವುದೆಂದು ರಾಯರಿಗೆ ತಿಳಿದುಬರುವ ಪ್ರತೀ ಸಲ ಅಂದೇ ಕ್ಲಬ್ಬಿನಲ್ಲಿ ಒಂದು ದೊಡ್ಡ ಟೀಪಾರ್ಟಿಯು, ರಾಯರ ಖರ್ಚಿನಲ್ಲೇ ಜರಗುವುದು. ಅದಕ್ಕೆ ಸದಸ್ಯರಲ್ಲದವರೇ ಹೆಚ್ಚಾಗಿ ಆಮಂತ್ರಿತರು. ಆಬಳಿಕ ಒಂದು ವರ್ಷದ ಮಟ್ಟಿಗೆ ಕ್ಲಬ್ಬಿನ ಸದಸ್ಯರ ಸಂಖ್ಯೆಯಲ್ಲಿ ನೂರರ ಬಡತಿಯು ತಪ್ಪದೆ ಆಗುವುದು.

'ಲೋಕಲ್ ಬ್ಯಾಂಕಿ'ನಲ್ಲಿ ವ್ಯವಹಾರ ಸ್ವಲ್ಪ ಕಡಿಮೆಯಾಗಿರುವುದೆಂದು ರಾಯರ ಅವಗಾಹನೆಗೆ ಬರಬೇಕಷ್ಟೆ. ಮರುದಿನದಿಂದ ಊರ, ಹೊರವೂರ ಪತ್ರಿಕೆಗಳಲ್ಲಿ ಈ ಬ್ಯಾಂಕನ್ನು ಮುಕ್ತಕಂಠವಾಗಿ ಹೊಗಳದ, ಈ ಬ್ಯಾಂಕಿನ ಭದ್ರತೆಯನ್ನು ಪ್ರಕಟಿಸುವ ಜಾಹೀರಾತಿಲ್ಲದ ಪತ್ರಿಕೆಯೇ ಇಲ್ಲ. ಫಲವಾಗಿ ಒಂದೇ ವಾರದಲ್ಲಿ ಬ್ಯಾಂಕು ಹತ್ತು ಜನ ಗುಮಾಸ್ತರನ್ನು 'ಪ್ರೊಬೇಶನರಿ'ಗಳಾಗಿ ಸೇರಿಸಿಕೊಳ್ಳುವಂತಾಗುವುದು.

ಆ ಸಂಸ್ಥೆಗಳ ಮೇಲೆ ರಾಯರ ಮಹನತ್ತಿನಿಂದ ಆಗುತ್ತಿದ್ದ ಸತ್ಪರಿಣಾಮವೇ ಇಂದಿಗೂ ಅವುಗಳ ದೃಢವಾದ ಪಂಚಾಂಗವಾಗಿ, ಚಿರಸ್ಥಾಯಿಯಾಗಿ, ಉಳಿದಿದ್ದುದಕ್ಕಾಗಿ ಅವು ರಾಯರಿಗೆ ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ಅದು ಕಡಿಮೆಯೇ ಸರಿ.

೩

ಚಿನ್ನದ ಬೆಲೆಯು ಅಕಸ್ಮಾತ್ತಾಗಿ ಏರುತ್ತು. ಹಿಂದೂದೇಶದ ವ್ಯಾಪಾರಕ್ಕೆ ಇದರಿಂದ ದೊಡ್ಡ ಪೆಟ್ಟು ಬಿತ್ತು. ಬ್ಯಾಂಕುಗಳು ಎಷ್ಟೋ ನಷ್ಟವನ್ನು ಹೊರುವಂತಾಯಿತು. ಕೊಟ್ಟ ಹಣವನ್ನೇ ವಸೂಲು ಮಾಡುವುದು ಅವುಗಳಿಗೆ ಪರಮ ಸಂಕಟವಾಗಿ, ಇದ್ದ ಹಣವನ್ನು ಕೊಡುವುದಕ್ಕೂ ಕೈ ಹಿಂದೆಗೆಯಬೇಕಾಯಿತು. ಸರಿ ಹಾನಿವಾಗಿ ಜನರಿಟ್ಟ ಠೇವಣಾತಿಗಳ ಬಡ್ಡಿಯನ್ನೂ ಇಳಿಸಿದುವು.

ಜನರು, ಬ್ಯಾಂಕುಗಳು ಕಷ್ಟದಲ್ಲಿರುವುದರಿಂದ, ತಮ್ಮ ಹಣವನ್ನು ಭದ್ರಪಡಿಸಬೇಕೆಂದು ಯೋಚಿಸತೊಡಗಿದರು. ಒಡನೆಯೇ ಹೆಚ್ಚಿನವರು ಮೇಲಾಟದಿಂದ, ತಮ್ಮ ಹಣದಲ್ಲಿ ಆದಷ್ಟನ್ನು ಹಿಂದೆ ಪಡೆಯತೊಡಗಿದರು.

ದಿವಾನ್ ಬಹದ್ದೂರ್ ಲಕ್ಷ್ಮೀಕಾಂತ ರಾಯರಿಗೆ 'ಲೋಕಲ್ ಬ್ಯಾಂಕಿ'ನ ದೂರು ಬಂತು. ಠೇವಣಾತಿಗಳನ್ನು ಹಿಂದೆ ಕೊಡಬೇಕೆಂದು ಕೇಳಿಕೊಂಡು ಬರುವವರನ್ನು ಸಮಾಧಾನಪಡಿಸಬೇಕೆಂದು ರಾಯರನ್ನು ಕೇಳಿಕೊಳ್ಳಲಾಯಿತು.

ರಾಯರಿಗೆ ತಮ್ಮ ಸಂಸ್ಥೆಯ ಮೇಲಿನ ವಾತ್ಸಲ್ಯವು ರೋಮರೋಮದಿಂದಲೂ ಹೊರಸೂಸಿತು. ಒಡನೆ ಬಹಿರಂಗವಾಗಿ ಭಾಷಣಗಳನ್ನು ಕೊಡಲಾರಂಭಿಸಿದರು.

ಅವರು ತಮ್ಮ ಭಾಷಣಗಳಲ್ಲಿ, ಜನರು ಆತುರಪಟ್ಟು ಬ್ಯಾಂಕುಗಳಿಗೆ ಮಾಡುತ್ತಿದ್ದ ಅನ್ಯಾಯವನ್ನು ವಿವರಿಸಿದರು. ಬ್ಯಾಂಕುಗಳು ಕೆಟ್ಟುಹೋಗಿರುವುವೆಂಬ ಊಹನೆಯು ತಪ್ಪಾದುದೆಂದು ವ್ಯಕ್ತಪಡಿಸಿದರು. ಹೆಚ್ಚು ಬಡ್ಡಿಯನ್ನು ಕೊಡುವುದು ಹೇಗೆ ಅಸಾಧ್ಯವೂ ಬ್ಯಾಂಕಿಗೆ ಹಾನಿಕರವೂ ಎಂದು ರುಜುಪಡಿಸಿದರು. ತಾನು ತನ್ನ ಸರ್ವಸ್ವವನ್ನೂ 'ಲೋಕಲ್ ಬ್ಯಾಂಕಿ'ನ ವಿಶ್ವಾಸಾರ್ಹತೆಯ ಭದ್ರತೆಯಾಗಿ ಬರೆದುಕೊಡುವೆನೆಂದೂ ಯಾರೂ ಅದರಲ್ಲಿ ಭರವಸೆಪಡದಿರಬಾರದೆಂದೂ ಖಚಿತಪಡಿಸಿದರು. ಮಾತ್ರವಲ್ಲ ಈಗ ಚಿನ್ನದ ಬೆಲೆಯೇರಿರುವುದೆಂದು ಚಿನ್ನವನ್ನು ಮಾರುವುದು ಹೆಡ್ಡತನವೆಂದೂ, ಅದರಿಂದ ನಮ್ಮ ದೇಶದಿಂದಲೇ ಚಿನ್ನವನ್ನು ಹೊರಕ್ಕಟ್ಟಿದಂತಾಗುವುದೆಂದೂ ಸೂಚಿಸಿದರು.

ಜನರು ರಾಯರ ಮಾತಿನಲ್ಲಿ ಎಷ್ಟು ವಿಶ್ವಾಸವಿರಿಸಿದರೆಂದರೆ, ಅವರನ್ನು ಜನಾಬ್ದಾರಿ ಕೊಡುವುದಕ್ಕಾಗಿ ಕೇಳದೆಯೇ ತಮ್ಮ ಠೇವಣಾತಿಗಳನ್ನು 'ಲೋಕಲ್ ಬ್ಯಾಂಕಿ'ನಲ್ಲೇ ಇರಗೊಡಿಸಿದರು. ಮಾತ್ರವಲ್ಲ, ಅನೇಕರು ಹೆಚ್ಚು ಬಡ್ಡಿ ಕೊಡುತ್ತಿದ್ದ ಬ್ಯಾಂಕುಗಳು ವಿಶ್ವಾಸಾರ್ಹವಲ್ಲವೆಂದು ನಂಬಿ, ಅಂತಹ ಬ್ಯಾಂಕುಗಳಲ್ಲಿದ್ದ ತಮ್ಮ ಹಣವನ್ನು ತಂದು 'ಲೋಕಲ್ ಬ್ಯಾಂಕಿ'ನಲ್ಲೇ ಇರಿಸಿದರು. ಇನ್ನೂ ಅನೇಕರು ಚಿನ್ನ ಮಾರುವುದನ್ನೂ ನಿಲ್ಲಿಸಿದರು. ಅಂತೂ ರಾಯರ ಉಪದೇಶವು ಮಾಂತ್ರಿಕ ಪರಿಣಾಮವನ್ನುಂಟುಮಾಡಿ 'ಲೋಕಲ್ ಬ್ಯಾಂಕಿ'ನ ಭದ್ರತೆಯನ್ನು ಮತ್ತಷ್ಟು ಹೆಚ್ಚಿಸಿಬಿಟ್ಟಿತು.

೪

ಹಲವು ವರ್ಷಗಳಿಂದ ಏನೇನೋ ಕಾರಣಗಳಿಂದಾಗಿ ಕಷ್ಟದಲ್ಲಿರುತ್ತಿದ್ದ 'ದುರ್ಗಂಡಿ ಬ್ಯಾಂಕು' ಆ ವರ್ಷ ವಹಿವಾಟುಗಳನ್ನು ಹೆಚ್ಚಿಸುವುದಕ್ಕಾಗಿ ಠೇವಣಾತಿಗಳ ಬಡ್ಡಿಯ ದರವನ್ನು ಇಮ್ಮಡಿ ಮಾಡಿಬಿಟ್ಟಿತ್ತು. ಇದನ್ನು ಕೇಳಿ ಎಷ್ಟೋ ಜನರ ಅದರ ಬಲೆಯಲ್ಲಿ ಬಿದ್ದಿದ್ದರು. ಒಂದೇ ತಿಂಗಳಲ್ಲಿ 'ದುರ್ಗಂಡಿ ಬ್ಯಾಂಕ' ತನ್ನ ಠೇವಣಾತಿಯನ್ನು ಹತ್ತು ಪಾಲಿಗೆ ಹೆಚ್ಚಿಸಿತು.

ಮೂರು ತಿಂಗಳ ಕಳೆಯಬೇಕಾದರೆ 'ದುರ್ಗಂಡಿ ಬ್ಯಾಂಕು' ದಿವಾಳಿಯೆತ್ತಿ ಅದು ಹೊರಕ್ಕೆ ಕೊಟ್ಟ ಹೆಚ್ಚಿನ ಸಾಲವು ಮುಳುಗಿದುದೇ ಇದರ ಕಾರಣವೆಂದು ಎಲ್ಲೆಲ್ಲಿಯೂ ಗುಲ್ಲಾಯಿತು. ಅತ್ಯಾಶೆ ಮಾಡಿದವರೆಲ್ಲರಿಗೂ ಗತಿಗೇಡಾಯಿತು. ಇದ್ದ ಚಿನ್ನವನ್ನೂ ಮಾರಿ ಹಣಮಾಡಿ ಆ ಬ್ಯಾಂಕಿನಲ್ಲಿಟ್ಟಿದ್ದ ಎಷ್ಟೋ ಕುಟುಂಬಗಳು ಒಕ್ಕಲೆದ್ದ ಹೋದಂತಾಯಿತು.

೫

'ದುರ್ಗಂಡಿ ಬ್ಯಾಂಕಿ'ನ ದಿವಾಳಿಯ ವೃತ್ತಾಂತವನ್ನು ಅಕಸ್ಮಾತ್ತಾಗಿ ಕೇಳಿದ ದಿವಾನ್ ಬಹದ್ದೂರ್ ಲಕ್ಷ್ಮೀಕಾಂತರಾಯರು ಹಠಾತ್ತಾಗಿ ಕೆಳಕ್ಕೆ ಬಿದ್ದುಬಿಟ್ಟರು. ಮತ್ತೆ ಅವರನ್ನು ಮೇಲೆಕ್ಕೆಬ್ಬಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ.

ಇದರ ಕಾರಣವೇನೆಂದ ನೆಂದಲು ಎಲ್ಲರಿಗೂ ಆಶ್ಚರ್ಯವಾಯಿತು. ಆ ಬ್ಯಾಂಕಿನಿಂದ ನೊಂದ ಬಡಬಗ್ಗರ ಮೇಲಿನ ಕನಿಕರವೇ ಇದರ ಕಾರಣವಾಗಿರಬೇಕೆಂದು ಹೆಚ್ಚಿನವರು ಆಗ ಎಣಿಸುವಂತಾಯಿತು.

ಆದರೆ ಲೋಕಲ್ ಬ್ಯಾಂಕಿನವರು ರಾಯರ ಮನೆ, ಆಸ್ತಿ, ಪಾಸ್ತಿಯನ್ನೆಲ್ಲಾ ಸ್ವಾಧೀನಪಡಿಸಿಕೊಂಡಾಗಲೇ ಎಲ್ಲವೂ ಬೆಳಕಿಗೆ ಬಂತು.

ಲೋಕಲ್ ಬ್ಯಾಂಕಿನವರ ಕೊಡುವ ಸಾಲದ ಬಡ್ಡಿಗಿಂತಲೂ ದುರ್ಗಂಡಿ ಬ್ಯಾಂಕಿನವರು ಪಡೆಯುತ್ತಿದ್ದ ಠೇವಣಿಯ ಬಡ್ಡಿಯು ಹೆಚ್ಚಾಗಿದ್ದುದರಿಂದ, ರಾಯರು ತಮ್ಮ ಸರ್ವಸ್ವವನ್ನೂ 'ಲೋಕಲ್ ಬ್ಯಾಂಕಿ'ಗೆ ಬರೆದುಕೊಟ್ಟು ನಗನಾಣ್ಯಗಳನ್ನೂ ಮಾರಿ, ಒಂದು ಲಕ್ಷ ರೂಪಾಯಿಯನ್ನು ಪಡೆದು 'ದುರ್ಗಂಡಿ ಬ್ಯಾಂಕು' ದಿವಾಳಿಯಾಗುವ ಮೂರೇ ದಿನಗಳ ಹಿಂದೆ ಅದರಲ್ಲಿಟ್ಟಿದ್ದರೆಂದು ತಿಳಿದುಬಂದ ಯಾವ ಮನುಷ್ಯನಿಗೆ ಅವರ ಮೇಲೆ ಕಲ್ಲು ಕರಗುವಂತಹ ಮರುಕವುಂಟಾಗದ? ಇದರಲ್ಲಿಯೂ ಅವರ ಕುಟುಂಬದ ಈಗಿನ ಅವಸ್ಥೆ ಕಣ್ಣಾರೆ ಕಾಣುವಾಗ?

(ಮುಂದಿನ ವಾರದ ಕಥೆಯ ಹೆಸರನ್ನು ೩ನೇ ಪುಟದಲ್ಲಿ ನೋಡುವುದು.)

ಮೂಲವ್ಯಾಧಿಯ ನೋವನ್ನೇಕೆ ಸಹಿಸಬೇಕು?

ಶುದ್ಧವಾದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಸಾಂಬಕನ್ನು ಪಯೋಗಿಸಿರಿ.

ದಿನಂಪ್ರತಿ ಮೂರು ಸಲ ಸಾಂಬಕನ್ನು ತಿಕ್ಕಿದರೆ ಮೂಲವ್ಯಾಧಿಯ ನೋವೂ ಶಾಸಿಯಾಗುವುದು. ಭಯಂಕರವಾದ ನೋವು ಸಾಂಬಕನ್ನು ತಗಿಸಿದೊಡನೆ ಮಿರಾತಿನಂತೆ ಮಾಯವಾಗುವುದು. ಒತ್ತೊತ್ತಾಗಿ ಮುಂದುಡಿದ ನರಗಳನ್ನು ಹಿಡಿಸಿ ಉಬ್ಬಿದ ಭಾಗಗಳ ಕಷ್ಟವನ್ನು ಹೊರಗೆಡಹಿ ಶಾಂತಿಯನ್ನೀಯುವುದು. ಮೂಲವ್ಯಾಧಿಯು ನಿಮ್ಮನ್ನು ಕಾತರರನ್ನಾಗಿ ಮಾಡದಿರಲಿ. ಇವೇಗಲೆ ಸಾಂಬಕನ್ನು ಕೊಂಡುಕೊಳ್ಳಿರಿ. ಮೂಲವ್ಯಾಧಿಗೆ ಅಲ್ಲದೆ ಇನ್ನಿತರ ಚರ್ಮ ವ್ಯಾಧಿಗಳಿಗೆ ಸಾಂಬಕ್ ದಿವ್ಯೌಷಧ. ಎಲ್ಲಾ ಔಷಧಿ ಅಂಗಡಿಗಳಲ್ಲಿ ಮಾರಾಟಕ್ಕೆ ಸಿಗುತ್ತಿದೆ. ದರ ರೂಪಾಯಿ 1 ಅಥವಾ ರೂ 2—4—0

ಇದರಲ್ಲಿ ಜಂತುಗಳ ಕೊಬ್ಬಿನ ಮಿಶ್ರವಿಲ್ಲ

ಸಾಂಬಕ್

Zam Buk

ವಿಚಾರಮಯ ಜಗತ್ತು.

ಎಣ್ಣೆಯ ಪ್ರಾಮುಖ್ಯ.

ಎಣ್ಣೆಯು ಮಹಾ ಯುದ್ಧಕ್ಕೆ ಒಂದು ಕಾರಣವಾಗಿದ್ದುದು. ಮುಸಲೋನಿಯು ಬುದ್ಧಿ ಚಾತುರ್ಯವನ್ನು ಎಣ್ಣೆಯಿಂದ ನೆಟ್ಟಗೆ ಮಾಡಬಹುದು. ಈ ಎಣ್ಣೆಯಿಂದಲೇ ಕಳೆದ ಮಹಾಯುದ್ಧದಲ್ಲಿ ಬ್ರಿಟನಿಗೆ ಸೋಲುವ ಸಂಭವಗಳು ಒದಗಿದ್ದವು. ಅಮೇರಿಕದಿಂದ ಬಹಳ ಎಣ್ಣೆಯು ಇತ್ತ ಕಡೆಗೆ ಸುರಿಯಿತು. ಬ್ರಿಟಿಷ ನೌಕಾ ಸಮೂಹಗಳು, ವಿಮಾನಗಳ ತಂಡಗಳು, ಟ್ಯಾಂಕುಗಳು ಸಮರವು ಸಂಪೂರ್ಣ ಜಯಕಾರಿಯಾಗುವರೆಗೆ ಚಲಿಸಿದವು. ಈಗಿನ ನಾಗರೀಕತೆಗೆ ಈ ಎಣ್ಣೆಯು ಅವಶ್ಯಕವಾಗಿರುತ್ತದೆ.

ಎಣ್ಣೆಯಿಂದಲೇ, ಪ್ರಪಂಚಕ್ಕೆ ಬೇಕಾದ ಶಕ್ತಿಯನ್ನು ಒದಗಿಸುತ್ತಿದ್ದಾರೆ. ನಾವು ಎಣ್ಣೆಯಿಂದಲೇ ಮೋಟಾರು ವಾಹನಗಳಲ್ಲಿ ಸಂಚಾರ ಮಾಡುತ್ತಿದ್ದೇವೆ. ಜಗತ್ತಿನ ಶ್ರೀಮಂತರಲ್ಲಿ ಕೆಲವರು ಈ ಎಣ್ಣೆಯನ್ನೇ ಹೊಂದಿಕೊಂಡಿದ್ದಾರೆ. ಸಂಯುಕ್ತ ಅಮೇರಿಕದ ರೋಕ್‌ಫೆಲ್ಲರನೆಂಬ ಜನಿಸಿನ ವ್ಯಾಪಾರಿಯೆಂಬವನು, ೮೩,೦೦೦ ಪೌಂಡಿಗೆ ಒಂದು ಎಣ್ಣೆ ಇರುವ ಪ್ರದೇಶವನ್ನು ಪಡಕೊಂಡು, ೪೦ ೦೦೦,೦೦೦ ಪೌಂಡಿಗೆ ಐಶ್ವರ್ಯವನ್ನು ಗಳಿಸಿ ಜಗತ್ತಿನ ಶ್ರೀಷ್ಠ ಶ್ರೀಮಂತರಲ್ಲಿ ಒಬ್ಬನಾದನು. ಈ ಐಶ್ವರ್ಯವನ್ನು ಗಳಿಸಿ ತನ್ನ ೬೫ನೇ ವಯಸ್ಸಿನಲ್ಲಿ ಈತನು ನಿವೃತ್ತನಾದನು. ಈತನಿಗೆ ಈಗ ೯೩ ವರ್ಷ ಪ್ರಾಯ. ಈತನಿಂದ ಈ ವ್ಯಾಪಾರವನ್ನು ಪಡಕೊಂಡ ಸಂಸ್ಥೆಯು, ಸ್ಟ್ಯಾಂಡರ್ಡ್ ಓಯಿಲ್ ಕಂಪೆನಿ ಎಂಬ ಹೆಸರಿನಿಂದ ಜಗತ್ತಿನ ಅತಿ ಶ್ರೇಷ್ಠವಾದ ಎಣ್ಣೆಯ ಸಂಸ್ಥೆಯಾಗಿ, ೪೦ ಮಿಲಿಯ ಪವನು ಕ್ರಯ ಬಾಳುವ ಈ ಆಸ್ತಿಯನ್ನು ೪೦೦ ಮಿಲಿಯ ಪವನು ಕ್ರಯ ಬಾಳುವಂತೆ ಮಾಡಿರುವರು.

ಎಣ್ಣೆಯಿಂದ ಪೆಟ್ರೋಲು ಜನಿಸಿದ ಮೋಟಾರುಗಳು ಜನನಕ್ಕೆ ಬಂದು ಕ್ರಮೇಣ ಸುಧಾರಣೆ ಹೊಂದಿಕೊಂಡು ಇವತ್ತಿಗೆ ಮಾನವನ ಜೀವಮಾನದಲ್ಲಿ ಒಂದು ಮುಖ್ಯ ಉಪಕರಣವಾಗಿರುತ್ತದೆ. ಈ ಎಣ್ಣೆಯಿಂದಲೇ ನಮಗೆ ವಿಮಾನಗಳು ದೊರಕಿದವು. ಅದ್ಭುತವಾದ ನೌಕೆಗಳು ಜನಿಸಿದವು. ಹೀಗಿರುವಾಗ ಈ ಎಣ್ಣೆಯು ಮಾಯವಾದರೆ ಎಣ್ಣೆಯ ಖನಿಗಳು ಬಾವಿಗಳು, ಬತ್ತಿಹೋದರೆ ಈ ಪ್ರಪಂಚದ ಅಭಿವೃದ್ಧಿ ಕಳಚಿ ಬಿದ್ದಂತಾಗುವುದು. ಸಮಸ್ತ ಪ್ರಪಂಚವು ಅಂಧಕಾರಮಯವಾಗುವುದು.

ಆದರೆ ಎಣ್ಣೆಯನ್ನು ಕಂಡುಹಿಡಿಯುವ ಈ ಕಾಲದಲ್ಲಿ ಮೊದಲೇ ಕಲ್ಲಿದ್ದಲು ಸಿಕ್ಕಿರುತ್ತದೆ. ಇದರಿಂದ ಪೆಟ್ರೋಲನ್ನು ತಯಾರಿಸುವ ಉಪಾಯವನ್ನು ಕಂಡುಹಿಡಿದಿರುವರು. ಎಣ್ಣೆಯು ಬತ್ತಿಹೋಗುವ ಸಂಭವದಲ್ಲಿ, ಕಲ್ಲಿದ್ದಲಿನಿಂದ ಪೆಟ್ರೋಲನ್ನು ಒದಗಿಸಿಕೊಳ್ಳಬಹುದು. ಭೂಶಾಸ್ತ್ರಜ್ಞರು ಇನ್ನು ೩೦ ವರ್ಷಗಳಲ್ಲಿ ಈ ಪ್ರಪಂಚದ ಎಣ್ಣೆಯ ಬಾವಿಗಳು ಬತ್ತಿಹೋಗುವವೆಂದು ಭವಿಷ್ಯವಾಗಿ ನುಡಿದಿರುವರು. ಆದರೆ ಈ ಭೂಮಿಯಲ್ಲಿ ಧಾರಾಳ ಕಲ್ಲಿದ್ದಲಿದೆ. ಬ್ರಿಟನಿಗೆ ಈಗ ಒಂದು ವರ್ಷಕ್ಕೆ ೧೫೦೦ ಮಿಲಿಯ ಗೆಲನು ಪೆಟ್ರೋಲು ಬೇಕಾಗಿದೆ. ಇದರಲ್ಲಿ ೬೦ ಮಿಲಿಯ ಗೆಲನುಗಳನ್ನು ಕಲ್ಲಿದ್ದಲಿನಿಂದ ತಯಾರಿಸುತ್ತದೆ. ಅಂದರೆ ಸಾಧಾರಣ 1/23ನೇ ಅಂಶ. ಅಲ್ಲಿನ ಈ ರೀತಿಯಲ್ಲಿ ಪೆಟ್ರೋಲನ್ನು ಸಿದ್ಧಪಡಿಸುವ ಒಂದು ಕಾರ್ಖಾನೆಯಲ್ಲಿ ಕಲ್ಲಿದ್ದಲಿನ ಪ್ರತಿ ೩೫ ಟನ್ನುಗಳಿಗೆ ೩೦೦ ಗೆಲನು ಎಣ್ಣೆ ದೊರಕುತ್ತದೆ. ಈ ಕಾರ್ಖಾನೆಗೆ ೩೫೦,೦೦೦ ಟನ್ನು ಕಲ್ಲಿದ್ದಲನ್ನು ಉಪಯೋಗಿಸುವ ಯೋಗ್ಯತೆ ಇದೆ. ಅಂದರೆ ಈ ಮಿಲ್ಲಿನಿಂದ ೪೫ ಮಿಲಿಯ ಗೆಲನು ಪೆಟ್ರೋಲು ತಯಾರಾಗುತ್ತದೆ. ಇದರ ನಿರ್ಮಾಣಕ್ಕೆ ೭ ಮಿಲಿಯ ಪವನುಗಳು ವೆಚ್ಚವಾಗಿವೆ. ಇಂಗ್ಲಾಂಡಿಗೆ ಈ ತರದ ಸಾಧಾರಣ ೩೦ ಮಿಲ್ಲುಗಳು ಬೇಕಾಗುವವು. ಅದಕ್ಕೆ ಬೇಕಾದ ಎಲ್ಲಾ ಎಣ್ಣೆಯನ್ನು ಒದಗಿಸಲು ಯುದ್ಧಕಾಲದಲ್ಲಿ ಈ ತರದ ೭೦ ಮಿಲ್ಲುಗಳು ಹೆಚ್ಚಾಗಿ ಬೇಕಾಗುವವು. ಜರ್ಮನಿಯಲ್ಲಿ ಎಣ್ಣೆ ದೊರಕುವ ಯಾವ ಪ್ರದೇಶಗಳಿಲ್ಲ. ಸಂಕಷ್ಟಗಳ ಸಂಭವದಲ್ಲಿ ಯಾ ಇನ್ನಿತರ ಕಾರಣಗಳಿಂದ ಎಣ್ಣೆಯು ಇವರಿಂದ ತಪ್ಪಿಹೋಗುವ ಸಂಭವಗಳನ್ನು ಇವರು ಮುಂದಾಗಿ ಕಂಡು ತಮ್ಮಲ್ಲಿ ಧಾರಾಳವಾಗಿ ಸಿಕ್ಕುವ ಕಲ್ಲಿದ್ದಲಿನಿಂದಲೇ ತಮಗೆ ಬೇಕಾಗುವ ಎಣ್ಣೆಯ ಮೂರನೆ ಒಂದಂಶವನ್ನು ಸ್ವದೇಶದಲ್ಲಿ ತಯಾರಿಸುತ್ತಾರೆ.

ರಷ್ಯಾದಲ್ಲಿ ಮತ್ತು ರೊಮೇನಿಯಾದಲ್ಲಿ ಅನೇಕ ಎಣ್ಣೆ ಖಜಾನೆಗಳಿವೆ. ಇವುಗಳಿಗಾಗಿ ಒಂದಾನೊಂದು ದಿವಸ ಜರ್ಮನಿಯು ತಮ್ಮ ಮೇಲೆ ಬೀಳಬಹುದೆಂಬ ಭೀತಿಯು ಅವರಲ್ಲುಂಟಾಗಿದೆ. ಬೋರ್ನಿಯೊ ಮತ್ತು ಜಾವಾದಲ್ಲಿರುವ, ತಮ್ಮ ಎಣ್ಣೆಯ ಸ್ಥಳಗಳನ್ನು ಜಪಾನೀಯರು ಕಸಕೊಳ್ಳುವರೆಂದು, ಡಚ್ಚರೂ, ಬ್ರಿಟಿಷರೂ ಭೀತಿಪಡುತ್ತಿದ್ದಾರೆ. ಹಾಗೆಯೇ ಅಮೇರಿಕವು ತನ್ನ ಕೆಲಿಫೋರ್ನಿಯಾದ ಎಣ್ಣೆಯ ಪ್ರದೇಶದ ಮೇಲೆ ಜಪಾನು ಅಧಿಕ್ರಮಿಸುವುದೆಂದು ಭೀತಿಗೊಳ್ಳುತ್ತದೆ. ಅದ್ದರಿಂದ ಈ ಎಣ್ಣೆಯು ಪ್ರಪಂಚದ ಶಾಂತಿಭಂಗಕ್ಕೆ ಒಂದು ಮುಖ್ಯ ಕಾರಣವಾಗಿರುತ್ತದೆ. ಈ ಸ್ಥಿತಿಯು ನಿವಾರಣೆಯು ಎಣ್ಣೆಯ ದಾಯದಿಂದಿಗಾಗುತ್ತದೆ. ಅಷ್ಟರ ತನಕ ಈ ಜಗತ್ತಿನಲ್ಲಿ ಗಲಭೆಯು ತಪ್ಪದು. ಇರೇಕಿನಲ್ಲಿರುವ ಎಣ್ಣೆಯನ್ನು ಸಮುದ್ರ ತೀರಕ್ಕೆ ತರಲು ಒಂದು ಬ್ರಿಟಿಷ ಸಂಸ್ಥೆಯು ೧೧೫೦ ಮೈಲು ಉದ್ದದ ಪೈಪ್ ದಾರಿಯನ್ನು ರಚಿಸಿದೆ. ಈ ನಳಿಗೆಗಳಿಂದ ಒಂದು ವರ್ಷಕ್ಕೆ ೪ ಮಿಲಿಯ ಟನ್ನು ಎಣ್ಣೆಯು ಸುರಿಯುತ್ತದೆ. ಬ್ರಿಟನಿಗೆ ಈ ಎಣ್ಣೆಯು ಆವಶ್ಯಕವಾದುದು. ಅದನ್ನು ಭದ್ರಪಡಿಸಿ ಅದಕ್ಕಾಗಿ ಯುದ್ಧಮಾಡಲು ಸಿದ್ಧವಿದೆ. ನಾವಿಕರು ಬ್ರಿಟಿಷ ಸಾಮ್ರಾಜ್ಯದ ಹೃದಯಕಮಲ. ಈ ನಾವಿಕರ ಯೋಜನೆಗಳಲ್ಲಿ ಶೇಕಡ ೯೦ ಸಲ ಈ ಎಣ್ಣೆಯಿಂದ ಶಕ್ತಿ ಪಡೆಯುತ್ತವೆ.

ವಾರ್ಸಲೆ ಸಂಧಿ ಅತಿ ಕರಾಳವಾದುದು.

ಜರ್ಮನಿಯು ಲೋಕಾರ್ನೋ ಒಪ್ಪಂದವನ್ನು ವಾರ್ಸಲೆ ಸಂಧಿಯನ್ನು ತಿರಸ್ಕಾರ ಮಾಡಿರುತ್ತದೆ. ಈ ಒಪ್ಪಂದಗಳ ಶರ್ತಪ್ರಕಾರ ಯಾವತ್ತು ದಂಡಯೋಜನೆಗಳು ನಡೆಯಬಾರದಾಗಿ ಗೊತ್ತುಮಾಡಿರುವ ಜರ್ಮನಿಯ ರ್ಯಾನ್ ಲೆಂಡಿನ ಅವರು ಮತ್ತೊಮ್ಮೆ ದಂಡಯೋಜನೆ ಮಾಡಿದ್ದಾರೆ. ಈ ವಾರ್ಸಲೆ ಸಂಧಿಯ ಕುರಿತು ಜರ್ಮನ ಪ್ರಜಾಸಿಗಳೂ ಮತ್ತು ಅಲ್ಲಿ ಅನೇಕ ಕಾಲ ನಿವಾಸಿಗಳಾದ ಓರ್ವ ಆಂಗ್ಲೇಯ ಸಿಂಗ್ರಾದ ಪುರುಷರ ಈ ಸಂಧಿಯ ಕುರಿತು ಹೀಗೆನ್ನುತ್ತಾರೆ. ೧೯೧೯ರಲ್ಲಿ ವಾರ್ಸಲೆ ಒಪ್ಪಂದವು ನಡೆದಿರುವಾಗ, ಕೆಲವು ಬುದ್ಧಿವಂತರೂ ಅದರಿಂದಾಗಿ ಇನ್ನೊಂದು ಮಹಾಕ್ರಾಂತಿಯು (ಕಳೆದ ಮಹಾಯುದ್ಧಕ್ಕಿಂತ ಭಯಂಕರದ) ಉಂಟಾಗುವುದೆಂದು ಭವಿಷ್ಯವಾಗಿ ನುಡಿದಿದ್ದರು. ಈ ಒಪ್ಪಂದದಿಂದ ಸಮಸ್ತ ಯುರೋಪು ಖಂಡದ ಶಾಂತಿಭಂಗವಾಗುವುದಲ್ಲದೆ ಅತಿ ದೂರವಿರುವ ಸಂಯುಕ್ತ ಅಮೇರಿಕವು ಕೂಡ ಈ ಮಹಾಕಲಹದಲ್ಲಿ ಸೆಳೆಯಲ್ಪಡುವುದು ಎಂಬುದಾಗಿ ಅವರಾಡಿದ ಭವಿಷ್ಯದ ಮಾತು ಇವತ್ತಿನ ದಿವಸಕ್ಕೆ ಹೊಂದಿಸಿಕೊಳ್ಳಲು ಪ್ರಾರಂಭಿಸಿವೆ. ಈ ಸಂಧಿಯು ಕೆಳೆಯಿಂದ ಯುರೋಪು ಖಂಡದ ಮೇಲೆ ಒಂದು ಮಹಾ ಹೊರೆಯನ್ನು ಇಟ್ಟಂತಾಗಿದೆ. ಯುರೋಪಿನ ಶಾಂತಿರಕ್ಷಣೆಯಾಗಬೇಕಾದರೆ ಈ ಕರಾಳ ಹೊರೆಯನ್ನು ತೆಗೆದುಹಾಕತಕ್ಕದು. ಈ ಒಪ್ಪಂದಕ್ಕೆ ೬೯ ಜನಾಂಗಗಳು ಸಹಿ ಹಾಕಿದ್ದರೂ, ಬ್ರಿಟನು ಫ್ರಾನ್ಸು, ಇಟೆಲಿ ಮತ್ತು ಸಂಯುಕ್ತ ಅಮೇರಿಕಾ ಇವರು ಮಾತ್ರ ಈ ಕರಾಳ ಸಂಧಿಯಾಗಲು ಹೊಣೆಗಾರರು. ಈ ಸಂಧಿಯಿಂದಾಗಿ ಗೆದ್ದ ಕಡೆಯವರಿಗೆ ಅನೇಕ ರೀತಿಯಲ್ಲಿ ಹೇರಳಾಭಗಳಾಗಿವೆ. ಜರ್ಮನಿಯ ಶ್ರೀಮನ್ಸಿನ ಹಾನಿಯು ಕಡಿದಂತಾಗಿದೆಂದು ಫ್ರೆಂಚರ ದೃಢವಾದ ನಂಬಿಕೆ. ಒಟ್ಟಿನ ಮೇಲೆ ಈ ಸಂಧಿಯಿಂದಾಗಿ ಜರ್ಮನಿಗೆ ಅನೇಕ ತರದ ನಷ್ಟಗಳನ್ನು ಅನುಭವಿಸಬೇಕಾಯಿತು. ದೇಶನಷ್ಟ ಸಾಂಪತ್ತಿಕ ನಷ್ಟ ರಾಷ್ಟ್ರೀಯ ಗೌರವನಷ್ಟ. ಅವರ ಮಾತೃಭೂಮಿಯ ಕೆಲವಂಶಗಳನ್ನು ಅವರಿಂದ ಕಿತ್ತುಗೆದರು. ಜರ್ಮನಿಯ ಕೈಗಾರಿಕೆಗಳನ್ನು ನಾಶಗೊಳಿಸುವುದು ಈ ಸಂಧಿಯ ಮುಖ್ಯ ಉದ್ದೇಶಗಳಾದವು. ಜರ್ಮನಿಯನ್ನು ಯುದ್ಧಕಾರಣ ಕರ್ತರೆಂದು ಮಾಡಿ (ನಿಜವಾಗಿಯೂ, ಈ ಯುದ್ಧಕ್ಕೆ ಕಾರಣರು, ರಷ್ಯಾ ಮತ್ತು ಫ್ರಾನ್ಸು) ಅವರು ಅನೇಕ ಪ್ರಾಯಶ್ಚಿತ್ತಗಳನ್ನು ನಡೆಯಿಸಬೇಕಾಗಿ ಇತ್ಯರ್ಥವಾಯಿತು. ೧೯೧೮ರ, ಯುದ್ಧವಿರತಿಯ ನಂತರವೂ ಅವರು ಜರ್ಮನಿಯ ಮೇಲೆ ಅನ್ಯಾಯಕರವಾದ ಹಂಗರ್ ಬ್ಲೋಕೇಡ್ ಎಂಬ ಆಹಾರವನ್ನು ತಪ್ಪಿಸುವ ಕ್ರೂರ ಯೋಜನೆಯ ಅಂಟಿಯೋಗದಿಂದಾಗಿ ಅಸಂಖ್ಯಾತ ಜರ್ಮನರು ಮೃತರಾದರು. ಆದರೆ ನಾಗರೀಕರೆಂದೆನಿಸಿಕೊಳ್ಳುವ ಮೇಲೆ ಹೊಟಿಸಿದ ಜನಾಂಗಗಳು, ಜರ್ಮನಿಯ ಮೇಲೆ ಈ ತರದ ಕರಾಳ ಸಂಧಿಯನ್ನು ಹೇಗೆ ವಿಧಿಸಿದರೋ? ನಿಜವಾಗಿಯೂ ಇವರನ್ನು ನಿಷ್ಕರುಣಿಗಳೆಂದು ಕರೆಯಬಹುದು. ಜರ್ಮನಿಯನ್ನು ಸದಾಕಾಲ ಗುಲಾಮಗಿರಿಯಲ್ಲಿರಿಸುವುದು, ಈ ಸಂಧಿಯ ಪರಿಣಾಮವಾಯಿತು. ಅಂದರೆ, ಮತ್ಸರ ಮತ್ತು ಕೋಪ, ಈ ಸಂಧಿಯನ್ನು ನಿರ್ಮಿಸಿದವರು ಹಾಗೆ ವರ್ತಿಸಲು ಕಾರಣವೆನ್ನಬಹುದು. ಅದಕ್ಕೆ ಈಗೀಗ, ಈ ಸಂಧಿಯು ಕೆಳೆಯಿಂದ ಬ್ರಿಟನಿಗೆ ಬಹಳ ಹಾನಿಯುಂಟಾಗೀತೆಂದು ಅಲ್ಲಿನ ಪ್ರಸಿದ್ಧ ರಾಜಕೀಯ ಪುರುಷರಲ್ಲಿ ಜ್ಞಾನೋದಯವಾಗಲಾರಂಭಿಸಿದೆ. (ಫ್ರಾನ್ಸು, ಈ ಪರಿಣಾಮಕ್ಕೆ ಇನ್ನೂ ಕುರುಡಾಗಿರುತ್ತದೆ) ಬ್ರಿಟನಿಗೆ ಇದರಿಂದ ಭಯಂಕರ ನಷ್ಟವುಂಟಾಗಿದೆ. ಅವರ ವ್ಯಾಪಾರವು ಇಳಿದಿರುತ್ತದೆ. ಇದರಿಂದ ಇಂಗ್ಲಾಂಡಿನಲ್ಲಿ ಭಯಂಕರ ಆರ್ಥಿಕ ಮುಗ್ಗಟ್ಟು ಉಂಟಾಗಿ ನಿರುದ್ಯೋಗಿಗಳ ತಂಡಗಳು ಬೆಳೆದವು. ಅದು ಇವರು ಈ ಸಂಧಿಯಲ್ಲಿ ನಡೆಯಿಸಿದ ಅನ್ಯಾಯಗಳ ಪ್ರತಿಫಲವೆಂದು ಅವರಲ್ಲಿ ಕೆಲವರಿಂದುದೂ ಉಂಟು. ಈ ಸಂಧಿಯನ್ನು ಸುಧಾರಿಸುವ ಬಗೆಯೆಂತು? ಜರ್ಮನಿಯು ಶಕ್ತಿಗೆಯನ್ನು ಇನ್ನೂ ಹಿಸುಕಬೇಕೆಂದೂ ಅಭಿಪ್ರಾಯ ಪಡುವವರು ಈಗಲೂ ಅನೇಕರಿದ್ದಾರೆ. ಅವರ ವರ್ತನೆಗೆ ಈ ಸಂಧಿಯ ೨೩೧ನೇ ಶರ್ತವನ್ನು ಕಾರಣವಾಗಿಟ್ಟಿರುವರು. (ಈ ಶರ್ತದ ಪ್ರಕಾರ ಈ ಯುದ್ಧಕ್ಕೆ ಜರ್ಮನಿಯು ಹೊಣೆಗಾರನೆಂದು ಮಾಡಿರುವರು) ಆದರೆ ಕಳೆದ ಮಹಾ ಯುದ್ಧಕ್ಕೆ ಯುರೋಪಿನ ಎಲ್ಲಾ ಜನಾಂಗಗಳು ಹೊಣೆಗಾರರು. ಬಹುಶಃ ಈ ಸತ್ಯವು ಈಗ ಅನೇಕರಲ್ಲಿ ವಹಿಸಿದೆ. ಹೀಗಾಗಿ ಇಷ್ಟು ಅನ್ಯಾಯಕಾರಿ ಸಂಧಿಗಾಗಿ ಇನ್ನೊಂದು ಯುದ್ಧವೆ? ಯುದ್ಧವು ಬ್ರಿಟನಿನಲ್ಲಿ ಯಾರಿಗೂ ಬೇಕಾಗಿಲ್ಲ. ಕೆಲವೊಂದು ಕಲ್ಪಿತ ಕಾರಣಗಳಿಂದಾಗಿ ಯುದ್ಧಮಾಡುವುದು (೧೯೧೪ರಲ್ಲಿ ಒದಗಿದಂತೆ) ಅವರಿಗೆ ಬೇಕಾಗಿಲ್ಲ. ಈಗ ಇವರ ಮೇಲಿನ ಈ ಇಚ್ಛೆಗಳಿಗೆ, ಸರಕಾರವು ವಿರೋಧವಾಗಿ ನಡೆದರೆ— ಆಗ್ಗೆ ಇಂಗ್ಲಾಂಡಿನಲ್ಲಿ ಒಂದು ಮಹಾ ಕ್ರಾಂತಿ ಉಂಟಾಗಬಹುದು. ೧೯೧೪—೧೯೧೮ರ ಘೋರ ಚಿತ್ರವು ಈಗಲೂ ಎಲ್ಲರ ಮನಸ್ಸುಗಳಲ್ಲಿವೆ.

ಪ್ರೇಮ ಪ್ರಸಾರಣ.

ಅಮೇರಿಕದ ಒಂದು ಆಕಾಶವಾಣಿ ಸಂಸ್ಥೆಯು ಪ್ರೇಮವನ್ನು ಪ್ರಸಾರಮಾಡುವುದನ್ನು ತನ್ನ ಎತ್ತದ ಕಾರ್ಯಕ್ರಮಕ್ಕೆ ಕೂಡಿಸಿಕೊಂಡಿದೆ. ಈ ರೇಡಿಯೋ ಪ್ರಣಯಿಯು ನಾನೂರಾರು ಸ್ತ್ರೀಯರನ್ನು ಸಂತೋಷಗೊಳಿಸುತ್ತಾನೆ. ರೋಮಾಂಚನಗೊಳಿಸುವ ಪ್ರಣಯ ಮಾತುಗಳು ಇವರನ್ನು ಮರುಳುಗೊಳಿಸುತ್ತದೆ. ಮಿಸ್ಸುಗಳಲ್ಲಿ ಈ ಪ್ರಣಯ ವಿಲಾಸವು ಬಹಳ ಪ್ರಸಿದ್ಧಿಗೆ ಬಂದಿರುತ್ತದೆ. ಗಂಡಂದಿರು ತಮ್ಮ ಉದ್ಯೋಗಗಳಿಗೆ ತೆರಳಿದೊಡನೆ ಈ ಕಾರ್ಯಕ್ರಮವು ಪ್ರಾರಂಭವಾಗುವುದು. ಸ್ತ್ರೀಯರು ತಮ್ಮ ಕಾರ್ಯಗಳನ್ನು ರೇಡಿಯೋ ಪೆಟ್ಟಿಗೆಗಳ ಹತ್ತಿರ ಎಳೆದು ಪ್ರಣಯಸುಖವನ್ನು ಮನೋಭಾವದಲ್ಲಿ ಅನುಭವಿಸುತ್ತಾರೆ.

ಹೊಸತಾಗಿ ಜನಿಸಿದ ಮಗುವಿನ ಹೃದಯದಲ್ಲಿ ಒಂದು ಲೋಹದ ತುಂಡು.

ಒಂದು ಗಂಡು ಮಗುವು ಇಂಗ್ಲಾಂಡಿನ ಒಂದು ಸ್ಥಳದಲ್ಲಿ ಜನಿಸಿ ಕೆಲ ನಿಮಿಷದಲ್ಲೇ ಮೃತವಾಯಿತು. ಆರೋಗ್ಯವಂತನಾಗಿ ಬೆಳೆದ ಈ ಮಗುವು ಅಕಸ್ಮಾತ್ತಾಗಿ ಮರಣಹೊಂದಲು, ವೈದ್ಯಕೀಯ ಜನರು ದಿಗಿಲುಪಟ್ಟರು. ಹಾಗೆ ಮರಣದ ಕಾರಣವನ್ನು ತಿಳಿಯುವ ಕುತೂಹಲದಿಂದ ಮಗುವಿನ ಮೇಲೆ ಶಸ್ತ್ರಪ್ರಯೋಗವನ್ನು ಮಾಡಿದರು. ಈ ಶಸ್ತ್ರಪ್ರಯೋಗದಲ್ಲಿ ಮಗುವಿನ ಹೃದಯ ಕಮಲವನ್ನು ಪರೀಕ್ಷಿಸುತ್ತಿರುವಾಗ ಅದರಲ್ಲಿ ಲೋಹದ ಒಂದು ತುಂಡು ದೊರಕಿತು. ಡಾಕ್ಟರರು ಇದು ತಮ್ಮ ಶಸ್ತ್ರಗಳಿಂದ ಬಿದ್ದಿರಬಹುದೆಂದು ಒಮ್ಮೆ ಅಭಿಪ್ರಾಯಪಟ್ಟರು. ಆದರೆ, ಅವುಗಳನ್ನು ಸರಿಯಾಗಿ ಪರೀಕ್ಷಿಸಲಾಗಿ, ಶಸ್ತ್ರಗಳಿಂದ ಲೋಹದ ತುಂಡು ಕಳಚಿ ಹೋದುದು ಕಂಡುಬರಲಿಲ್ಲ. ಎಂದರೆ—ಆ ಲೋಹದ ತುಂಡು ಹೃದಯದೊಳಗೆ ಜನನದ ಸಮಯ ಇತ್ತೆಂದು ದೃಢವಾಯಿತು. ಮಗುವಿನ ಮರಣಕ್ಕೆ ಇದೇ ಕಾರಣವೆಂದು ತಿಳಿದುಬಂತು. ಆದರೆ, ಲೋಹದ ತುಂಡು ಅಲ್ಲಿಗೆ ಹೇಗೆ ಬಂತು? ಬಹುಶಃ ತಾಯಿಯು ಆಹಾರದಲ್ಲಿ ಅದು ಸೇರಿಕೊಂಡಿದ್ದು, ಮಗುವಿನ ಹೃದಯಕಮಲವನ್ನು ಸೇರಬಹುದೆಂದು ಕೆಲವರಲ್ಲಿ ಭಾವನೆಯಾಗಬಹುದು. ಆದರೆ ಇಷ್ಟರ ತನಕ ಜ್ಞಾರಿಯಾದ ವೈದ್ಯಕೀಯ ಜ್ಞಾನಪ್ರಕಾರ ಇದು ಅಸಾಧ್ಯವೆನಿಸುತ್ತದೆ. ಅಂದರೆ ಮಗುವಿನ ಹೃದಯಕಮಲದಲ್ಲಿ ಲೋಹದ ತುಂಡು ಇದ್ದುದು ಒಂದು ವೈಚಿತ್ರ್ಯವೇ ಸರಿ!

ಕುರುಡರಿಗಾಗಿ ಮಾತಾಡುವ ಪುಸ್ತಕ!

ಕುರುಡರಾದವರ ವಿದ್ಯಾಭ್ಯಾಸ ನಡೆಸಲು ಪ್ರಪಂಚದ ವಿವಿಧ ಕಡೆಗಳಲ್ಲಿ ಉತ್ತಮಯೋಜನೆಗಳನ್ನು ಮಾಡಿದ ಕಾರ್ಯವು ಇವತ್ತಿಗೆ ಅನೇಕ ವರ್ಷಗಳಿಂದ ನಡೆಯುತ್ತದೆ. ಸದ್ಯದಲ್ಲೇ ಮಾತಾಡುವ ವರ್ತಮಾನ ಪತ್ರಗಳಂತೆ ಪುಸ್ತಕಗಳು ಬರುವವು. ಈ ಪುಸ್ತಕವನ್ನು ಗ್ರಾಮಾಫೋನ್ ಉಪಕರಣದಿಂದ ಕೇಳಬಹುದು. ಈ ರೀತಿಯಲ್ಲಿ ಗ್ರಾಮಫೋನ ಗಳ ವಿದ್ಯಾಭ್ಯಾಸದಲ್ಲಿ ಈಗ ಅನೇಕ ಕಡೆಗಳಲ್ಲಿ ಉಪಯೋಗವಾಗುತ್ತಿವೆ. ಮಾತಾಡುವ ಪುಸ್ತಕಗಳನ್ನು ಅಮೇರಿಕಾದಲ್ಲಿ ಬ್ರಿಟನಿನಲ್ಲಿ ತಯಾರಿಸುತ್ತಿದ್ದಾರೆ. ಇವುಗಳು ನಿಧಾನವಾಗಿ ನಡೆಯುವ ಗ್ರಾಮಫೋನು ಯಂತ್ರಗಳು. ಒಮ್ಮೆ ಮಾತಾಡಿದ ವಾಕ್ಯಗಳನ್ನು ಸರಿಯಾಗಿ ಪ್ರತಿ ಆಡಬಲ್ಲವು. ಇದರಲ್ಲಿ ಉಪಯೋಗ ಮಾಡುವ ರೆಕಾರ್ಡು ೩೦ ನಿಮಿಷಗಳ ತನಕ ನಡೆದು ೫೦೦೦ ಮಾತುಗಳನ್ನು ಆಡುವವಂತೆ.

ವಿದ್ಯುಚ್ಛಕ್ತಿಯನ್ನು ಧಿಕ್ಕರಿಸಿದ ಮಾನವ.

ಮನುಷ್ಯನನ್ನು ಕೊಲ್ಲಲು, ವಿದ್ಯುಚ್ಛಕ್ತಿಗೆ ೫೦೦ ವೋಲ್ಟುಗಳ ವೇಗವು ಇದ್ದರೆ ಸಾಕಾಗುತ್ತದೆ. ನಮ್ಮ ಮನೆಯಲ್ಲಿ ಉಪಯೋಗಿಸುವ ವೇಗದ ೪ ಪಾಲಷ್ಟು. ಆದರೆ ಕೆಲವು ವೇಳೆ ನಮ್ಮ ಮನೆಯಲ್ಲಿರುವ ವಿದ್ಯುತ್ ಸರಿಗೆಯು ಮೃತ್ಯುಮುಖವಾಗುವುದುಂಟು. ಆದರೆ, ೪೦೦,೦೦೦ ವೋಲ್ಟು ವೇಗವುಳ್ಳ ವಿದ್ಯುತ್ ಚಕ್ತಿ ಪ್ರವಾಹವನ್ನು ತನ್ನ ದೇಹದೊಳಗೆ ಚಲಿಸುವ ಯೋಗ್ಯತೆಯುಳ್ಳ ಒಬ್ಬ ಮನುಷ್ಯನಿರುವನಂತೆ. ಈ ವಿದ್ಯುಚ್ಛಕ್ತಿ ಪ್ರವಾಹವು ಆತನ ದೇಹದಲ್ಲಿ ಚಲಿಸುತ್ತಿರುವಾಗ ಆತನ ಬೆರಳುಗಳಿಂದ ಕಿಡಿ ಹಾರುತ್ತದಂತೆ. ಆತನು ವಿದ್ಯುತ್ ಚಕ್ತಿ ಬಲ್ಬುಗಳನ್ನು ಉರಿಸಬಲ್ಲನಂತೆ. ಆತನು ಈ ಅದ್ಭುತವನ್ನು ನಡೆಯಿಸುವ ಉಪಾಯವು ಗುಟ್ಟಾಗಿಟ್ಟಿರುತ್ತದೆ. ಆದರೆ ಆತನ ದೇಹದಿಂದ ೪೦೦ ೦೦೦ ವೋಲ್ಟಿನ ಪ್ರವಾಹವು ಚಲಿಸುವುದು ಹಲವರು ಕಣ್ಣಾರೆ ಕಂಡಿರುವರು. ಈ ಅದ್ಭುತಕಾರ್ಯದ ಮರ್ಮವೇನು?

ವಜ್ರಗಳು —— ವಜ್ರಗಳು!

ನಮ್ಮಲ್ಲಿ 'ಅಂಟುವರ್ಪ'ನಿಂದ ಸೀದಾ ತರಿಸುವ ಅತೀ ಉತ್ತಮ ಜಾತಿಯ ವಜ್ರಗಳು ಯಾವಾಗಲೂ ಸಿಗುತ್ತವೆ.



ಏನೊಂದು ಕಳೆಗಳಿಲ್ಲದ ಉತ್ತಮವರ್ಗದ "ಬ್ಲೂ ಜಾಗ್ಗರ" ವಜ್ರಗಳೂ.

"ಎಕ್ಸ್‌ಟ್ರಾ ವ್ಹಾಯಿಟ್" ವಜ್ರಗಳೂ ನಮ್ಮಲ್ಲಿ ಸದಾ ಸಿದ್ಧವಿರುತ್ತವೆ. ಬೆಲೆಗೆ ತಕ್ಕ ಒಡನೆ ಒದಗಿಸಿಕೊಡುವವರು

ಸಾಹುಕಾರ ಶ್ರೀನಿವಾಸ ರಂಗ ಪೈ,

ಸಾಹುಕಾರ ಮಹಾಲ್, ರಥಬೀದಿ ಮಂಗಳೂರು.
(ಸನ್ 1856ರಲ್ಲಿ ಸ್ಥಾಪಿತವಾದ್ದು)
ನೂಲ ಮತ್ತು ಜವುಳಿ ವ್ಯಾಪಾರಸ್ಥರು.

ಅನುಕ್ರಮಣಿಕೆ

[illegible]
[illegible]
ವಾರ್ತಾ ಚಿತ್ರಗಳು
ಉಪದೇಶಕನ ಉಪದೇಶ
ವಿವಿಧ ಸಮಾಚಾರಗಳು
ಗ್ರಲೇಖ
ಹೊಸ ತೆರಿಗೆ
ಮಂಗಳೂರು, ತಾಲೂಕುಗಳಿಂದ
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ
ಇಟಲಿ–ಹಬಷಿ ಸಂಧಿಯಾಗುವುದೇ? . ೧೪
ವನಿತಾ ವಿಭಾಗ

ಸ್ವದೇಶಾಭಿಮಾನಿ.

೫೯. ೨೭ನೇ ಶುಕ್ರವಾರ ಮಾರ್ಚಿ ೧೯೩೬

ಹೊಸ ತೆರಿಗೆ!

ಇಂಡಿಯಾ ಸರಕಾರದ ಅಥವಾ ಮದ್ರಾಸು ಸರಕಾರದ ಬಜೇಟನ್ನು ಅಲ್ಲಲ್ಲಿಗೆ ಸರಿಗೊಳಿಸಿ ಅಥವಾ ಲಾಭವಿದೆಯೆಂದು ತೋರುವಂತೆ ಕೌನ್ಸಿಲುಗಳಲ್ಲಿ ಚರ್ಚಿಸುವಾಗ, ಘನಾವ್ಯಾದ ರೀತಿಯಲ್ಲಿ ವಿಶೇಷ ಕಿರುಕುಳಗಳಾಗಿ ಪೀಡಿಸುವ ತೆರಿಗೆಗಳಿವೆಯೋ ಅವನ್ನು ಏತಕ್ಕೆ ರದ್ದುಮಾಡಲಾರದೆಂಬ ಪ್ರಶ್ನೆಯು ಯಾವಾಗಲು ಉಂಟಾಗುವುದುಂಟು ಆದರೆ, ಸರಕಾರ ಪಕ್ಷವು ಇಂತಹ ಪ್ರಶ್ನೆಗಳನ್ನು ಇದಿರಾದಿ ವಾದದಲ್ಲಿ ನಿಶ್ಚಿತವೋಟುಗಳ ಬಲದಿಂದ ಗೆಲ್ಲುವುದೂ, ಅಥವಾ ಸೋತಲ್ಲಿ ಸರ್ಟಿಫಿಕೇಟುಗಳ ಬಲದಿಂದ ಅವುಗಳನ್ನು ಇದ್ದಂತೆಯೆ ಎಂದರೆ ತಮ್ಮ ಅಭಿಪ್ರಾಯದಲ್ಲಿದ್ದಂತೆಯೆ ಮಾಡಿಕೊಳ್ಳುವುದೂ ಇದ್ದೇ ಇದೆ ಇದು ನಮ್ಮ ಆಡಳಿತ ಕ್ರಮದ ಸದ್ಯಸ್ಥಿತಿ.

ಪೋಸ್ಟು ಕಾರ್ಡುಗಳ ದರವನ್ನು ಅರ್ಧಾಣೆಗೆ ತಗ್ಗಿಸಬೇಕಾಗಿ ಎಸೆಂಬ್ಲಿಯಲ್ಲಿ ವಾದಿಸಲಾಗಿದೆ ಹೀಗೆ ಮಾಡಿದಲ್ಲಿ ಇಲಾಖೆಗೆ 50 ಲಕ್ಷ ರೂಪಾಯಿ ನಷ್ಟವಾಗುವುದಂತೆ ತುಂಬ ಲಾಭವುಳ್ಳ ಈ ಇಲಾಖೆಯಲ್ಲಿ ಸರಕಾರವು ಬಹಳ ಹೆಚ್ಚಿನ ಕಾರ್ಯಭಾರಕ್ಕೆ ಕೈಹಚ್ಚಿ ಅದೊಂದು ನಷ್ಟಕ್ಕೆ ಬರುವಂತೆ ಕ್ರಮವೇ ಇದೆ ಎಂದರೆ ತಪ್ಪಾಗದು. ಶ್ರೀ ಬೇವೂರವರು ಮೇಲು ಉದ್ಯೋಗಸ್ಥರಾಗಿ ಬಂದಂದಿನಿಂದ ಯಾವ ತರದಲ್ಲೂ ಸೌಕರ್ಯಗಳೂ ಸಲಕರಣೆಗಳೂ ಕಡಿಮೆಯಾಗದಂತೆಯೂ, ಆಗುವಷ್ಟು ಜನಪ್ರೀತವಾಗುವಂತೆಯೂ ಇಲಾಖೆಯನ್ನು ಅವರು ತಿದ್ದಿ ತರುತ್ತಿದ್ದಾರೆ ಆದರೆ, ಮಾಡುವುದೇನು? ಸರಕಾರ ಪಕ್ಷಕ್ಕೆ ಅವರು ಒತ್ತಿ ನುಡಿಯಬೇಕಾದುದರಿಂದ, ವರ್ಷಕ್ಕೆ ಹನ್ನೊಂದು ಲಕ್ಷದಂತೆ ಕಾರ್ಡುಗಳ ವಿನಿಯೋಗವು ಹೆಚ್ಚುತ್ತ ಬರುತ್ತಿದೆಯಾದರೂ, ಮುಕ್ಕಾಲಾಣೆಯ ದರವನ್ನು ಅರ್ಧಾಣೆಗೆ ಇಳಿಸಿದ ಕೂಡಲೆ ಐವತ್ತು ಲಕ್ಷ ನಷ್ಟವೆಂದು ಅವರು ನುಡಿದರು ಎಸೆಂಬ್ಲಿಯು ಇದನ್ನು ಮಂಜೂರು ಮಾಡಿದೆ. ಸರ್ಟಿಫಿಕೇಟು ಮೂಲಕ ಅದು ರದ್ದಾಗಬಹುದೇನೋ!

ನಮ್ಮ ಮಾದರಿ ಸಂಸ್ಥಾನವು ಮೋಟಾರು ಚಲಾವಣೆಯ ಮೇಲೆ ಇನ್ನಷ್ಟು ಬಲವಾದೊಂದು ತೆರಿಗೆ ಹೊರಿಸಿಯದೆ. ಪ್ರತಿ ಸೀಟಿಗೆ ರೂ. 7–8ಯಂತೆ ಈಗ ವಾರ್ಷಿಕ ತೆರಿಗೆಯಿದೆ. ಇದರಿಂದ ಎಷ್ಟೋ ಬಸ್ಸು ಕಂಪೆನಿಗಳಿಗೆ ಏಳು ಪರಿ ಹಿಡಿದಿದೆ. ಈ ತೆರಿಗೆಯನ್ನು ಈಗ 8-12-0 ರಂತೆ ಮಾಡುವರು. 28 ಜನರು ಪ್ರಯಾಣ ಮಾಡುವ ಒಂದು ಬಸ್ಸಿನ ಮೇಲೆ ವಾರ್ಷಿಕವಾಗಿ 1000 ರೂಪಾಯಿಯಷ್ಟು ತೆರಿಗೆಯೋ ಸರಕಾರಕ್ಕೆ ಸಿಗುವುದು! ಜಿಲ್ಲಾ ಬೋರ್ಡುಗಳಿಗೆ ಸರಾಸರಿಯಾಗಿ ರೂ. 690 ಸಿಗುವುದು ಜಿಲ್ಲಾ ಬೋರ್ಡುಗಳಿಗೇ ಮೋಟಾರು ವಾಹನಾದಿಗಳ ತೆರಿಗೆ ವಿಧಿಸುವ ಹಾಗೂ ವಸೂಲ್ಮಾಡುವ ಅಧಿಕಾರವನ್ನು ಕೊಟ್ಟರೇನು? ಎಂದರೆ, ಇದರಿಂದ ಜಿಲ್ಲಾ ಬೋರ್ಡುಗಳ ಸಾಂಪತ್ತಿಕ ದುರ್ಗತಿಗೆ ಕಾರಣವಾದೀತೆಂದು ನಮ್ಮ ಮಂತ್ರಿಗಳಿಗೆ ಚಿಂತೆ. ಎಂದರೆ, ಬಸ್ಸುಗಳ ಚಲಾವಣೆ ಹಾಗೂ ಅವುಗಳ ತೆರಿಗೆ ಇವುಗಳ ಮೇಲೆ ವಿಶೇಷ ನಂಬಿರಲು ಅನುಕೂಲವಾಗಿಲ್ಲ; ಸ್ಪರ್ಧೆಯ ದೆಸೆಯಿಂದ, ಬಹಳ ಕಡಿಮೆ ದರ ಹಾಕಿ ಬಸ್ಸು ಕಂಪೆನಿಗಳು ಅಸ್ತವ್ಯಸ್ತವಾಗಿ ಹೋಗುತ್ತವೆ; ಈಗ ತೆರಿಗೆ ಹೆಚ್ಚಿಸಿದ ಕೂಡಲೆ ಬಸ್ಸು ಮಾಲಿಕರು ಈ ತೆರಿಗೆಯಲ್ಲಿನ ಹೆಚ್ಚಿಗೆಯನ್ನು ಪ್ರಯಾಣಿಕರ ಮೇಲೆ ವರ್ಗಾಯಿಸಿದರೆ ತಾವು ಸುಖವಾಗಿರಬಹುದು ಎಂದು ಸೂಚಿಸಲಾಗಿದೆ.

ಕೌನ್ಸಿಲಿನಲ್ಲಿ ಈ ರೀತಿಯ ಮಾತುಬಂದುದರಿಂದ, ಸರಕಾರದ (ಮಂತ್ರಿಗಳ) ಉದ್ದೇಶವೊಂದು ಹೊರ ಬಿದ್ದಂತಾಯಿತು. ಬಸ್ಸು ಚಲಾವಣೆಯ ಮೇಲೆ ವಿಧಿಸುವ ತೆರಿಗೆಯನ್ನು ಬಸ್ಸು ಪ್ರಯಾಣಿಕರು ತೆರುವಂತಾಗುವುದು ಈಗಣ ಅಂದಾಜಿನಲ್ಲಿ ತೋರುವಂತೆ, ಆರಾಣೆ ಟಿಕೇಟಿಗೆ ಹೋಗುವ ಪ್ರಯಾಣಿಕರು ಏಳಾಣೆ ಕೊಟ್ಟರಾಯಿತು ಬಸ್ಸು ಧನಿಗಳಿಗೆ ಕೈಯಿಂದೇನೂ ಬೀಳದೆ, ಸರಕಾರಕ್ಕೆ ಅಧಿಕ ತೆರಿಗೆ ಸರಿಯಾಗಿ ಸಿಗುವುದು ಸಂಸ್ಥಾನದಲ್ಲಿ ಬಸ್ಸು ಚಲಾವಣೆಯ ವಿಧಿ ವಿಧಾನಗಳನ್ನು ನೋಡಿದರೆ, ತೀರಬಡಜನಗಳಿಗೆ ತ್ವರಿಯಾಗಿ ಪ್ರಯಾಣ ಮಾಡಲೂ ಸುಲಭವಾಗಿ ಪ್ರಯಾಣ ಮುಗಿಸಲೂ ಇರುವ ಇದೊಂದೇ ಸೌಕರ್ಯವನ್ನು ಈಗ ಸರಕಾರವು ಕಠಿನಗೊಳಿಸುವಂತೆ ತೋರುತ್ತಿದೆ ಮೋಟಾರುಗಳನ್ನಲ್ಲದೆ ಇತರ ಯಾವ ತರದ ವಾಹನಗಳಮೇಲೆಯೂ ತೆರಿಗೆ ಹಾಕುವುದಿಲ್ಲ, ಏಕೆಂದರೆ, ಬಡ ಬೇಸಾಯಗಳ ಗಾಡಿಯೆತ್ತುಗಳ ಮೇಲೆ ತೆರಿಗೆ ಏರಿಸುವುದು ಅನ್ಯಾಯವೆನ್ನುವ ಸರಕಾರದ ಮಂತ್ರಿಗಳು, ಅದೇ ಬೇಸಾಯಿಯೂ ಅವನ ಸರಕೂ ಸಂಚರಿಸಬೇಕಾದರೆ ಹೆಚ್ಚಿನ ವ್ಯಯವು ಉಂಟಾಗುವ ಹಾಗೆ ಈಗ ತೆರಿಗೆ ಏರಿಸುತ್ತಿದೆ

ಲೋಕಲ್ ಬೋರ್ಡುಗಳಿಗೆ, ಟೋಲ್ ಗೇಟುಗಳ ನಿರ್ಬಂಧವನ್ನು ತಪ್ಪಿಸಿದ ದಿನಗಳಿಂದ, ಆಯವು ಕಡಿಮೆಯಾಗಿದೆ ಸರಕಾರವು ಈ ನಷ್ಟವನ್ನು ತುಂಬಿಸುವುದಕ್ಕಾಗಿ, ಮೋಟರು ಚಲಾವಣೆಯ ಮೇಲೆ ತೆರಿಗೆ ವಿಧಿಸಿಯದೆ ವರ್ಷಕ್ಕೆ ೭೨ ಲಕ್ಷ ರೂಪಾಯಿ ಈ ರೀತಿಯಾಗಿ ಆಯವಾಗುವುದೆಂದು ನಂಬಿಕೆ ಇದ್ದರೂ, ಅದಿನ್ನೂ ೩೭ ಲಕ್ಷಕ್ಕೆ ಇಳಿದಿದೆ ಈಗ ಸೀಟಿಗೆ ರೂ ೧–೪ ೦ ರಂತೆ ಹೆಚ್ಚಿಸಿದರೆ, ೩॥ ಲಕ್ಷ ರೂಪಾಯಿ ಹೆಚ್ಚಿಗೆ ದೊರೆವುದಂತೆ ಹಾಗಿದ್ದರೂ, ಇನ್ನೂ ಬೇಕಾಗುವ ೩೩ ಲಕ್ಷ ರೂಪಾಯಿಗಳಿಗೇನು ಉಪಾಯವಿದೆ? ಈ ಮೋಟಾರು ತೆರಿಗೆಯಿಂದ ತಾನೆ ವಿದ್ಯಾ ಶಾಲೆಗಳು (ಸೆಕೆಂಡರಿ) ನಡೆಯುತ್ತಿದ್ದುವು ಈಗ ಬೋರ್ಡುಗಳಿಗೆ ಸಿಗುವ ಹಣವು ಅರ್ಧಕ್ಕರ್ಧವಾಗಿದೆ ರಸ್ತೆಯ ದುರಸ್ತಿಯ ಮಾತು ಹಾಗಿರಲಿ ಅದಕ್ಕೆ ಬೇಕಾದಷ್ಟು ಸಾಲ ಪಡೆದೇ ನಿರ್ವಹಿಸಬೇಕಾಗಿದೆ. ಗಾಡಿಗಳ ಮೇಲೆ ತೆರಿಗೆ ವಿಧಿಸದರಾಗದೆ ಎಂದರೆ, ರಸ್ತೆಗಳನ್ನು ಹಾಳುಮಾಡುವವು ಇವೇ ಆದರೂ, ಗಾಡಿಯವನು ಬಡವನು ಎಂಬ ಉತ್ತರ ಸಿಗುವುದು. ನಾಳಿನ ಚುನಾವಣೆಗೆ ಬಡ ವೋಟರರ ವೋಟಿನ ಮೇಲೆ ಕಣ್ಣಿದೆ

ಬಹುಜನರಿಗೆ, ಬಹುಜನ ಬಡವರಿಗೆ ಪ್ರಯಾಣಾನುಕೂಲತೆಗಾಗಿಯೋಗ್ಯವಾಗಿರುವ ಮೋಟರು ಬಸ್ಸುಗಳ ಮೇಲೆ ತೆರಿಗೆ ಏರಿಸಿ, ಬಡವರ ಕಿಸೆಯನ್ನು ಬರಿದುಮಾಡುವುದು ಮಂತ್ರಿಗಳಿಗೆ ಯೋಗ್ಯವಲ್ಲ. ಹೊಗೆಸೊಪ್ಪಿನ ಅದೊಂದು ಹೊಸ ತೆರಿಗೆಯೇ ಸಾಕು. ಆದರೆ, ಇವನ್ನು ಮಂಜೂರು ಮಾಡುವುದಿಲ್ಲೆಂದರೆ,— ತೀರ್ವೆಯಲ್ಲಿ ರಿಯಾಯಿತಿಯಿಲ್ಲ ಎಂಬ ಉತ್ತರವೂ ಸಿಗುವ ಸಂದರ್ಭವಿದೆ ಅಂತೂ, ಇದೇ ವಿಚಿತ್ರ ಆಡಳಿತ.

ಸ್ಫುಟವಿಚಾರಗಳು

ಗಾಬರಿವಾಳಿಕು

ಕೆಲವರಿಗೆ ಗಾಬರಿ ಹುಟ್ಟಿಸಿ ತಮಾಷೆ ನೋಡುವುದೊಂದು ಜೀವನೋದ್ಯೋಗವಾದಂತೆ ಈಗ ಕೆಲವು ಪ್ರಮುಖ ಪತ್ರಿಕೆಗಳಲ್ಲಿ ಕಾಣುತ್ತಿದೆ. ಯುರೋಪಿನಲ್ಲಿ ಈಗ ವಿದ್ಯಮಾನಗಳು ಸ್ವಲ್ಪ ಗಡಿಬಿಡಿಯಲ್ಲಿರುವ ಪ್ರಯುಕ್ತ, ಮಹಾ ಯುದ್ಧವಾಗುವುದಾಗಿಯೂ, ಅದುಕಾರಣವೇ ಎಲ್ಲೆಲ್ಲಿಯೂ ಯುದ್ಧಸನ್ನಾಹಗಳೂ ಹೆಚ್ಚುತ್ತಿರುವುದು ಅಗತ್ಯವೆಂದೂ ಒಂದು ಮುಖ್ಯ ಪತ್ರಿಕೆ ಬಲವಾಗಿ ಗರ್ಜಿಸತೊಡಗಿದೆ ನಮ್ಮ ದೇಶದಲ್ಲಿ ಸರಕಾರವು ಸೈನ್ಯ ವ್ಯವಸ್ಥೆಗೆಂದು ವ್ಯಯಿಸುತ್ತಿರುವ ಅಮಿತ ಖರ್ಚನ್ನು ಮಿತಗೊಳಿಸಬೇಕಾಗಿ ಎಸೆಂಬ್ಲಿಯಲ್ಲಿ ಚರ್ಚೆಯಾಗುವಾಗಲೇ ವಿಲಾಯತಿಯಲ್ಲಿ ಇಂತಹ ಪರಿಸ್ಥಿತಿಯೊಂದು ಉಂಟಾದುದು ಈ ಪತ್ರಿಕೆಗೆ ಸೈನ್ಯದ ಬೆಂಬಲಿಕ್ಕೆ ನಿಂತು ಇನ್ನೂ ಅದಕ್ಕಾಗಿ ಖರ್ಚು ಹೆಚ್ಚಬೇಕೆಂದು ಬೋಧಿಸಲು ಅವಕಾಶಕೊಟ್ಟಂತಾಗಿದೆ ಲೀಗ್ ಒಫ್ ನೇಶನ್ಸ್ ಸಭೆಗೆ ಈಗ ಕಠಿಣ ಅಭಿಸಂಧಿಯುಂಟಾಗಿದೆ ನಿಜ ಆದರೆ, ಯುರೋಪಿನಲ್ಲೇ ಆದರೂ ಯುದ್ಧಕ್ಕಾಗಿ ಹಾತೊರೆವ ಜನಾಂಗಗಳು ಇಲ್ಲ ಎಲ್ಲರಿಗೂ ಒಂದಲ್ಲ ಒಂದು ಅಂಗ ಕಡಿಮೆಯಾಗಿದ್ದು, ಯಾವುದೊಂದು ಜನಾಂಗದ ಚತುರಂಗ ಬಲವು ಸಂಪೂರ್ಣವಾಗಿಲ್ಲ ಸೈನ್ಯಗಳ ವ್ಯವಸ್ಥೆಗಳನ್ನೆ ಕುರಿತಾಗಿ ಅತ್ಯುತ್ತಮ ಸಲಹೆಗಳನ್ನು ಕುರಿತಾಗಿ ವಿಮರ್ಶಿಸಬೇಕೆಂದು ಈ 'ಲೀಗ್' ಸಂಘವು ಬಲು ಜಾಗರೂಕತೆಯಿಂದ ಕೆಲಸ ಮುಂದರಿಸುತ್ತಲಿದೆ ದಿನೇ ದಿನೇ ವಾದ ಪ್ರತಿವಾದಿಗಳಲ್ಲಿ ಸಂಧಾನಮಾಡಲು ಸಹಾಯಕವಾಗಿರುವ ವಿಚಾರಗಳಲ್ಲಿ ಒಂದೊಂದಾಗಿ ಮುಂದಿಕ್ಕೆ ತಂದು ಚರ್ಚಿಸುತ್ತ, ಹಲವರು ಕೂಡಿ ಇತ್ಯರ್ಥಿಸತೊಡಗುತ್ತಿದ್ದಾರೆ ಜರ್ಮನಿಯ ದುಡುಕಿನಿಂದ ಫ್ರಾನ್ಸಿಗೆ ದಿಗಿಲು ಉಂಟಾಗುವುದು ಸ್ವಾಭಾವಿಕವಾದರೂ, ಹಿಟ್ಲರನು ಹಲವು ವಿಧ ಹಲವು ಬಾರಿ ಬಲು ಚೆನ್ನಾಗಿ ವಿಚಾರಮಾಡದೆ, ಫಕ್ಕನೆ ಗುಂಡು ಹಾರಿಸಲಾರನು ಆತಂಕಗಳಿಷ್ಟಿವೆ ವ್ಯಥಾ ಗಾಬರಿ ಆಗಲೇ ಏತಕ್ಕೆ?

ಶ್ರೀ ಸುಭಾಸಚಂದ್ರ ಬೋಸರು

ಈಗ ವಿಲಾಯತಿಯಲ್ಲಿರುವರಷ್ಟೆ ಅವರು ಸ್ವದೇಶಕ್ಕೆ ಮರಳುತ್ತಲೇ ಪುನಃ ಬಂಧನದಲ್ಲಿರಬೇಕಾಗುವುದಾಗಿ ಅವರಿಗೆ ಸೂಚಿಸಲಾಗಿದೆ ರೋಗ ಚಿಕಿತ್ಸೆಗಾಗಿ ಅವರು ಯುರೋಪಿಗೆ ಹೋಗಬಹುದಾಗಿ, ಬಹಳವಾದ ಪ್ರಯಾಮರ್ಶೆಯ ತರುವಾಯ ಅವರಿಗೆ ಸರಕಾರವು ಅಪ್ಪಣೆಕೊಟ್ಟು ಈಗ ಮೂರು ವರ್ಷಗಳು ದಾಟಿವೆ ಇಂಗ್ಲೆಂಡು ಮತ್ತು ರಷ್ಯಾ ರಾಜ್ಯಗಳಲ್ಲಿ ಇವರು ಕಾಲಿಟ್ಟರೆ, ಅಲ್ಲೇನಾದರೂ ಭಯಂಕರ ವಿದ್ರೋಹಗಳಿಗೆ ಕಾರಣವಾದೀತೆಂದೇನೊ, ಅಲ್ಲಿಗೆ ಹೋಗಲು ಇವರಿಗೆ ಅಪ್ಪಣೆ ಕೊಟ್ಟುದಿಲ್ಲ ಯುರೋಪಿನಲ್ಲಿ ರಷ್ಯಾ ಹೊರತು ನಿರುಪದ್ರವಿಯರಾಗಿ ಇವರು ಇರಬಹುದು, ಇಂಗ್ಲೆಂಡು ಅಥವಾ ಇಂಡಿಯಗಳಲ್ಲಿ ಇವರ ಸುಳಿವಿಂದ ಉತ್ಪಾತಗಳುಂಟಾಗಬಹುದೆಂದು ನಮ್ಮ ಸರಕಾರವು ಬೆದರಿರುವುದು ಆದುದರಿಂದ ಅವರು ಊರಿಗೆ ಮರಳಿದರೆ, ಇಲ್ಲಿ ಸರಕಾರವನ್ನು ಕಲಕಳಗಾಗಿ ಮಾಡಬೇಕೆನ್ನುವವರಿಗೆ ಇವರಿಂದ ತುಂಬಾ ಪ್ರೋತ್ಸಾಹ ಸಿಗಲು ಅಸ್ಪದವಿದೆ ಎಂಬ ನಂಬುಗೆ ಸರಕಾರದಲ್ಲಿ ಇನ್ನೂ ಇದೆ ಸರಕಾರದ ಅಭಿಪ್ರಾಯಕ್ಕೆ ಸ್ವಲ್ಪವೂ ಎದುರಾಡುವವರಲ್ಲಿ ಸರಕಾರವು ಸಂಶಯವನ್ನಿಡುವುದು ಬೋಸರು ಇಂಗ್ಲೆಂಡಿಗೆ ಹೋಗಿಲ್ಲವಾದರೂ, ಇಂಡಿಯದ ವಿಷಯವಾಗಿ ಅವರು ಹೇಳಬಹುದಾಗಿರುವ ಅಭಿಪ್ರಾಯಗಳನ್ನುಳ್ಳ ಪುಸ್ತಕವು ಇಂಗ್ಲೆಂಡಿನಲ್ಲೇ ಪ್ರಕಟವಾಯಿತು, ಅದನ್ನು ಇಲ್ಲಿ ಪ್ರವೇಶಹೊಂದಲು ಸರಕಾರವು ಅತಂಕಿಸಿತು. ಇಂಗ್ಲೆಂಡಿನಲ್ಲಿ ಆ ಪುಸ್ತಕವು ತುಂಬ ವಿಮರ್ಶಿತವಾಗಿದ್ದೆ, ಬೋಸರ ಅಭಿಪ್ರಾಯಗಳನ್ನು, ಅವರ ಇದಿರಾಳಿ [illegible] ಮುಖಂಡರುಗಳೇ ಅವರು ಇಂಗ್ಲೆಂಡಿಗೆ ಏ. ಬರಬಾರದೆಂಬ ವಿಚಾರದಲ್ಲಿ ಚಳವಳಿಸಿದರು. ಈ ಮಹಾಶಯರನ್ನು ಕೋರ್ಟಿಗೆ ತಂದು ವಿಚಾರಣೆಗೆ ಒಳಪಡಿಸಿದರೆ, ಅವರ ಮೇಲಿದ್ದ ಅಸಮಾಧಾನಕ್ಕೆ ತಕ್ಕ ದಂಡನೆಯನ್ನಾದರೂ ವಿಧಿಸಬಹುದಾಗಿತ್ತು, ಇಲ್ಲವೆ ಅವರನ್ನು ಬಿಡುಗಡೆಮಾಡಬಹುದಿತ್ತು. ಈಗ ಇದೆರಡೂ ಅಸಾಧ್ಯವಾಗಿದೆ.

ಜನಾಂಗ ಸಭೆಯಲ್ಲಿ

ಇಂಡಿಯಕ್ಕೂ ಒಂದು ಮೆಂಬರಿಕೆ ಇದೆ. ಈ ಮೆಂಬರಿಕೆಯ ಪ್ರಯೋಜನಾದಿಗಳನ್ನು ವಿವರಿಸಲು, ಸಭೆಯ ವಿಷಯ ತಿಳುವಳಿಕೆ ಹಬ್ಬಿಸುವ ಶಾಖೆಯ ಡೈರೆಕ್ಟರರಾಗಿರುವ ಪೆಲ್ಟ್ ಸಾಹೇಬರು ಇಲ್ಲಿ ಸಂಚಾರಮಾಡುತ್ತ ಭಾಷಣ ಕೊಡುತ್ತಿದ್ದಾರೆ ಮೂಲಸ್ಥಾಪನೆಯ ಕಾಲದಲ್ಲಿ ಇಂಡಿಯವು ಲೀಗಿನ ಮೆಂಬರರು ಆಗಿಯೆ ಸೇರಿದ್ದುದಾದರೂ, ಬ್ರಿಟನ್ನಿನ ಬಲವಾಗಿರುವ ಇಂಡಿಯಕ್ಕೆ ಈ ಮೆಂಬರಿಕೆಯಿಂದ ದೊರೆವ ಏನ ಲಾಭವು ಮೂಲತಃ ಇಲ್ಲ ಎಂಬುದನ್ನು ಮಿ। ಪೆಲ್ಟರವರೇ ಒಪ್ಪಿಕೊಂಡಿರುವರು ಇದು ಅವರಲ್ಲಿರುವ ನಿಷ್ಪಕ್ಷ ಭಾವವನ್ನು ಪ್ರಶಂಸೆಗೆ ಗುರಿಮಾಡಿರುವರು "ನಾನು ಹಿಂದೀಯನಾಗಿದ್ದರೆ, ಲೀಗಿನ ಕಾರ್ಯಕಲಾಪದಲ್ಲಿ ಎಂತಹ ಕುತೂಹಲವನ್ನೂ ತೋರ್ಪಡಿಸುತ್ತಿರಲಿಲ್ಲ" ಎಂದರವರು ಸತ್ಯವಚನವಿದು ಚೀನ–ಅಬಿಸೀನಿಯಗಳನ್ನು ಯಾವ ಬಗೆಯಿಂದಲಾದರೂ ಕಾಪಾಡಲು ಅಶಕ್ತವಾದ ಈ ಲೀಗು, ಇನ್ನಾವ ಹೆಚ್ಚಿನ ರಕ್ಷಣೆಯನ್ನು ಈ ದೇಶಕ್ಕೆ ಕೊಡಬಲ್ಲುದು? ಇತರ ಶಿಕ್ಷಣ, ವೈದ್ಯ ಇತ್ಯಾದಿ ವಿಚಾರಗಳಲ್ಲಿ ಲೀಗಿನ ಅಭಿಪ್ರಾಯಗಳಿಗೆ ಮನ್ನಣೆ ದೊರೆತಿದೆ ನಿಜವಾದರೂ, ರಾಜಕೀಯ ವಿಚಾರಗಳು ಎಲ್ಲರ ದೃಷ್ಟಿಯಲ್ಲಿ ಕುಣಿಯುತ್ತಿರುವಾಗ, ರಾಜಕೀಯದಲ್ಲಿ ಇಂಡಿಯಕ್ಕೆ ಎಂತಹ ಪ್ರಯೋಜನವೂ ದೊರೆವುದಿಲ್ಲೆಂದು ಲೀಗಿನ ಆಫೀಸರರಾದ ಇವರೇ ಒಪ್ಪಿಕೊಳ್ಳುವಾಗ, ಮುಖ್ಯ ರಾಷ್ಟ್ರಗಳು ಔದಾರ್ಯ, ಸೌಜನ್ಯ, ಶಾಂತಿಪ್ರಿಯತೆ ಮೊದಲಾದುವನ್ನು ಅಭ್ಯಾಸ ಮಾಡುವ ವರೆಗೆ ಇಂಡಿಯದಂಥ 'ಮೂಲ ಮೆಂಬರ'ರಿಗೆ ಮೌಲ್ಯವೆಲ್ಲಿ?

ಅಧಿಕಾರ ಸ್ವೀಕಾರಕ್ಕಾಗಿ

ಕೊಂಗ್ರೆಸ್ ಪಕ್ಷದವರು ಸಿದ್ಧರೇ? ಮಂತ್ರಿಗಳಾಗಬಹುದೇ? ಎಂಬ ಸಮಸ್ಯೆಯನ್ನು ಕಾರ್ಯಕಾರೀ ಮಂಡಲವು ಈಗ ಚರ್ಚಿಸುತ್ತಿರುವಾಗಲೇ, ಕೊಂಗ್ರೆಸ್ ಎಂಟಿ-ಕೊನ್ಸ್ಟಿಟ್ಯೂಶನ್ ಕೊನ್ಫರೆನ್ಸ್ (ಬೊಂಬಾಯಿ)ನಲ್ಲಿ ಅಧ್ಯಕ್ಷಸ್ಥಾನದಿಂದ ಶ್ರೀ। ಕಮಲಾಬಾಯಿಯವರು "ಈ ವಿಚಾರವು ಯಾವ ತರದ ಚರ್ಚೆಗೂ ಯೋಗ್ಯವಾಗಿಲ್ಲ ಏಕೆಂದರೆ, ಪೂರ್ಣ ಸ್ವರಾಜ್ಯವೇ ನಮ್ಮ ಗುರಿ, ಸಂಪೂರ್ಣ ಸ್ವಾತಂತ್ರ್ಯವೇ ನಮಗೆ ಬೇಕಾದುದು ಅಧಿಕಾರ ಸ್ವೀಕಾರಕ್ಕೆ ಒಪ್ಪಿದರೆ, ಇಂಗ್ಲಿಷರು ಹಾಕಿಕೊಟ್ಟಿರುವ ಗಡಿಗಳೊಳಗೆ ಸುಳಿದಾಡಲು ನಾವು ಒಪ್ಪುವಂತಾಗುವ ಕಾರಣ, ನಮ್ಮ ಸ್ವಯಂ ನಿರ್ಧಾರ ತತ್ವಕ್ಕೂ ಮೋಸವಿದೆ ನಮ್ಮ ರಾಜಕೀಯ ವ್ಯವಸ್ಥೆಯನ್ನು ನಾವೇ ಮಾಡಿಕೊಳ್ಳಬೇಕೆಂದು ನಿರ್ಧರಿಸಿರುವುದಕ್ಕೂ ಮೋಸವಿದೆ ಆದಕ್ಕಾಗಿ ಕೊನ್ಸ್ಟಿಟ್ಯುವೆಂಟ್ ಎಸೆಂಬ್ಲಿಯನ್ನು ನಾವು ಮಾಡಿಕೊಳ್ಳಬೇಕಾದುದೇ ನ್ಯಾಯವು ಹೊರತು ಅಧಿಕಾರ ಸ್ವೀಕಾರದ ವಿಚಾರವೇ ಬೇಡ" ಎಂದು ಭಾಷಣ ಮಾಡಿರುವರು ಕೊಂಗ್ರೆಸ್ಸಿನ ಮೇಲಿರುವ ದೂರು, ಎಂದರೆ, ಅಧಿಕಾರ ವಹಿಸಿ ನಡೆಸಲಾರದೆ, ಸುಮ್ಮನೆ ಅಧಿಕಾರಿಗಳನ್ನು ಆಕ್ಷೇಪಿಸುವವರು ಎಂಬುದೇ ಆಗಿರುವುದು ಎಲ್ಲೆಲ್ಲಿಯೂ ಕೊಂಗ್ರೆಸ್ ಪಕ್ಷವು ಪ್ರಬಲ ಇದಿರಾದಿಗಳ ಪಕ್ಷವಾಗಿದೆ ಇವರು ಚುನಾವಣೆಗಳ ಕಾಲದಲ್ಲಿ ಜನತೆಗೆ ಹೇಳಿರುವ ಭರವಸೆಯ ಮಾತುಗಳು ಎಷ್ಟೋ ಇವೆ ಇನ್ನು ಹೊಸ ಚುನಾವಣೆಗಳಾಗಲಿರುವಾಗಲೂ, ಯಾವ ಕಾರ್ಯಕ್ರಮ ಇವರದು ಎಂದು ತಿಳಿಯದೆ, ಅಲ್ಲಲ್ಲಿ ಸ್ವಲ್ಪ ಕುಂದುಗಳೇ ಕಂಡು ಬಂದಿವೆ

ಬೆಂಗಳೂರು.

ಲೇಡೀಸ್ ಕ್ಲಬ್.

ಎಪ್ರಿಲ್ ತಾ. ೧೨ನೇ ಆದಿತ್ಯವಾರ ಬೆಂಗಳೂರು ಲೇಡಿಸ್ ಕ್ಲಬ್ಬಿನವರು ಜಿಲ್ಲಾ ಕಲೆಕ್ಟರರಾದ ಖಾನ್ ಬಹದೂರ್ ಜನಾಬ್ ಎಮ್. ಹುಮಾಯೂನ್ ಸಾಹೇಬ್ ಬಹದೂರ್ ಮತ್ತು ಅವರ ಪತ್ನಿಯವರ ನೇತೃತ್ವದಲ್ಲಿ ಗಾಯನಪಾರ್ಟಿ, ಇಂಗ್ಲೀಷ್, ಕನ್ನಡ, ಬಂಗಾಳಿ ಮತ್ತು ಹಿಂದುಸ್ಥಾನಿ ಭಾಷೆಗಳಲ್ಲಿ ಗಾಯನ ಪಾರ್ಟಿ, ತಂಬೂರಿ, ವೀಣಾವಾದನ, ಬಾಯಿಬರಿ ವರ್ಣನೆಗಳು, ನರ್ತನಗಳು, ವಿನೋದಗಳು, ಹೆಂಗಳೆಯರಿಂದಲೇ ಅಭಿನಯಿಸಲ್ಪಡುವ 'ಸ್ಪೆಂಡ್ ಕೊಂಟ್ರಿಡಿಕ್ಷನ್' ಎಂಬ ಮಿಸ್ ಪದ್ಮಿನಿ ಸತ್ಯವದನ್, ಎಮ್. ಎ. ಇವರಿಂದ ವಿರಚಿತವಾದ ನಾಟಕವೂ, ಗವರ್ನಮೆಂಟ್ ಕಾಲೇಜಿನಲ್ಲಿ ನಡೆಸಲ್ಪಡುವುವು. ಟಿಕೇಟಿನ ದರ ರೂ ೩, ೨, ೧.

ಶ್ರೀ ಕೃಷ್ಣಾ ಸಿನೇಮದಲ್ಲಿ.

ಸ್ಥಳೀಯ ಶ್ರೀಕೃಷ್ಣ ಸಿನಿಮಾ ಮಂದಿರದಲ್ಲಿ ತಾರೀಕು ೬-೪-೩೭ರಿಂದ ಸ್ವದೇಶಪ್ರೇಮ, ಸ್ವಜನಾಭಿಮಾನ, ದೀನಜನಪ್ರೇಮ ಮುಂತಾದವುಗಳನ್ನು ತೋರುವ ದೇಶದ ಸ್ವಾತಂತ್ರ್ಯಕ್ಕಾಗಿ ಸುಖಕ್ಕಾಗಿ, ಸುಧಾರಣೆಗಾಗಿ, ಉದ್ಧಾರಕ್ಕಾಗಿ ಹೋರಾಡುವ ಚಿತ್ರವನ್ನು ಚಿತ್ರಿಸುವ, ಪ್ರಸಿದ್ಧ ನಟರಾದ ಬಿಲ್ಲಿಮೋರಿಯಾ, ಗೋಹರ್, ರಾಜಕುಂಡೊ, ದೀಕ್ಷಿತ್, ಶಾಂತ ಹುಬ್ಲೀಕರ್, ರಾಮು ಅಪ್ಟೆ ಮತ್ತು ಪ್ರಸಿದ್ಧ ಹಾಸ್ಯಗಾರರಾದ ಗೋರೆ, ದೀಕ್ಷಿತ್ ಚಾರ್ಲಿ ಮುಂತಾದವರಿಂದ ಅಭಿನಯಿಸಲ್ಪಟ್ಟ ... ೧೦೦ ಧ್ವನಿಯುಕ್ತ ಚಿತ್ರವು ಪ್ರದರ್ಶಿಸಲ್ಪಡುವುದು.

ತಾ. ೯ರಿಂದ ಸುಮಾರು ಎರಡೂವರೆ ಲಕ್ಷ ರೂ. ವೆಚ್ಚದಿಂದ ತಯಾರಿಸಲ್ಪಟ್ಟ ಶಾಲಿನೀ ಸಿನಿಟೋನ್ ಕಂಪೆನಿಯವರಿಂದ—ಪ್ರಸಿದ್ಧ ಹಾಡುಗಾರರೂ, ನಟಶ್ರೇಷ್ಠರೂ ಆದ ಗೋವಿಂದರಾವ್ ಟೆಂಬೆ, ಉಷಾದೇವಿ, ಶಕ್ತಿಪ್ರಭಾ, ವಾಸುದೇವ್ ಮುಂತಾದವರಿಂದ ಅಭಿನಯಿಸಲ್ಪಟ್ಟ—ಪ್ರಸಿದ್ಧ ಬಾಬೂರಾವ್ ಪೈಂಟರರಿಂದ ಡೈರೆಕ್ಟ್ ಮಾಡಲ್ಪಟ್ಟ ಸುಪ್ರಸಿದ್ಧ ಚಿತ್ರವಾದ 'ಉಷಾ' ಪ್ರದರ್ಶಿಸಲ್ಪಡುವುದು.

ಸಂಗೀತ.

ಇದೇ ಕಳೆದ ತಾ. ೨೦ನೇ ಶನಿವಾರ ರಾತ್ರಿ ಗಂಟೆ ೮ಕ್ಕೆ ಸಂಗೀತ ವಿದ್ವಾನ್ ಶ್ರೀ ನಾರಾಯಣರಾಯರು ನಡೆಸಿಕೊಂಡು ಬರುವ 'ಲಲಿತ ಕಲಾದರ್ಶ ಸಂಗೀತ ಶಾಲೆ'ಯಲ್ಲಿ ಪಾಲ್ಘಾಟದತ್ತ ಕಡೆಯ ಒಡೆ ಒಂದಿದ್ದ ಶ್ರೀ ರಾಘವ ಅಯ್ಯರ್ ಇವರ ಗಾಯನವೂ ಶ್ರೀ ಕೃಷ್ಣ ಅಯ್ಯರ್ ಇವರ ಮೃದಂಗವಾದನವೂ ವ್ಯವಸ್ಥೆಯಾಗಿ ನಡೆಯಿತು. ಸಂಗೀತಾಭಿಮಾನಿಗಳನೇಕರು ಸಭಾಲಂಕೃತರಾಗಿದ್ದರು. ಕೊನೆಗೆ ಇವೆಲ್ಲಕ್ಕೂ ಆದರಭಾವದಿಂದ ಪರಸ್ಪರದ ... ಅಧ್ಯಕ್ಷತೆವಹಿಸಿ ಗೌರವಿಸಿದ ಶ್ರೀ ನಾರಾಯಣರಾಯರ ಪ್ರಯತ್ನಕ್ಕಾಗಿ ಅಭಿನಂದಿಸಿ, ಸಂಗೀತಶಾಲೆಯ ಅಭಿವೃದ್ಧಿಯನ್ನು ಬಯಸಿ ಶ್ರೀ ... ಪುಟ್ಟಯ್ಯನವರು ಸಮಯೋಚಿತ ಭಾಷಣ ಮಾಡಿದ ನಂತರ ಮಂಗಲಗೀತೆಯೊಡನೆ ಈ ಸಮಾರಂಭವು ಮುಕ್ತಾಯವಾಯಿತು.

ಶಂಕುಸ್ಥಾಪನೆ.

ಸ್ಥಳೀಯ ಬಿ. ಸಿ. ಎಮ್ ಶಾಲೆಯಲ್ಲಿ ಮಾರ್ಚಿ ತಾ. ೨೫ನೇ ಆದಿತ್ಯವಾರ ಸಾಯಂಕಾಲ ಗಂಟೆ ೫-೩೦ಕ್ಕೆ ಉಳ್ಳಾಲ ನರಸಿಂಗರಾವ ಮೆಮೋರಿಯಲ್ ಹಾಲ್‌ಗೆ ಕಟ್ಟಡದ ಶಂಕುಸ್ಥಾಪನ ಕಾರ್ಯವು ಸರ್ವೆಂಟ್ಸ್ ಆಫ್ ಇಂಡಿಯಾ ಸಂಘದ ಅಧ್ಯಕ್ಷರ ಸ್ವಹಸ್ತದಿಂದ ಜರಗಿಸಲ್ಪಡುವುದು. ಈ ವೇಳೆಯಲ್ಲಿ ಸಭೆ ಶಾಲೆಯಲ್ಲಿ ವಿವಿಧ ವಿನೋದಾವಳಿಗಳೂ ಇವೆ. ಎಲ್ಲರಿಗೂ ಸುಸ್ವಾಗತವಿದೆ.

ಥಿಯೋಸೊಫಿಕಲ್ ಲೋಜಿನಲ್ಲಿ.

ಇದೇ ಮಾರ್ಚ್ ತಿಂಗಳ ತಾ. ೨೮ನೇ ಶನಿವಾರ ಸಾಯಂಕಾಲ ೬ ಘಂಟೆಗೆ ಮಂಗಳೂರು ಥಿಯೋಸೊಫಿಕಲ್ ಲೋಜಿನಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸಂಘದ ಅಧ್ಯಕ್ಷರಾದ ಶ್ರೀ ಪಂಡಿತ ಹರ್ದಯನಾಥರು 'ಇನ್ನೇನು ಮಾಡಬೇಕು' ಎಂಬುದರ ಕುರಿತು ಸಾರ್ವಜನಿಕ ಭಾಷಣವೊಂದನ್ನು ಕೊಡಲಿರುವರು. ಸರ್ವರಿಗೂ ಸುಸ್ವಾಗತವಿದೆ.

ಮುನಿಸಿಪಾಲಿಟಿ ಸಾರ್ವಜನಿಕ ಲೈಬ್ರೆರಿಯು

ಇದೇ ತಾ. ೧-೪-೩೭ರಿಂದ ಸೋಮವಾರ ದಿನಗಳಲ್ಲಿ ಪೂರ್ತಿ ಮುಚ್ಚಲ್ಪಡುವುದು.

ಕಾಂಗ್ರೆಸ್ ಸಿವಿಲ್ ಬೋರ್ಡ್ ಸಭೆ.

ಕಳೆದ ಜಿಲ್ಲಾ ಬೋರ್ಡು ಪ್ರೆಸಿಡೆಂಟರ ಚುನಾವಣೆಯಲ್ಲಿ ಕಾಂಗ್ರೆಸು ಕಡೆಯ ಉಮೇದ್ವಾರರಿಗೆ ಅವ ಅವ ಜಯಕ್ಕೆ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ಕಾರಣರಾದ ಕಾಂಗ್ರೆಸು ಪಾರ್ಟಿಮೆಂಬರರ ಮೇಲೆ ಶಿಸ್ತು ನಿಬಂಧನೆಯನ್ನು ಕೆಗೆದುಕೊಳ್ಳುವರೆ ಮತ್ತು ಇತರ ವಿಷಯಗಳನ್ನು ಆಲೋಚಿಸುವುದಕ್ಕೂ ಕಾಂಗ್ರೆಸ್ ಸಿವಿಲ್ ಬೋರ್ಡಿನ ಮಹಾಸಭೆಯು ಇದೇ ತಿಂಗಳ ತಾ. ೨೫ನೇ ಆದಿತ್ಯವಾರ ಸಾಯಂಕಾಲ ಗಂಟೆ ೬-೧೫ಕ್ಕೆ ಕಾಂಗ್ರೆಸು ಕಚೇರಿಯಲ್ಲಿ ಕೂಡುವುದು. ಎಲ್ಲಾ ಮೆಂಬರರೂ ತಪ್ಪದೆ ಬರಬೇಕಾಗಿ ವಿನಂತಿ—ಎಂದು ಕಾಂಗ್ರೆಸ್ ಸಿವಿಲ್ ಬೋರ್ಡಿನ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಯುಗಾದಿ ಭಾಷಣಗಳು.

ಹೊಸ ವರುಷ ಪ್ರಾರಂಭದ ಸಂತೋಷ ಸಮಾರಂಭಕ್ಕಾಗಿ ಈ ತಿಂಗಳ ಅಖೈರು ವರೆಗೆ ಸ್ಥಳೀಯ ಕೊಡಿಯಾಲಬೈಲಲ್ಲಿರುವ ಉಳ್ಳಾಲ ರಘುನಾಥಯ್ಯ ಸ್ಮಾರಕಮಂದಿರದಲ್ಲಿ ಸಂಜೆ ಗಂಟೆ ೬-೧೫ಕ್ಕೆ ಕೆಳಗೆ ಸೂಚಿಸಿದ ಮಹನೀಯರು ಅವರ ಹೆಸರುಗಳ ಎದುರ್ಗಡೆ ನಮೂದಿಸಿದ ವಿಷಯಗಳ ಕುರಿತು ಭಾಷಣಮಾಡುವರು. ಎಲ್ಲರಿಗೂ ಸುಸ್ವಾಗತವಿದೆ. ಮಾರ್ಚ ತಾ ೨೧ರಲ್ಲಿ ಶ್ರೀ ರಾಮಾವತಾರದ ಸೂಚನೆ—ಶ್ರೀ ಎನ್ ಶ್ರೀನಿವಾಸಾಚಾರ್ಯ ಎಂ. ಎ ಎಲ್ ಟಿ ತಾ ೨೫ರಲ್ಲಿ—ಮಾನವರ ಮನಸ್ಸಿನ ಮೇಲೆ ರಾಮಾಯಣದ ಪ್ರಭಾವ—ಬಿ ಅ ಸುಬ್ಬಕೃಷ್ಣಯ್ಯ. ತಾ ೨೬ರಲ್ಲಿ—ರಾಮ ಮತ್ತು ಯೋಗವಸಿಷ್ಠ—ಶ್ರೀ ಎಂ ದಾಮೋದರ ಶೆಣೈ ಎಂ ಎ ಎಲ್ ಟಿ ತಾ ೨೭ರಲ್ಲಿ—ತುಲಸೀದಾಸ ಕೃತ ರಾಮಾಯಣ—ಶ್ರೀ ಎಂ ನರಸಿಂಗರಾವ್ ಬಿ ಎ. ಬಿ ಎಲ್. ತಾ ೨೮ರಲ್ಲಿ ವಾಲ್ಮೀಕಿ ರಾಮಾಯಣದ ಶಿಲ್ಪ ವೈಶಿಷ್ಟ್ಯಗಳು—ಶ್ರೀಯುತ ಪಂಡಿತ ಶಿವರಾಮ ತಾ ೨೯ರಲ್ಲಿ ಹರಿಕೀರ್ತನೆ—ಶ್ರೀ ಕೆ ವೆಂಕಟರಾವ್, ಎಂ ಎ ಎಲ್ ಟಿ ತಾ ೩೦ರಲ್ಲಿ—ಶ್ರೀ ರಾಮನ ಮಹತ್ವ—ಶ್ರೀ ಎಸ್ ಕೃಷ್ಣ ಭಟ್ ತಾ ೩೧ರಲ್ಲಿ—ಕಲಿಯುಗದ ಶ್ರೀ ರಾಮ—ಶ್ರೀ ಕೆ ಶಿವರಾಮ ಕಾರಂತ

ತಾಲೂಕುಗಳಿಂದ

ಕಾಪು—ವರ್ಷಾವಧಿ ಜರಗತಕ್ಕ ಈ ಬಿ ಬಿ ಎಂ ಪಾಠಶಾಲೋತ್ಸವವು ಈ ವರ್ಷವೂ ಬರುವ ಎಪ್ರಿಲ್ ತಿಂಗಳ ಆರಂಭದಲ್ಲೇ ಜರಗಲಿಕ್ಕಿರುವದು. ಆ ಪ್ರಯುಕ್ತ ಶಾಲೆಯ ಕಾರ್ಯಗಳೆಲ್ಲವೂ ಜಾಗರೂಕತೆಯಿಂದ ಆಗ್ತುಗಳನ್ನು ವ್ಯವಸ್ಥಿಯಾಗಿಸೋದು. ಈ ಶಾಲಾ ಹಳೇ ವಿದ್ಯಾರ್ಥಿಗಳ ಧ್ಯೇಯವಾಗಿದೆ. ಅಂದಿನ ಕಾರ್ಯಗಳಲ್ಲಿ ಒಂದಾದ ಪಾರಿತೋಷಕ ವಂಚನೆಯು ಪ್ರಾಮುಖ್ಯವಾದುದು. ಇದಕ್ಕೆ ಧನಸಹಾಯವೂ ಅತಿ ಅಗತ್ಯ. ಆದುದರಿಂದ ಹಳೆ ವಿದ್ಯಾರ್ಥಿಗಳು ಈ ಸಮಯವನ್ನು ಸಾಧಿಸಿ 'ಆಲಿ ನೀರೆ ಮಾಲ ಭಕ್ತಿ' ಎಂಬಂತೆ ಕೈಲಾದಷ್ಟು ಧನಸಹಾಯವನ್ನಿತ್ತು ಈಗಿನ ವಿದ್ಯಾರ್ಥಿವೃಂದಕ್ಕೆ ಪ್ರೋತ್ಸಾಹವನ್ನು ಕೊಡಬೇಕೆಂದೂ ಸಹ ಅರಿಕೆಬೇಕಾಗಿ ನಿಮ್ಮೆಲ್ಲರ ಕುರಿತು ಅರಿಕೆಮಾಡಿಕೊಳ್ಳುತ್ತೇನೆ ಮತ್ತು ಹಳೇ ವಿದ್ಯಾರ್ಥಿಗಳ ಮಹಾಸಭೆಯೊಂದು ಎಪ್ರಿಲ್ ತಿಂಗಳಲ್ಲಿ ನೆರವೇರಿಸಬೇಕಾಗಿರುವುದು (ತಾರೀಕನ್ನು ನಿಶ್ಚಯಿಸಿ ನಮ್ಮ ಜಿಲ್ಲಾ ಪ್ರಮುಖ ವಾರ್ತಾಪತ್ರಿಕೆಗಳಲ್ಲಿ ಪ್ರಕಟಿಸಿ ತಿಳಿಸುವೆವು) ಅಂದಿನ ಸಭೆಗೆ ನೀವೆಲ್ಲರೂ ಬಂದು ಸಹಕರಿಸಬೇಕಾಗಿ ಕೋರುತ್ತೇನೆ - ಎಂದು ಸೆಕ್ರೆಟರಿಯವರಾದ ಕೆ. ಭೋಜರಾಜ ಶೆಟ್ಟಿಯವರು ತಿಳಿಸುತ್ತಾರೆ.

ಅಡ್ಯನಡ್ಕ—ಇಲ್ಲಿಗೆ ಸಮೀಪದ ಒಂದು ಹಳ್ಳಿಯಲ್ಲಿ ಒಬ್ಬ ಕಾಪ್ರುಜಾತಿಯ ಜುಗಾರಿಕೋರನು ತನ್ನ ಅಣ್ಣನ ಹೆಂಡತಿಯಲ್ಲಿ ಸ್ವಲ್ಪ ಚಿನ್ನಾಭರಣಗಳಿರುವುದನ್ನು ತಿಳಿದು ಅವನ್ನು ಕೊಡಬೇಕೆಂದು ಕೇಳಿದಾಗ್ಗೆ, ಅವರು ಕೊಡದಿರಲು, ಅತನು ಕೋಪೋದ್ರೇಕದಿಂದ ಅವಳನ್ನು ಕಡಿದು ತುಂಡರಿಸಿ ಆಭರಣಗಳೊಂದಿಗೆ ಪಲಾಯನಮಾಡಿರುವನು.

ಹೆಬ್ರಿ—ಈ ಸೆಂಟರಿನ ಉಪಾಧ್ಯಾಯರ ಮಾಸಿಕ ಸಭೆಯು ಮೊನ್ನೆ ಶನಿವಾರ ಅಪರಾಹ್ನ ೧೨ ಗಂಟೆಗೆ ಹೆಬ್ರಿ ಶ್ರೀ ಸತ್ಯನಾರಾಯಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀಯುತ ಬಣ್ಣಂತ್ತ ವೆಂಕಟ್ರಮಣ ಭಟ್ಟರವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು.

ಧೂಮ್ರಪಾನದಿಂದ ಉಂಟಾಗುವ ಹಾನಿಯು ಎಷ್ಟೆಂದು ಮೊನ್ನೆ ಹೆಬ್ರಿಯಲ್ಲಿ ಪ್ರತ್ಯಕ್ಷವಾಯಿತು. ಜಿ. ಜನಾರ್ದನ ಭಯ್ಯಕ್ಕಾಗಿ ಮೊಕರಿಸಿಯ ಅಡ್ಡದಲ್ಲಿ ಯಾರೋ ಧೂಮ್ರಪಾನ ಮಾಡುತ್ತಿದ್ದಾಗ ಅದರಿಂದ ಕಿಡಿ ಮುಳಿಮಾಡಿಗೆ ಹಾರಿ ಸುಮಾರು ೧೦ ರೂಪಾಯಿ ಬೆಲೆಬಾಳುವ ಮುಳಿಯೂ, ಸುಮಾರು ೨೦೦ ರೂಪಾಯಿ ಬೆಲೆಬಾಳುವ ಉತ್ತಮ ಜಾತಿಯ ಕಸಿ ಮಾವಿನಗಿಡಗಳ ತೋಟದ ಒಂದು ಭಾಗವೂ ಸುಟ್ಟು ನಾಶವಾಯಿತು.

ಮುಲ್ಕಿ—ಇಲ್ಲಿಯ ಲೋಕಲ್‌ಫಂಡ್ ಆಸ್ಪತ್ರೆಯು ನಿರಾಶ್ರಿತ ಫಂಡಿನಿಂದ ಈಗತಾನೇ ಕಟ್ಟಿಸಿದ ಮತ್ತು ಸಧ್ಯದಲ್ಲೆ ತೆರೆಯಲ್ಪಡಲಿರುವ ಹೆರಿಗೆ ವಾರ್ಡಿನಲ್ಲಿ ಒಂದು ಮಂಚವನ್ನು ತಮ್ಮ ಕ್ಲಬ್ಬಿನ ಹೆಸರಿನಲ್ಲಿ ಇಡಬೇಕೆಂದು ಮುಂಬಯಿ ೧೮೫ನೇ ಪೊಲೀ ಸ್ಟ್ರೀಟಿನಲ್ಲಿರುವ ಬಿ ಕೆನರಾ ಯುನೈಟೆಡ್ ಫುಟ್‌ಬೋಲ್ ಕ್ಲಬ್ಬಿನವರು ರೂ ೧೫೦ನ್ನು ಅತ್ಯಂತ ಸಂತೋಷದಿಂದ ನನಗೆ ಕಳುಹಿಸಿದ ಬಗ್ಗೆ ಸದ್ರಿ ನಿರಾಶ್ರಿತ ಫಂಡಿನ ಗೌರವ ಕಾರ್ಯದರ್ಶಿಯವರು ಸದ್ರಿ ಫುಟ್‌ಬೋಲ್ ಕ್ಲಬ್ಬಿನ ಮೆಂಬರರಿಗೆಲ್ಲಾ ತಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನು ಸಮರ್ಪಿಸುವುದಲ್ಲದೆ, ಮುಂಬಯಿಯಲ್ಲಿರುವ ದಕ್ಷಿಣ ಕನ್ನಡದ ಮುಲ್ಕಿ ಊರಿನ ಮಹನೀಯರೆಲ್ಲರೂ ಈ ನಿರಾಶ್ರಿತ ಫಂಡಿಗೆ ತಮ್ಮ ಕೈಲಾದಷ್ಟು ಧನಸಹಾಯ ಮಾಡಬೇಕಾಗಿ ಪ್ರಾರ್ಥಿಸುತ್ತಾರೆ.

ಸ್ಥಳೀಯ ಬೋ. ಹಾ. ಎಲಿಮೆಂಟರಿ ಶಾಲೆಯ ಹಾಗೂ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿಶಾಲೆಯ ವರ್ಷಾವಧಿ ಪರೀಕ್ಷೆಯ ಬಗ್ಗೆ ತಾ ೧೯-೩-೩೭ರಲ್ಲಿ ಇಲ್ಲಿಗೆ ಚಿತ್ತೈಸಿದ್ದ ಮಂಗಳೂರು ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಮಹಾಶಯರಾದ ಮ. ರಾ. ರಾ. ಯು. ಬಿ. ಸಂಜೀವರಾವ್ ಅವರ್ಗಳ್, ಬಿ. ಎ. ಎಲ್ ಟಿ. ರವರು ಸದ್ರಿ ಶಾಲೆಗಳ ತನಿಖೆ ನಡೆಸಿ, ತಾ. ೨೦-೩-೩೭ರಲ್ಲಿ ಸ್ಥಳೀಯ ಕ್ಲಬ್ಬನ್ನು ಸಂದರ್ಶಿಸಿ ಒಳ್ಳೇ ಅಭಿಪ್ರಾಯಪಟ್ಟರು.

ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಇದೇ ತಾ ೨೧ರಲ್ಲು ಕೊಲಕಾಡಿ ಬೋರ್ಡ್ ಹುಡುಗಿಯರ ಶಾಲೆಯಲ್ಲಿ ಮ. ರಾ. ಯು ಕೆ ಒಸಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು.

ನಮ್ಮ ಜಿಲ್ಲಾಬೋರ್ಡು ಪ್ರೆಸಿಡೆಂಟರಾದ ಮ. ರಾ. ದಿವಾನ್‌ಬಹದೂರ್ ಬಿ ಯಂ ಹೆಗ್ಡೆ ಅವರ್ಗಳ್ ಬಿ ಎ, ಬಿ ಎಲ್ ರವರು ತಾ ೨೫ನೇ ಬೆಳಗ್ಗೆ ಸುಮಾರು ೮ ಗಂಟೆಗೆ ಇಲ್ಲಿಗೆ ಚಿತ್ತೈಸಿ, ಸ್ಥಳೀಯ ಕ್ಯೆಸ್ಕುಲ್ ಹಾ ಎ ಸ್ಕೂಲ್ ಕಟ್ಟಡಗಳನ್ನು ನೋಡಿ, ಮೂಡಬಿದ್ರೆ ಅತ್ತಕಡೆ ಪ್ರಯಾಣಬೆಳೆಸಿರುವರು.

ಸ್ಥಳೀಯ ಬೋರ್ಡ್ ಹುಡುಗಿಯರ ಶಾಲೆಯಲ್ಲಿ ಬಹಳ ವರ್ಷಗಳಿಂದ ಉಪಾಧ್ಯಾಯಿನಿಯಾಗಿದ್ದು ಶಾಲೆಯ ಕೆಲಸವನ್ನು ದಕ್ಷತೆಯಿಂದ ಮಾಡುತ್ತ, ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿಯೂ ಉತ್ಸಾಹದ ಭಾಗವನ್ನು ವಹಿಸಿಕೊಳ್ಳುತ್ತಿದ್ದ ಶ್ರೀಮತಿ ಯಂ ಭವಾನಿಬಾಯಿಯವರು ಕೆಲವೇ ದಿನಗಳ ಸ್ವಲ್ಪಜ್ವರದಿಂದ ಕಾಹಿಲೆಯಿಂದ ಕಳೆದ ತಾ ೧೯ರಲ್ಲಿ ಅಕಸ್ಮಾತ್ ನಿಧನಹೊಂದಿದರು. ಇವರ ಪವಿತ್ರ ಆತ್ಮಕ್ಕೆ ಶ್ರೀ ಭಗವಂತನು ಶಾಂತಿಯನ್ನೀಯಲಿ.

ಇದೇ ತಾ ೨೦ ೩-೩೭ರಿಂದ ಶ್ರೀ ಬಪ್ಪನಾಡು ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೆಯು ಪ್ರಾರಂಭವಾಗಿ ಯಥಾಕ್ರಮ ಜರಗಿದ್ದು ತಾ ೧೯-೩-೩೭ನೇ ಶನಿವಾರ ರಥಾರೋಹಣ, ತಾ. ೧೮-೪-೩೭ನೇ ರವಿವಾರ ರಥೋತ್ಸವ ಮತ್ತು ಅವಭೃಥ ಇದೀಗ ಉತ್ಸವವು ಜರಗಲಿರುವುದು.

ಸ್ಥಳೀಯ ಶ್ರೀ ವೆಂಕಟ್ರಮಣ ದೇವಳದ ವರ್ಷಾವಧಿ ರಥೋತ್ಸವವು ಬರುವ ತಾ ೩೧-೩-೩೭ನೇ ಶ್ರೀರಾಮನವಮಿಯ ದಿನ ಜರಗಲಿರುವುದು.

ಮುಂಡ್ಕೂರು—ಇದೇ ಕಳೆದ ತಾ ೭ನೇ ಶನಿವಾರ ಅಪರಾಹ್ನ ಗಂಟೆ ೧ಕ್ಕೆ ಇಲ್ಲಿಯ ಪಂಚಾಯತ ಕೋರ್ಟಿನಲ್ಲಿ ಚುನಾವಣೆಯು ನಡೆದು ಶ್ರೀ ಎಮ್. ವೆಂಕಟ್ರಮಣ ಪ್ರತಿಸ್ಪರ್ಧಿಯಿಲ್ಲದೆ ಸರ್ವಾನುಮತದಿಂದ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು. ಮತ್ತು ಆ ಸಂಬಂಧ ಕೂಡಿದ ಸಭಿಕರಿಗೆ ಪ್ರೆಸಿಡೆಂಟರು ಒಂದು ಉಪಹಾರವನ್ನು ಕೊಡುವವರಾದರು.

ಹಿರಿಯಡ್ಕ—ಇದೇ ಕಳೆದ ತಾ. ೨೮ರಲ್ಲಿ ಜರಗಿದ ದ. ಕ. ಜಿಲ್ಲಾಬೋರ್ಡು ಅಧ್ಯಕ್ಷಸ್ಥಾನದ ಚುನಾವಣೆಯಲ್ಲಿ ಮ. ರಾ. ಬಹುಮಾನಪಟ್ಟಿ ದಿವಾನ್ ಬಹದೂರ್ ಬಿ. ಮಹಾಬಲ ಹೆಗ್ಡೆಯವರು ಸರ್ವಸಮ್ಮತಿಯಿಂದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಸಂತೋಷಸೂಚಕವಾಗಿ ಊರ ಸದ್ಗೃಹಸ್ಥರಿಂದೊಡಗೂಡಿದ ಮೆರವಣಿಗೆಯೊಂದು ಪೇಟೆಯಲ್ಲಿ ಶ್ರೀಯುತರ ಭಾವಚಿತ್ರ ಸಮೇತ ವಾದ್ಯಗೋಷ್ಠಿಗಳಿಂದ ಕೂಡಿ ಜಾಮುಗಳಿನಲ್ಲಿ ಸಂಚರಿಸಲ್ಪಟ್ಟಿತು.

ಎರಡರ ನ ತಾ. ೩ನೇ ಸಂಜೆ ಗಂಟೆ ೪-೩೦ಕ್ಕೆ ಹಿರಿಯಡ್ಕ ಸ್ಥಳದ ಮ. ರಾ. ಚಂದಯ ಶ್ರಾಫ್ ಹೆಗ್ಗೆಡೆಯವರ ಸ್ಥಳೀಯ ದೇವಸ್ಥಾನದಲ್ಲಿ ಶ್ರೀ ವೀರಭದ್ರ ಪಟೇಲರ ಪಂಚಾಯತಕೋರ್ಟ ಪ್ರೆಸಿಡೆಂಟರಾದ ಮಂಜಪ್ಪ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿಸಲ್ಪಟ್ಟು, ಶ್ರೀ ಹೆಗ್ಡೆಯವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಸಂತೋಷ ಸೂಚಕ ಭಾಷಣಗಳಾದುದಲ್ಲದೆ ಶ್ರೀಯುತರನ್ನು ಪರ ವಾಕ್ಯವು ಸಕಲ ವಿಧಗಳಿಂದಲೂ ಜಯಶಾಲಿಯಾಗಿ ಬಾಳಿ, ನಮ್ಮ ಜಿಲ್ಲೆಯಲ್ಲಿ ಹಿತಕರವಾದ ಕೆಲಸವನ್ನು ಮಾಡುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸಿಕೊಂಡ ತರುವಾಯ ಶ್ರೀ ಚಂದಯ್ಯ ಶ್ರಾಫ್ ಹೆಗ್ಗೆಡೆ ಅವರು ನೆರೆದ ಸಭಿಕರನ್ನೆಲ್ಲಾ ಟೀಪಾರ್ಟಿ ಸತ್ಕಾರದಿಂದ ಉಪಚರಿಸಿದರು.

ಬಂಟವಾಳ—ಬಂಟವಾಳ ಸೆಂಟರಿನ ಉಪಾಧ್ಯಾಯರ ಸಂಘದ ಸಭೆಯು ಇದೇ ತಿಂಗಳ ತಾ. ೧೮ರಲ್ಲಿ ಜರಗಿತು. ಪಾಲಚಂದ್ರದ ೫ ಪ್ರತಿಗಳನ್ನು ೪ ಶಾಲೆಗಳಿಗೂ ಒಂದು ಸಂಘಕ್ಕೂ ತೆಗೆದುಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

ಬಂಟವಾಳ ಪೇಟೆಯಲ್ಲಿ ಗಾಡಿ, ಮೋಟಾರು ಕಾರು, ಬಸ್ಸು, ಲಾರಿ, ಜನರು, ಜಾನುವಾರುಗಳು, ಸಂಚರಿಸಲಿಕ್ಕೆ ಒಂದೇ ಮಾರ್ಗವಿದ್ದು, ಧೂಳಿನಿಂದ ಜನರ ಆರೋಗ್ಯಕ್ಕೆ ಕೇಡು ಉಂಟಾಗಿದೆ. ಮಾತ್ರವಲ್ಲ ಪ್ರಾಣಾಪಾಯಕ್ಕೂ ಎಡೆಯುಂಟಾಗಿದೆ. ಆದುದರಿಂದ ಮೋಟಾರು ಲೋರಿಗಳ ಬಸ್ಸುಗಳ ಮತ್ತು ಘಟ್ಟದ ಗಾಡಿಗಳ ಚಲಾವಣೆಗೆ ಜೋಡುಮಾರ್ಗದಿಂದ ಒಂದು ಹೊಸ ಹೆದ್ದಾರಿಯನ್ನು ಅರದತಗೂಡು ದೇವರಕಟ್ಟೆ ಬಳಿಯಾಗಿ ಕುಂಟೆ ಮಾರ್ಗ ಪಾಟೆ ಹೊಸತಾಗಿ ಕಟ್ಟಿದ ಬಳಿ ಸಂಚರ ಸತ್ತಿರ ಕೂಡುವದರ ಬೋರ್ಡಿನವರ ಒಪ್ಪಿಗೆ ಉಪಕಾರವಿತ್ತು. ಇದರಿಂದ ಬಂಟವಾಳ ಪಟ್ಟಣದ ವಿಸ್ತಾರವನ್ನು ಹೆಚ್ಚಿಸುಂಟಾಗುವುದು. ಆದುದರಿಂದ ಮಾನ್ಯ ಜಿಲ್ಲಾ ಕಲೆಕ್ಟರರೂ ಡಿ ಬೋ. ಪ್ರೆಸಿಡೆಂಟರೂ ಇದರ ವಿಷಯ ಅದಷ್ಟು ಬೇಗನೆ ಗಮನಕೊಡಬೇಕಾಗಿ ಪ್ರಾರ್ಥನೆ.

ಇಲ್ಲಿಯ ಬೋರ್ಡ್ ಹುಡುಗಿಯರ ಶಾಲೆಗೆ ಒಬ್ಬ ಸೆಕೆಂಡರಿ ಗ್ರೇಡಿನ ಮುಖ್ಯ ಉಪಾಧ್ಯಾಯಿನಿಯನ್ನು ಬೇಗ ನೇಮಿಸಿ ಬರುವ ಜೂನ್ ತಿಂಗಳಲ್ಲಿ ೬ನೇ ದರ್ಜೆಯನ್ನು ತೆರೆಯುವಂತೆ ಮಾಡಿದರೆ ಉಪಕಾರವಿತ್ತು. ಇಲ್ಲಿ ಎಲ್ಲಾ ಹುಡುಗಿಯರು ಹಿಂದುಗಳಾಗಿರುತ್ತಾರೆ. ಉಪಾಧ್ಯಾಯಿನಿಯರೆಲ್ಲರೂ ಕ್ರೈಸ್ತರಾಗಿದ್ದುದರಿಂದ ಒಬ್ಬರು ಇಬ್ಬರು ಗೌಡಸಾರಸ್ವತ ಉಪಾಧ್ಯಾಯಿನಿಯರನ್ನು ಬೇರೆ ಬೇರೆ ಶಾಲೆಗಳಿಂದ ಇಲ್ಲಿಗೆ ವರ್ಗಾಯಿಸಿದರೆ ಶಾಲೆಯು ಒಳ್ಳೇ ಅಭಿವೃದ್ಧಿಯಾಗುವದರಲ್ಲಿ ಸಂದೇಹವಿಲ್ಲ. ಮಾನ್ಯ ಡಿ ಬೋ. ಪ್ರೆಸಿಡೆಂಟರೂ ಇದರ ವಿಷಯ ಆಲೋಚಿಸದೆ ನಿರ್ವಾಹವಿಲ್ಲ.

ಹಳೆಯಂಗಡಿ—ಇಲ್ಲಿಯ ಬೋರ್ಡ್ ಹುಡುಗಿಯರ ಶಾಲೆಯ ೪ ಮತ್ತು ೫ನೇ ವರ್ಗಗಳಲ್ಲಿ ಒಟ್ಟಿಗೆ ಅರೇಳು ಮಂದಿ ಹುಡುಗಿಯರು ಮಾತ್ರವೇ ಇರುತ್ತಾರೆ. ಇದಕ್ಕಾಗಿ ಒಬ್ಬ ಉಪಾಧ್ಯಾಯಿನಿಯನ್ನು ಇಡುವುದರ ಬದಲಾಗಿ ಇಲ್ಲಿ ಇಬ್ಬರೇ ಉಪಾಧ್ಯಾಯಿನಿಯರನ್ನು ಇಟ್ಟು ಜೂನಿಯರ್ ಸ್ಕೂಲಾಗಿ ಮಾಡಿದರೆ ಬೋರ್ಡಿಗೆ ನೆಟ್ಟ ಹಣ ಉಳಿಯುವುದು.

ಕಾರ್ಕಳ—ತಾ ೧೬-೩-೩೭ನೇ ದಿವಸ ನಡೆದ ಕಾರ್ಕಳ ಶ್ರೀ ವೆಂಕಟ್ರಮಣ ದೇವಾಲಯದ ವಿದ್ಯಾ ಇಲಾಖಾ ಬೋರ್ಡಿನ ಸಭೆಯಲ್ಲಿ ... ಪ್ರಭುಗಳವರು ಸದರಿ ಬೋರ್ಡಿನ ಅಧ್ಯಕ್ಷರಾಗಿ ಸರ್ವರ ಅನುಮತಿಯಿಂದ ಆರಿಸಲ್ಪಟ್ಟಿರುವರು. ಬಹಳ ಸಂತೋಷ.

ಶ್ರೀ ವೆಂಕಟ್ರಮಣ ದೇವಾಲಯದ ಸುಧೀಂದ್ರ ಹಾಯರ್ ಎಲಿಮೆಂಟರಿ ಶಾಲೆಯ ವರ್ಷಕೋತ್ಸವವು ತಾ. ೨೫ರ ದಿನ ಇಲ್ಲಿಯ ವಕೀಲ ಶ್ರೀ ಪಿ. ರಾಮಚಂದ್ರ ರಾವ್ ಬಿ. ಎ ಬಿ ಎಲ್ ರವರ ಅಧ್ಯಕ್ಷತೆಯಲ್ಲಿ ಬಹಳ ಕಡೆಯ ಕಾರ್ಯಕ್ರಮದ ಪ್ರಕಾರ ಅತ್ಯಂತ ವಿಜೃಂಭಣೆಯಿಂದ ಜರಗಿತು. ಶ್ರೀ ವಿ ದಾಮೋದರ ಶೆಣೈಯವರು ಶಾಲೆಯ ಸ್ವಸ್ತಿವಾಚನ ಮಾಡಿದರು. ಮುಖ್ಯೋಪಾಧ್ಯಾಯರು ಓದಿದ ವರದಿಯ ಮೇಲಿಗೆ ಶಾಲೆಯು ಸರ್ವ ಅನುಕೂಲತೆಯವಾಗಿ ದಿನೇ ದಿನೇ ಪ್ರಗತಿಯನ್ನು ಹೊಂದುತ್ತಿದ್ದರೂ, ಶಾಲೆಗೊಂದು ಸ್ವತಂತ್ರ ಕಟ್ಟಡ, ಆಟದ ಬಯಲು ಮತ್ತು ಅಗತ್ಯದ ಸಾಹಿತ್ಯೋಪಕರಣಗಳಿಲ್ಲದಿರುವ ಕೊರತೆಯುಂಟೆಂದು ಗೊತ್ತಾಗುತ್ತದೆ. ಆ ಕೊರತೆಯನ್ನು ಆದಷ್ಟು ಮಂದಿರಿಯವರು ತೀರಿಸಲಿ ಎಂದು ಮಾಡಿ ಶಾಲೆಯ ಭವಿಷ್ಯವನ್ನು ಮತ್ತಷ್ಟು ಉಜ್ವಲಗೊಳಿಸುವರಾಗಿ ನಂಬಿದ್ದೇವೆ.

ಶ್ರೀ ವೆಂ. ದೇವಾಲಯದ ಸುಧೀಂದ್ರ ಶಾಲೆಯ ವರ್ಷೋತ್ಸವವು ನಡೆದ ಸಂದರ್ಭದಲ್ಲಿ, ಆ ಶಾಲೆಯ ಹಳೇ ವಿದ್ಯಾರ್ಥಿಗಳಾದ ಶ್ರೀ ಸ್ವಾಮಿ ಪ್ರಭುಗಳ ಅಧ್ಯಕ್ಷತೆಯಲ್ಲಿ ಸದ್ರಿ ಶಾಲಾ ಹಳೇ ವಿದ್ಯಾರ್ಥಿ ಸಂಘದ ಸ್ಥಾಪನೆಯಾಗಿರುವದು.

ಕಾಶೀಮಠಾಧೀಶ್ವರರಾದ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀ ಪಾದಂಗಳವರ ಕೆನರಾ ಹೈಸ್ಕೂಲು ಸಂದರ್ಶನ.

ಇದೇ ಮಾರ್ಚಿ ತಾ. ೨೧ನೇ ಶುಕ್ರವಾರವು ಕೆನರಾ ಹೈಸ್ಕೂಲಿನ ಚರಿತ್ರೆಯಲ್ಲೊಂದು ಪುಣ್ಯದ ದಿನವೆಂದೇ ಹೇಳಬೇಕು. ಕಾರಣ, ಅಂದು ಕಾಶೀ ಮಠಾಧೀಶ್ವರರಾದ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀ ಪಾದಂಗಳವರು ಈ ಶಾಲೆಯನ್ನು ಸಂದರ್ಶಿಸಿ ಈ ಸಂಸ್ಥೆಯು ಶಾಶ್ವತ ಯಶಸ್ವಿಯಾಗಿ ಬಾಳಲೆಂದು ಹರಸಿದರು. ಆ ದಿನ ಕೆನರಾ ಹೈಸ್ಕೂಲಿನ ಗೌರವ ಖಜಾಂಚಿಯವರಾದ ಶ್ರೀ ಎಂ. ವೆಂಕಟೇಶಪೈಗಳವರು ಶಾಲಾ ಹಳೇ ವಿದ್ಯಾರ್ಥಿಗಳಾದ ಶ್ರೀ ಕಸ್ತೂರಿ ನಾಗೇಶಪೈ, ಕಸ್ತೂರಿ ಪುರುಷೋತ್ತಮ ಪೈ, ಎಂ. ಲಕ್ಷ್ಮಣ ಪೈ ಮತ್ತು ಟಿ. ಪಾಂಡುರಂಗ ಭಂಡಾರಿ ಇವರೊಂದೊಡಗೂಡಿ ಶ್ರೀ ಪಾದಂಗಳವರ ಭೇಟಿಗೈದು ಅವರನ್ನು ತನ್ನ ಸ್ವಂತ ಕಾರಿನಲ್ಲಿ ಕುಳ್ಳಿರಿಸಿ ಶಾಲೆಗೆ ಬೆಳಿಗ್ಗೆ ಹತ್ತೂವರೆ ಗಂಟೆಗೆ ಬರಮಾಡಿಸಿದರು.

ಶಾಲಾ ಗೇಟಿನ ಬಳಿ ಶಾಲಾ ಮುಖ್ಯೋಪಾಧ್ಯಾಯರೂ, ಅಧ್ಯಾಪಕರ ಸಂಘದ ಕಾರ್ಯದರ್ಶಿಯವರೂ ಅವರನ್ನು ಇದಿರ್ಗೊಂಡು ಒಳಗೆ ಕರೆತಂದರು. ಅವರನ್ನು ಸ್ವಾಗತೀಕರಿಸಲು ಶಾಲಾ ವೀರಬಾಲರು ಇಕ್ಕಡೆಗಳಲ್ಲೂ ತಮ್ಮ ದಂಡಗಳನ್ನು ಹಿಡಿದು ನಿಂತ ದೃಶ್ಯವು ಸ್ವಾಮಿಜಿಯವರನ್ನು ಆನಂದತುಂದಿಲರನ್ನಾಗಿ ಮಾಡಿತು. ಹುಡುಗರ ಪೈಕಿ ಇನ್ನಿತರರು ಏನೊಂದು ಗಲಾಟೆ ಮಾಡದಂತೆ ಅವರು ಬಹಳ ಶ್ರದ್ಧೆಯಿಂದ ಕೆಲಸವನ್ನು ಸಾಗಿಸಿದ್ದರು.

ಮೊದಲಾಗಿ ಸ್ವಾಮಿಜಿಯವರನ್ನು ಚಿಕ್ಕ ಮಕ್ಕಳ ಕ್ಲಾಸುಗಳಿರುವ ರಾಘವಾಶ್ರಮಕ್ಕೆ ಕೊಂಡೊಯ್ದರು. ಅನಂತರ ಅವರು ಹೈಸ್ಕೂಲು ಮತ್ತು ಲೋವರ್ ಸೆಕೆಂಡರಿ ಕ್ಲಾಸುಗಳನ್ನು ನೋಡಿದರು. ಉಪಾಧ್ಯಾಯರು ಪಾಠಮಾಡುವುದನ್ನು ಬಾಲಕರು ಶಾಂತಚಿತ್ತರಾಗಿ ಆಲಿಸುತ್ತಿದ್ದನ್ನು ಕಂಡು ಅವರಿಗೆ ತುಂಬಾ ಸಂತೋಷವಾಯಿತು. ಕೆಲವು ಕ್ಲಾಸುಗಳಲ್ಲಿ ಬಾಲಕರಿಗೆ ಪ್ರಶ್ನೆಗಳನ್ನು ಹಾಕಿ ಸಮರ್ಪಕವಾದ ಉತ್ತರಗಳನ್ನು ಪಡೆಕೊಂಡರು. ಶಾಲಾ ಪಾಠಗಳು ಆಧುನಿಕ ರೀತ್ಯಾ ಕಲಿಸಲ್ಪಡುವುದನ್ನು ಕಂಡು ಶಾಲೆಯ ಪ್ರಗತಿಯು ಉಚ್ಚವಾಗಿರುವುದೆಂದು ಅಭಿಪ್ರಾಯಪಟ್ಟರು.

ಇಷ್ಟಾದ ಮೇಲೆ ಶಾಲಾ ಸ್ಥಾಪಕರ ಸ್ಮರಣಾರ್ಥವಾಗಿ ಕಟ್ಟಿಸಿದ ಕಟ್ಟಡದೊಳಗೆ ಹೋಗಿ ಅಲ್ಲಿಯ ವಿವಿಧ ವಸ್ತುಗಳ ಸಂಗ್ರಹವನ್ನೂ ಪುಸ್ತಕಗಳ ಭಾಂಡಾರವನ್ನೂ ಕಂಡು ತುಂಬಾ ಶ್ಲಾಘಿಸಿ, ಶಾಲೆಗೆ ತಕ್ಕದಾದ ಸಾಹಿತ್ಯವು ಅಲ್ಲಿ ಭರಪೂರ್ಣವಾಗಿ ಇದೆಯೆಂದು ಅಭಿಪ್ರಾಯಪಟ್ಟರು. ಇಷ್ಟರಲ್ಲಿ ಶಾಲಾ ಎಲ್ಲ ಬಾಲಕಬಾಲಕಿಯರೂ ಉಪಾಧ್ಯಾಯರೂ ಶ್ರೀಮದ್ ಭುವನೇಂದ್ರ ಸಭಾಸದನದಲ್ಲಿ ನೆರೆದಿದ್ದರು. ಸ್ವಾಮಿಜಿಯವರಿಗಾಗಿ ಸ್ಟೇಜಿನ ಮೇಲೆ ಒಂದು ಆಸನವನ್ನು ಅಲಂಕರಿಸಿದ್ದರು. ಶ್ರೀ ಪಾದಂಗಳವರು ಅಲ್ಲಿಗೆ ಬಂದೊಡನೆ ಎಲ್ಲರೂ ಎದ್ದು ನಿಂತು ಜೈ ಜೈಕಾರವನ್ನು ಹಾಕಿದರು. ಮಾರುತಿ ಬಾಲವೀರ ದಳದವರು ತಮ್ಮ ವಿಚಿತ್ರವಾದ ಕೂಗು ಗಳಿಂದ ಅವರನ್ನು ಸ್ವಾಗತೀಕರಿಸಿದರು. ಈ ನಿನಾದವು ಮುಗಿದ ಮೇಲೆ ಸ್ವಾಮಿಜಿಯವರು ತಮ್ಮ ಪೀಠವನ್ನು ಅಲಂಕರಿಸಿದರು. ಶಾಲಾ ಮುಖ್ಯೋಪಾಧ್ಯಾಯರು ಸಂಸ್ಕೃತದಲ್ಲಿ ತಯಾರಿಸಿದ್ದ ಮಾನಪತ್ರವನ್ನು ಓದಿ ಅವರಿಗೆ ಸಮರ್ಪಿಸಿದರು. ಗೌರವ ಖಜಾಂಚಿಯವರು ಶಾಲಾ ಆಡಳಿತೆಯಪರವಾಗಿ ಸ್ವಾಮಿಜಿಯವರಿಗೆ ಪಾದಪೂಜೆಯನ್ನು ಮಾಡಿದರು. ಸ್ವಾಮಿಜಿಯವರು ಈ ಸತ್ಕಾರವನ್ನು ಸ್ವೀಕರಿಸಿ, ಶಾಲಾ ಆಡಳಿತೆಯ ಸಂಘದ ಸದಸ್ಯರನ್ನೂ ಅಧ್ಯಾಪಕರನ್ನೂ ವಿದ್ಯಾರ್ಥಿವೃಂದವನ್ನೂ ಹರಸಿ ಶಾಲಾ ನಿಧಿಗೆ ರೂ. ೧೨೫ನ್ನು ದಾನವಾಗಿ ಕೊಟ್ಟು ಇದನ್ನು ಶ್ರೀಮತ್ ವರದೇಂದ್ರ ತೀರ್ಥ ಶ್ರೀಪಾದಂಗಳವರ ಹೆಸರಲ್ಲಿ ಬಡವನೂ ಯೋಗ್ಯನೂ ಕನ್ನಡದ ಬದಲಿಗೆ ಸಂಸ್ಕೃತವನ್ನು ತೆಗೆದುಕೊಂಡು ಅಭ್ಯಾಸಿಸುವವನೂ ಆದ ಹುಡುಗನಿಗೆ ಶಾಲಾ ವೇತನವಾಗಿ ಕೊಡಬೇಕೆಂದು ಹೇಳಿದುದಲ್ಲದೆ, ಶ್ರೀ ಪಿ. ವಿ. ಕಾಮತರ ಮುಂದಾಳುತ್ವದಲ್ಲಿ ಮಾರುತಿ ವೀರಬಾಲರು ಮಾಡುವ ಕೆಲಸಗಳಿಗೆ ಸಂತೋಷಗೊಂಡವರಾಗಿ ಅವರ ದಳಕ್ಕೂ ಸ್ವಲ್ಪ ಸಹಾಯಧನವನ್ನೂ ಕೊಟ್ಟರು.

ಅನಂತರ ಶಾಲಾಸ್ಥಾಪಕರಾದ ದಿವಂಗತ ಸುಬ್ರಾಯ ಪೈಗಳವರ ಪ್ರತಿಮೆಗೆ ಹೂಮಾಲೆಯನ್ನು ತೊಡಿಸಿ, ಎಲ್ಲರಿಗೂ ಪ್ರಸಾದವನ್ನು ಹಂಚಿ ಶಾಲಾತೋಟವನ್ನು ನೋಡಲು ಹೋದ ಸಮಯ ಅವರ ಭಾವಚಿತ್ರವನ್ನು ತೆಗೆಯಲಾಯಿತು. ಅವರು ಶಾಲೆಯಿಂದ ಮರಳಿದ ಬಳಿಕ ಶಾಲಾ ಮುಖ್ಯೋಪಾಧ್ಯಾಯರು ಸ್ವಾಮಿಜಿಯವರು ಶಾಲಾ ಸಂದರ್ಶನ ಮಾಡಿದ ಗೌರವಾರ್ಥವಾಗಿ ಅಂದು ಶಾಲೆಗೆ ರಜೆಯನ್ನಿತ್ತರು.

ದೇಶದ ಭವಿಷ್ಯವನ್ನು ರೂಪಿಸುವ ಮಕ್ಕಳು.

ಶಾಲೆಯೊಂದರ ಕೆಲವು ಮಕ್ಕಳು ಮಹಾತ್ಮಾಜೀಯವರಿಗೆ ಬರೆದ ಒಂದು ಪತ್ರವನ್ನು ಶ್ರೀ ಎಂ. ಡಿ. ಯವರು 'ಹರಿಜನ'ದಲ್ಲಿ ಹೀಗೆ ಪ್ರಕಟಿಸಿದ್ದಾರೆ:—

"ಪ್ರಿಯ ಗಾಂಧಿಜಿ,—ನಮ್ಮ ಭೂಗೋಳಶಾಸ್ತ್ರದಲ್ಲಿ ಹಿಂದೂದೇಶದ ಕುರಿತೂ ನಿಮ್ಮ ಕುರಿತೂ ನಾವು ಓದಿದ್ದೇವೆ. ನಿಮ್ಮ ದೇಶದ ಜನರು, ಅದರಲ್ಲಿಯೂ ಮುಖ್ಯವಾಗಿ ನಿಮ್ಮ ದೇಶದ ಬಡರೈತರು ಮತ್ತು ಕೂಲಿಯವರು ಎಷ್ಟು ಕಷ್ಟದ ದಿನಗಳನ್ನು ಕಳೆಯುತ್ತಿದ್ದಾರೆಂಬುದನ್ನೂ ನಾವು ಓದಿದ್ದೇವೆ. ನಿಶ್ಶಸ್ತ್ರ ಹಿಂದೂ ದೇಶವು ಅಹಿಂಸಾತ್ಮಕ ರೀತಿಯಿಂದ ಹೋರಾಡಿದ ಸ್ವಾತಂತ್ರ್ಯ ಯುದ್ಧದ ಕ್ರಮವನ್ನೂ ತಿಳಿದಿದ್ದೇವೆ. ನಿಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿಮಗೆ ಯಶಃಪ್ರಾಪ್ತಿಯಾಗಲೆಂದು ಬಯಸುತ್ತೇವೆ. ಕೆಲವು ವರ್ಷಗಳ ಮೊದಲು ನಾವು ಒಂದು ಪತ್ರಿಕೆಯನ್ನು ಹೊರಡಿಸಿದ್ದೆವು. ಅದನ್ನು ಕೈಯಿಂದ ಬರೆದು, ಕಲ್ಲಚ್ಚಿನಲ್ಲಿ ಅದರ ಪ್ರತಿಗಳನ್ನು ಮಾಡಿ ನಮ್ಮ ಬಂಧುಮಿತ್ರರಿಗೂ ಹೆತ್ತವರಿಗೂ ಮಾರುತ್ತಿದ್ದೆವು. ಸಂಚಾರ ಹೊರಡಲಿಕ್ಕೆ ಅಥವಾ ನಾಟಕ ಸಿನೇಮ ನೋಡಲಿಕ್ಕೆ ಮುಂದೆ ಎಂದಾದರೂ ಪ್ರಯೋಜನಕ್ಕೆ ಬೀಳಬಹುದೆಂದು ಪತ್ರಿಕೆಯನ್ನು ಮಾರಿ ಬಂದ ಈ ಹಣವನ್ನು ಒಂದು ಬೇಂಕಿನಲ್ಲಿಟ್ಟಿದ್ದೆವು. ಈಗ ಅಷ್ಟು ಹಣ (೩೫ ರೂಪಾಯಿ) ವನ್ನು ನಿಮಗೆ ಕೊಡಲಿಟ್ಟಿದ್ದೇವೆ. ನಿಮ್ಮ ದೇಶದ ಯಾರಾದರೂ ಸಣ್ಣ ಹುಡುಗ ಅಥವಾ ಹುಡುಗಿಗೆ ಶಾಲೆಗೆ ಹೋಗಲಿಕ್ಕೆ ಸಹಾಯವಾಗುವಂತೆ ನೀವು ಈ ಹಣವನ್ನು ಉಪಯೋಗಿಸಿದರಾಗಬಹುದೆಂದು ನಮಗೆ ಅಪೇಕ್ಷೆ ಇದೆ. ಅದರೆ ಹಾಗೆ ಮಾಡುವದು ನಿಮಗೆ ಸಾಧ್ಯವಲ್ಲವಾದರೆ ನೀವು ಅದನ್ನು ನಿಮಗೆ ಬೇಕಾದಂತೆ ವಿನಿಯೋಗಿಸಬಹುದು. ಸ್ವೀಡನ್ನಿನ ರಾಜಧಾನಿ ಸ್ಟಾಕ್‌ಹೋಮಿನ ಸಮೀಪದ ಹಳ್ಳಿಯಲ್ಲಿರುವ ಒಂದು ಬೋರ್ಡಿಂಗ್ ಶಾಲೆಯ ೬ನೇ ತರಗತಿಯಲ್ಲಿ ನಾವೀಗ ಓದುತ್ತಿದ್ದೇವೆ. ನಮ್ಮ ಶಾಲೆಯ ಚಿತ್ರವಿರುವ ಒಂದು ಕಾರ್ಡನ್ನೂ ನಿಮಗೆ ಕಳುಹಿಸಿದ್ದೇವೆ. ಅದು ಬಹು ಸೊಗಸಾಗಿರುವುದಲ್ಲವೇ?"

ಮಹಾತ್ಮಾಜೀಯವರ ಅಹಿಂಸಾ ಧರ್ಮದ ಸಂದೇಶವು ಪ್ರಪಂಚಾಂತರ್ಗತ ಪ್ರತಿಯೊಂದು ದೇಶದ ಮೂಲೆ ಮೂಲೆಯಲ್ಲಿಯೂ ಹರಡಿ ಆ ಮೂಲ ಅಬಾಲಗೋಪಾಲಂವರೆಗೂ ಎಲ್ಲರೂ ಹೇಗೆ ಪ್ರಭಾವಿತರಾಗುತ್ತಿದ್ದಾರೆಂಬುದಕ್ಕೆ ಇದೊಂದು ಉತ್ತಮ ನಿದರ್ಶನವಾಗಿರುತ್ತದೆ. ಆದರೆ, ಈ ಸಂಗತಿಯನ್ನು ಪಾಠಕರ ಮುಂದಿಡುವುದಕ್ಕಾಗಿ ಮಾತ್ರ ನಾವು ಸ್ವೀಡನ್ನಿನ ಆ ಮಕ್ಕಳ ಪತ್ರವನ್ನು ಕನ್ನಡಕ್ಕೆ ಅನುವಾದಿಸಿರುವುದಿಲ್ಲ. ಸದ್ವಿದ್ಯೆಯ ಫಲವು ಎಂತಹದ್ದಾಗುತ್ತದೆಂಬುದನ್ನು ಪ್ರಸ್ತಾಪಿಸುವುದಕ್ಕಾಗಿ ಇಲ್ಲಿ ನಾವೀಗ ಉದ್ಯುಕ್ತರಾಗಿದ್ದೇವೆ.

ವ್ಯಕ್ತಿ, ಸಮಾಜ, ದೇಶ, ಧರ್ಮಾಭಿಮಾನಿಗಳು ಹೆಚ್ಚು ಮಕ್ಕಳು ವಿಶ್ವಪ್ರೇಮಿಗಳಾಗುವಂತೆ ಸಾಧಿಸುವ ವಿದ್ಯೆಯೆ ಸದ್ವಿದ್ಯೆಯು. ದೇಶದಲ್ಲಿ ಎಷ್ಟು ಶಿಕ್ಷಣಾಲಯಗಳಲ್ಲಿ ಎಷ್ಟು ಮಂದಿ ಬಾಲಬಾಲಕಿಯರು ಶಿಕ್ಷಣವನ್ನು ಪಡೆಯುತ್ತಿರುವುದಿಲ್ಲ? ಪರಂತು ಊರು ಕೇರಿ ಸಂಚಾರ ಮಾಡುವ ನಾಟಕ ಸಿನೇಮ ನೋಡಬೇಕೆನ್ನುವ ಬಾಲೋಚಿತ ಅಭಿಲಾಷೆಯನ್ನು ತಡೆದು ಕೇವಲ ಮಾನವೋಚಿತ ಉಚ್ಚಸೇವಾಧರ್ಮ ಪ್ರೇರಿತರಾಗಿ ತಮ್ಮ ಸ್ವಾರ್ಜಿತ ಸ್ವಲ್ಪ ಹಣವನ್ನು ಕೂಡ ಬೇರೆ ದೇಶದವರ ದೀನ ದರಿದ್ರರ ದುಃಖ ನಿವಾರಣೆ ಅರ್ಪಿಸಲಿಕ್ಕೆ ಮಕ್ಕಳು ಸಿದ್ಧರಾಗಬೇಕಾದರೆ, ಆ ಮಕ್ಕಳಿಗೆ ದೊರೆತ ಶಿಕ್ಷಣವು ಎಷ್ಟು ಉದಾರವೂ ಉದಾತ್ತವೂ ಆಗಿರಬೇಡ? ಆದಕಾರಣ ಅಂತಹ ಶಿಕ್ಷಣವನ್ನು ಪಡೆದ ಬಾಲಬಾಲಿಕೆಯರೂ, ಆ ಶಿಕ್ಷಣವನ್ನು ಕೊಟ್ಟ ಉಪಾಧ್ಯಾಯರೂ, ಅದನ್ನು ಕೊಡಿಸಿದ ಹೆತ್ತವರುರಕ್ಷಕರೂ, ತಮ್ಮ ಜನ್ಮಸಾರ್ಥಕಮಾಡಿಕೊಳ್ಳುವರೆಂಬುದರಲ್ಲಿ ಏನೂ ಸಂಶಯವೂ ಬೇಡವೆನ್ನುತ್ತೇವೆ. ಇಂತಹ ಉಚ್ಚ ಉದಾರಶಿಕ್ಷಣವನ್ನು ಪಡೆದ ಬಾಲಬಾಲಕಿಯರಿಂದಲೇ ಜನಾಂಗದ ಭವಿಷ್ಯವು ರೂಪಿಸಲ್ಪಡತಕ್ಕುದಾಗಿದೆ. ಜಾತಿ ಮತ, ವರ್ಣಪಂಗಡಗಳೊಳಗಿನ ಮೇಲುಕೀಳು ದ್ವೇಷಾಸೂಯೆ ಮೊದಲಾದ ದುರ್ಭಾವನೆಗಳ ಸಮೂಲನಾಶವಾಗಿ ಅವುಗಳೊಳಗೆ ಪರಸ್ಪರ ಪ್ರೀತಿ ವಿಶ್ವಾಸ, ಆದರ, ಪೂಜ್ಯಭಾವನೆಗಳು ಉಂಟಾಗುವಂತೆ ಬಾಲಬಾಲಕಿಯರಲ್ಲಿ ನಿರ್ಮಲ ಮನಸ್ಸು, ವಿಶಾಲ ಹೃದಯ, ವಿಕಾಸವಿಚಾರಪರ ವಿಮರ್ಶಕ ಬುದ್ಧಿಗಳನ್ನುಂಟುಮಾಡುವ ಧ್ಯೇಯವು ಈ ಕಾರಣದಿಂದ ಪ್ರತಿಯೊಂದು ವಿದ್ಯಾಲಯಕ್ಕೂ ಇರಬೇಕಾಗಿದೆ. ಆಗಮಾತ್ರ ಜಗತ್ತಿನ ನಿಜವಾದ ಅಭ್ಯುದಯದ ಮತ್ತು ಕಲ್ಯಾಣಸಾಧನೆಯಾಗುವುದು.

ಕಟಪಾಡಿ ಶ್ರೀನಿವಾಸ ಶೆಣೈ, ಕಾರ್ಕಳ.

ಸಕಲ ಕರ್ನಾಟಕ ಸಂಘ ಸಮ್ಮೇಳನ.

ಮುಂದಿನ ಮೇ ತಿಂಗಳಲ್ಲಿ ನಡೆಯುವ ವಿಶೇಷ ಸಾಹಿತ್ಯೋತ್ಸವ ಕಾಲದಲ್ಲಿ, ಕನ್ನಡ ನಾಡಿನ ನಾನಾ ಭಾಗಗಳಲ್ಲಿಯೂ ಹೊರಗಡೆಯೂ ಇರುವ ಕರ್ನಾಟಕ ಸಂಘಗಳು ಮೊದಲಾದ ಭಾಷಾ ಸಾಹಿತ್ಯ ಸಂಸ್ಥೆಗಳ ಪ್ರತಿನಿಧಿಗಳನ್ನು ಪರಿಷತ್ತಿಗೆ ಬರಮಾಡಿಕೊಂಡು, ಒಂದು ಸಮ್ಮೇಳನವನ್ನು ನಡೆಸಬೇಕೆಂದು ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘದ ಅಧ್ಯಕ್ಷರು (ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯ, ಎಂ. ಎ. ಬಿ. ಎಲ್. ಇವರು) ಸೂಚಿಸಿ ಬರೆದ ತಾ. ೨೦-೩-೪೧ರ ಪತ್ರವನ್ನು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ತಾ. ೨೬-೩-೪೧ ರಲ್ಲಿ ಪರ್ಯಾಲೋಚಿಸಿ, ಆ ಯೋಚನೆ ಉಚಿತವಾದದ್ದೆಂದೂ ಆ ಕೆಲಸವನ್ನು ಪರಿಷತ್ತು ಕೈಕೊಳ್ಳತಕ್ಕದೆಂದೂ ತೀರ್ಮಾನಿಸಿ, ಅದಕ್ಕಾಗಿ ಒಂದು ಉಪಸಮಿತಿಯನ್ನು ನಿಯಮಿಸಿರುತ್ತದೆ. ಆದರ ಪ್ರಕಾರ ಮುಂದಿನ ಮೇ ೧-೨ನೆಯ ವಾರಗಳಲ್ಲಿ ವಿಶೇಷ ಸಾಹಿತ್ಯೋತ್ಸವ ಕಾಲದಲ್ಲಿ ನಡೆಯಲಿರುವ "ಸಂಘ ಸಮ್ಮೇಳನ"ಕ್ಕೆ ಸಮಸ್ತ ಕರ್ನಾಟಕ ಸಂಘಗಳೂ ತಮ್ಮ ತಮ್ಮ ಪ್ರತಿನಿಧಿಗಳನ್ನೂ ಕಳುಹಿಸಬೇಕೆಂದು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯು ಬೇಡುತ್ತದೆ.

ಕನ್ನಡ ನಾಡಿಗೆ ದೂರದಲ್ಲಿರುವ ಕಲ್ಕತ್ತ, ಕಾಶಿ, ಲಕ್ನೋ, ಬೊಂಬಾಯಿ, ಪುಣೆ, ಮದರಾಸು ಮೊದಲಾದ ಸ್ಥಳಗಳಲ್ಲಿ ಸಹ ಕರ್ನಾಟಕ ಸಂಘಗಳಂತಹ ಸಂಸ್ಥೆಗಳು ಈಚೀಚೆಗೆ ಸ್ಥಾಪಿತವಾಗಿವೆ. ಇಂತಹ ಸಂಸ್ಥೆಗಳ ಸಂಖ್ಯೆ ಈಗ ಒಟ್ಟಿಗೆ ಸುಮಾರು ೭೦ರ ಮೇಲೆ ಇರುವುದೆಂದು ಪರಿಷತ್ತಿನ ಕಾರ್ಯಾಲಯದಲ್ಲಿ ಅಂದಾಜು ತೋರುತ್ತದೆ. ಅವುಗಳಲ್ಲಿ ಇದುವರೆಗೆ ೧೮ ಸಂಘಗಳು ಮಾತ್ರ ಪರಿಷತ್ತಿಗೆ ಅಂಗಸಂಸ್ಥೆಗಳಾಗಿ ಸೇರಿವೆ; ಉಳಿದ ಬಹು ಸಂಸ್ಥೆಗಳು ಇನ್ನೂ ಸೇರಬೇಕಾಗಿವೆ...

ಈಗ ಪರಿಷತ್ತು ಕೈಕೊಂಡಿರುವ ಸಂಘ ಸಮ್ಮೇಳನದಲ್ಲಿ ಪರಿಷತ್ತಿಗೆ ಅಂಗಸಂಸ್ಥೆಗಳಾಗಿರುವ ಸಂಘಗಳು ಮಾತ್ರವಲ್ಲದೆ, ಇನ್ನೂ ಅಂಗಸಂಸ್ಥೆಗಳಾಗದೆ ಇರುವ ಸಂಘಗಳು ಸಹ ಭಾಗವಹಿಸಬೇಕೆಂದು ಪರಿಷತ್ತು ಅಪೇಕ್ಷಿಸುತ್ತದೆ.

ಈ ಸಂಘಸಮ್ಮೇಳನದಲ್ಲಿ ಮುಖ್ಯವಾಗಿ ಆಲೋಚಿಸಬೇಕಾದ ವಿಷಯಗಳಲ್ಲಿ ಕೆಲವನ್ನು ಇಲ್ಲಿ ಉದಾಹರಣೆಗಾಗಿ ಸೂಚಿಸಿದೆ:—

(೧) ಸಂಘಗಳ ಉದ್ದೇಶ, ರಚನೆ, ನಿಯಮಗಳು.

(೨) ಅವುಗಳ ಸದಸ್ಯ ಸಂಖ್ಯೆಯನ್ನೂ ಆರ್ಥಿಕ ಸ್ಥಿತಿಯನ್ನೂ ಉತ್ತಮಪಡಿಸುವ ರೀತಿಗಳು.

(೩) ಅವುಗಳ ಕಾರ್ಯಕಲಾಪವು ಸಾಮಾನ್ಯ ಜನಕ್ಕೆ ಪ್ರಯೋಜನಕರವಾಗಿ ಗ್ರಾಮಾಂತರಗಳಲ್ಲಿ ಹರಡುವಂತೆ ಮಾಡುವ ರೀತಿಗಳು.

(೪) ಕನ್ನಡದ ಪ್ರಾಬಲ್ಯವನ್ನು ಹೆಚ್ಚಿಸುವುದಕ್ಕಾಗಿ ಈ ಸಂಘಗಳು ಕೈಕೊಳ್ಳಬಹುದಾದ ವಿಶೇಷ ಕಾರ್ಯಗಳು.

(೫) ಸಮಸ್ತ ಕರ್ನಾಟಕಕ್ಕೆ ಸಂಬಂಧಪಟ್ಟ ಭಾಷಾ ಸಾಹಿತ್ಯ ವಿಚಾರಗಳಲ್ಲಿ ಜನಾಭಿಪ್ರಾಯವನ್ನು ಒಂದುಗೂಡಿಸಿ, ಅದಕ್ಕೆ ಪುಷ್ಟಿಯನ್ನೂ ಸಾರ್ಥಕತೆಯನ್ನೂ ಉಂಟುಮಾಡಲು ಆ ಸಂಘಗಳು ಮಾಡಬಹುದಾದ ಕೆಲಸಗಳು.

ಈ ವಿಷಯಗಳ ಜೊತೆಗೆ ಇನ್ನೂ ಬೇಕಾದ ವಿಷಯಗಳನ್ನು ಸೇರಿಸಿಕೊಳ್ಳಬಹುದು.

ಇಂಥ ಸಮಾರಂಭವೊಂದು ನಡೆಯುವುದು ಈಗ ಅತ್ಯಂತ ಅವಶ್ಯಕವಾಗಿದೆಯೆಂದೂ, ಅದಕ್ಕೆ ಇದು ಸರಿಯಾದ ಕಾಲವೆಂದೂ ಕಾರ್ಯನಿರ್ವಾಹಕ ಮಂಡಳಿಯು ಅಭಿಪ್ರಾಯಪಟ್ಟಿದೆ. ಆದಕಾರಣ ಕನ್ನಡ ನಾಡಿನ ಮತ್ತು ಹೊರಗಿನ ನಾನಾ ಕಡೆಗಳಲ್ಲಿರುವ ಎಲ್ಲ ಸಂಘದವರೂ ಈ ಪ್ರಯತ್ನಕ್ಕೆ ತಮ್ಮ ತೀವ್ರ ಗಮನವನ್ನು ಕೊಟ್ಟು ಸಹಕರಿಸಬೇಕೆಂದು ಕಾ॥ ನಿ॥ ಮಂಡಲಿ ಬೇಡುತ್ತದೆ.

ಈ ಸಮ್ಮೇಳನಕ್ಕೆ ಬರಲು ತಗಲುವ ಪ್ರಯಾಣದ ವೆಚ್ಚದ ಬಗ್ಗೆ ಯಾವ ಸಂಘದ ಪ್ರತಿನಿಧಿಯಾದರೂ ಸಹಾಯವನ್ನು ಸ್ವೀಕರಿಸುವುದಾದರೆ, ಪರಿಷತ್ತು ತನಗೆ ಸಾಧ್ಯವಿರುವಷ್ಟು ಮಟ್ಟಿಗೆ ಸಹಾಯವನ್ನೀಯಬೇಕೆಂದು ಉದ್ದೇಶವಿಟ್ಟುಕೊಂಡಿದೆ.

ಮದರಾಸಿನ ಕರ್ನಾಟಕ ಸಭೆ.

ಮದರಾಸಿನಲ್ಲಿ ಕರ್ನಾಟಕ ಸಭೆಯೆಂಬ ಕನ್ನಡಿಗರ ಸಂಸ್ಥೆಯೊಂದು ೧೯೧೯ರಲ್ಲಿ ಸ್ಥಾಪಿತವಾಗಿ ಎರಡು ವರ್ಷಕಾಲ ಚೆನ್ನಾಗಿ ನಡೆದು ಆ ಬಳಿಕ ಕಾರಣಾಂತರಗಳಿಂದ ನಿಂತುಹೋದುದು ಸರಿಯಷ್ಟೆ. ಅದನ್ನು ಜೀರ್ಣೋದ್ಧಾರಮಾಡಬೇಕೆಂದು ತದನಂತರದಲ್ಲಿ ಮಾಡಿದ ಒಂದೆರಡು ಪ್ರಯತ್ನಗಳು ನಿಷ್ಫಲವಾದ ವಿಷಯವು ಕೂಡ ಅನೇಕರ ಜ್ಞಾಪಕದಲ್ಲಿರಬಹುದು. ಈ ಮುಂದೆ ಪುನಃ ಹಿಂದಿನ ರೀತಿಯಲ್ಲಿಯೇ ಹೊರಡಿಸಿ ನಡೆಸುವುದು ಪ್ರಾಯಶಃ ಅಸಾಧ್ಯವೆಂದು ನಮ್ಮಲ್ಲಿ ಅನೇಕರು ತಿಳಿಯುತ್ತಾರೆ. ಆದರೆ, ಅದನ್ನು ಕ್ರಮವಾಗಿ ಮುಚ್ಚಿಬಿಡುವುದಕ್ಕೆ ಪೂರ್ವಭಾವಿಯಾಗಿ ನಡೆಯಬೇಕಾದ ಒಂದು ಕೆಲಸವಿದೆ. ಆ ಸಂಸ್ಥೆಗೆ ಸೇರಿದುದಾಗಿ ಮದ್ರಾಸಿನ ಇಂಡಿಯನ್ ಬೇಂಕಿನಲ್ಲಿ ಸಂಚಯಿಸಲ್ಪಟ್ಟಿರುತ್ತಿದ್ದ ಹಣವು ಈಗ ಸುಮಾರು ೬೧೨ ರೂಪಾಯಿಗೆ ಮುಟ್ಟಿರುವುದು. ಇದನ್ನು ವಶಪಡಿಸಿಕೊಂಡು, ಆ ಸಭೆಯ ಉದ್ದೇಶಗಳಿಗೆ ವ್ಯತಿರಿಕ್ತವಾಗದ—ಎಂದರೆ, ದೊರೆತನದವರಿಗೆ ಅಥವಾ ವಿಶ್ವವಿದ್ಯಾಲಯದವರಿಗೆ ಅದನ್ನು ಒಪ್ಪಿಸಿ ಅವರ ಮೂಲಕ ಅದರ ಬಡ್ಡಿಯಿಂದ ಪ್ರತಿವರ್ಷ ಸಮಸ್ತ ಕರ್ನಾಟಕದೊಳಗಿನ ಕನ್ನಡ ಗ್ರಂಥಲೇಖಕರಿಗೆ ಪ್ರೋತ್ಸಾಹಕವನ್ನು ಕೊಡುವ ಮುಂತಾದ—ಯಾವುದೊಂದು ರೀತಿಯಲ್ಲಿ ವಿನಿಯೋಗಿಸಲು ಏರ್ಪಾಡುಗಳನ್ನು ಕೈಕೊಳ್ಳಬೇಕೆಂದು ಮೇಲ್ಕಂಡ ಸಂಸ್ಥೆಯ ಕೆಲಕೆಲವು ಸದಸ್ಯರಿಗೂ ಭಾಷಾಭಿಮಾನಿಗಳಿಗೂ ಅಪೇಕ್ಷೆಯುಂಟಾಗಿದೆ. ಈ ಬಗ್ಗೆ ಆ ಸಭೆಯ ಸಭಾಸದರಾಗಿದ್ದ ಮಹನೀಯರುಗಳ ಒಂದು ಮಹಾಸಭೆಯನ್ನು ನೆರೆಯಿಸಿ, ಅವರೊಳಗಿಂದ ಒಂದು ಕಾರ್ಯನಿರ್ವಾಹಕ ಮಂಡಳಿಯನ್ನು ಆರಿಸಿಕೊಂಡು, ಆ ಮಂಡಲಿಯವರ ಮೂಲಕ ಆ ಉದ್ದೇಶವನ್ನು ನೆರವೇರಿಸಬೇಕೆಂದಿರುವೆವು. ಮಹಾಸಭೆಯನ್ನು ಮದ್ರಾಸು ತಂಬುಚೆಟ್ಟಿ ಬೀದಿ, ನಂಬ್ರ ೩೦ನೆ 'ಗಾನಮಂದಿರ'ದಲ್ಲಿ ೧೯೪೧ನೇ ಮಾರ್ಚಿ ತಾ. ೩೧ನೇ ಸೋಮವಾರ ದಿವಸ ಸಾಯಂಕಾಲ ೬-೩೦ ಗಂಟೆಗೆ ಸೇರಿಸಬೇಕೆಂದಿದ್ದೇವೆ. ಈ ಸಂಸ್ಥೆಯ ಸದಸ್ಯರಾಗಿರುತ್ತಿದ್ದ ಮಹನೀಯರೆಲ್ಲರೂ ಆ ವೇಳೆಗೆ ದಯಮಾಡಿಸಿ ತಮ್ಮ ಸಹಕಾರವನ್ನೂ ಸಲಹೆಗಳನ್ನೂ ಕೊಟ್ಟು ಸಹಾಯ ಮಾಡಬೇಕೆಂದು ಪ್ರಾರ್ಥನೆ.

ಸಾಧ್ಯವಿರುವ ಮಟ್ಟಿಗೆ ಪ್ರತಿ ಸದಸ್ಯನಿಗೂ ಪ್ರತ್ಯೇಕವಾಗಿ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿಯೇ ಇರುವೆವು. ಇದಲ್ಲದೆ ಕೆಲವು ಕನ್ನಡ ಮತ್ತು ಇಂಗ್ಲಿಷ್ ಪತ್ರಿಕೆಗಳಲ್ಲೂ ಕೂಡ ಈ ನೋಟೀಸನ್ನು ಪ್ರಚುರಗೊಳಿಸಿರುವೆವು. ಯಾವುದೊಂದು ಕಾರಣದಿಂದ ಸದಸ್ಯರೊಳಗೆ ಯಾರಿಗಾದರೂ ಆಮಂತ್ರಣ ಪತ್ರಿಕೆಯು ತಲುಪದೆ ಇದ್ದರೂ ಕೂಡಾ, ಅವರು ಪತ್ರಿಕೆಗಳೊಳಗೆ ಪ್ರಚಾರ ಮಾಡುದನ್ನೇ ಆಮಂತ್ರಣವಾಗಿ ಭಾವಿಸಿ, ಸಭೆಗೆ ದಯಮಾಡಿಸಬೇಕೆಂದು ಪ್ರಾರ್ಥನೆ.

ಯಾವ ಪಕ್ಷದಲ್ಲಿಯೂ ಸಭೆಯಲ್ಲಿ ಹಾಜರಿರಲು ಸಾಧ್ಯವಿಲ್ಲದ ಸದಸ್ಯರುಗಳೂ ತಮ್ಮ ಅಪೇಕ್ಷಿತವಾದ ಸಲಹೆಗಳನ್ನು ಈ ಕೆಳಗೆ ರುಜುಮಾಡಿದ ಯಾರೊಬ್ಬರಿಗೆ ಬರಹಮೂಲಕವಾಗಿ ತಿಳಿಸಿದ ಪಕ್ಷದಲ್ಲಿ ಅವು ಸಭೆಯ ಅಥವಾ ಮಂಡಲಿಯ ಮುಂದೆ ಪರ್ಯಾಲೋಚನೆಗೆ ಇಡಲ್ಪಡುವವು.

ಇತಿ,

ಡಾ॥ ಯು. ರಾಮರಾವು, ರಾವ್ ಸಾಹೇಬ್
೩೨, ತಂಬುಚೆಟ್ಟಿ ಬೀದಿ, ಮದ್ರಾಸು.

ಬಿ. ರಾಮರಾವು, ಎಂ. ಎ. ಎಲ್, ಎಲ್. ಬಿ.
"ಭಾಸ್ಕರವಿಲಾಸ" ವೇಪೇರಿ, ಮದರಾಸು.

ಈ ಉದ್ದೇಶದಲ್ಲಿ ಆಸಕ್ತಿಯುಳ್ಳ ಎಲ್ಲ ಸಂಸ್ಥೆಗಳೂ ತಮ್ಮ ಸಹಾನುಭೂತಿಯನ್ನು ೧೯೪೧ನೇ ಮಾರ್ಚಿ ತಾ. ೩೧ರೊಳಗಾಗಿ ಪರಿಷತ್ತಿನ ಕಾರ್ಯಾಲಯಕ್ಕೆ ದಯಮಾಡಿ ತಿಳಿಸಬೇಕೆಂದು ಪ್ರಾರ್ಥನೆ.

ಈ ವಿಚಾರಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು.

ಎಸ್. ವಿ. ರಂಗಣ್ಣ ಎಂ.ಎ.
ವ್ಯವಸ್ಥಾಪಕ,
ಕರ್ನಾಟಕ ಸಂಘ ಸಮ್ಮೇಳನ,
ಕರ್ನಾಟಕ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ,

ಇಟಲಿ-ಹಬಸಿ ಸಂಧಿಯಾಗುವುದೆ?

ತಮ್ಮ ಮೇಲಿರುವ ಸೆಂಕ್ಷನುಗಳನ್ನು ತೆಗೆದುಹಾಕಿದರೆ ತಾವು ಎಲ್ಲಾ ಯುದ್ಧಕಾರ್ಯಗಳನ್ನು ನಿಲ್ಲಿಸುವೆವೆಂದು, ಆ ತರುವಾಯ ಸಂಧಿ ಪ್ರಸ್ತಾಪದ ಕುರಿತು ಮಾತುಕತೆ ನಡೆಯಿಸಲು ಸಿದ್ಧರಿದ್ದೇವೆಂದು, ಇಟಲಿ-ಹಬಸಿ ಸಂಧಿಯ ಕುರಿತು ಮುಸಲೋನಿಯ ಶರ್ತಗಳೆಂದು, ಫ್ರಾನ್ಸಿನ ಬಹಿರ್ ವ್ಯವಹಾರದ ಮಂತ್ರಿವರ್ಯರಾದ ಫ್ಲೆಂಡಿನ್ನರು, ಚೆಂಬರ್ ಆಫ್ ಡಿಪ್ಯೂಟೆಸ್ ರ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದರು. ಫ್ಲೆಂಡಿನ್ನರು ಇಟಲಿ-ಹಬಸಿ ಸಂಧಿಯ ಕುರಿತು ಜನಾಂಗ ಸಭೆಯಲ್ಲಿ ಮಾತುಕತೆಗಳನ್ನು ಪ್ರಾರಂಭಮಾಡಿಸಿದವರು ಜಿನಿವಾದಲ್ಲಿ ಇಷ್ಟರ ತನಕ ನಡೆದ ಚರ್ಚೆಗಳ ಫಲಿತಾಂಶವಾಗಿ, ಇಟಲಿಯು ಹಬಸಿ ರಣರಂಗದಲ್ಲಿ ಯುದ್ಧಕಾರ್ಯಗಳನ್ನು ನಿಲ್ಲಿಸಬೇಕೆಂದೂ, ಜನಾಂಗ ಮಂಡಳವು ಅವರ ಮೇಲಿರುವ ಸೆಂಕ್ಷನುಗಳನ್ನು ರದ್ದು ಮಾಡಬೇಕೆಂದು ನಿರ್ಣಯಗಳಾಗಿವೆಯೆಂದು ತಿಳಿದು ಬರುತ್ತದೆ. ಅಂದರೆ, ಇಟಲಿ-ಹಬಸಿ ಯುದ್ಧವನ್ನು ಶಾಂತಗೊಳಿಸುವುದು ಮುಖ್ಯ ಉದ್ದೇಶ. ಇವರ ಈ ವರ್ತನೆಗೆ ಜರ್ಮನಿಯು ಲೋಕಾರ್ನೊ ಒಪ್ಪಂದವನ್ನು ಮುರಿದು, ಯುರೋಪಿನ ರಾಜಕೀಯ ವಾತಾವರಣದಲ್ಲಿ ಬಹಳ ಕೋಲಾಹಲ ಉಂಟಾದುದರಿಂದ. ಆದರೆ, ಫ್ಲೆಂಡಿನ್ನರ ಮೇಲಿನ ಸೂಚನೆಗಳಿಗೆ ಇಟಲಿಯ ಸಮ್ಮತ ಬಂದಿಲ್ಲ. ಎಥಿಯೋಪಿಯಾದಲ್ಲಿ ದಂಡಯಾತ್ರೆಯನ್ನು ಇವರು ಮುಂದುವರಿಸುತ್ತಿದ್ದಾರೆ. ಎಥಿಯೋಪಿಯಾವು ಇವರ ಬದಿಗೆ ಸೇರಿದ ವಿನಹ ಇವರು ಶಾಂತರಾಗುವುದಿಲ್ಲವಂತೆ. ಎಂದರೆ, ಫ್ರಾನ್ಸಿನ ಮತದಂತೆ ಇಟಲಿಯನ್ನು ಸಂತಯಿಸಲು ಜನಾಂಗ ಸಭೆ ಹಬಸಿಯವರನ್ನು ಬಲಿದಾನ ಕೊಡಬೇಕು. ಆದರೆ ಹಬಸಿಯರು ಇಷ್ಟರ ತನಕ ಬಹಳ ಪರಾಕ್ರಮ ತೋರಿಸಿರುವರು. ನವೀನ ಯುದ್ಧೋಪಕರಣಗಳಿಂದ ಕೂಡಿದ ಇಟಲಿಯರನ್ನು ತಮ್ಮ ಬಾಹು ಬಲದಿಂದಲೆ ಹಿಂದಡುತ್ತಿದ್ದಾರೆ. ಪಾಶ್ಚಾತ್ಯರ ಮೇಲೆ ತನಗೆ ಅಷ್ಟು ನಂಬುಗೆ ಇರುವುದಿಲ್ಲವೆಂದು ಹಬಸಿ ಚಕ್ರವರ್ತಿಯವರು ಯುದ್ಧ ಪ್ರಾರಂಭವಾಗುವ ಮೊದಲೇ ಆಡಿರುವರು. ತಮ್ಮ ರಕ್ಷಣೆಗಾಗಿ ಅವರು ಯಾರ ಮೇಲೂ ಹೊಂದಿಕೊಂಡಿರಲಿಲ್ಲವೆಂದು ವ್ಯಕ್ತವಾಗುತ್ತದೆ.

ಪ್ರಸಿದ್ಧ ಶ್ರೀಮಂತರಾದ, ರಿಕೆಟ್ಸ ಎಂಬವರು ಎಥಿಯೋಪಿಯಾದ ಕೆಲವು ಪ್ರದೇಶಗಳಲ್ಲಿ ಖನಿಜಗಳನ್ನು ನಡೆಯಿಸುವ ಹಕ್ಕುಗಳನ್ನು ಪಡಕೊಂಡಿದ್ದರು. ಹಬಸಿಯವರಲ್ಲಿ ಇವರಿಗೆ ಒಳ್ಳೇ ಗೌರವವಿದೆ. ಆದುದರಿಂದ ಇವರ ಖಾಸಗಿ ಕೆಲಸದಲ್ಲಿ ಮೊನ್ನೆ ಇವರು ಅಡಿಸ್ ಅಬಾಬಕ್ಕೆ ನಡೆದಿರುವಾಗ ಇವರು ಸಂಧಿಯ ಕುರಿತು ಮಾತುಕತೆಗಳನ್ನು ನಡೆಯಿಸುವರಾಗಿ ವಾರ್ತೆ ಹರಡಿತ್ತು. ಯುದ್ಧವು ಬೇಗನೇ ಕೊನೆಗೊಳ್ಳಬೇಕೆಂದು ಇವರ ಆಶೆ. ಕಾರಣ ಖನಿಜಗಳನ್ನು ತೋಡುವ ಕಾರ್ಯವನ್ನು ಆದಷ್ಟು ತ್ವರೆಯಿಂದ ಪ್ರಾರಂಭಿಸಲು. ಯುದ್ಧ ಕಾರ್ಯಗಳಿಂದ ಸಮಯ ವಿಳಂಬವಾಗುವುದರಿಂದ ತಾವು ಪಡಕೊಂಡ ಹಕ್ಕು ರದ್ದಾಗುವುದೆಂಬ ಭೀತಿಯು ಇವರಿಗಿತ್ತು. ಆದರೆ, ಸಮಯ ವಿಳಂಬವಾದರೂ ಶರ್ತಗಳು ರದ್ದಾಗವು ಎಂದು ಹಬಸಿ ಸರಕಾರವು ತಿಳಿಸಿರುತ್ತದೆ. ಈ ವರ್ಷದ ಅಕ್ಟೊಬರಿಗೆ ತನ್ನ ವ್ಯಾಪಾರ ಸಂಸ್ಥೆಗಳನ್ನು ಎಥಿಯೋಪಿಯಾದಲ್ಲಿ ಸ್ಥಾಪಿಸಿ, ಕಾರ್ಯ ಪ್ರಾರಂಭ ಮಾಡುವ ಆತುರವು ರಿಕೆಟ್ಸರಲ್ಲಿದೆ. ಟಾನಾ ಸರೋವರದ ಕುರಿತಾಗಿ ಒಂದು ಯೋಜನೆಯನ್ನು ನಡೆಯಿಸುವರಾಗಿ ತಿಳಿದುಬರುತ್ತದೆ. ಆದುದರಿಂದ ಈ ರಿಕೆಟ್ಸರು ಇಟಲಿ ಹಬಸಿ ಸಂಧಿಗೆ ಕಾರಣಪ್ರಾಯರಾಗುವರೆಂದು ಅನೇಕ ಜನಾಂಗಗಳ ಊಹೆ.

ಹಬಸಿ ಸರಕಾರವು ಈ ಕುರಿತು ಮೌನವನ್ನು ತಾಳಿರುವುದು. ತಮ್ಮ ರಾಜಕೀಯ ವಿಚಾರದಲ್ಲಿ ಯಾರೂ ಯಾವ ರೀತಿಯಲ್ಲೂ ಅಭಿಪ್ರಾಯಕೊಡಬಾರದಾಗಿ ಕಟ್ಟಾಜ್ಞೆಗಳು ಹೊರಡಿವೆ. ಚಕ್ರವರ್ತಿಯವರು, ಜನಾಂಗ ಮಂಡಳದಲ್ಲಿ ನಡೆಯುತ್ತಿರುವ ಘಟನೆಗಳನ್ನು ಸುಮ್ಮನೆ ನಿರೀಕ್ಷಿಸುತ್ತಿದ್ದಾರೆ.

ಇಟಲಿಯಾನರು ಯಥಾಪ್ರಕಾರ, ತಮ್ಮ ಕ್ರೂರ ಯುದ್ಧಯೋಜನೆಯನ್ನು ನಡೆಯಿಸುತ್ತಿದ್ದಾರೆ. ಹಬಸಿ ರಣರಂಗಕ್ಕಾಗಿ ಹೆಚ್ಚಿನ ವಿಮಾನಗಳು ರೋಮಿನಲ್ಲಿ ಸಿದ್ಧವಾಗಿವೆ. ಎಥಿಯೋಪಿಯಾದ ಜಿಜಿಗಾ ಎಂಬಲ್ಲಿ, ಇವರ ಯುದ್ಧವಿಮಾನಗಳು ಅನೇಕ ಅನಾಹುತಗಳು ನಡೆಸಿವೆಯಾಗಿ ತಿಳಿದುಬರುತ್ತದೆ. ಆದರೆ, ಹಬಸಿಯರು ಇಷ್ಟರ ತನಕ ಬಹಳ ಸಮಯದಿಂದ ಈ ತರದ ವಾಯು ಆಘಾತಕ್ಕೆ ಒಳಗಾದುದರಿಂದ, ಅವುಗಳನ್ನು ತಪ್ಪಿಸಿಕೊಳ್ಳುವ ಕಾರ್ಯದಲ್ಲಿ ಬಹಳ ನಿಪುಣರಾಗಿರುತ್ತಾರೆ. ಹಬಸಿ ಚಕ್ರವರ್ತಿಯವರನ್ನು ಕೊಲೆ ಮಾಡಿದರೆ, ಎಥಿಯೋಪಿಯಾವನ್ನು ಹಿಡಿಯುವ ಕಾರ್ಯವು ಸುಲಭವಾಗುವುದೆಂದು ಇವರು ನಂಬಿರುವರು. ಹಬಸಿ ಚಕ್ರವರ್ತಿಯವರನ್ನು ಕೊಲೆಮಾಡಲು ಅನೇಕ ಪ್ರಯತ್ನಗಳು ನಡೆದವು. ಆದರೆ, ಬಹಳ ಯುಕ್ತಿವಂತರೂ, ಜಾಣರೂ ಆದ ಹಬಸಿ ಚಕ್ರವರ್ತಿಯವರು ಇವರಿಂದ ತಪ್ಪಿಸಿಕೊಂಡು ಯೋಗ್ಯ ರೀತಿಯಲ್ಲಿ ಯುದ್ಧಕಾರ್ಯಗಳನ್ನು ನಡೆಯಿಸುತ್ತಿದ್ದಾರೆ.

ಜನಾಂಗ ಮಂಡಳವು, ಯುರೋಪಿನ ಇತರ ಜನಾಂಗಗಳು ಇಟಲಿ-ಹಬಸಿ ಸಂಧಿಯು ಬೇಗನೆ ನಡೆಯಿಸುವ ಕುತೂಹಲದಲ್ಲಿದ್ದಾರೆ. ಈ ಕುರಿತು ಜನಾಂಗ ಮಂಡಳದ ಕೌನ್ಸಿಲು ಈಗ ಇಂಗ್ಲಾಂಡಿನಲ್ಲಿರುವುದರಿಂದ, ಹಬಸಿ-ಇಟಲಿ ಕಲಹದ ವಿಚಾರಣೆಗಾಗಿ ಹಿಂದೆ ನೇಮಕವಾದ ಹದಿಮೂರು ಜನರ ಸಮಿತಿ, ಲಂಡನಿನಲ್ಲಿ ಸಭೆ ಸೇರಿ, ಜನಾಂಗ ಮಂಡಳದ ಕ್ರಮಗಳನ್ನನುಸರಿಸಿ, ಇಟಲಿ-ಹಬಸಿ ಸಂಧಿಯನ್ನು ಮಾಡಬೇಕಾಗಿ, ನಿರ್ಧಾರ ಮಾಡಿರುವರೆಂದು ತಿಳಿದುಬರುತ್ತದೆ. ಈ ಸಮಿತಿಯವರು ಸಂಧಿಸೂಚನೆಗಳನ್ನು ಇಕ್ಕಡೆಯವರಿಗೂ ಬೇಗನೆ ಕಳುಹಿಸಿಕೊಡುವರೆಂದು ತಿಳಿದುಬರುತ್ತದೆ.

ಬರುವ ವಾರ

ಮಿಥ್ಯಾಜೀವನದ ಸತ್ಯಕಥೆಗಳು:

೧೦. "ಕುಲದೀಪಕ"

ಓದಲು ಮರೆಯಬೇಡಿ!

ಗೊಡ್ರೆಜರ ಖ್ಯಾತಸಿದ್ಧವಾದ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊಡ್ರೆಜ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರರು ಕೊಂಡಾಡಿರುದನ್ನು ಕೇಳಿ ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನುಗಳನ್ನು ಆರ್ಡರು ಮಾಡಲು ಪ್ರಕ್ರಮಿಸಿದರು

ಗೊಡ್ರೆಜ್

ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ ಆಫ್ ಕಾಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸಪರಿಮೆಂಟಲ್ ಕೆಮಿಸ್ಟ್ರಿ, ಮೈಕೊಸ್ಕೋಪಿ ಎಂಡ್ ಬೆಕ್ಟೀರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಿಗಳಾಗಿರುವ

ಡಾ। ಜಿಫ್ರೆಚ್ಸ್ ಎಂಬವರು:—"ನಾನು ಗೊಡ್ರೆಜ್ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು. ನನ ಅಭಿಪ್ರಾಯದಂತೆ ಅವುಗಳು ಸ್ಟೆಫ್ಲೊಕೊಕಸ್ ಮತ್ತು ಸ್ಟಿಫಿಲೊಕಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ. ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ಕ್ ಎಂಬವರು:—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧೆ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್ಸನ್ ರವರು:—"ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿವೆ" ಎಂದರು

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

ಡಾ। ಎಂ. ಎ. ಅನ್ಸಾರಿ, ಎಂ. ಡಿ. ಎಂ. ಎಸ್. ರವರು:—"ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ. ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ. ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ. ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು.

ಫೆಕ್ಟರಿ:—**ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲೆಸಲ್ ರೋಡ್, ಮುಂಬಾಯಿ

ಸೋಲ್ ಏಜಂಟರು:—**ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

೨೦ ವರ್ಷಗಳ ಅಜೀರ್ಣವು ತತ್ಕ್ಷಣ ಗುಣವಾಯಿತು.

೨೦ ವರ್ಷಗಳ ನೋವು ಸಮೇತವಾದ ಅಜೀರ್ಣವನ್ನು ಸ್ಮರಿಸಿರಿ. ೨೦ ವರ್ಷಗಳ ವರೆಗೆ ನಿದ್ರಾವಿಹೀನತೆ, ಆಗಾಗ್ಗೆ ಅಸ್ವಸ್ಥ-ಅರೆಹೊಟ್ಟೆ.

ಇವುಗಳಿಂದ ತಪ್ಪಿಸಿಕೊಂಡು ಚಿಂತಿಸಿರಿ. ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರಿನಿಂದ ದೊರೆತ ತತ್ಕ್ಷಣ ಗುಣಲಾಭವನ್ನು ಚಿಂತಿಸಿರಿ. ಮಿಸೆಸ್ ಎ ರವರ ಅನುಭವವಿದು—ಅವರ ಪತ್ರವು ಇಲ್ಲಿದೆ. "ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನುಪಯೋಗಿಸಿ ನನಗೆ ದೊರೆತ ಗುಣಲಾಭವೇನೆಂದು ತಿಳಿಸಲಾಶಿಸುತ್ತೇನೆ. ೨೦ ವರ್ಷಗಳ ವರೆಗೆ ನನಗೆ ಅಜೀರ್ಣ ರೋಗಬಾಧೆಯೂ ಎದೆಯ ಸುತ್ತಲು ನೋವೂ ಇದ್ದಿತು. ರಾತ್ರಿಯಲ್ಲಿ ನಿದ್ರಿಸುವುದೆಂದರೇನೆಂದು ನನಗೆ ಗೊತ್ತಿಲ್ಲ. ಬೆಳಗ್ಗಿನ ಕೆಲವು ತಾಸುಗಳಲ್ಲಿ ನಿದ್ರಿಸುತ್ತಿದ್ದೆ. ಆಗಾಗ ಅಸ್ವಸ್ಥ. ನಿಮ್ಮ ಮೆಕಲೀನ ಬ್ರೇಂಡ್ ಸ್ಟೋಮಕ್ ಪೌಡರಿಗೆ ಧನ್ಯವಾದಗಳು. ೨೦ ವರ್ಷಗಳಲ್ಲಿ ಪ್ರಥಮಬಾರಿ ನಿದ್ರೆ ತಿನ್ನದಷ್ಟು ಆಹಾರ ತಿನ್ನಲು ಈಗ ಶಕ್ತನಾಗಿರುವೆ. ಈಗ ನಾನು ನವೀನ ಸ್ತ್ರೀಯಾಗಿದ್ದೇನೆ. ನಿಮ್ಮ ಚೂರ್ಣದಿಂದ ದೊರೆತ ಲಾಭಕ್ಕೆ ಎಷ್ಟು ಉಪಕಾರ ಮಾಡಿದರೂ ಸ್ವಲ್ಪವೇ."

ಈ ಸ್ತ್ರೀಯ ಉದಾಹರಣೆಯನ್ನು ಅನುಸರಿಸಿರಿ. ಆದರೆ ನಿಮ್ಮ ಕೆಮಿಸ್ಟರಿಂದ ನಿಜವಾದ ಮೆಕ್‌ಲೀನ್ ಬ್ರೇಂಡ್ ಚೂರ್ಣ ಸಿಗುವಂತೆ ಎಚ್ಚರವಿರಿ. ಅದರ ಮೇಲೆ ಒಂದು ಕೆಂಪು ಬಿಲ್ಲೆಯಿದೆ.

Alex. C. Maclean

ಎಂಬ ಸಹಿಯೂ ಅಚ್ಚು ಬಿಲ್ಲೆ ಮತ್ತು ಚೀಟಿಗಳ ಮೇಲಿದೆ.

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ತಪ್ಪಿದರೆ ಕೆಳಗಿನವರಿಗೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೩ ಸಂಕುರಾಮು ಚೆಟ್ಟಿ ಸ್ಟ್ರೀಟ್, ಮದ್ರಾಸು,

ಇಲ್ಲಿಗೆ ಬರೆಯಿರಿ.

ಮಾತೃಭೂಮಿಗೆ ತೆರಳಿದರೆ ಸೆರೆಮನೆಯನ್ನು ಸೇರಬೇಕಾಗುವುದು!

ಸ್ಟಾಂಪು ಅಂಟಿಸದೆ ಕಾಗದಗಳನ್ನು ಕಳುಹಿಸಬಹುದು.

ಉಪ್ಪಿನ ಮೇಲಿನ ತೆರಿಗೆಯನ್ನು ರದ್ದುಮಾಡಬೇಕು!

ಅಮೇರಿಕಾದಲ್ಲಿ ಭಯಂಕರ ನೆರೆ!

ಉಪ್ಪಿನ ತೆರಿಗೆಯನ್ನು ರದ್ದುಮಾಡಬೇಕು

ಇದಕ್ಕಿಗೆ ೪೦ ವರ್ಷಗಳಿಂದ ಉಪ್ಪಿನ ತೆರಿಗೆಯನ್ನು ರದ್ದುಪಡಿಸುವ ಪ್ರಯತ್ನಗಳು ನಡೆಯುತ್ತಿದ್ದವು. ಈ ವಿಚಾರದಲ್ಲಿ ಅಸೆಂಬ್ಲಿಯಲ್ಲಿ ಬಂದ ಠರಾವು ಮಂಜೂರಾದುದು ಇದೇ ಪ್ರಥಮ ಬಾರಿ. ಉಪ್ಪಿನ ತೆರಿಗೆಯನ್ನು ರದ್ದು ಮಾಡಬೇಕೆಂದು ತಂದ ಠರಾವು, ಕಳೆದ ವಾರದ ಅಸೆಂಬ್ಲಿ ಅಧಿವೇಶನದಲ್ಲಿ ಬಹುಮತದಿಂದ ಮಂಜೂರಾಗಿರುತ್ತದೆ. ಒಂದು ದಿವಸಕ್ಕೆ ಸರಾಸರಿ ಏಳು ಪಾವಾಣೆಗಳು ಉತ್ಪತ್ತಿಯುಳ್ಳ ಭಾರತೀಯ ಬಡವರಿಗೆ ಈ ತರದ ತೆರಿಗೆಯು ಯೋಗ್ಯವಲ್ಲವೆಂದೂ, ಅನೇಕ ಕಡೆಗಳಲ್ಲಿ ಈಗಿರುವ ಉಪ್ಪು ತಯಾರಿಸುವಿಕೆ ಮೇಲಿರುವ ಸರಕಾರಿ ನಿರ್ಬಂಧಗಳು ತೆಗೆಯಲ್ಪಡಬೇಕೆಂದೂ, ಈ ತೆರಿಗೆಯನ್ನು ರದ್ದುಪಡಿಸುದರಿಂದ ಆಗಿಯಬಹುದಾದ ಕೇಂದ್ರ ಸರಕಾರದ ಉತ್ಪತ್ತಿಯನ್ನು ಸರಕಾರಿ ಉದ್ಯೋಗಸ್ಥರ ಸಂಬಳದಲ್ಲಿ ಶೇಕಡಾ ೧೦ ಸಲೆ ಕಡಿತ ತಂದರೆ ಭರ್ತಿಯಾಗುವುದೆಂದೂ ಅನೇಕ ವಿವಿಧ ಸೂಚನೆಗಳನ್ನು ಕೊಟ್ಟು ಸರಕಾರಿ ಸದಸ್ಯರ ವಾದವನ್ನು ವಿರೋಧಿಸಿ ಭಾಷಣಗಳಾದವು. ಈ ತೆರಿಗೆಯನ್ನು ರದ್ದು ಮಾಡಿದರೆ ಇಂಡಿಯಾ ಸರಕಾರಕ್ಕೆ ರೂ ೮೭೫ ಲಕ್ಷ ನಷ್ಟವಾಗುತ್ತದಂತೆ.

ಸ್ಟಾಂಪು ಅಂಟಿಸದೆ ಕಾಗದಗಳನ್ನು ಕಳುಹಿಸಬಹುದು.

ಅಂಚೆ ಖಾತೆಯ ಮೇಲೆ ದೂರ ಕಳುಹಿಸುವ ಕಾಗದಗಳಿಗೆ ಸ್ಟಾಂಪು ಅಂಟಿಸಬೇಕಾಗಿಲ್ಲ ಎಂದು ಒಂದು ಠರಾವು ಕಳೆದ ವಾರದ ಅಸೆಂಬ್ಲಿ ಅಧಿವೇಶನದಲ್ಲಿ ಬಹುಮತದಿಂದ ಮಂಜೂರಾಗಿರುತ್ತದೆ. ಆದರೆ ಲಕೋಟೆಯನ್ನು ಸಂಪೂರ್ಣ ಬಂದು ಮಾಡಬಾರದಂತೆ. ಅಂಚೆ ಕಾರ್ಡಿನ ದರವನ್ನು ಅರ್ಧಾಣೆಗೆ ಇಳಿಸಬೇಕಾಗಿ ಒಂದು ಠರಾವಿನ ಕುರಿತು ಚರ್ಚೆಯು ನಡೆಯುತ್ತಿರುವಾಗ ಅಸೆಂಬ್ಲಿಯ ಆ ದಿನದ ಸಭೆಯು ಮುಕ್ತಾಯವಾಯಿತು. ಈ ಠರಾವಿನ ವಿಷಯ ಸೋಮವಾರ ದಿನ ಚರ್ಚೆ ನಡೆದು ಅದು ಬಹುಮತದಿಂದ ಮಂಜೂರಾಗಿರುತ್ತದೆ. ಇದರಿಂದ ಅಂಚೆ ಇಲಾಖೆಗೆ ಅರ್ಧ ಕೋಟಿ ರೂಪಾಯಿ ನಷ್ಟವಾಗುವುದೆಂದು ಸರಕಾರಿ ಕೈಗಾರ ಇಲಾಖೆಯ ಸದಸ್ಯರ ವಾದ.

ಮುಂಬಯಿಯಲ್ಲಿ ಭಯಂಕರ ಡಕಾಯಿತಿ

ಈ ತರದ ಡಕಾಯಿತಿಯು ಹೆಚ್ಚಾಗಿ ಅಮೇರಿಕದಲ್ಲಿ ಮಾತ್ರ ನಡೆಯುತ್ತಿದ್ದವು. ಮೊನ್ನೆ ರಾತ್ರಿ ಮುಂಬಯಿಯ ಓರ್ವ ಶ್ರೀಮಂತ ಮಾರವಾಡಿ ಮನೆಯನ್ನು ಒಂದು ತೂತು ಮಾಡಿ ಕೆಲವುಂದಿ ಕಳ್ಳಕಾಕರು ಹೊಕ್ಕು ಕ್ಲೋರೊಫೋರ್ಮ್ ಉಪಯೋಗದಿಂದ ಮಲಗಿದ್ದವರನ್ನು ಪ್ರಜ್ಞೆತಪ್ಪಿಸಿ ತನುಮಧ್ಯೆ ಬೊಬ್ಬಿಟ್ಟ ಓರ್ವ ಮುದುಕನನ್ನು ಮೃತಪಡಿಸಿ ಮನೆಯಲ್ಲಿರುವ ಎಲ್ಲಾ ಆಭರಣ ದ್ರವ್ಯ ಇತ್ಯಾದಿಗಳನ್ನು ಹಿಡಿದು ಪಲಾಯನ ಮಾಡಿರುವರು. ಕ್ಲೋರೊಫೋರ್ಮಿನಿಂದ ಪ್ರಜ್ಞೆತಪ್ಪಿದವರು ಬೆಳಿಗ್ಗೆ ಪ್ರಜ್ಞೆ ಹೊಂದಿದವರಾಗಿ ಈ ಘಟನೆಯನ್ನು ಪೋಲೀಸರಿಗೆ ತಿಳಿಸಿರುವರು. ಪೋಲೀಸರು ಶೋಧೆ ನಡೆಯಿಸುತ್ತಿದ್ದಾರೆ.

ಮಾತೃಭೂಮಿಗೆ ತೆರಳಿದರೆ ಸೆರೆಮನೆ ಸೇರಬೇಕಾಗುವುದು.

ಶ್ರೀ ಸುಭಾಷ್ಚಂದ್ರ ಬೋಸರು ಕಾಂಗ್ರೆಸು ಅಧಿವೇಶನಕ್ಕಾಗಿ ಭರತಖಂಡಕ್ಕೆ ಹಿಂತಿರುಗುವರಾಗಿ ತಿಳಿದಿದ್ದರಷ್ಟೆ. ಈ ವಾರ್ತೆ ಬ್ರಿಟಿಷ ಸರಕಾರದವರ ಕಿವಿಸೇರಲು ಮೊನ್ನೆ ಅವರಿಗೆ ಅವರು ಮಾತೃಭೂಮಿಗೆ ಹೋಗುವುದಾದರೆ ಮುತ್ತೊಮ್ಮೆ ಸೆರೆಮನೆ ಸೇರಬೇಕಾಗುವುದೆಂಬ ಅಭಿಪ್ರಾಯದಿಂದ ಕೂಡಿದ ಪತ್ರ ಬಂದಿರುತ್ತದೆಂದು ವಾರ್ತೆ.

ಅಲಿಗರದಲ್ಲಿ ಮಹಾವ್ಯಕ್ತಿಗಳಿಬ್ಬರ ಆಗಮನ.

ಮೊನ್ನೆ ದಿನ, ವ್ಯಾಸರಾಯರಾದ ಲೋರ್ಡ್ ವಿಲ್ಲಿಂಗ್ಡನ್ನರೂ ಹೈದರಾಬಾದಿನ ನಿಜಾಮರೂ ಅಲಿಗಾರಿನ ವಿಶ್ವವಿದ್ಯಾಲಯವನ್ನು ಸಂದರ್ಶಿಸಿದರು. ಲೋರ್ಡ್ ವಿಲ್ಲಿಂಗ್ಡನ್ನರಿಗೆ ಒಂದು ಗೌರವದ ಬಿರುದು ಕೊಡಲಾಯಿತು. ಈ ಎರಡು ಮಹಾವ್ಯಕ್ತಿಗಳು ವಿಶ್ವವಿದ್ಯಾಲಯವನ್ನು ಸಂದರ್ಶಿಸಿದುದು ೧೯೨೦ರ ನಂತರ ಇದೇ ಪ್ರಥಮ ಬಾರಿಯಂತೆ. ಸಮಾರಂಭವು ಬಹಳ ವೈಭವದಿಂದ ನಡೆಯಿತೆಂದು ತಿಳಿದುಬರುತ್ತದೆ.

ಡಾ। ಮುಂಜೆಯವರ ಬೋನ್ಸ್ಲಾ ಸಂಗ್ರಾಮ ಶಾಲೆ.

ಭಾರತೀಯರನ್ನು ಸಂಗ್ರಾಮಿಕರಾಗಿ ಮಾಡುವ ಉದ್ದೇಶದಿಂದ ಡಾ। ಮುಂಜೆಯವರು ಸೆಂಟ್ರಲ್ ಹಿಂದೂ ಮಿಲಿಟರಿ ಸೊಸೈಟಿ ಎಂಬ ಸಂಘವನ್ನು ಸ್ಥಾಪನೆಮಾಡಿರುವರು. ಇದರ ಆಶ್ರಯದಲ್ಲಿ ಬೋನ್ಸ್ಲಾ ಮಿಲಿಟರಿ ಶಾಲೆ ಎಂಬುದೊಂದು ನಡಿಯುತ್ತದೆ. ಡಾ। ಮುಂಜೆಯವರ ಈ ಕಾರ್ಯಕ್ಕೆ ಮಾಜಿ ಸೇನಾಪತಿಯವರ ಅಭಿಮತವೂ ಇಂಡಿಯಾ ಸರಕಾರದ ಅಭಿಮತವೂ ದೊರಕಿರುತ್ತದೆ. ಈ ಕುರಿತು ಕೆಲದಿವಸಗಳ ಹಿಂದೆ ಅವರು ವೈಸರಾಯರೊಡನೆ ಸಂಭಾಷಣೆ ನಡೆಸಿದ್ದರು. ಮೊನ್ನೆ ಅವರಿಗೆ ವೈಸರಾಯರಿಂದ ಅವರನ್ನು ಈ ಕಾರ್ಯದಲ್ಲಿ ಹಾರೈಸಿ ಒಂದು ಪತ್ರವೂ ೩೫೦೦ ರೂ ಧನಸಹಾಯವೂ ಬಂದಿರುತ್ತದೆಂದು ತಿಳಿದುಬರುತ್ತದೆ. ಭಾರತೀಯರನ್ನು ಸಂಗ್ರಾಮಶೂರರಾಗಿ ಮಾಡುವುದೆ ಡಾ। ಮುಂಜೆಯವರ ಮೇಲಿನ ಸಂಘದ ಉದ್ದೇಶ.

ಕಲ್ಕತ್ತಾ ನಗರಸಭೆಯಲ್ಲಿ ಮುಸ್ಲಿಮರು.

ಕೆಲಸಮಯದ ಹಿಂದೆ ಮುಸ್ಲಿಮರಿಗೆ ನಗರಸಭೆಯ ಉದ್ಯೋಗಗಳಲ್ಲಿ ಪ್ರಾತಿನಿಧ್ಯ ಸಿಕ್ಕುವ ವಿಚಾರದಲ್ಲಿ ಕೆಲವು ಮುಸ್ಲಿಮ ಸದಸ್ಯರು ತಮ್ಮ ಸದಸ್ಯತನಕ್ಕೆ ರಾಜಿನಾಮೆಯಿತ್ತಿದ್ದರು. ಈಗ ಅಲ್ಲಿನ ನಗರಸಭೆಯ ಸದಸ್ಯತನಕ್ಕೆ ಚುನಾವಣೆಯು ನಡೆಯುತ್ತದೆ. ಬಹಳ ಗದ್ದಲವೂ ನಡೆಯುತ್ತದೆ. ಮುಸ್ಲಿಮರು ತಮ್ಮ ಸಲಹೆಗಳಿಗೆ ಯೋಗ್ಯ ಮನ್ನಣೆ ದೊರೆಯದುದರಿಂದ ಚುನಾವಣೆಯಲ್ಲಿ ಭಾಗವಹಿಸದೆ ಅದನ್ನು ಬಹಿಷ್ಕಾರಮಾಡಬೇಕಾಗಿ ನಿರ್ಧಾರಮಾಡಿರುವರು. ಆ ಕುರಿತು ಬಹಳ ಚಳವಳ ನಡೆಯುತ್ತದೆ.

ಮಿಸೆಸ್ ಪಿ. ಕುಸುಮಾ ವಿ. ಥಾಕೂರ್.

ಇವರು ಅಮೇರಿಕದ ಅಯೋವಾ ವಿಶ್ವವಿದ್ಯಾಲಯದಲ್ಲಿ ಮಾಸ್ಟರ್ ಅಫ್ ಎಡ್ಯುಕೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪುನಃ ಸ್ವದೇಶಕ್ಕೆ ಬಂದಿರುವರು.

ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸಭೆ.

ಕಾಂಗ್ರೆಸ್ ಕಾರ್ಯಕಾರಿ ಮಂಡಳವು ಮುಂದಕ್ಕೆ ಲಕ್ನೋದಲ್ಲಿ ಜರಗಲಿರುವ ಕಾಂಗ್ರೆಸಿನಲ್ಲಿ ಆಲೋಚಿಸಬೇಕಾದ ಠರಾವುಗಳನ್ನು ರಚಿಸಲು, ದಿಲ್ಲಿಯಲ್ಲಿ ಸಭೆ ಸೇರಿತು. ಶ್ರೀಗಳಾದ ಜವಾಹರಲಾಲ ನೆಹರು, ಬಾಬೂರಾಜೇಂದ್ರಪ್ರಸಾದ, ಇತ್ಯಾದಿ ಕಾಂಗ್ರೆಸ್ ಮುಖಂಡರು ನೆರೆದಿದ್ದರು. ಇಲ್ಲಿ ಕಾಂಗ್ರೆಸ್ ಕಾರ್ಯಕಾರಿ ಮಂಡಳಕ್ಕೂ, ಕಾಂಗ್ರೆಸ್ ಪಾರ್ಲಿಮೆಂಟರಿ ಸಭೆಯವರಿಗೂ ಅನೇಕ ವಿಚಾರಗಳ ಮೇಲೆ ಚರ್ಚೆ ನಡೆಯಿತು. ನವರಾಜ ಶಾಸನದಲ್ಲಿ ಅಧಿಕಾರ ಸೂತ್ರವನ್ನು ವಹಿಸುವ ವಿಚಾರದಲ್ಲಿ ಲಕ್ನೋ ಕಾಂಗ್ರೆಸಿನಲ್ಲಿ ಇತ್ಯರ್ಥವಾಗಬೇಕೆಂದು ಈ ಸಭೆಯಲ್ಲಿ ಸೂಚನೆಗಳಾಗಿವೆಯೆಂದು ತಿಳಿದುಬರುತ್ತದೆ. ಈ ಕುರಿತಾಗಿ ಸಭೆಯಲ್ಲಿ ಠರಾವುಗಳನ್ನು ಮಾಡುವುದು ಈ ಸಭೆಯ ಉದ್ದೇಶವಂತೆ. ಮಹಾತ್ಮಾ ಗಾಂಧಿಯವರು ಈ ಸಭೆಯಲ್ಲಿ ಭಾಗವಹಿಸಲಿಲ್ಲ. ಅನೇಕ ಭೇದಾಭಿಪ್ರಾಯಗಳಿದ್ದರೂ, ನವರಾಜ ಶಾಸನದ ಅಧಿಕಾರಸೂತ್ರವನ್ನು ವಹಿಸುವ ವಿಚಾರ ದೃಢವಾದ ನಿರ್ಣಯಗಳಾಗುವುವೆಂದು ತಿಳಿದುಬರುತ್ತದೆ.

ಅಂಚೆದರಗಳಲ್ಲಿ ಬದಲಾವಣೆಗಳು.

ವರ್ತಮಾನ ಪತ್ರಗಳಿಗೆ ಕಾಲಾಣೆ ದರಕ್ಕೆ ಈಗಿರುವ ೬ ತೊಲೆ ತೂಕವನ್ನು ೧೦ ತೊಲೆಗೆ ಏರಿಸಬೇಕೆಂದು ಎಸೆಂಬ್ಲಿಯಲ್ಲಿ ತಂದ ಠರಾವು ಬಹುಮತದಿಂದ ಮಂಜೂರಾಯಿತು. ಇದರಿಂದ ಅಂಚೆ ಇಲಾಖೆಗೆ ರೂ ೬೪,೦೦೦ ನಷ್ಟವಾಗಬಹುದೆಂದು ಅಂಚೆಖಾತೆಯ ಮುಖ್ಯಾಧಿಕಾರಿಗಳಾದ ಶ್ರೀ ಬೆವೂರ್ರರವರು ವಾದಿಸಿದರು. ಬುಕ್ ಪೋಸ್ಟಿನ ವಿಚಾರದಲ್ಲಿ,—೨½ ತೊಲೆ ಭಾರದ ಪಕೇಟಿಗೆ ಅರ್ಧಾಣೆ ದರವಿರಿಸಬೇಕಾಗಿಯೂ, ೫ ತೊಲೆಗೆ ಮಿಕ್ಕಿದ ಪಕೇಟುಗಳಿಗೆ ೯ ಪೈ ದರವಿಧಿಸಬೇಕೆಂದೂ ತಂದ ಠರಾವು ಮಂಜೂರಾಗದೆ ಬಿದ್ದುಹೋಯಿತು.

ಮೋಟಾರ್ ಬಸ್ಸುಗಳ ಮೇಲಿನ ತೆರಿಗೆಯು ಹೆಚ್ಚಿಸಲ್ಪಡಯಿತು

ಈಗ ಸೀಟು ಒಂದರ ರೂ ೬-೮-೦ ಇರುವ ಮೋಟಾರು ಬಸ್ಸುಗಳ ತೆರಿಗೆಯನ್ನು ೮-೧೨-೦ಕ್ಕೆ ಏರಿಸಲಾಯಿತು. ಜಿಲ್ಲಾ ಬೋರ್ಡುಗಳಿಗೆ ಟೋಲು ಗೇಟುಗಳನ್ನು ರದ್ದುಮಾಡಿದುದರಿಂದ ಉಂಟಾದ ನಷ್ಟವನ್ನು ಭರ್ತಿ ಮಾಡಲು ಇದನ್ನು ಏರಿಸಿರುವರಾಗಿ ತಿಳಿದುಬರುತ್ತದೆ.

ಕಾಂಗ್ರೆಸ್ಸಿಗೆ ಪ್ರತಿನಿಧಿಗಳು

ಈ ಬಾರಿ ಲಕ್ನೋದಲ್ಲಿ ಜರಗಲಿರುವ ಕಾಂಗ್ರೆಸ್ಸಿಗೆ ೬೦೦ ಮಂದಿ ಪ್ರತಿನಿಧಿಗಳು ಬರುವರಾಗಿ ತಿಳಿದುಬರುತ್ತದೆ. ಬಂಗಾಳದ ಕಾಂಗ್ರೆಸು ಕಲಹವು ಇನ್ನೂ ನಿವಾರಣೆಯಾಗದಿರುವುದರಿಂದ, ಇಲ್ಲಿನ ಪ್ರಾತಿನಿಧ್ಯ ಕುರಿತು ಇನ್ನೂ ನಿರ್ಧಾರಗಳಾಗಲಿಲ್ಲ. ಮುಂಬಯಿಯಲ್ಲೂ ಈ ತರದ ಕಲಹವುಂಟಾಗಿತ್ತು. ಆದರೆ ಅದು ನಿವಾರಣೆಯಾಗುವುದಾಗಿ ತಿಳಿದುಬರುತ್ತದೆ. ತಮಿಳುನಾಡು, ಆಂಧ್ರದೇಶ ಸಂಯುಕ್ತಪ್ರಾಂತ್ಯಗಳು, ಬಿಹಾರ ಗುಜರಾತು ಈ ಪ್ರಾಂತ್ಯಗಳಿಂದ ಹೆಚ್ಚು ಪ್ರತಿನಿಧಿಗಳು ಬರುವವರಾಗಿ ತಿಳಿದುಬರುತ್ತದೆ. ಕಾಂಗ್ರೆಸ್ಸಿನಲ್ಲಿ ಆಗಬೇಕಾದ ಯಾವತ್ತು ನಿರ್ಧಾರಗಳು ಈ ಪ್ರಾಂತ್ಯಗಳ ಮೇಲೆ ಹೊಂದಿವೆ. ಈ ಬಾರಿಯ ಕಾಂಗ್ರೆಸಿನಲ್ಲಿ ಎಲ್ಲರೂ ಐಕ್ಯದಿಂದ ಕಾರ್ಯ ನಡೆಯಿಸುವರಾಗಿ ಕೆಲ ಸದಸ್ಯರು ಭರವಸೆಕೊಟ್ಟಿರುವರಾಗಿ ತಿಳಿದುಬರುತ್ತದೆ.

ಕಾಂಗ್ರೆಸ್ಸು ಅಧಿಕಾರಸೂತ್ರವನ್ನು ವಹಿಸಬಾರದು.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿದ ನವರಾಜಶಾಸನ ಖಂಡನಾ ಪರಿಷತ್ತಿನಲ್ಲಿ ಕಾಂಗ್ರೆಸ್ ನವರಾಜಶಾಸನ ಅಡಿಯಲ್ಲಿ ಅಧಿಕಾರಸೂತ್ರವನ್ನು ವಹಿಸಬಾರದಾಗಿ ಠರಾವಾಗಿರುತ್ತದೆ. ಹೀಗೆ ನವರಾಜ ಶಾಸನವನ್ನು ಖಂಡಿಸಿ ಅದರಲ್ಲಿ ಅಧಿಕಾರಸೂತ್ರವನ್ನು ವಹಿಸಿದರೆ ಬ್ರಿಟಿಷರೊಡನೆ ಸಹಕರಿಸಿದಂತಾಗುವುದೆಂದೂ ಕೆಲವೆಡೆಗಳಲ್ಲಿ ನವರಾಜ ಶಾಸನ ನಿಷೇಧ ಪರಿಷತ್ತುಗಳ ಬದಲಾಗಿ ಠರಾವುಗಳಾಗಿವೆ. ಮತ್ತೊಂದು ಪಕ್ಷವು ಕಾಂಗ್ರೆಸು ಅಧಿಕಾರಸೂತ್ರವನ್ನು ವಹಿಸಿ ನವರಾಜಶಾಸನವು ಕಾರ್ಯಗೊಳಿಸಲು ತಡೆಗಳನ್ನು ಉಂಟುಮಾಡಿ ಅದರಿಂದ ಸರಕಾರವು ತನ್ನ ನೀತಿಯನ್ನು ಬದಲಾಯಿಸುವಂತೆ ಸಾಧಿಸಬೇಕೆಂದು ಅಭಿಪ್ರಾಯಪಡುವ ಠರಾವುಗಳಾಗಿವೆ.

ಅಮೇರಿಕದಲ್ಲಿ ಭಯಂಕರ ನೆರೆ.

ಸಂಯುಕ್ತ ಅಮೇರಿಕದ ರಾಜಧಾನಿಯಾದ ನ್ಯೂಯೋರ್ಕಿನಲ್ಲಿ ಭಯಂಕರ ನೆರೆ ಬಂದು ೧೫೦ ಮಂದಿಗಳು ಮೃತರಾಗಿರುವರು. ಅನೇಕರು ಗಾಯಹೊಂದಿರುವರು. ಮಾತ್ರವಲ್ಲದೆ ಈ ನೆರೆಯಿಂದ ಮಿಲಿಯ ಡಾಲ್ಲರುಗಳು ನಷ್ಟವಾಗಿದೆಯೆಂದು ತಿಳಿದುಬರುತ್ತದೆ. ಅಲ್ಲಿನ ಓಹಿಯೋ ನದಿಯ ಅಣೆಕಟ್ಟು ಒಡೆದುಹೋದ್ದರಿಂದ ನೆರೆಯು ಸಂಭವಿಸಿತ್ತೆಂದು ತಿಳಿದುಬರುತ್ತದೆ. ನೆರೆಯಿಂದ ಕಷ್ಟಪಟ್ಟವರಿಗೆ ಸರಕಾರದಿಂದ ದ್ರವ್ಯಸಹಾಯಮಾಡುವ ಏರ್ಪಾಡಾಗಿದೆ.

ಹಳ್ಳಿಗಳಲ್ಲಿ ಟಪ್ಪಾಲು ಅಫೀಸುಗಳು.

ಹಳ್ಳಿಗಳಿಗಾಗಿ, ಗತ ವರ್ಷದಲ್ಲಿ ೩೧೪ ಟಪ್ಪಾಲು ಅಫೀಸುಗಳು ತೆರೆಯಲ್ಪಟ್ಟವೆ. ಮದ್ರಾಸು ಸಂಸ್ಥಾನದಲ್ಲಿ ೪೪ ಟಪ್ಪಾಲು ಅಫೀಸುಗಳು ತೆರೆಯಲ್ಪಟ್ಟವೆ.

ಕವಿರವೀಂದ್ರರಿಗೆ ಬಿನ್ನಪ ಕೊಡಬಾರದು.

ಕವಿ ರವೀಂದ್ರರು ದಿಲ್ಲಿಗೆ ಬಂದಾಗ್ಗೆ ಅವರಿಗೆ ಯೋಗ್ಯ ರೀತಿಯಲ್ಲಿ ಸ್ವಾಗತೀಕರಿಸಬೇಕೆಂದೂ, ಅವರಿಗೆ ಒಂದು ಬಿನ್ನಪವನ್ನು ಅರ್ಪಿಸಬೇಕೆಂದೂ ನಗರ ಸಭೆಯ ಓರ್ವ ಸದಸ್ಯರು ಠರಾವನ್ನು ಮುಂದೆ ತಂದಿದ್ದರು. ನಗರಸಭೆಯ ಅಧ್ಯಕ್ಷರು ಇದನ್ನು ತಿರಸ್ಕರಿಸಿದ್ದಾರೆಂದು ತಿಳಿದು ಬರುತ್ತದೆ. ಇವರು ಈ ರೀತಿಯಲ್ಲಿ ವರ್ತಿಸಲು ಕಾರಣವೇನೆಂದು ಹಲವು ಸದಸ್ಯರು ಕೇಳುವರು.

ಬ್ರಿಟಿಷ ಸರಕಾರದ ಬಾಹ್ಯವ್ಯವಹಾರದ ಮಂತ್ರಿಗಳಾದ

ಮಿ। ಎಂತೋನಿ ಏಡೆನ್ನರವರು.

ಹರಿಜನಸೇವಕ ಸಂಘ

ಅಖಿಲ ಭಾರತ ಹರಿಜನ ಸೇವಾ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯೊಂದು ಶ್ರೀ ಬಿರ್ಲಾರವರ ಅಧ್ಯಕ್ಷತೆಯಲ್ಲಿ ನವದಿಲ್ಲಿಯಲ್ಲಿ ಜರಗಿತು. ಹರಿಜನ ಸೇವೆಗಾಗಿ ಕುಟ್ಟೀಕಿನಲ್ಲಿ ಒಂದು ಉದ್ಯೋಗಿಕ ಶಾಲೆಯನ್ನು ಸ್ಥಾಪಿಸಬೇಕೆಂದೂ ಅಸ್ಸಾಮಿನಲ್ಲಿ ಹರಿಜನ ಸೇವಾಕಾರ್ಯಕ್ಕಾಗಿ ರೂ ೪೨೬೩ ವ್ಯಯಿಸಬೇಕೆಂದೂ ರೂ ೫೦೦ನ್ನು ಲಾಹೋರಿನ ಒಂದು ಹರಿಜನ ಸಂಸ್ಥೆಗೆ ಕೊಡಬೇಕೆಂದೂ, ಅಸ್ಪೃಶ್ಯತಾನಿವಾರಣೆಗಾಗಿ ನಾಲ್ ಪೋಸ್ಟರುಗಳನ್ನು ಮುದ್ರಿಸಲು ರೂ ೧೦೦೦ವನ್ನು ವ್ಯಯಿಸಬೇಕಾಗಿಯೂ ಮೈಸೂರಿನಲ್ಲಿ ಆರು ತಿಂಗಳ ಸಮಯದಲ್ಲಿ ೫೦ ಹರಿಜನ ಭಜನಮಂದಿರಗಳನ್ನು ಕಟ್ಟಿಸಬೇಕೆಂದೂ ಇವೇ ಮೊದಲಾದ ಹರಿಜನಸೇವೆಯ ಕುರಿತಾದ ಠರಾವುಗಳು ಮಂಜೂರಾದವು.

ಶ್ರೀ ಸುಭಾಷ್ಚಂದ್ರ ಭೋಸರ ಕುರಿತು ಎಸೆಂಬ್ಲಿಯಲ್ಲಿ ಚರ್ಚೆ.

ಶ್ರೀ ಸುಭಾಷ್ಚಂದ್ರ ಭೋಸರು ಹಿಂದೂದೇಶಕ್ಕೆ ಕಾಲಿಟ್ಟರೆ ಅವರನ್ನು ಸೆರೆಹಿಡಿಯಲಾಗುವುದೆಂದು ಇಂಡಿಯಾ ಸರಕಾರವು ನಿರ್ಧಾರಮಾಡಿದ ವಿಚಾರದಲ್ಲಿ, ಸರಕಾರವನ್ನು ಖಂಡಿಸಿ ಒಂದು ಠರಾವು ಎಸೆಂಬ್ಲಿಯಲ್ಲಿ ಬಂದು ಶ್ರೀ ಭೋಸರ ಮೇಲೆ ಚರ್ಚೆ ನಡೆದು ಬಹುಮತದಿಂದ ಮಂಜೂರಾಗಿರುತ್ತದೆ. ಶ್ರೀಯುತರು ಕ್ರಾಂತಿಕಾರಿಯ ಚಳವಳಕ್ಕೊಳಗಾದವರೆಂದು ಸರಕಾರದ ವಾದ. ಆದರೂ ಸುಭಾಷ್ಚಂದ್ರಭೋಸರು ಸ್ವದೇಶಕ್ಕೆ ಹೊರಡುವರೆಂದು ತಿಳಿದುಬರುತ್ತದೆ. ಸರಕಾರದ ಈ ನಿರ್ಧಾರದಿಂದ ಬಂಗಾಳದಲ್ಲಿ ಬಹಳ ಕೋಲಾಹಲವು ಉಂಟಾಗಿರುತ್ತದೆಂದು ತಿಳಿದುಬರುತ್ತದೆ.

ಹಿಂದೂದೇಶದ ಹೊರಗೆ ಸಲ್ಲುವ ತಲಬು.

ಗತಿಸಿದ ವರ್ಷದಲ್ಲಿ ಇಂಡಿಯಾ ಸರಕಾರದವರು ರೂ. ೩.೭೫ ಕೋಟಿಯನ್ನು ಹಿಂದೂದೇಶದ ಹೊರಗೆ ಸಲ್ಲಬೇಕಾದ ತಲಬಿಗಾಗಿ ವ್ಯಯಿಸಿದೆ. ಪೆನ್ಶನು ರೂಪದಿಂದ ಇಂಡಿಯಾ ಸರಕಾರವು ರೂ ೪ ಕೋಟಿಯನ್ನು ಹಿಂದೂದೇಶದ ಹೊರಗೆ ವ್ಯಯಿಸುತ್ತದೆ.

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA——AND——MANGALORE.

ನವರತ್ನ ದ್ರಾಕ್ಷಾಸವ, ನರಗಳಿಗೆ ಬಲವನ್ನು ಕೊಟ್ಟು, ಕೆಮ್ಮು, ಕ್ಷಯ ಸೂತಿಕಾ ವಾಯುಗಳನ್ನು ಖಂಡಿಸಿ, ಮಲಬದ್ಧವನ್ನೂ ಅಜೀರ್ಣವನ್ನೂ ಪರಿಹಾರಮಾಡುವ ಟಾನಿಕ್ಕು.

24 ಔನ್ಸ್ ರೂ. 2   16 ಔನ್ಸ್ ರೂ. 1-8-0   8 ಔನ್ಸ್ ರೂ. 0-14-0

ನವರತ್ನ ಅಶೋಕಾರಿಷ್ಟ: ಸ್ತ್ರೀಯರ ವಿವಿಧ ಗರ್ಭಾಶಯ ವ್ಯಾಧಿಗಳನ್ನು ಗುಣಪಡಿಸಿ ಉಷ್ಣಕಾರಕದಿಂದ ಉಂಟಾಗುವ ಎಲ್ಲಾ ವ್ಯಾಧಿಗಳನ್ನು ನಿರ್ಮೂಲಿಸುತ್ತದೆ.

ಅಯೊಡೈಸ್ಡ್ ಸರ್ಸಪರಿಲ್ಲಾ: ಉತ್ತಮವಾದ ರಕ್ತಶೋಧಕ ವೀರ್ಯವರ್ಧಕ ಔಷಧಿ, ಚರ್ಮವ್ಯಾಧಿಗಳಲ್ಲಿಯೂ, ಮೇಹವ್ಯಾಧಿಗಳಲ್ಲಿಯೂ, ತೀವ್ರ ಗುಣಕಾರಿ.

4 ಔನ್ಸ್ ರೂ. 1-0-0   8 ಔನ್ಸ್ ರೂ. 1-8-0.

ದಕ್ಷಿಣ ಕನ್ನಡದ ಏಜಂಟರು — ಪ್ರೊವಿನ್ಶಿಯಲ್ ಸ್ಟೋರ್ಸ್, ಮಂಗಳೂರು.

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿ ವಾರಪತ್ರಿಕೆಯಲ್ಲೇ ಕೊಡಿರಿ.

ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ

ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು

Motor Accessories Of Approved Manufacture Always in Stock.

Exide Batteries Uncharged	Rs. 20-0-0
Fully Charged	Rs. 24-0-0
Genuine Lockheed Hydraulic Brake fluid Quart tins factory Sealed	Rs. 2-12-0
Genuine Lockheed " locally filled	Rs. 2-4-0

All Hydraulic Brake parts held in stock and available at Bombay Prices less 5% discount.

Chevrolet Springs of approved American Make available at less than Bombay Prices

Brake liners, Automobile lamp bulbs, Bronze bushings and bars, Bolts and Nuts of S. A. E. threads, Special tools, Drilling Machines, Spanner sets of all types.

An Enquiry with us will save you money

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು, ಮಂಗಳೂರು.

The Canara Public Conveyance Company Ltd., Kodialbail, Mangalore.

ನಾವು ಸ್ವಾತಂತ್ರ್ಯಾರ್ಹರೇ?

ಬಡೆಕಿಲ ಕೃಷ್ಣಭಟ್, ಮಂಗಳೂರು.

[illegible] ಪ್ರಶ್ನೆಗಳು, ಹಿಂದೀಯರು ಸ್ವಾತಂತ್ರ್ಯಾರ್ಹರೇ ಎಂಬುದರ ವಿಚಾರದಲ್ಲಿ ಎಳುಗುತ್ತಾರೆ. ನಾವು ಅರ್ಹರೋ ಅಥವಾ ಅನರ್ಹರೋ ಎಂಬುದಿನ್ನೂ ನಿರ್ಣಯಕ್ಕೆ ಬಂದಿಲ್ಲ—[illegible] ನಿರ್ಣಯಿಸಲ್ಪಡುವ ವಿಚಾರವಲ್ಲವೆಂಬುದೂ [illegible] ತಿಳಿದುಬಂದಿದೆ. ಒಂದು ವೇಳೆ, ಇತರ ಜನಾಂಗದವರು ನಾವು ಸ್ವಾತಂತ್ರ್ಯ ಸುಖವನ್ನು ಹೊಂದಲು ಅರ್ಹರು ಎಂದು ತಿಳಿಯಪಡಿಸಿದರೂ ಆಳರಸರು ಅವರ ವಿಚಾರವನ್ನು ಅಲ್ಲಗಳೆಯುವರೇ ವಿನಹ ಅಂಗೀಕರಿಸ[illegible]. ಯಾವುದಕ್ಕಾಗಿ ಸಾವಿರಾರು ಜನರು ಕ್ರಮಪ[illegible]ಯಾದ ಉದಾತ್ತ ವಿಚಾರಕ್ಕಾಗಿ ಅಸಂಖ್ಯಾತ ಜನರು [illegible]ವನ್ನು ಧಾರೆಯೆರೆದರೋ ಅದನ್ನು ಅವರು [illegible]. ನಾವು ಸೆಳೆಕೊಂಡ ವಿನಹ ಸಿಗುವ [illegible]ವಿಲ್ಲ.

ಜಾತಿಯಲ್ಲಿ, ನೀತಿಯಲ್ಲಿ, ಸಂಬಂಧನೆಗಳಲ್ಲಿ ತಮ್ಮ [illegible]ನಾಂಗದ ಒಂದು ಭಾಗವೇ ಆದ ಆಯರ್ಲೆಂಡ್ ದೇಶ[illegible]ವರು ತಮ್ಮ ಜನ್ಮಸಿದ್ಧ ಹಕ್ಕನ್ನು ಕೊಡಬೇಕೆಂದು [illegible]ಳಲು, ಹೋರೆದಾಡಲು, ಆಳ್ವರು ತೋರಿಸಿದ ಉಬ್ಬಾ[illegible]ತನ; ವೇದ್ಯಪಡಿಸಿದ ಕಟುಕತನ, ಕೊಟ್ಟ ಶಿಕ್ಷೆಯನ್ನು [illegible]ದಿದ್ದಲ್ಲಿ, ಪ್ರತಿಯೊಂದು ರೀತಿಯಲ್ಲಿ ಪರರೇ ಆಗಿ[illegible]ವ ಈ ಭಾರತಮಾತೆಯ ಬಡಮಕ್ಕಳ ಪಾಲಿಗೆ ಬೀಳ[illegible]ದಾದ ಪಂಚಾಮೃತವನ್ನು ಊಹಿಸಲು ಸಾಧ್ಯವಿದೆ.

ಹಿಂದೂ ಮುಸಲ್ಮಾನರೊಳಗಿನ ಕಚ್ಚಾಟ, ವೈಮನಸ್ಸು[illegible] ಕುರಿತು ರಾಜಕಾರಣ ಧುರೀಣರು ಟೀಕಿಸುತ್ತಿರು[illegible]. ಹಿಂದೀಯರ ಅಸಬಾಧ್ಯತೆಗೆ ಜಾತಿಭೇದವೇ [illegible]ರಣವೆಂದು ಹೇಳುತ್ತಾರೆ. ಅದು ವಾಸ್ತವಿಕ ವಿಷ[illegible]ವೇ? ಅನ್ಯದೇಶಿಗರು ಹೇಳುವವನ್ನು ನಿಶ್ಚಯ ಸ್ವೀಕ[illegible] ಹಿಂದೂದೇಶದಲ್ಲಿರುವ ಮತ ಮತ್ಸರತೆ ಮುಚ್ಚಿಲ್ಲ. ಆ[illegible]ತಿಯಲ್ಲಿದೆ, ಈ ಅವಸ್ಥೆಯಲ್ಲಿವೆ ಎಂಬವುಗಳು ಬರಿ[illegible] ಬಣ್ಣದ ಮಾತುಗಳು ಮಾತ್ರವಲ್ಲ. ಅರಸಿನ [illegible]ಬಂಡಿಗೆಯ ಕೀಳಗಡಿಂದ ಪೀಡಿತರಾದವರ ದೃಷ್ಟಿ[illegible]ಕ್ಕೆ ಬೀಳತಕ್ಕ ಅರ್ಥಚಿತ್ರವೇ ಸರಿ. ಜಗತ್ತಿನ ಇತರ [illegible]ನಾಂಗಗಳು, ನಮ್ಮಲ್ಲಿ ಬೇರೂರಿ ಬೆಳೆದ ಕೆಟ್ಟ ಅಸ್ಪೃ[illegible]ತೆ ಸಮೇತ ಮೂಲೆಗೊತ್ತಲ್ಪಡಬೇಕಾದ ಮತಭೇ[illegible]ದ ಕುರಿತು ನಿಷ್ಠೂರ ತೆಗಳಲಿ. ಭಾರತೀಯರೊಳ[illegible]ಗೆ ಕಾರಣವೆಂದು ಜಗತ್ತಿನ ವಿವಿಧ ಮುತ್ಸದ್ದಿಗಳು [illegible]ರುತ್ತಿರಲಿ. ಇದರಿಂದಾಗಿ ದೇಶದಲ್ಲುಂಟಾದ, ಅನಾ[illegible]ಚಾರ, ಕ್ರಾಂತಿ, ಕ್ಷೋಭೆ, ವಿರೋಧ ಮತದವರೊಡನೆ [illegible]ಡೆದುಬಂದ ಮಾರಾಮಾರಿ ಇವುಗಳನ್ನು ಎಷ್ಟೇ ಕ್ರೂರ[illegible]ತೆಯಿಂದ ಕಾಣುತ್ತಿರಲಿ, ತರತರದ ಬಣ್ಣಗಳಿಂದ ಚಿತ್ರಿ[illegible]ಸುತ್ತಿರಲಿ. ನವ್ಯೊಂದು ಹಟವನ್ನು ಸಾಧಿಸೋಣ. ಮತ[illegible]ಭೇದವು ಈಗಿನ್ನೂ ಕಠಿಣಾವಸ್ಥೆಯಲ್ಲಿದ್ದರೂ, ಎಷ್ಟೇ [illegible]ಕ್ಕಸ್ಥಾವಸ್ಥೆಯನ್ನು ಮುಟ್ಟಿದ್ದರೂ, ಎಷ್ಟೇ ಕೆಟ್ಟ ಕೆಲಸ[illegible]ಗೆ ಮನುಷ್ಯನನ್ನು ಅದು ಮುಟ್ಟಿದೆಯಾದರೂ ಪ್ರಕೃ[illegible]ತದ ನಮ್ಮ ಪರಿಸ್ಥಿತಿಯು ಸುಧಾರಿತ ನಾಗರೀಕತೆಯ [illegible]ತ್ತ ತುದಿಯನ್ನೇರಿದ ಐರೋಪ್ಯ ಖಂಡದ ದೇಶಗಳ[illegible]ಗಿಂತ ಸಾವಿರ ಪಾಲಿಗೆ ಶಾಂತವೂ ಸೌಮ್ಯವೂ, ಸರಳವೂ, ಪರಸ್ಪರ ಅನುಕೂಲ ಯುಕ್ತವೂ ಆಗಿದೆ ಎಂದು.

ಮತವನ್ನೇ ಹೇತುವನ್ನಾಗಿಟ್ಟುಕೊಂಡು ನಾಗರೀಕ ದೇಶಗಳೆಂದು ಕರೆಯಿಸಿಕೊಳ್ಳುವ ದೇಶಗಳೆಷ್ಟು—ಅನಾಥರ ಮೇಲೆ ಅನ್ಯಾಯವನ್ನೆಸಗಿಲ್ಲ? ಅಧರ್ಮದ ಕಾರ್ಯಗಳನ್ನು ಮಾಡಿಲ್ಲ? ಅನೌಚಿತ್ಯ ಕೆಲಸಗಳು, ಕಟುಕತನವನ್ನು ವೇದ್ಯಪಡಿಸುವ ಕೃತ್ಯಗಳು, ಬಡವರ ರಕ್ತದ ಕಾಲುವೆಗಳನ್ನೇ ಹರಿಸಿದ ಪುಸ್ತಕಗಳು ಓದಿದವರ ಅದೆಷ್ಟು ಕಂಡು ಬರುವುದಿಲ್ಲ? ಇಂತಹ ಕಾರ್ಯಗಳು ಅದೆಷ್ಟು ನಾಡುಗಳ ಪ್ರಕಾಶಮಾನವಾದ ಚರಿತ್ರೆಯಲ್ಲಿ ಒಡೆದು ಕಾಣಸುವುದಿಲ್ಲ. ಈ ಹತ್ಯಾ ಕಾರ್ಯಗಳು ಬೆಳ್ಳಗಿನ ಗೋಡೆಯ ಮೇಲಿನ ಮಸಿಯ ಗೆರೆಗಳಂತಿವೆ. ಪರರಾಷ್ಟ್ರಗಳೊಡನೆ ನಮ್ಮದನ್ನು ತುಲನೆ ಮಾಡೋಣ. ಮಾಡಿದ್ದಲ್ಲಿ ಹಿಂದೂದೇಶವು ನಾಗರೀಕತೆಯಲ್ಲಿ ಅವುಗಳಿಂತ ಉನ್ನತವಾದ ದಿನ್ನೆಯಲ್ಲಿದೆ, ಖ್ಯಾತಿಯಲ್ಲಿ ಒಂದು ಮೆಟ್ಟಿಲಾದರೂ ಮೇಲಿಯದೆ, ತನ್ನ ಮಾನಸಿಕತ್ವವನ್ನು ಇನ್ನೂ ಕಳಕೊಂಡಿಲ್ಲವೆಂಬುದು ವೇದ್ಯವಾಗದಿರದು.

'ಇಂಕ್ವಿಸಿಷನ್' 'ಬಾರ್ತಲೋಮ್ಯು' ಇತ್ಯಾದಿ ಪ್ರಸಿದ್ಧಿಗೆ ಬಂದ ಹತ್ಯಾ ಕಾರ್ಯಗಳು ಯಾರ ಪ್ರೇರಣೆಯಿಂದ ಮಾಡಲ್ಪಟ್ಟವು? ಕೆಥೋಲಿಕರಿಗೆ ಕೊಟ್ಟ ಚಿತ್ರಹಿಂಸೆ, ಜ್ಯೂಯಿಶ್ ಜನಾಂಗವನ್ನೇ ಸಂಹರಿಸುವುದಕ್ಕೆ ಅಷ್ಟಿಷ್ಟ ಮುತ್ಸದ್ದಿಗಳ ಬುದ್ಧಿಯು ನಿರ್ವ್ಯಾಜತೆ; ಹುಚ್ಚುತನವನ್ನು ವ್ಯಕ್ತಪಡಿಸುವ ಯುದ್ಧಗಳು, ಪ್ರತಿಫಲವಾಗಿ ಹರಿದ ರಕ್ತದ ಕಾಲುವೆಗಳು ಪಡೆದ ನಮ್ಮ ನಾಡಿನ ಚರಿತ್ರೆಯಲ್ಲಿ ಕಾಣುವುದು ಅಸಾಧ್ಯದ ಮಾತೇ ಆಗಿರುತ್ತದೆ.

ತಮ್ಮ ಮತಕ್ಕಾಗಿ, ಅದರ ಮಹತ್ವವನ್ನು ಸಾರುವುದಕ್ಕಾಗಿ ಕ್ರಿಸ್ತಾನುಯಾಯಿಗಳು ಮಾಡಿದ ಪಾತಕ ಕೃತ್ಯಗಳು ಈ ದುರಭಿಮಾನವನ್ನೇ ಧ್ಯೇಯವನ್ನಾಗಿಟ್ಟುಕೊಂಡು ನ್ಯಾಯ, ಲಿಂಗ ಇನ್ನಾವುಗಳನ್ನೂ ಗಮನಕ್ಕೆ ತಂದುಕೊಳ್ಳದೆ ಮಾಡಿದ ಪತನಗಳು; ಮಾನವತೆಯ ಕಡವನ್ನು ಕಂಪೇರಿಸಿದ ಕೃತ್ಯಗಳು, ಇವುಗಳನ್ನೊಳಗೊಂಡ ಘಟನೆಗಳನ್ನು ಓದುವ ನನಗೆ ಅದೇ ಕಾಲದ ನಮ್ಮ ದೇಶದ ಪ್ರಾಜ್ವಲ್ಯಮಾನವಾದ ಚರಿತ್ರೆಯು ಬಿಡುಗಡೆಯ ಉಸಿರೊಂದನ್ನು ಎಳಕೊಳ್ಳುವುದಕ್ಕೆ ಎಡೆಕೊಡದೆ ಇರಲಾರದು.

ತಮ್ಮವರೇ ತಮ್ಮವರ ಕುತ್ತಿಗೆಯನ್ನು ಕತ್ತರಿಸಲು ದುಷ್ಕೃತರಾದ ವೇಳೆಯಲ್ಲಿ ಕಾಲಿಗೆ ಬುದ್ಧಿ ಹೇಳಿ ಇಲ್ಲಿಗೆ ಬಂದ ಪರಮತಾನುಯಾಯಿಗಳಿಗೆ ಆದರದಿಂದ, ಕರುಣೆಯಿಂದ ಆಶ್ರಯಕೊಟ್ಟ ಸಹಸ್ರಾರು ಸನ್ನಿವೇಶಗಳು ಹಿಂದೂದೇಶದ ಚರಿತ್ರೆಯಲ್ಲಲ್ಲದೆ ಮತ್ತಾವ ನಾಡಿನ ಚರಿತ್ರೆಯಲ್ಲಿ ಕಾಣಬಂದೀತು?

ಎಲ್ಲದರಲ್ಲಿಯೂ ತುತ್ತ ತುದಿಯಲ್ಲಿ ನಾವಿದ್ದೇವೆಂದು ಹೇಳಿಕೊಳ್ಳುತ್ತಿರುವ ಹದಿನೇಳನೇ ಶತಮಾನದ ಇಂಡಿಯಾ ಇಂಗ್ಲೆಂಡು ದೇಶಗಳ ಚರಿತ್ರೆಯನ್ನು ತುಸು ಪರಿಶೀಲಿಸೋಣ. ಪ್ರಜಾ ಸಾಮ್ರಾಜ್ಯದ ಕಾಲವದು ಧೀರ ಕ್ರಾಮವೆಲನ ಕಾಲವದು. ಇಂಥಾ ವೇಳೆಯಲ್ಲಿಯೂ ಕೆಥೋಲಿಕರಿಗೆ ಮತವಿಲ್ಲಯ, ಪದಕೊಳ್ಳುವ, ಪಾರ್ಲಿಮೆಂಟನ್ನು ಪ್ರವೇಶಿಸುವ ಹಕ್ಕಿರಲಿಲ್ಲ. ಅವರನ್ನು ರಕ್ಷಿಸುವ ಭಾರವನ್ನು ಕಾರಭಾರ ಮಾಡುವವರು ವಹಿಸಿಕೊಂಡಿರಲಿಲ್ಲ.

ಸಾಧಾರಣ ಅದೇ ಕಾಲದ ಹಿಂದೂ ದೇಶದ ಚರಿತ್ರೆಯನ್ನು ನೋಡೋಣ. ಸುಪ್ರಸಿದ್ಧ ಅಕಬರನ ಆಳ್ವಿಕೆಯ ಕಾಲವದು. ಜಾತಿಯಲ್ಲಿ ಮೊಗಲನಾದರೂ ಇತರ ಮತಾನುಯಾಯಿಗಳಲ್ಲಿ ತಾನಿರಿಸಿದ್ದ ಭಕ್ತಿ ಮತ್ತು ಸಹನಶೀಲತೆ ವ್ಯಂದ್ಯಾರ್ಹವು. ಪಾರ್ಸೀ ಹಿಂದೂ, ಮುಸಲ್ಮಾನರೆಂಬ ಭೇದವಿಲ್ಲದೆ ತನ್ನ ಆಶ್ರಯವನ್ನು ಕೇಳಿದರೆ ವಿಶ್ವಾಸದಿಂದಿರುತ್ತಿದ್ದ. ತಮ್ಮ ಮನೆ ದೇವರುಗಳನ್ನು ಕಾಪಾಡಿಕೊಂಡು ಬಂದಿರುವುದಕ್ಕೆ ನಾಡಿನ ಮೂಲ ನಿವಾಸಿಗಳಿಗೆ ಬೇರೆ ಮತಗಳವರ ಭಕ್ತಿಯೇ ಕಾರಣ.

ಹಿಂದೂಗಳ ಸಹನಾಶಕ್ತಿಯು ಅಸಾಧಾರಣವಾದುದು. ಕೆಲವು ವೇಳೆ ಕಲಹಗಳು ಎದ್ದುದುಂಟು. ಈ ಕಲಹಗಳಿಗೆ ಜಾತಿಭೇದವು ಕಾರಣವಲ್ಲ. ಧರ್ಮದ ಅಂಧಶ್ರದ್ಧೆಯಿಂದ ಉದ್ಭವಿಸಿದವುಗಳಲ್ಲ. 'ಇಂಕ್ವಿಸಿಶನ್' ಲಿಂಗ ನ್ಯಾಯ ಭೇದವನ್ನು ಮನಸ್ಸಿಗೆ ತಂದುಕೊಳ್ಳದೆ ಮಾಡಿದ ಕೊಲೆ ಸುಲಿಗೆ ಮಾನಸೂರೆಗಳು ಅಂಧಶ್ರದ್ಧೆಯ ಪರಿಣಾಮಗಳು. ಪರರು ಮತಗಳನ್ನು ತಾತ್ಸಾರದೃಷ್ಟಿಯಿಂದ ಕಾಣುವುದೇ ಮೂಲ. ಹಿಂದೂದೇಶದ ಮತಾವಲಂಬಿಗಳು ಧರ್ಮವನ್ನು ಧ್ಯೇಯವನ್ನಾಗಿಟ್ಟುಕೊಂಡು ಯುದ್ಧಸನ್ನದ್ಧರಾಗಲಿಲ್ಲ. ನಾವು ಹೂಡಿರುವ ರಾಜ್ಯಗಳಲ್ಲಿ ನಿರತರಾದ, ಅಗ್ನಿದೇವನ ಪೂಜೆಯಲ್ಲಿ ತಲ್ಲೀನರಾದ ಧರ್ಮದಲ್ಲಿ ಶ್ರದ್ಧೆಯುಳ್ಳ ಪಾರಸೀಯರು ತೊಂದರೆಯಿಲ್ಲದೆ ಜೀವನ ಸಾಗಿಸುತ್ತಿರುವುದನ್ನು ನೀವು ಕಾಣುವಿರಿ. ತಾಯ್ನಾಡಾದ ಇರಾನ್ ದೇಶದಲ್ಲಿ, ಎಂದು ನಮ್ಮ ಕುಲದ ನಾಮಾವಶೇಷವಾಗಿ ಹೋಗುವುದೋ ಅಗ್ನಿದೇವನ ಶಕ್ತಿಮಾಲಿನ್ಯತೆಯನ್ನು ಹೊಂದುವುದೋ ಎಂದು ಸತತಚಿಂತಿಸುತ್ತಿರುವ ಇವರಿಗೆ ಪರದೇಶವಾದ ಹಿಂದೂದೇಶದಲ್ಲಿ ಆ ಭಯವಿಂದಿಲ್ಲ.

ಹಿಂದಿನ ಶತಮಾನದ ಅವಧಿಯೊಳಗಾಗಿ ಎದ್ದ ರಾಜ್ಯಗಳ ಭೂತಲವಾಯಿಯಾದ ರಾಷ್ಟ್ರಗಳಲ್ಲಿ ಉಂಟಾದ ರಾಜಕೀಯ ಹಾಗೂ ವಾಸ್ತವಿಕ ಬದಲಾವಣೆಗಳ ಸಂದರ್ಭಗಳಲ್ಲಿ ಅದರ ಲೀನವಾಗದಿರುವಿಕೆಯು ಎಕ್ಸ್ ಕೈ ವಿಪುಲ ಭಾರತದ ಸಹನಾಶಕ್ತಿಯನ್ನು ಸಾರುವುದು. ಈ ದೀರ್ಘ ಅವಧಿಯಲ್ಲಿ ಪರಮತಗಳೊಡನೆ ಅದು ಬೆರೆತುಹೋಗದಿರುವ. ಯಾವ ಕಾಲದಲ್ಲಿ ಕೆಥೋಲಿಕರಿಗೆ ಮತವೀವ ಯೋಗ್ಯತೆಯಿರಲಿಲ್ಲವೋ; ಪಾರ್ಲಿಮೆಂಟನ್ನು ಹೋಗುವ ಸ್ವಾತಂತ್ರ್ಯವು ಇರಲಿಲ್ಲವೋ ಆ ಕಾಲದಲ್ಲಿ ಹಿಂದೂದೇಶದಲ್ಲಿ ಇತರ ಮತಾವಲಂಬಿಗಳಿಗೆ ಉತ್ತಮ ಪದವಿ, ರಾಜನಿಂದ ರಕ್ಷಣೆ ದೇಶದ ಹಕ್ಕು ಸಿಗುತ್ತಿತ್ತು. ಇಂಥಾ ಸ್ವರ್ಣಭೂಮಿಯಲ್ಲಿ ಕಾಣಬರುವ ಮತಭೇದದ ಕುರಿತು ಟೀಕಿಸುವುದನ್ನು ಕಂಡರೆ ಆಶ್ಚರ್ಯಗೊಳಿಸುವ ಮಾತು ಹಾಗಿರಲಿ, ಬುದ್ಧಿಯ ನಿರ್ವಿಕಾಸತೆಗಾಗಿ ನಗು ಬಂದೀತು.

ಆಗಿ ಹೋದವುಗಳ ಮಾತು ಹಾಗಿರಲಿ. ನಮ್ಮ ಕಣ್ಣೆದುರಲ್ಲೇ ರಾಜ್ಯಗಳಲ್ಲಿ ಏನೆಲ್ಲ ಅನಾಹುತಗಳು ಆಗಿ ಹೋಗಿಲ್ಲ? ಅವುಗಳು ಸ್ಮೃತಿ ಪಥದಿಂದ ಮಾಸಿಹೋಗರಲಾರವು. ತನ್ನ ಸುತ್ತಮುತ್ತಲಿನ ದೇಶಗಳಲ್ಲಿ ಜಾತಿಭೇದದ ದೆಸೆಯಿಂದಾಗಿ ಆ ನೀತಿಯ ವ್ಯವಹಾರಗಳು ಅಧಿಕವಾಗುತ್ತಿರುವ ಹೊತ್ತಿನಲ್ಲಿ ಹಿಂದೂದೇಶವಂಥ ಶಾಂತಸ್ಥಿತಿಯಲ್ಲಿತ್ತು. ಅದರ ಪಶ್ಚಿಮ ಕರಾವಳಿಯಲ್ಲಿಯ ವಿಜಯನಗರ ಪಟ್ಟಣದಲ್ಲಿ, ನಿತ್ಯ ಕರ್ಮಗಳನ್ನು ಪಡೆದುಕೊಳ್ಳುವ ಎಕ್ಸ್‌ಟೆನ್ಶನ್ ರಾಜಕೀಯ ವಾತಾವರಣದಲ್ಲಿ ಉಚ್ಚಸ್ಥಾನವನ್ನು ಪಡೆಯುವ ಬದಲು ವಿಳಂಬದಿಂದ ದೇಗುಲ ದೇವತಾರಾಧನೆಯ ಸ್ಥಳಗಳನ್ನು ಧೂಳೀಭೂತಗೊಳಿಸಲು ಇದುವರೆಗಿಂದ ಬಂಧಿಸಲ್ಪಟ್ಟವನಾಗಿಯೇ ಅಲ್ಲದೆ ಧರ್ಮದ ಹಂಬಲದಿಂದ ಪಡೆದ ಅಲ್ಲಾ ವುದ್ದೀನ ಆಲಮಗೀರ, ಮಹಮ್ಮದರಂಥ ವ್ಯಕ್ತಿಗಳು ರಾಷ್ಟ್ರದ ಚರಿತ್ರೆಯಲ್ಲಿ ಕಾಣಬರುತ್ತಾರೆ. ಅವರ ಮಾತು ಹಾಗಿರಲಿ. ಅವರು ಗಂಧದ ತೋಟದಲ್ಲಿ ಬೆಳೆದ ಕಾಸರ್ಕನ ಮರಗಳು. ಆ ಕಾಲದಲ್ಲಿ ಮಸೀದಿಗಳ ಬದಿಯಲ್ಲಿಯೇ ಕಟ್ಟಲ್ಪಟ್ಟ ದೇಗುಲಗಳೆಷ್ಟು ನವ್ಯ ಕಣ್ಣ್ಮನಗಳಿಗಾನಂದವನ್ನುಂಟುಮಾಡುವುದಿಲ್ಲ. ಜಗದ್ವಿಖ್ಯಾತ ಟಿಪ್ಪೂನ ಕೈವಶವಿದ್ದ ಶ್ರೀರಂಗಪಟ್ಟಣದ ಕೋಟೆಯ ಸನೀಯದಲ್ಲಿ ಅಪೂರ್ವ ಕಲೆಯಿಂದ ಶೋಭಿಸುತ್ತಿರುವ ಹಳೆಯ ದೇಗುಲವೊಂದು ಈಗಲೂ ಕಾಣಬರುತ್ತದೆ. ವಿವಿಧ ಮತಗಳೊಡನೆ ಶರೀರ ಸಂಬಂಧವು ಆಗುತ್ತಿತ್ತು. ಇತರ ಮತಾವಲಂಬಿಗಳಿಗೆ ರಾಜ್ಯಭಾರದ ನಿರ್ವಾಹಕರ ಕೆಲಸದಲ್ಲಿ ಪ್ರಧಾನಸ್ಥಾನವು ದೊರಕುತ್ತಿತ್ತು.

"ಮತಭೇದವೆಂಬುದು ಜಗತ್ತು ಜನತೆಗುಣಿಸಿದ ಆಭರಣ" ಎಂಬ ರಷ್ಯಾದವರ ಮಾತು ಅಕ್ಷರಶಃ ನಿಜವಿರುತ್ತದೆ/ ವಿಶಾಲ ಜಗತ್ತಿನಲ್ಲಿ ಅಶಾಂತಿಗೆ ಜನಾಂಗಗಳಿಗೆ ಆಶ್ರಯವಾಗಿರುವ ಮಸೀದಿ ದೇವಸ್ಥಾನ ಚರ್ಚುಗಳಲ್ಲಿರುವ ಸ್ವಾಸ್ಥ್ಯಪಾಪ ಸ್ತಂಭಗಳಿಂದ ಶೋಭಾಯಮಾನವಾಗಿರುವ ದೇಶವಿರುವುದೊಂದು ಆ ದೇಶ ಹಿಂದೂದೇಶ.

ಮತಭೇದವು ತೋರುಗುವುದಕ್ಕೆ ನಮ್ಮಲ್ಲಿ ಒಗ್ಗಟ್ಟು ಉಂಟಾಗುವುದಕ್ಕೆ ವಿದೇಶೀ ನೀತಿಯ ಸವಿದಾರರ ನೀಚ ಉಪಾಯಕ್ಕೆ ಸುಧಾರಕರು ಕಾರಣಭೂತರಂತೆ! ಸತ್ಯಾಂಶವೆಷ್ಟು? ನಾಡಿನ ಜನರಲ್ಲಿದ್ದ ಹುಟ್ಟುಗುಣವದು! ಬೆಳೆದು ಬೇಕೆಂದಿಗೆ ತಂದ ತೊಡುವೆ ದು! ಹಾಗೆ ಮುತ್ಸದ್ದಿಗಳಿಂದ ಮಹಾರಾಣಿಯವರ ಜನನವಾಗುವುದಕ್ಕೆ ಸಾವಿರ ವರ್ಷ ಮೊದಲಿನಲ್ಲಿ ಪಾಪವಾಗಿದ್ದರಿಂದ ಬಂದ ಶಕ್ತಿಯದು.

ಆಯರ್ಲೆಂಡಿನ ಕ್ಷೋಭೆ, ಅಲ್ಲಿನ ಪಿನೇಲುಕೋಡಿನ ಒಂದು ವರ್ಣನೆಯನ್ನು ನೀವು ಕೇಳಿರಬಹುದು. ಓದಿರಬಹುದು. "ನಾನು ಅಲ್‌ಸ್ಟರನ್ನ (Ulster) ಸ್ವಾಧೀನಪಡಿಸಿದೆನು" ಎಂದು ಚೆಕ್ಸರ್ ಟನ್ನನು ಹೆಮ್ಮೆಯಿಂದ ಹೇಳುತ್ತಾನೆ. ಸ್ಥಾಪಿಸಿದ ವಿಧಾನವನ್ನು ನಿರ್ನಾಮ ಮಾಡಿದೆನು. ನ್ಯಾಯ ಲಿಂಗ ಭೇದಗಳನ್ನು ಗಮನಕ್ಕೆ ತಾರದೆ ಸಿಕ್ಕಿದವರನ್ನು ಕೊಂದೆ. ಕೆಲವರನ್ನು ಸುಟ್ಟೆ. ಹೆಚ್ಚೇನು? ಎಲ್ಲರನ್ನೂ ಎಲ್ಲವನ್ನು ಸುಟ್ಟು ಧ್ವಂಸಮಾಡಿದೆವು" ಮೇಲೆ ಹೇಳಿದ ತೆರನಾದ ದುಷ್ಕರ್ಮದ ಸಂಕೀರ್ತನೆಯ ನಮ್ಮ ನಾಡಿಗರು ಹಾಗಿರಲಿ. ಅನಾಗರಿಕರಿಂದೂ, ಜ್ಞಾನಶೂನ್ಯರಿಂದೂ ಕರೆಯಿಸಿಕೊಳ್ಳಲ್ಪಡುವ ಮೃಗ ಸದೃಶ್ಯರಾದ ಆಫ್ರಿಕದ ನಿವಾಸಿಗಳೂ ಮಾಡಿರಲಿಕ್ಕಿಲ್ಲ. ನಾಗರೀಕತೆಗೆ ಕಾರಣರಾದ, ಕರುಣಾಕರಪಡಿಂದ ಏಸುಕ್ರಿಸ್ತನ ಅನುಯಾಯಿಗಳಾದ ಆಯರ್ಲೆಂಡ್ ದೇಶದ ಸಂಖ್ಯಾಬಾಹುಳ್ಯರಿಗೆ ಹೀಗೆ ಮಾಡಿದರೆಂದಮೇಲೆ ಇನ್ನೇನು ಸರಿಯು? ಬೇಲಿ ಎದ್ದು ಹೊಲ ಮೇದರೆ ಕೇಳುವವರಾರು? ಸಣ್ಣದರಲ್ಲಿ ಹೇಳುವುದಾದರೆ ಜಗತ್ತಿನ ಇತರ ರಾಷ್ಟ್ರಗಳಿಗಿಂತ ಧರ್ಮದ ಹೆಸರಿನಲ್ಲಿ ಅಧರ್ಮದ ಕಾರ್ಯಗಳು ನಡೆದುದು ತೀರಾ ಕಡಿಮೆ.

ಈಗಿನ ರಾಜಕಾರಣ ಪಟುಗಳು ಸಾರ್ವಭೌಮತೆ ಸಮಸ್ಯೆಗೆ ನೇರವಿದವರು. ಅವರ ಮಾತುಗಳೊಳ ನೀರಿನಲ್ಲಿ ಎಳೆದ ಗೆರೆಗಳು. ಹಿಡಿದ ಕೋಳಿಗೆ ಮೂರು ಕಾಲು ಮೂರೆಂಟು ಹುಚ್ಚು ವಾದಿಗಳು ತಮ್ಮ ಹಿತವನ್ನು ಸಾಧಿಸುವುದೇ ಅವರ ಧ್ಯೇಯ! ಮತಭೇದದ ಆರೋಪವನ್ನು ಹೊರಿಸಿದ್ದು ತಪ್ಪು; ನಾವು ಮಳಲ ಮೇಲೆ ಮನೆ ಕಟ್ಟಿದ್ದೇವೆ ಎಂಬುದು ಅವರಿಗೆ ತಿಳಿದಿದೆ, ಒಪ್ಪಿಕೊಳ್ಳಲು ಮನಸ್ಸು ಬಿಡುವುದಿಲ್ಲ. ಸ್ವಾತಂತ್ರ್ಯ ಸುಖವನ್ನನುಭೋಗಿಸುತ್ತಿರುವ ದೇಶಗಳಲ್ಲಿ ಮತಭೇದವಿದೆ. ಮತದ ಹೆಸರಲ್ಲಿ ಅಸಂಖ್ಯಾತ ಅನ್ಯಾಯಗಳು ಆಗುತ್ತಿವೆ ಎಂಬುದವರಿಗೆ ತಿಳಿದುಬಂದಿದೆ.

ನಾವು ಸ್ವಾತಂತ್ರ್ಯ ಸುಖವನ್ನು ಹೊಂದಲು ಬಾಧ್ಯರೆಂಬುದು ನಿರ್ವಿವಾದದ ಮಾತೇ ಸರಿ. ನಿರಕ್ಷರ ಕುಕ್ಷಿಗಳು ಹೆಚ್ಚು ಮಂದಿ ಇದ್ದಾರೆ ಎಂಬುದು ಎರಡನೇ ಆರೋಪ. ನೂರೈವತ್ತು ವರ್ಷಗಳ ಅವಧಿಯಲ್ಲಿ ವಿದ್ಯಾಪ್ರಚಾರವನ್ನು ಅವರಿಗೆ ಮಾಡಲಾಗಲಿಲ್ಲವೆಂಬರೆ ಸ್ವಾತಂತ್ರ್ಯವು ನಮ್ಮಲ್ಲಿದ್ದರೆ ಅವಿದ್ಯಾವಂತ ಬಂಧುಗಳನ್ನು ಬರೇ ಹದಿನೈದು ವರ್ಷಗಳಲ್ಲಿ ವಿದ್ಯಾವಂತರನ್ನಾಗಿ ಮಾಡಲು ಸಾಧ್ಯವಿದೆ ಅದು ಸಾಧ್ಯವಿದೆ ಎಂದು ರಷ್ಯಾವು ಸಾರಿ ಹೇಳಿದೆ. ನಿದರ್ಶನಕ್ಕೆ ತಂದುಕೊಟ್ಟಿದೆ.

ಕೋಂಗ್ರೆಸಿನಂತಹ ಉತ್ತಮ ಸಭೆಯನ್ನು ಅಥವಾ ಸಂಸ್ಥೆಯನ್ನು ವಿನಾಶಕ್ಕರು ಬೇರೆ ದೇಶದ ಚರಿತ್ರೆಗಳಲ್ಲಿ ತೋರಿಸಿ ಕೊಡಲಾರರೇ! ಈ ಸಂಸ್ಥೆ ಎಷ್ಟು ಸ್ಥಳಗಳಲ್ಲಿ ತನ್ನ ಶಕ್ತಿಯನ್ನು ಹರಡದಿಟ್ಟಿಲ್ಲ? ದೇಹ ದಾರ್ಢ್ಯತೆಯಲ್ಲಿ ಮೊದಲಿಗರಾದ ಪಂಜಾಬಿಗಳು, ಕಾರ್ಯತತ್ಪರರಾದ ಗುಜರಾಥಿಗಳು, ಸೂಕ್ಷ್ಮಮತಿಗಳೂ ವಿನಯಗ್ರಹಣಶಕ್ತಿಯುತರೂ ಆದ ಬಂಗಾಳಿಗಳು, ಶೀಘ್ರಕೋಪಿಗಳೂ ಸರಳರೂ ಆದ ದಕ್ಷಿಣದೇಶಿಗರು, ಸ್ವಿನೀರ ಸ್ವಭಾವಗಳುಳ್ಳ ಸಿಕ್ಕರು.—ಹೆಚ್ಚೇನು?—ವಿವಿಧ ಗುಣಗಳ ಗುಂಪನಿವುಳ್ಳ, ಬುದ್ಧಿಶಕ್ತಿಯ ಸಮ್ಮಿಳನವುಳ್ಳ, ಮನಸ್ಸಿನ ವಿಚಿತ್ರವಿಚಾರಗಳ ಸಂಘಟನೆಯುಳ್ಳ, ಮಿದುಳಿನ ವೈವಿಧ್ಯತೆಯ ಸಂಕಲನವುಳ್ಳ—ಹೆಚ್ಚೇನು? ನೂರಾರು ಮೈಲುಗಳ ಅಂತರದಿಂದಾಗಿ ದೂರಿಸಲ್ಪಟ್ಟ ವಿವಿಧ ಜಾತಿಯ ವಿಭವಿಧ ಬುದ್ಧಿಶಕ್ತಿಯ, ತರತರದ ಗ್ರಹಣಶಕ್ತಿಯ ಜನರು ರಾಷ್ಟ್ರೀಯದ ನೆಲದಲ್ಲಿ ವಿಶ್ರಾಂತಿಹೊಂದುತ್ತಿದ್ದಾರೆ. ಇದಕ್ಕಿಂತಲೂ ಸೋಜಿಗದ ಸುದ್ದಿ ಇನ್ನೊಂದಿದೆಯೇ? ಅಸಂಖ್ಯಾತ ಎಣ್ಣೆಗಳ ಜಾಗವನ್ನು ಅದು ಆಂಕೆಯೊಳಗಿಟ್ಟು. ಈ ವಿಸ್ತಾರ ಜಾಗದಲ್ಲಿ ಸಶಸ್ತ್ರವಾದ ಸೈನಿಕ ನೆಚ್ಚಲಿಲ್ಲ. ರಷ್ಯಾ ಮೊದಲಾದ ದೇಶಗಳಲ್ಲಿ ಹೀಗೆ ಕ್ರಾಂತಿಯ ಉದ್ಭವವಾಗಲಿಲ್ಲ. ಸ್ವಾತಂತ್ರ್ಯವನ್ನು ಪಡೆಯಲು ಈ ಕೆಲವು ಆಟಗಳನ್ನು ಅವರು ಹೂಡಿಲ್ಲ. ಕಾಂಗ್ರೆಸು ಸಭೆಯು ಉನ್ನತ ದಿನ್ನೆಯ ಮೇಲಿದೆ. ಜಗತ್ತಿನ ಇತರ ಕ್ರಾಂತಿಯ ಕಟಗಳು, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸಂಘಗಳು ಪಶ್ಚಾಗಳಿಂತ ಕಾದಿ ಇಷ್ಟಾರ್ಥವನ್ನು ಕಡೆಗಾಣಿಸಿಕೊಡುವವು. ನಿಶಸ್ತ್ರರು ನಾವು ಯಾವ ಆಯುಧಗಳೂ ನಮ್ಮಲ್ಲಿಲ್ಲ. ಹಿಂದೂದೇಶವು ದೇಹಶಕ್ತಿಯನ್ನು ನಂಬಿಕೊಂಡಿಲ್ಲ. ಮಾನಸಿಕ ಮಹತ್ವತೆಯ ಬೆಂಬಲವನ್ನು ನಂಬಿಕೊಂಡಿದೆ. ಜಗತ್ತಿನ ಚರಿತ್ರೆಯಲ್ಲಿ ಇಂತಹ ಅದ್ಭುತ ಯುದ್ಧವೊಂದು ಆಗಲಿಲ್ಲ—ಆಗಲಿಕ್ಕು ಇಲ್ಲ.

ಇಂಥಾ ಶಕ್ತಿ ಸಹನಾಶಕ್ತಿಯನ್ನು ಪಡಕೊಂಡಿರುವ ಭಾರತೀಯರು ಸ್ವಾತಂತ್ರ್ಯಸುಖವನ್ನು ಹೊಂದಲು ಅನಬಾಧ್ಯರೆಂತಾಗುವರು?

ಬೆಂಗಳೂರು

ಬೆಂಗಳೂರಲ್ಲಿ, ಬೇಸಿಗೆಯ ರಜಾಕಾಲದಲ್ಲಿ ನಡೆವ ಅಖಿಲ ಹಿಂದೂದೇಶದ ವಸ್ತುಪ್ರದರ್ಶನದಲ್ಲಿ ಮೈಸೂರು ಟಪ್ಪಾಲು ಇಲಾಖೆಯವರು ತಮ್ಮ ಕೆಲಸಗಳ ಪ್ರದರ್ಶನವೊಂದನ್ನು ಮಾಡಲಿರುವರಂತೆ. ಅಲ್ಲದೆ ಬೆಡ್ ಮಿಂಟನ್, ಟೇಬಲ್ ಟೆನ್ನಿಸ್ ಕೇರಂ ಮೊದಲಾದ ಪಂದ್ಯಾಟಗಳೂ ಈ ಪ್ರದರ್ಶನದ ಸಮಯದಲ್ಲಿ ಆಗಲಿವೆಯಂತೆ.

TYPEWRITING

ಯಾವತ್ತೂ ಪತ್ರವ್ಯವಹಾರ ಅರ್ಜಿ ವಗೈರೆಗಳನ್ನು ಟೈಪರೈಟ್ ಮಾಡಿಕೊಡುವೆವು ಹೊಸ ಮೆಶಿನ್ ದರ ಅತಿ ಕಡಿಮೆ

ಬಂಗ್ರೆ ರಘುನಾಥ ಶ್ಯಾನುಭೋಗ್,
ಮೋಡರ್ನ್ ಕಮರ್ಶಿಯಲ್ ಹೌಸ್, ಫೆಲಿಕ್ಸ್‌ಪೈ ಬಿಲ್ಡಿಂಗ್ ಮಿಶನ್ ಕಾಂಪೌಂಡ ಬಳಿ, ಹಂಪನಕಟ್ಟೆ, ಮಂಗಳೂರು

'ಸ್ವದೇಶಾಭಿಮಾನಿ'
ವಾರಪತ್ರಿಕೆಗೆ
ಇಂದೇ ಚಂದಾದಾರರಾಗಿರಿ

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳ.

- ಮೃಧ್ವಿಕಾಸವ - (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
- ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
- ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
- ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
- ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
- ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ ದ. ಕನ್ನಡ.



Distributors for South Kanara:—

Raghavendra Ranga Pai Car Street, Mangalore.

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ. / ಅಜ್ಜಿ ಕಥೆಗಳು (ಸಚಿತ್ರ.)

ಚರಿತ್ರೆ ಮತ್ತು ಕಥೆಗಳು.	ರೂ.	ಆ.	ಪೈ.	ಸಾಮಾನ್ಯ ವಿಜ್ಞಾನ.	ರೂ.	ಆ.	ಪೈ.	ಅಜ್ಜಿ ಕಥೆಗಳು
								ಮೂರು ಕರಡಿಗಳು.
				ಎರಡನೇ ದರ್ಜೆ	0	8	0	ಹೇನು ಸತ್ತು ಕಾಗೆ ಬಡವಾಯಿತು.
ನಾಲ್ಕನೇ ದರ್ಜೆ	0	6	0	ಮೂರನೇ ,,	0	8	0	ಮೊಲನ ಕಾಳಪ್ಪ.
ಮೂರನೇ ,,	0	4	6	ನಾಲ್ಕನೇ ,,	0	6	0	ಅರ್ಗಣೆ ಮುದ್ದೆ.
ಎರಡನೇ ,,	0	4	0	ಐದನೇ ,,	0	5	0	ಇಲಿಗಳ ಥಕ್ಕ ಥೈ.
ಸಮಾಜಶಾಸ್ತ್ರ.								ಅಂಗಳ ದುಗ್ಗ.
ಐದನೇ ದರ್ಜೆ	0	3	0					ಗುಡುಗುಡು ಗುಮ್ಮಟ ದೇವರು.
ನಾಲ್ಕನೇ ,,	0	3	0	ಆರನೇ ದರ್ಜೆ	0	4	0	ಒಡ್ಡನ ಓಟ.
ಮೂರನೇ ,,	0	2	6	ಏಳನೇ ,,	0	5	0	
				ಎಂಟನೇ ,,	0	6	0	(ಇವುಗಳ ಕ್ರಯ: 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸೋಸಿಯೋಲೋಜಿ' ಅಥವಾ 'ಸಮಾಜಶಾಸ್ತ್ರ'—ಕ್ರಯ ರೂ. 1.

☞ ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

ಶಾರದಾ ಛಾಪಖಾನೆ, ಮಂಗಳೂರು.

ಕಾಫಿ ಎಸ್ಟೇಟುಗಳಿಗೆ

ಬೇಕಾಗಿರುವ

ಚಕ್ರೋಲು,

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆಗೆ

ಬರೆಯಿರಿ,

ಅಥವಾ

ಬನ್ನಿರಿ.

ತಯಾರಾಗಿದೆ!

ಗಾ. ಹಾ. ಎ. ಟ್ರೈನಿಂಗ್ ವಿದ್ಯಾರ್ಥಿಗಳಿಗಾಗಿ

ಸಮಾಜಶಾಸ್ತ್ರ

ಅಥವಾ

ಸೋಸಿಯೋಲೋಜಿ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ ರೂ. 1

ಆರನೇ ದರ್ಜೆಯ ಸಮಾಜಶಾಸ್ತ್ರವು ಇದೀಗಲೇ ಸಿದ್ಧವಾಗಿದೆ. ಇದನ್ನು ಗಣಪತಿರಾಯರ ಪಾಠಪಟ್ಟಿಗನುಸಾರವಾಗಿ ತಯಾರಿಸಲಾಗಿದೆ.

ಏಳನೇ ಮತ್ತು ಎಂಟನೇ ದರ್ಜೆಗಳ ಸಮಾಜಶಾಸ್ತ್ರವು ಮಾರಾಟಕ್ಕೆ ಸಿದ್ಧವಿದೆ.

ಆರು, ಏಳು ಮತ್ತು ಎಂಟನೇ ತರಗತಿಗಳ ಸಾಮಾನ್ಯವಿಜ್ಞಾನವು ಬೇಗನೇ ಸಿದ್ಧವಾಗುವುದು.

ಇಲ್ಲಿಗೆ ಕೂಡಲೇ ಬರೆಯಿರಿ:

ಮೆನೇಜರ್,
ಶಾರದಾ ಛಾಪಖಾನೆ,
ಮಂಗಳೂರು.

ರೈಲು ಬಂಡಿಗಳ ಸಮಯ

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9-50	ಸಂಜೆ 4-20
ಮಿಕ್ಸ್ಡ್	,, 5-55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12-45	ಮ. 2-40
ಶಟಲ್	ಸಂಜೆ 5-25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ. 8-25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 3.20	ಸಂಜೆ 6-15

ಚಿಕ್ಕ ಕೈಗಾರಿಕೆಗಳೂ, ಗ್ರಾಮಗಳ ಸುಧಾರಣೆಯೂ, ಬಡತನ ನಿವಾರಣೆಯೂ.

(ಲೇಖಕ:—ಶ್ರೀ ಕೆ. ಶೇಷಪ್ಪ ಕುಡುವ, ಅಧ್ಯಾಪಕ ಉಡುಪಿ)

ಗ ಎತ್ತ ನೋಡಿದತ್ತ ಬಡ ಬೋರೇಗೌಡನು ದಿನಕ್ಕೊಂದು ಬಗೆಯಲ್ಲಿ ಕುಂದುತ್ತ, ನೆಲಕ್ಕಂಟಿ ಹೋಗುತ್ತಿದ್ದಾನೆ. ಬಡತನದ ಬೇಗೆಯು ನಾಡಿನ ನಾಲ್ಕು ದಿಕ್ಕಿನಲ್ಲಿ ಹಬ್ಬಿ ಹೊಗೆಯಾಡುತ್ತಿದೆ.

ಬಡತನವು ರೋಗದ ಆಗರ, ದುಃಖದ ಸಾಗರ, ಅದರಲ್ಲಿಯೇ ಚಿಂತೆಯ ಸೆಲೆ, ಅಲ್ಲಿಯೇ ಕಲೆಯ ಕೊಲೆ, ಅದರಿಂದ ಮೊಗದಲ್ಲಿ ಚೆಲ್ಲಾಟವಾಡುವ ನಗೆಯ ನವಿಲು ಅಡಗಿ, ಅಂತಃಕರಣವನ್ನು ಚೀರಾಡಿಸುವ ದಿಗಿಲು ತಲೆದೋರುವುದು. ಅಹಾ! ಬಡತನದ ಅತ್ಯದ್ಭುತವಾದ ಮಹಿಮೆಯೇ! ಒಮ್ಮೊಮ್ಮೆ ಈ ಬಡತನವು ಎಲ್ಲರಿಗೂ ಬಗ್ಗುವ ಭೀರುತನದಲ್ಲಿ ಮೊದಲಾಗಿ ಯಾರಿಗೂ ಸಗ್ಗದ ಬಂಟತನದಲ್ಲಿ, ಮುಕ್ತಾಯವಾಗುವುದು. ಆಗ ಅದು ಮೆಟ್ಟಲಿಗೊಂದು ವೇಷ—ಅದಕ್ಕೆ ತಕ್ಕ ಆ ವೇಷವನ್ನು ತೋರ್ಪಡಿಸುವುದು

ಮನುಷ್ಯಮಾತ್ರನಿಗೆ ಜೀವನದ ಎಲ್ಲ ಭೂಮಿಕೆಗಳಲ್ಲೂ ಆನಂದದ ಸುಗ್ಗಿಯನ್ನು ಸ್ಸಲು ಅಗತ್ಯವಾದ ಸೊತ್ತುಗಳ ಸ್ವಾಮ್ಯತ್ವವಾಗಲೀ, ಸ್ವಾವಲಂಬನವಾಗಲೀ, ಇದ್ದರೆ ನಿಜವಾಗಿಯೂ ಆತನು ಸ್ವತಂತ್ರನು ಈ ಸ್ವಾವಲಂಬನದಲ್ಲಾತನು ಕೊರತೆಯಾದಷ್ಟೂ ಬಡವನು, ಈ ಕೊರತೆಯಾದ ಅಂಶವನ್ನು ತುಂಬಿಕೊಳ್ಳಲಾತನು ಹೆರರನ್ನು ಹೊಂದಿಕೊಳ್ಳುವನು, ವಂದಿಸುವನು, ಬೇಡುವನು, ಪೊಡಮಡುವನು, ಕಾಡುವನು, ಕೊನೆಗೆ ಹೊಟ್ಟೆ ಸಾಗದಂತಾಗಿ ಕೈಸೀಗದಂತಾದರೆ, ತಾನು ಕಣ್ಣೀರು ಮಿಡಿದು, ಮಡಿಯುವನು, ಇದೀಗ ಬಡತನದ ರುದ್ರದೃಶ್ಯ'' ಎಷ್ಟೋ ವ್ಯಕ್ತಿಗಳು ಈ ಕ್ರೂರ ಬಡತನದ ಬೆಸೆಯಿಂದ ಅನುಭವಿಸಬೇಕಾಗುವ ಸಂಕಷ್ಟಗಳನ್ನು ತಪ್ಪಿಸಿಕೊಳ್ಳುವುದು ಲೇಸೆಂಬುದಾಗಿ ತಮ್ಮ ಸ್ವೇಚ್ಛೆಯಿಂದಲೇ ಯಮಧರ್ಮರಾಯನಿಗೆ ಶರಣಾಗತರಾಗುವರು. ಅನೇಕರು ತಮ್ಮ ಕುಲಗೋತ್ರಗಳನ್ನೆಣಿಸದೆ, ಮತತ್ಯಾಗ, ವಿಷಪಾನಾದಿಗಳಿಂದ ದೇಹತ್ಯಾಗ, ಅದಕ್ಕಾಗಿ ಸ್ತ್ರೀಯರು ಆಚರಿಸುತ್ತಿರುವ ದೇಹವಿಕ್ರಯ, ಜೂಜು, ಕಳವು, ಅನ್ಯರ ಮನೆಮಾರು ದಹಿಸುವಿಕೆ, ಹುಚ್ಚು ಪ್ರಮಾದ, ನೆಂಟರಿಷ್ಟರ ಕಲಹ, ಪತಿಪತ್ನಿಯರ ಕಲಹ, ಧರ್ಮದ್ರೋಹ, ಮಿತ್ರದ್ರೋಹ, ಗುರುದ್ರೋಹ, ದೈವದ್ರೋಹ, ರಾಜದ್ರೋಹ, ಇವೇ ಮೊದಲಾದ ಅನೇಕಾನೇಕ ಸಂಕಷ್ಟಗಳಲ್ಲಿ ನರಳುತ್ತಿರುವರು ಇಂತಹ ವಿಪರ್ಯಾಸದ ಪರಮಾವಧಿಯನ್ನವಲಂಬಿಸಲು ಆ ಬಡತನದ ಪರಮಾಪ್ತಸ್ನೇಹಿತನಾದ ಅವಿವೇಕನೆಂಬ ವೀರನೇ ಕಾರಣೀಭೂತನಾಗಿರುವನು

ನಮ್ಮ ಮಾತೃಭೂಮಿಗಿಂದು ಈ ತೆರನಾದ ಬಡತನವು ಏಕೆ ಪ್ರಾಪ್ತವಾಗಬೇಕು? ನಮ್ಮನ್ನು ಸದಾಪೀಡಿಸುವ ಆ ದುರ್ಭಿಕ್ಷವು ಯಾವ ಕಡೆಯಿಂದ ಮೊಳೆಯಿತು? ವಿಚಾರಮಾಡುವುದಾದರೆ, ನಾವು ಹಿತಾಹಿತ ಪರಿಜ್ಞಾನ ಉಳ್ಳವರಾಗಿದ್ದರೆ, ಮೈಗಳ್ಳತನವು ನಮ್ಮಲ್ಲಿ ಅಡಕವಾಗಿಲ್ಲದಿದ್ದರೆ, ಸ್ವಾವಲಂಬನದ 'ರಹಸ್ಯವನ್ನು ಅರಿತವರಾಗಿದ್ದರೆ, ಕಾಯಕಷ್ಟದ ಮೇಲೆ ಅಭಿಮಾನ ಉಳ್ಳವರಾಗಿದ್ದರೆ, ಸ್ವಾತಂತ್ರ್ಯಾಭಿಮಾನಿಗಳಾದರೆ, ದೇಶಪ್ರೇಮಿಗಳಾದರೆ, ನಮ್ಮಲ್ಲಿಯ ಬಡತನವು ಈ ತೆರನಾಗಿ ರುದ್ರರೂಪವನ್ನು ತಾಳುತ್ತಿದ್ದಿಲ್ಲ! ನಮ್ಮ ಬಡತನದ ಪರಿಸ್ಥಿತಿಯನ್ನು ಇದೇ ರೀತಿಯಲ್ಲಿ ಕೆಲಕಾಲ ಬೆಳೆಯ ಬಿಟ್ಟರೆ, ಈಗಾಗಲೇ ಕಟ್ಟು ಸಡಲಾಗಿ ಕುಪ್ಪಳಿಸುತ್ತಿರುವ ನಮ್ಮ ಸಮಾಜವು ಎಂತಹ ಕೋಲಾಹಲದಲ್ಲಿ ಕಾಲಿಕ್ಕುವುದೋ ಹೇಳಲಾಸಲ! ಆದೆ ಪ್ರಯುಕ್ತ ಆ ಬಡತನವೆಂಬ ನೀಚ ಪಿಶಾಚಿಯನ್ನು ನಾವು ಯಾವ ಬಗೆಯಲ್ಲಿ ಹೊಡೆದೋಡಿಸಬಹುದೆಂದು ತುಸು ವಿಚಾರಿಸಬೇಕಾಗುವುದು.

ನಮ್ಮನ್ನು ಸದಾ ಪೀಡಿಸುವ ಆ ಬಡತನಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ವಿಶೇಷ ವೆಚ್ಚತಗಲುವ ಸರಕಾರದ ಧೋರಣೆಯೇ ಈ ಬಡತನಕ್ಕೊಂದು ಕಾರಣವೆಂದು ಹೇಳಬಹುದು. ವರ್ಷವರ್ಷವೂ ಈ ವೆಚ್ಚವು ತೀವ್ರಗತಿಯಿಂದ ವೃದ್ಧಿಯನ್ನು ತಾಳುತ್ತಿದೆ ವೆಚ್ಚವು ಈ ಬಗೆಯಲ್ಲಿ ವೃದ್ಧಿಯನ್ನು ತಾಳುವ ಸಮಯದಲ್ಲಿ ಯಾವ ಸರಕಾರಕ್ಕಾದರೂ ತೆರಿಗೆಗಳನ್ನು ಕಮ್ಮಿ ಮಾಡಲು ಸಾಧ್ಯವಿಲ್ಲ ನಮಗೆ ಬರುವ ನವರಾಜ ಶಾಸನವು ವರ್ಷ ಒಂದರ ಲರಿಂದ ೧೦ ಕೋಟಿ ರೂಪಾಯಿಗಳ ವೆಚ್ಚವನ್ನು ವಿಧಿಸುವುದು ಸಾಗುವಳಿ ವೃತ್ತಿಯನ್ನವಲಂಬಿಸಿ, ತಮ್ಮ ಜೀವನವನ್ನು ನಿರ್ವಹಿಸುವವರಿಗೆ ಇನ್ನಿತರ ಬೇರೆ ಸಹಾಯಕ ಉದ್ಯಮಗಳಿಲ್ಲದಿರುವುದೇ ಈ ಬಡತನಕ್ಕೆ ಮತ್ತೊಂದು ಕಾರಣವಾಗಿದೆ ನಮ್ಮ ಹಿಂದೂದೇಶದ ಶೇಕಡಾ 90ರಷ್ಟು ಜನರು ಹಳ್ಳಿಗಳಲ್ಲಿ ವಾಸಮಾಡುವವರಾಗಿಯೂ, ಇವರಲ್ಲಿ ಮುಕ್ಕಾಲು ಪಾಲು ಜನರು ಕೃಷಿ ವೃತ್ತಿಯನ್ನವಲಂಬಿಸಿ ತಮ್ಮ ಜೀವನವನ್ನು ನಿರ್ವಹಿಸತಕ್ಕವರು ಹಿಂದಿನ ಕಾಲದಲ್ಲಿ ಭೂದರೋ, ನಮ್ಮ ಗ್ರಾಮಸ್ಥರಲ್ಲಿ ಸ್ವಲ್ಪವಾದರೂ ಹಣವನ್ನು ಗಳಿಸುವ ಕೆಲವು ಬಗೆಯ ಕೈಗಾರಿಕೆಗಳು ವಾಡಿಕೆಯಲ್ಲಿದ್ದುವೆಂದು ಹೇಳಬಹುದು ಅವರು ಈ ತೆರದ ಚಿಕ್ಕ ದೊಡ್ಡ ಕೈಗಾರಿಕೆಗಳಿಂದ ಸಂಪಾದಿಸಿದ ಧನದಿಂದ ತಮಗೆ ಬಂದೊದಗಿದ ಕೆಲವು ತರದ ಅನುವಕ್ಕಗಳನ್ನು ಸುಧಾರಿಸಿಕೊಳ್ಳುತ್ತಿದ್ದರು ಆದರೆ ಇಂದು ಮಾತ್ರ ಹಳ್ಳಿಗಳಲ್ಲಿ ಬಡ ಒಕ್ಕಲಿಗರಿಗೆ ದಿಕ್ಕೇ ತೋರದಂತಾಗಿದೆ ಅವರ ಸಂಕಷ್ಟಗಳು ದಿನೇ ದಿನೇ ವೃದ್ಧಿ ಹೊಂದುತ್ತಲಿವೆ ಇಂದಿನ ಗ್ರಾಮಗಳೆಂದರೆ, ನರಕ ಸಮಾನವಾಗಿ, ಎತ್ತ ನೋಡಿದರೂ ರೋಗಗ್ರಸ್ತಶರೀರಗಳಾದ ಜೀವಚ್ಛವಗಳಂತಿರಾದ ಚೈತನ್ಯ ಶೂನ್ಯರಾದ ನಷ್ಟಾನಂದರಾದ ಮೋರೆಯಲ್ಲಿ ಮೃತ್ಯುಛಾಯೆ ಬಿದ್ದಂತೆ ಭಾಸವಾಗುವ ಬಡ ಒಕ್ಕಲಿಗರೇ ತೋರಿಬರುವರು ಅವರಿಗೆ ತಮ್ಮ ಕರ್ತವ್ಯವೇನು? ಯಾವ ಕಾರ್ಯಗಳನ್ನು ಸಾಧಿಸಿದರೆ ತಮ್ಮ ಸಂಕಷ್ಟಗಳು ನಿವಾರಣೆಯಾಗಬಹುದು? ಎಂಬ ವಿಷಯಗಳ ಎಳ್ಳಷ್ಟೂ ಅರಿವಿಲ್ಲದಂತಾಗಿದೆ ಅಂದಮೇಲೆ "ಜಗತ್ತಿನ ತಾತ'' ಎಂಬಂತಿರುವ ಹಳ್ಳಿಗಳು ಈ ತೆರನಾದ ಶೋಚನೀಯ ಸ್ಥಿತಿಗೆ ಬಂದಿಳಿದಿರುವಲ್ಲಿ ಭಾರತೀಯರ ಬಡತನಕ್ಕೆ ಬೇರೆ ನಿದರ್ಶನಗಳು ಬೇಕೇ?

ಅಂದು ನಮ್ಮ ಹಿಂದೂದೇಶದಲ್ಲಿ ಅನೇಕಾನೇಕ ಚಿಕ್ಕ, ದೊಡ್ಡ ಕೈಗಾರಿಕೆಗಳು ತಯಾರಿಸಲ್ಪಡುತ್ತಿದ್ದುವು ಉದಾಹರಣಾರ್ಥವಾಗಿ ಪರಮ ಶ್ರೇಷ್ಠವಾದ ನೂಲುವ ಮತ್ತು ನೇಯುವ ಕೈಗಾರಿಕೆಯನವಲಂಬಿಸಿ, ನಮ್ಮಲ್ಲಿಯ ಅನೇಕ ಜನರು ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದರು ಈ ಕೈಗಾರಿಕೆಯಿಂದ ಬೇಕಾದಷ್ಟು ವಸ್ತ್ರವು ದೊರೆಯುತ್ತಿತ್ತಲ್ಲದೆ ನಮ್ಮಲ್ಲಿ ತಯಾರಿಸಿದ ವಸ್ತ್ರವು ಅನ್ಯದೇಶಗಳಿಗೆ ರಫ್ತಾಗಿ ಹೋಗುತ್ತಿದ್ದಿತು ಆದರೆ ಇಂದಿನ ಸ್ಥಿತಿಯೇನು? ನಮ್ಮ ದೇಶಕ್ಕೀಗ ವರ್ಷ ಒಂದಕ್ಕೆ ಸಾಧಾರಣ 60 ಕೋಟಿ ರೂಪಾಯಿ ಮೌಲ್ಯದ ವಸ್ತ್ರವು ಪರದೇಶದಿಂದ ಆಮದಾಗುತ್ತದೆ. ಪ್ರತಿಯೊರ್ವ ಭಾರತೀಯನೂ ಸ್ವದೇಶದಲ್ಲೇ ತಯಾರಿಸಲ್ಪಡುವ ಶುದ್ಧ ಖಾದಿ ವಸ್ತ್ರವನ್ನು ಉಪಯೋಗಿಸಿದರೆ, ಪರದೇಶಗಳಿಗೆ ಹೋಗುವ ಹೇರಳ ಹಣವು ನಮ್ಮಲ್ಲೇ ಉಳಿಯುವುದಲ್ಲದೆ, ದೇಶದಲ್ಲಿ ಸಾಂಕ್ರಾಮಿಕ ಜಾಡ್ಯದಂತೆ ಹರಡಿಕೊಂಡಿರುವ ಭಾರತೀಯರ ನಿರುದ್ಯೋಗವೂ ಕೂಡ ಕೆಲ ಮಟ್ಟಿಗಾದರೂ ನಿವಾರಣೆಯಾಗಬಹುದೆಂದು ತಜ್ಞರು ಅಭಿಪ್ರಾಯಪಡುತ್ತಾರೆ.



ಸಾಬೂನು ತೆಗೆದ ನಂತರ ಇದನ್ನು ನೀಳ್ಗದೆಲಿಯ ಪೆಟ್ಟಿಗೆಯಾಗಿ ಮಾಡಬಹುದು

ಮೊದಲಾಗಿ ನಾವೀಗ ಎಂದೋ ಮೃತಪ್ರಾಯವಾಗಿ ಹೋಗಿರುವ ಗ್ರಾಮ ಕೈಗಾರಿಕೆಗಳ ಕಡೆಗೆ ಗಮನವನ್ನಿತ್ತು, ಅವುಗಳನ್ನು ಪುನರುಜ್ಜೀವನಗೊಳಿಸುವ ಬಗೆ ಯಾವುದೆಂದು ಆಲೋಚಿಸುವುದಾದರೆ, ಹಳ್ಳಿಗಳ ಒಕ್ಕಲಿಗರಿಗೆ ನಾನಾ ವಿಧದ ವಸ್ತು ಒಡವೆಗಳನ್ನು ತಯಾರಿಸಿ, ಯಾವ ರೀತಿಯಲ್ಲಿ ತಾವು ತಯಾರಿಸಿದ ಒಡವೆಗಳನ್ನು ವಿಕ್ರಯ ಮಾಡಿ ಹಣಗಳಿಸಬಹುದೆಂಬ ಜ್ಞಾನವು ಅವರಲ್ಲಿ ಉಂಟಾಗಬೇಕು ಗ್ರಾಮಸ್ಥರು ತಮ್ಮ ವಿರಾಮಕಾಲದಲ್ಲಿ ಬೇರೆ ಬೇರೆ ಕೈಗಾರಿಕೆಗಳನ್ನವಲಂಬಿಸಿ, ತಮ್ಮ ಆರ್ಥಿಕ ಸುಧಾರಣೆಯನ್ನು ಮಾಡಿಕೊಳ್ಳಬಹುದಾಗಿದೆ ಹಳ್ಳಿಗಳಲ್ಲಿಯ ಕೃಷೀವಲರೆಂದರೆ ಅವರು ವರ್ಷವಿಡೀ ನಿರುದ್ಯೋಗಿಗಳಾಗಿ ಕಾಲಹರಣೆ ಮಾಡಲಾರರು ಆದರೆ ವರ್ಷದ ಕೆಲವು ತಿಂಗಳುಗಳಲ್ಲಿ ಉದ್ಯೋಗವಿಲ್ಲದೆ ವೃಥಾ ಸಮಯವನ್ನು ಅನರ್ಥ್ಯಯ ಪಡಿಸುವರು ಅವರು ಬೇಸಾಯದ ಕಾರ್ಯವು ಇಲ್ಲದೆ ಇದ್ದ ಸಮಯದಲ್ಲಿ ಸಮಯವನ್ನು ಹಾಳುಮಾಡುವುದರ ಬದಲಾಗಿ, ಅನೇಕಾನೇಕ ಉದ್ಯೋಗಗಳನ್ನು ಕೈಕೊಳ್ಳಬಹುದು ಪ್ರಾಚೀನ ಕಾಲದಿಂದಲೂ ಬಹು ಪ್ರಾಧಾನ್ಯತೆಯನ್ನು ಪಡೆದಿರುವ ಕಮ್ಮಾರ ಕೆಲಸ, ಬಡಗಿ ಕೆಲಸ, ಸಮಗಾರನ ಕೆಲಸ, ಹುರಿಹಗ್ಗ ಮಾಡುವಿಕೆ, ಗಾಣವಾಡಿ ಎಣ್ಣೆ ತೆಗೆಯುವಿಕೆ, ಬೆಲ್ಲ ತಯಾರಿಸುವಿಕೆ ಹಿಟ್ಟು ಮಾಡುವಿಕೆ, ಮೊದಲಾದ ಕೈಗಾರಿಕೆಗಳನ್ನು ಮಾಡಬಹುದು ಮಾತ್ರವಲ್ಲದೆ ಇನ್ನೂ ಅನೇಕ ಚಿಕ್ಕ ಚಿಕ್ಕ ಕೈಗಾರಿಕೆಗಳನ್ನೂ ತಯಾರಿಸಬಹುದು ಈ ಮುಂಚೆಯೇ ಹೇಳಿದ ಕಮ್ಮಾರ, ಬಡಗಿ, ಮೊದಲಾದ ಕೆಲಸಗಳನ್ನು ಮಾಡಲವರು ಅರಿತವರಾಗಿದ್ದಾರೆ ತಮ್ಮ ಸಾಹಿತ್ಯೋಪಕರಣಗಳನ್ನು ತಾವೇ ತಯಾರಿಸಿ ಹಾಗೂ ನಾದುರಸ್ತಿ ಇದ್ದುವುಗಳನ್ನು ಸ್ವತಃ ದುರಸ್ತಿ ಪಡಿಸುವುದರಿಂದ, ಆ ಬಗ್ಗೆ ಹೆರವರಿಗೆ ಕೊಡುವ ಹಣವನ್ನು ತಾವೇ ಉಳಿಸಿಕೊಳ್ಳಲು ಸಾಧ್ಯವಿದೆ

ಮುಖ್ಯವಾಗಿ ಹಳ್ಳಿಗಳ ಆರ್ಥಿಕ ಸುಧಾರಣೆ ಮಾಡುವ ಜವಾಬ್ದಾರಿಕೆಯು ಸರಕಾರವನ್ನು ಅವಲಂಬಿಸಿಕೊಂಡಿರುವುದು ಸರಕಾರವು ಈ ಕಾರ್ಯಕ್ಕಾಗಿ ಬೇಕಾದ ಸಲಹೆಗಳನ್ನು ಒದಗಿಸಿಕೊಡುವುದು ಅತ್ಯಾವಶ್ಯಕವಾಗಿದೆ ಗ್ರಾಮಗಳಲ್ಲಿ ಒಳ್ಳೆಯ ಕೇಂದ್ರಗಳನ್ನು ಆರಿಸಿ ಅಲ್ಲಿ ಶಾಲೆಗಳನ್ನಿಟ್ಟು ಈ ವೃತ್ತಿಗಳ ಶಾಸ್ತ್ರೀಯ ಜ್ಞಾನವನ್ನು ಅವರಿಗೆ ಕೊಡುವ ಏರ್ಪಾಡನ್ನು ಮಾಡಬೇಕಾಗಿದೆ ಅದೂ ಮಾತ್ರವಲ್ಲದೆ ಗ್ರಾಮಸ್ಥರಲ್ಲಿ ನೆಲೆಗೊಂಡಿರುವ ಅಂಧಶ್ರದ್ಧೆ ಮೂಢನಂಬಿಗೆ, ಮೊದಲಾದುವುಗಳನ್ನು ಸ್ವತಃ ಬುದ್ಧಿಯಿಂದ ಗ್ರಾಮಸ್ಥರು ಬಿಡದಿದ್ದರೆ, ಅವುಗಳು ಅವರಿಂದ ಅಗಲುವುದರ ಸಲುವಾಗಿ ಬೇಕಾದ ಕಾಯಿದೆ ಕಾನೂನುಗಳನ್ನು ಸರಕಾರವೇ ಮಾಡಬೇಕಾಗಿದೆ ಆದರೆ ಈ ಗ್ರಾಮ ಪುನರುಜ್ಜೀವನಕ್ಕಾಗಿ, ಲೇಖನ ಭಾಷಣ, ಕರಪತ್ರ, ವಿತರಣಾದಿಗಳಿಂದ ಅಷ್ಟೊಂದು ಸಾಫಲ್ಯತೆಯು ದೊರೆಯುವಂತಿಲ್ಲ ಕಾರಣ ಗ್ರಾಮಸ್ಥರು ಓದುಬರಹವನ್ನು ಅರಿತವರಾಗಿರವುದಿಲ್ಲ ಅಂದಮೇಲೆ ಲೇಖನ, ಭಾಷಣ, ಕರಪತ್ರ ವಿತರಣಾದಿಗಳಿಂದೇನ ಪ್ರಯೋಜನ ಲಭಿಸಿದಂತಾಗುವುದು? ಅವರಿಗೆ ಅದರಿಂದ ಏನ ತಿಳಿದಂತಾಗುವುದು? ಆದಪ್ರಯುಕ್ತ ಬರೀ ಸಾಹಿತ್ಯ ವಿಚಾರದಿಂದ ಯಾವ ಕಾರ್ಯವೂ ಪೂರ್ಣವಾಗುವಂತಿಲ್ಲ ಮನದೊಳಗೆ ಇದ್ದ ಭಾವನೆಯ ಮಾತಿನಲ್ಲಿ ಪ್ರಕಟಿಸಿದರೆನೇ, ಅದು ಫಲಕಾರಿಯಾಗಿ ಪರಿಣಮಿಸುವುದರಿಂದ, ಗ್ರಾಮಗಳಲ್ಲಿ ವಾಸ ಮಾಡುವ ಒಬ್ಬೊಬ್ಬರನ್ನೂ ಪ್ರತ್ಯಪ್ರತ್ಯೇಕವಾಗಿ ಕಂಡು ಮಾತನಾಡಿಸಿ, ಆ ಮೂಲಕ ಅವರಿಗೆ ಕರ್ತವ್ಯ ಜ್ಞಾನವನ್ನು ಮಾಡಿಕೊಟ್ಟರೇನೇ, ನಮ್ಮ ಹಿಂದೂ ದೇಶದ ಏಳು ಲಕ್ಷ ಗ್ರಾಮಗಳು ಪುನರುಜ್ಜೀವನಗೊಂಡು, ಕೈಗಾರಿಕಾ ಕಲೆಯೂ ಕೂಡ, ಅಂದಿನ ಉಚ್ಛಸ್ಥಿತಿಯನ್ನು ಹೊಂದಿ ಭಾರತೀಯರನ್ನು ಸದಾ ಪೀಡಿಸುವ ಆ ಬಡತನವು ನಮ್ಮಿಂದ ಪಾರಾಗಿ ದೇಶದಲ್ಲೆಲ್ಲಾ ಸುಭಿಕ್ಷವು ನೆಲೆಗೊಳ್ಳುವುದರಲ್ಲಿ ಸಂದೇಹವೇನೆಂಬ ತಜ್ಞರ ಮಾತು ರಸಭರಿತವಲ್ಲವೇ?

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd..
1, Purniah Chatram Road, Balepet,
BANGALORE CITY

New Era Technical School.

Near Market Square, Udipi.

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟ್ಯಾಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course and insure against unemployment Datails may be had on application to the Manager.

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್,

ಮಡಿಕೇರಿಗುಡ್ಡೆ, ಮಂಗಳೂರು.

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು-ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ. ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕ ದರದಲ್ಲಿ ಒದಗಿಸಿಕೊಡಬಹುದು.

ಎಲ್ಲಾ ಜವಳಿ ಬೆಲೆಗೆ ಮಿೞರಿ! ಬಣ್ಣದಲ್ಲಿ ಸವನು! ಬಾಳಿಕೆಯಲ್ಲಿ ಸವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ.

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಶೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಯುಂ. ವೆಂಕಟೇಶ ರಂಗ ಶೈ, ಪ್ರೊಪ್ರೈಟರ್.

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಜ್ಡ ಸಾರ್ಸಪರಿಲಾ ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಬಲ್ಲರಿ

ಡಾ॥ ಗೌತಮ ರಾವ್ ಕೇಶವರವರ ಫೊಸ್ಫರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಘಾಕುರದ್ವಾರ, ಮುಂಬಾಯಿ ೨

ಸ್ಟೊಕಿಸ್ಟ— ಪಾ ಕಂಪೆನಿ ಮಂಗಳೂರು

(ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿ)

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ.

ಕಸ್ತೂರಿ ಬಂಗಾರ ಮಿಶ್ರಿತವಾದುದು

ರಕ್ತವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 3-0-0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ. 2-8-0. ½ಕ್ಕೆ ರೂ. 1-5-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ. 1-8-0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಪ್ಲೂಯೆಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.

ಬಾಟ್ಲಿ 1ಕ್ಕೆ ರೂ. 1-8-0.

ಮೇಹಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2-8-0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—

ಡಬ್ಬಿ 1ಕ್ಕೆ ರೂ. 0-2-6. 12ಕ್ಕೆ ರೂ 1-12-0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:

1. ಡಾಕ್ಟರ್ ಬಿ. ಎಚ್. ಪದ್ಮನಾಭ ಶೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು.
4. ವಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ESTD· 1906·

The Canara Banking Corporation Udipi Ltd.

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

The First Indigenous & Cosmopolitan Bank of S. K. District.

Capital· Authorised, issued & Subscribed	Rs.	3,50,000	0	0
Paid up Capital	,,	2,81,035	0	0
Reserves	,,	3,64,872	0	0

6-8-1936

FIXED DEPOSITS UP TO 5 %

Head office:—UDIPI, S. K

Branches:—1 Udipi, 2 Goondapoor, 3 Car Street, Mangalore, 4 Shimoga, 5 Madras 6 Bunder Mangalore, 7 Mercara & 8 Virarajendrapet

THE BOMBAY LIFE ASSURANCE COMPANY, LIMITED.

KOCHIKAR BROTHERS, Madras Branch Secretaries and Chief Agents for Bombay City & Suburbs

ANNOUNCEMENT:— We have the pleasure to inform all our Constituents Agents and Policy holders that we have taken up a Newly Erected Bungalow 'Soumyalayam' at Puthiyara in the Taluq Office Road opposite Puthiyara Post Office and are opening our Calicut Branch Office in the said Building on 14—9—1936 The present Office of Mr C Sankaran Nair our Malabar District Agent, situated in Husur Road will cease to exist and will merge in our New Branch Office This has been necessitated by the vast expansion of our business in Malabar and the adjacent districts as the New Premises are very well situated and more spacious and thus we hope to render better service to our Policyholders Our patrons and well wishers are requested to pay a visit to the 'Soumyalayam at their early convenience All correspondence and remittances and cheques should be addressed to

Messrs **KOCHIKAR BROTHERS,**
Bombay Life Office, Puthiyara Post (Calicut—Malabar)

We have also registered our telegraphic address as 'Kochikar—Calicut' for the convenience of our constituents

ಪ್ರಕಟಣೆ—ಸದರಿ ವಿಮಾ ಕಂಪೆನಿಯು ತನ್ನ ಏಜಂಟರಿಗೂ ಪೋಲಿಸಿದಾರರಿಗೂ ಈ ಮೂಲಕ ತಿಳಿಯಪಡಿಸುವದೇನೆಂದರೆ—ತಾ. 14 8 36ರಿಂದ ಕಲ್ಲಿಕೋಟೆಯಲ್ಲಿರುವ ನಮ್ಮ ಮಲಬಾರ ಏಜೆಂಟರಾದ ಮಿ॥ ಸಿ ಶಂಕರನಾಯರ್ ರವರ ಹಜೂರ ರಸ್ತೆಯ ಬಳಿ ಇರುವ ಆಫೀಸನ್ನು ಪುತಿಯಾರ ಪೋಸ್ಟು ಆಫೀಸಿನ ಎದುರಿರುವ ಹೊಸತಾಗಿ ಕಟ್ಟಿಸಿದ ದಿವ್ಯವಾದ ಸೌಮ್ಯಾಲಯ ಎಂಬ ಬಂಗ್ಲೆಯಲ್ಲಿ ತೆರೆಯಲಾಗುವುದು ಇನ್ನು ಮುಂದೆ ಸಂಬಂಧಪಟ್ಟ ಲೆಖ್ಖ ಪತ್ರಗಳನ್ನು ಕೆಳಗಿನ ವಿಳಾಸಕ್ಕೆ ಬರೆಯ ತಕ್ಕದ್ದು

ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್,
ಬೊಂಬೈ ಲೈಫ್ ಆಫೀಸ್, ಪುತಿಯರಾ ಪೋಸ್ಟು (ಕಲ್ಲಿಕೋಟೆ ಮಲಬಾರ)

ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ತಂತಿಯ ವಿಳಾಸವನ್ನು ಕೊಚ್ಚಿಕಾರ—ಕಲ್ಲಿಕೋಟೆ ಎಂಬುದಾಗಿ ಮಾಡಿದೆ

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು ಕುತ್ತಿಗೆ ಭುಜ ಹಲ್ಲುನೋವುಗಳಿಗೂ ಎದೆನೋವು ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಆ ಕಂಪೆನಿಯಲ್ಲಿ ದೊರೆಯುವುದು

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೮ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾಗದಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

Edited Printed & Published By A. S. Kamath at the Sharada Press Car Street. Mangalore.

...ಕೆ ಚಂದಾ ೩ ರೂಪಾಯಿ
... ಸಂಚಿಕೆಗೆ ಒಂದಾಣೆ.

Regd. No. M. ३४०८

...ಟಪ್ಪಾಲು ಹಾಸಲು ಸೇರಿದರೆ 3-12-0

...p
...or Quality Snuff
H. Rama Rao
and Sons.
...gh Class Snuff Manufacturers
Mangalore S. I.
ASK FOR —
RAMA SNUFF
...e charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in—
THE BOMBAY LIFE
Madras Branch Secretaries
Kochikar Brothers
Udipi Mangalore Bangalore Madras Bombay and Calicut

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ । ೧ ॥
ದೊರೆಯಲನುಪಮರತ್ನಗಳು ಸಾಗರವ ಮಥಿಸಲು ಸುರರಿಂಗದರಿಂ ಹರುಷವಾಯಿತೆ? ಮತ್ತೆ ವಿಷವ ಸುದುತ ಬರುತಿರುವ ॥
ಗರಲಕವರಂಜಿದರೆ ಸುಧೆಯುನ । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ? ತೊರೆದ ಧೀರರು ನಿಶ್ಚಿತಾರ್ಥವನು । ೧ ॥

ಪುಸ್ತಕ ೩೦. ಮಂಗಳೂರು ತಾ. ೩ನೇ ಶುಕ್ರವಾರ ಏಪ್ರಿಲ್ ೧೯೩೬ (3-4-'36) ಸಂಚಿಕೆ ೧೪



ರಾಮೇಶ್ವರದ ಗೌಡಸಾರಸ್ವತ ದೇವಸ್ಥಾನ.

ರಾಮೇಶ್ವರದಲ್ಲಿ ಹಾಳುಬಿದ್ದ ಗೌಡಸಾರಸ್ವತ ದೇವಸ್ಥಾನದ ಪುನರ್ನಿರ್ಮಾಣವಾಗುತ್ತಿರುವುದು.

NOTES

ಸ್ವಾವಾ ಕರಾರು ಆದಾಗಲೇ ಹಿ ಯುರೆಲ್ಲಿ ದೇಶಪ್ರಿಯರು ಕರಾರುಮಾಡಿದ್ದರು. ಆದರೆ, ಪ್ರತಿನಿಧಿಗಳು ಕೈಕಟ್ಟಿಕೊಂಡ ಮೇಲೆ ಯಾರೇನು ಮಾಡುವರು? ಒಂದೂವರೆ ವರ್ಷ ಆದರ ಪರಿಣಾಮ ನೋಡಿ, ಮೆಜೊರಿಟಿ ಮೆಂಬರರು ಇಷ್ಟರಲ್ಲಿ ಅದು ಉತ್ತಮ—ಹಾಳು ಎನ್ನಬರುವುದಿಲ್ಲ ಎಂದರು. ಈಗ ಎಸೆಂಬ್ಲಿ ಯಲ್ಲಿಯೆ ಅದರ ಇತ್ಯರ್ಥಕ್ಕೆ ಬರುವ ಹಾಗಾಯಿತು.

\+ \+ \+

ಜಿನ್ನರು ಜಾಣರು; ಕರಾರು ಇನ್ನು ಬೇಡವೆಂದು ಕೂಡಲೇ ನೋಟೀಸು ಕೊಡಿರಿ ಎಂದರು. ಪ್ರತಿಯೊಂದು ದೇಶದೊಡನೆಬೇರೆಯೆ ಕರಾರುಗಳನ್ನು ಮಾಡುವೆವು, ಅಷ್ಟೇ ಸಾಕು. ಬ್ರಿಟಿಷ ಸಾಮ್ರಾಜ್ಯದ ಉದ್ಧಾರಕ್ಕಾಗಿ ಹಿಂದೂ ದೇಶವಿಲ್ಲ; ಎಲ್ಲರೂ ಇಲ್ಲಿಗೆ ಬರಲಿ. ಬೇಕಾದ್ದನ್ನು ನಮಗೆ ಕೊಟ್ಟು ಅವರಿಗೆ ಬೇಕಾಗುವುದನ್ನು ಕೊಂಡೊಯ್ಯಲಿ. ಬ್ರಿಟನೂ ಒಂದೇ, ಜರ್ಮನಿಯೂ ನಮಗೆ ಒಂದೇ ಎಂದರು.

× × ×

ಎಕ್ಸ್‌ಪರ್ಟುಗಳು ಹೇಗೆ ಅಂಕೆಗಳ ಇಂದ್ರಜಾಲ ಹೂಡಿದರು! ಅವರ ಮಾತು ಕೇಳಿದರೆ ಒಟ್ಟಾವಾಬಂದಲೆ ಜಗದುದ್ಧಾರ; ವರಾಹಾವತಾರದಂತೆ ಭಾರತ ವರ್ಷವನ್ನು ಒಟ್ಟಾವಾ ಕರಾರು ಎತ್ತಿಹಿಡಿಯಿತೆಂದರು

\+ \+ \+

ಆದರೆ ಪ್ರತಿಯೊಂದು ವ್ಯಾಪಾರಕ್ಕೆ ಸಂಬಂಧಪಟ್ಟವರೂ ಪರದೇಶಗಳಲ್ಲಿ ಪ್ರತಿ ಒಂದು ದೇಶದೊಡನೆ ವ್ಯಾಪಾರ ಮಾಡುತಿದ್ದವರೂ ಮಾತ್ರ ತಮ್ಮ ಅನುಭವ ತಿಳಿಸಿ ಈ ಅಂಕೆಗಳ ಸೊಕ್ಕನ್ನು ಅಣಗಿಸಿದರು ಯಾವ ವ್ಯಾಪಾರಿಯ ಪ್ರಾತಿನಿಧ್ಯವೂ ಇಲ್ಲದೆ ಆದ ಕರಾರು ಎಲ್ಲ ವ್ಯಾಪಾರಿಗಳಿಂದಲೂ ರದ್ದಾಗಬೇಕೆಂದೇ ಸೂಚಿತವಾಯಿತು

\+ \+ \+

ನಮ್ಮ ಡಾಕ್ಟರ ಡಿ'ಸೋಜರನ್ನು ನೋಡಿರಿ! ಅಂದು ಫೈನಸ್ಸ್ ಬಿಲ್ಲನ್ನು ಇದಿರಾದಿದರು. ಇಂದು ಕರಾರನ್ನೂ ಮುರಿಯಬೇಕೆಂದರು. ಸರಕಾರದಿಂದ ನೇಮಕಹೊಂದಿರುವೆನಾದರೂ, ತನ್ನವರ ಹಿತಕ್ಕೆ ಆತಂಕವಾದಲ್ಲಿ ಇದಿರು ಪಕ್ಷಕ್ಕೇ ಸೇರುವೆನೆಂದರು, ಹಾಗೆಯೆ ಮಾಡಿದರು ಅವರನ್ನು ಬಹಳವಾಗಿ ಪ್ರೋತ್ಸಾಹಿಸಿದ ಸರಕಾರದ ಮೆಂಬರರನ್ನು ಹಾಗೆಯೆ ಬಿಟ್ಟು ಕರಾರಿಗೆ ವಿರುದ್ಧವಾಗಿಯೆ ವೋಟು ಕೊಟ್ಟರು.

× × ×

ಕರಾರು ರದ್ದಾಗಲು ಈಗ ನೋಟೀಸು ಹೋಗಬೇಕು ಸರಕಾರವು ಈ ತೀರ್ಮಾನವನ್ನು ಮೊದಲೇ ಒಪ್ಪಿಕೊಂಡಿದೆ, ಕಾಶೀ ಯಾತ್ರೆಗೆ ಹೋಗುತಿದ್ದ ಒಂದು ಮಹಾರಾಜರನ್ನೂ ಕರೆದು ತಂದರೂ ಅವರ ವೋಟು ಸರಕಾರಕ್ಕೆ ಸಿಕ್ಕಿದರೂ ಕರಾರು ಮುರಿಯಿತೇ ಮುರಿಯಿತು.

× × ×

ಕಾರ್ಡಿನ ಬೆಲೆ ಎಷ್ಟೆಂದರೂ ಅರ್ಧಾಣೆಗಿಳಿಸದೆಯೂ ಉಪ್ಪಿನಕರ ನಾಲ್ಕಾಣೆಯಾದರೂ ಕಡಿಮೆಮಾಡದೆಯೂ ಇರುವಂತೆ ಹಟತೊಟ್ಟಿರುವ ಎಕ್ಸಿಕ್ಯೂಟಿವ ಮೆಂಬರರಿಗೆ ಅಧ್ಯಂದಿರ ಸಭೆಯಾದ ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ನಾಲ್ಕು ಬಿಸಿಮಾತುಗಳು ದೊರೆತುವು.

× × ×

ಹೆಮ್ಮಕ್ಕಳನ್ನು ಕದ್ದೊಯ್ಯುವ ಪಂಗಡವೊಂದನ್ನು ಪಂಜಾಬಿನಲ್ಲಿ ಸೆರೆಹಿಡಿದಿರುವರು. ಬಂಗಾಳದಲ್ಲೇ ಈ ವ್ಯಾಧಿ ಪ್ರಬಲಿಸಿತ್ತು; ಇತ್ತ ಪಂಜಾಬಿನಲ್ಲೂ ತಲೆದೋರಿದ್ದಿತು. ಖೂರತ್ ಮುಸಲತ್ತು ಮೊಕದ್ದಮೆಗಾಗಿ ಧನ ವ್ಯಯಿಸಿದಂತೆ ಈ ಮುಸಲತ್ತನ್ನು ಮುರಿಯಲು ಸರಕಾರವು ಪ್ರಯತ್ನಿಸದೆ ಇರಲಾರದು. ಆ ಹೆಮ್ಮಕ್ಕಳನ್ನು ತಲಾ ಸುಮಾರು ಒಂದು ಸಾವಿರ ರೂಪಾಯಿಗೆ ಮಾರಿದ ರಾವಣರಿರುವರೆಂದು

ಓವಲ್ಟಿನ್ ಸೇವನೆಯು ಮಕ್ಕಳನ್ನು ದೃಢಕಾಯರನ್ನಾಗಿ ಮಾಡುವುದು.

ಬಾಲ್ಯಪ್ರಾಯವೇ ಮಕ್ಕಳ ಬೆಳವಣಿಗೆಯ ಪ್ರಾಯ. ಆಗಲೇ ಮಕ್ಕಳ ಅರ್ಹಿಕೆಯನ್ನು ಸರಿಯಾಗಿ ಮಾಡಿದ ಪಕ್ಷದಲ್ಲಿ ನಂತರ ಅಷ್ಟೊಂದು ಬೆದರಿಕೆಯಿಲ್ಲ ಮಕ್ಕಳ ಬೆಳವಣಿಗೆಯು ಹೆಚ್ಚಾಗಿ ಅವರು ತೆಗೆದುಕೊಳ್ಳುವ ಆಹಾರದಲ್ಲಿರುತ್ತದೆ. ಯಾವ ಆಹಾರವಾದರೂ, ತಾದೇಹ ಶಕ್ತಿಯನ್ನೂ, ನರಗಳ ಶಕ್ತಿಯನ್ನೂ, ಮಿದುಳಿನ ಜ್ಞಾಪಕಶಕ್ತಿಯನ್ನೂ ಏಕಪ್ರಕಾರವಾಗಿ ಕೊಡುವುದಿಲ್ಲ ಆದರೆ, ಒಂದು ಆಹಾರವು ಮಕ್ಕಳಿಗೆ ಇದೆಲ್ಲವನ್ನೂ ಸಮಗ್ರವಾಗಿ ಕೊಡಬಲ್ಲುದು. ದೇಹಕ್ಕೆ ಶಕ್ತಿ, ಸರಿಯಾದ ಬೆಳವಣಿಗೆ, ಮಿದುಳಿನ ಜ್ಞಾಪಕಶಕ್ತಿ, ಯಾವುದರಲ್ಲಿಯೂ ಉತ್ಸಾಹವಿರುವಿಕೆ ಇವೆಲ್ಲವೂ ಅದರಿಂದ ಸಿದ್ಧವಾಗುತ್ತಿದೆ . . . ಅದೇ 'ಓವಲ್ಟಿನ್'

ಓವಲ್ಟಿನ್‌ಗೆ ಸರಿಸಮಾನವಾದ ಮತ್ತೊಂದು ಆಹಾರವಿಲ್ಲ ಬಾಲ್ಯಪ್ರಾಯದಲ್ಲಿ ಮಕ್ಕಳಿಗೆ ಅದನ್ನು ಕೊಡಿರಿ ನಿಮ್ಮ ಮಕ್ಕಳು ಹುಲುಸಾಗಿ ಬೆಳೆದು ನಿಮ್ಮ ಮನಸ್ಸನ್ನು ಅರಳಿಸುವವು ಗಟ್ಟಿಯಾದ ಮೈಕಟ್ಟು, ಅಂದವಾದ ತೇಜಸ್ಸು, ಸ್ವರೂಪಗಳು ನಿಮ್ಮ ಮಕ್ಕಳದಾಗವವು ಓವಲ್ಟಿನ್‌ನಲ್ಲಿ ನಿಸರ್ಗಸಿದ್ಧವಾದ ಅಮೂಲ್ಯ ಸಾರ... ಬೆಳೆದ ಬಾರ್ಲಿ, ದನದ ಕೆನೆಹಾಲು ಇತ್ಯಾದಿಗಳ ಸತ್ವವು ಅದರಲ್ಲಿ ತುಂಬಾ ಇದೆ. ಆದರೆ, ಪರೀಕ್ಷೆಯ ಮೋಸಕ್ಕೆ ಬಲಿಬೀಳಬೇಡಿ ನಮ್ಮ ಮಾಲು ಉತ್ಕೃಷ್ಟ ತರಗತಿಯದಾಗಿರುತ್ತದೆ. ಇದು ಖಂಡಿತ

'ಓವಲ್‌ಟಿನ್'

OVALTINE

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ.

ಏಜಂಟ್ಸ್—ಜೇಮ್ಸ್ ರ್‍ಯಾಟ್, 8 ಎ ರಿಪನ್ ಸ್ಟ್ರೀಟ್, ಕಲ್ಕತ್ತಾ ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ

OV 118

ಮ್ಯುನಿಸಿಪಾಲಿಟಿಯು ಹೆದ್ದಾರಿಗಳಮೇಲೆ ಪಾಯಿಖಾನೆಗಳ ವಾಸನೆಯೂ ತೆಂಗಿನಮರದ ಸೋಗೆಗಳೂ ದಾರಿಗರ ಸಂಚಾರಕ್ಕೆ ಅಪಾಯವಾಗುವಂತಾದಲ್ಲ ಯಾರಿಗೆ ದೂರು ತಿಳಿಸಬೇಕು? ಇದರಿಂದ ಆರೋಗ್ಯಕ್ಕೂ ಪ್ರಾಣಕ್ಕೂ ಅಪಾಯವಾದಲ್ಲಿ ಮ್ಯುನಿಸಿಪಾಲಿಟಿಯು ನಷ್ಟ ಭರ್ತಿಮಾಡಲು ಶಕ್ಯವಾಗಿದ್ದೀತೆ? ಮದುರಾ ಜಿಲ್ಲೆಯಲ್ಲೊಂದು ವ್ಯಾಜ್ಯವಾಗಿ ಮ್ಯುನಿಸಿಪಾಲಿಟಿಗೆ ಅವಗುಣವಾದುದನ್ನು ಯಾರಾದರೂ ಓದಿರುವರೆ?

* * *

ಮ್ಯುನಿಸಿಪಾಲಿಟಿಗಳಲ್ಲಿ ವಿದ್ಯುಚ್ಛಕ್ತಿಯ ಪೂರಯಿಕೆಯ ವಿಷಯವಾಗಿ (ಸೇಲಂ) ಮತ್ತೊಂದು ಐದು ವರ್ಷದ ಅವಧಿಗೆ ಕಂಟ್ರಾಕ್ಟನ್ನು ಬೇಡಿಗೆ ಕಂಪೆನಿಗೆ ಕೌನ್ಸಿಲು ನಿರಾಕರಣೆ ಮಾಡಿತು. ಚಾರ್ಜನ್ನು ಕಡಿಮೆಮಾಡಬೇಕು, ಇನ್ನು ಕೆಲವು ಸೌಕರ್ಯಗಳನ್ನು ಹೆಚ್ಚಿಸಬೇಕು ಎಂದು ಕೌನ್ಸಿಲು ತಿಳಿಸಿದರೆ ಕಂಪೆನಿ ನಿರಾಕರಿಸಿತು. ಅದಕ್ಕಾಗಿ, ಇನ್ನು ಪೆಟ್ರೊಮೆಕ್ಸ ದೀಪಗಳನ್ನಾದರೂ ಉರಿಸುವೆವು. ಈ ಕಂಪೆನಿ ಎಂದು ಕೌನ್ಸಿಲಿನ ನಿರ್ಣಯ ಇದೂ ಒಂದಾ ಪಾರ ಕಂಪೆನಿಯ ಪಾಲುಗಾರರು ಕೌನ್ಸಿಲಿನಲ್ಲಿ ಇಲ್ಲದುದರಿಂದ ಸೇಲಂನಲ್ಲಿ ಹೀಗಾಯಿತೆ ಎಂದು ಒಂದು ಪ್ರಶ್ನೆ

× × ×

ಬೆಂಗಳೂರಿನಲ್ಲಿ ಶಾಲೆಗೆ ಹೋಗುತಿದ್ದ ಹುಡುಗಿಯನ್ನು ಮೋಟರಲ್ಲಿ ಎತ್ತಿಹಾಕಿ ಹೋದವರ ವಿಚಾರ ಮೊನ್ನೆ ಮುಗಿಯಿತಷ್ಟೆ. ಅವರಿಗೆ ಜೈಲುಪ್ರಾಪ್ತವಾಗಿದೆ ಈಗ ರಾಮನಾಡಿನಲ್ಲಿ ಇಗರ್ಜಿಗೆ ಹೋಗುತಿದ್ದ ಕ್ರೈಸ್ತ ಹುಡುಗಿಯೊಬ್ಬಳನ್ನು ಅದೇ ರೀತಿ ಕಾರಿನಲ್ಲಿ ಎತ್ತಿಕೊಂಡ ವಿಚಾರ ಪ್ರಕಟವಾಗಿದೆ. ಪೋಲೀಸರು ಪತ್ತೆ ನಡೆಸುತ್ತಾರೆ

TYPEWRITING

ಯಾವತ್ತೂ ಪತ್ರವ್ಯವಹಾರ, ಅರ್ಜಿ ವಗೈರೆಕಯಾರಿಸಿ ಟೈಪರೈಟ್ ಮಾಡಿಕೊಡುವರು. ಹೊಸ ಮೆಶಿನ್, ದರ ಅತೀ ಕಡಮೆ

ಬಂಗ್ರ ರಮಾನಾಥ ಶ್ಯಾನುಭೋಗ್,

ಮೊಡರ್ನ್ ಕಮರ್ಶಿಯಲ್ ಹೌಸ್, ಫೆರ್ನಾಂಡಿಸ್ ಬಿಲ್ಡಿಂಗ್ ಮಿಶನ್ ಶಾಪಿನ ಬಳಿ, ಹಂಪನಕಟ್ಟೆ, ಮಂಗಳೂರು.

For your
DIAMONDS

Enquire at—
SOWKAR MAHAL,
Srinivas Ranga Pai,
Car Street Mangalore

೧೯ ಲಕ್ಷ ರೂಪಾಯಿಗಳನ್ನು ವ್ಯಯಿಸಿ ಹೈದರಾಬಾದಿನಲ್ಲಿ ಹುಚ್ಚರ ಆಸ್ಪತ್ರೆಯೊಂದು ಬೇಗನೇ ಸ್ಥಾಪನೆಯಾಗುವುದು. ಹೈದರಾಬಾದಿನಲ್ಲಿ ಪ್ಲೇಗುತಲೆದೋರಿದ್ದದೆ. ರೋಗವನ್ನು ತಡೆಯಲು ಧಾರಾಳ ಇಂಜೆಕ್ಷನಗಳು ಕೊಡಲಾಗಿವೆ

ಕವಿ ರವೀಂದ್ರರು ಭಾರತ್ ನಗರಕ್ಕೆ ಆಗಮಿಸಿದರು. ಅಲ್ಲಿನ ಪ್ರಸಿದ್ಧ ನವಾಬ್ ಜಮ್‌ಶೆಡ್ಜಿ ಆಲಿಯೆಂಬವರು ರವೀಂದ್ರರನ್ನು ಸತ್ಕರಿಸಿ ಒಂದು ಟೀಪಾರ್ಟಿ ಸಮಾರಂಭವನ್ನು ಕೊಟ್ಟರು ತನ್ನ 'ಚಿತ್ರಾಂಗದ'ವೆಂಬ ನಾಟಕವನ್ನು ಅಲ್ಲಿ ಆಡಿತೋರಿಸಿದರು ನಾಟಕಕ್ಕೆ ಪ್ರೇಕ್ಷಕ ಸಂದಣಿಯು ಬಹಳವಿತ್ತು

ಪ್ರಪಂಚದ ಅತೀ ಮಹತ್ವಾದ ಅಣೆಕಟ್ಟು

ಸಂಯುಕ್ತ ಅಮೇರಿಕಾದ ಕೊಲೊಂಬಿಯಾ ನದಿಯ ಮೇಲೆ ರಚಿಸಲಾಗುತ್ತಿದೆ ಈ ಅಣೆಕಟ್ಟಿನಿಂದ ಈಗ ಮರುಳುಗಾಡಿನಂತಿರುವ ೧,೨೦೦,೦೦೦ ಎಕ್ರೆ ಭೂಪ್ರದೇಶವು ಬಹಳ ಫಲವತ್ತಾಗುವುದು. ಧಾರಾಳ ವಿದ್ಯುಶ್ಛಕ್ತಿಯ ನಿಲಯವಾಗಿ, ಈ ಅಣೆಕಟ್ಟು ಆ ಪ್ರದೇಶವನ್ನು ಆಧುನಿಕ ಕಾಲದ ಶ್ರೇಷ್ಠ ಕೈಗಾರಿಕಾಪ್ರದೇಶವನ್ನಾಗಿ ಮಾಡುವುದು ಈ ಅಣೆಕಟ್ಟಿನ ವಿಷಯ ಕೆಲವು ಅಂಕಿಸಂಖ್ಯೆಗಳು, ಈ ಅಣೆಕಟ್ಟಿನ ನಿರ್ಮಾಣಕ್ಕೆ ಬೇಕಾಗುವ ಸಿಮೆಂಟು ೯,೫೦೦,೦೦೦ ಕ್ಯೂಬಿಕ್ ಗಜಗಳು, ಕೊಂಕ್ರೀಟನ್ನು ತಯಾರಿಸಲು, ಜಲ್ಲಿಕಲ್ಲನ್ನು ತಯಾರಿಸಲು, ಹೊಯಿಗೆಯನ್ನು ತಯಾರಿಸಲು, ಜಗತ್ತಿನ ಮಹತ್ವಾದ, ವಿದ್ಯುಶ್ಛಕ್ತಿಯಿಂದ ನಡೆಯುವ ಯಂತ್ರವು ಇಲ್ಲಿ ಚಲಿಸುತ್ತಿದೆ, ಈ ಅಣೆಕಟ್ಟಿಗೆ ತಗಲುವ ಜುಮ್ಲಾ ವೆಚ್ಚ ೩೯೩ ಮಿಲಿಯ ಡೊಲ್ಲರುಗಳು, ಈ ಅಣೆಕಟ್ಟಿನಿಂದ ೩೦,೦೦೦ ಕೃಷಿ ಕ್ಷೇತ್ರಗಳು ಸೃಷ್ಟಿಯಾಗುವುವು, ಇವುಗಳು ವಿದ್ಯುಶ್ಛಕ್ತಿಯಿಂದ ನಡೆಯಿಸಲ್ಪಡುವುವು, ೧,೫೦೦,೦೦೦ ಜನರಿಗೆ ಒಂದು ಹೊಸ ವಾಸ್ತವ್ಯವು ಇದರ ದೆಸೆಯಿಂದ ನಿರ್ಮಾಣವಾಗುವುದು ಸಾಧಾರಣ ೩ ಮಿಲಿಯ ಅಶ್ವ ಶಕ್ತಿ ವಿದ್ಯುತ್ ಪ್ರವಾಹವನ್ನು (ನೀರಿನ ಪ್ರವಾಹಗಳಿಂದ) ತಯಾರಿಸುವ ಶಕ್ತಿನಿಲಯಗಳು ಇಲ್ಲಿ ರಚನೆಯಾಗುವುವು ಈ ಅಣೆಕಟ್ಟಿನ ನಿರ್ಮಾಣದಲ್ಲಿ ೧೬ ಮಿಲಿಯ ಕ್ಯೂಬಿಕ್ ಗಜ ಅಗೆಯುವಿಕೆ ನಡೆಯಬೇಕಾಗಿದೆ ೬೦೦೦ ಜನರು ಇಲ್ಲಿ ಈಗ ಕೆಲಸ ಮಾಡುತ್ತಿದ್ದಾರೆ ಈ ಅಣೆಕಟ್ಟಿನಿಂದ ಶೇಖರಿಸಲ್ಪಡುವ ನೀರಿನ ತೂಕದಿಂದ ಭೂಮಿಯು ಈ ಕಡೆಯ ತೂಕವು ಬಹಳವಾಗಿ ಹೆಚ್ಚುವುದರಿಂದ ಭೂಮಿಯ ರೇಖೆಯು ಬದಲಾಗುವುದೆಂದು ಕೆಲವು ವಿಜ್ಞಾನಿಗಳಲ್ಲಿ ಭಯವುಂಟಾಗಿದೆ ಹೀಗೆ ಭೂಮಿಯ ರೇಖೆಯು ಬದಲಾವಣೆಯಾದರೆ ಭಯಂಕರ ಪರಿಣಾಮಗಳು ಭೂಕಂಪಗಳು ಸಂಭವಿಸುವುವು ಈ ಅಣೆಕಟ್ಟು ಇಂಜಿನಿಯರಿಂಗಿನ ಒಂದು ಮಹಾ ಅದ್ಭುತವೆನ್ನಬಹುದು ೨೫ ಮಿಲಿಯ ಅಶ್ವ ಶಕ್ತಿವುಳ್ಳ ನೀರನ್ನು ಹಿಂದಿಡುವ ಯೋಗ್ಯತೆಯು ಈ ಅಣೆಕಟ್ಟಿಗೆ ಬೇಕಾಗಿದೆ ಅಣೆಕಟ್ಟಿನ ಎತ್ತರ ೫೫೦ ಅಡಿಗಳು

ನೋವಿಲ್ಲದ ದಂತ ಚಿಕಿತ್ಸೆ!

೨೫ ವರ್ಷ ಶ್ರಮದ ಫಲಿತಾಂಶವಾಗಿ ಅಮೇರಿಕಾದ ಓರ್ವ ಪ್ರಸಿದ್ಧ ಡಾಕ್ಟರರು ಹಲ್ಲಿನ ಚಿಕಿತ್ಸೆಯ ಸಮಯ ನೋವು ನಾಶಮಾಡುವ ಒಂದು ದ್ರಾವಕವನ್ನು ತಯಾರಿಸಿರುವರು ಹಾಳಾದ ಹಲ್ಲುಗಳನ್ನು, ಅವುಗಳನ್ನು ತುಂಬಿಸಲು ಕೊರೆಯುತ್ತಿರುವಾಗ ಬಹಳ ನೋವು ಉಂಟಾಗುತ್ತದೆ ಈ ನೋವನ್ನು ತೆಗೆಯುವುದಕ್ಕಾಗಿ ಹಲವು ತರದ ಔಷಧಿಗಳನ್ನು ಕಂಡುಹಿಡಿದಿದ್ದರು ಇವುಗಳನ್ನು ಇಂಜೆಕ್ಷನ್ ಮೂಲಕ ಹಲ್ಲಿನ ಬುಡದಲ್ಲಿ ಉಪಯೋಗಿಸಬೇಕಿತ್ತು ಈ ಔಷಧಿಗಳಿಂದ ಚಿಕಿತ್ಸೆಯ ನಂತರ ಅನೇಕ ದುಷ್ಪರಿಣಾಮಗಳು ಉಂಟಾಗುತ್ತವೆ ಈ ನವೀನ ದ್ರಾವಕದಿಂದ ಚಿಕಿತ್ಸೆಯ ಸಮಯ ಉಂಟಾಗುವ ನೋವು ಸಂಪೂರ್ಣ ಮಾಯವಾಗುವುದು ಈ ದ್ರಾವಕದ ಉಪಯೋಗದಲ್ಲಿ ಇಂಜೆಕ್ಷನಿನ ಸೂಜಿಯನ್ನು ಉಪಯೋಗ ಮಾಡಬೇಕಾಗಿಲ್ಲ ಚಿಕಿತ್ಸೆ ನಡೆಯಿಸಬೇಕಾದ ಹಲ್ಲಿನ ಮೇಲೆ ಈ ದ್ರಾವಕದಲ್ಲಿ ಒಂದು ಹತ್ತಿಯ ಬಿಲ್ಲೆಯನ್ನು ಒದ್ದೆ ಮಾಡಿ ಇಟ್ಟರೆ ಸರಿ, ರೋಗಿಗಳು ಚಿಕಿತ್ಸೆಯ ಸಮಯ ಒಂದಿಷ್ಟು ನೋವನ್ನು ಅನುಭವಿಸಲಾರರು ಈ ನವೀನ ಶೋಧೆಯಿಂದ ಈಗ ಕ್ರೂರವೆನಿಸುವ ದಂತ ಚಿಕಿತ್ಸೆಯು ಬಹಳ ಸುಲಭಕರವಾಗುವುದು. ಈ ದ್ರಾವಕವನ್ನು ವ್ಯಾಪಾರಮಾಡುವ ರೀತಿಯಲ್ಲಿ ತಯಾರಿಸುವ ಏರ್ಪಾಡುಗಳು ಬೇಗನೇ ಆಗುವುವೆಂದು ತಿಳಿದುಬರುತ್ತದೆ

! ನಿಮಗೆ ತಿಳಿದಿರುವುದೆ? ?

ವಿಜ್ಞಾನದ ಕೌತುಕಗಳು.

ಸೂರ್ಯನ ಉಷ್ಣದಿಂದ ಲೋಹವನ್ನು ತಯಾರಿಸುವುದು

ಲೋಹಕಲ್ಲುಗಳನ್ನು ಭಸ್ಮಮಾಡಿ ಅವುಗಳಿಂದ ಲೋಹವನ್ನು ಹೊರತೆಗೆಯುವ ನವೀನ ತರದ ಆಗುಷ್ಟೆಯೊಂದನ್ನು ಕಂಡುಹಿಡಿದಿರುವರು ಹೆಚ್ಚಾಗಿ ಆಗುಷ್ಟೆಗಳನ್ನು ಬೆಂಕಿಯಿಂದಲೂ ವಿದ್ಯುಶ್ಛಕ್ತಿಯಿಂದ ನಡೆಯಿಸುತ್ತಾರೆ ಆದರೆ, ನವೀನವಾಗಿ ಕಂಡುಹಿಡಿದಿರುವ ಆಗುಷ್ಟೆಯಲ್ಲಿ ಸೂರ್ಯನ ಉಷ್ಣವು ಉಪಯೋಗಿಸಲಾಗುವುದು ೬೦ ಕನ್ನಡಿಗಳ ೩ ಕಟ್ಟೆಗಳು ಈ ಆಗುಷ್ಟೆಯ ಸುತ್ತಲೂ ಒಂದು ಗುರುಟಾಕೃತಿಯಲ್ಲಿ ದಾರಿಯಲ್ಲಿ ಸುಲಭವಾಗಿ ಚಲಿಸುತ್ತವೆ ಇವುಗಳನ್ನು ಬೇಕಾದ ರೀತಿಯಲ್ಲಿ ತಿರುಗಿಸಿ ಸೂರ್ಯ ಕಿರಣಗಳನ್ನು ಹಿಡಿಯುವಂತೆ ಮಾಡಬಹುದು ಈ ಕನ್ನಡಿಗಳು ಸೂರ್ಯನ ಕಿರಣಗಳನ್ನು ಆಗುಷ್ಟೆಯ ಮೇಲೆ ಪ್ರತಿಫಲಿಸುವವು ಪ್ರತಿಫಲಿಸಿದ ಸೂರ್ಯನ ಕಿರಣಗಳು ಆಗುಷ್ಟೆಯನ್ನು ಬಿಸಿ ಮಾಡುತ್ತವೆ ಈ ಯೋಜನೆಯಿಂದ ೬೦೦೦ °F ಉಷ್ಣವನ್ನು ತಯಾರಿಸಬಹುದಂತೆ

ಬೆಂಕಿ ತಗಲದ ಸಸ್ಯಗಳು

ಅಮೇರಿಕಾದ ಕೆಲಿಫೋರ್ನಿಯಾದಲ್ಲಿ ಅನೇಕ ಅರಣ್ಯಗಳಿವೆ ಈ ಅರಣ್ಯಗಳಲ್ಲಿ ಧಾರಾಳ ಐಶ್ವರ್ಯವಿದೆ ಇವುಗಳನ್ನು ಭದ್ರವಾಗಿಡಲು ಸಂಯುಕ್ತ ಅಮೇರಿಕಾದ ಸರಕಾರದ ಅರಣ್ಯ ಇಲಾಖೆಯು ಬಹಳಶ್ರಮ ಪಡುತ್ತದೆ ಕಾಡುಗಿಚ್ಚುಗಳನ್ನು ತಡೆಯುವುದು, ಅವುಗಳ ಕಾರಣಗಳನ್ನು ಕಂಡುಹಿಡಿಯುವುದು, ಅವುಗಳಕಾರಣಕರ್ತರಾದ ಅಪಾದಿತರನ್ನುಹಿಡಿಯುವುದು ಇವೇ ಮೊದಲಾದುವುಗಳು ಈ ಇಲಾಖೆಯ ಕರ್ತವ್ಯಗಳು ಈ ಕಾಡುಗಿಚ್ಚುಗಳನ್ನು ತಡೆಯಲು, ಬೆಂಕಿ ತಗಲದ ಒಂದು ನವೀನ ತರದ ಸಸ್ಯವನ್ನು ಅಲ್ಲಿ ಓರ್ವ ಪ್ರಸಿದ್ಧ ವನಸ್ಪತಿ ಶಾಸ್ತ್ರಜ್ಞರು ಕಂಡುಹಿಡಿದಿರುವರು ಈ ಸಸ್ಯಗಳನ್ನು ಅರಣ್ಯದ ಸುತ್ತಲೂ ನಟ್ಟುಬಿಟ್ಟರೆ, ಅವು ಬೆಳೆದು, ಕಾಡ ಗಿಚ್ಚುಗಳಿಂದ ಒಳಗಿನ ಅರಣ್ಯವನ್ನು ರಕ್ಷಿಸುವವು ಉರಿಯುವ ಬೆಂಕಿಯ ಕೆಂಡಗಳನ್ನು ಈ ಸಸ್ಯಗಳ ಸಮೂಹದಲ್ಲಿ ಬಿಸಾಡಿದರೂ, ಇವುಗಳಿಗೆ ಬೆಂಕಿ ತಗಲುವುದಿಲ್ಲವಂತೆ

ವಿಮಾನಗಳಿಂದ ರಕ್ಷಣೆ

ಯುದ್ಧಕಾಲದಲ್ಲಿ ಮಾನವ ವರ್ಗವನ್ನು ನಾಶಪಡಿಸಲು ವಿಮಾನವು ಹೇಗೆ ಸಹಕಾರಿಯಾಗುತ್ತವೆಯೋ ಹಾಗೆಯೇ ಶಾಂತಸಮಯದಲ್ಲಿ ಅದು ಮನುಷ್ಯನಿಗೆ ಅಕಸ್ಮಾತ್ತಾಗಿ ಬರುವ ಸಂಕಷ್ಟಗಳಿಂದ ರಕ್ಷಣೆಗೊಳಿಸುವ ಒಂದು ಯೋಗ್ಯ ಯೋಜನೆಯಾಗಿರುತ್ತದೆ ಸಂಯುಕ್ತ ಅಮೇರಿಕಾದಲ್ಲಿ ಸಂಗ್ರಾಮ ಇಲಾಖೆಯ ವಿಮಾನಗಳು ಯುದ್ಧವಿಲ್ಲದ ಈ ಸಮಯದಲ್ಲಿ ರಕ್ಷಣಾಕಾರ್ಯಗಳಿಗೆ ಉಪಯೋಗಿಸಲ್ಪಡುತ್ತವೆ ನೆರೆಯಿಂದ ಮಾರ್ಗೋಪಾಯಗಳು ಕಡಿದುಹೋಗಿ, ಹತಾಶವಾದ ಪ್ರದೇಶಗಳಿಗೆ ಆಹಾರ ಇತ್ಯಾದಿಗಳನ್ನು ಇವುಗಳಿಂದ ಒದಗಿಸುತ್ತಾರೆ ಸಾಂಕ್ರಾಮಿಕ ರೋಗಗಳ ಹಾವಳಿಯಿರುವ ದೇಶಗಳಿಗೆ ಬೇಕಾದ ರೋಗ ನಿವಾರಣೆ ಔಷಧಿಗಳನ್ನು ಒದಗಿಸಲು (ಗಗನ ಮಂಡಳದಿಂದ) ಇವುಗಳನ್ನು ಉಪಯೋಗಿಸುತ್ತಾರೆ ಭೂಕಂಪ ಇತ್ಯಾದಿ ಭಯಂಕರ ಘಟನೆಯ ವಿವರವನ್ನು ಸರಿಯಾಗಿ ತಂದು, ಯೋಗ್ಯ ಸಂರಕ್ಷಣಾ ಉಪಾಯಗಳನ್ನು ಇವುಗಳ ಸಹಕಾರದಿಂದ ಮಾಡುತ್ತಿದ್ದಾರೆ. ಅತೀ ದೂರವಿರುವ ಪ್ರದೇಶಗಳಿಂದ ರೋಗಿಗಳನ್ನು ಬಹಳ ತ್ವರೆಯಿಂದ ವಿಶೇಷ ಚಿಕಿತ್ಸೆಗಾಗಿ ದೊಡ್ಡ ದೊಡ್ಡ ಆಸ್ಪತ್ರೆಗಳಿರುವ ಸ್ಥಳಗಳಿಗೆ ತರಲು ಇವು ಬಹಳ ಸಹಕಾರಿಯಾಗುತ್ತವೆ.

ಕುರಿಯ ಉಣ್ಣೆಯನ್ನು ಶ್ರೇಷ್ಠಗೊಳಿಸುವುದು

ಈಗ ವಾಡಿಕೆಯಲ್ಲಿರುವ ಉಣ್ಣೆಗಿಂತ ಎರಡು ಪಾಲಷ್ಟು ಗಟ್ಟಿಯಾದ, ಬಹಳ ಕಾಲ ಬಾಳುವ ಉಣ್ಣೆಯ ವಸ್ತ್ರಗಳನ್ನು ತಯಾರಿಸಲು ನವೀನವಾಗಿ ಕಂಡುಹಿಡಿದಿರುವ ಒಂದು ಉಪಾಯದಿಂದ ಸಾಧ್ಯವಾಗುವುದು ವಿಜ್ಞಾನ ರೀತಿಗಳಿಂದ ತಯಾರಾದ ಒಂದು ಆಹಾರದ ಮೇಲೆ ಕುರಿಗಳನ್ನು ಪೋಷಿಸಿದರೆ, ಅವುಗಳ ಉಣ್ಣೆಯ ಗುಣಗಳು ಶ್ರೇಷ್ಠವಾಗುತ್ತವಂತೆ ಈ ಆಹಾರವು ಕುರಿಗಳಿಗೆ ಬಹಳ ಪುಷ್ಟಿಕರವಾಗಿದೆ ಉಣ್ಣೆಯ ವ್ಯಾಪಾರಿಗಳಿಗೆ ಬಹಳ ಲಾಭವನ್ನು ಗಳಿಸುವುದು ಅನೇಕ ಶೋಧೆಗಳನ್ನು ನಡೆಯಿಸಿ ಕುರಿಗಳನ್ನು ಈ ಆಹಾರದ ಮೇಲೆ ಸಲಹಿ, ಅವುಗಳ ಉಣ್ಣೆ ತೆಗೆದು ಪರೀಕ್ಷಿಸಿ, ಈ ರೀತಿಯಲ್ಲಿ ಉಣ್ಣೆಯನ್ನು ಉತ್ತಮಗೊಳಿಸಬಹುದೆಂದು ದೃಢಮಾಡಿರುತ್ತಾರೆ

ಅಂತರಿಕ್ಷದಿಂದ ಸೇನಾಬಲವನ್ನು ಇಳಿಸುವುದು

ಇದೊಂದು ನವೀನವಾಗಿ ಕಂಡುಹಿಡಿದಿರುವ ಅನೇಕ ಸಂಗ್ರಾಮ ಯೋಜನೆಗಳಲ್ಲಿ ಒಂದಾಗಿರುತ್ತದೆ ವಿಮಾನಗಳ ಮೂಲಕ ಸೈನ್ಯ ಸಮೂಹವನ್ನು ವೈರಿ ಪ್ರದೇಶಕ್ಕೆ ಒಯ್ದು ನಂತರ ಪೆರೆಚ್ಯೂಟ ಕೊಡೆಗಳ ಮೂಲಕ ಇಳಿಸುವರು ಈ ಪೆರೆಚ್ಯೂಟ ಕೊಡೆಗಳಿಂದ ಸೈನಿಕರು ಪಕ್ಷಿಗಳಂತೆ ಹಾರಾಡಿ ಮೆಲ್ಲನೆ ಭೂಮಿಯನ್ನು ಸೇರುವರು ನಂತರ ವೈರಿಗಳಿದ್ದಲ್ಲಿ ಧಾವಿಸುವರು ಈ ಬಗೆಯ ಯುದ್ಧ ಕ್ರಮಗಳಲ್ಲಿ ರಷ್ಯವು ತನ್ನ ಸೈನ್ಯ ಮಂಡಳವನ್ನು ತರಬೇತು ಮಾಡುತ್ತಿದೆ ಅಸಂಖ್ಯಾತ ವಿಮಾನಗಳು ಈ ಯೋಜನೆಗಾಗಿ ಸಿದ್ಧವಾಗಿವೆ

ಆಯಾಸ ಕೊಡದ ಸೈಕಲ್

ಆಯಾಸವಿಲ್ಲದೆ ಪ್ರಯಾಣ ಮಾಡಲು ಸಾಧ್ಯವಾಗುವ ಸೈಕಲ್‌ಗಳನ್ನು ತಯಾರಿಸುವ ಕಾರ್ಯದಲ್ಲಿ ಅನೇಕ ವಿಜ್ಞಾನಿಗಳು ಮಗ್ನರಾಗಿ ವಿವಿಧ ತರದ ಅಯಾಸವನ್ನು (ಶ್ರಮವನ್ನು ಕಡಿಮೆ ಮಾಡುವ) ಯೋಜನೆಗಳನ್ನು ಕಂಡುಹಿಡಿದಿರುವರು. ಆದರೆ, ಅವುಗಳು ಯೋಗ್ಯವಾದವುಗಳೆಂದು ಹೇಳಲಾಗುವುದಿಲ್ಲ ಆದರೆ, ಏನೂ ಆಯಾಸವಿಲ್ಲದೆ ಸುಲಭವಾದ ರೀತಿಯಲ್ಲಿ ಏರುಗಳಲ್ಲಿ ಸಂಚಾರ ಮಾಡಲು ಯೋಗ್ಯತೆಯುಳ್ಳ ಒಂದು ನವೀನ ತರದ ಸೈಕಲ್ ರಚನೆಯಾಗಿರುತ್ತದೆ ಪೆಡಲ್ ಚಕ್ರದ ಹೊರತು ಮಿಕ್ಕವೆಲ್ಲಾ ವಿಚಾರಗಳಲ್ಲಿ ಈ ಸೈಕಲ್ಲು ಈಗ ವಾಡಿಕೆಯಲ್ಲಿರುವ ಸೈಕಲ್‌ನಂತಿದೆ ಉರುಟಾದ ಪೆಡಲ್ ಚಕ್ರದ ಬದಲಾಗಿ, ಮೊಟ್ಟೆಯ ಆಕೃತಿಯ ಪೆಡಲ್ ಚಕ್ರವನ್ನು ಇದರಲ್ಲಿ ಉಪಯೋಗ ಮಾಡಿರುತ್ತಾರೆ ಈ ಮೊಟ್ಟೆಯಾಕೃತಿಯ ಪೆಡಲ್ ಚಕ್ರದಿಂದ ಸೈಕಲ್ ಸಂಚಾರ ನಿರಾಯಾಸಕರವಾಗುವುದಂತೆ

ಬಿಸಿಯಾದ ಐಸು

ಭಯಂಕರ ಅದಷ್ಟಗಳಿಗೆ ಜಾವಾಗಲೂ ತುತ್ತಾಗಿ, ೭೦,೦೦೦ ಪೌಂಡ್ ಗಳ ಒತ್ತಾಟವನ್ನು ತಯಾರಿಸುವ ಒಂದು ವಿಚಿತ್ರ ಯಂತ್ರವನ್ನು ಓರ್ವ ಅಮೇರಿಕನ್ ವಿಜ್ಞಾನಿಯು ರಚನೆ ಮಾಡಿರುವನು. ಈ ಒತ್ತಾಟಕ್ಕೆ ಒಳಗಾದ ಅನೇಕ ವಸ್ತುಗಳು ವಿಚಿತ್ರ ಸ್ಥಿತಿಯನ್ನು ಹೊಂದಿವೆ ಕಾಗದ, ರಬ್ಬರ್, ವಸ್ತ್ರ ಇತ್ಯಾದಿಗಳು ಎಲುಬಿನ ಸಾಮಾನುಗಳಂತಾಗಿವೆ ಈ ಒತ್ತಾಟಕ್ಕೆ ಒಳಪಡಿಸಿದ ನೀರು ಒಂದು ವಿಚಿತ್ರ ತರದ ಐಸಾಗಿ ಬದಲಾವಣೆ ಹೊಂದುತ್ತಿದೆ—ಬಿಸಿಯಾದ ಐಸು ಸಿದ್ಧವಾಗುತ್ತದೆ. ಈ ಯಂತ್ರದಿಂದ ಮಾಪಕ್ಕೂ ಪ್ರಮಾಣದ ಒತ್ತಾಟವನ್ನು ನಿರ್ಮಿಸಬಹುದು

ತೋಟಗಳಿಂದ ಹತ್ತಿ ಕಿತ್ತುವ ಯಂತ್ರ

ಕೆಲಸವನ್ನು ಕಡಿಮೆ ಮಾಡಲು, ಮಜೂರರ ಸಂಖ್ಯೆಯನ್ನು ಕಡಿಮೆ ಮಾಡಲು,—ಅಮೇರಿಕಾದ (ದಕ್ಷಿಣ) ಒಂದು ಹತ್ತಿಯ ತೋಟದಲ್ಲಿ, ಹತ್ತಿಯನ್ನು ಕಿತ್ತು ಒಟ್ಟುಗೂಡಿಸುವ ಒಂದು ಯಂತ್ರವನ್ನು ತಯಾರಿಸಿರುವರು. ಈ ಯಂತ್ರದಿಂದ ೩ ತಾಸಿನೊಳಗೆ ೬೦೦ ರಾತ್ಲು ಹತ್ತಿಯನ್ನು ಕಿತ್ತು ತೆಗೆಯಬಹುದು ಮಜೂರರು ಇದೇ ಸಮಯದಲ್ಲಿ ೩೦ ರಾತ್ಲುಗಳನ್ನು ಮಾತ್ರ ತೆಗೆಯಬಲ್ಲರು ಕಿತ್ತು ತೆಗೆದ ಹತ್ತಿಯನ್ನು ಒಂದು ಚೀಲದೊಳಗೆ ಶೇಖರಿಸುತ್ತದೆ. ಈ ತರದ ಅನೇಕ ಯಂತ್ರಗಳನ್ನು ತಯಾರಿಸಿ ಹತ್ತಿ ತೆಗೆಯುವ ಕಾರ್ಯಕ್ಕೆ ಉಪಯೋಗಿಸುವರಾಗಿ ತಿಳಿದುಬರುತ್ತದೆ—ನಿರುದ್ಯೋಗಕ್ಕೆ ಇನ್ನೊಂದು ಕಾರಣ.

ಅರಿಸಿ ತೆಗೆದುದು

ಸಾಧಾರಣ ಪ್ರಮಾಣದ ೧೪ ಸಾವಿರ ಇರುವೆಗಳ ತೂಕವು ಒಂದು ರಾತ್ಲು ಆಗುವುದು

ನಮ್ಮ ದೇಹದೊಳಗಿರುವ ಮಯಣವು ಅದರಲ್ಲಿರುವ ದ್ರಾವಕಗಳನ್ನು ಆವಿಯಾಗದಂತೆ ರಕ್ಷಿಸುತ್ತದೆ

ಆನೆಗಳಿಗೆ ದೂರಕ್ಕೆ ಕಾಣಿಸುವುದಿಲ್ಲ

ವಿದ್ಯುಶ್ಛಕ್ತಿಯಿಂದ ಮನುಷ್ಯ ದೇಹದ ಮೂಲಕ ಇಷ್ಟರತನಕ 167 ಬೆಂಕಿ ಅನಾಹುತಗಳು ನಡೆದಿವೆ

ಅಮೇರಿಕಾದ ಕೆಂಟಕಿ ಎಂಬಲ್ಲಿ ಒಂದು ಸಿಡಿಲು 19 ನಿಮಿಷಗಳ ತನಕ ಗರ್ಜಿಸಿತು

ಕುರಿಯ ಮೀಸೆಗಳನ್ನು ಕಂಬಳಿ, ಮತ್ತು ಜಮಖಾನದ ತಯಾರಿಯಲ್ಲಿ ಉಪಯೋಗಿಸುತ್ತಾರೆ

೧೮ನೇ ಪುಟದಿಂದ ಮುಂದುವರಿದುದು)

ವಿಕಾಸನೆಗೆ ದೊರಕಿರುತ್ತವೆ 'ವಿಕಾಸನೆ'ಯ ಕುರಿತು ಹಲವು ಗ್ರಂಥಗಳು ಹೊರಟಿವೆ ಇಂಗ್ಲಾಂಡಿನ 'ಡಾರ್ವಿನ್' ಎಂಬ ಶ್ರೇಷ್ಠ ವಿಜ್ಞಾನಿಗಳು ತನ್ನ ಸಂಪೂರ್ಣ ಜೀವಮಾನವನ್ನು ಈ ಕುರಿತು ಸತ್ಯಶೋಧನೆ ಮಾಡುವುದರಲ್ಲಿ ಕಳೆದು 'ವಿಕಾಸನೆ'ಯು ಈ ಸೃಷ್ಟಿಗೆ ಮೂಲ ಕಾರಣವೆಂಬುದನ್ನು ದೃಢಮಾಡಿದರು ಹೀಗೆ ಅಮೇರಿಕಾ, ಜರ್ಮನಿ ಇತ್ಯಾದಿ ದೇಶಗಳ ಪ್ರಸಿದ್ಧ ವಿಜ್ಞಾನಿ 'ವಿಕಾಸನೆ'ಗೆ ಅನೇಕ ಆಧಾರಗಳನ್ನು ಕಂಡುಹಿಡಿದಿರುವರು

ಸೃಷ್ಟಿಯ ಕುರಿತು ನಾವು ಮೇಲಿನ ಅಭಿಪ್ರಾಯಪಟ್ಟರೆ ನಾವು ದೇವಭ್ರಷ್ಟರಾಗುವೆವೆ? ದೇವರನ್ನು ಪ್ರಾರ್ಥಿಸಲು ನಾವು ಪ್ರಾಚೀನ ಕಾಲದ ಅಂಧಶ್ರದ್ಧೆಯ ಅಂಧಕಾರದಲ್ಲೇ ಇರಬೇಕೆ? ಆತನ ಮಹಿಮೆಯ ಕುರಿತು ನವೀನ ಸಂಗತಿಗಳನ್ನು ತಿಳಕೊಳ್ಳಬಾರದೆ? ಪ್ರಪಂಚದ ಧರ್ಮಗಳಿಗೆ ಈ ರೀತಿಯ ಸತ್ಯ ಶೋಧೆಗಳಿಂದ ಹಾನಿ ಬರುವುದೆ? ಬದಲಾಗಿ, 'ಧರ್ಮ'ಗಳ ಯೋಗ್ಯತೆಗಳು ಇನ್ನೂ ಮಿಗಿಲಾಗುವುವು ಗತಿಸಿದ ಕಾಲದ ಸತ್ಯಗಳು ಮಾತ್ರ ಧರ್ಮವಲ್ಲ ಕಾಲಚಕ್ರದೊಡನೆ ನಡೆದು ನವ ಸತ್ಯಶೋಧೆಗಳಿಂದೊಡಗೂಡಿ ಮುಂದುವರಿಸುವ ಧರ್ಮವೇ ಶ್ರೇಷ್ಠವಾದುದು ಧರ್ಮದ ಆಧಾರವು ಶಾಸ್ತ್ರದ ಪುಸ್ತಕಗಳಲ್ಲ ಮನುಷ್ಯನ ಅತ್ಮವೆ ಅದಕ್ಕೆ ಮುಖ್ಯ ಆಧಾರ ದೇವರ ಸೃಷ್ಟಿಯು ಚಿರಂಜೀವಿ—ವಿಕಾಸನೆ ಬಿಡುತಿಲ್ಲದೆ ಮುಂದುವರಿಯುವುದು ಎಂಬ ಭಾವನೆಯೂ ಆ ಆತ್ಮವನ್ನು ಇನ್ನೂ ಶುದ್ಧಗೊಳಿಸುವುದು

'ವಿಕಾಸನೆ'ಯಿಂದ ದೇವರೆಂಬ ಭಾವನೆಯು ಮೂಲೆಗೆ ಹೋಗುವುದೆಂದು ಕೆಲವರ ಮಾತು ಅದು ತಪ್ಪು ಭಾವನೆ 'ವಿಕಾಸನೆ'ಯು ದೇವ ಮಹಿಮೆಯು ವಿಕಾಸನೆಯಿಂದ ಕೆಲವು ಶ್ರೇಷ್ಠ ಸತ್ಯಗಳು ಹೊರಬಂದಿವೆ ಕೆಲವು ಕ್ರಮಗಳು ನಮಗೆ ತಿಳಿದಿವೆ. ಇದರಿಂದ ದೇವರ ಕುರಿತು ಸತ್ಯಗಳು, ದೇವರ ಅಪಾರ ಶಕ್ತಿಯು ನಮಗೆ ತಿಳಿದುಬಂದಿದೆ

ಲೋಧ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಕೇರಿ ದಾಟ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಎರಡು ಸೈಜಿನಲ್ಲಿ ದೊರೆಯುತ್ತದೆ **ಲೋಧ್ರ** ರೂ. 3 ಮತ್ತು 1—10—0

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದ್ರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು -

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಜಾಹೀರಾತು.

ಎಲ್ಲಾ ಆಯುರ್ವೇದಿಯ ಔ(ಷಧಿಗಳ)
ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಶಾಲೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ಶಾಸ್ತ್ರೋಕ್ತ ರೀತಿ ಸದ್ಗುಣವ ಹೊಂದಿದ ಎಲ್ಲಾ ಔಷಧ ಮಾತ್ರೆಗಳನ್ನು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಅಭಿವೃದ್ಧಿಗೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟ್ ಮಂಗಳೂರು, ದ. ಕ.

ರೈಲು ಬಂಡಿಗಳ ಸಮಯ.

ಗಾಡಿಗಳು,	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9.50	ಸಂಜೆ 4.20
ಮಿಕ್ಸೆಡ್	,, 5.55	ರಾತ್ರಿ 8.50
ಫಾಸ್ಟ್ ಪೆಸೆಂಜರ್	ಮ. 12.45	ಮ. 2.40
ಶಟಲ್	ಸಂಜೆ 5.25	ಬೆಳಿಗ್ಗೆ 9.25
ಕಾಂಞಂಗಾಡ್ ಪೆಸೆಂಜರು	ಬೆ. 8.25	ಮ. 1.20
ಕಾಸರಗೋಡು ಪೆಸೆಂಜರು	ಸಂಜೆ 8.20	ಸಂಜೆ 6.15

Ested 1920] THE [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ:

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5 ರಂತೆ, 6 ತಿಂಗಳಿಗೆ ಶೇಕಡಾ 6 ರಂತೆ, 12 ತಿಂಗಳಿಗೆ ಶೇಕಡಾ 6½ ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4 ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವುವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur,
Dated 10 – 4 – 1935.

G. N. Lakshman Pai,
Secretary.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು. ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಪಡಿಸಲ್ಪಡುವುದು.

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು:— ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

First And Foremost

FIRST AND FOREMOST among the ideals of the Canara Bank is the ideal of Service to its Customers

ESTD. 1906

CANARA BANK

LIMITED.

ಚಿತ್ರಾಕೃತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ–ಊರ್ಧ್ವಪುಂಡ್ರ–ಮುದ್ರಾಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ. ಎಂ. ನರಸಿಂಗರಾವ್, ಬಿ. ಎ. ಎಂ. ಎಲ್. ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ. ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಟ್ಟಿಗೆ ತಕ್ಕೊಳ್ಳುವವರಿಗೆ ಒಳ್ಳೆಯ ರಿಯಾಯಿತಿ.

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್‌ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು—

ಬನ್ನಿರಿ ಅಥವಾ ಬರೆಯಿರಿ

ವಿದೇಶ ವಾರ್ತೆಗಳು.

ಅಮೇರಿಕಾದ ಮೆಕ್ಸಿಕೊ ನಗರದಲ್ಲಿ, ಜರ್ಮನಿಯಿಂದ ಭೂಪ್ರವಾಸಕ್ಕೆ ಬಂದ ಒಂದು ದೊಡ್ಡ ವಿಮಾನವು, ಬೆಂಕಿ ತಗಲಿ, ಸ್ಫೋಟನವಾಗಿ, ನೆಲಕ್ಕೆ ಉರುಳಿತು. 14 ಜನರು ಮಡಿದಿರುವರು ಮಡಿದವರಲ್ಲಿ ಜರ್ಮನಿಯ ಕೆಲವು ಪ್ರಸಿದ್ಧ ಪುರುಷರಿದ್ದರಂತೆ

ಇಂಗ್ಲಾಂಡಿನ ಹೆಂಪ್ ಶಾಯರಿನ ಲಿಂಡ್ ಹರ್ಸ್ಟ್ ವೆಂಬಲ್ಲಿ ಇನ್ನೊಂದು ವಿಮಾನವು ಡಿಕ್ಕಿ ಬಡೆದು, ಐವರು ಮೃತರಾಗಿರುವರು. ಇದು ಯುದ್ಧ ವಿಮಾನವಂತೆ ರಾತ್ರಿ ಕಾಲದ ಯುದ್ಧ ಕ್ರಮದಲ್ಲಿ ತರಬೇತು ಹೊಂದುತ್ತಿರುವಾಗ ಈ ಅಪಘಡವು ನಡೆಯಿತ್ತೆಂದು ತಿಳಿದುಬರುತ್ತದೆ

ಜರ್ಮನಿಯ ಶ್ರೇಷ್ಠ ವಾಯು ನೌಕೆ 'ಹಿಂಡನ್ ಬರ್ಗ' ಎಂಬ ಜೆಪ್ಲೀನ್ನಿಗೆ, ಅದರ ಪ್ರಥಮ ದಕ್ಷಿಣ ಸಂಚಾರದಲ್ಲೊಂದು ಸಣ್ಣ ಅಪಘಡ ಉಂಟಾಯಿತು ಹೆಚ್ಚಿನ ಹಾನಿಯಾಗಲಿಲ್ಲವಂತೆ ಈ ನೌಕೆಯಲ್ಲಿ 150 ಜನರು ಪ್ರಯಾಣಮಾಡಬಹುದು

ಆಂಗ್ಲೇಯ ಸಮುದ್ರ ಪ್ರದೇಶದಲ್ಲಿ, ಒಂದು ಫ್ರೆಂಚ ವ್ಯಾಪಾರ ಹಡಗವು ಮುಳುಗಿತು (1145 ಟನ್ನ ತೂಕ) ಇದರಿಂದ 18 ಜನರನ್ನು ರಕ್ಷಣೆ ಮಾಡಿರುವರು ಇತರರನ್ನು ಹುಡುಕಾಡುತ್ತಿದ್ದಾರೆ

ಪ್ರಪಂಚದ ವ್ಯಾಪಾರದಲ್ಲಿ ಸ್ವಲ್ಪ ವೃದ್ಧಿ ಕಾಣಿಸುತ್ತದೆಂದು, ಜನಾಂಗ ಮಂಡಳದ, ಬುಲ್ಲೇಟಿನಿಂದ ತಿಳಿದುಬರುತ್ತದೆ

ಬ್ರಿಟನಿನ ಪ್ರಮುಖ ನೌಕೆಯಾದ,'ಕ್ವೀನ್ ಮೇರಿ'ಯ ಪರೀಕ್ಷಾ ಪ್ರಯಾಣವು ಮೊನ್ನೆ ನಡೆಯಿತು ಈ ಸಮಾರಂಭದಲ್ಲಿ ಬಹಳ ಜನಸಮುದಾಯವು ನೆರೆದಿತ್ತೆಂದು ತಿಳಿದು ಬರುತ್ತದೆ

ಹಬಸಿ ರಣರಂಗದ ಜಿಜಿಗಾ ಎಂಬಲ್ಲಿ ಇಟೇಲಿಯಾನ ವೈಮಾನಿಕರು, ಬೊಂಬುಗಳಿಂದ ಬಹಳ ಹಾನಿ ನಡೆಯಿಸಿರುವರು ಉಪಶಮನಾ ಸಂಸ್ಥೆಗಳಾದ ಅನೇಕ ರೆಡ್ ಕ್ರಾಸ್ ಆಸ್ಪತ್ರೆಗಳು ಧ್ವಂಸವಾಗಿವೆ

ಫ್ರಾನ್ಸಿನ ಆರ್ಥಿಕ ವ್ಯವಸ್ಥೆಯಲ್ಲಿ,ವಿಷಮ ಪರಿಸ್ಥಿತಿ ಉಂಟಾಗಿದೆಂದೂ ಅದನ್ನು ನಿವಾರಿಸಲು, ಫ್ರೆಂಚ ಸರಕಾರವು ಅನೇಕ ಉಪಾಯಗಳನ್ನು ಹೂಡುವುದೆಂದು ವಾರ್ತೆ

ಜರ್ಮನಿಯ ಅರ್ಥ ಪ್ರವೀಣರಾದ, ಹಿಟ್ಲರರ ಮತಾವಲಂಬಿಗಳಾದ, ಮತ್ತು ಎಡಕ್ಕೆಯಂತಿರುವ, ಜರ್ಮನಿಯ ಎಲ್ಲಾ ನವೀನ ಸಮಸ್ಯೆಗಳಿಗೆ ದ್ರವ್ಯ ಒದಗಿಸಿದ, ಜರ್ಮನಿಯ ರ್‍ಯಾಶ್ಚ ಬೇಂಕಿನ ಅಧ್ಯಕ್ಷರಾದ ಡಾ ಸ್ಕಾಚ್ಟರು ತಮ್ಮ ಹುದ್ದೆಗೆ ರಾಜಿ ಕೊಟ್ಟಿರುವರು ಸಾಂಪತ್ತಿಕ ವ್ಯವಹಾರ ಸಚೀವರಾಗಿ, ತನ್ನ ಕಾರ್ಯವನ್ನು ಸರಿಯಾಗಿ ನಡೆಯಿಸಲು ಸರಿಯಾಗದುದರಿಂದ ಹೀಗೆ ನಡೆಸಿದರೆಂದು ತಿಳಿದು ಬರುತ್ತದೆ

ರಷ್ಯಾ ಫ್ರಾನ್ಸು ಒಪ್ಪಂದದ ಸ್ಥಿರಪತ್ರವು ಜ್ಯಾರಿಗೆ ಬಂದಿರುತ್ತದೆ

ಯೂರೋಪಿನ ಮಾರ್ಸಲೆ ಎಂಬಲ್ಲಿ, ಅಂತರಿಕ್ಷದಲ್ಲಿ ಹಾರಾಡುತ್ತಿರುವ ಎರಡು ವಿಮಾನಗಳು, ಒಂದಕ್ಕೊಂದು ಬಡೆದಾಡಿ, ಇಬ್ಬರು ಮೃತರಾಗಿರುವರು, ಮೃತರಾದವರಲ್ಲಿ, ಓರ್ವ ಸ್ತ್ರೀ ಡಾಕ್ಟರಳಂತೆ

ತಾಮ್ರವು ಅತಿರೇಕವಾಗಿ ತಯಾರಾಗುವುದರಿಂದ, ಅದರ ಧಾರಣೆಯು, ಭಯಂಕರ ರೀತಿಯಲ್ಲಿ ಇಳಿದು, ವ್ಯಾಪಾರವೆ ಹಾಳಾಗುವುದರಿಂದ, ಈ ಸಂಕಷ್ಟವನ್ನು ತಪ್ಪಿಸಲು, ತಾಮ್ರದ ತಯಾರಿಯನ್ನು ಕಡಿಮೆಮಾಡಲು ಒಂದು ಅಂತರಾಷ್ಟ್ರೀಯ ಪರಿಷತ್ತು ಲಂಡನಿನಲ್ಲಿ ಜರಗುವ ಏರ್ಪಾಡುಗಳಾಗುತ್ತಿವೆ

ಇಂಗ್ಲಾಂಡಿನ 1931ರಲ್ಲಿ ರೈಲ್ವೆ ಕೆಲಸಗಾರರಕೂಲಿಗೆ ಹೂಡಿದ ಕಡಿತವು ಅರ್ಧ ವಾಪಿತೆಗೆಯಲಾಗುವುದೆಂದು ವಾರ್ತೆ ಕೆಲಸಗಾರರ ಸಂಘಗಳಿಗೂ, ರೈಲ್ವೆ ಸಂಸ್ಥೆಗಳಿಗೂ, ನಡೆದ ಮಾತುಕತೆಗಳ ಫಲಿತಾಂಶವಿದು

ಇಟೇಲಿಯ ರೋಮಿಯಲ್ಲಿ ಒಂದು ಯುದ್ಧ ವಿಮಾನವು ಹಾರಾಡುತ್ತಿರುವಾಗ, ಯಂತ್ರ ಚಲನವು ಘಕ್ಕನೆನಿಂತು, ನೆಲಕ್ಕೆ ಡಿಕ್ಕಿ ಬಡೆದು, ಮೂವರು ಮೃತರಾಗಿರುವರು ವಿಮಾನವು ಸುಟ್ಟು ಬೂದಿಯಾಯಿತು ಮಡಿದವರಲ್ಲಿ ಓರ್ವ ಸಂಗ್ರಾಮಾಧಿಕಾರಿಗಳಿದ್ದರಂತೆ

ಸಂಯುಕ್ತ ಅಮೇರಿಕಾದ ನಿರುದ್ಯೋಗಿಗಳ ಸಂಖ್ಯೆಯು, 9,815,000 ಇದು ಫೇಬ್ರುವರಿಯ ಸಂಖ್ಯೆಗಿಂತ ಕಡಿಮೆ ಎಂದು ತಿಳಿದು ಬರುತ್ತದೆ

ಐರ್‍ಲೆಂಡಿನ ನಾಯಕರಾದ ಡಿವೆಲರರು 'ಕೆಟರಾಕ್ಟ್' ಎಂಬ ಕಣ್ಣು ರೋಗ ಪೀಡಿತರಾಗಿರುವರೆಂದೂ, ಅವರ ಕಣ್ಣು ಶಸ್ತ್ರಚಿಕಿತ್ಸೆ ನಡೆದಿದೆಂದೂ ವಾರ್ತೆ

ಬ್ರಿಟಿಷ ಸಾಮ್ರಾಟರು, ಡೆನ್ ಮಾರ್ಕಿನ ರಾಜಕುಟುಂಬ 21 ವಯಸ್ಸಿನಓರ್ವ ಕನ್ನೆಯರನ್ನು ವಿವಾಹವಾಗುವರಾಗಿ ವಾರ್ತೆಯು, ಇಂಗ್ಲಾಂಡಿನಲ್ಲಿ ಹರಡಿರುತ್ತದೆ

ಇಂಗ್ಲಾಂಡಿನಲ್ಲಿ, ದಾರಾಳ ಎಣ್ಣೆ ಒದಗಿಸುವ ಎಣ್ಣೆಯ ಬಾವಿಗಳನ್ನು ಪೋರ್ಟ್ಸ್ ಮಾತ ಎಂಬಲ್ಲಿ ತೋಡುವ ಕಾರ್ಯವು ಬೇಗನೆ ಪ್ರಾರಂಭವಾಗುವುದು ಈ ಯೋಜನೆಯನ್ನು ಪ್ರಾರಂಭಿಸುವ ಸಮಾರಂಭವು ಖನಿಜಗಳ ಮುಖ್ಯೋದ್ಯೋಗಸ್ಥರ ನೇತೃತ್ವದಲ್ಲಿ ನಡೆಯುವುದಂತೆ

ಪ್ರಪಂಚದ ಸಾಮಾಜಿಕ ಉನ್ನತಿಯ ಆಲೋಚಿಸಲು, ಅಂತರಾಷ್ಟ್ರೀಯ ಪರಿಷತ್ತು ಈ ಭಾರಿ ಯೂರೋಪಿನ ಪ್ರೇಗ್ ಪಟ್ಟಣದಲ್ಲಿ ಜರಗಿಸಬೇಕಾಗಿ ಗೊತ್ತಾಗಿರುತ್ತದೆ ಸಾಮಾಜಿಕ ಪ್ರಗತಿಯ ಬಗ್ಗೆ ಅನೇಕ ನವ ಸಂಗತಿಗಳು ಇಲ್ಲಿ ಚರ್ಚಿಸಿ, ಠರಾವುಗಳಾಗುವವು

ವಿದ್ಯಾಶಾಲೆಗಳನ್ನು ಕುರಿತಾದ

ಕೆಲವು ಅಂಕಸಂಖ್ಯೆಗಳು ಕೌನ್ಸಿಲಿನಲ್ಲಿ ಹೊರಬಿದ್ದಿವೆ ಈ ಅಂಕೆಗಳಿಂದ ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸವು ಪ್ರಗತಿಯನ್ನು ಹೊಂದುತ್ತಿರುವುದಾಗಿ ಸೂಚಿತವಾಗಿದೆ 1930 31ರಲ್ಲಿ 50121 ಎಲಿಮೆಂಟರಿ ಶಾಲೆಗಳಿದ್ದು, ಅವುಗಳಲ್ಲಿ 22,95,256 ವಿದ್ಯಾರ್ಥಿಗಳಿದ್ದರು ಕಳೆದ ವರ್ಷ ಶಾಲೆಗಳ ಸಂಖ್ಯೆ 48787 ಆಗಿದ್ದಿತಾದರೂ, ವಿದ್ಯಾರ್ಥಿಗಳ ಸಂಖ್ಯೆಯು 24,70,410 ಆಗಿದ್ದಿತು ಯಾವುದೊಂದು ಬಗೆಯಲ್ಲಿ ಸರಕಾರದ ಒತ್ತಾಯವಿರದೆ ಡೆಂಪಿಯೆನ್ ಸ್ಕೀಮನ್ನು ಹಲವೆಡೆಗಳಲ್ಲಿ ಜನರೇ ಜ್ಯಾರಿಗೆ ತಂದಿರುವ ಪ್ರಯುಕ್ತ, ಶಾಲೆಗಳ ಸಂಖ್ಯೆ ಕಡಿಮೆ, ವಿದ್ಯಾರ್ಥಿಯರ ಸಂಖ್ಯೆ ಹೆಚ್ಚಾಗುವಂತಾಯಿತು. ಇಂಡಿಯಾದ ಇತರ ಯಾವ ಪ್ರಾಂತ್ಯಕ್ಕಿಂತಲೂ ಅಕ್ಷರಸ್ಥರ ಸಂಖ್ಯೆ ಈ ಸಂಸ್ಥಾನದಲ್ಲಿ ಹೆಚ್ಚಾಗಿದೆ. ಜನಸಂಖ್ಯೆಯಲ್ಲಿ ನೂರಕ್ಕೆ 16ರಂತೆ ಇಲ್ಲಿಯೂ, 15⅓ಯಂತೆ ಬಂಗಾಳದಲ್ಲೂ, 15ರಂತೆ ಬೊಂಬಾಯಿಯಲ್ಲೂ ಗಂಡಸರು ಅಕ್ಷರಸ್ಥರು ಬಂಗಾಳ ಬೊಂಬಾಯಿ ಮದ್ರಾಸು ಪ್ರಾಂತಗಳಲ್ಲಿ ಸ್ತ್ರೀಯರಲ್ಲಿ ಅಕ್ಷರವನ್ನಿವರು ಸಾವಿರದಲ್ಲಿ 270-268 259 ರಂತಿರುವರು "ಇತರ ಸಮಾಜದವರು ಏನೇ ಎಂದರೂ ಮುಸ್ಲಿಮರು ವಿದ್ಯಾ ಇಲಾಖೆಯಲ್ಲಿ ಅವರಿಗೆ ಸಿಕ್ಕಿರುವ ಸೌಕರ್ಯಗಳನ್ನು ಕುರಿತಾಗಿ ಮಂತ್ರಿಗಳನ್ನು ದೂರುವುದಕ್ಕಿಲ್ಲ" ಎಂದು ಮಂತ್ರಿಗಳೇ ಹೇಳಿರುವರು ಅಸ್ಪೃಶ್ಯರನ್ನು ಸೇರಿಸಿಕೊಳ್ಳದ ಶಾಲೆಯ ಮಂಜೂರಾತಿಯೇ ರದ್ದಾಗುವುದೆಂದ ಬಳಿಕ, ಅಸ್ಪೃಶ್ಯರನ್ನು ಸಹ ಮಂತ್ರಿಗಳು ಆದರಿಸಿರುವರು. ಮಿಶ್ಯನ್ ಶಾಲೆಗಳು ಮಾಡಿರುವ ಮಹದುಪಕಾರವನ್ನು ಕುರಿತು, ಕೃತಜ್ಞತೆ ತೋರಿಸಬೇಕಾಗಿದೆ ವಿನಾ ಅವುಗಳನ್ನು ಕುರಿತು ಟೀಕಿಸುವುದು ನ್ಯಾಯವಾಗಿಲ್ಲವೆಂದೂ ಅವರ ಅಭಿಪ್ರಾಯ ಉಳಿದ ಸಮಾಜಗಳವರು ಮಾತ್ರ ದೂರಬಹುದು ದೂರುತ್ತಿರಲಿ, ಬಾಧಕವಿಲ್ಲ.

ಹಿಟ್ಲರನೇ ಜರ್ಮನಿಯು!

ಸಂಗ್ರಾಮಧಿಕಾರ ಸಂಭಾಷಣೆ!

ಹಬಸಿಗಳ ಮೇಲೆ ಬೊಂಬಿನ ಹಾವಳಿ

ಜರ್ಮನಿಯಲ್ಲಿ ಚುನಾವಣೆ

ಹಿಟ್ಲರನಿಗೆ ಅಧಿಕ ಮತಗಳು ದೊರಕಿವೆ ಈತನ ವರ್ತನೆಗೆ ಸಮಸ್ತ ಜರ್ಮನಿಯ, ಶೇ ೯೯ರ ಸಲಿ, ಜನರ ಅಭಿಮತವು ದೊರಕಿರುತ್ತದೆ ಓಟರರ ಪಟ್ಟಿಯಲ್ಲಿರುವ ಹೆಸರುಗಳು ೪೫,೪೦೪,೦೦೦ (ಒಟ್ಟು ಜನಸಂಖ್ಯೆ ೬೫ ಮಿಲಿಯ), ಉಪಯೋಗವಾದ ಓಟುಗಳು, ೪೪,೯೩೭,೨೬೦ ನಾಜಿಗಳಿಗೆ ವಿರೋಧವಾಗಿ ಉಪಯೋಗಿಸಲ್ಪಟ್ಟ ಓಟುಗಳು ೫೪೨,೦೦೦ ಹಿಟ್ಲರನಿಗೆ ಸಿಕ್ಕಿದ ಓಟುಗಳು ಶೇ ೯೮ ೭೯ ಸಲಿ ಚುನಾವಣೆಯು ಬಹಳ ವಿಜೃಂಭಣೆಯಿಂದ ನಡೆಯಿತು ಜಗತ್ತಿನ ಮಹತ್ತಾದ, 'ಹಿಂಡೆನ್ ಬರ್ಗ' ಮತ್ತು 'ಗ್ರೆಫ್' ಜೆಪ್ಲಿನ್ ಎಂಬ ಎರಡು ವಾಯು ನೌಕೆಗಳು, ಈ ಚುನಾವಣೆಯಲ್ಲಿ ಉಪಯೋಗವಾಗಿದ್ದುವು ನವೀನವಾದ 'ಹಿಂಡನ್ ಬರ್ಗ'ನಲ್ಲಿ ೧೦೪ ಮಂದಿಗಳು ರ್‍ಯಾನ್ ಲೆಂಡಿನಿಂದ, ಸಾರ್ ಪ್ರದೇಶಕ್ಕೆ ಪ್ರಯಾಣ ಬೆಳಸಿ, ಹಿಟ್ಲರನಿಗೆ ಮತವಿತ್ತರು ರಾಜಕೀಯ ಸ್ಥಿತಿಯನ್ನು ಉತ್ತಮಗೊಳಿಸುವೆನೆಂದು ಈ ಚುನಾವಣೆಯಲ್ಲಿ ಹಿಟ್ಲರನ ವಾಗ್ದಾನವಾಗಿದೆ

ಹರಾರ್ ನಗರವನ್ನು ಸಂಪೂರ್ಣ ಕೆಡಿಸಿಬಿಟ್ಟರು

ಎಥಿಯೋಪಿಯಾದ ಒಗಡನ್ ಪ್ರದೇಶದ, ಹಬಸಿ ಚಕ್ರವರ್ತಿಯರ ಜನ್ಮಸ್ಥಾನವಾದ ಹರಾರ್ ನಗರದ ಮೇಲೆ ಇಟಲಿಯಾನರ ೩೦ ವಿಮಾನಗಳು, ಬೊಂಬುಗಳಿಂದ ಭಯಂಕರ ದಾಳಿ ನಡೆಸಿದವು ಸಂಪೂರ್ಣ ನಗರವು ೩ ತಾಸುಗಳ ತನಕ ಉರಿದಿರುತ್ತದೆ ಮನೆಮಠಗಳೆಲ್ಲಾ ನೆಲಸಮವಾಗಿವೆ ಗುಡ್ಡಗಳಿಗೆ ಪಲಾಯನ ಮಾಡಿದ ನಿವಾಸಿಗಳ ಹೊರತು ನಗರದಲ್ಲಿ ಸಿಲುಕಿದವರು ಮೃತರಾಗಿರುವರು ಇತ್ತೀಚೆಗೆ ಹಬಸಿ ರಣರಂಗದಲ್ಲಿ ಇಟಲಿಯಾನರ ಬೊಂಬುಗಳ ಹಾವಳಿಯು ಅತಿರೇಕವಾಗಿ ಹೆಚ್ಚಿವೆ

ಯುದ್ಧ ಪ್ರಕರಣ,

(೧೩ನೇ ಪುಟದಿಂದ ಮುಂದುವರಿದುದು)

ಸಂಗ್ರಾಮಧಿಕಾರಿಗಳ ಸಂಭಾಷಣೆಗಳು

ಆಂಗ್ಲೇಯ- ಫ್ರೆಂಚ- ಬೆಲ್ಜಿಯಮಾನ ಸಂಗ್ರಾಮಧಿಕಾರಿಗಳ ಸಂಭಾಷಣೆಯು ಬೇಗ ನಡೆಯುವುದನ್ನು, ಪಾಶ್ಚಾತ್ಯದ ಪತ್ರಿಕೆಗಳು ಸಾರುತ್ತಿವೆ ಜರ್ಮನ್ ಪ್ರತಿನಿಧಿಗಳಾದ ರೋಬೆನ್ ಟ್ರೋಫ ನವರು (ಲಂಡನಿಗೆ ಸಂಧಿ ಪ್ರಸ್ತಾಪಕ್ಕೆ ಬಂದವರು) ಎಡೆನ್ನರೊಡನೆ ಈ ಸಂಭಾಷಣೆಯನ್ನು ಇಷ್ಟು ಅವಸರದಿಂದ ನಡೆ ಸಟಾರದಾಗಿ ವಿನಂತಿ ಮಾಡಿದ್ದರು ಲೋಕಾರ್ನೋ ಒಪ್ಪಂದದ ಶರ್ತಗಳ ನಿಮಿತ್ತ ಈ ಸಂಭಾಷಣೆಯು ನಡೆಯಲಿಬೇಕಾಗಿದೆ- ಜರ್ಮನಿಯ ಉತ್ತರವನ್ನು ಹೊಂದಿಕೊಂಡಿರದೆ ಈ ಸಂಭಾಷಣೆಗಳಲ್ಲಿ ಲೋಕಾರ್ನೊ ಒಪ್ಪಂದದ ಜನಾಂಗಗಳು, ಯುದ್ಧಾಗ್ನಿಯು ಎಲ್ಲಾದರೂ ಮೊಳಗಿದರೆ, ಹೇಗೆ ವರ್ತಿಸಬೇಕೆಂಬುದು ಮಾತ್ರ ನಿರ್ಣಯಿಸಲಾಗುವುದು ಈ ಸಂಭಾಷಣೆಗಳು ಸರಕಾರದ ಅಧಿಕಾರಕ್ಕೆ ಒಳಪಟ್ಟು ನಡೆಯುವುವು ಈ ಸಂಭಾಷಣೆಯು ನಡೆಯುವುದೆಂಬ ವಾರ್ತೆಯಿಂದ ಜರ್ಮನಿಯಲ್ಲಿ ಸ್ವಲ್ಪ ಅಸಮಾಧಾನವುಂಟಾಗಿದೆ

ನವೀನ ಲೋಕಾರ್ನೊ ಒಪ್ಪಂದ

ಫ್ರಾನ್ಸಿನ ಬಹೀರ್ ವ್ಯವಹಾರದ ಮಂತ್ರಿಗಳಾದ ಫ್ಲೆಂಡಿನ್ನರು ನವೀನ ಲೋಕಾರ್ನೋ ಒಪ್ಪಂದದ ಕುರಿತು, ತಮ್ಮ ಅಭಿಪ್ರಾಯ ಪ್ರಕಟಮಾಡಿರುವರು ಒಪ್ಪಂದಗಳಿಗೆ ಮುಂದಕ್ಕೆ ಯೋಗ್ಯ ಮನ್ನಣೆಯು ದೊರಕುವ ಏರ್ಪಾಡುಗಳಾಗಬೇಕು, ಒಪ್ಪಂದಗಳು ಯಾರೂ ತುಚ್ಛೀಕಾರ ಮಾಡದಂತೆ, ಅವುಗಳಿಗೆ ಪವಿತ್ರತೆಯನ್ನು ಎಲ್ಲ ಜನಾಂಗಗಳು ಕೊಡತಕ್ಕದು ಮನಬಂದ ಕೆ ಅವುಗಳನ್ನು ತುಚ್ಛೀಕರಿಸುವುದಾದರೆ, ಒಪ್ಪಂದಗಳಿಂದ ಯಾವ ಫಲ ಲಭಿಸಿದಂತಾಯಿತು? ಹೊಸದೊಂದು ಒಪ್ಪಂದವಾಗುವುದಾದರೆ, ತಾನು ಅದನ್ನು ಮನ್ನಿಸುವುದೆಂದು ಜರ್ಮನಿಯು ಯಾವ ರೀತಿಯ ಭರವಸೆ ಕೊಡಲು ಸಿದ್ಧವಿದೆ? ಜರ್ಮನಿಯು ಬಲಾತ್ಕಾರ ಉಪಯೋಗಿಸುವುದಾದರೆ, ಆಗ್ಯೆ ಸಂಧಿಗಳೇಕೆ? ಫ್ರೆಂಚರಿಗೆ ಯುರೋಪಿನಲ್ಲಿ ಶಾಂತಿಸ್ಥಾಪನೆ ಮಾಡಲು ಜರ್ಮನಿಯರಿಗಿಂತ ಅಧಿಕವಾದ ಕ ತೂ ಹಲವಿದೆ ಹಿಟ್ಲರನು ಒಡಂಬಡಿಕೆಗೆ ಸಿದ್ಧನಿರುವನಾದರೆ, ಈ ಕೆಳಗಿನ ಪ್ರಶ್ನೆಗಳಿಗೆ ಆತನ ಉತ್ತರ ಕೊಡಲಿ ಸುಮ್ಮನೆ ಭಾವಪೂರ್ವಕ ಭಾಷಣಗಳನ್ನು ಮಾಡುವುದರಲ್ಲಿ ಪ್ರಯೋಜನವಿಲ್ಲ

ಜರ್ಮನಿಯು, ರ್‍ಯಾನ್ ಲೆಂಡಿನಲ್ಲಿ ಭದ್ರತಾಕಾರ್ಯಗಳನ್ನು ನಡೆಸುವ ಕಾರಣಗಳೇನು?

ಜರ್ಮನಿಗೆ ತನ್ನ ಹತ್ತಿರವಿರುವ ಸಣ್ಣ ಸಣ್ಣ ದೇಶಗಳು, ಲಿಥುನಿಯಾ ಮೇಮಲ ಇತ್ಯಾದಿಗಳು ಸರಕಾರಗಳಲ್ಲಿ ಒಪ್ಪಲಾದೀತ ಯಾಗುವ ಇಚ್ಛೆಯುದೆಯೋ?

ಜರ್ಮನಿಗೆ ಕಳೆದುಹೋದ ಎಲ್ಲಾ ವಸಾಹತು ಬೇಕಾಗಿವೆಯೊ ಯಾ ಕೆಲವೆ ಮಾತ್ರ?

ಆಸ್ಟ್ರಿಯಾ ಹೊಲೆಂಡ್ ಜೆಕೊಸ್ಲೆವೇಕಿಯಾ ಮತ್ತು ಸ್ವಿಜರ್ ಲೇಂಡ್ ಈ ದೇಶಗಳಲ್ಲಿ ರಾಜಯ ವಿಶೇಷ ಪ್ರಸಾರಣೆಯು ನಡೆಯುತ್ತದೆ ಇವುಗಳನ್ನು ಜರ್ಮನಿಗೆ ಕೂಡಿಸಿಕೊಳ್ಳುವುದು ಹಿಟ್ಲರನ ಮತವೆ?

ಕೆಲವು ಪರಸ್ಪರ ಒಪ್ಪ ಪಗಳಿಂದ ಯೂರೋಪಿನಲ್ಲಿ ಶಾಂತಿಸ್ಥಾಪನೆಯಾಗವುದೆಂದು ಫ್ರಾನ್ಸಿನ ನಂಬಿಗೆಯುಳ್ಳ ಎಲ್ಲರ ಒಮ್ಮನಸ್ಸಿನಿಂದ ವರ್ತಿಸತಕ್ಕದ ಶಾಂತಿಸ್ಥಾಪನೆಯಾಗಬೇಕಾದರೆ ಒಪ್ಪಂದಗಳಿಗೆ ಗೌರವ ಬರಬೇಕು ಆಗಾಗ್ಯೆ ಮಾತುಕತೆಗಳು ನಡೆದು ಅವುಗಳ ಸುಧಾರಣೆ, ಇತ್ಯಾದಿ ಬದಲಾವಣೆಗಳಾಗಬೇಕು ಈ ರೀತಿಯಲ್ಲಿ ಭದ್ರತೆಗಳಾದರೆ, ಆಗ್ಯೆ ಶಾಂತಿಸ್ಥಾಪನೆ ತನ್ನಷ್ಟಕ್ಕನೇ ಆಗುವುದು. ಒಪ್ಪಂದಗಳು ಬಲವಾದರೆ,—ಆಗ್ಯೆ ಶಾಸ್ತ್ರತ್ಯಾಜನಸಮಸ್ಯೆಯು ಯೋಗ್ಯ ರೀತಿಯಲ್ಲಿ ನಡೆಯುವುದು

ಹಿಟ್ಲರನು ಕಲಹ ನಿವಾರಣೆಯ ಕುರಿತು ಜರ್ಮನಿಯ ನವ ಸೂಚನೆಗಳನ್ನು ಸದ್ಯದಲ್ಲೆ, ಮಾಡುವನೆಂದು ಚುನಾವಣೆಯ ನಂತರದ ತನ್ನ ಪ್ರಥಮದ ಭಾಷಣದಲ್ಲಿ ವ್ಯಕ್ತಪಡಿಸಿರುವನು

ಸ್ತನೋಸ್ತೇಧಃ

STHANO STHEDAH — THE MALAYALA OUSHADHA CO. 1031 - CHALAPURAM, MALABAR

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗಸರ್ವರನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವು—ಅವುಗಳು ಉಬ್ಬಿ ಗೋಲಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣವಾಪಸ.

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ 'ಸ್ತನೋಸ್ತೇಧ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅನಾರೋಗ್ಯದಿಂದಲೂ ದಾರುಣವಾದ ಚಿಂತೆಯಿಂದಲೂ ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲು ಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲುದು. ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪುಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನತಾನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಘಾತಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣ ಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ 3 ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ 1
ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ
1. ಮುಟ್ಟಿನದೋಷ 2. ಸಂತತಿ ಪ್ರತಿಬಂಧಕ, 3 ಧಾತುಪುಷ್ಟಿ, 4 ಲಿಂಗವೃದ್ಧಿ 5 ಸ್ತ್ರೀರೋಗ, 6 ಕ್ಷಯ ಸಂಹಾರಿ, 7 ವಾತರೋಗ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 42/1936

ದೇವಕಿ ಅಮ್ಮ ಸಹಾ—ಅರ್ಜಿದಾರರು

ಸದ್ರಿ ಅರ್ಜಿದಾರರ ಕಡೆಯಿಂದ ತಿಳಿಯಪಡಿಸುವುದು ಏನೆಂದರೆ:-

ತಾರೀಕು 29-10-1935ರಲ್ಲು ವೃತಪಟ್ಟ ಎಡನಾಡು ಗ್ರಾಮದಲ್ಲಿರುತ್ತಿದ್ದ ಎರ್ಮುಟಿ ಗುಬ್ಬಣ್ಣ ಯಾನೆ ಕೃಷ್ಣಭಟ್ಟರ ಮಗ ಅಪ್ಪಯ್ಯಯಾನೆ ಕೃಷ್ಣಭಟ್ಟರಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲ್ಮಾಡುವ ಬಗ್ಗೆ ವೃತನ ವಿಧವೆಯಾದ 1ನೇ ಅರ್ಜಿದಾರಳು ದೇವಕಿ ಅಮ್ಮನ ಹೆಸರಲ್ಲಿ ಸಕ್ಸೆಷನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರ ಕಡೆಯಿಂದ ದಾಖಲಾದ ಮೇಲ್ಕಂಡ ಅರ್ಜಿಯು ತಾ 14-4-1936ಕ್ಕೆ ತನ್ಖಿಗೆ ಇಡಲ್ಪಟ್ಟಿದೆ ಎಂದು ಈ ಮೂಲಕ ತಿಳಿಸಲಾಗಿದೆ

Kasaragod 24 3 1936 — **K Kamalaksha Kamath**, Advocate for Petre

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ ಅ	ರೂ ಅ
ಹೊಸ ರಾಶಿ ಅಕ್ಕಿ	3 4	3— 8
ಹೊಸ ಮುಡಿ	3—10	4— 0
ಗುಡ್ಡು ಸುಗ್ಗಿ	3— 6	3—12
ಊದ ಅಮ್ಮಲ್ ಬೆಳ್ತಿಗೆ	4— 0	4 — 8
ರಂಗೂನು ಬೆ ಗೋ ಗಟ್ಟ	6— 4	7— 0
ಎಲ್ಲೂರು ಬೆ ಮು ಗಟ್ಟ	4— 4	4— 8
ಗೋದಿ ಗೋಣಿ ಗಟ್ಟ	8 — 8	10— 4
ಕೊಗರು ಗೋಣಿ ಗಟ್ಟ	9 —[illegible]	9 — 8
ಹುರುಳಿ ಗೋಣಿ ಗಟ್ಟ	5— 4	5 —1[illegible]
ಕಡಲೆ ಗೋಣಿ ಗಟ್ಟ	7 — 4	9 — 8
ತೊಗರಿಬೇಳೆ ಗೋಣಿಗಟ್ಟ	11— 0	10— 8
ಉದ್ದು ಗೋಣಿ ಗಟ್ಟ	9— 8	10 — 0
ಹೆಸರು ಗೋಣಿ ಗಟ್ಟ	9— 4	9—12
ಕೊರುಬೆಲ್ಲ ಕಂಡಿ ಗಟ್ಟ	30— 0	35— 0
ಉಪ್ಪು ಗೋಣಿ ಗಟ್ಟ	4— 8	4— 8
ಕೊಬ್ರಿ ಕಂಡಿ ಗಟ್ಟ	60— 0	70— 0
ಕೊತ್ತಂಬರಿ ಕಂಡಿ ಗಟ್ಟ	28— 0	29— 0
ಎಳ್ಳೆಂಡ ಕಂಡಿ ಗಟ್ಟ	32 — 8	33—12
ಕೊಬ್ರಿ ಎಣ್ಣೆ ಮುಡಿ ಗಟ್ಟ	4—15	6— 0
ಎಳ್ಳೆಣ್ಣೆ ಮುಡಿ ಗಟ್ಟ	7— 0	7— 0
ಚಿಮಿಣಿಎಣ್ಣೆ ಪೆಟ್ಟಿಗೆ ಗಟ್ಟ	6— 5	6— 5
ಮೋರಿಸ ಸಕ್ಕರೆ ಮು ಗಟ್ಟ	3— 9	3 — 9
ಮೆಣಸು	2— 6	4— 0
ಸಾಸಿವೆ ಮುಡಿ ಗಟ್ಟ	5 — 8	6— 0
ಕಾಳುಮೆಣಸು ಕಂ ಗಟ್ಟ	102— 8	105
ಯೇಲಕ್ಕಿಬೀಜ ಮುಡಿಗಟ್ಟ	38— 0	39— 0
ಗೇರುಬೀಜ ಮು ಗಟ್ಟ	3— 6	3 — 10
ಕಬ್ಬಿಣ ಕಂಡಿ ಗಟ್ಟ	35 0	37— 8
ಕಾಂಡ್ರು ತಗಡು ಮು. ಗಟ್ಟ	9 12	9— 14
ಕಾಂಡ್ರು ಪಾತ್ರಗಳು ಮು ಗಟ್ಟ	12— 6	14 — 0
ಚೀನಾಬೆಲ್ಲ ಸೇರು ಗಟ್ಟ	17— 8	18— 0
ಹಿತ್ತಾಳೆ ತಗಡು ಮು ಗಟ್ಟ	10— 0	10—
ಹವನು ಗಟ್ಟ	22— 8	22— 8
ಹುಣಸೆ ಹುಳಿ ಕಂಡಿ ಗಟ್ಟ	20— 0	25— 0
ನೇಟಿವ್ ಕಾಫಿ ಕಂಡಿ ಗಟ್ಟ	145— 0	150— 4
ಫ್ಲಾಂಟೇಶನ್ ಕಾಫಿ ಕಂಡಿ ಗಟ್ಟ	175— 0	185 0
ಮಡಿಕೇರಿ ಏಲಕ್ಕಿ	25— 0	26 — 8

ಭಯಂಕರ ಹೊಟ್ಟೆ ನೋವಿದ್ದ ರಾತ್ರಿಗಳು

ಹಲವು ವರ್ಷಗಳ ತನಕ ಉದರವೇದನೆಗೊಳಗಾಗಿ ನಿದ್ದೆ ಕೆಟ್ಟು ಅಸಹನೀಯ ಕಷ್ಟಕ್ಕೆ ತುತ್ತಾಗಿದ್ದರೂ ಈಗ ನಿಶ್ಚಿಂತೆ ಉಂಡುತಿಂದು ಸಾಧ್ಯನಾಗುವುದೆಂದರೆ ಎಂತಹ ಸುಖ!—

ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನುಪಯೋಗಿಸಿ ಅದೃಷ್ಟಶಾಲಿಯಾದೆನೆಂದು ಮಿ T ಇವರು ಬರೆಯುತ್ತಾರೆ—

"ಹಲವು ವರ್ಷಗಳಿಂದ ಹೊಟ್ಟೆನೋವಿನಿಂದ ಸಂಕಷ್ಟಪಟ್ಟೆ. ಕಂಡು ಕೇಳಿದ ಮದ್ದುಗಳನ್ನುಪಯೋಗಿಸಿದೆ. ಆದರೆ ಯಾವ ಪ್ರಯೋಜನವೂ ಆಗಲಿಲ್ಲ. ಕಡೆಗೆ ನಿಮ್ಮ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಉಪಯೋಗಿಸಿದೆ. ಈಗ ಯಾವ ಉಪದ್ರವೂ ಇಲ್ಲದೆ ಯಾವುದನ್ನೂ ತಿನ್ನಲು ಶಕ್ತನಾಗಿರುವೆ. ಎಷ್ಟೋ ರಾತ್ರಿಗಳಲ್ಲಿ ನಾನು ಅಸಹನೀಯ ವೇದನೆಯನ್ನು ಸಹಿಸಿ, ಬೆವರು ಸುರಿಸಿ ಮಲಗಿ ದಿನ ದೂಡಿದೆ. ನಿಮ್ಮ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನುಪಯೋಗಿಸಿದಂದಿನಿಂದ ನಾನು ಸುಖವಾಗಿ ನಿದ್ರಿಸುತ್ತಿರುವೆನು. ನನಗೆ ದೊರೆಯುವ ಎಲ್ಲಾ ಸಂದರ್ಭಗಳಲ್ಲೂ ನಾನು ನಿಮ್ಮ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಶಿಫಾರಸು ಮಾಡುತ್ತಿರುವೆನು. ನನ್ನನ್ನು ಬಾಧಿಸಿದ ರೋಗದಲ್ಲಿ ನರಳುವವರನ್ನು ಕಂಡು ನನಗೆ ವ್ಯಥೆಯಾಗುತ್ತಿದೆಯಾದುದರಿಂದ ನಾನು ಮುಂದಕ್ಕೂ ನಿಮ್ಮ ಔಷಧಿಯನ್ನು ಶಿಫಾರಸು ಮಾಡುವುದನ್ನು ಮರೆಯೆನು."

ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ. ಆದರೆ ಕೆಲವು ಅಂಗಡಿಗಳಲ್ಲಿ ಉಳಿಸಿಕೊಂಡಿರುವ ನಕಲಿ ಮಾಲುಗಳನ್ನು ಪಡೆದು ಮೋಸಹೋಗಬೇಡಿರಿ. ಕೆಂಪು ಮುದ್ರೆಯಿರುವ ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನೇ ಪಡೆಯುವಂತೆ ಜಾಗ್ರತರಾಗಿರಿ. ಮುದ್ರೆ, ಚಿತ್ರ, ಚಿಲ್ಲೆಗಳ ಮೇಲೆ

Alex. C. Maclean

ಎಂಬ ಸಹಿಯು ಇದೆ

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೮ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು, ಇಲ್ಲಿಗೆ ಬರೆಯಿರಿ



ಅಲಭ್ಯ ಲಾಭ! — ಸುವರ್ಣ ಸಂದರ್ಭ!

ಪ್ರಥಮ ಬಹುಮಾನ ರೂ. 5000 ಎರಡನೇ ಬಹುಮಾನ ರೂ. 2500

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

"ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ"

ತೆಗೆಯುವ ತಾರೀಕು 3-6-1936. ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ.

ಸೋಡ್ತಿಯ ಮೊಬಲಗು: ರೂ. 50,000

ಒಟ್ಟು ಬಹುಮಾನಗಳ ಸಂಖ್ಯೆ. 1778 — ಮೌಲ್ಯ ರೂ. 20,000

ಸಂಪೂರ್ಣ ಪುಸ್ತಕಗಳನ್ನು ಮಾರುವವರಿಗೆ ಯಾ ಕೊಂಡುಕೊಳ್ಳುವವರಿಗೆ ವಿಶೇಷ ಬಹುಮಾನವಿದೆ

ಸಂಪೂರ್ಣ ಪುಸ್ತಕಗಳನ್ನು ಮಾರಾಟ ಮಾಡುವವರಿಗೆ ಪ್ರತ್ಯೇಕ ನಗದಿ ಕಮಿಷನ್ ಕೂಡಾ ಇದೆ

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ

ಟಿಕೇಟು ಪುಸ್ತಕಗಳ ಮಾರಾಟಕ್ಕಾಗಿ ದಕ್ಷರೂ ಉತ್ಸಾಹಿಗಳೂ ಆದ ಏಜಂಟರು ಬೇಕಾಗಿದೆ

ಹೆಚ್ಚಿನ ವಿವರಗಳಿಗೆ ಮತ್ತು ಪುಸ್ತಕಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್ — ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

ವಿ. ಸೂ. ಯಾವ ಕಾರಣದಿಂದಲಾದರೂ ಸೋಡ್ತಿ ತೆಗೆಯುವ ತಾರೀಕನ್ನು ಮುಂದರಿಸಲಾಗುವುದಿಲ್ಲ.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 23/1936

1 ಮಾರ್ಸೆಲ್ ದಾಲ್ಮೇದಿ
2 ರೀತಾ ದಾಲ್ಮೇದಿ
3 ಪೇದ್ರು ದಾಲ್ಮೇದಿ 4 ಜಿಜ್ಜ ದಾಲ್ಮೇದಿ, 5 ಲೀಲಿ ದ ಲ್ಮೇದಿ 6 ಯೆವುಜ ದಾಲ್ಮೇದಿ, 7 ಒಸ್ವಾಲ್ಡ್ ದಾಲ್ಮೇದಿ, 8 ಲವರೆಂತ ದಾಲ್ಮೇದಿ, 9 ಕರ್ಮಿನ ದಾಲ್ಮೇದಿ ಮ್ಯಾನರು ಸದ್ರಿ ಮ್ಯಾನರರ ಗಾರ್ಡಿಯನ್ ತ ಪೆ-1ನೇ ಅರ್ಜಿದಾರ— ಅರ್ಜಿದಾರರು

ಮೇಲ್ಕಂಡ ವ್ಯವಹರಣಯ 1ನೇ ಅರ್ಜಿದಾರನ ಹೆಂಡತಿ ಮತ್ತು ಅರ್ಜಿದಾರರ ತಾಯಿ ಮಸ್ಕಿನಾ ಬಾಯಿಯು ದಿ ಉಡುಪಿ ಅರ್ಬನ್ ಬೇಂಕಿನಲ್ಲಿ Fixed Deposit No 1555/7-8-35ನೆಗೆ ಡಿಪೋಜಿಟು ಇಟ್ಟ ಅಸಲು ರೂಪಾಯಿ 1000-0-0 ವ ಆ ಬಾಬ್ತು ಬಡ್ಡಿ ರೂಪಾಯಿ 28-5-4 ಕೂಡಾ ರೂ 1028-5-4 ವ ಮುಂದಿನ ಬಡ್ಡಿ ಕೂಡಾ ವಸೂಲು ಪಡೆಯುವರೆ ಸದ್ರಿ ಮಸ್ಕಿನಾ ಬಾಯಿಯು ತಾರೀಕು 29-1-1936ರಲ್ಲಿ ವೃತಪಟ್ಟು ಅವರಿಗೆ ಅರ್ಜಿದಾರರು ಮುಖ್ಯ ವಾರೀಸುದಾರರಾಗಿ ಸದ್ರಿ ಹಣ ಬಡ್ಡಿ ಪಡೆಯಲಿಕ್ಕೆ ಹಕ್ಕುದಾರರಾಗಿ ಸದ್ರಿ ಹಣ ಅರ್ಜಿದಾರರು ವಸೂಲು ಪಡೆಯುವಂತೆ Succession ಸರ್ಟಿಫಿಕೇಟು ಕೊಡುವಂತೆ ಕೊಟ್ಟ ಸದ್ರಿ ಅರ್ಜಿಯು ತಾ 16-4-1936ಕ್ಕೆ ತನ್ಖಿಗೆ ಇಟ್ಟಿರುವುದರಿಂದ ಆಕ್ಷೇಪ ಹೇಳತಕ್ಕವರು ಆ ದಿವಸ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು

ಉಡುಪಿ 28-3-36 — **P Padmanabha Rao,** Vakil for Petitioner

ಹೊಸ ನಮೂನೆ — ಹೊಸ ನಮೂನೆ

New Design

ಶ್ರೀ ಶೃಂಗೇರಿ ಜಗದ್ಗುರುಗಳಾದ
ಶ್ರೀ ಚಂದ್ರಶೇಖರ ಭಾರತೀ ಸ್ವಾಮಿ
ಗಳವರ ಮತ್ತು
ಕರಕಮಲಸಂಜಾತರಾದ
ಶ್ರೀಮದಭಿನವ ವಿದ್ಯಾತೀರ್ಥ
ಸ್ವಾಮಿಗಳವರ

10 × 15 ಸೈಜಿನಲ್ಲಿ ಸುಂದರವಾದ ಫೋಟೋಗಳು ಕಲ್ಕತ್ತ ಲಕ್ಷ್ಮೀವಿಲಾಸ ಪ್ರೆಸ್ಸಿನಲ್ಲಿ 60 ಪೌಂಡ್ ಇಂಗ್ಲಿಷ್ ಆರ್ಟ್ ಪೇಪರಿನಲ್ಲಿ 6 ಬಣ್ಣಗಳಲ್ಲಿ ಅಚ್ಚಾಗಿರುತ್ತೆ. 1 ಡಜನ್ ಕಾಪಿಗಳಿಗೆ ಬೆಲೆ ರೂ 3

ಕಾಲುಭಾಗ ಅಡ್ವಾನ್ಸು ಸಹಿತ ಆರ್ಡರ್ ಕೊಡುವವರಿಗೆ ಮೇಲ್ಕಂಡ ಗುರುಶಿಷ್ಯರು ಮತ್ತು ಶ್ರೀ ಗಣೇಶ ಶ್ರೀಮಾನ್ ಮೈಸೂರು ಮಹಾರಾಜರವರು ವಗೈರೆ ಫೋಟೋಗಳಿರುವ 1936ನೇ ಇಸವಿಯ ಕ್ಯಾಲೆಂಡರು ಒಂದು ಪ್ಯಾಕಿಂಗ್ ಮತ್ತು ಪೋಸ್ಟೇಜು ಫ್ರೀಯಾಗಿ ಕಳಿಸಲ್ಪಡುತ್ತೆ. ಮೇಲ್ಕಂಡ ಪ್ರೆಸ್ಸಿನಲ್ಲಿ ಅಚ್ಚಾದ ಇತರ ಫೋಟೋಗಳೂ ಸಹ ದೊರೆಯುತ್ತೆ

Sree Sharada Frame Works,
Sringeri—Kadur Mysore State

ಶಾಲಿವಾಹನ ಶಕ ೧೮೫೮ನೆಯ ಯುವ ಸಂವತ್ಸರದ ಚೈತ್ರ ಶು ೧೩ ಶನಿವಾರದಿಂದ ಚೈತ್ರ ಬ ೩ ಶುಕ್ರವಾರದ ವರೆಗಿನ ಪಂಚಾಂಗ (೧೯೩೬ನೇಯ ಏಪ್ರಿಲ್ ಸುಗ್ಗಿ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ವಿಶೇಷ
4	ಶನಿ	೧೪	೪೭	ಪುಬ್ಬ	೪೦	೩೩	[illegible]
5	ರವಿ	೧೫	೫೨	ಉತ್ತರ	೪೭	೩೪	
6*	ಸೋಮ	೧೫	೫೭	ಹಸ್ತ	೫೪	೩೫	
7	ಮಂಗಳ	೧	೬೦	ಚಿತ್ರ	೫೯	೩೬	
8	ಬುಧ	೧	೨	ಸ್ವಾತಿ	೬೦	೩೭	
9	ಗುರು	೨	೬	ಸ್ವಾತಿ	೫	೩೮	
10	ಶುಕ್ರ	೪	೧೦	ವಿಶಾಖ	೧೦	೩೯	

ಸಂಗ್ರಾಮಗಳು ಸಿದ್ಧರಾಗಬೇಕು!

ಶ್ರೀ. ಸುಭಾಷ್ಚಂದ್ರ ಭೋಸರು ಹಿಂದೂದೇಶಕ್ಕೆ ಬರುವರು!!

ಅನ್ನ ಆಹಾರವಿಲ್ಲದೆ 10 ದಿವಸ ಸಮುದ್ರದಲ್ಲಿ ತೇಲಬೇಕಾಯಿತು.

ಈ ನಾಡು ಬಂಗಾಳದ ಚಿಟ್ಟಿಗಾಂಗಿನ ಮೂರು ಮಂದಿ ಮುಸ್ಲಿಮರಿಗೆ ಒದಗಿತು. ಒಂದು ತೆಪ್ಪದಲ್ಲಿ ಕುಳಿತು, ಚಿಟ್ಟಿಗಾಂಗಿನ ಅರಣ್ಯಗಳಲ್ಲಿ ಕಡಿದ ಬಿದಿರುಗಳನ್ನು ಸಾಗಿಸುತ್ತಿರುವಾಗ, ನೀರಿನ ಭಯಂಕರ ಸೆಳೆತಕ್ಕೆ ಸಿಲುಕಿ, ಇವರ ತೆಪ್ಪವು ಸಮುದ್ರವನ್ನು ಸೇರಿತು ದಾರಿ ತೋಚದೆ, ರಕ್ಷಣೆಯ ಯಾವತ್ತೂ ಬಗೆ ಕಾಣದೆ ಹತ್ತು ದಿವಸಗಳ ತನಕ, ಅನ್ನ, ಆಹಾರ, ನೀರಿಲ್ಲದೆ, ಇವರು ಸಮುದ್ರದಲ್ಲಿ ತೇಲಬೇಕಾಯಿತು. ಕೃಪೆಯನ್ನು ಮಳೆನೀರಿನಲ್ಲಿ ಒದ್ದೆಯಾದ ತಮ್ಮ ವಸ್ತ್ರಗಳನ್ನು ಹಿಂಡಿ ತೆಗೆದ ನೀರಿನಿಂದ ತಣಿದರು ಕೊನೆಗೆ ಒಂದು ವಸ್ತ್ರದ ಚಿಂದಿಯನ್ನು ಒಂದು ಕೋಲಿಗೆ ಕಟ್ಟಿ, ಅತ್ತ ಕಡೆಯಿಂದ ಹಾಯುವ ಹಡಗಗಳ ಸಹಾಯವನ್ನು ಕೋರಿದರು. ಇವರ ಪತಾಕೆಯು ಒಂದು ವರ್ತಕ ಹಡಗದ ಕೆಪ್ಟನನಿಗೆ ಕಾಣಲಾಗಿ, ಆತನು ಇವರನ್ನು ರಕ್ಷಿಸಿದನು.

ಓಟ್ಟೊವಾ ಒಪ್ಪಂದ.

ಓಟ್ಟೊವಾ ಒಪ್ಪಂದವನ್ನು ನಿರಾಕರಿಸಿ, ಅದರ ಬದಲಾಗಿ, ಹಿಂದೂದೇಶಕ್ಕೆ ಹಿತವಾಗುವ ರೀತಿಯಿಂದ ಇತರ ದೇಶಗಳೊಡನೆ ವ್ಯಾಪಾರದ ಕರಾರುಗಳನ್ನು ಮಾಡಬೇಕೆಂದು, ಶ್ರೀ ಜಿನ್ನರು ತಂದ ಠರಾವು ಬಹುಮತದಿಂದ ಮಂಜೂರಾಗಿರುತ್ತದೆ ಓಟ್ಟೊವಾ ಒಪ್ಪಂದವನ್ನು ರಕ್ಷಿಸಲು ಮಾಡಿದ ಸಂಕಾರದ ಭಗೀರಥ ಪ್ರಯತ್ನಗಳು ನಿಷ್ಫಲವಾದವು ಈ ಸಮಸ್ಯೆಯ ಮೇಲೆ ಪ್ರಚಂಡಚರ್ಚೆ ನಡೆಯಿತು.

ಕಾಂಗ್ರೆಸ್ಸಿನ ಮುಂದಿನ ಕಾರ್ಯಕ್ರಮ.

ನವರಾಜಶಾಸನದಲ್ಲಿ ಅಧಿಕಾರ ಸೂತ್ರ ವಹಿಸುವ ವಿಚಾರದಲ್ಲಿ ಅನೇಕ ಅಭಿಪ್ರಾಯಗಳು ಅಲ್ಲಹಾಬಾದಿನಲ್ಲಿ ಜರಗಲಿರುವ ಕಾರ್ಯಕಾರಿ ಮಂಡಳದ ಸಭೆಯು ಮುಂದೆ ಇವೆ ಅಲ್ಲಹಾಬಾದಿನಲ್ಲಿ ನಡೆಯುವ ಕಾರ್ಯಕಾರಿ ಮಂಡಳದ ಸಭೆಯಲ್ಲಿ ಕಾಂಗ್ರೆಸ್ಸಿನ ಮುಂದಿನ ಕಾರ್ಯಕ್ರಮವು ರಚಿಸಲಾಗುವುದು. ಕಾಂಗ್ರೆಸ್ಸಿನಲ್ಲಿ ಸಂಪೂರ್ಣ ಐಕ್ಯವುಂಟಾಗುವಂತೆ, ಪ್ರಯತ್ನಗಳು ನಡೆಯುವವು. ಆ ಪ್ರಯತ್ನಗಳು ಫಲಕಾರಿಯಾಗುವ ಭರವಸೆ ಇವೆ ಶ್ರೀ ಜವಾಹರಲಾಲರು, ಶ್ರೀ ಮಾಲವೀಯರ ಪಕ್ಷವಾದ ನಾಶನಲ್ ಪಂಗಡವನ್ನು ರದ್ದುಮಾಡುವ ಕಾರ್ಯದಲ್ಲಿ ಜಯಶಾಲಿಗಳಾಗಿರುವರು. ಈ ಪಂಗಡವನ್ನು ಪಂಡಿತಮಾಲವೀಯರು ಬರುವ ಕಾಂಗ್ರೆಸ್ಸು ಸಮಯ ವಿಸರ್ಜನೆಗೊಳಿಸುವರೆಂದು ತಿಳಿದು ಬರುತ್ತದೆ. ಶ್ರೀ ಪ್ರಕಾಶರು, ಲಕ್ನೊ, ಕಾಂಗ್ರೆಸ್ಸಿನ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಚುನಾಯಿತರಾಗಿರುವರು.

ಸ್ಥಳೀಯ ಸಂಸ್ಥೆಗಳ ಸುಧಾರಣೆ.

ಲೋಕಲ್ ಸೆಲ್ಫ್ ಗವರ್ನಮೆಂಟಿನ ಪರಿಷತ್ತಿನ ಪ್ರಥಮ ಅಧಿವೇಶನವು ನವಡಿಲ್ಲಿಯಲ್ಲಿ ಜರಗಿತು. ಶ್ರೀ ಸುಭಾಷ್ಚಂದ್ರರು ಮಾತೃಭೂಮಿಯನ್ನು ಸೇರುವ ವಿಚಾರದಲ್ಲಿರುವ ಸರಕಾರದ ನಿರ್ಬಂಧಗಳನ್ನು ತೆಗೆದು ಹಾಕುವರೆ ಸರಕಾರದೊಡನೆ ವಿನಂತಿಸಬೇಕೆಂದೂ, ಮುಂದಿನ ಪರಿಷತ್ತು ಕಲ್ಕತ್ತದಲ್ಲಿ ಜರಗಿಸಬೇಕೆಂದೂ, ಇನ್ನು ಇತರ ಸ್ಥಳೀಯ ಸಂಸ್ಥೆಗಳ ಸುಧಾರಣೆಯ ಕುರಿತು 24 ಠರಾವುಗಳೂ ಮಂಜೂರಾಗಿವೆ. ಜರ್ಮನಿಯಲ್ಲಿ ಜರಗಲಿರುವ ಅಂತರಾಷ್ಟ್ರೀಯ ಮುನ್ಸಿಪಾಲಿಟಿಗಳ ಪರಿಷತ್ತಿಗೆ ಹಿಂದೂದೇಶದ ಪ್ರತಿನಿಧಿಗಳನ್ನು ಆರಿಸಲಾಯಿತು. (ಶ್ರೀಗಳಾದ ನಲಿನಿರಂಜನ್ ಸರಕಾರ ಮತ್ತು ಬಿರೆನ್ ರೋಯಿ) ಇಂಡಿಯಾ ಸರಕಾರವು ಸ್ಥಳೀಯ ಸಂಸ್ಥೆಗಳಿಗೆ ಸಾಲ ಕೊಡುವ ಏರ್ಪಾಡುಗಳಾಗಬೇಕೆಂದೂ, ಎಲ್ಲಾ ಸ್ಥಳೀಕ ಸಭೆಗಳ ಅಧ್ಯಕ್ಷರನ್ನು ಚುನಾಯಿಸಬೇಕೆಂದೂ, (ಅಧ್ಯಕ್ಷರ ಚುನಾವಣೆ ಸರಕಾರದ ಅಭಿಮತದಿಂದ ಹೊರಗಾಗಬೇಕೆಂದೂ,) ಲೋಕಲ್ ಬೋರ್ಡುಗಳ ನೋಮಿನೇಶನ್ ಪದ್ಧತಿ ರದ್ದಾಗಬೇಕೆಂದೂ, 21 ವರ್ಷದೊಳಗಿನ ಎಲ್ಲಾ ಸ್ತ್ರೀಪುರುಷರಿಗೆ ಮತ ಕೊಡುವ ಹಕ್ಕುಗಳು ದೊರಕಬೇಕೆಂದೂ, ಇವೇ ಮೊದಲಾದ ಠರಾವುಗಳು ಮಂಜೂರಾಗಿವೆ.

ಜರ್ಮನಿಯು ಆಸ್ಟ್ರಿಯಾವನ್ನು ಹಿಡಿಯುವುದು.

ಜರ್ಮನಿಯಲ್ಲಿ ನಡೆದ ಚುನಾವಣೆಯಲ್ಲಿ, ಉಂಟಾದ ವಿಚಿತ್ರ ಏಕಾನುಮತಿಯು ಪ್ರೇರಣೆಯು ಸುತ್ತಲಿನ ದೇಶದೊಳಗೆ, ತನ್ನ ಪ್ರಭಾವವನ್ನು ನಡೆಯಿಸುವುದಾಗಿ, ಪ್ರಾನ್ಸಿನಲ್ಲಿ ಭೀತಿಯುಂಟಾಗಿದೆ ಅಲ್ಲಿ ಒಂದು ಪತ್ರಿಕೆಯಲ್ಲಿ, ಹಿಟ್ಲರನು ಆಸ್ಟ್ರಿಯಾದ ವಿಯನ್ನಾವನ್ನು ಒಂದು ತಿಂಗಳೊಳಗೆ ಸೇರುವನಲ್ಲದೆ, ಮೇಲಿನ ಆಸ್ಟ್ರಿಯಾದ ಮುಖ್ಯ ಪಟ್ಟಣವಾದ ಲಿಂಜ್‌ನ ನಡೆಯುವನೆಂದು, ಜರ್ಮನಿಯ ರಾಯಭಾರಿಗಳಲ್ಲಿ ಊಹವೆ ಉಂಟಾಗಿರುವುದೆಂದು ಪ್ರಕಟವಾಗಿರುತ್ತದೆ ಮೊನ್ನೆ ನಡೆದ ಚುನಾವಣೆಯಲ್ಲಿ ಜರ್ಮನಿಯು ಹಿಟ್ಲರನೆಂಬುದು ಪ್ರಖ್ಯಾತವಾಗಿರುತ್ತದೆ

ಎಲ್ಲಾ ಸಂಗ್ರಾಮಿಗಳು ಸಿದ್ಧರಾಗಬೇಕು.

ಲೋಕಾರ್ನೊ ಒಪ್ಪಂದವನ್ನು ಜರ್ಮನಿಯು ಮುರಿದ ದೆಸೆಯಿಂದ ಉಂಟಾದ ಪ್ರೆಂಚೊ ಜರ್ಮನ್ ಬಿರುಕಿನಿಂದ ಇನ್ನೊಂದು ಮಹಾ ಯುದ್ಧವು ಸಂಭವಿಸುವುದೆಂದು ಭೀತಿಯಿಂದ ಬ್ರಿಟಿಷ ಸಾಮ್ರಾಜ್ಯದ ಎಲ್ಲಾ ಸಂಗ್ರಾಮಿಗಳಿಗೆ ಸಿದ್ಧರಾಗಿರಲು ಸರ್ಕಲರುಗಳು ಬಂದಿವೆಯೆಂದು ವಾರ್ತೆ ಹಾಗೆಯೆ ವಸಾಹತುಗಳಲ್ಲಿ ಮತ್ತು ಇತರ ದೇಶಗಳಲ್ಲಿರುವ ಜರ್ಮನಿಯರಿಗೆ, ಜರ್ಮನಿಯಿಂದ ಇದೇ ತರದ ಸರ್ಕಲಾರುಗಳು ಬಂದಿವೆಯೆಂದು ತಿಳಿದುಬರುತ್ತದೆ

ಸ್ತ್ರೀಯರನ್ನು ಕದ್ದೊಯ್ಯುವುದು

ಸ್ತ್ರೀಯರನ್ನು ಕದ್ದೊಯ್ದು, ಅವರನ್ನು ಪಂಜಾಬಿನಲ್ಲಿ ಮಾರಾಟ ಮಾಡುವ, ಸಂಯುಕ್ತ ಪ್ರಾಂತ್ಯಗಳಲ್ಲಿ ನಡೆಯುವ ಒಂದು ದೊಡ್ಡ ಒಳಸಂಚಿನ ವಿವರವು, ಕೊನಪುರದಲ್ಲಿ ಇರ್ವರನ್ನು ಸೆರೆಹಿಡಿದುದರಿಂದ, ತಿಳಿದುಬರುವವು ಇಷ್ಟರ ತನಕ ಸಾಧಾರಣ 72 ಮಂದಿ ಸ್ತ್ರೀಯರು, ವಿವಾಹಿತರು, ವಿದವೆಗಳು ಹುಡುಗಿಯರು— ಸಂಯುಕ್ತ ಪ್ರಾಂತ್ಯಗಳ ಅನೇಕ ಜಿಲ್ಲೆಗಳಿಂದ ಮಾಯವಾಗಿರುವರೆಂದು, ಇವರನ್ನು ಈ ಒಳಸಂಚಿನವರು ಕದ್ದೊಯ್ದು, ಪಂಜಾಬದಲ್ಲಿ ಸರಾಸರಿ ತಲಾ ಒಂದರ ರೂ. 1000 ಪ್ರಕಾರ ಮಾರಿರುವರೆಂದೂ, ಆಗಾಗ್ಯೆ ಸ್ತ್ರೀಯರು ಮಾಯವಾದಘಟನೆಗಳು ಪೋಲಿಸರಿಗೆ ತಿಳಿದು ಬಂದರೂ ಈ ಅಪಾದಿತರು ಹೇಗೆ ತಲೆ ತಪ್ಪಿಸಿಕೊಳ್ಳುತ್ತಿದ್ದರೆಂದೂ ತಿಳಿದು ಬರುತ್ತದೆ. ಈ ಒಳಸಂಚಿನಲ್ಲಿ ಭಾಗಿಗಳಾದ ಜನರನ್ನು ಹುಡುಕಿ ತೆಗೆಯಲು, ಲಕ್ನೊ, ಕಾನಪುರ ಇತ್ಯಾದಿ ನಗರಗಳಲ್ಲಿ ಪೋಲೀಸರು ಬಹಳ ಶೋಧೆ ನಡೆಯಿಸುತ್ತಿದ್ದಾರೆ.

ಶ್ರೀ ಸುಭಾಷ್ಚಂದ್ರ ಭೋಸರು.

ಶ್ರೀ ಸುಭಾಷ್ಚಂದ್ರ ಬೋಸರ ಮೇಲೆ ಹಾಕಿದ ನಿರ್ಬಂಧವನ್ನು ಖಂಡಿಸಿ, ಕಲ್ಕತ್ತದ ನಗರ ಸಭೆಯವರು ಠರಾವು ಮಾಡಿರುವರು ಈ ಠರಾವನ್ನು ಕೆಲ ಪಾಶ್ಚಾತ್ಯ ಸದಸ್ಯರಿಂದ ವಿರೋಧಿಸಲ್ಪಟ್ಟಿದ್ದರೂ, ಅದು ಬಹುಮತದಿಂದ ಮಂಜೂರಾಯಿತು. ಶ್ರೀ ಭೋಸರು ವಿಯನ್ನಾದಿಂದ, ಹಿಂದೂದೇಶಕ್ಕೆ ತೆರಳಲು ಇಟಲಿಗೆ ಹೋಗಿರುವರೆಂದು ವಾರ್ತೆ ಅಲ್ಲದೆ ಜಿನೋವಾದಲ್ಲಿ 'ಕೊಂಡರ್‌ವೆರ್ಡ್' ಎಂಬ ಹಡಗವನ್ನು ಹತ್ತಿರುವರೆಂದು ಎಪ್ರಿಲ್ 11ರಲ್ಲಿ ಕೊಲೊಂಬೊದಲ್ಲಿ ಇಳಿಯುವರೆಂದು ಇನ್ನೊಂದು ವಾರ್ತೆ ಬಂದಿರುತ್ತದೆ.

ಪ್ರಾಣಿಬಲಿ ನಿಷೇಧ.

ಕಲ್ಕತ್ತದ ಕಾಳಿ ದೇವಾಲಯದಲ್ಲಿ ಪ್ರಾಣಿಬಲಿಯನ್ನು ನಿಲ್ಲಿಸಲು, ಉಪವಾಸಾಚರಣೆ ನಡೆಯಿಸಿದ ಪಂಡಿತರಾಮಚಂದ್ರ ಶರ್ಮರವರು ಮುಂಬ್ಯಾಯ ಸಾಂಗ್ಲಿ ಎಂಬಲ್ಲಿ ರಾಮನವಮಿ ಸಮಯ ಪ್ರಾಣಿಬಲಿಯಾಗದಂತೆ ಉಪವಾಸಾಚರಣೆ ಮಾಡುವರೆಂದು ಅವರು ಸಾಂಗ್ಲಿಗೆ ಬೇಗನೆ ಪ್ರಯಾಣಬೆಳೆಸುತ್ತಿರುವರೆಂದು ವಾರ್ತೆ ಬಂದಿರುತ್ತದೆ

ಶಿವನ ಪ್ರತಿಮೆಯು ದೊರಕಿರುತ್ತದೆ.

ವಿಜಯ ನಗರದ ಸಮೀಪದಲ್ಲಿರುವ ಒಂದು ಹಳ್ಳಿಯಲ್ಲಿ ನೆಲದಡಿಯಲ್ಲಿ ಕೆಲವು ವಿಗ್ರಹಗಳು ದೊರಕಿವೆ ಇದರ ದೆಸೆಯಿಂದ ಆ ಸ್ಥಳವು ಒಂದು ಯಾತ್ರಾಸ್ಥಳವಾಗಿರುತ್ತದೆ. ಸಾವಿರಾರು ಯಾತ್ರಿಕರು ಇಲ್ಲಿಗೆ ಬರುತ್ತಿದ್ದಾರೆ ಈ ಹಳ್ಳಿಯು ಹೆಸರು 'ಪರಾಸಾಮ' ಎಂದು ವಿಜಯನಗರದಿಂದ ಇಲ್ಲಿಗೆ 10 ಮೈಲುಗಳಿವೆ ಹುಲ್ಲು ಬೆಳೆದ ಎರಡು ದಿನ್ನೆಗಳ ಹತ್ತಿರ ಕೆಲವು ಶಾಲಾ ಹುಡುಗರು ಆಡುತ್ತಿರುವಾಗ, ಅವರಿಗೆ ಇಲ್ಲೊಂದು ಕಲ್ಲಿನ ಬಸವನತಲೆಯು ನೆಲದಲ್ಲಿ ಕಾಣಿಸಿತು. ಇದನ್ನು ಹಿರಿಯರಿಗೆ ತಿಳಿಸಲಾಗಿ ಓರ್ವ ಜಮೀನುದಾರರು ಈ ಸ್ಥಳವನ್ನು ಅಗೆಸಿದಲ್ಲಿ ಅವರಿಗೆ 6 ಅಡಿ ಎತ್ತರವಿರುವ ಶಂಕಧಾರಿಯಾದ ಒಂದು ಶಿವನ ಪ್ರತಿಮೆಯು ದೊರಕಿರುತ್ತದೆ. ಪ್ರತಿಮೆಯ ಕುತ್ತಿಗೆಗೆ ಒಂದು ಕಂಠಿಯೂ ಯಜ್ಞೋಪವೀತವೂ ಇದಲ್ಲದೆ, ಇತರ ಪ್ರತಿಮೆಗಳಕೆಲವು ತುಂಡುಗಳು ದೊರಕಿವೆ.

56 ಉಪಾಧ್ಯಾಯರಿಗೆ ನಿವೃತ್ತಿಯ ನೋಟೀಸು

ಬೋರ್ಡುಶಾಲಾ (ಸೆಕೆಂಡರಿ) ಹೆಡ್ ಮಾಸ್ತರರು, ಪಂಡಿತರು, ಡ್ರಿಲ್ ಮತ್ತು ಡ್ರಾಯಿಂಗ್ ಮಾಸ್ತರರು ಹೊರತಾಗಿ ಉಳಿದ ಎಲ್ಲಾ ಸೆಕೆಂಡರಿ ಶಾಲಾ ಮಾಸ್ತರರ ಮೂರು ತಿಂಗಳಲ್ಲಿ, ಜೂನ್ ತಾ. 10ರ ನಿವೃತ್ತಿಹೊಂದುವಂತಾಗಿ, ತಿನ್ನವೆಲಿ ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರು ನೋಟೀಸು ಕೊಟ್ಟಿದ್ದರಿಂದ, 56 ಮಂದಿ ಉಪಾಧ್ಯಾಯರು ಜೂನ ತಾ 10ರ ಆ ಜಲಿಯಲ್ಲಿ ಗತಿಗೋತ್ರವಿಲ್ಲದವರಂತೆ ಅಲೆಯಬೇಕಾಗಿ ಬರುವುದು. ಕಳೆದ ಫೆಬ್ರವರಿ ತಿಂಗಳಲ್ಲಿ ಆ ಬೋರ್ಡಿನ ಬಜೆಟಿನ ಚರ್ಚೆಸುವಾಗ, ಅಧ್ಯಕ್ಷರು ಗಳು ಸರಿಯಾಗಿ ಹಾಗೆ ಮಾಡಲು ಜಿಲ್ಲಾ ಬೋರ್ಡು ಎಜ್ಯುಕೇಶನ್ ಅಫೀಸರರ ಸೂಚನೆಯಂತೆ ಆಕ್ಟಿನ 103ನೆ ನಿಬಂಧನೆಯಂತೆ ಈ ನೋಟೀಸು ಕೊಡಲಾಗಿದೆಯಂತೆ ಬೋರ್ಡಿನ ಕೊಂಗ್ರೆಸ ಪಕ್ಷದ ಮೆಂಬರರು ಈ ವಿಷಯವನ್ನು ಮುಂದಿನ ಸಭೆಯಲ್ಲಿ ಚರ್ಚೆಗಿಡಬೇಕಾಗಿಯೂ ನೋಟೀಸುಗಳನ್ನು ಹಿಂತೆಗೆಯಬೇಕಾಗಿಯೂ ಒಂದು ಸೂಚನೆ ಕೊಟ್ಟಿರುವರು. ಎಡ್ಯುಕೇಶ ಆಫೀಸರರು ಆ ಮಂದಿಯನ್ನು, ಅವರ ಇಂತಹರೇ ಎಂದು ತಿಳಿಸದೆ ವಜಾಮಾಡಬಹುದಾಗಿ ಸೂಚಿಸಿದ್ದುದಕ್ಕೆ, ಇಂತಹ ಅಪಾಧವನ್ನು ಮಾಡಿ, ಇಡೀ ಉಪಾಧ್ಯಾಯ ವರ್ಗ ಇಂತಹ ಆಘಾತರವನ್ನು ತಂದೊಡ್ಡಿದ ಪ್ರೆಸಿಡೆಂಟರನ್ನು ಕುರಿತು ಆಲೋಚಿಸಬೇಕಾಗಿ ಎಂದೇ ಕೊಂಗ್ರೆಸ್ ಪಕ್ಷದವರು ಎನ್ನುವರ ಇನ್ನೆಷ್ಟು ಕಡೆ, ಈ ರೀತಿಯಾಗಿ ಉಪಾಧ್ಯಾಯರ ಮೇಲೆ ವಕ್ರಗ್ರಹಗಳು ತೀಕ್ಷ್ಣ ನೋಟ ಬೀರಿರುವುದಕ್ಕೆ, ಪ್ರೆಸಿಡೆಂಟರು ಬಜೆಟ ಸೂಚನೆಗಳಿಗೆ ಕಲ್ಪಿಸಿರುವ ಅಪಾರ್ಥಗಳೇ ಕಾರಣವೊ!

ಚರ್ಮದ ಉರಿಯನ್ನು ಈ ವಿಷಹಾರಿ ಸಾಬೂನಿನಿಂದ ತಣಿಸಿರಿ

ಕೆಲವೊಂದು ವೇಳೆ ಅತೀ ಉಷ್ಣದಿಂದ ಚರ್ಮದ ಉರಿತವು ದ್ವಿಗುಣಿತವಾಗುವುದುಂಟು, ಆಗ ಅದರ ವೇದನೆಯು ಬಹಿಷ್ಕರಿಸಲಸಾಧ್ಯ. ಅಂತಹ ಸಂದರ್ಭದಲ್ಲಿ ಇರಾಸ್ಮಿಕ್ ಗ್ಲಿಸರಿನ್ ಸಾಬೂನನ್ನು ಉಪಯೋಗಿಸಲು ಮರೆಯಬೇಡಿರಿ,

ಈ ಸಾಬೂನಿನಲ್ಲಿ ಅತ್ಯದ್ಭುತವಾದ ಲಕ್ಷಣಗಳಿವೆ, ಇದರಲ್ಲಿ ಕಾರ್ಬೋಲಿಕ್ ದ್ರಾವಕವೂ, ಗ್ಲಿಸರಿನೂ ಮಿಶ್ರವಾಗಿದ್ದರಿಂದ ಅದರಿಂದ ಉದ್ಭವಿಸುವ ವಿಷಹಾರಿ ನೊರೆಯು, ದೇಹದೊಳಗಿನ ರಂಧ್ರಗಳ ಮೂಲಕ ಒಳಹೊಕ್ಕು, ವಿಷಾಣುಗಳನ್ನು ಕೊಂದು ದೇಹಕ್ಕೆ ತಂಪನ್ನೀಯುವುದು,

ಡಾಕ್ಟರರೂ, ಚರ್ಮವ್ಯಾಧಿಗಳ ಹುಳುಕನ್ನು ಕಂಡಲ್ಲಿ ಅಂಥವರಿಗೆ ಈ ಸಾಬೂನನ್ನೇ ಶಿಫಾರಸು ಮಾಡುತ್ತಾರೆ. ಇದನ್ನು ದಿನಾಲೂ ಉಪಯೋಗಿಸಿದಿರಾದರೆ ಯಾವ ಚರ್ಮರೋಗಗಳಿಗೂ ಸೀವು ಬಲಿಬೀಳಲಾರಿರಿ. ಇರಾಸ್ಮಿಕ್ ಕಾರ್ಬೋಲಿಕ್ ಗ್ಲಿಸರಿನ್ ಸಾಬೂನು ತೈಲಾಭ್ಯಂಜನಕ್ಕೂ ಇದು ಬಹಳ ಉಪಯೋಗಕಾರಿಯಾಗಿದೆ,

ERASMIC
36% CARBOLIC GLYCERINE SOAP

THE ERASMIC CO. LTD., LONDON, ENGLAND

ಸಾಬೂನು ತೆಗೆದ ನಂತರ ಇದನ್ನು ಬೀಳ್ಳದೆಲೆಯ ಪೆಟ್ಟಿಗೆಯಾಗಿ ಮಾಡಬಹುದು.

ಮಿಥ್ಯಾಜೀವನದ

ಸತ್ಯಕಥೆಗಳು

(All Rights Reserved.)

ಲೇಖಕ:—ಶ್ರೀ 'ರಸಿಕರಂಜನ'

"Truth is stranger than Fiction"

೧೦. "ಕುಲದೀಪಕ"

ಸೀತಾರಾಮರಾಯರಿಗೆ ಅರುವತ್ತನೆಯ ಅವರ ವಯಸ್ಸಿನಲ್ಲಿ, ಅವರ ನಾಲ್ಕನೆಯ ಹೆಂಡತಿಯಲ್ಲಿ, ಪುತ್ರೋತ್ಸವವಾದುದು ಎಲ್ಲರಿಗೂ—ಅವರ ಮೂವರು ಹಿರಿಯ ಹೆಂಡಂದಿರಿಗೂ ಸಹ—ಅಪಾರ ಸಂತೋಷದ ಸಂಗತಿಯಾಗಿತ್ತು. ಅಂತೂ, ವರ್ಷಗಟ್ಟಲೆಯಿಂದ ಕತ್ತಲೆಯಲ್ಲಿ ತತ್ತರಿಸುತ್ತಿದ್ದವನಿಗೆ ಉಜ್ವಲವಾದ ದೀಪವು ದೊರಕಿತೆಂದೂ, ಅಳಿದುಹೋಗುವುದರಲ್ಲಿದ್ದ ವಂಶಕ್ಕೆ ಒಬ್ಬ ಕುಲದೀಪಕನು ಉದಯಿಸಿದನೆಂದೂ ರಾಯರ ಬಂಧುಮಿತ್ರರೆಲ್ಲರೂ ಹಿರಿಹಿರಿ ಹಿಗ್ಗಿದರು.

ಲಕ್ಷ್ಮೀಪುತ್ರರಾಗಿದ್ದ ಸೀತಾರಾಮರಾಯರು ಈ ಉತ್ಸವವನ್ನು, ತನ್ನ ಅಂತಸ್ತಿಗೆ ತಕ್ಕಂತೆ, ಬಹು ಸಂಭ್ರಮದಿಂದ ಆಚರಿಸಿದರು: ಬಂಧುಬಾಂಧವರಿಗೆ, ಮಿತ್ರ ಕಳತ್ರರಿಗೆ, ಬಂದು ಹೋದವರಿಗೆಲ್ಲಾ ಬಾಯಿತುಂಬ ಮಿಠಾಯಿಯ ಸರಬರಾಯಿಯನ್ನು ಮಾಡಿದರು. ಬಡಬಗ್ಗರಿಗೆ, ಬ್ರಾಹ್ಮಣರಿಗೆಲ್ಲಾ ಕೈತುಂಬ ಧನಧಾನ್ಯ, ಕಾಂಚನಗಳನ್ನು ದಾನಮಾಡಿದರು. ಎಲ್ಲರೂ ರಾಯರ ಔದಾರ್ಯವನ್ನು ಹಲವು ಬಾಯಿಗಳಿಂದ ಹೊಗಳಿ ಹೊಗಳಿ ಸಾಕಾದರು. ಅಂತೂ ರಾಯರ ಸತ್ಕಾರವನ್ನು ಪಡೆದವರಲ್ಲಿ ಅವರ ಮಗನನ್ನು ಕುಲದೀಪಕನಾಗಲೆಂದು ಮುಕ್ತಕಂಠವಾಗಿ ಹರಸದವರೇ ಇರದಂತಾಯಿತು.

ಚಂದ್ರಕಾಂತನು ಹುಟ್ಟಿದ ಆರನೆಯ ದಿನದಲ್ಲಿ ಷಷ್ಠಿ ಹಬ್ಬವನ್ನೂ, ಹನ್ನೆರಡನೆಯ ದಿನದಲ್ಲಿ ತೊಟ್ಟಿಲ ಹಬ್ಬವನ್ನೂ, ಮೂರನೇ ವರ್ಷದಲ್ಲಿ ಅನ್ನಪ್ರಾಶನವನ್ನೂ, ನಾಲ್ಕನೆಯ ವರ್ಷದಲ್ಲಿ ಚೌಲವನ್ನೂ, ಕ್ರಮಪ್ರಕಾರ, ಚಾಚೂ ತಪ್ಪದೆ, ಬಹು ವಿಜೃಂಭಣೆಯಿಂದ ಆಚರಿಸಿ, ಐದನೆಯ ವರ್ಷದಲ್ಲಿ ಅವನನ್ನು ಶಾಲೆಗೆ ಕಳುಹಿಸಿದರು. ಮಗನಿಗೆ ಎಂಟು ವರ್ಷ ತುಂಬುತ್ತಲೇ ಬ್ರಹ್ಮೋಪದೇಶ ವಿಧಿಯನ್ನು ಸಡಗರದಿಂದ ಜರಗಿಸಬೇಕೆಂದು ಯೋಚಿಸಿದ ರಾಯರು, ವೃದ್ಧಾಪ್ಯದ ದೆಸೆಯಿಂದ ಆ ಮುಂಚೆಯೇ ಕೈಲಾಸ ಯಾತ್ರೆಗೆ ಹೋಗಿಬಿಟ್ಟು, ಎಲ್ಲರನ್ನೂ ಅಪಾರ ಶೋಕಸಾಗರದಲ್ಲಿ ಮುಳುಗಿಸಿದರು.

೨

ಚಂದ್ರಕಾಂತನ ಹಿತಚಿಂತನೆಯನ್ನು ಆಮೇಲೆ ಕೆಲವು ವರ್ಷಗಳ ವರೆಗೆ ಅವನ ಸೋದರಮಾವ ನರಹರಿ ರಾಯನೇ ವಹಿಸುವಂತಾಯಿತು. ನರಹರಿ ರಾಯನ ವಿಚಕ್ಷಣತೆಯಿಂದಾಗಿ ಸೀತಾರಾಮರಾಯರ ಮನೆಮಂದಿಯ, ಹಾಗೂ ಆಸ್ತಿಪಾಸ್ತಿಯ, ಮೇಲ್ವಿಚಾರಣೆಯು ಯೋಗ್ಯ ರೀತಿಯಿಂದಲೇ ನಡೆದು, ಎಲ್ಲವೂ ನೆಮ್ಮದಿಯಿಂದಲೇ ಸಾಗಿತು.

'ಅವರೂರ' ಶಾಲೆಯ ಪರೀಕ್ಷೆಗಳನ್ನೆಲ್ಲಾ ಮುಗಿಸಿದ ಮೇಲೆ, ಚಂದ್ರಕಾಂತನು ಉಚ್ಚ ಶಿಕ್ಷಣಕ್ಕಾಗಿ ಮಂಗಳೂರಿಗೆ ಹೋಗಬೇಕಾಯಿತು. ಅವನು ಮನೆಯವರೆಲ್ಲರ ಕಣ್ಮಣಿಯಾಗಿ ಬೆಳೆದಿದ್ದುದರಿಂದ, ಮಂಗಳೂರಲ್ಲಿ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿಭವನದಲ್ಲಿ ಉಳಕೊಳ್ಳುವುದು ಯಾರಿಗೂ ಒಗ್ಗದಾಯಿತು. ಆದುದರಿಂದ ಅವನಿಗಾಗಿ ನರಹರಿರಾಯನು ಒಂದು ಪ್ರತ್ಯೇಕ ಮನೆಯನ್ನು ಬಾಡಿಗೆಗೆ ಪಡೆದು, ತನ್ನ ತಂಗಿ ಲಕ್ಷ್ಮಮ್ಮನೊಡನೆ ಅಲ್ಲೇ ಇರತೊಡಗಿದನು.

ನರಹರಿರಾಯನು, ಚಂದ್ರಕಾಂತನನ್ನು ಶಾಲೆಗೆ ಒಯ್ಯುವುದಕ್ಕಾಗಿ ಒಂದು ಮೋಟರ್ ಕಾರನ್ನೂ ಕ್ರಯಕ್ಕೆ ಪಡೆದನು. ಆಸ್ತಿಯ ಮೇಲ್ವಿಚಾರಣೆಯೇ ಮುಂತಾದ ಕೆಲಸಗಳ ಮೇಲೆ ನರಹರಿರಾಯನಿಗೆ 'ಅವರೂರ'ಗೆ ಹೋಗಿಬರುವುದಕ್ಕೂ, ಲಕ್ಷ್ಮಮ್ಮನಿಗೆ ನೆಂಟರಿಷ್ಟರಲ್ಲಿ ತಿರುಗಾಡುವುದಕ್ಕೂ, ಈ ಕಾರು ಬಹಳ ಉಪಕಾರಿಯಾಗತೊಡಗಿತು.

ಹದಿನಾರನೆಯ ವರ್ಷದಲ್ಲಿ ಎಂಟನೆಯ ದರ್ಜೆಯನ್ನು ಸೇರಿದ ಚಂದ್ರಕಾಂತನು ಎರಡು ವರ್ಷಗಳಾದರೂ ಆ ದರ್ಜೆಯಿಂದ ಮೇಲಕ್ಕೆ ಏರಲಿಲ್ಲ. ಅವನಿಗೆ, ಶಾಲೆಯಲ್ಲಿ ಕಲಿಸುವ ಉಪಾಧ್ಯಾಯರು ಅಸಮರ್ಥರೆಂದು, ಮನೆಯಲ್ಲಿಯೂ ಕಲಿಸಲು ಇಬ್ಬರು ಉಪಾಧ್ಯಾಯರನ್ನು ನೇಮಕಮಾಡಿದ್ದರು. ಅವರು ಮೂರು ವರ್ಷಗಳ ವರೆಗೆ ತಮ್ಮ ತಲೆಯಲ್ಲಿಲ್ಲದಷ್ಟನ್ನು ತಂದು ಚಂದ್ರಕಾಂತನ ತಲೆಯೊಳಕ್ಕೆ ತುಂಬಿಸಿದರೂ, ಪರೀಕ್ಷಕರ ಸವಾಲುಗಳಿಗೆ ತಕ್ಕ ಜವಾಬನ್ನು ಕೊಡುವಷ್ಟು ಮಾತ್ರ ಮೂರನೆಯ ಸಲವೂ ಅದರಿಂದ ಹೊರಕ್ಕೆ ಬರದಾಯಿತು. ಆಗಲಾನೇ ನರಹರಿರಾಯನು ತನ್ನ ಸೋದರಳಿಯನ ಮೆದುಳು ವಿದ್ಯೆಯಿಂದ ಪೂರ್ತಿಯಾಗಿ ತುಂಬಿ 'ಸೆಚುರೇಟ್' (Saturate) ಆಗಿರುವುದೆಂದು ತಿಳಿದುಕೊಂಡನು.

ಆಗಲೇ ಚಂದ್ರಕಾಂತನು ಪ್ರಾಯಕ್ಕೆ ಬಂದಿದ್ದುದರಿಂದ ಇನ್ನು ಆತನೇ ತನ್ನ ಆಸ್ತಿಯ ಯಜಮಾನತ್ವವನ್ನು ನೋಡಬೇಕೆಂದು ಅನೇಕರು ಅವನಿಗೆ ಹೇಳಿಕೊಡಲಾರಂಭಿಸಿದರು.

ಚಂದ್ರಕಾಂತನೂ ತನ್ನ ತಾಯಿಯೊಡನೆ ಇದನ್ನು ಸೂಚಿಸಲು ಅವಳು ಇನ್ನೆರಡು ವರ್ಷಕ್ಕೆ ಆತನು ನರಹರಿರಾಯನೊಡನೆ ಆಸ್ತಿಯ ವ್ಯವಹಾರಗಳ ಸಂಬಂಧವಾದ ಮಾಹಿತಿಯನ್ನು ಪಡೆಯಬೇಕೆಂದೂ, ಆಮೇಲೆ ಆತನೇ ಯಜಮಾನತ್ವವನ್ನು ನೋಡಬಹುದೆಂದೂ ತಿಳಿಸಿದಳು. ಈ ಮಾತಿನ ಸಂಬದ್ಧತೆಯನ್ನು ಮನಗಂಡ ಚಂದ್ರಕಾಂತನು ಇದಕ್ಕೆ ಒಪ್ಪಿದನು.

ಚಂದ್ರಕಾಂತನ ವಿದ್ಯಾಭ್ಯಾಸವು ಕೊನೆಗಂಡರೂ, ಇವರ ಮಂಗಳೂರಿನ ಬಿಡಾರ ಮಾತ್ರ ಮುಚ್ಚಲ್ಪಡಲಿಲ್ಲ. ಪಟ್ಟಣವಾಸದ ಸವಿಯನ್ನು ಕಂಡ ಚಂದ್ರಕಾಂತನು, ಸೋದರಮಾವನನ್ನು ಒತ್ತಾಯಪಡಿಸಿ ಮಂಗಳೂರಲ್ಲಿ ಒಂದು ಮನೆಯನ್ನು ಕ್ರಯಕ್ಕೇ ಪಡೆದನು. ವಾಸವನ್ನು ಇಲ್ಲೇ ಮಾಡುತ್ತಿದ್ದರೂ, ಆಗಿಂದಾಗ ನರಹರಿರಾಯನೊಂದಿಗೆ ತನ್ನ ಆಸ್ತಿಪಾಸ್ತಿಯ ಮೇಲ್ವಿಚಾರಕ್ಕಾಗಿ 'ಅವರೂರ'ಗೆ ಹೋಗಿ ಬರತೊಡಗಿದನು.

೪

ನರಹರಿರಾಯನು ತನ್ನ ಕೈಗೆ ಅನಾಯಾಸವಾಗಿ ಬಂದ ಆಸ್ತಿಯು ತಪ್ಪಿ ಹೋಗುವುದಲ್ಲ ಎಂದು ಮರುಗಿದನು. ಹಾಗಾಗದಂತೆ ಮಾಡಲು ಉಪಾಯಗಳನ್ನು ಹುಡುಕತೊಡಗಿದನು. ಪ್ರತಿ ಸಲವೂ ಚಂದ್ರಕಾಂತನನ್ನು ಆತನ ಆಸ್ತಿಯ ಕಡೆಗೆ ಕರೆದೊಯ್ಯುವಾಗ ಗೇಣಿ ವಸೂಲು ಮಾಡುವುದೇ ಮುಂತಾದ ಕೆಲಸಗಳಲ್ಲಿನ ಕಷ್ಟಗಳನ್ನು ಅವನಿಗೆ ಮನದಟ್ಟಾಗುವಂತೆ ಮಾಡಿದನು. ಕ್ರಮಕ್ರಮವಾಗಿ ಆ ಕೆಲಸವು ರಾಜನಂತೆ ಸುಮ್ಮನೆ ಕುಳಿತು ಸುಖಪಡಬಹುದಾದ ಚಂದ್ರಕಾಂತನಿಗೆ ಹೇಳಿದುದಲ್ಲವೆಂದು ವ್ಯಕ್ತಪಡಿಸಿದನು. ತಾಸಿರುವ ವರೆಗೆ ಅದನ್ನು ಏನೂ ಪ್ರತಿಫಲಾಪೇಕ್ಷೆಯಿಲ್ಲದೆ ತಾನೇ ಮಾಡಲು ಸಿದ್ಧನಾಗಿರುವೆನೆಂದು ಸೂಚಿಸಿದನು. ಚಂದ್ರಕಾಂತನಿಗೆ ಲೆಕ್ಕಪತ್ರಗಳನ್ನೆಲ್ಲಾ ಸರಿಯಾಗಿ ತೋರಿಸುವೆನೆಂದೂ, ಆತನಿಗೆ ಬೇಕಾದ ಹಣವನ್ನು ಬೇಕಾದಾಗ ಒದಗಿಸಿಕೊಡುವೆನೆಂದೂ, ಆತನು ಮಂಗಳೂರಲ್ಲೇ ಇದ್ದುಕೊಂಡು ಬೇಕಾದುದನ್ನು ಮಾಡಬಹುದೆಂದೂ, ತಿಳಿಸಿದನು.

ಲೋಕವ್ಯವಹಾರಜ್ಞಾನವಿಲ್ಲದ ಚಂದ್ರಕಾಂತನು ಸುಲಭವಾಗಿ ನರಹರಿರಾಯನ ಬಲೆಯೊಳಗೆ ಬಿದ್ದನು. ಅವನು ಮದುವೆಯಾಗಿ ಮಂಗಳೂರಲ್ಲೇ ಹಾಯಾಗಿ ಇದ್ದುಬಿಟ್ಟನು.

೫

ಜೇನಿದ್ದಲ್ಲಿ ಜೇನುನೊಣಗಳು ಮುತ್ತುವುದು ಲೋಕರೂಢಿಯಷ್ಟೆ. ಚಂದ್ರಕಾಂತನನ್ನೂ ಅನೇಕ ಗೆಳೆಯರು ಮುತ್ತಿದರು. ಬೇರೇನೂ ಉದ್ಯೋಗವಿಲ್ಲದೆ ಗೆಳೆಯರೊಂದಿಗೆ ದಿನವೆಲ್ಲಾ ಕಾರಿನಲ್ಲಿ ಸುತ್ತಾಡಿ, ಮನಸ್ಸಿಯಾಗಿ ಹಣವೆಚ್ಚ ಮಾಡುವುದೇ ಚಂದ್ರಕಾಂತನ ದಿನಚರಿಯಾಯಿತು.

ಈ ದಿನ ಐನೂರು ರೂಪಾಯಿ, ನಾಳೆ ಸಾವಿರ, ನಾಡದು ಐದು ಸಾವಿರ, ಆಚೆ ನಾಡದು ಹತ್ತು ಸಾವಿರ, ಈ ಪ್ರಕಾರ ಚಂದ್ರಕಾಂತನು ಸೋದರ ಮಾವನಿಗೆ ಬರೆದು ತರಿಸಿಕೊಂಡು ಖರ್ಚು ಮಾಡಿದನು. ನರಹರಿರಾಯನು ಕೈಯ್ಯಲ್ಲಿ ನಗದು ಇಲ್ಲವೆಂದರೆ ಬೇಗಾದರೂ ಮಾಡಿ, ಏನಾದರೂ ಮಾಡಿ, ಬೇಕಾದ ಹಣವನ್ನು ಅವಶ್ಯವಾಗಿ ಕಳುಹಿಸಿಕೊಡಲೇಬೇಕೆಂದು ಚಂದ್ರಕಾಂತನ ತಾಕೀತಾಗಿತ್ತು.

ನರಹರಿರಾಯನೂ ಈ ದಿನ ಈ ಪತ್ರಕ್ಕೆ ಸಹಿಮಾಡಿ ಕಳುಹಿಸು, ನಾಳೆ ಆ ಪತ್ರಕ್ಕೆ, ನಾಡದು ಇನ್ನೊಂದಕ್ಕೆ, ಎಂದು, ಹೀಗೆ ಎಷ್ಟೋ ಪತ್ರಗಳಿಗೆ ಚಂದ್ರಕಾಂತನಿಂದ ಸಹಿಮಾಡಿಸಿಕೊಳ್ಳುತ್ತಿದ್ದನು.

ಚಂದ್ರಕಾಂತನು ಐದು ವರ್ಷಗಳಲ್ಲಿ, ಹತ್ತು ಸಲ ಕಾರನ್ನು ಬದಲಾಯಿಸಿ ಹೊಸತಾಗಿ ಪಡೆದುಕೊಂಡನು. ಇದರಿಂದ ಪ್ರತಿಸಲವೂ ಎರಡುಮೂರು ಸಾವಿರ ರೂಪಾಯಿ ಅವನ ಕೈಬಿಡುತ್ತಿತ್ತು. ಇಪ್ಪತ್ತು ಸಲ ಗೆಳೆಯರನ್ನು ಕೂಡಿಕೊಂಡು ಸುಖಾಸ್ವೀಪಣೆಗಾಗಿ ಮುಂಬಾಯಿ, ಮದ್ರಾಸು, ಕಲ್ಕತ್ತಾ ಮುಂತಾದ ಶಹರುಗಳನ್ನು ಸಂದರ್ಶಿಸಿಬಂದನು. ಈ ಒಂದೊಂದು ಪ್ರಯಾಣಕ್ಕೂ ನಾಲ್ಕೈದುಸಾವಿರ ರೂಪಾಯಿ ನೀರಾಗುತ್ತಿತ್ತು. ನೂರು ಸಲ ತನ್ನ ಮಂಗಳೂರು ಭವನದಲ್ಲಿ ಮಿತ್ರರಿಗೆ ಸತ್ಕಾರ ಕೂಟಗಳನ್ನು ಏರ್ಪಡಿಸಿದನು. ಇದರಿಂದ ಎಷ್ಟೋ ಹಣವು ಹೊಗೆಯಾಗಿ ಹೋಗುತ್ತಿತ್ತು.

೬

ಚಂದ್ರಕಾಂತನು ತನ್ನ ಮಿತ್ರರಿಂದಲೂ ಅಗತ್ಯಬಿದ್ದಾಗ ಹಣಪಡೆದು, ನರಹರಿರಾಯನಿಂದ ಬಂದ ಹಣದಿಂದ ಅದನ್ನು ಮರುಪಾವತಿ ಮಾಡುತ್ತಿದ್ದನು. ಎಷ್ಟು ಸಾವಿರ ರೂಪಾಯಾದರೂ ಅವನಿಗೆ ಬರೀ ಬಾಯಿಮಾತಿನಲ್ಲೇ ದೊರಕುತ್ತಿತ್ತು.

ನಾರಾಯಣರಾಯರಿಗೆ ಅವನು ಹತ್ತು ಸಾವಿರ ರೂಪಾಯಿ ಕೊಡುವುದಿತ್ತು. ನರಹರಿರಾಯನಿಗೆ ಆ ರೂಪಾಯಿಗಾಗಿ ಬರೆದ ಪತ್ರಕ್ಕೆ ಮೂರು ದಿನವಾದರೂ ಜವಾಬು ಬಂದಿರಲಿಲ್ಲ.

ಈ ದಿನದ ಎರಡನೆಯ ಟಪ್ಪಾಲಿಗೆ ಚಂದ್ರಕಾಂತನಿಗೆ ದಪ್ಪವಾದ ಒಂದು ಲಕೋಟೆ ಬಂತು. ಅದನ್ನು ಒಡೆದುನೋಡಲು, ಒಳಗಿಂದ ಅವನು ನರಹರಿರಾಯನಿಗೆ ಬಾಡಿಗೆಯಂತೆ ಈ ತಿಂಗಳಲ್ಲಿ ಕಳುಹಿಸಿಕೊಟ್ಟಿದ್ದ 'ಬಿಲ್'ಗಳ ಕಟ್ಟು, ಒಂದು ಉದ್ದವಾದ ಪತ್ರವೂ, ಹನ್ನೆರಡಾಣೆಯ ಚೀಟು ಅಂಟಿಸಲ್ಪಟ್ಟ ಒಂದು ಕಾಗದವೂ ಹೊರಬಿದ್ದವು.

ಚಂದ್ರಕಾಂತನು ನರಹರಿರಾಯನ ಪತ್ರವನ್ನು ಲಗುಬಗೆಯಿಂದ ಓದಿನೋಡಿದನು. ಅದರ ಹೆಚ್ಚಿನ ಅಂಶವು ಅವನನ್ನು ದೂಕೊಂಡು ಇದ್ದು, ಅದರ ಕಡೆಗೆ ಅವನ ಲಕ್ಷ್ಯವು ಅಷ್ಟೊಂದು ಹೋಗಲಿಲ್ಲ; ಆದರೆ ಈ ಕೆಳಗಿನ ಅದರ ಕೊನೆಯ ಮಾತುಗಳು ಕೆಂಪು ಶಾಯಿಯಿಂದ ಗುರುತು ಮಾಡಲ್ಪಟ್ಟಿದ್ದು ಅವನ ಲಕ್ಷ್ಯವನ್ನು ಮೊದಲು ಆಕರ್ಷಿಸಿದುವು:—

"....ನಮ್ಮೆಲ್ಲರ ಬುದ್ಧಿವಾದವನ್ನು ಉಪೇಕ್ಷಿಸಿ ನೀನು ಮಾಡಿದ ದುಂದುಗಾರಿಕೆಯ ಫಲವನ್ನು ಉಣ್ಣಲು ನಿನಗೆ ಈಗ ಸಮಯ ಬಂದಿರುವುದು. ನಿನಗೆ ಮನಬಂದಂತೆ ಹಣ ಕಳುಹಿಸುವುದಕ್ಕಾಗಿ ಇದ್ದ ಆಸ್ತಿಯನ್ನೆಲ್ಲಾ ಕರಗಿಸಬೇಕಾಯಿತು. ಈಗ ನಿನಗೆ ಹತ್ತು ಸಾವಿರ ರೂಪಾಯಿ ಬಿಟ್ಟು ಅಷ್ಟೇ ಕಾಸನ್ನಾದರೂ ಮಾಡಿ ಕಳುಹಿಸಲು, ಅಡವು ಮಾಡಲಾಗಲಿ, ಮಾರಲಾಗಲಿ ನಿನ್ನ ಸ್ವಂತವಾದ ಒಂದು ಕಲ್ಲು ಕೂಡ ಉಳಿದಿರುವುದಿಲ್ಲ. ಇದರೊಂದಿಗೆ ಕಳುಹಿಸಿಕೊಟ್ಟಿರುವ ಅರ್ಜಿಗೆ ದಸ್ಕತು ಮಾಡಿ ಕೋರ್ಟಿಗೆ ಹಾಜರು ಮಾಡುವುದೊಂದೇ ನಿನಗೆ ಸಾಲಗಾರರಿಂದ ತಪ್ಪಿಸಿಕೊಳ್ಳಲು ಅನುಕೂಲವಾದ ಉಪಾಯವಾಗಿರುವುದು."

ಚಂದ್ರಕಾಂತನು ಒಮ್ಮೆ ಪತ್ರದ ಕಡೆಗೆ ನೋಡಿದನು, ಒಮ್ಮೆ ಅರ್ಜಿಯ ಕಡೆಗೆ ನೋಡಿದನು. ಒಡನೆ, ಕನಸಿನಲ್ಲಿಂಬಂತೆ ಮೆಲ್ಲಗೆ ಎದ್ದು, ಕಪಾಟಿನಲ್ಲಿದ್ದ ರಿವೊಲ್ವರನ್ನು ಕೈಯಲ್ಲಿತ್ತಿ ಮೆದುಳಿಗೆ ಗುರಿಯಿಟ್ಟು ಹಿಡಿದುಕೊಂಡನು. ಒಂದೇ ಕ್ಷಣ ಕಳೆಯಿತು; ಮರುಕ್ಷಣದಲ್ಲಿ 'ಢಂ' ಎಂಬ ಶಬ್ದವಾಗಿ ಚಂದ್ರಕಾಂತನ ದೇಹವು 'ಧಡಲ್' ಎಂದು ಕೆಳಕ್ಕೆ ಬಿತ್ತು. ಶಬ್ದ ಕೇಳಿ ಓಡಿಬಂದವರೆಲ್ಲರೂ ಅವನ ತಲೆಯೊಳಗಿಂದ ಹರಿಯುತ್ತಿದ್ದ ರಕ್ತಪ್ರವಾಹವನ್ನು ನೋಡಲಾರದೆ ಕೈಯಿಂದ ಕಣ್ಣುಗಳನ್ನು ಮುಚ್ಚಿಕೊಂಡರು. ಅಥವಾ 'ಕುಲದೀಪಕ'ನ ಪ್ರಕಾಶದ ಪ್ರಜ್ವಲತೆಯನ್ನು ಸಹಿಸಲಾರದೆಯೋ ಏನೋ!

"ಮಿಥ್ಯಾಜೀವನದ ಸತ್ಯಕಥೆಗಳು"

(ಪ್ರಥಮ ಭಾಗ)

— ಸಮಾಪ್ತ —

ನಿರೀಕ್ಷಿಸಿರಿ: -

"ತಿರುಗು-ಮುರುಗು"

(ಮಿಥ್ಯಾಜೀವನದ ಸತ್ಯಕಥೆಗಳು)

ಭಾಗ ೧.

ವಿಶ್ವಸಮಾಜದ ಹೃದ್ಭೇದಕ ಅವನತಿಯ ಹತ್ತು ಹೃದಯಂಗಮ ಚಿತ್ರಗಳು.

ಲೇಖಕ:—ಶ್ರೀ "ರಸಿಕರಂಜನ"

ಬೇಗನೆ ಪುಸ್ತಕರೂಪದಲ್ಲಿ ಪ್ರಕಟವಾಗುವುದು.

ಬರುವ ವಾರ:

ಒಂದು ಸಚಿತ್ರ

ಪ್ರಣಯ ಕಥೆ:

ಶ್ರೀ "ರಸಿಕರಂಜನ"

ಇವರ ಸರಸ ಲೇಖನಿಯಿಂದ,

ಓದಲು ಮರೆಯಬೇಡಿ!

ಸೇವಾ ಸಮಿತಿಯ ಸ್ಕೌಟ್ ದಳಗಳು.

ಎಂಬೀ ವಿಷಯವಾಗಿ ಶ್ರೀ ಪಂಡಿತ ಹೃದಯನಾಥ ಕುಂಜ್ರುರವರು ಭಾಷಣ ಮಾಡುತ್ತ, ಈ ಸ್ಕೌಟರ ಅನುದಿನದ ಕಾರ್ಯಕ್ರಮದಲ್ಲಿ, ಈ ದೇಶಕ್ಕೆ ಸಂಬಂಧಪಟ್ಟವರು ತಾವೆಂಬ ಅಭಿಪ್ರಾಯವು ಅವರ ಮನಸ್ಸಿನಲ್ಲಿ ನಾಟುವ ಹಾಗೆ ಸ್ವೀರೀಪಣೆ ತಾನಾಗಿ ಉಂಟಾಗುವಂತಾಗುವುದು. ಸ್ವದೇಶದ ವೀರರ ಮಹಾವೀರರ ಮಹಾರಾಜರುಗಳ ಮಹಾ ಪುರುಷರುಗಳ ಜೀವನ ಚರಿತ್ರೆಯನ್ನು ಕುರಿತಾಗಿ ಈ ಬಲವೀರರಿಗೆ ಗ್ರಂಥಗಳು ಒದಗಿಸಬೇಕಾಗಿದೆ. ಸ್ವಭಾಷೆಯಲ್ಲಿಯೆ ದೇಶೀ ಸಂಗೀತದಲ್ಲಿ ಗಾನಗಳು ಬೇಕು. ಸ್ವದೇಶೀ ಪ್ರಚಾರದಲ್ಲಿ ಈ ಬಲವೀರರು ಅಸಾಧಾರಣ ಕೆಲಸ ಮಾಡಿರುವರು. ಕುಂಭಮೇಳದ ಕಾಲದಲ್ಲಿ ಇವರು ಅದ್ಭುತ ಸೇವೆ ಮಾಡಿರುವರು. ಅಸ್ಪೃಶ್ಯತಾ ನಿವಾರಣೆಗಾಗಿ ಇವರಿಂದಾದ ಸಾಹಸವು ವಿಶೇಷವಾಗಿದೆ. ಹೀಗೆ ಇವರು ಸ್ಕೌಟಿಂಗ್ ಪದ್ಧತಿಗೇ ಮಾತ್ರವಲ್ಲದೆ, ದೇಶದಲ್ಲಿ ವಿದ್ಯಾಭ್ಯಾಸವು ಹರಡುವುದಕ್ಕೂ ಬಹಳವಾಗಿ ಸೇವೆ ಮಾಡಿರುವರು ಎಂದರು. ಸ್ಕೌಟ ಪದ್ಧತಿಯು ಇನ್ನೂ ಇನ್ನೂ ವಿದೇಶೀಯವಾಗಿಯೆ ಇದ್ದು, ಮತ್ತೂ ವಿದೇಶಿಯವಾಗಿಯೆ ಹೋಗುತ್ತ ಸ್ಕೌಟರನ್ನು ದೂರ ಒಯ್ಯುತ್ತಿರುವಾಗ, ಸೇವಾ ಸಮಿತಿಯವರು ದೇಶದೊಡನೆ ಸಮೀಪ ಸಂಬಂಧವನ್ನು ಉಂಟುಮಾಡಿ ಬಲಪಡಿಸಲು ಯತ್ನಿಸುತ್ತಿರುವುದು ಯೋಗ್ಯವಾಗಿದೆ.

ವನಿತಾ ವೈಭವ.

ಸ್ತ್ರೀಯರೂ ನಿರುದ್ಯೋಗಿಗಳೇ!

ಭಾರತದ ಪ್ರಸ್ತುತದ ಪ್ರಶ್ನೆಯೆಂದರೆ ನಿರುದ್ಯೋಗ. ವಾರಣ ಭುಜತಿಯು ಬಹುಕಾಲದಿಂದಲೂ ಜನರು ನಿರುದ್ಯೋಗದ ಕುರಿತು ಮಾತೆತ್ತುವಾಗ ಅದನ್ನು ಕೇವಲ ಗಂಡಸರ ಸಂಬಂಧಿಯೇ ಮಾತಾಡುವದಾಗಿತ್ತು. ಆದರೆ ಇತ್ತೀಚೆಗೆ ಹೇಗೆ ಕಾಲಚಕ್ರವು ಉರುಳುತ್ತದೊ ಹಾಗೆ ನಮ್ಮ ದೇಶದ ಸ್ಥಿತಿಯು ಉರುಳುತ್ತಾ ಹೋಗಹತ್ತಿದೆ. ಹೆಂಗಸರಲ್ಲಿಯೂ ನಿರುದ್ಯೋಗದ ಸಮಸ್ಯೆಯು ತಲೆ ತೋರಹತ್ತಿದೆ. ಇಷ್ಟರವರೆಗೆ ಗಂಡಸರೇ ಇದರ ಕುಂಠಿತ ಕಳೆಯನ್ನು ಖರ್ಚುಮಾಡಿ ಕಾಲಕಳೆಯುವ ಸಂಸ್ಥೆ ಆಯಿತು. ಈಗ ಇದು ಸ್ತ್ರೀಯರನ್ನು ಬೆನ್ನಟ್ಟತೊಡಗಿದೆ. ಭಾರತದ ಅಧೋಗತಿಗೆ ಇನ್ನೇನು ಬೇಕು? ಶಾಲಾ ಕಾಲೇಜುಗಳಿಂದ ಹೊರಬಿದ್ದ ಯುವಕರು ಮಾತ್ರ ಕೆಲಸಕ್ಕಾಗಿ ಬಾಗಿಲಿಂದ ಬಾಗಿಲಿಗೆ ಅಲೆದಾಡುವುದಲ್ಲ. ಈಗ ಯುವತಿಯರೂ ಹಾಗೆಯೇ ಅಲೆಯತೊಡಗಿದ್ದಾರೆ.

ಮೊದಲು ಬರೇ ಅಲ್ಪ ಸಂಖ್ಯಾತ ತರುಣಿಯರು ಉಚ್ಚತರಗಳಲ್ಲಿ ಓದುತ್ತಿದ್ದು ಅವರು ಮೆಟ್ರಿಕ್ಯುಲೇಶನ ಕಲಿತು ಹೊರಬಿದ್ದ ಕೂಡಲೇ ಶಾಲಾ ಅಧ್ಯಾಪಕಿಯರಾಗಿ ರೂ ೩೫ ಗಳಿಸಿದಂತೆ ತಮ್ಮ ಜೀವನವನ್ನು ಸರಾಗವಾಗಿ ನಡಿಸುತ್ತಿದ್ದರು. ಈಗ ಸಾವಿರಗಟ್ಟಲೆ ತರುಣಿಯರು ಶಾಲಾ ಕಾಲೇಜುಗಳಿಂದ ಹೊರಬಿದ್ದು ಅದೇ ಕೆಲಸವನ್ನು ನೋಡುವವೆಂದರೆ ಅಷ್ಟು ಶಾಲೆಗಳಾದರೂ ಇರಬೇಡವೆ? ಆದ್ದರಿಂದ ಈ ಬಿಕ್ಕಟ್ಟಿನ ಸಮಸ್ಯೆ. ಅಂತೂ ಮೊದಲು ಮೆಟ್ರಿಕ್ಯುಲೇಶನ್ ಪಾಸಾಗಿದ್ದ ಯುವತಿಗೆ ರೂ ೩೫ ಸಿಗುತ್ತಿದ್ದರೆ, ಈಗ ಎಮ್ ಎ ಕಲಿತ ತರುಣಿಯೂ ಆ ಕೆಲಸಕ್ಕೆ ಸಿದ್ಧಳಿರುವಳು. ಆದ್ದರಿಂದ ಅವರ ಸಂಬಳಕ್ಕೆ ಎತ್ತಲಿಂದಲೂ ಲಕ್ಷ್ಯ ಬಂದಂತಾಗಿದೆ. ಈಗ ಮೆಟ್ರಿಕ್ ಪಾಸಾದ ಅಧ್ಯಾಪಕಿಯರೂ ಬರೇ ರೂ ೨೦ ಯಾ ಅದಕ್ಕಿಂತ ಕಡಿಮೆ ಸಂಬಳಕ್ಕೂ ಸಿಕ್ಕುವಂತಾಗಿದೆ. ಹೀಗಿರುವಾಗ ಗಂಡಸರ ಪಾಡೇನು? ಗಂಡಸರು ಹೆಂಗಸರ ಕೆಲಸಕ್ಕೆ ಪ್ರಾರಂಭಿಸಿದಂದಿನಿಂದ ನಾವು ನಿರುದ್ಯೋಗಿಗಳಾಗಬೇಕಾಯಿತೆಂದು ಹೆಂಗಸರನ್ನು ದೂರುತ್ತಿದ್ದರೆ ಈಗ ಹೆಂಗಸರು ಯಾರನ್ನು ದೂರಬೇಕು?

ಇದಕ್ಕೆಲ್ಲಾ ಕಾರಣವೇನೆಂದು ವಿಚಾರಿಸಿದಲ್ಲಿ ಹೆಂಗಸರು ಮಾಡುವ ಕೆಲಸಗಳಿಗೆ ಮಿತಿ ಇದೆ. ಇತರ ಜನಾಂಗಗಳ ಮಹಿಳೆಯರಂತೆ ಹಿಂದೂದೇಶದ ತರುಣಿಯರು ಎಲ್ಲಾ ಸಂಸ್ಥೆಗಳಲ್ಲಿಯೂ ಕಾರ್ಯವನ್ನು ಸಾಗಿಸುವುದಿಲ್ಲ. ಇದೇ ಅವರ ನಿರುದ್ಯೋಗದ ಮುಖ್ಯ ತಾತ್ಪರ್ಯ. ಶಾಲೆಯಿಂದ ಹೊರಬಿದ್ದೊಡನೆ ಅವರ ಆಲೋಚನೆಯೊಂದೇ ಒಂದೇ. ಉಪಾಧ್ಯಾಯಿನಿಯಾಗುವುದು ಅಥವಾ ಡಾಕ್ಟರಿಕೆ. ಇತರ ಕೆಲಸಗಳ ಕಡೆಗೆ ಕಣ್ಣೆತ್ತಿ ಸಹ ನೋಡುವುದಿಲ್ಲ. ಆದ್ದರಿಂದ ಆ ಕೆಲಸಗಳಿಗೆ ತುಂಬಾ ಉಮೇದ್ವಾರರಿದ್ದಾಗ ನಿಜವಾಗಿಯೂ ಅದೃಷ್ಟವಂತಳಾದವಳಿಗೆ ಆ ಕೆಲಸವು ಸಿಕ್ಕಿತೆಂದರೆ ಉಳಿದವರು ಸುಮ್ಮನೆ ಹಿಂತಿರುಗಬೇಕಾದುದು ಸಹಜ. ವಕೀಲ ವೃತ್ತಿ, ಟೈಪಿಸ್ಟ ಕೆಲಸ, ದರ್ಜಿಯ ಕೆಲಸ, ಪ್ರಿಂಟಿಂಗ್ ಕೆಲಸ, ಇಂಜಿನಿಯರಿಂಗ್ ಇವೇ ಮೊದಲಾದ ಕೆಲಸಗಳಿಗೆ ಅವರು ಇನ್ನೂ ಮುಂದೊತ್ತಿ ಬರಲಿಲ್ಲ. ಕೆಲವರಿಗೆ ಇಂಥಹ ಕೆಲಸಗಳನ್ನು ಮಾಡಿದರೆ ಸಮಾಜವು ಏನೆನ್ನುವುದೋ ಎಂಬ ಭೀತಿ. ಇನ್ನು ಕೆಲವರಿಗೆ ಅದನ್ನು ಕಲಿಯಲು ಸಾಧ್ಯವಿಲ್ಲ. ಆದ್ದರಿಂದ ರಮಣೀಸುಲಭವಾದ ಈ ಅಧ್ಯಾಪಕಿಯ ವೃತ್ತಿಗೆ ಗಂಟುಬೀಳಬೇಕಾಗಿದೆ ಅವರಿಗೆ. ದುರಾದೃಷ್ಟದಿಂದ ಈಗ ಈ ಸಂಸ್ಥೆಗಳಲ್ಲಿಯೂ ಅವರಿಗೆ ಕೆಲಸ ಸಿಗುವುದು ದುರ್ಲಭವಾಗಿದೆ. ಸ್ತ್ರೀಯರ ನಿರುದ್ಯೋಗ ನಿವಾರಣೆಯಾಗಬೇಕಾದರೆ ಅವರಿಗೆ ಇತರ ಕೆಲಸಗಳಿಗೆ ಯೋಗ್ಯವಾಗುವಂತೆ ತರಬೇತಿಯನ್ನು ಕೊಟ್ಟು ಅವರು ಈ ಉಪಾಧ್ಯಾಯಿನಿ ವೃತ್ತಿಗೆ ಜೋಲು ಬೀಳದಂತೆ ನೋಡಿದರೆ ಅವರಲ್ಲಿ ನಿರುದ್ಯೋಗವು ಬಂದಿತಾದರೂ ಕಡಿಮೆಯಾಗುವುದು. ಅಗರಿಗೆ ಇಂತಹ ಉದ್ಯೋಗಗಳನ್ನೇ ಕೈಕೊಳ್ಳಬೇಕೆಂದು ಸ್ವಾರ್ಥಸಾಧನೆ ಮಾಡುವುದು ಒಳ್ಳೆಯದಲ್ಲ. ಅವರಿಗೆ ಯಾವ ಧಂಧೆಯ ಮೇಲೆ ಪ್ರೀತಿಯಿದೆಯೋ ಅದನ್ನೇ ದೃಷ್ಟಿಪಥದಲ್ಲಿಟ್ಟು, ಅದರಲ್ಲಿ ತರಬೇತಿಯನ್ನು ಚೆಟ್ಟಾಗಿ ಪಡೆದ ನಂತರ ಅದರಿಂದಲೇ ಸಂಪಾದನೆಯನ್ನು ಗೈಯ್ಯಲಿ ಅಂದರೆ ಎಲ್ಲವೂ ಸುಲಭವಾಗುವುದು.

ನಿರುದ್ಯೋಗವು ಇನ್ನೊಂದು ದೊಡ್ಡ ಸಮಸ್ಯೆಯನ್ನು ಹೆಮ್ಮಕ್ಕಳ ಪಾಲಿಂದಿರ ಎದುರಿಗಿಟ್ಟಿದೆ. ಸಂಪಾದನೆಯಾಗದೆ ಮದುವೆಯಾಗುವುದಿಲ್ಲವೆಂದು ಯುವಕರ ಹಟ. ನಿಜ. ಯುವಕರು ಬೇಕೆಂತಲೇ ಇದನ್ನು ಹೇಳಲಿಲ್ಲ. ಮದುವೆಯಾದ ನಂತರ ಖರ್ಚಿಗೆ ಹಣ ಬೇಡವೇ? ಇಷ್ಟೆಲ್ಲಾ ಗಂಡಾಂತರಗಳಿಗೆ ಸಿಲುಕಿ ಬಳಲಿ ಬಾಧ ಪಡುವುದಕ್ಕಿಂತಲೂ ಸುಮ್ಮನಿರುವುದು ಲೇಸೆಂದು ಯುವಕರ ವಾದವಾಗಿದೆ. ಹಾಗಾದರೆ ಬೆಳೆದ ಹೆಮ್ಮಕ್ಕಳನ್ನು ಮನೆಯಲ್ಲಿಟ್ಟು ಸಮಾಜದ ಕಣ್ಣನ್ನು ತಪ್ಪಿಸುವ ಹೆತ್ತವರ ಗತಿಯೇನು? ಯುವಕನು ಒಪ್ಪದಿದ್ದರೆ ಯುವತಿಯನ್ನು ಕಲ್ಲಿಗೆ ಕೊಟ್ಟು ಮದುವೆಮಾಡುವುದೆ? ಇದರಿಂದಾಗಿ ಹಿಂದಿನ ಕಾಲಕ್ಕಿಂತಲೂ ಈಗ ಮದುವೆಗಳ ಸಂಖ್ಯೆಯು ಬಹಳೇ ಕಡಿಮೆಯಾಗಿದೆ. ಇದರ ಮೂಲಕಾರಣವು ನಿರುದ್ಯೋಗ. ಹೆತ್ತವರು ತಮ್ಮ ಹೆಮ್ಮಕ್ಕಳನ್ನು ಒಂದು ಹೊರೆಯಾಗಿ ಭಾವಿಸಿ, ಆ ಹೊರೆಯನ್ನು ಇಳಿಗಿಡಲು ಸಾಧ್ಯವಾಗದೆ ಅನೇಕಾನೇಕ ಆಘಾತಗಳನ್ನು ಮಾಡಿದ್ದಾರೆ. ಇದಕ್ಕೆ ತಾಗಿ ಇನ್ನೊಂದು ಸಮಸ್ಯೆಯು ತಲೆ ಎತ್ತಿ ತನ್ನ ಭೀಕರ ವದನವನ್ನು ತೋರಿಸುತ್ತಿದೆ. ಅದೇ ವರದಕ್ಷಿಣೆ. ಮೊದಮೊದಲು ವಿದ್ಯಾವತಿಯರಾದ ಯುವತಿಯರನ್ನು ಯುವಕರು ಏನೊಂದೂ ವರದಕ್ಷಿಣೆಯನ್ನು ಪಡೆಯದೆ ಮದುವೆಯಾಗುತ್ತ ಬಂದರು. ಇದನ್ನರಿತ ಹೆತ್ತವರು ತಮ್ಮ ಹೆಮ್ಮಕ್ಕಳಿಗೆ ಹೆಚ್ಚುಹೆಚ್ಚಾಗಿ ವಿದ್ಯಾಭ್ಯಾಸವನ್ನು ಕೊಡತೊಡಗಿದರು. ಆದರೆ ಕಾಲಕ್ರಮೇಣ ದುರ್ಘಟನ ಧಾರಣೆಯು ಬಂದೇ ಸವನೆ ಕೆಳಗೆ ಬಿದ್ದಂತೆ ಯುವಕರು ಹುಡುಗಿಯು ಎಷ್ಟೇ ಕಲಿತರೂ ಕೊಡುವ ವರದಕ್ಷಿಣೆಯನ್ನು ಕೊಡಲೇಬೇಕೆಂದು ವಾದಿಸಿದರು. ಹುಡುಗಿಯರಿಗಾಗಿ ಹೆತ್ತವರು ಇಮ್ಮಡಿ ಖರ್ಚುಮಾಡಬೇಕಾಯಿತು. ಒಂದನೇದಾಗಿ ಹುಡುಗಿಗೆ ವಿದ್ಯಾಭ್ಯಾಸ, ಎರಡನೇದಾಗಿ ಮದುವೆ. ಇವೆರಡನ್ನು ಪೂರೈಸುವಾಗ ಕನ್ಯಾಪಿತನು ಕೈಯಲ್ಲಿ ದಂಡವನ್ನು ಹಿಡಿದು ದೇಶತ್ಯಾಗ ಮಾಡಬೇಕಾಗುತ್ತದೋ ಎಂದು ಹೆದರಿಕೆ. ಕಾರಣ, ಹಲವು ಕಡೆಗಳಲ್ಲಿ ಇಂತಹ ಘಟನೆಗಳು ಸಂಭವಿಸಿವೆ.

ಇತ್ತೀಚೆಗೆ ಯುವತಿಯು ಮನಸ್ಸಿನಲ್ಲಿ ಸಮಾಧಾನವಿಲ್ಲ. ಪಿತನು ಅಷ್ಟು ದುಡ್ಡನ್ನು ವಿನಿಯೋಗಿಸಿಯೂ ವಿನಃ ಸಾರ್ಥಕವಾಗಲಿಲ್ಲವಲ್ಲಾ. ತಾನು ಮದುವೆಯಾಗಿ ಸುಖವಾಗಿರಬೇಕಾದ ಸಮಯದಲ್ಲಿ ತಂದೆಯ ಮನೆಯಲ್ಲಿ ಅವನಿಗೆ ದೊಡ್ಡದೊಂದು ಹೊರೆಯಾಗಿ ಇರಬೇಕಾಯಿತಲ್ಲ ಎಂಬ ಅಗಾಧವಾದ ಚಿಂತೆಯು. ತಂದೆಯ ಕಷ್ಟವನ್ನು ನೀಗಿಸುವ ಎಂದರೆ ಅವಳಿಗೆ ಕೆಲಸ ಸಿಗುವುದಿಲ್ಲ. ಸರಿಯಾಗಿ ಮದುವೆಮಾಡಿ ಕೊಡಲು ತಂದೆಗೆ ಸಾಧ್ಯವಿಲ್ಲ ಎಂಬ ಈ ಎರಡು ಚಿಂತೆಗಳ ನಡುವೆ ಸಿಕ್ಕಿರುವವರ ಅವಹೇಳನದ ನಾಲ್ಕು ಇವೆಲ್ಲವುಗಳನ್ನು ರಾತ್ರಿಂದಿವವೂ ಕೇಳಿ ನೋಡಿ ಬೇಸರ ಹೊಂದು ಎಷ್ಟು ಜನ ಯುವತಿಯರು ಇನ್ನೇ ಆತ್ಮಹತ್ಯವನ್ನು ಮಾಡಿಕೊಂಡಿಲ್ಲ? ಇದೆಲ್ಲವನ್ನೂ ಸರಿಯಾಗಿ ಬಿಚ್ಚಿ ಹೇಳಿದರೆ ನಮ್ಮ ಸಮಾಜದ ಕುಂದುಕೊರತೆಗಳು ಸರಿಯಾಗಿ ಕಂಡುಬರುವುದಲ್ಲ. ಇಂತಹ ಕ್ರೂರ ಸಮಾಜಕ್ಕೆ ಧಿಕ್ಕಾರ!

ಗಾರ್ಡರ್ ಎಂಬಲ್ಲಿ ಇಂತಹ ಅನಾಹುತವೊಂದು ನಡೆಯಿತು. ನಾಡಿನ ಹಿರಿಯರು ಇದನ್ನು ಅಲ್ಲಲ್ಲಿ ಮುಚ್ಚಿಡಲು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ಸೊಗ್ಗಿಯಾಗಿದ್ದುದು ಹೂವಾಗಿ ಅರಳಿದ ಮೇಲೆ ಅದರ ಪರಿಮಳವನ್ನು ಅಡಗಿಸಲು ಯಾರಿಂದ ತಾನೇ ಸಾಧ್ಯ? ಆದ್ದರಿಂದ ಸಮಾಜದ ಮುಖಂಡರುಗಳಾದ ಹಿರಿಯರು ಇನ್ನಾದರೆ ಜಾಗ್ರತೆ ನಮ್ಮ ಅವಸ್ಥೆಯನ್ನು ನಾವು ಸುಧಾರಿಸದೆ ಇದ್ದರೆ ದೇಶದ ಜನನಿಯರನೇಕರನ್ನು ನಾವು ನಿಷ್ಕಾರಣವಾಗಿ ಕಳೆದುಕೊಳ್ಳಬೇಕಾಗುವುದು. ಅವರಿಂದ ಎಂತಹ ಪವಿತ್ರಾತ್ಮಗಳು ಉದ್ಭವಿಸಲಿದ್ದುವೆಂಬುದು ಯಾರಿಗೆ ತಾನೇ ಗೊತ್ತು. ಅಂಥವರನ್ನು ನಾವು ಮೇಲೆ ಹೇಳಿದಂತೆ ಬುಡದಲ್ಲಿ ಕಲಿಯೆತ್ತದಂತೆ ಕಡಿದು ಬಿಟ್ಟರೆ ನಮ್ಮಗಳ ಹಾನಿಯನ್ನು ನಾವೇ ಬಯಸಿದಂತೆ ಆಗುವುದಲ್ಲ. ಇಂತಹ ಕ್ರೂರ ಶಿಷ್ಟಂಥಿಗಳನ್ನು ಪಾಲಿಸಿ ಜನತೆಯ ನಿರ್ನಾಮಗೈಯುವ ಆ ಸಮಾಜವು ಇದ್ದು ಪ್ರಯೋಜನವೇನು? ಆದ್ದರಿಂದ ಇನ್ನಾದರೂ ಜಾಗ್ರತರಾಗಿರಿ. ನಮ್ಮಲ್ಲಿರುವ ಹುಳುಕುಗಳನ್ನು ಕಿತ್ತೊಗೆದು ಜನಕ್ಕೆ ಅದರಿಂದ ಜಗತ್ತಿಗೆ ಕಲ್ಯಾಣವನ್ನುಂಟುಮಾಡುವ ರೀತಿನೀತಿಗಳನ್ನು ಅನುಸರಿಸಿ ದೇಶದೇಶಗಳೊಳಗಿನ ದೇಶಮಾತೆಯರನ್ನು ಉದ್ಧರಿಸಿದರೆ ದೇಶವು ಉನ್ನತಿಯನ್ನು ಗೈಯ್ಯುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಅವರಿಗೆ ನಮ್ಮಷ್ಟೆ ಸ್ವಾತಂತ್ರ್ಯವನ್ನು ಕೊಟ್ಟು ಪ್ರತಿಯೊಂದು ಸಂಸ್ಥೆಯಲ್ಲಿ ಅವರು ಕಾರ್ಯಾನ್ವಿತರಾಗುವಂತೆ ಮಾಡಿ ನಮ್ಮೊಂದಿಗೆ ಅವರನ್ನೂ ಸಮಾಜದಲ್ಲಿ ಉಚ್ಛಸ್ಥಿತಿಗೆ ತರುವ. ಅಂದರೆ ಅವರ ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ಉತ್ತರಿಸಿದಂತೆ ಆಗುವುದಿಲ್ಲವೇ?

ಮಿಸೆಸ್ ಧರ್ಮಶೀಲಾ ಲಾಲ್.

ಮಿಸೆಸ್ ಧರ್ಮಶೀಲಾ ಲಾಲ್, ಎಂ. ಎ., ಬಾರ್ ಅಟ್ ಲಾ. ಇವರು ಪಾಟ್ನಾ ಹೈಕೋರ್ಟಿನ ಎಡ್ವೋಕೇಟರಾಗಿ ಧರ್ಮಮಾಡಲ್ಪಡುತ್ತಾಳಾಗಿ ವದಂತಿ. ಬಿಹಾರಿ ಹೆಂಗಸರ ಪೈಕಿ ವಕೀಲವೃತ್ತಿಯನ್ನು ಕೈಕೊಂಡ ಮಹಿಳೆಯರಲ್ಲಿ ಇವರೇ ಮೊದಲಿನವರು.

ಬಲಾತ್ಕಾರ ವಿವಾಹ.

ಜರ್ಮನ್ ಪ್ರಜಾಭಿವೃದ್ಧಿಯಾಗಲೆಂದು ಹಿಟ್ಲರನು ಹಾಕಿದ ಆಗಗಳೆಲ್ಲ ವ್ಯರ್ಥವಾಗಿ ಹೋಗಿವೆ. ಸಂಭಾವನೆ ಕೊಡುತ್ತೇನೆ, ಸರ್ವ ಸೌಕರ್ಯಗಳನ್ನು ಒದಗಿಸಿ ಕೊಡುತ್ತೇನೆ ಎಂದು ಅವನು ಹೇಳಿದರೂ ಜನರು ಮದುವೆಯನ್ನೇ ಮಾಡಿಕೊಳ್ಳಲೊಲ್ಲರು. ಇಷ್ಟಕ್ಕೆ ಧೃತಿಗೆಟ್ಟು ಹಿಟ್ಲರನು ಹತಾಶನಾಗಿಲ್ಲ. ಜರ್ಮನಿಯ ಸ್ತ್ರೀಪುರುಷರೆಲ್ಲರ ಜುಟ್ಟನ್ನು ಈಗ ಕೈಲಿ ಹಿಡಿದುಕೊಂಡಿದ್ದಾನೆ.

ಮದುವೆಯು ಧೈವಲೀಲೆ, ಋಣಾನುಬಂಧವಿದ್ದವರಿಗೆ ಮಾತ್ರ ಮದುವೆಯಾಗುತ್ತದೆಂದು ಎಲ್ಲರೂ ಹೇಳಿದರೆ, ಈಗ ಜರ್ಮನಿಯು ತನಗೆ ಇಷ್ಟಬಂದವರಿಗೆ ಮಾತ್ರ ಋಣಾನುಬಂಧವು ಬೆಳೆಯುತ್ತದೆನ್ನುತ್ತಿದೆ. ಹಿಟ್ಲರ್ ಕೊಟ್ಟ ಸೌಕರ್ಯಗಳನ್ನು ಸದುಪಯೋಗಪಡಿಸಿಕೊಳ್ಳದೆ ಒಂಟಿಯಾಗಿ ಯಾರು ಇದ್ದಾರೆಯೋ ಅವರನ್ನೆಲ್ಲ ಕತ್ತು ಹಿಡಿದು ಒಬ್ಬೊಬ್ಬರಾಗಿ ಗಂಟುಹಾಕುವಂತೆ ಶಾಸನವೊಂದನ್ನು ಮಾಡಲಿದ್ದಾರೆ. ತಮ್ಮ ಜವಾಬ್ದಾರಿಯನ್ನರಿಯದೆ ಹೋಗುವವರಿಗೆ ಇದೊಂದೇ ತಕ್ಕ ಮದ್ದೆಂದು ಜರ್ಮನಿಯ ನಾಜಿ ನಾಯಕರ ಮತ.

ಯುವತಿಯ ಮರಣ ಸಂಕಟ,

ಮದರಾಸಿನ ಗೋವಿಂದಮ್ಮಾಳ್ ಎಂಬ ೧೬ ವರ್ಷದ ಯುವತಿಯೋರ್ವಳು ರಾತ್ರಿ ಮಲಗಿದ್ದಾಗ ಅವಳ ತಲೆಯ ಮೇಲೆ ಉರಿಯುತ್ತಿದ್ದ ದೀಪವು ಅಕಸ್ಮಾತ್ತಾಗಿ ಹಾಸಿಗೆಯ ಮೇಲೆ ಬಿದ್ದು ಅವಳು ಉಟ್ಟ ಸೀರೆಗೆ ಬೆಂಕಿ ತಗಲಿ ಮೈಯೆಲ್ಲಾ ಸುಟ್ಟುಹೋಗಿದೆ. ಅವಳನ್ನೀಗ ಸಾರ್ವಜನಿಕ ಆಸ್ಪತ್ರೆಗೆ ಕೊಂಡುಹೋಗಿದ್ದಾರೆ. ಬದುಕುವುದು ಕಷ್ಟವೆಂದು ಡಾಕ್ಟರರ ಅಭಿಪ್ರಾಯ.

ಭಾರತ ಮಹಿಳೆಯರು

"ಭಾರತದಿಂದ ಹಿಂತಿರುಗಿದರೂ ಭಾರತರಮಣಿಯರ ಸವಿ ನೆನವು ಮಾತ್ರ ಅಳಿಸಿಹೋಗುವಂತಿಲ್ಲ. ಯಾರೇ ಭಾರತಕ್ಕೆ ಹೋಗಲಿ ಅಲ್ಲಿಯೇ ಇದ್ದುಬಿಡೋಣ ಎನ್ನಿಸುತ್ತದೆ. ಅಲ್ಲಿನ ಭಕ್ತಿಮಯವಾದ ಧಾರ್ಮಿಕ ವಾತಾವರಣ ಹಾಗನ್ನಿಸುತ್ತದೆ.

"ಭಾರತದಲ್ಲಿ ಕ್ರೂರ ಸಾಮಾಜಿಕ ಪದ್ಧತಿಗಳಿರುವುದು ನಾಚ್ಯವು. ಆದರೆ ನಿವಾರಣಾ ಕಾರ್ಯಗಳೂ ನಡೆಯುತ್ತಿವೆ. ಭಾರತದ ಮಹಿಳೆಯರ ಉದ್ಧಾರಕಾರ್ಯವನ್ನು ನೋಡಿ ನನಗೆ ತೃಪ್ತಿಯಾಯಿತು."

ಕಲ್ಕತ್ತೆಯಲ್ಲಿ ನೆಡೆದ ವಿಶ್ವಮಹಿಳೆಯರ ಸಮ್ಮೇಳನಕ್ಕೆ ಆಂಗ್ಲರ ಪ್ರತಿನಿಧಿಯಾಗ ಬಂದಿದ್ದ ಶ್ರೀಮತಿ ಆಡ್ಗರ ಎಂಬಾಕೆಯು ತನ್ನ ನಾಡನ್ನು ಮುಟ್ಟುತ್ತ ಭಾರತವನ್ನು ಕುರಿತು ತನ್ನ ಸೋದರಿಯರಿಗೆ ಹೇಳಿದ ಅನುಭವ ವಾಕ್ಯಗಳಿವು!

ಫ್ರಾನ್ಸಿಗೆ ಸಂತಾನ ನಿರೋಧ ಅನಿಷ್ಟವೆ?

ಫ್ರಾನ್ಸಿಗೇಕೊ ಸಂತಾನನಿರೋಧವು ಅಷ್ಟು ರುಚಿಸಿಲ್ಲವೆಂದು ಕಂಡುಬರುತ್ತದೆ. ಸಂತಾನ ಸಮೃದ್ಧಿಯೇ ಫ್ರಾನ್ಸಿಗೆ ಇಷ್ಟವೆಂದು ತೋರುತ್ತದೆ.

ಎಮಿಲಿ ಪೇಚರ್ ಎಂಬಾಕೆ ೬೪ ವಯಸ್ಸಿನ ಮಹಾಮಾತೆ. ಈ ಭಾಗ್ಯಶಾಲಿನಿ ೧೪ ಮಕ್ಕಳನ್ನು ಹೆತ್ತಿದ್ದಾಳೆ. ಅವರಲ್ಲಿ ೧೩ ಮಂದಿ ಇಂದಿಗೂ ಬದುಕಿದ್ದಾರೆ. ಅವರಲ್ಲಿ ಬೇಸಾಯಗಾರರು ಬಾಕಿ ೬ ಮಕ್ಕಳ ಪೈಕಿ ಮೂವರು ಕಾಯಿಲೆಯಿಂದ ಸತ್ತರು. ಒಬ್ಬ ಅಪಾಯಕ್ಕೆ ಸಿಕ್ಕಿ ಪ್ರಾಣಬಿಟ್ಟ. ಮಿಕ್ಕಿಬ್ಬರು ಯುದ್ಧದಲ್ಲಿ ಮಡಿದರು. ಆದರೂ ಅವಳಿಗೆ ಈಗ ಭಾರೀಸಂಸಾರ. ೩೦ ಮೊಮ್ಮಕ್ಕಳೇ ಇದ್ದಾರೆ.

ಈ ಸಂತಾನಲಕ್ಷ್ಮಿಗೆ ಆಕೆಯ ಸಂತಾನಭಾಗ್ಯಕ್ಕಾಗಿ ಫ್ರೆಂಚ ಸರಕಾರವು "ಲೀಜನ್ ಆಫ್ ಆನರ್" ಎಂಬ ಪ್ರಶಸ್ತಿಯನ್ನು ದಯಪಾಲಿಸಿದೆ!

ರಷ್ಯದ ಸ್ಥಿತಿ ಹೇಗಿದೆ?

ರಷ್ಯದಲ್ಲಿ ನಮಗೆ ಕಲೆಕೆಳಗಾದ ಸಮಾಜವು ನಿರ್ಮಾಣವಾಗಿದೆ. ಅಂದರೆ ಸ್ತ್ರೀಯರ ಸ್ಥಾನಮಾನಗಳಲ್ಲಿಯೂ ಮಾರ್ಪಾಡುಗಳಾಗಿರಬೇಕಷ್ಟೆ. ರಷ್ಯದ ಸ್ತ್ರೀಯರು ಗಂಗಸರಂತೆಯೇ ಸರ್ವ ಸ್ವತಂತ್ರರು. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಸ್ವಲ್ಪ ವಿವರಣೆಯು ಅವಶ್ಯಕ.

ಸಮಾಜ ರಚನೆಯು ಅದರ ಆರ್ಥಿಕ ಮೂಲಾಧಾರದಂತೆ ನಿರ್ಮಿತವಾಗುತ್ತದೆ. ಅತ್ಯಂತ ಹಿಂದಿನ ಕಾಲದಲ್ಲಿ ಗಂಡಸರೂ ಹೆಂಗಸರೂ ಇಬ್ಬರೂ ದುಡಿಯುತ್ತಿದ್ದರು. ಬಂದ ಫಲಾಫಲಗಳನ್ನು ಇಬ್ಬರೂ ಸಮ ಪ್ರಕಾರದಾಗಿ ಹಂಚಿಕೊಳ್ಳುತ್ತಿದ್ದರು. ಯಾರಿಗೆ ಯಾರೂ ಅಡಿಯಾಳಾಗಿರಲಿಲ್ಲ. ಆದರೆ, ಬರಬರುತ್ತ ಕೆಲವರು ಆಸ್ತಿಮಾಡುವುದನ್ನು ಕಲಿತು, ಜನಸಮೂಹದಲ್ಲಿ ವರ್ಗಗಳನ್ನೇರ್ಪಡಿಸಿದರು. ಅಂದಿನಿಂದ ಸ್ತ್ರೀಯರಿಗೆ ಬಂಧನವು ಪ್ರಾರಂಭವಾಯಿತು. ಅವರು ಗಂಡಸಿನ ಸ್ವತ್ತಾದರು. ಸಮಸ್ತ ಸಾಮಾಜಿಕ, ರಾಜಕೀಯ, ವ್ಯಾವಹಾರಿಕ ತೊಂದರೆಗಳಿಗೂ ಸ್ತ್ರೀಯು ತುತ್ತಾದಳು.

ರಷ್ಯವು ಇಷ್ಟು ಅನರ್ಥಕಾರಿಯಾದ ಸಮಾಜವನ್ನು ಮಣ್ಣುಗೂಡಿಸಿದೆ. ಇದರೊಡನೆ ಸ್ತ್ರೀಯೆಂದರೆ ಕಾಮೋದ್ರೇಕಕಾರಿಣಿ ಎಂಬ ಸಹಜಭಾವನೆಯೂ ಹಾರಿಹೋಗಿದೆ. ಇಂದು ರಷ್ಯದಲ್ಲಿ ಸ್ತ್ರೀಯೂ ಪ್ರಧಾನವಾದ ವ್ಯಕ್ತಿ, ಮದುವೆಯು ಸ್ತ್ರೀಪುರುಷರ ಸ್ವಂತ ವಿಷಯ. ಅವರ ಅಭೀಷ್ಟವನ್ನು ನೆರವೇರಿಸುವುದು, ಕಾಪಾಡುವುದು ಮಾತ್ರ ಸರಕಾರದ ಕೆಲಸ. ವಿವಾಹ ವಿಚ್ಛೇದವೂ ಇಷ್ಟೇ ಸುಲಭವಾದ ಪ್ರಸಂಗ. ಯಾರು ಅಸಮ್ಮತಿಪಟ್ಟರೂ ಅಲ್ಲಿಗೆ ಆ ಸಂಬಂಧವು ಕಿತ್ತುಹೋಯಿತು.

ವರದಕ್ಷಿಣೆಯಲ್ಲ ವಧೂದಕ್ಷಿಣೆ.

ಮಧ್ಯ ಏಷಿಯ ಖಂಡದಲ್ಲಿ ಕಿರ್ಗಿಜ್ ಮತ್ತು ಕಜಾಕ್ಸ್ ವರ್ಗದ ಮುಸಲ್ಮಾನರಿದ್ದಾರೆ. ಅವರ ಮದುವೆಪದ್ಧತಿಗಳು ಬಹಳ ವಿಚಿತ್ರವಾಗಿವೆ. ಈಗ್ಗೆ ೬೦೦ ವರ್ಷಗಳ ಹಿಂದೆ ಯಾವ ಪದ್ಧತಿ ಇತ್ತೋ ಇಂದಿಗೂ ಅದೇ ಪದ್ಧತಿ ಇದೆ. ಹುಡುಗಿಯರನ್ನು ಹೆತ್ತವರು ಪುಣ್ಯವಂತರು. ಏಕೆಂದರೆ ಗಂಡಿನ ಕಡೆಯವರು ದುಡ್ಡು ಕೊಟ್ಟು ಹುಡುಗಿಯರನ್ನು ಮದುವೆ ಮಾಡಿಕೊಂಡು ಹೋಗುತ್ತಾರೆ. ಈ ವಧೂದಕ್ಷಿಣೆಯು ಅವರವರ ಯೋಗ್ಯತಾನುಸಾರ ವ್ಯತ್ಯಾಸವಾಗುತ್ತದೆ.

ನಾಣ್ಯಪದ್ಧತಿಯು ಆ ಜನರಲ್ಲಿ ಜಾರಿಯಲ್ಲಿದ್ದರೂ, ಅವರು ಹೆಚ್ಚಾಗಿ ತಮ್ಮ ದನಕರುಗಳು, ಕುರಿ ಕುದುರೆಗಳ ವಿನಿಮಯದಿಂದಲೇ ವ್ಯಾಪಾರಮಾಡುತ್ತಾರೆ. ಹೆಣ್ಣು ಕೊಳ್ಳುವಾಗಲೂ ಅಷ್ಟೆ. ಹುಡುಗಿಯರ ಬೆಲೆಯು ಅವರವರ ಮನೆಯ ಆಸ್ತಿಯ ಮೇಲೆ ನಿರ್ಧಾರವಾಗುತ್ತದೆ. ೪೦ ಕುದುರೆಗಳು ೧೦೦೦ ಕುರಿಗಳನ್ನು ಕೊಟ್ಟು ಐಶ್ವರ್ಯವಂತರು ಹೆಣ್ಣು ಮಕ್ಕಳನ್ನು ಕೊಳ್ಳುತ್ತಾರೆ. ಬಡವರು ಒಂದು ಹಸುವನ್ನೋ ಒಂದು ಕುದುರೆಯನ್ನೋ ಕೊಟ್ಟು ಬಡ ಹುಡುಗಿಯರನ್ನು ಸ್ವೀಕರಿಸುತ್ತಾರೆ.

ಹುಡುಗಿಯರಿಗೆ ೮ ವರ್ಷವಾಗುತ್ತಲೇ ಅವರ ಬೆಲೆ ಗೊತ್ತುಪಡಿಸಿ ಪ್ರಾರಂಭವಾಗುತ್ತದೆ. ಯಾರು ಹೆಚ್ಚಾಗಿ ಕೊಡಲು ಒಪ್ಪಿಕೊಳ್ಳುತ್ತಾರೋ ಅವರಿಗೆ ಹುಡುಗಿ ದಕ್ಕುತ್ತಾಳೆ. ೧೩ ೧೪ ವರ್ಷ ವಯಸ್ಸಾಗುವ ವರೆಗೂ ತಂದೆಯ ಮನೆಯಲ್ಲಿದ್ದು ಬರಬೇಕಾದ ಕುದುರೆ ಕುರಿಗಳು ಬಂದ ಕೂಡಲೆ ಅವರು ಗಂಡನ ಮನೆಗೆ ಕಾಲಿಡುತ್ತಾರೆ. ಒಂದುವೇಳೆ ಹುಡುಗಿಯರು ಹೋಗಲು ಸಮ್ಮತಿಸದಿದ್ದರೆ ತೆಗೆದುಕೊಂಡ ಪ್ರಾಣಿಗಳನ್ನೆಲ್ಲಾ ಹಿಂದಕ್ಕೆ ಕೊಟ್ಟು ಕೈ ತೊಳೆದುಕೊಳ್ಳುವುದೂ ಉಂಟು. ಹಿಂದಕ್ಕೆ ಕೊಡದೆ ಹುಡುಗಿಯನ್ನು ಕಳುಹಿಸದೆ ತಂಟೆಮಾಡುವುದೂ ಉಂಟು.

ಪ್ರಕೃತದ ಪರಿಸ್ಥಿತಿ.

(ಹೆಂಡತಿಯರು)

ಗಂಡಕ್ಕೆ ಮಾಡರಿದಿರಂ
ಕಡುಮೂರ್ಖರೆಂದೆಲ್ಲರಿ ಜರೆವರ್ ।
ಹೆಂಡತಿಯರ್! ಜಗದೊಳ್ ತಾಂ
ಗಡುಸುಗಾತಿಯರೆಂದುಬ್ಬುಬ್ಬಿ ಕೊಬ್ಬುವರ್ ॥

(ದೇವರ್ಗಳವರು)

ದೇವೃದೇವರ್ಗೆ ಹೊಡರ್
ವಂಚನೆಯಿಂದಾಡಿ, ಗುಟ್ಟಿನೊಳ್ ಮದ ।
ಭೀಷ್ಮವಂ ಪೂಡಿಸಿಕೊಳ್ವ ।
ಮತ್ತಜನರ್ ಜೀವಿಸಲೆಳಸಿದೊಳ್ ॥

ಶ್ರೀ ಬಡೇಕಿಲ ಕೃಷ್ಣಭಟ್, ಮ......

ವಿಷಯಸೂಚಿ

[illegible]
[illegible]
[illegible] ಜಾತೀಗ
[illegible]
[illegible] ಸಮಾಚಾರ
ಸ್ತ್ರೀಯರು
ಸ್ಥಳೀಯ ಸ್ವರಾಜ್ಯ
ಹುಬ್ಬಳ್ಳಿ, [illegible]
ಸ್ಫುಟವಿಚಾರಗಳು
ವರ್ತಮಾನ ಸಂಗ್ರಹ
ದಿಲ್ಲಿ [illegible]
ವನಿತಾ ವಿಭಾಗ
ಜಾಹೀರಾತು

ಸ್ವದೇಶಾಭಿಮಾನಿ

ತಾ. ೩ನೇ ಶುಕ್ರವಾರ ಎಪ್ರಿಲ್ ೧೯೩೬

ಸ್ಥಳೀಯ ಸ್ವರಾಜ್ಯ

ಲೋಕಲ್ ಬೋರ್ಡು ಮತ್ತು ಮ್ಯುನಿಸಿಪಾಲಿಟಿಗಳೇ ಮೊದಲಾದುವು ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ಬಗೆಯಾಗಿ ಇದ್ದು, ಸ್ಥಳೀಯ ಸ್ವರಾಜ್ಯದ ಆಡಳಿತವು ಸರಿಯಾಗಿ ಎಲ್ಲ ಕಡೆಗಳಲ್ಲೂ ಹರಡಲು ಅನುಕೂಲವಾಗುವಂತೆ ಎಲ್ಲ ಸಮಸ್ಯೆಗಳನ್ನು ಇತ್ಯರ್ಥಿಸಲು ಒಂದು ಅಖಿಲ ಭಾರತೀಯ ಸಂಸ್ಥೆಯು ಬೇಕಾಗಿದ್ದಿತು. ಅದಕ್ಕಾಗಿ ದೇಶೀಯ ರಾಜ್ಯಗಳಲ್ಲಿನ ಇಂತಹ ಸಂಸ್ಥೆಗಳನ್ನು ಒಳಗೊಂಡ ಅಖಿಲ ಭಾರತೀಯ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡುವುದಕ್ಕಾಗಿ ಢಿಲ್ಲಿಯಲ್ಲಿ ಸರ್ ಗುಲಾಮ್ ಹುಸೇನ್ ಹಿದಾಯತ್ ಉಲ್ಲಾರವರ ಅಧ್ಯಕ್ಷತೆಯಲ್ಲಿ, ೧೩೦ ಮಂದಿಗಳ ಒಂದು ಪ್ರತಿನಿಧಿ ಕೂಟವು ಸೇರಿ, ಈ ಸಂಸ್ಥೆಯನ್ನು ಸ್ಥಾಪಿಸುವ ವಿಚಾರಮಾಡಲಾಗಿದೆ ಎಂಬುದು ತೃಪ್ತಿಕರ ವಾರ್ತೆ.

ಲೋರ್ಡ್ ರಿಪನ್‌ರು ಪ್ರಜಾಪಕ್ಷಪಾತಿಗಳಾಗಿದ್ದಾಗ ತಾನೆ, ೫೦ ವರ್ಷಗಳ ಹಿಂದೆ, ಲೋಕಲ್ ಬೋರ್ಡುಗಳನ್ನು ಸ್ಥಾಪಿಸಿದರು. ಮೊದಲು ಎಲ್ಲವೂ ನೊಮಿನೇಶನ್ ಮೂಲಕವೇ ನಡೆಯುತ್ತಿತ್ತು, ಈಗಲೂ ಎಷ್ಟೋ ಪ್ರಾಂತ್ಯಗಳಲ್ಲಿ ಜಿಲ್ಲಾ ಅಧಿಕಾರಿಗಳ ಮಿತ್ರರನ್ನೆ ನೊಮಿನೇಶನ್ ಮಾಡುವ ಸಂಪ್ರದಾಯವಿದ್ದರೂ, ಹೆಚ್ಚಿನ ಮಟ್ಟಿಗೆ ಚುನಾವಣೆಯಿಂದಾಗಿಯೆ ಈ ಬೋರ್ಡು ಮ್ಯುನಿಸಿಪಾಲಿಟಿ ಸಭೆಗಳು ರಚಿತವಾಗುತ್ತಿವೆ. ಇಂತಹ ಸಂಸ್ಥೆಗಳು ದೇಶೀಯ ರಾಜ್ಯಗಳಲ್ಲೂ ಇವೆ.

ಪ್ರಜಾಸತ್ತೆಯೆ ಗಣನೆಗೆ ಬರುವ ಈ ಕಾಲದಲ್ಲಿ, ಪ್ರತಿನಿಧಿಗಳ ಮೂಲಕವೇ ಆಡಳಿತ ನಡೆಸುವ ಇಂತಹ ಸಂಸ್ಥೆಗಳೂ ಅಗತ್ಯವಾಗಿವೆ. ಲೋಕಲ್ ಬೋರ್ಡು ಇತ್ಯಾದಿ ಸ್ಥಳೀಯ ಸ್ವರಾಜ್ಯ ಪಾಲನೆಯಲ್ಲಿ ನಾವು ಎಷ್ಟು ಮುಂದರಿಯುವೆವೊ, ಅದರಿಂದ ಭಾರತವರ್ಷಕ್ಕೆ ಸ್ವರಾಜ್ಯ ದೊರೆವಂತೆ ಸಾಧಿಸಲೂ, ದೊರೆತುದನ್ನು ಪಾಲಿಸಲೂ ನಾವು ಅರ್ಹರೆಂದು ಜಗತ್ತಿಗೆ ಪ್ರತ್ಯಕ್ಷ ತೋರಿಸಿಕೊಡಲು ಅನುಕೂಲವಾಗುವುದು.

ಈ ಸಂಸ್ಥೆಗಳ ನಂತರ ತಾನೆ ಉಂಟಾದ ನ್ಯಾಯವಿಧಾಯಕ ಸಭೆಗಳೇ ಮೊದಲಾದುವು ಅಭ್ಯುದಯ ಹೊಂದಿರುವಷ್ಟು ಚೆನ್ನಾಗಿ ಈ ಹಳೆಯ ಸಂಸ್ಥೆಗಳು ಅಭಿವೃದ್ಧಿಹೊಂದಿಲ್ಲ ಎಂಬುದು ಚಿಂತನೀಯ ವಿಚಾರ. ಇವು ಹಿಂದುಳಿದಷ್ಟು ಕಾಲಕ್ಕೆ, ಮುಂದರಿದ ಅ ಕೌನ್ಸಿಲು ಮೊದಲಾದುವು ಚೆನ್ನಾಗಿ ಪ್ರಗತಿ ಹೊಂದದಂತೆ ಆತಂಕವುಂಟಾಗುವುದು.

ಹೊಸ ಸುಧಾರಣೆಗಳಂತೂ ಈಗ ದೇಶದ ರಾಜ್ಯಭಾರದಲ್ಲಿ ಉಂಟಾಗಲಿರುವ ಕಾರಣ, ಸ್ಥಳೀಯ ಸಂಸ್ಥೆಗಳ ಸುಧಾರಣೆಯು ಕೂಡಲೆ ಆಗಬೇಕಾಗಿದೆ. ವೋಟು ಎಂದರೇನು, ಅದರ ಮಹತ್ವವೇನು, ಬೋರ್ಡು ಏತಕ್ಕೆ, ಅದರ ಅಧಿಕಾರವೇನಿದೆ, ಎಷ್ಟಿದೆ, ಅದಕ್ಕೆ ಬೇಕಾದ ಹಣವೆಲ್ಲಿಂದ ಬರಬೇಕು, ತೆರಿಗೆಗಳಾವುವು, ಸರಕಾರಕ್ಕೂ ಈ ಸಂಸ್ಥೆಗಳಿಗೂ ಸಂಬಂಧವೇನು? ಎಂಬ ವಿಚಾರಗಳನ್ನು ಪ್ರತಿಯೊಬ್ಬ ವ್ಯಕ್ತಿಯೂ ಚೆನ್ನಾಗಿ ತಿಳಿದುಕೊಳ್ಳುವಂತಾಗಬೇಕು. ಇವೆಲ್ಲ ವಿಚಾರಗಳು ಎಂತಹ ತಿದ್ದುಪಡಿಗಳಿಗೆ ಒಳಪಡಬೇಕಾಗಿ ಈಗ ತೋರುತ್ತಿದೆ ಎಂಬುದೂ ವಿಚಾರಾರ್ಹವಾಗಿದೆ. ಹಾಗೆ ತಿಳುವಳಿಕೆ ಪ್ರಚಾರಗೊಳಿಸಿಯೂ ತಿದ್ದುಪಡಿಗಳನ್ನು ಮಾಡಿಯೂ ನಾವು ಮುಂದರಿಯಬೇಕಲ್ಲದೆ, ಈಗ ಇರುವಂತೆ ಇದ್ದರೆ, ಇಲ್ಲೇ ಇನ್ನೆಷ್ಟೋ ಕಾಲ ಬಿದ್ದುಕೊಳ್ಳಬೇಕಾದೀತೆಂದು ಅಂಜಿಕೆ ಇದೆ.

"ಪ್ರಾಯಸ್ಥರೆಲ್ಲರಿಗೂ ವೋಟು ಸಿಗುವಂತಾಗಬೇಕು, ಎಲ್ಲರೂ ಸಾಮುದಾಯಿಕವಾಗಿ ಚುನಾವಣೆ ಮಾಡುವಂತಾಗಬೇಕು, ಪ್ರತ್ಯೇಕ ಪ್ರಾತಿನಿಧ್ಯದ ಮಾರಿಯನ್ನು ಅಣಗಿಸಬೇಕು; ಹಿಂದುಳಿದವರಿಗೆ ಅಥವಾ ಕಡಿಮೆ ಸಂಖ್ಯೆಯವರಿಗೆ ಸ್ಥಾನಗಳನ್ನು ಕಾಪಾಡಿಟ್ಟರೆ ಸಾಕಾಗುವುದು, ಪ್ರಾಯಸ್ಥರೆಲ್ಲರಿಗೆ ವೋಟಿನ ಅಧಿಕಾರವಿರುವಲ್ಲಿ, ಜನಸಂಖ್ಯೆಗೆ ಸರಿಯಾಗಿ ಸ್ಥಾನಗಳು ಸಿಗುವ ಕ್ರಮದಿಂದ, ಸ್ಥಾನಗಳನ್ನು ಕಾದಿಡುವ ರಗಳೆಯೂ ಅಗತ್ಯವಾಗಲಾರದು ಈ ದೇಶವೇ ಬಹುಸಂಖ್ಯಾಕ ಮತ್ತು ಅಲ್ಪಸಂಖ್ಯಾಕ ಸಮಾಜಗಳಿಂದಲೇ, ತುಂಬಿದೆ ಇವೆರಡೂ ತರಗತಿಗಳ ಸಮಾಜಗಳು ಮೆಲ್ಲನೆ ಒಂದಾಗಲು ಈ ಕ್ರಮವೇ ಉತ್ತಮ" ಎಂದು ಅಧ್ಯಕ್ಷರು ಸೂಚಿಸಿರುವರು.

ಇನ್ನು ಖಜಾನಾವಿಚಾರ ತೆರಿಗೆಗಳನ್ನು ಬೇಕಾದಷ್ಟು ಹೊರಿಸಿ ಆಗಿದೆ. ಇನ್ನು ಹೇರಿದರೆ ಹೊರುವವರಿಲ್ಲ. ಆದರೆ ಇವುಗಳಲ್ಲಿ ವಿನೋದಗಳ ಮೇಲಣ ತೆರಿಗೆಗಳಂಥವುಗಳನ್ನು ಸ್ಥಳೀಯ ಸಂಸ್ಥೆಗಳಿಗೇ ಕೊಡುವಂತಾಗಬೇಕು. ನೀರು ಸರಬರಾಯಿ, ಆರೋಗ್ಯ ರಕ್ಷಣೆಯ ಏರ್ಪಾಡು, ಬೆಳಕಿನ ಏರ್ಪಾಡು ಮುಂತಾದುವನ್ನೆಲ್ಲ ಈ ಸಂಸ್ಥೆಗಳೇ ನೋಡಿಕೊಂಡು ಬರಬೇಕಾದುದರಿಂದ, ಅವುಗಳ ಖರ್ಚನ್ನು ಜನ ಕೆಲವು ಹೊರಬೇಕು. ಇತರ ಖರ್ಚುಗಳೆಲ್ಲ ತೆರಿಗೆಗಳನ್ನು ವಿಧಿಸುವ ಬದಲಾಗಿ,—ಮೋಟರು ಚಲಾವಣೆಯ ವಿಭಾಗ, ವಿದ್ಯುಚ್ಛಕ್ತಿ ಪೂರಯಿಕೆಯ ವಿಭಾಗ, ಮುದ್ರಾಯಂತ್ರ ವ ಇತರ ಕಾರ್ಖಾನೆಗಳು, ಬೇಂಕುಗಳು ಮೊದಲಾದುವುಗಳ ಮೂಲಕವಾಗಿ ಸಹ ಈ ಸಂಸ್ಥೆಗಳು ಹಣಗಳಿಸಿ ಅದನ್ನು ಸಾರ್ವಜನಿಕ ಉಪಯೋಗಕ್ಕೆ ವಿನಿಯೋಗಿಸಬೇಕಾಗಿದೆ,—ಎಂಬಿವೂ ಅಧ್ಯಕ್ಷರ ಕೆಲವು ಸೂಚನೆಗಳಾಗಿವೆ.

ನೌಕರರನ್ನು ಸಹ ಒಂದು ಸಂಸ್ಥೆಯಿಂದ ಮತ್ತೊಂದಕ್ಕೆ ವರ್ಗಾಯಿಸುವಂತೆ ಮಾಡಿದರೆ, ಎಲ್ಲ ಕಡೆಯಲ್ಲಿ ನೌಕರಿಯ ಸಂಬಳ, ರಜಾ ಮೊದಲಾದುವೂ ಒಂದೇ ರೀತಿಯಾಗಿರಲು ಅನುಕೂಲವಾಗುವುದು. ಅವುಗಳ ಆಯಕ್ಕೆ ತಕ್ಕಂತೆ, ಸಂಸ್ಥೆಗಳನ್ನೆಲ್ಲ ತರಗತಿಗಳನ್ನಾಗಿ ವಿಭಾಗಿಸಿ, ಅವುಗಳ ನೌಕರರ ನೌಕರಿಯ ಶರ್ತಗಳನ್ನು ದೃಢೀಕರಿಸುವುದೂ ಒಂದು ಅಗತ್ಯ ವಿಚಾರವಾಗಿದೆ. ಇಂತಹ ನೌಕರರನ್ನು ನೇಮಿಸುವುದಕ್ಕೂ ಒಂದು ಸರ್ವಿಸ್ ಕಮಿಶನು ಅಗತ್ಯವಿದೆ. ಪ್ರತಿಯೊಂದು ಸಂಸ್ಥೆಯಿಂದ ಒಬ್ಬೊಬ್ಬ ಸದಸ್ಯನುಳ್ಳ ಒಂದು ಸ್ಥಳೀಯ ಸಂಸ್ಥೆಗಳ ಬೋರ್ಡನ್ನು ಸ್ಥಾಪಿಸಿದರೆ, ಇಡೀ ಪ್ರಾಂತ್ಯಕ್ಕೆ ಸಂಬಂಧಪಡುವ ವಿಷಯಗಳನ್ನು ಅಲ್ಲೇ ನಿಶ್ಚಯಿಸಬರುವುದು. ಸರಕಾರದ ಮೇಲ್ವಿಚಾರಣೆಯು ಅವಶ್ಯ, ಆದರೆ ಅದು ಎಷ್ಟು ಮಟ್ಟಿಗೆ ಮಾತ್ರ ಪಸರಿಸಿರಬೇಕೆಂಬುದನ್ನು ಇತ್ಯರ್ಥಿಸಬೇಕಾಗಿದೆ.

ಈ ಸಭೆಗೆ ಸರಕಾರವು ಅಥವಾ ಸಂಸ್ಥೆಗಳು ಯಾವುವೂ ತಮ್ಮ ಪ್ರತಿನಿಧಿಗಳನ್ನು ಆರಿಸಿ ಅಥವಾ ನೇಮಿಸಿ ಕಳುಹಿಸಿರಲಿಲ್ಲ. ಆದುದರಿಂದ

ಸ್ಫುಟ ವಿಚಾರಗಳು

ಅಭ್ಯುದಯದ ಹಾದಿ.

ಕರ್ತವ್ಯಪಥವೇ ಅಭ್ಯುದಯ ಪಥವು. ನಿಸ್ವಾರ್ಥಸೇವೆಯು ಈಗ ಲೋಕಲ್ ಬೋರ್ಡುಗಳಲ್ಲಿ ಅತ್ಯಾವಶ್ಯಕವಾಗಿ ಬೇಕಾದುದು. ಸ್ವಾಭಿಲಾಷೆ, ಸ್ವಾರ್ಥಸಾಧನೆಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಸ್ಥಾನವಿಲ್ಲದಿರಲಿ. ಈ ಸಂಸ್ಥೆಗಳಿಗೆ ಸಂಬಂಧವುಳ್ಳ ಸರ್ವರೂ, ಜನತೆಯ ಹಿತಚಿಂತನೆಯಲ್ಲೇ ನಿರತರಾಗಿರುವುದು ಅಗತ್ಯವಾಗಿದೆ. ಯಾವನೊಬ್ಬನ, ಯಾವುದೊಂದು ಸಮಾಜದ ಅಥವಾ ಸಂಸ್ಥೆಯ ಹಿತಚಿಂತನೆ ಮಾತ್ರವೇ ಸ್ಥಳೀಯ ಸಂಸ್ಥೆಗಳ ಸದಸ್ಯರುಗಳ ಕರ್ತವ್ಯವಲ್ಲ. ಇಂತಹ ಸಂಸ್ಥೆಗಳಲ್ಲಿ ಪಕ್ಷಗಳಾಗುವುವಾದರೆ, ಅವುಗಳನ್ನೆಲ್ಲ ಸೂತ್ರ ಅಥವಾ ಕಾರ್ಯಕ್ರಮ ಅನುಸರಿಸಿಯೇ ಮಾಡಿಕೊಳ್ಳಬೇಕಾಗಿದೆ. ಸರ್ವಸಾಮಾನ್ಯವಾಗಿರುವ ವಿಚಾರಗಳು ಎಷ್ಟೋ ಇವೆ; ಇವುಗಳನ್ನು ಸರ್ವರೂ ಮಾನ್ಯಮಾಡಬಹುದಾಗಿದೆ. ಇದನ್ನುಳಿದು, ಜಾತಿ ಸಂಗಡಗಳನ್ನು ಕಟ್ಟಿಕೊಳ್ಳುವುದು ಯಾವ ಸಂಸ್ಥೆಗೂ ಹಿತವಾಗಿಲ್ಲ. ಮೆಂಬರರೆಲ್ಲರು ಇದನ್ನರಿತು ಕಾರ್ಯ ನಿರ್ವಹಿಸುವುದು ಉತ್ತಮ. ಪ್ರತಿನಿಧಿಗಳನ್ನು ಆರಿಸಿ ಕಳುಹುವ ಎಲ್ಲ ಸಂಸ್ಥೆಗಳಲ್ಲಿ ಜನತೆಯ ಹಿತವನ್ನೆ ಸಾಧಿಸಬೇಕಾಗಿದೆಯಲ್ಲದೆ, ಸದಸ್ಯತೆಯು ಕೃತಾರ್ಥಹೊಂದುವ ಹಾಗೆ ಇದೇ ಮೂಲಮಂತ್ರವಾಗಿರತಕ್ಕದು. ಜನತೆಯೂ ಈ ವಿಷಯವಾಗಿ ಒಂದು ಕರ್ತವ್ಯವುಳ್ಳದ್ದಾಗಿದೆ. ಅತ್ಯುತ್ತಮರನ್ನೆ, ಇತರ ಯಾವ ವಿಷಯವನ್ನೂ ಗಣನೆಗೆ ತಾರದೆ ಪ್ರತಿನಿಧಿಗಳನ್ನಾಗಿ ಕಳುಹುವುದು ಜನರ ಕರ್ತವ್ಯ. ಯೋಗ್ಯರಲ್ಲದವರನ್ನು ಪ್ರತಿನಿಧಿಗಳೆಂದು ಹೆಸರಿಡುವುದಾದರೆ, ಅವರನ್ನು ಆರಿಸಿದವರ ಯೋಗ್ಯತೆ ಎಲ್ಲಿ ಉಳಿಯಿತು?

ದೇಶೀಯ ಕೈಗಾರಿಕೆಗಳು.

ಅಖಿಲ ಭಾರತದ ಖಾದಿ ಮತ್ತು ಗುಡಿ ಕೈಗಾರಿಕೆಗಳ ಒಂದು ಪ್ರದರ್ಶನವನ್ನು ತೆರೆವ ಸಮಾರಂಭದಲ್ಲಿ ಮಹಾತ್ಮಾಜಿಯವರು ನಮ್ಮ ದೇಶದ ಗ್ರಾಮಗಳನ್ನು ಬಹಳವಾಗಿ ಸಂಚಾರ ಮಾಡಿದ ಕಾಂಗ್ರೆಸ್ ಮೆಂಬರರಲ್ಲಿ ನಾನೇ ಬಹಳ ಅನುಭವಿಯು. ಹೆಚ್ಚಾಗಿ ಗ್ರಾಮಸ್ಥರು ಬಹಳ ದೀನರಾಗಿ ಅಲ್ಪಾಹಾರದಿಂದ ಬದುಕಬೇಕಾಗಿರುವುದರಿಂದ, ಮೈಯಲ್ಲೂ ಮೆದುಳಲ್ಲೂ ಬಲಹೀನರಾಗಿರುವರು ೧೯೩೦ರಿಂದ ಅಹ್ಮದಾಬಾದು ಕಾಂಗ್ರೆಸಿನಲ್ಲಾದ ನಿರ್ಣಯದಂತೆ ಗ್ರಾಮಗಳ ಸಂಘಟನೆಗಾಗಿ ಧಾರಾಳವಾಗಿ ಹೋರಾಟಪಡುತಿದ್ದೇವೆ. ಬಡ ನಿರ್ಜೀವಿಗಳಾಗಿರುವ ಗ್ರಾಮಸ್ಥರನ್ನು ಉಳಿಸುವುದಕ್ಕೆ ಪ್ರತಿಯೊಬ್ಬನು ತನ್ನಿಂದಾಗುವಷ್ಟು ಪ್ರಯತ್ನಿಸಬೇಕಾಗಿದೆ. ಅವರ ರಕ್ಷಣೆಗಾಗಿ ನಾವು ಕಾಣುವ ಕನಸುಗಳೇ ಈಗ ಈ ಪ್ರದರ್ಶನಗಳಂತೆ ತೋರುತ್ತಿವೆ. ಇವನ್ನು ನೋಡುವ ಪ್ರತಿಯೊಬ್ಬನೂ ಇಲ್ಲಿರುವ ಒಡವೆಗಳನ್ನು ಮಾರಲು ವಿತರಣಕಾರ್ಯವನ್ನು ವಹಿಸಿಕೊಳ್ಳಬೇಕು. ಅದರಿಂದ ತಾನೆ ಗ್ರಾಮಸೇವೆಮಾಡಿದಂತಾಗುವುದು. ಈ ಪ್ರದರ್ಶನವು ಸಿನೆಮ ಪ್ರದರ್ಶನವಾಗಿಲ್ಲ. ಆದರೆ ಮೃತದೇಹದ ದೇಹದಲ್ಲಾದರೂ ಚೇತನವೆಷ್ಟಿದೆ ಎಂಬುದನ್ನು ಇದು ಸ್ಪಷ್ಟಗೊಳಿಸುತ್ತಿದೆ ಎಂದರು. ಗ್ರಾಮ ಕೈಗಾರಿಕೆಗಳ ಪ್ರದರ್ಶನಗಳು ನಗರದಲ್ಲಾಗಬೇಕು. ಅವುಗಳನ್ನು ನೋಡುವ ಜನರು ತೆರುವ ಪ್ರವೇಶ ಹಾಸಲಿಂದಲಾದರೂ, ಗ್ರಾಮ ಕೈಗಾರಿಕೆಗಳ ಉಜ್ಜೀವನಕ್ಕೆ ಸಹಾಯವಾಗಬೇಕು ಎಂಬುದೂ ಮಹಾತ್ಮರ ಸೂಚನೆ.

ಸಭೆಯಲ್ಲಿ ಚರ್ಚಿಸಲಾಗಿರುವ (ಮೇಲೆ ಹೇಳಿರುವ) ಸೂಚನೆಗಳು ಇನ್ನು ಹತ್ತು ವರ್ಷಗಳಲ್ಲಾದರೂ ಆಚರಣೆಗೆ ಬರುವುವೋ ಎಂಬುದು ತಿಳಿಯದ ವಿಷಯವಾಗಿದೆ.

ಅಖಿಲಭಾರತ ಮುಸ್ಲಿಮ ಪರಿಷತ್ತು

ಢಿಲ್ಲಿಯಲ್ಲಿ ಸೇರಿತು. ಹಾಜೀ ಅಬ್ದುಲ್ಲಾ ಹಾರೂನ್‌ರವರೇ ಅಧ್ಯಕ್ಷರು. ಬಡ ಮುಸ್ಲಿಮರ ಅಭಿವೃದ್ಧಿಗಾಗಿ ಅವರು ಕೊಟ್ಟಿರುವ ಸೂಚನೆಗಳಲ್ಲಿ ಹಲವು, ಇತರ ಯಾವತ್ತೂ ಸಮಾಜಗಳ ಬಡವರ ಅಭಿವೃದ್ಧಿಗೂ, ಸಾಧಕಗಳೇ ಆಗಿವೆ. ಚಿಮಿಣಿ ಎಣ್ಣೆ ಬೆಂಕಿಪೆಟ್ಟಿಗೆಗಳ ಮೇಲೂ ಇರುವ ತೆರಿಗೆಗಳನ್ನು ರದ್ದುಗೊಳಿಸಿರಿ. ಧನವಂತರ ಮೇಲೆ ತೆರಿಗೆ ವಿಧಿಸಿ, ಅದರಿಂದ ದರಿದ್ರರಿಗೆ ರಕ್ಷಣೋಪಾಯಗಳನ್ನು ಮಾಡಿರಿ. ಸಾಲಗಾರರ ಬಾಧೆಯಿಂದ ಬಡವರನ್ನು ಕಾಪಾಡಿ, ಅವರು ಸಾಲವನ್ನು ಹಿಂತೆರಲು ಕೋರ್ಟುಗಳ ಬದಲಾಗಿ ಪಂಚಾಯಿತರ ಮುಖಾಂತರವೇ ಉಪಾಯಗಳನ್ನು ಕಂಡುಕೊಳ್ಳುವಂತೆ ಮಾಡಿರಿ. ಇಡೀ ದೇಶವು ದಾರಿದ್ರ್ಯದ ಹಿಡಿಯಲ್ಲಿದೆ. ಅತ್ಯಾಧುನಿಕ ಕೃಷಿ ವಿಚಾರಗಳನ್ನು ರೇಡಿಯೋ ಮೂಲಕ ಸಾರಬಹುದು. ಹಳ್ಳಿಗರ ನೈತಿಕ ವಿಚಾರಗಳನ್ನು ರೇಡಿಯೋ ಮೂಲಕವೇ ಸುಲಭವಾಗಿ ಜಾಗ್ರತಗೊಳಿಸಬಹುದು. ಪೈಗಂಬರರ ಜೀವನದಿಂದ ಮುಸ್ಲಿಮರು ಆತ್ಮೋದ್ಧಾರ ವಿಚಾರಗಳನ್ನು ತಿಳಿದುಕೊಳ್ಳಲಿ" ಇದಾದ ಬಳಿಕ, ತೆರಿಗೆಗಳ ಏರುಗೆಯನ್ನು ದೂರಿ, ಬಡವರು ಇನ್ನೂ ಹುಳುಗಳಂತಾಗದ ಹಾಗೆ ರಕ್ಷಣೆ ಹೊಂದಲೆಂದು ಬೋಧಿಸಲಾಯಿತು. ಜನರ ಸಾಂಪತ್ತಿಕ, ಸಾಮಾಜಿಕ, ನೈತಿಕ ವಿಚಾರಗಳನ್ನು ಹೆಚ್ಚಿಸುವುದಕ್ಕೆ ಅಗತ್ಯವಾಗಿರುವ ಚಿಕ್ಕ ವಹಿಗಳನ್ನು ಲಕ್ಷಗಟ್ಟಲೆಯಾಗಿ ಪ್ರಕಟಿಸಬೇಕೆಂದೂ ನಿರ್ಣಯವಾಯಿತು. ಅಗಾಖಾನರು ಸೂಚಿಸಿರುವ ಉಪಾಯಗಳನ್ನು ಕೈಗೊಳ್ಳಬೇಕಾಗಿ ನಿರ್ಧಾರವಾಯಿತು.

ಕುಲಗೆಟ್ಟರೂ ಸುಖಪಡಬೇಕು.

ಎಂಬ ಉದ್ದೇಶದಿಂದ ಕ್ರೈಸ್ತರಾಗಿರುವ ಹಲವು ಅಸ್ಪೃಶ್ಯರಿರುವರು. ಕ್ರೈಸ್ತಧರ್ಮಕ್ಕೆ ಸೇರಿದವರೆಲ್ಲರೂ ಒಂದೇ ತಂದೆಯ ಮಕ್ಕಳು, ಸೋದರರು ಎಂದು ಬೋಧನೆ ಕೇಳಿ, ಹಿಂದುಗಳು ತಮ್ಮನ್ನು ಹೀನರಾಗೆನಿಸುವ ಕಾರಣ, ಕ್ರೈಸ್ತರಾದ ಮಾತ್ರಕ್ಕೇ ಗೌರವಹೊಂದುವೆವೆಂದು ಬಗೆದು ಇವರು ಕ್ರೈಸ್ತರಾದರು. ಆಗ, ಹಿಂದುಗಳಾದರೂ ಇವರನ್ನು ಕ್ರಮೇಣ ಇತರ ಕ್ರೈಸ್ತರನ್ನು ಕಾಣುವಷ್ಟೆ ಗೌರವದಿಂದ ಕಾಣತೊಡಗಿದರು. ಕ್ರೈಸ್ತರೇ ಮಾತ್ರ ಇವರನ್ನು ತಮ್ಮೊಳಗೂ ಅಸ್ಪೃಶ್ಯರೆಂದೇ ಕಂಡರು, ಕಾಣುತ್ತಿರುವರು. ಮೊದಲು ಅಸ್ಪೃಶ್ಯರಾಗಿ ಇದ್ದವರು ಈಗ ಅಸ್ಪೃಶ್ಯ ಕ್ರೈಸ್ತರೆಂದಾದರು. ಇವರಿಗೆ ಇಗರ್ಜಿಗಳೂ ಬೇರೆಯಾಗಬೇಕೆಂದೂ, ದೇವಾರಾಧನೆಯ ಕಾಲಕ್ಕೆ ಇವರು ಇತರ ಮತಾಂತರಹೊಂದಿ ಕ್ರೈಸ್ತರಾದವರೊಡನೆ ಸೇರದಂತೆ ಒಂದು ದಿಗ್ಬಂಧನೆಯಿದೆ ಎಂದೂ ಶಾಲೆಗಳಲ್ಲೂ ಸಮಾಜದ ಕೂಟಗಳಲ್ಲೂ ಇವರಿಗೆ ಇತರ ಕ್ರೈಸ್ತರಿಗೆ ದೊರೆವ ಸ್ಥಾನಮಾನ ವೇತನ ಬಹುಮಾನ ಮೊದಲಾದುವು ದೊರೆವುದಿಲ್ಲೆಂದು ಇವರ ಪ್ರತಿನಿಧಿಗಳು ಮೊನ್ನೆ ಗವರ್ನರರಿಗೇ ಬಿನ್ನವಮಾಡಿದರು. ಸರಕಾರವು ಇವರಿಗೆ ರಿಯಾಯಿತಿ ತೋರಿಸಿದರೆ, ಅದು ಕ್ರೈಸ್ತರಿಗೆ ಕೋರಿದಂತಾಯಿತು. ಖಾನೆಸುಮಾರಿಯಲ್ಲಿ ಇವರು ಕ್ರೈಸ್ತರ ಸಾಲಿಗೇ ಬರುವರು. ಆದರೆ ಇವರನ್ನು ಕುಲಗೆಟ್ಟ ಬಳಿಕವೂ ಸುಖವಿಲ್ಲದಂತೆ, ಮೊದಲಿದ್ದಷ್ಟು ತೃಪ್ತಿಯೂ ಇಲ್ಲದಂತೆ ಮಾಡಿಕೊಡುವ ಈ ಮತಾಂತರ ಭಾಗ್ಯವು ದೊಡ್ಡ ಗಂಡಾಂತರವಲ್ಲವೆ? ಇದನ್ನು ಹಿಂದುಗಳ ಮೇಲೆ ಸಿಟ್ಟಾದ ಅಂಬೇಡಕರರು ತಿಳಿದಿರುವರೇ? ಹಿಂದುಗಳ ಮೇಲೆ ಸಿಟ್ಟಾಗಿ ಅಸ್ಪೃಶ್ಯ ಕ್ರೈಸ್ತರೆನಿಸಲು ಇವರಿಗೆ ಬೋಧಿಸುತ್ತಿರುವರೆ?

ಮಂಗಳೂರು.

ನೋಟೀಸು.

ಮಂಗಳೂರು ಮುನಿಸಿಪಲ್ ಕೌನ್ಸಿಲು ತಾರೀಖು ೧೩—೨—೩೬ರಲ್ಲಿ ನೆಡೆದ ಸಭೆಯಲ್ಲಿ, ಉಗಿಯ ಬಲದಿಂದ ಯಾ ಎಣ್ಣೆಯ ಶಕ್ತಿಯಿಂದ ಅಥವಾ ಇತರ ಯಾಂತ್ರಿಕ ಯಾ ಹೋರ್ಸ್ ಪವರ್ (Horse Power)ಗಿಂತ ಹೆಚ್ಚಿನ ವಿದ್ಯುಚ್ಛಕ್ತಿಯಿಂದ ನಡೆಯುವ ಯಾವುದೊಂದು ಕಾರ್ಖಾನೆಯನ್ನಾಗಲಿ ಇತರ ಕೆಲಸದ ಸ್ಥಳವನ್ನಾಗಲಿ ಕಟ್ಟಿಸುವುದು ಯಾ ಸ್ಥಾಪಿಸುವುದಾಗಲಿ ಅಥವಾ ಯಾವ ಕಟ್ಟೋಣವನ್ನು ಮೇಲೆ ಹೇಳಿದ ಯಾವತರ್ತು ಕಾರ್ಖಾನೆಯನ್ನಾಗಿ ಅಥವಾ ಕೆಲಸದ ಸ್ಥಳವನ್ನಾಗಿ ಉಪಯೋಗಿಸುವುದು ಕೆಳಗೆ ಕೊಟ್ಟಿರುವ ಶೆಡ್ಯೂಲಿನಲ್ಲಿ ವಿವರಿಸಿದ ಸ್ಥಳದೊಳಗೆ ಹೊರತು ಈ ಮುನಿಸಿಪಾಲಿಟಿಯ ಒಳಗೆ ಇತರ ಯಾವ ಸ್ಥಳದಲ್ಲಿಯೂ ಬಿಡಲಾಗದೆಂದು ನಿಶ್ಚಯಿಸಿರುವುದು ಈ ಕೆಳಗೆ ವಿವರಿಸಿದ ಕೈಗಾರಿಕೆಯ ಅಭಿವೃದ್ಧಿಗೆಂದು ನಿಶ್ಚಯಿಸಿದ ಸ್ಥಳವು ಟೌನ್ ಪ್ಲೇನಿಂಗ ಡೈರೆಕ್ಟರರು ಮತ್ತು ಮುನಿಸಿಪಲ್ ಹೆಲ್ತ್ ಆಫೀಸರರಿಂದ ಯೋಗ್ಯವೆಂದು ಸಮ್ಮತಿಸಲ್ಪಟ್ಟಿದೆ ಈ ನೋಟೀಸನ್ನು ಪ್ರಕಟಿಸಿದಂದಿನಿಂದ ಇದು ಜಾರಿಗೆ ಬರುವುದು " ಗಡಿಗಳು —ಉತ್ತರ ಹೊಯಿಗೆ ವಾರ್ಡಿನ ಟವನ ಸರ್ವೆ ನಂಬ್ರ ೧ ಮತ್ತು ೧೪ ಮತ್ತು ದಕ್ಷಿಣಕ್ಕೆ ತಿರುಗಿ ಬೋಳಾರ ಕಡವು ರಸ್ತೆಯಿಂದಾಗಿ ಟೈಲರಿ ರಸ್ತೆ ವರೆಗೆ ಮತ್ತು ಟೈಲರಿ ರಸ್ತೆಯಿಂದಲಾಗಿ ಜಪ್ಪು ವಾರ್ಡ ಟವನ್ ಸರ್ವೆ ನಂಬ್ರ ೭೬೨ನೇ ಮತ್ತು ಅದೇ ಸರ್ವೆ ನಂಬ್ರದ ಉತ್ತರ ಗಡಿಯಿಂದಾಗಿ ೭೭೬ನೇ ಸರ್ವೆ ನಂಬ್ರದ ಮೂಲಕ ಜಪ್ಪು ವಾರ್ಡಿನ ೭೪೯ನೇ ಸರ್ವೆ ನಂಬ್ರದ ದಕ್ಷಿಣ ಗಡಿಯಿಂದಾಗಿ ಮತ್ತು ಅದೇ ವಾರ್ಡಿನ ೮೦೫/A, ೮೦೭ ೮೦೮ ಮತ್ತು ೮೦೯ ಸರ್ವೆ ನಂಬ್ರದ ಪಶ್ಚಿಮ ಗಡಿಯಿಂದಾಗಿ ಗುಜ್ಜರಕೆರೆ ರಸ್ತೆಗೆ ಅಲ್ಲಿಂದ ಅದೇ ರಸ್ತೆಗಾಗಿ ಜಪ್ಪು ರಸ್ತೆ ಮತ್ತು ಜಪ್ಪು ಸೈಕಲ್ ರಸ್ತೆಯಿಂದಾಗಿ ಮುನಿಸಿಪಲ್ ಗಡಿ ವರೆಗೆ ಪೂರ್ವ ಮುನಿಸಿಪಲ್ ಗಡಿ, ದಕ್ಷಿಣ ಮತ್ತು ಪಶ್ಚಿಮ ನೇತ್ರಾವತಿ ನದಿ

ಮಾಯಾಜಾಲ ಪ್ರದರ್ಶನ.

ಎಪ್ರಿಲ್ ತಾ ೫ನೇ ಆದಿತ್ಯವಾರ ಸಾಯಂಕಾಲ ಗಂಟೆ ೬ಕ್ಕೆ ಗಣಪತಿ ಹೈಸ್ಕೂಲಿನಲ್ಲಿ ಒಂದು ಮಾಯಾಜಾಲದ ಪ್ರದರ್ಶನವಿದೆ ಜಗತ್ತಿನಲ್ಲಿ ಇಷ್ಟರವರೆಗೆ ಕಾಣದ ಅದ್ಭುತ ಆಟಗಳನ್ನು ಮಾಡಿತೋರಿಸುವರು ಅಲ್ಲದೆ ಬಲಪ್ರದರ್ಶಕ ಆಟಗಳೂ ಇವೆ ಎಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ

ಮೋಟಾರು ಅಪಘಾತದಿಂದ ಮರಣ.

ಕಳೆದ ಮಾರ್ಚ ತಾ ೩೧ನೇ ಮಂಗಳವಾರ ಮಧ್ಯಾಹ್ನ ಸ್ಥಳೀಯ ಗೇರುಬೀಜ ಕಾರ್ಖಾನೆಯ ಶ್ರೀಮಂತ ಸಾಹುಕಾರರಾದ ಮಿಜಾರ್ ಕಾರರ ಹೊಸ ಮೋಟರ್ ಕಾರಿನ ಅಡಿಯಲ್ಲಿ ಓರ್ವ ಮುಸ್ಲಿಮನು ಬಿದ್ದು ಅಕಾಲ ಮರಣಕ್ಕೆ ತುತ್ತಾದನು

ದ. ಕ. ಕಾಂಗ್ರೆಸು ಕಮಿಟಿ ಸಭೆ

ದಕ್ಷಿಣ ಕನ್ನಡ ಕಾಂಗ್ರೆಸ್ ಕಮಿಟಿಯ ಸಭೆಯೊಂದು ಕಳೆದ ಮಾರ್ಚ ತಾ ೨೯ನೇ ಆದಿತ್ಯವಾರ ಕಾಂಗ್ರೆಸ್ ಆಫೀಸಿನಲ್ಲಿ ಕಮಿಟಿಯ ಅಧ್ಯಕ್ಷರಾದ ಶ್ರೀ ಕೆ. ಆರ್ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು ಅಂದು, ಡಿಸ್ಟ್ರಿಕ್ಟ್ ಬೋರ್ಡ ಆಫೀಸರರ ಚುನಾವಣೆಯಲ್ಲಿ ಕಾಂಗ್ರೆಸ್ ಪಂಥವನ್ನು ಬಿಟ್ಟು ಬೇರೆಯವರಿಗೆ ಓಟುಗಳನ್ನು ಕೊಟ್ಟ ಕಾಂಗ್ರೆಸ್ ಸದಸ್ಯರ ವರ್ತನೆಯನ್ನು ಖಂಡಿಸಿ ಠರಾವುಗಳನ್ನು ಅಂಗೀಕರಿಸಿದುದು ಅಲ್ಲದೆ ಅಧ್ಯಕ್ಷರು ತನ್ನ ಅಧ್ಯಕ್ಷಪದವಿಗೆ ರಾಜಿನಾಮೆಯನ್ನು ಕೊಡುವುದಾಗಿ ಹೇಳಲು ಎಲ್ಲರೂ ಹಾಗೆ ಸರ್ವಥಾ ಮಾಡಕೂಡದಾಗಿ ಪ್ರಾರ್ಥಿಸಿಕೊಂಡರು.

ಖಾಸಗಿ ಶಾಲೆಗಳಿಗೆ ಗ್ರೆಂಟು ಮಂಜೂರಾಯಿತು

ದ. ಕ ಜಿಲ್ಲಾ ಖಾಸಗಿ ಶಾಲೆಗಳ ಗ್ರೇಂಟುಗಳ ಬಗ್ಗೆ ರೂ. ೨,೫೨,೩೬೨ ಬೇಕಾದ್ದಲ್ಲಿ, ಅದರಲ್ಲಿ ೧೨೦ ಸಲೆಯಂತೆ ಕಡಿತ ಮಾಡಿ ರೂ ೨ ೫೧,೨೭೧ ಮಂಜೂರು ಮಾಡಿರುವರು, ಅಂತೆಯೇ ರಾತ್ರಿಶಾಲೆಯ ಗ್ರೆಂಟಿನಲ್ಲೂ ಶೇಕಡಾ ೩೦ರಷ್ಟನ್ನು ಕಡಿದು ರೂ ೮೦೬ನ್ನು ಕೊಡುವಲ್ಲಿ ಕೇವಲ ರೂ ೫೨೫ನ್ನೇ ಮಂಜೂರು ಮಾಡಿರುವರು, ಕಂಪೆನ್ಸೇಶನ್ ಗ್ರೇಂಟಿನಲ್ಲೂ ಶೇಕಡಾ ೨೦ರಷ್ಟು ಕಡಿತಮಾಡಿ ರೂ ೨೧೮ ಬೇಕಾದಲಿ ರೂ. ೧೬೦೪ನ್ನೇ ಮಾತ್ರ ಮಂಜೂರುಮಾಡಿರುತ್ತಾರೆ. ಇದನ್ನು ತಿಳಿದ ಶಾಲಾಧಿಕಾರಿಗಳು ಶಾಲಾ ಗ್ರೇಂಟಿನ ವಿಷಯವಾಗಿ ಅಸಮಾಧಾನಸೂಚಕ ಪತ್ರಗಳನ್ನು ಸಂಬಂಧಪಟ್ಟ ಇಲಾಖಾ ಆಫೀಸರರಿಗೆ ಕಳುಹಿಸಿರುವರಾಗಿ ವದಂತಿ

ಜನನ ಮರಣ.

ಮಾರ್ಚ ತಾ ೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೨೫ ಮರಣಗಳೂ ೪೭ ಜನನಗಳೂ ಆದುವು

ಶ್ರೀ ಪಂ. ಹೃದಯನಾಥಕುಂಜ್ರುರವರು.

ಇದೇ ಕಳೆದ ೨೮ನೇ ಶನಿವಾರ ಸಂಜೆಗೆ ಇಲ್ಲಿಗೆ ದಯಮಾಡಿಸಿದ ಶ್ರೀ। ಪಂಡಿತ ಹೃದಯನಾಥ ಕುಂಜ್ರುಗಳು ಇಲ್ಲಿಯ ಥಿಯೋಸೊಫಿಕಲ್ ಲೋಜಿನಲ್ಲಿ ಶ್ರೀ। ಕೆ. ಆರ್ ಕಾರಂತರ ಅಧ್ಯಕ್ಷತೆಯಲ್ಲಿ "ಮುಂದೇನು" ಎಂಬ ಉತ್ತಮವಾದ ಸರಸ ಭಾಷಣವನ್ನು ಕೊಟ್ಟಿದ್ದಲ್ಲದೆ, ಮರುದಿನ ಸಂಜೆ ಡಿ ಸಿ ಮಿಶನಿನ ಕಂಪೌಂಡಿನಲ್ಲಿ ಉಳ್ಳಾಲ ನರಸಿಂಗರಾಯರ ಪುತ್ರಿಯವರ ದ್ರವ್ಯದಾನದ ಸಂಬಂಧವಾದ ಅದೇ ಮಹನೀಯರ ಹೆಸರಿನ ಸ್ಮಾರಕ ಭವನದ ಶಂಕುಸ್ಥಾಪನೆಯ ಶುಭಕಾರ್ಯವನ್ನೂ ನಡೆಸಿದರು ಆ ಸಂದರ್ಭದಲ್ಲಿ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಅಧ್ಯಕ್ಷರಾದ ಆ ಪಂಡಿತರ ಮನೋರಂಜನದ ಗೌರವಕ್ಕಾಗಿ ಒಂದು ವಿವಿಧ ವಿನೋದಪ್ರದರ್ಶನವೂ ಇದ್ದಿತು

ಮೈಸೂರು ಯುವರಾಜರ ಆಗಮನ

ಇದೇ ಎಪ್ರಿಲ್ ತಾ ೨ನೇ ಗುರುವಾರ ಬೆಳಿಗ್ಗೆ ಮೈಸೂರಿನ ಯುವರಾಜರು ಮಂಗಳೂರಿಗೆ ಬಂದಿರುವರು ಇವರನ್ನು ಎದುರ್ಗೊಳ್ಳಲು ಮಂಗಳೂರಿನ ಅಧಿಪುರುಷರೆಲ್ಲರೂ ಬಂದರಿನಲ್ಲಿ ಕಿಕ್ಕಿರಿದಿದ್ದರು.

ಇಲ್ಲಿಯ ವೆಂಕಟರಮಣ ದೇವಳದ ಟ್ರಸ್ಟಿಗಳಾಗಿ ಕೆನರಾ ಬೇಂಕಿನ ಬಂದರ ಶಾಖೆಯ ಎಕೌಂಟಾಂಟರಾದ ಶ್ರೀ। ಪಿ ಎನ್ ಶೆಣೈಯವರು ನೇಮಿಸಲ್ಪಟ್ಟಿರುವರು

ಶ್ರೀ ಕಾಶೀ ಮಠದ ಶ್ರೀ ಸುಕೃತೀಂದ್ರ ಸ್ವಾಮಿಗಳು ಈಚೆಗೆ ಕೆನರಾ ಬೇಂಕಿಗೆ ದರ್ಶನವನ್ನಿತ್ತು ಸದ್ರಿ ಸಂಸ್ಥೆಯನ್ನು ಆಶೀರ್ವದಿಸಿದರು

ತಾಲೂಕುಗಳಿಂದ

ನಂದಳಿಕೆ ನಂದಳಿಕೆಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಾವಧಿ ನಡೆಯತಕ್ಕ ಜಾತ್ರೆಯು ತಾ ೬ ೪—೩೬ನೇ ಚಂದ್ರವಾರ ಜರಗಲಿಕ್ಕಿರುತ್ತದೆ ಎಂಬ ಸಂಗತಿ ಸದರಿ ದೇವಸ್ಥಾನದ ಆಡಳಿತೆ ಮೊಕ್ತೇಸರರು ಬಾವಡಿ ವೆಂಕಪ್ಪ ಹೆಗ್ಗಡೆಯವರು ತಿಳಿಸುತ್ತಾರೆ

ವಿಟ್ಲ:— ಇಲ್ಲಿಗೆ ಸಮೀಪ ವಿಟ್ಲಪುತ್ತೂರು ಮಾರ್ಗದಲ್ಲಿ ಮಹಾಲಕ್ಷ್ಮೀ ಮತ್ತು ಸಿ ಪಿ ಸಿ ಈ ಎರಡು ಬಸ್ಸುಗಳು ಒಂದನ್ನೊಂದು ದಾಟುವಾಗ ಮಹಾಲಕ್ಷ್ಮೀ ಬಸ್ಸು ಬದಿಗೆ ಒತ್ತಿ ಮಾರ್ಗ ಬಿಟ್ಟು ಚರಂಡಿಗೆ ಮಗುಚಿತು ಸಮೀಪವೇ ಗೋಡೆಯಿದ್ದುದರಿಂದ ಬಸ್ಸು ಕಲೆಕೆಳಗಾಗಿ ಉರುಳಲಿಲ್ಲ ಒಬ್ಬ ಗಂಡಸಿಗೂ ಒಬ್ಬ ಹೆಂಗಸಿಗೂ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರರಿಗೂ ಸ್ವಲ್ಪ ಅಪಾಯ ಆಗಿದೆ

ಕಾಟುಕುಕ್ಕೆ:— ಈ ಊರಿನಲ್ಲೆಲ್ಲಾ ಕೋಳಿ ರೋಗದ ಬಹಳ ಪ್ರಾಬಲ್ಯವಾಗಿರುವುದು ಇದರ ನಿವಾರಣೆಗಾಗಿ ಊರಿನ ಬಡ ತೋಟಗಾರರೆಲ್ಲರೂ ಸೇರಿ ಕಾಟುಕುಕ್ಕೆ-ಶ್ರೀ ಸುಬ್ರಮಣ್ಯೇಶ್ವರ ದೇವಸ್ಥಾನದಲ್ಲಿ ಒಂದು ಹೊಸ ಡಬ್ಬಿಯನ್ನು ಸ್ಥಾಪಿಸುವರು

ಮೂಡಬಿದ್ರಿ — ಈ ಸೆಂಟರಿನ ಉಪಾಧ್ಯಾಯರ ಸಂಘದ ವರ್ಷಾಂತ್ಯ ವಾರ್ಷಿಕೋತ್ಸವದ ಸಭೆಯು ಇದೇ ಕಳೆದ ಮಾರ್ಚ ತಾ ೨೮ರಲ್ಲು ಬೋರ್ಡ ಹುಡುಗರ ಶಾಲೆಯಲ್ಲಿ, ಇಲ್ಲಿಯ ಸುಪ್ರಸಿದ್ಧ ಜಮೀನುದಾರರಾದ ಮ। ರಾ। ರಾ। ಕರಂಬೆ ಶ್ಯಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು ೨೭ ಶಾಲೆಗಳ ೩೫ ಮಂದಿ ಅಧ್ಯಾಪಕರು ಹಾಜರಿದ್ದರು ಬೆಳುವಾಯಿ ಮಿಶನ್ ಫಾರ್ಮ ಮೆನೇಜರರಾದ ಮಿ। ಸೋನ್ಸರು ಟೇಸಾಯ ಮತ್ತು ವಿದ್ಯೆಯ ವಿಷಯ ಸುರಸವಾಗಿ ಭಾಷಣವಿತ್ತರು ಅನೇಕ ಸಭಿಕರು ಸಂಘದ ಏಳಿಗೆಯ ವಿಷಯ ಮಾತನಾಡಿದ ಬಳಿಕ ಅಧ್ಯಕ್ಷರು ತಮ್ಮ ಅನೇಕಭವಾದ ಸ್ವಾನುಭವವನ್ನು ಉಪದೇಶ ಮಾಡಿದ ಮೇಲೆ ಉಪಹಾರದೊಡನೆ ಸಭೆಯು ಮುಕ್ತಾಯಪಡಿಸಲಾಯಿತು ಬರುವ ಸಭೆಯು ಎಪ್ರಿಲ್ ತಾ ೧೮ಕ್ಕೆ ಇಡಲ್ಪಟ್ಟಿದೆಯೆಂದು ತಿಳಿಸೋಣಾಗುತದೆ

ಕುಂದಾಪುರ:—ಕರ್ನಾಟಕ ಸಾಹಿತ್ಯಸಂಘದ ವಿಶೇಷ ಸಭೆಯು ಇಲ್ಲಿಯ ವಕೀಲರಾದ ಶ್ರೀಯುತ ನಾರಾಯಣ ಕ್ಯಾನುಭಾಗರು, ಬಿ. ಎ. ಅವರ ಅಧ್ಯಕ್ಷತೆಯಲ್ಲಿ ತಾ. ೨೯ರಲ್ಲು ಜರಗಿತು ಶ್ರೀ ರಾಮನವಮಿ ಎಂಬ ವಿಷಯದಲ್ಲಿ ಪ್ರಬಂಧ ಸ್ಪರ್ಧೆ ನಡೆದು ಜಯಶೀಲರಾದ ವಿದ್ಯಾರ್ಥಿಗಳಿಗೆ ಪ್ರಥಮ, ಮತ್ತು ದ್ವಿತೀಯ ಬಹುಮಾನಗಳು ಹಂಚಲಾದುವು ಅಧ್ಯಕ್ಷರೂ ಇತರ ಮಹನೀಯರೂ ರಾಮಚಂದ್ರನನ್ನು ವಿವರಿಸಿ ಮಾತಾಡಿದರು ಬೆಂಗಳೂರಲ್ಲಿ ಜರಗುವ ಸಕಲ ಕರ್ನಾಟಕ ಸಂಘ ಸಮ್ಮೇಳನಕ್ಕೆ ಹೋಗುವರೆ ಈ ಸಂಘದಿಂದಲೂ ಪ್ರತಿನಿಧಿಗಳನ್ನು ಆರಿಸಲಾಯಿತು ಅಧ್ಯಕ್ಷರಿಗೂ ನೆರೆದ ಸಭಿಕರಿಗೂ ಧನ್ಯವಾದವನ್ನರ್ಪಿಸಿದ ತರುವಾಯ ಸಭೆಯು ಅಂತ್ಯವಾಯಿತು

ಸ್ಥಳೀಯ ಶ್ರೀ ವೆಂಕಟ್ರಮಣ ದೇವಾಲಯದಲ್ಲಿ ಕಾಲಾವಧಿ ಜಾತ್ರೆಯು ತೊಡಗಿರುವುದು ೧ನೇ ತಾರೀಕಿಗೆ ಅಂತ್ಯವಾಗುವುದೆಂದು ತಿಳಿದುಬರುತ್ತದೆ.

ಬಂಟ್ವಾಳ ರಘುನಾಥರಾಯರ ಹಿಂದೂ ಎಲಿಮೆಂಟರಿ ಶಾಲೆಯು ಇಲ್ಲಿಯ ಪಂಚಾಯತ ಬೋರ್ಡಿಗೆ ಒಪ್ಪಿಸಲ್ಪಡುವ ಮತ್ತು ಸದರಿ ಶಾಲೆಯನ್ನು ಬೋರ್ಡಿನವರು ತೆರೆಯುವ ಸಮಾರಂಭವು ತಾ ೪—೪—೩೬ರಲ್ಲು ಜಿಲ್ಲಾ ಕಲೆಕ್ಟರವರಾದ ಶ್ರೀಯುತ ವೆಂಕಟೇಶ್ವರನ್ ಎಮ್. ಎ ಐ ಸಿ ಎಸ್ ಅವರ ಅಧ್ಯಕ್ಷತೆಯಲ್ಲಿ ಜರಗುವುದು

ಪೊಳಲಿ —ಶ್ರೀಮಾನ್ ಮಹಾ ದೇವದೇವೋತ್ತಮ ಪೊಳಲಿ ಶ್ರೀ ರಾಜರಾಜೇಶ್ವರೀ ಅಮ್ಮನವರ ದೇವಸ್ಥಾನದಲ್ಲಿ ವರ್ಷಂಪ್ರತಿಯಂತೆ ಇದೇ ಕಳೆದ ಮೀನ ಸಂಕ್ರಮಣದ ದಿನ ಧ್ವಜಾರೋಹಣವಾಗಿರುತ್ತದೆ ಮುಂದೆ ಎಪ್ರಿಲ್ ತಾ ೫ನೇ ಆದಿತ್ಯವಾರ ಚೆಂಡಿನ ಉತ್ಸವವು ಆರಂಭವಾಗಿ ಗುರುವಾರ ಕಡೆಚೆಂಡು ಮಹೋತ್ಸವ ಮರುದಿನ ರಥೋತ್ಸವವಾಗಿ ಶನಿವಾರ ತಾ ೧೧ಕ್ಕೆ ಅವಭೃತವಾಗುವುದು ಭಕ್ತಾದಿಗಳೆಲ್ಲರೂ ಸಂದರ್ಶಿಸಿ ಪ್ರಸಾದ ಸ್ವೀಕರಿಸಬೇಕಾಗಿ ವಿನಂತಿ

ಗುರುಪುರದಿಂದ ಪೊಳಲಿಗೆ ಕಳೆದ ವರ್ಷ ಮಾಡಿದ ಖಾಸಗಿ ರಸ್ತೆಯು ದುರುಸ್ತಿಯಾಗಿ ಈಗ ಹೊಳೆಬದಿಯ ವರೆಗೂ ಬಂಡಿ ಮೋಟಾರುಕಾರು ಬರುವರೆ ಅಡ್ಡಿಯಿಲ್ಲ ಜಾತ್ರೆಯ ಸಮಯ ದೇವಸ್ಥಾನದ ವರೆಗೆ ಕಾರುಗಳೂ ಬಂಡಿಗಳೂ ಬರಬಹುದು

ಸುರತ್ಕಲ್ — ಇಲ್ಲಿಯ ಇದ್ಯ ವಿದ್ಯಾದಾಯಿನೀ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಭೆಯು ಇದೇ ಬರುವ ತಾ ೨೨—೩—೩೬ನೇ ಆದಿತ್ಯವಾರ ದಿನ ಶ್ಯಾಮ ಗಂಟೆ ೩ಕ್ಕೆ ಸದರಿ ಶಾಲಾ ಮಂದಿರದಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ। ಎಚ್ ದಾಮೋದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಈ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸುವುದರ ಆವಶ್ಯಕತೆ ಪ್ರಯೋಜನ ಇತ್ಯಾದಿಗಳನ್ನು ವಿವರಿಸಿ ಪ್ರಾರಂಭ ಭಾಷಣಗಳಾದ ಮೇಲೆ ಹಳೆ ವಿದ್ಯಾರ್ಥಿಗಳ ಸಂಘವೊಂದನ್ನು ಏರ್ಪಡಿಸುವುದೆಂದು ನಿರ್ಣಯವಾಗಿ ಆ ಬಗ್ಗೆ ತಯಾರುಮಾಡಿದ ನಿಬಂಧನೆಗಳನ್ನು ಸರ್ವಸಮ್ಮತದಿಂದ ಮಂಜೂರು ಮಾಡಲಾಯಿತು ಆ ಮೇಲೆ ಈ ಕೆಳಗಿನವರು ಸದರಿ ಸಂಘದ ಕಾರ್ಯಕಾರಿಯ ಮಂಡಳಿಯ ಸದಸ್ಯರಾಗಿ ಚುನಾಯಿಸಲ್ಪಟ್ಟರು

ಶ್ರೀಗಳಾದ ಬಿ ವಿ ರಾಮರಾವ್ (ಅಧ್ಯಕ್ಷ) ಟಿ ಪದ್ಮನಾಭಯ್ಯ (ಉಪಾಧ್ಯಕ್ಷ) ಎಚ್ ದಾಮೋದರ ರಾವ್ (ಎಕ್ಸ್-ಒಫಿಸಿಯೋ) ಎಂ ವಾಸುದೇವರಾವ್ (ಕಾರ್ಯದರ್ಶಿ) ಡಾ। ಕೆ ವೆಂಕಟರಾವ್ ವಿ ಸತ್ಯಾರ್ಥಿ ಎಸ್ ಬಾಬುರಾಯ ಕಾಮತ್, ಎಚ್ ಸುಬ್ಬಣ್ಣ ಶೆಟ್ಟಿ ಟಿ ಸಂಜೀವ ಮಲ್ಲಿ ಎಂ ಬಾಬು ಸೆಟ್ಟಿ, ಜನಾರ್ಧನರಾವ್, ಬಳಿಕ ಸಭಾಧ್ಯಕ್ಷರ ಸಮಾಪನ ಭಾಷಣದೊಡನೆ ಸಭಾರ್ಯವಾಯಿತು. ಹಲವು ಮಂದಿ ವಿದ್ಯಾರ್ಥಿಗಳ ಸರಿಯಾದ ವಿಳಾಸಗಳು ತಿಳಿಯದೆ ಅವರೊಡನೆ ಪತ್ರವ್ಯವಹಾರ ನಡೆಸಲು ತುಂಬಾ ಅನಾನುಕೂಲವಾಗಿರುವ ಕಾರಣ ಈ ಶಾಲಾ ಹಳೇ ವಿದ್ಯಾರ್ಥಿಗಳೆಲ್ಲರೂ ತಂತಮ್ಮ ವಿಳಾಸಗಳನ್ನು ದಯವಿಟ್ಟು ಕೂಡಲೇ ತಿಳಿಸುವುದಲ್ಲದೆ ಈ ಸಂಘದ ಸದಸ್ಯರಾಗಿ ಸೇರಿ ಸಂಘದ ಉದ್ದೇಶಗಳನ್ನು ಸಫಲಗೊಳಿಸುವಲ್ಲಿ ನೆರವಾಗಬೇಕಾಗಿ ವಿನಂತಿ.

ಇಲ್ಲಿಯ "ಗ್ರ್ಯಾಂಡ್ ವಿದ್ಯಾದಾಯಿನೀ ಸೊಸೈಟಿ"ಯ ಟಿಕೇಟುಪುಸ್ತಕಗಳ ಮಾರಾಟದ ಕಾರ್ಯವನ್ನು ಸ್ವೀಕರಿಸಿ ಸದರಿ ಉದ್ಯಮಕ್ಕೆ ಸಹಾಯವನ್ನು ಮಾಡುತ್ತಿರುವ ಮಹನೀಯರೆಲ್ಲರೂ ಸೊಸೈಟಿ ಟಿಕೇಟುಗಳನ್ನು ನಗದಿಗೆನೇ ಮಾರಾಟ ಮಾಡಬೇಕಾಗಿಯೂ, ಒಂದು ವೇಳೆ ವಿಶ್ವಾಸಿ ಜನರೊಳಗೆ ಕಡವಾಗಿ ಟಿಕೇಟುಗಳನ್ನು ಕೊಟ್ಟಲ್ಲಿಯೂ ಸೊಸೈಟಿಯ ಆಫೀಸು ತಾ ೨೦—೫—೩೬ರೊಳಗೆ ಅಂಥ ಹಣವನು. ಟಿಕೇಟು ಮಸ ಕಡೊಂದಿಗೆ ಸೊಸೈಟಿ ಆಫೀಸಿಗೆ ರವಾನಿಸುವರೆ ಬದ್ಧರಾಗಿರುವರೆಂಬ ನಿಬಂಧನೆಯಂತೆ ತಪ್ಪದೆ ನಡೆದುಕೊಳ್ಳಬೇಕಾಗಿಯೂ ವಿನಂತಿ, ಈ ವಿಷಯದಲ್ಲಿ ಟಿಕೇಟು ಪಡಕೊಂಡವರು ತಕ್ಕ ಗಮನವನ್ನೀಯಬೇಕಾಗಿ ಸವಿನಯ ವಿನಂತಿ, ಸೊಸೈಟಿಯು ಈ ಮೊದಲೇ ಪ್ರಕಟಿಸಿದ ತಾ. ೩-೬—೩೬ನೇ ದಿನವೇ ನಿಶ್ಚಯವಾಗಿಯೂ ತೆಗೆಯಲ್ಪಡುವುದು ಎಂದು ಸದರಿ ಸೊಸೈಟಿಯ ಮೆನೇಜರರು ತಿಳಿಸುತ್ತಾರೆ

ಅಜೆಕಾರು:—ಸ್ಥಳೀಯ ಬೋರ್ಡ ಶಾಲೆಯಲ್ಲಿ ಸ್ಥಳಸಂಕೋಚವಾಗುವುದನ್ನು ನಿವಾರಿಸಲು ಊರವರು ಕೈಕೊಂಡ ಶಾಲಾ ವಿಸ್ತರಿಸುವಿಕೆಯ ಕೆಲಸವು ರಭಸದಿಂದ ಸಾಗುತ್ತಿದೆ ಅಂತೂ ಮೇ ಅಖೈರಿಯೊಳಗೆ ಪೂರ್ತಿಯಾಗಲಿರುವುದು ಅತ್ಯಂತ ಸ್ತುತ್ಯವೇ ಸರಿ!

ಬೋಧಕರ ಸಂಘದ ಮಾಸಿಕ ಸಭೆಯು ಇದೇ ಬರುವ ತಾ ೧೮—೪—೩೬ರಲ್ಲು ಪಡುಕುಡೂರು ಶಾಲೆಯಲ್ಲಿ ಜರಗಲಿದೆ

ಉಡುಪಿ:— ಮ್ಯುನಿಸಿಪಾಲಿಟಿಯಿಂದ ಹೊಸತಾಗಿ ಸ್ಥಾಪಿಸಲಾದ ಪೆಟ್ರೋಮೆಕ್ಸ್ ದೀಪಗಳಲ್ಲೊಂದು ಕೆಲ ಕಾಲದ ಹಿಂದೆ ಕಳವಾಗಿತ್ತು ಅದರ ತಪಾಸು ಆಗುತ್ತಲಿದ್ದು ಈಗ ಅದರ ಶೋಧವಾಗಿರುತ್ತದೆ ಇವರೊಟ್ಟಿಗೆ ಆಗಿಂದಾಗ ಶಹರಿನಲ್ಲಿ ಕಳವಾದ ಹಲವು ಇತರ ಸಾಮಾನುಗಳೂ ದೊರಕಿವೆಯಂತೆ ಈ ಮುಂಚೆ ಕೆಲ ತಿಂಗಳ ಹಿಂದೆ ಚಿಲ್ಲರೆ ಕಳವುಗಳ ಸಕ್ತಿಯಾದಾಗ ಆಪಾದಿತರು ಹೇಗೋ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದಿಲ್ಲ ದಾರಿಹೋಕರನ್ನು ತಡೆಗಟ್ಟಿ ಚಿಲ್ಲರೆ ಹಣಕಾಸುಗಳನ್ನು ಕಸುಕೊಂಡಾಗ ಪೋಲೀಸರಿಗೆ ತಿಳಿಸಲಾಗಿತ್ತು ಕೆಲವರ ಮೇಲೆ ಗುಮಾನೆಯು ಸ್ಥಿರವಾಗಿತ್ತು, ಇತ್ತಲಾಗೆ ಚಿಲ್ಲರೆ ಕಳವುಗಳು ಪದೇ ಪದೇ ಆಗುತ್ತಲಿದ್ದು ಈ ಸಲವಾದರೂ ತಪ್ಪಿತಸ್ಥರನ್ನು ಕಠಿಣ ಶಿಕ್ಷೆಗೆ ಗುರಿಮಾಡುವುದವಶ್ಯ ಪುಂಡರ ಒಂದು ಮಂಡಳಿಯೇ ಇದ್ದು ಇವರ ಬಲೆಯು ಬಹುದೂರ ವ್ಯಾಪಿಸಿದ್ದು ಪಟ್ಟಣಿಗರಿಗೆ ಯಾವಾಗಲೂ ಭಯಪ್ರದವಾಗುತ್ತದೆ ಪೋಲೀಸು ಇಲಾಖೆಯವರು ಈ ಸಲ ಈ ಕಳವುಗಳ ಮತ್ತು ಆಪಾದಿತರ ಶೋಧವನ್ನು ಚೆನ್ನಾಗಿ ಮಾಡಿ ಶಾಸನದಿಂದ ಬಿಗಿದು ಉಡುಪಿ ನಿವಾಸಿಗಳನ್ನು ಸುರಕ್ಷಿತಗೊಳಿಸಿದ್ದಲ್ಲಿ ಮಹದುಪಕಾರವಾಗುತ್ತಿತ್ತು

ಮಲ್ಪೆ ಬಂದರದಿಂದ ಸ್ಟೀಮರಿಗೆ ಹೋಗಿಬರುವ ಪ್ರಯಾಣಿಕರ ದುಬಾವಗಳನ್ನು ಸುರಕ್ಷಿತವಾಗಿ ಎಳೆದೊಯ್ಯುವ ಕಷ್ಟ ಒಂದು ಸ್ಟೀಮ್ ಲೋಂಚು ಸದರಿ ಬಿ ಎಸ್ ಎನ್ ಕಂಪೆನಿಯವರಿಂದ ಕಳುಹಲಾಗಿದೆ ಸ್ಟೀಮರಿನ ದಿನವನ್ನುದಾಗ ಇದು ನಿಯಮಿತ ಬಾಡಿಗೆಗೆ ವಹಾರಿಕಾಗಿಯೂ ಒದಗಿಸುವ ಏರ್ಪಾಡಿರುವುದು.

ತಾ ೨೯ನೇ ಪೂರ್ವಾಹ್ನ ಇಲ್ಲಿನ ಪುರಪ್ರಮುಖರ ಕೋರಿಕೆಯ ಮೇರೆಗೆ ಶ್ರೀ। ಪಂಡಿತ ಹರ್ದಯನಾಥ ಕುಂಜ್ರು ಸರ್ವೆಂಟ್ಸ್ ಒಫ್ ಇಂಡಿಯಾ ಸೊಸೈಟಿಯ ಅಧ್ಯಕ್ಷರೂ ಶ್ರೀಗಳಾದ ಸೂರ್ಯನಾರಾಯಣರಾವ್ ಮತ್ತು ನಾರಾಯಣ ಶೆಟ್ಟಿಯವರೊಡಗೂಡಿ ಸಂದರ್ಶಿಸಿದರು ಅರ್ಧ ಗಂಟೆಯ ಕಾಲ ಮಧ್ಯಾಹ್ನ ಉಡುಪಿಯಲ್ಲಿ ವಿಶ್ರಮಿಸಿದ್ದರು ಅಖಿಲ ಭಾರತದ ಮಹನೀಯರುಗಳಿಂದ ಪಂಡಿತರನ್ನು ಸ್ಥಳೀಯ ಮುಖಂಡರುಗಳಿಗೆ ಭೆಟ್ಟಿಯ ಮಟ್ಟಿಗಾದರೂ ಬರಮಾಡಿ ಡಿ ಸಿ ಮಿಶನಿನ ಕಾರ್ಯಕಲಾಪಗಳಲ್ಲಿ ಹೆಚ್ಚಿನ ಸಹಾಯಸಹಾನುಭೂತಿಗಳನ್ನು ಪಡೆಯುವುದರಲ್ಲಿ ಸಹಕಾರಿಯಾಗುತ್ತಿತ್ತೆಂದೂ ಅವರನ್ನು ಅಗ್ಗೆ ಉಪಚಾರದಿಂದ ಸತ್ಕರಿಸಬೇಕೆಂದು ಪ್ರಕಟಪಡಿಸಿದ ಇಲ್ಲಿನ ಸಧ್ಯಃ ಪುರಸ್ಕಾರ ಆಮಂತ್ರಣವನ್ನು ಸ್ವೀಕರಿಸಬಹುದಿತ್ತೆಂದೂ ಅಭಿಪ್ರಾಯವಿತ್ತರು

ಇದೇ ಚೈತ್ರ ಶು। ೧ರಿಂದ ೯ರ ವರೆಗೆ ಶ್ರೀ ರಾಮನವಮಿ ಉತ್ಸವಗಳು ಎಂದಿನಂತೆ ಶ್ರೀ ಮದನಂತೇಶ್ವರ ದೇವರ ಸನ್ನಿಧಿಯಲ್ಲಿ ಪುರಾಣ ವಾಚನ, ಭಜನೆ, ಹರಿಕಥೆ ಪೂಜಾದಿಗಳಿಂದ ಜರಗಿರುತ್ತದೆ

ಸ್ಥಳೀಯ ಮುನಿಸಿಪಾಲಿಟಿಯು ಹೊಸತಾಗಿ ನೆಟ್ಟಿದ್ದ ಗೇಸ್ ದೀಪಗಳಲ್ಲೊಂದು ಕಳವಾದುದು ಈಚೆಗೆ ಪತ್ತೆಹಚ್ಚಲ್ಪಟ್ಟು, ಆಪಾದಿತನನ್ನು ೬ ಎರಡು ತಕ್ಷೀರುಗಳಿಗಾಗಿ ೬ ತಿಂಗಳ ಕಾರಾವಾಸಕ್ಕೆ ಗುರಿಪಡಿಸಲಾಗಿದೆ— ಈತನ ಸಹೋದ್ಯೋಗಿಗಳೂ ಕೆಲವರು ಇರುವರಾಗಿ, ಅವರ ಮೇಲಿನ ತೀವ್ರ ಲಕ್ಷ್ಯವಿಟ್ಟು, ಅವರನ್ನೂ ಶಿಕ್ಷೆಗೆ ಗುರಿಮಾಡಿದ್ದಲ್ಲಿ ಪುರವಾಸಿಗಳಿಗೆ ಹೆಚ್ಚಿನ ನೆಮ್ಮದಿ ಸಿಗುವುದರಲ್ಲಿ ಸಂಶಯವಿಲ್ಲ.

ಕಾಪು—ಇದೇ ಎಪ್ರಿಲ್ ತಾ ೨೭ನೇ ಸೋಮವಾರ ದಿನ ಘಂಟೆ ೧೨—೧೮ಕ್ಕೆ ನಡೆವ ಮಿಥುನಲಗ್ನದಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ ಪ್ರತಿಷ್ಠಾ ಶುಭಕಾರ್ಯವು ಜರು

(೧೪ನೆ ಪುಟಕ್ಕೆ ಮುಂದುವರಿಸಿದೆ)

ಸಂಪಾದಕರ ಟಪಾಲು ಪೆಟ್ಟಿಗೆ.

(ಪತ್ರಕಾರರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

[illegible] ಹಾ. ಎ. ಶಾಲೆಯ ಅವಶ್ಯಕತೆ.

[illegible] ಗ್ರಾಮದಲ್ಲಿ ಇಂದಿಗೆ ೧೪ ವರ್ಷಗಳಿಂದ ಒಂದು ಹಾಯರ್ ಎಲಿಮೆಂಟರಿ ಶಾಲೆಯು ಲೋಕಲ್ ಬೋರ್ಡ್ ಆಡಳಿತೆಯಿಂದ ನಡಿಸಿಕೊಂಡು ಬರುತ್ತಿತ್ತು. ಅದ್ಯಾಪಿ ಈ ವರೆಗೂ ಸದ್ರಿ ಶಾಲೆಯು ದಿನೇ ದಿನೇ ಅಭಿವೃದ್ಧಿ ಹೊಂದಿ, ಕಾರ್ಕಳ ರೇಂಜಿಗೆ ಸೇರಿದ ಲೋಕಲ್ ಬೋರ್ಡ್ ಹಾ. ಎ. ಶಾಲೆಗಳಲ್ಲಿ ಪ್ರಥಮಸ್ಥಾನವನ್ನು ಹೊಂದಿರುತ್ತಿತ್ತು. ಬಹು ಪುರಾತನಕಾಲದಲ್ಲಿ ಪ್ರೈವೇಟ್ ಮಿಶನ್ನಿಯ ಎಲಿಮೆಂಟರಿ ಶಾಲೆಯಾಗಿ ಸ್ಥಾಪಿಸಲ್ಪಟ್ಟು ಕ್ರಮೇಣ ಮಂಜೂರಾತಿ ಹೊಂದದ ಹಾಯರ್ ಕ್ಲಾಸುಗಳನ್ನು ನಡೆಸುವರೇ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ಅಸಾಧ್ಯವಾದ ಕಾರಣ ೧೯೨೨ನೇ ಇಸವಿಯಲ್ಲಿ ಶಾಲಾ ಕಟ್ಟೋಣ, ಸಾಹಿತ್ಯ ಸಾಮಗ್ರಿಗಳ ಸಮೇತ ಮಾನ್ಯ ಕಾರ್ಕಳ ತಾಲೂಕು ಬೋರ್ಡ್ ಆಡಳಿತೆಗೆ ಬಿಟ್ಟುಕೊಡಲ್ಪಟ್ಟಿತು.

ಈ ಶಾಲೆಯು ನಂದಳಿಕೆ, ಕೆದಿಂಜೆ, ಬೋಳ, ಸೂಡ, ಪಿಲಾರು, ಸಾಂತೂರು, ಬೆಳ್ಮಣ್ಣು ಮೊದಲಾದ ಗ್ರಾಮ ನಿವಾಸಿಗಳ ಬಾಲಕರಿಗೆ ಪ್ರಯಾಸವಿಲ್ಲದೆ ಏಳನೇ ತರಗತಿಯ ವರೆಗೆ ವಿದ್ಯಾಭ್ಯಾಸ ಪಡೆಯುವರೆ ತುಂಬಾ ಅನುಕೂಲವಾಗಿತ್ತು.

ಈ ಶಾಲೆಯು ಸ್ಥಾಪಿಸಲ್ಪಟ್ಟಂದಿನಿಂದ ಈ ಹಳ್ಳಿ ಹಳ್ಳಿಯ ಬಡಮಕ್ಕಳಿಗೆ ಆಂಗ್ಲಭಾಷೆಯ ಸೋಂಕು ಸಹ ತಕ್ಕಮಟ್ಟಿಗೆ ತಗಲಿತೆಂದರೆ ಅತಿಶಯೋಕ್ತಿಯಾಗಲಾರದು. ಆದರೆ, ಕಾಲ ಮಾರ್ಪಾಟಿನ ಜತೆಯಲ್ಲಿ ಶಾಲಾ ಮಾರ್ಪಾಟವು ಕೂಡಾ ಆಗಿಯೇ ಹೋಯಿತು. ಮೇಲಿನ ಮೂರು ತರಗತಿಗಳು ಮುಚ್ಚಲ್ಪಟ್ಟವು. ಬಡಮಕ್ಕಳ ವಿದ್ಯಾಭಿವೃದ್ಧಿಯ ಬುಡಕ್ಕೆ ಕೊಡಲಿಯೇಟು ಬಿದ್ದುದರಿಂದ ಗ್ರಾಮದಲ್ಲೆಲ್ಲಾ ಹಾಹಾಕಾರವು ತುಂಬಿಹೋಯಿತು.

ಈ ಶಾಲೆಯ ಮೇಲಿನ ತರಗತಿಗಳನ್ನು ತೆಗೆದುಹಾಕುವರೇ ಸಮರ್ಪಕವಾದ ಯಾವ ಕಾರಣವೂ ಇದ್ದಿಲ್ಲ. ಮೇಲಿನ ತರಗತಿಯಲ್ಲಿ ಮಕ್ಕಳ ಸಂಖ್ಯೆಯು ಬೇಕಷ್ಟು ಮಿಕ್ಕಿದ್ದುದಲ್ಲದೆ ಪ್ರತಿ ತರಗತಿಗೆ ಸಾಕಷ್ಟು ಇತ್ತು. ಅದರಲ್ಲೂ ಬಾಲಿಕೆಯರ ಸಂಖ್ಯೆಯು ಹದಿಮೂರರ ವರೆಗೆ ಇರಬಹುದು.

ದೇಶದ ಮೇಲಾಟದ ಪ್ರತಿಯೊಂದು ಹಳ್ಳಿಯಲ್ಲಿಯೂ ಸಾಕಷ್ಟು ವಿದ್ಯಾಪ್ರಚಾರ ಮಾಡುವದೇ ಸರಕಾರದ ಧ್ಯೇಯವಾಗಿರುವುದು. ಸರಕಾರದಿಂದ ಗ್ರಾಮವಾಸಿಗಳಿಗೆ ಸಿಕ್ಕುವ ಹೆಚ್ಚಿನ ಪ್ರಯೋಜನವೆಂದರೆ ವಿದ್ಯಾಭ್ಯಾಸ ಪರಂತು, ಅಂಥಾ ವಿದ್ಯಾಶಾಲೆಗಳನ್ನೇ ತೆಗೆದುಹಾಕುವುದೆಂದರೆ ಬಡವರ ದುಃಖಕ್ಕೆ ಪಾರವೇ ಇರಲಾರದು.

ಆಕಸ್ಮಿಕವಾಗಿ ಈ ಶಾಲೆಯನ್ನು ತೆಗೆದುಹಾಕುವರೆಂದು ಯಾರೂ ಗ್ರಹಿಸಲಿಲ್ಲ. ಆದ್ದರಿಂದ ಈ ಸರ್ಕಲಿನ ಮತದಾರರಿಂದ ಮತಪಡೆದಿರುವ ಡಿ. ಬೋರ್ಡ್ ಮೆಂಬರರು ತಕ್ಕ ಪ್ರಯತ್ನನಡಿಸುವುದಲ್ಲದೆ ಡಿ. ಬೋರ್ಡಿನವರೂ ಡಿಪಾರ್ಟ್‌ಮೆಂಟಿನವರೂ, ಎಜುಕೇಶನ್ ಕೌನ್ಸಿಲಿನವರೂ ದಯವಿಟ್ಟು ಈ ಶಾಲೆಯ ಮೇಲಿನ ದರ್ಜೆಗಳನ್ನು ಪುನರುಜ್ಜೀವಗೊಳಿಸಿ, ಈ ಕಡೆಯ ಬಾಲಕರ ದುಃಖವನ್ನು ಪರಿಹರಿಸಿ ವಿದ್ಯಾದಾನವನ್ನು ನೀಡುವ ಏರ್ಪಾಡು ಮಾಡಬೇಕಾಗಿ ಬೇಡಿಕೊಳ್ಳುತ್ತೇನೆ.

—ಹಳೇ ವಿದ್ಯಾರ್ಥಿ

ಪುದುಶಾಲೆಗೆ ಬಂದಿದ್ದ ಪ್ರೇಕ್ಷಕರ ಮಾತು ಸುಳ್ಳಲ್ಲವೇ?

ತಾ. ೩-೩-೩೩ನೇ ದಿನ ಪುದು ಮಾಪ್ಪಡ್ಸನ್ ಬೋರ್ಡ್ ಶಾಲೆಯ ವಾರ್ಷಿಕೋತ್ಸವದಲ್ಲಿ ಶಾಲಾ ಹಿತವನ್ನು ಬಯಸಲು ನಾನೂ ಒಪ್ಪಿದುದು ನಿಜ. ಆದರೆ, ತಾ. ೪ರಲ್ಲಿ— ಸಾಯಂಕಾಲ ಸದ್ರಿ ಶಾಲಾ ಮುಖ್ಯ ಉಪಾಧ್ಯಾಯರ ಕೂಡೆ ನನಗಿರತಕ್ಕ ಜರೂರಾತಿ ಕೆಲಸವನ್ನು ಸೂಚಿಸಿ ಕಲ್ಪಾಗೆ ಹೋದವನು, ಅಲ್ಲಿಯ ಅನಿರೀಕ್ಷಿತ ಅವಘಡಗಳಿಂದ ತನಗೆ ವಾರ್ಷಿಕೋತ್ಸವಕ್ಕೆ ಬಂದು ಭಾಗವಹಿಸಲು ಸಾಧ್ಯವಾಗಲಿಲ್ಲವೆಂದು ಸೂಚಿಸಲು ತುಂಬಾ ವ್ಯಸನ ಪಡುತ್ತೇನೆ. ತಾ. ೧೪-೩-೩೩ನೇ ಸ್ವದೇಶಾಭಿಮಾನಿ ಸಂಚಿಕೆಯ ಪುಟ ಒಂದರಲ್ಲಿ "ಪುದುಗ್ರಾಮದ ಬೋರ್ಡ್ ಶಾಲೆಯ ಉತ್ಸವದ ಬಗ್ಗೆ" ಎಂಬ ಲೇಖನದಲ್ಲಿ ಅಂದು ನಾನು ಅಧ್ಯಕ್ಷತ ವರೆಗೆ ಅಲ್ಲಿದ್ದು 'ಇಂದಿಗ್ಗೆ ಸದು ಪಕಾರ್ಯದಲ್ಲಿ ತಪ್ಪಿ ಅಪೇಕ್ಷಿಕಾರ್ಯಕ್ಕೆ ದೋಷವನ್ನು ತಂದೊಡ್ಡಿದರೆಂಬ' ಪ್ರೇಕ್ಷಕರಲ್ಲೊಬ್ಬನ ಸುಳ್ಳು ಟೀಕೆಯನ್ನು ಕಂಡು ಆಶ್ಚರ್ಯಪಡಬೇಕಾಗಿದೆ. ಆದಕಾರಣ, ಸದ್ರಿ ದಿನ ನನಗೊದಗಿದ ಕಷ್ಟ ಸಂಕಷ್ಟಗಳನ್ನು ವಿಚಾರಿಸದೆ, "ಇಷ್ಟಬಂದಂತೆ ಪತ್ರಿಕೆಯಲ್ಲಿ ಅಲ್ಲಸಲ್ಲದ ಸುದ್ದಿಗಳನ್ನು ಸೇರಿಸಿ ಟೀಕೆ ಹಚ್ಚುವಂತೆ ರವಾನಿಸಿದ್ದು ಪ್ರೇಕ್ಷಕನ ಗೌರವಕ್ಕೆ ಯೋಗ್ಯವೋ? ಎಂಬುದನ್ನೊಮ್ಮೆ ಮಾನ್ಯ ವಾಚಕರೇ ಪರಾಂಬರಿಸಿದ್ದಲ್ಲಿ ಸಮಾಧಾನಕರವಾಗಬಹುದು. ಮಾನ್ಯ ದೇಶಾಭಿಮಾನಿಗಳು ಪ್ರೇಕ್ಷಕರು ಮಾಡತಕ್ಕ ಇಂಥಾ ಕಾರ್ಯಗಳಿಂದ ಒಬ್ಬರಿಗೊಬ್ಬರ ಮೇಲೆ ದ್ವೇಷವುಂಟಾಗುವುದಲ್ಲದೆ, ದೇಶವೃದ್ಧಿಯಾಗಲಾರದೆಂಬುದು ಪ್ರೇಕ್ಷಕರೇ ತಿಳಿಯಲಿ.

ಸದ್ರಿ ಶಾಲಾಭಿವೃದ್ಧಿಯ ಕುರಿತು ಗ್ರಾಮಸ್ಥರ ಸಹಾಯ ಕೋರಿಕೊಂಡು ನಾನುಪಡತಕ್ಕ ಶ್ರಮವನ್ನು ೧೯ ಮುಖ್ಯ ಉಪಾಧ್ಯಾಯರಿಂದ ತಿಳಿದುಕೊಳ್ಳಬಹುದು. ಆದಕಾರಣ, ಪ್ರೇಕ್ಷಕರು ಸ್ವಾರ್ಥವನ್ನು ಇನ್ನಾದರೂ ಬಿಟ್ಟು ಪಾರಮಾರ್ಥಕ್ಕೆ ಕೈಯಿಕ್ಕಲಿ.

ಪುದುಗ್ರಾಮದ ಪಟೇಲ್.

ಜಿಲ್ಲಾ ಕಾಂಗ್ರೆಸ್ ಕಮಿಟಿ ಮತ್ತು ಸಿವಿಕ್ ಬೋರ್ಡಿನ ಅವಗಾಹನೆಗೆ-

ಅಯ್ಯಾ,

೧. ಜಿಲ್ಲಾ ಬೋರ್ಡಿನ ಪ್ರಥಮ ಸಭೆ ಸೇರಿದಾಗ ಶ್ರೀ ಎಸ್. ಎಂ. ಅಡ್ಯಂತಾಯರು ಕಾಂಗ್ರೆಸ್ ನಿರ್ಣಯಕ್ಕೆ ವಿರೋಧ ಮತಕೊಟ್ಟು ಕೂಡಲೇ ಅವರ ಮೇಲೆ ಶಿಸ್ತಿನ ರೀತ್ಯಾ ಕಾರ್ಯಕೈಕೊಳ್ಳದೆಯೂ, ಉಳಿದ ಸದಸ್ಯರು ಮುಂದಕ್ಕೆ ಕಾಂಗ್ರೆಸ್ ಶಿಸ್ತುಗಳನುಸಾರವಾಗಿಯೇ ವರ್ತಿಸುವಂತೆ ಯೋಚನೆಯನ್ನು ಏಕೆ ಮಾಡಲಾಗಲಿಲ್ಲ?

೨. ಮದ್ರಾಸು ಸೆನೆಟಿಗೆ ಕಾಂಗ್ರೆಸ್ ಕಡೆಯಿಂದ ಡಾ. ಪಟ್ಟಾಭಿ ಸೀತಾರಾಮಯ್ಯ(?) ಸರ್ವಾನುಮತ ಇಲ್ಲವೇ ಬಹುಮತದಿಂದ ಮಂಜೂರಾದಾಗ್ಯೂ ಡಾ. ಪಿ. ಜಿ. ಆಚಾರ್ಯರು ಇದಕ್ಕೆ ವಿರೋಧವಾಗಿ ತಮ್ಮ ನೋಮಿನೇಶನನ್ನು ಹಾಕಿದಾಗಲಾದರೂ ಕಾಂಗ್ರೆಸ್ ಶಿಸ್ತಿನ ರೀತ್ಯಾ ಏಕೆ ಕೂಡಲೇ ವ್ಯವಸ್ಥೆ ಮಾಡಲಾಗಿಲ್ಲ?

೩. ಜಿಲ್ಲಾ ಬೋರ್ಡ್ ಅಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಟಿಯ ಉಮೇದ್ವಾರರಿಗೆ ಅಪಜಯವಾಗಲು ಕೂಡಲೇ ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷರೂ [illegible] ಕಾರ್ಯನಿರ್ವಾಹಕರೂಗಲಿ ಸಭೆ ಕರೆದು ಉಪಾಧ್ಯಕ್ಷರ ಚುನಾವಣೆಯ ಕೂಟವು ಸೇರುವುದಕ್ಕೆ ಮುಂಚಿತವಾಗಿಯೋಗಲಿ ಅನಂತರವಾಗಲೀ ಪಾರ್ಟಿಯವರೆಲ್ಲ ಕೂಡಿಕೊಂಡು, ಕಾಂಗ್ರೆಸ್ಸಿಗಾದ ಅಪಜಯವ ಅಪಯಶಸ್ಸಿಗೆ ಕಾರಣರ್ಯಾರೆಂಬುದಾಗಿ ತನಿಖೆ ಅಥವಾ ನಿರ್ಣಯ ಮಾಡಿ, ಅವರ ಬಗ್ಗೆ ಮುಂದಕ್ಕೆ ಹೇಗೆ ವರ್ತಿಸಬೇಕೆಂದು ಏಕೆ ಆಲೋಚಿಸಲಾಗಲಿಲ್ಲ?

೪. ಕೊನೆಗೂ ಎರಡೂ ಸಮಿತಿಗಳಿಂದ ಸಂಯೋಜಿತ ವಿಸ್ತಾರವಾದ ಪ್ರಕಟಣೆಯು ಕೂಡಲೇ ಹೊರಬೀಳುವುದಿದೆಯೆಂದು ಇದ್ದಿತಾದರೂ, ಅದರ ಸುಳಿವೇ ಇಲ್ಲ. ಮೇಲಾಗಿ ಕಳೆದ ಜಿ. ಕೆ. ಕಮಿಟಿ ನಿರ್ಣಯಗಳಿಂದಲೂ ಯಾವ ಶಿಸ್ತಿನ ಕ್ರಮವೂ ವ್ಯಕ್ತವಾಗಿಲ್ಲ.

ಈ ಬಗ್ಗೆ ಕೂಡಲೇ ಮತ್ತು ಕ್ರಮಬದ್ಧವಾದ ಶಿಸ್ತನ್ನು ಪಾಲಿಸುವ ಜವಾಬ್ದಾರಿಯನ್ನು ಕಾಂಗ್ರೆಸ್ ಕಮಿಟಿಯವರಾಗಲೀ, ಸಿವಿಕ್ ಬೋರ್ಡಿನವರಾಗಲೀ, ಜಿಲ್ಲಾ ಬೋ. ಕಾಂಗ್ರೆಸ್ ಪಾರ್ಟಿಯವರಾಗಲೀ ಖಂಡಿತ ಯಾರ ಏರ್ಪಾಡು ಮಾಡುವುದು ಮುಂದರಿಯುವುದೆಂಬುದರಲ್ಲಿ ಸಂಶಯವಿದ್ದಂತೆ ಕಾಣುತ್ತದೆ. ಆದುದರಿಂದ ಸಂಬಂಧಪಟ್ಟ ಈ ಮೂರು ಸಮಿತಿಯವರು ತಾವು ಪ್ರತ್ಯಪ್ರತ್ಯೇಕವೆಂದು, ಉಳಿದವರು ನೋಡಿಕೊಳ್ಳಲೆಂದು ಉದಾಸೀನರಾಗಿರುವುದು ಸಮ್ಮತವಲ್ಲ. ಎಲ್ಲರೂ ಒಟ್ಟು ಸೇರಿ ಸಕ್ರಿಯಕಾರ್ಯಕ್ಕೆ ತೊಡಗಿ ಇನ್ನು ಮುಂದಕ್ಕಾದರೂ ಜನತೆಗೆ ಕಾಂಗ್ರೆಸ್ಸಿನಲ್ಲಿರುವ ಅಭಿಮಾನ ವಿಶ್ವಾಸವನ್ನು ವೃದ್ಧಿಗೊಳಿಸಿ, ಜಿಲ್ಲಾ ಬೋರ್ಡಿನಲ್ಲಿ ತಮ್ಮಿಂದಾಗತಕ್ಕ ಕಾರ್ಯಗಳ ಮಟ್ಟಿನ ಕಾರ್ಯಕ್ರಮವನ್ನು ಪ್ರಕಟಿಸಿ ಆ ಕುರಿತು ಕಾರ್ಯೋತ್ಸಾಹಿಗಳಾಗುವರೇ? ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವರೇ? ಜನಹಿತವನ್ನು ಕೈಕೊಳ್ಳುವರೇ?

ಓರ್ವ ದೇಶಸೇವಕ

ದೇವಾಲಯ ಪ್ರವೇಶ ಚಳವಳ.

ಮಹಾತ್ಮಾಗಾಂಧಿಯವರು, ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶದೊರಕಿಸುವ ಕುರಿತು ತನ್ನ "ಹರಿಜನ" ಪತ್ರಿಕೆಯಲ್ಲಿ ಹೀಗೆಂದು ಬರೆದಿರುವರು,

"ಹರಿಜನ ಸೇವಕ ಸಂಘವು ಈ ಕುರಿತು ಒಂದು ಮುಖ್ಯ ಠರಾವನ್ನು ಮಾಡಿದ್ದು ಎಲ್ಲರಿಗೂ ತಿಳಿದ ವಿಚಾರವಾಗಿರುತ್ತದೆ. ಆದರೆ ಈ ಕುರಿತು ಯಾವ ತರದ ಚಟುವಟಿಕೆಗಳು ಬಹಳ ಸಮಯ ಕಾಣಸಿಕೊಳ್ಳದುದರಿಂದ ಸಂಘವು ಇದನ್ನು ಮರೆತಿರಬಹುದೆಂಬ ಅಭಿಪ್ರಾಯಪಡಬಾರದು. ಪಂಡಿತ ಮಾಲವೀಯರ ನಾಸಿಕ ಪ್ರವಾಸ, ಅಲ್ಲಿ ಅವರ ಸುತ್ತಲೂ ನೆರೆದ ಮಹತ್ತಾದ ಜನಸ್ತೋಮ, ಅಸ್ಪೃಶ್ಯತೆಯನ್ನು ನಿರ್ಮೂಲಗೊಳಿಸುವ ಕುತೂಹಲವು, ಸವರ್ಣಪಕ್ಷದವರು ಇದನ್ನು ವಿರೋಧಿಸಿದ್ದರೂ, ಜನರಲ್ಲಿ ಬಹಳವಾಗಿರುವುದೆಂದು ಖಚಿತವಾಗುತ್ತದೆ.

ಸ್ಥಳೀಕ ಸಂಘದವರು, ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶ ಸಿಕ್ಕುವಂತೆ ಬಹಳ ಉತ್ಸಾಹದಿಂದ ಶ್ರಮಪಡಬೇಕಾಗಿದೆ. ಮಾತ್ರವಲ್ಲದೆ, ಹೊಸ ದೇವಾಲಯಗಳನ್ನು ಸ್ಥಾಪಿಸುವ ಕಾರ್ಯವನ್ನು ಕೈಕೊಳ್ಳಬೇಕು. ಹರಿಜನರಿಗೆ ಮಾತ್ರವಲ್ಲ, ಇವುಗಳು ಸಾರ್ವಜನಿಕ ದೇವಾಲಯಗಳಾಗಬೇಕು. ಅವುಗಳನ್ನು ಆರೋಗ್ಯಕರವಾದ ಸ್ಥಳಗಳಲ್ಲಿ ರಚಿಸಿ ಅವುಗಳೊಂದಿಗೆ ಶಾಲೆ, ಸಾರ್ವಜನಿಕ ಕೂಡುವ ಸ್ಥಳ ಮತ್ತು ಧರ್ಮಶಾಲೆಯನ್ನೂ ಕೂಡಿಸಿದರೆ ಅವುಗಳು ಜನರಂಜಿತವಾಗುವುವು. ಅಲ್ಲಿ ನಿಯಮಿತ ಸಮಯಗಳಲ್ಲಿ ಯಾ ಸಾಯಂಕಾಲದಲ್ಲಿ ಸಾರ್ವಜನಿಕ ಪ್ರಾರ್ಥನೆ ನಡೆಯುವ ಏರ್ಪಾಡು ಮಾಡಬೇಕು. ಜನರಿಗೆ ಧರ್ಮದ ಕುರಿತು ಸುಜ್ಞಾನವಾಗಲೂ, ಅಲ್ಲಿ ಆಗಿಂದಾಗ್ಗೆ ಗೋಷ್ಠಿಗಳು ನಡೆಯಬೇಕು. ಇವು ಸರಿಯಾಗಿ ನಡೆದರೆ ದೇವಾಲಯ ಪ್ರವೇಶದ ಕುರಿತು ಹರಿಜನರ ಮೇಲಿರುವ ವಕ್ರದೃಷ್ಟಿಯು ಮಾಯವಾಗಬಹುದು.

ಹರಿಜನರಿಗಾಗಿಯೇ ಈ ದೇವಾಲಯಗಳು ಸ್ಥಾಪಿಸಲ್ಪಟ್ಟವೆ ಎಂಬ ಅಭಿಪ್ರಾಯವು ಬರದಂತೆ ಜಾಗ್ರತೆ ತೆಗೆದುಕೊಳ್ಳಬೇಕು. ಅವುಗಳು ಎಲ್ಲ ಹಿಂದೂಗಳಿಗೂ ತೆರೆದಿಡಲ್ಪಡಬೇಕು. ಮೇಲಿನ ಉದ್ದೇಶವನ್ನು ಸಾಧಿಸಲು ವಿವಿಧ ಕಡೆಗಳಲ್ಲಿ ಸ್ಥಾಪನೆಯಾಗುವ ಈ ದೇವಾಲಯದಲ್ಲಿ ವಿವಿಧ ತರದ ಯೋಜನೆಯನ್ನು ನಡೆಯಿಸಬಹುದು. ಈ ಎಲ್ಲಾ ವಿಚಾರಗಳಲ್ಲಿ ಅಹಿಂಸಾಧರ್ಮವನ್ನೇ ಅನುಸರಿಸಲ್ಪಡತಕ್ಕದ್ದು. ಈ ಕುರಿತು ಅಖಿಲ ಭಾರತ ಚಳವಳವನ್ನು ಹೂಡುವ ಅಲೋಚನೆಗಳಾಗುತ್ತಿವೆ. ಸ್ಥಳೀಕ ಸ್ಥಿತಿಗತಿಗಳನ್ನನುಸರಿಸಿ ಈ ಚಳವಳವನ್ನು ಅಲ್ಲಲ್ಲಿ ನಡೆಸಲಾಗುವುದು. ಅಲ್ಪಸಂಖ್ಯಾಕರು ದೇವಾಲಯದ ಸ್ಥಾಪನೆಯನ್ನು ವಿರೋಧಿಸುವುದಾದರೆ, ಅಲ್ಲಿ ಅವರ ಇಚ್ಛೆಗೆ ವಿರೋಧವಾಗಿ ಅವನ್ನು ಎಷ್ಟುಕೂ ಸ್ಥಾಪಿಸಲಾರದು. ಒಂದು ದೇವಾಲಯವನ್ನು ಸ್ಥಾಪಿಸಬೇಕಾದರೆ ಅಲ್ಲಿನ ಎಲ್ಲ ಜನರ ಒಮ್ಮತವು ದೊರೆಯಬೇಕು. ಈ ರೀತಿಯಲ್ಲಿ ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶದೊರಕಲು ಅನುಕೂಲವಾಗುವಂತೆ ಸರ್ವ ಜನಾಭಿಪ್ರಾಯವು ಬದಲಾವಣೆ ಹೊಂದುವಂತೆ ಪ್ರಯತ್ನಗಳು ನಡೆಯಬೇಕು.

ಆಶ್ರಿತರಾಜ್ಯಗಳಲ್ಲಿ —

"ಆಶ್ರಿತರಾಜ್ಯಗಳಲ್ಲಿ ಈ ವಿಚಾರದ ಸ್ಥಿತಿಯು ಬೇರೆಯಾಗಿರುತ್ತದೆ. ಮಹಾರಾಜರು ಮತ್ತು ಅವರ ಉದ್ಯೋಗಸ್ಥರು ಇಚ್ಛಿಸಿದರೆ ದೇವಾಲಯಗಳ ಸ್ಥಾಪನಾ ಕೆಲಸವು ಅತಿ ಸುಲಭವಾಗುವುದು. ತಿರುವಾಂಕೂರಿನಲ್ಲಿ ಈ ಚಳವಳವು ಬಹಳ ಯಶಸ್ವಿಯಾಗಿ ನಡೆಯುತ್ತದೆ. ಕೆಲವು ಕಡೆಗಳಲ್ಲಿ ಹರಿಜನರು ದೇವಾಲಯ ಪ್ರವೇಶದ ಕುರಿತು ನಿರುತ್ಸಾಹಿಗಳಾಗಿರುತ್ತಾರೆ. ಆದರೆ, ತಿರುವಾಂಕೂರಿನಲ್ಲಿ, ಹರಿಜನರು ಬಹಳ ಪ್ರಗತಿಹೊಂದಿರುವರು, ಅಲ್ಲದೆ ಬಹಳ ವಿದ್ಯಾವಂತರೂ ಆಗಿರುವರು. ಅನೇಕ ಉತ್ತಮ ಉದ್ಯೋಗಗಳನ್ನು ಪಡೆದಿರುವರು. ವಿಶ್ವವಿದ್ಯಾಲಯದ ಪದವಿಗಳನ್ನೂ ಪಡೆದಿರುವರು. ತಿರುವಾಂಕೂರಿನ ರಾಜಧಾನಿಯಲ್ಲೂ ಬಹಳ ಸುಧಾರಕರು ಸವರ್ಣ ಹಿಂದೂಗಳು ಪ್ರಭಾವಶಾಲಿಗಳಾಗಿದ್ದರೂ ಅವರ ಪ್ರೀತಿಯು ಹರಿಜನ ಸುಧಾರಣಾ ಚಳವಳಕ್ಕೆ ಯಾವ ತರದ ಆತಂಕಗಳನ್ನೂ ಉಂಟುಮಾಡುವಂತಿಲ್ಲ. ಸವರ್ಣ ಹಿಂದೂಗಳಲ್ಲಿ ಅನೇಕರು ತಿರುವಾಂಕೂರಿನ ದೇವಾಲಯಗಳನ್ನು ಹರಿಜನರಿಗೆ ತೆರೆಯಲು ಕುತೂಹಲಪಡುತ್ತಿರುವರು. ಮಹಾರಾಜರು ಜನರ ಈ ತರದ ಅಭಿಪ್ರಾಯಕ್ಕೆ ವಿರೋಧವಾಗಿ ವರ್ತಿಸುವರೆಂದು ನಾನೆಣಿಸುವುದಿಲ್ಲ."

ಹಿಂದೂದೇಶದ ಪ್ರೌಢ ವಿದ್ಯಾಭ್ಯಾಸ.

ಈ ಕುರಿತು, ಡಾ. ಜೇಮ್ಸ್ ಎಚ್. ಕಸಿನ್ಸರು ಕೆಳಗಿನ ಅಭಿಪ್ರಾಯಗಳಿಂದೊಡಗೂಡಿದ ಭಾಷಣವನ್ನು ಮದ್ರಾಸಿನ ಟ್ರೈಬ್ಯೂನ್(?) ಎಸೋಸಿಯೇಶನಿನಲ್ಲಿ ಮಾಡಿದರು,

ಜನರು ವಿದ್ಯಾವಂತರಾಗುವ ವಿಚಾರದಲ್ಲೂ ಇತರ ದೇಶಗಳಲ್ಲಿ ನಡೆಯುವ ಪ್ರೌಢವಿದ್ಯಾಭ್ಯಾಸಕ್ಕೆ ಬಹಳ ವ್ಯತ್ಯಾಸವಿದೆ. ಮಾತೃಭಾಷೆಯಲ್ಲಿ ಓದಲು, ಬರೆಯಲು ಗೊತ್ತಿರದ ೩೦೦ ಮಿಲಿಯ ಜನರಿರುವ ಹಿಂದೂದೇಶದಲ್ಲಿ 'ಪ್ರೌಢವಿದ್ಯಾಭ್ಯಾಸ'ವೆಂಬುದರ ಅರ್ಥವೇ ಮಾರ್ಪಾಡಾಗಿರುತ್ತದೆ. ರಾಜಕೀಯ ಬದಲಾವಣೆ, ಆಗುವ ಈ ಸಮಯದಲ್ಲಿ ವಿದ್ಯಾವಂತ ಟೀಚರು ಹಿಂದೂದೇಶದಲ್ಲಿ ಹೆಚ್ಚಬೇಕೆಂಬ ಬೊಬ್ಬೆ ಮಾತ್ರ ಕೇಳಿಸುತ್ತದೆ. ಆದರೆ, ಹಿಂದೂದೇಶಕ್ಕೆ ಯಾವ ವಿಧದ ಪ್ರೌಢವಿದ್ಯಾಭ್ಯಾಸವು ಬೇಕಾಗಿದೆ? ಅವರಲ್ಲಿ ವಿದ್ಯಾವಂತ ಓಟರರನ್ನು ಹೆಚ್ಚಿಸುವ ಮಾತ್ರವಲ್ಲದೆ ಅವರು ಸಂಸ್ಕೃತಿಹೊಂದುವ ರೀತಿಯಲ್ಲಿ ಅದು ನಡೆಯಬೇಕಾಗಿದೆ.

ಹಣದ ತಾಪಸದಿಂದ ಈ ಪ್ರೌಢವಿದ್ಯಾಭ್ಯಾಸ ಸಮಸ್ಯೆಯೂ ಹಿಂದುಳಿಯಬಹುದೆಂಬ ಅಭಿಪ್ರಾಯ ಕೆಲವರಲ್ಲಿ ಆಗಬಹುದು. ಅಲ್ಲಲ್ಲಿ ಸುಮ್ಮನೆ ಕೇಳಂತಮಾಗುವ ಹಣವು ಸಮಾಜಹಿತಕ್ಕಾಗಿ ವಿನಿಯೋಗಿಸಲ್ಪಡಬೇಕು. ಜಪಾನಿನಲ್ಲಿ ನಡೆದಂತೆ, ಧನಾಢ್ಯ ಥಲುಸರು(?) ಈ ಸಮಸ್ಯೆಗೆ ಬೇಕಾಗುವ ದ್ರವ್ಯಸಹಾಯವನ್ನೊದಗಿಸಬೇಕು. ಜಪಾನಿನ ವರ್ತಕಮಂಡಳವು ಪ್ರೌಢವಿದ್ಯಾಕ್ಕಾಗಿ ಬಹಳ ದ್ರವ್ಯಸಹಾಯಮಾಡುತ್ತದೆ. ಆದರೆ ಪ್ರೌಢವಿದ್ಯಾಭ್ಯಾಸವನ್ನು ಸರಿಯಾಗಿ ನಡೆಯಿಸುವುದು ಅದಕ್ಕೆ ಬೇಕಾದ ದ್ರವ್ಯಸಹಾಯಮಾಡುವುದು ಸರಕಾರದ ಮುಖ್ಯ ಕರ್ತವ್ಯವಾಗಿರುತ್ತದೆ. ವಿದ್ಯಾಪ್ರಚಾರವಾಗಿ ಸುಶಿಕ್ಷಿತರ ಸಂಖ್ಯೆ ಹೆಚ್ಚಾದರೆ ಸರಕಾರದ ಇತರ ವ್ಯಯಗಳು—ಆರೋಗ್ಯಖಾತೆ, ಪೋಲೀಸ್ ಖಾತೆ—ಕಡಿಮೆಯಾಗಬಹುದು.

ವಿದ್ಯಾ ಪ್ರಚಾರವು ಯಶಸ್ವಿಯಾಗಿ ನಡೆಯಬೇಕಾದರೆ ಪ್ರಗತಿಯು ದೇಶದ ಒಳಗಿರುವುದೆಂಬ ಭಾವನೆಯಿಂದಲೇ ಅದನ್ನು ನಡೆಯಿಸಬೇಕಾಗಿದೆ. ಗಲ್ಯಾಂಡಲ್ಲಿ ಭಹೀರ್(?) ಭಾಷೆಯಿಂದ ವಿದ್ಯೆಯನ್ನು ಕಲಿಸುವ ಪಿನ್‌ಲೆಂಡು ವಿದ್ಯಾಭ್ಯಾಸವು ಜರಗದಿರುವುದನ್ನು ಕಂಡು ಮಾತೃಭಾಷೆಯನ್ನೇ ವಿದ್ಯಾಭ್ಯಾಸದ ಆಧಿಕಾರ್ಯ(?)ಗಿ ಮಾಡಿ ಬರೇ ೩೦ ವರ್ಷಗಳಲ್ಲಿ ಅಲ್ಲಿನ ಶೇಕಡಾ ೯೦ ಮಂದಿಗಳು ವಿದ್ಯಾವಂತರಾಗುವಂತೆ ಮಾಡಿತು. ಅಂತೆಯೇ ಹಿಂದೂದೇಶದ ವಿದ್ಯಾಭ್ಯಾಸವು ಅನ್ಯಭಾಷೆಯಲ್ಲಿ ನಡೆಯದೆ, ಅಲ್ಲಲ್ಲಿನ ವಿವಿಧ ಪ್ರಾಂತ್ಯಗಳ ಮಾತೃಭಾಷೆಗಳಲ್ಲಿ ನಡೆದರೆ ಅಗ್ಗಿ ವಿಶ್ವವಿದ್ಯಾಲಯಸ್ಥಾಪನೆಯೂ ಸಾರ್ಥಕವಾಗುವುದು. ವಿದ್ಯಾಪ್ರಚಾರವು ಬಹಳ ತ್ವರೆಯಿಂದ ನಡೆಯುವುದು. ಹಿಂದೂದೇಶದ ಸಂಸ್ಕೃತಿಯು ಹೆಚ್ಚುವುದು.

ಈಗ ವಾಡಿಕೆಯಲ್ಲಿರುವ ವಿದ್ಯಾಕ್ರಮದಿಂದ ಯುವಕ ಯುವತಿಯರು ಅವರ ಮುಂದಿನ ಜೀವಮಾನಕ್ಕೆ ಸಹಕಾರಿಯಾಗುವ ವಿದ್ಯಾಭ್ಯಾಸವನ್ನು ಪಡೆಯುವುದಿಲ್ಲ. ಪ್ರೌಢವಿದ್ಯಾಭ್ಯಾಸದ ಕುರಿತು ವಿಶ್ವವಿದ್ಯಾಲಯಗಳು ಬಹಳವಾಗಿ ಶ್ರಮಪಟ್ಟಿರಬಹುದು. ಆದರೆ, ಈಗಿನ ವಿದ್ಯಾಭ್ಯಾಸ ಕ್ರಮವು ಸುಧಾರಣೆಯಾಗಬೇಕಾಗಿದೆ. ಜಾತಿ, ಮತ, ಭೇದ ಇತ್ಯಾದಿಗಳನ್ನು ಹೊರಡಿಸಿಕೊಂಡು, ಒಂದೇ ಉದ್ದೇಶದಿಂದ ವಿದ್ಯಾಭ್ಯಾಸವು ನಡೆಯಬೇಕು. ವಿದ್ಯಾಭ್ಯಾಸವು ಹಾಲೆಂಡು ಇತ್ಯಾದಿ ಪಾಶ್ಚಾತ್ಯದೇಶಗಳಲ್ಲಿ ನಡೆದಂತೆ ಇಲ್ಲಿಯೂ ನಡೆಯಬೇಕು. ಪ್ರೌಢವಿದ್ಯಾಭ್ಯಾಸದ ವಿಚಾರದಲ್ಲಿ ದೇಶದ ಹಲವು ಸಂಸ್ಥೆಗಳು ಕಾರ್ಯಸಬೇಕು. ಈ ತರದ ಸಂಘ ಚಟುವಟಿಕೆಗಳಿಂದ ವಿದ್ಯಾಭ್ಯಾಸವು ಯೋಗ್ಯ ರೀತಿಯಲ್ಲಿ ನಡೆಯುವುದು. ಈ ಎಲ್ಲಾ ಸಂಸ್ಥೆಗಳಿಗೂ ವಿಶ್ವವಿದ್ಯಾಲಯಗಳಿಗೂ ಸರಕಾರದಿಂದ ಯೋಗ್ಯವಾದ ಧನಸಹಾಯವು ದೊರಕಬೇಕು. ಆಗ್ಗ ವಿದ್ಯಾಯೋಜನೆಯೂ ಬಹಳ ಯಶಸ್ವಿಯಾಗಿ ನಡೆಯುವುದು.

ಜಪಾನಿನಲ್ಲಿ ವಿದ್ಯಾಯೋಜನೆಯು ಮೇಲಿನ ರೀತಿಯಲ್ಲಿ ನಡೆಯುತ್ತದೆ ಈ ಕುರಿತು, ಜಪಾನು ಪಾಶ್ಚಾತ್ಯರಿಂದ ಒಂದು ಪಾಠವನ್ನು ಕಲಿತಿದೆ. ಪಾಶ್ಚಾತ್ಯರನ್ನು ಅನುಸರಿಸಿಯೇ ಅವರ ವಿದ್ಯಾಭ್ಯಾಸವು ನಡೆಯುತ್ತದೆ. ಹೀಗೆ ಪ್ರಪಂಚದ ಅನೇಕ ದೇಶಗಳಲ್ಲಿ ವಿದ್ಯಾಭ್ಯಾಸವು ಪುರುಷರಿಗೂ ಸ್ತ್ರೀಯರಿಗೂ ಅವರು ವಿದ್ಯಾವಂತರಾಗು

(೧೩ನೇ ಪುಟಕ್ಕೆ ಮುಂದರಿಯುವದು.)

ಯುದ್ಧ ಪ್ರಕರಣ.

ಯೂರೋಪಿನ ಕಲಹ ನಿವಾರಣೆ ಶಾಂತತೆಯಿಂದಾಗುವುದು.

ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಮಿ॥ ಏಡೆನ್ನರ ಭಾಷಣ.

ಬ್ರಿಟನು ಲೋಕಾರ್ನೋ ಒಪ್ಪಂದವನ್ನು ಮನ್ನಿಸುತ್ತದೆ ಅದನ್ನು ಕಾಪಾಡಲು ಸಿದ್ಧವಿದೆ. ಹಿಂದೆ ವಾರ್ಸಾಲೆ ಸಂಧಿಯ ಸಮಯ ಜರ್ಮನಿಯು ರ್‍ಹೈನ್‌ಲೆಂಡನ್ನು ದಂಡ ಯೋಜನೆಯಿಂದ ಹೊರಗೆ ಮಾಡುವ ಶರ್ತದಿಂದಲೆ, ಫ್ರಾನ್ಸಿನ ಶರ್ತಗಳ ಪ್ರಕಾರ ಜರ್ಮನಿಯಿಂದ ಬಿಂಗಡಿಸಲಿಲ್ಲವಾಗಿತ್ತು ಆಗ್ಯೆ ಜರ್ಮನಿಯು ಈ ಒಪ್ಪಂದಕ್ಕೆ ಒಡಂಬಡಿಕೆ ಕೊಟ್ಟಿತ್ತು.

ಜರ್ಮನಿಗೆ ಲೋಕಾರ್ನೋ ಒಪ್ಪಂದವನ್ನು ಬದಲಾಯಿಸಬೇಕಾಗಿ ಇಚ್ಛೆಯಿದ್ದುದಾದರೆ, ಅವರು ಆ ಕುರಿತು ಒಡಂಬಡಿಕೆ ಮಾತುಗಳನ್ನು ನಡೆಯಿಸಬಹುದಿತ್ತು

ರಷ್ಯಾಕ್ಕೂ ಫ್ರಾನ್ಸಿಗೂ ಸಂಧಿಯು ಲೋಕಾರ್ನೊ ಒಪ್ಪಂದಕ್ಕೆ ವಿರೋಧವಾದುದೆಂದು, ಜರ್ಮನಿಯು ವಾದಿಸುವುದಾದರೆ, ಅದನ್ನು ಇತ್ಯರ್ಥ ಮಾಡಲು, ಒಪ್ಪಂದದ ಶರ್ತಗಳಲ್ಲಿ ಅವಕಾಶಗಳಿವೆ ಹೇಗ್ ಕೋರ್ಟಿನ ನಿರ್ಣಯವು ಅವರಿಗೆ ಯೋಗ್ಯವಲ್ಲವೆಂದು ಕಂಡುಬಂದರೆ, ಯಾವತ್ತು ವಾದಗಳನ್ನು ರಾಜಿಯಲ್ಲಿ ತೀರ್ಮಾನಿಸಲು ಒಂದು ಸಮಿತಿಯನ್ನು ನೇಮಕ ಮಾಡಬಹುದೆಂದು, ಸಂಧಿಯ ಶರ್ತಗಳಲ್ಲಿದೆ

ಜರ್ಮನಿಯ ವರ್ತನೆಯು ನ್ಯಾಯ ಸಮ್ಮತವಾಗಿದ್ದರೂ, ಅದಕ್ಕೆ ಅವರು ಯೋಗ್ಯ ಕಾರಣಗಳನ್ನು ಕೊಡದೆ, ಬಲಾತ್ಕಾರದಿಂದ ವರ್ತಿಸಿದಂತಾಗಿದೆ

ನನ್ನಿಂದಾಗಿ ಬ್ರಿಟಿಷರು ಪ್ರಥಮಬಾರಿಗೆ ವಚನಭ್ರಷ್ಟರಾಗುವುದು ನನ್ನ ಇಚ್ಛೆಯಲ್ಲ

ಶಾಂತತೆಯಿಂದ, ಜರ್ಮನ್ ಪ್ರೆಂಚ ಕಲಹವನ್ನು ನಿವಾರಿಸುವುದು ಬ್ರಿಟಿಷರ ಮುಖ್ಯ ಉದ್ದೇಶ. ಫ್ರಾನ್ಸಿನ ಇಚ್ಛೆಯ ಮೇರೆಗೆ ಜರ್ಮನಿಯ ಕರಾಳ ಶಾಸನಗಳನ್ನು ಹೂಡಿ ಅವರನ್ನು ಬಗ್ಗಿಸುವುದು ನಮ್ಮ ಮತವಲ್ಲ ಒಡಂಬಡಿಕೆಯ ಮಾತುಕತೆಗಳಿಂದ, ಈಗ ಉಂಟಾಗಿರುವ ಬಿರುಕನ್ನು ಸರಿಗೊಳಿಸಬೇಕೆಂದು ನಮ್ಮ ಸಂಕಲ್ಪ

ಅನೇಕ ದಿವಸಗಳ ಆಲೋಚನೆ ನಡೆಯಿಸಿ, ಈಗಿನ ಕಲಹದ ಕುರಿತು, ಸಂಧಾನ ಸೂಚನೆಗಳಿಂದೊಡಗೂಡಿದ ವ್ಹಾಯಿಟ್ ಪೇಪರನ್ನು ಹೊರಡಿಸಿರುತ್ತೇವೆ

ಜರ್ಮನಿಗೆ ಅವು ಒಪ್ಪದಿದ್ದರೆ, ಅವುಗಳ ಬದಲಾಗಿ, ಬೇರೆ ಸೂಚನೆಗಳನ್ನು ಕೊಟ್ಟರೆ, ಅವುಗಳನ್ನು ಆಲೋಚಿಸಲು ನಾವು ಸಿದ್ಧರಿದ್ದೇವೆ ಜರ್ಮನಿಯು ರ್‍ಹೈನ್‌ಲೆಂಡಿನಲ್ಲಿ ಯಾವತ್ತು ತರದ ಭದ್ರತಾ ಏರ್ಪಾಡುಗಳನ್ನು ನಡೆಯಿಸಬಾರದು

ಫ್ರಾನ್ಸು ಮತ್ತು ಬೆಲ್ಜಿಯಮ್ಮಿನ ಮೇಲೆ, ಯಾರಾದರೂ ಯುದ್ಧವೊಡ್ಡದಂತೆ ನೋಡುವುದು ಬ್ರಿಟನಿನ ಮುಖ್ಯ ಕರ್ತವ್ಯ. ವ್ಹಾಯಿಟ್ ಪೇಪರಿನಲ್ಲಿ, ಈ ಜನಾಂಗಗಳ ಮತ್ತು ನಮ್ಮ ಸಂಗ್ರಾಮಾಧಿಕಾರಿಗಳ ಸಭೆ ಸೇರಬೇಕೆಂದು ಸೂಚನೆಯಿರುವುದು ನಿಜ. ಅದು ಯುದ್ಧಸಿದ್ಧತೆಗಾಗಲ್ಲ ಯುದ್ಧಸಂಭವದಲ್ಲಿ ಏನುಮಾಡಬೇಕೆಂಬುದನ್ನು ಆಲೋಚಿಸಲು ಈ ವ್ಹಾಯಿಟ್ ~~ಪೇಪರಿನಿಂದಾಗಿ ಇನ್ನೊಂದು ಮಹಾಯುದ್ಧವು~~ ತಪ್ಪುವುದೆಂದು ನನ್ನ ಊಹನೆ.

ಶಾಂತಿಸ್ಥಾಪನೆಯ ವಿಚಾರದಲ್ಲಿ ಜರ್ಮನಿಯು ನಮ್ಮೊಡನೆ ಸಹಕರಿಸಬೇಕಾಗಿದೆ ಜರ್ಮನಿಯು ಆ ಕುರಿತು ಸಂಪೂರ್ಣ ಭರವಸೆ ಕೊಟ್ಟಿರುತ್ತದೆ

ಜರ್ಮನಿಗೆ ಯಾ ಫ್ರಾನ್ಸಿಗೆ ಪಕ್ಷಪಾತ ತೋರಿಸುವುದು ಬ್ರಿಟನಿನ ಉದ್ದೇಶವಲ್ಲ. ಫ್ರಾನ್ಸು ಉದಾರಭಾವದಿಂದ ನಮ್ಮೊಡನೆ ಸಹಕರಿಸದಿದ್ದರೆ, ಶಾಂತಿಸ್ಥಾಪನೆಯ ಕಾರ್ಯವು ಸಾಧ್ಯವೆ? ಜರ್ಮನಿಯು ಬುದ್ಧಿ ಬದಲಾವಣೆಯಾಗುವಂತೆ, ಅವರಿಗೆ ಯೋಗ್ಯ ಶರ್ತಗಳನ್ನು ಕೊಡಬೇಕಲ್ಲವೆ?

ಪಾರ್ಲಿಮೆಂಟಿನ ಇತರ ಸದಸ್ಯರ ಎಚ್ಚರಿಕೆ

ಬ್ರಿಟನು ಈ ಲೋಕಾರ್ನೊ ಕಲಹದಲ್ಲಿ ಒಂದು ಮುಖ್ಯ ಭಾರವನ್ನು ಹೊರಿಸಿಕೊಂಡಿದೆ. ಹಿಟ್ಲರನು ಯುದ್ಧೋನ್ಮುಖನಾಗಿರುವಾಗ, ಅದಷ್ಟು ಜಾಗ್ರತೆಯಿಂದ ವರ್ತಿಸುವುದು ಬ್ರಿಟಿಷ ಸರಕಾರದ ಕರ್ತವ್ಯವಾಗಿರುತ್ತದೆ. ಸ್ವಲ್ಪ ಹೆಚ್ಚು ಕಡಿಮೆಯಾದರೆ, ಮಿಲಿಯಗಟ್ಟಲೆ ಬ್ರಿಟಿಷರು ಪ್ರಾಣ ಆಹುತಿಯಾಗಬೇಕಾಗುವುದು ಹಿಟ್ಲರನು ೨೫ ವರ್ಷಗಳ ತನಕ ಸುಮ್ಮನಿರುವನೆಂದು ಭರವಸೆ ಕೊಟ್ಟಿರುವನು ನಿಜ ಆದರೆ, ಕೆಲೊಗ್ ಶಾಂತಿ ಒಪ್ಪಂದ ಪ್ರಕಾರ, ಯುದ್ಧ ಕಾರ್ಯವನ್ನು ಜರ್ಮನಿಯು ನಡೆಸಬಾರದೆಂಬ ನಿರ್ಬಂಧಗಳಿವೆ. ಜರ್ಮನಿಯು ಮತ್ತೊಮ್ಮೆ ಜನಾಂಗಮಂಡಲವನ್ನು ಸೇರಲಿಚ್ಛಿಸುವುದು ಕಳೆದುಹೋದ ವಸಾಹತುಗಳನ್ನು ಹಿಂದೆ ಪಡೆಕೊಳ್ಳಲು ಹೀಗೆ ಅನೇಕ ಮುಖ್ಯ ವಿಚಾರಗಳು ಈಗಿನ ಕಲಹದಲ್ಲಿ ಕೂಡಿವೆ ಗೋಳದ ಸ್ಥಿತಿಯು ಮತ್ತೊಮ್ಮೆ ಕಾಣಿಸಿಕೊಳ್ಳುವ ಚಿಹ್ನೆಗಳು ಮೂಡುತ್ತಿವೆ ಜರ್ಮನಿಯು ಸಶಸ್ತ್ರವಾಗುವುದರಿಂದ, ಇತರ ಜನಾಂಗಗಳು ವಿವೇಕದಿಂದ ವರ್ತಿಸಬೇಕು ಜರ್ಮನಿಗೆ ಈ ಒಪ್ಪಂದಗಳಿಂದಾದ ಕುಂದುಕೊರತೆಗಳನ್ನು ತಿಳಕೊಳ್ಳಬೇಕು ಜರ್ಮನಿಯು ಒಪ್ಪಂದಗಳಿಗೆ ಮನ್ನಣೆಕೊಡುವ ಏರ್ಪಾಡುಗಳಾಗಬೇಕು ಜರ್ಮನಿಯ ವರ್ತನೆಯಿಂದ ಇತರ ಜನಾಂಗಗಳಲ್ಲಿ ಅಪನಂಬಿಗೆಯುಂಟಾಗಿರುತ್ತದೆ ಇವೆಲ್ಲಾ ಸಂಘಟನೆಗಳನ್ನು ಪರಿಶೀಲಿಸಿ, ಮುಂದಿನ ಕಾರ್ಯವು ನಡೆಯಬೇಕಾಗಿದೆ

ಸೆಕೆಕಾಲದಲ್ಲಾಗುವ ಗಂಟಲುನೋವನ್ನು

ನೀಗಿಕೊಳ್ಳಿರಿ.



ಬೇಸಗೆ ಕಾಲದಲ್ಲಿ ಸಾವಿರಗಟ್ಟಲೆ ಜನರಿಗೆ ಗಂಟಲುನೋವು ಪ್ರಾರಂಭವಾಗುವುದು ವಿಷಾಣುಪೂರಿತ ಧೂಳು ಗಂಟಲೊಳಗೆ ಸೇರುವುದರಿಂದ ಈ ನೋವು ಉಂಟಾಗುವುದು ಇದರಿಂದಾಗಿ ಗಂಟಲು ಒಣಗುವುದು, ನೋವು ಪ್ರಾರಂಭವಾಗುವುದು ಗಂಟಲುಗಳಲ್ಲಿ ಗಳ್ಳೆಗಳು ಏಳುವುದು ಇವೆಲ್ಲವೂ ಸಂಭವಿಸುವುವು ಆದುದರಿಂದ ಬೇಸಿಗೆ ಕಾಲದಲ್ಲಿ ಪ್ರತಿಯೊಬ್ಬನು ಬಹಳ ಜಾಗ್ರತೆಯಿಂದಿರಬೇಕಾಗಿದೆ. ನಿಮಗೆ ಸ್ವಲ್ಪ ನೋವು ಉಂಟಾದ ಕೂಡಲೆ ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ ಪೆಪ್ಸ್ ಗುಳಿಗೆಗಳು ಬಾಯಿಯಲ್ಲಿ ಕರಗಿದಾಕ್ಷಣ ಅದರಿಂದ ಸ್ವಾದಿಷ್ಟಯುಕ್ತ ಹೊಗೆಯು ಹೊರಡುವುದು. ಅದರ ಸುವಾಸನೆಯು ಗಂಟಲುಗಳಲ್ಲೂ ಶ್ವಾಸಕೋಶಗಳಲ್ಲೂ ಹರಡಿ ವಿಷಾಣುಗಳನ್ನು ನಾಶಪಡಿಸಿ, ನಿಮಗೆ ಸುಖವನ್ನೀಯುವುದು ಗಾರ್ಗಲ್ಸ್‌ಗಳಿಗಿಂತಲೂ, ಪೆಪ್ಸ್ ಗುಳಿಗೆಗಳು ಉತ್ತಮವಾದುವು ಗುಳಿಗೆಗಳಲ್ಲಿರುವ ಎಣ್ಣೆಯ ಪಸೆಯು ಆರಿ ಹೋಗದಂತೆ ಅವುಗಳನ್ನು ಅಂದವಾದ ಬೆಳ್ಳಿಯ ಕಾಗದದಲ್ಲಿ ಮಡಗಿವೆ. ಒಮ್ಮೆ ಪರೀಕ್ಷಿಸಿರಿ.

ಎಲ್ಲಾ ಔಷಧಿಯ ಅಂಗಡಿಗಳಲ್ಲೂ ಸೀಸೆಯೊಂದಕ್ಕೆ ರೂ 1.

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್ PEPS

ಏಡೆನ್ನರ ಭಾಷಣದ ಕುರಿತು ಜರ್ಮನಿಯ ಅಭಿಪ್ರಾಯ

ರ್‍ಹೈನ್‌ಲೆಂಡಿನಲ್ಲಿ ಭದ್ರತಾ ಏರ್ಪಾಡುಗಳು ನಡೆಸಬಾರದೆಂಬ ಏಡೆನ್ನರ ಮಾತು ಜರ್ಮನಿಗೆ ಒಪ್ಪುವುದಿಲ್ಲ "ಒಪ್ಪಂದಗಳು ನ್ಯಾಯವಾದುವುಗಳೆಂದ ನಮಗೆ ಕಂಡರೆ ಮಾತ್ರ ನಾವು ಅವುಗಳನ್ನು ಮನ್ನಿಸುವೆವು ಇತರರ ಇತ್ಯರ್ಥದ ಪ್ರಕಾರ ವರ್ತಿಸಲು ನಾವು ಸಿದ್ಧರಿಲ್ಲ" ಜರ್ಮನಿಯು ಈಗ ಉಂಟಾದ ಬಿರುಕನ್ನು ಸರಿಪಡಿಸುವ ಕಾರ್ಯದಲ್ಲಿ, ಸಹಕಾರಿಯಾಗಬೇಕೆಂದು, ಬ್ರಿಟಿಷ ಮುಖ್ಯಮಂತ್ರಿಗಳು ಜರ್ಮನಿ ಪ್ರತಿನಿಧಿಗಳೊಡನೆ ಸಂಭಾಷಣೆಯ ಭಾಷಣದಲ್ಲಿ ವಿನಂತಿಸಿದ್ದಾರೆ ಬ್ರಿಟಿಷರ ಲೋಕಾರ್ನೊ ಒಪ್ಪಂದ ಕುರಿತು ವರ್ತನೆಯು ಶ್ಲಾಘನೀಯವಾಗಿದೆಂದ ಅನೇಕ ಜನಾಂಗಗಳ ಅಭಿಪ್ರಾಯ.

(ಇನ್ನೇ ಪುಟಕ್ಕೆ ಮುಂದುವರಿದುದು)

ಗೊಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊಡ್ರೆಜ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿ ರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದ ಒಬ್ಬ ಡಾಕ್ಟರರ ಕಾಂಡಾದಿದನ್ನು ಕೇಳಿ ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನಗಳನ್ನು ಆಮದು ಮಾಡಲಾಪಕ್ರಮಿಸಿದರು.

ಗೊಡ್ರೆಜ್

ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ ಒಫ್ ಕೊಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸ್‌ಪೆರಿಮೆಂಟಲ್ ಕೆಮಿಸ್ಟ್ರಿ ಮೈಕೊಸ್ಕೋಪಿ ಎಂಡ್ ಬೆಕ್ಟೀರಿಯೋಲೊಜಿ ಇವಕ್ಕೂ ರಸಾಯನಶಾಸ್ತ್ರಜ್ಞರಾಗಿದ್ದ

ಡಾ॥ ಬಿಫ್ರೆಚ್ಟ್ ಎಂಬವರು:—"ನಾನು ಗೊಡ್ರೆಜ್ ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ್ನ ಅಭಿಪ್ರಾಯದಂತೆ ಅವುಗಳು ಸ್ಟೆಪ್ಟೊಕೊಕಸ್ ಮತ್ತು ಸ್ಟೆಫಿಲೊಕಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯುಳ್ಳದ್ದು ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ಸ್ ಎಂಬವರು.—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳ ಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್‌ಸನ್‌ರವರು:—"ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಪ್ರಮಾಣಕವಿದೆ" ಎಂದರು.

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

ಡಾ॥ ಎಂ ಎ. ಅನ್ಸಾರಿ, ಎಂ. ಡಿ ಎಂ ಎಸ್ ರವರು:—"ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ~~ಅತ್ಯಾನಂದವಾಗುತ್ತದೆ. ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯೂರೋಪಿನಲ್ಲಾಗಲೀ ಇತರ~~ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು.

ಫೆಕ್ಟರಿ:—**ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ.

ಸೋಲ್ ಏಜಂಟರು:—**ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

ಒಟ್ಟೋಮನ್ ಬಿಲ್ಲು ನಿಷೇಧಿಸಲ್ಪಟ್ಟಿತು!

ವಿಚಿತ್ರ ಶಿಶುಗಳು.

...ಶಾಬಾನಿಕ ಕೊಡಂಬೂರು ಎಂಬಲ್ಲಿ ಗೌಡರ ಜಾತಿಯ ಹೆಣ್ಣೊಬ್ಬಳು ... ಎಂಬವಳು ಕಳೆದ ತಾ. ೩೧ನೇ ದಿನ ಐದಾರು ಅಂಗುಲ ಉದ್ದವಾಗಿದ್ದು ಸೊಂಟದಿಂದ ಎರಡು ಶಿಶುಗಳನ್ನು ಹೆತ್ತು ಸೊಂಟದಿಂದ ಬಳಿಯುತ್ತ ತಿರಗಿ ಸಶಕ್ತವಾದ ಬಲಿಕ ಪಡೆದ ಗಂಡು ಶಿಶುವನ್ನು ಹೆತ್ತಳು. ಮೆಸರ್ಸ್ ಕೊಟ್ಟಾರಿ ಬ್ರಧರ್ಸ್‌ನ ಪೈಕಿ ಶ್ರೀ ಕೆ. ನರಸಿಂಹ ಪೈ, ಬೊಂಬಾಯಿ ಪ್ಯಾಸಿಫಿಕ್ ಟ್ರೇಡಿಂಗ್ ಕಂಪೆನಿ ಇವರು ಆ ಪ್ರಾಂತ್ಯದಲ್ಲಿ ಕಾರ್ಯನಿಮಿತ್ತವಾಗಿ ಪ್ರವಾಸ ಮಾಡುತ್ತಿದ್ದವರು ಅಂದು ಅಲ್ಲಿಂದ ಹಾದುಹೋಗುವಾಗ ಈ ಸುದ್ದಿಯನ್ನು ತಿಳಿದವರಾದರು. ಸ್ಥಳೀಯ ವೈದ್ಯರಾದ ಎಂ ಎಚ್. ನಾಯಕರು ಹೆಂಗೆಯಲ್ಲಿ ಸಹಾಯಕರಾಗಿದ್ದರು. ಅವರ ಪ್ರಯತ್ನದಿಂದಾಗಿ ಶ್ರೀ ಪೈಯವರು ಸದ್ರಿ ವಿಚಿತ್ರವಾದ ಶಿಶುಗಳನ್ನು ಪಡೆದು, ಊರಿಗೆ ಮರಳುವಾಗ ತಂದು, ಸದ್ಯ ಅವುಗಳನ್ನು ಕೆನರಾ ಹೈಸ್ಕೂಲಿನ ಮ್ಯೂಝಿಯಮಿಗೆ ಕೊಟ್ಟಿರುತ್ತಾರೆ. ಬಾಣಂತಿಯೂ ಮೂರನೇ ಮಗುವೂ ಕ್ಷೇಮವಾಗಿರುವರು.

ತಾಲೂಕುಗಳಿಂದ

(೧೧ನೇ ಪುಟದಿಂದ ಮುಂದುವರಿದುದು)

ವ್ಯಂಕ ಗುರುಗಳಾದ ಶ್ರೀ ಸಂಸ್ಥಾನ ಕಾಶೀ ಮಠಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರಿಂದ ನೆರವೇರಿಸಲಾಗುವುದು.

ಪ್ರತಿಷ್ಠಾ ಕಾರ್ಯಕ್ರಮ:— ತಾರೀಕು ೨೨–೪–೪೩ ವೈಶಾಖ ಶು ೧ ಬುಧವಾರ ದಿನ ಮುಹೂರ್ತ, ರಕ್ಷೋಘ್ನ ಭೂಶುದ್ಧಿ. ತಾ ೨೩–೪–೪೩ ವೈಶಾಖ ಶು ೨ ಗುರುವಾರ ಪ್ರಾಕಾರ ಶುದ್ಧಿ, ಮಂಟಪ ಶುದ್ಧಿ ಅಂಕುರಾರ್ಪಣ, ವಾಸ್ತುಪೂಜಾ ಸರ್ವತೋಭದ್ರ ಹೋಮ, ಧ್ವಜಾರೋಹಣ, ಅಧಿವಾಸ, ಸಂತರ್ಪಣೆ. ತಾ. ೨೪–೪–೪೩ ವೈಶಾಖ ಶು ೩ ಶುಕ್ರವಾರ ನವ ಗ್ರಹ ಪೂಜಾ, ಹೋಮ ನರಶೀಲದ ಪ್ರತಿಷ್ಠಾ. ತಾ ೨೫–೪–೪೩ ವೈಶಾಖ ಶು ೪ ಶನಿವಾರ ಅಷ್ಟೋತ್ತರ ಮಹಾಮಂತ್ರ ಹೋಮ ತಾ ೨೬–೪–೪೩ ವೈಶಾಖ ಶು ೫ ರವಿವಾರ ಮಹಾಮಂತ್ರ ಹೋಮ ಸುದರ್ಶನ ಹೋಮ ಸಾನ್ನಿಧ್ಯ ಹೋಮ, ಪೂರ್ಣಕಲಾ ಸಾನ್ನಿಧ್ಯ ಹೋಮ, ಬಲಿ ತಾ ೨೭–೪–೪೩ ವೈಶಾಖ ಶು ೬ ಸೋಮವಾರ ಪಂಚಾಮೃತಾಭಿಷೇಕ, ಕ್ಷೀರಕಲಶಾಭಿಷೇಕ, ಕನಕಾಭಿಷೇಕ, ಬ್ರಹ್ಮ ಕುಂಭಾಭಿಷೇಕ, ಪೂರ್ಣಹೋಮ, ಕೃಷ್ಣಾರ್ಪಣ, ಸಹಸ್ರಭೋಜನ ತಾ. ೨೮–೪–೪೩ ವೈಶಾಖ ಶು ೭ ಮಂಗಳವಾರ ಅವಭೃತ ಮಂಗಳಸ್ನಾನ ಬ್ರಾಹ್ಮಣ ಸಂತರ್ಪಣೆ, ಶ್ರೀಗುರುಪಾದ ಪೂಜಾ, ದಾನ ಹೋಮಾದಿ ಭೂರಿದಕ್ಷಿಣೆ ಬ್ರಹ್ಮವೃಂದಾಶೀರ್ವಚನ ಫಲ ಮಂತ್ರಾಕ್ಷತ ಸಹಿತ ಶ್ರೀ ದೇವರ ಗಂಧಪ್ರಸಾದ ಸ್ವೀಕಾರ ಸ್ವಸ್ತಿ.

ಪಾಣೆಮಂಗಳೂರು— ಇಲ್ಲಿಯ ಎಸ್ ವಿ ಎಸ್ ಹಾಯರ್ ಎಲಿಮೆಂಟರಿ ಶಾಲೆಯ ೬ನೇ ದರ್ಜೆಗೆ ಪರ್ಮನೆಂಟ್ ರಿಕಗ್ನೀಶನ್ ಕೊಡಲಾಗಿದೆ.

ಫರಂಗಿಪೇಟೆ,

ಸ್ಥಳೀಯ ಶ್ರೀರಾಮ ಹಾಯರ್ ಎಲಿಮೆಂಟರಿ ಶಾಲೆಯ ಚತುರ್ವಿಂಶತ್ಯೆಯ ವರ್ಧಂತಿ ಉತ್ಸವವು ಕಳೆದ ಮಾರ್ಚ ತಾ ೩೧ನೇ ಮಂಗಳವಾರ ಶ್ರೀರಾಮ ನವಮಿ ದಿನ ಡಿಸ್ಟ್ರಿಕ್ಟ್ ಬೋರ್ಡು ಎಜ್ಯುಕೇಶನಲ್ ಆಫೀಸರರಾದ ರಾ॥ ಶ್ರೀ ಕೆ ಸಂಜೀವ ಭಟ್ ಎಮ್ ಎ ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಶಾಲಾ ಚಪ್ಪರವು ಸುಮನೋಹರವಾಗಿ ಅಲಂಕರಿಸಲ್ಪಟ್ಟಿತ್ತು. ಬಂದ ಅತಿಥಿ ಅಭ್ಯಾಗತರಿಗೆ ಯೋಗ್ಯವಾದ ಸತ್ಕಾರವು ನಡೆದಿತ್ತು. ಸದ್ರಿ ಶಾಲೆಯ ಹಿತವನ್ನು ಬಯಸಿದ ಶ್ರೀ ಆರ್ ಎಸ್ ಅಂಬಲಕೋಡಿಯವರ ಭಾಷಣವು ಹೃದಯಂಗಮವಾಗಿತ್ತು. ಅನಂತರ ಶಾಲಾ ವರದಿ ವಾಚನ, ಅನಂತರ ಪಂಡಿತರ ಹಿತ್ಯೆಷಿಗಳ ಭಾಷಣ (ಶ್ರೀ ಪಿ. ರಾಮರಾವ್, ಮಹೋಪಾಧ್ಯಾಯ, ಕಲ್ಲಡ್ಕ, ಬೋರ್ಡು ಹಾಯರ್ ಎಲಿಮೆಂಟರಿ ಶಾಲೆ ಮತ್ತು ಜನಾಬ್ ಎಫ್ ಎಚ್ ಒಡೆಯರವರಿಂದ) ಬಳಿಕ ಅಧ್ಯಕ್ಷರು ತಕ್ಕ ಸರಸವಾದ ನುಡಿಗಳಿಂದ ಶಾಲೆಯು ದಿನೇ ದಿನೇ ಹೊಂದುತ್ತಿದ್ದ ಪ್ರಗತಿಯ ವಿಷಯವನ್ನು ತಿಳಿಸಿದರು. ನೆರೆದ ಸಭೆಯವರಿಗೆ ಹೊಸತು ಅಂತಹ ಅಮೋಘ ವಿಷಯಗಳಿಗೆ ಊರ ಪರವೂರ ಮಹನೀಯರು ಒಮ್ಮನಸ್ಸಿನಿಂದ ಸಹಾಯವನ್ನು ಮಾಡಬೇಕೆಂದೂ ಹಾಗೆ ಮಾಡದೆ ಇದ್ದರೆ ಇಂತಹ ಆರ್ಥಿಕ ದುಸ್ಥಿತಿಯ ಸಮಯದಲ್ಲಿ ಶಾಲೆಗಳ ಪ್ರಗತಿಗೆ ತೊಡಕುಂಟಾಗುತ್ತದೆಂದು, ಹೇಳಿ ಶಾಲಾ ಶ್ರೇಯಸ್ಸನ್ನು ಬಯಸಿ ತಮ್ಮ ಭಾಷಣವನ್ನು ಕೊನೆಗಾಣಿಸಿದರು. ಅನಂತರ ಶಾಲಾ ವಿದ್ಯಾರ್ಥಿಗಳು ಪಂಡಿತ ಕಲ್ಲಡ್ಕದ ಪ್ರಸಿದ್ಧ ಗ್ರಂಥಕರ್ತರಾದ ರಾ॥ ಶ್ರೀ ಎಸ್ ... ರಾವ್ ... ಇವರಿಂದ ರಚಿತವಾದ ... ಕ್ರೋಡ ಎಂಬ ನಾಟಕವನ್ನು ಚಿತ್ತಾಕರ್ಷಕವಾಗಿ ಅಭಿನಯಿಸಿ ತೋರಿಸಿದರು.

ವಾರ್ತಾವಾಹಿನಿ.

ಬೆಳಗಾವಿಯ ಒಂದು ಗುಡ್ಡೆಯಲ್ಲಿ ಅಶೋಕನ ಕಾಲದ ಒಂದು ಶಿಲಾಶಾಸನವು ದೊರೆತಿರುತ್ತದೆ. ಈ ಶಾಸನದ ಮುಂದಿರವನ್ನು ಅಶೋಕನ ಪತ್ನಿಯು ಕಟ್ಟಿಸಿದಂತೆ, ಅಗೆಯುವ ಕೆಲಸವನ್ನು ಮುಂದುವರಿಸಿರುತ್ತಾರೆ.

೧೯೩೯ರಿಂದ ತಪ್ಪಿಸಿಕೊಂಡ ಮೋಸ ಮತ್ತು ಮಂದುಗಾರಿಕೆಯಿಂದ ರೂ. ೬೩೦೦ ಹೊಡೆದು ಅಪಾದನೆಗೆ ಒಳಗಾದ ವರದರಾಜು ನಾಯುಡು ಎಂಬವನನ್ನು ಮದ್ರಾಸಿನಲ್ಲಿ ಹಿಡಿದಿರುವರು.

ಮದ್ರಾಸಿನ ಇಂಪೀರಿಯಲ್ ಬೇಂಕಿನಲ್ಲಿ ಗುಮಾಸ್ತರಾದ್ದ ರಂಗಯ್ಯ ಚೆಟ್ಟಿ ಎಂಬವನು ಉಬ್ಬಸ ರೋಗದ ಬಾಧೆಯನ್ನು ತಡೆಯಲಾರದೆ ಬೇಂಕಿನ ಟಿಪಿನ್ ಕೋಣೆಯಲ್ಲಿ ಪ್ರಾಣತ್ಯಾಗ ಮಾಡಿಕೊಳ್ಳಲು ಬಾಕಿನಿಂದ ಕುತ್ತಿಗೆಯನ್ನು ಕೊಯ್ದುಕೊಂಡು, ಕೆಲದಿವಸ ಆಸ್ಪತ್ರೆಯಲ್ಲಿದ್ದು ನಂತರ ಮೃತನಾದನು.

ತಿರುಚಿನಾಪಳ್ಳಿಯ ಹತ್ತಿರ ಒಂದು ಮೋಟಾರು ಕಾರು ಹೊಂಡಕ್ಕೆ ಬಿದ್ದು ಒಬ್ಬ ಮುದುಕನು ಮೃತನಾದನು. ಇತರ ಮೂರು ಜನರಿಗೆ ಭಯಂಕರ ಗಾಯ ಆಗಿರುತ್ತದೆ.

ಕಾಂಗ್ರೆಸ್ ಅಧ್ಯಕ್ಷರಾದ ಬಾಬೂರಾಜೇಂದ್ರ ಪ್ರಸಾದರು ಲಾಹೋರಿಗೆ ತೆರಳಿ, ಅಲ್ಲಿ ಎರಡು ದಿವಸಗಳಿದ್ದು ತಾ ೪ರಲ್ಲು ಸರದಾರ್ ಪಟೇಲರನ್ನು ಕಾಣಲು ಡಿಲ್ಲಿಗೆ ಬಂದು ಅಲ್ಲಿಂದ ವಾರ್ಧಾಕ್ಕೆ ಪ್ರಯಾಣ ಬೆಳೆಸಿ ಬೇಗನೇ ಅಲ್ಲಹಾಬಾದಿಗೆ ಬರುವರಾಗಿ ತಿಳಿದುಬರುತ್ತದೆ.

ಕಾಶಿ ಪಟ್ಟಣದಲ್ಲಿ ನಡೆದ ಆದುಗಳನ್ನು ಒಂದು ದೇವಾಲಯದಲ್ಲಿ ಆಯುಕ್ತಮೂರ್ತಿವರಿಂದ ಕೆಲವು ಸ್ವಯಂಸೇವಕರು ರಕ್ಷಿಸಿರುವರು. ಸ್ವಯಂಸೇವಕರೂ ಅನೇಕ ಸನ್ಯಾಸಿಗಳೂ ಪಂಡಿತರೂ ಸಹಕರಿಸಿದ್ದರು. ರಾಮನವಮಿ ದಿನದಲ್ಲಿ ಪ್ರಾಣಿಬಲಿ ಯಾಗದಂತೆ ವಿಶೇಷ ತರದ ಪ್ರಚಾರ ಕಾರ್ಯವು ನಡೆಯುತ್ತದೆ.

ಬಿಹಾರ ಪ್ರಾಂತ್ಯದ ಕಲ್ಲಿದ್ದಲಿನ ಗಣಿಗಳಲ್ಲಿ ಅನೇಕ ಬೆಂಕಿಗಳು ಉಂಟಾದುದರಿಂದ ಆ ಸ್ಥಳವನ್ನು ಕಾಯಲು ಬಿಹಾರ ಸರಕಾರವು ಪೋಲೀಸ್ ಸಿಬ್ಬಂದಿಯನ್ನು ಇಟ್ಟಿರುತ್ತದೆ.

ಮಹಾತ್ಮಾಜೀಯವರಿಗೆ ಕೇಸ್ ... ಇವರಿಂದ ನವವ್ಯವಸಾಯರೊಡನೆ ನವರಾಜ ಶಾಸನ ಮತ್ತು ಚರ್ಕ ... ಅವರ ಸಂದರ್ಶನದ ೬-ತಿಂಗಳ ಚರ್ಚೆ ನಡೆಸಲು ಭೇಟಿಯಾಗಬೇಕೆಂಬ ಪತ್ರಬಂದುದು ಸುಳ್ಳೆಂದು, ಇಂಡಿಯಾ ಸರಕಾರದ ಮತ್ತು ಮಹಾತ್ಮಾಜಿಯವರ ಪ್ರತಿನಿಧಿಗಳಾಗಿವೆ.

ಪಂಡಿತ ಜವಾಹರಲಾಲರು ಎಪ್ರಿಲ್ ೯ನೇ ತಾ. ಆರಲ್ಲಿ ಲಕ್ನೋಗೆ ತೆರಳುವರು. ಅಧ್ಯಕ್ಷರೊಳಗೆ ಅಲ್ಲಹಾಬಾದಿನಲ್ಲಿ ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಅಧಿವೇಶನದಲ್ಲಿ ಆಯಾ ವಿಚಾರದಲ್ಲಿ ಯಾವದೊಂದು ತೀರ್ಮಾನಕ್ಕೆ ಬಾರದಿದ್ದರೆ ಕಾರ್ಯಕಾರಿ ಮಂಡಳಿಯ ಸಭೆಯು ಲಕ್ನೋದಲ್ಲಿ ಮುಂದುವರಿಸಲಾಗುವುದು.

ಊರಿಂದ ಊರಿಗೆ ಸಂಚರಿಸುವ ಕನ್ನಡ ಚಿತ್ರಾಲಯವೊಂದು ಕಲ್ಕತ್ತಾದಿಂದ ಬಂಗಾಳದ ಪ್ರಯಾಣಕ್ಕೆ ಹೊರಟಿರುತ್ತದೆ. ಅಲ್ಲಲ್ಲಿ ಸಂಚರಿಸಿ, ಕನ್ನಡ ಚಿತ್ರಗಳ ನಡೆಯಲ್ಪಡುವುದಲ್ಲದೆ ಕನ್ನಡ ಜಾಗ್ರತಿ ವಿಷಯಗಳಲ್ಲಿ ಜ್ಞಾನಬರುವಂತೆ ಪ್ರಚಾರಕಾರ್ಯವನ್ನು ನಡೆಸುವರು. ಈ ತರದ ಯೋಜನೆಯು ಹೊರಟದುದು ಹಿಂದುಸ್ಥಾನದಲ್ಲಿ ಇದೇ ಪ್ರಥಮ ಬಾರಿಯಾಗಿರುತ್ತದೆ.

ಹಿಂದುಮಹಾಸಭೆಯ ಸಾಂಪ್ರತಿಕ ಸುಧಾರಣೆಯ ಕುರಿತು ಕಾರ್ಯಕ್ರಮವನ್ನು ರಚಿಸಲು ... ಭಾರತ ಮಹಾಸಭಾ ಪರಿಷತ್ತು ತಾ. ೨೩ನೇ ತಾರಿಖಿನಲ್ಲಿ ಜರಗಿತು.

ಎಸೆಂಬ್ಲಿಯಲ್ಲಿ ಒಟ್ಟೋಮನ ಕರಾರಿನ ಕುರಿತು ಚರ್ಚೆ ಪ್ರಾರಂಭವಾಗಿರುತ್ತದೆ. ಸರಕಾರದ ಸದಸ್ಯರು ಇದರ ಅಗತ್ಯವನ್ನು ಸೂಚಿಸಿ ಭಾಷಣ ಮಾಡಿರುವರು. ವಿರೋಧ ಪಕ್ಷದವರು ಇದನ್ನು ಖಂಡಿಸಿ ಭಾಷಣ ಮಾಡಿರುವರು. ಚರ್ಚೆಯು ಮುಂದುವರಿಯುತ್ತದೆ.

ಆಕ್ಸ್‌ಫೋರ್ಡಿಗೆ ತನ್ನ ನವೀನ ಹುದ್ದೆಯನ್ನು ವಹಿಸಲು ಹೋಗಲಿರುವ ಶ್ರೀ ಪ್ರೊ. ರಾಧಾಕೃಷ್ಣನ್‌ರವರನ್ನು ಬೀಳ್ಕೊಡುವ ಸಮಾರಂಭವು ಆಂಧ್ರ ಯುನಿವರ್ಸಿಟಿಯ ಕೇಂದ್ರ ಸ್ಥಳವಾಗಿರುವ ವಿಶಾಖ ಪಟ್ಟಣದಲ್ಲಿ ... ರಾಧಾಕೃಷ್ಣನರು ಪ್ರವೇಶ ...

ಜ್ಞಾನಿಗಳಿಂದ ಇವರನ್ನು ಶ್ಲಾಘಿಸಿ ಅನೇಕ ಭಾಷಣಗಳಾದುವು.

ನವ ಡಿಲ್ಲಿಗೆ ತೆರಳಿದ ತಿರುವಾಂಕೂರಿನ ಮಹಾರಾಜರನ್ನು ಡಿಲ್ಲಿಯ ಮುಖ್ಯಸ್ಥರುಗಳು ಸತ್ಕರಿಸಿದ್ದರು. ರೆಂಡು ಮಹಾರಾಜರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಮಹಾರಾಜರು ಅದನ್ನು ಉತ್ತರಿಸಿ ಯೋಗ್ಯ ಭಾಷಣ ಮಾಡಿದರು.

ಪ್ರಪಂಚದ ಎಲ್ಲಾ ನದಿಗಳ ಅರಣ್ಯಗಳನ್ನು ಪರಿಶೋಧಿಸಿ, ಕಾಡುಪ್ರಾಣಿಗಳನ್ನು ಕಂಡುಹಿಡಿಯಲು ಉತ್ಸಾಹಿಗಳಾದ ಕೆಲವು ಭಾರತೀಯರ ಕೂಟವೊಂದು ಧೈರ್ಯದ ತಕ್ಕೆ ಹೊರಡುವುದೆಂದು, ಇವರೊಡನೆ ಒಬ್ಬ ಛಾಯಾಚಿತ್ರಕಾರ ಹೋಗುವರೆಂದೂ ತಿಳಿದುಬರುತ್ತದೆ.

ಕಳೆದ ವಾರ ಮುಂಬಯಿಯಿಂದ ರೂ ೭,೬೪ ಲಕ್ಷ ಮೌಲ್ಯದ ಭಂಗಾರವು ಯುರೋಪು ಖಂಡಕ್ಕೂ ಅಮೇರಿಕಾಕ್ಕೂ ರಫ್ತಾಗಿರುತ್ತದೆ.

ಬೆಂಗಳೂರಿನ ಟಾಟಾ ವಿಜ್ಞಾನಸಂಸ್ಥೆಯನ್ನು ಸಂದರ್ಶಿಸಲು ಬಂದ ಪ್ರಸಿದ್ಧ ಆಂಗ್ಲೇಯ ವಿಜ್ಞಾನಿಗಳಾದ ಸರ್ ಜೇಮ್ಸ್ ಜೀನ್ಸ್‌ರು, ಹಿಂದುಸ್ಥಾನದಲ್ಲಿ ವಿಜ್ಞಾನಕ್ಕೆ ಒಳ್ಳೇ ಭವಿಷ್ಯವಿದೆಯೆಂದು ಅಭಿಪ್ರಾಯಪಟ್ಟಿರುವರು.

ಮೈಸೂರಿನ ವೃದ್ಧ ಪಿತಾಮಹರಾದ ಶ್ರೀ ಸರ್ ಪುಟ್ಟಣ್ಣ ಚೆಟ್ಟಿ

ಇವರಿಗೆ ತಾ ೨೫ ೩–೧೯೩೩ನೇ ದಿನ ಶ್ರೀ ಮೈಸೂರು ರಾಜರು "ಡಾಕ್ಟರ್ ಆಫ್ ಲಾಸ್" ಎಂಬ ಮೈಸೂರು ವಿಶ್ವ ವಿದ್ಯಾನಿಲಯದ ಗೌರವ ಬಿರುದನ್ನು ಕೃಪೆಮಾಡಿದರು.

ಆಸೆಂಬ್ಲಿಯು ತಿರಸ್ಕರಿಸಿದ ಫೈನಾನ್ಸು ಬಿಲ್ಲು ಚರ್ಚೆಗಾಗಿ ಕೌನ್ಸಿಲ್ ಆಫ್ ಸ್ಟೇಟಿಗೆ ಹೋಗಿರುತ್ತದೆ. ಅಂಚೆಕಾರ್ಡಿನ ಧರವನ್ನು ಅರ್ಧಾಣೆಗೆ ಇಳಿಸುವುದು ಉಪ್ಪಿನ ತೆರಿಗೆಯಲ್ಲಿ ಎರಡಾಣೆ ಕಡಿಮೆಮಾಡುವುದು, ಕೆಲವು ಸದಸ್ಯರ ತಲೆಯಲ್ಲಿದ್ದರೂ ಅದು ಓಟಿನ ಬಲದಿಂದ ಖಂಡಿಸಲಾಗುವುದೆಂದು ತಿಳಿದುಬರುತ್ತದೆ.

ಡಿಲ್ಲಿಯಲ್ಲಿ ದೇಹಾಲಸ್ಯ ಹೊಂದಿದ ಸರದಾರ ಪಟೇಲರು ಗುಣಹೊಂದಿರುವರು. ದ್ವರವು ಸಂಪೂರ್ಣವಾಗಿ ಇಳಿದಿರುತ್ತದೆ. ಸಿಕ್ಕಾಗ ಸ್ವಲ್ಪವಿದೆ. ಸಂಪೂರ್ಣ ಗುಣಹೊಂದಲು ಇನ್ನೂ ಸ್ವಲ್ಪ ಸಮಯ ತಗಲಬಹುದು.

ಅಬಿಸಿ ರಣರಂಗದ ಹರಾರಿನಲ್ಲಿ ನಡೆದ ಬಾಂಬಿನ ಧಾಳಿಯಲ್ಲಿ ೩೦೦ ಬಾಂಬುಗಳು ಉಪಯೋಗವಾಗಿವೆ. ಅವುಗಳಲ್ಲಿ ೫೦ ಈಜಿಪ್ಶಿಯನ್ ರೆಡ್‌ಕ್ರಾಸ್ ಆಸ್ಪತ್ರೆಯ ಮೇಲೆ ಬಿದ್ದಿರುತ್ತದೆಂದು ಅಡಿಸ್ ಅಬಾಬಿನಿಂದ ವಾರ್ತೆ.

ಎಥಿಯೋಪಿಯಾದ ಎಂಡಾಮೋಟಾ ಮತ್ತು ಅಂಬಾ ಅಲಾಗಿ ಎಂಬಲ್ಲಿ ಇಟಾಲಿಯನರು ವಿಷಕರ ಗೇಸಿನ ಬಾಂಬುಗಳನ್ನು ಉಪಯೋಗಿಸಿರುವರು. ಈ ಸ್ಥಳದಲ್ಲಿ ಒಂದು ಇಟಾಲಿಯನ ವಿಮಾನವನ್ನು ಅಬಿಸಿಗಳು ಕೆಳಗೆ ತಂದಿರುವರು.

ಹರಾರಿನಲ್ಲಿ ನಡೆದ ಬಾಂಬಿನ ಹಾವಳಿಯಿಂದ ಅಲ್ಲಿನ ನಿವಾಸಿಗಳು ಹತಾಶರಾಗಿ, ಅಲ್ಲಿ ನಿಲಿಯಾಗಿರುವ ಬ್ರಿಟಿಷ್ ಕೌನ್ಸಲರ ಮೇಲೆ ದಾಳಿಗೆ ಬರುವರಾಗಿ ಎಚ್ಚರಿಕೆ ಕೊಟ್ಟಿರುವರು. ಆದುದರಿಂದ ನಿವಾಸಿಗಳು ಬೇಗನೆ ನಗರವನ್ನು ತ್ಯಜಿಸುವ ವ್ಯವಸ್ಥೆ ಮಾಡಲಾಗಿದೆ.

ಎಸೆಂಬ್ಲಿಯಲ್ಲಿ ವೈಸರಾಯರ ಭಾಷಣವು ಎಪ್ರಿಲ ತಾ ಆರಲ್ಲಿ ಕೊಡಲಾಗುವುದು. ಮೊನ್ನೆ ಮುಂದುವರಿದ ಆಸೆಂಬ್ಲಿಯು ಎಪ್ರಿಲ ೬ರ ತನಕ ಮುಂದುವರಿಯುವುದಿಲ್ಲ.

ಇಪ್ಪತ್ತರ ತನಕ ಕೊಚ್ಚಿನ್ ದರಬಾರ್ ಎಂಬ ನಾಮದಿಂದ ಕರೆಯಲಾಗುವ ಕೊಚ್ಚಿನ್ ಸರಕಾರವನ್ನು ಮುಂದಕ್ಕೆ "ಗವರ್ನಮೆಂಟ್ ಆಫ್ ಕೊಚ್ಚಿನ್" ಎಂದು ಕರೆಯಲ್ಪಡಲು ಇಂಡಿಯಾ ಸರಕಾರದ ಸಮ್ಮತಿಸಿದೆ.

ಕಾಂಗ್ರೆಸ್ಸಿನ ಸುವರ್ಣೋತ್ಸವ ಸಮಯದಲ್ಲಿ ವಿದ್ಯಾಸಂಸ್ಥೆಗಳು ಆ ಸಮಾರಂಭದಲ್ಲಿ ಭಾಗವಹಿಸಬಾರದಾಗಿ ಬಂಗಾಳ ಸರಕಾರದ ಕಟ್ಟಳೆಗಳು ಹೊರಟ ವಿಚಾರ, ಅಲ್ಲಿನ ನ್ಯಾಯವಿಧಾಯಕ ಸಭೆಯಲ್ಲಿ ಪ್ರಶ್ನೆಗಳು ಕೇಳಲಾದುವು. ಅದು ಸರಕಾರದ ಗಮನಕ್ಕೆ ಬರಲಿಲ್ಲವೆಂದು ತಿಳಿದುಬಂತು.

'ಮೆನಿಂಜೈಟಿಸ್' ಎಂಬ ಭಯಂಕರ ರೋಗವು ನಾಗಪುರದಲ್ಲಿ ಹಬ್ಬಿಕೊಂಡಿರುವ ಚಿಹ್ನೆಗಳು ಕಂಡುಬರುತ್ತಿದೆಯೆಂದು ಅಲ್ಲಿಯ ಸರಕಾರದ ಪ್ರಕಟನೆ.

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಬಾಬುರಾಜೇಂದ್ರ ಪ್ರಸಾದರು ಪೆಶ್ಯಾರಿಗೆ ತೆರಳಿ, ಅಲ್ಲಿ ಜೈಲುವಾಸಿಗಳಾದ ಗಡಿನಾಡಿನ ಗಾಂಧಿಗಳಾದ ಖಾನ್ ಅಬ್ದುಲ್ ಗಫರ್ ಖಾನರ ಭೇಟಿಮಾಡಿದರು. ಸಾಧಾರಣ ೩೫ ನಿಮಿಷಗಳ ಕಾಲ ಸಂಭಾಷಣೆ ನಡೆಯಿತು. ಖಾನರ ಆರೋಗ್ಯವು ಉತ್ತಮವಾಗಿರುವುದೆಂದು ಶ್ರೀ ಬಾಬು ರಾಜೇಂದ್ರರು ತಿಳಿಸಿದರು.

ನಿರುದ್ಯೋಗವನ್ನು ಕಡಿಮೆ ಮಾಡಲು, ನಿರುದ್ಯೋಗಿ ವಿದ್ಯಾವಂತರನ್ನು ಕೃಷಿಕಾರ್ಯಗಳಲ್ಲಿ ತರಬೇತುಮಾಡಲು ಜಮೀನುದಾರರೂ ಸರಕಾರಗಳೂ ಒಟ್ಟುಕೂಡಿ ಕೃಷಿಕ್ಷೇತ್ರಗಳನ್ನು ರಚಿಸಬೇಕಾಗಿ ಬರ್ದ್ವಾನ್ ಮಹಾರಾಜರ ಸೂಚನೆ.

ಬಿಸಿಬಿಸಿ ವಾರ್ತೆಗಳು.

ಎಸೆಂಬ್ಲಿಯಲ್ಲಿ ಮಂಜೂರಾದ ಕಂದಾಯಗಳಲ್ಲಿದ್ದ ಬದಲಾಯಿಸಿ ಬಹುಮತದಿಂದ ಸರ್ಟಿಫೈ ಮಾಡಿ ಕೌನ್ಸಿಲ್ ಆಫ್ ಸ್ಟೇಟಿಗೆ ಹೋದ ಫೈನಾನ್ಸ್ ಬಿಲ್ಲು ಬಹುಮತದಿಂದ ಮಂಜೂರಾಯಿತು. ಎಸೆಂಬ್ಲಿಯಲ್ಲಿ ರದ್ದಾದ ಉಪ್ಪಿನ ತೆರಿಗೆಯ ಮತ್ತು ... ದರ ಇಳಿದ ಅಂಚೆ ಕಾರ್ಡು ಅವುಗಳ ಪೂರ್ವ ಸ್ಥಿತಿಯಲ್ಲೇ ಇರುವವು.

ಒಟ್ಟೋಮನ ಒಪ್ಪಂದವನ್ನು ಮುಖ್ಯವಾಗಿಟ್ಟುಕೊಂಡು ಎಸೆಂಬ್ಲಿಯು ತೀರ್ಮಾನವನ್ನು ಬ್ರಿಟಿಷ್ ಕೇಬಿನೆಟ್ಟಿನವರು ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನವರು ಪರ್ಯಾಲೋಚಿಸಿದರಿಂದ ಒಪ್ಪಂದವನ್ನು ಕೊನೆಗೊಳಿಸುವ ನಿರ್ಧಾರವನ್ನು ಒಂದು ವೇಳೆ ಸರಕಾರದಿಂದ ಮನ್ನಿಸಲ್ಪಟ್ಟರೆ, ಅದು ಇತರ ದೇಶಗಳೊಡನೆ ವ್ಯಾಪಾರದ ಕರಾರನ್ನು ಮಾಡಲು ಸಿದ್ಧವಿಲ್ಲವೆಂದು ತಿಳಿದುಬರುತ್ತದೆ.

ಲೋಕಾರ್ನೋ ಕರಾರಿನ ವಿಚಾರದಲ್ಲಿ ಬ್ರಿಟನ ಜರ್ಮನಿಯ ಕುರಿತು ಬ್ರಿಟನ ಒತ್ತಾಯದಲ್ಲಿ ವೈಮನಸ್ಸು ಉಂಟಾಗಿದೆಯೆಂದೂ, ಇದರ ಒತ್ತಾಯವು ತನ್ನ ಹುದ್ದೆಗೆ ರಾಜೀನಾಮೆ ಕೊಟ್ಟರೆಂದೂ ವಾರ್ತೆ.

ಬ್ರಿಟನ ಜರ್ಮನ್ ಡೇಗೆ ಕೊಟ್ಟರೂ ಉತ್ತರ ಹಿಡಿದುಕೊಂಡು ಜರ್ಮನ್ ಪ್ರತಿನಿಧಿಗಳು ಒಂದಾಗಿ ಬಂದಿರುವರು. ಜರ್ಮನ್-ಫ್ರೆಂಚ್ ಬಿರುಕನ್ನು ಸರಿಪಡಿಸುವ ಯೋಗ್ಯತೆಯು ಈ ಉತ್ತರದಲ್ಲಿದೆಯೆಂದು ತಿಳಿದುಬರುತ್ತದೆ.

ಜರ್ಮನಿಯ ೨೩ ವಿಮಾನಗಳು ಫ್ರಾನ್ಸಿನ ಮೇಲಿಂದ ಹಾರಿದುದರಿಂದ ಫ್ರೆಂಚ ಸರಕಾರದ ರಾಯಭಾರಿ ಹೊರಟಿರುತ್ತದೆ. ಈ ಕಾರಣದಿಂದ ದಕ್ಷಿಣ ಅಮೇರಿಕಾದ ಬ್ರೆಜಿಲಿಗೆ ಹೋಗಲಿರುವ ಪ್ರಸಿದ್ಧ ವಾಯುನೌಕೆಯಾದ 'ಹಿಂಡೆನ್‌ಬರ್ಗ್' ಫ್ರಾನ್ಸಿನ ಮೇಲಿಂದ ಹಾರಲಾರದು.

ಇಟಾಲಿಯ ಆರ್ಥಿಕ ಸ್ಥಿತಿಯು ಭಯಂಕರ ಅವಸ್ಥೆಯಲ್ಲಿದೆ. ದೇಶದ ಭಂಗಾರದೆಲ್ಲಾ ಹೊರಗೆ ಹೋಗುತ್ತಿದೆ. ಯುದ್ಧಕಾರ್ಯದ ಮುಂದಿನ ಸಾಗುತ್ತಿದೆ.

ಬೇಕಾಗಿದೆ.

ಮಂಗಳೂರ ಶಹರಿನ ಹೆದ್ದಾರಿಯಲ್ಲಿ ಸುಮಾರು ಒಂದು ಎಕ್ರೆ ಖಾಲಿ ಸ್ಥಳ ವ ಸಣ್ಣ ಮನೆ ಇರುವ ಜಾಗ ಕ್ರಯಕ್ಕೆ ವ ಮೂಲ ಗೇಣಿಗೆ ಅಥವಾ 15 ವರ್ಷ ವಾಯಿದೆಗೇಣಿಗೆ ಬೇಕು.

ಪತ್ರವ್ಯವಹಾರ—

ಸುದರ್ಶನ,
C/o ಸ್ವದೇಶಾಭಿಮಾನಿ.

THE 1935 MODEL

HEAVY DUTY TRUCK



For Your Haulage

U. SUBRAYA NAYAK,

FORD DEALER

SHIMOGA——AND——MANGALORE

ಚಿಕ್ಕಮಕ್ಕಳು ಅಳುವುವೇಕೆ?

ಎಂಬುದನ್ನು ತಿಳಿಯದೆ, ಅನೇಕ ಹೆತ್ತವರು, ತಮಗಿಚ್ಛೆ ಬಂದಂತೆ ಅವುಗಳನ್ನು ಸಮಜಾಯಿಸಲು ನೋಡುವರು.

ಅವುಗಳಿಗೆ ಅಜೀರ್ಣವಿದೆ - ಉದರಶೂಲೆ ಇದೆ - ಅಮವಾತದ ಉಪದ್ರವೂ ಇರಬಹುದು -

ಎಂಬುದನ್ನು ಬಲ್ಲಿರಾ?

ಬೆಬೂಲಿನ್

ಇದ ಚಿಕ್ಕ ಶಿಶುಗಳಿಗಾಗಿಯೇ ತಯಾರಿಸಲ್ಪಟ್ಟಿದೆ. ಸೋಡಿಯಮ್‌ನ ಅಲ್ಕಲಾಯಿನ್ ಲವಣ, ಮೆಗ್ನೆಶಿಯಮ್, ಪೊಟೇಶಿಯಮ್, ಮತ್ತು ಬಡಿಶೇಪ, ಓಮ ಮತ್ತು ಮೆಂಥಲ್ ಇವುಗಳ ಮಧುರವೂ ರುಚಿಕರವೂ ಆದ ಮಿಶ್ರಣದಿಂದ ತಯಾರಿಸಲ್ಪಟ್ಟಿವೆ ಚಿಕ್ಕ ಮಕ್ಕಳ ಉದರಶೂಲೆಯನ್ನು ನಿವಾರಿಸಿ, ಮಕ್ಕಳ ಕರುಳುಗಳನ್ನು ಸ್ವಚ್ಛಗೊಳಿಸಿ, ಬಲಗೊಳಿಸಿ ಕಾಪಾಡುವುದು

ವಾಂತಿ, ನಾಯಿಕೆಮ್ಮು - ಇವುಗಳಿಗೂ ಉಪಯೋಗಿಸಲ್ಪಡಬಹುದಾದ ಅಮೂಲ್ಯ ಔಷಧ. ಮಕ್ಕಳಿಗೆ ಹಲ್ಲು ಮೂಡುವ ಕಾಲದಲ್ಲಾಗುವ ವಿಕಾರಗಳನ್ನೆಲ್ಲ ನಿಲ್ಲಿಸುವುದು. ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ! ಅನುಪಾನ ಪತ್ರ, ಸೀಸೆಯೊಂದಿಗಿದೆ.

ಬೊಂಬಾಯಿಯ ಬೆಬ್ ಕೆಮಿಕಲ್ ವರ್ಕ್ಸಿನವರು ತಯಾರಿಸಿದ್ದು

ದಕ್ಷಿಣ ಕನ್ನಡ ಜಿಲ್ಲೆಗೆ ಏಜಂಟರು - ಪ್ರೊವಿನ್ಶಿಯಲ್ ಸ್ಟೋರ್ಸ್ ರಥಬೀದಿ ಮಂಗಳೂರು.

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿ ವಾರಪತ್ರಿಕೆಯಲ್ಲೇ ಕೊಡಿರಿ.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸು,

ಚಿಕ್ಕಮಗಳೂರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬಾಯಿ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟರ ಸರ್ವೀಸುಗಳು.

ಮುಂಬಾಯಿಯಿಂದ - ಪೂನಾ - ಬೆಳಗಾಂವ - ಧಾರವಾಡ - ಹುಬ್ಬಳ್ಳಿ - ಗೋವಾ ಇವಲ್ಲ ಕಡೆಗಳಿಂದ,

ಮಂಗಳೂರಿಗೆ - ಪುತ್ತೂರು - ಉಡುಪಿ - ಕಾರ್ಕಳ - ಬೆಳ್ತಂಗಡಿ - ವೇಣೂರು - ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ -

ಶೀಘ್ರ ಪ್ರಯಾಣ - ಅನುಕೂಲ ಸೌಕರ್ಯ - ಅತ್ಯಲ್ಪ ಖರ್ಚು - ಸುಂದರವಾದ ನೋಟ.

ಅಲ್ಲದೆ

ಮೈಸೂರಿನ ಅರಸರ ಶೆಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯಾದ ಕೆಮ್ಮಣ್ಣು ಗುಂಡಿ ಯಾತ್ರಾಸ್ಥಳವಾದ ಬಾಬಾ ಬುಡಾನಗಿರಿ - ಕೈಗಾರಿಕೆಯ ಕೇಂದ್ರವಾದ ಭದ್ರಾವತಿ - ಶಿಲಾಶಿಲ್ಪದ ಬೇಲೂರು, ಹಳೆಬೀಡು - ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪಶ್ಚಿಮ ಘಟ್ಟಗಳು -

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ

Chikmagalur Public Conveyance Motor Service,

CHIKMAGaLUR.

ಚುಟುಕು ವಾರ್ತೆಗಳು

ಮೈಸೂರಿನ ಭದ್ರಾವತಿಯಲ್ಲಿ ಮುಂದಿನ ಸಕ್ಕರೆ ಕಾರ್ಖಾನೆಯು ರೀತಿ ಪಾಲುಭಾಂಡವಾಳಗಳನ್ನು ಕೂಡಿಸಿ ಸರಕಾರದ ಆಧಾರವನ್ನು ಹೊಂದಿಕೊಂಡು, ಒಂದು ಕಾಗದ ತಯಾರಿಸುವ ಕಾರ್ಖಾನೆಯು ಸ್ಥಾಪನೆಯಾಗುವುದೆಂದು ತಿಳಿದುಬರುತ್ತದೆ.

ನಾಗಪುರದ ಹತ್ತಿರವಿರುವ ಬಿರಾರ್ ಪ್ರದೇಶವನ್ನು ನೈಜಾಮರ ಹೈದರಾಬಾದಿಗೆ ಕೂಡಿಸುವರೆಂದು ಹೈದರಾಬಾದಿನ ಯುವರಾಜರು ಇನ್ನುಮುಂದಕ್ಕೆ ಪ್ರಿನ್ಸ್ ಒಫ್ ಬಿರಾರ್ ಆಗುವರೆಂದೂ, ಈ ಕುರಿತು ನೈಜಾಮರಿಗೂ ಇಂಡಿಯಾ ಸರಕಾರಕ್ಕೂ ಮಾತುಕತೆಗಳು ನಡೆದು ಸಂಪೂರ್ಣವಾಗಿವೆಯೆಂದು ವಾರ್ತೆ.

ಶ್ರೀ ಜವಾಹರಲಾಲ ನೆಹರೂಗಳವರು ತಮ್ಮ ವಾಸ್ತವ್ಯ ಯೊಡನಿರಲು ಅಲ್ಲಹಾಬಾದಿನಲ್ಲಿ ಇರಬೇಕಾದುದರಿಂದ ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಳವು ಇಲ್ಲಿ ಸಭೆ ಸೇರುವುದೆಂದು ತಿಳಿದುಬರುತ್ತದೆ.

ನಾಸಿಕದಿಂದ ಬನಾರಿಸಿಗೆ ತೆರಳಿದ ಪಂಡಿತ ಮಾಲವಿಯರು ವಿಶ್ವವಿದ್ಯಾಲಯದ ಕೆಲ ಕಾರ್ಯಗಳನ್ನು ಮುಗಿಸಿ ಅಲ್ಲಹಾಬಾದಿಗೆ ತೆರಳುವರಾಗಿ ತಿಳಿದುಬರುತ್ತದೆ.

ಮಕ್ಕಳ ರಕ್ಷಣಾ ಸಂಘ, ಮದ್ರಾಸು, ಇವರ ಹತ್ತನೆಯ ವಾರ್ಷಿಕೋತ್ಸವವು ಮುಖ್ಯ ನ್ಯಾಯಾಧೀಶರ ಅಧ್ಯಕ್ಷತನದಲ್ಲಿ ಜರಗಿತು. ಗತವರ್ಷ ವರದಿ ಪ್ರಕಾರ ಈ ಸಂಘದ ಅನಾಥ ಮಕ್ಕಳ ರಕ್ಷಣೆಯ ವಿಚಾರದಲ್ಲಿ ಶ್ಲಾಘನೀಯವಾಗಿ ಕೆಲಸ ಮಾಡಿರುತ್ತದೆ.

ಮದ್ರಾಸ ನ್ಯಾಯವಿಧಾಯಕ ಸಭೆಯ ಬಜೆಟ್ಟು ಅಧಿವೇಶನವು ಮುಕ್ತಾಯವಾಗಿರುತ್ತದೆ. ಶ್ರೀಗಳಾದ ಎ ಬಿ ಶೆಟ್ಟಿ ಮದ್ರಾಸು ಸಿಟಿ ಪೋಲಿಸ್ ಮತ್ತು ಮತ್ತು ಮದ್ರಾಸು ಡಿಸ್ಟ್ರಿಕ್ಟ್ ಪೋಲಿಸ್ ಆಕ್ಟ್ ಬದಲಾವಣೆಯ ಕುರಿತು ರಚನೆಯಾದ ಸಮಿತಿಯ ಅಧ್ಯಕ್ಷರಾಗಿ ನೇಮಕವಾಗಿರುವರು.

ಮುಂಬಾಯಿ ನ್ಯಾಯವಿಧಾಯಕ ಸಭೆಯ ಬಜೆಟ್ಟು ಅಧಿವೇಶನವು ಮುಕ್ತಾಯವಾಗಿರುತ್ತದೆ. ಮಾತೃಭೂಮಿಗೆ ತೆರಳುವವನ್ನು ವೈಸರಾಯರಾದ ಲೋರ್ಡ ವೆಲ್ಲಿಂಗ್ಡನ್ ಮತ್ತು ಅವರ ಪತ್ನಿಯವರನ್ನು ಶ್ಲಾಘಿಸಿ ಠರಾವುಗಳಾಗಿವೆ.

ಬೆಳ್ಳಾರಿಯ ಒಂದು ಹತ್ತಿ ಗಿರಣಿಗೆ ಭಯಂಕರ ಬೆಂಕಿ ಬಿದ್ದು ಬಹಳ ನಷ್ಟ ಸಂಭವಿಸಿದೆ. ಪೋಲಿಸರು ಬೆಂಕಿಯನ್ನು ನಂದಿಸುವ ಕಾರ್ಯವನ್ನು ನಡೆಯಿಸಿದರು.

ಮದ್ರಾಸು ಸರಕಾರದ ಮುಖ್ಯ ಮಂತ್ರಿಗಳಾದ ಬೊಬ್ಬಿಲಿ ರಾಜರು ತಮ್ಮ ಪತ್ನಿಯರ ಆರೋಗ್ಯಕ್ಕಾಗಿ ವಿಲಾಯತಿಗೆ ತೆರಳುವರು. ಇವರ ಸ್ಥಳದಲ್ಲಿ ಶ್ರೀ ಪಿ ಟಿ ರಾಜನ್‌ರವರು ಮತ್ತು ಎಸ್ ಕುಮಾರಸ್ವಾಮಿ ಮೊದಲಿಯಾರರು ಅಧಿಕಾರ ನೋಡುವರು.

ನೋಟೀಸು

ಕಾಸರಗೋಡು ಡಿ ಮು. ಕೋರ್ಟಿನಲ್ಲಿ.

O P No 38/1936

ಆಯಿಸಮ್ಮ ಸಹಾ 2 ಜನರು ಅರ್ಜಿದಾರರು

ಮತ್ತು

1. ಬೀಪಾತ್ಮ, 2 ಮರಿಯುಮ್ಮ (ಮ್ಯಾನರ್), 3 ಆಚು, 4 ಪಾತು—ರೆಸ್ಪಾಂಡೆಂಟರು

1ನೇ ಅರ್ಜಿದಾರಳ ಗಂಡ, 2ನೇ ಅರ್ಜಿದಾರಳ ತಂದೆ ನೀಲೇಶ್ವರ ಗ್ರಾಮದ ಕೋಟಪುರದಲ್ಲಿ ಕಳೆದ 1107ನೇ ಮಿಥುನಮಾಸದಲ್ಲಿ ಮೃತಪಟ್ಟ ಅಂಜಿಲ್ಲತ್ತ ಅಬ್ದುಲ್ಲಗೆ ಹೊರಗಿನಿಂದ ಬರತಕ್ಕ ಸಾಲ ವಗೈರೆ ವಸೂಲುಮಾಡುವರೆ ಅರ್ಜಿದಾರರಿಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ವಗೈರೆ ಅರ್ಜಿದಾರರು ದಾಕ್ಲು ಮಾಡಿದ ಮೇಲ್ಕಂಡ ಅರ್ಜಿಯು ಇದೇ ತಾ 9—4—36ಕ್ಕೆ ತನಿಗೆ ಇಟ್ಟಿರುತ್ತದೆಂತಲೂ, ಈ ಕುರಿತು ಆಕ್ಷೇಪವುಳ್ಳವರು ಸದ್ರಿ ದಿವಸ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆಂತ ಈ ಮೂಲಕವಾಗಿ ತಿಳಿಸೋಣಾಗುತ್ತದೆ.

A. Y. Narayana Menon
Vakil for Pttrs.

ಕಾಸರಗೋಡು,
10—3—36.

ಕಾಂಗ್ರೆಸ್ಸು ನವರಾಜಶಾಸನದಲ್ಲಿ ಅಧಿಕಾರ ಸೂತ್ರವನ್ನು ವಹಿಸುವುದೇ?

ಮೇಲಿನ ವಿಚಾರದಲ್ಲಿ ತೀರ್ಮಾನವು ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ ಮಾಡುವರಾಗಿ ತಿಳಿದುಬರುತ್ತದೆ. ಈ ತೀರ್ಮಾನವು ಕಾಂಗ್ರೆಸ್ ಕಮಿಟಿಯ ಸದಸ್ಯರ ಹಾಜರಿಯ ಮೇಲೆ ಹೊಂದಿಕೊಂಡಿದೆಯಾದುದರಿಂದ, ಎಲ್ಲಾ ಸದಸ್ಯರನ್ನು ಈ ಸಮಯದಲ್ಲಿ ಸೇರಿಸಲು ಪ್ರಯತ್ನಗಳು ನಡೆಯುತ್ತವೆ. ಶ್ರೀ ಜವಾಹರಲಾಲರು ಅಧಿಕಾರ ಸೂತ್ರವನ್ನು ವಹಿಸಬಾರದೆಂದು ಅಭಿಪ್ರಾಯ ಪಡುತ್ತಿದ್ದರೂ, ಇವರ ಮನೋಭಿಪ್ರಾಯವು ಲಕ್ನೋದಲ್ಲಿ ಬದಲಾವಣೆಯಾಗುವ ಸಂಭವಗಳು ಬರಬಹುದು. ಕಾಂಗ್ರೆಸ್ ಅಧಿಕಾರಸೂತ್ರವನ್ನು ವಹಿಸಬಾರದಾಗಿ ನಿರ್ಧಾರಗಳಾದ ವಾರ್ತೆ ಸುಳ್ಳೆಂದು ತಿಳಿದುಬರುತ್ತದೆ.

ಡಿಲ್ಲಿಯಲ್ಲಿ ನಡೆದ ಕಾರ್ಯಕಾರಿ ಮಂಡಳದ ಸಭೆಯ ಫಲಿತಾಂಶ.

ಈ ಚರ್ಚೆಯಲ್ಲಿ ನವ ಅಧ್ಯಕ್ಷರಾದ ಶ್ರೀ ಜವಾಹರಲಾಲರಿಗೆ ಕಾಂಗ್ರೆಸ್ಸಿನ ಮುಂದಿನ ವರ್ತನೆಯ ಕುರಿತು, ತನ್ನ ತೀರ್ಮಾನ ಕೊಡಲು ಅವಕಾಶವಾಗುವಂತೆ ಈಗಿನ ರಾಜಕೀಯ ವಾತಾವರಣದ ಸ್ಥಿತಿಯಿಂದ ತಿಳಿದುಬಂದಿರುತ್ತದೆ. ಈ ಕುರಿತು ತನ್ನ ಮನೋಭಾವಗಳನ್ನು ಶ್ರೀ ನೆಹರೂಗಳವರು ಇಲ್ಲಿ ಪ್ರಚುರಪಡಿಸಿದರು. ಕಾಂಗ್ರೆಸ್ಸು ಒಂದು ಅಂತರ್‍ರಾಷ್ಟ್ರೀಯ ಸಮಸ್ಯೆಯಾಗಬೇಕೆಂದು ಅವರ ಈಗಿನ ಉದ್ದೇಶವಾಗಿರುತ್ತದೆ. ಈ ಯೋಗ್ಯತೆಯನ್ನು ಪಡೆಯಲು, ಕಾಂಗ್ರೆಸ್ ದಳೆಯುವ ವಿಚಾರದಲ್ಲಿ ಎಲ್ಲರೂ ಸಮ್ಮತಿಗಳಾಗಿರುವರು. ಈ ನಿರ್ಧಾರದಿಂದ ಕಾಂಗ್ರೆಸ್ಸು ಲೆಜಿಸ್ಲೇಟಿವ್ ಸಭೆಗಳಲ್ಲಿ ಹೆಚ್ಚಿನ ಸದಸ್ಯತನಗಳನ್ನು ಹಿಡಿಯಬೇಕೆಂಬ ನಿರ್ಧಾರವೂ ಸ್ಪಷ್ಟವಾಯಿತು. ಚರ್ಚೆಯಾದ ಮುಖ್ಯ ವಿಚಾರವೆಂದರೆ—ಅಧಿಕಾರ ಸೂತ್ರವನ್ನು ವಹಿಸಿದರೆ ಕಾಂಗ್ರೆಸ್ಸಿನ ಮೇಲಿನ ಉದ್ದೇಶವನ್ನು ನಡೆಯಿಸಲು ಎಷ್ಟರಮಟ್ಟಿಗೆ ಸಾಧ್ಯವಾಗುವುದೆಂದೂ, ಲೆಜಿಸ್ಲೇಟಿವ್ ಸಭೆಗಳನ್ನು ಸೇರಿದ ಕಾಂಗ್ರೆಸ್ ಸದಸ್ಯರು ಕಾಂಗ್ರೆಸ್ಸಿನ ಧ್ಯೇಯವನ್ನು ಸಂಪೂರ್ಣವಾಗಿ ಸಾಧಿಸಲು ಪ್ರಯತ್ನಗೊಳ್ಳಬೇಕೆಂಬ ನಿರ್ಧಾರಗಳಾಗಿವೆ. ಅಧಿಕಾರ ಸೂತ್ರದ ಕುರಿತು ಮುಂದಕ್ಕೆ ಆಲೋಚಿಸಬೇಕೆಂದಾಗಿದೆ ಲಕ್ನೋ ಕಾಂಗ್ರೆಸ್ಸಿನಲ್ಲಿ.

ಕಾಂಗ್ರೆಸ್ಸು ನವ ರಾಜಶಾಸನವನ್ನು ನಡೆಯಿಸಿಕೊಡಲು ಸಿದ್ಧವಿಲ್ಲ ಎಂಬುದು ಈ ಚರ್ಚೆಗಳಲ್ಲಿ ಖಚಿತವಾಗಿರುತ್ತದೆ. ಕಾಂಗ್ರೆಸ್ಸಿಗೆ ಅಧಿಕವಾದ ಬಲವು ದೊರಕಿದಂತಾಗಿ, ಭಾರತೀಯರೆಲ್ಲಾ ಕೂಡಿದ ಸಂಸ್ಥೆ ಒಂದಾಗಿ ಮೋಕ್ಷವನ್ನು ಗೈಯ್ಯಲು ಸಾಧನವಾಗುವಂತೆ ರೈತರಿಗೂ ಮಜೂರರಿಗೂ ಕಾಂಗ್ರೆಸ್ಸಿನಲ್ಲಿ ಪ್ರಾತಿನಿಧ್ಯ ಸಿಗದೆ. ಕಾಂಗ್ರೆಸ್ ಸಾರ್ವಜನಿಕ ಸಂಸ್ಥೆಯಾಗಿ ಮಹತ್ವದ ಕುರಿತು ಮಾತುಕತೆಗಳು ನಡೆದಿರುತ್ತವೆ. ನವರಾಜಶಾಸನದ ಯೋಗ್ಯತೆಯನ್ನು ಪರೀಕ್ಷಿಸುವ ಎಲ್ಲ ರೀತಿ ಇಲ್ಲಿ ಚರ್ಚಿಸಲ್ಪಡಲಿಲ್ಲ. ಕಾಂಗ್ರೆಸ್ಸಿನ ಉದ್ದೇಶಗಳನ್ನು ಸಾಧಿಸಲು ಕಾಂಗ್ರೆಸ್ ಸದಸ್ಯರು ನಾಯಕತ್ವವನ್ನು ಲಕ್ನೋ ಅಧಿವೇಶನದಲ್ಲಿ ಮುಂಗಾಣುತ್ತಾರೆ. ದೇಶದ ರಾಜಕೀಯ ಮತ್ತು ಸಾಂಪತ್ತಿಕ ವಿಚಾರದ ಕುರಿತು, ಘರ್ಷಣೆಯು ಕಾಂಗ್ರೆಸ್ಸಿನ ಕೇವಲ ಕೆಲವು ಪಕ್ಷಗಳನ್ನು ಯಾ ವ್ಯಕ್ತಿಗಳನ್ನು ಹೊಂದಿಕೊಂಡಿಲ್ಲ—ಅದು ದೇಶಕ್ಕೆ ಹಿತವೆನಿಸುವ ರೀತಿಯಲ್ಲಿ ರಚನೆಯಾಗುವುದು. ಆದರೆ, ಈ ಪಕ್ಷಗಳಿಂದ ತಮಗೆ ಯಾವ ಆತಂಕಗಳು ಬರುವುವು ಎಂಬುದನ್ನು ಅವರು ಸ್ವಲ್ಪ ಗಮನಿಸಬೇಕು. ಅದು ಅಷ್ಟೊಂದು ಮುಖ್ಯ ವಿಚಾರವೆಂದಲ್ಲ.

ಭರತ ಖಂಡಕ್ಕೆ ಯೋಗ್ಯ ರಾಜಶಾಸನವು ದೊರಕದಿರುವ ಈ ಸಂದರ್ಭದಲ್ಲಿ ಕಾಂಗ್ರೆಸ್ ಹೇಗೆ ವರ್ತಿಸಬೇಕು? ಈಗ ನವಾಗಿ ಸಿದ್ಧವಾಗಿರುವ ರಾಜಶಾಸನವು ಅಯೋಗ್ಯವಾದುದೆಂದೂ ಬ್ರಿಟನಲ್ಲೂ, ಇಂಡಿಯಾದಲ್ಲೂ ಅಭಿಪ್ರಾಯಗಳಾಗಿವೆ. ರಾಜಶಾಸನವನ್ನು ಬದಲಾಯಿಸುವುದು ಒಂದು ದೊಡ್ಡ ಸಮಸ್ಯೆಯಲ್ಲ. ಈ ರಾಜಶಾಸನವು ಬಹಳ ಕಾಲ ಬಾಳುವಂತಿಲ್ಲ. ಅದ ರದ್ದಾಗುವುದು ಇಲ್ಲದಿದ್ದರೆ ಸ್ವರಾಜ್ಯ ಸಾಧನೆಗೆ ಯೋಗ್ಯವಾಗುವ ರೀತಿಯಲ್ಲಿ ಸುಧಾರಣೆ ಮಾಡಬೇಕಾಗುವುದು.

ಆದರಿಂದ ಈ ರಾಜಶಾಸನವನ್ನು ಖಂಡಿಸುವ ಕಾರ್ಯದಲ್ಲಿ ಕಾಂಗ್ರೆಸ್ ಏಕಚಿತ್ತದಿಂದ ಕಾರ್ಯ ನಡೆಯಿಸಬೇಕಾಗಿದೆ. ಸರ್ವರೂ ಕಾಂಗ್ರೆಸ್ಸನ್ನು ಆಧರಿಸಿಕೊಳ್ಳುವಂತಾಗಬೇಕು. ಅದು ಜನಪ್ರಿಯವಾಗುವಂತೆ ಮಾಡುವುದು ಅತಿ ಅಗತ್ಯವು. ರಾಷ್ಟ್ರೀಯ ಉನ್ನತಿಯಾಗುವಂತೆ ಮುಂದಿನ ಕಾರ್ಯಗಳು ನಡೆಯಬೇಕು.

ಮೇಲಿನದು ಡಿಲ್ಲಿಯಲ್ಲಿ ನಡೆದ ಕಾರ್ಯಕಾರಿ ಮಂಡಳದ ಸಭೆಯ ನಂತರ ಹೊರಟ ಕಾಂಗ್ರೆಸ್ಸಿನ ಪ್ರಕಟಣೆಯಾಗಿರುತ್ತದೆ.

ರಿಸರ್ವ ಬೇಂಕಿನಿಂದ ರೈತರಿಗೆ ಸಾಲಸಿಗುವ ಏರ್ಪಾಡುಗಳು.

ಇಂಡಿಯಾ ಸರಕಾರದವರು ರಿಸರ್ವ ಬೇಂಕನ್ನು ಸ್ಥಾಪನೆಮಾಡಿ ಒಂದು ವರ್ಷ ದಾಟಿರುತ್ತದೆ. ಇಲ್ಲಿ ಹಳ್ಳಿಗಳಿಗೆ ಸುಲಭವಾದ ರೀತಿಯಲ್ಲಿ ಸಾಲವನ್ನೊದಗಿಸುವ ಏರ್ಪಾಡುಮಾಡಲಾಗುವುದೆಂದು ವಾರ್ತೆಯು ಹರಡಿತ್ತು. ಆದರೆ, ಸರಕಾರದ ಈ ಆಲೋಚನೆಯು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಕೆಲವರು, ಬೇಂಕಿನ ಉದ್ಯೋಗಸ್ಥರೇ ಈ ತಡಕ್ಕೆ ಕಾರಣವನ್ನುತ್ತಿದ್ದರು. ಆದರೆ, ಅವರೊಡನೆ ವಿಚಾರಿಸಲಾಗಿ, ಪ್ರಾಂತಿಕ ಸರಕಾರಗಳು ಆ ಕುರಿತು ತಮ್ಮ ಅಭಿಪ್ರಾಯಗಳನ್ನು ಇನ್ನೂ ಸ್ಪಷ್ಟ ಕೊಡದಿರುವುದರಿಂದ ಅದನ್ನು ಕಾರ್ಯರೂಪಕ್ಕೆ ತರಲಾಗಲಿಲ್ಲವೆಂದು ತಿಳಿದುಬರುತ್ತದೆ. ಈ ವಿಚಾರದಲ್ಲಿ ರಿಸರ್ವ ಬೇಂಕು ಯಾವ ರೀತಿಯಲ್ಲಿ ವರ್ತಿಸಬೇಕೆಂಬುದು ಎಲ್ಲಾ ಸ್ಥಳೀಯ ಸರಕಾರಗಳಿಗೆ ತಿಳಿದಿರುತ್ತದೆ. ಎಲ್ಲರಿಗೂ ಹಿತವಾಗುವ ರೀತಿಯಲ್ಲಿ ರೈತರಿಗೆ ದ್ರವ್ಯವನ್ನು ಒದಗಿಸುವುದು ಈ ಬೇಂಕಿನ ಕರ್ತವ್ಯ. ರಿಸರ್ವ ಬೇಂಕಿನವರಿಂದಲೇ ಈ ಯೋಜನೆಯು ಕ್ರಮವಾಗಿ ನಡೆಸಬೇಕಾಗಿಲ್ಲ. ಈ ವಿಚಾರವಾಗಿ ಕಾರ್ಯನಿರ್ವಹಿಸುತ್ತಿರುವ ಅನೇಕ ಸಂಸ್ಥೆಗಳನ್ನು ಮಧ್ಯವರ್ತಿಗಳನ್ನಾಗಿ ಮಾಡಿ ಈ ಯೋಜನೆಯನ್ನು ನಡೆಯಿಸಬೇಕು. ಅವುಗಳು ಯಾವುವು? ಜಮೀನು ಅಡವಿನಲ್ಲಿ ಸಾಲಕೊಡುವ ಸಂಸ್ಥೆಗಳು, ಸಹಕಾರಿ ಸಂಘಗಳು ಅಥವಾ ಸ್ಥಳೀಯ ಸರಕಾರಗಳು ಯಾ ಪಕ್ಷದ ಸಣ್ಣ ರೈತರಿಗೆ ಇತ್ಯಾದಿಗಳ ಹಿತವನ್ನು ಸಾಧಿಸುವ ಜಾಯಿಂಟ್ ಸ್ಟಾಕ್ ಬೇಂಕುಗಳು. ರಿಸರ್ವಬೇಂಕಿನ ಹಳ್ಳಿಗರಿಗೆ ಸಾಲ ಒದಗಿಸುವ ಯೋಜನೆಯು ಆದಷ್ಟು ಬೇಗನೆ ನಡೆಯುವಂತೆ ಯೋಗ್ಯ ಯೋಜನೆಗಳನ್ನು ರಚಿಸಿಕೊಡುವುದು ಪ್ರತಿಯೊಂದು ಸರಕಾರಗಳ ಕರ್ತವ್ಯವಾಗಿರುತ್ತದೆ.

ನವವೈಸರಾಯರು ಮಹಾತ್ಮಾಜಿಯವರ ಭೇಟಿಮಾಡುವರು.

ನಮ್ಮ ನೂತನ ವೈಸರಾಯರಾದ ಲೋರ್ಡ ಇರ್ವಿನ್‌ರವರು ಮಹಾತ್ಮರಿಗೆ ಅವರು ಸತ್ಯಾಗ್ರಹಿಗಳ ಕುರಿತಾಗಿಯೂ ಪತ್ರವ್ಯವಹಾರದ ಸಂದರ್ಶನದ ಕುರಿತು ನವ ವೈಸರಾಯರೊಡನೆ ಮಾತುಕತೆಗಳನ್ನು ನಡೆಯಿಸಬೇಕಾಗಿಯೂ, ನವ ವೈಸರಾಯರಾದ ಲೋರ್ಡ ಲಿನ್‌ಲಿತ್‌ಗೋ ಅವರು ಮಹಾತ್ಮಾಜಿಯವರನ್ನು ಈ ವಿಚಾರದಲ್ಲಿ ಕಾದು ಬಹಳ ಕುತೂಹಲಪಡುತ್ತಿದ್ದಾರೆಂದೂ, ಪತ್ರ ಒದಗಿದವರಾಗಿ ವಾರ್ತೆ.

ಶ್ರೀ ಜವಾಹರಲಾಲರ ಕಾಂಗ್ರೆಸ್ ಭಾಷಣ.

ಕಾಂಗ್ರೆಸಿನ ಅಧ್ಯಕ್ಷರಾಗಿ ಲಕ್ನೋ ಕಾಂ ಅಧಿವೇಶನದಲ್ಲಿ ಕೊಡಲಿಕ್ಕಿರುವ ಭಾಷಣದ ತಯಾರಿಯನ್ನು ಶ್ರೀ ನೆಹರೂಗಳು ಪೂರ್ಣಗೊಳಿಸಿರುವರೆಂದು ತಿಳಿದು ಬರುತ್ತದೆ. ಈ ಭಾಷಣ ಬಹಳ ಉದ್ದವಿಲ್ಲದೆ ಎಷ್ಟು ಅಕ್ಷರದ ಬರೆ ಪುಟಗಳು. ಅದನ್ನು ಇವರು ಆಂಗ್ಲೇಯ ಭಾಷೆಯಲ್ಲಿ ಬರೆಯುವರಾಗಿಯೂ, ದೆಹಲಿಯ ಹಿಂದೀ ಪ್ರವೀಣರಾದ ಶ್ರೀ ನಾರಾಯಣದೇವರೆಂಬವರು ಅದನ್ನು ಹಿಂದೀಗೆ ಭಾಷಾಂತರಮಾಡಿದರೂ, ಲಕ್ನೋದ ಹಿಂದೀ ಕಾಂಗ್ರೆಸ್‌ವಾಲರು ಉರ್ದು ಭಾಷೆಗೆ ಭಾಷಾಂತರಿಸುವರಾಗಿಯೂ ತಿಳಿದುಬರುತ್ತದೆ. ಈ ಭಾಷಣದಲ್ಲಿ ಹಿಂದೂದೇಶದ ಈಗಿನ ರಾಜಕೀಯ ಸ್ಥಿತಿಗೆ ಅಂತರ್ರಾಷ್ಟ್ರೀಯ ಮಹತ್ವವು ಕೊಡಲಾಗುವುದು. ಇದನ್ನು ಮಹಾತ್ಮಾಜಿಯವರು ಓದಿನೋಡುವರು.

ಮಹಾತ್ಮಾಜಿಯವರು ಕಾಂಗ್ರೆಸ್ಸಿಗೆ ಆಗಮಿಸುವರು.

ಮಹಾತ್ಮಾ ಗಾಂಧಿಯವರು ಲಕ್ನೋದಲ್ಲಿ ಜರುಗುವ ಕಾಂಗ್ರೆಸ್ಸಿಗೆ ತೆರಳದಿರುವರಾಗಿ ಡಿಲ್ಲಿಯ ಜನ ಕೆಲವರಿಂದ ದೃಢವಾದ ವಾರ್ತೆಬಂದಿರುತ್ತದೆ. ಇದರಿಂದಾಗಿ, ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಸಮಾಧಾನಹೊಂದಿರುವರು. ಕಾರಣ, ಲಕ್ನೋ ಅಧಿವೇಶನದಲ್ಲಿ ಅನೇಕ ಮುಖ್ಯ ತೀರ್ಮಾನಗಳಾಗಲಿವೆ.

ಮುಂಬಾಯಿ ಲೋಕ ಮ್ಯೂಸಿಕರು ಟಿಳಕ್ಕ ಜೆಟ್ಟಿಸಿದ ದಕ್ಕಾಗಿ ಒಂದು ದಿವಸ (ಏಪ್ರಿಲ್ ೫ ರಲ್ಲಿ) ಮುಷ್ಕರ ನಡೆಯಿಸಿದರು.

ಕೆನರಾ ಹೈಸ್ಕೂಲ್ ಹಳೇ ವಿದ್ಯಾರ್ಥಿ ಸಂಘದ ಟೆನ್ನಿಸ್ ಪಂದ್ಯಾಟದ ಫಲಿತಾಂಶ.

ಮೆನ್ಸ್ ಸಿಂಗಲ್ಸ್—ದಿವಾನ್ ಬಹದೂರ್ ಜಸ್ಟಿಸ್ ಕೆ. ಪಿ. ಲಕ್ಷ್ಮಣರಾವ್, ಬಿ. ಎ. ಬಿ. ಎಲ್. ಇವರಿಂದ ಕೊಡಲ್ಪಟ್ಟ ರೋಲಿಂಗ್ ಕಪ್, ಮತ್ತು ಶ್ರೀ ಎ. ದಾಮೋದರ ಶೆಣೈ, ಬಿ. ಎ. ಬಿ. ಎಲ್. ರವರಿಂದ ಕೊಡಲ್ಪಟ್ಟ ಪರ್ಮನೆಂಟ್ ಕಪ್ಪುಗಳನ್ನೂ, ಶ್ರೀ ಜಿ. ನಾರಾಯಣರಾವ್ ಇವರಿಗೆ ಬಹುಮಾನಿಸಲ್ಪಟ್ಟಿತು.

ಎರಡನೇ ಬಹುಮಾನವಾಗಿ ಶ್ರೀ ಎಮ್. ಲಕ್ಷ್ಮಣ ಪೈಗಳವರಿಂದ ಕೊಡಲ್ಪಟ್ಟ ಕಪ್ಪನ್ನು ಮಿ ಮೈಕಲ್ ಸಲ್ದಾನರವರಿಗೆ ಕೊಡಲಾಯಿತು.

ಮೆನ್ಸ್ ಡಬ್ಬಲ್ಸ್—ಪ್ರಥಮ ಬಹುಮಾನವಾಗಿ ಶ್ರೀ ವಿ ಜಿ ಶಿವಮೊಗ್ಗೆ ಮತ್ತು ರಾವ್‌ಬಹದೂರ್ ಡಾ. ಎಮ್. ಕೇಶವ ಪೈ ಓ ಬಿ ಇ ಎಮ್. ಡಿ ಇವರಿಂದ ಕೊಡಲ್ಪಟ್ಟ ರೋಲಿಂಗ್ ಕಪ್ಪುಗಳನ್ನೂ ಮತ್ತು ಶ್ರೀ ಸಾಹುಕಾರ್ ಎಮ್ ವೆಂಕಟೇಶ ಪೈಗಳಿಂದಲೂ, ಮತ್ತು ಶ್ರೀ ಎ ಬಿ ಶೆಟ್ಟಿ, ಎಂ. ಎಲ್ ಸಿ ಯವರಿಂದಲೂ ಕೊಡಲ್ಪಟ್ಟ ಪರ್ಮನೆಂಟ್ ಕಪ್ಪುಗಳನ್ನೂ ಶ್ರೀ ಜಿ. ನಾರಾಯಣರಾವ್ ಮತ್ತು ಎಮ್ ಮಾಧವ ಪ್ರಭು ಇವರಿಗೆ ಬಹುಮಾನಿಸಲಾಯಿತು.

ಎರಡನೇ ಬಹುಮಾನವಾಗಿ ಶ್ರೀ ಗಣೇಶ ಶ್ರೀನಿವಾಸ ಪೈಗಳಿಂದಲೂ ಮತ್ತು ಮೆಸರ್ಸ ರಘುನಾಥ ಪೈ ಎಂಡ್ ಕಂಪೆನಿ, ಏಜಂಟ್ಸ್ ಬರ್ಮಾ ಶೆಲ್ ಒಯಿಲ್ ಕಂಪೆನಿ ಇವರಿಗೆ ಕೊಡಲ್ಪಟ್ಟ ಕಪ್ಪುಗಳನ್ನು ಶ್ರೀ ಶಿವನಾಥ ಸುವರ್ಣ ಮತ್ತು ಪ್ರೊ ಬಾರ್ನೆಟ ಇವರಿಗೆ ಕೊಡಲಾಯಿತು.

ಮಿಕ್ಸೆಡ್ ಡಬ್ಬಲ್ಸ್—ಪ್ರಥಮ ಬಹುಮಾನವಾಗಿ ಡಾ ಯಲ್ ಫೊಟಿಸ್ ಪ್ರೌಸ್ ಮತ್ತು ಶ್ರೀ ಕಸ್ತೂರಿ ನಾಗೇಶ ಮಲ್ಯಾಯ ಪೈಗಳವರಿಂದ ಕೊಡಲ್ಪಟ್ಟ ಕಪ್ಪುಗಳನ್ನು ಮಿಸೆಸ್ ಬಾಲಸುಬ್ರಹ್ಮಣ್ಯಂ ಮತ್ತು ಜಿ ನಾರಾಯಣರಾವ್ ಇವರಿಗೆ ಕೊಡಲ್ಪಟ್ಟಿತು.

ಎರಡನೇ ಬಹುಮಾನವಾಗಿ ಶ್ರೀ ಕಾರ್ಕಳ ಸದಾಶಿವರಾವ್ ಬಿ ಎ ಎಮ್ ಎಲ್ ಪಬ್ಲಿಕ್ ಪ್ರೊಸಿಕ್ಯೂಟರ್ ಮತ್ತು ಶ್ರೀ ಎನ್ ರಾಮರಾವ್ ಬಿ ಎ ಬಿ ಎಲ್ ಇವರಿಬ್ಬರಿಂದಲೂ ಕೊಡಲ್ಪಟ್ಟ ಕಪ್ಪುಗಳನ್ನು ಮಿಸೆಸ್ ಕೃಷ್ಣನ್ ಮತ್ತು ಎಮ್ ಜಿ ಶಿವನಾಥ ಇವರಿಗೆ ಕೊಡಲಾಯಿತು.

ಪಂದ್ಯಾಟದಲ್ಲಿ ಭಾಗವಹಿಸಿದ ಅತೀ ಚಿಕ್ಕ ಪ್ರಾಯದ ಮಿಸ್ ಶಾಕುಂತಲಾ ಸುಬ್ರಹ್ಮಣ್ಯಮ್ ಎಂಬವರಿಗೆ ಕಮಿಟಿಯವರು ಒಂದು ಬೆಳ್ಳಿಯ ಪದಕವನ್ನು ಬಹುಮಾನಿಸಿದರು.

ಲಕ್ನೋಗೆ ಪ್ರಯಾಣ ಬೆಳೆಯಿಸಿದ ಮಹಾತ್ಮಾ ಗಾಂಧಿಯವರು ಅಲ್ಲಹಾಬಾದಿಗೆ ಬಂದು, ಕಾಂಗ್ರೆಸ್ ಕಾರ್ಯಕಾರಿ ಮಂಡಳ ಸಭೆಯು ಜರುಗುವ ಸಮಯ ಅಲ್ಲಿದ್ದರು.

(ಮೂರನೇ ಪುಟದ ಆರನೇ ಕಾಲಮಿನಿಂದ)

ವಂತೆ ನಡೆಯುತ್ತದೆ. ಹಿಂದೂಸ್ಥಾನದಲ್ಲಿ ವಿವಾಹವಾದೊಡನೆ ಸ್ತ್ರೀಯರು ವಿದ್ಯಾಭ್ಯಾಸವನ್ನು ತ್ಯಜಿಸುವರು. ಈ ಅಭ್ಯಾಸವು ಬಿಡಲ್ಪಡಬೇಕು.

ಪ್ರೌಢ ವಿದ್ಯಾಭ್ಯಾಸದಲ್ಲಿ ಉತ್ತಮ ಶಿಕ್ಷಣ ಭೋದನೆಯು ತಯಾರಾಗಬೇಕು. ಇಂದಿನ ಬಹಳ ಹಿಂದಿನಿಂದ ಸಂಸ್ಥಾಪಿತವಾದ ಜನರು ಇದರ ಈ ಸಂಸ್ಥೆಯು ಅದರಲ್ಲಿ ಆಡಿಕೊಂಡಿದ ಉದ್ದೇಶಕ್ಕೆ ಒಳಗಾಗಿದೆ. ಇದನ್ನು ವಿಮೋಚನೆಗೊಳಿಸುವ ರೀತಿಯಲ್ಲಿ ವ್ಯಾಖ್ಯಾನವು ನಡೆಯಬೇಕು. ಅವರ ಶಾಸ್ತ್ರ ಇತ್ಯಾದಿ ಪುರಾಣ ಗ್ರಂಥಗಳಲ್ಲಿ ಅವರಿಗೆ ಪಾಠವು ಕೊಡಲ್ಪಡಬೇಕು. ಸರ್ವ ಸ್ತ್ರೀಪುರುಷರ ಪ್ರೌಢ ವಿದ್ಯಾಭ್ಯಾಸಕ್ಕೆ ಏರ್ಪಾಡುಗಳಾಗಬೇಕು. ಈ ಕುರಿತು ವಿಶ್ವವಿದ್ಯಾಲಯಗಳು ಹೊಸ ಯೋಜನೆಗಳನ್ನು ಮಾಡಬೇಕು. ಹಿಂದೂಸ್ಥಾನದ ಹಳ್ಳಿಗಳಲ್ಲಿ ಪ್ರೌಢ ವಿದ್ಯಾಭ್ಯಾಸವನ್ನು ಉತ್ತಮ ರೀತಿಯಲ್ಲಿ ನಡೆಯಿಸಬೇಕು.

ಜಪಾನು, ಅಮೇರಿಕಾ ರಷ್ಯಾ ಇತ್ಯಾದಿ ದೇಶಗಳಂತೆ ಹಿಂದೂದೇಶವೂ ಪ್ರಗತಿಹೊಂದಬೇಕಾದರೆ, ಪ್ರತಿಯೊಬ್ಬ ಪ್ರಾಯಸ್ಥರ ಭಾರತಪುತ್ರರು ವಿದ್ಯಾವಂತರಾಗಬೇಕು. ವಿದ್ಯೆಯಿಂದ ಅವರಲ್ಲಿ ಕವಿದ ಅಂಧಕಾರವು ಮಾಯವಾಗುವುದು. ಆಗ್ಗೆ ಅವರಿಗೆ ಸ್ವತಂತ್ರರು ಶಾಂತಿಯೂ ತನ್ನಷ್ಟಕ್ಕೇ ಬರುವವು.

ಪಂಡಿತರೂ ವಿದ್ಯಾರ್ಥಿಗಳೂ.

ಬಡಕೀಲ ಕೃಷ್ಣಭಟ್, ಮಂಗಳೂರು

ಪ್ರಪಂಚದಲ್ಲಿ ಪರಿವರ್ತನೆ ಹೊಂದದ ವಸ್ತುವು ಇಲ್ಲ. ಪಂಚ ಕಾಲವು ಗತಿಸಲು ಎಲ್ಲವೂ ಮಾರ್ಪಡುವುವು. ಪತಿ ಗಂಡನ ಮೇಲೆ ಹೆಂಡತಿ ಅಧಿಕಾರವನ್ನು ನಡೆಸುವುದು, ಜನಕನ ಮೇಲೆ ಸಂಜಾತನ ಸತ್ತೆಯಾಗುವುದು, ಅಬಲರ ಮೇಲೆ ಬಲಯುತರ ಬಲಪ್ರದರ್ಶನ ಪಾಮರರ ಮುಂದೆ ಪಂಡಿತರ ಪಾಂಡಿತ್ಯದ ಹೊರಸೂಸುವಿಕೆ, ಇವುಗಳು ನಾವು ನೋಡಿದ ವಿಷಯಗಳಷ್ಟೆ. ಇವೆಲ್ಲ ಕಲಿಪುರುಷನ ದೆಸೆಯಿಂದುದವಿಸಿದ್ದವುಗಳಂತೆ.

ಪತಿಯೇ ಪರದೈವವೆಂದು ಪೂಜಿಸುತ್ತಿದ್ದ, ತಂದೆಯನ್ನು ದೇವಾಂಶ ಸಂಭೂತನೆಂದು ಭಯಭಕ್ತಿಯಿಂದ ಕಾಣುತ್ತಿದ್ದ, ಗುರುಗಳನ್ನು ದೇವಮೂರ್ತಿಗಳೆಂದು ತಿಳಿಯುತ್ತಿದ್ದ ಕಾಲವೊಂದಿತ್ತು. ಆ ಕಾಲ ನಮ್ಮ ಕಣ್ಣಿಂಟಿನೊಳಗಿಲ್ಲ. "ಬಾ" ಎಂದು ಕೂಗಿ ಕರೆದರೂ ಬರುವುದಿಲ್ಲ. ಕಾಲಚಕ್ರದ ತಿರುಗುವಿಕೆಯ ದೆಸೆಯಿಂದಾಗಿ ಅವೆಲ್ಲಾ ತಿರುಗಾ ಮುರುಗಾ ಆಗಿಬಿಟ್ಟವೆ. ಈ ಪರಿವರ್ತನೆ ನಮ್ಮ ದೇಶದಲ್ಲೂ ಕಾಣಬರುತ್ತಿದೆ. ವಿದ್ಯಾ ವಿಚಾರದಲ್ಲಿ ಅದು ಅಧಃಪತನವನ್ನು ಕಂಡೇ ಬಿಟ್ಟಿದೆ. ಈ ಕಾಲದಲ್ಲಿ ಓನಾಮವನ್ನು ಕಲಿಸಿದ ಗುರುವನ್ನು 'ಗುರು' ಎಂದು ಭಾವಿಸುವುದಕ್ಕೂ ವಿದ್ಯಾರ್ಥಿಗಳು ಹಿಂಜರಿಯುವುದಿಲ್ಲ. ಹಿಂದಿನ ಕಾಲದ ಗುರು ಶಿಷ್ಯರು ಏಕಮಾನಸರಾಗಿದ್ದರೆಂತ ನಾವು ಹೇಳಿದ್ದನ್ನು ಕೇಳಿದ್ದೆವು. ಈಗ ಅದು ಒಡೆಯ ಪುಸ ಹೋಲಿಕ ಆಕಾರದ ವಿಷಮಸ್ಥಿತಿಗೆ ಬಂದುಮುಟ್ಟಿದೆ. ಎತ್ತು ಏರಿಗೆಳೆಯುತ್ತೆ, ಎಮ್ಮೆ ಕೆರೆಗೆಳೆಯುತ್ತೆ ಎಂಬ ಗಾದೆಯ ಒಂದು ನುಡಿಯುದೆಯಷ್ಟೆ ಹಾಗಿದೆ.

ಈ ಗುರು ಶಿಷ್ಯರೊಳಗಿರತಕ್ಕ ಒಡಕು ಕನ್ನಡ ಅಧ್ಯಾಪಕರಲ್ಲಿ ಯೂ ಅವರಡಿಯಲ್ಲಿ ಕಲ್ತವರೊಡನೆಯೂ ಕಣ್ಣಿಗೆಬರುವುದು. ಕನ್ನಡ ಪಂಡಿತರಿಗೂ ವಿದ್ಯಾರ್ಥಿಗಳಿಗೂ ಅಂದರೆ ಹಾಗೇ ಹಾಗೇ ಎಷ್ಟು ಬೇಕೋ ಅಷ್ಟೆ'

ಕನ್ನಡ ಪಂಡಿತರಿಗೆ ವಿದ್ಯಾರ್ಥಿಗಳನ್ನು ಕಂಡಾಗುವದಿಲ್ಲವೆನ್ನುವುದರ ಬದಲಾಗಿ ಆಧುನಿಕ ರೀತಿಯಲ್ಲಿ ಕಲಿಸಲ್ಪಟ್ಟ ವಿದ್ಯಾರ್ಥಿಗಳಿಗೆ ಹಳೇಯ ರೀತಿಯಲ್ಲಿ ನಡೆಯುತ್ತ ಬರುವ ಕನ್ನಡ ಪಂಡಿತರನ್ನು ಕಂಡಾಗುವುದಿಲ್ಲ ಎಂದನ್ನುವುದು ಸಮಂಜಸವೂ ಯೋಗ್ಯವೂ ಆದ ವಾಕ್ಯರಚನೆಯೆಂದು ನಾನು ಊಹಿಸುತ್ತೇನೆ.

ವಿದ್ಯಾರ್ಥಿಗಳು ವಿಮನಸ್ಕರಾಗುವುದಕ್ಕೆ ಉಪಾಧ್ಯಾಯರಲ್ಲಿರುವ ದುರ್ಗುಣಗಳೆಲ್ಲ (ಪರೀಕ್ಷಿಸಿದ್ದರೆ ಇವರು ದೋಷರಹಿತರೇ) ಪಾಂಡಿತ್ಯವಿರದಿರುವಿಕೆಯಲ್ಲ. ಪಂಡಿತರಲ್ಲಿರಬೇಕಾದ ಗುಣಗಳವರಲ್ಲಿವೆ. ಆದರೆ ಶಬ್ದಕೋಶದಲ್ಲಿನ ಅದೆಷ್ಟೋ ಶೋಚನೀಯ ಶಬ್ದದ ಪ್ರಯೋಗವನ್ನು ನಾನಿಲ್ಲಿ ಮಾಡಬೇಕಾಗಿದೆ? ಈಗಿನ ವಿದ್ಯಾರ್ಥಿಗಳಿಗೆ ಪಂಡಿತರಲ್ಲಿರತಕ್ಕ ಅಪೇಕ್ಷ ಹಾಗೂ ಅಮೂಲ್ಯ ಗುಣಗಳನ್ನು ಕಂಡುಕೊಳ್ಳ ತಕ್ಕ ಬುದ್ಧಿಯನ್ನು ವಿಧಾತನು ಕರುಣಿಸಲಿಲ್ಲ. ವಿಧಾತನು ಕೊಡಲಿಲ್ಲವೋ ಅಥವಾ ಅದನ್ನವರು ದುರುಪಯೋಗಿಸಿದರೋ? 'ಬೆಳ್ಳಗಿದ್ದುದನ್ನು ಹಾಲೆಂದು ಭಾವಿಸಿ ವಿದ್ಯಾರ್ಥಿಗಳು ಮೋಸಹೋಗುತ್ತಾರೆ.' ಕನ್ನಡ ಪಂಡಿತರು ತೋರುವಾಗ ಗರೀಬರಂತೆ ಕಂಡುಬಂದರೂ ವಿದ್ವತ್ತಾದ ಸ್ಥಿತಿ ಅವರಿಗೇನು ಗೊತ್ತು?

ಪಂಡಿತರು ಹಳತನ್ನು ಹೊನ್ನೆಂದು ಭಾವಿಸುವಂತಹವರು. ವಿದ್ಯಾರ್ಥಿಗಳು ಹಳೆಯದರಲ್ಲಿ ವಿರಕ್ತಿಯುಳ್ಳವರು. ಇಂತಹರನ್ನು ಒಟ್ಟುಗೂಡಿಸುವುದು ಅಂತರ್ಯಾಮಿಗೂ ಕಷ್ಟವೆಂದು ಅಸಾಧ್ಯವೆಂದ ತೋರದಿರಲಾರದು.

ಪಂಡಿತರು 'ಫೇಶಾನು' (fashion) ಎಂಬ ಬಾಧದಿಂದ ಬಗಿಯಲ್ಪಟ್ಟವರಾಗಿಲ್ಲ. ತಲೆಗೊಂದು ವಸ್ತ್ರ, ಹಳೇಯ ತರದ, ಕೆಳಗೆ ಬಟ್ಟೆ ಕೊರೆತವಾಗ ದಪ್ಪ ಭಯದಿಂದ ಮೇಲೆಯೇ ಇರುವ ಒಂದು ಕಚ್ಚೆ, ಹಳತಾದ, ಹಲವು ದಿಕ್ಕುಗಳಲ್ಲಿ ಹರಿದು ದಾರಗಳಿಂದ ಸರಿಮಾಡಲ್ಪಟ್ಟ ಬೋಳಿಯ ಮನೆಯನ್ನು ಕಾಣದ ಕೋಟು, ಹರದಾರಿ ದೂರಕ್ಕೆ ಕಂಡುಬರತಕ್ಕ ತಿಲಕ, ಇದು ಅವರ ವೇಷ. ಬೋಳಿಸದೆ ಇರುವ ಗಡ್ಡ, ಈ ತೆರದಿಂದ ಕಾಣಬರುವ ಗುರುಗಳನ್ನು ಗುರು ಎಂದು ಸಂಬೋಧಿಸಲು ನಾಚಿಕೆಯಾಗುವುದರಲ್ಲಿ ಹೆಚ್ಚಿನ ಆಶ್ಚರ್ಯವೇನೂ ಕಂಡುಬರುವುದಿಲ್ಲ.

ಈಗಿನ ವಿದ್ಯಾರ್ಥಿಗಳು ಓದುವ ಪಾಠಗಳು ಅವರಿಗೂ ಇವರಿಗೂ ಎಲ್ಲಿಯ ಗಂಟು? ಅವರೊಳಗೆ ನಿಕಟ ಸಂಬಂಧವಿರುವುದೆಂಬುದು ಕಲ್ಪನಾತೀತ. ವಿಚಾರ ನೇಮ ತಪ್ಪಿದುದು ಒಟಮಾದ ಕಾರಣವೇನೆಂದರೆ ಈ ಸ ವಿದ್ಯಾರ್ಥಿಗಳಿಗೆ ಕನ್ನಡ ಅಂದರೆ ಅಷ್ಟಕ್ಕಷ್ಟೇ. ಕನ್ನಡದಲ್ಲಿ ಒಂದಿಷ್ಟು ಪ್ರೇಮವಿಲ್ಲ. 'ತಗೆ ನಿನ್ನ ಕನ್ನಡಂ' ಎಂಬ ಕವಿಯ ಉಕ್ತಿಯಂತೆ ಹೇಳತಕ್ಕವರೇ ಹೆಚ್ಚು. ನಾವು ಕನ್ನಡಿಗರು ಎಂಬ ಅಭಿಮಾನವಿಲ್ಲ. ಅವರಲ್ಲಿ (ದುರಭಿಮಾನವಿದೆ) ಕನ್ನಡ ನುಡಿಯಲ್ಲಿರುವ ತಾತ್ವಿಕತೆಯನ್ನು ಅದನ್ನು ಕಲಿಸುವ ಕನ್ನಡ ಪಂಡಿತರ ಮೇಲೆ ತೋರಿ ಇಷ್ಟಾರ್ಥವನ್ನು ಪೂರೈಸಿಕೊಳ್ಳುತ್ತಾರೆ. ಮಗುವಿನ ಮೇಲಿರುವ ಸಿಟ್ಟನ್ನು ಅದರ ಮಾತಾಪಿತರನ್ನು ನಿಂದಿಸಿ ತೋರಿಸುವ ಕಾಡಿನ ಮಾನವರಂತಿದೆ ಆ ವಿದ್ಯಾರ್ಥಿಗಳ ಬುದ್ಧಿ.

ಮೇಲೆ ಹೇಳಿದವುಗಳು ಕನ್ನಡ ಪಂಡಿತರೊಳಗೆ, ಕಲಿವಾಕುಲದಿಂದು (?) ಬರುವ ನವತರುಣರೊಳಗೆ ವೈಮನಸ್ಸು ಉಂಟಾಗುವುದಕ್ಕೆ ಕಾರಣ.

ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಾಯರ ಸಂಘ.

ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಾಯರ ಸಂಘದ ೨ನೇ ಮಹಾ ಅಧಿವೇಶನವು ಈ ಜೂನ್ ತಾರೀಕಿನ ಬೋರ್ಡ್ ಹೈಸ್ಕೂಲಿನಲ್ಲಿ ಇದೇ ತಿಂಗಳ ೨೯ ರಿಂದ ೩೦ರ ವರೆಗೂ ಜರಗುವುದು. ಈ ಸಂದರ್ಭದಲ್ಲಿ ಮದ್ರಾಸು ಸಂಸ್ಥಾನದ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರಾದ ವಿ. ಆರ್. ಎಂ. ಸಾವ್ರರ್ ಎಂಬವರು ಕಾರ್ಕಳಕ್ಕೆ ಚಿತ್ರ ಬಾಲಕರಿಗೆ ಕಲಿಸುವ ವಿಧಾನದ ಕುರಿತು ಕೆಲವು ಪಾಠಗಳನ್ನು ಕೊಡಲಿರುವರು. ಹೊಸ ಸೂಚನೆಗಳನ್ನು ಕೊಡಲಿರುವವರು, ಅಥವಾ ಹೊಸ ಠರಾವುಗಳನ್ನು ಜಾರಿಗೆ ತರಲಿರುವ ಅವುಗಳನ್ನು ಅದೇ ತಾರೀಕಿನೊಳಗೆ ಸಂಘದ ಕಾರ್ಯದರ್ಶಿಯವರಿಗೆ ತಿಳಿಸತಕ್ಕದು.

ಜೊತೆಕಾರ್ಯದರ್ಶಿಗಳು,



Distributors for South Kanara

Raghavendra Ranga Pai, Car Street Mangalore

ಕುಂದಾಪುರ ಪ್ರವರ್ತಕರು.– ಕಾಮತ್ಸ್ ಸ್ವದೇಶೀ ಎಂಪೋರಿಯಂ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ. ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು' ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು

ವೃದ್ಧಿ ಕಾಸವ— ನಿತ್ರಾಣಕ್ಕೆ ಅತ್ಯಂತ ಗುಣಕಾರಿ

ಮಹಾಮದನ ಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಹಿಮಸಾಗರ ತೈಲ— ನಿದ್ರಾ ನಾಶಕ್ಕೆ ಅತೀ ಉಪಯುಕ್ತ

ಮಹಾಮಾಷ ತೈಲ - ಪಕ್ಷಘಾತಕ್ಕೆ ಅತ್ಯಂತ ಗುಣಕಾರಿ

ಗರ್ಭಪಾಲ - ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ

ಗುಡ್ಡ ಪಿಪ್ಪಲಿ— ಲಿವರ್ ರೋಗಕ್ಕೆ ಅತ್ಯುತ್ತಮ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು, ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದಕ್ಷಿಣ ಕನ್ನಡ.

ವಿಕಾಸನೆ.

(Evolution.)

'ಶಂಕರ'

ನಮ್ಮ ಈ ಬ್ರಹ್ಮಾಂಡದ ಸೃಷ್ಟನೆಯ ಕುರಿತು ವಿವಿಧ ತರದ ಅಭಿಪ್ರಾಯಗಳು ವಾಡಿಕೆಯಲ್ಲಿವೆ ಹಿಂದುಗಳ ಅಭಿಪ್ರಾಯ, ಬೈಬಲಿನ ಅಭಿಪ್ರಾಯ, ವಿಜ್ಞಾನಿಗಳ ಅಭಿಪ್ರಾಯ ಇತ್ಯಾದಿಗಳು. ವಿವಿಧ ಜನಾಂಗಗಳಿಗೆ ಈ ಕುರಿತು ವಿವಿಧ ಭಾವನೆಗಳಿವೆ ಸೃಷ್ಟಿಯ ಮೂಲ ಕಾರಣವನ್ನು ತಿಳಿಯುವ ಕುತೂಹಲವು ಅತಿ ಪ್ರಾಚೀನ ಕಾಲದಿಂದ ವಾಡಿಕೆಗೆ ಬಂದಿರುತ್ತದೆ ಆದರೆ, ವಿಜ್ಞಾನ ಯುಗವು ಮೂಡುವ ತನಕ ಈ ಕುರಿತು ಕೇವಲ ಕೆಲವು ಕಲ್ಪನೆಗಳು ಮಾತ್ರ ಮೂಡಿ ಬಂದು. ಅವುಗಳಲ್ಲಿ ಕೆಲವು ದೃಢವಾಗುತ್ತ ಬಂದುವು ಆದರೆ, ಈಗಿನ ವಿಜ್ಞಾನಯುಗದಲ್ಲಿ ಬ್ರಹ್ಮಾಂಡದ ಸೃಷ್ಟಿಯ ಕುರಿತು ಒಂದು ನವೀನ ಅಭಿಪ್ರಾಯವು ಹೊರಬಿದ್ದಿರುತ್ತದೆ ಈ ಅಭಿಪ್ರಾಯವು ಅನೇಕ ಶೋಧೆಗಳ ಫಲಿತಾಂಶವಾಗಿ ಒಳ್ಳೇ ಕಾರಣಗಳಿಂದ ಕೂಡಿದೆ ಇಷ್ಟರ ತನಕ ರೂಢಿಯಲ್ಲಿರುವ ಇತರ ಎಲ್ಲಾ ಅಭಿಪ್ರಾಯಗಳು ಇದರಿಂದ ಅದರ್ಶನಮಯವಾಗಿವೆ

ಬ್ರಹ್ಮಾಂಡವು ವಿಕಾಸವಾದುದೆಂದು ವಿಜ್ಞಾನದಿಂದ ನಮಗೆ ತಿಳಿದುಬಂದಿರುತ್ತದೆ ಭೂಮಿಯು ಜನಿಸಿ ಅನೇಕ ಮಿಲಿಯ ವರ್ಷಗಳಾಗಿವೆ ಅದು ಸೂರ್ಯ ಮತ್ತು ಇತರ ನಕ್ಷತ್ರಗಳಿಗಿಂತ ಕಡಿಮೆ ಪ್ರಾಯದ್ದಾಗಿರುತ್ತದೆ ಈ ಭೂಮಿಯಲ್ಲಿರುವ ಕಲ್ಲಿದ್ದಲು ಇತ್ಯಾದಿಗಳ, ಉಂಟಾಗಲು ಮಿಲಿಯಗಟ್ಟಲೆ ವರ್ಷಗಳು ಬೇಕಾದುವು ಎಂದು ಕೆಲವು ಪ್ರಸಿದ್ಧ ಭೂಗರ್ಭ ಶಾಸ್ತ್ರಜ್ಞರು ಕಂಡುಹಿಡಿದಿರುವರು ಇವರ ಈ ಸೂತ್ರಗಳಿಗೆ ಒಳ್ಳೇ ಕಾರಣಗಳನ್ನು ಶೋಧನಾಲಯಗಳ ಮೂಲಕ ಕಂಡುಹಿಡಿಯಲ್ಪಟ್ಟಿವೆ ವಿಜ್ಞಾನಿಗಳು ಅನೇಕ ಸೂತ್ರಗಳನ್ನು ಅನುಸರಿಸಿ, ಈ ಕುರಿತು ಶೋಧನಾಕಾರ್ಯಗಳನ್ನು ನಡೆಯಿಸಿ, ಅವರ ಮೇಲಿನ ತತ್ವವನ್ನು ದೃಢೀಕರಿಸಿರುವರು ಬರಿ ಕಲ್ಪನೆಯಲ್ಲ ಆದರೆ, ವಿವಿಧ ಮತಗಳಲ್ಲಿರುವ ಅಭಿಪ್ರಾಯಗಳ ಮೇರೆಗೆ ಭೂಮಿಯ ಪ್ರಾಯವು ಕೆಲಸಾವಿರ ವರ್ಷಗಳಿಂದಿದೆ ನಮ್ಮ ಯುಗದ ವಿಜ್ಞಾನಿಗಳು ಕಂಡುಹಿಡಿದ ಸತ್ಯಗಳ ಎದುರು ಇವರ ಕಲ್ಪನೆಗಳು ಮಾಯವಾಗುತ್ತಿವೆ ಹೀಗೆ ಪುರಾತನ ಕಾಲದ ಬೈಬಲ್ ಹಿಂದೂಶಾಸ್ತ್ರ ಇತ್ಯಾದಿಗಳಲ್ಲಿರುವ ಈ ಸೃಷ್ಟನೆಯ ಕುರಿತು ಅಭಿಪ್ರಾಯಗಳು ವಿಜ್ಞಾನಿಗಳ ಸೂತ್ರಗಳಿಗೆ ವಿರೋಧವಾಗಿವೆ ದೃಷ್ಟಾಂತವಾಗಿ ವನಸ್ಪತಿ ವರ್ಗವು ಸೂರ್ಯನಿಗಿಂತ ಮೊದಲು ಸೃಷ್ಟಿಯಾಯಿತಂತೆ ಸೂರ್ಯನಿಲ್ಲದೆ ವನಸ್ಪತಿಗಳು ಬೆಳೆಯುವವೆ? ಈ ಸೂತ್ರಗಳು ಬರೆ ಮನೋಭಾವಗಳಾಗಿವೆ

ಸೂರ್ಯ ಮತ್ತು ಇತರ ಗ್ರಹಗಳು, ಈಗ ಪ್ರಸಿದ್ಧಿಗೆ ಬರುತ್ತಿರುವ ಬ್ರಹ್ಮಾಂಡವು ವಿಕಾಸವಾದುದೆಂಬ ಸೂತ್ರವು ಏನನ್ನುತ್ತದೆ? ಇದರ ಉತ್ತರಕ್ಕಾಗಿ ನಾವು ಗಗನ ಮಂಡಳವನ್ನು ಪರೀಕ್ಷಿಸಬೇಕು ಜ್ಯೋತಿಷಿಯು ತನ್ನ ವಿಚಿತ್ರ ಶೋಧನಾ ಶಕ್ತಿಯಿಂದ ಈ ಬ್ರಹ್ಮಾಂಡದ ವಿಕಾಸನೆಯ ಕುರಿತು ಅನೇಕ ಸತ್ಯಗಳನ್ನು ತಿಳಿದಿರುವನು ಈತನು ಒಂದು ತಾರಾಮಂಡಳವನ್ನು (NEBULA) ಕಂಡುಹಿಡಿದಿರುವನು ಈ ತಾರಾಮಂಡಳದಲ್ಲಿ ಸುತ್ತುತ್ತಿರುವ ಒಂದುಬಗೆಯ ಚಲನೆಯು ಕಂಡುಹಿಡಿಯಲಾಯಿತು ಈ ಚಲನೆಯಿಂದ ತಾರಾಮಂಡಳದಿಂದ ಸೂರ್ಯನು ಹೊರಟನು, ಸೂರ್ಯನಿಂದ ಭೂಮಿ ಇತ್ಯಾದಿ ಗ್ರಹಗಳು ಜನಿಸಿದವು. ಎಲ್ಲಾ ಈ ಚಲನೆಯ ದೆಸೆಯಿಂದ ಈ ವಿಕಾಸನೆ ಕಾರ್ಯವು ಈಗಲೂ ನಡೆಯುತ್ತಿದೆ ಜ್ಯೋತಿಷ್ಯರ ಟೆಲಿಸ್ಕೋಪುಗಳಿಂದ ಸೂರ್ಯಮಂಡಳದ ರಚ, ...ಸರ್ವವೂ ವಿಕಾಸವಾದುದೆಂಬುದು ಖಚಿತವಾಯಿತು. ಹೀಗೆ ಇವುಗಳೆಲ್ಲಾ ಈ ರೀತಿಯಲ್ಲಿ ಸೃಷ್ಟನೆಯಾದುವೆಂದು ಹೇಳುತ್ತಿರುವಾಗ ನಮ್ಮ ಭೂಮಿಯ ಸೃಷ್ಟನೆಯ ಕುರಿತು ನಾವು ಯಾಕೆಬೇರೆಅಭಿಪ್ರಾಯಪಡುವವರಾಗಬೇಕು? ಈ ಭೂಮಿಯು ಉಂಟಾದುದು ವಿಕಾಸನೆಯ ಫಲದಿಂದ.

ನಮ್ಮ ಭೂಮಿಯನ್ನು ಪರೀಕ್ಷಿಸೋಣ ಇದರ ಹೊರಮೈಯಲ್ಲಿ ನಮ್ಮ ಮೇಲಿನ ಸೂತ್ರಕ್ಕೆ ಆಧಾರವಾಗುವ ಯಾವ ಸಾಕ್ಷಗಳು ಕಾಣಿಸುತ್ತವೆ? ವಿಕಾಸನೆಯ ಕುರುಹುಗಳು ಇದರ ಮೇಲೆ ತುಂಬಾ ಕಾಣಿಸುತ್ತವೆ ಪ್ರಕೃತಿಯು ತನ್ನ ಪಂಚಭೂತ ಮತ್ತಿತರ ಬಲಗಳಿಂದ ನಡೆಯಿಸಿದ, ಕಾರ್ಯವು ಇದರ ಮೇಲೆ ಸಂಪೂರ್ಣ ಗೋಚರವಾಗುತ್ತದೆ ಅಗ್ನಿ, ನೀರು, ಗಾಳಿ ಮತ್ತು ಹಿಮ ಇವುಗಳ ಪ್ರೇರಣೆಯ ಪರಿಣಾಮಗಳು ಅದರ ಮೇಲೆ ಚಿತ್ರಿಸಿವೆ ಈ ಪರಿಣಾಮಗಳನ್ನು ಪರಿಶೀಲಿಸಿ ಭೂಶಾಸ್ತ್ರಜ್ಞರು ಭೂಮಿಯ ಸೃಷ್ಟಿಯ ಕುರಿತು ಅನೇಕ ಸತ್ಯ ಶೋಧನೆಗಳನ್ನು ಮಾಡಿರುವರು ಜ್ವಾಲಾಮುಖಿ, ಬಂಡೆಕಲ್ಲಿನ ಮೇಲೆ ಅಗ್ನಿಯ ಪ್ರತಾಪ, ಸಂಸ್ಕರಗಳು ಉಂಟಾಗುವಿಕೆ, ಸಮುದ್ರಪ್ರದೇಶ ಬದಲಾವಣೆ, ಪರ್ವತಗಳು ಉಂಟಾಗುವುದು, ಮಳೆಯ ಪರಿಣಾಮಗಳು, ಗಾಳಿಯ ದೆಸೆಯಿಂದ ಬಂಡೆಕಲ್ಲುಗಳು ಸವೆದುದು, ಮರುಳು ಇತ್ಯಾದಿ ಉಂಟಾಗುವುದು, ಹೀಗೆ ಭೂಮಿಯ ಮೇಲೆ ಉಂಟಾಗುವ ಘಟನೆಗಳನ್ನು ಪರಿಶೀಲಿಸಿದರೆ,(ಇವುಗಳನ್ನುಪರಿಣಮಿಸುವ ಕಾರಣ ಬದಲಾಗುವುದಿಲ್ಲವೆಂಬುದು ಖಚಿತ)ಭೂಮಿಯ ಹಿಂದಣಚರಿತ್ರೆಯು ನಮಗೆ ದೊರಕುತ್ತದೆ ಭೂಮಿಯು ನಾವು ಈಗ ನೋಡುವ ರೂಪಕ್ಕೆ ಹೇಗೆ ಬಂತೆಂಬುದರ ಕಾರಣವು ಸಂಪೂರ್ಣವಾಗಿ ಹೊಳೆಯುತ್ತದೆ ಅದರ ಮೇಲೆ ಬದಲಾವಣೆಗಳು ಯಾವಾಗಲೂ ನಡೆಯುತ್ತವೆ ಈ ವರ್ತನೆಯ ದಾಖಲೆಗಳು ಭೂಮಿಯ ಮೇಲೆಲ್ಲಾ ಕಾಣಿಸುತ್ತವೆ-ಇದಕ್ಕನ್ನುತ್ತಾರೆ 'ವಿಕಾಸನೆ' Evolution' ಎಂದು

ಭೂಮಿಯು ಜೀವಾದಿಗಳ ನೆಲೆಯಾಗಬೇಕಾದರೆ ಬಹಳ ಸಮಯ ತಗಲಿತು 'ವಿಕಾಸನೆ'ಯು ಮುಂದೆ ಸಾಗಿತು ಕ್ರಮೇಣ ಜೀವಾದಿಗಳು ಕಾಣಿಸಿಕೊಂಡುವು ಜೀವಾದಿಗಳ ಹೇಗೆ ಉಂಟಾದುವು, ಅವುಗಳ ಮೂಲ ಇತ್ಯಾದಿಗಳ ಕುರಿತು ಮರ್ಮ, ಈ ಜಗತ್ತಿನ ಯಾವ ವಿಜ್ಞಾನಿಗಳಿಗೂ ಕಂಡುಹಿಡಿಯಲು ಸಾಧ್ಯವಾಗಲಿಲ್ಲ ಈವಿಚಾರದಲ್ಲಿ ವಿಜ್ಞಾನಿಗಳು ಇನ್ನೂ ಅಂಧಕಾರದಲ್ಲಿರುವರು 'ವಿಕಾಸನೆ'ಯು ಯಾವ ಬದಲಾವಣೆ ಹೊಂದಿಕೊಂಡು ಮುಂದೆ ಸಾಗುತ್ತಿರುವಾಗ ಜೀವಾದಿಗಳುಂಟಾದುವು?- ಎಂದರೆ, ನಿರ್ಜೀವ ವಸ್ತುಗಳಿಂದ ಸಜೀವ ವಸ್ತುಗಳುಂಟಾದುವೆಂದು ಖಚಿತವಾಗುತ್ತದೆ ಆದರೆ, ಪ್ರಕೃತಿಯ ಇತರ ವರ್ತನೆಗಳನ್ನು ತಿಳಿದು, ಇದು ಹೀಗಾಗಬೇಕೆಂಬುದು ಒಂದು ಊಹನೆ ಮಾತ್ರವಲ್ಲದೆ ಇದರ ಮರ್ಮವನ್ನು ಇಷ್ಟರ ತನಕ ಕಂಡುಹಿಡಿಯಲಿಲ್ಲ 'ವಿಕಾಸನೆ'ಯು ಇದರ ಕಾರಣವಲ್ಲದಿದ್ದರೆ,-ಬೇರೆ ಕಾರಣಗಳನ್ನು ಕಂಡುಹಿಡಿಯಲು ಅಸಾಧ್ಯವು

'ವಿಕಾಸನೆ'ಯು ಪ್ರಾರಂಭವಾಗಿ ಎಷ್ಟು ಸಮಯವಾಯಿತು? ಅಂದರೆ ಈ ಭೂಮಿಯ ಪ್ರಾಯವೆಷ್ಟು? ೧೯ನೆಯ ಶತಮಾನದ ವಿಜ್ಞಾನಿಗಳು ಅದು ೨೦ರಿಂದ ೨೭ ಮಿಲಿಯ ವರ್ಷಗಳೆಂದು ಅಂದಾಜು ಮಾಡಿದ್ದರು ನಂತರದ ಶೋಧನಾ ಪುರುಷರು ಇದನ್ನು ಹೆಚ್ಚಿಸಿದರು ಕಲ್ಲಿದ್ದಲು ರಚನೆಯಾಗಿ ೨೫೦ ಮಿಲಿಯ ವರ್ಷಗಳಾದುವೆಂದು ಈಗ ದೃಢವಾಗಿರುತ್ತದೆ ಭೂಮಿಯಲ್ಲಿರುವ ಅತೀ ಹಳೇಯದಾದ ಲೋಹದ ಪ್ರಾಯವು ೧೫೦೦ ಮಿಲಿಯ ವರ್ಷಗಳೆಂದು ಖಚಿತವಾಗಿರುತ್ತದೆ ಇವೆಲ್ಲಾ ಆಧಾರಗಳ ಮೇಲೆ ಹೊಂದಿಕೊಂಡು ಭೂಮಿಯ ಪ್ರಾಯವನ್ನು ೪೦೦೦ ಮಿಲಿಯ ವರ್ಷಗಳೆಂದು ಲೆಕ್ಕ ಮಾಡಿರುವರು

ಜೀವಾದಿಯು ಪ್ರಾರಂಭದಿಂದ ಇದ್ದುದೆಂದು ಭಾವಿಸಿದರೂ ಅದು ಈಗಿನ ರೂಪವನ್ನು ಹೊಂದಲು 'ವಿಕಾಸನೆ'ಯು ಕಾರಣವೆಂದು ಪ್ರಕೃತಿಯು ಇಷ್ಟರ ತನಕದ ಚರಿತ್ರೆಯಿಂದ ತಿಳಿದುಬರುತ್ತದೆ ನಿರಂಜನವಾಗಿರುವ ಈ ಜೀವಾದಿ ಪ್ರಾರಂಭದಲ್ಲಿ ಬಹಳ ನೀಳುತರ ಗತಿಯುದ್ದಾಗಿದ್ದು, ಕ್ರಮೇಣ ಕೆಳತರಗತಿಯಿಂದ ಮೇಲ್ಪದವಿಗೂ ನಿರಂಜನದಿಂದ ಸಂಕೀರ್ಣಕ್ಕೂ ಹೀಗೆ ಅನೇಕ ತರದ ಬದಲಾವಣೆಗಳಾಗಿ,— ವನಸ್ಪತಿ ಮತ್ತು ಪ್ರಾಣಿವರ್ಗಗಳೆಂಬ ಎರಡು ವಿಭಾಗಗಳಾದುವುವೆನ್ನಬಹುದು ನಂತರ ಈ ಎರಡು ವಿಭಾಗಗಳಲ್ಲಿ ಕಾಲಕ್ರಮೇಣ ಬದಲಾವಣೆ ಇತ್ಯಾದಿಗಳು ನಡೆದು ನವೀನ ವಿಭಾಗಗಳುಂಟಾಗಿ, ಅವುಗಳು ಗುಣಿಸಿಕೊಂಡು,-ಕೊನೆಗೆ ಈಗಿರುವ ಭೂಮಿಯು ಉಂಟಾಯಿತು ಆದರೆ, 'ವಿಕಾಸನೆ' ಈ ರೀತಿ ನಡೆದಿರುತ್ತದೆಂದ ನಮಗೆ ಹೇಗೆ ತಿಳಿಯಿತು? ಪ್ರಕೃತಿಯ ಚರಿತ್ರೆವೆನಿಸುವ ಭೂಗರ್ಭದಲ್ಲಿ ಮೇಲಿನವುಗಳು ಬಹಳ ದೃಢವಾಗಿ ಚಿತ್ರಿಸಿವೆ ಇದನ್ನು ಮರೆಸಲು ಸಾಧ್ಯವಿಲ್ಲ ಇದರಿಂದ ತಪ್ಪುತಿಳುವಳಿಕೆಯಾಗಲು ಅವಕಾಶ ಕೂಡ ಇಲ್ಲಾ

'ವಿಕಾಸನೆ'ಯ ತತ್ವಕ್ಕೆ ಅನೇಕ ಆಧಾರಗಳು ದೊರಕಿವೆ ಪ್ರಸಿದ್ಧ ಗ್ರಂಥವೆನಿಸುವ ಎನ್‌ಸೈಕ್ಲೊಪೆಡಿಯಾ ಬ್ರಿಟನಿಕಾದಲ್ಲಿ ಇದಕ್ಕೆ ಆಧಾರವಾಗಿ ಅನೇಕ ಸತ್ಯಗಳು ಕೊಟ್ಟಿವೆ ಭೂಮಿಯ ಅಡಿಯಲ್ಲಿ ದೊರಕಿವೆ ಅತೀ ಪ್ರಾಚೀನ ಅಸ್ಥಿಪಂಜರಗಳು (Fossils), ಪ್ರಾಣಿವರ್ಗದ ಒಂದೆ ತರದ ಯೋಜನೆ, ಪ್ರಾಣಿವರ್ಗದ ವಿವಿಧವಿಭಾಗಗಳು, ವಿವಿಧ ಕಡೆಗಳಲ್ಲಿರುವ ಪ್ರಾಣಿವರ್ಗ, ಪ್ರಾಣಿವರ್ಗದಲ್ಲಾದ ಬದಲಾವಣೆ, ಪ್ರಾಣಿಗಳ ಅಂಗರಚನೆ, ಉತ್ಪತ್ತಿ ಆಕಾರಗಳ ಕುರಿತು ಶಾಸ್ತ್ರ (Biology), ಇವೆ ಮೊದಲಾದುವು ಅದರಲ್ಲಿ ಕೊಟ್ಟಿರುವ ಆಧಾರಗಳಲ್ಲಿ ಕೆಲವು

ಪ್ರಸಿದ್ಧ ವಿಜ್ಞಾನಿಗಳು ಬಹಳ ಸಮಯ ಶೋಧೆಗಳನ್ನು ನಡೆಯಿಸಿ, ಸತ್ಯಗಳನ್ನು ವ್ಯಕ್ತಪಡಿಸಿ 'ವಿಕಾಸನೆ' ಸೂತ್ರಕ್ಕೆ ಅನೇಕ ಆಧಾರಗಳನ್ನು ಕಂಡುಹಿಡಿದು ಸಮಸ್ತ ಸೃಷ್ಟಿಗೆ ಕಾರಣ 'ವಿಕಾಸನೆ' ಎಂಬುದು ದೃಢಪಡಿಸಿರುವರು. ವಿಜ್ಞಾನಿಗಳ ಬಹುಮತಗಳು 'ವಿಕಾ

(೯ನೇ ಪುಟವನ್ನು ನೋಡುವುದು)

ವಾತದ ನೋವಿನಿಂದ ಬಳಲುತ್ತಿದ್ದೆ

ಜೀವಮಾನದ ಸುಖವಿಲ್ಲೆಂದು ಚಿಂತಿಸುತ್ತಿದ್ದೆ

ಈಗ ಸರಿಯಾಗಿ ಮಾಳಿಗೆಯ ಮೆಟ್ಟಲುಗಳನ್ನು ಹತ್ತಬಹುದು

ಇದಕ್ಕಾಗಿ ಕ್ರುಶ್ಯೆನ್ ಲವಣವನ್ನು ಅಭಿನಂದಿಸುತ್ತೇನೆ.

ನಿಮಗೂ ಈ ಹೆಂಗಸಿಗೆ ಇದ್ದಷ್ಟೆ ವಾತರೋಗವಿದ್ದರೂ ಅಥವಾ ಆಗಾಗ ಮಾತ್ರ ಇಂತಹ ನೋವಿನಿಂದ ಬಳಲುತ್ತಿದ್ದರೂ, ಮೇಲೆ ಹೇಳಿದ ಹೆಂಗಸಿನ ಕತೆಯನ್ನು ಕೇಳಿದರೆ ಕ್ರುಶ್ಯೆನ ಲವಣದ ಮಹಿಮೆಯನ್ನು ಚೆನ್ನಾಗಿ ನೀವು ಅರಿಯುವಿರಿ

"ನಾನು ಕ್ರುಶ್ಯನ ಲವಣದ ಸೇವನೆಯಿಂದಾಗಿ ಒಂದು ವರುಷದೊಳಗಾಗಿ ಇಷ್ಟು ಗುಣವನ್ನು ಹೊಂದಿದುದನ್ನು ಕಂಡು ತುಂಬಾ ಆನಂದಿಸುತ್ತೇನೆ ನನ್ನ ಕಾಲುಗಳು ಈ ವಾತರೋಗದಿಂದ ಸಂಪೂರ್ಣವಾಗಿ ನಿಷ್ಪ್ರಯೋಜನವಾಗಿದ್ದುವು ಈಗ ಕ್ರುಶ್ಯನ ಲವಣದ ಸೇವನೆಯಿಂದ ಸರಿಯಾಗಿ ಓಡಾಡಬಲ್ಲೆನು ಕಳೆದ ವರುಷ ಒಂದು ಕಾಲನ್ನು ಸಹ ಬಗ್ಗಿಸಲು ಆಗುತ್ತಿರಲಿಲ್ಲ. ಜೀವಮಾನದಲ್ಲಿಯ ಸುಖಶಾಂತಿಗಳು ನನ್ನ ಪಾಲಿಗಿಲ್ಲವೆಂದೇ ನಾನು ಸದಾಕಾಲ ದುಃಖಿತೆಯಾಗಿದ್ದೆನು ಆದರೆ ಈಗ ನಾನು ಸಂಪೂರ್ಣ ಸುಖಿ ನನಗೆ ಅಜೀರ್ಣ ರೋಗವು ಬಹಳವಾಗಿತ್ತು. ಈ ಕ್ರುಶ್ಯೆನ ಲವಣವು ಅದನ್ನೂ ಹೋಗಲಾಡಿಸಿದೆ. ಈಗದನ್ನು ನಾನು ದಿನನಿತ್ಯದ ಸೇವನೆಯಾಗಿ ಮಾಡಿರುವೆನು"

Mrs M A

ಜ್ವರದಂತೆ ಈ ವಾತರೋಗವೂ ಕರುಳುಗಳಲ್ಲಿಯ ಅಜೀರ್ಣ ಪದಾರ್ಥಗಳಿಂದ ಉಂಟಾಗುತ್ತದೆ ಜನರಿಗೆ ಮಾತ್ರ ಇದರ ಅರಿವಿಲ್ಲ ಜೀರ್ಣವಾಗಿ ಉಳಿದ ಪದಾರ್ಥಗಳು ಈ ಕರುಳುಗಳಲ್ಲಿ ಕಲೆಯುತ್ತಾ ಇದ್ದು ಕಡೆಗೆ ಅದರಿಂದ ಹುಟ್ಟುವ ದ್ರಾವಕವು ಅದರಲ್ಲಿ ಮೊನೆಚಾದ ಸೂಜಗಳ ಹಾಗಿರುವ ಹರಳುಗಳು ಉದ್ಭವಿಸುವುವು ಇವೇ ವಾತರೋಗದ ಸಮಯ ನೋವನ್ನು ಕೊಡುವ ಪದಾರ್ಥಗಳು ಕ್ರುಶ್ಯನ ಲವಣವು ಈ ಹರಳುಗಳನ್ನು ಸವೆದು ನೀರನ್ನಾಗಿ ಮಾಡುವುದು ಅನಂತರ ನಿಮಗೆ ಚಿರಕಾಲವೂ ಶಾಂತಿ ಮತ್ತು ಸುಖ ನಿಶ್ಚಯ.



ಎಲ್ಲಾ ಕೆಮಿಸ್ಟರರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ಕ್ರುಶ್ಯನ ಲವಣವು ಮಾರಲ್ಪಡುತ್ತದೆ

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassan and Kadur districts.
2. Coorg, South Canara, Shimoga and Chitaldrug districts.
3. Tumkur, Kolar, Mangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY

New Era Technical School.

Near Market Square, Udipi.

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ.
(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)
ಇಲ್ಲಿ ಟ್ಯಾಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course and insure against unemployment. Details may be had on application to the Manager.

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc., in guaranteed colours. Silk Sarees & Coatings a Speciality. Work is conducted under the supervision of Textile experts. We undertake special orders to suit individual tastes.

Please inspect our goods at:

Raghavendra Ranga Pai, Car Street, Mangalore.

We deal in grey & Coloured Yarns Dyes Chemicals & Handloom accessories

M. Venkatesha Ranga Pai,
Proprietor

ಡಾಕ್ಟರ ವಾಮನ ಗೋಪಾಳರವರ



ಐ. ಡಿ. ಡಾಯಿಬೆಟ
ಸಾಕ್ಸರಿನ್
ಕಟ್ಟಿ ರಕ್ತಕ್ಕೆ ಪರಮೌಷಧ
೪೫ ವರ್ಷದ ಅನುಭವ
ಉಪಯೋಗಿಸಿದವರೇ ಹೇಳಿದ್ದಾರೆ
ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅಶಕ್ತರು ...
ಡಾಕ್ಟರ್ ಗೌತಮ ರಾವ್ ಕೇಶವ ...

ನಿಮ್ಮ ಮಿತ್ರರನ್ನು
ಸ್ವದೇಶಾಭಿಮಾನಿಯ
ಚಂದಾದಾರರನ್ನಾಗಿ
ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 3 0 -0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ 2-8-0. ½ಕ್ಕೆ ರೂ 1 5-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ. 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಫ್ಲುಯೆಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.

ಬಾಟ್ಲಿ 1ಕ್ಕೆ ರೂ. 1—8—0.

ಮೇಹಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8—0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—

ಡಬ್ಬಿ 1ಕ್ಕೆ ರೂ. 0-2-6. 12ಕ್ಕೆ ರೂ. 1-12-0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಷಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:

1. ಡಾಕ್ಟರ್ ಬಿ. ಎಚ್. ಪದ್ಮನಾಭ ಶೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು.
4. ವಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

Head office—UDIPI. S. K

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras 6. Bunder Mangalore, 7. Mercara & 8. Virajandrapet.

THE BOMBAY LIFE ASSURANCE COMPANY, LIMITED.

KOCHIKAR BROTHERS, Madras Branch Secretaries and Chief Agents for Bombay City & Suburbs

ANNOUNCEMENT:—We have the pleasure to inform all our Constituents, Agents and Policy-holders that we have taken up a Newly Erected Bungalow "Soumyalayam" in Puthiyara on the Taluq Office Road, opposite Puthiyara Post Office and are opening our Calicut Branch Office in the said Building on 14—3—1936. The present Office of Mr C. Sankaran Nair our Malabar District Agent, situated in Husur Road, will cease to exist and will merge in our New Branch Office. This has been necessitated by the vast expansion of our business in Malabar and the adjacent districts, as the New Premises are very well situated and more spacious and thus we hope to render better service to our Policyholders. Our patrons and well wishers are requested to pay a visit to the "Soumyalayam at their early convenience. All correspondence and remittances and cheques should be addressed to

Messrs. **KOCHIKAR BROTHERS,**
Bombay Life Office, Puthiyara Post (Calicut—Malabar,

We have also registered our telegraphic address as "Kochikar—Calicut" for the convenience of our constituents

ಪ್ರಕಟಣೆ-ಸದರಿ ವಿಮಾ ಕಂಪೆನಿಯು ತನ್ನ ಏಜಂಟರಿಗೂ, ಪೋಲಿಸಿದಾರರಿಗೂ ಈ ಮೂಲಕ ತಿಳಿಯಪಡಿಸುವದೇನೆಂದರೆ—ತಾ 14-3-36ರಿಂದ ಕಲ್ಲಿಕೋಟೆಯಲ್ಲಿರುವ ನಮ್ಮ ಮಲಬಾರ ಏಜೆಂಟರಾದ ಮಿ॥ ಸಿ ಶಂಕರನಾಯರ್‌ರವರ ಹಜೂರ ರಸ್ತೆಯ ಬಳಿ ಇರುವ ಆಫೀಸನ್ನು ಪುತಿಯಾರ ಪೋಸ್ಟು ಆಫೀಸಿನ ಎದುರಿರುವ ಹೊಸತಾಗಿ ಕಟ್ಟಿಸಿದ ದಿವ್ಯವಾದ ಸೌಮ್ಯಲಯಮ್ ಎಂಬ ಬಂಗ್ಲೆಯಲ್ಲಿ ತೆರೆಯಲಾಗುವದು ಇನ್ನುಮುಂದೆ ಸಂಬಂಧಪಟ್ಟ ಲೆಖ್ಖಪತ್ರಗಳನ್ನು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು

ಮೆಸರ್ಸ ಕೊಚ್ಚಿಕಾರ್ ಬ್ರದರ್ಸ್,
ಬೊಂಬೈ ಲೈಫ್ ಆಫೀಸ್, ಪುತಿಯಾರಾ ಪೋಸ್ಟು, (ಕಲ್ಲಿಕೋಟೆ ಮಲಬಾರು)

ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ತಂತಿಯ ವಿಳಾಸವನ್ನು ಕೊಚ್ಚಿಕಾರ-ಕಲ್ಲಿಕೋಟೆ ಎಂಬುದಾಗಿ ಮಾಡಿದೆ

Regd)

ಅಮೃತಾಂಜನ

ತಲೆನೋವು, ಶಿರೋವೇದನೆ ಉಳುಕು ಕುತ್ತಿಗೆ ಭುಜ, ಹಲ್ಲುವೇದನೆಗಳಿಗೂ ಎದೆನೋವು ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ ಮೊದಲಾದ

ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ ಹುಳುಕಡ್ಡಿ ಕ್ಷತ ಉಪದ್ರವ ತಲೆಹುಣ್ಣು ಪಗ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

...ವೇ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿ!

ಮೊದಲನೇ ೩ ವರ್ಷಗಳ ಮೌಲ್ಯನಿರ್ಣಯದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ಅನುಕೂಲವಾದ ಸಾಧನಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ. ತಪ್ಪದೆ ಬರೆಯಿರಿ.

ಮಾಹಿತಿ ಪತ್ರ, ವಿವರಣೆಯ ಪತ್ರಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

MISSING
10 & 17 APRIL

MISSING
10 & 17 APRIL

for Quality Snuff
H. Rama Rao
and Sons.
High Class Snuff Manufacturers
Mangalore, S. I.
ASK FOR —
RAMA SNUFF
The charm of Snuff Users!



"LIFE ASSURANCE
IS
NO EXPENSE
BUT
AN INVESTMENT"
Safeguard yourself & your
family TODAY
Buy a policy in
THE BOMBAY LIFE
Koch kar Brothers

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

[illegible] ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
[illegible] । ಗರಳ ಮಥಿಸಲು ಸುರಂಗದಿಂ । [illegible] ಮತ್ತೆ ವಿಷ್ಣುವ ಸುಡುತ ಬರುತಿರುವ ।
[illegible] ಸುಧೆಯನು । [illegible] ॥ ೧ ॥

ಪುಸ್ತಕ ೩೦ | ಮಂಗಳೂರು ತಾ. ೨೪ನೇ ಶುಕ್ರವಾರ ಎಪ್ರಿಲ್ ೧೯೩೬ (24-4-'36) | ಸಂಚಿಕೆ ೧೭

ಜನಾಂಗಸಂಘದ ಚುನಾವಣೆಗಳಲ್ಲಿ ಒಡೆ ಛಿದ್ರಗಳು ಕಾಣುತ್ತಿರುವುದಾಗಿ ನಿಷ್ಪ ಮಾತು.

ಅದನ್ನು ರಚಿಸುವಾಗಲೆ, ಬಾಯುಳ್ಳ ಅಭಿಪ್ರಾಯಕ್ಕೆ ಬೆಲೆ ಸಿಗದಂತೆ ಕೆಲವು ಜನಾಂ ಗಗಳನ್ನೂ ಅವರೊಡನೆ ಅವರ ಅಭಿಪ್ರಾಯ ಸರ್ವಾಗ್ರಗಣ್ಯ ಅಭಿಪ್ರಾಯವಾಗುವ ಜನಾಂ ಗಗಳನ್ನು ಸೇರಿಸಿ, ಲೀಗನ್ನು ರಚಿಸಿದರು. ಈ ಬಾಯುಳ್ಳವರು ಬಲವಾಗಿ ಮಾತಾಡು ತ್ತಿದ್ದಾರೆ; ಅಭಿಪ್ರಾಯ ಕೊಡುತ್ತಾರೆ. ಅದನ್ನು ಅಭಿಪ್ರಾಯದ ಬಲಾತ್ಕಾರ ಮಾಡತಕ್ಕವರು ಕಡಿಯುತ್ತಾರೆ. ಹೀಗಾಗಿ ಸಂಸ್ಥೆ ಎರಡನೆಯ ವರ್ಗದೇ ಆಗಿದೆ ಎಂಬಂತಿದೆ.

ಈ ಎರಡನೆಯವರಲ್ಲೂ ಫೆರ್ರೊಕೊಂಕ್ರೀ ಟಿನ ಮೈತ್ರಿಯೇನೂ ಇಲ್ಲ. ಎಲ್ಲವೂ ಒಡೆ ಯುತ್ತ ಬಂದಿದೆ. ತಮ್ಮ ತಮ್ಮ ಆತ್ಮರಕ್ಷಣೆ ಗಾಗಿ ಮೊದಲು ನೋಡಿಕೊಳ್ಳುವ ಭಾರವು ಹೆಚ್ಚಾಗಿಟ್ಟು, ಯಾರ ರಕ್ಷಣೆಗೂ ಯೋಗ್ಯ ಉಪಾಯಗಳು ತೋಚುವುದಿಲ್ಲ. ನೆರೆಮನೆ ಸುಡುವಾಗ, ಅದನ್ನಾರಿಸುವುದೋ ತನ್ನದನ್ನು ಕಾಪಾಡಿಕೊಳ್ಳುವುದೋ, ಮೊದಲು ಯಾವು ದೆಂಬ ಸಮಸ್ಯೆ ಈಗ ತಲೆದೋರಿದೆ. ಇದ ...ದ ನೆರೆಮನೆ ಹೋಯಿತು, ತನ್ನದು ಉಳಿ ಕಷ್ಟವಾಗಿದೆ.



ವಿದೇಶ ವಾರ್ತೆಗಳು.

ಸಮತಾವಾದಿಗಳಿಗೂ ಪೆಸ್ಸಿಯುಪ್ಪರಿಗೂ ಬಿದ್ದಿರುವ ಪರಸ್ಪರ ಕಚ್ಚಾಟದಿಂದ ಸ್ಪೈನ್ ದೇಶದಲ್ಲಿ ಬಹಳ ಕ್ಷೋಭೆ ನಡೆಯಿತು. ಮೊನ್ನೆ, ಸಮಸ್ತ ವ್ಯವಹಾರವು, ಲೇಬರ ಪಂಗಡದವರು ಪೆಸಿಯುಪ್ಪ ಪಂಗಡದವರಿಗೆ ವಿರೋಧವಾಗಿ ನಡೆಯಿಸಿದ ಮುಷ್ಕರದಿಂದ, ನಿಂತು ಹೋಗಿತ್ತು ಭಯಂಕರ ಗಲಭೆಯು ನಡೆಯಿತು.

ಸ್ವೀಜರ್‌ಲೇಂಡಿನ ಸರಕಾರವು ತಮ್ಮ ರಾಷ್ಟ್ರೀಯ ಭದ್ರತೆಗಾಗಿ, ಹಣವನ್ನು ವ್ಯಯಿಸಬೇಕಾಗಿ ತಂದ ಬಿಲು ಮಂಜೂರಾಗಿರುತ್ತದೆ

ಸ್ವಿಸ್ ದೇಶದ ಮೇಲೆ ಹಾರಾಡುತ್ತಿರುವ ಒಂದು ಜರ್ಮನ್ ವಿಮಾನವು ಕೆಳಬಿದ್ದು, ಒಳಗಿದ್ದ ಮೂವರು ಮೃತರಾಗಿರುವರು. ಹಿಮವು ಮುಸುಕಿದರಿಂದ, ದಾರಿ ತೋಚದೆ, ಈ ವಿಮಾನಕ್ಕೆ ಈ ಗತಿಯು ಒದಗಿತಂತೆ.

ಬ್ರಿಟಿಷ, ಫ್ರೆಂಚ, ಮತ್ತು ಬೆಲ್ಜಿಯಮ್ ದೇಶಗಳ ಸಂಗ್ರಾಮಾಧಿಕಾರಿಗಳ ಸಭೆಯು ಮುಕ್ತಾಯವಾಗಿರುತ್ತದೆ ಸಂಗ್ರಾಮ ಸಂಭವದಲ್ಲಿ ಯಾವ ರೀತಿಯಲ್ಲಿ ವರ್ತಿಸಬೇಕೆಂಬುದು ಇದರಲ್ಲಿ ನಿಶ್ಚಯವಾಗಿರುತ್ತದೆ ಈ ಸಭೆಯಿಂದ ಫ್ರೆಂಚ ಸರಕಾರಕ್ಕೆ, ಬಹಳ ಸಮಾಧಾನವಾಗಿರುವದೆ

ಫ್ರೆಂಚ ಸರಕಾರದ ಮಹಾ ಚುನಾವಣೆಯು ಬೇಗನೆ ನಡೆಯಲಿದೆ ೫೦೦೦ ಮಂದಿ ಉಮೇದ್ವಾರರು ಮುಂದೆ ಬಂದಿರುವರು ಒಟ್ಟು ೬೧೫ ಸದಸ್ಯತನಗಳಿಗೆ ಚುನಾವಣೆ ನಡೆಯಬೇಕಾಗಿದೆ ಈ ಚುನಾವಣೆಯ ದೆಸೆಯಿಂದ ಬಹೀರ್ ವ್ಯವಹಾರದ ಕುರಿತು ಫ್ರೆಂಚರ ವರ್ತನೆಯು ಬದಲಾಗುವ ಸಂಭವಗಳಿಲ್ಲ

ಕೆಲವು ಇಟೇಲಿಯಾನ ವಿಮಾನಗಳು ಏಡಿಸ್ ಅಬಾಬ ಮೇಲೆ ಹಾರಿ, ಬೊಂಬುಗಳಿಂದ ಭಯಂಕರ ಹಾವಳಿಯನ್ನು ನಡೆಯಿಸಿದವು. ವಿಷಕರ ಗೇಸಿನ ಭೀತಿಯಿಂದ ಸರ್ವ ನಿವಾಸಿಗಳು, ವಸ್ತ್ರವನ್ನು ತಮ್ಮ ಮುಖಗಳ ಮೇಲೆ ಒತ್ತಿ ಹಿಡಿದರು.

ಟುರ್ಕಿ ದೇಶವು ತನ್ನ ಹತ್ತಿರದಲ್ಲಿರುವ ಕಳೆದ ವಾರ್ಸೇಲ ಒಪ್ಪಂದಪ್ರಕಾರ, ದಂಡಯೋಜನೆಯಿಂದ ಹೊರ ಮಾಡಿದ. ಎಥೆನ್ಸ ದೇಶದ ಹತ್ತಿರವಿರುವ ದೇಶಗಳಲ್ಲಿ ದಂಡಯೋಜನೆ ಕಾರ್ಯ ನಡೆಯಿಸುವುದೆಂದೂ, ಅವರ ಈ ವರ್ತನೆಗೆ ರಷ್ಯಾದೇಶವು ಸಮ್ಮತವಿತ್ತಿದೆಂದೂ ವಾರ್ತೆ ಇನ್ನೊಂದು ಮಹಾ ಯುದ್ಧದ ಸಂಭವದಲ್ಲಿ, ಇದೊಂದು ಟರ್ಕಿ ದೇಶದ ಭದ್ರತಾಯೋಜನೆಯಾಗಿರುತ್ತದೆ.

೦ ೦ ೦ ೦ ೦

ಹಬಸಿ ಚಕ್ರವರ್ತಿಯವರು ಮೃತರಾದರೆಂದು ಹರಡಿದ ವಾರ್ತೆಯು ಸುಳ್ಳಾಗಿರುವುದೆಂದೂ, ಚಕ್ರವರ್ತಿಯವರು ಯುದ್ಧರಂಗದಿಂದ, ಈಗಲೂ ಅಡಿಸ್ ಅಬಾಬದೊಡನೆ ಪತ್ರವ್ಯವಹಾರ ನಡೆಯಿಸುತ್ತಿದ್ದಾರೆಂದೂ, ಇಟೇಲಿಯಾನ ಸೈನ್ಯದ ಎದುರು, ಹಬಸಿ ಯುವರಾಜರು ಸ್ವಲ್ಪ ಹಿಂದೆ ಸರಿದು, ಅವರನ್ನು ನಡೆಬಿಡಲು ಭಯಂಕರ ಏರ್ಪಾಡು ಮಾಡುವರೆಂದೂ ವಾರ್ತೆ ಬಂದಿರುತ್ತದೆ

ಇಟೇಲಿ ಹಬಸಿ ಸಂಧಿಯ ಕುರಿತು, ಜನಾಂಗ ಮಂಡಳದ ಕಾರ್ಯಗಳು ನಿಶ್ಚಲವಾಗಿವೆ. ಹದಿಮೂರು ಜನರ ಸಮಿತಿ ಬೇಗನೆ ಸಭೆ ಸೇರುವುದು.

ಆಂಗ್ಲೇಯ ಮುಖ್ಯ ಮಂತ್ರಿಯರಾದ ಮಿ| ಬಾಲ್ಡವಿನ್ನರು, ಹಲವು ಕಾರಣಗಳಿಂದ ತನ್ನ ಹುದ್ದೆಗೆ ರಾಜಿನಾಮೆಯೀಯುವರೆಂದು ವಾರ್ತೆ ಹರಡಿತ್ತು. ಆದರೆ ತಾನು ಇಷ್ಟುಬೇಗನೆ ನಿವೃತ್ತರಾಗುವುದಿಲ್ಲವೆಂದು, ಮುಖ್ಯ ಮಂತ್ರಿಯರು ಆಡಿರುವರು

ಪ್ರವಾಸ ಪ್ರಯುಕ್ತ ಜರ್ಮನಿಯ ಬ್ಲೇಕ್ ಫೋರೆಸ್ಟಿಗೆ ತೆರಳಿದ, ಒಂದು ಆಂಗ್ಲೇಯ ವಿದ್ಯಾರ್ಥಿಗಳ ತಂಡದಲ್ಲಿ ೬ ಮಂದಿಗಳು ಮೃತರಾಗಿರುವರು ರಾತ್ರಿಯಲ್ಲಿ ಅಕಸ್ಮಾತಾಗಿ, ಹಿಮದ ಸುಂಟರ ಗಾಳಿಯು ಬೀಸಿದ್ದರಿಂದ, ಹುಡುಗರು ದಿಕ್ಕು ತೋಚದೆ, ಹಿಮದಲ್ಲಿದ್ದು ಈ ಗತಿಯನ್ನು ಅನುಭವಿಸಬೇಕಾಯಿತು

ಫ್ರಾನ್ಸಿನಲ್ಲಿ ಮತ್ತು ಬೆಲ್ಜಿಯಮ್ಮಿನಲ್ಲಿ ಈಗಲೂ, ಕಳೆದ ಮಹಾ ಯುದ್ಧದಲ್ಲಿ ಗತಿಸಿದ ಸೈನಿಕರ ಶವಗಳು ದೊರಕುತ್ತವೆ ಯುದ್ಧವು ಮುಗಿದು ಇವತ್ತಿಗೆ ಹದಿನೆಂಟು ವರ್ಷಗಳಾದರೂ, ವರ್ಷಂಪ್ರತಿ ನೂರಾರು ಶವಗಳು ಇಲ್ಲಿ ದೊರಕುತ್ತವೆ ಇವುಗಳಲ್ಲಿ ಶೇಕಡಾ ೧೫ ಸಲೆ ಶವಗಳ ಗುರ್ತು ಹಿಡಿಯಲಾಗಿದೆ ದೊರೆತಿದ ಶವಗಳಲ್ಲಿ, ಬ್ರಿಟಿಷ, ಜರ್ಮನ್, ಫ್ರೆಂಚ್ ಇತ್ಯಾದಿ ಸೈನಿಕರ ಶವಗಳಾಗಿವೆ

ಎಂಟನೆ ಎಡ್ವರ್ಡ ಚಕ್ರವರ್ತಿಯವರಿಗೆ ಒಂದು ನವೀನ ಮೋಟಾರು ವಾಹನವು ಸಿದ್ಧವಾಗಿರುತ್ತದೆ ಇದರಲ್ಲಿ ಚಕ್ರವರ್ತಿಯವರು, ಪ್ರವಾಸದ ಸಮಯ ರಾಜಕಾರ್ಯ ಸಂಬಂಧ ಪತ್ರವ್ಯವಹಾರ ನಡೆಯಿಸಲು ಒಂದು ಆಫೀಸು ಕೋಣೆ ಇರುವುದು ಚಕ್ರವರ್ತಿಯವರು ಸ್ವಂತವಾಗಿ ರಚಿಸಿದ ಪ್ಲೇನಿನ ಪ್ರಕಾರ ಈ ಮೋಟಾರು ವಾಹನವು ಸಿದ್ಧವಾದುದಂತೆ ಇದರ ಮೌಲ್ಯ ೧೦೦೦ ಪೌಂಡು

ಮೊನ್ನೆ ನಡೆದ ನೌಕಾ ಒಪ್ಪಂದಕ್ಕೆ ಬ್ರಿಟಿಷ ಸಾಮ್ರಾಜ್ಯದ ಎರಡು, ದೇಶಗಳು ಸಹಿ ಹಾಕಲಿಲ್ಲಾ (೧) ದಕ್ಷಿಣ ಆಫ್ರಿಕಾ (೨) ಐಯರ್‌ಲೇಂಡ್ ಈ ಒಪ್ಪಂದದಲ್ಲಿ ಈ ಜನಾಂಗಗಳಿಗೆ ಅಷ್ಟು ಭರವಸೆಯಿಲ್ಲದಿರುವುದರಿಂದಲೆ ಅವರು ಈ ರೀತಿ ವರ್ತಿಸಲು ಕಾರಣ

ಹಿಂದೂ ದೇಶದಲ್ಲಿ ಬಹಿಷ್ಕಾರವಟ್ಟ ಮಿಸ್ ಮೇಯೊಳ ನವೀನಗ್ರಂಥವಾದ 'ಮೆಸಾ ಒಫ್ ಮದರ್ ಇಂಡಿಯಾ' 'ಹಿಂದೂಮಾತೆಯ ಮುಖಪುಟ' ಗ್ರಂಥವು, ಸಮಸ್ತ ಜಗತ್ತಿನಲ್ಲಿ ಹರಡದಂತೆ ಬಹಿಷ್ಕಾರ ಹಾಕುವ ಆಲೋಚನೆಗಳು ನಡೆಯುತ್ತಿವೆ

೦ ೦ ೦ ೦ ೦

ಬ್ರಿಟಿಷ ಚಕ್ರವರ್ತಿಯು, ಜರ್ಮನಿಯು ರ್ಹೈನ್‌ಲೇಂಡ್ ಪ್ರದೇಶದಲ್ಲಿ ನಡೆಯಿಸಿದ ದಂಡಯೋಜನೆ ಕಾರ್ಯವು ನ್ಯಾಯಸಮ್ಮತವಾದುದೆಂದು ಅಭಿಪ್ರಾಯ ಪಡುತ್ತಿದ್ದಾರೆಂದೂ ಅವರು ಜರ್ಮನಿಯೊಡನೆ ಕನಿಕರ ಪಡುತ್ತಿದ್ದಾರೆಂದೂ, ಜರ್ಮನಿಯ ಕೆಲವು ಪತ್ರಿಕೆಗಳು ಸಾರುತ್ತಿದ್ದಾವೆ

೦ ೦ ೦ ೦ ೦

ಜರ್ಮನಿಯ ಬಹೀರ್ ವ್ಯಾಪಾರವು ಬಹಳವಾಗಿ ಬಿದ್ದಿರುತ್ತದೆಂದು ತಿಳಿದುಬರುತ್ತದೆ ರಪ್ತಿನಲ್ಲೂ, ಆಮದಿನಲ್ಲೂ ಇಳಿತಾಯಗಳಾಗಿವೆ ಕಾರಣ ಸಾಮುಗ್ರಿಗಳನ್ನು ಹೊರಗಿಂದ ಪಡಕೊಳ್ಳುವುದು ಜರ್ಮನಿಯು ಕಡಿಮೆ ಮಾಡಿರುತ್ತದೆ

೦ ೦ ೦ ೦ ೦

ಹಿಟ್ಲರನು ಹಿಂದೂದೇಶಕ್ಕೆ ವಿರೋಧವಾಗಿ ಆಡಿದ ಕೆಲವು ನುಡಿಗಳಿಂದ, ಹಿಂದೂ ದೇಶದಲ್ಲಿ ಉಂಟಾದ ಕ್ರೋಧವು ಜರ್ಮನಿಗೆ ತಿಳಿದು ಬಂದಿರುತ್ತದೆಂದೂ, ಇದರಿಂದ ತನ್ನ ವ್ಯಾಪಾರದ ಮೇಲೆ ದುಷ್ಪರಿಣಾಮಗಳು ಬರಬಹುದೆಂದು, ಉಂಟಾದ ಬಿರುಕನ್ನು ಶಮನಗೊಳಿಸಲು, ಜರ್ಮನಿ ಸರಕಾರವು ಪ್ರಯತ್ನಗೊಳ್ಳುವುದೆಂದು ವಾರ್ತೆ

ಶ್ರೀಮತಿ ಕಮಲಾ ದೇವಿಯವರೂ ಖಾದಿಯೂ

ಲಖ್ನೋದಲ್ಲಿ ಕಾಂಗ್ರೆಸು ವಾರದಲ್ಲಿ ಜರುಗಿದ ಸಬ್ಜೆಕ್ಟ್ಸ ಕಮಿಟಿಯಲ್ಲಿ ಚರ್ಚೆಗೆ ಬಂದಿದ್ದ ಸತತ ಖಾದಿ ಧಾರಣದ ಕುರಿತು ಶ್ರೀಮತಿ ಕಮಲಾ ದೇವಿಯವರು ಹೀಗೆಂದರು ರಾಜಕೀಯ ಧುರೀಣರು ರಾಜಕೀಯ ಆಂದೋಲನವನ್ನು ಮುಂದರಿಯುತ್ತಿರಬೇಕು; ಯಾವದೆ ಆಗಲಿ ಮಾಂತ್ರಿಕ ಗುಣವಿಶೇಷಣಗಳನ್ನು ಹಂಬಲಿಸುತ್ತಿರಕೂಡದು ರಾಜಕೀಯ ವಾತಾವರಣದಲ್ಲಿ ಖಾದಿಯು ತನ್ನ ಕಾರ್ಯವನ್ನು ಪೂರೈಸಿರುತ್ತದೆ, ಅಲ್ಲದೆ ಮುಂದಕ್ಕೆ ರಾಜಕೀಯ ಚಟುವಟಿಕೆಗಳನ್ನು ಗೈಯ್ಯುತ್ತಿರುವುದಕ್ಕೆ ಖಾದಿಯು ಮಹಾ ತೊಡಕಾಗಿದೆ ಕೊಂಗ್ರೆಸ್ಸಿನವರು ಸತತ ಖಾದಿ ಧಾರಣದ ಸೂತ್ರವನ್ನು ಒತ್ತಾಸೆ ಮಾಡುವುದಾದರೆ, ಪ್ರಮಾಣಿತ ಅಂಗಡಿಗಳಿಂದ ಜನರು ತಮ್ಮ ಆಹಾರ ಜೀನಸುಗಳನ್ನು ಕೊಂಡುಕೊಳ್ಳಬೇಕೆನ್ನುವುದಕ್ಕೆ ಸಹಾ ಒತ್ತಾಯ ಮಾಡಬಹುದಾಗಿದೆ

ಕಾಂಗ್ರೆಸು ಕೆಲಸಗಾರರಾಗಿದ್ದು ಮಹಾತ್ಮರೊಡನಿದ್ದು ಹೆಚ್ಚು ಅನುಭವಸ್ಥರಾದ ಶ್ರೀ ಕೃಪಾಲಿನಿಯವರು ಇದಕ್ಕುತ್ತರವಾಗಿ, ಖಾದಿ ಕೆಲಸಗಾರರನೇಕರು ಬಡಹಳ್ಳಿಗರನ್ನು ಅವರವರ ಸ್ಥಳದಲ್ಲೆ ಸಂದರ್ಶಿಸಿರುವಂತೆ, ಶ್ರೀಮತಿಯವರು ಹಳ್ಳಿಪ್ರದಾನ ಮಾಡಿಲ್ಲವೆಂದರು ಆ ಭಾಷಾ ಕಮಿಟಿಯೊಳಗೆ ಶ್ರೀಮತಿಯವರು ನಮ್ಮ ಪ್ರತಿನಿಧಿಯಾಗಿರುವವರಾದರೂ, ಕಾಂಗ್ರೆಸು ವ ಇತರ ಜನತಾ ಕಾರ್ಯಗಳಿಗಾಗಿ ಪ್ರಾಂತದವರ ಪ್ರಾಂತಗಳನ್ನು ಇವರು ಸುತ್ತಾಡಿರುವರಾದರೂ ಸುಗಮ ಮಾರ್ಗಗಳಿಲ್ಲದ ವಾಹನಾನುಕೂಲತೆಯಿಲ್ಲದ ಹಳ್ಳಿಗಾಡು ಪ್ರದೇಶಗಳ ಗುಡಿಸಲುಗಳಲ್ಲಿ ಸಿರಿದ್ರ್ಯಾಗ ಹಸಿವು ರೋಗಗಳಿಂದ ಪೀಡಿತರಾದ ಸಾವಿರಾರ ಬಡ ಹಳ್ಳಿಗರ ಸ್ಥಿತಿಯ ಇವರಿಗಿಲ್ಲ

ಬಡ ಹಳ್ಳಿಗರ ಅಪ್ರಿಯವಾದ ಪರಿತಕ್ಕೆ ಖಾದಿಯು ಸ್ವಲ್ಪ ಪದ್ಧತಿ [illegible] ಅಥವಾ ತಂತನ್ನು ವಸ್ತ್ರದ ಪೂರೈಕೆ ಸಹಕರಿಸಿ [illegible] ಆವಿರ್ಭವಿಸಿರುತ್ತದೆ ಖಾದಿಯಿಲ್ಲದಿದ್ದರೆ ಬಡ ಹಳ್ಳಿಗರ ಹಿಂದಿ [illegible] ಅಥವಾ ಜಪಾನ ಇಲ್ಲವೆ ಬೇರೆ [illegible] ವಸ್ತ್ರವನ್ನು ಕೊಂಡುಕೊಳ್ಳಬೇಕಷ್ಟೆ ಆದರೆ ಸಮತಾವಾದಿಗಳ ಪ್ರತಿಪಾದಿಸುತ್ತಿರುವ ಭಂಡವಾಳಗಾರರನ್ನು ಪುಷ್ಟೀಕರಿಸಿದಂತಾಗುವುದಷ್ಟೆ' ಸತತ ಖಾದಿ ಧಾರಣವು ಕಾಂಗ್ರೆಸು ಕಮಿಟಿಗಳಿಗೆ ಆರಿಸಿ ಬರುವವರ ಮಟ್ಟಿಗೇ ಇರುವುದರಿಂದ, ಬಡ ಹಳ್ಳಿಗರ ಪ್ರತಿನಿಧಿಯಾಗಲಿಚ್ಛಿಸುವವರಿಗೆ ಬಡವರ ಹೆಗ್ಗುರುತಾದ ಖಾದಿಯನ್ನು ಧರಿಸಲಾಗದಿದ್ದರೆ, ಇವರ ಮುಖಂಡತನದ ಪ್ರಾತಿನಿಧ್ಯದ ಸಾರ್ಥಕವೆಂತು?

ಖಾದಿಯ ಅತ್ಯುಜ್ವಲ ಭಕ್ತರಾದ ಮಹಾತ್ಮಾ ಗಾಂಧಿಯವರು ಕೂಡ ಬಡ ಹಳ್ಳಿಗರು ಖಾದಿಯನ್ನು ಕೊಂಡುಕೊಳ್ಳಬೇಕೆಂದು ಆಜ್ಞೆ ಮಾಡಿಲ್ಲ ವಿರಾಮ ಕಾಲದಲ್ಲಿ ಬೇರಾವ ಹೆಚ್ಚಿನ ದುಡಿತದ ಉದ್ಯೋಗವಿಲ್ಲದ್ದಲ್ಲಿ, ನೂಲಬೇಕಾಗಿಯೂ, ಅದರಿಂದ ತಮ್ಮ ವಸ್ತ್ರದ ಪೂರೈಕೆಯನ್ನು ಮಾಡಿಕೊಳ್ಳಬೇಕಾಗಿಯೂ, ಇರುತ್ತದೆ ಪರದೇಶದ ವಸ್ತ್ರಾವಲಂಬನದಿಂದಲೇ ಕಳಕೊಂಡ ನಮ್ಮ ಸ್ವಾತಂತ್ರ್ಯವನ್ನು ವಸ್ತ್ರಸ್ವಾವಲಂಬನದಿಂದಲೇ ತಿರಿಗಿ ದೊರಕಿಸಬೇಕಾಗಿದೆ ಪ್ರಾಯಶ್ಚಿತ್ತ ರೂಪವಾಗಿ ದಿನಾಲೂ ಒಂದು ತಾಸಿನಷ್ಟಾದರೂ ಪ್ರತಿಯೊರ್ವ ಹಿಂದೀಯನು ನೂತದ್ದೇಯಾದರೆ ಅದನ್ನು ವಸ್ತ್ರ ಮಾಡಿಸಿ ಉಪಯೋಗಿಸಿದ್ದಾದರೆ, ನಮ್ಮ ಪೂರ್ವಜರು ಅನುಭವಿಸಿದ ಸುಖ ಸಾಮ್ರಾಜ್ಯಕ್ಕೆ ಅನತಿದೂರ ಇದುವರೆಗೆ ಹಳ್ಳಿಯಲ್ಲಿಲ್ಲಾ ಖಾದಿ ತಯಾರಿಸುವವರು ತಮ್ಮ ದುಡಿತವನ್ನು ಬೇರೆ ಉಪಯೋಗಕ್ಕಾಗಲಿ ಪರದೇಶೀ ಅಥವಾ ದೇಶೀ ಗಿರಣಿ ವಸ್ತ್ರಕ್ಕಾಗಲಿ ಉಪಯೋಗಿಸುತ್ತಿದ್ದರು ಮಹಾತ್ಮರು ಇವರು ದಪ್ಪರಿಣಾಮವನ್ನರಿತು, ಖಾದಿ ತಯಾರಿಸತಕ್ಕವರು ತಾವೇ ಖಾದಿ ಧಾರಣ ಮಾಡಬೇಕೆಂದು ಮತ್ತು ನೂಲುವವರಿಗೆ ದಿನ [illegible] ಗೈಯ್ಯಲ್ಲಿ ತಮ್ಮ ಜೀವನಕ್ಕೆ ಬೇಕಾದ [illegible] ಒದಗಿಸಿಕೊಡಬೇಕೆಂದು [illegible] ಸಂಭವದ [illegible] ಖಾದಿಯ [illegible] ತಯಾರಿಯಲ್ಲಿ [illegible]

[illegible] ದೇವಿಯವರ [illegible] ಹಳ್ಳಿ [illegible] ಕೈಗಾರಿಕೆಯ [illegible] ಸಂದರ್ಶಿಸಿ, ಖಾದಿಯ ಪುನರುಜ್ಜೀವನ [illegible] ಖಾದಿಯ [illegible] ಹಳ್ಳಿಗರಿಗೆ [illegible] ಪ್ರಥಮ [illegible] ರಾಜಕೀಯ [illegible] ಅನ್ನದಾತೃನೇ ಅವರ [illegible] ಆಧುನಿಕ [illegible] ನಾಗರಿಕರಿಗೆ ಈ ಬಡ ಹಳ್ಳಿಗರ [illegible] ಒಂದಾಣೆ ಅಥವಾ ಎರಡಾಣೆಯ [illegible] ಸಂತೋಷ ಅನುಭವವಾಗಲಾರದು [illegible] ಇಂದಿನವರೆಗೂ ಹಿಂದೀಯರಿಗೆ [illegible] ಖಾದಿಯು ಹಿಂದೂದೇಶದ ಬಡತನವನ್ನು ಓಡಿಸುವ ಲಕ್ಷ್ಮೀ ದೇವಿ [illegible] ಸ್ವಾರ್ಥ ಸಾಮ್ರಾಜ್ಯದ ರಾಕ್ಷಸರದಲ್ಲಿ ಸ್ವರ್ಗ ಸಾಮ್ರಾಜ್ಯದ ಮಹಾತ್ಮರು. ಎಲ್ಲರೂ ದೇಶಕ್ಕಾಗಿ ಸಾಯಲಾಗದು, ದೇಶಕ್ಕಾಗಿ ಖಾದಿ ಧರಿಸಲಾಗದೇ? ದೇವಿಯವರೇ ತಾಳಿರಿ, ಖಾದಿಯ ಅವಹೇಳನ ಮಾಡದಿರಿ ಖಾದಿಯ ಪುನರುತ್ಥಾನ, ಖಾದಿ ಧಾರಣವೇ ಹಿಂದೂದೇಶದ ಶಕ್ತಿ ಸಾಮರ್ಥ್ಯ ಸ್ವಾತಂತ್ರ್ಯಗಳನ್ನು ಪುನಹ ಹೊಂದುವ ಹೆದ್ದಾರಿಯೆಂದು ಅನುಭವಿಸದಿರಲಾರಿರಿ!

N.I.P.
Petral (Ready Delivery)
Kerosene & Diesel Oils
FOR RATES AND AGENCY TERMS APPLY
International Oil Co Ltd
JIJI HOUSE RAVELIN STREET FORT BOMBAY.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್,

ಸ್ತ್ರೀಯರಿಗೊಂದು ಮಹಾ ವ

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರ-ವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಎರಡು ಸೈಜಿನಲ್ಲಿ ದೊರೆಯುತ್ತದೆ **ಲೋಧ್ರ** ರೂ 3 ಮತ್ತು 1—10—0

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್ ಎಗ್ಮೋರ್ ಮದ್ರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು —

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತ:

ಅವಗಾಹನೆ ಬಗ್ಗೆ—

ನಮ್ಮ ಫಾರ್ಮೆಸಿ ಇಲಾಖೆಯಲ್ಲಿ ಯೋಗ್ಯ ಪಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ನಾವು ನಿಶ್ಚಯಿಸಿ ಸ್ವಾನುಭವ ಹೊಂದಿದ ಎಲ್ಲಾ ಔಷಧ ಮೂಲಿಕೆಗಳನ್ನು ಸುಲಭ ಬೆಳೆಗೆ ವಿಕ್ರಯಮಾಡ ತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ

ಸೆಕ್ರೆಟರಿ

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ

—ಸಂಘ, ಪೋಸ್ಟ್ ಮಂಗಳೂರು, ದ ಕ

ರೈಲು ಬಂಡಿಗಳ ಸಮಯ.

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4 20
ಮಿಕ್ಸೆಡ್	„ 5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಶಿಟಲ್	ಸಂಜೆ 5 25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1 20
ಕಾಸರಗೋಡು ಪೆಸೆಂಜರು	ಸಂಜೆ 3 20	ಸಂಜೆ 6 15

Ested 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

ಠೇವಣಾತಿಗಳ ದರ:

ನಿರಖು ಠೇವಣಾತಿಗಳು.—3 ತಿಂಗಳಿಗೆ ಶೇಕಡಾ 5ರ ೯ 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

“ಸೇವಿಂಗ್ಸ್ ಬೇಂಕ್”—ಎಂಬ ಸ ಚಯ ಠೇವಣಾತಿಗಳು ಶೇಕಡಾ 4ರಂತೆ

“ಚಾಲ್ತಿ ಠೇವಣಾತಿಗಳಿಗೆ” -ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದಂಡ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುತ್ತವೆ ಬೇಂಕಿನ ಇತರ ಎಲ್ಲಾ ವ್ಯವಹಾರಗಳು ನಡೆಸಲ್ಪಡುತ್ತವೆ

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur, Dated 10—4 1936 } **G N. Lakshman Pai,** *Secretary.*

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನಪಂಡಿತ

ಡಿ ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ ಬೋಕ್ಸ್ 287, ಮದರಾಸು

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ESTD 1906

CANARA BANK

LIMITED

Head Office: MANGALORE

Subscribed Capital	6,00 000
Paid up Capital	3,33'000
Reserves	4 50 000
Deposits	61,92 000
Working Capital	73,40,000

OFFICES:

Bombay-Fort, Bombay Mandvi, Hubli, Calicut Cochin, Ernakulam Alleppey, Bangalore, Chikmagalur Mangalore Bunder, Mangalore-City, Kasaragod, Puttur, Udipi, Karkala Coondapoor, Ganguli, Buntwal, Davanagere & Moolky

ALL KINDS OF BANKING BUSINESS UNDERTAKEN

ಚಿತ್ರಾಹುತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ-ಊರ್ಧ್ವಪುಂಡ್ರ-ಮುದ್ರಾ ಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ ಎಂ ನರಸಿಂಗರಾವ್, ಬಿ. ಎ ಎಂ ಎಲ್ ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ **ಬೆಲೆ ಆಣೆ 3.**

30 60 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಸೂಕ್ತಿಯ ಡಿಸ್ಕೌಂಟು

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್‌ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು—

ಬನ್ನಿರಿ ಅಥವಾ ಬರೆಯಿರಿ

ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಸುಧಾರಣೆಗಳಾಗಬೇಕೆ?

(ಮಾಜಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ। ಬಾಬೂರಾಜೇಂದ್ರ ಪ್ರಸಾದರ ಭಾಷಣದ ಸಾರಾಂಶ:—

ಜನನದಾರಭ್ಯ ಕಾಂಗ್ರೆಸ್ಸಿನ ಧ್ಯೇಯವು ಕಾಲನ ಅಗಾಧ ಲೀಲೆಗೆ ಅನುಸಾರವಾಗಿ ನಡೆಸಿಕೊಂಡು ಬರುವಂತಾದಾಗಿತ್ತು. ಕಾಂಗ್ರೆಸ್ಸಿನ ಕಾರ್ಯಕರಂಗದಲ್ಲಿ ಸಮಯಕ್ಕನುಸರಿಸಿ ಬದಲಾವಣೆಗಳಾಗಬೇಕೆಂದು ಚಂದಿ ಹಿಡಿದವರು ತಮ್ಮ ಮನೋಗತದಂತೆ ಬದಲಾವಣೆಗಳನ್ನು ಮಾಡಿಯೇ ಬಿಟ್ಟರು. ಬದಲಾವಣೆಗಳನ್ನು ಮಾಡಿದ್ದು ವಿಹಿತವಾಗಲಿಲ್ಲವೆಂದು ಹೇಳಲಾರೆ. ಆದರೆ ಅಂತಹ ಬದಲಾವಣೆಗಳನ್ನನುಸರಿಸಿ ಕಾರ್ಯೋದ್ಯುಕ್ತರಾಗುವುದು ಸರಿಯೆಂದು ಭಾವಿಸುತ್ತೇನೆ. ಇಷ್ಟರ ವರೆಗೆ ಜನತೆಯ ಸಂಕಷ್ಟಗಳನ್ನರಿತು ದೇಶದ ಸ್ಥಿತಿಗತಿಗಳನ್ನು ತಿಳಿದು ಪರಿತಪಿಸುತ್ತಿದ್ದ ಜಗತ್ತಿನೊಟ್ಟಿಗೆ ಸಹಾನುಭೂತಿಪೂರ್ವಕವಾಗಿ ನಡೆದು ದಾಯಿತು. ನವಸುಧಾರಿತ ಕಾರ್ಯಕರಂಗದಲ್ಲೂ ಹೀಗೆ ಸಂಪೂರ್ಣ ಅನುಭವಹೊಂದಿ ಕಾರ್ಯಾಸ್ತಿಕರಾಗುವುದು ಎಷ್ಟೋ ವಾಸಿ. ಜಗತ್ತಿನ ದೃಷ್ಟಿಯಲ್ಲಿ ಕಾಂಗ್ರೆಸ್ಸು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂಸ್ಥೆ. ಎಲ್ಲರೂ ಅದನ್ನು ಏಕೀಭಾವದಿಂದಲೂ ಅನ್ಯೋನ್ಯ ಪ್ರೀತಿಯಿಂದಲೂ ಕಾಣುತ್ತಿರುವರು. ಆದರೆ ಸಂಶಯಕ್ಕೆ ಪಾತ್ರರಾಗದಂತೆ ವರ್ತಿಸುವುದು ಶ್ರೇಯಸ್ಕರವಲ್ಲವೆ? ತಮ್ಮಗಳ ಅಭಿಪ್ರಾಯಗಳನ್ನು ಪರರು ಮೆಚ್ಚಬೇಕೆಂದಿರುವವರು, ಪರರ ಅಭಿಪ್ರಾಯಗಳನ್ನು ಮೆಚ್ಚಲು ಸಿದ್ಧರಾಗಿರಬೇಕು.

ಕಾಂಗ್ರೆಸ್ಸು ಇಂದು ಏರ್ಪಡಿಸಿದ ಶಿಸ್ತು ಸುಧಾರಣೆಗಳು ಜನರ ಉದ್ಧಾರಗಯ್ಯಲು ಪೂರ್ಣಾನುಬಂಧಗಳಾಗಿವೆ. ಆದರೆ ನನ್ನ ಮುಂದೆ ಹೊಸತಾಗಿ ಬಂದು ನಿಂತ ಹಲಕೆಲವು ಪ್ರಶ್ನೆಗಳನ್ನು ಬಹಳ ನಿಧಾನವಾಗಿ ಪರ್ಯಾಲೋಚಿಸಿ ಉತ್ತರಿಸಬೇಕಾಗಿರುವುದು. ಆದ್ದರಿಂದ ಅವಿಚಾರವಂತರಾಗಿ ಇದ್ದ ಗೊಂದಲಗಳನ್ನು ಇನ್ನಷ್ಟು ಕಠಿಣತರ ಸಮಸ್ಯೆಗಳಾಗಿಸದು ಮಾಡದಂತೆ ನಡೆಯುವ ಮಾರ್ಗವನ್ನವಲಂಭಿಸುವ ಪಥವನ್ನು ಹುಡುಕುವುದು ಆವಶ್ಯಕ. ದೇಶದವರಿಗೆ ಸ್ವರಾಜ್ಯವು ಬೇಕೆಂಬುದು ನಿಜ. ಆದರೆ ಪರದೇಶದವರ ವರದ ಹಸ್ತವಿದ ಸ್ವರಾಜ್ಯವನ್ನು ಯಾರ [illegible] ಅವರೊಡನೆ ನಾನು ಯೋಚನೆಯನ್ನು ಮಾಡಲು ಸಿದ್ಧನಿಲ್ಲ. ಕಾರಣ ಅದು ನಮ್ಮ [illegible] ಅಧ್ಯಂತವಾಗಿ ಸೂಚಿಸುತ್ತದೆ.

ಕಾಂಗ್ರೆಸ್ ಕಾರ್ಯಕ್ರಮದತ್ತ ಗಮನ ಕೊಡುವ ಅದು ನಮ್ಮನ್ನೆಲ್ಲಿಗೆ ಮುಟ್ಟಿಸುವುದು? ಎಂಬ ಪ್ರಶ್ನೆ. ಹಿಂದೂದೇಶದಲ್ಲಿಯ ಅನೇಕಾನೇಕ ಜಾತಿಗಳ, ಮತಗಳ, ಭಾಷೆಗಳ ಪ್ರಾಂತ್ಯಗಳನ್ನು ಒಟ್ಟುಗೂಡಿಸಿ ಸ್ವರಾಜ್ಯಕ್ಕಾಗಿ ಹೆಣಗಾಡುವ ಪಂಥವನ್ನು ಹೇಗೆ ಸಾಧಿಸಬಹುದು? ಸ್ವರಾಜ್ಯವು ಸಿಗಬೇಕಾದರೆ ಇವರೆಲ್ಲರ ಒಗ್ಗಟ್ಟು ಅನಿವಾರ್ಯವಾದ ಸಂಗತಿ. ನಾವು ಶತಪ್ರಯತ್ನಗೈದು ಭಿನ್ನ ಭಿನ್ನವಾದ ಜನಾಂಗಗಳಲ್ಲಿ ನಮ್ಮ ಧ್ಯೇಯದ ಪ್ರಚಾರ ಮಾಡಿ ಅವರನ್ನು ನಮ್ಮ ಪಂಥಕ್ಕೆ ಒಳಗಾಗುವಂತೆ ಮಾಡಬೇಕು. ಇದು ಸಾಧ್ಯವೇ? ಇಂದಿಗೆ ಐವತ್ತು ವರ್ಷಗಳಿಂದ ಹಲವು ಮಂದಿ ಪವಿತ್ರಾತ್ಮರ ನಿಸರ್ಗ ಬುದ್ಧಿಯಿಂದಲೂ ದೇಶ ತ್ಯಾಗದಿಂದಲೂ ಹಲಕೆಲವು ಜಾತಿಗಳ ಸಹಾನುಭೂತಿಯನ್ನು ಕೈಗೊಳ್ಳಲು ಕಾಂಗ್ರೆಸ್ಸಿಗೆ ಸಾಧ್ಯವಾಗಿದೆ. ಆದರೆ ಇದೊಂದರಲ್ಲಿ ನನಗೆ ತೃಪ್ತಿಯಿದೆ. ನಾನು ಕಾಂಗ್ರೆಸ್ಸಿನ ಪ್ರಚಾರಕ್ಕಾಗಿ ಎಲ್ಲೆಲ್ಲಿ ಸಂಚರಿಸಿದ್ದೆನೋ ಅಲ್ಲಿಯವರೆಲ್ಲರೂ ಕಾಂಗ್ರೆಸ್ಸಿಗಾಗಿ ತಮ್ಮ ಸಹಾನುಭೂತಿಯನ್ನು ಬಹಳ ಉತ್ತಮರೀತಿಯಲ್ಲಿ ಪ್ರಕಟಗೊಳಿಸಿದರು. ಇಂತಹ ಕಾರ್ಯಕ್ರಮದಿಂದ ಜನತೆಗೆ ಸಹಾಯ ಮಾಡಿದಂತಾಗುವುದಿಲ್ಲವೆಂದು ಯಾರು ತಾನೆ ಹೇಳುವರು? ಮತ್ತು ಇಂತಹ ರೀತಿಯು ಜನರನ್ನು ಆಕರ್ಷಿಸಿ ಸ್ವರಾಜ್ಯವನ್ನು ಪಡೆಯಲು ಹುರಿದುಂಬಿಸುವುದಿಲ್ಲವೆಂದು ಯಾರು ತಾನೇ ಅನ್ನುತ್ತಾರೊ ಅವರು ಜಗತ್ತಿನ ದೃಷ್ಟಿಯಲ್ಲಿ ಕುದ್ರ ಪಾಪಿಗಳೆಂದು ನಾನೆಣಿಸುತ್ತೇನೆ. ಯಾವುದಾದರೊಂದು ವಿಷಯವನ್ನಾಗಲಿ, ಕೆಲಸವನ್ನಾಗಲಿ, ವಿಚಕ್ಷಣತೆಯಿಂದ ಮಾಡುವುದಕ್ಕಿಂತಲೂ, ಹಾಳುಗೈವುದು ನಿಮಿಷಮಾತ್ರದ ಕೆಲಸವೆಂದು ನುರಿತವರಾದ ನಿಮಗೆ ಹೇಳಬೇಕಾಗಿಲ್ಲ. ಆ ನಿಮಿಷಗಳ ಭೂಕಂಪನದಿಂದಾಗಿ ಬಿಹಾರ್ ದೇಶವೇ ಕುಸಿದು ಬಿತ್ತು. ಈಗದರ ಪುನರ್ನಿರ್ಮಾಣಕ್ಕಾಗಿ ಎಷ್ಟು ಸಂವತ್ಸರಗಳು ಬೇಕೋ ದೇವರೆ ಬಲ್ಲ.

ಇದೀಗ ಐವತ್ತು ವರ್ಷಗಳಿಂದಲೂ ಈ ಕಾಂಗ್ರೆಸ್ ಸಂಸ್ಥೆಯು ನಮ್ಮ ಅನೇಕಾನೇಕ ಪರಲೋಕವಾಸಿ ಬಂಧುಬಾಂಧವರ ಪುಣ್ಯ ಪ್ರಭಾವದಿಂದ ಕುಸಿದು ಬೀಳದೆ ಮುನ್ನಡೆಯುತ್ತಾ ಬಂದಿದೆ. ಇಂದೀಗ ಅದನ್ನು ಸಂಪೂರ್ಣವಾಗಿ ಶಿಥಿಲಗೊಳಿಸಬೇಕೆಂದೆನ್ನುವವರು, ನಿಜವಾಗಿಯೂ ಪವಿತ್ರಾತ್ಮರಾದ ನಮ್ಮ ಪೂಜ್ಯ ಬಾಂಧವರ ಮನಸನ್ನು ನೋಯಿಸುವವರಾಗುವುದಿಲ್ಲವೆ. ಆದುದರಿಂದ ಇನ್ನಾದರೂ 'ಹೊಸ, ಹೊಸ' ಎಂದು ಭೋರ್ಗರೆಯದೆ ಕಾಂಗ್ರೆಸ್ಸಿನ ಇದ್ದ ಕಾರ್ಯಕ್ರಮಗಳನ್ನು ಪುಷ್ಟೀಕರಿಸಿ ಅದರಿಂದ ನಮ್ಮ ಪರೋಕ್ಷದ ಸಾಧನೆಯನ್ನು ಗಳಿಸಲು ಪ್ರಯತ್ನಿಸಿರಿ.

ದೇಶದ ಅನೇಕಾನೇಕ ಜಾತಿಗಳ ಏಕೀಕರಣವಾಗಲು ಪ್ರಯತ್ನಿಸಿದ್ದರಿಂದ ಕಾಂಗ್ರೆಸ್ಸು ಮಾಡಿದ ಅವಿಚಾರವಾವುದು? ದೇಶದ ಆರ್ಥಿಕ ಸ್ಥಿತಿಯನ್ನು ಉದ್ಧಾರಗೊಳಿಸಲು ಏರ್ಪಡಿಸಿದ ಕಾಟೇಜ್ ಇಂಡಸ್ಟ್ರೀಸ್‌ಗಳಿಂದ ಕಾಂಗ್ರೆಸ್ಸಿಗೆ ಬಂದ ಕುಂದೇನು? ಮಿಲಿಯಗಟ್ಟಳೆ ಸಹೋದರರನ್ನು ಹರಿಜನರೆಂದು ದೂರವಿರಿಸಿದ್ದಲ್ಲಿ ಸ್ವರಾಜ್ಯವನ್ನು ಪಡೆಯುವುದಾದರೂ ಎಂತು. ಇವೇ ಕೆಲವು ಸಮಸ್ಯೆಗಳಲ್ಲಿ ಭಿನ್ನಾಭಿಪ್ರಾಯಗಳೆದ್ದು ಹಲವರು ನವಸುಧಾರಣೆಗಳಾಗಬೇಕೆಂದರು. ನಮ್ಮ ಭಾಗ್ಯೋದಯವಾಗಬೇಕಾದರೆ ಬೇಕಾದ ಮುಖ್ಯ ಜೀವಾಂಶಗಳಾದ ಇವನ್ನೆ ಕಿತ್ತೊಗೆಯುವರೆಂದರೆ ಉಳಿದ ಅಲ್ಪ ಸಂಗತಿಗಳಿಗಾಗಿ ಹೆಣಗಾಡಿ ಪುರುಷಾರ್ಥವೇನು. ಇದೆಲ್ಲವನ್ನೂ ಪರ್ಯಾಲೋಚಿಸದೆ ಒಂದೇ ಸವನೆ ಇದಕ್ಕೆಲ್ಲ ಬಹಿಷ್ಕಾರವನ್ನು ಹಾಕಿದ ನನ್ನ ಬಾಂಧವರ ಆಲೋಚನೆಗಳ ಪರಿಷ್ಕಾರವೇನೆಂದು ನನಗಿನ್ನೂ ತಿಳಿಯದಾಗಿದೆ.

ನಮ್ಮ ದೇಶವು ಬಹಳ ಹೀನವಾದ ದರಿದ್ರಾವಸ್ಥೆಯನ್ನು ತಾಳಿದೆ. ದೇಶದ ಆಯವನ್ನು ಎಲ್ಲರಿಗೂ ಸರಿಸಮಾನವಾಗಿ ವಿಭಜಿಸಿದ್ದಲ್ಲಿ ಪ್ರತಿಯೊಬ್ಬನಿಗೂ ಸಾಕಾಗುವಷ್ಟು ಲಭಿಸಲಿಕ್ಕಿಲ್ಲ. ರಾ। ಶ್ರೀ। ದಾದಾಭಾಯಿಯವರ ಕಾಲದಿಂದಲೂ ಗಣಿತ ಶಾಸ್ತ್ರಜ್ಞರು ತಲಾ ಒಂದರಂತೆ ಪ್ರಜೆಗಳಿಗೆ ಸಿಕ್ಕುವ ಆಯವೆಷ್ಟೆಂದು ಪ್ರಯತ್ನಿಸಿ ತಿಂಗಳಿಗೆ ರೂ 2—8—0 ಎಂದು ಕಂಡುಹಿಡಿದಿದ್ದಾರೆ. ಈಗ ಅದಕ್ಕಿಂತಲೂ ಕಡಿಮೆಯೆ ವಿನಹ ಹೆಚ್ಚಾಗಿಲ್ಲ. ಇದರಲ್ಲೂ ದೊಡ್ಡ ಪದವೀಧರರಿಗೆ ಹೆಚ್ಚು ವೇತನ ಸಿಕ್ಕಿತೆಂದರೆ ತುಂಬಾ ಬಡಬಗ್ಗರಜೀವನಕ್ಕೆ ಸೊನ್ನೆ. ಹಾಗಾದರೆ ಪಾವನ ಚರಿತೆ, ಪುಣ್ಯ ಮಾತೆಯ ಉದರದಲ್ಲಿ ಜನಿಸಿದ ಬಡಬಗ್ಗರು ಉಪವಾಸದಿಂದ ಸಾಯಬೇಕೆ? ಹಾಯ್ ಅದೆಂತಹ ಶೋಚನೀಯ ಅವಸ್ಥೆ.

ಪತ್ನೀಸಹಿತ ಶ್ರೀ। ಬಾಬೂರಾಜೇಂದ್ರ ಪ್ರಸಾದರವರು.

ಆದುದರಿಂದ ದೇಶದ ಆಯವನ್ನು ಎಲ್ಲರಿಗೂ ಸರಿಸಮಾನವಾಗಿ ಹಂಚುವುದರಿಂದಾಗಿ ದೇಶದ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಿದಂತಾಗುವುದಿಲ್ಲ. ಕಲ್ಯಾಣದ ಹಾದಿಯೆಂದರೆ, ಪ್ರತಿಯೊಬ್ಬನಿಗೂ ಕೆಲಸದ ದಾರಿಯನ್ನು ತೋರಿಸಿಕೊಟ್ಟು, ಅವನ ಜೀವಿತವನ್ನು ಅವನು ಪಡೆಯುವಂತೆ ಮಾಡುವುದಾಗಿರುವುದು. ಇದನ್ನೇ ಕಾಂಗ್ರೆಸ್ಸು ಮಾಡುತ್ತಿರುವುದು. ದೇಶದ ಅಡಿಗಲ್ಲಾಗಿರುವ ಹಳ್ಳಿಗಳಲ್ಲಿ ಈ ಕೈಗಾರಿಕೆ ಕೆಲಸಗಳಿಗೆ ಪ್ರೋತ್ಸಾಹಕೊಟ್ಟು ಪಟ್ಟಣಗಳಲ್ಲೂ ಅದರ ಗಾಳಿಯು ಬೀಸುವಂತೆ ಮಾಡಿ ದೇಶದ ಸಂಪತ್ತನ್ನು ಇಮ್ಮಡಿ ಮಾಡುವುದೇ ಅವರ ಕಾರ್ಯಗಳಲ್ಲೊಂದಾಗಿದೆ. ಆದರೆ ಇಷ್ಟರ ವರೆಗೆ ನಾವು ಪರದೇಶಗಳಿಗೆ ವೃಥಾ ಕಳುಹಿಸುತ್ತಿದ್ದ ಹಣದ ಗೊಡವೆಯನ್ನು ಮಾಡಿಲ್ಲ. ನಮ್ಮ ಮನೆಯಲ್ಲಿರುವ ಸಾಮಗ್ರಿಗಳನ್ನೆ ಎಣಿಸಿದರೆ ನಮ್ಮ ಹಳ್ಳಿಯಲ್ಲಿ ವ ನಮ್ಮ ದೇಶಗಳಲ್ಲಾಗುವ ಸಾಮಾನುಗಳಿಗಿಂತ ಪರದೇಶದಲಿ ಸಿದ್ಧವಾಗುವಂತಹ ಸಾಮಾನುಗಳೇ ಹೆಚ್ಚಾಗಿರುವುವು. ಇದರಿಂದ ಇಲ್ಲಿ ಉತ್ಪತ್ತಿಯಾದ ಧನವು ನಮಗೆ ಸಿಗದೆ ಪರದೇಶಕ್ಕೆ ತೆರಳುವುದೆಂದರೆ ಇದೆಂತಹ ವಿಪರ್ಯಾಸ. ಕಾಂಗ್ರೆಸ್ಸು ತತ್ಕಾಲಕ್ಕೆ ನೂಲು [illegible] ರುತ್ತದೆ, ಇನ್ನೂ [illegible] ಆಲೋಚಿ[illegible] ಗಳಿಗೂ [illegible] ಸ್ಥಿತಿಯ [illegible] "ಹಿಂದ[illegible] ಯಾಧಿಪತಿಗ[illegible] ಉದರಪೋಷಣೆಗಳಿಗಾಗಿ [illegible]—— ಸ್ವದೇಶೀ ಕೈಗಾರಿಕೆಗಳು."

ಜನತೆಯಲ್ಲಿಯ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಮೂರು ಕಾರ್ಖಾನೆಗಳನ್ನು ಏರ್ಪಡಿಸಿದೆವು. ಅಲ್ಲಿ ವಸ್ತ್ರಕ್ಕೆ ಬೇಕಾದ ನೂಲಿನ ಮೂರನೇ ಒಂದಂಶವನ್ನು ಹಿಂದೂ ದೇಶದಿಂದ ಪಡೆಯುತ್ತೇವೆ. ಮೂರನೇ ಒಂದಂಶವನ್ನು ಪರದೇಶದಿಂದಲೂ, ಬಾಕಿ ಉಳಿದ ಮೂರನೇ ಒಂದಂಶವನ್ನು ಹಳ್ಳಿಗಳಿಂದಲೂ ತರಿಸುತ್ತೇವೆ. ಈ ಮೂರನೇ ಒಂದಂಶ ನೂಲನ್ನು ತಯಾರಿಸುವುದರಿಂದ ಹಳ್ಳಿಗಳ ನಾಲ್ಕು ಮಿಲಿಯ ಜನರಿಗೆ ಜೀವನ ಉತ್ಪತ್ತಿಯಾಗುತ್ತಿದೆ. ಆದ್ದರಿಂದ ಪರದೇಶದಿಂದ ತರಿಸುವದಕ್ಕಿಂತಲೂ ಎಲ್ಲವನ್ನೂ ಇಲ್ಲಿಯೇ ಕೈಮಗ್ಗಗಳಿಂದಲೆ ತಯಾರಿಸುತ್ತಿದ್ದರೆ ಎಷ್ಟು ಮಿಲಿಯ ಜನರ ಜೀವನವನ್ನು ಸುಖಮಯವಾಗಿ ಮಾಡಬಹುದಿತ್ತು ನೀವೇ ಯೋಚಿಸಿರಿ. ಕೈಗಾರಿಕೆಯೊಂದಕ್ಕೆ ಸರಿಯಾಗಿ ಸಿಗಾಕೊಟ್ಟಲ್ಲಿ ಇಷ್ಟೊಂದು ಲಾಭವನ್ನು ಪಡೆಯ ಬಹುದಾದರೆ, ಇನ್ನಿತರ ಸ್ವದೇಶಿ [illegible]ಗಳನ್ನು ತಯಾರಿಸುವುದರಿಂದ ನಮ್ಮ ದೇಶದ ಆರ್ಥಿಕ ಸ್ಥಿತಿಯೆಷ್ಟು ಉತ್ತಮವಾಗಲಿಕ್ಕಿಲ್ಲ. ನಿರುದ್ಯೋಗದ ಸಮಸ್ಯೆಯನ್ನು ಉತ್ತರಿಸಲು ಅಷ್ಟೊಂದು ಗಹನವಾದ ಬೇರೊಂದು ಆಲೋಚನೆಯು ಏಕೆ?

ಇನ್ನು ಮುಂದೆ ಪ್ರತಿಯೊಂದು ಸಾಮಾನನ್ನು ಕ್ರಯಕ್ಕೆ ಪಡೆಕೊಳ್ಳುವಾಗ ಚೆನ್ನಾಗಿ ಆಲೋಚಿಸಿರಿ. ಅದರಿಂದಾಗಿ ಹಣವು ಪರದೇಶಗಳಿಗೆ ತೆರಳುವದಾದರೆ ಅದನ್ನು ಆದಷ್ಟು ಶ್ರಮಪಟ್ಟು ಕೊಂಡುಕೊಳ್ಳದಂತೆ ಪ್ರಯತ್ನಿಸಿ. ಸ್ವದೇಶ ಬಾಂಧವರಿಗೆ ಸಿಗುವ ಯಾವ ಸಾಮಾನಿದೆಯೋ ಅದಕೆ ಒಳ್ಳೆ ಪ್ರೋತ್ಸಾಹವಿರಿ. ಸ್ವದೇಶಿ ಕೈಗಾರಿಕೆಗಳನ್ನು ಅಭ್ಯಸಿಸುವುದು, ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದು. ಇವರಡೂ ದೇಶದ ಸ್ವಾತಂತ್ರ್ಯವನ್ನು ಬಿಡಿಸಿಕೊಳ್ಳಲು ಉತ್ತಮ ಸಾಧನೆಗಳಾಗಿವೆ. ನಮಗೆ ಸ್ವರಾಜ್ಯವನ್ನು ಪಡೆಯಲು ಅವು ತಕ್ಕವಷ್ಟು ಧೈರ್ಯವನ್ನೂ ಪ್ರೋತ್ಸಾಹವನ್ನೂ [illegible]ದೆಂದರೂ ಅತಿಶಯೋಕ್ತಿಯಾಗಬಾರದು.

ಮತ್ತೊಂದು ಮಾತು. ನಮ್ಮ ದೇಶದಲ್ಲಿರುವ ಜಾತೀಯತೆಯ ಪ್ರಶ್ನೆಯನ್ನು ಒಗೆಹರಿಸಲು ಪ್ರಯತ್ನಿಸುವುದು. ಇದು ಇನ್ನೊಂದು ಗಡುತರ ಪ್ರಶ್ನೆ. ಒಂದೇ ದೇಶದಲ್ಲಿ ಹುಟ್ಟಿ, ಒಂದೇ ಆಹಾರದಿಂದ ಬೆಳೆದವರು. ನಾವು ಅದರಿಂದ ಯಾವನೊಬ್ಬನು ಸ್ವರಾಜ್ಯವು ಹಿಂದುಗಳಿಗಾಗಿ ಎಂದರೆ ಅವನನ್ನು ಹುಚ್ಚರಾಸ್ಪತ್ರೆಯ ಸದಸ್ಯನಾಗಲು ಉತ್ತಮನಿರುವನೆಂದು. ನನ್ನ ಭಾವನೆ. ಹಾಗೆಯೇ ಮುಸಲ್ಮಾನರೂ, ಕ್ರಿಸ್ತಿಯಾನರು ಅಂದರೆ ಅವರೂ ಅಂತಹ ಪಂಗಡಕ್ಕೆ ಸೇರಿದವರೆಂದು ಹೇಳಲು ನಾನು ಅಸಮಾಧಾನ ಪಡುವುದಿಲ್ಲ. ನಾವು ಅರಿಸುವ ಸ್ವರಾಜ್ಯವು ಹಿಂದುಗಳದ್ದಲ್ಲ, ಮುಸ್ಲಿಮರದ್ದಲ್ಲ, ಕ್ರೈಸ್ತರದ್ದಲ್ಲ, ಸಿಕ್ಕ ಪಾರ್ಸಿಗಳದ್ದಲ್ಲ. **ಅದು ಭರತ ಭೂಮಿಯಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬ ಮಾನವನದಾಗಿರುತ್ತದೆ.** ಆದ್ದರಿಂದ ಎಲ್ಲರೂ, ತಮ್ಮ ತನುಮನಧನಗಳಿಂದ ಅದನ್ನು ಪಡೆಯಲು ಸಾಧಿಸುವುದು ಅತ್ಯಗತ್ಯ.

ಹಿಂದುಗಳ ಆರಾಧ್ಯ ದೇವತೆಗಳು ಹಲವಿರುವವು. ಇವುಗಳಲ್ಲಿ ಭಾರತಾಂಬೆಯು ಒಬ್ಬಳು. ಪುರಾಣಗಳಲ್ಲೂ ನಮ್ಮ ಜನ್ಮಭೂಮಿಗೆ ಜನನಿ ಎಂಬ ನಾಮಧೇಯವಿದ್ದುದನ್ನು ನಾವು ಓದಬಲ್ಲೆವು. ನಮ್ಮ ಜನನವಿತ್ತ ತಾಯಿಯು ಪರಂಧಾಮವನ್ನೈದಿದ ಬಳಿಕ

(೧೩ನೇ ಪುಟ ನೋಡುವುದು)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟೋನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಎರಡು ಸೈಜಿನಲ್ಲಿ ದೊರೆಯುತ್ತದೆ **ಲೋಧ್ರ** ರೂ. 3 ಮತ್ತು 1—10—0

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದ್ರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು —

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಅಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ಸಾಕ್ಷಿತ್ವಯಿಸಿ ಸ್ವಾನುಭವ ಹೊಂದಿದ ಎಲ್ಲಾ ಔಷಧ ಮೂಲಿಕೆಗಳನ್ನು ಸುಲಭ ಬೆಲೆಗೆ ವಿಕ್ರಯಮಾಡಿ ಶ್ರೀ ಈ ಧರ್ಮಸಂಸ್ಥೆಯ ಉದ್ದಿಶ್ಯಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟ್ ಮಂಗಳೂರು, ದ. ಕ

ರೈಲು ಬಂಡಿಗಳ ಸಮಯ.

ಗಾಡಿಗಳು,	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9 50	ಸಂಜೆ 4-2
ಮಿಕ್ಸೆಡ್	,, 5 55	ರಾತ್ರಿ 8-5
ಫಾಸ್ಟ್ ಪೆಸೆಂಜರ್	ಮ. 12 45	ಮ. 2 4
ಶಟಲ್	ಸಂಜೆ 5 25	ಬೆಳಗ್ಗೆ 9-2
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1 2
ಕಾಸರಗೋಡು ಪೆಸೆಂಜರು	ಸಂಜೆ 3.20	ಸಂಜೆ 6 1

Ested 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು

ಠೇವಣಾತಿಗಳ ದರ:

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ದಸ್ತಾವೇಜುಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವುವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಯಿರಿ

Puttur, Dated 10 - 4 - 1935

G N. Lakshman Pai,
Secretary.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅವರ ಧನ್ವಂತರಿ ವೈದ್ಯರತ್ನಪಂಡಿತ

ಡಿ. ಗೋಪಾಲಾಚಾರ್ಯರವರ



ಬಾಲಭಾಸ್ಕರ

(ಗವರ್ನ್‌ಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣವಾಗಲ್ಪಡುವುವು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 237, ಮದರಾಸು

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು —ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ESTD 1906

CANARA BANK

LIMITED.

Head Office: MANGALORE

Subscribed Capital	6,00,000
Paid up Capital	3,33,000
Reserves	4,50,000
Deposits	61,92,000
Working Capital	73,40,000

OFFICES:

Bombay-Fort, Bombay Mandvi, Hubli, Calicut Cochin, Ernakulam, Alleppey, Bangalore, Chikmagalur, Mangalore-Bunder, Mangalore-City, Kasaragod, Puttur, Udipi, Karkala Coondapoor, Ganguli, Buntwal, Davanagere & Moolky

ALL KINDS OF BANKING BUSINESS UNDERTAKEN.

ಚಿತ್ರಾಹುತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾ ಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ. ಎಂ. ನರಸಿಂಗರಾವ್, ಬಿ. ಎ. ಎಂ. ಎಲ್ ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ ಬೆಲೆ ಆಣೆ 3.

30, 60 100 ಪ್ರತಿಗಳನ್ನು ಒಮ್ಮೆಲೆ ತಗೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.

ಶಾಲಾ ವಿದ್ಯಾರ್ಥಿಗಳಿಗೆ ಬೇಕಾಗಿರುವ

ಚಕ್ ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು—

ಬನ್ನಿರಿ ಅಥವಾ ಬರೆಯಿರಿ

ಕೊಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಸುಧಾರಣೆಗಳಾಗಬೇಕೆ?

(ಮಾಜಿ ಕೊಂಗ್ರೆಸ್ ಅಧ್ಯಕ್ಷರಾದ ಶ್ರೀ ಬಾಬೂರಾಜೇಂದ್ರ ಪ್ರಸಾದರ ಭಾಷಣದ ಸಾರಾಂಶ:—

ಜನನದಾರಂಭ್ಯ ಕಾಂಗ್ರೆಸ್ಸಿನ ಧ್ಯೇಯವು ಕಾಲನ ಅಗಾಧ ಲೀಲೆಗೆ ಅನುಸಾರವಾಗಿ ನಡೆಸಿಕೊಂಡು ಬರುವಂತಾದಾಗಿತ್ತು ಕಾಂಗ್ರೆಸ್ಸಿನ ಕಾರ್ಯಕರಂಗದಲ್ಲಿ ಸಮಯಕ್ಕನುಸರಿಸಿ ಬದಲಾವಣೆಗಳಾಗಬೇಕೆಂದು ಚಂಡಿ ಹಿಡಿದವರು ತಮ್ಮ ಮನೋಗತದಂತೆ ಬದಲಾವಣೆಗಳನ್ನು ಮಾಡಿಯೇ ಬಿಟ್ಟರು ಬದಲಾವಣೆಗಳನ್ನು ಮಾಡಿದ್ದು ವಿಹಿತವಾಗಲಿಲ್ಲವೆಂದು ಹೇಳಲಾರೆ. ಆದರೆ ಅಂತಹ ಬದಲಾವಣೆಗಳನ್ನನುಸರಿಸಿ ಕಾರ್ಯೋದ್ಯುಕ್ತರಾಗುವುದು ಸರಿಯೆಂದು ಭಾವಿಸುತ್ತೇನೆ. ಇಷ್ಟರ ವರೆಗೆ ಜನತೆಯ ಸಂಕಷ್ಟಗಳನ್ನರಿತು ದೇಶದ ಸ್ಥಿತಿಗತಿಗಳನ್ನು ತಿಳಿದು ಪರಿತಪಿಸುತ್ತಿದ್ದ ಜಗತ್ತಿನೊಟ್ಟಿಗೆ ಸಹಾನುಭೂತಿಪೂರ್ವಕವಾಗಿ ನಡೆದು ದಾಯಿತು. ನವಸುಧಾರಿತ ಕಾರ್ಯಕರಂಗದಲ್ಲೂ ಹೀಗೆ ಸಂಪೂರ್ಣ ಅನುಭವಹೊಂದಿ ಕಾರ್ಯಾಸ್ತಿತರಾಗುವುದು ಎಷ್ಟೋ ವಾಸಿ ಜಗತ್ತಿನ ದೃಷ್ಟಿಯಲ್ಲಿ ಕಾಂಗ್ರೆಸ್ಸು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂಸ್ಥೆ ಎಲ್ಲರೂ ಅದನ್ನು ಏಕೀಭಾವದಿಂದಲೂ ಅನ್ಯೋನ್ಯ ಪ್ರೀತಿಯಿಂದಲೂ ಕಾಣುತ್ತಿರುವರು ಆದರೆ ಸಂಸ್ಥೆಯು ಕೈ ಪಾತ್ರರಾಗದಂತೆ ವರ್ತಿಸುವುದು ಶ್ರೇಯಸ್ಕರವಲ್ಲವೆ? ತಮ್ಮಗಳ ಅಭಿಪ್ರಾಯಗಳನ್ನು **ಪರರು ಮೆಚ್ಚಬೇಕೆಂದಿರುವವರು, ಪರರ ಅಭಿಪ್ರಾಯಗಳನ್ನು ಮೆಚ್ಚಲು ಸಿದ್ಧರಾಗಿರಬೇಕು.**

ಕೊಂಗ್ರೆಸ್ಸು ಇಂದು ನಿರ್ವಧಿಸಿದ ಶಿಸ್ತು ಸುಧಾರಣೆಗಳು ಜನರ ಉದ್ಧಾರಗಯ್ಯಲು ಪೂರ್ಣಾನುಬಂಧಗಳಾಗಿವೆ ಆದರೆ ನಮ್ಮ ಮುಂದೆ ಹೊಸತಾಗಿ ಬಂದು ನಿಂತ ಹಲಕೆಲವು ಪ್ರಶ್ನೆಗಳನ್ನು ಬಹಳ ನಿಧಾನವಾಗಿ ಪರ್ಯಾಲೋಚಿಸಿ ಉತ್ತರಿಸಬೇಕಾಗಿರುವುದು ಅಷ್ಟರಿಂದ ಅವಿಚಾರವಂತರಾಗಿ ಇದ್ದ ಗೊಂದಲಗಳನ್ನು ಇನ್ನಷ್ಟು ಕಠಿಣತರ ಸಮಸ್ಯೆಗಳಿಗೀಡು ಮಾಡದಂತೆ ನಡೆಯುವ ಮಾರ್ಗವನ್ನವಲಂಬಿಸುವ ಪಥವನ್ನು ಹುಡುಕುವುದು ಅವಶ್ಯಕ ದೇಶದವರಿಗೆ ಸ್ವರಾಜ್ಯವು ಬೇಕೆಂಬುದು ನಿಜ ಆದರೆ ಪರದೇಶದವರ ಪರದೆ ಹಸ್ತವಿದ್ದ ಸ್ವರಾಜ್ಯವನ್ನು ಯಾರು ಬಯಸುತ್ತಾರೊ ಅವರೊಡನೆ ನಾನು ಯೋಚನೆಯನ್ನು ಮಾಡಲು ಸಿದ್ಧನಿಲ್ಲ ಕಾರಣ ಅದು ನಮ್ಮ ನಿರ್ಬಲತ್ವವನ್ನು ಅದ್ಯಂತವಾಗಿ ಸೂಚಿಸುತ್ತದೆ

ಕೊಂಗ್ರೆಸ್ ಕಾರ್ಯಕ್ರಮದತ್ತ ಗಮನ ಕೊಡುವ ಅದು ನಮ್ಮನ್ನೆಲ್ಲಿಗೆ ಮುಟ್ಟಿಸುವುದು? ಎಂಬ ಪ್ರಶ್ನೆ ಹಿಂದೂದೇಶದಲ್ಲಿಯ ಅನೇಕಾನೇಕ ಜಾತಿಗಳ, ಮತಗಳ, ಭಾಷೆಗಳ ಪ್ರಾಂತ್ಯಗಳನ್ನು ಒಟ್ಟುಗೂಡಿಸಿ ಸ್ವರಾಜ್ಯಕ್ಕಾಗಿ ಹೆಣಗಾಡುವ ಪಂಥವನ್ನು ಹೇಗೆ ಸಾಧಿಸಬಹುದು? ಸ್ವರಾಜ್ಯವು ಸಿಗಬೇಕಾದರೆ ಇವರೆಲ್ಲರ ಒಗ್ಗಟ್ಟು ಅನಿವಾರ್ಯವಾದ ಸಂಗತಿ. ನಾವು ಕತಿಪ್ರಯತ್ನಗೈದು ಭಿನ್ನ ಭಿನ್ನವಾದ ಜನಾಂಗಗಳಲ್ಲಿ ನಮ್ಮ ಧ್ಯೇಯದ ಪ್ರಚಾರ ಮಾಡಿ ಅವರನ್ನು ನಮ್ಮ ಪಂಥಕ್ಕೆ ಒಳಗಾಗುವಂತೆ ಮಾಡಬೇಕು ಇದು ಸಾಧ್ಯವೇ? ಇಂದಿಗೆ ಐವತ್ತು ವರ್ಷಗಳಿಂದ ಹಲವು ಮಂದಿ ಪವಿತ್ರಾತ್ಮರ ನಿಸರ್ಗ ಬುದ್ಧಿಯಿಂದಲೂ ದೇಹತ್ಯಾಗದಿಂದಲೂ ಹಲಕೆಲವು ಜಾತಿಗಳ ಸಹಾನುಭೂತಿಯನ್ನು ಕೈಗೊಳ್ಳಲು ಕೊಂಗ್ರೆಸ್ಸಿಗೆ ಸಾಧ್ಯವಾಗಿದೆ ಆದರೆ ಇದೊಂದರಲ್ಲಿ ನನಗೆ ತೃಪ್ತಿಯಿದೆ ನಾನು ಕೊಂಗ್ರೆಸ್ಸಿನ ಪ್ರಚಾರಕ್ಕಾಗಿ ಎಲ್ಲೆಲ್ಲಿ ಸಂಚರಿಸಿದ್ದೆನೋ ಅಲ್ಲಿಯವರೆಲ್ಲರೂ ಕಾಂಗ್ರೆಸ್ಸಿಗಾಗಿ ತಮ್ಮ ಸಹಾನುಭೂತಿಯನ್ನು ಬಹಳ ಉತ್ತಮರೀತಿಯಲ್ಲಿ ಪ್ರಕಟಗೊಳಿಸಿದರು ಇಂತಹ ಕಾರ್ಯಕ್ರಮದಿಂದ ಜನತೆಗೆ ಸಹಾಯ ಮಾಡಿದಂತಾಗುವುದಿಲ್ಲವೆಂದು ಯಾರು ತಾನೆ ಹೇಳುವರು? ಮತ್ತು ಇಂತಹ ರೀತಿಯು ಜನರನ್ನು ಆಕರ್ಷಿಸಿ ಸ್ವರಾಜ್ಯವನ್ನು ಪಡೆಯಲು ಹುರಿದುಂಬಿಸುವುದಿಲ್ಲವೆಂದು ಯಾರು ತಾನೇ ಅನ್ನುತ್ತಾರೊ ಅವರು ಜಗತ್ತಿನ ದೃಷ್ಟಿಯಲ್ಲಿ ಶುದ್ಧ ಪಾಪಿಗಳೆಂದು ನಾನೆಣಿಸುತ್ತೇನೆ ಯಾವುದಾದರೊಂದು ಪಾಪ

ಯವನ್ನಾಗಲಿ, ಕೆಲಸವನ್ನಾಗಲಿ, ವಿಚಕ್ಷಣತೆಯಿಂದ ಮಾಡುವುದಕ್ಕಿಂತಲೂ, ಹಾಳುಗೈವುದು ನಿಮಿಷಮಾತ್ರದ ಕೆಲಸವೆಂದು ನುರಿತವರಾದ ನಿಮಗೆ ಹೇಳಬೇಕಾಗಿಲ್ಲ ಆ ನಿಮಿಷಗಳ ಭೂಕಂಪನದಿಂದಾಗಿ ಬಿಹಾರ್ ದೇಶವೇ ಕುಸಿದು ಬಿತ್ತು ಈಗದರ ಪುನರ್ನಿರ್ಮಾಣಕ್ಕಾಗಿ ಎಷ್ಟು ಸಂವತ್ಸರಗಳು ಬೇಕೋ ದೇವರೆ ಬಲ್ಲ

ಇದೀಗ ಐವತ್ತು ವರ್ಷಗಳಿಂದಲೂ ಈ ಕೊಂಗ್ರೆಸ್ ಸಂಸ್ಥೆಯು ನಮ್ಮ ಅನೇಕಾನೇಕ ಪರಲೋಕವಾಸಿ ಬಂಧುಬಾಂಧವರ ಪುಣ್ಯ ಪ್ರಭಾವದಿಂದ ಕುಸಿದ್ದ ಬೀಳದೆ ಮುನ್ನಡೆಯುತ್ತಾ ಬಂದಿದೆ ಇಂದೀಗ ಅದನ್ನು ಸಂಪೂರ್ಣವಾಗಿ ಶಿಥಿಲಗೊಳಿಸಬೇಕೆಂದೆನ್ನುವವರು, ನಿಜವಾಗಿಯೂ ಪವಿತ್ರಾತ್ಮರಾದ ನಮ್ಮ ಪೂಜ್ಯ ಬಾಂಧವರ ಮನಸನ್ನು ನೋಯಿಸುವವರಾಗು

ನಮ್ಮ ದೇಶವು ಬಹಳ ಹೀನವಾದ ದರಿದ್ರಾವಸ್ಥೆಯನ್ನು ತಾಳಿದೆ ದೇಶದ ಆಯವನ್ನು ಎಲ್ಲರಿಗೂ ಸರಿಸಮಾನವಾಗಿ ವಿಭಜಿಸಿದ್ದಲ್ಲಿ ಪ್ರತಿಯೊಬ್ಬನಿಗೂ ಸಾಕಾಗುವಷ್ಟು ಲಭಿಸಲಿಕ್ಕಿಲ್ಲ ರಾ| ಶ್ರೀ| ದಾದಾಭಾಯಿಯವರ ಕಾಲದಿಂದಲೂ ಗಣಿತ ಶಾಸ್ತ್ರಜ್ಞರು ತಲಾ ಒಂದರಂತೆ ಪ್ರಜೆಗಳಿಗೆ ಸಿಕ್ಕುವ ಆಯವೆಷ್ಟೆಂದು ಪ್ರಯತ್ನಿಸಿ ತಿಂಗಳಿಗೆ ರೂ 2—8—0 ಎಂದು ಕಂಡುಹಿಡಿದಿದ್ದಾರೆ ಈಗ ಅದಕ್ಕಿಂತಲೂ ಕಡಿಮೆಯೆ ವಿನಹ ಹೆಚ್ಚಾಗಿಲ್ಲ. ಇದರಲ್ಲೂ ದೊಡ್ಡ ಪದವೀಧರರಿಗೆ ಹೆಚ್ಚು ವೇತನ ಸಿಕ್ಕಿತೆಂದರೆ ತುಂಬಾ ಬಡಬಗ್ಗರಜೀವನಕ್ಕೆ ಸೊನ್ನೆ ಹಾಗಾದರೆ ಪಾವನ ಚರಿತೆ, ಪುಣ್ಯ ಮಾತೆಯ ಉದರದಲ್ಲಿ ಜನಿಸಿದ ಬಡಬಗ್ಗರು ಉಪವಾಸದಿಂದ ಸಾಯಬೇಕೆ? ಹಾಯ್ ಅದೆಂತಹ ಶೋಚನೀಯ ಅವಸ್ಥೆ

ಪತ್ನೀಸಹಿತ ಶ್ರೀ ಬಾಬೂರಾಜೇಂದ್ರ ಪ್ರಸಾದರವರು.

ವುದಿಲ್ಲವೆ ಆದುದರಿಂದ ಇನ್ನಾದರೂ, ಹೊಸ, ಹೊಸ' ಎಂದು ಭೋರ್ಗರೆಯದೆ ಕಾಂಗ್ರೆಸ್ಸಿನ ಇದ್ದ ಕಾರ್ಯಕ್ರಮಗಳನ್ನು ಪುಷ್ಟೀಕರಿಸಿ ಅದರಿಂದ ನಮ್ಮ ಪರೋಕ್ಷದ ಸಾಧನೆಯನ್ನು ಗಳಿಸಲು ಪ್ರಯತ್ನಿಸಿರಿ

ದೇಶದ ಅನೇಕಾನೇಕ ಜಾತಿಗಳ ಏಕೀಕರಣವಾಗಲು ಪ್ರಯತ್ನಿಸಿದ್ದರಿಂದ ಕಾಂಗ್ರೆಸ್ಸು ಮಾಡಿದ ಅವಿಚಾರವಾವುದು? ದೇಶದ ಆರ್ಥಿಕ ಸ್ಥಿತಿಯನ್ನು ಉದ್ಧಾರಗೊಳಿಸಲು ನಿರ್ವಧಿಸಿದ ಕೊಟೆಜ್ 'ಇಂಡಸ್ಟ್ರೀಸ್'ಗಳಿಂದ ಕೊಂಗ್ರೆಸ್ಸಿಗೆ ಬಂದ ಕುಂದೇನು? ಮಿಲಿಯಗಟ್ಟಳೆ ಸಹೋದರರನ್ನು ಹರಿಜನರೆಂದು ದೂರವಿರಿಸಿದ್ದಲ್ಲಿ ಸ್ವರಾಜ್ಯವನ್ನು ಪಡೆಯುವುದಾದರೂ ಎಂತು. ಇವೇ ಕೆಲವು ಸಮಸ್ಯೆಗಳಲ್ಲಿ ಭಿನ್ನಾಭಿಪ್ರಾಯಗಳಿದ್ದು ಹಲವರು ನವಸುಧಾರಣೆಗಳಾಗಬೇಕೆಂದರು ನಮ್ಮ ಭಾಗ್ಯೋದಯವಾಗಬೇಕಾದರೆಬೇಕಾದ ಮುಖ್ಯ ಜೀವಾಂಶಗಳಾದ ಇವನ್ನೆ ಕಿತ್ತೊಗೆಯುವರೆಂದರೆ ಉಳಿದ ಅಲ್ಪ ಸಂಗತಿಗಳಿಗಾಗಿ ಹೆಣಗಾಡಿ ಪುರುಷಾರ್ಥವೇನು. ಇದೆಲ್ಲವನ್ನೂ ಪರ್ಯಾಲೋಚಿಸದೆ ಒಂದೇ ಸವನೆ ಇದಕ್ಕೆಲ್ಲ ಬಹಿಷ್ಕಾರವನ್ನು ಹಾಕಿದ ನನ್ನ ಬಾಂಧವರ ಆಲೋಚನೆಗಳ ಪರಿಷ್ಕಾರವೇನೆಂದು ನನಗಿನ್ನೂ ತಿಳಿಯದಾಗಿದೆ

ಆದುದರಿಂದ ದೇಶದ ಆಯವನ್ನು ಎಲ್ಲರಿಗೂ ಸರಿಸಮಾನವಾಗಿ ಹಂಚುವುದರಿಂದಾಗಿ ದೇಶದ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಿದಂತಾಗುವುದಿಲ್ಲ ಕಲ್ಯಾಣದ ಹಾದಿಯೆಂದರೆ, ಪ್ರತಿಯೊಬ್ಬನಿಗೂ ಕೆಲಸದ ದಾರಿಯನ್ನು ತೋರಿಸಿಕೊಟ್ಟು, ಅವನ ಜೀವಿತವನ್ನು ಅವನು ಪಡೆಯುವಂತೆ ಮಾಡುವುದಾಗಿರುವುದು ಇದನ್ನೇ ಕೊಂಗ್ರೆಸ್ಸು ಮಾಡುತ್ತಿರುವುದು ದೇಶದ ಅಧಿಗಲನ್ನಾಗಿರುವ ಹಳ್ಳಿಗಳಲ್ಲಿ ಈ ಕೈಗಾರಿಕೆ ಕೆಲಸಗಳಿಗೆ ಪ್ರೋತ್ಸಾಹಕೊಟ್ಟು ಪಟ್ಟಣಗಳಲ್ಲೂ ಅದರ ಗಾಳಿಯು ಬೀಸುವಂತೆ ಮಾಡಿ ದೇಶದ ಸಂಪತ್ತನ್ನು ಇಮ್ಮಡಿ ಮಾಡುವುದೇ ಅವರ ಕಾರ್ಯಗಳಲ್ಲೊಂದಾಗಿದೆ. ಆದರೆ ಇಷ್ಟರ ವರೆಗೆ ನಾವು ಪರದೇಶಗಳಿಗೆ ವೃಥಾ ಕಳುಹಿಸುತ್ತಿದ್ದ ಹಣದ ಗೊಡವೆಯನ್ನು ಮಾಡಿಲ್ಲ ನಮ್ಮ ಮನೆಯಲ್ಲಿರುವ ಸಾಮಗ್ರಿಗಳನ್ನೆ ಎಣಿಸಿದರೆ ನಮ್ಮ ಹಳ್ಳಿಯಲ್ಲಿ ವ ನಮ್ಮ ದೇಶದಲ್ಲಾಗುವ ಸಾಮಾನುಗಳಿಗಿಂತ ಪರದೇಶದಲ್ಲಿ ಸಿದ್ಧವಾಗುವಂತಹ ಸಾಮಾನುಗಳೇ ಹೆಚ್ಚಾಗಿರುವುವು. ಇದರಿಂದ ಇಲ್ಲಿ ಉತ್ಪತ್ತಿಯಾದ ಧನವು ನಮಗೆ ಸಿಗದೆ ಪರದೇಶಕ್ಕೆ ತೆರಳುವುದೆಂದರೆ ಇದೆಂತಹ ವಿಪರ್ಯಾಸ. ಕಾಂಗ್ರೆಸ್ಸು ಕಷ್ಟಾಲಕ್ಕೆ ನೂಲು

ರುತ್ತದೆ. ಅದರ ಪ್ರಚಾರ ಕಾರ್ಯವನ್ನು ಇನ್ನೂ ಇನ್ನೂ ಮುಂದರಿಸಬೇಕಾಗಿಯೂ ಆಲೋಚಿಸಿದೆ. ಇದರಿಂದಾಗಿ ನಿರುದ್ಯೋಗಿಗಳಿಗೂ ಕೆಲಸ ಕೊಟ್ಟಂತಾಗಿ ದೇಶದ ಆರ್ಥಿಕ ಸ್ಥಿತಿಯನ್ನು ಉದ್ಧರಿಸಿದಂತಾಗುವುದಲ್ಲವೇ? **"ಹಿಂದೂದೇಶಕ್ಕೆ ಬೇಕಾದವರು ಮಿಲಿಯಾಧಿಪತಿಗಳಲ್ಲ, ಮಿಲಿಯಗಟ್ಟಳೆ ಜನರ ಉದರಪೋಷಣೆಗೀಗಾಗಿ ನೆರವಾಗುವ ಸ್ವದೇಶೀ ಕೈಗಾರಿಕೆಗಳು."**

ಜನತೆಯಲ್ಲಿಯ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಮೂರು ಕಾರ್ಖಾನೆಗಳನ್ನು ನಿರ್ವಧಿಸಿದೆವು. ಇಲ್ಲಿ ವಸ್ತ್ರಕ್ಕೆ ಬೇಕಾದ ನೂಲಿನ ಮೂರನೇ ಒಂದಂಶವನ್ನು ಹಿಂದೂದೇಶದಿಂದ ಪಡೆಯುತ್ತೇವೆ ಮೂರನೇ ಒಂದಂಶವನ್ನು ಪರದೇಶದಿಂದಲೂ, ಬಾಕಿ ಉಳಿದ ಮೂರನೇ ಒಂದಂಶವನ್ನು ಹಳ್ಳಿಗಳಿಂದಲೂ ತರಿಸುತ್ತೇವೆ. ಈ ಮೂರನೇ ಒಂದಂಶ ನೂಲನ್ನು ತಯಾರಿಸುವುದರಿಂದ ಹಳ್ಳಿಗಳ ನಾಲ್ಕು ಮಿಲಿಯ ಜನರಿಗೆ ಜೀವನ ಉತ್ಪತ್ತಿಯಾಗುತ್ತಿದೆ ಆದ್ದರಿಂದ ಪರದೇಶದಿಂದ ತರಿಸುವದಕ್ಕಿಂತಲೂ ಎಲ್ಲವನ್ನೂ ಇಲ್ಲಿಯೇ ಕೈಮಗ್ಗಗಳಿಂದಲೆ ತಯಾರಿಸುತ್ತಿದ್ದರೆ ಎಷ್ಟು ಮಿಲಿಯ ಜನರ ಜೀವನವನ್ನು ಸುಖಮಯವಾಗಿ ಮಾಡಬಹುದಿತ್ತು ನೀವೇ ಯೋಚಿಸಿರಿ ಕೈಗಾರಿಕೆಯೊಂದಕ್ಕೆ ಸರಿಯಾಗಿ ನಿಗಾಕೊಟ್ಟಲ್ಲಿ ಇಷ್ಟೊಂದು ಲಾಭವನ್ನು ಪಡೆಯಬಹುದಾದರೆ, ಇನ್ನಿತರ ಸ್ವದೇಶಿ ವಸ್ತುಗಳನ್ನು ಪ್ರಚಾರಿಸುವುದರಿಂದ ನಮ್ಮ ದೇಶದ ಆರ್ಥಿಕ ಸ್ಥಿತಿಯೆಷ್ಟು ಉತ್ತಮವಾಗಲಿಕ್ಕಿಲ್ಲ ನಿರುದ್ಯೋಗದ ಸಮಸ್ಯೆಯನ್ನು ಉತ್ತರಿಸಲು ಇಷ್ಟೊಂದು ಗಹನವಾದ ಬೇರೊಂದು ಆಲೋಚನೆಯು ಬೇಕೆ?

ಇನ್ನು ಮುಂದೆ ಪ್ರತಿಯೊಂದು ಸಾಮಾನನ್ನು ಕ್ರಯಕ್ಕೆ ಪಡೆಕೊಳ್ಳುವಾಗ ಚೆನ್ನಾಗಿ ಆಲೋಚಿಸಿರಿ ಅದರಿಂದಾಗಿ ಹಣವು ಪರದೇಶಗಳಿಗೆ ತೆರಳುವದಾದರೆ ಅದನ್ನು ಅದಷ್ಟು ಶ್ರಮಪಟ್ಟು, ಕೊಂಡುಕೊಳ್ಳದಂತೆ ಪ್ರಯತ್ನಿಸಿರಿ ಸ್ವದೇಶ ಬಾಂಧವರಿಗೆ ಸಿಗುವ ಯಾವ ಸಾಮಾನಿದೆಯೋ ಅದಕ್ಕೆ ಒಳ್ಳೇ ಪ್ರೋತ್ಸಾಹವನ್ನಿತ್ತು ಸ್ವದೇಶಿ ಕೈಗಾರಿಕೆಗಳನ್ನು ಅಭ್ಯಾಸಿಸುವುದು ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದು ಇವೆರಡೂ ದೇಶದ ಸ್ವಾತಂತ್ರ್ಯವನ್ನು ಲಭಿಸಿಕೊಳ್ಳಲು. ಉತ್ತಮ ಸಾಧನೆಗಳಾಗಿವೆ ನವ ಸ್ವರಾಜ್ಯವನ್ನು ಪಡೆಯಲು ಅವು ತಕ್ಕಮಟ್ಟಿನ ಧೈರ್ಯವನ್ನೂ ಪ್ರೋತ್ಸಾಹವನ್ನೂ ಕೊಡುತ್ತದೆಂದರೂ ಅತಿಶಯೋಕ್ತಿಯಾಗಲಾರದು.

ಮತ್ತೊಂದು ಮಾತು ನಮ್ಮ ದೇಶದಲ್ಲಿರುವ ಜಾತೀಯತೆಯ ಪ್ರಶ್ನೆಯನ್ನು ಬಗೆಹರಿಸಲು ಪ್ರಯತ್ನಿಸುವುದು. ಇದು ಇನ್ನೊಂದು ಗಡುತರ ಪ್ರಶ್ನೆ. ಒಂದೇ ದೇಶದಲ್ಲಿ ಹುಟ್ಟಿ, ಒಂದೆ ಆಹಾರದಿಂದ ಬೆಳೆದವರು ನಾವು ಆದುದರಿಂದ ಯಾವನೊಬ್ಬನು ಸ್ವರಾಜ್ಯವು ಹಿಂದುಗಳಿಗಾಗಿ ಎಂದರೆ ಅವನನ್ನು ಹುಚ್ಚನೆಂದು ಸ್ವತಂತ್ರ್ಯಸದಸ್ಯನಾಗಲು ಉತ್ತಮನಿರುವನೆಂದು ನನ್ನ ಭಾವನೆ ಹಾಗೆಯೇ ಮುಸಲ್ಮಾನರೂ ಕ್ರಿಸ್ತಿಯಾನರು. ಅಂದರೆ, ಅವರೂ ಅಂತಹ ಸಂಗಡಕ್ಕೆ ಸೇರಿದವರೆಂದು ಹೇಳಲು ನಾನು ಅಸಮಾಧಾನ ಪಡುವುದಿಲ್ಲ, ನಾವು ಆಳುವ ಸ್ವರಾಜ್ಯವು ಹಿಂದುಗಳದ್ದಲ್ಲ, ಮುಸ್ಲಿಮರದ್ದಲ್ಲ, ಕ್ರೈಸ್ತರದ್ದಲ್ಲ, ಸಿಕ್ಖರ ಪಾರ್ಸಿಗಳದ್ದಲ್ಲ **ಅದು ಭರತ ಭೂಮಿಯಲ್ಲಿ ಜನವೆತ್ತಿದ ಪ್ರತಿಯೊಬ್ಬ ಮಾನವನದಾಗಿರ**ತ್ತದೆ ಆದ್ದರಿಂದ ಎಲ್ಲರೂ, ತಮ್ಮ ತನುಮನಧನಗಳಿಂದ ಅದನ್ನು ಪಡೆಯಲು ಸಾಧಿಸುವುದು ಅವಶ್ಯಕ

ಹಿಂದುಗಳ ಆರಾಧ್ಯ ದೇವತೆಗಳು ಹಲವಿರುವವು. ಇವುಗಳಲ್ಲಿ ಭಾರತಾಂಬೆಯು ಒಬ್ಬಳು. ಪುರಾಣಗಳಲ್ಲೂ ನಮ್ಮ ಜನ್ಮಭೂಮಿಗೆ ಜನನಿ ಎಂಬ ನಾಮಧೇಯವಿದ್ದುದನ್ನು ನಾವು ಓದಿಬಲ್ಲೆವು ನಮಗೆ ಜನನಿ ತಾಯಿಯು ಪರಂಧಾಮವನ್ನೈದಿದ ಬಳಿ

[illegible]

ಬಿಸಿಲಿನ ಜಳದಿಂದುಂಟಾದ ಅನೇಕಾನೇಕ ಚರ್ಮ ವ್ಯಾಧಿಗಳಿಗೆ

ಸಾಂಬಕನ್ನು ತಿಕ್ಕಿ ಗುಣ ಲಾಭವನ್ನು ಪಡೆಯಿರಿ.

ಉಗ್ರವಾದ ಬಿಸಿಲಿನಿಂದ ಬಹುತೇಕ ಜನರು ನಾನಾ ತರದ ಚರ್ಮವ್ಯಾಧಿಗಳಿಂದ ನರಳುವುದಿದೆ ಅವುಗಳಿಂದಾಗಿ ಮೈಯೆಲ್ಲಾ ಜ್ವಾಲೆ ಎದ್ದಂತಾಗಿ ಕುಸುಸುಖಕ್ಕಾದರೂ ಎಡೆಯಿಲ್ಲದಂತೆ ಮಾಡುತ್ತವೆ ಇದಕ್ಕೆಲ್ಲಾ ಸಾಂಬಕನ್ನು ಉಪಯೋಗಿ ತೀಕ್ಷ್ಣವಾಗಿ ಗುಣಲಾಭವನ್ನು ಪಡೆಯಿರಿ ಉರಿಯುವ ಭಾಗಗಳಲ್ಲಿ ಸಾಂಬಕನ್ನು ತಿಕ್ಕಿದರೆ ಕೂಡಲೇ ತಂಪನ್ನೀಯುವುದಲ್ಲದೆ, ದೇಹಕ್ಕೆ ಶಾಂತಿಯನ್ನೂ ಸುಖವನ್ನೂ ಕೊಡುವುದು. ರಾತ್ರಿ ಮಲಗುವಾಗ ಸಾಂಬಕನ್ನು ತಿಕ್ಕಿ ಮಲಗಿದಿರೆಂದರೆ ಮುಂಜಾನೆ ಏಳುವಾಗ ಖಾತ್ರಿಯಾಗಿ ಗುಣವನ್ನು ಪಡೆಯುವಿರಿ ಎಲ್ಲಾ ಔಷಧಿಯ ಅಂಗಡಿಗಳಲ್ಲಿ ವಿಕ್ರ ರೂ 1 ಅಥವಾ 2-4-0ಕ್ಕೆ ದೊರೆಯುತ್ತದೆ

ಇದರಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರಣವಿಲ್ಲ.

ಸಾಂಬಕ್

Zam Buk

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿಯಲ್ಲೇ ಕೊಡಿರಿ!

The Ammembal Subba Rao Pai Memorial Fund

Canara High School, MANGALORE

Applications for loan stipends from the above Fund should reach the HONORARY TREASURER of the Fund by the 15th June 1936. Printed Application forms are available at the Office of the Fund between 9 a. m. and 11 a. m. every day at a cost of one anna each for original application forms and half an anna each for renewal application forms. If forms are to be sent by post, postage stamps equivalent to the price of the form or forms required and one three-fourth anna stamp for each form to cover the postage for the same should be sent. Only Gowd Saraswath Brahmin students need apply. Applicants will note that first preference will be given to running stipendiaries while awarding stipends, and if funds are available after that, new applicants cases will be considered, with preference for applications for technical courses.

Canara High School Mangalore 11—4—1936

M. Venkatesha Pai
Hon. Secretary

ಕಾರ್ಯಸಿದ್ಧಿ ಮಂತ್ರಂ

ಯಾರೇ ಆಗಲಿ, ಗಂಡಸರಾಗಲಿ, ಹೆಂಗಸರಾಗಲಿ, ಹುಡುಗರಾಗಲಿ, ಈ ಮಂತ್ರವನ್ನು ಸಿದ್ಧಿ ಮಾಡಿಕೊಂಡು ಮಲಗುವುದಕ್ಕೆ ಮುಂಚೆ ರಾತ್ರಿಯಲ್ಲಿ ಜಪಿಸಿದರೆ ಅವರ ಮನೋಭಿಲಾಷೆಗಳೆಲ್ಲವೂ ನೆರವೇರುವುವು. ಇದರ ಸಹಾಯದಿಂದ ಕಳೆದ ಪದಾರ್ಥಗಳ ಪತ್ತೆ ಹಚ್ಚುವಿಕೆಯು ಪ್ರತ್ಯೇಕವಾದ ಸಂಬಂಧಿಗಳೊಡನೆ ಸಂಭಾಷಣೆಯೂ, ಇತರರ ಮನೋಭಿಪ್ರಾಯಗಳನ್ನೂ, ಭೂತಭವಿಷ್ಯತ್ ವರ್ತಮಾನಗಳೆಲ್ಲವನ್ನೂ ಸುಲಭವಾಗಿ ತಿಳಿಯಬಹುದು. ಕೇವಲ ಒಂದು ರೂಪಾಯಿಯನ್ನು ಮನಿಯಾರ್ಡರ್ ಮೂಲಕ ಕಳುಹಿಸುವವರಿಗೆ ಈ ಕಾರ್ಯಸಿದ್ಧಿ ಮಂತ್ರವು ಅಂಚೆ ವೆಚ್ಚವಿಲ್ಲದೆ ಕಳುಹಿಸಲ್ಪಡುವುದು. ವಿ. ಪಿ. ಮಾಡುವುದಿಲ್ಲ ವ್ಯವಸ್ಥಾಪಕ,

ಕಾರ್ಯಸಿದ್ಧಿ ಆಶ್ರಮ 211 ವಿಶ್ವೇಶ್ವರ ಪುರಂ,

ಬೆಂಗಳೂರು ಸಿಟಿ. (S 1)

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಅ	ರೂ. ಅ
ಹೊಸ ರಾಶಿ ಅಕ್ಕಿ	3—4	3—6
ಹೊಸ ಮುಸ್ಕಿ	3—10	4—0
ಗುಡ್ಡ ಸುಗ್ಗಿ	೨—8	3—12
ಊರ ಅವ್ವಲ್ ಬೆಳ್ತಿಗೆ	4—0	4—8
ರಂಗೂನು ಬಿ. ಗೋ. ೧ಕ್ಕೆ	6—4	7—0
ಎಲ್ಲೂರು ಬೆ. ಮು. ೧ಕ್ಕೆ	4—4	4—8
ಗೋದಿ ಗೋಣಿ ೧ಕ್ಕೆ	8—8	10—4
ತೊಗರಿ ಗೋಣಿ ೧ಕ್ಕೆ	9—0	9—8
ಉದ್ದು ಗೋಣಿ ೧ಕ್ಕೆ	5—4	5—1
ಕಡಲೆ ಗೋಣಿ ೧ಕ್ಕೆ	7—4	9—
ತೊಗರಿಬೇಳೆ ಗೋಣಿ ೧ಕ್ಕೆ	11—0	15—8
ಉದ್ದು ಗೋಣಿ ೧ಕ್ಕೆ	9—8	10—
ಹೆಸರು ಗೋಣಿ ೧ಕ್ಕೆ	9—4	9—1
ಊರುಬೆಲ್ಲ ಖಂಡಿ ೧ಕ್ಕೆ	30—0	35—
ಉಪ್ಪು ಗೋಣಿ ೧ಕ್ಕೆ	4—8	4—
ಕೊಪ್ರಿ ಖಂಡಿ ೧ಕ್ಕೆ	60—0	70—
ಕೊಪ್ರಿ ಹಿಂಡಿ ಖಂಡಿ ೧ಕ್ಕೆ	28—0	29—
ಎಳ್ಳಿಂಡಿ ಖಂಡಿ ೧ಕ್ಕೆ	32—8	33—1
ಕೊಪ್ರಿ ಎಣ್ಣೆ ಮುಡಿ ೧ಕ್ಕೆ	4—15	6—
ಎಳ್ಳೆಣ್ಣೆ ಮುಡಿ ೧ಕ್ಕೆ	7—0	7—
ಚಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ	6—5	6—
ಮೋರಿಸ ಸಕ್ಕರೆ ಮು. ೧ಕ್ಕೆ	3—9	3—
ಮೆಣಸು	2—8	4—
ಸಾಸಿವೆ ಮುಡಿ ೧ಕ್ಕೆ	5—8	6—
ಕಾಳುಮೆಣಸು ಖ. ೧ಕ್ಕೆ	102—8	105—
ಯೇಲಕ್ಕಿಬೀಜ ಮುಡಿ ೧ಕ್ಕೆ	38—0	39—
ಗೇರುಬೀಜ ಮು. ೧ಕ್ಕೆ	8—8	9—1
ಕಬ್ಬಿಣ ಖಂಡಿ ೧ಕ್ಕೆ	35—0	37—
ತಾಂಬ್ರತಗಡು ಮು. ೧ಕ್ಕೆ	9—12	9—1
ತಾಂಬ್ರಪಾತ್ರಗಳು ಮು. ೧ಕ್ಕೆ	12—8	14—
ಚೀನಿಬೆಲ್ಲ ಸೇರು ೧ಕ್ಕೆ	17—8	18—
ಹಿತ್ತಾಳೆ ತಗಡು ಮು. ೧ಕ್ಕೆ	10—0	10—
ಪವನು ೧ಕ್ಕೆ	22—8	22—
ಹುಣಿಸೆ ಹುಳಿ ಖಂಡಿ ೧ಕ್ಕೆ	20—0	25—
ನೇಟಿವ್ ಕಾಫಿ ಖಂಡಿ ೧ಕ್ಕೆ	145—0	150—
ಫೀಬೇರಿ ಕಾಫಿ ಖಂಡಿ ೧ಕ್ಕೆ	175—0	185—
ಮಡಿಕೇರಿ ಏಲಕ್ಕಿ	25—0	26—

ಸ್ತನೋ ಸ್ತೇಧಃ

STHANO STHEDAH THE MALAYALA OUSHADHA CO., POST - CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು ಮನುಷ್ಯನು ಹೆಂಗಸೋರ್ವಳನ್ನು ಕಂಡೊಡನೆಯೇ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವು- ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣವಾಪಸು.

ಇವೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ ಸ್ತನೋ ಸ್ತೇಧದಿಂದ ಸಾಧ್ಯ ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದಾರುಣವಾದ ಚಿಂತೆಯಿಂದಲೂ ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲು ಬಿದ್ದಿದ್ದರೂ ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಪುಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎಡೆಬಿಡದೆ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪುಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸಾಗಿಸಿ ಸ್ತನಗಳನ್ನು ಅನವಾಕರ್ಷಕಗಳನ್ನಾಗಿ ಮಾಡುವುದು ಮಾತ್ರವಲ್ಲದೆ ಚರ್ಮಕ್ಕೆ ಭಿನ್ನವಾದ ಕಾಂತಿಯನ್ನೂ ಕೊಡುತ್ತದೆ. ಇದರಿಂದ ಸಾಧಕ ವಿನಹ ಬಾಧಕವಿಲ್ಲ ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು ಅಂತಹ ಗುಣವನ್ನು ನೀವೂ ಪಡೆಯಿರಿ

ಸ್ತನೋ ಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ 3 ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ 3

ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು

ಇವಲ್ಲದೆ ಬೇರೆ ಔಷಧಗಳು ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ

1. ಮುಟ್ಟುದೋಷ 2 ಸಂತತಿ ಪ್ರತಿಬಂಧಕ, 3 ಧಾತುಪುಷ್ಟಿ, 4 ಲಿಂಗವೃದ್ಧಿ, 5. ಸ್ತ್ರೀರೋಗ, 6 ಕ್ಷಯ ಸಂಹಾರಿ, 7 ವಾತರೋಗ,

ಅಲಭ್ಯ ಲಾಭ! ಸುವರ್ಣ ಸಂದರ್ಭ!

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

ಗ್ರ್ಯಾಂಡ್ ವಿದ್ಯಾದಾಯಿನೀ ಲೋಟ್ರಿ

ತೆಗೆಯುವ ತಾರೀಕು 3-6-1936 ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ.

ಲೋಟ್ರಿಯ ಮೊಬಲಗು: ರೂ. 50,000.

ಒಟ್ಟು ಬಹುಮಾನಗಳ ಸಂಖ್ಯೆ: 1778. ಮೌಲ್ಯ ರೂ. 20,000.

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಮೆನೇಜರ್— ಗ್ರ್ಯಾಂಡ್ ವಿದ್ಯಾದಾಯಿನೀ ಲೋಟ್ರಿ, ಸುರತ್ಕಲ್ (ದ. ಕ.)

ಏ ನೊ-ಪಾನ ಕಾರಣದಿಂದಲಾದರೂ ಲೋಟ್ರಿ ತೆಗೆಯುವ ತಾರೀಕನ್ನು ಮುಂದರಿಸೋಣಾಗುವುದಿಲ್ಲ.

ಶಾಲಿವಾಹನ ಶಕ ೧೮೫೮ನೆಯ ಯುವ ಸಂವತ್ಸರದ ವೈಶಾಖ ಶು। ೪ ಶನಿವಾರದಿಂದ ವೈಶಾಖ ಶು। ೧೦ ಶುಕ್ರವಾರದ ವರೇಗಿನ ಪಂಚಾಂಗ.(೧೯೩೬ನೇಯ ಮೇಷ ಪಗ್ಗು)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
25	ಶನಿ	೪	೧೪	ಮೃಗಶಿರಾ	೪೩	೧೩	[illegible]
26	ರವಿ	೫	೧೧	ಆರ್ದ್ರಾ	೪೨	೧೪	
27	ಸೋಮ	೬	೯	ಪುನರ್ವಸು	೪೩	೧೫	
28	*ಕುಜ	೭	೯	ಪುಷ್ಯ	೪೫	೧೬	
29	ಬುಧ	೮	೧೦	ಆಶ್ಲೇಷಾ	೪೯	೧೭	
30	ಗುರು	೯	೧೨	ಮಘಾ	೫೩	೧೮	
1	ಶುಕ್ರ	೧೦	೧೬	ಪುಬ್ಬ	೫೯	೧೯	

ನಮ್ಮ ಸಾಪ್ತಾಹಿಕ ಕಥೆ:

ಪಾತ್ರ ವಿಪರ್ಯಾಸ

ಲೇಖಕ: ಶ್ರೀ 'ರಸಿಕರಂಜನ'

ರಮಾನಂದನು ಎಂದಿನಿಂದ ನಳಿನಿಯ ವರ್ತನದಲ್ಲಿ ಹೆಚ್ಚುಹೆಚ್ಚಾದ ಉದಾಸೀನತೆಯ ಚಿಹ್ನೆಗಳನ್ನು ಕಾಣತೊಡಗಿದನೋ, ಅಂದಿನಿಂದಲೂ ಅವನು ತನ್ನ ಹೃದಯವನ್ನು ಅವಳಲ್ಲಿ ಒಮ್ಮೆಗೇ ಪೂರ್ತಿಯಾಗಿ ಬಿಚ್ಚಿ, ಬಹು ಸಮಯದಿಂದ ತನ್ನನ್ನು ಕಾಡುತ್ತಿದ್ದ ಸಂಶಯವನ್ನು ನಿವಾರಿಸಿಕೊಳ್ಳಬೇಕೆಂದು ಯೋಚಿಸುತ್ತಿದ್ದನು. ಯಾವುದಾದರೊಂದು ಇತ್ಯರ್ಥಕ್ಕೆ ಕೂಡಲೇ ಬರುವುದು ಅತ್ಯಂತ ಅಗತ್ಯವೆಂದು ಅವನಿಗೆ ಒಂದಕ್ಕಿಂತ ಹೆಚ್ಚು ಸಲ ತೋರಿದ್ದಿತಾದರೂ, ಯಾವುದೋ ಒಂದು ಕಾಣದ ಕೈಯು ಅವನನ್ನು ಮುಂದೆ ಹೆಜ್ಜೆಯಿಡಲು ಸಂಕೋಚಪಡಿಸುತ್ತಿತ್ತು 'ಆಶಾಪೂರ್ಣ ಹೃದಯದಿಂದ ಮಾರ್ಗಕ್ರಮಣ ಮಾಡುವುದೇ ಗತಿಯನ್ನು ಸೇರುವುದಕ್ಕಿಂತಲೂ ಉತ್ತಮ'* ಎಂದು ಕವಿ ಎಂದಿರುವನಾದರೂ, ರಮಾನಂದನ ಹೃದಯವೇಕೋ ಆ ಗತಿಯ ಸೇರುವೆಗಾಗಿ ಹೆಚ್ಚುಹೆಚ್ಚಾಗಿ ಹಾರೈಸತೊಡಗಿತು ಅವನ ಹೃದಯವು ಅಸಿಧಾರಾವ್ರತ† ಧಾರಣೆಗೆ ಅನುಕೂಲವಾಗಿ ನಿರ್ಮಿಸಲ್ಪಟ್ಟಿರಲಿಲ್ಲ ಆ ಖಡ್ಗವು ತನ್ನ ತಲೆಯನ್ನು ಒಂದೇ ಪೆಟ್ಟಿಗೆ ಕಡಿದರೂ ದೊಡ್ಡದಲ್ಲ, ಆದರೆ ಅದರ ಧಾರೆಗೆ ತಲೆಯನ್ನೊಡ್ಡಿಕೊಂಡು ಇನ್ನು ಒಂದು ಕ್ಷಣವಾದರೂ ಕಳೆಯಲಾರೆನೆಂದೇ ಅವನು ಈ ದಿನ ಭೀಷ್ಮಪ್ರತಿಜ್ಞೆ ಮಾಡಿದನು

ಉಚ್ಚ ವಿದ್ಯಾಭ್ಯಾಸಕ್ಕಾಗಿ ಮಂಗಳೂರಿಗೆ ಬಂದ ಮೇಲೆ ರಮಾನಂದನು ತನ್ನ ಸೋದರಮಾವನ ಮಗಳಾದ ನಳಿನಿಯಲ್ಲಿ ಅನುರಕ್ತನಾಗಿ ಅವಳ ಪ್ರೇಮವನ್ನು ಸಂಪಾದಿಸುವುದಕ್ಕಾಗಿ ಅವರಲ್ಲಿಗೆ ಹೋಗತೊಡಗಿದಂದಿನಿಂದಲೂ, ನಳಿನಿಯಲ್ಲಿ ಅಂತಹ ಪ್ರೇಮಚಿಹ್ನೆಗಳಾವುವನ್ನೂ ಅವನು ಪ್ರಕಾಶವಾಗಿ ಕಂಡಿರಲಿಲ್ಲ. ಅವನು ನಳಿನಿ ಮತ್ತು ಅವಳ ತಂಗಿ ಸರಸೆಯೊಡನೆ ಸಂಭಾಷಿಸುತ್ತ ಸಮಯವನ್ನು ಸಂತೋಷದಿಂದ ಕಳೆಯುತ್ತಿದ್ದಾಗಲೆಲ್ಲ ನಳಿನಿಯು ಹೆಚ್ಚಾಗಿ ಆ ಸಂತೋಷದಲ್ಲಿ ಭಾಗವಹಿಸದಿರುತ್ತಿದ್ದುದು ಈಚೆಗೆ ರಮಾನಂದನನ್ನು ಎಷ್ಟೋ ಸಲ ಯೋಚನೆಗೀಡುಮಾಡಿತ್ತು ಸರಸೆಯ ವಾಕ್ಚಾತುರ್ಯವು ಈ ವರೆಗೆ ತನಗೆ ತಿಳಿಯದಂತೆ ನಳಿನಿಯ ಉದಾಸೀನತೆಯ ಮೇಲೆ ಹೇಗೆ ಪರದೆಯಾಯಿತೆಂಬುದು ರಮಾನಂದನಿಗೆ ಆಶ್ಚರ್ಯವನ್ನುಂಟುಮಾಡಿತು ಯೋಚಿಸಿ ನೋಡಿದಂತೆ ರಮಾನಂದನಿಗೆ ನಳಿನಿಯು ಹೇಗೆ ತನ್ನ ಸಂಭಾಷಣೆಗಳಲ್ಲೆಲ್ಲಾ ಅಭಿರುಚಿಯಿಲ್ಲದವಳಾಗಿರುತ್ತಿದ್ದಳೆಂಬುದೂ, ಹೇಗೆ ಸರಸೆಯೇ ಅವುಗಳಲ್ಲಿ ಮುಖ್ಯಸ್ಥಾನವನ್ನು ನಿಪುಣತೆಯಿಂದ ಆಕ್ರಮಿಸಿಕೊಳ್ಳುತ್ತಿದ್ದಳೆಂಬುದೂ ಪರಿಷ್ಕಾರವಾಗಿ ತೋರತೊಡಗಿತು ಅವನು ನಳಿನಿಗೆಂದೇ ಓದಲು ತಂದುಕೊಡುತ್ತಿದ್ದ ಕಾದಂಬರಿ ಮುಂತಾದುವೆಲ್ಲಾ ಈಚೆಗೆ ಅವಳ ಕಟಾಕ್ಷವಿಕ್ಷೇಪದ ಸೌಭಾಗ್ಯವನ್ನು ಕೂಡ ಹೊಂದದಿರುತ್ತಿದ್ದುದೂ, ಸರಸೆಯಾದರೆ ಅವುಗಳನ್ನು ಆತುರದಿಂದ ಆಮೂಲಾಗ್ರವಾಗಿ ಓದಿ, ಪರಿಸಿ, ಅವನೊಡನೆ ಅವುಗಳ ಟೀಕಾಟೂಕೆಯನ್ನು ಸಹ ಮಾಡುತ್ತಿದ್ದುದೂ ಅವನ ಸ್ಮರಣೆಗೆ ಬರುತ್ತಲೇ ಅವನು ಸಹಿಸದಾದನು ಸಾಯಂಕಾಲ ಬೆಳದಿಂಗಳಲ್ಲಿ ಮನೆಯ ಉದ್ಯಾನದಲ್ಲಿ ವಿಹರಿಸಲು ಹೋಗುವ ರಮಾನಂದನ ಆಮಂತ್ರಣಗಳನ್ನು ಗೌರವಿಸಲು ನಳಿನಿಗೆ ಈಚೆಗೆ ಎಷ್ಟೋ ಸಲ ಸರಸೆಯ ಒತ್ತಾಯದ ಆವಶ್ಯಕತೆಯುಂಟಾಗುತ್ತಿದ್ದುದರಲ್ಲಿ ಸಹ ರಮಾನಂದನಿಗೆ ಈಗ ಹೊಸ ಅರ್ಥವು ಹೊಳೆಯಲಾರಂಭಿಸಿತು

ಈಚೆಗೆ, ಮಾತುಕತೆಯು ತೀರ ಭರದಲ್ಲಿ ಸಾಗುತ್ತಿದ್ದಾಗ ಸಹ, ನಳಿನಿಯು ಎಷ್ಟೊಂದು ಸಲ ನಿರಾಧಾರವಾದ ಕುಂಟು ನೆವಗಳನ್ನು ಹೇಳಿ ನಡುವಿನಿಂದ ಎದ್ದುಹೋಗಿ ತನ್ನ ಕೊಠಡಿಯನ್ನು ಸೇರಿರಲಿಲ್ಲ? ಎಷ್ಟೊಂದು ಸಲ ಬಳಿಯಲ್ಲಿದ್ದ ಏನಾದರೊಂದು ಪುಸ್ತಕವನ್ನು ಕೈಯಲ್ಲಿ ಎತ್ತಿಕೊಂಡು ಅದರೊಳಗಿನ ವಿಷಯದಲ್ಲಿ ತಲ್ಲೀನಳಾದಂತೆ ನಟಿಸಿ, ಸಂಭಾಷಣೆಯಿಂದ ತಪ್ಪಿಸಿಕೊಂಡಿರಲಿಲ್ಲ? ಎಷ್ಟೊಂದು ಸಲ ಹತ್ತಿರವಿದ್ದ ಬೇರೆ ಯಾರೊಡನಾದರೂ ಮಾತನಾಡುವ ತೋರಿಕೆಯಿಂದ ರಮಾನಂದನ ಪ್ರಶ್ನೆಯು ಕಿವಿಗೆ ಬೀಳದಂತೆ ತೋರಿಸಿಕೊಂಡಿರಲಿಲ್ಲ? ಆದರೆ ಈವರೆಗೆ ನಳಿನಿಯು ಹಾಗೆ ಎದ್ದುಹೋದಾಗಲೆಲ್ಲ ಸರಸೆಯು ಸಂಭಾಷಣೆಯನ್ನು ನೀರಸವಾಗಗೊಡದೆ, ಮತ್ತಷ್ಟು ಉಲ್ಲಾಸಕರ ರೀತಿಯಲ್ಲಿ ಮುಂದುವರಿಸುತ್ತಿದ್ದಳು; ನಳಿನಿಯು ಪುಸ್ತಕವನ್ನು ಓದುವುದರಲ್ಲಿ ಮಗ್ನಳಾದಾಗಲೆಲ್ಲ ತನ್ನ ವಾಕ್ಚಾತುರ್ಯದಿಂದ ರಮಾನಂದನ ಮನಸ್ಸನ್ನು ತನ್ನ ಕಡೆಗೇ ಆಕರ್ಷಿಸಿಕೊಂಡು ನಳಿನಿಯ ಅನ್ಯಮನಸ್ಕತೆಯನ್ನು ಅವನ ಲಕ್ಷ್ಯಕ್ಕೆ ಬಾರದಂತೆ ಮಾಡುತ್ತಿದ್ದಳು, ನಳಿನಿಯು ರಮಾನಂದನ ಪ್ರಶ್ನೆಯನ್ನು ಅಲ್ಲಗಳೆದಾಗಲೆಲ್ಲ ತಾನೇ ಅದಕ್ಕೆ ಚಮತ್ಕಾರಿಕವಾಗಿ ತಕ್ಕ ಉತ್ತರವನ್ನು ಕೊಟ್ಟು ಅವನ ಮನಸ್ಸನ್ನು ಬೇರೆ ವಿಚಾರದ ಕಡೆಗೆ ಹರಿಯಿಸಿಬಿಡುತ್ತಿದ್ದಳು ಇದನ್ನು ಯೋಚಿಸುತ್ತಲೇ ಸರಸೆಯ ಆ ಸಾರಸ್ಯ, ನೈಪುಣ್ಯಗಳಿಗಾಗಿ ರಮಾನಂದನು, ತನ್ನ ಆಗಿನ ಮನಸ್ಥಿತಿಯಲ್ಲಿ ಸಹ, ತಲೆದೂಗಿದನು

ಇಷ್ಟಾದರೂ ನಳಿನಿಯ ಮನೋಭಾವದ ವಿಷಯದಲ್ಲಿ ರಮಾನಂದನು ಎಂತಹ ನಿರ್ಧಾರಕ್ಕೂ ಬಂದಿರಲಿಲ್ಲ ಆದರೆ ಇತ್ತೀಚೆಯ ಕೆಲವು ಸಂದರ್ಭಗಳಲ್ಲಿ ನಳಿನಿಯ ವರ್ತನವು ರಮಾನಂದನಿಗೆ ಆಕೆಯ ಪ್ರೇಮಾಭಾವದ ವಿಷಯಕವಾದ ಸಂಶಯಗಳಿಗೆ ಆಸ್ಪದ ಕೊಟ್ಟಿತ್ತು ಹೌದು, ಪ್ರೇಮಾಭಾವವಲ್ಲದಿದ್ದರೆ ನಳಿನಿಯು ಅದೇಕೆ ಈಗ ಅವನೊಡನೆ ಸಂಭಾಷಿಸುವ ಗೊಡವೆಗೇ ಬರುವುದಿಲ್ಲ? ರಮಾನಂದನು ಯಾವಾಗ ಹೋಗಿ ನೋಡಿದರೂ ಅವಳು ತನ್ನ ಪಾಠಪುಸ್ತಕಗಳನ್ನು ಓದುವುದರಲ್ಲಿಯೋ, ಹಾರ್ಮೋನಿಯಮನ್ನು ಬಾರಿಸುವುದರಲ್ಲೋ, ಚಿಕ್ಕ ತಮ್ಮನನ್ನು ಆಡಿಸುವುದರಲ್ಲೋ ನಿಮಗ್ನಳಾಗಿರುತ್ತಿದ್ದು, ಅವನ ಕಡೆಗೆ ಲಕ್ಷ್ಯವನ್ನೇ ಕೊಡದಿರುವುದನ್ನು ನೋಡಿದರೆ, ಪ್ರೇಮಾಭಾವವಲ್ಲದೆ ಬೇರೊಂದನ್ನು ಗ್ರಹಿಸಲು ಅವಕಾಶವಿದೆಯೇ?

ನಳಿನಿಯ ಈ ತರದ ನಡತೆಯನ್ನು ಕಾಣತೊಡಗಿದಂದಿನಿಂದಲಂತೂ, ಮುಂಚಿನಂತೆಯೇ ಸಾಗುತ್ತಿದ್ದ ಸರಸೆಯ ಮಾತುಕತೆಗಳೂ ಸಹ ರಮಾನಂದನಿಗೆ ಹಿಂದಿನ ಉಲ್ಲಾಸವನ್ನು ಕೊಡಲು ಅಶಕ್ತವಾಗತೊಡಗಿದ್ದುವು ನಳಿನಿಯ ವರ್ತನವು ರಮಾನಂದನ ಹೃದಯಕ್ಕೆ ಕೊಟ್ಟ ಆಘಾತವು ಅವನನ್ನು ಬಹು ರೀತಿಯಿಂದ ಪೀಡಿಸುತ್ತಿದ್ದು, ಹಗಲೂ ಇರುಳೂ ಅವನ ಹೃದಯದಲ್ಲಿ ಪ್ರಚಂಡವಾದ ಬಿರುಗಾಳಿಯಿಂದ ವಿಶೇಷ ಅಲ್ಲೋಲಕಲ್ಲೋಲವುಂಟಾಗುತ್ತಿತ್ತು ಇದರಿಂದ ಅವನ ಮನಸ್ಸು ಯಾವಾಗಲೂ ಅನ್ಯಾಕ್ರಾಂತವಾಗಿರುತ್ತಿದ್ದುದರಿಂದ ಅವನಿಗೆ ಈಗ ಸರಸೆಯ ಸಲ್ಲಾಪದಲ್ಲಿ ಮೊದಲಿನ ಆಸಕ್ತಿಯು ತಪ್ಪಿದ್ದಿತು ನಳಿನಿಯನ್ನು ನೋಡುತ್ತಲೂ, ಅವಳ ಸ್ವರವನ್ನು ಆಲಿಸುತ್ತಲೂ, ಅವಳೊಡನೆ ಒಂದೆರಡು ಮಾತನ್ನಾದರೂ ಆಡುತ್ತಲೂ ಇರಬಹುದೆಂಬ ಆಶೆಯಿಂದಲೇ ಈಗ ರಮಾನಂದನು ಸರಸೆಯೊಡನೆ ಸಂಭಾಷಣೆಯ ನಟನೆಯನ್ನು ಮಾಡುತ್ತಿದ್ದನು. ಇಂತಹ ನೀರಸವಾದ ಸಂಭಾಷಣೆಯಿಂದ ಸರಸೆಯೂ ಸಹ ಈಚೀಚೆಗೆ ಬೇಸರಪಟ್ಟು, ನಡುನಡುವೆ ಸುಮ್ಮನಾಗಿ ಬಿಡುತ್ತಿದ್ದಳು ಹೀಗಾಗಿ, ಒಂದೊಂದು ಸಲ ಇಬ್ಬರೂ ಮೌನವಾಗಿಯೇ ಕುಳಿತುಬಿಡುತ್ತಿದ್ದರು ಇಂತಹ ಸಂದರ್ಭದಲ್ಲಿ ರಮಾನಂದನು ದೂರದ ಆಕಾಶವನ್ನೇ ದಿಟ್ಟಿಸುತ್ತಾ ಇದ್ದುಬಿಡುವನು ಆಗ ಅವನ ಮನಸ್ಸು ಎಷ್ಟೋ ಯೋಜನ ದೂರದ ಚಂದ್ರಲೋಕದ ಶೀತಲತೆಯಲ್ಲೋ, ನಕ್ಷತ್ರಪುಂಜಗಳ ಶಾಂತತೆಯಲ್ಲೋ, ಆಕಾಶದಾಚೆಯ ಶೂನ್ಯತೆಯಲ್ಲೋ ದಿಕ್ಕುಕಾಣದೆ ಅಲೆದಾಡುತ್ತಿರುವುದು

೨

ಅಂದಿನ ಸಾಯಂಕಾಲ ರಮಾನಂದನು ನಳಿನಿಯ ಮನಸ್ಸನ್ನು ತನ್ನ ಕಡೆಗೆ ಆಕರ್ಷಿಸುವುದಕ್ಕಾಗಿ ಎಷ್ಟೋ ಹೊಸ ಸಂಗತಿಗಳನ್ನು ಮಾತನಾಡಬೇಕೆಂದು ನಿಶ್ಚಯಿಸಿ, ಬಹಳ ಉತ್ಸಾಹದಿಂದ ಬಂದಿದ್ದನು ಆದರೆ ಅವನು ಬಂದು ಸರಸೆಯೊಡನೆ ಸಲ್ಲಾಪಿಸುತ್ತಾ ಎಷ್ಟೋ ಸಮಯ ಕಳೆದರೂ, ನಳಿನಿಯ ಸುಳಿವಾದರೂ ಎಲ್ಲಿ? ಅವಳು ಒಳಗೆ ಯಾವುದನ್ನೋ ಓದುವುದರಲ್ಲಿಯೂ, ಬರೆಯುವುದರಲ್ಲಿಯೂ ತಲ್ಲೀನಳಾಗಿ ಕುಳಿತಿದ್ದುದು ರಮಾನಂದನಿಗೆ ಕುಳಿತಲ್ಲಿಂದಲೇ ತೋರುತ್ತಿತ್ತು ದೀಪದ ಬೆಳಕಿನಲ್ಲಿ ಮೇಜಿನ ಬಳಿ ಕುರ್ಚಿಯ ಮೇಲೆ ಕುಳಿತ ನಳಿನಿಯ ಪಾರ್ಶ್ವದೃಶ್ಯವು ಬಹು ಮನೋಹರವಾಗಿ ಕಾಣುತ್ತಿತ್ತು ರಮಾನಂದನ ಆಸೆಯನ್ನು ಪ್ರತಿಕ್ಷಣವೂ ಹೆಚ್ಚಿಸುತ್ತಿದ್ದು, ಆಗಿಂದಾಗ ಅವಳ ಕಡೆಗೆ ನೋಡುತ್ತಾ ಸರಸೆಯೊಡನೆ ನೀರಸವಾದ ಮಾತುಕತೆಯನ್ನು ನಡೆಯಿಸುತ್ತಿದ್ದನು ಆ!, ತನ್ನ ಹೃದಯದೊಳಗೆ ಉಕ್ಕೇರಿ ಬರುತ್ತಿದ್ದ ವಿಷಯಗಳನ್ನು ನಳಿನಿಯೊಡನೆ ಹೇಳಲ್ಕೆ ರಮಾನಂದನ ಮನಸ್ಸು ಎಷ್ಟು ಲವಲವಿಸಿತು ಆದರೆ ಹಾಯ್! ಅವಳ ಓದು ಬರವಣಿಗೆಗಳು ಇನ್ನೂ ಮುಗಿಯುವಂತೆ ತೋರಲೊಲ್ಲದು ಇದೇನು, ನಳಿನಿಗೆ ಬ್ರಹ್ಮಕರಣೀಕತನವೇ ದೊರೆತಿರುವುದೇ?

'ಈ ಶಾಲೆಗಳೆಂಬ ಕಾರಾಗೃಹಗಳು, ಮಾನವ ಪಂಜರಗಳು ಯಾಕೆ ಸೃಷ್ಟಿಸಲ್ಪಟ್ಟುವು? ಎಷ್ಟೊಂದು ಮಂದಿ ತರುಣತರುಣಿಯರು ಅವುಗಳಲ್ಲಿ ಬಿದ್ದು, ನಾರಿ, ತಮ್ಮ ಜೀವನದ ಅತ್ಯಮೂಲ್ಯವಾದ ದಿನಗಳನ್ನು ವ್ಯರ್ಥಪಡಿಸುತ್ತಿರುವರು! ಅವರ ಯೌವನವು ಬರೇ ಕಾನನದ ಬೆಳದಿಂಗಳಿನಂತೆ, ಕಾಡಿನಲ್ಲಿನ ಹೂವಿನಂತೆ, ಮರುಭೂಮಿಯಲ್ಲಿನ ಮಳೆಯಂತೆ, ಹಾಳಾಗುತ್ತಿರುವುದಲ್ಲ ಇಂತಹ ಕೃತಕಜೀವನದಿಂದ ಈ ಪ್ರಪಂಚದಿಂದ ಎಷ್ಟೊಂದು ಪ್ರಕೃತಿದತ್ತವಾದ ಸಂತೋಷವು ನಶಿಸುತ್ತಿರುವುದು!' ಎಂದು ರಮಾನಂದನ ಮನಸ್ಸು ತಳಮಳಿಸಿತು

ಅವನಿಗೆ, ನೆಟ್ಟಗೆ ಎದ್ದುಹೋಗಿ, ಅವಳನ್ನು ಕೈಹಿಡಿದೆಬ್ಬಿಸಿ, 'ನಳಿನಿ, ನಿನ್ನ ಯೌವನಕುಸುಮವನ್ನು ಈ ಕೊಠಡಿಯ ಮೂಲೆಯಲ್ಲೇ ಬಾಡಿಸುವಿಯಾ? ಬಿಡು, ಹೊರಗೆ ಬಾ— ಅಲ್ಲಿ ಎಷ್ಟೊಂದು ನಿರ್ಮಲವಾದ ಸಂತೋಷವು ನಮ್ಮನ್ನು ಕಾಯುತ್ತಿರುವುದು ನೋಡು!' ಎಂದು ಹೇಳಿ, ಹೊರಗೆ ಎಳೆದು ತರಬೇಕೆಂದು ಅತ್ಯಂತ ಆತುರವಾಯಿತು ಆದರೆ ಅದಕ್ಕೆ ಆಚಾರಪಾಶಗಳ ಬಂಧನವು ಎಂತಹ ಕ್ರೂರವಾದ ಆತಂಕವಾಗಿದ್ದಿತು! ಇದೊಂದು ಪ್ರಸಂಗದಿಂದಲೇ ಮನುಷ್ಯನ ನಿಸ್ಸಹಾಯತೆ, ಆಶಾಭಿಲಾಂಕ್ಷೆಗಳ ನಿಷ್ಪ್ರಯೋಜಕತೆ, ಸುಖಸಂತೋಷಗಳ ಕ್ಷಣಭಂಗುರತೆಗಳು ರಮಾನಂದನ ಮನಸ್ಸಿಗೆ ಹೊಳೆದು ಅವನ ಹೃದಯವು ವೇದನೆಯಿಂದ ತುಂಬಿಹೋಯಿತು

ಆಗಲೇ ಒಳಗಿನಿಂದ ಹಾರ್ಮೋನಿಯಮಿನಲ್ಲಿ ಹೃದಯಭೇದಕವಾದ ಉದ್ಗಾರಗಳು ಕೇಳಿ ಬರತೊಡಗಿದುವು, ಹಾರ್ಮೋನಿಯಮಿನ ಸ್ವರದೊಡನೆ ಇಂಪಾದ ದನಿಯಲ್ಲಿ ಹಾಡೂ ಹೊರಟಿತು

'ಹಾ! ಪ್ರಿಯಾ! ಪ್ರಶಾಂತಹೃದಯಾ!
ಶಾಂತಿ ಹೊಂದಿದೆಯಾ?'

ಹಾಡು ಬಹಳ ದುಃಖಪೂರ್ಣವಾಗಿತ್ತು ಅದು ಲಹರಿಲಹರಿಯಾಗಿ ರಮಾನಂದನ ಹೃದಯವನ್ನು ಪ್ರವೇಶಿಸಿ, ಅಲ್ಲಿ ವೇದನೆಯ ತರಂಗತರಂಗಗಳನ್ನೆಬ್ಬಿಸಿ ಕಣ್ಣಿನ ಮೂಲಕ ನೀರಾಗಿ ಹರಿಯಿಸಿತು. ಕೈಯ ಮೇಲೆ ಉದುರಿದ ಬಿಸಿಬಿಸಿಯಾದ ಕಂಬನಿಯ ತಟಕುಗಳು ರಮಾನಂದನನ್ನು ಯೋಚನಾಸಾಮ್ರಾಜ್ಯದಿಂದ ಎಚ್ಚರಗೊಳಿಸಿದುವು, ಅವನು ತಬ್ಬಿಬ್ಬಾಗಿ ಅತ್ತಿತ್ತ ನೋಡಿದನು, ಬಳಿಯಲ್ಲಿ ಯಾರೂ ಇರಲಿಲ್ಲ ನಳಿನಿಯು ಇನ್ನೂ ಅಲ್ಲೇ ಕುಳಿತು ಓದಿನಿಂದ ಪದಗಳನ್ನು ಹೊರ ಊದಿಕೊಳ್ಳುತ್ತಿದ್ದಳು ಸರಸೆಯು ಯಾವಾಗ ಅವನ ಮುಂದಿನ ಕುರ್ಚಿಯ ಮೇಲಿಂದ ಎದ್ದುಹೋಗಿದ್ದಳೋ ಅವನಿಗೆ ತಿಳಿಯದು ಹಾಡು ಹೊರಸೂಸುತ್ತಿದ್ದ ವೇದನೆಯು ಸಹನಾತೀತವಾಗಲು ರಮಾನಂದನು ಮೆಲ್ಲಗೆ ಎದ್ದು, ಭಾರವಾದ ಹೆಜ್ಜೆಗಳಿಂದ ಹೊರಗೆ ಹೋಗಿ, ಉದ್ಯಾನವನ್ನು ಹೊಕ್ಕು ಅಲ್ಲಿ ಕಂಡುಬಂದ ಮೊದಲನೆಯ ಶಿಲಾಸನದ ಮೇಲೆಯೇ ತನ್ನ ದೇಹದ ಭಾರವನ್ನು ಹಾಕಿ ಕುಳಿತುಬಿಟ್ಟನು

ಹಿಟ್ಟು ಚೆಲ್ಲಿದಂತಹ ಬೆಳದಿಂಗಳಲ್ಲಿ ಹೂವಿನಗಿಡಬಳ್ಳಿಗಳ ಸುತ್ತಲೂ ಎಣೆಯಿಲ್ಲದ ಸೊಬಗನ್ನು ಬೀರುತ್ತಿದ್ದುವು ಗಾಳಿಯು ನಾನಾ ತರದ ಹೂಗಳ ಪರಿಮಳದಿಂದ ಗಮಗಮಿಸುತ್ತಿತ್ತು ಇತರ ಸಮಯಗಳಲ್ಲಾದರೆ ರಮಾನಂದನನ್ನು ಆನಂದಸಾಗರದಲ್ಲಿ ತೇಲಿಸಬಲ್ಲ ಅವೆಲ್ಲವೂ ಆಗ ಮಾತ್ರ ಅವನ ಮನಸ್ಸಿನ ಮೇಲೆ ಸ್ವಲ್ಪವೂ ಪರಿಣಾಮವನ್ನುಂಟುಮಾಡಲು ಸಮರ್ಥವಾಗಲಿಲ್ಲ ದೂರದಿಂದ ಹಾಡು ಇನ್ನೂ ಸ್ಪಷ್ಟವಾಗಿ ಕೇಳಿಬರುತ್ತಿತ್ತು

'ಅ[illegible] ಮರೆತು ಹೋಗಿ
ತೊರೆದ ಪ್ರೇಮಗುಣವದೇ? ಪ್ರಿಯಾ—'

ಅತ್ಯಪರಿಮಿತವಾದ ವೇದನೆಯಿಂದ ನರಳುತ್ತಿದ್ದ ಆತ್ಮನೇ ಸಹಿಸಲಾರದೆ ಮೊರೆಯಿಡುತ್ತಿರುವಂತೆ ಭಾಸವಾಯಿತು. ರಮಾನಂದನ ಆತ್ಮವೂ ಸ್ವಾಭಾವಿಕವಾಗಿಯೇ ಆ ಆತ್ಮದೊಡನೆ ಸಹಕರಿಸಿತು. ಅವನು ಸಹಜವಾಗಿಯೇ ತಾನೂ ಆ ಹಾಡಿನೊಂದಿಗೆ ಕಂಠಸೇರಿಸಿ ಹಾಡಲಾರಂಭಿಸಿದನು ಎರಡು ದ[illegible]ತ ಆತ್ಮಗಳೂ ಒಂದೇ ಸ್ವರದಲ್ಲಿ ಒಟ್ಟಿಗೇ ಮೊರೆಯಿಡತೊಡಗಿದವು

'[illegible] ಪ್ರಾಣಕಾಂತಾ
ಶಾಂತಿ ಹೊಂದಿದೆಯಾ?
ಹಾ ಪ್ರಿಯಾ! ಪ್ರಶಾಂತಹೃದಯಾ!
ಶಾಂತಿ ಹೊಂದಿದೆಯಾ?'

ರಮಾನಂದನ ಗಂಟಲು ಬಿಗಿದಂತಾಯಿತು. ಎದೆಯು ಒಡೆದಂತಾಯಿತು ಅವನು ಕೈಗಳನ್ನು ಶಿಲಾಸನದ ಒರಗಿನ ಮೇಲೆ ನೀಡಿ, ಮುಖವನ್ನು ಅವುಗಳ ಮೇಲೆ ಅಡಗಿಸಿ, ಸಣ್ಣ ಮಗುವಿನಂತೆ ಬಿಕ್ಕತೊಡಗಿದನು ಅವನನ್ನೇ ಕೊಚ್ಚಿಕೊಂಡು ಹೋಗುವಷ್ಟು ಕಣ್ಣೀರಕೋಡಿ ಹರಿಯಿತು.

ಈ ಘಟನೆಯೇ ರಮಾನಂದನ ಕಣ್ಣುಗಳನ್ನು ಪೂರ್ತಿಯಾಗಿ ತೆರೆಯಿಸಿ ಅವನ ವಿಚಾರಶಕ್ತಿಗೆ ಕೆಲಸಕೊಟ್ಟಿತು. ನಳಿನಿಯಲ್ಲಿಗೆ ಹೋಗಲಾರಂಭಿಸಿದಂದಿನಿಂದ ನಡೆದುದೆಲ್ಲದರ ಸಿಂಹಾವಲೋಕನವೇ ಅವನ ಇಂದಿನ ಭೀಷ್ಮಪ್ರತಿಜ್ಞೆಗೆ ಕಾರಣವಾಯಿತು ಅಂತೂ, ನಳಿನಿಯ ಪ್ರೇಮಭಿಕ್ಷೆಯನ್ನು ಬೇಡುವುದೇ ಇನ್ನು ತನಗುಳಿದ ಒಂದೇ ಉಪಾಯವೆಂದೂ, ಅದನ್ನು ಇಂದೇ ಕೈಕೊಳ್ಳುವೆನೆಂದೂ ಅವನು ದೃಢವಾಗಿ ನಿರ್ಧರಿಸಿದನು.

[ಸಶೇಷ]

*"To travel hopefully is better than to arrive."—Stvenson.

†Sword of Sophocles

ಸ್ಪರ್ಧಾರಂಗ

ಸಂಚಾಲಕ:—ಶ್ರೀ "[illegible]"

೧೦ ರೂಪಾಯಿ ಬಹುಮಾನ!

ಪ್ರಥಮ ಬಹುಮಾನ: ರೂ. ೫, ದ್ವಿತೀಯ ಬಹುಮಾನ: ರೂ. ೩;
ತೃತೀಯ ಬಹುಮಾನ: ರೂ. ೨–೦–೦;
ವಿಶೇಷ ಬಹುಮಾನ: ಒಂದು ವರ್ಷದ "ಸ್ವದೇಶಾಭಿಮಾನಿ"

ಚಕ್ರಬಂಧ ಒಗಟು ಸಂಖ್ಯೆ ೨.

ಉತ್ತರ ಸ್ವೀಕರಿಸುವ ಕೊನೆಯ ದಿನ:— 12–5–1936.

ಉತ್ತರ ಪ್ರಕಟಿಸುವ ದಿನ:— 15–6–1936.

■	1	2 ಜ	■	3 ಸ		■
4	■	5 ನ		ನ	■	6
7 ರ	8 ತ		■	9	10 ದ	ನ
■		■	■	■		■
11 ಸಂ	ಕ	12	■	13	ಪ	14 ನ
	■	15 ಗ		ತ	■	
■	16	ರು	■	17 ಕ		■

ಹೆಸರು . . .

ವಿಳಾಸ

. . . . . .

ಸಲಹೆಗಳು:—

ಎಡದಿಂದ ಬಲಕ್ಕೆ:—

1. ಒಂದು [illegible].
3. [illegible].
5. [illegible].
7. [illegible].
9. [illegible].
11. [illegible].
13. [illegible].
15. [illegible].
16. ಒಂದು [illegible].
17. [illegible].

ಮೇಲಿಂದ ಕೆಳಕ್ಕೆ:—

2. [illegible].
3. [illegible].
4. [illegible].
6. [illegible].
8. [illegible].
10. [illegible].
11. [illegible].
12. [illegible].
13. [illegible].
14. [illegible].

ವಿಶೇಷ ಸೂಚನೆ:—

ಈ ಒಗಟಿನಲ್ಲಿ ಬರಬಹುದಾದ ಶಬ್ದಗಳು:—

ಅಜ	ಗಜ	ನದಿ	ಸನಕ
ಅದು	ಗಳಿತ	ನಲಿನ	[illegible]
ಕಚ	ಗಳಿಕ	ನೇಸ	ಸಲ
ಕಟ	ಜಟಿಲ	ನಾರ	ಸಂಕಟ
ಕಟ್ಟು	[illegible]	ನೀರ	ಸರಸ
ಕದನ	ತಿಲಕ	ನೂರು	ಸಂಧ್ಯಾ
ಕರ	[illegible]	ಬನ	ಸಂಧಿ
[illegible]	ದಲಿತ	ಮೂರು	
[illegible]	ದಳಪ	ರತಿ	
ಕಷ್ಟ	ನೆರ	ವನ	

ನಿಯಮಗಳು:—೧. ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೇ ಸ್ಪಷ್ಟವಾದ ಅಕ್ಷರಗಳಲ್ಲಿ ಹೆಸರು ವಿಳಾಸ ಸಹಿತ ಬರೆದು ಕಾಲಾಣೆಯ ನಾಲ್ಕು ಟಪ್ಪಾಲು ಚೀಟುಗಳೊಂದಿಗೆ ತಾ. 12–5–1936ರೊಳಗೆ ತಲಪುವಂತೆ ಕಳುಹಿಸಬೇಕು. ೨. ಹೆಚ್ಚು ಉತ್ತರ ಕಳುಹಿಸುವವರು ಮೊದಲನೆಯ ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೂ, ಉಳಿದ ಉತ್ತರಗಳನ್ನು ಪ್ರತ್ಯೇಕ ಕಾಗದಗಳ ಮೇಲೆಯೂ ಬರೆದು ಪ್ರತಿ ಆರು ಉತ್ತರಗಳಿಗೆ ಕಾಲಾಣೆಯ ಹದಿನಾರು ಚೀಟುಗಳೊಂದಿಗೆ ಕಳುಹಿಸತಕ್ಕದ್ದು. ೩. ತಾ. 12–5–'36ರೊಳಗೆ ಸ್ವೀಕೃತವಾದ ಉತ್ತರಗಳಲ್ಲಿ, ನಾವು ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ್, ಮಂಗಳೂರು ರಥಬೀದಿ ಶಾಖೆಯ ಏಜೆಂಟರೊಡನೆ ಮೊಹರು ಮಾಡಿ ಭದ್ರತೆಯಲ್ಲಿಟ್ಟಿರುವ ಉತ್ತರದೊಡನೆ ಅಕ್ಷರಶಃ ಹೋಲುವ ಉತ್ತರಕ್ಕೆ ಅಥವಾ ಉತ್ತರಗಳಿಗೆ ಮೊದಲನೆಯ ಬಹುಮಾನವನ್ನೂ, ಒಂದು ತಪ್ಪಿನ ಉತ್ತರಗಳಿಗೆ ಎರಡನೆಯ ಬಹುಮಾನವನ್ನೂ, ಎರಡು ತಪ್ಪಿನ ಉತ್ತರಗಳಿಗೆ ಮೂರನೆಯ ಬಹುಮಾನವನ್ನೂ ಕೊಡಲಾಗುವುದು. ಈ ರೀತಿಯ ಉತ್ತರಗಳು ಬಾರದ ಪಕ್ಷದಲ್ಲಿ ಅತ್ಯಂತ ಕಡಿಮೆ ತಪ್ಪಿನ ಉತ್ತರಗಳಿಗೆ ರೂ. ೧೦ನ್ನು ಸಮವಾಗಿ ಹಂಚಿ ಕೊಡಲಾಗುವುದು. ೪. ಅತ್ಯಂತ ಹೆಚ್ಚು ಉತ್ತರ ಕಳುಹಿಸುವವರಿಗೆ ಒಂದು ವರ್ಷದ "ಸ್ವದೇಶಾಭಿಮಾನಿ"ಯು ವಿಶೇಷ ಬಹುಮಾನ ದೊರೆಯುವುದು. ೫. ಎಲ್ಲಾ ಸಂದರ್ಭಗಳಲ್ಲಿಯೂ ಈ 'ಸ್ಪರ್ಧಾರಂಗ'ದ ಸಂಚಾಲಕರ ಇತ್ಯರ್ಥವೇ ಕೊನೆಯ ಇತ್ಯರ್ಥವಾಗಿರುವುದು.

ತಿದ್ದುಪಡಿ:—ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಚಕ್ರಬಂಧ ಒಗಟು ಸಂಖ್ಯೆ ೧ರಲ್ಲಿ ಈ ಕೆಳಗಿನ ತಿದ್ದುಪಡಿಯನ್ನು ಎಲ್ಲರೂ ಲಕ್ಷಿಸತಕ್ಕದ್ದು:—ಎಡದಿಂದ ಬಲದ 16ನೇ ಸೂಚನೆಯಾದ "ಒಂದು ಚಾಂದ್ರಮಾನ ತಿಂಗಳು" ಎಂಬುದನ್ನು "ಒಂದು ಸೌರಮಾನ ತಿಂಗಳು" ಎಂದು ಓದತಕ್ಕದ್ದು.

ಕಳೆದ ಸಾರಿಯ ಚಕ್ರಬಂಧ ಒಗಟು ಸಂಖ್ಯೆ ೧ರಲ್ಲಿ ಬರಬಹುದಾದ ಶಬ್ದಗಳು—

[illegible] (ಈ ಮೊದಲೇ ಉತ್ತರ ಕಳುಹಿಸಿದವರು ಬಯಸಿದರೆ ಬೇರೆ ಉತ್ತರ ಕಳುಹಿಸಲು ಬದ್ಧರಾಗಿರುವರು)

ಸಂಚಾಲಕ, "ಸ್ಪರ್ಧಾರಂಗ",
'ಸ್ವದೇಶಾಭಿಮಾನಿ' ಕಾರ್ಯಾಲಯ ಮಂಗಳೂರು.

OUR ENGLISH COLUMN

'Smile Awhile'

Lakshmi: My little boy has just swallowed a four anna piece.

Rajam:—Gracious. Is the child in danger.

Lakshmi: No, thanks goodness, his father is out of town.

o o o o

A learned young lady once astonished a company by asking for the "loan of a diminutive, argenteous, truncated cone, convex on its summit and semi perforated with symmetrical indentations"—she wanted a thimble!

o o o o

A book-seller sent a bill to a certain customer for a book. The customer replied:

"I did not order the book. If I did, you didn't send it; if you sent it, I didn't receive it; if I did I paid for it; if I didn't, I won't."

o o o o

Jim:—"How did John get on with that motor-cycle he bought?"

Tim:—"Oh, he had an accident on the very first day, and was knocked *speechless.*"

Jim:—Well, and what about his bike?

Tim:—"That was knocked *spokeless.*"

o o o o

Canvasser:—Well, sir, I am selling a can-opener, which can not be beaten. It opens any can that can be opened by a can-opener and any can can be opened by this can-opener, than can be opened by any can-opener. If you can show a can I can—

But the door was shut.

o o o o

The lovers had quarrelled. "I will return all you have ever given me," she said:

"Begin with the kisses," he answered, cunningly. Now they are married.

o o o o

"Come out of that water at once. Bathing is not allowed there"

"Pardon me, I'm not bathing. I'm drowning".

o o o

Mother:—"Did you say 'sorry' when you trod on that gentlemen's foot?"

Bad Boy:—"Yes, and he gave me a penny, so I trod on the other"

Odd Truths.

The siz... ... ...

How much water is there in all the sea? It has been worked out that if land were filled into all the hollows of the ocean-bed up to what is called sea level, the displaced water will flow over the entire surface of the world to a depth of two miles. But I have not checked this, so do not write and say I'm wrong'.

Star statistics

How many stars are there? Stars can be divided into three categories. Of those we can see with the naked eye, there are about three thousand. Of those we can make out with the strongest telescope, there are—roughly,—a hundred million. Of those which we can see by any means, there are a limitless number. They extend into Infinity, and are beyond human computation or understanding.

Wonders of Infinity

The earth goes round the sun—does the sun itself go round anything? Of course it does. Nothing in the universe is stationary. As the earth, and Venus, and Mars, and the other planets of our solar system go round the sun, so the sun with all its planets, goes round some other vaster system—which, in its turn with all its own adherents goes round something vaster still. And so on, *ad infinitum.* But don't think about it too much, or you'll get a headache.

1,000,000,000 Not out!

In order to grasp the age of the world try this. Think over the years you have lived. They will probably seem quite a long time. Then imagine yourself living to the good old age of a hundred. If you achieve that, you will have lived about one ten millionth as long as the world itself is believed to have existed. The known history of the world does not penetrate back more than one hundred-thousandth part of the world's age.

By: 'OWL'

ವಿಚಾರಮಯ ಜಗತ್ತು.

ಜರ್ಮನಿಯ ಈ ಬಾರಿಯ ಯುದ್ಧ ಸಿದ್ಧತೆಗಳು.

ಜರ್ಮನಿಯು ಈ ಬಾರಿ ಯಾವ ತರದ ಯುದ್ಧ ಸಿದ್ಧತೆಗಳನ್ನು ಮಾಡಿರುತ್ತದೆ? ಕಳೆದ ಮಹಾಯುದ್ಧದಲ್ಲಿ ಇವರ ಸೋಲಿಗೆ ಕಾರಣವೇನು? ಸಂಗ್ರಾಮ ಸಾಮಗ್ರಿಗಳು ಕಡಿಮೆಯಾಗಿ ಜರ್ಮನಿಯು ಸೋತಿತ್ತು. ಜರ್ಮನಿಗೆ ಆಹಾರ ಸಾಮಗ್ರಿಗಳು ಹೊರಗಿಂದ ಬರಬೇಕಾಗಿತ್ತು. ವೈರಿಗಳು ಇವರಿಗೆ ಆಹಾರ ದೊರೆಯದಂತೆ ತಡೆಗಳನ್ನು ಹಾಕಿ, ಹಸಿವೆಯಿಂದ ಸಾಯುವಂತೆ ಮಾಡಿ, ಇವರನ್ನು ಗೆದ್ದರು. ಈ ಬಾರಿ ಈ ಸಂಭವಗಳು ಒದಗದಂತೆ ಕೃತಕ ಆಹಾರಗಳನ್ನು ವಿಜ್ಞಾನದ ಸಹಕಾರದಿಂದ ತಯಾರಿಸುವ ಯೋಜನೆಗಳನ್ನು ತಯಾರಿಸುವ ಕಾರ್ಯದಲ್ಲಿ ಜರ್ಮನಿಯ ರಸಾಯನ ಶಾಸ್ತ್ರಜ್ಞರು ಮಗ್ನರಾಗಿರುವರು. ರಸಾಯನ ಶಾಸ್ತ್ರ ಸೂತ್ರಗಳ ಆಧಾರದಿಂದ ಕೃತಕ ಆಹಾರವನ್ನು ತಯಾರಿಸುವ ಅನೇಕ ಉಪಾಯಗಳನ್ನು ಕಂಡುಹಿಡಿದಿರುವರು. ಅವರ ಈ ಯೋಜನೆಗಳು ಫಲಕಾರಿಯಾಗಿ ನಡೆದವೆಂದರೆ ಜರ್ಮನಿಯು ಸೋಲುವ ಸಂಭವಗಳು ಕಡಿಮೆ ಎಂದು ಕೆಲವರು ಅಭಿಪ್ರಾಯ ಪಡುತ್ತಿರುವರು. ಕಲ್ಲಿದ್ದಲಿನಿಂದ ಪೆಟ್ರೋಲನ್ನು ತಯಾರಿಸುವ ಉಪಾಯವು ಪ್ರಥಮತಃ ಕಂಡುಹಿಡಿಯಲ್ಪಟ್ಟುದು ಜರ್ಮನಿಯಲ್ಲಿ. ವ್ಯಾಪಾರ ಪ್ರಪಂಚದಲ್ಲಿ ಕಳೆದ ಮಹಾಯುದ್ಧದಲ್ಲಿ ಜರ್ಮನಿಗೆ ಒಂದು ವಿಚಿತ್ರ ಸ್ಥಿತಿಯು ಒದಗಿತು. ಇತರ ಬಹಿರ ವ್ಯಾಪಾರವು ಬಿದ್ದುಹೋಗಲಾರಂಭಿಸಿತು. ಇವರು ಹೊರಗಿನಿಂದ [illegible] ಸಾಮಗ್ರಿಗಳನ್ನು ಒದಗಿಸುವ ದೇಶಗಳಿಂದ ಯಾವತ್ತೂ ರೀತಿಯ ಪ್ರತಿಫಲವಾಗಿ, ವ್ಯಾಪಾರವಿಲ್ಲದೆ ಪಡಕೊಳ್ಳದ ಸಮಯ ಒದಗಿತು. ಆದುದರಿಂದ ಹಿಟ್ಲರನು ಜರ್ಮನಿಯ ಕಾರಣ ಸಾಮಗ್ರಿಗಳನ್ನು ಇತರರಿಂದ ಪಡಕೊಳ್ಳುವ ಬದಲಾಗಿ, ಅವುಗಳನ್ನು ಸ್ವದೇಶದಲ್ಲೇ ತಯಾರಿಸುವ ಯೋಜನೆಗಳನ್ನು ಹೂಡಿದನು. ಪ್ರಕೃತಿಯು ವಿವಿಧ ದೇಶಗಳಲ್ಲಿ ಒದಗಿಸುವ ಅನೇಕ ಕಾರಣ ಸಾಮಗ್ರಿಗಳನ್ನು ರಸಾಯನ ಶಾಸ್ತ್ರದ ಆಧಾರದಿಂದ ಕೃತಕ ರೀತಿಯಲ್ಲಿ ತಯಾರಿಸಲು, ಅನೇಕ ವಿಜ್ಞಾನಿಗಳು ಶ್ರಮಪಡುವಂತೆ ಅಪ್ಪಣೆ ಹೊರಡಿಸಿದನು. ಒಣಗಿದ ಮರದಿಂದ ಪ್ರಾಣಿಗಳಿಗೂ ಮಾನವ ವರ್ಗಕ್ಕೂ ಬೇಕಾಗುವ ಕೃತಕ ಆಹಾರವನ್ನು ತಯಾರಿಸುವ ಉಪಾಯವನ್ನು ಕಂಡು ಹಿಡಿದಿರುವರು. ಆದುದರಿಂದ ಈ ಬಾರಿ ಜರ್ಮನಿಯ ಮೇಲೆ ಆಹಾರ ನಿರ್ಬಂಧಗಳನ್ನು ಹೂಡಿ ಅವರನ್ನು ಸೋಲಿಸುವುದು ಕಷ್ಟಸಾಧ್ಯವಾಗುವುದೆಂದು ಓರ್ವ ಪ್ರಸಿದ್ಧ ಶಾಸ್ತ್ರಜ್ಞ ಪುರುಷರ ಅಭಿಪ್ರಾಯ.

ತಾಯಂದಿರನ್ನು ರಕ್ಷಿಸಿರಿ

ಹಿಂದೂದೇಶದಲ್ಲಿ ಮೃತ್ಯುವಿನಿಂದ ಅನೇಕ ಘಟನೆಗಳು ನಡೆಯುವುದು ಎಲ್ಲರಿಗೂ ತಿಳಿದಿರುತ್ತದೆ. ಪ್ರತಿ ವರ್ಷ ಸಾಧಾರಣ ೨,೦೦,೦೦೦ ತಾಯಂದಿರು ಮೃತರಾಗುತ್ತಿದ್ದಾರೆ. ಈ ಸಂಖ್ಯೆಯು ೧೯೩೪ರ ವರೆಗೆ ಸಾಂಕ್ರಾಮಿಕ ರೋಗಗಳಿಂದ ಉಂಟಾಗುವ ಮರಣಗಳಿಗಿಂತ ಹೆಚ್ಚಾಗಿರುತ್ತದೆ. ಆದ್ದರಿಂದ ಈ ಸಮಸ್ಯೆಗೆ ಸರಕಾರವು ಸಾಂಕ್ರಾಮಿಕ ರೋಗಗಳಿಗೆ ಕೊಡುವ ಗಮನಕ್ಕಿಂತ ಹೆಚ್ಚಿನ ಗಮನ ಕೊಡಬೇಕಾಗಿದೆ. ಆದರೆ ಈ ಕುರಿತು ವೈದ್ಯಕೀಯ ಇಲಾಖೆ ಯಾವ ವ್ಯವಸ್ಥೆಯನ್ನು ಮಾಡಿರುತ್ತದೆ? ಯೋಗ್ಯವಾದ ವ್ಯವಸ್ಥೆ ಇಲ್ಲವೆಂದೂ ಸರಕಾರಿ ಉದ್ಯೋಗಸ್ಥರ ನುಡಿಗಳಿಂದಲೆ ವ್ಯಕ್ತವಾಗುತ್ತದೆ. ಒಂದು ಕುಟುಂಬಕ್ಕೆ ತಾಯಿಯು ಅತಿ ಅಗತ್ಯವಾದ ವ್ಯಕ್ತಿಯು. ಸರಕಾರವು ಆ ಕುಟುಂಬದ ಒಂದು ವ್ಯಕ್ತಿಗೆ ಸಾಂಕ್ರಾಮಿಕ ರೋಗವು ತಗಲದಂತೆ ಜಾಗ್ರತೆ ತೆಗೆದುಕೊಳ್ಳುತ್ತಿರುವಾಗ ತಾಯಂದಿರ ಕುರಿತು ಹೆಚ್ಚಿನ ಜಾಗ್ರತೆ ವಹಿಸುವುದು ನ್ಯಾಯಸಮ್ಮತವು. ಜನರಲ್ಲಿ ಇದರ ಕುರಿತು ಬುದ್ಧಿವಿಕಾಸವಾಗಲಾರಂಭಿಸಿದೆ. ತಾಯಂದಿರ ಅಭಿವೃದ್ಧಿ ಬಗ್ಗೆ ಸಂಸ್ಥೆಗಳು ದಿನೇ ದಿನೇ ಹೆಚ್ಚುತ್ತಿವೆ. ವೈದ್ಯಕೀಯ ಶೋಧನಮಂಡಳದವರು ಹಿಂದೂದೇಶದ ತಾಯಂದಿರ ಸ್ಥಿತಿಗತಿಗಳನ್ನು ತಿಳಿಕೊಂಡು ವರದಿಮಾಡಲು ಒಂದು ಸಮಿತಿಯನ್ನು ರಚಿಸಬೇಕಾಗಿ ಕೇಳಿಕೊಂಡಿದೆ. ಈ ಸಮಿತಿಯು ತನ್ನ ಕಾರ್ಯವನ್ನು ಹಳ್ಳಿಗಳಲ್ಲಿ ನಡೆಸಬೇಕಾಗಿ ಗೊತ್ತಾಗಿರುತ್ತದೆ. ಮಾತೃತ್ವದ ದೆಸೆಯಿಂದ ಸಂಭವಿಸುವ ಮರಣಗಳ ಸರಿಯಾದ ಪಟ್ಟಿಯು ಈಗ ತಯಾರಾಗಿಲ್ಲ. ಇದನ್ನು ಸಂಗ್ರಹಿಸಬೇಕಾಗಿದೆ. ನವೀನವಾಗಿ ರಚನೆಯಾಗುವ ಈ ಸಮಿತಿಯು ಜನರಲ್ಲಿ ಈ ಕುರಿತು ಬುದ್ಧಿವಿಕಾಸವಾಗುವ ರೀತಿ, ಪ್ರಸಾರವಾಗುವ ರೀತಿ, ಕಾರ್ಯಗಳನ್ನು ನಡೆಸಬೇಕಾಗಿದೆ. ಸರ್ಕಾರ [illegible] ಚಳವಳದಲ್ಲಿ ಭಾಗಿಗಳಾಗಿ ಮುಂದಿನ ಜನಾಂಗದ ಪೋಷಕರಾಗಿರುವ ತಾಯಂದಿರನ್ನು ಆರೋಗ್ಯವಂತರಾಗಿಯೂ ಸುರಕ್ಷಿತವಾಗಿಯೂ ಮಾಡಬೇಕಾಗಿದೆ.

ಪ್ರಪಂಚದ ಶಾಂತಿಯ ಸ್ಥಿತಿಯು ಹೇಗಿದೆ?

ಅಮೇರಿಕದ ಓರ್ವ ಪತ್ರಿಕಾ ಪ್ರತಿನಿಧಿಗಳು [illegible] ಪ್ರತ್ಯಕ್ಷ ತೆರಳಿದರು. ಅಲ್ಲಿನ ಅಲೆಕ್ಸಾಂಡ್ರಿಯಾ ಬಂದರದಲ್ಲಿ ನಡೆದ ನೌಕಾ ಯುದ್ಧ ಸಿದ್ಧತೆಗಳನ್ನು ನೋಡಿ ಬೆರಗಾದರು. ಬ್ರಿಟಿಷರ ಒಂದು ಭಯಂಕರ ನೌಕಾ ಫೌಜು ಇಲ್ಲಿ ಕೇಂದ್ರೀಕರಿಸಲ್ಪಟ್ಟಿದೆ. ಅಲ್ಲಿ ಪ್ರಪಂಚದ ಶಾಂತಿಭಂಗವಾಗಲು ಅನೇಕ ಅವಕಾಶಗಳಿವೆ ಎಂದು ಈ ಪ್ರತಿನಿಧಿಗಳ ಅಭಿಪ್ರಾಯ. ಕಾರಣ, ಇಷ್ಟು ಉತ್ಸಾಹದಿಂದ ವಿಶೇಷ ಯೋಗ್ಯತೆಗಳಿಂದ ಕೂಡಿದ ಬ್ರಿಟಿಷರ ನೌಕಾಬಲವು ಇತರ ಜನಾಂಗಗಳ ಅದೇ ತರದ ಯುದ್ಧ ಸಿದ್ಧತೆಯ ಇದಿರಿನಲ್ಲಿ [illegible] ಕಾರಣಾಂತರದಿಂದಾಗಿ ಘೋರ ಸಮರದ ಕಾರಣವಾಗುವುದರಲ್ಲಿ ನಿಸ್ಸಂದೇಹವಂತೆ.

ಅದು ಹಾಗಿರಲಿ, ಜಿನೇವೆಯಲ್ಲಿ ಶಾಂತಿಸ್ಥಾಪನೆ ಶಸ್ತ್ರತ್ಯಾಗ ಇತ್ಯಾದಿಗಳ ಕುರಿತು ಮಾತುಕತೆಗಳು ನಡೆಯುತ್ತಿರುವಾಗ, ಯೂರೋಪಿನ ಮಹಾಪ್ರಭುತ್ವ ಜನಾಂಗಗಳು ಏನು ಮಾಡುತ್ತಿದ್ದವು? [illegible] ಶಾಲೆಗಳನ್ನು ತೆರೆದು [illegible] ಮಗ್ನರಾಗಿರುತ್ತಾರೆ. ಬ್ರಿಟನಿನಲ್ಲಿ ಅನೇಕ [illegible] ಕಾರ್ಖಾನೆಗಳು [illegible] ಕಾರ್ಯ ನಡೆಸಿ ಉಪಕರಣಗಳನ್ನು ಸಿದ್ಧಮಾಡುತ್ತಿವೆ. ಅಂತೆಯೇ ಇತರ ಜನಾಂಗಗಳು.

[illegible] ಸಂಪೂರ್ಣ [illegible] ನಾಶದ [illegible] ಗಳನ್ನು ಹೊರಡಿಸಿದೆ. [illegible] ಜನಾಂಗಗಳ [illegible] ನಡೆಸುವ ಸಿದ್ಧತೆಯಲ್ಲಿ ಈ ಜನಾಂಗಗಳು [illegible] ಒಂದು [illegible] ದೇಶ [illegible].

ಇನ್ನೊಂದು [illegible] ಜನಾಂಗದ [illegible] ಸಾಂಪತ್ತಿಕ ಸ್ಥಿತಿ, ಸಾಂಪತ್ತಿಕ ಸ್ಥಿತಿಯನ್ನು ನೆಟ್ಟಗೆ ಮಾಡುವ ಭರದಲ್ಲಿ ಶಸ್ತ್ರಗಳ [illegible] ಯೋಗ್ಯ ರೀತಿಯಲ್ಲಿ ಈ ಸಾಂಪತ್ತಿಕ ಸ್ಥಿತಿಯ ಉದ್ಧರಣೆಯಾಗಲು ಕೆಲವು ಧನಾಢ್ಯ ಜನಾಂಗಗಳು ಬಿಡಲಾರವು. ಈ ಧನಾಢ್ಯ ವರ್ಗಕ್ಕೆ ಅಭಿರುಚಿಯು ಬಹಳವಾಗುವುದರಿಂದ ಎಲ್ಲಾ ಜನಾಂಗಗಳಿಗೆ ಸರಿಸಮಾನವಾದ ಸಾಂಪತ್ತಿಕ ಸ್ಥಿತಿಯು ದೊರಕಲು ಅವಕಾಶವಿಲ್ಲ. ಆದ್ದರಿಂದ ಇಲ್ಲಿಯೇ ನಡೆಯುವ ಘಟನೆಗಳಿಂದಲೂ ಮೇಲಿನ ಕಾರಣಗಳಿಂದಲೂ ಒಂದು ದಿವಸ ಪ್ರಪಂಚದ ಶಾಂತಿಭಂಗವಾಗದಿರದು. ಸಮಸ್ತ ಪ್ರಪಂಚವು ವಿನಾಶದ ಕಡೆಗೆ ಸಾಗುತ್ತಿದೆ.

ಶ್ರೀ ಜವಾಹರಲಾಲರ ಗ್ರಂಥ

ತನ್ನ ಚರಿತ್ರೆಯನ್ನು ಚಿತ್ರಿಸಿ ಶ್ರೀ ಜವಾಹರಲಾಲರು ಬರೆದ ಗ್ರಂಥವು ಬ್ರಿಟನಿನಲ್ಲಿ ಪ್ರಕಟವಾಗಿರುತ್ತದೆ. ಸಾಹಿತ್ಯಲೋಕದಲ್ಲಿ ಇದೊಂದು ವಿಶೇಷ ತರದ ಗ್ರಂಥವಾಗಿರುತ್ತದೆಂದು ಆಂಗ್ಲೇಯ ವಿಮರ್ಶಕರ ಅಭಿಪ್ರಾಯ. ಈ ಗ್ರಂಥದಲ್ಲಿ ಶ್ರೀ ನೆಹರೂರವರು ತನ್ನ ರಾಜಕೀಯ ಚಟುವಟಿಕೆಗಳನ್ನು ಅನೇಕ ವಿಮರ್ಶೆಗಳೊಂದಿಗೆ ಚಿತ್ರಿಸಿರುವರು. ಗ್ರಂಥದಲ್ಲಿ ೬೦೦ ಪುಟಗಳಿವೆ. ಇದರ ಪ್ರಸ್ತಾವನೆಯನ್ನು ಓದಿದವರು ಇದನ್ನು ಸಂಪೂರ್ಣವಾಗಿ ಓದದೆ ಬಿಡರು. ಈ ತರದ ಗ್ರಂಥಗಳನ್ನು ಅನೇಕ ಮಹನೀಯರು ಬರೆದಿರುವರು. ಆದರೆ ಅವುಗಳಿಗೆ ಇಷ್ಟು ಯೋಗ್ಯತೆಯಿಲ್ಲವೆಂದು ಓರ್ವ ಆಂಗ್ಲ ಸಾಹಿತಿಗಳ ಅಭಿಪ್ರಾಯ. ಈ ಗ್ರಂಥವನ್ನು ಶ್ರೀ ನೆಹರೂರವರು ತನ್ನ ಕಾರಾಗೃಹವಾಸದಲ್ಲಿ ಬರೆದುದು. ಸೆರೆಮನೆಯೊಳಗಿದ್ದು ಈ ರೀತಿಯಲ್ಲಿ ತನ್ನ ಜೀವಮಾನದ ಸತ್ಯಗಳನ್ನು ಬಿಚ್ಚಿತೋರಿಸಿದುದು ಪರಮಾಶ್ಚರ್ಯ!

ಈ ಗ್ರಂಥವನ್ನು ಓದಿದವರಲ್ಲಿ ಶ್ರೀ ಜವಾಹರಲಾಲ [illegible] ಅವರು ಒಂದು ಮಹಾ ವ್ಯಕ್ತಿಯೆಂದು ಇದರಿಂದ ತಿಳಿಯಬರುತ್ತದೆ. ತನ್ನ ರಾಜಕೀಯ ಚಟುವಟಿಕೆಯಲ್ಲಿ ಅವರು ಅನುಭವಿಸಿದ ಶ್ರಮಗಳು ಇದರಲ್ಲಿ ಚಿತ್ರಿಸಲ್ಪಟ್ಟಿವೆ. ತನ್ನ ಸಹಪಾಠಿಗಳ ಕುರಿತು ಸರಿಯಾದ ಅಭಿಪ್ರಾಯಗಳನ್ನು ಕೊಟ್ಟಿರುವರು. ರಾಜಕೀಯ ಕೈದಿಗಳ ಕುರಿತು ಈ ಗ್ರಂಥದಲ್ಲಿ ಅನೇಕ ವಿಷಯಗಳನ್ನು ಕೊಟ್ಟಿರುತ್ತಾರೆ. ಒಂದಾನೊಂದು ಕಾಲದಲ್ಲಿ ಇಂಡಿಯಾ ಸರಕಾರದ ಉದ್ಯೋಗದಲ್ಲಿದ್ದು, ರಾಜಕೀಯ ಕೈದಿಗಳಿಗೆ ಭಯಂಕರ ಅನುಭವಗಳನ್ನು ಒದಗಿಸಿದ ನಿವೃತ್ತ ಉದ್ಯೋಗಿಗಳು ಈ ಗ್ರಂಥವನ್ನು ಓದಿ ಸಂತುಷ್ಟರಾಗಿರುವರು.

ಕಳೆದ ಕಾಂಗ್ರೆಸ್ ಅಧಿವೇಶನದ ಕುರಿತು ಕೆಲವು ಅಭಿಪ್ರಾಯಗಳು.

ಈ ಬಾರಿಯ ಅಧಿವೇಶನವು ಅಷ್ಟೊಂದು [illegible] ವಾಗಲಿಲ್ಲವೆಂದೂ, ಅಲ್ಲಿ ನಡೆದ ನಿರ್ಧಾರಗಳಿಂದ ಜನರು ನಿರಾಶರಾಗಿರುವರೆಂದೂ ಕಾಂಗ್ರೆಸ್ಸಿನಲ್ಲಿ [illegible] ಕಾಣಿಸಿಕೊಳ್ಳುವವೆಂದೂ ಕೆಲವರ ಅಭಿಪ್ರಾಯ. ಇದಕ್ಕೆ ಕಾರಣವೇನು? ನವರಾಜ ಶಾಸನದಲ್ಲಿ ಅಧಿಕಾರ ಸೂತ್ರವನ್ನು ವಹಿಸುವ ವಿಚಾರ ದೃಢವಾದ [illegible] ಗಳನ್ನು ಮಾಡದುದರಿಂದ ಮೇಲಿನ ಅಭಿಪ್ರಾಯವು ಅವರ ಮಾತು. ಹಾಗಿರಲಿ. ಈ ಬಾರಿಯ ಕಾಂಗ್ರೆಸ್ಸು ನಿಜವಾಗಿಯೂ ಒಳ್ಳೇ ಶ್ರೇಷ್ಠ ಸ್ವರೂಪಗಳಿಂದ ನಡೆದಿರುತ್ತದೆ. ಕಾಂಗ್ರೆಸ್ಸಿನ ಈಗಿನ ನಿರ್ಧಾರದಂತೆ ಅಧಿಕಾರ ಸೂತ್ರ [illegible] ಅಭಿಪ್ರಾಯ [illegible] ಅದರ ವಿರೋಧ [illegible] ಈ ಸಮಸ್ಯೆಯು ಮೇಲೆ ಇನ್ನು [illegible] ಪ್ರಾರಂಭ [illegible] ಸಮಯ ದೊರಕುತ್ತದೆ.

ಈ ಬಾರಿಯ ಅಧಿವೇಶನದಲ್ಲಿ [illegible] ಸುಧಾರಣೆ [illegible] ಕಾಂಗ್ರೆಸ್ಸಿನಲ್ಲಿ [illegible] ದೇಶಗಳಲ್ಲಿ ಪ್ರಚಾರ [illegible] ಅನೇಕ ಸಂಸ್ಥೆಗಳನ್ನು [illegible] ಪ್ರತಿನಿಧಿಗಳು [illegible] ಆಸ್ತಿಯನ್ನು [illegible] ದಲ್ಲಿ ನಡೆದ ಈ ಬಾರಿಯ ಅಧಿವೇಶನದಲ್ಲಿ ಈ ರೀತಿ ಪ್ರಚಾರಕಾರ್ಯವನ್ನು ನಡೆಸಲು ಒಂದು ಇಲಾಖೆಯನ್ನು ತೆರೆಯಬೇಕಾಗಿದೆ [illegible] ಸಂಘಗಳ ವಿಷಯದಲ್ಲಿ ವಿಶೇಷ ತರದ [illegible] ಗಳು ನಡೆದುವು. ಕೆಲವರು ಹಿಂದಿಯಲ್ಲಿ ಭಾಷಣ ಮಾಡಿದರು.

ಸಮಾಜವಾದಿಗಳು ತಮ್ಮ ಮತಗಳ ಪ್ರಚಾರಕ್ಕೆ ಈ ಬಾರಿಯ ಅಧಿವೇಶನದ ಉಪಯೋಗವನ್ನು ವಿಶೇಷವಾಗಿ ಮಾಡಿದರು. ಕಾಂಗ್ರೆಸ್ಸಿನ ವಿವಿಧ ಸಮಿತಿಗಳಲ್ಲಿ ಅಧಿಕ ಸದಸ್ಯತನವನ್ನು ಪಡೆಯಲು ಸಮಾಜವಾದಿಗಳು ಪ್ರಯತ್ನಿಸಿದರು. ಅಧ್ಯಕ್ಷ ಶ್ರೀ ಜವಾಹರಲಾಲರು ಅವರ ಪಕ್ಷದವರು ಇದ್ದುದರಿಂದ ಇವರಿಗೆ ಯೋಗ್ಯ ನಾಯಕತ್ವವು ದೊರಕಿತು. ಇತರ ಪಕ್ಷಗಳೂ ಇವರ ಸ್ಪರ್ಧೆ ನಡೆಸುವ ಇಚ್ಛೆಯವರು. ಈ ಪಕ್ಷದವರಿಗೆ ಇಷ್ಟರೂ ಶ್ರೀ ಜವಾಹರಲಾಲರ 'ಪ್ರೇರಣೆಯಿಂದ, ರಾಷ್ಟ್ರೀಯ ಅಭಿಮಾನಕ್ಕೆ ಸರಿಯಾಗಿ ಈ [illegible] ಕಾರ್ಯ ನಡೆಸುವಂತಾಗುವುದು.

ಶ್ರೀ ಜವಾಹರಲಾಲರ ಅಧ್ಯಕ್ಷ ಭಾಷಣ [illegible] ಉತ್ತಮವಾದ ಆಲೋಚನಾ ಮಂಡಲವು [illegible] ರಚನೆಯಾಗುತ್ತದೆ. ಅನೇಕ ಪ್ರಸಿದ್ಧ ವ್ಯಕ್ತಿಗಳು ಇದರಲ್ಲಿರುವುದರಿಂದ ಶ್ರೀ ನೆಹರೂರವರ ಮುಂದಿನ ಕಾರ್ಯವು ಸುಲಭವಾಗುವುದು.

ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ಸಿನ ಸದಸ್ಯರಲ್ಲದಿದ್ದರೂ, ಈ ಬಾರಿಯ ಕಾಂಗ್ರೆಸ್ ಅಧಿವೇಶನವು ಜಯಶೀಲವಾಗಿ ನಡೆಯಲು ಇವರೇ ಕಾರಣಪ್ರಾಯರಾಗಿರುವರು. ಶ್ರೀ ಜವಾಹರಲಾಲರ ಮೇಲೆ ಇವರಿಗೆ [illegible] [illegible]

ಬೆಳ್ಳಿಯ ಧಾರಣೆಯು ಹೆಚ್ಚಿರುತ್ತದೆ.

ಚೀನಿಯರಿಗೂ ಅಮೇರಿಕಕ್ಕೂ ನಡೆದ ಮಾತುಕತೆಗಳ ಫಲಿತಾಂಶವಾಗಿ ಬೆಳ್ಳಿಯ ಧಾರಣೆಯು ಹೆಚ್ಚುವ ಸಂಭವವಿರುವುದರಿಂದ, ಹಿಂದೂದೇಶವು ೩ ಮಿಲ್ಲಿಯ ಔನ್ಸು ಬೆಳ್ಳಿಯನ್ನು ಮಾರಿಕೊಂಡಿರುತ್ತದೆ.

ಒಟ್ಟೋವಾ ಒಪ್ಪಂದದ ಮುಕ್ತಾಯ.

ಅಸೆಂಬ್ಲಿಯ ನಿರ್ಧಾರದ ಪ್ರಕಾರ ಒಟ್ಟೋವಾ ಒಪ್ಪಂದವನ್ನು ಮುಕ್ತಾಯಮಾಡಲು ಇಂಡಿಯಾ ಸರಕಾರವು ಬ್ರಿಟಿಷ ಸರಕಾರಕ್ಕೆ ನೋಟೀಸು ಕೊಟ್ಟಿದೆಯೆಂದು ಶ್ರೀ ಸತ್ಯಮೂರ್ತಿಯವರು ಕೇಳಿದ ಪ್ರಶ್ನೆಗೆ—ಅದು ಇಂಡಿಯಾ ಸರಕಾರದ ಮೇಲೆ ಹೊಂದಿಕೊಂಡಿದೆ ಎಂಬ ಉತ್ತರವು ದೊರಕಿರುತ್ತದೆ. ಆದರೆ, ಸರಕಾರವು ಅಸೆಂಬ್ಲಿಯ ನಿರ್ಧಾರದ ಮೇರೆಗೆ ವರ್ತಿಸುವುದರ ಕುರಿತು ಭರವಸೆ ದೊರಕಿರುತ್ತದೆ.

ಹಿಂದೂದೇಶದಲ್ಲಿ ಅಫೀಮು ಸೇವನೆ

೧೯೩೪—೩೫ರಲ್ಲಿ ಮದ್ರಾಸಿನಲ್ಲಿ [illegible] ಸೇರುಗಳು [illegible] ೧೬ [illegible] ಸೇರುಗಳು, ಸಿಂಧ್ ದೇಶದಲ್ಲಿ [illegible] ಸೇರುಗಳು, [illegible] ಸೇರುಗಳು. ೧೯೩೩—೩೪ರಲ್ಲಿ [illegible] ಸೇರುಗಳು, [illegible] ಸೇರುಗಳು, [illegible] ಸೇರುಗಳು, [illegible] ಸೇರುಗಳು ಉಪಯೋಗವಾಗಿವೆ.

[illegible]

[illegible]

ಶ್ರೀ [illegible]

ಇನ್ನೊಂದು ಮಹಾಯುದ್ಧದ ಸಂಭವದಲ್ಲಿ [illegible] ಬೆಳ್ಳಿಯ [illegible] ದೇಶದ [illegible] ಗಳನ್ನು [illegible] ನಡೆದ ಬ್ರಿಟಿಷ 'ಕ್ರೌನ' ಬೆಳ್ಳಿಯ [illegible] ಮಾಧಿಕಾರಿಗಳ [illegible]

ಕಲ್ಕತ್ತಾ ನಗರದಲ್ಲಿ [illegible] ವರ್ಷ [illegible] ಸಂಘವನ್ನು [illegible] ಪೋಲೀಸರ ಅತಿಸತ್ವರ್ತ್ಯಾಗಿ [illegible] ಇವನೊಡನೆ ಕೆಲವು ಶಿಷ್ಯರುಗಳು [illegible] ದೊರೆತಿದೆ.

[illegible] ಒಂದು [illegible] ನಗೆ [illegible] ಯಂತ್ರಗಳ [illegible]

ಕಲ್ಕತ್ತಾದ ಅಲಿಪುರದಲ್ಲಿರುವ [illegible] ಗಳನ್ನು ಕಂಡುಹಿಡಿಯುವ [illegible] ಎಂಬ [illegible] ದಲ್ಲಿ ಒಂದು ಭಯಂಕರ [illegible] ನಡೆದಿರುವುದು ವ್ಯಕ್ತವಾಗಿದೆ.

ಸ್ಪರ್ಧಾರಂಗ

ಸಂಚಾಲಕ:— ಶ್ರೀ "ರಸಿಕರು"

ಗೆಲ್ಲಿರಿ — ಪಡೆಯಿರಿ!

೧೦ ರೂಪಾಯಿ ಬಹುಮಾನ!

ಪ್ರಥಮ ಬಹುಮಾನ: ರೂ. ೫, ದ್ವಿತೀಯ ಬಹುಮಾನ: ರೂ. ೩;
ತೃತೀಯ ಬಹುಮಾನ: ರೂ. ೨—೦—೦;
ವಿಶೇಷ ಬಹುಮಾನ: ಒಂದು ವರ್ಷದ "ಸ್ವದೇಶಾಭಿಮಾನಿ"

ಚಕ್ರಬಂಧ ಒಗಟು ಸಂಖ್ಯೆ ೨.

ಉತ್ತರ ಸ್ವೀಕರಿಸುವ ಕೊನೆಯ ದಿನ:— 12-5-1936.

ಉತ್ತರ ಪ್ರಕಟಿಸುವ ದಿನ:— 15-5-1936.

■	1	2 ಜ	■	3 ಸ		■
4	■	5 ಸ		ಸ	■	6
7 ರ	8 ತ		■	9	10 ದ	ನ
■		■	■	■		■
11 ಸಂ	ಕ	12	■	13	ಪ	14 ನ
	■	15 ಗ		ತ	■	
■	16	ರು	■	17 ಕ		■

ಹೆಸರು.

ವಿಳಾಸ.

ಸಲಹೆಗಳು:—

ಎಡದಿಂದ ಬಲಕ್ಕೆ:—
1. ಒಂದು ಮೃಗ.
4. ಸಾರಿ.
5. ಪದ್ಯ.
7. ಮನುಷ್ಯ.
9. ಯುದ್ಧ.
11. ವ್ಯಥೆ.
13. ಸಹಾಯಕ.
15. ಜಾರಿ ಬಿದ್ದ.
16. ಒಂದು ಸಂಖ್ಯೆ.
17. ಶರೀರದ ಒಂದು ಭಾಗ.

ಮೇಲಿಂದ ಕೆಳಕ್ಕೆ:—
2. ರಾಜ.
3. ಒಬ್ಬ ಋಷಿ.
4. ಉದಕ.
6. ಅದ್ಭುತ.
8. ಬೆಟ್ಟ.
10. ಸೇನಾಪತಿ.
11. ಸಾಯಂಕಾಲ.
12. ಗಂಡು ಕುರಿ.
13. ಕಂಪು.
14. ಹೊಳೆ.

ವಿಶೇಷ ಸೂಚನೆ:—

ಈ ಒಗಟಿನಲ್ಲಿ ಬರಬಹುದಾದ ಶಬ್ದಗಳು:—

ಅಜ	ಗಜ	ಸದಿ	ಸನಕ
ಅರು	ಗಳಕ	ನರಿಸ	ಸರ್ಪ
ಕಚ	ಗಳಕ	ನೇಸ	ಸಲ
ಕಟಿ	ಜನಕ	ನಾರ	ಸಂಕಟ
ಕಣ್ಣು	ಟಗರು	ನೀರ	ಸಂಜೆ
ಕದನ	ತಿಲಕ	ಸೂರು	ಸಂಧ್ಯಾ
ಕರ	ತಿಳಿ	ಬನ	ಸಂಧ್ಯೆ
ಕಂತಕ	ದಲಪ	ದನಾರು	
ಕಂಪನ	ದಳಪ	ರತಿಪ	
ಕಪ್ಪ	ನದ	ವನ	

ನಿಯಮಗಳು:—೧. ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೇ ಸ್ಪಷ್ಟವಾದ ಅಕ್ಷರಗಳಲ್ಲಿ ಹೆಸರು ವಿಳಾಸ ಸಹಿತ ಬರೆದು ಕಾಲಾಣೆಯ ನಾಲ್ಕು ಸ್ಟಾಂಪು ಚೀಟುಗಳೊಂದಿಗೆ ತಾ. 12-5-1936ರೊಳಗೆ ತಲಪುವಂತೆ ಕಳುಹಿಸಬೇಕು. ೨. ಹೆಚ್ಚು ಉತ್ತರ ಕಳುಹಿಸುವವರು ಮೊದಲನೆಯ ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೂ, ಉಳಿದ ಉತ್ತರಗಳನ್ನು ಪ್ರತ್ಯೇಕ ಕಾಗದಗಳ ಮೇಲೆಯೂ ಬರೆದು ಪ್ರತಿ ಆರು ಉತ್ತರಗಳಿಗೆ ಕಾಲಾಣೆಯ ಹದಿನಾರು ಚೀಟುಗಳೊಂದಿಗೆ ಕಳುಹಿಸತಕ್ಕದ್ದು. ೩. ತಾ. 12-5-'36ರೊಳಗೆ ಸ್ವೀಕೃತವಾದ ಉತ್ತರಗಳಲ್ಲಿ, ನಾವು [illegible] ಕಾರ್ಪೊರೇಶನ್, ಉಡುಪಿ, ಲಿಮಿಟೆಡ್, ಮಂಗಳೂರು ರಥಬೀದಿ ಶಾಖೆಯ ಏಜಂಟರೊಡನೆ ಮೊಹರು ಮಾಡಿ ಭದ್ರತೆಯಲ್ಲಿಟ್ಟಿರುವ ಉತ್ತರದೊಡನೆ ಅಕ್ಷರಶಃ ಹೋಲುವ ಉತ್ತರಕ್ಕೆ ಅಥವಾ ಉತ್ತರಗಳಿಗೆ ಮೊದಲನೆಯ ಬಹುಮಾನವನ್ನೂ, ಒಂದು ತಪ್ಪಿನ ಉತ್ತರಗಳಿಗೆ ಎರಡನೆಯ ಬಹುಮಾನವನ್ನೂ ಎರಡು ತಪ್ಪಿನ ಉತ್ತರಗಳಿಗೆ ಮೂರನೆಯ ಬಹುಮಾನವನ್ನೂ ಕೊಡಲಾಗುವುದು. ಈ ರೀತಿಯ ಉತ್ತರಗಳು ಬಾರದ ಪಕ್ಷದಲ್ಲಿ ಅತ್ಯಂತ ಕಡಿಮೆ ತಪ್ಪಿನ ಉತ್ತರಗಳಿಗೇ ರೂ. ೧೦ನ್ನು ಸಮಯಾಗಿ ಹಂಚಿ ಕೊಡಲಾಗುವುದು. ೪. ಅತ್ಯಂತ ಹೆಚ್ಚು ಉತ್ತರ ಕಳುಹಿಸುವವರಿಗೆ ಒಂದು ವರ್ಷದ "ಸ್ವದೇಶಾಭಿಮಾನಿ"ಯ ವಿಶೇಷ ಬಹುಮಾನ ದೊರೆಯುವುದು. ೫. ಎಲ್ಲಾ ಸಂದರ್ಭಗಳಲ್ಲಿಯೂ ಈ 'ಸ್ಪರ್ಧಾರಂಗ'ದ ಸಂಚಾಲಕರ ನಿರ್ಧಾರವೇ ಕೊನೆಯ ನಿರ್ಧಾರವಾಗಿರುವುದು.

ತಿದ್ದುಪಡಿ:—ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಚಕ್ರಬಂಧ ಒಗಟು ಸಂಖ್ಯೆ ೧ರಲ್ಲಿ ಈ ಕೆಳಗಿನ ತಿದ್ದುಪಡಿಯನ್ನು ಎಲ್ಲರೂ ಲಕ್ಷಿಸತಕ್ಕದ್ದು:—ಎಡದಿಂದ ಬಲದ 16ನೇ ಸೂಚನೆಯಾದ "ಒಂದು ಚಾಂದ್ರಮಾನ ತಿಂಗಳು" ಎಂಬುದನ್ನು "ಒಂದು ಸೌರಮಾನ ತಿಂಗಳು" ಎಂದು ಓದತಕ್ಕದ್ದು.

ಕಳೆದ ಸಾರಿಯ ಚಕ್ರಬಂಧ ಒಗಟು ಸಂಖ್ಯೆ ೧ರಲ್ಲಿ ಬರಬಹುದಾದ ಶಬ್ದಗಳು:—

ಅಜರ; ಅಟವಿ; ಅದಿತಿ; ಅನಂತ; ಅಮರ; ಅಮಿತ; ಅಸಿ; ಕಚ; ಕಾಳ; ಕೋಕ; ಕ್ಷಯ; ಘೋಷ; ಜಮುನಾ; ಜಯ; ಕನೆಯ; ತನುಜ; ತಮ; ತಲ; ತಳ; ದಧಿ; ದಹನ; ನಾನಾ; ಸಾಯಕ; ಬಕ; ಬಳ; ಮುಕರ; ಮುಗ; ಮುರಾಲ; ಮುರಾಳ; ಯಮುನಾ; ರಕ; ರಥ; ರವಿ; ರಸ; ರಾಜ; ರಾಯ; ವಿಹಗ; ವಿಹಂಗ; ವ್ಯಯ; ಬಳ; ಸರಸ. (ಈ ಕೂಡಲೇ ಉತ್ತರ ಕಳುಹಿಸಿದವರು ಬಯಸಿದರೆ ಬೇರೆ ಉತ್ತರ ಕಳುಹಿಸಲು ಬದ್ಧರಾಗಿರುವರು.)

ಸಂಚಾಲಕ, "ಸ್ಪರ್ಧಾರಂಗ",
'ಸ್ವದೇಶಾಭಿಮಾನಿ' ಕಾರ್ಯಾಲಯ, ಮಂಗಳೂರು.

OUR ENGLISH COLUMN

'Smile Awhile'

Lakshmi: My little boy has just swallowed a four anna piece.

Rajam:—Gracious Is the child in danger.

Lakshmi: No, thanks goodness, his father is out of town.

o o o o

A learned young lady once astonished a company by asking for the "loan of a diminutive, argenteous, truncated cone, convex on its summit and semi perforated with symmetrical indentations"—she wanted a thimble!

o o o o

A book-seller sent a bill to a certain customer for a book. The customer replied:

"I did not order the book If I did, you didn't send it; if you sent it, I didn't receive it; if I did I paid for it; if I didn't, I won't"

o o o o

Jim.—"How did John get on with that motor-cycle he bought?"

Tim:—"Oh, he had an accident on the very first day, and was knocked *speechless*."

Jim:—Well, and what about his bike?

Tim:—"That was knocked *spokeless*"

o o o o

Canvasser—Well, sir, I am selling a can-opener, which can not be beaten. It opens any can that can be opened by a can-opener and any can can be opened by this can-opener, than can be opened by any can-opener. If you can show a can I can—"

But the door was shut.

o o o o

The lovers had quarrelled. "I will return all you have ever given me," she said:

"Begin with the kisses," he answered, cunningly. Now they are married.

o o o o

"Come out of that water at

Odd Truths.

The size of the sea

How much water is there in all the sea? It has been worked out that if land were filled into all the hollows of the ocean-bed up to what is called sea level, the displaced water will flow over the entire surface of the world to a depth of two miles. But I have not checked this, so do not write and say I'm wrong'

Star statistics

How many stars are there? Stars can be divided into three categories Of those we can see with the naked eye, there are about three thousand. Of those we can make out with the strongest telescope, there are—roughly,—a hundred million Of those which we can see by any means, there are a limitless number They extend into Infinity, and are beyond human computation or understanding.

Wonders of Infinity

The earth goes round the sun: does the sun itself go round anything? Of course it does Nothing in the universe is stationary As the earth, and Venus, and Mars, and the other planets of our solar system go round the sun, so the sun with all its planets, goes round some other vaster system—which, in its turn with all its own adherents goes round something vaster still. And so on, *ad infinitum*, But don't think about it too much, or you'll get a headache.

1,000,000,000 Not out!

In order to grasp the age of the world try this. Think over the years you have lived They will probably seem quite a long time. Then imagine yourself living to the good old age of a hundred If you achieve that, you will have lived about one ten millionth as long as the world itself is believed to have existed. The known history of the world does not penetrate back more than one hundred-thousandth part of the world's age.

By: 'OWL'

"Pardon me, I'm not bathing, I'm drowning".

o o o o

Mother:—"Did you say 'sorry' when you trod on that gentlemen's foot?"

Bad Boy:—"Yes, and he gave me a penny, so I trod on the other"

ಜರ್ಮನಿಯು ಈ ಬಾರಿಯ ಯುದ್ಧ ಸಿದ್ಧತೆಗಳು.

ಜರ್ಮನಿಯು ಈ ಬಾರಿ ಯಾವ ತರದ ಯುದ್ಧ ಸಿದ್ಧತೆಗಳನ್ನು ನಡಿಸಿರುತ್ತದೆ. ಕಳೆದ ಮಹಾಯುದ್ಧದಲ್ಲಿ ಇವರ ಸೋಲಿಗೆ ಕಾರಣವೇನು? ಸಂಗ್ರಾಮ ಯೋಗ್ಯತೆಗಳು ಕಡಿಮೆಯಾಗಿ ಜರ್ಮನಿಯು ಸೋತದ್ದಲ್ಲ. ಜರ್ಮನಿಗೆ ಆಹಾರ ಸಾಮಗ್ರಿಗಳು ಹೊರಗಿಂದ ಬರಬೇಕಾಗಿತ್ತು. ವೈರಿಗಳು ಇವರಿಗೆ ಆಹಾರ ದೊರೆಯದಂತೆ ತಡೆಗಳನ್ನು ಹಾಕಿ, ಹಸಿವೆಯಿಂದ ನರಳುವಂತೆ ಮಾಡಿ, ಇವರನ್ನು ಗೆದ್ದರು. ಈ ಬಾರಿ ಈ ಸಂಭವಗಳು ಒದಗದಂತೆ ಕೃತಕ ಆಹಾರಗಳನ್ನು ವಿಜ್ಞಾನದ ಸಹಕಾರದಿಂದ ತಯಾರಿಸುವ ಯೋಜನೆಗಳನ್ನು ತಯಾರಿಸುವ ಕಾರ್ಯದಲ್ಲಿ ಜರ್ಮನಿಯ ರಸಾಯನ ಶಾಸ್ತ್ರಜ್ಞರು ಮಗ್ನರಾಗಿರುವರು. ರಸಾಯನ ಶಾಸ್ತ್ರ ಸೂತ್ರಗಳ ಆಧಾರದಿಂದ ಕೃತಕ ಆಹಾರವನ್ನು ತಯಾರಿಸುವ ಅನೇಕ ಉಪಾಯಗಳನ್ನು ಕಂಡುಹಿಡಿದಿರುವರು. ಅವರ ಈ ಯೋಜನೆಗಳು ಫಲಕಾರಿಯಾಗಿ ನಡೆದವೆಂದರೆ ಜರ್ಮನಿಯು ಸೋಲುವ ಸಂಭವಗಳು ಕಡಿಮೆ ಎಂದು ಕೆಲವರು ಅಭಿಪ್ರಾಯ ಪಡುತ್ತಿರುವರು. ಕಲ್ಲಿದ್ದಲಿನಿಂದ ಪೆಟ್ರೋಲನ್ನು ತಯಾರಿಸುವ ಉಪಾಯವು ಪ್ರಥಮತಃವಾಗಿ ಕಂಡುಹಿಡಿಯಲ್ಪಟ್ಟುದು ಜರ್ಮನಿಯಲ್ಲೇ. ವ್ಯಾಪಾರ ಪ್ರಪಂಚದಲ್ಲಿ ಕಳೆದ ಮಹಾಯುದ್ಧದಲ್ಲಿ ಜರ್ಮನಿಗೆ ಒಂದು ವಿಚಿತ್ರ ಸ್ಥಿತಿಯು ಒದಗಿತು. ಇವರ ಬಹಿರ ವ್ಯಾಪಾರವು ಬಿದ್ದುಹೋಗಲಾರಂಭಿಸಿತು. ಇವರು ಹೊರಗಿನಿಂದ ಕಾರಣ ಸಾಮಗ್ರಿಗಳನ್ನು ಒದಗಿಸುವ ದೇಶಗಳಿಂದ ಯಾವತ್ತು ರೀತಿಯ ಪ್ರತಿಫಲವಾಗಿ ವ್ಯಾಪಾರವಿಲ್ಲದೆ ಪಡೆಕೊಳ್ಳುವ ಸಮಯ ಒದಗಿತು. ಆದುದರಿಂದ ಹಿಟ್ಲರನು ಜರ್ಮನಿಯು ಕಾರಣ ಸಾಮಗ್ರಿಗಳನ್ನು ಇತರರಿಂದ ಪಡೆಕೊಳ್ಳುವ ಬದಲಾಗಿ, ಅವುಗಳನ್ನು ಸ್ವದೇಶದಲ್ಲೇ ತಯಾರಿಸುವ ಯೋಜನೆಗಳನ್ನು ಹೂಡಿದನು. ಪ್ರಕೃತಿಯು ವಿವಿಧ ದೇಶಗಳಲ್ಲಿ ಒದಗಿಸುವ ಅನೇಕ ಕಾರಣ ಸಾಮಗ್ರಿಗಳನ್ನು ರಸಾಯನ ಶಾಸ್ತ್ರದ ಆಧಾರದಿಂದ ಕೃತಕ ರೀತಿಯಲ್ಲಿ ತಯಾರಿಸಲು ಅನೇಕ ವಿಜ್ಞಾನಿಗಳು ಶ್ರಮಪಡುವಂತೆ ಆಜ್ಞೆ ಹೊರಡಿಸಿದನು. ಒದಗಿದ ಮಾರದಿಂದ ಪ್ರಾಣಿಗಳಿಗೂ ಮಾನವ ವರ್ಗಕ್ಕೂ ಬೇಕಾಗುವ ಕೃತಕ ಆಹಾರವನ್ನು ತಯಾರಿಸುವ ಉಪಾಯವನ್ನು ಕಂಡು ಹಿಡಿದಿರುವರು. ಆದುದರಿಂದ ಈ ಬಾರಿ ಜರ್ಮನಿಯ ಮೇಲೆ ಆಹಾರ ನಿರ್ಬಂಧನೆಗಳನ್ನು ಹೂಡಿ ಅವರನ್ನು ಸದೆಬಡೆಯುವುದು ಕಷ್ಟಸಾಧ್ಯವಾಗುವುದೆಂದು ಓರ್ವ ಪ್ರಸಿದ್ಧ ಪಾಶ್ಚಾತ್ಯ ಪುರುಷರ ಅಭಿಪ್ರಾಯ.

ಕಾಯಿಲೆಯಿಂದಿರನ್ನು ರಕ್ಷಿಸಿರಿ

ಹಿಂದೂದೇಶದಲ್ಲಿ ಮಾತೃತ್ವದಿಂದ ಅನೇಕ ಮರಣಗಳು ನಡೆಯುವುದು ಎಲ್ಲರಿಗೂ ಕಾಣಿಸುತ್ತದೆ. ವರ್ಷಂಪ್ರತಿ ಸಾಧಾರಣ ೨,೦೦,೦೦೦ ಕಾಯಿಲೆಯರು ಮೃತರಾಗುತ್ತಿದ್ದಾರೆ. ಈ ಸಂಖ್ಯೆಯು ೧೯೩೪ನೇ ಇಸವಿ ವರೆಗೆ ಸಾಂಕ್ರಾಮಿಕ ರೋಗಗಳಿಂದ ಉಂಟಾಗುವ ಮರಣಗಳಿಂತ ಹೆಚ್ಚಾಗಿರುತ್ತದೆ. ಆದ್ದರಿಂದ ಈ ಸಮಸ್ಯೆಗೆ ಸರಕಾರವು ಸಾಂಕ್ರಾಮಿಕ ರೋಗಗಳಿಗೆ ಕೊಡುವ ಗಮನಕ್ಕಿಂತ ಹೆಚ್ಚಿನ ಗಮನ ಕೊಡಬೇಕಾಗಿದೆ. ಆದರೆ ಈ ಕುರಿತು ವೈದ್ಯಕೀಯ ಇಲಾಖೆ ಯಾವ ವ್ಯವಸ್ಥೆಯನ್ನು ಮಾಡಿರುತ್ತದೆ? ಯೋಗ್ಯವಾದ ವ್ಯವಸ್ಥೆ ಇಲ್ಲವೆಂದೂ ಸರಕಾರಿ ಉದ್ಯೋಗಸ್ಥರ ಮುಖಗಳಿಂದಲೇ ವ್ಯಕ್ತವಾಗುತ್ತದೆ. ಒಂದು ಕುಟುಂಬಕ್ಕೆ ಕಾಯಿಲೆಯು ಅತಿ ಅಗತ್ಯವಾದ ವ್ಯಕ್ತಿಯು. ಸರಕಾರವು ಆ ಕುಟುಂಬದ ಒಂದು ವ್ಯಕ್ತಿಗೆ ಸಾಂಕ್ರಾಮಿಕ ರೋಗವು ತಗಲದಂತೆ ಜಾಗ್ರತೆ ತೆಗೆದುಕೊಳ್ಳುತ್ತಿರುವಾಗ ಕಾಯಿಲೆಯ ಕುರಿತು ಹೆಚ್ಚಿನ ಜಾಗ್ರತೆ ವಹಿಸುವುದು ನ್ಯಾಯಸಮ್ಮತವು. ಜನರಲ್ಲಿ ಇದರ ಕುರಿತು ಬುದ್ಧಿವಿಕಾಸವಾಗಲಾರಂಭಿಸಿದೆ. ಕಾಯಿಲೆಯರ ಅಭಿವೃದ್ಧಿ ಬಗ್ಗೆ ಸಂಸ್ಥೆಗಳು ದಿನೇ ದಿನೇ ಹೆಚ್ಚುತ್ತಿವೆ. ವೈದ್ಯಕೀಯ ಶೋಧನಮಂಡಳದವರು ಹಿಂದೂದೇಶದ ಕಾಯಿಲೆಯ ಸ್ಥಿತಿಗತಿಗಳನ್ನು ತಿಳಿದುಕೊಂಡು ವರದಿಮಾಡಲು ಒಂದು ಸಮಿತಿಯನ್ನು ರಚಿಸಬೇಕಾಗಿ ಹೇಳಿಕೊಂಡಿದೆ. ಈ ಸಮಿತಿಯು ತನ್ನ ಕಾರ್ಯವನ್ನು ಹಳ್ಳಿಗಳಲ್ಲಿ ನಡೆಯಿಸಬೇಕಾಗಿ ಗೊತ್ತಾಗಿರುತ್ತದೆ. ಮಾತೃತ್ವದ ವೇಳೆಯಿಂದ ಸಂಭವಿಸುವ ಮರಣಗಳ ಸರಿಯಾದ ಪಟ್ಟಿಯು ಈಗ ತಯಾರಾಗುವುದಿಲ್ಲ. ಇದನ್ನು ಸರಿಪಡಿಸಬೇಕಾಗಿದೆ. ನವೀನವಾಗಿ ರಚನೆಯಾಗುವ ಈ ಸಮಿತಿಯು ಜನರಲ್ಲಿ ಈ ಕುರಿತು ಬುದ್ಧಿವಿಕಾಸವಾಗುವ ರೀತಿ, ಪ್ರಸಾರವಾಗುವ ರೀತಿ, ಕಾರ್ಯನಡೆಯಿಸಬೇಕಾಗಿದೆ. ಸರ್ವರ ಮಾತೃತ್ವ ನೋವನ್ನೂ ಅಪಾಯವನ್ನೂ ನಿವಾರಿಸುವ ಈ

ವಿಚಾರಮಯ ಜಗತ್ತು.

ಚಳವಳದಲ್ಲಿ ಭಾಗಿಗಳಾಗಿ ಮುಂದಿನ ಜನಾಂಗದ ಸೋಪಾನಗಳಾಗಿರುವ ಕಾಯಿಲೆಯರನ್ನು ಆರೋಗ್ಯವಂತರಾಗಿಯೂ ಸುರಕ್ಷಿತವಾಗಿಯೂ ಮಾಡಬೇಕಾಗಿದೆ.

ಪ್ರಪಂಚದ ಶಾಂತಿಯ ಸ್ಥಿತಿಯು ಹೇಗಿದೆ?

ಅಮೇರಿಕದ ಓರ್ವ ಪತ್ರಿಕಾ ಪ್ರತಿನಿಧಿಗಳು ಐಗುಪ್ತಕ್ಕೆ ತೆರಳಿದಾಗ, ಅಲ್ಲಿನ ಅಲೆಕ್ಸಾಂಡ್ರಿಯಾ ಬಂದರದಲ್ಲಿ ನಡೆದ ನೌಕಾ ಯುದ್ಧ ಸಿದ್ಧತೆಗಳನ್ನು ನೋಡಿ ಬೆರಗಾಗಿರುವರು. ಬ್ರಿಟಿಷರ ಒಂದು ಭಯಂಕರ ನೌಕಾ ಫೌಜು ಇಲ್ಲಿ ಶೇಖರಿಸಲ್ಪಟ್ಟಿದೆ. ಅಲ್ಲಿ ಪ್ರಪಂಚದ ಶಾಂತಿಭಂಗವಾಗಲು ಅನೇಕ ಅವಕಾಶಗಳಿವೆ ಎಂದು ಈ ಪ್ರತಿನಿಧಿಗಳ ಅಭಿಪ್ರಾಯ. ಕಾರಣ ಇಷ್ಟು ಉತ್ಸಾಹದಿಂದ ವಿಶೇಷ ಯೋಗ್ಯತೆಗಳಿಂದ ಕೂಡಿದ ಬ್ರಿಟಿಷರ ನೌಕಾಬಲವು ಇತರ ಜನಾಂಗಗಳ ಅದೇ ತರದ ಯುದ್ಧ ಸಿದ್ಧತೆಯು ಇದಿರಲ್ಲಿ ಚಿಕ್ಕಪುಟ್ಟ ಕಾರಣಗಳಿಂದಾಗಿ ಘೋರ ಸಮರದ ಕಾರಣವಾಗುವುದರಲ್ಲಿ ನಿಸ್ಸಂದೇಹವಂತೆ.

ಅದು ಹಾಗಿರಲಿ. ಒಂದೆಡೆಯಲ್ಲಿ ಶಾಂತಿಸ್ಥಾಪನೆ, ಶಸ್ತ್ರತ್ಯಾಗ ಇತ್ಯಾದಿಗಳ ಕುರಿತು ಮಾತುಕತೆಗಳು ನಡೆಯುತ್ತಿರುವಾಗ, ಯುರೋಪಿನ ಮಹಾಪ್ರಭುತ್ವ ಜನಾಂಗಗಳು ಏನು ಮಾಡುತ್ತಿದ್ದಾರೆ? ಮಿಲಿಯಾದಿ ಮೌಲ್ಯದ ಸಾಲಗಳನ್ನು ತೆತ್ತು ದಂಡಯೋಜನೆಯ ಕಾರ್ಯದಲ್ಲಿ ಮಗ್ನರಾಗಿರುತ್ತಾರೆ. ಬ್ರಿಟನಿನಲ್ಲಿ ಅನೇಕ ಆಧುನಿಕ ನವಯುದ್ಧೋಪಕರಣಗಳನ್ನು ಕಾರ್ಖಾನೆಗಳು ರಾತ್ರಿ ಹಗಲು ಕಾರ್ಯನಡೆಸಿ ಉಪಕರಣಗಳನ್ನು ಸಿದ್ಧಮಾಡುತ್ತಿದ್ದಾವೆ. ಅಂತೆಯೇ ಇತರ ಜನಾಂಗಗಳ.

ಇಟಲಿಯು ಹಬಸಿಯರನ್ನು ಸಂಪೂರ್ಣ ಕೊಲೆಗೈದ ನಂತರ ಜನಾಂಗಸಭೆಯು ಸಂಧಿಪ್ರಸ್ತಾಪದ ಮಾತುಗಳನ್ನು ಹೊರಡಿಸಿದೆ. ಇಟಲಿಯು ಕ್ರೂರ ಕೃತ್ಯಗಳನ್ನು ನಡೆಸಿದುದಕ್ಕಾಗಿ ಜನಾಂಗ ಸಭೆಯ ಇತರ ಸದಸ್ಯ ಜನಾಂಗಗಳ ದೂಷಣೆಗಳು ಕುಂದಿ. ಒದರೆ ಇಟಲಿಗಿಂತ ಕ್ರೂರಕೃತ್ಯಗಳನ್ನು ನಡೆಯಿಸುವ ಸಿದ್ಧತೆಯಲ್ಲಿ ಈ ಜನಾಂಗಗಳು ತತ್ಪರರಾಗಿರುವರು. ಇತ್ತೀಚೆಗೆ ಪೌರ್ವಾತ್ಯದಲ್ಲಿ ಜಪಾನಿನ ಚಟುವಟಿಕೆಗಳನ್ನು ನಿರೀಕ್ಷಿಸಿದರೆ ಇಲ್ಲೂ ಒಂದು ಯುದ್ಧಾಗ್ನಿಯು ಜನಿಸಿರುತ್ತದೆಂದು ಖಚಿತವಾಗುತ್ತದೆ.

ಇವೆಲ್ಲಾ ಕಟ್ಟಾಟಗಳಿಗೆ ಕಾರಣಗಳಾವುವು? ಕೆಲವು ಜನಾಂಗದ ನಿಕೃಷ್ಟ ಸಾಂಪತ್ತಿಕ ಸ್ಥಿತಿ. ಸಾಂಪತ್ತಿಕ ಸ್ಥಿತಿಯನ್ನು ನೆಟ್ಟಗೆ ಮಾಡುವ ಭರದಲ್ಲಿ ಜಗ್ಗಿಗಳ ಬಡಿದಾಟವು ಪರಿಣಮಿಸುತ್ತದೆ. ಯೋಗ್ಯ ರೀತಿಯಲ್ಲಿ ಈ ಸಾಂಪತ್ತಿಕ ಸ್ಥಿತಿಯು ಉದ್ಧರಣೆಯಾಗಲು ಕೆಲವು ಧನಾಢ್ಯ ಜನಾಂಗಗಳು ಬಿಡಲಾರವು. ಈ ಧನಾಢ್ಯ ವರ್ಗಕ್ಕೆ ಅಭಿಲಾಷೆಯು ಬಹಳವಿರುವುದರಿಂದ ಎಲ್ಲಾ ಜನಾಂಗಗಳಿಗೆ ಸರಿಸಮಾನವಾದ ಸಾಂಪತ್ತಿಕ ಸ್ಥಿತಿಯು ದೊರಕಲು ಅವಕಾಶವಿಲ್ಲ. ಆದ್ದರಿಂದ, ಅಲ್ಲಲ್ಲಿ ನಡೆಯುವ ಘಟನೆಗಳಿಂದಲೂ ಮೇಲಿನ ಕಾರಣಗಳಿಂದಲೂ ಒಂದು ದಿವಸ ಪ್ರಪಂಚದ ಶಾಂತಿಭಂಗವಾಗದಿರದು. ಸಮಸ್ತ ಪ್ರಪಂಚವು ವಿನಾಶದ ಕಡೆಗೆ ಸಾಗುತ್ತಿದೆ.

ಶ್ರೀ ಜವಾಹರಲಾಲರ ಗ್ರಂಥ

ತನ್ನ ಚರಿತ್ರೆಯನ್ನು ಚಿತ್ರಿಸಿ ಶ್ರೀ ಜವಾಹರಲಾಲರು ಬರೆದ ಗ್ರಂಥವು ಬ್ರಿಟನಿನಲ್ಲಿ ಪ್ರಕಟವಾಗಿರುತ್ತದೆ. ಸಾಹಿತ್ಯಲೋಕದಲ್ಲಿ ಇದೊಂದು ವಿಶೇಷ ತರದ ಗ್ರಂಥವಾಗಿರುತ್ತದೆಂದು ಆಂಗ್ಲೇಯ ವಿದ್ವಜ್ಜರ ಅಭಿಪ್ರಾಯ. ಈ ಗ್ರಂಥದಲ್ಲಿ ಶ್ರೀ ನೆಹರೂಗಳವರು ತನ್ನ ರಾಜಕೀಯ ಚಟುವಟಿಕೆಗಳನ್ನು ಅನೇಕ ವಿಮರ್ಶೆಗಳಿಂದೊಡಗೂಡಿ ಚಿತ್ರಿಸಿರುವರು. ಗ್ರಂಥದಲ್ಲಿ ೬೦೦ ಪುಟಗಳಿವೆ. ಇದರ ಪ್ರಸ್ತಾಪನೆಯನ್ನು ಓದಿದವರು ಇದನ್ನು ಸಂಪೂರ್ಣವಾಗಿ ಓದದೆ ಬಿಡರು. ಈ ತರದ ಗ್ರಂಥಗಳನ್ನು ಅನೇಕ ಮಹನೀಯರು ಬರೆದಿರುವರು. ಆದರೆ, ಅವುಗಳಿಗೆ ಇಷ್ಟು ಯೋಗ್ಯತೆಯಿಲ್ಲವೆಂದು ಓರ್ವ ಆಂಗ್ಲ ಸಾಹಿತಿಗಳ ಅಭಿಪ್ರಾಯ. ಈ ಗ್ರಂಥವನ್ನು ಶ್ರೀ ನೆಹರೂಗಳು ತನ್ನ ಕಾರಾಗೃಹವಾಸದಲ್ಲಿ ಬರೆದುದು. ಸೆರೆಮನೆಯೊಳಗಿದ್ದು ಈ ರೀತಿಯಲ್ಲಿ ತನ್ನ ಜೀವಮಾನ ಸತ್ಯಗಳನ್ನು ಒಟ್ಟುಗೂಡಿಸಿದುದು ಪರಮಾಶ್ಚರ್ಯ!

ಈ ಗ್ರಂಥವನ್ನು ಓದಿದವರಲ್ಲಿ ಶ್ರೀ ಜವಾಹರಲಾಲರ ಕುರಿತು ನಿಜವಾದ ಅಭಿಪ್ರಾಯವು ದೊರಕುತ್ತದೆ. ಅವರು ಒಂದು ಮಹಾ ವ್ಯಕ್ತಿಯೆಂದು ಇದರಿಂದ ಖಚಿತವಾಗುತ್ತದೆ. ತನ್ನ ರಾಜಕೀಯ ಚಟುವಟಿಕೆಯಲ್ಲಿ ಇವರು ಅನುಭವಿಸಿದ ಶ್ರಮಗಳು ಇದರಲ್ಲಿ ಚಿತ್ರಿಸಲ್ಪಟ್ಟಿವೆ. ತನ್ನ ಸಹಪಾಟಿಗಳ ಕುರಿತು ಸರಿಯಾದ ಅಭಿಪ್ರಾಯಗಳನ್ನು ಕೊಟ್ಟಿರುವರು. ರಾಜಕೀಯ ಕೈದಿಗಳ ಕುರಿತು ಈ ಗ್ರಂಥದಲ್ಲಿ ಅನೇಕ ವಿಷಯಗಳನ್ನು ಕೊಟ್ಟಿರುತ್ತಾರೆ. ಒಂದಾನೊಂದು ಕಾಲದಲ್ಲಿ ಇಂಡಿಯಾ ಸರಕಾರದ ಉದ್ಯೋಗದಲ್ಲಿದ್ದು, ರಾಜಕೀಯ ಕೈದಿಗಳಿಗೆ ಭಯಂಕರ ಅನುಭವಗಳನ್ನು ಒದಗಿಸಿದ ನಿವೃತ್ತ ಉದ್ಯೋಗಿಗಳು ಈ ಗ್ರಂಥವನ್ನು ಓದಿ ಸಂತುಷ್ಟರಾಗಿರುವರು.

ಕಳೆದ ಕಾಂಗ್ರೆಸ್ ಅಧಿವೇಶನದ ಕುರಿತು ಕೆಲವು ಅಭಿಪ್ರಾಯಗಳು.

ಈ ಬಾರಿಯ ಅಧಿವೇಶನವು ಅಷ್ಟೊಂದು ಗಂಭೀರವಾದುದಲ್ಲವೆಂದೂ ಅಲ್ಲಿ ನಡೆದ ನಿರ್ಧಾರಗಳಿಂದ ಹಲವರು ನಿರಾಶರಾಗಿರುವರೆಂದೂ, ಕಾಂಗ್ರೆಸ್ಸಿನಲ್ಲಿ ಕಲಹಗಳು ಕಾಣಿಸಿಕೊಳ್ಳುವವೆಂದೂ ಕೆಲವರ ಅಭಿಪ್ರಾಯ. ಇದಕ್ಕೆ ಕಾರಣವೇನು? ನವರಾಜ ಶಾಸನದಲ್ಲಿ ಅಧಿಕಾರ ಸೂತ್ರವನ್ನು ವಹಿಸುವ ವಿಚಾರ ದೃಢವಾದ ನಿರ್ಣಯಗಳನ್ನು ಮಾಡದುದರಿಂದ ಮೇಲಿನ ಅಭಿಪ್ರಾಯಪಡುವವರ ಮಾತು ಹಾಗಿರಲಿ. ಈ ಬಾರಿಯ ಕಾಂಗ್ರೆಸ್ಸು ನಿಜವಾಗಿಯೂ ಬಹಳ ಶ್ರೇಯಸ್ಕರವಾಗಿ ನಡೆದಿರುತ್ತದೆ. ಕಾಂಗ್ರೆಸ್ಸಿನ ಈಗಿನ ನಿರ್ಧಾರದಂತೆ ಅಧಿಕಾರಸೂತ್ರ ವಹಿಸಬೇಕೆಂಬ ಅಭಿಪ್ರಾಯಪಡುವ ಪಕ್ಷಕ್ಕೂ ಅದರ ವಿರೋಧಪಕ್ಷಕ್ಕೂ ಆ ಸಮಸ್ಯೆಯ ಮೇಲೆ ಇನ್ನೂ ಆಲೋಚಿಸಲು ಪ್ರಚಾರಕಾರ್ಯವನ್ನು ನಡೆಯಿಸಲು ಸಮಯ ದೊರಕಿರುತ್ತದೆ.

ಈ ಬಾರಿಯ ಅಧಿವೇಶನದಲ್ಲಿ ೧೬ ವರ್ಷಗಳ ಮುಂಚೆಯಾಗಿನ ಸಾಧಾರಣ ೫೫ ಮಂದಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ಭೂರಿ ಜನರನ್ನು ಕಾಂಗ್ರೆಸ್ಸಿನಲ್ಲಿ ಕೂಡಿಸುವುದು ಮತ್ತು ಗ್ರಾಮಾಭ್ಯುದಯ ಇವೇ ದರ ಕುರಿತು. ಆದ ಠರಾವುಗಳು ಕಾರ್ಯರೂಪಕ್ಕೆ ಬಂದಲ್ಲಿ ಕಾಂಗ್ರೆಸ್ಸು ಸಂಸ್ಥೆಯು ಇನ್ನೂ ದೃಢವಾಗುವುದು ಖಂಡಿತ. ಹಿಂದೂದೇಶದ ಕಸು ಬಾಹ್ಯ ದೇಶಗಳಲ್ಲಿ ಪ್ರಸಾರಕಾರ್ಯವು ಸರಿಯಾಗಿ ನಡೆಯದುದರಿಂದ ಅದು ಅನೇಕ ಸಂಕಷ್ಟಗಳನ್ನನುಭವಿಸಬೇಕಾಯಿತು. ಈ ತೊಡಕನ್ನು ತಿಳಿದ ದಿವಂಗತ ವಿಟ್ಠಲಭಾಯಿ ಪಟೇಲರು ಬಹಿರ್ಪ್ರಸಾರಣೆಗಾಗಿ ತನ್ನ ಸರ್ವ ಆಸ್ತಿಯನ್ನು ದಾನ ಮಾಡಿಬಿಟ್ಟಿರುವರು. ಲಕ್ನೋದಲ್ಲಿ ನಡೆದ ಈ ಬಾರಿಯ ಕಾಂ ಅಧಿವೇಶನದಲ್ಲಿ ಈ ರೀತಿ ಪ್ರಸಾರಣಾಕಾರ್ಯವನ್ನು ನಡೆಯಿಸಲು ಒಂದು ಇಲಾಖೆಯನ್ನು ತೆರೆಯಬೇಕಾಗಿ ನಿರ್ಧರಿಸಲಾಗಿದೆ. ಭಾಷಣಗಳ ವಿಚಾರದಲ್ಲಿ ವಿಶೇಷ ತರದ ಭಾಷಣಗಳು ನಡೆದುವು. ಕೆಲವರು ಹಿಂದೀಯಲ್ಲಿ ಭಾಷಣ ವಿತ್ತರು.

ಸಮತಾವಾದಿಗಳು ತಮ್ಮ ಮತಗಳ ಪ್ರಸಾರಣೆಗೆ ಈ ಬಾರಿಯ ಅಧಿವೇಶನದ ಉಪಯೋಗವನ್ನು ಬಹಳವಾಗಿ ಮಾಡಿದರು. ಕಾಂಗ್ರೆಸ್ಸಿನ ವಿವಿಧ ಸಮಿತಿಗಳಲ್ಲಿ ಅಧಿಕ ಸದಸ್ಯತನವನ್ನು ಪಡೆಯಲು ಸಮತಾವಾದಿಗಳು ಪ್ರಯತ್ನಪಟ್ಟರು. ಅಧ್ಯಕ್ಷ ಶ್ರೀ ಜವಾಹರಲಾಲ ನೆಹರೂರವರು ಇವರೊಂದಿಗೆ ಇದ್ದುದರಿಂದ, ಇವರಿಗೆ ಯೋಗ್ಯ ನಾಯಕತ್ವವು ದೊರಕಿದಂತಾಗಿದೆ. ಇತರ ಪಕ್ಷಗಳೊಡನೆ ಸ್ಪರ್ಧೆ ನಡೆಯಿಸುವ ಇಚ್ಛೆಯು ಈ ಪಕ್ಷದವರಿಗೆ ಇದ್ದರೂ, ಶ್ರೀ ಜವಾಹರಲಾಲರ ಪ್ರೇರಣೆಯಿಂದ, ರಾಷ್ಟ್ರೀಯ ಅಭ್ಯುದಯಕ್ಕೆ ಸರಿಯಾಗಿ ಈ ಪಂಗಡವು ಕಾರ್ಯನಡೆಸುವಂತಾಗುವುದು.

ಶ್ರೀ ಜವಾಹರಲಾಲರಿಗೆ ಆಧಾರವಾಗಿ ಬಹಳ ಉತ್ತಮವಾದ ಆಲೋಚನಾ ಮಂಡಳವು ಈ ಬಾರಿ ರಚನೆಯಾಗಿರುತ್ತದೆ. ಅನೇಕ ಪ್ರಸಿದ್ಧ ವ್ಯಕ್ತಿಗಳೇ ಇದರಲ್ಲಿರುವುದರಿಂದ ಶ್ರೀ ನೆಹರೂರವರ ಮುಂದಿನ ಕಾರ್ಯವು ಸುಲಭವಾಗುವುದು.

ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ಸಿನ ಸದಸ್ಯರಲ್ಲದಿದ್ದರೂ, ಈ ಬಾರಿಯ ಕಾಂಗ್ರೆಸ್ ಅಧಿವೇಶನವು ಜಯಶೀಲವಾಗಿ ನಡೆಯಲು ಇವರೇ ಕಾರಣಪ್ರಾಯರಾಗಿರುವರು. ಶ್ರೀ ಜವಾಹರಲಾಲರ ಮೇಲೆ ಇವರಿಗೆ ಕುಂದಿರಾ ಭರವಸೆ ಇದೆ.

ಬೆಳ್ಳಿಯ ಧಾರಣೆಯು ಹೆಚ್ಚುತ್ತದೆ.

ಚೀನಿಯರಿಗೂ ಅಮೇರಿಕಕ್ಕೂ ನಡೆದ ಮಾತುಕತೆಗಳ ಫಲಿತಾಂಶವಾಗಿ ಬೆಳ್ಳಿಯ ಧಾರಣೆಯು ಹೆಚ್ಚುವ ಸಂಭವವಿರುವುದರಿಂದ, ಹಿಂದೂದೇಶವು ೩ ಮಿಲ್ಲಿಯನ್ನು ಔನ್ಸು ಬೆಳ್ಳಿಯನ್ನು ಪಡೆಕೊಂಡಿರುತ್ತದೆ.

ಒಟ್ಟೋವಾ ಒಪ್ಪಂದದ ಮುಕ್ತಾಯ.

ಅಸೆಂಬ್ಲಿಯ ನಿರ್ಧಾರದ ಪ್ರಕಾರ ಒಟ್ಟೋವಾ ಒಪ್ಪಂದವನ್ನು ಮುಕ್ತಾಯಮಾಡಲು ಇಂಡಿಯಾ ಸರಕಾರವು ಬ್ರಿಟಿಷ ಸರಕಾರಕ್ಕೆ ನೋಟೀಸು ಕೊಟ್ಟಿದೆಯೆಂದು ಶ್ರೀ ಸತ್ಯಮೂರ್ತಿಯವರು ಕೇಳಿದ ಪ್ರಶ್ನೆಗೆ—ಅದು ಇಂಡಿಯಾ ಸರಕಾರದ ಮೇಲೆ ಹೊಂದಿಕೊಂಡಿದೆ ಎಂಬ ಉತ್ತರವು ದೊರಕಿರುತ್ತದೆ. ಆದರೆ, ಸರಕಾರವು ಅಸೆಂಬ್ಲಿಯ ನಿರ್ಧಾರದ ಮೇರೆಗೆ ವರ್ತಿಸುವುದರ ಕುರಿತು ಭರವಸೆ ದೊರಕಿರುತ್ತದೆ.

ಹಿಂದೂದೇಶದಲ್ಲಿ ಅಫೀಮು ಸೇವನೆ

೧೯೩೪—೩೫ರಲ್ಲಿ ಮದ್ರಾಸಿನಲ್ಲಿ ೨೮,೫೮೯ ಸೇರುಗಳು. ಮುಂಬಾಯಿಯಲ್ಲಿ ೧೬,೩೫೮ ಸೇರುಗಳು. ಸಿಂಧ್ ದೇಶದಲ್ಲಿ ೪೭೧೯ ಸೇರುಗಳು. ಬಂಗಾಳದಲ್ಲಿ ೨೭೧೦೪ ಸೇರುಗಳು. ೧೯೩೩–೩೪ರಲ್ಲಿ ಬಿಹಾರದಲ್ಲಿ ೩೩,೭೩೦ ಸೇರುಗಳು. ಸಂಯುಕ್ತ ಪ್ರಾಂತ್ಯದಲ್ಲಿ—೧೬,೪೮೭ ಸೇರುಗಳು. ಪಂಜಾಬದಲ್ಲಿ ೩೦ ೩೩೦ ಸೇರುಗಳು. ಒರಿಸ್ಸಾದಲ್ಲಿ–೩೦,೦೫೬ ಸೇರುಗಳೂ ಮಧ್ಯಪ್ರಾಂತ್ಯಗಳಲ್ಲಿ ೧೧ ೬೯೧ ಸೇರುಗಳೂ ಉಪಯೋಗವಾಗಿವೆ.

ನಾಗಪುರದ ಅಂಬಾಜೇರಿ ಸರೋವರದಲ್ಲಿ ಈರ್ವರು ಯುವಕ—ಯುವತಿಯರ ಶವಗಳು ದೊರಕಿರುತ್ತವೆ. ಯುವಕನ ಪ್ರಾಯ ಸಾಧಾರಣ ೩೧. ಯುವತಿಯ ಪ್ರಾಯ ೨೦. ಇಬ್ಬರೂ ಪ್ರಾಣತ್ಯಾಗ ಮಾಡಿಕೊಂಡಿರುವರು. ಕಾರಣ ಪ್ರಣಯ. ಯುವಕನು ತನ್ನ ನೆರೆಯವನಾದ ಇನ್ನೋರ್ವನ ಪತ್ನಿಯಾದ ಯುವತಿಯನ್ನು ಪ್ರೀತಿಸುತ್ತಿದ್ದನು. ಗುಟ್ಟು ರಟ್ಟಾಗಲು ಈರ್ವರೂ ಪ್ರಾಣತ್ಯಾಗ ಮಾಡಿಕೊಂಡರು.

ಪಾಂಡಿಚೇರಿಯಲ್ಲಿ ಓರ್ವನು ತನ್ನ ಹೆಂಡತಿಯನ್ನು ಕೊಂದು ದೂರದಲ್ಲಿರುವ ಬಾವಿಗೆ ನೆಗೆದು ಕೊಂಡು ಪ್ರಾಣತ್ಯಾಗ ಮಾಡಿಕೊಂಡನು. ತಿವಿದ ಹೆಂಗಸು ಮೃತಳಾಗದೆ ಪೊಲೀಸರು ಇತ್ತ ಧಾವಿಸಿದರು. ಯಾರೋ ತನ್ನನ್ನು ತಿವಿದರೆಂದೂ ತನ್ನ ಗಂಡನು ಹೊರಗಿನ ಒಂದು ಹಳ್ಳಿಗೆ ಹೋಗಿರುವನೆಂದೂ ಕೊನೆಗೆ ತನ್ನ ಗಂಡನೇ ತನ್ನನ್ನು ತಿವಿದನೆಂದೂ ಹೇಳಿದಳು. ಮನೆಯಲ್ಲಿ ಗಂಡನ ಪತ್ತೆಯಾಗದಿರಲು, ಆತನನ್ನು ಹುಡುಕಾಡಿದರು. ಎರಡು ಮೈಲು ದೂರದಲ್ಲಿರುವ ಒಂದು ಬಾವಿಯಲ್ಲಿ ತೇಲುವ ಆತನ ಶವವು ದೊರಕಿತು.

ಶ್ರೀ ಸುಭಾಷಚಂದ್ರಬೋಸರನ್ನು ಎರವಾಡಾದಿಂದ ಕಲ್ಕತ್ತಾಕ್ಕೆ ಒಯ್ಯುವರಾಗಿಯೂ ಅಲ್ಲಿ ಅವರ ಆರೋಗ್ಯಕ್ಕೆ ಯೋಗ್ಯವೆನಿಸುವ ಸ್ಥಳಕ್ಕೆ ಒಯ್ಯುವರೆಂದೂ ವಾರ್ತೆ ಬಂದಿರುತ್ತದೆ.

ಇನ್ನೊಂದು ಮಹಾಯುದ್ಧದ ಸಂಭವದಲ್ಲಿ ಜರ್ಮನಿಯು ಬೆಲ್ಜಿಯಮಿನ ಮೂಲಕ ಆಕ್ರಮಿಸದಂತೆ ಬೆಲ್ಜಿಯಮ್ ದೇಶದ ಗಡಿಗಳನ್ನು ಭದ್ರಪಡಿಸಲು ಪ್ಯಾರಿಸ್ಸಿನಲ್ಲಿ ನಡೆದ ಬ್ರಿಟಿಷ, ಫ್ರೆಂಚ್, ಬೆಲ್ಜಿಯಂ ಸರಕಾರ ಸಂಗ್ರಾಮಾಧಿಕಾರಿಗಳ ಸಭೆಯಲ್ಲಿ ನಿಶ್ಚಯವಾಗಿರುತ್ತದೆ.

ಕಲ್ಕತ್ತಾ ನಗರದಲ್ಲಿ ೩೦ ವರ್ಷ ಪ್ರಾಯದ ಓರ್ವ ಪಂಜಾಬಿಯನ್ನು ಕಳೆದ ಶನಿವಾರ ರಾತ್ರಿ ಪೋಲೀಸರು ಆಕಸ್ಮಾತ್ತಾಗಿ ಸೆರೆಹಿಡಿದಿರುವರು. ಇವನೊಡನೆ ಕೆಲವು ಔಷಧಿಗಳೂ, ಬಾಂಬುಗಳೂ ದೊರಕಿದೆ.

ಲಾಯಲ್‌ಪುರ ಎಂಬಲ್ಲಿ ಒಂದು ಹತ್ತಿಯ ಕಾರ್ಖಾನೆಗೆ ಬೆಂಕಿ ತಗಲಿದುದರಿಂದ ಲಕ್ಷಾಂತರ ರೂಪಾಯಿಗಳ ನಷ್ಟಸಂಭವಿಸಿದೆ. ಮುನಿಸಿಪಾಲಿಟಿಯ ಬೆಂಕಿ ತಣಿಸುವ ಯಂತ್ರಗಳ ಶ್ರಮಗಳು ನಿಷ್ಫಲವಾದವು.

ಕಲ್ಕತ್ತಾದ ಆಲಿಪೂರದಲ್ಲಿರುವ ಭೂಕಂಪಗಳನ್ನು ಕಂಡುಹಿಡಿಯುವ ಸಿಸ್ಮೋಗ್ರಾಫ್ ಎಂಬ ಯಂತ್ರವಲ್ಲಿ ಅಲ್ಲಿಂದ ೪೫೫೦ ಮೈಲು ದೂರದಲ್ಲಿ ಒಂದು ಭಯಂಕರ ಭೂಕಂಪವು ನಡೆದಿದೆಯೆಂದು ವ್ಯಕ್ತವಾಗಿದೆ.

ಅನುಕ್ರಮಣಿಕೆ

ನೋಟಗಳು ೩
ನಿಜೇಶ ವಾರ್ತೆ... ೪
ಕಾಂಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಸುಧಾರಣೆಗಳಾಗಬೇಕೆ? ೫
ರಾಷ್ಟ್ರ ವಿಪರ್ಯಾಸ ೬
ವಿವಿಧ ಸಮಾಚಾರಗಳು ೯
ಲೇಖ
ಜಿಲ್ಲಾ ಶಿಕ್ಷಕರ ಸಂಘ ೧೦
ಮಂಗಳೂರು, ತಾಲೂಕುಗಳಿಂದ ೧೧
ಸ್ಫುಟವಿಚಾರಗಳು ೧೧
ವರ್ತಮಾನ ಸಂಗ್ರಹ
ವನಿತಾ ವೈಭವ ೧೬

ಸ್ವದೇಶಾಭಿಮಾನಿ.

ತಾ॥ ೧೦ನೇ ಶುಕ್ರವಾರ ಎಪ್ರಿಲ್ ೧೯೩೬

ಜಿಲ್ಲಾ ಶಿಕ್ಷಕರ ಸಂಘ

ನಮ್ಮ ಜಿಲ್ಲೆಯ 'ಟೀಚರ್ಸ್ ಗಿಲ್ಡ್' ಸಂಘವು ಇದೇ ಸೋಮವಾರದಿಂದ ಗುರುವಾರದ ತನಕ ನಡೆಸಿದ ಅಧಿವೇಶನವು ಬಹಳ ಶ್ಲಾಘನೆಗೆ ಪಾತ್ರವಾಗುವ ರೀತಿಯಲ್ಲಿ ತನ್ನ ಕಾರ್ಯಕ್ರಮವನ್ನು ನಡೆಸಿ ಮುಗಿಸಿತು. ಮದ್ರಾಸಿನ ಜಿಲ್ಲಾ ವಿದ್ಯಾ ಇಲಾಖಾ ಆಫೀಸರರಾಗಿರುವ ಶ್ರೀ॥ ಎಲ್. ಎಮ್. ಸವೂರ್‌ರವರು, ಹಲವು ವರ್ಷಗಳಿಂದ ವಿದ್ಯಾಭ್ಯಾಸ ಕ್ರಮಗಳಲ್ಲಿ ಆತ್ಯಾಧುನಿಕವಾಗಿರುವ ವೈಯಕ್ತಿಕ ಶಿಕ್ಷಣ ಪದ್ಧತಿಯನ್ನು ಕುರಿತಾಗಿ ಆರು ಭಾಷಣಗಳನ್ನು ಇಲ್ಲಿ,-ಮದ್ರಾಸು ಯುನಿವರ್ಸಿಟಿಯವರ ನಿರ್ದೇಶದಂತೆ ಮದ್ರಾಸಿನಲ್ಲಿ ಮಾಡಿದ ಹಾಗೆಯೆ,-ಕೊಟ್ಟದ್ದು ಈ ಸಲದ ಅಧಿವೇಶನಕ್ಕೆ ಬಹಳ ಶ್ರೇಯಸ್ಸನ್ನು ತಂದಿರುವುದು ಮಾತ್ರವಲ್ಲದೆ, ಶಿಕ್ಷಣ ಪರೀಕ್ಷೆಗಳೆರಡರಲ್ಲೂ ನೂತನ ವಿಧಾನಗಳು ಈಗ ಬಳಕೆಗೆ ಬಂದಿರುವ ಕಾರಣ, ಅವುಗಳ ಕೂಲಂಕಷ ತತ್ವವೂ ಪ್ರಯೋಗ ಕ್ರಮಗಳೂ ಶಿಕ್ಷಕರಿಗೆ ಸುಲಭವಾಗಿ ಹಸ್ತಗತವಾಗುವಂತಾಗಿ ಶಿಕ್ಷಣಪ್ರಚಾರಕ್ಕೆ ಧಾರಾಳ ಉಪಕಾರವಾಯಿತು.

ಶಿಕ್ಷಕರಾಗಿಯೆ ವೃದ್ಧರಾಗಿರುವ ಶ್ರೀ ಸ್ವಾಮಿ ಸುವಿಚಾರಾನಂದರು ಪ್ರಾರಂಭ ಭಾಷಣವನ್ನು ಮಾಡಿದುದರಲ್ಲಿ ಶಿಕ್ಷಕರಲ್ಲಿರುವ ಗ್ಲಾನಿಯನ್ನು ಹೋಗಲಾಡಿಸಿ, ವಾಸ್ತವಿಕ ವಿಚಾರ ಸರಣಿಯಲ್ಲಿ, ಶಿಕ್ಷಕರ ವೃತ್ತಿಯ ಹಾಗೂ ಜೀವನದ ಮಹತ್ವವನ್ನು ವಿದ್ಯಮಾನಗಳೊಡನೆ ಹೋಲಿಸಿ ಹೇಳುವಾಗ, ವಯಸ್ಕರಾದವರಲ್ಲಿ ಜನ್ಮಜನ್ಮಕೂ ಶಿಕ್ಷಕರಾಗಿದ್ದೇ ಸಂಸಾರಯಾತ್ರೆಯನ್ನು ಮಾಡುವುದು ಅತಿ ಉಪಯುಕ್ತವಾದುದೆಂದು ತೋರಿ, ಅವರೆಲ್ಲ, ಸ್ವರ್ಗಸುಖದ ಕನಸನ್ನು ಅದೊಂದು ಕಾಸಿನ ಮಟ್ಟಿಗೆ ಸತ್ಯವಾಗಿಯೂ ಅನುಭವಿಸುವಂತಾಯಿತು. ಯುಕ್ತಿವಾದವನ್ನೇನೂ ಮಾಡದೆ, ತನ್ನ ಜೀವನದಲ್ಲಿ ತನಗೆ ಲಭಿಸಿರುವ ಅನುಭವವನ್ನು ಮಾತ್ರ, ಸರ್ವರಿಗೆ ಹಂಚಿಕೊಟ್ಟು, ಬೇಸರಗೊಳ್ಳುವುದಕ್ಕೆ ವಿಶಿಷ್ಟ ಕಾರಣಗಳಿದ್ದ ಉಪಾಧ್ಯಾಯರು ಸಹ ಪುರುಷಾರ್ಥ ಸಾಧನೆಗೆ ಕೈನೀಡಿ ಕೆಲಸ ಮಾಡಲು ಅಕುರ ಹೊಂದುವಂತೆ ಇವರು ಪ್ರೋತ್ಸಾಹಿಸಿದರು.

ಪ್ರತಿಯೊಂದು ಮಗುವೂ ಒಂದೊಂದು ವ್ಯಕ್ತಿಯಾಗಿ ಶಾಲೆಯಲ್ಲಿ ಜ್ಞಾನ ಸಂಪಾದನೆಯನ್ನು ಮಾಡುತ್ತಿರುವಾಗ, ಇಡೀ ವರ್ಗದಲ್ಲಿ ೨೦-೩೦-೪೦ರಂತೆ ಮಕ್ಕಳನ್ನಿಟ್ಟುಕೊಂಡು ನಾವು ಮಾಡುವ ಪಾಠಕ್ರಮವು ಸರಿಯೆ? ಪರಿಶ್ರಮ ಮತ್ತು ಧನವ್ಯಯದ ದೃಷ್ಟಿಯಿಂದ ಹೀಗೆ ಸಮುದಾಯಗಳನ್ನಿಟ್ಟು ಕಲಿಸುತ್ತಿರುವಾಗ ಪಾಠಗಳು ಪ್ರತಿ ಮಗುವಿಗೆ ಅದರದರ ತಿಳಿವಳಿಕೆಗೆ ಸರಿಯಾಗುವಂತೆ ಸುಲಭವಾಗಿ ಮುಂದರಿಯುವ ಹಾಗೆ ಈಗಣ ಶಿಕ್ಷಣ ಕ್ರಮವನ್ನು ಹೇಗೆ ಮನಶ್ಶಾಸ್ತ್ರಜ್ಞರು ಬಲ್ಲವರು ತಿದ್ದಿಕೊಂಡು ಶಿಕ್ಷಣವನ್ನು ಪರೀಕ್ಷೆಗಳನ್ನು ಹೇಗೆ ಬದಲಾಯಿಸಿರುವರು? ಎಂಬುದೇ ಶ್ರೀ॥ ಸವೂರರವರು ತಾವೇ ಬಹಳ ಪರಿಶ್ರಮದಿಂದ, ತಮ್ಮ ಜಿಲ್ಲೆಯ ಉಪಾಧ್ಯಾಯರ ಸಹಕಾರದಿಂದ ಸಾಧಿಸಿ ಶೋಧನಾಪೂರ್ವಕವಾಗಿ ಸಂಗ್ರಹಿಸಿರುವ ಅನುಭವದಿಂದ ಶಿಕ್ಷಣ ವಿಜ್ಞಾನವನ್ನೂ ಪ್ರತ್ಯಕ್ಷ ಪಾಠಕ್ರಮಗಳನ್ನು ಬೋಧಿಸಿದರು.

ಮಕ್ಕಳಿಗೆ ಮನಸ್ಸೆಂಬುದಿದೆ ಮಾನಸಿಕ ಬೆಳವಣಿಗೆಯನ್ನು ಅಳೆಯ ಬರುವುದು ಅದಕ್ಕಾಗಿ ಅಳೆಯುವ ಕ್ರಮಗಳಿವೆ ಅಂತಹವನ್ನು ಪ್ರಯೋಗಿಸಿದಲ್ಲಿ ಪ್ರತಿ ದರ್ಜೆಯ ಆಯಾ ವಯೋಧರ್ಮಕ್ಕೆ ತಕ್ಕಂತಹ ಮಗುವಿನ ಮಾನಸಿಕ ಬೆಳವಣಿಗೆಯು ಸಾಕಷ್ಟಾಗಿದೆಯೆ, ಎಷ್ಟಕ್ಕಾಗಬೇಕು, ಏಕಾಗಿಲ್ಲ ಎಂಬುದನ್ನು ತಿಳಿದುಕೊಂಡು ಕ್ರಮಗಳನ್ನು ಸುಲಭವಾಗಿ ಬದಲಾಯಿಸಬರುತ್ತಿದೆ. ಇದಕ್ಕೆ ಅಮೇರಿಕ ಮತ್ತು ಇಂಗ್ಲೆಂಡು ದೇಶಗಳಲ್ಲಿನ ಯುನಿವರ್ಸಿಟಿಯವರೂ ಶಿಕ್ಷಣ ವಿಜ್ಞಾನಿಯರೂ ಬರೆದ ಅನುಭವ ಗ್ರಂಥಗಳಿವೆ. ಇವುಗಳಲ್ಲಿ ಪ್ರಾಮುಖ್ಯವಾದುವು ಏನನ್ನೆಲ್ಲ ವಿವರಿಸಿ ಚರ್ಚಿಸಿ ಇತ್ಯರ್ಥಿಸಿರುವುವೊ ಅವುಗಳಲ್ಲಿ ಸಭಿಕರಿಗೆ ಸುಲಭವಾಗಿ ತಿಳಿವಂತೆ, ವಿಚಾರಗಳಿಂದಲೂ ದೃಷ್ಟಾಂತಗಳಿಂದಲೂ ವಿವರಿಸಿದುದೇ ಈ ಭಾಷಣಗಳ ಮಹತ್ವವಾಗಿದ್ದಿತು. ದಿನೇದಿನೇ ಬೆಳೆದು ಬರುತ್ತಿರುವ ಶಿಕ್ಷಣ ವಿಜ್ಞಾನವು ನಮ್ಮಲ್ಲಿನ ಪಾಠಶಾಲೆಗಳಿಗೂ ಆಗುವಷ್ಟು ಬೇಗನೆ ಮುಟ್ಟಲು ಸಾಧನಗಳಿರಲೇ ಬೇಕು. ಒಬ್ಬ ಶಿಕ್ಷಕನಿಗೆ, ಒಂದು ಶಾಲೆಗೆ ಇದನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ. ಇಂತಹ ಸಂಘಗಳೇ ಇದನ್ನು ಕೈಕೊಳ್ಳಬಹುದಾಗಿದೆ. ಶಿಕ್ಷಕರು ಅದಕ್ಕಾಗಿಯೆ ಇಂತಹ ಸಂಘಗಳನ್ನು ಸೇರಿ, ಬಲಪಡಿಸಿಕೊಂಡು ತಮ್ಮ ವೃತ್ತಿಯು ಸುಗಮವಾಗುವ ಹಾಗೆ ಸಾಧಿಸಬೇಕಾಗಿದೆ ಎಂಬುದು ನಿರ್ವಿವಾದದ ಮಾತು. ಸಾಮಾನ್ಯ ವಿಜ್ಞಾನದ ಪಾಠಗಳು ಸೆಕೆಂಡರಿ ಮತ್ತು ಹಾಯರ್ ಎಲಿಮೆಂಟರಿ ತರಗತಿಗಳಲ್ಲಿ ಈಗಣ ಹೊಸ ಸಿಲೆಬಸ್ಸಿನಂತೆ ಹೇಗೆ ನಡೆಯಬೇಕಾಗಿದೆ ಎಂಬುದನ್ನು, ಕನ್ನಡ ಭಾಷಾ ಪಾಠಗಳು ಐದನೆ ದರ್ಜೆಯ ತನಕ ಯಾವ ಕೂಲಂಕಷ ವಿಚಾರಗಳಿಂದ ಈಗ ನಡೆಯಬೇಕಾಗಿವೆ, ಕನ್ನಡ ಲಿಪಿಯಲ್ಲಿ ತಿದ್ದುಪಡಿ ಅಗತ್ಯವೇ ಎಷ್ಟು ಅಗತ್ಯ ಎಂಬುದನ್ನು, ಕನ್ನಡ ಮಾತನ್ನೆ ಉಪಯೋಗಿಸಿ ಸ್ಕೂಲ್ ಫೈನಲ್ ತನಕವೂ ಗಣಿತ ಶಾಸ್ತ್ರವನ್ನು ಕಲಿಸಿದ ಅನುಭವ ಮತ್ತು ಈ ಪ್ರಯೋಗದ ಸಾರ್ಥಕತೆ ಮತ್ತು ಸಾಧ್ಯತೆ ಇವುಗಳನ್ನು ಮಾತ್ರವಲ್ಲದೆ, ವ್ಯಾಯಾಮ ಮತ್ತು ಈಗಣ ಸ್ಪರ್ಧೆಯಾಟಗಳ ಉಪಯುಕ್ತತೆ ಮತ್ತು ಅವುಗಳ ವ್ಯವಸ್ಥಾ ಕ್ರಮ ಮೊದಲಾದುವನ್ನೂ ಅವುಗಳ ಪ್ರದರ್ಶನವನ್ನೂ, ಮೊದಲೇ ಪ್ರಕಟಿಸಿರುವ ಪ್ರಕಾರ ಯಥಾಕ್ರಮವಾಗಿ ಆಯಾ ಭಾಷಣಕರ್ತರು ವಿವರಿಸಿದರು. ಸ್ಕೂಲ್ ಫೈನಲ್ ಪಾಠಕ್ರಮ ಕುರಿತಾಗಿ ಸರಕಾರವು ಪ್ರಕಟಿಸಿದ್ದ ವಿಮರ್ಶಾಪತ್ರಕವನ್ನು ಸರ್ವರೂ ಚರ್ಚಿಸಿದರು. ಒಂದನೆ ದರ್ಜೆಯಿಂದ VI ಫೋರ್ಮ್ ವರೆಗಣ ಶಿಕ್ಷಕರಲ್ಲಿ ಪ್ರತಿಯೊಬ್ಬರಿಗೂ, ಹೆಚ್ಚಾಗಿ ಪ್ರಾಥಮಿಕ ಶಾಲೆಗಳಿಗೂ ಅಪೂರ್ಣ ಸೆಕೆಂಡರಿ ಶಾಲೆಗಳಿಗೂ ಅತ್ಯವಶ್ಯಕವಾದ ಹಾಗೂ ಅತ್ಯಾಧುನಿಕ ಅಭಿಪ್ರಾಯಗಳನ್ನು ವಿವರಿಸಿದುದೇ ಜಿಲ್ಲಾ ಸಂಘದ ಹೆಚ್ಚಿನ ಶ್ರೇಯಸ್ಸಿಗೆ ಕಾರಣವಾಗಿ, ಕೆಳದರ್ಜೆಗಳ ಉಪಾಧ್ಯಾಯರೂ ಉಪಾಧ್ಯಾಯ ಸಂಘಗಳೂ ಈ ಜಿಲ್ಲಾ ಸಮಿತಿಗೆ ಸೇರಲು ನಿರ್ವಿವಾದವಾದ ಕಾರಣವಾಗಿದೆ.

ಶಿಕ್ಷಣವು ದೇಶದಲ್ಲೆಲ್ಲ ಆಗುವಷ್ಟು ಬೇಗನೆ ಸರ್ವತ್ರವೂ ಹರಡುವುದು ಅತ್ಯಾವಶ್ಯಕವೆಂದೂ, ಶಿಕ್ಷಣ ಕ್ರಮಗಳು ಇದಕ್ಕಾಗಿ ಬಹಳವಾಗಿ ಅನುಕೂಲವಾಗುವಂತೆ ಮಾರ್ಪಡುವುದು ಅಗತ್ಯವಾಗಿದೆ ಎಂದೂ, ಶಿಕ್ಷಕರ ಜೀವನದಲ್ಲಿ ವಿದ್ಯಮಾನಗಳು ನಾನಾ ಸಮಸ್ಯೆಗಳನ್ನು ತಂದೊಡ್ಡುವಾಗ ಅವುಗಳ ಪರಿಹಾರವು ಸಂಘಗಳ ಮೂಲಕವಾಗಿಯೆ ಸಾಧ್ಯವೆಂಬುದೂ, ಸರ್ವರಿಗೂ ತಿಳಿದೇ ಇದೆ. ಹೀಗಿರುವುದರಿಂದ ಈ ಗಿಲ್ಡ್ ಸಂಘವನ್ನು ಬರೇ ಕೆಲವೇ ಶಾಲೆಗಳು ಅಥವಾ ಶಿಕ್ಷಕರ ಸಂಘಗಳು ಸೇರಿರುವುದು ಸಾಲದು. ಪ್ರಾಥಮಿಕ ತರಗತಿಗಳಿಗಾಗಿ ನಡುವ ಹೋರಾಟಗಳಿಗಿಂತ ಹೆಚ್ಚಾಗಿದೆ ಎಂಬುದನ್ನು ಇದೇ ಅಧಿವೇಶನ ಕಾಲದಲ್ಲಿ ಜರುಗಿದ ಕಾರ್ಯಕ್ರಮದಿಂದ ತಿಳಿದುಬರುವುದು. ಉಪಾಧ್ಯಾಯ ವರ್ಗದಲ್ಲಿ ಹೆಚ್ಚಾಗಿ, ಮೇಲಧಿಕಾರಿಗಳು ಅಥವಾ ಆಡಳಿತದವರು, ಅಪ್ಪಣೆ ಕೊಟ್ಟ ಕ್ಷಣವೇ ಯಾವುದೊಂದು ಉದ್ಯಮ ಕ್ಷೋಭ್ಯರ ಉತ್ಸಾಹವು ತೊಡಗಿ ಬೆಳಗಿ ಬೆಳೆಯುವ ಲಕ್ಷಣಗಳು ಕಾಣುವುದೆಂದು ಶಿಕ್ಷಣ ವಿಮರ್ಶಕರು ಹೇಳುವರು. ಎರಡು ಮೂರು ವರ್ಷಗಳಲ್ಲಿ ನಡೆದ ವಾರ್ಷಿಕಾಧಿವೇಶನಕ್ಕೆ ಲಭಿಸಲಿಲ್ಲದ ಯೋಗ್ಯ ಯಶಸ್ಸು ಈ ವರ್ಷದ ಅಧಿವೇಶನಕ್ಕೆ ದೊರೆತಿದೆಯಾದರೂ, ಬೋರ್ಡು ಶಾಲೆಗಳ ಪ್ರತಿನಿಧಿಗಳು ಅಥವಾ ಶಾಲಾಧಿಕಾರಿಗಳು ಇಷ್ಟು ವರ್ಷಗಳಲ್ಲಿ ನೆರೆದಷ್ಟು ಈ ವರ್ಷ ಬಾರದಿರಲು, ಬೋರ್ಡ್ ಅಧಿಕಾರಿಗಳು ಇತರ ಮಹತ್ವದ ವಿಷಯಗಳ ಪರ್ಯಾಲೋಚನೆಯ ಆವಶ್ಯಕತೆಯಲ್ಲಿ ಮಗ್ನರಾಗಿದ್ದುದೇ ಕಾರಣವಾಯಿತೆಂದು ತೋರುತ್ತಿದೆ. ಮಹದಾಲೋಚನೆಗೆ ಒಳಪಡುವ ಆವಶ್ಯ ವಿಚಾರಗಳಲ್ಲಿ ಶಿಕ್ಷಣವೂ ಒಂದಾಗಿದೆ ಎಂಬ ಭಾವನೆಗೆ ಈ ಮಹತ್ವದ ವಿಷಯಗಳಲ್ಲಿ ಏಕೆ ಸ್ಥಾನ ದೊರೆತಿಲ್ಲವೊ ತಿಳಿಯದು. ಇಂತಹ ದುರದೃಷ್ಟವು ಮಾಯವಾಗಿ, ಶಿಕ್ಷಣವು ಸರ್ವತ್ರವೂ ಯೋಗ್ಯ ರೀತಿಯಲ್ಲಿ ಹರಡುವ ಹಾಗೆ, ಶಿಕ್ಷಣಾಭಿಮಾನಿಗಳಲ್ಲಿ ಉತ್ಸಾಹವೂ ಯಥಾಯೋಗ್ಯ ರೀತಿಯಲ್ಲಿ ಹೆಚ್ಚುತ್ತ ಬರಲಿ.

ಸ್ಫುಟ ವಿಚಾರಗಳು

ಹೊಸ ವೈಸ್ರಾಯರು

ಲೋರ್ಡ್ ಲಿನ್ಲಿಥ್ಗೋರವರು, ಇದೇ ತಾ. 16ರಲ್ಲಿ, ತಮ್ಮ ಗದ್ದುಗೆಯನ್ನೇರಿದ ಶುಭಮುಹೂರ್ತದಲ್ಲಿ ಭಾರತೀಯರಿಗೆ ಕೊಟ್ಟಿರುವ ಸಂದೇಶವನ್ನು 'ಗೆಳೆಯರೆ' ಎಂಬ ಮಾತಿಂದ ಪ್ರಾರಂಭಿಸಿದ್ದೇ, ಇಂತಹ ಮಹಾಧಿಕಾರಿಗಳ ಭಾಷಣಗಳಲ್ಲಿ ಇದು ವರೆಗೆ ಎಂದೂ ಕೇಳದಿದ್ದ ಶುಭಲಕ್ಷಣವೆಂದೇ ತಿಳಿದುಬರುತ್ತಿದೆ. ಜನರ ಕಡೆಗೆ ವಾತ್ಸಲ್ಯವನ್ನಿಟ್ಟುಕೊಂಡಲ್ಲದೆ, ಈ ಮಾತು ಹೊರಡದು. ಸರ್ವಿಸುಗಳಲ್ಲಿರುವ ನೋಕರರು ಹೊಸ ರಾಜ್ಯಾಂಗ ಪದ್ಧತಿಯ ಕಡೆಗೆ ಅರೆ ಮನಸ್ಸು ಕೊಡದೆಯೂ ಸಂದೇಹವನ್ನೆಣಿಸದೆಯು ಧೈರ್ಯದಿಂದ ಮುಂದರಿಸಬೇಕಾಗಿಯೂ ಅವರು ಸೂಚಿಸಿರುವರು. ಹಳ್ಳಿ ಜನರನ್ನು ಆಗುವಷ್ಟು ಚೆನ್ನಾಗಿ ಪರಿಚಿತರನ್ನಾಗಿ ಮಾಡಿಕೊಳ್ಳುವುದು ಅಗತ್ಯವೆಂದೂ, ಯಾವುದೊಂದು ಜಾತಿ ಸಮಾಜಾದಿ ಭೇದಭಾವವೇ ಇರದೆ, ಸರ್ವರನ್ನು ತನ್ನ ಕುಟುಂಬದಲ್ಲಿ ತಾನು ಮಕ್ಕಳನ್ನು ಕಾಣುವ ಹಾಗೆಯೇ ನಮ್ರ ಭಾವದಿಂದಲೇ ಕಾಣುವುದು ತನ್ನ ನೀತಿಯೆಂದೂ, ಭಗವತ್ಪ್ರಾರ್ಥನೆಯಲ್ಲಿ ತನ್ನ ನೆನಪು ಸದಾಸರ್ವದಾ ಜನರಲ್ಲಿ ಪ್ರತಿಯೊಬ್ಬನಿಗೂ ಇರಲೆಂದು ಕೇಳಿಕೊಂಡುದೂ ಅವರು ಹೃದಯದ ಆಳದಿಂದ ಈ ಭಾಷಣವನ್ನು ಯಥಾರ್ಥರೀತಿಯಲ್ಲಿ ಮಾಡಿರುವುದೆಂಬುದಕ್ಕೆ ದೃಷ್ಟಾಂತಗಳಾಗಿವೆ. ವೋಟರರು ತಮ್ಮ ಹಕ್ಕು ಬಾಧ್ಯತೆಯನ್ನರಿತುಕೊಂಡು ತಮ್ಮ ಮನೋಭಿಪ್ರಾಯಗಳನ್ನು ವೋಟಿನ ಮೂಲಕ ಸೂಚಿಸುವುದರಲ್ಲಿ ತನ್ನದಾವ ಬಗೆಯ ಆಗ್ರಹವೂ ಇರಲಾರದೆಂದು ಅವರು ಪುನಃ ನುಡಿದಿರುವರು. ಕೃಷಿ ಕರ್ಮದಲ್ಲಿ ಪಕ್ಷಪಾತವನ್ನಳಿ ಈ ವೈಸ್ರಾಯರ ಆಳಿಕೆಯಲ್ಲಿ ಗ್ರಾಮಗಳ ಅಭ್ಯುದಯವು ಬಲು ಚೆನ್ನಾಗಿ ಸಾಗುವುದಾಗಿಯೂ, ಸ್ನೇಹಾಚಾರವೇ ಮೊದಲಿಂದಲೂ ಇವರ ಆಳಿಕೆಯ ಮುಖ್ಯ ರೀತಿಯಾಗುವುದಾಗಿಯೂ ತೋರಿ ಬರುತ್ತಿದೆ ಎಂದೆನ್ನಬಹುದು. ನಮ್ಮ ದೇಶದ ಸದ್ಯಸ್ಥಿತಿಯಲ್ಲಿ, ಪ್ರಪಂಚದ ಪ್ರಲಯ ಸ್ಥಿತಿಯ ಭಯಂಕರ ಮಬ್ಬಿನಲ್ಲಿ ವೈಸ್ರಾಯರ ಮನಸ್ಸು ಇಲ್ಲಿನ ಪಾಯುಗುಣದಿಂದ ಕೆಡದಂತೆಯೂ, ರಾಜಕೀಯವೇ ಮೊದಲಾದ ರಂಗಸ್ಥಳದಲ್ಲಿ ಇವರು ಇತರ ಸಂಗಡಿಗರಿಗೆ ಅನುಕೂಲರಾಗಿದ್ದು ಸರ್ವರ ಸಹಕಾರವು ಇವರಿಗೆ ಶ್ರದ್ಧೆಯಿಂದ ದೊರೆತು ಇವರ ಆದರ್ಶಗಳು ಕೈಗೂಡುವಂತೆ ದೈವಾನುಗ್ರಹ ಉಂಟಾಗುವ ಹಾಗೆಯೆ ನಾವು ಹಾರೈಸಬೇಕಾಗಿದೆ.

ಯುದ್ಧರಂಗದಲ್ಲಿ

ಅಬಿಸೀನಿಯವು ಇನ್ನು ಗೆಲ್ಲುವಂತಾದರೆ (ಗೆಲ್ಲಲಿ!) ಅದು ಆ ರಾಜ್ಯದ ಸರ್ವ ಪ್ರಜೆಗಳಿಗೂ ಮಾಡುವ ಆತ್ಮಯಜ್ಞದ ಫಲವಾಗಿ ಮಾತ್ರ ಸಾಧ್ಯವಾಗುವುದಲ್ಲದೆ ಲೀಗ್ ಒಫ್ ನೇಶನ್ಸ್ ಸಂಘದ ಪ್ರಬಲವಾದ ಚಾತುರ್ಯದ ಅಥವಾ ರಾಜನೀತಿಯ ಪರಿಣಾಮವಾಗಿ ಅಲ್ಲ ಎಂದು ಹೇಳುವುದಕ್ಕೆ ಇನ್ನು ಆತಂಕವಿಲ್ಲ. ಇಂಗ್ಲಿಷರು, ಫ್ರೆಂಚರನ್ನ ಬಿಟ್ಟು ನಡೆವಂತಿಲ್ಲ. ಫ್ರೆಂಚರು ಇಟೆಲಿಯನ್ನು ಆಲಿಂಗಿಸಿಕೊಂಡಿರುವರು. 'ಅಬಿಸೀನಿಯದಲ್ಲಾಗುವ ಯುದ್ಧವೆಂಬುದು, ಯುರೋಪಿನ ಮೇಲೆ ಈಗ ಹರಡಿರುವ ರಣಕಾಯಿಯ ಮಬ್ಬಿನಿಂದ ಗೋಚರವಾಗುವಂತಿಲ್ಲ'' ಎಂದು ಫ್ರೆಂಚರು ಎನ್ನುತ್ತಾರೆ. ಜನಾಂಗ ಸಂಘವೆಂಬುದರ ಅಂಗದಲ್ಲೆಲ್ಲ ಭಂಗಗೊಳ್ಳುವ ದುರ್ಲಕ್ಷಣಗಳು ಈಗ ವಿಶೇಷವಾಗಿ ಕಾಣತೊಡಗಿವೆ. ಇಟೆಲಿಯು ತನ್ನ ಯುದ್ಧದಲ್ಲಿ ಜಯವನ್ನು ಹೊಂದಿ, ತನಗೆ ಬೇಕಾದುದನ್ನು ಸ್ವಾಧೀನ ಪಡಿಸಿಕೊಂಡ ಕೂಡಲೆ, ಇನ್ನು ಸೆಂಕ್ಷನುಗಳ ಮಾತನ್ನೆತ್ತದೆ, ಇಟೆಲಿಯೊಡನೆ ಸೇರಿ ಜರ್ಮನಿಯನ್ನು ಇದಿರಾಡಲು ಅಥವಾ ಜರ್ಮನಿಗೆ ತಡೆ ಹಾಕಲು ಫ್ರೆಂಚರು ಸಾಧಿಸಬೇಕಾಗಿ ಕಾಯುತ್ತಿರುವಂತೆ ತೋರುತ್ತಿದೆ. ಅಬಿಸೀನಿಯವನ್ನು ಈಗ ನುಗ್ಗಿರುವ ಇಟೆಲಿಯು, ಒಂದೇ ಹೆಜ್ಜೆ ಮುಂದರಿವ ಮೊದಲಿಂದಲೂ, ಲೀಗಿಗೆ ದೂರು ಕೊಟ್ಟಿದ್ದ ಅಬಿಸೀನಿಯವು ಇದುವರೆಗೆ ಲೀಗಿನ ತೀರ್ಮಾನವನ್ನು ಹಾರಯಿಸಿಯೆ ಈಗ ಸಕಲ ಸಂಕಷ್ಟಗಳನ್ನು ಅನುಭವಿಸಿ, ಲೀಗಿನಲ್ಲಿ ವಿಶ್ವಾಸವನ್ನು ಕಳೆದುಕೊಂಡಿದೆ. ಲೀಗ್ ಈ ರೀತಿಯಾಗಿ ಅಬಿಸೀನಿಯದೊಡನೆ "ಅಹಿಂಸಾತ್ಮಕವಾದ ಅಸಹಕಾರ" ನೀತಿಯನ್ನು ಆಚರಿಸುವುದರ ಅರ್ಥವೇನೆಂದು ಇನ್ನು ಸುಲಭವಾಗಿ ತಿಳಿಯಬಹುದಾಗಿದೆ. ಯಾವ ಮೆಂಬರನಲ್ಲೂ ಉತ್ಸಾಹವಿಲ್ಲ, ತಣ್ಣಗಾಗಿಯೆ ಎಲ್ಲವರು ಅಬಿಸೀನಿಯವನ್ನು ಸಮಾಧಾನಿಸುತ್ತ, ಒಣ ಜಂಬದ ನೀತಿವಾಕ್ಯಗಳನ್ನು ಸಾರುತ್ತಿದ್ದಾರೆ. ಧರ್ಮಯುದ್ಧಕ್ಕೂ ರಣನೀತಿಗೂ ವಿರುದ್ಧಾಚರಣೆ ಮಾಡಿಯೂ ಅಬಿಸೀನಿಯವನ್ನು ಇಟೆಲಿಯು ಧ್ವಂಸಗೊಳಿಸುವಾಗ, ಸೂಚನೆ ನಿರ್ಣಯ ಸಭೆಗಳಲ್ಲೇ ಕಾಲಹರಣ ಮಾಡುವ ಲೀಗಿಗೆ ಬೀಗ ಹಾಕಿಡಬಾರದೇ?

ಜಿಲ್ಲಾ ಕಲೆಕ್ಟರರುಗಳ ಕೂಟವು

ಇಂದೇ ಉಟಕಮಂಡದಲ್ಲಿ ಸೇರುವುದು. ನಮ್ಮ ಹೊಸ ವೈಸ್ರಾಯರು ಮಾಡಿರುವ ಪ್ರಥಮ ಭಾಷಣದಲ್ಲಿ,- ಜಿಲ್ಲಾಧಿಕಾರಿಗಳ ಮೇಲೆ ಹೆಚ್ಚಿನ ಜವಾಬುದಾರಿಯೆಂದು ಮೊದಲಾಗಿ ಸೂಚಿಸುತ್ತೇನೆ. ಚಕ್ರವರ್ತಿಯರ ಪ್ರತಿನಿಧಿಯಾಗಿ ಜಿಲ್ಲೆಗಳಲ್ಲಿರುವ ನಿಮ್ಮ ಕೆಲಸವನ್ನು ಪ್ರಾಮುಖ್ಯವಾದುದೆಂದೇ ಅದರ ಪರಿಣಾಮಗಳನ್ನು ನಾನು ನಿತ್ಯವೂ ಪರ್ಯಾಲೋಚಿಸುವೆನು. ಸರಕಾರಕ್ಕೂ ಗ್ರಾಮಸ್ಥರಿಗೂ ನೀವು ಸೇತುರೂಪವಾಗಿರುವಿರಿ. ಕೃಷಿಕರು ನಿಮ್ಮನ್ನೆ ಬುದ್ಧಿವಾದಕ್ಕೂ ಸಹಾಯಕ್ಕೂ ಸಲಕರಣೆಗಳಿಗೂ ಕಾಯುತ್ತ ನಿರೀಕ್ಷಿಸುವರು. ಇತ್ತೀಚೆಗೆ ನಿಮ್ಮ ಆಫೀಸು ಕೆಲಸಗಳು ಹೆಚ್ಚುತ್ತ ಬರುತ್ತಿದ್ದರೂ, ಗ್ರಾಮಸ್ಥರ ಕಡೆಗೆ ನೀವು ಲಕ್ಷ್ಯವನ್ನಿಟ್ಟಿರುವುದನ್ನು ನಾನು ತಿಳಿದೇ ಇರುವೆನು. ಇನ್ನು ನಿಮ್ಮ ಆಫೀಸು ಕೆಲಸಗಳಲ್ಲಿ ಕೆಲವಂಶವನ್ನು ಕಡಿಮೆಮಾಡಿ, ಗ್ರಾಮಸ್ಥರಿಗೆ ಸಹಾಯ ಮಾಡಲು ನಿಮಗೆ ಅನುಕೂಲತೆಗಳನ್ನು ಹೆಚ್ಚಿಸುವ ವ್ಯವಸ್ಥೆ ಮಾಡಿಸಬೇಕೆಂದಿರುವೆನು. ಆದರೆ, ನಿಮ್ಮ ಕಷ್ಟಗಳು ಎಷ್ಟೇ ಇರಲಿ,-ನಿಮಗೆ ಗ್ರಾಮಗಳ ಪರಿಚಯವನ್ನು ಬಹಳ ಚೆನ್ನಾಗಿ ಮಾಡಿಕೊಳ್ಳಿರಿ. ಡೇರೆಗಳಲ್ಲಿ ವಾಸಮಾಡುವ ಪರಿಶ್ರಮವು ನಿಮಗೆ ಹೆಚ್ಚಾಗಿರಬೇಕಾಗುವುದು. ಡೇರೆಗಳಲ್ಲಿದ್ದು ಸರ್ಕೀಟು ಬೆಳಸಿ ದೇಶಾಭ್ಯುದಯವನ್ನು ಮಾಡಿರುವ ಕೀರ್ತಿಯು ನಿಮ್ಮ ಉತ್ತರಾಧಿಕಾರಿಗಳಿಗೆ ಸಂದು, ಬೆಳೆದಿರುವಂತೆಯೆ, ನಿಮ್ಮಿಂದಲೂ ಬೆಳೆಯಬೇಕಾಗಿದೆ." ಎಂದು ಸೂಚಿಸಿರುವ ವೈಸ್ರಾಯರ ಮನಸ್ಸಿನ ಅಪೇಕ್ಷೆಯು ಸಹ ಈ ಕೂಟದಲ್ಲಿ ಇತ್ಯರ್ಥ ಹೊಂದುವುದು. ಕಾಂಗ್ರೆಸ್ ಕಾರ್ಯಕ್ರಮಗಳು ಗ್ರಾಮಾಭ್ಯುದಯ ಸಾಧನೆಗಳು ಹಳ್ಳಿಗಳಲ್ಲಿ ಅನುಸರಣೆಗೆ ಬಂದಿರುವ ಪ್ರಯುಕ್ತ ಸರಕಾರವು ಹೀಗೆ ಇಷ್ಟು ಎಚ್ಚರಗೊಂಡಂತೆ ತೋರುವುದಾಗಿ ಹೇಳುವವರೂ ಇರಬಹುದು, ಆದರೆ, ಗ್ರಾಮಗಳು ಅಭಿವೃದ್ಧಿಹೊಂದುವ ಹಾಗೆ ಸರಕಾರವು ಕೈಗೊಳ್ಳುವ ಹೋರಾಟದಲ್ಲಿ, ಸರ್ವಪಕ್ಷಗಳೂ ನ್ಯಾಯವಾಗಿ ಸಹಕಾರ ಮಾಡಬೇಕಾದಲ್ಲಿ ಸಹಕರಿಸಿದರೆ, ಈ ವೈಸ್ರಾಯರ ಕಾಲದಲ್ಲಿ, ಹಿಂದೆ ಎಂದೂ ಉಂಟಾಗದಿದ್ದಷ್ಟು ಉತ್ತಮ ಪರಿಣಾಮಗಳು ಕೃಷಿಕರಿಗೆ ಉಂಟಾಗುವುವು ಎಂಬುದರಲ್ಲಿ ಸಂದೇಹವಿಲ್ಲ.

ಮಂಗಳೂರು.

ಅಕಾಲ ಮರಣ.

ಇಲ್ಲಿಯ ಪ್ರಸಿದ್ಧ ಚಿಕಿತ್ಸಕರಾದ ಆಯುರ್ವೇದ ಭೂಷಣ ಎಮ್. ವಿ ಶಾಸ್ತ್ರಿಗಳವರ "ಗೋಪಾಲ ನಿಲಯಾಶ್ರಮ"ದಲ್ಲಿ ಸುಮಾರು ೧೯ ವರ್ಷದಿಂದ ಅವಿಚ್ಛಿನ್ನವಾಗಿ ಸ್ವಕರ್ತವ್ಯಪಾಲನಾ ಪ್ರಜ್ಞೆ ಮತ್ತು ದಕ್ಷತೆಯಿಂದ ತನ್ನ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಕಂಪೌಂಡರ್ ಶ್ರೀ ಎಸ್. ಸುಬ್ರಾಯರು ಬರೇ ಐದು ದಿವಸದ ನ್ಯುಮೋನಿಯಾ ಜ್ವರದಿಂದ ಪೀಡಿತರಾಗಿದ್ದು, ಕಳೆದ ಸೋಮವಾರ ರಾತ್ರಿ ಅನಿರೀಕ್ಷಿತವಾಗಿ ಪರಂಧಾಮವನ್ನೈದಿದರೆಂದು ತಿಳಿಸಲು ತುಂಬಾ ವಿಷಾದವೆನಿಸುತ್ತಿದೆ. ಶ್ರೀಯುತರು ಸುಮಾರು ೬೧ ವರ್ಷ ಪ್ರಾಯದ ತರುಣರೂ, ಸತ್ಯಪ್ರಿಯರೂ ಶಾಂತ ಸ್ವಭಾವದವರಾಗಿದ್ದು ಜನಪ್ರಿಯರಾಗಿದ್ದರು. ಇವರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನನುಗ್ರಹಿಸಲಿ!

ಮಹಾಜನರಿಗೆ ನಿರೂಪ.

ಮಂಗಳೂರು ಟೌನಿನಲ್ಲಿರುವ ಶ್ರೀ ಶೃಂಗೇರಿ ಶ್ರೀಮಠದ ಶಿಷ್ಯವರ್ಗಕ್ಕೆ ಸೇರಿದ ಎಲ್ಲಾ ಜಾತಿ ಮಹಾಜನರು ಈ ಆಗಾಮಿಯಾಗಿ ಎರಡನೆ ಅಪ್ಪಣೆ ಕೊಡುವವರೆಗೂ ಮಂಗಳೂರು ಶಹರಿನಲ್ಲಿರುವ ಶ್ರೀ ಶೃಂಗೇರಿ ಶ್ರೀಮಠದ ಶಿಷ್ಯಜನರ ಆಚಾರ ವಿಚಾರ ಧರ್ಮಗಳನ್ನು ವಿಚಾರ ಮಾಡಿ ಶ್ರೀಮಠದ ಶ್ರೀಮುಖಕ್ಕೆ ಕಳುಹಿಸುವುದಕ್ಕೂ, ಪರಂಪರೆಯಾಗಿ ಬಂದ ಪ್ರತಿವರ್ಷದ ದೀಪಾರಾಧನೆ ಕಾಣಿಕೆ ಮೊದಲಾದ ಎಲ್ಲಾ ಸೇವಾದ್ರವ್ಯವನ್ನು ಶಿಷ್ಯಜನರಿಂದ ವಸೂಲುಮಾಡುವುದಕ್ಕೂ ಸಹ ಶ್ರೀಯುತ ಆಯುರ್ವೇದ ಭೂಷಣ ಎ. ಕೆ. ಪದ್ಮನಾಭ ಶರ್ಮರನ್ನು ಮಂಗಳೂರು ಶಹರಿಗೆ ಮಠಮುದ್ರಾಧಿಕಾರಿಗಳನ್ನಾಗಿ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಅನುಜ್ಞೆಯಂತೆ ನಿಯಮಿಸಿರುತ್ತೆ. ಶ್ರೀಮಠದ ಶಿಷ್ಯರೆಲ್ಲರೂ ಇವರ ಮೂಲಕ ಆಚಾರ ವಿಚಾರಗಳನ್ನು ಶ್ರೀಮಠಕ್ಕೆ ತಿಳಿಸುತ್ತಲೂ ಶ್ರೀಮಠದಿಂದ ಕೊಡಿಸುವ ಆಜ್ಞೆಯಂತೆ ನಡೆಯುತ್ತಲೂ ಬರುವುದಲ್ಲದೆ ಪೂರ್ವ ನಿಬಂಧನೆಯಂತೆ ದೀಪಾರಾಧನೆ ಕಾಣಿಕೆ ಮೊದಲಾದ ಸೇವಾದ್ರವ್ಯವನ್ನು ಆವಾಗಲೇ ಇವರ ವಶಾ ಪಾವತಿಮಾಡಿ ರಶೀದಿ ಪಡೆಯುತ್ತಾ ಬಂದು ಶ್ರೀ ಮಹಾಸ್ವಾಮಿಗಳವರ ಅನುಜ್ಞೆಯಂತೆ ನಡೆದು ಶ್ರೇಯಸ್ಸನ್ನು ಸಂಪಾದಿಸತಕ್ಕದ್ದಿದೆ ಎಂದು ವಿದ್ವಾನ್ ಕೆ ಶೇಷಶಾಸ್ತ್ರೀ (ಧರ್ಮಾಧಿಕಾರಿ) ಇವರು ತಿಳಿಸುತ್ತಾರೆ.

ಹಿಂದೀ ವರ್ಗ

ಬರುವ ತಿಂಗಳ ೧ನೇ ತಾರೀಕಿನಿಂದ ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಹಿಂದೀ ವರ್ಗಗಳು ಪ್ರಾರಂಭವಾಗುವುವು. ವರ್ಗಗಳು ಸೋಮವಾರ ಬುಧವಾರ ಮತ್ತು ಶುಕ್ರವಾರಗಳಲ್ಲಿ ಸಂಜೆ ಗಂಟೆ ೬ರಿಂದ ೭ರ ತನಕ ನಡಿಸಲ್ಪಡುವುವು. ಮೇಲೆ ಹೇಳಿರುವ ದಿವಸಗಳಲ್ಲಿ ಸಂಜೆಗೆ ಬರಲು ಅನಾನುಕೂಲವಿದ್ದವರಿಗೆ ಶನಿವಾರ ಮತ್ತು ಆದಿತ್ಯವಾರಗಳಲ್ಲಿ ಬೆಳಿಗ್ಗೆ ಗಂಟೆ ೧೦ರಿಂದ ೧೧ರ ವರೆಗೆ ಒಂದು ವಿಶೇಷ ವರ್ಗವು ನಡಿಸಲ್ಪಡುವುದು.

ಗರೀಬ ಸೇವಾ ಮಂದಿರ ಬಿಜ್ಜೈ.

ಇದರ ೨ನೇ ವಾರ್ಷಿಕೋತ್ಸವವು ಬರುವ ಮೇ ತಿಂಗಳ ತಾ ೫ನೇ ಆದಿತ್ಯವಾರ ಅಪರಾಹ್ನ ಗಂಟೆ ೪-೩೦ಕ್ಕೆ ಶ್ರೀ ಯು. ಕಣ್ಣಪ್ಪ ಎಸ್ಕ್ವಾಯರ್ ಎಂ ಎ ಎಲ್ ಟಿ ಡಿ ಎಜ್ಯುಕೇಶನಲ್ ಆಫೀಸರ್ ಇವರ ಅಧ್ಯಕ್ಷತೆಯಲ್ಲಿ ಸದರಿ ಆಸ್ಪತ್ರೆಯ ಆವಾರದಲ್ಲಿ ಜರಗುವುದೆಂದೂ, ಸಿ. ಮಥಾಯಸ್ ಎಂ ಡಿ. (ಹೋಮ್ಯೋ), ಎಂ. ಬಿ (ಅಯಂ) ಇವರು ತಿಳಿಸುತ್ತಾರೆ.

ರೈಲ್ವೆ ಗುಡ್ ಶೆಡ್ ಬಳಿಯಲ್ಲಿರುವ ನೀರೇಶ್ವಾಲ್ಯ ಶ್ರೀ ಆರ್ಯ ಭಜನೆಮಂದಿರದ ಹನ್ನೊಂದನೇ ವಾರ್ಷಿಕೋತ್ಸವವು ಇದೇ ತಿಂಗಳ ತಾ. ೧೯ನೇ ಆದಿತ್ಯವಾರ ಸಾಯಂಕಾಲ ಗಂಟೆ ೪-೩೦ಕ್ಕೆ ಬ್ರಹ್ಮಶ್ರೀ ರೆವರೆಂಡ್ ಇ. ಸುಬ್ಬುಕೃಷ್ಣಯ್ಯ ಎಂ ಎ ಬಿ ಎಸ್ ಸಿ ಬಿ. ಡಿ. ಇವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಮಹಾರಾಜೇಶ್ರೀಗಳಾದ ನೋಹನಪ್ಪ ತಿಂಗಳಾಯ, ನಾರಾಯಣ ಕಿಲ್ಲೆ, ಬಿ. ಲಕ್ಷ್ಮಣದೇವ ವಿದ್ಯಾರ್ಥಿ ಮತ್ತು ಸಂಜೀವ ಮಹಾಶಯರುಗಳು ಬೋಧಪರವಾದ ಭಾಷಣಗಳನ್ನಿತ್ತು ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದರು. ಕಡೆಗೆ ಸಭೆಯ ಅಧ್ಯಕ್ಷ ಮಹಾಶಯರ ಭಾಷಣಗಳ ನಂತರ ಫಲಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಸಿಟಿ ಆರ್ಯಸಮಾಜ.

ಇಲ್ಲಿಯ ಸಿಟಿ ಆರ್ಯಸಮಾಜದ ಪ್ರಥಮ ವಾರ್ಷಿಕೋತ್ಸವವು ಇದೇ ಎಪ್ರಿಲ್ ತಿಂಗಳ ತಾ. ೨೮ನೇ ಆದಿತ್ಯವಾರ ಅಪರಾಹ್ನ ಗಂಟೆ ೩-೩೦ಕ್ಕೆ ಮಂಗಳೂರು ಸಿಟಿ ಆರ್ಯಸಮಾಜದ ಪ್ರಥಮ ವಾರ್ಷಿಕೋತ್ಸವವು ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹೋಲಿನಲ್ಲಿ ಬ್ರಹ್ಮಶ್ರೀ ಪಂಡಿತ ವಿದ್ವಾನ್ ಅನಂತ ಉಪಾಧ್ಯಾಯ ಸಂಸ್ಕೃತ ಪ್ರೊಫೆಸರ್ ಸೈಂಟ್ ಎಲೋಶಿಯಸ್ ಕೋಲೇಜ ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಬಂಧು ಭಗಿನಿಯರೆಲ್ಲರೂ ಬಂದು ಸಹಕರಿಸಬೇಕಾಗಿ ವಿನಂತಿ.

ಕೆನರಾ ಹೈಸ್ಕೂಲಿನ ಮೊರುತಿ ಕಬ್ ದಳವು

ಇದೇ ತಿಂಗಳ ತಾ. ೧೭ನೇ ಗುರುವಾರ ೧೨॥ ಗಂಟೆಗೆ ಅವರ ಕಬ್‌ನಾಯಕ ಪಿ ವಿಟ್ಠಲ್ ಕಾಮತರಿಂದೊಡಗೂಡಿ ೪೦ ಮಂದಿ ಬಾಲಕರು ಬಸ್ಸನ್ನೇರಿ ಅಂದೇ ಸಾಯಂಕಾಲ ಪುಣ್ಯಕ್ಷೇತ್ರವಾದ ಧರ್ಮಸ್ಥಳಕ್ಕೆ ತಲಪಿ, ಹೂನ್ನ ಹೆಗ್ಗಡೆಯವರಿಂದ ಆದರಪೂರ್ವಕ ಸ್ವೀಕರಿಸಲ್ಪಟ್ಟು ಫಲಾಹಾರಾದಿಗಳನ್ನು ಮುಗಿಸಿ, ಅಲ್ಲಿಯ ಮುಖ್ಯ ಮುಖ್ಯ ಸ್ಥಳಗಳನ್ನು ನೋಡಿ ರಾತ್ರಿಯ ಜಾತ್ರೋತ್ಸವದಲ್ಲಿ ಭಾಗಿಗಳಾದರು. ತಾ ೧೭ನೇ ಶುಕ್ರವಾರ ಬೆಳಿಗ್ಗೆ ಫಲಾಹಾರಾದಿಗಳನ್ನು ಮುಗಿಸಿದ ನಂತರ ಮಾನ್ಯ ಹೆಗ್ಗಡೆಯವರಿಗೆ ಈ ಬಾಲಕರು ಅವರ ಕೆಲವು ಆಟಪಾಟಗಳನ್ನು ತೋರಿಸಿದರು. ತರುವಾಯ ಸ್ನಾನಾದಿಗಳನ್ನು ಮುಗಿಸಿ ದೇವರ ಪೂಜೆಯ ಸಮಯ ದೇವಸ್ಥಾನವನ್ನು ಸೇರಿ, ಅಲ್ಲಿ ಹೆಗ್ಗಡೆಯವರಿಂದ ಗಂಧಪ್ರಸಾದ ಧನಸಹಾಯ ಆಶೀರ್ವಾದಗಳನ್ನು ಪಡೆದು, ಭೋಜನಾದಿಗಳನ್ನು ಮುಗಿಸಿ, ಹೆಗ್ಗಡೆಯವರನ್ನು ಬೀಳ್ಕೊಂಡು ಅಂದೇ ಸಾಯಂಕಾಲ ಬೆಳ್ತಂಗಡಿಗೆ ಬಂದಿಳಿದರು. ಧರ್ಮಸ್ಥಳದಲ್ಲಿ ಮ। ರಾ। ರಿ ಮಂಜಯ್ಯ ಹೆಗ್ಗಡೆಯವರಿತ್ತ ಆದರೋಪಚಾರ, ಧನಸಹಾಯ ಮೊದಲಾದುವುಗಳಿಗೆ ಈ ಕಬ್‌ಪಂಗಡವು ಅವರನ್ನು ಸದಾ ಅಭಿವಂದಿಸುತ್ತದೆ. ತಾರೀಕು ೧೭ನೇ ಶುಕ್ರವಾರ ಸಾಯಂಕಾಲ ಬೆಳ್ತಂಗಡಿಗೆ ಬಂದೊಡನೆ ಅಲ್ಲಿಯ ಬೋರ್ಡ್ ಹೈಯರ್ ಎಲಿಮೆಂಟರಿ ಶಾಲೆಯ ಸ್ಕೌಟ್ ದಳದವರಿಂದ ಸ್ವೀಕರಿಸಲ್ಪಟ್ಟು ನಮ್ಮ ಶಾಲೆಯ ಹಳೇ ವಿದ್ಯಾರ್ಥಿಯವರಾದ ಸಬ್ ಇನ್ಸ್‌ಪೆಕ್ಟರ್ ಮ. ರಾ। ರಾ। ಅಣ್ಣಪ್ಪನವರು ಆದರಪೂರ್ವಕವಾಗಿತ್ತ ಫಲಾಹಾರಾದಿಗಳನ್ನು ಮುಗಿಸಿ ಅಲ್ಲಿಯ ಹೈಯರ್ ಎಲಿಮೆಂಟರಿ ಶಾಲೆಯನ್ನು ಸೇರಿ ಅಲ್ಲಿ ನೆರೆದಿದ್ದ ಶಾಲಾ ಬಾಲಕರ ಊಗ ಪ್ರಾಧಮಿಕ್ಕ ಜನರ ಮುಂದೆ ಈ ಬಾಲಕರು ತಮ್ಮ ಕೆಲವು ಆಟಪಾಟಗಳನ್ನು ತೋರಿಸಿದರು. ಅಂದಿನ ಸಭೆಯಲ್ಲಿ ಅಗ್ರಸ್ಥಾನವನ್ನು ವಹಿಸಿದ್ದ ಮಾನ್ಯ ಸಬ್ ಇನ್ಸ್‌ಪೆಕ್ಟರವರು ಈ ಬಾಲಕರನ್ನು ಹರ್ಷಿಸಿ ಕೊಂಡಾಡಿ ಸುರಸವಾದ ಭಾಷಣವನ್ನಿತ್ತು ಪ್ರೋತ್ಸಾಹಿಸಿದರು.

ತಾ ೧೮ನೇ ಬೆಳಿಗ್ಗೆ ಅಲ್ಲಿಯ ಓವರ್ಸಿಯರ್ ಸಿ ವಾಸುದೇವ ಕಾಮತರವರಿತ್ತ ಫಲಾಹಾರವನ್ನು ಸ್ವೀಕರಿಸಿ ಅಲ್ಲಿಯ ಕೆಲವು ಸ್ಕೌಟ್ ಹುಡುಗರೊಂದಿಗೆ ಈ ಬಾಲಕರು ಜಮಲಾಬಾದನ್ನೇರಿ ಸುರಕ್ಷಿತವಾಗಿ ೧೨ ಗಂಟೆಗೆ ಬೆಳ್ತಂಗಡಿಗೆ ಬಂದು ಅಲ್ಲಿಯ ಶಾಲಾ ಉಪಾಧ್ಯಾಯರಿತ್ತ ಫಲಾಹಾರಾದಿಗಳನ್ನು ಸ್ವೀಕರಿಸಿ, ಅಲ್ಲಿಯ ಬಸ್ಸನ್ನು ಸೇರಿ, ಊಟ ತೀರಿಸಿ ಅಂದೇ ಸಾಯಂಕಾಲ ೫ ಗಂಟೆಗೆ ಮಂಗಳೂರಿಗೆ ಬಂದು ತಲಪಿದರು. ಬೆಳ್ತಂಗಡಿಯಲ್ಲಿ ಸಹಾಯವನ್ನಿತ್ತ ಸರ್ವ ಮಹನೀಯರೆಲ್ಲರಿಗೂ ಈ ದಳವು ಅಭಿನಂದಿಸುತ್ತದೆ.

---

10 ರೂಪಾಯಿ ಬಹುಮಾನ ಪಡೆಯುವಿರಾ?

ಹಾಗಾದರೆ, ಈ ಸಂಚಿಕೆಯ ೮ನೇ ಪುಟವನ್ನು ನೋಡಿರಿ!

ಕಲ್ಲಡ್ಕ:— ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘದ ತೃತೀಯ ವಾರ್ಷಿಕ ದಿನಾಚರಣೆಯನ್ನು ತಾರೀಕು ೨೮ ೪ ೪೬ನೇ ಶನಿವಾರ ಅಪರಾಹ್ನ ಗಂಟೆ ೫ಕ್ಕೆ ಮಂಗಳೂರು ಮುನ್ಸಿಪಾಲ್ ಚೆಯರ್ಮೆನ್ ಮ। ರಾ। ಡಿ ಕೃಷ್ಣ ಕೆ ಪಿ. ಶೆಟ್ಟಿರವರ ಅಧ್ಯಕ್ಷತೆಯಲ್ಲಿ ನಡೆಯಲಿರುವುದು. ಸರ್ವರೂ ಸಹಕರಿಸಬೇಕಾಗಿ ಸಂಘದ ಕಾರ್ಯದರ್ಶಿಗಳವರು ಅಪೇಕ್ಷಿಸುತ್ತಾರೆ.

ಹಿರಿಯಡ್ಕ:— ಶ್ರೀ ವೀರಭದ್ರ ದೇವರ ಸನ್ನಿಧಿಯಲ್ಲಿ ಇದೇ ವೈಶಾಖ ಶು। ೧೫ಯು ತಾ ೬—೫—೪೬ ಬುಧವಾರ ಧ್ವಜಾರೋಹಣ ವೈಶಾಖ ಬ। ೧ ಗುರುವಾರ ದೀಪಾರಾಧನೆ ವೈಶಾಖ ಬ। ೩ ಶುಕ್ರವಾರ ರಂಗಪೂಜೆ, ಬ। ೩ ಶನಿವಾರ ಶ್ರೀ ಮನ್ಮಹಾರಥೋತ್ಸವ ಬ। ೪ ರವಿವಾರ ಅವಭೃತಸ್ನಾನ ಮುಂತಾದ ಮಹೋತ್ಸವಗಳು ನಡೆಯುವುದರಿಂದ ಈ ಬಗ್ಗೆ ಸರ್ವರೂ ದಯಮಾಡಿ ಬಂದು ಶ್ರೀ ದೇವರ ಶ್ರೀಮುಡಿ ಗಂಧಪ್ರಸಾದವನ್ನು ಸ್ವೀಕರಿಸಿ ಶ್ರೀಶಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಕೋರುತ್ತೇನೆ.

ತಾಲೂಕುಗಳಿಂದ.

ಕಾರ್ಕಳ:— ಶ್ರೀ ಮಾರ್ಯಮ್ಮ ದೇವಸ್ಥಾನದ ವರ್ಷಾವಧಿ ಕಟ್ಟಳೆ ಪ್ರಕಾರ ನಡೆಯುವ ಮಹಾಪೂಜೆಯು ಇದೇ ಎಪ್ರಿಲ್ ತಿಂಗಳ ತಾ. ೨೮-೨೯ಕ್ಕೆ ಜರಗುವುದು.

ಇಲ್ಲಿಯ ಮಾರಿಗುಡಿಯಲ್ಲಿ ವರ್ಷಾವಧಿ ನಡೆಯತಕ್ಕ ಪೂಜೋತ್ಸವ ಕಾಲದಲ್ಲಿ ಆಗುವ ಪ್ರಾಣಿಬಲಿಯನ್ನು ನಿಲ್ಲಿಸಬೇಕೆಂದು ಕೆಲವು ದಿನಗಳ ಹಿಂದೆ ನಡೆದ ಸಾರ್ವಜನಿಕ ಸಭೆಯಲ್ಲಿ ಸರ್ವಾನುಮತದಿಂದ ನಿರ್ಧರಿಸಿ, ತಮ್ಮ ನಿರ್ಣಯವನ್ನು ಮಹಾಜನರು ಮಾರಿಗುಡಿಯ ಮೊಕ್ತೇಸರರಿಗೆ ಕಳುಹಿಸಿಕೊಟ್ಟಿದ್ದರು. ಆದರೆ ಅವರು ಅದನ್ನು ಅಲಕ್ಷಿಸಿ ಬಲಿಗೆ ಬೇಕಾದ ಕೋಣವನ್ನು ಕ್ರಯಕ್ಕೆ ಪಡೆದು ಸಾರ್ವಜನಿಕ ಅಭಿಪ್ರಾಯವನ್ನು ಧಿಕ್ಕರಿಸಿದುದರಿಂದ ಡಾಕ್ಟರ್ ಸಿ ರಾಮಕಾಮತರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಭೆ ಜರಗಿ, ಅದರಲ್ಲಿ ಎಂದಿನ ತನಕ ಮಾರಿಗುಡಿಯವರು ಪ್ರಾಣಬಲಿಯನ್ನು ನಿಲ್ಲಿಸುವುದಿಲ್ಲವೊ ಅಂದಿನ ತನಕ ಆ ಮಾರಿಗುಡಿ ಮತ್ತು ಅದರ ಪೂಜೋತ್ಸವಾದಿಗಳನ್ನು ಸಂಪೂರ್ಣ ಬಹಿಷ್ಕರಿಸಬೇಕೆಂದು ಸರ್ವಾನುಮತದಿಂದ ನಿರ್ಣಯಿಸಿರುವರು. ಆ ಪ್ರಕಾರ ನಡೆಕೊಳ್ಳಬೇಕಾಗಿ ಪ್ರಾರ್ಥಿಸುವ ವಿನಂತಿಪತ್ರಗಳೂ ಹೊರಟಿವೆ. ಮಾರಿಗುಡಿಯ ಮೊಕ್ತೇಸರರು ಮಹಾಜನರ ಅಭಿಪ್ರಾಯವನ್ನು ಅಲ್ಲಗಳೆದುದು ಖೇದಾಸ್ಪದವಾಗಿದೆ. ಅವರು ತಮ್ಮ ನಡೆಯನ್ನು ತಿದ್ದಿಕೊಳ್ಳುವರಾಗಿ ನಂಬಿದ್ದೇವೆ. ತಾರೀಕು ೧೯-೪-೪೬ರ ದಿನ ಸಾಯಂಕಾಲ ಮೆರವಣಿಗೆಯೊಂದು ಸಾರ್ವಜನಿಕ ಸಭೆಯು ಜರಗಿ ಇಲ್ಲಿಯ ವಕೀಲ ಶ್ರೀ ಸಾಹುಕಾರ ವಾಸುದೇವ ಉಪಾಧ್ಯಾಯರವರು ದೇವಿದೇವತೆಗಳ ಹೆಸರಲ್ಲಾಗುವ ಪ್ರಾಣಬಲಿಯನ್ನು ತೀವ್ರವಾಗಿ ನಿಷೇಧಿಸಿ ಬೋಧಪ್ರದವಾದ ಭಾಷಣವನ್ನು ಕೊಟ್ಟಿರುವರು.

ಇಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ವೃಂದದ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಬರುವ ತಾರೀಕು ೨೭-೪-೪೬ ಬುಧವಾರ ಧ್ವಜಾರೋಹಣ ವ ಇತರ ವಿನಿಯೋಗಗಳು ನಡೆದ ತಾ ೨೮-೪-೪೬ ರವಿವಾರ ರಥೋತ್ಸವವು ಜರಗಲಿದೆ.

ತಾ ೧೩-೪-೪೬ರಲ್ಲಿ ಕಾಂಗ್ರೆಸ್ ದಿವಸವು ಇಲ್ಲಿ ಆಚರಿಸಲ್ಪಟ್ಟಿತು. ಸಾಯಂಕಾಲ ೬ ಗಂಟೆಗೆ ಶ್ರೀಯುತ ವಕೀಲ ಲಕ್ಷ್ಮಣ ಕಾಮತರ ಅಧ್ಯಕ್ಷತೆಯಲ್ಲಿ ಸ್ವರಾಜ್ಯ ಮೈದಾನದಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿ ಶ್ರೀಯುತ ಕಟಪಾಡಿ ಶ್ರೀನಿವಾಸ ಶೆಣೈ ಪಂಡಿತ ಜವಾಹರಲಾಲರ ಜೀವನಚರಿತ್ರೆಯ ವಿಷಯ ಭಾಷಣಮಾಡಿದರು. ಮರುದಿನ ಬೆಳಿಗ್ಗೆ ೮ ಗಂಟೆಗೆ ರಾಷ್ಟ್ರಧ್ವಜವಂದನೆಯು ಸಮಾರಂಭವು ಜರಗಿತು. ಸಾಯಂಕಾಲ ಒಂದು ಮೆರವಣಿಗೆಯು ಹೊರಟು ಸ್ವರಾಜ್ಯಮೈದಾನಿಗೆ ಹೋಗಿ, ಅಲ್ಲಿ ಶ್ರೀಯುತ ವಕೀಲ್ ಬೈಲಾಡಿ ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ರಾಷ್ಟ್ರೀಯವಾದ ಮಹತ್ವದ ವಿಷಯ ಶ್ರೀಗಳಾದ ಕೆ ಕೆ ಪಿ ರಾಮಪೊದುವಾಳ್, ಕೇಶವ ಶೆಣೈ, ಶ್ರೀನಿವಾಸ ಶೆಣೈ ಮತ್ತು ವಕೀಲ್ ಎಂ ಎಸ್ ಅಧಿಕಾರಿಯವರ ಭಾಷಣವಾಗಿ ಶ್ರೀಯುತ ಸುಭಾಶ್ ಚಂದ್ರಬೋಸರ ದಸ್ತಗಿರಿಯ ವಿಷಯ ಸರಕಾರದವರ ವರ್ತನೆಯನ್ನು ಖಂಡಿಸಿ ಶ್ರೀಯುತ ಅಧಿಕಾರಿಯವರು ತಂದ ಠರಾವು ಸರ್ವಸಮ್ಮತದಿಂದ ಮಂಜೂರುಮಾಡಲ್ಪಟ್ಟಿತು.

ಬರುವ ಮದ್ರಾಸು ಲೆಜಿಸ್ಲೇಟಿವ್ ಎಸೆಂಬ್ಲಿಯ ಚುನಾವಣೆಗೆ ಕುಂದಾಪುರ ಡಿವಿಜನಿನಿಂದ ಶ್ರೀಯುತ ಬಾರಕೂರ ನಾಗಪ್ಪ ಶೆಟ್ಟರು ಕಾಂಗ್ರೆಸ್ ಕಡೆಯಿಂದ ಉಮೇದ್ವಾರರಾಗಿ ಸ್ಪರ್ಧಿಸುವರು ಎಂದು ತಿಳಿದುಬರುತ್ತದೆ. ಇವರ ಕೆಲವು ವರ್ಷಗಳ ಹಿಂದೆ ಮದ್ರಾಸು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಸ್ವರಾಜ್ಯಪಾರ್ಟಿಯ ಕಡೆಯಿಂದ ಮೆಂಬರರಾಗಿದ್ದು ಶ್ರೀಮಂತರೂ ಯೋಗ್ಯರೂ ಜನಾದರಣೆಯುಳ್ಳವರೂ ಆಗಿದ್ದು ಅನೇಕ ವರ್ಷಗಳಿಂದ ಪ್ರಾಂತಿಕ ಜಿಲ್ಲಾ ಮತ್ತು ತಾಲೂಕು ಕಾಂಗ್ರೆಸ್ ಕಮ್ಮಿಟಿಗಳ ಸದಸ್ಯರಾಗಿದ್ದು ಕಾಂಗ್ರೆಸ್ ಬ ಇತರ ಅನೇಕ ಸಾರ್ವಜನಿಕ ಸಂಸ್ಥೆಗಳ ಕಡೆಯಿಂದ ಕೆಲಸಮಾಡಿದವರಾಗಿರುತ್ತಾರೆ. ಇವರಿಗನೇ ಈ ಸಲ ಟಿಂಬಲ ಕೊಟ್ಟು ಎಸೆಂಬ್ಲಿಗೆ ಉಮೇದ್ವಾರರನ್ನಾಗಿ ನಿಲ್ಲಿಸಬೇಕೆಂದು ಕೋರಿಕೆ.

ಸಾಂತೂರು ಮುದರಂಗಡಿ — ಇದೇ ತಿಂಗಳ ತಾ ೬ರಲ್ಲು ಮುದರಂಗಡಿಯಲ್ಲಿ ದಶಾವತಾರ ಆಟ ನಡಿಯುತ್ತಿರುವಾಗ ಜುಗಾರಿಗಾರರ ಆಟದ ಕೂಟವು ಒಂದು ಗುಪ್ತವಾದ ಸಣ್ಣ ಕಿರುಮನೆಯಲ್ಲಿ ಬಹಳ ಉತ್ಸಾಹದಿಂದ ನಡೆಯುತ್ತಿತ್ತು. ಮೊದಲೇ ಸೋವನ್ನು ತಿಳಿದಿದ್ದ ಪೋಲಿಸ್ ಇನ್ಸ್‌ಪೆಕ್ಟರರು ಕೆಲವು ಮಂದಿ ಪೋಲಿಸ್ ಜನರೊಂದಿಗೆ ಬಂದು ಸದ್ದಿಲ್ಲದೆ ಹಿಡಿದುಬಿಟ್ಟರು. ಜಾಮೀನಿನ ಮೇಲೆ ಜುಗಾರಿಕೋರರನ್ನು ಬಿಡಲಾಗಿದೆ. ಪೋಲಿಸ್ ಇನ್ಸ್‌ಪೆಕ್ಟರರ ಇದೊಂದು ಊರಿಗೆ ಮಹೋಪಕಾರ. ಹೆಚ್ಚುಕಡಿಮೆ ಹುಮಾರು ಮನ್ನಿಂತ ವರವಿ ಇದ್ದ...

ಪಾಣೆಮಂಗಳೂರು ಎಸ್ ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಗೆ ಶ್ರೀ ಸುಕೃತೀಂದ್ರತೀರ್ಥ ಶ್ರೀ ಪಾದಂಗಳವರ ಆಗಮನ:— ಪುತ್ತೂರಿನಿಂದ ಪಾಣೆಮಂಗಳೂರಿಗೆ ಬಂದವರು ಆದಿತ್ಯವಾರ ಸುಮಾರು ೧೧ ಗಂಟೆ ಸಮಯಕ್ಕೆ ಶಾಲೆಗೆ ದಯಮಾಡಿದರು. ಶಾಲಾ ಕಮಿಟಿ ಮೆಂಬರರು ಅವರನ್ನು ಶಾಲಾ ಗೇಟಿನ ಬಳಿ ಸ್ವಾಗತಮಾಡಿ ಒಳಗೆ ಕರಕೊಂಡುಹೋಗಿ ದಿವ್ಯಾಲಂಕಾರ ಮಾಡಿದ ಆಸನದಲ್ಲಿ ಕುಳ್ಳಿರಿಸಿದರು. ಶಾಲಾ ಮಕ್ಕಳು ವಾಸುದೇವರಾಯರು ತಯಾರಿಸಿದ ಸ್ವಾಗತಹಾಡನ್ನು ಹಾಡಿದರು. ಶಾಲಾಕಮಿಟಿ ಕಡೆಯಿಂದ ಶಾಲಾ ಮೆನೇಜರರಾದ ರಾ। ನಾರಾಯಣ ಸ್ವಾರ ಶಾನಭಾಗರು ಮಾನಪತ್ರವನ್ನು ಓದಿಕೇಳಿದರು. ಶಾಲೆಯ ಮುಖ್ಯ ಉಪಾಧ್ಯಾಯರಾದ ಎಂ ಜಿ ಐಗಳರು ೫೦ ವರ್ಷಗಳ ಹಿಂದೆ ಸ್ಥಾಪನೆಯಾದ ಈ ಶಾಲೆಯ ಸಂಗತಿಯನ್ನೆಲ್ಲಾ ಶ್ರೀಗಳವರಿಗೆ ಮಂದಟ್ಟಾಗುವಂತೆ ಕೊಂಕಣಿ ಭಾಷೆಯಲ್ಲಿ ಹೇಳಿದರು. ನಂತರ ಪಾದಪೂಜೆಯಾಯಿತು. ಶ್ರೀಗಳವರು ಶಾಲೆ ಅಭಿವೃದ್ಧಿಹೊಂದುವಂತೆ ಆಶೀರ್ವಚನ ಕೊಡುವಾಗ ಸ್ವಲ್ಪ ಧನಸಹಾಯ ಮಾಡುತ್ತೇನೆಂದು ಅಭಿವಚನವನ್ನಿತ್ತರು. ಅನಂತರ ಗ್ರೂಪ್ ಫೋಟೋ ತೆಗೆಯಲಾಯಿತು. ತರುವಾಯ ಶಾಲಾ ಮಕ್ಕಳು ಲಾಠಿ ಲೇಜಿಮು ಆಟ ಮುಂತಾದ ನಾನಾ ತರದ ಆಟಗಳನ್ನಾಡಿ ಸಂತೋಷಗೊಳಿಸಿದರು. ಶ್ರೀಗಳವರು ಸಂತೋಷಪಟ್ಟು ಶಾಲಾ ಮಕ್ಕಳಿಗೆ ತಿಂದಿ ಹಂಚುವುದಕ್ಕಾಗಿ ೨೦ ರೂಪಾಯಿಗಳನ್ನು ಹೆಡ್ ಮಾಸ್ತರರ ವಶ ಕೊಟ್ಟು ಉಪಾಧ್ಯಾಯರಿಗೆ ಫಲಮಂತ್ರಾಕ್ಷತೆಯನ್ನಿತ್ತು ದೇವಸ್ಥಾನಕ್ಕೆ ತೆರಳಿದರು. ಶಾಲಾ ವಠಾರವನ್ನು ಉಪಾಧ್ಯಾಯರು ಬಹಳ ಅಂದವಾಗಿ ಅಲಂಕರಿಸಿದ್ದರು.

ಕುಂದಾಪುರ — ಇದೇ ತಾ ೧೫ನೇ ಸೋಮವಾರ ದಿನ ಯುಗಾದಿ ಹಬ್ಬವಾಗಿದ್ದು ವರ್ಷಾರಂಭವಾದುದರಿಂದ ಇಲ್ಲಿಯ ಎಲ್ಲಾ ಶಾಲೆಗಳಿಗೂ ಕೋರ್ಟು ಕಚೇರಿಗಳಿಗೂ ಬ್ಯಾಂಕುಗಳಿಗೂ ರಜೆಯಿತ್ತು. ಆದರೆ ಇಲ್ಲಿಯ ಬೋರ್ಡ್ ಹುಡುಗಿಯರ ಹಾಯರ್ ಎಲಿಮೆಂಟರಿ ಶಾಲೆಯವರು ರಜೆಯನ್ನುಪಯೋಗಿಸದೆ ಈ ದಿನ ಶಾಲೆಮಾಡಿದ್ದರು. ಶಾಲಾ ದಿವಸಗಳು ಕಡಿಮೆಯಾದುದೇ ಇದಕ್ಕೆ ಕಾರಣವಂತೆ. ಕೇವಲ ೪೦ ಕ್ರಿಂತಲೂ ಹೆಚ್ಚು ದಿ ಹಿಂದೂ ವಿದ್ಯಾರ್ಥಿಗಳ ಸಂಖ್ಯೆಯಿರುವ ಈ ಶಾಲೆಯಲ್ಲಿ ಇತರ ಈಸ್ಟರ್ ಶನಿವಾರ ಭಾನುವಾರ ರಜಾ ದಿನಗಳಲ್ಲಿ ಪ್ರತಿವಾರ ಹಬ್ಬಗಳಿದ್ದ ಈ ದಿನವನ್ನು ಬೇಕೆಂದು ಹಿಂದೂಗಳ ಪವಿತ್ರದಿನವಾಗಿದ್ದ ಯುಗಾದಿ ದಿನದಲ್ಲಿಯೇ ಶಾಲೆಮಾಡಿದುದನ್ನು ನೋಡುವಾಗ ಇದು ಕ್ರಿಶ್ಚನ್ ಮತಾವಲಂಬಿಗಳಾದ ಶಾಲಾ ಮುಖ್ಯೋಪಾಧ್ಯಾಯಿನಿಯವರ ಸ್ವಮತಾಭಿಮಾನವೋ? ಅಥವಾ ಮತಾಂತರದ ತಿರಸ್ಕಾರವೋ? ಎನೆಂದು ಗೊತ್ತಾಗುವುದಿಲ್ಲ.

ಕುಕ್ಕುಂದೂರು:— ಸಿಟ್ಟಿ ಸಂಟ್ ಲೋರೆನ್ಸ್ ಚರ್ಚ್ ಶಾಲೆಯ ಅಧಿಕಾರಿಯವರು ಹಿಂದೂ ಶಾಲೆಗಳಿಗೆ ತೆರಳುತ್ತಿದ್ದ ಕ್ರೈಸ್ತ ಬಾಲಕರನ್ನು ಇನ್ನುಮುಂದೆ ತಮ್ಮ ಶಾಲೆಗೆ ಬರಬೇಕಾಗಿ ಒತ್ತಾಯಮಾಡಿದ್ದರಿಂದಲೂ ಅ ಪ್ರಯುಕ್ತ ಒಳಗಿಂದೊಳಗೆ ಒಳಸಂಚುಗಳನ್ನು ನಡೆಸಿ ತನ್ನ ಶಾಲೆಯ ವಿಸ್ತಾರವನ್ನು ಬಯಸುತ್ತಿರುವರೆಂದೂ ಕುಕ್ಕುಂದೂರು ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆಯ ಮೆನೇಜರರು ಭಿನ್ನಪತ್ರವು ವಿದ್ಯಾ ಇಲಾಖಾ ಅಧಿಕಾರರಿಗೆ ತಲ್ಪಿದೆ.

ಉಡುಪಿ:— ಇಲ್ಲಿಯ ಶಿವಳ್ಳಿ ಪಂಚಾಯತ ಕೋರ್ಟನ್ನು ವಿಭಜನೆಮಾಡಿ ಮೂಡನಿಡಂಬೂರು ಮತ್ತು ಶಿವಳ್ಳಿ ಪಂಚಾಯತ ಕೋರ್ಟುಗಳೆಂದು ಏರ್ಪಡಿಸಲಾಗಿದೆ. ಅವುಗಳಿಗೆ ಅನುಕ್ರಮವಾಗಿ ಶ್ರೀಗಳಾದ ಕಾರ್ನಾಡು ರಾಮರಾಯರು ಮತ್ತು ಯು ಕೇಶವ ಬಾಯರಿಗಳು ಅಧ್ಯಕ್ಷರಾಗಿ ಆಚರಿಸಲ್ಪಟ್ಟಿರುತ್ತಾರೆ.

ಲೋಕಲ್ ಸೆಲ್ಫ್ ಗವರ್ನಮೆಂಟ್ ಸೆಕ್ರಿಟೆರಿಯಟ್ ಪರ್ಸನಲ್ ಅಸಿಸ್ಟಂಟರು ಕಳೆದ ವಾರ ಇಲ್ಲಿ ಎರಡು ದಿನವಿದ್ದು ಉಡುಪಿ ಮ್ಯುನಿಸಿಪಾಲಿಟಿ ಸಂಬಂಧವಾಗಿ ವೃತ್ತಪತ್ರಿಕೆಗಳಲ್ಲಿ ಪತ್ರವ್ಯವಹಾರ ರೂಪವಾಗಿಯೂ ಆಕ್ಷೇಪಸೂಚನೆಗಳ ಕುರಿತು ಪರೀಕ್ಷಿಸಿ ಹೋಗಿರುತ್ತಾರೆ. ಕೃಷ್ಣಮಠ ಮತ್ತು ಮಠ ದೇವಸ್ಥಾನಗಳನ್ನವಲಂಬಿಸಿರುವ ಬಡವರಿಂದ ಹೆಚ್ಚಾಗಿ ತುಂಬಿರುವ ಉಡುಪಿಗೆ ಹೊಸತಾಗಿ ಸ್ಥಾಪಿಸಲ್ಪಟ್ಟಿರುವ ಮ್ಯುನಿಸಿಪಾಲಿಟಿಯ ಆಡಳಿತದಿಂದ ಆದಷ್ಟು ಕಡಿಮೆ ತೆರಿಗೆಗಳನ್ನು ಹೊರಿಸಿ ಆದಷ್ಟು ಲಘುತರವಾಗಿ ದಯಾದೃಷ್ಟಿಯಿರಿಸಿ ನಾಗರಿಕರನ್ನು ಕಾಣುವಂತಾಗಲೆಂದು ಹಾರೈಕೆ.

ದುಡ್ಡಿನಭಾವವಿದ್ದರೂ ಪಿಚ್ಚರ್ ನೂಲಿಗೋಸ್ಕರ ದೃಷ್ಟಿಯಿಂದ ಇಲ್ಲಿ ಸರಕಾರೊಂದೂ ಹೊಸ ಸಿನೇಮಾ ದೇವಾಲಯಗಳಿಗೆ ಪ್ರಾರಂಭಿಸಿದೆ.

ಮೂಡಬಿದ್ರಿ:— ಇಲ್ಲಿಯ ಸಾರ್ವಜನಿಕ ಧರ್ಮಾರ್ಥ ವಾಚನಾಲಯದ ೮ನೇ ವಾರ್ಷಿಕೋತ್ಸವವು ಇದೇ ಬರುವ ತಾ. ೨—೫—೧೯೪೬ನೇ ಶನಿವಾರ ಸಾಯಂಕಾಲ ಗಂಟೆ ೬-೩೦ಕ್ಕೆ ಜರಗುವುದು.

ವನಿತಾ ವೈಭವ

ಗೈಷಾ ಹುಡುಗಿಯರು.

ಪಾಶ್ಚಿಮಾತ್ಯರ ಸಮಾಜದಲ್ಲಿ ಸ್ತ್ರೀಯರ ಪ್ರಭಾವ ಪ್ರಾಬಲ್ಯಕ್ಕೆ ಕಡಿಮೆಯಿಲ್ಲ. ಎಲ್ಲ ಸಾರ್ವಜನಿಕ ವ್ಯವಹಾರಿಕ ವಿಷಯಗಳಲ್ಲೂ ಅಲ್ಲಿ ಸ್ತ್ರೀಯರು ಭಾಗವಹಿಸುತ್ತಾರೆ. ಆದುದರಿಂದ ಹೊಸಬರು ಯಾರಾದರೂ ಅವರ ವ್ಯವಹಾರಗಳನ್ನು ಕಂಡರೆ, ಅವುಗಳಲ್ಲಿ ಸ್ತ್ರೀಯರ ಭಾಗವು ಎಷ್ಟಿದೆ? ಸ್ತ್ರೀಯರ ಪ್ರಭಾವವು ಎಷ್ಟಿದೆ? ಸ್ತ್ರೀಯರ ಅಂತಸ್ತು, ಯೋಗ್ಯತಾ ಸಿದ್ಧಿಗಳು ಎಷ್ಟು ಎನ್ನುವುದೆಲ್ಲ ಬಹುಕಾಲದಲ್ಲಿ ನೇರವಾಗಿ ಗೊತ್ತಾಗುತ್ತವೆ.

ಆದರೆ ಜಪಾನಿಯರ ಸಮಾಜವು ಹಾಗಲ್ಲ. ರಾಜಕೀಯ ವ್ಯವಹಾರಿಕ ಚಟುವಟಿಕೆಗಳಾವುದನ್ನೂ ಜಪಾನೀ ಮಹಿಳೆಯರು, ಗೃಹಿಣಿಯರು ಹಚ್ಚಿಕೊಳ್ಳುವುದಿಲ್ಲ. ಯಾವುದೂ ಗೋಷ್ಠಿ, ಸಂತೋಷ ಸತ್ಕಾರ ಕೂಟಗಳಲ್ಲಿ ಅವರು ಸೇರುವುದಿಲ್ಲ. ಅಂದರೆ ಅಲ್ಲಿನ ವ್ಯವಹಾರಿಕ ಪ್ರಪಂಚವೆಲ್ಲವೂ ಪುರುಷಮಯವಾದದು. ಸ್ತ್ರೀರಹಿತವಾದುದು. ಗೃಹಿಣಿಯರು, ಮಹಿಳೆಯರು ಇತ್ಯಾದಿ ಸ್ತ್ರೀ ಸಾಮಾನ್ಯರು ಅಲ್ಲಿನ ಬಾಹ್ಯ ಜೀವನದಲ್ಲಿ ಕಾಣಬರದಿದ್ದರೂ, ಮತ್ತೊಂದು ವಿಧದಲ್ಲಿ ಸ್ತ್ರೀ ಪ್ರಭಾವವು ಉಳಿದಿದೆ. ಗೈಷಾ ಹುಡುಗಿಯರೇ ಆ ಪ್ರಭಾವದ ಮೂಲ.

ಗೈಷಾ ಹುಡುಗಿಯರ ವರ್ಣನೆಯು ಇಲ್ಲಿ ಸ್ವಲ್ಪ ಅವಶ್ಯಕ. ಗೈಷಾ ಹುಡುಗಿಯರು ಜನ್ಮವಶಾತ್ ಒಂದು ಪಂಗಡವಾಗದಿದ್ದರೂ ಸಂದರ್ಭವಶಾತ್ ಒಂದು ಪಂಗಡದವರು. ಅವರ ವೃತ್ತಿ ನಾನಾ ಮುಖವಾಗಿ ಅವರು ವಿದ್ಯಾವತಿಯರು. ಅಂದರೆ ಜಪಾನೀ ಸ್ತ್ರೀಯರಲ್ಲಿ ಕೇಳದಾ ಗ? ಮಂದಿ ವಿದ್ಯಾವತಿಯರಲ್ಲ ವಿಶಿಷ್ಟವೇನು? ಎಂದು ಕೇಳಬಹುದು. ಇವರ ವಿದ್ಯೆಗೂ ಇತರರ ವಿದ್ಯೆಗೂ ಅಂತರವಿದೆ. ಇವರ ವಿದ್ಯೆ ಜನರಂಜಕ ಸಾಧನವಾದುದು. ಮನರಂಜನೆಕ್ಕೂ ಬೇಕಾದುದು. ಸಂಗೀತ ಸಾಹಿತ್ಯ ಎಲ್ಲ ವ್ಯವಹಾರ ಶಾಸ್ತ್ರಗಳಲ್ಲಿ ಇವರು ಅತ್ಯಂತ ನಿಪುಣರು. ಈ ನೈಪುಣ್ಯತೆಯನ್ನು ಪಡೆಯಲು ಇವರು ಕಠಿಣ ಶಿಕ್ಷಣವನ್ನು ಪಡೆಯುತ್ತಾರೆ.

ಇವರು ಅತ್ಯಂತ ರೂಪವತಿಯರು. ತಮ್ಮ ರೂಪ ಲಾವಣ್ಯಗಳನ್ನು ವಿದ್ಯೆಯಂತೆಯೇ ಇವರು ಕಾಪಾಡಿಕೊಳ್ಳಬೇಕು.

ಇನ್ನು ಇವರ ವೃತ್ತಿಯ ಬಗ್ಗೆ. ಯಾರಾದರೂ ದೊಡ್ಡ ಮನುಷ್ಯರು ಒಂದು ಔತಣವನ್ನು ಏರ್ಪಡಿಸಿದ್ದಾರೆನ್ನಿ. ಒಂದು ಸತ್ಕಾರ ಕೂಟವನ್ನೋ ಸಂತೋಷ ಕೂಟವನ್ನೋ ನಡೆಸಬೇಕೆಂದಿಟ್ಟುಕೊಳ್ಳಿ. ಆಗ ಆ ಮನುಷ್ಯನು ಈ ಗೈಷಾ ಹುಡುಗಿಯರ ವ್ಯವಸ್ಥಾಪಕನಿಗೆ ಹೇಳಿ ಕಳುಹಿಸುತ್ತಾನೆ. ಇಷ್ಟು ಹುಡುಗಿಯರು ಬೇಕು ಎಂದು ಕೇಳಿದರೆ ಅಷ್ಟು ಮಂದಿಯನ್ನು ವ್ಯವಸ್ಥಾಪಕ ಕಳುಹಿಸುತ್ತಾನೆ. ಆ ಹುಡುಗಿಯರೇ ಔತಣಕ್ಕೆಲ್ಲ ಅಣಿಮಾಡುತ್ತಾರೆ. ಅತಿಥಿಗಳೂ ಆಹ್ವಾನಿತರೂ ಬಂದು ಮಂಡಿಸಿದ ಮೇಲೆ ಈ ಹುಡುಗಿಯರು ಅವರಿಗೆ ತಿಂಡಿ ತೀರ್ಥಗಳನ್ನು ನೀಡುತ್ತಾರೆ. ಆಗ ಆ ನೆರೆದ ಮಂದಿಯನ್ನು ಉತ್ಸಾಹಗೊಳಿಸುವಂತೆ ಮಾತನಾಡುತ್ತ ಈ ಹುಡುಗಿಯರು ಹರ್ಷ ಸಂತೋಷಗಳನ್ನುಂಟುಮಾಡುತ್ತಿರುತ್ತಾರೆ. ಆಗಲೇ ಅವರ ವಿದ್ಯಾಭ್ಯಾಸವೆಲ್ಲವೂ ಪ್ರಯೋಜನಕ್ಕೆ ಬರುವುದು. ಆರ್ಥಿಕ ಸಾಮಾಜಿಕ ರಾಜಕೀಯ ವಿಷಯಗಳನ್ನು ಇವರು ಬಹಳ ನಿಪುಣತೆಯಿಂದ ಚರ್ಚಿಸುತ್ತಾರೆ. ಈ ಬುದ್ಧಿ ರಂಜನೆಯಾದ ಮೇಲೆ, ನೇತ್ರಾನಂದವನ್ನುಂಟುಮಾಡುವ ಮನೋರಂಜನೆಯನ್ನು ಕೊಡುವ ನೃತ್ಯ ಗೀತ ವಾದನಗಳು.

ಇದು ಅವರ ಬಾಹ್ಯ ಜೀವನದ ದೃಶ್ಯ. ಅಂತರಂಗ ಜೀವನದ ದೃಶ್ಯವನ್ನು ಊಹಿಸಿ ತಿಳಿವುದೇ ಅಸಾಧ್ಯ.

ಸಂದರ್ಭವಶಾತ್ ಇವರು ಒಂದು ಜಾತಿಯವರಾಗುತ್ತಾರೆಂದು ಪ್ರಾರಂಭದಲ್ಲಿ ಹೇಳಿದೆ. ಆ ಸಂದರ್ಭಗಳು ಜಪಾನಿನ ಸಮಾಜದ ಸಂಕುಚಿತ ಭಾವನೆಯ ಸಂಕೇತಗಳು. ಇವನ್ನು ಅನಿವಾರ್ಯ ಮಾಡಲು ಕಷ್ಟಸಾಧ್ಯವಲ್ಲ. ಅವರೂ ಜನತೆಯ ಸಮ್ಮತಿಯಿಂದ ನಡೆದುಕೊಂಡು ಹೋಗುತ್ತಿವೆ. ದಾರಿದ್ರ್ಯದೋಷದಿಂದಲೂ, ಧನದ ದುರಾಶೆಯಿಂದಲೂ ತಂದೆ ತಾಯಿಗಳು ತಮ್ಮ ಹೆಣ್ಣು ಮಕ್ಕಳನ್ನು ಚಿಕ್ಕತನದಲ್ಲಿಯೇ ಮಾರಿಬಿಡುತ್ತಾರೆ. ಲಾವಣ್ಯವತಿಯರನ್ನು ಕೊಂಡವರು ಅವರಿಗೆ ತಕ್ಕ ಶಿಕ್ಷಣವನ್ನು ಕೊಟ್ಟು, ಗೈಷಾ ವೃತ್ತಿಗೆ ಯೋಗ್ಯರನ್ನಾಗಿ ಮಾಡಿ ಅದೇ ಒಂದು ದುಡ್ಡಾರ್ಜನೆಯ ಮೂಲವನ್ನಾಗಿ ಮಾಡಿಕೊಳ್ಳುತ್ತಾರೆ.

ಸ್ತ್ರೀಯರೂ ನವನಾಗರೀಕತೆಯೂ.

ಶ್ರೀಮತೀ ಉಮಾ ಮುಖರ್ಜೀ ಎಂಬವರು ಸ್ತ್ರೀಯರ ಸಮಸ್ಯೆಯನ್ನು ಅತ್ಯಂತ ಚಾತುರ್ಯದಿಂದ ಬಿಡಿಸಿ ಬರೆಯುತ್ತಾರೆ. "ಮಾಡರ್ನ್ ಟ್ರೆಂಡ್ಸ್" ಪತ್ರಿಕೆಯಿಂದ ಅದನ್ನೆತ್ತಿ ಕೊಟ್ಟಿದೆ.

"ಸ್ತ್ರೀಯರಿಗೆ ಅವರು ಈಗಿರುವ ಅವಸ್ಥೆಯನ್ನು ಬಿಟ್ಟುಬಿಡಬೇಕೆನಿಸಿರುವುದೇನೋ ನಿಜ, ಪ್ರತಿಕೂಲ ಪರಿಸ್ಥಿತಿಗಳಿಂದ ಪಾರಾಗಿ ಉತ್ತಮ ಅಂತಸ್ತನ್ನೇರಬೇಕೆಂದು ಅವರು ಹವಣಿಸುತ್ತಿದ್ದಾರೆ. ಆದರೆ ನಿಜವಾಗಿಯೂ ಅವರಪೇಕ್ಷಿಸುವುದೇನು? ಗೃಹಿಣಿಯಾಗಿರುವುದೇನು? ಅವರಿಗೆ ಬೇಸರವಾಗಿ ಹೋಗಿಯದೆಯೆ? ಗಂಡಸಿನಂತೆ ಬಾಹ್ಯಜೀವನದಲ್ಲಿ ಆಕೆಗೆ ತೃಪ್ತಿಯುಂಟಾಗುತ್ತದೆಯೇ? ಆ ರೀತಿ ವಾದಿಸುವುದರಲ್ಲಿಯೇ ದೋಷವಿದೆ. ಹೆಂಗಸು ಎಷ್ಟೇ ಆದರೂ ಮನೆಯೆಂಬುವುದನ್ನು ಮರೆಯಲಾರಳು. ಆಕೆಗೂ ಮನೆಗೂ ಅಷ್ಟು ಪ್ರೇಮ ಬಂಧನವಿರುವುದು ಸಕಾರಣವಾಗಿದೆ. ಆದರೆ ಮನೆಯಲ್ಲಿಯೇ ಸಾಯಬೇಕಾಗಿ ಬಂದರೆ ಮಾತ್ರ ಆಕೆಯು ಇಷ್ಟಪಡುವುದಿಲ್ಲ. ಬೇರೆ ಜೀವನದಲ್ಲಿ ಭಾಗವಹಿಸಬೇಕೆಂಬ ಬಯಕೆಯು ಮನೆಯನ್ನು ತ್ಯಜಿಸಬೇಕೆಂಬ ಇಚ್ಛೆಯಿಂದ ಜನಿಸಿದುದಲ್ಲ. ಮನೆಯ ಹೊರಗೆ ನಡೆದು ಹೋಗುತ್ತಿರುವ ಆ ಹತ್ತಾರು ಬಗೆಯ ವಿದ್ಯಮಾನ ಧ್ವನಿಯಲ್ಲಿ ತಾವೂ ಬಂದು ಕಾಲಕ್ಕೆ ತಕ್ಕಂತೆ ಹೆಜ್ಜೆ ಹಾಕಬೇಕೆಂಬ ಮಾನವನ ಸಹಜವಾದ ಉತ್ಕಟೇಚ್ಛೆಯಿಂದ ಅವರು ಬಾಹ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಹಾಗೆ ಅವರು ಕಾಲಚಕ್ರದೊಡನೆ ಕಾಲು ಹಾಕದೆ ಹೋದರೆ ಅವರ ಜೀವನವು ವ್ಯರ್ಥವಲ್ಲವೆ?

ಅಂತರಂಗ—ಬಹಿರಂಗ

'ಸ್ತ್ರೀಯ ಅಂತರಂಗವನ್ನು ಹೊಕ್ಕು ನೋಡಿದರೆ ಅಲ್ಲಿ ಪ್ರೇಮಗಳವೇ ತನ್ಮಯವಾಗಿ ಕಾಣುತ್ತದೆ. ಸ್ತ್ರೀಯರ ಹೊರಗಿನ ಇಷ್ಟಾನಿಷ್ಟಗಳೇನೇ ಇರಲಿ, ಮನೆಯ ಮೇಲಿನ, ಮಕ್ಕಳ ಮೇಲಿನ ಮಮತೆಯು ಎಂದೆಂದಿಗೂ ಬತ್ತಿಹೋಗುವುದಿಲ್ಲ. ಅದೇ ಆಕೆಯ ವೈಶಿಷ್ಟ್ಯ. ಯಾವ ಬಗೆಯ ನಾಗರೀಕತೆಯೂ ಅದನ್ನು ನಾಶಪಡಿಸಲಾರದು. ಮನೆಯನ್ನು ಅಣಿಮಾಡಿ, ಮಕ್ಕಳನ್ನು ಬೆಳೆಸಿ ಪಾಲಿಸುವುದು ಆಕೆಗೆ ಸಹಜವಾದ ಆನಂದವನ್ನು ಕೊಡುತ್ತದೆ.

ಆಧುನಿಕ ಸ್ತ್ರೀಯರೂ ಅಷ್ಟೇ. ಮನೆಗೆ ಬೆನ್ನು ತಿರುಗಿಸಲವರು ಸಿದ್ಧರಾಗಿಲ್ಲ. ಅವರ ಶಿಕ್ಷಣ ಸಂಸ್ಕಾರಗಳು ಅವರ ವೈಶಿಷ್ಟ್ಯವನ್ನು ಮತ್ತಷ್ಟು ಪುಷ್ಟಿಗೊಳಿಸುತ್ತವೆ. ಮನೆಯ ಸಾಮ್ರಾಜ್ಯದಲ್ಲಿ ತಮ್ಮ ಅಧಿಕಾರವನ್ನು ಮತ್ತಾರಿಗೂ ಬಿಟ್ಟುಕೊಡಲು ಅವರಿಗೆ ಹೊಟ್ಟೆ ಹಿಡಿಸುವುದಿಲ್ಲ. ಆದರೆ ಗಂಡಸರ ಕೇವಲ ಸಂಭೋಗ ಸಾಮಗ್ರಿಯಾಗಲೂ ಅವರು ಸಮ್ಮತಿಸುವುದಿಲ್ಲ.

ಇಂದು ಹೆಂಗಸರು ಮನೆಯ ಹೊರಗಿನ ಜೀವನವನ್ನು ಕೈಕೊಂಡಿದ್ದಾರೆ. ಅದಕ್ಕೆ ಇಂದಿನ ಆರ್ಥಿಕ ಅನಾಯಕತ್ವವು ಜೊತೆಯೇ ವಿನಹ ನಿಜಕ್ಕೂ ಅವರು ಕಾರಣರಲ್ಲ. ಮನೆಮಾಡುವ ಎಲ್ಲ ಆಟಗಳು ನಾಶವಾದಾಗ ಮಾತ್ರ ಸ್ತ್ರೀಯು ಮನೆಯಿಂದ ಆ ಸಂಕಟದಿಂದ ಕಾಲಿಡುತ್ತಾಳೆ. ಹೊರಗಡೆಯೂ ಆಕೆಯು ಶಾಂತಿ ಸ್ಥಿರತೆಯ ವಾತಾವರಣವನ್ನು ಕಲಿಸುತ್ತಾಳೆ. ಈ ಮೃದು ಸ್ವಭಾವವನ್ನು ಕಂಡೇ ಗಂಡಸು ಹೆಂಗಸನ್ನು ತುಳಿದು ಮನೆಯ ನಾಲ್ಕು ಮೂಲೆಗಳೊಳಗೆ ಸೇರಿಸಿಬಿಟ್ಟು ಆವಳನ್ನು ಅನಾಥೆಯನ್ನಾಗಿ ಮಾಡುವಂತಹ ಸಾಮಾಜಿಕ ನಿಯಮಗಳನ್ನು ಹಾಕಿದ. ಈ ಅಪ್ಪ ದಿಗ್ಬಂಧನವನ್ನು ನುಚ್ಚುನೂರು ಮಾಡುವುದು ಮಾತ್ರ ಆಕೆಯ ಬಯಕೆ.

(ವಿ. ಕೆ)

ಹಿಂದೂ ಸ್ತ್ರೀಯರು ಜಗತ್ತಿನ ಸುಂದರಿಯರು

ಪ್ರಪಂಚದ ಸ್ತ್ರೀಯರಲ್ಲೆಲ್ಲಾ ಹಿಂದೂ ಸ್ತ್ರೀಯರೇ ಅತ್ಯಂತ ಸುಂದರಿಯರು, ಅವರ ಆಧಿಕಾರ, ಚೆಲುವ ಬಲ. ಯೋಗ್ಯತೆ ಹೇಗಾದರೂ ಇರಲಿ, ಅವರ ಮುಖದಲ್ಲಿ ಒಂದು ವಿಧದ ಗಾಂಭೀರ್ಯವೂ ಚೆಲುವೂ ಇದೆ, ಬಂಗಲೆಗಳಲ್ಲಿಯೂ ಗಲ್ಲಿಗಳಲ್ಲಿಯೂ ವಾಸಿಸುತ್ತಿರುವ ಹುಟ್ಟು ದರಿದ್ರರಲ್ಲಿಯೂ ಅಸಾಧಾರಣವಾದ ಸುಂದರಿ

ಸ್ತ್ರೀ ಮಾರ್ಗದರ್ಶಕರು.

ಜಪಾನಿಗೆ ಹೋಗುವ ಪ್ರವಾಸಿಗಳಿಗೆ ಅಲ್ಲಿಯ ನೋಟಗಳನ್ನು ತೋರಿಸಲು ಟೋಕಿಯೋ ನಗರದಲ್ಲಿ ಸ್ತ್ರೀಯರ ಕೂಟವೊಂದು ಏರ್ಪಾಡಾಗಿದೆ. ಈಗ ಆ ಏಜೆನ್ಸಿಯಲ್ಲಿ ೩೦ ಹುಡುಗಿಯರು ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಬಹುಮಂದಿ ಸ್ತ್ರೀಯರು ಹೈಸ್ಕೂಲಿನ ಗ್ರಾಜ್ಯುವೇಟುರು. ಒಂಟಿಯಾಗಿ ನಾಟಕಗಳಿಗೂ, ಹೋಟೆಲಿನಲ್ಲಿ ಊಟಕ್ಕು ಹೋಗಲು ಇಷ್ಟಪಡದವರಿಗೆ ಅವರು ಜತೆಗಾರರಾಗಿ ಬರುತ್ತಾರೆ. ನಾಟಕಗಳಿಗೂ ತಿಂಡಿತೀರ್ಥಗಳಿಗೂ, ಒಬ್ಬ ಅಥವಾ ಇಬ್ಬರು ಹುಡುಗಿಯರನ್ನು ಬೇಕಾದರೆ ಏಜನ್ಸಿಯವರು ಒದಗಿಸಿಕೊಡುತ್ತಾರೆ.

ರಷ್ಯದಲ್ಲಿ ಸ್ತ್ರೀ ಸೈನ್ಯ.

ಇನ್ನು ಕೊಂಚ ಕಾಲವಾದ ಮೇಲೆ ರಷ್ಯದಲ್ಲಿ ಸ್ತ್ರೀಯರ ಸೈನ್ಯವೊಂದು ಸಿದ್ಧವಾಗುತ್ತದೆ. ಅಲ್ಲಿನ ಸರಕಾರದವರು ಎರಡು ವರ್ಷಗಳ ಮುಂಚೆ ಸ್ತ್ರೀಯರನ್ನು ಸೈನ್ಯಕ್ಕೆ ಸೇರಿಸಿಕೊಂಡು ಅವರಿಗೂ ಸಮಸ್ತ ಕ್ಷತ್ರಿಯ ವಿದ್ಯೆಗಳನ್ನು ಕಲಿಸಬೇಕೆಂದು ಗೊತ್ತುಮಾಡಿದರು. ಇದರ ಫಲವಾಗಿ ಈಗ ರಷ್ಯದಲ್ಲಿ ಸ್ತ್ರೀ ವೈಮಾನಿಕರು, ನಾವಿಕರು ಇತ್ಯಾದಿ ಸಮಸ್ತ ಸೈನ್ಯಭಾಗದವರೂ ಇದ್ದಾರೆ. ಅವರೆಲ್ಲರೂ ನವೀನ ಯುದ್ಧ ಕ್ರಮಗಳನ್ನು ಅರಿತು ಪರಿಣತರಾಗಿದ್ದಾರೆ. ಆದುದರಿಂದ ಇನ್ನು ಕೊಂಚ ಕಾಲದ ತರುವಾಯ ಸ್ತ್ರೀ ಸೈನಿಕರನ್ನೇ ಪ್ರತ್ಯೇಕ ಮಾಡಿ ಒಂದು ಹೆಂಗಸರ ಪಡೆಯನ್ನು ಸಿದ್ಧಗೊಳಿಸುತ್ತಾರೆ.

ವಿಶ್ವವಾಣಿ

ಕನ್ನಡ ಸಂಸ್ಕೃತಿಯ ಹೊಸ ಮಾಸಪತ್ರಿಕೆ

ಸಂಪಾದಕರ ಅ ನ ಕೃಷ್ಣರಾಯರು, ಬೆಂಗಳೂರು

(ಬರೆದು ಬಂದುದು)

ವಿಶ್ವವಾಣಿಯು ಕರ್ನಾಟಕದ ನವೋದಯದ ಶುಭ ಚಿಹ್ನೆ. ಕರ್ನಾಟಕವು ತನ್ನ ಪರಂಪರಾನುಗತವಾದ ಸಂಸ್ಕೃತಿಯಿಂದಲೂ ಹೊಸಕಾಲದ ಹೊಸ ಭಾವದ ಆವಿಷ್ಕಾರದಿಂದಲೂ ಜಗತ್ತಿನ ಪ್ರಗತಿ ಮತ್ತು ಸಂಸ್ಕೃತಿಗಳಲ್ಲಿ ತನ್ನದೇ ಒಂದು ಸ್ಥಾನವನ್ನು ಸೃಷ್ಟಿಸಿಕೊಂಡಿದೆ.

ಕರ್ನಾಟಕವು ಈಗ ತನ್ನ ಸುಷುಪ್ತಿಯಿಂದ ಎಚ್ಚೆತ್ತಿದೆ. ತನ್ನ ಸೋದರ ಪ್ರಾಂತ್ಯಗಳು ಮುಂದೆ ಮುಂದೆ ಹೋಗುತ್ತಿರುವುದನ್ನು ಕಂಡು ತಾನೂ ಸ್ಪರ್ಧಿಸಿ ತನ್ನ ಸಂಸ್ಕೃತಿಯ ಹೆಚ್ಚಳದಿಂದ ಜಗತ್ತಿನ ಗೌರವವನ್ನು ಸಂಪಾದಿಸಿದೆ. ಎಚ್ಚೆತ್ತ ಕರ್ನಾಟಕದ ಸಂದೇಶವನ್ನು ಕವಿಗಳು ಗಮಕಿಗಳು, ಕಲಾವಿದರು ನಾಟಕಗಳು ಮೊದಲಾದ ಎಲ್ಲಾ ಪ್ರಗತಿಗಾಮಿಗಳೂ ಜಗತ್ತಿಗೆ ಸಾರುತ್ತಿದ್ದಾರೆ.

ವಿಶ್ವವಾಣಿಯು ಆ ದುಂದುಭಿ ನಿನಾದದ ಪ್ರತಿಸ್ವರ. ಸಂಸ್ಕೃತಿ ದೃಷ್ಟಿಯಲ್ಲಿ ಕರ್ನಾಟಕವು ಹೇಗೆ ವಿಶ್ವದ ವಾಣಿಯೋ ಹಾಗೆ ಪ್ರಗತಿಯ ದೃಷ್ಟಿಯಲ್ಲಿ ವಿಶ್ವವಾಣಿಯು ಕರ್ನಾಟಕದ ವಾಣಿ. ಕರ್ನಾಟಕ ಮತ್ತು ವಿಶ್ವದ ಆ ಧುರ ಸಂಬಂಧವನ್ನು ಬೆಳಸಿ ವಿಶ್ವದ ಭವ್ಯಮಂದಿರವು ಎಲ್ಲಾ ಕಡೆಗಳಲ್ಲಿಯೂ ಪ್ರೇಮ ಶಕ್ತಿ ಜ್ಞಾನಗಳ ಮೇಲೆ ಕಟ್ಟಲ್ಪಟ್ಟಿದೆಯೆಂದು ತೋರುವುದೇ ವಿಶ್ವವಾಣಿಯ ಉದ್ದೇಶ. ವಿಶ್ವದ ಪೂಜೆಯೆ ವಿಶ್ವೇಶ್ವರನ ಪೂಜೆ. ವಿಶ್ವವು ಈಶ್ವರನನ್ನು ಹಲವು ರೂಪಗಳಲ್ಲಿ ಕಂಡು ಹಲವು ದೃಷ್ಟಿಯಲ್ಲಿ ನೋಡಿ, ಹಲವು ಆಕೃತಿಗಳಲ್ಲಿ ಪೂಜಿಸಿ ಹಲವು ಹೆಸರುಗಳಿಂದ ಕರೆದರೂ ಅವನೊಬ್ಬನೇ. ಅವನ ಜೀವಜ್ಯೋತಿಯೇ ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಧರ್ಮಗಳಲ್ಲಿಯೂ ಎಲ್ಲಾ ಕಲೆ ಸಾಹಿತ್ಯ ವಿಜ್ಞಾನಗಳಲ್ಲಿಯೂ ಬೆಳಗುತ್ತಿದೆ. ಆ ಬೆಳಕಿನ ಭಾಗ್ಯವನ್ನು ವಿಶ್ವವಾಣಿಯು ಎಲ್ಲಾ ಹೃದಯಮಂದಿರಗಳಲ್ಲಿಯೂ ಬಿತ್ತರಿಸಲು ಪ್ರಯತ್ನಿಸುತ್ತದೆ.

ಕರ್ನಾಟಕವು ಧರ್ಮದಾಗರ ಶಾಸ್ತ್ರದ ಮಹಾಕ್ಷೇತ್ರ ಕಲೆಯ ಬೀಡು, ವೀರರ ಭೂಮಿ ತನ್ನದಾಗಿ ಅದು ಜಗತ್ತಿಗೆ ಮಹತ್ತರ ಕಾಣಿಕೆಗಳನ್ನರ್ಪಿಸಿದೆ. ಈಗ ಅದು ಲೌಕಿಕ ವಿಷಯಗಳಲ್ಲಿ ತನ್ನನ್ನು ಇತರರ ದೇಶಗಳೊಂದಿಗೆ ಹೋಲಿಸಿಮಾಡಿಕೊಳ್ಳುತ್ತಿದೆ. ಜಗತ್ತಿಗೆ ಕಲಿಸಲು ಸಿದ್ಧವಾಗಿರುವ ಕರ್ನಾಟಕವು ಕಲಿಯಲೂ ಸಿದ್ಧವಾಗಿದೆ. ಜಗತ್ತಿನಿಂದ ಕಲಿಯಬೇಕಾದುದನ್ನು ಕರ್ನಾ

ಸತ್ಯ, ಸೌಂದರ್ಯ, ಶಕ್ತಿಗಳ ಸೇವೆಯೇ ವಿಶ್ವವಾಣಿಯ ಧ್ಯೇಯ. ವಿಶ್ವವಾಣಿಯ ಉದಾತ್ತ ಆಶ್ರಯಕ್ಕೆ ನೆರವಾಗಿ ಭಾರತದ ವಿವಿಧ ಪ್ರಾಂತ್ಯಗಳ ಹೆಸರುಗೊಂಡ ಅನೇಕ ಮಹನೀಯರೂ, ಜಗತ್ತಿನ ವಿವಿಧ ಭಾಗಗಳಲ್ಲಿ ಹೆಸರಾದ ಅನೇಕ ಮಹನೀಯರೂ ಮುಂದುವರಿದಿದ್ದಾರೆ. ಅವರೆಲ್ಲರ ಜ್ಞಾನ, ಪಾಂಡಿತ್ಯ, ತಪಸ್ಸಿನ ಫಲವನ್ನು ವಿಶ್ವವಾಣಿಯು ತನ್ನ ಓದುಗರಿಗೆ ಧಾರೆಯರೆಯುತ್ತದೆ.

ರಸಿಕರಿಗೆ ಬೇಕಾದ ನಾಟಕ, ಸಂಗೀತ, ಚಿತ್ರಕಲಾ, ನಾಟ್ಯಕಲಾ, ಶಿಲ್ಪ, ಚಲನ ಚಿತ್ರಕಲಾ ಸಂಬಂಧ ಲೇಖನಗಳು ಸಾಹಿತ್ಯಪ್ರೇಮಿಗಳಿಗೆ ಬೇಕಾದ ಕಥೆ, ಕಾದಂಬರಿ ಜೀವನ ಚರಿತ್ರೆ, ಪ್ರಬಂಧ, ಕವಿತೆಗಳೂ, ವಿಚಾರಶೀಲರಿಗೆ ಬೇಕಾದ ಇತಿಹಾಸ ವಿಜ್ಞಾನ, ಸಮಾಜಶಾಸ್ತ್ರ ಮನೋವಿಜ್ಞಾನ, ಅರ್ಥಶಾಸ್ತ್ರ ಶಿಕ್ಷಣಶಾಸ್ತ್ರ, ವೇದಾಂತ ದರ್ಶನ ಸಂಬಂಧ ಲೇಖನಗಳೂ, ಗ್ರಂಥ ವಿಮರ್ಶೆಗಳು —ಲೇಖಕರ ಪರಿಚಯಗಳು ಸದ್ವಿಷಯ ಸಂಕಲನಗಳು— ಸಂಪಾದಕರ ನಿರ್ವಾಚ್ಯ ಟೀಕೆಗಳು ವಿಶ್ವವಾಣಿಯಲ್ಲಿ ಪ್ರಕಟವಾಗುತ್ತದೆ.

ದ. ಕ. ಜಿಲ್ಲಾ ಚಿತ್ಪಾವನ ಪರಿಷತ್ತು, ಮಂದಾಜಿ.

ಪೂರ್ವ ನಿಶ್ಚಯದಂತೆ ದ ಕ ಚಿತ್ಪಾವನ ಬ್ರಾ ಪರಿಷದವು ಇದೇ ತಿಂಗಳ ೨೭ ೨೮ ಮತ್ತು ೨೯ರಲ್ಲಿ ಜರಗಿತು. ಸ್ವಾಗತಾಧ್ಯಕ್ಷ ಸ್ಥಾನವನ್ನು ಶ್ರೀ ದಶೀ ಬಿಡೆ ಕೇಶವಭಟ್ಟರವರು ವಹಿಸಿದ್ದರು. ಪರಿಷತ್ತಿನ ಅಧ್ಯಕ್ಷರು ಪುಣೆಯಿಂದ ದಯಮಾಡಿಸಿದ (ಈ ಪರಿಷತ್ತಿನ ಅಧ್ಯಕ್ಷರಾಗಿ) ಗೀತಾವಾಚಸ್ಪತಿ ಸದಾಶಿವಶಾಸ್ತ್ರಿ ಭಿಡೆಯವರು ಆಗಿದ್ದರು. ಈ ಜಿಲ್ಲೆಯ ಚಿತ್ಪಾವನ ಮುಖ್ಯ ಸ್ಥಳಗಳಿಂದ ಹೆಚ್ಚಿನ ಪ್ರತಿನಿಧಿಗಳೂ ಸ್ಥಳೀ ಚಿತ್ಪಾವನ ಪ್ರತಿನಿಧಿಗಳೂ ಈ ಪರಿಷತ್ತಿನಲ್ಲಿ ಸಹಕರಿ ಅತಿ ಯಶಸ್ವಿಯಾಗಿ ಜರಗುವಂತಾಯಿತು. ೩ ದಿನಗ ಚರ್ಚೆಯಲ್ಲೂ ಇತರ ಕಾರ್ಯಕ್ರಮಗಳಲ್ಲೂ [illegible] ಕಡಿಮೆಯಾಗದೆ ಪ್ರತಿನಿಧಿಗಳು ಭಾಗವಹಿಸಿದ್ದ ವಿಷಯನಿಯಾಮಕ ಸಮಿತಿಯವರ ಕಾರ್ಯಕ್ರ ಗಳನ್ನು ಹೊರಗಿನವರರಿಯಲು ಸಾಧ್ಯವಾಗದಿದ್ದರ ಎಲ್ಲ ಕಾರ್ಯಕಲಾಪಗಳೂ ಎಲ್ಲರ ಸಹಕಾರದ ಸಲ ಗಳನ್ನು ಪಡೆದೇ ನಡೆಯುತ್ತಿತ್ತು. ಪರಿಷತ್ತಿನ ಪಾಸಾದ ಗೊತ್ತುವಳಿಗಳಲ್ಲಿ ಮುಖ್ಯವಾದುದು ದ ಜಿಲ್ಲಾ ಚಿತ್ಪಾವನ ಸಂಘದ ಸ್ಥಾಪನೆ. ಈ ಪರಿಷತ್ತಿ ಫಲವಾಗಿ ಎಂಬಂತೆ ಈ ಸಂಘದ ಆಡಳಿತ ಮಂಡಲದವ ಜಿಲ್ಲೆಯ ಮುಂದಿನ ಹೆಚ್ಚಿನ ಪ್ರೋತ್ಸಾಹದ ಚಿತ್ಪಾವನರ ಉನ್ನತಿಯನ್ನು ಸಾಧಿಸಲು ಸಮರ್ಥರಾ ರೆಂದು ನಂಬಲು ಸಾಕಷ್ಟು ಭರವಸೆ ಇದೆ. ಪರಿಷತ್ತಿ ದಯಮಾಡಿಸಿದ ಊರಪರವೂರ ಪ್ರತಿನಿಧಿಗಳ ಭೋ ವಾದಿಗಳ ವ್ಯವಸ್ಥೆಯೂ ಪರಿಷನ್ಮಂಡಳದವರಿಂದಲೇ ನೇರಿಸಲ್ಪಟ್ಟಿತು — ಮಹಾರಾಷ್ಟ್ರದಿಂದ ದಯಮಾಡಿಸಿದ ಶ್ರೀ ಆ ಟಿ ಬಿಡೆ ಹಿಂದೂಮಹಾಸಭೆಯ ಜನರಲ್ ಸೆಕ್ರೆ ಮತ್ತು ಕೇಸರಿ ಸಂಪಾದಕರೂ ಮೋಟ್‍ಘೇಕ್ಕರ ಯಶಸ್ವಿಗಳಾದ ಸಾಂಗಲಿಯ ಶ್ರೀ ಜಿ ಸಿ ಬಿಡೆ ವರೂ, ಶ್ರೀ ವಿ ಎಸ್ ಜೋಶಿಯವರೂ ದಯಮಾ ಸಿದ್ದರಲ್ಲದೆ ರತ್ನಾಗಿರಿಯಿಂದ ಶ್ರೀ ಬಾಳಾಸಾಹೇ ಮರಾಠೆಯವರೂ ಸಾಗರದಿಂದ ಬಾಪಟ ಪಂ ಲಕ್ಷ್ಮಣರಾಯರೂ ಈ ಪರಿಷತ್ತಿಗೆ ದಯಮಾ ನಮ್ಮವರಿಗೆ ಹೆಚ್ಚಿನ ಪ್ರೋತ್ಸಾಹವನ್ನಿತ್ತುದು ನಮ್ಮ ಸೌಭಾಗ್ಯವೆನ್ನಬೇಕು.

ಈ ಪರಿಷತ್ತಿನಲ್ಲಾದ ಭಾಷಣಗಳ, ಕಾರ್ಯಕ್ರಮ ಪಾಸಾದ ಠರಾವುಗಳ ಬಗ್ಗೆ ಸಮಗ್ರವೃತ್ತಾಂತವ ಹಿಂದಿನಿಂದ ಪುಸ್ತಕರೂಪವಾಗಿ ಪ್ರಕಟಿಸಲಿರುವೆವಾದ ರಿಂದ ಆ ಕುರಿತು ಬರೆಯುವುದಿಲ್ಲ. ಮುಂದಾಳೆಯಾ ಹೊಸದಾಗಿ ಮಹಿಳಾಸಭೆಯೂ ೨೮ ರಲ್ಲಿ ಇದ್ದು ಹೆಚ್ಚಿನ ಭಾಷಣಗಳೂ ಶ್ರೀ ಸದಾಶಿವಶಾಸ್ತ್ರಿಗಳ 'ಯರೂ ಗೀತೆಯೂ' ಎಂಬ ವಿಷಯದ ಮೇಲಿನ ಭಾ ಷಣವೂ ಶ್ರೀ ಆರ್ ಜಿ ಬಿಡೆಯವರ ಲೋಕಮಾನ್ಯ ತಿಲಕರ ಕುರಿತಾದ ಮಾತುಗಳೂ ಹೆಚ್ಚಿನ ಪ್ರೋತ್ಸಾ ಕರ ವಾತಾವರಣದಿಂದ ಯಶಸ್ವಿಯಾಗಿ ಜರಗಿತು.

ಶ್ರೀ ಜವಾಹರಲಾಲರಿಗೆ ಈಗಿನ ಚಕ್ರವರ್ತಿಯ ಿಂದ ತಮ್ಮ ಭೇಟಿಮಾಡಲು ಆಮಂತ್ರಣ ಬಂದಿದೆ ಎಂದೂ ಕೆಲವು ಪತ್ರಿಕೆಗಳಲ್ಲಿ ವಾರ್ತೆ ಹರಡಿತ್ತು. ಶ್ರೀ ಜವಾಹರಲಾಲರು, ಅದರಲ್ಲಿ ಸತ್ಯಾಂಶವಿಲ್ಲವೆಂದು ಪ್ರ ಕಟಮಾಡಿರುವರು

(೫ನೇ ಪುಟದಿಂದ ಮುಂದುವರಿದುದು.)

ಇವಳೆ ನಮ್ಮನ್ನು ತನ್ನ ತೊಡೆಯಲ್ಲಿ ಕುಳ್ಳಿರಿಸಿ ಲಾಲಿಸಿ ಪಾಲಿಸುವುದು. ನಮ್ಮವರೇ ಎಂಬ ಬಂಧುಬಳಗದವರೂ, ಇಷ್ಟಮಿತ್ರರೂ ನಮ್ಮನ್ನು ತ್ಯಜಿಸಿದಾಗ (ಸತ್ತ ನಂತರ) ಇವಳೆ ಪುನಃ ನಮ್ಮನ್ನು ತನ್ನ ಹೊಟ್ಟೆಯಲ್ಲಿ ಸುರಕ್ಷಿತವಾಗಿ ಇರಗೊಡುವವಳು. ನಮಗೆ ಜನನ ಕೊಟ್ಟು ಲಾಲಿಸಿ ಪಾಲಿಸಿ, ಸುಖಸಂತೋಷಗಳನ್ನಿತ್ತು ಕಡೆಗೆ ಎಲ್ಲರೂ ತೊರೆದಾಗ ಪುನಃ ತನ್ನ ಉದರದಲ್ಲಿ ನಿರಾತಂಕವಾದ ವಿಶ್ರಾಂತಿಗಾಗಿ ಎಡೆ ಕೊಡುವ ಈ ಮಾತೃಭೂಮಿಯನ್ನು ಪರರ ಆಕ್ರಮಣದಿಂದ ಪಾಲಿಸಿ, ದಾಸ್ಯತ್ವದಿಂದ ಉದ್ಧರಿಸಿ, ತೇಜೋವಿಹೀನಳಾದವಳನ್ನು ಕಾಂತಿಯುಕ್ತಳನ್ನಾಗಿ ಮಾಡುವುದು ವೀರ ಭಾರತೀಯರ ಕರ್ತವ್ಯವಾಗಿರುತ್ತದೆ. ಆದ್ದರಿಂದ ಭಾರತದ ನವತರುಣರೆ, ಇನ್ನಾದರೂ, ನಿದ್ರೆಯಿಂದ ಏಳಿರಿ, ಜಾಗ್ರತೆಯಿಂದ ಕಾರ್ಯಾಸಕ್ತರಾಗಿರಿ ಮಾತೆಯನ್ನು ಉದ್ಧರಿಸಿರಿ

ಜಯವಾಗಲಿ ಮಾತೆಗೆ!
ಜನನೀ ಜನ್ಮ ಭೂಮಿಗೆ!

ಕರ್ಣಾಟಕ ಸಾಹಿತ್ಯ ಪರಿಷತ್ತು.

(ವಿಶೇಷ ಸಾಹಿತ್ಯೋತ್ಸವ)

ಮಂಗಳೂರು ಪ್ರಾಂತದ ಪಾಠಶಾಲೆಗಳಿಗೆಲ್ಲ ಮೇ ತಿಂಗಳಲ್ಲಿ ರಜಾ ಬರುವುದು ಸರಿಯಷ್ಟೆ. ಕರ್ಣಾಟಕ ಸಾಹಿತ್ಯ ಪರಿಷತ್ತಿನವರು ಮೇ ತಿಂಗಳು ೬ನೆಯ ತಾರೀಕಿನಿಂದ ೧೩ರ ವರೆಗೆ ಏರ್ಪಾಡು ಮಾಡಿರುವ ವಿಶೇಷ ಸಾಹಿತ್ಯೋತ್ಸವದ ಪ್ರಕಟಣೆಯನ್ನು ಈಗಾಗಲೆ ಎಲ್ಲ ಪಾಠಶಾಲೆಗಳಿಗೂ ಕಳುಹಿಸಿ ಕೊಟ್ಟಿದೆ. ಈ ವಿಚಾರದಲ್ಲಿ ಶಾಲೆಯ ಇನ್ಸ್ಪೆಕ್ಟರುಗಳಿಗೂ ಪತ್ರಗಳನ್ನು ಬರೆಯಲಾಗಿದೆ

ಹೊರಗಿನಿಂದ ಬರತಕ್ಕ ಉಪಾಧ್ಯಾಯರುಗಳಿಗೆ ಸಾಹಿತ್ಯೋತ್ಸವದ ಒಟ್ಟು ಕಾಲಕ್ಕೆಲ್ಲ ಎಂದರೆ ಸುಮಾರು ಒಂಬತ್ತು ದಿನಗಳಿಗೆ ಒಂದೇ ಒಂದು ರೂಪಾಯಿಯ ರುಸುಮನ್ನಿಟ್ಟು ಭೋಜನ ವಸತಿಗಳ ಏರ್ಪಾಡನ್ನು ಮಾಡಿದೆ ಉಪನ್ಯಾಸಗಳು, ಸಂಗೀತ ಕಾವ್ಯವಾಚನ, ಪ್ರಸಿದ್ಧ ಕಾರ್ಯಾಲಯಗಳ ಭೇಟಿ ಇವುಗಳನ್ನೆಲ್ಲ ಉತ್ಸವದಲ್ಲಿ ಏರ್ಪಾಡು ಮಾಡಿದೆ.

ಮಂಗಳೂರು ಪ್ರಾಂತದ ಉಪಾಧ್ಯಾಯರು ಹೆಚ್ಚು ಸಂಖ್ಯೆಯಲ್ಲಿ ದಯಮಾಡಿಸಿ ಉತ್ಸವದಲ್ಲಿ ಭಾಗಿಗಳಾಗಬೇಕೆಂದು ಪ್ರಾರ್ಥನೆ.

ಎಂ ಆರ್. ಶ್ರೀನಿವಾಸ ಮೂರ್ತಿ.
ವ್ಯವಸ್ಥಾಪಕ

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 24/1936

ಪಮ್ಮು ಮಡ್ತಿಲ್ತಿ—ಪುದ್ದು ಮಡ್ತಿಲನ ಹೆಂಡತಿ—ಉಡುಪಿ ತಾಲೂಕು ಉದಿಯಾವರ ಗ್ರಾಮದಲ್ಲಿರುವವಳು -

ಅರ್ಜಿದಾರಳು—

ತಾರೀಕು 19-1-1936ರಲ್ಲು ಹಾಲಿ ಉದಿಯಾವರ ಗ್ರಾಮದಲ್ಲಿ ಮೃತಪಟ್ಟಿರುವ ಅರ್ಜಿದಾರಳ ಮಗ ಕಿಟ್ಟ ಮಡ್ತಿಲನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್ ಉಡುಪಿ ಇದರಲ್ಲಿ J L No 41/15ಕ್ಕೆ ಈಡು ಮಾಡಿಟ್ಟಿರುವ ಚಿನ್ನಾಭರಣಗಳನ್ನು ವಸೂಲು ಮಾಡುವರೆ ಸದ್ರಿ ಮೃತನ ಕುಟುಂಬದ ಯಜಮಾನಳಾದ ತಾನು ಹಕ್ಕುದಾರಳೆಂತಲೂ ಆ ಕುರಿತು ತನಗೆ ಈ ಕೋರ್ಟಿನಿಂದ ಒಂದು ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿಯೂ ವಗೈರೆ ಅಪೇಕ್ಷಿಸಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ 12-6 36ಕ್ಕೆ ತನಿಖೆಗೆ ಇಟ್ಟಿರುತ್ತದೆ- ಆಕ್ಷೇಪವುಳ್ಳವರು ಆ ದಿವಸ ಸದ್ರಿ ಕೋರ್ಟು ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜಾಹೀರು ಮಾಡಿಕೊಳ್ಳಬಹುದೆಂತ ಈ ಮೂಲಕ ತಿಳಿಸೋಣಾಗಿದೆ

ಉಡುಪಿ
ತಾ 20 4 36 } P. N. Madhava Rao,
Vakil for Petitioner

ಬಿಸಿಲಿನ ತಾಪದಿಂದ

ಉರಿಯುವ ಚರ್ಮಕ್ಕೆ ಶಾಂತತೆಯನ್ನೀಯಲು ಬಯಸುವಿರಾ?

ಹಾಗಾದರೆ
ಇತ್ತ ಗಮನಿಸಿರಿ



ಉಷ್ಣದಲಯಗಳಲ್ಲಿ ಅತಿರೇಖವಾದ ಉಷ್ಣದಿಂದಾಗಿ ಚರ್ಮವು ಉರಿಯುವುದು ವ್ಯಕ್ತಿಗಳಲ್ಲಿ ಸಣ್ಣ ಪುಟ್ಟ ಬೊಕ್ಕೆಗಳೂ ತಲೆದೋರುವುವು ಇವನ್ನೆಲ್ಲಾ ನಾಶಗೊಳಿಸಿ ನಿಮಗೆ ಶಾಂತತೆಯನ್ನೂ ದೇಹಕ್ಕೆ ತಂಪನ್ನೂ ಕೊಡುವ ಸಾಬೂನುಗಳಲ್ಲಿ ಇರಾಸ್ಮಿಕ್ ಗ್ಲಿಸರಿನ್ ಕಾರ್ಬಾಲಿಕ್ ಸಾಬೂನಿಗೆ ಮಿಕ್ಕದುದು ಯಾವುದೂ ಇಲ್ಲ. ಕಾರ್ಬಾಲಿಕ್ ದ್ರಾವಕವೂ ಗ್ಲಿಸರಿನೂ ಸಮ್ಮಿಶ್ರಿತವಾಗಿರುವುದರಿಂದ ಇದು ಚರ್ಮ ವ್ಯಾಧಿಗಳನ್ನೆಲ್ಲಾ ಅಣಗಿಸಲು ಬಲ್ಲುದು. ತುರಿ ಕಜ್ಜಿ ಹುಳ ಮೇಯುವಿಕೆ ಕೆಕೆಯಿಂದಾಗಿ ಬರುವ ಇನ್ನಿತರ ರೋಗಗಳಿಗೆಲ್ಲಾ ಇದು ದಿವ್ಯೌಷಧ

ತೈಲಾಭ್ಯಂಜನಕ್ಕೂ ಇದು ಉಪಯೋಗಕಾರಿ ಇದರ ಸುವಾಸನಯುಕ್ತ ನೊರೆಯು ದೇಹವನ್ನು ಶುಚಿಯಾಗಿಡುವುದು!

ERASMIC 36% CARBOLIC GLYCERINE SOAP

X ECG 494-403 THE ERASMIC CO. LTD., LONDON, ENGLAND

ಸಾಬೂನು ತೆಗೆದ ನಂತರ ಇದನ್ನು ಪೀಳ್ಪದಲಿಯ ಪೆಟ್ಟಿಗೆಯಾಗಿ ಮಾಡಬಹುದು.

It has come to Thrill you! with

MAGNETIC **MADHURI &** BRILLIANT **BILLIMORI**

and the famous Indian Comedian Trio

CARLIE DIXIT GORY

with those beloved stars of yore! **Keki Bava-Ishwarlal-Khatoon-Shantha** and the famous Indian Boy Prodigy

RAM APTE.

Noor-E-Vatan ನೂರೆ ವತನ್

A Ranjit Super stunt-Spectacular Stupendous- Subject.

From: 23-4-'36 - at - For a few days only.

SRI KRISHNA CINEMA, MANGALORE

ನಿಮ್ಮ ಮೆಚ್ಚುಗೆ ಪಡೆದ ನಟರು ಮಧುರವಾಣಿ ಮಾಧುರಿ! ಬಲವಂತ ಬಿಲ್ಲಿಮೋರಿಯ!

ನಿಮ್ಮ ಮೆಚ್ಚುಗೆಯ ಹಾಸ್ಯತ್ರಯರು—ಚಾರ್ಲಿ — ಗೋರಿ—ದೀಕ್ಷಿತ್ ಅಲ್ಲದೆ ರಾಮ ಆಪ್ಟೆ, ಕೇಕಿ ಬಾವಾ, ಈಶ್ವರಲಾಲ, ಶಾಂತ.

ಆದರ್ಶ ಪ್ರೇಮವೊಂದಿದೆ! ಪ್ರಜೆಗಳ ರಾಜವಾತ್ಸಲ್ಯ—ಮಂತ್ರಿ ಸೇನಾಧಿಪತಿಗಳ ಅಧಿಕಾರ ದರ್ಪ—ದಂಗೆಗಾರರೆಲ್ಲೊಬ್ಬ—ಒಡೆಯನ ಬಲಿಗೊಡಲಿರುವರು—ಆದರೆ ಬಲುಮೆಯ ಕುವರಿಯನ್ನು ಬಿಡಲೇ ಬೇಕಾಯಿತು—ಆದರೆ ಒಡೆಯನ ಪ್ರಾಣವು ಉಳಿಯಲಿಲ್ಲ— ತನ್ನ ಸಾಹಸದ ಫಲವಾಗಿ ಅವಿಶ್ರಾಂತ ಕಾದಾಟದಿಂದ ಸಂಗಡಿಗರನ್ನು ಕೂಡಿಕೊಂಡು ಯುದ್ಧವನ್ನು ಹೂಡಿಯೇ ಹೂಡಿದನು. ಜೀವದ ಹಂಗುತೊರೆದು ಕಾದಾಡಿದುದರಿಂದಲೇ ಜೀವಜ್ಯೋತಿಯನ್ನು ಪಡೆದನು.

ಸಿಲ್ವರ್ ಕಿಂಗ್ ಚಿತ್ರವನ್ನು ನೀವು ಕಂಡಿರುವಿರಿ ಇದು ಅದಕ್ಕಿಂತಲೂ ಇಮ್ಮಡಿ ಮಿಗಿಲಾದುದು.

ಹೃದಯವಿದೀರ್ಣಗೊಳಿಸುವ ಈ ಚಿತ್ರವನ್ನು ಕಾಣಲು ಮರೆಯದಿರಿ! ನಕ್ಕು ನಗಿಸುವ ಹಾಸ್ಯವನ್ನು ಕಂಡು ಆನಂದಿಸಿರಿ!

ಇನ್ನೇನಿದೆ?—ನರ್ತನದ ಬೆಡಗು—ಹಾಡಿನ ಹಬ್ಬ—ರೋಮಾಂಚನಗೊಳಿಸುವ ಕಾದಾಟ—ಏನು ಬೇಕಾಗಿದೆಯೋ ಅದೆಲ್ಲಾ ಇದೆ.

ಶ್ರೀ ಕೃಷ್ಣಾ ಸಿನೆಮಾ, ಮಂಗಳೂರು.

ಎಥಿಯೋಪ್ಯ ಇಟಲಿಗೆ ಶರಣಾಗತನಾಗುವುದಿಲ್ಲ

ಇಟಲಿಯನರು ಭಯಂಕರ ವೇಗದಿಂದ ಎಥಿಯೋಪಿಯಾದ ರಾಜಧಾನಿಯಾದ ಅಡಿಸ್ ಅಬಾಬದ ಕಡೆಗೆ ಧಾವಿಸುತ್ತಿದ್ದಾರೆ. ಇದರ ದೆಸೆಯಿಂದ, ಮತ್ತು ಆಗಿಂದಾಗ್ಗೆ ಜರಗುತ್ತಿರುವ ಅಂತರಿಕ್ಷದ ಆಕ್ರಮಣಗಳಿಂದ ಸಮಸ್ತ ನಗರವು ಭೀತಿಮಯವಾಗಿ ಅನೇಕ ನಿವಾಸಿಗಳು ಈಗಾಗಲೇ ಪಲಾಯನಮಾಡಿರುವರು. ಇಟಲಿಯನರನ್ನು ತಡೆಯುವ ಸಿದ್ಧತೆಗಳು ನಡೆಯುತ್ತಿವೆ. ಒಗಡನ್ ಪ್ರಾಂತ್ಯದ ಜಿಜಿಗಾವು ಇಟಲಿಯನರ ಕೈಸೇರುದುದರಿಂದ ಎಥಿಯೋಪಿಯದ ಒಂದೇ ಒಂದಾಗಿರುವ ರೈಲ್ವೇ ಮಾರ್ಗವು ಕಡಿದುಹೋಗುವುದೆಂಬ ಭೀತಿಯು ಉಂಟಾಗಿದೆ. ಒಟ್ಟಿನಲ್ಲಿ, ಹಬಸಿಯವರ ಸಂಪೂರ್ಣ ಸೋಲಿಗೆ ಅನುಕೂಲಗಳಾಗಿವೆ. ಆದರೂ, ಹಬಸಿ ಚಕ್ರವರ್ತಿಯವರು, ಇಟಲಿಯನರ ಮರೆಹೊಕ್ಕಲು ಸಿದ್ಧರಿಲ್ಲವಂತೆ. ರಾಜಧಾನಿಯಾದ ಅಡಿಸ್ ಅಬಾಬವನ್ನು ಇಟಲಿಯನರು ಹಿಡಿದರೂ, ಸಮರಕಾರ್ಯವನ್ನು ಮುಡುಕದೆ ಮುಂದುವರಿಸಲು ಹಬಸಿ ಚಕ್ರವರ್ತಿಯವರ ದೃಢಮಾಡಿರುವರು. ಹಬಸಿ ಚಕ್ರವರ್ತಿಯವರು ಯಾವ ಸ್ಥಳದಲ್ಲಿರುವರೆಂದು ಹೇಳಲು ಅಸಾಧ್ಯ. ಅವರು ಮೃತರಾದರೆಂದು ಬಂದ ವಾರ್ತೆಯು ತೀರ ಸುಳ್ಳೆಂದು ತಿಳಿದು ಬರುತ್ತದೆ. ಧಾರಾಳ ಸೈನಿಕರು ದೇಶರಕ್ಷಣೆಗಾಗಿ ಚಕ್ರವರ್ತಿಯವರೊಡನೆ ಕಾದಾಡಲು, ಉತ್ತರ ದಿಕ್ಕಿಗೆ ನಡೆಯುತ್ತಿದ್ದಾರೆ.

ಬ್ರಿಟನಿನಲ್ಲಿ ಹಬಸಿಯರು ತಮ್ಮ ಸ್ವತಂತ್ರ ರಕ್ಷಣೆಯ ಒಂದು ಆಶೆಯನ್ನು ಕಂಡಿರುವರು. ಅವರು ಬೇಗನೇ ಎಣ್ಣೆ ಸೆಂಕ್ಷನುಗಳು ಜ್ಯಾರಿಗೆ ಬರುವಂತೆ ಮಾಡಿ, ಇಟಲಿಯನರ ಕೈಕಟ್ಟುವರೆಂದೂ, ಇದರಿಂದಲೇ ತಮ್ಮ ರಕ್ಷಣೆಯಾಗುವುದೆಂದೂ ಹಬಸಿಯವರು ಭರವಸೆಪಡುತ್ತಿದ್ದಾರೆ. ಜನಾಂಗಸಭೆಯ ಮೇಲೆ ಸಂಪೂರ್ಣ ವಿಶ್ವಾಸವನ್ನಿಟ್ಟಿವೆ. ಅದ್ದರಿಂದ, "ಜನಾಂಗಸಭೆಯು ಇವರನ್ನು ರಕ್ಷಿಸಲು ಎಣ್ಣೆ ಸೆಂಕ್ಷನುಗಳನ್ನು ಜ್ಯಾರಿಮಾಡುವುದೆಂದು ಎಲ್ಲೆಲ್ಲೂ ಊಹನೆಗಳಾಗಿವೆ.

ಕರುಣಾ ಹಬಸಿಯರು, ತಮ್ಮ ದೇಶಕ್ಕೆ ಈ ಸಂದಿಗ್ಧ ಸಮಯದಲ್ಲಿ, ಇವತ್ತಿಗೆ ೩೦೦೦ ವರ್ಷಗಳಿಂದ ಸ್ವತಂತ್ರವಾಗಿ ಬಾಳಿಬಂದ ತಮ್ಮ ದೇಶವನ್ನು ರಕ್ಷಿಸಲು ಅಲ್ಲಲ್ಲಿ ಪ್ರಸಾರಣಾಕಾರ್ಯವನ್ನು ನಡೆಸಿ, ದೇಶಸೇವೆಗೆ ಬೇಕಾದಷ್ಟು ಸೈನಿಕರನ್ನು ಒಟ್ಟುಗೂಡಿಸುತ್ತಿದ್ದಾರೆ. ಮುಖ್ಯ ನಗರವಾದ ಅಡಿಸ್ ಅಬಾಬವನ್ನು ರಕ್ಷಿಸಲು ಯೋಜನೆಗಳನ್ನು ಹಬಸಿ ಸರಕಾರವು ಆಲೋಚಿಸುತ್ತದೆ. ಚಕ್ರವರ್ತಿಯವರಿಗೆ ಇದನ್ನು ರಕ್ಷಿಸಲು ಅಷ್ಟು ಉತ್ಸಾಹವಿಲ್ಲ. ಕಾರಣ, ಇಟಲಿಯನ್ನು ತಡೆಯುವ ಭರದಲ್ಲಿ ಸಾವಿರಾರು ಮಂದಿಗಳು ಸಾಯಬೇಕಾಗುವುದೆಂದು. ತನ್ನ ಸೇನಾಬಲವನ್ನು ಇತರ ಕಡೆಯ ಸಮರಕ್ಕಾಗಿ ಸುರಕ್ಷಿತರಾಗಿಮಾಡುವುದು ಚಕ್ರವರ್ತಿಯವರ ಅಭಿಪ್ರಾಯ. ಅಡಿಸ್ ಅಬಾಬದಲ್ಲಿ ವಾಸವಾಗಿರುವ ಬಹಿರ್ ಜನಾಂಗಿಕರಿಗೆ ಬಹಳ ಭೀತಿಯುಂಟಾಗಿರುತ್ತದೆ.

ಜನಾಂಗಸಭೆಯು ಎಥಿಯೊಪಿಯದ ಕೈಬಿಡುವುದೆ?

ಜನಾಂಗಸಭೆಯ ಭವಿಷ್ಯವೇನಾಗುವುದು?

ಇಟಲಿಯು ಜನಾಂಗಸಭೆಯ ಸೂತ್ರಗಳಿಗೆ ವಿರೋಧವಾಗಿ ನಡೆಯಿಸಿದ ಅತ್ಯಾಚಾರಕೃತ್ಯವು ಉತ್ತಮ ಫಲಕಾರಿಯಾಗುವುದಾದರೆ, ಆಗ್ಗೆ ಜನಾಂಗಸಭೆಯು ಹೆಚ್ಚಿನ ಸಮಯ ಬಾಳಲಾರದು. ಇದು ಬ್ರಿಟಿಷ ಬಹಿರ್ ವ್ಯವಹಾರದ ಕಾರ್ಯದರ್ಶಿಗಳಾದ ಮಿ॥ ಎಡೆನ್ನರು ಜನಾಂಗಸಭೆಯಲ್ಲಿ ಮಾಡಿದ ಭಾಷಣದ ಮುಖ್ಯ ಅಭಿಪ್ರಾಯವಾಗಿರುತ್ತದೆ. ಜನಾಂಗಸಭೆಯ ಸೂತ್ರಗಳನ್ನು ರಕ್ಷಿಸಲು ಅನೇಕ ಜನಾಂಗಗಳು ಉದ್ಯುಕ್ತರಾಗಿರುವಾಗ ಇಟಲಿಯ ವರ್ತನೆಯು ಯಾವತ್ತು ಶಿಕ್ಷೆಗೊಳಿಲ್ಲದೆ ಹೋಗಬಾರದೆಂದು ಅನೇಕ ಸದಸ್ಯ ಜನಾಂಗಗಳ ಪ್ರತಿನಿಧಿಗಳ ಅಭಿಪ್ರಾಯವಾಗಿರುತ್ತದೆ. ಅಂತೂ ಇಂತೂ ಚರ್ಚೆ ನಡೆದು, ಇಟಲಿ ಹಬಸಿ ಶಾಂತಿಮಾಡುವ ಕಾರ್ಯವು ನಿಷ್ಫಲವಾಗಿರುವುದೆಂಬ ಠರಾವು ಮಂಜೂರು ಮಾಡಿದರು. ಹಬಸಿ ಪ್ರತಿನಿಧಿಗಳು ಜನಾಂಗಸಭೆಯ ನಿಬಂಧನೆಗಳ ಮೇರೆಗೆ ಎಲ್ಲಾ ಸದಸ್ಯ ಜನಾಂಗಗಳು ಎಥಿಯೋಪಿಯಾವನ್ನು ರಕ್ಷಿಸುವ ಕಾರ್ಯದಲ್ಲಿ ಭಾಗಿಗಳಾಗಬೇಕಾಗಿ ವಿನಂತಿಮಾಡಿರುವರು.

ಹಬಸಿಯರು ದೈವಸಹಾಯವನ್ನು ಕಾಯುತ್ತಿದ್ದಾರೆ.

ಇನ್ನೊಂದು ತಿಂಗಳೊಳಗೆ ಎಥಿಯೋಪಿಯಾದಲ್ಲಿ ಮಳೆಗಾಲವು ಪ್ರಾರಂಭವಾಗುವುದು. ಅಲ್ಲಿನ ಮಳೆಗಾಲವು ಅತೀ ಕರಾಳವಾದುದು. ಇದರ ದೆಸೆಯಿಂದ ಇಟಲಿಯನರಿಗೆ ಅವರು ಹಿಡಿದ ಪ್ರದೇಶಗಳು ನರಕಪ್ರಾಯವಾಗುವವು. ಭಯಂಕರ ಸಾಂಕ್ರಾಮಿಕ ರೋಗಗಳು ತಲೆದೋರುವವು. ಮಳೆಯ ದೆಸೆಯಿಂದ ಮಾರ್ಗೋಪಾಯಗಳು ಹಾಳಾಗಿ, ಇಟಲಿಯನರ ಚಲನೆಗೆ ಭಯಂಕರ ತಡೆಗಳು ಉಂಟಾಗುವವು. ಮಾರ್ಗೋಪಾಯಗಳು ಕೆಟ್ಟುಹೋದರೆ, ಅಲ್ಲಲ್ಲಿ ಹರಡಿರುವ ಇಟಲಿಯನ ಸೈನ್ಯಮಂಡಲಗಳಿಗೆ ಪರಸ್ಪರ ಸಂಬಂಧವು ತಪ್ಪಿಹೋಗಿ, ಆಹಾರ ಇತ್ಯಾದಿಗಳು ತಪ್ಪಿದಂತಾಗಿ ಭಯಂಕರ ಅನುಸಂಕಟಗಳನ್ನು ಅನುಭವಿಸಬೇಕಾಗುವುದು. ದೇಶದ ಪಶ್ಚಿಮ ದಿಕ್ಕಿನಲ್ಲಿ ಮಳೆಗಾಲದಲ್ಲಿ ಇಟಲಿಯನರ ಮೇಲೆ ಸೇಡು ತೀರಿಸಲು ಭಯಂಕರ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಆದುದರಿಂದ ಅವರು ಕೆಲವೆಡೆಗಳಲ್ಲಿ ಇಟಲಿಯನರ ಆಕ್ರಮಣಗಳನ್ನು ನಿರ್ಲಕ್ಷಿಸುವುದು. "ಅನಾಥೋ ದೈವರಕ್ಷಕಃ" ಎಂಬ ಒಂದು ವಿಮೋಚನೆ ಹಾದಿಯಲ್ಲದೆ, ಎಥಿಯೋಪಿಯಕ್ಕೆ ಬೇರೆ ಹಾದಿ ಕಾಣಿಸುವುದಿಲ್ಲ.

ಜನಾಂಗಸಭೆಯೂ ಎಥಿಯೋಪಿಯವೂ.

ಎಥಿಯೋಪಿಯವು ಜನಾಂಗಸಭೆಯ ಮೇಲೆ ವಿಶ್ವಾಸವಿಟ್ಟುಬಿಟ್ಟಿತು: ಜನಾಂಗಸಭೆಯು ಅದನ್ನು ತ್ಯಜಿಸಿಯೂ ಆಯಿತು. ಈಗ ಅದು ತನ್ನ ರಕ್ಷಣೆಗಾಗಿ, ತಾನೇ ಶ್ರಮಪಡಬೇಕಾಗಿದೆ. ಎಥಿಯೋಪಿಯನರು ಪ್ರಾಣರಕ್ಷಣೆಗಾಗಿ ಬಳಲುತ್ತಿರುವಾಗ, ಯುರೋಪು ಖಂಡವು ತನ್ನ ಶಾಂತಿರಕ್ಷಣೆಗಾಗಿ ಮಾತ್ರ ಪ್ರಯತ್ನಗೊಳ್ಳುತ್ತಿದೆ; ಸಮಸ್ತ ಎಥಿಯೋಪಿಯಾವನ್ನು ನುಂಗಿದ ವಿನಹ ಯಾವತ್ತು ಶರ್ತಗಳಿಗೆ ಬರಲು, ಇಟಲಿಯು ಸಿದ್ಧವಿಲ್ಲ. ಎಥಿಯೋಪಿಯಾದ ಕುರಿತು ಬರೇ ಮಾತುಕತೆಗಳು ನಡೆಯುವುದು ಮಾತ್ರ ಈಗ ಕಾಣಿಸುತ್ತದೆ. ಆದಷ್ಟು ಬೇಗನೆ ಕಠಿಣ ತರದ ಸೆಂಕ್ಷನು ಇತ್ಯಾದಿಗಳನ್ನು ಜ್ಯಾರಿ ಮಾಡಿ ಇಟಲಿಯನ್ನು ಬಗ್ಗಿಸುವ ಉದ್ದೇಶವು ಪಾಶ್ಚಾತ್ಯ ಜನಾಂಗಗಳಲ್ಲಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಾಗದು. "ಶಾಂತಿರಕ್ಷಣೆಗಾಗಿ ಎಲ್ಲರೂ ಐಕ್ಯದಿಂದ ಏಕಪಕ್ಷರಾಗಿ ಕಾರ್ಯ ನಡೆಯಿಸಬೇಕು" ಎಂದು ಬ್ರಿಟನು ಇತ್ಯಾದಿ ಜನಾಂಗಗಳು ಸಾರುವುದರಲ್ಲಿ ಏನೂ ಅರ್ಥವಿಲ್ಲ. ಆದುದರಿಂದ ಈ ತತ್ವದಿಂದ ಏನೂ ಪ್ರಯೋಜನವಾಗುವಂತಿಲ್ಲ. ಜನಾಂಗಮಂಡಳದ ಸದಸ್ಯ ಜನಾಂಗಗಳು ಈ ಮಾತುಗಳನ್ನು ಆಡುವುದನ್ನು ನಿಲ್ಲಿಸುವುದು ಉತ್ತಮವೆಂದು ಕೆಲವು ಪತ್ರಿಕೆಗಳು ಅಭಿಪ್ರಾಯ ಪಡುತ್ತಿದ್ದಾವೆ. ಸಂಗತಿಗಳು ಹೀಗೆ ನಡೆಯುತ್ತಿರುವಾಗ ಜನಾಂಗಸಭೆಯು ಇನ್ನು ಬಹಳ ಕಾಲ ಬಾಳುವುದರಲ್ಲಿ ತುಂಬಾ ಸಂದೇಹವಿದೆ. ಮಿ॥ ಎಡೆನ್ನರ ಅಭಿಪ್ರಾಯದಂತೆ ಇಟಲಿಯ ಈಗಿನ ವರ್ತನೆಯು ಫಲಕಾರಿಯಾದರೆ ಆಗ ಜನಾಂಗಸಭೆಯು "ನಿರ್ನಾಮವಾಗುವುದು" ಅಂದರೆ, ಹಬಸಿ ಚಕ್ರವರ್ತಿಯವರು ಒಬ್ಬಂಟಿಗರಾಗಿ ನಾಗರಿಕತೆಯ ಕ್ರೂರ ಆಕ್ರಮವನ್ನು ಎದುರಾಯಿಸಬೇಕಾಗಿದೆ. ದೈವ ಸಹಾಯವು ಇವರಿಗೆ ಮಳೆಯ ರೂಪದಲ್ಲಿ ಬರುವುದೆ, ಒಂದೇ ಒಂದು ವಿಮೋಚನೆ ಬಗೆಯಾಗಿರುತ್ತದೆ.

ಲೋರ್ಡ್ ಲಿನ್‌ಲಿತ್ ಗೋರವರು.

ಹಿಂದೂದೇಶದ ಈಗಿನ ವೈಸರಾಯರಾದ ಲೋರ್ಡ್ ಲಿನ್‌ಲಿತ್ ಗೋರವರು. ವೈಸರಾಯ ಪದವೀ ಸ್ವೀಕಾರದ ಪವಿತ್ರ ಕೆಲಸವಾದ ನಂತರ ತನ್ನ ಹಲೋ ಮಾತುಗಳಿಂದ ಹಿಂದೂದೇಶದ ಶ್ರೇಯವನ್ನು ಬಯಸಿದರು.

ವಾರ್ತಾ ವಾಹಿನಿ!

[illegible] ಡೆಲ್ಲಿಯಲ್ಲಿ ಕೆಲವು ಅಸೆಂಬ್ಲಿ ಸದಸ್ಯರಿಂದೊಡಗೂಡಿ ಸೇರಿದ ಸಭೆಯು, ಏನೂ ಫಲವಿಲ್ಲದೆ ಮುಕ್ತಾಯವಾಯಿತು. ಈ ಕೈಗಾರಿಕೆಯ ಏಳ್ಗೆಗಾಗಿ ಅನೇಕ ಉತ್ತಮ ಸೂಚನೆಗಳು ಈ ಸಭೆಯ ಮುಂದೆ ಬಂದಿದ್ದುವು. ಈ ಕುರಿತಾದ ಚರ್ಚೆಯನ್ನು ನಿಲ್ಲಿಸಲಾಗಿದೆ.

ಪಂಜಾಬ ಸರಕಾರದ ಮಂತ್ರಿಗಳಾದ ಸರ್ ಫಿರೋಜ್ ಖಾನ್ ನೂನ್‌ರನ್ನು ಲಂಡನಿನಲ್ಲಿ ಹಿಂದೂದೇಶದ ಹೈ ಕಮಿಶನರಾಗಿ ನೇಮಕಮಾಡಿರುವರೆಂದು ಬಲವಾದ ವಾರ್ತೆ ಹರಡಿರುತ್ತದೆ. ಇವರು ತನ್ನ ಈಗಿನ ಮಂತ್ರಿ ಪದವಿಗೆ ರಾಜಿನಾಮೆಯನ್ನೀಯುವರೆಂದು ತಿಳಿದು ಬರುತ್ತದೆ.

ಹಿಂದೂದೇಶದ ಚಾ ತಯಾರಿಯು ಬಹಳ ವೃದ್ಧಿ ಹೊಂದಿರುತ್ತದೆ. ಆದರೆ, ಸುರಾಪಾನ ತಯಾರಿಕೆಯು ಕಡಿಮೆಯಾಗುತ್ತದೆ. ಅಲ್ಲದೆ ಚಾ ಕೈಗಾರಿಕೆಯು ಇನ್ನೂ ಅಭಿವೃದ್ಧಿ ಹೊಂದುವುದು. ಇದರಿಂದಾಗಿ ಹಿಂದೂದೇಶದಲ್ಲಿ ಚಾ ಪಾನಿಗಳ ಸಂಖ್ಯೆಯು ಹೆಚ್ಚುವುದು; ಇದರಿಂದ ಜನರು ಮದ್ಯಪಾನವನ್ನು ಉಪಯೋಗಿಸುವುದು ಕಡಿಮೆಯಾಗುವುದು. ಮೇಲಿನದು, ಮಿ॥ ಪಿಸಾಕೆಂಬವರು ಲಂಡನಿನಲ್ಲಿ ಮಾಡಿದ ಭಾಷಣದ ಸಾರಾಂಶವಾಗಿರುತ್ತದೆ.

ದಾಜಟಪುರ ಎಂಬಲ್ಲಿ ಒಂದು ವಿಚಿತ್ರ ಘಟನೆಯು ನಡೆಯಿತು. ಕಾವಲು ನಡೆಯಿಸುತ್ತಿದ್ದ ಕೆಲವು ಸೈನಿಕರ ಎದುರಿಗೆ, ಒಂದು ರಾತ್ರಿ ಬಿಳಿವರ್ಣದ ದನವೊಂದು ಕರುವಿನ ಸಮೇತ ಕಾಣಿಸಿತು. ಅವರು ಅವುಗಳನ್ನು ಹಿಡಿಯಲು ಹೋಗಲು, ಆ ದನಕರುಗಳೆರಡು ಅದೃಶ್ಯವಾದವು. ಕೆಲವು ದಿನಗಳ ನಂತರ, ಇನ್ನೊಂದು ವಿಚಿತ್ರವು ನಡೆಯಿತು. ಸೈನಿಕರಿಗೆ ಒಂದು ಬಿಳಿ ಭೂತವು (ಮನುಷ್ಯ ರೂಪದ) ಕಾಣಿಸಿತು. ದನಕರುವಿನಂತೆ ಇದು ಕೂಡಾ ಅದೃಶ್ಯವಾಯಿತು. ಅದೃಶ್ಯವಾದೊಡನೆ.– "ನೀವು ನರಸಿಂಹ ದೇವರನ್ನು ಆರಾಧಿಸಬೇಕು, ತಪ್ಪಿದರೆ ನಿಮಗೆ ಅನುಸಂಕಟಗಳು ಒದಗುವುವು" ಎಂಬ ಆಕಾಶ ಧ್ವನಿಯು ಕೇಳಿಸಿತು. ಸೈನಿಕರು ಕೂಡಲೇ ದೇವರನ್ನು ಅತ್ಯಂತ ಭಕ್ತಿಯಿಂದ ಆರಾಧಿಸಿದರು. ಪ್ರಸಾದ, ಗಂಧ ಮುಡಿ ಇತ್ಯಾದಿಗಳನ್ನು ಅಲ್ಲಿನ ಹಳ್ಳಿಗರಲ್ಲಿ ಹಂಚಿದರು.

ಕೊಚ್ಚಿನ್ ರಾಜ್ಯದ ಪ್ರಜೆಗಳು ಅಲ್ಲಿನ ದಿವಾನರಾದ ಸರ್ ಷಣ್ಮುಗಂಚೆಟ್ಟಿಯಾರರ ಮೇಲೆ ಬಹಳ ಅಸಮಾಧಾನಗೊಂಡಿರುವರು. ಅವರನ್ನು ಕೆಲಸದಿಂದ ನಿವೃತ್ತಗೊಳಿಸಿ, ತಮಗೆ ಯೋಗ್ಯರಾದ ದಿವಾನರನ್ನು ನೇಮಿಸಬೇಕೆಂದು ಅವರು ಕೊಚ್ಚಿನ್ ಮಹಾರಾಜರಿಗೆ ಅರ್ಜಿ ಮಾಡಿರುವರು. ಈ ಅರ್ಜಿಗೆ ಅಲ್ಲಿನ ೬/೮ ಅಂಶ ಜನರು ಸಹಿ ಹಾಕಿರುವರಂತೆ. ರಾಜ್ಯದ ಕೆಲವು ವಿಚಾರಗಳಲ್ಲಿನ ಅವರ ವರ್ತನೆಯು ಪ್ರಜೆಗಳ ಹಿತಗಳಿಗೆ ವಿರೋಧವಾಗಿರುವುದರಿಂದಲೇ ಪ್ರಜೆಗಳು ಈ ರೀತಿ ವರ್ತಿಸಲು ಕಾರಣವೆಂದು ತಿಳಿದುಬರುತ್ತದೆ.

ಇಟಲಿಯನರು ಒಗಡನ್ ಪ್ರಾಂತ್ಯದ ಜಿಜಿಗಾವನ್ನೂ ಹರಾರನ್ನೂ ಹಿಡಿದರೆಂಬ ಬಲವಾದ ವಾರ್ತೆಯು ಬಂದಿರುತ್ತದೆ.

ಇಟಲಿಯನರು ಸಂಪೂರ್ಣ ಎಥಿಯೋಪಿಯವನ್ನು ಹಿಡಿದು ಹಬಸಿಗಳಿಗಾಗಿ ಹಿತಕರವಾಗುವ ರೀತಿ ಸರಕಾರದ ವ್ಯವಹಾರವನ್ನು ವಹಿಸುವರೆಂದೂ ಮುಸಲೋನಿಯು ರೋಮಿನಲ್ಲಿ ಸಾರಿರುವನು.

ಯೆಹೂದಿಯರಿಗೂ ಅರಬಿಯರಿಗೂ ಇವರ ಪರಸ್ಪರ ಭೇದಗಳ ದೆಸೆಯಿಂದಾಗಿ, ಅರೇಬಿಯದ ಪೆಲೆಸ್ಟೈನ್‌ನಲ್ಲಿ ಮೊನ್ನೆ ದಿನ ಬಹಳ ಗಲಭೆಯು ನಡೆಯಿತು. ತುಪಾಕಿಗಳ ಉಪಯೋಗವಾಗಿ ಅನೇಕರು ಮಡಿದಿರುವರು. ಗಲಭೆಗೆ ಕಾರಣ,—ಕೊಲೆಮಾಡಲ್ಪಟ್ಟ ಇರ್ವರು ಅರಬಿಯರ ಶವಸಂಸ್ಕಾರ. ಗಲಭೆಯನ್ನು ಶಮಿಸಲು ಮಿಲಿಟರಿಯನ್ನು ಕರೆಯಬೇಕಾಯಿತು. ಇಲ್ಲಿನ ಯೆಹೂದ್ಯರಿಗೂ ಅರಬಿಯರಿಗೂ ಅನೇಕ ರಾಜಕೀಯ, ಸಾಂಪತ್ತಿಕ ಇತ್ಯಾದಿ ಕಾರಣಗಳಿಂದ ವೈಮನಸ್ಸು ಉಂಟಾಗಿರುತ್ತದೆ.

ಕಾಂಗ್ರೆಸ್ ಪ್ರಚಾರಕಾರ್ಯಕ್ಕಾಗಿ ಶ್ರೀ॥ ಜವಾಹರಲಾಲ ನೆಹರೂರವರು ಸಮಸ್ತ ಭಾರತದ ಪ್ರವಾಸಗೈಯ್ಯುವರಾಗಿ ತಿಳಿದುಬರುತ್ತದೆ.

[illegible] ಚಟರ್ಜಿ [illegible] ಅವರ ಸಹೋದರಿಯವರಿಗೆ, ಕಾಶಿ ವಿಶ್ವವಿದ್ಯಾನಿಲಯದ ಸ್ತ್ರೀ[illegible]ರ ಕಾಲೇಜಿನಲ್ಲಿ ಅಧ್ಯಾಪಕಿಯರಾಗಿರುವ ಶ್ರೀಮತಿ ಸೂಚಿತ್ರಾ ಮುಜುಮದಾರ್, ಎಂ. ಎ. ಇವರೊಡನೆ ವಿವಾಹವು ನಡೆದಿರುತ್ತದೆ. ವಿವಾಹವು ಶ್ರೀ ಜವಾಹರಲಾಲರ ನೇತೃತ್ವದಲ್ಲಿ ಅಲ್ಲಹಾಬಾದಿನ ಆನಂದಭವನದಲ್ಲಿ ನಡೆಯಿತು.

ಕಲ್ಕತ್ತಾ ನಗರದಲ್ಲಿನ ಹಿರ್ಯ ಪೋಲೀಸ್ ಅಧಿಕಾರಿಗಳ ಪತ್ನಿಯು ತನ್ನ ಪತಿಯ ರಿವೋಲ್ವರಿನಿಂದ ಪ್ರಾಣತ್ಯಾಗ ಮಾಡಿಕೊಂಡಳು. ಈಕೆಯ ಶವಸಂಸ್ಕಾರಕ್ಕೆ ಬಹಳ ಜನರು ಸೇರಿದ್ದರು.

ಎಟ್ವಾ ಎಂಬಲ್ಲಿಯ ಒಂದು ಜೈನ ದೇವಾಲಯದ ಜೀರ್ಣೋದ್ಧಾರ ಕೆಲಸವು ನಡೆಯುತ್ತಿರುವಾಗ, ಒಂದು ಬೆಂಚಿನ ಮೇಲಿಟ್ಟಿದ್ದ ವಿಗ್ರಹಗಳು, ಬೆಂಚು ಮುರಿದುದರಿಂದ ಕೆಳಗೆ ಬಿದ್ದು ನುಚ್ಚುನೂರಾದುವು. ಇದೊಂದು ಅವಲಕ್ಷಣವೆಂದೆಣಿಸಿ ಅಲ್ಲಿನ ಜೈನರು ಆ ದಿವಸ ಉಪವಾಸವನ್ನು ಆಚರಿಸಿದರು.

ಹಿಂದೂದೇಶದ ಮಾಜಿ ವೈಸರಾಯರಾದ

ಲೋರ್ಡ್ ವಿಲ್ಲಿಂಗ್ಡನ್ನರು.

ಮೊನ್ನೆ ತನ್ನ ಸ್ವದೇಶವಾದ ಇಂಗ್ಲಾಂಡಿಗೆ ತೆರಳಿದರು. ಇವರನ್ನು ಬೀಳ್ಕೊಳ್ಳಲು ಮುಂಬಾಯಿಯ ಗೇಟ್‌ವೆ ಒಫ್ ಇಂಡಿಯದ ಹತ್ತಿರ ದೊಡ್ಡ ಜನಸ್ತೋಮವು ನೆರೆದಿತ್ತು.

ಮುಂಬಾಯಿ ನಗರದ ಟೇಕ್ಸಿ ಮುಷ್ಕರವು ಇನ್ನೂ ಕೊನೆಗೊಳ್ಳಲಿಲ್ಲ. ಪೋಲೀಸ್ ಕಮಿಷನರರು ತನ್ನ ನಿರ್ಧಾರವನ್ನು ಬದಲಾಯಿಸಲು ಸಿದ್ಧರಿಲ್ಲ. ಕೆಲವು ಟೇಕ್ಸಿಗಳು ಮಾತ್ರ ಲೈಸೆನ್ಸುಗಳನ್ನು ಪಡೆದುಕೊಂಡು ಆರು ಆಣೆ ದರದಲ್ಲಿ ಈಗ ನಡೆಯುತ್ತಿವೆ.

ನೋವಾಸ್ಕೋಶಿಯಾ ಎಂಬಲ್ಲಿ ಭಂಗಾರದ ಗನಿಯೊಂದಕ್ಕೆ ಇಳಿದ ಮೂವರು (ಗನಿಯ ಮ್ಯಾಲಿಕರು ಮತ್ತು ಅವರ ಸಹಪಾಠಿಗಳಾದ ಇಬ್ಬರು ಮಹಾಪುರುಷರು) ಒಂದು ಬಂಡೆಯು ಕುಸಿದುಬಿದ್ದುದರಿಂದ ಘನಿಯೊಳಗೇ ಸಿಲುಕಿಬಿದ್ದಿರುವರು. ಇವರನ್ನು ರಕ್ಷಿಸಲು ಮಾಡಿದ ಪ್ರಯತ್ನಗಳು ಫಲಕಾರಿಯಾಗಲಿಲ್ಲ.

ಸಂಯುಕ್ತ ಅಮೇರಿಕಾದ ಅಧ್ಯಕ್ಷರಾದ ಮಿ॥ ರೂಜ್‌ವೆಲ್ಟರ "ನೆರೆಯವರೊಡನೆ ಒಳ್ಳೇ ಮೈತ್ರಿಯನ್ನು ಬೆಳೆಯಿಸುವ" ಉದ್ದೇಶದಿಂದ ಕೆನಡಾವನ್ನು ಸಂದರ್ಶಿಸುವರಾಗಿ ತಿಳಿದುಬರುತ್ತದೆ.

ಜರ್ಮನಿಯಲ್ಲಿ ಹಿಟ್ಲರನ ಜನ್ಮದಿನೋತ್ಸವವು ಬಹು ಸಂಭ್ರಮದಿಂದ ಜರಗಿಸಲ್ಪಟ್ಟಿತು.

ಮುಂಬಾಯಿ ನಗರಸಭೆಯವರು, ನಿವೃತ್ತ ಮೇಯರರಾದ ಶ್ರೀ॥ ನರಿಮಾನರ ಕಾರ್ಯದಕ್ಷತೆಯನ್ನು ಶ್ಲಾಘಿಸಿ ಠರಾವು ಮಾಡಿರುವರು.

ನವವೈಸರಾಯರ ಇಚ್ಛೆಪ್ರಕಾರ ಜಿಲ್ಲಾ ಕಲೆಕ್ಟರರು, ಹೆಚ್ಚಾಗಿ ಹಳ್ಳಿಗರ ಸಂಗಡವಿದ್ದು, ಬಡ ರೈತರ ಕಷ್ಟ ಉಪಶಮನವಾಗುವಂತೆ, ಹಳ್ಳಿಯನ್ನು ಸಂದರ್ಶಿಸಬೇಕಾಗುವ ಸಂಭವಗಳು ಒದಗುವುದರಿಂದ, ಅವರಿಲ್ಲದ ಸಮಯದಲ್ಲಿ ಅವರ ಕಾರ್ಯನೋಡಲು ಹಿರ್ಯ ಸಹಾಯಕರನ್ನು ನೇಮಿಸಲು ಮದರಾಸು ಸರಕಾರವು ಆಲೋಚಿಸುತ್ತದೆ.

ಕಲ್ಕತ್ತಾ ನಗರಸಭೆಯ ಚುನಾವಣೆಯ ದೆಸೆಯಿಂದ ಅಲ್ಲಿನ ಹೈಕೋರ್ಟಿನಲ್ಲಿ ೫ ಒಬ್ಜೆಕ್ಷನ್ ಅರ್ಜಿಗಳು ದಾಖಲಾಗಿವೆ.

ಗೊಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊಡ್ರೆಜ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಅದೊಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ, ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನುಗಳನ್ನು ಅಮದು ಮಾಡಲುಪಕ್ರಮಿಸಿದರು.

ಗೊಡ್ರೆಜ್

ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ ಒಫ್ ಕೊಮರ್ಸ್ ಇದಕ್ಕೂ ಜರ್ಮನ್ ಪಬ್ಲಿಕ್ ಲಿಬೊರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ ಮೈಕ್ರೊಸ್ಕೊಪಿ ಎಂಡ್ ಬೆಕ್ಟೀರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಿಗಳಾಗಿರುವ

ಡಾ| ಔಫ್ರೆಕ್ಟ್ ಎಂಬವರು:—"ನಾನು ಗೊಡ್ರೆಜ್ ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ ಅಭಿಪ್ರಾಯದಂತೆ ಅವುಗಳು ಸ್ಟೆಫ್ಲೊಕೊಕಸ್ ಮತ್ತು ಸ್ಟ್ರೆಪ್ಟೊಕಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ಸ್ಟ್ ಎಂಬವರು:—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧೆ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕನ್‌ಸನ್‌ರವರು:—"ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ" ಎಂದರು

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

ಡಾ| ಎಂ. ಎ. ಅನ್ಸಾರಿ, ಎ. ಡಿ. ಎಂ. ಎಸ್ ರವರು:—"ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯುಕ್ತಿಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು.

ಫಕ್ಟರಿ.— **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ

ಸೋಲ್ ಏಜಂಟರು:— **ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

ನೋಟೀಸು

ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಪುತ್ತೂರು. ದ. ಕ.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ ವ ಅದರ ಮೇಲಣ ಬಡ್ಡಿಯನ್ನಾಗಲೀ ಸರಿಯಾಗಿ ವ್ಯಾಯಿದೆಗೆ ಕೊಡದೆ ಬಾಕಿ ಮಾಡಿದುದರಿಂದಲೂ, ಅವರಿಗೆ ಕ್ರಮವಾಗಿ ಬಿಟ್ಟ ರಿಜಿಸ್ಟ್ರಿ ನೋಟೀಸು, ಅವರು ಸಿಕ್ಕಲಿಲ್ಲವಾಗಿ ಮರಳು ಬಂದಿರುವುದರಿಂದಲೂ, ಈ ಮೂಲಕ ತಿಳಿಯಪಡಿಸುವುದೇನೆಂದರೆ ಸದ್ರಿಯವರು ಯಾ ಅವರ ನ್ಯಾಯವಾದ ಹಕ್ಕುದಾರರು, ಮೇಲ್ಕಂಡ ಬೇಂಕಿಗೆ ಸಲ್ಲತಕ್ಕ ಸಾಲದ, ಅಸ್ಲು. ಬಡ್ಡಿ, ರಿಜಿಸ್ಟ್ರಿ ನೋಟೀಸು ವಗೈರೆ ಖರ್ಚು ವ ಈ ನೋಟೀಸು ಖರ್ಚು, ಸಹ ಕೂಡಿಸಿ, ಇದೇ ಬರುವ ಮೇ ತಿಂಗಳ ತಾರೀಕು ಇಪ್ಪತ್ತೈದು (25-5-36)ರ ಒಳಗೆ, ಬ್ಯಾಂಕಿಗೆ ತಂದು ಸಲಾಯಿಸಿ, ಅಡವಿಟ್ಟ ಸದರಿ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದಲ್ಲಿ, ಈಡಿದ್ದ ಸದ್ರಿ ನಗಗಳನ್ನು ತಾರೀಕು 27-5-1936ನೇ ಬುಧವಾರ ಯಾ ಅದರ ನಂತರ ಬ್ಯಾಂಕಿನ ಆಫೀಸರರಿಗೆ ಸಾಧ್ಯವಾದಷ್ಟು ಯುಕ್ತ ತೋರುವ ಬೇರೆ ತಾರೀಕಿನಲ್ಲಿ, ಪುನಃ ಯಾವ ತರದ ನೋಟೀಸೂ ಕೊಡದೆ, ಅಪರಾಹ್ನ ಘಂಟೆ 2ಕ್ಕೆ ಬ್ಯಾಂಕಿನ ಪುತ್ತೂರು ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು

ಲೋನು ನಂಬ್ರ 745/33 ಸಂಕು ಶೆಟ್ಟಿ ಮಗ ಕಾಂತಪ್ಪ ಶೆಟ್ಟಿ, ಕರ್ಪೋಪಾಡಿ ಗ್ರಾಮ, ವಿಟ್ಲ ಪೋಸ್ಟ್, ಅಸ್ಲು ರೂ 25-0-0

ಲೋನು ನಂಬ್ರ 952/34 ಸುಬ್ರಾಯ ಆಚಾರಿ ಮಗ ಅಚ್ಯುತ ಆಚಾರಿ ಅಕ್ಕಸಾಲಿಗ, ಪುತ್ತೂರು ಅಸ್ಲು ರೂಪಾಯಿ 125-0-0

ಕೆನರಾ ಬೇಂಕ್ ಲಿಮಿಟೆಡ್ ಪುತ್ತೂರು 18—4—1936. } M Anantha Bhandary ಏಜಂಟ್

ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವೀಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತದೆ

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಅದೇ ದಿನ ಮಧ್ಯಾಹ್ನ ಘಂಟೆ ೪ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ ಮಂಗಳೂರು, ಬಂಟವಾಳ, ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ

ಅಲ್ಲದೆ,

ಸಕಲೇಶಪುರದಿಂದ ಅದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದೆ.

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚೆಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ, ಇತ್ಯಾದಿ ಸ್ಥಳಗಳಿಗೆ ಅದೇ ದಿನ ಸಾಯಂಕಾಲ ತಲುಪಲು ಅತೀ ಅನುಕೂಲವಾಗಿದೆ

The Canara Public Conveyance Co., Ltd., Kodialbail Mangalore.

The Sakaleshwara Motor Service Ltd., Saklaspur.

ನಮ್ಮ ಸ್ವಾಮಿಯವರೂ ಸಮಾಜವೂ.

ಕಟಪಾಡಿ ಶ್ರೀನಿವಾಸ ಶೆಣೈ, ಕಾರ್ಕಳ.

[illegible] ಸಮಾಜದ ಗುರುವರ್ಯ ಶ್ರೀ ಸುಕೃತೀಂದ್ರ ತೀರ್ಥ ಸ್ವಾಮಿಯವರು—ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಶರೀರ ಶ್ರಮ, ಅಸ್ವಾದ, ಭಯವರ್ಜನ, ಸರ್ವಧರ್ಮಸಮಾನ ದೃಷ್ಟಿ, ವಿಶ್ವಭ್ರಾತೃತ್ವ—ಈ ಗುಣಗಳಿಂದ ಸಂಪನ್ನರಾಗಿ ಗುರುಪೀಠದ ಮಹತ್ವವನ್ನು ಕಾಯ್ದುಕೊಂಡುಬಂದಿರುತ್ತಾರೆ ಎಂಬುದರಿಂದ ಅವರ ಮೇಲೆ ಸಮಸ್ತ ಶಿಷ್ಯವರ್ಗದವರಿಗೆ ಅಪೂರ್ವವಾದ ಆದರ, ಭಕ್ತಿ, ವಿಶ್ವಾಸ ಪ್ರೇಮಗಳಿರುತ್ತವೆ. ಶ್ರೀ ಸ್ವಾಮಿಯವರು ಸರ್ವಸದ್ಗುಣಗಳಿಂದ ಭೂಷಿತರಾಗಿ ಆಶ್ರಮಧರ್ಮವನ್ನು ಚೆನ್ನಾಗಿ ಪರಿಪಾಲಿಸಿಕೊಂಡು ಆತ್ಮಶಕ್ತಿಯನ್ನು ಸಂಪಾದಿಸಿ ತೇಜೋವಂತರಾಗಿರುವರಾದರೂ, ಅವರೂ ಶಿಷ್ಯವರ್ಗದವರೂ ಮನುಷ್ಯರೇ ಆಗಿರುತ್ತಾರೆ, ತಪ್ಪುಗಳನ್ನು ಮಾಡುವದು, ಆ ಮೇಲೆ ಅವುಗಳನ್ನು ತಿದ್ದಿಕೊಳ್ಳುವದು ಮನುಷ್ಯಮಾತ್ರರ ಸ್ವಭಾವವಾಗಿರುತ್ತದೆ. ಹೇಗಿದ್ದರೂ ಪೂರ್ಣ ಮನುಷತ್ವವನ್ನು ಪಡೆಯುವದು—ಯಾರೇ ಆಗಿರಲಿ—ಪ್ರತಿಯೊಬ್ಬರ ಜೀವನಧ್ಯೇಯವಾಗಿರಬೇಕು. ಅದನ್ನು ಬಿಟ್ಟು ಅನ್ಯಥಾ ಕಾರ್ಯಗಳಲ್ಲಿ ತೊಡಗಿದರೆ ಅಶ್ರೇಯಸ್ಸು ಉಂಟಾಗುತ್ತದೆ. ಮನುಷ್ಯರು ದ್ವಿಪಾದ ಪಶುಗಳಾಗುತ್ತಾರೆ.

ಪೂರ್ಣ ಮನುಷತ್ವವನ್ನು ಪಡೆಯಲಿಕ್ಕೆ ಪ್ರತಿಯೊಬ್ಬರೂ ಪ್ರಪಂಚ—ಪರಮಾರ್ಥ ಎರಡನ್ನೂ ಚಿಂತಿಸಬೇಕು. ಅವುಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಅನುಸರಿಸುವದು ಸಾಧ್ಯವೇ ಅಲ್ಲ! ಶ್ರೀ ಸ್ವಾಮಿ ವಿದ್ಯಾರಣ್ಯರು ಶ್ರೀ ಸಮರ್ಥರಾಮದಾಸರು, ಶ್ರೀ ಸ್ವಾಮಿ ವಿವೇಕಾನಂದರು ಇದೇ ಮಾರ್ಗವನ್ನನುಸರಿಸಿ ಕೀರ್ತಿಶಾಲಿಗಳಾದರು. ಇತರರಿಗೂ ಅದೇ ಮಾರ್ಗಾನುಸರಣವು ಶ್ರೇಯಸ್ಕರವಾಗಿರುತ್ತದೆ. ಜಪತಪಾನುಷ್ಠಾನಗಳು ಒಬ್ಬರಿಗೆ ಎಷ್ಟು ಆವಶ್ಯಕವೋ ಅಷ್ಟೇ ಇತರ ಲೌಕಿಕ ವಿಚಾರಗಳೂ ಆವಶ್ಯಕವಾಗಿರುತ್ತವೆ. ಎಲ್ಲರೂ ಪ್ರಪಂಚಪರಮಾರ್ಥಗಳ ನಿಜವಾದ ಮಹತ್ವವನ್ನು ತಿಳಿದಂತೆ ತೋರುವುದಿಲ್ಲ. ಅದ್ದರಿಂದಲೇ ಸಮಾಜವು ದುರ್ಬಲವಾಗಿದೆ, ಅಸಂಘಟಿತವಾಗಿದೆ. ತಂದೆತಾಯಿಗಳನ್ನು ಕಳಕೊಂಡ ಅನಾಥಮಗುವಿನಂತೆ ಕಂಗಾಲಾಗಿದೆ. ಇದನ್ನು ಶ್ರೀ ಸ್ವಾಮಿಯವರು ಆಲೋಚಿಸಬೇಕು.

[illegible] ಸುಬ್ಬರಾಯರು ಶ್ರೀ ಸ್ವಾಮಿಯವರಿಗೆ ಈಗ್ಗೆ ಸುಮಾರು ೭ ತಿಂಗಳ ಹಿಂದೆ ತಾರೀಖು ೯-೧೦-೩೫ರ ದಿನ ಮುದ್ರಿಸಿದರೆಯಿಂದ ಒಂದು ವಿಜ್ಞಾಪನೆಯನ್ನು ಕಳುಹಿಸಿಕೊಟ್ಟಿದ್ದರು. ನನ್ನೊಂದಿಗಿರುವ ಅದರ ಮೂಲಪ್ರತಿಯಲ್ಲಿ ಹೀಗೆ ಬರೆಯಲ್ಪಟ್ಟಿರುತ್ತದೆ. "ಭಗವದ್ಗೀತೆಯಲ್ಲಿ ೩ನೇ ಅಧ್ಯಾಯದ ೨೧ನೇ ಶ್ಲೋಕದಲ್ಲಿ ಶ್ರೀ ಕೃಷ್ಣನು ಹೇಳಿದಂತೆ ಶ್ರೇಷ್ಠ ಮನುಷ್ಯರು ಯಾವ ರೀತಿಯಲ್ಲಿ ನಡೆಯುತ್ತಾರೋ ಅದೇ ರೀತಿಯಲ್ಲಿ ಇತರ ಜನರು ನಡೆಯಲಿಕ್ಕೆ ಪ್ರಯತ್ನಿಸುತ್ತಾರೆ ಎಂಬ ಸಂಗತಿ ಎಲ್ಲಾ ಜನರಿಗೆ ತಿಳಿದಿದೆ. ಉತ್ತರಾದಿ ಮಠದ ಸ್ವಾಮಿಯವರು ದ್ವೈತಪ್ರತಿಪಾದನೆಗೋಸ್ಕರ ಮತ್ತು ಅದರ ಮೂಲಕ ಶಿಷ್ಯವರ್ಗದ ಇಹಪರಲೋಕಗಳ ಕ್ಷೇಮಕ್ಕೋಸ್ಕರ ಸನ್ಮಾನಧನಗಳನ್ನು ಕೊಟ್ಟು ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಇತ್ತಲಾಗೆ ಅನೇಕ ವರ್ಷಗಳಿಂದ ಆ ಮಠದ ಶ್ರೀ ಸ್ವಾಮಿಯವರು ವರ್ಷಕ್ಕೊಮ್ಮೆ ದಶಂಬರ ತಿಂಗಳಲ್ಲಿ ತಮ್ಮ ಶಿಷ್ಯವರ್ಗದಲ್ಲಿ ಷಟ್‌ಶಾಸ್ತ್ರಗಳ ಪ್ರತಿ ಒಂದು ಯಾ ಹೆಚ್ಚಿನ ಶಾಸ್ತ್ರದಲ್ಲಿ ನಿಪುಣರಾದ ವಿದ್ವಾಂಸರಿಗೆ ದ್ರವ್ಯರೂಪವಾದ ಸಂಭಾವನೆ ಮಾಡುವದನ್ನು ನೋಡಿದರೆ ತುಂಬಾ ಆನಂದವುಂಟಾಗುತ್ತದೆ. ಸಾವಿರಾರು ವಿದ್ವಾಂಸರು, ಸಣ್ಣ ಹುಡುಗರು ಮೊದಲು ವೃದ್ಧರಾದವರಿಗೆ ಸಹ ಅವರವರ ವಿದ್ಯೆಗೆ ಅನುಸಾರವಾಗಿ ಪ್ರತಿಯೊಬ್ಬರಿಗೆ ೨೫, ೩೦, ೪೦ ೫೦, ೬೦, ೧೦೦ ೨೦೦ ರೂಪಾಯಿಗಳ ವರೆಗೆ ಸಂಭಾವನೆ ಸಿಗುತ್ತದೆ. ಕಳೆದ ೭ ವರ್ಷಗಳಲ್ಲಿ ನಮ್ಮ ಜಿಲ್ಲೆಯಿಂದ ವಿದ್ವಾಂಸರಲ್ಲಿ ಅನೇಕರು ಆ ಕುರಿತು ಪ್ರತಿ ವರ್ಷ ದಶಂಬರ ತಿಂಗಳಲ್ಲಿ ತಿರುಪತಿಗೆ ಹೋಗುವಾಗ ಅನೇಕ ಸಾರಿ ನಾನು ರೈಲಿನಲ್ಲಿ ಅವರನ್ನು ನೋಡಿರುತ್ತೇನೆ. ತಿರುಗಿ ಕಳೆದ ದಶಂಬರ ತಿಂಗಳಲ್ಲಿ ನಮ್ಮ ಜಿಲ್ಲೆಯಿಂದ ಹೋದ ಅನೇಕ ವಿದ್ವಾಂಸರಲ್ಲಿ ಒಬ್ಬ ೮ ವರುಷ ಪ್ರಾಯದವನು ಇಡೀ ಋಗ್ವೇದವನ್ನೇ ಬಾಯಿಪಾಠಮಾಡಿದ್ದನೆಂಬುವದನ್ನು ಪರೀಕ್ಷಿಸಿ ಅವನಿಗೆ ರೈಲು ಖರ್ಚು ಪೂರಾ ಕೊಟ್ಟು ೩೦ ರೂಪಾಯಿಗಳ ಸಂಭಾವನೆ ಮಾಡಿದ್ದಾರೆ. ಶ್ರೀ ಸ್ವಾಮಿಯವರು ಪ್ರತಿ ವರ್ಷ ಸುಮಾರು ೨೫೦೦೦ ರೂಪಾಯಿಗಳ ಮೇಲೆ ಖರ್ಚು ಮಾಡುತ್ತಾರಾಗಿ ತಿಳಿದು ಬರುತ್ತದೆ. ಈ ವಿಷಯ ಶ್ರೀ ಸ್ವಾಮಿಯವರಿಗೆ ನಾನು ಬರೆದ ಕಾಗದಕ್ಕೆ ಶ್ರೀಯವರು ತಾವು ಪ್ರಸಿದ್ಧಮಾಡಿದ ಪುಸ್ತಕಗಳಲ್ಲಿ ೧೨ನ್ನು ಸುಮಾರು ಒಂದು ರೂಪಾಯಿ ಟಪ್ಪಾಲುಖರ್ಚು ಮಾಡಿ ನನಗೆ ಧರ್ಮಕ್ಕೇನೇ ಕಳುಹಿಸಿರುತ್ತಾರೆ. ಆ ಪ್ರತಿ ೨ ಪುಸ್ತಕಗಳನ್ನು ನಾನು ತಮ್ಮ ಚರಣಗಳಿಗೆ ಈ ದಿನ ಟಪ್ಪಾಲು ಮೂಲಕ ಬುಕ್‌ಪೋಸ್ಟ್ ಮಾಡಿರುತ್ತೇನೆ. ತಕ್ಕುದ ವಿವರವನ್ನು ನನಗೆ ಪ್ರೀತಿಯಿಟ್ಟು ತಿಳಿಸಬೇಕಾಗಿ ಪ್ರಾರ್ಥನೆಯಿಂದ ಬೇಡಿಕೊಳ್ಳುತ್ತೇನೆ. ಗೌಡಸಾರಸ್ವತ ಸಮಾಜದಲ್ಲಿ ಈಗಿನ ವೈದಿಕರ ಸ್ಥಿತಿ ವಿಚಾರಿಸಿದರೆ ತುಂಬಾ ವ್ಯಸನವಾಗುತ್ತದೆ. ವೈದಿಕರು ಮಾಡುವ ಕ್ರಮದಲ್ಲಿಯೂ ಮಂತ್ರೋಚ್ಚಾರಣೆಯಲ್ಲಿಯೂ ಅನೇಕ ತಪ್ಪುಗಳು ಕಂಡುಬರುತ್ತವೆ. ಕಾರಣ, ಶಾಸ್ತ್ರದಲ್ಲಿ ಅಜ್ಞಾನವೇ ಆಗಿರುತ್ತದೆ. ವೈದಿಕ ಜನರ ಜ್ಞಾನೋದ್ಧಾರವನ್ನು ಕೈಕೊಳ್ಳುವರೆ ಪರಮಾತ್ಮನು ಕಾಶೀ ಮಠಾಧೀಶರನ್ನು ಇಟ್ಟಿರುತ್ತಾನೆಂಬ ಭಾವನೆಯು ಬಹಳ ಜನರಲ್ಲಿ ನೆಲೆಗೊಂಡಿರುತ್ತದೆ. ಆದುದರಿಂದ ವೈದಿಕ ಮಂಡಳಿಯ ಪುನರುಜ್ಜೀವನ ಮಾಡುವ ಕಾರ್ಯವು ಮಠದ ಕಡೆಯಿಂದ ಆಗಬೇಕಾಗಿ ಹೃತ್ಪೂರ್ವಕವಾಗಿ ನಾನು ಈ ಮೂಲಕ ಬೇಡಿಕೊಳ್ಳುತ್ತೇನೆ. ಈ ವಿಷಯದಲ್ಲಿ ಶ್ರೀಮತ್ ಭುವನೇಂದ್ರ ಮಹಾವಿದ್ಯಾಲಯದ ಕಾರ್ಕಳದಲ್ಲಿರುವ ಸಂಸ್ಥೆಯನ್ನೇ ಚೆನ್ನಾಗಿ ಪ್ರೋತ್ಸಾಹ ಕೊಟ್ಟಲ್ಲಿ ನಾನು ಸೂಚಿಸಿರುವ ಪ್ರಮೇಯವು ಸಫಲವಾಗುವದೆಂಬುದು ನನ್ನ ಪೂರ್ಣ ವಿಶ್ವಾಸ. ಈ ಬಗ್ಗೆ ನನ್ನಿಂದಾಗುವಷ್ಟು ತನು ಮನ ಧನ ಸಹಾಯ ನಾನು ಅರ್ಪಿಸುವದಲಿಕ್ಕೆ ಸಿದ್ಧನಾಗಿರುತ್ತೇನೆ ಎಂಬುದಾಗಿ ಸಾಷ್ಟಾಂಗಪ್ರಣಾಮಗಳಿಂದ ಶ್ರೀ ಸನ್ನಿಧಿಯಲ್ಲಿ ಭಕ್ತಿಪೂರ್ವಕ ಭಿನ್ನೈಸಿಕೊಂಡು ಈ ಪತ್ರವನ್ನು ಮುಗಿಸುತ್ತೇನೆ."

ಮೇಲ್ಕಾಣುವ ಪತ್ರಕ್ಕೆ ಶ್ರೀ ಸ್ವಾಮಿಯವರಿಂದ ಯಾವ ಉತ್ತರವೂ ಇದುವರೆಗೆ ಬರಲಿಲ್ಲವಾಗಿಯೂ, ಮುಖತಃ ಮಾತನಾಡಲಿಕ್ಕಿದ್ದಾಗ ಅದು ಅಸಾಧ್ಯವಾಯಿತೆಂದೂ ಶ್ರೀ ಸುಬ್ಬರಾಯರು ತಿಳಿಸುತ್ತಾರೆ. ಶ್ರೀ ಸ್ವಾಮಿಯವರ ಉದಾಸೀನತೆ ಅಥವಾ ಅಲಕ್ಷ್ಯದಿಂದ ಹೀಗಾಯಿತೆಂದು ನಾವು ನಂಬುವದಿಲ್ಲ. ಲೌಕಿಕ ವಿಚಾರಗಳ ಪರಾಮರ್ಶೆ ತೆಗೆದುಕೊಳ್ಳಲಿಕ್ಕೆ ಶ್ರೀ ಸ್ವಾಮಿಯವರು ಮಠದಲ್ಲಿ ಯಾರನ್ನು ನೇಮಿಸಿದ್ದಾರೋ ಅವರು ವ್ಯವಹಾರಕುಶಲರಾಗಿರುವದಿಲ್ಲವೆಂಬುದನ್ನು ಮಾತ್ರ ಒಪ್ಪಲೇ ಬೇಕಾಗಿದೆ. ಶ್ರೀ ಸ್ವಾಮಿಯವರ ಹೆಸರಿನಿಂದ ಕಪ್ಪಕಾಣಿಕೆ, ವಂತಿಗೆ ವರಾಡಗಳನ್ನು ಎತ್ತುವದರಲ್ಲಿ ಇವರಿಗೆ ಎಷ್ಟು ಉತ್ಸಾಹವು ಕಂಡುಬರುತ್ತದೋ ಅಷ್ಟೇ ಉತ್ಸಾಹವು ಅದಕ್ಕೂ ಮಹತ್ವದ ಇತರ ಕಾರ್ಯಗಳ ನಿರ್ವಹಣದಲ್ಲಿ ಕಂಡುಬರುವದಿಲ್ಲವೆಂಬುದು ಖೇದಾಸ್ಪದವಾಗಿದೆ. ಅನ್ಯ ಧರ್ಮೀಯಗುರುಗಳೊಡನೆ ಮತಧರ್ಮ ಸಂಬಂಧವಾಗಿ ಇದೇ ರೀತಿ ಮಾಡಿದ ಪತ್ರವ್ಯವಹಾರದಲ್ಲಿ, ಅನ್ಯ ಧರ್ಮೀಯ ಗುರುಗಳು ಉತ್ತರ ಪ್ರತ್ಯುತ್ತರಗಳನ್ನು ಕೊಡುವದರಲ್ಲಿ ಎಷ್ಟು ಜಾಗರೂಕರಾಗಿರುತ್ತಾರೆ ಎಂದು ಶ್ರೀ ಸುಬ್ಬರಾಯರು ನಿದರ್ಶನಗಳನ್ನು ಕೊಟ್ಟು ಸ್ಪಷ್ಟಮಾಡುವದನ್ನು ಕಂಡಾಗ ನಮ್ಮ ಸ್ಥಿತಿಯ ಬಗ್ಗೆ ಯಾರಿಗಾದರೂ ಕನಿಕರವುಂಟಾಗಬೇಕು. ಯಾರಿಗಾದರೂ ಹಣವೇ ಸರ್ವಸ್ವವಲ್ಲ. ಶಾರೀರಿಕ ಮಾನಸಿಕ, ಆತ್ಮಿಕ ಉನ್ನತಿಗಾಗಿ ಹಣವನ್ನು ಬಿಟ್ಟು ಮನುಷ್ಯನು ಸಾಧಿಸಬೇಕಾದ ಇನ್ನೆಷ್ಟೋ ವಿಷಯಗಳು ಇರುವವು. ಅವುಗಳ ಸಂಪಾದನೆಯಲ್ಲಿ ಶಿಷ್ಯವರ್ಗದವರಿಗೆ ಸಹಾಯಸಹಾನುಭೂತಿಗಳನ್ನು ಕೊಟ್ಟು ಪ್ರೋತ್ಸಾಹಿಸುವದು ಮಠಾಧಿಪತಿಗಳ ಕರ್ತವ್ಯವಿರುತ್ತದೆ. ಆಗ ಮಾತ್ರ ಅವರು ತಮ್ಮ ಆಶ್ರಮಧರ್ಮವನ್ನು ಪೂರ್ಣವಾಗಿ ಪರಿಪಾಲಿಸಿಕೊಂಡು, ಇತರರಿಗೆ ಮಾರ್ಗದರ್ಶಕರಾಗುತ್ತಾರೆ. ಶ್ರೀ ಸುಬ್ಬರಾಯರ ಪತ್ರದಲ್ಲಿ ಬರೆಯಲಾದ ವಿಷಯವನ್ನೂ, ಸಮಾಜಕ್ಕೆ ಸೇರಿದ ಜನರ ಶಾರೀರಿಕ ಮಾನಸಿಕ ಆತ್ಮಿಕ ಉನ್ನತಿಯ ಇತರ ಸಾಧನೋಪಾಯಗಳನ್ನೂ ಶ್ರೀ ಸ್ವಾಮಿಯವರು ಸ್ವತಃ ಪರ್ಯಾಲೋಚಿಸಿ ತಾವು ಮುಂದಾಳುಗಳಾಗಿದ್ದುಕೊಂಡು ಸಮಾಜವನ್ನು ಅಭಿವೃದ್ಧಿಯ ಕಡೆಗೆ ನಡೆಸಿಕೊಂಡು ಹೋಗುವರಾಗಿ ನಂಬಿದ್ದೇವೆ.

ಭಾರತೀಯ ತರುಣರ ಆದ್ಯಕರ್ತವ್ಯ.

ಶ್ರೀ ಕೆ. ಕೇಶವ ಕುಡುವ, ಅಧ್ಯಾಪಕ, ಉಡುಪಿ

[illegible] ಹಿಂದೂದೇಶದಲ್ಲೀಗ ಶಾಲಾ ಕೊಲೇಜುಗಳಲ್ಲಿ ಆಂಗ್ಲ ವಿದ್ಯಾಭ್ಯಾಸವನ್ನು ಗಳಿಸಿದ ಅನೇಕಾನೇಕ ಸುಶಿಕ್ಷಿತ ತರುಣರು ತಮ್ಮ ಮುಂದಿನ ಜೀವನೋಪಾಯ ತೋಚದವರಾಗಿ, ಏನೊಂದೂ ಉದ್ಯೋಗವಿಲ್ಲದೆ ಕಾಲಹರಣ ಮಾಡುತ್ತಲಿದ್ದಾರೆ. ಈ ಸುಶಿಕ್ಷಿತ ತರುಣರ ನಿರುದ್ಯೋಗ ನಿವಾರಣೆಯ ಕುರಿತಾಗಿ ಅನೇಕಾನೇಕ ಲೇಖನಗಳು ಭಾಷಣಗಳು ಆಗಾಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದಲ್ಲದೆ, ಯಾವ ಊರುಗಳಿಗೆ ಹೋದರು ಕೂಡ ಇದೇ ಮಹತ್ವದ ಸಮಸ್ಯೆಯ ಕುರಿತಾದ ತರ್ಕವಿತರ್ಕಗಳು ನೋಡಸಿಗುತ್ತವೆ, ಕೇಳಬರುತ್ತಿವೆ! ಈ ನಿರುದ್ಯೋಗ ಸಮಸ್ಯೆ (Unemployment Question) ಯು ನಮ್ಮ ಹಿಂದೂಸ್ಥಾನದಲ್ಲಿ ಮಾತ್ರವಲ್ಲದೆ ವೈಭವ ಶಿಖರಗಳನ್ನೇರಿರುವ ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಕೂಡ ಅದ್ಭುತ ಸಮಸ್ಯೆಯಾಗಿ ನಿಂತಿರುವುದೆಂದರೆ ಯಾರಿಗೆ ತಾನೆ ಆಶ್ಚರ್ಯವಾಗದಿರದು? ಮುಖ್ಯವಾಗಿ ನಮ್ಮ ಹಿಂದೀ ರಾಷ್ಟ್ರದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ದಿನೇ ದಿನೇ ತೀವ್ರಗತಿಯಿಂದ ವೃದ್ಧಿಯನ್ನು ತಾಳುತ್ತಿರಲು ಅನೇಕಾನೇಕ ಕಾರಣಗಳಿರುತ್ತವೆ! ನಿರ್ದಾಕ್ಷಿಣ್ಯವಾಗಿ ಹೇಳುವುದಾದರೆ, ಪ್ರಥಮ ಕಾರಣವು ನಮ್ಮ ಮಾನಸಿಕ ದೌರ್ಬಲ್ಯ ಮತ್ತು ದೇಹಾಲಸ್ಯವೇ ನಮಗಿಂದು ಈ ತೆರನಾದ ಕಠಿಣ ಪರಿಸ್ಥಿತಿಗೆ ಗುರಿಪಡಿಸಿತು! ದೇಶದ ಪತನಕ್ಕೆ ಆಸ್ಪದಕೊಟ್ಟಿತು!! ಕೈಗಾರಿಕಾ ದೇವಿಯು ಅಧಃಪತನಕ್ಕೆ ಕಾರಣೀಭೂತವಾಯಿತು!!

ಮುಖ್ಯವಾಗಿ ಯಾವುದಾದರೊಂದು ರಾಷ್ಟ್ರದ ಉನ್ನತಿಯು ಯಾ ಅವನತಿಯು ಆಯಾ ರಾಷ್ಟ್ರಗಳ ವ್ಯಾಪಾರ, ಕೈಗಾರಿಕೆ ಸ್ವದೇಶಕ್ಕೆ ಬೇಕಾಗುವ ವಸ್ತು ಒಡವೆಗಳನ್ನು ತಯಾರಿಸುವ ಚಿಕ್ಕ ದೊಡ್ಡ ಕಾರ್ಖಾನೆಗಳು ಮಾತ್ರವಲ್ಲದೆ ಇವೆಲ್ಲಾ ವಿಷಯಗಳಿಗೆ ಮೂಲಾಧಾರವಾದ ಕೃಷಿ ಮತ್ತು ಗೋರಕ್ಷಣೆ ಇವುಗಳ, ಉನ್ನತಿ ಯಾ ಅವನತಿಯನ್ನವಲಂಬಿಸಿಕೊಂಡಿರುತ್ತವೆ! ಈ ಮಾತು ಎಷ್ಟರ ಮಟ್ಟಿನ ಸ್ವಾರಸ್ಯಭರಿತವಾದುದೆಂಬುದಕ್ಕೆ ಇಂಗ್ಲೆಂಡ್, ಜರ್ಮನಿ ಫ್ರಾನ್ಸು ಇಟಲಿ ಜಪಾನು, ಅಮೇರಿಕ ಮೊದಲಾದ ಸುಧಾರಣೆಯ ಶಿಖರವನ್ನೇರಿದ ರಾಷ್ಟ್ರಗಳೇ ಸಾಕ್ಷಿಯಾಗಿವೆ. ಎಂದು ಜಗತ್ತಿನ ಇತರ ರಾಷ್ಟ್ರಗಳು ನಿದ್ರಾವಸ್ಥೆಯಲ್ಲಿದ್ದವೋ, ಅಂದು ಇದೇ ಮಹತ್ವದ ಮೂಲಮಂತ್ರವನ್ನು ಜಪಿಸಿ, ನಮ್ಮ ಹಿಂದೀ ರಾಷ್ಟ್ರವು ಕುಬೇರನ ಸರಿಯಾಗಿ ಮೆರೆಯುತ್ತಿತ್ತೆಂಬುದನ್ನು ಆರ್ಯಾವರ್ತದ ಇತಿಹಾಸವು ಸ್ಪಷ್ಟೋಕ್ತಿಯಿಂದ ಸಾರುತ್ತಿದೆ! ಸ್ವರ್ಣಧಾತ್ರಿಯ ಸಂತತಿಯವರಾದ ನಾವಿಂದು ದಾರಿದ್ರ್ಯ, ಮಾರಿ, ಕ್ಷಾಮ, ಸದಾರೋಗ ಪೀಡೆ ಇತ್ಯಾದಿಗಳ ಮೂಲಕ ಸದಾ ಸಂಕಷ್ಟಪಟ್ಟು ನರಳುತ್ತಿರುವೆವು! ಕಾರಣ ಕೃಷಿ, ಗೋರಕ್ಷಣೆ ಮತ್ತು ವಾಣಿಜ್ಯವೆಂಬ—ಈ ಮೂರು ವೈಶ್ಯ ಧರ್ಮದ ರತ್ನಗಳನ್ನು ಪುನಃ ಸಾಧ್ಯ ವಶಮಾಡಿಕೊಂಡ ವಿನಹ ನಮಗೆ [illegible]ವಿಲ್ಲವು!

ಆದರೆ ಅದೊಂದು ಸಾಧ್ಯ? ಯಾವ ಕಾರ್ಯಗಳನ್ನು ಸಾಧಿಸಿ ಆ ರತ್ನತ್ರಯಗಳನ್ನು ನಾವು ನಮ್ಮ ಸ್ವಾಧೀನಪಡಿಸಿಕೊಳ್ಳಬಹುದು? ಎಂಬ ವಿಚಾರವನ್ನು ಮಾಡುವುದಾದರೆ ಮೊದಲಾಗಿ ಪ್ರತಿಯೋರ್ವ ಭಾರತೀಯನೂ ತಾನು ಯಾರು? ತನ್ನ ಕರ್ತವ್ಯವೇನು? ಎಂಬುದನ್ನು ತಿಳಕೊಳ್ಳಬೇಕಾಗಿದೆ. ನಮ್ಮಲ್ಲಿಯ ಬಹುಮಂದಿ ಜನರು ಸ್ವಾವಲಂಬನವೆಂದರೇನೆಂಬುದನ್ನು ಕೂಡ ಯೋಚನೆಮಾಡಲರಿಯದಿರುವರು. ಧರ್ಮವು ತನ್ನನ್ನು ತಾನೇ ಉದ್ಧಾರಮಾಡಿಕೊಳ್ಳಬೇಕಾಗಿ ಸಾರುತ್ತಿರುವುದಾದರೂ—ಧಾರ್ಮಿಕ ಮನೋವೃತ್ತಿಯ ಜನರೂ ಕೂಡ—ತಾವು ತಮ್ಮ ಕರ್ತವ್ಯವನ್ನು ಮರೆತು, ಸ್ವಾವಲಂಬನದ ರಹಸ್ಯವನ್ನರಿಯದೆ, ಕರ್ತವ್ಯ ಶೂನ್ಯರಾಗಿರುವುದು ಅತ್ಯಂತ ವ್ಯಸನಾಸ್ಪದಕರವಾದ ಸಂಗತಿಯಾಗಿರುತ್ತದೆ. ಆದರೆ ವಿದ್ಯಾ ಸಂಪನ್ನರ ಪರಿಸ್ಥಿತಿಯು ಇದಕ್ಕಿಂತಲೂ ಹೆಚ್ಚಿನ ಖೇದಜನಕವಾಗಿರುವುದು! ವಿದ್ಯಾವಂತರಲ್ಲಿ ಕೆಲವರಿಗೆ ಸರಕಾರಿ ನೌಕರಿಯೇ ಬೇಕಂತೆ! ಕೆಲವರಿಗೆ ಚಿಕ್ಕ ನೌಕರಿಯು ಲಜ್ಜಾಸ್ಪದವಂತೆ! ಅದರಿಂದ ಅವರ ಗೌರವಕ್ಕೆ ಕುಂದುಬರುವುದಂತೆ! ಮತ್ತು ಕೆಲವರಿಗೆ ಕುರ್ಚಿ ಮೇಜುಗಳಿಲ್ಲದಿದ್ದರೆ ಸಾಧ್ಯವೇ ಇಲ್ಲ! ಇನ್ನು ಕೆಲವರಿಗೆ ಊರು ಬಿಟ್ಟು ಪರವೂರಿಗೆ ಹೋಗಲು ಅವರ ಮನಸ್ಸು ಒಡಂಬಡುವುದಿಲ್ಲ! ಇತ್ಯಾದಿ ಕಾರಣಗಳಿಂದ ನಮ್ಮಲ್ಲಿಯ ನಿರುದ್ಯೋಗಿಗಳ ಸಂಖ್ಯೆಯು ವರ್ಷ ವರ್ಷಕ್ಕೆ ತೀವ್ರಗತಿಯಿಂದ ವೃದ್ಧಿಯನ್ನು ತಾಳುತ್ತಿದೆ.

ಅದಪ್ರಯುಕ್ತ ಈ ಶಿಕ್ಷಿತ ನಿರುದ್ಯೋಗಿಗಳು ಕುರ್ಚಿ ಮೇಜುಗಳುಳ್ಳ ಸುಖದಾಯಕವಾದ ಉದ್ಯೋಗವನ್ನು ಪಡೆಯುವೆವೆಂಬ ಭಾವನೆಯನ್ನು ತೊರೆದು, ಇನ್ನಾದರೂ ಕಾಯಕಷ್ಟದ ಮೇಲೆ ಅಭಿಮಾನವನ್ನಿಡಬೇಕು. ಮೊದಲನೆಯದಾಗಿ ಪ್ರತಿಯೋರ್ವನೂ ತನ್ನ ದೇಹರಕ್ಷೆ ಮಾಡಿಕೊಂಡು ಆರೋಗ್ಯವಂತನಾಗಲು ಪ್ರಯತ್ನಿಸಬೇಕು. ಆದರೆ ಕಾಲೇಜುಗಳಿಂದ ಹೊರಬಿದ್ದ ನಮ್ಮ ಯುವಕರು ಬರೇ ನಿರುದ್ಯೋಗಿತನದಿಂದ ಕಾಲವನ್ನು ಅನರ್ಥವ್ಯಯಪಡಿಸುವರಲ್ಲದೆ, ತಮ್ಮ ಆರೋಗ್ಯ ರಕ್ಷಣೆಯ ಕಡೆಗೂ ಅಲಕ್ಷ್ಯಭಾವವನ್ನು ತೋರಿಸುತ್ತಾರೆ. ಅನಾರೋಗಿಯಾದ ಸ್ತ್ರೀಪುರುಷರಿಂದ ಯಾವ ಕಾರ್ಯವೂ ಸಾಗುವಂತಿಲ್ಲ. ನಿರುದ್ಯೋಗಿಗಳು ತಮ್ಮ ಆರೋಗ್ಯ ರಕ್ಷಣೆಯೊಂದು ಮಾಡಿಕೊಳ್ಳುವುದಲ್ಲದೆ ಸದಾಕಾಲವೂ ತಾವು ಉದ್ಯೋಗಿಗಳಾಗಿರುವೆವೆಂದು ಭಾವಿಸಿ ಯಾವುದಾದರೊಂದು ಉದ್ಯೋಗವನ್ನು ನಡೆಯಿಸುತ್ತಲೇ ಬೇಕು. ನಿರುದ್ಯೋಗಿಗಳಾದವರು, ಉದ್ಯೋಗಿಗಳಾಗಲು ಮೊದಲು ಯಾವ ಕೆಲಸ ಮಾಡದೆಯೂ ಕೆಲಸವಿಲ್ಲದಿರುವ ಜನರೊಡನೆ ಕೂಡಿ ನಡೆಯದೆ, ಸದ್ಗುಣಭರಿತರಾಗಿಯೂ, ಸದಾ ಉದ್ಯೋಗಶೀಲರಾಗಿಯೂ ವರ್ತಿಸುವ ಜನರೊಡನೆ ಸ್ನೇಹ ಸಂಪಾದಿಸಿ ಅವರೊಡನೆ ಕೂಡಿ ನಡೆಯುವುದು ಶ್ರೇಯಸ್ಕರವಾಗಿದೆ.

ಆದರೆ ನಮ್ಮಲ್ಲಿಯ ಅನೇಕಾನೇಕ ನಿರುದ್ಯೋಗಿ ತರುಣರು ಇನ್ನುಮುಂದಾದರೂ ತಮಗೆ ಒಳ್ಳೆಯ ಸರಕಾರಿ ನೌಕರಿಗಳು ದೊರೆಯಬಹುದು. ಆಗ ನಾವು ಸುಖದಿಂದ ಜೀವಿಸಬಹುದು ಎಂಬ ಅಭಿಪ್ರಾಯವನ್ನು ಪಟ್ಟು ತಾವು ಮಾತ್ರಕ್ಕೆ ಇಂದಿನ ಕರ್ತವ್ಯವನ್ನು ಮರೆಯುತ್ತಾರೆ. ಈ ಕಾರಣದಿಂದ ಅಂತಹ ಯುವಕರಲ್ಲಿ ದಿನೇ ದಿನೇ ಆಲಸ್ಯ ವೃತ್ತಿಯು ಹೆಚ್ಚುವುದಲ್ಲದೆ ಕಾಲಾಪವ್ಯಯ, ಅವಿಶ್ವಾಸ ಮೊದಲಾದ ದುರ್ಗುಣಗಳು ಒಡಮೂಡಿ ಬರಲು ಆಸ್ಪದಕೊಟ್ಟಂತಾಗುವುದು. ಅದಪ್ರಯುಕ್ತ ಅವರು ಇಂದಿನ ದಿನವೇ ಸುಖ ದಿನವೆಂದು ತಿಳಿದು ಅತ್ಯಂತ ಉತ್ಸಾಹದಿಂದ ಯಾವುದಾದರೊಂದು ವೃತ್ತಿಯನ್ನು ಕೈಕೊಳ್ಳುವುದು ಆದ್ಯ ಕರ್ತವ್ಯವಾಗಿರುತ್ತದೆ. ಯಾವಾತನು ಯಾವ ಉದ್ಯೋಗವನ್ನು ಕೈಕೊಳ್ಳಬೇಕಾಗಿ ಯೋಚಿಸುವನೋ, ಅವನು ಅದೇ ಮಾರ್ಗದಿಂದ ಮುಂದಡಿ ಇಡತಕ್ಕದ್ದು ಮಾತ್ರವಲ್ಲದೆ ಉದ್ಯೋಗಿಯಾಗಲು ಬಯಸುವವನು ಯಾವಾಗಲೂ ಔದ್ಯೋಗಿಕ ಪುಸ್ತಕಗಳನ್ನು ಓದುತ್ತಲೇ ಇರಬೇಕು; ಕೃಷಿಕ್ಷೇತ್ರ ಮೂಲಕ ಜೀವನ ಮಾಡಲು ಆತುರಪಡುವವನು ಸುಧಾರಿತ ಕೃಷಿಶಾಸ್ತ್ರ ಮಾರ್ಗಗಳ ಸ್ಮರಿಸಲು ಪ್ರಯತ್ನಿಸಬೇಕು! ತಮ್ಮ ಯಶಸ್ಸು ತಮ್ಮನ್ನು ಕಾದುಕೊಂಡಿರುವುದಾಗಿ ತಿಳಿದು, ನಮ್ಮ ತರುಣರು ದ್ವಿಗುಣಿತ ಉತ್ಸಾಹದಿಂದ ಕಾರ್ಯಾರಂಭ ಮಾಡಿದರೆ, ನಿಜವಾಗಿಯೂ ಆ ಕಾರ್ಯವು ಸುಲಭಸಾಧ್ಯವಾಗುವುದಲ್ಲದೆ, ಯಶಸ್ಸು ಕೂಡ ನಮ್ಮನ್ನು ಹಿಂಬಾಲಿಸಿ ನಮ್ಮಲ್ಲಿಯ ಕೈಗಾರಿಕೆಯೂ ಕೂಡ ಉನ್ನತಿಯನ್ನು ಪಡೆದು, ಹಿಂದೀ ರಾಷ್ಟ್ರದ ಎಲ್ಲೆಡೆಯಲ್ಲಿಯೂ ಸುಖಶಾಂತಿಗಳು ನೆಲೆಗೊಳ್ಳುವುದರಲ್ಲಿ ಸಂದೇಹವೇನು?

ನಮ್ಮೂರವರಾದ ಕೆ. ಸಂಜೀವರಾಯರನ್ನು ಇಂಡಿಯಾ ಸರಕಾರದ ಆರ್ಥಿಕ ಇಲಾಖೆಯ ಡೆಪ್ಯುಟಿ ಸೆಕ್ರೆಟರಿಗಳಾಗಿ ನೇಮಕಮಾಡಿರುವರು.

WANTED

Trained & qualified Teachers -Ladies also-for the S A T H Elementary School, Manjeshwar.

Applications to reach the under signed by the 15th of May 1936

S A T H, Ele. School, MANJESHWAR, 16 4—1936 } M. N, Kini, Manager & Correspondent.

ಶ್ರೀ ಜ್ಞಾನೋದಯ ಸಮಾಜದ ವಾರ್ಷಿಕೋತ್ಸವ.

ಕಳೆದ ಸೌರಮಾನ ಯುಗಾದಿ ದಿವಸ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಅಂದು ಸೂರ್ಯೋದಯಕ್ಕೆ ಸಮಾಜದ ಸದಸ್ಯರೆಲ್ಲರೂ ಸಮುದ್ರಬದಿಯಲ್ಲಿ ಒಟ್ಟುಕೂಡಿ ಸ್ನಾನ, ಹವನ, ಸಂಧ್ಯಾವಂದನಾದಿಗಳನ್ನು ಮಾಡಿ ತಮ್ಮ ಮದ್ಯಪಾನ ತ್ಯಾಗದವ್ರತವನ್ನು ಧರಿಸಿಕೊಂಡರು.

ಸಾಯಂಕಾಲ ೪ ಘಂಟೆಗೆ ಸಮಾಜಮಂದಿರದಲ್ಲಿ ಸಮಾಜದ ಸದಸ್ಯರ ಮತ್ತು ಆಶ್ರಯದಾತರ ಮಹಾಸಭೆಯು ಶ್ರೀ ವೆಂಕಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ನೆರೆದುಬಂದು ಈ ಕೆಳಗಿನ ನಿರ್ಣಯಗಳು ಸರ್ವಾನುಮತದಿಂದ ಮಂಜೂರುಮಾಡಲ್ಪಟ್ಟವು:-

೧. ಈ ಸಮಾಜಕ್ಕೆ ಇಂದಿಗೆ ೨೫ ವರ್ಷ ಪ್ರಾಯವು ತುಂಬಿರುವುದರಿಂದ ಅದರ ರಜತೋತ್ಸವವನ್ನು ಬರುವ ಡಿಸೆಂಬರ ತಿಂಗಳಲ್ಲಿ ಆಚರಿಸಬೇಕು. ೨ ರಜತೋತ್ಸವ ಕಾಲದಲ್ಲಿ ಅಖಿಲ ಭಾರತೀಯ ಮತ್ಸ್ಯವ್ಯವಸಾಯ ವಸ್ತು ಪ್ರದರ್ಶನ, ಮದ್ಯಪಾನ ನಿಷೇಧಕ (ಟೆಂಪರೆನ್ಸ್) ವಸ್ತು ಪ್ರದರ್ಶನ ಮತ್ತು ಆರೋಗ್ಯಸಾಧನ ವಸ್ತು ಪ್ರದರ್ಶನಾದಿಗಳನ್ನು ಏರ್ಪಡಿಸಬೇಕು ೩ ಮೇಲಿನ ಪ್ರದರ್ಶನಗಳು ಕೈಗೂಡಿಬರಲು ಸರಕಾರದ ಮತ್ತು ಮಹಾಜನರ ಸಹಕಾರವು ದೊರೆಯುವಂತೆ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. ೪ ಮತ್ಸ್ಯವ್ಯವಸಾಯದ ಜೀವಾಳವಾದ ಉಪ್ಪನ್ನು ಬಡಜನರು ತಮ್ಮ ಸ್ವಂತ ಉಪಯೋಗದ ಬಗ್ಗೆ ತಯಾರುಮಾಡುವ ಕುರಿತು ಸರಕಾರದವರು ಮಾಡಿದ ರಿಯಾಯತಿಗಳನ್ನೂ ಕಾನೂನು ನಿಬಂಧನೆಗಳನ್ನೂ ಅದನ್ನು ತಯಾರು ಮಾಡುವ ವಿಧಾನಗಳನ್ನೂ ಕರಾವಳಿಯ ಎಲ್ಲಾ ಗ್ರಾಮಗಳಲ್ಲೂ ಪ್ರಚಾರಮಾಡಬೇಕು. ೫. ಅಲ್ಲಿ ಅವುಗಳ ಸಾಧಕಬಾಧಕಗಳ ವರದಿಯನ್ನು ರಜತೋತ್ಸವದ ಸಮಯ ಪ್ರಕಟಿಸಬೇಕು.

ತರುವಾಯ ಸಾಯಂಕಾಲ ೫॥ ಗಂಟೆಗೆ ಸಮಾಜದ ಸದಸ್ಯರಾದ ಬೋಳೂರು ಲಕ್ಷ್ಮಣ ಪುತ್ರನ್ನರವರ ನೇತೃತ್ವದಲ್ಲಿ ಶಿಕ್ಷಣ ಹೊಂದಿದ ಬೆಂಗರೆ ಶಾಲಾ ವಿದ್ಯಾರ್ಥಿಗಳ ಪ್ರೇಕ್ಷಣೀಯವಾದ ಕೋಲಾಟ ಪ್ರದರ್ಶನಗಳು ಜರಗಿದವು. ಸಾಯಂಕಾಲ ೭ ಘಂಟೆಗೆ ಸಮಾಜದ ಸತ್ಯಶೋಧಕ ನಾಟಕಮಂಡಳಿಯವರು ... ರಿಂದ ಬರೆಯಲ್ಪಟ್ಟ 'ಉಂಡ ಮನೆಗೆ?' ಎಂಬ ಸಾಮಾಜಿಕ ನಾಟಕವನ್ನು ಚಲೋದಾಗಿ ಅಭಿನಯಿಸಿದರು. ಈ ನಾಟಕವನ್ನು ನೋಡಲಿಕ್ಕಾಗಿ ಬಂದ ಸಕಲ ಜಾತಿಜನರಿಗೂ ಸ್ತ್ರೀಪುರುಷರಿಂದ ಸಮಾಜ ಭವನವು ತುಂಬಿತುಳುಕುತ್ತಿತ್ತು.

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ.

ಈ ಸಂಘದ ೧೯೩೯ನೇ ಇಸವಿಯ ಮೆಂಬರರ ವಾರ್ಷಿಕ ಮಹಾಸಭೆಯು ಇದೇ ಏಪ್ರಿಲ್ ತಾ ೨೩ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಕೋಟೆಯೊಳಗಣ ನಂಬ್ರ ೧೪೫ನೇ ಮೋದಿ ರಸ್ತೆಯಲ್ಲಿರುವ ಮಂಡಳಿಯ ರಾತ್ರಿಶಾಲಾ ಮಂದಿರದಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗುವುದು.

TEST YOUR EYES

By the Electro Ophthalmoscope.

All Varities of Frames & Lenses.

At

The Mangalore Trading Association Ltd

Sight Testing Ophthalmic Opticians,

Car Street MANGALORE



Distributors for South Kanara —

Raghavendra Ranga Pai, Car Street Mangalore

ಕುಂದಾಪುರ ಪ್ರವರ್ತಕರು:— ಕಾಮತ್ಸ್ ಸ್ವದೇಶೀ ಎಂಪೋರಿಯಂ

ನಾಯಕ್ ಬ್ರದರ್ಸ್‌ರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ—ನಿತ್ರಾಣಕ್ಕೆ ಅತ್ಯಂತ ಗುಣಕಾರಿ

ಮಹಾಮದನ ಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ ಅತೀ ಉಪಯುಕ್ತ

ಮಹಾಮಾಷ ತೈಲ—ಪಕ್ಷವಾತಕ್ಕೆ ಅತ್ಯಂತ ಗುಣಕಾರಿ

ಗರ್ಭಪಾಲ—ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ

ಗುಡಪಿಪ್ಪಲಿ—ಲಿವರ್ ರೋಗಕ್ಕೆ ಅತ್ಯುತ್ತಮ.

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸ್‌ರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದಕ್ಷಿಣ ಕನ್ನಡ.

[illegible]

...ಕ್ಕಾಗಬೇಕಾಗಿದೆ ಎಂದು ಈಗ ಸರಕಾರವು ಪ್ರಕಟಿಸಿಯದೆ. ನಮ್ಮ ಡೈರೆಕ್ಟರ ಸಾಹೇಬರು ಈ ವಿಷಯ ಕೆಲವು ಅಮೂಲ್ಯ ಅಭಿಪ್ರಾಯಗಳನ್ನು ತಿಳಿಸಿರುವರು:—"ಈ ಪತ್ರಗಳು ಹೊರಬೀಳುವಂತೆ ಮಾಡಿಸಿದ ಜನರ ಮನೋವೃತ್ತಿ ವಿಚಿತ್ರವಾಗಿದೆ. ನಮ್ಮ ಸಂಸ್ಥಾನದಲ್ಲಿ ನೈತಿಕ ಶಿಕ್ಷಣವು ಎಷ್ಟು ಹಾಳಾಗಿದೆಯೆಂದರೆ, ಪ್ರಶ್ನಾ ಪತ್ರಗಳನ್ನು ಪಡೆಯಲು ವಿದ್ಯಾರ್ಥಿಯರು ಕಠಿಣ ಪ್ರಯತ್ನ ಮಾಡುವರಲ್ಲದೆ, ಅವುಗಳಿಗಾಗಿ ಹಣವನ್ನು ತೆರಲೂ ಹಿಂತೆಗೆವುದಿಲ್ಲ! ಇಂತಹ ವಿದ್ಯಾರ್ಥಿಯರಿಗೆ ಈ ಪ್ರಶ್ನಾ ಪತ್ರಗಳನ್ನು ಕೊಂಡುಕೊಳ್ಳಲು ಬೇಕಾದ ಹಣ ಕೊಡುವ ರಕ್ಷಕರೂ ಇದ್ದಾರೆಂಬುದು ವಿಚಿತ್ರವಾಗಿದೆ. ಇಂತಹ ದುಷ್ಕಾರ್ಯ ಮಾಡಲು ಪ್ರೋತ್ಸಾಹ ಕೊಡುವ ಉಪಾಧ್ಯಾಯರೂ ಇದ್ದಾರಲ್ಲ! ಹೆಡ್‌ಮಾಸ್ತರರ ಸಂಘವು ಈ ವಿಷಯಗಳನ್ನು ಪರ್ಯಾಲೋಚಿಸಬೇಕಾಗಿದೆ. ವರ್ಷದಲ್ಲೆಲ್ಲ ವಿದ್ಯಾರ್ಥಿಯರಿಗೆ ಪ್ರಶ್ನೆ ಹಾಕಿ, ಉತ್ತರ ಬರೆವ ಕ್ರಮ ಸೂಚಿಸಿ, ವಿದ್ಯಾರ್ಥಿಯರು ಸಮರ್ಥರಾಗುವಂತೆ ಉಪಾಧ್ಯಾಯರು ಪ್ರಯತ್ನಿಸಬೇಕಾದುದು ಸಹಜ. ಪರೀಕ್ಷೆಗೆ ಕೆಲದಿನಗಳಿರುವಾಗ ಓಡಾಡುವ ವಿದ್ಯಾರ್ಥಿಗಳು ಪ್ರಶ್ನಾಪತ್ರಗಳನ್ನು, ಅದೇ ಪರೀಕ್ಷೆಗೆ ಕೊಡಲಾಗುವುದೆಂದು ನಂಬಿ, ಶಿಕ್ಷಕರ ಬಳಿಗೆ ಬಂದರೆ, ಅಂತಹ ವಿದ್ಯಾರ್ಥಿಗಳನ್ನು ದೂರವಿರಿಸಬೇಕು. ಈ ವರ್ಷ ಪ್ರಶ್ನಾ ಪತ್ರಗಳಲ್ಲಿ ಕೊಟ್ಟಿದ್ದ ಪ್ರಶ್ನೆಗಳನ್ನು ವಿದ್ಯಾರ್ಥಿಯರು ಉಪಾಧ್ಯಾಯರಿಗೆ ತಂದುಕೊಟ್ಟು ಉತ್ತರಗಳನ್ನು ಪಡೆಯಲು ಸಾಧಿಸಿದರು. ಇಂತಹ ಕೆಲಸವನ್ನು ಉಪಾಧ್ಯಾಯರು ಮಾಡಬಹುದೇ? ನಮ್ಮ ಅಧಿಪತ್ಯದ ಹೆಸರು ಹಾಳಾಯಿತು ಇದು ಭಯಂಕರ ಕೆಡುಕು." ಡೈರೆಕ್ಟರರು ಕೊನೆಯ ವಾಕ್ಯಗಳಲ್ಲಿ ತಮಗಿಂತ ಇತರ ಯಾವ ಕರ್ತವ್ಯವೂ ಇಲ್ಲವೆಂಬಂತೆ, ಉಪಾಧ್ಯಾಯರು ವಿದ್ಯಾರ್ಥಿಗಳ ಪ್ರಶ್ನೆಗಳನ್ನು ಉತ್ತರಿಸಬಾರದೆಂದು ಅಪ್ಪಣೆ ಕೊಟ್ಟು ತೀರ್ಮಾನಿಸಿದರಲ್ಲ!

ಬಟ್ಟೆಗಳನ್ನು ಉಡುಪುಗಳನ್ನೂ ಶುಚಿಯಾಗಿಯೂ ಪ್ರಕಾಶವಾಗಿಯೂ ಇಡುವುದು ಹೇಗೆ!

"ನಿನ್ನ ಮನೆಯನ್ನು ನೋಡಿದರೆ ಮನಸ್ಸಂತೋಷವಾಗುತ್ತೆ! ಎಲ್ಲಾ ಪದಾರ್ಥಗಳೂ ಶುಭ್ರವಾಗಿಯೂ ಹೊಸದರಹಾಗಿಯೂ ಕಾಣಿಸಲ್ಪಡುವದಲ್ಲ!"
"ಅದು ಹೇಗೆಂದರೆ ನನ್ನ ಸಲವೆಗಲ್ಲಾ ಸನ್‌ಲೈಟನ್ನೇ ಉಪಯೋಗಿಸುವದರಿಂದ, ಬಟ್ಟೆಗಳ ಹೊಸದರಹಾಗಿರುವದು."

"ನೀನು ಯಾವಾಗಲೂ ಸನ್‌ಲೈಟನ್ನೆ ಉಪಯೋಗಿಸುವದರಲ್ಲಿ ಏನೂ ಆಶ್ಚರ್ಯವಿಲ್ಲ. ನಾನು ಅದನ್ನು ಪ್ರಾರಂಭಿಸಿದ ಮೇಲೆ ಸಲವೆಯಲ್ಲಿ ತುಂಬ ಬದಲಾವಣೆ ಇದೆ."
"ಹೌದು! ಸನ್‌ಲೈಟನಿಂದ ನಿನ್ನ ಮನೆಯಲ್ಲಿಯೇ ಏನೂ ಶ್ರಮವಿಲ್ಲದೆ ಎಲ್ಲಾ ಬಟ್ಟೆಗಳನ್ನು ಒಗೆಯಬಹುದು."

ಸಲವೆಗೆಲ್ಲಾ ಸನ್‌ಲೈಟೇ ಸನ್‌ಲೈಟನ ಅಪರಿಮಿತವಾದ ನೊರೆಯು ಬಟ್ಟೆಗಳಲ್ಲಿರುವ ಮಾಲಿನ್ಯವನ್ನು ಅತಿ ನುಟ್ಟವಾಗಿಯೂ ಮತ್ತು ಸುಲಭವಾಗಿಯೂ ಹೊರಗಾಡಿಸುವುದು ನಿಮ್ಮ ಮನೆಯಲ್ಲಿ ಅದು ಯಾವಾಗಲೂ ಇರಲಿ ನಿಮ್ಮ ಸಲವೆಗೆಲ್ಲಾ ಸನ್‌ಲೈಟೇ ಯಾಗಿರಲಿ. ಅದು ಈಗ ತುಂಬಾ ಸರಸವಾಗಿರುವುದು



SUNLIGHT SOAP

LEVER BROTHERS (INDIA) LTD.

I-S 1105-288A

KANARESE

ಪ್ಲೆಂಟರರ ವಿಲೆವಾರಿ.

ಹೆಸರ್ಗೊಂಡ ಶಾಲೆಯ ವಿದ್ಯಾರ್ಥಿಯಾಗಿರುವವರನ್ನು ಇಂಗ್ಲೆಂಡಿನ ಹೆಡ್‌ಮಾಸ್ತರರ ಪರಿಷತ್ತಿನ ಸಹಕಾರದೊಡನೆ ಇಂಡಿಯನ್ ಟೀ ಎಸೋಸಿಯೇಶನ್‌ನವರು ಇಂಗ್ಲೆಂಡಿನಲ್ಲಿ ಎರಡು ಅಥವಾ ಮೂರುವರೆ ವರ್ಷಗಳ ತನಕ ತರಬೇತು ಮಾಡಿಸಿ, ಈ ದೇಶದಲ್ಲಿನ ಚಾ ತೋಟಗಳಲ್ಲಿ ಮೆನೇಜರರಾಗಿ ನೇಮಿಸುವರೆಂದು ಬಹಳ ಔದಾರ್ಯದಿಂದ ಪ್ರಕಟಿಸಿದ್ದಾರೆ. ಈ ತರಬೇತಿನ ಖರ್ಚಿಗಾಗಿ ನಾನ್ನೂರು ಪವನುಗಳನ್ನು ವಿದ್ಯಾರ್ಥಿಯವ ಖರ್ಚುಮಾಡಬೇಕಾಗಿದೆ ತರಬೇತಾದ ಬಳಿಕ ಅವನಿಗೆ ತಿಂಗಳಿಗೆ ३०० ರೂಪಾಯಿ ಸಂಬಳ ದೊರೆವುದು ಇದು ತೀರ ಅಸಂಗತವಾದ ವಿಚಾರ ಟೀ ಎಸೋಸಿಯೇಶನಿನವರು ತಮ್ಮ ವಿಷಯ ಎಲ್ಲಾ ವಿದ್ಯಾರ್ಥಿಗಳು ಮಾತಾಡುತ್ತ ಒಂದು ಬಗೆಯಾಗಿ 'ಎಡ್ವರ್ಟಾಯಿಸ್' ಮಾಡಲೆಂದು ಈ ಉಪಾಯ ಮಾಡಿರುವರೋ ಎಂದು ಸಂದೇಹಪಡಬೇಕಾಗಿದೆ. ४०० ಪವನು ವ್ಯಯಿಸಿ ಇಂಗ್ಲೆಂಡಿನಲ್ಲಿ ಒಬ್ಬ ಬಡಗಿಗೆ ಸಿಗುವ ಸಂಬಳವನ್ನು ಇವನಿಗೆ ಕೊಟ್ಟು, ಪ್ಲೆಂಟರನನ್ನಾಗಿ ಮಾಡುವ ಹವ್ಯಾಸವು ಈ ಎಸೋಸಿಯೇಶನಿಗೆ ಏತಕ್ಕೆ? ಈ ಪ್ಲೆಂಟರ್ ಪದವಿಯಾದರೂ ಐದು ವರ್ಷಗಳ ತನಕ ಮಾತ್ರವಂತೆ. ಅನಂತರ ಈ ತರಬೇತಾದ ಹುದ್ದೆದಾರನನ್ನು ಪಾಲಿಸುವವರಾರು? ಈ ಪ್ರಶ್ನೆಗೆ ಎಸೋಸಿಯೇಶನಿನ ಉತ್ತರವಿಲ್ಲ ಪ್ಲೆಂಟರನಾಗಿ ತೋಟದಲ್ಲಿ ಯೂರೋಪೀಯರು ಜೀವನ ಮಾಡುವರಾದರೆ, ಮುನ್ನೂರು ರೂಪಾಯಿಯನ್ನು ತಿಂಗಳ ಅಂತ್ಯಕ್ಕೆ ३०-४० ರೂಪಾಯಿಗಳನ್ನು ಉಳಿಸುವುದು ಕಷ್ಟವೆಂದು ಇಲ್ಲಿನ ಪ್ಲೆಂಟರರೆನ್ನುವರು. ಇದರಿಂದ ಐದು ವರ್ಷದ ಜೈಲು ವಾಸಕ್ಕೆ ಯುವಕರನ್ನು ಕಳಿಸಿದಷ್ಟೆ ಕಷ್ಟವಾಗುವುದಾಗಿ ಬ್ರಿಟಿಷರೆನ್ನುವರು. ಇದರ ಬದಲಾಗಿ, ನಮ್ಮ ದೇಶದಲ್ಲಿ ಬೆಳೆಸುವ ಚಾವನ್ನು, ಇಲ್ಲಿ ಸುಶಿಕ್ಷಿತ ಯುವಕರು ನಿರುದ್ಯೋಗಿಗಳಾಗಿರುವಾಗ, ಇಲ್ಲಿನವರನ್ನೆ ತರಬೇತು ಮಾಡಿಸುವರೆ ಇಂಡಿಯನ್ ಟೀ ಎಸೋಸಿಯೇಶನಿವರು ಏತಕ್ಕೆ ಸೂಚಿಸಬಾರದು? ಇಲ್ಲದಿದ್ದರೆ, ಇದರಲ್ಲಿ 'ಇಂಡಿಯನ್' ಎಂಬುದರ ಅರ್ಥವೇನು?

ಪಾರ್ಟಿಯ ಮಹತ್ವವೇ?

ಶ್ರೀಯುತ ರತ್ನಸಭಾಪತಿ ಗೌಂಡರ್ ಎಂಬಾತನನ್ನೂ ಇನ್ನು ಐದು ಮಂದಿಯೊಡನೆ ಸೇರಿಸಿ, ಕೊಯಮುತ್ತೂರು ಸೆಶನ್ಸ್ ಜಡ್ಜರ ಕೋರ್ಟಿನಲ್ಲಿ, ರಾಮಕೃಷ್ಣ ಜಮೀನ್ದಾರರಿಂದ ಜಬರದಸ್ತಿಯಿಂದ ಹಣ ಪಡೆದ ಸಬಬಿನ ಮೇಲೆ, ಮೊಕದ್ದಮೆ ನಡೆಯಿತು ಜ್ಯೂರಿಯವರು ವಿಚಾರಣೆಯ ತರುವಾಯ ಅಪಾದಿತನು ತಪ್ಪಿತಸ್ಥನೆಂದು ಒಮ್ಮತವಾಗಿ ಹೇಳಿದುದನ್ನು ಜಡ್ಜರು ಒಪ್ಪಿ, ಆತನಿಗೆ ಎರಡು ವರ್ಷ ಕಠಿಣ ಸಜೆ ವಿಧಿಸಿದರು ಹೈಕೋರ್ಟಿನಲ್ಲಿ ಆತನ ಅಪ್ಪೀಲನ್ನು ತಳ್ಳಿಹಾಕಿದರು ಆತನು ಈಗ ಸರಕಾರಕ್ಕೇ ಒಂದು ಅರ್ಜಿ ಬರೆದುಕೊಂಡು, ಜ್ಯೂರಿಯವರಲ್ಲಿ ಮೂವರು ಬ್ರಾಹ್ಮಣರು, ಬ್ರಾಹ್ಮಣರು ಹೆಚ್ಚಾಗಿ ಕೊಂಗ್ರೆಸ್ ಪಕ್ಷಪಾತಿಗಳು, ಜಿಲ್ಲೆಯಲ್ಲಿನ ಕೊಂಗ್ರೆಸ್ ಪಕ್ಷದವರು ತಾನು ಜಸ್ಟಿಸ್ ಪಕ್ಷದವನೆಂದು ವಿರೋಧಕಟ್ಟಿಕೊಂಡು ಪೋಲೀಸರೊಡನೆ ಹೀಗೆ ಅನ್ಯಾಯವಾಗಿ ಮೊಕದ್ದಮೆ ಹೂಡಿದರು. ಜಸ್ಟಿಸ್ ಪಕ್ಷದ ಗೌರವ ಕೆಡಿಸಲಿಕ್ಕಾಗಿ ಕೊಂಗ್ರೆಸ್ ಪಕ್ಷದವರು ಹೀಗೆ ಮಾಡಿದರೆಂದು ಅವನ ಆಕ್ಷೇಪ. 'ಜೂರಿಯವರಲ್ಲಿದ್ದ ಮೂವರು ಬ್ರಾಹ್ಮಣರಲ್ಲದೆ, ಮತ್ತೊಬ್ಬ ಬ್ರಾಹ್ಮಣೇತರನು ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿದ್ದವನು. ಪತ್ರಿಕೆಗಳಲ್ಲಿ ಈ ಮೊಕದ್ದಮೆಯ ವಿಷಯ ಬಹಳವಾಗಿ ಮೊದಲೇ ಪ್ರಕಟವಾಗಿದ್ದುದರಿಂದ ಜ್ಯೂರಿಯವರ ಅಭಿಪ್ರಾಯವೂ ತೀರ್ಮಾನವೂ ಪಕ್ಷಪಾತವುಳ್ಳದ್ದಾಗಿದೆ ಸೆಶನ್ಸ್ ಜಡ್ಜರು ಹೇಳಿಕೆ ತನ್ನ ಕಡೆಗಿದ್ದರೂ, ಜ್ಯೂರಿಯವರೆ ವಿರೋಧವಾಗಿ ತೀರ್ಮಾನಿಸಿದರು' ಎಂದು ಮೊದಲಾಗಿ ಬರೆದ ಅರ್ಜಿಯನ್ನು ಗವರ್ನರರಿಗೂ ಗವರ್ನರ ಜನರಲರಿಗೂ ಕಳುಹಿಸಿದನು ಈ ಮಧ್ಯೆ ಜ್ಯೂರಿಯವರ ನಿರ್ಣಯವನ್ನು ಅಂಗೀಕರಿಸಲು ಜಡ್ಜರು ಒಂದು ದಿನ ಸಮಯ ತೆಗೆದು, ಅವರ ಅಭಿಪ್ರಾಯದಂತೆ ತಾವೂ ತೀರ್ಮಾನಿಸಿ ಶಿಕ್ಷೆ ವಿಧಿಸಿದರಲ್ಲದೆ, ಶಿಕ್ಷೆಯು ಕಡಿಮೆಯಾಯಿತೆಂದು ಸರಕಾರವು ಆಕ್ಷೇಪವೆತ್ತಿದ್ದುಂಟು. ಅದಕ್ಕೆ, ಗವರ್ನರರು ಆತನ ಹೇಳಿಕೆ ಮನ್ನಿಸಿ, ಅನುಭವಿಸಿದ ಸಜೆಯಷ್ಟೆ (೫ ತಿಂಗಳು ೧೧ ದಿನ) ಸಾಕೆಂದರು; ಗವರ್ನರರ ಜನರಲರು ಎಲ್ಲಾ ಸಜೆಯನ್ನೂ ಮಾಫಿ ಮಾಡಿದರು!

ಸರಕಾರದವರಿಂದ ರಿಜಿಸ್ಟರ ಮಾಡಲ್ಪಟ್ಟ ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ
ಅರ್ಕಶಫಾ ಅಥವಾ ಆರೋಗ್ಯಬಿಂದು.

ಸ್ಥಾಪನಾ 1909

ರೋಗದ ನಾಮಗಳು:— ಕ್ಷಯ ರೋಗ, ಉಬ್ಬಸ ರೋಗ, ಹಳೆದ ಕೆಮ್ಮು, ದಮ್ಮು, ಅಜೀರ್ಣ, ಕಾಲರಾ (ಮರಿಬೇನೆ), ಪ್ಲೇಗು, ಇನ್‌ಪ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲ ರೋಗ, ಗಂಡುಮಾಲೆ, ಸಾರೆಹುಣ್ಣು, ಪಕ್ಷಘಾತ, ಶಿರಶೂಲೆ, ಮಾಳಗಿ ಹೊಳಗಿನ ಬಿಸಿ ಮೊದಲಾದುವುಗಳು, ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ, ಹೊಟ್ಟೆ ಶೂಲೆ, ಸಣ್ಣ ಕೂಸುಗಳಿಗೆ ಆದ ರೋಗಗಳು, ಅರಿವು, ಮುಟ್ಟಿನದೋಷ, ಹೊಟ್ಟೆ ದೊಡ್ಡದಾಗೋಣ, ಕೋಡಗೆಮ್ಮು ವ್ಯ ಹೊರಬೀಳೋಣ, ಮತ್ತು ಡಾಕ್ಟರರಿಗೂ, ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣಬರುವವು. ಅನೇಕ ರೋಗಗಳಿಗೆ ಒಂದೇ ಔಷಧವೆಂದರೆ ಜನರಿಗೆ ಆಶ್ಚರ್ಯ ಉಂಟಾಗಬಹುದು, ಅಂಥವರು ಒಂದು ಸಾರಿ ತಂದು ಮನಗಾಣಬೇಕು ಸ್ಥಾಪನಾ ಆಂದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ ಇದೀ ಕರ್ನಾಟಕದಲ್ಲೆಲ್ಲಾ ಹೋಗುತ್ತವೆ

೧ ತೊಲೆ ಬಾಟ್ಲಿ ಒಂದಕ್ಕೆ ರೂ. ೨ ನಮೂನೆ ಉದ್ದೇಶ ೫ ೬ ತೊಳದ ಬಾಟ್ಲಿ ಒಂದಕ್ಕೆ ೫ ೮. ಚಿಕ್ಕ ಬಾಟ್ಲಿ ಒಂದೇ ಸಾರಿ ಒಂದು ಡಜನ್ ತರಿಸಿಕೊಳ್ಳುವವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು ಟಪ್ಪಾಲ ಖರ್ಚು ಹೆಚ್ಚು ಆದ ಕಾರಣ ಈ ಪ್ರಕಾರ ವ್ಯವಸ್ಥೆ ಮಾಡಿದೆ. ಟಪ್ಪಾಲ ಖರ್ಚು ೧೧ ಆಣೆ. ೧ ತೊಲೆ ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು, ಟಪ್ಪಾಲ ಖರ್ಚು ೧೧ ಆಣೆ ಬೀಳುವುದು ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ ಸಣ್ಣ ಬಾಟ್ಲಿ ಒಂದೇ ಬೇಕಾದರೆ ಕಳಿಸಲಾಗದು ಟಪ್ಪಾಲ ಖರ್ಚು ೮ ಆಣೆ ಬರುವುದು ಕನಿಷ್ಟ ಪಕ್ಷಕ್ಕೆ ಎರಡು ರೂಪಾಯಿಯ ಔಷಧ ತರಿಸಿಕೊಂಡರೆ ಕಳಿಸುತ್ತೇವೆ ಟ ಖರ್ಚು ೮ ಆಣೆ ಬೀಳುವುದು.

ತಿಳಕೊಳ್ಳುವ ಪ್ರಮಾಣ—ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು. ಬಾ. ಯ ಕೂಡ ಕಳಿಸುವೆವು ಔಷಧವು ಖೊಟ್ಟಿಯಾಗಿ ತೋರಿದರೆ ಉಳಿದ ಬಾಟ್ಲಿ ಪರತ ತೆಗೆದುಕೊಂಡು ಹಣ ತಿರುಗಿ ಕೊಡುವೆವು ಬೇಡುವವರು ತಮ್ಮ ವಿಳಾಸ ಕನ್ನಡ, ಮರಾಠಿ, ಇಂಗ್ಲೀಷುಗಳಲ್ಲಿ ಸ್ಪಷ್ಟ ಬರೆಯಬೇಕು ತಮ್ಮ ಹೆಸರು ತಂದೆಯ ಹೆಸರು, ಅಡ್ಡ ಹೆಸರು, ಇರುವ ಗ್ರಾಮ ಪೋಸ್ಟಾಫೀಸು, ತಾಲೂಕು ಜಿಲ್ಲಾ, ಸ್ಟೇಟ ಎಲ್ಲಾ ಖುಲಾಸ ಬರೆಯಬೇಕು

ನಮ್ಮ ವಿಳಾಸ — ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸು, ಪೊ. ಶಹಾಪೂರ [ಬೆಳಗಾಂವಿ]

New Era Technic... School,
Near Market Square, Udipi

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್
ಸಂತೆಕಟ್ಟೆ, ಉಡುಪಿ

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

ಡಾಕ್ಟರ ವಾಮನ ಗೋಪಾಳರವರ



ಜಗದ್ವಿಖ್ಯಾತ ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೪೫ ವರ್ಷದ ಅನುಭವ
ಉಪಯೋಗಿಸಿದವರೇ ಹೇಳಿದ್ದಾರೆ
ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅಶಕ್ತತೆಗೆ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ ಮುಂಬಾಯಿ,
ಏಜೆಂಟ್ಸ್—ಶಾ ಕಂಪೆನಿ ಮಂಗಳೂರು
(ಪತ್ರವ್ಯವಹಾರ ಇಂಗ್ಲಿಷ್ ಭಾಷೆಯಲ್ಲಿ ಮಾಡಬೇಕು.)

ನಿಮ್ಮ ಮಿತ್ರರನ್ನು
ಸ್ವದೇಶಾಭಿಮಾನಿಯ
ಚಂದಾದಾರರನ್ನಾಗಿ ಮಾಡಿರಿ.

'ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್,
ಮಡಿಕೇರಿಗುಡ್ಡೆ, ಮಂಗಳೂರು

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು—ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕು ದರದಲ್ಲಿ ಒದಗಿಸಿಕೊಡಬಹುದು.

ಎಲ್ಲಾ ಜವಳಿ ಬೆಲೆಗೆ ಮಿೂರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ ಪವನು!
ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ.

ನಮ್ಮ ಮಾಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಪೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಯುಂ. ವೆಂಕಟೇಶ ರಂಗ ಪೈ, ಪ್ರೊಪ್ರೈಟರ್.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ
ಕಸ್ತೂರಿ ಬಂಗಾರ ಮಿಶ್ರಿತವಾದುದು.
ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.
ಡಬ್ಬಿ 1ಕ್ಕೆ ರೂ. 3—0—0.

ಮಲೇರಿಯಾ ನಿವಾರಿಣಿ
ಚಳಿಜ್ವರ, ಮಲೆಜ್ವರ, ಇನ್‌ಪ್ಲುಯೆಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.
ಬಾಟ್ಲಿ 1ಕ್ಕೆ ರೂ. 1—8—0.

ಚವನ ಪ್ರಾಶ್ಯ
ಇದು ಅತ್ಯಂತ ಶಕ್ತಿವರ್ಧಕ ರಸಾಯನ ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ 2-8-0. ½ಕ್ಕೆ ರೂ. 1-5-0.

ಮೇಹಕುಠಾರ
20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.
ಡಬ್ಬಿ 1ಕ್ಕೆ ರೂ. 2—8—0.

ಕಸ್ತೂರಿ ಮಿಶ್ರಣ ದಶಮೂಲ
ಒುರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ
ಬಾಟ್ಲಿ 1ಕ್ಕೆ ರೂ 1—8—0.

ದಂತ ಕಾಂತಿ ಚೂರ್ಣ
ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—
ಡಬ್ಬಿ 1ಕ್ಕೆ ರೂ. 0-2-6. 12ಕ್ಕೆ ರೂ 1-12-0.

ಪೈ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:
ಪದ್ಮನಾಭ ಪೈ, ಚಿಕ್ಕಮಂಗಳೂರು. 3. ಡಾಕ್ಟರ್ ಶ್ರೀನಿವಾಸ ಪೈ, ಪುತ್ತೂರು. 4. ವಿ. ಬಿ. ಕಾಮತ್ ಮಡಿಕೇರಿ.
...ಶ್, ಶ್ರೀರಾಮಪೇಟೆ, ಕಾಸರಗೋಡು. 5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ಪರೀಕ್ಷೆಯ ಮೊದಲೇ ಪ್ರಶ್ನಾಪತ್ರಗಳು ಪ್ರಕಟವಾದವು

ಅದಕ್ಕಾಗಿ ಐದು ಜಿಲ್ಲೆಗಳ ರಾಜಧಾನಿಗಳಲ್ಲಿ ಮಾತ್ರ, ಆಯಾ ಜಿಲ್ಲೆಯಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತುಕೊಳ್ಳುವವರಾಗಿದ್ದವರೆಲ್ಲರು, ತಾ. ೨೦ಕ್ಕೆ ಮೂರು ರೂಪಾಯಿ ಫೀಸನ್ನು ಕೆತ್ತು ಪುನಃ ಪರೀಕ್ಷೆಗೆ ಹಾಜರಾಗಬೇಕಾಗಿದೆ ಎಂದು ಈಗ ಸರಕಾರವು ಪ್ರಕಟಿಸಿಯದೆ ನಮ್ಮ ಡೈರೆಕ್ಟರ ಸಾಹೇಬರು ಈ ವಿಷಯ ಕೆಲವು ಅಮೂಲ್ಯ ಅಭಿಪ್ರಾಯಗಳನ್ನು ತಿಳಿಸಿರುವರು.—"ಈ ಪತ್ರಗಳು ಹೊರಬೀಳುವಂತೆ ಪ್ರಯತ್ನಿಸಿದ ಜನರ ಮನೋವೃತ್ತಿ ವಿಚಿತ್ರವಾಗಿದೆ. ನಮ್ಮ ಸಂಸ್ಥಾನದಲ್ಲಿ ನೈತಿಕ ಶಿಕ್ಷಣವು ಎಷ್ಟು ಹಾಳಾಗಿದೆಯೆಂದರೆ, ಪ್ರಶ್ನಾ ಪತ್ರಗಳನ್ನು ಪಡೆಯಲು ವಿದ್ಯಾರ್ಥಿಯರು ಶತಪ್ರಯತ್ನ ಮಾಡುವರಲ್ಲದೆ, ಅವುಗಳಿಗಾಗಿ ಹಣವನ್ನು ತೆರಲೂ ಹಿಂತೆಗೆವುದಿಲ್ಲ! ಇಂತಹ ವಿದ್ಯಾರ್ಥಿಯರಿಗೆ ಈ ಪ್ರಶ್ನಾ ಪತ್ರಗಳನ್ನು ಕೊಂಡುಕೊಳ್ಳಲು ಬೇಕಾದ ಹಣ ಕೊಡುವ ರಕ್ಷಕರೂ ಇದ್ದಾರೆಂಬುದು ವಿಚಿತ್ರವಾಗಿದೆ. ಇಂತಹ ದುಷ್ಕಾರ್ಯ ಮಾಡಲು ಪ್ರೋತ್ಸಾಹ ಕೊಡುವ ಉಪಾಧ್ಯಾಯರೂ ಇದ್ದಾರಲ್ಲ! ಹೆಡ್‌ಮಾಸ್ತರರ ಸಂಘವು ಈ ವಿಷಯಗಳನ್ನು ಪರ್ಯಾಲೋಚಿಸಬೇಕಾಗಿದೆ ವರ್ಷದಲ್ಲೆಲ್ಲ ವಿದ್ಯಾರ್ಥಿಯರಿಗೆ ಪ್ರಶ್ನೆ ಹಾಕಿ, ಉತ್ತರ ಬರೆವ ಕ್ರಮ ಸೂಚಿಸಿ, ವಿದ್ಯಾರ್ಥಿಯರು ಸಮರ್ಥರಾಗುವಂತೆ ಉಪಾಧ್ಯಾಯರು ಪ್ರಯತ್ನಿಸಬೇಕಾದುದು ಸಹಜ ಪರೀಕ್ಷೆಗೆ ಕೆಲದಿನಗಳಿರುವಾಗ ಓಡಾಡುವ ವಿದ್ಯಾರ್ಥಿಗಳು ಪ್ರಶ್ನಾ ಪತ್ರಗಳನ್ನು, ಅದೇ ಪರೀಕ್ಷೆಗೆ ಕೊಡಲಾಗುವುದೆಂದು ನಂಬಿ, ಶಿಕ್ಷಕರ ಬಳಿಗೆ ಬಂದರೆ, ಅಂತಹ ವಿದ್ಯಾರ್ಥಿಗಳನ್ನು ದೂರವಿರಿಸಬೇಕು ಈ ವರ್ಷ ಪ್ರಶ್ನಾ ಪತ್ರಗಳಲ್ಲಿ ಕೊಟ್ಟಿದ್ದ ಪ್ರಶ್ನೆಗಳನ್ನು ವಿದ್ಯಾರ್ಥಿಯರು ಉಪಾಧ್ಯಾಯರಿಗೆ ಕೊಂಡುಕೊಟ್ಟು ಉತ್ತರಗಳನ್ನು ಪಡೆಯಲು ಸಾಧಿಸಿದರು ಇಂತಹ ಕೆಲಸವನ್ನು ಉಪಾಧ್ಯಾಯರು ಮಾಡಬಹುದೇ? ನಮ್ಮ ಆಧಿಪತ್ಯದ ಹೆಸರು ಹಾಳಾಯಿತು ಇದು ಭಯಂಕರ ಕೆಡುಕು' ಡೈರೆಕ್ಟರರ ಕೊನೆಯ ವಾಕ್ಯಗಳಲ್ಲಿ ತಮಗೂ ಇತರ ಯಾವ ಕರ್ತವ್ಯವೂ ಇಲ್ಲವೆಂಬಂತೆ, ಉಪಾಧ್ಯಾಯರು ವಿದ್ಯಾರ್ಥಿಗಳ ಪ್ರಶ್ನೆಗಳನ್ನು ಉತ್ತರಿಸಬಾರದೆಂದು ಅಪ್ಪಣೆ ಕೊಟ್ಟು ತೀರ್ಮಾನಿಸಿದರಲ್ಲ



ವಸ್ತ್ರಗಳನ್ನು ಉಡುಪುಗಳನ್ನೂ ಶುಭ್ರವಾಗಿಯೂ ಪ್ರಕಾಶವಾಗಿಯೂ ಇಡುವುದು ಹೇಗೆ!

"ನಿನ್ನ ಮನೆಯನ್ನು ನೋಡಿದರೆ ಮನಸ್ಸಂತೋಷವಾಗುತ್ತೆ! ಎಲ್ಲಾ ಪದಾರ್ಥಗಳೂ ಶುಭ್ರವಾಗಿಯೂ ಹೊಸದರಹಾಗಿಯೂ ಕಾಣಿಸಲ್ಪಡುವದಲ್ಲ!"
"ಅದು ಹೇಗೆಂದರೆ ನನ್ನ ಸಲವೆಗೆಲ್ಲಾ ಸನ್‌ಲೈಟನ್ನೇ ಉಪಯೋಗಿಸುವದರಿಂದ, ಬಟ್ಟೆಗಳ ಹೊಸದರಹಾಗಿರುವದು."

"ನೀನು ಯಾವಾಗಲೂ ಸನ್‌ಲೈಟನ್ನೆ ಉಪಯೋಗಿಸುವದರಲ್ಲಿ ಏನೂ ಆಶ್ಚರ್ಯವಿಲ್ಲ. ನಾನು ಅದನ್ನು ಪ್ರಾರಂಭಿಸಿದ ಮೇಲೆ ಸಲವೆಯಲ್ಲಿ ತುಂಬ ಬದಲಾವಣೆ ಇದೆ"
"ಹೌದು! ಸನ್‌ಲೈಟಿನಿಂದ ನಿನ್ನ ಮನೆಯಲ್ಲಿಯೇ ಏನೂ ಶ್ರಮವಿಲ್ಲದೆ ಎಲ್ಲಾ ಬಟ್ಟೆಗಳನ್ನು ಒಗೆಯಬಹುದು"

ಸಲವೆಗೆಲ್ಲಾ ಸನ್‌ಲೈಟೇ ಸನ್‌ಲೈಟಿನ ಅಪರಿಮಿತವಾದ ನೊರೆಯು ಬಟ್ಟೆಗಳಲ್ಲಿರುವ ಮಾಲಿನ್ಯವನ್ನು ಅತಿ ನುಟ್ಟವಾಗಿಯೂ ಮತ್ತು ಸುಲಭವಾಗಿಯೂ ಹೊರಗಾಡಿಸುವುದು ನಿಮ್ಮ ಮನೆಯಲ್ಲಿ ಅದು ಯಾವಾಗಲೂ ಇರಲಿ ನಿಮ್ಮ ಸಲವೆಗೆಲ್ಲಾ ಸನ್‌ಲೈಟೇ ಯಾಗಿರಲಿ ಅದು ಈಗ ತುಂಬಾ ಸರಸವಾಗಿರುವುದು



SUNLIGHT SOAP

1 S 1105-268A

LEVER BROTHERS (INDIA) LTD

KANARESE

ಪ್ಲೆಂಟರರ ವಿಲೇವಾರಿ

ಹೆಸಗೆರ್ಗಿಂದ ಶಾಲೆಯ ವಿದ್ಯಾರ್ಥಿಯಾಗಿರುವವರನ್ನು ಇಂಗ್ಲೆಂಡಿನ ಹೆಡ್‌ಮಾಸ್ತರರ ಪರಿಷತ್ತಿನ ಸಹಕಾರದೊಡನೆ ಇಂಡಿಯನ್ ಟೀ ಎಸೋಸಿಯೇಶನ್‌ನವರು ಇಂಗ್ಲೆಂಡಿನಲ್ಲಿ ಎರಡು ಅಥವಾ ಮೂರುವರೆ ವರ್ಷಗಳ ತನಕ ತರಬೇತು ಮಾಡಿಸಿ, ಈ ದೇಶದಲ್ಲಿನ ಚಾ ತೋಟಗಳಲ್ಲಿ ಮೆನೇಜರರಾಗಿ ನೇಮಿಸುವರೆಂದು ಬಹಳ ಔದಾರ್ಯದಿಂದ ಪ್ರಕಟಿಸಿದ್ದಾರೆ ಈ ತರಬೇತಿನ ಖರ್ಚಿಗಾಗಿ ನಾನ್ನೂರು ಪವನುಗಳನ್ನು ವಿದ್ಯಾರ್ಥಿಯು ಖರ್ಚುಮಾಡಬೇಕಾಗಿದೆ ತರಬೇತಾದ ಬಳಿಕ ಅವನಿಗೆ ತಿಂಗಳಿಗೆ ೩೦೦ ರೂಪಾಯಿ ಸಂಬಳ ದೊರೆವುದು ಇದು ತೀರ ಅಸಂಗತವಾದ ವಿಚಾರ ಟೀ ಎಸೋಸಿಯೇಶನಿನವರು ತಮ್ಮ ವಿಷಯ ಎಲ್ಲಾ ವಿದ್ಯಾರ್ಥಿಗಳು ಮಾತಾಡುತ್ತ ಒಂದು ಬಗೆಯಾಗಿ 'ಎಡ್ವರ್ಟೈಯಿಸ್' ಮಾಡಲೆಂದು ಈ ಉಪಾಯ ಮಾಡಿರುವರೋ ಎಂದು ಸಂದೇಹಪಡಬೇಕಾಗಿದೆ ೪೦೦ ಪವನು ವ್ಯಯಿಸಿ ಇಂಗ್ಲೆಂಡಿನಲ್ಲಿ ಒಬ್ಬ ಬಡಗಿಗೆ ಸಿಗುವ ಸಂಬಳವನ್ನು ಇವನಿಗೆ ಕೊಟ್ಟು, ಪ್ಲೆಂಟರನನ್ನಾಗಿ ಮಾಡುವ ಹವ್ಯಾಸವು ಈ ಎಸೋಸಿಯೇಶನಿಗೆ ಏತಕ್ಕೆ? ಈ ಪ್ಲೆಂಟರ್ ಪದವಿಯಾದರೂ ಐದು ವರ್ಷಗಳ ತನಕ ಮಾತ್ರವಂತೆ ಅನಂತರ ಈ ತರಬೇತಾದ ಹುದ್ದೆದಾರನನ್ನು ಸಾಲಿಸುವವರಾರು? ಈ ಪ್ರಶ್ನೆಗೆ ಎಸೋಸಿಯೇಶನಿನ ಉತ್ತರವಿಲ್ಲ ಪ್ಲೆಂಟರನಾಗಿ ತೋಟದಲ್ಲಿ ಯುರೋಪಿಯರು ಜೀವನ ಮಾಡ ಬರಾದರೆ, ಮುನ್ನೂರು ರೂಪಾಯಿಯನ್ನು ತಿಂಗಳ ಅಂತ್ಯಕ್ಕೆ ೩೦-೪೦ ರೂಪಾಯಿಗಳನ್ನು ಉಳಿಸುವುದು ಕಷ್ಟವೆಂದು ಇಲ್ಲಿನ ಪ್ಲೆಂಟರರೆನ್ನುವರು ಇದರಿಂದ ಐದು ವರ್ಷದ ಜೈಲು ವಾಸಕ್ಕೆ ಯುವಕರನ್ನು ಕಳಿಸಿದಷ್ಟೆ ಕಷ್ಟವಾಗುವುದಾಗಿ ಬ್ರಿಟಿಷರೆನ್ನುವರು ಇದರ ಬದಲಾಗಿ, ನಮ್ಮ ದೇಶದಲ್ಲಿ ಬೆಳೆಸುವ ಚಾವನ್ನು, ಇಲ್ಲಿ ಸುಶಿಕ್ಷಿತ ಯುವಕರು ನಿರುದ್ಯೋಗಿಗಳಾಗಿರುವಾಗ, ಇಲ್ಲಿನವರನ್ನೆ ತರಬೇತು ಮಾಡಿಸುವರೆ ಇಂಡಿಯನ್ ಟೀ ಎಸೋಸಿಯೇಶನಿನವರು ಏತಕ್ಕೆ ಸೂಚಿಸಬಾರದು? ಇಲ್ಲದಿದ್ದರೆ, ಇದರಲ್ಲಿ 'ಇಂಡಿಯನ್' ಎಂಬುದರ ಅರ್ಥವೇನು?

ಪಾರ್ಟಿಯ ಮಹತ್ವವೇ?

ಶ್ರೀಯುತ ರತ್ನಸಭಾಪತಿ ಗೌಂಡರ್ ಎಂಬಾತನನ್ನೂ ಇನ್ನು ಐದು ಮಂದಿಯೊಡನೆ ಸೇರಿಸಿ, ಕೊಯಮ್ಮತ್ತೂರು ಸೆಶನ್ಸ್ ಜಡ್ಜರ ಕೋರ್ಟಿನಲ್ಲಿ, ರಾಮಕೃಷ್ಣ ಜವಿಹನ್ನಾರಿಂದ ಜಬರದಸ್ತಿಯಿಂದ ಹಣ ಪಡೆದ ಸಬಬಿನ ಮೇಲೆ, ಮೊಕದ್ದಮೆ ನಡೆಯಿತು ಜ್ಯೂರಿಯವರು ವಿಚಾರಣೆಯ ತರುವಾಯ ಅಪಾದಿತನು ತಪ್ಪಿತಸ್ಥನೆಂದು ಒಮ್ಮತವಾಗಿ ಹೇಳಿದುದನ್ನು ಜಡ್ಜರು ಒಪ್ಪಿ ಆತನಿಗೆ ಎರಡು ವರ್ಷ ಕಠಿಣ ಸಜೆ ವಿಧಿಸಿದರು ಹೈಕೋರ್ಟಿನಲ್ಲಿ ಆತನ ಅಪ್ಪೀಲನ್ನು ತಳ್ಳಿಹಾಕಿದರು ಆತನು ಈಗ ಸರಕಾರಕ್ಕೇ ಒಂದು ಅರ್ಜಿ ಬರೆದುಕೊಂಡು, ಜ್ಯೂರಿಯವರಲ್ಲಿ ಮೂವರು ಬ್ರಾಹ್ಮಣರು, ಬ್ರಾಹ್ಮಣರು ಹೆಚ್ಚಾಗಿ ಕೊಂಗ್ರೆಸ್ ಪಕ್ಷಪಾತಿಗಳು, ಜಿಲ್ಲೆಯಲ್ಲಿನ ಕೊಂಗ್ರೆಸ್ ಪಕ್ಷದವರು ತಾನು ಜಸ್ಟಿಸ್ ಪಕ್ಷದವನೆಂದು ವಿರೋಧಕಟ್ಟಿಕೊಂಡು ಪೋಲೀಸರೊಡನೆ ಹೀಗೆ ಅನ್ಯಾಯವಾಗಿ ಮೊಕದ್ದಮೆ ಹೂಡಿದರು ಜಸ್ಟಿಸ್ ಪಕ್ಷದ ಗೌರವ ಕೆಡಿಸಲಿಕ್ಕಾಗಿ ಕೊಂಗ್ರೆಸ್ ಪಕ್ಷದವರು ಹೀಗೆ ಮಾಡಿದರೆಂದು ಅವನ ಆಕ್ಷೇಪ 'ಜೂರಿಯವರಲ್ಲಿದ್ದ ಮೂವರು ಬ್ರಾಹ್ಮಣರಲ್ಲದೆ, ಮತ್ತೊಬ್ಬ ಬ್ರಾಹ್ಮಣೇತರನು ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿದ್ದವನು ಪತ್ರಿಕೆಗಳಲ್ಲಿ ಈ ಮೊಕದ್ದಮೆಯ ವಿಷಯ ಬಹಳವಾಗಿ ಮೊದಲೇ ಪ್ರಕಟವಾಗಿದ್ದುದರಿಂದ ಜ್ಯೂರಿಯವರ ಅಭಿಪ್ರಾಯವೂ ತೀರ್ಮಾನವೂ ಪಕ್ಷಪಾತವುಳ್ಳದ್ದಾಗಿದೆ ಸೆಶನ್ಸ್ ಜಡ್ಜರು ಹೇಳಿಕೆ ಕಣ್ಣ ಕಡೆಗಿದ್ದರೂ, ಜ್ಯೂರಿಯವರು ವಿರೋಧವಾಗಿ ತೀರ್ಮಾನಿಸಿದರು' ಎಂದು ಮೊದಲಾಗಿ ಬರೆದ ಅರ್ಜಿಯನ್ನ ಗವರ್ನರರಿಗೂ ಗವರ್ನರ ಜನರಲರಿಗೂ ಕಳುಹಿಸಿದನು ಈ ಮಧ್ಯೆ ಜ್ಯೂರಿಯವರ ನಿರ್ಣಯವನ್ನು ಅಂಗೀಕರಿಸಲು ಜಡ್ಜರು ಒಂದು ದಿನ ಸಮಯ ತೆಗೆದು, ಅವರ ಅಭಿಪ್ರಾಯದಂತೆ ತಾವೂ ತೀರ್ಮಾನಿಸಿ ಶಿಕ್ಷೆ ವಿಧಿಸಿದರಲ್ಲದೆ, ಶಿಕ್ಷೆಯು ಕಡಿಮೆಯಾಯಿತೆಂದು ಸರಕಾರವು ಆಕ್ಷೇಪವೆತ್ತಿದ್ದುಂಟು. ಆದರೆ, ಗವರ್ನರರು ಆತನ ಹೇಳಿಕೆ ಮನ್ನಿಸಿ, ಅನುಭವಿಸಿದ ಸಜೆಯಷ್ಟೆ (೫ ತಿಂಗಳು ೧೧ ದಿನ) ಸಾಕೆಂದರು, ಗವರ್ನರ ಜನರಲರು ಎಲ್ಲ ಸಜೆಯನ್ನೂ ಮಾಫಿ ಮಾಡಿದರು!

ಸರಕಾರದಲ್ಲಿ ರಜಿಸ್ಟರ ಮಾಡಲ್ಪಟ್ಟ ಪ್ರಸಿದ್ಧವಾದ

ರೋಗದ ನಾಮಗಳು--ಕ್ಷಯ ರೋಗ, ಬಾಣಂತಿರೋಗ, ಹಡೆದ ಸಂಜು, ದಮ್ಮು, ಅಡಗ್ನಿ ಕಾಲರಾ, (ಮಾರಿಕಾ,) ಪ್ಲೇಗು, ಇನ್ ಫ್ಲುಯಿಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮಲ ರೋಗ, ಗಂಡುಮಾಲೆ, ನಾರಹುಣ್ಣು, ಶಸ್ತ್ರಘಾಯ, ಶಿಶುಶೂಲೆ, ಮೂಗಿನೊಳಗಿನ ಏನು ಮೊದಲಾದುವುಗಳು, ಕಣ್ಣಿನೊಳಗೆ ಹೂವು ಬೀಳೋದು, ಅಜೀರ್ಣ, ಹೊಟ್ಟೆ ಶೂಲೆ, ಸಣ್ಣ ಕೂಸುಗಳಿಗೆ ಆದ ರೋಗಗಳು, ಅರಿವು, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋದು, ಕೋಡಗಿಮ್ಮು ಹೊರಬೀಳೋದು, ಮತ್ತು ಡಾಕ್ಟರರಿಗೂ, ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣಬರುವುದು. ಅನೇಕ ರೋಗಗಳಿಗೆ ಒಂದೇ ಔಷಧವೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು, ಅಂಥವರು ಒಂದು ಸಾರಿ ತಂದು ನೋಡಬೇಕು. ಸ್ಥಾಪನಾ ಆಂದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ. ಇದೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ.

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರವಾಸಮಿತ್ರ ಮೂರ್ತಿಮಂತವೈದ್ಯ

೧ ತೊಲೆ ಬಾಟ್ಲಿ ಒಂದಕ್ಕೆ ರೂ. ೨. [illegible] ತೊಲದ ಬಾಟ್ಲಿ ಒಂದಕ್ಕೆ [illegible] ಚಿಕ್ಕ ಬಾಟ್ಲಿ ಒಂದೇ ಸರಿ ಒಂದು ಡಜನ್ ತರಿಸಿಕೊಳ್ಳುವವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು. ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು. ಟಪಾಲ ಖರ್ಚು ಹೆಚ್ಚು ಆದ ಕಾರಣ ಈ ಪ್ರಕಾರ ವ್ಯವಸ್ಥೆ ಮಾಡಿದೆ. ಟಪಾಲ ಖರ್ಚು ೧೧ ಆಣೆ. ೧ ತೊಲೆ ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು. ಟಪಾಲ ಖರ್ಚು ೧೧ ಆಣೆ ಬೀಳುವುದು. ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ. ಸಣ್ಣ ಬಾಟ್ಲಿ ಒಂದೇ ಬೇಡಿದರೆ ಕಳಿಸಲಾಗದು. ಟಪಾಲ ಖರ್ಚು ೮ ಆಣೆ ಬರುವುದು. ಕನಿಷ್ಠ ಪಕ್ಷಕ್ಕೆ ಎರಡು ರೂಪಾಯಿಯ ಔಷಧ ತರಿಸಿಕೊಂಡರೆ ಕಳಿಸುತ್ತೇವೆ. ಟ. ಖರ್ಚ ೮ ಆಣೆ ಬೀಳುವುದು.

ತಿಳಿಯ್ಕೊಳ್ಳುವ ಪ್ರಮಾಣ—ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು. ಬಾಟ್ಲಿಯ ಕೂಡ ಕಳಿಸುವೆವು. ಔಷಧವು ಬೊಟ್ಟಿಯಾಗಿ ಹೋದರೆ ಉಳಿದ ಬಾಟ್ಲಿ ಮರಳ ತೆಗೆದುಕೊಂಡು ಹಣ ತಿರುಗಿ ಕೊಡುವೆವು. ಬೇಡುವವರು ತಮ್ಮ ವಿಳಾಸ ಕನ್ನಡ, ಮರಾಠಿ, ಇಂಗ್ಲೀಷುಗಳಲ್ಲಿ ಸ್ಪಷ್ಟ ಬರೆಯಬೇಕು. ತಮ್ಮ ಹೆಸರು, ತಂದೆಯ ಹೆಸರು, ಅಡ್ಡ ಹೆಸರು, ಇರುವ ಗ್ರಾಮ, ಪೋಸ್ಟಾಫೀಸು, ತಾಲೂಕು, ಜಿಲ್ಲಾ, ಸ್ಟೇಟ ಎಲ್ಲಾ ಖುಲಾಸ ಬರೆಯಬೇಕು.

ನಮ್ಮ ವಿಳಾಸ—ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸು, ಪೋ. ಶಹಾಪೂರ [ಬೆಳಗಾಂವಿ]

New Era Technical School.

Near Market Square, Udipi.

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course and insure against unemployment. Details may be had on application to the Manager

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್,

ಮಡಿಕೇರಿಗುಡ್ಡೆ, ಮಂಗಳೂರು.

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು—ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ. ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದೆ. ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕ ದರದಲ್ಲಿ ಒದಗಿಸಿಕೊಡಬಹುದು.

ಎಲ್ಲಾ ಜವಳಿ ಬೆಲೆಗೆ ಮಿರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ ಪವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ.

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘವೇಂದ್ರ ರಂಗ ಶೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಯಂ. ವೆಂಕಟೇಶ ರಂಗ ಶೈ, ಪ್ರೊಪ್ರೈಟರ್.

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಡ್ಸ ಸಾರ್ಸಪರಿಲಾ ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ ಪ್ರೊಸ್ಟರಸ್ ಗುಳಿಗೆಗಳ ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಫಾಕಲಂದ್ವಾರ, ಮುಂಬಾಯಿ

ಸ್ಟಾಕಿಸ್ಟ—ಪಾ ಕಂಪೆನಿ ಮಂಗಳೂರು

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ]

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 3—0—0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ 2-8-0. ½ಕ್ಕೆ ರೂ 1 5-0.

ಕಸ್ತೂರಿ ಮಿಶ್ರಣ ದಶಮೂಲ

ಸ್ತ್ರೀರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಪ್ಲುಯಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.

ಬಾಟ್ಲಿ 1ಕ್ಕೆ ರೂ. 1—8—0.

ಮೇಹಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8—0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—

ಡಬ್ಬಿ 1ಕ್ಕೆ ರೂ. 0-2-6 12ಕ್ಕೆ ರೂ 1-12-0.

ಶೆಟ್ಟಿ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:

ಪದ್ಮನಾಭ ಶೈ, ಚಿಕ್ಕಮಂಗಳೂರು. 3. ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು 4 ವಿ. ಬಿ. ಕಾಮತ್ ಮಡಿಕೇರಿ.

ಶೆಟ್ಟಿ ಎಸ್, ಶ್ರೀರಾಮಪೇಟೆ, ಕಾಸರಗೋಡು. 5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ESTD. 1906.

The Canara Banking Corporation Udipi Ltd

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

The First Indigenous & Cosmopolitan Bank of S. K. District.

Capital Authorised, issued & Subscribed	Rs.	3,50,000	0	0
Paid up Capital	„	2,87,435	0	0
Reserves	„	3,69,986	0	0

FIXED DEPOSITS UP TO 5% 4-4-1936

Head office:—UDIPI, S. K.

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras 6. Bunder Mangalore, 7. Mercara & 8. Virarajendrapet.

THE BOMBAY LIFE ASSURANCE COMPANY, LIMITED.

KOCHIKAR BROTHERS, Madras Branch Secretaries and Chief Agents for Bombay City & Suburbs

ANNOUNCEMENT:—We have the pleasure to inform all our Constituents, Agents and Policy-holders that we have taken up a Newly Erected Bungalow 'Soumyalayam" in Puthiyara on the Taluq Office Road, opposite Puthiyara Post Office and are opening our Calicut Branch Office in the said Building on 14—3—1936. The present Office of Mr. C. Sankaran Nair, our Malabar District Agent, situated in Husur Road, will cease to exist and will merge in our New Branch Office. This has been necessitated by the vast expansion of our business in Malabar and the adjacent districts, as the New Premises are very well situated and more spacious and thus we hope to render better service to our Policyholders. Our patrons and well wishers are requested to pay a visit to the "Soumyalayam at their early convenience. All correspondence and remittances and cheques should be addressed to

Messrs. **KOCHIKAR BROTHERS,**
Bombay Life Office, Puthiyara Post. (Calicut—Malabar)

We have also registered our telegraphic address as "Kochikar—Calicut' for the convenience of our constituents.

ಪ್ರಕಟಣೆ—ಸದರಿ ವಿಮಾ ಕಂಪೆನಿಯು ತನ್ನ ಏಜಂಟರಿಗೂ, ಪೋಲಿಸಿದಾರರಿಗೂ ಈ ಮೂಲಕ ತಿಳಿಯಪಡಿಸುವದೇನೆಂದರೆ—ತಾ 14 3-36ರಿಂದ ಕಲ್ಲಿಕೋಟೆಯಲ್ಲಿರುವ ನಮ್ಮ ಮಲಬಾರ ಏಜೆಂಟರಾದ ಮಿ| ಸಿ ಶಂಕರನಾಯರ್‌ರವರ ಹಜೂರ ರಸ್ತೆಯ ಬಳಿ ಇರುವ ಆಫೀಸನ್ನು ಪುತಿಯಾರ ಪೋಸ್ಟು ಆಫೀಸಿನ ಎದುರಿರುವ ಹೊಸತಾಗಿ ಕಟ್ಟಿಸಿದ ದಿವ್ಯವಾದ ಸೌಮ್ಯಾಲಯಮ್ ಎಂಬ ಬಂಗ್ಲೆಯಲ್ಲಿ ತೆರೆಯೋಣಾಗುವುದು ಇನ್ನುಮುಂದೆ ಸಂಬಂಧಪಟ್ಟ ಲೆಖ್ಖಪತ್ರಗಳನ್ನು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು

ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್,
ಬೊಂಬೈ ಲ್ಯಾಫ್ ಆಫೀಸ್, ಪುತಿಯಾರ ಪೋಸ್ಟು, (ಕಲ್ಲಿಕೋಟೆ ಮಲಬಾರು)

ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ತಂತಿಯ ವಿಳಾಸವನ್ನು ಕೊಚ್ಚಿಕಾರ—ಕಲ್ಲಿಕೋಟೆ ಎಂಬುದಾಗಿ ಮಾಡಿದೆ

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ನೋವುಗಳಿಗೂ ಎದೆನೋವು, ಛಾಯೆಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೆಗಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

AMRUTANJAN DEPOTS BOMBAY MADRAS CALCUTTA

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ.

— ಕ್ಕಂಟು, ಆ... ಪಾಲಿಕ ಮನ್ನಿಸಿ, ಅನುಭ... ೫, ತಿಂಗಳು ೧೧ ದಿನ) ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಕ್ಕ ಗವರ್ನರ ಜನರಲರು ಎಲ್ಲ ಪ್ರತಿಯೊಂದು ಸಾವಿರ ರೂಪಾಯಿಗೆ ಮಾಫಿ ಮಾಡಿದರು!

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗಿ

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆ

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ——— ಯಥೋಚಿತವಾದ ಪುರಸ್ಕಾರಗಳಿವೆ. ———

...ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾ

lited Printed & Published By A. S. Kamath ...

ವಾರ್ಷಿಕ ಚಂದಾ: ೩ ರೂಪಾಯಿ
ಬಿಡಿ ಸಂಚಿಕೆಗೆ ಒಂದಾಣೆ.

Regd. No. M 3408

ಟಪ್ಪಾಲು ಹಾಸಲು ಸೇರಿ ರೂ.2-13-0

For Quality Snuff
H. Rama R...
and Sons

RAMA SNUFF

ಸ್ವದೇಶಾಭಿಮಾನಿ

SWADESHABHIMANI

THE ASSURANCE
IS
NO EXPENSE
BUT
AN INVESTMENT
... TODAY
... THE BOMBAY LIFE

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾಃ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ । ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ; ಹರುಷವಾಯಿತೆ ಮತ್ತೆ ವಿಷವನು ಸುಡುತ ಬರುತಿರುವ ॥

ಗರಲಕವರಂಜದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ।

ಮಂಗಳೂರು ತಾ. ೧ನೇ ಶುಕ್ರವಾರ ಮೇ ೧೯೩೬ (1–5–'36) ಸಂಚಿಕೆ ೧೮

ಶ್ರೀ ಸುಭಾಷ್ಚಂದ್ರ ಬೋಸರನ್ನು, ಒಳಸಂಚು ನಡೆಸ್ಸಿ, ಹಿಂದೂದೇಶಕ್ಕೆ ಬರುವಂತೆಯೂ, ಅವರು ಸೆರೆಮನೆಯನ್ನು ಸೇರುವಂತೆಯೂ, ಕೆಲವರು ಮಾಡಿದರು. ಅದರಲ್ಲಿ ಮಹಾತ್ಮಾ ಗಾಂಧಿಯವರಿಗೂ, ಶ್ರೀ ಜವಾಹರ್‌ಲಾಲರಿಗೂ, ಕೈಗಳಿರುವುದೆಂದೂ, ಓರ್ವ ಮಹನೀಯರು ಸಾರಿದ್ದರು. ಶ್ರೀ ಜವಾಹರಲಾಲರು ಈ ಕುರಿತು ಹೀಗೆನ್ನುತ್ತಿದ್ದಾರೆ: ಶ್ರೀ ಸುಭಾಷ್ಚಂದ್ರ ಬೋಸರಿಗೆ ಮೊದಲು ಬರಬಾರದಾಗಿ ಇವರು ಪತ್ರ ಬರೆದಿದ್ದರು. ಬಹಳ ಆಲೋಚನೆಯಾದ ನಂತರ ಪುನಃ ಇವರಿಗೆ ವಾಕ್ಯಪೂರ್ವಿಗೆ ಒಂದು ಪತ್ರ ಬರೆದರು. ಆದರೆ ಈ ಪತ್ರವು ಬೋಸರಿಗೆ ತಲ್ಪುವ ಮೊದಲು ಅವರು ಹಡಗನ್ನು ಹತ್ತಿದ್ದರು. ಶ್ರೀ ಬೋಸರು ಕ್ರಾಂತಿಯ ಚಳವಳದಲ್ಲಿ ಸೇರಿದ್ದು, ಶ್ರೀ ಕೃಷ್ಣದಾಸರೆಂಬವರು, ಮಹಾತ್ಮ ಗಾಂಧಿಯವರಿಗೆ ಪತ್ರ ಬರೆಯಲು ಮತ್ತು ಆ ಪತ್ರವು ಸರಕಾರದ ಕೈಯಲ್ಲಿ ಬಿದ್ದಿರುವುದರಿಂದ ಸರಕಾರವು ಈ ರೀತಿ ವರ್ತಿಸಲಿಕ್ಕೆ ಕಾರಣವಂತೆ. ಆದರೆ ಈ ಈ ಕೃಷ್ಣದಾಸರು ಕಾಂಗ್ರೆಸ್ಸಿನಿಂದ ಯಾವಾಗಲೋ ಹೊರಗೆ ನಡೆದಿರುತ್ತಾರೆ. ಆದ್ದರಿಂದ ಮೇಲಿನ ಆರೋಪಗಳಿಗೆ ಅರ್ಥವಿಲ್ಲವೆಂದು ಶ್ರೀ ಜವಾಹರಲಾಲರ ಮಾತು



ಆಂಗ್ಲೇಯ ಪ್ರಸಿದ್ಧ ಗ್ರಂಥಕಾರರಾದ ಎಚ್. ಜಿ. ವೆಲ್ಸ್‌ರೆಂಬವರು, ವಿಜ್ಞಾನದ ಪ್ರಗತಿಯಿಂದಾಗಿ 'ಮುಂದಕ್ಕೆ ಬರುವ ಸಂಗತಿಗಳು' ಎಂಬ ಗ್ರಂಥವನ್ನು ಬರೆದಿರುವರು. ಇದರಲ್ಲಿ ಅನೇಕ ಭವಿಷ್ಯ ಘಟನೆಗಳನ್ನು ತಿಳಿಸಿರುವರು. ಚಂದ್ರಯಾತ್ರೆ ಇದರಲ್ಲೊಂದು. ಈ ಗ್ರಂಥವನ್ನು ಆಧರಿಸಿ ಒಂದು ಚಲನಚಿತ್ರವನ್ನು ತಯಾರಿಸಿರುವರು. ಇದು ಅದರಲ್ಲಿರುವ ಚಂದ್ರಯಾತ್ರೆಗೆ ಸಿದ್ಧಪಡಿಸಿದ, 'ಸ್ಪೇಸ್ ಗನ್ನಿನ ಚಿತ್ರ'. ಆಕಾಶ ಮಂಡಳಕ್ಕೆ ಚಂದ್ರಯಾತ್ರಿಕರನ್ನು ಕಳುಹಿಸುವ ಯೋಜನೆಯಾಗಿರುತ್ತದೆ. ನೇರವಾಗಿ ಎದ್ದು ಕಂಭದ ಹಾಗೆ ಕಾಣಿಸುತ್ತಿರುವುದು ಈ 'ಸ್ಪೇಸ್ ಗನ್'. ಚಂದ್ರಯಾತ್ರಿಕರನ್ನು ಒಂದು ವಿಚಿತ್ರ ಪೆಟ್ಟಿಗೆಯಲ್ಲಿರಿಸಿ, ಆ ಪೆಟ್ಟಿಗೆಯನ್ನು ಈ ಸ್ಪೇಸ್ ಗನ್ನಿನ ಮೂಲಕ ಚಂದ್ರಮಂಡಳಕ್ಕೆ ಒಯ್ಯುವ ಪ್ರಯತ್ನ ನಡೆಸುವ ಘಟನೆ ಇದು

ನೋಟಗಳು.

NOTES.

ಅಬಿಸೀನಿಯಕ್ಕೆ ಇನ್ನು ಯಾವ ಸಂಕಟವೂ ಉಂಟಾಗಲಾರದು. - ಪ್ರಜೆಗಳು ಮಾತೆತ್ತದೆ ಸುಮ್ಮನೆ ಇಟಲಿಯ ಸೈನ್ಯಗಳಿಗೆ ಸ್ವಾಗತ ಮಾಡಿ, ನಾಗರಿಕತೆಗೆ ಆಮಂತ್ರಣವಿತ್ತರೆ ಸರಿ, ಇಲ್ಲವಾದರೆ ರಾಜಧಾನಿಯು ನೆಲಸಮವಾಗುವುದಾಗಿ ಇಟಲಿಯ ಮಾತು. ಅದಲ್ಲದೆ, ಮೇ ೧೧ರಲ್ಲಿ ಲೀಗಿನ ಕಮಿಟಿಯು ಮತ್ತೊಂದು ಸಭೆ ಸೇರಿ ಈ ವಿಷಯವಾಗಿ ಇತ್ಯರ್ಥಿಸುವುದೆಂದೂ ಪ್ರಕಟವಾಗಿದೆ. ಲೀಗಿನ ಒಂದೊಂದು ಸಭೆ ಸೇರುತ್ತಿರುವಂತೆ, ಅಬಿಸೀನಿಯದ ಒಂದೊಂದು ತುಂಡನ್ನು ಇಟಲಿ ನುಂಗುತ್ತಿದೆ. ಇನ್ನೂ ಕೆಲವು ಸಭೆಗಳು ಬಾಕಿ, ಏಕೆಂದರೆ, ಇನ್ನೂ ಕೆಲವು ತುಂಡುಗಳು ಉಳಿದಿವೆ

× × ×

ಜರ್ಮನಿಯ ಮುನ್ನಡೆ ತಡೆಯಲು, ಇಟಲಿಯು ಸಹಕರಿಸಬೇಕಾಗಿಯೂ ಇಂಗ್ಲೆಂಡು ಫ್ರಾನ್ಸುಗಳ ಸೂಚನೆಯಿದೆ ಮುನ್ನಡೆದ ಇಟಲಿಯು ಮುನ್ನಡೆವ ಜರ್ಮನಿಯನ್ನು ತಡೆವುದೆಂದರೇನು? ಇಟಲಿಯನ್ನು ತಡೆದರೆ, ಅದು ಜರ್ಮನಿಗೆ ಸಹಾಯಮಾಡಿ ಫ್ರಾನ್ಸನ್ನು ದೂರ ವಿಡುವುದೆಂದೂ ಬೆದರಿಕೆಯಿದೆ

+ + +

ಯುರೋಪಿನಲ್ಲಿ ಮಹಾಯುದ್ಧವಾದರೆ? ಯಾವಾಗ ಎಂದು ಯಾರಿಗೂ ಹೇಳಬರುವುದಿಲ್ಲ "ಯುರೋಪು ಅರಾಜಕವಾಗುವುದು ಉಚ್ಚಸ್ಥಾನದಲ್ಲಿರುವವರ ದುಷ್ಟತನಕ್ಕಾಗಿ ಅರಾಜಕತೆಯೆ ಇಳಿದೋರುವುದು" ಎಂದು ಬ್ರಿಟಿಷ ಮುಖ್ಯ ಪ್ರಧಾನರು ಎನ್ನುವರು ರಷ್ಯವನ್ನು ನೋಡಿರಿ, ಫ್ರಾನ್ಸು ಮತ್ತೊಂದು ಯುದ್ಧದಲ್ಲಿ ಆರು ತಿಂಗಳೇ ಆದರೂ ಬಾಳುವಂತಿಲ್ಲ ಎನ್ನುವರು ಆದರೆ, ಪ್ರತಿಯೊಂದು ರಾಜ್ಯವೂ 'ಶಾಂತಿಗಾಗಿ 'ಸೈನ್ಯಗಳನ್ನು' ಹೆಚ್ಚಿಸುತ್ತಿದೆ

× × ×

ವಿಲ್ಲಿಂಗಡನ್ನ ಮಹಾಶಯರ ವಿದಾಯ ಭಾಷಣ ಕೇಳುವಷ್ಟು ಯೋಗ್ಯವೇ "ಸಹಕರಿಸಿರಿ ಸಂಶಯ ಬೆಳೆಸಬೇಡಿರಿ!" ಗಾಂಧಿಜೀಯವರ ಗ್ರಾಮೋದ್ಧಾರ ಕಾರ್ಯದಲಿ ಸಂಶಯಪಟ್ಟೂ ಸಹಕರಿಸದೆ ಇರುವಂತೆ ಸರ್ಕಾರು ಪ್ರೋರಿಪಿಸಿದವರು ಯಾರು? ಹೋಗಲಿ,- ಇತಿಹಾಸದಲ್ಲಿ ಈ ಅಧ್ಯಾಯ ವಂತೂ ಮುಗಿಯಿತು

+ + +

ನವಿಮ್ಮಾಗಣ ವೈಸರಾಯರ ಪ್ರಥಮ ಭಾಷಣದಂತೆ, ದೇವರು ಅವರಿಂದ ಕಾರ್ಯಗಳನ್ನ ನಡೆಸುತ್ತ ಬಂದರೆ, ನಾವು ಲೋರ್ಡ ಕರ್ಸ್ಸಿಂಗ್, ಲೋರ್ಡ ರಿಪನ್ ಮೊದಲಾದವರನ್ನು ಮರೆವಷ್ಟು ಉತ್ತಮವಾದ ಆಳಿಕೆಯನ್ನು ನಿರೀಕ್ಷಿಸಬಹುದಾಗಿದೆ ಗ್ರಿಗ್ ಸಾಹೇಬರು ಏನಂತೆ? "ನಾವೂ ಸ್ವಲ್ಪ ಕೆಲಸಮಾಡಬೇಡವೆ?" ಎಂಬುದು ಇವರ ಪ್ರಶ್ನೆ.

× × ×

ಪಕ್ಷವಿಲ್ಲ, ಪಂಗಡವಿಲ್ಲ, ಚುನಾವಣೆಗಳಲ್ಲಿ ಸೂಚನೆಯಿಲ್ಲ, ನಾಯಕರಲ್ಲಿ ವಿಶ್ವಾಸವಿದೆ—ಎಂಬಿಷ್ಟು ಅವರ ವಾಕ್ಯ ಬಲು ಕಷ್ಟ ಇದರಂತೆ ನಡೆಯಲು ಅವರಿಗೆ ಸಹಾಯವಾದರೆ, ಹಿಂದೀಯರನ್ನು ಅವರು ಎಂದೋ ತನ್ನವರನ್ನಾಗಿ ಕಟ್ಟಿಕೊಳ್ಳುವರು ಹಾಗಾಗಲಿ!

× × ×

ನಮ್ಮ ವಿದ್ಯಾ ಇಲಾಖಾ ಅಧಿಕಾರಿ ಸ್ಮಿಥಮ್ ಸಾಹೆಬರು, ಮದ್ರಾಸಿನ ವಿದ್ಯಾರ್ಥಿಗಳಿಗೆ ಉಪದೇಶಮಾಡುವಾಗ "ಅಂಗಿ ತೆಗೆದಿಡಿರಿ!" ಎಂದರು ಇಪ್ಪತ್ತು ವರ್ಷಗಳ ಹಿಂದೆ, ನಮ್ಮ ಸೀಮೆಯ ನಾಡಿನಲ್ಲಿ, ದೋತರ ಚಾದರ ಒಳ ಅಂಗಿ ಅಷ್ಟೇ ವಿದ್ಯಾರ್ಥಿಗಳಿಗೆ ಸಾಕೆಂದು ಬೋಧನೆ ಹೊರಟಾಗ, ಇಲಾಖೆಯಲ್ಲ ಉದ್ರೇಕಗೊಂಡ ನೆನಪು ಅವರಿಗಿದೆಯೆ?

× × ×

ವಿಲಾಯತಿಯಲ್ಲಿ ಉಡುಪಿನ ನಿಷ್ಠೆ ೧೫೦ ವರ್ಷ ಪ್ರಯೋಗಿಸಿದುದು ಹಾಳಾಯಿತೆಂದು ಎಷ್ಟು ಸಂಕಟಗೊಂಡ ಅಧಿಕಾರಿಗಳಿರಲಿಲ್ಲ? ಇಷ್ಟೆ ದುಸ್ತು, ಯೂನಿಫೋರ್ಮ ಅಗತ್ಯವೆಂದು ಸರ್ಕಾರನ್ನು ಕಳಿಸಿದ್ದಿಲ್ಲವೆ? ಫಲವಾಗಿ, ಒಬ್ಬೊಬ್ಬ ವಿದ್ಯಾರ್ಥಿಯು ಒಂದೊಂದು ಬಗೆ ಉಟ್ಟು ಬರಲಾರಂಭಿಸಿದನು ಖಾದಿಯೂ ಅಲ್ಲ ಸ್ವದೇಶಿಯೂ ಅಲ್ಲ, ಸರ್ಕಾರಿನಂತಿಲ್ಲದ ದುಸ್ತು ಹುಡುಗರ ಫೆಶನಾಯಿತು ಅನಂತರ, ಎಲ್ಲರೂ ತಣ್ಣಗಾದರು ಈಗ, 'ಅಂಗಿ ತೆಗೆದಿಡಿರಿ!' ಎಂಬ ಮಾತೇ ಅಗ ಅಗತ್ಯವಾಗಲಿಲ್ಲ

೨೫,೦೦೦ ನಿವೃತ್ತ ಸೈನಿಕರು ಹೊಸ ವೈಸರಾಯರಿಗೆ ಮುಖತಃ ತಮ್ಮ ಸಂಕಟಗಳನ್ನು ಹೇಳಿಕೊಂಡು, ಅವುಗಳ ನಿವಾರಣೆಮಾಡಿಕೊಳ್ಳಲು ಸಾಧಿಸುವರಂತೆ ೧೯೨೯ರಲ್ಲಿ ಇವರನ್ನು ನೂರಾರು ಮಂದಿ ತಮ್ಮ ಹೆಂಡಿರು ಮಕ್ಕಳೊಡನೆ ಲಾಹೋರಿಗೆ ಬಂದು ಗವರ್ನರರಿಗೆ ಮಾಡಿಕೊಂಡ ವಿನಂತಿಗೆ ಇನ್ನೂ ಪರಿಹಾರರೂಪವಾದ ಯಾವ ಅಪ್ಪಣೆಯೂ ದೊರೆತಿಲ್ಲವಂತೆ'

ದೇಶಕ್ಕಾಗಿ, ಬ್ರಿಟಿಷರಿಗಾಗಿ ಕಾದಿದವರು ಹೀಗೆ ಸಂಕಟಪಡುತ್ತಿದ್ದರೆ ಒಳ್ಳೆಯದೆ? ಎಂಬುದನ್ನು ವಾತ್ಸಲ್ಯವುಳ್ಳ ವೈಸರಾಯರು ವಿಚಾರಿಸರೆ? ಸರ್ವ ಸೈನ್ಯಾಧ್ಯಕ್ಷರು ಏನಂತೆ?

10,000 ರೂಪಾಯಿಗಳನ್ನು ಬಹುಮಾನವಾಗಿ ಕಷ್ಟವಿಲ್ಲದೆ ಪಡೆಯಿರಿ.

ಉತ್ತರವನ್ನು ಸ್ವೀಕರಿಸುವ ತಾ. ಮೇ 15ರ ವರೇಗೆ.

ಈ ಒಗಟಿಯನ್ನು ಸರಿಯಾಗಿ ಬಿಡಿಸಿದವನಿಗೆ 10,000 ರೂಪಾಯಿಗಳನ್ನು ಬಹುಮಾನವಾಗಿ ಕೊಡುವೆವು ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿದ್ದಲ್ಲಿ ಹಣವನ್ನು ಅವರೊಳಗೆ ಸರಿಸಮಾನವಾಗಿ ಹಂಚಲಾಗುವುದು ಅಂತೂ ಸರಿಯಾದ ಉತ್ತರಗಳು ಅನೇಕವಿದ್ದಲ್ಲಿ ಪ್ರತಿಯೊಬ್ಬನಿಗೂ ಕನಿಷ್ಠಪಕ್ಷ ರೂ 500 ಬಹುಮಾನ ಸಿಕ್ಕುವುದರಲ್ಲಿ ಸಂಶಯವಿಲ್ಲ ಈ ಒಗಟಿಯ ಉತ್ತರವನ್ನು ಮುದ್ರೆ ಹಾಕಿ, ಸೆಂಟ್ರಲ್ ಬೇಂಕ್ ಒಫ್ ಇಂಡಿಯಾ ಇದರಲ್ಲಿ ಭದ್ರವಾಗಿಟ್ಟಿದೆ

ನಂಬ್ರ 1 | ನಂಬ್ರ 2 | ನಂಬ್ರ 3

ಮೇಲಿನ ಚೌಕ ನಂಬ್ರ 1, 2 ಮತ್ತು 3 ಇವುಗಳ ಕೋಣೆಗಳನ್ನು 2—26ರ ಒಳಗಿನ ಸಂಖ್ಯೆಗಳಿಂದ ತುಂಬಬೇಕು ಒಂದೇ ಸಂಖ್ಯೆಯನ್ನು ಒಂದು ಚೌಕದಲ್ಲಿ ಎರಡು ಸಲ ಉಪಯೋಗಿಸಬಾರದು ಮೊದಲನೇ ಚೌಕದಲ್ಲಿ ಹೇಗೆ ಕೂಡಿಸಿದರೂ ಸಂಖ್ಯೆಗಳ ಒಟ್ಟು ಮೊತ್ತವು 15 ಬರಬೇಕು 2ನೇ ಚೌಕದಲ್ಲಿ 24 ಮತ್ತು 3ನೇ ಚೌಕದಲ್ಲಿ 48 ಒಬ್ಬರು ಎಷ್ಟು ಉತ್ತರಗಳನ್ನೂ ಕಳುಹಿಸಬಹುದು ಕಾಗದದಲ್ಲಿ ಅಂದವಾಗಿ ಬರೆದು ಲಕೋಟೆಯಲ್ಲಿ ಮಡಗಿ ಕಳುಹಿಸಬಹುದು ಆದರೆ ಮೂರು ಚೌಕಗಳ ಒಂದು ಉತ್ತರಕ್ಕೆ ರೂ 1ನ್ನು ನಮ್ಮ ಆಫೀಸಿಗೆ ಮನಿಯಾರ್ಡರ್ ಮೂಲಕ ಕಳುಹಿಸಬೇಕು ಉತ್ತರವನ್ನು ಕಳುಹಿಸುವವರು ತಮ್ಮ ಹೆಸರು ವಿಳಾಸವನ್ನು ಅಂದವಾಗಿ ಬರೆದು ಕಳುಹಿಸತಕ್ಕದ್ದು ಈ ಒಗಟಿಯ ಸರಿಯಾದ ಉತ್ತರವನ್ನೂ ಮತ್ತು ಸರಿಯಾಗಿ ಉತ್ತರಿಸಿದವರ ಹೆಸರುಗಳನ್ನೂ ಈ ಪತ್ರಿಕೆಯಲ್ಲಿ ಮೇ ತಾ 20ರಲ್ಲಿ ಪ್ರಕಟಿಸುವೆವು ಬಹುಮಾನದ ಹಣವನ್ನು ಚೆಕ್ ಮುಖಾಂತರ ವಾ ಮನಿಯಾರ್ಡರ್ ಮೂಲಕ ಕಳುಹಿಸಲಾಗುವುದು ಒಗಟಿನ ಬಿಚ್ಚುಗರು ಫಲಿತಾಂಶವನ್ನು ಬಯಸುವುದಾದರೆ ಉತ್ತರದೊಂದಿಗೆ ಒಂದಾಣೆಯ ಅಂಚೆಚೀಟನ್ನು ಕಳುಹಿಸಬೇಕಾಗಿರುವುದು ತಾವು ಕಳುಹಿಸಿದ ಉತ್ತರವು ಸರಿಯಾಗಿದ್ದು ಪೇಪರಿನಲ್ಲಿ ಹೆಸರು ಬಾರದೆ ಇದ್ದಸಮಯದಲ್ಲಿ ಅಂಥವರು ರೂ 1ನ್ನು ಕಳುಹಿಸಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕು ಒಂದು ಸಲದ ಅವರ ಹೇಳಿಕೆಯು ತಪ್ಪಾದಲ್ಲಿ ಹಣವನ್ನು ಮರತ ಕಳುಹಿಸಲಾಗಲಿಕ್ಕಿಲ್ಲ ಒಂದು ಒಗಟಿಗೆ ಕಟ್ಟಿದ ಹಣವನ್ನು ಇನ್ನೊಂದು ಒಗಟಿಗೆ ಬದಲಾಯಿಸಲ್ಪಡಲಿಕ್ಕಿಲ್ಲ

ಎಲ್ಲಾ ಬಿಚ್ಚುಗರ ಅಪೇಕ್ಷೆ ಮೇರೆಗೆ ಒಗಟಿನ ಕಳುಹಿಸುವ ತಾರೀಕನ್ನು ಮೇ ತಾ 15ಕ್ಕೆ ಮುಂದರಿಸಲಾಗಿದೆ

ನಿಮ್ಮ ಉತ್ತರಗಳನ್ನು ಈ ಕೆಳಗಿನ ವಿಳಾಸಕ್ಕೆ ರವಾನಿಸಿರಿ:—

VICTORIA COMPETITION,

PURSRAM MANSION

Girgaum, BOMBAY,

ಪ್ರಕಟಣೆ.

ಸುರತಕಲ್ ಗ್ರಾಮದಲ್ಲಿರುವ ಕೇಶವಯ್ಯನವರ ಮಗ ಲಕ್ಷ್ಮೀನಾರ್ಣಪ್ಪಯ್ಯನು ಈ ಮೂಲಕ ಸಮಸ್ತ ಜನರಿಗೆ ತಿಳಿಸವುದೇನೆಂದರೆ ನನ್ನ ಹಿರೀ ಮಗ ಎಲ್ ರಾಮಕೃಷ್ಣನು ತಾ 21—4—1936ನೇ ಕಂಠೀರವದಲ್ಲಿ ಪ್ರಕಟಿಸಿದ ವಿಷಯವು ತೀರಾ ಸುಳ್ಳು ಸಂಗತಿಯಾಗಿರುತ್ತದೆ ತಾ 18—4—1936ನೇ ರಾಷ್ಟ್ರಬಂಧುವಿನಲ್ಲಿ ನನ್ನ ಮಗ ವೆಂಕಟ್ರಾಜನು ಪ್ರಕಟಿಸಿದಂತೆ ಸದ್ರಿ ರಾಮಕೃಷ್ಣನ ಹೆಸರಲ್ಲಿರುವ ದಸ್ತಾವೇಜುಗಳನ್ನು ಕುಟುಂಬಾರ್ಥದ ಹಣಗಳಿಂದ ನಾನು ಸದ್ರಿಯವನ ಹೆಸರಲ್ಲಿ ಮಾಡಿಸಿಟ್ಟಿರುವದಾಗಿದ್ದು ಸದ್ರಿ ಸೊತ್ತುಗಳು ಕುಟುಂಬದ ಹಕ್ಕಿನ ಸೊತ್ತುಗಳಾಗಿರುತ್ತವೆ ಸದ್ರಿ ಸೊತ್ತುಗಳ ವಿನಹ ಮೂಲ್ಕಿ ಸಾಹುಕಾರ ವಿಟ್ಠಪ್ಪಶ್ಯಾನುಭಾಗರಿಂದ ಹೋಳಡವಿನಲ್ಲಿ ರೂಪಾಯಿ 1500ನ್ನೂ, ನಾನು ಪಡೆದ ಐವೇಜನ್ನೂ ಸಹ ಸದ್ರಿ ರಾಮಕೃಷ್ಣಯ್ಯನಿಗೆ ಶಂಕರ ವಿಟ್ಠಲ್ ಕಂಪೆನಿಯಲ್ಲಿ ಶೇರ್ ತೆಗೆದುಕೊಳ್ಳುವ ಬಗ್ಗೆ ನಾನು ಕೊಟ್ಟದ್ದಾಗಿರುತ್ತದೆ ಮತ್ತು ಸದ್ರಿಯವನು ಕೋರ್ಟು ಏಲಮಿನಲ್ಲಿ ಪಡೆದ ಲಿಂಗರಗುಂಡಿ ಆಸ್ತಿಯ ಬಗ್ಗೆ ಕೋರ್ಟಿಗೆ ಕಟ್ಟಿದ ಕ್ರಯದ ಐವೇಜು ಕೂಡಾ ನಾನೇ ಕೊಟ್ಟದ್ದಾಗಿರುತ್ತದೆ ಸದ್ರಿ ಸೊತ್ತುಗಳು ಸಹ ಕುಟುಂಬಾರ್ಥದ ಸೊತ್ತುಗಳಾಗಿರುತ್ತವೆ. ಸದ್ರಿ ಸೊತ್ತುಗಳು ರಾಮಕೃಷ್ಣನ ಸ್ವಂತ ಸೊತ್ತುಗಳಲ್ಲ ನನ್ನ ಮಗ ವೆಂಕಟ್ರಾಜನು 1934ರಲ್ಲಿ ಬರಿಸಿಕೊಂಡ ಕೆಲವು ಸ್ಥಿರಾಸ್ತಿಗಳ ಕ್ರಯಚೀಟುಗಳೂ ರೂಪಾಯಿ 1500ರ ಚಿಟ್ಟೆಫಂಡು ಹಕ್ಕಿನ ಕ್ರಯಚೀಟೂ 2ನೇ ಮಗನಾದ ರಾಮಚಂದ್ರರಾಯನು ಬರಿಸಿಕೊಂಡ ಕಟಹಿತ್ಲು, ಅಗ್ಗಿದಕಳಿಯ, ಸುರತಕಲ್ ಗ್ರಾಮಗಳ ಸ್ಥಿರಾಸ್ತಿಗಳ ಕ್ರಯಚೀಟುಗಳೂ ಸಿಕ್ಕಾಂಸೋಜನ ರೂಪಾಯಿ 800ರ ಅಡವು ದಸ್ತಾವೇಜೂ ಬೇರೆ ಇತರ ದಸ್ತಾವೇಜುಗಳೂ ಸಹ ಕುಟುಂಬಾರ್ಥದಲ್ಲ ಇವುಗಳು ಅವರ ಸ್ವಂತ ಹಕ್ಕಿನದ್ದಾಗಿದ್ದು ಬೇರೆ ಯಾರಿಗೂ ಅವುಗಳಲ್ಲಿ ಹಕ್ಕಿರುವುದಿಲ್ಲ ಎಂತಲೂ ಈ ಬಾಬಿನಲ್ಲಿ ಇದಕ್ಕೆ ವಿರೋಧವಾಗಿ ರಾಮಕೃಷ್ಣಯ್ಯನ ಪ್ರಕಟಣೆಯಲ್ಲಿ ಬರೆದಿರುವ ಸಂಗತಿಗಳು ಒಪ್ಪತಕ್ಕದ್ದಲ್ಲ ಎಂತಲೂ ಅವುಗಳು ಕೇವಲ ಸುಳ್ಳು ಎಂತಲೂ ಸಮಸ್ತರೂ ತಿಳಿದಿರುವ ಬಗ್ಗೆ ಈ ಮೂಲಕ ಪ್ರಕಟಿಸಿರುತ್ತೇನೆ

ಸುರತಕಲ್ ತಾ.28-4-36 } ಲಕ್ಷ್ಮೀನಾರ್ಣಪ್ಪಯ್ಯನ ರುಜು.

! ನಿಮಗೆ ತಿಳಿದಿರುವುದೆ? ?

ಭಯಂಕರ ಸರ್ಪಗಳು.

'ಇಂಡಿಯನ್ ಫೋರೆಸ್ಟರ್' ಎಂಬ ಪುಸ್ತಕದಲ್ಲಿ ಸರ್ಪಗಳ ಕುರಿತು ಹೀಗೆ ಬರೆದಿರುತ್ತದೆ. 'ಕುಲ್‌ನಾಶಕ್' ಎಂಬ ಜಾತಿಯ ಸರ್ಪವು ಸರ್ಪ ಜಾತಿಯಲ್ಲಿ ಭಯಂಕರ ತರದ್ದಾಗಿರುವುದು. ಇದು ಒಂದು ಕಡ್ಡಿಯನ್ನು ಕಡಿದರೆ, ಕಡ್ಡಿಯು ಸುಟ್ಟು ಭಸ್ಮವಾಗುವುದಲ್ಲದೆ-ಆ ಕಡ್ಡಿಯು ಯಾವ ಮರಂದದಿಯಾ ಪೊದರಿನಲ್ಲಿ ಬಂತೋ ಅದೂ ಕೂಡ ಸಂಪೂರ್ಣ ಸುಟ್ಟು ಬೂದಿಯಾಗುವುದು.

ಇನ್ನೊಂದು ಜಾತಿಯ ಸರ್ಪವು, 'ಅಗನ್ ಜಾಹಾರ್' ಎಂಬುದು ಇದರಲ್ಲಿ ವಿಷವು ಎಷ್ಟಿರುವುದೆಂದರೆ, ಇದು ಸರಿದು ಹೋದಲ್ಲಿ ಇರುವ ಹುಲ್ಲು ಸುಟ್ಟು ಬೂದಿಯಾಗುವುದು.

'ಕಾಳಾನಾಗ್' ಎಂಬುದು ಮತ್ತೊಂದು ಜಾತಿಯ ಸರ್ಪವು ಈ ಸರ್ಪವಿದ್ದಲ್ಲಿ ಒಂದು ಪ್ರಕಾಶಮಾನವಾದ ದೀಪವಿಟ್ಟರೆ, ಪ್ರಕಾಶವು ಕುಂದುವುದು. ಗಾಳಿಯಲ್ಲಿ ಹರಡುವ ಇದರ ವಿಷದ ಪ್ರಭಾವದಿಂದಂತೆ

'ನಾಗ್ ಶಂಕ್ ರೈಕ್' ಎಂಬುದು ಭಯಂಕರ ವಿಷಕರ ಸರ್ಪವು ಇದು ಕಚ್ಚಿದ ಮನುಷ್ಯನು ಹತ್ತೇ ನಿಮಿಷದಲ್ಲಿ ಮೃತನಾಗುವನು.

ಸರ್ಪಕಡಿತವಾದ ಮನುಷ್ಯನ ಹಲ್ಲುಗಳು ಹುಳಿಯಾಗುವವು ಆತನಿಗೆ ಯಾವತ್ತೂ ತಿಂಡಿಯನ್ನು ಜಗಿಯಲು ಸಾಧ್ಯವಾಗದು

ಸರ್ಪ ಕಡಿತದಿಂದ ರಕ್ಷಿಸಿಕೊಳ್ಳುವ ಉಪಾಯ.-ಕಡಿತವಾದ ಭಾಗವನ್ನು ಮುಂಚೆ ಕಡಿಯಬೇಕು ಒಂದು ಹೇಟೆ ತಿಕ್ಕೆಯ ಮೇಲಿನ ರೋಮವನ್ನು ತೆಗೆದು ಅದನ್ನು ಗಾಯದಮೇಲೆ ಇಡಬೇಕು ಹತ್ತು ನಿಮಿಷಗಳಲ್ಲಿ ಹೇಟೆಯು, ಕೈಕಾಲು ಬಡೆಯಲು ಪ್ರಾರಂಭ ಮಾಡುವುದು ಅದರೆ ಅದು ಸಾಯುವ ತನಕ ಅದನ್ನು ಅಲ್ಲಿಂದ ತೆಗೆಯಬಾರದು. ಇದರಿಂದ ಸರ್ಪಕಡಿತ ಉಪಶಮನವಾಗುವುದು

ಪೌರ್ವಾತ್ಯದ ಕೌತುಕಗಳು.

ಕುದಾಬಕ್ಸ ಎಂಬ ಹಿಂದಿಯ ವ್ಯಕ್ತಿಯೊಂದು, ಕಣ್ಣುಗಳನ್ನು ಬಿಗಿಯಾಗಿ ಕಟ್ಟಿಕೊಂಡು ಓಡಿ, ಉರಿಯುವ ಕೆಂಡಗಳ ಮೇಲೆ ನಡೆದು, ಇತರರನ್ನು ಅವುಗಳ ಮೇಲೆ ನಡೆಯುವಂತೆ ಮಾಡಿ, ಅನೇಕ ಬ್ರಿಟಿಷ ವಿಜ್ಞಾನಿಗಳು ಆಶ್ಚರ್ಯಪಡುವಂತೆ ಮಾಡಿತು.

ಇವುಗಳು ಮಾಯಾವಿ ಕೃತ್ಯಗಳೆಂದು ಕೆಲಮಂದಿ ಬ್ರಿಟಿಷರು ವಾದಿಸ ತೊಡಗಿದರು. ಆದರೆ ಭಾರತೀಯರು ಭಯಂಕರ ತಪಸ್ಸಿನಿಂದ ಈಅದ್ಭುತ ಶಕ್ತಿಯನ್ನುಪಡೆಯಬಲ್ಲರು ಕುದಾಬಕ್ಸನು ನಡೆಯಿಸುವ ಕಾರ್ಯಗಳು ಅಷ್ಟು ಅದ್ಭುತಕರವಲ್ಲ ಕಾರಣ ಯೋಗಾಭ್ಯಾಸದ ಬಲದಿಂದ ೧೮೩೭ರಲ್ಲಿ ಲಾಹೋರಿನ ಹರಿದಾಸನೆಂಬ ಯೋಗಿ, ಇದಕ್ಕಿಂತ ಆಶ್ಚರ್ಯಕರವಾದ ಅದ್ಭುತವನ್ನು ನಡೆಯಿಸಿದನು. ಈತನಿಗೆ ಒಂದು ಪೆಟ್ಟಿಗೆಯಲ್ಲಿಕೈಕಾಲುಗಳನ್ನು ಕಟ್ಟಿಹಾಕಿ, ಭದ್ರವಾಗಿ ಬೀಗ ಮುದ್ರೆಗಳನ್ನು ಹಾಕಿ, ನಂತರ, ಆ ಪೆಟ್ಟಿಗೆಯನ್ನು ಭೂಮಿಯಲ್ಲಿ ಹೂತಿಟ್ಟರು ಈತನನ್ನು ಹೂಣಿಟ್ಟಲ್ಲಿ ಕಾವಲು ಇಡಲ್ಪಾಗಿತ್ತು. ಈ ಅದ್ಭುತ ನಡೆದದ್ದು, ಅಲ್ಲಿನ ಆಗಿನ ರಾಜರಾದ ರಾಣಾರಾಜಸಿಂಗರ ನೇತೃತ್ವದಲ್ಲಿ ೪೦ ದಿವಸಗಳ ಅವಧಿಯಲ್ಲಿ ಇವನನ್ನು ಮೇಲೆ ತೆಗೆಯಲಾಯಿತು. ಸಮಾಧಿಯನ್ನು ಒಡೆಯುವ ಸಮಯದಲ್ಲಿ, ಮೂರು ಮಂದಿ ಬ್ರಿಟಿಷ ಉದ್ಯೋಗಸ್ತರು ಹಾಜರಿದ್ದರು. ಯೋಗಿಯು ಜೀವಂತನಾಗಿದ್ದನು.

ಹೀಗೆಯೆ ಕೆಲವು ವಿಚಿತ್ರ ವ್ಯಕ್ತಿಗಳು ಹಿಮಾಲಯದಲ್ಲಿರುವವರು. ಇವರು ಚಿತ್ತಶಕ್ತಿಯಿಂದ ದೇಹದಲ್ಲಿ ಭಯಂಕರ ಉಷ್ಣವನ್ನು ಬೆಳೆಯಿಸಬಲ್ಲರು. ಭಯಂಕರ ಶೀತವಿರುವ ಆ ಪ್ರದೇಶದಲ್ಲಿ ಇವರು, ಭತ್ತಲೆ ಕಾಲಹರಣ ಮಾಡುತ್ತಿದ್ದಾರೆ. ಅವರ ಮೈಯ ಶಕ್ತಿ ವಿನಹ, ಅವರಿಗೆ ಬೇರೆ ಯಾವತ್ತು ಉಪಾಯದಿಂದ ಶೀತವನ್ನು ತಪ್ಪಿಸಲು ಅಸಾಧ್ಯವು.

ಕೆಲವು ರೋಗಿಗಳು, ಉರಿಯುವ ಬೆಂಕಿಯಲ್ಲಿ ಏನೂ ಅಪಾಯವಿಲ್ಲದೆ ನೇತಾಡಬಲ್ಲರು ಇಂಥ ದೃಷ್ಯಗಳನ್ನು ಹಿಂದೂದೇಶದ ಅನೇಕ ಯಾತ್ರಾ ಸ್ಥಳಗಳಲ್ಲಿ ಕಾಣಬಹುದು. ಭಿಕ್ಷಾಟನೆ ಮಾಡುತ್ತಿರುವ ಕೆಲವು ಯೋಗಿಗಳು, ಮುಳ್ಳಿನ ಮಣೆಯ ಮೇಲೆ ಮಲಗಬಲ್ಲರು.

ಈಗಿನ ರೇಡಿಯೊ ಪೆಟ್ಟಿಗೆಯಂತೆ, ಈಗಿನ ಮತ್ತು ಹಿಂದಿನ ಕಾಲದ ಯಾವತ್ತೂ ದೇಶದಲ್ಲಿ ನಡೆದ ಗಾಯನ ಭಾಷಣ ಇತ್ಯಾದಿಗಳನ್ನು ಚಿತ್ತಶಕ್ತಿಯಿಂದ ಕೇಳಿಸುವ ಶಕ್ತಿವುಳ್ಳ ಅನೇಕ ಯೋಗಿಗಳಿದ್ದಾರೆ ಭಯಂಕರ ಯೋಗಾಭ್ಯಾಸದಿಂದ ಹಿಂದೀಯರು ಮೇಲಿನ ಅದ್ಭುತಗಳನ್ನು ಮಾಡಬಲ್ಲರು

ಮಾನವನ ಪ್ರತಿಯೊಂದು ಅಂಗಾಂಗದ ಚಲನೆಯಲ್ಲಿ ವಿದ್ಯುಕ್‌ಶಕ್ತಿಯು ಜನಿಸುತ್ತದೆ.

ಕಣ್ಣಾಡಿಸುವುದು, ಮುಷ್ಟಿ ಕಟ್ಟುವುದು, ದೀರ್ಘ ಶ್ವಾಸವನ್ನು ತೆಗೆದುಕೊಳ್ಳುವುದು ಇವೆಲ್ಲಾ ಕೃತ್ಯಗಳನ್ನು ಮಾನವನು ಮಾಡುತ್ತಿರುವಾಗ ಸ್ವಲ್ಪ ವಿದ್ಯುತ್ ಚಕ್ತಿಯು ಉಂಟಾಗುತ್ತದೆ ವಿಜ್ಞಾನಿಗಳು ಬಹಳ ಕಾಲ ತಮ್ಮ ಶೋಧನಾಲಯಗಳಲ್ಲಿ ಶ್ರಮಿಸಿ, ವಿದ್ಯುತ್ ಚಕ್ತಿಗೂ ಪ್ರಾಣಿವರ್ಗಕ್ಕೂ ಇರುವ ಸಂಬಂಧವನ್ನು ಕಂಡುಹಿಡಿದಿರುವರು

ಕೇಂಬ್ರಿಜ್ ವಿಶ್ವವಿದ್ಯಾನಿಲಯದ, ನೊಬೆಲ್ ಬಹುಮಾನವನ್ನು ಪಡೆದ ಪ್ರಖ್ಯಾತ ಡಾ। ಇ ಡಿ ಎಡ್ರಿಯನ್ ಎಂಬವರು ಬೆಕ್ಕಿನ ಕಾಲಿನ ನರವನ್ನು ಒಂದು ವಿಚಿತ್ರ ಯಂತ್ರಕ್ಕೆ ಜೋಡಿಸಿ, ಅದರ ಬೆರಳನ್ನ ಮುಟ್ಟಿ, ಅಗ್ಗೆ ಉಂಟಾಗುವ ವಿದ್ಯುತ್ ಚಕ್ತಿಯನ್ನು ಕೆಲವು ಸೂಚಕ ಯಂತ್ರಗಳಿಂದ ಕಂಡುಹಿಡಿದಿರುವರು ಹೀಗೆ ಪ್ರಪಂಚದ ಹಲವು ಪ್ರಖ್ಯಾತ ವಿಜ್ಞಾನಿಗಳು ಈ ಕುರಿತು ಶೋಧನಾ ಕಾರ್ಯವನ್ನು ನಡೆಯಿಸಿ, ಅನೇಕ ಸತ್ಯಗಳನ್ನು ಕಂಡುಹಿಡಿದಿರುವರು

ಹೃದಯವು ಚಲಿಸುತ್ತಿರುವಾಗ, ಉಂಟಾಗುವ ವಿದ್ಯುಕ್ ಚಕ್ತಿಯಿಂದ, ಕೆಲವು ಹೃದಯ ರೋಗಗಳನ್ನು ಕಂಡುಹಿಡಿಯುವ, ಒಂದು ನವೀನ ಯೋಜನೆಯನ್ನು ಸಿದ್ಧಪಡಿಸಿರುವರು.

ಹೀಗೆ ಮೆದುಳು ಕಾರ್ಯಿಸುತ್ತಿರುವಾಗ ಉಂಟಾಗುವ ವಿದ್ಯುತ್ ಪ್ರವಾಹದಿಂದ, ಅದರ ಕುರಿತು ಜ್ಞಾನ ಪಡೆಯಲು, ಅನೇಕ ಆಧಾರಗಳನ್ನು ದೊರಕಿಸುವ ಯಂತ್ರಗಳು ಸಿದ್ಧವಾಗಿವೆ ಈ ಯಂತ್ರವನ್ನು ಮನುಷ್ಯನ ತಲೆಗೆ ಸಿಕ್ಕಿಸಿ, ಆತನು ಆಲೋಚಿಸುತ್ತಿರುವಾಗ, ಆತನ ಮೆದುಳು ಯಾವ ರೀತಿಯಲ್ಲಿ ವರ್ತಿಸುತ್ತದೆ, ಸ್ವಪ್ನಗಳ ಚಿತ್ರ, ಇತ್ಯಾದಿ ಮನುಷ್ಯನ ಮಾನಸಿಕ ಸ್ಥಿತಿಯನ್ನು ತಿಳಕೊಳ್ಳಬಹುದು ಇದರಿಂದ ವಿಜ್ಞಾನಿಗಳಿಗೆ ಮಾನವನ ಮೆದುಳಿನ ಕುರಿತು ಅನೇಕ ನವಸತ್ಯಗಳು ಒದಗಿವೆ ಮಾನವನು ಆಲೋಚಿಸುವುದು ಮೆದುಳಿನಿಂದ ಮಾತ್ರವಲ್ಲ-ಇಡೀ ದೇಹದಿಂದ ಆಲೋಚಿಸುತ್ತಿದ್ದಾನೆ- ಎಂಬುದು ಈ ಯಂತ್ರದಿಂದ ಖಚಿತ ಮಾಡಿರುವರು.

ನಮ್ಮ ಹಲ್ಲುಗಳು, ದೇಹದ ಇತರ ಭಾಗಗಳಂತೆ, ತಮ್ಮಷ್ಟಕ್ಕೇನೆ, ರಿಪೇರಿ ಹೊಂದಲಾರವು ನಮ್ಮ ಈ ದೇಹದಲ್ಲಿ ಈ ತರದ ಅಂಗವು ಇದೊಂದು ಮಾತ್ರ.

ಜೇನುನೊಣಗಳು, ಹೂಗಳಿಂದ ನಮ್ಮ ಗೂಡಿಗೆ ಹೋಗುತ್ತಿರುವಾಗ, ತಮ್ಮ ದೇಹದ ಸರಿ ಅರ್ಧ ತೂಕವಿರುವ ಜೇನನ್ನು ಒಯ್ಯುವವು

ಕೊಳಲು, ಅತಿ ಪ್ರಾಚೀನ ಸಂಗೀತದ ಸಾಮಗ್ರಿ

ಪುರುಷರಿಗೆ, ಸ್ತ್ರೀಯರಿಗಿಂತ ಹೆಚ್ಚು ಆಯುಷ್ಯವಿರುವುದು, ಆಯರ್ಲೆಂಡಿನಲ್ಲಿ ಮಾತ್ರ.

ಏಸ್ಯಾಖಂಡದ ಮೊಂಗೋಲಿಯಾದ್ಯಕತ್ತೆಯು ಸ್ವಲ್ಪ ದೂರಗಳಿಗೆ, ತಾಸು ಒಂದಕ್ಕೆ ನಾಲ್ವತ್ತು ಮೈಲು ವೇಗದಿಂದ ಓಡಬಲ್ಲದು.

ದಕ್ಷಿಣ ಅಮೇರಿಕಾದ ಒಂದು ಕಾಡಿನಲ್ಲಿ, ೬೦ ಅಡಿ ಎತ್ತರವಾಗಿ ಬೆಳೆದ ಹೊಗೆಸೊಪ್ಪಿನ ಗಿಡವನ್ನು ಕಂಡುಹಿಡಿದಿರುವರು.

ತಿಮಿಂಗಿಲಗಳಿಗೆ ಶಬ್ದಮಾಡುವ ಇಂದ್ರಿಯಗಳಿಲ್ಲ

ವಿಮಾನಗಳಿಗೆ, ತೇಲುವುದನ್ನು ಕಲಿಯಲು ಮಿಲಿಯಾದಿ ವರ್ಷಗಳು ತಗಲಿದ್ದವು. ಪ್ರಾರಂಭದಲ್ಲಿ ಇವುಗಳು ಸಮುದ್ರದ ಬುಡದಲ್ಲಿ ವಾಸವಾಗಿದ್ದವೆಂದು ವಿಜ್ಞಾನಿಗಳು ಕಂಡುಹಿಡಿದಿರುವರು

ಚರ್ಮದ ಉರಿಯನ್ನು ಈ ವಿಷಹಾರಿ ಸಾಬೂನಿನಿಂದ ತಣಿಸಿರಿ

ಕೆಲವೊಂದು ವೇಳೆ ಅತೀ ಉಷ್ಣದಿಂದ ಚರ್ಮದ ಉರಿತವು ದ್ವಿಗುಣಿತವಾಗುವುದುಂಟು. ಆಗ ಅದರ ವೇದನೆಯು ಬಹಳ ಅಸಾಧ್ಯ. ಅಂತಹ ಸಂದರ್ಭದಲ್ಲಿ ಇರಾಸ್ಮಿಕ್ ಗ್ಲಿಸರಿನ್ ಸಾಬೂನನ್ನು ಉಪಯೋಗಿಸಲು ಮರೆಯಬೇಡಿರಿ

ಈ ಸಾಬೂನಿನಲ್ಲಿ ಅತ್ಯದ್ಭುತವಾದ ಲಕ್ಷಣಗಳಿವೆ ಇದರಲ್ಲಿ ಕಾರ್ಬಾಲಿಕ್ ದ್ರಾವಕವೂ ಗ್ಲಿಸರಿನೂ ಮಿಶ್ರವಾಗಿದ್ದುದರಿಂದ ಅದರಿಂದ ಉದ್ಭವಿಸುವ ವಿಷಹಾರಿ ನೊರೆಯು, ದೇಹದೊಳಗಿನ ರಂಧ್ರಗಳ ಮೂಲಕ ಒಳಹೊಕ್ಕು, ವಿಷಾಣುಗಳನ್ನು ಕೊಂದು ದೇಹಕ್ಕೆ ತಂಪನ್ನೀಯುವುದು

ಡಾಕ್ಟರರೂ, ಚರ್ಮವ್ಯಾಧಿಗಳ ಹುಳುಕನ್ನು ಕಂಡಲ್ಲಿ ಅಲ್ಲವರಿಗೆ ಈ ಸಾಬೂನನ್ನೇ ಶಿಫಾರಸು ಮಾಡುತ್ತಾರೆ ಇದನ್ನು ದಿನಾಲೂ ಉಪಯೋಗಿಸಿದಿರಾದರೆ ಯಾವ ಚರ್ಮರೋಗಗಳಿಗೂ ಸೀವ್ರ ಒಳಬೀಳಲಾರಿರಿ ಇರಾಸ್ಮಿಕ್ ಕಾರ್ಬಾಲಿಕ್ ಗ್ಲಿಸರಿನ್ ಸಾಬೂನು ತೈಲಾಭ್ಯಂಜನಕ್ಕೂ ಇದು ಬಹಳ ಉಪಯೋಗಕಾರಿಯಾಗಿದೆ.

ERASMIC

36% CARBOLIC GLYCERINE SOAP

THE ERASMIC CO LTD, LONDON, ENGLAND

X-ECG 468-402

ಸಾಬೂನು ತೆಗೆದ ನಂತರ ಇದನ್ನು ಪೌಡರಿನ ಪೆಟ್ಟಿಗೆಯಾಗಿ ಮಾಡಬಹುದು

ಚಿಕ್ಕ ಮಕ್ಕಳು ಅಳುವುದೇಕೆ?

ಎಂಬುದನ್ನು ತಿಳಿಯದೆ, ಅನೇಕ ಹೆತ್ತವರು, ತಮಗಿಚ್ಛೆ ಬಂದಂತೆ ಅವುಗಳನ್ನು ಸಮಜಾಯಿಸಲು ನೋಡುವರು.

ಅವುಗಳಿಗೆ ಅಜೀರ್ಣವಿದೆ ಉದರಶೂಲೆ ಇದೆ-ಅಮವಾತದ ಉಪದ್ರವೂ ಇರಬಹುದು-

ಎಂಬುದನ್ನು ಬಲ್ಲಿರಾ?

ಬಾಬೂಲಿನ್

ಇದು ಚಿಕ್ಕ ಶಿಶುಗಳಿಗಾಗಿಯೇ ತಯಾರಿಸಲ್ಪಟ್ಟಿದೆ ... ಲಾಯಿನ್ ಲವಣ, ಮೆಗ್ನಿಶಿಯಮ್, ಪೊಟ್ಯಾಶಿಯಮ್ ಮತ್ತು ಬಡಿಶೇಪ ಎಣ್ಣೆ ಮತ್ತು ಮೆಂಥಲ್ ಇವುಗಳ ಮಧುರವೂ ರುಚಿಕರವೂ ಆದ ಮಿಶ್ರಣದಿಂದ ತಯಾರಿಸಲ್ಪಟ್ಟಿದೆ ಚಿಕ್ಕ ಮಕ್ಕಳ ಉದರಶೂಲೆಯನ್ನು ನಿವಾರಿಸಿ ... ಕರುಳುಗಳನ್ನು ಸ್ವಚ್ಛವಿರಿಸಿ, ಬಲಗೊಳಿಸಿ ಕಾಪಾಡುವುದು.

ಕಾಂತಿ, ನಾಯಿಕೆಮ್ಮು-ಇವುಗಳಿಗೂ ಉಪಯೋಗಿಸಲ್ಪಡಬಹುದಾದ ಅಮೂಲ್ಯ ಔಷಧ. ಮಕ್ಕಳಿಗೆ ಹಲ್ಲು ಮೂಡುವ ಕಾಲದಲ್ಲಾಗುವ ವಿಕಾರಗಳನ್ನೆಲ್ಲ ನಿಲ್ಲಿಸುವುದು. ಇಂದೇ ಒಂದು ಬಾಟ್ಲಿಯನ್ನು ಕೊಂಡುಕೊಳ್ಳಿರಿ! ಅನುಪಾನ ಪತ್ರ, ಸೀಸೆಯೊಂದಿಗಿದೆ.

ಬಾಬ್ ಕೆಮಿಕಲ್ ವರ್ಕ್ಸ್ ಬೊಂಬಾಯಿ ಮತ್ತು ಕಲ್ಕತ್ತಾ.

ದಕ್ಷಿಣ ಕನ್ನಡ ಜಿಲ್ಲೆಗೆ ಏಜಂಟರು-ಪೊಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಎರಡು ಸೈಜಿನಲ್ಲಿ ದೊರೆಯುತ್ತದೆ **ಲೋಧ್ರ** ರೂ. 3 ಮತ್ತು 1—10—0

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದ್ರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ಸಾವು ನಿಶ್ಚಯಸಿ ಸ್ವಾನುಭವ ಹೊಂದಿದ ಎಲ್ಲಾ ಔಷಧ ಮೂಲಿಕೆಗಳನ್ನು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ಧಿಶ್ಯಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟ್ ಮಂಗಳೂರು, ದ. ಕ.

ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9 50	ಸಂಜೆ 4-20
ಮಿಕ್ಸೆಡ್	,, 6-55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ, 12 45	ಮ 2 40
ಶಿಟಲ್	ಸಂಜೆ 5-25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1-20
ಕಾಸರಗೋಡು ಪೆಸೆಂಜರು	ಸಂಜೆ 8 20	ಸಂಜೆ 6-[illegible]

Ested 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಸ್ ಲಿಮಿಟೆಡ್,

ಪುತ್ತೂರು

ಠೇವಣಾತಿಗಳ ದರ:

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 5½ರಂತೆ 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳಿಗೆ ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು. ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಯಲ್ಪಡುವುದು.

Puttur
Dated 10 – 4 – 1935

G. N. Lakshman Pai,
Secretary.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಎದ್ದುಪಡುವ ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 93, ಚಿಕ್ಕಪೇಟೆ, ಬೆಂಗಳೂರು ಸಿಟಿ.

ESTD 1906

CANARA BANK

LIMITED

Head Office: MANGALORE

Subscribed Capital	6,00,000
Paid up Capital ..	3,33'000
Reserves ...	4,50,000
Deposits .	61,92 000
Working Capital . . .	73,40,000

OFFICES:

Bombay-Fort, Bombay-Mandvi, Hubli, Calicut Cochin, Ernakulam, Alleppey, Bngalore, Chikmagalur, Mangalore Bunder, Mangalore-City, Kasaragod, Puttur, Udipi, Karkala Coondapoor, Ganguli, Buntwal, Davanagere & Moolky

ALL KINDS OF BANKING BUSINESS UNDERTAKEN

ಚಿತ್ರಾಹುತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ. ಎಂ ನರಸಿಂಗರಾವ್, ಬಿ. ಎ. ಎಂ ಎಲ್ ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್‌ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು.

ಬನ್ನಿರಿ ಅಥವಾ ಬರೆಯಿರಿ.

ನಮ್ಮ ಸಾಪ್ತಾಹಿಕ ಕಥೆ:

ಪಾತ್ರ ವಿಪರ್ಯಾಸ

ಲೇಖಕ: ಶ್ರೀ 'ರಸಿಕರಂಜನ'

(ಕಳೆದ ಸಂಚಿಕೆಯಿಂದ ಮುಂದುವರಿದುದ)

ಈ ದಿನ ಸಾಯಂಕಾಲ ರಮಾನಂದನು ಹೋದಾಗ ಹೊರಚಾವಡಿಯಲ್ಲಿ ನಳಿನಿಯಾಗಲಿ, ಸರಸೆಯಾಗಲಿ ಕಂಡು ಬರಲಿಲ್ಲ ಮೇಜು ಕುರ್ಚಿಗಳೆಲ್ಲಾ ಬರಿದಾಗಿಯೇ ನಿಂತಿದ್ದುವು. ರಮಾನಂದನು ತನ್ನ ಮನಸ್ಸನ್ನು ಸ್ವಮಿತಕ್ಕೆ ತರುವುದಕ್ಕಾಗಿ ಉದ್ಯಾನಕ್ಕೆ ಹೋಗಿ ಅತ್ತಿತ್ತ ಅಲೆದಾಡತೊಡಗಿದನು

ಬೆಳದಿಂಗಳಿನಿಂದಲೂ, ತಂಗಾಳಿಯಿಂದಲೂ, ಹೂಗಂಪಿನಿಂದಲೂ ಪ್ರಕೃತಿಯು ಮನಸೆಳೆಯುವಂತಿದ್ದಳು ಹಾಗೆಯೇ ಅವನ ಬಾಯಿಂದ, ತಾನು ಎಷ್ಟೋ ಸಲ ಹಾಡಿದ್ದ ಮುದ್ದು ಹಾಡು ಸಣ್ಣ ದನಿಯಲ್ಲಿ ಹೊರಟಿತು.

"ಮಂಜುಳ ನಿಶಿ, ಮಂಜುಳ ಶಶಿ,
ಮಂಜುಳ ದಿಶಿ, ನೋಡು ಬಾ
ತನುಸೆಳೆವನು, ದನಿಯೆಳೆವನು,
ಮನಗೆಳೆವನು, ಬೀರು ಬಾ
ಕೂಡು ಬಾ! ಹಾಡು ಬಾ!
ಬೇಗ ಬಾ! ಬಾ! ಬಾ!"

ಹಾಡನ್ನು ನಿಲ್ಲಿಸಿ ನೀರವನಾಗಿ ಅತ್ತಿತ್ತ ಹೆಜ್ಜೆಯಿಡಹತ್ತಿದನು ಸ್ವಲ್ಪ ಸಮಯದಲ್ಲೇ ಅವನಿಗೆ ಹತ್ತಿರದಿಂದಲೇ ತಾನು ಹಾಡಿದ ರಾಗದ ಹಾಡೇ ಇಂಪಾದ ಸ್ವರದಲ್ಲಿ ಕೇಳಬರತೊಡಗಿತು

"ಜೊತೆಯಿಲ್ಲದೆ ನನ್ನೊಳಿದೆದೆ
ಕಂಪಿಸುತಿದೆ, ಕೂಡು ಬಾ
ಹೊಸ ಹಸುರಿದೆ, ತಿಳಿಗೊಳವಿದೆ,
ನಾನಿನ್ನೆಡೆ, ನೀನೆನ್ನೆಡೆ!
ಕೂಡು ಬಾ! ಹಾಡು ಬಾ
ಬೇಗ ಬಾ ಬಾ ಬಾ"

ರಮಾನಂದನು ತಟಸ್ಥನಾಗಿ ಅತ್ತ ತಿರುಗಿ ನೋಡಿದನು ಅಲ್ಲೇ ಕೆರೆಯ ಸೋಪಾನಗಳ ಮೇಲೆ ತನ್ನ ಮನೋದೇವಿಯೇ ಪ್ರತ್ಯಕ್ಷಳಾಗಿ ಕುಳಿತಿದ್ದಳು! ಅವಳ ಆ ಮೂರ್ತಿಯನ್ನು ಯಾವಾಗಲಾದರೂ ಗುರುತಿಸದಿರಲು ಸಾಧ್ಯವಿದೆಯೇ! ಅವಳ ಆ ಸೌಂದರ್ಯಭರಿತವಾದ ಮುಖಕಮಲವು ಇದಿನವೇಕೋ ಮತ್ತಷ್ಟು ಮನೋಹರವಾಗಿ ರಂಜಿಸುತ್ತಿತ್ತು ಅವಳ ಮುಂಗುರುಳುಗಳ ಬೆಡಗು, ಕಣ್ಣುಗಳ ಸೊಬಗು, ಮೈಯ ಮಿರುಗು ಎಲ್ಲವೂ ವಿಚಿತ್ರವಾಗಿದ್ದುವು ಅವಳ ಆಗಿನ ಸೌಂದರ್ಯವು ರಮಾನಂದನನ್ನು ಪೂರ್ತಿಯಾಗಿ ಮುಗ್ಧನಾಗಿ ಮಾಡಿತು ಅವನು ನೋಡುತ್ತಿದ್ದಂತೆಯೇ ಅವಳು ಮುಖವನ್ನು ಕೈಬೊಗಸೆಯಲ್ಲಿ ಅಡಗಿಸಿ ಬಿಕ್ಕುತ್ತಿದ್ದಂತೆ ತೋರಿತು.

ರಮಾನಂದನು ಮೆಲ್ಲಗೆ ಅವಳ ಬಳಿಗೆ ಹೋದನು, ಅವಳ ಲಕ್ಷ್ಯವು ಅವನ ಕಡೆಗೆ ಹರಿಯಲಿಲ್ಲ ರಮಾನಂದನು ಮೆಲ್ಲಮೆಲ್ಲನೆ ಅವಳ ಕಾಲಬಳಿಯಲ್ಲಿ ಹೋಗಿ ಕೂತನು, ಅವಳು ಮತ್ತೂ ಮುಖವನ್ನು ಎತ್ತಲಿಲ್ಲ ರಮಾನಂದನು ಅಲ್ಲೇ ಮೊಣಕಾಲೂರಿಕೊಂಡು ಬಾಗಿ ಅವಳ ಕಾಲುಗಳನ್ನು ಎರಡೂ ಕೈಗಳಿಂದ ಬಹಳ ಮೃದುವಾಗಿ ಸ್ಪರ್ಶಿಸಿ, ತನ್ನ ಮುಖದಿಂದ ಅವುಗಳನ್ನು ಮುಚ್ಚಿಬಿಟ್ಟನು ಅವನ ಕಣ್ಣುಗಳಿಂದ ನೀರು ಕಾಲುವೆಯಾಗಿ ಹರಿದು, ಅವಳ ಕಾಲುಗಳನ್ನು ತೊಯಿಸತೊಡಗಿತು.

ಒಡನೆ ಅವಳು, ದಿಗಿಲುಗೊಂಡವಳಂತೆ, ಎದ್ದುನಿಂತು, ತನ್ನ ಕಾಲುಗಳನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದಳು ಆದರೆ ರಮಾನಂದನು ಆಗ ಅವುಗಳನ್ನು, ತನ್ನ ಪ್ರಾಣವೇ ಎಂಬಂತೆ, ಮತ್ತಷ್ಟು ಬಿಗಿಯಾಗಿ ಹಿಡಿದು, ಬಿಕ್ಕುತ್ತಾ, ಬಿಕ್ಕುತ್ತಾ, "ನನ್ನ ಜೀವನಸರ್ವಸ್ವ ನಿನ್ನ ಪ್ರೇಮಭಿಕ್ಷೆಯಿಂದ ನನಗೆ ಪ್ರಾಣದಾನ ಮಾಡಲಾರೆಯಾ?" ಎಂದು ಮೊರೆಯಿಟ್ಟನು

ಮರುಕ್ಷಣದಲ್ಲೇ ಮಿಂಚಿನ ವೇಗದಲ್ಲಿ ಎರಡು ಕೈಗಳು ಅವನ ಕೊರಳನ್ನು ಬಿಗಿದು, ಎರಡು ಮೃದುವಾದ ತುಟಿಗಳು ಅವನ ಹಣೆಯ ಮೇಲೆ ಸಮ್ಮತಿಯ ಮುದ್ರೆಯನ್ನು ಒತ್ತಿದುವು ರಮಾನಂದನು ದೇವಲೋಕದ ಸುಖವನ್ನು ಅನುಭವಿಸಿ ಸರಿಯಾಗಿ ಎದ್ದು ನಿಲ್ಲುವಷ್ಟರಲ್ಲಿ ಅವನ ಕೊರಳು ತನ್ನ ಬಂಧನದಿಂದ ಬಿಡುಗಡೆ ಹೊಂದಿತು. ರಮಾನಂದನು ತನ್ನ ಸುಖಸ್ವಪ್ನದಿಂದ ಎಚ್ಚರವಾಗಿ ಮುಂದೆ ನೋಡುವಷ್ಟರಲ್ಲಿ, ಅವನ ಅಧಿಷ್ಠಾತ್ರಿಯು ಲಜ್ಜೆಯಿಂದ ಆಚೆಗೆ ಓಡುವುದರಲ್ಲಿದ್ದಳು. ರಮಾನಂದನು ಛಕ್ಕನೆ ಹಾರಿ ಅವಳ ಕೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ಅವಳ ಬಾಗಿದ ಮುಖವನ್ನು ತನ್ನ ಕಡೆಗೆ ತಿರುಗಿಸಿದನು

ಒಡನೆ ಅವನು ಹಾಹಾ! ಅವಳನ್ನು ಬಿಟ್ಟು ಬಿಟ್ಟು, 'ಇದೇನು ಸರಸೆ' ಎಂದನು

ಆಶ್ಚರ್ಯದಿಂದ ತಬ್ಬಿಬ್ಬಾದ ರಮಾನಂದನು ಸ್ವಲ್ಪ ಸಮಯದವರೆಗೆ ಸರಸೆಯನ್ನೇ ಮೇಲೆ ಕೆಳಗೆ ದಿಟ್ಟಿಸಿ ನೋಡಿದನು

ಸರಸೆಯು ರಮಾನಂದನ ಈ ವರ್ತನದ ಅರ್ಥವನ್ನು ತಿಳಿಯದವಳಾದಳು ಅವಳು ಅವಾಕ್ಕಾಗಿ ನಿಂತುಬಿಟ್ಟಳು ಅವಳ ಕಣ್ಣುಗಳು ತುಂಬಿಬಂದುವು ತುಟಿಗಳು ಅದುರಿದುವು ಅವಳ ಮುಖದ ಮೇಲಿಂದ ಸಂತೋಷ ಲಜ್ಜೆ, ಅಂಜಿಕೆ ಗಲಿಬಿಲಿ ಮುಂತಾದ ಭಾವಗಳು ಹಾಯುತ್ತಾ, ಅದಕ್ಕೆ ಒಂದು ಅಪೂರ್ವ ಲಾವಣ್ಯವನ್ನು ಕೊಟ್ಟಿತು

ರಮಾನಂದನು, ಅವಳಲ್ಲಿ ನಳಿನಿಯನ್ನೂ ಹಿಂದಿಕ್ಕುವಷ್ಟು ಸೌಂದರ್ಯವಿರುವುದೆಂದು, ಆಗಲೇ ಮನಗಂಡನು ನಳಿನಿಯ ಮೇಲಿನ ತನ್ನ ಪಕ್ಷಪಾತವೇ ಪ್ರತಿಯೊಂದರಲ್ಲಿಯೂ ನಳಿನಿಯನ್ನು ಮಿಗಿಸುತ್ತಿದ್ದ ಸರಸೆಯ ವಿಷಯದಲ್ಲಿ ತನ್ನನ್ನು ಕುರುಡನಾಗಿ ಮಾಡಿದ್ದುದಕ್ಕಾಗಿ ಅವನು ತನ್ನನ್ನು ತಾನೇ ಹಳಿದುಕೊಂಡನು ಸರಸೆಗೆ ಮೊದಲಿನಿಂದಲೂ ತನ್ನಲ್ಲಿ ಪ್ರೇಮವಿದ್ದುದು ಅತನಿಗೆ, ಕಣ್ಣ ಮುಂದಿನ ಪರದೆಯು ಜಾರಿದಂತೆಯೇ, ಕ್ರಮಕ್ರಮವಾಗಿ ಸ್ಪಷ್ಟವಾಗಿ ಮನದಟ್ಟಾಯಿತು

'ನೀವು ಅಕ್ಕನನ್ನೇ ಪ್ರೀತಿಸುವಿರೆಂದು ತಿಳಿದಿದ್ದೆ'" ಸರಸೆಯು ಮೌನವನ್ನು ಸಹಿಸಲಾರದೆ, ಎಂದಳು

"ಆದರೆ, ಸರಸೆ! ಈಗ ನಿನ್ನನ್ನೇ ಪ್ರೀತಿಸುತ್ತಿದ್ದೇನೆ. ನನ್ನ ಜನ್ಮವನ್ನು ಸಾರ್ಥಕಪಡಿಸಲಾರೆಯಾ?" ರಮಾನಂದನು, ಸರಸೆಯನ್ನು ಸಮೀಪಿಸುತ್ತಾ, ಎಂದನು

ಮರುಕ್ಷಣದಲ್ಲಿ ರಮಾನಂದನ ಕೊರಳನ್ನು ಬಿಗಿದ ಸರಸೆಯ ತೋಳುಗಳೂ, ಅವನ ತುಟಿಯನ್ನು ಒತ್ತಿದ ಅವಳ ತುಟಿಗಳೂ, ಅವನಿಗೆ ಸರಿಯಾದ ಉತ್ತರವನ್ನೇ ಕೊಡದಿರಲಿಲ್ಲ *

*With apologies to Mr K V Puttappa, M A

*O Henry ಯ ಒಂದು ಕಥೆಯಿಂದ ಪ್ರೇರಿತ

ಸ್ಪರ್ಧಾರಂಗ

ಸಂಚಾಲಕ — ಶ್ರೀ "ರಸಿಕರಂಜನ"

ಗೆಲ್ಲಿರಿ! ಪಡೆಯಿರಿ!

೧೦ ರೂಪಾಯಿ ಬಹುಮಾನ!

ಪ್ರಥಮ ಬಹುಮಾನ: ರೂ ೫, ದ್ವಿತೀಯ ಬಹುಮಾನ: ರೂ ೩,

ತೃತೀಯ ಬಹುಮಾನ: ರೂ ೨-೦-೦;

ವಿಶೇಷ ಬಹುಮಾನ: ಒಂದು ವರ್ಷದ "ಸ್ವದೇಶಾಭಿಮಾನಿ"

ಚಕ್ರಬಂಧ ಒಗಟು ಸಂಖ್ಯೆ ೧.

ಉತ್ತರ ಸ್ವೀಕರಿಸುವ ಕೊನೆಯ ದಿನ.— ತಾ 5-5-1936



ಹೆಸರು

ವಿಳಾಸ

ಸುಳಿವುಗಳು:

ಎಡದಿಂದ ಬಲಕ್ಕೆ -		ಮೇಲಿಂದ ಕೆಳಕ್ಕೆ.	
1	ಅಗಣಿತ	1	ಸುರ
3	ಮಗ	2	ಅಂಧಕಾರ
5	ಹಂಸ	3	ಮೀಲ್ಮಾಗ
7	ಪಾದರಸ	4	ಗಂಗಾನದಿಯ ಮುಖ್ಯ ಶಾಖೆ
9	ವಿವಿಧ	6	ಅರಸ
10	ಅಯೋಧ್ಯೆಯ ರಾಜರ ಕುಲ	8	ಸರೋವರ
11	ಒಂದು ಸಂವತ್ಸರ	9	ಪತಿ
12	ಖಡ್ಗ	12	ಕಾಡು
14	ಎಲಾಗಿಲು	13	ಒಂದು ಪಕ್ಷಿ
16	ಒಂದು ಸೌರಮಾನ ತಿಂಗಳು	15	ಶವದ ಅಂತ್ಯಕ್ರಿಯೆ
18	ಪಕ್ಷಿ	16	ಕುವರ
19	ಯುದ್ಧ	17	ಸೂರ್ಯಕಾಂತ

ನಿಯಮಗಳು:— ೧ ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೇ ಸ್ಪಷ್ಟವಾದ ಅಕ್ಷರಗಳಲ್ಲಿ ಹೆಸರು ವಿಳಾಸ ಸಹಿತ ಬರೆದು ಕಾಲಾಣೆಯ ನಾಲ್ಕು ಸ್ಟ್ಯಾಂಪು ಟಿಕೇಟುಗಳೊಂದಿಗೆ ತಾ ೫-5 1936ರೊಳಗೆ ತಲಪುವಂತೆ ಕಳುಹಿಸಬೇಕು ೨ ಹೆಚ್ಚು ಉತ್ತರ ಕಳುಹಿಸುವವರು ಮೊದಲನೆಯ ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೂ, ಉಳಿದ ಉತ್ತರಗಳನ್ನು ಪ್ರತ್ಯೇಕ ಕಾಗದಗಳ ಮೇಲೆಯೂ ಬರೆದು, ಪ್ರತಿ ಆರು ಉತ್ತರಗಳಿಗೆ ಕಾಲಾಣೆಯ ಹದಿನಾರು ಟಿಕೇಟುಗಳೊಂದಿಗೆ ಕಳುಹಿಸತಕ್ಕದ್ದು ೩ ತಾ 6-5-'36ರೊಳಗೆ ಸ್ವೀಕೃತವಾದ ಉತ್ತರಗಳಲ್ಲಿ, ನಾವು ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ ಲಿಮಿಟೆಡ್ ಮಂಗಳೂರು ರಥಬೀದಿ ಶಾಖೆಯ ಏಜಂಟರೊಡನೆ ಮೊಹರು ಮಾಡಿ ಭದ್ರತೆಯಲ್ಲಿಟ್ಟಿರುವ ಉತ್ತರದೊಡನೆ ಅಕ್ಷರಶಃ ಹೋಲುವ ಉತ್ತರಕ್ಕೆ ಅಥವಾ ಉತ್ತರಗಳಿಗೆ ಮೊದಲನೆಯ ಬಹುಮಾನವನ್ನೂ, ಒಂದು ತಪ್ಪಿನ ಉತ್ತರಗಳಿಗೆ ಎರಡನೆಯ ಬಹುಮಾನವನ್ನೂ, ಎರಡು ತಪ್ಪಿನ ಉತ್ತರಗಳಿಗೆ ಮೂರನೆಯ ಬಹುಮಾನವನ್ನೂ ಕೊಡಲಾಗುವುದು. ಈ ರೀತಿಯ ಉತ್ತರಗಳು ಬಾರದ ಪಕ್ಷದಲ್ಲಿ ಅತ್ಯಂತ ಕಡಿಮೆ ತಪ್ಪಿನ ಉತ್ತರಗಳಿಗೇ ರೂ. ೧೦ನ್ನೂ ಸರಿಯಾಗಿ ಹಂಚಿ ಕೊಡಲಾಗುವುದು ೪ ಅತ್ಯಂತ ಹೆಚ್ಚು ಉತ್ತರ ಕಳುಹಿಸುವವರಿಗೆ ಒಂದು ವರ್ಷದ 'ಸ್ವದೇಶಾಭಿಮಾನಿ'ಯ ವಿಶೇಷ ಬಹುಮಾನ ದೊರೆಯುವುದು ೫ ಎಲ್ಲಾ ಸಂದರ್ಭಗಳಲ್ಲಿಯೂ ಈ 'ಸ್ಪರ್ಧಾರಂಗ'ದ ಸಂಚಾಲಕರ ಇತ್ಯರ್ಥವೇ ಕೊನೆಯ ಇತ್ಯರ್ಥವಾಗಿರುವುದು

ಮೇಲಿನ ಚಕ್ರಬಂಧ ಒಗಟು ಸಂಖ್ಯೆ ೧ರಲ್ಲಿ ಬರಬಹುದಾದ ಶಬ್ದಗಳು:—

ಅಜರ, ಅಟವಿ, ಅದವಿ, ಅನಂತ, ಅಮರ, ಅಮಿತ, ಅಸಿ, ಕದ, ಕಾಕ, ಕೋಕ, ಕ್ಷಯ, ಕ್ಷೋಭ, ಜಮುನಾ, ಜಯ, ತನಯ, ತನುಜ, ತಮ, ತಳ, ತಲ, ದಮನ, ದಹನ, ನಾನಾ, ನಾಯಕ, ಪಿಕ, ಬಕ, ಮಕರ, ಮಗ, ಮರಾಲ, ಮರಾಳ, ಯಮುನಾ, ರಜ, ರಘು, ರವಿ, ರಸ, ರಾಜ, ರಾಯ, ವಿಹಗ, ವಿಹಂಗ, ವ್ಯಯ, ಶುಕ, ಸರಸಿ

ಸಂಚಾಲಕ, "ಸ್ಪರ್ಧಾರಂಗ",

'ಸ್ವದೇಶಾಭಿಮಾನಿ' ಕಾರ್ಯಾಲಯ ಮಂಗಳೂರು.

ಆ ಕೆಮ್ಮುವನ್ನು ನಿವಾರಿಸಿರಿ

ಆಗಾಗ್ಗೆ ದುರದೃಷ್ಟಕರವಾದ ಬಾಧೆಯನ್ನೀವ ಆ ಕೆಮ್ಮುವನ್ನು ತೀವ್ರವಾಗಿ ಗುಣಪಡಿಸಿಕೊಳ್ಳಿರಿ. ಗಂಟಲಿನ ಕಿರ್ಕಿರಿತೆಯಿಂದಲೂ, ಶ್ವಾಸಕೋಶದ ದುರ್ಬಲತೆಯಿಂದಲೂ ಉಂಟಾಗುವ ಈ ಕೆಮ್ಮುವನ್ನು, ಪೆಪ್ಸ್ ಗುಳಿಗೆಗಳನ್ನು ಸೇವಿಸಿ ನಿವಾರಿಸಿರಿ ಪೆಪ್ಸ್ ಗುಳಿಗೆಗಳ ಔಷಧಿಯುಕ್ತವಾದ ನೊರೆಯು ಶ್ವಾಸಕೋಶವನ್ನು ಸೇರಿ ಅಲ್ಲಿರುವ ವಿಷಾಣುಗಳನ್ನು ಬಹುಸುಲಭದಲ್ಲೀ ಕೊಂದು ಬಿಡುತ್ತದೆ.



ಇದರಿಂದ ಎದೆನೋವೂ, ಗಂಟಲ ನೋವೂ ಶಮನವಾಗುವುದಲ್ಲದೆ, ಕಫವೂ ನಿಂತುಬಿಡುತ್ತದೆ ದೇಹಕ್ಕೆ ನವೀನ ಶಕ್ತಿಯನ್ನೂ, ಮನಸ್ಸಿಗೆ ಹುರುಪನ್ನೂ ಕೊಡುತ್ತದೆ

ಒಮ್ಮೆ ಪರೀಕ್ಷಿಸಿರಿ.

ಪೆಪ್ಸ್ ಗುಳಿಗೆಗಳು ಅಂದವಾದ ಸೀಸೆಗಳಲ್ಲಿ ಮಾರಲ್ಪಡುತ್ತದೆ ಸೀಸೆ 1ಕ್ಕೆ ರೂ 1

ಏಜಂಟರು – ದಾಥಾ ಎಂಡ್ ಕಂಪೆನಿ, ಪಿ. ಟಿ. ಮದರಾಸು.

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳು.

ಪೆಪ್ಸ್ PEPS

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿಯಲ್ಲೇ ಕೊಡಿರಿ!

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 21/1936

ಪದ್ಮು ಮಡ್ಕಲ್ತಿ–ಕಿಟ್ಟು ಮಡ್ಕಲನ ಹೆಂಡತಿ- ಉಡುಪಿ ತಾಲೂಕು ಉದಿಯಾವರ ಗ್ರಾಮದಲ್ಲಿರುವವಳು—ಅರ್ಜಿದಾರಳು.

ತಾರೀಕು 19-1 1936ರಲ್ಲು ಹಾಲಿ ಉದಿಯಾವರ ಗ್ರಾಮದಲ್ಲಿ ಮೃತಪಟ್ಟಿರುವ ಅರ್ಜಿದಾರಳ ಮಗ ಮುದ್ದು ಮಡ್ಕೇಲನು ದಿ ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಉಡುಪಿ ಇದರಲ್ಲಿ J L No 41/35ಕ್ಕೆ ಈಡು ಮಾಡಿಟ್ಟಿರುವ ಚಿನ್ನಾಭರಣಗಳನ್ನು ವಸೂಲು ಮಾಡುವರೆ ಸದ್ರಿ ಮೃತನ ಕುಟುಂಬದ ಯಜಮಾನಳಾದ ತಾನು ಹಕ್ಕುದಾರಳೆಂತಲೂ ಆ ಕುರಿತು ತನಗೆ ಈ ಕೋರ್ಟಿನಿಂದ ಒಂದು ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿಯೂ ವಗೈರೆ ಅಪೇಕ್ಷಿಸಿ ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾ 12-6-36ಕ್ಕೆ ತಸ್ಲಿಗೆ ಇಟ್ಟಿರುತ್ತದೆ ಆಕ್ಷೇಪವುಳ್ಳವರು ಆ ದಿವಸ ಸದ್ರಿ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತರ ಹಾಜರಾಗಿ ಜಾಹಿರು ಮಾಡಿಕೊಳ್ಳಬಹುದೆಂತ ಈ ಮೂಲಕ ತಿಳಿಸೋಣಾಗಿದೆ

ಉಡುಪಿ　　　　P N Madhava Rao,
20–4–36　　　　*Vakil for Petitioner*

ಕಾರ್ಯಸಿದ್ಧಿ ಮಂತ್ರ

ಯಾರೇ ಆಗಲಿ, ಗಂಡಸರಾಗಲಿ, ಹೆಂಗಸರಾಗಲಿ ಹುಡುಗರಾಗಲಿ, ಈ ಮಂತ್ರವನ್ನು ಸಿದ್ಧಿ ಮಾಡಿಕೊಂಡ ಮಾತ್ರಕ್ಕೆ ಹುಂಬಿ ರೀತಿಯಲ್ಲಿ ಜಪಿಸಿದರೆ ಅವ ಮನೋಭಿಲಾಷೆಗಳೆಲ್ಲವೂ ನೆರವೇರುವುವು. ಇದ ಸಹಾಯದಿಂದ ಕಳೆದ ಪದಾರ್ಥಗಳ ಪತ್ತೆ ಹಚ್ಚುವಿಕೆಯ, ವ್ಯಕ್ತರಾದ ಸಂಬಂಧಿಗಳೊಡನೆ ಸಂಭಾಷಣೆಯೂ, ಇ ರರ ಮನೋಭಿಪ್ರಾಯಗಳನ್ನೂ, ಭೂತಭವಿಷ್ಯತ್ ವರ್ತಮಾನಗಳೆಲ್ಲವನ್ನೂ ಸುಲಭವಾಗಿ ತಿಳಿಯಬಹುದು. ಕೇವಲ ಒಂದು ರೂಪಾಯಿಯನ್ನು ಮನಿಯಾರ್ಡರ್ ಮೂಲಕ ಕಳುಹಿಸುವವರಿಗೆ ಈ ಕಾರ್ಯಸಿದ್ಧಿ ಮಂತ್ರವು ಅಂಚೆ ವೆಚ್ಚವಿಲ್ಲದೆ ಕಳುಹಿಸಲ್ಪಡುವುದು. ವಿ ಪಿ ಮಾಡುವುದಿಲ್ಲ　　ವ್ಯವಸ್ಥಾಪಕ,

ಕಾರ್ಯಸಿದ್ಧಿ ಆಶ್ರಮ 211 ವಿಶ್ವೇಶ್ವರ ಪುರಂ

ಬೆಂಗಳೂರು ಸಿಟಿ　(S I)

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು.	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 4	3— 0
ಹೊಸ ಮುಸ್ತಾಕಿ	3—10	4— 4
ಗುಡ್ಡು ಸುಗ್ಗಿ	3— 8	3—12
ಊರ ಅವಲಕ್ಕಿ ಬೆಳ್ತಿಗೆ	4— 0	4— 8
ರಂಗೂನು ಬಿ. ಗೋ ಒಕ್ಕ	6— 4	7— 0
ಎಲ್ಲೂರು ಬಿ ಮು.ಒಕ್ಕ	4— 4	4— 8
ಗೋದಿ ಗೋಣಿ ಒಕ್ಕ	8 — 8	10— 4
ತೊಗರಿ ಗೋಣಿ ಒಕ್ಕ	9 —[illegible]	9 — 8
ಹುರುಳಿ ಗೋಣಿ ಒಕ್ಕ	5— 4	5 —12
ಕಡಲೆ ಗೋಣಿ ಒಕ್ಕ	7 — 4	9 — 8
ತೊಗರಿಬೇಳೆ ಗೋಣಿ ಒಕ್ಕ	11— 0	15 — 8
ಉದ್ದು ಗೋಣಿ ಒಕ್ಕ	9— 8	10 — 0
ಹೆಸರು ಗೋಣಿ ಒಕ್ಕ	9— 4	9—12
ಊರುಬೆಲ್ಲ ಖಂಡಿ ಒಕ್ಕ	30— 0	30— 0
ಉಪ್ಪು ಗೋಣಿ ಒಕ್ಕ	4— 8	4— 8
ಕೊಬ್ರಿ ಖಂಡಿ ಒಕ್ಕ	60— 0	70— 0
ಕೊಬ್ರಿ ಹಿಂಡಿ ಖಂಡಿ ಒಕ್ಕ	28— 0	29— 0
ಎಳ್ಳಿಂಡಿ ಖಂಡಿ ಒಕ್ಕ	32 — 8	33—12
ಕೊಬ್ರಿ ಎಣ್ಣೆ ಮುಡಿ ಒಕ್ಕ	4 —15	6— 0
ಎಳ್ಳೆಣ್ಣೆ ಮುಡಿ ಒಕ್ಕ	7— 0	7— 0
ಚಿಮಿಣಿ ಎಣ್ಣೆ ಪೆಟ್ಟಿಗೆ ಒಕ್ಕ	6— 5	6— 5
ಮೋರಿಸ ಸಕ್ಕರೆ ಮು. ಒಕ್ಕ.	3— 9	3 — 9
ಮೆಣಸು	2— 8	4— 0
ಸಾಸಿವೆ ಮುಡಿ ಒಕ್ಕ	5 — 8	6— 0
ಕಾಳುಮೆಣಸು ಖ ಒಕ್ಕ	102— 8	105—
ಯೇಲಕ್ಕಿ ಬೀಜ ಮಣ ಒಕ್ಕ	38— 0	39— 0
ಗೇರುಬೀಜ ಮು. ಒಕ್ಕ	3— 8	3 — 10
ಕಬ್ಬಿಣ ಖಂಡಿ ಒಕ್ಕ	35— 0	37— 8
ತಾಮ್ರತಗಡು ಮ ಒಕ್ಕ	9— 12	9— 14
ತಾಮ್ರಪಾತ್ರಗಳು ಮ ಒಕ್ಕ	12— 8	14— 0
ಜೀರಿಗೆಬೆಳ್ಳಿ ಸೇರು ಒಕ್ಕ	17— 8	18— 0
ಹಿತ್ತಾಳೆ ತಗಡು ಮ. ಒಕ್ಕ	10— 0	10—
ಪವನು ಒಕ್ಕ	22— 8	23— 8
ಹುಣಸೆ ಹುಳಿ ಖಂಡಿ ಒಕ್ಕ	20— 0	25— 0
ನೇಟಿವ್ ಕಾಫಿ ಖಂಡಿ ಒಕ್ಕ	145— 0	150— 4
ಫಿಡೇರಿ ಕಾಫಿ ಖಂಡಿ ಒಕ್ಕ	175— 0	185— 0
ವಾಡಿಕೇರಿ ಏಲಕ್ಕಿ	25— 0	26 — 8

ಸ್ತನೋ ಸ್ತೇಧಃ

STHANO STHEDAH　THE MALAYALA OUSHADHA CO. POST-CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು ಮನುಷ್ಯರನ್ನು ಆಕರ್ಷಿಸುವ ಚೆಲುವು ಏನೆಂದು ಅವರಿಗೆ ಗೊತ್ತು ಮನುಷ್ಯನು ಹೆಂಗಸರ ಅವರ್ಣಗಳನ್ನು ಕಂಡೊಡನೆಯೇ ಅವನ ದೃಷ್ಟಿಯು ಆಕೆಯ ಮುಖದಿಂದ ಸುಂದರ ಸ್ತನದ ಬಳಿ ನಿಲ್ಲುವುದು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣವಾಪಸ್.

ಇದಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ ಸ್ತನೋಸ್ತೇಧ ದಿಂದ ಸಾಧ್ಯ ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದಾರುಣವಾದ ತೀಕ್ಷ್ಣವಾದ ಶ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ ಅವುಗಳು ಜೋಲು ಬಿದ್ದಿದ್ದರೂ ಸರಿಯಾಗಿ ಬೆಳೆಯದೆ ಇದ್ದರೂ ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ, ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಪುಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪುಷ್ಟತೆಯನ್ನೂ ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನರ ನೋಟಕ್ಕೆ ಯೋಗ್ಯವಾಗಿ ಮಾಡುವುದು ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು ಅಂತಹ ಗುಣವನ್ನು ನೀವೂ ಪಡೆಯಿರಿ

ಸ್ತನೋಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ 3 ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ 3

ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ

1 ಮುಟ್ಟುದೋಷ 2 ಸಂತತಿ ಪ್ರತಿಬಂಧಕ, 3 ಧಾತುಪುಷ್ಟಿ 4 ಲಿಂಗವೃದ್ಧಿ 5 ಸ್ತ್ರೀರೋಗ, 6 ಕ್ಷಯ ಸಂಹಾರಿ, 7 ವಾತರೋಗ

ಅಲಭ್ಯ ಲಾಭ!　　　　ಸುವರ್ಣ ಸಂದರ್ಭ!

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ

ತೆಗೆಯುವ ತಾರೀಕು 3-6-1936　　ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ

ಸೋಡ್ತಿಯ ಮೊಬಲಗು: ರೂ. 50,000.

ಒಟ್ಟು ಬಹುಮಾನಗಳ ಸಂಖ್ಯೆ: 1778.　　ಮೌಲ್ಯ ರೂ. 20,000.

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಮೆನೇಜರ್– ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

ವಿ ಸೂ-ಯಾವ ಕಾರಣದಿಂದಲಾದರೂ ಸೋಡಿ ತೆಗೆಯುವ ತಾರೀಕನ್ನು ಮುಂದರಿಸೋಣಾಗುವುದಿಲ್ಲ

ಶಾಲಿವಾಹನ ಶಕ ೧೮೫೮ನೆಯ ಯುವ ಸಂವತ್ಸರದ ವೈಶಾಖ ಶು| ೧೧ ಶನಿವಾರದಿಂದ ವೈಶಾಖ ಬ| ೨ ಶುಕ್ರವಾರದ ವರೇಗಿನ ಪಂಚಾಂಗ (ಗಣಿತ ನೇಯ ಮೇಷ ವಗ್ಗ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ದಿನಮಾನ	ವಿಶೇಷ
2	ಶನಿ	೧೧	೨೦	ಉತ್ತರ	೬೦	೨೦	* [illegible]
3	ರವಿ	೧೨	೨೫	ಉತ್ತರ	೫	೨೧	
4	ಸೋಮ	೧೪	೪೦	ಹಸ್ತ	೧೧	೨೩	
5	ಮಂಗಳ	೧೪	೪೫	ಚಿತ್ರ	೧೮	೨೪	
6	*ಬುಧ	೧೫	೪೯	ಸ್ವಾತೀ	೨೪	೨೪	
7	ಗುರು	೧	೪೨	ವಿಶಾಖ	೨೯	೨೫	
8	ಶುಕ್ರ	೨	೪೫	ಅನೂರಾಧ	೪೪	೨೬	

ಇಟೆಲಿಯು ಜನಾಂಗಸಭೆಯಿಂದ ಕ್ಷಮಾಪಣೆಯನ್ನು ಕೇಳುತ್ತಿದೆ! ಸ್ತ್ರೀಯರು ಗ್ರಾಮಾಭ್ಯುದಯ ಕಾರ್ಯವನ್ನು ತೊಡಗಬೇಕು.

ಇಟಲಿಯು ಜನಾಂಗಸಭೆಯಿಂದ ಕ್ಷಮಾಪಣೆಯನ್ನು ಕೇಳುತ್ತದೆ!

ಲೊಕಾರ್ನೋ ಒಪ್ಪಂದದ ಮುರಿತದಿಂದ ಉಂಟಾದ ಈಗಿನ ಕಲಹನಿವಾರಣೆ ಕಾರ್ಯದಲ್ಲಿ ಇಟೇಲಿಯು ಸಹಕರಿಸಲು ಸಿದ್ಧವಿದೆ. ಆದರೆ ತನ್ನ ಸಹಕಾರಕ್ಕೆ ಈ ಕೆಳಗಿನ ಬೆಲೆಯು ಸಿಗಬೇಕಾಗಿದೆ.

"ಜನಾಂಗಸಭೆಯು ನಮ್ಮ ಮೇಲೆ ಸಂಕ್ಷನುಗಳನ್ನು ಹೇರಿದುದಕ್ಕಾಗಿ ಕ್ಷಮಾಪಣೆ ಬೇಡಬೇಕು" ಈ ವಾರ್ತೆಯು ಜರ್ಮನಿಯಲ್ಲಿ ಹರಡಿರುತ್ತದೆ.

ಇಟಲಿಯ ಶರ್ತಗಳು:-೧. ಸಂಕ್ಷನುಗಳು ರದ್ದಾಗಬೇಕು. ೨. ಇಟಲಿಯು ಅಬಿಸೀನಿಯಾ ಜನಾಂಗವೆಂದು ಮಾಡಿದ ಜನಾಂಗಸಭೆಯ ಠರಾವು ರದ್ದಾಗಬೇಕು. ೩ ಇಟಲಿಯ ಮೇಲೆ ಅನ್ಯಾಯಕರವಾದ ಕೆಲವು ಆರೋಪಗಳು ಹೊರಿಸಲಾದುವು ಅದಕ್ಕೆ ಜನಾಂಗಸಭೆಯು ಪಶ್ಚಾತ್ತಾಪಪಡುತ್ತದೆ ಎಂಬ ಠರಾವಾಗಬೇಕು.

ಹಬಸಿಯವರಿಗೆ ಮುಕ್ತಿ ಹೇಗೆ?

ಜನಾಂಗಸಭೆಯ ಸ್ಥಿತಿಯು ಹೀಗಾದರೆ, ಹಬಸಿಯವರನ್ನು ರಕ್ಷಿಸುವವರಾರು? ಯೂರೋಪಿನಲ್ಲಿ ಇನ್ನೊಂದು ಮಹಾಯುದ್ಧವೆಂದು ಓರ್ವ ಆಂಗ್ಲೇಯ ಮಹಸೀಯರ ಮಾತು. ಪಾಶ್ಚಾತ್ಯರು ಎಲ್ಲಾ ನ್ಯಾಯನೀತಿಗಳನ್ನು ಮರೆಯುತ್ತಿರುವರು ಮಾತ್ರವಲ್ಲದೆ, ಅವರಿಗೆ ಬುದ್ಧಿಭ್ರಮೆಯಾಗಿದೆಯೆಂದು ಇವರ ಮಾತು.

ಇಟೇಲಿಯಾನರು ಅಡಿಸ್ ಅಬಾಬವನ್ನು ಹಿಡಿದರೆ?

ಅಡಿಸ್ ಅಬಾಬದಲ್ಲಿ ಭದ್ರೀಕರಿಸಲ್ಪಟ್ಟ ಭಟರ ಜನಾಂಗಿಕ ವ್ಯಾಪಾರಸ್ಥರೇ ಇರುವುದರಿಂದಲೇ ಇಟೇಲಿಯಾನರು ಈ ನಗರವನ್ನು ಹಿಡಿಯುವುದರಿಂದ ಹೆಚ್ಚಿನ ಬಾಧೆಬರುವ ಹಾಗಿಲ್ಲ, ಎಂಬುದು ಓರ್ವ ನಿಗ್ರೋ ಪತ್ರಿಕಾಪ್ರತಿನಿಧಿಗಳ ಮಾತು. ಇಟೇಲಿಯಾನರ ಹತ್ತಿರ ಬ್ರಿಟಿಷರಷ್ಟು ಯಾ ಅಮೇರಿಕಾದವರಷ್ಟು ದ್ರವ್ಯವಿದ್ದರೆ, ಅವರು ಇನ್ನು ೫ ವರ್ಷಗಳ ತನಕ ಯುದ್ಧನಡೆಸಬಹುದು. ಜಯಶೀಲರೂ ಆಗಬಹುದು. ಆದರೆ ಇಟೇಲಿಯ ಆರ್ಥಿಕಸ್ಥಿತಿಯು ಬಹಳ ಹೀನಾವಸ್ಥೆಯಲ್ಲಿರುತ್ತದೆ. ಒಂದು ವೇಳೆ, ೫ ವರ್ಷ ಸಮಯದಲ್ಲಿ ಜಯಶೀಲರಾದರೂ, ದೇಶವನ್ನು ತಣಿಯಲು ಇನ್ನು ೩೦ ವರ್ಷಗಳು ತಗಲುವುದು ಎಂದು ಇವರ ಅಭಿಪ್ರಾಯ.

ಫ್ರಾನ್ಸಿನ ವಿಶ್ವಾಸಘಾತುಕ.

ಫ್ರಾನ್ಸ್ ಇಟೇಲಿಗೆ ಹಿತಕರವೆನಿಸುವ ರೀತಿಯಲ್ಲಿ ನಿರ್ಣಯದಲ್ಲಿ ಆಶ್ರಯಿಸುವುದು ಮಾತ್ರವಲ್ಲದೆ, ಹಬಸಿಯರ ಮೇಲೆ ಅನೇಕ ವಿಶ್ವಾಸಘಾತುಕ ಕಾರ್ಯಗಳನ್ನು ನಡೆಯಿಸಿರುತ್ತದೆ. ಹಬಸಿಯರಿಗೆ ಬೇಕಾದ ತುಪಾಕಿ, ಸಿಡಿಮದ್ದು ಇತ್ಯಾದಿಗಳು ಸಿಗದಂತೆ ಫ್ರಾನ್ಸ್ ಸಾಧನೆ ಮಾಡಿತ್ತು ಅವರ ಈ ವರ್ತನೆಯು ಇತ್ತೀಚೆಗೆ ತಿಳಿದು ಬಂದಿರುತ್ತದೆ

ಹಿಟ್ಲರನು ಆಸ್ಟ್ರಿಯಾಕ್ಕೆ ನೆಗೆಯುವನು.

ಆಸ್ಟ್ರಿಯಾವನ್ನು ಸೇರುವುದು ಹಿಟ್ಲರ ಇನ್ನೊಂದು ಹೆಜ್ಜೆಯಾಗುವುದೆಂದು ಓರ್ವ ಪ್ರಸಿದ್ಧ ಫ್ರೆಂಚ ಸಂಗ್ರಾಮ ಪುರುಷರ ಮಾತು. ಗಡಿಯನ್ನು ದಾಟಿದ ೮೦ ತಾಸುಗಳಲ್ಲಿ ಹಿಟ್ಲರನು ಆಸ್ಟ್ರಿಯದ ವಿಯಾನ್ನವನ್ನು ಹಿಡಿಯುವನು. ನಂತರ ಹಂಗೇರಿಯನ್ನು ತನ್ನ ಬದಿಗೆ ಸೇರಿಸಿಕೊಳ್ಳುವನು. ಇಷ್ಟರೊಳಗೆ ಸಿಸಿಲಿಕ ಸ್ಥಳಗಳಿಗೆ ಹೋಗಲು ಎಲ್ಲಾ ಸೈನ್ಯಸಮೂಹಗಳು ಜರ್ಮನಿಯಲ್ಲಿ ಸಿದ್ಧವಾಗುವವು. ಒಂದೇ ೨೪ ತಾಸಿನೊಳಗೆ ತನ್ನ ಸಮಸ್ತ ಗಡಿಪ್ರದೇಶಗಳಿಗೆ ಸೇನಾಸಮೂಹವನ್ನು ಹರಡಿಸುವ ಯೋಗ್ಯತೆಯು ಜರ್ಮನಿಯಲ್ಲಿದೆ. ಈಗಿನ ಕಲಹದ ಫಲಿತಾಂಶವು ಏನಾಗುವುದು? ಫ್ರಾನ್ಸು, ತನ್ನ ಗಡಿನಾಡುಗಳಿಗೆ ದಂಡುಗಳನ್ನು ಕಳುಹಿಸಿಕೊಡುವುದು. ಅಂತೆಯೇ ಇಟಲಿಯು ಯುದ್ಧಕ್ಕೆ ಸಿದ್ಧವಾಗುವುದು. ಬ್ರಿಟಿಷರು ಮಾತ್ರ ಬಂಚಲಮನಸ್ಕರಾಗಿ ದಾರಿ ತೋಚದವರಾಗುವರು. ಕೊನೆಗೆ ಯುದ್ಧದ ಅಪಾಯಗಳನ್ನು ತಪ್ಪಿಸಿಕೊಳ್ಳಲು ಎಲ್ಲರೂ ಬಗ್ಗುವರು. ಎಂಬುದು ಈ ಫ್ರೆಂಚ್ ಸಂಗ್ರಾಮಿಗಳ ಈಗಿನ ಯೂರೋಪಿನ ಕಲಹದ ವಿಚಾರ ಅಭಿಪ್ರಾಯವಾಗಿದೆ

ಅಖಿಲ ಭಾರತ ಮುಸ್ಲಿಮರ ಸಭೆ.

ಶ್ರೀ ಜಿನ್ನಾರವರ ಪ್ರಯತ್ನಗಳಿಂದ ಹಿಂದೂದೇಶದ ಮುಸ್ಲಿಮರು ಪೇರ್ಲಿಮೆಂಟರಿ ಕಾರ್ಯಗಳನ್ನು ನಡೆಯಿಸಲು ಒಂದು ಅಖಿಲ ಭಾರತ ಮುಸ್ಲಿಮ ಮಂಡಳವು ಸ್ಥಾಪನೆಯಾಗಿರುತ್ತದೆ. ಈ ಮಂಡಳವು ಪ್ರಾಂತ್ಯಗಳಲ್ಲಿ ಉಪಮಂಡಲಗಳನ್ನು ಸ್ಥಾಪಿಸಿ, ಹಿಂದೂದೇಶದ ಸಂಕಟ ತಮ್ಮ ಹಿತವನ್ನು ಸಾಧಿಸುವುದು. ಸ್ವಾತಂತ್ರ್ಯ ಸಾಧನೆಯು ಈ ಸಂಘದ ಮುಖ್ಯ ಧ್ಯೇಯವಾಗಿರುತ್ತದೆ. ಈ ಸಂಘವು ಕೋಮುವಾರು ಎವಾರ್ಡನ್ನೂ ನವರಾಜ ಶಾಸನವನ್ನು ಖಂಡಿಸುತ್ತದೆ. ಮುಸ್ಲಿಮರು ಸ್ವತಂತ್ರರಾಗಿ ದೇಶದ ಸ್ವಾತಂತ್ರ್ಯ ಸಾಧಿಸುವ ಪ್ರಯತ್ನಗಳು ಈ ಸಂಘದಿಂದ ನಡೆಸಲಾಗುತ್ತದೆ. ಬರುವ ಚುನಾವಣೆಯಲ್ಲಿ ಮುಸ್ಲಿಮರ ಕುರಿತು ಈ ಸಂಘವು ಪ್ರಯತ್ನಪಡುವುದಾಗಿ ತಿಳಿದುಬರುತ್ತದೆ ಈ ಸಂಘವು ಯಾವತ್ತೂ ಪಕ್ಷಗಳಿಗೆ ವಿರೋಧವಾಗಿ ಕಾರ್ಯನಡೆಸುವುದಿಲ್ಲವಂತೆ.

ಮಹಾತ್ಮಾಜಿಯವರನ್ನು ವಿರೋಧಿಸಿ ಪ್ರಕಟನೆಗಳು.

ನಾಗಪುರದಲ್ಲಿ ಜರಗಿದ ಭಾರತ ಸಾಹಿತ್ಯ ಪರಿಷತ್ತಿನ ಅಧಿವೇಶನದ ಎರಡನೇ ದಿನದಲ್ಲಿ ಕೆಲ್ಲೆಟಿಯುಂಟಾಯಿತು ಮಹಾತ್ಮಾ ಗಾಂಧಿಯವರ ಕುರಿತು ಸುಭಾಷ್ಚಂದ್ರಬೋಸರ ಬಂಧನವನ್ನು ಅನ್ಯಾಯ ಹಂಚಲ್ಪಟ್ಟ ಪ್ರಕಟನೆಗಳಿಂದ ಶ್ರೀ ಜವಾಹರಲಾಲ ನೆಹರೂಗಳವರು ಮಹಾತ್ಮಾಜಿಯವರ ಮೇಲೆ ಹೀಗೆ ಅನ್ಯಾಯವಾಗಿ ಆರೋಪಗಳು ವಿಧಿಸಿದ್ದುದಕ್ಕಾಗಿ ವಿಷಾದಿಸಿ ಭಾಷಣ ಮಾಡಿದರು. ಪ್ರಕಟನೆಗಳನ್ನು ಹಂಚಲ್ಪಟ್ಟ ಸ್ವಯಂಸೇವಕರನ್ನು ಚಪ್ಪರದಿಂದ ಹೊರಗೆ ಕಳುಹಿಸಲಾಯಿತು

ಭಾರತ ಸಾಹಿತ್ಯ ಪರಿಷತ್ತು.

ಈ ಮೇಲಿನ ಪರಿಷತ್ತಿನ ಅಧಿವೇಶನದ ಎರಡನೇ ಮಹಾತ್ಮಾಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಎಲ್ಲಾ ಪ್ರಾಂತ್ಯಗಳವರಲ್ಲೂ ಪರಸ್ಪರ ಸಂಸ್ಕೃತೀಕ ಸಹಕಾರವು ಬೆಳೆಯುವಂತೆ ಸಾಧಿಸಲು ಉದ್ದೇಶಗಳುಳ್ಳದುವು ಈ ಕುರಿತು ಒಂದು ಪರಿಷತ್ತು ಕರೆಯಲಾಗುವುದು ಹಿಂದೀಯನ್ನು ರಾಷ್ಟ್ರೀಯ ಭಾಷೆಯನ್ನಾಗಿ ಮಾಡುವ ವಿಚಾರವು ಈ ಭಾರಿಯ ಅಧಿವೇಶನದಲ್ಲಿ ಚರ್ಚಿಸಲಾಯಿತು.

ಎಲ್ಲ ಹಿಂದೂಗಳಿಗೊಂದು ದೇವಾಲಯ.

ಬೆನಾರಿಸ್ (ಕಾಶಿ) ನ ದಾಸ್ವೆಸ್‍ಗಂಜ್ ಎಂಬಲ್ಲಿ ಸಮಸ್ತ ಹಿಂದೂಗಳ (ಹರಿಜನರೂ ಕೂಡಿ) ಉಪಯೋಗದ ಬಗ್ಗೆ ರಚನೆಯಾದ ನವೀನ ದೇವಾಲಯದ ಪ್ರಾರಂಭೋತ್ಸವವು ಶ್ರೀ ಮಾಲವೀಯರ ಕೈಗಳಿಂದ ನಡೆಯಿತು. ಈ ಸಮಾರಂಭಕ್ಕೆ ಅನೇಕ ಹಿಂದೂಗಳು ನೆರೆದಿದ್ದರು. ನೆರೆದವರಲ್ಲಿ ಪವಿತ್ರ ಹಿಂದೂ ಪಂಡಿತರನೇಕರಿದ್ದರು ಶ್ರೀ ಮಾಲವೀಯರು ಶಾಸ್ತ್ರೀಯಕಾರ್ಯಕ್ಕಾಗಿ ಅಯೋಧ್ಯಕ್ಕೆ ಪ್ರಯಾಣಬೆಳೆಯಿಸುವುದಾಗಿ ತಿಳಿದುಬರುತ್ತದೆ.

ಅಹ್ಮದಾಬಾದಿನಲ್ಲಿ ಬೆಂಕಿಯ ಅನಾಹುತ.

ಅಹ್ಮದಾಬಾದಿನ ಒಂದು ಕಲ್ಲಿದ್ದಲಿನ ಡಿಪೋದಲ್ಲಿ ಬೆಂಕಿಯುಂಟಾಗಿ ಹತ್ತಿರವಿರುವ ಅನೇಕ ಕಟ್ಟಡಗಳಿಗೆ ಬೆಂಕಿ ತಗಲಿತು. ರಾತ್ರಿಯೊಳಗೆ ಬೆಂಕಿಯನ್ನು ನೊಂದಿಸಲಾಯಿತು. ಸಾಧಾರಣ ರೂ ೧೫,೦೦೦ದಷ್ಟು ನಷ್ಟ ಸಂಭವಿಸಬಹುದೆಂದು ಅಂದಾಜುಮಾಡಲಾಗಿದೆ.

ಮೃತಹುಡುಗಿಯೊಬ್ಬಳು ಜೀವಕ್ಕೆ ಬಂದಳು!

ಇಂಗ್ಲೆಂಡಿನ ಓಕ್ಸ್‍ಫೋರ್ಡ್ ಎಂಬಲ್ಲಿ ಓರ್ವ ಹುಡುಗಿಯು ಮೃತಳಾದ ೧೫ ನಿಮಿಷಗಳ ನಂತರ ಡಾಕ್ಟರರು ಅವಳನ್ನು ಜೀವಕ್ಕೆ ತಂದಿರುವರು. ಹುಡುಗಿಯು ಹೃದಯರೋಗ ಪೀಡಿತಳಾಗಿದ್ದಳು. ಆಕಸ್ಮಾತ್ತಾಗಿ ಇವಳ ಪ್ರಾಣವು ಹಾರಿಹೋಯಿತು ಡಾಕ್ಟರರು ತನ್ನೊಡನಿದ್ದ ಒಂದು ಔಷಧಿಯನ್ನು ಇಂಜಕ್ಷನ್ ಮೂಲಕ ಇವಳ ದೇಹದೊಳಗೆ ಸೇರಿಸಿದರು. ಹುಡುಗಿಯ ಹೃದಯವು ಮತ್ತೊಮ್ಮೆ ಚಲಿಸಲಾರಂಭಿಸಿತು. ಹುಡುಗಿಯು ಈಗ ಗುಣಹೊಂದುತ್ತಿದ್ದಾಳೆ

ಸ್ತ್ರೀಯರು ಗ್ರಾಮಾಭ್ಯುದಯಕಾರ್ಯವನ್ನು ತೊಡಗಬೇಕು.

ಸ್ತ್ರೀಯರು ಎಲ್ಲಾ ಸ್ಥಳೀಯ ಮತ್ತು ಪ್ರಾಂತಿಕ ಸಭೆಗಳಲ್ಲಿ ಸದಸ್ಯತನವನ್ನು ದೊರಕಿಸಿಕೊಂಡು ಸ್ತ್ರೀ ಉದ್ಧಾರಕಾರ್ಯವನ್ನು ನಡೆಯಿಸಬೇಕು ಅಖಿಲ ಭಾರತ ಸ್ತ್ರೀಯರ ಪರಿಷತ್ತು ದಿನೇ ದಿನೇ ಯಶಸ್ಸನ್ನು ಪಡೆಯುತ್ತಿದೆ ಸ್ತ್ರೀಯರು ಗ್ರಾಮಾಭ್ಯುದಯದ ಕುರಿತು ಎಲ್ಲಾ ಕಾರ್ಯಗಳಲ್ಲಿ ಭಾಗವಹಿಸಬೇಕು ದೇಶದ ವಿದ್ಯಾಭ್ಯಾಸವನ್ನು ವೃದ್ಧಿಗೊಳಿಸುವ ಕಾರ್ಯವನ್ನು ಸ್ತ್ರೀಯರು ವಹಿಸಬಹುದು. ಮೇಲಿನದು ತಿರುವಾಂಕೂರಿನ ಮಹಾರಾಣಿಯವರು ನವದಿಲ್ಲಿಯಲ್ಲಿ ಮಾಡಿದ ಭಾಷಣದ ಸಾರಾಂಶವಾಗಿದೆ.

ಅಪರಾಧಿತನು ನ್ಯಾಯಾಧೀಶನಾದನು!

ಜನಾಂಗ ಮಂಡಳದಲ್ಲಿ ಒಂದಲ್ಲ ಒಂದು ಜನಾಂಗವು ಆ ಸಂಸ್ಥೆಯ ಶರ್ತಗಳನ್ನು ಮುರಿದ ವಿಚಾರ ಮಾತುಕತೆಗಳು ನಡೆಯುತ್ತಿವೆ. ಆದರೆ ಅದರಲ್ಲಿ ಪ್ರಾಮುಖ್ಯವಾಗಿ ಭಾಗವಹಿಸುವ ಜನಾಂಗಗಳು, ಅದರ ಶರ್ತಗಳನ್ನು ಎಷ್ಟರಮಟ್ಟಿಗೆ ಮನ್ನಿಸುತ್ತಿವೆ ಎಂಬುದನ್ನು ಪರಿಶೀಲಿಸಿದರೆ ಅನೇಕ ವೈಚಿತ್ರ್ಯಗಳು ತಿಳಿದುಬರುವವು

ಜರ್ಮನಿಯು ಜನಾಂಗ ಮಂಡಳದ ಶರ್ತಗಳನ್ನು ಮುರಿದಿದೆ, ಅದಕ್ಕೆ ತಕ್ಕ ಪ್ರಾಯಶ್ಚಿತ್ತವಾಗಬೇಕು ಎಂದು ಬೊಬ್ಬಿಡುವ ಫ್ರಾನ್ಸು ಜನಾಂಗ ಸಭೆ ಶರ್ತಗಳನ್ನು ಪ್ರಥಮವಾಗಿ ಮುರಿದಿರುವದು. ಸಂದರ್ಭ ವಾರ್ಸೆಲ್ ಒಪ್ಪಂದವು ನಡೆದ ಸ್ವಲ್ಪ ಸಮಯದ ನಂತರ, ಜರ್ಮನಿಯನ್ನು ಗದರಿಸಲು

ಈಗಲೂ ಜರ್ಮನಿಯು ಲೀಗಿನ ಶರ್ತಗಳನ್ನು ಮುರಿದ ವರ್ತನೆಯನ್ನು ವಿಮರ್ಶೆ ಮಾಡುವ ಜನಾಂಗಗಳಲ್ಲಿ ಅನೇಕರು ಅದರ ಶರ್ತಗಳನ್ನು ಮುರಿದವರು.

ಜನಾಂಗ ಮಂಡಳದ ೧೬ನೇ ಶರ್ತವು ಹೀಗಿದೆ ಯುದ್ಧಕ್ಕೆ ಕಾರಣರಾಗುವ ಯಾವತ್ತೂ ಜನಾಂಗದ ಮೇಲೆ ಈ ಕೆಳಗಿನ ಬಹಿಷ್ಕಾರಗಳನ್ನು ಹಾಕತಕ್ಕದ್ದು ವ್ಯಾಪಾರಿಕ ಮತ್ತು ಆರ್ಥಿಕ ಸಂಬಂಧವನ್ನು ಕಡಿದು ಹಾಕುವುದು. ಅವರೊಡನೆ ಯಾವತ್ತೂ ತರದ ರಾಷ್ಟ್ರೀಯ ಸಂಬಂಧವನ್ನು ಬೆಳೆಯಿಸದಿರುವುದು, ಶರ್ತಗಳು ಮುರಿಯುವ ಜನಾಂಗವನ್ನು ಜನಾಂಗ ಮಂಡಳದ ಸದಸ್ಯ ಜನಾಂಗಗಳ ಪಂಕ್ತಿಯಿಂದ ಹೊರದೂಡತಕ್ಕದ್ದು

ಆದರೆ ಜರ್ಮನಿಯು ರ್ಹೈನ್‍ಲೆಂಡಿನ ದಂಡಯೋಜನೆಯನ್ನು ನಡೆಯಿಸಲು ಲೊಕಾರ್ನೋ ಒಪ್ಪಂದಕ್ಕೆ ವಿರೋಧವಾಗಿ, ಇಟಲಿಗೆ ಯಾವ ಭಾವವು ಕೊಡಲಾಯಿತು? ಇಟಲಿಯು ಜರ್ಮನಿಗೆ ವಿರೋಧವಾಗಿ ಜನಾಂಗಸಭೆಯ ಶರ್ತಗಳನ್ನು ಭದ್ರಪಡಿಸಲು ಆಮಂತ್ರಣ ಕಳುಹಲಾಯಿತು. ಅಲ್ಲದೆ ಪಾಂಡಿರಕ್ಷಣೆಗೋಸ್ಕರ ಇಟಲಿಯು ಕೂಡ ಒಂದು ಪೋಲಿಸ್ ಪೌಜನ್ನು ಜರ್ಮನ್ ಗಡಿಯ ಹತ್ತಿರ ಇತರ ರಾಷ್ಟ್ರಗಳ ಸೇನಾಸಮೂಹದೊಡನೆ ಇಡಬಹುದೆಂದಾಯಿತು. ಇದು ಮೇಲಿನ ೧೬ನೇ ಶರ್ತಕ್ಕೆ ಕ್ರಮವಾಗಿದೆಯೆ?

ಆ ೧೬ನೇ ಶರ್ತ ಪ್ರಕಾರ ಇಟಲಿಯನ್ನು ಪಂಕ್ತಿಯಿಂದ ಹೊರಮಾಡುವ ಬದಲಾಗಿ ಇಟಲಿಗೆ, ಜರ್ಮನಿಯು ಶರ್ತಗಳನ್ನು ಮುರಿದ ವಿಚಾರ, ಫ್ರಾನ್ಸು ಬ್ರಿಟಿಷರೊಡನೆ ಸರಿಸಮಾನವಾದ ಸ್ಥಾನವು ದೊರಕಿರುತ್ತದೆ ಜರ್ಮನಿಯ ಮೇಲೆ ಜನಾಂಗಸಭೆಯ ಶರ್ತಗಳನ್ನು ಹೇರಿಸುವ ಕಾರ್ಯದಲ್ಲಿ ಇಟಲಿಗೂ ಒಂದು ಸ್ಥಾನದೊರಕಿರುತ್ತದೆ. ವಿಚಾರಣೆಗಾಗಿ, ಮಹಾಘಾತಕ ಎಂಬ ಇತ್ಯರ್ಥಕ್ಕೊಳಗಾದ ಅಪರಾಧಿತನು-ಪೋಲೀಸನೂ ಮಾತ್ರವಲ್ಲದೆ, ನ್ಯಾಯಾಧೀಶನಾಗಿರುವನು!

ಇಷ್ಟು ಮಾತ್ರವಲ್ಲ ಸ್ಥಾನವು ತನ್ನ ಕ್ರೂರ ವರ್ತನೆಯನ್ನು ಒಂದಿಷ್ಟು ಬದಲಾಯಿಸದೆ, ಅನ್ಯಾಯಕಾರ್ಯಗಳನ್ನು ನಡೆಯುತ್ತಿರುವ, ಜನಾಂಗಸಭೆಯ ಶರ್ತಗಳನ್ನು ತುಚ್ಛೀಕರಿಸುವ ಇಟಲಿಗೆ ದೊರಕಿರುತ್ತದೆ.

ಫ್ರಾನ್ಸ್ ಮತ್ತು ಬ್ರಿಟನು ಈ ರೀತಿಯ ಅನ್ಯಾಯಕರ ಸ್ಥಿತಿಯನ್ನು ಹೇಗೆ ಸಹಿಸುತ್ತಿದ್ದಾರೆ? ಹೀಗಾದರೆ ಜನಾಂಗಸಭೆಯ ಮೇಲೆ ಯಾರಿಗೆ ತಾನೇ ನಂಬಿಗೆಯು ಉಂಟಾಗಬಹುದು? ಅಪರಾಧಿತನಿಗೆ ಮನ್ನಣೆ ಕೊಡುವ ಜನಾಂಗಸಭೆಯಿಂದ ಏನು ಪ್ರಯೋಜನವಾಗಬಹುದು? ಅನ್ಯಾಯಗಾರರಿಗೆ ಜನಾಂಗ ಸಭೆಯ ಮೇಲೆ ಹೇಳಿದ ರೀತಿ ಸ್ಥಾನದೊರಕುವುದು ಸಹಜವಾಗಿಯೇ?

ಜನಾಂಗಸಭೆಯ ಎಲ್ಲಾ ಸದಸ್ಯ ಜನಾಂಗಗಳು ತಾವು ಒಂದು ಇಳಿಜಾರಿನ ಕೆಳಗೆ ಭಯಂಕರ ವೇಗದಿಂದ ಜಾರುತ್ತಿದ್ದೇವೆಂಬುದು ಭಾಸವಾಗಲಾರಂಭಿಸಿದೆ ಆದರೆ, ಈಗ ಅವರಿಗೆ ಹಿಂದು ಹಿಂಜರಿಯುವುದು ನಿರ್ವಾಹವಿಲ್ಲದ ಸಮಯ. ಒದಗಿದಾಗ್ಗೆ, ತಟ್ಟು ಭದ್ರತೆಗಾಗಿ ತಮ್ಮ ನೆರೆಯವರನ್ನು ದೂಡಿಹಾಕಬಹುದೆಂದು. ಕಳೆದ ಮಹಾ ಯುದ್ಧದಲ್ಲಿ ಇದು ಸಾಧ್ಯವಾಗಲಿಲ್ಲ ಈ ಬಾರಿಯ ಯುದ್ಧದಲ್ಲೋ ಏನಾಗುವುದೆಂದು ನೋಡಬೇಕಿದೆ.

ಸಿಸಿಲಿಯ ಜಲ್ಲಾ ಬೋರ್ಡನ್ನು ರದ್ದುಮಾಡುವ ಆಲೋಚನೆಯನ್ನು ಮದ್ರಾಸು ಸರಕಾರವು ಬಿಟ್ಟಿರುತ್ತದೆಂದು ವಾರ್ತೆ

ಇಟೇಲಿಯಾನರು ಹರಾರಿನ ಕಡೆಗೆ ಸಾಗುತ್ತಿದ್ದಾರೆ.

ಒಗಡನ್ ಪ್ರಾಂತ್ಯದ ಮುಖ್ಯ ನಗರವಾದ ಹರಾರದ ದಕ್ಷಿಣದೆಗೆ ಇಟಲಿಯಾನರು ಜನರಲ್ ಗ್ರೆಜಿಯಾನಿಯವರ ನಾಯಕತ್ವದಲ್ಲಿ ಸಾಗುತ್ತಿದ್ದಾರೆ ಹಬಸಿಗಳು ರಾಸ್ ನಸಿಬಿನ ನಾಯಕತ್ವದಲ್ಲಿ ಇವರಿಗೆ ಭಯಂಕರ ಕದನವನ್ನು ಕೊಡುತ್ತಿದ್ದಾರೆ. ಇಟಲಿಯಾನರ ನಾಲ್ಕು ವಿಮಾನಗಳನ್ನು ಹಬಸಿಗಳು ನೆಲಕ್ಕೆ ಹುರುಳಿಸಿರುವರು. ೨ ಟೆಂಕುಗಳು ಇಟಲಿಯಾನರ ವಶವಾಗಿದೆ ಹರಾರು ಬೇಗನೇ ಇಟಲಿಯಾನರ ಕೈಸೇರುವುದೆಂದು ರೋಮಿನಿಂದ ವಾರ್ತೆ ಬಂದಿರುತ್ತದೆ.

ದೇವರಿಗಾಗಿ ನಮ್ಮನ್ನು ರಕ್ಷಿಸಿರಿ.

ದೇವರಿಗಾಗಿ ನಮ್ಮನ್ನು ರಕ್ಷಿಸಿರಿ ಇಟಲಿಯಾನರ ಆಧಿಕ್ರಮವನ್ನು ನಿಲ್ಲಿಸಿ. ಗ್ಯಾಸಿನ ಪ್ರಯೋಗವಾಗದಂತೆ ನೋಡಿ ನಮ್ಮಗೆ ಇನ್ನೂ ಸಮಯ ವಿಳಂಬ ಮಾಡಿದರೆ ಬರುವ ವಾರ ತಿಂಗಳಿನಲ್ಲಿ ಮತ್ತೊಮ್ಮೆ ಮಾರಣಹೋಮ ಮಾತ್ರ ನಡೆಯುವುದು ನಮ್ಮನ್ನು ಈಗಲೇ ರಕ್ಷಿಸಿರಿ" ಇದು ಹಬಸಿ ಚಕ್ರವರ್ತಿಯ ೧೬ ವರ್ಷ ಪ್ರಾಯದ ಕುಮಾರಿಯು ಪ್ರಪಂಚದ ಇತರ ಜನಾಂಗಗಳು ಸ್ತ್ರೀಯರಲ್ಲಿ ಇಟ್ಟ ಮೊರೆಯಾಗಿರುತ್ತದೆ

ಇಟಲಿಯಾನರ ವಿಜ್ಞಾಪನೆ.

'ನಮ್ಮುಭಯರಿಂದ ಬೇಗನೇ ವರ್ಣನಾಗತರಾಗಿ ದೇವರು ನಮ್ಮ ಈ ಕಾರ್ಯವನ್ನು ಜಯಶೀಲವಾಗ ನಡೆಯುವಂತೆ ಪ್ರಕಾಶಿಸಿರುವ. ಬೇಗನೆ ನಾವು ಅಡಿಸ್ ಅಬಾಬವನ್ನು ಹಿಡಿಯುವೆವು ನಮ್ಮ ಮೇಲೆ ಆಧಿಕ್ರಮಕ್ಕೆ ಸಿದ್ಧರಾದ ಚಕ್ರವರ್ತಿಯ ಸೈನ್ಯ ಸಮೂಹವನ್ನು ನಾವು ಧ್ವಂಸಮಾಡಿದ್ದೇವೆ ನಮ್ಮ ನೂರಾರು ವಿಮಾನಗಳು ನಿಮ್ಮಲ್ಲಿ ಬಾಂಬುಗಳನ್ನು ಬಿಸುಟವೆ ಬಿಡದೆ ನಾಶ ಕೃಸ್ತ ರಕ್ತವ ಹೀಗೆ ವಂತೆ ಮಾಡುತ್ತಿ ನಿಮಗೆ ನಾವು ಶಾಂತಿಯನ್ನು ತಂದಿರುವೆವು ಸ್ವೀಕರಿಸಿ ಮುಂದಕ್ಕೆ ಬಂದವರ ಅವರವರ ಮನೆಗಳಿಗೆ ಹಿಂತಿರುಗಲಿ ನಾವು ರೇಖೆಯನ್ನು ಮಾಡಿರಿ ನಮ್ಮ ಸೈನಿಕರನ್ನು ತಡೆಯಬೇಡಿ ನಾವು ರಚಿಸಿದ ಮಾರ್ಗಗಳನ್ನು ಕೆಡಿಸಬೇಡಿರಿ ನೀವು ವರ್ತಿಸಿದರೆ ನಿಮ್ಮನ್ನು ನಾವು ಯಾವ ರೀತಿಯಲ್ಲೂ ಕಾಡುವುದಿಲ್ಲ ನೀವು ಅತಂಕಪಡಬೇಡಿರಿ ನಿಮ್ಮನ್ನು ನಿರ್ಭಯ ಮಾಡುವೆವು" ಇದು ಅಡಿಸ್ ಅಬಾಬದ ಹತ್ತಿರವಿರುವ ಹೊರನಗರ ನಿವಾಸಿಗಳಿಗೆ ಇಟಲಿಯಾನರ ನಾಯಕರಾದ ಬಡೊಗ್ಲಿಯೊ ಮಾಡಿದ ವಿಜ್ಞಾಪನೆಯಾಗಿರುತ್ತದೆ ಜನಾಂಗಸಭೆಯು ಒಡೆ ಮಾತುಕತೆಗಳಲ್ಲಿ ಸಮಯ ವಿಳಂಬ ಮಾಡುತ್ತಿರುವಾಗ ಹಬಸಿಯಾರು ಒಂದೊಂದೆ ಪ್ರಾಂತವನ್ನು ಕಳಕೊಳ್ಳುತ್ತಿದ್ದಾರೆ. ಈಗಾಗಲೆ ಸಾಧಾರಣ ಮುಕ್ಕಾಲಂಶ ದೇಶವು ಇಟಲಿಯಾನರ ವಶವಾಗಿರುತ್ತದೆ. ಇಟಲಿಯನ್ನು ತಡೆಯುವ ವಿಚಾರವನ್ನು ಜನಾಂಗಸಭೆಯು ಮೇ ತಿಂಗಳ ೧೧ಕ್ಕೆ ಅಲೋಚಿಸುವುದಂತೆ ಸಂಪೂರ್ಣ ಎಬಿಸೀನಿಯವು ಇಟಲಿಗೆ ಸೇರಿದ ನಂತರ!

ನವರಾಜಶಾಸನದ ಪ್ರಕಾರ ಮದ್ರಾಸು ಸರಕಾರದ ಮಹಾ ಚುನಾವಣೆಯು ಇದೇ ವರ್ಷ ನವಂಬರದಲ್ಲಿ ನಡೆಯಿಸಲು ಸಾಧ್ಯವಿಲ್ಲವಾದುದರಿಂದ ಅದನ್ನು ಬರುವ ವರ್ಷ ಫೆಬ್ರವರಿಯಲ್ಲಿ ನಡೆಸಲಾಗುವುದು ಖಂಡಿತವಂತೆ.

ವಿದೇಶ ವಾರ್ತೆಗಳು

ಬ್ರಿಟಿಷರಿಂದ ಜರ್ಮನಿಗೆ ೮೦ ಮಿಲಿಯ ಪೌಂಡಿನ ಒಂದು ಸಾಲವನ್ನು ಕೊಡುವ ಮಾತುಕತೆಗಳು, ಲಂಡನಿನಲ್ಲಿ ಜಯಶೀಲವಾಗಿ ಮುಕ್ತಾಯವಾಗಿದೆಂದು ವಾರ್ತೆ.

ಫ್ರಾನ್ಸಿನ ವಿಲ್ಲಾಗೊಬ್ಲೆ ಎಂಬಲ್ಲಿ ಓರ್ವ ವೈಮಾನಿಕನು, ಎತಿಯೋಪಿಯಾದ ಚಕ್ರವರ್ತಿಯವರಿಗಾಗಿ ಸಿದ್ಧವಾದ ವಿಮಾನವನ್ನು ಹಿಡಿದು ಮಾಯವಾಗಿರುವನು. ಈತನು ನವೀನವಾಗಿ ಸಿದ್ಧವಾದ ಈ ವಿಮಾನದ ಚಾಲಕನಾಗುವನೆಂದು ಸಲಹೆ ಕೊಟ್ಟಿದ್ದನು ಆದರೆ ಫ್ರೆಂಚ ಸರಕಾರವು ಆ ವಿಮಾನವು ಹೊರಗೆ ಹೋಗಬಾರದಾಗಿ ನಿರ್ಬಂಧ ಹಾಕಿದ್ದಿತು ಆತನು, ಆ ವಿಮಾನವನ್ನು ನೋಡುವ ನೆವದಿಂದ ಹೊರಗೆ ತಂದು ಅದರಲ್ಲಿ ಕುಳಿತು ಅಕಸ್ಮಾತಾಗಿ ಹಾರಿ ಹೋಗಿರುವನು. ಈ ವಿಮಾನದಲ್ಲಿ ೧೦೦೦ ಮೈಲುಗಳಿಗೆ ಪೂರೈಸುವ ಪೆಟ್ರೋಲಿನ ಶೇಖರವಿದೆ ಈತನು ಹೇಗೆ ಎತಿಯೋಪಿಯಾವನ್ನು ಮುಟ್ಟುವನೆಂದು ನೋಡಲಿದೆ

ನಮ್ಮ ಮಾಜಿ ವೈಸರಾಯರಾದ ಲೋಡ್ ಇರ್ವಿನರ ಮಗನ ಮದುವೆ ಲಂಡನಿನ ಸೆಂಟ್ ಪೋಲ್ ಇಗರ್ಜಿಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು ಸಾಧಾರಣ ೨೦೦೦ ಮಂದಿ ಅತಿಥಿಗಳು ನೆರೆದಿದ್ದರು

ಅಂತರಾಷ್ಟ್ರೀಯ ಹತ್ತಿಯ ಪೆಡರೇಶನಿನ ವಾರ್ಷಿಕ ಸಭೆಯು ಈ ಬಾರಿ ಕೋಪನ್ ಹೆಗನ್ನಿನಲ್ಲಿ, ತಾ ೨೮ರಲ್ಲಿ ನಡೆಯುವುದು ಸೋವಿಯಟ್ ರಷ್ಯಾ ಮತ್ತು ಯುನೈಟೆಡ್ ಸ್ಟೇಟ್ ಈ ಎರಡು ದೇಶಗಳಲ್ಲದೆ ಇತರ ಎಲ್ಲಾ ದೇಶಗಳಿಂದ ಪ್ರತಿನಿಧಿಗಳು ಹೋಗಿರುವರು

ಐಗುಪ್ತದ ಅರಸರಾದ ಪೋದರು, ಭಯಂಕರ ಅಸ್ವಸ್ಥದಿಂದ ನರಳುತ್ತಿರುವರು ಇವರನ್ನು ರಕ್ಷಿಸಲು ವೈದ್ಯಕೀಯ ಜನರು ಬಹಳ ಶ್ರಮಪಡುತ್ತಿದ್ದಾರೆ ಆದರೆ, ಅರಸರು ಬದುಕುವ ವಿಚಾರ ಅನೇಕ ಸಂದೇಹಗಳಿವೆ

ಆಸ್ಟ್ರಿಯಾದಲ್ಲಿ ರಾಜಕೀಯ ಗಲಭೆಯು ತಲೆದೋರುವ ಸಂಭವಗಳುಂಟಾಗಿವೆ ಇದಕ್ಕೆ ಕಾರಣ ಜರ್ಮನಿಯ ಹಿಟ್ಲರನಂತೆ ಹಿಟ್ಲರನ ಇಲ್ಲಿನ ಒಂದು ಪಂಗಡದೊಡನೆ, ಸೇರಿ ಆಸ್ಟ್ರಿಯಾವನ್ನು ಜರ್ಮನಿಯ ಬದಿಗೆ ಸೆಳೆಯುವ ಉಪಾಯಗಳನ್ನು ನಡೆಯಿಸುತ್ತಿದ್ದಾನಂತೆ

ಫ್ರೆಂಚ ಸರಕಾರದ ಚುನಾವಣೆಯು ಬಹಳ ಶಾಂತತೆಯಿಂದ ನಡೆಯುತ್ತವೆ

ಫ್ರಾನ್ಸಿನಲ್ಲಿ ಕಲ್ಲಿದ್ದಲಿನ ಗಣಿಯ ಕೆಲಸಗಾರರ ಭಯಂಕರ ಮುಷ್ಕರ ಹಿಡಿಯುವುದು ಅವರಿಗೂ, ಮ್ಹಾಲಿಕರಿಗೂ ನಡೆದ ಮಾತುಕತೆಗಳ ಫಲಿತಾಂಶವಾಗಿ, ತಡೆಯಲ್ಪಟ್ಟಿದೆ

ಬ್ರಿಟನಿನ ವ್ಯಾಪಾರವು ವೃದ್ಧಿಯಾಗಿರುವುದೆಂದು ಅಲ್ಲಿನ ಬೋರ್ಡು ಒಫ್ ಟ್ರೇಡಿನವರ ವರದಿ ಇವರು ಈ ವರ್ಷ ಕಳೆದ ವರ್ಷಕ್ಕಿಂತ ಹೆಚ್ಚು ಕಾರಣ ಸಾಮಗ್ರಿಗಳನ್ನು ಪಡಕೊಂಡಿರುವರಂತೆ

ಐಗುಪ್ತದ ಭಯಂಕರ ಮರಳು ಪ್ರದೇಶದಲ್ಲಿ, ಅಲ್ಲಿನ ಅಲೆಕ್ಸಾಂಡ್ರಿಯಾವನ್ನು, ಬ್ರಿಟಿಷ ವಾಯುಬಲದ ಕೇಂದ್ರ ಸ್ಥಳವಾದ ಮೆರ್ಸಾ ಮಾತ್ರು ಎಂಬ ಸ್ಥಳದೊಡನೆ ಕೂಡಿಸಲು, ೮೯ ಮೈಲು ಉದ್ದದ ರೈಲು ಮಾರ್ಗವನ್ನು ೬೩ ದಿವಸಗಳಲ್ಲಿ ಹಾಕಿರುವರು

ಪೂನೆಯಲ್ಲಿ ಹಿಂದೂ-ಮುಸ್ಲಿಂ ಗಲಭೆ

ಕಳೆದ ಹನುಮಂತ ಜಯಂತಿ ಸಮಯ ಅಂದರೆ ಕಳೆದ ತಾ ೨೦ರಲ್ಲಿ ಪೂನೆಯ ರವಿವಾರ ಪೇಟೆಯಲ್ಲಿರುವ ಸೊನ್ಯಮಾರುತಿ ದೇವಾಲಯದ ಹತ್ತಿರ ಹಿಂದೂ-ಮುಸ್ಲಿಮ ಗಲಭೆಯು ನಡೆಯಿತು. ಈ ದೇವಾಲಯವಿರುವ ೩೦ ಗಜ ದೂರದಲ್ಲಿ ಮುಸ್ಲಿಮರ ಒಂದು ಮಸೀದಿಯಿದೆ. ಇಲ್ಲಿ ಯಾವತ್ತೂ ತರದ ಸಂಗೀತ ನಡೆಯಿಸಬಾರದಾಗಿ ಈ ಮುಂಚೆ ನಿರ್ಬಂಧಗಳಿದ್ದುವು. ಆದರೆ ಮೊನ್ನೆ ತಾ. ೨೮ರಲ್ಲಿ ಹನುಮಂತ ಜಯಂತಿಯನ್ನು ನೆರವೇರಿಸಲು, ಹಿಂದೂಗಳು ಸಂಗೀತವನ್ನಾದಲು ಜಿಲ್ಲಾ ಕಲೆಕ್ಟರಿಂದ ಅಪ್ಪಣೆಯನ್ನು ಪಡೆದಿದ್ದರು. ಕಲೆಕ್ಟರರು ಅನೇಕ ಶರ್ತಗಳನ್ನು ಹಾಕಿ ಸಂಗೀತ ಮಾಡಬಹುದೆಂದು ಅಪ್ಪಣೆಯಿತ್ತರು ಅಂದು ಬೆಳಗ್ಗೆ ಸಾಧಾರಣ ಘಂಟೆ ೯ ಕ್ಕೆ ಹಿಂದೂಗಳು ಮಧುರ ವಾದಗಾಯನ ನಡೆಸುತ್ತಿರುವಾಗ, ಮುಸ್ಲಿಮರು ಅಲ್ಲಿ ಕೂಡಲಾರಂಭಿಸಿದರು ೩೦ ಗಜ ದೂರದಲ್ಲಿರುವ ತಾಂಬೋಲಿ ಮಸೀದಿಯನ್ನು ರಕ್ಷಿಸಲು, ಧಾರಾಳ ಪೊಲೀಸರನ್ನೂ, ಪಠಾಣರನ್ನೂ ಇರಿಸಿದ್ದರು ಒಂದೆಡೆಯಲ್ಲಿ ೭೦೦೦ ಹಿಂದೂಗಳು ಕೂಡಿದ್ದರು ಇನ್ನೊಂದೆಡೆಯಲ್ಲಿ ೪೦೦೦ ಮುಸ್ಲಿಮರು ಸೇರಿದ್ದರು ಹಿಂದೂಗಳ ಮೇಲೆ ಕಲ್ಲುಗಳು ಎಸೆಯಲಾದುವು ಪೋಲೀಸರು ಇಲ್ಲದಿರುತ್ತಿದ್ದರೆ ಭಯಂಕರ ಗಲಭೆ ನಡೆಯುವ ಸಂಭವಗಳಿದ್ದವು. ಆದರೂ ಸಾಧಾರಣ ತರದ ಗಲಭೆಯು ನಡೆಯಿತು ಸಂಗೀತವು ನಿಲ್ಲಿಸಲಾಯಿತು ಜಿಲ್ಲಾ ಅಧಿಕಾರಿಗಳು ಆ ಸ್ಥಳಕ್ಕೆ ಬಂದು ಹಿಂದೂಗಳನ್ನೂ ಮುಸ್ಲಿಮರನ್ನೂ ದೂರಕ್ಕೆ ಸರಿಯುವಂತೆ ಮಾಡಿದರು ಎರಡು ಸಣ್ಣ ಹಿಂದೂ ದೇವಾಲಯಗಳು ಕೆಡವಲಾದುವು ಕೆಲಮಂದಿ ಸಿಖ್ಖರು ಹಿಂದೂಗಳೊಡನೆ ಸಹಕರಿಸಿದರೆಂಬ ಭಾವನೆಯಿಂದ, ಬುದು ಸಿಕ್ಖ ಗುರುದ್ವಾರವನ್ನು ಕೆಡಹುವ ಆಲೋಚನೆಯನ್ನು ಕೆಲಮಂದಿ ಮುಸ್ಲಿಮರು ಮಾಡಿದರು ಆದರೆ ಪೋಲೀಸರು ಇವರನ್ನು ತಡೆದರು ಹಿಂದೂಗಳು ಕಸ್ಬಾ ಪೇಟೆಯಲ್ಲಿರುವ ಒಂದು ಮಸೀದಿಯನ್ನು ಸುಟ್ಟರೆಂಬ ವರ್ತಮಾನವನ್ನು ಕೇಳಿ, ಕೆಲ ಮಂದಿ ಮುಸ್ಲಿಮರು ವಿಠೋಬ ದೇವಾಲಯದ ಮೇಲೆ ದಾಳಿ ನಡೆಸಿದರು ಇವರ ನಂತರ ಹಿಂದೂಗಳಿಗೂ ಮುಸ್ಲಿಮರಿಗೂ ಭಯಂಕರ ಜಟಾಪಟಿ ನಡೆಯಿತು ಕೊನೆಗೆ ಮಿಲಿಟರಿಯು ಬರಲು ಜಟಾಪಟಿಯು ಶಾಂತವಾಯಿತು ಸಾಧಾರಣ ೧೫೦ ಮಂದಿಗಳು ಗಾಯಗೊಂಡರುವರು ಇವರು ಮೃತರಾಗಿರುವರಂತೆ ಈಗ ಶಾಂತತೆಯು ತಲೆದೋರಿರುವುದು

೧೬,೦೦೦ ಮೈಲು ಸ್ಯಾಕಲಿನಲ್ಲಿ ಭೂಪ್ರವಾಸ ಮಾಡಿದ ಹಿಂದೀಯ ಸ್ಯಾಟನೊಬ್ಬನು ಲಂಡನಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾನೆ ಈತನು ಮುಂಬಯಿಯಿಂದ ೧೯೩೪ರ ಮೇ ತಿಂಗಳಲ್ಲಿ ಹೊರಟಿದ್ದನು ಈತನು ಈಗಾಗಲೆ ಪ್ರಪಂಚ ಅನೇಕ ದೇಶಗಳನ್ನು ಸುತ್ತಿರುವನು ಇಲ್ಲಿಂದ ಆಸ್ಟ್ರೇಲಿಯಾ ಮುಖವಾಗಿ ಹಿಂದೂ ದೇಶಕ್ಕೆ ಮರಳುವನಂತೆ

ಫ್ರಾನ್ಸಿನ ಚುನಾವಣೆಯಲ್ಲಿ ಕೊಮ್ಯುನಿಷ್ಟ ಪಂಗಡಕ್ಕೆ ಹೆಚ್ಚಿನ ಸದಸ್ಯತನಗಳು ದೊರಕಿವೆ ಇದರಿಂದ ಇಲ್ಲಿನ ಮಾರ್ಕೆಟಿನ ಧಾರಣೆಗಳು ಬಹಳವಾಗಿ ಇಳಿದಿವೆ

ಪ್ರಪಂಚದ ಅತಿ ದೊಡ್ಡದಾದ, ಹಾಯಿಂದ ಚಲಿಸಲ್ಪಡುವ ಹಡಗವು, ಇಂಗ್ಲಾಂಡಿನ ಹತ್ತಿರ, ಒಂದು ಬಂಡೆಗೆ ತಗಲಿ ಮುಳುಗಿ ಹೋಗಿರುತ್ತದೆ ಈ ಹಡಗವು ಆಸ್ಟ್ರೇಲಿಯಾ-ಇಂಗ್ಲಾಂಡು ಓಡಾಟದ ಪಂದ್ಯಾಟದಲ್ಲಿ ಪ್ರಥಮ ಸ್ಥಾನವನ್ನು ೭ ಸರ್ತಿ ಪಡೆದು ಪ್ರಖ್ಯಾತವಾದುದಾಗಿತ್ತು.

ಮಾಜಿ ವೈಸರಾಯರಾದ ಲೋಡ್ ವಿಲ್ಲಿಂಗ್‌ಡನ್ನರಿಗೆ ಪ್ರಯಾಣದಲ್ಲಿ ಸ್ವಲ್ಪ ದೇಹಾಲಸ್ಯವಾಗಿದೆಯೆಂದು ವಾರ್ತೆ

OUR ENGLISH COLUMN

Odd Truths.

Our Wonderful House.

A middlesized man has over 300,000,000 pores in the glands of his skin to allow evaporation. He will perspire about two and a half pounds during a seven hour night's sleep

Weight of the World

is now estimated to be 6,592,000,000,000,000,000 tons

The Sahara desert is 3,100 miles long and 600 miles wide. It covers an area equal to two-thirds of Europe

The world's record for depth is held by the pacific ocean which is in places about 6 miles deep At such a depth the pressure of the water exceeds 6 tons per square inch

The fastest flowing river in the world is the Sutlej in India, which rises 15,200 feet above the sea and falls 12,000 feet in 180 miles

The longest river in the world is the Mississipi with the Missouri The length is 4,200 miles which is greater than the distance from Liverpool to New York

The St John del Rey gold mine in Brazil is the deepest in the world It is worked to a depth of 6,726 feet

The Great Wall of China is the longest in the world being well over a thousand miles in length But it is not the oldest The most ancient are the Walls of Jericho They were built 1 500 years before the birth of Christ, and are, therefore, over three thousand years old

Kilanea, in Hawaii is the largest active volcano in the world The crater is 3 miles across

The coral reef in the world is in Australia—the Great Barrier Reef, 1000 miles long and 30 miles wide

Russia has the longest canal in the world, starting at Leningrad, it reaches the frontier of china and has a total length of nearly 4 500 miles

The forest of the Amazon valley is the densest in the world

'Smile Awhile'

did he furnish his house with second hand stuff?

"Yes he even married widow

A Deadlock

Said the small boy "My ma and pa had an awful time getting married Ma would'nt marry pa when he was drunk and pa wouldn't marry ma when he was sober

Ie uuus

A short-sighted old lady entered a large curio shop, and after pottering around for while asked an assistant, How much is that big Japanese idol by the door worth?

"A great deal replied the assistant that's the proprieter.

× × ×

Pretty Tough

Mother Why are you crying to-day, Bobby?

Bobby I've got toothache and there is no school to-day

The highest town in the world is Cerro del Pasco 14,280 feet up in the Andes

The Silent Lake There is a lake the depth of wich is unknown This is the Great sunken Lake in the cascade mountains, and besides being possibly the deepest in the world it is also the most silent Sunk far below the mountain rim its walls, average 2,000 feet down to the waters surface and how much further down the water it goes, no one knows The length of the lake is 15 miles and breadth about 41 miles

The Baltic is the shallowest sea, only 43 yards in average depth Next comes the Adriatic with an average of 45 yards' depth

ವನಿತಾ ವೈಭವ.

ಕಠೋರವಾದ ಜೀವಮಾನವಾವುದು? ವೈಧವ್ಯವೋ ಸಹಗಮನವೋ?

"ಹಿಂದೂ ಸಂಘ"ವೆಂಬ ಸೌಧದಲ್ಲಿ ಪ್ರಮಾದಕರವಾಗಿ ಮುರಿದು ಮೇಲೆ ಬೀಳಲು ಸಿದ್ಧವಾಗಿರುವ ಭಾವನವೇನಾದರೂ ಇರುವುದೇ? ಎಂದು ನೋಡಿದ್ದಲ್ಲಿ ಬಾಲ ವಿಧವೆಯರ ದುರ್ದಶೆಯು ಭಯಂಕರವಾಗಿ ಕಾಣುವುದಾಗಿದೆ. "ವಿಧವೆ"ಯೆಂದರೆ ಕೆಲಸಕ್ಕೆ ಬಾರದವಳು ಎಂದು ಪರಿಗಣಿಸುವರು. ಬೆಳಿಗ್ಗೆ ಎದ್ದು ಆಕೆಯ ಮುಖವನ್ನು ನೋಡಿದ್ದಲ್ಲಿ ಮಹಾನರ್ಥವೆಂದು ಆಡುವರು. ತಾಯಿತಂದೆಗಳೇ ತಾವು ಪಡೆದ ಮಕ್ಕಳನ್ನೇ ನಿರಾಪರಾಧಿಗಳಾದ ತಮ್ಮ ಕುವರಿಯರನ್ನು ಈ ರೀತಿಯಾಗಿ ನಿರ್ದಾಕ್ಷಿಣ್ಯದಿಂದ ಕ್ರೂರವಾಗಿಯೂ ಹೀನವಾಗಿಯೂ ನೋಡುತ್ತಿರುವುದು ಹಿಂದೂ ಸಮಾಜಕ್ಕೆ ಅಪಯಶಸ್ಸಾಗಿದೆ. ನಮ್ಮ ಹಿಂದುಗಳ ಹೃದಯಗಳು ರಾಕ್ಷಸ ಕಠಿಣಹೃದಯಗಳೆಂದು ಪ್ರಪಂಚವೆಲ್ಲವೂ ಹೇಳುವುದಾಗಿದೆ. ಸತ್ತುಹೋದ ಗಂಡನೊಂದಿಗೆ ಜೀವಿಸಿರುವ ಹೆಂಡತಿಯನ್ನು ಕೂಡ ಬೆಂಕಿಯಲ್ಲಿ ಹಾಕಿ ಸುಡುತ್ತಿದ್ದರು. ಪೂರ್ವದಲ್ಲಿ ಇದು ಬರೀ ಕಿರಾತಗಳ ಜಾತಿಯ ಆಚಾರವಾಗಿದ್ದು, ಅಘೋರಾಚಾರವು ಈ ದೇಶದಲ್ಲಿ ಇರಬಾರದೆಂದೂ ಸಹಗಮನ ಮಾಡಿದವರಿಗೆ ಶಿಕ್ಷೆ ವಿಧಿಸಲ್ಪಡುವುದೆಂದೂ ಸರಕಾರದವರು ಕಾನೂನನ್ನು ಜಾರಿಗೆ ತಂದ ನಂತರ ಅದು ಕೊನೆಗೆ ನಿರ್ನಾಮವಾಯಿತು. ಸಹಗಮನವು ಹೊರಟುಹೋಯಿತು.

ಘೋರ ಯಾದ ಜೀವಮಾನವಾದ ಗೃಹಾಂತರವಾಸ ಶಿಕ್ಷೆ ರದ್ದಲ್ಪಡುವ ನಿರ್ಬಂಧ ವೈಧವ್ಯವು ಈ ದೇಶದಲ್ಲಿ ಪ್ರತಿ ಮನೆಯಲ್ಲೂ ಹೊರಬಂದಿರುವುದು. ಈ ನಿರಂತರ ವೈಧವ್ಯ ಬಾಧೆಗಿಂತ ಒಂದು ಕ್ಷಣದಲ್ಲಿ ಈ ಶರೀರವನ್ನು ನಾಶಮಾಡಿ ಕಷ್ಟವನ್ನು ಬಗೆಹರಿಸಿಕೊಳ್ಳುವುದು ನೆಮ್ಮದಿಯಾಗಿರುವುದೇನೋ ಎಂದು ತೋರುತ್ತದೆ. ಈ ವೈಧವ್ಯದ ಬಾಧೆಯಲ್ಲಿ ಎಷ್ಟಿಯಾದರೂ ಎಷ್ಟು ಮಾತ್ರವಾದರೂ ಆನಂದವಾಗಲೀ ಸೌಖ್ಯವಾಗಲೀ ಇರುವುದೋ ಎಂದಲ್ಲಿ ಕಂಬನಿ ಹಂಚು ಹಾಕಿ ಹುಡುಕಿದರೂ ಕಾಣ ಬಾರದು. ಅಂತಹ ವಿಧವೆಯರಾದ ಹೆಣ್ಣುಮಕ್ಕಳು ಮನೆಯಲ್ಲಿದ್ದರೆ ಅವರನ್ನು ನೋಡಿದಾಗಲೆಲ್ಲ ಮನೆಯವರೆಲ್ಲರೂ ಕಣ್ಣಿನಲ್ಲಿ ನೀರು ಸುರಿಸುತ್ತಿರುವುದರಿಂದಲೂ ಈ ವಿಧವೆಗೆ ಇನ್ನುಮುಂದೆ ಏನು ಗತಿಯಪ್ಪಾ ಎಂದು ಮನೆಯಲ್ಲಿರುವ ಹಿರಿಯರು ಭಯಪಡುತ್ತಿರುವುದರಿಂದಲೂ ಆಕೆಯ ದುರ್ಭರವಾದ ಜೀವನವು ಮನೆಯವರೆಲ್ಲರಿಗೂ ದುರ್ಭರವಾಗಿರುವುದು. ಇಂತಹ ವಿಧವೆಯರುಗಳು ಕೊನೆಯ ಪಕ್ಷ ಮನೆಗಿಬ್ಬರಾದರೂ ಈ ದೇಶದಲ್ಲಿ ಇರುವರು. ಎಲ್ಲಾ ವಿಷಯಕ್ಕಿಂತ ಹೆಚ್ಚು ಘೋರವೆಂದರೆ ಒಕ್ಕೆಯವರು ಕೆಟ್ಟವರು. ಎಂಬುದರ ಪೂರ್ವಾಪರ ಪರಿಚಯವಿಲ್ಲದ ಸಣ್ಣ ಸಣ್ಣ ಕನ್ಯೆಯರು ವಂದಿಗಳೋ ವಿಧವೆಯರುಗಳಾಗಿ ಮನೆಗಳಲ್ಲಿ ಈ ಬಾಧೆಯುಳ್ಳ ಕಠಿಣ ನರಕವನ್ನು ಅನುಭವಿಸುತ್ತಿರುವರು. ಇವರಿಗೆ ಯಾರಾದರೂ ದೊಡ್ಡವರು ಸಾಹಸ ಮಾಡಿ ಮದುವೆ ಮಾಡಿದ್ದಲ್ಲಿ ಕುಲದಿಂದ ಹೊರಡಿಸುವರು. ಹಿಂದೂ ಮತವೆಲ್ಲವೂ ಅವರ ಮೂಲಕದಿಂದ ನ್ಯೂನಗೆಯಾಗಿ ಧರ್ಮಸಂಕಟವಾಗಿ ಹೋಗುತ್ತದೆನ್ನುವರು.

ಶಾರದಾ ಆಕ್ಟು ಪ್ರಕಾರ ೧೪ ವರುಷಗಳು ತುಂಬಿದ ಮೇಲೆ ಹೆಣ್ಣುಮಕ್ಕಳಿಗೆ ಮದುವೆಮಾಡಬೇಕೆಂದು ಸರಕಾರದವರು ಶಾಸನಮಾಡಿದ್ದಾರೆ. ಈ ಶಾಸನವನ್ನು ಉಲ್ಲಂಘಿಸಿದರೆ ಶಿಕ್ಷಿಸುವರು. ಆದ್ದರಿಂದ ೧೪ ವರುಷಗಳು ತುಂಬುತ್ತಲೇ ಇನ್ನು ಮದುವೆಗೆ ಲಿಮಿಟೇಶನ್ ಹಿಡಿಯುವುದೇನೋ ಎಂದಂತೆ ತಾಯಿತಂದೆಗಳು ಹೆಣ್ಣುಮಕ್ಕಳಿಗೆ ಮದುವೆಯನ್ನು ಮಾಡಿಬಿಡುವರು. ನಿಶೇಕವು ಕೂಡ ವಿಶೇಷ ಕಾಲ ನಿಲ್ಲಿಸದೆ ಶರೀರದಾರ್ಢ್ಯವು ಚೆನ್ನಾಗಿ ವಿರ್ಧಿಸುವುದಕ್ಕೆ ಮೊದಲೆ ಹೆಣ್ಣುಮಕ್ಕಳನ್ನು ಸಂಸಾರಭಾಗಿಗಳಾಗಿ ಮಾಡುವರು. ೨೦ ವರುಷಗಳು ತುಂಬಿದ ತರುವಾಯ ಹೆಣ್ಣುಮಕ್ಕಳಿಗೆ ಮದುವೆ ಮಾಡಿದ ಹೆತ್ತವರು ಹಿಂದೂ ಸಂಘದಲ್ಲಿಲ್ಲವೆಂದೇ ಹೇಳಬೇಕು.

ಯಾವ ವಯಸ್ಸಿನಲ್ಲಿ ಹೆಮ್ಮಕ್ಕಳಿಗೆ ವಿವಾಹಮಾಡುವುದು ಯುಕ್ತವಾಗಿರುವುದೋ ದೇಶ ಕಾಲ, ಶೀತೋಷ್ಣ ಸ್ಥಿತಿಗಳಿಂದಲೂ ಪ್ರಜೆಗಳ ಚಿತ್ತವೃತ್ತಿಗಳಿಂದಲೂ ನಿರ್ಣಯಿಸಬೇಕಾಗಿರುವುದು. ಸಂಸಾರ ತಾಪತ್ರಯಗಳನ್ನು ಹೊರಬಲ್ಲ ಸಾಮರ್ಥ್ಯ ಉಂಟಾಗುವುದಕ್ಕೆ ಮೊದಲೇ ಹೆಣ್ಣುಮಕ್ಕಳಿಗೆ ತೊಂದರೆ ಕೊಟ್ಟು ಹೆತ್ತವರು ಏಕೆ ಮದುವೆಮಾಡುವರೋ. ಅಷ್ಟು ಕಷ್ಟಪಟ್ಟು ಮದುವೆಮಾಡದೇ ಹೋದಲ್ಲಿ ಬರುವ ತೊಂದರೆಗಳೇನೋ ನಮಗೆ ತಿಳಿಯಬರಲಿಲ್ಲ. ಹೆಣ್ಣುಮಗಳು ಹುಟ್ಟಿ ಬೆಳೆಯುವುದೆಂದರೆ ತಮಗೇನೋ ಭಾರವು ಬೆಳೆಯುತ್ತಾ ಬರುತ್ತಿರುವುದಾಗಿ ಎಣಿಸುವುದು ನಮ್ಮಗಳ ಸಾಂಪ್ರದಾಯ. ಆದುದರಿಂದಲೇ ಅವಕಾಶವಾದಷ್ಟು ತ್ವರೆಯಲ್ಲಿ ಮದುವೆಮಾಡಿ ಹೆಣ್ಣುಮಗುವನ್ನು ಅತ್ತೆಯ ಮನೆಗೆ ಕಳುಹಿಸಿ ಋಣಭಾರವನ್ನು ಬಗೆಹರಿಸಿಕೊಳ್ಳಬೇಕೆನ್ನುವಂತೆ ತಾಯಿತಂದೆಗಳು ತೊಂದರೆಪಡುವರು.

ಅತೀ ಬಾಲ್ಯವಿವಾಹಗಳು ಹೆಚ್ಚಾಗುತ್ತಾ ಬಂದ ಹಾಗೆಲ್ಲಾ ಬಾಲವಿಧವೆಯರುಗಳ ಸಂಖ್ಯೆಯೂ ಕೂಡ ದೇಶದಲ್ಲಿ ಹೆಚ್ಚಾಗಿಯೇ ಆಗುತ್ತಿರುವುದು. ಮದುವೆಯಾದ ನಂತರ ಗಂಡನೊಂದಿಗೆ ಸಂಸಾರವನ್ನಾಡಿ ತಿಳಿಯದ ಕರುಣಾಪಾತ್ರರು ಯಾವ ಜೀವಮಾನ ವೈಧವ್ಯವನ್ನು ಅನುಭವಿಸುತ್ತ ನಮ್ಮ ಮನೆಗಳಲ್ಲಿರುವರು. ಅಂತಹ ಹೆಣ್ಣುಮಕ್ಕಳಿಗೂ ಕೂಡ ಪುನಃ ಮದುವೆಮಾಡಲು ಅವಕಾಶವಿಲ್ಲದಿರುವುದು. ಕೂಗಾಡುವುದು ಕೇವಲ ರಾಕ್ಷಸ ಕೃತ್ಯವು. ನೊಸೆಯ ಕಾಲಿಟ್ಟ ಮೇಲೇ ವಿಶೇಷದಿಂದಲ್ಲಿ ಹಣ್ಣಿನಂತಹ ಮಗನು ಪರಲೋಕವಾಸಿಯಾದನೆಂದು ಅತ್ತೆಯವರು ಯಾವಾಗಲೂ ಶಪಿಸುತ್ತಲೇ ಇರುವರು. ಕುಟುಂಬಕ್ಕೆಲ್ಲಾ ಆ ತರುಣಿಯು ಕಾಲಿಡುವುದೇ ದೊಡ್ಡ ಅರಿಷ್ಟವೆಂದು ಬಯ್ಯುತ್ತಿರುವರು.

ಹುಟ್ಟಿದ ಮನೆಯವರು ಭಾಗ್ಯವಂತರಾಗಿದ್ದಲ್ಲಿ ಆಕೆಯನ್ನು ಸ್ವಲ್ಪ ಆದರಿಸಿ ಆಕೆಯು ವ್ಯಸನಪಟ್ಟಾಗ ತಾಯಿತಂದೆಗಳೂ ಕೂಡಾ ಅಳುತ್ತಾ ಇರುವರು. ಅತ್ತೆಯವರ ಮನೆಯಲ್ಲಿದ್ದಾದರೆ ಅತ್ತೆಯವರ ನಿಷ್ಠುರವಾಣಿಯಿನ ಅಲ್ಲದೆ ಹೆಣ್ಣುಮಗಳ ಜೀವನವು ಘೋರವಾಗಿರುವುದು. ವಯಸ್ಕಳಾಗಿರುವ ಬಾಲವಿಧವೆಯು ಎಷ್ಟು ಮಾತ್ರ ನಕ್ಕರೂ ಎಷ್ಟು ಮಾತ್ರ ಸಂತೋಷವಾಗಿದ್ದರೂ ಆಕೆಗೆ ಯಾವ ಸದಾಚಾರಗಳು. ಹೆಣ್ಣುಮಕ್ಕಳೊಂದಿಗೆ ಅಂಟಿಕೊಂಡು ಕಳೆಯುತ್ತಿರುವ ತೆರನಂತೆ ಅವಮಾನಿಸುತ್ತಿರುವುದು. ಭಾವನ್ಮೈದುನರೊಂದಿಗೂ ಇತರ ಬಂಧುಗಳೊಂದಿಗೂ ಆ ಬಾಲವಿಧವೆಯು ಅತಿ ಜಾಗ್ರತೆಯಾಗಿ ಕತ್ತಿಯ ಅಲುಗಿನ ಮೇಲೆ ನಡೆದಂತೆ ಇರಬೇಕು.

ವೈಧವ್ಯವೆಂದರೆ ಒಂದು ಬಗೆಯಾದ ಕಠಿಣ ಸೆರೆಮನೆಯಲ್ಲಿಯ ಶಿಕ್ಷೆಗಿಂತ ಗಡುಸಾದುದು. ಯಾವಜ್ಜೀವಮಾನ ಒಪ್ಪತ್ತು ಊಟ ಮಾಡುತ್ತ ಉಪವಾಸ ಮಾಡಬೇಕಾಗಿದೆ. ವಿಶಂತ ಸಂಗೀತ ಕೈಗಳಲ್ಲಿ ಬಳೆ ಇಡಬಾರದು. ಒಡವೆಗಳು ಹಾಕಿಕೊಳ್ಳಬಾರದು. ಅಂದವಾದ ಸೀರೆಗಳನ್ನು ಉಡಬಾರದು. ಸರ್ವಸೌಖ್ಯಗಳನ್ನು ಪರಿತ್ಯಜಿಸಬೇಕು. ಇದರಿಂದ ಹಿಂದು ವಿಧವೆಯರುಗಳಿಗೆ ಏರ್ಪಡುವೇನೋ ಕಡನು. ಆದರೆ ದಾಂಪತ್ಯದ ಸುಖವನ್ನು ಇಷ್ಟು ಬಾಲ್ಯಪ್ರಾಯದಲ್ಲೇ ತೋರಿಯಲು ಅದೆಷ್ಟು ಸೌಲಭ್ಯ. ಗಂಡನ ಆಸ್ತಿ ಆಕೆಗಿದ್ದರೂ ಅದನ್ನು ಆಕೆಯು ಅನುಭವಿಸಲು ಅವಕಾಶವಿಲ್ಲ. ಗಂಡನ ಸ್ವಾರ್ಜಿತವನ್ನು ಮಾತ್ರವೇ ಆಕೆಯು ಜೀವಮಾನದ ಕಾಲದ ವರೆಗೆ ಆಕೆಯು ಅನುಭವಿಸಬಹುದೆಂದೂ ಹಿಂದೂ ನ್ಯಾಯಶಾಸ್ತ್ರಗಳು ಉಸುರುತ್ತವೆ. ಸ್ವಾರ್ಜಿತವಿಲ್ಲದೆ ಹೋದರೆ ಸಮಷ್ಟಿ ಕುಟುಂಬದ ಭಾಗದವರಾಗಲೀ ಗಂಡನ ವಾರಸುದಾರರಾಗಲೀ ಆಕೆಗೆ ಜೀವನಾಂಶ ಕೊಡಬೇಕು. ಈ ರೀತಿಯಾಗಿ ವಿಧವೆಯಾದ ಹೆಂಗಸಿನ ಜೀವಮಾನವು ಈ ಕಟ್ಟು ಕಟ್ಟಿನಿಂದ ದುರ್ಭರವಾದ ಜೀವನವಾಗಿರುವುದು.

ಈ ವೈಧವ್ಯವನ್ನು ಏನೂ ಪಾಪವರಿಯದ ಈ ಹೆಣ್ಣುಮಕ್ಕಳಿಗೆ ವಿಧಿಸುವುದು ಯಾವ ಕಾರಣದಿಂದ? ಇದಕ್ಕೆ ಪ್ರತಿಕ್ರಿಯೆ ಏನು? ಇಂತಹ ನಿರಂಕುಶಾಧಿಕಾರವನ್ನು ಬಲಾತ್ಕಾರವಾದುದೆಂದುಕೊಳ್ಳಲು ನಮಗೆ ಅರ್ಹತೆ ಇರುವುದೇ? ಮನೆಯಲ್ಲಿ ಗೇಯತ್ತಿ ಹೊರಗಡೆ ಚೆಲ್ಲಬೇಕಲ್ಲವೇ? ನಮ್ಮ ಮನೆಯಲ್ಲಿ ನಮ್ಮ ಸಂಘದಲ್ಲಿ ನಾವು ಧರ್ಮ ಪರಿಪಾಲನೆಮಾಡಿದರೇನೆ ನಾವು ಕೂಡ ಗೌರವದಿಂದ ಜೀವಿಸುವ ಜನಾಂಗವಾಗಿ ದೇಶಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಲು ಸಮರ್ಥರಾಗುವೆವು. ಈಗಲಾದರೂ ನಿದ್ರೆಯಿಂದ ಎಚ್ಚರಗೊಂಡಲ್ಲಿ ಒಳ್ಳೆಯದು. ಈ ನಿರ್ಬಂಧದಿಂದ ವೈಧವ್ಯವು ಇನ್ನೂ ಎಷ್ಟು ಕಾಲ ನಮ್ಮ ಸಂಘದಲ್ಲಿ ಈ ರೀತಿಯಾಗಿ ಇರುವುದೋ. ಈ ಸ್ಥಿತಿಗತಿಗಳನ್ನು ನಮ್ಮ ಕರ್ನಾಟಕ ಮಹಿಳಾಮಣಿಗಳು ಮನನಮಾಡಿ ಮಹಿಳಾಭ್ಯುದಯಕ್ಕೆ ತಕ್ಕ ಎಚ್ಚರ ಹೊಂದುವರೆಂದು ನಂಬುಗೆ.

ಸರಸ್ವತೀ.

ನಮ್ಮ ಚದುರೆಯರು

ಚದುರೆಯೊಬ್ಬಳ ನಾಲಗೆಯನ್ನು ಕೊಯ್ದು ನೆಲದ ಮೇಲೊಗೆದರೆ, ಆಗಲೂ ಅದು ಗೊಣಗುಟ್ಟುವುದನ್ನು ಬಿಡಲಿಲ್ಲವಂತೆ. . .... ಜಾಣೆನ ಕುದುರೆಯಂತಿರುವ ಅದರ ಅಂತರ್ರಚನೆಯಾದರೂ ಹೇಗಿರಬಹುದು?

ನಮ್ಮ ಹೆಂಗಸರು ವೈಯಾರದಲ್ಲಿ ಸಿಂಗಾರಗಳಲ್ಲಿ ಮಾತ್ರವಲ್ಲದೆ ಮಾತುಗಾರಿಕೆಯಲ್ಲಿಯೂ ಕೀರ್ತಿಯನ್ನು ದೊರಕಿಸಿರುವರು. ಇದೇ ಅವರ ವೈಶಿಷ್ಟ್ಯ. ವೇದದಲ್ಲೂ ಸಲ್ಲುವುದು. ಕ್ಷಣ ಕ್ಷಣಕ್ಕೂ ಕನ್ನಡಿಯ ಬಳಿಗೆ ಬಂದು ಮುಖಕಮಲದ ಪ್ರತಿಭಾಗವನ್ನೂ ನೋಡಿ ಬಹು ಮೆಚ್ಚಿದ ಪ್ರಮದೆಯರೊಬ್ಬರೂ ಇಲ್ಲದಿರುವಂತೆ ಕ್ಷಮಾರ್ಥವಾದರೂ ಕೋಮಲವಾದ ನಾಲಿಗೆಗೆ ರಜೆಯನ್ನು ಕೊಟ್ಟ ರಮಣಿಯನ್ನು ನಾನೆಲ್ಲಿಯೂ ಕಂಡು ಕೇಳಲಿಲ್ಲ. ಒಂದು ವೇಳೆ ಮನಸ್ಸು ಮಾಡಿಯವರು ಕನವರಿಸ ಪವರ ಚಿಕ್ಕವನ್ನು ತೆಗೆದುಕೊಂಡರೆ ನಮ್ಮ ಚದುರೆಯರ ಪ್ರಮಾಣವು ನೂರಕ್ಕೆ ಎರಡೈದಕ್ಕಾಗುವುದೆಂದು ಅನೇಕರ ಅಭಿಪ್ರಾಯ ಪಡುತ್ತಿದ್ದಾರೆ.

ಮಹಾ ತತ್ವಜ್ಞಾನಿಯಾದ ಸಾಕ್ರಟೀಸನು ಸ್ತ್ರೀ ಜಾತಿಯನ್ನು ಒಬ್ಬ ರಮಣಿಯೆಂದರಿತೆನೆಂದು ಗಾಢವಾಗಿ ಪಂಡಿತರೊಬ್ಬರ ಹೇಳಿರುವರು. ಆ ಕಲೆಯು ನಿಜವಾಗಿಯೂ ಕೋಮಲೆಯರ ಸ್ವತ್ತೆಂದು ನನ್ನ ಭಾವನೆಯಾಗಿರುವುದು. ವಿಶ್ವ ವಿದ್ಯಾಲಯದವರ ಈ ವಿಷಯವನ್ನು ಸ್ತ್ರೀಪಂಡಿತರಿಗೊಪ್ಪಿಸ ದ ಪಚಾರವಾಡು ವುದು ಶ್ರೇಯಸ್ಕರವಾದ ದು. ಬೇರಾದ ವಿಷಯದ ಮೇಲೆ ಕಾಸುಗಟ್ಟಲೆ ಮಾತನಾಡಬಲ್ಲರೆಂದು ಕೆಲವು ಪುರುಷರು ಹೆಸರಾಗಿರುವರು. ನಮ್ಮ ನೋಟಿಸಿಯಾದ ನೇಕರು ಏನೂ ವಿಷಯವಿಲ್ಲದೆಯೇ ಇಡೀ ಒಪ್ಪತ್ತು ಗಟ್ಟಲೆ ಮಾತನಾಡಬಲ್ಲವರಾಗಿರುವುದು ಬಹು ಶ್ಲಾಘನೀಯವಾಗಿರುವುದು. ಸೀರೆಯ ನೆ ಹಾಕುವುದರ ಮೇಲೆ ವಕ್ತೃಗಳೊಬ್ಬಳ ಕ್ಷಣಕಾಲವನ್ನು ಸಹ ಪಿಟಾರದಲ್ಲಿ ಕಳೆಯದೆ ಬಹು ದೀರ್ಘ ಭಾಷಣವನ್ನ ಆ ದಿನ ಕೇಳಬೇಕಿತ್ತು! ಮನೆಯ ಆಳು ಮಲ್ಲಿಗೆಯನ್ನು ಬಾಡದಂತೆ ತರದಿದ್ದ ತಪ್ಪಿಗಾಗಿ ಶಬ್ದಾಲಂಕಾರಗಳ ನೈಶಲ್ಯ ಪ್ರಯೋಗಿಸಿ ವಿದೂಷಿಯೊಬ್ಬಳ ಆವನನ್ನು ದೂಷಿಸ ತ್ತಿದ್ದಳು.

ಸ್ತ್ರೀಯರ ವಾಕ್‌ಲಾಲಿತ್ಯವು ಮುಂದರಿದರೆ ನ್ಯಾಯಸ್ಥಾನದ ವಾಕ್ಪಟುತ್ವವು ಇಂದಿನ ನೂತನ ಕಾಲದ ಪ್ರವರ್ಧಮಾನವಾಗುವುದರಲ್ಲಿ ನನಗೇನೂ ಸಂಶಯವಿಲ್ಲ. ಇದರ ಸತ್ಯತೆಯನ್ನು ಕಾಣಬೇಕೆನ್ನುವವರು ಅದಕ್ಕಾಗಿ ಕೆಲವು ಸುಂದರಿಯರನ್ನು ಮೆಚ್ಚಿಸಲಿ. ಇವರಲ್ಲಿ ಹಲವು ವರ್ಗಗಳನ್ನು ಕಲ್ಪಿಸಬಹುದು. ಮೊದಲನೆಯವರು ಇತರರ ಮನಸನ್ನೊಲಿಸುವುದರಲ್ಲಿ ಪ್ರವೀಣರು. ಇದು ವಕ್ತೃತ್ವದ ಕಾರ್ಯದಲ್ಲೊಂದು. ಮೇಲೆ ಹೇಳಿದಂತೆ ಸಾಕ್ರಟೀಸನು ಚದುರೆಯೊಬ್ಬಳ ಶಿಷ್ಯನಾಗಿದ್ದುದು ಸತ್ಯವೆಂದರೆ ಅವಳು ಈ ವರ್ಗಕ್ಕೆ ಸೇರಿದವಳೆಂದು ಧೈರ್ಯವಾಗಿ ಹೇಳಬಹುದು.

ಎರಡನೇ ವರ್ಗದ ಸ್ತ್ರೀವಕ್ತೃಗಳು ಇತರರ ಗುಣದೋಷಗಳಲ್ಲಿ—ಮುಖ್ಯವಾಗಿ ದೋಷಗಳ ಚರ್ಚೆಯಲ್ಲಿ ನಿಪುಣರು. ಇವರಿಗೆ ಸತ್ಯತೆಯ ಪಕ್ಷಪಾತವಿಲ್ಲ. ತಮಗಿಂತಲೂ ಚೆಲುವರಾದವರು ಈ ಲೋಕದಲ್ಲೇ ಈ ಯಾವ ಲೋಕದಲ್ಲಿಯೂ ಇಲ್ಲವೆಂದು ಇತರ ವರ್ಗದವರಿಗಿಂತಲೂ ಇವರು ಹೆಚ್ಚು ವಾದಿಸುವರು. ಬಹು ಆಶ್ಚರ್ಯಕರವಾದ ಇವರ ಕಲ್ಪನಾಶಕ್ತಿಯೂ ನುಡಿ ಜಾಣ್ಮೆಯೂ ದಿನೇ ನೂತನವಾಗಿರುವುದು. ನಮ್ಮ ಕವಿಗಳ ಕಾವ್ಯವನ್ನು ಮೆಚ್ಚಿ ಬಿರುದುಗಳನ್ನು ಕೊಡುತ್ತಿದ್ದ ಆ ಹಿಂದಿನ ರಾಜರು ಇವರ ಮೋಡಿಯನ್ನಿಷ್ಟು ಅರಿತ್ತಿದ್ದರೆ ಮನಪೂರ್ವಕವಾಗಿ ದೋಷಾನ್ವೇಷಿಗಳೆಂಬ ಬಿರುದನ್ನು ಇವರಿಗೆ ಕೊಟ್ಟುಬಿಡುತ್ತಿದ್ದರೆಂದು ನಾವು ಧಾರಾಳವಾಗಿ ಹೇಳಬಹುದು. ಇನ್ನೊಬ್ಬರ ಪ್ರತಿಯೊಂದು ಅತಿ ಕ್ಷುದ್ರ ಹುಳುಕನ್ನು ಇವರು ಕೂಡಲೇ ಕಂಡುಹಿಡಿದು ಅದೆಂತಹ ಪ್ರತ್ಯುತ್ಪನ್ನಮತಿಯಿಂದ ಅದೆಂತಹ ಕಲ್ಪನಾಜಾಲದಿಂದ ಅದೆಷ್ಟು ಜನಗಳ ಮುಂದೆ ಅತ್ಯಲ್ಪಕಾಲದಲ್ಲಿ ಅದನ್ನು ಪರ್ವತಪ್ರಾಯವಾಗಿ ಮಾಡುವರು. ಅದೆಷ್ಟು ವಿವರವಾಗಿ ಅದೆಷ್ಟು ಹೊಸ ಬಗೆಯಲ್ಲಿ ಹೇಳಿದ್ದನ್ನೇ ನಮ್ಮ ಈ ಮಹಿಳೆಯರು ಪುನಃ ಪುನಃ ಹೇಳಬಲ್ಲರು. ಒಬ್ಬ ಮುಸುಕಿನವಳು ಅವಳೇನೂ ಹಾಗೆನ್ನುತ್ತಿರಲಿಲ್ಲ. ಆದರೊಂದು ಎಗ್ಗದ ವಿಷಯವಾಗಿ ಎಡೆಬಿಡದೆ ಒಂದು ತಿಂಗಳ ಮೇಲೆ ಮೂರು ದಿನಗಳ ವರೆಗೂ ಹೇಳಿ, ಹೇಳಿ ಹೇಳುತ್ತಿದ್ದುದು ನನಗೆ ಗೊತ್ತಿದೆ. ಒಂದು ಸಲ ಅವಳು ಮದುಮಗಳನ್ನು ದೂಷಿಸಿದಳು, ಇನ್ನೊಮ್ಮೆ ಅದಕ್ಕಾಗಿ ಹಲುಬಿದಳು. ಮತ್ತೊಮ್ಮೆ ಅವಳನ್ನು ನೆನೆನೆನೆದು ನಕ್ಕಳು. ಮಗದೊಮ್ಮೆ ಅವಳ ನಡತೆಗಾಗಿ ಆಶ್ಚರ್ಯಪಟ್ಟಳು. ಕೊನೆಯಲ್ಲಿ ಅವಳ ಮೇಲೆ ಬಹು ಸಿಟ್ಟಾದಳು. ಅಂತೂ ಅವಳ ನವರಸಗಳಿಗೆ ಕಡಿಮೆಯಿಲ್ಲದಷ್ಟು ರಸಗಳನ್ನು ವ್ಯಕ್ತಗೊಳಿಸಿದಳು. ಲಗ್ನವಿಷಯಗಳನ್ನು ವಿವರಿಸಲು ಕೇರಿಕೇರಿಗೆ, ಮನೆಮನೆಗೆ ಸತತವೂ ಹೋಗಿ ಬರುವ ಗೊಂದಲದಲ್ಲಿ ಅವಳ ಗಾಡಿಯು ಮುರಿದು ತ್ರಾಣವನ್ನು ಸಹಿಸಲಾರದೆ ೧೫ ದಿನಗಳಲ್ಲಿ ೪ ಕುದುರೆಗಳು ಸತ್ತುಹೋದುವು. ಅನಂತರ ಈ ಲಗ್ನ ವಿಷಯವೇನೂ ಅಳುಕಿಯುದಂತಾದ ಮೇಲೆ ಹೊಸದಾಗಿ ಮದುವೆಯಾದ ದಂಪತಿಗಳನ್ನು ಇವಳು ಸಂದರ್ಶಿಸಿದಳು. ಇಂತಹ ಪತಿಯನ್ನು ಪಡೆದ ಅವಳ ಪುಣ್ಯವನ್ನು ಹೊಗಳಿದಳು. ಅವಳ ಸೌಜನ್ಯವನ್ನು ಬಹಳ ಮೆಚ್ಚಿದಳು. ಅತ್ತೆಯ ಮನೆಯಲ್ಲಿರುವ ಬಗೆಯನ್ನು ಉಪದೇಶಿಸಿದಳು. ಇಂತಹ ಸ್ತ್ರೀಯರ ಹೊಗಳಿಕೆ ತೆಗಳಿಕೆಗಳನ್ನು ಮಾತುಗಾರಿಕೆಯನ್ನು ಸಾಗಿಸಲು ತೆಗೆದುಕೊಂಡ ಸಾಧನಗಳೆಂದು ಮಾತ್ರ ಭಾವಿಸತಕ್ಕದ್ದು.

ಮೂರನೇ ವರ್ಗದ ಸಂಭಾಷಣೆಯನ್ನು ತಲೆ ಹರಟೆಯವರೆಂದು ಕರೆಯಬಹುದು. ಸಾಕ್ರಟೀಸನು ಈ ವರ್ಗದ ಕಲೆಯಲ್ಲಿ ಹೊರಾದವಳು. ಸ್ತ್ರೀಯೋರ್ವಳ ರೆಲ್ಲರ ಪ್ರತಿ ಜೇಸರಿಷ್ಟ್ ಇವಳು ಅವಹಾಸ್ಯ ಮಾಡಬಲ್ಲಳು. ಬಡಿಗೆತೂಡಿಗೆ ನಡಿಗೆ ನ ದಿನದ ದೊಡ್ಡದುವನ್ನು ಇತರರು ಬೇಡವೆಂದರೂ ವಿಮರ್ಶಿಸಬಲ್ಲಳು. ನೆರೆಹೊರೆಯಲ್ಲಿನ ಪ್ರತಿ ಮನೆಯ ಅಡಿಗೆಯನ್ನು ಇವಳು ಬಲ್ಲಳು. ದೇಶಾಂತರದಲ್ಲಿ ನಡೆದಿರುವ ಸುದ್ದಿಯನ್ನು ಅರಿಯದವರಿಗೆ ದಂಬಂತೆ ಹೇಳಬಲ್ಲಳು. ಇವಳ ಮಹಾಭಾಷಣದಲ್ಲಿ ಪರಸ್ಪರ ಸಂಬಂಧವನ್ನು ಬಿಟ್ಟು ಬೇರೆ ಬಲ್ಲ ಇರುವುದು.

ವೈಯಾರಿಯನ್ನು ನಾಲ್ಕನೇ ವರ್ಗದಲ್ಲಿ ಸೇರಿಸಬಹುದು. ತನ್ನ ಮಾತುಗಾರಿಕೆಗೆ ಹೆಚ್ಚು ಆಸ್ಪದವನ್ನು ದೊರಕಿಸಲು ಅವಳು ಒಂದೇ ಘಳಿಗೆಯಲ್ಲಿ ಪ್ರೇಮ ದ್ವೇಷಗಳನ್ನೂ ನಗುವು ಅಳುವುಗಳನ್ನೂ ಹೊರಚೆಲ್ಲುವಳು. ಅವಳ ದೂರದ ವಸ್ತುವಿಲ್ಲ. ಅವಳು ಮೆಚ್ಚುವ ಮಾತಿಲ್ಲ. ತನ್ನ ಗುರುತಿನ ಗಂಡಸರೊಡನೆ ಸುಳ್ಳು ಜಗಳವನ್ನೊಮ್ಮೆ ಹೂಡುವಳು. ಇಲ್ಲದಿದ್ದ ಉಪಕಾರವನ್ನು ಒಮ್ಮೆ ಹೆಚ್ಚಿಕೊಳ್ಳುವಳು. ತಾನು ಸಂತೋಷದಿಂದಿರುವಾಗ ನ್ಯಾಯಿಸಲು ಬಿಡಬಲ್ಲಳು. ದುಃಖದಲ್ಲಿರುವಾಗ ನಗಬಲ್ಲಳು. ಇವಳು ಮುಖ್ಯವಾಗಿ ನಟನೆ ಎಂಬ ವಕ್ತೃತ್ವದ ಅಂಗದಲ್ಲಿ ಪ್ರವೀಣಳು. ಅವಳ ಕಣ್ಣನ್ನು ಹೊರಳಿಸುವ, ತಲೆಯನ್ನು ತೂಗುವ, ತೋಳನ್ನೆತ್ತುವ ಕಾಲನ್ನು ಅಲುಗಿಸುವ ಅಥವಾ ತನುಕಾಂತಿಯನ್ನು ಹಲವು ಹಾವಭಾವಗಳಿಂದ ತೋರಿಸಬಹುದು. ಉದ್ದೇಶವನ್ನು ಸಾಧಿಸಿಕೊಳ್ಳಲೆಂದು ಮಾತನಾಡುವಳೇ ಹೊರತು ಮತ್ತೆ ಬೇರೆ ಇಲ್ಲವೆಂದು ಕಂಡುಬರುವುದು.

ವಾಕ್ಚತುರತೆಯಲ್ಲಿ ಸುಂದರಿಯರು ಪುರುಷರಿಗಿಂತಲೂ ಅಧಿಕಾರವಾಗಿರುವುದರ ಕಾರಣದ ಗುಟ್ಟನ್ನು ಕಂಡುಹಿಡಿಯಲು ಮಾಡಿದ ನನ್ನ ಪ್ರಯತ್ನಗಳೆಲ್ಲವೂ ವಿಫಲವಾದುವು. ನಾನು ಹಲವು ವೇಳೆ ಹೆಂಗಸರಿಗೆ ಗಂಡಸರಿಗಿರುವಂತೆ ತಮ್ಮ ಆಲೋಚನೆಗಳನ್ನು ಮನಸ್ಸಿನಲ್ಲಿಯೆ ತಡೆದಿಡುವ ಶಕ್ತಿ ಇಲ್ಲವಾದುದರಿಂದ ಅವುಗಳನ್ನೇ ಹೇಳಿಕೊಳ್ಳುವರೆಂದು ಭಾವಿಸಿದೆ. ಇದು ನಿಜವಾದರೆ ದೇಕಾರ್ಟಸನೆಂಬ ಫ್ರೆಂಚ್ ತತ್ವಜ್ಞಾನಿಗೆ ಬಹು ಬೆಂಬಲವು ದೊರೆತಂತಾಗುವುದು. ಏಕೆಂದರೆ ಆತ್ಮವು ಯಾವಾಗಲೂ ಆಲೋಚಿಸುವುದು ಎಂಬುದೇ ಅವನ ಸಿದ್ಧಾಂತ. ನಮ್ಮ ವೈದ್ಯರು, ಸ್ತ್ರೀಯರು ಮುನಿಸಿನಲ್ಲಿರುವುದೊಂದಾದರೆ ಬಾಯಿ ಬಿಟ್ಟಿಲ್ಲಂದನ್ನು ನುಡಿಯುವರೆಂದೂ ಕಾಪಟ್ಯಕ್ಕೆ ಅವರು ಅಪರಿಚಿತರಲ್ಲವೆಂದೂ ಅಭಿಪ್ರಾಯ ಪಡುತ್ತಿರುವುದರಿಂದ ನಾನು ನನ್ನ ಮೊದಲಿನ ಅಭಿಪ್ರಾಯವನ್ನು ಬಿಟ್ಟುಬಿಡಬೇಕಾಯಿತು. ನಮ್ಮ ವನಿತೆಯರೂ ಸಹ—

ಕಾಯುವವರದೂ ಅಂತರಂಗವ
ಬಾಯಬಿಡದನ್ಯಾಯವಾಡುವ
ರಾಯಕಾಕ್ಷಿಯುದಂಗವಿಹುದು

(೧೨ನೇ ಪುಟವನ್ನು ನೋಡುವುದು.)

ಅನುಕ್ರಮಣಿಕೆ.

ನೋಟಗಳು	೨
ನಿಮಗೆ ತಿಳಿದಿರುವುದೇ?	೩
ಹಾಸ್ಯ ವಿನಯೋಗ	೫
ವಿವಿಧ ಸಮಾಚಾರಗಳು	೬
ಅಗ್ರಲೇಖ	
ಸ್ಥಳೀಯ ಸ್ವರಾಜ್ಯ ಸಂಸ್ಥೆಗಳು	೧೦
ಮಂಗಳೂರು, ತಾಲೂಕುಗಳಿಂದ	೧೧
ಸ್ಫುಟವಿಚಾರಗಳು	೧೧
ವರ್ತಮಾನ ಸಂಗ್ರಹ.	
ಈ ಭಾರಿಯ ಎಸೆಂಬ್ಲಿ ಅಧಿವೇಶನದ ಅನುಭವ	೧೪
ವನಿತಾ ವೈಭವ	೯
ಹಿಂದಿಯು ದೇಶಭಾಷೆಯಾಗಬೇಕು	೧೮

ಸ್ವದೇಶಾಭಿಮಾನಿ.

ತಾ ೧ನೇ ಶುಕ್ರವಾರ ಮೇ ೧೯೩೬

ಸ್ಥಳೀಯ ಸ್ವರಾಜ್ಯ ಸಂಸ್ಥೆಗಳು.

ಪಂಜಾಬಿನ ಈ ಸಂಸ್ಥೆಗಳ ಪರಿಷತ್ತು ತಾ ೨೫ರಲ್ಲಿ ಲಾಹೋರಿನಲ್ಲಿ ಸೇರಿತು ಗವರ್ನರರೇ ಸಭಾಕಾರ್ಯವನ್ನು ಪ್ರಾರಂಭಿಸಿದರು, ಶ್ರೀಯುತ ಜಿಪ್ ಶಿಡ್ ಮೊಹತಾರವರು ಅಧ್ಯಕ್ಷರಾಗಿದ್ದರು ಇವರಿಬ್ಬರು ಮಹನೀಯರು ಅಲ್ಲಿ ವ್ಯಕ್ತಗೊಳಿಸಿರುವ ಅಭಿಪ್ರಾಯಗಳನ್ನು ಸ್ಥಳೀಯ ಸಂಸ್ಥೆಗಳ ಕಾರ್ಯಭಾರದಲ್ಲಿ ಸೇರಿರುವ ಎಲ್ಲರೂ ತಿಳಿದುಕೊಳ್ಳುವುದುತ್ತಮ

'ಜನಾಭಿಪ್ರಾಯವು ಸರಿಯಾಗಿ ರೂಪಗೊಂಡು ಈ ಸಂಸ್ಥೆಗಳ ಮೇಲೆ ಪರಿಣಮಿಸಲಾರದಿರುವಲ್ಲಿ, ಈ ಸಂಸ್ಥೆಗಳು ಹೆಚ್ಚಿನ ಫಲ ಕೊಡುವಂತಿಲ್ಲ ಆದುದರಿಂದ ಜನಾಭಿಪ್ರಾಯವು ರೂಪಗೊಳ್ಳುವ ಹಾಗೆ ಸತತವೂ ಪ್ರಯತ್ನಿಸುವುದು ನಾಗರಿಕರ ಕರ್ತವ್ಯವಾಗಿದೆ

ಸ್ಥಳೀಯ ಸಂಸ್ಥೆಗಳಲ್ಲಿ,—ಲಂಚ, ಜಾತಿ ಪಾತ್ಸಲ್ಯ, ನೆಂಟರಿಷ್ಟರಿಗೆ ಆದಾಯ, ನಿರುಪಯುಕ್ತ ಆಡಳಿತ, ಇತ್ಯಾದಿ ದೋಷಗಳಿವೆ ಎಂಬ ದೂರು ಆಗಾಗ ಕೇಳಿಸುತ್ತಿದೆ, ಈ ದೂರುಗಳಿಗೂ ಹೆಚ್ಚಿನ ಮಟ್ಟಿಗೆ ಕಾರಣಗಳಿಲ್ಲದೆ ಇಲ್ಲ ಆದರೂ, ಕೆಲವು ಸಂಸ್ಥೆಗಳಲ್ಲಿ ಬಿನ್ ಸರಕಾರೀ ಸದಸ್ಯರು ಬಹಳ ಚೆನ್ನಾಗಿ ದುಡಿದು, ನಿಸ್ವಾರ್ಥ ಪರಿಶ್ರಮದ ಸಲುವಾಗಿ ಶ್ಲಾಘನೆಗೂ ಪಾತ್ರರಾಗುತಿದ್ದಾರೆ ಸಾಮಾನ್ಯವಾಗಿ, ಜನತೆಯ ಯೋಗ್ಯತೆ ಎಂತಹದೋ, ಅಂತಹ ಆಡಳಿತವೇ ಅವರಿಗೆ ದೊರೆಯುತ್ತಿದೆ ಎಂದು ನಿಶ್ಚಯವಾಗಿಯೂ ಹೇಳಬಹುದು ಜನತೆಯ ಕೈಯಲ್ಲಿ ವೋಟುಗಳ ಬಲವಿದೆ, ಈ ವೋಟುಗಳ ಮೌಲ್ಯವನ್ನು ತಿಳಿಯದೆಯೂ, ಅವನ್ನು ಯಥಾರೀತಿಯಾಗಿ ಉಪಯೋಗಿಸದೆಯೂ ಜನತೆಯು ಆಡಳಿತಕ್ಕೆ ಕುಂದನ್ನುಂಟು ಮಾಡುತ್ತಿದೆ ವೋಟುಗಳನ್ನು ಸರಿಯಾದ ರೀತಿಯಲ್ಲಿ ಪ್ರಯೋಗಿಸಿದರೆ, ಸರಕಾರಕ್ಕಿಂತಲೂ ಧಾರಾಳವಾಗಿ ಈ ಸಂಸ್ಥೆಗಳನ್ನು ತಿದ್ದಿ ಜನಹಿತಕ್ಕೆ ಬಾಗಿ ನಡೆವಂತೆ ಸಾಧಿಸಲು ಅನುಕೂಲವಾಗಿದೆ

ಯಾವನೊಬ್ಬ ಮೆಂಬರನು ಸರಿಯಾಗಿ ವರ್ತಿಸುತ್ತಿಲ್ಲವೆಂದು ಸರಕಾರಕ್ಕೆ ತಿಳಿದೇಬಂದರೂ, ವೋಟರರ ಬೆಂಬಲದಿಂದ ಆತನು ನಿಯುಕ್ತನಾಗಿರುವ ಕಾರಣ ಆತನನ್ನು ತಕ್ಕ ರೀತಿಯಲ್ಲಿ ತಡೆಯಲೂ ಶಿಕ್ಷಿಸಲೂ ಸರಕಾರವು ಬಲಗೊಳ್ಳದೆ ಇರಬೇಕಾಗುತ್ತಿದೆ ಅಂತಹ ಸಮಯದಲ್ಲಿ ಆತನನ್ನು ಆರಿಸಿದ ವೋಟರರೇ ಆತನನ್ನು ಚೆನ್ನಾಗಿ ತಿಳಿದವರಾದ ಕಾರಣ, ಆತನ ಪ್ರಾತಿನಿಧ್ಯವು ಇನ್ನೂ ಬೇಕೇ ಅಥವಾ ಅಷ್ಟೇ ಸಾಕೇ? ಎನ್ನುವ ಪ್ರಶ್ನೆಯನ್ನು ಅವರು ತಾನೆ ಸರಿಯಾಗಿ ನಿರ್ಧರಿಸಬಲ್ಲರು ಆದರೆ ವೋಟರರು ಈ ಭಾಗದಲ್ಲಿ ಯಾವ ಪ್ರಯತ್ನಗಳನ್ನು ಮಾಡುತ್ತಿಲ್ಲ. ತಿಳಿದಿದ್ದರೂ ಉದಾಸೀನಭಾವದಿಂದಿರುವರು. ಇದರಿಂದ ಆಡಳಿತವು ಹಾಳಾಗುತ್ತ ಬರುತ್ತಿದೆ. ಪ್ರತಿಯೊಬ್ಬನಿಗೂ ಅವನ ಸೌಕರ್ಯಗಳು ಹಾಳಾಗುವಂತಾದರೆ, ಈ ಆಡಳಿತವು ತೃಪ್ತಿಕರವಾಗಿ ನಡೆಯುತ್ತಿಲ್ಲವೆಂಬಷ್ಟು ಜ್ಞಾನವಾದರೂ ಇರತಕ್ಕದು. ತನ್ನ ಹಣವು ವ್ಯರ್ಥವಾಗಿ ದುರ್ವ್ಯಯವಾಗುತ್ತಿದೆ ಎಂಬುದನ್ನು ಆತನು ಆಗಲಿ ತಿಳಿದುಕೊಳ್ಳಬೇಕಾಗಿದೆ. ಆಗ ಆಡಳಿತವನ್ನು ತಿದ್ದಲು, ತನಗೆಷ್ಟು ಅಧಿಕಾರವಿದೆ ಎಂಬುದನ್ನು ಆತನು ತಿಳಿದುಕೊಂಡರೆ, ಅದರಿಂದ ಜನತೆಗೆಲ್ಲ ಪ್ರಯೋಜನವಿರುವುದಲ್ಲವೆ?

ಜನಾಭಿಪ್ರಾಯವನ್ನು ಈ ಬಗೆಯಾಗಿ ತಿದ್ದಿ ತರುವುದು ನಾಗರಿಕರ ಮುಖ್ಯ ಕರ್ತವ್ಯವಾಗಿದೆ ಹಾಗೆ ತಿದ್ದುವಾಗ, ನಿರಕ್ಷರನಿಗೆ ಸಹ ಅದರ ತತ್ವಗಳು ಸರಿಯಾಗಿ ತಿಳಿಯುಬರುವಂತೇ ವೋಟಿನ ಮೌಲ್ಯವನ್ನಷ್ಟೆಯಲ್ಲದೆ ಅದರ ಜವಾಬುದಾರಿಯನ್ನು ಬೋಧಿಸಬೇಕಾಗಿದೆ ಸ್ಥಳೀಯ ಸಂಸ್ಥೆಗಳ ಸದಸ್ಯರೇ ಈ ಪ್ರಕಟನಾ ಕಾರ್ಯದಲ್ಲಿ ಹೆಚ್ಚಿನ ಭಾಗವನ್ನು ನಿರ್ವಹಿಸಬೇಕಾಗಿದೆ''

ಪಂಜಾಬಿನ ಗವರ್ನರರಾಗಿರುವ ಸರ್ ಹರ್ಬರ್ಟ್ ಇಮರ್ಸನರವರೇ ಈ ಅಮೂಲ್ಯ ಅಭಿಪ್ರಾಯಗಳನ್ನು ಸಭೆಯ ಮುಂದಿಟ್ಟು, ಇವನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಸಭಾಕಾರ್ಯಗಳೆಲ್ಲ ನೆರವೇರುವಂತೆ ಕೇಳಿಕೊಂಡರು ಕೌನ್ಸಿಲುಗಳಲ್ಲಿ ನಿಂತು, ಸ್ಥಳೀಯ ಸಂಸ್ಥೆಗಳ ಅಧಿಕಾರಗಳನ್ನು ಹೀಗೆ ಹಾಗೆ ತಿದ್ದಿ ತಡೆದು ತರಬೇಕೆಂದು ಕೇಳುವುದೂ ಈಗಣ ಪ್ರಜಾಸತ್ತೆಯ ಒಂದು ಲಕ್ಷಣವಾಗಿದೆ, ಈ ಕೇಳಿಕೆಯಿಂದ ಆಡಳಿತವು ಉತ್ತಮಗೊಳ್ಳುವುದು ನಿಶ್ಚಿತವಾಗಿದ್ದರೆ, ಕೇಳಿಕೆಯು ಯೋಗ್ಯವೆ ಆದರೆ, ಹೆಚ್ಚಾಗಿ ಹಾಗಿರುವುದೇ ಇಲ್ಲ ಪಂಜಾಬು ಸರಕಾರವು ಜನತೆಯನ್ನು ಈ ಭಾಗದಲ್ಲಿ ತಿದ್ದಿ ತರಲು ನಾನಾ ಸುಧಾರಣೆಗಳನ್ನು ಹೂಡಿ ಈಗ ಇಡೀ ದೇಶದಲ್ಲಿ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಸುಲಭವಾಗಿ ಇತರರಿಗೆ ಮಾರ್ಗದರ್ಶಿಯಾಗಿದೆ ಇಲ್ಲಿ ಈ ವಿಷಯ ಅಭಿಪ್ರಾಯ ಹೇಳತಕ್ಕವರು, ಮೇಲು ಅಧಿಕಾರಿಗಳಿಗೆ ರುಚಿಯಾಗುವಂತೆ, ಮನಸ್ಸನ್ನು ಅಡಗಿಸಿ ಬಾಯಾಡಿಸುವುದಿಲ್ಲ ಸರಕಾರವೇ ಹಾಗೆ ಹೀಗೆ ಮಾಡಬೇಕಾಗಿ ಅಲ್ಲಿನ ಪಂಚಾಯತುಗಳು ಬೇಡಿಕೊಳ್ಳುತ್ತಿಲ್ಲ

ನಮ್ಮ ಸ್ಥಳೀಯ ಸಂಸ್ಥೆಗಳಂತೆ, ಪಂಜಾಬಿನಲ್ಲೂ ಈ ಬೋರ್ಡುಗಳ ಹಣವು ಕಡಿಮೆಯಾಗಿದೆ, ಸರಕಾರಕ್ಕೆ ಆಗ ಹಣಕ್ಕಾಗಿ ಬೇಡಿಕೆಗಳಾಗುವುವು ಆದರೆ, ಬೋರ್ಡು ಸ್ವತಃ ಹಣವನ್ನು ಕಂಡುಕೊಳ್ಳುವ ಪ್ರವೃತ್ತಿಯಲ್ಲಿ ಇಲ್ಲದಿರುವಾಗ ಸರಕಾರವು ತಾನೆ ಅವುಗಳ ಸಹಾಯಕ್ಕೆ ಬರುತ್ತಿಲ್ಲ "ಬೋರ್ಡು ಮ್ಯುನಿಸಿಪಾಲಿಟಿಗಳು ಜನತೆಗೆ ಒದಗಿಸುವ ಸೌಕರ್ಯಗಳಿಗಾಗಿ ಜನತೆಯೆ ಹಣವನ್ನೊದಗಿಸಿಕೊಡಬೇಕು ಎಂಬ ಸೂತ್ರವು ಅಲ್ಲಿ ರೂಢಿಯಲ್ಲಿದೆ ಆದರೆ, ತೆರಿಗೆಗಳು ಜನತೆಗೆ ಇಷ್ಟವಾಗಿರುವುದಿಲ್ಲ ಬೋರ್ಡಿನಿಂದ ಪಡೆಯುವ ಉಪಕಾರಕ್ಕಾಗಿ, ತೆರಿಗೆ ತೆರುವುದು ನ್ಯಾಯವಾದ ಕರ್ತವ್ಯವಾದರೂ, ಜನತೆಯು ತೆರಿಗೆಯಿಂದ ಕೂಡಲೆ ಕೆರಳುವುದೇತಕ್ಕೆ?

ತೆರಿಗೆಗಳನ್ನು ಪರಿಷ್ಟ ಸರಕಾರವೂ, ಪ್ರಾಂತಿಕ ಸರಕಾರವೂ, ಈ ಸ್ಥಳೀಯ ಸಂಸ್ಥೆಗಳೂ ವಸೂಲು ಮಾಡುತ್ತಿವೆ ಪರಿಷ್ಟ ಮತ್ತು ಪ್ರಾಂತಿಕ ಸರಕಾರಗಳು ವಸೂಲು ಮಾಡುವ ತೆರಿಗೆಗಳಿಂದ ಸ್ಥಳೀಯ ಬೋರ್ಡುಗಳಿಗೆ ಸಹಾಯಕೂಪವಾದ ಅಂಶವು ಮಾತ್ರ ಸಿಗುವುದಿಲ್ಲ ಈ ಮೊಬಲಗು ದೊರೆತರೆ, ಸ್ಥಳೀಯ ಸಂಸ್ಥೆಗಳ ಮೇಲೆ ಬೀಳುವ ತೆರಿಗೆಯ ಭಾರವು ಕಡಿಮೆಯಾಗುವುದು ಈ ಕಡೆಗೆ ಜನತೆಯ ಪ್ರತಿನಿಧಿಗಳ ಗಮನವಿರಬೇಕು ಸರಕಾರದ ಮತ್ತು ಖಾಸಗಿ ಸದಸ್ಯರುಳ್ಳ ಒಂದು ಸಮಿತಿಯು ಈ ತೆರಿಗೆಗಳನ್ನು ನಿರ್ಧರಿಸಬೇಕು ಏಕೆಂದರೆ,— ಸ್ಥಳೀಯ ಸಂಸ್ಥೆಗಳು ಜನತೆಗೆ ಎಂತಹ ಸೌಕರ್ಯಗಳನ್ನು ಒದಗಿಸಲೇಬೇಕೆಂಬ ನಿಯಮವನ್ನು ಸರಕಾರವು ಸೂಚಿಸಿರುವುದು, ಎಂತಹ ತೆರಿಗೆಗಳನ್ನು ವಿಧಿಸಬಹುದೆಂದು ಸೂಚಿಸಿಯದೆ, ಹೀಗಿರುತ್ತ, ಆಗುವಷ್ಟು ಹೆಚ್ಚಿನ ಸೌಕರ್ಯಗಳನ್ನು ಹೊಂದಲು ಆಗತಕ್ಕವಾಗಿರುವ ತೆರಿಗೆ ತೆರಲು ಜನತೆಯು ಹಿಂತೆಗೆಯಬಾರದು. ಅವಿಚಾರಯುಕ್ತವಾಗಿ ನಡೆವ ಈ ಬೋರ್ಡು ಮ್ಯುನಿಸಿಪಾಲಿಟಿ ಪಂಚಾಯತುಗಳನ್ನು ಸರಕಾರವೇ ನಡೆಸಿ ಬರುವುದೆಂಬ ಮಾತನ್ನೂ ಜನತೆಯು ಮರೆಯಬಾರದು.

ಜನಾಭಿಪ್ರಾಯವು ನೆಟ್ಟಗಿಲ್ಲವೆಂಬುದಕ್ಕೆ ಉತ್ಕೃಷ್ಟವಾದೊಂದು ಉದಾಹರಣೆಯು ಮದ್ರಾಸಿನಲ್ಲಿ ಮೊನ್ನೆಯೆ ಪ್ರಕಟವಾಗಿದೆ. ಮ್ಯುನಿಸಿಪಲ್ ರಸ್ತೆಗಳನ್ನು ಪಾಯಖಾನೆಗಳಂತೆ ಉಪಯೋಗಿಸುವ ಕೆಟ್ಟ ಚಾಳಿಯು ಮಂಗಳೂರಲ್ಲಿ ಮಾತ್ರವೇ ಅಲ್ಲದೆ, ಮದ್ರಾಸಿನಂತಹ ಮಾದರಿ ನಗರದಲ್ಲೂ ಇದೆ. ವಿಚಿತ್ರವೆಂದರೆ, ಮೊನ್ನೆ ಅಲ್ಲಿ ಹಾಗೆ ಹೆದ್ದಾರಿಗಳ ದುರುಪಯೋಗ ಮಾಡುವುದನ್ನು ವಿಚಾರ ಮಾಡುವಾಗ, ಈಗ ತಾನೆ ನಿವೃತ್ತರಾಗಿರುವ ಮ್ಯುನಿಸಿಪಲ್ ಹೆಲ್ತ್ ಇನ್ಸ್‌ಪೆಕ್ಟರರೊಬ್ಬರೇ ತಮ್ಮ ಮಕ್ಕಳು ಮರಿಮಕ್ಕಳನ್ನು ಈ ಕೆಲಸಕ್ಕೆ ನಿಯೋಜಿಸಿದ್ದರೆಂದೂ, ತಿಳಿದುಬಂದಿದೆ. ಜನಸಮುದಾಯದ ಆರೋಗ್ಯ ಸಾಧನೆಯ ಏರ್ಪಾಡು ಮಾಡುವುದರಲ್ಲೇ ಜೀವನ ಸವೆದ ಈ ಮಹನೀಯರು ತನ್ನವರಿಂದಲೇ ಜನತೆಯ ಆರೋಗ್ಯ ಕೆಡುವಾಗ ಕಣ್ಣು ಮುಚ್ಚಿದ್ದರೆಂದರೆ, -ಜನಾಭಿಪ್ರಾಯವು (ಸಾಮಾನ್ಯ) ಹೇಗಿರಬೇಕೋ ಊಹಿಸಬರುವುದಿಲ್ಲವೆ? ಈ ಮಾದರಿಯಿಂದ ಅಶಿಕ್ಷಿತ ನಗರವಾಸಿಗಳ ಮೇಲೆ ಎಂತಹ ಪರಿಣಾಮವಾಗದು?

ಆದುದರಿಂದಲೇ, ವೋಟರರು ಉದಾಸೀನರಾದರೆ, ಆಡಳಿತದ ವಿಷಯವಾಗಿ ತಿಳಿವಳಿಕೆ ಇಲ್ಲದವರಾದರೆ ಈ ಸಂಸ್ಥೆಗಳಿಂದ ಅಪಕಾರವು ಹೆಚ್ಚುತ್ತಲೂ ಉಪಕಾರವೂ ಕ್ಷಯಿಸುತ್ತಲೂ ಬರುವುದು. ಸಹಜವಲ್ಲವೆ?

ಜನತೆಯ ಶಿಕ್ಷಣವೇ ಈ ಸಂಸ್ಥೆಗಳಿಗೆ ಕವಚ

ಸ್ಫುಟವಿಚಾರಗಳು

ಜ್ಞಾನಾರ್ಜನೆಗೆ ಸಮಯ

ಎಷ್ಟೇ ವಿದ್ಯೆ ಕಲಿತವನಿಗಾದರೂ ಜ್ಞಾನಾರ್ಜನೆಗೆ ಈಗ ದೊರೆವಂತಹ ಸಂದರ್ಭಗಳು ಹಿಂದೆ ಎಂದೂ ದೊರೆತುದಿಲ್ಲ ಈ ಕಾಲವೇ ನಮ್ಮಲ್ಲಿ ಜ್ಞಾನಸಂಪಾದನೆಗೆ ಕುತೂಹಲವನ್ನು ಹುಟ್ಟಿಸುವಂತಹದಾಗಿದೆ ಯೌವನವು ಒಂದು ವಿಶೇಷವಾದ ಹಕ್ಕು ಎಂದು ವಿದ್ಯಾರ್ಥಿಗಳು ತಿಳಿದಿರಬೇಕು, ಇದನ್ನು ಉಪಯೋಗಿಸಿಕೊಂಡು, ತಮಗೂ ಸಮಾಜಕ್ಕೂ ಹಿತಕರವಾಗುವ ಪ್ರಯೋಜನ ಪಡೆಯಲು ಅವರು ಸನ್ನದ್ಧರಾಗಬೇಕಾಗಿದೆ ಜ್ಞಾನವನ್ನು ಸಂಪಾದಿಸುವುದಕ್ಕೆ ಒಬ್ಬನು ಅರ್ಹನಲ್ಲದೆ, ಅದರ ಫಲ ಪ್ರಯೋಜನಗಳನ್ನು ಹೊಂದಲು ಅವನೊಬ್ಬನೇ ಬಾಧ್ಯನಾಗಿರುವುದಿಲ್ಲ ಮಹಾ ಪುರುಷರು ನಮ್ಮ ದೇಶದಲ್ಲಿ ತೀರ ಯೌವನ ವಯಸ್ಸಿನಲ್ಲೇ ಬನ್ನವೆತ್ತುದನ್ನು ನಾವು ಓದುವಾಗ, ಎಳೆಯ ವಯಸ್ಸಿನಲ್ಲಿರುವವರು ಮಹಾ ಪುರುಷರಾಗಲು ಉತ್ತಮ ಯೋಗ್ಯತೆಯುಳ್ಳವರೆಂಬ ವಿಚಾರವನ್ನು ಅಲ್ಲಗಳೆಯ ಬರುವುದಿಲ್ಲ ಜ್ಞಾನಾರ್ಜನೆಯಾಗಬೇಕೆಂಬ ಆಸೆಯು ಮಾಡುವುದಕ್ಕೆ ಬಹಳ ವಯಸ್ಸು ಕಳೆಯುವಂತಾದರೆ, ಆಗ ಯೌವನದ ಉತ್ಸಾಹವು ಕುಂದುವ ಕಾರಣ ಅದು ಅಷ್ಟು ಸಾಧ್ಯವಾಗಲಾರದು ನಮ್ಮ ದೇಶದ ಮತ್ತು ಇತರ ದೇಶಗಳ ಸಾಹಿತ್ಯವೆಂಬ ಭೇದವನ್ನು ಮರೆತು ಯಾವ ದೇಶದ ಉತ್ತಮ ಸಾಹಿತ್ಯವಿರುವುದೋ ಅದನ್ನು ಗ್ರಹಿಸಿಕೊಂಡು, ದೇಶಹಿತವನ್ನು ದೇಶಬಾಂಧವರ ಹಿತವನ್ನು ಸಾಧಿಸುವುದು ಯುವಕರಿಗೆ ಅತ್ಯುತ್ತಮವಾಗಿದೆ

ವೈಸ್ರಾಯರ ಹೋರಿಗಳು.

ಎರಡು ಅತ್ಯುತ್ತಮ ಬೀಜದ ಹೋರಿಗಳನ್ನು ಢಿಲ್ಲಿ ಪ್ರಾಂತ್ಯದ ನಿವಾಸಿಕರ ಉಪಯೋಗಕ್ಕಾಗಿ ದಾನಮಾಡುವಾಗ ನವಿನ್ನಾಗಣ ವೈಸರಾಯರು ಒಂದು ಚಿಕ್ಕ ಭಾಷಣಮಾಡಿದರು ದನ ಎತ್ತುಗಳು ತಮ್ಮ ಬೆನ್ನಮೇಲೆ ನಮ್ಮೆಲ್ಲ ಕೃಷಿಕರ್ಮದ ರಚನೆಯನ್ನೆ ಹೊತ್ತಿವೆ. ಬೇಸಾಯಿಗೆ ಇವೆರಡೂ ಅತ್ಯಾವಶ್ಯಕವಾಗಿವೆ. ಇವನ ದನವೇ, ಅನನಿಗೂ ಹೆಂಡತಿಮಕ್ಕಳಿಗೂ ಮುಖ್ಯ ವೈದ್ಯನು. ನಿಮ್ಮ ಮಕ್ಕಳು ಬಲಿಷ್ಠರಾಗಬೇಕೆಂದಿದ್ದರೆ, ಗರ್ಭಿಣಿ ಮಾತೆಗೂ, ಮಕ್ಕಳು ಎದೆ ಹಾಲುಣ್ಣುವಾಗಲೂ, ಅವರಿಗೆ ದನದ ಹಾಲನ್ನು ಬೇಕಾದಷ್ಟು, ಸಿಗುವಷ್ಟು ಕೊಡಿರಿ ಹೊಸ ಹೊಸ ಕೃಷಿಯ ಉಪಕರಣಾದಿಗಳನ್ನು ರಚಿಸಿ ಫಲವೇನು, ಅವನ್ನು ಬಳಸಲು ಯೋಗ್ಯ ಬಲವುಳ್ಳ ಎತ್ತುಗಳೇ ಇಲ್ಲವಾದರೆ? ಆದುದರಿಂದ ಕೃಷಿಕನಿಗೆ ಸಹಾಯಮಾಡುವಿರಾದರೆ, ಜಾನುವಾರುಗಳ ಜಾತಿಯೇ ಉತ್ತಮವಾಗುವಂತೆ ಸಾಧನೆ ಮಾಡುವುದೇ ಮುಖ್ಯ ಸಹಾಯವಾಗಿದೆ. ಉತ್ತಮ ಕೋಮಲ ಸಡಿಲಾದ ಚರ್ಮ, ಒಳ್ಳೆಯ ಆಕಾರದ ಹೆಗಲು, ನೆಟ್ಟಗಾದ ಬೆನ್ನು, ಬಲಿಷ್ಠವಾದ ತೊಡೆಗಳು, ಪುಷ್ಟವಾದ ಕಾಲುಗಳು, ದೊಡ್ಡ ಎಲುಬುಗಳು ಇವೇ ಎತ್ತುಗಳ ಮುಖ್ಯ ಲಕ್ಷಣಗಳು ಇವುಗಳಂತೆ ಯೋಗ್ಯವಾದ ಹೋರಿಗಳು ಸಾರ್ವಜನಿಕ ಉಪಯೋಗಕ್ಕೆ ಬರುವಂತೆ ಗೃಹಸ್ಥರು ಅವನ್ನು ಒಪ್ಪಿಸುವರಾದರೆ, ದೇಶಕ್ಕೆ ಇದರಿಂದ ಅಪರಿಮಿತವಾದ ಹಿತವುಂಟಾಗುವುದು ಇದೇ ರೀತಿಯಾಗಿ ಯಾವನೊಬ್ಬನು ಈ ರೀತಿಯಾಗಿ ಕೃಷಿಗೆ ಸಹಾಯಕನಾಗುವನಾದರೆ, ಆತನಿಗೆ ನಾ... ಆತನ ಔದಾರ್ಯವನ್ನು ಶ್ಲಾಘಿಸಿ, ವತ್ತ... ವೆನು' ಹಿಂದಣ ಕಾಲದಲ್ಲಿ ಹಳ್ಳಿ... ಗಳಲ್ಲೂ 'ದೇವರ ಹೋರಿ'ಗಳಿದ್ದುವು ಇತ್ತೀಚೆಗೆ ದೇವರಿಗೇ ಗೌರವ ಕುಂದುತ್ತಾ ಬಂದು ಹೋರಿಗಳು ಮಾಯವಾಗಿವೆ ವೈಸರಾಯರೇ ಸ್ವಯಂ ಈ ಬಗೆಯ ಮಹಾದಾನಕ್ಕೆ ತೊಡಗಿದುದರಿಂದ ಎಲ್ಲೆಲ್ಲಿಂದಲೂ, ಅವರ ಧನ್ಯವಾದ ಪಡೆಯಲು, ಹೋರಿಗಳ ಹಿಂದುಗಳೇ ಕೃಷಿಕನ ಜೀವನಕ್ಕೆ ಉಪಕಾರಕ್ಕಾಗಿ ದೊರೆವ ದಿನ ಬಂದೀತೆನ್ನುವ

ಜವಾಹರಲಾಲರ ಸೂಚನೆಗಳು.

ನಾಗಪುರದಲ್ಲಿ ಮಹಾಜನರ ಸಭೆಯು ಸೇರಿದಾಗ, ಕೊಂಗ್ರೆಸ್ ಅಧ್ಯಕ್ಷರು, ಜನರಿಗೆ 1929ರಿಂದ ಇದುವರೆಗಣ ಇತಿಹಾಸವನ್ನು ಸಂಕ್ಷೇಪಿಸಿ, ಮುಂದಣ ಮುಖ್ಯ ಕಾರ್ಯಕ್ರಮ ಸೂಚಿಸಿರುವರು ಸರಕಾರವನ್ನು ಇದುವರೆಗೆ ವಿರೋಧಿಸಿ, ಜನರಲ್ಲಿ ಸ್ವದೇಶ ವಾತ್ಸಲ್ಯದ ಕಡೆಗೆ ಜಾಗ್ರತೆಯನ್ನು ಉಂಟುಮಾಡಿದುದು ಕೊಂಗ್ರೆಸಿನ ರೀತಿಯಾಗಿದೆಯಾದರೂ, ಸ್ವಾತಂತ್ರ್ಯವೇ ನಮ್ಮ ಗುರಿ ಎಂಬ ವಿಚಾರವು ಮನಸ್ಸಿನಲ್ಲಿ ನಾಟಿಕೊಂಡಿದ್ದರೆ ಯಾವ ಜಾಗ್ರತಿಯೂ ಫಲಕೊಡಲಾರದೆಂದರು ಅತ್ಯಾವಶ್ಯಕವಾಗಿರುವ ಸುಧಾರಣೆಗಳಿಂದ ಜನರ ಮನಸ್ಸು ದೂರ ಸಿಲ್ಲುವ ಹಾಗೆ, ತಾತ್ಕಾಲಿಕವಾಗಿ ಇದು ಇತರ ವಿಚಾರಗಳ ಕಡೆಗೆಹರಿಯುವಂತೆ ಮಾಡಲು ಸಮಾಜಾನ್ವಯವಾದ ಏರ್ಪಾಡನ್ನು ಸರಕಾರವು ಪ್ರಕಟಿಸಿತು. ಯಾವಾಗಲೂ ಸರಕಾರದ ರೀತಿಯೇ ಹೀಗಾಗುವುದುಂಟು ಹೊಸ ಚುನಾವಣೆಗಳು ಯಾವಾಗ ಆಗುವುವೂ ಹೇಳಬರುವಂತಿಲ್ಲವಾದರೂ, ಅಂತಹ ಕಾಲಕ್ಕೆ ಸರಕಾರಕ್ಕೆ ಸಹಾಯಕವಾಗುವ ಹಲವು ಹೊಗಳುಭಟ್ಟರ ಪಂಗಡಗಳು ಹೊಸದಾಗಿ ಅಂಕುರಿಸಿ ಮೆರೆಯುವುದುಂಟೆಂದೂ, ಆಗ ವೋಟರರಿಗೆ ತಮ್ಮ ವೋಟನ್ನು ಯಾರಿಗೆ ಕೊಡುವುದೆಂದು ತಿಳಿಯದೆ, ಮೋಸವಾಗುವುದೆಂದೂ, ಆದರೆ ಯಾವ ಪಕ್ಷವು (ಪ್ರತಿನಿಧಿಯು) ಸ್ವಾತಂತ್ರ್ಯವನ್ನು ಸಮರ್ಥಿಸುವುದೋ ಅದಕ್ಕೆ ವೋಟು ಕೊಡುವುದು ನ್ಯಾಯವೇ ಹೊರತು ಹೊಗಳುಭಟ್ಟರನ್ನು ಕೌನ್ಸಿಲಿಗೆ ಕಳುಹಿಸಿ ಪುರುಷಾರ್ಥವೇನೂ ಇಲ್ಲವೆಂದರು. ಇನ್ನು ಶೀಘ್ರನೆ ಮಹಾಯುದ್ಧವೊಂದು ಉಂಟಾಗಲಿದೆ; ಅದೂ ಅಕಸ್ಮಿಕವಾಗಿ ಎಂದೂ, ಇಂತಹ ಯುದ್ಧದಿಂದ ನಮ್ಮ ದೇಶಕ್ಕೇನೂ ಪ್ರಯೋಜನವುಂಟಾಗಲಾರದೆಂದೂ, ಆದರೆ ಅಂತಹ ಯುದ್ಧದಲ್ಲಿ ಸೇರಬಹುದೋ ಬೇಡವೋ ಎಂಬ ವಿಷಯವನ್ನು ಜನತೆಗೆ ಚೆನ್ನಾಗಿ ಚರ್ಚಿಸಿ ಇತ್ಯರ್ಥಿಸಬೇಕೆಂದೂ, ಅಧಿಕಾರಿಗಳು ಹೇಳಿದಂತೆ ಆಗ ವರ್ತಿಸುವುದಕ್ಕಿಂತ ಜನತೆಯೇ ನಿರ್ಣಯ ಮಾಡುವುದಕ್ಕೆ ಅಧಿಕಾರವುಳ್ಳುದೆಂದೂ ಹೇಳಿದರು.

ಮಂಗಳೂರು.

ದಿ. ಬೊಂಬೈ ಸ್ಟೀಮ್ ನೇವಿಗೇಶನ್ ಕಂಪೆನಿ, ಲಿಮಿಟೆಡ್.

ಹವಾ ಸ್ಥಿತಿಯು ಸುಗಮವಾಗಿದ್ದಲ್ಲಿ ಮಂಗಳೂರಿನಿಂದ ಕೆಳಗೆ ನಮೂದಿಸಿದ ದಿನಗಳಲ್ಲಿ ಕಡೆಯದಾಗಿ ಹಡಗುಗಳಾದವುಗಳಿಯಾಗುವುದು. ಫಾಸ್ಟ್ ಸ್ಟೀಮರ್ ಮೇ ತಾ. ೯ನೇ ಶನಿವಾರ ಮತ್ತು ಸ್ಲೋ ಸ್ಟೀಮರ್ ಮೇ ತಾ. ೧೨ನೇ ಮಂಗಳವಾರ ಏಪ್ರಿಲ್ ತಾ. ೩೦ನೇ ಗುರುವಾರ ಮುಂಬಾಯಿಯಿಂದ ಹೊನ್ನಾವರಕ್ಕೆ ಬಿಟ್ಟ ಹಡಗು ಕಡೆಯದಾಗಿರುವುದು.

ಮಂಗಳೂರಿನಿಂದ ಕಡೆಯದಾಗಿ ಮೇ ತಾ ೫ಕ್ಕೆ ಬಿಡಲ್ಪಟ್ಟ ಕಾರ್ಗೋ ಹಡಗು ಕಡವೂರು, ವೀರವಾಲ್, ಮಂಗ್ರೋಲ್ ಮತ್ತು ಪೋರ ಬಂದರಿಗೂ, ಮೇ ತಾ. ೯ರಲ್ಲಿ ಬಿಡಲ್ಪಟ್ಟ ಹಡಗು ದ್ವಾರಕಾ, ನವಾಬಂದರ್ ಜಫ್ರಾಬಾದ್ ಮತ್ತು ಮೋಹವಾ ಇಲ್ಲಿಗೂ ತಲ್ಪುವುದು.

ಮೇ ತಾ ೩೦ರಲ್ಲಿ ಬೋಡಿಯಾ ಬಂದರು ಮುಚ್ಚಲ್ಪಡುವುದು. ಭಾವಾನಗರ, ಕರಾಚಿ, ಸಾಲ್ಯಾ, ಬೇಡಿ ಬಂದರ್ ಮುಂದರಾ, ಕುಂಡ್ಲಾ, ಓಖಾ ಮತ್ತು ನವ ಲಾಕೆ ಇಲ್ಲಿ ಇದೇ ವರ್ಷದಲ್ಲೂ ಹಡಗು ಚಲಾವಣೆಯಾಗುವುದು.

ಸ್ಪೆಶಲ್ ಚಲಾವಣೆಗಳಿದ್ದಲ್ಲಿ ಅದನ್ನು ಅಗ್ಗಿಂದಾಗ್ಗೆ ತಿಳಿಯಪಡಿಸಲಾಗುವುದು.

ದ. ಕನ್ನಡ ಜಿಲ್ಲಾ ಸ್ವದೇಶಿ ಪ್ರಚಾರ ಸಭೆಯ ಸೆವೆನ್ ಸೀಟರ್ ಮೋಟರನ್ನು ಮಾರಾಟಮಾಡುವುದಾಗಿ ನಿರ್ಣಯಿಸಿರುವುದರಿಂದ ಗಿರಾಕಿಗಳು ಈ ಕೆಳಗೆ ಕಾಣಿಸಿದವರೊಡನೆ ಬಂದು ಮಾತಾಡಿ ಪತ್ರವ್ಯವಹಾರದ ಮೂಲಕ ತಾವು ಕೊಡಲು ಸಿದ್ಧರಿದ್ದ ಅತೀ ಹೆಚ್ಚಿನ ಮೌಲ್ಯವನ್ನು ಇದೇ ಮೇ ತಾ. ೧೫ರೊಳಗೆ ತಿಳಿಸಬೇಕಾಗಿ ಅಪೇಕ್ಷಿಸಲಾಗುತ್ತದೆ ಎಂದು ಪಿ. ರಾಮರಾಯ ಮಲ್ಯ, ಕಾರ್ಯದರ್ಶಿ ಇವರು ತಿಳಿಸುತ್ತಾರೆ.

ಸಿಟಿ ಆರ್ಯ ಸಮಾಜ ಮಂಗಳೂರು.

ಈ ಸಮಾಜದ ಪ್ರಥಮ ವಾರ್ಷಿಕೋತ್ಸವವು ಇದೇ ಏಪ್ರಿಲ್ ತಾ ೨೬ನೇ ಆದಿತ್ಯವಾರ ಅಪರಾಹ್ನ ಗಂಟೆ ೩-೩೦ಕ್ಕೆ ಇಲ್ಲಿಯ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಬಹಳ ವಿಜೃಂಭಣೆಯಿಂದ ಬ್ರಹ್ಮ ಶ್ರೀ ಸಿದ್ಧೋಡಿ ಅನಂತ ಉಪಾಧ್ಯಾಯ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಐದನೇ ಜೋರ್ಜರ ಸ್ಮಾರಕನಿಧಿ

ಕಲೆಕ್ಟರರ ಆಫೀಸಿನಲ್ಲಿ ಕಳೆದ ಏಪ್ರಿಲ್ ತಾ ೨೦ನೇ ಸೋಮವಾರ ಸಂಜೆ ಗಂಟೆ ೫ಕ್ಕೆ ಜರುಗಿದ ಕಿಂಗ್ ಜಾರ್ಜ್ V ಮೆಮೋರಿಯಲ್ ಫಂಡಿಗೆ ಸಂಬಂಧಿಸಿದ ಡಿ. ಕಮಿಟಿಯ ನಡವಳಿಕೆಗಳು.—೧ ಈ ಜಿಲ್ಲೆಯ ಯುರೋಪಿಯ ನಿವಾಸಿಗಳಿಂದ ಚಂದಾ ಸಂಗ್ರಹಿಸುವ ಕೆಲಸವನ್ನು ಮಿ॥ ಶಿರುವನ್‌ರವರಿಗೆ ಒಪ್ಪಿಸುವಂತೆ ನಿರ್ಧರಿಸಲಾಯಿತು. ೨. ಕಮಿಟಿಯ ಮೆಂಬರರಲ್ಲಿ ಒಬ್ಬೊಬ್ಬರೇ ಆಗಿ ಕೆಲಸ ಮಾಡಲು ಅಪೇಕ್ಷಿಸುವವರಿಗೆ ರಶೀದಿ ಪುಸ್ತಕಗಳನ್ನು ಕೊಡಿಸುವಂತೆಯೂ, ಗೃಹಸ್ಥನಾಗಲೀ, ಮಹಿಳೆಯಾಗಲಿ ಅವರವರಿಗೆ ಉತ್ತಮವೆಂದು ತೋರಿದ ರೀತಿಯಲ್ಲಿ ಅವರವರು ಕೆಲಸ ಮಾಡುವಂತೆ ಅವರನ್ನು ಪ್ರಾರ್ಥಿಸುವಂತೆಯೂ, ಗುಂಪಾಗಿ ಕೆಲಸ ಮಾಡುವವರು ಸಬ್ ಕಮಿಟಿಗಳನ್ನು ರಚಿಸಿಕೊಂಡು ಕೆಲಸ ಮಾಡುವಂತೆ ಕೇಳಿಕೊಳ್ಳಬೇಕಾಗಿಯೂ ನಿರ್ಧರಿಸಲಾಯಿತು. ೩ ವಂತಿಗೆ ಕೂಡಿಸುವ ಕಮಿಟಿ ಮೆಂಬರರು ವಂತಿಗೆ ಕೊಟ್ಟವರ ಪಟ್ಟಿಯೊಡನೆ ಅಥವಾ ರಶೀದಿಯ ದ್ವಿಪ್ರತಿಯೊಡನೆ ಹಣವನ್ನು ಖಜಾನೆಗೆ ಪಾವತಿ ಮಾಡಬೇಕೆಂದೂ, ಎಂತಹ ಸಂದರ್ಭದಲ್ಲಿಯಾದರೂ ರಶೀದಿಯ ದ್ವಿಪ್ರತಿಗಳೂ, ಖರ್ಚಾಗದ ರಶೀದಿಗಳೂ, ಸಾಧ್ಯವಿರುವಷ್ಟು ಬೇಗನೇ ಖಜಾನೆಗೆ ಕಳುಹಿಸಲ್ಪಡಬೇಕೆಂದೂ ನಿರ್ಧರಿಸಲಾಯಿತು. ೪. ಕೂಡಿಸಲಾದ ಹಣವನ್ನು ಕಮಿಟಿಯು ಯಾವ ರೆಂಬ ರಹಿತ ಸಾಮಾನ್ಯವಾಗಿ ಒಂದು ವಾರಕ್ಕಿಂತ ಹೆಚ್ಚಿಗೆಯಾಗಿ ತನ್ನೊಡನೆ ಇಟ್ಟುಕೊಳ್ಳಬಾರದಾಗಿ ನಿರ್ಧರಿಸಲಾಯಿತು. ೫. ಪ್ರೆಸಿಡೆಂಟರು ಮೆಂಬರರುಗಳಿಗೆ ತಾವು ಕೊಟ್ಟ ರಶೀದಿಯ ನಂಬರುಗಳನ್ನು ಆಗಾಗ್ಗೆ ಖಜಾನೆಗಳಿಗೆ ತಿಳಿಸಬೇಕೆಂದು ನಿರ್ಧರಿಸಲಾಯಿತು. ೬. ಮುಂದಿನ ಮೀಟಿಂಗನ್ನು ಅದೇ ಕಳೆದ ತಾ. ೨೬ನೇ ಆದಿತ್ಯವಾರ ಬೆಳಿಗ್ಗೆ ಗಂಟೆ ೧೧ಕ್ಕೆ ಜರಗಿಸಬೇಕೆಂದು ನಿರ್ಧರಿಸಲಾಯಿತು. ೭. ಮದ್ರಾಸು ನಗರದಲ್ಲಿ ಸ್ಥಾಪಿಸಲಿರುವ ದಿವಂಗತ ಮಹಾಮಾನ್ಯ ನಮ್ಮ ಚಕ್ರವರ್ತಿಗಳ ಪ್ರತಿಮೆಯ ವೆಚ್ಚದಲ್ಲಿ ಈ ಜಿಲ್ಲೆಯು ಸಹಿಸಬೇಕಾದ ಪಾಲನ್ನು, ಈ ಜಿಲ್ಲೆಯ ಕಮಿಟಿಗಳು ಸಂಗ್ರಹಿಸುವ ಯಾವತ್ತು ಬಿನ್ ವಂತಿಗೆಯ ಮೊತ್ತದಲ್ಲಿ ಕಳೆದು, ಉಳಿದ ಐವಜನ್ನು ಈ ಜಿಲ್ಲೆಯ ವೈದ್ಯಕೀಯ ಸಹಾಯಕ್ಕಾಗಿ ವಿನಿಯೋಗಿಸುವಂತೆ ಪ್ರಾಂತಿಕ ಕಮಿಟಿಯನ್ನು ಪ್ರಾರ್ಥಿಸುವ ಹಾಗೆ ನಿರ್ಧರಿಸಲಾಯಿತು. (ರುಜು) ಎಂ. ಹುಮಾಯೂನ್, ಪ್ರೆಸಿಡೆಂಟ್, ಐದನೆ ಜೋರ್ಜ್ ಮೆಮೋರಿಯಲ್ ಫಂಡ್ ಮಂಗಳೂರು.

ದಿವಂಗತ ಐದನೇ ಜೋರ್ಜ್ ಚಕ್ರವರ್ತಿಗಳವರ ಸ್ಮಾರಕ ನಿಧಿಗಾಗಿ ಈ ಕೆಳಗಿನವರು ತಮ್ಮ ವಂತಿಗೆಯನ್ನು ಕೊಟ್ಟಿರುವುದಾಗಿ ಸನ್ಮಾನ್ಯ ಕಲೆಕ್ಟರರು ತಿಳಿಸುತ್ತಾರೆ —೧ ಜನಾಬ್ ಖಾನ್ ಬಹದ್ದೂರ್ ಮಹಮ್ಮದ್ ಹುಮಾಯೂನ್ ಸಾಹೇಬ್ ಬಹದ್ದೂರ್ ಬಿ ಎ. ದ. ಕ. ಜಿಲ್ಲಾ ಕಲೆಕ್ಟರರು ರೂ. ೧೦೦ ೨ ಶ್ರೀಮತಿ ಪಂಜಿಗುಡ್ಡೆ ಕಾವೇರಮ್ಮ ಪುತ್ತೂರಿನ ಪಡ್ನೂರು ಪಂಚಾಯತ್ ಬೋರ್ಡಿನ ಅಧ್ಯಕ್ಷೆ ರೂ ೫ ೩ ಶ್ರೀಯುತ ಯು ಗಣೇಶ ಶೆಣೈ ಸುಪರಿಂಟೆಂಡೆಂಟ್ ಸರಸ್ವತಿ ಪ್ರಿಂಟಿಂಗ್ ವರ್ಕ್ಸ್ ಲಿಮಿಟೆಡ್ ಮಂಗಳೂರು ರೂ ೫

ಇಲ್ಲಿನ ಜಪ್ಪಿನ ಗುಜ್ಜರಕೆರೆ ಬಳಿ ಇರುವ ಬೆಸ್ತರ ಜಾತಿಯ ಕೃಷ್ಣಪ್ಪ ಎಂಬಾತನ ಹೆಂಡತಿ ಪೊಣ್ಣಮ್ಮ ಎಂಬ ೨೫ ವರ್ಷದವಳು ತನ್ನ ೨ ವರ್ಷದ ಮಗುವಿನ ಸಹಿತ ಅಲ್ಲೇ ಒಂದು ಬಾವಿಯಲ್ಲಿ ಬಿದ್ದು ಆಕೆಯೂ ಮಗುವೂ ಮೃತರಾದರೆಂದೂ, ಇವರ ಶವವು ಬಾವಿಯಲ್ಲಿ ಕಳೆದ ಆದಿತ್ಯವಾರ ಬೆಳಿಗ್ಗೆ ಕಾಣಸಿಕ್ಕಿತೆಂದೂ ತಿಳಿದುಬರುತ್ತದೆ. ಅಪಾಯವೋ ಆತ್ಮಹತ್ಯೆಯೊ ತಿಳಿದಿಲ್ಲ.

ಈಗ ತಾನೇ ಮಂಗಳೂರಲ್ಲಿ ಶ್ರೀ ಸುಬ್ಬುಕೃಷ್ಣಯ್ಯನವರ ನೇತೃತ್ವದಲ್ಲಿ ತೆರೆಯಲಾದ ಹಿಂದೂ ಮಹಾಸಭೆಯು ಶಾಖೆಯ ಉದ್ದೇಶಪ್ರಚಾರಕ್ಕಾಗಿ ಕಳೆದ ಶುಕ್ರವಾರ ಉಳ್ಳಾಲ ರಘುನಾಥಯ್ಯನವರ ಸ್ಮಾರಕ ಮಂದಿರದಲ್ಲಿ ಸಾರ್ವಜನಿಕ ಸಭೆಯೊಂದು ನೆರೆದಿದ್ದು ಅಂದು ಶ್ರೀ ಕೆ ಶಂಕರಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಸುಬ್ಬುಕೃಷ್ಣಯ್ಯನವರೂ ಲಕ್ಷ್ಮೀದೇವ ವಿದ್ಯಾರ್ಥಿಗಳು ಭಾಷಣಗಳನ್ನು ಕೊಟ್ಟರು. ಅಲ್ಲದೆ ಅಲ್ಲೇ ಮರುದಿನ ಜರಗಿದ ಶ್ರೀ ಶಂಕರ ಜಯಂತಿಯ ಉತ್ಸವ ಕಾಲದಲ್ಲಿ ಶ್ರೀ ಸುಬ್ಬುಕೃಷ್ಣಯ್ಯನವರು ಅಧ್ಯಕ್ಷತೆ ವಹಿಸಿದ್ದು ಶ್ರೀ ಕೆ ಗೋಪಾಲಶಾಸ್ತ್ರಿ ವಿದ್ವಾನ್ ಇವರು ಅಂದು ನಿರೂಪಿಸಿದ ಶ್ರೀ ಶಂಕರಾಚಾರ್ಯರ ತತ್ವಗಳನ್ನು ಸಮರ್ಥಿಸಿ ವಿವರಿಸಿ ಬುದ್ಧ ಶಂಕರರ ಮಾರ್ಗಗಳು ಯಾವುವೆಂಬುದನ್ನು ನಿವೇದಿಸಿದರು.

ಇಲ್ಲಿನ ಕನರಾಟೇಂಕಿನ ಶಾಖೆಯಿಂದ ಮಂಜೇಶ್ವರದಲ್ಲಿ ಮಾರ್ಚಿ ತಾ ೨೪ರಲ್ಲಿ ತೆರೆಯಲ್ಪಟ್ಟಿತು. ಎಂ ಸಂಜೀವ ಶೆಣೈ ಎಂಬವರು ಇಲ್ಲಿನ ಏಜಂಟರಾಗಿ ನೇಮಕಗೊಂಡಿರುವರು.

ದಿ ಕಲ್ಯಾಣಪುರ ಶುಗರ್ ಮಿಲ್ಸ್ ಲಿಮಿಟೆಡ್, ಇವರ ಯಂತ್ರಸಾಮಗ್ರಿಗಳು ಮಲ್ಪೆಯಲ್ಲಿ ಬಂದು ಇಳಿದಿವೆ. ಕಲ್ಯಾಣಪುರದಲ್ಲಿ ಇದಕ್ಕೆ ನಿಯಮಿತವಾದ ಸ್ಥಳದಲ್ಲಿ ಕಾರ್ಖಾನೆಯ ಕಟ್ಟಡ ಕೆಲಸ ನಡೆಯುತ್ತಿದೆ. ತ್ವರೆಯಲ್ಲೇ ಈ ಮಿಲ್ಲು ಕಾರ್ಯನಡೆಸಲು ಪ್ರಾರಂಭಿಸುವುದು.

ಇಲ್ಲಿ ಒಂದು ಮೆಟರ್ನಿಟಿ ಹೋಮನ್ನು 'ಹೆರಿಗೆ ಆಸ್ಪತ್ರೆ' ತೆರೆಯುವ ವಿಚಾರವನ್ನು ಆಲೋಚಿಸಲು ಇದೇ ತಿಂಗಳ ತಾ ೩ರಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಸದನದಲ್ಲಿ ಒಂದು ಸಾರ್ವಜನಿಕ ಸಭೆ ಸೇರುವುದು. ಈ ಕಾರ್ಯದಲ್ಲಿ ಶ್ರೀಗಳಾದ ಸಾಹುಕಾರ ಗಣೇಶ ಶ್ರೀನಿವಾಸ ಪೈ, ಸಾಹುಕಾರ ಎಂ ವೆಂಕಟೇಶ ಪೈ ಎಂ ಎ ಎಲ್ ಟಿ, ಡಾ॥ ರಾಮಬಾಳಿಗ ಇವರೇ ಮೊದಲಾದ ಆರ್ಯ ಪುರುಷರು ಶ್ರಮವಹಿಸಿರುವರು.

ಸದ್ಯದಲ್ಲಿ ಇಲ್ಲಿಂದು ವಿದ್ಯಾ ಅಭಿವರ್ಧಿನಿ ಎಂಬ ಆಂಗ್ಲ ಕನ್ನಡ ಸಾಪ್ತಾಹಿಕ ಪತ್ರಿಕೆಯೊಂದು ಹೊರಡುವುದೆಂದು ನಾವು ತಿಳಿಯುತ್ತೇವೆ.

ನಮ್ಮ ಜಿಲ್ಲೆಯ ಇನ್‌ಕಮ್‌ಟೇಕ್ಸ್ ಆಫೀಸರರಾದ ಓ ಡಿ ರಾಘವನವರಿಗೆ ಇಲ್ಲಿಂದ ಮದ್ರಾಸಿನ VIನೆ ಸರ್ಕಲಿಗೆ ವರ್ಗವಾಗಿರುತ್ತದೆ. ಶ್ರೀ ಸಿ. ಆರ್ 'ಕೃಷ್ಣರಾವ್' ಎಂಬವರು ನಮ್ಮ ಹೊಸ ಇನ್‌ಕಮ್‌ಟೇಕ್ಸ್ ಆಫೀಸರರು. ಇವರು ಇಲ್ಲಿಗೆ ಬಂದಿರುವರು. ಬೇಗನೆ ಮುಂಚಿನ ಆಫೀಸರರಿಂದ ಚಾರ್ಜನ್ನು ವಹಿಸಿಕೊಳ್ಳುವರು.

ಉಳ್ಳಾಲ:— ಇಲ್ಲಿಯ ಸ್ಥಳೀಕ ಸಂತೆಯು ಈ ಮೊದಲು ಮಾರ್ಗದ ಇಕ್ಕೆಡೆಗಳಲ್ಲಿ ನಡೆಯುತ್ತಿತ್ತು. ಇದರಿಂದ ಮೋಟಾರು, ಗಾಡಿ, ಸೈಕಲ್ ಮೊದಲಾದ ವಾಹನಗಳ ಪ್ರಯಾಣಕ್ಕೆ ತುಂಬಾ ಅನಾನುಕೂಲವಾಗುತ್ತಿತ್ತು. ಅಷ್ಟುಮಾತ್ರವಲ್ಲದೆ ಅನೇಕ ವೇಳೆಗಳಲ್ಲಿ ಮನುಷ್ಯರಿಗೂ ಪ್ರಾಣಿಗಳಿಗೂ ಅಪಾಯ ಆಗುತ್ತಿತ್ತು. ಈ ಅಪಾಯ ತಪ್ಪಿಸುವುದಕ್ಕಾಗಿ ಈಗ ಸ್ಥಳೀಕ ದೇವಸ್ಥಾನಕ್ಕೆ ಹೋಗುವ ಅಗಲವಾದ ದಾರಿಯ ಎರಡು ಪಾರ್ಶ್ವಗಳಲ್ಲಿ ಜರಗುತ್ತದೆ.

ತಾಲೂಕುಗಳಿಂದ

ಮೂಡಬಿದ್ರಿ:— ಈ ಸಂಟರಿನ ಉಪಾಧ್ಯಾಯರ ಸಂಘದ ೧೯೩೬-೩೭ರ ಪ್ರಥಮ ಸಭೆಯು ಇದೇ ಕಳೆದ ಏಪ್ರಿಲ್ ತಾ. ೧೮ನೇ ಶನಿವಾರ ೨॥ ಗಂಟೆಗೆ ಬೋರ್ಡು ಹುಡುಗರ ಶಾಲೆಯಲ್ಲಿ ತಾಲ್ಲೋಕೆಶಾಲಾ ಮುಖ್ಯ ಉಪಾಧ್ಯಾಯರಾದ ಮ॥ ರಾ॥ ರಾ॥ ಪಿ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ೭೪ ಉಪಾಧ್ಯಾಯರ ಪೈಕಿ ೬೦ ಮಂದಿ ಉಪಾಧ್ಯಾಯರು ಹಾಜರಿದ್ದರು. ಹೊಸ ವರ್ಷದ ಕಾರ್ಯಕಾರಿ ಮಂಡಳಿಗೆ ಈ ಕೆಳಗಣ ಅಧ್ಯಾಪಕರನ್ನು ಆರಿಸಲಾಯಿತು — ಪಿ ಕೃಷ್ಣಯ್ಯ ಪಿ ರಮಾನಾಥರಾವ್ ಆರ್ ಕಲ್ಯಾಣ ಜಿ ವಿಂ ಸಿಕ್ವೇರ ಪಿ ಮಿನೇಜಸ್, ಎಂ ನರಸಿಂಹ ಕಿಣಿ ನಾಗರಾಜ ಹೆಗ್ಡೆ, ಬಿ ಮಂಜುನಾಥಯ್ಯ, ಜಿ ಅಬ್ದುಲ್ ರಹಿಮಾನ್ ಸಾಹೇಬ್. ಬರುವ ಸಭೆಯು ಆಗೋಸ್ತು ೧ಕ್ಕೆ ಮೂಡಬಿದ್ರಿ ಸರಕಾರಿ ಲೇಬರ ಶಾಲೆಯಲ್ಲಿ ಜರಗಿಸಲ್ಪಡುವುದೆಂದು ಈ ಮೂಲಕ ತಿಳಿಸಲಾಗಿಯದೆ.

ಇಲ್ಲಿಯ ಹರಿಜನ ಭಜನಾ ಸಂಘ ಎಂಬ ಒಂದು ಸಂಘವು ಲೇಬರ ಶಾಲಾ ಮಾಸ್ತರ್ ಕೆ ರಾಮಚಂದ್ರಯ್ಯನವರ ಪ್ರಯತ್ನದಿಂದ ತಾ ೧೮—೪—೩೬ರಲ್ಲಿ ಮ॥ ರಾ॥ ರಾ॥ ಪಿ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ೬೦ ಮಂದಿ ಹರಿಜನ ಹುಡುಗರೂ ಗೃಹಸ್ಥರೂ ಸಭೆಸೇರಿ ಪಡುಕೊಣಾಜೆ ಲೇಬರ್ ಶಾಲಾ ಮಾಸ್ತರ್ ಹರಿಜನರ ಅಭಿವೃದ್ಧಿಯ ವಿಷಯ ಮಾತನಾಡಿದರು. ಆನಂತರ ಹರಿಜನರೂ ಇತರ ಗೃಹಸ್ಥರೂ ಭಜನೆಯಿಂದ ಮೆರವಣಿಗೆ ಮಾಡಿ, ಇಲ್ಲಿಯ ಹನುಮಂತ ದೇವಸ್ಥಾನದ ಬಳಿ ಭಜನೆ ಹೇಳಿ ಪಂಚಾಯತ ಬೋರ್ಡು ಅಧ್ಯಕ್ಷರಾದ ಡಾಕ್ಟರ್ ಮಲ್ಯರು ಮಕ್ಕಳಿಗೆ ಬಾಳೆಹಣ್ಣನ್ನು ಹಂಚಿದರು. ಆನಂತರ ಲೇಬರ್ ಶಾಲಾ ಗೌರವ ವಿಜಿಟರರಾದ ಮ॥ ರಾ॥ ರಾ॥ ಕರಂಜೆ ಶ್ಯಾಮರಾಯರು ಸತ್ಯನಾರಾಯಣ ದೇವಸ್ಥಾನದ ಬಳಿಯಲ್ಲಿಯೂ ಭಜನೆ ಹಾಡಿದ ಮೇಲೆ ಎಲ್ಲರೂ ಶಾಲೆಗೆ ಹೋಗಿ ಅಲ್ಲಿ ಮ॥ ರಾ॥ ರಾ॥ ಶ್ಯಾಮರಾಯರು ಹರಿಜನರಿಗೆ ಸದುಪದೇಶ ಮಾಡಿದ ಮೇಲೆ ತಿಂಡಿ ಫಲಾಹಾರದೊಡನೆ ಸಭೆಯು ಮುಕ್ತಾಯವಾಯಿತು. ಪ್ರತಿ ಏಕಾದಶಿಗೆ ಇಂತಹ ಪ್ರಭಾತಫೇರಿಗಳನ್ನು ಹರಿಜನರು ನಡೆಸಬೇಕೆಂದು ನಿರ್ಧರಿಸಲಾಯಿತು.

ಕಾಸರಗೋಡು:— ಮಾತೃಭಾಷಾಭಿಮಾನಿಗಳು ಮುಳ್ಳೇರಿಯಾದಿ ವಿದ್ಯಾಲಯದಲ್ಲಿ ಕೆಲವು ಮಾಸಗಳ ಹಿಂದೆ ಯಕ್ಷಗಾನ ರೂಪವಾಗಿ ಪ್ರಾರಂಭವಾದ ರಾಮಾಯಣ ಕಥಾಭಾಗವು ಇದೇ ಬರುವ ಮೇ ತಿಂಗಳ ೩ನೇ ತಾರೀಕಿಗೆ ಮುಕ್ತಾಯವಾಗುವುದು. ಆ ದಿನ ರಾತ್ರಿ ಗಂಟೆ ೯ಗೆ ಶ್ರೀಯುತ ಸರಸ್ವತೀ ಮಧ್ವರಾಯ (ಕರ್ನಾಟಕ ಪಂಡಿತರ) ಅಧ್ಯಕ್ಷತೆಯಿಂದಲೂ ಶ್ರೀ ನೈಂವಸ್ಥಗರ ಹಾಡುವಿಕೆಯಿಂದಲೂ ಶ್ರೀ ಕೃಷ್ಣಪ್ಪಯ್ಯನವರ ಮೃದಂಗ ವಾದನದಿಂದಲೂ ಉತ್ತಮ ತರಗತಿಯ ಪಾತ್ರವರ್ಗದವರಿಂದಲೂ ಸಭೆಯು ಜರಗುವುದರಿಂದ ಯಕ್ಷಗಾನ ಪ್ರೇಮಿಗಳೆಲ್ಲರೂ ಬರಬೇಕಾಗಿ ಇಲ್ಲಿಯ ಸಂಘದವರ ಪ್ರಾರ್ಥನೆ.

ಫಲಿಮಾರು:— ಸ್ಥಳೀಕ ಬೋರ್ಡು ಹಯರ್ ಎಲಿಮೆಂಟರಿ ಶಾಲೆಯ ಎಂಟನೇ ತರಗತಿಯ ಇ ಎಸ್ ಎಲ್ ಸಿ ಪರೀಕ್ಷೆಯು ತಾ ೧೫—೪—೩೬ರಲ್ಲಿ ಉಡುಪಿ ರೇಂಜಿನ ಜೂನಿಯರ್ ಡಿಪ್ಯೂಟಿ ಇನ್ಸ್‌ಪೆಕ್ಟರವರಿಂದ ಜರಗಿಸಲ್ಪಟ್ಟಿತು. ಪರೀಕ್ಷೆಗೆ ಕುಳಿತುಕೊಂಡ ೧೫ ವಿದ್ಯಾರ್ಥಿಗಳ ಪೈಕಿ ೧೨ ಜನರು ಉತ್ತೀರ್ಣರಾಗಿರುತ್ತಾರೆ.

ಚಾಲ್ತಿ ವರ್ಷದಲ್ಲಿ ಮಾನ್ಯ ಬೋರ್ಡಿನವರು ಕಟ್ಟಿಸಿರುವ ಹೊಸ ಕಟ್ಟೋಣವು ಕೂಡಾ ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತಿರುವ ಈ ಶಾಲೆಗೆ ಸಾಲದೆಂದು ರಾ॥ ಶಾಲಾ ಇನ್ಸ್‌ಪೆಕ್ಟರವರು ಅಭಿಪ್ರಾಯ ಪಟ್ಟಿರುತ್ತಾರೆ. ಊರಿನವರ ತುಂಬಾ ಪ್ರೋತ್ಸಾಹ ಸಿಕ್ಕಿರುವ ಈ ಶಾಲೆಗೆ ಬೋರ್ಡಿನವರ ಉದಾರತ್ವವು ಇನ್ನು ಹೆಚ್ಚಲೆಂದು ಬಿನ್ನಿಹದಾರನ ಕೋರಿಕೆ.

ಮಾಮೂಲಿನಂತೆ ಜರಗುವ ವಿಸಪಪಿ ಸಂತೆಯು ತಾ ೬—೫—೩೬ರಿಂದ ಪ್ರಾರಂಭವಾಗಿ ಒಂದು ಪಕ್ಷದ ತನಕ ನಡೆಯಲಿಕ್ಕಿರುವುದು. ನಾಡೆಪಟ್ಟದಂತೆ ಈ ಜಾತ್ರೆಯ ಸಮಯ ಕೃಷಿಪ್ರದರ್ಶನ ಹುಲಿಕಥೆ ವ್ಯಾಖ್ಯಾನ ಇತ್ಯಾದಿಗಳ ವಿಭಾಗಗಳಿರುವವು. ಸಾರ್ವಜನೋಪಯುಕ್ತವಾದ ಈ ವಿಸಪಪಿ ಸಂತೆ ಜಾತ್ರೆಗೆ ಸರ್ವರೂ ಬಂದು ಸಹಭಾಗಿಗಳಾಗಿ ಲಾಭಹೊಂದಬೇಕಾಗಿ ವಿನಂತಿ.

ತ್ರಿಕಾರಪೂರ್:— ಕೊಲೇರಿ ಬೋರ್ಡು ಹಾ. ಎ. ಶಾಲೆಯ ವಾರ್ಷಿಕ ಪರೀಕ್ಷೆಯು ಕಳೆದ ಏಪ್ರಿಲ್ ತಾ. ೨೦—೨೧ನೇ ದಿನಗಳಲ್ಲಿ ಕಾಸರಗೋಡು ರೇಂಜ್ ಡಿಪ್ಯೂಟಿ ಇನ್ಸ್‌ಪೆಕ್ಟರ್ ರಾ॥ ಎ ವಿ ಹರಿಹರಯ್ಯರ್ ಬಿ ಎ. ಎಲ್. ಟಿ ಇವರು ನಡೆಸಿದರು. ಎಂಟನೇ ದರ್ಜೆಯಲ್ಲಿದ್ದ ೨೯ ಮಂದಿ ವಿದ್ಯಾರ್ಥಿಗಳ ಪೈಕಿ ೨೭ ಮಂದಿ ಪರೀಕ್ಷೆಗೆ ಕುಳಿತಿದ್ದರು.

ಈ ಶಾಲೆಯ ವರ್ಧಂತಿ ಉತ್ಸವವು ಕಳೆದ ಏಪ್ರಿಲ್ ತಾ ೨೨ನೇ ಬುಧವಾರ ಹಗಲು ಗಂಟೆ ೩-೩೦ಕ್ಕೆ ಶ್ರೀ ವಿ. ಆರ್ ನಾಯನಾರ್ ಬಿ ಎ. ಬಾರ್-ಎಟ್-ಲಾ ಇವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ಮಂಜೇಶ್ವರ:— ಇಲ್ಲಿಯ ಶ್ರೀ ಮದನಂತೇಶ್ವರ ಟೆಂಪಲ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಉತ್ಸವವು ಇದೇ ಬರುವ ತಾ ೧೧—೫—೩೬ಕ್ಕೆ ನಮ್ಮ ಜಿಲ್ಲೆಯ ಮಾನ್ಯ ಕಲೆಕ್ಟರ್ ದೊರೆಗಳಾದ ಖಾನ್ ಬಹದ್ದೂರ್ ಮಹಮ್ಮದ್ ಹುಮಾಯೂನ್ ಸಾಹೇಬ್ ಬಹದ್ದೂರರವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ತಾ ೮ಕ್ಕೆ ಬಾಲವೀರ ದಿನಾಚರಣೆ ತಾ ೯ಕ್ಕೆ ಬಾಲರ ದಿನಾಚರಣೆ, ತಾ ೧೦ಕ್ಕೆ ಮಹಿಳೆಯರ ದಿನಾಚರಣೆ ಇರುವ ಪ್ರಯುಕ್ತ ಶಾಲೆಯ ಹಳೆವಿದ್ಯಾರ್ಥಿಗಳೂ ಹಿತಚಿಂತಕರೂ ಮೇಲ್ಕಂಡ ಕಾರ್ಯಕ್ರಮಗಳಲ್ಲಿ ಸಹಕರಿಸಿ ಈ ಸಮಾರಂಭವನ್ನು ಸಾಂಗಗೊಳಿಸುವುದರಲ್ಲಿ ನೆರವಾಗಬೇಕಾಗಿ ಸದರಿ ಶಾಲಾ ದಿನಾಚರಣೆ ಕಮಿಟಿಯ ಕಾರ್ಯದರ್ಶಿಯವರ ವಿನಂತಿಯಿದೆ.

ಉಡುಪಿ:— ಸ್ಥಳೀಯ ಕಡಿಯಾಳಿ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತಿ ಸಮಾರಂಭವು ಇದೇ ತಾ ೨೫ನೇ ಶನಿವಾರ ದಿನ ಬೆಳಗಾಂವಿ ಲಿಂಗರಾಜ ಕಾಲೇಜಿನ ಪ್ರೊಫೆಸರರಾದ ಶ್ರೀಮಾನ್ ಎಸ್ ನರಸಿಂಹ ಮೂರ್ತಿ ಎಂ ಎ ಪಿ ಎಚ್ ಡಿ (ಲಂಡನ್) ಇವರ ಸಭಾಧಿಪತ್ಯದಲ್ಲಿ ಆಚರಿಸಲಾಯಿತು. ಅಂದು ಶಾಲಾ ವಠಾರವು ತಳಿರುತೋರಣಗಳಿಂದಲೂ ತ್ರಿವರ್ಣದ ಪತಾಕೆಗಳಿಂದಲೂ ಅಲಂಕರಿಸಲ್ಪಟ್ಟಿದ್ದು ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದಿತು.

ಇದೇ ವಿದ್ಯಾಸಂಸ್ಥೆಯ ಟ್ರೇನಿಂಗ್ ಶಾಲೆಯಾದ ಸರಸ್ವತೀ ಬಾಲಿಕಾ ಪಾಠಶಾಲೆಯ ವರ್ಧಂತ್ಯುತ್ಸವವು ಇದೇ ಏಪ್ರಿಲ ತಾ ೨೮ನೇ ಸೋಮವಾರ ಸಾಯಂಕಾಲ ಗಂಟೆ ೫-೩೦ಕ್ಕೆ ಸರಿಯಾಗಿ ಸದರಿ ಶಾಲಾ ವಠಾರದಲ್ಲಿ ಶ್ರೀಮಾನ್ ವಿ ಕೆ ಸುಂದರೇಶ ಶಾಸ್ತ್ರಿ ಸಬ್ ಮೆಜಿಸ್ಟ್ರೇಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಜನಸಂದಣಿಯು ಕಿಕ್ಕಿರಿದು ನೆರೆದಿತ್ತು. ಇಂದಿನ ಕೂಡ ಶಾಲಾ ಎಳೆಯ ಬಾಲಿಕೆಯರು ಪ್ರಾರ್ಥನೆ ಗೀತೆಯನ್ನು ಹಾಡಿ ಅಧ್ಯಕ್ಷರ ಚುನಾವಣೆಯಾಯಿತು. ನಂತರ ಶಾಲಾ ಮುಖ್ಯೋಪಾಧ್ಯಾಯರು ಶಾಲಾ ವರದಿಯನ್ನು ಹಾಗೂ ಪುರಜನರು ಪ್ರೋತ್ಸಾಹದ ರೂಪದಲ್ಲಿ ಕೊಟ್ಟ ಇನಾಮ ಪಟ್ಟಿಯನ್ನೂ ಓದಿದರು. ಬಹುಮಾನ ವಿತರಣ ಕಾರ್ಯವು ಅಧ್ಯಕ್ಷ ಮಹಾಶಯರ ಸಹಸ್ತದಿಂದಲೇ ನಿರ್ವಹಿಸಲ್ಪಟ್ಟಿತು. ಆನಂತರ ಸಭಾಧ್ಯಕ್ಷರೂ ಶ್ರೀಯುತ ಕೆ ಶೀನಶೆಟ್ಟರವರೂ ಶಾಲಾಭ್ಯುದಯವನ್ನು ಕೋರಿ ಗಂಭೀರವಾದ ಗಹನವಾದ ಉಪಯೋಗದ ಭಾಷಣಮಾಡಿದರು. ಈ ಸಂದರ್ಭದಲ್ಲಿ "ಸತ್ಯವಾನ್ ಸಾವಿತ್ರಿ" ಎಂಬ ನಾಟಕವೂ ಕೂಡ ಪ್ರೇಕ್ಷಕ ಜನ ಮನಸಂತೋಷವಾಗುವ ರೀತಿಯಲ್ಲಿ ಅಭಿನಯಿಸಲ್ಪಟ್ಟಿತು.

ಉಡುಪಿಯಿಂದ ನಾಲ್ಕು ಮೈಲು ದೂರದಲ್ಲಿರುವ ಪಣಿಯೂರು ಎಂಬಲ್ಲಿಯ ಬಂಟರ ಸಮಾಜದವರಾದ ಶ್ರೀಯುತ ಬಲ್ಲಂಪಳ್ಳಿ ಸಂಜೀವ ಶೆಟ್ಟರು ಇದೇ ಏಪ್ರಿಲ್ ತಾ ೧೨ರಲ್ಲಿ ಮೃತರಾದ ಸಂಗತಿ ತಿಳಿಸಲು ಅತ್ಯಂತ ವ್ಯಸನವೆನಿಸುತ್ತದೆ. ಇವರು ಪಣಿಯೂರಿನ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಮೆಂಬರರಾಗಿದ್ದರು. ಕಾಂಗ್ರೆಸ್ ಕೇಸರಿಯಲ್ಲದೆ ಶಾಂತಿಪ್ರಿಯರೂ ಆಗಿದ್ದ ಇವರು ಕಳೆದ ಅಸಹಕಾರದ ಚಳವಳಿಯಲ್ಲಿ ತಮ್ಮ ತನುಮನಧನವನ್ನು ಮಾತೃಸೇವೆಗಾಗಿ ಅರ್ಪಿಸಿ ಕಾರಾಗೃಹವನ್ನು ಸೇರಿ ಅನೇಕ ತೆರನಾದ ಕಷ್ಟನಷ್ಟಗಳನ್ನನುಭವಿಸಿದ್ದರು. ಇವರ ಕುಟುಂಬದವರು ಹಾಗೂ ಬಂಧುವರ್ಗದವರು ಇವರ ಅಗಲಿಕೆಯಿಂದ ವ್ಯಥೆಪಡುತ್ತಿದ್ದಾರೆ. ದೇವರು ಇವರ ಆತ್ಮಕ್ಕೆ ಶ್ರೀಹರಿ ಶಾಂತಿಯನ್ನೀಯಲಿ!

ತಾ ೨೬ನೇ ಪ್ರಾತಃಕಾಲ ೮ ಘಂಟೆಗೆ ಕುಂದಾಪುರ ಡಿವಿಜನಲ್ ಆಫೀಸರವರಿಂದ ತಾಲೂಕು ಕಚೇರಿಯಲ್ಲಿ ದಿವಂಗತ ಐದನೇ ಜೋರ್ಜ್ ಚಕ್ರವರ್ತಿಗಳ ಸ್ಮಾರಕ ಸಮಿತಿಯನ್ನೇರ್ಪಡಿಸುವರೆ ಆಫೀಸರ ವ ಇತರ ಪ್ರಮುಖರ ಸಭೆಯು ಕೂಡಿಸಲಾಗಿತ್ತು. ಪ್ರಬಲ ಸಮಿತಿಯೊಂದು ಏರ್ಪಟ್ಟಿದ್ದಲ್ಲದೆ, ಸ್ಮಾರಕ ನಿಧಿಯನ್ನು ಕೂಡಿಸುವ ಯೋಜನೆಯೂ ಆಗಿದೆಯೆಂದು ತಿಳಿಯುತ್ತೇವೆ.

ಲಕ್ನೋ ಪ್ರದರ್ಶನ

ಲಕ್ನೋದಲ್ಲಿ ಜರಗಿದ ಕಾಂಗ್ರೆಸ್ ಅಧಿವೇಶನದೊಡನೆ ಅಖಿಲ ಭಾರತ ಪ್ರದೇಶೀ ಕೈಗಾರಿಕಾ ಪ್ರದರ್ಶನವು ತೆರೆಯಲ್ಪಟ್ಟಿತು, ಹಿಂದೂದೇಶದ ಹಳ್ಳಿಗಳಲ್ಲಿ ತಯಾರಾಗುತ್ತಿರುವ ಎಲ್ಲಾ ತರದ ಸಾಮಾನುಗಳು, ನೇಯಿಗೆ ಮತ್ತು ಇತರ ಕೈಗಾರಿಕೆಯ ವಸ್ತುಗಳು ಇಲ್ಲಿ ಪ್ರದರ್ಶಿಸಲ್ಪಟ್ಟಿದ್ದವು. ಮಹಾತ್ಮಾಗಾಂಧಿಯವರು ಈ ಪ್ರದರ್ಶನವನ್ನು ಸಂದರ್ಶಿಸಿನೋಡಿ ಬಹಳ ಸಂತುಷ್ಟರಾಗಿರುವರು. ಈ ತರದ ಪ್ರದರ್ಶನಗಳಿಗೆ ಬಹಳ ಮಹತ್ವವಿದೆ ಎಂದು ಅವರ ಮಾತು, ಕಾರಣ, ಹೊಟ್ಟೆಗಿಲ್ಲದೆ ನರಳುತ್ತಿರುವ ನಮ್ಮ ಹಳ್ಳಿಗರ ವಿಶೇಷ ಯೋಗ್ಯತೆಗಳನ್ನು ಅದು ವ್ಯಕ್ತಪಡಿಸುತ್ತಲ್ಲದೆ, ಗ್ರಾಮಾಭ್ಯುದಯ ಪ್ರಚಾರಕಾರ್ಯವು ಇದರಿಂದ ನಡೆಸಿದಂತಾಗುವುದು. ಇತರ ಪರದೇಶಗಳಲ್ಲಿ ತಯಾರಾಗುವ ಒಡವೆಗಳನ್ನು ಅತಿ ಸುಲಭದರದಿಂದ ಈ ಹಳ್ಳಿಗರಿಂದ ಪಡೆಕೊಳ್ಳಬಹುದು. ಈ ಪ್ರದರ್ಶನಗಳಲ್ಲಿ ದೇಶದ ಸಂತುಷ್ಟಾಂಶದವರು ಬಡವರಿಗೆ ಸಹಾಯಕರಾಗುವ ಒಂದು ಪರದು ಹಾದಿಯಿದೆ, ದೇಶದ ಹಿಂದೂ, ಮುಸ್ಲಿಂ, ಹರಿಜನ ಇತ್ಯಾದಿ ಜಾತಿಜಾತಿಗಳ ಐಕ್ಯವು ಈ ಪ್ರದರ್ಶನದಲ್ಲಿ ವ್ಯಕ್ತವಾಗುತ್ತದೆ. ಕಾರಣ, ಕಾಶ್ಮೀರದ ಮುಸ್ಲಿಮರ ಒಡವೆಗಳೂ, ಬೆಂಗಳೂರಿನ ಹರಿಜನರ ಒಡವೆಗಳೂ ಅನ್ಯ ಕರ ಕಡೆಗಳಿಂದ ಬೇರೆ ಬೇರೆ ಜಾತಿಗಳಿಂದ ತಯಾರಿಸಲ್ಪಟ್ಟ ಒಡವೆಗಳೂ ಪ್ರದರ್ಶನಕ್ಕೆ ಬಂದಿದ್ದವು ಇದೇ ಕಾರಣದಿಂದಾಗಿ ಮಹಾತ್ಮಾಜೀಯವರು ಈ ಪ್ರದರ್ಶನಕ್ಕೆ ಮಹತ್ವವನ್ನು ಕೊಟ್ಟಿರುವುದು. ಮುಂದಕ್ಕೆ ಈ ತರದ ಅನೇಕ ಪ್ರದರ್ಶನಗಳು ಶ್ರೇಯಸ್ಕರವಾಗಿ ದೇಶದ ವಿವಿಧ ಭಾಗಗಳಲ್ಲಿ ನಡೆಯುವ ಕಾರ್ಯದಲ್ಲಿ ಮಹಾತ್ಮಾಜಿಯವರು ಸಹಕರಿಸುವರಾಗಿ ತಿಳಿದುಬರುತ್ತದೆ. ನಿಜವಾಗಿಯೂ ಗ್ರಾಮಾಭ್ಯುದಯ ಕಾರ್ಯಕ್ಕೆ ಇದೊಂದು ಉತ್ತಮಯೋಜನೆಯಾಗಿರುತ್ತದೆ ಒಂದು ಜಿಲ್ಲೆಯ ಆಯಾಯ ತಾಲೂಕುಗಳಲ್ಲಿ ಗ್ರಾಮಾಭ್ಯುದಯ ಕೇಂದ್ರಗಳು ಸ್ಥಾಪನೆಯಾಗಿ ಆಗಾಗ್ಗೆ ಈ ತರದ ಪ್ರದರ್ಶನಗಳನ್ನು ನಡೆಯಿಸಿ ಗ್ರಾಮಕೈಗಾರಿಕೆಗಳಿಗೆ ಯೋಗ್ಯ ಪ್ರೋತ್ಸಾಹ ಸಿಗುವಂತೆ ಸಾಧನೆಗಳು ನಡೆಯಬೇಕು. ಗ್ರಾಮಾಭ್ಯುದಯದ ಕುರಿತು ಬರವಣಿಗೆ ಭಾಷಣ ಇತ್ಯಾದಿಗಳು ಸಾಕಷ್ಟು ಆಗಿವೆ. ಈಗ ಬೇಕಾದುದು ಕಾರ್ಯ. ಗ್ರಾಮಾಭ್ಯುದಯವು ಕಾರ್ಯರೂಪದಲ್ಲಿ ನಡೆಯಲು ಬೇಗನೇ ಪ್ರಾರಂಭವಾಗಬೇಕು. ದೇಶದ ಸಾಂಪತ್ತಿಕ ದುಃಸ್ಥಿತಿಯ ನಿವಾರಣೆಯ ಒಂದು ಹಾದಿಯು ಇದರಲ್ಲಿದೆ

ನಮ್ಮ ಶಿಶುಗಳು.

ದಕ್ಷಿಣ ಹಿಂದೂದೇಶದ ಶಿಶುಗಳು ಸರಿಯಾದ ಪೌಷ್ಟಿಕ ಆಹಾರವನ್ನು ಸೇವಿಸದೆ ಅಸಂಖ್ಯಾತ ಅನುಸಂಕಟಗಳಿಗೆ ಗುರಿಯಾಗುತ್ತವೆ. ಮುಂದಿನ ಜನ ರಗದ ಆಧಾರಗಳಾಗಿರುವ ಶಿಶುಗಳು ಈ ಸ್ಥಿತಿಯನ್ನು ಅನುಭವಿಸುವುದಾದರೆ—ಮುಂದಿನ ಜನಾಂಗವು ನಿರ್ಬಲವೂ ರೋಗಪೀಡಿತವೂ ಆಗುವುದು. ಶಿಶುಗಳಿಗೆ ಮುಖ್ಯವಾಗಿ ಬೇಕಾದುದು ಹಾಲು. ಹಾಲಿನಲ್ಲಿ ಅವರ ಬೆಳವಣಿಗೆಗೆ ಬೇಕಾದ ಪೌಷ್ಟಿಕವು ದೊರೆಯುತ್ತದೆ. ಆದರೆ ದಕ್ಷಿಣ ಹಿಂದೂದೇಶದ (ನಮ್ಮ ಜಿಲ್ಲೆಯೂ) ಶಿಶುಗಳಿಗೆ ಬೇಕಾದ ಹಾಲು ಸಲ್ಲುವುದಿಲ್ಲ. ನಮ್ಮಲ್ಲಿ ಯೋಗ್ಯ ಆಕಳುಗಳು ಕೂಡಾ ಇಲ್ಲ. ಜನರು ಈ ವಿಚಾರದಲ್ಲಿ ಬಹಳ ಅಲಕ್ಷ್ಯಗಳಾಗಿರುವರು

ಹಾಲು ಒಂದು ವಿಶೇಷ ಪೌಷ್ಟಿಕದ ವಸ್ತು. ಒಂದು ಜನಾಂಗವು ಆರೋಗ್ಯದಿಂದ ಬಾಳಬೇಕಾದರೆ, ಅದು ಧಾರಾಳ ಹಾಲು ಸೇವಿಸಬೇಕು ಎಂಬುದು ಎಲ್ಲಾ ದೇಶಗಳೂ ತಿಳಿದಿವೆ. ಇದೇ ಕಾರಣಗಳಿಂದ ಪಾಶ್ಚಾತ್ಯದಲ್ಲಿ ಅಮೇರಿಕಾದಲ್ಲಿ, ಆಕಳುಗಳ ಸಾಕುವಿಕೆಗೂ, ರಕ್ಷಣೆಗೂ ಹಾಲು ಒದಗಿಸುವುದಕ್ಕೂ ಅನೇಕ ಸಂಸ್ಥೆಗಳು ಉಂಟಾಗಿವೆ. ಆಕಳು ವೃಂದವನ್ನು ವೃದ್ಧಿಗೊಳಿಸುವ ಅನೇಕ ನವೀನ ಉಪಾಯಗಳನ್ನು ಕಂಡುಹಿಡಿದಿರುವರು ಹೀಗೆ ಹಲವು ಯೋಜನೆಗಳಿಂದ ಇವರ ಆಕಳು ಬಹಳ ವೃದ್ಧಿಹೊಂದಿವೆ. ಈ ಎಲ್ಲ ದೇಶಗಳಲ್ಲಿ ಎಲ್ಲರಿಗೂ ಯೋಗ್ಯ ಹಾಲು ಸುಲಭ ದರಕ್ಕೆ ದೊರಕುವಂತೆ ಏರ್ಪಾಡುಗಳಾಗಿವೆ. ಆದ್ದರಿಂದಲೇ ಈ ಜನಾಂಗವು, ಶಿಶುಗಳು, ದೊಡ್ಡವರು, ಎಲ್ಲರೂ ಅಷ್ಟು ಆರೋಗ್ಯವಂತರಾಗಿ ಬಾಳುವುದು ಇದರಿಂದ್ಲ ಅವರಲ್ಲಿ ರೋಗರುಜಿನೆಗಳ ಹಾವಳಿಯೂ ಕಡಿಮೆ

ಆದರೆ, ನಮ್ಮ ದೇಶದ ಅನೇಕ ಶಿಶುಗಳಿಗೆ ಹಾಲು ದೊರಕುವುದೇ ಇಲ್ಲ. ನಮ್ಮಲ್ಲಿ ಯೋಗ್ಯ ದನಗಳೂ ಇಲ್ಲ, ಇದುದರಿಂದಲೇ ನಾವು ನಿರ್ಬಲರಾಗಿ ರೋಗರುಜಿನೆಗಳಿಂದ ಬಳಲುತ್ತಿದ್ದೇವೆ. ಆದರಿಂದಲೇ ದಕ್ಷಿಣ ಹಿಂದೂದೇಶದ ಆಶ್ರಯು ದಿನೇ ದಿನೇ ಕುಂದುತ್ತಿದ್ದಾರೆ. ಈ ದುಸ್ಥಿತಿಯು ನಿವಾರಣೆಯಾಗಬೇಕಾದರೆ, ಆಕಳು ಸಾಕುವಿಕೆ ಇತ್ಯಾದಿಗಳನ್ನು ಉದ್ಧಾರಗೊಳಿಸುವ ಯೋಜನೆಗಳು ಬೇಕಾಗಿವೆ. ಎಲ್ಲರೂ ಧಾರಾಳ ಹಾಲುಸೇವಿಸಬೇಕು

ವಿಚಾರಮಯ ಜಗತ್ತು.

ಹಿಂದೂದೇಶವು ವೃದ್ಧಿಹೊಂದುತ್ತಿದೆ

"ಹಿಂದೂದೇಶವು ವೃದ್ಧಿಹೊಂದುತ್ತಿದೆ" ಎಂದು ಸರಕಾರಿ ಅಧಿಕಾರಿಗಳು ಇತ್ತೀಚೆಗೆ ಬಹಳ ಕಾಲದಿಂದ ಆಡಲು ಪ್ರಾರಂಭಿಸಿರುವರು. ಪ್ರಾಯಶಃ ಹೀಗೆ ಮಂತ್ರ ಹಾಕಿಯೇ ಹಿಂದೂದೇಶವನ್ನು ಅಭಿವೃದ್ಧಿಗೊಳಿಸುವುದು ಇವರ ಉದ್ದೇಶವಾಗಿರಬಹುದು. ಅವರ ಈ ಉದ್ದೇಶಕ್ಕಾಗಿ ನಿಜವಾಗಿಯೂ ನಾವು ಕೃತಜ್ಞರಾಗಬೇಕು ಆದರೆ, ಹಿಂದೂದೇಶವನ್ನು ನಿಜಕ್ಕೂ ಅಭಿವೃದ್ಧಿಗೊಳಿಸಬೇಕೆಂಬ ಇಚ್ಛೆಯು ಇವರಲ್ಲಿದ್ದರೆ ಅವರು ಕೆಲವು ಯೋಗ್ಯ ವೃಢ ಯೋಜನೆಗಳನ್ನು ಕಲ್ಪಿಸುವುದು ಉಚಿತವು. ಆರ್ಥಿಕ ವ್ಯವಸ್ಥೆಯ ಕುರಿತು ಅವರ ಈಗಿನ ವರ್ತನೆಯು ಬದಲಾಗಬೇಕು ಅವರ ಈಗಿನ ವರ್ತನೆಯು, ಅವರು ಅದು ಉತ್ತಮವಾದುದೆಂದು ಹೇಳುತ್ತಿದ್ದರೂ ಹಿಂದೂದೇಶಕ್ಕೆ ದುಷ್ಪರಿಣಾಮಕಾರಿಯಾಗಿದೆ.

ಈ ವಿಚಾರದಲ್ಲಿ ನವೀನವಾಗಿ ಬಂದ ವೈಸರಾಯರಾದ ಲೋರ್ಡ್ ಲಿನ್ ಲಿತ್ ಗೋವರವರಿಗೆ ಮಾಜಿ ವೈಸರಾಯರ ಗಾಳಿ ತಾಗಿದಂತೆ ತೋರುತ್ತದೆ ಅವರು ಅನ್ನುವುದೇನು? "ಹಿಂದೂದೇಶವು ಕಳೆದ ಆರ್ಥಿಕ ಮುಗ್ಗಟ್ಟಿನಿಂದ ಬಹಳ ಚಮತ್ಕಾರದಿಂದ, ಚೇತನ ಹೊಂದುತ್ತಿದೆ ಅದರ ಆರ್ಥಿಕಸ್ಥಿತಿಯು ಬೇಗನೆ ಅಭಿವೃದ್ಧಿಗೊಳ್ಳುವುದೆಂದು ನಾನು ನಂಬುತ್ತೇನೆ" ಆದರೆ, ಲೋರ್ಡ್ ಲಿನ್ ಲಿತ್‌ಗೋವರು ಇಷ್ಟು ಬೇಗನೇ ಈ ಮಾತುಗಳನ್ನು ಆಡುವ ಬದಲಾಗಿ, ಇನ್ನೂ ಸ್ವಲ್ಪ ಸಮಯ ಸಂಗತಿಗಳನ್ನು ಪರೀಕ್ಷಿಸಿ ನಿಜವಾದ ಸ್ಥಿತಿಯನ್ನು ಅರಿತುಕೊಂಡು, ನಂತರ ಈ ವಿಚಾರದಲ್ಲಿ ತನ್ನ ಮತವನ್ನು ಕೊಡಬಹುದಿತ್ತು ಹಿಂದೂದೇಶವು ನಿಜಕ್ಕೂ ವೃದ್ಧಿಹೊಂದುವುದಿಲ್ಲ ಅದು ಅಭಿವೃದ್ಧಿ ಹೊಂದುತ್ತದೆಂದು ಸರಕಾರಿ ಅಧಿಕಾರಿಗಳ ಕಣ್ಣುಗಳಿಗೆ ಮಾತ್ರ ಗೋಚರವಾಗುತ್ತದೆ.

ಹಿಂದೂದೇಶಕ್ಕೆ ಒಂದು ಪಾಠ.

ಆಫಘಾನಿಸ್ಥಾನದ ಅರಸರು ತನ್ನ ರಾಜ್ಯದಲ್ಲಿರುವ ಹಿಂದೂ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ರೂ ೧೪,೦೦೦ ದಾನಮಾಡಿರುವರೆಂದು ವಾರ್ತೆ ಬಂದಿರುತ್ತದೆ ಇವರ ಈ ವರ್ತನೆಯು ಬಹಳ ಶ್ಲಾಘನೀಯವು. ಇದು ಅವರ ವಿವೇಕ ಬುದ್ಧಿಯನ್ನು ಸೂಚಿಸುತ್ತದೆ. ಅವರ ಹಿಂದೂ ಪ್ರಜೆಗಳು ಅವರ ಈ ಕಾರುಣ್ಯಕ್ಕಾಗಿ ಬಹಳ ಕೃತಜ್ಞತರಾಗಿರುವರು

ಹಿಂದೂದೇಶದ ಹಿಂದೂ ಮುಸ್ಲಿಮರಿಗೆ ಇದರಲ್ಲಿ ಒಂದು ಮಹಾ ಪಾಠವು ಅಡಕವಾಗಿರುತ್ತದೆ ಇದನ್ನು ಅವರು ತಿಳಕೊಂಡು, ಅಫಘಾನಿಸ್ಥಾನ ಅರಸರ ಈ ವರ್ತನೆಯ ಮಹತ್ವವನ್ನು ತಿಳಕೊಂಡು, ಭರತಖಂಡದ ಹಿಂದೂ ಮುಸ್ಲಿಮರು, ದೇಶಕ್ಕೆ ಹಾನಿಕರವೆನಿಸುವ ತಮ್ಮ ಈಗಿನ ವರ್ತನೆಯ ಕುರಿತು ಸ್ವಲ್ಪ ಆಲೋಚಿಸಿದರೆ ಉತ್ತಮವಿತ್ತು

ಕಪ್ಪೆಯು ಮೀನಿನ ವರ್ಗಕ್ಕೆ ಸೇರಿದೆಲ್ಲ.

ಎಂಬುದಾಗಿ ಫ್ರಾನ್ಸಿನ ಸುಪ್ರೀಮ್ ಕೋರ್ಟಿನಲ್ಲಿ ಇತ್ತೀಚೆಗೆ ಬಹಳ ಸಮಯದಿಂದ ನಡೆದ ಒಂದು ಅಪೀಲು ವ್ಯವಹಾರದಲ್ಲಿ ಇತ್ಯರ್ಥವಾಗಿರುತ್ತದೆ. ಒಬ್ಬನನ್ನು ಮೀನುಗಳನ್ನು ಹಿಡಿಯದಾರದೆಂಬ ನಿರ್ಬಂಧ ಹಾಕಲ್ಪಟ್ಟಿ ಒಂದು ಕೆರೆಯಿಂದ ಕಪ್ಪೆ ಹಿಡಿದುದಕ್ಕಾಗಿ ದಸ್ತಗಿರ ಮಾಡಲಾಯಿತು ಕಪ್ಪೆಗಳನ್ನು ಹಿಡಿದ ತಪ್ಪಿಗಾಗಿ ಆತನ ಮೇಲೆ ಕ್ರಿಮಿನಲ್ ವ್ಯವಹಾರ ಹೂಡಲಾಯಿತು ಕೆಳಗಿನ ಕೋರ್ಟಿನಲ್ಲಿ ಆತನು ತಪ್ಪಿತನೆಂದು ತೀರ್ಮಾನಿಸಿ, ಅವರ ಕೈದಿಯು "ಕಪ್ಪೆಯು ಮೀನಲ್ಲ ಆ ಕೆರೆಯಿಂದ ಮೀನುಗಳನ್ನು ಹಿಡಿಯಲು ಮಾತ್ರ ನಿರ್ಬಂಧವಲ್ಲದೆ ಅದು ಕಪ್ಪೆಗಳನ್ನು ಹಿಡಿಯುವುದಕ್ಕೆ ತಗಲುವುದಿಲ್ಲವೆಂದು ವಾದಿಸಿದನು ಆದರೆ ಕಪ್ಪೆ ಮೀನೆಂದು ತೋರಿಸರ ವಾದ, ಆಪಾದಿತರ ಮೇಲಿನ ಕೋರ್ಟಿಗೆ ಅಪೀಲು ಹಾಕಿದನು. ಫ್ರಾನ್ಸಿನ ಸುಪ್ರೀಮ್ ಕೋರ್ಟಿಗೆ ಕಪ್ಪೆಯ ಜಾತಿಯನ್ನು ವಿಚಾರಿಸುವ ಸಂಭವ ಒದಗಿತು, ಅನೇಕ ದಿವಸ ವ್ಯವಹಾರ ನಡೆಯಿತು, ಅನೇಕ ಪ್ರಾಣಿಶಾಸ್ತ್ರಗಳನ್ನು ಓದಲಾಯಿತು ಅನೇಕ ಪ್ರಾಣಿಶಾಸ್ತ್ರಜ್ಞರು ಕೇಳಲಾಯಿತು. ಕೊನೆಗೆ ಕಪ್ಪೆಯು ಮೀನಿನ ಜಾತಿಗೆ ಸೇರಿದಲ್ಲ ಎಂದು ಇತ್ಯರ್ಥವಾಗಿ, ಅಪಾದಿತನ ಮೇಲೆ ತಂದಿರುವ ಪೋಲೀಸ್ ವ್ಯವಹಾರವು ವಜಾ ಆಯಿತು."

ನಮ್ಮ ಹೊಸ ವೈಸರಾಯರು.

ನಮ್ಮ ಹೊಸ ವೈಸರಾಯರಾದ ಲೋರ್ಡ್ ಲಿನ್ ಲಿತಗೋವರ ಭಾಷಣವು ಸುಖಾಗಮನಿಯವೂ ಅತಿ ವಿಶೇಷಾರ್ಥವುಳ್ಳದ್ದೂ ಆಗಿರುವುದು "ನಾನು ಹೆಚ್ಚೇನು ನಿಮ್ಮಿಂದ ಕೇಳುವುದಿಲ್ಲ, ನೀವು ನಿಶ್ಚಿಂತರಾಗಿಯೂ, ದೃಢ ಮನಸ್ಸು ಉನವಿಶ್ವಾಸವುಳ್ಳವರಾಗಿಯೂ ನಿಮ್ಮ ದೇಶದ ದುಃಸ್ಥಿತಿಯನ್ನು ಕೊನೆಗೊಳಿಸಲು ಸಹಾಯಕರಾಗಬೇಕು. ನಾನಾದರೋ ನಿಮ್ಮ ದೇಶದ ಸೇವೆಯನ್ನು ದೃಢಪೂರ್ವಕ ನಡೆಯಿಸುವೆನು. ಈ ಸೇವೆಗಾಗಿ ದೇವನು ನನ್ನಲ್ಲಿ ಸುಖವನ್ನು ಬೆಳಸಲೆಂದು ಪ್ರಾರ್ಥಿಸುವೆನು ನೀವು ನಿಮ್ಮ ನಿತ್ಯದ ಪ್ರಾರ್ಥನೆಯಲ್ಲಿ ನನ್ನ ನೆನಪನ್ನು ಮಾಡಬೇಕು" ಎಂದು ಭಾಷಣದ ಭಾವಭರಿತ ಮುಖ್ಯಾಂಶವು

ಆದರೆ ಈ ತರದ ಭಾವನೆಗಳು ಮಾನವನ ಜೀವಮಾನಕ್ಕೆ ಹಿತಕರವಾದರೂ ಜನಾಂಗಗಳ ರಾಜಕೀಯ ಕಷ್ಟಗಳನ್ನು ಹೋಗಲಾಡಿಸಲು ನೆರವಾಗುವುದಿಲ್ಲ. ಹಿಂದೂ ದೇಶದ ಪ್ರಜೆಗಳು ಈ ತರದ ಭಾವಾರ್ಥಕ ಮಾತುಗಳನ್ನು ಬಾರಿ ಬಾರಿಗೂ ಸಮಯಕ್ಕನುಸಾರವಾಗಿ ಕೇಳಿರುವರು ಮತ್ತು ಕೇಳಿ ದಣಿದಿರುವರು. ಈ ಭಾವನೆಯು ದೇಶದಲ್ಲಿ ಮಹತ್ವಕ್ಕೆ ಹೊಡಗುವುದೆಂದು ಹೇಳಲಸಾಧ್ಯ. ಅಷ್ಟಾದರೂ ಬಹು ಹಿಂದೂ ದೇಶಸ್ಥರು ಈ ಐದು ವರುಷಗಳ ಅವಧಿಯಲ್ಲಿ ಏನಾದರೂ ಒಳ್ಳೆಯದಾಗುವುದೆಂದು ನಂಬಿರುವರು ಇದರಿಂದ ಬ್ರಿಟಿಷ್ ಸರಕಾರವು ಇಷ್ಟು ನಂಬುಗೆ ಈಯೇವ ಭಾರತೀಯರ ಪ್ರೀತಿಯನ್ನು ಸಂಪಾದಿಸಲು ಬರೇ ಸ್ವಾರ್ಥಬುದ್ಧಿಯಿಂದ ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆಂದು ವ್ಯಕ್ತವಾಗುವುದು

ಲೋರ್ಡ್ ಲಿನ್ ಲಿತ್‌ಗೋವರು ಹಿಂದೂದೇಶದ ರಾಜ್ಯಾಂಗ ನೀತಿಯನ್ನು ಸರಿಪಡಿಸಿರುವರೆಂದು ನಂಬುಗೆ ಇತ್ತಿರುವರು ಈ ನಂಬುಗೆಯು ಎಷ್ಟರ ವರೆಗೆ ಕೊನೆಗೊಳ್ಳುವುದೆಂದು ನೋಡಲಿದೆ ಜಾತಿ ಮತವಾದಗಳಿಂದ ಹರಿದುಹೋದ ದೇಶವಿದು ಒಬ್ಬರಲ್ಲಿ ಒಬ್ಬನಿಗೆ ನಂಬುಗೆ ಇರುವುದಿಲ್ಲ. ಒಳ್ಳೆಬ್ಬನ ಸುಳಿವಿಲ್ಲ ಕೋಮುವಾರು ಎವಾರ್ಡ ಎಂಬ ನವರಾಜಶಾಸನದ ಬರದಿಂದ ಈಗಿನ ಈ ಪರಿಸ್ಥಿತಿಯು ಇನ್ನೂ ಪ್ರಗತಿಹೊಂದುವುದರಲ್ಲಿ ಸಂದೇಹವಿಲ್ಲ. ಇದಲ್ಲದೆ, ಕೆಲವು ಕರಾಳ ಶಾಸನಗಳಿಂದ ಮಾಜಿ ವೈಸರೀಯರಾದ ಲೋರ್ಡ್ ವಿಲ್ಲಿಂಗ್ಡನ್ನರು ಬ್ರಿಟಿಷ್ ಹಿಂದೀಯ ಬಿರುಕು ಇನ್ನೂ ಅಗಲವಾಗುವಂತೆ ಮಾಡಿರುವರು ಈ ಹೊಸ ವೈಸರಾಯರು ನಮಗೆ ನಿಜವಾಗಿಯೂ ಹಿತವನ್ನು ಬಯಸುವುದಾದರೆ, ಈಗ ರೂಢಿಯಲ್ಲಿರುವ ಮೇಲಿನ ಕರಾಳಶಾಸನಗಳನ್ನು ರದ್ದುಗೊಳಿಸುವುದು ರಾಜಕೀಯ ದೃಷ್ಟಿಯಿಂದ ನ್ಯಾಯಸಮ್ಮತವು

ಪತ್ರಿಕಾವ್ಯವಸಾಯವು ಒಂದು ರಾಜ್ಯದ ಮುಖ್ಯ ಅಂಗವಾಗಿರುತ್ತದೆ. ಸರಕಾರಕ್ಕೆ ಇದರ ಮೇಲೆ ಚಿಂತನೆಯು ಇರಲೇಬೇಕು, ಒಂದು ದೇಶದ ಸಾಂಪತ್ತಿಕ ಅಥವಾ ಆಧ್ಯಾತ್ಮಿಕಸ್ಥಿತಿಯು ಇದರ ಮೇಲೆ ಹೊಂದಿಕೊಂಡಿರುವುದೆಂದೂ ಅನೇಕ ಸವನಾಗರೀಕ ದೇಶಗಳ ಅನುಭವವಾಗಿರುತ್ತದೆ ಆದ್ದರಿಂದ, ಸರಕಾರದ ಇದರ ಮೇಲಿನ ವಕ್ರದೃಷ್ಟಿಯು ಬದಲಾವಣೆಯನ್ನು ಲೋರ್ಡ್ ಲಿತ್‌ಲಿತ್ ಗೋ ಇವರು ಮಾಡಬೇಕಾಗಿದೆ. ಇವರು ಜಾತಿಪಂಗಡಗಳ ಕುರಿತು ಆಡಿದ ಮಾತು ಬಹಳ ಮನೋರಂಜಕವಾದದ್ದು ಈ ಜಾತಿಪಂಗಡಗಳನ್ನು ತನ್ನ ಮಕ್ಕಳಿಗೆ ಹೋಲಿಸಿದ್ದಾರೆ— "ನನ್ನ ಮಕ್ಕಳು ಒಂದೇ ತಾಯಿಯಲ್ಲಿ ಜನಿಸಿದವರಾದರೂ, ಅವರಲ್ಲಿ ಕೆಲವು ಪರಸ್ಪರ ಭೇದಗಳಿರುವುದು ಪ್ರಕೃತಿಸ್ಥಿತಿಯು. ಅವರಲ್ಲಿ ಭೇದಭಾವಗಳಿದ್ದರೂ ನನಗೆ ಅವರಲ್ಲಿ ಏಕಮಾತ್ರವಾದ ಪ್ರೀತಿಯಿರುವುದು. ನನ್ನ ಈ ಪ್ರೀತಿಯು ಪಕ್ಷಪಾತವನ್ನು ಹೊಂದಿಕೊಂಡಿರುವುದಿಲ್ಲ. ಇದೇ ರೀತಿ ನನ್ನ ಪ್ರೀತಿಯು ಹಿಂದೂದೇಶದ ವಿವಿಧ ಜಾತಿಮತಗಳಿಂದ ಕೂಡಿದ ಸಾರ್ವಭೌಮರ ಮುಖಿಯಾಧಿ ಪ್ರಜೆಗಳಿಗೆ ಸಲ್ಲುವುದು" ಎಂದು ಹೇಳಿದರು. ಹೀಗೆಯೇ ಇವರು ನಿಷ್ಪಕ್ಷಪಾತದಿಂದ ವರ್ತಿಸಿದರೆ ಉತ್ತಮವಾಗುವುದು.

೯ನೇ ಪುಟದಿಂದ ಮುಂದುವರಿಯುವುದು

ಎಂದು ಈ ಸಿದ್ಧಾಂತವನ್ನು ಎತ್ತಿ ಹಿಡಿದಿರುವರು, ಶರೀರಶಾಸ್ತ್ರ ಪಾರಂಗತನಾದ ತನ್ನ ಮಿತ್ರನೊಬ್ಬನು ಒಂದು ಸಮಾಲೋಚನೆಯಲ್ಲಿ ನಾರಿಯೊಬ್ಬಳ ನಾಲಿಗೆಯನ್ನು ಕೊಯ್ದು ಅದರಲ್ಲಿ ಇಷ್ಟರ ಮಟ್ಟಿನ ಚಪಲತೆಯನ್ನು ಹುಟ್ಟಿಸುವ ಅದಾವ ರಚನೆಯಿರುವುದೆಂದೂ, ಅದಿಲ್ಲದಿದ್ದರೆ ಅದರಲ್ಲಿಯ ತಂತುಗಳು ಹೆಚ್ಚು ಸೂಕ್ಷ್ಮ ಅಥವಾ ಹೆಚ್ಚು ಕೋಮಲವಾಗಿರಬಹುದೆಂದೂ ಅಥವಾ ಅದನ್ನು ಉಚ್ಚಾಟನಗೊಳಿಸುವಂಥ ಅದೆಂತ ಪರಿಯಲ್ಲಿ ಮಾಂಸಖಂಡಗಳ ರಚನೆಯಾಗಿವೆಯೆಂದೂ ಕೊಟ್ಟ ಕೊನೆಯಲ್ಲಿ ಮಿದುಳು ಹೃದಯಗಳಿಂದ ಸತತವಾಗಿ ಈ ಮಾತಿನ ಯಂತ್ರಕ್ಕೆ ಸ್ಫೂರ್ತಿಯು ಹರಿದುಬರುವ ಕಾಲುವೆಗಳಿರುವವೆಂದೂ ಪರೀಕ್ಷಿಸಿ ತಿಳಿಸುವುದಾಗಿ ನನಗೆ ಭರವಸೆಯನ್ನು ಕೊಟ್ಟಿರುವನು, ಹಾಳುಹರಟೆಯವರ ನಾಲಿಗೆಯು ಅತ್ಯೀತ ಚಪಲವಾಗಿರುವುದೆಂಬುದರ ಕಾರಣವನ್ನು ಹ್ಯಾಡಿಬಾಸನು ಹೇಳುವನು, ನಾಲಿಗೆಯು ಜಾಣನ ಕುದುರೆಯಂತಿರುವುದಂತೆ, ಹೊರುವ ಭಾರವು ಕಡಿಮೆಯಾದಂತೆ ಅವುಗಳ ಚಲನಶಕ್ತಿಯೂ ಹೆಚ್ಚುವುದಂತೆ. ತಿಳುವಳಿಕೆಯೂ ಕಲೆ ಹರಟೆಯೂ ಯಾವಾಗಲೂ ವ್ಯಸ್ತಪ್ರಮಾಣದಲ್ಲಿರುವವೆಂದೂ ಗಣಿತಶಾಸ್ತ್ರದ ಹೊಸ ಶೋಧೆಯಾಗಿರುವುದಂತೆ. ನಮ್ಮ ಸುಂದರಿಯರ ವಿಚಾರಗಳು ಅವರ ಧ್ವನಿಯಷ್ಟು ಸುಂದರವಾಗಿಲ್ಲವೆಂದೂ, ಅವರ ಮುಂದೆಗಳಷ್ಟು ನೂತನ ಮಾಂದ್ಯವಿಲ್ಲವೆಂದೂ ಕೆಲ ಅನುಭವಿಗಳ ಅಭಿಪ್ರಾಯವಿದೆ

ಒಬ್ಬ ಸದ್ಗೃಹಸ್ಥನಿಗೆ ವನಿತಾ ವಕ್ತೃವೊಬ್ಬಳೊಡನೆ ಕೆಲವು ತಾಸುಗಳ ವರೆಗೆ ಮಾತಾಡುವ ಪ್ರಸಂಗ ಬಂದಿತ್ತು.

"ನೀವು ಗಾಢ ನಿದ್ರೆಯಲ್ಲಿರುವಾಗ ನಿಮ್ಮ ನಾಲಿಗೆಗೆ ಬಹು ಸಂತೋಷವಾಗುವುದಲ್ಲವೇ?" ಎಂದು ಅವನು ಕಠಿಣ ಪ್ರಶ್ನಿಸಿದನು ಏಕೆಂದರೆ ಇನ್ನಿತರ ಕಾಲಗಳಲ್ಲಿ ಅದಕ್ಕೆ ಅರ್ಧ ಕ್ಷಣದ ವಿಶ್ರಾಂತಿಯಾದರೂ ದೊರೆಯುತ್ತಿರಲಿಲ್ಲ ಭಾಸರ್ ಕವಿಯು ಒಂದೆಡೆಯಲ್ಲಿ ಹೇಳಿದ ಈ ಮಾತು ನೆನಸಿನಲ್ಲಿಡತಕ್ಕದ್ದು.

I think, Quoth Homas,
women's tongues of as
pen leaves are made"

ಆ ಸ್ಪನ ಎಲೆಗಳೆಂಬುವು ಅದೇ ಎಲೆಯಂತಹ ನಾಲಿಗೆ ಯಾವಾಗಲೂ ಅಲ ಗಾಡುವ ಎಲೆಗಳು ಅವಿರತವಾಗಿ ಹೊಯ್ದಾಡುವ ನಾರಿಯರ ನಾಲಿಗೆಯೂ ಇವುಗಳಿಂದ ಮಾಡಲ್ಪಟ್ಟಿರಬಹುದೇ?

ಓಬಿಡನು ಒಂದು ಕ್ರೂರ ಸನ್ನಿವೇಶವನ್ನು ವರ್ಣಿಸುವಾಗ ನಾರಿಯೊಬ್ಬಳ ನಾಲಿಗೆಯನ್ನು ಕೊಯ್ದು ನೆಲದ ಮೇಲೊಗೆದಾಗ ಆ ಸ್ಥಿತಿಯಲ್ಲೂ ಅದು ಗೊಣಗುಟ್ಟುವುದನ್ನು ಬಿಡಲಿಲ್ಲವೆಂದು ತಿಳಿಸುತ್ತಾನೆ ಬಾಯಿಯು ಲ್ಲದ ನಾಲಿಗೆಯೊಂದೇ ಮಾತನಾಡಬಲ್ಲದಾದರೆ ಮಾತಿನ ಎಲ್ಲಾ ಉಪಕರಣಗಳನ್ನೂ ಸಹಾಯಗಳನ್ನೂ ಪಡೆದ ನಾಲಿಗೆಯು ಏನುಮಾಡೀತು, ಏನು ಮಾಡಲಿಕ್ಕಿಲ್ಲ?

ಇದನ್ನು ಯಾರು ಎಷ್ಟು ಹೊಗಳಿದರೂ ನಾನು ಮಾತ್ರ ಇದಕ್ಕಿರುವ ಅಸೂಯೆ, ಸಿಟ್ಟು, ದೂಷಣೆ, ಕೇಳು, ಸುಡಿ ನುಡಿಯುವಿಕೆ, ಒಣಮೈಮೆ ಇವುಗಳಿಂದಾದ ಅಪಸ್ವರಗಳನ್ನು ತಾಳಲಾರೆ ಸದ್ಗುಣ, ವಿನಯ, ಪ್ರೇಮ, ಲಜ್ಜೆ ಮೊದಲಾದ ದೈವೀಗುಣಗಳ ನೆಲೆಮನೆಯಾಗುವ ವರೆಗೂ ಇದನ್ನು ಸ್ವರ್ಗೀಯ ವಸ್ತುವೆನ್ನಲಾರೆ.

ಆದರೂ ಈ ಚಿಕ್ಕ ವಾದ್ಯಕ್ಕೆ ನಾನು ಮನಸೋತಿರುವೆನೆಂದು ಕೊನೆಯಲ್ಲಿ ಒಪ್ಪಿಕೊಳ್ಳದಿರಲಾರೆನು. ಅದನ್ನು ಪ್ರಶಂಸಿಸದಿರುವುದು ನನಗೆ ಉಚಿತವೂ ಅಲ್ಲ. ಇದರ ಧ್ವನಿಗೆ ಮರುಳಾಗಿ ನಮ್ಮ ನವೀನ ಕವಿಗಳೊಬ್ಬ ರೊಡನೆ "ಮುದದಮಲ್ಲಿ—ಮುದಮಲ್ಲಿ—ಮುದನೊತ್ತಲಾರ ನಾದ ಹಿದು. ಮುಂಚಿದೆಡೆಯಲ್ಲಿ "ಎಂದು ನಾನೂ ಧ್ವನಿಗೂಡಿಸುವೆನು. "ಸಹಯರಾದ ನೀವೂ ಸಹ 'ಎನಿತೊಂದು ಮೋಹನವೂ ಈ ದನಿಯೊಳು' ಎಂದೆನ್ನಬಹುದು. "ಭಾವನೆಯ ಭಾಷಣದಲ್ಲಿ ಮರುಳಿಲ್ಲವೆಂದು ತಿಳಿದಿರುವಾಗಲೂ ಸಹ ಅನೇಕರು ಅಲ್ಲಿಗೆ ಕಾಲಿಡುವುದಕ್ಕೆ ಇದರ ಮಹಿಮೆಯೇ ಕಾರಣವಲ್ಲವೇ?

ಜಿ. ಕೆ.

ಈ ಭಾರಿಯ ಎಸೆಂಬ್ಲಿ ಅಧಿವೇಶನದ ಅನುಭವ

ಮೂರು ತಿಂಗಳ ಹಿಂದೆ ಪ್ರಾರಂಭವಾದ ಎಸೆಂಬ್ಲಿ ಅಧಿವೇಶನವು ಮೊನ್ನೆ ತಾ. ೨೩ರಲ್ಲಿ ಮುಕ್ತಾಯವಾಯಿತು. ಈ ಮೂರು ತಿಂಗಳಲ್ಲಿ ಅನೇಕ ವಿಶೇಷ ಘಟನೆಗಳು ನಡೆದಿವೆ. ವಿರೋಧ ಪಕ್ಷದವರು, ಕಳೆದ ಅಧಿವೇಶನದಂತೆ, ಇದರಲ್ಲೂ ಬಹಳ ಯಶಸ್ವಿತೆಯಿಂದ ತಮ್ಮ ಧ್ಯೇಯವನ್ನು ಸಾಧಿಸಿರುವರು ವಿರೋಧ ಪಕ್ಷವು ಈ ಅಧಿವೇಶನದಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆಯಿತು.

ಕಾಂಗ್ರೆಸ್ ಪಂಗಡವು ಮಜೂರರ ವಿಚಾರದಲ್ಲಿ, ವಿವಿಧ ಮನಸ್ಕರಾದುದಲ್ಲದೆ, ಇತರ ರಾಷ್ಟ್ರೀಯ ಹಿತಕರ ವಿಚಾರಗಳಲ್ಲಿ ಬಹಳ ಐಕ್ಯದಿಂದ ಕಾರ್ಯ ಸಾಧಿಸಿದರು. ನ್ಯಾಶನಲಿಷ್ಟ ಪಂಗಡದವರು, ಕೋಮುವಾರ ಬೇದಗಳು ಒಳಗೆ ಒಂದು ಸಮಯದಲ್ಲಿ ಅಲ್ಲದೆ, ಇತರ ಎಲ್ಲಾ ಸಮಯದಲ್ಲಿ ತಮ್ಮ ಸಂಪೂರ್ಣ ಬೆಂಬಲವನ್ನು ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟಿದ್ದರು.

ಈ ಭಾರಿ ಹೆಚ್ಚಿನ ಲಕ್ಷ್ಯವನ್ನು ಪಡೆದುದು ಜಿನ್ನಾರವರ ಪಕ್ಷವು. ಇವರ ದೆಸೆಯಿಂದ [illegible]ಧ ಪಕ್ಷಕ್ಕೆ ಅನೇಕ ಜಯಗಳು ಲಭಿ[illegible] ಆದರೆ, ಇವರಲ್ಲದೆಯೂ, ವಿರೋಧ ಪಕ್ಷಕ್ಕೆ ಕೆಲವು ಜಯಗಳು ದೊರಕಿರುತ್ತವೆ ದೃಷ್ಟಾಂತವಾಗಿ,—ಶ್ರೀ ಸುಭಾಶ್ಚಂದ್ರ ಬೋಸರ ಬಂಧನದ ಕುರಿತು ಬಂದ ಠರಾವು, ಶ್ರೀ ಜಿನ್ನಾರವರು, ಯಾವತ್ತೂ ಪಕ್ಷವನ್ನು ಸೇರದೆ ಸುಮ್ಮನೆ ಕುಳಿತಿದ್ದರೂ ಮಂಜೂರಾತಿ ಹೊಂದಿರುತ್ತದೆ ಒಟ್ಟಾವಾ ಒಪ್ಪಂದದ ಚರ್ಚೆಯ ಕುರಿತು ಶ್ರೀ ಜಿನ್ನಾರವರ ವಿರೋಧ ಪಕ್ಷಕ್ಕೆ ವಚ್ಛ ಆಧಾರವಾಗಿದ್ದುದರಿಂದ ಒಟ್ಟೋವಾ ಒಪ್ಪಂದವು ಎಸೆಂಬ್ಲಿಯಲ್ಲಿ ತ್ಯಜಿಸಲ್ಪಟ್ಟಿತು. ಮುಂದಕ್ಕೆ ಕಾಂಗ್ರೆಸ್ ಪಕ್ಷದವರು ಯಾವತ್ತೂ ವಿಚಾರಗಳ ನಿರ್ಧಾರ ಮಾಡಬೇಕಾದರೆ, ಶ್ರೀ ಜಿನ್ನಾರವರ ಮತವನ್ನು ಕಾಯಬೇಕು ಇದರಿಂದ ಅವರ ವಿರೋಧ ಪಕ್ಷದ ಕಡೆಗಿನ ಉತ್ಸಾಹವು ಹೆಚ್ಚುವುದು. ಇವರ ಈ ಅಧಿವೇಶನದಲ್ಲಿನ ವರ್ತನೆಯಿಂದ ಸರಕಾರವು ಬೆರಗಾಗಿರುತ್ತದೆ ಒಟ್ಟೋವಾ ಚರ್ಚೆಯಲ್ಲಿ ಇವರು ೪೫ ನಿಮಿಷಗಳ ತನಕ ಮಾಡಿದ ಭಾಷಣವು, ಎಸೆಂಬ್ಲಿಯ ಚರಿತ್ರೆಯಲ್ಲಿ ಒಂದು ಪ್ರಾಮುಖ್ಯ ಸ್ಥಾನವನ್ನು ಹೊಂದುವುದರಲ್ಲಿ ಏನೂ ಸಂದೇಹವಿಲ್ಲ

ಒಟ್ಟೋವಾದ ಸೋಲಿನ ದಿವಸದಿಂದ, ಅಸೆಂಬ್ಲಿಯ ಕೊಮರ್ಸ ಸದಸ್ಯರು (ವ್ಯಾಪಾರ ಸದಸ್ಯರು) ಕರ್ಕಶ ಮನಸ್ಕರಾದರು ಕೋಮರ್ಸ ಮೆಂಬರರು ಮುಸ್ಲಿಮರಾಗಿದ್ದರು, ಇವರಿಗೆ ವಿರೋಧ ಪಕ್ಷವನ್ನು ಸೋಲಿಸಲು ಬೇಕಾದ ಓಟುಗಳನ್ನು ಮುಸ್ಲಿಮ ಸದಸ್ಯರಿಂದ ಪಡೆಯಲು ಸಾಧ್ಯವಾಗದೆ ಹೋಯಿತು. ಕೊಮರ್ಸ ಮೆಂಬರರಾದ ಶ್ರೀ ಜಫರುಲ್ಲಾ ಖಾನರು, ವಿರೋಧ ಪಕ್ಷದೊಡನೆ ಹಿತವಾದಿಗಳಾಗಿದ್ದಾರೆ. ಆದರೆ ಇವರು ಸ್ವತಂತ್ರರಾಗಿ ವರ್ತಿಸಲು ಯಾವುವೋ ಆತಂಕಗಳಿದ್ದಂತೆ ಭಾಸವಾಯಿತು ತನ್ನ ಸಹಾಯಕರ ಬೋಧನೆಗಳಂತೆ ವರ್ತಿಸುವರಾದರು. ಉದ್ಯೋಗಿಗಳನ್ನು ನೇಮಿಸುವ ವಿಚಾರದಲ್ಲಿ ಮುಸ್ಲಿಮರ ಮೇಲೆ ಇವರ ಅತಿರೇಕವಾದ ಪ್ರೀತಿಯಿದ್ದರೂ, ಮುಸ್ಲಿಮರ ಹಿತವಿಲ್ಲದ ನೇಮಕಗಳಲ್ಲಿ, ಭಾರತೀಯರದಾಗಿ ಬದಲಾವಣೆ ಮಾಡುವ ವಿಚಾರದಲ್ಲಿ ಇವರ ಉತ್ಸಾಹ ಕಡಿಮೆ

ಹೀಗೆ, ಭಾರತೀಯರಾದ ಅನೇಕ ಸರಕಾರಿ ಸದಸ್ಯರು, ಕೆಲವು ಉದ್ಯೋಗಗಳನ್ನು ಭಾರತೀಯರದಾಗಿ ಮಾಡುವ ವಿಚಾರದಲ್ಲಿ ಇದೇ ರೀತಿ ವರ್ತಿಸುತ್ತಿದ್ದಾರೆ ಭಾರತೀಯರೆ ಈ ರೀತಿಯಲ್ಲಿ ವರ್ತಿಸುತ್ತಿರುವಾಗ, ಆಂಗ್ಲೇಯರಿಂದ ಈ ಸಮಸ್ಯೆಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕುವುದೆ? ಈ ಆಂಗ್ಲೇಯ ಸದಸ್ಯರಿಗೆ, ಹಿಂದೂ ದೇಶದ ಕೈಗಾರಿಕೆಯ ಉನ್ನತಿಯ ವಿಚಾರದಲ್ಲಿ ಯಾವ ಮತವಿರುವುದೊ, ಅದೆ ಅಭಿಪ್ರಾಯವು ಈ ವಿಚಾರದಲ್ಲಿರುವುದು.

ಎನ್ ಎನ್ ಸರಕಾರ್ ರವರು ಅವರ ಕೆಲಬಾರಿನ ವಕ್ರ ಭಾಷಣಗಳ ಹೊರತು, ಇತರ ಎಲ್ಲಾ ಸಮಯ, ವಿರೋಧ ಪಕ್ಷದ ಪ್ರೀತಿಯನ್ನು ಪಡೆದಿರುವರು.

ಸರ್ ಹೆನ್ರಿ ಕ್ರೈಕ್ಕರು, ಕಾಂಗ್ರೆಸ್ಸನ್ನು ಹತ್ತಿರ ಕರೆಯುವ ಪ್ರಯತ್ನದಲ್ಲಿಲ್ಲವೆಂದು ವ್ಯಕ್ತವಾಗುತ್ತದೆ ಕಾಂಗ್ರೆಸ್ ಪಕ್ಷದೊಡನೆ,—ವಿರೋಧ ಪಕ್ಷದೊಡನೆ ಮೈತ್ರಿ ಬೆಳೆಯಿಸುವ ಉತ್ಸಾಹವು ಇವರಲ್ಲಿ ಕಾಣಿಸುವುದಿಲ್ಲ

ಸರ್ ಫ್ರೆಂಕ್ ನೋಯ್ಸರು, ಬಹಳ ಪ್ರಸಿದ್ಧತೆಯನ್ನು ಪಡೆದರು. ಇವರು ಯಾವತ್ತು ಪಕ್ಷವನ್ನು ದೂಷಿಸಿದವರಲ್ಲ ಆದರೆ ಕೆಲವು ಸರ್ತಿ ಇವರು ಉತ್ಸಾಹ ಕುಂದಿದವರಂತೆ ವರ್ತಿಸಿದರು ನವ ವೈಸರಾಯರಿಗೂ ಇವರಿಗೂ ಮುಂಚಿನಿಂದ ಸಂಬಂಧವಿರುವುದರಿಂದ (ಸಾಗುವಳಿಯ ರೋಯಲ್ ಕಮಿಶನಿನ ಕಾರ್ಯದರ್ಶಿಗಳಾಗಿ) ಇವರು ನವ ವೈಸರಾಯರ ಮೇಲೆ ಯೋಗ್ಯ ಪ್ರೇರಣೆಯನ್ನು ಉಪಯೋಗಿಸುವರೆಂದು ಭಾವಿಸಲಾಗಿದೆ. ಕಾಂ॥ ಪಕ್ಷಕ್ಕೂ ಸರಕಾರಕ್ಕೂ ಮೈತ್ರಿ ಉಂಟಾಗುವುದಾದರೆ ಸರ್ ಫ್ರೆಂಕ್ ನೊಯ್ಸರಿಂದ, ಸರ್ ಜೇಮ್ಸ್ ಗ್ರಿಗ್ ರಿಂದಲ್ಲ.

ಆರ್ಥಿಕ ಸದಸ್ಯರಾದ ಸರ್ ಜೇಮ್ಸ್ ಗ್ರಿಗ್ಗರು, ಈ ಭಾರಿ, ಎಸೆಂಬ್ಲಿ ಮೆಂಬರರಿಗೆ ಒಪ್ಪದಿರುವ ಮಾತುಗಳನ್ನು ತಮ್ಮ ಭಾಷಣಗಳಲ್ಲಿ ಉಪಯೋಗ ಮಾಡಿರುವರು ಒಂದು ಆಶ್ರಿತ ಜನಾಂಗವು ಸದಾ ಕಾಲ ಆಶ್ರಿತರಾಗಿರಬೇಕು. ಇವರ ಉದ್ದೇಶವೆಂದು ವ್ಯಕ್ತವಾಯಿತು ಕಾಂಗ್ರೆಸ್ಸು ಪಕ್ಷವು ನ್ಯಾಯಸಮ್ಮತವಾದ ಕೆಲಸ ಮಾಡಲಾರದೆಂದು ಇವರ ಅಭಿಪ್ರಾಯವಿದ್ದಂತೆ ಭಾಸವಾಗುತ್ತದೆ ಒಟ್ಟೋವಾ ಒಪ್ಪಂದವು ಬಿದ್ದು ಹೋಗಲು, ಶ್ರೀ ಜಿನ್ನಾರವರ ಭಾವಪೂರ್ವಕ ಭಾಷಣವು ಎಷ್ಟು ಪರಿಣಾಮಕಾರಿಯಾಯಿತೊ ಅಷ್ಟೆ ಆರ್ಥಿಕ ಸದಸ್ಯರ ವಕ್ರ ವರ್ತನೆಯು ಅದಕ್ಕೆ ಕಾರಣವಾಯಿತು ಕ್ವೆಟ್ಟಾ ಪುನರ್ರಚನೆಗೆ ಮೂಲಧನದಿಂದ ಹಣವನ್ನು ವಿಂಗಡಿಸಬೇಕೆಂಬ ಸರ್ ಕವಾಸ್ಜಿ ಜಹಾಂಗೀರ್, ರವರ ಠರಾವು ಅರ್ಥಾಣೆ ಕಾರ್ಡು, ಇವೆಲ್ಲಾ ಒಟ್ಟೋವಾ ಒಪ್ಪಂದದ ಕುರಿತು ಜಯಹೊಂದಲು ಸಹಕಾರಿಯಾಗುವ ಸಂಭವಗಳಿದ್ದುವು. ಉಪ್ಪಿನ ತೆರಿಗೆಯನ್ನು ರದ್ದು ಮಾಡುವ ವಿಚಾರ ಸರಕಾರದ ಸೋಲು, ಈ ಸದಸ್ಯರು ಮನಸ್ಸು ಮಾಡುತ್ತಿದ್ದರೆ ತಪ್ಪಿಸಬಹುದಿತ್ತು. ವ್ಯಾಪಾರ, ಕೈಗಾರಿಕೆ, ಇತ್ಯಾದಿ ವಿಚಾರಗಳಲ್ಲಿ, ಸರ್. ಜೇಮ್ಸ್ ಗ್ರಿಗ್ಗರೆ ಮುಖ್ಯ ಸ್ಥಾನವನ್ನು ಪಡೆದರು ಶ್ರೀ ಜಫುರುಲ್ಲಾ ಖಾನರು ಆಗಿಂದಾಗ್ಗೆ, ಬೋಧನೆಗಳಿಗಾಗಿ ತನ್ನ ಸಹಘಾಟಿಗಳಕಡೆಗೆ ಕೈಯೊಡ್ಡಬೇಕಾಯಿತು. ಸರ್ ಜೇಮ್ಸರ ಮಾತುಗಳಲ್ಲಿ ಬದಲಾವಣೆಯಾಗಬೇಕೆಂದು ಕೆಲವರ ಅಭಿಪ್ರಾಯ, ಎಕ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಅವರಿಗೆ ಅಷ್ಟು ಮುಖ್ಯ ಸ್ಥಾನ ಕೊಡುವುದು ಹಾನಿಕರವೆಂದು ಕೆಲವರ ಅಭಿಪ್ರಾಯ

ವಿರೋಧ ಪಕ್ಷದಲ್ಲಿ, ಶ್ರೀ ಸತ್ಯಮೂರ್ತಿಯವರು, ಬಹಳ ಕೀರ್ತಿಯನ್ನು ಪಡೆದಿರುವರು. ಪ್ರಶ್ನಾ ಸಮಯದಲ್ಲಿ ಇವರು ಬಹಳ ಕೀರ್ತಿಯನ್ನು ಪಡೆದರು ವಿರೋಧಪಕ್ಷದವರಿಗೆ ಒಪ್ಪುವ ಚಾತುರ್ಯವು ಇವರು ಪ್ರಕಟಮಾಡಿದರು. ಇವರ ಭಾಷಣಗಳ, ಬಹಳ ಉತ್ತಮವಾಗಿದ್ದವು ಎಲ್ಲಾ ವಿಷಯಗಳಿಂದ ಕೂಡಿದ್ದವು ಪಂಡಿತ ಗೋವಿಂದ ವಲ್ಲಭ ಪಂತರವರು ವಿರೋಧಪಕ್ಷದ ನಾಯಕರೆಂದೆನಿಸಿಕೊಂಡರು ಬಹಳ ಬುದ್ಧಿವಂತರಾದ ಇವರ ಭಾಷಣಗಳು, ಬಹಳ ಶ್ರದ್ಧೆಯಿಂದ ಕೇಳಲಾದವು.

ಕಾಂಗ್ರೆಸ್ಸ ಪಕ್ಷದ ಭಯವು ಸರಕಾರಕ್ಕೆ ಕಳೆದ ಅಧಿವೇಶನದ ಸಮಯದಲ್ಲಿದ್ದಕ್ಕಿಂತ ಸ್ವಲ್ಪ ಕಡಿಮೆಯಾದಂತೆ ಕಾಣಿಸಿತು ಅಂದರೆ ಕಾಂಗ್ರೆಸ್ಸಿಗೂ ಸರಕಾರಕ್ಕೂ, ಪರಸ್ಪರ ಮೈತ್ರಿ ಉಂಟಾಗುವ ಸಂಭವಗಳು ದಿನೇ ದಿನೇ ಕಡಿಮೆಯಾಗುತ್ತಾ ಬರುತ್ತವೆ ಕಾಂಗ್ರೆಸ್ಸಿನ ಪ್ರವರ್ತನೆಯಲ್ಲಿ ಸ್ವಲ್ಪ ಬದಲಾವಣೆಯಾಗಬೇಕಾಗುವುದು ಕಾಂಗ್ರೆಸ್ಸು ನವವೈಸರಾಯರೊಡನೆ ಯಾವ ರೀತಿ ವರ್ತಿಸುವುದೆಂದು, ಇನ್ನೂ ನಿರ್ಧಾರವಾಗಬೇಕಾಗಿದೆ ನವವೈಸರಾಯರು ತನ್ನ ಆಕಾಶವಾಣಿ ಭಾಷಣದಲ್ಲಿ ಆಡಿದ ಮಾತುಗಳಿಗೆ ಸರಿಯೆನಿಸುವ ರೀತಿಯಲ್ಲಿ ಎಕ್ಸಿಕ್ಯೂಟಿವ್ ಕೌನ್ಸಿಲಿನ ಸದಸ್ಯರು ವರ್ತಿಸುವಂತೆ, ಮಾಡುವರೆಂದು, ದೃಢವಾದ ನಂಬುಗೆಯು ಎಲ್ಲರಲ್ಲೂ ಇದೆ

'ಹಿಂದೂ ಪತ್ರಿಕೆಯಿಂದ'

ಈಗ ಅವಳ ಬಟ್ಟೆಗಳಿಗೆಲ್ಲಾ ಸನ್ಲೈಟೇ.

ಸನ್ಲೈಟನ ಅತಿನುಟ್ಟವಾದ ಜಿಗುಟು ಬಟ್ಟೆಗಳನ್ನು ಒಗೆಯುವದಕ್ಕೆ ತುಂಬ ಸಹಕಾರಿಯಾಗಿರುವುದು ಅದರ ಅಪರಿಮಿತವಾದ ನೊರೆಯು ಬಟ್ಟೆಗಳಲ್ಲಿರುವ ಮಲಿನತೆಯನ್ನು ತೊಲಗಿಸಿ ಎತ್ತಿ ಒಗೆಯುವದಕ್ಕೂ ಉಜ್ಜುವದಕ್ಕೂ ಅವಕಾಶಕೊಡದೆ ಅತಿಸುಲಭವಾಗಿ ಶುಭ್ರಮಾಡುವದು ಸನ್ಲೈಟಿನಿಂದ ಸಲವೆ ಮಾಡಿದ ಬಟ್ಟೆಗಳು ಪರಿಶುಭ್ರವಾಗಿರುವದಲ್ಲದೆ ನೋಡುವುದಕ್ಕೆ ಇಂಪಾಗಿಯೂ ಮತ್ತು ಪ್ರಕಾಶವಾಗಿಯೂ ಇರುವುವು. ನೀವು ಒಗೆಯುವುದಕ್ಕೆಲ್ಲಾ ಸನ್ಲೈಟಾಗಿರಲಿ ಅದನ್ನು ಯಾವಾಗಲೂ ನಿಮ್ಮ ಮನೆಯಲ್ಲಿ ಇಟ್ಟಿರಿ ಅದು ಈಗ ತುಂಬ ಸಲೀಸಾಗಿ ದೊರಕುವುದು

SUNLIGHT SOAP

1-S 1104-288A

LEVER BROTHERS (INDIA) LTD.

KANARESE

ಎಲ್ಲರೂ ಸ್ವಾತಂತ್ರಕ್ಕಾಗಿ ತಮ್ಮ ಮತವೀಯಬೇಕು!

ರೈತರಿಗೆ ಹಿತವೆನಿಸುವ ಸ್ವರಾಜ್ಯವು ನಮಗೆ ಬೇಕು!

ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಸಭೆಯು ವಾರ್ಧಾದಲ್ಲಿ ನಡೆಯಿತು.

ಬ್ರಿಟನು ಜನಾಂಗಸಭೆಯನ್ನು ತ್ಯಜಿಸುವುದೇ?

ನಾಗಪುರದಲ್ಲಿ ಶ್ರೀ ಪಂಡಿತ ಜವಾಹರ ಲಾಲ ನೆಹರುಗಳು.

ಸಾಹಿತ್ಯ ಪರಿಷತ್ತಿನ ಸಮ್ಮೇಲನಕ್ಕಾಗಿ ನಾಗಪುರಕ್ಕೆ ತೆರಳಿದ ಕಾಂಗ್ರೆಸ್ಸ ಅಧ್ಯಕ್ಷರಾದ ಶ್ರೀ ಜವಾಹರಲಾಲ ನೆಹರುಗಳವರು, ಮೊನ್ನೆ ತಾ. ೨೮ಕ್ಕೆ ಚಿತ್ನಾವಿಸ್ ಪಾರ್ಕಿನಲ್ಲಿ ೧೦೦೦೦ ಜನರು ನೆರೆದಿರುವ ಒಂದು ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ಸ ಪರವಾಗಿ ಒಂದು ಭಾಷಣ ವಿತ್ತರು ಹಿಂದೂದೇಶದಲ್ಲಿ ಇವತ್ತಿಗೆ ಬಹಳ ಸಮಯದಿಂದ ನಡೆದು ಬರುತ್ತಿರುವ ರಾಜಕೀಯ ಚಳವಳದಿಂದ ಅಲ್ಲಲ್ಲಿ ಅನೇಕ ಬದಲಾವಣೆಗಳಾಗಿವೆ. ಶ್ರಮಗಳೇನೂ ಜಯಶೀಲವಾದುದಿಲ್ಲ. ನಿಜ. ಆದರೆ, ಈ ಚಳವಳದಿಂದ ಸಮಸ್ತ ಜನಾಂಗದ ಬುದ್ಧಿಯು ವಿಕಾಸವಾಗಿರುತ್ತದೆ. ಸ್ವಾತಂತ್ರವನ್ನು ಪಡೆಯುವುದು ಈಗ ಎಲ್ಲರ ಮುಖ್ಯ ಧ್ಯೇಯವಾಗಬೇಕು. ಜನರ ಚಿತ್ತವನ್ನು ಬೇರೆ ಕಡೆಗೆ ಆಕರ್ಷಿಸುವಂತೆ ಮಾಡಲು, ಸರಕಾರವು ಕೋಮುವಾರು ಎವಾರ್ಡೆಂಬ ಯೋಜನೆಯನ್ನು ಹೂಡಿರುತ್ತದೆ. ಈ ಕೋಮುವಾರು ಎವಾರ್ಡ ಸ್ವಾತಂತ್ರಕ್ಕೆ ವಿರೋಧವಾದುದು ಈ ಕೋಮುವಾರು ಎವಾರ್ಡನ್ನು ಯಾವತ್ತೂ ಕಾಂಗ್ರೆಸ್ಸವಾಲರು ಆದರಿಸಲಾರರು. ಚುನಾವಣೆಯ ವಿಚಾರದಲ್ಲಿ, ಈಗಾಗಲೆ ಹಲಕೆಲವು ಭಂಗಗಳ ತಲೆದೋರಲು ಪ್ರಾರಂಭಿಸಿವೆ. ಇವೆಲ್ಲಾ ಕೊನೆಗೆ ಸರಕಾರಕ್ಕೆ ಆಧಾರ ಕೊಡುವ ಪಕ್ಷಗಳು. ಎಲ್ಲರೂ ಸ್ವಾತಂತ್ರಕ್ಕಾಗಿ ನಮ್ಮ ಮತವನ್ನು ಕೊಡಬೇಕು. ಬೇಗನೆ ಯುದ್ಧ ಪ್ರಾರಂಭವಾಗುವ ಸಂಭವಗಳಿವೆ. ಹಿಂದೂದೇಶವು ಆ ಸಮಯದಲ್ಲಿ ಹೇಗೆ ವರ್ತಿಸಬೇಕೆಂಬ ವಿಚಾರವು ಇನ್ನು ನಿಷ್ಕರ್ಷೆಯಾಗಬೇಕಾಗಿದೆ. ಯುದ್ಧದಲ್ಲಿ ಹಿಂದೂದೇಶವು ಭಾಗವಹಿಸಬೇಕೊ ಬೇಡವೆಂಬ ನಿರ್ಧಾರವನ್ನು ಮಾಡುವುದು, ವೈಸರಾಯರು ಯಾ ಸೆಕ್ರಟರಿ ಒಫ್ ಸ್ಟೇಟ್‌ರಲ್ಲ, ಅದು ಹಿಂದೀಯರಿಂದಲೆ ಇತ್ಯರ್ಥವಾಗಬೇಕು. ಲಕ್ನೊ ಕಾಂಗ್ರೆಸ್ಸಿನ ನಿರ್ಧಾರ ಮೇರೆಗೆ ಎಲ್ಲರೂ ಗ್ರಾಮೋಭ್ಯುದಯ ಕಾರ್ಯಕ್ಕೆ ಹೆಚ್ಚಿನ ಪ್ರೋತ್ಸಾಹಕೊಟ್ಟು ಈಗ ಕವಿದಿರುವ ನಿರುದ್ಯೋಗವನ್ನು ನಿವಾರಿಸಬೇಕು, ಎಂಬುದೆ ಅವರ ಭಾಷಣದ ಮುಖ್ಯ ಸಾರಾಂಶ.

ಮುಸ್ಲಿಮರಿಗೆ ಭಾಷಣ.

ಹಿಂದೂ ಮುಸ್ಲಿಮ ಎಂಬ ಈ ಎರಡು ಪಕ್ಷಗಳೆದುರಿರುವ ಸಮಸ್ಯೆಗಳನ್ನು ಸರಿಯಾಗಿ ಪರಿಶೀಲಿಸಿ ನೋಡಿದರೆ, ಅವುಗಳಲ್ಲಿ ಯಾವತ್ತೂ ಕೋಮುವಾರು ಬೇದದ ವಿಚಾರಗಳಿಲ್ಲವೆಂದು ವ್ಯಕ್ತವಾಗುತ್ತದೆ ಹಿಂದೂ ರೈತರಿಗೆ ಯೋಗ್ಯವೆನಿಸುವ ಒಂದು ಕ್ರಮವು ಮುಸ್ಲಿಮರಿಗೆ ಅಯೋಗ್ಯವೆನಿಸುವುದೆ? ಈಗಿನ ದುಸ್ಥಿತಿಯು ನಿವಾರಣೆಯಾಗಬೇಕಾದರೆ ಸರಕಾರವು ಸಂಪೂರ್ಣ ಮಾರ್ಪಾಟು ಹೊಂದಬೇಕು. ಸಮತಾವಾದವನ್ನು ಆಚರಿಸಿದ ವಿನಹ ಈಗಿನ ನಿರುದ್ಯೋಗವು ನಿವಾರಣೆಯಾಗದು ಎಲ್ಲರೂ ಸ್ವಾತಂತ್ರಸಾಧನೆಯನ್ನು ಮರೆಯಬಾರದು. ಪೂನೆಯಲ್ಲಿ ನಡೆದ ಹಿಂದೂ-ಮುಸ್ಲಿಮ ಗಲಭೆಯ ಕುರಿತು ವಿಷಾದಿಸಿದರು ಇದರಿಂದ ಇಂದಿಗೆ ೧೩ ವರುಷದ ಅನುಭವವು ನಿಷ್ಫಲವಾದಂತೆ ಭಾಸವಾಗುತ್ತದೆ. ಕೋಮುವಾರು ಎವಾರ್ಡಿನಿಂದ ದೇಶಕ್ಕೆ ಯಾವತರದ 'ಉತ್ತಮವಾಗುವುದಿಲ್ಲ" ಇದು ಶ್ರೀ ಜವಾಹರಲಾಲರು ಮುಸ್ಲಿಮರ ಸಭೆಯಲ್ಲಿ ಮಾಡಿದ ಭಾಷಣದ ಸಾರಾಂಶ.

ರೈತರ ಪರಿಷತ್ತು.

ನಾಗಪುರದಿಂದ ೧೮ ಮೈಲು ದೂರವಿರುವ ಬುಟಿಬೋರಿ ಎಂಬ ಹಳ್ಳಿಯಲ್ಲಿ ಜರಗಿದ ಒಂದು ರೈತರ ಪರಿಷತ್ತಿಗೆ ಶ್ರೀ. ಜವಾಹರಲಾಲ ನೆಹರುಗಳು ಆಗಮಿಸಿದ್ದರು. ಸಾಧಾರಣ ೫೦೦೦ ರೈತರು ನೆರೆದಿದ್ದರು. ಇವರು ನೆಹರುಗಳವರಿಗೆ ಯೋಗ್ಯ ಸ್ವಾಗತವನ್ನು ಕೊಟ್ಟರು. ರೈತರ ಅವಸ್ಥೆಯು ದಿನೇ ದಿನೇ ಕೆಡುತ್ತಿದೆ. ಎಷ್ಟರ ತನಕ ಅಧಿಕಾರವು ಧನಾಢ್ಯರಾದ ಕೆಲವೆ ಮಂದಿಗಳ ಕೈಗಳಲ್ಲಿರುವುದೊ ಅಷ್ಟರ ತನಕ ರೈತರು ಈಗಿನ ಸ್ಥಿತಿಯಿಂದ ವಿಮೋಚನೆಯಾಗುವಂತಿಲ್ಲ ರೈತರ ಕಷ್ಟ ನಿವಾರಣೆಯಾಗಬೇಕು. ಅವರೆ ಅವರ ಸರಕಾರವನ್ನು ನಡೆಯಿಸುವವರಾಗಬೇಕು. ಇದಕ್ಕೆನ್ನುತ್ತಾರೆ ಸ್ವರಾಜ್ಯವೆಂದು ಕಾಂಗ್ರೆಸ್ಸು ಈ ತರದ ಸ್ವರಾಜ್ಯವನ್ನು ಸಾಧಿಸುತ್ತದೆ. ರೈತರು ಸಣ್ಣ ಸಣ್ಣ ಸಭೆಗಳನ್ನು ರಚಿಸಿ ಕಾಂಗ್ರೆಸಿನೊಡನೆ ಸಹಕರಿಸಿ ಈ ಉದ್ದೇಶವನ್ನು ಸಾಧಿಸಬೇಕು' ಎಂಬುದು ಶ್ರೀ. ಜವಾಹರರು ಈ ಪರಿಷತ್ತಿನಲ್ಲಿ ಮಾಡಿದ ಭಾಷಣದ ಸಾರಾಂಶ.

ಇಲ್ಲಿಂದ ಶ್ರೀ ಜವಾಹರಲಾಲ ನೆಹರುಗಳವರು ಕಾಂಗ್ರೆಸ್ಸು ಕಾರ್ಯಕಾರಿ ಮಂಡಳದ ಸಭೆಗಾಗಿ ವಾರ್ಧಾಕ್ಕೆ ತೆರಳಿದರು.

ಕಾಂಗ್ರೆಸ್ಸ ಕಾರ್ಯ ಮಂಡಳದ ಸಭೆಯು ವಾರ್ಧಾದಲ್ಲಿ ನಡೆಯಿತು.

ಪ್ರಾಂತಿಕ ಮತ್ತು ಜಿಲ್ಲಾ ಕಾಂಗ್ರೆಸ್ಸ ಕಮಿಟಿಗಳು ಮುಂದಕ್ಕೆ ಯಾವ ರೀತಿಯಲ್ಲಿ ವರ್ತಿಸಬೇಕೆಂಬ ವಿಚಾರಗಳನ್ನು ಹೊಂದಿರುವ



ರೈತರ ವೇಶದಲ್ಲಿ:—ನವ ವೈಸರಾಯರು ಮುಂಬಾಯಿಯಲ್ಲಿ ಇಳಿಯುವ ಸಮಯ, ರೈತರ ಒಂದು ತಂಡವನ್ನು ಅವರೆದುರಿಗೆ ಇರಿಸಿದ್ದರು 'ಹಿಂದುಸ್ಥಾನ ಟೈಮ್ಸ್' ಡಿಲ್ಲಿಯ ಪ್ರಸಿದ್ಧ ಆಂಗ್ಲ ಪತ್ರಿಕೆಯ ವ್ಯಂಗ ಚಿತ್ರಕಾರರು, ಈ ಚಿತ್ರವನ್ನು ಬಿಡಿಸಿರುವರು—ವೈಸರಾಯರನ್ನು ಮೆಚ್ಚಿಸಲು, ಅವರ ಮಂತ್ರಿಮಂಡಳವು ರೈತರ ವೇಶವನ್ನು ಧರಿಸುವುದು.

ಅನೇಕ ವಿಚಾರಗಳು ಇಲ್ಲಿ ಚರ್ಚಿಸಲ್ಪಟ್ಟವು ಬಹೀರ್ ದೇಶಗಳಲ್ಲಿ ಹಿಂದೂದೇಶದ ಕುರಿತು ಪ್ರಚಾರಕಾರ್ಯವನ್ನು ಕಾಂಗ್ರೆಸ್ಸು ನಡೆಯಿಸುವ ವಿಚಾರವು ಚರ್ಚಿಸಲಾಯಿತು. ಈ ಈ ಕಾರ್ಯಕ್ಕಾಗಿ ಓರ್ವ ಉದ್ಯೋಗಸ್ತರನ್ನು ನೇಮಿಸಬೇಕೆಂಬ ನಿರ್ಧಾರವಾಗಿರುತ್ತದೆ. ಈ ಪ್ರಚಾರಕಾರ್ಯವನ್ನು ನಡೆಯಿಸುವ ವಿಚಾರವನ್ನು ಕಮಿಟಿಯವರು, ಸಂಪೂರ್ಣವಾಗಿ ಅಧ್ಯಕ್ಷರಿಗೆ ಒಪ್ಪಿಸಿ ಬಿಟ್ಟಿರುತ್ತಾರೆ. ನಂತರ 'ವ್ಯವಸ್ಥಾಪನಾ ಕಮಿಟಿ'ಗಳ ಕುರಿತು ಚರ್ಚೆ ನಡೆಯಿತು. ಈ ವಿಚಾರದಲ್ಲಿ ಸಮತಾವಾದಿಗಳ ಅಭಿಪ್ರಾಯ ಬೇರೆ ಇರುವುದರಿಂದ, ಯಾವತ್ತೂ ದೃಢನಿಶ್ಚಯಗಳಾಗಲಿಲ್ಲ. ಇದು ಕಾಂಗ್ರೆಸ್ ಕಾರ್ಯಕ್ಕಾಗಿ ಕಾಯಂ ಕೆಲಸ ನಡೆಯಿಸಲು ಸ್ವಯಂಸೇವಕರನ್ನು ನೇಮಿಸುವ ವಿಚಾರವನ್ನು ಅನ್ವಯಿಸುತ್ತದಂತೆ. ಸಮತಾವಾದಿಗಳು ಕಾಂಗ್ರೆಸ್ಸಿನ ಎಲ್ಲಾ ಕಮಿಟಿಗಳಲ್ಲಿ ಪ್ರಾತಿನಿಧ್ಯ ಸಿಕ್ಕುವಂತೆ ಪ್ರಯತ್ನಪಡುತ್ತಿದ್ದಾರೆ.

ಕಾಂಗ್ರೆಸ್ಸಿಗೂ, ಭೂರಿ ಜನರಿಗೂ ಸಂಬಂಧ ಬೆಳೆಯುವಂತೆ ಸಾಧಿಸಲು ಒಂದು ಉಪಸಮಿತಿಯು ರಚಿಸಲಾಯಿತು. ಶ್ರೀಗಳಾದ ಬಾಬು ರಾಜೇಂದ್ರ ಪ್ರಸಾದ, ಜಯರಾಮದಾಸ್, ದೌಲತ್ ರಾಮ, ಜಯಪ್ರಕಾಶ, ಇವರೆ ಈ ಸಮಿತಿಯ ಸದಸ್ಯರು. ಕಾಂಗ್ರೆಸ್ಸಿಗೂ ಮಜೂರರ ಸಂಘಗಳಿಗೂ, ರೈತರಿಗೂ ಒಳ್ಳೆ ಸಂಬಂಧವುಂಟಾಗುವಂತೆ ಈ ಸಮಿತಿಯು ಸಾಧಿಸುವುದು.

ಮಹಾತ್ಮಾಜಿಯವರ ಮುಂದಿನ ಕಾರ್ಯಕ್ರಮ.

ಮಹಾತ್ಮಾಜಿಯವರು ಮತ್ತೊಮ್ಮೆ ರಾಜಕೀಯ ರಂಗಕ್ಕೆ ಇಳಿಯುವುದಿಲ್ಲ. ಇನ್ನುಳಿದ ಸಮಯವನ್ನು ಹಳ್ಳಿಗಳಲ್ಲಿ ಕಳೆಯಬೇಕೆಂದು ನಿರ್ಧಾರಮಾಡಿರುವರು. ಆರೋಗ್ಯಕ್ಕಾಗಿ ಕೆಲ ಸಮಯ ಮೈಸೂರು ನಂದಿಗುಡ್ಡೆಗಳಲ್ಲಿ ವಾಸಮಾಡುವರು. ನಂತರ ವಾರ್ಧಾದಿಂದ ೩ ಮೈಲು ದೂರವಿರುವ ಶ್ರೀಮತಿ ಮೀರಾ ಬೆನ್ನಾ ಕಾರ್ಯ ನಡೆಯಿಸುತ್ತಿರುವ ಸಿಗಾಂ ಹಳ್ಳಿಯಲ್ಲಿ ನೆಲಸುವರು ಆದರೆ ಮಹಾತ್ಮಾಜಿಯವರು ರಾಜಕೀಯ ವಿಚಾರಗಳಲ್ಲಿ ತನ್ನ ಮಿತ್ರರಿಗೆ ಬೋಧನೆಕೊಡಲು ಸಿದ್ಧರಿದ್ದಾರೆ

ಬ್ರಿಟನು ಮತ್ತು ಜನಾಂಗಮಂಡಳ

ಜನಾಂಗಸಭೆಯು ಇಟೇಲಿಯ ಮೇಲೆ ಇನ್ನೂ ಕಠಿಣವಾದ ಸೆಂಕ್ಷನುಗಳನ್ನು ಜ್ಯಾರಿ ಮಾಡಬೇಕಾಗಿ ಹಲವು ಜನಾಂಗವು ಕಂಡ ಸಲಹೆಗಳನ್ನು ಜನಾಂಗಸಭೆಯು ಮನ್ನಿಸದಿದ್ದರೆ, ಬ್ರಿಟನು ಜನಾಂಗಸಭೆಯನ್ನು ತ್ಯಜಿಸಿ, ಬಹಿರ್ವ್ಯವಹಾರದಲ್ಲಿ ಸ್ವತಂತ್ರರಾಗಿ ವರ್ತಿಸುವ ವಿಚಾರವನ್ನು ಬ್ರಿಟಿಷ್ ಸರಕಾರವು ಬೇಗನೆ ಪ್ರಕಟನೆಮಾಡಬೇಕೆಂದು, ಪಾರ್ಲಿಮೆಂಟಿನಲ್ಲಿ ಓರ್ವ ಲೇಬರ್ ಸದಸ್ಯರು ಸೂಚಿಸಲು ಮಿ ಎಡೆನ್ನರು-'ಜಿನಿವಾದಲ್ಲಿ' ನಡೆದ ಇಟೇಲಿ-ಹಬಸಿ ಕಲಹದ ಕುರಿತು ಮಾತುಕತೆಗಳನ್ನೂ ಘಟನೆಗಳನ್ನೂ ಬ್ರಿಟಿಷ್ ಸರಕಾರವು ಇತಿ ಜಾಗರೂಕತೆಯಿಂದ ಪರಿಶೀಲಿಸಿ, ನಂತರ ಬಹಿರ್ವ್ಯವಹಾರದ ಕುರಿತು ತನ್ನ ವರ್ತನೆಯನ್ನು ರೂಪಿಸುವುದೆಂದು ಉತ್ತರವಿತ್ತಿರುವರು

ಮದ್ರಾಸು ಸರಕಾರದ ಪಾರ್ಲಿಮೆಂಟಿನ ಕಟ್ಟಡ

ನವರಾಜಶಾಸನದ ಪ್ರಕಾರ ನಿರ್ಮಾಣವಾಗುವ ಮದ್ರಾಸು ಪ್ರಾಂತೀಯ ಪಾರ್ಲಿಮೆಂಟಿಗೆ ಒಂದು ಹೊಸ ಕಟ್ಟಡವು ರಚಿಸಲಾಗುವುದು ಇದನ್ನು ಮಿಲಿಟರಿಯವರ ವಶದಲ್ಲಿ ಮದ್ರಾಸಿನ ಸಮುದ್ರಕಿನಾರೆಯ ಹತ್ತಿರವಿರುವ ನೆಪಿಯರ್ ಛತ್ರಿಯ ಹತ್ತಿರ ಕಟ್ಟಿಸುವರು. ಇದಕ್ಕೆ ಸಾಧಾರಣ ೨೦ ಲಕ್ಷ ರೂಪಾಯಿ ವೆಚ್ಚ ತಗಲುವುದು. ರಚನಾ ಕಾರ್ಯವು ಬೇಗನೆ ಪ್ರಾರಂಭವಾಗುವುದು.

N.I.P.
Petral (Ready Delivery)
Kerosene & Diesel Oils.
FOR RATES AND AGENCY TERMS APPLY
International Oil Co. Ltd
JIJI HOUSE, RAVELIN STREET, FORT BOMBAY.

ಹರಿಜನರಿಗೆ ಉಳಕೊಳ್ಳಲು ಸ್ಥಳಗಳು.

ಮದ್ರಾಸು ಸರಕಾರವು ಹರಿಜನರು ಉಳಕೊಳ್ಳಲು ಪಡಕೊಳ್ಳುವ ಸ್ಥಳಗಳ ಕ್ರಯವನ್ನು ಹೊರಬೇಕಾಗಿ ನಿರ್ಣಯವಿರುತ್ತದೆ. ಸ್ಥಳದ ಕ್ರಯವು, ಒಣ ನೆಲವಾದರೆ ಎಕ್ರೆ ಒಂದರ ರೂ ೧೨೫, ನೀರಿರುವ ಸ್ಥಳವಾದರೆ ಎಕ್ರೆ ಒಂದರ ರೂ ೨೫೦ ಮೀರಬಾರದು. ಸ್ಥಳದ ಕ್ರಯದ ಅರ್ಧಾಂಶವನ್ನು ಸರಕಾರವು ವಹಿಸುವುದು. ಉಳಿದ ಕ್ರಯವನ್ನು ಹರಿಜನರು ಕಂತಿನಲ್ಲಿ ಪಾವತಿಮಾಡತಕ್ಕದು

ಇನ್ನೂ ಕೆಲವು ಕೋಮುವಾರು ಗಲಭೆಗಳು

ಬಿಹಾರದಲ್ಲಿ

ಎಪ್ರಿಲ್ ತಾ ೨೫ರಲ್ಲಿ ಬಿಹಾರಿನ ಮೊಂಗಿಯರ್ ಜಿಲ್ಲೆಯ ಜಮಾಲಪುರ ಎಂಬಲ್ಲಿ, ಒಂದು ಮದುವೆ ದಿಬ್ಬಣವು ಒಂದು ಮಸೀದಿ ಮುಂದುಗಡೆಯಿಂದ ಹಾದು ಹೋಗುತ್ತಿರುವುದು ಗಲಭೆಗೆಕಾರಣವಾಗಿ, ಓರ್ವ ಹಿಂದೂವು ಇತರ ಅನೇಕ ಮಂದಿಗಳು ಗಾಯಹೊಂದಿರುವರು ಪೋಲೀಸ್ ಅಧಿಕಾರಿಗಳು ಈ ಗಲಭೆಯನ್ನು ತಣಿದರು ಈಗ ಅಲ್ಲಿ ಶಾಂತತೆಯು ತಲೆದೋರಿದೆ ಸರಕಾರಿ ಅಧಿಕಾರಿಗಳು ತನಿಖೆ ನಡೆಯಿಸುತ್ತಿದ್ದಾರೆ.

ಜಬಲಪುರಿ ಗುರಿ

ಎಪ್ರಿಲ್ ತಾ ೨೫ರಲ್ಲಿ ಬೆಳಿಗ್ಗೆ ಸಾಧಾರಣ ಘಂಟೆ ೧೦ಕ್ಕೆ ಮಾರವಾರಿಯವರ ಒಂದು ಮದುವೆಯ ದಿಬ್ಬಣವು, ಒಂದು ಮಸೀದಿಯ ಎದುರಿನಿಂದ ಹೋಗುತ್ತಿರುವಾಗ ಮುಸ್ಲಿಮರು ಮಸೀದಿಯಿಂದ ಹೊರಬಂದು, ಸಂಗೀತವನ್ನು ನಿಲ್ಲಿಸಲು ವಿಜ್ಞಾಪಿಸಿದರು. ಮೆರವಣಿಗೆಯೊಂದಿಗೆ ಬಂದ ಪೋಲೀಸರು ಸಂಗೀತವನ್ನು ನಿಲ್ಲಿಸಿದರು ಆದರೂ ಮೆರವಣಿಗೆಯ ಜನರ ಮೇಲೆ ಕಲ್ಲು ಇತ್ಯಾದಿ ಸಾಮಾನುಗಳು ಎಸೆಯಲಾದುವು ಒಬ್ಬನಿಗೆ ಮಾತ್ರ ಗಾಯವಾಗಿದೆ. ಪೋಲೀಸರು ಗಲಭೆಯಾಗದಂತೆ ಜಾಗ್ರತೆ ತೆಗೆದುಕೊಂಡಿರುವರು.

ಬೆಳಗಾಂ

ಬೆಳಗಾಂವಿನ ಕ್ಷಾನಪುರವೆಂಬಲ್ಲಿ ಮೊನ್ನೆ ತಾ. ೨೬ರಲ್ಲಿ ಒಂದು ಹಿಂದೂ-ಮುಸ್ಲಿಮ ಗಲಭೆಯು ನಡೆಯಿತು. ಇಕ್ಕಡೆಯಲ್ಲಿ ಮೂರು ಮಂದಿಗಳು ಜಖಂ ಹೊಂದಿರುವರು. ಹಿಂದೂಗಳು ಬಸವೇಶ್ವರನ ರಥವನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಿರುವಾಗ, ಕೆಲಮಂದಿ ಮುಸ್ಲಿಮರು ಅವರ ಮೇಲೆ ಅಕ್ರಮ ನಡೆಸಿದುದರಿಂದ ಗಲಭೆಯು ಉಂಟಾಯಿತು. ಗಲಭೆಯನ್ನು ಈಗ ತಣಿಸಿರುತ್ತಾರೆ ಪೋಲೀಸ್ ಸುಪರಿಂಟೆಂಡೆಂಟರು ತನಿಖೆ ನಡೆಸಿದರು.

ಗೊಡ್ರೆಜರ ಭಾರತಪ್ರಸಿದ್ಧವಾದ ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊಡ್ರೆಜ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪಂಡಿತರೂ ಆದೊಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ. ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು

ಗೊಡ್ರೆಜ್

ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ

ಬರ್ಲಿನ್ ಚೇಂಬರ್ ಒಫ್ ಕಾಮರ್ಸ್ ಇವರಿಂದ ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸಪರಿಮೆಂಟಲ್ ಕೆಮಿ

ಮೈಕ್ರೊಸ್ಕೊಪಿ ಎಂಡ್ ಬೆಕ್ಟೀರಿಯೋಲೊಜಿ ಇವುಗಳ ರಸಾಯನಶಾಸ್ತ್ರಿಗಳಾಗಿರುವ

ಡಾ| ಲಿಫ್ರೆಟ್ಸ್ ಎಂಬವರು:—"ನಾನು ಗೊಡ್ರೆಜ್ ವೆಜಿಟೇಬಲ್ ಟ್ಯೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು. ನನ್ನ ಅಭಿಪ್ರಾಯದಂತೆ ಅವುಗಳು ಸ್ಟೆಫ್ಲೊಕೊಕಸ್ ಮತ್ತು ಸ್ಟಫಿಲೊಕಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ ಉಸುರ್ಸ್ ಎಂಬವರು:—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು.

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್‌ಸನ್‌ರವರು:—"ಗೊಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ" ಎಂದರು.

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

ಡಾ| ಎಂ ಎ. ಅನ್ಸಾರಿ, ಎಂ. ಡಿ ಎಂ ಎಸ್ ರವರು:—"ಗೊಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ. ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು

ಫೆಕ್ಟರಿ:—**ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಿಲಿಸಲ್ ರೋಡ್, ಮುಂಬಾಯಿ.

ಸೋಲ್ ಏಜಂಟರು:—**ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

ಕೆ. ಸಿ. ಬೆನರ್ಜಿಯ ದೇಶಪರ್ಯಟನ.

ಚೀನಿ ದರೋಡೆಗಾರರ ಬಂದೂಕುಗಳಿಂದ ಸುರಕ್ಷಿತವಾಗಿ ಬಂದು, ಕ್ರೂರ ಮೃಗಗಳ ಹಿಂಸೆಯಿಂದ ಪಾರಾಗಿ ತನ್ನ ಸ್ವತ್ತುಗಳೆಲ್ಲವನ್ನೂ ಕಳೆದುಕೊಂಡು, 28000 ಮೈಲು ಪ್ರಯಾಣವನ್ನು ಬೆಳಸಿ ಹಿಂದೂ ದೇಶವನ್ನು ಪುನಃ ಸೇರಿದ ಬಂಗಾಳಿ ತರುಣನಾದ ಶ್ರೀ ಕೆ. ಸಿ. ಬೆನರ್ಜಿ ಎಂಬವನೇ ಸಾಹಸಿಯು. ಸರಿ ಇಂದಿಗೆ ೩ ವರುಷಗಳ ಹಿಂದೆ ಅಂದರೆ ೧೯೩೦ ರಲ್ಲಿ ಬೆನರ್ಜಿಯಲ್ಲಿ ದೇಶಸಂಚಾರದ ಸ್ಫೂರ್ತಿಯು ಜಗ್ಗನೆ ಎದ್ದಿತು. ಕಾಲ್ನಡೆಯಿಂದಲೆ ಕೆಲವು ದೇಶಗಳನ್ನು ನಡೆಯಬೇಕೆಂದು ಅವನ ನಿರ್ಧಾರವಿತ್ತು. ಮಧ್ಯ ಹಿಂದೂಸ್ಥಾನ ಮತ್ತು ಉತ್ತರ ಹಿಂದೂಸ್ಥಾನದ ಪ್ರಯಾಣದ ನಂತರ ಅವನು ರಂಗೂನಿಗೆ ತೆರಳಿದನು. ಅಲ್ಲಿ ಅವನು ಒಂದು ಸೈಕಲನ್ನು ಪಡೆದುಕೊಂಡು ಮುಂದಿನ ಸಂಚಾರವನ್ನು ಅದರ ಅದರಲ್ಲಿಯೇ ಪೂರೈಸಿದನು. ಬರ್ಮಾ, ಚೈನಾ, ಸಿಯಾಮ್, ಮಂಚೂರಿಯಾ, ಕೊರಿಯಾ, ಜಪಾನ, ಫಿಲಿಫೈನ್ ದ್ವೀಪಗಳನ್ನು ಬೋರ್ನಿಯೋ ಸೆಲಿಬಸ, ಬಾಲಿ, ಜಾವಾ, ಸುಮಾತ್ರಾ ಮತ್ತು ದ್ವೀಪಗಳನ್ನು ಇವನ್ನೆಲ್ಲಾ ಸಂದರ್ಶಿಸಿ ಕಳೆದ ಮಾರ್ಚಿ ತಾ. ೯ಕ್ಕೆ ಮದರಾಸನ್ನು ತಲಪಿದನು. ಜಪಾನಿನಲ್ಲಿರುವಾಗ ಅಲ್ಲಿಂದ ರಷ್ಯಕ್ಕೆ ತೆರಳಲು ಬಹು ಪ್ರಯಾಸಪಟ್ಟನಂತೆ ಆದರೆ ಪಾಸ್‌ಪೋರ್ಟ್ ಸಿಗದ ಕಾರಣ ಸಾಧ್ಯವಾಗಲಿಲ್ಲ. ಮಂಗೋಲಿಯದ ಗಡಿಪ್ರಾಂತದಲ್ಲಿರುವಾಗ ಚೀನಾ ದೇಶದ ದರೋಡೆಗಾರರು ಅವನನ್ನು ಹಿಡಿದು ಗುದ್ದಿದರಂತೆ. ಆದರೂ ಉಪಾಯಾಂತರದಿಂದ ಅವರಿಂದ ತಪ್ಪಿಸಿ ಬಂದ ಧೀರ ಬೆನರ್ಜಿ ಕಡೆಗವನು ಮದ್ರಾಸಿನಿಂದ ತನ್ನ ಊರಾದ ಕಲ್ಕತ್ತೆಗೆ ತೆರಳಿರುವನು. ಸ್ವಲ್ಪ ವಿಶ್ರಾಂತಿಯನ್ನು ಪಡೆದ ನಂತರ ಪುನಃ ಪ್ರಯಾಣಕ್ಕೆ ತೆರಳಬೇಕೆಂಬ ಬಲವಾದ ಇಚ್ಛೆ ಅವನಲ್ಲಿರುವುದಾಗಿ ತಿಳಿದು ಬರುತ್ತದೆ. ಮುಂದಿನ ಪ್ರಯಾಣ ಪ್ರದೇಶ ಆಫ್ರಿಕವಾಗಿರುವುದು. ಕಳೆದ ಸಂಚಾರದಲ್ಲಿ ೧೧,೦೦೦ ಮೈಲು ಕಾಲ್ನಡೆಯಿಂದಲೂ ೧೩,೦೦೦ ಮೈಲು ಸೈಕಲಿನಿಂದಲೂ ಪ್ರಯಾಣ ಮಾಡಿರುವುದಾಗಿ ತಿಳಿದು ಬರುತ್ತದೆ.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸು,

ಚಿ ಕ್ಕ ಮ ಗ ಳೂ ರು .

ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬಾಯಿ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟರ ಸರ್ವೀಸುಗಳು.

ಮುಂಬಾಯಿಯಿಂದ—ಪೂನಾ—ಬೆಳಗಾಂವ—ಧಾರವಾಡ—ಹುಬ್ಬಳ್ಳಿ—ಗೋವಾ ಇವಲ್ಲ ಕಡೆಗಳಿಂದ,

ಮಂಗಳೂರಿಗೆ—ಪುತ್ತೂರು—ಉಡುಪಿ—ಕಾರ್ಕಳ—ಬೆಳಂಗಡಿ—ವೇಣೂರು—ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

ತೀವ್ರ ಪ್ರಯಾಣ· ಅನುಕೂಲ ಸೌಕರ್ಯ· ಅತ್ಯಲ್ಪ ಖರ್ಚು· ಸುಂದರವಾದ ನೋಟ.

ಅಲ್ಲದೆ

ಮೈಸೂರಿನ ಅರಸರ ಶಕೆಕಾಲದ ವಾಸಸ್ಥಾನವಾದ ಮತ್ತು ಕಬ್ಬಿಣದ ಗನಿಯಾದ ಕೆಮ್ಮಣ್ಣು ಗುಂಡಿ—ಯಾತ್ರಾಸ್ಥಳವಾದ ಬಾಬಾ ಬುಡಾನಗಿರಿ—ಶೃಂಗಾರಿಕೆಯ ಕೇಂದ್ರವಾದ ಭದ್ರಾವತಿ—ಶಿಲಾಶಿಲ್ಪದ ಬೇಲೂರು, ಹಳೆಬೀಡು—ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪತಿಮ ಘಟ್ಟಗಳು

ಇವಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ

Chikmagalur Public Conveyance Motor Service.

CHIKMAGALUR

ಸಂಪಾದಕರ ಟಪಾಲು ಪೆಟ್ಟಿಗೆ.

ಪತ್ರಲೇಖಕರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.—ಸಂ. ಸ್ವ.

ದ. ಕ. ಜಿಲ್ಲಾ ಬಸ್ಸು ವ್ಯಾಪಾರದ ಅವಗಾಹನೆ ಬಗ್ಗೆ

ಅಯ್ಯಾ,

ಈಚೆಗೆ ಹಲವು ಬಸ್ಸುಗಳಲ್ಲಿ ಸೀಟುಗಳನ್ನು ಕಲ್ಪಿಸುವ ಸರಳುಗಳಿಂದ ಪ್ರತ್ಯೇಕ ಪ್ರತ್ಯೇಕ ಪ್ರಯಾಣಿಕರಿಗೆ ಭಾಗಗಳನ್ನು ವಿಂಗಡಿಸಲಾದವಷ್ಟೆ. ಪ್ರಯಾಣಿಕರೆಲ್ಲರಿಗೆ ಒಂದೇ ಪ್ರಮಾಣದ ಭಾಗಗಳನ್ನು ಈ ರೀತಿ ವಿಂಗಡಿಸಿರುವುದರಿಂದ ಓಡಿ ಆಡ್ಡಾಡುವ ಬಸ್ಸುಗಳಲ್ಲಿ ಕೂತ ಪ್ರಯಾಣಿಕರ ಅವಸ್ಥೆ ಹೇಗಾಗುವುದೆಂದು ನೀವಿನ್ನಾದರೂ ಅರಿತಿರುವಿರಾ? ನಾನು ಈಚೆಗೆ ಇಂತಹದ್ದೊಂದು ಬಸ್ಸಿನಲ್ಲಿ ಮಂಗಳೂರಿನಿಂದ ಕಾರ್ಕಳ ದಾರಿಯಾಗಿ ಉಡುಪಿಗೆ ಪ್ರಯಾಣ ಬೆಳೆಸುತ್ತಾ ಸುಮಾರು ೪ ತಾಸುಗಳ ಅವಧಿಯ ಅನುಭವವನ್ನು ಏನೆಂದು ವರ್ಣಿಸಲಿ! ಅದಕ್ಕಿನ್ನಬೇಕು—ದುಡ್ಡು ಕೊಟ್ಟು ಬಂಧಿವಾಸ! ಈ ಏರ್ಪಾಟಿಗೆ ಕಾರಣರು ಸರಕಾರದವರೆನ್ನುವಿರಾದರೂ, ಇದರಿಂದ ಪ್ರಯಾಣಿಕರಿಗಾಗುವ ಸುಖ ಅಥವಾ ಕಷ್ಟದ ಪರಿಣಾಮವನ್ನಾದರೂ ಆಲೋಚಿಸಬೇಡವೆ? ಇದಕ್ಕೆ ಮೊದಲು ೩—೪ ತಿಂಗಳುಗಳಿಂದಲೂ ತಕರಾರು ಮಂದಿ ಈ ಕಷ್ಟಕ್ಕೆ ಸಿಲುಕಿ ಘಾಸಿಗೊಂಡಿದ್ದರೂ ಯಾರೊಬ್ಬರೂ ಇದರ ಬಗ್ಗೆ ಸಂಬಂಧಪಟ್ಟವರಿಗೆ ಏಕೆ ಅರುಹಲಿಲ್ಲವೋ? ಪ್ರಯಾಣ ಸೌಕರ್ಯವನ್ನೊದಗಿಸುತ್ತೇವೆಂದು ಹಣ ಪಡೆದು, ಪ್ರಯಾಣಿಕರಿಗೆ ಈ ಅಸೌಕರ್ಯವನ್ನುಂಟುಮಾಡುವುದರ ಸ್ವಾರಸ್ಯವೇನು? ಇನ್ನಾದರೂ ಸಂಬಂಧಪಟ್ಟವರು ಇದರ ಕುರಿತು ಸಮಾಲೋಚಿಸಿ ಈ ಕಷ್ಟವನ್ನು ನೀಗಿಸಲು ಪ್ರಯತ್ನಿಸುವರೆ?

ಬಸ್ ಪ್ರಯಾಣಿಕ.

ಕಲ್ಯಾಣಪುರ ಪಂಚಾಯತ ಬೋರ್ಡು

ಅಯ್ಯಾ ಸಂಪಾದಕರೇ,

ನವಸ್ಫೂರಣೆಯ ನೂತನ ರೀತಿಯ ವಾತಾವರಣವು ಪಸರಿಸುತ್ತಿರುವ ಈ ನವಯುಗದಲ್ಲಿ ವಿವಿಧ ಬದಲಾವಣೆಗಳ ಆವಶ್ಯಕತೆ ಇದೆಯಷ್ಟೆ! ಈ ಮಾದರಿಗೆ ಅನುಸಾರವಾಗಿ ಈಗ ಅಲ್ಲಲ್ಲಿ ಕಂಡುಬರುವಂತೆ, ನಮ್ಮ ಕಲ್ಯಾಣಪುರದಲ್ಲಿಯೂ ಕಳೆದ ಸುಮಾರು ಮೂರು ತಿಂಗಳುಗಳ ಹಿಂದೆ ಒಂದು ಪಂಚಾಯತ ಬೋರ್ಡ್ ನೇಮಕವಾಗಿಯದೆ. ಇದು ಸ್ಥಾಪಿತವಾದುದು ಇತ್ತೀಚೆಗಾದರೂ ಇದರ ಮೆಂಬರರುಗಳ ಸಹಕಾರದಿಂದ ಉತ್ಸಾಹ ಭರಿತರಾಗಿ ಇಂದಿನ ವರೆಗೆ ಸಾಗಿದ ಕಾರ್ಯಸಾಗಣೆಯು ಚಿಕ್ಕದಾದ ಈ ಗ್ರಾಮವನ್ನು ತುಂಬಿ ಮೀರಿ ಮಿಕ್ಕಿ ಹರಿಯುತ್ತಿದೆ. ಲೌಕಿಕರು ತಲೆತೂಗುವಂತಾಗಿಯದೆ. ಈ ಬೋರ್ಡಿನ ಸಭೆಗಳು ಹಲವು ಸೇರಿದ್ದು, ಠರಾವುಗಳ ಸುರಿಮಳೆಯ ಪ್ರತಿಫಲವಾಗಿ ಗ್ರಾಮೋದ್ಧಾರವೆಂಬ ನೀರಿನ ಪ್ರವಾಹವು ಹಾದಿಬೀದಿಗಳಲ್ಲಿ ಮಾತ್ರವೇ ಅಲ್ಲದೆ ರಸ್ತೆ ಬದಿಗಳಲ್ಲಿಯೂ ತುಂಬಿಹರಿದು ಗ್ರಾಮಸ್ಥರನ್ನು ಆವಾಕ್ಕಾಗಿ ಮಾಡಿರುವುದೆಂದರೂ ಅತಿಶಯೋಕ್ತಿಯಾಗಲಾರದು. ಪಥಿಕರು ಸಾಗುವಂತೆ ಕಲ್ಯಾಣಪುರದಿಂದ ಹಾದುಹೋಗುವ ಡಿ. ಬೋ. ರಸ್ತೆಯ ಮೇಲೆ ಪ್ರವಾಸಿಗರ ಸುಖದಕ್ಕಾಗಿ ಎರಡು ಪೆಟ್ರೋಮ್ಯಾಕ್ಸ್ ಲೈಟುಗಳನ್ನು ಉರಿಸಬೇಕು ಬೇಡವೆಂದು ಹಲವು ಬಾರಿ ಚರ್ಚಿಸಲಾಗಿ, ಕೊನೆಗೆ ಎಂತೂ ಲೈಟುಗಳ ತೂಗುಕಂಬಗಳಿರಲು, ಅಷ್ಟು ಕಷ್ಟದಿಂದಾದರೂ, ಅಷ್ಟು ಮಟ್ಟಿಗೆ ಪಾತ್ರವಾಗಿಯೇ ನಡೆಸಲ್ಪಟ್ಟವು. ಲೈಟುಗಳು ತರಿಸಲ್ಪಟ್ಟು ಪ್ರೆಸಿಡೆಂಟರ ಮನೆಯಲ್ಲಿ ಕೂತವು. ಪ್ರವಾಸಿಗರ ಮೊಗವು ಅರಳಹತ್ತಿದುದು. ಆದರೆ, ಇಷ್ಟೆಲ್ಲಾ ವ್ಯವಸ್ಥೆಗಳಾಗಿ ಒಂದು ತಿಂಗಳು ಮಿಕ್ಕಿದರೂ, ಲೈಟುಗಳನ್ನು ಉರಿಸಿದ್ದಿಲ್ಲ. ಕಂಬಗಳು ಬಿಸಿಲಿನ ಬೇಗೆಯಿಂದ ಬೇಯುತ್ತಿವೆ. ಕಂಬಗಳ ತುದಿಗಳಲ್ಲಿ ತೂಗಾಡುತ್ತಿರುವ ಲೈಟುಗಳ ಕೊಕ್ಕೆಗಳೆರಡೂ "ಬಾ! ಬಾ!" ಎಂದು ಲೈಟುಗಳನ್ನು ಕರೆಯುತ್ತಲಿವೆ. ಲೈಟುಗಳು ಉದ್ಯೋಗವಿಲ್ಲದೆ ಮೂಲೆಯಲ್ಲಿ ಕೂತು "ನಮ್ಮ ಗತಿ ಏನೋ" ಎಂದು ಅಳುತ್ತಿವೆ. "ಇದೇನು! ಲೈಟುಗಳನ್ನು ಉರಿಸಲು ಸಮುಹೂರ್ತವು ಬರಲಿಲ್ಲವೇ?" ಎಂದು ಜನತೆಯಲ್ಲಿ ಸಂದೇಹಾಸ್ಪದ ಅಭಿಪ್ರಾಯಗಳು ತಲೆದೋರಹತ್ತಿವೆ ಎನ್ನುವಷ್ಟರಲ್ಲಿ, ಇನ್ನೊಂದು ವರ್ತಮಾನ ಓಹ! "ಪೆಟ್ರೋಮ್ಯಾಕ್ಸ್ ಲೈಟುಗಳ ಬದಲಾಗಿ ಕೇಂಡಲ್ ಲೈಟುಗಳನ್ನು ಉರಿಸುವರೆ ಆಲೋಚನೆಯು ನಡೆಯಬೇಕೆಂದೂ ಈ ಲೈಟುಗಳು ಮಾರಲ್ಪಡುವವಷ್ಟೆ! ಕೊಳ್ಳಿಗೆ ಹೋದೀತು ಬಡ ಬಾಲಕರಿಗೆ ಗಾಳಿಯೇ ದೇವರೇ ಬಲ್ಲ!!! ಇದೇನು ಉತ್ಪಾತಗಳು! ಗ್ರಾಮದಲ್ಲಿ ಘಟಸ್ಫೋಟವಾದುದಿಗೆ ಭೂಮಿ ಕೇಳುವಿನ ಉದಯ ಬಾಯಿಕೇ! ಅಲ್ಲವೆ, ಮೋಜಿಗಳ ಕಡೆಯೋ! ಇಲ್ಲವೆ, ಮೆಂಬರರುಗಳ ಯೋಗ್ಯತೆಯೋ! ಯಾರೊಡನೆ ಹೇಳಲಿ!! ಇಷ್ಟೆಲ್ಲಾ ನಡೆದರೂ ಈ ವಿಷಯಗಳ ಗಾಳಿಯು ಸಮ್ಮಂಧಪಟ್ಟಿರುವ ಇಲಾಖೆಯವರಿಗೆ ಸೋಂಕಲಿಲ್ಲವೆ?

ಈ ದುಷ್ಕಾಲದ ಮರ್ದನದಲ್ಲಿ ಅದರಲ್ಲೂ ಬಡ ಹಳ್ಳಿನಾಡಿನ ಗ್ರಾಮದಲ್ಲಿ ಧನದ ಪರಾಭವವಿದ್ದರೂ, ವೃತ್ತಿ ಕರಗಿಯ ವಸೂಲಿಗೇನೂ ಧಕ್ಕೆಯಿಲ್ಲ. ಈ ನಮ್ಮ ಬೋರ್ಡು ಎಂದಿನಂತೆ ಮುಂದೆಯೂ, ಒನ್ನು ಹೆಚ್ಚು ಇಷ್ಟು ಚೈತನ್ಯದಿಂದ ನೇರಾಗಿ ಮುಂದೆ ನಡೆಯುವುದು ಮರುಳ್ಗಣದಲ್ಲಿ ನೊಗ ಅಡಿಮಾಡಿಕೊಂಡು ಅಂಬೆಕಾಲಿಕ್ಕುತ್ತ ಮುಂದೆ ಸರಿದಷ್ಟಲ್ಲಿಂದ ಹಿಂದೆ ಬರುವುದು ಎಂದಾದರೆ, ಗ್ರಾಮಸ್ಥರ ಬೆವರಿನ ಧನದ ಸದ್ವಿನಿಯೋಗವೆಲ್ಲಿ? ಗ್ರಾಮಸ್ಥರಿಗೆ ಈ ಬೋರ್ಡಿನಿಂದ ಸುಖವೆಲ್ಲಿ? ಗ್ರಾಮದ ಸುವ್ಯವಸ್ಥೆಯೆಲ್ಲಿ? ಇದರಿಂದ ಗ್ರಾಮಕ್ಕೆ ಸಹಕಾರವೆಲ್ಲಿಯದು?—ಇನ್ನು ಮುಂದಕ್ಕಾದರೂ ಈ ಬೋರ್ಡಿಗೆ ಸಮ್ಮಂಧಪಡುವ ಇಲಾಖೆಯವರು ಕಣ್ಣು ತೆರೆದು ಈ ಕಲ್ಯಾಣಪುರ ಪಂಚಾಯತ ಬೋರ್ಡಿನ ದುರ್ಗತಿಯನ್ನು ಮನಗಂಡು "ಎತ್ತು ಬರುವಾಗಲೇ ಗಾಣ ಮುರಿಯಿತು" ಎಂದು ಮುಂದಕ್ಕೆ ಈ ಬೋರ್ಡಿನ ಮೇಲೆ ಬರಲಿರುವ ಅಪವಾದವನ್ನು ದೂರಮಾಡಿ, ಇದು ಸುವ್ಯವಸ್ಥೆಯಿಂದ ನಡೆಯುವಂತೆ ಏರ್ಪಾಡು ಮಾಡಿ, ಈ ನಮ್ಮ ಬಡ ಗ್ರಾಮಸ್ಥರ ಮೇಲೆ ದಯಾದೃಷ್ಟಿಯನ್ನು ಬೀರುವರೇ? ಎಂಬುದೊಂದು ನನ್ನ ಚಿಕ್ಕ ಬಯಕೆ.

ಓರ್ವ ಕಲ್ಯಾಣಪುರ ನಿವಾಸಿ.

ದ. ಬೋ. ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ವಿಶೇಷ ಮಹಾ ಸಭೆ 10—5—1936ಕ್ಕೆ

ಮಂಗಳೂರಲ್ಲಿ ಬೋರ್ಡಿನ ಮುಂದೆ ಮುಂದೆ ಮಾಡತಕ್ಕ ಆಖೈರಿ ಪ್ರಯತ್ನ

ಉಪಾಧ್ಯಾಯರೇ,

ವರ್ಷದಿಂದ ವರ್ಷಕ್ಕೆ ನಮ್ಮ ಸ್ಥಿತಿಗತಿಯು ಕ್ಷೀಣವಾಗುತ್ತಾ ಬರುತ್ತದೆ. ಗ್ರಹಚಾರವು ಬೆನ್ನು ಬಿಡುವುದೇ ಇಲ್ಲ. ದ. ಬೋರ್ಡಿಗೆ ಸೇರಿದ ನಂತರವಾದರೂ ನಮ್ಮ ಗತಿಯು ಉತ್ತಮವಾಗಬಹುದೆಂದು ಭರವಸೆ ಇತ್ತು. ಆದರೆ ನಮ್ಮ ಹಿಂದಿನ ಚಿಕ್ಕ ಬೋರ್ಡೇ ಆಗುತ್ತಿತ್ತೆಂದು ಈಗ ಕಾಣುತ್ತದೆ. ದ. ಬೋರ್ಡಿಗೆ ಸೇರಿದ ನಂತರ ಎಲಿಮೆಂಟರಿ ಸಂಸ್ಥೆಯಲ್ಲಿ ಅನೇಕ ಮಾರ್ಪಾಟುಗಳು ಆದುವು, ಇನ್ನೂ ಆಗುತ್ತಲೇ ಇವೆ. ಇನ್ನೂ ನಮ್ಮ ಸ್ಥಾನ ಮಾನ, ಜೀವನದ ಭದ್ರತೆಯು ಇನ್ನೂ ನೆಲೆಗಡೆಗೆ ಬರಲಿಲ್ಲ. ವರ್ಷದಿಂದ ವರ್ಷ ಕಷ್ಟಪರಂಪರೆಗಳು ಹೆಚ್ಚುತ್ತಾ ಬರುತ್ತವೆ. ದ. ಬೋರ್ಡು ಬಜೆಟು ಕಮಿಟಿಯವರ ಉಪಕಾರವು ಸ್ತುತ್ಯವೇ. ೧೯೩೬-೧೯೩೭ನೇ ವರ್ಷದ ನಮ್ಮ ಜಾತಕವನ್ನು ಬರೆದಿರುವರು. ಮುಂದಿನ ಬೋರ್ಡ್ ಮೀಟಿಂಗಿನಲ್ಲಿ ಅದು ಸ್ಪಷ್ಟವಾಗಲಿರುವುದು. ಬೋರ್ಡು ಎಲಿಮೆಂಟರಿ ಕೋಶದಿಂದ ಜನರಲ್ ಫಂಡಿನ ಕೋಶದಲ್ಲಿ ಡೆಫಿಸಿಟ್ ನಿಂತ ಹಣವು ಹೆಚ್ಚಿದ್ದರೂ ಜನರಲ್ ಫಂಡಿನ ಸಂಸ್ಥೆಯ ನೌಕರರ ಸ್ಥಿತಿಯನ್ನು ಸಾಟೀತಿಯಲ್ಲಿ ಇರಿಸಿ ನಮಗೆ ಮಾತ್ರ ರೂಪಾಯಿಗೆ ಒಂದಾಣೆಯಿಂದ ಎರಡಾಣೆಗೆ ಏರಿಕದ ಇನ್ಕ್ರಿಮೆಂಟನ್ನು ಕೊಡುವ ಹಾಗೆ ಶಿಫಾರಸು ಮಾಡಿರುವರು. ನಾವು ಹುಲ್ಲು ತಿಂದು ಜೀವಿಸುವ ಕುರಿಗಳಾಗಿದ್ದೇವೆ. ಉಳಿದವರು ಮೃಷ್ಟಾನ್ನ ಭೋಜನ ಮಾಡತಕ್ಕವರು. ಅವರ ಜೀವನದಲ್ಲಿ ಯಾವ ರಿಟ್ರೆಂಚ್‌ಮೆಂಟ್ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಏನು ಮಾಡಲಿ? ಯಾರಿಗೆ ದೂರಲಿ? ಯಾರನ್ನು ನೋಡಿ ಅಳಲಿ? ನಮಗೆ ಬೆಂಬಲವಿಲ್ಲ. ನಮ್ಮಲ್ಲಿ ಉತ್ಸಾಹವಿಲ್ಲ, ಒಗ್ಗಟ್ಟಿಲ್ಲ, ಧೈರ್ಯವಿಲ್ಲ, ಮುಂದೊತ್ತುವ ಶಕ್ತಿಯೂ ಇಲ್ಲ ಎಂದು ಎಲ್ಲರೂ ತಿಳಿದ ವಿಷಯವಾದ್ದರಿಂದ ನಮಗೆ ಹಾಗಾಗುವುದು ಸ್ವಾಭಾವಿಕವೇ ಸರಿ. ರೂಪಾಯಿಗೆ ೧೬ ಆಣೆ ಏರಿಕೆ ಮಾಡಿದರೂ ಬಿದ್ದಲ್ಲಿಯೇ ಬಿದ್ದು ಕೊರಗುವ ಅಭ್ಯಾಸ ವಿನಹ ತಲೆಯೆತ್ತಿ ನೋಡುವ ಅಭ್ಯಾಸವು ನಮ್ಮಲ್ಲಿಲ್ಲ. ಗಟ್ಟಿಯಾಗಿ ಕೂಗಿದರೂ ಮಾನಭಂಗವಾಗುವುದೋ ಎಂಬ ಭಯ. ಸರ್ವ ಪ್ರಾಣಿಗಳಲ್ಲಿಯೂ ಆತ್ಮರಕ್ಷಣೆ, ಜೀವರಕ್ಷಣೆ ಇತ್ಯಾದಿಗಳಲ್ಲಿ, ಕೂಗುಗಳೆ ಮಾಡುವ ಸ್ವಭಾವ ಶಕ್ತಿಯೂ ಇದೆ.

ಉಪಾಧ್ಯಾಯರೇ,

"ನಾವು ಒಗ್ಗಟ್ಟಿನಿಂದಲೂ, ಧೈರ್ಯದಿಂದಲೂ ಮುಂದೊತ್ತಿ ಕೆಲಸಮಾಡಿದರೆ ದ. ಬೋರ್ಡಿನ ಜನರಲ್ ಸಂಸ್ಥೆಯ ಜತೆಯಲ್ಲಿ ಕೂಡಿಸಿಕೊಳ್ಳಲು ಶಕ್ಯವಾದೀತು. ಬೋರ್ಡಿನವರು, ಮಾನ್ಯ ಸರಕಾರದವರು ನಮ್ಮ ಸ್ಥಿತಿಯನ್ನು ಆಲೋಚಿಸುವಂತೆ ನಾವು ಮಾಡಬೇಕು. ಬೋರ್ಡಿನ ಮೆಂಬರರು ಯಾರೂ ಕೆಟ್ಟವರಲ್ಲ. ನಮ್ಮ ದುಸ್ಥಿತಿಯು ಸರಿಯಾಗಿ ಅವರಿಗೆ ತಿಳಿಯದಿರುವುದರಿಂದಲೇ ಹೀಗಾಗುವುದು. ಪ್ರತಿಯೊಂದು ತಾಲೂಕಿನ ಉಪಾಧ್ಯಾಯರು ಹಟತೊಟ್ಟು ಆಯಾಯ ತಾಲೂಕಿನ ಮೆಂಬರರ ಸಹಾನುಭೂತಿಯನ್ನು ನಮ್ಮ ಕಡೆಗೆ ಎಳಸಿಕೊಳ್ಳಬೇಕು. ಈ ಬಗ್ಗೆ ಪ್ರಚಂಡ ಕೆಲಸವನ್ನು ಮಾಡಲೇ ಬೇಕು. ಹೀಗೆ ಮಾಡಿದರೆ ಪ್ರತಿಯೊಬ್ಬ ಉಪಾಧ್ಯಾಯನು ತಾ. ೧೦—೫—೧೯೩೬ನೇ ಪೂರ್ವಾಹ್ನ ಘಂಟೆ ೯ಕ್ಕೆ ಮಂಗಳೂರು ಗವರ್ನಮೆಂಟು ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವಠಾರದಲ್ಲಿ ಸೇರಬೇಕಾಗಿ ವಿನಯಪೂರ್ವಕವಾಗಿ ಪ್ರಾರ್ಥಿಸುವೆನು. ೧೫೦೦ ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರು ಈ ಸಭೆಗೆ ಸೇರಿ ಒಂದೇ ಸರ್ತಿ ಕೂಗುವರು, ದುಃಖಬಾಷ್ಪದಿಂದ ದ. ಬೋರ್ಡು ಮೆಂಬರರ ಹೃದಯವನ್ನು ತೋಯಿಸಬೇಕೆಂದು ನನ್ನ ಅಭಿಪ್ರಾಯ. ಇದರಿಂದಲೂ ಬೋರ್ಡಿಗೆ ನಮ್ಮ ಮೇಲೆ ದಯವು ಹುಟ್ಟದೆ ಇದ್ದರೆ ಬೋರ್ಡಿನ ಮುಂದೆ ಮಾಡತಕ್ಕ ಪ್ರಯತ್ನವನ್ನು ನಿಲ್ಲಿಸಿ ಸರಕಾರದ ಮುಂದೆ ಹೋರಾಡಬೇಕು.

ವಿ. ಬಾಬು ಶೆಟ್ಟಿ,
ಜಿಲ್ಲಾ ಉಪಾಧ್ಯಾಯ ಸಂಘದ ಕಾರ್ಯದರ್ಶಿ.

ಕಾಂಗ್ರೆಸ್ ಕಾರ್ಯದಲ್ಲಿ ವಿಜ್ಞಾಪನೆ.

ಬಂಧುಗಳೇ,

ವಿಶ್ವದ ಇತಿಹಾಸದಲ್ಲಿ ಭಾರತೀಯರು ತಮ್ಮ ಜನ್ಮಸಿದ್ಧವಾದ ಹಕ್ಕನ್ನೂ ಸ್ವಾತಂತ್ರ್ಯವನ್ನೂ ಪಡೆಯುವುದಕ್ಕೆ ೧೯೩೦ರಿಂದ ೧೯೩೪ ಎಪ್ರಿಲ್ ವರೆಗೆ ಹೋರಾಡಿದ ಶಾಂತಿಸಂಗ್ರಾಮದ ಪ್ರಕರಣವು ಉಜ್ವಲವಾಗಿ ಅಜರಾಮರವಾಗಿ ಉಳಿಯುವುದರಲ್ಲಿ ಸಂದೇಹವಿಲ್ಲ. ಆ ಪ್ರಕರಣಕ್ಕೆ ನಮ್ಮ ಕರ್ನಾಟಕದ ಶಾಂತಿಸಂಗ್ರಾಮದ ಇತಿಹಾಸವು ಮುಕುಟಮಣಿಯಾಗಿ ಶೋಭಿಸುವುದು. ಇದು ನಿರ್ವಿವಾದವಾದದ್ದು. ಕರ್ನಾಟಕವು ತೋರಿಸಿದ ಶೂರತನವು ಅಜ್ಞಾತವಾಗಿಯೇ ಹೋಗಿಯುತ್ತ ಉಳಿಯಬೇಕಾದುದು. ಇದರ ನಾಸ್ಮಂತ ಇತಿಹಾಸವು ಅನ್ಯಪ್ರಾಂತೀಯರಿಗೆ ಅಷ್ಟೇಕೆ ಕನ್ನಡಿಗರಿಗೇ ಗೊತ್ತಿಲ್ಲದಿರುವುದು ಅತ್ಯಂತ ಶೋಚನೀಯವಾದುದು. ಈ ಕೊರತೆಯನ್ನು ನೀಗುವುದಕ್ಕಾಗಿ ಕರ್ನಾಟಕದ ಶಾಂತಿಸಂಗ್ರಾಮದ ಇತಿಹಾಸವನ್ನು ಸಾಧ್ಯವಿದ್ದಷ್ಟು ಸಾದ್ಯಂತವಾಗಿ ಬರೆಯಬೇಕೆಂಬ ಸಾಹಸದ ಕಾರ್ಯಕ್ಕೆ ಕೈಹಾಕಿದ್ದೇನೆ. ಆದರೆ ಇದಕ್ಕೆ ಸರ್ವ ಕಾಂಗ್ರೆಸ್ ಕಮಿಟಿಗಳು, ಕಾರ್ಯಕರ್ತರು ಬೆಂಬಲ ಪ್ರೋತ್ಸಾಹನ ಕೊಟ್ಟು ನೆರವಾದರೆ ಮಾತ್ರ ಸಿದ್ಧಿಸುವ ಕಾರ್ಯವಿದು. ಈಗಾಗಲೇ ಈ ವಿಷಯವನ್ನು ಕೆಲವರ ಮುಂದೆ ಎತ್ತಿದಾಗ ಶ್ರೀಮಂತ ಅಂದಾನಪ್ಪ ದೊಡ್ಡ ಮೇಟಿಯವರೂ ಶ್ರೀಮಾನ್ ದಿವಾಕರರೂ ಪ್ರೋತ್ಸಾಹಿಸಿ ಆಶೀರ್ವದಿಸಿದ್ದಾರೆ. ಈ ಕಾರ್ಯವನ್ನು ೩—೪ ತಿಂಗಳಲ್ಲಿಯೇ ಮುಗಿಸಿ ಕನ್ನಡಿಗರ ಕೈಯಲ್ಲಿ ಅರ್ಪಿಸಬೇಕೆಂದು ಸಂಕಲ್ಪಿಸಿದ್ದೇನೆ. ಅದ್ದರಿಂದ ದಯವಿಟ್ಟು ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ತಮ್ಮ ತಾಲೂಕಿನ ಮಾಹಿತಿಯನ್ನು ಕೆಳಗೆ ಬರೆದ ಪ್ರಕಾರ ಕೂಡಲೇ ಕೆಳಗಿನ ವಿಳಾಸಕ್ಕೆ ಕಳಿಸಬೇಕೆಂದು ನಮ್ರಭಾವದಿಂದ ಬೇಡುತ್ತೇನೆ.

೧. ಜಿಲ್ಲೆಯ ಯಾವ ತಾಲೂಕಿನ ಪೂರ್ವೇತಿಹಾಸ ೧೯೩೦ರ ವರೆಗೆ. ೧೯೩೦ರಿಂದ ೧೯೩೪ನೇ ಎಪ್ರಿಲ್ ವರೆಗೆ ನಡೆದ ಸಂಗ್ರಾಮದ ಮಾಹಿತಿ ಕೆಳಗಿನಂತೆ ಕಳಿಸಬೇಕೆಂದು ಬಿನ್ನಹ.—೨. ತಾಲೂಕಿನಲ್ಲಿ ಸೆರೆಮನೆಗೆ ಹೋದವರೆಷ್ಟು? ಅವರಲ್ಲಿ ಸ್ತ್ರೀಯರೆಷ್ಟು? ಪುರುಷರೆಷ್ಟು? ಹದಿನೆಂಟು ವರ್ಷಕ್ಕೆ ಮಿಕ್ಕಿದ ಹುಡುಗರೆಷ್ಟು? ೩. ಅವರಲ್ಲಿ ಬ್ರಾಹ್ಮಣರೆಷ್ಟು? ಲಿಂಗಾಯತರೆಷ್ಟು? ಮುಸಲ್ಮಾನರೆಷ್ಟು? ಉಳಿದ ಜಾತಿಯವರೆಷ್ಟು? ೪. ವಿಶೇಷ ದಂಡಕ್ಕೆ ಮತ್ತು ಶಿಕ್ಷೆಗೆ ಗುರಿಯಾದ ಮನೆತನಗಳೆಷ್ಟು? ಅವುಗಳ ನಷ್ಟಕ್ಕೆ ಕಾರಣಗಳೇನು? ಅವುಗಳ ವಿಳಾಸ. ೫. ಛಡಿ ಶಿಕ್ಷೆಗೆ ಗುರಿಯಾದವರೆಷ್ಟು? ೬. ಆರ್ಡಿನನ್ಸಿಗೆ ತುತ್ತಾದವರೆಷ್ಟು? ೭. ಕೈಕೊಂಡ ಕಾರ್ಯಕ್ರಮಗಳು, ೮. ಪಿಕೆಟರರು ಎಷ್ಟು? ೯. ಲಾಠೀ ಪ್ರಯೋಗಗಳು ಎಷ್ಟು? ಯಾವ ಸ್ಥಳದಲ್ಲಿ? ಎಂದು, ೧೦. ಗೋಳೀಬಾರುಗಳೆಷ್ಟು? ೧೧. ಪ್ರತಿಬಂಧಕ ಕಲಮುಗಳು ಯಾವವು ಹಾಗೂ ಹಾಕಲ್ಪಟ್ಟವು? ಯಾರ್ಯಾರಿಗೆ? ಎಂದೆಂದು, ೧೨. ಪತ್ರಿಕೆಗಳು ಯಾವವು ಬಂದಾದವು? ೧೩. ಯಾವ ಯಾವ ಕರಪತ್ರಗಳು ಹೊರಟವು? ೧೪. ಬೇಕಾಯದೆ ಶೀರ ಆದ ಸಂಸ್ಥೆಗಳು ಯಾವವು? ೧೫. ಕಾಯದೆ ಭಂಗ, ಕರಬಂದಿಯ ಪ್ರಾರಂಭ ಮತ್ತು ಅದರ ಪ್ರಗತಿ, ೧೬. ಇತರ ಅಗತ್ಯ ಕಂಡ ಮಾಹಿತಿ, ೧೭. ತಾಲೂಕಿನಲ್ಲಿ ಪ್ರಾಮುಖ್ಯವಾಗಿ ಭಾಗವಹಿಸಿದವರು ಯಾರು?

+ ಟಿಪ್ಪಣಿ—ಪ್ರತಿಯೊಬ್ಬ ಕಾರ್ಯಕರ್ತರಿಗೂ ಪತ್ರಬರೆದು ಮಾಹಿತಿ ತರಿಸಿಕೊಳ್ಳುವುದು ಕಠಿಣವಾದುದು. ಈ ಪ್ರಕಟನೆಯೇ ತಮಗೆ ಬರೆದ ಪತ್ರವೆಂದು ತಿಳಿದು ಮಾಹಿತಿ ಕೂಡಲೇ ಕಳಿಸಬೇಕಾಗಿ ಕೋರಿಕೆ.

ಜಕ್ಕಲಿ ಪೋಸ್ಟು ಅಬ್ಬಿಗೇರಿ (ಧಾರವಾಡ)
ತಮ್ಮ ಅಡಿಯಾಳು
ಗುರುನಾಥ ಜೋಶಿ.

ಗ್ರಾಮಉದ್ಯೋಗಗಳ ಕುರಿತು ಮಾಹಿತಿ ಸಂಗ್ರಹ

ಹಳ್ಳಿ ಕೈಗಾರಿಕೆಗಳ ಪುನರುಜ್ಜೀವನದ ಕುರಿತು ಅತ್ತಲಾಗಿ ಬಹಳ ಮಾತು ನಡೆಯುತ್ತಿದೆ. ಈ ಬಗ್ಗೆ ಏನಾದರೂ ಪ್ರತ್ಯಕ್ಷ ಕೆಲಸಮಾಡಬೇಕಾದರೆ ಇಡೀ ಜಿಲ್ಲೆಯಲ್ಲಿ ಈಗ ಯಾವ ಕೈಗಾರಿಕೆಗಳು ಇವೆ, ಅವು ನಡೆಯುತ್ತಿವೆ, ಅವನ್ನು ನಡೆಸುವ ಕೆಲಸಗಾರರ ಗತಿಗಳು ಹೇಗಿವೆ ಎಂಬಿತ್ಯಾದಿ ಮಾಹಿತಿಯನ್ನು ಸಂಗ್ರಹಿಸುವುದು ಅಗತ್ಯ. ಇಂಥ ಮಾಹಿತಿಯನ್ನು ಕೂಡಿಸಿದ ಬಳಿಕ ಯಾವ ಉದ್ಯೋಗಗಳನ್ನು ಯಾವ ರೀತಿಯಲ್ಲಿ ಅಭಿವೃದ್ಧಿಗೆ ತರಬಹುದೆಂದು ನಿರ್ಧರಿಸಬಹುದು. ಆದುದರಿಂದ ದ. ಕ. ಜಿಲ್ಲಾ ಗ್ರಾಮಉದ್ಯೋಗ ಸಂಘ ಹಾಗೂ ಜಿಲ್ಲಾ ಭೂಮಾಲಿಕರ ಸಂಘದ ಆಶ್ರಯಗಳಲ್ಲಿ ಈ ಬಗೆಯ ಮಾಹಿತಿ ಸಂಗ್ರಹವನ್ನು ನಡೆಸಬೇಕಾಗಿ ನಿರ್ಧರಿಸಿದ್ದೇವೆ.

ಜಿಲ್ಲೆಯ ಮಹಾಜನರಲ್ಲಿ ಗ್ರಾಮಉದ್ಯೋಗಗಳಲ್ಲಿ ಅಭಿರುಚಿ ಇದ್ದವರು ಇದರ ಜೊತೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆದು ಇದೇ ಮೇ ೩೧ನೇ ಒಳಗೆ ನಮಗೆ ತಲ್ಪುವಂತೆ ಕಳುಹಿಸಿ ಈ ಕೆಲಸದಲ್ಲಿ ಸಹಾಯಮಾಡಬೇಕಾಗಿ ಕೇಳಿಕೊಳ್ಳುತ್ತೇವೆ. ಪ್ರಶ್ನೆಗಳ ಸಂಖ್ಯೆಗಳನ್ನು ಮಾತ್ರ ಬಳಸಿ ಉತ್ತರಗಳನ್ನು ಬರೆದರೆ ಸಾಕು—ಪುನಃ ಪ್ರಶ್ನೆಗಳನ್ನು ಬರೆಯಬೇಕಾಗಿಲ್ಲ. ಒಂದು ಸ್ಥಳದಲ್ಲಿ ನಡೆಯುವ ಒಂದು ಕೈಗಾರಿಕೆಗಳ ಕುರಿತು ಈ ಪ್ರಶ್ನೆಗಳಿಗೆ ಉತ್ತರ ಬರೆಯುವುದು—ಅಂದರೆ ಪ್ರತಿ ಕೈಗಾರಿಕೆಯ ಕುರಿತು ಪ್ರತ್ಯೇಕವಾಗಿ ಈ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಬೇಕು.

ಈ ರೀತಿ ಬರಬಹುದಾದ ಉತ್ತರಗಳನ್ನು ನೋಡಿ ಸಂಗತಿಗಳನ್ನು ಸಾಧ್ಯವಿದ್ದ ಮಟ್ಟಿಗೆ ಸ್ವತಹ ನೋಡುವ ಉದ್ದೇಶದಿಂದ ನಾವು ಜಿಲ್ಲೆಯಲ್ಲಿ ಸಂಚರಿಸಲಿಕ್ಕಿದ್ದೇವೆ ಮತ್ತು ಗ್ರಾಮಉದ್ಯೋಗಗಳ ಅಭಿವೃದ್ಧಿಯ ವ್ಯವಹಾರ್ಯವಾಗುವ ಕಾರ್ಯಕ್ರಮವನ್ನು ರಚಿಸಲು ಅನುಕೂಲವಾಗುವಂತೆ ನಾವು ಸಂಗ್ರಹಿಸಿರುವ ಮಾಹಿತಿಯ ವರದಿಯನ್ನು ತಯಾರಿಸಲಿಕ್ಕಿದ್ದೇವೆ.

ಆದುದರಿಂದ ನಿಮ್ಮ ನಿಮ್ಮ ತಾಲೂಕು ಯಾ ಅದರ ಯಾವುದಾದರೂ ಭಾಗಗಳಲ್ಲಿ ನಡೆಯುವ ಉದ್ಯೋಗಗಳ ಕುರಿತು ನಾವು ಕೇಳಿರುವ ಮಾಹಿತಿಯನ್ನು ಸಾಧ್ಯವಿದ್ದ ಮಟ್ಟಿಗೆ ಸಂಗ್ರಹಿಸಿ ನಮಗೆ ಕಳುಹಿಸಬೇಕಾಗಿ ವಿನಂತಿ.

ಮಂಗಳೂರು,
೩೦-೪-೧೯೩೬.

ಕೆ. ಆರ್. ಕಾರಂತ,
ಕಾರ್ಯದರ್ಶಿ,
ಭೂಮಾಲಿಕರ ಸಂಘ.
ಸಿ. ಆರ್. ಮಲ್ಯ,
ಕಾರ್ಯದರ್ಶಿ,
ದ. ಕ. ಗ್ರಾಮಉದ್ಯೋಗ ಸಂಘ.

For your
DIAMONDS
Enquire at—
SOWKAR MAHAL,
Srinivas Ranga ...,
Car Street, Mangalore.

"ಹಿಂದೀ ಶಾಂತಿನಿಕೇತನ"

ಹಿಂದೀ ಪಾಠಶಾಲೆ, ಮಂಗಳೂರು ಈ ಸಂಸ್ಥೆಗೆ ಧನಸಹಾಯವನ್ನಿತ್ತ ಮಹನೀಯರ ಹೆಸರುಗಳು.—

ಶ್ರೀಗಳಾದ ಬಿ. ವೆಂಕಟ್ರಾಯ ಬಾಳಿಗ ರೂಪಾಯಿ ೨೧–೮–೦, ಎಚ್. ಸುಂದರರಾವ್ ರೂ ೩–೦–೦, ಎಂ. ಶ್ರೀನಿವಾಸ ಹೆಗ್ಡೆ ರೂ. ೧–೦–೦, ಪಿ. ದಾಮೋದರ ಪ್ರಭು ರೂ. ೩–೮–೦, ಕೆ ರಾಮರಾವ್ ರೂಪಾಯಿ ೫–೦–೦, ವಿ ರಘುನಾಥ ಪೈ ರೂ ೩–೮–೦ ಬಿ. ಎಸ್ ಆನಂದರಾವ್ ರೂ. ೧–೦–೦, ಎಮ್. ಮೋಹನ ರಾವ್ ರೂ. ೧–೦–೦, ಕೆ. ಗೋವಿಂದ ಶ್ರೀಯಾನ್ ರೂ. ೧–೮–೦, ಕೆ ಐತಪ್ಪ ಸೆಟ್ಟಿ ರೂ. ೨–೦–೦, ಯು. ಸಂಜೀವ ಪೈ ರೂ ೧–೦–೦ ಬಿ. ವಿಶ್ರಮ ನಾಯ್ಕ ರೂ. ೩–೦–೦, ಎಂ ವಾಸುದೇವ ಶೆಣೈ ರೂ ೩–೦–೦, ಎಚ್. ಎಮ್ ರಾಯ [illegible] ರೂ. ೩–೦–೦, ಯು ಗಣಪತಿ ಪ್ರಭು ರೂಪಾಯಿ ೧–೦–೦, ಕೆ ಕೊರಗ ಸೆಟ್ಟಿ ರೂ ೩–೦–೦, ಎಮ್ [illegible]ರಾವ್ ರೂ ೧–೮–೦, ಮೂಲ್ಕಿ ಸೀತಾರಾಮ ನಾಯ್ಕ ರೂ ೩–೦–೦, ಯು ಕೃಷ್ಣ ಕಾಮತ್ ರೂ. ೧–೪–೦, ಎಂ ಸೀತಾರಾಮ ನಾಯ್ಕ ರೂಪಾಯಿ ೨–೪–೦, ಕೆ ನಾರಾಯಣ ಪೈ ರೂ ೧–೪–೦, ಕೆ ಎ. ಕಾಮತ್ ರೂ. ೦–೧೨–೦ ಕೆ ರಾಮಪ್ಪ [illegible] ರೂ ೦–೧೨–೦ ಮಿಜಾರ್ ನಾರಾಯಣ ಪೈ ರೂ ೦–೮–೦, ಎಂ ಮಾಧವ ಹೆಗ್ಡೆ ರೂ ೦–೮–೦ [illegible] ವಾಸುದೇವ ಕಾಮತ್ ೦–೮–೦, ಕೆ [illegible] ಭಟ್ ರೂ ೦–೮–೦, ಎಚ್ [illegible] ರೂಪಾಯಿ [illegible] ರಘುನಾಥ ಪೈ ರೂ ೦–೪–೦, [illegible] ಕಾಮತ್ ರೂ ೦–೮–೦ ಎಂ ಗೋಪಾಲ [illegible] ಗೋಪಾಲಶರ್ಮ ರೂ ೦–೪–೦ [illegible] ನಾಯ್ಕ ರೂ ೦–೪–೦ ಕೆ ಕೃಷ್ಣ[illegible] ರೂ ೦–೮–೦, ಎಂ ಸೀನಪ್ಪ[illegible] ರೂ ೦–೬–೦ ಕೆ [illegible] ರೂ ೦–೮–೦.

[illegible]ವರು ತಿಂಗಳೊಂದರ ರೂ ೧–೮–೦ ರಂತೆಯೂ [illegible] ರೂ ೧–೦–೦ ರಂತೆಯೂ [illegible]ರಿಂದ [illegible] ವರೆಗಿನ ಮಹನೀಯರು ರೂ [illegible] ರಂತೆಯೂ ಮತ್ತು [illegible]ರಿಂದ [illegible] ವರೆಗಿನ [illegible] ತಿಂಗಳೊಂದರ ರೂ ೦–೪–೦ಯ ದರದಂತೆ ಶಾಲೆಗೆ ಧನಸಹಾಯವನ್ನು ಮಾಡುತ್ತಿದ್ದಾರೆ. ಅಲ್ಲದೆ ಈ ಕೆಳಗಿನ ಮಹನೀಯರು [illegible] ಧನಸಹಾಯವನ್ನು ಮಾಡಿರುವರು [illegible] ಶ್ರೀ ವಿಶ್ವಂಭರ ಭಟ್ ಜಿ, [illegible] ಮಾಡಿದವರು ಶ್ರೀ ಕೃಷ್ಣಪ್ಪ [illegible] ಮತ್ತು ಕೆ ಸಂಜೀವ ಪ್ರಭು [illegible] ಸಹಾಯ ಮಾಡಿದವರು ಶ್ರೀಗಳಾದ ಕೆ ಕೃಷ್ಣ ಸೆಟ್ಟಿ, ಕೆ [illegible]ನಾಥ ಶೆಣೈ, ಎಂ ಗಣೇಶ ಕಾಮತ್, [illegible] ಕಾಮತ್, ಕೆ ಸಂಕಪ್ಪ ಸೆಟ್ಟಿ, [illegible] ಕೆ [illegible] ಎ ದೇವಡಿಗಾರ್ ಗಣಪತಿ ಪ್ರಭು, [illegible] ಸಹಾಯವಾಗಿದವರು [illegible] ನಾಯ್ಕ, [illegible] ಮಂಜೇಶ್ವರ ಕೃಷ್ಣಭಟ್ ಅನಂತ ಭಟ್, ಎಸ್ ವೆಂಕಟೇಶ ಕಾಮತ್ [illegible] ದೇವರಾಯ ಶೇಟ್ ಎ ಗಣಪತಿ [illegible] ಸ್ವದೇಶಿ ಸ್ಟೋರ್ಸ್ [illegible] ರೂ. ೬–೪–೦

ಧನಸಹಾಯವನ್ನು ಮಾಡಿ ನಮ್ಮನ್ನು ಪ್ರೋತ್ಸಾಹಿಸಿ ಹಿಂದೀ ಪ್ರಚಾರಕಾರ್ಯದಲ್ಲಿ ತಮಗಿರುವ ಪ್ರೇಮವನ್ನು ವ್ಯಕ್ತಪಡಿಸಿದ ಎಲ್ಲಾ ಮಹನೀಯರಿಗೆ ಈ ಸಂಸ್ಥೆಯು ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತದೆ

TEST YOUR EYES



By the Electro Ophthalmoscope.

All Varities of Frames & Lenses.

At

The Mangalore Trading Association Ltd.

Sight Testing Ophthalmic Opticians,

Car Street, MANGALORE

LIMDA SOAP



Free from Animal Fat

THE VEGETABLE SOAP WORKS, Props: SAIT N.P.E. Co. CALICUT.

Distributor for South Kanara

Raghavendra Ranga Pai, Car Street Mangalore

ಕುಂದಾಪುರ ಪ್ರವರ್ತಕರು.—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ವೃದ್ಧಿಕಾಸವ—ನಿತ್ರಾಣಕ್ಕೆ ಅತ್ಯಂತ ಗುಣಕಾರಿ

ಮಹಾಮದನ ಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ ಅತೀ ಉಪಯುಕ್ತ.

ಮಹಾಮಾಷ ತೈಲ—ಪಕ್ಷವಾತಕ್ಕೆ ಅತ್ಯಂತ ಗುಣಕಾರಿ

ಗರ್ಭಪಾಲ—ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ

ಗುಡಪಿಪ್ಪಲಿ—ಲಿವರ್ ರೋಗಕ್ಕೆ ಅತ್ಯುತ್ತಮ.

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದಕ್ಷಿಣ ಕನ್ನಡ.

ಹಿಂದಿಯು ದೇಶಭಾಷೆಯಾಗಬೇಕು

(ಶ್ರೀ ಬಾಬು ರಾಜೇಂದ್ರ ಪ್ರಸಾದರ ಭಾಷಣ.)

ಕಾರಣಾಂತರಗಳಿಂದ ಹಿಂದೀ ಭಾಷೆಯು ಬಹು ಸೊಗಸಾದ ಭಾಷೆಯಾಗಿದ್ದಾಗ್ಯೂ, ಇದು ನಮ್ಮ ದೇಶಭಾಷೆಯಾಗುವುದರಲ್ಲಿ ಸಂದೇಹ ವಿಲ್ಲ. ಇದನ್ನು ನಮ್ಮ ದಿನನಿತ್ಯದ ಭಾಷೆಯನ್ನಾಗಿಯೂ, ಕೋರ್ಟು ಕಛೇರಿಗಳ ಭಾಷೆಯನ್ನಾಗಿಯೂ, ಹೆಚ್ಚೇಕೆ ವ್ಯಾಪಾರ ವಹಿವಾಟು ಇವೇ ಮೊದಲಾದ ಸಂಗತಿಗಳಲ್ಲೂ ಈ ಭಾಷೆಯೇ ಉಪಯೋಗಿಸಲ್ಪಟ್ಟರೆ ಇದರ ಪುನರುದ್ಧಾರವಾಗುವುದಲ್ಲದೆ ದೇಶಕ್ಕೂ, ಅದರಿಂದಾಗಿ ದೇಶದ ಜನರಿಗೂ, ತಮ್ಮದೇ ಎಂಬ ಭಾವನೆಯು ಪ್ರತಿಯೊಂದೆಡೆಯಲ್ಲಿಯೂ ಇರುವುದೆಂಬ ಆನಂದವು ಉಕ್ಕೇರಿ ಬರುವುದು. ಆದರೆ ಈಗ ಪ್ರಚಲಿತವಾದ ಹಿಂದೀಭಾಷೆಯು ಅಪೂರ್ಣ. ಇದನ್ನು ನಾವು ಇನ್ನೂ ಪುಷ್ಟೀಕರಿಸಬೇಕಾಗಿದೆ. ಕೆಲವೇ ಶಬ್ದಗಳ ಸಹಾಯದಿಂದ ನಮ್ಮ ಮನೋವಾಂಛಿತವನ್ನು ಪರರಿಗೆ ಅರಿಯಗೊಡುವುದು ಅಸಾಧ್ಯ. ಅದಕ್ಕಾಗಿ ಭಾಷೆಯ ವಿಶಾಲರಿವು ಅಗತ್ಯ. ಅಂತೂ ದೇಶಭಾಷೆಯನ್ನಾಗಿ ಮಾಡಿದ ಮೇಲೆ ಹಿಂದಿಯು ತಿರುಕೂಲಿಯಿಂದಾಗಿ ಪ್ರಖ್ಯಾತ ಮನುಷ್ಯನ ಬಾಯಿಯಿಂದ ಒರತೆಯಂತೆ ಹರಿದು ಬರುತ್ತಿರಬೇಕಾಗಿರುವುದರಿಂದ ಅದರ ಘನತೆಯನ್ನು ಷಾಕ್ಷರಣೆಯಿಂದ ವಿದ್ಯುಕ್ತಪಡಿಸುವುದು ನಮ್ಮ ಕರ್ತವ್ಯ ಈಗ ಆಂಗ್ಲ ಭಾಷೆಯ ಕಡೆಗೆ ಗಮನವಿಡಿರಿ. ಅದರಲ್ಲಿರುವ ಶಬ್ದಗಳ ದೋಷಗಳೆಷ್ಟು. ಕಟ್ಟಕಡೆಗೆ ಅವೂ ಸಾಲದೆ ಶಬ್ದ ವಿಚ್ಛಿನ್ನಗಳಾಗಿ ಪರಭಾಷೆಯ ಶಬ್ದಗಳ ರೂಪಗಳನ್ನು ಕೆಡಿಸಿ ಆಂಗ್ಲ ಭಾಷೆಗ ಸೇರಿಸಿದರು. ಇದರ ಕಾರಣವೇನೆಂದು ನೀವೇ ತಿಳಿಯಬಹುದು. ಹಾಗೆಯೇ ಹಿಂದಿಯಲ್ಲೂ ಕೂಡ ಶಬ್ದಭಾಂಡಾರವಿಲ್ಲದಿದ್ದರೂ ನಮಗೆ ಬೇಕಾಗಿರುವ ಹಲಕೆಲವು ಸಾಮಾನ್ಯ ಶಬ್ದಗಳನ್ನು ಪರಭಾಷೆಯಿಂದ ಪಡೆಯಲು ಸಿದ್ಧರಾಗಿರಬೇಕು. ಪರಭಾಷೆಗಳ ಸೋಂಕಿಲ್ಲದ ಒಂದು ಸ್ವಚ್ಛಭಾಷೆಯನ್ನು ಪ್ರಸಿದ್ಧಿಗೆ ತರಲು ಸಾಧ್ಯವಿಲ್ಲವೆಂತಲ್ಲ. ಅದರಲ್ಲಿ ತುಂಬಾ ಕಷ್ಟವಿದೆ. ಅನೇಕ ವರ್ಷಗಳ ಅಧ್ಯಯನವೂ ಅದಕ್ಕೆ ಬೇಕಾಗುತ್ತದೆ. ಹಾಗೆ ಮಾಡಿದ ಮೇಲೆ ಅದು ಜನಸಾಮಾನ್ಯರಿಗೆ ಅದರ ಉಪಯೋಗವು ಬಹು ಕಷ್ಟವೆಂದು ತೋರಿಬಂದಲ್ಲಿ ಅವರದನ್ನು ಮೆಚ್ಚಲಿಕ್ಕಿಲ್ಲ. ಆದುದರಿಂದ ದೇಶಭಾಷೆಯನ್ನಾಗಿ ಮಾಡುವ ಮೊದಲು ಹಿಂದಿಯನ್ನು ಬಲಿತ ಹಿಂದಿಯನ್ನಾಗಿ ಮಾಡಿ, ನಂತರ ಅವರಿಗದರ ಧ್ಯೇಯವನ್ನು ಸೂಚಿಸಿದರೆ, ಹಿಂದಿಯ ಏಳ್ಗೆಯು ಬಹು ಬೇಗನೆ ಆಗುವುದರಲ್ಲಿ ಸಂದೇಹವಿಲ್ಲ

ಲಿಪಿಗಳ ವಿಷಯ ತುಂಬಾ ಜಾಗ್ರತಿಯನ್ನು ತೆಗೆದುಕೊಳ್ಳಬೇಕಾಗಿರುವುದು. ಅಂದವಾದ ಬರಹವು, ಜನಮನಾಕರ್ಷಕವಾಗಿರುವುದು. ಭಾಷೆಯನ್ನು ನಾವು ಹೇಗೆ ಆಡುತ್ತೇವೋ ಹಾಗೆಯೇ ಸರಳವಾಗಿ ಬರೆಯಲೂ ಕಲಿಯಬೇಕು ತೀವ್ರಗತಿಯಿಂದ ಅಂದವಾಗಿ ಬರೆಯುವುದು ಸಾಮಾನ್ಯ ಕೆಲಸವಲ್ಲ. ನಮ್ಮ ಹಿಂದೀ ಅಕ್ಷರಗಳನ್ನು ಅಷ್ಟೊಂದು ಬಿರುಸಾಗಿ ಬರೆವ ಹಾಗಿಲ್ಲ ಹಾಗೆ ಬರೆದರೆ ಅದನ್ನು ಓದುವುದೂ ತುಂಬಾ ಪ್ರಯಾಸಕರ. ಆದುದರಿಂದ ಲಿಪಿಯನ್ನು ಛಾಪಿಸಲೂ ಟೈಪು ಮಾಡಲೂ ಏನೊಂದೂ ತೊಂದರೆಯಾಗದಂತೆ ಉಜ್ಜೀವನಗೊಳಿಸಬೇಕು.

ಮೊದಲಾಗಿ ಶೈಲಿಯ ಕಡೆಗೆ ನಮ್ಮ ಗಣನೆಯನ್ನು ಹರಿಯಗೊಡಬಾರದು ಚಿಲ್ಲರೆ ಪಣದ ಆಶೆಯಿಂದಾಗಿ ಬರೆದ ಲೇಖನಗಳಲ್ಲಿ ಶೈಲಿಯ ಸ್ಪಷ್ಟೀಕರಣವಾಗುವುದಿಲ್ಲ. ನಿಜವಾದ ಶೈಲಿಯೆಂದರೆ ಜೀವನದ ದೀಪವನ್ನು ಉದ್ದೀಪನಗೊಳಿಸುವಂತಹದ್ದಾಗಿರುತ್ತದೆ. ದೇಶದ ಜನರ ಜೀವನವನ್ನು ಸುಗಮವಾಗಿ ಮಾಡಿ, ಅಧಃಪತನಕ್ಕಿಳಿದ ಜನರನ್ನು ಮೇಲಕ್ಕೆತ್ತುವಂತೆ ಮಾಡುವ ಲೇಖನವು ಭಾಷೆಯ ಶೈಲಿಯನ್ನು ಸಂಪೂರ್ಣವಾಗಿ ರುಜುಪಡಿಸುತ್ತದೆ.

ತನ್ನಷ್ಟೆ ದೇಶದ ಜನರ ನಡತೆಯನ್ನು ಹತೋಟಿಗೆ ತರಲು ಪ್ರಯತ್ನಿಸಬೇಕು. ಇತ್ತೀಚೆಗೆ ಈ ಸಿನೆಮಾ ಚಿತ್ರಗಳು ಜನರನ್ನು ಇಲ್ಲಸಲ್ಲದ ವಿಕಾರಗಳಿಗೆ ಗುರಿಯಾಗ ಮಾಡಿವೆ. ಸಮಾಜದ ಹಾನಿಯು ಈ ಇಂತಹ ಹೀನವಾದ ದೃಶ್ಯಗಳಿಂದಲೇ ಉದ್ಭವಿಸಿತೆನ್ನಬಹುದು. ಯಾವ ಚಿತ್ರದಲ್ಲಿ ದೇಶಭಕ್ತಿಯ ಪ್ರಚಾರದ ಬೀಜವು ಬಿತ್ತಲ್ಪಟ್ಟಿದ್ದಿತೋ ಅದನ್ನು ಸರಕಾರದವರು ಬಹಿಷ್ಕರಿಸಿದರು. ಎಲ್ಲೂ ಅದನ್ನು ಪ್ರದರ್ಶಿಸಬಾರದಾಗಿ ಕಟ್ಟಪ್ಪಣೆ ಮಾಡಿದರು. ಆದರೆ ಸಮಾಜವನ್ನು ಅವನತಿಗೆಳೆವ ಇತರ ಚಿತ್ರಗಳನ್ನು ಪ್ರದರ್ಶಿಸಲು ಆಸ್ಪದ ಕೊಟ್ಟ ಸರಕಾರದವರ ಅಲೌಕಿಕ ವಿಚಾರಗಳಿಗೇನೆಂತ ಹೇಳಬೇಕು. ಆದರೂ ಪರವಿಲ್ಲ. ಇನ್ನಾದರೂ ಎಲ್ಲರೂ ಅಂತಹ ದೃಶ್ಯಗಳಿಗೆ ಆಸ್ಪದ ಸಿಗದಂತೆ ಪ್ರಯತ್ನಿಸಿ ಸಮಾಜದ ನಿರ್ಬಲತ್ವವನ್ನು ಹೋಗಲಾಡಿಸುವ ದಿವ್ಯ ಧ್ಯೇಯವನ್ನು ತೊಟ್ಟುಕೊಳ್ಳಿರಿ.

ಹಳ್ಳಿಗಳಲ್ಲಿ ಹಿಂದಿ ಪ್ರಚಾರವಾಗಬೇಕಾದರೆ ತುಂಬಾ ಪ್ರಯಾಸವಿದೆ. ಅವರಿಗೆ ಓದಲು ಬಿಡುವು ಸಿಗದಿದ್ದರೂ, ಸಮಯವಿದ್ದಾಗ ಓದಲು ಪುಸ್ತಕಗಳು ಸಿಗುವುದು ದುರ್ಲಭ. ಇದನ್ನು ಹೋಗಲಾಡಿಸಲು ಪ್ರತಿಯೊಂದು ಹಳ್ಳಿಯಲ್ಲಿ ಚಿಕ್ಕದೊಂದು ಹಿಂದಿ ವಾಚನಾಲಯವನ್ನು ತೆರೆದು ಧರ್ಮಾರ್ಥವಾಗಿ ಹಿಂದಿ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಅವರಿಗೆ ಓದಲು ಸಿಗುವಂತೆ ಮಾಡುವುದು ಉತ್ತಮ.

ದೊಡ್ಡ ಪಟ್ಟಣಗಳಲ್ಲಿ ಹಿಂದೀ ವಿಶ್ವವಿದ್ಯಾಲಯಗಳನ್ನು ತೆರೆದು ಹಿಂದಿಯಲ್ಲಿ ಉತ್ತಮ ಶ್ರೇಣಿಯ ವಿದ್ಯಾಭ್ಯಾಸವನ್ನು ಪಡೆವಂತೆಯೂ ಮಾಡಬೇಕು. ಇದರ ನಿರ್ಮಾಣಕ್ಕಾಗಿ ಶ್ರೀಮಂತರ ಉದರಾಶ್ರಯವು ಅತೀ ಅಗತ್ಯ ದಕ್ಷಿಣ ಹಿಂದೂ ದೇಶದಲ್ಲಿ ಹೇಗೆ ಹಿಂದಿಯು ಪ್ರಚಾರವಾಗುತ್ತಿದೆ ಅದೇ ರೀತಿಯಲ್ಲಿ ಹಿಂದೂದೇಶದ ಪ್ರತಿಯೊಂದು ಜಿಲ್ಲೆಯಲ್ಲೂ ಹಿಂದಿಯು ಪ್ರಚಾರವಾಗಬೇಕು. ಎಲ್ಲರೂ ಅದರ ಗಂಧವನ್ನು ತಕ್ಕಷ್ಟು ಮಟ್ಟಿಗೆ ಮೂಸುವಂತಾಗಬೇಕು. ಅನಂತರ ಅದರ ಸಂಮುಳವನ್ನು ಸವಿದು ಅವರು ತಾವಾಗಿಯೇ ಅದನ್ನು ನಡೆಯಲು ಹವಣಿಸುವರು. ಆಗ ಹಿಂದಿಯ ಬೆಲೆಯು ಸರ್ವರೂ ತಿಳಿದಂತಾಗಿ ಅದರ ಪ್ರಚಾರ ಕಾರ್ಯವು ಚಲೋದಾದ ರೀತಿಯಲ್ಲಿ ಮುಂದೊತ್ತುವುದು. ಹಿಂದಿಯ ಪ್ರಚಾರವ ಅದನ್ನು ದೇಶಭಾಷೆಯನ್ನಾಗಿ ಮಾಡುವುದು ಪರಭಾಷೆಗಳನ್ನು ತ್ಯಜಿಸಬೇಕೆಂಬ ಆಕಾಂಕ್ಷೆಯಿಂದಲ್ಲ. ಅನ್ಯಭಾಷೆಗಳೂ ನಮಗೆ ಬೇಕು ಆದರೆ ಅವೆಲ್ಲವುಗಳಿಗಿಂತಲೂ ನಮ್ಮದೆ ಆಗಿರುವ ಒಂದು ಭಾಷೆಯು ನಮ್ಮಲ್ಲಿರುವುದು ಒಳಿತು.

ಕ್ಷಯರೋಗವನ್ನು ಹೇಗೆ ನಿವಾರಿಸಬಹುದು

ರಾವ್ ಬಹದ್ದೂರ್ ಡಾಕ್ಟರ್ ಎಮ್. ಕೇಶವ ಪೈ ಎಮ್. ಡಿ. ಇವರು ನೆಲ್ಲೂರಲ್ಲಿ ಕೊಟ್ಟ ಭಾಷಣದ ಸಾರಾಂಶ.

ಹಿಂದೂ ದೇಶದಲ್ಲಿ ಈಗಲೀಗ ಕ್ಷಯರೋಗದ ಪ್ರಸಾರವು ಬಹು ವೇಗವಾಗಿ ಸಾಗುತ್ತಿದೆ. ಈ ರೋಗದ ಅಣುಗಳು ಪ್ರತಿ ಅಂಗಗಳಲ್ಲಿಯೂ ಹೊಕ್ಕೊಡನೆ ದೇಹದ ವಿವಿಧ ಭಾಗಗಳಲ್ಲಿ ಕ್ಷಯರೋಗವನ್ನುಂಟುಮಾಡುತ್ತದೆ. ಇದರ ಅಣುಗಳು ಶ್ವಾಸಕೋಶವನ್ನು ಸೇರಿದುವೆಂದರೆ, ಶ್ವಾಸಕೋಶದ ಕ್ಷಯರೋಗವು ಪ್ರಾರಂಭವಾಗುವುದು. ಕೇವಲ ಮನುಷ್ಯರಿಗೆ ಮಾತ್ರ ಇದರ ಪೀಡೆಯಿಲ್ಲ. ಮೃಗಗಳಲ್ಲೂ ಇದರ ಹಾವಳಿ ಇದೆ. ಹೆಚ್ಚಾಗಿ ದನ, ಎಮ್ಮೆ ನಾಯಿ ಬೆಕ್ಕು ಇವುಗಳಿಗೆ ಈ ರೋಗವು ತಗಲುವುದು. ಕೋತಿಗಳೂ, ಹಂದಿಗಳೂ, ಇದರಿಂದ ಪೀಡೆಹೊಂದುವುದುಂಟು. ಮೊದಮೊದಲು ಕೋತಿಗಳಿಗೆ ಈ ರೋಗದಿಂದಾಗಿ ಹಾನಿ ಇಲ್ಲವೆಂದು ಎಲ್ಲರೂ, ಹೇಳುತ್ತಿದ್ದರು. ಆದರೆ ಇತ್ತೀಚೆಗೆ ನಡೆದ ವಿಜ್ಞಾನಶಾಸ್ತ್ರದ ಅನುಭವದಿಂದಾಗಿ ಅವರಿಗೂ ಇದರ ಹಾನಿಯಿದೆ ಎಂಬುದಾಗಿ ತಿಳಿದು ಬಂದಿದೆ. ಕುಷ್ಠರೋಗವೂ ಈ ಕ್ಷಯರೋಗದಷ್ಟೆ ಪ್ರಬಲವಾದ ವ್ಯಾಧಿ. ಇವೆರಡು ರೋಗಗಳು ಅಂಟುರೋಗಗಳಾದ ಕಾರಣ ಪರಸ್ಪರ ಹಬ್ಬುವಿಕೆಯಿಂದಾಗಿ ಜನರ ನಿರ್ನಾಮ ಮಾಡುತ್ತವೆ. ಆದರೆ ನಿಜವಾದ ವಸ್ತುಸ್ಥಿತಿಯು ಬೇರೆಯೇ. ಅದು ನಾವು ಭುಂಜಿಸುವ ಕೆಟ್ಟ ಆಹಾರದಿಂದಾಗಿ ಉದ್ಭವಿಸುತ್ತದೆ.

ಅದು ಹರಡುವ ನಮೂನೆಯು ಅಗಾಧವಾದುದು. ಕ್ಷಯರೋಗಪೀಡಿತ ಮನುಷ್ಯನ ಉಗುಳು ಭಯಂಕರ ಮಾರಿಯೇ ಸರಿ. ಅದು ಒಣಗಿದ ಕೂಡಲೆ ಅದರಲ್ಲಿಯ ಅಣುಗಳು ಬಹಳ ಹಗುರವಾಗಿ ಗಾಳಿಯಲ್ಲಿ ಹಾರಲು ತೊಡಗುತ್ತವೆ. ಕಸ ತೆಗೆಯುವಾಗ ಆಗಲಿ, ವಾಹನಗಳು ರಭಸದಿಂದ ಹೋಗುವಾಗ ಆಗಲಿ ಇದು ಮೇಲಕ್ಕೆದ್ದು ಗಾಳಿಯಲ್ಲಿ ತೇಲಲು ಪ್ರಾರಂಭಿಸಿ ಯಾವನಾದರೊಬ್ಬ ಮನುಷ್ಯನ ಶ್ವಾಸಕೋಶವನ್ನು ಸೇರಿ ಅವನನ್ನು ಕ್ಷಯರೋಗ ಪೀಡಿತನನ್ನಾಗಿ ಮಾಡುತ್ತಿದೆ ಕ್ಷಯರೋಗವನ್ನು ಗುಣಪಡಿಸಲು ಸಾಧ್ಯವಿಲ್ಲವೆಂಬ ಮಾತು ಸಂಪೂರ್ಣ ಸುಳ್ಳು. ಅದನ್ನು ನಿಜವಾಗಿಯೂ ಬಹಳ ಸುಲಭದಲ್ಲಿ ಗುಣಪಡಿಸಿಕೊಳ್ಳಬಹುದು. ಲೇಖಕರು ಎಂಟರಷ್ಟು ರೋಗಿಗಳು ಔಷಧವನ್ನು ಪಡೆದು ಗುಣ ಹೊಂದುತ್ತಿದ್ದಾರೆ. ಪ್ರಾರಂಭದಲ್ಲೆ ಯೋಗ್ಯ ಔಷಧಿಯನ್ನು ಸರಿಯಾದ ಪಥ್ಯಪಾನಗಳನ್ನು ಮಾಡಬೇಕು ಅದು ಚಿಕ್ಕ ವಯಸ್ಸಿನಲ್ಲೆ ಮಕ್ಕಳನ್ನು ಆಶ್ರಯಿಸುತ್ತದೆ. ಆಗಲೇ ಅದರ ಹುಳುಕನ್ನು ತಿಳಿದ ಹೆತ್ತವರು ವೈದ್ಯರ ಸಹಾಯದಿಂದ ಅದನ್ನು ಕಿತ್ತೊಗೆಯಲು ಪ್ರಯತ್ನ ಪಡುತ್ತಿರಬೇಕು. ಮಗುವಿಗೆ ಸರಿಯಾದ ಆಹಾರವನ್ನು ನಿರ್ಮಲವಾದ ಉಡಿಗೆ ತೊಡಿಗೆಗಳನ್ನು ನಿರ್ಮಲವಾದ ವಾಯುಸೇವನೆ, ದೇಹಕ್ಕೆ ಸುಖಕರವಾದ ಆಟಗಳು, ಇವುಗಳನ್ನೆಲ್ಲಾ ಹೆತ್ತವರು ಮಕ್ಕಳಿಗೆ ಒದಗಿಸುತ್ತಿರಬೇಕು. ಕ್ಷಯರೋಗದ ಚಿಹ್ನಗಳಾವವೆಂದರೆ, ನಿರ್ಬಲತ್ವ, ಅಜೀರ್ಣ, ಸಾಯಂಕಾಲವಾಗುತ್ತಾ ಮೈಬಿಸಿ ಏರುವುದು, ಕೆಮ್ಮು, ಚಳಿಜ್ವರ, ಇವನ್ನು ಕಂಡಕೂಡಲೆ ವೈದ್ಯರನ್ನು ವಿಚಾರಿಸಿ ತಕ್ಕ ಚಿಕಿತ್ಸೆಯನ್ನು ಮಾಡಿಬಿಟ್ಟರೆ ಎಷ್ಟೊ ವಾಸಿ. ಇಂತಹ ರೋಗಗಳಿದ್ದಲ್ಲಿ ಹೀಗೆಯೇ ಕಸವನ್ನು ಗುಡಿಸಬಾರದು. ಅದರಿಂದ ವಿಷಾಣುಗಳ ಪ್ರಸಾರಕ್ಕೆ ಆಶ್ರಯಕೊಟ್ಟಂತಾಗುತ್ತದೆ. ಅಲ್ಲಲ್ಲಿ ನೀರನ್ನು ಚಲ್ಲಿ ಅನಂತರ ಗುಡಿಸುವುದು ವಾಸಿ. ಕ್ಷಯರೋಗ ಪೀಡಿತರಾದ ಸೇವಕರಿದ್ದರೆ, ಅವರನ್ನು ಕೂಡಲೇ ಕೆಲಸದಿಂದ ತೆಗೆದು ಹಾಕುವುದು ಉತ್ತಮ. ಮನೆಯಕೆಲಸದವರು ಹೀಗೆ ಪೀಡಿತರಾದರೆ ಅವರನ್ನು ನಿವೃತ್ತಗೊಳಿಸಬೇಕು. ಅಂತೆಯೆ ಮನೆಯಲ್ಲಿ ತುಂಬಾ ಬೆಳಕು ಬೀಳುವಂತೆಯೂ, ಗಾಳಿಯು ಸಂಚರಿಸುವಂತೆಯೂ ಆಗಬೇಕು. ಇದಕ್ಕಾಗಿ ವಿಶಾಲವಾದ ಕಿಟಕಿಗಳನ್ನೂ ಬಾಗಿಲುಗಳನ್ನೂ ಇಡುವುದು ಒಳ್ಳೇದು. ಬಾಲ್ಯಪ್ರಾಯದಲ್ಲೆ ಮದುವೆ ಮಾಡುವುದು ಬಹಳ ಕೆಟ್ಟದು. ಕ್ಷಯರೋಗಕ್ಕೆ ಅದೊಂದು ದೊಡ್ಡ ಹೆದ್ದಾರಿ. ಚಿಕ್ಕ ಪ್ರಾಯದಲ್ಲೆ ಹುಡುಗಿಯು ಹೆರಲು ಪ್ರಾರಂಭಿಸಿದರೆ ಅವಳಿಗೆ ಕ್ಷಯರೋಗ ತಗಲುವುದರಲ್ಲಿ ಸಂಶಯವಿಲ್ಲ. ಸಂತಾನ ನಿರೋಧವು ತೃಪ್ತಿಕರವಾಗಿ ಮಾಡಿದ್ದಲ್ಲಿ ಕ್ಷಯರೋಗವು ಬಾರದಂತೆ ಮಾಡಬಹುದು. ಕೆಲ ಹೆಂಗಸರಲ್ಲಿರುವ ಘೋಷಾಪದ್ಧತಿಯು ಈ ರೋಗಕ್ಕೆ ಒಂದು ನೆಲೆಯನ್ನು ಕೊಟ್ಟಂತಾಗುತ್ತದೆ ಬಿಸಿಲು ಗಾಳಿಗೆ ಅದಷ್ಟು ಮೈಯನ್ನು ಒಡ್ಡಬೇಕು. ರಾತ್ರಿಂದಿವವೂ ಅದನ್ನು [illegible] ಬಿಸಿಲು ಗಾಳಿಯಿಂದ ಮುಚ್ಚಿಟ್ಟರೆ ದೇಹ ಪ್ರಕೃತಿಗೆ ಬಹಳ ಕೆಟ್ಟದು. ಹೆಮ್ಮಕ್ಕಳಿಗೆ ಶಾಲಾ ವಿದ್ಯಾಭ್ಯಾಸವು ಬಹಳ ಉಪಕಾರವಾಗುವುದು. ಕಾರಣ ಅಲ್ಲಾದರೂ ತುಸ ಸಮಯ ಅವರು ನಿರ್ಮಲ ಗಾಳಿಯ ಹೊರಲಲ್ಲಿ ಬಿದ್ದು ಬಿಸಿಲಲ್ಲಿ ಕುಣಿದಾಡಿ ಆರೋಗ್ಯಕ್ಕೆ ಬೇಕಾದ ಬಿಸಿಲು ಗಾಳಿಗಳನ್ನು ಸರಿಯಾಗಿ ಪಡೆಯುವಂತೆ ಆಗುತ್ತದೆ. ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸಿ ಬಡವರ ಕೂಡ ಒಳ್ಳೆಯ ಆಹಾರವನ್ನು ಪಡೆವಂತೆ ಮಾಡಿದರೆ ಈ ಕ್ಷಯರೋಗವನ್ನು ಆದಷ್ಟು ಮಟ್ಟಿಗೆ ದೂರ ಅಟ್ಟಿದಂತೆ ಆಗುತ್ತದೆ.

"ಮೇಲೆ ಮೇಲೆ ವೇದನೆ ಗೊಳ್ಳುತ್ತಿದ್ದೆ"

ಎರಡು ವರ್ಷಗಳ ವರೆಗೆ ಉದರವೇದನೆಯಿಂದ ಕಷ್ಟಪಟ್ಟು, ಆಸ್ಪತ್ರೆಯ ಚಿಕಿತ್ಸೆಯಾದ ನಂತರವೂ ಅದು ಗುಣವಾಗದಿದ್ದು ನೊಂದುಕೊಳ್ಳುವಾಗ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್‌ನ ಒಂದೇ ಒಂದು ಬಾಟ್ಲಿಯಿಂದ ಶೀಘ್ರ ಗುಣವಾಯಿತೆಂದರೆ ಅದೊಂದು ವಿಚಿತ್ರವೆಂದು ನೀವು ಭಾವಿಸಲಾರಿರಾ? ಅದನ್ನು ಮಿ W. C. H. ರವರು ಅವರ ಸುದಿಗಳಿಂದಲೇ ವ್ಯಕ್ತಪಡಿಸಿರುವುದನ್ನು ಓದಿರಿ

ನಾನು ಆಸ್ಪತ್ರೆಯಲ್ಲಿದ್ದೆ, ಎರಡು ಸಲ ಎಕ್ಸ್‌ರೇ ನಡೆಸಿದರು, ಎರಡು ವರ್ಷಗಳಿಂದ ಉದರವೇದನೆಯಿಂದ ಬಳಲುತ್ತಿದ್ದೆ. ಒಮ್ಮೊಮ್ಮೆ ಮೇಲೆ ಮೇಲೆ ವೇದನೆಯಾಗುತ್ತಿತ್ತು ಆಸ್ಪರಲ್ಲಿ ಒಬ್ಬ ಗೆಳೆಯರು ಮೆಕ್ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಉಪಯೋಗಿಸೆಂದು ಹೇಳಿದರು. ಅದು ಅದ್ಭುತವನ್ನೇ ನಡೆಸಿತು, ಒಂದು ಬಾಟ್ಲಿಯ ಹುಡಿಯನ್ನು ತೆಗೆದುಕೊಂಡೊಡನೆ ನನಗೆ ಬಹು ಸ್ವಾಸ್ಥ್ಯವು ಲಭಿಸಿತು. ಮುಂದಕ್ಕೆ ನಾನು ಅದನ್ನು ಇಟ್ಟುಕೊಳ್ಳದಿರೆನು. ಹೊಟ್ಟೆನೋವಿನಿಂದ ಕಷ್ಟಪಡುತ್ತಿರುವವರಿಗೆಲ್ಲ ಅದನ್ನು ಶಿಫಾರಸು ಮಾಡುವೆನು.

ಯಾವ ರೀತಿಯ ಹೊಟ್ಟೆಯ ಬಾಧೆಯಿಂದ ಕಷ್ಟಪಡುತ್ತಿರುವಿರಾದರೂ, ನಿಮಗೆ ಮಿ H. ರವರಿಗೆ ದೊರೆತ ಸುಖ ದೊರೆಯುವುದು, ಆದರೆ ಕೆಲವು ಆಶೆಗಳ ವಾಸಿಗಾಗಿ ಕೀಳು ತರಗತಿಯ ವಸ್ತುವನ್ನು ಪಡೆದು ಅಪಾಯಕ್ಕೆ ಗುರಿಯಾಗಬೇಡಿ. ಕೆಂಪು ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರ್ ನಮ್ಮ ಕೆಮಿಸ್ಟರಿಂದ ಪಡೆಯಿರಿ, ಸೀಲು, ರಕ್ಷಾಪತ್ರ, ಮತ್ತು ಬಿಲ್ಲೆಗಳ ಮೇಲೆ

Alex. C. Maclean

ಎಂಬ ದಸ್ಕತು ಇದೆ,

ಸ್ಥಳೀಕ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿದ್ದಲ್ಲಿ —

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೩ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,

ಇಲ್ಲಿಗೆ ಬರೆಯಿರಿ.

ಸರಕಾರದಲ್ಲಿ ರಜಿಸ್ಟರ ಮಾಡಲ್ಪಟ್ಟ ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಪ್ರವಾಸಮಿತ್ರ ಮೂರ್ತಿಮಂತವೈದ್ಯ

ರೋಗದ ನಾಮಗಳು:—ಕ್ಷಯ ರೋಗ, ಬಾಣಂತಿರೋಗ, ಹಡೆದ ನಂಜು, ದಮ್ಮು, ಅಜೀರ್ಣ, ಕಾಲರಾ, (ಮಾರಿಕಾ,) ಪ್ಲೇಗು, ಇನ್‌ಪ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲ ರೋಗ, ಗಂಡುಮಾಲೆ, ಸಾರೆಹುಣ್ಣು, ಶಸ್ತ್ರಘಾಯ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದುವುಗಳು, ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ, ಹೊಟ್ಟೆ ಶೂಲೆ, ಸಣ್ಣ ಕೂಸುಗಳಿಗೆ ಆದ ರೋಗಗಳು, ಅರಿವಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋಣ, ಕೋಡಗೆಮ್ಮು, ಮೈ ಹೊರಬೀಳೋಣ, ಮತ್ತು ಡಾಕ್ಟರರಿಗೂ, ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಅರೋಗ್ಯಬಿಂದುವಿನಿಂದ್ನಿಖಾತ್ರಿಯಾಗಿ ಗುಣಪಡುವುದು. ಅನೇಕ ರೋಗಗಳಿಗೆ ಒಂದೇ ಔಷಧನೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು ಅಂಥವರು ಒಂದು ಸಾರಿ ತಂದು ಮನಗಾಣಬೇಕು, ಸ್ಥಾಪನಾ ಅಂದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ. ಇದೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ

೧ ತೊಲೆ ಬಾಟ್ಲಿ ಒಂದಕ್ಕೆ ರೂ. ೨ ನಮೂನೆ ಉದ್ದೇಶ ೫ ೮ ತೊಲದ ಬಾಟ್ಲಿ ಒಂದಕ್ಕೆ ೮ ೮. ಚಿಕ್ಕ ಬಾಟ್ಲಿ ಒಂದೇ ಸರಿ ಒಂದು ಡಜನ್ ತರಿಸಿಕೊಳ್ಳುವವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು. ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು. ಟಪಾಲ ಖರ್ಚು ಹೆಚ್ಚು ಆದ ಕಾರಣ ಈ ಪ್ರಕಾರ ವ್ಯವಸ್ಥಾ ಮಾಡಿದೆ. ಟಪಾಲ ಖರ್ಚು ೧೧-ಆಣೆ ೧ ತೊಲೆ ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು. ಟಪಾಲ ಖರ್ಚು ೧೧ ಆಣೆ ಬೀಳುವುದು. ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ. ಸಣ್ಣ ಬಾಟ್ಲಿ ಒಂದೇ ಬೇಡಿದರೆ ಕಳಿಸಲಾಗದು. ಟಪಾಲ ಖರ್ಚು ೮ ಆಣೆ ಒಡುವುದು ಕನಿಷ್ಠ ಪಕ್ಷಕ್ಕೆ ಎರಡು ರೂಪಾಯಿಯ ಔಷಧ ತರಿಸಿಕೊಂಡರೆ ಕಳಿಸುತ್ತೇವೆ. ಟ. ಖರ್ಚು ೮ ಆಣೆ ಬೀಳುವುದು.

ತಿಳಿಸ್ಕೊಳ್ಳುವ ಪ್ರಮಾಣ—ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷಿಸಿದೆವು. ಬಾ. ಯ ಕೂಡ ಕಳಿಸುವೆವು. ಔಷಧವು ಖೊಟ್ಟಿಯಾಗಿ ಹೊರಟರೆ ಉಳಿದ ಬಾಟ್ಲಿ ಪರತ ತೆಗೆದುಕೊಂಡು ಹಣ ತಿರುಗಿ ಕೊಡುವೆವು ಬೇಡುವವರು ತಮ್ಮ ವಿಳಾಸ ಕನ್ನಡ, ಮರಾಠಿ, ಇಂಗ್ಲೀಷುಗಳಲ್ಲಿ ಸ್ಪಷ್ಟ ಬರೆಯಬೇಕು, ತಮ್ಮ ಹೆಸರು ತಂದೆಯ ಹೆಸರು, ಅಡ್ಡ ಹೆಸರು, ಇರುವ ಗ್ರಾಮ, ಪೋಸ್ಟಾಫೀಸು ತಾಲೂಕು, ಜಿಲ್ಲಾ ಸ್ಟೇಟ ಎಲ್ಲಾ ಖುಲಾಸ ಬರೆಯಬೇಕು

ನಮ್ಮ ವಿಳಾಸ – ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕುಶಫಾ ಹೆಡ್ ಆಫೀಸು, ಪೊ. ಶಹಾಪೂರ [ಬೆಳಗಾಂವಿ]

New Era Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment

Details may be had on application to the Manager.

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc., in guaranteed colours. Silk Sarees & Coatings a Speciality. Work is conducted under the supervision of Textile experts. We undertake special orders to suit individual tastes.

Please inspect our goods at:

Raghavendra Ranga Pai, Car Street, Mangalore.

We deal in grey & Coloured Yarns, Dyes Chemicals & Handloom accessories

M. Venkatesha Ranga Pai,

Proprietor

ಡಾಕ್ಟರ ವಾಮನ ಗೋಪಾಳರವರ

ಐಟಿಡಾಯಿಡ್ಡ ಸಾರ್ಸಪರಿಲಾ ರಕ್ತಶುದ್ಧಿಗೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾ|| ಗೌತಮ ರಾವ್ ಕೇಶವರವರ ಫೋಸ್ಫರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೨

ಸ್ಟಾಕಿಸ್ಟ್—ಪಾ ಕಂಪೆನಿ ಮಂಗಳೂರು

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 3 -0—0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯಾಷಧ. ಪೌಂಡು 1ಕ್ಕೆ ರೂ 2-8-0. ½ಕ್ಕೆ ರೂ 1 5-0,

ಕಸ್ತೂರಿ ವಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ· 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಫ್ಲೂಯೆಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯಾಷಧ.

ಬಾಟ್ಲಿ 1ಕ್ಕೆ ರೂ. 1 – 8—0.

ಮೇಹಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8—0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—

ಡಬ್ಬಿ 1ಕ್ಕೆ ರೂ. 0-2-6. 12ಕ್ಕೆ ರೂ. 1-12-0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:

1 ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಪೈ, ಪುತ್ತೂರು. 4. ವಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ESTD: 1906

The Canara Banking Corporation Udipi Ltd

ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್ ಉಡುಪಿ ಲಿಮಿಟೆಡ್.

The First Indigenous & Cosmopolitan Bank of S. K District.

Capital Authorised, issued & Subscribed	Rs.	3,50,000	0	0
Paid up Capital	„	2,87,435	0	0
Reserves	„	3,69,986	0	0

4-4-1986

FIXED DEPOSITS UP TO 5%

Head office:—UDIPI, S. K.

Branches:—1 Udipi, 2. Coondapoor, 3. Car Street, Mangalore, 4. Shimoga, 5. Madras 6. Bunder Mangalore, 7. Mercara & 8 Virarajendrapet.

THE BOMBAY LIFE ASSURANCE COMPANY, LIMITED.

KOCHIKAR BROTHERS, Madras Branch Secretaries and Chief Agents for Bombay City & Suburbs

ANNOUNCEMENT:—We have the pleasure to inform all our Constituents, Agents and Policy-holders that we have taken up a Newly Erected Bungalow "Soumyalayam" in Futhiyara on the Taluq Office Road, opposite Puthiyara Post Office and are opening our Calicut Branch Office in the said Building on 14—8—1936. The present Office of Mr C. Sankaran Nair, our Malabar District Agent, situated in Huzur Road, will cease to exist and will merge in our New Branch Office This has been necessitated by the vast expansion of our business in Malabar and the adjacent districts, as the New Premises are very well situated and more spacious and thus we hope to render better service to our Policyholders. Our patrons and well wishers are requested to pay a visit to the "Soumyalayam at their early convenience. All correspondence and remittances and cheques should be addressed to,

Messrs. **KOCHIKAR BROTHERS,**

Bombay Life Office, Puthiyara Post (Calicut—Malabar)

We have also registered our telegraphic address as "Kochikar— Calicut" for the convenience of our constituents

ಪ್ರಕಟಣೆ—ಸದರಿ ವಿಮಾ ಕಂಪೆನಿಯು ತನ್ನ ಏಜಂಟರಿಗೂ, ಪೋಲಿಸಿದಾರರಿಗೂ ಈ ಮೂಲಕ ತಿಳಿಯಪಡಿಸುವದೇನಂದರೆ—ತಾ. 14 8-36ರಿಂದ ಕಲ್ಲಿಕೋಟೆಯಲ್ಲಿರುವ ನಮ್ಮ ಮಲಬಾರ ಏಜೆಂಟರಾದ ಮಿ॥ ಸಿ. ಶಂಕರನಾಯರ್‌ರವರ ಹಜೂರ ರಸ್ತೆಯ ಬಳಿ ಇರುವ ಆಫೀಸನ್ನು ಪುತಿಯಾರ ಪೋಸ್ಟು ಆಫೀಸಿನ ಎದುರಿರುವ ಹೊಸತಾಗಿ ಕಟ್ಟಿಸಿದ ದಿವ್ಯವಾದ ಸೌಮ್ಯಾಲಯಮ್ ಎಂಬ ಬಂಗ್ಲೆಯಲ್ಲಿ ತೆರೆಯಲಾಗುವುದು ಇನ್ನುಮುಂದೆ ಸಂಬಂಧಪಟ್ಟ ಲೆಖ್ಖಪತ್ರಗಳನ್ನು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು

ಮೆಸರ್ಸ ಕೊಚ್ಚಿಕಾರ್ ಬ್ರದರ್ಸ್,

ಬೊಂಬೈ ಲೈಫ್ ಆಫೀಸ್, ಪುತಿಯಾರಾ ಪೋಸ್ಟು, (ಕಲ್ಲಿಕೋಟೆ ಮಲಬಾರು)

ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ತಂತಿಯ ವಿಳಾಸವನ್ನು ಕೊಚ್ಚಿಕಾರ—ಕಲ್ಲಿಕೋಟೆ ಎಂಬುದಾಗಿ ಮಾಡಿದೆ

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುನೋವುಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷಪಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ. ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಡ ಮಾಡದೆ ಬರೆಯಿರಿ.

ಸೂಚನಾ ಪತ್ರ, ವಿವರಣೆಯ ಹಸ್ತಕಾಧಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

Edited Printed & Published By A. S. Kamath at the Sharada Press, Car Street, Mangalore.

ಕಾಣ್ಕೆಗಳ ಪಂಚಾಂಗ ರೂಪಾಯಿ
ಬಿಡಿ ಸಂಚಿಕೆಗೆ ಒಂದಾಣೆ.

Regd. No. M 8406

ಟಪ್ಪಾಲು ಹಾಸಲು ಸೇರಿ ವರ್ಷ 3-13-0

?
for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR —
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in
THE BOMBAY LIFE
Madras Branch Secretaries
Kochikar Brothers

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ ತೋರಿದ ಧೀರರು ನಿಶ್ಚಿತಾರ್ಥವನು । ೧ ॥

ಪುಸ್ತಕ ೩೦. ಮಂಗಳೂರು ತಾ. ೮ನೇ ಶುಕ್ರವಾರ ಮೇ ೧೯೩೬ (8-5-'36) ಸಂಚಿಕೆ ೧೯

ಮಧುರೆಯಲ್ಲಿರುವ ತಿರುಮಲ್ನಾ ಅರಮನೆಯ ಗಂಭೀರವಾದ ಕಂಬಗಳ ಮನೋರಂಜಕ ದೃಶ್ಯ.
ಇಲ್ಲಿ ನಡೆಯುವ ಚಿತ್ರಾ ಹಬ್ಬಕ್ಕೆ ಲಕ್ಷೋಪಲಕ್ಷ ಜನರು ಧಾವಿಸಿ ಬರತೊಡಗಿದ್ದಾರೆ

ನೋಟಗಳು.
NOTE . . . S.

ರೋಮ್, ನಗರದ ಪ್ರತಿಷ್ಠಾಪನೆಯ ದಿನಾಚರಣೆ ನಡೆಯಿತು, ಮೇ ತಾ. ೪ರಲ್ಲಿ ಅಂದು ರೋಮೀಯರ ಪುರಾಣ ಪ್ರಸಿದ್ಧವಾದ ಮಹಾ ಗೌರವವನ್ನು ಕೊಂಡಾಡುವುದಕ್ಕೆಂದು, ಯುರೋಪಿನ ಲೀಗ್ ಒಫ್ ನೇಶನ್ಸ್ ಸಮಿತಿಯವರು, ಅಬಿಸೀನಿಯವನ್ನು ಇಟೇಲಿಗೆ ದಾನವಾಗಿ ಕೊಟ್ಟಿರುವಂತೆ ಭಾವಿಸಲು ಅನುಕೂಲವಾದ ವಿದ್ಯಮಾನಗಳು ನಡೆದಿವೆ

೦ ೦ ೦ ೦

ಇಥಿಯೋಪಿಯ ಎಂದರೆ ಕಪ್ಪು ಜನಗಳ ದೇಶ, ಅಬಿಸೀನಿಯ ಎಂದರೆ ಮಿಶ್ರ ಜನಾಂಗಗಳ ದೇಶ ಇವೆರಡೂ ಹೆಸರುಗಳು ಆ ಸಾಮ್ರಾಜ್ಯಕ್ಕೆ ಒಪ್ಪವು. 'ಮುಸೊಲಿನಿಯಾ' ಎಂಬ ಹೊಸ ಹೆಸರನ್ನಿಕ್ಕಲ್ಲಿ, ಮಿಸಲೀನಿಯಸ್ ಆದ ಮಿಶ್ರ ಜನಗಳ ಬಳಿಯವರಲ್ಲದ ಇತರರ ಹಾಗೂ, ಮುಸೊಲೀನಿ ಮಹಾ ಮಾಂಡಲಿಕನ ರಾಜ್ಯ ಎಂಬ ಮೂರು ಹೆಸರುಗಳು ಆ ರಾಜ್ಯಕ್ಕೆ ಒಪ್ಪದಿರವು ಎಂದು ರೋಮಿನ ಸೂಚನೆ

೦ ೦ ೦ ೦

ಇಪ್ಪತ್ತನೆಯ ಶತಮಾನದ ವಿಲಾಯತೀ ಸುಧಾರಣೆಯು ವಿಷವಾತಗಳ ರೂಪವಾಗಿ ಆ ರಾಜ್ಯದೊಳಗೆ ಹರಿದು, ಹಳೆಯ ಜೀವನವನ್ನು ಸಂಪ್ರೋಕ್ಷಣೆಯ ಮೂಲಕ ಪರಿಶುದ್ಧ ಮಾಡಿ ನೂತನ ಜೀವನವನ್ನು ಅಲ್ಲಿ ಬಿತ್ತಿದ ಕೀರ್ತಿ ಇಟೆಲಿಗೆ ಮಾತ್ರವಲ್ಲ,—ಇಟೆಲಿಯು ಒಳನುಗ್ಗಿದ ಆರು ತಿಂಗಳ ತರುವಾಯದಲ್ಲಿ ಇಟೆಲಿಯು ಯುದ್ಧದಲ್ಲಿ aggressor ಅಗ್ರೇಸರನಾದುದೆಂದು ನಿರ್ಧಾರ ಮಾಡುವ ಧಾರಾಳ ವಿವೇಕವನ್ನು ಪ್ರಕಟಿಸಿರುವ ಲೀಗ್ ಒಫ್ ನೇಶನ್ಸಿಗೂ ಸಲ್ಲುವುದು

೦ ೦ ೦ ೦

ಸಮ್ರಾಜನು ಪರಿವಾರದೊಡನೆ ಫ್ರೆಂಚರ ನಾಡಿಗೆ ತೆರಳಿ, ಆ ಇಂದ್ರಪ್ರಸ್ಥದಿಂದ ಜಬೂತಿ (Djibouti) ಹಸ್ತಿನಾವತಿಯ ರಾಜ್ಯಕ್ಕಾಗಿ ಪುನಃ ಸಂಧಾನ ಮೂಲಕ ಸಾಧಿಸುವನು ಆದರೆ,—ಆ ಊಗ ಹೆಸರು ಅಪಲಕ್ಷಣವಾಗಿದೆ — ಪಭೂತಿ'

೦ ೦ ೦ ೦

ಮುಸೊಲಿನಿಗೆ ಸಹಾಯಕರು ದೇವರಲ್ಲದೆ ಇನ್ನಾರೂ ಇರಲಿಲ್ಲ ದೇವರು ಸ್ವಯಂ ಪ್ರತ್ಯಕ್ಷನಾಗಲಿಲ್ಲ,—ಪೆಟ್ರೋಲ್ ರೂಪವಾಗಿ ಲೀಗ್ ಒಫ್ ನೇಶನ್ಸಿನ ಜಡತೆ ಆಡಂಬರಗಳ ರೂಪವಾಗಿ, ಅಬಿಸೀನಿಯಕ್ಕೆ ಅಸಹಾಯತೆಯ ಸೂತ್ರಗಳ ರೂಪವಾಗಿ' ದೇವರ ಈ ತ್ರಿವಿಕ್ರಮಾವರೂಪದಿಂದಲ್ಲದೆ — ಅಬಿಸೀನಿಯವು ಬಲಿಯಾಗುತಿದ್ದಿತೆ?

೦ ೦ ೦ ೦

ಈಗ ರಗಳೆಗಿಟ್ಟದೆ ಇಟಲಿ ಗೆದ್ದರೆ, ಅಬಿಸೀನಿಯ ಸೋತರೆ, ನಷ್ಟವೇನಂದೇ—ಲೀಗಿಗೆ ಇನ್ನು ಬೀಗ ಮುದ್ರೆ' ಇದ್ದಾಗಲೂ ಮಹಾ ರಾಷ್ಟ್ರಗಳಿಗೆ ಅದು ಸಹಾಯಕವೆಂಬ ದೂರು ಇದ್ದಿತು ಈಗ ದೂರು ಹೋಯಿತು, ನಿಜ ಎಂದಾಯಿತು, 'ಸಾಮುದಾಯಿಕ ಭದ್ರತೆ' Collective Security ಇನ್ನು ಮಾಯವಾಯಿತು

೦ ೦ ೦ ೦

ಜರ್ಮನಿ ಜಾಪಾನು—ಫ್ರಾನ್ಸು ರಷ್ಯಾಗಳಲ್ಲ ಒಪ್ಪಂದಗಳಾಗುವುವು ಆಸ್ಟ್ರಿಯನ್ನು ಜರ್ಮನಿಯು ನುಂಗದಂತೆ ಇಟೆಲಿಯು ಫ್ರಾನ್ಸಿಗೆ ಸಹಾಯಮಾಡಬೇಕಾಗಿ ಎಣಿಸಿ, ಇಟೆಲಿಗೆ ಸರ್ವಾನುಕೂಲತೆಯನ್ನು ಫ್ರಾನ್ಸು ಮಾಡಿಕೊಟ್ಟಿತು ಈಗ,—ಜರ್ಮನಿಯು ಆಸ್ಟ್ರಿಯನ್ನು ನುಂಗಿದರೂ, ಅದರ ಸಹಾಯಕ್ಕೆ ... ಇಟೆಲಿಗೆ ಬಲವಿಲ್ಲ ಜರ್ಮನಿಯು ...ಲ್ಲಿ ಬೀಳದ ಕಾರಣ, ರಷ್ಯವು ಯುದ್ಧ...ಯು ಮಾಡುವುದಿಲ್ಲ ಈ ... ಯಾರಿಗಾಯಿತು?

ಇಂಗ್ಲೆಂಡು ಯಾವ ಯುದ್ಧದೊಳಗೂ ಸೇರಿಕೊಳ್ಳುವ ಹಾಗಿಲ್ಲ ತನ್ನ ಸಂರಕ್ಷಣೆ ಮಾತ್ರ ನೋಡಿಕೊಳ್ಳಲು ಈಗ ಸನ್ನಾಹ ಮಾಡುತ್ತಿದೆ

೦ ೦ ೦ ೦

ಹಿಂದುಸ್ಥಾನವನ್ನು ಗೋಕುಲದಂತೆ ಮಾಡಿಟ್ಟರೆ, ದೇಶದಲ್ಲಿ ಸಂಪತ್ತು ಹೆಚ್ಚುವುದೆಂದು ವೈಸ್ರಾಯರು ನಂಬಿ, ಎರಡು ಹೋರಿಗಳನ್ನು ಗೋಹಿತಕ್ಕಾಗಿ ದಾನಮಾಡಿದರು, ಕೂಡಲೆ ಕೊಯಮುತ್ತೂರಿನ ದ ನಾಲ್ಕು ಹೋರಿಗಳು' ಇನ್ನೆಷ್ಟೋ, ಎಲ್ಲೆಲ್ಲಿಂದಲೆಲ್ಲ, ಈ ದಾನದ ಸ್ಪರ್ಧೆಯ ಹೋರಾಟಕ್ಕೆ ಸಿದ್ಧವಾಗಬಹುದು'

೦ ೦ ೦ ೦

ಆದರೆ, ಕೆಲಕಾಲಕ್ಕೆ ಹಿಂದೆ, ಬೀಜದ ಹೋರಿಗಳು ಜಾನುವಾರುಗಳ ಅಭಿವೃದ್ಧಿಗೆ ಅಗತ್ಯವೆಂದು ಐ ಸಿ ಎಸ್ ಆಫೀಸರರೊಬ್ಬರು ನಮ್ಮ ಸರಕಾರಕ್ಕೆ ತಿಳಿಸಿದ್ದಾಗ,—'ಒಂದೆರಡು ಹೋರಿಗಳು ಇಂತಹ ಅಭ್ಯುದಯಕ್ಕೆ ಕಾರಣವಾಗಲಾರವು ಎಂಬು ಸರಕಾರದ ಅಪ್ಪಣೆಯಾಗಿತ್ತು. ಆ ಅಪ್ಪಣೆ ಪಾಲಿಸಿದ ಮಂತ್ರಿಗಳೇ, ಕೊಯಮುತ್ತೂರಿನ ಹೋರಿದಾನ ಸಮಾರಂಭ ಜರಗಿಸಿದರು

೦ ೦ ೦ ೦

ಇದರಲ್ಲಿ ಪ್ರಮಾದವೇನೂ ಇಲ್ಲ ಗೋಕುಲ ಇದ್ದುದು ಉತ್ತರ ಹಿಂದುಸ್ಥಾನದಲ್ಲಿ ಮದ್ರಾಸು ಅಧಿಪತ್ಯದಲ್ಲಿ ಅಲ್ಲವಷ್ಟೆ—ಅಷ್ಟು ನಮ್ಮ ಮಂತ್ರಿವರ್ಯರಿಗೆ ಚೆನ್ನಾಗಿ ಗೊತ್ತಾಗಿದೆ!

೦ ೦ ೦ ೦

ಪ್ರತಿಯೊಬ್ಬ ಯೂರೋಪಿಯನೂ ಈಗ ಓದುತ್ತಿರುವುದು, ಮೆಯೋವಿನಾಯಿಯ ಪುಸ್ತಕವನ್ನಲ್ಲ, ಇಂಡಿಯಾ ಆಕ್ಟನ್ನೂ ಅಲ್ಲ ಜವಾಹರಲಾಲರ ಅಧ್ಯಕ್ಷ ಭಾಷಣವನ್ನು!

ನಿಮಗೆ ಬೇಕಾಗಿರುವ:
ವಜ್ರಗಳು—
ಸಾವಕಾರ ಶ್ರೀನಿವಾಸ ರಂಗ ಪೈ,
ಸಾವಕಾರ ಮಹಾಲ್,
ರಥಬೀದಿ, ಮಂಗಳೂರು.
ಇವರಲ್ಲಿ ದೊರೆಯುತ್ತವೆ.

NOTICE

For auction sale three oil crushers with belts, pulleys, oil and water tanks etc, one 14 H P, Lister cold starter Engine in perfect working order, with all tools etc Double lock safe (Godrej) measuring 30 by 24' with wooden stand, wooden furniture such as chairs, table, Bench under the orders of the District Munsiff of Udipi on 24—5—36 at 9 A. M at the premisses of the canara mills company, Udipi Bidders will have to (1) pay cash on lots being knocked down (2) remove the machinary from the premises where it is now fixed within a week from the date of the sale provided the purchaser makes his own arrangements for the safe custody thereof For further particulars apply to

Udipi, 6–5–36.

K. Vittal Nayak,
Receiver,
The Canara mills Co.,

ಹಿಟ್ಲರನು ಮರದಿಂದಲೆ ಜಗತ್ತನ್ನು ಎದುರಿಸಬಲ್ಲನು!

ಪಕ್ಷಿವರ್ಗಗಳಲ್ಲಿ ನ್ಯಾಯಸ್ಥಾನ! ಕೋತಿಗಳು ಮಾತಾಡುತ್ತಿವೆ!

ತುಲಸಿ ಗಿಡವೂ ಅದರ ಮಹತ್ವವೂ.

ವಿಜ್ಞಾನದ ವಿಜಯ

ಹಿಟ್ಲರನು ಮರದಿಂದಲೇ ಜಗತ್ತನ್ನು ಎದುರಿಸಬಲ್ಲನು.

ಕಬ್ಬಿಣವೇ ಯುದ್ಧಸಾಮಗ್ರಿಯೆಂದು ನಲಿದಾಡುವ ಪ್ರಪಂಚಕ್ಕೆ ಹಿಟ್ಲರನು ಮರವನ್ನು ತೋರಿರುವನು. ಇನ್ನು ಮುಂದಿನ ಯುದ್ಧಗಳಲ್ಲಿ ಸಕಲ ಯುದ್ಧೋಪಕರಣಗಳು ಮರದಿಂದಲೇ ಮಾಡಲ್ಪಡುವುವು—ಆಶ್ಚರ್ಯ'

ಡಾಕ್ಟರ್ ಬರ್ಗಿಯಸ್ ಎಂಬ ಜರ್ಮನಿಯ ವಿಜ್ಞಾನ ಸಂಘದ ಡೈರೆಕ್ಟರರೊಬ್ಬರು ಅಗಾಧವಾದ ಪರಿಶೋಧನೆಗಳಿಂದ ಜನಾಂಗಕ್ಕೆ ಮರದಿಂದ ಸಿಗುವ ಅಕ್ಷಯ ಲಾಭವನ್ನು ಕಂಡುಹಿಡಿದಿರುವರು. ಕಲ್ಲಿದ್ದಲಿಂದ ಎಣ್ಣೆಯನ್ನು ಪಡೆಯುವ ವಿಧಾನವನ್ನೂ ಇವರೇ ಕಂಡುಹಿಡಿದಿರುವುದೆಂದು ತಿಳಿದು ಬಂದಿದೆ ಜರ್ಮನಿಯು ಈಗ ವರ್ಷಂಪ್ರತಿ ೨೨೦,೦೦೦,೦೦೦ ಗೆಲನ್ ಪೆಟ್ರೋಲನ್ನು ಕಲ್ಲಿದ್ದಲಿಂದಲೇ ಪಡೆಯುತ್ತಿರುವುದು ಈಗ ಮರದಿಂದ ಮನುಷ್ಯನಿಗೆ ಅತ್ಯಗತ್ಯವಾಗಿರುವ, ಸಾಮಗ್ರಿಗಳನ್ನು ಯುದ್ಧೋಪಕರಣಗಳನ್ನೂ ತಯಾರಿಸಬಹುದೆಂತ ಇವರ ಅಭಿಪ್ರಾಯ ಲಂಡನಿನಲ್ಲಿ ನಡೆದ ಮರದ ಸಾಹುಕಾರರ ಪರಿಷತ್ತಿನಲ್ಲಿ ಇವರು ಹೇಳಿಂದರು

"ಇಂದಿಗೆ ೨೦ ವರ್ಷಗಳಿಂದಲೂ ನಾನು ಮರದೊಂದಿಗೆ ಶೋಧನಾ ಕಾರ್ಯಗಳನ್ನು ನಡೆಸುತ್ತಾ ಬಂದಿರುವೆನು ಕಟ್ಟಕಡೆಗೆ ನನ್ನ ಕೆಲಸದಲ್ಲಿ ನನಗೆ ಜಯಪ್ರಾಪ್ತಿಯಾಯಿತು ಈಗ ನಾನು ಬಹು ಸುಲಭದಲ್ಲಿ ಮರದಿಂದ ಪ್ರಾಣಿಗಳಿಗೂ ಮನುಷ್ಯರಿಗೂ ಬೇಕಾಗುವ ಆಹಾರವನ್ನು ಒದಗಿಸಬಲ್ಲೆ' ಇವರ ಸೂಚನೆ ನೇರೆಗೆ ಮರವೇ ಮಾನವನಿಗೆ ಮುಖ್ಯವಾಗಿ ಬೇಕಾದ ವಸ್ತು ಕಾರಣ ಅದು ಆಹಾರದಿಂದ ಯುದ್ಧೋಪಕರಣಗಳ ವರೆಗೆ ಎಲ್ಲವನ್ನು ಕೊಡಲು ಶಕ್ತವಾಗಿದೆ ಮರದ ಒಂದು ತುಂಡು ಅದರ ಮೂರನೆ ಎರಡಂಶದಷ್ಟು ಸಕ್ಕರೆಯನ್ನು ಕೊಡಬಲ್ಲುದು ಸಕ್ಕರೆಯನ್ನು ಒದಗಿಸುವ ಮರದಿಂದ ಗ್ಲೂಕೋಸ್, ಸರಾಯಿ, ಸಿಡಿಮದ್ದುಗಳು, ಗ್ಲಿಸರಿನ್ ಮೊದಲಾದುವನ್ನು ತಯಾರಿಸಬಹುದಾಗಿ ಕಂಡುಹಿಡಿದಿರುತ್ತಾರೆ ಮರದಿಂದ ಪಡೆಯಬಹುದಾದ ಆಹಾರ ಸಾಮಗ್ರಿಯು ಯುದ್ಧಕಾಲದಲ್ಲಿ ಜರ್ಮನರಿಗೆ ಉಪಯುಕ್ತವಾಗುವಷ್ಟು ಸಮೃದ್ಧಿಯಾಗಿ ಪಡೆಯಬಹುದಂತೆ. ಗೇಸನ್ನು ಸಹಾ ಮರದಿಂದ ಪಡೆಯಲು ಬರುತ್ತದೆ. ಜರ್ಮನಿಯಲ್ಲಿ ಈಗಾಗಲೆ ಹಲವು ಕಾರ್ಖಾನೆಗಳಲ್ಲಿ ಇಂತಹ ಗೇಸಿನ ತಯಾರಿಯು ಆಗಹತ್ತಿದೆ ಮರಗಳಿಂದ ಇಮಿಟೇಶನ್ ಸಿಲ್ಕನ್ನು ತಯಾರಿಸುವ ವಿಧಾನವನ್ನೂ ಕಂಡುಹಿಡಿದಿರುವರು ಕಡೆಯದಾಗಿ ಮರದಿಂದ ಲೋಹ ಪಡೆಯುವ ವಿಧಾನವನ್ನು ಕಂಡುಹಿಡಿಯಲು ಡಾಕ್ಟರ್ ಬರ್ಗಿಯುಸರು ತೊಡಗಿದ್ದಾರೆ

ಇದೆಲ್ಲವನ್ನೂ ಕಂಡುಹಿಡಿದ ಜರ್ಮನಿಯು ಯುದ್ಧಕಾಲದಲ್ಲಿ ಇನ್ನು ಯಾರು ಯಾವ ವಸ್ತುಗಳ ಮೇಲೆ ಬಹಿಷ್ಕಾರವನ್ನು ಹಾಕಿದರೂ ಬೆದರುವಂತಿಲ್ಲವಾಗಿದೆ

ಮನುಷ್ಯನು ಪಕ್ಷಿಗಳಂತೆ ನಭದಲ್ಲಿ ಹಾರಾಡಬಲ್ಲನು

ಪ್ಯಾರಿಸ್ ಫ್ರಾಂಕ್ಸಿದ ಕ್ಲೆಮ್ ಸೋಹನ ಎಂಬವನು ತನ್ನ ದೇಹದ ಇಕ್ಕಡೆಗಳಲ್ಲಿ ಗರಿಗಳನ್ನು ಬಿಗಿಯಾಗಿ ಕಟ್ಟಿ ಪಕ್ಷಿಗಳಂತೆ ನಭದಲ್ಲಿ ಹಾರಿ ಭೂತಲಕ್ಕೆ ಒಂದು ಮುಟ್ಟಿದನು. ಮೊದಲು ವಿಮಾನದಲ್ಲಿ ಹತ್ತು ಸಾವಿರ ಅಡಿ ಮೇಲಕ್ಕೇರಿ, ಕಡೆಗೆ ಅಲ್ಲಿಂದ ಕೃತಕ ಗರಿಗಳನ್ನು ಕಟ್ಟಿ ಭೂತಲಕ್ಕೆ ಹಾರಿದನು ಕೃತಕ ಗರಿಗಳು ಅವನನ್ನು ನಭದಲ್ಲಿ ತೇಲಿಸಿ ಸ್ವಲ್ಪ ಸಮಯದಲ್ಲೇ ಸುರಕ್ಷಿತವಾಗಿ ಭೂಮಿಗೆ ತಂದು ಮುಟ್ಟಿಸಿದುವು ಇನ್ನು ಮನುಷ್ಯರೂ ಪಕ್ಷಿಗಳಂತೆ ಹಾರಾಡಬಹುದಲ್ಲ ವಿಜ್ಞಾನ ಯುಗವು ಏನನ್ನು ತಾನೆ ಮಾಡಲಾರದು'

ಉಪಾಧ್ಯಾಯರು ಶಾಲೆಗೆ ಹೋಗ ಬೇಕಾದ ಆವಶ್ಯಕತೆಯಿಲ್ಲ

ರೇಡಿಯೊ ಮೂಲಕ ಶಿಕ್ಷಣ ಪ್ರಚಾರ

ನ್ಯೂಯೋರ್ಕ್ ಯುನಿವರ್ಸಿಟಿಯಲ್ಲಿ ಉಪಾಧ್ಯಾಯರಿಗೆ ಶಾಲೆಗೆ ಹೋಗಬೇಕಾದ ಅವಶ್ಯಕತೆಯಿಲ್ಲ ಅಲ್ಲಿ ರೇಡಿಯೋ ಯಂತ್ರವನ್ನು ಇಟ್ಟಿರುವುದಾಗಿ ತಿಳಿದು ಬಂದಿದೆ ಉಪಾಧ್ಯಾಯರು ಮನೆಯಲ್ಲಿ ಸ್ವಸ್ಥಚಿತ್ತರಾಗಿ ಕುಳಿತು ಪಾಠವನ್ನೂ ಭಾಷಣವನ್ನೂ ಕೊಡುವರು ಅದೆಲ್ಲವೂ ರೇಡಿಯೊ ಮುಖಾಂತರ ಶಾಲೆಯಲ್ಲಿ ಬಾಲಕರಿಗೆ ಸ್ಪಷ್ಟವಾಗಿ ಕೇಳಬರುವುದು ಇದರಿಂದ ಇನ್ನೊಂದು ಪ್ರಯೋಜನವೆಂದರೆ ಶಾಲೆಗೆ ಹೋಗದ ಇತರ ವಿದ್ಯಾರ್ಥಿಗಳೂ ಏನೂ ಖರ್ಚಿಲ್ಲದೆ ಪಾಠಗಳನ್ನು ಕಲಿಯಬಹುದು.

ಮಂಗನು ಮನುಷ್ಯರಂತ ಮಾತಾಡಬಲ್ಲನು

ಲಂಡನಿನ ಪ್ರಾಣಿವರ್ಗದಲ್ಲಿ ಮಂಗಗಳಿಗೆ ಮಾತಾಡಿಸಲು ಕಲಿಸುತ್ತಿದ್ದಾರೆ ಪಾಠವು ಮಾತ್ರ ಚಿಕ್ಕ ಪ್ರಾಯದಿಂದಲೆ ಕಲಿಸಬೇಕಾಗಿರುತ್ತದ ತತ್ಕಾಲಕ್ಕೆ ಸರ್ ರಿಚರ್ಡ್ ಪೆಜೆಟ್ ಎಂಬವರು ಎರಡು ವರ್ಷ ಪ್ರಾಯದ ಮಂಗಗಳನ್ನು ಭಾಷೆ ಕಲಿಸಲು ಪ್ರಾರಂಭಿಸಿರುವರು ಎರಡು ತಿಂಗಳುಗಳಿಂದಲೂ ಈ ಪಾಠಗಳು ಕ್ರಮಪ್ರಕಾರವಾಗಿ ನಡೆಯುತ್ತಾ ಬಂದಿವೆ ಇಷ್ಟರಲ್ಲಿ ತನ್ನ ಆಹಾರವು ಎಲ್ಲಿಂದ ಬರುತ್ತದೆ ಎಂಬುದನ್ನು ಕೇಳಲು ಶಕ್ತರಾಗಿರುವುವಂತೆ

ಪಕ್ಷಿವರ್ಗಕ್ಕೂ ನ್ಯಾಯಸ್ಥಾನಗಳಿವೆ

ಪಕ್ಷಿಗಳಲ್ಲಿ ಕೆಲವು ವರ್ಗದವು ನ್ಯಾಯವನ್ನರಿತವು ಇವಲ್ಲಿಯೂ ಕೂಡ ನ್ಯಾಯಾಧೀಶರೂ ಪೋಲೀಸ್ ಇಲಾಖೆಯೂ ಇರುವುದು, ಎಂದು ಪ್ರಾಣಿಶಾಸ್ತ್ರವನ್ನರಿತ ಪಂಡಿತರೊಬ್ಬರ ಪರಿಶೀಲನೆಯಿಂದ ತಿಳಿದುಬರುತ್ತದೆ.

ನಾವು ಕೆಲವು ಬಾರಿ ಕಾಗೆಗಳು ಒಟ್ಟು ಕೂಡಿ ಕೂಗುವುದನ್ನು ಕಾಣಬಹುದು. ಅದೇ ಅದರ ನ್ಯಾಯಸ್ಥಾನ ಇವುಗಳ ನಡುವಿನಲ್ಲಿರುವ ಕೆಲವು ಕಾಗೆಗಳು ಅನ್ಯಾಯಿಗಳು ಅನ್ಯಾಯವೇನೆಂದು ಗೊತ್ತಿರುವುದೇ? ಬೇರೆ ಗೂಡುಗಳ ಕಸಕಡ್ಡಿಗಳನ್ನು ಕದ್ದದ್ದಾಗಿರಬಹುದು ತನ್ನ ಮಂಗಳಲ್ಲಿ ಪಕ್ಷಪಾತವನ್ನು ನಡೆಸಿದುದಾಗಿರಬಹುದು. ಮನುಷ್ಯನಿಂದ ಸ್ಪರ್ಶಿಸಲ್ಪಟ್ಟುದಾಗಿರಬಹುದು ಮುತ್ತು ಬೇರೆ ಇತರ ಸಾಧಾರಣ ಅನ್ಯಾಯಗಳಾಗಿರಬಹುದು. ಈ ಅನ್ಯಾಯಗಳಿಗೆ ದಂಡನೆಗಳು ನಾನಾ ತರದವುಗಳಾಗಿರುವುದು ಮನುಷ್ಯನಿಂದ ಸ್ಪರ್ಶಿಸಿದಲ್ಲಿ ಮರಣ ದಂಡನೆಯೂ, ತತ್ತಿಮೊಟ್ಟೆಗಳನ್ನು ಅಜಾಗ್ರತೆಯಿಂದ ನೋಡಿದಲ್ಲಿ ಗೂಡುಬಿಟ್ಟು ಹೋಗಬೇಕಾದ ದಂಡನೆಯೂ ಹೀಗೆಯೇ ನಾನಾ ತರದ ಅನ್ಯಾಯಗಳಿಗೆ ಮನುಷ್ಯವರ್ಗದಲ್ಲಿದ್ದಂತೆ, ನಾನಾ ತರದ ದಂಡನೆಗಳಿವೆ

ಅವರಲ್ಲಿಯೂ ಕೂಡ ಮನುಷ್ಯರಲ್ಲಾಗುವಂತೆ ಕೆಲವು ಪಕ್ಷಿಗಳು ನಿರ್ದೋಷಿಗಳಾದರೂ ದಂಡನೆಗೆ ಗುರಿಯಾಗುವುದುಂಟು ಇದನ್ನು ನೋಡಲು ಈ ಪಂಡಿತರು ಒಮ್ಮೆ ಕಾಗೆಯ ಮೊಟ್ಟೆಗಳನ್ನು ಗೂಡಿನಿಂದ ಕಾಗೆಗಳಿಗೆ ತಿಳಿಯದಂತೆ ಕದ್ದು ಗೂಗೆಯ ಗೂಡಿನಲ್ಲಿಟ್ಟು ಅಲ್ಲಿಪ್ಪ ಗೂಗೆಯ ಮೊಟ್ಟೆಗಳನ್ನು ಗೂಗೆಗಳಿಗೆ ತಿಳಿಯದಂತೆ ಕಾಗೆಯ ಗೂಡಿನಲ್ಲಿರಿಸಿದರು. ಈ ಗೂಗೆಯ ಮೊಟ್ಟೆಗಳನ್ನು ಕಾಗೆಗಳು ಈ ಗೂಡಿನಲ್ಲಿ ಬಂದುದನ್ನು ನೋಡಿ ಅದೇ ದಿನ ಕಾಗೆಯನ್ನು ಕೂಡಲೇ ಎರೆಸ್ಟು ಮಾಡಿದರು ಒಡನೆಯೇ ಅಲ್ಲಿ ಒಂದು ನ್ಯಾಯಸ್ಥಾನವಾಯಿತು ಆ ಕಾಗೆಯ ಮೇಲೆ ಕುಲವಂಚಿತ ಎಂಬ ದೋಷವು ಬಿತ್ತು ಕೊನೆಗೆ ಆ ಬಡಕಾಗೆಯನ್ನು ಮರಣಶಿಕ್ಷೆಗೆ ಗುರಿಮಾಡಿ ಆ ನ್ಯಾಯಾಧೀಶರುಗಳ ಕೊಂದಿಕ್ಕಿದರು.

ಹೀಗೆಯೇ ಬೇರೆ ಕೆಲವು ಪಕ್ಷಿಗಳಲ್ಲಿ ನ್ಯಾಯ ತೀರ್ಮಾನಗಳು ನಡೆಯುತ್ತವಂತೆ

ತುಲಸಿ ಗಿಡವೂ ಅದರ ಮಹತ್ವವೂ

ಶ್ರೀಯುತ ಗಂಗಾಧರರೆಂಬುವ ಹಿಂದೂ ದೇಶದ ಹೆಸರುವಾಸಿಯಾದ ಪ್ರಾಚೀನ ವೈದ್ಯರೊಬ್ಬರು ಒಳ್ಳೆ ಮೆಣಸಿನ ಪುಡಿಯನ್ನು ತುಲಸಿ ರಸದಲ್ಲಿ ಬೆರಸಿ ಸೇವಿಸುವುದರಿಂದ ಮಲೇರಿಯಾ ಜ್ವರವು ವಾಸಿಯಾಗುವುದೆಂದು ಬರೆದಿರುವರು ಅಷ್ಟೇ ಅಲ್ಲದೆ ಇತರ ಅನೇಕ ವ್ಯಾಧಿಗಳಿಗೆ ತುಲಸಿ ಗಿಡವು ಅತ್ಯುತ್ತಮ ಔಷಧವೆಂದು ಅವರು ಅಭಿಪ್ರಾಯಪಟ್ಟಿರುವರು. ತುಲಸಿ ಗಿಡದ ರಸದ ಲೇಪದಿಂದ ಅನೇಕ ಚರ್ಮ ರೋಗಗಳೂ ತುಳುಮೇಯುವ ಕಜ್ಜಿಗಳೂ ಗುಣವಾಗುವುವು, ಎಂದು ಪ್ರಖ್ಯಾತ ವೈದ್ಯ ಚೌಧರಿಯವರು ಹೇಳುತ್ತಾರೆ ತುಲಸಿ ದಳದ ರಸದೊಂದಿಗೆ ಲಿಂಬೆ ಹಣ್ಣಿನ ರಸವನ್ನು ಕಲಸಿ ತಾಗಿಸುವುದರಿಂದ ಕ್ರಿಮಿ ಸಂಬಂಧವಾದ ಎಲ್ಲಾ ರೋಗಗಳೂ ಗುಣವಾಗುವುದೆಂದೂ ತುಲಸಿ ರಸವು ಹುಣ್ಣುಗಳಲ್ಲಿ ಆಗುವ ವ್ರಣಗಳನ್ನು ನಾಶಪಡಿಸಬಲ್ಲುದೆಂದೂ ತಿಳಿದು ಬಂದಿದೆ ತುಲಸಿ ದಳದ ರಸವು ಎಲ್ಲಾ ತರದ ಕಿವಿನೋವುಗಳಿಗೆ ದಿವ್ಯವಾದ ಔಷಧವು ಹಾವುಗಳ ಮತ್ತು ವಿಷಜಂತುಗಳ ಕಡಿತಕ್ಕೂ ಇತ್ತೀಚೆಗೆ ತುಲಸಿಯ ಪ್ರಯೋಗವನ್ನು ಮಾಡಿ ಪ್ರಯೋಜನಹೊಂದಿರುವರು ತುಲಸಿ ದಳವನ್ನು ಚೆನ್ನಾಗಿ ಅರೆದು ಅದನ್ನು ಚೆನ್ನಾಗಿ ಬೆಣ್ಣೆಯೊಂದಿಗೆ ಬರಸಿ ಹಾವು ಕಚ್ಚಿದ ಗಾಯಕ್ಕೆ ಹಚ್ಚಬೇಕು ಅದು ವಿಷವನ್ನು ಹೀರುತ್ತಾ ಕಪ್ಪು ಬಣ್ಣದಿಂದ ಕೂಡಿ ಬಂದಾಗ ಅದನ್ನು ತೆಗೆದು ತಿರುಗಿ ಒಸ್ಸಿಯದನ್ನು ಹಚ್ಚಬೇಕು ಇದರಿಂದ ವಿಷವು ಹೊರಗೆ ಎಳೆಯಲ್ಪಟ್ಟು ಅಪಾಯವು ಕಡಿಮೆಯಾಗುವುದು. ತುಲಸಿಯು ಆಯುರ್ವೇದದ ಅನೇಕ ಪ್ರಾಮುಖ್ಯ ಔಷಧಗಳೊಂದಿಗೆ ಸೇರುತ್ತದೆಂದು ಅನೇಕರು ಅಭಿಪ್ರಾಯಪಡುತ್ತಾರೆ ಕೆಮ್ಮು ಕಫ ಮತ್ತು ಶ್ವಾಸಕೋಶದ ಇತರ ರೋಗಗಳಿಗೆ ತುಲಸಿ ರಸವನ್ನು ಶುಂಠಿ, ಜೇನು ಮತ್ತು ನೀರುಳ್ಳಿ ರಸಗಳೊಂದಿಗೆ ಬೆರಸಿ ಕೊಡುವುದರಿಂದ ಬಹಳ ಪ್ರಯೋಜನ ಸಿಗುವುದು ತುಲಸಿ ದಳದ ರಸವನ್ನು ಬಿಸಿಮಾಡಿದ ಹಾಲಿನೊಂದಿಗೆ ಸಕ್ಕರೆ, ಕಾಫಿ, ಚಾ ಮೊದಲಾದ ಪಾನೀಯಗಳ ಬದಲಾಗಿ ಕುಡಿದರೆ ಜಡ, ಅಶಕ್ತಿಯನ್ನು ಹೋಗಲಾಡಿಸಿ ನವಚೇತನವನ್ನು ಕೊಡುವುದೆಂದು ಅನೇಕರ ಅನುಭವವಾಗಿದೆ

ತುಲಸಿ ದಳದ ರಸವು ಮಕ್ಕಳ ಅಜೀರ್ಣವನ್ನೂ, ಜೀರ್ಣೇಂದ್ರಿಯದ ಇತರ ದೋಷಗಳನ್ನೂ ಹೊಟ್ಟೆನೋವನ್ನೂ ನಿಲ್ಲಿಸಬಲ್ಲದು. ಹೊಸದಾಗಿ ತೆಗೆದ ತುಳಸಿ ರಸದೊಡನೆ ಏಲಕ್ಕಿಯ ಪುಡಿಯನ್ನು ಬೆರಸಿ ಕುಡಿಯುವುದರಿಂದ ಕಠಿಣವಾದ ವಾಂತಿಯು ಕೂಡ ಉಪಶಮನವಾಗುವುದು ಪ್ರತಿ ಮುಂಜಾನೆಯೂ ಸ್ವಲ್ಪ ರಸದೊಂದಿಗೆ ಕರಿಮೆಣಸಿನ ಪುಡಿಯನ್ನು ಬೆರಸಿ ಕುಡಿಯುವುದರಿಂದ ಎಲ್ಲಾ ತರದ ಜ್ವರವನ್ನೂ ತಪ್ಪಿಸಿಕೊಳ್ಳಬಹುದು. ಮನುಷ್ಯನ ಹೊಟ್ಟೆಯಲ್ಲಿ ಮುಖ್ಯವಾಗಿ ಮಕ್ಕಳಲ್ಲಿ ಬಹುವಿಧದ ವ್ಯಾಧಿಗಳನ್ನುಂಟುಮಾಡುವ ಸಕಲ ತರದ ಹುಳುಗಳನ್ನೂ ಕ್ರಿಮಿಗಳನ್ನೂ ತುಲಸಿ ರಸವು ನಾಶಪಡಿಸಿ ಹೊರತರುವುದು

ಇಷ್ಟು ಅಪಾರವಾದ ಗುಣಕಾರಿಯಾದ ಈ ಗಿಡವನ್ನು ನಮ್ಮ ತೋಟಗಳಲ್ಲಿ ಬೆಳೆಸುವುದು ಅತೀ ಅವಶ್ಯಕ ನಮ್ಮ ಪೂರ್ವಿಕರು ಸ್ಥಾಪಿಸಿದ ಅನೇಕ ಕಟ್ಟುಕಟ್ಟಳೆಗಳಲ್ಲಿ ಅವರು ನಮ್ಮ ಪಾರಮಾರ್ಥಿಕ ಹಿತವನ್ನು ಮಾತ್ರವಲ್ಲದ ಶಾರೀರಕ ಹಿತವನ್ನು ಕೂಡಾ ಚಿಂತಿಸುತ್ತಿದ್ದರೆಂದು ನಾವು ತಿಳಿದುಕೊಳ್ಳಬಹುದು ದಿನನಿತ್ಯವೂ ಮುಂಜಾನೆ ತುಲಸಿ ಗಿಡದ ಪ್ರದಕ್ಷಿಣೆಯನ್ನು ತೆಗೆಯುವಾಗ ಗಿಡದ ದಳಗಳ ರಾತ್ರಿ ಕಾಲದ ಮಂಜಿನಿಂದ ನೆನೆದು ಬೆಳಗ್ಗೆ ಬೀರುವ ಸುವಾಸನೆಯು ನಮ್ಮ ಶಾರೀರಕ ಹಿತಕ್ಕಾಗಿ ಬಹು ಉತ್ತಮವಾದುದು. ಮತಭೇದವನ್ನೆಣಿಸದೆ ಸರ್ವರಿಗೂ ಏಕರೀತಿಯಾಗಿ ಉಪಯುಕ್ತವಾಗಿರುವ ಈ ಗಿಡವನ್ನು ಹಿಂದುಗಳು, ಕ್ರೈಸ್ತರು, ಮುಸಲ್ಮಾನರೆಂಬ ಭೇದವಿಲ್ಲದೆ ಎಲ್ಲರೂ ತಮ್ಮ ಮನೆಯ ಮುಂಭಾಗದಲ್ಲಿಯೂ ನಿವಾಸದ ಇತರ ಭಾಗಗಳಲ್ಲಿಯೂ ನೆಟ್ಟು ಸುಲಭದಲ್ಲಿ ಕ್ಷೇಮಲಾಭವನ್ನು ಸಂಪಾದಿಸಿಕೊಳ್ಳಬಹುದು

ಕೃ ಮು.

೧೪ ವರ್ಷಗಳ ಅಗ್ನಿಮಾಂದ್ಯ, ವಾತ ಮತ್ತು ಚಳಿಜ್ವರ

ಆ ಮೇಲೆ ಪೂರ್ಣ ಗುಣ.

14 ವರ್ಷಗಳ ಅಗ್ನಿಮಾಂದ್ಯದ ವೇದನೆಯ ಬಾಧೆ ಆ ಮೇಲೆ ಪೂರ್ತಾ ಮತ್ತು ಶಾಶ್ವತ ಗುಣ! ಯೋಚಿಸಿರಿ Mrs M ಇವರ ನಿಜವಾದ ಅನುಭವ ವಾಯು ಬಾಧೆ ಮತ್ತು ಚಳಿಜ್ವರವಿಲ್ಲದ ಅವರಿಗೆ ಒಂದು ದಿನ ನಿದ್ದೆ ಇಲ್ಲ ಎಲ್ಲಾ ಉದರವೇದನೆಗಳಿಗೂ ಅತ್ಯಮೋಘವೂ ಆಸ್ಪತ್ರೆಗಳಲ್ಲಿ ಡಾಕ್ಟರರು ಶಿಫಾರಸು ಮಾಡಿರುವ ಅದ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಸೇವಿಸುವ ವರೆಗೆ ಅವರಿಗೆ ಈ ಕಷ್ಟ

Mrs M ಬರೆದ ಪತ್ರವನ್ನೋದಿ:-

ನಿಮ್ಮ ಅದ್ಭುತಕರ ಮೆಕ್‌ಲೀನ್ ಬ್ರೇಂಡ್ ಪೌಡರನ್ನುಪಯೋಗಿಸಿ ನನಗೆ ಸಿಕ್ಕಿದ ಗುಣಕ್ಕಾಗಿ ನಿಮಗೆ ವಂದನೆಗಳು ವಾತ ಮತ್ತು ಅಗ್ನಿಮಾಂದ್ಯಗಳಿಂದ ಕಳೆದ 14 ವರ್ಷಗಳಿಂದಲೂ ಬಾಧಿತಳಾಗುತ್ತಿದ್ದೆ ರಾತ್ರಿ ಮಲಗಿದೊಡನೆ ಏಳುತ್ತಿದ್ದೆ. ಗಂಟೆಗಟ್ಟಲೆಯಾಗಿ ವಾಯುವಿನ ಉಪದ್ರವು ಇರುತ್ತಿತ್ತು ಹೃದಯವು ನಡುಕವುಂಟಾಗುತ್ತಿತ್ತು ಚಳಿಯಿಂದ ದೇಹವು ಕಂಪಿಸುತ್ತಿತ್ತು ಸಣ್ಣ ತುಂಡು ಊಟವನ್ನು ತಿಂದೊಡನೆ ನನ್ನ ಹೊಟ್ಟೆಯು ಉಬ್ಬಿಕೊಂಡಂತಾಗುತ್ತಿತ್ತು ಎಲ್ಲಾ ಬಗೆಯಿಂದಲೂ ಸಾಧಿಸಿದೆ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನುಪಯೋಗಿಸುವವರೆಗೆ ಯಾವುದರಿಂದಲೂ ಪ್ರಯೋಜನವಾಗಲಿಲ್ಲ

Mrs M ಗೆ ದೊರೆತಷ್ಟೇ ಗುಣವು ನಿಮಗೂ ಸಿಗಬಹುದು ಆದರೆ ಕೆಲವು ಅಂಗಡಿಗಳ ಲಾಭಕ್ಕಾಗಿ ಕೀಳು ತರಗತಿಯ ವಸ್ತುವನ್ನು ಪಡೆದು ಅಪಾಯಕ್ಕೆ ಗುರಿಯಾಗಬೇಡಿ ಕೆಂಪು ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ನಮ್ಮ ಕೆಮಿಸ್ಟರಿಂದ ಪಡೆಯಿರಿ ಸೀಲು ರಟ್ಟಿನ ಪತ್ರ ಮತ್ತು ಬಿಲ್ಲೆಗಳ ಮೇಲೆ

Alex. C. Maclean

ಎಂಬ ದಸ್ಕತು ಇದೆ

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮೋರ್ಟನ್ ಎಂಡ್ ಹೆರಿಸ್ ಲಿಮಿಟೆಡ್

೧೫ ಸಂಕುರಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,

ಇಲ್ಲಿಗೆ ಬರೆಯಿರಿ

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಎರಡು ಸೈಜಿನಲ್ಲಿ ದೊರೆಯುತ್ತದೆ **ಲೋಧ್ರ** ರೂ. 8 ಮತ್ತು 1—10—0

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದ್ರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು –

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಜಾಹೀರಾತು.

ಎಲ್ಲಾ ಆಯುರ್ವೇದಿಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ನಾವು ನಿಶ್ಚಯಿಸಿ ಸ್ವಾನುಭವ ಹೊಂದಿದ ಎಲ್ಲಾ ಔಷಧ ಮೂಲಿಕೆಗಳನ್ನು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟ್ ಮಂಗಳೂರು, ದ. ಕ.

ರೈಲು ಬಂಡಿಗಳ ಸಮಯ.

ಗಾಡಿಗಳು,	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9-50	ಸಂಜೆ 4-20
ಮಿಕ್ಸೆಡ್	,, 5 55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ. 2 40
ಶಟಲ್	ಸಂಜೆ 5 25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ. 1 20
ಕಾಸರಗೋಡು ಪೆಸೆಂಜರು	ಸಂಜೆ 8.20	ಸಂಜೆ 6 15

Ested 1920] **THE** [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ:

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜಿವಾಸ್ತುಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವುವು

ಹೆಚ್ಚಿನ ಮಾಹಿತಿ ಎಗ್ಗೆ ಬೇಂಕಿಗೆ ಬರಕೊಳ್ಳುವುದು,

Puttur,
Dated 10 – 4 – 1935

G. N. Lakshman Pai,
Secretary.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನಪಂಡಿತ

ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನ್‌ಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— **ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು**

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು —ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ESTD. 1906

CANARA BANK

LIMITED.

Head Office: MANGALORE

Subscribed Capital	6,00,000
Paid up Capital	3,33'000
Reserves ...	4,50,000
Deposits	61,92,000
Working Capital	73,40,000

OFFICES:

Bombay-Fort, Bombay-Mandvi, Hubli, Calicut Cochin, Ernakulam, Alleppey, Bagalore, Chikmagalur, Mangalore-Bunder, Mangalore-City, Kasaragod, Puttur, Udipi, Karkala Coondapoor, Ganguli, Buntwal, Davanagere & Moolky

ALL KINDS OF BANKING BUSINESS UNDERTAKEN.

ಚಿತ್ರಾಹುತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ–ಊರ್ಧ್ವಪುಂಡ್ರ–ಮುದ್ರಾಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ ಎಂ. ನರಸಿಂಗರಾವ್, ಬಿ. ಎ. ಎಂ. ಎಲ್. ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ. ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್‌ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು.

ಬನ್ನಿರಿ ಅಥವಾ ಬರೆಯಿರಿ.

ಒಂದು ಶತಮಾನ ಬಾಳಿರಿ

(ಮಿ। ಸರ್. ವಿಲ್ಲಿಯಂ ಅಲ್ಬರ್ಟ್ ನೆಟ್ ಇವರ ಲೇಖದ ಆಧಾರದಿಂದ)

ರೋಗವನ್ನು ಗುಣಪಡಿಸುವುದಕ್ಕಿಂತಲೂ ದನ್ನು ಬಾರದಂತೆ ನೋಡುವುದು ಎಷ್ಟೋ ಲೇಸು. ಇದರ ತಾತ್ಪರ್ಯವನ್ನು ಎಲ್ಲರೂ ರಿತಿದ್ದರೆ, ಇಂದು ಆಸ್ಪತ್ರೆಗಳಲ್ಲಿ ಅಸಂಖ್ಯಾತ ನರು ನರಳುತ್ತಿರಬೇಕಾಗಿರಲಿಲ್ಲ. ಆರೋಗ್ಯವನ್ನು ಕಾಪಾಡುವಂತಹ ಸೂತ್ರಗಳನ್ನು ನ್ನಾಗಿ ಮನನಮಾಡಿ ರೋಗದ ಚಿಹ್ನೆಗಳು ಣಿಸಿದೊಡನೆ ಅದರ ನಿವಾರಣೋಪಾಯ ನ್ನು ಕೈಗೊಳ್ಳುತ್ತಿದ್ದರೆ ಇಷ್ಟೆಲ್ಲಾ ದೀನ ಅವ ಗೆ ಜಗತ್ತು ತುತ್ತಾಗುತ್ತಿರಲಿಲ್ಲ. ಅಜಾಗ್ರತೆಯು ನಮ್ಮ ವ್ಯಾದಿಗಳ ಕಾರಣವಾಗಿದ್ದರೂ ಜ್ಞಾನವೂ ಅದರಗಿಂತ ಶ್ರೇಷ್ಠ ಕಾರಣವಾಗಿ ತ್ತದೆ. ಆರೋಗ್ಯ ಜ್ಞಾನವು ಹಲವರ ಜೀವ ನಗಳನ್ನು ಸರಿಪಡಿಸುತಿತ್ತು ಆದರೆ ಜ್ಞಾನ ಬಹಳವಾಗಿ ಪ್ರಸಾರದಲ್ಲಿದೆ, ಅಲ್ಲದೆ, ನೇಕ ವಿರೋದಾಭಿಪ್ರಾಯಗಳಿಂದ ಇದರ ಕ್ತಿಯು ಇನ್ನೂ ಕೆಟ್ಟುಹೋಗುತ್ತಿದೆ.

ಆದರೆ ವ್ಯವಹಾರ ಜ್ಞಾನ, ಅನುಭವ ಮತ್ತು ಮೂಲತತ್ವ ಜ್ಞಾನದೊಂದಿಗೆ ಮಾನವನು ತನ್ನ ಜೀವಮಾನವನ್ನು ಸುರಕ್ಷಿತವಾಗಿ ಕಾಗಿಸಬಹುದು

ಇಪ್ಪತ್ತೊಂದು ಮುಂದೊತ್ತಿ ಬಂದ ನಾವು ಈಗ ಪುನಃ ಹಿಂದಿನ ಸೂತ್ರಗಳನ್ನು ಅನುಸರಿಸುವದೆಂದರೆ ಕೇವಲ ನಾಚಿಕೆಗೇಡು ಆದ್ದರಿಂದ ಈಗಿನ ಪರಿಸ್ಥಿತಿಗೆ ಸರಿಯಾದ ರೀತಿಯಲ್ಲಿ ನಮ್ಮ ಜೀವಮಾನವನ್ನು ರೂಪಿಸಬೇಕು. ಇವುಗಳಿಂದ ಪಾರಾಗುವಂತೆ ಬಹಳೇ ಚಲೋ ಉಪಾಯಗಳನ್ನು ಕಂಡು ಹಿಡಿಯುವುದು ಉತ್ತಮವೆಂದು ನನ್ನ ಅಭಿಪ್ರಾಯ. ದೇಹದ ಬೆಳವಣಿಗೆಯೇ ದೇಶದ ಬೆಳವಣಿಗೆ. ಪೂರ್ವದಲ್ಲಿ ದೇಶವು ಸುಭಿಕ್ಷವೂ ಪ್ರಜೆಗಳೂ ಸುಕಾಯರೂ ಆಗಿದ್ದರೆ, ಅವರ ನಿರ್ಮಲ ತಥಾ ಆರೋಗ್ಯಕರವಾದ ರೀತಿಯಿಂದ ಜೀವನ ಮಾಡಿಕೊಂಡಿದ್ದುದೇ, ಅದರ ಫಲವಾಗಿತ್ತು ಅಂದು ಪ್ರತಿಯೊಬ್ಬನೂ ದಷ್ಟಪುಷ್ಟನಾಗಿಯೂ ದೀರ್ಘಾಯುವಾಗಿಯೂ ಬಾಳುತ್ತಿದ್ದನು ರೋಗರುಜಿನಗಳ ಬಾಧೆಯು ಅವರಿಗೆ ತಟ್ಟುತ್ತಿರಲಿಲ್ಲ. ಇಂದು ನಾವು ಹಳೆ ಹಾಗೆ ಜೀವಿಸಬಾರದು ನಾವೂ ಅವರ ಹಾಗೆ ನಡೆಯಲ್ಲವೆ? ಇದನ್ನು ತಿಳಿದ ನಾನು ಕೆಲವು ಕಾಲ ಅಖಂಡ ಅಭ್ಯಾಸಗಳನ್ನು ಅಭ್ಯಾಸಿಸಿ, ಅದರ ಪರಿಣಾಮವಾಗಿ ಸುಖಾಯುನೂ, ಆರೋಗ್ಯವಂತನೂ ಆಗಿರುವೆನು. ನನ್ನ ಅನುಭವದ ಸಂಗತಿಗಳನ್ನೇ ನಿಮಗೂ ತಿಳಿಸುವೆನು.

ಆದಷ್ಟು ಮಟ್ಟಿಗೆ ಮಾಂಸಾಹಾರವನ್ನು ತೊರೆಯಿರಿ. ಸಾಧ್ಯವಿದ್ದಲ್ಲಿ ಆದನ್ನು ಸಂಪೂರ್ಣವಾಗಿ ತ್ಯಜಿಸಿರಿ. ಅದರ ಬದಲಾಗಿ ಮೀನನ್ನು ಸೇವಿಸಬಹುದು. ಮೀನು ದೇಹಾರೋಗ್ಯಕ್ಕೆ ಬಹಳ ಉತ್ತಮ. ಮೈ ಮುರಿದು ಕೆಲಸ ಮಾಡುವವರೂ, ಅಜೀರ್ಣದ ಬಾಧೆ ಇಲ್ಲದವರೂ ಮಾಂಸವನ್ನು ಉಪಯೋಗಿಸಬಹುದು. ಅಂಥವರು ಅದನ್ನು ಭುಂಜಿಸಿದರೆ ಶರೀರಕ್ಕೆ ಬೇಕಾದ ಕೊಬ್ಬನ್ನು ಪಡೆದು ಚೆನ್ನಾಗಿ ಬೆಳೆಯುವರು. ಇಲ್ಲವಾದರೆ ಆ ಮಾಂಸವು ಪಚನವಾಗದೆ ಕರುಳುಗಳಲ್ಲಿ ಕೊಳೆತು ಅನೇಕಾನೇಕ ರೋಗಗಳಿಗೆ ಎಡೆಕೊಡುತ್ತದೆ. ಮೇಲ್ವಿಚಾರ ನೋಡುವುದೆ ಮುಖ್ಯ ಕೆಲಸವಾಗಿರುವ ಅಧಿಕಾರಿಗಳು ಇದನ್ನು ಸರ್ವಥಾ ಭುಂಜಿಸಬಾರದು.

ಫಲವಸ್ತುಗಳು ನಿಮ್ಮ ದಿನನಿತ್ಯದ ಆಹಾರವಾಗಿರಲಿ. ಕಾಯಿಪಲ್ಯಗಳ ಪದಾರ್ಥಗಳನ್ನು ವಿಶೇಷವಾಗಿ ತಿನ್ನಿರಿ. ಹಾಲು ಬೆಣ್ಣೆ ತುಪ್ಪ ಇವುಗಳನ್ನು ಸಮೃದ್ಧಿಯಾಗಿ ಪಡೆಯಿರಿ ಇವೆಲ್ಲವೂ ನಿಮಗೆ ಬೇಕಾಗಿರುವ ದೇಹಪುಷ್ಟಿಯನ್ನು ಕೊಡುತ್ತವೆ. ಆಹಾರ ಸತ್ವವು ದೇಹ ಬೆಳವಣಿಗೆಗೆ ಮಾತ್ರವಲ್ಲ, ಜೀವದ ಬೆಳವಣಿಗೆಗೂ ಪ್ರಾಮುಖ್ಯವಾಗಿದೆ. ಅದರಿಂದಾಗಿ ನಮ್ಮ ದೇಹದಲ್ಲಿರುವ ಜೀವಾಣುಗಳು ಶಕ್ತಿಯನ್ನು ಹೊಂದಿ ಪ್ರತಿಯೊಂದು ನರಗಳಲ್ಲಿ ಶಕ್ತಿವರ್ಧಕ ಧಾತುವನ್ನು ಸಂಚಯಿಸಿ ನವ ವರ್ಚಸ್ಸನ್ನು, ನವಕಳೆಯನ್ನೀಯುವುದು. ಒಂದು ತಡವೆ ಅದಕ್ಕೆ ಬೇಕಾದ ಆಹಾರವು ಸಿಗದೆ ಇದ್ದಲ್ಲಿ ಅವು ನಶಿಸಿ ಹಾಳಾಗುತ್ತವೆ. ಅಂತೆಯೇ ಜೀವವು ಶಿಥಿಲತೆಯನ್ನು ತಾಳಿ ಕುಸಿದುಬೀಳುವುದು. ನಾವು ತೆಗೆದುಕೊಳ್ಳುವ ಮಿಶ್ರ ಆಹಾರಗಳಲ್ಲಿ A. B. C. ಮತ್ತು D. ಎಂಬ ನಾಲ್ಕು ಜಾತಿಯ ಆಹಾರ ಸತ್ವಗಳಿವೆ. ಆದರೆ ಇವುಗಳಲ್ಲಿ B. ಆಹಾರ ಸತ್ವವು ನಮಗೆ ಬಹಳೇ ಕಮ್ಮಿಯಾಗಿ ದೊರಕುವುದರಿಂದ ನಮ್ಮ ಆರೋಗ್ಯವು ಆಗಾಗ ಹಾಳಾಗಲು ಕಾರಣ. ಇದರಿಂದಾಗಿ ಪಚನಶಕ್ತಿಯು ಕಮ್ಮಿಯಾಗಿ ಸ್ನಾಯುಗಳ ಬಲವು ಕಮ್ಮಿಯಾಗ ತೊಡಗುತ್ತದೆ ಆದ್ದರಿಂದ B. ಆಹಾರ ಸತ್ವವಿರುವ ರೊಟ್ಟಿ, ಮೀನು ಟೊಮೆಟೊ ಮೊದಲಾದುವುಗಳನ್ನು ಸೇವಿಸುವುದು ಒಳ್ಳೆದು

ಮೇಲೆ ಹೇಳಿದ ಆಹಾರಗಳೊಂದಿಗೆ ಇನ್ನೂ ಕೆಲವು ಪದಾರ್ಥಗಳನ್ನು ಮಿಶ್ರಮಾಡಿ ತಿಂದರೆ ಅವು ನಮ್ಮ ದೇಹದೊಳಗಿನ ಕೊಳೆ ಕಶ್ಮಲಗಳನ್ನು ಹೊರಗೆಡವಲು ಸಹಾಯಕವಾಗುತ್ತಿವೆ. ಈ ಪದಾರ್ಥಗಳು ಹೆಚ್ಚಾಗಿ ಕಾಯಿ ಪಲ್ಯಗಳಲ್ಲಿ ಸಿಗುತ್ತವೆ. ಸರಿಯಾಗಿ ಪಚನವಾಗುವ ಆಹಾರಗಳು ದೇಹಕ್ಕೆ ಒಳ್ಳೆಯವು ಎಂಬ ಭಾವನೆಯು ತಪ್ಪು ಇವುಗಳೊಂದಿಗೆ ದೇಹದೊಳಗಿನ ಕಶ್ಮಲಗಳನ್ನು ಹೊರತಳ್ಳುವ ಆಹಾರವಿದ್ದರೇನೆ ದೇಹದ ಬೆಳವಣಿಗೆಗೆ ಅವು ಉಪಕಾರಿಯಾಗುವುವು.

ಪ್ರತಿಯೊಂದು ಊಟವಾದ ಕೂಡಲೆ ದೇಹದೊಳಗಿನ ಕೊಳೆಯನ್ನು ಹೊರಗೆಡಹಲು ಪ್ರಯತ್ನಿಸಿರಿ ಇದರಿಂದ ದೇಹದ ಪ್ರಗತಿಯು ನೆಟ್ಟಗಾಗುವುದು. ಅಜೀರ್ಣವಾಗದಂತೆ ನೋಡಿಕೊಳ್ಳುವುದು ಬಹಳ ಲಾಭದಾಯಕ ಕಾರಣ ಈ ಅಜೀರ್ಣವು ಅನೇಕ ಭೀಕರ ರೋಗಗಳ ತವರುಮನೆಯಾಗಿದೆ. ಮಿತಿಮೀರಿ ಯಾವುದನ್ನೂ ಉಣ್ಣಬೇಡಿರಿ, ತಿನ್ನಬೇಡಿರಿ. ದಿನಸಕ್ಕೆ ಸರಾಸರಿ ಆರು ಕುಡಿತೆ ನೀರನ್ನು ಕುಡಿಯಿರಿ, ಬೆಳಿಗೆ ಎದ್ದೊಡನೆ ೨ ಕುಡುತೆ, ರಾತ್ರೆ ಮಲಗುವಾಗ ೨ ಕುಡುತೆ, ಉಳಿದ ೨ ಕುಡುತೆ ಊಟದ ವೇಳೆಯಲ್ಲಿ, ಬೆಳಿಗ್ಗೆ ಎದ್ದ ಕೂಡಲೆ ಕುಡಿದ ನೀರು ದೇಹದೊಳಗಿನ ಇಂದ್ರಿಯಗಳನ್ನು ಶುಚಿಮಾಡಲು ಸಹಕಾರಿಯಾಗುತ್ತಿದೆ. ಬಹಳ ಬಿಸಿಯಾದ ನೀರನ್ನು ಉಪಯೋಗಿಸಬೇಡಿರಿ. ಅದರಿಂದ ತುಂಬಾ ಹಾನಿ ಇದೆ. ಶುಚಿಯಾದ, ಸರಿಯಾಗಿ ಬೆಳಕು ಗಾಳಿಗಳಿರುವ ಕೋಣೆಗಳಲ್ಲಿ ವಾಸಿಸಿರಿ. ಕೆಲಸ ಮಾಡುತ್ತಿರುವಾಗಲೂ ಗಾಳಿ ಬೆಳಕುಗಳು ಏನೊಂದೂ ತೊಂದರೆಗಳಿಲ್ಲದೆ ನಿಮ್ಮ ಮೈಯನ್ನು ಸವರಿಕೊಂಡು ಹೋಗಲಿ.

ಬಿಸಿಲಿನ ಸ್ನಾನ

ಸೂರ್ಯನ ಬಿಸಿಲು ನಮ್ಮ ರೋಗಗಳಿಗೆಲ್ಲಾ ದಿವ್ಯ ಔಷಧಿಯಾಗಿದೆ. ಸೂರ್ಯನ ಬಿಸಿಲಿನಿಂದ ನಮ್ಮ ದೇಹವನ್ನು ಅಡಗಿಸುವ ನಾವು, ಅದನ್ನು ನಿಷ್ಕಾರಣವಾಗಿ ಅನೇಕಾನೇಕ ರೋಗಗಳಿಗೆ ತುತ್ತಾಗುವಂತೆ ಮಾಡುತ್ತಿರುವೆವು. ನಗ್ನರಾಗಿ ಸೂರ್ಯಸ್ನಾನವನ್ನು ಮಾಡಬೇಕೆಂತ ನನ್ನ ಮತವಲ್ಲ. ಆದರೂ ತಮ್ಮ ಮನೆಮಠಗಳಲ್ಲಿ ಗುಪಿತದಲ್ಲಿ ಸ್ತ್ರೀಪುರುಷರು ತಮಗೆ ಬೇಕಾದಷ್ಟು ಸೂರ್ಯಸ್ನಾನವನ್ನು ಪಡೆಯಬಹುದು. ಕೇವಲ ತೆಳ್ಳಗಾದ ವಸ್ತ್ರವನ್ನು ಜನನೇಂದ್ರಿಯವನ್ನು ಅಡಗಿಸಲು ಮಡಗಿ ಸೂರ್ಯಸ್ನಾನವನ್ನು ಮಾಡಬಹುದು; ಇಲ್ಲವೆ ಸೂರ್ಯರಶ್ಮಿಗಳು ವಸ್ತ್ರದೊಳಗಿಂದ ದೇಹವನ್ನು ಮುಟ್ಟಲು ಆಗುವಂತಹ ಉಡುಪನ್ನು ಧರಿಸಿದರೂ ಉತ್ತಮ. ನಮ್ಮ ದೇಹವನ್ನು ಆರೋಗ್ಯವಾಗಿಡಬೇಕಾದರೆ ಕೇವಲ ನಾಸಿಕದ ಉಸಿರಾಟವು ಮಾತ್ರ ಅಪೇಕ್ಷನೀಯವಲ್ಲ. ಇಡೀ ದೇಹವೇ ಉಸಿರಾಡಲು ಬಾಧ್ಯವಾಗಿರುವುದು. ದೇಹದಲ್ಲಿರುವ ಅನೇಕಾನೇಕ ತೂತುಗಳು ಈ ಉಸಿರಾಟದ ಕೆಲಸವನ್ನು ಸಾಗಿಸುತ್ತಿರಬೇಕು.

ಅಂತಿರುವಾಗ ನಾವವನ್ನು ಮುಚ್ಚಿಬಿಟ್ಟರೆ ಎಂತಹ ಅನಾಹುತವು ಸಂಭವಿಸಿತು ಎಂಬುದನ್ನು ನೀವೇ ಆಲೋಚಿಸಿರಿ. ಬಹಳ ಬಿಗಿಯಾಗಿ ಉಡುವುದರಿಂದ ದೇಹದ ಉಷ್ಣತೆಯು ಹೆಚ್ಚಾಗಿ ಜ್ವರಕ್ಕೆ ಕಾರಣವಾಗುತ್ತದೆ. ಇನ್ನೂ ಈ ರಂಧ್ರಗಳ ಕೆಲಸಗಳು ಸರಿಯಾಗಿ ಸಾಗಬೇಕಾದ್ದಲ್ಲಿ ದಿನನಿತ್ಯವೂ ಸ್ನಾನವು ಅತಿ ಅಗತ್ಯ. ಸಾಯಂಕಾಲ ಬಿಸಿ ನೀರು ಸ್ನಾನಗಳು ದೇಹದ ಆಯಾಸವನ್ನು ಹೋಗಲಾಡಿಸುತ್ತದೆ. ಕೆಲವರಿಗೆ ಬಿಸಿನೀರಿನ ಸ್ನಾನಾನಂತರ

(೩ನೇ ಪುಟವನ್ನು ನೋಡುವುದು.)

OUR ENGLISH COLUMN

Odd Truths.

You 're a fish

It is not only millionaires who possess private museums, every one has in his own body, which is full of interesting relics that go back millions of years. At the end of your spine, for instance, there is a little pointed bone, which is all that remains of what was once a long, waving, tail. At a certain stage of its development the human embryo has a well worked-out tail whilst a little earlier it shows gills similar to those a fish uses for breathing.

Our early ancestors were able to move their ears, just as a dog or horse does, to enable them to listen intently to faint sounds. Many people can still move their ears slightly, but in all this, the necessary muscles remain though they have dwindled through lack of use. The little point in the rim of the year is all that remains of the flap

Man's Third Eye

Within the brain of every human being there is a strange survival from the remote past. This is a third eye Ages ago Nature experimented with a third eye, but it was apparently not found very useful by its owners and so it became less and less developed But the third eye remains in the brain of every human being and of most animals

What a million means

A way of realising the meaning of a million is to think of what it means in times. Few people would realise that there is less than a million days in the whole Christian Era, in fact if we count back a million days, say from 1933, we come to a day before the founding of Rome, while a million hours would take us back to the battle of Trafalgar The great war lased about two million minutes and taking the total casualties as ten millions, this gives an a vohage of five casualties per minute through out the period of hostilities.

Largest Dam

The largest dam in the world is the Sukkur Barrage in Sind It commands an area of 8,000,000 acres of Sind – the land actually irrigated by the canals being 6,000,000 acres. It carries two mighty bridges over the Indus, each of them nearly a mile long. The dam is pierced by 66 openings, each of 60 feet span, between which huge gates operate. There are seven large canals. The Rohri canal, the biggest, is over 200 miles long, with 2,300 miles of branches and distributions. The irrigated lands will produce an annual crop of two million tons of grain and cotton.

'Smile Awhile'

A Negative Hint

"Mr. Ramdas," asked the professor in the class, "what three words are used most among college students?"

"I don't know", said the student. "Correct," replied the professor

× × ×

Wisdom

First Man My motto is: Do *right* and fear no man.

Second Man. And mine is. Don't *write* and fear no woman.

× × ×

The Real Question

Wife: Do you know that you haven't kissed me for six weeks.

Professor (who is absent minded) Good heavens, whom have I been kissing then'

+ + +

Where Ignorance is Bliss

Bean "I'm just debating whether to give you a book or a kiss which would you rather have"

Belle (Coyly) "I can't read."

× × ×

Ante up again

He "I'll bet you a kiss I can steal a kiss from you?"

She "I'll bet you two you can't"

He 'you win'"

By: 'OWL'

ಲೋದ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದ ರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭ ಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗ ಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸುತ್ತದೆ.

ಎರಡು ಸೈಜಿನಲ್ಲಿ ದೊರೆಯುತ್ತದೆ **ಲೋದ್ರ** ರೂ. 3 ಮತ್ತು 1—10—0

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದ್ರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು —

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ಪಿದ್ವಾಂಸ ರಿಂದ ರಚಿಸಲ್ಪಟ್ಟ ಸಿಧ್ಧಾಂತಗಳ ಆಧಾರದಿಂದ ನಾವು, ನಿತ್ಯ ಯಶಸ್ವಿ ಸ್ವಾನುಭವ ಹೊಂದಿದ ಎಲ್ಲಾ ಔಷಧ ಮಾಲಿಕೆಗಳನ್ನು ಸುಲಭ ಬೆಲೆಗೆ ವಿಕ್ರಯಮಾಡುತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟ್ ಮಂಗಳೂರು, ದ. ಕ.

ರೈಲು ಬಂಡಿಗಳ ಸಮಯ.

ಗಾಡಿಗಳು,	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9-50	ಸಂಜೆ 4-20
ಮಿಕ್ಸಡ್	,, 5-55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12 45	ಮ. 2 40
ಶಟಲ್	ಸಂಜೆ 5 25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ. 1 20
ಕಾಸರಗೋಡು ಪೆಸೆಂಜರು	ಸಂಜೆ 3.20	ಸಂಜೆ 6·15

Estd 1920] THE [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ:

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವುವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur, Dated 10-4-1935 } **G N. Lakshman Pai,** *Secretary.*

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನಪಂಡಿತ

ಡಿ. ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷದವು ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯಿಂದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ESTD. 1906

CANARA BANK

LIMITED.

Head Office: MANGALORE

Subscribed Capital ...	6,00,000
Paid up Capital	3,33,000
Reserves	4,50,000
Deposits	61,92,000
Working Capital	73,40,000

OFFICES:

Bombay-Fort, Bombay-Mandvi, Hubli, Calicut Cochin, Ernakulam, Alleppey, Bagalore, Chikmagalur, Mangalore-Bunder, Mangalore-City, Kasaragod, Puttur, Udipi, Karkala Coondapoor, Gangoli, Buntwal, Davanagere & Moolky.

ALL KINDS OF BANKING BUSINESS UNDERTAKEN.

ಚಿತ್ರಾಹುತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ-ಊರ್ಧ್ವಪುಂಡ್ರ-ಮುದ್ರಾ ಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ. ಎಂ. ನರಸಿಂಗರಾವ್, ಬಿ. ಎ. ಎಂ. ಎಲ್ ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ. ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್‌ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು.

ಬನ್ನಿರಿ ಅಥವಾ ಬರೆಯಿರಿ.

ಒಂದು ಶತಮಾನ ಬಾಳಿರಿ

(ಮಿ। ಸರ್. ವಿಲ್ಲಿಯಂ ಅಲ್ಬತ್ ಸೋರ್ಟ್ ಇವರ ಲೇಖದ ಆಧಾರದಿಂದ)

ರೋಗವನ್ನು ಗುಣಪಡಿಸುವುದಕ್ಕಿಂತಲೂ ಅದನ್ನು ಬಾರದಂತೆ ನೋಡುವುದು ಎಷ್ಟೋ ವಾಸಿ. ಇದರ ತಾತ್ಪರ್ಯವನ್ನು ಎಲ್ಲರೂ ಅರಿತಿದ್ದರೆ, ಇಂದು ಆಸ್ಪತ್ರೆಗಳಲ್ಲಿ ಅಸಂಖ್ಯಾತ ಜನರು ನರಳುತ್ತಿರಬೇಕಾಗಿರಲಿಲ್ಲ ಆರೋಗ್ಯವನ್ನು ಕಾಪಾಡುವಂತಹ ಸೂತ್ರಗಳನ್ನು ಚೆನ್ನಾಗಿ ಮನನಮಾಡಿ ರೋಗದ ಚಿಹ್ನೆಗಳು ತೋರಿದೊಡನೆ ಅದರ ನಿವಾರಣೋಪಾಯವನ್ನು ಕೈಗೊಳ್ಳುತ್ತಿದ್ದರೆ ಇಷ್ಟೆಲ್ಲಾ ದೀನ ಅವಸ್ಥೆಗೆ ಜಗತ್ತು ತುತ್ತಾಗುತ್ತಿರಲಿಲ್ಲ ಅಜಾಗ್ರತೆಯು ನಮ್ಮ ವ್ಯಾಧಿಗಳ ಕಾರಣವಾಗಿದ್ದರೂ ಅಜ್ಞಾನವೂ ಅದರಗಿಂತ ಶ್ರೇಷ್ಠ ಕಾರಣವಾಗಿರುತ್ತದೆ. ಆರೋಗ್ಯ ಜ್ಞಾನವು ಹಲವರ ಜೀವಮಾನಗಳನ್ನು ಸರಿಪಡಿಸುತಿತ್ತು ಆದರೆ ಅಜ್ಞಾನ ಬಹುಳವಾಗಿ ಪ್ರಸಾರದಲ್ಲಿದೆ. ಅಲ್ಲದೆ, ಅನೇಕ ವಿರೋಧಾಭಿಪ್ರಾಯಗಳಿಂದ ಇದರ ಸ್ಥಿತಿಯು ಇನ್ನೂ ಕೆಟ್ಟುಹೋಗುತ್ತಿದೆ

ಆದರೆ ವ್ಯವಹಾರ ಜ್ಞಾನ, ಅನುಭವ ಮತ್ತು ಮೂಲತತ್ವ ಜ್ಞಾನದೊಂದಿಗೆ ಮಾನವನು ತನ್ನ ಜೀವಮಾನವನ್ನು ಸುರಕ್ಷಿತವಾಗಿ ಸಾಗಿಸಬಹುದು

ಇಷ್ಟರವರೆಗೂ ಮುಂದೊತ್ತಿ ಬಂದ ನಾವು ಈಗ ಪುನಃ ಹಿಂದಿನ ಸೂತ್ರಗಳನ್ನು ಅನುಸರಿಸುವದೆಂದರೆ ಕೇವಲ ನಾಚಿಕೆಗೇಡು ಆದ್ದರಿಂದ ಈಗಿನ ಪರಿಸ್ಥಿತಿಗೆ ಸರಿಯಾದ ರೀತಿಯಲ್ಲಿ ನಮ್ಮ ಜೀವಮಾನವನ್ನು ರೂಪಿಸಬೇಕು ಇವುಗಳಿಂದ ಪಾರಾಗುವಂತೆ ಬಹಳೇ ಚಲೋ ಉಪಾಯಗಳನ್ನು ಕಂಡು ಹಿಡಿಯುವುದು ಉತ್ತಮವೆಂದು ನನ್ನ ಅಭಿಪ್ರಾಯ ದೇಹದ ಬೆಳವಣಿಗೆಯೇ ದೇಶದ ಬೆಳವಣಿಗೆ ಪೂರ್ವದಲ್ಲಿ ದೇಶವು ಸುಭಿಕ್ಷವೂ ಪ್ರಜೆಗಳೂ ಸುಕಾಯರೂ ಆಗಿದ್ದರೆ, ಅದವರ ನಿರ್ಮಲ ತಥಾ ಆರೋಗ್ಯಕರವಾದ ರೀತಿಯಿಂದ ಜೀವನ ಮಾಡಿಕೊಂಡಿದ್ದುದೇ, ಅದರ ಫಲವಾಗಿತ್ತು ಅಂಬು ಪ್ರತಿಯೊಬ್ಬನೂ ದಷ್ಟಪುಷ್ಟನಾಗಿಯೂ ದೀರ್ಘಾಯುವಾಗಿಯೂ ಬಾಳುತ್ತಿದ್ದನು ರೋಗರುಜಿಗಳ ಹೆದರಿಯೂ ಅವರಿಗ ತಟ್ಟುತ್ತಿರಲಿಲ್ಲ. ಇಂದು ನಾವು ಏಕೆ ಹಾಗೆ ಜೀವಿಸಬಾರದು ನಾವೂ ಅವರ ಹಾಗ ನರರಲ್ಲವೆ! ಇದನ್ನು ತಿಳಿದ ನಾನು ಕೆಲವು ಕಾಲ ಅಖಂಡ ಅಭ್ಯಾಸಗಳನ್ನು ಅಭ್ಯಾಸಿಸಿ, ಅದರ ಪರಿಣಾಮವಾಗಿ ಸುಖಾಯುನೂ, ಆರೋಗ್ಯವಂತನೂ ಆಗಿರುವೆನು ನನ್ನ ಅನುಭವದ ಸಂಗತಿಗಳನ್ನೇ ನಿಮಗೂ ತಿಳಿಸುವೆನು

ಆದಷ್ಟು ಮಟ್ಟಿಗೆ ಮಾಂಸಾಹಾರವನ್ನು ತೊರೆಯಿರಿ ಸಾಧ್ಯವಿದ್ದಲ್ಲಿ ಆದನ್ನು ಸಂಪೂರ್ಣವಾಗಿ ತ್ಯಜಿಸಿರಿ ಅದರ ಬದಲಾಗಿ ಮೀನನ್ನು ಸೇವಿಸಬಹುದು ಮೀನು ದೇಹಾರೋಗ್ಯಕ್ಕೆ ಬಹಳ ಉತ್ತಮ ಮೈ ಮುರಿದು ಕೆಲಸ ಮಾಡುವವರೂ, ಅಜೀರ್ಣದ ಬಾಧೆ ಇಲ್ಲದವರೂ ಮಾಂಸವನ್ನು ಉಪಯೋಗಿಸಬಹುದು ಅಂಥವರು ಅದನ್ನು ಭುಂಜಿಸಿದರೆ ಶರೀರಕ್ಕೆ ಬೇಕಾದ ಕೊಬ್ಬನ್ನು ಪಡೆದು ಚೆನ್ನಾಗಿ ಬೆಳೆಯುವರು ಇಲ್ಲವಾದರೆ ಆ ಮಾಂಸವು ಪಚನವಾಗದೆ ಕರುಳುಗಳಲ್ಲಿ ಕೊಳೆತು ಅನೇಕಾನೇಕ ರೋಗಗಳಿಗೆ ಎಡೆಕೊಡುತ್ತದೆ. ಮೇಲ್ವಿಚಾರ ನೋಡುವುದೆ ಮುಖ್ಯ ಕೆಲಸವಾಗಿರುವ ಆಫೀಸರರು ಇದನ್ನು ಸರ್ವಥಾ ಭುಂಜಿಸಬಾರದು

ಫಲವಸ್ತುಗಳು ನಿಮ್ಮ ದಿನನಿತ್ಯದ ಆಹಾರವಾಗಿರಲಿ ಕಾಯಿಪಲ್ಯಗಳ ಪದಾರ್ಥಗಳನ್ನು ವಿಶೇಷವಾಗಿ ತಿನ್ನಿರಿ. ಹಾಲು ಬೆಣ್ಣೆ ತುಪ್ಪ ಇವುಗಳನ್ನು ಸಮೃದ್ಧಿಯಾಗಿ ಪಡೆಯಿರಿ ಇವೆಲ್ಲವೂ ನಿಮಗೆ ಬೇಕಾಗಿರುವ ದೇಹಪುಷ್ಟತೆಯನ್ನು ಕೊಡುತ್ತವೆ ಆಹಾರ ಸತ್ವವು ದೇಹ ಬೆಳವಣಿಗೆಗೆ ಮಾತ್ರವಲ್ಲ, ಜೀವದ ಬೆಳವಣಿಗೆಗೂ ಪ್ರಾಮುಖ್ಯವಾಗಿದೆ ಅದರಿಂದಾಗಿ ನಮ್ಮ ದೇಹದಲ್ಲಿರುವ ಜೀವಾಣುಗಳು ಶಕ್ತಿಯನ್ನು ಹೊಂದಿ ಪ್ರತಿಯೊಂದು ನರಗಳಲ್ಲಿ ಶಕ್ತಿವರ್ಧಕ ಧಾತುವನ್ನು ಸಂಚಯಿಸಿ ನವವರ್ಚಸ್ಸನ್ನು, ನವಕಳೆಯನ್ನೀಯುವುದು ಒಂದು ತಡವೆ ಅದಕ್ಕೆ ಬೇಕಾದ ಆಹಾರವು ಸಿಗದೆ ಇದ್ದಲ್ಲಿ ಅವು ನಶಿಸಿ ಹಾಳಾಗುತ್ತವೆ. ಅಂತೆಯೇ ಜೀವವು ಶಿಥಿಲತೆಯನ್ನು ತಾಳಿ ಕುಸಿದುಬೀಳುವುದು ನಾವು ತೆಗೆದುಕೊಳ್ಳುವ ಮಿಶ್ರ ಆಹಾರಗಳಲ್ಲಿ A B. C ಮತ್ತು D ಎಂಬ ನಾಲ್ಕು ಜಾತಿಯ ಆಹಾರ ಸತ್ವಗಳಿವೆ ಆದರೆ ಇವುಗಳಲ್ಲಿ B. ಆಹಾರ ಸತ್ವವು ನಮಗೆ ಬಹಳೇ ಕಮ್ಮಿಯಾಗಿ ದೊರಕುವುದರಿಂದ ನಮ್ಮ ಆರೋಗ್ಯವು ಆಗಾಗ ಹಾಳಾಗಲು ಕಾರಣ ಇದರಿಂದಾಗಿ ಪಚನಶಕ್ತಿಯು ಕಮ್ಮಿಯಾಗಿ ಸ್ನಾಯುಗಳ ಬಲವು ಕಮ್ಮಿಯಾಗ ತೊಡಗುತ್ತದೆ ಆದ್ದರಿಂದ B ಆಹಾರ ಸತ್ವವಿರುವ ಮೊಟ್ಟೆ, ಮೀನು ಟೊಮೆಟೊ ಮೊದಲಾದುವುಗಳನ್ನು ಸೇವಿಸುವುದು ಒಳ್ಳೆದು

ಮೇಲೆ ಹೇಳಿದ ಆಹಾರಗಳೊಂದಿಗೆ ಇನ್ನೂ ಕೆಲವು ಪದಾರ್ಥಗಳನ್ನು ಮಿಶ್ರಮಾಡಿ ತಿಂದರೆ ಅವು ನಮ್ಮ ದೇಹದೊಳಗಿನ ಕೊಳೆ ಕಶ್ಮಲಗಳನ್ನು ಹೊರಗೆಡಹಲು ಸಹಾಯಕವಾಗುತ್ತವೆ ಈ ಪದಾರ್ಥಗಳು ಹೆಚ್ಚಾಗಿ ಕಾಯಿಪಲ್ಯಗಳಲ್ಲಿ ಸಿಗುತ್ತವೆ ಸರಿಯಾಗಿ ಪಚನವಾಗುವ ಆಹಾರಗಳು ದೇಹಕ್ಕೆ ಒಳ್ಳೆಯವು ಎಂಬ ಭಾವನೆಯು ತಪ್ಪು ಇವುಗಳೊಂದಿಗೆ ದೇಹದೊಳಗಿನ ಕಶ್ಮಲಗಳನ್ನು ಹೊರತಳ್ಳುವ ಆಹಾರವಿದ್ದರೇನೆ ದೇಹದ ಬೆಳವಣಿಗೆ ಅವು ಲಾಭಕಾರಿಯಾಗುವುವು

ಪ್ರತಿಯೊಂದು ಊಟವಾದ ಕೂಡಲೆ ದೇಹದೊಳಗಿನ ಕೊಳೆಯನ್ನು ಹೊರಗೆಡಹಲು ಪ್ರಯತ್ನಿಸಿ ಇದರಿಂದ ದೇಹದ ಪ್ರಗತಿಯು ನೆಟ್ಟಗಾಗುವುದು ಅಜೀರ್ಣವಾಗದಂತೆ ನೋಡಿಕೊಳ್ಳುವುದು ಬಹಳ ಲಾಭದಾಯಕ ಕಾರಣ ಈ ಅಜೀರ್ಣವು ಅನೇಕ ಘೋರ ರೋಗಗಳ ತವರ ಮನೆಯಾಗಿದೆ ಮಿತಿಮೀರಿ ಯಾವುದನ್ನೂ ಉಣ್ಣಬೇಡಿರಿ, ತಿನ್ನಬೇಡಿರಿ ದಿವಸಕ್ಕೆ ಸರಾಸರಿ ಆರು ಕೊಡತೆ ನೀರನ್ನು ಕುಡಿಯಿರಿ, ಬೆಳಿಗೆ ಎದ್ದೊಡನೆ ೩ ಕೊಡತೆ, ರಾತ್ರೆ ಮಲಗುವಾಗ ೨ ಕೊಡತೆ, ಉಳಿದ ೨ ಕೊಡತೆ ಊಟದ ವೇಳೆಯಲ್ಲಿ ಬೆಳಿಗ್ಗೆ ಎದ್ದ ಕೂಡಲೆ ಕುಡಿದ ನೀರು ದೇಹದೊಳಗಿನ ಇಂದ್ರಿಯಗಳನ್ನು ಶುಚಿಮಾಡಲು ಸಹಕಾರಿಯಾಗುತ್ತಿದೆ ಬಹಳ ಬಿಸಿಯಾದ ನೀರನ್ನು ಉಪಯೋಗಿಸಬೇಡಿರಿ ಅದರಿಂದ ತುಂಬಾ ಹಾನಿ ಇದೆ ವಿಶಾಲವಾದ, ಸರಿಯಾಗಿ ಬೆಳಕು ಗಾಳಿಗಳಿರುವ ಕೋಣೆಗಳಲ್ಲಿ ವಾಸಿಸಿರಿ ಕೆಲಸ ಮಾಡುತ್ತಿರುವಾಗಲೂ ಗಾಳಿ ಬೆಳಕುಗಳು ಏನೊಂದೂ ತೊಂದರೆಗಳಿಲ್ಲದೆ ನಿಮ್ಮ ಮೈಯನ್ನು ಸವರಿಕೊಂಡು ಹೋಗಲಿ

ಬಿಸಿಲಿನ ಸ್ನಾನ

ಸೂರ್ಯನ ಬಿಸಿಲು ನಮ್ಮ ರೋಗಗಳಿಗೆಲ್ಲಾ ದಿವ್ಯ ಔಷಧಿಯಾಗಿದೆ ಸೂರ್ಯನ ಬಿಸಿಲಿನಿಂದ ನಮ್ಮ ದೇಹವನ್ನು ಅಡಗಿಸುವ ನಾವು, ಅದನ್ನು ನಿಷ್ಕಾರಣವಾಗಿ ಅನೇಕಾನೇಕ ರೋಗಗಳಿಗೆ ತುತ್ತಾಗುವಂತೆ ಮಾಡುತ್ತಿರುವೆವು ನಗ್ನರಾಗಿ ಸೂರ್ಯಸ್ನಾನವನ್ನು ಮಾಡಬೇಕೆಂತ ನನ್ನ ಮತವಲ್ಲ ಆದರೂ ತಮ್ಮ ಮನೆಮಠಗಳಲ್ಲಿ ಗುಪಿತದಲ್ಲಿ ಸ್ತ್ರೀಪುರುಷರು ತಮಗೆ ಬೇಕಾದಷ್ಟು ಸೂರ್ಯಸ್ನಾನವನ್ನು ಪಡೆಯಬಹುದು ಕೇವಲ ತೆಳ್ಳಗಾದ ವಸ್ತ್ರವನ್ನು ಜನನೇಂದ್ರಿಯವನ್ನು ಅಡಗಿಸಲು ಸುಡಗಿ ಸೂರ್ಯಸ್ನಾನವನ್ನು ಮಾಡಬಹುದು; ಇಲ್ಲವೆ ಸೂರ್ಯರಶ್ಮಿಗಳು ವಸ್ತ್ರದೊಳಗಿಂದ ದೇಹವನ್ನು ಮುಟ್ಟಲು ಆಗುವಂತಹ ಉಡುಪನ್ನು ಧರಿಸಿದರೂ ಉತ್ತಮ ನಮ್ಮ ದೇಹವನ್ನು ಆರೋಗ್ಯವಾಗಿಡಬೇಕಾದರೆ ಕೇವಲ ನಾಸಿಕದ ಉಸಿರಾಟವು ಮಾತ್ರ ಅಪೇಕ್ಷಣೀಯವಲ್ಲ ಇಡೀ ದೇಹವೇ ಉಸಿರಾಡಲು ಬಾಧ್ಯವಾಗಿರುವುದು ದೇಹದಲ್ಲಿರುವ ಅನೇಕಾನೇಕ ತೂತುಗಳು ಈ ಉಸಿರಾಟದ ಕೆಲಸವನ್ನು ಸಾಗಿಸುತ್ತಿರಬೇಕು

ಅಂತಿರುವಾಗ ನಾವವನ್ನು ಮುಚ್ಚಿಬಿಟ್ಟರೆ ಎಂತಹ ಅನಾಹುತವು ಸಂಭವಿಸಿತು ಎಂಬುದನ್ನು ನೀವೇ ಆಲೋಚಿಸಿರಿ ಬಹಳ ಬಿಗಿಯಾಗಿ ಉಡುವುದರಿಂದ ದೇಹದ ಉಷ್ಣತೆಯು ಹೆಚ್ಚಾಗಿ ಜ್ವರಕ್ಕೆ ಕಾರಣವಾಗುತ್ತದೆ. ಇನ್ನೂ ಈ ರಂಧ್ರಗಳ ಕೆಲಸಗಳು ಸರಿಯಾಗಿ ಸಾಗಬೇಕಾದ್ದಲ್ಲಿ ದಿನನಿತ್ಯವೂ ಸ್ನಾನವು ಅತಿ ಅಗತ್ಯ ಸಾಯಂಕಾಲ ಬಿಸಿ ನೀರು ಸ್ನಾನಗಳು ದೇಹದ ಆಯಾಸವನ್ನು ಹೋಗಲಾಡಿಸುತ್ತದೆ. ಕೆಲವರಿಗೆ ಬಿಸಿನೀರಿನ ಸ್ನಾನಾನಂತರ

(೬ನೇ ಪುಟವನ್ನು ನೋಡುವುದು.)

OUR ENGLISH COLUMN

Odd Truths.

You're a fish

It is not only millionaires who possess private museums, every one has in his own body, which is full of interesting relics that go back millions of years At the end of your spine, for instance, there is a little pointed bone, which is all that remains of what was once a long, waving, tail. At a certain stage of its development the human embryo has a well worked-out tail whilst a little earlier it shows gills similar to those, a fish uses for breathing

Our early ancesters were able to move their ears, just as a dog or horse does, to enable them to listen intently to taint sounds Many people can still move their ears slightly, but in all this the necessary muscles remain though they have dwindled through lack of use The little point in the rim of the year is all that remains of the flap

Man s Third Eye

Within the brain of every human being there is a strange survival from the remote past This is a third eye Ages ago Nature experimented with a third eye but it was apparently not found very useful by its owners and so it became less and less developed But the third eye remains in the brain of every human being and of most animals

What a million means

A way of realising the meaning of a million is to think of what it means in times Few people would realise that there is less than a million days in the whole Christian Era, in fact if we count back a million days, say from 1933, we come to a day before the founding of Rome, while a million hours would take us back to the battle of Trafalgar The great war lasted about two million minutes and taking the total casualties as ten millions, this gives in a voltage of five casual ties per minute through out the period of hostilities

Largest Dam

The largest dam in the world is the Sukkur Barrage in Sind It commands an area of 8,000,000 acres of Sind—the land actually irrigated by the canals being 6000,000 acres It carries two mighty bridges over the Indus, each of them nearly a mile long The dam is pierced by 66 openings, each of 60 feet span, between which huge gates operate There are seven large canals. The Rohri canal, the biggest, is over 200 miles long, with 2,300 miles of branches and distributions. The irrigated lands will produce an annual crop of two million tons of grain and cotton.

By 'OWL'

'Smile Awhile'

A Negative Hint

"Mr. Ramdas," asked the professor in the class, "what three words are used most among college students?"

'I don't know", said the student "Correct," replied the professor

× × ×

Wisdom

First Man My motto is Do *right* and fear no man

Second Man And mine is Don't *write* and fear no woman

× × ×

The Real Question

Wife Do you know that you haven't kissed me for six weeks

Professor (who is absent minded) Good heavens whom have I been kissing then

+ + +

Where Ignorance is Bliss

Bean "I'm just debating whether to give you a book or a kiss which would you rather have?"

Belle (Coyly) 'I can t read

× × ×

Ante up again

He "I ll bet you a kiss I can steal a kiss from you?"

She 'I'll bet you two you can't '

He "you win'

ಕ್ರಿಮಿಗಳ ಕಡಿತವು ನಿಮ್ಮನ್ನು ತತ್ತರಿಸುವುದೆ?

ಹಾಗಾದರೆ

ಸಾಂಬಕನ್ನುಪಯೋಗಿಸಿರಿ.

ಕ್ರಿಮಿಗಳ ಕಡಿತವು ನಿಮ್ಮ ರಕ್ತವನ್ನು ವಿಷಮಯವನ್ನಾಗಿ ಮಾಡುವುದು ಅದೇ ನಿಮ್ಮನ್ನು ಸಹಿಸಲಸದಳವಾದ ವೇದನೆಗೆ ಗುರಿಮಾಡುವುದು ಇದನ್ನೆಲ್ಲವನ್ನು ನೀಗ ಬೇಕಾದರೆ ಸಾಂಬಕನ್ನು ತಿಕ್ಕಿರಿ ಅದು ನಿಮ್ಮ ನೋವನ್ನೆಲ್ಲಾ ಶಮನಗೊಳಿಸಿ ನಿಮಗೆ ಶಾಂತಿಯನ್ನೀಯುವುದು ಬಾತುಹೋಗುವುದನ್ನು ಗುಣಪಡಿಸುವುದು ಉರಿಯನ್ನು ತಣಿಸುವುದು. ಎಲ್ಲಾ ಔಷಧಿಯ ಅಂಗಡಿಗಳಲ್ಲೂ ಮಾರಾಟಕ್ಕೆ ಸಿಗುತ್ತಿದೆ ಬೆಲೆ ರೂ. 1 ಅಥವಾ 2-4-0

ಇದರಲ್ಲಿ ಜಂತುಗಳ ಕೊಬ್ಬಿನ ಮಿಶ್ರವಿಲ್ಲ.

ಸಾಂಬಕ್

Zam-Buk

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿಯಲ್ಲೇ ಕೊಡಿರಿ!

(೬ನೇ ಪುಟದಿಂದ ಮುಂದುವರಿದುದು.)

...ಪ್ರಾರಂಭವಾಗುವುದುಂಟು ಕಾರಣ ಆದ್ದರಿಂದ ಬಿಸಿನೀರನನ್ನು ಸ್ನಾನವಾದ ಕೂಡಲೆ ಕಂಬಳಿಯನ್ನು ಹೊದೆದು ದೇಹದ ಉಷ್ಣತೆಯನ್ನು ಒಂದೇ ಸವನೆ ಕಳಗಿಳಿಯದಂತೆ ನೋಡುತ್ತಿರಬೇಕು. ಅಂತೂ ಎಲ್ಲರಿಗೂ ತಣ್ಣೀರು ಸ್ನಾನವು ಅಪಾಯಕರ ಆದ್ದರಿಂದ ತಣ್ಣೀರ ಸ್ನಾನ ಮಾಡಲಪೇಕ್ಷಿಸುವವರು ಮುಂದಾಗಿ ವೈದ್ಯರ ಅನುಮತಿಯನ್ನು ಪಡೆದು ವರ್ತಿಸಲಿ.

ಹಲ್ಲುಗಳನ್ನು ದಿನಕ್ಕೆರಡಾವರ್ತಿ ಉಜ್ಜಬೇಕು. ರಾತ್ರಿ ಮಲಗುವಾಗ ಮತ್ತು ಬೆಳಿಗ್ಗೆ ಎದ್ದ ಕೂಡಲೆ ಶುಚಿಯಾಗಿರುವ ಹಲ್ಲು ಯಾವಾಗಲೂ ಬಿದ್ದುಹೋಗುವುದಿಲ್ಲ ಆಹಾರದಲ್ಲಿರುವ ಜಿಡ್ಡು ಪದಾರ್ಥಗಳು ಹಲ್ಲುಗಳ ಎಡೆಯಲ್ಲಿ ಕೂತು ಅಲ್ಲಿ ಕೊಳೆತು, ಹಲ್ಲುಗಳನ್ನು ಹಾಳುಮಾಡುತ್ತವೆ ಅದರಲ್ಲಿ ಉದ್ಭವಿಸಿದ ಕ್ರಿಮಿಗಳು ಹೊಟ್ಟೆಯೊಳಗೂ ಹೋಗಿ ಅನಿವಾರ್ಯವಾದ ರೋಗಕ್ಕೆ ಈಡುಮಾಡುತ್ತವೆ

ಜೀರ್ಣಾಂಗಗಳಿಗೆ ಕೆಲಸ ಕೊಡುವಂತಹ ವ್ಯಾಯಾಮವನ್ನು ಬೆಳಿಗ್ಗೆ ಎದ್ದೊಡನೆಯೂ, ಸಾಯಂಕಾಲದ ವೇಳೆಯಲ್ಲಿಯೂ ತೆಗೆದುಕೊಳ್ಳುತ್ತಿರಬೇಕು ಮಧ್ಯ ವಯಸ್ಕರಾದವರಿಗೆ ಇದು ಅತಿ ಅಗತ್ಯ. ಆಗವರ ಜೀರ್ಣಶಕ್ತಿಯು ಕಡಿಮೆಯಾಗತೊಡಗುತ್ತದೆ ಜೀರ್ಣಾಂಗಗಳ ಕೆಲಸವು ಕೆಲಸವು ಕಡಿಮೆಯಾಗತೊಡಗುತ್ತದೆ ಅವುಗಳನ್ನು ಸ್ತಿಮಿತಕ್ಕೆ ತರಲು ಈ ವ್ಯಾಯಾಮವು ಆವಶ್ಯಕ ನಿರ್ಮಲವಾಯುವೆ ಎಲ್ಲರ ಜೀವಾಳವಾಗಿರುವುದು ಕಲ್ಮಶ ವಾಯುವನ್ನು ಸೇವಿಸಿ ದೇಹದಂಡನೆಗೆ ಗುರಿಯಾಗಬೇಡಿರಿ

ಕಾರ್ಯಸಿದ್ಧಿ ಮಂತ್ರಂ

ಯಾರೇ ಆಗಲಿ, ಗಂಡಸರಾಗಲಿ, ಹೆಂಗಸರಾಗಲಿ, ಹುಡುಗರಾಗಲಿ, ಈ ಮಂತ್ರವನ್ನು ಸಿದ್ಧಿ ಮಾಡಿಕೊಂಡು ಮಲಗುವುದಕ್ಕೆ ಮುಂಚೆ ರಾತ್ರಿಯಲ್ಲಿ ಜಪಿಸಿದರೆ ಅವರ ಮನೋಭಿಲಾಷೆಗಳೆಲ್ಲವೂ ನೆರವೇರುವುವು, ಇದರ ಸಹಾಯದಿಂದ ಕಳೆದ ಪದಾರ್ಥಗಳ ಪತ್ತೆ ಹಚ್ಚುವಿಕೆಯು, ಮೃತರಾದ ಸಂಬಂಧಿಗಳೊಡನೆ ಸಂಭಾಷಣೆಯೂ, ಇತರರ ಮನೋಭಿಪ್ರಾಯಗಳನ್ನೂ, ಭೂತಭವಿಷ್ಯತ್ ವರ್ತಮಾನಗಳೆಲ್ಲವನ್ನೂ ಸುಲಭವಾಗಿ ತಿಳಿಯಬಹುದು, ಕೇವಲ ಒಂದು ರೂಪಾಯಿಯನ್ನು ಮನಿಯಾರ್ಡರ್ ಮೂಲಕ ಕಳುಹಿಸುವವರಿಗೆ ಈ ಕಾರ್ಯಸಿದ್ಧಿ ಮಂತ್ರವು ಅಂಚೆ ವೆಚ್ಚವಿಲ್ಲದೆ ಕಳುಹಿಸಲ್ಪಡುವುದು ವಿ. ಪಿ ಮಾಡುವುದಿಲ್ಲ ವ್ಯವಸ್ಥಾಪಕ

ಕಾರ್ಯಸಿದ್ಧಿ ಆಶ್ರಮ 211 ವಿಶ್ವೇಶ್ವರ ಪುರಂ

ಬೆಂಗಳೂರು ಸಿಟಿ. (S I

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ ಆ
ಹೊಸ ರಾಶಿ ಅಕ್ಕಿ	3— 4	3— 0
ಹೊಸ ಮುಸ್ಕತಿ	3—10	4— 8
ಗುಡ್ಡ ಸುಗ್ಗಿ	3— 6	3—12
ಊರ ಅವ್ವಲ್ ಬೆಳ್ತಿಗೆ	4— 0	4— 6
ರಂಗೂನು ಬೆ ಗೋ ಗಳ್ಳೆ	6— 4	7— 0
ಎಲ್ಲೂರು ಬೆ ಮು ಗಳ್ಳೆ	4— 4	4— 8
ಗೋದಿ ಗೋಣಿ ಗಳ್ಳೆ	8 — 8	10— 4
ತೊಗರಿ ಗೋಣಿ ಗಳ್ಳೆ	9 —0	9 — 6
ಹುರುಳಿ ಗೋಣಿ ಗಳ್ಳೆ	5— 4	5 —12
ಕಡಲೆ ಗೋಣಿ ಗಳ್ಳೆ	7 — 4	9 — 8
ತೊಗರಿಬೇಳೆ ಗೋಣಿ ಗಳ್ಳೆ	11— 0	15— 8
ಉದ್ದು ಗೋಣಿ ಗಳ್ಳೆ	9— 8	10 — 0
ಹೆಸರು ಗೋಣಿ ಗಳ್ಳೆ	9— 4	9—12
ಊರುಬೆಲ್ಲ ಖಂಡಿ ಗಳ್ಳೆ	30— 0	35— 0
ಉಪ್ಪು ಗೋಣಿ ಗಳ್ಳೆ	4— 8	4— 8
ಕೊಬ್ರಿ ಖಂಡಿ ಗಳ್ಳೆ	60— 0	70— 0
ಕೊಬ್ರಿ ಹಿಂಡಿ ಖಂಡಿ ಗಳ್ಳೆ	28— 0	29— 0
ಎಳ್ಳಿಂಡಿ ಖಂಡಿ ಗಳ್ಳೆ	32 — 8	33—12
ಕೊಬ್ರಿ ಎಣ್ಣೆ ಮುಡಿ ಗಳ್ಳೆ	4 —15	6— 0
ಎಳ್ಳೆಣ್ಣೆ ಮುಡಿ ಗಳ್ಳೆ	7— 0	7— 0
ಚಿಮಣಿಎಣ್ಣೆ ಪೆಟ್ಟಿಗೆ ಗಳ್ಳೆ	6— 5	6— 5
ಮೋರಿಸ ಸಕ್ಕರೆ ಮು ಗಳ್ಳೆ	3— 9	3 — 9
ಮೆಣಸು	2— 6	4— 0
ಸಾಸಿವೆ ಮುಡಿ ಗಳ್ಳೆ	5 — 8	6— 0
ಕಾಳುಮೆಣಸು ಖ ಗಳ್ಳೆ	103— 8	105—
ಯೇಲಕ್ಕಿ ಬೀಜ ಮಣಗಳ್ಳೆ	36— 0	39— 0
ಗೇರುಬೀಜ ಮು. ಗಳ್ಳೆ	8— 8	8 — 10
ಕಚ್ಚಿಣ ಖಂಡಿ ಗಳ್ಳೆ	35— 0	37— 8
ತಾಂಬ್ರತಗಡು ಮ. ಗಳ್ಳೆ	9— 12	9— 14
ತಾಂಬ್ರಪಾತ್ರೆಗಳು ಮ ಗಳ್ಳೆ	12— 8	14— 0
ಚೀನಬೆಳ್ಳಿ ಸೇರು ಗಳ್ಳೆ	17— 8	18— 0
ಹಿತ್ತಾಳೆ ತಗಡು ಮ. ಗಳ್ಳೆ	10— 0	10—
ಪವನು ಗಳ್ಳೆ	22— 8	22— 8
ಹುಣಸೆ ಹುಳಿ ಖಂಡಿ ಗಳ್ಳೆ	20— 0	25— 0
ನೇಟಿವ್ ಕಾಫಿ ಖಂಡಿ ಗಳ್ಳೆ	145— 0	150— 4
ಫಿಬೇರಿ ಕಾಫಿ ಖಂಡಿ ಗಳ್ಳೆ	175— 0	185— 0
ಮಡಿಕೇರಿ ಏಲಕ್ಕಿ	25— 0	26 — 8

ಸ್ತನೋ ಸ್ತೇದಃ

STHANO STHEDAH THE MALAYALA OUSHADHA CO., POST- CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು ಮನುಷ್ಯನ ಹೆಂಗಸೋರ್ವಳನ್ನು ಕಂಡೊಡನೆಯೇ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವು—ಅವುಗಳು ಉಬ್ಬಿ ಗೋಳಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣವಪಸತ.

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ ಸ್ತನೋಸ್ತೇಧಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಕಾಲಿಕ್ಯದಿಂದಲೂ ದಾರುಣವಾದ ಚಿಂತೆಯಿಂದಲೂ ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ ಅವುಗಳು ಜೋಲು ಬಿದ್ದಿದ್ದರೂ ಸರಿಯಾಗಿ ಬೆಳೆಯದೆ ಇದ್ದರೂ ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ, ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆಯಿಂದ ಬೆಳೆಯುವಂತೆಯೂ ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲುದು ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪುಷ್ಟತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು ಇದರಿಂದ ಸಾಧಕ ವಿನಹ ಬಾಧಕವಿಲ್ಲ ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು ಅಂತಹ ಗುಣವನ್ನು ನೀವೂ ಪಡೆಯಿರಿ

ಸ್ತನೋ ಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ 3 ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ 3

ಧರ್ಮಾರ್ಥವಾಗಿ ಸಿಗುವ ಕಿಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ

1. ಮುಟ್ಟುದೋಷ 2 ಸಂತತಿ ಪ್ರತಿಬಂಧಕ, 3 ಧಾತುಪುಷ್ಟಿ, 4 ಲಿಂಗವೃದ್ಧಿ 5 ಸ್ತ್ರೀರೋಗ, 6 ಕ್ಷಯ ಸಂಹಾರಿ, 7 ವಾತರೋಗ

ಅಲಭ್ಯ ಲಾಭ! ಸುವರ್ಣ ಸಂದರ್ಭ!

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ

ತೆಗೆಯುವ ತಾರೀಕು **3-6-1936.** ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ

ಸೋಡ್ತಿಯ ಮೊಬಲಗು: ರೂ. 50,000.

ಒಟ್ಟು ಬಹುಮಾನಗಳ ಸಂಖ್ಯೆ: 1778. ಮೌಲ್ಯ ರೂ. 20,000.

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಮೆನೇಜರ್– ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

ವಿ ಸೂ–ಯಾವ ಕಾರಣದಿಂದಲಾದರೂ ಸೋಡ್ತಿ ತೆಗೆಯುವ ತಾರೀಕನ್ನು ಮುಂದರಿಸೋಣಾಗುವುದಿಲ್ಲ

ಶಾಲಿವಾಹನ ಶಕ ೧೮೫೮ನೆಯ ಯುವ ಸಂವತ್ಸರದ ವೈಶಾಖ ಬ. ೩ ಶನಿವಾರದಿಂದ ವೈಶಾಖ ಬ. ೯ ಶುಕ್ರವಾರದ ವರೇಗಿನ ಪಂಚಾಂಗ.(೧೯೩೬ನೇಯ ವೃಷಭ ಬೇರೆ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
9	ಶನಿ	೪	೪೩	ಜ್ಯೇಷ್ಠ	೪೭	೩೭	*ಬುಧ ಕೃತ್ತಿಕಾ ಪ್ರವೇಶ
10	ರವಿ	೫	೪೩	ಮೂಲ	೪೭	೩೮	
11	ಸೋಮ	೬	೪೪	ಪೂ ಷಾಢ	೪೮	೩೯	
12	ಕುಜ	೭	೫೧	ಉ ಷಾಢ	೪೭	೪೦	
13	*ಬುಧ	೭	೪೮	ಶ್ರವಣಾ	೪೩	೪೧	
14	ಗುರು	೮	೩೪	ಧನಿಷ್ಠ	೪೪	೧	
15	ಶುಕ್ರ	೯	೩೮	ಶತಭಿಷಾ	೪೦	೩	

ಎಥಿಯೋಪಿಯದ ಕಠಿಣ ಅವಸ್ಥೆ!

ಹಬಸಿ ಚಕ್ರವರ್ತಿಯವರು ತಮ್ಮ ದೇಶವನ್ನು ಬಿಟ್ಟರು!!

ಅಡಿಸ್ ಅಬಾಬದಲ್ಲಿ ದಂಗೆ! ಇಟಲಿಯವರು ರಾಜಧಾನಿ ಕಡೆಗೆ ಮುಂದೊತ್ತುತ್ತಿದ್ದಾರೆ!

ತಮಗಿಂತ ಅನೇಕ ಪಾಲು ಹೆಚ್ಚು ಬಲವುಳ್ಳ ಇಟೇಲಿಯಾನರ ಎದುರು ಬಹಳ ಪರಾಕ್ರಮದಿಂದ ಕಾದಾಡಿ ಜನಾಂಗಸಭೆಯ ಮೇಲೆ ಸಂಪೂರ್ಣ ವಿಶ್ವಾಸವಿಟ್ಟ ಹಬಸಿ ಚಕ್ರವರ್ತಿಯರು ಜನಾಂಗಸಭೆಯು ಸಂಧಿಗ್ಧ ಸಮಯದಲ್ಲಿ ಅವರ ಕೈಬಿಡಲು ಭಯಂಕರ ಆಧುನಿಕ ಯುದ್ಧೋಪಕರಣಗಳಿಂದ ಮುಂದೆ ಹಾಯುವ ಇಟೇಲಿಯಾನರನ್ನು ತಡೆಯಲಿಕ್ಕೆ ಸಾಧ್ಯವಾಗದೆ, ಸುಮ್ಮನೆ ಯುದ್ಧದಲ್ಲಿ ಪ್ರಾಣ ಕಳಕೊಳ್ಳುವ ಬದಲಾಗಿ ಶಾಂತರೀತಿಯಿಂದಲೂ, ಇತರ ಯಾವತ್ತೂ ಬಗೆಗಳಿಂದಲೂ ಜನಾಂಗಸಭೆಯ ಮೂಲಕ ತನ್ನ ದೇಶರಕ್ಷಣೆಯನ್ನು ಮಾಡುವ ಉದ್ದೇಶದಿಂದ ತನ್ನ ಪತ್ನೀ ಪುತ್ರ ಪರಿವಾರದೊಡನೆ ಸ್ವದೇಶವನ್ನು ತ್ಯಜಿಸಿ ಪಾಶ್ಚಾತ್ಯಕ್ಕೆ ಹೊರಟಿರುವರು ಇಟೇಲಿಯಾನರು ಅಡಿಸ್ ಅಬಾಬದ ಹತ್ತಿರದಲಿದ್ದಾರೆ ರಾಜಧಾನಿಯನ್ನು ತ್ಯಜಿಸುವ ಮೊದಲು ತನ್ನ ಅರಮನೆಯನ್ನು ಸಮಸ್ತ ನಗರನಿವಾಸಿಗಳಿಗೆ ಒಪ್ಪಿಸಿಬಿಟ್ಟರು ಅವರು ಅರಮನೆಯನ್ನು ನುಗ್ಗಿ ಅದನ್ನು ಸೂರೆಗೊಂಡರು ಹಬಸಿಯ ರಕ್ಷಣೆಗೆ ಒದಗಿ ಬಾರದೆ ಹೋಯಿತು, ಜನಾಂಗಸಭೆ ಆದರೆ ಜನಾಂಗಸಭೆ ಮಾಡಿದೇನು? ಕೇವಲ ಭಾವಪೂರ್ಣ ಭಾಷಣಗಳಲ್ಲೂ ಸಮಿತಿಗಳ ರಚನೆಯಲ್ಲೂ ಸಮಯ ಕಳೆದದು ಇಟೇಲಿಯು ಒಂದೊಂದೆ ಪ್ರಾಂತ್ಯವನ್ನು ಹಿಡಿದು ಮುಂದೊತ್ತುವ ಸಮಯ ಇವರ ಕೆಲವು ಚಿಕ್ಕ ಪುಟ್ಟ ಶಿಕ್ಷೆಗಳನ್ನು ಇಟೇಲಿಯ ಮೇಲೆ ಜ್ಯಾರಿ ಮಾಡಿದರು ಆದರೆ ಅವುಗಳಿಂದ ಹಬಸಿಯರಿಗೆ ಯಾವ ಉಪಕಾರವೂ ಆಗಲಿಲ್ಲ ಇಟೇಲಿಯು ಸಂಪೂರ್ಣ ಎಥಿಯೋಪಿಯಾವನ್ನು ನುಗ್ಗುವ ತನಕ ಬಡಿ, ಸಮಿತಿಗಳ ಸಭೆಗಳನ್ನು ನಡಿಸುವುದರಲ್ಲಿ ಜನಾಂಗಸಭೆಯು ಸಮಯವನ್ನು ಕಳೆಯಿತು ಹಬಸಿ ಚಕ್ರವರ್ತಿಯವರು ಧಾರಿತೋಚದೆ ಕೊನೆಗೆ ತನ್ನ ಪ್ರಾಣರಕ್ಷಣೆಗಾಗಿ ತನ್ನ ದೇಶವನ್ನು ತ್ಯಜಿಸಬೇಕಾಯಿತು ಚಕ್ರವರ್ತಿಯರು ದೇಶರಕ್ಷಣೆಗಾಗಿ ಮಾಡಿದ ಹಲವು ಪ್ರಯತ್ನಗಳು ನಿಷ್ಫಲವಾದುವು ಅವರ ಅನೇಕ ನಾಯಕರು ದೇಶದ್ರೋಹಿಗಳಾದರ ದೇಶದ ಸರಕಾರದ ಅಧಿಕಾರವನ್ನು ಮಂತ್ರಿಮಂಡಲದಲ್ಲಿ ಇರಿಸಿ, ಹಬಸಿ ಚಕ್ರವರ್ತಿಯರು ನಗರವನ್ನು ತ್ಯಜಿಸಿದರು ಅಡಿಸ್ ಅಬಾಬದಲ್ಲಿ ಬಹಳ ಕ್ಷೋಭೆಯುಂಟಾಗಿದೆ ಅಲ್ಲಲ್ಲಿ ದಂಗೆಗಳು ನಡೆಯುತ್ತಿದ್ದಾವೆ ಕಳ್ಳಕಾಕರ ಹಾವಳಿ ಭಯಂಕರ ರೀತಿಯಲ್ಲಿ ನಡೆಯುತ್ತದೆ ಅಡಿಸ್ ಅಬಾಬದಲ್ಲಿರುವ ಬಹೀರ್ ಜನಾಂಗಿಕ ವಾಸಸ್ಥಳಗಳನ್ನು ರಕ್ಷಿಸುವ ಏರ್ಪಾಡುಗಳಾಗಿವೆ ಆದರೂ ದಂಗೆಕಾರರು ಆಗಾಗ್ಗೆ ಬಹಳ ತೊಂದರೆ ಕೊಡುತಿದ್ದಾರೆ ದಂಗೆಯಲ್ಲಿ ಅನೇಕರು ಮಡಿದಿರುವರು ಭಯಂಕರ ಕಳ್ವ್ಯಾಟಕೆಯು ನಡೆದಿರುತ್ತದೆ

ಹಬಸಿ ಚಕ್ರವರ್ತಿಯವರು ಅಡಿಸ್ ಅಬಾಬದಿಂದ ಜಬೌತಿಗೆ ತೆರಳಿ ಅಲ್ಲಿಂದ ಬ್ರಿಟಿಷ ನಾವೆಯೊಂದರ ಮೇಲೆ ಏಡಿನ್ನಿಗೆ ಬಂದು ಅಲ್ಲಿಂದ ಇಂಗ್ಲಾಂಡಿಗೆ ತೆರಳುವರು ದೇಶಬಿಟ್ಟು ಹೋಗುವ ಸಮಯ ಸಾಧಾರಣ ಹತ್ತು ಲೋರಿಗಳು ತುಂಬುವಷ್ಟು ಸಾಮಾನನ್ನು ತೆಗೆದುಕೊಂಡು ಹೋಗಿರುವರು. ಇವರೊಡನೆ ಬಹಳ ಶೌರ್ಯದಿಂದ ರಣರಂಗದಲ್ಲಿ ಕಾದಾಡಿದ ಕೆಲಮಂದಿ ದೇಶಪ್ರೇಮಿ ನಾಯಕರು ಇರುವರು

ಎಥಿಯೋಪಿಯದ ಚಕ್ರವರ್ತಿಯರ ಸ್ಥಿತಿ ಹೀಗಾಗಿರುವಾಗ ಆಂಗ್ಲೇಯ ಬಹಿರ್ವ್ಯವಹಾರ ಮಂತ್ರಿಯರಾದ ಮಿ ಅಂತೊನಿ ಎಡೆನ್ನರ ಶಾಂತಿರಕ್ಷಣೆ ಕುರಿತಾಗಿ ಒಂದು ಭಾಷಣವಿತ್ತರು. ಆದರೆ ಇವರ ಭಾಷಣದಲ್ಲಿ ಇಟೇಲಿಯ ಮೇಲೆ ಈಗಿನ ವರ್ತನೆಗಾಗಿ ಯಾವ ತರದ ಶಿಕ್ಷೆ ವಿಧಿಸಲಾಗುವುದೆಂದು ವ್ಯಕ್ತವಾಗುವುದಿಲ್ಲ ಹಬಸಿ ಚಕ್ರವರ್ತಿಯರು ತನ್ನ ದೇಶವನ್ನು ತ್ಯಜಿಸಿದುದರಿಂದ ಜನಾಂಗಸಭೆಯ ಕಾರ್ಯವು ಇನ್ನೂ ಕಷ್ಟತರದ್ದಾಗಿದೆ ಈ ಕುರಿತಾಗಿ ಲಂಡನ್ ಪೆರಿಸ್ ರೋಮಿಗೂ ಡಿಪ್ಲೊಮೇಟಿಕ್ ಮಾತುಕತೆಗಳು ನಡೆದಿವೆ ಹಬಸಿ ಚಕ್ರವರ್ತಿಯವರು ದೇಶವನ್ನು ತ್ಯಜಿಸಿದ ದರಿಂದ ಫ್ರಾನ್ಸು ಬಹಳ ಸಂತೋಷಪಡುತ್ತಿದ್ದಂತೆ ಕಾರಣ ಇಟೇಲಿ ಹಬಸಿ ಕಲಹ ನಿವಾರಣೆಯಾದುದರಿಂದಾಗಿ, ಇನ್ನೂ ಮುಂದಕ್ಕೆ ಯುರೋಪಿನ ಲೋಕಾರ್ನೊ ಕಲಹದ ನಿವಾರಣೆಯಲ್ಲಿ, ಜರ್ಮನಿಯನ್ನು ಸದೆಬಡಿಯಲು ಇಟೇಲಿಯ ಮೈತ್ರಿಯು ಸಿಗುವುದೆಂಬ ಭಾವನೆಯಿಂದ ಇವರ ಸಂತೋಷಪಟ್ಟಿರಬೇಕು. ಜನಾಂಗಸಭೆಯು ಅನೇಕ ಪಾಮುಖ್ಯ ಜನಾಂಗಗಳ ಪ್ರತಿನಿಧಿಗಳು ಇದಿದಂತೆ ಅವರೆಲ್ಲಾ ನಿಜವಾಗಿಯೂ ಜನಾಂಗ ಸಭೆಯ ಗೌರವವನ್ನು ರಕ್ಷಿಸಲು ಇಚ್ಛಿಸುವುದಾದರೆ ಇಟೆಲಿಯ ಅಕ್ರಮಣಕ್ಕೆ ತಕ್ಕ ಪ್ರಾಯಶ್ಚಿತ್ತ ನಡೆಯಲೇಬೇಕು ಯಾವ ತರದ ಪ್ರಾಯಶ್ಚಿತ್ತ ನಡೆಯುವುದೆಂದು ನೋಡಲಿದೆ ಬದಲಾಗಿ ಇಟಲಿಯ ತನ್ನ ಪರಿಶ್ರಮದ ಫಲವಾಗಿ ಇತರ ಜನಾಂಗಗಳೊಡನೆ ಕೆಲವು ಒಪ್ಪಂದದ ಕರಾರುಗಳನ್ನು ಮಾಡಿಸಿ ಎಥಿಯೋಪಿಯಾದಲ್ಲಿ ಇಟಲಿಯಾನ ಪ್ರಭುತ್ವವನ್ನು ಸ್ಥಾಪಿಸುವುದಾದರೆ, ಜನಾಂಗಸಭೆಯು ಕುಸಿದು ಬೀಳುವುದು ಪ್ರಪಂಚದ ಜನರಲ್ಲಿ ಇದರಲ್ಲಿರುವ ವಿಶ್ವಾಸವು ತಪ್ಪಿ ಹೋಗುವುದು. ಕೊನೆಯ ಪರಿಣಾಮವಾಗಿ, ಸಮಸ್ತ ಪ್ರಪಂಚವು ರಣಾಗ್ರವಾಗಿ ಜನಾಂಗಗಳ ಒಬ್ಬರನ್ನೊಬ್ಬರು ಕತ್ತು ಹಿಸುಕುವ ಸಮಯವು ಬರುವುದು ಆದರೆ ಫ್ರೆಂಚರ ಕಾರವು ನಿಶಲಿಪ್ಪರ ಕೈಗಳಿಗೆ ಸೇರಿದುದರಿಂದ ಅಪರಾಧಿಗೆ ತಕ್ಕ ಪ್ರಾಯಶ್ಚಿತ್ತವು ನಡೆಯದೆ ಇರದ ಎಂದು ಒಂದು ಭಾವನೆ

ಇಟೆಲಿಯಾನರು ಅಡಿಸ್ ಅಬಾಬವನ್ನು ಸೇರಿದರು

ಇಟೆಲಿಯಾನರು ಮೊನ್ನೆ ತಾ ೫ರಲ್ಲಿ ಅಡಿಸ್ ಅಬಾಬವನ್ನು ಸೇರಿದರು. ಪ್ರಸ್ತುತವಾಗಿ ರೋಮಿನ ಗವರ್ನರರಾಗಿದ್ದ ಈಗ ಸೇನಾನಾಯಕರಾಗಿರುವ ಬೋಟಾಯಿ ಎಂಬವರು ರಾಜಧಾನಿಯನ್ನು ಸೇರಿದರು ಇಟಲಿಯಾನರ ದಂಡನಾಯಕರಾದ ಬೊಡೊಗ್ಲಿಯೊರವರು ಬಿಳಿ ಅಶ್ವದ ಮೇಲೆ ಕುಳಿತು ನಗರವನ್ನು ಸೇರಿದರು ಸಾಧಾರಣ ೨೫,೦೦೦ ಸೈನಿಕರು ಅಡಿಸ್ ಅಬಾಬವನ್ನು ನುಗ್ಗಿರುವರು.

ಜರ್ಮನ್ ಶಾಂತಿ ಪ್ಲೇನು.

ಜರ್ಮನ್ ಶಾಂತಿಯ ಕುರಿತು ಬ್ರಿಟಿಷ ಸೂಚನೆಗಳು ಜರ್ಮನಿಯ ಬರ್ಲಿನಿಗೆ ಕಳುಹಿಸಲಾಗಿವೆ. ಇದರಲ್ಲಿ ಜರ್ಮನ್ ಸರಕಾರದೊಡನೆ ಅನೇಕ ಪ್ರಶ್ನೆಗಳು ಕೇಳಲಾಗಿವೆ. ಶಾಂತಿಸ್ಥಾಪನೆ ಬಗ್ಗೆ ಬ್ರಿಟನು, ಫ್ರಾನ್ಸು, ಬೆಲ್ಜಿಯುಮ್ ಮತ್ತು ಜರ್ಮನಿ ಇವರೊಳಗೆ ಮಾತುಕತೆಗಳು ಬೇಗನೆ ಪ್ರಾರಂಭವಾಗುವುವು.

ಅಡಿಸ್ ಅಬಾಬ ದಿನ.

ಹಬಸಿಯರೊಡನೆ ಸಸಿಕರ ಸಡಲ, ಮೇ ತಿಂಗಳ ೯ನೆ ದಿನವನ್ನು ಅಡಿಸ್ ಅಬಾಬ ದಿನವನ್ನಾಗಿ ಆಚರಿಸಬೇಕೆಂದು ರಾಷ್ಟ್ರ ಸಭಾಪತಿ ಶ್ರೀ ಜವಾಹರಲಾಲ ನೆಹರುಗಳವರು ಸಮಸ್ತ ಹಿಂದೂಸ್ಥಾನದೊಡನೆ ವಿನಂತಿ ಮಾಡಿರುವರು

ಇಟೆಲಿಗೆ ಈಗ ಶಾಂತಿ ಬೇಕಾಗಿದೆ

ಮುಸಲೀನಿಯ ಉದ್ದೇಶವು ಪೂರ್ತಿಗೊಂಡಿರಲು, ಅವನಿಗೆ ಈಗ ಶಾಂತಿ ಬೇಕಾಗಿದೆ ಇನ್ನು ತಾನು ಯಾರ ಗೋಜಿಗೂ ಹೋಗುವುದಿಲ್ಲವೆಂದು ಈತನು ಭರವಸೆ ಕೊಡುತ್ತಿದ್ದಾನೆ ಆದರೆ ಕಷ್ಟಪಟ್ಟು ವಶೀಕರಿಸಿದ ಎಥಿಯೋಪಿಯಾದಲ್ಲಿ ಯಾರಿಗೂ ಸ್ಥಳ ಕೊಡಲಾರೆನೆಂದು ಈತನ ದೃಢವಾದ ಮಾತು ಇಟೆಲಿಯಾನ ಸಾಮ್ರಾಜ್ಯದ ಅಡಿಯಲ್ಲಿ ಎಥಿಯೋಪಿಯಾವನ್ನು ಒಂದು ಆಶ್ರಿತ ರಾಜ್ಯವನ್ನಾಗಿ ಮಾಡುವನಂತೆ

ವಿದೇಶ ವಾರ್ತೆಗಳು

ಫ್ರಾನ್ಸಿನ ಚುನಾವಣೆಯು ಬಹಳ ಶಾಂತತೆಯಿಂದ ನಡೆಯಿತು ಈ ವರೆಗಿನ ಫಲಿತಾಂಶವು ಹೀಗಿದೆ, ೧೪೬ ಸೋಸಲಿಷ್ಟರು ೧೧೬, ರೆಡಿಕಲ್ ಸೋಸಿಲಿಷ್ಟರು, ಕೊಮ್ಯುನಿಷ್ಟರು, ೧೧೪ ಸೆಂಟರಿಷ್ಟ, ೧೨೪ ರೈಟಿಷ್ಟ, ಈ ಭಾರಿಯ ಸರಕಾರವು ಸೋಷಲಿಷ್ಟ ಸಂಗದ (ಸಮತಾವಾದಿಗಳ) ಇವರಿಂದ ರಚನೆ

ಜರ್ಮನಿಯರು ಚೀನಾ ಸರ್ಕಾರಿ ಹಾಕಿದ ಮೂರು ನೌಕೆಗಳಿಗೆ, ೧೯೧೪ರಲ್ಲಿ ಯುದ್ಧಮಾಡಿದ ಮೂರು ಪ್ರಾಮುಖ್ಯ ಯುದ್ಧ ನಾವೆಗಳ ಹೆಸರು ಕೊಟ್ಟಿರುವರು ಈ ನೌಕೆಗಳು, ಪ್ರಯಾಣದ ಬಗ್ಗೆ ಇಲ್ಲಿಗೆ ಹಾಕಲ್ಪಟ್ಟದ್ದರೂ, ಇವುಗಳನ್ನು ಸಮಯ ಒದಗಿದಾಗ, ಯುದ್ಧ ನಾವೆಗಳಾಗಿ ಮಾರ್ಪಾಟುಮಾಡುವ ಏರ್ಪಾಡ ಇವುಗಳಲ್ಲಿವೆ

ಬೊಂಬಾಯಿಯ ತಿಲಕಪನ್ನ ರಾಷ್ಟ್ರೀಯ ಕನ್ಯಾಶಾಲೆಯ ವಿದ್ಯಾರ್ಥಿನಿಯರು ಬಾರ್ಶಿಕೋತ್ಸವ ಸ್ವಾಲಾ ಸಮಾರಂಭದ ವೇಳೆಯಲ್ಲಿ ಅಭಿನಯಿಸಿದ ಕೋಲಾಟದ ದೃಶ್ಯ

ನಕ್ಷತ್ರಗಳು ಭವಿಷ್ಯವನ್ನು ಸೂಚಿಸುತ್ತವೊ?

ನಕ್ಷತ್ರಗಳನ್ನು ಸರಿಯಾಗಿ ಪರಿಶೀಲಿಸಿ ಭವಿಷ್ಯವನ್ನು ವಿನಾ ತಪ್ಪುಗಳಿಲ್ಲದೆ ಹೇಳಿ ಬಹಳ ಪ್ರಖ್ಯಾತಿಹೊಂದಿದ, ಹಂಗೇರಿಯಾ ಪ್ರೆಕ ವಿಶ್ವವಿದ್ಯಾನಿಲಯದ, ಪ್ರೊಫೆಸರ್ ಹೆಂಕೋರವರಿಗೆ, ಪೆರಿಸಿನ ಒಂದು ಪತ್ರಿಕೆಯಿಂದ ಒಂದು ಮಹಾ ಉದ್ಯೋಗವು ದೊರಕಿರುತ್ತದೆ

ಪ್ರೊ। ಹೆಂಕೋರವರ, ಪ್ರಪಂಚದ ವಿವಿಧ ಭಾಗಗಳಲ್ಲಿ ನಡೆದ ಭೂಕಂಪಗಳನ್ನೂ, ಹವಾಗುಣಗಳನ್ನೂ ಭವಿಷ್ಯವಾಗಿ ಹೇಳಿ, ಅವುಗಳೆ ಅವರು ಹೇಳಿದ ಸಮಯದಲ್ಲಿ ನಡೆದು ಅನೇಕ ವರ್ಷಗಳಿಂದ ಭವಿಷ್ಯ ಜ್ಞಾನ ವಿಚಾರದಲ್ಲಿ ಬಹಳ ಕೀರ್ತಿ ಪಡೆದಿರುವರು ಯಾವತ್ತ ಘಟನೆಗಳ ಸಮಯವನ್ನು ಇವರು ಸರಿಯಾಗಿ ಹೇಳಬಲ್ಲರು ಅದರಿಂದ ಅಲ್ಲಿನ ನಿವಾಸಿಗಳು ಇವರನ್ನು ಒಂದು ಮಹಾ ದೈವ ವ್ಯಕ್ತಿಯಂತೆ ಮನ್ನಿಸುತ್ತಿದ್ದಾರೆ ಪ್ರತಿ ತಿಂಗಳ ಹವಾಗುಣವನ್ನು ನಕ್ಷತ್ರಗಳ ಪರಿಶೀಲನೆಯಿಂದ ಭವಿಷ್ಯವಾಗಿ ಹೇಳಬಲ್ಲರು. ಅದಲ್ಲದೆ ನಕ್ಷತ್ರಗಳು ಮಾನವನ ಜೀವಮಾನವನ್ನು ಪ್ರೇರೇಪಿಸುತ್ತವೆಂದು ಪ್ರೊ ಹೆಂಕೋರವರ ಮಾತು ಈ ಕುರಿತು ಅನೇಕ ಶೋಧನಾಕಾರ್ಯಗಳನ್ನು ನಡೆಯಿಸಿ ಹಿಂದಿನ ಕಾಲದಲ್ಲಿ ನಡೆದ ಮಹಾಯುದ್ಧ ಇತ್ಯಾದಿ ಘಟನೆಗಳನ್ನು ಆಗಿನ ಕಾಲದ ನಕ್ಷತ್ರಗಳ ಸ್ಥಿತಿಗಳನ್ನು ಪರಿಶೀಲಿಸಿ, ಅವರು ಇಷ್ಟು ದೃಢವಾದ ನಂಬಿಕೆ ಹೊಂದಿರುತ್ತಾರೆ ನಕ್ಷತ್ರಗಳನ್ನು ಪರಿಶೀಲಿಸಿ ಇವರಾಡುವ ಭವಿಷ್ಯಗಳು ಒಂದಿಷ್ಟು ತಪ್ಪಿಲ್ಲದೆ ನಡೆಯುತ್ತವೆ

ಜರ್ಮನಿಯ ಶಾಂತಿ ಕುರಿತಾಗಿ ಈ ಕೆಳಗಿನ ೫ ಪ್ರಶ್ನೆಗಳು, ಫ್ರಾನ್ಸು ಜರ್ಮನಿಯೊಡನೆ ಕೇಳುವುದಂತೆ. ೧ ಜರ್ಮನಿಯು ಜನಾಂಗಸಭೆಯನ್ನು ಸೇರಬೇಕಾದರೆ ಅದರ ಕ್ರಮಗಳನ್ನು (ಕೊವೆನೆಂಟುಗಳನ್ನು) ಬದಲಾಯಿಸಲು ಇಚ್ಛಿಸುತ್ತದೆಯೆ? ೨ ಡಾನ್ಸಿಗ್ ಶಾಸನ ಮೊದಲು ಪೂರ್ವ ಪರಿಸ್ಥಿತಿಯಲ್ಲಿರುವುದು, ಆಸ್ಟ್ರಿಯವು ಸ್ವತಂತ್ರವಾಗಿರುವುದಕ್ಕೆ ಜರ್ಮನಿಯು ಒಪ್ಪಿಗೆ ಇರುವುದೆ? ೩ ಅಂತರಿಕ್ಷ ಬಲಕ್ಕೆ ಅಂತರಿಕ್ಷ ಒಪ್ಪಂದದ ಮೇರೆಗೆ ಒಂದು ನಿಶ್ಚಿತಿಯನ್ನು ಹಾಕಲು ಜರ್ಮನಿಗೆ ಒಪ್ಪಿಗೆ ಇರುವುದೆ? ೪ ಜರ್ಮನಿಯು ಪೂರ್ವ ಗಡಿಯಲ್ಲಿರುವ ದೇಶಗಳ ಮೇಲೆ ಅಧಿಕ್ರಮಿಸುವುದಂತೆ, ಆ ದೇಶಗಳು ಹೊರಗಿನ ರಾಷ್ಟ್ರಗಳೊಡನೆ ಒಪ್ಪಂದ ಬೆಳೆಸಲು ಜರ್ಮನಿಯು ಸಮ್ಮತಿಸಿರುವುದೆ? ೫ ಇನ್ನು ಮುಂದೆ ಜರ್ಮನಿಯು ಏಕ ಪಕ್ಷದಿಂದ ವರ್ತಿಸುವುದನ್ನು ತಿರಸ್ಕರಿಸಲು ಸಿದ್ಧವಿದೆಯೆ?

ಸಾಪ್ತಾಹಿಕ ಕಥೆ:—

"ಕೈಯಲ್ಲಿ ಕಾಸಿಲ್ಲದಾಗ"

ಲೇಖಕ:— ಶ್ರೀ| "ರಸಿಕರಂಜನ"

'ನನಗೆ ಒಂದು ಹೊಸ ರೇಶ್ಮೆ ಸೀರೆ ತಂದು ಕೊಡಿರೆಂದು ಎಷ್ಟು ಸಲ ಬಾಯಿ ಬಡಿದು ಕೊಂಡೆನೋ!' ನೀರೆ ಉದ್ಗಾರ ತೆಗೆದಳು.

"ಒಂಭತ್ತು ಸಾವಿರದ ಒಂಭೈನೂರ ತೊಂಭತ್ತೊಂಭತ್ತು ಸಲ, ..." ಎಂದೆ.

'ಸಾಕು, ಬಿಡಿ, ನಿಮ್ಮ ತಮಾಷೆ! ಇಷ್ಟು ಸಲ ಕೇಳುವಾಗ ಒಂದು ಸಾದಾ ಬೆಂಗಳೂರು ಸಿಲ್ಕ್ ಸಾರಿಯನ್ನಾದರೂ ತಂದು ನನ್ನ ಮೂಗಿನ ಮೇಲೆ ಎಸೆಯಬಾರದಿತ್ತೇ?' ನೀರೆಯ ಸವಾಲು.

'ಅಹಾ! ಅಷ್ಟು 'ಸುಕೋಮಲ,' 'ಸುಲಲಿತ,' 'ಸುಮನಸ್ಸದೃಶ'ವಾದ ಈ ಮೂಗಿನ ಅವಸ್ಥೆಯೇನಾಗುತ್ತಿತ್ತೋ ಆಗ! ಪಟ್ಟೆ ಪೀತಾಂಬರವಾದರೆ ಅಷ್ಟೊಂದು ಹೆದರಲು ಕಾರಣವಿಲ್ಲ!' ನನ್ನ ಸೂಚನೆ.

'ಹೌದು, ಸಾದಾ ರೇಶ್ಮೆ ಸೀರೆಗಾಗಿ ಕೇಳಲು ಒಂದು ನಾಲಿಗೆ ಸಾಲದಾಯಿತು; ಇನ್ನು ಪಟ್ಟೆ ಪೀತಾಂಬರಕ್ಕಾಗಿ ಕೇಳಲು ಎಷ್ಟು ನಾಲಿಗೆ ಪಡೆಯಬೇಕಾಗುವುದೋ!' ನೀರೆ ವ್ಯಸನದಿಂದ ಎಂದಳು.

'ಬೇಡ, ಮಹಾರಾಯತಿ! ಇದ್ದ ಒಂದು ನಾಲಿಗೆಯನ್ನೇ ಗಿಡ್ಡ ಮಾಡಿಕೊಂಡರೆ ಅಗಲಬಹುದೆಂದು ತೋರುತ್ತಿರುವಾಗ, ದಯಮಾಡಿ ಇನ್ನೂ ಹೆಚ್ಚು ನಾಲಿಗೆಗಳನ್ನು ಪಡೆಯುವ ಪ್ರಯತ್ನ ಮಾಡಬೇಡ! ನಿನ್ನ ಉಪಕಾರ!' ನಾನು ವ್ಯಂಗ್ಯದಿಂದ ಎಂದೆನು.

'ಸಾಕು, ನಿಮ್ಮ ಕುಚೋದ್ಯ! ಯಾವಾಗ ನೋಡಿದರೂ ಹೀಗೆಯೇ ಮಾತಾಡಿ ಮರೆಯಿಸುವಿರಿ. ನಿಜವಾಗಿ ಹೇಳಿ, ನನಗೆ ಸೀರೆಯನ್ನು ಯಾವಾಗ ತಂದು ಕೊಡುತ್ತೀರಿ?' ನೀರೆಯ ಅಧಿಕಾರವಾಣಿ.

'ನೀರಾ! ಸ್ವಲ್ಪ ಸೈರಿಸು. ನಿನ್ನ 'ತೀರಿದ ಉಡುಗೊರೆಯ ಪ್ರಕರಣ'*ದಿಂದ ಪಡೆದ ಪೆಟ್ಟಿನಿಂದ ನನಗೆ ಇನ್ನೂ ಪೂರ್ತಿ ನೇರವಾಗಿ ನಿಲ್ಲುವಂತಾಗಲಿಲ್ಲ. ಈಗಾಗಲೇ, ಕೈಯಲ್ಲಿ ಕಾಸಿಲ್ಲದಾಗ, 'ಸೀರೆ, ಸೀರೆ'ಯೆಂದು ನನ್ನ ಪ್ರಾಣವನ್ನು ಹೀರಬೇಡ!' ನನ್ನ ಪ್ರಾರ್ಥನೆ.

'ಹೌದು, ನಿಮ್ಮ ತೀರಿದ ಉಡುಗೊರೆಯಿಂದ ನಾನು ಭಾರಿ ಏರಿಹೋಗಿರುವೆನು. ಅಂತಹ ಉಡುಗೊರೆಯನ್ನು ಮಾಡಿ, ಪಾಪ, ಪೂರಾ ಸೋತುಹೋಗಿರುವಿರಿ! ನಿಮ್ಮ ಈ ಪೊಳ್ಳು ಮಾತುಗಳಿಂದ ಯಾರು ಮೋಸ ಹೋದಾರು!' ......

'ಅದರಿಂದಾಗಿಯೇ ಅಷ್ಟೊಂದು ಸೋಲ ದಿದ್ದರೂ, ಆಮೇಲಿನ ನನ್ನ ದುಡಿತವಾದರೂ ನಮ್ಮ ನಿತ್ಯದ ಖರ್ಚಿಗೆ ತಕ್ಕಷ್ಟೇ ಆಗಿರುವುದರಿಂದ, ಅಂದು ಮಾಡಿದ ಅಲ್ಪಸ್ವಲ್ಪ ಸಾಲವು ಇನ್ನೂ ಹಾಗೆಯೇ ಉಳಿದಿದೆ. ಅದರ ಮೇಲೆ ತಿರುಗಿ ಸೀರೆಗಾಗಿ ಸಾಲಮಾಡಿದರೆ ಹೇಗಾದೀತು, ನೀರಾ? ನೀನೇ ಯೋಚಿಸಿ ನೋಡು,' ನಾನು ವ್ಯಕ್ತಪಡಿಸಿದೆ.

'ಸಾಲಮಾಡಿದರೆ ಹೇಗಾದೀತು ಎಂದಾದರೆ, ನಗದಿಗೇ ತಂದುಕೊಡಿ ಸೀರೆಯನ್ನು; ನನಗೇನು, ಕಡ ತಂದುದಕ್ಕೆ ಒಂದು ಬಣ್ಣ ಹೆಚ್ಚು, ನಗದಿಗೆ ತಂದುದಕ್ಕೆ ಒಂದು ಬಣ್ಣ ಕಡಿಮೆ ಎಂದಿದೆಯೇ?' ನೀರೆಯ ವಾದ.

'ಕೈಯಲ್ಲಿ ಕಾಸಿಲ್ಲದಾಗ ನಗದಿಗೆ ಹೇಗೆ ತರಲಿ?' ನನ್ನ ದೀನವಾಣಿ.

'ಕೈಯಲ್ಲಿ ಕಾಸಿಲ್ಲವಾದರೆ ನೀವು ದಿನಾಲೂ ಸಿಗರೆಟ್ ಹೇಗೆ ಕೊಂಡುಕೊಳ್ಳುತ್ತೀರಿ? ಎರಡು ದಿನಕ್ಕೊಮ್ಮೆ ಸೆಲೂನಿಗೆ ಹೋಗಿ ಗಡ್ಡ ಹೇಗೆ ತೆಗೆಯಿಸಿಕೊಳ್ಳುತ್ತೀರಿ? ಏಳು ದಿನಕ್ಕೊಮ್ಮೆ ಬಟ್ಟೆ ಹೇಗೆ ಧೋಬಿಗೆ ಕೊಡುತ್ತೀರಿ? ಸ್ನೇಹಿತರಿಗೆ ಕರೆದುಕೊಂಡು ಹೊಟೆಲಿಗೆ ಹೇಗೆ ಹೋಗುತ್ತೀರಿ? ಶಾಲೆ-ಕಾಲೇಜು, ಸಭೆ-ಸಂತೆಗಳಿಗೆ ವಂತಿಗೆ-ವರಾಡಗಳನ್ನು ಹೇಗೆ ಕೊಡುತ್ತೀರಿ?' ನೀರೆಯ ಬಾಯಿ, ಕಣ್ಣು, ಮೂಗು, ಕಿವಿಗಳಿಂದ ಕಿಡಿಗಳು ಹಾರಿದುವು.

'ನೀರಾ! ನೀರಾ!! ತಾಳ್ಮೆ! ತಾಳ್ಮೆ!! ಸಿಟ್ಟಾಗದಿದ್ದರೆ ಹೇಗೆಂದು ಹೇಳುವೆನು, ಕೇಳು: ನಿನಗೆ ದಿನಾಲೂ ಮುಡಿಯುವುದಕ್ಕೆ ಹೂಗಳನ್ನು ಹೇಗೆ ತಂದುಕೊಡುತ್ತೇನೆ? ನಿನ್ನನ್ನು ಎರಡು ದಿನಕ್ಕೊಮ್ಮೆ ಹಲ್ಲುನೋವಿಗಾಗಿ ದಂತವೈದ್ಯರಲ್ಲಿ ಹೇಗೆ ಕೊಂಡೊಯ್ಯುತ್ತೇನೆ? ಏಳು ದಿನಕ್ಕೊಮ್ಮೆ ಟಾಕೀಸಿಗೆ ಹೇಗೆ ಕರೆದುಕೊಂಡು ಹೋಗುತ್ತೇನೆ? ಆಗಿಂದಾಗ ಪೌಡರ್, ಸ್ನೋ, ರಿಬ್ಬನ್ ಮುಂತಾದುವನ್ನು ಹೇಗೆ ತಂದುಕೊಡುತ್ತೇನೆ? ಅವರ ಇವರ ಮದುವೆ, ಪ್ರಸ್ತ, ಹುಟ್ಟಿದ ಹಬ್ಬ ಮುಂತಾದುವಕ್ಕೆ ಉಡುಗೊರೆಗಳನ್ನು ಹೇಗೆ ಒದಗಿಸಿಕೊಡುತ್ತೇನೆ, ನೀರಾ? ಹಾಗೆಯೇ ಎಲ್ಲಾ!' ಸ್ವಲ್ಪ ದಾಕ್ಷಿಣ್ಯ ಬಿಟ್ಟು, ಆದರೂ ಸಮಾಧಾನದಿಂದಲೇ ಕಾರಿದೆ. (ಈಚೆಗೆ ನನ್ನ ಮುಖದ ಕಡೆ ಸ್ವಲ್ಪ ನೋಡಿ: ಒಂದು ಕಣ್ಣನ್ನು ಸ್ವಲ್ಪ ಹಾರಿಸುತ್ತಿದ್ದೇನೆ.)

'ಓಹೋ, ನಿಮ್ಮ ಕಣ್ಣಿಗೆ ಹೋಗುವುದೆಲ್ಲಾ ನನ್ನ ವೆಚ್ಚವೇ!' ನೀರೆ, ಸ್ವಲ್ಪ ಅಪ್ರತಿಭಳಾಗಿ ದೂರಿದಳು.

'ಒಬ್ಬರ ವೆಚ್ಚ ಒಬ್ಬರ ಕಣ್ಣಿಗೆ ಹೋಗುವುದು ಲೋಕಾಚಾರವಲ್ಲವೇ, ನೀರಾ?' ನಾನು ಶಾಂತನಾಗಿಯೇ ಎಂದೆ.

'ಆದರೆ ನಿಮ್ಮದೆಲ್ಲಾ ದುರ್ವ್ಯಯವೇ,' ನೀರೆಯ ಖಂಡಿತವಾಕ್ಯ.

'ಅನುಮಾನವೇಕೆ? ನಿನ್ನದೆಲ್ಲಾ ಸದ್ವ್ಯಯವೇ,' ನನ್ನ ಸಮರ್ಥನೆ.

'ಕೈಯಲ್ಲಿ ಕಾಸಿಲ್ಲದವರು ದುರ್ವ್ಯಯ ಯಾಕೆ ಮಾಡಬೇಕು?' ನೀರೆಯ ಪ್ರಶ್ನೆ

'ಸದ್ವ್ಯಯವನ್ನೇ ಮಾಡಬೇಕು,' ನನ್ನ ಬೋಧನೆ

'ಹಾಗಾದರೆ ಅದನ್ನು ನಿಲ್ಲಿಸಿ.'

'ಸದ್ವ್ಯಯವನ್ನೇ?'

'ಅಲ್ಲ ದುರ್ವ್ಯಯವನ್ನು.'

'ಸ್ತ್ರೀ; ಹೇಗೂ ಕೈಯಲ್ಲಿ ಕಾಸಿಲ್ಲ, ನಿನ್ನ ಸದ್ವ್ಯಯವನ್ನು ಮಾತ್ರ ಮುಂದರಿಸಲೇ?'

— 'ನಿಮ್ಮ ಕಣ್ಣಿಗೆ ಹೋಗುವುದೆಲ್ಲಾ ನನ್ನ ವೆಚ್ಚವೇ.'

'ಹೌದು; ಹಾಗೆಂದು ಒಮ್ಮೆ ಹೇಳಿದೆಯಲ್ಲ!'

'ನಿಮಗೆ ನನ್ನ ಮೇಲೆ ಅಸೂಯೆ. ಅದುದರಿಂದಲೇ ಒಂದು ಸೀರೆ ಕೇಳಿದುದಕ್ಕೆ ಇಷ್ಟು ಪ್ರಸಂಗ ಎಳೆದಿರಿ.'

'ಅಧಿಕ ಪ್ರಸಂಗವಲ್ಲವಷ್ಟೆ!'

'ನಿಮ್ಮ ಮನಸ್ಸು ತಿಳಿಯಿತಲ್ಲ! ಇನ್ನು ನಾನು ಸೀರೆಯ ಮಾತೆತ್ತಿದರೆ ಅಧಿಕಪ್ರಸಂಗವೆನ್ನಿ. ಯಾಕೆ, ನನಗಾಗಿ ಇನ್ನು ಯಾವ ವೆಚ್ಚವನ್ನೂ ಮಾಡಬೇಡಿ; ಅದೂ ದುರ್ವ್ಯಯವೇ.'

'ಅಲ್ಲ ಸದ್ವ್ಯಯ, ನೀರಾ! ಆದರೆ ಕೈಯಲ್ಲಿ ಕಾಸಿಲ್ಲದಾಗ.....'

'ಬೇಡ, ಕೈಯಲ್ಲಿ ಕಾಸಿಲ್ಲದಾಗ ಎಲ್ಲವೂ ದುರ್ವ್ಯಯವೇ ನನಗಾಗಿ ಇನ್ನು ಏನೂ ತರಬೇಡಿ. ತೆಂಪರೂ, ನಾನು ಒಲ್ಲೆನು.'

'ಒಲ್ಲದಿದ್ದರೆ ಚಿಂತೆಯಿಲ್ಲ; ಆದರೆ ಒಲಿಯದೆ ಮಾತ್ರ ಇರಬೇಡ, ನೀರಾ'

'ಒಲಿದು ಮನೆಯಲ್ಲೇ ಇದ್ದು ನಲಿಯುವೆನು: ನಿಮಗೆ ಕೈಯಲ್ಲಿ ಕಾಸಿಲ್ಲದಾಗ ಸ್ವಲ್ಪವೂ ವೆಚ್ಚಬೇಡ, ನನಗಾಗಿ; ಅದೆಲ್ಲಾ ದುರ್ವ್ಯಯ, ನಿಮ್ಮದೆಲ್ಲಾ ಸದ್ವ್ಯಯ; ಅದನ್ನೇ ಮುಂದರಿಸಿ.'

'ನೀರಾ! ಸಿಟ್ಟಾದೆಯಾ? ಇಗೋ ಇಂದಿನಿಂದ ನನ್ನ ವೆಚ್ಚವನ್ನೆಲ್ಲಾ ಪೂರ್ತಿಯಾಗಿ ನಿಲ್ಲಿಸುತ್ತೇನೆ. ನಿನಗೆ ಬೇಕಾದುದನ್ನೆಲ್ಲಾ ತಂದುಕೊಡುತ್ತೇನೆ. ಮಾತ್ರ, ಮುನಿಯಬೇಡ!'

'ಬೇಡ, ನನಗಾಗಿ ಏನೂ ತರಬೇಡಿ; ನಿಮಗೆ ಬೇಕಾದುದನ್ನು ಮಾಡಿ, ನನ್ನಾಣೆ!' ನೀರೆ ಮುಸುಡು ತಿರುಗಿಸಿ ಕೋಣೆಯಿಂದ ಹೊರಗೆ ಹೋಗಿಬಿಟ್ಟಳು.

೨

ಏಕಾಂತವಾಗಿ ನಾನು ನೀರೆ ಸೂಚಿಸಿದ ನನ್ನ ದುರ್ವ್ಯಯವನ್ನು ಅಂದಿನಿಂದಲೇ ನಿಲ್ಲಿಸುವೆನೆಂದು ಶಪಥಹಾಕಿದೆನು. ಅಲ್ಲದೆ ಆ ರೀತಿಯಲ್ಲಿ ಆದ ಉಳಿತಾಯದಿಂದ ನೀರೆಗೆ ಒಂದು ರೇಶ್ಮೆ ಸೀರೆಯನ್ನು ಕೊಂಡುಕೊಳ್ಳುವೆನೆಂದು ನಿಶ್ಚಯಮಾಡಿದೆನು. 'ಸುಧಾಕರ' ಕಂಪೆನಿಯವರಂತೂ ಒಂದು ತಿಂಗಳ ಮಾತಿನಲ್ಲಿ ಎಷ್ಟನ್ನಾದರೂ ಸಾಲಕೊಡುವರೆಂದು ತಿಳಿದು, ಸೀರೆಯನ್ನು ಅಂದೇ ಕಡ ಪಡೆಯುವೆನೆಂದು ನಿಷ್ಕರ್ಷಿಸಿದೆನು

ಪೇಟೆಗೆ ಹೋದವ, ಮೊದಲು ಅಲ್ಲಿ ಹೋಗಿ, ಕೆಲವು ರೇಶ್ಮೆ ಸೀರೆಗಳನ್ನು, ಆರಿಸುವಿಕೆಗಾಗಿ, ಅಲ್ಲಿನ ಹುಡುಗನ ಮೂಲಕ ಮನೆಗೆ ಕಳುಹಿಕೊಟ್ಟು, ನನ್ನ ಕೆಲಸದ ಮೇಲೆ ಹೋದೆನು.

ಸಂಜೆ ಮನೆಗೆ ಹಿಂತಿರುಗುವಾಗ ದಾರಿಯಲ್ಲಿ ಅದೇ ಅಂಗಡಿಗೆ ಹೋಗಿ ನೀರೆ ಎಷ್ಟು ಕ್ರಯದ ಸೀರೆ ಆರಿಸಿ ತೆಗೆದಳೆಂದು ವಿಚಾರಿಸಿದೆನು. ಆದರೆ ಅಂಗಡಿಯವರ ಉತ್ತರವು ನನ್ನನ್ನು ಯೋಚನೆಗೆ ಈಡುಮಾಡಿತು ನೀರೆ ಯಾವ ಸೀರೆಯನ್ನೂ ತೆಗೆಯದೆ, ಹುಡುಗನನ್ನು ಬಂದ ಹಾಗೆಯೇ ಹಿಂದೆ ಕಳುಹಿಸಿದ್ದಳು.

ನಾನು ಮನಸ್ಸನ್ನು ಬಲು ಗಟ್ಟಿಮಾಡಿ ಆ ದಿನ ಸಿಗರೆಟ್ ಪೆಕೆಟನ್ನು ಕೊಂಡುಕೊಳ್ಳಲಿಲ್ಲ.

ದಾರಿಯಲ್ಲಿ ಹೂವಿನ ಮಾರ್ಕೆಟನ್ನು ಹಾಯುತ್ತ, ನೀರೆಗಾಗಿ ಒಂದು ಚೆಂಡು ಮಲ್ಲಿಗೆಯನ್ನು ಕೊಂಡುಕೊಂಡೆನು

ನನಗೆ ಹೋದೊಡನೆ ಹೂಚೆಂಡನ್ನು ನೀರೆಯ ಕೈಗೆ ಕೊಡಹೋಗಲು, ಅವಳದನ್ನು ತೆಗೆದುಕೊಳ್ಳದೆ ಅದರಿಂದ ಬರೇ ಒಂದು ಮಲ್ಲಿಗೆಯನ್ನು ಮಾತ್ರ ಕಿತ್ತು ಮುಡಿದುಕೊಂಡಳು.

ಇದೇನು, ನೀರಾ, ಹೀಗೆ?' ನಾನು ದಿಗಿಲಿಂದ ಕೇಳಿದೆ

'ನನಗಾಗಿ ಏನನ್ನೂ ತರಬಾರದೆಂದ ಮೇಲೂ, ಕೈಯಲ್ಲಿ ಕಾಸಿಲ್ಲದಾಗ, ನೀವು ಯಾಕೆ ಹೀಗೆ ದುರ್ವ್ಯಯಮಾಡುತ್ತೀರಿ?' ಅವಳ ಮರುಪ್ರಶ್ನೆ.

'ಸೀರೆಗಳನ್ನೂ ಕಳುಹಿಸಿಕೊಟ್ಟಿದ್ದೆನಲ್ಲ! ನೀನ. ಯಾಕೆ ಬೇಕಾದುದನ್ನು ಆರಿಸಿ ತೆಗೆಯಲಿಲ್ಲ?'

'ಅವನನ್ನು ನೀವು ಕಳುಹಿಸಿದ್ದಿರಾ? ಅವನು ಇಲ್ಲಿ ಮನೆತಪ್ಪಿ ಬಂದಿರಬೇಕೆಂದು ಎಣಿಸಿದ್ದೆ. ಹಾಗೇ ಹಿಂದೆ ಕಳುಹಿಸಿದ್ದು ಒಳ್ಳೆಯದಾಯಿತು. ನಿಮಗೆ ದುರ್ವ್ಯಯ ಉಳಿಯಿತು; ಅದೂ ಕೈಯಲ್ಲಿ ಕಾಸಿಲ್ಲದಾಗ,' ನೀರೆ ಕೆಣಕಿದಳು.

'ನೀರಾ! ನೀನು ಹೀಗೆ ಮಾಡಿದರೆ ಹೇಗೆ? ನಾನು ನನ್ನ ದುರ್ವ್ಯಯಗಳನ್ನೆಲ್ಲಾ ನಿಲ್ಲಿಸಿದ್ದೇನೆ. ಅದರಿಂದ ನಿನಗಾಗಿ ಸೀರೆ ತೆಗೆದುಕೊಳ್ಳಲು ನನಗೆ ಅನುಕೂಲವಾಗುವುದು!' ಸಮಾಧಾನ ಹೇಳಿದೆ.

'ಬೇಡ, ನನಗಾಗಿ ದುರ್ವ್ಯಯ ಮಾಡಬೇಡಿ,' ನೀರೆ ನನ್ನ ಮುಂದಿನಿಂದ ಜಾರಿಬಿಟ್ಟಳು.

೩

ಮರುದಿನದಿಂದ ನಮ್ಮಲ್ಲಿ ಪ್ರತಿಯೊಂದು ವಿಷಯದಲ್ಲಿಯೂ ವೆಚ್ಚದ ಕಡಿತವಾಗತೊಡಗಿತು.

"ನಾನು ಸಿಗರೆಟ್ ಸೇದುವುದನ್ನು ಪ್ರಯತ್ನಪೂರ್ವಕವಾಗಿ ಬಿಟ್ಟೆ. ಮೊದ ಮೊದಲು ಬಹಳ ಕಷ್ಟವಾದರೂ ಕ್ರಮಕ್ರಮವಾಗಿ ಹಿಡಿದ ಅಭ್ಯಾಸ ಬಿಡುವ ಅಭ್ಯಾಸವಾಗುತ್ತಾ ಬಂತು. ಸೆಲೂನಿಗೆ ಹೋಗುವುದನ್ನೂ, ಬಟ್ಟೆಗಳನ್ನು ಧೋಬಿಗೆ ಕೊಡುವುದನ್ನೂ ನಿಲ್ಲಿಸಿದೆನು. ಹೊಟೆಲಿಗೆ ಕಾಲಿಡಲಿಲ್ಲ. ಸ್ನೇಹಿತರ ಮುಖ ನೋಡಲಿಲ್ಲ.

ನೀರೆಯೂ ತನ್ನ ಸತ್ಯಾಗ್ರಹವನ್ನು ಒಳ್ಳೇ ಹುರುಪಿನಿಂದ ಮುಂದುವರಿಸಿದಳು. ನಾನ ಹೂ ಕೊಂಡೊಯ್ಯುವುದನ್ನು ತಡೆದಳು ಪೌಡರ್, ಸ್ನೋ, ರಿಬ್ಬನ್‌ಗಳ ಉಪಯೋಗವನ್ನು ನಿಲ್ಲಿಸಿದಳು. ಸೀರೆ ಕುಪ್ಪಸಗಳನ್ನೂ ಮಕ್ಕಳ ಉಡುಪುಗಳನ್ನೂ ಧೋಬಿಗೆ ಕೊಡುವುದನ್ನೂ ಬಿಟ್ಟಳು. ಮನೆಯಿಂದ ಹೊರಗೆ ಕಾಲಿಡಲಿಲ್ಲ.

ಎರಡು ವಾರ ಕಳೆಯುವಷ್ಟರಲ್ಲಿ ನನ್ನ ಮುಖದಲ್ಲಿ ಗಡ್ಡವು ಒಂದು ಅಂಗುಲ ಉದ್ದಕ್ಕೆ ಬೆಳೆಯಿತು. ಉಡುವ ಬಿಳಿಯ ಬಟ್ಟೆಬರೆಗಳೆಲ್ಲಾ ಕಾವಿ ಬಣ್ಣಕ್ಕೆ ತಿರುಗತೊಡಗಿದುವು ಸಿಗರೆಟ್ ಸೇದದೆ ನನ್ನ ಮನಸ್ಸು ಯಾವಾಗಲೂ ಅನ್ಯಾಸಕ್ತವಾಗಿ, ಬುದ್ಧಿಯು ಮಂದವಾಗುತ್ತಾ ಬಂತು.

ನೀರೆಯ ಮುಖವು ಅದನ್ನು ಅಲಂಕರಿಸುತ್ತಿದ್ದ ಪೌಡರ್, ಸ್ನೋಗಳ ಅಭಾವದಿಂದ ಬೇರೆಯೇ ಒಂದು ರೂಪವನ್ನು ತಳೆಯಿತು ಅವಳ ಬಿಳಿಯ ಸೀರೆ ಕುಪ್ಪಸಗಳೂ ಕಾವಿ ಬಣ್ಣಕ್ಕೆ ಪರಿವರ್ತಿಸಿದುವು ಅವಳ ರಿಬ್ಬನ್ ಇಲ್ಲದ ಜಡೆಯು ತನ್ನ ಸೊಬಗನ್ನೇ ಕಳೆದುಕೊಂಡಿತು.

ಮನೆಯೊಳಗಿನ ಕಾಫಿಯ 'ಕಲಮೂ' ರದ್ದಾಗಿತ್ತು ಎಲ್ಲರಿಗೂ ದಿನಕ್ಕೆ ಮೂರು ಬಾರಿ ಗಂಜಿಯು 'ಫಲಾಗತ'ವಾಗಿ ಬೀಳುತ್ತಿತ್ತು

ಇದರಿಂದ ನಮ್ಮ ದೇಹಸ್ಥಿತಿಯೂ ಪೂರ್ತಿಯಾಗಿ ಬದಲಾಗಿಹೋಯಿತೆನ್ನುವಾಗ ಮಕ್ಕಳ ಅವಸ್ಥೆ ಏನಾಗಿರಬಹುದೆಂದು ಸುಲಭವಾಗಿ ಊಹಿಸಬಹುದು

ನೀರೆಯೊಡನೆ ಯಾವ ಪ್ರಸ್ತಾಪವನ್ನೂ ಎತ್ತುವಂತಿರಲಿಲ್ಲ, ಆಡಿದ ಮಾತಿಗೆಲ್ಲಾ, 'ಕೈಯಲ್ಲಿ ಕಾಸಿಲ್ಲದಾಗ ಇದೂ ಹೆಚ್ಚು!' ಎಂದು ಎಲ್ಲರ ಮೇಲೆ ಉರಿದುಬೀಳುತ್ತಿದ್ದಳು.

೪

ಆ ದಿನ ಮಿಂದು ಒಂದು ಗಂಜಿಯೂಟಕ್ಕೆ ಕಾದು ಕುಳಿತಿದ್ದೆ ಅಷ್ಟರಲ್ಲಿ ಅಡಿಗೆ ಕೋಣೆಯಿಂದ ನೀರೆಯ ಚೀರಾಟವೊಂದು ಚಿರ್ರೆಂದು ಕೇಳಿಸಿತು.

ನಾನು ಗಾಬರಿಯಿಂದ ಅಲ್ಲಿಗೆ ಓಡಿಹೋಗಿ ನೋಡಲು ನೀರೆಯು ಎಡಗಲ್ಲವನ್ನು ಒತ್ತಿ ಹಿಡಿದುಕೊಂಡು, ಹಾಗೆಯೇ ತಲೆಯನ್ನು ಅತ್ತಿತ್ತ ತೂಗುತ್ತ, ಹೊರಳುತ್ತ, ಕಳವಳಿಸುತ್ತಿದ್ದಳು. ಒಡನೆಯೇ ನನಗೆ ಎಲ್ಲವೂ ಹೊಳೆದುಹೋಯಿತು ನೀರೆಗೆ ಹಲ್ಲು ಸಿಡಿತ ಪ್ರಾರಂಭವಾಗಿತ್ತು.

ಕೂಡಲೇ ಓಡಿಹೋಗಿ ಒಂದು ಜಟಕಾ ಗಾಡಿಯನ್ನು ತಂದೆನು ನಾನು ಪಂಚೆ ಉಟ್ಟುಕೊಂಡಿದ್ದು ಹೆಗಲ ಮೇಲೆ ಒಂದು ಬೈರಾಸನ್ನು ಮಾತ್ರ ತೂಗಿಸಿಕೊಂಡಿದ್ದೆ ನೀರೆ ಒಂದು ಮಾಸಿ ಹೋದ ಹಳೆಯ ಹರಕು ಸೀರೆಯನ್ನು ಉಟ್ಟು ಹಳೆಯ ಒಂದು ಕುಪ್ಪಸವನ್ನು ತೊಟ್ಟುಕೊಂಡಿದ್ದಳು ಅವಳ ಅಸ್ತವ್ಯಸ್ತವಾದ ಕೂದಲೂ, ಕಣ್ಣೀರಿನಿಂದ ತೊಯ್ದ ಮುಖವೂ, ಅವಳ ಉಡಿಗೆತೊಡಿಗೆಯೂ, ಅವಳಿಗೆ ಒಂದು 'ಅಪರೂಪ' ಸೌಂದರ್ಯವನ್ನು ಕೊಟ್ಟಿದ್ದುವು

ನಮ್ಮ ಗಾಡಿಯು ನೇರವಾಗಿ ದಂತವೈದ್ಯರಲ್ಲಿಗೆ ಹೋಯಿತು. ಆ ಪುಣ್ಯಾತ್ಮರು ನೀರೆಯ ನೋಯುವ ಹಲ್ಲನ್ನು ಅರೆಕ್ಷಣದಲ್ಲಿ ಸ್ವಲ್ಪವೂ ನೋವಿಲ್ಲದೆ ಹಾರಿಸಿಬಿಟ್ಟರು.

(ಇನ್ನೂ ಇದೆ ..... ಕಡೆಯತನು ನೋಡುವುದು)

*30—1—'36ನೇ 'ಪ್ರಭಾತ'ದಲ್ಲಿ ಪ್ರಕಟವಾದ 'ತೀರಿದ ಉಡುಗೊರೆ'ಯನ್ನು ನೋಡುವುದು— ಲೇಖಕ

ನವವೈಸರಾಯರಿಗೆ ಲಂಡನಿನಿಂದ ಬುದ್ಧಿವಾದ.

ನವವೈಸರಾಯರಾದ ಲೋರ್ಡ್ ಲಿನ್‌ಲಿತ್‌ಗೋವರು ಸ್ವದೇಶದಿಂದ ಭಾರತದೇಶಕ್ಕೆ ಪ್ರಯಾಣ ಮಾಡುತ್ತಿರುವಾಗ, ಮಾರ್ಸೆಲ್ಸ್ ಎಂಬಲ್ಲಿ ಅವರಿಗೆ ಹಿಂದೂ ದೇಶದಿಂದ ಅವರು ಮಹಾತ್ಮಾಜಿಯವರ ಭೇಟಿ ಮಾಡಬೇಕೆಂದೂ, ಮಹಾತ್ಮಾಜಿಯವರು ಅವರನ್ನು ಕಾಣಲು ಒಪ್ಪಿಗೆ ಕೊಟ್ಟಿರುವರೆಂದೂ, ಸಂದೇಶ ಬಂದಿತ್ತು.

ಈ ಸಂಗತಿಯು, ಪ್ರಸಿದ್ಧ ಬ್ರಿಟಿಷ ಪತ್ರಿಕಾ ವ್ಯವಸಾಯಿಗಳಾದ ಜೆನಿಸ್ ಸ್ಪೈಕರ್‌ರೆಂಬವರಿಂದ ತಿಳಿದು ಬಂದಿರುತ್ತದೆ.

ಜೆನಿಸ್ ಸ್ಪೈಕರರು ಈ ರೀತಿ ಬರೆದಿರುವರು, ಹಿಂದೂದೇಶಕ್ಕೆ ಪ್ರವಾಸ ಮಾಡುತ್ತಿರುವ ಲೋರ್ಡ್ ಲಿನ್‌ಲಿತ್‌ಗೋರವರಿಗೆ ಮಹಾತ್ಮಾಗಾಂಧಿಯವರು ಅವರ ಭೇಟಿ ಮಾಡಲು, ಅನೇಕ ಮಂದಿ ಬ್ರಿಟಿಷ್ ಮತ್ತು ಭಾರತೀಯರ ಪಕ್ಷ್ಯ ನಿರುತ್ಸುಕ ಒಪ್ಪಿಬರು ಇದರಿಂದ ಹಿಂದೂದೇಶದ ರಾಜಕೀಯಕೀಯ ರಂಗದಲ್ಲಿ ಮಹಾ ಬದಲಾವಣೆಗಳಾಗುವವು"

1936 ನವರಾಜಶಾಸನದ ಆರಂಭ.

ಮಹಾತ್ಮಾ ಗಾಂಧಿಯವರು ಕಾಂಗ್ರೆಸ್ಸ ದಳದಲ್ಲಿ ಐಕ್ಯ ಉಂಟಾಗುವಂತೆ ಬಹಳ ಶ್ರಮಪಟ್ಟಿರುವರೆಂದು ಇವರು ಬರೆದಿರುವರು,

ಶ್ರೀ ಜವಾಹರಲಾಲನೆಹರುಗಳವರಿಗೆ, ಇಂಗ್ಲಂಡಿನಲ್ಲಿರುವ ಸಮಯ. ನವರಾಜಶಾಸನವನ್ನು ವಿರೋಧಿಸುವ ಅಭಿಪ್ರಾಯವಿದ್ದು, ಅದನ್ನು ತ್ಯಜಿಸಬೇಕೆಂಬ ನಿರ್ಧಾರ ಮಾಡಿದವರು, ಈಗ ತಮ್ಮ ಮತ ಬದಲಾವಣೆ ಮಾಡಲು ಸಿದ್ಧರಿರುವರು, ಯಾವಾಗ,—ಲಕ್ನೋ ಕಾಂಗ್ರೆಸ್ಸು ಅಧಿವೇಶನವು ಕಾಂಗ್ರೆಸ್ಸು ಸರಕಾರದ ರಚನೆಯಲ್ಲಿ ಭಾಗವಹಿಸಬೇಕೆಂಬ ನಿರ್ಧಾರ ಮಾಡಿದರೆ?

ಅಂದರೆ, ಲೋರ್ಡ್ ಲಿನ್‌ಲಿತ್‌ಗೋ, ಇಂಡಿಯಾ ಆಫೀಸು, ಮತ್ತು ಸಾರ್ವಭೌಮರ ಇಚ್ಛೆಗಳ ಮೇರೆಗೆ ನವರಾಜಶಾಸನದ ಪ್ರಾರಂಭೋತ್ಸವ, ಡಿಲ್ಲಿಯಲ್ಲಿ ನಡೆಯಲಿರುವ ಇಂಪೀರಿಯಲ್ ದರ್ಬಾರದ ಸಮಯ ಜನವರಿ ೧೯೩೭ರಲ್ಲಿ ಜರಗಿಸಲಾಗುವುದು

ಶ್ರೀ ಸಪ್ರೂರರೊಡನೆ ಚಕ್ರವರ್ತಿಯರ ಹಾಸ್ಯ

ಭಾರತೀಯ ನಾಯಕರಾದ ಶ್ರೀ ಸಪ್ರೂಗಳವರು ಪ್ರಿವಿ ಕೌನ್ಸಿಲರಾಗಿ, ಪ್ರತಿಜ್ಞಾ ತೆಗೆದುಕೊಳ್ಳುವ ಸಮಯ ದಿವಂಗತ ಚಕ್ರವರ್ತಿ ಐದನೆ ಜಾರ್ಜರು ಅವರನ್ನು ಕುರಿತು ನಿಮ್ಮೊಳ್ಳಿಗೆ ನಾನು ಓರ್ವ ವಿಸ್ಕೌಂಟ್ ಮಿತ್ರನನ್ನು ಕಳುಹಿಸಿಕೊಡುತ್ತೇನೆ

"ಅವು ಯಾರೆಂದೂ ನನಗೆ ವಿಚಾರಿಸಬಹುದೆ" ಎಂದು ಸಪ್ರೂಗಳು ಕೇಳಲೂ "ನಿಮಗೆ ಅವರ ಪರಿಚಯ ಒಳ್ಳೆದಾಗಿದೆ. ಅವರು ಲೋರ್ಡ್ ಲಿನ್‌ಲಿತ್‌ಗೋರವರು" ಮತ್ತು ಚಕ್ರವರ್ತಿಯರು ನಗುತ್ತಾ

"ಅವರು ಡೊಮಿನಿಯನ್ ಸ್ಟೇಟಸ್ ವರ್ಗದಿಂದ ಬಂದವರು" ಎಂದರು, ಕಾರಣ ಲೋರ್ಡ್ ಲಿನ್‌ಲಿತ್‌ಗೋರವರ ಪಿತಾಮಹರು, ಆಸ್ಟ್ರೇಲಿಯಕ್ಕೆ ಡೊಮಿಯನ್ ಸ್ಟೇಟಸ್ ದೊರಕಿದ ಸಮಯ ಪ್ರಥಮ ಗವರ್ನರ ಜನರಲರಾಗಿದ್ದರು,

ಜೆನಿಸ ಸ್ಪೈಕರರು, ವೈಸರಾಯರಿಗೆ ಈ ಬಗೆಯ ಬುದ್ಧಿಮಾತುಗಳನ್ನು ಕೊಟ್ಟು ತನ್ನ ಲೇಖವನ್ನು ಪೂರ್ಣಗೊಳಿಸಿದರು,

ಲಿನ್‌ಲಿತ್‌ಗೋರವರು, ಲಂಡನಿನಿಂದ, ಮುಂಬಾಯಿಗೆ ತೆರಳುವ ಸಮಯ ಹಿಂದೂದೇಶದ ಎಲ್ಲಾ ಸಮಸ್ಯೆಗಳನ್ನು ಸರಿಯಾಗಿ ಪರ್ಯಾಲೋಚಿಸಬೇಕು,

ಹಿಂದೂದೇಶದಲ್ಲಿ ಇದರೊಡನೆ, ನವರಾಜಶಾಸನದೊಡನೆ, ಹಳೆಯ ವರ್ಗಕ್ಕೆ ಸೇರಿದವರನ್ನು ಬೆರಸುವ ಪ್ರಯತ್ನಗಳು ಇವರಿಗೆ ಕಾಣಬರುವವು, ಗವರ್ನರು, ಸಿವಿಲ್ ಅಧಿಕಾರಿಗಳು, ಆಶ್ರಿತ ರಾಜರುಗಳು, ಮತ್ತು ಅವರ ಒಡನಾಡಿಗಳು ಮತ್ತು ಈಗಿನ ಸರಕಾರದ, ಸಾಮಗ್ರಿಗಳು,

ಹಿಂದೂದೇಶವು ಕೇಳುತ್ತಿರುವ ಒಂದು ಪ್ರಶ್ನೆ ಯಾವುದು? "ಲಿನ್‌ಲಿತ್‌ಗೋರವರಲ್ಲಿ ಸ್ವತಂತ್ರರಾಗಿ ವರ್ತಿಸುವ ಯೋಗ್ಯತೆಯಿದೆಯೆ?"

ಪಂಜಾಬ್ ಕಾಂಗ್ರೆಸ್ ಕಮಿಟಿಯವರು ಮುಂದಿನ ಚುನಾವಣೆಯ ಕುರಿತು ಪ್ರಸಾರಣಾಕಾರ್ಯವನ್ನು ನಡೆಸಲು ಒಂದು ಉಪಸಮಿತಿಯನ್ನು ರಚಿಸಿರುವರು

ವಿಚಾರಮಯ ಜಗತ್ತು.

ಮತ್ತೊಮ್ಮೆ ಭಾರತೀಯ ವಿಜ್ಞಾನಿಗಳಿಗೆ ನೋಬೆಲ್ ಬಹುಮಾನ?

ಬಂಗಾಳದ ಪ್ರಸಿದ್ಧ ವಿಜ್ಞಾನಿಗಳು.

ಅಲಹಾಬಾದು ವಿಶ್ವವಿದ್ಯಾನಿಲಯದಲ್ಲಿ, ಫಿಸಿಕ್ಸ್ ಪ್ರೊಫೆಸರರಾಗಿದ್ದ ಡಾಕ್ಟರ್ ಮೇಘನಾಥ ಸಾಹರವರಿಗೆ ಫಿಸಿಕ್ಸಿನ ನೋಬೆಲ್ ಬಹುಮಾನ ದೊರಕುವ ಸಂಭವನೀಯವೆಂದು ಬಲವಾದ ವಾರ್ತೆ ಇದೆ. ಈ ವಾರ್ತೆಯು ಲಂಡನ್ ನಗರದಿಂದ ಬಂದಿರುತ್ತದೆ. ಡಾ॥ ಸಾಹರವರು ಈಗ ಪಾಶ್ಚಾತ್ಯದಲ್ಲಿ ಪ್ರವಾಸ ಮಾಡುತ್ತಿದ್ದಾರೆ ಇಂಗ್ಲೆಂಡನ್ನು ಸದ್ಯದಲ್ಲಿ ಸಂದರ್ಶಿಸುವರು. ಅಗ್ಗೆ ಅಲ್ಲಿ ಪ್ರಸಿದ್ಧ ವಿಜ್ಞಾನಿಗಳ ಪರಿಚಯವನ್ನು ಮಾಡುವರಂತೆ. ಜರ್ಮನಿಯಲ್ಲಿ ಇವರನ್ನು ಬಹಳ ವಿನಯದಿಂದ ಸ್ವಾಗತಿಸಿದರು, ಅನೇಕ ವಿಜ್ಞಾನಿಗಳು ಇವರ ಭೇಟಿ ಮಾಡಿದರು, ಫಿಸಿಕ್ಸ್ (ವಸ್ತುಶಾಸ್ತ್ರ)ದಲ್ಲಿ ಇವರು ಅನೇಕ ಶೋಧನಾ ಕಾರ್ಯಗಳನ್ನು ನಡೆಯಿಸಿ ಅನೇಕ ನವತತ್ವಗಳನ್ನು ಕಂಡುಹಿಡಿದಿರುವರು ಪಾಶ್ಚಾತ್ಯವಿಜ್ಞಾನವಿದ್ವಾಂಸರು ಕೂಡ ಇವರನ್ನು ಈ ಕಾರ್ಯಗಳಿಂದಾಗಿ ಬಹಳವಾಗಿ ಮನ್ನಿಸುತ್ತಿದ್ದಾರೆ ಇಷ್ಟರ ತನಕ ಯಾವತ್ತು ವಿಜ್ಞಾನಿಗಳಿಗೆ ಹೊಳೆಯದಿರುವ, ಅನೇಕ ನವತತ್ವಗಳನ್ನು ಹುಡುಕಿ ತೆಗೆದು, ಇವರು ಪ್ರಚಾರ ಮಾಡಿರುವರು ಫಿಸಿಕ್ಸಿಗಾಗಿ ನೋಬೆಲ್ ಬಹುಮಾನವನ್ನು ಪ್ರಥಮವಾಗಿ ಪಡೆದವರು ಡಾಕ್ಟರ್ ಸಿ. ವಿ. ರಾಮನ್‌ರವರು ಇವರು ಈಗ ಬೆಂಗಳೂರಿನಲ್ಲಿರುವ ಸರಕಾರದ ವಿಜ್ಞಾನ ಸಂಸ್ಥೆಯ ಚಾಲಕರಾಗಿರುವರು ಇವರು ಈ ಪ್ರಪಂಚದ ಕಾರಣದ ವಿಚಾರದ ಅನೇಕ ಶೋಧನೆಗಳನ್ನು ನಡೆಯಿಸಿರುವರು

ಮಹಾತ್ಮಾಜಿಯರ ಪಟವನ್ನು ಹರಿದುಬಿಟ್ಟ ಪಾಶ್ಚಾತ್ಯ ಪುರುಷ.

ಒಂದು ಹರಿಜನ ಗುಡಿಸಿಲಿನಿಂದ ತಮ್ಮ ವೃಂದದ ಗುರುಗಳಂತೆ ಆರಾಧಿಸುತ್ತಿದ್ದರು

ಈ ಸಂಗತಿ ಮೂರ್ರಿ ಎಂಬಲ್ಲಿ ನಡೆದುದಾಗಿರುತ್ತದೆ, ಪಾಶ್ಚಾತ್ಯಗೋವರ್ಮೆಂಟ ಚಾಕೋಟದ ಮ್ಯಾಂಲಿಕ, ಸಿಕಂಗೆ ನಡೆದಿದ್ದನು. ಹಾದಿಯಲ್ಲಿ ಒಂದು ಹರಿಜನ ಗುಡಿಸಲಿನ ಹೊರಗಿನ ಗೋಡೆಯ ಮೇಲೆ ಮಹಾತ್ಮಾಜಿಯರ ಪಟವನ್ನು ಕಂಡನು ಗುಡಿಸಲಿನ ಹರಿಜನ ಮ್ಹಾಲೀಕನಾದ, ಮುಕ್ರಾ ಸದಾನಂದನು ಎಲ್ಲಿಯೋ ಹೋಗಿದ್ದನು ಮಹಾತ್ಮಾಜಿಯರ ಪಟವನ್ನು ಕಂಡ ಪಾಶ್ಚಾತ್ಯನು ಅದನ್ನು ಅಲ್ಲಿಂದ ಕಿತ್ತು ತೆಗೆದು ಹರಿದು ಹಾಕಿದನು, ಅಲ್ಲಿರುವ ಸ್ತ್ರೀಯರು ಎಷ್ಟು ಪ್ರತಿಕೂಲಿಸಿದರೂ, ನಿಷ್ಫಲವಾಯಿತು ಮುಕ್ರಾ ಸದಾನಂದನು ಮನೆಗೆ ಹಿಂತಿರುಗಿ ಬಂದವನಿಗೆ ಗಾಂಧಿಪಟದ ಚೂರುಗಳನ್ನು ನೋಡಿ ಬಹಳ ಚಿಂತೆಯುಂಟಾಯಿತು. ಈತನು ಮಹಾತ್ಮಾಜಿಯರನ್ನು ತಮ್ಮ ಪಕ್ಷದ ಗುರುಗಳೆಂದು ಬಹು ಭಕ್ತಿಯಿಂದ ಆರಾಧಿಸುತ್ತಿದ್ದನು, ಪಾಶ್ಚಾತ್ಯ ಪುರುಷನ ಗುರ್ತನ್ನು ಹುಡುಕಿ ತೆಗೆದು, ಆತನು ಪೋಲಿಸರೊಡನೆ ಕಂಪ್ಲೇಂಟ್ ಮಾಡಿರುವನು, ಈ ಗುಡಿಸಿಲಿನಲ್ಲಿದ್ದ ಸ್ತ್ರೀ ಆ ಪಾಶ್ಚಾತ್ಯನವಳ್ಳ.

ಲಕ್ನೋ ನೀರು.

ಕಳೆದ ಕಾಂಗ್ರೆಸ್ಸ ಅಧಿವೇಶನಕ್ಕೆ ಲಕ್ನೋ ನಗರಸಭೆಯವರು ರೂ. ೧೫,೦೦೦ವನ್ನು ವೆಚ್ಚಮಾಡಿ, ಪೋತಿ ನಗರಕ್ಕೆ ಬೇಕಾದ ನೀರಿನ ಸರಬರಾಯಿಯನ್ನು ಒದಗಿಸಿದ್ದರು, ಆದರೆ, ಸಂಯುಕ್ತ ಪ್ರಾಂತ್ಯದ ಸರಕಾರದವರು ಆ ತರದ ಸಮಾರಂಭಗಳಿಗೆ ನಗರಸಭೆಗಳು ವ್ಯಯಿಸುವುದು ಕ್ರಮಕ್ಕೆ ವಿರೋಧವೆಂದು, ಮೇಲಿನ ಕರ್ಚಿಗೆ ತಮ್ಮ ಒಪ್ಪಿಗೆಯನ್ನು ಕೊಡಲಿಲ್ಲ. ಸದ್ಯದಲ್ಲಿ ಸಂಯುಕ್ತ ಪ್ರಾಂತ್ಯದ ಸರಕಾರದ ಆಶ್ರಯದಲ್ಲಿ, ಲಕ್ನೋದಲ್ಲಿ ಒಂದು ಕೈಗಾರಿಕೆಯ ಪ್ರದರ್ಶನ ಜರಗಲಿದೆ, ನಗರಸಭೆಯವರು ಸರಕಾರದೊಡನೆ ತಮ್ಮ ಮೇಲಿನ ನಿರ್ಧಾರದ ಕುರಿತು ಸರಿಯಾಗಿ ಆಲೋಚಿಸಲು ಮಾಡಿದ ವಿನಂತಿ ಏನೂ ಫಲವಿಲ್ಲದಾಗಿದೆ, ಆದ್ದರಿಂದ, ಮೇಲಿನ ಕ್ರಮದ ಮೇರೆಗೆ ಸಂಯುಕ್ತಪ್ರಾಂತ್ಯದ ಸರಕಾರವು ಜರಗಿಸುವ ಈ ಕೈಗಾರಿಕಾ ಪ್ರದರ್ಶನಕ್ಕೆ ನೀರು ಒದಗಿಸಬಾರದೆಂಬ ನಿರ್ಧಾರ ಮಾಡಿರುವರು.

ಜನಾಂಗಮಂಡಳದ ಕುರಿತು ಪ್ರಸಿದ್ಧ ಆಂಗ್ಲೇಯ ಕವಿಗಳಾದ ಬರ್ನಾಡ್ ಷಾರವರ ಅಭಿಪ್ರಾಯ.

ಜನಾಂಗಸಭೆಯ ಕುರಿತು ತನ್ನ ಅಭಿಪ್ರಾಯವನ್ನು ಮೇಲೆ ಹೊಂದಿಕೊಂಡಿರುವ, ಜಿನಿವಾ ಎಂಬ ನಾಟಕವನ್ನು ಇವರು ಬರೆದಿರುವರು, ಈ ನಾಟಕದ ದೃಶ್ಯ ಜಿನಿವಾದಲ್ಲಿ, ಜಿನಿವಾದ ಕುರಿತು ಘಟನೆಗಳು ಚಿತ್ರಿಸಲಾಗಿವೆ, ಇವರಲ್ಲಿ ಜನಾಂಗ ಸಭೆಯ ಕುರಿತು ಷಾರವರ ಅಭಿಪ್ರಾಯಗಳು ಚಿತ್ರಿಸಲ್ಪಟ್ಟಿವೆ,

"ಎಬಿಸೀನಿಯನ್ನು ಕಠಿಣ ತರದ ಸಂಕಷ್ಟದಿಂದ ಬಿಡಿಸಲು ಪ್ರಯತ್ನಗಳಿಂದ ಏನೂ ಪ್ರಯೋಜನವಾಗುವಂತಿಲ್ಲ, ಕರುಣಮಯ ವಿಷಕರ ಗೇಸುಗಳ ಯುದ್ಧದಲ್ಲಿ ಉಪಯೋಗವಾಗಬೇಕೆಂದು ಚಳವಳಿ ನಡೆಯಿಸಿದರೆ ಉತ್ತಮವಿತ್ತು. ನಿಮ್ಮನ್ನು ಸಭ್ಯರೀತಿಯಲ್ಲಿ ಕೊಲೆಮಾಡುವ ಒಂದು ಗೇಸು ಕಂಡುಹಿಡಿಯಬೇಕು, ಆದರೆ ಆ ಗೇಸಿನಿಂದ ನೀವಿರುವ ಪ್ರಕಾರದ ಕಟ್ಟಡ, ಧನ ಇತ್ಯಾದಿಗಳಿಗೆ ಹಾನಿಯಾಗದಂತಾಗಬೇಕು ರಸಾಯನ ಶಾಸ್ತ್ರದಿಂದ ಈ ಬಗೆಯ ಗೇಸನ್ನು ಕಂಡುಹಿಡಿಯಬಹುದು

ವಿಜ್ಞಾನದಿಂದ ಆಧ್ಯಾತ್ಮಿಕಸೇವೆಯಾಗಬೇಕು.

ನವನಾಗರಿಕತೆಯು ನಿರ್ನಾಮವಾಗುವುದರಿಂದ ರಕ್ಷಿಸಬೇಕಾದರೆ, ಈ ಕುರಿತು ಹಿಂದೂ ಮತಾಭಿಪ್ರಾಯವನ್ನು ಎಲ್ಲರೂ ಅನುಸರಿಸಿದರೆ ಲೇಸಿತ್ತು, ಎಂದು ಪ್ರೊಫೆಸರ್ ಅಕ್ಷ ಕುಮಾರ ಬೆನರ್ಜಿಯವರು, ಪ್ರಬುದ್ಧ ಭಾರತದಲ್ಲಿ ಬರೆದಿರುವರು

ನವನಾಗರಿಕತೆಯ ಅಂತರ್ಯವನ್ನು ಸರಿಯಾಗಿ ತಿಳಕೊಂಡರೆ, ಇದರಿಂದ ಭಯಂಕರ ಸ್ಥಿತಿಯು ಸಂಭವಿಸುವುದೆಂಬ ಭೀತಿಯುಂಟಾಗುವುದು, ಮಾನವನ ಈ ನವನಾಗರೀಕತೆಯ ಪ್ರಗತಿಯೊಂದಿಗೆ ಪಡೆದ ಫಲಗಳೂ ಹಾಳಾಗದಂತೆ ಈ ಕುರಿತು ಅಭಿಪ್ರಾಯವು ಬದಲಾವಣೆಯಾಗಬೇಕಾಗಿದೆ ನವನಾಗರೀಕತೆಗೆ ಆಧ್ಯಾತ್ಮಿಕ ಆಧಾರವಿರಬೇಕು ರಾಜಕೀಯಕ್ಕೆ ಸಾಂಪತ್ತಿಕ ವಿಚಾರ, ಕೈಗಾರಿಕೆ, ಮತ್ತು ವ್ಯಾಪಾರ ಇವುಗಳಿಗೆ ನೀತಿ ಮತ್ತು ಧರ್ಮಗಿಂತ ಕೆಳಗಿನ ಸ್ಥಾನಗಳು ಕೊಡಬೇಕು ವಿಜ್ಞಾನ ಮತ್ತು ಕಲೆಯನ್ನು ಆಧ್ಯಾತ್ಮಿಕ ಸೇವೆಯ ಪ್ರಕರಣಗಳನ್ನಾಗಿ ಮಾಡಬೇಕು"

ಒಂದಾನೊಂದು ಕಾಲದಲ್ಲಿ ರಾಜವೈಭವದಲ್ಲಿ ಮೆರೆಯುತ್ತಿರುವ ನೆಹರು ಕುಟುಂಬವು, ಇಂದಿಗೆ ಹಳೆ ಅಪರಾಧಿಗಳ ಮತ್ತು ಭಗ್ನ ಹೃದಯಗಳ ಮನೆಯಾಗಿರುತ್ತದೆ, ಒಂದಾನೊಂದು ಕಾಲದಲ್ಲಿ ರಾಜಕುಮಾರರ ಆರಮನೆಯಾಗಿದ್ದ ಅವರ ಅರಮನೆಯು ಇವತ್ತಿಗೆ ಒಂದು ಸಾರ್ವಜನಿಕ ದೇವಾಲಯವಾಗಿರುತ್ತದೆ ಸರ್ವ ಜನರ ಪ್ರೀತಿಗೂ ಭಕ್ತಿಗೂ ಪಾತ್ರವಾಗಿರುತ್ತದೆ

ಗ್ರಾಮಾಭ್ಯುದಯ ಕಾರ್ಯಕ್ಕೆ ಇಂಡಿಯಾ ಸರಕಾರದ ಗ್ರೇಂಟು.

ನವರಾಜಶಾಸನ ಪ್ರಕಾರ ರಚನೆಯಾಗುವ ನವ ಸರಕಾರದ ಆರ್ಥಿಕ ವ್ಯವಸ್ಥೆಯ ಮೇಲೆ, ಮಾಡಿದ ನೇಮಿಯರ್ ವರದಿಯಲ್ಲಿ ಪ್ರಾಂತಗಳಿಗೆ ಕೊಡಲಾಗುವ ಮಾರ್ಗೋಪಾಯ ಗ್ರೇಂಟಿನೊಂದಿಗೆ, ಗ್ರಾಮಾಭ್ಯುದಯ ಗ್ರೇಂಟನ್ನು ಕೊಡಿಸಿರುವರು ಆಮೇಲಿಂದ ಏನು ವ್ಯಕ್ತವಾಗುತ್ತದೆ? ಇಂಡಿಯಾ ಸರಕಾರವು ಮುಂದಕ್ಕೆ ಗ್ರಾಮಾಭ್ಯುದಯ ಕಾರ್ಯಗೋಸ್ಕರ, ವರ್ಷಂಪ್ರತಿ ಗ್ರೇಂಟು ಕೊಡುವುದುಂಡು, ಮೇಲಿನ ನೇಮಿಯರ್ ಸೂಚನೆಯಿಂದಲೂ, ಈಗಿನ ವೈಸರಾಯರು ಗ್ರಾಮಗಳ ಕಡೆಗೆ ಚೆಲ್ಲಿಸ ದೃಷ್ಟಿಯನ್ನು ಹಾಕುವವರಾದುದರಿಂದಲೂ, ಸರ್ವರೂ ಈ ತರದ ಅಭಿಪ್ರಾಯಪಡುತ್ತಿದ್ದಾರೆ, ಗ್ರಾಮಾಭ್ಯುದಯ ಕಾರ್ಯಗೋಸ್ಕರ ಒಂದು ಕೇಂದ್ರ ಬೋರ್ಡನ್ನು ಸ್ಥಾಪನೆ ಮಾಡುವ ಕುರಿತು ಇಂಡಿಯಾ ಸರಕಾರವು ಆಲೋಚಿಸುತ್ತದೆ. ಈ ಕಾರ್ಯಕ್ಕಾಗಿ ರಚನೆಯಾಗುವ ಬೋರ್ಡಿಗೆ ಈ ಬಗ್ಗೆ ಹುಂಬಾ ಕೆಲಸವಿರುವುದು, ಲೋಕಲ್ ಗವರ್ನಮೆಂಟುಗಳಿಗೆ ಸಂದ ಗ್ರೇಂಟುಗಳನ್ನು ಗ್ರಾಮಾಭ್ಯುದಯ ಕಾರ್ಯದಲ್ಲಿ ಹೇಗೆ ವಿನಿಯೋಗಿಸಬೇಕು, ಎಂಬುವದರ ಕುರಿತು ಈ ಬೋರ್ಡಿನವರು ಆಲೋಚಿಸಬೇಕಾಗುವುದು, ಈ ಬಗ್ಗೆ ಸಂದ ಹಣವನ್ನು ಅತಿ ಜಾಗರೂಕತೆಯಿಂದ ವ್ಯಯಿಸತಕ್ಕದು, ಯೋಗ್ಯ ಯೋಜನೆಗಳ ಮೇಲೆ ವಿನಿಯೋಗಿಸಲ್ಪಡಬೇಕು ಬೋರ್ಡಿನವರು ಗ್ರಾಮಾಭ್ಯುದಯ ಕಾರ್ಯದಲ್ಲಿ, ಇಂಡಿಯಾ ಸರಕಾರಕ್ಕೂ, ಪ್ರಾಂತಿಕ ಸರಕಾರಗಳಿಗೂ, ಹೆಚ್ಚು ಉಪಕಾರಿಯಾಗಬೇಕು, ಇವರ ಕಾರ್ಯಗಳು, ಪ್ರಾಂತೀಯ ಸರಕಾರ ಕಾರ್ಯಗಳೊಡನೆ ಸೇರಿ, ಗ್ರಾಮಾಭ್ಯುದಯ ಕಾರ್ಯ ಬಹಳ ಬಲಗೊಂಡುವಂತಾಗಬೇಕು. ಗ್ರಾಮಾಭ್ಯುದಯ ಕಾರ್ಯಕ್ಕಾಗಿ ರಚನೆಯಾಗುವ ಸೆಂಟ್ರಲ್ ಬೋರ್ಡು ಸರಿಯಾದ ರೀತಿಯಲ್ಲಿ ವ್ಯವಸ್ಥೆಗೊಂಡರೆ, ಕೇಂದ್ರ ಸರಕಾರಕ್ಕೂ, ಪ್ರಾಂತಿಕ ಸರಕಾರಗಳಿಗೂ, ಉಂಟಾಗುವ ಭೇದಾಭಿಪ್ರಾಯಗಳನ್ನು ತೆಗೆದುಹಾಕಬಹುದು, ಆದ್ದರಿಂದ ಈ ಬೋರ್ಡನ್ನು ಅದಷ್ಟು ಜಾಗ್ರತೆಯಿಂದ ರಚಿಸಬೇಕು, ಸರಿಯಾದ ಆಲೋಚನೆಯಿಂದ ಈ ಬೋರ್ಡಿನ ಕಾರ್ಯಕ್ರಮವು ರಚನೆಯಾಗಬೇಕು. ಗ್ರಾಮಾಭ್ಯುದಯವೆ ಈ ಬೋರ್ಡಿನವರ ಪೂರ್ಣ ಧ್ಯೇಯವಾಗಬೇಕು, ಮೇಲಿನ ಸೂತ್ರಗಳನ್ನನುಸರಿಸಿ, ಈ ಬೋರ್ಡನ್ನು ರಚಿಸುವುದಾದರೆ, ಈ ಬೋರ್ಡಿನಲ್ಲಿ, ಸರಕಾರಿ ಮತ್ತು ಉದ್ಯೋಗಸ್ಥರನ್ನು ಯಾ ಇನ್ನಿತರ ಪ್ರವೀಣರನ್ನು ಸೇರಿಸಿಕೊಳ್ಳದೆ, ರೈತರ ಪ್ರತಿನಿಧಿಗಳನ್ನೆ ಸೇರಿಸಿಕೊಳ್ಳುವುದು, ಉತ್ತಮವೆನಿಸುವುದು.

ಇಂಡಿಯಾ—ಸಿಲೋನ್ ಸಂಬಂಧ.

ಹಿಂದೂದೇಶ—ಸಿಲೋನ ವ್ಯಾಪಾರ ಸಂಬಂಧವನ್ನು ಸರಿಪಡಿಸುವರೆ ಸಿಲೋನಿನಲ್ಲಿ ಮಾತುಕತೆಗಳು ನಡೆಯುತ್ತಿವೆ, ದಕ್ಷಿಣ ಹಿಂದೂದೇಶಕ್ಕೆ ಸಿಲೋನಿನಿಂದ ತೆಂಗಿನಕಾಯಿಗಳು ಅತೀವವಾಗಿ ಸೇರುವುದರ ಕುರಿತು ದಕ್ಷಿಣ ಹಿಂದೀಯರು ಕಳವಳಪಟ್ಟು ಇಲ್ಲಿಂದ ಸಿಲೋನಿಗೆ ಹೋಗುವ ಕೂಲಿಯಾಳುಗಳ ಮೇಲೆ ಅಲ್ಲಿನವರು ಅನೇಕ ನಿರ್ಬಂಧಗಳನ್ನು ತರುವುದು, ಈ ಮಾತುಕತೆಗಳ ಕಾರಣವಾಗಿರಬಹುದು, ಈ ವ್ಯಾಪಾರಿಕ ಪ್ರಶ್ನೆಗಳಿಂದ ರಾಜಕೀಯ ಪ್ರಶ್ನೆಗಳನ್ನು ಬಿಡಿಸುವ ಪ್ರಯತ್ನಗಳು ನಡೆಯುತ್ತಿವೆ. ಎಂದಿನ ವರೆಗೆ ಹಿಂದೂದೇಶವು ಸಿಲೋನಿನಲ್ಲಿರುವ ತನ್ನ ಜನರಿಗೆ ಒದಗುವ ತೊಂದರೆಗಳ ಕುರಿತಾಗಿ, ಮತ್ತು ಇತರ ಪ್ರಶ್ನೆಗಳ ಕುರಿತಾಗಿ ಅಸಮಾಧಾನ ಪಡುತ್ತದೊ ಅಂದಿನ ವರೆಗೆ ಹಿಂದೂದೇಶಕ್ಕೂ ಸಿಲೋನಿಗೂ ಈ ಕುರಿತು ಒಳ್ಳೆ ಸಂಬಂಧ ಬೆಳೆಯುವ ಅಸಾಧ್ಯವು. ಆದ್ದರಿಂದ ಇಂಡೋ—ಸಿಲೋನ ವಿಷಯಗಳ ಕಾರಣ ಸರಿಯಾಗಿ ಪರಿಶೀಲಿಸಿ, ಅವುಗಳನ್ನು ನಿವಾರಿಸಲು ಒಪ್ಪಂದ ಇತ್ಯಾದಿಗಳನ್ನು ಬೆಳೆಯಿಸುವ ಹಕ್ಕುಳ್ಳ ಎರಡು ದೇಶಗಳ ಪ್ರತಿನಿಧಿಗಳ ಒಂದು ಪರಿಷತ್ತು ಸೇರಬೇಕು,

ಆದರೆ ಮೇಲಿನ ತರದ ಪರಿಷತ್ತನ್ನು ಜರಗಿಸಲು ಅಧಿಕಾರಿಗಳೂ ಯಾವತ್ತು ಪ್ರಯತ್ನಗಳನ್ನು ನಡೆಯಿಸಿದುದು ಕಂಡುಬರುವುದಿಲ್ಲ. ತಂಗಿನ ಕುರಿತು ಕಲಹವು ದಿನೇ ದಿನೇ ವೃದ್ಧಿಯಾಗುತ್ತಿದೆ ಹಿಂದೂದೇಶದ ತೆಂಗು ಬೆಳೆಯಿಸುವವರು ಇಂಡಿಯಾ ಸರಕಾರ ಈ ವಿಚಾರದಲ್ಲಿನ ವರ್ತನೆಯನ್ನು ನೋಡಿ, ಅಸಮಾಧಾನ ಹೊಂದಿರುವರು ಇವರ ಅಸಮಾಧಾನಕ್ಕೆ ಯೋಗ್ಯ ಕಾರಣಗಳೂ ಇವೆ ಹಿಂದೂದೇಶದ ಕೆಲವು ಸಾಮಾಗ್ರಿಗಳ ಮೇಲೆ ಸಿಲೋನ ಸರಕಾರವು ಡ್ಯೂಟಿ ಹೆಚ್ಚಿಸಿದುದು, ಅಲ್ಲಿ ನೆಲೆಸಿರುವ ಹಿಂದೀಯರ ಮೇಲೆ ವಕ್ರದೃಷ್ಟಿಯನ್ನು ಬೀರಿದುದು, ಇವುಗಳಿಂದ ಹಿಂದೂದೇಶವು ನಷ್ಟವು ಇನ್ನೂ ಹೆಚ್ಚಿದಂತಾಗಿದೆ ಹಿಂದೂದೇಶದಿಂದ ಧಾರಾಳ ವಸ್ತ್ರವು ಸಿಲೋನಿಗೆ ಹೋಗುತ್ತಿದೆ ಸೆಕ್ರಿಟರಿ ಒಫ್ ಸ್ಟೇಟ್ ಫೊರ್ ಕೊಲೊನಿಸ್ ಇವರು ಹಿಂದೂದೇಶಕ್ಕೆ ಯೋಗ್ಯವೆನಿಸುವ ಕೋಟಾವನ್ನು ರಚಿಸಿದರಿಂದ ಇವರ ಈ ವರ್ತನೆಗೆ ಸಿಲೋನಿನ ಸಮ್ಮತವಿರಲಿಲ್ಲ ಹಿಂದೂದೇಶದ ವಸ್ತ್ರ ವ್ಯಾಪಾರಿಗಳಿಗೆ ಇದರಿಂದ ತುಂಬಾ ಉಪಕಾರವಾಗಿದೆ ಈಗಿನ ಈ ಸ್ಥಿತಿಯನ್ನು ರಕ್ಷಿಸಿಕೊಳ್ಳುವ ಇಚ್ಛೆಯು ಅವರಲ್ಲಿದೆ. ಅದನ್ನು ರಕ್ಷಿಸಿಕೊಳ್ಳುವ ಬಗೆಯೆಂತು? ಇಂಡೋ ಸಿಲೋನಿನ ವ್ಯಾಪಾರ ಸಂಬಂಧವನ್ನು ಉತ್ತಮಗೊಳಿಸಿ ಅದರಿಂದ ಸಿಲೋನು ಹಿಂದೂದೇಶಕ್ಕೆ ಉಂಟಾದ ಪರಿಣಾಮಗಳನ್ನು ಯೋಗ್ಯ ರೀತಿಯಲ್ಲಿ ಪರಿಶೀಲಿಸಬೇಕು ಎರಡು ದೇಶಗಳಿಗೂ ಪರಸ್ಪರ ಹಿತಕರವೆನಿಸುವ ವ್ಯಾಪಾರ ಸಂಬಂಧ ಬೆಳೆಯಬೇಕು.

ಇದಲ್ಲದೆ, ಇತರ ಪ್ರಶ್ನೆಗಳಿವೆ, ಹಿಂದೀಯರ ಮಜೂರರು ತಮ್ಮಲ್ಲಿ ಉಂಟಾದ ನಿರುದ್ಯೋಗವನ್ನು ಹೋಗಲಾಡಿಸಲು ತಮ್ಮ ದೇಶವನ್ನು ಸೇರುವಂತೆ, ಅವರು ಅನೇಕ ನಿರ್ಬಂಧಗಳನ್ನು ತರುತ್ತಿದ್ದಾರೆ. ಆದರೆ ಸಿಲೋನಿನವರು ತಮ್ಮವರಿಗೆ ಉದ್ಯೋಗ ದೊರಕಿಸಲು ಈ ರೀತಿ ವರ್ತಿಸುವುದು ನ್ಯಾಯಸಮ್ಮತವು. ಆದರೆ ಅಲ್ಲಿ ಕೆಲವೆ ಮಂದಿ ಹಿಂದೀಯರು ಮಾತ್ರ ಇರುವರು. ಇವರನ್ನು ಹೊರತಳ್ಳುವ ಪ್ರಯತ್ನಗಳನ್ನು ಮಾಡದೆ ಅವರ ಹಿತವನ್ನು ಸಾಧಿಸುವುದು, ಇವರಿಗೆ ಉತ್ತಮವೆನಿಸುವುದು ಎಂತಾದರೂ ಇಂಡೋ—ಸಿಲೋನ ಸಂಬಂಧವನ್ನು ಸರಿಗೊಳಿಸುವುದು, ಇಬ್ಬರಿಗೂ ಯೋಗ್ಯವೆನಿಸುವುದು.

ಅನುಕ್ರಮಣಿಕೆ.

ನೋಟೀಸುಗಳು ೩
ಒಂದು ಶತಮಾನ ಹಿಂದೆ ೫
ಹಿಟ್ಲರನು ಮರದಿಂದಲೇ ಜಗತ್ತನ್ನು ಎದುರಿಸ ಬಲ್ಲನು. ೬
ಕೈಯಲ್ಲಿ ಕಾಸಿಲ್ಲದಾಗ ೮
ವಿವಿಧ ಸಮಾಚಾರಗಳು ೧೩
ಅಗ್ರಲೇಖ.
ಮಾತೃದೇವೋ ಭವ ೧೦
ಮಂಗಳೂರು, ತಾಲೂಕುಗಳಿಂದ ೧೧
ಸ್ಫುಟವಿಚಾರಗಳು ,,
ವರ್ತಮಾನ ಸಂಗ್ರಹ
ವನಿತಾ ವೈಭವ ೯

ಸ್ವದೇಶಾಭಿಮಾನಿ.

ತಾ. ೧ನೇ ಶುಕ್ರವಾರ ಮೇ ೧೯೩೬

"ಮಾತೃದೇವೋ ಭವ"

'ತಾಯಿಯು ದೇವರಷ್ಟೆ ಪೂಜಾಯೋಗ್ಯಳು' ಎಂಬೀ ನೀತಿಸೂತ್ರವನ್ನು, ಸುಸಂಸ್ಕೃತರಾದ ಆರ್ಯರು ಜನಾಂಗಕ್ಕೆಲ್ಲ ಬೋಧಿಸಿ, ಜಗತ್ತಿನಲ್ಲಿ ತಮ್ಮ ಸಭ್ಯತೆಯ ಗೌರವವನ್ನು ಬೆಳಗಿಸಿದರು. ನಾರೀ ಜಾತಿಯನ್ನೆ ಸನ್ಮಾನಿಸಿ ಮನೆಯಲ್ಲಿ ದೇವತೆಗಳು ನಲಿಯುತ್ತಿರಬೇಕಾದರೆ, ನಾರಿಯರೂ ಪೂಜ್ಯತೆಯಿಂದ ಮೆರೆಯುತ್ತಿದ್ದಿರಬೇಕು ಎಂದೂ ಅವರೆಂದರು. ಜನ್ಮದಾಯಿನಿಯಾಗಿ ಸಮಸ್ತ ಕಷ್ಟಕ್ಲೇಶಗಳನ್ನು ಸಹಿಸುತ್ತ ಕ್ಷಮೆಯಾಗ ಇವಿಶಿಷ್ಟಳಾಗಿ ಮೆರೆಯುವ ಮಾತೆಯೇ, ಜನ್ಮಭೂಮಿಗೆ ಸಮಾನಳೆಂದ ಜನ್ಮಭೂಮಿಯನ್ನೂ ಜನ್ಮದಾತೆಯನ್ನೂ ಒಂದೇ ತೂಕವಾಗಿಟ್ಟು, ಮಾತೆಯ ಪ್ರದಕ್ಷಿಣೆಯೆಂದರೆ ಭೂಪ್ರದಕ್ಷಿಣೆ ಸಮಾನವೆಂದೂ ಸಾರಿದರು.

ಇದೆಲ್ಲವೂ ಬರಿಯ ಕವಿಯ ಭಾವನೆಯಲ್ಲ, ಕಲ್ಪಿತ ನಿರ್ದೇಶವಲ್ಲ, ಕಿರಿಯರಿಗೊಂದು ಸಂದೇಶವೂ ಅಲ್ಲ. ಅದರ ಉದ್ದೇಶವೇ ಬೇರೆ. ಅದರ ಮಹತ್ವವು ಈಗ ತಾನೆ ಬಹಳ ಚೆನ್ನಾಗಿ, ನಮ್ಮ ದುರ್ದಿನಗಳಲ್ಲಿ ವಿದಿತವಾಗುತ್ತಲಿದೆ. ಕಾಲಕ್ರಮವಾಗಿ ಜನಾಂಗವು ತನ್ನ ಧ್ಯೇಯಗಳನ್ನು ಕಳೆದುಕೊಂಡು ಜೀವನೋದ್ದೇಶವನ್ನೇ ಮರೆತು, ದುರ್ದಶೆಗೆ ಈಡಾಗಿ ಬಂದಿದೆ. ಅದನ್ನು ತಿಳಿದುಕೊಂಡು ಜಾಗ್ರತವಾಗಿ ಪುನಃ ಆತ್ಮೋದ್ಧಾರಕ್ಕಾಗಿ ಚಳವಳಿಸುತ್ತಿದೆ. ಈ ಸಂದರ್ಭದಲ್ಲಿ ತಾನೆ, ಹಿಂದಣ ರೀತಿನೀತಿಗಳ ಕಡೆಗೆ ಲಕ್ಷ್ಯ ಕೊಡಲಾರಂಭಿಸಿದೆ. ಇದೊಂದು ಉತ್ತಮ ಚಿಹ್ನವಾಗಿದೆ ಎನ್ನಬೇಕು.

ತಾಯಂದಿರು ದೇವತಾ ಸಮಾನರಾಗಿ ಆರಾಧನೆಗೆ ಯೋಗ್ಯರು ಎಂದು ಪುನಃ ಜನಾಂಗವು ಕಂಡುಕೊಳ್ಳುವ ವಿಧಾನಗಳಲ್ಲಿಯೂ ಚೇಷ್ಟಾಟಗಳಲ್ಲಿಯೂ, ತಾಯಂದಿರ ಕಡೆಗೆ ಜನತೆಯ ಮತ್ತೂ ಸರಕಾರದ ಕಣ್ಣು ತಿರುಗಿದೆ. ಪ್ರತಿವರ್ಷವೂ ಜನನಮರಣಗಳನ್ನು ಲೆಕ್ಕವಿಡುವ ಇಲಾಖೆಯವರು, ಹೆಚ್ಚಿನಮಟ್ಟಿಗೆ ಪ್ರಾಮುಖ್ಯವಾಗಿರುವ ನಗರಗಳಲ್ಲಿ ಮಾತ್ರ ಕೆಲಸಮಾಡುತ್ತಿದ್ದು, ಹಳ್ಳಿಗಳಿಂದ ಅಂದಾಜಿನ ಸಂಖ್ಯೆಗಳನ್ನೆ ಪಡೆಯುತ್ತಿದ್ದಾರೆಯಾದರೂ, ರೋಗಗಳ ಹೆಸರುಗಳನ್ನು ವಿಚಾರವಿಲ್ಲದೆ ಕೈಗೆ ಬಂದಂತೆ 'ಭರ್ತಿ'ಮಾಡುತ್ತಿದ್ದಾರೆಯಾದರೂ, ಮಗುವಿನ ಹೆರಿಗೆಯಲ್ಲೇ ಮರಣ ಹೊಂದುವ (ಶತಶತದಿಯಲ್ಲದಿದ್ದರೂ ಸ್ತ್ರೀಯೀ ಆಗಿರುವ) ತಾಯಂದಿರ ವಾರ್ಷಿಕ ಮರಣ ಸಂಖ್ಯೆಯನ್ನು ನೋಡಿದರೆ, ಕಳವಳಿಸಬೇಕಾಗಿದೆ. ಪ್ರತಿ ವರ್ಷವೂ ಎರಡು ಲಕ್ಷ ಸ್ತ್ರೀಯರು ಹೆರುವಾಗಲೆ ಸಾಯುತ್ತಿರುವರು! ಈ ಸಂಖ್ಯೆಯು ನಾಲ್ಕು ಪಾಲಷ್ಟು ಸ್ತ್ರೀಯರು ಖಂಡಿತವಾಗಿಯೂ ಸಾಯುತ್ತಿದ್ದಾರೆಯಾದರೂ, ಅವರ ಲೆಕ್ಕ ಸಿಗುತ್ತಿಲ್ಲವಾಗಿ ತಜ್ಞರು ಅಭಿಪ್ರಾಯಪಡುವರು. ಅಂತೂ ಹತ್ತು ಲಕ್ಷ ತಾಯಂದಿರು 'ಲೆಕ್ಕ ಪ್ರಕಾರ' ಸಂತಾನಕ್ಕೆ ಜೀವ ಕೊಡುವ ಕರ್ತವ್ಯದಲ್ಲಿ ತಮ್ಮ ಜೀವನವನ್ನೆ ಕೊಡುವರಲ್ಲ.

ಜನ್ಮವೆತ್ತಿದ ಒಂದು ವರ್ಷದೊಳಗೆ ಮರಣಹೊಂದುವ ಕೂಸುಗಳ ಸಂಖ್ಯೆಯನ್ನೂ, ತಾಯಂದಿರ ಸಂಖ್ಯೆಯನ್ನೂ ಬೇರೆ ಲೆಕ್ಕ ಹಾಕಬೇಕಾಗುವುದು. ಹೀಗಿದ್ದರೆ, ನಮ್ಮ ಜನಾಂಗದಲ್ಲಿ ಮನೆಗೆ ಯಜಮಾನಿಯರೂ, ಮನೆಗೆ ಅಲಂಕಾರವಾಗಿರುವ ಕೂಸುಗಳೂ ವರ್ಷ ವರ್ಷಕ್ಕೆ ಎಷ್ಟು ಮರಣಹೊಂದುವರೋ ಅದರಿಂದ ಜನಾಂಗಜೀವನಕ್ಕೆ ಎಷ್ಟರ ಕುಂದು ಕೊರತೆಗಳಿವೆ ಎಂಬುದನ್ನು ಭಾವಿಸಿಯೆ ನಿಟ್ಟುಸಿರಿಡಬೇಕಾಗುವುದು.

೧೯೨೩ ಇಸವಿಯಿಂದ ೧೯೩೨ನೇ ಇಸವಿಯ ತನಕ ಹತ್ತು ವರ್ಷಗಳಲ್ಲಿ ಪ್ಲೇಗ್ ಮತ್ತು ಸಿಡುಬು ಎಂಬೀ ಮಹಾಮಾರಿಗಳಿಂದ ಯಾವ ವರ್ಷದಲ್ಲಾದರೂ ಇಡೀ ದೇಶದಲ್ಲಿ ಉಂಟಾಗಿದ್ದ ಮರಣಗಳ ಸಂಖ್ಯೆಗಿಂತ, ಪ್ರತಿ ವರ್ಷ ಹೆರಿಗೆಯ ಕಾಲದಲ್ಲಿ ಮರಣಹೊಂದುವ ತಾಯಂದಿರ ಸಂಖ್ಯೆಯು ಹೆಚ್ಚಾಗಿದೆ ಎಂದು ಸರಕಾರೀ ಲೆಕ್ಕವೇ ಸಿದ್ಧಾಂತಪಡಿಸಿರುವುದು. ಹೀಗಿದ್ದರೂ, ಗರ್ಭಿಣಿತನ ಎಂಬುದು, ಒಂದು ರೋಗವೇ ಅಲ್ಲವಷ್ಟೆ. ಉಸಿರಾಡುವುದು ಅನ್ನ ಜೀರ್ಣವಾಗುವುದು ಮಗು ಬೆಳೆದು ಮನುಷ್ಯನಾಗುವುದು ಮೊದಲಾದುವು ಹೇಗೆ ದೇಹಕ್ಕೆ ಸ್ವಾಭಾವಿಕ ವ್ಯಾಪಾರಗಳಾಗಿವೆಯೊ ಹಾಗೆಯೆ ಅಷ್ಟೆಯೆ ಗರ್ಭಿಣಿತನವೂ ಸ್ವಾಭಾವಿಕವೇ ಆಗಿದೆ. ಆದರೂ, ಮಹಾರೋಗಗಳಿಗಿಂತ ಹೆಚ್ಚಿನ ಮರಣವು ಈ ಸ್ವಾಭಾವಿಕ ಕ್ರಿಯೆಯಿಂದೇಕೆ ಉಂಟಾಗುತ್ತಿದೆ? ಅಂತಹ ಮಹಾರೋಗಗಳನ್ನಾದರೂ ತಡೆಗಟ್ಟಿ, ನಿವಾರಿಸಿ, ಜಾಡ್ಯಾಟನೆ ನಿಲಿಸುವವರು ಎಲ್ಲೆಲ್ಲಿಯೂ ಇರುವಾಗ, ದೇವತಾ ಸಮಾನವಾಗಿ ಗೌರವ ಹೊಂದುವ ಸ್ತ್ರೀಯ ಸ್ವಾಭಾವಿಕ ಜೀವನ ಕ್ರಿಯೆಗೆ ಬರಿಯ ಸೇವಾ ಉಪಚಾರಾದಿಗಳನ್ನು ಮಾಡುವವರೇ ಕಡಿಮೆಯಾಗಿರಬೇಕೆ? ದುರ್ದಶೆ ಎಂದರೆ ಇದೇ ಅಲ್ಲವೆ?

ಬಂಗಾಳ ಸರಕಾರವು ತನ್ನ ವರದಿಯಲ್ಲಿ ಹೇಳಿರುವಂತೆ,—ಪ್ಲೇಗ್, ವಾಂತಿಭೇದಿ ಸಿಡುಬು ಮೊದಲಾದುವು ಯಾವನನ್ನು ಪೀಡಿಸುವುವೊ ಆತನೆ ಮೃತನಾದರೆ, ಮನೆತನಕ್ಕೆ ಎಷ್ಟು ಕೊರತೆ ಇರಬಹುದೋ ಅದರ ನೂರು ಪಾಲಷ್ಟು ದುಃಖವೂ, ನ್ಯೂನತೆಗಳೂ ಒಬ್ಬ ತಾಯಿಯ ಮರಣದಿಂದ ಉಂಟಾಗುವುದು. ಮಗುವಿಗೆ ತಾಯಿ,ಗಂಡನಿಗೆ ಹೆಂಡತಿ—ಲೋಪವಾದಲ್ಲಿ ಮನೆಯೂ, ಕುಟುಂಬವೂ ಮಣ್ಣುಪಾಲಾಗುವುವು! ಮಗುವಿಗೆ ಆರೈಕೆಯಿಲ್ಲ, ತಾಯಿಯಂತೆ ಸಲಹುವ ದೈವವಿನ್ನಾವುದಿದೆ? ಮುಂದ ಎಂತಹ ಮಹತ್ವವನ್ನು ತಳೆಯಬಹುದಾಗಿದ್ದವನೂ, ಇಂತಹ ಮಾತೃ ಲಲನಾವಂಚಿತ ಬಾಲ್ಯದಲ್ಲಿ ಕಂಗೆಟ್ಟು, ಕುಂದಿ, ಬಾಡಿ ಕೇವಲ ಸಾಮಾನ್ಯನಾಗಿಯೇ ಪರವುಟ್ಟನಾಗಿಯೇ ಅನ್ಯಾಶ್ರಯದಿಂದಲೇ ಬೆಳೆವ ಹಾಗಾಗುವುದಲ್ಲವೆ?

ಮೇಲಣ ಲೆಕ್ಕದಂತೆ, ವರ್ಷಕ್ಕೆ ಹತ್ತು ಲಕ್ಷ ಕೂಸುಗಳೂ ಹತ್ತು ಲಕ್ಷ ಕುಟುಂಬಗಳೂ ಹಾಳಾಗುತ್ತಾ ಬರುವಂತಾದ್ದಲ್ಲಿ, ೩೫ ಕೋಟಿ ಸಂಖ್ಯಾಕ ಭಾರತೀಯರೆಂಬವರಲ್ಲಿ ಎಷ್ಟುಮಟ್ಟಿಗೆ ತಾನೆ ದುರ್ಧರ ದುಃಖಕ್ಕೆ ನೆಲೆಯಿದೆ ಎಂಬುದನ್ನು ಊಹಿಸುವುದು ಕಷ್ಟವಲ್ಲ.

ಜನತೆಯು ತಾಯಂದಿರನ್ನು ಸಂರಕ್ಷಿಸುವ ವ್ಯವಸ್ಥೆಮಾಡುವ ತನಕ,ಜನ್ಮಭೂಮಿಯ ಉದ್ಧಾರವು ತ್ವರೆಯಲ್ಲಿ ಕೈಗೂಡಲಾರದು.

ಸುಮಾರು ೧೬ ವರ್ಷ ವಯಸ್ಸಿನ ಬಾಲಿಕೆಯರಿಗೆ ಧಾತ್ರೀ ವಿದ್ಯೆ, ಶುಶ್ರೂಷೆ, ಬಾಳಂತಿ ರಕ್ಷಣೆ, ಶಿಶು ಸಂಗೋಪನ ಇತ್ಯಾದಿ ಅಗತ್ಯ ಮಾಹಿತಿಯನ್ನು ಕೊಡುವ ವ್ಯವಸ್ಥೆಯಿರಬೇಕು. ಗರ್ಭಿಣಿಯರಿಗೆ ಹೆರಿಗೆಯ ತನಕ, ಹೇಗೆ ಆರೋಗ್ಯವನ್ನೂ ಕಾಪಾಡಿ ಬರಬೇಕೆಂದು ಸುಲಭವಾಗಿ ಸೂಚಿಸುವ ಧಾತ್ರಿಯರು ಬೇಕು. ಹೆರಿಗೆಯ ಕಾಲದಲ್ಲಿ ಒಂದು ಕ್ಷಣದೊಳಗೆ ಉಂಟಾಗ ಬಹುದಾದ ಪ್ರಮಾದದಿಂದ, ಇಡೀ ಜೀವಮಾನವೂ ನಾನಾ ಬೇನೆ ವ್ಯಥೆಗಳಿಂದ ಮುಂದೆ ನರಳುವಂತಾಗುವ ಸಂಭವಗಳು ಇರುವುದರಿಂದ, ಅವನ್ನು ನಿವಾರಿಸುವ ಎಚ್ಚರವಿಡಲು ಅಗತ್ಯ ಜ್ಞಾನವುಳ್ಳ ಸೂಲಗಿತ್ತಿಯರೂ, ವೈದ್ಯರೂ ಇರಬೇಕಲ್ಲದೆ, ಅವರ ಸಹಾಯವೂ ಉಪಚಾರವೂ ಕಡೆಯಿಲ್ಲದೆ ಸಿಗುವಂತಾಗಬೇಕು. ಬಾಳಂತಿಯು ತನ್ನ ಮಗುವಿನ ಮತ್ತು ತನ್ನ ಮಗುವಿನ ಮತ್ತು ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳುವ ಸುಲಭ ಕ್ರಮಗಳನ್ನು ಆಗಲೆ ತಿಳಿಯುವ ಹಾಗೆ ಹತ್ತಿರವೆ ಹೇಳಿಕೊಡುವ ವ್ಯವಸ್ಥೆಯಿರಬೇಕು.

ತೀರ ಬಡವರಿಗೆ ಇಂತಹ ಅನುಕೂಲತೆಗಳು ಪ್ರತಿ ಸಮಾಜದಲ್ಲಿ ಹೇಗೆ ದೊರೆವುವು, ಅವನ್ನು ಹೇಗೆ ಒದಗಿಸಬಹುದು ಎಂಬ ವಿಚಾರವು ಸರ್ವ ಸಮಾಜಗಳ ಮುಖಂಡರುಗಳಲ್ಲಿ ಈಗ ಉಂಟಾದರೆ, ಆಯಾ ಸಮಾಜವು ಭಾಗ್ಯಶಾಲಿಯೆನ್ನಬಹುದು. ಮಾತೆಯರ ಸೇವೆಗಾಗಿಯೇ ಉತ್ತಮ ಆಶ್ರಯ ಸ್ಥಾನಗಳು ಉಂಟಾಗುವ ಹಾಗೆ ಯಾರು ಪ್ರಯತ್ನಿಸಿ ಪ್ರೋತ್ಸಾಹಿಸಿ ಸಹಕರಿಸುವರೋ, ಆ ತಹರೀ ಜನಾಂಗದಲ್ಲಿ ಪ್ರತಿಯೊಂದು ಸಮಾಜದ ಏಳಿಗೆಗೆ ಸಾಧಕರಾಗುವ ಪುಣ್ಯ ಪುರುಷರೆಂದೇ ಗಣನೆಗೆ ಬರತಕ್ಕವರು. ಅವರ ಪ್ರಯತ್ನಗಳಿಂದ ತಾನೆ ಭಾರತವಾಸಿಯರು ಹಿಂದಣ ಆರ್ಯರ ಮಾತಿನಲ್ಲೆ ಘೋಷಿಸಬಹುದು,—'ಮಾತೃ ದೇವೋ ಭವ'.

ಸ್ಫುಟವಿಚಾರಗಳು

ರಣರಂಗದಿಂದ

ಇಷ್ಟೂ ತಿಂಗಳು ಅಪಂಚಿತವಾದರೂ ಅತಿ ಭಯಂಕರವಾದ ಸಿಡಿಗುಂಡುಗಳ ಮಳೆಯಲ್ಲಿ ಸೈನಿಕರೊಡನೆ ನೆನೆದು ನೊಂದು ಕೊನೆಯ ತನಕ ತಾನೂ ತನ್ನ ಜನಾಂಗವೂ ಸೋತಿಲ ವೆಂದೇ ಭರವಸೆ ಹೇಳುತ್ತ, ಅಬಿಸೀನಿಯದ ಸಮ್ರಾಜರು ಸಪರಿವಾರವಾಗಿ, ಫ್ರೆಂಚರ ಬಂದರಿಗೆ ತಲುಪಿ, ಅಲ್ಲಿಂದ ಬ್ರಿಟಿಷ ಹಡಗನ್ನೇರಿ ಪೆಲೆಸ್ತೀನಕ್ಕೆ ಪ್ರಯಾಣ ಬೆಳಸಿದರೆಂದೂ, ರಾಜಧಾನಿಯಲ್ಲ ದಂಗೆ ಪುಂಡಾಟಿಕೆಗಳಿಗೆ ತುತ್ತಾಗಿದ್ದರೂ ಇಟಲಿಯಾನ ಸೈನಿಕರು ಸ್ವಾಗತಾಕಾಂಕ್ಷೆಯಿಂದ ಕಾಯುತಿದ್ದ ವಾರ್ತೆಯು ತಲುಪಿದೆ. ಜನಾಂಗ ಸಂಘದ ತಳಹದಿಯು ಅಲುಗುವಂತಾಗಿದೆ ಎಂದರೆ ತಪ್ಪಾಗದು. ಬ್ರಿಟಿಷ ಮಂತ್ರಿಯು ಹೇಳುವಂತೆ "ಕಳೆದ ಆರು ತಿಂಗಳ ಅನುಭವದಿಂದ, ಶಾಂತಿಗಾಗಿ ಏನೆಲ್ಲ ಮಾಡಬೇಕಾಗುವುದೋ ಅದನ್ನು ತ್ವರೆಯಲ್ಲಿ ಸಿದ್ಧಮಾಡದೆ ನಿರ್ವಾಹವಿಲ್ಲ." ಯುರೋಪಿನಲ್ಲಿ ಭಗ್ಗನೆ ಯುದ್ಧವು ಎಂದಿಗೆ ಹುಟ್ಟುವುದೋ ಹೇಳಬರುವಂತಿಲ್ಲ. ಆದರೆ, ಪ್ರತಿ ಸರಕಾರವು ಶಾಂತಿಗಾಗಿ, ಯುದ್ಧಸನ್ನಾಹ ಮಾಡತ್ತಲಿದೆ. ಇಟಲಿ ಅಬಿಸೀನಿಯಗಳೊಳಗೆ ಒಪ್ಪಂದವಾಗುವುದಾದರೆ ಹೇಗೆ ಎಂಬ ಪ್ರಶ್ನೆಯೊಂದಿದೆ; ಮುಖ್ಯ ಯುರೋಪಿಯ ಸರಕಾರಗಳಿಗೆ ಹಾನಿ ತಟ್ಟದಂತೆ, ಒಪ್ಪಂದವಾಗುವುದು. ಆದರೆ, ಯುದ್ಧ ಪ್ರಾರಂಭಿಸುವವರಿಗೆ ಬಂದು ಸಂಚಿಕಾರ ಕೊಟ್ಟಂತೆ, ಈ ಯುದ್ಧದಲ್ಲಿ ಇಟಲಿಯು ಮುಂದುವರಿವಂತೆ ಮಾಡಿರುವ ಸರಕಾರಗಳು ಸುರಕ್ಷಿತವಾಗಿರುವುದು ಸಾಧ್ಯವೆ?

ನಮ್ಮ ಗವರ್ನರರು

ನಾಲ್ಕು ತಿಂಗಳ ರಜೆ ಪಡೆದು ಇಂಗ್ಲೆಂಡಿಗೆ ತೆರಳುವರು. ಇವರ ಬದಲಾಗಿ ಸರ್ ಕೆ. ವಿ. ರೆಡ್ಡಿಯವರು ಗವರ್ನರರಾಗಿ ಆಗ ಅಧಿಕಾರ ನಡೆಸುವರು. ಗವರ್ನರರು ಇಂಗ್ಲೆಂಡಿಗೆ ತೆರಳುವುದು ಆರೋಗ್ಯ ಲಾಭಕ್ಕಾಗಿ ಎನ್ನುವುದಕ್ಕೆ ಕಾರಣಗಳಿಲ್ಲ, ಅವರೂ ಪರಿವಾರವು ಸೌಖ್ಯವಾಗಿಯೆ ಇದ್ದಾರೆ. ಹಲವು ಪ್ರಾಂತ್ಯಗಳ ಗವರ್ನರರು ಇದೇ ಸಮಯಕ್ಕೆ ಸರಿಯಾಗಿ ಇಂಗ್ಲೆಂಡಿನಲ್ಲಿದ್ದು, ೧೯೩೭ನೇ ಏಪ್ರಿಲ್ ನಿಂದ ಪ್ರಾಂತಿಕ ಸ್ವರಾಜ್ಯ ಕಾರ್ಯವು ಇಲ್ಲಿ ಪ್ರಾರಂಭವಾಗುವುದಕ್ಕೆ ಅಗತ್ಯ ತೋರುವ ಆಲೋಚನೆಗಳು ಇಂಡಿಯಾ ಸೆಕ್ರಿಟರಿಯವರೊಡನ ಪರಾಮರ್ಶಿಸುವರಾಗಿ ಬೇರೆ ವದಂತಿ ಇದೆ. ಅದಿರಲಿ. ಸರ್ ರೆಡ್ಡಿಯವರು ಸರಕಾರದ ಪ್ರಾಂತಿಕ ವ ವರಿಷ್ಠ ಕೌನ್ಸಿಲುಗಳಲ್ಲಿ, ಸ್ಥಳೀಯ ಸಂಸ್ಥೆಗಳಲ್ಲಿ, ನ್ಯಾಯ ವಿಧಾಯಕ ಹಾಗೂ ಕಾರ್ಯಕಾರೀ ಮಂಡಲದಲ್ಲಿ ಉತ್ತಮ ಕೆಲಸ ಮಾಡಿದ್ದು, ದಕ್ಷಿಣಾಫ್ರಿಕದಲ್ಲಿ ಸರಕಾರದ ಮುಕ್ತದಿಗಳಾಗಿಯೂ, ಯಶಸ್ಸನ್ನು ಸಂಪಾದಿಸಿರುವರು. ಜಸ್ಟೀಸ್ ಪಂಗಡಕ್ಕೆ ಬಹುಕಾಲದಿಂದ ಸೇರಿದ ಮುಖಂಡರಾಗಿರುವರಾದರೂ, ಅಧಿಕಾರವನ್ನು ಸ್ವೀಕರಿಸುತ್ತಲೆ, ಸ್ವಾಭಾವಿಕವಾಗಿ ಪಕ್ಷಗಳಾವುವೂ ಇಲ್ಲದಂತೆ ನಿಷ್ಪಕ್ಷವಾಗಿಯೆ ರಾಜ್ಯಭಾರವನ್ನು ನಿರ್ವಹಿಸುವರಾಗಿ ಸರ್ವ ಪಂಗಡಗಳೂ ಭರವಸೆಯಿಟ್ಟಿವೆ. ಮಧ್ಯ ಪ್ರಾಂತದ ಮಾನನೀಯ ಶ್ರೀ ರಾಘವೇಂದ್ರರಾಯರು ಅಲ್ಲಿನ ಗವರ್ನರರಾಗಿ ಬದಲು ಅಧಿಕಾರ ನಿರ್ವಹಿಸುವಾಗಲೆ, ಇವರೂ ಇಲ್ಲಿ ಅಂತಹ ಪದವಿಗೆ ಏರುವರು. ಮದ್ರಾಸಿನ ವಿಚಕ್ಷಣತೆಯನ್ನು ಆಗ ನೋಡಬಹುದು.

ಮದ್ರಾಸು ಸರಕಾರದ ನ್ಯಾಯ ವಿಚಕ್ಷಣತೆ

ಯಾವಾಗಲು ಆಯಕ್ಕೆ ತಕ್ಕಷ್ಟೆ ಅಥವಾ ಅದಕ್ಕಿಂತ ಕಡಮೆಯೇ ಆದ ವ್ಯಯವನ್ನು ಮಾಡಿ, ತಾವು ಸಬಲರ ಎಂದು ನಮ್ಮ ಸರಕಾರದ ಮೇಲಧಿಕಾರಿಗಳು ತಾವೇ ಕೊಂಡಾಡಿಕೊಂಡರು. ಇತರ ಪ್ರಾಂತ್ಯಗಳವರು, ಜನತೆಗೆ ಹಿತಕರವಾದ ಇಲಾಖೆಗಳಲ್ಲಿ ಅಧಿಕಾಧಿಕವಾಗಿ ಹಣ ಖರ್ಚುಮಾಡುತ್ತ, ಇಂಡಿಯಾ ಸರಕಾರದಿಂದ ಸಾಲಪಡೆದು ಬಂದರು. ಈಗ ಪ್ರಾಂತೀಯ ಸ್ವರಾಜ್ಯವು ತಲೆದೋರಲಿರುವ ಕಾಲದಲ್ಲಿ, ಪ್ರಾಂತ್ಯಗಳ ಆರ್ಥಿಕ ಸ್ಥಿತಿಯನ್ನು ವಿಮರ್ಶಿಸಲು ಬಂದಿರುವ ಸರ್ ನೀಮೆಯರ್ ರವರು ಪಾರ್ಲಿಮೆಂಟಿನ ಮುಂದಿಡಲು ತಯಾರಿಸಿರುವ ರಿಪೋರ್ಟಿನಲ್ಲಿ, ಬಂಗಾಳ, ಬಿಹಾರ ಅಸ್ಸಾಂ ಮೊದಲಾದ ಪ್ರಾಂತಗಳ ಸರಕಾರಗಳು ಇಂಡಿಯಾ ಸರಕಾರಕ್ಕೆ ಇನ್ನೂ ತೆರಲು ಉಳಿದಿರುವ ಸಾಲವನ್ನೇನೂ ಸಲ್ಲಿಸುವ ಅಗತ್ಯವಿಲ್ಲದಂತೆ ರದ್ದುಮಾಡಿ, ಮದ್ರಾಸು ಸರಕಾರವು ತೆರಬೇಕಾಗಿರುವ ಸಾಲವನ್ನು ಅಖಂಡವಾಗಿ ಇಟ್ಟಿರುವರು. ಆದರೂ, ಈ ಸಾಲವನ್ನು ಒಂದಾಗಿ ಗಂಟು ಕಟ್ಟಿರುವ ಕಾರಣದಿಂದ ಸರ್ ನೀಮಾಯರ್‌ರವರು, ನಮ್ಮ ಸರಕಾರಕ್ಕೆ ೨೬॥ ಲಕ್ಷ ರೂಪಾಯಿಗಳನ್ನು ಉಳಿತಾಯವಾಗಿ ಮಾಡಿಕೊಟ್ಟಿರುವರು. ಹೀಗಾಗಿ, ನಮ್ಮ ಸರಕಾರವೂ ಮುಂದಣ ವರ್ಷ ಪ್ರಜಾಹಿತಕಾರ್ಯಗಳಿಗೆ ೨೬॥ ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ವ್ಯಯಿಸಬಹುದಾಗಿದೆ. ಹಿಂದಣ ವಿಚಕ್ಷಣತೆಯಿಂದ, ಅದನ್ನು ಹಾಗೆ ಡಿಪಾಜಿಟ್ಟು ಇಟ್ಟುಕೊಂಡು ಬೆನ್ನು ತಟ್ಟಿಕೊಳ್ಳುವರೆ? ಅಥವಾ ವಿದ್ಯಾಭ್ಯಾಸ, ವೈದ್ಯ ಸಹಾಯ ಗ್ರಾಮೋನ್ನತಿಗಳಿಗಾಗಿ ವ್ಯಯಿಸುವರೆ ನೋಡಬೇಕು.

ಮಂಗಳೂರು.

ಇಲ್ಲಿಯ ಪ್ರಸಿದ್ಧ ಸಾಹಿತಿಗಳೂ ಕಲಾಜ್ಞಗಳೂ ಆದ ಶ್ರೀ ಕೋಟ ಶಿವರಾಮಕಾರಂತರು ಮೊನ್ನೆ ತಾರೀಖು ೬-೫-೩೬ನೇ ಬುಧವಾರ ದಿನ, ಇಲ್ಲಿನ ಬಿಜೈಯಲ್ಲಿ ವಾಸವಾಗಿರುವ ಶ್ರೇಷ್ಠ ಬಂಟರ ಮನೆತನದ ಶ್ರೀ ಕೆ. ಟಿ. ಆಳ್ವರ ಪುತ್ರಿಯಾದ ಶ್ರೀಮತಿ ಲೀಲಾ ಆಳ್ವರನ್ನು ರಿಜಿಸ್ಟ್ರೇಶನ್ ಪ್ರಕಾರ ವಿವಾಹವಾದರು. ವಿವಾಹವನ್ನು ರಿಜಿಸ್ಟ್ರ ಮಾಡುವ ಕಾರ್ಯವು ಅಂದು ಬೆಳಗ್ಗೆ ಶ್ರೀ ಕೆ. ಟಿ. ಆಳ್ವರ ಸದನದಲ್ಲಿ ಊರಿನ ಮತ್ತು ಪರವೂರಿನ, ಶ್ರೀ ಕೆ. ಟಿ. ಆಳ್ವರ ಮತ್ತು ಶ್ರೀ ಕಾರಂತರ ಸ್ನೇಹಿತರಾದ ಅನೇಕ ಮಹನೀಯರ ಮುಂದೆ, ನಿವೃತ್ತ ಡೆಪ್ಯುಟಿ ಕಲೆಕ್ಟರವರಾದ ಶ್ರೀ ಯು ಮಂಜಪ್ಪನವರಿಂದ ನಡೆಸಲ್ಪಟ್ಟಿತು. ನಂತರ ವಧೂವರರು ಪರಸ್ಪರ ಹೂಮಾಲೆ ಉಂಗುರಗಳನ್ನು ಹಾಕಿಕೊಂಡು, ವಿವಾಹಕಾರ್ಯವು ಕೊನೆಗೊಂಡಿತು. ವಿವಾಹಸಮಾರಂಭಕ್ಕೆ ಸೇರಿದ ಮಹನೀಯರಿಗೆ ಶ್ರೀ ಆಳ್ವರಲ್ಲಿ ಔತಣವಿತ್ತು. ನಂತರ ರಾತ್ರೆ ಘಂಟೆ ೮ಕ್ಕೆ ಶ್ರೀ ಕಾರಂತರ ಪರವಾಗಿ ಶ್ರೀ ರಮಾನಂದರಾಯರ ಮನೆಯಲ್ಲಿ ಒಂದು ಟೀಪಾರ್ಟಿ ಕೂಟವು ಇತ್ತು. ಊರಿನ ಅನೇಕ ಪ್ರಮುಖರು ಇಲ್ಲಿ ನೆರೆದು



ಶ್ರೀ ಶಿವರಾಮ ಕಾರಂತರು.

ಬಂದಿದ್ದರು. ಈ ಸತ್ಕಾರಕೂಟದ ಅಂಕ್ಯದಲ್ಲಿ ಶ್ರೀ ಕಾರಂತರು ರಚಿಸಿದ "ಕೆರೆಯ ಮರೆಯಲ್ಲಿ" ಮತ್ತು "ದೃಷ್ಟಿಸಂಗಮ"ವೆಂಬ ಎರಡು ಗ್ರಂಥಗಳು ವಧೂವರರಿಂದ ನೆರೆದ ಅತಿಥಿಗಳಿಗೆ ಹಂಚಲಾಯಿತು.

ಶ್ರೀ ಶಿವರಾಮ ಕಾರಂತರು ಉಚ್ಛತರಗತಿಯ ಕೋಟ ಬ್ರಾಹ್ಮಣರಾಗಿದ್ದು, ಶ್ರೀಮತಿ ಲೀಲಾ ಆಳ್ವರು ಬಂಟರ ಜಾತಿಯ ಕನ್ಯೆಯಾಗಿದ್ದು ಇವರೊಳಗೆ ನಡೆದ ಈ ಅಂತರ್ಜಾತೀಯ ವಿವಾಹವು ಬಹಳ ಶ್ಲಾಘನೀಯವಾದುದು.

ಮೊನ್ನೆ ಚಿಕ್ಕಮಗಳೂರಿನಿಂದ ಅಡಿಕೆ ಗೋಣಿಗಳನ್ನು ತುಂಬಿಕೊಂಡು ಬರುತ್ತಿರುವ ಮೋಟಾರು ಲಾರಿಯೊಂದು ಚಾರ್ಮಾಡಿ ಘಾಟಿಯನ್ನು ಇಳಿಯುತ್ತಿರುವಾಗ, ಅದನ್ನು ಚಲಾಯಿಸುವ ಚಕ್ರ್ಯಾಣಯಂತ್ರದ ಒಂದು ಭಾಗವು ಮುರಿದುಹೋಗಿ ಲಾರಿ ಹಿಂದು ತಿರುಗುವ ಸ್ಥಳದಲ್ಲಿ ತಿರುಗದೆ, ನೇರವಾಗಿ ಚಲಿಸಿ ಬದಿಯಲ್ಲಿರುವ ಗೋಡೆಯನ್ನು ಕೆಡವಿ, ಸಾಧಾರಣ ೪೦೦-೫೦೦ ಅಡಿ ಕೆಳಗಿರುವ ಘೋರ ಅರಣ್ಯದಲ್ಲಿ ಬಿದ್ದು ಕಣ್ಮರೆಯಾಗಿರುತ್ತದೆ. ದೈವವಶಾತ್ ಲಾರಿ ಡ್ರೈವರನೂ ಕಂಡಕ್ಟರನೂ ಬೇಗನೆ ಲಾರಿಯಿಂದ ಕೆಳಗೆ ಹಾರಿ ತಮ್ಮ ಜೀವವನ್ನು ಉಳಿಸಿಕೊಂಡರು. ಕೆಳಗೆ ಹಾರುವ ಸಮಯ ಡ್ರೈವರನ ಕೈಯು ಲಾರಿಯೊಳಗೆ ಸಿಲುಕಿ ತುಂಡಾಗಿರುವುದೆಂದು ತಿಳಿದುಬರುತ್ತದೆ.

ನಮ್ಮ ಈಗಿನ ಜಿಲ್ಲಾ ಕಲೆಕ್ಟರರಾಗಿರುವ ಮಾ॥ ರಾ॥ ಹುಮಾಯೂನ ಸಾಹೇಬ ಬಹದೂರರ ಪುತ್ರರು ರೋಗಪೀಡಿತರಾಗಿ ಮದ್ರಾಸಿನಲ್ಲಿ ಚಿಕಿತ್ಸೆಹೊಂದುತ್ತಿದ್ದವರು ಮೊನ್ನೆ ಆಕಸ್ಮಾತ್ತಾಗಿ ಮೃತರಾಗಿರುವರೆಂದು ತಿಳಿದುಬರುತ್ತದೆ. ನಮ್ಮ ಕಲೆಕ್ಟರವರು ಈ ನಿಮಿತ್ತ ಮದ್ರಾಸಿಗೆ ತೆರಳಿರುವರು. ಸ್ವದೇಶಾಭಿಮಾನಿಯು ರಾ॥ ಹುಮಾಯೂನ್ ಸಾಹೇಬರೊಡನೆ ಸಂತಾಪಿಸುತ್ತಾ ಇಲ್ಲದೆ, ಮೃತರ ಆತ್ಮಕ್ಕೆ ದೇವರು ಶಾಂತಿಯನ್ನೀಯಲೆಂದೂ ಹಾರೈಸುತ್ತಿದ್ದಾಳೆ.

ಬಂಟರ ಯಾನೆ ನಾಡವರ ಸಮಾಜದ ಕೆಲಮಂದಿ ಯುವಕರು ತಮ್ಮಿಂದ ಕೂಡಿದಷ್ಟು ಸಮಾಜಸೇವೆ ಮಾಡಬೇಕೆಂಬ ಸದುದ್ದೇಶದಿಂದ "ಶ್ರೀ ರಾಮಕೃಷ್ಣ ಯುವಕ ಸಂಘ"ವೆಂಬ ಸಂಘವೊಂದನ್ನು ಇದೇ ತಾ. ೫ನೇ ಮಂಗಳವಾರ ಇಲ್ಲಿಯ ಮಣ್ಣಗುಡ್ಡೆಯ ಬಳಿ ಕಂಬಳ ಎಂಬಲ್ಲಿ ಸ್ಥಾಪಿಸಿರುವರು. ಸ್ವಜಾತಿ ಯುವಕರು ಸೇರಿ ಪ್ರೋತ್ಸಾಹಿಸಬೇಕಾಗಿ ಸದ್ರಿ ಸಂಘದ ಮೆಂಬರರೆಲ್ಲ ಬ್ಬರು ತಿಳಿಸುತ್ತಾರೆ.

ಇಲ್ಲಿಂದ ದುಮಕೂರಿಗೆ ಟ್ರಾನ್ಸ್‌ಫರ್ ಆದ ಶ್ರೀ ಪಿ. ಟಿ. ರಾಘವನ್ ಇವರು ಮೊನ್ನೆ ಬುಧವಾರ ಮದ್ರಾಸಿಗೆ ತೆರಳಿರುವರು. ಇನ್‌ಕಮ್‌ಟ್ಯಾಕ್ಸ್ ಆಫೀಸಿನವರು ಇವರು ನವೀನ ಆಫೀಸರರೊಡನೆ ಚಾರ್ಜುಕೊಟ್ಟ ದಿನ ಇವರಿಗೊಂದು ಸತ್ಕಾರಕೂಟವನ್ನು ಕೊಟ್ಟರು. ನಂತರ ಫೋಟೋ ತೆಗೆಯಲಾಯಿತು.

ಇಲ್ಲಿನ ಸಬ್ ರಿಜಿಸ್ಟ್ರಾರರಾಗಿದ್ದ ಶ್ರೀ ಪದ್ಮನಾಭ ಪ್ರಭುಗಳು ನಿವೃತ್ತರಾಗಲು, ೪ ತಿಂಗಳ ರಜೆಯನ್ನು ಪಡೆದುಕೊಂಡಿರುವರು. ಇವರು ಸರ್ವಜನ ಪ್ರೀತಿಗೆ ಪಾತ್ರರಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಹರಿಜನ ಸೇವಕ ಸಂಘದ ಮುಂದಿನ ಕೆಲಸದ ಕುರಿತು ವಿಚಾರಿಸುವ ಬಗ್ಗೆ ಸಂಘದ ಕಮಿಟಿಯು ತಾ. ೧೦-೫-೩೬ನೇ ಆದಿತ್ಯವಾರದ ಮಧ್ಯಾಹ್ನ ಗಂಟೆ ೩ಕ್ಕೆ ಮಂಗಳೂರು ಡಿ. ಸಿ. ಮಿಶನಿನ ಹಾಲಿನಲ್ಲಿ ಕೂಡಲಿಕ್ಕಿದೆ. ಸದಸ್ಯರೆಲ್ಲರೂ ತಪ್ಪದೆ ಬರಬೇಕಾಗಿ ಸದ್ರಿ ಸಂಘದ ಕಾರ್ಯದರ್ಶಿಗಳ ವಿನಂತಿ.

ಇದೇ ಬರುವ ತಾ ೧೧ನೆಯ ಸೋಮವಾರ ಸಂಜೆ ಗಂಟೆ ೬ರಿಂದ ೮ರ ವರೆಗೆ ಶ್ರೀ ಶರವಿನ ಮಹಾಗಣಪತಿ ದೇವಸ್ಥಾನದಲ್ಲಿ ಕೀರ್ತನಾನಂದಿನಿ ಶ್ರೀ ಭೂದೇವಿ ಎಂಬ ಬಾಲಕಿಯ ಹರಿಕೀರ್ತನೆಯೊಂದು ನೆರವೇರಲಿರುವುದು. ಸರ್ವರಿಗೂ ಸುಸ್ವಾಗತವಿದೆ.

ಇಲ್ಲಿನ ಕ್ರಿಸೆಂಟ್ ಕ್ಲಬ್ಬಿನವರು ಕಳೆದ ಶುಕ್ರವಾರ ದಿನ, ಬಿಗುಪ್ತದ ಅರಸರಾದ ಫುವಾಡರು ದಿವಂಗತರಾದುದಕ್ಕೆ ಸಂತಾಪಸೂಚಕ ಸಭೆಯನ್ನು ಜರಗಿಸಿದ್ದರು. ಸಭೆಯಲ್ಲಿ ಅರಸ ಫುವಾರ್ಡರ ಕುರಿತು ಭಾಷಣಗಳಾಗಿ ಕೊನೆಗೆ ಸಂತಾಪಸೂಚಕ ಠರಾವು ಮಾಡಲಾಯಿತು.

ಸ್ಥಳೀಕ ಕೃಷ್ಣ ಸಿನೇಮಾ ಮಂದಿರದಲ್ಲಿ ಇದೇ ತಾ ೮ರಿಂದ ಪ್ರಸಿದ್ಧ ಹಾಸ್ಯಗಾರನಾದ ಎಡ್ಡಿ ಕೆಂಟರನಿಂದ ಅಭಿನಯಿಸಲ್ಪಟ್ಟ "ರೋಮನ್ ಸ್ಕೇಂಡಲ್ಸ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು. ಈ ಚಿತ್ರವು ಅನೇಕ ಹಾಸ್ಯಗಳಿಂದ ಕೂಡಿದ್ದು ಹಿಂದೂದೇಶದ ಇತರ ಕಡೆಗಳಲ್ಲಿ ಜನರ ಮೆಚ್ಚುಗೆಗೆ ಪಾತ್ರವಾಗಿರುತ್ತದೆ. ನಂತರ ಮಿಸ್ ಸುಲೋಚನಾ ಎಂಬವಳಿಂದ ಅಭಿನಯಿಸಲ್ಪಟ್ಟ ಪ್ರಸಿದ್ಧ ಅನಾರ್ಕಲಿ ಎಂಬ ಹಿಂದೀ ಚಿತ್ರವೂ ದಿ ಕಾಲ್ ಆಫ್ ದಿ ಜಂಗ್ಲ್ ಎಂಬ ಅರಣ್ಯಸಾಹಸಗಳಿಂದೊಡಗೂಡಿದ ಆಂಗ್ಲೇಯ ಚಿತ್ರವೂ ಪ್ರದರ್ಶಿಸಲ್ಪಡುವುದು.

ಇದೇ ಬರುವ ತಾ ೧೭ನೇ ಆದಿತ್ಯವಾರ ಗವರ್ನಮೆಂಟ್ ಕಾಲೇಜಿನಲ್ಲಿ ನವ್ಯ ದಿವಂಗತ ರಾವ್ ಭಾಮಂದ ಸ್ಮಾರಕ ನಿಧಿಯ ಮೀಟಿಂಗು ಜರುಗಿದ ಬಳಿಕ ಕಳೆದ ಸಲ ಇಲ್ಲಿ ಜರಗಿದ ಕೃಷಿಕೈಗಾರಿಕೆಗಳ ಪ್ರದರ್ಶನದಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಗುವುದೆಂದು ತಿಳಿದುಬರುತ್ತದೆ.

ಇದೇ ತಾ ೩ರಲ್ಲಿ ಕೆನರಾ ಹೈಸ್ಕೂಲಿನ ಸುಬ್ಬರಾವ್ ಮೆಮೋರಿಯಲ್ ಹಾಲಿನಲ್ಲಿ ಗೌಡಸಾರಸ್ವತ ಸಮಾಜದವರಿಗೆ ಮುಖ್ಯವಾಗಿಯೂ ಇತರ ಸಮಾಜದವರಿಗೆ ಸಹ ಮುಂದೆ ಅನುಕೂಲವಾಗುವ ಹಾಗೆಯೂ ಒಂದು ಹೆಂಗಸರ ಆಸ್ಪತ್ರೆಯನ್ನು ಹೆಂಗಸರು ಮಕ್ಕಳ ಕ್ಷೇಮ ಸಾಧನೆಯ ಶುಶ್ರೂಷಾಗಾರದೊಡನೆ ಸ್ಥಾಪಿಸುವರೆ ಹಲವರ ಸಭೆಯು ಡಾ॥ ಬಿ. ರಾಮಬಾಳಿಗರು, (ನಿವೃತ್ತ ಜಿ॥ ಸರ್ಜನ್) ಇವರ ಅಧ್ಯಕ್ಷತೆಯಲ್ಲಿ ಸೇರಿತು. ಸಮಾಜಕ್ಕೆ ಸೇರಿರುವ ೧೨ ಮಂದಿ ಉತ್ಸಾಹಿ ತರಬೇತು ಹೊಂದಿದ ಡಾಕ್ಟರರು ಇದರಲ್ಲಿ ಸೇವೆಯನ್ನು ವಹಿಸಲು ಸಿದ್ಧರಾಗಿರುವರೆಂದು ತಿಳಿದುಬಂದಿದೆ. ಇತರ ಇಂಥಹ ಸೇವಾಶ್ರಮಗಳೊಡನೆ ಅನುಕೂಲಸಂಬಂಧವನ್ನಿಟ್ಟು ಕೊಂಡು ಈ ಆಸ್ಪತ್ರೆಯನ್ನು ೧೨ ಮಂದಿ ಬಾಣಂತಿಯರಿಗೆ ಸೌಕರ್ಯ ದೊರಿವಂತೆ ಮೊದಲು ಸ್ಥಾಪಿಸಬೇಕಾಗಿ ನಿರ್ಧರಿಸಿ, ಅದರ ಸಲುವಾಗಿ ಹಣವನ್ನು ಕೂಡಿಸಿ ಬೇಕಾಗುವ ವ್ಯವಸ್ಥೆಯನ್ನು ಮಾಡಿ ಸಂಘವನ್ನು ರಿಜಿಸ್ಟರು ಮಾಡುವರೆ ನಿಯಮ ನಿಬಂಧನೆಗಳನ್ನು ಸಹ ಸಿದ್ಧಪಡಿಸಲು ಒಂದು ಕಮಿಟಿಯನ್ನು ನೇಮಿಸಲಾಗಿದೆ. ಶ್ರೀ ಎ ದಾಮೋದರ ಪೈ ಬಿ ಎ ಬಿ ಎಲ್ ಇವರ ಕಾರ್ಯದರ್ಶಿಗಳಾಗಿಯೂ, ಶ್ರೀ ಸಾಹುಕಾರ ಎಂ ವೆಂಕಟೇಶ ಪೈಗಳು ಕೋಶಾಧ್ಯಕ್ಷರಾಗಿಯೂ ಇರುವ ಕಾರ್ಯಕಾರೀ ಕಮಿಟಿಗೆ ಶ್ರೀ ಅಮ್ಮೆಂಬಳ ಶ್ರೀನಿವಾಸಪೈಯವರೇ ಅಧ್ಯಕ್ಷರಾಗಿರುವರು. ಇವರ ಪ್ರಯತ್ನಗಳು ಬೇಗನೇ ಫಲಕಾರಿಯಾಗುವುದೆಂದು ಹಾರೈಸಲಾಗಿದೆ.

ಮೊನ್ನೆ ಆದಿತ್ಯವಾರ ರಾತ್ರಿ ಇಲ್ಲಿ ಕಠಿಣ ಗಾಳಿಯು ಬೀಸಿ ಅನೇಕ ಮರಗಳು ಕೆಡಲ್ಪಟ್ಟವು. ಮನೆಯ ಹಂಚುಗಳೂ ಹಾರಿಹೋದವು. ವಿದ್ಯುತ್ ಪ್ರವಾಹದ ಸರಿಗೆಗಳು ಒಂದಕ್ಕೊಂದು ತಗಲಿ 'ಫ್ಯೂಜ್'ಗಳು ಸುಟ್ಟು ಹೋಗಿ ಅನೇಕ ಮನೆಗಳಲ್ಲಿ ಕತ್ತಲೆಗೆ ಕಾರಣವಾಯಿತು.

ತಾಲೂಕುಗಳಿಂದ.

ಉಡುಪಿ—ತಾ. ೩ನೆಗೆ ಜಿಲ್ಲಾ ಬೋರ್ಡು ಅಧ್ಯಕ್ಷರಾದ ದಿ ಬ ಮಹಾಬಲ ಹೆಗ್ಡೆಯವರನ್ನು ಸನ್ಮಾನಿಪರೆ ಸ್ವಜಾತಿ ಗೃಹಸ್ಥರಿಂದ ಒಂದು ಉಪಹಾರಕೂಟವು ಪೇಟೆಯೊಳಗಿನ ಮುಕಾಶಿ ಬಂಗ್ಲೆಯಲ್ಲಿ ಜರುಗಿಸಲ್ಪಟ್ಟಿತು.

ನವಸುಧಾರಣೆಯ ಮಸೂದೆಯಂತೆ ಹೊಸತಾಗಿ ನಿರ್ಮಾಣವಾಗಲಿರುವ ಮದ್ರಾಸು ನ್ಯಾಯವಿಧಾಯಕ ಸಭೆಯ ಸದಸ್ಯತನಕ್ಕೆ ಕುಂದಾಪುರ ಡಿವಿಜನಿನಿಂದ ವಕೀಲ ಶ್ರೀ ಎಂ ವಿಟ್ಠಲ್ ಕಾಮತರು ತಮ್ಮ ಉಮೇದ್ವಾರಿಕೆಯನ್ನು ಪ್ರಕಟಿಸಿರುತ್ತಾರೆ. ಇವರು ತಾಲೂಕು ಮತ್ತು ಜಿಲ್ಲಾ ಬೋರ್ಡುಗಳಲ್ಲಿ ನುರಿತ ಕೆಲಸಗಾರರಿದ್ದು ಬಡವರ ಹಾಗೂ ರೈತರ ಅಹವಾಲೆಗಳನ್ನು ಚೆನ್ನಾಗಿ ಅರಿತಿರುವವರಾಗಿರುತ್ತ, ಇವರನ್ನು ಜಯಶೀಲರಾಗಗೊಳಿಸಿದ್ದಲ್ಲಿ ನಮ್ಮ ಡಿವಿಜನಿನಿಂದ ಇಷ್ಟು ಸಮಯ ಪ್ರಾತಿನಿಧ್ಯವಿಲ್ಲದ ಕೊರತೆಯೂ ನೀಗುವುದು.

ಮದ್ರಾಸು ಕೋರ್ಪರೇಶನಿನಲ್ಲಿ ಸ್ಕಾಲರಿಗೆ ಆರ್ಧವಷಾಕ್ಕೆ ೮ ಆಣೆ, ಮಂಗಳೂರಿನಲ್ಲಿ ೧ ರೂ, ಆದರೆ ಹೊಸತಾಗಿ ನಿರ್ಮಾಣಗೊಂಡಿರುವ ಬಡ ಉಡುಪಿ ಮ್ಯುನಿಸಿಪಾಲಿಟಿಯಲ್ಲಿ ಮಾತ್ರ ರೂ ೧-೮ ರಂತೆ ತೆರಿಗೆ ನಿಯಮಿಸಿದ ಧೋರಣೆಯನ್ನು ಹಾಲಿ ಸ್ಪೆಶಲ್ ಆಫೀಸರರು ಬದಲಾಯಿಸಲಾರರೇ? ಈಗ್ಗೆ ರೆವಿನ್ಯೂ ಇನ್ಸಪೆಕ್ಟರರ ಗ್ರೇಡಿನ ಮನೆತೆರಿಗೆಯನ್ನು ನಿಶ್ಚಯಿಸುವ ಆಫೀಸರರು ನೇಮಕಪಟ್ಟಿರುವರೆಂದು ತಿಳಿದುಬಂದಿರುವ. ಬಡವರು ಶ್ರೀಮಂತರೆಂದು ಹೆಚ್ಚು ಮಂದಿ ಸ್ವಂತ ಮನೆಗಳಲ್ಲಿರುತ್ತ, ಸದ್ಯದ ಆರ್ಥಿಕ ಅವನತಿಯ ದೃಷ್ಟಿಯಿಂದ ಮನೆತೆರಿಗೆಗಳನ್ನು ನಿಶ್ಚಯಿಸುವ ವೇಳೆ ದಯಾದೃಷ್ಟಿಯಿಂದ ಮಿತವಾಗಿ ತೆರಿಗೆಹೊರಿಸುವಂತಾಗಲೆಂದು ಮಹಾಜನರ ಅಪೇಕ್ಷೆ. ಅಂದರೆ ಈ ತೆರಿಗೆಯು ಮುಂದಕ್ಕೆ ೫ ವರ್ಷಗಳ ವರೆಗೆ ಬದಲಾಯಿಸಲಾಗುವುದಿಲ್ಲವಂತೆ.

ಕಳೆದ ಆದಿತ್ಯವಾರ ಇಲ್ಲಿನ ಕೆಲ ಪ್ರಮುಖರು ಮಂಗಳೂರಿನ ಲಾರ್ಡ ಬಿಶಪರನ್ನು ಭೆಟ್ಟಿಯಾಗಿ ಉಡುಪಿಗೆ ಒಂದು ಸೆಕೆಂಡ್ರಿ ಗ್ರೇಡ್ ಕಾಲೇಜನ್ನು ಸ್ಥಾಪಿಸುವಂತೆ ಅರಿಕೆಮಾಡಲಾಯಿತಂತೆ. ತಮಗೆ ಫೀಡರ್ ಆಗಿದ್ದ ಸ್ಥಳೀಯ ಹೈಸ್ಕೂಲನ್ನು ಕೊಡಿಸಬೇಕೆಂದು ಲಾರ್ಡ ಬಿಶಪರು ಅಪೇಕ್ಷಿಸಿದುದಕ್ಕೆ ತಾವು ಆ ಮಟ್ಟಿಗೆ ಭರವಸೆ ಕೊಡಲಾಗುವುದಿಲ್ಲವೆಂದೂ ಉಡುಪಿಯಲ್ಲಿ ಬರೇ ಕಾಲೇಜನ್ನು ಸ್ಥಾಪಿಸಲಾಗದಿದ್ದರೆ ತಮ್ಮದೇ ಆದ ಹೈಸ್ಕೂಲೊಂದು ಕಲ್ಯಾಣಪುರದಲ್ಲಿರುವುದರಿಂದ ಅಲ್ಲಾದರೂ ಸದ್ರಿ ಕಾಲೇಜನ್ನು ಸ್ಥಾಪಿಸಬೇಕೆಂದು ಬೇಡಿಕೊಂಡರಂತೆ. ಈ ಬಗ್ಗೆ ತಾವು ಆಲೋಚಿಸಿ ತಿಳಿಸುತ್ತೇವೆಂದು ಸದ್ರಿ ಬಿಶಪರು ಉತ್ತರಕೊಟ್ಟರೆಂದು ತಿಳಿದುಬರುತ್ತದೆ. ದೇಶದಲ್ಲೆಲ್ಲಾ ಸಾರ್ವಜನಿಕ ಸಂಸ್ಥೆಗಳಾಗಬೇಕು ಜಾತೀಯತೆ ಹೋಗಬೇಕೆಂದು ದೇಶಮುಖಂಡರ ಧೋರಣೆಯಿರುವಾಗ, ನಮ್ಮವರು ಜಾತೀಯ ಸಂಸ್ಥೆಯೇ ಬೇಕೆಂಬ ಹವ್ಯಾಸವುಳ್ಳವರಾದುದು ತಕ್ಕುದಾಗಿಲ್ಲ. ಅದಕ್ಕೆ ಸಂಸ್ಕೃತ ಕಾಲೇಜನ್ನಾದರೂ ಪುನಃ ಶೀರೂರು ಮಠೀಯರು ಶಿವಳ್ಳಿಯವರ ಕಾಲೇಜೆಂದಾದರೂ ಸ್ಥಾಪಿಸುವುದರಲ್ಲಿ ಕೀರ್ತಿಯಿದೆ.

ಮುಲ್ಕಿ—ಇಲ್ಲಿನ ಲೋಕಲ್ ಫಂಡ್ ಆಸ್ಪತ್ರೆಯ ಸಿರಾಪ್ರಿತ ಫಂಡಿನ ಮೆಂಬರರ ವರ್ಷಾವಧಿ ಮಹಾಸಭೆಯೂ ಮತ್ತು ಶ್ರೀಮತಿ ರಮಾಬಾಯಿ ರಾಮರಾವ್ ಕರಂಜೆ ಹೆರಿಗೆ ವಾರ್ಡನ್ನು ತೆರೆಯುವ ಸಮಾರಂಭವೂ ಮೂಲ್ಕಿ ಆಸ್ಪತ್ರೆಯ ವಠಾರದಲ್ಲಿ ಇದೇ ತಾ ೧೫ನೇ ಶುಕ್ರವಾರ ಸಂಜೆ ೪ ಗಂಟೆಗೆ ಜರಗಲಿರುವುದು. ಈ ಸಂದರ್ಭದಲ್ಲಿ ಎಂ ಎಸ್ ಕ್ರೇಷ್ಮಾ ಎಂ ಎಲ್ ಸಿ ಬಿ ಎ. ಬಾರ್ ಅಟ್ ಲಾ ಸಿ. ಪಿ ಎಸ್. (ರಿಟಾಯರ್ಡ್) ಇವರು ಅಧ್ಯಕ್ಷಸ್ಥಾನವನ್ನು ವಹಿಸುವರು ಮತ್ತು ದಿವಾನ್ ಬಹದೂರ್ ಬಿ ಮಹಾಬಲ ಹೆಗ್ಡೆ, ಫ್ಲೀಡರ್, ಬಿ ಎ ಬಿ ಎಲ್ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಪ್ರಸಿಡೆಂಟರವರು ಸದ್ರಿ ಹೆರಿಗೆ ವಾರ್ಡನ್ನು ತೆರೆಯುವ ಸಮಾರಂಭವನ್ನು ಮಾಡುವರು. ಆದಕಾರಣ ಸದ್ರಿ ಸಿರಾಪ್ರಿತ ಫಂಡಿನ ಮೆಂಬರರೆಲ್ಲರೂ ಈ ಸಮಾರಂಭಕ್ಕೆ ದಯಮಾಡಿ ಬರಬೇಕಾಗಿ ಸದ್ರಿ ಫಂಡಿನ ಗೌರವ ಕಾರ್ಯದರ್ಶಿಗಳ ಸವಿನಯ ಆಮಂತ್ರಣ.

ಇಲ್ಲಿಯ ಬೋ॥ ಹಾ॥ ಶಾಲೆಯ ವಿದ್ಯಾರ್ಥಿಗಳ ತರ್ಕಸಂಘದ ವರ್ಷಾವಧಿ ಮಹಾಸಭೆಯು ಇದೇ ತಾ. ೩೦-೪-೩೬ರಲ್ಲಿ ಇಲ್ಲಿಯ ಬೋರ್ಡು ಹೈಸ್ಕೂಲಿನ ಮುಖ್ಯ ಉಪಾಧ್ಯಾಯರಾದ ಶ್ರೀ ಕೆ. ಕೃಷ್ಣರಾವ್ ಬಿ ಎ ಎಲ್ ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಾನ್ಯ ಅಧ್ಯಕ್ಷರು ಅಮೂಲ್ಯ ಭಾಷಣವನ್ನು ಕೊಟ್ಟು ಸಮಾರಂಭವನ್ನು ಕೊನೆಗೊಳಿಸಿದರು.

ಇಲ್ಲಿಯ ಶ್ರೀ ದುರ್ಗಾದೇವಿ ಧರ್ಮಾರ್ಥ ಛಾತ್ರಶಾಲೆಯ ನವವರ್ಧಂತ್ಯುತ್ಸವವು ಇದೇ ೬-೫-೩೬ನೇ ಶುಕ್ರವಾರ ಸಂಜೆ ಗಂಟೆ ೬ಕ್ಕೆ ಬೋರ್ಡು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ವಿದ್ಯಾಭಿಮಾನಿಗಳಾದ ಸರ್ವರಿಗೂ ಸುಸ್ವಾಗತವಿದೆ.

ನಮ್ಮ ಊರಿನವರಾದ ಅನಂತಪುರ ಜಿಲ್ಲೆಯ ಜಿಲ್ಲಾ ಸಜಿನರಾದ ರಾವ್ ಬಹದೂರ್ ವಿ ಪಿ. ಕಾಮತ್, ಎಲ್ ಎಂ ಎಂಡ್ ಎಸ್ ಇವರು ರಜೆಯ ಮೇಲೆ ಇಲ್ಲಿಗೆ ಬಂದಿರುವರು.

ನಮ್ಮ ಜಿಲ್ಲಾ ಸರ್ಜನರಾದ ಡಾ॥ ಸದಾಶಿವರಾವ್ ಹಳ್ದೀಪುರ್ ಇವರು ಮುಲ್ಕಿ ಲೋಕಲ್ ಫಂಡ್ ಆಸ್ಪತ್ರೆಯ ವರ್ಷಾವಧಿ ತನಿಖೆ ಬಗ್ಗೆ ನಿನ್ನೆ ಇಲ್ಲಿಗೆ ಬಂದಿದ್ದು, ತಾ ೬ರಲ್ಲಿ ಹಿಂತಿರುಗಿ ಹೋದರು.

ಇಲ್ಲಿಯ ರಿಜಿಸ್ಟ್ರಿ ಆಫೀಸಿನ ವರ್ಷಾವಧಿ ತನಿಖೆ ಬಗ್ಗೆ ಜಿಲ್ಲಾ ರಿಜಿಸ್ಟ್ರಾರರವರು ಇಲ್ಲಿ ಮೊಕ್ಕಾಂ ಮಾಡಿರುವರು.

ಫರಂಗಿಪೇಟೆ—ಈ ಸೆಂಟರಿನ ಉಪಾಧ್ಯಾಯ ಸಂಘದ ಮಾಸಿಕ ಸಭೆಯು ಕಳೆದ ತಾ ೨೫ರಲ್ಲಿ ರಾವ್ ಸಾಹೇಬ ದೆ ಫಾ ಸಿ ಕುತಿನ್ಹಾರವರ ಅಧ್ಯಕ್ಷತೆಯಲ್ಲಿ ಜರಗಿತು.

ಮಂಜೇಶ್ವರ—ಇಲ್ಲಿನ ಬೋರ್ಡು ಮಾಪಿಳ್ಳ ಶಾಲೆಯ ಬಾವಿಯು ಅವ್ಯಾಹವು ಪೂರ್ಣ ನಾದುರಸ್ತಿಯಲ್ಲಿದೆ. ನೀರು ತೆಗೆಯುವ ಲಾಟಿ ಹಾಕಿದ ಮರದ ಅಡ್ಡಗಳೂ ತುಂಡಾಗಿ ನೇತಾಡುತ್ತಿದೆ. ಆದುದರಿಂದ ನೀರು ತೆಗೆಯುವವರಿಗೆ ಅಪಾಯ ಸಂಭವಿಸದಂತೆ ಕಬ್ಬಿಣದ ಸರಳುಗಳನ್ನು ಬೋರ್ಡಿನವರು ಹಾಕಿಸಿದರೆ ಉಪಕಾರವಿತ್ತು.

ಮೂಡಬಿದ್ರೆ ಸಾರ್ವಜನಿಕ ಧರ್ಮಾರ್ಥ ಶಾಲೆಯಂದ ಆನೇ ವಾರ್ಷಿಕೋತ್ಸವವು ಕಳೆದ ಮೇ ೩ನೇ ಶನಿವಾರ ಶ್ರೀ ಮಂಜಯ್ಯ ತಿಮ್ಮಪ್ಪಯ್ಯ ಪಿಮ್ರಿನ್ಸ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಿಕೆಗಳು ಅಧ್ಯಕ್ಷರಿಂದ ಕೊಡಲ್ಪಟ್ಟವು. ಸಭಿಕರ ಪೈಕಿ ಶ್ರೀ ಗಳಾದ ಪಿ. ಭವಾನಿಶಂಕರರಾಯರು ಮೊದಲಾದವರು ಭಾಷಣಗಳನ್ನು ಮಾಡಿದರು. ಶ್ರೀ ಸರ್ವೋತ್ತಮ ಶೆಣ್ಯೆಗಳು ಹಿಂದೀ ಶಿಕ್ಷಣವನ್ನು ನಡೆಸಿದ ಶ್ರೀಮಾನ್ ಸಿದ್ಧಾರ್ಥ ಶೆಟ್ರನ್ನು ಅಭಿನಂದಿಸಿದರು. ಅಧ್ಯಕ್ಷರು ವಾಚನಾಲಯವು ಪತ್ರಿಕೆಗಳನ್ನು ವಾಚಕರಿಗೆ ಒದಗಿಸಿಕೊಟ್ಟರೆ ಮಾತ್ರ ಸಾಲದು. ರಾಜಕೀಯ ಧಾರ್ಮಿಕ ಆರ್ಥಿಕ ಮತ್ತು ವ್ಯವಸಾಯಿಕ ಸಂಬಂಧವಾದ ಜ್ಞಾನಪ್ರಸಾರದ ಕಾರ್ಯವನ್ನು ಪ್ರಾರಂಭಿಸಿ ಆ ಕಾರ್ಯಗಳನ್ನು ಎಡೆಬಿಡದೆ ಮಾಡಬೇಕೆಂದರು."

ಇಲ್ಲಿಯ ಸಬ್ ರಿಜಿಸ್ಟ್ರಾರರಾಗಿದ್ದ ಶ್ರೀ ಕೆ ನಾರಾಯಣ ಬಿ ಎ ಇವರು ಶಂಕರನಾರಾಯಣಕ್ಕೆ ವರ್ಗಾಯಿಸಲ್ಪಟ್ಟಿರುವರು. ಈ ಸಂಬಂಧ ಸ್ಥಳೀಯ ಯೂನಿಯನ್ ಕ್ಲಬ್ಬಿನವರು ತಾ ೨೮ರಲ್ಲೂ ತಾ ೨೯ರಲ್ಲಿ ಸಾರ್ವಜನಿಕ ಧರ್ಮಾರ್ಥ ವಾಚನಾಲಯದವರೂ ತಾ ೩೦ನೇ ದಿನ ಊರಮಹನೀಯರೆಲ್ಲರೂ, ತಾ ೨ರಲ್ಲಿ ರಿಕ್ರಿಯೇಶನ್ ಕ್ಲಬ್ಬಿನವರೂ ಶ್ರೀಯುತರಿಗೆ ವಿದಾಯಸತ್ಕಾರವನ್ನೇರ್ಪಡಿಸಿದ್ದರು. ಇಷ್ಟೊಂದು ಸಂಸ್ಥೆಗಳು ಇವರಿಗೆ ವಿದಾಯಸತ್ಕಾರವನ್ನು ಕೊಟ್ಟುದುದು ಇವರಲ್ಲಿ ಜನಸಮುದಾಯಕ್ಕಿದ್ದ ಪ್ರೀತಿ ವಿಶ್ವಾಸ ಮತ್ತು ಸಾರ್ವಜನಿಕ ಯಾವತ್ತೂ ಕಾರ್ಯಗಳಲ್ಲಿಯೂ ಶ್ರೀಯುತರಿಗಿದ್ದ ಆಸಕ್ತಿ ಇವನ್ನೂ ಒಡೆದುಕಾಣುತ್ತಿದೆ.

ಕಾಸರಗೋಡು—ಕಳೆದ ತಾ ೩ನೇ ರವಿವಾರ ಇಲ್ಲಿಯ ಸುಳ್ಯಪಾಡಿ ವಿದ್ಯಾಲಯದಲ್ಲಿ ನೆರವೇರಿದ ಯಕ್ಷಗಾನ ಸಭೆಗೆ, ಸಭಾಸದಸ್ಯರ ಸಮ್ಮತದಂತೆ ಕರ್ನಾಟಕ ಪಂಡಿತರಾದ ಶ್ರೀ ಸುರತ್ಕಲ್ ಸುಬ್ಬರಾಯರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು.

ಪಡುಬಿದ್ರೆ—ಉಡುಪಿ ತಾಲೂಕು ನಡಿಸಾಲ್ ಗ್ರಾಮದ ಬೇಂಗ್ರೆಯ ಮಧ್ಯದಲ್ಲಿ ಒಂದು ಹೊಳೆಯು ಹರಿಯುತ್ತಿರುವುದು. ಮಳೆಗಾಲದಲ್ಲಿಯೂ ಬೇಸಗೆ ಕಾಲದಲ್ಲಿಯೂ ಜನರಿಗೆ ಇದನ್ನು ದಾಟಿ ಅಚೆ ಈಚೆ ಹೋಗುವುದಕ್ಕೆ ತುಂಬಾ ತೊಂದರೆಯಾಗುತ್ತಿತ್ತು. ಈ ಕಷ್ಟವನ್ನು ನಿವಾರಿಸಲು ಬೇಂಗ್ರೆಯ ಮಾನ್ಯ ಶ್ರೀಯುತ ವಾಮನ ಶ್ರೀನಿವಾಸಯ್ಯನವರು ಸರ್ವ ಜನರಿಗೂ ಉಪಯೋಗವಾಗುವಂತೆ ಈ ಹೊಳೆಗೆ ಒಂದು ಕಲ್ಲಿನ ಸೇತುವೆಯನ್ನು ಸುಮಾರು ೧೫೦ ರೂ ಖರ್ಚುಮಾಡಿ ಕಟ್ಟಿಸಿರುವರು. ಇದೊಂದು ಪುಣ್ಯಕಾರ್ಯವೇ ಸರಿ.

ವನಿತಾ ವೈಭವ

ಮುಂದುವರಿದ ಮರಾಠ ಮಹಿಳೆ.

ಮರಾಠ ಮಹಿಳೆಯರಲ್ಲಿ ಶ್ರೀಮತಿ ಸುಲೋಚನಾ ಬಾಯಿಯವರೇ ಎಲ್. ಎಂ. ಪಿ. ಪರೀಕ್ಷೆ ಪಾಸಾದವರಲ್ಲಿ ಸರ್ವಪ್ರಥಮರಾಗಿರುತ್ತಾರೆ. ಕಳೆದ ಏಪ್ರಿಲ್ ತಿಂಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಜರಗಿದ ಎಲ್. ಎಂ. ಪಿ. ಫೈನಲ್ ಪರೀಕ್ಷೆಗೆ ಕುಳಿತ ೯ ಮಹಿಳೆಯರಲ್ಲಿ ತೇರ್ಗಡೆಯಾದವರು ಕೇವಲ ಇಬ್ಬರೇ. ಉತ್ತೀರ್ಣರಾದವರಲ್ಲಿ ಶ್ರೀಮತಿ ಸುಲೋಚನಾ ಬಾಯಿ ಥಾಣೆಯವರೊಬ್ಬರು. ಇವರ ವಿದ್ಯಾಭ್ಯಾಸವು ಬಹಳ ಕಷ್ಟದಿಂದ ನಡೆಯಿತು. ಚಿಕ್ಕಂದಿನಿಂದಲೂ ಕಠಿಣ ಕಷ್ಟಗಳಲ್ಲೇ ಕರಗಿಯೂ ಮರುಗಿಯೂ ಬೆಳೆದವರಿವರು. ಸರಕಾರದ ಸಹಾಯದಿಂದಲೂ ಸತ್ಕಾರ್ಯಕರ ಸಹಾನುಭೂತಿಯಿಂದಲೂ ಮರಾಠ ಸಮಾಜದ ಮತ್ತು ವಿದ್ಯಾರ್ಥಿ ಭವನದ ಬೆಂಬಲದಿಂದಲೂ ಮತ್ತು ಮಾಂಗಳದ ದಾನದಿಂದಲೂ ಈಕೆಯು ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸುವಂತಾಯಿತು.

ಪ್ರಸ್ತುತ ಮರಾಠ ಮಹಿಳೆಯರಲ್ಲಿ ಎಲ್. ಎಂ. ಪಿ. ಪದವಿ ಪಡೆದು ಸಮಾಜಸೇವೆಗೆ ಬದ್ಧಕಂಕಣರಾಗಿರುವವರು ಇವರೊಬ್ಬರೇ. ದಕ್ಷಿಣ ಕನ್ನಡದಲ್ಲಿ ಮರಾಠ ಸಮಾಜವು ಜನ್ಮವೆತ್ತಿ ಇದಾಗಲೇ ನಾಲ್ಕೈದು ವರ್ಷಗಳಾದರೂ ಇನ್ನೂ ಸಮಾಜವು ಬಾಲ್ಯಾವಸ್ಥೆಯಲ್ಲಿದ್ದು ಮರಾಠ ಮಹಿಳಾ ವಿದ್ಯಾಭ್ಯಾಸದ ಅಭಾವವನ್ನು ಹೋಗಲಾಡಿಸುವ ಸಫಲ ಪ್ರಯತ್ನಮಾಡಿರುವುದಿಲ್ಲ. ಶ್ರೀಮತಿ ಸುಲೋಚನಾಬಾಯಿ ಮತ್ತು ಬೆಂಗಳೂರಿನ ಮುಂದುವರಿದ ಮರಾಠ ಮಹಿಳೆಯರನ್ನಾದರ್ಶವಾಗಿಟ್ಟುಕೊಂಡು ಕುರುಸಾಧಿನಲ್ಲೂ ಮರಾಠ ಸ್ತ್ರೀ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಟ್ಟಲ್ಲಿ ಎಷ್ಟೋ ಲೇಸು. ಕರ್ನಾಟಕದ ಮೂಲೆಮೂಲೆಗಳಲ್ಲಿ ಚದರಿ ನೆಲಸಿರುವ ಮರಾಠ ಬಂಧುಭಗಿನಿಯರಿಂದ ಸಂಘಟಿತವಾಗಿ ಮರಾಠ ಸಂಸ್ಕೃತಿ ಮತ್ತು ಏಳಿಗೆಗಾಗಿ ಸ್ಥಾಪಿಸಲ್ಪಟ್ಟಿರುವ ಒಂದು ಕೇಂದ್ರ ಸಂಸ್ಥೆಯಿಲ್ಲದಿರುವುದು ತೀರ ಕೊರತೆ ಮತ್ತು ಶೋಚನೀಯವಾಗಿರುವುದು.

ಬಂಗಾಳಿ ವಿದ್ಯಾರ್ಥಿನಿಯರು.

"ಶಾಲೆಗೆ ಹೋಗುತ್ತಿರುವ ಬಂಗಾಳೀ ಹುಡುಗಿಯರ ಆರೋಗ್ಯಭಾಗ್ಯವು ಸ್ವಲ್ಪವೂ ಸಮರ್ಪಕವಾಗಿಲ್ಲ. ಕೇಳಿದಾ ಹಾಗಿದ್ದರೂ ತಂದೆತಾಯಿಗಳೂ ಸರಕಾರದವರೂ ಕಣ್ಣು ಮುಚ್ಚಿಕೊಂಡಿದ್ದಾರೆ. ವೈದ್ಯರೊಬ್ಬರನ್ನು ನೇಮಿಸಿ ಅವರ ಆರೋಗ್ಯದಾರ್ಢ್ಯಗಳನ್ನು ನೋಡಿಕೊಳ್ಳಬೇಕು.

ಸರಿಯಾದ ವೈದ್ಯಕೀಯ ಚಿಕಿತ್ಸೆಯಿಲ್ಲದೆ, ಆರೋಗ್ಯ ನಿಯಮಗಳನ್ನು ಪಾಲಿಸದೆಯೂ ಗಂಟಲು ನೋವು, ಚರ್ಮರೋಗ, ಮಲಬದ್ಧತೆ, ಕಣ್ಣು ಹಲ್ಲುನೋವುಗಳಿತ್ಯಾದಿ ನಾನಾ ವ್ಯಾಧಿಗಳಿಂದ ಹುಡುಗಿಯರು ನರಳುತ್ತಿದ್ದಾರೆ. ಕೇವಲ ಬಾಲ್ಯದಿಂದಲೇ ಹುಡುಗಿಯರು ನರಳುವುದಕ್ಕೆ ಪ್ರಾರಂಭಿಸಿದರೆ ಅವರ ಮುಂದೆ ತಲೆಯೆತ್ತುವ ಸಂಭವವಾದರೂ ಎಲ್ಲುಂಟು? ಆ ಜನಾಂಗವು ಅಭಿವೃದ್ಧಿಯನ್ನು ಹೇಗೆ ಪಡೆದೀತು?

ಈ ವಿಷಾದಕರವಾದ ಪರಿಸ್ಥಿತಿಯನ್ನು ಕೊನೆಗಾಣಿಸಬೇಕಾಗಿದೆ. ತಂದೆತಾಯಿಗಳನ್ನು ಕೇಳಿದರೆ, ನಮಗೆ ಹೊಟ್ಟೆಗೆ ಮಾರ್ಗವಿಲ್ಲ. ಮಕ್ಕಳ ಔಷಧಿಗಳಿಗೆಲ್ಲಿಂದ ಹಣ ಒದಗಿಸುವುದು, ಇನ್ನು ಪುಷ್ಟಿಕರವಾದ ಆಹಾರವನ್ನು ಹೇಗೆ ಕೊಡುವುದು ಇತ್ಯಾದಿಯಾಗಿ ತಮ್ಮ ದಾರಿದ್ರ್ಯದ ಮೇಲೆ ತಪ್ಪುಹೊರಿಸಿ, ತಲೆಯ ಮೇಲೆ ಕೈಹಚ್ಚಿ ಕುಳಿತುಕೊಂಡು ಬಿಡುತ್ತಾರೆ. ದಾರಿದ್ರ್ಯದೋಷವು ವಾಸ್ತವವಾಗಿಯೂ ದುಸ್ಸಹವಾಗಿದ್ದರೂ, ಅವರು ಕೊಡುವ ಕಾರಣವು ಸ್ವಲ್ಪ ಭಾಗ ನಿಜವಾಗಿದ್ದರೂ ತಮ್ಮ ಆದಾಯದಲ್ಲಿಯೇ ಅಗ್ಗವೂ ಆರೋಗ್ಯಕರವೂ ಆದ ಆಹಾರವಸ್ತುಗಳನ್ನು ಕೊಳ್ಳುವುದರಿಂದ ಅರ್ಧ ಅನಿಷ್ಟಗಳನ್ನು ಕಡಿಮೆಮಾಡಬಹುದು.

ಆದರೂ, ಇತರರ ಉದಾರಸಹಾಯವಿಲ್ಲದೆ, ಅವರಿಗೆ ವೈದ್ಯಕೀಯ ಸೌಕರ್ಯಗಳು ಲಭ್ಯವಾಗುವುದಿಲ್ಲ. ಆದುದರಿಂದ ಈ ಮಕ್ಕಳಿಗೆ ತಕ್ಕ ಸೌಕರ್ಯಗಳನ್ನೊದಗಿಸಿ, ದೇಶೋದ್ಧಾರವಾಗಲು ನಿಧಿಯೊಂದು ಬೇಕಾಗಿದೆ. ಉದಾರಹೃದಯಿಗಳು ಮುಕ್ತಹಸ್ತದಿಂದ ಸಹಾಯ ಮಾಡಬೇಕಾಗಿ ಕೋರಿದೆ"

ಅಖಿಲ ಭಾರತ ಮಹಿಳಾ ಸಮ್ಮೇಳನದ ಕಲಕತ್ತಾ ವಿಭಾಗದ ಪರವಾಗಿ ಶ್ರೀಮತಿ ಸಿ. ಮುಖರ್ಜಿಯವರು ಈ ಮೇಲಿನ ಪ್ರಾರ್ಥನೆಯನ್ನು ಪ್ರಕಟಿಸಿದ್ದಾರೆ.

ವಿ. ಶ.

ಹೆಂಗಸರು ಗಂಡಸರ ಸಮಭಾಗಿಗಳಾಗಿರುವುದು ಒಂದೇ ರಾಷ್ಟ್ರದಲ್ಲಿ.

ಜಗತ್ತಿನಲ್ಲಿ ಒಂದೇ ಒಂದು ರಾಷ್ಟ್ರವಿದೆ. ಅಲ್ಲಿ ಹೆಂಗಸು ಗಂಡಸಿಗೆ ಯಾವ ತರದಲ್ಲೂ ಹೆಚ್ಚುಕಡಿಮೆಯೆಂಬ ವ್ಯತ್ಯಾಸವಿಲ್ಲ. ಆ ರಾಷ್ಟ್ರವು ರಷ್ಯಾ.

ಅಲ್ಲಿ ಹೆಂಗಸರು ಹಳ್ಳಿಶಾಲೆ, ಕೈಹಚ್ಚುವ ಉದ್ಯೋಗವಿಲ್ಲ. ಗ್ರಾಮಗಳ ಸಂಸ್ಥಾನಾಧಿಕಾರಿಗಳಿಂದ ಹಿಡಿದು ಮೇಧಾಶಕ್ತಿ ಬೇಕಾಗುವ ಉದ್ಯೋಗಗಳ ವರೆಗೂ ಹೆಂಗಸರು ದೊಡ್ಡ ಸಂಖ್ಯೆಗಳಿಂದ ಆಕ್ರಮಿಸುತ್ತಿದ್ದಾರೆ. ಈಗ ರಷ್ಯಾದಲ್ಲಿ ವೈದ್ಯ ಕಲಿಯುತ್ತಿರುವ ವಿದ್ಯಾರ್ಥಿಗಳಲ್ಲಿ ಅರ್ಧಭಾಗವೇ ಹೆಂಗಸರಿದ್ದಾರೆ. ಶಿಕ್ಷಣೋದ್ಯೋಗದಲ್ಲಿ ರಸಾಯನಿಕ ಶೋಧನಕಾರ್ಯಾಲಯಗಳಲ್ಲಿ ಗಂಡಸರಿಗೆ ಸರಿಸಮವಾಗಿ ಹೆಂಗಸರನ್ನು ಕಾಣಬಹುದು. ಮೋಟಾರು ಕಾರು, ಬಸ್ಸು, ಟ್ರಾಮ್ಗಳನ್ನು ನಡೆಸುವವರಲ್ಲಿ ಹೆಂಗಸರು ಸಾಮಾನ್ಯವಾಗಿದ್ದಾರೆ. ವಿಶೇಷ ಶರೀರ ಶ್ರಮ, ಬೇಕಾದ ರಸ್ತೆ ಮಾಡುವದು, ಭಾವಿ ನಾಲೆಗಳನ್ನು ತೋಡುವದು ಇತ್ಯಾದಿ ಕೆಲಸಗಳಲ್ಲಿ ಹೆಂಗಸರು ಸಂತುಷ್ಟರಾಗಿ ದುಡಿಯುತ್ತಿರುವುದನ್ನು ನೋಡಬಹುದು.

ರಷ್ಯನ್ ಹೆಂಗಸರ ಇಂದಿನ ಸ್ಥಿತಿಯೊಡನೆ ೨೦ ವರುಷದ ಹಿಂದಿನ ಜಾರರ ಕಾಲದ ಸ್ಥಿತಿಯೊಡನೆ, ಹೋಲಿಸಿದರೆ ಬೊಲ್‌ಷೆವಿಕ್‌ರ ಕ್ರಾಂತಿಯ ಮಹತ್ವವು ಗೊತ್ತಾಗುವುದು.

ಕ್ರಾಂತಿಯ ಪೂರ್ವದ ದಿನಗಳಲ್ಲಿ ಕೇವಲ ಗಂಡಸ್ಸು ರಷ್ಯನ್ ಜನರು ಸಂಪೂರ್ಣ ಗುಲಾಮರಂತೆ ಜೀವಿಸುತ್ತಿದ್ದರು. ಮುಕ್ಕಾಲು ಪಾಲು ಜನರು ಗಂಡಸರು ಹೆಂಗಸರು, ಮಕ್ಕಳು ತಮ್ಮ ದನಗಳು, ಕುರಿಕೋಳಿಗಳೊಂದಿಗೆ ಗಾಳಿ ತೂರದ ಚಿಕ್ಕಗೂಡಿಯಂತಿದ್ದ ಒಂದೇ ಕೋಣೆಯಲ್ಲಿ ವಾಸಿಸುತ್ತಿದ್ದರು.

ಜಾರರ ಕಾಲದ, ಅಂದರೆ ಕ್ರಾಂತಿಗೆ ಮೊದಲು ರಷ್ಯದಲ್ಲಿ ರೈತನ ಜೀವನಕ್ರಮದಲ್ಲಿ ಎರಡೇ ,ಅವನನ್ನು ಮತ್ತಾಗಿ ಮಾಡಬಹುದಾಗಿತ್ತು. ಒಂದು ಕುಡಿಯುವದು, ಇನ್ನೊಂದು ಹೆಂಡತಿಯನ್ನು ಹೊಡೆಯುವದು. ಮಕ್ಕಳು ಹುಟ್ಟಿದಾಗಿನಿಂದ ದನಗಳಂತೆ ಬೆಳೆದು ಗುಲಾಮರಂತೆ ನೋಡಲ್ಪಡುತ್ತಿದ್ದರು.

ಇದೇ ರೈತವರ್ಗದ ದುಃಖದ ಸಂದರ್ಭಯ ಮೂರ್ತಿಯಾಗಿತ್ತು. ರಷ್ಯದಲ್ಲಿದ್ದ ಲೆಕ್ಕವಿಲ್ಲದ ಜಮೀನ್‌ದಾರರು ಇವರನ್ನು ಗಾಣದ ಎತ್ತಿನ ಹಾಗೆ ದುಡಿಸುತ್ತಿದ್ದರು. ಕ್ರಾಂತಿಯ ನಂತರದ ಬೊಲ್‌ಷೆವಿಕ್ ಸರಕಾರವು ಹಿಂದಿನ ಸರಕಾರದ ಪದ್ಧತಿಯನ್ನೆಲ್ಲಾ ಬದಲಾಯಿಸಿತು. ಹೆಂಗಸರಿಗೂ ಗಂಡಸರಿಗೂ ಸಮಾನವಾದ ರಾಜಕೀಯ ಹಕ್ಕುಗಳು ಕೊಡಲಾದುವು. ಮಕ್ಕಳನ್ನು ಬೊಲ್‌ಷೆವಿಕ್ ರೀತಿಯಲ್ಲಿ ಬೆಳೆಸಿ, ಅವರಲ್ಲಿ ಸಮಾನತ್ವವು ಬೆಳೆಯುವ ಹಾಗೆ ಸರಕಾರವು ಮಕ್ಕಳನ್ನು ಸಾಕುವುದಕ್ಕಾಗಿ ಬೇರೆ ಬೇರೆ ಸಂಸ್ಥೆಗಳನ್ನು ಏರ್ಪಡಿಸಿದ್ದಾರೆ. ಇದರಿಂದ ತಾಯಿಮಕ್ಕಳಿಗೆ ಅಗಲಿಕೆ ಮಾಡಿದಂತೆ ಅರ್ಥವಲ್ಲ. ಏಕೆಂದರೆ, ತಾಯಂದಿರು ಬೇಕಾದಾಗ ತಮ್ಮ ಮಕ್ಕಳ ಬಳಿ ಇರಬಹುದು. ಅಲ್ಲದೆ ತಾಯಂದಿರಿಗೂ ಹೆಚ್ಚಿನ ವಿರಾಮ ಸಿಕ್ಕಿ ಅವರಿಗೆ ಬುದ್ಧಿವಿಕಾಸದ ಮಾರ್ಗಗಳಲ್ಲಿ ಪ್ರಯತ್ನಿಸಲು ಅನುಕೂಲವಾಗಿದೆ. ೧೮ ವರ್ಷಗಳಿಗೆ ಮೊದಲು ಆಟಪಾಟ ವಿನೋದಗಳೆಂಬುದು ರಷ್ಯದ ರೈತ ಮತ್ತು ಕೆಲಸಗಾರವರ್ಗಕ್ಕೇ ಇರಲಿಲ್ಲ. ಫುಟ್‌ಬಾಲ್, ಕ್ರಿಕೆಟ್ ಮೊದಲಾದ ಆಟಗಳಾದ್ದವೂ ಅವರಿಗೆ ಕೊಡದಾಗಿತ್ತು. ಈಜಾಡುವದು ಸಹಾ ಧನಿಕರದೇ ವಿಶಿಷ್ಟ ಆಟವಾಗಿದ್ದಿತು.

ಈಗ ಯಾರು ಬೇಕಾದರೂ ಯಾವ ಆಟವನ್ನಾದರೂ ಆಡಬಹುದು. ರಷ್ಯನ್ ಹೆಂಗಸರು ಇದರ ಸಂಪೂರ್ಣ ಉಪಯೋಗವನ್ನು ಮಾಡಿಕೊಂಡಿದ್ದಾರೆ. ಅವರು ಗಂಡಸರಂತೆ ಎಲ್ಲಾ ಆಟಗಳನ್ನೂ ಆಡುವರು. ಈ ರೀತಿಯಾಗಿ ಜಾರರ ಕಾಲದ ಗುಲಾಮಗಿರಿಯಿಂದ ಸ್ವಾತಂತ್ರ್ಯಕ್ಕೆ ತರಲ್ಪಟ್ಟ ಹೆಂಗಸರು ತಾವೂ ಜೀವನದಲ್ಲಿ ಗಂಡಸರ ಸಮಭಾಗಿಗಳೆಂದು ಉತ್ಸಾಹಭರಿತರಾಗಿದ್ದಾರೆ.

10,000 ರೂಪಾಯಿಗಳನ್ನು ಏನೊಂದೂ ಕಷ್ಟವಿಲ್ಲದೆ ಪಡೆಯಿರಿ.

ಉತ್ತರವನ್ನು ಸ್ವೀಕರಿಸುವ ತಾ. ಮೇ 15ರ ವರೇಗೆ.

ಈ ಒಗಟೆಯನ್ನು ಸರಿಯಾಗಿ ಬಿಡಿಸಿದವನಿಗೆ 10,000 ರೂಪಾಯಿಗಳನ್ನು ಬಹುಮಾನವಾಗಿ ಕೊಡುವೆವು. ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿದ್ದಲ್ಲಿ ಹಣವನ್ನು ಅವರೊಳಗೆ ಸರಿಸಮಾನವಾಗಿ ಹಂಚಲಾಗುವುದು. ಅಂತೂ ಸರಿಯಾದ ಉತ್ತರಗಳು ಅನೇಕವಿದ್ದಲ್ಲಿ ಪ್ರತಿಯೊಬ್ಬನಿಗೂ ಕನಿಷ್ಠಪಕ್ಷ ರೂ 500 ಬಹುಮಾನ ಸಿಕ್ಕುವುದರಲ್ಲಿ ಸಂಶಯವಿಲ್ಲ. ಈ ಒಗಟೆಯ ಉತ್ತರವನ್ನು ಮುದ್ರೆ ಹಾಕಿ, ಸೆಂಟ್ರಲ್ ಬೇಂಕ್ ಒಫ್ ಇಂಡಿಯಾ ಇದರಲ್ಲಿ ಭದ್ರವಾಗಿಟ್ಟಿದೆ.

ಸಂಬ್ರ 1

ಸಂಬ್ರ 2

ಸಂಬ್ರ 3



ಮೇಲಿನ ಚೌಕ ನಂಬ್ರ 1, 2 ಮತ್ತು 3 ಇವುಗಳ ಕೋಣೆಗಳನ್ನು 1—26ರ ಒಳಗಿನ ಸಂಖ್ಯೆಗಳಿಂದ ತುಂಬಬೇಕು. ಒಂದೇ ಸಂಖ್ಯೆಯನ್ನು ಒಂದು ಚೌಕದಲ್ಲಿ ಎರಡು ಸಲ ಉಪಯೋಗಿಸಬಾರದು.

ನಂಬ್ರ 1ರ	ಎಲ್ಲಾ ಸಾಲುಗಳು,	ಕಲಮುಗಳು,	ದಯಗ್ನಲುಗಳ	ಒಟ್ಟು	ಸಂಖ್ಯೆ	15
ನಂಬ್ರ 2ರ	,,	,,	,,	,,	,,	24
ನಂಬ್ರ 3ರ	,,	,,	,,	,,	,,	48

ಒಬ್ಬರು ಎಷ್ಟು ಉತ್ತರಗಳನ್ನೂ ಕಳುಹಿಸಬಹುದು. ಕಾಗದದಲ್ಲಿ ಅಂದವಾಗಿ ಬರೆದು ಲಕೋಟೆಯಲ್ಲಿ ಮಡಗಿ ಕಳುಹಿಸಬಹುದು. ಆದರೆ ಮೂರು ಚೌಕಗಳ ಒಂದು ಉತ್ತರಕ್ಕೆ ರೂ 1ನ್ನು ನಮ್ಮ ಆಫೀಸಿಗೆ ಮನಿಯಾರ್ಡರ್ ಮೂಲಕ ಕಳುಹಿಸಬೇಕು. ಉತ್ತರವನ್ನು ಕಳುಹಿಸುವವರು ತಮ್ಮ ಹೆಸರು ವಿಳಾಸವನ್ನು ಅಂದವಾಗಿ ಬರೆದು ಕಳುಹಿಸತಕ್ಕದ್ದು. ಈ ಒಗಟೆಯ ಸರಿಯಾದ ಉತ್ತರವನ್ನೂ ಮತ್ತು ಸರಿಯಾಗಿ ಉತ್ತರಿಸಿದವರ ಹೆಸರುಗಳನ್ನೂ ಈ ಪತ್ರಿಕೆಯಲ್ಲಿ ಮೇ ತಾ 20ರಲ್ಲಿ ಪ್ರಕಟಿಸುವೆವು. ಬಹುಮಾನದ ಹಣವನ್ನು ಚೆಕ್ ಮುಖಾಂತರ ವ ಮನಿಯಾರ್ಡರ್ ಮೂಲಕ ಕಳುಹಿಸಲಾಗುವುದು. ಒಗಟಿನ ಬಿಟ್ಟುಗರು ಫಲಿತಾಂಶವನ್ನು ಬಯಸುವುದಾದರೆ ಉತ್ತರದೊಂದಿಗೆ ಒಂದಾಣೆಯ ಅಂಚೆಚೀಟನ್ನು ಕಳುಹಿಸಬೇಕಾಗಿರುವುದು. *ತಾವು ಕಳುಹಿಸಿದ ಉತ್ತರವು ಸರಿಯಾಗಿದ್ದು, ಪೇಪರಿನಲ್ಲಿ ಹೆಸರು ಬಾರದೆ ಇದ್ದ ಸಮಯದಲ್ಲಿ ಅಂಥವರು ರೂ. 1ನ್ನು ಕಳುಹಿಸಿ ತಮ್ಮ ಹಕ್ಕನ್ನು ಸ್ಥಿರಪಡಿಸಿಕೊಳ್ಳಬೇಕು. ಒಂದು ತಡವೆ ಅವರ ಹೇಳಿಕೆಯು ತಪ್ಪಾದಲ್ಲಿ ಹಣವನ್ನು ಮರತ ಕಳುಹಿಸಲಾಗಲಿಕ್ಕಿಲ್ಲ. ಒಂದು ಒಗಟಿಗೆ ಕಟ್ಟಿದ ಹಣವನ್ನು ಇನ್ನೊಂದು ಒಗಟಿಗೆ ಬದಲಾಯಿಸಲ್ಪಡಲಿಕ್ಕಿಲ್ಲ.

ಎಲ್ಲಾ ಬಿಟ್ಟುಗರ ಅಪೇಕ್ಷೆ ಮೇರೆಗೆ ಒಗಟಿನ ಕಳುಹಿಸುವ ತಾರೀಕನ್ನು ಮೇ ತಾ. 15ಕ್ಕೆ ಮುಂದರಿಸಲಾಗಿದೆ.

ನಿಮ್ಮ ಉತ್ತರಗಳನ್ನು ಈ ಕೆಳಗಿನ ವಿಳಾಸಕ್ಕೆ ರವಾನಿಸಿರಿ:—

VICTORIA COMPETITION,

PURSRAM MANSION,

Girgaum, BOMBAY

ಸ್ಪರ್ಧಾರಂಗ

ಸಂಚಾಲಕ — ಶ್ರೀ "ರಸಿಕರಂಜನ"

ಗೆಲ್ಲಿರಿ! **ಪಡೆಯಿರಿ**

೧೦ ರೂಪಾಯಿ ಬಹುಮಾನ!

ಪ್ರಥಮ ಬಹುಮಾನ: ರೂ ೫, ದ್ವಿತೀಯ ಬಹುಮಾನ: ರೂ. ೩,

ತೃತೀಯ ಬಹುಮಾನ: ರೂ. ೨ ೦—೦,

ವಿಶೇಷ ಬಹುಮಾನ: ಒಂದು ವರ್ಷದ "ಸ್ವದೇಶಾಭಿಮಾನಿ"

ಚಕ್ರಬಂಧ ಒಗಟು ಸಂಖ್ಯೆ ೧.

ಉತ್ತರ ಸ್ವೀಕರಿಸುವ ಕೊನೆಯ ದಿನ — 12—5—1936



ಉತ್ತರ ಪ್ರಕಟಿಸುವ ದಿನ — 15—5—1936

ಹೆಸರು

ವಿಳಾಸ

ಸಲಹೆಗಳು:—

ಎಡದಿಂದ ಬಲಕ್ಕೆ —

ಒಂದು ಮೃಗ
3 ಸಾರಿ
5 ಪದ್ಯ
7 ಮನ್ಮಥ
9 ಯುದ್ಧ
11 ವೃಥೆ
18 ನಡುಕ
15 ದಾರಿ ಬಿದ್ದ
16 ಒಂದು ಸಂಖ್ಯೆ
17 ಶರೀರದ ಒಂದು ಭಾಗ

ಮೇಲಿಂದ ಕೆಳಕ್ಕೆ —

2 ರಾಜ
3 ಒಟ್ಟು ಕೂಡಿ
4 ಉದರ
6 ಅರಣ್ಯ
8 ಬೊಟ್ಟು
10 ಸೇನಾಪತಿ
11 ಸ್ವಯಂಕೃತ
12 ಗಂಡು ಕುರಿ
13 ಕಂಡು
14 ಹೊಲೆ

ವಿಶೇಷ ಸೂಚನೆ:—

ಈ ಒಗಟಿನಲ್ಲಿ ಬರಬಹುದಾದ ಶಬ್ದಗಳು —

ಅಜ	ಗಜ	ನದಿ	ಸನಕ
ಅಸು	ಗಳತ	ನಲಿನ	ಸಹಿ
ಕಷ್ಟ	ಗಳಿಕ	ನಳಿನ	ಸಲ
ಕಚ	ಜನಕ	ನಾರ	ಸಂಕಟ
ಕಟಿ	ಟಗರು	ನೀರ	ಸಂಜೆ
ಕಣ್ಣು	ತಿಲಕ	ನೂರು	ಸಂಧ್ಯಾ
ಕದನ	ತಿಳಿ	ಬನ	ಸಂಧ್ಯೆ
ಕರ	ದಲಪ	ಮೂಳೆ	
ಕಂತಕ	ದಳಪ	ರತಿಪ	
ಕಂಪನ	ನಡ	ವನ	

ನಿಯಮಗಳು:—೧ ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೇ ಸ್ಪಷ್ಟವಾದ ಅಕ್ಷರಗಳಲ್ಲಿ ಹೆಸರು ವಿಳಾಸ ಸಹಿತ ಬರೆದು ಕಾಲಾಣೆಯ ನಾಲ್ಕು ಟಿಪ್ಪಾಲು ಚೀಟಿಗಳೊಂದಿಗೆ ತಾ 5—5—1936ರೊಳಗೆ ತಲುಪುವಂತೆ ಕಳುಹಿಸಬೇಕು ೨ ಹೆಚ್ಚು ಉತ್ತರ ಕಳುಹಿಸುವವರು ಮೊದಲನೆಯ ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೂ ಉಳಿದ ಉತ್ತರಗಳನ್ನು ಪ್ರತ್ಯೇಕ ಕಾಗದಗಳ ಮೇಲೆಯೂ ಬರೆದು ಪ್ರತಿ ಆರು ಉತ್ತರಗಳಿಗೆ ಕಾಲಾಣೆಯ ಹದಿನಾರು ಚೀಟುಗಳೊಂದಿಗೆ ಕಳುಹಿಸತಕ್ಕದ್ದು ೩. ತಾ 5—5—'36ರೊಳಗೆ ಸ್ವೀಕೃತವಾದ ಉತ್ತರಗಳಲ್ಲಿ, ನಾವು ಕೆನರಾ ಬೇಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ್, ಮಂಗಳೂರು—ಶಾಖೆಯ ಶಾಖೆಯ ಏಜಂಟರೊಡನೆ ಮೊಹರು ಮಾಡಿ ಭದ್ರತೆಯಲ್ಲಿಟ್ಟಿರುವ ಉತ್ತರದೊಡನೆ ಅಕ್ಷರಶಃ ಹೋಲುವ ಉತ್ತರಕ್ಕೆ ಅಥವಾ ಉತ್ತರಗಳಿಗೆ ಮೊದಲನೆಯ ಬಹುಮಾನವನ್ನೂ ಒಂದು ತಪ್ಪಿನ ಉತ್ತರಗಳಿಗೆ ಎರಡನೆಯ ಬಹುಮಾನವನ್ನೂ ಎರಡು ತಪ್ಪಿನ ಉತ್ತರಗಳಿಗೆ ಮೂರನೆಯ ಬಹುಮಾನವನ್ನೂ ಕೊಡಲಾಗುವುದು ಈ ರೀತಿಯ ಉತ್ತರಗಳು ಬಾರದ ಪಕ್ಷದಲ್ಲಿ ಅತ್ಯಂತ ಕಡಿಮೆ ತಪ್ಪಿನ ಉತ್ತರಗಳಿಗೇ ರೂ. ೧೦ನ್ನು ಸಮಭಾಗ ಹಂಚಿ ಕೊಡಲಾಗುವುದು ೪ ಅತ್ಯಂತ ಹೆಚ್ಚು ಉತ್ತರ ಕಳುಹಿಸುವವರಿಗೆ ಒಂದು ವರ್ಷದ "ಸ್ವದೇಶಾಭಿಮಾನಿ"ಯ ವಿಶೇಷ ಬಹುಮಾನ ದೊರೆಯುವುದು ೫ ಎಲ್ಲಾ ಸಂದರ್ಭಗಳಲ್ಲಿಯೂ ಈ 'ಸ್ಪರ್ಧಾರಂಗ'ದ ಸಂಚಾಲಕರ ಇತ್ಯರ್ಥವೇ ಕೊನೆಯ ಇತ್ಯರ್ಥವಾಗಿರುವುದು.

ಈಗಲ ಸ್ವಲ್ಪ ಅವಕಾಶದ ನಿಮಿತ್ತ ಒಗಟು ಸಂಖ್ಯೆ ೧ರ ಉತ್ತರ ಇತ್ಯಾದಿಗಳನ್ನು ಬರುವ ಸಂಚಿಕೆಯಲ್ಲಿ ಕೊಡಲಾಗುವುದು

ಸಂಚಾಲಕ, "ಸ್ಪರ್ಧಾರಂಗ",
'ಸ್ವದೇಶಾಭಿಮಾನಿ' ಕಾರ್ಯಾಲಯ ಮಂಗಳೂರು.

(ಅನೇ ಪುಟದಿಂದ ಮುಂದುವರಿದುದು)

ಅವರನ್ನು ಬೀಳ್ಕೊಳ್ಳುವಾಗ ಎರಡು ರೂಪಾಯಿಯನ್ನು ಅವರ ಕೈಯಲ್ಲಿಟ್ಟೆನು ಅವರು ನನ್ನನ್ನು ಮೇಲೆ ಕೆಳಗೆ ನೋಡಿ, 'ಎನ್ರೀ ಗೌಡ್ರೇ, ನಮ್ಮ ಛಾರ್ಜು ಹಲ್ಲಿಗೆ ಐದು ರೂಪಾಯಿ ಇರುವಾಗ ಇದೇನು ನೀವು ಎರಡೇ ರೂಪಾಯಿ ಕೊಡುತ್ತೀರಿ?' ಎಂದರು

ನಾನು ಆವಾಕ್ಕಾಗಿ ನನ್ನಷ್ಟಕ್ಕೇ, 'ಇದೇನು, ನನ್ನ ಗುರ್ತಿನ ಇವರು ನನ್ನನ್ನು 'ಗೌಡ್ರೆ'ಎಂದು ಸಂಬೋಧಿಸಿ, ಈ ಮುಂಚೆ ಹಲ್ಲಿಗೆ ಎರಡೇ ರೂಪಾಯಿ ಪ್ರಕಾರ ತೆಗೆದುಕೊಳ್ಳುತ್ತಿದ್ದರೂ ಈಗ ಐದು ರೂಪಾಯಿ ಕೇಳುವರು?' ಎಂದು ಯೋಚಿಸಿದೆನು, ಅಷ್ಟರಲ್ಲಿ ನನ್ನ ದೃಷ್ಟಿಯು ಕೊಳಕು ಪಂಚೆ, ಭೈರಾಸುಗಳ ಕಡೆಗೂ, ನೀರೆಯ ವೇಷಭೂಷಣದ ಕಡೆಗೂ ಹೋಯಿತು, ನನ್ನ ಕೈಯು ಗಡ್ಡದ ಮೇಲೆ ಹೋಯಿತು ನನಗೆ ಎಲ್ಲವೂ ಸ್ಪಷ್ಟವಾಯಿತು

ನನ್ನ ಮುಖವು ಲಜ್ಜೆಯಿಂದ ಕೆಂಪೇರುತ್ತಿರಲು ನೀರೆಯ ದೃಷ್ಟಿಯು ನನ್ನ ದೃಷ್ಟಿಯೊಂದಿಗೆ ನೆರೆಯಿತು

ನೀರೆ, ಮುಖ ಲಜ್ಜೆಯಿಂದ ಕೆಂಪೇರುತ್ತಿರಲು, 'ಕೊಟ್ಟು ಬಿಡವಾರದೇ?' ಎಂದು ಮುಖ ತಿರುಗಿಸಿ ನೆಟ್ಟಗೆ ಹೋಗಿ ಗಾಡಿಯಲ್ಲಿ ಕೂತಳು

ನಾನು ಅವಳ ಮಾತೇ ಮರ್ಯಾದೆ ಉಳಿಸಿಕೊಳ್ಳಲು ಯೋಗ್ಯವೆಂದೆಣಿಸಿ ಇನ್ನು ಮೂರು ರೂಪಾಯಿಗಳನ್ನು ದಂತ ವೈದ್ಯರ ಕೈಯಲ್ಲಿಟ್ಟು ಹೊರಟು ಬಂದೆನು

ಅಳುತ್ತ, ಹೊರಳುತ್ತ ಹೋದ ನೀರೆ ಬಿದ್ದು ಬಿದ್ದು ನಗುತ್ತ ಮನೆಗೆ ಬಂದಳು

ದಾರಿಯಲ್ಲಿ ನೀರೆ ಗಾಡಿಯನ್ನು 'ಸ್ನೋ ವೈಟ್ ಲೊಂಡ್ರಿ'ಯ ಬಳಿ ನಿಲ್ಲಿಸಿ ನಮ್ಮಲ್ಲಿಗೆ ವಸ್ತ್ರಕ್ಕಾಗಿ ಆಳನ್ನು ಕಳುಹಿಸಲು ಅಪ್ಪಣೆ ಕೊಟ್ಟಳು ಮುಂದೆ ಬರುತ್ತ 'ಸಿಂಗಾಪುರ ಸೆಲೂನಿ'ನ ಬಳಿ ನನ್ನನ್ನು ಕೆಳಗಿಳಿಸಿಬಿಟ್ಟಳು

ಹತ್ತು ಗಂಟೆಗೆ ನಾನು ಮನೆಗೆ ಹೋಗುವಾಗ ನೀರೆ ಹೊಟೆಲಿನಿಂದ ಫಲಾಹಾರಕ್ಕೆ ತರಿಸಿ ಮೇಜಿನ ಮೇಲೆ ಸಿದ್ಧಪಡಿಸಿ ಇಟ್ಟಿದ್ದಳು ಬಳಿಯಲ್ಲೇ ಒಂದು ಸಿಗರೆಟ್ ಕರಡಿಗೆಯೂ ಇತ್ತು ಮಧ್ಯಾಹ್ನ ಹನ್ನೆರಡು ಗಂಟೆಗೆ ಸರಿಯಾಗಿ ಹಾಲುಕೀರಿನ ಊಟವು ಸ್ವಲ್ಪವೂ ಲೋಪವಿಲ್ಲದೆ ಬಿತ್ತು

ಸಂಜೆ ಫಲಾಹಾರವಾದ ಮೇಲೆ ಆಗ ತಾನೇ 'ಸ್ಪೆಶಲ್' ಮಾಡಿಸಿ ತಂದ ಮೋಟಾರನ್ನು ಹತ್ತಿಕೊಂಡು ನಾನೂ ನೀರೆಯೂ ಮತ್ತೆ ಆ ದಿನ 'ಕಾರ್ಪೆನ್ ಏಂಡ್ ಕೆಲ್ಲೀಸ್ ಇನ್ ಟ್ರಬಲ್' ಟಾಕಿಗೆ ಹೋಗಿಬಂದೆವು ಬರುವಾಗ ದಾರಿಯಲ್ಲಿ ನೀರೆ 'ಸುಧಾಕರ' ಕಂಪೆನಿಯನ್ನು ಸಂದರ್ಶಿಸಿ ಒಂದು ಆಕಾಶವರ್ಣದ ಸಿಲ್ಕ್ ಸಾರಿಯನ್ನು ಆರಿಸಿಕೊಂಡಳು ಮುಂದೆ ಬರುತ್ತ ಆ್ಯಸಿಲ್ಯಾ ಫೇಸ್ ಪೌಡರೂ, 'ಹಿಮಾನಿ' ಸ್ನೋವೂ, ಒಳ್ಳೆ ಬಣ್ಣದ ರಿಬ್ಬನ್‌ಗಳೂ, ಮಲ್ಲಿಗೆ ಚೆಂಡುಗಳೂ ನೀರೆಯ ಮಡಿಲಲ್ಲಿ ಬಿದ್ದುವು ಆದರೂ ಕೈಯಲ್ಲಿ ಕಾಸಿಲ್ಲದಿರುವಾಗ.

ಶ್ರೀ ಕೃಷ್ಣ ಸಿನೆಮ, ಮಂಗಳೂರು

ದಿ ನ್ಯೂ ಯುರ್ ವರ್ಸ್ಟ್ ಟಾಕೀ ಮಂದಿರದಲ್ಲಿ

ಅನೇಕ ಸಾಹಸ, ಘಟನಾವಳಿಗಳಿಂದ ಕೂಡಿದ ಅತ್ಯಮೋಘ ಚಿತ್ರವಾದ

ದಿ ಕೋಲ್ ಒಫ್ ದಿ ಸೇವೇಜ್

ಎ ಟಾರ್ಜನ್ ಚಿತ್ರವನ್ನು ಸದ್ಯದಲ್ಲಿ ಪ್ರದರ್ಶಿಸಲಿರುವುದು

ಟಿಕೇಟುಗಳನ್ನು ಮುಂದಾಗಿ ಪಡೆಯಿರಿ.

ಲಕ್ನೋವಿನಲ್ಲಿ ಬಾಂಬಿನ ಆಸ್ಫೋಟನ.

ಅಬಿಸೀನಿಯಾ ಚಕ್ರವರ್ತಿಯರ ಭವಿಷ್ಯವೇನು?

ಹಬಸಿ ಚಕ್ರವರ್ತಿಯರ ಪ್ರಯಾಣ.

ಹಬಸಿ ಚಕ್ರವರ್ತಿಯರು, ಕುಟುಂಬ ಪರಿವಾರ ದೊಡನೆ, ಒಂದು ಬ್ರಿಟಿಷ ಯುದ್ಧನಾವೆಯನ್ನು ಹತ್ತಿ ಕೊಂಡು, ಪೆಲಿಸ್ಟೈನಿಗೆ ತೆರಳಿರುವರು. ಅಲ್ಲಿಂದ ಜೆರುಸೆಲಮಿಗೆ ಹೋಗಿ, ಬ್ರಿಟಿಷ ಸರಕಾರವು ಸಮ್ಮತಿಸು ಯುವುದಾದರೆ, ಅಲ್ಲಿಂದ ಲಂಡನ್ನಿಗೆ ಪ್ರಯಾಣ ಮಾಡು ವರಂತೆ. ಚಕ್ರವರ್ತಿಯವರು ಆಡಿಸ್ ಅಬಾಬದಿಂದ ಹೊರಡುವ ಮೊದಲು, ಬ್ರಿಟಿಷರು ತನಗೊಂದು ಯುದ್ಧ ನಾವೆಯನ್ನು ಒದಗಿಸಬೇಕಾಗಿ ವಿನಂತಿ ಮಾಡಿದ್ದರು. ತಾನು ಸರಕಾರದ ಅಧಿಕಾರವನ್ನು ಮಂತ್ರಿಗಳಿಗೆ ಒಪ್ಪಿಸಿ ದುದಲ್ಲದೆ, ಸಿಂಹಾಸನವನ್ನು ತ್ಯಜಿಸಲಿಲ್ಲ ವೆಂದು ಹೇಳಿದ್ದರು. ಇಟೇಲಿಗೆ ಚಕ್ರವರ್ತಿಯರು ಎಥಿ ಯೋಪಿಯಾವನ್ನು ಬಿಡುವ ವಿಚಾರ ಯಾವತ್ತು ಅಡ್ಡಿಗಳಿ ಲ್ಲದಿರುವುದರಿಂದ, ಅವರು ಚಕ್ರವರ್ತಿಯರು ಬ್ರಿಟಿಷರ ಯುದ್ಧನಾವೆಯಲ್ಲಿ ಪ್ರಯಾಣ ಮಾಡಲು ಒಪ್ಪಿರುವರಂತೆ.

ರಾಸ್ ನಿಶ್ಯೂಬನು ಜಿಬೂತಿಗೆ ಬಂದಿರುವನು

ರಾಸ್ ನಿಶ್ಯೂಬು ಮತ್ತು ಆತನ ಟರ್ಕಿಸ್ ಸಂಗ್ರಾಮ ಬೋಧಕರಾದ ವಾಹಿಬ್ ಪಾಶಾರವರು, ರಣರಂಗವನ್ನು ತ್ಯಜಿಸಿ ಜಿಬೂತಿಗೆ ಬಂದಿರುವರು. ರಾಸ್ ನಿಶ್ಯೂಬನು ಓಗಡನ್ ಪ್ರಾಂತ್ಯದ ಹಬಸಿ ಸೈನ್ಯ ಮಂಡ ಳದ ಮುಖ್ಯ ನಾಯಕರಾಗಿದ್ದರು. ಪ್ರಾಯಶಃ ಇತ್ತ ಕಡೆ ಇಟೇಲಿಯನ್ನರನ್ನು ತಡೆಯಲು ಅಸಾಧ್ಯವಾದ ರಿಂದ ಈ ರಾಸರು, ಆ ರಣರಂಗವನ್ನು ತ್ಯಜಿಸಿರಬಹು ದೆಂದು, ಇನ್ನೂ ಮುಂದಕ್ಕೆ ಈ ಪ್ರಾಂತ್ಯದಲ್ಲಿ ಇಟೀ ಲಿಗೆ ಯಾವತ್ತು ತಡೆಗಳು ಇರಲಾರವೆಂದು ವಾರ್ತೆ ಬಂದಿರುತ್ತದೆ

ಬ್ರಿಟಿಷ ಪಾರ್ಲಿಮೆಂಟಿನ ಸಭೆ.

ಹಬಸಿಯರ ಗತಿ ಈ ರೀತಿಯಾಗಲು, ಛಹೀರ್ ವ್ಯವಹಾರದ ಕುರಿತು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಬಹಳ ಚರ್ಚೆ ನಡೆಯುವುದಂತೆ. ಆಗ್ಯೆ ಇಟೇಲಿಯ ಮೇಲೆ ನಿಂಕ್ಷನುಗಳು ಜನಾಂಗಸಭೆಯ ಭವಿಷ್ಯ ಜರ್ಮನಿಗೆ ಈ ವಾರದಲ್ಲಿ ಕಳುಹಿಸಲಾದ ಪ್ರಶ್ನಾವಳಿ, ಆಸ್ಟ್ರಿಯದ ಸ್ಥಿತಿ ಇವೇ ಮೊದಲಾದ ಅಂತರಾಷ್ಟ್ರೀಯ ವಿಚಾರಗಳು ಚರ್ಚಿ ಸಲಾಗುವವು

ಇಟೇಲಿಯು ಬಹಳ ಹಿಗ್ಗಿರುತ್ತದೆ

ಹಬಸಿ ಚಕ್ರವರ್ತಿ ಎಥಿಯೋಪಿಯಾವನ್ನು ತ್ಯಜಿಸಿ ಪಲಾಯನ ಮಾಡಿದುದರಿಂದ ಇಟೇಲಿಯ ರೋಮ ನಲ್ಲಿ ಆನಂದ ಸುಗ್ಗಿ ತಮ್ಮ ಜಯದ ಸಂತೋಷವನ್ನು ಬಹಳ ವಿಜೃಂಭಣೆಯಿಂದ ವ್ಯಕ್ತಪಡಿಸಲು ಅಲ್ಲಲ್ಲಿ ಏರ್ಪಾಡುಗಳಾಗಿವೆ ಸಮಸ್ತ ಎಥಿಯೋಪಿಯಾವನ್ನು ವಶೀಕರಿಸುವ ನಿರ್ಧಾರ ಇಟೇಲಿಯು ಮಾಡುವು ದಂತೆ

ಆಡಿಸ್ ಅಬಾಬದ ಸ್ಥಿತಿ

ಇಟೇಲಿಯಾನರು ಅಡಿಸ್‌ಅಬಾಬದಿಂದ ೧೦ ಮೈಲು ದೂರದಲ್ಲಿರುವರು ಲೂಟಾಯಿಸುವುದು ಈಗ ಸ್ವಲ್ಪ ನಿಂತಿರುತ್ತದೆ ಆದರೆ ಹತಾಶರಾದ ಜನರ ಗುಂಪು ಗಳು ನಗರವನ್ನು ಸೇರುತ್ತಿದ್ದಾರೆ ಇದರಿಂದ ನಗರವಾ ಸಿಗಳಿಗೂ ಛಹೀರ್ ಜನಾಂಗಿಕರಿಗೂ ಅಪಾಯ ಉಂಟಾ ಗುವುದೆಂದು ಊಹಿಸಲಾಗಿದೆ

ಓಗಡನ್ ಪ್ರಾಂತ್ಯದಲ್ಲಿ

ಎಲ್ಲೆಲ್ಲೂ ಇಟೇಲಿಯಾನರಿಗೆ ಸಂಪೂರ್ಣ ಜಯ ವಾಗಿರುತ್ತದೆ ಈ ಪ್ರಾಂತ್ಯದ ನಿವಾಸಿಗಳು ಬಹಳ ಸಂತೋಷದಿಂದ ಇಟೇಲಿಯವರನ್ನು ಸ್ವಾಗತೀಕರಿಸಿದ ರಂತೆ. ಎಲ್ಲಿಯೂ ಇಟೇಲಿಗೆ ತಡೆಗಳಿಲ್ಲವೆಂದು ವಾರ್ತೆ ಆಡಿಸ್ ಅಬಾಬದಲ್ಲಿ ಈಗ ನಡೆಯುತ್ತಿರುವ ಅನರ್ಥಗಳನ್ನು ತಪ್ಪಿಸಲು, ಇಟೇಲಿಯು ಆಡಿಸ್ ಅಬಾಬ ವನ್ನು ಬೇಗನೆ ಸೇರುವುದಂತೆ

ಜನಾಂಗಸಭೆಯ ಅಪಜಯ.

ಜನಾಂಗಸಭೆಯು ಒಟ್ಟಾಗಿ ಕಾರ್ಯ ಸಾಧಿಸುವ ವಿಚಾರದಲ್ಲಿ ಅಪಜಯ ಹೊಂದಿದುದರಿಂದ ಅದರ ಈಗಿನ ಸ್ಥಿತಿಯ ಅರಿವನ್ನು ಮಾಡಿಕೊಳ್ಳಬೇಕಾಗಿ, ಬ್ರಿಟಿಷ ಮುಖ್ಯ ಮಂತ್ರಿಯರಾದ, ಬಾಲ್ಡವಿನ್ನರು, ಮಿ ಎಡೆನ್ನರು, ಜನಾಂಗಸಭೆಯ ಯೂನಿಯನ್ನಿನ ಒಂದು ಡೆಪ್ಯುಟೇಶನಿಗೆ ಉತ್ತರವಿತ್ತಿರುವರು. ಇಟೇಲಿ ಮೇಲೆ ಯೋಗ್ಯ ಪ್ರಾಯಶ್ಚಿತ್ತವನ್ನು ಹಾಕಬೇಕೆಂದು ಈ ಡೆಪ್ಯುಟೇಶನಿನವರು ಒತ್ತಾಯಪಡಿಸಿದ್ದಾರಂತೆ. ಜನಾಂಗ ಸಭೆ ಈಗಿನ ಕೊವೆನೆಂಟುಗಳನ್ನು (ಶರ್ತಗಳನ್ನು) ಬದ ಲಾಯಿಸುವ ಪ್ರಯತ್ನಗಳು ಮುಂದಕ್ಕೆ ನಡೆಯುವ ವಂತೆ.

ವಾರ್ತಾ ವಾಹಿನಿ!

ವೈಸರಾಯರಾದ ಲೋರ್ಡ್ ಲಿನ್‌ಲಿತ್ ಗೋರವರು ಸಪತ್ನೀಕರಾಗಿ ಡೆರಾಡೆನ್ನಿನ ಹತ್ತಿರವಿರುವ ಕೆಲವು ಹಳ್ಳಿ ಗಳನ್ನು ಸಂದರ್ಶಿಸಿದರು. ಹಳ್ಳಿಗರೊಡನೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಹಳ್ಳಿಗಳ ಪರಿಚಯಮಾಡಿ ಕೊಳ್ಳುವುದೇ ಈ ಸಂದರ್ಶನದ ಉದ್ದೇಶವಂತೆ

ಮದ್ರಾಸಿನ ಎಕ್ಸಿಕ್ಯೂಟಿವ್ ಕೌನ್ಸಿಲಿನ ವೈಸ್ ಪ್ರೆಸಿ ಡೆಂಟರಾದ ಸರ್. ಕೆ. ವಿ ರೆಡ್ಡಿಯವರು, ಲೋರ್ಡ್ ಎರ್ಸ್ಕಿನ್ನರು ರಜೆಯ ಮೇಲೆ ಸ್ವದೇಶಕ್ಕೆ ತೆರಳಿದ ಸಮಯ ಗವರ್ನರರಾಗಿ ಬದ್ಲಿ ನೋಡಲು ನೇಮಕ ಹೊಂದಿರುವರು ಲೋರ್ಡ್ ಎರ್ಸ್ಕಿನ್ನರು ಬರುವ ಜೂನ್ ತಿಂಗಳಿಂದ ೪ ತಿಂಗಳ ರಜೆಯ ಮೇಲೆ ಸ್ವದೇ ಶಕ್ಕೆ ತೆರಳಲಿರುವರು.

ನಾಗಪುರದ ನಗರಸಭೆಯವರು ಮೊನ್ನೆ ಅಲ್ಲಿಗೆ ಬಂದ ಡಾ। ಅಂಬೇಡ್ಕರರಿಗೆ ಒಂದು ಭಿನ್ನವತ್ತವನ್ನು ಒಪ್ಪಿಸಿದರು

ಅಹಮ್ಮದಾಬಾದಿನ ಮಜೂರರ ಪರಿಷತ್ತು ಮೊನ್ನೆ ತಾ. ಅರೆಲ್ಲಿ ಜರಗಿತು ಅನೇಕ ಠರಾವುಗಳು ಮಂಜೂ ರಾಗಿವೆ ಕಳೆದ ಅಸೆಂಬ್ಲಿಯಲ್ಲಿ ಮಂಜೂರಾದ ಪೇಮೆಂಟ್ ಆಫ್ ವೇಜಸ್ ಬಿಲನ್ನು ಖಂಡಿಸಿದ ಠರಾವು ಇವುಗಳಲ್ಲೊಂದಾಗಿದೆ

ಮುಂಬಾಯಿಯ ರಾಮಚಂದ್ರ ನ ಂಗಲ ಸಿಂಗ್ ಎಂಬ ಮಜೂರ ನಾಯಕರು ಮೊನ್ನೆ ಸೆರೆಮನೆಯಿಂದ ಹೊರಗೆಬಂದಿರುವರು ಇವರು ಮುಂಬಾಯಿ ಅಧ್ಯಕ್ಷ ವನ್ನು ಬಿಡಬೇಕಾಗಿ ಸರಕಾರದ ಕಟ್ಟಪ್ಪಣೆಯಾಗಿರುತ್ತದೆ

ಲಾರ್ಡ್ ವಿಲ್ಲಿಂಗಡನ್ನರು ಸಪತ್ನಿಪರಿವಾರ ಸಮೇತ, ಲಂಡನ್ ನಗರದಲ್ಲಿ ಇಳಿದರು ಇವರನ್ನು ಎದುರು ಕಾಣಲು ಇಂಡಿಯಾ ಸೆಕ್ರೆಟರಿ ಮೊದಲಾದ ಮಹನೀಯರು ಬಂದಿದ್ದರು ಶೀತನಿಮಿತ್ತ ಪ್ರಯಾಣ ದಲ್ಲಿ ಐದು ದಿವಸ ಮಾಜಿ ವೈಸರಾಯರು ಹಾಸಿಗೆಯಲ್ಲಿ ಇರಬೇಕಾಯಿತು

ಕೌನ್ಸಿಲಿನ ಲೋರ್ಡ್ ಪ್ರೆಸಿಡೆಂಟರಾದ ಮಿ। ರೆಮ್ಸೇ ಮೆಕ್ ಡೊನಾಲ್ಡರು ಬರುವ ದರ್ಬಾರ್ ಮೇ ತಿಂಗಳಲ್ಲಿ ಜರ ಗಬೇಕಾದ ಅರಸರ ಕಿರೀಟಧಾರಣೆ ಸಮಾರಂಭದ ಸಿದ್ಧತೆ ಗಳನ್ನು ಮಾಡುತ್ತಿದ್ದಾರಂತೆ ಕಿರೀಟ ಧಾರಣೆಯು ಜರಗುವ ಸಂಭ್ರಮದ ತಾರೀಕು ಬೇಗನೆ ಪ್ರಕಟವಾಗು ವುದು

ನವರಾಜಶಾಸನ ಪ್ರಕಾರ, ಹೊಸ ಸರಕಾರದ ಪ್ರಾರಂಭವು ಬರುವ ವರ್ಷದ ಎಪ್ರಿಲ್ ತಿಂಗಳಲ್ಲಿ ಆಗು ವುದೆಂದು ವಾರ್ತೆ.

ಬ್ರಿಟನಿನ ಮಾರ್ಗಗಳಲ್ಲಿ ಮೋಟಾರು ಅಪಘಾತಗ ಳಿಂದ ಸಂಭವಿಸುವ ಮಕ್ಕಳ ಮರಣದ ಸಂಖ್ಯೆಯನ್ನು ಕಡಿಮೆಮಾಡಲು ಏಳು ವರ್ಷದ ಕಡಿಮೆ ಪ್ರಾಯದ ಮಕ್ಕಳು ಯಾರಾದರೂ ದೊಡ್ಡವರು ಸಂಗಾತಿಗಳಲ್ಲದೆ ಬೀದಿಗಳಲ್ಲಿ ಸಂಚರಿಸಬಾರದಾಗಿ ಹೊಸ ಕ್ರಮವೊಂದು ಜ್ಯಾರಿಯಾಗುವುದಂತೆ

ಪ್ರಪಂಚ ಅತಿ ದೊಡ್ಡದಾದ ಸರ್ಪವೊಂದು ಮಲೆಯಾ ಅರಣ್ಯದಲ್ಲಿ ಹಿಡಿಯಲ್ಪಟ್ಟು, ಲಂಡನಿನ ಮೃಗಾ ಲಯಕ್ಕೆ ಕಳುಹಿಸಲಾಗಿದೆ ಇದು ಅತಿ ಭಯಂಕರ ವಾದ ಸರ್ಪ ಇದರ ಉದ್ದ ಸಾಧಾರಣ ೧೮ ಅಡಿ ಇದರ ಕಡಿತದಿಂದ ಮನುಷ್ಯನು ಕೆಲವೆ ನಿಮಿಷಗಳಲ್ಲಿ ಮಡಿಯುವನಂತೆ

ಫ್ರಾನ್ಸಿನಲ್ಲಿ ಸೋಶಿಯಲಿಸ್ಟ ಪಂಗಡವು ಅಧಿಕಾ ರಕ್ಕೆ ಬಂದುದರಿಂದ, ಅಲ್ಲಿನ ಚಲಾವಣೆ ನಾಣ್ಯವಾದ ಫ್ರಾಂಕು ಗೋಲ್ಡ ಸ್ಟೆಂಡರ್ಡಿನಿಂದ ತಪ್ಪಿಹೋಗುವುದೆಂಬ ಊಹನೆಗಳುಂಟಾಗಲು ಪ್ರಾರಂಭವಾಗಿದೆ ಆದರೆ ಅದರ ಬದಲಾಗಿ, ಫ್ರಾಂಕು ಇನ್ನೂ ದೃಢವಾಗುವುದೆಂದು ಅಭಿಪ್ರಾಯಪಡುತ್ತಿರುವವರು ಅನೇಕರಿದ್ದಾರೆ

ಸ್ವಿಸ್ಸಿನ ಧಾರಾಳ ಭಂಗಾರವು ಅಮೇರಿಕಾಕ್ಕೆ ಹೋಗುತ್ತಿದೆ ಇದರಿಂದ ಬೇಂಕ್ ಒಫ್ ಫ್ರಾನ್ಸು ಸಾಧಾರಣ ನೂರು ಮಿಲಿಯ ಪವನು ಭಂಗಾರವನ್ನು ಕಳೆದುಕೊಂಡಿದೆ

ಆಸ್ಟ್ರೀಯಾದಲ್ಲಿ ಸೈನ್ಯಕರಬೇತನ್ನು ಹೆಚ್ಚು ಮಾ ಡುವ ಪ್ರಯತ್ನಗಳು ನಡೆಯುತ್ತಿವೆ ಈ ಕುರಿತು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಕೆಲವು ಪ್ರಶ್ನೆಗಳು ಕೇಳಲಾ ದವು

ಆಂಧ್ರ ಕಾಂಗ್ರೆಸ್ ಸೋಶಿಯಲಿಸ್ಟ ಪಾರ್ಟಿಯ ೩ನೇ ವಾರ್ಷಿಕ ಅಧಿವೇಶನವು ಜೂನ್ ೩ನೇ ವಾರದಲ್ಲಿ ರಾಜಮಹೇಂದ್ರಿಯಲ್ಲಿ ಜರಗುವುದು

ಮುಂದೆ ಪುನಃ ಯುದ್ಧ ಪ್ರಾರಂಭವಾಗುವು ದಾದರೆ ಬ್ರಿಟನನ್ನು ಇಟಲಿ ಮತ್ತು ಜರ್ಮನಿಯ ಜೊತೆಗೆ ಸೇರಿ ರಷ್ಯಾದ ಮೇಲೆ ಬೀಳುವುದೆಂದು ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯಲ್ಲಿ ಟಿ ಎಫ ಪ್ರೇಸ್‌ರವರು ಒಂದು ಲೇಖನ ಬರೆದಿದ್ದಾರೆ ಫ್ರಾನ್ಸು ಮುಂತಾದ ರಾಷ್ಟ್ರಗಳು ರಷ್ಯಾದ ಕಡೆಗೆ ಸೇರುವುದೆಂದು ಅವರ ಅಭಿ ಪ್ರಾಯ

ಮಿರಜ್ಜಿನಲ್ಲಿ ಮೊನ್ನೆ ಶನಿವಾರ ೧೨ ಗಂಟೆಯ ಸಮಯ ಒಂದು ತೀಕ್ಷ್ಣವಾದ ಭೂಕಂಪವಾಯಿತು. ನಷ್ಟವೇನೂ ವರದಿಯಾಗಲಿಲ್ಲ

ಬಿಜಾಪುರದ ತಾಲೂಕಿನ ನಿರೋಣಿ ಎಂಬ ಗ್ರಾಮದ ಒಂದು ಹಾಳು ಬಾವಿಯಲ್ಲಿ ಒಬ್ಬ ಸ್ತ್ರೀ ಮತ್ತು ಆಕೆಯ ಇಬ್ಬರು ಮಕ್ಕಳ ಶವಗಳು ದೊರಕಿರುತ್ತವೆ. ಪೋಲೀಸ ತನ್ನಿಖೆಯು ನಡೆಯುತ್ತದೆ.

ಲಾಹೋರ ಡಿಸ್ಟ್ರಿಕ್ಟಿನ ನೆರೋಲ್ ಎಂಬಲ್ಲಿ ಎರಡು ಪಂಗಡಗಳಿಗೆ ಭಾರಿ ಗಲಭೆಯುಂಟಾಗಿ ಒಬ್ಬನು ಅಲ್ಲಿ ಸತ್ತು ಬಿದ್ದ ಇನ್ನೊಬ್ಬನ ಭಯಂಕರ ಗಾಯಗಳಿಂದ ಮೃತಪಟ್ಟ ಪೋಲೀಸರು ವಿಚಾರಿಸುತ್ತಿದ್ದಾರೆ

ರತ್ನಗಿರಿಯ ಸುತ್ತುವ ಪಟ್ಟಲಿನ ಗ್ರಾಮಗಳಲಿ ಕೆಲ ದಿವಸಗಳ ಹಿಂದೆ ಒಂದು ಸೆಕೆಂಡು ಭೂಮಿಯು ಕಂಪಿಸಿತು, ಇದರಿಂದ ಅಲ್ಲಿನ ಜನರು ಕಕ್ಕಾಬಿಕ್ಕಿ ಯಾದರು

ದಿ ಕೆನರಾ ಬ್ಯಾಂಕ್, ಲಿಮಿಟೆಡ್,

ಪುತ್ತೂರು

ಪ್ರಕಟಣಾ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿ ನಿಂದ ತಾ 24-1-33ರಲ್ಲು ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ನೊಬಲಗನು ಯಾ ಅದರ ಮೇಲಣ ಬಡ್ಡಿಯನ್ನು ಕೊಡದೆ ಬಾಕಿ ಇಟ್ಟುಕೊಂಡಿದ್ದು ದರಿಂದ ಅವರಿಗೆ ಕ್ರಮವಾಗಿ ಬಿಟ್ಟ ರಜಿಸ್ಟ್ರಿ ನೋಟೀಸು ಮೂಲಕ ಅವರು ಮೃತಪಟ್ಟಿರುವರಾಗಿ ತಿಳಿದು ಬಂದ ನಿಮಿತ್ತವಾಗಿ ಇದೇ ಇಸವಿ ಮಾರ್ಚ ತಿಂಗಳ 20ನೇ ತಾರೀಕಿನ ಸ್ವದೇಶಾಭಿಮಾನಿ ಗಜೇಟಿನಲ್ಲಿ ಪ್ರಕಟಿಸಿದ ಮೇರೆಗೆ ಇದೇ ತಿಂಗಳ ತಾರೀಕು 5ನೇ ಮಂಗಳವಾರ ಮಧ್ಯಾಹ್ನ ಗಂಟೆ 3ಕ್ಕೆ ಸದ್ರಿ ಅಡವಿಟ್ಟ ನಗಗಳನ್ನು ಬಹಿ ರಂಗವಾಗಿ ಏಲಂ ಮಾಡಿದ್ದಲ್ಲಿ ರೂ 270-0-0 ಹುಟ್ಟಿಬರಲು, ಆ ಪೈಕಿ ರೂ 150-3-5ನ್ನು ಸದ್ರಿ ಸಾಲದ ಅಸಲು ಬಡ್ಡಿ ಬಡ್ಡಿಗೆ ಬಡ್ಡಿ ಖರ್ಚು ವಗೈರೆ ಗಳ ಬಾಬ್ತು ಮಜಾ ಕಳೆದು ಬಾಕಿ ಉಳಿಕೆಯಾದ ರೂ 119 12 7ನ್ನು ಸದ್ರಿಯವರ ಹೆಸರಿನಲ್ಲಿ ಅಮಾ ನತು ಖಾತೆಗೆ ಜಮೆಯಾಗಿ ಇಟ್ಟುಕೊಂಡಿರುತ್ತದೆ ಆ ಖಾತೆಯ ಹಣವನ್ನು ಸದ್ರಿ ಮೃತಪಟ್ಟವರ ನ್ಯಾಯ ವಾದ ಹಕ್ಕುದಾರರು ತ್ವರ್ಯದಲ್ಲಿ ಕೊಂಡುಹೋಗ ಬೇಕಾಗಿಯೂ ಅದಕ್ಕೆ ಮೇಲ್ಕಂಡ ಬ್ಯಾಂಕಿನಿಂದ ಯಾವ ಸಲಿಯ ಬಡ್ಡಿಯೂ ಸಿಕ್ಕಲಿಕ್ಕಿಲ್ಲವಾಗಿಯೂ ಈ ಮೂಲಕ ತಿಳಿಸಲಾಗುತ್ತದೆ

ಈ ಪ್ರಕಟನೆ ನೋಟೀಸ ಖರ್ಚು ಅವರೇ ತೆರತಕ್ಕ ದ್ದಾದುದರಿಂದ ಅವರ ಅಮಾನತು ಖಾತೆಗೇನೇ ಈ ಬಾಬ್ತು ಖರ್ಚು ಬರೆಯಲಿಕ್ಕಿರುವುದು

ಕುಂಜಣ್ಣ ರೈಯವರ ಅಳಿಯ ಅತ್ರಟ್ಟೆಲ್ ಭಂಡಾ ರ್ಯ ಪೆರ್ನಾ ಗ್ರಾಮ ಉಪ್ಪಿನಂಗಡಿ ಪೋಸ್ಟ

ಅಮಾನತು ಖಾತೆ ರೂ 119-12-7

(*Sd*) **M Anantha Bhandary**
Agent

ಶ್ರೀ ಕೃಷ್ಣಾ ಸಿನೆಮಾ, ಮಂಗಳೂರು.

SULOCHANA ATTRACTED MILLIONS IN



ANARKALI ಅನಾರ್ಕಲಿ

ಯಲ್ಲಿ ಶೀಘ್ರದಲ್ಲೇ ತೋರಿಸುವೆವು.

ಐ. ಸಿ. ಎಸ್. ಪರೀಕ್ಷೆಯ ಹೊಸ ಕ್ರಮಗಳು.

ಈ ಪರೀಕ್ಷೆಯಲ್ಲಿ ಇತ್ತೀಚೆಗೆ ಹಿಂದೀಯರೇ ಹೆಚ್ಚುಹೆಚ್ಚಾಗಿ ಉತ್ತೀರ್ಣರಾಗುವುದನ್ನು ನೋಡಿಯೂ, ಇಂಗ್ಲಿಷ ಉಮೇದುವಾರರ ಸಂಖ್ಯೆ ಕಡಿಮೆಯಾಗುತ್ತಲೂ ಮಾತ್ರವಲ್ಲದೆ ಅಷ್ಟು ಉತ್ತಮವಾಗಿ ಸ್ಥಾನಗಳನ್ನು ಪಡೆಯದಿರುವ ನಿಮಿತ್ತವೂ, ಈಗ ಇಂಗ್ಲಿಷ ಆಫೀಸರರ ಸಂಖ್ಯೆಯು ಇಳಿಯುತ್ತ ಹಿಂದೀಯರ ಸಂಖ್ಯೆಯು ಹೆಚ್ಚುತ್ತ ಬರುವ ಕಾರಣ, ಹೇಗೂ ಮಾಡಿ ಈ ಎರಡು ಸಂಖ್ಯೆಗಳೊಳಗಣ ದಾಮಾಶಾಯವನ್ನು ಸಂಗೊಳಿಸಲು ನೂತನ ನಿಯಮಗಳನ್ನು ಸೆಕ್ರೆಟರಿ ಒಫ್ ಸ್ಟೇಟರೆಂಬ ಇಂಡಿಯಾ ಕರಣಿಕರು ಪ್ರಕಟಿಸಿರುವರು ಇನ್ನು ಕೆಲವೇ ಎಂದರೆ ನಾಲ್ಕು ವರ್ಷಗಳಲ್ಲಿ ಇಂಗ್ಲೆಂಡಿನಲ್ಲಿ ನಡೆವ ಪರೀಕ್ಷೆಯಿಂದ ಉತ್ತೀರ್ಣರಾಗತಕ್ಕ ಹಿಂದೀಯರು ಆರೇ ಮಂದಿ ಆಗುವರು. ಡಿಲ್ಲಿಯಲ್ಲಾಗುವ ಪರೀಕ್ಷೆಯಿಂದ ೧೨ ಮಂದಿಯನ್ನು ಆರಿಸುವರು. ಒನರ್ಸ್ ಪರೀಕ್ಷೆಯಲ್ಲಿ ಉತ್ತಮ ಹೆಸರುಗೊಂಡು, ಇಂಗ್ಲಿಷ ಯುನಿವರ್ಸಿಟಿಯ ಶಿಫಾರಸಿಗೆ ಪಾತ್ರರಾಗಿದ್ದರೆ ಮಾತ್ರ, ಈ ಪರೀಕ್ಷೆಗೆ ಇಂಗ್ಲೆಂಡಿನಲ್ಲಿ ಉಮೇದ್ವಾರರಾಗಬಹುದು, ಅದೂ ಅಲ್ಲಿ ಎರಡು ವರ್ಷವಾಸ ಮಾಡಿಕೊಂಡಿದ್ದರೆ ಮಾತ್ರ. ಪರೀಕ್ಷೆಗೆ ಬರುವವರ ವಯಸ್ಸು ೨೩ರಿಂದ ೨೪ ಆಗಬಹುದು. ಪರೀಕ್ಷೆಯು ಇಲ್ಲದೆಯೆ, ಉತ್ತಮ ಯೋಗ್ಯತೆಯುಳ್ಳ ಒನರ್ಸ್ (ಇಂಗ್ಲಿಷ) ಗ್ರೆಜ್ಯುವೇಟರನ್ನು ನೇಮಿಸಬಹುದು. ಕಳೆದ ಆರು ವರ್ಷಗಳಲ್ಲಿ ಲಂಡನಿನಲ್ಲಾಗುವ ಪರೀಕ್ಷೆಯ ಮೂಲ್ಕ ೯೮ ಯೂರೋಪಿಯರೂ ೯೭ ಹಿಂದೀಯರೂ ಈ ಸರ್ವಿಸ್ಸಿಗೆ ನೇಮಕ ಹೊಂದಿರುವರು, ೩೬೯ ಸ್ಥಾನಗಳಿಗೆ ೨೬೦ ಮಂದಿಯನ್ನು ಮಾತ್ರ ನೇಮಿಸಿರುತ್ತಾರೆ, ಇವರಲ್ಲೂ ೯೦ ಮಂದಿ ಯೂರೋಪಿಯರು, ೧೭೩ ಹಿಂದೀಯರು, ೧೯ ಬರ್ಮನಿಯರು ಡಿಲ್ಲಿಯಿಂದ ಪರೀಕ್ಷೆ ಮೂಲಕ ಉತ್ತೀರ್ಣರಾಗಿ ನೇಮಕವಾದವರು ೨೩, ಆದರೆ ಜಾತಿವಾರು ಪ್ರಾತಿನಿಧ್ಯದ ಸಲುವಾಗಿ ೩೪ ಮಂದಿಯನ್ನು ಸರಕಾರವು ಹೆಚ್ಚಿಗೆ ನೇಮಿಸಿದೆ. ೧೯೩೦-೩೧ರಲ್ಲಿ ಉತ್ತೀರ್ಣರಾದವರಲ್ಲಿ ೨೪ ಮಂದಿ ಯೂರೋಪಿಯರೂ ೧೦ ಮಂದಿ ಹಿಂದೀಯರೂ ಇದ್ದಾಗ, ಕಳೆದ ವರ್ಷ ೫ ಮಂದಿ ಯೂರೋಪಿಯರೂ ೧೫ ಹಿಂದೀಯರೂ ಉತ್ತೀರ್ಣರಾಗಿದ್ದರು. ಹಿಂದೀಯರಲ್ಲಿ ಉತ್ತೀರ್ಣರಾದವರು ಬೇಕಾದಷ್ಟು ಮಂದಿ ಇದ್ದರೂ ಇವೇ ಆರು ವರ್ಷಗಳಲ್ಲಿ ೮೯ ಸ್ಥಾನಗಳಿಗೆ ಚುನಾವಣೆ ಮಾಡಿದ್ದೇ ಇಲ್ಲ. ಈಗ ಅದನ್ನು ಭರ್ತಿ ಮಾಡುವರಂತೆ. ಹಿಂದೀಯರೇ ಪಾಸಾಗುತ್ತಿದ್ದರೆ, ಯೂರೋಪಿಯರಿಗೆ ಸ್ಥಾನಗಳೆಲ್ಲಿ?

ವಿದ್ಯಾದಾಯಿನಿ ಸಭಾ ಮುಂಬಾಯಿ.

ವಿದ್ಯಾದಾಯಿನಿ ಸಭೆಯಲ್ಲಿ ಅನೇಕ ವರ್ಷಗಳಿಂದ ತನುಮನಧನಗಳನ್ನರ್ಪಿಸಿ ಕೆಲಸ ಮಾಡುತ್ತಿದ್ದ ಬಿಲ್ಲವರಲ್ಲಿ ದಿವಂಗತ ಡಿ. ಎಂ. ಅಮೀನರು ಒಬ್ಬರಾಗಿರುವರು. ಇವರು ಸ್ವಲ್ಪ ಸಮಯದಿಂದ ಕಾಯಿಲೆಯಲ್ಲಿದ್ದು, ಎಷ್ಟು ಪ್ರಯತ್ನಪಟ್ಟರೂ, ಗುಣಹೊಂದದೆ ಕಳೆದ ಎಪ್ರಿಲ್ ತಾ. ೮ನೇ ದಿನ ಮುಂಬಾಯಿಯಲ್ಲೇ ದೈವಾಧೀನರಾದರೆಂದು ತಿಳಿಸುವರೆ ತುಂಬಾ ವ್ಯಸನಪಡುತ್ತೇವೆ. ಇವರ ಅಕಾಲ ಮರಣವು ವಿದ್ಯಾದಾಯಿನಿ ಸಭೆಗೆ ಮಾತ್ರವಲ್ಲದೆ ಪ್ರತಿಯೋರ್ವ ಪರಿಚಿತ ವ್ಯಕ್ತಿಗೂ ಅತ್ಯಂತ ಖೇದಕರವಿರದಿರದು. ವಿದ್ಯಾದಾಯಿನಿ ಸಭೆಗೆ ಅನೇಕ ತರದ ತೊಂದರೆಗಳು ಬಂದೊದಗಿದ್ದರೂ ಅವುಗಳನ್ನು ಗಣ್ಯಮಾಡದೆ, ಎದೆಯೊಡ್ಡಿ ನಿಂತು ಅತಿ ಪ್ರಯಾಸದಿಂದ ೧೯೩೩ರಲ್ಲಿ (ಸದ್ರಿ) ಸಭೆಯನ್ನು ರಿಜಿಸ್ಟ್ರ ಮಾಡುವಂತೆ ಪ್ರಯತ್ನಪಟ್ಟು ಆ ಕಾರ್ಯವನ್ನು ಸರಕಾರದವರಲ್ಲಿ ನೆರವೇರಿಸಿದವರಲ್ಲಿ ಇವರೂ ಓರ್ವರಾಗಿರುವರು. ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಹಾರೈಸಿ ಅವರ ಕುಟುಂಬಬಂಧುಬಳಗದವರ ಅಪಾರ ದುಃಖದಲ್ಲಿ ನಾವೂ ಸಹಭಾಗಿಗಳಾಗಿದ್ದೇವೆ ಎಂಬ ದುಃಖಸೂಚಕ ಠರಾವು ವಿದ್ಯಾದಾಯಿನಿ ಸಭೆಯ ಕಾರ್ಯನಿರ್ವಾಹಕ ಸಮಿತಿಯಲ್ಲಿ ಮಂಜೂರಾಗಿರುವುದು.

ಸೆಕೆಯ ದಾಹದಿಂದ ತಪ್ತವಾದ ದೇಹಕ್ಕೆ ನಿಜವಾದ ಶಾಂತಿಯು ಇಲ್ಲಿದೆ.

ಸೆಕೆಯ ದಾಹದ ಬಳುವಳಿ ಇಲ್ಲದವರಿಗೆ ಅದರ ಬವಣೆಗಳು ತಿಳಿಯಲಾರವು. ಆದರೆ ಇನ್ನು ಅಷ್ಟು ಕಷ್ಟಪಡಬೇಕಾಗಿಲ್ಲ. ಸೆಕೆಯಿಂದ ಬಳಲುವ ಮಾನವರೇ ಇತ್ತ ಕಡೆ ಗಮನ ಕೊಡಿ. ನಿಮಗೆ ದಾಹವು ಉಂಟಾದ ಕೂಡಲೆ ಇರಾಸ್ಮಿಕ್ ಕಾರ್ಬಾಲಿಕ್ ಗ್ಲಿಸರಿನ್ ಸಾಬೂನಿನಿಂದ ನಿಮ್ಮ ಮೈಯನ್ನು ತಿಕ್ಕಿ ಸ್ನಾನಮಾಡಿ. ಅದರ ಅದ್ಭುತವಾದ ನೊರೆಯು ರಂಧ್ರಗಳ ಮೂಲಕ ದೇಹದೊಳಗಿಳಿದು ನಿಮಗೆ ಸುಖದಾಯಕವಾದ ತಂಪನ್ನೀಯುವುದು. ಇರಾಸ್ಮಿಕ್ ಕಾರ್ಬಾಲಿಕ್ ಸಾಬೂನಿನಲ್ಲಿ ಕಾರ್ಬಾಲಿಕ್ ದ್ರಾವಕವೂ, ಗ್ಲಿಸರಿನೂ ಸೇರಿಕೊಂಡಿವೆ. ತುರಿಸುವಿಕೆ, ಹುಳಮೇಯುವಿಕೆ, ಮುಂತಾದ ಚರ್ಮವ್ಯಾಧಿಗಳಿಗೆ ಇದು ದಿವ್ಯೌಷಧ.

ಇರಾಸ್ಮಿಕ್ ಕಾರ್ಬಾಲಿಕ್ ಗ್ಲಿಸರಿನ್ ಸಾಬೂನನ್ನು ತೈಲಭ್ಯಂಜನಕ್ಕೂ ಉಪಯೋಗಿಸಬಹುದು. ತಲೆಯ ಎಲ್ಲಾ ಕೊಳೆಯನ್ನು ನಾಶಗೈದು, ಸುಖವಾದ ನಿದ್ರೆಯನ್ನೀಯುವುದು.

ERASMIC
36% CARBOLIC GLYCERINE SOAP

X ECG 492-403 THE ERASMIC CO. LTD., LONDON

For Your Electrical Requirements

ಇಲೆಕ್ಟ್ರಿಕ್ ಫಿಟ್ಟಿಂಗು ಮಾಡಬೇಕಾದರೆ ಇಲೆಕ್ಟ್ರಿಕ್ ಸಾಮಾನುಗಳು ಬೇಕಾದರೆ

ವಿಶ್ವಾಸಕರ ವ್ಯಾಪಾರವನ್ನು ನಡೆಸಬೇಕೆಂದಿದ್ದರೆ

ನಮ್ಮ ಇಲೆಕ್ಟ್ರಿಕ್ ಸಾಮಾನಿನ ಮಾರಾಟದ ಅಂಗಡಿಯನ್ನು ಸಂದರ್ಶಿಸಿರಿ

Estimates Submitted without obligation

ಇಲೆಕ್ಟ್ರಿಕ್ ಫಿಟ್ಟಿಂಗುಗಳ ಅಂದಾಜು ಮೌಲ್ಯದ ಪಟ್ಟಿಯನ್ನು ಉಚಿತವಾಗಿ ತಯಾರಿಸಿಕೊಡುತ್ತೇವೆ.

Electric fans, Household appliances, Table lamps,

Very Attractive chandeliers and other fittings

Everything in Electricity

Goods supplied on Approval and guarantee of Manufacture

First class Goods First class Work First class Attendance

An Enquiry at our Electrical Show Rooms will cost you Nothing

And

Will gain You excellent Service.

The Canara Public Conveyance Company Ltd., Kodialbail, Mangalore.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ವಾಚಕರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.—ಸಂ. ಸ್ವ

ಹೊಸದುರ್ಗದಲ್ಲಿ ಮತಾಂತರದ ಗಲಾಟೆ.

ಸ್ವದೇಶಾಭಿಮಾನಿ ಪತ್ರಿಕಾ ಸಂಪಾದಕರಿಗೆ—

ಹೊಸದುರ್ಗವು ಒಂದು ಚಿಕ್ಕ ಊರು ಇಲ್ಲಿಯ ಜನಸಂಖ್ಯೆಯು ೫೦೦೦ಕ್ಕೆ ಮಿಕ್ಕಿ ಇರಲಾರದು. ಪೈಕಿ ೧೦೦೦ ಮಹಮ್ಮದೀಯರೂ ಸುಮಾರು ೪೦೦೦ ಹಿಂದೂಗಳೂ ಆಗಿರುತ್ತಾರೆ. ಈ ವಿನಹ ಇಲ್ಲಿ ಸುಮಾರು ೨೦ ಮಂದಿ ಪ್ರೊಟೆಸ್ಟಾಂಟ್ ಕ್ರೈಸ್ತರೂ ೫ ಮಂದಿ ಕೆಥೋಲಿಕ್ ಕ್ರೈಸ್ತರೂ ಇರುವರು ಈ ೫ ಮಂದಿ ಕೆಥೋಲಿಕ್ ಕ್ರೈಸ್ತರ ಪರವಾಗಿ ಇಲ್ಲಿ ಒಬ್ಬ ಕೆಥೋಲಿಕ್ ಗುರುಗಳು ಸುಮಾರು ೬ ತಿಂಗಳ ಹಿಂದೆ ಇಲ್ಲಿಗೆ ಬಂದು ನೆಲಸಿಕೊಂಡಿದ್ದಾರೆ. ಅತೀ ಕನಿಷ್ಠ ಸ್ಥಿತಿಯಲ್ಲಿದ್ದ ತನ್ನ ಜಾತಿಸಂಖ್ಯೆಯನ್ನು ಏರಿಸಬೇಕೆಂಬುದೇ ಅವರ ಮುಖ್ಯ ಕಾಂಕ್ಷೆಯೆಂದು ತೋರುತ್ತದೆ. ಇಲ್ಲಿನ ನೆರೆಗ್ರಾಮಗಳಲ್ಲಿಯೂ ಹರಿಜನರ ಸಂಖ್ಯೆಯು ತುಂಬಾ ಇದ್ದು ಅವರನ್ನು ಹೇಗಾದರೂ ಪುಸಲಾಯಿಸಿ ಕೆಥೋಲಿಕರನ್ನಾಗಿ ಮಾಡಬೇಕಾಗಿ ಈ ಗುರುಗಳು ಭಗೀರಥಪ್ರಯತ್ನದಲ್ಲಿದ್ದಾರೆ

ಈಗಾಗಲೇ ಸುಮಾರು ೧೫–೨೦ ಜನ ಪಂಚಮರನ್ನು ಅವರು ಸೇರಿಸಿದ್ದಾಯಿತು. ಇನ್ನೂ ಮನೆಮನೆಗಳಿಗೆ ಹೋಗಿ ಅವರಿಗೆ ವಸ್ತ್ರವೋ ತಿಂಡಿಯೋ ಹಣವೋ ಕೊಟ್ಟು ಹಿಂದೂಮತವನ್ನು ತ್ಯಜಿಸುವಂತೆ ಪ್ರೇರೇಪಿಸುತ್ತಿದ್ದಾರೆ ಚಿಕ್ಕ ಪ್ರಾಯದ ಹುಡುಗಿಯರಿಗೆ ಈ ರೀತಿಯಲ್ಲಿ ಮರುಳುಗೊಳಿಸಿ, ಅವರ ಹಿರಿಯರಿಗೂ ಈ ಗುರುಗಳಿಗೂ ಆಗಾಗ ಜಗಳಾಟವು ನಡೆಯುತ್ತಲೇ ಇವೆ ಇದು ಬಹಳ ಶೋಚನೀಯವಾದ ಸಂಗತಿಯಾಗಿದೆ ಪಂಚಮರ ಪೈಕಿ ಅನೇಕರು ಬಹಳ ನೊಂದವರಾಗಿ ಪೇಚಾಡುತ್ತಿದ್ದಾರೆ ಈ ದುಃಸ್ಥಿತಿಯನ್ನು ಮಾರ್ಪಡಿಸಲು ಸಾಧ್ಯವಿಲ್ಲವೇ? ಹಿರಿಯರ ಒಪ್ಪಿಗೆಯಿಲ್ಲದೆ ಅವರ ಮನಸ್ಸನ್ನು ನೋಯಿಸಿ ಪ್ರಾಯಸಮುರ್ಥರಾಗದಿರುವ ಎಳೇ ಮಕ್ಕಳನ್ನೂ ಯುವ್ವನಸ್ಥರನ್ನೂ ತನ್ನ ಹಣದ ದರ್ಪದಿಂದ ಬಲಾತ್ಕರಿಸಿ ಕೆಥೋಲಿಕ್ ಮತಕ್ಕೆ ಈ ಗುರುಗಳು ಸೇರಿಸಿಕೊಳ್ಳುವುದು ಇದು ಯಾವ ನ್ಯಾಯ? ಹಿಂದೂಗಳ ಪೈಕಿ ಹರಿಜನರು ಇಂಥಾ ಮತಾಂತರಕ್ಕೆ ಬಹಳ ತುತ್ತಾಗುವ್ವದು ನಮ್ಮ ಹಿಂದೂ ಸಮಾಜದ ಹೀನಸ್ಥಿತಿಯನ್ನು ತೋರ್ಪಡಿಸುತ್ತದೆ ಈ ಗುರುಗಳ ದೆಸೆಯಿಂದ ಇಲ್ಲಿಯ ಇಡೀ ಹಿಂದೂವರ್ಗವು ಎಚ್ಚತ್ತು, ಈ ರೀತಿ ಹಿಂದೂಗಳನ್ನು ಕಂಡಕಂಡವರು ಅನ್ಯಮತಕ್ಕೆ ಸೇರಿಸಿಕೊಳ್ಳಲು ಬಿಡಬಾರದಾಗಿ ಈಟೆಗೆ ಕಂಡುಕೊಂಡಿದ್ದಾರೆ ಇದರ ಫಲವಾಗಿ ಇಲ್ಲೊಂದು ಹರಿಜನಸಂಘವನ್ನು ಏರ್ಪಡಿಸಿ ಪಂಚಮರನ್ನು ಎಲ್ಲಾ ರೀತಿಗಳಲ್ಲಿಯೂ ಮೇಲಕ್ಕೆ ತರುವಂತೆ ಸದ್ರಿ ಸಂಘದವರು ಪ್ರಯತ್ನಿಸುತ್ತಲಿದ್ದಾರೆ ಈ ಪ್ರಯತ್ನದಲ್ಲಿ ಅಲ್ ಇಂಡಿಯಾ ಹರಿಜನ ಸೇವಾ ಸಂಘದವರೂ ಆರ್ಯ ಸಮಾಜದವರೂ ಭಾಗಿಗಳಾಗಿ ಇಲ್ಲಿಯ ಸಂಘದವರನ್ನು ಪ್ರೋತ್ಸಾಹಿಸುವರೆಂದು ನಾವು ಕೋರುತ್ತೇವೆ

ಹೊಸದುರ್ಗ ನಿವಾಸಿ.

ಮೂಡಿಗೆರೆ ತಾಲೂಕು ಕಳಸದ ಹೊರ್ನಾಡ್ ಶ್ರೀ ಅನ್ನಪೂರ್ಣೇಶ್ವರೀ ದೇವಾಲಯ.

ಈ ಮೇಲ್ಕಂಡ ದೇವಸ್ಥಾನದಲ್ಲಿ ಕಳೆದ ೨೫–೨–೩೬ ರಲ್ಲಿ ರಥೋತ್ಸವ ಸಂಬಂಧ ಯಕ್ಷಗಾನ ಪಂಪತ್ತು ಏರ್ಪಡಿಸಲಾಗಿತ್ತು ಶ್ರೀ ಮೊಸಕೊಪ್ಪ ಕೃಷ್ಣಯ್ಯನವರು ಅಧ್ಯಕ್ಷರಾಗಿದ್ದರು. ಮಂಗಳೂರಿನ ಯಕ್ಷಗಾನ ಕಲೆಯಲ್ಲಿ ಪ್ರಸಿದ್ಧಿಹೊಂದಿದ ಶ್ರೀ ಜಾ: ವೆಂಕಪ್ಪಶೆಟ್ರುವರು ತಮ್ಮ ಯಕ್ಷಗಾನಮೇಳದೊಂದಿಗೆ ಜಯಮಾಡಿಸಿದ್ದರು. ಶ್ರೀ ಶೆಟ್ರುವರಿಗೆ ಅರ್ಥದ ಬಗ್ಗೆ ಬಂಗಾರದ ಪದಕವೂ, ಶ್ರೀ ಹೊಸಕೊಪ್ಪರವರಿಗೆ ಮೃದಂಗ ವಾದನದ ಬಗ್ಗೆ ಒಂದು ಬಂಗಾರದ ಪದಕವೂ, ಮತ್ತು ಇನ್ನಿತರರಿಗೆ ಬಂಗಾರ, ಬೆಳ್ಳಿಪದಕಗಳೂ, ಬೆಳ್ಳಿಕಪ್ಪುಗಳೂ ಯೋಗ್ಯತಾನುಸಾರ ಕೊಡಲಾದುವಲ್ಲದೆ ಅನೇಕರಿಗೆ ಭಕ್ತಿ ಮೊದಲಾದುವು ಕೊಡಲಾದುವಂತೆ,

ಈ ಸಂತೋಷ ಸಮಾರಂಭದಲ್ಲಿ ಒಂದು ವಿಷಾದಕರವಾದ ಸಂಗತಿಯು ನಡೆದ ಬಗ್ಗೆ ವಿವರಿಸಲು ಬಹಳ ವಿಷಾದವೆನಿಸುತ್ತದೆ. ಈ ದೇವಸ್ಥಾನಕ್ಕೆ 'ಶಿಷ್ಯವರ್ಗ'ದವರೆಂದು ಕರೆಯಲ್ಪಡುತ್ತಿರುವ ಶ್ರೀ ಸಾಹುಕಾರ್ ಮುನಿಸ್ವಾಮಿಗೌಡರು ಕೊಲ್ಲಪ್ಪಯ್ಯ ಮತ್ತು ಶ್ರೀ ಸಾಹುಕಾರ್ ಕವಿಳುಕಾಡಿಗೆ ಸುಬ್ರಾಯ್ ಇವರ ಮತಸ್ಥರಿಂದಲೇ ಹೆಚ್ಚಿನ ಕಾಣಿಕೆಯು ಸಲ್ಲುತ್ತಿರುವುದಾಗಿ ತಿಳಿಯುತ್ತದೆ. ಹೀಗಿರುವಲ್ಲಿ ಮೇಲ್ಕಂಡ ದೇವಸ್ಥಾನದಲ್ಲಿ ಸಹಪಂಕ್ತಿಯನ್ನು ಸುಮಾರು ೩–೪ ಸಂವತ್ಸರಗಳಿಂದ ಕೊಡಲ್ಪಡುತ್ತಿದ್ದು, ಈ ಸಂವತ್ಸರದ ಮೇಲ್ಕಂಡ ರಥೋತ್ಸವದ ದಿವಸ ಅನಿರ್ವಚನೀಯವಾದ ಕೆಲವು ಮಾತುಗಳಿಂದ ಊಟಕ್ಕೆ ಕುಳಿತ ವೇಳೆಯಲ್ಲಿ ಅವಮಾನಪಡಿಸಿದ್ದಕ್ಕೋಸ್ಕರ ಊಟಮಾಡುವುದನ್ನೇ ಬಿಟ್ಟು ಸದ್ರಿ ಶ್ರೀ ಸಾಹುಕಾರ ಕೋಮಿನವರು ಎದ್ದುಹೋದರೆಂತಲೂ, ಆ ಬಗ್ಗೆ ಇತ್ತೀಚೆಗೆ ಒಂದು ವಾರಾವಸ್ಥದ ಮೊಕದ್ದಮೆಯನ್ನು ಸದ್ರಿ ದೇವಸ್ಥಾನದ ಅಧಿಕಾರಿಗಳ ಮೇಲೆ ಹೂಡಲ್ಪಡುವದಾಗಿ ತಿಳಿದುಬರುತ್ತದೆ. ಅಲ್ಲದೆ ಈ ದೇವಸ್ಥಾನದ ಭಕ್ತಾದಿಗಳಾದ ಮೂಡಿಗೆರೆ, ಕೊಪ್ಪ, ನರಸಿಂಹರಾಜಪುರ, ಶೃಂಗೇರಿ, ಆಗುಂಬೆ, ತೀರ್ಥಹಳ್ಳಿ, ಮಹಾಜನಗಳಿಗೆ ಈ ದೇವಸ್ಥಾನದ ಲೆಖ್ಖಾಚಾರವೇ ತಿಳಿಯಬರುವುದಿಲ್ಲವಾದ್ದರಿಂದ ಈ ವರ್ಷ ಕಳೆದ ಮೂರು ಸಂವತ್ಸರಗಳ ಲೆಕ್ಕಾಚಾರವನ್ನೂ ವೃತ್ತಪತ್ರಿಕೆಗಳ ದ್ವಾರವೂ, ಭಕ್ತಾದಿಗಳಿಗೆ ವರದಿಯಂತೆಯೂ ಕೂಡ ದೇವಸ್ಥಾನದ ಅಧಿಕಾರಿಗಳು ತಿಳಿಸಬೇಕೆಂದು ಪ್ರಾರ್ಥಿಸುತ್ತಲಿದ್ದಾರೆ ಮತ್ತು ಸದ್ರಿ ಅಧಿಕಾರಿಗಳು ಇತ್ತೀಚೆಗೆ ಕೆಲವು ಸ್ಥಿರ ಆಸ್ತಿಗಳನ್ನೂ ಕೂಡಾ ಮಾಡಿಟ್ಟಿರುವುದಾಗಿಯೂ ವದಂತಿ ವಿಚಾರಗಳು ಹೀಗಿರುವಾಗ ಸದ್ರಿ ಅಧಿಕಾರಿಗಳು ಭಕ್ತಾದಿಗಳ ಮೊರೆಗೆ ಮನ್ನಣೆಯನ್ನು ಕೊಡದೆ ತಾಟಸ್ಥ್ಯವನ್ನು ವಹಿಸಿರುವ ಕಾರಣವೇನೋ ತಿಳಿದು ಬರುವುದಿಲ್ಲ

ವಿಚಾರಗಳು ಹೇಗೂ ಇರಲಿ ಇತ್ತೀಚೆಗೆ ಶ್ರೀ ಶೃಂಗೇರಿ ಶ್ರೀ ಮಠದ ಪರಂಪರಾಪ್ರಾಪ್ತವಾದ ಜಗದ್ಗುರು ಶ್ರೀ ಉಗ್ರನರಸಿಂಹ ಭಾರತೀಯ ಸ್ವಾಮಿಗಳವರ ಕಾಲದಲ್ಲಿಯ ಕೆಲವು ರಿಕಾರ್ಡುಗಳಿಂದ ಸದ್ರಿ ಕೋಮಿನವರು ಉತ್ತರ ದೇಶದಿಂದ ಬಂದ ಬ್ರಾಹ್ಮಣರೇ ಎಂದೂ ಸದ್ರಿಯವರು ಈ ಪ್ರಾಂತ್ಯಕ್ಕೆ ಬಂದಾಗ ಅವರನ್ನು ಯಾರೂ ಗಮನಿಸದೆ ಇದ್ದುದರಿಂದ ದೂರೀಕರಿಸಲ್ಪಟ್ಟರೇ ಶಿವಾದ್ವೈತವಾದ ಕಾರಣದಿಂದಲೂ ದೂರೀಕರಿಸಲ್ಪಟ್ಟವರಲ್ಲವೆಂದೂ, ಶ್ರೀ ಮಠದ ಆಸ್ಥಾನವಿದ್ವಾಂಸ ಧರ್ಮಾಧಿಕಾರಿ ಶ್ರೀ ವಿದ್ವಾನ್ ಕೆ ಶೇಷಶಾಸ್ತ್ರಿಯವರು ತಾ ೧೫–೪–೩೬ ರಲ್ಲಿ ಶ್ರೀ ಸಾಹುಕಾರ್ ಕವಿಳುಕಾಡಿಯವರ ಮನೆಯಲ್ಲಿ ನಡೆದ ಸಭೆಯಲ್ಲಿ ಮೇಲ್ಕಂಡಂತೆ ಅಪ್ಪಣೆ ಕೊಡಿಸಿರುತ್ತಾರೆ ಹೀಗಿರುವಾಗ ಸದ್ರಿ ಅಧಿಕಾರಿಗಳು ಮೇಲ್ಕಂಡ ಕೋಮಿನವರಲ್ಲಿ ಮನ್ನಣೆಯನ್ನು ಬೇಡುವುದು ಯುಕ್ತವಲ್ಲವೆ? ಲೆಕ್ಕಾಚಾರಗಳನ್ನು ಪ್ರಕಟಿಸುವುದೂ ಧರ್ಮವಲ್ಲವೇ? ಇಷ್ಟೇ ಅಲ್ಲದೆ ಶ್ರೀ ಮಠದಲ್ಲಿಯೂ ಕೂಡ ಸಹಪಂಕ್ತಿ ನಡೆಯುತ್ತಿರುವುದನ್ನೂ ತಿಳಿದೂ ಮೇಲ್ಕಂಡಂತೆ ವರ್ತಿಸಿದ್ದು ಧರ್ಮವಿರುದ್ಧವಲ್ಲವೇ? ಈ ಮೇಲೆ ತಿಳಿಸಿದಂತೆ ಅವಮಾನ ಮಾಡಿದ ಕಾರಣ ವರ್ಷಂಪ್ರತಿ ಮೇಲ್ಕಂಡ ಕೋಮಿನವರು ಕೊಡುತ್ತಿದ್ದ ಮೇಲ್ಕಂಡ ದೇವಸ್ಥಾನದ ಅಡಿಕೆಯ ಮೂಲಕವಾದ ಕಾಣಿಕೆಯು ಕೂಡಾ ನಿಲ್ಲಿಸಲ್ಪಡಲು ಅವಕಾಶವುಂಟಾಯಿತಲ್ಲವೇ? ಇನ್ನಾದರೂ ಸದ್ರಿ ಅಧಿಕಾರಿಗಳು ಭಕ್ತಾದಿಗಳ ಕೋರಿಕೆಯಂತೆ ವರದಿಯೊಂದನ್ನು ಕ್ಷಿಪ್ರದಲ್ಲಿಯೇ ಹೊರಡಿಸುವುದು ಅತ್ಯಗತ್ಯವಿರುತ್ತದೆ

'ಓರ್ವ ಹಿತೈಷಿ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಧಾರವಾಡ.

ಈಗ ಎಲ್ಲ ಕಾಂಗ್ರೆಸ್ ಠರಾವುಗಳು ವೃತ್ತಪತ್ರಗಳಲ್ಲಿ ಬಂದು ಹೋಗಿವೆ, ಅವುಗಳ ಬಗ್ಗೆ ವಿಚಾರ ಮಾಡಿ ಅವುಗಳನ್ನು ಅನುಲಿಗೆ ತರುವ ಕುರಿತು ಆದಷ್ಟು ಬೇಗನೇ ನಿಮ್ಮ ಕಮಿಟಿಯ ಸಭೆಯನ್ನು ಕರೆಯಬೇಕು. ಆ ಠರಾವುಗಳನ್ನು ಕುರಿತು ನಾವೆಲ್ಲರೂ ಮಾಡತಕ್ಕ ಮುಖ್ಯ ಕರ್ತವ್ಯವೆಂದರೆ ಅವುಗಳ ಪ್ರಚಾರ ಊರೂರುಗಳಲ್ಲಿ ಸಭೆಗಳನ್ನು ಮಾಡಿ ಅಲ್ಲಿ ಜನರಿಗೆ ಈ ಠರಾವುಗಳ ಮಹತ್ವವನ್ನು ತಿಳಿಯಪಡಿಸುವುದು ಅತ್ಯಂತ ಅವಶ್ಯವೆಂದು ತೋರುವದು.

ಅದೇ ಪ್ರಕಾರ ಈಗ ಕಾಂಗ್ರೆಸ್ ಘಟನೆಯಲ್ಲಿ ಹಲವು ಮಾರ್ಪಾಟುಗಳಾಗಿವೆ. ಆ ಮಾರ್ಪಾಟುಗಳನ್ನಯ ನಿಮ್ಮ ನಿಮ್ಮ ಘಟನೆಯಲ್ಲಿ ಮಾರ್ಪಾಟುಗಳನ್ನು ಮಾಡುವದು ಅವಶ್ಯವಿದೆ, ನಿಮ್ಮ ಘಟನೆಗಳ ಒಂದೊಂದು ಪ್ರತಿಯನ್ನು ಈ ಕಚೇರಿಗೆ ಕೂಡಲೇ ಕಳುಹಿಸಬೇಕು ಇನ್ನು ಮುಖ್ಯ ಠರಾವುಗಳನ್ನು ಕುರಿತು ನಾವು ಮಾಡತಕ್ಕ ಕರ್ತವ್ಯಗಳ ದಿಗ್ದರ್ಶನವನ್ನು ಇಲ್ಲಿ ಮಾಡುತ್ತೇನೆ,

೧ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟಿನ ಬಗ್ಗೆ ಠರಾವು—ಈ ಠರಾವು ಚೆನ್ನಾಗಿ ಓದಿನೋಡಿದರೆ ಆಕ್ಟಿನ ನಿಂತಕರಣೆಯನ್ನು ಮಾಡಲಿಕ್ಕೇ ಬೇಕು ಎಂಬುದು ಸ್ಪಷ್ಟವಿದೆ, ಮಂತ್ರಿಪದವಿ ಸ್ವೀಕಾರದ ಬಗ್ಗೆ ಮತಭೇದವು ಇದ್ದರೂ ಈ ಸುಧಾರಣಾ ಕಾಯಿದೆಯನ್ನು ನಾವು ಪೂರ್ಣ ನಿರಾಕರಿಸಲಿಕ್ಕೇ ಬೇಕು ಎಂಬ ಬಗ್ಗೆ ಯಾವ ಮತಭೇದವೂ ಇರುವುದಿಲ್ಲ ಆದುದರಿಂದ ಈ ಠರಾವಿನನ್ನಯ ಈ ಸುಧಾರಣಾ ಕಾಯಿದೆಯ ಹುಳುಕುಗಳನ್ನೆಲ್ಲಾ ಜನರಿಗೆ ತೋರಿಸಿ ಅದನ್ನು ನಿರಾಕರಿಸುವ ಅವಶ್ಯಕತೆಯನ್ನು ಜನರ ಮನಸ್ಸಿನ ಮೇಲೆ ಬಿಂದಿಸಲಿಕ್ಕೆ ಬೇಕು

೨. ಮಹಾಯುದ್ಧವು ಹೊಡಲ್ಪಟ್ಟರೂ ಹಿಂದೂವಾಸಿಯರು ಅದರಲ್ಲಿ ಭಾಗವಹಿಸಲಾರರು ಎಂಬ ಠರಾವಿನ ಪ್ರಚಾರವನ್ನು ಚೆನ್ನಾಗಿ ಮಾಡಬೇಕು

೩. ಮೇ ೧೦ನೇ ತಾರೀಖಿನ ದಿವಸ ಶ್ರೀ ಸುಭಾಸ್ ಚಂದ್ರ ದಿನವೆಂದು ಆಚರಿಸಿ ಅವರ ಬಂಧನದ ಸಂಪೂರ್ಣ ನಿಷೇಧವನ್ನು ಮಾಡಬೇಕು ಹಾಗೂ ವ್ಯಕ್ತಿಸ್ವಾತಂತ್ರ್ಯ ಇತ್ಯಾದಿಗಳ ಬಗ್ಗೆ (Civil Liberties) ಕಾಂಗ್ರೆಸಿನವರು ಮಾಡಿದ ಠರಾವಿಗೆ ಚೆನ್ನಾಗಿ ಬೆಂಬಲವನ್ನು ಕೊಡುವಂತೆ ಮಾಡಬೇಕು.

೪ ಕಾಂಗ್ರೆಸ್ ಕಮಿಟಿಗಳು ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿಯ ರೈತರ ಹಾಗೂ ಕೂಲಿಕಾರರ ಸಂಘಟನೆಯನ್ನು ಮಾಡಲೆತ್ನಿಸಬೇಕು ಮತ್ತು ಅವರು ಕಾಂಗ್ರೆಸ್ ಕಮಿಟಿಗಳ ಕಾರ್ಯಕಲಾಪಗಳಲ್ಲಿ ಹೆಚ್ಚೆಚ್ಚು ಭಾಗ ವಹಿಸುವಂತೆ ನಾವು ಯತ್ನಿಸಬೇಕು

ಈ ಬಗ್ಗೆ ನೀವು ಏನೇನು ಮಾಡಿರುವಿರಿ ಹಾಗೂ ಮಾಡಬೇಕೆನ್ನುವಿರಿ ಇದನ್ನು ಕೂಡಲೇ ತಿಳಿಸಬೇಕು

ತಮ್ಮ

ರಂ. ರಾ. ದಿವಾಕರ,

ಗೌರವ ಕಾರ್ಯದರ್ಶಿ

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಯಿ.

ತಾ ೨೬–೪–೩೬ರಲ್ಲಿ ಕರೆಯಲ್ಪಟ್ಟ ಈ ಮೇಲಿನ ಸಂಘದ ೧೯೩೬ನೇ ಇಸವಿಯ ಮೆಂಬರರ ವಾರ್ಷಿಕ ಮಹಾಸಭೆಯಲ್ಲಿ ಸಾಕಷ್ಟು ಮಂದಿ ಮೆಂಬರರು ಹಾಜರಿಲ್ಲದುದರಿಂದ ಮಂಡಳಿಯ ನಿಯಮನಿಬಂಧನೆಯನುಸಾರವಾಗಿ ಮುಂದರಿಸಿಟ್ಟ ಮೀಟಿಂಗನ್ನು ಇದೇ ಮೇ ತಾ ೧೦ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ೧೪೫ ಮೋದಿ ರಸ್ತೆಯಲ್ಲಿರುವ ಮಂಡಳಿಯ ಧರ್ಮಾರ್ಥ ರಾತ್ರಿ ಶಾಲೆಯ ಮಂದಿರದಲ್ಲಿ ಜರಗಿಸಲು ನಿಶ್ಚಯಿಸಿರುವುದರಿಂದ ಸರ್ವ ಮೆಂಬರರೂ ಹಾಜರಾಗಬೇಕಾಗಿ ಮಂಡಳಿಯ ಕಾರ್ಯದರ್ಶಿಯವರು ಅಪೇಕ್ಷಿಸುತ್ತಾರೆ

ಶೃಂಗೇರಿ ಪತ್ರ

ನರಸಿಂಹರಾಜಪುರದಲ್ಲಿ ಹುಲಿಕಾಟ.

ನರಸಿಂಹರಾಜಪುರದಲ್ಲಿ ಹುಲಿಯು ಹೆಚ್ಚಿ ಅನೇಕ ಜಾನುವಾರುಗಳು ನಷ್ಟವಾಗುತ್ತಲಿವೆ ಇದರಿಂದ ರೈತಾಪಿಗಳಿಗೆ ತುಂಬಾ ತೊಂದರೆ ಮತ್ತು ನಷ್ಟ ಇದಕ್ಕೆ ಕಾರಣ ಮೈಸೂರು ಸರಕಾರದವರು ಹುಲಿಯನ್ನು ಹೊಡೆಯಕೂಡದೆಂದು ತಾಕೀತು ಮಾಡಿರುವುದೇ ಅರಣ್ಯಶಾಖೆಯವರು ಇಲ್ಲಿಯೇ ವಾಸವಾಗಿದ್ದು ಸರಕಾರದವರ ಗಮನಕ್ಕೆ ಈ ವಿಷಯವು ಬಾರದಿರುವುದನ್ನು ತಿಳಿಸಲು ಬಹಳ ವಿಷಾದವೆನಿಸುತ್ತದೆ ಆದ್ದರಿಂದ ನಮ್ಮ ಜಿಲ್ಲಾಧಿಕಾರಿಗಳಾದರೂ ಈ ಬಗ್ಗೆ ತಕ್ಕ ಏರ್ಪಾಟುಗಳನ್ನು ಮಾಡಿ ರೈತಾಪಿಜನರಿಗುಂಟಾಗಿರುವ ಕುಂದುಕೊರತೆಗಳನ್ನು ನಿವಾರಿಸುವರಾಗಿ ನಂಬಿದೆ

ಶೃಂಗೇರಿ ಶ್ರೀ ಜಗದ್ಗುರು ಮಹಾಸ್ವಾಮಿಗಳವರು.

ಶೃಂಗೇರಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳವರು ಸಂಪೂರ್ಣ ಆರೋಗ್ಯಸ್ಥಿತಿಯಲ್ಲಿರುವರು ಮಹಾಸ್ವಾಮಿಗಳವರು ಆಗಿಂದಾಗ್ಗೆ ಹೊಳೆ ಈಚೆಗಿರುವ ಶ್ರೀ ಶಾರದಾಮ್ಮನವರ ದರ್ಶನಕ್ಕೆ ಬರುತ್ತಿದ್ದಾರೆ ನಮ್ಮ ಜಿಲ್ಲಾಧಿಕಾರಿಗಳಾದ ಮಿ। ಅಬ್ದುಲ್ ಹಕ್ ಸಾಹೇಬರವರು ಶ್ರೀಗಳವರ ದರ್ಶನವನ್ನು ಮಾಡಲು ಮಾಡೂರು ಹೊಳೆ ಆಚೆಯಿರುವ ನರಸಿಂಹವನಕ್ಕೆ ಹೋಗಿರಲು ಪೋಲೀಸಿನವರ ಬಂದೋಬಸ್ತು ಇಟ್ಟಿದ್ದರೂ ಕೂಡ ಶ್ರೀ ಶ್ರೀಗಳವರು ಶ್ರೀ ಶಾರದಮ್ಮನ ದರ್ಶನಕ್ಕೆಂದು ಬರುತ್ತಿದ್ದವರು ಅನೇಕರಿಗೆ ದರ್ಶನವನ್ನು ಕೊಡುತ್ತಲಿದ್ದಾರೆ

ಕಳಸದಲ್ಲಿ ಅನ್ಯಾಯಾಚಾರ.

ಕಳಸದ ಊರಿನಲ್ಲಿ ಶ್ರೀ ವೆಂಕಟರಾಮಭಟ್ಟ ಎಂಬವರಿಗೆ ವಿಶಾಲಾಕ್ಷಮ್ಮ ಎಂಬ ಹಿರಿಯ ಮಗಳು. ಈಕೆಯನ್ನು ಅದೇ ಊರಿನ ಅದಂ ಸಾಹೇಬ ಎಂಬವರು ಕೆಲವರು ಊರಿನವರ ಸಹಾಯದಿಂದ ಬಂಟ್ವಾಳಕ್ಕೆ ಕರೆದುಕೊಂಡು ಹೋಗಿ, 'ನಿಕಾ' ಮಾಡಿಕೊಳ್ಳುವುದರಲ್ಲಿದ್ದರಂತೆ ಅಷ್ಟರಲ್ಲೇ ಈ ವಿಚಾರವು ಈ ಊರಿನ ಸುಧಾರಕ ಪಂಗಡದವರಿಗೆ ತಿಳಿದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳಕ್ಕೆ ಹೋಗಿ ಪೋಲೀಸರಿಗೆ ಫಿರ್ಯಾದಿ ಕೊಟ್ಟು ಸಂಬಂಧಪಟ್ಟವರನ್ನು ಅರೆಸ್ಟ್ ಮಾಡಿಸಿದರೆಂತಲೂ ಹುಡುಗಿಯನ್ನು ಜಾಮೀನಿನ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಬಿಟ್ಟಿರುವುದಾಗಿಯೂ, ಚಿಕ್ಕಮಗಳೂರು ಒಂದನೇ ಕ್ಲಾಸ್ ಮೇಜಿಸ್ಟ್ರೇಟರವರ ಕೋರ್ಟಿನಲ್ಲಿ ಈ ಕೇಸು ನಡೆಯುತ್ತಿದೆಯಾಗಿಯೂ ವದಂತಿ

ಮಲನಾಡಿನ ಶಿಷ್ಯವರ್ಗದವರು.

ಈ ಮೇಲ್ಕಂಡ ಕೋಮಿನವರು ಶ್ರೀಮನ್ಮೈಸೂರು ಮಹಾರಾಜ ಸರಕಾರಕ್ಕೆ ಭಾರೀ ಕಂದಾಯ ಕೊಡುವವರೂ ಭಾರೀ ಜಮೀನ್ದಾರರೂ ಇದ್ದಾರೆ. ಇವರು ಮೂಡಿಗೆರೆ ತಾಲೂಕು ಹೊರನಾಡ್ ಶ್ರೀ ಅನ್ನಪೂರ್ಣೇಶ್ವರೀ ದೇವಾಲಯಕ್ಕೆ ಒಂದು ಮೊತ್ತವನ್ನು ದೇವಾಲಯದ ಧರ್ಮಖರ್ಚಿಗಾಗಿ ಪ್ರತಿಸಂವತ್ಸರದಲ್ಲಿಯೂ ಕೊಡುತ್ತಲಿದ್ದಾರೆ ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರು ಕೆಲವು ಸಂವತ್ಸರಗಳ ಹಿಂದೆ ಇವರು ಸ್ಮಾರ್ತಬ್ರಾಹ್ಮಣರೆಂದೂ ಇವರು ಸಹಪಂಕ್ತಿಯಲ್ಲಿ ಕುಳಿತು ಭೋಜನಮಾಡಬಹುದೆಂದೂ ಒಂದು ವೇಳೆ ಅಪ್ಪಣೆಕೊಡಿಸಿದ್ದಾರಂತೆ ಈ ಮೇಲ್ಕಂಡ ಜನಾಂಗದವರಿಗೆ ಈ ವರೆಗೂ ಸಹಪಂಕ್ತಿ ಭೋಜನವು ಶೃಂಗೇರಿ ಮಠದಲ್ಲಿ ನಡೆಯುತ್ತಲೇ ಇದೆ ಅಂತೆಯೇ ಕಳೆದ ಮೂರು ವರ್ಷಗಳಿಂದಲೂ ಶ್ರೀ ಹೊರನಾಡು ದೇವಸ್ಥಾನದಲ್ಲಿಯೂ ಸಹಪಂಕ್ತಿ ಭೋಜನಕ್ಕೆ ಅವಕಾಶವಿತ್ತು ಈ ಸಂವತ್ಸರ ಸಹಪಂಕ್ತಿ ಭೋಜನಕ್ಕೆ ಅವಕಾಶ ಕೊಡದೆ ಅಗೌರವವಾಗುವಂತೆ ಸದ್ರಿ ದೇವಳ ಅಧಿಕಾರಿಗಳು ವರ್ತಿಸಿದರೆಂದೂ ಹೇಳಲ್ಪಟ್ಟಿದೆಯಲ್ಲದೆ ಎಲ್ಲಾ ಭಕ್ತಾದಿಗಳಿಗೂ ಕೂಡ ದೇವಸ್ಥಾನದ ಆದಾಯವ್ಯಯಗಳನ್ನು ವರದಿಯ ಮೂಲಕ ತಿಳಿಯಪಡಿಸಬೇಕೆಂದೂ ಕೇಳಿರುವರಲ್ಲದೆ ತಮಗೆ ಅಗೌರವ ಪಡಿಸಿದಕ್ಕೋಸ್ಕರ ಇಷ್ಟರಲ್ಲೇ ಒಂದು ವ್ಯವಹರಣೆಯನ್ನೂ ಹೂಡುವರಾಗಿ ವರ್ತಮಾನ

ಶೃಂಗೇರಿ ಜಹಗೀರಿಯ ರೈತರು.

ಈ ಜಹಗೀರಿಯಲ್ಲಿ ಇತ್ತೀಚೆಗೆ ತುಂಬಾ ಪರಿವರ್ತನೆಯಾದುದು ಸರಿಯಷ್ಟೆ ಈ ಹಿಂದೆ ಇಲ್ಲಿ ನಿರಂಕುಶಾಧಿಕಾರವನ್ನು ಮಾಡುತ್ತಿದ್ದ ವೇ ಬ್ರಾ। ಶ್ರೀ ಶ್ರೀಕಂಠ ಶಾಸ್ತ್ರಿಗಳವರು ಕಳೆದ ರಿ–ಸರ್ವೇ ಸೆಟಲ್‌ಮೆಂಟಿನ ಕಾಲದಲ್ಲಿ ಜಹಗೀರಿಯ ಜಮೀನುಗಳೆಲ್ಲವೂ ತುಂಬಾ ಉತ್ಕೃಷ್ಟವಾಗಿದೆಯೆಂದು ಶಿಫಾರಸುಮಾಡಿ ಮೈಸೂರು ಸರಕಾರೀ ತಾಲೂಕುಗಳಿರುವುದಕ್ಕಿಂತಲೂ ೧।—। ರಷ್ಟು ಕಂದಾಯವನ್ನು ಹೆಚ್ಚಿಸಿ ರೈತರಿಗೆ ತೊಂದರೆಗಳ ವಿಚಾರವಾಗಿ ಹಲವು ವೇಳೆ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ ಮತ್ತು ಜಹಗೀರಿಯ ರೈತರು ಶ್ರೀಮನ್ಮೈಸೂರು ಮಹಾರಾಜ ಸರಕಾರಕ್ಕೆ ಈ ಬಗ್ಗೆ ಸರಿಯಾಗಿ ಮನನಮಾಡಿಕೊಂಡೇ ಇದ್ದಾರೆ ಜಹಗೀರಿ ರೈತರ ಅದೃಷ್ಟದಿಂದಲೋ ದುರಾದೃಷ್ಟದಿಂದಲೋ ಈಗ ಜಹಗೀರಿಯ ಆಡಳಿತವೆಲ್ಲವೂ ಮೈಸೂರು ಸರಕಾರದ ಅಧಿಕಾರದಲ್ಲಿರುವುದು ಸರಿಯಷ್ಟೆ' ಅಂದ ಮೇಲೆ ಜಹಗೀರಿಯ ರೈತರು ಈಗ ಮೈಸೂರು ಸರಕಾರದ ರೈತರಲ್ಲವೇ? ಮತ್ತು ಪ್ರಜೆಗಳಲ್ಲವೇ? ಮೈಸೂರು ಸರಕಾರದ ರೈತರಿಗಿರುವ ಹಕ್ಕುಬಾಧ್ಯತೆಗಳು ಜಹಗೀರಿಯ ರೈತರುಗಳಿಗೂ ಅನ್ವಯಿಸುವುದಿಲ್ಲವೇ? ವಿಷಯಗಳು ಹೀಗಿರುವಾಗ ಇಲ್ಲಿ ಸಾಲಸೋಲಗಳಿಂದ ಮತ್ತು ಸಾಹುಕಾರರು ಕೊಡುವ ಅನಿರ್ವಚನೀಯವಾದ ತೊಂದರೆಗಳನ್ನು ಸಹಿಸಿಕೊಂಡಿರುವ ಜಹಗೀರಿ ರೈತರಿಗೆ ಮೈಸೂರು ಸರಕಾರದಲ್ಲಿ ವಿಧಾಯಕವಾದಷ್ಟೇ ಕಂದಾಯವನ್ನು ಇನ್ನು ಮುಂದೆಯಾದರೂ ವಸೂಲ್ಮಾಡುವಂತೆ ಏರ್ಪಡಿಸಬೇಕು ಹಾಗೆ ಮಾಡಿದ್ದ ಭಾಗದಲ್ಲಿ ಜಹಗೀರಿಯ ರೈತರ ಗೋಳನ್ನು ನಿವಾರಿಸಲು ಸಾಧ್ಯವೇ ಇಲ್ಲ ನಮ್ಮ ಜಿಲ್ಲಾಧಿಕಾರಿಗಳಾದ ಮಿ। ಅಬ್ದುಲ್ ಹಕ್ ಸಾಹೇಬರವರು ಈ ವಿಚಾರಗಳ ಗಮನಕ್ಕೆ ತೆಗೆದುಕೊಂಡು ಜಹಗೀರಿ ರೈತಾಪಿಗಳ ಕುಂದುಕೊರತೆಗಳನ್ನು ನಿವಾರಿಸುವರಾಗಿ ನಂಬಿದೆ,

ಫೋರ್ಟ್ ಆರ್ಯಸಮಾಜ, ಮುಂಬಾಯಿ.

ಕಳೆದ ತಾ॥ ೨೭—೪—೩೬ನೇ ಸೋಮವಾರ ಸಂಜೆ ಗಂಟೆ ೬-೩೦ಕ್ಕೆ ಶ್ರೀ ಎಚ್. ಎಸ್ ಕಲ್ಯಾಣರ ಅಧ್ಯಕ್ಷತೆಯಲ್ಲಿ ಶ್ರೀಮಾನ್ ಆರ್ಯಮುನಿಯವರಿಗೆ ಸಮಾಜದ ಸದಸ್ಯರೆಲ್ಲರೂ ಕೂಡಿ ಒಂದು ಸಂತೋಷಕೂಟವನ್ನೇರ್ಪಡಿಸಿ ಸತ್ಕರಿಸಿದರು. ಈ ಸಂದರ್ಭದಲ್ಲಿ ಶ್ರೀಗಳಾದ ವಿ. ಕೆ. ಕೋಟ್ನೀಸ್, ಎಚ್. ನೀಲಕಂಠ, ಎಂ. ಚಂದ್ರೇಶ್ವರ ಮತ್ತು ವಿ. ಸತ್ಯಾರ್ಥಿ ಸಿದ್ಧಾಂತ ವಿಶಾರದ ಮೊದಲಾದವರು, ಶ್ರೀಮಾನ್ ಆರ್ಯಮುನಿಯವರು ತಮ್ಮ ಸಮಾಜಸ್ಥಾಪನಾ ಕಾರ್ಯದಲ್ಲಿಟ್ಟರೆಂದೂ ಮತ್ತು ಬಹಳ ಶ್ರದ್ಧೆಯಿಂದ ಶ್ರಮಪಟ್ಟು ಸಮಾಜದ ಕೆಲಸಗಳನ್ನು ಮಾಡುತ್ತಿದ್ದರೆಂದೂ ಸಭೆಗೆ ತಿಳಿಸಿದರಲ್ಲದೆ, ಈಗಲೂ ತಮ್ಮ ವಾಸಸ್ಥಾನವಾದ ಮೈಸೂರಿನಲ್ಲಿ "ಹರಿಜನೋದ್ಧಾರ" "ವಿಧವಾ ವಿವಾಹ" "ಪಶುಬಲಿ ನಿಷೇಧ" ಮುಂತಾದ ಕಾರ್ಯಗಳಲ್ಲಿ ದಕ್ಷರಾಗಿ ಹಗಲು ರಾತ್ರಿ ಶ್ರಮಪಡುತ್ತಿದ್ದಾರೆಂದು ಶ್ಲಾಘಿಸಿ ಮಾತನಾಡಿದರು. ಶ್ರೀ ಆರ್ಯಮುನಿಯವರು ತನ್ನ ದೀರ್ಘ ಮತ್ತು ಅತ್ಯಂತ ಸ್ಫೂರ್ತಿದಾಯಕ ಭಾಷಣದಲ್ಲಿ ಸಮಾಜದ ಉತ್ತರೋತ್ತರ ಅಭಿವೃದ್ಧಿಯನ್ನು ಕೋರಿ ನವಯುವಕರಿಗೆ ಉತ್ಸಾಹದಿಂದ ಸಮಾಜಕಾರ್ಯಗಳಲ್ಲಿ ಭಾಗವಹಿಸಬೇಕೆಂದು ಉಪದೇಶಿಸಿದರು. ತರುವಾಯ ಅಧ್ಯಕ್ಷರ ಕಾಲೋಚಿತ ಭಾಷಣವಾಗಿ ಶ್ರೀ ಆರ್ಯಮುನಿಯವರಿಗೆ ಪುಷ್ಪಹಾರವನ್ನು ಅರ್ಪಿಸಿದ ನಂತರ ಕಿಂಚಿತ್ ಫಲಹಾರದೊಂದಿಗೆ ಸಭೆ ಅಂತ್ಯವಾಯಿತು.

ಸ್ತ್ರೀಯರು ಪ್ರಾಣತ್ಯಾಗ ಮಾಡಬೇಕಾಯಿತು.

ಜಬಲ್ಪುರದ ಗಾದರ್ವಾರಾ ಎಂಬಲ್ಲಿನ ಸೆಷನ್ಸ್ ಕೋರ್ಟಿನಲ್ಲಿ ಇಬ್ಬರು ಸ್ತ್ರೀಯರ ತನಿಖೆಯ ಸಮಯ ಈ ಕೆಳಗಿನ ಕಥೆಯು ಹೊರಗೆ ಬಂದಿರುತ್ತದೆ. ಕೆಲವು ವ್ಯಾಪಾರಿಗಳ ವಿಚಾರಣೆಯ ಸಮಯ ಅಲ್ಲಿನ ಸಮೀಪದ ಹಳ್ಳಿ ಪೋಲೀಸ್ ಅಧಿಕಾರಿಗಳು ಆ ಸ್ತ್ರೀಯರ ಮೇಲೆ ಅತ್ಯಾಚಾರ ನಡೆಯಿಸಿದರಂತೆ. ಈ ಕಾರಣದಿಂದಲೆ ಅವರು ಪ್ರಾಣತ್ಯಾಗ ಮಾಡಲು ಪ್ರಯತ್ನಗೊಂಡರು. ಆದರೆ ಯಾರೋ ಅವರನ್ನು ರಕ್ಷಿಸಿದರು. ವಿಚಾರಣೆಯು ನಡೆಯುತ್ತಿದೆ.

30 ಕೋಟಿ ವೆಚ್ಚ ತಗಲಿದ ಅಣೆಕಟ್ಟು.

ಸಕ್ಕೂರ್ ಅಣೆಕಟ್ಟು ಸಿಂಧ ಸರಕಾರದ ಆರ್ಥಿಕ ವ್ಯವಸ್ಥೆಯನ್ನು ಕೆಲ್ಲಣಗೊಳಿಸುವುದೆ? ಈ ಪ್ರಾಂತ್ಯದ ಆರ್ಥಿಕ ವ್ಯವಸ್ಥೆಯು ಈಗಲೆ ಸರಿಯಿಲ್ಲ. ಈ ಪ್ರಶ್ನೆ ಇಲ್ಲಿ ನವೀನವಾಗಿ ರಚಿತವಾದ ಸರಕಾರವನ್ನು ಚಿಂತೆಗೊಳಿಸಿದೆ. ಇಲ್ಲಿನ ಸಕ್ಕೂರ್ ಅಣೆಕಟ್ಟಿನ ಮೇಲೆ ಇಷ್ಟರ ತನಕ ಸಾಧಾರಣ ೨೪ ಕೋಟಿ ರೂಪಾಯಿ ವೆಚ್ಚವಾಗಿರುತ್ತದೆ. ಇದರ ಮೇಲಿನ ಬಡ್ಡಿಯು ರೂಪಾಯಿ ೧,೦೩,೦೦ ೦೦೦ ಆಗುವುದು. ಈ ಅಣೆಕಟ್ಟಿನಿಂದ ವರ್ಷಂಪ್ರತಿ ತಗಲುವ ವೆಚ್ಚ ರೂ ೧,೮೬ ೦೦ ೦೦೦



ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ. ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು. ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು.

ಮೃದ್ವೀಕಾಸವ—ನಿತ್ರಾಣಕ್ಕೆ ಅತ್ಯಂತ ಗುಣಕಾರಿ.

ಮಹಾಮದನ ಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ ಅತೀ ಉಪಯುಕ್ತ.

ಮಹಾಮಾಷ ತೈಲ—ಪಕ್ಷವಾತಕ್ಕೆ ಅತ್ಯಂತ ಗುಣಕಾರಿ.

ಗರ್ಭಪಾಲ—ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ.

ಗುಡ್ಡಪಿಪ್ಪಲಿ—ಲಿವರ್ ರೋಗಕ್ಕೆ ಅತ್ಯುತ್ತಮ.

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದಕ್ಷಿಣ ಕನ್ನಡ.

N.I.P.
Petrol (Ready Delivery)
Kerosene & Diesel Oils
FOR RATES AND AGENCY TERMS APPLY
International Oil Co Ltd
DIJI HOUSE RAVELIN STREET FORT BOMBAY.

ಸಮಾಜದ ಪರಿಸ್ಥಿತಿ

ಲೇಖಕ — ಯಂ. ಬಿ. ಸರಸ್ವತಿ ಮಂಗಳೂರು.

ಪ್ರಸ್ತುತ, ಭಾರತದಲ್ಲಿ ಅನೇಕ ಸಮಾಜಗಳು ಇರುತ್ತವೆ. ಅವುಗಳೆಲ್ಲ ನೇರವು ಉನ್ನತ ಸ್ಥಿತಿಯಲ್ಲಿವೆ. ಅಸಂಖ್ಯಾತ ಸಮಾಜಗಳು ದಲಿತಯಲ್ಲಿಯೇ ಬದ್ಧಾಡುತ್ತಿವೆ. ಉನ್ನತ ಸಮುದಾಯಗಳು ಐಶ್ವರ್ಯ, ವಿದ್ಯಾಬಲಗಳಿಂದಲೇ ಮೇಲ್ಮೆಯಿರುವುದೆಂದು ಹೇಳಬಹುದು. ಎಲ್ಲಿ ಐಶ್ವರ್ಯ, ವಿದ್ಯಾಬಲಗಳು ಸಮ್ಮಿಳಿತವಾಗಿದೆಯೋ ಅಲ್ಲಿ ಎಲ್ಲಾ ತರದ ಅನುಕೂಲಗಳಿರುವುವು.

ಅಧಿಕಾರ ದರ್ಪವೂ, ಅರಸರ ಬೆಂಬಲವೂ, ಹಣದ ರಾಶಿಯೂ ಇರುವಲ್ಲಿ ಸಮಾಜದ ಆದರ ಗೌರವಗಳು ತನಗೆ ತಾನಾಗಿಯೇ ಬರುವುವು. ದೊಡ್ಡ ಮೀನುಗಳು ಸಣ್ಣವುಗಳನ್ನು ನುಂಗುವಂತೆ ಐಶ್ವರ್ಯವಂತ ಸಮಾಜವು ಬಡಸಮಾಜವಾದ ಹಿಂದುಳಿದವರನ್ನು ನುಂಗುವುದು ದೊಡ್ಡದಲ್ಲ. ಆದರೆ ಒಬ್ಬನು ಐಶ್ವರ್ಯವಂತನಾಗಬೇಕಾದರೆ ಸಾವಿರಾರು ಬಡಜನರ ಕಷ್ಟಪಡ ಜೀವನದ ರಕ್ತ ಹೀರಬೇಕಾಗುವುದೆಂಬುದು ನಿಜವಾಗಿರುತ್ತದೆ. ವಸ್ತುಸ್ಥಿತಿ ಈ ರೀತಿಯಲ್ಲಿರುವುದರಿಂದ ಹಿಂದುಳಿದ ಬಡ ಸಮಾಜದ ಏಳ್ಗೆಯುಂಟಾಗುವುದೆಂದು?

ವಿದ್ಯಾರ್ಜನೆಯ ಸೋಪಾನವೂ, ಅಧಿಕಾರದ ಕೇಂದ್ರೀಕರಣವೂ ಮುಂದರಿದ ಸಮಾಜಕ್ಕೇನೆ ಸುಕಳು, ಪಾರಂಪರ್ಯವಾಗಿ ಬರುತ್ತಿರುವುದು ದೃಷ್ಟಿಪಥಗಳಿಗೆ ಗೋಚರಿಸುತ್ತಿರುವುದು. ಶೃಂಗಾರ ರಸಭರಿತ ಭವ್ಯ ಭವನವೂ, ಅಮೂಲ್ಯವಾದ ವಿದೇಶೀ ಮೋಟಾರ್ ವಾಹನವೂ, [illegible], ಕರದ ಕಾಮುಕ ಪ್ರವರ್ತನದ ತಿಂದಿ ತಿನಸುಗಳೂ ಎಂದೂ ಅಕ್ಷಯವಾಗಿಯೇ ಇರುವುದು. ಅಂಥಾ ದಿನನಿತ್ಯದ ಖರ್ಚಿನ ಹಣವು ಸಾಧಾರಣ ನೂರಾರು ಬಡಪ್ರಾಣಿಗಳನ್ನು ಸಾಕಲಿಕ್ಕೆ ಸಾಕಾಗಬಹುದು. ಇವೆಲ್ಲಾ ಎಲ್ಲಿಂದ ಬರುವಂಥಾದ್ದು? ಬಡವರ ಕಷ್ಟಪಟ್ಟ ಜೀವನದ ಫಲಿತಾಂಶವಲ್ಲವೆ? ಇವು ದುಂದುಗಾರಿಕೆಯೆಂದು ಮುಂದರಿದ ಸಮಾಜವು ತಿಳಿಯಲಾಗದೆ?

ಒಂದು ಕಡೆ ಭವ್ಯ ಭವನದ ಮೇಲೆ ತರತರದ ಪ್ಲೇಟುಗಳಿಂದ ಹೊರಸೂಸುತ್ತಿರುವ ಗ್ರಾಮೊಫೋನಿನ ಮಧುರ ಗಾನ, ಇನ್ನೊಂದು ಕಡೆ ಹಸಿವಿನ ಬೇಗೆಯನ್ನು ತಾಳಲಾರದ ಮುರುಕು ಗುಡಿಸಲಿನ ಹೃದಯವೇದನೆಯು ಕೇಳುವುದು. ಒಂದು ಕಡೆ ಸರ್ವ ಅನುಕೂಲತೆಗಳನ್ನು ಹೊಂದಿದ ವಾಹನಗಳ ಸವಾರಿ, ಮಗದೊಂದ ಕಡೆ ಭೀಕರ ಪ್ರಚಂಡ ಬಿಸಿಲಿನ ತಾಪದೊಡನೆ ಹೊಟ್ಟೆ ಪಾಡಿಗಾಗಿ ಕಾಡಲ್ಲಿ ಚಲನೆ ಇವೆಲ್ಲಾ ಯಾವ ರೀತಿಯಲ್ಲಿ ತೋರುತ್ತಿರುವುದು? ಮುಂದುವರಿದ ಸಮಾಜವು ಮತ್ತೂ ಮತ್ತೂ ಉನ್ನತ ಸಿಖರವನ್ನೇ ಹತ್ತಲು ಆಶಿಸುತ್ತವೆಯೇ ಹೊರತು ಹಿಂದುಳಿದ ಅಸಂಖ್ಯಾತ ಸಮಾಜವು ಯಾವ ಸ್ಥಿತಿಯಲ್ಲಿರುವುದೆಂಬುದನ್ನು ಕಡೆಗಣ್ಣಿನಿಂದ ನೋಡುವಷ್ಟು ದಯಾಳುತ್ವವಾದರೂ ಉಂಟಾಗುವ ಸ್ಥಿತಿಯಲ್ಲಿದೆಯೇ?

ಸ್ವೇಚ್ಛೆಯಂತೆ ಮದುವೆ ಸಮಾರಂಭವನ್ನು ಹೊಂದಿ ಅದು ಸಾಲದೆ ವೇಶ್ಯೆಯರೊಂದೊಡಗೂಡಿ ಕಡೆಗೆ ತನ್ನ ನಿಜಸತಿಯನ್ನು ವಿವಾಹ ವಿಚ್ಛೇದ ಎಂಬ ಕರಾಳ ರಾಕ್ಷಸನಿಗೆ ಆಹುತಿ ಕೊಟ್ಟು ಸ್ವತಂತ್ರರಾಗುವವರು ಇಚ್ಛಿಸಿದಂತೆ ಮತ್ತೂ ತಮ್ಮ ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳುವರು. ಇವು ಮುಂದುವರಿದ ಸಮಾಜದ ಸ್ಥಿತಿಯಾಗಿದೆ. ಇನ್ನು ಗಂಡನ ಮನೆಯೇ ತನ್ನ ಮಂದಿರವೆಂದೂ, ಮನೆಯಲ್ಲಿ ಹಾಕಿಕೊಟ್ಟ ತಿಂಡಿತಿನಸುಗಳೇ ಮಹಾ ಪ್ರಸಾದವೆಂದೂ, ನೆನಸಿ, ಅತ್ತೆ ನಾದಿನಿಯರ ಬೈಗಳ ರಾಶಿ, ಗಂಡನ ತರತರದ ಹಿಂಸೆಗಳನ್ನು ಹೊಂದಿ ಗಂಡನೇ ದೇವರೆಂದು ಪರಿಚಾರಿಕೆಯಂತೆ ದಿನಗಳೆಯುವ ಅನಾಥ ಬಾಲೆಯರ ಅವಸ್ಥೆ ಹೇಗಿರಬೇಕು? ಸ್ವಾತಂತ್ರ್ಯ ಎಂಬ ಹೆಸರನ್ನೆ ಅರಿಯದೆ ಜನ್ಮವೆಲ್ಲಾ ಮನೆಯೊಳಗೆನೇ ಇದ್ದು ತರತರದ ರೋಗರುಜೆಗಳನ್ನು ಹೊಂದಿ ಒಂದು ದಿನ ನಶ್ವರ ಶರೀರವನ್ನು ತೊರೆಯಬೇಕಾಗುತ್ತದೆ. ಹಾ! ಪ್ರಪಂಚವೇ ಶೋಕದಾತೊಂಭತ್ತರ ಮೇಲಿನ ಹಿಂದುಳಿದ ಸಮಾಜವು ಯಾವ ದೀನಾವಸ್ಥೆಯಲ್ಲಿದೆ ಎಂಬ ಸಂಗತಿಯು ಮುಂದುವರಿದ ಶ್ರೀಮಂತ ಸಮಾಜದ ದೃಷ್ಟಿಗೆ ಗೋಚರಿಸುವುದೆಂದು?

ಸಮಾಜದ ಭೀತಿ, ಐಶ್ವರ್ಯವಂತರ ದರ್ಪ, ಅಧಿಕಾರ ವಕ್ರದೃಷ್ಟಿ, ದೈವವಿಹೀನತೆ ಮತ್ತು ಭವ ಬಂಧನಗಳೆಂಬ ಕ್ರೂರತನಗಳಿಗೆ ಒಳಗಾಗಿ ಕಾಯಕಷ್ಟ ಹೊಂದಿದರೂ, ಹೊಟ್ಟೆ ಹಸಿವೆಗೆ ಸಾಕಾಗದೆ, ಹರಕು, ಮುರುಕು ವಸನಗಳಿಂದ ಬರೀ ಹಸಿವೆ ಎಂಬ ತನುವನ್ನು ತಂಪುಗೊಳಿಸಲೋಸುಗವೇ ಪ್ರವರ್ತಕ್ಕೆ ಬಂದದ್ದೆಂಬಂತೆ ಗೋಚರಿಸುತ್ತಿರುವುದು ಹಿಂದುಳಿದ ಸಮಾಜವಲ್ಲವೆ?

ಬೆರಳೆಣಿಕೆಯ ಹಲಕೆಲವು ಸಮಾಜಗಳು ಪುಣ್ಯ ಪುರುಷರ ದಿವ್ಯವಾಣಿಗಳಿಂದ ಮುಂದರಿಸಿ ಬರುವುದಾದರೂ, ಅನೇಕವುಗಳು ಇನ್ನೂ ಕೂಪಮಂಡೂಕದಂತಿರುವುವು. ವಿದ್ಯಾಬಲ ಹಾಗೂ ಧನಬಲದ ಯಾವುದೊಂದೂ ಸಹಾಯವು ದೊರಕದೆ ಕಷ್ಟಹೊಂದುತ್ತಿರುವುವು. ತಮ್ಮ ಕೃತಕರ್ಮಕ್ಕನುಸಾರವಾಗಿ ಕಾಲ್ಪನಿಕ ಸುಖದುಃಖಗಳನ್ನು ಭೋಗಿಸುತ್ತಾ, ಅಲ್ಪ ಸುಖ ಬಂದಾಗ ಅದರಲ್ಲೇ ಮತ್ತರಾಗಿ ತಮ್ಮ ಅಕ್ಕ ಪಕ್ಕದ ಸ್ಥಿತಿಗಳನ್ನು ಕೂಡಾ ಅರಿಯದೆ ನಿಶ್ಚಿತ ಸುಖವೆಂದು ಎಣಿಸುವರಾದರೂ ಅದು ಬರೀ ಕಾಲ್ಪನಿಕವೆಂದು ತೋರಿಬರುತ್ತದೆ. ಇದೆಲ್ಲಾ ಅಲ್ಪವಿದ್ಯೆಯ ಅಬಲತ್ವವಲ್ಲದೆ ಮತ್ತೇನು?

ಮುಂದರಿದ ಸಮಾಜವೇ ಹಿಂದುಳಿದ ಬಡ ಸಮಾಜವನ್ನು ಸ್ವಲ್ಪ ದೃಷ್ಟಿಸಿ ನೋಡಿರಿ. ಅಧಿಕಾರ ಮದ, ಧನ ಮದ ವಿದ್ಯಾ ಮದಗಳನ್ನು ವಿವೇಕಕ್ಕೆ ತಿರುಗಿಸಿರಿ. ಪರ ಸ್ವಾರ್ಥ ಸೇವೆಗಾಗಿ ತನ್ನ ದೇಹವನ್ನು ಮಾರಿ ಬರೀ ತನ್ನ ಹೆಂಡತಿ ಮಕ್ಕಳ ಕ್ಷಣಿಕ ಸುಖಕ್ಕಾಗಿ ಅಸಂಖ್ಯಾತ ಜನಸಾಮಾನ್ಯರನ್ನು ರಣಕಂಭಕ್ಕೆ ಆಹುತಿ ಕೊಡದಿರಿ. ಹೌದು. ನಿಮ್ಮ ಹಿರಿಯರು ನಿಮಗೆ ಬೇಕಾದ ವಿದ್ಯೆಯನ್ನೂ ಹಣವನ್ನೂ ಕೊಟ್ಟು ಘನಪದವಿಗೆ ಏರಿಸಿರುವರು. ಆ ಹಣವು ನಿಮಗೆ ನಿಮ್ಮ ನಿಮ್ಮ ಅನುಕೂಲತೆಗಳಿಗಾಗಿ ಸಂಗ್ರಹವಾಗಿರಬಹುದು. ಆದರೆ ಆ ಹಣವು ಎಲ್ಲಿಂದ ಬಂದದ್ದು, ಯಾವ ರೀತಿಯಲ್ಲಿ ಖರ್ಚಾಗುತ್ತದೆ, ಹಣವು ಎಲ್ಲಿಗೆ ಹೋಗುತ್ತಿದೆ ಎಂಬುದನ್ನು ಸ್ವಲ್ಪ ವಿಚಾರಿಸಿ ನೋಡಿರಿ. ಆಗ ಮಾತ್ರ ನಿಜ ಸಂಗತಿಯು ನಿಮಗೆ ತಿಳಿದುಬರುವುದು. ನೀವು ನೀರಿನಂತೆ ಖರ್ಚು ಮಾಡುವ ಹಣವು ನಿಮ್ಮದಲ್ಲವೆಂದೂ ಅಸಂಖ್ಯಾತ ಗರೀಬ ವಿದ್ಯಾಹೀನರ ಕಷ್ಟಾರ್ಜಿತದ ಹಣವೆಂದೂ ತಿಳಿಯುವಿರಿ.

ಬರೀ ಅಲ್ಪವೇತನಕ್ಕೆ ಇಡೀ ದಿನ ಕೆಲಸ ಮಾಡಿ ಹೊಟ್ಟೆ ಹಸಿವನ್ನೆ ತೀರಿಸಲು ಅಸಾಧ್ಯವಾದ ಅನಾಥ ಸಮಾಜವು ಮಾಡುವ ಅದೇ ಕೆಲಸದ ಪ್ರತಿಫಲವು ತನ್ನ ಯಜಮಾನನ ಬೊಕ್ಕಸವನ್ನು ತುಂಬಿಸುತ್ತದೆ. ಉದಾಹರಣೆಗಾಗಿ ಅನೇಕ ಚಿತ್ರಗಳನ್ನು ತೋರಿಸಬಹುದಾದರೂ ಮುಖ್ಯವಾಗಿ ಕಾಫಿ, ಚಹ ತೋಟಗಳಿಗೆ ಹೋಗುವ ಸಾವಿರಾರು ಬಡ ಕೂಲಿಗಳು ಬರೀ ಅಲ್ಪವೇತನಕ್ಕೆ (ದಿನ ಒಂದಕ್ಕೆ ಮೂರೂವರೆ ಆಣೆ) ಚಳಿ, ಗಾಳಿ, ಮಳೆ ಮುನ್ನದೆ ಕ್ರಿಮಿಕೀಟಗಳ ಕಡಿತದ ಪೆಟ್ಟಿಗೆ ಒಳಗಾಗಿ ದುಡಿದು ಹೊಟ್ಟೆ ಹೊರೆಯುವ ಸ್ಥಿತಿಯನ್ನು ಸ್ವಲ್ಪ ಚಿತ್ರಿಸಿದರೆ, ಅದು ಅಸಮಂಜಸವಾಗಲಾರದು.

ಕೂಲಿಗಳಿಗೆ ವಾಸಿಸಲು ಇರುವ ಮನೆಗಳಾದರೋ ಬಹಳ ನಿಕೃಷ್ಟಾವಸ್ಥೆಯಲ್ಲಿವೆ. ಅವುಗಳು ಪ್ರದೇಶದಲ್ಲಿ ಅಂದರೆ ಕಾಫಿ, ಚಹ ತೋಟಗಳಿಗೆ ಲಗ್ನವಾಗಿ ಲೈನ್ ಪ್ರಕಾರ ನೂರಾರು ಕೋಣೆಗಳಿರುವ ಒಂದೇ ಕಟ್ಟೋಣದಲ್ಲಿ ಅಷ್ಟು ಸಂಸಾರಗಳು ದಿನ ಕಳೆಯಬೇಕಾಗಿದೆ. ಸರಿಯಾದ ಗಾಳಿಗೆ ಅವಕಾಶವಿಲ್ಲ. ನೀರಿನ ಸರಬರಾಯಿಯೆಂದರೆ ಕೊಳಗಳದ್ದೇ. ಆ ಕೋಣೆಗಳಾದರೋ ಮಕ್ಕಳು ಮರಿಗಳ ಮಲಮೂತ್ರಗಳಿಂದ ತುಂಬಿರುತ್ತವೆ. ಸರಿಯಾದ ಆಸರೆಗೆ ಎಡೆಯೇ ಸಿಕ್ಕುವುದಿಲ್ಲ. ಹೊಟ್ಟೆಗೆ ತಿನ್ನುವ ಆಹಾರವನ್ನು ಒದಗಿಸುವ ಸ್ಥಿತಿಯಾದರೋ ಬಹಳ ನಿಕೃಷ್ಟಾವಸ್ಥೆಯಾಗಿದೆ. ನಿರ್ಮಲದ ಹೆಸರೇ ಇಲ್ಲ. ಬಟ್ಟೆಬರೆಗಳಾದರೂ ಬಹಳ ಅಸಹ್ಯಕರವಾದದ್ದು. ನಿರ್ಮಲ ಮಾಡುವ ಸ್ಥಿತಿಯಲ್ಲೇ ಇರುವುದಿಲ್ಲ. ಮಕ್ಕಳುಗಳೆ ಅಂಥಾ ಕೋಣೆಗಳಲ್ಲಿ ಆಸರೆಯಿಲ್ಲದೆ ತರತರದ ರೋಗರುಜೆಗಳನ್ನು ಹೊಂದಿ ಬರೀ ಕ್ವಿನಿನ ಮಿಶ್ರವಾದ ನೀರನ್ನೇ ಹೊಂದುವ ಸ್ಥಿತಿಯಲ್ಲಿರುತ್ತವೆ. ಸರಿಯಾದ ಆರೈಕೆಯಿಲ್ಲದೆ ಅಂಥಾ ಮಕ್ಕಳು ಮರಿಗಳು ಎಷ್ಟು ಸಮಯ ಬದುಕಿಕೊಂಡಾವು? ಮಾರ್ಗಗಳಲ್ಲಿ ಅಸಡೆ ಇಲ್ಲದೆ ತಿರುಗುತ್ತಿರುವ ಬೀಡಿ ನಾಯಿಗಳಂತೆ ಒಂದೆರಡು ದಿವಸ ಹಾಗೂ ಹೀಗೂ ಕಳೆದು ಇಹಲೋಕವನ್ನು ತ್ಯಜಿಸಿ ಹೋಗುತ್ತವೆ. ಗಂಡನು ಹೆಂಗಸರಿಂದ ಕೆಲಸವನ್ನು ಮಾಡಿಸುವ ಒಂದೇ ಉದ್ದೇಶವು ತೋಟಗಳ ಯಜಮಾನನಿಗೂ ಕೂಲಿಗಳ ಏಜಂಟನಿಗೂ ಇರುವುದರಿಂದ ಮಕ್ಕಳು ಮರಿಗಳ ಕಾಟ ತಪ್ಪಿದರೆ ಸಾಕೆಂಬ ಅಭಿಪ್ರಾಯ ಬರುತ್ತಿರುವುದು. ಹೆಚ್ಚಲ್ಲ, ಆಳುಗಳಾದರೋ ಕಿ/ರಿ ಮುಂದೆಗಳಂತೆ ಒಟ್ಟಿಗಿದ್ದು, ಸ್ನಾನ ವಸ್ತ್ರ ಒಗೆಯುವ ಆಲೋಚನೆಯುಳ್ಳವೆ (ಮುಖ್ಯಥಾ ಅಂದಾಳಿಸುಕೂಲಿಕೆಗಳು ಇರುವುದಿಲ್ಲ.) ಅನಾರೋಗ್ಯದಿಂದ (ಮರದ ಎಲೆಗಳು ಉದುರುವಂತೆ) ಒಬ್ಬೊಬ್ಬರೇ ನಶ್ವರ ದೇಹವನ್ನು ಬಿಟ್ಟು ಹೋಗುತ್ತಿರುವರು. ಅದು ಕೂಡಾ ಬರೀ ಅಲ್ಪ ಪ್ರಾಯದಲ್ಲೇ. ಊರವರಿಗೆ ತಿಳಿಯುದಂತೆ ಕಣ್ಮರೆಯಾಗುವರು. ಇದಕ್ಕೆ ಕಾರಣವೇನು? ಅಲ್ಪ ವೇತನಕ್ಕೆ ದುಡಿಯುವ ಒಬ್ಬ ಕೂಲಿಯು ಬರೀ ಮೂರು ತಿಂಗಳು ಕೆಲಸ ಮಾಡಿದರೆ ಯಜಮಾನನ ಒಂದು ವರ್ಷದ ಕೆಲಸವು ಒಂದಂತಾಗುತ್ತದೆ. ಅವರ ಒಂದು ಸಲದ ಸೀಕಿನ ಆರೈಕೆ ಮಾಡಿದರೆ ಅತನ ಜೀವಿತಕಾಲದ ಸಂಪಾದನೆಯ ಹಣವನ್ನೇ ಡಾಕ್ಟರುಗಳಿಗೆ ಸುರಿಯಬೇಕಾಗುತ್ತದೆ. ಈ ದೆಸೆಯಿಂದ ಹೆಚ್ಚಿನ ಆರೈಕೆಯನ್ನು ನೋಡುವ ಅಗತ್ಯವು ಯಜಮಾನರಿಗೂ ಮತ್ತು ತಮ್ಮ ಏಜಂಟರಿಗೂ ತೋರುವುದಿಲ್ಲ.

ಕೂಲಿಗಳನ್ನು ಹೊಡಕೊಂಡು ಹೋಗುವ ಏಜಂಟನಾದರೋ, ಪ್ರತ್ಯೇಕವಾದ ಬಂಗಲೆಯನ್ನು ಯಜಮಾನನಿಂದ ಪಡಕೊಂಡ ಎಡ್ವಾನ್ಸನ್ನು ಮುಂಗೈಗೆ ತಾಗಿಸಿದ ಬೆಲ್ಲದಂತೆ ಕೂಲಿಗಳಿಗೆ ತೋರಿಸಿ ಅವರ ಬಾಯಲ್ಲಿ ನೀರು ಸುರಿಯುವಂತೆ ಮಾಡುತ್ತಾನೆ. ಮತ್ತು ಅದೇ ಹಣದ ಗಂಟನ್ನು ಗುಪ್ತವಾಗಿ ಜೇಬಿನೊಳಗೆ ಹಾಕಿಕೊಳ್ಳುತ್ತಾನೆ. ಮತ್ತು ಅದೇ ಹಣವನ್ನು ಊರಿಗೆ ತಂದು ಒಂದೆರಡು ಮಾಳಿಗೆಗಳಿರುವ ಉತ್ತಮ ಬಂಗಲೆಯನ್ನು ಕಟ್ಟಿಸಿ ಹಾಯಾಗಿರುತ್ತಾನೆ. ತೋಟಗಳಿಗೆ ಆಗಾಗ್ಗೆ ಹೋಗುವನಾದರೂ ಹಣಮಾಡುವ ಒಂದೇ ಉದ್ದೇಶವಿರುವುದರಿಂದ ಆದಷ್ಟು ಹಣವನ್ನು ಹೊಂದುತ್ತಾನೆ. ಇವನು ಪಡಕೊಂಡು ಮೆರೆಯುವ ಹಣದ ರಾಶಿ ಯಾರದು? ಇವನು ಯಜಮಾನನಲ್ಲಿ ಬಾಕಿ ಮಾಡಿದ ಹಣವು ಎಲ್ಲಿಂದ ತೀರಬೇಕು? ಪಾಪ, ಆ ಕೂಲಿಯಾಳುಗಳು ಕೆಲಸ ಮಾಡಿ, ದೈ ಮುರಿದು ತೀರಿಸಬೇಕಾಗಿದೆ. ವಿದ್ಯೆಯ ಗಂಧ ಕೂಡಾ ತಿಳಿಯದ ಆ ಪಶುಪ್ರಾಯದ ಕೂಲಿ ಆಳುಗಳು ಕಡೆಗೂ ತಮ್ಮ ಏಜಂಟನೇ ತಮ್ಮ ಕಾರ್ಯ ದೇಗಳೆಂದೂ, ಅವರಿಲ್ಲದಿದ್ದರೆ ತಮ್ಮ ಅವಸ್ಥೆಯೇನಾಗಬೇಕೋ ಎಂಬ ಗೊಡ್ಡು ಸ್ವಭಾವದಿಂದ ಕೆಲಸ ಮಾಡುವುದೇ ತಮ್ಮ ಧರ್ಮವೆಂದೂ, ಕೊಟ್ಟದ್ದೇ ಪ್ರಸಾದವೆಂದೂ ನೆನಸಿ ದಿನವನ್ನು ಕಳೆಯುತ್ತಿರುತ್ತಾರೆ. ಲೆಖ್ಖಪತ್ರದ ಗೊಡವೆ ಇಲ್ಲದೆ ಇದ್ದು ಕೂಲಿಗಳು ಊರಿಗೆ ಬರುವಾಗಲೂ, ಊರಿಂದ ಹೋಗುವಾಗಲೂ, ಮೋಟಾರು ವಾಹನಗಳಲ್ಲಿ ಪ್ರಯಾಣ ಮಾಡುವುದರಿಂದ ಇಂಥಾ ಸುಖವು ಸ್ವರ್ಗದಲ್ಲಿ ಕೂಡಾ ಇಲ್ಲವೆಂದ ನೆನಸುತ್ತಾರೆ. ಪಾಪ ಅಂಥಾ ಖರ್ಚಿನ ಹಣವು ತಮ್ಮ ಕಷ್ಟಾರ್ಜಿತ ಹಣದಿಂದ ಬಡ್ಡಿ ಕಡಿ ವಜಾ ಮಾಡಲ್ಪಡುತ್ತದೆಂದು ತಿಳಿಯದಂತಹ ಪಶುಗಳಾಗಿರುತ್ತಾರೆ. ಅಂಥಾ ಕೂಲಿಗಳ ಮಧ್ಯದಲ್ಲಿ ಒಬ್ಬಿಬ್ಬ ಬುದ್ಧಿವಂತರಿರುವರಾದರೂ ಅಂಥವರನ್ನು ಆ ಮೊದಲೇ ಏಜಂಟನು ಸ್ವಲ್ಪ ಕೈಬಿಸಿ ಮಾಡಿಸುತ್ತಾನೆ.

ವಿದ್ಯೆಯ ಅಭಾವದಿಂದ ಮೈಮುರಿದು ದುಡಿಯುವ ಕೂಲಿಗಳನ್ನು ಮತ್ತಷ್ಟು ಅಧೋಗತಿಗೆ ತರುವುದು ಏಜಂಟರ ಪೈಶಾಚಿಕ ವೃತ್ತಿಯು. ಅವರಿಗೆ ಬೇಕಾದ ಸಿಹಾ ಸೇವನೆಯನ್ನು ಮಾಡಿಸಿ ಅವರ ಮನಸ್ಸನ್ನು ತಿರುಗಿಸಿ ತಮಗೆ ಬೇಕಾದ ಕೈಮೋರಗಳನ್ನು ಪಡೆದು ಊರನ್ನು ಬಿಟ್ಟವರು ಪುನಹ ಊರಿಗೆ ಹೋಗದ ಸ್ಥಿತಿಗೆ ತಂದು ಬಿಡುತ್ತಾರೆ. ಕೂಲಿಗಳಾಗಿ ದುಡಿಯುವರಾದರೂ ಯಜಮಾನನು ಇವರನ್ನು ಕ್ರಯಕ್ಕೆ ಪಡೆದಿರುವನೋ ಎಂಬಭಾವನೆ ನೋಡುವವರಿಗೆ ಉಂಟಾಗುತ್ತದೆ. ಇನ್ನೂ ಕೆಲವು ಅಮಾನುಷ ಸ್ಥಿತಿಗಳನ್ನು ಹೇಳತೀರದು. ಒಡಲ ಹೊಟ್ಟೆಪಾಡಿಗಾಗಿ ದುಡಿಯುವ ಕೆಲವರು ಸ್ತ್ರೀಯರುಗಳು ಏಜಂಟನ ಹಾಗೂ ಅವನ ಸಂಗಡಿಗರ ವಿಷಯ ಲಂಪಟತನಕ್ಕೆ ಒಳಗಾಗಿ ತಮ್ಮ ತಮ್ಮ ಮಾನ ಕೆಡಿಸಿಕೊಳ್ಳಬೇಕಾಗುತ್ತದೆ. ಹಾಗೂ ಪಾರಂಪರ್ಯದಿಂದ ಬಂದ ತರತರದ ರೋಗಗಳನ್ನು ಹೊಂದಿ ಊರಿನ ಮುಖ ನೋಡಲಾರದೆ ಅಲ್ಲೇ ಇಹಲೋಕವನ್ನು ತ್ಯಜಿಸುವ ಸನ್ನಿವೇಶಗಳೂ ಒದಗುತ್ತವೆ. ಹಾಯ್ ಸಮಾಜವೇ, ಬೇವು ಅಬಲರನ್ನು ತುಳಿಯುತ್ತಿದೆ ಹಾಗೂ ಕೆಡಿಸುತ್ತಿದೆ ಮತ್ತು ತನ್ನ ಇಚ್ಛೆಯನ್ನು ಪೂರೈಸುತ್ತಿದೆ. ಇಂಥಾ ಸಮಾಜವು ಕಣ್ತೆರೆಯುವುದು ಎಂದು?

ಸಂಘಶಕ್ತಿ, ಸಮಾಜ ಸಂಸ್ಕರಣ ಹೊಂದಿ ಮಾರ್ಗದರ್ಶಕನೊಬ್ಬನು ಪ್ರವರ್ತಕ್ಕೆ ಬಂದು ಅವಿದ್ಯೆ ಅಜ್ಞಾನವನ್ನು ತೊಲಗಿಸಬೇಕು. ಅಲ್ಲಲ್ಲಿ ಸಂಘಟನೆ ಹೊಂದಿ ಸಮುದಾಯ ಸುಧಾರಕರು ತಲೆಎತ್ತಬೇಕು. ದೇಶದಲ್ಲಿ ಹಿಂದುಳಿದ ಸಮಾಜವು ಮುಂದಕ್ಕೆ ಬರಬೇಕಾದರೆ ಶ್ರೀಮಂತ ಸಮಾಜದ ಹೃದಯ ಪರಿವರ್ತನೆ ಆಗದೆ ಎಂದೂ ಸಾಧ್ಯವಾಗಲಾರದು. ಎಂಥಾ ಪಿದರಿಕೆ, ಬಲಾತ್ಕಾರ ನಡಿಸಿದರೂ ಸಾಧ್ಯವಾಗಲಾರದು. ಮುಂದುವರಿದ ಸಮಾಜದ ಹೃದಯ ಪರಿವರ್ತನೆಯಾಗಿ ಹಿಂದುಳಿದ ಸಮಾಜವು ಏಳ್ಗೆಗೆ ಬಂದು ಭಾರತಮಾತೆಯು ಇನ್ನಷ್ಟು ಶೋಭಿತಳಾಗಿ ಮೆರೆಯಲೆಂದೇ ಜಗದೀಶನೊಡನೆ ಪ್ರಾರ್ಥನೆ.

ಕರ್ನಾಟಕದಲ್ಲಿ ಬಹಳ ವರ್ಷಗಳಿಂದ ಪ್ರಸಿದ್ಧವಾದ

ರೋಗಗಳ ನಾಮಗಳು — ಕ್ಷಯ ರೋಗ, ಬಾಣಂತಿರೋಗ, ಹೆಣ್ಣಿನ ರೋಗ, ಮಲೇರಿಯಾ, (ಚಳಿಜ್ವರ) ಪ್ಲೇಗು, ಇನ್‌ಫ್ಲುಯೆಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲ ರೋಗ, ಗಂಡುಮಾಲೆ, ...ಹುಣ್ಣು, ಶಸ್ತ್ರಘಾಯ, ಶಿರಶೂಲಿ, ...

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶೆಫಾ ಅಥವಾ ಆರೋಗ್ಯಬಿಂದು.

ಪ್ರವಾಸಮಿತ್ರ ಮೂರ್ತಿಮಂತವೈದ್ಯ

...ಕಗೆ ಹೊಟ್ಟೆ ಬೇನೆ, ಅಜೀರ್ಣ, ಹೊಟ್ಟೆ ಶೂಲೆ ಸಣ್ಣ ಕೂಸುಗಳಿಗೆ ಆದ ರೋಗಗಳು, ಅತಿಸಾರ, ... ಹೊಟ್ಟೆ ದೊಡ್ಡದಾಗುವದು, ... ಹೊರಬೀಳುವಿಕೆ, ಮತ್ತು ಡಾಕ್ಟರರಿಗೂ, ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣಪಡುವವು. ಅನೇಕ ರೋಗಗಳಿಗೆ ಒಂದೇ ಔಷಧವೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು. ಅಂಥವರು ಒಂದು ಸಾರಿ ತಂದು ನೋಡಬೇಕು. ಸ್ಥಾಪನಾ ಆರಂಭದಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮಗೆ ಬಹಳ ಪ್ರಚಾರವು ಮಾಡಬೇಕಾಗಿಲ್ಲ. ಇದೀ ಕರ್ನಾಟಕದಲ್ಲೆಲ್ಲಾ ದೊರೆಯುತ್ತದೆ.

೧। ತೊಲೆ ಬಾಟ್ಲಿ ಒಂದಕ್ಕೆ ರೂ. ... ತೊಲೆಯ ಬಾಟ್ಲಿ ಒಂದಕ್ಕೆ ... ಚಿಕ್ಕ ಬಾಟ್ಲಿ ಒಂದೇ ಸರಿ ಒಂದು ಡಜನ್ ತರಿಸಿಕೊಳ್ಳುವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು. ... ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು. ಟಪ್ಪಾಲ ಖರ್ಚು ... ಆದ ಕಾರಣ ಈ ಪ್ರಕಾರ ವ್ಯವಸ್ಥೆ ಮಾಡಿದೆ. ಟಪ್ಪಾಲ ಖರ್ಚು ... ಆಣೆ. ... ತೊಲೆ ಬಾಟ್ಲಿ ಒಂದೇ ಸಲ ... ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುತ್ತದೆ. ಟಪ್ಪಾಲ ಖರ್ಚು ... ಆಣೆ ಬೀಳುವುದು. ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ. ಸಣ್ಣ ಬಾಟ್ಲಿ ಒಂದೇ ಬೇಡಿದರೆ ಕಳಿಸಲಾಗದು. ಟಪ್ಪಾಲ ಖರ್ಚು ... ಆಣೆ ಬರುತ್ತದು. ಕನಿಷ್ಟ ಪಕ್ಷಕ್ಕೆ ಎರಡು ರೂಪಾಯಿಯ ಔಷಧ ತರಿಸಿಕೊಳ್ಳಬೇಕು ... ಆಣೆ ಬೀಳುವುದು.

ತಕ್ಕೊಳ್ಳುವ ಪ್ರಮಾಣ — ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿವೆ. ... ಔಷಧವು ... ಬಾಟ್ಲಿ ಜತೆ ತೆಗೆದುಕೊಂಡು ... ಕೊಡುವೆವು. ಬೇಕಾದವರು ತಮ್ಮ ವಿಳಾಸ ಕನ್ನಡ, ಮರಾಠಿ, ಇಂಗ್ಲೀಷುಗಳಲ್ಲಿ ಸ್ಪಷ್ಟ ಬರೆಯಬೇಕು. ತಮ್ಮ ಹೆಸರು ತಂದೆಯ ಹೆಸರು, ಅಡ್ಡ ಹೆಸರು ... ಪೋಸ್ಟಾಫೀಸು ... ಜಿಲ್ಲಾ ಸ್ಟೇಶನ್ ಎಲ್ಲಾ ಖುಲಾಸ ಬರೆಯಬೇಕು.

ನಮ್ಮ ವಿಳಾಸ — ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶೆಫಾ ಹೆಡ್ ಆಫೀಸ ... ಬೆಳಗಾಂವಿ].

New Era Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ.

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our Special Commercial Course and insure against unemployment. Details may be had on application to the Manager.

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್,

ಮಡಿಕೇರಿಗುಡ್ಡೆ, ಮಂಗಳೂರು.

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು, ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಾಲು ತಯ್ಯಾರು ಆಗುತ್ತವೆ. ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತವೆ. ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕ ದರದಲ್ಲಿ ಒದಗಿಸಿಕೊಡಬಹುದು.

ಎಲ್ಲಾ ಜವಳಿ ಬೆಲೆಗೆ ಮೀರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ ಪವನು!

ಸ್ವತಹಾ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ.

ನಮ್ಮ ಮಾಲನ್ನು ರಥಬೀದಿಯಲ್ಲಿರುವ ಸಾವುಕಾರ ರಾಘವೇಂದ್ರ ರಂಗ ಶೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಯಂ. ವೆಂಕಟೇಶ ರಂಗ ಶೈ, ಪ್ರೊಪ್ರೈಟರ್.

ಡಾಕ್ಟರ ವಾಮನ ಗೋಪಾಳರವರ



ಇಟಿಡಾಯಿಬ್ಬ ... ಕೀರ್ತಿ ... ವರ್ಷದ ಅನುಭವ ... ಡಾ॥ ಗೌತಮ ವಾಮ ಕೇಶವರವರು ಪ್ರೊಪ್ರೈಟರ್ ...

ಡಾಕ್ಟರ್ ಗೌತಮ ... ಕೇಶವ ಅಂಡ್ ಸನ್ಸ್, ... ಮುಂಬಾಯಿ

... ಮಂಗಳೂರು

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ.

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 3 0 0.

ಮಲೇರಿಯಾ ಸಮ್ಹಾರಿಣೀ

ಚಳಿಜ್ವರ, ಮಲೆಜ್ವರ, ಇನ್‌ಫ್ಲುಯಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.

ಬಾಟ್ಲಿ 1ಕ್ಕೆ ರೂ. 1 8—0.

ಮೇಹಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2-8-0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ. 2-8-0. ½ಕ್ಕೆ ರೂ. 1 5-0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವದು, ವಸಡುಗಳು ... ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಬಿಳುಪು ಮಾಡುವುದು.

ಡಬ್ಬಿ 1ಕ್ಕೆ ರೂ. 0-2-6. 12ಕ್ಕೆ ರೂ 1-12-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ. 1—8—0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:

1. ಡಾಕ್ಟರ್ ಬಿ. ಎಚ್. ಪದ್ಮನಾಭ ಶೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು. 4. ವ್ಹಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ಸಮಾಜದ ಪರಿಸ್ಥಿತಿ

ಲೇಖಕ:— ಯಂ. ಬಿ. ನರ್ಸಪ, ಮಂಗಳೂರು.

ಸಮಗ್ರ ಭಾರತದಲ್ಲಿ ಅನೇಕ ಸಮಾಜಗಳು ಬಾಳುತ್ತಿವೆ. ಅವುಗಳಲ್ಲಿ ಅನೇಕವು ಉನ್ನತ ಸ್ಥಿತಿಯಲ್ಲಿವೆ. ಅಸಂಖ್ಯಾತ ಸಮಾಜಗಳು ಅವನತಿಯಲ್ಲಿಯೇ ಒದ್ದಾಡುತ್ತಿವೆ. ಉನ್ನತ ಸ್ಥಿತಿಯವುಗಳು ಐಶ್ವರ್ಯ, ವಿದ್ಯಾಬಲಗಳಿಂದಲೇ ಮೇಲಕ್ಕೇರಿರುವುದೆಂದು ಹೇಳಬಹುದು. ಎಲ್ಲಿ ಐಶ್ವರ್ಯ, ವಿದ್ಯಾಬಲಗಳು ಸಮ್ಮಿಳಿತವಾಗಿವೆಯೋ ಅಲ್ಲಿ ಎಲ್ಲಾ ತರದ ಅನುಕೂಲತೆಗಳಿರುವವು.

ಅಧಿಕಾರ ದರ್ಪವೂ, ಆಳರಸರ ಬೆಂಬಲವೂ, ಹಣದ ರಾಶಿಯೂ ಇರುವಲ್ಲಿ ಸಮಾಜದ ಆದರ ಗೌರವಗಳು ತನಗೆ ತಾನಾಗಿಯೇ ಬರುವುವು. ದೊಡ್ಡ ಮೀನುಗಳು ಸಣ್ಣವುಗಳನ್ನು ನುಂಗುವಂತೆ ಐಶ್ವರ್ಯವಂತ ಸಮಾಜವು ಬಡಸಮಾಜವಾದ ಹಿಂದುಳಿದವರನ್ನು ಹೀರುವುದು ದೊಡ್ಡದಲ್ಲ. ಆದರೆ ಒಬ್ಬನು ಐಶ್ವರ್ಯವಂತನಾಗಬೇಕಾದರೆ ಸಾವಿರಾರು ಬಡಜನರ ಕಷ್ಟಪರ ಜೀವನದ ರಕ್ತ ಹೀರಬೇಕಾಗುವುದೆಂಬುದು ನಿಜವಾಗಿರುತ್ತದೆ. ವಸ್ತುಸ್ಥಿತಿ ಈ ರೀತಿಯಲ್ಲಿರುವುದರಿಂದ ಹಿಂದುಳಿದ ಬಡ ಸಮಾಜದ ಏಳ್ಗೆಯುಂಟಾಗುವುದೆಂದು?

[illegible]ಪಾನವೂ, ಅಧಿಕಾರಗಳ ವಶೀಕರಣವೂ ಮುಂದರಿದ ಸಮಾಜಕ್ಕೇನೆ ಮಕ್ಕಳು, ಪಾರಂಪರ್ಯವಾಗಿ ಬರುತ್ತಿರುವುದು ದೃಷ್ಟಿಪಥಗಳಿಗೆ ಗೋಚರಿಸುತ್ತಿರುವುದು. ಶೃಂಗಾರ ರಸಭರಿತ ಭವ್ಯ ಭವನವೂ, ಅಮೂಲ್ಯವಾದ ವಿದೇಶೀ ಮೋಟರ್ ವಾಹನವೂ, ತರ, ತರದ ಕಾಮುಕ ಪ್ರವರ್ತನದ ತಿಂದಿ ತಿನಸುಗಳೂ ಎಂದೂ ಅಕ್ಷಯವಾಗಿಯೇ ಇರುವುದು. ಅಂಥಾ ದಿನನಿತ್ಯದ ಖರ್ಚಿನ ಹಣವು ಸಾಧಾರಣ ನೂರಾರು ಬಡಪ್ರಾಣಿಗಳನ್ನು ಸಾಕಲಿಕ್ಕೆ ಸಾಕಾಗಬಹುದು. ಇವೆಲ್ಲಾ ಎಲ್ಲಿಂದ ಬರುವಂಥಾದ್ದು? ಬಡವರ ಕಷ್ಟಪರ ಜೀವನದ ಫಲಿತಾಂಶವಲ್ಲವೆ? ಇವು ದುಂದುಗಾರಿಕೆಯಿಂದು ಮುಂದರಿದ ಸಮಾಜವು ತಿಳಿಯಲಾಗದೆ?

ಒಂದು ಕಡೆ ಭವ್ಯ ಭವನದ ಮೇಲೆ ತರ ತರದ ಪ್ಲೇಟುಗಳಿಂದ ಹೊರಸೂಸುತ್ತಿರುವ ಗ್ರಾಮೋಫೋನಿನ ಮಧುರ ಗಾನ, ಇನ್ನೊಂದು ಕಡೆ ಹಸಿವಿನ ಬೇಗೆಯನ್ನು ತಾಳಲಾರದ ಮುರುಕು ಗುಡಿಸಲಿನ ಹೃದಯವೇದನೆಯ ಗೋಳು. ಒಂದು ಕಡೆ ಸರ್ವ ಅನುಕೂಲತೆಗಳನ್ನು ಹೊಂದಿದ ವಾಹನಗಳ ಸವಾರಿ, ಮಗದೊಂದು ಕಡೆ ಭೀಕರ ಪ್ರಚಂಡ ಬಿಸಿಲಿನ ತಾಪದೊಡನೆ ಹೊಟ್ಟೆ ಪಾಡಿಗಾಗಿ ಕಂಡಲ್ಲಿ ಚಲನೆ. ಇವೆಲ್ಲಾ ಯಾವ ರೀತಿಯಲ್ಲಿ ತೋರುತ್ತಿರುವುದು? ಮುಂದುವರಿದ ಸಮಾಜವು ಮತ್ತೂ ಮತ್ತೂ ಉನ್ನತ ಶಿಖರವನ್ನೇ ಹತ್ತಲು ಆತೆ ಪಡುತ್ತವೆಯೇ ಹೊರತು, ಹಿಂದುಳಿದ ಅಸಂಖ್ಯಾತ ಸಮಾಜವು ಯಾವ ಸ್ಥಿತಿಯಲ್ಲಿರುವುದೆಂಬುದನ್ನು ಕಡೆಗಣ್ಣಿನಿಂದ ನೋಡುವಷ್ಟು ದಯಾಭಾವವಾದರೂ ಉಂಟಾಗುವ ಸ್ಥಿತಿಯಲ್ಲಿದೆಯೇ?

ಸ್ವೇಚ್ಛೆಯಂತೆ ಮದುವೆ ಸಮಾರಂಭವನ್ನು ಹೊಂದಿ ಅದು ಸಾಲದೆ ವೇಶ್ಯೆಯರಿಂದೊಡಗೂಡಿ ಕಡೆಗೆ ತನ್ನ ನಿಜಸತಿಯನ್ನು 'ವಿವಾಹ ವಿಚ್ಛೇದ' ಎಂಬ ಕರಾಳ ರಾಕ್ಷಸನಿಗೆ ಆಹುತಿ ಕೊಟ್ಟು ಸ್ವತಂತ್ರರಾಗುವರು. ಇಚ್ಛಿಸಿದರೆ ಮತ್ತೂ ತಮ್ಮ ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳುವರು. ಇವು ಮುಂದುವರಿದ ಸಮಾಜದ ಸ್ಥಿತಿಯಾಗಿದೆ. ಇನ್ನು ಗಂಡನ ಮನೆಯೇ ತನ್ನ ಮಂದಿರವೆಂದೂ, 'ಮನೆಯಲ್ಲಿ ಹಾಕಿ ಕೊಟ್ಟ ತಿಂಡಿತಿನಸುಗಳೇ ಮಹಾ ಪ್ರಸಾದವೆಂದೂ, ನೆನಸಿ, ಅತ್ತೆ ನಾದಿನಿಯರ ಬೈಗಳ ರಾಶಿ, ಗಂಡನ ತರತರದ ಹಿಂಸೆಗಳನ್ನು ಹೊಂದಿ ಗಂಡನೇ ದೇವರೆಂದು ಪಂಜರದ ಗಿಳಿಯಂತೆ ದಿನಗಳೆಯುವ ಅನಾಥ ಬಾಲೆಯರ ಅವಸ್ಥೆ ಹೇಗಿರಬೇಕು? ಸ್ವಾತಂತ್ರ್ಯ ಎಂಬ ಹೆಸರನ್ನೆ ಅರಿಯದೆ ಒಬ್ಬಳಂತೆ ಮನೆಯೊಳಗೆನೇ ಇದ್ದು ತರತರದ ರೋಗರುಜೆಗಳನ್ನು ಹೊಂದಿ ಒಂದು ದಿನ ನಶ್ವರ ಶರೀರವನ್ನು ತೊಲಗಬೇಕಾಗುತ್ತದೆ. ಹಾ! ಪ್ರಪಂಚವೇ ಶೇಕಡಾ ತೊಂಭತ್ತರ ಮೇಲಿನ ಹಿಂದುಳಿದ ಸಮಾಜವು ಯಾವ ದೀನಾವಸ್ಥೆಯಲ್ಲಿದೆ ಎಂಬ ಸಂಗತಿಯು ಮುಂದುವರಿದ ಶ್ರೀಮಂತ ಸಮಾಜದ ದೃಷ್ಟಿಗೆ ಗೋಚರಿಸುವುದೆಂದು?

ಸಮಾಜದ ಭೀತಿ, ಐಶ್ವರ್ಯವಂತರ ದರ್ಪ, ಅಧ್ಯರ ವಕ್ರದೃಷ್ಟಿ, ದೈವವಿಹೀನತೆ ಮತ್ತು ಭವ ಬಂಧನಗಳೆಂಬ ಕ್ರೂರತನಗಳಿಗೆ ಒಳಗಾಗಿ ಕಾಯಕಷ್ಟ ಹೊಂದಿದರೂ, ಹೊಟ್ಟೆ ಹಸಿವೆಗೆ ಸಾಕಾಗದೆ, ಹರಕು, ಮುರುಕು ವಸನಗಳಿಂದ ಬರೀ ಹಸಿವೆ ಎಂಬ ತನುವನ್ನು ತಂಪುಗೊಳಿಸಲ್ಲೋಸುಗವೇ ಪ್ರವರ್ತಕ್ಕೆ ಬಂದ ದ್ವಂದ್ವಂತೆ ಗೋಚರಿಸುತ್ತಿರುವುದು ಹಿಂದುಳಿದ ಸಮಾಜವಲ್ಲವೆ?

ಬೆರಳೆಣಿಕೆಯ ಹಲಕೆಲವು ಸಮಾಜಗಳು ಪುಣ್ಯ ಪುರುಷರ ದಿವ್ಯವಾಣಿಗಳಿಂದ ಮುಂದರಿಸಿ ಬರುವುದಾದರೂ, ಅನೇಕವುಗಳು ಇನ್ನೂ ಕೂಪಮಂಡೂಕದಂತಿರುವುವು. ವಿದ್ಯಾಬಲ ಹಾಗೂ ಧನಬಲದ ಯಾವುದೊಂದೂ ಸಹಾಯವು ದೊರಕದೆ ಕಷ್ಟಹೊಂದುತ್ತಿರುವುವು. ತಮ್ಮ ಕೃತಕರ್ಮಕ್ಕನುಸಾರವಾಗಿ ಕಾಲ್ಪನಿಕ ಸುಖದುಃಖಗಳನ್ನು ಭೋಗಿಸುತ್ತಾ, ಅಲ್ಪ ಸುಖ ಬಂದಾಗ ಅದರಲ್ಲೇ ಮತ್ತರಾಗಿ ತಮ್ಮ ಅಕ್ಕ ಪಕ್ಕದ ಸ್ಥಿತಿಗಳನ್ನು ಕೂಡಾ ಅರಿಯದೆ ನಿಶ್ಚಿತ ಸುಖವೆಂದು ಎಣಿಸುವರಾದರೂ ಅದು ಬರೀ ಕಾಲ್ಪನಿಕವೆಂದು ತೋರಿಬರುತ್ತದೆ. ಇದೆಲ್ಲಾ ಅಲ್ಪವಿದ್ಯೆಯ ಅಬಲತ್ವವಲ್ಲದೆ ಮತ್ತೇನು?

ಮುಂದರಿದ ಸಮಾಜವೇ ಹಿಂದುಳಿದ ಬಡ ಸಮಾಜವನ್ನು ಸ್ವಲ್ಪ ದೃಷ್ಟಿಸಿ ನೋಡಿರಿ. ಅಧಿಕಾರ ಮದ, ಧನ ಮದ, ವಿದ್ಯಾ ಮದಗಳನ್ನು ವಿವೇಕಕ್ಕೆ ತಿರುಗಿಸಿರಿ. ಪರ ದಾಸ್ಯ ಸೇವೆಗಾಗಿ ತನ್ನ ದೇಹವನ್ನು ಮಾರಿ ಬರೀ ತನ್ನ ಹೆಂಡತಿ ಮಕ್ಕಳ ಕ್ಷಣಿಕ ಸುಖಕ್ಕಾಗಿ ಅಸಂಖ್ಯಾತ ಜನಸಾಮಾನ್ಯರನ್ನು ರಣಕಂಭಕ್ಕೆ ಆಹುತಿ ಕೊಡದಿರಿ. ಹೌದು. ನಿಮ್ಮ ಹಿರಿಯರು ನಿಮಗೆ ಬೇಕಾದ ವಿದ್ಯೆಯನ್ನೂ ಹಣವನ್ನೂ ಕೊಟ್ಟು ಘನಪದವಿಗೆ ಏರಿಸಿರುವರು. ಆ ಹಣವು ನಿಮಗೆ ನಿಮ್ಮ ನಿಮ್ಮ ಅನುಕೂಲತೆಗಳಿಗಾಗಿ ಸಂಗ್ರಹವಾಗಿರಬಹುದು. ಆದರೆ ಆ ಹಣವು ಎಲ್ಲಿಂದ ಬಂದದ್ದು, ಯಾವ ರೀತಿಯಲ್ಲಿ ಖರ್ಚಾಗುತ್ತದೆ, ಹಣವು ಎಲ್ಲಿಗೆ ಹೋಗುತ್ತಿದೆ ಎಂಬುದನ್ನು ಸ್ವಲ್ಪ ವಿಚಾರಿಸಿ ನೋಡಿರಿ. ಆಗ ಮಾತ್ರ ನಿಜ ಸಂಗತಿಯು ನಿಮಗೆ ತಿಳಿದುಬರುವುದು. ನೀವು ನೀರಿನಂತೆ ಖರ್ಚು ಮಾಡುವ ಹಣವು ನಿಮ್ಮದಲ್ಲವೆಂದೂ ಅಸಂಖ್ಯಾತ ಗರೀಬ ವಿದ್ಯಾಹೀನರ ಕಷ್ಟಾರ್ಜಿತದ ಹಣವೆಂದೂ ತಿಳಿಯುವಿರಿ.

ಬರೀ ಅಲ್ಪವೇತನಕ್ಕೆ ಇಡೀ ದಿನ ಕೆಲಸ ಮಾಡಿ ಹೊಟ್ಟೆ ಹಸಿವನ್ನೆ ತೀರಿಸಲು ಅಸಾಧ್ಯವಾದ ಅನಾಥ ಸಮಾಜವು ಮಾಡುವ ಅದೇ ಕೆಲಸದ ಪ್ರತಿಫಲವು ತನ್ನ ಯಜಮಾನನ ಬೊಕ್ಕಸವನ್ನು ತುಂಬಿಸುತ್ತದೆ. ಉದಾಹರಣೆಗಾಗಿ ಅನೇಕ ಚಿತ್ರಗಳನ್ನು ತೋರಿಸಬಹುದಾದರೂ ಮುಖ್ಯವಾಗಿ ಕಾಫಿ, ಚಹ ತೋಟಗಳಿಗೆ ಹೋಗುವ ಸಾವಿರಾರು ಬಡ ಕೂಲಿಗಳು ಬರೀ ಅಲ್ಪವೇತನಕ್ಕೆ (ದಿನ ೧ಕ್ಕೆ ಮೂರೂವರೆ ಆಣೆ) ಚಳಿ, ಗಾಳಿ, ಮಳೆಯನ್ನದೆ ಕ್ರಿಮಿಕೀಟಗಳ ಕಡಿತದ ಪೆಟ್ಟಿಗೆ ಒಳಗಾಗಿ ದುಡಿದು ಹೊಟ್ಟೆ ಹೊರಕೊಳ್ಳುವ ಸ್ಥಿತಿಯನ್ನು ಸ್ವಲ್ಪ ಚಿತ್ರಿಸಿದರೆ, ಅದು ಅಸಮಂಜಸವಾಗಲಾರದು.

ಕೂಲಿಗಳಿಗೆ ವಾಸಿಸಲು ಇರುವ ಮನೆಗಳಾದರೋ ಬಹಳ [illegible]ವ್ಯವಸ್ಥೆಯಲ್ಲಿವೆ. ಜವುಳು ಪ್ರದೇಶದಲ್ಲಿ ಅಂದರೆ ಕಾಫಿ, ಚಹ ತೋಟಗಳಿಗೆ ಲಗ್ತವಾಗಿ ಪ್ಲ್ಯಾನ್ ಪ್ರಕಾರ ನೂರಾರು ಕೋಣೆಗಳಿರುವ ಒಂದೇ ಕಟ್ಟೋಣದಲ್ಲಿ ಅಷ್ಟು ಸಂಸಾರಗಳು ದಿನ ಕಳೆಯಬೇಕಾಗಿದೆ. ಸರಿಯಾದ ಗಾಳಿಗೆ ಅವಕಾಶವಿಲ್ಲ. ನೀರಿನ ಸರಬರಾಯಿಯೆಂದರೆ ಕೊಳಗಳದ್ದೇ. ಆ ಕೋಣೆಗಳಾದರೋ ಮಕ್ಕಳು ಮರಿಗಳ ಮಲಮೂತ್ರಗಳಿಂದ ತುಂಬಿರುತ್ತವೆ. ಸರಿಯಾದ ಆಸರೆಗೆ ಎಡೆಯೇ ಸಿಕ್ಕುವುದಿಲ್ಲ. ಹೊಟ್ಟೆಗೆ ತಿನ್ನುವ ಆಹಾರವನ್ನು ಒದಗಿಸುವ ಸ್ಥಿತಿಯಾದರೋ ಬಹಳ ನಿಕೃಷ್ಟಾವಸ್ಥೆಯಾಗಿದೆ. ನಿರ್ಮಲದ ಹೆಸರೇ ಇಲ್ಲ, ಬಟ್ಟೆಬರೆಗಳಾದರೂ ಬಹಳ ಅಸಹ್ಯಕರವಾದದ್ದು. ನಿರ್ಮಲ ಮಾಡುವ ಸ್ಥಿತಿಯಲ್ಲೇ ಇರುವುದಿಲ್ಲ. ಮಕ್ಕಳುಗಳು ಅಂಥಾ ಕೋಣೆಗಳಲ್ಲಿ ಆಸರೆಯಿಲ್ಲದೆ ತರತರದ ರೋಗರುಜೆಗಳನ್ನು ಹೊಂದಿ ಬರೀ ಕ್ವಿನಿನ ಮಿಶ್ರವಾದ ನೀರನ್ನೇ ಹೊಂದುವ ಸ್ಥಿತಿಯಲ್ಲಿರುತ್ತವೆ. ಸರಿಯಾದ ಆರೈಕೆಯಿಲ್ಲದೆ ಅಂಥಾ ಮಕ್ಕಳು ಮರಿಗಳು ಎಷ್ಟು ಸಮಯ ಬದುಕಿಕೊಂಡಾವು? ಮಾರ್ಗಗಳಲ್ಲಿ ಆಸರೆ ಇಲ್ಲದೆ ತಿರುಗುತ್ತಿರುವ ಬೀಳೀ ನಾಯಿಗಳಂತೆ ಒಂದೆರಡು ದಿವಸ ಹಾಗೂ ಹೀಗೂ ಕಳೆದು ಇಹಲೋಕವನ್ನು ತ್ಯಜಿಸಿ ಹೋಗುತ್ತವೆ. ಗಂಡನು ಹೆಂಗಸರಿಂದ ಕೆಲಸವನ್ನು ಮಾಡಿಸುವ ಒಂದೇ ಉದ್ದೇಶವು ತೋಟಗಳ ಯಜಮಾನನಿಗೂ, ಕೂಲಿಗಳ ಏಜಂಟನಿಗೂ ಇರುವುದರಿಂದ ಮಕ್ಕಳು ಮರಿಗಳ ಕಾಟ ತಪ್ಪಿದರೆ ಸಾಕೆಂಬ ಅಭಿಪ್ರಾಯ ಬರುತ್ತಿರುವುದು ಹೆಚ್ಚಲ್ಲ. ಇಳುಗಳಾದರೋ ಕುರಿ ಮಂದೆಗಳಂತೆ ಒಟ್ಟಿಗಿದ್ದು, ಸ್ನಾನ, ವಸ್ತ್ರ ಒಗೆಯುವ ಆಲೋಚನೆಯಿಲ್ಲದೆ, (ಮುಖ್ಯಥಾ ಅಂಥಾ ಅನುಕೂಲತೆಗಳು ಇರುವುದಿಲ್ಲ.) ಅನಾರೋಗ್ಯದಿಂದ (ಮರದಿಂದ ಒಣಗೆಲೆಗಳು ಉದುರುವಂತೆ) ಒಬ್ಬೊಬ್ಬರೇ ನಶ್ವರ ದೇಹವನ್ನು ಬಿಟ್ಟು ಹೋಗುತ್ತಿರುವರು. ಅದು ಕೂಡಾ ಬರೀ ಅಲ್ಪ ಪ್ರಾಯದಲ್ಲೇ ಊರವರಿಗೆ ತಿಳಿಯದಂತೆ ಕಣ್ಮರೆಯಾಗುವರು. ಇದಕ್ಕೆ ಕಾರಣವೇನು? ಅಲ್ಪ ವೇತನಕ್ಕೆ ದುಡಿಯುವ ಒಬ್ಬ ಕೂಲಿಯು ಬರೀ ಮೂರು ತಿಂಗಳು ಕೆಲಸ ಮಾಡಿದ್ದರೆ ಯಜಮಾನನ ಒಂದು ವರ್ಷದ ಕೆಲಸವು ಬಂದಂತಾಗುತ್ತದೆ. ಅವರ ಒಂದು ಸಲದ ಶೀತಿನ ಆರೈಕೆ ಮಾಡಿದರೆ ಅತನ ಜೀವಿತಕಾಲದ ಸಂಪಾದನೆಯ ಹಣವನ್ನೇ ಡಾಕ್ಟರುಗಳಿಗೆ ಸುರಿಯಬೇಕಾಗುತ್ತದೆ. ಈ ದೆಸೆಯಿಂದ ಹೆಚ್ಚಿನ ಆರೈಕೆಯನ್ನು ನೋಡುವ ಆಗತ್ಯವು ಯಜಮಾನನಿಗೂ ಮತ್ತು ತಮ್ಮ ಏಜಂಟರಿಗೂ ತೋರುವುದಿಲ್ಲ.

ಕೂಲಿಗಳನ್ನು ಹೊಡಕೊಂಡು ಹೋಗುವ ಏಜಂಟನಾದರೋ, ಪ್ರತ್ಯೇಕವಾದ ಬಂಗಲೆಯಲ್ಲಿದ್ದು, ಯಜಮಾನನಿಂದ ಪಡಕೊಂಡ ಎಡ್ವಾನ್ಸನ್ನು ಮುಂಗೈಗೆ ತಾಗಿಸಿದ ಬೆಲ್ಲದಂತೆ ಕೂಲಿಗಳಿಗೆ ತೋರಿಸಿ ಅವರ ಬಾಯಲ್ಲಿ ನೀರು ಸುರಿಯುವಂತೆ ಮಾಡುತ್ತಾನೆ. ಮತ್ತು ಅದೇ ಹಣದ ಗಂಟನ್ನು ಗುಪ್ತವಾಗಿ ಜೇಬಿನೊಳಗೆ ಹಾಕಿಕೊಳ್ಳುತ್ತಾನೆ. ಮತ್ತು ಅದೇ ಹಣವನ್ನು ಊರಿಗೆ ತಂದು ಒಂದೆರಡು ಮಾಳಿಗೆಗಳಿರುವ ಉತ್ತಮ ಬಂಗಲೆಯನ್ನು ಕಟ್ಟಿಸಿ ಹಾಯಾಗಿರುತ್ತಾನೆ. ತೋಟಗಳಿಗೆ ಆಗಾಗ್ಯೆ ಹೋಗುವನಾದರೂ ಹಣಮಾಡುವ ಒಂದೇ ಉದ್ದೇಶವಿರುವುದರಿಂದ ಆದಷ್ಟು ಹಣವನ್ನು ಹೊಂದುತ್ತಾನೆ. ಇವನು ಪಡಕೊಂಡು ಮೆರೆಯುವ ಹಣದ ರಾಶಿ ಯಾರದು? ಇವನು ಯಜಮಾನನಲ್ಲಿ ಬಾಕಿ ಮಾಡಿದ ಹಣವು ಎಲ್ಲಿಂದ ತೀರಬೇಕು? ಪಾಪ, ಆ ಕೂಲಿಯಾಳುಗಳು ಕಲ್ಲು ಮಾಡಿ, ಮೈ ಮುರಿದು ತೀರಿಸಬೇಕಾಗಿದೆ. ವಿದ್ಯೆಯ ಗಂಧ ಕೂಡಾ ತಿಳಿಯದ ಆ ಪಶ್ಚಪ್ರಾಯದ ಕೂಲಿ ಆಳುಗಳು ಕಡೆಗೂ ತಮ್ಮ ಏಜಂಟನೇ ತಮ್ಮ ತಾಯ್ತಂದೆಗಳೆಂದೂ, ಅವರಲ್ಲದಿದ್ದರೆ ತಮ್ಮ ಅವಸ್ಥೆಯೇನಾಗಬೇಕೋ ಎಂಬ ಗೊಡ್ಡು ಸ್ವಭಾವದಿಂದ ಕೆಲಸ ಮಾಡುವುದೇ ತಮ್ಮ ಧರ್ಮವೆಂದೂ, ಕೊಟ್ಟದ್ದೇ ಪ್ರಸಾದವೆಂದೂ ನೆನಸಿ ದಿನವನ್ನು ಕಳೆಯುತ್ತಿರುತ್ತಾರೆ. ಲೆಖ್ಖಪತ್ರದ ಗೊಡವೆ ಇಲ್ಲದೆ ಇದ್ದು ಕೂಲಿಗಳು ಊರಿಗೆ ಬರುವಾಗಲೂ, ಊರಿಂದ ಹೋಗುವಾಗಲೂ, ಮೋಟಾರು ವಾಹನಗಳಲ್ಲಿ ಪ್ರಯಾಣ ಮಾಡುವುದರಿಂದ ಇಂಥಾ ಸುಖವು ಸ್ವರ್ಗದಲ್ಲಿ ಕೂಡಾ ಇಲ್ಲವೆಂದು ನೆನಸುತ್ತಾರೆ. ಪಾಪ ಅಂಥಾ ಖರ್ಚಿನ ಹಣವು ತಮ್ಮ ಕಷ್ಟಾರ್ಜಿತ ಹಣದಿಂದ ಬಡ್ಡಿ ಕೂಡಿ ವಜಾ ಮಾಡಲ್ಪಡುತ್ತದೆಂದು ತಿಳಿಯದಂತಹ ಪಶುಗಳಾಗಿರುತ್ತಾರೆ. ಅಂಥಾ ಕೂಲಿಗಳ ಮಧ್ಯದಲ್ಲಿ ಒಬ್ಬಿಬ್ಬ ಬುದ್ಧಿವಂತರಿರುವರಾದರೂ ಅಂಥವರನ್ನು ಆ ಮೊದಲೇ ಏಜಂಟನು ಸ್ವಲ್ಪ ಕೈಬಿಸಿ ಮಾಡಿಸುತ್ತಾನೆ.

ವಿದ್ಯೆಯ ಅಭಾವದಿಂದ ಮೈಮುರಿದು ದುಡಿಯುವ ಕೂಲಿಗಳನ್ನು ಮತ್ತಷ್ಟು ಅಧೋಗತಿಗೆ ತರುವುದು ಏಜಂಟರ ಪೈಶಾಚಿಕ ವೃತ್ತಿಯು. ಅವರಿಗೆ ಬೇಕಾದ ಸಿಹಿ ಸೇವನೆಯನ್ನು ಮಾಡಿಸಿ ಅವರ ಮನಸ್ಸನ್ನು ತಿರುಗಿಸಿ ತಮಗೆ ಬೇಕಾದ ಕೈಮೋರಗಳನ್ನು ಪಡೆದು ಊರನ್ನು ಬಿಟ್ಟವರು ಪುನಹ ಊರಿಗೆ ಹೋಗದ ಸ್ಥಿತಿಗೆ ತಂದು ಬಿಡುತ್ತಾರೆ. ಕೂಲಿಗಳಾಗಿ ದುಡಿಯುವರಾದರೂ ಯಜಮಾನನು ಇವರನ್ನು ಕ್ರಯಕ್ಕೆ ಪಡೆದಿರುವನೋ ಎಂಬಭಾವನೆ ಹೊರಗಿನವರಿಗೆ ಬಂದುಬಿಡುತ್ತದೆ. ಇನ್ನು ಕೆಲವು ಅಮಾನುಷ ಸ್ಥಿತಿಗಳನ್ನು ಹೇಳತೀರದು. ಬಡ ಹೊಟ್ಟೆಪಾಡಿಗಾಗಿ ದುಡಿಯುವ ಕೆಲ ತರುಣ ಸ್ತ್ರೀಯರುಗಳು ಏಜಂಟನ ಹಾಗೂ ಅವನ ಸಂಗಡಿಗರ ವಿಷಯ ಲಂಪಟತನಕ್ಕೆ ಬಳಗಾಗಿ ತಮ್ಮ ತಮ್ಮ ಮಾನ ಕೆಡಿಸಿಕೊಳ್ಳಬೇಕಾಗುತ್ತದೆ. ಹಾಗೂ ಪಾರಂಪರ್ಯದಿಂದ ಬಂದ ತರತರದ ರೋಗಗಳನ್ನು ಹೊಂದಿ ಊರಿನ ಮುಖ ನೋಡಲಾರದೆ ಅಲ್ಲೇ ಇಹಲೋಕವನ್ನು ತ್ಯಜಿಸುವ ಸನ್ನಿವೇಶಗಳೂ ಒದಗುತ್ತವೆ. ಹಾಯ್ ಸಮಾಜವೇ, ಬಲವು ಅಬಲರನ್ನು ತುಳಿಯುತ್ತಿದೆ ಹಾಗೂ ಕೆಡಿಸುತ್ತಿದೆ. ಮತ್ತು ತನ್ನ ಇಚ್ಛೆಯನ್ನು ಪೂರೈಸುತ್ತಿದೆ. ಇಂಥಾ ಸಮಾಜವು ಕಣ್ತೆರೆಯುವುದು ಎಂದು?

ಸಂಘಶಕ್ತಿ, ಸಮಾಜ ಸಂಸ್ಕರಣ ಹೊಂದಿ ಮಾರ್ಗದರ್ಶಕನೊಬ್ಬನು ಪ್ರವರ್ತಕ್ಕೆ ಬಂದು ಅವಿದ್ಯೆ ಅಜ್ಞಾನವನ್ನು ತೊಲಗಿಸಬೇಕು. ಅಲ್ಲಲ್ಲಿ ಸಂಘಟನೆ ಹೊಂದಿ ಸಮಾಜ-ಸುಧಾರಕರು ತಲೆಎತ್ತಬೇಕು. ದೇಶದಲ್ಲಿ ಹಿಂದುಳಿದ ಸಮಾಜವು ಮುಂದಕ್ಕೆ ಬರಬೇಕಾದರೆ ಶ್ರೀಮಂತ ಸಮಾಜದ ಹೃದಯ ಪರಿವರ್ತನೆಯಾಗದೆ ಎಂದೂ ಸಾಧ್ಯವಾಗಲಾರದು. ಎಂಥಾ ಬೆದರಿಕೆ, ಬಲಾತ್ಕಾರ ನಡಿಸಿದರೂ ಸಾಧ್ಯವಾಗಲಾರದು. ಮುಂದುವರಿದ ಸಮಾಜದ ಹೃದಯ ಪರಿವರ್ತನೆಯಾಗಿ ಹಿಂದುಳಿದ ಸಮಾಜವು ಏಳ್ಗೆಗೆ ಬಂದು ಭಾರತಮಾತೆಯು ಇನ್ನಷ್ಟು ಶೋಭಿತಳಾಗಿ ಮೆರೆಯಲೆಂದೇ ಜಗದೀಶನೊಡನೆ ಪ್ರಾರ್ಥನೆ.

N.I.P.
Petral (Ready Delivery
Kerosene & Diesel Oil
FOR RATES AND AGENCY TERMS APPLY
International Oil Co. Ltd.
JIJI HOUSE, RAVELIN STREET, FORT BOMBAY.

ಸರಕಾರದಿಂದ ರಜಿಸ್ಟರ ಮಾಡಲ್ಪಟ್ಟ ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಸ್ಥಾಪನಾ 1909

ಪ್ರವಾಸಮಿತ್ರ ಮೋಹನಮಂತವೈದ್ಯ

ರೋಗದ ನಾಮಗಳು - ಕ್ಷಯ ರೋಗ, ಬಾಣಂತಿರೋಗ, ಹಡೆದ ನಂಜು, ದಮ್ಮು, ಅಡಗ್ಗೆ ಕಾಲರಾ, (ಮಾರಿಕ್ಯಾ) ಪ್ಲೇಗು, ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಶೂಲ ರೋಗ ಗಂಡುಮಾಲೆ, ನಾರಹುಣ್ಣು, ಶಸ್ತ್ರಘಾಯ, ಕಿವಿಶೂಲೆ, ಮೂಗಿನೊಳಗಿನ ಪಿನಸ ರೋಗಲಾದುವುಗಳು, ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ, ಹೊಟ್ಟೆ ಶೂಲೆ ಸಣ್ಣ ಕೂಸುಗಳಿಗೆ ಆದ ರೋಗಗಳು, ಆರಿವು, ಮುಟ್ಟಿನದೋಷ ಹೊಟ್ಟೆ ದೊಡ್ಡದಾಗೋಣ ರೋಗಗಳನ್ನು ಮೈ ಹೊರಬೀಳೋಣ, ಮತ್ತು ಡಾಕ್ಟರರಿಗೂ, ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣಪಡುವುವು. ಅನೇಕ ರೋಗಗಳಿಗೆ ಒಂದೇ ಔಷಧವೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು. ಅಂಥವರು ಒಂದು ಸಾರಿ ತಂದು ಪರೀಕ್ಷಿಸಬೇಕು. ಸ್ಥಾಪನಾ ಆದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ. ಇಡೀ ಕರ್ನಾಟಕದಲ್ಲೆಲ್ಲಾ ಹರಿಯುತ್ತಿದೆ.

೧। ತೊಲೆ ಬಾಟ್ಲಿ ಒಂದಕ್ಕೆ ರೂ ೨ ನಮೂನೆ ಉದ್ದೇಶಿ ೫ ೮ ತೊಲದ ಬಾಟ್ಲಿ ಒಂದಕ್ಕೆ ೮ ಆ. ಚಿಕ್ಕ ಬಾಟ್ಲಿ ಒಂದೇ ಸರಿ ಒಂದು ಡಜನ್ ತರಿಸಿಕೊಳ್ಳುವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು. ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು. ಟಪ್ಪಾಲ ಖರ್ಚು ಹೆಚ್ಚಾದ ಕಾರಣ ಈ ಪ್ರಕಾರ ವ್ಯವಸ್ಥೆ ಮಾಡಿದೆ. ಟಪ್ಪಾಲ ಖರ್ಚು ೧೧ ಆಣೆ. ೧। ತೊಲೆ ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು. ಟಪ್ಪಾಲ ಖರ್ಚು ೧೧ ಆಣೆ ಬೀಳುವುದು. ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ. ಸಣ್ಣ ಬಾಟ್ಲಿ ಒಂದೇ ಬೇಡಿದರೆ ಕಳಿಸಲಾಗದು. ಟಪ್ಪಾಲ ಖರ್ಚು ೮ ಆಣೆ ಬರುವುದು. ಕನಿಷ್ಠ ಸಕ್ಕಕ್ಕೆ ಎರಡು ರೂಪಾಯಿಯ ಔಷಧ ತರಿಸಿಕೊಂಡರೆ ಕಳಿಸುತ್ತೇವೆ. ಟ. ಖರ್ಚು ೮ ಆಣೆ ಬೀಳುವುದು.

ತಿಳಿದುಕೊಳ್ಳುವ ಪ್ರಮಾಣ—ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು. ಬಾ ಯ ಕೂಡ ಕಳಿಸುವೆವು. ಔಷಧವು ಖೊಟ್ಟಿಯಾಗಿ ಹೊರಟರೆ ಇಡೀ ಬಾಟ್ಲಿ ಪರತ ತೆಗೆದುಕೊಂಡು ಹಣ ತಿರುಗಿ ಕೊಡುವೆವು. ಬೇಡುವವರು ತಮ್ಮ ವಿಳಾಸ ಕನ್ನಡ, ಮರಾಠಿ, ಇಂಗ್ಲೀಷುಗಳಲ್ಲಿ ಸ್ಪಷ್ಟ ಬರೆಯಬೇಕು. ತಮ್ಮ ಹೆಸರು ತಂದೆಯ ಹೆಸರು, ಅಡ್ಡ ಹೆಸರು, ಇರುವ ಗ್ರಾಮ, ಪೋಸ್ಟಾಫೀಸು ತಾಲೂಕು ಜಿಲ್ಲಾ ಸ್ಟೇಟ ಎಲ್ಲಾ ಖುಲಾಸ ಬರೆಯಬೇಕು.

ನಮ್ಮ ವಿಳಾಸ – ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸು, ಪೊ. ಶಹಾಪೂರ [ಬೆಳಗಾಂವಿ]

New Era Technical School.

Near Market Square, Udipi

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ)

ಇಲ್ಲಿ ಟೈಪ್‌ರ್‍ಯಾಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course and insure against unemployment.

Details may be had on application to the Manager

ಜುಬಿಲಿ ಟೆಕ್ಸ್‌ಟ್ಟಾಲ್ ಇಂಡಸ್ಟ್ರಿಯಲ್ಸ್

ಮಡಿಕೇರಿಗುಡ್ಡೆ, ಮಂಗಳೂರು

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಬಣ್ಣದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು–ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ. ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋದಾಗಿ ತಯ್ಯಾರು ಆಗುತ್ತದ. ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕ ದರದಲ್ಲಿ ಒದಗಿಸಿಕೊಡಬಹುದು.

ಎಲ್ಲಾ ಜವಳಿ ಬೆಲೆಗೆ ಮಿೂರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ ಪವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾವಕಾರ ರಾಘುವೇಂದ್ರ ರಂಗ ಪೈಯವರಲ್ಲಿ ಬಂದು ನೋಡಿಕೊಳ್ಳಿರಿ

ಯಂ. ವೆಂಕಟೇಶ ರಂಗ ಪೈ, ಪ್ರೊಪ್ರೈಟರ್.

ಡಾಕ್ಟರ ವಾಮನ ಗೋಪಾಳರವರ



ನಿಜಿಡಾಯಿಜ್ಡ ಸಾರ್ಸಪರಿಲಾ ಕೆಟ್ಟ ರಕ್ತಕ್ಕೆ ಪಂಚೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ ಫೊಸ್ಫರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ ಮುಂಬಾಯಿ ೪

ಏಜೆನ್ಸಿ – ಶಾ ಕಂಪೆನಿ ಮಂಗಳೂರು

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ]

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 3 0—0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ 2–8–0. ½ಕ್ಕೆ ರೂ 1 5–0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಫ್ಲುಯೆಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.

ಬಾಟ್ಲಿ 1ಕ್ಕೆ ರೂ. 1–8–0.

ಮೇಹಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ

ಡಬ್ಬಿ 1ಕ್ಕೆ ರೂ 2–8–0.

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು.

ಡಬ್ಬಿ 1ಕ್ಕೆ ರೂ. 0–2–6. 12ಕ್ಕೆ ರೂ 1–12–0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜೀಸಿಯನ್ಸ್, ರಥಬೀದಿ ನಂಬ್ರು 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ.

1. ಡಾಕ್ಟರ್ ಬಿ. ಎಚ್. ಪದ್ಮನಾಭ ಪೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಪೈ, ಪುತ್ತೂರು. 4. ವಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ESTD· 1906·

The Canara Banking Corporation Udipi Ltd.

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

The First Indigenous & Cosmopolitan Bank of S. K. District.

Capital· Authorised, issued & Subscribed	**Rs.**	**3,50,000**	**0**	**0**
Paid up Capital	**„**	**2,87,585**	**0**	**0**
Reserves	**„**	**3,70,106**	**0**	**0**

FIXED DEPOSITS UP TO 5%

29-4-1986

Head office:—UDIPI, S. K

Branches:—1 Udipi, 2 Coondapoor, 3 Car Street, Mangalore, 4 Shimoga, 5 Madras 6. Bunder Mangalore, 7 Mercara & 8 Virarajendrapet.

THE BOMBAY LIFE ASSURANCE COMPANY, LIMITED.

KOCHIKAR BROTHERS, Madras Branch Secretaries and Chief Agents for Bombay City & Suburbs

ANNOUNCEMENT:—We have the pleasure to inform all our Constituents, Agents and Policy holders that we have taken up a Newly Erected Bungalow "Soumyalayam" in Puthiyara on the Taluq Office Road, opposite Puthiyara Post Office and are opening our Calicut Branch Office in the said Building on 14—3—1936. The present Office of Mr C Sankaran Nair our Malabar District Agent, situated in Huzur Road, will cease to exist and will merge in our New Branch Office. This has been necessitated by the vast expansion of our business in Malabar and the adjacent districts, as the New Premises are very well situated and more spacious and thus we hope to render better service to our Policyholders. Our patrons and well wishers are requested to pay a visit to the "Soumyalayam at their early convenience All correspondence and remittances and cheques should be addressed to

Messrs **KOCHIKAR BROTHERS,**
Bombay Life Office, Puthiyara Post (Calicut—Malabar)

We have also registered our telegraphic address as "Kochikar—Calicut" for the convenience of our constituents

ಪ್ರಕಟಣೆ-ಸದರಿ ವಿಮಾ ಕಂಪೆನಿಯು ತನ್ನ ಏಜಂಟರಿಗೂ, ಪೋಲಿಸಿದಾರರಿಗೂ ಈ ಮೂಲಕ ತಿಳಿಯಪಡಿಸುವದೇನೆಂದರೆ—ತಾ 14 3-36ರಿಂದ ಕಲ್ಲಿಕೋಟೆಯಲ್ಲಿರುವ ನಮ್ಮ ಮಲಬಾರ ಏಜೆಂಟರಾದ ಮಿ। ಸಿ ಶಂಕರನಾಯರ್‌ರವರ ಹಜೂರ ರಸ್ತೆಯ ಬಳಿ ಇರುವ ಆಫೀಸನ್ನು ಪುತಿಯಾರ ಪೋಸ್ಟು ಆಫೀಸಿನ ಎದುರಿರುವ ಹೊಸತಾಗಿ ಕಟ್ಟಿಸಿದ ದಿವ್ಯವಾದ ಸೌಮ್ಯಲಯಮ್ ಎಂಬ ಬಂಗ್ಲೆಯಲ್ಲಿ ತೆರೆಯಲಾಗುವುದು ಇನ್ನುಮುಂದೆ ಸಂಬಂಧಪಟ್ಟ ಲೆಖ್ಖಪತ್ರಗಳನ್ನು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು

ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್,
ಬೊಂಬೈ ಲೈಫ್ ಆಫೀಸ್, ಪುತಿಯಾರಾ ಪೋಸ್ಟು (ಕಲ್ಲಿಕೋಟೆ ಮಲಬಾರು)

ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ತಂತಿಯ ವಿಳಾಸವನ್ನು ಕೊಚ್ಚಿಕಾರ—ಕಲ್ಲಿಕೋಟೆ ಎಂಬುದಾಗಿ ಮಾಡಿದೆ

Regd)

ಅಮೃತಾಂಜನ

ತಲೆನೋವು, ಶಿರೋವೇದನೆ ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ
ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS BOMBAY MADRAS CALCUTTA

ಬ್ರಿಟಿಷ್ ಕರ್ಣಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ ೫ ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಫುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ. — ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವಾರ್ಷಿಕ ಚಂದಾ: 2 ರೂಪಾಯಿ
ಬಿಡಿ ಸಂಚಿಕೆಗೆ ಒಂದಾಣೆ

Regd. No. M. 8406

ಟಪ್ಪಾಲು ಹಾಸಲು ಸೇರಿ ರೂ. 2-13-0

for Quality Snuff
H. Rama Rao and Sons
High Class Snuff Manufacturers
RAMA SNUFF
The charm of Snuff Users

ಸ್ವದೇಶಾಭಿಮಾನಿ

SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
THE BOMBAY LIFE
Kochikar Brothers,

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ । ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳಬಲ್ಲರೆ? ಕೇಳಿರಿದು. ಧೀರರು ನಿಶ್ಚಿತಾರ್ಥವನು । ೨ ।

ಪುಸ್ತಕ ೩೦ ಮಂಗಳೂರು ತಾ. ೧೫ನೇ ಶುಕ್ರವಾರ ಮೇ ೧೯೩೬ (15-5-'36) ಸಂಚಿಕೆ ೨೦

ಪ್ರಥಮ ಕನ್ನಡ ಸಾಮಾಜಿಕ ವಾಕ್ಚಲನ ಚಿತ್ರ:—

"ಸಂಸಾರ ನೌಕ"

ಅದ್ಭುತ, ಹಾಸ್ಯಮಯ, ವಿಷಾದಮಯ ಕನ್ನಡ ಮಾತಾಡುವ ಚಲಚ್ಚಿತ್ರ

ದೇವಿ ಫಿಲ್ಮ್ಸ್, ಲಿಮಿಟೆಡ್.

ನೋಟಿಗಳು
NOTE. ...S.

ಕಳೆದ ವಾರ ಒಬ್ಬ ಚಕ್ರವರ್ತಿಗಳು ಸ್ವರಾಜ್ಯವನ್ನು ಬಿಟ್ಟು ಪಲಾಯನ ಮಾಡಿದರು, ದೇಶದ ಹಿತಕ್ಕಾಗಿ. ಮತ್ತೊಬ್ಬ ರಾಜರು ಚಕ್ರವರ್ತಿಯರಾಗಿ ಮುಕುಟ ಧರಿಸಿಕೊಂಡರು; ಅದೇ ದೇಶದ ಹಿತಕ್ಕಾಗಿ. ಈ ಹಿತಚಿಂತನೆಯು ವಿಹಿತವಾದುದೇ ಅಲ್ಲವೇ, ಎಂದು ಲೀಗ್ ಆಲೋಚನೆ ಮಾಡುತ್ತದೆ

೦ ೦ ೦ ೦

ಎಬಿಸಿನಿಯ ರಾಜ್ಯವೆಂಬದೇ ಇನ್ನು ಸ್ವತಂತ್ರವಾಗಿಲ್ಲದರಿಂದ, ಆ ರಾಜ್ಯದ ಪ್ರತಿನಿಧಿಯಿರುವಲ್ಲಿ ತಾನಿಲ್ಲವೆಂದು ಇಟಲಿಯ ಪ್ರತಿನಿಧಿಯು ಲೀಗಿನಲ್ಲಿ ನುಡಿದನು. ಎಬಿಸಿನಿಯವನ್ನು ಇಟಲಿಯು ಆವರಿಸಿರುವಂತೆ, ನುಂಗಿರುವಂತೆ, ಆ ಪ್ರತಿನಿಧಿಯನ್ನು ಈ ಪ್ರತಿನಿಧಿಯು ಆವರಿಸಿ ನುಂಗಿರುವಂತೆಯೆ ಲೀಗಿನವರು ಏಕೆ ಎಣಿಸಬಾರದಾಗಿತ್ತು? ನಿಧಿಯು ಇಟಲಿಯದಂತೆ,—ಪುನಃ ಪ್ರತಿನಿಧಿ ಎಲ್ಲಿಂದ?

೦ ೦ ೦ ೦

ಎಬಿಸಿನಿಯವನ್ನು ನುಗ್ಗಿ, ಇಡೀ ಲೀಗಿನ ಸೂಚನೆಗಳಿಗೆ ವಿರೋಧವಾಗಿ ನಡೆದ, ಇಟಲಿಗೆ ಲೀಗಿನಲ್ಲಿ ಸ್ಥಾನವಿದೆ. ಲೀಗನ್ನು ನಂಬಿ, ಅದರ ಅಭಿಪ್ರಾಯಗಳನ್ನು ಮನ್ನಿಸಿ, ಮರಣಕಾಲದಲ್ಲೂ ದೇವರ ಹೆಸರ ಬದಲು ಲೀಗ್ ಎಂದು ಕೂಗುತ್ತಿದ್ದ ಎಬಿಸಿನಿಯಕ್ಕೆ ಲೀಗಿನಲ್ಲಿ ಸ್ಥಾನವಿಲ್ಲವೆಂದು ಇಟಲಿಯ ಆಕ್ಷೇಪ. ಭೀಮನಿರುವ ಸ್ವರ್ಗವು ತನಗೆ ಬೇಡವೆಂದು ದುರ್ಯೋಧನನು ಎಂದಿದ್ದನಂತೆ!

೦ ೦ ೦ ೦

ಎಬಿಸಿನಿಯವು ಸುಧಾರಣೆಯ ಗಂಧಗಾಳಿ ಕೂಡ ಇಲ್ಲದಿದ್ದ ರಾಜ್ಯವಾಗಿತ್ತೆಂದು ಇಟಲಿಯು ಸಾರಿದ್ದಿತು. ಹಾಗೆಯೆ ಅದನ್ನು ಸುಧಾರಣೆಗೊಳಿಸುವುದಕ್ಕೆಂದು, ವಿಷವಾತವನ್ನು ಬೀರಿ, ಬೆಂಕಿ ಹೊತ್ತಿಸುವ ಸಿಡಿಗುಂಡುಗಳ ಮಳೆಗರೆದು, ಆ ರಾಜ್ಯವನ್ನೆಲ್ಲ ಹೊಸ ವಾತಾವರಣದಿಂದ ಈಗ ತೊಡ್ಡು ಬಿಟ್ಟಿದೆ,—ಇಟಲಿ ಇನ್ನು ಸುಧಾರಣೆಯಾಗದೆ ನಿರ್ವಾಹವೇ ಇರದು

೦ ೦ ೦ ೦

ಇಂಗ್ಲೆಂಡಿನಲ್ಲಿ ಬಜೇಟು ಪ್ರಕಟವಾಗುವ ಮೊದಲೇ, ಅದರಲ್ಲಿ ಮಾಡಿದ ತೆರಿಗೆ ತಿದ್ದುಪಡಿಗಳು ಅದ್ಯಾರಿಗೆ ತಿಳಿದಿದ್ದುವೆಂದು ಒಂದು ಆಕ್ಷೇಪ ಉಂಟಾಗಿತ್ತು. ಆ ವಿಷಯ ಈಗ ವಿಚಾರಣ ನಡೆಯುತ್ತದೆ. ಆದರ್ಶವು ಹೀಗಿರಬೇಕು

೦ ೦ ೦ ೦

ಪೂರ್ವ ಏಷ್ಯಕ್ಕೂ ಸ್ವಯಂ ನಿಯೋಜಿತ ಸಂರಕ್ಷಕನಾಗಿ ಜಾಪಾನು ಎದ್ದು ನಿಂತು, ತನ್ನ ಮೊಕ್ತೇಸರಿಕೆಯನ್ನು ಈ ವಾರ ಸಾರುತ್ತಲಿದೆ. ಯುರೋಪು ಅಮೇರಿಕಗಳು ಕಿವಿಕೊಟ್ಟು ಕೇಳಬೇಕು! ಈ ಕಲಿಯುಗದಲ್ಲಿ ರಕ್ಷಕರು ಭಕ್ಷಕರಾಗುವುದು ಅತಿ ಅಪರೂಪ

೦ ೦ ೦ ೦

ಕುಂಭಕೋಣ! ಹೀಗೆಂದು ಆ ಪವಿತ್ರ ಊರ ಹೆಸರೆತ್ತಿದರೇ ಅಲ್ಲಿನವರು ಕೋಪಿಸುವರು, ಬೈಯ್ಯುವರು. ಆದಾಗ್ಯೂ, ಆಗಾಗ ಅವರು 'ಕುಂಭಕೋಣಂ' ಮಾಡದೆ ಬಿಡುವುದಿಲ್ಲವಲ್ಲ. ಒಂದು ಅಡಿಗೆ ಬೆನ್ನಿಗೆ ಸಿಡಿ ಚುಚ್ಚಿಸಿ ಮೂರು ಮೂರು ಸಲ ಐವತ್ತು ಅಡಿ ಎತ್ತರಕ್ಕೆ ಎತ್ತಿ ಇಳಿಸಿ ಮಾರೀಪೂಜೆ ಮಾಡಿದರಂತೆ! ಜನರು ಭ್ರಾಂತಿಯಿಂದ ಹೀಗೆ ಚುಚ್ಚಿಸಿಕೊಂಡು ತೂಗಿಕೊಳ್ಳುವುದಿತ್ತು. ಅವನ್ನು ಸರಕಾರವು ನಿಲ್ಲಿಸಿತು. ಇರಲಿ, ಮಾರಿಗೆ ಬಲಿಕೊಡುವ ಕೋಣವನ್ನು ಇನ್ನು ಇವರು ಸಿಡಿ ಚುಚ್ಚಿಸಬಹುದು. ಏಕೆಂದರೆ, ಹೇಗೂ ಇವರು 'ಕುಂಭಕೋಣಂ'ನವರು!

೦ ೦ ೦ ೦

ಯಾವತ್ತು ಮರಗಳಲ್ಲಿ ಹೆಚ್ಚು ಕಡಿಮೆ ಬಹು ವರ್ಷಗಳ ಕೊಳೆ ಕಟ್ಟಿರುವುದು. ಅದರ ಗೋಜಿಗೆ ಯಾರೂ ಹೋಗುವುದಿಲ್ಲ. ಯಾವುದೋ ಒಂದು ಕೆರೆ ನೀರು ಹಸುರಾಗಿ ತೋರಿದ ಕೂಡಲೇ ಆರೋಗ್ಯ ಖಾತೆಯ ಹೆಸರೆತ್ತಿ ಅದನ್ನು ಶುಚಿಮಾಡಿರೆನ್ನುತ್ತೇವೆ. ಯಾವುದೊಂದು ಖಾತೆಯು ಉಳಿದೆಲ್ಲ ಕೊಳೆ ಕಟ್ಟಿರುವುದನ್ನು ಶುಚಿಗೊಳಿಸಲು ಎಚ್ಚರಕೊಡದೇ?

೦ ೦ ೦ ೦

ವೋಟು ಕೊಡಲು ಸೊಂಟ ಕಟ್ಟಿಸಿ, ಮುಂದಣ ಫೆಬ್ರವರಿಯಲ್ಲಿ ವೋಟು ಪಟ್ಟಿ ಈಗ ತಯಾರು! ಒಂದ ಮೋಟರನ್ನು ಇಟ್ಟುಕೊಂಡುದಕ್ಕೆ ತೆರಿಗೆ ಕೊಡಿ, ವ್ಯಕ್ತಿತೆರಿಗೆ, ಆಸ್ತಿತೆರಿಗೆ, ಇನ್ಕಂ ಟೇಕ್ಸು, ತೀರ್ವೆ, ಬಾಡಿಗೆ ಒಕ್ಕಲು, ರೂಪಾಯಿ ೫೦ರ ತೀರ್ವೆಯಾಸ್ತಿಯ ರಿಜಿಸ್ಟ್ರ ಗೇಣಿಚೀಟುಳ್ಳ ಒಕ್ಕಲು, ಇವರೆಲ್ಲರಿಗೆ ವೋಟು ಇದೆ! ಹಕ್ಕು ಇದ್ದಲ್ಲಿ ರಿಜಿಸ್ತ್ರಮಾಡಿಸಿ ಇಲ್ಲದಿದ್ದಲ್ಲಿ ಉಂಟುಮಾಡಿಕೊಳ್ಳಿರಿ. ಮರೆತರೆ, ಈ ಅಪೂರ್ವ ಸಂದರ್ಭವನ್ನು ಕಳೆದುಕೊಂಡಂತಾದೀತು

೦ ೦ ೦ ೦

ಹುಟ್ಟಿದರೆ ಬೋರ್ಡು ಎಲಿಮೆಂಟರಿ ಶಾಲೆಯ ಉಪಾಧ್ಯಾಯರಾಗಬೇಕು. ಇವರಿಗೆ ಸಂಬಳ ಹಲವು ತಿಂಗಳ ನಂತರ; ಬಿದ್ದರೆ ನೇಕಡಾ ೧೨½ಯಂತೆ ಕಡಿತ. ಇವರ ಸಂಬಳಕ್ಕೆ ಹಣ ಕಡಿಮೆಯಾಗಿದೆ ಎಂದು ಸರಕಾರಕ್ಕೆ ತಿಳಿಸಿದರೆ, ಇತರ ಸಿಬಂದಿಯ ಸಂಬಳ ಅಥವಾ ಇತರ ಬಾಬಿನ ಖರ್ಚು ಕಡಿಮೆಯಾದಿಲ್ಲವೇಕೆಂದು ಕೇಳುವಿರೋ ಎಂದು ಬೆದರಿಕೆ. ಉಪಾಧ್ಯಾಯರು ಈ ಕಡಿತದಿಂದ ನೊಂದ ಗಾಯಗಳಿಗೆ ಅಲ್ಲಲ್ಲಿನ ಮೆಂಬರರ ಸಹಾನುಭೂತಿಯ ವಿಭೂತಿ ಹಚ್ಚಿಕೊಳ್ಳಬಹುದಾಗಿ ಸೂಚನೆಯಾಗಿದೆ.

೦ ೦ ೦ ೦

೨೫–೫–೧೯೩೬! ಜಿಲ್ಲಾ ಬೋರ್ಡು ಬಜೇಟ್ ಮೀಟಿಂಗ್! ಸಂಬಳದಲ್ಲಿ ಕಡಿತಾಯವಾಗಬಾರದಾಗಿ ಇಚ್ಛಿಸುವ ಎಲ್ಲಾ ಉಪಾಧ್ಯಾಯ ಉಪಾಧ್ಯಾಯಿನಿಯರು ಬೋರ್ಡು ಆಫೀಸಿನ ವಠಾರದಲ್ಲಿ ಶಿಕ್ಷಕರ ದೀನತಾ ಪ್ರದರ್ಶನವನ್ನು ಜರಗಿಸಬೇಕೆಂದು ಇನ್ನೊಂದು ಸೂಚನೆಯಾಗಿದೆ. ಬಡ ಉಪಾಧ್ಯಾಯರು ಇನ್ನೇನು ಮಾಡಬಹುದು? ಮೀಟಿಂಗಿಗೆ ಒರುವ ಬೋರ್ಡು ಮೆಂಬರರು, ಜನಹಿತಸಾಧಕರಾಗಿಯೇ ಮೆಂಬರರಾಗಿರುವ ಪ್ರಯುಕ್ತ, ಈ ಪ್ರದರ್ಶನವನ್ನು ಕಣ್ಣಾರೆ ಕಂಡು ದೀನತೆಯನ್ನು ಹೋಗಲಾಡಿಸಬಹುದಾಗಿ ಕೋರಿಕೆ.



ನಿಮ್ಮವರು ಆರೋಗ್ಯವಂತರೂ ಶಕ್ತಿಯುತರೂ ಆಗಬೇಕೆ, ಹಾಗಾದರೆ ಅವರಿಗೆ ಓವಲ್ಟಿನ್ನನ್ನು ಕೊಡಿರಿ

ನವಚೈತನ್ಯವನ್ನೂ ಶಾಂತ ಚಿತ್ತವನ್ನೂ ಕೊಡುವುದರಲ್ಲಿ 'ಓವಲ್ಟಿನ್' ಅತ್ಯದ್ಭುತಕರವಾದುದು. ಓವಲ್ಟಿನ್ನನ್ನು ತೆಗೆದುಕೊಂಡುದರಿಂದ ಅನಾರೋಗ್ಯವು ನಾಶವಾಗಿ ನಿಶ್ಶಕ್ತಿಯು ಕುಂದಿ, ಭರಪೂರತ್ರಾಣವೂ ದೇಹದಾರ್ಢ್ಯವೂ ಹೆಚ್ಚುವುದು. ಜ್ಞಾಪಕಶಕ್ತಿಗೂ ಬಹಳ ಉಪಯೋಗಕಾರಿ

ಓವಲ್ಟಿನ್‌ನಲ್ಲಿ ನಿಸರ್ಗಸಿದ್ಧವಾದ ಅಮೂಲ್ಯ ಸಾರವಿದೆ. ಬೆಳೆದ ಬಾರ್ಲಿ, ದನದ ಕೆನೆಹಾಲು ಅತ್ಯಮೂಲ್ಯ ಪಾನೀಯಗಳು ದೇಹದ ಬೆಳವಣಿಗೆಯನ್ನೂ ಮೆದುಳಿನ ಶಕ್ತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಲು ಅತ್ಯಾವಶ್ಯಕವಾದ ಸಾಧನಗಳು. ಒಂದು ಸಲ ಸೇವಿಸಿದೊಡನೆ ಅದರ ಚೇತನದಾಯಕ ಗುಣವನ್ನು ನೀವು ಕಂಡುಹಿಡಿಯುವಿರಿ

ದಿನನಿತ್ಯವೂ ಚಹಾಕ್ಕೆ ಓವಲ್ಟಿನ್ ಸೇರಿಸಿರಿ. ಅದರಿಂದಾಗಿ ಇಚ್ಛಾಪೂರ್ತಿಯನ್ನು ಹೊಂದಿರಿ. ಆದರೆ ಪರಕೀಯರ ಮೋಸದ ವ್ಯಾಪ್ತಿಯನ್ನು ಪಡಕೊಂಡು ನಾಶವನ್ನು ಹೊಂದಬೇಡಿ

'ಓವಲ್‌ಟಿನ್'

ಟೋನಿಕ್ ಆಹಾರ ಪಾನಕ.

OVALTINE

ಮೆದುಳು, ನರ, ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಬಜಾರುಗಳಲ್ಲಿಯೂ ಕ್ರಯಕ್ಕೆ ಸಿಗುತ್ತದೆ

ಏಜಂಟ್ಸ್ — ಜೇಮ್ಸ್ ರೈಟ್ ೪೦ಎ ರಿಪನ್ ಸ್ಟ್ರೀಟ್ ಕಲ್ಕತ್ತಾ ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ

ಔ೯/೩೨೦

ತುಂಡು ವಾರ್ತೆಗಳು

ಪ್ರಾಂತಿಕ ಸರಕಾರಗಳಿಗೆ ಹಿಂದೂದೇಶ ವಿದ್ಯಾಭ್ಯಾಸಗಳ ಕುರಿತು ವಿಚಾರಣೆ ನಡೆಯುವ ವಿಚಾರದಲ್ಲಿ, ಕೇಂದ್ರ ಸರಕಾರದಿಂದ ಬಿನ್ನಪಗಳು ಹೋಗಿವೆ

ಮೆರೋದಾಬಾದ ಎಂಬಲ್ಲಿ ಭಯಂಕರ ಬೆಂಕಿಯುಂಟಾಗಿ ಮೂರು ಮಂದಿ ಸ್ತ್ರೀಯರೂ ಒಬ್ಬ ಪುರುಷನೂ ಸುಟ್ಟು ಮೃತರಾಗಿರುವರು

ಭಯಂಕರ ನೆರೆಯಿಂದ ಬಂಗಾಳದಲ್ಲೂ ಸಂಯುಕ್ತ ಪ್ರಾಂತಗಳಲ್ಲೂ ಬಹಳ ಹಾನಿ ಮತ್ತು ನಷ್ಟಗಳು ಸಂಭವಿಸಿವೆ

ರಂಗೂನಿನಲ್ಲಿ ವಿದ್ಯಾರ್ಥಿಗಳ ಮುಷ್ಕರವು ಪ್ರಾರಂಭವಾಗಿವೆ. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸದಂತೆ ಪಿಕೆಟಿಂಗ್ ಕೆಲಸವು ನಡೆಯುತ್ತದೆ



ನವನಾಗರಿಕತನವು ವಿಷಗಾಳಿಯೊಡನೆಯೂ, ದ್ರವಾಗ್ನಿಯೊಡನೆಯೂ ಬೊಂಬುಗಳೊಡನೆಯೂ ಅಬಿಸೀನಿಯವನ್ನು ಪ್ರವೇಶಿಸುತ್ತಿದೆ.

ಎತಿಯೋಪಿಯವು ಇಟೆಲಿಯ ವಶವಾಯಿತು

"ಅಡ್ಡಿಸ್ ಅಬಾಬ ದಿನಾಚರಣೆ"
ಕೊಂಗ್ರೆಸ್ ಪಕ್ಷದವರಲ್ಲಿ ಶ್ರೀ ಪಂಡಿತ ಜವಾಹರಲಾಲರ ಅರಿಕೆ.
ರಾಜತ್ವದ ಧೂರ್ತತನ.

"ಅಬಸಿಯರು ಅವಿಶ್ರಾಂತ ತಮ್ಮನ್ನು ರಕ್ಷಿಸಿಕೊಳ್ಳುವಂತ ಕಾರ್ಯವನ್ನು ನಡೆಸಿದರೂ ರಾಜತ್ವದ ನವಯುದ್ಧೋಪಕರಣಗಳಿಗೆ ಕುಂದಿದರಿಂದ ಅದಿಸ್ ಅಬಾಬವು ಇಟಲಿಯ ಹಸ್ತಗತವಾಗಿರುವುದು. ಇವರ ಸ್ವಾತಂತ್ರ್ಯವು ನಿರ್ಗತಿಕ ಸ್ಥಿತಿಯನ್ನೈದು ಸಮಸ್ತ ಜನಾಂಗದ ಬಂಧುತ್ವವನ್ನು ವಿರೋಧಿಸುವ ಇಟಲಿಯ ರಾಜತ್ವದ ಶಕ್ತಿಯ ಕಾಲಿಗೆರಗಿದೆ ದಂಸಕೃತ ಪ್ರಕೃತ ವಿಷಮ ವಿಷಗಾಳಿ, ದ್ರವಾಗ್ನಿ, ಇವೇ ಮೊದಲಾದ ಯುದ್ಧೋಪಕರಣಗಳನ್ನು ಪ್ರಯೋಗಿಸಿ ಇಟೆಲಿಯು ಜಯಪ್ರದರಾಗಿರುವುದೇನು ನಿಜ, ಆದರೆ ಇಟಲಿಯ ಈ ಜಯೋತ್ಸವವು ರಾಜತ್ವದ ನಿಜ ಕ್ರೂರ ರೂಪವನ್ನೂ, ರಾಜತ್ವದಲ್ಲಿ ಮೆರೆಯುವ ಬೇರೆಬೇರೆ ಪಾಶ್ಚಾತ್ಯ ದೊಡ್ಡ ದೊಡ್ಡ ಜನಾಂಗಗಳ ಮೂಲವಾಗಿರುವ ಕಪಟಕಹುಕತ್ವವನ್ನೂ, ಜನಾಂಗಸಭೆಯ ನಿಸ್ಸ್ವಾರ್ಥಕತನವನ್ನೂ ವ್ಯಕ್ತಪಡಿಸುತ್ತದೆ. ಅಂದು ನಿಜವಾಗಿಯೂ ಮಹಾಯುದ್ಧಕ್ಕೆ ಕಾರಣವಾದ ಈ ರಾಜತ್ವದ ಶಕ್ತಿಯು ಇಂದು ಸ್ವಾತಂತ್ರ್ಯದ ಒದ್ದಾಟಗಳನ್ನು ಗುದ್ದಿ ನಿಲ್ಲಿಸುವುದಾದರೂ ಸ್ವಾತಂತ್ರ್ಯೇಚ್ಛೆಯು ಜನರಲ್ಲಿ ಕುಂದಲಿಕ್ಕಿಲ್ಲ. ಎತಿಯೋಪಿಯಾದಲ್ಲಿ ರಾಜತ್ವದ ಶಕ್ತಿಯು ವಿಜಾರಿಕೊಂಡಿದ್ದರೂ, ಜನರ ಸ್ವಾತಂತ್ರ್ಯೇಚ್ಛೆಯು ಎಂದೂ ಕೊನೆಗೊಳ್ಳಲಾರದು. ರಾಜತ್ವವು ಇರುವ ವರೇಗೆ ಅದಕ್ಕೆ ಸ್ವಾತಂತ್ರ್ಯತ್ವವು ಎದುರಾಗಿರುವುದು. ನಾವು ಅಬಸಿಯರ ದುಃಖದ ದೂರದಾಹನ್ನನೆಯನ್ನು ಕೇಳಿ ಅವರನ್ನು ವಿಮುಕ್ತಗೊಳಿಸುವುದು ಅಸಾಧ್ಯ. ರಾಜತ್ವದ ಶಕ್ತಿಯು ನಮ್ಮ ಮೇಲೆಯೂ ಕೂಡ ಒತ್ತಿರುವುದು. ಆದರೆ ನಾವು ಅವರ ದುಃಖ ದುಃಖಿತರಾಗಿ ನಮ್ಮ ನಿಜವಾದ ಕರುಣೆಯ ಸಲಹೆಗಳನ್ನು ಕಳಿಸುವೆವು. ಈ ಕರುಣೆಯ ಸಲಹೆಗಳು ನಮ್ಮ ಇಡೀ ದೇಶಸೂಚಕವಾಗಲು ಹೃದಯತಃ ಪ್ರಯತ್ನಿಸುವೆವು ಆದುದರಿಂದ, ಅಬಸಿಯರು ಇಟೀಲಿಯ ರಾಜತ್ವದ ಶಕ್ತಿಗೆ ಧೈರ್ಯಗುಂದಿ ಸ್ವಾತಂತ್ರ್ಯೇಚ್ಛೆಯನ್ನು ಬಿಡಬಾರದೆಂದು ನಮ್ಮ ಕಾಂಕ್ಷೆಯಾಗಿರುವುದರಿಂದ, ಹಿಂದೂ ಬಾಂಧವರೆಲ್ಲರೂ ಮೇ ತಾ 9ಕ್ಕೆ ಎಬಿಸೀನಿಯ ದಿನಾಚರಣೆ ಮಾಡಬೇಕೆಂದು ನನ್ನ ಅರಿಕೆ" ಎಂದು ಜವಾಹರಲಾಲರು ಪ್ರಕಟಿಸಿರುವರು. ಇವರ ಈ ಅರಿಕೆಯಿಂದ ರಾಜತ್ವದ ಕ್ರೂರ ಮಹತ್ವವು ವ್ಯಕ್ತವಾಗುತ್ತದೆ.

೦ ೦ ೦

ಪಂಡಿತ ಜವಾಹರಲಾಲರು ಎಬಿಸೀನಿಯ ದಿನಾಚರಣೆಯ ಅರಿಕೆಯನ್ನು ಇಟೆಲಿಯ ಪಕ್ಷವು ಟೀಕಿಸಿ, ನವನಾಗರಿಕ ಮತ್ತು ನಿಜವಾದ ಅಧ್ಯಾತ್ಮಿಕ ಭಾವವು ಇವರಲ್ಲಿ ಇದ್ದಲ್ಲಿ ತನ್ನ ರಾಷ್ಟ್ರ ಬಾಂಧವರಿಗೆ ಹೀಗೆ ಅರಿಕೆ ಮಾಡಿದ್ದು ಶುದ್ಧ ತಪ್ಪೆಂದೂ, ಇಟಲಿಯು ಮೊದಲಿನಿಂದಲೂ ಹಿಂದೂದೇಶದ ಹಿತಚಿಂತಕವಾಗಿ ಸ್ನೇಹ ಸಲಹೆಗಳನ್ನು ಕೊಟ್ಟಿದ್ದ ಪಕ್ಷದಲ್ಲಿ ಈ ಅರಿಕೆಯನ್ನು ಹಿಂತೆಗೆಯಬೇಕೆಂದೂ, ಹೇಳುತ್ತಿದೆ. ಈ ಹೇಳಿಕೆಗೆ ಮ। ಜವಾಹರಲಾಲರು ಹೀಗೆ ಪ್ರತ್ಯುತ್ತರವನ್ನು ಕೊಟ್ಟಿರುವರು. ಈ ಪ್ರತ್ಯುತ್ತರದಿಂದ ನಿಜವಾದ ರಾಜತ್ವದ ಕ್ರೂರತನವು ಇನ್ನೂ ಬಯಲಾಗುತ್ತದೆ.

"ಇಟೆಲಿಯ ಮೇಲೆ ನಮ್ಮಲ್ಲಿ ದ್ವೇಷ ಸಂತಾಪಗಳು ಒಂದಿಷ್ಟೂ ಇರುವುದಿಲ್ಲ. ಹಿಂದೆ ಇಟೆಲಿಯಿಂದ ದೊರೆತ ಸ್ನೇಹ ಸಲಹೆಗಳಿಗೂ ಪ್ರೋತ್ಸಾಹಕ್ಕೂ, ನಾವು ಚಿರ ಋಣಿಯಾಗಿರುವೆವು — ಸ್ವಕೀಯವಾಗಿ, ನನ್ನ ಬಾಲಪ್ರಾಯದಲ್ಲಿ ಇಟೆಲಿಯು ನನಗೆ ಬಾಲವನವಾಗಿ ಸಂಭವಿಸಿರುವುದು. ಅಲ್ಲಿಯ ವಿಕಾಸಗೊಳಿಸುವ ಅತೀ ಸುಂದರ ರೋಮ್ ನಗರದ ಇತಿಹಾಸದೃಷ್ಟತ್ವವುಳ್ಳ ಪ್ರಾಚೀನ ಸ್ಮಾರಕಗಳು ನನ್ನ ಮನಸ್ಸನ್ನು ಸೆಳೆದಿರುವವು. ಇಟೆಲಿಯು ಸ್ವಾತಂತ್ರ್ಯಯಾಗಲು ತೋರಿಸಿದ ಅತ್ಯುತ್ತಮ ಧೈರ್ಯಸ್ಥೈರ್ಯವು ನನ್ನನ್ನು ಬಾಲಪ್ರಾಯದಲ್ಲಿ ಉತ್ತೇಜನಗೊಳಿಸಿದೆ. ಆದರೆ ಇಟೆಲಿಯ ಮೇಲಿರುವ ಪ್ರೀತಿಯೂ ಆದರ ಮೆಚ್ಚುಗೆಯೂ, ರಾಜತ್ವದ ಧೂರ್ತತ್ವವನ್ನು, ಅದಲ್ಲದೆ ವಿಶ್ವಬಂಧುತ್ವ ಸಮತಾವಾದಗಳನ್ನು ವಿರೋಧಿಸುವ ಇಟೆಲಿಯ ರಾಜತ್ವದ ಧೂರ್ತತ್ವವನ್ನು ನಿರಾಕರಿಸುವ ದೇಶಪ್ರೇಮಿಗಳೂ ಸ್ವಾತಂತ್ರ್ಯೇಚ್ಛುಗಳೂ ಆದ ನಮ್ಮನ್ನು ಹಿಂಜರಿಸಿ ಹಿಂದಿಡುವುದಿಲ್ಲ. ನಮ್ಮಲ್ಲಿ ಮೊಳಗಿರುವ ಈ ಸ್ವಾತಂತ್ರ್ಯ ವಾತ್ಸಲ್ಯವು, ಎಂದೆಂದೂ, ನಮ್ಮನ್ನಾವರಿಸಿಕೊಂಡಿರುವ ರಾಜತ್ವದ ಶಕ್ತಿಯನ್ನು, ಮುರಿಯಲು ಮುಂದೊಡುತ್ತದು. ಹತಭಾಗಿಗಳಾದ ನಾವು ಈ ರಾಜತ್ವವನ್ನು ಕಾದಾಡುತ್ತಾ ಇದ್ದೇವೆ. ಎಲ್ಲಿ ರಾಜತ್ವವು ತಲೆದೋರುವುದೊ ಅಲ್ಲಿ ಅದಕ್ಕೆ ನಮ್ಮ ಉಚಿತ ವಾದ ಬಹಿಷ್ಕಾರವಿರಲೇಬೇಕು.

ಎಬಿಸೀನಿಯದ ಜನರು ಇಟೆಲಿಯಿಂದ ಇಂದಿಗ ಉಡಧಾರಿ ಬೆಂಕಿ ಜ್ವಾಲೆಗಳಿಂದ ನಾನಾ ವಿಧಗಳಲ್ಲಿ ಪೀಡಿತರಾಗಿ ನಾಗರೀಕತನದಲ್ಲಿ ಮುಂದುವರಿಯದೆ ಹಿಂದುಳಿದು, ರಾಜತ್ವದಿಂದ ಬರುವ ಒಕ್ಕಟ್ಟು ಸುಜನತೆಗಳನ್ನರಿಯದೆ ಇರುವರು ಎಂಬ ಇಟೆಲಿಯ ಆರೋಪಣಾಹ್ವಾನೆಗೆ ಬಲಿಯಾಗಿ ದಂಡನ ಬಂಧನೆಗೊಳಗಾಗಿರುವರು. ಆದರೆ ರಾಜತ್ವವು ಅವರೊಳಗೆ ಅವರೊನ್ನತಿಗಾಗಿ ಒಕ್ಕಟನ್ನು ಸಾಧಿಸುತ್ತಿದೆಂಬುದೂ, ಅವರನ್ನು ಅಪ್ರತಿಮ ನಾಗರೀಕರನ್ನಾಗಿ ಮಾಡುತ್ತದೆಂಬುದೂ ಬರೀ ಸುಳ್ಳುತನ. ಈ ರಾಜತ್ವವು ನಿರಂತರ ಪಕ್ಷಪಾತ ಬುದ್ಧಿಯಲ್ಲಿಯೇ ಮುಳುಗಿರುವುದರಿಂದ ಜನರೊನ್ನತಿಯು ಅದರಿಂದ ಅಸಾಧ್ಯ. ಇದರ ಅಲಭ್ಯತನವೂ, ಪಕ್ಷಪಾತವೂ, ಜನರಲ್ಲಿರುವ ಅಧ್ಯಾತ್ಮಿಕ ಭಾವವನ್ನು ಕೆಡಿಸುತ್ತದೆ. ಈ ಇಟಲಿಯ ರಾಜತ್ವದ ದೂತರು ಎಬಿಸೀನಿಯದಲ್ಲಿ ವಿಷಮ ವಿಷಾಗ್ನಿಗಳಾಗಿ ಪರಿಣಮಿಸಿರುವರು. ಎಬಿಸೀನಿಯಕ್ಕೆ ಸಂಭವಿಸಿದ ವಿಷಮ ಸ್ಥಿತಿಯು ರಾಜತ್ವದ ನಿಜ ಸ್ವಭಾವವನ್ನು ದೃಷ್ಟಾಂತಕರಿಸುತ್ತದೆ. ಮಾತ್ರವಲ್ಲದೆ, ರಾಜತ್ವವು ಯಾವ ತರದ ನಾಗರಿಕತನವನ್ನು ತಂದೊಡ್ಡುವುದೆಂದು ವ್ಯಕ್ತಪಡಿಸುತ್ತದೆ. ಆದ್ದರಿಂದ ಸದಾ ರಾಜತ್ವದಿಂದ ವಿಮುಕ್ತರಾಗಲಿಚ್ಛಿಸುವ ನಾವು ಇಂದು ರಾಜತ್ವದಿಂದ ಆಪತ್ತಿಗೊಳಗಾದ ಎಬಿಸೀನಿಯರಿಗಾಗಿ ಬಹಳ ವಿಷಾದಿಸಬೇಕು."

ಎಬಿಸೀನಿಯದಿಂದಾಗುವ ಅರಿವು.

ಆಫ್ರಿಕದಲ್ಲಿ ಸ್ವಾತಂತ್ರ್ಯದ ಕೊನೆಯ ಚಿಹ್ನೆಗಳು ಅಡಗಿದವು. ಅಬಿಸೀನಿಯರ ಜೀವಾಳವು ಇಟೀಲಿಯ ಕ್ರೂರ ಹಿಡಿತದಲ್ಲಿರುವುದು. ಅಬಿಸೀನಿಯರ ಅರಸರು ಶಕ್ತಿ ಕುಂದುವವರೆಗೆ ಕಾದಿರುವರಾದರೂ, ಈ ನವ ಯುದ್ಧೋಪಕರಣಗಳು ಪ್ರಯೋಗದಲ್ಲಿದ್ದಲ್ಲಿ ಇವರ ಸಾಹಸಗಳೆಲ್ಲಿ? ಇಟಲಿಯೊಡನೆ ಕಾದಾಡಿ ಎಲ್ಲವನ್ನೂ ಕಳೆದುಕೊಂಡು, ಕ್ರಿಸ್ತನು ಎಲ್ಲವನ್ನು ಕಳೆದುಕೊಂಡು ಬರೀ ಬದುಕಿರುವುದಕ್ಕಾಗಿ ಜರುಸಲೆಮ್ ಆಶ್ರಯವನ್ನು ಹೊಂದಂತೆ ಅದೇ ಜರುಸಲೇಮಿನ ಆಶ್ರಯವನ್ನು ಹೊಂದಿರುವರು.

೦ ೦ ೦

ಇಟೆಲಿಯು ಜಯಪ್ರದರಾಗಿರುವುದು ಎಬಿಸೀನಿಯದಲ್ಲಿ ವಸಾಹತು ಮಾಡಬೇಕೆಂಬ ಮುಸಲೊಲೀನಿಯ ಕಾಂಕ್ಷೆಯು ಸದ್ಯದಲ್ಲೇ ರೂಪಗೊಳ್ಳುವಂತಿದೆ. ಇಂದೇ ಎಬಿಸೀನಿಯದ ಪ್ರಾಕೃತಿಕ ಉತ್ಪತ್ತಿ ಸ್ಥಾನಗಳು ಇಟಲಿಯ ಕೈಯಲ್ಲಿವೆ. ನವನಾಗರಿಕತನವನ್ನು ಇಲ್ಲಿ ಹೂಡಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಉತ್ತಮಗೊಳಿಸಿ ಈ ವಾಸ್ತವಿಕ ಇಟೆಲಿಯನ್ ಜನಾಂಗವು ಅತ್ಯುತ್ತಮ ರಾಜತ್ವದ ಜನಾಂಗಗಳಲ್ಲಿ ಒಂದಾಗುವುದೋ ಎಂದು ನೋಡಲಿದೆ.

೦ ೦ ೦

ಮುಸಲೊಲೀನಿಯ ಗೌರವ ಕಾಲ ಇಂದು ನೆರೆದುಬಂತು. ಎಬಿಸೀನಿಯದಲ್ಲಿ ಜಯಪ್ರದರಾದುದಕ್ಕೆ ಇಡೀ ಇಟೆಲಿಯ ಜನಾಂಗವು ಮುಸಲೊಲೀನಿಯನ್ನು ಎರಡನೇಯ ಜುಲಿಯಸ್ ಸೀಸರ್‌ನಂತೆ ಕೊಂಡಾಡುವುದು, ಈ ಕೊಂಡಾಟದಲ್ಲಿ ಇಟೀಲಿಯ ಇಷ್ಟರ ವರೆಗ ಉಪಶಮನ ಮಾಡಿಕೊಂಡಿದ್ದ ಕವಿಗಳ ಕವಿತ್ವ ಎಷ್ಟಿರುವುದೋ.

೦ ೦ ೦

ಇಟೆಲಿಯುರು ಜಯಪ್ರದರಾಗಿದ್ದದರಿಂದ ಇಟೆಲಿಯ ಸೈನ್ಯಬಲದ ಅರುಹು ಇಡೀಜಗತ್ತಿಗಾಗಿರುವುದು. ಆದರೆ ಇಟೆಲಿಯ ಈ ಜಯವು ಬೇರೆಬೇರೆ ಜನಾಂಗಗಳಲ್ಲಿ ಯಾವುದನ್ನು ಚಿತ್ರಿಕರಿಸುವುದೆಂದು ಹೇಳಲಸಾಧ್ಯ. ಎಬಿಸೀನಿಯವನ್ನು ಕೊಂದ ಈ ಇಟೀಲಿಯ ಸಾಮರ್ಥ್ಯವು ಜನಾಂಗಸಭೆಯನ್ನು ಛಿಂದ್ರಿಗೊಳಿಸಿದೆ. ಅಂದ ಮೇಲೆ ಈ ರಾಜತ್ವದ ಜನಾಂಗಗಳು ಶಾಂತ ಸ್ಥಾಪಿಸುವುದು ಅದು ಎಂತು?

೦ ೦ ೦ ೦

ಇತಿಯೋಪಿಯಕ್ಕೆ ಸಮಯಾನು ಸಂಬಂಧ ಸಿಕ್ಕಿದ ರಾಜಕೀಯ ಜನಾಂಗಗಳ ಪಪಾಯ..

ಸ್ವದರ ... ೩೦೦ ... ಯೌವನ ರಸವನ ... ಮೇಂಕಿನ ... ಇನಸ್ಸು ... ಭಪ್ರತೆಯ ಲ್ಲಿಟ್ಟಿ. ...

ಕಳೆದ ಯೌವನವು ಮರಳಿ ಬರುವುದೇ

ಎಂದು ಪ್ರಶ್ನೆಯನ್ನೆತ್ತಿದಲ್ಲಿ, ಕಳೆದ ಯೌವನವು ಎಂದೆಂದಿಗೂ ಬರಲಾರದೆಂದೂ ಬಹುಮತವಾದರಿಂದ ಬಹು ಜನರ ಹಾಸ್ಯಕ್ಕೆ ಒಳಗಾಗಬೇಕಿತ್ತು. ಆದರೆ ಲಂಡನಿನ ಹಾರ್ಲೇ ಸ್ಟ್ರೀಟಿನ ಪ್ರಸಿದ್ಧ ವೈದ್ಯರು ಅವಿಶ್ರಾಂತ ವೈದ್ಯಕೀಯ ಅನ್ವೇಷಣ ಕಾರ್ಯ ನಡಸಿ ಯೌವನರಸ (elixir of youth) ಎಂಬುದನ್ನು ಕಂಡು ಹಿಡಿದಿರುವರು. ಈ ಯೌವನರಸವು ಕೆಲವು ಜಾತಿಯ ಕೋತಿಗಳ ಗ್ರಂಥಿಗಳಿಂದ ತಯಾರು ಮಾಡುವರಂತೆ. ತಯಾರಿಸಲು ವೆಚ್ಚವು ಬಹಳವಿರುವುದರಿಂದ ಇದು ಇನ್ನೂ ಪ್ರಚಾರಕ್ಕೆ ಬಂದಿರುವುದಿಲ್ಲ. ಈ ರಸವನ್ನು ಐವತ್ತು ಅರುವತ್ತು ವರುಷ ಪ್ರಾಯದ ಮುದುಕರ ಶುದ್ಧರಕ್ತನಾಳದಲ್ಲಿ ಇಂಜೆಕ್ಟ್ ಮಾಡಿದಲ್ಲಿ ಕೆಲವು ದಿವಸಗಳಲ್ಲಿಯೇ ಅವರ ಕಳೆದ ಯೌವನವು ಮರಳಿ ಪಡೆವುದ ... ಹಾರ್ಲೇ ಸ್ಟ್ರೀಟಿನ

ದೇಶದ ಹಿತಕ್ಕೆ ಸಾಧಿಸುವ ಮ. ದಿ... ಸ್ವಾರ್ಥಿಗಳು ಕೆಲವು ಇದನ್ನು ಇಂಜೆಕ್ಟ್ ಮಾಡಿಸಿಕೊಳ್ಳಬಾರದೇ?

೧೪ ವರ್ಷಗಳ ಅಗ್ನಿಮಾಂದ್ಯ

ವಾತ ಮತ್ತು ಚಳಿಜ್ವರ

ಆ ಮೇಲೆ ಪೂರ್ಣ ಗುಣ

14 ವರ್ಷಗಳ ಅಗ್ನಿಮಾಂದ್ಯದ ವೇದನೆಯು ಬಾಧೆ. ಆ ಮೇಲೆ ಪೂರ್ಣ ಮತ್ತು ಶಾಶ್ವತ ಗುಣ! ಯೋಚಿಸಿರಿ! Mrs M ಇವರ ನಿಜವಾದ ಅನುಭವ ವಾಯು ಬಾಧೆ ಮತ್ತು ಚಳಿಜ್ವರವಿಲ್ಲದೆ ಅವಳಿಗೆ ಒಂದು ದಿನ ನಿದ್ದೆ ಇಲ್ಲ. ಎಲ್ಲಾ ಉದರವೇದನೆಗಳಿಗೂ ಅತ್ಯುತ್ತಮವೂ ಆಸ್ಪತ್ರೆಗಳಲ್ಲಿ ಡಾಕ್ಟರರು ಶಿಫಾರಸು ಮಾಡಿದುದೂ ಆದ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಸೇವಿಸುವ ವರೆಗೆ ಅವಳಿಗೆ ಈ ಕಷ್ಟ.

Mrs M ಬರೆದ ಪತ್ರಾನಿಸ್ವೀಕರಿ

ನಿಮ್ಮ ಅದ್ಭುತಕರ ಮೆಕ್‌ಲೀನ್ ಬ್ರೇಂಡ್ ಪೌಡರನ್ನುಪಯೋಗಿಸಿ ನನಗೆ ಸಿಕ್ಕಿದ ಗುಣಕ್ಕಾಗಿ ನಿಮಗೆ ವಂದನೆಗಳು. ವಾತ ಮತ್ತು ಅಗ್ನಿಮಾಂದ್ಯಗಳಿಂದ ಕಳೆದ 14 ವರ್ಷಗಳಿಂದಲೂ ಬಾಧಿತಳಾಗುತ್ತಿದ್ದ ರಾತ್ರಿ ಮಲಗಿದೊಡನೆ ಏಳುತ್ತಿದ್ದ ಗಂಟೆಗಟ್ಟಳೆಯಾಗಿ ವಾಯುವಿನ ಉಪದ್ರವು ಆದುತ್ತಿತ್ತು. ಸ್ವಪ್ನ ನಡುಕವುಂಟಾಗುತ್ತಿತ್ತು. ಚಳಿಯಿಂದ ದೇಹವು ಕಂಪಿಸುತ್ತಿತ್ತು. ಸಣ್ಣ ತುಂಡು ಊಟವನ್ನು ತಿಂದೊಡನೆ ನನ್ನ ಹೊಟ್ಟೆಯು ಅಡಿಮೇಲಾದಂತಾಗುತ್ತಿತ್ತು. ಎಲ್ಲಾ ಬಗೆಯಿಂದಲೂ ಸಾಧಿಸಿದೆ. ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನುಪಯೋಗಿಸುವವರೆಗೆ ಯಾವುದರಿಂದಲೂ ಪ್ರಯೋಜನವಾಗಲಿಲ್ಲ.

Mrs M ಗೆ ದೊರೆತಷ್ಟೇ ಗುಣವು ನಿಮಗೂ ಸಿಗಬಹುದು. ಆದರೆ ಕೆಲವು ಜನರ ಲಾಭಕ್ಕಾಗಿ ಕೀಳು ತರಗತಿಯ ವಸ್ತುವನ್ನು ಪಡೆದು ಆಶಾಭಂಗಕ್ಕೆ ಗುರಿಯಾಗಬೇಡಿ. ಕೆಂಪು ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ನಿಮ್ಮ ಕೆಮಿಸ್ಟರಿಂದ ಪಡೆಯಿರಿ. ಸೀಸೆ, ರಕ್ಷಾಪತ್ರ ಮತ್ತು ಚಿಟ್ಟಿಗಳ ಮೇಲೆ

Alex. C. Maclean

ಎಂಬ ದಸ್ಕತು ಇದೆ.

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್

೧೩ ಸಂಕುರಾಮ ಚೆಟ್ಟಿ ಸ್ಟ್ರೀಟ್ ಮದ್ರಾಸು,

ಇಲ್ಲಿಗೆ ಬರೆಯಿರಿ

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರೆದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಎರಡು ಸೈಜಿನಲ್ಲಿ ದೊರೆಯುತ್ತದೆ **ಲೋಧ್ರ** ರೂ. 3 ಮತ್ತು 1—10—0

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದ್ರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು -

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಜಾಹೀರಾತು.

ಎಲ್ಲಾ ಆಯುರ್ವೇದೀಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಶಾಲೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ನಾವು ನಿಶ್ಚಯಿಸಿ ನಿಸ್ಸಂಶಯವಾಗಿ ಹೊಂದಿದ ಎಲ್ಲಾ ಔಷಧ ಮೂಲಿಕೆಗಳನ್ನು ಸುಲಭ ಬೆಲೆಗೆ ವಿಕ್ರಯಿಸುತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟ್ ಮಂಗಳೂರು, ದ. ಕ.

ರೈಲ ಬಂಡಿಗಳ ಸಮಯ.

ಗಾಡಿಗಳು.	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಗ್ಗೆ 9-50	ಸಂಜೆ 4-20
ಮಿಕ್ಸೆಡ್	,, 6-55	ರಾತ್ರಿ 8-50
ಫಾಸ್ಟ್ ಪೆಸೆಂಜರ್	ಮ. 12-45	ಮ. 2-40
ಶಿಟಲ್	ಸಂಜೆ 5-25	ಬೆಳಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ. 8-25	ಮ. 1-20
ಕಾಸರಗೋಡು ಪೆಸೆಂಜರು	ಸಂಜೆ 3.20	ಸಂಜೆ 6-15

Ested 1920] **THE** [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರೈಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ:

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವುವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur,
Dated 10 – 4 – 1935.

G. N. Lakshman Pai,
Secretary.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತ.

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು:— ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ESTD. 1906

CANARA BANK

LIMITED.

Head Office: MANGALORE.

Subscribed Capital	6,00,000
Paid up Capital	3,33,000
Reserves	4,50,000
Deposits	61,92,000
Working Capital	73,40,000

OFFICES:

Bombay-Fort, Bombay-Mandvi, Hubli, Calicut Cochin, Ernakulam, Alleppey, Bangalore, Chikmagalur, Mangalore-Bunder, Mangalore-City, Kasaragod, Puttur, Udipi, Karkala Coondapoor, Ganguli, Buntwal, Davanagere & Moolky.

ALL KINDS OF BANKING BUSINESS UNDERTAKEN.

ಚಿತ್ರಾಕೃತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ–ಊರ್ಧ್ವಪುಂಡ್ರ–ಮುದ್ರಾ ಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ. ಎಂ. ನರಸಿಂಗರಾವ್, ಬಿ. ಎ. ಎಂ. ಎಲ್. ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ. ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್ ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು.

ಬನ್ನಿಂಗಟನ್ ಬಜಾರ್.

ಮಲೇರಿಯಾ ನುಸಿಯ ಕಾಟ

ವಿಶೇಷ ಪ್ರಯತ್ನದಿಂದಲಾದರೂ ಉಷ್ಣವಲಯದ ಇತರ ರೋಗಗಳನ್ನು ಬರಗೊಡದಂತೆ ಮಾಡಬಹುದು. ಆದರೆ ಎತ್ತ ಹೋದರೂ ತನಿ ಮಹಾರಾಯನ ಕಾಟವು ತಪ್ಪದಂತೆ ಈ ನುಸಿಗಳು ದೇಶದ ಪ್ರತಿಯೊಂದು ಎಲ್ಲೆಗಳಿಂದಲೂ ನಮ್ಮನ್ನು ಸ್ವಾಗತೀಕರಿಸಲು ಝೇಂಕರಿಸಿ ಬರುತ್ತವೆ. ಯಾರನ್ನಾದರೂ ಈ ಜಗತ್ತಿನಲ್ಲಿ ತಪ್ಪಿಸಿಕೊಳ್ಳಬಹುದು. ಆದರೆ ಇವುಗಳಿಂದ ತಪ್ಪಿಸಿಕೊಳ್ಳುವುದು ಸರ್ವಥಾ ಅಸಾಧ್ಯ. ಮನೆಗಳಲ್ಲೂ ಮಠಗಳಲ್ಲೂ ಶಾಲೆಗಳಲ್ಲೂ ಪ್ರಯಾಣ ಮಾಡುವಾಗ ಮಾರ್ಗದಲ್ಲೂ ಮನುಷ್ಯನನ್ನು ಬೆಂಬತ್ತಿ ಬರುತ್ತವೆ. ಸಂಗಾತಿಗಳ ಹಾಗೆ ಬೇಕಾದರೆ ಗುಡ್ಡ ಪ್ರದೇಶಗಳಿಗೆ ತೆರಳಿ, ಅಲ್ಲಿಯ ಹವೆಯು ಅವನಿಂದ ಸಹಿಸಲಸದಳವಾದರೂ ಅಲ್ಲೂ ಅದು ಒಡನಾಡಿಯಾಗಿ ಬರುವುದು. ಜೀವನದ ಬೇಸರವನ್ನು ನೀಗಿಸಲು ತನ್ನ ಇಂಪಾದ ಗಾಯನವನ್ನು ಹಾಡಿಬಿಡುವುದು ಪಾಪ ನಮಗದು ಸೇರದ ಸಂಗತಿಯೆಂದು ಅದಕ್ಕೆ ತಾನೆ ಹೇಗೆ ತಿಳಿಯಬೇಕು

ತೀರ ಚಿಕ್ಕದಾಗಿರುವಾಗಲೆ ಅದಕ್ಕೆ ಮನುಷ್ಯನ ದೇಹಶಾಸ್ತ್ರದ ಪರಿಪಾಠವು ಚೆನ್ನಾಗಿ ದೊರೆಯುತ್ತದೆ. ಮನುಷ್ಯನ ದೇಹದಲ್ಲಿ ಯಾವ ಯಾವ ಭಾಗಗಳಲ್ಲಿ ರಕ್ತವು ಬಹು ಬೇಗನೆ ಹೀರಲು ಸಿಗುತ್ತದೆ ಎಂಬುದರ ಪರೀಕ್ಷೆಯು ಅದು ತನ್ನಷ್ಟಕ್ಕೆ ತಿಳಕೊಳ್ಳುವುದು ಆಶ್ಚರ್ಯದ ಸಂಗತಿ.

ಬಹುಶಃ ದೇವರೆ ಆ ಬುದ್ಧಿಯನ್ನು ಅದರಲ್ಲಿ ತುಂಬಿರಬೇಕು. ಯಾರಾದರೊಬ್ಬ ಮನುಷ್ಯನು ಮಲಗಿರುವನೆಂದು ಅದು ಬಹು ಬೇಗನೆ ತಿಳಿಯುತ್ತದೆ. ಏನೊಂದು ಸದ್ದಿಲ್ಲದೆ ಅವನ ಮೈಮೇಲೆ ನರ್ತಿಸುತ್ತದೆ. ಕೈ ಕಪಿ, ಕುತ್ತಿಗೆ ಇವುಗಳ ಮೇಲೆ ತನ್ನ ಧಾಳಿಯನ್ನು ವಿಧಾನದಿಂದ ಪೂರ್ಣಗೊಳಿಸುತ್ತದೆ. ಮುದುಡಿದ ಕೈ ಭಾಗವು ಏನೊಂದೂ ಆವರಣವಿಲ್ಲದೆ ಹೊರಬಿದ್ದಲ್ಲಿ ಅದನ್ನೆ ತನ್ನ ವಾಸಸ್ಥಳವಾಗಿ ನಿಶ್ಚಯಿಸುತ್ತದೆ ಆದರೆ ಅದರ ಗುಣಗಳು ಬಹಳ ಶ್ಲಾಘನೀಯ, ಕಾರಣ ನಮ್ಮಿಂದ ಅದು ಏನೊಂದನ್ನೂ ಒತ್ತಾಯ ಮೂಲಕ ಪಡೆಯುವುದಿಲ್ಲ. ಎಲ್ಲವೂ ರಾಜಿ ಪಂಚಾತಿಕೆಯಲ್ಲಿ ಆಗಬೇಕು. ನಾವು ಎದ್ದೊಡನೆ ಅದು ತನ್ನಷ್ಟಕ್ಕೆ ಸುಮ್ಮಗುಳಿವುದು. ಪರಪೀಡಕವಾಗಬಾರದೆಂದೇ ಅದರ ಮಹತ್ವಾಕಾಂಕ್ಷೆಯಾಗಿರಬೇಕು ಮಾನವ ದೇಹದ ರಕ್ತದ ರುಚಿಯು ಎರಿದಾಗ ಮಾತ್ರ ಅವನು ಜಾಗ್ರತೆಯಲ್ಲಿರುವಾಗಲೂ ಸ್ವಸ್ಥಚಿತ್ತವಾಗಿ ಏನೂ ಅರಿಯದಂತೆ ವಸ್ತ್ರದ ಬಿರುಕುಗಳಿಂದ ಅವನ ದೇಹವನ್ನು ಚುಂಬಿಸುವುದುಂಟು. ಮೃದುವಾದ ಸಿಲ್ಕು ಉಣ್ಣೆಗಳದ್ದರೆಂತೂ ಅದಕ್ಕೆ ಕಷ್ಟವಿಲ್ಲ. ತನ್ನ ಪಾದಗಳನ್ನು ಸುಲಭವಾದ ರೀತಿಯಲ್ಲಿ ವಸ್ತ್ರದಿಂದ ಒಳ ಹೋಗಿಸಬಹುದು. ದಪ್ಪ ದಪ್ಪ ಅಂಗಿಗಳದ್ದರೆ ಮಾತ್ರ ತುಂಬಾ ಪ್ರಯಾಸ. ಆಗ ಅದಕ್ಕೆ ತುಸು ಕೋಪಬರುವುದು ಇದೆ ನಿಮ್ಮ ಪಾದಗಳನ್ನು ಇದರ ಕಾಟದಿಂದ ತಪ್ಪಿಸಬೇಕಾದರೆ ಬೂಟ್ಸುಗಳನ್ನೆ ಉಪಯೋಗಿಸಿರಿ ಕೇವಲ ಮೆಟ್ಟುಗಳನ್ನು ಧರಿಸಿದರೆ ಅದಕ್ಕೆ ನಿಮ್ಮ ಪಾದಗಳ ಮೇಲೆ ಕೂತು ಪ್ರಯಾಣ ಮಾಡುವುದು ಬಹು ಸುಲಭ.

ನಿಯಾಮಕನ ಪ್ರೇರೇಪಣೆಯು ಮೇರೆಗೆ ಇದೊಂದು ಸೌಖ್ಯವನ್ನು ದೇವರು ಅವರಿಗೆ ಕೊಡುವನು. ಅವರು ಕಚ್ಚಿದರೆ ವಿಷಬಾಧೆಯಿಲ್ಲ. ರೋಗಗ್ರಸ್ಥರಾಗುವುದು ತೀರಾ ಕಡಿಮೆ. ಹಲವು ವೇಳೆ ಮಾತ್ರ ಚಿಕ್ಕದೊಂದು ಗುಳ್ಳೆಯು ಆ ಸ್ಥಳದಲ್ಲಿ ಏಳುವುದು ಅದರ ತೀಕ್ಷ್ಣಬಾಧೆಯು. ಕೆಲವು ನಿಮಿಷಗಳ ವರೆಗೆ ನಮ್ಮನ್ನು ತತ್ತರಿಸುವುದು. ಎಂತಹ ಗೂಡುಗಳಲ್ಲಿ, ಪರದೆಯ ಒಳಗೂ ಕೂತುಕೊಂಡರೂ ಪ್ರಯೋಜನವಾಗುವ ಹಾಗಿಲ್ಲ. ಅದು ತನ್ನ ಪಥವನ್ನು ಹುಡುಕಿಯೇ ಬಿಡುತ್ತದೆ. ಅದರ ದೃಷ್ಟಿಯು ಬಹಳ ತೀಕ್ಷ್ಣ. ಒಂದಿಷ್ಟು ಸಾಸಿವೆ ಕಾಳಷ್ಟು ತೂತು ಅದರ ಕಣ್ಣನ್ನು ಬಿಟ್ಟುಹೋಗುವಂತಿಲ್ಲ. ಅಂತೂ ಒಂದು ಸಣ್ಣ ತೂತು ಸಿಕ್ಕಿದೊಡನೆ ಸ್ವಾರ್ಥ ಬುದ್ಧಿಯನ್ನು ತೋರಿಸದೆ ತನ್ನ ಸಂಗಾತಿಗಳಿಗೂ ತನ್ನ ಶೋಧದ ಸಂಗತಿಯನ್ನು ಅರುಹಿ ಅವರನ್ನೂ ಸ್ವಾಗತೀಕರಿಸುವ ಬುದ್ಧಿ ಅದರದು. ಬೆಳಗ್ಗೆ ಎದ್ದು ನೋಡುವಾಗ ಆ ಪರದೆಗಳಲ್ಲಿ ಸಿಲುಕಿ ಮೃತ್ಯುವಶರಾದ ನುಸಿಗಳೇ ಇದಕ್ಕೆ ಪ್ರಮಾಣ.

ಅದರ ವೈರಿ ಎಂದರೆ ಗಾಳಿ ಮನುಷ್ಯರು ವಿದ್ಯುತ್ ಬೀಸಣಿಗೆಗಳ ಹತ್ತಿರ ಕುಳಿತರೆಂದರೆ ಅವರ ಮೈಮೇಲೆ ಆಡಲು ಅವುಗಳಿಗೆ ಸಾಧ್ಯವಿಲ್ಲ. ಗಾಳಿಯಲ್ಲಿ ಹಾರಲು ಅವಕ್ಕೆ ಬರುವುದಿಲ್ಲ ಅದರ ಎಳಕ್ಕೆ ಸುಮ್ಮನೆ ಒಂದು ಕಡೆಯಲ್ಲಿ ಬೀಳಲು ಸಾಧ್ಯವಿಲ್ಲ.

ಅದರ ಹಸಿವೆಯು ಬಹಳ ದೊಡ್ಡದು. ಸಾಧಾರಣ ಆಹಾರದಿಂದ ಅದಕ್ಕೆ ತೃಪ್ತಿಯಿಲ್ಲ ಯಾರಾದರೂ ಮಲಗಿದ್ದು ಅದು ತನ್ನ ಆಹಾರವನ್ನು ಪಡಕೊಳ್ಳುವ ನಮೂನೆಯನ್ನು ನೋಡಿದರೆ ಎಲ್ಲವೂ ವ್ಯಕ್ತವಾಗುತ್ತದೆ. ರಕ್ತವನ್ನು ಹೀರಿ ಹೀರಿ ಹೊಟ್ಟೆಯು ಉಬ್ಬರಿಸುವ ವರೆಗೆ ಅಲ್ಲಿಯೇ ರಮಿಸಿ ಕಡೆಗೆ ಆನಂದದಿಂದ ರಾಗದಿಂದ ಹಾಡಲು ಪ್ರಾರಂಭಿಸಿ ತೇಗುತ್ತಾ ಕೆಲವು ಸಂದರ್ಭಗಳಲ್ಲಿ ಗುಡ್ಡಗಳು ಕೆಳಗೆ ಬೀಳುವಂತೆ, ದೊಪ್ಪನೆ ಬೀಳುವುದೂ ಉಂಟು. ಆ ಮೇಲೆ ಕಾಲು ಪಸರಿಸಿ ಕೈಗಳನ್ನು ನೀಡಿ ವಿಶ್ರಾಂತಿಗೈದು ಪುನಃ ಇನ್ನೊಂದು ತಡವೆ ಆಹಾರವನ್ನು ಹುಡುಕಿ ಹೋಗುವುದುಂಟು ಹೀಗೆ ಇಡೀ ದಿವಸ ಆಹಾರವನ್ನು ಭುಂಜಿಸುತ್ತಾ ಹೋಗುತ್ತಿದೆ ಎಷ್ಟು ಸಲವೆಂತಿಲ್ಲ, ಇಂತಿಷ್ಟೆ ಸಮಯವೆಂದಿಲ್ಲ ರೀತಿನೀತಿಗಳಿಲ್ಲ

ಹಸಿವಿನಿಂದ ಬಳಲುತ್ತಿರುವ ಮತ್ತು ತಿಂದು ತೇಗಿದ ನುಸಿಗಳನ್ನು ನಾವು ಸುಲಭದಲ್ಲಿ ಗುರುತಿಸಬಹುದು ಹಸಿವಿನಿಂದ ಆಹಾರವನ್ನು ಹುಡುಕಿಕೊಂಡು ಬರುತ್ತಿರುವ ನುಸಿಯು ಬಹು ಚುರುಕಾಗಿರುವುದು ಅದನ್ನು ಹಿಡಿಯಲು ಪ್ರಯತ್ನಿಸುವಾಗಲೆ ಅದನ್ನರಿತು ಕೂಡಲೆ ಜಾರುವುದು ಆದರೆ ರಕ್ತ ಹೀರಿದ ನುಸಿಗಳನ್ನು ಬಹು ಬೇಗನೆ ಹಿಡಿಯಬಹುದು. ಕೊಲ್ಲಲೂಬಹುದು ಕಾರಣ ಅವುಗಳ ದೇಹವು ಭಾರವಾದ ಕಾರಣ ಅವರ ಚಲನವಲನಗಳು 'ಮಂದಗತಿಯವುಗಳಾಗಿ ನಮ್ಮ ಕರಶಸ್ತ್ರಗಳಿಗೆ ಸಿಲುಕುವುವು. ಅಂತೂ ರಕ್ತದ ಆಶೆಯಿಂದಾಗಿ ಜೀವವನ್ನು ಕಳಕೊಳ್ಳಲೂ ಹೆದರುವುವಲ್ಲ.

ನುಸಿಯು ಬಹು ಸಾಧು ಕ್ರಿಮಿ. ಅದಕ್ಕೆ ಪೂರ್ವಾಪರ ವಿಚಾರವಿಲ್ಲ ಇದು ಅದರ ವ್ಯಕ್ತಿತ್ವದಿಂದ ವ್ಯಕ್ತವಾಗುತ್ತದೆ. ಮಾತ್ರ ಇದನ್ನು ಎಣಿಸಿ ಯಾರೂ ಮೋಸಹೋಗಬೇಡಿರಿ. ನಾವು ಎಚ್ಚರಿಕೆಯಿಂದಿರುವಾಗ ಮಾತ್ರ ಅದು ಸಾಧು ಪ್ರಾಣಿ ಎಂತ ನೆನಸಿರಿ ನಾವು ನಿದ್ರಿಸಿರುವಾಗ ಮಾತ್ರ ನಮ್ಮ ರಕ್ತಹೀರುವ ಕ್ರೂರ ಪ್ರಾಣಿ. ಆದರೆ ಮನುಷ್ಯರನ್ನು ಒಲಿಸಿಕೊಳ್ಳುವಂತಹ ಅಪೂರ್ವ ಬುದ್ಧಿ ಅದರಲ್ಲಿದೆ ಎಂಬುದು ಖಾತ್ರಿ ಅದಕ್ಕಾಗಿ ನಮ್ಮ ಹತ್ತಿರ ಬಾರದೆ ನಮ್ಮ ಸುತ್ತುಸುತ್ತು ಬಂದು ಇಂಪಾದ ಗಾಯನವನ್ನು ಹಾಡಿ ತನ್ನ ಕರ್ಣಮೈಪರಕೀಯರನ್ನು ಸಂತೋಷ ಸಾಮ್ರಾಜ್ಯದಲ್ಲಿ ಮುಳುಗಿಸುವುದು ಎಂಬಂತೆ ನಮ್ಮನ್ನು ಮರೆಸುವುದು. ಜಗತ್ತಿನ ಎಲ್ಲೆಡೆಗಳಲ್ಲೂ ವಾಸಿಸಿ ಮನುಷ್ಯ ರಕ್ತವನ್ನು ಹೀರಿ. ಮನುಷ್ಯನನ್ನು ಅನೇಕಾನೇಕ ಕಷ್ಟಪಾರಂಪರ್ಯಗಳಲ್ಲಿ ಸಿಲುಕಿಸಿ ಬಳಲಿಸುವ, ಕ್ರಿಮಿಯೇ ನುಸಿಯಾಗಿರುವುದು

ಸ್ಪರ್ಧಾರಂಗ

ಸಂಚಾಲಕ:— ಶ್ರೀ "ರಸಿಕರಂಜನ"

ಗೆಲ್ಲಿರಿ! ಪಡೆಯಿರಿ!

೧೦ ರೂಪಾಯಿ ಬಹುಮಾನ!

ಪ್ರಥಮ ಬಹುಮಾನ: ರೂ. ೫, ದ್ವಿತೀಯ ಬಹುಮಾನ: ರೂ. ೩;

ತೃತೀಯ ಬಹುಮಾನ: ರೂ. ೨–೦–೦;

ವಿಶೇಷ ಬಹುಮಾನ: ಒಂದು ವರ್ಷದ "ಸ್ವದೇಶಾಭಿಮಾನಿ"

ಚಕ್ರಬಂಧ ಒಗಟು ಸಂಖ್ಯೆ ೨.

ಉತ್ತರ ಸ್ವೀಕರಿಸುವ ಕೊನೆಯ ದಿನ:— 20 5–1936



ಉತ್ತರ ಪ್ರಕಟಣೆ ದಿನ:— 27 –6–1936

ಹೆಸರು

ವಿಳಾಸ

ಸಲಹೆಗಳು:—

ಎಡದಿಂದ ಬಲಕ್ಕೆ:—

1 ಒಂದು ಮೃಗ
3. ಸಾರಿ.
5. ವಿದ್ಯೆ
7 ಮಸ್ತಕ.
9. ಯುದ್ಧ
11. ವ್ಯಥೆ.
13. ನಡುಕ.
15. ಜಾರಿ ಬಿದ್ದ
16 ಒಂದು ಸಂಖ್ಯೆ.
17. ಶರೀರದ ಒಂದು ಭಾಗ

ಮೇಲಿಂದ ಕೆಳಕ್ಕೆ.—

2 ರಾಜ.
3 ಒಬ್ಬ ಋಷಿ
4. ಉದಕ.
6. ಆರ್ಗ,
8. ದೋಣಿ.
10. ಸೇನಾಪತಿ.
11. ಸಾಯಂಕಾಲ
12 ಗಂಡು ಕುರಿ
13 ಶಂಕು
14 ಜೋಳ

ವಿಶೇಷ ಸೂಚನೆ:—

ಈ ಒಗಟಿನಲ್ಲಿ ಬರಬಹುದಾದ ಶಬ್ದಗಳು –

ಅಜ	ಗಜ	ನದಿ	ಸಜಲ
ಅದು	ಗಣಕ	ನಲಿನ	ಸರ್ಕ
ಕಷ್ಟ	ಗಳಿಕ	ನೇಸ	ಸಲ
ಕಚ	ಜನಪ	ನಾರ	ಸಂಕಟ
ಕಟಿ	ಟಗರು	ನೀರ	ಸಂಜೆ
ಕಣ್ಣು	ತಿಲಕ	ನೂರು	ಸಂಧ್ಯಾ
ಕದನ	ಪ್ರಿಕಳ	ಬನ	ಸಾಧ್ಯೆ
ಕರ	ದಲಾ	ಮೂರು	
ಕಂತಕ	ಜಳಕ	ರೂಪ	
ಕಂಪನ	ನದ	ವನ	

ನಿಯಮಗಳು:—೧. ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೇ ಸ್ಪಷ್ಟವಾದ ಅಕ್ಷರಗಳಲ್ಲಿ ಹೆಸರು, ವಿಳಾಸ ಸಹಿತ ಬರೆದು ಕಾಲಾಣೆಯ ನಾಲ್ಕು ಸ್ಟಾಂಪುಗಳೊಂದಿಗೆ ತಾ. 20–5–1936ರೊಳಗೆ ತಲಪುವಂತೆ ಕಳುಹಿಸಬೇಕು ೨. ಹೆಚ್ಚು ಉತ್ತರ ಕಳುಹಿಸುವವರು ಮೊದಲನೆಯ ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೂ, ಉಳಿದ ಉತ್ತರಗಳನ್ನು ಪ್ರತ್ಯೇಕ ಕಾಗದಗಳ ಮೇಲೆಯೂ ಬರೆದು ಪ್ರತಿ ಉತ್ತರಗಳಿಗೆ ಕಾಲಾಣೆಯ ಹದಿನಾರು ಸ್ಟಾಂಪುಗಳೊಂದಿಗೆ ಕಳುಹಿಸತಕ್ಕದ್ದು. ೩. ತಾ. 20–5–'36ರೊಳಗೆ ಸ್ವೀಕೃತವಾದ ಉತ್ತರಗಳಲ್ಲಿ, ನಾವು ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಲಿಮಿಟೆಡ್, ಮಂಗಳೂರು 'ಠೇವಣಿ'ಯಲ್ಲಿ ಇಡುವ ಮೊಹರು ಮಾಡಿದ ಲಕೋಟೆಯಲ್ಲಿರುವ ಉತ್ತರದೊಡನೆ ಅಕ್ಷರಶಃ ಹೋಲುವ ಉತ್ತರಕ್ಕೆ ಅಥವಾ ಉತ್ತರಗಳಿಗೆ ಮೊದಲನೆಯ ಬಹುಮಾನವನ್ನೂ, ಒಂದು ತಪ್ಪಿನ ಉತ್ತರಗಳಿಗೆ ಎರಡನೆಯ ಬಹುಮಾನವನ್ನೂ ಎರಡು ತಪ್ಪಿನ ಉತ್ತರಗಳಿಗೆ ಮೂರನೆಯ ಬಹುಮಾನವನ್ನೂ ಕೊಡಲಾಗುವುದು, ಈ ರೀತಿಯ ಉತ್ತರಗಳು ಬಾರದ ಪಕ್ಷದಲ್ಲಿ ಅತ್ಯಂತ ಕಡಿಮೆ ತಪ್ಪಿನ ಉತ್ತರಗಳಿಗೇ ರೂ. ೧೦ನ್ನೂ ಸರಿಯಾಗಿ ಹಂಚಿ ಕೊಡಲಾಗುವುದು, ೪. ಅತ್ಯಂತ ಹೆಚ್ಚು ಉತ್ತರ ಕಳುಹಿಸುವವರಿಗೆ ಒಂದು ವರ್ಷದ "ಸ್ವದೇಶಾಭಿಮಾನಿ"ಯ ವಿಶೇಷ ಬಹುಮಾನ ದೊರೆಯುವುದು. ೫. ಎಲ್ಲಾ ಸಂದರ್ಭಗಳಲ್ಲಿಯೂ ಈ 'ಸ್ಪರ್ಧಾರಂಗ'ದ ಸಂಚಾಲಕರ ಇತ್ಯರ್ಥವೇ ಕೊನೆಯ ಇತ್ಯರ್ಥವಾಗಿರುವುದು.

ಸಂಚಾಲಕ, "ಸ್ಪರ್ಧಾರಂಗ",

'ಸ್ವದೇಶಾಭಿಮಾನಿ' ಕಾರ್ಯಾಲಯ ಮಂಗಳೂರು.

ವಿಷಾಣುಗಳು ಧೂಳಿನ ಮೂಲಕ ಶ್ವಾಸಕೋಶಗಳನ್ನು ಸೇರುತ್ತವೆ

ಬೇಸಿಗೆ ಕಾಲದಲ್ಲಿ, ಬಿಸಿಯಾದ ವಾಯುವಿನಲ್ಲಿ ವಿಷಾಣುಮಿಶ್ರಿತ ಧೂಳು ಸೇರಿ, ನಾಸಿಕ ಮೂಲಕವಾಗಿ ನಮ್ಮ ಶ್ವಾಸಕೋಶಗಳನ್ನು ಸೇರಿ ನಮ್ಮ ದೇಹವನ್ನು ಅನೇಕಾನೇಕ ರೋಗಗಳಿಗೆ ಬಲಿಕೊಡುತ್ತದೆ. ಮೊದಲು ಗಂಟಲು ನೋವು, ಅನಂತರ ಎದೆ ನೋವು, ಉಬ್ಬಸ, ಕೆಮ್ಮು ಇವುಗಳೆಲ್ಲಾ ಪ್ರಾರಂಭವಾಗುವವು. ಇದನ್ನರಿತ ಕೂಡಲೆ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ. ಈ ಗುಳಿಗೆಯನ್ನು ಬಾಯಲ್ಲಿ ಹಾಕಿದ ಕೂಡಲೆ ಅದರಿಂದ ಬರುವ ಸುಗಂಧಯುಕ್ತ ಹೊರೆಯು, ಶ್ವಾಸಕೋಶಗಳನ್ನು ಸೇರಿ, ಅಲ್ಲಿರುವ ವಿಷಾಣುಗಳ ಧ್ವಂಸ ಮಾಡುತ್ತದೆ. ಇಂತಹ ರೋಗಗಳಿಗೆ ಪೆಪ್ಸ್ ಅಮೋಘ ಔಷಧವಾಗಿರುತ್ತದೆ. ಕೆಮ್ಮು, ಉಬ್ಬಸ, ಜ್ವರ ಇತ್ಯಾದಿಗಳಿಂದ ಸುರಕ್ಷಿತರಾಗಿರಲು ಪೆಪ್ಸನ್ನು ಸೇವಿಸಿರಿ. ಈ ಗುಳಿಗೆಗಳಲ್ಲಿರುವ ಎಣ್ಣೆಯು ಆರಿಹೋಗದಂತೆ ಅವುಗಳನ್ನು ಬೇಗಡೆಯ ಕಾಗದದಲ್ಲಿ ಮಡಗಿವೆ.

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್ PEPS

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿಯಲ್ಲೇ ಕೊಡಿರಿ!

ಒರಲೆಗಳು ಬೆಂಕಿ ನೊಂದಿಸಲು ಸಾಧ್ಯರಂತೆ

ಯಾವುದಾದರೂ ಒಂದು ಕಾರಣದಿಂದ ಒರಲೆಗಳ ವಲ್ಮೀಕ ಇರುವಲ್ಲಿ ಸಣ್ಣ ಬೆಂಕಿಯು ಉಂಟಾದಲ್ಲಿ ಕ್ಷಣದಲ್ಲಿ ಇವುಗಳ ಸೈನ್ಯ ಬಂದು ತಮ್ಮ ಕೊಂಡಿಗಳಿಂದ ಒಂದು ತರದ ದ್ರವವನ್ನು ಚಿಮ್ಮಿಸಿ ಬೆಂಕಿಯನ್ನು ನೊಂದಿಸುತ್ತವೆ. ಈ ವಿಚಿತ್ರ ತರದ ಗುಣವನ್ನು ಇತ್ತೀಚೆಗೆ ಒಂದು ಹಳ್ಳಿಯಲ್ಲಿ ಒರಲೆಗಳ ವಲ್ಮೀಕದಿಂದ ತುಂಬಿದ ಚಿಕ್ಕ ಗುಡಿಸಲಿಗೆ ಬೆಂಕಿ ಹಿಡಿದಾಗ ಕಂಡು ಹಿಡಿದರು. ಇವುಗಳು ಚಿಮ್ಮುವ ದ್ರವದ ಚಿಕ್ಕಾಂಶವು ಮಾಯಾ ಶಕ್ತಿಯಿಂದ ಉಂಟಾಗುವ ಉರಿಜ್ವಾಲೆಯನ್ನು ನೊಂದಿಸುವುದಂತೆ. ವಿಜ್ಞಾನಿಗಳು ಈ ದ್ರವವನ್ನು ಪರಿಶೋಧಿಸಿ ಇದರಷ್ಟು ಒಳ್ಳೆಯ ತರದ ಬೆಂಕಿ ನೊಂದಿಸುವ ವಸ್ತು ಇಂದಿನ ವರೆಗೆ ಯಾರೂ ಕಂಡುಹಿಡಿದಿರುವುದಿಲ್ಲವೆಂದು ಹೇಳುವರು.

Wanted

as active partners, on co-operative basis, educated young men for employment in an agricultural and industrial colony on a monthly allowance of Rupees 7-8-0. Cash security of Rs. 100/- is essential along with the applications to:

Kanjarpane Gopalkrishnaya,
Sullia Post, South Kanara.

ಕಾರ್ಯಸಿದ್ಧಿ ಮಂತ್ರಂ

ಯಾರೇ ಆಗಲಿ, ಗಂಡಸರಾಗಲಿ, ಹೆಂಗಸರಾಗಲಿ, ಹುಡುಗರಾಗಲಿ, ಈ ಮಂತ್ರವನ್ನು ಸಿದ್ಧಿ ಮಾಡಿಕೊಂಡು ಮಲಗುವುದಕ್ಕೆ ಮುಂಚೆ ರಾತ್ರಿಯಲ್ಲಿ ಜಪಿಸಿದರೆ ಅವರ ಮನೋಭಿಲಾಷೆಗಳೆಲ್ಲವೂ ನೆರವೇರುವುವು. ಇದರ ಸಹಾಯದಿಂದ ಕಳೆದ ಪದಾರ್ಥಗಳ ಪತ್ತೆ ಹಚ್ಚುವಿಕೆಯು ಮೃತರಾದ ಸಂಬಂಧಿಗಳೊಡನೆ ಸಂಭಾಷಣೆಯೂ, ಇತರರ ಮನೋಭಿಪ್ರಾಯಗಳನ್ನೂ, ಭೂತಭವಿಷ್ಯತ್ ವರ್ತಮಾನಗಳೆಲ್ಲವನ್ನೂ ಸುಲಭವಾಗಿ ತಿಳಿಯಬಹುದು. ಕೇವಲ ಒಂದು ರೂಪಾಯಿಯನ್ನು ಮನಿಯಾರ್ಡರ್ ಮೂಲಕ ಕಳುಹಿಸುವವರಿಗೆ ಈ ಕಾರ್ಯಸಿದ್ಧಿ ಮಂತ್ರವು ಅಂಚೆ ವೆಚ್ಚವಿಲ್ಲದೆ ಕಳುಹಿಸಲ್ಪಡುವುದು.—ವಿ. ಪಿ. ಮಾಡುವುದಿಲ್ಲ. ವ್ಯವಸ್ಥಾಪಕ,

ಕಾರ್ಯಸಿದ್ಧಿ ಆಶ್ರಮ. 211 ವಿಶ್ವೇಶ್ವರ ಪುರಂ,

ಬೆಂಗಳೂರು ಸಿಟಿ. (S. I.)

ಮಂಗಳೂರಿನ ಪೇಟೆಧಾರಣೆ

ಸಾಮುಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ರಾಶಿ ಅಕ್ಕಿ ...	3— 4	3— 0
ಹೊಸ ಮುಸ್ಕಿ ...	3—10	4— 6
ಗುಡ್ಡ ಸುಗ್ಗಿ ...	3— 8	3—12
ಊರ ಅಪ್ಪಲ್ ಬೆಳ್ತಿಗೆ ...	4— 0	4— 8
ರಂಗೂನು ಬೆ. ಗೋ. ಗಳ್ಳೆ...	6— 4	7— 0
ಎಲ್ಲೂರು ಬೆ. ಮು. ಗಳ್ಳೆ...	4— 4	4— 8
ಬೀದಿ ಗೋಣಿ ಗಳ್ಳೆ ...	8 — 8	10— 4
ಕೊಗರಿ ಗೋಣಿ ಗಳ್ಳೆ ...	9 —0	9 — 8
ಹುರುಳಿ ಗೋಣಿ ಗಳ್ಳೆ ...	5— 4	5 —12
ಕಡಲೆ ಗೋಣಿ ಗಳ್ಳೆ ...	7 — 4	9 — 8
ಕೊಗರಿಬೇಳೆ ಗೋಣಿ ಗಳ್ಳೆ...	11— 0	15— 8
ಉದ್ದು ಗೋಣಿ ಗಳ್ಳೆ ...	9— 8	10 — 0
ಹೆಸರು ಗೋಣಿ ಗಳ್ಳೆ ...	9— 4	9—12
ಊರುಬೆಲ್ಲ ಖಂಡಿ ಗಳ್ಳೆ ...	30— 0	35— 0
ಉಪ್ಪು ಗೋಣಿ ಗಳ್ಳೆ ...	4— 8	4— 8
ಪೆಪ್ಪರು ಖಂಡಿ ಗಳ್ಳೆ ...	60— 0	70— 0
ಕೊಬ್ಬರಿ ಹಿಂಡಿ ಖಂಡಿ ಗಳ್ಳೆ...	28— 0	29— 0
ಎಳ್ಳಿಂಡಿ ಖಂಡಿ ಗಳ್ಳೆ ...	32 — 8	33—12
ಕೊಬ್ಬರಿ ಎಣ್ಣೆ ಮುಡಿ ಗಳ್ಳೆ...	4—15	6— 0
ಎಳ್ಳೆಣ್ಣೆ ಮುಡಿ ಗಳ್ಳೆ ...	7— 0	7— 0
ಘಾಸಲೆಟ್ ಎಣ್ಣೆ ಪೆಟ್ಟಿಗೆ ಗಳ್ಳೆ...	6— 5	6 — 5
ಮೋರಿಸ ಸಕ್ಕರೆ ಮು. ಗಳ್ಳೆ...	3— 9	3 — 9
ಮೆಣಸು ...	2— 8	4— 0
ಸಾಸಿವೆ ಮುಡಿ ಗಳ್ಳೆ ...	5 — 8	6— 0
ಕಾಳುಮೆಣಸು ಖ. ಗಳ್ಳೆ ...	102— 8	105—
ಮೆಂತ್ಯಬೀಜ ಮುಡಿಗಳ್ಳೆ...	38— 0	39— 0
ಗೇರುಬೀಜ ಮು. ಗಳ್ಳೆ ...	8— 6	8 — 10
ಕಬ್ಬಿಣ ಖಂಡಿ ಗಳ್ಳೆ ...	35— 0	37— 8
ತಾಂಬ್ರತಗಡು ಮ. ಗಳ್ಳೆ...	9— 12	9— 14
ತಾಂಬ್ರಪಾತ್ರಗಳು ಮ. ಗಳ್ಳೆ	12— 6	14— 0
ಅಡಿಕೆ ಬೆಳ್ಳೆ ಸೇರು ಗಳ್ಳೆ ...	17— 8	18— 0
ಹಿತ್ತಾಳೆ ತಗಡು ಮ. ಗಳ್ಳೆ...	10— 0	10—
ಅರಸಿನ ಗಳ್ಳೆ ...	22— 8	22— 8
ಹುಣಸೆ ಹುಳಿ ಖಂಡಿ ಗಳ್ಳೆ	20— 0	25— 0
ನೇಟಿವ್ ಕಾಫಿ ಖಂಡಿ ಗಳ್ಳೆ	145— 0	150— 4
ಪ್ಲಾಂಟರ ಕಾಫಿ ಖಂಡಿ ಗಳ್ಳೆ...	175— 0	185— 0
ಮಡಿಕೇರಿ ಏಲಕ್ಕಿ ...	25— 0	26 — 8

ಸ್ತನೋ ಸ್ತೇಧಃ
STHANO STHEDAH THE MALAYALA OUSHADHA CO. POST - CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗಸೋರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವುವು—ಅವುಗಳು ಉಬ್ಬಿ ಗೋಲಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯಿರಿ. ಇಲ್ಲವಾದರೆ ಹಣವಾಪಸು.

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ 'ಸ್ತನೋಸ್ತೇಧಾ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದಾರುಣ ಘಾಡ ಚಿಂತೆಯಿಂದಲೂ, ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲು ಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲುದು. ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪೌಷ್ಟಿಕತೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ. 3. ನಂಬ್ರ 21. (ಹೊರಗೆ ಲೇಪಿಸುವ ಮದ್ದು) ರೂ. 3. ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ.

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು.

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.

1. ಮುಟ್ಟಿನದೋಷ; 2. ಸಂತತಿ ಪ್ರತಿಬಂಧಕ, 3. ಧಾತುಪುಷ್ಟಿ, 4. ಲಿಂಗವೃದ್ಧಿ, 5. ಸ್ತ್ರೀರೋಗ, 6. ಕ್ಷಯ ಸಂಹಾರಿ, 7. ವಾತರೋಗ.

ಅಲಭ್ಯ ಲಾಭ! ಸುವರ್ಣ ಸಂದರ್ಭ!

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ

ತೆಗೆಯುವ ತಾರೀಕು: 3-6-1936. ಟಿಕೆಟಿನ ಬೆಲೆ ನಾಲ್ಕಾಣೆ ಮಾತ್ರ

ಸೋಡ್ತಿಯ ಮೊಬಲಗು: ರೂ. 50,000.

ಒಟ್ಟು ಬಹುಮಾನಗಳ ಸಂಖ್ಯೆ: 1778. ಮೌಲ್ಯ ರೂ. 20,000.

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಮೆನೇಜರ್— ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

ಏ. ಸೂ.—ಯಾವ ಕಾರಣದಿಂದಲಾದರೂ ಸೋಡ್ತಿ ತೆಗೆಯುವ ತಾರೀಕನ್ನು ಮುಂದರಿಸೋಣಾಗುವುದಿಲ್ಲ.

ಶಾಲಿವಾಹನ ಶಕ ೧೮೫೮ನೆಯ ಯುವ ಸಂವತ್ಸರದ ವೈಶಾಖ ಬ। ೧೦ ಶನಿವಾರದಿಂದ ಜ್ಯೇಷ್ಠ ಶು। ೨ ಶುಕ್ರವಾರದ ವರೆಗಿನ ಪಂಚಾಂಗ.(೧೯೩೬ನೇಯ ವೃಷಭ ಬೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಶ್ರಾದ್ಧ ತಿಥಿ	ವಿಶೇಷ
16	ಶನಿ	೧೦	೨೩	ಪೂ. ಭಾದ್ರ	೨೬	೩	*ಬುದ್ಧ ಜಯಂತಿ
17	ರವಿ	೧೧	೧೬	ಉ. ಭಾದ್ರ	೨೩	೪	
18	ಸೋಮ	೧೨	೧೦	ರೇವತೀ	೧೮	೫	
19	ಕುಜ	೧೩	೫೪	ಅಶ್ವಿನೀ	೧೪	೬	
20	*ಬುಧ	೩೦	೫೩	ಭರಣೀ	೧೦	೭	
21	ಗುರು	೧	೪೯	ಕೃತ್ತಿಕ	೭	೮	
22	ಶುಕ್ರ	೨	೪೫	ರೋಹಿಣೀ	೪	೯	

ನಮ್ಮ ಸಾಪ್ತಾಹಿಕ ಕಥೆ:—

'ಅದೂ ಒಂದು ಹುಚ್ಚು!'

ಲೇಖಕ:— ಶ್ರೀ| "ರಸಿಕರಂಜನ"

'ಹೌದು, ಮರೆತೇ ಹೋಗಿದ್ದೆ. ನೀನು ಆ ಹುಚ್ಚನ ಇತಿಹಾಸ ಬಹಳ ವಿಚಿತ್ರವಾದು ದೆಂದಿದ್ದೆಯಷ್ಟೆ. ಅದರಲ್ಲಿ ಅದೇನು ಅಷ್ಟು ವಿಚಿತ್ರವಾದುದು, ವೇಣು?' ನನ್ನ ದವಾಖಾನೆ ಯಲ್ಲಿ, ನಾಮಣಿಯು, ಇಲ್ಲಿಗೆ ಬಂದಂದಿ ನಿಂದಲೂ, ತನ್ನ ಸ್ವಂತದ್ದಾಗಿ ಆಕ್ರಮಿಸಿ ಕೊಂಡಿದ್ದ ಈಸುಚೆಯರಿನ ಮೇಲೆ ಕೈಕಾಲು ಗಳನ್ನು ಹಾಯಾಗಿ ಚಾಚಿ ಬಿದ್ದುಕೊಂಡು, ಒಂದು ಸಿಗರೆಟನ್ನು ಹೊತ್ತಿಸುತ್ತಾ, ಕೇಳಿದನು

ನನಗೆ ಕಲ್ಕತ್ತೆಯ ಹುಚ್ಚರ ಆಸ್ಪತ್ರೆಯ ಡೊಕ್ಟರ್ ರಾಯಚೌಧುರಿಯವರ ಬಳಿ ಸ್ವಲ್ಪ ಕೆಲಸವಿದ್ದುದರಿಂದ ಆ ದಿನ ಬೆಳಿಗ್ಗೆ ಹತ್ತು ಘಂಟೆಗೆ ಸರಿಯಾಗಿ ಅಲ್ಲಿಗೆ ಹೋಗಿ ದ್ದೆನು ಆಗ, ಬಸವನ ಹಿಂದೆ ಬಾಲವಾಗಿ, ನಾಮಣಿಯೂ ನನ್ನೊಡನೆ ಬಂದಿದ್ದನು. ಅಲ್ಲಿ ಡೊಕ್ಟರ್ ರಾಯಚೌಧುರಿಯವರ ಬಳಿಯ ನನ್ನ ಕೆಲಸ ಮುಗಿಯುತ್ತಲೇ ನಾನು, ನಾಮ ಣಿಯ ಅಪೇಕ್ಷೆಯಂತೆ, ಅಲ್ಲಿಯ ಹುಚ್ಚರ ವಠಾರಗಳನ್ನೆಲ್ಲಾ ಅವನಿಗೆ ತೋರಿಸಿದ್ದೆನು. ಆಗ, ಅಲ್ಲಿ, ಬಲವಾದ ಬಂದಿಖಾನೆಯೊಂದ ರೊಳಗೆ ಸೆರೆಯಲ್ಲಿದ್ದ ಒಬ್ಬ ಸಾಧಾರಣ ಮೂವತ್ತೈದು ವರ್ಷ ಪ್ರಾಯದ ಉಗ್ರನಾದ ಹುಚ್ಚನನ್ನು ತೋರಿಸುತ್ತ ನಾನು, ನಾಮಣಿ ಯೊಡನೆ, ಅವನ ಇತಿಹಾಸವು ವಿಚಿತ್ರವಾದು ದೆಂದಿದ್ದೆ. ಹಾಗೆ ಹೇಳಲು ಕಾರಣವಿರದಿರ ಲಿಲ್ಲ

'ಅವನ ಇತಿಹಾಸವನ್ನು ಕೇಳುವಷ್ಟು ತಾಳ್ಮೆ ವಹಿಸುವಿಯಾದರೆ ಅದೇನೆಂದು ನಿನಗೇ ತಿಳಿಯುವುದು, ನಾಮಣಿ,' ನಾನು ಎಂದೆ

'ಹಾಗಾದರೆ ಇನ್ನು ಸಾವಕಾಶ ಮಾಡ ಬೇಡ ತಾಳ್ಮೆಯ ಮಾತೆತ್ತಿದೆಯಾ? ನನ್ನ ಬಾಳೇ ಒಂದು ತಾಳ್ಮೆಯಾಗಿರುವಾಗ ಈ ಅಲ್ಪ ವಿಷಯವನ್ನು ಕೇಳಲು ತಾಳ್ಮೆಗೆ ಏತರ ಧಾಡಿ?' ನಾಮಣಿ ಎಂದನು

'ಅಲ್ಪ ವಿಷಯವೇ? ನಿನಗೆ ಇದು ಒಂದು ಅಲ್ಪ ವಿಷಯವೇ ಆಗಿರಬಹುದು, ಆದರ ನನಗೆ ಮಾತ್ರ ಇದು ಒಂದು ಮಹತ್ವದವಿಷಯ ವಾಗಿರುವುದು ಯಾಕೆ, ನನ್ನ ವೈದ್ಯವೃತ್ತಿಗೆ ಇದರಿಂದ ದೊರೆತ ಪ್ರಯೋಜನವನ್ನು ಗಣಿಸು ವಾಗ, ಈ ವಿಷಯವು ನನ್ನ ಜೀವನಾಧಾರವೇ ಆಯಿತೆನ್ನಲು ಸಂಕೋಚವಿರದು, ತಿಳಿಯಿತೇ?' ನಾನು ಹೇಳಿದೆ

'ಓಹೋ! ಅಂತಹ ಮಹತ್ವದ ವಿಷಯ ವನ್ನು ಇಷ್ಟರವರೆಗೆ ನನ್ನಿಂದ ಮುಚ್ಚಿಟ್ಟಿದೆ ಯೇಕೆ? ಅದಕ್ಕೂ ಮಹತ್ವದ ಕಾರಣವಿ ದೆಯೋ?' ನಾಮಣಿಯ ಪ್ರಶ್ನೆ

'ಅದನ್ನೆಲ್ಲಾ ನೀನು ಆಮೇಲೆ ತಿಳಿ ಯುವಿ ವಿಷಯವನ್ನು ಮೊದಲು ಕೇಳು,' ನಾನು ಎಂದೆ

'ಸೈ, ಹಾಗಾದರೆ, ಇಗೋ! ನನ್ನ ಕಿವಿ ಯನ್ನು ನೆಟ್ಟಗೆ ಮಾಡಿರುವೆನು' ನಾಮಣಿಯು ನನ್ನನ್ನೇ ದಿಟ್ಟಿಸುತ್ತಾ, ಎಂದನು

೨

'ಒಂಭತ್ತು ವರ್ಷಗಳ ಹಿಂದಿನ ಮಾತು,' ನಾನು ಮೊದಲುಮಾಡಿದೆ 'ಆಗ ನಾನು ಎಮ್. ಬಿ ಬಿ., ಎಸ್. ಪಾಸಾಗಿ ನಮ್ಮ ಮಂಗಳೂರನ್ನು ಬಿಟ್ಟು ಇಲ್ಲಿಗೆ ಬಂದು ವೈದ್ಯ ವೃತ್ತಿಯನ್ನು ಪ್ರಾರಂಭಿಸಿ ಒಂದು ವರ್ಷವಾಗಿ ತ್ತಷ್ಟೆ. ಮೊದಲೇ ಪರವೂರು; ಅದರಲ್ಲಿಯೂ ಹೊಸಬ ಹೀಗಾಗಿ ನನಗೆ ಇಲ್ಲಿ ಜನರ ವಿಶ್ವಾಸವಡೆಯುವುದು ಬಹಳ ಕಷ್ಟವಾಗಿತ್ತು. ಒಂದು ವರ್ಷದಿಂದಲೂ ನನ್ನ ದುಡಿತವು ಬಹಳ ನಿಕೃಷ್ಟವಾಗಿತ್ತು. ನಾನು ಆಗ ಇನ್ನುಮುಂದಿನ ದಾರಿಯೇನೆಂದು ಯೋಚಿಸಲಾರಂಭಿಸಿದ್ದೆನು.

'ದವಾಖಾನೆಯನ್ನು ತೆರೆದು ಇಡೀ ದಿನ ಕುಳಿತರೂ ಒಬ್ಬಿಬ್ಬರು ಔಷಧಿ ಅಥವಾ ಚಿಕಿತ್ಸೆ ಗಾಗಿ ಬರುವುದು ಕಷ್ಟವಾಗಿತ್ತು. ಹಾಗಿರು ವಾಗ, ಒಂದು ದಿನ ಬೆಳಿಗ್ಗೆ ೮ ಗಂಟೆಗೆ ಬಾಗಿಲು ತೆರೆಯುತ್ತಲೇ, ನನ್ನ ದವಾಖಾನೆಯ ಮುಂದೆ ಒಂದು ಮೋಟರ್ ಕಾರು ನಿಂತು ಅದರೊಳಗಿಂದ ಐವರು ಒಬ್ಬ ಯುವಕನನ್ನು ಕೆಳಗೆ ಇಳಿಸಿಕೊಂಡು ನನ್ನ ಬಳಿಗೆ ಬಂದು ದನ್ನು ನೋಡಿ, ನನಗೆ, ಇನ್ನು ನನ್ನ ಸ್ವರ್ಣ ದಿನಗಳು ಮೂಡಿದುವೆಂದು ಎನಿಸಿತು ಆ ಮೇಲಿನ ನನ್ನ ಜೀವನದ ಸಿಂಹಾವಲೋಕನ ಮಾಡಿದರೆ, ನನ್ನ ಅಂದಿನ ಆ ಊಹನೆಯು ನಿಜವಾಗಿಯೂ ಒಂದು ವಿಧದಲ್ಲಿ ನಿಜರೂಪ ವನ್ನು ಹೊಂದಿತೆಂದು ನನಗೆ ಖಚಿತವಾಗು ವುದು

"ಬಂದವರೆಲ್ಲರೂ ಒಳ್ಳೆಯ ಬೆಲೆಬಾಳುವ ಪೋಷಾಕನ್ನು ಹಾಕಿಕೊಂಡಿದ್ದು ಶ್ರೀಮಂತ ರಾಗಿ ತೋರುತ್ತಿದ್ದರು, ನನ್ನ ಬಳಿಗೆ ಬರು ತ್ತಲೇ ಎಲ್ಲರೂ ನನಗೆ ನಮಸ್ಕಾರಮಾಡಿ ಮಾತು ಕತೆಗೆ ಮೊದಲುಮಾಡಿದರು ಅವರ ಕೈಸೆರೆ ಯಲ್ಲಿದ್ದ ತರುಣಯುವಕ ಮಾತ್ರ ನನ್ನನ್ನು ನೋಡಿ ಒಂದೇ ಸವನೆ ದೊಡ್ಡದಾಗಿ ನಗತೊಡ ಗಿದನು ಅದನ್ನು ನೋಡುತ್ತಲೇ ನನಗೆ ಅವನ ರೋಗವೂ, ಅವರ ಉದ್ದೇಶವೂ ಸ್ಪಷ್ಟವಾ ಯಿತು

"'ಸ್ವಾಮಿ, ತಾವು ದಕ್ಷಿಣ ಹಿಂದೂಸ್ಥಾನ ದವರೆಂದು ಕೇಳಿದೆವು,' ಆ ಹುಚ್ಚನೊಡನೆ ಬಂದವರಲ್ಲಿ ಒಬ್ಬನು ಎಂದನು 'ತಮ್ಮ ಕೈಗುಣವೂ ಚೆನ್ನಾಗಿರುವುದೆಂದು ಎಲ್ಲರೂ ಎನ್ನುವರು ನಮ್ಮ ಸಂಬಂಧಿಕನಾದ ಈ ನರೇಂದ್ರದತ್ತನ ರೋಗವೇನೆಂದು ತಮಗೆ ತಿಳಿ ಯಿತಲ್ಲ? ಆ ರೋಗಕ್ಕೆ ನಾವು ಇಷ್ಟರ ವರೆಗೆ ಸಾವಿರಗಟ್ಟಳೆಯಲ್ಲಿ ಹಣ ಖರ್ಚುಮಾಡಿ ನೋಡಿರುವೆವು ತಾವು ತಮ್ಮ ಯಾವುದಾದ ರೊಂದು ಉತ್ಕೃಷ್ಟ ಚಿಕಿತ್ಸೆಯಿಂದ ನಮ್ಮ ನರೇಂದ್ರದತ್ತನನ್ನು ಉದ್ಧಾರಮಾಡಿದರೆ ತಮಗೆ ಕೇಳಿದಷ್ಟು ಹಣ ಕೊಡುವೆವು'

ನಾನು ರೋಗಿಯನ್ನು ಕೂಲಂಕಷವಾಗಿ ಪರೀಕ್ಷಿಸಿನೋಡಿದೆ ಅತನು ಒಂದೆರಡು ಸಲ ಸ್ವಲ್ಪ ಗಲಾಟೆಮಾಡಿದರೂ, ಅವನ ಹುಚ್ಚು ಅಷ್ಟೊಂದು ಅಪಾಯಕಾರಿಯಲ್ಲವೆಂದು ನನಗೆ ಖಚಿತವಾಯಿತು

ನಾನು ಕೊನೆಗೆ ಆತನ ಚಿಕಿತ್ಸೆಯನ್ನು ಕೈಕೊಳ್ಳಲು ಒಪ್ಪಿದೆನು ಅವನ ಸಂಗಾತಿಗಳು ನನಗೆ ಬಹಳ ಕೃತಜ್ಞತೆಯನ್ನು ಸೂಚಿಸಿದರು ಅಲ್ಲದೆ ರೋಗಿಯನ್ನು ಹೋಗಿ ನೋಡಲು ದಿನಾಲೂ ಮೋಟರ್‌ಕಾರನ್ನು ಕಳುಹಿಸಿಕೊಡು ವೆವೆಂದರು, ಮತ್ತೆ ನನಗೆ ಮುಂಗಡವಾಗಿ ಒಂದು ನೂರು ರೂಪಾಯಿಯ ನೋಟನ್ನು ಕೊಟ್ಟರು

ಒಂಭತ್ತು ಗಂಟೆಯಾಗುತ್ತಲೇ ನಾನು ಅವರಿಗೆ ರೋಗಿಯ ಚಿಕಿತ್ಸಾಕ್ರಮವನ್ನು ವಿವ ರಿಸಿ, ಔಷಧಿಯನ್ನು ಕೊಟ್ಟು ಕಳುಹಿಸಿದೆನು

೩

'ಮರುದಿನದಿಂದ ನಾನು ದಿನಾಲೂ ಬೆಳಿಗ್ಗೆ ನರೇಂದ್ರದತ್ತನನ್ನು ಸಂದರ್ಶಿಸಿ ಬರತೊಡಗಿದೆ ಅವನ ಮನೆಯವರು ಪ್ರತಿದಿನ ನನಗೆ ಮೋಟರ್ ಕಾರನ್ನು ಕಳುಹಿಸಿಕೊಡುತ್ತಿದ್ದುದರಿಂದ ಸ್ವಲ್ಪ ವೂ ವ್ಯತ್ಯಾಸವಿಲ್ಲದೆ ಕೆಲಸವಾಗುತಿತ್ತು. ಪ್ರತಿ ವಿಜಿಟಿಗೂ ನನಗೆ ಐದು ರೂಪಾಯಿಯ ಒಂದು ನೋಟು ತಪ್ಪದೆ ನಗದಾಗಿಯೇ ದೊರೆಯು ತ್ತಿತ್ತು. ಅಲ್ಲದೆ ನಾನು ಕೊಟ್ಟ ಔಷಧಿಗಳ ಕ್ರಯವನ್ನೂ ಅವರು ನಗದಾಗಿ ಕೊಟ್ಟೇ ಅವು ಗಳನ್ನು ಕೊಂಡೊಯ್ಯುತಿದ್ದರು. ಹೀಗಾಗಿ ನಾನು ಬಲು ಹಿಗ್ಗತೊಡಗಿದೆನು.

'ದಿನಹೋದಂತೆ ರೋಗಿಯು ಗುಣಮುಖ ವಾದ ಲಕ್ಷಣಗಳು ಕಂಡುಬರತೊಡಗಿದುವು. ಅವನ ಸಂಬಂಧಿಕರೂ ಇದರಿಂದ ಸಂತೋಷ ಪಟ್ಟು,ಹದಿನೈದು ದಿನಗಳ ಮೇಲೆ ಮತ್ತೊಂದು ನೂರರ ನೋಟನ್ನು ನನ್ನ ಕೈಯಲ್ಲಿಟ್ಟು ಹೋದರು.

'ಅವರು ತಮ್ಮ ಸಂತೋಷವನ್ನು ಬಹು ವಿಧದಿಂದ ತೋರ್ಪಡಿಸಿದರು ನನಗೆ ಎಷ್ಟೋ ಹಣ್ಣು ಹಂಪಲು, ಚಿನ್ನ ಬೆಳ್ಳಿಯ ಸಾಮಾನು, ಸಿಲ್ಕ್, ವೆಲ್ವೆಟ್ ವಸ್ತ್ರ ಮುಂತಾದ ಕಾಣಿಕೆ ಗಳನ್ನೂ ಅಯಾಚಿತವಾಗಿಯೇ ಕೊಟ್ಟು ಹೋದರು ಅಲ್ಲದೆ ಇತರ ಕೆಲವು ರೋಗಿ ಗಳನ್ನೂ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟರು ಇದ ರಿಂದ ನನ್ನ ವೈದ್ಯವೃತ್ತಿಯು ದಿನಹೋದಂತೆ ವೃದ್ಧಿಹೊಂದುತ್ತಾ ಬಂತು ನನ್ನ ಹೆಸರು ನಾಲ್ಕೂ ಕಡೆಗೆ ಹಬ್ಬಿತು, ನಾನು ನನ್ನ ಜನ್ಮವು ಸಾರ್ಥಕವಾಯಿತೆಂದುಕೊಂಡು ಸಂತೋಷ ಪಟ್ಟೆನು ಜೀವನದಲ್ಲಿನ ನೀರಸವನ್ನು ಕಳೆದು ಕೊಂಡು, ಹೊಸ ಹುರುಪಿನಿಂದ ತುಂಬಿದೆನು

'ಆದರೆ ನನ್ನ ಅದೃಷ್ಟದ ಕೆಡುಗಾಲವು ಅಷ್ಟರಲ್ಲೇ ಕಾಲಿಡತೊಡಗಿತು ಒಂದು ತಿಂಗಳು ದಾಟುವಷ್ಟರಲ್ಲಿ ನರೇಂದ್ರನರೋಗವು ತಿರುಗಿ ಹೆಚ್ಚಳ ಹೊಂದುತ್ತಾ ಬಂತು ಈ ಸಲ ಅವನು ಬಹಳ ಅಪಾಯಕಾರಿಯಾಗತೊಡಗಿ ದನು ಯಾವಾಗ ನೋಡಿದರೂ ಅವನು ಇತರರನ್ನು ನಾನಾ ರೀತಿಯಲ್ಲಿ ಹಿಂಸಿಸು ತ್ತಿದ್ದನು ಆದರೆ ಅವನನ್ನು ಮನೆಯವರು ಬಹಳ ಜಾಗರೂಕತೆಯಿಂದ, ಹೊರಗಿನವರ ದೃಷ್ಟಿಯಲ್ಲಿ ಬೀಳದಂತೆ, ಇಡುತ್ತಿದ್ದು ನನಗೂ ಆ ವಿಷಯವನ್ನು ಗುಟ್ಟಾಗಿಯೇ ಇಡುವಂತೆ ತಿಳಿಸಿದರು ಅವರ ಮನೆತನವು ಬಹಳ ಗೌರವದ್ದಾಗಿದ್ದುದೇ ಇದರ ಕಾರಣವೆಂದರು

'ಎರಡನೆಯ ತಿಂಗಳು ಕಳೆಯುವಷ್ಟ ರಲ್ಲಿ ನರೇಂದ್ರನ ಹುಚ್ಚು ವಿಪರೀತಕ್ಕೆ ಮುಟ್ಟಿ ತು ಅವನ ಬಾಧೆಯು ತಡೆಯಲಸದಳವಾ ಯಿತು ಒಬ್ಬಿಬ್ಬರಿಗೆ ಅವನು ಹೊಡೆದು ಗಾಯಪಡಿಸಿ, ಮನೆಯವರಿಗೆ ತುಂಬ ಗಾಬರಿ ಉಂಟುಮಾಡಿದನು ಆದರೂ ಎಲ್ಲವೂ ಹೊರ ಗಿನವರಿಗಾರಿಗೂ ತಿಳಿಯದೆಯೇ ಇತ್ತು

"ಕಡೆಗೆ ನನಗೂ ಆತನು ಬಹಳ ಅಪಾ ಯಕಾರಿಯೆಂದು ಕಾಣತೊಡಗಿದನು ಆಗ ನಾನು ಉಪಾಯ ಕಾಣದೆ ಆತನನ್ನು ಹುಚ್ಚರ ಆಸ್ಪತ್ರೆಯಲ್ಲಿ ಇರಿಸಲೇ ಬೇಕೆಂದು ಒತ್ತಾಯ ಪಡಿಸಿದೆನು ಮೊದಲು ಮನೆಯವರೆಲ್ಲರೂ ಇದನ್ನು ಪೂರ್ತಿಯಾಗಿ ಅಲ್ಲಗಳೆದರೂ, ಕಡೆಗೆ ಹಾಗೆ ಮಾಡುವೆನೆಂದು ನನಗೆ ತಿಳಿಸಿ ನನ್ನ ದೊಂದು ಸರ್ಟಿಫಿಕೇಟನ್ನು ಪಡೆದರು ಅದ ರೊಂದಿಗೆ ನನ್ನ-ನರೇಂದ್ರನ ಸಂಬಂಧವೂ ಕಳಚಿಹೋಯಿತ

೪

'ಕೆಲವು ತಿಂಗಳುಗಳು ದಾಟುತ್ತಲೇ ಒಂದು ದಿನ ನನಗೆ ಹುಚ್ಚರ ಆಸ್ಪತ್ರೆಯ ಡೊಕ್ಟರ್ ರಾಯಚೌಧುರಿಯವರ ಪತ್ರವೊಂದು ಬಂದಿತು. ಅವರಿಗೆ ನನ್ನೊಡನೆ ಅಗತ್ಯದ ಕೆಲ ಸವಿರುವುದರಿಂದ ನಾನು ಅವರನ್ನು ಕೂಡಲೇ ಕಾಣಬೇಕೆಂಬುದೇ ಅದರ ಒಕ್ಕಣೆಯಾಗಿತ್ತು.

'ನಾನು ಕೂಡಲೇ ಹುಚ್ಚರ ಆಸ್ಪತ್ರೆಗೆ ಹೋಗಿ ಅವರನ್ನು ಕಂಡೆನು.

'ರಾಯ ಚೌಧುರಿಯವರು ನನ್ನನ್ನು ಬಹಳ ಮರ್ಯಾದೆಯಿಂದ ಬರಮಾಡಿಕೊಂ ಡರು. ನಾನು, ಅವರು ನನ್ನನ್ನು ಕರೆಯಿಸಿದ ಕಾರಣವನ್ನು ಕೇಳಲು, ಅವರು ಒಂದು ಪತ್ರ ವನ್ನು ತೆಗೆದು ನನ್ನ ಮುಂದೆ ಇರಿಸಿದರು ಅದು ನಾನು ನರೇಂದ್ರನ ಹುಚ್ಚಿನ ವಿಷಯವಾಗಿ ಕೊಟ್ಟ ಸರ್ಟಿಫಿಕೇಟಾಗಿತ್ತು.

"'ಯಾಕಿದು? ಏನಾಗಿದೆ ಇದರಲ್ಲಿ ವ್ಯತ್ಯಾಸ?' ನಾನು ಕೇಳಿದೆ

"'ಇದರಲ್ಲಿ ವ್ಯತ್ಯಾಸವೇನೂ ಇಲ್ಲ ಆದರೆ ಇದರಲ್ಲಿ ಕಾಣಿಸಿದ ಹೆಸರಿನವನು ನಿಮ್ಮ ಚಿಕಿ ತ್ಸೆಯಲ್ಲಿದ್ದನೇ?' ರಾಯಚೌಧುರಿಯವರು ಕೇಳಿದರು

"'ಹೌದು ಅದರಲ್ಲೇನು?'

'ಅವನನ್ನು ನೀವು ಗುರುತಿಸಬಲ್ಲಿರಾ?'

'ಗುರುತಿಸದೆ ಏನ, ಹುಚ್ಚಿನ ಪರಿಣಾ ಮವಾಗಿ ದೇಹದಲ್ಲಿ ಕ್ಷೀಣ ಒದಗಿರಬಹುದು ದ್ದರೆ?'

ಹಾಗಾದರೆ ಒಮ್ಮೆ ಈಚೆಗೆ ಬರಲಾ ರಿರಾ?'

"'ಓಹೋ'

'ರಾಯ ಚೌಧುರಿಯವರು ನನ್ನನ ಹುಚ್ಚರ ಕೋಣೆಗಳ ದಾರಿಯಾಗಿ ಕರೆದು ಕೊಂಡು ಹೋದರು ಹೋಗುತ್ತಾ ನಾನು ಚಿಕಿತ್ಸೆ ನಡೆಯಿಸಿದ ನರೇಂದ್ರದತ್ತನು ಆ ಕೋಣೆ ಗಳಲ್ಲೆಲ್ಲಿಯಾದರು ಇರುವನೋ ಎಂದು ಕೇಳುತ್ತಾ ನಡೆದೆನು ಎಲ್ಲಾ ಕೋಣೆಗಳನ್ನು ದಾಟಿದರೂ ನನಗೆ ನರೇಂದ್ರನು ಕಂಡು ಬರ ಲಿಲ್ಲ ನಾನು ಹಾಗೇ ಎಂದೆನು

"ಕಡೆಗೆ ರಾಯಚೌಧುರಿಯವರು ನನ್ನ ನ್ನು ಒಂದು ಕೋಣೆಯ ಒಳಗೆ ಒಯ್ದು ಅದರ ಲ್ಲಿದ್ದವನನ್ನು ತೋರಿಸಿ 'ಇವನ ಪರಿಚಯ ವಿದೆಯೇ?' ಎಂದು ಕೇಳಿದರು

"'ಇಲ್ಲ'

"'ಆದರೆ ಇವನೇ ನಿಮ್ಮ ಸರ್ಟಿಫಿಕೇಟಿನ ಮೂಲಕ ಇಲ್ಲಿ ಸೇರಿಸಲ್ಪಟ್ಟ ನರೇಂದ್ರದತ್ತ ನಲ್ಲಿ!'

'ಅದು ಹೇಗಾದೀತು? ಇವನನ್ನು ನಾನು ಈವರೆಗೆ ಕಂಡಿಲ್ಲ' ನಾನು ದಂಗುಬಡೆದು ದಿಗಿಲಿನಿಂದ, ಎಂದೆನು

'ಹೇಗಾದೀತೆಂದು ಮತ್ತೆ ಕೇಳುವಿರಿ ಈಗ ಈ ಪಾಪದವನನ್ನು ಮೊದಲು ಬಿಡಬೇಕಾಗಿದೆ'

'ಒಡನೆ ಆ ಕೋಣೆಯ ಕ್ಲಿಷ್ಟ 'ನರೇಂದ್ರ ದತ್ತ'ನನ್ನು ಸೆರೆಯಿಂದ ಬಿಡಿಸಿ ಡೊಕ್ಟರ್ ರಾಯ ಚೌಧುರಿಯವರು ನನ್ನೊಟ್ಟಿಗೊಂದಿಗೆ ತಮ್ಮ ಆಫೀಸಿಗೆ ಹೋದರು

೫

'ರಾಯ ಚೌಧುರಿಯವರು ನನ್ನ ವೃತ್ತಾಂತ

(೩ನೇ ಪುಟವನ್ನು ನೋಡುವುದು)

(೩ನೇ ಪುಟವನ್ನು ನೋಡುವುದು)

ನೀವು ಎಂದಾದರೂ ಬಿಹಾರ್ ರಸಾಯನಿಕ ವೈದ್ಯಶಾಲೆಯ ಕೇಶಪುಷ್ಪಸಾರಕೂಡಿದ ಮಹಾ ಭೃಂಗರಾಜತೈಲ ಉಪಯೋಗಿಸಿರುವಿರೋ?

ನಿಮ್ಮ ಬೋಳು ತಲೆಯನ್ನು ಇದರ ಉಪಯೋಗದಿಂದ ವಿಪುಲವಾದ ಕೂದಲಿನಿಂದ ರಂಜಿಸುವುದು.

ಅನೇಕರು ಕೂದಲು ಉದುರುವದರಿಂದ ಮರುಕಪಡುವರು ಅಂಥವರು ಬಂದು ನೀಲಿ ಕಾಣಿಸುವ ತೈಲವನ್ನು ಉಪಯೋಗಿಸಿ ದಿನದಿನಕ್ಕೂ ಉದುರುವ ಕೂದಲಿಗೆ ತಡೆಮಾಡಿರಿ, ಬಂಧುಮಿತ್ರರಿಂದ ಪ್ರಶಂಸಿಸಲ್ಪಡಿರಿ.

ಇದು ಪ್ರತಿ ದಿನದ ಲೇಪನೆಯಿಂದ ಉದುರಿಬೀಳುವ ಕೂದಲನ್ನು ತಡೆಕಟ್ಟುವದು ವಿಪುಲವಾಗಿ ಬೆಳೆವ ಕೂದಲಿಗೆ ನಿಲುವೆಯನ್ನು ಕೊಟ್ಟು ಅಕಾಲದಲ್ಲಿ ನರೆತ ಕೂದಲು ಕಪ್ಪಾಗುವದು. ಇದು ಶಾಸ್ತ್ರೋಕ್ತವಾಗಿ ತಯಾರಿಸಿರುವದರಿಂದ, ತಲೆ ತಿರುಗುವಿಕೆ, ಓರ್ಕಣ್ಣಿ ನೋವು ಕಣ್ಣು ಮಂಜು, ಸ್ಮೃತಿವಿಕಾಸ, ಇವುಗಳೆಲ್ಲಾ ಗುಣವಾಗುವದು. ಮಾನಸಿಕ ಕೆಲಸದ ಪುರುಷರಿಗೂ, ಸ್ತ್ರೀಯರಿಗೂ, ಬೇಸಿಗೆ ಕಾಲಕ್ಕೆ ವರಪ್ರದಾನವಾಗಿದೆ

ಸೀಸೆ ೧ಕ್ಕೆ ೧-೧೨-೦. ವಿಳಾಸ —Behar Chemleal Works,

Shree Gauranga Bhavan, BHAGALPUR

ಏಜಂಟರು—ಷಾ ಕಂಪೆನಿ, ಮಂಗಳೂರು, ದ. ಕ.

24 × 6 3 × 2 = 6 ×4 1·8
4·96 5-30 1-7
24 1-4

ವಿಷಾಣುಗಳು ಧೂಳಿನ ಮೂಲಕ ಶ್ವಾಸಕೋಶಗಳನ್ನು ಸೇರುತ್ತವೆ

ಬೇಸಿಗೆ ಕಾಲದಲ್ಲಿ, ಬಿಸಿಯಾದ ವಾಯುವಿನಲ್ಲಿ ವಿಷಾಣುಮಿಶ್ರಿತ ಧೂಳು ಸೇರಿ ಮೂಗಿನ ಮೂಲಕವಾಗಿ ನಮ್ಮ ಶ್ವಾಸಕೋಶಗಳನ್ನು ಸೇರಿ ನಮ್ಮ ದೇಹವನ್ನು ಅನೇಕಾನೇಕ ರೋಗಗಳಿಗೆ ಬಲಿಕೊಡುತ್ತದೆ. ಮೊದಲು ಗಂಟಲು ನೋವು, ಆನಂತರ ಎದೆ ನೋವು, ಉಬ್ಬಸ, ಕೆಮ್ಮು ಇವುಗಳೆಲ್ಲಾ ಪ್ರಾರಂಭವಾಗುವುವು. ಇದನ್ನರಿತ ಕೂಡಲೆ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ. ಈ ಗುಳಿಗೆಯನ್ನು ಬಾಯಲ್ಲಿ ಹಾಕಿದ ಕೂಡಲೆ ಅದರಿಂದ ಬರುವ ಸೌರಭವಾಯುವು ನೇರಿಯು, ಶ್ವಾಸಕೋಶಗಳನ್ನು ಸೇರಿ, ಅಲ್ಲಿರುವ ವಿಷಾಣುಗಳ ನಾಶನ ಮಾಡುತ್ತದೆ. ಇಂತಹ ರೋಗಗಳಿಗೆ ಪೆಪ್ಸ್ ಅನೋಘ ಔಷಧವಾಗಿರುತ್ತದೆ. ಕೆಮ್ಮು ಉಬ್ಬಸ, ಜ್ವರ ಇತ್ಯಾದಿಗಳಿಂದ ಸುರಕ್ಷಿತವಾಗಿರಲು ಪೆಪ್ಸನ್ನು ಸೇವಿಸಿರಿ. ಈ ಗುಳಿಗೆಗಳಲ್ಲಿರುವ ಎಣ್ಣೆಯು ಆರಿಹೋಗದಂತೆ ಅವುಗಳನ್ನು ಬೇಗಡಿಯ ಕಾಗದದಲ್ಲಿ ಮಡಗಿವೆ.

ವಿಷಹಾರಿ ಶ್ವಾಸನೀಯ ಪೆಪ್ಸ್ ಗುಳಿಗೆಗಳನ್ನು ಸೇವಿಸಿರಿ.

ಪೆಪ್ಸ್ PEPS

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿಯಲ್ಲೇ ಕೊಡಿರಿ!

ಒರಲೆಗಳು ಬೆಂಕಿ ನೊಂದಿಸಲು ಸಾಧ್ಯವಂತೆ

ಯಾವುದಾದರೂ ಒಂದು ಕಾರಣದಿಂದ ಒರಲೆಗಳ ವಲ್ಮೀಕ ಇರುವಲ್ಲಿ ಸಣ್ಣ ಬೆಂಕಿಯು ಉಂಟಾದಲ್ಲಿ ಕ್ಷಣದಲ್ಲಿ ಇವುಗಳ ಸೈನ್ಯ ಬಂದು ತನ್ನ ಕುಂಡಿಗಳಿಂದ ಒಂದು ತರದ ದ್ರವವನ್ನು ಚಿಮ್ಮಿಸಿ ಬೆಂಕಿಯನ್ನು ನೊಂದಿಸುತ್ತವೆ. ಈ ವಿಚಿತ್ರ ತರದ ಗುಣವನ್ನು ಇತ್ತೀಚೆಗೆ ಒಂದು ಹಳ್ಳಿಯಲ್ಲಿ ಒರಲೆಗಳ ವಲ್ಮೀಕದಿಂದ ತುಂಬಿದ ಚಿಕ್ಕ ಗುಡಿಸಲಿಗೆ ಬೆಂಕಿ ಹಿಡಿದಾಗ ಕಂಡು ಹಿಡಿದರು. ಇವುಗಳು ಚಿಮ್ಮುವ ದ್ರವದ ಚಿಕ್ಕಾಂಶವು ಮಯಣ ಬತ್ತಿಯಿಂದ ಉಂಟಾಗುವ ಉರಿಜ್ವಾಲೆಯನ್ನು ನೊಂದಿಸುವುದಂತೆ. ವಿಜ್ಞಾನಿಗಳು ಈ ದ್ರವವನ್ನು ಪರಿಶೋಧಿಸಿ ಇದರಷ್ಟು ಒಳ್ಳೆಯ ತರದ ಬೆಂಕಿ ನೊಂದಿಸುವ ವಸ್ತು ಇಂದಿನ ವರೆಗೆ ಯಾರೂ ಕಂಡುಹಿಡಿದಿರುವುದಿಲ್ಲವೆಂದು ಹೇಳುವರು.

Wanted

as active partners, on co-operative basis, educated young men for employment in an agricultural and industrial colony on a monthly allowance of Rupees 7-8-0. Cash security of Rs. 100/- is essential along with the applications to:

Kanjarpane Gopalkrishnaya,
Sullia Post, South Kanara.

ಕಾರ್ಯಸಿದ್ಧಿ ಮಂತ್ರಂ

ಯಾರೇ ಆಗಲಿ, ಗಂಡಸರಾಗಲಿ, ಹೆಂಗಸರಾಗಲಿ, ಮುದುಕರಾಗಲಿ, ಈ ಮಂತ್ರವನ್ನು ಸಿದ್ಧಿ ಮಾಡಿಕೊಂಡು ಮಲಗುವುದಕ್ಕೆ ಮುಂಚೆ ರಾತ್ರಿಯಲ್ಲಿ ಜಪಿಸಿದರೆ ಅವರ ಮನೋಭಿಲಾಷೆಗಳೆಲ್ಲವೂ ನೆರವೇರುವುವು. ಇದರ ಸಹಾಯದಿಂದ ಕಳೆದ ಪದಾರ್ಥಗಳ ಪತ್ತೆ ಹಚ್ಚುವಿಕೆಯು ವ್ಯತಿರಾದ ಸಂಬಂಧಿಗಳೊಡನೆ ಸಂಭಾಷಣೆಯೂ, ಇತರರ ಮನೋಭಿಪ್ರಾಯಗಳನ್ನೂ, ಭೂತಭವಿಷ್ಯತ್ ವರ್ತಮಾನಗಳೆಲ್ಲವನ್ನೂ ಸುಲಭವಾಗಿ ತಿಳಿಯಬಹುದು. ಕೇವಲ ಒಂದು ರೂಪಾಯಿಯನ್ನು ಮನಿಯಾರ್ಡರ್ ಮೂಲಕ ಕಳುಹಿಸುವವರಿಗೆ ಈ ಕಾರ್ಯಸಿದ್ಧಿ ಮಂತ್ರವು ಅಂಚೆ ವೆಚ್ಚವಿಲ್ಲದೆ ಕಳುಹಿಸಲ್ಪಡುವುದು. ವಿ. ಪಿ. ಮಾಡುವುದಿಲ್ಲ.

ವ್ಯವಸ್ಥಾಪಕ,

ಕಾರ್ಯಸಿದ್ಧಿ ಆಶ್ರಮ. 211 ವಿಶ್ವೇಶ್ವರ ಪುರಂ,

ಬೆಂಗಳೂರು ಸಿಟಿ. (S. I.)

ಮಂಗಳೂರಿನ ಪೇಟೆಧಾರ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ರಾಶಿ ಅಕ್ಕಿ ...	3— 4	3— 0
ಹೊಸ ಮಸ್ತಿ ...	3—10	4— 6
ಗುಡ್ಡೆ ಸುಗ್ಗಿ ...	3— 8	3—12
ಊರ ಅವ್ವಲ್ ಬೆಳ್ತಿಗೆ ...	4— 0	4— 8
ರಂಗೂನು ಬೆ. ಗೋ. ಗಿಳ್ಳಿ...	6— 4	7— 0
ಎಲ್ಲೂರು ಬೆ. ಮು. ಗಿಳ್ಳಿ...	4— 4	4— 8
ಜೀರಿ ಗೋಟೆ ಗಿಳ್ಳಿ ...	8 — 8	10— 4
ತೊಗರಿ ಗೋಟೆ ಗಿಳ್ಳಿ ...	9 —0	9 — 8
ಹುರುಳಿ ಗೋಟೆ ಗಿಳ್ಳಿ ...	5— 4	5 —12
ಕಡಲೆ ಗೋಟೆ ಗಿಳ್ಳಿ ...	7 — 4	9 — 8
ತೊಗರಿಬೇಳೆ ಗೋಟೆ ಗಿಳ್ಳಿ...	11— 0	15— 8
ಉದ್ದು ಗೋಟೆ ಗಿಳ್ಳಿ ...	9— 8	10 — 0
ಹೆಸರು ಗೋಟೆ ಗಿಳ್ಳಿ ...	9— 4	9—12
ಖೂರುಬೆಲ್ಲ ಖಂಡಿ ಗಿಳ್ಳಿ ...	30— 0	35— 0
ಉಪ್ಪು ಗೋಟೆ ಗಿಳ್ಳಿ ...	4— 8	4— 8
ಕೊಬ್ಬರಿ ಖಂಡಿ ಗಿಳ್ಳಿ ...	60— 0	70— 0
ಕೊಬ್ಬರಿ ಹಿಂಡಿ ಖಂಡಿ ಗಿಳ್ಳಿ...	28— 0	29— 0
ಎಳ್ಳಿಂಡಿ ಖಂಡಿ ಗಿಳ್ಳಿ ...	32 — 8	33—12
ಕೊಬ್ಬರಿ ಎಣ್ಣೆ ಮುಡಿ ಗಿಳ್ಳಿ...	4—15	6— 0
ಎಳ್ಳೆಣ್ಣೆ ಮುಡಿ ಗಿಳ್ಳಿ ...	7— 0	7— 0
ಹರಳೆಣ್ಣೆ ಪಟ್ಟಿಗೆ ಗಿಳ್ಳಿ...	6— 5	6 — 5
ಮೋರಿಸ ಸಕ್ಕರೆ ಮು. ಗಿಳ್ಳಿ...	3— 9	3 — 9
ಮೆಣಸು ...	2— 8	4— 0
ಸಾಸಿವೆ ಮುಡಿ ಗಿಳ್ಳಿ ...	5 — 8	6— 0
ಕಾಳುಮೆಣಸು ಖ. ಗಿಳ್ಳಿ ...	102— 8	105—
ಮೇಲುಕ್ಕೆ ಬೀಜ ಮುಡಿಗಿಳ್ಳಿ...	38— 0	39— 0
ಗೇರುಬೀಜ ಮು. ಗಿಳ್ಳಿ ...	8— 8	8 — 10
ಕಬ್ಬಿಣ ಖಂಡಿ ಗಿಳ್ಳಿ ...	35— 0	37— 8
ತಾಂಬ್ರ ತಗಡು ಮ. ಗಿಳ್ಳಿ...	9— 12	9— 14
ತಾಂಬ್ರ ಪಾತ್ರಗಳು ಮ. ಗಿಳ್ಳಿ	12— 8	14— 0
ಬೀಡಿಬೆಳ್ಳಿ ಸೇರು ಗಿಳ್ಳಿ ...	17— 8	18— 0
ಹಿತ್ತಾಳೆ ತಗಡು ಮ. ಗಿಳ್ಳಿ...	10— 0	10—
ಕವಸು ಗಿಳ್ಳಿ ...	22— 8	22— 8
ಹುಣಸೆ ಹುಳಿ ಖಂಡಿ ಗಿಳ್ಳಿ	20— 0	25— 0
ನೇಟಿವ್ ಕಾಫಿ ಖಂಡಿ ಗಿಳ್ಳಿ	145— 0	150— 4
ಪ್ಲಾಂಟೇಶನ್ ಕಾಫಿ ಖಂಡಿ ಗಿಳ್ಳಿ...	175— 0	185— 0
ಮಡಿಕೇರಿ ಏಲಕ್ಕಿ ...	25— 0	26 — 8

ಸ್ತನೋ ಸ್ತೇಧಃ

STHANO STHEDAH THE MALAYALA OUSHADHA CO., POST - CHALAPURAM, MALABAR.

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರೆನ್ನು ಆಕರ್ಷಿಸುವಂತೆ ಮಾಡುವ ಬಗೆ ಹೇಗೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗಸೊರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವು—ಅವುಗಳು ಉಬ್ಬಿ ಗೋಲಾಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯಿರಿ. ಇಲ್ಲವಾದರೆ ಹಣವಾಪಸ್.

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ "ಸ್ತನೋ ಸ್ತೇಧ"ದಿಂದ ಸಾಧ್ಯ. ನಿಮ್ಮ ಸ್ತನಗಳು ಅನಾರೋಗ್ಯದಿಂದಲೂ ದಾರುಣವಾದ ಚಿಂತೆಯಿಂದಲೂ, ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲು ಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಹೃಷ್ಟಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು. ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪೌಷ್ಟಿಕೆಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ. 3. ನಂಬ್ರ 21. (ಹೊರಗೆ ಲೇಪಿಸುವ ಮದ್ದು) ರೂ. 3.
ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ.

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು.

ಇವಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.
1. ಮುಟ್ಟಿನದೋಷ, 2. ಸಂತತಿ ಪ್ರತಿಬಂಧಕ, 3. ಧಾತುಪುಷ್ಟಿ, 4. ಲಿಂಗವೃದ್ಧಿ, 5. ಸ್ತ್ರೀರೋಗ, 6. ಕ್ಷಯ ಸಂಹಾರಿ, 7. ವಾತರೋಗ.

ಅಲಭ್ಯ ಲಾಭ!   ಸುವರ್ಣ ಸಂದರ್ಭ!

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

ಗ್ರ್ಯಾಂಡ್ ವಿದ್ಯಾದಾಯಿನೀ ಲೋಟ್ರಿ

ತೆಗೆಯುವ ತಾರೀಕು: 3-6-1936.   ಟಿಕೆಟಿನ ಬೆಲೆ ನಾಲ್ಕಾಣೆ ಮಾತ್ರ

ಲೋಟ್ರಿಯ ಮೊಬಲಗು: ರೂ. 60,000.

ಒಟ್ಟು ಬಹುಮಾನಗಳ ಸಂಖ್ಯೆ: 1778.   ಮೌಲ್ಯ ರೂ. 20,000.

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಮೆನೇಜರ್— ಗ್ರ್ಯಾಂಡ್ ವಿದ್ಯಾದಾಯಿನೀ ಲೋಟ್ರಿ, ಸುರತ್ಕಲ್ (ದ. ಕ.)

ವಿ. ಸೂ.—ಯಾವ ಕಾರಣದಿಂದಲಾದರೂ ಲೋಟ್ರಿ ತೆಗೆಯುವ ತಾರೀಕನ್ನು ಮುಂದರಿಸಲಾಗುವುದಿಲ್ಲ.

ಶಾಲಿವಾಹನ ಶಕ ೧೮೫೮ನೆಯ ಯುವ ಸಂವತ್ಸರದ ವೈಶಾಖ ಬ। ೧೦ ಶನಿವಾರದಿಂದ ಜ್ಯೇಷ್ಠ ಶು। ೨ ಶುಕ್ರವಾರದ ವರೇಗಿನ ಪಂಚಾಂಗ.(೧೯೩೬ನೇಯ ವೃಷಭ ಬೇಶ)

ದಿನಾಂಕ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
16	ಶನಿ	೧೦	೨೬	ಪೂ. ಭಾದ್ರ	೨೬	೩	[illegible]
17	ರವಿ	೧೧	೧೬	ಉ. ಭಾದ್ರ	೨೨	೪	
18	ಸೋಮ	೧೨	೧೦	ರೇವತಿ	೧೮	೫	
19	ಮಂಗಳ	೧೩	೩೪	ಅಶ್ವಿನೀ	೧೪	೬	
20	*ಬುಧ	೩೦	೩೩	ಭರಣೀ	೧೦	೭	
21	ಗುರು	೧	೪೯	ಕೃತ್ತಿಕ	೭	೮	
22	ಶುಕ್ರ	೨	೪೫	ರೋಹಿಣೀ	೪	೯	

ನಮ್ಮ ಸಾಪ್ತಾಹಿಕ ಕಥೆ:—

'ಅದೂ ಒಂದು ಹುಚ್ಚು!'

ಲೇಖಕ:—ಶ್ರೀ "ರಸಿಕರಂಜನ"

'ಹೌದು, ಮರೆತೇ ಹೋಗಿದ್ದೆ. ನೀನು ಆ ಹುಚ್ಚನ ಇತಿಹಾಸ ಬಹಳ ವಿಚಿತ್ರವಾದು ದೆಂದಿದ್ದೆಯಷ್ಟೆ. ಅದರಲ್ಲಿ ಅದೇನು ಅಷ್ಟು ವಿಚಿತ್ರವಾದುದು, ಹೇಳು?' ನನ್ನ ದವಾಖಾನೆ ಯಲ್ಲಿ, ನಾಮಣಿಯು, ಇಲ್ಲಿಗೆ ಬಂದಂದಿ ನಿಂದಲೂ, ತನ್ನ ಸ್ವಂತದ್ದಾಗಿ ಆಕ್ರಮಿಸಿ ಕೊಂಡಿದ್ದ ಈಝಿಚೆಯರಿನ ಮೇಲೆ ಕೈಕಾಲು ಗಳನ್ನು ಹಾಯಾಗಿ ಚಾಚಿ ಬಿದ್ದುಕೊಂಡು, ಒಂದು ಸಿಗರೆಟನ್ನು ಹೊತ್ತಿಸುತ್ತಾ, ಕೇಳಿದನು.

ನನಗೆ ಕಲ್ಕತ್ತೆಯ ಹುಚ್ಚರ ಆಸ್ಪತ್ರೆಯ ಡೊಕ್ಟರ್ ರಾಯಚೌಧುರಿಯವರ ಬಳಿ ಸ್ವಲ್ಪ ಕೆಲಸವಿದ್ದುದರಿಂದ ಆ ದಿನ ಬೆಳಿಗ್ಗೆ ಹತ್ತು ಘಂಟೆಗೆ ಸರಿಯಾಗಿ ಅಲ್ಲಿಗೆ ಹೋಗಿ ದ್ದೆನು. ಆಗ, ಬಸವನ ಹಿಂದೆ ಬಾಲವಾಗಿ, ನಾಮಣಿಯೂ ನನ್ನೊಡನೆ ಬಂದಿದ್ದನು ಅಲ್ಲಿ ಡೊಕ್ಟರ್ ರಾಯಚೌಧುರಿಯವರ ಬಳಿಯ ನನ್ನ ಕೆಲಸ ಮುಗಿಯುತ್ತಲೇ ನಾನು, ನಾಮ ಣಿಯ ಅಪೇಕ್ಷೆಯಂತೆ, ಅಲ್ಲಿಯ ಹುಚ್ಚರ ವಠಾರಗಳನ್ನೆಲ್ಲಾ ಅವನಿಗೆ ತೋರಿಸಿದ್ದೆನು. ಆಗ, ಅಲ್ಲಿ, ಬಲವಾದ ಬಂದಿಖಾನೆಯೊಂದ ರೊಳಗೆ ಸೆರೆಯಲ್ಲಿದ್ದ ಒಬ್ಬ ಸಾಧಾರಣ ಮೂವತ್ತೈದು ವರ್ಷ ಪ್ರಾಯದ ಉಗ್ರನಾದ ಹುಚ್ಚನನ್ನು ತೋರಿಸುತ್ತ ನಾನು, ನಾಮಣಿ ಯೊಡನೆ, ಅವನ ಇತಿಹಾಸವು ವಿಚಿತ್ರವಾದು ದೆಂದಿದ್ದೆ. ಹಾಗೆ ಹೇಳಲು ಕಾರಣವಿರದಿರ ಲಿಲ್ಲ

'ಅವನ ಇತಿಹಾಸವನ್ನು ಕೇಳುವಷ್ಟು ತಾಳ್ಮೆ ವಹಿಸುವಿಯಾದರೆ ಅದೇನೆಂದು ನಿನಗೇ ತಿಳಿಯುವುದು, ನಾಮಣಿ,' ನಾನು ಎಂದೆ

'ಹಾಗಾದರೆ ಇನ್ನು ಸಾವಕಾಶ ಮಾಡ ಬೇಡ ತಾಳ್ಮೆಯ ಮಾತೆತ್ತಿದೆಯಾ? ನನ್ನ ಬಾಳೇ ಒಂದು ತಾಳ್ಮೆಯಾಗಿರುವಾಗ ಈ ಅಲ್ಪ ವಿಷಯವನ್ನು ಕೇಳಲು ತಾಳ್ಮೆಗೆ ಏತರ ಧಾಡಿ?' ನಾಮಣಿ ಎಂದನು

'ಅಲ್ಪ ವಿಷಯವೇ? ನಿನಗೆ ಇದು ಒಂದು ಅಲ್ಪ ವಿಷಯವೇ ಆಗಿರಬಹುದು, ಆದರೆ ನನಗೆ ಮಾತ್ರ ಇದು ಒಂದು ಮಹತ್ವದವಿಷಯ ವಾಗಿರುವುದು ಯಾಕೆ, ನನ್ನ ವೈದ್ಯವೃತ್ತಿಗೆ ಇದರಿಂದ ದೊರೆತ ಪ್ರಯೋಜನವನ್ನು ಗಣಿಸು ವಾಗ, ಈ ವಿಷಯವು ನನ್ನ ಜೀವನಾಧಾರವೇ ಆಯಿತೆನ್ನಲು ಸಂಕೋಚವಿರದು, ತಿಳಿಯಿತೇ?' ನಾನು ಹೇಳಿದೆ

'ಓಹೋ! ಅಂತಹ ಮಹತ್ವದ ವಿಷಯ ವನ್ನು ಇಷ್ಟರವರೆಗೆ ನನ್ನಿಂದ ಮರೆಮಾಚಿದ ಯೇಕೆ? ಅದಕ್ಕೂ ಮಹತ್ವದ ಕಾರಣವಿ ದೆಯೋ?' ನಾಮಣಿಯ ಪ್ರಶ್ನೆ

'ಅದನ್ನೆಲ್ಲಾ ನೀನು ಆಮೇಲೆ ತಿಳಿ ಯುವಿ ವಿಷಯವನ್ನು ಮೊದಲು ಕೇಳು,' ನಾನು ಎಂದೆ

'ಸೈ, ಹಾಗಾದರೆ, ಇಗೋ! ನನ್ನ ಕಿವಿ ಯನ್ನು ನೆಟ್ಟಗೆ ಮಾಡಿರುವೆನು' ನಾಮಣಿಯು ನನ್ನನ್ನೇ ದಿಟ್ಟಿಸುತ್ತಾ, ಎಂದನು

೨

'ಒಂಭತ್ತು ವರ್ಷಗಳ ಹಿಂದಿನ ಮಾತು,' ನಾನು ಮೊದಲುಮಾಡಿದೆ 'ಆಗ ನಾನು ಎಮ್. ಬಿ ಬಿ., ಎಸ್. ಪಾಸಾಗಿ ನಮ್ಮ ಮಂಗಳೂರನ್ನು ಬಿಟ್ಟು ಇಲ್ಲಿಗೆ ಬಂದು ವೈದ್ಯ ವೃತ್ತಿಯನ್ನು ಪ್ರಾರಂಭಿಸಿ ಒಂದು ವರ್ಷವಾಗಿ ತ್ತಷ್ಟೆ. ಮೊದಲೇ ಪರವೂರು; ಅದರಲ್ಲಿಯೂ ಹೊಸಬ ಹೀಗಾಗಿ ನನಗೆ ಇಲ್ಲಿ ಜನರ ವಿಶ್ವಾಸವಡೆಯುವುದು ಬಹಳ ಕಷ್ಟವಾಗಿತ್ತು. ಒಂದು ವರ್ಷದಿಂದಲೂ ನನ್ನ ದುಡಿತವು ಬಹಳ ನಿಷ್ಫಲವಾಗಿತ್ತು. ನಾನು ಆಗ ಇನ್ನುಮುಂದಿನ ದಾರಿಯೇನೆಂದು ಯೋಚಿಸಲಾರಂಭಿಸಿದ್ದೆನು.

'ದವಾಖಾನೆಯನ್ನು ತೆರೆದು ಇಡೀ ದಿನ ಕುಳಿತರೂ ಒಬ್ಬಿಬ್ಬರು ಔಷಧಿ ಅಥವಾ ಚಿಕಿತ್ಸೆ ಗಾಗಿ ಬರುವುದು ಕಷ್ಟವಾಗಿತ್ತು. ಹಾಗಿರು ವಾಗ, ಒಂದು ದಿನ ಬೆಳಿಗ್ಗೆ ೮ ಗಂಟೆಗೆ ಬಾಗಿಲು ತೆರೆಯುತ್ತಲೇ, ನನ್ನ ದವಾಖಾನೆಯ ಮುಂದೆ ಒಂದು ಮೋಟರ್ ಕಾರು ನಿಂತು ಅದರೊಳಗಿಂದ ಐವರು ಒಬ್ಬ ಯುವಕನನ್ನು ಕೆಳಗೆ ಇಳಿಸಿಕೊಂಡು ನನ್ನ ಬಳಿಗೆ ಬಂದು ದನ್ನು ನೋಡಿ, ನನಗೆ, ಇನ್ನು ನನ್ನ ಸ್ವರ್ಣ ದಿನಗಳು ಮೂಡಿದುವೆಂದು ಎನಿಸಿತು. ಆ ಮೇಲಿನ ನನ್ನ ಜೀವನದ ಸಿಂಹಾವಲೋಕನ ಮಾಡಿದರೆ, ನನ್ನ ಅಂದಿನ ಆ ಊಹನೆಯು ನಿಜವಾಗಿಯೂ ಒಂದು ವಿಧದಲ್ಲಿ ನಿಜರೂಪ ವನ್ನು ಹೊಂದಿತೆಂದು ನನಗೆ ಖಚಿತವಾಗು ವುದು.

"ಬಂದವರೆಲ್ಲರೂ ಒಳ್ಳೆಯ ಬೆಲೆಬಾಳುವ ಪೋಷಾಕನ್ನು ಹಾಕಿಕೊಂಡಿದ್ದು ಶ್ರೀಮಂತ ರಾಗಿ ತೋರುತ್ತಿದ್ದರು, ನನ್ನ ಬಳಿಗೆ ಬರು ತ್ತಲೇ ಐವರೂ ನನಗೆ ನಮಸ್ಕಾರಮಾಡಿ ಮಾತು ಕತೆಗೆ ಮೊದಲುಮಾಡಿದರು ಅವರ ಕೈಸೆರೆ ಯಲ್ಲಿದ್ದ ಆರನೆಯವನು ಮಾತ್ರ ನನ್ನನ್ನು ನೋಡಿ ಒಂದೇ ಸವನೆ ದೊಡ್ಡದಾಗಿ ನಗತೊಡ ಗಿದನು ಅದನ್ನು ನೋಡುತ್ತಲೇ ನನಗೆ ಅವನ ರೋಗವೂ, ಅವರ ಉದ್ದೇಶವೂ ಸ್ಪಷ್ಟವಾ ಯಿತು.

"'ಸ್ವಾಮಿ, ತಾವು ದಕ್ಷಿಣ ಹಿಂದೂಸ್ಥಾನ ದವರೆಂದು ಕೇಳಿದೆವು,' ಆ ಹುಚ್ಚನೊಡನೆ ಬಂದವರಲ್ಲಿ ಒಬ್ಬನು ಎಂದನು 'ತಮ್ಮ ಕೈಗುಣವೂ ಚೆನ್ನಾಗಿರುವುದೆಂದು ಎಲ್ಲರೂ ಎನ್ನುವರು ನಮ್ಮ ಸಂಬಂಧಿಕನಾದ ಈ ನರೇಂದ್ರದತ್ತನ ರೋಗವೇನೆಂದು ತಮಗೆ ತಿಳಿ ಯಿತಲ್ಲ? ಆ ರೋಗಕ್ಕೆ ನಾವು ಇಷ್ಟರ ವರೆಗೆ ಸಾವಿರಗಟ್ಟಳೆಯಲ್ಲಿ ಹಣ ಖರ್ಚುಮಾಡಿ ನೋಡಿರುವೆವು ತಾವು ತಮ್ಮ ಯಾವುದಾದ ರೊಂದು ಉತ್ಕೃಷ್ಟ ಚಿಕಿತ್ಸೆಯಿಂದ ನಮ್ಮ ನರೇಂದ್ರದತ್ತನನ್ನು ಉದ್ಧಾರಮಾಡಿದರೆ ತಮಗೆ ಕೇಳಿದಷ್ಟು ಹಣ ಕೊಡುವೆವು'

'ನಾನು ರೋಗಿಯನ್ನು ಕೂಲಂಕಷವಾಗಿ ಪರೀಕ್ಷಿಸಿನೋಡಿದೆ ಆತನು ಒಂದೆರಡು ಸಲ ಸ್ವಲ್ಪ ಗಲಾಟೆಮಾಡಿದರೂ, ಅವನ ಹುಚ್ಚು ಅಷ್ಟೊಂದು ಅಪಾಯಕಾರಿಯಲ್ಲವೆಂದು ನನಗೆ ಖಚಿತವಾಯಿತು

'ನಾನು ಕೊನೆಗೆ ಆತನ ಚಿಕಿತ್ಸೆಯನ್ನು ಕೈಕೊಳ್ಳಲು ಒಪ್ಪಿದೆನು ಅವನ ಸಂಗಾತಿಗಳು ನನಗೆ ಬಹಳ ಕೃತಜ್ಞತೆಯನ್ನು ಸೂಚಿಸಿದರು. ಅಲ್ಲದೆ ರೋಗಿಯನ್ನು ಹೋಗಿ ನೋಡಲು ದಿನಾಲೂ ಮೋಟರ್ ಕಾರನ್ನು ಕಳುಹಿಸಿಕೊಡು ವೆವೆಂದರು, ಮತ್ತೆ ನನಗೆ ಮುಂಗಡವಾಗಿ ಒಂದು ನೂರು ರೂಪಾಯಿಯ ನೋಟನ್ನೂ ಕೊಟ್ಟರು

ಒಂಭತ್ತು ಗಂಟೆಯಾಗುತ್ತಲೇ ನಾನು ಅವರಿಗೆ ರೋಗಿಯ ಚಿಕಿತ್ಸಾಕ್ರಮವನ್ನು ವಿವ ರಿಸಿ, ಔಷಧಿಯನ್ನು ಕೊಟ್ಟು ಕಳುಹಿಸಿದೆನು

೩

'ಮರುದಿನದಿಂದ ನಾನು ದಿನಾಲೂ ಬೆಳಿಗ್ಗೆ ನರೇಂದ್ರದತ್ತನನ್ನು ಸಂದರ್ಶಿಸಿ ಬರತೊಡಗಿದೆ ಅವನ ಮನೆಯವರು ಪ್ರತಿದಿನ ನನಗೆ ಮೋಟರ್ ಕಾರನ್ನು ಕಳುಹಿಸಿಕೊಡುತ್ತಿದ್ದುದರಿಂದ ಸ್ವಲ್ಪ ವೂ ಪ್ರಯಾಸವಿಲ್ಲದೆ ಕೆಲಸವಾಗುತಿತ್ತು. ಪ್ರತಿ ವಿಝಿಟಿಗೂ ನನಗೆ ಐದು-ರೂಪಾಯಿಯ ಒಂದು ನೋಟು ತಪ್ಪದೆ ನಗದಾಗಿಯೇ ದೊರೆಯು ತ್ತಿತ್ತು. ಅಲ್ಲದೆ ನಾನು ಕೊಟ್ಟ ಔಷಧಿಗಳ ಕ್ರಯವನ್ನೂ ಅವರು ನಗದಾಗಿ ಕೊಟ್ಟೇ ಅವು ಗಳನ್ನು ಕೊಂಡೊಯ್ಯುತಿದ್ದರು. ಹೀಗಾಗಿ ನಾನು ಬಲು ಹಿಗ್ಗತೊಡಗಿದೆನು.

'ದಿನಹೋದಂತೆ ರೋಗಿಯ ಗುಣಮುಖ ವಾದ ಲಕ್ಷಣಗಳು ಕಂಡುಬರತೊಡಗಿದುವು. ಅವನ ಸಂಬಂಧಿಕರೂ ಇದರಿಂದ ಸಂತೋಷ ಪಟ್ಟು,ಹದಿನೈದು ದಿನಗಳ ಮೇಲೆ ಮತ್ತೊಂದು ನೂರರ ನೋಟನ್ನು ನನ್ನ ಕೈಯಲ್ಲಿಟ್ಟು ಹೋದರು.

'ಅವರು ತಮ್ಮ ಸಂತೋಷವನ್ನು ಬಹು ವಿಧದಿಂದ ತೋರ್ಪಡಿಸಿದರು. ನನಗೆ ಎಷ್ಟೋ ಹಣ್ಣು ಹಂಪಲು, ಚಿನ್ನ ಬೆಳ್ಳಿಯ ಸಾಮಾನು, ಸಿಲ್ಕ್, ವೆಲ್ವೆಟ್ ವಸ್ತ್ರ ಮುಂತಾದ ಕಾಣಿಕೆ ಗಳನ್ನೂ ಅಯಾಚಿತವಾಗಿಯೇ ಕೊಟ್ಟು ಹೋದರು ಅಲ್ಲದೆ ಇತರ ಕೆಲವು ರೋಗಿ ಗಳನ್ನೂ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟರು ಇದ ರಿಂದ ನನ್ನ ವೈದ್ಯವೃತ್ತಿಯು ದಿನಹೋದಂತೆ ವೃದ್ಧಿಹೊಂದುತ್ತಾ ಬಂತು ನನ್ನ ಹೆಸರು ನಾಲ್ಕೂ ಕಡೆಗೆ ಹಬ್ಬಿತು, ನಾನು ನನ್ನ ಜನ್ಮವು ಸಾರ್ಥಕವಾಯಿತೆಂದುಕೊಂಡು ಸಂತೋಷ ಪಟ್ಟೆನು ಜೀವನದಲ್ಲಿನ ನೀರಸವನ್ನು ಕಳೆದು ಕೊಂಡು, ಹೊಸ ಹುರುಪಿನಿಂದ ತುಂಬಿದೆನು

'ಆದರೆ ನನ್ನ ಅದೃಷ್ಟದ ಕೆಡುಗಾಲವು ಅಷ್ಟರಲ್ಲೇ ಕಾಲಿಡತೊಡಗಿತು ಒಂದು ತಿಂಗಳು ದಾಟುವಷ್ಟರಲ್ಲಿ ನರೇಂದ್ರನರೋಗವು ತಿರುಗಿ ಹೆಚ್ಚಳ ಹೊಂದುತ್ತಾ ಬಂತು ಈ ಸಲ ಅವನು ಬಹಳ ಅಪಾಯಕಾರಿಯಾಗತೊಡಗಿ ದನು ಯಾವಾಗ ನೋಡಿದರೂ ಅವನು ಇತರರನ್ನು ನಾನಾ ರೀತಿಯಲ್ಲಿ ಹಿಂಸಿಸು ತ್ತಿದ್ದನು ಆದರೆ ಅವನನ್ನು ಮನೆಯವರು ಬಹಳ ಜಾಗರೂಕತೆಯಿಂದ, ಹೊರಗಿನವರ ದೃಷ್ಟಿಯಲ್ಲಿ ಬೀಳದಂತೆ, ಇಡುತ್ತಿದ್ದು ನನಗೂ ಆ ವಿಷಯವನ್ನು ಗುಟ್ಟಾಗಿಯೇ ಇಡುವಂತೆ ತಿಳಿಸಿದರು ಅವರ ಮನೆತನವು ಬಹಳ ಗೌರವದ್ದಾಗಿದ್ದುದೇ ಇದರ ಕಾರಣವೆಂದರು.

'ಎರಡನೆಯ ತಿಂಗಳು ಕಳೆಯುವಷ್ಟ ರಲ್ಲಿ ನರೇಂದ್ರನ ಹುಚ್ಚು ವಿಪರೀತಕ್ಕೆ ಮುಟ್ಟಿ ತು ಅವನ ಬಾಧೆಯು ತಡೆಯಲಸದಳವಾ ಯಿತು ಒಬ್ಬಿಬ್ಬರಿಗೆ ಅವನು ಹೊಡೆದು ಗಾಯಪಡಿಸಿ, ಮನೆಯವರಿಗೆ ತುಂಬ ಗಾಬರಿ ಉಂಟುಮಾಡಿದನು ಆದರೂ ಎಲ್ಲವೂ ಹೊರ ಗಿನವರಿಗಾರಿಗೂ ತಿಳಿಯದೆಯೇ ಇತ್ತು

"ಕಡೆಗೆ ನನಗೂ ಆತನು ಬಹಳ ಅಪಾ ಯಕಾರಿಯೆಂದು ಕಾಣತೊಡಗಿದನು ಆಗ ನಾನು ಉಪಾಯ ಕಾಣದೆ ಆತನನ್ನು ಹುಚ್ಚರ ಆಸ್ಪತ್ರೆಯಲ್ಲಿ ಇರಿಸಲೇ ಬೇಕೆಂದು ಅಭಿಪ್ರಾಯ ಪಡಿಸಿದೆನು ಮೊದಲು ಮನೆಯವರೆಲ್ಲರೂ ಇದನ್ನು ಪೂರ್ತಿಯಾಗಿ ಅಲ್ಲಗಳೆದರೂ, ಕಡೆಗೆ ಹಾಗೆ ಮಾಡುವೆನೆಂದು ನನಗೆ ತಿಳಿಸಿ ನನ್ನ ದೊಂದು ಸರ್ಟಿಫಿಕೇಟನ್ನು ಪಡೆದರು ಅದ ರೊಂದಿಗೆ ನನ್ನ ನರೇಂದ್ರನ ಸಂಬಂಧವೂ ಕಳಚಿಹೋಯಿತು

೪

'ಕೆಲವು ತಿಂಗಳುಗಳು ದಾಟುತ್ತಲೇ ಒಂದು ದಿನ ನನಗೆ ಹುಚ್ಚರ ಆಸ್ಪತ್ರೆಯ ಡೊಕ್ಟರ್ ರಾಯಚೌಧುರಿಯವರ ಪತ್ರವೊಂದು ಬಂದಿತು. ಅವರಿಗೆ ನನ್ನೊಡನೆ ಅಗತ್ಯದ ಕೆಲ ಸವಿರುವುದರಿಂದ ನಾನು ಅವರನ್ನು ಕೂಡಲೇ ಕಾಣಬೇಕೆಂಬುದೇ ಅದರ ಒಕ್ಕಣೆಯಾಗಿತ್ತು.

'ನಾನು ಕೂಡಲೇ ಹುಚ್ಚರ ಆಸ್ಪತ್ರೆಗೆ ಹೋಗಿ ಅವರನ್ನು ಕಂಡೆನು,

'ರಾಯಚೌಧುರಿಯವರು ನನ್ನನ್ನು ಬಹಳ ಮರ್ಯಾದೆಯಿಂದ ಬರಮಾಡಿಕೊಂ ಡರು. ನಾನು, ಅವರು ನನ್ನನ್ನು ಕರೆಯಿಸಿದ ಕಾರಣವನ್ನು ಕೇಳಲು, ಅವರು ಒಂದು ಪತ್ರ ವನ್ನು ತೆಗೆದು ನನ್ನ ಮುಂದೆ ಇರಿಸಿದರು. ಅದು ನಾನು ನರೇಂದ್ರನ ಹುಚ್ಚಿನ ವಿಷಯವಾಗಿ ಕೊಟ್ಟ ಸರ್ಟಿಫಿಕೇಟಾಗಿತ್ತು.

"'ಯಾಕಿದು? ಏನಾಗಿದೆ ಇದರಲ್ಲಿ ವ್ಯತ್ಯಾಸ?' ನಾನು ಕೇಳಿದೆ

"'ಇದರಲ್ಲಿ ವ್ಯತ್ಯಾಸವೇನೂ ಇಲ್ಲ ಆದರೆ ಇದರಲ್ಲಿ ಕಾಣಿಸಿದ ಹೆಸರಿನವನು ನಿಮ್ಮ ಚಿಕಿ ತ್ಸೆಯಲ್ಲಿದ್ದನೇ?' ರಾಯಚೌಧುರಿಯವರು ಕೇಳಿದರು

"'ಹೌದು ಅದರಲ್ಲೇನು?'

'ಅವನನ್ನು ನೀವು ಗುರುತಿಸಬಲ್ಲಿರಾ?'

"'ಗುರುತಿಸದೆ ಏನ, ಹುಚ್ಚಿನ ಪರಿಣಾ ಮವಾಗಿ ದೇಹದಲ್ಲಿ ತಿರುಚು ಒಡಲಾಯಿಸ ದಿದ್ದರೆ?'

'ಹಾಗಾದರೆ ಒಮ್ಮೆ ಈಚೆಗೆ ಬರಲಾ ರಿರಾ?'

"'ಬಹೆನು'

"ರಾಯಚೌಧುರಿಯವರು ನನ್ನನು ಹುಚ್ಚರ ಕೋಣೆಗಳ ದಾರಿಯಾಗಿ ಕರೆದು ಕೊಂಡು ಹೋದರು ಹೋಗುತ್ತಾ ನಾನು ಚಿಕಿತ್ಸೆ ನಡೆಯಿಸಿದ ನರೇಂದ್ರದತ್ತನು ಆ ಕೋಣೆ ಗಳಲ್ಲಿಯಾದರೂ ಇರುವನೋ ಎಂದು ಕೇಳುತ್ತಾ ನಡೆದರು ಎಲ್ಲಾ ಕೋಣೆಗಳನ್ನು ದಾಟಿದರೂ ನನಗೆ ನರೇಂದ್ರನು ಕಂಡು ಬರ ಲಿಲ್ಲ ನಾನು ಹಾಗೇ ಎಂದೆನು

"ಕಡೆಗೆ ರಾಯಚೌಧುರಿಯವರು ನನ್ನ ನ್ನು ಆ ಕೋಣೆಯ ಒಳಗೆ ಒಯ್ದು ಅದರ ಲ್ಲಿದ್ದವನನ್ನು ತೋರಿಸಿ, 'ಅವನ ಪರಿಚಯ ವಿದೆಯೇ?' ಎಂದು ಕೇಳಿದರು

"'ಇಲ್ಲ'

"'ಆದರೆ ಇವನೇ ನಿಮ್ಮ ಸರ್ಟಿಫಿಕೇಟಿನ ಮೂಲಕ ಇಲ್ಲಿ ಸೇರಿಸಲ್ಪಟ್ಟ ನರೇಂದ್ರದತ್ತ ರಲ್ಲ!'

"'ಅದು ಹೇಗಾದೀತು? ಇವನನ್ನು ನಾನು ಈವರೆಗೆ ಕಂಡಿಲ್ಲ' ನಾನು ದಂಗುಬಡೆದು ದಿಗಿಲಿಸಿದ, ಎಂದೆನು

'ಹೇಗಾದೀತೆಂದು ಮತ್ತೆ ಕೇಳುವಿರಿ ಈಗ ಈ ಪಾಪದವನನ್ನು ಮೊದಲು ಬಿಡಬೇ ಕಾಗಿದೆ

'ಒಡನೆ ಆ ಕೋಣೆಯಲ್ಲಿದ್ದ 'ನರೇಂದ್ರ ದತ್ತ'ನನ್ನು ಸರೆಯಿಂದ ಬಿಡಿಸಿ ಡೊಕ್ಟರ್ ರಾಯಚೌಧುರಿಯವರು ನನ್ನೊಬ್ಬನೊಂದಿಗೆ ತಮ್ಮ ಒಫೀಸಿಗೆ ಹೋದರು

೫

'ರಾಯಚೌಧುರಿಯವರು ನನ್ನ ವೃತ್ತಾಂತ

(೮ನೇ ಪುಟವನ್ನು ನೋಡುವುದು)

ನೀವು ಎಂದಾದರೂ ಬಿಹಾರ್ ರಸಾಯನಿಕ ವೈದ್ಯಶಾಲೆಯ ಕೇಶಪುಷ್ಪಸಾರಕೂಡಿದ ಮಹಾ ಭೃಂಗರಾಜತೈಲ್ಯ ಉಪಯೋಗಿಸಿರುವಿರೋ?

ನಿಮ್ಮ ದೋಳು ತಲೆಯನ್ನು ಇದರ ಉಪಯೋಗದಿಂದ ವಿಪುಲವಾದ ಕೂದಲಿನಿಂದ ರಂಜಿಸುವುದು. ಅನೇಕರು ಕೂದಲು ಉದುರುವದರಿಂದ ಮರುಕಪಡುವರು ಅಂಥವರು ಒಂದು ಸೀಸೆ-ಮೇಲೆ ಕಾಣಿಸಿದ ತೈಲವನ್ನು ಉಪಯೋಗಿಸಿ ದಿನದಿನಕ್ಕೂ ಉದುರುವ ಕೂದಲಿಗೆ ತಡೆಮಾಡಿ, ಬಂಧುಮಿತ್ರರಿಂದ ಪ್ರಶಂಸಿಸಲ್ಪಡಿರಿ. ಇದು ಪ್ರತಿ ದಿನದ ಲೇಪನೆಯಿಂದ ಉದುರಿಬೀಳುವ ಕೂದಲನ್ನು ತಡೆಕಟ್ಟುವದು ವಿಪುಲವಾಗಿ ಬೆಳೆದ ಕೂದಲಿಗೆ ನಿಲುವೆಯನ್ನು ಕೊಟ್ಟು ಅಕಾಲದಲ್ಲಿ ನರೆತ ಕೂದಲು ಕಪ್ಪಾಗುವದು, ಇದು ಶಾಸ್ತ್ರೋಕ್ತವಾಗಿ ತಯಾರಿಸಿರುವದರಿಂದ, ತಲೆ ತಿರುಗುವಿಕೆ, ಓದಕೆಲಸ ನೋವು ಕಣ್ಣು ಮಂಜು, ಸ್ಮೃತಿನಾಶ ಇವುಗಳನ್ನು ಗುಣವಾಗುವದು, ಮಾನಸಿಕ ಕೆಲಸದ ಪುರುಷರಿಗೂ, ಸ್ತ್ರೀಯರಿಗೂ, ಬೇಸಿಗೆ ಕಾಲಕ್ಕೆ ವರಪ್ರದಾನವಾಗಿದೆ

ಸೀಸೆ ೧ಕ್ಕೆ ೭—೧೨—೦, ವಿಳಾಸ:—Behar Chemical Works,

Shree Gauranga Bhavan, BHAGALPUR.

ಏಜಂಟರು—ಷಾ ಕಂಪೆನಿ, ಮಂಗಳೂರು, ದ. ಕ.

'Smile Awhile'

Necessary Identification

OFFICIAL—Have you got any identification papers?

VISITOR—No, I thought them unnecessary as half the town knows me

OFFICIAL—I am sorry, I belong to the half of the town that does not know you!

o o o o o o o

A Dangerous Symptom

EXAMINER—"What is the first sign of approaching death?"

STUDENT—"The arrival of the doctor"

o o o o o o o

Experience

TEACHER—"Ramdas, can you tell me, what a hypocrite is?"

RAMDAS—'Yes, sir It's a boy who comes to school with a smile on his face"

(೭ನೇ ಪುಟದಿಂದ ಮುಂದುವರಿದುದು)

ವನ್ನೆಲ್ಲಾ ಪೂರ್ತಿಯಾಗಿ ಕೇಳಿ, ಬಳಿಕ ನನಗೆ ಎಲ್ಲವನ್ನೂ ವಿವರಿಸಿ ಹೇಳಿದರು

'ಸುರೇಂದ್ರ ದತ್ತನೂ, ನರೇಂದ್ರ ದತ್ತನೂ ಜಿಸ್ವಕ್ರಮವಾಗಿ, ಧೀರೇಂದ್ರ ದತ್ತನ ಹಿರಿಯ ಮತ್ತು ಕಿರಿಯ ಹೆಂಡಂದಿರ ಮಕ್ಕಳಾಗಿದ್ದರು ತಂದೆಯ ಮರಣಾನಂತರ ಒಳ್ಳೆ ಕೆಟ್ಟ ಚಾಳಿಯುಳ್ಳವನಾದ ಸುರೇಂದ್ರ ದತ್ತನು ನರೇಂದ್ರ ದತ್ತನನ್ನು, ಆತನ ಒಂದು ಲಕ್ಷ ರೂಪಾಯಿ ಬೆಲೆ ಬಾಳುವ ಆಸ್ತಿಯ ಅಂಶದ ಲೋಭದಿಂದ, ನಿವಾರಿಸಲು ಗುಟ್ಟಿನಲ್ಲಿ ಪ್ರಯತ್ನ ಮಾಡಿದನು ಅವನ ಯತ್ನಗಳು ಸಫಲವಾಗದಿರಲು, ಕಡೆಗೆ ಆತನನ್ನು ಹುಚ್ಚನೆಂದು ಆಸ್ಪತ್ರೆಯಲ್ಲಿ ಸೇರಿಸಿ ಮರಣಾಂತ ಸಜೆ ವಿಧಿಸುವ ಹಂಚಿಕೆಯನ್ನು ಹೂಡಿದನ ಆಸ್ಪತ್ರೆಯಲ್ಲಿ ಇರಿಸುವಂತೆ ಮಾಡಲು ತಾನೇ ನರೇಂದ್ರನೆಂದ ಹೇಳಿಕೊಂಡು ಹುಚ್ಚನ ನಟನೆ ಮಾಡಿ ವಂಚಿಸಿ ಉಪಾಯದಿಂದ ನನ್ನ ಸರ್ಟಿಫಿಕೇಟನ್ನು ಪಡೆದನು ನರೇಂದ್ರನು ತನಗೆ ಹುಚ್ಚಿಲ್ಲವೆಂದು ಆಸ್ಪತ್ರೆಯಲ್ಲಿ ಸೇರಿಸಲ್ಪಟ್ಟಂದಿನಿಂದ ಎಷ್ಟು ಹೇಳಿಕೊಂಡರೂ ಯಾರೂ ಕಿವಿಗೆ ಹಾಕಿಕೊಳ್ಳಲಿಲ್ಲ ಆತನ ಹುಚ್ಚಿನ ಮಾದರಿಯೇ ಅದೆಂದು ಆಸ್ಪತ್ರೆಯವರಿಗೆ ಸುರೇಂದ್ರನು ಮೊದಲೇ ತಿಳಿಸಿದ್ದನು ಆದರೆ ಕಡೆಗೆ ಆತನ ಮಾತಿನ ಯಥಾರ್ಥತೆಯನ್ನು ತಿಳಿಯಬೇಕೆಂದು ರಾಯ ಚೌಧುರಿಯವರು ಆತನನ್ನು ಕೂಲಂಕಷವಾಗಿ ಪರೀಕ್ಷಿಸಿ ನೋಡಿದರು ಸುರೇಂದ್ರನು ಅಪರಾಧಿಯಾಗಿರಬಹುದೆಂದು ಅನುಮಾನವಾಯಿತು ಕಡೆಗೆ ನನ್ನ ಸರ್ಟಿಫಿಕೇಟಿನ ಸತ್ಯತೆಯನ್ನು ಪರೀಕ್ಷಿಸಿ ನೋಡುವುದಕ್ಕಾಗಿ ನನ್ನನ್ನೂ ಕರೆಯಿಸಿದ್ದಾಯಿತು ಸುರೇಂದ್ರನ ಗುಟ್ಟೆಲ್ಲವೂ ರಟ್ಟಾಯಿತು,' ನಾನು ಮಾತನ್ನು ನಿಲ್ಲಿಸಿದೆನು.

'ಆ ಮೇಲೆ ನರೇಂದ್ರನ ಬದಲಿಗೆ ಸುರೇಂದ್ರನನ್ನೇ ಅವನ ತಪ್ಪಿಗಾಗಿ ಹುಚ್ಚರ ಆಸ್ಪತ್ರೆಯ ಕೋಣೆಯಲ್ಲಿ ಸೆರೆಹಾಕಿದರೇ?'' ನಾಮಣಿ ಕೇಳಿದನು.

'ಅದು ಹೇಗಾಗುವುದು? ಸುರೇಂದ್ರನ ತಪ್ಪು ಕೋರ್ಟಿನಲ್ಲಿ ಸ್ಥಾಪನೆಯಾಯಿತು. ಅವನಿಗೆ ಹತ್ತು ವರ್ಷಗಳ ಕಠಿಣ ಸಜೆಯಾಯಿತು. ಆದರೆ ಹಿಂದೆ ಒಮ್ಮೆ ಮೋಸಕ್ಕಾಗಿ ನಟಿಸಿದ ಹುಚ್ಚನ್ನು ಒಂದೇ ವರ್ಷದಲ್ಲಿ ಅವನು ನಿಜವಾಗಿಯೂ ವಹಿಸುವಂತಾಯಿತು ಆಮೇಲೆ ನರೇಂದ್ರನಿಗಾಗಿ ಅಣಿಮಾಡಿದ ಕೋಣೆಯೇ ಸುರೇಂದ್ರನಿಗೆ ದೊರೆಯಿತು' ನಾನು ಎಂದೆ.

'ನೀನೂ ಮೊಖದ್ದಮೆಯಲ್ಲಿ ಸಿಲುಕಿ ಬೀಳಲಿಲ್ಲವೇ?' ನೀನು ಲಂಚತಿಂದು ಹಾಗೆ ಸರ್ಟಿಫಿಕೇಟನ್ನು ಕೊಟ್ಟದ್ದೆಂದಾಗಲಿಲ್ಲವೆ?' ನಾಮಣಿ ಕೇಳಿದನು

"ಮೊಖದ್ದಮೆಯಲ್ಲಿ ನನ್ನನ್ನು ಹಾಗೆಂದೇ ಸೇರಿಸಿದ್ದರು ಆದರೆ, ತನ್ನ ಬೇರೆ ಬೇಯ ಇಲ್ಲವೆಂದಾದ ಮೇಲೆ, ಸುರೇಂದ್ರನೇ ನನ್ನ ಕಡೆಗೆ ಸಾಕ್ಷಿ ಹೇಳಿ, ನನ್ನನ್ನು ವಿಪತ್ತಿನಿಂದ ಪಾರುಮಾಡಿದನು ಈ ಮೊಖದ್ದಮೆಯಿಂದಾಗಿ ನನ್ನ ವೈದ್ಯವೃತ್ತಿಯು ಪೂರಾ ಮಣ್ಣು ಮುಕ್ಕುವುದೆಂದು ಅಂಜಿದ್ದೆ ಆದರೆ ಅದರಿಂದ ದೊರೆತ ಪ್ರಕಟಣೆಯೆ ನನ್ನ ಇಂದಿನ ಸ್ಥಿತಿಗೆ ಕಾರಣವಾಯಿತು ಅದಕ್ಕಾಗಿಯೇ ಎಂದಿದ್ದೆ, ಇದು ನನಗೆ ಮಹತ್ವದವಿಷಯವೆಂದು, ಅಂತೂ ಜೀವನಾಧಾರವಾಯಿತೆಂದು,' ನಾನು ಎಂದೆ

'ಎಂತಹ ದುರಾಶೆಯಪ್ಪ ಮನುಷ್ಯನಿಗೆ' ಲಕ್ಷಾಂತರ ಹಣವಿದ್ದೂ, ಅದಕ್ಕೆ ಇನ್ನೂ ಕೂಡಿಸುವ ಲಾಲಸೆಯ ಮುಂದೆ ರಕ್ತಸಂಬಂಧ ಕೂಡ ಮರೆತುಹೋಗಬೇಕೇ?' ನೊಂದಿಹೋದ ಸಿಗರೆಟನ್ನು ಹೊತ್ತಿಸುತ್ತ ಎಂದ, ನಾಮಣಿ

'ಹೇಗೆ ಹೇಳಲಿ, ನಾಮಣಿ' **ಅದೂ ಒಂದು ಹುಚ್ಚು!'** ನಾನು ಮಾತು ಮುಗಿಸಿದೆ.

ತಾ. 17–4–1936ನೇ 'ಸ್ವದೇಶಾಭಿಮಾನಿ'ಯಲ್ಲಿ ಪ್ರಕಟವಾದ

ಚಕ್ರಬಂಧ ಒಗಟು ಸಂಖ್ಯೆ೧ರ ಉತ್ತರ.

ಅ	ನಂ	ತ		ತ	ನು	ಜ
ಜ		ಮ	ರಾ	ಲ		ಮು
ರ	ಸ		ಯ		ನಾ	ನಾ
	ರ	ವಿ		ಜ	ಯ	
ಅ	ಸಿ		ಸಿ		ಳ	ದ
ಟ		ಮ	ಕ	ರ		ಫ
ವಿ	ಹಂ	ಗ		ಕ	ಲ	ನ

ಬಿಚ್ಚುಗರು ಕಳುಹಿಸಿದ ಉತ್ತರಗಳಲ್ಲಿ ಪ್ರತಿಯೊಂದರಲ್ಲೂ ಅನೇಕಾನೇಕ ತಪ್ಪುಗಳಿದ್ದುದರಿಂದ ಅವುಗಳಲ್ಲಿ ಅತಿ ಕಡಿಮೆ ತಪ್ಪುಗಳಿರುವ ಉತ್ತರಗಳಿಗೆ ಬಹುಮಾನ ಕೊಡಲಾಗಿದೆ ಆ ಪ್ರಕಾರ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ಕೆಳಗೆ ಕಾಣಿಸಿದ ಮಹಾಶಯರುಗಳಲ್ಲಿ ಸರಿಸಮಾನವಾಗಿ ಹಂಚಲಾಗಿದೆ

1 ಶಿ ಮಾದೈಯ್ಯ, ಬಿದರೂರು ಗ್ರಾಮ, ಶನಿವಾರ ಸಂತೆ ಪೋಸ್ಟು, ಪುತ್ತೂರು ಕೊಡಗು—ರೂ 5

2. ಎಸ್ ನರಸಿಂಹ ಕಾಮತ್, ಮೂಡಬಿದರೆ, ರೂ 5

ಇವರಲ್ಲಿ ಹೆಚ್ಚು ಉತ್ತರಗಳನ್ನು ಕಳುಹಿಸಿದುದಕ್ಕಾಗಿ ನಂಬ್ರ 1ನೇಯವರಿಗೆ ಒಂದು ವರುಷದ ಸ್ವದೇಶಾಭಿಮಾನಿಯನ್ನು ಉಚಿತವಾಗಿ ಕಳುಹಿಸಲಾಗುವುದು (ಬಹುಮಾನದ ಹಣವನ್ನು ಮನಿಯಾರ್ಡರ್ ಮೂಲಕ ಕಳುಹಿಸಲಾಗುವುದು)

'ಸಂಚಾಲಕ'' "ಸ್ಪರ್ಧಾರಂಗ"

ದೇವೀ ಫಿಲಂ ತಯಾರಿಕೆ ಶ್ರೀಯುತ ಸಿಂಹರೇ ನಿರ್ದೇಶಕರು.

ಸಂಸಾರ ನೌಕ

ನಟವರ್ಗ.—

ಎಂ. ಸ ಮಾಧವರಾವ್, ಎಂ ಮಾಧವ ರಾವ್, ಬಿ. ಆರ್. ಪಂತಲು, ಹನುಮಂತ ರಾವ್, ರಾಘವೇಂದ್ರ ರಾವ್, ಕೃಷ್ಣ ಶಾಸ್ತ್ರಿ ಕೃಷ್ಣ ಮೂರ್ತಿ, ಬಾಲಕೃಷ್ಣರಾವ್ ಮಿಸ್ ಪದ್ಮ, ಮಿಸ್. ರಾಜಮ್ಮ ಮಿಸ್ ಸರೋಜ

ತಾತನಿಂದ ಹೊರದೂಡಲ್ಪಟ್ಟು ಸ್ನೇಹಿತರಿಂದ ಕಡೆಗಣಿಸಿ, ಪ್ರಿಯ ಪತ್ನಿಯಿಂದ ಪ್ರತ್ಯೇಕಿಸಲ್ಪಟ್ಟು ನಿರುದ್ಯೋಗದ ವ್ಯಥೆಗೆ ಸಿಲ್ಕಿದ ಸುಂದರ

ತನಗಾಗಿ ಸರ್ವಸ್ವವನ್ನು ತೊರೆದ ಪತಿಗಾಗಿ ಪಾಡುಪಟ್ಟ ಸುಶೀಲೆ ಸರಳೆ

ಅಪೂರ್ವ ನಂಬಿಕೆಯುಳ್ಳ ಜಮಾದಾರನ ಸಂಸಾರ ನೌಕಾಭಂಗಕ್ಕೆ ಕಾರಣನಾದ ಕುಟಿಲ ಆಚಾರ್ಯ ಶುಕದೇವ,

ಸ್ವಾಮಿಗಾಗಿ ಸ್ವಾಮಿ ಸುಖಕ್ಕಾಗಿ ತನ್ನ ಜೀವಿತ ಆರ್ಜಿತವನ್ನೆಲ್ಲವನ್ನು ಅರ್ಪಿಸಲು ಸಿದ್ಧನಾದ ಸಿದ್ದ

ಇವರನ್ನು ನಿಮ್ಮ ಪ್ರೀತಿಯ ಭವ್ಯ ಸಿನಿಮಾ ಮಂದಿರದಲ್ಲಿ ಎದುರುಗೊಳ್ಳಲು ಸಿದ್ಧರಾಗಿ

For booking apply to—

Devi Films Ltd., Mint St., P.T. Madras.

ಡಾ॥ ಅನ್ಸಾರಿಯವರು ದಿವಂಗತರಾದರು.

ಕಾಂಗ್ರೆಸಿನ ಮಾಜಿ ಅಧ್ಯಕ್ಷರು.

ಟ್ರೈನಿನಲ್ಲಿ ಅಕಸ್ಮಾತ್ತಾಗಿ ಮೃತರಾದರು!

ಸಮಗ್ರ ಹಿಂದೂದೇಶವೇ ಸಂತಾಪದಲ್ಲಿ ಮುಳುಗಿದೆ.

ಮೃತರಿಗೆ ಭಾರೀ ಶ್ಲಾಘನೆಗಳು.

ಭರತ ಖಂಡದ ಮಾನ್ಯವ್ಯಕ್ತಿಗಳೂ, ಸುಪ್ರಸಿದ್ಧ ವೈದ್ಯ ವಿದ್ಯಾಪ್ರವೀಣರೂ ಮತ್ತು ಕಾಂಗ್ರೆಸ್ಸಿನ ಅಪರ್ವ ಪುರುಷರೂ ಆದ ಡಾ॥ ಅನ್ಸಾರಿಯವರು ರೈಲುಗಾಡಿಯಲ್ಲಿ ಮೃತಿಯನೈದಿದರು.

ಇದೇ ೯ನೇ ೧೦ರಲ್ಲಿ ಡಾ॥ ಅನ್ಸಾರಿಯವರು ಡೆಹರಾಡೂನ್ನಿಗೆ ಹೋಗಿದ್ದವರು ಡಿಲ್ಲಿಗೆ ಹಿಂತಿರುಗುವ ಸಮಯ ಹೃದ್ರೋಗದಿಂದ ಟ್ರೈನಿನಲ್ಲಿ ಅಕಸ್ಮಾತ್ತಾಗಿ ಮೃತರಾದರು. ಡಾ॥ ಅನ್ಸಾರಿಯವರು [illegible] ಕೇಸದ ಮೇಲೆ ಶ್ರೀಮತಿ ಕಿಲ್ಲಿಯೆಂಬುವರೊಡನೆ ಮಸ್ಸೂರಿಗೆ ತೆರಳಿದ್ದರು. ಸಾಧಾರಣ ರಾತ್ರಿ ಘಂಟೆ ೧೨-೪೦ಕ್ಕೆ ಮಲಗಿದ್ದ ಡಾಕ್ಟರು "ನಾನು ಸಾಯುತ್ತೇನೆ [illegible] ಔಷಧಿ ಕೊಡಿರಿ" [illegible] ಆದರೆ ಯಾವ ಔಷಧಿಯಿಂದು ಕೇಳುವಷ್ಟು ಅವರಿಗೆ [illegible] ದೊರಕಲಿಲ್ಲ. ತೊಸ್ಸಿಗೆ ಶ್ರೀಮತಿ [illegible] ಎಬ್ಬಿಸಿದರು. ಗಾಡಿಯಲ್ಲಿ ಪ್ರಯಾಣ ಮಾಡುತ್ತಿರುವ ಅವರ ಸೇವಕರನ್ನು ಕರೆದು [illegible] ಔಷಧಿಯನ್ನು ಕಂಡುಹಿಡಿದರು. ಆದರೆ, ಅದು ಫಲಿತ ಮಾಗಲಿಲ್ಲ. [illegible] ಸ್ವರ್ಗಸ್ಥರಾದರು. [illegible] ಡಿಲ್ಲಿಗೆ ಹಂಚಿತು. [illegible] ಟ್ರೈನು ಮರುದಿನ ಬೆಳಿಗ್ಗೆ [illegible] ಡಿಲ್ಲಿ ಸ್ಟೇಶನನ್ನು ಸೇರಿತು. [illegible] ಡಾ॥ ಅನ್ಸಾರಿಯವರ ಕೊನೆಯ ದರ್ಶನವನ್ನು ಮಾಡಬೇಕೆಂದು ಅಲ್ಲಿ ನೆರೆದಿದ್ದರು. ಶವಸಂಸ್ಕಾರವು ಅಂದೇ ಸಾಯಂಕಾಲ ನಡೆಯಿತು. ಡಾಕ್ಟರರ ಅಕಾಲಮೃತ್ಯುವನ್ನು ಕುರಿತು, ಅವರ ಗುಣಕಥನಮಾಡಿ ಅನೇಕ ಸಂತಾಪಸೂಚಕ [illegible] ಭರತ ಖಂಡದ ಎಲ್ಲಾ ಪ್ರಮುಖರಿಂದ ಎಲ್ಲ ಕಡೆಗಳಿಂದ ಡಾ॥ ವಿಧನೆಯವರಿಗೆ ಬಂದಿರುತ್ತವೆ.

ಡಾ॥ ಅನ್ಸಾರಿಯವರ ಸಂಕ್ಷಿಪ್ತ ಜೀವನ ಚರಿತ್ರೆ.

ಜನನ ೧೮೮೦ ಸಂಯುಕ್ತ ಪ್ರಾಂತ್ಯದ ಗಾಜಿಪುರ ಎಂಬಲ್ಲಿ. ಅಲ್ಲಹಾಬಾದಿನ ಸೆಂಟ್ರಲ್ ಕಾಲೇಜಿನಲ್ಲೂ ಹೈದ್ರಾಬಾದಿನ ನೈಜಾಮ ಕಾಲೇಜಿನಲ್ಲೂ ವಿದ್ಯಾಭ್ಯಾಸಂಗ ಮಾಗಿ, ಕೊನೆಗೆ ಮದ್ರಾಸಿನ ಮೆಡಿಕಲ್ ಕಾಲೇಜಿನಲ್ಲಿ ಅಭ್ಯಾಸಮಾಡಿ ವೈದ್ಯಕೀಯ ಬಿರುದನ್ನು ಪಡೆದರು. ೧೯೦೫ರಲ್ಲಿ ಸ್ಕಾಟ್ಲೆಂಡಿನ ಎಡಿನ್ ಬರೋವಿಗೆ ಹೋದರು. ಅನೇಕ ವೈದ್ಯಕೀಯ ಪರೀಕ್ಷೆಗಳಿಗೆ ಕುಳಿತು ಬಿರುದುಗಳನ್ನು ಪಡೆದರು. ಅನೇಕ ಆಂಗ್ಲೇಯ ಆಸ್ಪತ್ರೆಗಳಲ್ಲಿ ಅನುಭವಹೊಂದಿದರು. ೧೦ ವರ್ಷ ಕಾಲ ಪಾಶ್ಚಾತ್ಯದಲ್ಲಿದ್ದು ೧೯೧೦ರಲ್ಲಿ ಹಿಂದೂದೇಶಕ್ಕೆ ಬಂದು ೧೯೧೨-೧೩ರಲ್ಲಿ ಟರ್ಕಿದೇಶಕ್ಕೆ ಒಂದು ಅಖಿಲ ಭಾರತ ಮೆಡಿಕಲ್ ಮಿಶನನ್ನು ತೆಗೆದುಕೊಂಡುಹೋದರು. ಮಹಾಯುದ್ಧದ ಸಮಯ ಯೂರೋಪು ಖಂಡದ ಅನೇಕ ಕಡೆಗಳಲ್ಲಿ ರೆಡ್‌ಕ್ರಾಸ್ ಸಂಸ್ಥೆಯಲ್ಲಿದ್ದು ಯುದ್ಧದಲ್ಲಿ ಘಾಯಹೊಂದಿದವರ ಸೇವೆಯನ್ನು ಮಾಡಿದರು. ಉತ್ತರ ಹಿಂದೂದೇಶದ ಅನೇಕ ರಾಜಕುಮಾರರ ವೈದ್ಯರಾಗಿದ್ದರು. ೧೯೧೬-೧೮ರಲ್ಲಿ ನಡೆದ ಹೋಂರೂಲು ಚಳವಳದಲ್ಲಿ ಬಹಳ ಪರಿಶ್ರಮವಹಿಸಿದರು. ೧೯೨೦ರಲ್ಲಿ ಅಖಿಲ ಭಾರತ ಮುಸ್ಲಿಮ್ ಸಂಘದ ಅಧ್ಯಕ್ಷರಾಗಿದ್ದರು. ೧೯೨೭ರಲ್ಲಿ ಮದ್ರಾಸಿನಲ್ಲಿ ಜರಗಿದ ಕಾಂಗ್ರೆಸ್ಸಿನ ೪೨ನೇ ಅಧಿವೇಶನದ ಅಧ್ಯಕ್ಷರು. ೧೯೨೨ರಲ್ಲಿ ಗಯೆಯಲ್ಲಿ ಜರಗಿದ ಖಿಲಾಫತ್ ಪರಿಷತ್ತಿನ ಅಧ್ಯಕ್ಷರು. ೧೯೨೮ರಲ್ಲಿ ಕಲ್ಕತ್ತಾದಲ್ಲಿ ನಡೆದ ಎಲ್ಲಾ ಪಕ್ಷಗಳ ಸಭೆಯ ಅಧ್ಯಕ್ಷರಾಗಿದ್ದರು. ೧೯೩೦ ಮತ್ತು ೧೯೩೨ರಲ್ಲಿ ನಡೆದ ಸತ್ಯಾಗ್ರಹ ಚಳವಳದಲ್ಲಿದ್ದು ಕಾರಾಗ್ರಹವನ್ನು ಸೇರಿದರು. ೧೯೩೪-೩೫ರಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾಗಿದ್ದರು. ೧೯೩೫ರಲ್ಲಿ ಇವರು ರಾಜಕೀಯದಿಂದ ಆರೋಗ್ಯ ನಿಮಿತ್ತ ನಿವೃತ್ತರಾಗಿದ್ದರು.

ಇಟಲಿಯ ಅರಸರು ಹಬಸಿಯರ ಚಕ್ರವರ್ತಿಯಾದರು.

ಎಥಿಯೋಪಿಯಾದ ಪ್ರಾಂತ್ಯಗಳ ಮೇಲೆ ಇಟಲಿಯಾನರ ಅಧಿಕಾರ.

ಮುಸಲೇನಿಯ ಭಿನ್ನಪ.

ಮಾರ್ಶಲ್ ಬೊಡೊಗ್ಲಿಯೋ-ಎಥಿಯೋಪಿಯಾದ ವೈಸರಾಯರು.

ಇಟಲಿಯಾನ ಪೆಸಿಸ್ಟ್ ಗ್ರೇಂಡ್ ಕೌನ್ಸಿಲಿನ ಸಭೆಯು ಮೊನ್ನೆ ೯ನೇ ೧೦ರಲ್ಲಿ ರೋಮಿನಲ್ಲಿ ಜರಗಿತು. ನಂತರ, ಸರಕಾರಮಂಡಳದ ಸಭೆಯೂ ಜರಗಿತು. ಬಹಳ ಜನಸ್ತೋಮವು ನೆರೆದಿದ್ದ ಒಂದು ಸಭೆಯಲ್ಲಿ ಮುಸಲೇನಿಯವರು ಒಂದು ಭಾಷಣಮಾಡಿದರು. "ಇಟಲಿಗೆ ಕಡೆಗೆ ಸಾಮ್ರಾಜ್ಯವು ದೊರಕಿರುತ್ತದೆ. ಪೆಸಿಸ್ಟ ಸಾಮ್ರಾಜ್ಯವು ಅನಾದಿ ರೋಮಿನಂತೆ ಕೀರ್ತಿಯಿಂದ ನಡೆಯುವಂತದ್ದು. ಇದರಿಂದ ಶಾಂತಿಯ ಸಾಮ್ರಾಜ್ಯವು [illegible] ಇಟಲಿಗೆ ಶಾಂತಿಯೇ ಬೇಕಾಗಿದೆ. ಆದರೆ, ನಮ್ಮ ಮೇಲೆ ಆಕ್ರಮಿಸಿದವರನ್ನು ನಾವು ಶಸ್ತ್ರಗಳಿಂದ ವಿರೋಧಿಸಲು ಸಿದ್ಧರಿದ್ದೇವೆ. ಈ ಸಾಮ್ರಾಜ್ಯಕ್ಕಾಗಿ, ಇಂದಿಗೆ ೧೪ ವರ್ಷಗಳಿಂದಲೂ ಇಟಲಿಯ ತರುಣರು ಪರಿಶ್ರಮಿಸುತ್ತಿರುವರು. ಇಟಲಿಗೆ ಉಜ್ವಲವಾದ ಭವಿಷ್ಯವಿದೆ. ಅದಕ್ಕೆ ನೀವು ಸಿದ್ಧರೇ?" ಇದಕ್ಕೆ ಎಲ್ಲರೂ ಸಮ್ಮತದ ಕೂಗನ್ನು ಹಾಕಿದರು. ಮುಸಲೇನಿಯ ಭಾಷಣವನ್ನು ಕೇಳಲು ಸಾಧಾರಣ ೩ ಲಕ್ಷ ಜನರು ನೆರೆದಿದ್ದರು. ಆದರೆ ಪ್ರಪಂಚದ ಇತರ ಕಡೆಗಳಲ್ಲಿ ಮುಸಲೇನಿಯ ಈ ವರ್ತದ ಭಾಷಣಕ್ಕೆ ಅಷ್ಟು ಮನ್ನಣೆ ದೊರೆತಂತೆ ತಿಳಿಯುವುದಿಲ್ಲ.

ಮುಸಲೇನಿಯವರ

ಇಟಲಿಯ ಅರಸರು ಸದ್ಯದಲ್ಲೇ (ಶಾಂತಿಸ್ಥಾಪನೆಯಾದ ಮೇಲೆ) ಎಥಿಯೋಪಿಯಾವನ್ನು ಸಂದರ್ಶಿಸುವರಂತೆ. ಇಟಲಿಯಾನರು ಉತ್ತರ ದಿಕ್ಕಿನಲ್ಲೂ ದಕ್ಷಿಣ ದಿಕ್ಕಿನಲ್ಲೂ ಅನೇಕ ಪ್ರಾಂತ್ಯಗಳನ್ನು ಹಿಡಿದಿರುವರು. ಇಟಲಿಯಾನರ ಅಧಿಕಾರದ ಅಡಿಯಲ್ಲಿ ಹಬಸಿಯರ ಸೇನಾಮಂಡಲವೊಂದು ಸಿದ್ಧವಾಗುತ್ತದೆ.

ಮುಸಲೇನಿಯನ್ನು ಎದುರಿಸಲು, ಹಬಸಿ ಸಿಂಹಾಸನದ ಮೇಲೆ ಹಕ್ಕುಳ್ಳ ಚಕ್ರವರ್ತಿ ಮೆನಲಿಕ್‌ರ ವಿರೋಧಿಗಳಾದ ಓರ್ವ ಹಬಸಿ ನಾಯಕರು ಒಂದುವರೆ ಲಕ್ಷ ಸೈನಿಕರುಳ್ಳ ಒಂದು ಪಡೆಯಿಂದ ಕೂಡಿದವರಾಗಿ ಹಬಸಿ ಸಿಂಹಾಸನಕ್ಕಾಗಿ ಹೋರಾಡುವರಂತೆ.

ಎಥಿಯೋಪಿಯಾವನ್ನು ಯಾವತ್ತು ಜನಾಂಗದವರು ಇಟಲಿಯ ಅಪ್ಪಣೆ ವಿನಹ ಪ್ರವೇಶಿಸಬಾರದಾಗಿ ಕಟ್ಟುಪ್ಪಾಡುಗಳು ಜ್ಯಾರಿಯಾಗಿವೆ. ಅಲ್ಲಲ್ಲಿ ಕಾವಲು ಇಡಲಾಗಿದೆ.

ಶ್ರೀ॥ ಸುಭಾಷ್ಚಂದ್ರರ ಬಂಧನ.

ದೇಶದಲ್ಲೆಲ್ಲಾ ಪ್ರತಿಕೂಲಗಳು.

ಶ್ರೀ॥ ರಾಜೇಂದ್ರಪ್ರಸಾದ ಮತ್ತು ಶ್ರೀ॥ ಸತ್ಯಮೂರ್ತಿಗಳ ಪ್ರಚಂಡ ಭಾಷಣ.

ಮೇ ತಿಂಗಳ ೩ನೇ ೧೦ನೇ ದಿನವು ಶ್ರೀ॥ ಸುಭಾಷ್ ಚಂದ್ರರ ಬಂಧನವನ್ನು ಪ್ರತಿಕೂಲಿಸುವುದಕ್ಕಾಗಿ, ಸುಭಾಷ್ಚಂದ್ರ ದಿನವಾಗಿ ಸಮಗ್ರ ಹಿಂದೂಸ್ಥಾನದಲ್ಲೆಲ್ಲಾ ಆಚರಿಸಲಾಯಿತು. ಪಾಟ್ನಾದಲ್ಲಿ ಜರಗಿದ ಈ ಸಮಾರಂಭಕ್ಕೆ ಶ್ರೀ॥ ಬಾಬೂರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿದ್ದರು. ಇವರು ಸರಕಾರದ ಹಿಂದೀಯರ ನಾಗರೀಕ ಸ್ವಾತಂತ್ರ್ಯವನ್ನು ದಿಗಿಬಿಡಿಯುವ ವರ್ತನೆಯನ್ನು ಖಂಡಿಸಿ ಭಾಷಣಮಾಡಿದರು. ಹಿಂದೂದೇಶವು ಆಶ್ರಿತ ರಾಜ್ಯವಾದುದರಿಂದಲೇ [illegible] ಅನರ್ಥಗಳಿಗೆ ಕಾರಣವೆಂದೂ, ಆದರಿಂದ ಭಾರತೀಯರು ಆದಷ್ಟು ಬೇಗನೇ ಸ್ವರಾಜ್ಯ ಪಡೆಯಲು ಪ್ರಯತ್ನಿಸಬೇಕೆಂದೂ ಶ್ರೀಯುತ ಪ್ರಸಾದರು ಭಾವಪೂರ್ವಕವಾಗಿ ನೆರೆದ ಸಭಿಕರಲ್ಲಿ ಭಿನ್ನವಿಸಿಕೊಂಡರು.

ಮದ್ರಾಸಿನಲ್ಲಿ ಈ ಬಗ್ಗೆ ಜರಗಿದ ಸಭೆಯಲ್ಲಿ ಶ್ರೀ॥ ಸತ್ಯಮೂರ್ತಿಯವರು ಸರಕಾರದ ಕಠಿಣ ಶಾಸನಗಳನ್ನು ಖಂಡಿಸಿಯೂ ಸುಭಾಷ್ಚಂದ್ರರ ಗುಣಕಥನ ಮಾಡಿಯೂ ನವನೈಸರಿಯವರ ಕುರಿತಾಗಿಯೂ ಪ್ರಚಂಡ ಭಾಷಣವು ಇದ್ದಿತು. ಅನೇಕ ಕಾಂಗ್ರೆಸ್ ಪ್ರಮುಖರೂ ಭಾಷಣವಿತ್ತರು.

ಶ್ರೀ॥ ಸುಭಾಷ್ಚಂದ್ರ ಭೋಸರು.

ಬೊಂಬಾಯಿಯಲ್ಲಿ ಜರಗಿದ ಈ ಸಮಾರಂಭಕ್ಕೆ ಶ್ರೀ॥ ಕೆ. ಎಫ್. ನರಿಮ್ಯಾನರು ಅಧ್ಯಕ್ಷರಾಗಿದ್ದರು. ಶ್ರೀ॥ ಭೋಸರನ್ನು ಯಾವತ್ತು ನ್ಯಾಯವಿಚಾರಣೆಗಳು ಇಲ್ಲದೆ ಬಂಧನದೊಳಗೆ ಇರಿಸಿದ ಸರಕಾರದ ವರ್ತನೆಯನ್ನು ಖಂಡಿಸಿ ಠರಾವುಗಳಾದುವು. ಅನೇಕ ಭಾವಪೂರ್ಣ [illegible] ಭಾಷಣಗಳಾದುವು.

ಸಮಸ್ತ ಹಿಂದೂದೇಶದಲ್ಲೂ ಶ್ರೀ॥ ಸುಭಾಷ್ಚಂದ್ರ ದಿನಾಚರಣೆಯು ಯಶಸ್ವಿಯಾಗಿ ನಡೆಯಿತು.

ಶ್ರೀ ನರಿಮಾನರು ಸುಭಾಷ್ಚಂದ್ರರ ಭೇಟಿಮಾಡಿದರು.

ಮುಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಶ್ರೀ॥ ಕೆ. ಎಫ್. ನರಿಮೇನರು ಮುಂಬಯಿ ಸರಕಾರದ ಅಪ್ಪಣೆಪಡೆದು, ಸರಕಾರಿ ಅಧಿಕಾರಿ ಸರಗತ ಎರವಾಡದಲ್ಲಿರುವ ಶ್ರೀ॥ ಭೋಸರ ಭೇಟಿಯನ್ನು ಮಾಡಿದರು. ಅಧಿಕಾರಿಗಳು ಇವರು ಭೋಸರೊಡನೆ ಯಾವತ್ತು ರಾಜಕೀಯ ವಿಚಾರಗಳನ್ನು ಕುರಿತು ಮಾತಾಡದಂತೆ ಅಡ್ಡಿ ಹಾಕಿದರು. ದಿವಂಗತ ಪಟೇಲರ ವೀಲಿನ ಕುರಿತು ಮಾತ್ರ ಮಾತುಕತೆ ನಡೆಯಿತು. ಶ್ರೀ॥ ಭೋಸರಿಗೆ ಕೆಲವು ಹಣ್ಣುಹಂಪಲುಗಳನ್ನು ಒತ್ತಿಪೂ ಒದಗಿಸುವ ವಿಚಾರದಲ್ಲಿ [illegible]

ಹರಿಜನರಿಗೆ ದೇವಾಲಯ ಪ್ರವೇಶ.

ಕೇರಳಾಧಲ್ಲಿ ಜರಗಿದ ಪರಿಷತ್ತಿನಲ್ಲಾದ ನಿರ್ಣಯಗಳು.

ಹರಿಜನರಿಗೆ ದೇವಾಲಯಗಳಲ್ಲಿ ಪ್ರವೇಶದೊರಕಿಸಲು ತಿರುವಾಂಕೂರಿನಲ್ಲಿ ಈಗ ಚಳವಳವು ಬಹಳ ರಭಸದಿಂದ ನಡೆಯುತ್ತಿದೆ. ಮೊನ್ನೆ ದಿನ ಅಲ್ಲಿ ಟ್ರಿವಾಂಡ್ರಮಿನಲ್ಲಿ ಅಖಿಲ ಕೇರಳಾ ಹರಿಜನ ದೇವಾಲಯ ಪ್ರವೇಶ ಪರಿಷತ್ತು ಜರಗಿತು. ಹರಿಜನರಿಗೆ ದೇವಾಲಯ ಪ್ರವೇಶ ದೊರಕಿಸುವರೇ ಅನೇಕ ಠರಾವುಗಳು ಮಂಜೂರಾದುವು. ಮಹಾರಾಜರೊಡನೆ ಈ ಕುರಿತು ವಿನಂತಿ ಮಾಡಿಕೊಳ್ಳಲು ನಿರ್ಧರಿಸಲಾಯಿತು.

ಮುಂದಿನ ಭಾನುವಾರ ಡಾ॥ ಅನ್ಸಾರಿಯವರ ದಿನ.

ಪಂಡಿತ ಜವಾಹರಲಾಲರ ಪ್ರಾರ್ಥನೆ.

ಡಾ॥ ಅನ್ಸಾರಿಯವರ ಮರಣದ ಸುದ್ದಿಯನ್ನು ಕೇಳಿ ಪಂಡಿತ ಜವಾಹರಲಾಲರು ಬಹಳ ಮರುಗಿದರು. ಅವರು ಹೇಳಿದ್ದೇನೆಂದರೆ: ಅಗಾಗ್ಗೆ ಭರತ ಖಂಡವು ಒಬ್ಬ ಮಾನ್ಯ ಮತ್ತು ಅನಾಮರಿಗೆ ಪರಿಪೂರ್ಣರಾದ ಮಹನೀಯರ ಮರಣಕ್ಕಾಗಿ ಮರುಗುತ್ತಿದೆ. ಇದು ನಮ್ಮ ದುರದೃಷ್ಟ. ನಾವು ಇಂತಹ ದುಃಖ ಸನ್ನಿವೇಶಗಳಿಗೆ ಅಗಾಗ್ಗೆ ಗುರಿಯಾಗಿ ಅದರ ಸಂಕಟವನ್ನನುಭವಿಸಿದರೂ ಕೂಡ ಆ ವಿಯೋಗಸಂಕಟವು ನಮಗೆ ಕಡಿಮೆಯಾಗಿಲ್ಲ. ನಮಗೆ ಆ ಸಂಕಟವಿದ್ದೇ ಇದೆ. ಆದರಿಂದ ನಾವು ಹೊರಗಾಗಿಲ್ಲ. ಮುಖ್ತಾರ್ ಅಹಮ್ಮದ್ ಅನ್ಸಾರಿಯವರು ಈ ಪ್ರಪಂಚವನ್ನು ಬಿಟ್ಟುಹೋದರು. ಅವರು ದೇಶಕ್ಕೆ ದೊಡ್ಡ ಆಧಾರಸ್ತಂಭದಂತಿದ್ದರು. ಅಂತಹ ಮಹನೀಯರನ್ನು ಇಂದು ದೇಶವು ಕಳಕೊಂಡಿತು. ಡಾ॥ ಅನ್ಸಾರಿಯವರ ದೇಶಸೇವೆ ಮತ್ತು ದೇಶಕ್ಕಾಗಿ ಅವರು ಮಾಡಿದ ತ್ಯಾಗ ಮುಂತಾದುವು ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿವವೆ. ಸ್ವಾತಂತ್ರ್ಯಕ್ಕಾಗಿ ಅವರು ದುಡಿದ ರೀತಿ ಮತ್ತು ಹೋರಾಡಿದ ರೀತಿ ಇವುಗಳು ಇನ್ನು ಹೊಸವಾಗಿ ನಮ್ಮ ನೆನಪಿನಲ್ಲಿವೆ. ಡಾ॥ ಅನ್ಸಾರಿಯವರಂತಹ ಪ್ರೇಮಪೂರಿತ ಹೃದಯದವರನ್ನು ನಾವು ಕಳೆದುಕೊಂಡಿರುವುದು ನಮ್ಮ ದುರದೃಷ್ಟ. ಅವರ ಸಹಾಯವು ನಮಗೆ ಸದಾ ಇತ್ತು. ಈಗ ೩೦ ವರ್ಷಗಳ ನಂತರ ನಾನು ಅವರನ್ನು ಮೊದಲನೆಯ ಸಾರಿ ನೋಡಿ ಅವರ ಪರಿಚಯಭಾಗ್ಯವನ್ನು ಪಡೆದೆನು. ಈ ದೀರ್ಘ ಕಾಲದಲ್ಲಿ ಅವರ ಸ್ನೇಹದ ಬೆಲೆಯೇನೆಂಬುದನ್ನು ನಾನು ಅರಿತಿದ್ದೇನೆ. ಈ ಕಷ್ಟ ದಿನಗಳಲ್ಲಿ ಅವರೂ ನಾನೂ ವಿವಿಧರೀತಿ ಕಷ್ಟಪಟ್ಟಿದ್ದೇವೆ.

ಈ ದುಃಖ ಸಮಾಚಾರವು ಭರತ ಖಂಡದ [illegible] [illegible] ಎಲ್ಲಾ [illegible] ಅದರೆ ಅಂತಹ [illegible] ಒಂದು ಪ್ರತ್ಯೇಕ ದಿನವನ್ನು [illegible] ಇದೇ ೩೧ನೇ ಭಾನುವಾರ ದಿನ ಭರತ ಖಂಡದಲ್ಲೆಲ್ಲಾ ಅವರ ದಿನವನ್ನಾಚರಿಸಬೇಕೆಂದು ಕೋರುತ್ತೇನೆ. [illegible] ಸಭೆಗಳನ್ನು ನಡೆಸಿ ಸಂತಾಪ ಸೂಚಕ [illegible] ಕಳುಹಿಸಿಕೊಡಬೇಕು.

ಬೆಂಗಳೂರಿನಲ್ಲಿ ಮಹಾತ್ಮಾ ಗಾಂಧೀಜಿಯವರು.

ಬಹಳ ವಿಜೃಂಭಣೆಯಿಂದ ಸ್ವಾಗತೀಕರಿಸಲ್ಪಟ್ಟರು.

ಆರೋಗ್ಯವು ನೆಟ್ಟಗಿದೆ.

ಮಹಾತ್ಮಾಜಿಯವರು ತಮ್ಮ ಪತ್ನಿಯವರೊಡನೆ ಮದ್ರಾಸು ಮೈಲಿನಲ್ಲಿ ಪ್ರಯಾಣ ಬೆಳಸಿ, ಮೊನ್ನೆ ೩ನೇ ೧೦ರಲ್ಲಿ ಬೆಳಗಿನ ಜಾವಕ್ಕೆ ಬೆಂಗಳೂರಿನಲ್ಲಿ ಇಳಿದರು. ಜನಸ್ತೋಮವು ಅವರ ದರುಶನ ಮಾಡಲು ಕಿಕ್ಕಿರಿದು ನೆರೆದಿತ್ತು. ಸರದಾರ್ ಪಟೇಲರು ಮಹಾದೇವ ದೇಸಾಯಿಗಳು ಶ್ರೀಮತಿ ಮಣಿಬೆನ್ ಪಟೇಲರು ಮುಂಬಯಿಯಿಂದ ಇವರನ್ನು ಸೇರಲು ಇಲ್ಲಿಗೆ ಬಂದಿರುವರು. ಬೆಂಗಳೂರಿನ ಕುಮಾರಪಾರ್ಕಿನಲ್ಲಿ ಒಂದು ತಾಸು ವಿರಾಮ ಪಡೆದು ನಂತರ ನಂದಿಗುಡ್ಡೆಗಳಿಗೆ ಪ್ರಯಾಣ ಬೆಳೆಸಿದರು. ಮಹಾತ್ಮಾಜಿಯವರ ಆರೋಗ್ಯವು ನೆಟ್ಟಗಿದ್ದು ಅವರು ಸಂತೋಷಚಿತ್ತರಾಗಿದ್ದರು. ಮೈಸೂರಿನ ದಿವಾನರು ಮಹಾತ್ಮಾಜಿಯವರ ಭೇಟಿಮಾಡಿದರು.

ನಾಲ್ವರು ಸ್ತ್ರೀಯರ ಪ್ರಾಣತ್ಯಾಗ.

ಕೂನೂರಿನಿಂದ ಸುಮಾರು ೬ ಮೈಲು ದೂರದಲ್ಲಿರುವ ತಾಕೇರಿ ಎಂಬ ಹಳ್ಳಿಯಲ್ಲಿ ನಾಲ್ವರು ಸ್ತ್ರೀಯರು ತಮ್ಮ ಜೀವನದ ಮೇಲೆ ಬೇಸತ್ತು ಪ್ರಾಣತ್ಯಾಗ ಮಾಡಬೇಕೆಂಬ ನಿರ್ಧಾರಮಾಡಿದರು. ಒಂದು ಮದುವೆಗೆ ಹೋದವರು ತಮ್ಮ ಮನೆಗಳಿಗೆ ಹಿಂತಿರುಗದೆ, ಅಲ್ಲಿರುವ ಒಂದು ಸರೋವರಕ್ಕೆ ಹಾರಿ ಪ್ರಾಣತ್ಯಾಗಮಾಡಿಕೊಂಡರು.

ಅನುಕ್ರಮಣಿಕೆ

ನೋಟಗಳು . . . ೩
[illegible] ಕಾಟ ೪
ಎಚ್ಚರ ಕೊಡುವ ಇಟಲಿಯ ವಶವಾಯಿತು ೬
ಆದರೂ ಒಂದು ಹುಚ್ಚು ೭
ವಿವಿಧ ಸಮಾಚಾರಗಳು . . ೧೦
[illegible]
ಮ್ಯುನಿಸಿಪಲ್ ಕೌನ್ಸಿಲಿನಲ್ಲಿರುವ ಕಾಂಗ್ರೆಸ್ ಸದಸ್ಯರು ೧೧
[illegible], ಕಾಲಕ್ಷೇಪ ೧೧
[illegible] ವಿಚಾರಗಳು ೧೨
[illegible] ಸಂಗ್ರಹ
[illegible] . . ೯
[illegible] ೧೮

[illegible]

೨ ೧೫ನೇ ಶುಕ್ರವಾರ ಮೇ ೧೯೩೬

ಮ್ಯುನಿಸಿಪಲ್ ಕೌನ್ಸಿಲಿನಲ್ಲಿರುವ ಕಾಂಗ್ರೆಸ್ ಪಕ್ಷದವರು

ಜಿಲ್ಲಾ ಬೋರ್ಡು ಮತ್ತು ಮ್ಯುನಿಸಿಪಾಲಿಟಿಗಳಲ್ಲಿ ಅಧಿಕ ಸಂಖ್ಯೆಯಿಂದ ಕಾಂಗ್ರೆಸ್ ಪಕ್ಷದವರೇ ಸ್ಥಾನ ಪಡೆದಿರುವುದು ನಿಜವಾದರೂ, ತಾವು ಸೇರಿರುವ ಪಕ್ಷದ ಗೌರವವನ್ನು ಉಳಿಸಲು ಅವರು ಕೈಕೊಳ್ಳಬೇಕಾಗಿರುವ ಕಾರ್ಯಕ್ರಮದ ಕುರಿತು ಹೆಚ್ಚಿನವರಲ್ಲಿ ಇನ್ನೂ ನಿಶ್ಚಿತವಾದ ಅಭಿಪ್ರಾಯವು ಉಂಟಾಗಿಲ್ಲ. ಕೆಲವರು ಜಾತಿವಾರಾಗಿ ಪಕ್ಷಪಾತದಿಂದ ಕೊಡಲಾಗುತ್ತಿದ್ದ ಹುದ್ದೆ ಕಂಟ್ರಾಕ್ಟು ಮೊದಲಾದುದನ್ನು ತಡೆವೆವೆಂದೂ, ಕೆಲವರು ಆರೋಗ್ಯ ವರ್ಧನೆಗಾಗಿ ಹೋರಾಡುವೆವೆಂದೂ, ಇನ್ನು ಕೆಲವರು ಕಡ್ಡಾಯವಾದ ಪ್ರಾಥಮಿಕ ವಿದ್ಯಾಭ್ಯಾಸವನ್ನೇ ಹರಡಿಸುವೆವೆಂದೂ, ಹೇಳುತ್ತಾರೆ. ಸ್ಥಳೀಯ ಸಂಸ್ಥೆಗಳ ಮುಖ್ಯ ಆದ್ಯ ಕರ್ತವ್ಯಗಳನ್ನು ಕುರಿತು ಇವರೆಲ್ಲರು ಸ್ವಲ್ಪ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ.

ಕೌನ್ಸಿಲಿನಲ್ಲಿ ಪ್ರಾತಿನಿಧ್ಯ ಪಡೆವುದು ತಮ್ಮವರಿಗೆ ಉದ್ಯೋಗವನ್ನೊದಗಿಸುವುದಕ್ಕಲ್ಲ ತನ್ನೊಬ್ಬನ ಲಾಭಕ್ಕಲ್ಲ, ಸಮಸ್ತರ ಹಿತಕ್ಕಾಗಿ, ನೀರು, ಚರಂಡಿಗಳು, ಬೆಳಕು, ಸ್ವಚ್ಛತೆ ಇವುಗಳ ಸರಬರಾಯಿಯನ್ನು ಒದಗಿಸಿ ದಾರಿಗಳೂ ಯೋಗ್ಯ ದುರುಸ್ತಿಯಲ್ಲಿದ್ದು, ಅಲ್ಲಲ್ಲಿ ಆಸ್ಪತ್ರೆಗಳೂ, ಶಾಲೆಗಳೂ ಇದ್ದು ಇವುಗಳಿಂದಲೂ, ಇತರ ಮನೋರಂಜನೆಗೆ ಸಹಾಯಕವಾದ ರೇಡಿಯೋ ಆಟದ ಬಯಲುಗಳು ಮೊದಲಾದವುಗಳಿಂದಲೂ ಜನತೆಗೆ ಮಾನಸಿಕ ಬೆಳವಣಿಗೆಗೂ ಸಹಾಯಮಾಡುವುದು ಪ್ರತಿನಿಧಿಗಳ ಮೂಲಮಂತ್ರವಾಗಿರಬೇಕು ಹೀಗಿರುವುದರಿಂದ, ಇಷ್ಟು ವಿಧಾನಗಳಲ್ಲಿ ಪ್ರತಿಯೊಂದು ಮೂಲಕವೂ ಜನಸೇವೆ ಮಾಡಲು ಕಾಂಗ್ರೆಸ್ ಪಕ್ಷದವರಿಗೆ ತುಂಬಾ ಅನುಕೂಲವಿದೆ.

ಭಾವಿಗಳು ಇಲ್ಲ, ಇದ್ದವೂ ಒಳ್ಳೇ ನೀರಿಲ್ಲದವು; ಖಾಸಗಿ ಜನರ ಹಿತ್ತಲುಗಳಲ್ಲಿ ಬಾವಿಗಳಿವೆ —ಅದನ್ನು ಆಯಾ ಧನಿಗಳ ಅಪ್ಪಣೆಪಟ್ಟವರೇ ಮಾತ್ರ ಉಪಯೋಗಿಸಬಹುದು ಹೀಗೆ ಎಷ್ಟೋ ಮ್ಯುನಿಸಿಪಾಲಿಟಿಗಳ ರಿಪೋರ್ಟುಗಳ ವಿಮರ್ಶೆಯಲ್ಲಿದೆ. ಶುದ್ಧ ನೀರಿನ ಸರಬರಾಯಿಯುಳ್ಳ ಪಟ್ಟಣಗಳು ಬಹು ಕಡಿಮೆ ಒಂದೊಂದು ಮನೆ ಒಂದೊಂದು ರೀತಿಯಾಗಿ ನೀರನ್ನು ಪಡೆವುವು. ಇಂತಹ ಕುಂದುಗಳನ್ನು ಹೋಗಲಾಡಿಸಲು ಪ್ರಯತ್ನಿಸಬೇಕು.

ಚರಂಡಿಗಳು ಸರಿಯಾಗಿಲ್ಲದೆ, ಖಾಸಗಿ ಮನೆಗಳಿಂದಲೂ ಕೆಲವು ಓಣಿ ಕೇರಿಗಳಿಂದಲೂ ನೀರು ಹೆದ್ದಾರಿಯ ಮೇಲೆ ನಿಂತು ಕೊಳೆತು ನಾರುವುದುಂಟು. ಮಳೆಯ ನೀರು ಸರಿಯಾಗಿ ಹರಿದುಹೋಗಲು ಏರ್ಪಾಡಿರುವಲ್ಲಿ, ಎಂದರೆ ಹೆದ್ದಾರಿಗಳು ದುರುಸ್ತಿಯಾಗಿರದೆ ಅಲ್ಲಲ್ಲಿ ಹೊಂಡಗಳಾಗಿರುವಲ್ಲಿ, ಆರೋಗ್ಯಕ್ಕೂ ಸಂಚಾರಕ್ಕೂ ಬಾಧೆಯಿದೆ. ನೀರಿನ ಹರಿದಾಟಕ್ಕೆ ಆತಂಕವಿರದಂತೆ ನೋಡುವ ಸಿಬಂದಿಯ ಮೇಲೆ ಹೆಚ್ಚಿನ ನಿಗಾ ಇಡಬೇಕಾಗಿದೆ.

ವಿದ್ಯುದ್ದೀಪಗಳು ಮುಖ್ಯ ಹೆದ್ದಾರಿಗಳಲ್ಲಿದ್ದರೂ ಮುಖ್ಯ ಓಣಿ ಕೇರಿಗಳಲ್ಲಿ ಬೆಳಕು ಸಾಕಷ್ಟು ಕಾಲಕ್ಕೆ ಸಾಕಷ್ಟು ಚೆನ್ನಾಗಿ ಕೊಡುವ ದೀಪಸ್ತಂಭಗಳಿಲ್ಲ. ವಿದ್ಯುಚ್ಛಕ್ತಿಯ ಬೆಲೆಯನ್ನಿಳಿಸುವ ಹಾಗೂ ವಿದ್ಯುತ್ಪಾದನವು ಮ್ಯುನಿಸಿಪಾಲಿಟಿಯ ಇಲಾಖೆಯದೇ ಆಗುವಂತೆಯೂ ಪ್ರಯತ್ನಿಸಬೇಕಲ್ಲದೆ, ಓಣಿ ದೀಪಗಳನ್ನು ಆಗಾಗ ಸಂದರ್ಶನೆಯ ಮೂಲಕ ಅವು ಯೋಗ್ಯ ರೀತಿಯಲ್ಲಿರುವ ಹಾಗೆ ಎಚ್ಚರ ನೋಡಬೇಕಾಗಿದೆ.

ಮಲಮೂತ್ರಗಳನ್ನೊಯ್ಯುವ ಏರ್ಪಾಡ ಪಾಯಖಾನೆಗಳ ಪುರವಟೆ, ಹೆದ್ದಾರಿಗಳನ್ನೇ ಇವುಗಳ ಬದಲಾಗಿ ಉಪಯೋಗಿಸುವುದನ್ನು ನಿಷ್ಪ್ರಯೋಜಕಮಾಡುವ ವ್ಯವಸ್ಥೆ, ಇವುಗಳ ಕಡೆಗೆ ಹೆಚ್ಚಿನ ಗಮನಕೊಡಬೇಕಾಗಿದೆ.

ಇಕ್ಕಡೆಗಳಲ್ಲೂ ಚರಂಡಿಗಳಿಲ್ಲದ ಮಾರ್ಗಗಳಿದ್ದು ಪ್ರಯೋಜನವೇನು? ಕಾಲಧರ್ಮದಂತೆ ಚಿಕ್ಕ ದಾರಿಗಳನ್ನು ರಿಪೇರಿಮಾಡಿ ಯಾವ ಉಪಯೋಗವೂ ಇಲ್ಲ. ಆಗಾಗ ಹೊಂಡಗಳಾಗಿ ಮಾರ್ಗವು ಹಾಳಾಗಿ ದುರುಸ್ತಿಯ ದಿನ ಬರುವ ತನಕ ಜನರು ಕಷ್ಟಕ್ಕೀಡಾಗುವುದನ್ನು ತಪ್ಪಿಸಬೇಕಾಗಿದೆ. ಜನಸಂಚಾರಕ್ಕೆ ಬಾಧಕವುಂಟಾಗುವ ಹಾಗೆ ಎತ್ತೆತ್ತಲೂ ಹಿತ್ತಿಲು ತೆಂಗು ಮೊದಲಾದ ಮರಗಳು ನೆತ್ತಿಯ ಮೇಲೆ ಭಯಪ್ರದರ್ಶಿಸುತ್ತ ನಿಲ್ಲುವುದನ್ನೂ, ಸುಲಭವಾಗಿ ಉರು ಹತ್ತುವ ಕಟ್ಟೆ ಮಾಡುಗಳೇ ದಾರಿಗೆ ಎದುರಾಗಿ ನಿಂತಿರುವುದನ್ನೂ ತಪ್ಪಿಸುವುದು ಆಗತ್ಯ. ದಾರಿಗಳು ನೇರವಾಗುವಂತೆ ಮಾಡುತ್ತ ಬರುವುದು ಉತ್ತಮ, ಸುಂದರ.

ಪ್ರತಿಯೊಂದು ವಾರ್ಡಿನಲ್ಲಿ ಒಂದೊಂದು ಉಚಿತ ವೈದ್ಯ ಚಿಕಿತ್ಸೆಗಾದರೂ ಸರ್ವರಿಗೂ ಸಹಾಯವಾದೀತು. ಸೂಲಗಿತ್ತಿಯರ ಸಂಖ್ಯೆ ಸಾಕೆ? ಅವರು ತರಬೇತಾಗಿದ್ದಾರೆಯೆ? ಊರ ಹೆರಿಗೆ ಕೆಲಸನಾಡುವ 'ದಾಯಿ'ಯರಿಗೆ ತರಬೇತು ಕೊಡುವುದು ಅಗತ್ಯವಲ್ಲವೆ? ಜನನಗಳ ಮೇಲೂ, ಗರ್ಭಿಣಿಯರ ಮೇಲೂ ಉತ್ತಮ ಪರಿಣಾಮವನ್ನುಂಟುಮಾಡುವಂತಹ ಏರ್ಪಾಡು ಇದೆಯೆ? ಎಂಬ ಪ್ರಶ್ನೆಗಳನ್ನು ಮೆಂಬರರು ತಂತಮ್ಮ ವಾರ್ಡಿನ ವಿಷಯವಾಗಿಯಾದರೂ ಆಲೋಚಿಸುತ್ತಿರು ಆಗತ್ಯ.

ಹನ್ನೆರಡು ವರ್ಷ ವಯಸ್ಸಿನ ತನಕವಾದರೂ, ಬಾಲಕಬಾಲಕಿಯರಿಗೆ ಧರ್ಮಾರ್ಥವಾಗಿ ವಿದ್ಯಾಭ್ಯಾಸವು ಸಿಗುವಂತಾಗಬೇಕು. ಒಂದೊಂದು ವಾರ್ಡಿನಲ್ಲಿ, ಶಾಲೆಬಾರದ ಬಾಲಕರನ್ನೂ ಮನೆಯಲ್ಲೇ ಕಾಲಕಳೆಯುವ ಹೆಣ್ಣುಮಕ್ಕಳನ್ನೂ ಗೊತ್ತುಹಚ್ಚಿ ಅವರಿಗೆ ಶಾಲೆಗೆ ಹೋಗುವಂತೆ ಒತ್ತಾಯಪಡಿಸುವುದು, ಈ ಸುಧಾರಣೆಯ ಯುಗದಲ್ಲಿ ಇನ್ನಷ್ಟು ಆಗತ್ಯವಾಗಿದೆ. ನೂಲುವುದೇ ಮೊದಲಾದುವನ್ನು ಶಾಲೆಗಳು ಮಕ್ಕಳಿಗೆ ಕಲಿಸದಿದ್ದರೆ, ಮಕ್ಕಳು ಬೀಡಿ ಕಟ್ಟುವುದಕ್ಕೂ ಸೇದುವುದಕ್ಕೂ ಕಲಿಯುತ್ತಾರೆ.

ಮ್ಯುನಿಸಿಪಲ್ ಶಾಲೆಗಳಲ್ಲಿ ಹಿಂದೀ ಕಲಿಸುವ ಏರ್ಪಾಡಿರುವುದು ಉತ್ತಮ. ಹಾಳು ಮುರುಕು ಗುಡಿಗಳನ್ನು ಕಿತ್ತು ಬಡವಾಯಿಗಳ ಉಳಕೊಳ್ಳಲು ಸುಲಭ ಬಾಡಿಗೆ ಮನೆಗಳನ್ನು ಕಟ್ಟಿಕೊಡುವುದೂ ಮ್ಯುನಿಸಿಪಾಲಿಟಿಗಳ ಕರ್ತವ್ಯವಾಗಿದೆ. ಜನ ವಾಸುವಾರುಗಳ ವಸತಿಗೆ ಅಯೋಗ್ಯವಾಗಿರುವ ಕಟ್ಟಡಗಳನ್ನು ನಿರ್ಮೂಲಿಸಬೇಕಾಗಿದೆ. ಅಂತೆಯೆ ವಸತಿಗಳು ಚೊಕ್ಕವಾಗಿರುವ ಹಾಗೆ ಸಾಧಿಸುವುದೂ ಆಗತ್ಯವಾಗಿದೆ. ಈ ವಿಚಾರಗಳು ಸರಿಯಾಗಿ ಸಿಬಂದಿಯವರಿಗೇ ತಿಳಿದಿಲ್ಲದುದರಿಂದ ಅವರಿಗೆ ಸಂಬಂಧಪಟ್ಟಿರುವ ಕಾನೂನನ್ನು ಸುಲಭವಾಗಿ ವಿವರಿಸಬೇಕಾಗಿದೆ.

ಮ್ಯುನಿಸಿಪಾಲಿಟಿಗಳ ಕೆಲಸವನ್ನೆಲ್ಲ ಕಮಿಶನರರೇ ಮಾಡುವರೆಂದು ಅದನ್ನೆಲ್ಲ ಮರೆತು ಕೂತಿರುವುದು ಮೆಂಬರರ ಕರ್ತವ್ಯವಲ್ಲ. ಕಮಿಶನರರು ಹೆಚ್ಚಾಗಿ ಪರಜಿಲ್ಲೆಯವರು, ಪರ ಇಲಾಖೆಯಲ್ಲಿ ಕೆಲಸಮಾಡಿದವರು.

ಮೆಂಬರುಗಳಿಗೆ ಕೌನ್ಸಿಲಿನೊಳಗೆ ಇರುವ ಕೆಲಸಕ್ಕಿಂತ, ಕೌನ್ಸಿಲಿನ ಹೊರಗಿರುವ ಕರ್ತವ್ಯವು ಹೆಚ್ಚಿನದೆಂದು ಬಾಬು ರಾಜೇಂದ್ರ ಪ್ರಸಾದರು ಒಂದು ಮ್ಯುನಿಸಿಪಲ್ ಬಿನ್ನವತ್ತಳೆಗೆ ಉತ್ತರವಾಗಿ ಹೇಳಿದ ಮಾತನ್ನು ನೆನಪಿನಲ್ಲಿಟ್ಟುಕೊಂಡು, ಪ್ರತಿಯೊಬ್ಬ ಮೆಂಬರರೂ ತಾವು ಮೆಂಬರರಾಗಿ ಮಾಡುತ್ತಿರುವ ಕೆಲಸವನ್ನೂ ಪರಿಣಾಮಗಳನ್ನೂ ಆಗಾಗ ವೋಟರರಿಗೆ ತಿಳಿಯಬರುವಂತೆ ಪ್ರಕಟಿಸುತ್ತಿರುವುದು ಅಗತ್ಯ. ಕಾಂಗ್ರೆಸ್ ಮೆಂಬರರಾದರೂ ಈ ವಿಚಾರಗಳಿಗೆ ಗಮನಕೊಡುವುದುಂಟೆ?

ಸ್ಫುಟ ವಿಚಾರಗಳು

ಆರೋಗ್ಯಕರವಾದ ಆಹಾರಗಳು

ಎಲ್ಲೆಲ್ಲಿಯೂ ಸಿಗಬೇಕಾದುದು ಅವಶ್ಯವಾದರೂ, ಇಲ್ಲವೆ ಅವುಗಳಲ್ಲಿ ಬೆರಕೆ ಪದಾರ್ಥಗಳನ್ನು ಹಾಕಿ ಅಥವಾ ತೂಕ ಕಡಿಮೆ ಮಾಡಿ ಮಾರಿಯೋ ತಾವು ಲಾಭ ಹೊಂದುತ್ತ ಜನತೆಗೆ ನಷ್ಟವನ್ನು ಉಂಟುಮಾಡುವ ವ್ಯಾಪಾರಿಗಳು ಇರುವರು. ಇವರಿಂದ ತುಪ್ಪ, ಕಾಫಿ ಹುಡಿ ಮೊದಲಾದುವನ್ನು ತೂಕದಲ್ಲಿ ಕಡಿಮೆ ಪಡೆದರೆ ಉಂಟಾಗುವ ಹಾನಿಗಿಂತ, ಬೆರಕೆಯಾಗಿ ಪಡೆವುದರಿಂದ ಹೆಚ್ಚಿನ ಹಾನಿವುಂಟಾಗುತ್ತದೆ. ಕೆಲವು ಶಹರುಗಳಲ್ಲಿ ಈ ಪದಾರ್ಥಗಳಲ್ಲಿ ಶೇಕಡಾ ೭೦ರಷ್ಟು ಬೆರಕೆಯಿದೆ ಮಾತ್ರವಲ್ಲದೆ, ಅಂಗಡಿಯಲ್ಲಿರುವ ನೂರರಲ್ಲಿ ೬೦ ಜಿನಸುಗಳಲ್ಲಿ ಬೆರಕೆಯಿದ್ದೇ ಇದೆ ಎಂದು ಸರಕಾರದ ಆರೋಗ್ಯ ಇಲಾಖೆಯು ಕಂಡು ಹಿಡಿದು ಎಲ್ಲ ಮ್ಯುನಿಸಿಪಾಲಿಟಿಗಳಿಗೆ ತಿಳಿಸಿದೆ. ಆದರೆ ಬೆರಕೆ ಮಾಡಿದುದನ್ನು ಕಂಡುಕೊಳ್ಳುವುದು ಸುಲಭವಾಗಿಲ್ಲ. ಅದನ್ನು ಶೋಧಿಸುವ ಒಂದು ಇಲಾಖೆಯೇ ಇದೆ. ಬಡವರು ಇಂತಹ ಬೆರಕೆ ವಸ್ತು ಮಾರುವ ವ್ಯಾಪಾರಗಳಿಂದ ಮೋಸಹೋದರೆ, ಅವರು ಅದನ್ನು ರುಜುಮಾಡುವುದು ಕಷ್ಟವಾಗುತ್ತದೆ. ಅದಕ್ಕಾಗಿ ಯಾವುದೊಂದು ಮ್ಯುನಿಸಿಪಾಲಿಟಿಯು ವಾರ್ಷಿಕವಾಗಿ ರೂ ೫೦೦ನ್ನು ಸರಕಾರಕ್ಕೆ ತೆತ್ತಲ್ಲಿ, ನಾನಾ ಪದಾರ್ಥಗಳನ್ನು ಶುದ್ಧವೇ ಅಲ್ಲವೇ ಎಂದು ಪರೀಕ್ಷೆ ಮಾಡಲು ಈ ಶೋಧನಾಲಯಕ್ಕೆ ಕಳುಹಲು ಅನುಕೂಲತೆಯನ್ನು ಸರಕಾರವು ಈಗ ಮಾಡಿಕೊಟ್ಟಿದೆ. ಬೆರಕೆ ಮಾಡುತ್ತಿರುವವರನ್ನು ವಿಚಾರಣೆಗೆ ಒಳಪಡಿಸಿ, ಅವರಿಂದ ವಸೂಲಾಗುವ ಜುಲುಮಾನೆಗಳಿಂದಲೇ ಈ ಮೊಬಲಗನ್ನು ಭರ್ತಿಮಾಡಿಕೊಳ್ಳಬಹುದು. ಈ ವಿಷಯವನ್ನು ಮ್ಯುನಿಸಿಪಾಲಿಟಿಯೂ, ಜಿಲ್ಲಾ ಬೋರ್ಡೂ ಜನತೆಯ ಆರೋಗ್ಯದ ಹಿತಾಕಾಂಕ್ಷೆಯಿಂದ ಪರ್ಯಾಲೋಚಿಸುವುದುತ್ತಮ.

ಚಿಕ್ಕ ಹುಡುಗರ ಸವಾರಿ

ಇಂಗ್ಲೆಂಡಿನಲ್ಲಿ ೭ ವರ್ಷದ ಮಕ್ಕಳು ಸಹ ಹಿರಿಯರ ಜತೆಯಲ್ಲಲ್ಲದೆ ಹೆದ್ದಾರಿಯಲ್ಲಿ ಅಡ್ಡಾಡಬಾರದಾಗಿ ನಿಯಮ ಮಾಡಿರುವುದರಿಂದ ಅವರಿಗೂ ಅವರಿಂದ ಇತರರಿಗೂ ಉಂಟಾಗುವ ಅಪಘಡಗಳನ್ನು ಇಳಿಸಲು ಸಾಧ್ಯವಾಗಿದೆ. ನಮ್ಮಲ್ಲೀಗ ಮೋಟಾರು ಅಪಘಡಗಳು ಕಡಿಮೆಯಾಗಿವೆಯಾದರೂ, ಸೈಕಲ್ ಬಾಡಿಗೆಗೆ ದೊರೆತು, ಚಿಕ್ಕವರ ಸವಾರಿಯ ಗದ್ದಲವು ಬಹಳವಾಗಿದೆ. ಒಂದೊಂದು ಸೈಕಲಿನ ಮೇಲೆ ಎರಡುಮೂರು ಹುಡುಗರು ಸವಾರಿ ಮಾಡುತ್ತಿರುವುದೂ, ಅಥವಾ ಹುಡುಗನೊಬ್ಬನು ಸರ್ಕಸು ಆಟಗಳನ್ನು ಅಭ್ಯಾಸಮಾಡುತ್ತ ಓಡಾಡುವುದೂ, ಯಾರೋ ತಪ್ಪಿಸಿ ಮರೆಯೋ ಮುಖರಾದವರೆಂಬಂತಿರುವ ಜನಗಳ ನಡುವಿನಿಂದ ಅತಿ ತ್ವರೆಯಿಂದ ಸೈಕಲ್ ಓಡಾಡಿಸುವುದೂ, ಸೈಕಲ್ ಹಿಂದೆ ಭಾರವಾದ ಹೇರನ್ನು ಕಟ್ಟಿಕೊಂಡು ಓಡಾಡಿಸುವುದೂ ಬಹಳ ಹೆಚ್ಚುತ್ತ ಬರುತ್ತಲಿದೆ. ಗಣಪತಿ ದೇವಸ್ಥಾನದಿಂದ ಕೋರ್ಟು ರಸ್ತೆಗೆ ಸೇರುವಲ್ಲಿರುವ ಏರಿನ ಮೇಲೆ ಎಳೆಯ ಹುಡುಗನೊಬ್ಬನು ಹೇರು ಸಮೇತ ಸೈಕಲ್ ಸವಾರಿ ಮಾಡಿ ತಿರುಗುವಾಗ, ಸೈಕಲೂ ಅವನೂ ದಾರಿಗರೊಬ್ಬರ ಮೇಲೆ ಇಳಿದು, ಮೂವರೂ ಹತ್ತಿರವೇ ಇರುವ ಚರಂಡಿಯಲ್ಲಿ (ಅದಕ್ಕೊಂದು ಅಡ್ಡ ಗೋಡೆಯೂ ಇಲ್ಲದಿರುವುದು ಮ್ಯುನಿಸಿಪಾಲಿಟಿಯ ಕರ್ತವ್ಯಬದ್ಧರಾಗಿರುವ ಅಧಿಕಾರಿಗಳ ಪುಣ್ಯ) ಬಿದ್ದು ಅಪಘಡವಾಗುವಂತಿದ್ದುದೂ ನಮಗೆ ಗೊತ್ತಾಗಿದೆ. ವಯಸ್ಕರಾದ ದಾರಿಗರು ಸವಾರನನ್ನು ಶೀಘ್ರದಿಂದ ಎತ್ತಿ, ಸೈಕಲನ್ನು ಅವನ ಅವನ ವಶ ಕೊಟ್ಟು, "ಬೀಳುವೆಯಾದರೆ ಚಿತ್ತಲಿನ ಚರಂಡಿ ಇನ್ನು ತಗ್ಗಾಗಿಲ್ಲ, ಅದನ್ನು ಸಾಧಿಸು ಹೆಸರು ಪಡೆ" ಎಂದು ಅವನ ಬೆನ್ನು ತಟ್ಟಿ, ತಾವು ಒದುಕಿಕೊಂಡುದಕ್ಕೆ ಹೆಂಡತಿ ಮಕ್ಕಳ ಭಾಗ್ಯವನ್ನು ವಂದಿಸಿ ಮನೆ ದಾರಿಹಿಡಿದರು. ಇಂತಹ ಉತ್ಪಾತಗಳಿಂದ ಪ್ರಯಾಣಿಕರನ್ನು ರಕ್ಷಿಸಲು ಪೋಲೀಸರಿಗೆ ಯಾವ ಅಧಿಕಾರವೂ ಇಲ್ಲವೆ? ಮುಂಜಾಗ್ರತೆ ಕೆಟ್ಟದ್ದೇ? ಸೈಕಲ್ ಬಾಡಿಗೆ ಕೊಡುವವರಿಗೆ, ಹೇಗೂ ವಸೂಲಾಗಬಹುದು, ಹೆತ್ತವರಿಗೆ ಇಂತಹ ಮಕ್ಕಳು ಹುಟ್ಟಲೂ ಬಹುದು, ಅತ್ತಿತ್ತ ಹೋಗುವವರಿಗೆ ಪ್ರಾಣಾಪಾಯವಾಗುವುದಾದರೆ, ಇದರ ಜವಾಬುದಾರಿ ಯಾರ ಮೇಲೆ?

ನಾಳಿನ ತಂಟೆ.

ಅಬಿಸೀನಿಯದಲ್ಲಿ ಇಟೇಲಿಯು ನುಗ್ಗಿ, ಸಾಮ್ರಾಜ್ಯ ಸ್ಥಾಪಿಸಿ, ಸಧಾರಣೆಯನ್ನು ಹಬ್ಬಿಸುವ ಅವಸರದಲ್ಲಿ, ಅವರಿಗೆಲ್ಲ ಸಹಾಯ ಮಾಡಿದವರೂ ಸತ್ತವರಲ್ಲಿ ಹೆಚ್ಚಿನವರೂ ಆಫ್ರಿಕಾವಾಸಿಗಳೇ ಆಗಿರುವ ಕರಿಯ ಸಿಪಾಯಿಗಳು. ಇಟೇಲಿಯು ಸಾಮ್ರಾಜ್ಯ ಸ್ಥಾಪಿಸಿದರೂ, ಅಬಿಸೀನಿಯದ ಸರಹದ್ದಿನಿಂದ ಇನ್ನೂ ಇನ್ನೂ ದಿನಗಳು ಅವರನ್ನು ಆಗಾಗ ಪೀಡಿಸಿ, ಕಾದಾಡುತ್ತ ಕಡಿಯುತ್ತ ಇರದೆ ಇರಲಾರದು. ಉತ್ತರ ಆಫ್ರಿಕಾವಾಸಿಗಳು ಇನ್ನೂ ಸೇನಾಂಗಗಳನ್ನು ರಚಿಸುವುದರಲ್ಲೇ ನಿರತರಾಗುವರು. ಗೆದ್ದ ಮತ್ತು ಸೋತ ಸಾವಿರಗಟ್ಟಲೆ ಸಿಪಾಯಿಗಳು ಎಲ್ಲರೂ ಯುದ್ಧಮಾಡಲು ಬಲ್ಲವರು. ಇಟೆಲಿಯವರು ಇಂತಹರನ್ನು ಯುದ್ಧಕರ್ಮಕ್ಕೆ ಉಪಯೋಗಿಸುವಂತಾದರೆ, ಎಲ್ಲೆಲ್ಲಿಯೂ ಕರಿಯ ಜನರು ಸಿಪಾಯಿ ಹುದ್ದೆಗೆ ಕೈಹಚ್ಚುತ್ತ ಬ್ರಿಟಿಷರ ವಸಾಹತುಗಳ ಮೇಲೆ ಬಂದುಎರಗಬಹುದಾದ ಗಂಡಾಂತರವೊಂದಿದೆ. ಬ್ರಿಟಿಷರು ತಮ್ಮ ವಸಾಹತುಗಳಲ್ಲಿನ ಕರಿಜನರನ್ನು ಬಹಳವಾಗಿ ಮೆಟ್ಟಿಯೆ ಬಂದಿರುವುದೂ ಬ್ರಿಟಿಷರಿಗೆ ಗೊತ್ತಿದೆ. ಈಗ ಇವರಿಗೆ ವೋಟು ಇಲ್ಲವೆಂದೂ ನಿಶ್ಚಿತವಾಗಿದೆ. ಇದು ಒಂದು ಉದ್ರೇಕಗೊಳಿಸಲು ಕಾರಣವಾಗದಿರದು. ಮೈಬಣ್ಣದ ದ್ವೇಷವು ಬೆಳೆದು, ಉತ್ತರ ಆಫ್ರಿಕಾದಲ್ಲಿ ಕರಿ ಸಿಪಾಯರಿಗೆ ಇರುವ ಮಹತ್ವವು ದಕ್ಷಿಣ ಆಫ್ರಿಕದಲ್ಲಿರುವ ಕರಿಜನರನ್ನು ಉತ್ತೇಜನಗೊಳಿಸಿದರೆ, ಬ್ರಿಟಿಷರಿಗೇ ಮಾತ್ರವಲ್ಲದೆ, ಇತರ ವಿಲಾಯತಿಯ ಜನಗಳಿಗೂ ವಸಾಹತುಗಳಿಗೂ ಬಾಧಕವಿದೆ. ಹತ್ತಿರದಲ್ಲಿ ಒಬ್ಬನೇನೋ ಬಿಳೀಯವನು ಇರುವ ಈ ಪಠಾರದಲ್ಲಿ, ಇದರ ಪರಿಣಾಮವು ಹೇಗಾಗುವುದೆಂಬುದಾಗಿ ಯಾರೂ ಸಂದೇಹಪಡಬೇಕಾಗಿಲ್ಲ. ಇರಾಕ್, ಅರೇಬಿಯ, ಪ್ರಾಂತ್ಯಗಳೂ, ಮೊರೊಕ್ಕೊ ಸಹಾರಾ ಪ್ರಾಂತ್ಯಗಳೂ ಒಂದಾದರೆ, ದಕ್ಷಿಣಾಫ್ರಿಕಕ್ಕೆ ಅಪಾಯವಿದೆ. ಇದರಿಂದಾದರೂ ವರ್ಣದ್ವೇಷವು ಕಡಿಮೆಯಾಗಲು ವಿಲಾಯತಿಯ ಜನರು ಅಲ್ಲೇನಾದರೂ ಉಪಾಯ ಕಂಡು ಸುಧಾರಣೆಮಾಡದೆ ಇರಬರುವುದಿಲ್ಲ, ನೋಡಬೇಕು.

ಮಂಗಳೂರು.

ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಮಹಾಸಭೆಯೊಂದು ಇದೇ ಮೇ ತಾ ೨೫ನೇ ಸೋಮವಾರ ಪೂರ್ವಾಹ್ನ ಗಂಟೆ ೧೧ರಿಂದ ಅಪರಾಹ್ನ ಗಂಟೆ ೫ರ ತನಕ ನಡೆಯುವುದು.

ಕೌನ್ಸಿಲ್ ಆಫ್ ಸ್ಟೇಟಿನ ಮೆಂಬರರ ಚುನಾವಣೆಯು ಶೀಘ್ರದಲ್ಲಿಯೇ ನಡೆಯಲಿಕ್ಕಿದೆ. ಮದ್ರಾಸು ಸಂಸ್ಥಾನದಿಂದ ಸದರಿ ಸಂಸ್ಥೆಗೆ ಒಟ್ಟು ನಾಲ್ಕು ಮಂದಿ ಮೆಂಬರರನ್ನು ಚುನಾಯಿಸಬೇಕಾಗಿರುವುದು. ಈ ನಾಲ್ಕು ಸ್ಥಾನಗಳ ಪೈಕಿ ಮೂರು ಸ್ಥಾನಗಳಿಗೆ ಶ್ರೀಯುತ ವಿ. ರಾಮದಾಸ್ ಮದ್ರಾಸು, ಶ್ರೀಯುತ ವಿ. ಸಿ. ವೆಲ್ಲಿಂಗಿರಿ ಗೌಂಡರ್ ಕೊಯಮುತ್ತೂರು ಮತ್ತು ಶ್ರೀಯುತ ನಾರಾಯಣದಾಸ್ ಗಿರಿಧರದಾಸ್ ಇವರುಗಳನ್ನು ಕಾಂಗ್ರೆಸ್ ಕಡೆಯ ಉಮೇದ್ವಾರರನ್ನಾಗಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಮಂಜೂರುಮಾಡಿದ್ದಾರೆ. ಈ ಚುನಾವಣೆಗೆ ಸಂಬಂಧಪಟ್ಟ ದಕ್ಷಿಣ ಕನ್ನಡ ಜಿಲ್ಲೆಯ ಓಟರು ಮಹಾಶಯರು ಕಾಂಗ್ರೆಸಿನ ದೇ[illegible]ಯಲ್ಲಿ ಸಂಪೂರ್ಣ ಪ್ರೀತಿಯನ್ನಿಟ್ಟು ನಾಲ್ಕು ಜನ ಉಮೇದ್ವಾರರಿಗೆ ವಿನಿಯೋಗಿಸಬಹುದಾದ ತಮ್ಮ ಓಟಿನ ಹಕ್ಕಿನ ಪ್ರಕಾರ ಮೂರು ಸ್ಥಾನಗಳನ್ನು ಮೇಲ್ಕಾಣಿಸಿದ ಕಾಂಗ್ರೆಸ್ ಉಮೇದ್ವಾರರಿಗೇನೇ ದಯವಿಟ್ಟು ಕೊಟ್ಟು, ಕಾಂಗ್ರೆಸಿನ ಜಯವೇ ದೇಶದ ಜಯವೆಂದಾಗಿ ತೋರಿಸಬೇಕಾಗಿ ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಜತೆಕಾರ್ಯದರ್ಶಿಯರಾದ ಬಿ ಅನಂತಕೃಷ್ಣಯವರು ವಿನಂತಿಮಾಡುತ್ತಾರೆ.

ಓಟುಕೊಡಲು ಬಾಧ್ಯರಾಗಿರುವವರು ತಮ್ಮ ಹೆಸರನ್ನು ಓಟುಗಳ ರಿಜಿಸ್ಟ್ರಿಯಲ್ಲಿ ಅಚ್ಚಾದ ರೀತಿಯ ಪ್ರಕಾರ ಬರೆಸತಕ್ಕದ್ದು. ಅರ್ಜಿಗಳನ್ನು ಹಾಕಿ ಓಟುಕೊಡುವ ಹಕ್ಕನ್ನು ಸ್ಥಾಪಿಸುವವರು ಸದರಿ ಹಕ್ಕನ್ನು ಮುನಿಸಿಪಾಲಿಟಿಯ ಕಮಿಶನರಿಂದ ಛಾಪಾ ಅರ್ಜಿಗಳನ್ನು ಪಡೆದು ಅವುಗಳಲ್ಲಿಯ ಕಲಮುಗಳನ್ನು ಭರ್ತಿಮಾಡಿ ರಿಜಿಸ್ಟ್ರೇಶನ್ ಆಫೀಸರರಾದ ಮುನಿಸಿಪಾಲಿಟಿಯ ಕಮಿಶನರಿಗೆ ಕಳುಹಿಸತಕ್ಕದ್ದು. ವಿದ್ಯಾಗೌರವತೆಯ ಮೂಲಕ ಓಟುಗಳ ಹಕ್ಕನ್ನು ಪಡೆಯುವವರು ಸ್ವಹಸ್ತದಿಂದಲೇ ಸದರಿ ಹಕ್ಕನ್ನು ಜಾಹೀರುಪಡಿಸುವ ಅರ್ಜಿಯನ್ನು ಬರೆದು ಮುನಿಸಿಪಾಲಿಟಿಯ ಕಮಿಶನರಿಗೆ ಮೇ ತಾ ೩೧ರ ಒಳಗೆ ತಲಪಿಸುವುದು.

ಅಖಿಲಭಾರತದ ರಾಷ್ಟ್ರಭಾಷೆಯಾದ ಹಿಂದಿಯ ಪ್ರಚಾರವು ಕಳೆದ ಒಂದು ವರ್ಷದಿಂದ ಬ್ರಹ್ಮಾವರ, ಬಾರಕೂರ್, ಮಂದರ್ತಿ, ಸೈಬರಕಟ್ಟೆ, ಹಂಗಾರಕಟ್ಟೆ, ಕೊಕ್ಕರ್ಣೆ ಮತ್ತು ಪೇತ್ರಿ ಎಂಬೀ ಏಳು ಕೇಂದ್ರಗಳಲ್ಲಿ ಭರದಿಂದ ಸಾಗುತ್ತಿದ್ದು ಕಳೆದ ಸಪ್ಟಂಬರ ಮತ್ತು ಫೆಬ್ರವರಿಯ ಪರೀಕ್ಷೆಗಳಲ್ಲಿ ಈ ವರೆಗೆ ೧೫೪ ಮಂದಿ ಹಿಂದೀ ಪ್ರೇಮಿಗಳು ಭಾಗಿಗಳಾಗಿರುವರು. ಹಿಂದೀ ಪ್ರಚಾರದ ಪ್ರಗತಿಗೂ ಅಭಿವೃದ್ಧಿಗಾಗಿಯೂ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪ್ರಮಾಣಪತ್ರಗಳ ವಿತರಣಾರ್ಥವಾಗಿಯೂ ಇದೇ ಮೇ ತಾ ೧೮ರಿಂದ ೨೪ನೇ ತಾರೀಕಿನ ವರೆಗೆ ಕಾರ್ಯಕ್ರಮದಂತೆ ಹಿಂದೀ ಸಪ್ತಾಹವನ್ನು ಏಳು ಕೇಂದ್ರಗಳಲ್ಲಿಯೂ ಜರಗಿಸಲು ಆಲೋಚನೆ ಮಾಡಿರುವುದರಿಂದ ಆ ದಿನಗಳಲ್ಲಿ ತಾವು ಆಯಾ ಕೇಂದ್ರಗಳ ಉತ್ಸವಗಳ ಸಮಾರಂಭಗಳಿಗೆ ಇಷ್ಟಮಿತ್ರರೊಡನೆ ದಯಮಾಡಿಸಿ ಈ ಸಪ್ತಾಹವನ್ನು ಸಫಲಗೊಳಿಸಬೇಕಾಗಿ ಕಟೀಲ್ ಗಣಪತಿ ಶರ್ಮಾ, ವಿಶಾರದ (ಹಿಂದೀಪ್ರಚಾರಕ) ಪ್ರಧಾನ ಕಾರ್ಯದರ್ಶಿ ಹಿಂದೀಪ್ರಚಾರ ಸಪ್ತಾಹ ಸಮಿತಿ ಇವರು ಅಪೇಕ್ಷಿಸುತ್ತಾರೆ.

ತೀಯಾ ಶಕ್ತಿ ಸಂಘ — ಇದೇ ಮೇ ತಾ ೧೭ನೇ ಆದಿತ್ಯವಾರ ಬೆಳಗ್ಗೆ ೯ ಗಂಟೆಗೆ ಮಾ। ರಾ। ರಾ। ಕೆ. ಪಿ. ದಾಮೋದರನ್‌ರವರು "ತೀಯರ ಚರಿತ್ರೆ" ವಿಷಯ ಭಾಷಣವಿರುವುದು.

ಈ ಮುಂಚೆ ಸರಕಾರದವರು ಜಿಲ್ಲೆಯ ಅನೇಕ ರಿಜರ್ವ ಕಾಡುಗಳಲ್ಲಿ ರಹಿತರಿಗೆ ಇರುತ್ತಿದ್ದ ಹಕ್ಕು ಯಾನೆ ರಿಯಾಯಿತಿಗಳನ್ನು ವಜಾ ಮಾಡುವರಷ್ಟೆ. ಈ ಬಾಬಿನಲ್ಲಿ ೧೯೩೫ನೇ ನವಂಬರದಿಂದ ಜಿಲ್ಲಾ ಸಂಘದವರು ಆಗಾಗ್ಗೆ ಮಾಡಿಕೊಂಡ ಮನವಿಗಳ ವಿಷಯ ಮಾಜಿ ಲೋ ಮೆಂಬರರು ಕಳೆದ ದಶಂಬರ ತಿಂಗಳಲ್ಲಿ ಈ ಜಿಲ್ಲೆಯನ್ನು ಸಂದರ್ಶಿಸಿದನಂತರ ಸರಕಾರದವರು ಹುಕುಂ ಪಾಸುಮಾಡಿದ್ದಾರೆಂಗಿ ಕೇಳಿದು ಎರಡುಸಾರಿ ಸಂಬಂಧಪಟ್ಟ ಸರಕಾರದ ಡಿಪಾರ್ಟುಮೆಂಟಿಗೆ ನಾವು ಬರಕೊಂಡರೂ ಅದಕ್ಕೆ ಯಾವ ತರದ ಉತ್ತರವೂ ಈ ವರೆಗೆ ಬರಲಿಲ್ಲ. ಆದರೆ ಉತ್ತರ ಮಂಗಳೂರು ಡಿವಿಜನಿನ ಜಿಲ್ಲಾ ಫಾರೆಸ್ಟ್ ಆಫೀಸರರಿಗೆ ಬರಕೊಂಡದ್ದಕ್ಕೆ ಈ ಕೆಳಗೆ ಕಾಣಿಸಿದ ಬಹು ಸಂಕ್ಷೇಪವಾದ ಉತ್ತರ ಇದೇ ೩೦ ರಲ್ಲಿ ಬಂದಿರುತ್ತದೆ. ಇದನ್ನು ಸಂಬಂಧಪಟ್ಟ ಎಲ್ಲಾ ರಹಿತರ ಅವಗಾಹನೆಗೆ ತಂದಿರುತ್ತೇನೆ. ಹೆಚ್ಚಿನ ಮಾಹಿತಿಯನ್ನು ಸರಕಾರದವರು ದಯಪಾಲಿಸಿದರೆ ಅದನ್ನು ಬಂದಕೂಡಲೇ ತಿಳಿಸುವೆನು.

ಚೀಫ್ ಕಾನ್ಸರ್ವೇಟರವರ ಹುಕುಮುಗಳ ಪ್ರಕಾರ ಹಸಿ ವಣ ಎಲೆ (ದರಳೆ) ಮತ್ತು ಸತ್ತು ಬಿದ್ದ ಸೌದೆ ತೆಗೆಯಲಿಕ್ಕೆ ಬಿಡುವುದು. ಗೋಚರಾವಿನ ಪರ್ಮಿಟುಗಳನ್ನು ಪಡೆಯುವರೆ ಜನರಿಗೆ ಖುಷಿ ಇಲ್ಲವಾದರೆ ಅವುಗಳನ್ನು ಪಡೆಯುವದರೆ ಇನ್ನುಮುಂದೆ ಒತ್ತಾಯ ಪಡಿಸಬಾರದು. ಇದಲ್ಲದೆ ಸೀತಾನದಿ ಗ್ರಾಮಸ್ಥರು ತಮ್ಮ ಕುಮ್ಕಿಗಳಿಗೆ ಬೇಲಿಹಾಕಬೇಕಾದಲ್ಲಿ ಅಂಥಾ ಬೇಲಿಗಳನ್ನು ರಿಜರ್ವ ಕಾಡಿನ ಗಡಿಯ ಜೊತೆಗೆ ಹಾಕಿದ್ದಲ್ಲಿ ಅದಕ್ಕೆ ಆಕ್ಷೇಪಿಸಕೂಡದಾಗಿ ನಿಶ್ಚಯಿಸಿರುತ್ತದೆ. ಈ ಹುಕ್ಕುಂ ಪ್ರಕಾರ ಜನರು ನಡಕೊಳ್ಳಬಹುದು. ಇದಕ್ಕೆ ಫಾರೆಸ್ಟ್ ನೌಕರರು ಯಾರಾದರೂ ಆಕ್ಷೇಪ ಮಾಡಿದರೆ ಯಾ ಅದಕ್ಕೆ ವಿರೋಧವಾಗಿ ನಡಕೊಂಡರೆ ಕುಲಂಕುಶ ವಿವರಗಳನು ಕಾಣಿಸಿ ನನಗೆ ಬರೆದು ತಿಳಿಸಬೇಕಾಗಿ ವಿನಂತಿ ಎಂದು ಕೋಟೆ ರಾಮಕೃಷ್ಣ ಕಾರಂತ, ಕಾರ್ಯದರ್ಶಿ, ದಕ್ಷಿಣ ಕನ್ನಡ ಜಿಲ್ಲಾ ವರ್ಗದಾರರ ಸಂಘ ಇವರು ತಿಳಿಸುತ್ತಾರೆ.

ಪತ್ನೀ ಸಹಿತರಾದ ಕೋ. ಶಿ. ಕಾರಂತರು.

ತಾಲೂಕುಗಳಿಂದ.

ಕಾರ್ಕಳ:— ದಿವಂಗತ ಪಂಚಮ ಜೋರ್ಜ ಭೂಪತಿಗಳ ಸ್ಮಾರಕನಿಧಿಗೆ ಹಣಸಂಗ್ರಹ ಮಾಡುವುದಕ್ಕೋಸ್ಕರ ಒಂದು ಸಭೆಯು ಇಲ್ಲಿಯ ಬೋರ್ಡ ಹೈಸ್ಕೂಲಿನಲ್ಲಿ ರೆವಿನ್ಯೂ ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಜರಗಿ ಕಮಿಟಿ ನಿರ್ಮಾಣವಾಗಿದೆ. ಸಭೆಗೆ ಬಂದವರು ಕೇವಲ ಕೈಬೆರಳೆಣಿಸಬಹುದಷ್ಟು ಮಂದಿ ಇದ್ದರಾದರೂ ನಿರ್ಧಾರಿತ ಪರಿಮಾಣದಲ್ಲಿ ಧನಸಂಗ್ರಹವಾಗದಿರಲಾರದೆಂದು ನಂಬಲಾಗಿದೆ.

ಇಲ್ಲಿಯ ಪಟೇಲ ಶ್ರೀ। ಗೋಪಾಲ ಹೆಗ್ಡೆಯವರು ಕರ ಕಂದಾಯಗಳ ವಸೂಲಿಯನ್ನು ತೃಪ್ತಿಕರವಾಗಿ ಮಾಡಿದ ಸಂಬಂಧ ಮೇಲಾಧಿಕಾರಿಗಳ ಶ್ಲಾಘನೆಗೆ ಪಾತ್ರರಾಗಿರುವರೆಂದೂ, ಆ ಸಂಬಂಧ ಅವರಿಗೆ ಇತರ ಕೆಲವರಂತೆ ತಾತ್ಕಾಲಿಕ ನಿವೃತ್ತಿ ಜುರ್ಮಾನೆ ಮೊದಲಾದ ದಂಡಗಳಾಗುವ ಪ್ರಸಂಗವು ತಪ್ಪಿಹೋಗಿರುವುದೆಂದೂ ತಿಳಿದು ಬರುತ್ತದೆ. ಶ್ರೀ। ಹೆಗ್ಡೆರಿಗಿಂದು ಕೀರ್ತಿ! ನಮಗೊಂದು ಗೌರವ!!

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರ ಆದೇಶದ ಮೇರೆಗೆ ಇಲ್ಲಿಯೂ ನಿರ್ದಿಷ್ಟ ಕಾರ್ಯಕ್ರಮವನ್ನನುಸರಿಸಿ ಅಡೀಸ ಅಬಾಬಾ ಆಕ್ರಮಣ ಮತ್ತು ಶ್ರೀ ಸುಭಾಷ್ಚಂದ್ರಭೋಸರ ದಸ್ತಗಿರಿ ನಿಷೇಧ ದಿನಗಳನ್ನು ಆಚರಿಸಿ ಇಟಲಿ ಎಸಗಿದ್ದ ನಮ್ಮ ದೇಶೀಯ ಸರಕಾರದ ಧೋರಣೆಯನ್ನು ನಿಷೇಧಿಸಿ ಹಲವರ ಭಾಷಣಗಳಾದುವು. ನಮ್ಮ ತಾಲೂಕು ಮತ್ತು ನಗರ ಕಾಂಗ್ರೆಸ ಕಮಿಟಿಗಳ ಕೆಲವರು ಬಿಟ್ಟು ಉಳಿದ ಎಲ್ಲಾ ಮೆಂಬರರು ಇಂಥ ದಿನಾಚರಣೆಗಳನ್ನು ತಮ್ಮ ಉಪಸ್ಥಿತಿಯಿಂದ ಯಶಸ್ವಿಗೊಳಿಸುವ ಅವಶ್ಯಕತೆಯನ್ನು ಯಾಕೆ ಮನಗಾಣುವದಿಲ್ಲವೋ ಗೊತ್ತಾಗದಾಗಿದೆ! ಇಷ್ಟನ್ನು ಮಾಡಲಾರದ ಕಾಂಗ್ರೆಸ ಕಾರ್ಯಕಾರಿ ಮಂಡಳಿಯ ಮೆಂಬರರು ತಮ್ಮ ಸದಸ್ಯಸ್ಥಾನವನ್ನು ಇತರರಿಗೆ ಬಿಟ್ಟುಕೊಡುವುದುಚಿತವಲ್ಲವೇ?

ಸ್ಥಳೀಯ ಆರ್ಯಸಮಾಜದ ಕಳೆದ ಎರಡು ಆದಿತ್ಯವಾರಗಳ ಸಾಪ್ತಾಹಿಕ ಸಭೆಗಳಲ್ಲಿ ಬ್ರಹ್ಮಚಾರಿ ರಾಮರಾಯ ನಾಯಕರು ಆತ್ಮಶಾಂತಿ ಮತ್ತು ಪರಮಾತ್ಮ ಸಾಕ್ಷಾತ್ಕಾರದ ಕುರಿತಾಗಿಯೂ ಆರ್ಯ ಮಿತ್ರರ [illegible] ಶಿಷ್ಯೆಯರು ವಿಚಾರ ವಿವೇಕಗಳ ಪ್ರಾಶಸ್ತ್ಯದ ಕುರಿತಾಗಿಯೂ ಭಾಷಣಮಾಡಿದರು.

ಇಲ್ಲಿಯ ಶ್ರೀ ಸೀರಪಾಣಿ ದೇವಾಲಯದ ಜೀರ್ಣೋದ್ಧಾರ ಮಾಡುವ ಆವಶ್ಯಕತೆಯನ್ನು ಈಗ್ಗೆ ಅನೇಕ ವರ್ಷಗಳ ಹಿಂದೆ ಶ್ರೀಮತ್ ಭುವನೇಂದ್ರ ತೀರ್ಥ ಸ್ವಾಮಿಯವರೂ, ಅನಂತರ ಶ್ರೀಮತ್ ವರದೇಂದ್ರ ತೀರ್ಥ ಸ್ವಾಮಿಯವರೂ ಮನಗಂಡು ಆ ಕಾರ್ಯವನ್ನು ಯಶಸ್ವಿಗೊಳಿಸುವರೆ ರಾಯಸಪತ್ರಗಳನ್ನು ಹೊರಡಿಸಿ ಶಿಷ್ಯವರ್ಗಕ್ಕೆ ಆಜ್ಞಾಪಿಸಿದ್ದರಾದರೂ ಕೆಲವು ಅನಿರೀಕ್ಷಿತ ಮತ್ತು ಅನಿವಾರ್ಯ ಕಾರಣಗಳಿಂದ ಆ ಕಾರ್ಯವು ಪ್ರಾರಂಭ ಕೂಡ ಆಗದೆ ಹಾಗೆಯೇ ಉಳಿದುಬಂದಿತ್ತು. ಇತಿಹಾಸ ಪ್ರಸಿದ್ಧವಾದ ಈ ದೇವಾಲಯದ ಜೀರ್ಣೋದ್ಧಾರವನ್ನು ಈಗ ಶ್ರೀ ಸುಕೃತೀಂದ್ರತೀರ್ಥ ಸ್ವಾಮಿಯವರ ಪ್ರೋತ್ಸಾಹ ಸಹಾನುಭೂತಿಗೊಳಪಟ್ಟು ಮಹಾಜನರಿಂದ ಮಾಡಿಸಬೇಕೆಂದು ಪ್ರಯತ್ನಗಳಾಗುತ್ತಿವೆ. ಈ ಬಗೆಯ ಸತ್ಕಾರ್ಯಗಳಿಗೆ ಅವರ ಉದಾರಸಹಾಯವು ಯಥೋಚಿತವಾಗಿ ಒದಗುವಲ್ಲಿ ದೊರೆಯುವದೆಂದು ದೇವಾಲಯದ ಅಧಿಕಾರಿಗಳು ಆಶಿಸುತ್ತಾರೆ.

ದುರ್ಗ— ತಾ ೧೦ನೇ ಆದಿತ್ಯವಾರ ದಿನ ರಾತ್ರಿ ಸ್ಥಳೀಕ ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳಾದ ಶ್ರೀಯುತ ಅಧಿಕಾರಿಯವರೂ ಪಟೇಲ ಬಿ ವೆಂಕಟೇಶ ಭಟ್ಟರೂ ಕೆ ಕೆ ಬಿ ರಾಮಶೆಟ್ಟರವರೂ ದುರ್ಗ ಗ್ರಾಮದ ಶ್ರೀ ಮಹೇಶ್ವರ ದೇವಸ್ಥಾನಕ್ಕೆ ಹೋಗಿ ಅಲ್ಲಿ ನೆರೆದ ಸಭಿಕರಿಗೆ ಕಾಂಗ್ರೆಸಿನ ವಿಷಯವೂ, ಕರಾಚಿ ಕಾಂಗ್ರೆಸಿನಲ್ಲಿ ಮಂಜೂರಾದ ಮೂಲಭೂತ ಹಕ್ಕುಗಳು ಶ್ರೀಯುತ ಸುಭಾಷ್ಚಂದ್ರ ಬೋಸರ ಬಂಧನ ಎಡಿಸ್ ಅಬಾಬ ದಿನಾಚರಣೆ ರೈತರ ಸಂಘಟನೆ ಲಕ್ನೋ ಕಾಂಗ್ರೆಸಿನಲ್ಲಿ ರೈತರ ವಿಷಯ ಮಂಜೂರಾದ ಗೊತ್ತುವಳಿಗಳು ಇವೇ ಮೊದಲಾದ ವಿಷಯ ವಿವರಿಸಿ ಹೇಳಿದರು.

ಪುದು ಫರಂಗಿಪೇಟೆ:— ಇಲ್ಲಿಯ ಮಾಪಿಳ್ಳಾ ಬೋರ್ಡು ಶಾಲೆಗೆ ಇತ್ತೀಚೆಗೆ ವರ್ಗವಾಗಿ ಬಂದ ಉತ್ತಿಪ್ಪೂರು ರಾ। ಮೊಹಿದ್ದೀನ್ ಸಾಹೇಬರವರು ಬೋರ್ಡು ಮಹಮ್ಮದನ್ ಜೋಗಟ್ಟೆ ಶಾಲೆಗೆ ವರ್ಗವಾಗಿ ಹೋಗುವ ಸಮಯ ಊರವರ ವಿದಾಯಕೂಟವು ತಾ ೭—೫ ೩೬ನೇ ಗುರುವಾರ ದಿನ ಜನಾಬ್ ಆ ಬೈನ್ ಬ್ಯಾರಿ (ಶಾಲಾಕಮಿಟಿಯ ಅಧ್ಯಕ್ಷ)ಗಳ ಅಧ್ಯಕ್ಷತೆಯಲ್ಲಿ ಜರಗಿತು. ಉಪಾಧ್ಯಾಯರೂ, ವಿದ್ಯಾರ್ಥಿಗಳೂ, ಊರವರೂ ಅಂಥಾ ಯೋಗ್ಯ ಉಪಾಧ್ಯಾಯರನ್ನು ಕಳಕೊಳ್ಳಲು ತುಂಬಾ ವಿಷಾದಪಟ್ಟರು. ಇಲ್ಲಿಗೆ ವರ್ಗವಾಗಿ ಬಂದ ರಾ। ಪಿ ಆದಂ ಸಾಹೇಬರು ಮುಸಲ್ಮಾನ ಉಪಾಧ್ಯಾಯರಾಗಿದ್ದು ಈ ಶಾಲೆಯು ಮಾಪಿಳ್ಳಾ ಶಾಲೆಯಾಗಿರುವುದರಿಂದ ಹಳ್ಳಿಯವರಿಗೆ ಅತೀ ಆವಶ್ಯವಾದ ಮತಸಂಬಂಧವಾದ ಕುರಾನು ಪಾಠವು ಹಾಗಾಗಿ ಅಭಿವೃದ್ಧಿಯಲ್ಲಿರುವ ಶಾಲೆಯು ಹೀನಾವಸ್ಥೆಗೆ ಬರುವುದು. ಮಾನ್ಯ ಡಿ। ಬೋ। ಪ್ರೆಸಿಡೆಂಟರವರು ಶಾಲಾಭಿವೃದ್ಧಿಯ ಕಡೆಗೆ ದೃಷ್ಟಿ ಇಟ್ಟು ಮಾಪಿಳ್ಳಾ ಉಪಾಧ್ಯಾಯರನ್ನು ಕೊಟ್ಟು ಹಿತವಿದ್ಯಾರ್ಥಿಗಳ ವಿದ್ಯಾಭ್ಯಾಸವನ್ನು ಏಳ್ಗೆಗೆ ತರುವರಾಗಿ ನಂಬುತ್ತೇವೆ.

ಮಂಜೇಶ್ವರ:— ಇಲ್ಲಿ ತಾ, ೧೧ನೇ ಸೋಮವಾರ ಬೆಳಗ್ಗೆ ೯॥ ಗಂಟೆಗೆ ಸರಿಯಾಗಿ ವೈಸರಾಯರ ಸಂದೇಶವನ್ನು ಇಲ್ಲಿ ನಡೆದ ಪೋಲೀಸ ಪರೇಡ್ ಸಮಯ ಊರ ಪ್ರಮುಖರ ಸರಕಾರಿ ನೌಕರರ ಮತ್ತು ಶಾಲಾ ಮಕ್ಕಳ ಸಮಕ್ಷಮದಲ್ಲಿ ಓದಿಹೇಳಿದರು.

ಜಿಲ್ಲಾ ಕಲೆಕ್ಟರ್ ದೊರೆಗಳು ಸುಮಾರು ೧ ಗಂಟೆ ಸಮಯಕ್ಕೆ ಬಂದು [illegible].

ಶ್ರೀ ಮಹಾಮಹೇಶ್ವರ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು. ಶಾಲಾ ಮಕ್ಕಳ ಪೋಲ್‌ಡ್ರಿಲ್, ಲೇಜಿಮ, ಲಾಠಿಯೇಟು, ಕೋಲಾಟ ನರ್ತನ, ಪಿರಮಿಡ್ ಆಟ ಹಳೇ ವಿದ್ಯಾರ್ಥಿಗಳ "ಗವಾಯಿಗಳ ಫಾರ್ಸ್" ಬಹಳ ಚಲೋದಾಗಿತ್ತು. ಸೀತಾವನ ನಾಟಕವು ಅತ್ಯುತ್ತಮ ರೀತಿಯಲ್ಲಿ ಅಭಿನಯಿಸಲ್ಪಟ್ಟಿತು. ಒಟ್ಟಾರೆ ಶಾಲಾ ಉಪಾಧ್ಯಾಯರ, ಮಕ್ಕಳ ಮೆನೇಜಿಂಗ್ ಕಮಿಟಿಯವರ ಸಾಹಸವು ಉತ್ಸಾಹಭರಿತವಾಗಿತ್ತು.

ಕಿನ್ನಿಗೋಳಿ:— ಇಲ್ಲಿ ಸಮೀಪದ ಮೂರುಕಾವೇರಿ ಎಂಬಲ್ಲಿ ಮಾಜಿ ಶೆಟ್ಟರ ಅಂಗಡಿಗೆ ತಾ, ೪—೫—೩೬ರ ರಾತ್ರಿ ಕಳ್ಳರು ಮಾಡಿನ ಮೂಲಕ ಮಾಳಿಗೆಗೆ ಹತ್ತಿ ಒಳಗಿದ್ದ ಸುಮಾರು ೧೫೦ ರೂಪಾಯಿ ಬೆಲೆಯ ಸಾಮಾನುಗಳನ್ನು ಕಳವು ಮಾಡಿರುತ್ತಾರೆ. ಪೋಲಿಸ್ ತನಿಖೆಯು ಭರದಿಂದ ನಡೆಯುತ್ತದೆ.

ತಾ ೧೦—೫—೧೯೩೬ನೇ [illegible]

ತಾ, ೧೩—೫—೩೬ರ ಬೆಳಗ್ಗೆ [illegible] ಅಬ್ಕಾರಿ ಇನ್ಸ್‌ಪೆಕ್ಟರರು ಇಲ್ಲಿ [illegible] ಜನರನ್ನು ಎರಡು ಕಡೆಗಳಲ್ಲಿ ಹಿಡಿದಿರುತ್ತಾರೆ.

ಅಜೆಕಾರು — ಸ್ಥಳೀಯ ಬೋರ್ಡ ಶಾಲಾ [illegible] ವಿಸ್ತರಿಸ [illegible] ಕೆಲಸವು ಪೂರೈಸಿ [illegible]. ಮಕ್ಕಳ ಸಂಖ್ಯೆಯು ಏರುತ್ತಲಿರುವ ಈ ಶಾಲೆಗೆ ಇನ್ನು ಸ್ವಾಭಾವಿಕವಾದ ಕೊರತೆಯು ಪ್ರತ್ಯಕ್ಷ ಇಲ್ಲದಂತಾಗುವುದು ಸ್ಪಷ್ಟ! ಊರ ಸಹೃದಯರು ಪ್ರೋತ್ಸಾಹವಿತ್ತು ಈ ಸೆಂಟ್ರಲ್ ಶಾಲೆಗೆ ಮಾನ್ಯ ಜಿಲ್ಲಾ ಬೋರ್ಡಿನವರು ಇನ್ನೂ ಅಭಿವೃದ್ಧಿ ಹೊಂದುವಂತೆ ತಕ್ಕ ವ್ಯವಸ್ಥೆ ಮಾಡಬೇಕಾಗಿ ಪ್ರಾರ್ಥನೆ.

ಕಳೆದ ವರ್ಷ ನವೀನವಾಗಿ ಸ್ಥಾಪಿಸಲ್ಪಟ್ಟ ಇಗರ್ಜಿಯ ವರ್ಷಾವಧಿ ಹಬ್ಬವು ಇದೇ ತಾ ೧೨—೫—೩೬ರಲ್ಲಿ ಜರಗಿತು.

ತಾ ೯—೫ ೧೯೩೬ರಲ್ಲಿ ಅಜೆಕಾರು ಬೋಧಕರ ಸಂಘದ ಸಭೆಯು ಅಂದಾರು ಶಾಲೆಯಲ್ಲಿ ಮಾ। ರಾ। [illegible] ಕೆ ಬೋಗ್ಗ ಶೆಟ್ಟಿ ನೇತೃತ್ವದಲ್ಲಿ ನೆರವೇರಿತು.

ಇಲ್ಲಿಯ ಕೊಡಮಣಿತ್ತಾಯ ದೈವದ ಗುಡಿಯು ಜೀರ್ಣೋದ್ಧಾರವಾಯಿತು! ಮದ್ರಾಸ್ ರಿಲೀಜಿಯಸ್ ಎಂಡೋವ್‌ಮೆಂಟ್ ಬೋರ್ಡಿನವರು ಶ್ರೀ। ಕಾಂತು ಆಳ್ವರುಗಳವರನ್ನು ಮುಖ್ಯ ಟ್ರಸ್ಟಿಗಳಾಗಿ ನೇಮಿಸಿದ್ದರು. ಇನ್ನುಮುಂದೆ ಕೋಲ ನೇಮಗಳ ಕಾರ್ಯವು ಕ್ರಮವಾಗಿ ನೆರವೇರುವುದರಲ್ಲಿ ಸಂಶಯವಿರಲಾರದು!!

ಉಡುಪಿ:— ತಾ, ೧೦ನೇ ರಾತ್ರಿ ಭಾರಿ ಗುಡುಗು ಮಿಂಚುಗಳೊಡನೆ ಮಳೆ ಬಿದ್ದಿತು. ಉಡುಪಿ ಬೈಲೂರಿನಲ್ಲಿ ನಾರಾಯಣ ಭಟ್ಟನೆಂಬವರ ಶಿವಳ್ಳಿ ಬ್ರಾಹ್ಮಣನ ಮನೆಯೊಳಗೆ ಕೂತಲ್ಲಿ ಸಿಡಿಲು ಬಡಿದು ಮೃತಪಟ್ಟನು.

ತಾ. ೧೧ನೇ ಪೂರ್ವಾಹ್ನ ಮಾನ್ಯ ವೈಸರಾಯರ ಅಪ್ಪಣೆ ಮೇರೆಗೆ ಪೋಲೀಸರಿಗೆ ಜುಬಿಲೀ [illegible] ಓದಿಹೇಳುವ ಸಮಾರಂಭವು ತಾಲೂಕು ಆಫೀಸಿನಲ್ಲಿ ಜರಗಿತು. ಸರಕಾರಿ ಆಫೀಸರರೂ ಶಾಲಾ ಮಾಸ್ತರರೂ ಮುತ್ತಾದವರೂ ನೆರೆದಿದ್ದರು. ಬೇರೆ ಶಾಲೆಗಳವರೂ ಇತ್ತ ಕೆಲವು ಹರಿಜನ ವಿದ್ಯಾರ್ಥಿಗಳು ಬಹುಶಃ ಅಲ್ಲಿಗೆ ಬರಮಾಡಲ್ಪಟ್ಟವರಾಗಿ ಬೀದಿಯಲ್ಲಿ ಧೂಪದ ಮರಗಳ ನೆರಳಿನಲ್ಲಿ ಕಾದಿದ್ದರು.

ಇದೇ ತಾ ೨೩ಕ್ಕೆ ಜಿಲ್ಲಾ ಬೋರ್ಡ ಮೆಂಬರರ ಸಾಧಾರಣ ಸಭೆಯೊಂದು ಸೇರುವುದರಿಂದ ಅನಂತರ ಹಲವು ಉಪಸಮಿತಿಗಳ ಕಮಿಟಿಗಳ ಚುನಾವಣೆಯೂ ಜರಗುವದೆಂದು ತಿಳಿದುಬರುತ್ತದೆ. ಕಳೆದ ತಾ ೩ಂಕ್ಕೆ ಜಿಲ್ಲಾ ಸಿವಿಲ್ ಬೋರ್ಡಿನ ಹಾಗೂ ಬೋರ್ಡಿನೊಳಗಣ ಕಾಂಗ್ರೆಸ್ ಸದಸ್ಯರ ಸಭೆಗಳಿಗೆ ಕನಿಷ್ಠ ಹಾಜರಿಯಿಲ್ಲದೆ ಸಭೆಗಳು ಜರುಗಿದ್ದಿಲ್ಲವಂತೆ ಸಂಬಂಧಪಟ್ಟವರು. ಈ ವೇಳೆಗೆ ಸರಿಯಾಗಿಯಾದರೂ ಸದ್ರಿ ಸಭೆಗಳನ್ನು ಸೇರಿಸಿ ಮುಂದಿನ ಧೋರಣೆ ಕಾರ್ಯಕ್ರಮಗಳ ಮಟ್ಟಿಗೆ ನಿಶ್ಚಯಿಸಿ [illegible] ದಾರಿಯನ್ನು ತೋರುವುದೇ ಎಂದು ಹಾರೈಸಲಾಗುತ್ತದೆ. ಅಲ್ಲದೆ ನಾವಿದು ತಾ, ೨೩ಕ್ಕೆ ರೈಲ್ವೇ ಸೆಸ್ಸನ್ನು ಹೇಗೆ ವಿನಿಯೋಗಿಸಬಹುದೆಂಬುದರ ವಿವೇಚನೆಯಾಗುವುದಿದೆ. ಇದು ವರೆಗೆ ನಮ್ಮ ಜಿಲ್ಲೆಯಲ್ಲಿ ರೈಲ್ವೇ ಸೆಸ್ಸು ಎಷ್ಟು ಎಷ್ಟು ವಸೂಲಾಗಿದೆ, ಆಯಾಯ ತಾಲೂಕುಗಳಿಂದ ವಸೂಲೆಷ್ಟು? ಇದು ವರೆಗೆ ಸದ್ರಿ ಹಣದಿಂದ ನಡೆಸಲಾದ ಕಾಮಗಾರಿ ವ ಖರ್ಚಿನ ಸೂತ್ರಗಳಾವುವು? ಇದು ವರೆಗೆ ಖರ್ಚಾದ ಹಣಗಳಿಂದ ಆಯಾಯ ತಾಲೂಕುಗಳಿಗೆ ಸಿಕ್ಕಿರಬಹುದಾದ ಪ್ರಯೋಜನದ ಅಂಶವೆಷ್ಟು? ಯಾವುದಾದರೂ ತಾಲೂಕುಗಳಿಗೆ ರೈಲ್ವೇ ಸೆಸ್ಸಿನ ವ್ಯಯದ ಪ್ರಯೋಜನ ಸಿಕ್ಕಿಲ್ಲವಾದರೆ, ಈಗ ವಿನಿಯೋಜಿಸಲಿರುವ ಅಂದಾಜಿನಲ್ಲಿ ಈ ತಾಲೂಕುಗಳ ಮಟ್ಟಿಗೆ ಯೋಚಿಸ [illegible] ಬೋರ್ಡಿನ [illegible]

ಸ್ಥಾನಿಕ ಸುದ್ದಿಗಳು.

ಅಡಿಸ್ ಅಬಾಬ ದಿನಾಚರಣೆ.

ಕಾಂಗ್ರೆಸ್ ಅಧ್ಯಕ್ಷರ ಅಪ್ಪಣೆ ಪ್ರಕಾರ ಇದೇ ತಿಂಗಳ ತಾ. ೯ನೇ ಶನಿವಾರವು ಕಾರ್ಕಳದಲ್ಲಿ ಅಡಿಸ್ ಅಬಾಬ ದಿನಾಚರಣೆ ನಡೆಯಿತು. ಸಾಯಂಕಾಲ ಆರ್ಯ ಸಮಾಜದ ಮಂದಿರದಲ್ಲಿ ಶ್ರೀಯುತ ಮೂಡ್ಲಗಿರಿ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿ ನಾಗರೀಕತೆಗೆ ವಿರೋಧವಾಗಿ ತನ್ನ ನೌಕರಶಾಹಿ ಧೋರಣವನ್ನು ಸ್ಥಾಪಿಸುವ ಉದ್ದೇಶದಿಂದ ವಿಷದ ಗಾಳಿ ವಗೈರೆ ಯುದ್ಧದ ಸಾಮುಗ್ರಿಗಳನ್ನು ಉಪಯೋಗಮಾಡಿ ಎಥಿಯೋಪಿಯ ದೇಶವನ್ನು ಜಯಿಸಿದ ಇಟೆಲಿದೇಶದವರ ವರ್ತನೆಯನ್ನೂ, ತಮ್ಮ ಮೇಲೆ ಎಬಿಸೀನಿಯ ದೇಶದ ಚಕ್ರವರ್ತಿಗಳು ಸಂಪೂರ್ಣ ವಿಶ್ವಾಸ ವಿಟ್ಟು ಸಂದಿಗ್ಧ ಸಮಯದಲ್ಲಿ ಕೈಬಿಟ್ಟುಹಾಕಿದ ಜನಾಂಗಸಂಘದವರ ವರ್ತನೆಯನ್ನೂ ತೀವ್ರವಾಗಿ ಖಂಡಿಸಿ, ಮತ್ತು ಸ್ವಾತಂತ್ರ್ಯವನ್ನು ಕಳಕೊಂಡ ಎಬಿಸೀನಿಯ ದೇಶದವರ ಮೇಲೆ ಸಭೆಯ ಅಂತಃಕರಣಪೂರ್ವಕವಾದ ಸಹಾನುಭೂತಿಯನ್ನು ವ್ಯಕ್ತಗೊಳಿಸಿ ಅಧ್ಯಕ್ಷರು ತಂದ ಠರಾವು ಸರ್ವಸಮ್ಮತದಿಂದ ಮಂಜೂರು ಮಾಡಲ್ಪಟ್ಟಿತು. ಶ್ರೀಗಳಾದ ಕಟಿಪಾಡಿ ಶ್ರೀನಿವಾಸ ಶೆಟ್ಟಿ, ಅಚ್ಯುತರಾವ್ ಮತ್ತು ಎಂ. ಎಸ್. ಅಧಿಕಾರಿಯವರು ಸದರಿ ಠರಾವಿನ ವಿಷಯ ಭಾಷಣಮಾಡಿದರು.

ಸುಭಾಷ್ಚಂದ್ರಬೋಸರ ದಿನಾಚರಣೆ.

ರಾಷ್ಟ್ರ ಸಭಾಧಿಪತಿಗಳಾದ ಪಂಡಿತ ಜವಾಹರಲಾಲ ನೆಹರುಗಳ ಅಪ್ಪಣೆ ಪ್ರಕಾರ ಇದೇ ತಿಂಗಳ ತಾ. ೧ನೇ ಆದಿತ್ಯವಾರ ದಿನವು ಇಲ್ಲಿ "ಸುಭಾಷ್ಚಂದ್ರ ಬೋಸರ ದಿನವಾಗಿ ಆಚರಿಸಲ್ಪಟ್ಟಿತು. ಸಾಯಂಕಾಲ ಆರ್ಯ ಸಮಾಜದ ಮಂದಿರದಲ್ಲಿ ಒಂದು ಸಾರ್ವಜನಿಕ ಸಭೆಯು ಶ್ರೀಯುತ ಸಿ. ಎಚ್. ಕೇಶವ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಜರಗಿ, ಈ ಕೆಳಗಿನ ಠರಾವು ಶ್ರೀಯುತ ವಕೀಲ ಎಂ. ಎಸ್. ಅಧಿಕಾರಿಯವರಿಂದ ಸೂಚಿಸಲ್ಪಟ್ಟು ಶ್ರೀಯುತ ಕಟಿಪಾಡಿ ಶ್ರೀನಿವಾಸ ಶೆಟ್ಟರಿಂದ ಅನುಮೋದಿಸಲ್ಪಟ್ಟು, ಸರ್ವಸಮ್ಮತದಿಂದ ಮಂಜೂರು ಮಾಡಲ್ಪಟ್ಟಿತು.

ಠರಾವು.

ಬಹಳ ಸಮಯದ ವರೆಗೆ ಗಡಿಪಾರಾಗಿದ್ದು ಲಕ್ನೋ ಕಾಂಗ್ರೆಸಿನ ಅಧಿವೇಶನಕ್ಕೆ ಬರುವರೆ ಹಿಂದೂಸ್ಥಾನಕ್ಕೆ ಹೊರಟ ಶ್ರೀಯುತ ಸುಭಾಷ್ಚಂದ್ರ ಬೋಸರನ್ನು ಕೈದು ಮಾಡಿ ಬಂಧನದಲ್ಲಿಟ್ಟದ್ದಕ್ಕಾಗಿ ಸರಕಾರದವರ ಮೇಲಣ ಕೋಪವನ್ನು ವ್ಯಕ್ತಗೊಳಿಸಿ ಅವರ ವರ್ತನೆಯನ್ನು ಕಾರ್ಕಳದ ಮಹಾಜನರ ಈ ಸಭೆಯು ತೀವ್ರವಾಗಿ ನಿಷೇಧಿಸುತ್ತದೆ.

ತನಗೆ ದೇಹದಲ್ಲಿ ಸೌಖ್ಯವು ನೆಟ್ಟಗಿಲ್ಲವಾದರೂ ತನ್ನ ದೇಶಕ್ಕೆ ವಾಪಾಸು ಬಾರದ ಹಾಗೆ ತನ್ನ ಮೇಲೆ ಸರಕಾರದವರು ಜ್ಯಾರಿಮಾಡಿದ ಹುಕುಮನ್ನು ಧೈರ್ಯದಿಂದ ಉಲ್ಲಂಘಿಸುವರೆ ಸಂಕಲ್ಪಮಾಡಿದ್ದಕ್ಕಾಗಿ ಶ್ರೀ ಬೋಸರನ್ನು ಈ ಸಭೆಯು ಕೊಂಡಾಡುತ್ತದೆ.

ಶ್ರೀಯುತ ಬೋಸರನ್ನು ಕೂಡಲೆ ಬಿಡುಗಡೆ ಮಾಡುವಂತೆ ಈ ಸಭೆಯು ಸರಕಾರದವರನ್ನು ಕೇಳುತ್ತದೆ. ಶ್ರೀಯುತ ಸುಭಾಷ್ಚಂದ್ರ ಬೋಸರಿಗೆ ಈ ಸಭೆಯು ತನ್ನ ಸುಸ್ವಾಗತವನ್ನೂ ಸಹಾನುಭೂತಿಯನ್ನೂ ಕಳುಹಿಸುತ್ತದೆ.

ತರುವಾಯ ವ್ಯಕ್ತಿಸ್ವಾತಂತ್ರ್ಯದ ವಿಷಯ ಲಕ್ನೋ ಕಾಂಗ್ರೆಸಿನಲ್ಲಿ ಮಂಜೂರಾದ ಠರಾವನ್ನು ಶ್ರೀಯುತ ಅಧಿಕಾರಿಯವರು ಓದಿ ವಿವರಿಸಿ ಹೇಳಿದ ನಂತರ ಅದಕ್ಕೆ ಸರ್ವಸಮ್ಮತದಿಂದ ಬೆಂಬಲಕೊಡಲಾಯಿತು. ಅನಂತರ ಕಾಂಗ್ರೆಸ್ ಅಧ್ಯಕ್ಷರು ಕಳುಹಿಸಿದ ಸರ್ಕ್ಯೂಲರು ಪ್ರಕಾರ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯರಾದ ಶ್ರೀಯುತ ಅಧಿಕಾರಿಯವರು ಲಕ್ನೋ ಕಾಂಗ್ರೆಸಿನಲ್ಲಿ ಮಂಜೂರಾದ ಮುಖ್ಯ ಗೊತ್ತುವಳಿಗಳನ್ನು ಓದಿ ವಿವರಿಸಿ ಹೇಳಿದ ತರುವಾಯ ಸಭೆಯು ಮುಕ್ತಾಯವಾಯಿತು.

For your

DIAMONDS

Enquire at—

SOWKAR MAHAL,

Srinivas Ranga Pai,

Car Street, Mangalore.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.—ಸಂ. ಸ್ವ.

ಶ್ರೀ ಪದ್ಮಸಾಲಿ ವೈಶ್ಯಸಮಾಜ ಸೇವಾ ಸಂಘದವರಲ್ಲಿ ಒಂದು ವಿನಂತಿ.

ಪ್ರಿಯ ಶ್ರೀ ಪದ್ಮಸಾಲಿ ವೈಶ್ಯಸಮಾಜ ಸೇವಾ ಸಂಘದವರೇ, ನಾನು ಪ್ರಭಾತ ಮತ್ತು ರಾಷ್ಟ್ರಬಂಧು ಪತ್ರಿಕೆಯಲ್ಲಿ ಶ್ರೀ ಪದ್ಮಸಾಲಿ ವೈಶ್ಯಸಮಾಜದವರಿಗೆ ಒಂದು ಸಂಘವಿದೆಯೆಂದು ತಿಳಿದುಕೊಂಡೆನು. ಅವರು ಸದ್ರಿ ಸಮಾಜದ ಕುರಿತು ತುಂಬಾ ಕುತೂಹಲಚಿತ್ತರಾಗಿ ಹಲಕೆಲವು ಕೆಲಸಮಾಡುತ್ತಿರುವರೆಂದು ತಿಳಿದುಕೊಂಡೆನು. ಅಂದಿನಿಂದ ನನ್ನ ಮನಸ್ಸು ಸಂತೋಷಸಾಗರದಲ್ಲಿ ತೇಲಾಡತೊಡಗಿತು. ಏನೆಂದರೆ, ಜಾತಿವೈಷಮ್ಯದ ತಿಕ್ಕಾಟದಿಂದ ಅನಾಥಬಂಧುಗಳೆಂದೆನಿಸಿಕೊಂಡ ಸ್ವಜಾತಿ ಬಾಂಧವರು ಇಂದು ತಾನೇ ಬೆಳಕಿಗೆ ಬರುವಂತಾಯಿತು, ಅಂಧವಿಶ್ವಾಸದಲ್ಲಿ ಮುಳುಗಿದ್ದು ನ್ಯಾಯಧರ್ಮದ ಬೆಳಕನ್ನು ಈ ಪರಿಯಂತರವೂ ನೋಡದ ಬಾಂಧವರು ತಾವಾಗಿ ಮುಂದೊತ್ತಿಬಂದು ಅಥವಾ ಸಂಘದ ಕಟ್ಟುಪ್ಪಾಡುಗಳನ್ನು ವಿಚಾರಿಸಿ ನೋಡಿದರೂ ನ್ಯಾಯಧರ್ಮದ ಬೆಳಕನ್ನು ವಿಶಾಲ ದೃಷ್ಟಿಯಿಂದ ನೋಡುವಂತಾಗುವುದು, ಹಿಗ್ಗಟ್ಟು, ದೈವಭಕ್ತಿ ನ್ಯೂನತೆಗಳು ತಿದ್ದುಪಡಿ ಮತ್ತು ನವಸುಧಾರಣಾ ಪದ್ಧತಿ ಮುಂತಾದುವು ಸಮಾಜದಲ್ಲಿ ನೆಲೆಗೊಳ್ಳುವುವು.

ಸಮಾಜಸೇವೆಯೇ ಮನುಷ್ಯನ ಉತ್ತಮ ಕರ್ತವ್ಯಗಳಲ್ಲಿ ಒಂದು. ಇದನ್ನು ಸಮಾಜದವರು ಮುಖ್ಯವಾಗಿ ಗಮನಿಸತಕ್ಕ ವಿಷಯ, ಈ ಸಂಘದವರು ಮಾಡತಕ್ಕ ಪ್ರಮುಖ್ಯ ಕೆಲಸವಿದೆ. ಅದೇ ಸಮಾಜದ ಏಳಿಗೆಯ ಬೀಜವನ್ನು ಬಿತ್ತುವುದು; ಹಾಗೆ ಬೀಜವನ್ನು ಬಿತ್ತಬೇಕಾದರೆ ಸದ್ರಿ ಸಮಾಜದವರು ಒಟ್ಟು ಸೇರುವ ಒಂದು ಜಿಲ್ಲಾ ಸಂಘವನ್ನು ಏರ್ಪಡಿಸಬೇಕು. ಆ ಸಂಘದ ಮೂಲಕ ಅದರ ನಿಯಮದಂತೆ ಇಹಕ್ಕೂ ಪರಕ್ಕೂ ಸುಖದಾಯಕವಾದ ಕೆಲಸಗಳನ್ನು ಮಾಡಬೇಕು.

ಈ ಸಂಘದವರು ಮಂಗಳೂರಿಗೆ ಟಿಕ್ಕಾಸಿ ಸಂಘದ ಕರ್ತವ್ಯಗಳನ್ನು ನೆರೆದಿದ್ದ ಜಾತಿಬಾಂಧವರಿಗೆ ಬೋಧಿಸಿದ ಸಂಗತಿಯು ಸಂತೋಷದ ವಾರ್ತೆ. ನವನಾಗರಿಕತ್ವದ ತತ್ವವನ್ನು ಕಸದ ಕುಪ್ಪೆಗೆ ಬಿಸಾಡಿ ಸ್ವೇಚ್ಛಾಪ್ರವೃತ್ತಿಯಿಂದ ನಡೆಯುತ್ತಿರುವ ಉಳ್ಳಾಲ, ಮಂಜೇಶ್ವರ ಮತ್ತು ಹೊಸದುರ್ಗ ಮುಂತಾದ ಹಿಂದುಳಿದ ಕಡೆಗಳಲ್ಲಿ ಸ್ಥಾಪಿತವ ಉದ್ದೇಶ ಮತ್ತು ಅದರ ತತ್ವದ ಕುರಿತು ಬೋಧಿಸಲಾರರೇಕೆ? ಅದು ಅಸಾಧ್ಯವೆಂದು ತಿಳಿದುಕೊಳ್ಳುವರೇ? ಅಲ್ಲವಾದರೆ ಮುಖ್ಯಸ್ಥರನ್ನೊ ವಿದ್ಯಾವಂತರನ್ನೂ ಒಂದು ಕೇಂದ್ರ ಸ್ಥಳಕ್ಕೆ ಬರಮಾಡಿಕೊಂಡು ಅಲ್ಲಿಯಾದರೂ ಅದರ ಫಲಿತಗಳನ್ನು ಬೋಧಿಸಲಾರರೇ? ಅದು ಸಂಘದವರಿಗೆ ಅಸಾಧ್ಯವೆ? ಅದಕ್ಕೆ ಸ್ವಾಗತ ಬೇಕೆ? ಹಾಗಾದರೆ ಶ್ರೀ ಯಂ. ಎನ್. ಟಿ. ಎಸ್. ಮಾಸ್ಟರ್ ಶೇಟ್ ಜಿಯವರಂಥವರು ಯಾರಾದರೂ ಉದಾರ ಬುದ್ಧಿಯಿಂದ ಆಮಂತ್ರಿಸುವವರು ಇರುವರೇ? ಎಂದು ಸಂಘದವರು ಕೇಳಬಹುದಾದ ಪ್ರಶ್ನೆಯಿದೆ. ಉತ್ತರವು ಇಷ್ಟೇ—ಕುಬೇರನಂಥವರು ಇಲ್ಲವಾದರೂ ಕುಚೇಲನಂತವರು ಇರಬಹುದು ಇದು ಸಾಕೆ?

ಮಂಗಳೂರಿನಲ್ಲಿ ಸಂಘವು ಸ್ಥಾಪನೆಯಾಗಿದೆಯೇ? ಹಾಗಾದರೆ ಅದನ್ನೇ ಯಾಕೆ ಜಿಲ್ಲಾ ಸಂಘವಾಗಿ ಮಾಡಬಾರದು. ಹಾಗೆ ಮಾಡಿದರಲ್ಲವೇ ಆ ಸಂಸ್ಥೆಯ ರಂಗಸ್ಥಳದಲ್ಲಿ ಜಿಲ್ಲೆಯೊಳಗಣ ಹಲವು ಸಮಾಜ ಸೇವಾ ವೀರತರುಣರು ಮುಂದೆದ್ದು ಬಂದು ಪಾತ್ರವಹಿಸಿ ಕುಣಿದು ತಮ್ಮ ವರ್ಚಸ್ಸಿನ ಯಶಸ್ಸನ್ನು ಪ್ರದರ್ಶಿಸುವುದು. ಇದು ಜಿಲ್ಲಾ ಸಂಘವಾಗಿ ಪರಿಣಮಿಸಿದರಲ್ಲವೇ ಈ ರೀತಿಯಾಗುವುದು. ಕಾರ್ಕಳ ಶ್ರೀ ಪದ್ಮಸಾಲಿ ವೈಶ್ಯ ಸಮಾಜಸೇವಾ ಸಂಘದವರೊಂದಿಗೆ ಇದೀ ದ. ಕ. ಜಿಲ್ಲೆಯ ಕೆಲವು ತರುಣರು ಅಲ್ಲಿ ಸೇರಿಕೊಂಡು ಕಾರ್ಕಳದ ಏಳಿಗೆಯನ್ನು ಮಾತ್ರ ಬಯಸಬೇಕೆ? ಜಿಲ್ಲಾ ಸಮಾಜದವರ ಅಭಿವೃದ್ಧಿಯನ್ನು ಬಯಸಬೇಕೆ? ಅದು ನನಗೆ ತಿಳಿಯುವುದಿಲ್ಲ. ಅಧ್ಯಕ್ಷ ಮಹಾಶಯ ಮುತ್ತಯ್ಯ ಶೆಟ್ಟಿಗಾರರು ಇದನ್ನು ಕುರಿತು ಚೆನ್ನಾಗಿ ಪರ್ಯಾಲೋಚಿಸುವರಾಗಿ ನಂಬುತ್ತೇನೆ.

ಶ್ರೀ ಪದ್ಮಸಾಲಿ ವೈಶ್ಯ ಸಮಾಜದವರಿಗೆ ಅಷ್ಟಮಠ ಗಳಿವೆಯೆಂದು ನಾನು ಕೇಳಿರುತ್ತೇನೆ. ಆ ಕಡೆಗಳಲ್ಲಿ ಜಿಲ್ಲಾ ಸಂಘದ ಒಂದೊಂದು ಶಾಖೆಯನ್ನು ತೆರೆದು ಜಿಲ್ಲಾ ಸಂಘ ಒಂದನ್ನು ಬಲಪಡಿಸಿ ರಿಜಿಸ್ಟರ್ ಮಾಡಬಾರದೇ? ಇದು ಅಸಾಧ್ಯವೆಂದು ನಮ್ಮ ಪದ್ಮಸಾಲಿ ಜನಾಂಗಕ್ಕೆ ತೋರಲಾರದು. ಇದು ಕೊನೆಮುಟ್ಟುವ ಕೆಲಸವಲ್ಲವೆಂದು ಸಂಸ್ಥೆಯವರೂ (ಇನ್ನಿತರ ಮಹನೀಯರೂ) ಮೌನವ್ರತವನ್ನು ಕೈಕೊಳ್ಳುವರೋ ಎಂದು ನಮಗೆ ಸಂದೇಹವುಂಟಾಗುತ್ತದೆ. ಆದರೆ ಈ ಸಂಜೀವ ಕ್ರಾಂತಿಯು ಒಟ್ಟಿನಲ್ಲೇ ಇದೆ. ಯಾರು ಬಿಟ್ಟರೂ ಶ್ರೀ ಯಂ. ಎನ್. ಟಿ. ಎಸ್. ಮಾಸ್ಟರ್ ಶೇಟ್‌ಜಿಯವರು ಬಿಡಲಾರರು. ಈ ಕಾರ್ಯದ ಬೀಜವನ್ನು ಬಿತ್ತಿ ಮೊಳೆಯಲು ನೀರು ಹಾಕದೆ ಇದ್ದರೆ ಬಿರುದಿಗೆ ಕುಂದಲ್ಲವೇ?

ಶ್ರೀ ಮಾ। ಶೇಟ್ಜಿಯವರು ಮತ್ತು ದೇರೆಬೈಲು ದಾರುಶೆಟ್ಟಿಗಾರರು ಒಟ್ಟು ಸೇರಿಕೊಂಡು ಜಿಲ್ಲೆಯೊಳಗಣ ಎಲ್ಲಾ ಮುಖ್ಯಸ್ಥರನ್ನೂ ವಿದ್ಯಾವಂತರನ್ನೂ ಬರಮಾಡಿಕೊಂಡು ಇನ್ನೊಂದು ಮಹಾಸಭೆಯನ್ನು ಏರ್ಪಡಿಸಬೇಕಾಗಿ ಶ್ರೀ ಪದ್ಮಸಾಲಿ ವೈಶ್ಯಸಮಾಜದ ಪರವಾಗಿ ಬೇಡಿಕೊಳ್ಳುತ್ತೇನೆ. ಕಳೆದ ಸಭೆಗೆ ಅಷ್ಟಮಠಾಧಿಪರನ್ನು ಬರಮಾಡಿಕೊಂಡು ಸಮಾಜದ ಏಕೀಕರಣವನ್ನು ಅಂದೇ ಬಲಪಡಿಸದಿದ್ದುದು ವಿಷಾದಕರ ಸಂಗತಿ. ಗುತ್ತಿನ ಯಜಮಾನರಂತೆ ದೊಡ್ಡ ಮುಂಡಾಸಿನ ಗಲ್ಲಮೀಸೆಯ ಸುದೈವಶಾಲಿಗಳಾದ ಹಲಕೆಲವು ಮಹನೀಯರು ಈ ಅಷ್ಟಮಠಗಳಲ್ಲಿ ಸೇರುವರಿರುವರಂತೆ. ಅಂಥವರೆಲ್ಲವರೂ ಈ ಶುಭಕಾರ್ಯವನ್ನು ಉದಾರ ಬುದ್ಧಿಯಿಂದ ನಡೆಸದಿರಲಾರರು. ಇಲ್ಲವಾದರೆ ಅವರ ಕೊರತೆಯನ್ನು ಯಾರಲ್ಲಿ ಹೇಳಲಿ. ನಮ್ಮವರೆಂದರೆ ಉದ್ದುದ್ದ ಬಿರುದುಗಳನ್ನು ಧರಿಸಿಕೊಂಡು ಅನ್ಯರಿಂದ ಹೊಗಳಿಸಿಕೊಂಡು, ಸ್ವಜಾತಿ ಬಾಂಧವರನ್ನು ಧಿಕ್ಕರಿಸಿ ಕಡೆಗಣ್ಣಿನ ಓರೆ ನೋಟದಿಂದ ತಿಡಿಗಳನ್ನು ಹೊಸೂಸಿಕೊಂಡು ಅನ್ಯಮತದವರ ದೇವಾಲಯಗಳಿಗೆ ಸಾವಿರ ಗಟ್ಟಲೆಯಲ್ಲಿ ಖರ್ಚು ನಡೆಸಿ ಪರರ ಮರ್ಯಾದೆಗೆ ಒಳಪಡುವಂತಹ ಶೂರರಲ್ಲದೆ, ನಮ್ಮ ಸಮಾಜವನ್ನು ವೃದ್ಧಿಪಡಿಸುವ ವೀರರು ನಮ್ಮವರಲ್ಲಿಲ್ಲ. ಈ ರೀತಿಯ ವರ್ತನೆಗೆ ಒಳಪಟ್ಟವರ ಪಾಲಿಗೆ ಬಿದ್ದಿರುವ ಮತವಲ್ಲವೇ ಇಂದು ನಮ್ಮ ಕಣ್ಣ ಮುಂದೆ ಮಣ್ಣುಪಾಲಾಗಿರುವುದು? ಈ ದೃಶ್ಯವನ್ನು ನೋಡಿದರೆ ಎಂಥಾ ಪಾಷಾಣ ಹೃದಯನಾದರೂ ಕಣ್ಣೀರು ಸುರಿಯುವುದರಲ್ಲಿ ಸಂದೇಹವಿಲ್ಲ. ಆದರೂ ಸ್ವಜಾತಿ ಬಾಂಧವರನ್ನು ವೃದ್ಧಿಸುವುದಿಲ್ಲ. ಇದು ದುಃಖಸೂಚಕ ಸಂಗತಿ. ಈ ಎಲ್ಲಾ ಪರಿಸ್ಥಿತಿಯನ್ನು ನೋಡಿದರೆ, ಶ್ರೀ ಪದ್ಮಸಾಲಿ ವೈಶ್ಯಸಮಾಜದ ಸೇವಾ ಸಂಘದವರೇ ಸುದೈವಶಾಲಿಗಳು. ಮತ್ತು ಧನ್ಯರು. ಅವರು ಇಂದು ಅಳಿಲ ಸೇವೆಯಂತೆ ಮಾಡುತ್ತಿರುವ ಸಮಾಜಸೇವೆಯು ಇನ್ನು ಮುಂದೆ ಯಶಸ್ವಿಯಾಗಿ ಮುಂದುವರಿಯುವುದರಲ್ಲಿ ಸಂದೇಹವಿಲ್ಲ. ಇವರೇ ಇನ್ನು ಮುಂಬರುವ ಆಗಲಿರುವ ಜಿಲ್ಲಾ ಸಂಘಕ್ಕೆ ಕಳಶವೆಂದು ನಾನು ದೃಢವಾಗಿ ಹೇಳುತ್ತೇನೆ. ಇದಕ್ಕಾಗಿ ಅವರಿಗೆ ಸಂತೋಷಪೂರ್ವಕ ನನ್ನ ವಂದನೆಗಳ ನ್ನರ್ಪಿಸುತ್ತೇನೆ. ಇನ್ನು ಮುಂದೆಯಾದರೂ ಒಟ್ಟು ಸೇರಿಕೊಂಡು ಸಮಾಜದ ಏಳಿಗೆಯನ್ನು ಬಯಸಬೇಕಾಗಿ ನನ್ನ ಪ್ರಾರ್ಥನೆ. ಅವರೊಂದಿಗೆ ಸೇರಿಕೊಂಡು ಮಹತ್ವದ ವಿಷಯಗಳನ್ನು ತಿಳಿಸಲಿದ್ದ ಮತ್ತು ಸದ್ಯದಲ್ಲೇ ಸದ್ರಿ ಸಂಘವನ್ನು ಜಿಲ್ಲಾ ಸಂಘವೆಂಬ ಸಂಸ್ಥೆಯನ್ನು ಏರ್ಪಡಿಸಲಿರುವ ಶ್ರೀ ಶೇಟ್ಜಿಯವರಿಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ.

ದೇರೆಬೈಲು ದಾರುಶೆಟ್ಟಿಗಾರರೂ ಶ್ರೀ ಮಾಸ್ಟರ್ ಶೇಟ್ಜಿಯವರೂ ಮತ್ತು ಕಾರ್ಕಳ ಶ್ರೀ ಪ. ವೈ. ಸೇವಾ ಸಂಘದವರೂ ಈ ಲೇಖನವನ್ನು ಅರಣ್ಯರೋಧನದಂತೆ ಮಾಡಲಾರರೆಂದು ನಾನು ನಂಬುತ್ತೇನೆ. ಈ ಕಾರ್ಯದಲ್ಲಿ ಹೆಚ್ಚಿನ ಶ್ರದ್ಧೆ ತೆಗೆದುಕೊಳ್ಳುವರಾಗಿ ಪ್ರಾರ್ಥಿಸುತ್ತೇನೆ.

ಹಿತಚಿಂತಕ.

ವಿನಂತಿ.

೧೯೩೯ನೇ ಜನವರಿಯಲ್ಲಿ ನಡೆಯಲಿಕ್ಕಿರುವ ಮದ್ರಾಸು ನ್ಯಾಯವಿಧಾಯಕ ಮಂಡಲಿ ಚುನಾವಣೆಯಲ್ಲಿ ಪುತ್ತೂರು ಡಿವಿಜನಿಗೆ (ಪುತ್ತೂರು ಮತ್ತು ಕಾಸರಗೋಡು ತಾಲೂಕು) ಇರುವ ಒಂದು ಸ್ಥಾನಕ್ಕಾಗಲೀ ಇತರ ಯಾವ ಸ್ಥಾನಗಳಿಗಾಗಲೀ ಕಾಂಗ್ರೆಸ್ಸಿನವರು ಉಮೇದ್ವಾರರನ್ನು ಈ ವರೆಗೆ ಚುನಾಯಿಸಲಿಲ್ಲ. ಹಾಗೆ ಚುನಾಯಿಸುವಲ್ಲಿ ಕಾಂಗ್ರೆಸು ಪಕ್ಷದಿಂದ ಸದರಿ ಸ್ಥಾನಕ್ಕೆ ನಿಲ್ಲಲು ನಾನು ಅಪೇಕ್ಷಿಸುತ್ತೇನೆ. ಹಾಗೆ ನನ್ನನ್ನಾಗಲೀ ಇತರ ಯಾರನ್ನಾಗಲೀ ಚುನಾವಣೆಗೆ ಆರಿಸಿದಲ್ಲಿ ಸದರಿ ತಾಲೂಕಿನ ಮಹಾಜನರು ಅವರಿಗೇನೇ ಸಹಾಯಮಾಡಬೇಕಲ್ಲದೆ ದುಂಬಿತವಾಗಿ ಯಾರಿಗೂ ಭರವಸೆಯನ್ನು ಕೊಡಬಾರದಾಗಿ ನನ್ನ ವಿನಂತಿ.

ಮಂಗಳೂರು. ಕೋಟ ರಾಮಕೃಷ್ಣ ಕಾರಂತ.

ದಕ್ಷಿಣ ಕನ್ನಡ ಜಿಲ್ಲೆಯ ಮಹಾಜನರಲ್ಲಿ ವಿನಂತಿ.

೧೯೩೯ನೇ ಇಸವಿ ಸುಮಾರು ಫೆಬ್ರವರಿ ತಿಂಗಳಲ್ಲಿ ನಡೆಯಲಿಕ್ಕಿರುವ ಮದ್ರಾಸು ಎಸೆಂಬ್ಲಿ ಮತ್ತು ಕೌನ್ಸಿಲಿನ ವೋಟರರ ಪಟ್ಟಿಯು ಈಗ ಸರಕಾರದವರು ತಯಾರಿಸುತ್ತಾರೆ. ಈ ಸಂದರ್ಭದಲ್ಲಿ ಅಂಥಾ ವೋಟರರ ಪಟ್ಟಿಗಳಿಗೆ ಸೇರಿಸಲ್ಪಡುವದಕ್ಕೆ ಹಕ್ಕುಳ್ಳ ಎಲ್ಲರ ಹೆಸರು ಸೇರುವುದು ಅಗತ್ಯ. ಹಾಗೆ ಎಸೆಂಬ್ಲಿಯ ಜನರಲ್ ಪ್ರದೇಶದ ಪಟ್ಟಿಗೆ ಸೇರುವರೆ ಬೇಕಾದ ಹಕ್ಕುಗಳ ಮುಖ್ಯ ಸಾರಾಂಶ ಮಾತ್ರ ಈ ಕೆಳಗೆ ಕೊಟ್ಟಿರುತ್ತದೆ. ಹೆಚ್ಚಿಗೆ ಅನುಭವ ಬೇಕಾದವರು ಕಳೆದ ಎಪ್ರಿಲ್ ತಾ. ೨೬ ಮತ್ತು ಮೇ ತಾ. ೪ನೇ ಜಿಲ್ಲಾ ಗಜೇಟನ್ನು ನೋಡಬೇಕು.

ಯಾವ ತರದ ವೋಟರನಾದರೂ ಪ್ರಾಯದಲ್ಲಿ ೨೧ ವರ್ಷಕ್ಕೆ ಮಿಕ್ಕಿದವನಾಗಿರಬೇಕು.

೨ನೇ ಕಲಂ—೧೯೩೭-೩೮ನೇ ವರ್ಷದಲ್ಲಿ ಅಂದರೆ ೧೯೩೮ನೇ ಮಾರ್ಚಿಗೆ ಅಂತ್ಯವಾಗುವ ವರ್ಷದಲ್ಲಿ (a) ಸರಕಾರಕ್ಕೆ ಮೋಟರ್ ವೆಹಿಕಲ್ ತೆರಿಗೆ ಕೊಟ್ಟಿರಬೇಕು, (b) ಇದೇ ವರ್ಷದಲ್ಲಿ (ಅಂದರೆ ಎರಡೂ ಅರ್ಧ ವರ್ಷಗಳಲ್ಲಿ) ವೃತ್ತಿತೆರಿಗೆ ಕೊಟ್ಟಿರಬೇಕು, (c) ಮುನಿಸಿಪಾಲಿಟಿಯಲ್ಲಿ ಆಸ್ತಿತೆರಿಗೆ (Property tax) ಕೊಟ್ಟಿರಬೇಕು, (e) ಇದೇ ವರ್ಷದಲ್ಲಿ ಅಂಥಾ ಆಸ್ತಿತೆರಿಗೆ ಕೊಟ್ಟ ಮನೆಯಲ್ಲಿ ಒಟ್ಟನೇ ವಕ್ಕಲಾಗಿ ವಾಸಿಸಿರಬೇಕು—ಯಾ (f) ಇನ್‌ಕಮ್ ಟೇಕ್ಸ್ ಕೊಡುವವನಾಗಿರಬೇಕು.

೩ನೇ ಕಲಂ—ಬಾಲ್ತಿ ಫಸಲಿಯಲ್ಲಿ (a) ಎಷ್ಟನ್ನಾದರೂ ತೀರ್ವೆ ಕೊಡುವ ಪಟ್ಟಾದಾರನಾಗಿರಬೇಕು, (b) ಗ್ರಾಂಡ್ ರೆಂಟ್ ಕೊಡುವವನಾಗಿರಬೇಕು, (d) ರೂ. ೫ಕ್ಕೆ ಕಡಿಮೆಯಾಗದಷ್ಟು ವರ್ಷಾವಧಿ ತೀರ್ವೆ ಕೊಡುವ ಭೂಮಿಯನ್ನು ರಿಜಿಸ್ಟ್ರಿ ಆದ ದಸ್ತಾವೇಜು ಯಾ ಗೇಣಚೀಟಿನ ಮೂಲಕ ಅನುಭವಿಸುವ ಭೋಗ್ಯಾದಿ ಅಧಿಕಾರಿ ಯಾ ವಕ್ಕಲು ಆಗಿರಬೇಕು.

೪ನೇ ಕಲಂ—ಜೋಯಿಂಟ್ ಪಟ್ಟಾದಾರರಾದರೆ ರೂ. ೧೦ಕ್ಕೆ ಮಿಕ್ಕಿದ ಪಟ್ಟೆಯಲ್ಲಿ ರೂ. ೫ಕ್ಕೆ ಕಡಿಮೆಯಾಗದ ವಾಲ್ಯಕ್ಕೆ ಒಬ್ಬ ಪಟ್ಟಾದಾರನಂತೆ. ರೂಪಾಯಿ ೧೦ಕ್ಕೆ ಕಡಿಮೆಯಾದಲ್ಲಿ ಜೋಯಿಂಟ್ ಪಟ್ಟಾದಾರರಲ್ಲಿ ಬಹುಮತದವರು ನೇಮಿಸುವವರ ಪೈಕಿ ಒಬ್ಬನು.

೫ನೇ ಕಲಂ—೨, ೩ನೇ ಕಲಮುಗಳಲ್ಲಿ ಕಾಣಿಸಿದಂತೆ ಹಕ್ಕುಳ್ಳ ಮೈನರ ಬಗ್ಗೆ ಅವನ ಗಾರ್ಡಿಯನನು.

೬ನೇ ಕಲಂ—ನಂ. ೨ನೇ ಫೋರ್ಮನ್ನು ವೋಟರರ ಪಟ್ಟಿ ತಯಾರಿಸುವ ರಿಜಿಸ್ಟ್ರೇಶನ್ ಆಫೀಸರರು, ಗ್ರಾಮ ಉದ್ಯೋಗಸ್ಥರು ಯಾ ಅವರಿಗಿಂತ ಹೆಚ್ಚಿನ ಸರಕಾರಿ ನೌಕರರ ಮುಂದೆ ಸ್ವತಹಾ ಭರ್ತಿಮಾಡಿ ದಸ್ಕತು ಮಾಡುವಷ್ಟು ಬರಹವುಳ್ಳವನು.

೮ ಮತ್ತು ೯ನೇ ಕಲಂ—ಈ ಕೆಳಗೆ ಹಕ್ಕುಳ್ಳವನ ಹೆಂಡತಿಯರಿಗೆ ಕೂಡಾ ಹಕ್ಕಿದೆ:—೧೯೩೭-೩೮ನೇ ವರ್ಷದಲ್ಲಿ (a) ಇನ್‌ಕಮ್ ಟೇಕ್ಸ್ ಕೊಡುವವ, (b) ಕಂಪೆನಿ ತೆರಿಗೆ ಕೊಡುವವ, (c) ರೂ. ೩ಕ್ಕೆ ಕಡಿಮೆಯಾಗದಷ್ಟು ವೃತ್ತಿತೆರಿಗೆ ಯಾ ಆಸ್ತಿತೆರಿಗೆ (ಅಥವಾ ಎರಡೂ ಕೂಡಾ ಅಷ್ಟು) ಕೊಡುವವ, (d) ಬಾಲ್ತಿ ಫಸಲಿಯಲ್ಲಿ ರೂ. ೧೦ಕ್ಕೆ ಕಡಿಮೆಯಾಗದಷ್ಟು ತೀರ್ವೆ ಕೊಡುವ ಭೂಮಿಯ ಪಟ್ಟಾದಾರ ಯಾ (e) ಸದರಿ ಫಸಲಿಯಲ್ಲಿ ಅಂಥಾ ಭೂಮಿಯನ್ನು ರಿಜಿಸ್ಟ್ರಿ ಗೇಣಚೀಟು ಮೂಲಕ ಅನುಭವಿಸುವ ವಕ್ಕಲು.

ಮುಖ್ಯ ವಿಷಯ—ಮೇಲೆ ಕಾಣಿಸಿದ ೨ (a), ೩ (b) ಮತ್ತು (d), ೫ ಮತ್ತು ೬ನೇ ಕಲಂ ಪ್ರಕಾರ ಹಕ್ಕುಳ್ಳವರು IIನೇ ಫೋರ್ಮಿನಲ್ಲಿ ಅರ್ಜಿ ಮಾಡಿದ ವಿನಹಾ ಅವರ ಹೆಸರನ್ನು ಪಟ್ಟಿಯಲ್ಲಿ ಸೇರಿಸುವುದಿಲ್ಲ. ಅಂಥಾ ಫೋರ್ಮುಗಳು ಮುನ್ಸಿಪಲ್, ರೆವಿನ್ಯೂ ಡಿವಿಜನಲ್ ತಹಶೀಲ್ದಾರರು ಮತ್ತು ಡಿಪ್ಯುಟಿ ತಹಸೀಲ್ದಾರರ ಆಫೀಸಿನಲ್ಲಿ ಯಾ ಈ ಅರ್ಜಿಗಳನ್ನು ಪಡೆಯುವ ಬಗ್ಗೆ ಅಲ್ಲಲ್ಲಿ ಸದರಿ ಜಿಲ್ಲಾ ಗಜೇಟಿನಲ್ಲಿ ಕಾಣಿಸುವಂತೆ ಕ್ಯಾಂಪು ಮಾಡುವಲ್ಲಿ ಸಿಕ್ಕುವವು.

ಈ ವಿಷಯಗಳನ್ನು ತಿಳಕೊಂಡು ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ವೋಟಿಗೆ ಅರ್ಹತೆಯುಳ್ಳವರು ತಮ್ಮ ಹೆಸರುಗಳನ್ನು ಪಟ್ಟಿಗೆ ಸೇರಿಸುವಂತೆ ಮಾಡಬೇಕಾಗಿ ವಿನಂತಿ.

ಕೋಟ ರಾಮಕೃಷ್ಣ ಕಾರಂತ,

ಮಂಗಳೂರು.

SRI KRISHNA CINEMA MANGALORE

Watch the date of release!

"The Call of the Savage"

An Amazing Universal Serial

In 12 Chapters or 24 Reels of Daring-Adventures and 12,000 Thrills.

BETTER THAN 100 TARZANS.

Exciting! ***Gripping!*** ***Weird!*** ***Startling!***

Supported By - **Noah Beery Jr Dorothy Short, Walter Miller, Wiliam Desmond, Grace Cunard, King Baggot, Dickie Jones Etc.,**

A Wild Animal Serial of Super-Thrills for Daring Adventures Never seen or Heard before

Never before in the History of Motion Pictures, has any Film Company gone into the heart of Africa where the Story is laid.

NOAH BEERY JR in "The CALL OF THE SAVAGE" UNIVERSAL SERIAL

See

The attack of python The battle between Tiger and Crocodiles the Erupting Volcano Native Africans war dances and ceremonial rites. The Jungle engulfed in a roaring inferno Trumpeting of giant Elephant herds Bickering of a million Monkeys Barbaric howl of savage tribes Roaring thunder of King of Beasts Tigers at large Giant Chimpanzees Man eating Crocodile and Thrills so EXCITING AS TO BE ALMOST BEYOND BELIEF ARE PACKED IN EVERY CHAPTER

Go into the Hearts of African Jungle Tossing and steaming with tropic Emotions infested by wild beast and [illegible] Meet Romance Defy Danger Fight Tarzan Jungle monsters

All these thrills are yours

Book Your Seats early to avoid disappointment

ತ್ವರೆ ಮಾಡಿರಿ! ಅನೂಪ ಸಂಧಿ ಕಳೆಯಬೇಡಿರಿ!

ಪ್ರಾರಂಭದ ತಾರೀಕನ್ನು ಗಮನಿಸಿರಿ

ಶ್ರೀ ಕೃಷ್ಣಾ ಸಿನೆಮ ಮಂಗಳೂರು.

ದಿವ್ಯ ಟಾಕೀ ಭವನದಲ್ಲಿ

ದಿ ಕೊಲ್ ಒಫ್ ದಿ ಸೆವೇಜ್

ಎಂಬ ಭೀಕರ ತಥಾ ವಿಸ್ಮಯಜನಕ ಸೀರಿಯಲ್ ಚಲಚ್ಚಿತ್ರವು ಪ್ರದರ್ಶಿಸಲ್ಪಡುವುದು.

12 ಅಧ್ಯಾಯಗಳು 24 ರೀಲುಗಳು, 12,000 ರೋಮಾಂಚನಗೊಳಿಸುವ ದೃಶ್ಯಗಳು.

ಟಾರ್ಜನನ ದೇಖಾವೆಗಿಂತಲೂ ನೂರು ಪಾಲು ಮಿಗಿಲಾದುದು,

ನಟವರ್ಗವೇ ನಿಮ್ಮನ್ನು ಆಕರ್ಷಿಸಿರುವುದು:—

ನೋಹಾ ಬೇರಿ (ಜೂನಿಯರ್) ಡೊರೋತಿ ಶೋರ್ಟ್, ವಾಲ್ಟರ್ ಮಿಲ್ಲರ್, ವಿಲ್ಲಿಯಂ ಡೆಸ್ಮಂಡ, ಗ್ರೇಸ್ ಕುನಾರ್ಡ್,

ಕಿಂಗ್ ಬಗೂಟ್, ಡಿಕ್ಕಿ ಜೋನ್ಸ್ ಇವರೇ ಮೊದಲಾದವರು.

ಕಾಡಿನ ಮೃಗಾಲಯ, ಕಾಡಿನ ಮನುಷ್ಯರು, ಕಾಡಿನ ದೆವ್ವಗಳು, ಕಾಡಿನಲ್ಲಿ ನಡೆವ ಅಮಾನುಷ ಕೆಲಸಗಳು, ಸಿನೆಮಾ ಪ್ರಪಂಚದಲ್ಲಿ ಇಂತಹ ವಿಸ್ಮಯಗಳು ನಡೆದಿಲ್ಲ. ನೀವೇ ದೃಢೀಕರಿಸುವಿರಿ. ಆಫ್ರಿಕಾ ದೇಶದ ಕಗ್ಗತ್ತಲು ಕವಿದ ಕಾಡುಗಳನ್ನು ಹೊಕ್ಕು ತೆಗೆದ ಚಿತ್ರವಿದು. ಇಂತಹ ಸಾಹಸವನ್ನು ಯಾವ ಕಂಪೆನಿಯೂ ಮಾಡಿಲ್ಲವೆಂದು ಖಾತ್ರಿಯಾಗಿ ಹೇಳಬಹುದು. ಮೊಸಳೆಗೂ ಹೆಬ್ಬುಲಿಗೂ ಭೀಕರ ಯುದ್ಧ; ವಿಷಜಂತುಗಳೊಡನೆ ಮಾನವನ ಕಾದಾಟ. ಭೂಕಂಪನಗಳು; ಜ್ವಾಲಾಮುಖಿಗಳು; ಆಫ್ರಿಕಾ ದೇಶದ ನಿವಾಸಿಗಳ ಚೋದ್ಯಮಯ ನರ್ತನ; ಮೃಗಗಳ ಭೀಕರ ರೋಧನ ಮತ್ತು ಕಿರ್ಚಾಟ; ಕೋತಿಗಳ ನಕಲಿ ಕಾಡು ಮನುಷ್ಯನ ಹಾವಳಿ; ಇವೆಲ್ಲವನ್ನು ಕಾಣಿರಿ. ಆಫ್ರಿಕಾಕ್ಕೆ ಹೋಗಲು ಅನಾನುಕೂಲವಾದರೂ ಆಫ್ರಿಕದ ದೃಶ್ಯವನ್ನಾದರೂ ಕಣ್ಣಾರೆ ಕಾಣುವಂತೆ

ಟಿಕೇಟುಗಳನ್ನು ಮುಂದಾಗಿ ಪಡೆಯಿರಿ!

ವಾರ್ತಾ ವಾಹಿನಿ!

ಜನರಲ್ ಜುನುವೇಲ್ ಅಜಾನಾ ಎಂಬವರು ಸ್ಪೈನ್ ದೇಶದ ಅಧ್ಯಕ್ಷರಾಗಿ ಚುನಾಯಿತರಾಗಿರುವರು.

ಗ್ರೀಸ್ ದೇಶದ ಸೆಲೋನಿಕಾ ಎಂಬಲ್ಲಿ ಭಯಂಕರ ದಂಗೆಗ ಳುಂಟಾಗಿ ಅನೇಕ ಅನಾಹುತಗಳು ನಡೆದುವು. ದಂಗೆಯು ಇನ್ನೂ ಶಾಂತಗೊಳ್ಳಲಿಲ್ಲ.

ಪ್ರಖ್ಯಾತ ಆಂಗ್ಲೇಯ ವೈಮಾನಿಕರಾದ ಮಿಸ್ ಎಮಿ ಮೊಲಿಸನ್ನರು ಲಂಡನ್ನಿನಿಂದ ಕೇಪ್‌ಟೌನ್ (ಆಫ್ರಿಕಾದ) ಅಷ್ಟು ಕಡಿಮೆ ಸಮಯದಲ್ಲಿ ಪ್ರಯಾಣ ಮಾಡಲು ಮೊನ್ನೆ ವಿಮಾನದಲ್ಲಿ ಹೊರಟಿರುವರು.

ಸ್ಪೈನ್ ದೇಶದ ಲೇಬರ್ ಸಂಘದವರು ಅಲ್ಲಲ್ಲಿ ಸೋವಿಯಟ್ ಸಂಘಗಳನ್ನು ಸ್ಥಾಪಿಸಬೇಕಾಗಿ ನಿರ್ಧಾರ ಮಾಡಿರುವರು

ಹಬಸಿ ಚಕ್ರವರ್ತಿಯವರು, ಮಹಾಪ್ರಭುತ್ವ ಜನಾಂಗ ಗಳು ತಮ್ಮನ್ನು ರಕ್ಷಿಸುವರೆಂದು ಆಶಿಸುತ್ತಿದ್ದಾರೆ

ಇಂಗ್ಲಾಂಡಿನಲ್ಲಿ, ಜನಾಂಗ ಸಭೆಯನ್ನು ಒಂದೇ ಸುಧಾರಣೆಗೊಳಿಸಬೇಕು, ಅಥವಾ ಅದು ಅದರ ಸದಸ್ಯ ತನವನ್ನು ತ್ಯಜಿಸಬೇಕು ಎಂಬ ಚಳವಳವು ಪ್ರಾರಂಭ ವಾಗಿರುತ್ತದೆ

ಇಂಗ್ಲಾಂಡಿಗೆ ತೆರಳಿದ ಹಿಂದೀ ಕ್ರಿಕೇಟ್ ಟೀಮಿನ ವರು ಪ್ರಥಮ ಬಾರಿ ವೊರಸೆಸ್ಟರ ಶಾಯರ್ ಎಂಬಲ್ಲಿ ಪಂದ್ಯಾಟವಾಡಿ, ಪಂದ್ಯಾಟವು ಮುಂದುವರಿಸಲ್ಪಟ್ಟಿತು.

ಸಮಗ್ರ ಭಾರತದಲ್ಲೆಲ್ಲಾ ಡಾ। ಅನ್ಸಾರಿಯವರ ನಿಧನ ದ ಕುರಿತು ಅನೇಕ ಸಂತಾಪಸೂಚಕ ಸಭೆಗಳು ನಡೆದವು

ದೇಶದ ಪ್ರಾಮುಖ್ಯ ಪುರುಷರ ವಿಲಾಸಗಳ ನಿಘಂಟು ಒಂದನ್ನು ನಮ್ಮ ಅಂಟೆ ಭಾರತೀಯರು ಸಿದ್ಧಪಡಿಸು ವರಂತೆ

ಜಿಗುಪ್ತದಲ್ಲಿ ನಾಹಾಸಾ ಪಾಷಾರವರು ವಾಫ್ದ ಪಂಗ ಡದ ಸರಕಾರದ ರಚನೆಯನ್ನು ಮಾಡಿರುವರು. ಕಳೆದ ಮಹಾ ಚುನಾವಣೆಯ ಸಮಯ ಈ ಪಕ್ಷಕ್ಕೆ ಅಧಿಕ ಸ್ಥಾನಗಳು ದೊರೆತುದರಿಂದಲೇ ಈ ಪಕ್ಷವು ಅಧಿಕಾ ರಕ್ಕೆ ಬಂದಿರುತ್ತದೆ.

ಮುಂಬಾಯಿಯ ಕ್ರಾಫರ್ಡ ಮಾರ್ಕೆಟ ನಲ್ಲಿ, ಅಖಿಲ ಭಾರತ ಮಾವಿನ ಪ್ರದರ್ಶನವು ನಡೆಯು ವುದು. ಜೂನ್ ತಿಂಗಳ ತಾ ೭, ೮ ಮತ್ತು ೯ರಲ್ಲಿ ೩೦ ಬಹುಮಾನಗಳು ಕೊಡಲಾಗುವುವು ನಮ್ಮ ಜಿಲ್ಲೆಯು ಇದರಲ್ಲಿ ಭಾಗವಹಿಸಬಹುದು

ಸಂಯುಕ್ತ ಪ್ರಾಂತ್ಯಗಳ ಲಿಬರಲ್ ನಾಯಕರು ಸಿವಿಲ್ ಲಿಬರ್ಟೀಸ್ ಸಂಘವನ್ನು ಸ್ಥಾಪಿಸುವ ವಿಚಾರ ದಲ್ಲಿ ಕಾಂಗ್ರೆಸ್ಸಿನೊಡನೆ ಸಹಕರಿಸಬಾರದಾಗಿ ನಿರ್ಧರಿಸಿದೆ

ಕರಾಚಿಯಲ್ಲಿ ಒಂದು ನವೀನ ಹೆರಿಗೆ ಆಸ್ಪತ್ರೆಯು ನವೀನ ಗವರ್ನರರ ಪತ್ನಿಯವರಿಂದ ತೆರೆಯಲ್ಪಟ್ಟಿತು

ರಂಗೂನಿನಲ್ಲಿ ಉಂಟಾದ ವಿದ್ಯಾರ್ಥಿಗಳ ಮುಷ್ಕರವು ಕೊನೆಗೊಂಡಿರುವುದೆಂದು ವಾರ್ತೆ

ಜನಾಂಗ ಮಂಡಳವು, ಇಟೇಲಿಯ ಪ್ರತಿಕೂಲ ಇದ್ದರೂ ಇಟೇಲಿ–ಹಬಸಿ ಪ್ರಶ್ನೆಯನ್ನು ಚರ್ಚಿಸಬೇಕು ಎಂದು ನಿರ್ಧರಿಸಿದೆ.

ಎಥಿಯೋಪಿಯಾದ ಮೇಲೆ ಇಟೇಲಿಯ ಅಧಿಕಾರ ವನ್ನು ಜನಾಂಗಸಭೆಯು ಮನ್ನಿಸಬಾರದಾಗಿ ಹಬಸಿ ಚಕ್ರವರ್ತಿಯವರ ವಿನಂತಿ

ಬ್ರಿಟಿಷ ಬಜೆಟ್ಟು ಪ್ರಕಟವಾಗುವ ಮೊದಲೇ ಅದರ ಕೆಲವಂಶಗಳು ಜನರ ಕೈಸೇರಿದ್ದುವು ಈ ಕುರಿತು ವಿಚಾರಣಾ ಸಮಿತಿಯು ಕಾರ್ಯಪ್ರಾರಂಭಿಸಿದೆ

ಜಪಾನಿನ ಮಾಜಿ ಮಂತ್ರಿಗಳಾದ ಬೆರನ್ ಓಕೊಡಾರವರು 'ಹರಿಕಿರಿ' ಪ್ರಾಣತ್ಯಾಗ ಮಾಡಿಕೊಳ್ಳಬೇಕಾಗಿ, (ಕಳೆದ ದಂಗೆಗೆ ಕಾರಣರಾಗಿರುವುದರಿಂದ) ಕರಾವು ತಂದ ಸರ ಕಾರ ಮಂಡಳದ ಓರ್ವ ಸದಸ್ಯರನ್ನು ಸಭೆಯಿಂದಹೊರಗೆ ತಳ್ಳಿದ್ದಾರೆ.

ಜನಾಂಗಮಂಡಳವು ಇಟೆಲಿಯನ್ನು ಗದರಿಸಿತು.

ಎಥಿಯೋಪಿಯಾದ ಪ್ರಶ್ನೆಯು ಚರ್ಚಿಸಲಾಗುವುದು

ಇಟೆಲಿಯ ಪ್ರತಿನಿಧಿಗಳು ಸಭೆ ಯಿಂದ ಹೊರಗೆ ನಡೆದರು

ಇತ್ಯರ್ಥವಾಗಲು ಇನ್ನೂ ಕಾಲವಿಳಂಬ ವಾಗಬಹುದು.

ತಾ ೧೧ರಲ್ಲಿ ಜನಾಂಗ ಮಂಡಳದ ಸಭೆ, ಬ್ರಿಟಿಷ ಬಹೀರ್ ವ್ಯವಹಾರದ ಕಾರ್ಯದರ್ಶಿಗಳಾದ ಮಿ।ಎಡನ್ನ ಅಧ್ಯಕ್ಷತನದಲ್ಲಿ ಜರಗಿತು ಇಟೇಲಿಯ ಸದಸ್ಯರು ಹಬಸಿ–ಇಟೇಲಿ ಪ್ರಶ್ನೆಯನ್ನು ಜನಾಂಗಸಭೆಯು ಚರ್ಚಿ ಸಬಾರದೆಂದು ಆಡ್ಡಿ ತಂದದಾಗ್ಯೂ, ಅದನ್ನು ಚರ್ಚಿಸಬೇ ಕೆಂದೂ ದೃಢನಿರ್ಣಯ ಮಾಡಿದರು ಸ್ಥಿತಿ ಹೀಗಾಗಲು, ತಮ್ಮ ಪ್ರತಿಕೂಲತೆಯನ್ನು ಸೂಚಿಸಲು, ಇಟೇಲಿಯಾದ ಸದಸ್ಯರಾದ ಬೆರನ್ ಅಲೋಸಿಯರು ಇಟೇಲಿಯ ಇತರ ಪ್ರತಿನಿಧಿಗಳೊಡನೆ ಸಭೆಯಿಂದ ಹೊರಗೆ ನಡೆದರು

ಇಟೇಲಿ–ಹಬಸಿ ಪ್ರಶ್ನೆಯು ಜೂನ್ ತಿಂಗಳ ೧೫ರಲ್ಲಿ ಜರಗುವ ಜನಾಂಗಸಭೆಯ ವಿಶೇಷ ಸಭೆಯಲ್ಲಿ ಚರ್ಚಿಸಲಾಗುವುದೆಂದು ವಾರ್ತೆ ಬಂದಿರುತ್ತದೆ

ಮಿ। ಎಂತೋಣಿ ಎಡನ್ನರು

ಹಬಸಿ ಚಕ್ರವರ್ತಿಯರ ವಿನಂತಿ.

ಜನಾಂಗಸಭೆಯು, ಇಟೆಲಿಯ ಸಾಮ್ರಾಜ್ಯ ಬೆಳವ ಣಿಗೆಯನ್ನು ಮನ್ನಿಸಬಾರದು। ಕಾರಣ ಹಿಂಸೆಯಿಂದ ಜನಾಂಗಸಭೆ ಸೂತ್ರಗಳಿಗೆ ವಿರೋಧವಾಗಿ ಅವರು ಎಥಿ ಯೋಪಿಯಾವನ್ನು ಹಿಡಿದುದರಿಂದ। ಇಟೇಲಿಯು ಅನ್ಯಾಯಕರವಾದ ಯುದ್ಧವನ್ನು ನಡೆಯಿಸಿದುದರಿಂ ದಲೇ ತಾನು ಯುದ್ಧವನ್ನು ಕೊನೆಗೊಳಿಸಬೇಕಾಯಿತು. ಶಾಂತಿಯಿಂದ ಇತರ ಮಹಾ ಪ್ರಭುತ್ವದ ಜನಾಂಗಗಳ ಸಹಕಾರದಿಂದ ಎಥಿಯೋಪಿಯಾವನ್ನು ರಕ್ಷಿಸಲು ಹಬಸಿ ಚಕ್ರವರ್ತಿಯವರು, ತಮ್ಮ ದೇಶವನ್ನು ಬಿಡಲು ಕಾರಣವಾಯಿತು

ಜನಾಂಗ ಸಭೆಯನ್ನು ಎಂದರೆ ೫೦ ಜನಾಂಗಗ ಳನ್ನು ಧಿಕ್ಕರಿಸಿ ಇಟೇಲಿಯು ಎಥಿಯೋಪಿಯಾವನ್ನು ಹಿಡಿದಿರುತ್ತದೆ ಆದರಿಂದ ಜನಾಂಗಸಭೆಯು ಸುರಕ್ಷಿತ ವಾಗಿರಬೇಕಾದರೆ ಇಟೇಲಿಯಮೇಲೆ ತಕ್ಕ ಶಿಕ್ಷೆಯನ್ನು ಹೊರಿಸಬೇಕಾಗಿದೆ ಎಂದು ಹಬಸಿ ಪ್ರತಿನಿಧಿಗಳು ಜನಾಂ ಗಮಂಡಳದೊಡನೆ ವಿನಂತಿ ಮಾಡಿರುವರು

ನವೀನ ವಿವಾಹವಾದವರು ಮೃತರಾಗಿರುವರು

ಮುಂಬಾಯಿಯ ಓರ್ವ ಪೋಲೀಸ ಸಬ್ ಇನ್ಸ್‌ಪೆಕ್ಟ ರರು, ತನ್ನ ಪ್ರಥಮ ಹೆಂಡತಿಯು ಪಿಸ್ತೂಲಿನಿಂದ ಗುಂಡುಹೊಡೆದು ಪ್ರಾಣತ್ಯಾಗ ಮಾಡಲು ಆತ್ಮಹತ್ಯೆಗೆ ಇನ್ನೊಮ್ಮೆ ವಿವಾಹವಾದವರು ಮೊನ್ನೆ ತಾ. ೧೧ ರಲ್ಲಿ, ಗಂಡ ಹೆಂಡಂದಿರೂ ಪಿಸ್ತೂಲಿಗಳಿಂದ ಗುಂಡಿಕ್ಕಿ ಮೃತರಾಗಿರುವರು ಮುಂಚಿನ ದಿನ ರಾತ್ರಿ ವರೇಗೆ ಸಬ್ ಇನ್ಸ್‌ಪೆಕ್ಟರರು ಕೆಲಸದಲ್ಲಿದ್ದರು ಅವರಲ್ಲಿ ಯಾವ ತರದ ಬುದ್ಧಿವಿಕಾರವು ಯಾರಿಗೂ ಕಾಣಬಂ ದಿಲ್ಲ. ಕೋಣೆಯಲ್ಲಿ ಉಪಯೋಗಿಸಲ್ಪಟ್ಟ ಪಿಸ್ತೂಲು ಗಳು, ಕೆಲವು ಖಾಲಿ ಟಿನುಗಳು ದೊರಕಿವೆ ಪ್ರಥಮ ಹೆಂಡತಿಯು ಜೀವಿತಳಾಗಿರುವಾಗಲೇ ದ್ವಿತೀಯ ವಿವಾಹ ದಿಂದ ಪ್ರಥಮ ಪತ್ನಿಯು ಪ್ರಾಣತ್ಯಾಗ ಮಾಡಿಕೊಂಡದ್ದೇ ಈ ಅನಾಹುತಕ್ಕೆ ಕಾರಣವಂತೆ.

ದಿವಂಗತ, ಡಾ। ಅನ್‌ಸಾರಿಯವರು

ಮುಖಂಡರ ಅಭಿಪ್ರಾಯಗಳು

ತನ್ನ ಆಪ್ತಮಿತ್ರರೂ ಮಾರ್ಗದರ್ಶ ಕರಾಗಿದ್ದರೆಂದು ಮಹಾತ್ಮಾ ಗಾಂಧಿಯವರ ಮಾತು

ಮಹತ್ಮಾ ಗಾಂಧಿಯವರು.

ಡಾ। ಅನ್ಸಾರಿಯವರ ಮರಣವು ಸ್ಮೃತಿ ತಪ್ಪಿ ಸುವ ಒಂದು ಪೆಟ್ಟಾಗಿರುತ್ತದೆ. ಮುಸ್ಲಿಮರಲ್ಲೂ, ಹಿಂದೂಗಳಲ್ಲೂ ಓರ್ವ ಉತ್ತಮ ಪುರುಷರಾಗಿದ್ದರು. ಅವರ ಮರಣದಿಂದ ನನಗೆ ಭಾರಿ ನಷ್ಟ ಸಂಭವಿಸಿದಂತಾ ಗಿದೆ ಹಿಂದೂ ಮುಸ್ಲಿಮ ಪ್ರಶ್ನೆಗಳ ಮೇಲೆ ತನ್ನ ಮಾರ್ಗದರ್ಶಕರಾಗಿದ್ದರು ಸಮಾಜದ ಅನೇಕ ಕುಂದು ಕೊರತೆಗಳನ್ನು ನಾಶಮಾಡಲು, ನಾವು ಒಂದು ಯೋಜ ನೆಯನ್ನು ಆಲೋಚಿಸುತ್ತಿದ್ದೆವು ಅವರು ರಾಜಕುಮಾ ರರ ವೈದ್ಯರಾಗಿದ್ದರೂ ಬಡವರ ಸೇವೆಯನ್ನೂ ಮಾಡು ತ್ತಿದ್ದರು ಅವರ ಆಶ್ರಯಕ್ಕೆ ಒಳಗಾದ ಸಾವಿರಾರು ಮಂದಿ ಅವರ ಮರಣದಿಂದಾಗಿ, ಸಂತಾಪಗೊಳ್ಳುವರು.

ಶ್ರೀ ಪಂಡಿತ ಜವಾಹರಲಾಲರ ಶೋಕ.

ಡಾ। ಅನ್ಸಾರಿಯವರ ಮಗಳಾದ ಜೋಹರಾವಿಗೆ ಶ್ರೀ ನೆಹರುಗಳು ಈ ಕೆಳಗಿನ ತಂತಿಯನ್ನು ಕಳುಹಿಸಿ ರುವರು "ತನ್ನ ಪರಮ ಸ್ನೇಹಿತರಾದ ಹಳೆ ಸ್ನೇಹಿತ ರನ್ನು ಕಳೆದುಕೊಂಡೆನೆಂಬ ವಾರ್ತೆಯನ್ನು ಕೇಳಿ ನನಗೆ ಸಿಡಿಲು ಬಡಿದಂತಾಯಿತು ಡಾ। ಅನ್ಸಾರಿಯವರು ನನ್ನ ಹಳೆ ಪರಮ ಸ್ನೇಹಿತರು ನಿಮ್ಮ ಮತ್ತು ಬೇಗಂ ಅನ್ಸಾರಿಯವರ ಅಪಾರ ದುಃಖದಲ್ಲಿ ನಾನೂ ಭಾಗಿಯಾ ಗಿದ್ದೇನೆ"

ಶ್ರೀಮತಿ ಸರೋಜಿನಿ ದೇವಿಯವರು

ಶ್ರೀಮತಿ ಸರೋಜಿನಿ ದೇವಿಯರು ಈ ಕೆಳಗಿನ ತಂತಿಯನ್ನು ಬೇಗಂ ಅನ್ಸಾರಿಯವರಿಗೆ ಕಳುಹಿಸಿರು ವರು. ನನ್ನ ಪ್ರೀತಿಗೆ ಪಾತ್ರರಾದ ಸಹೋದರರನ್ನು ಕಳೆದುಕೊಂಡುದು, ನನ್ನ ಹೃದಯವನ್ನು ದುಃಖಭರಿತ ವನ್ನಾಗಿ ಮಾಡಿದೆ ನಿಮಗೆ ಈ ವಿಯೋಗ ದುಃಖವನ್ನು ಧರಿಸಲು ಭಗವಂತನು ಶಕ್ತಿಯನ್ನೀಯಲಿ

ಶ್ರೀ ನರಿಮಾನರು.

ಅನ್ಸಾರಿಯವರ ಆಕಸ್ಮಿಕ ಮರಣವು ನಮಗೆ ಸಿಡಿಲು ಬಡಿದಂತಾಗಿದೆ ಮುಂಬಾಯಿ ನಗರವು ಅವರ ಮರಣಕ್ಕಾಗಿ ಮರುಗುತ್ತಿದೆ ಮತ್ತು ತನ್ನ ಹೃತ್ಪೂರ್ವಕ ಅನುತಾಪವನ್ನು ಕಳುಹಿಸುತ್ತಿದೆ

ಪ್ರೊಫೆಸರ ಇಂದ್ರ

ಅನ್ಸಾರಿಯವರು ಉದಾರಿಗಳಾಗಿದ್ದು ಸಕಲ ಕೋಮುಗಳ ಅನುರಾಗವನ್ನು ಹೊಂದಿದ್ದರು

ಶ್ರೀ ಜಮ್ನಾದಾಸ್ ಮೆಹತಾ

ಡಾ। ಅನ್ಸಾರಿಯವರ ಅಮಿತ ಸ್ವಾತಂತ್ರ್ಯ ಪ್ರೇಮವೂ ಮತ್ತು ದೇಶಾಭಿಮಾನವೂ, ಅವರು ಸ್ಫೂರ್ತಿ ಗೊಂಡ ಸಕಲ ಕಡೆಗಳಲ್ಲೂ ಅವರ ಮರಣವು ಸಿಡಿಲು ಬಡಿದಂತೆ ಬರುವುದರಲ್ಲಿ ಸಂದೇಹವಿಲ್ಲ ೧೯೨೦ರಿಂದ ಅವರು ಸ್ವಾರ್ಥತ್ಯಾಗದಿಂದ ಭಾರತಮಾತೆಯ ಅಚ್ಚು ಮೆಚ್ಚಿನ ಪುತ್ರರಾಗಿದ್ದರು"

ಡಾ। ದೇಶಮುಖ್

'ಭಾರತ ರಾಜಕೀಯ ಭವಿಷ್ಯತೆಗೆ ಡಾ। ಅನ್ಸಾ ರಿಯವರ ಸಹಾಯ ಇಲ್ಲದಂತಾಗಿದೆ"

ಸರ್ ಪೆಟಿಟ್ ವಾಡ್‌ರು.

ರಾಜಕೀಯ ವಿಷಯಗಳಲ್ಲಿ ಅವರು ಸೌಮ್ಯ ಮತೀಗಳಾಗಿದ್ದರು. ಉಗ್ರತೆಯನ್ನು ವ್ಯಕ್ತಗೊಳಿಸು ತ್ತಿರಲಿಲ್ಲ ದೇಶಕ್ಕಾಗಿ ಬಹಳ ವರ್ಷಗಳ ವರೆಗೆ ದುಡಿ ದರು

ಎಂ. ಆರ್. ಜಯಕರರವರು.

"ಹಿಂದೂಗಳಿಗೂ, ಮುಸ್ಲಿಮರಿಗೂ, ಬಾಂಧವ ರಂತಿದ್ದ ಒಬ್ಬ ವೀರರನ್ನು ಮರಣವು ಕೊಂಡೊಯ್ದಿದೆ."

ಮೌಲಾನಾ ಶೌಕತ್ ಅಲಿಯವರು.

"ಭಾರೀ ಮಿತ್ರರು, ಮಾನ್ಯ ಸಹೋದರರು, ಮತ್ತು ಧೀರರೊಬ್ಬರನ್ನು ನಾವು ಕಳೆದುಕೊಂಡಿದ್ದೇವೆ ಭರತಖಂಡವು ಮಾನ್ಯ ಪುತ್ರರೊಬ್ಬರನ್ನು ಕಳೆದುಕೊಂ ಡಿದೆ ಅವರ ಆತ್ಮಕ್ಕೆ ಶಾಂತಿ ಉಂಟಾಗಲಿ"

ಸರ್ ಮೋಡಿಯವರು.

"ಅವರ ವಿರೋಧಿಗಳಿಗೂ ಕೂಡ ಅವರ ಬಳಿ ಭಕ್ತಿ ವಿಶ್ವಾಸಗಳಿದ್ದುವು. ಡಾ। ಅನ್ಸಾರಿಯವರು ಅಂತಹ ವ್ಯಕ್ತಿಗಳು. ಅವರ ಮರಣದಿಂದ ದೇಶಕ್ಕೆ ದೊಡ್ಡ ನಷ್ಟವಾಗಿದೆ.

ಮಿ। ಹುಸೇನ್ ಭಾಯಿ ಲಾಲ್ಜಿಯವರು.

"ಹಿಂದೂಗಳೂ, ಮುಸ್ಲಿಮರು ಸಹೋದರರಂತೆ ವರ್ತಿಸುವುದನ್ನು ಅವರು ಸದಾಕಾಲದಲ್ಲಿಯೂ ನೆನೆಸು ತ್ತಿದ್ದರು. ಇಂತಹ ಸಮಯದಲ್ಲಿ ಅವರ ಮರಣವು ದೊಡ್ಡ ನಷ್ಟ."

ಪಂಡಿತ ಮಾಲವೀಯ.

ಪರಮ ಮಿತ್ರ ಡಾ। ಅನ್ಸಾರಿಯವರ ಮರಣವಾ ರ್ತೆಯನ್ನು ಕೇಳಿ ನಾನು ಬಹಳ ದುಃಖಿತನಾಗಿರುವೆನು. ಹಿಂದೂದೇಶದ ನಿರಂತರ ಸೇವೆ ಮಾಡಿದ ವೀರಾಳು ಒಂದನ್ನು ಭರತಮಾತೆಯು ಕಳಕೊಂಡಂತಾಯಿತು. ನನ್ನ ಹೃತ್ಪೂರ್ವಕ ಸಂತಾಪಗಳು,–ಅವರ ಬೇಗಂಸಾಹೇ ಬರು ನಾನು ಅರ್ಪಿಸುತ್ತೇನೆ ಹೀಗೆ ಅನೇಕ ಕಡೆಗ ಳಿಂದ ಸಂತಾಪ ಸಂದೇಶಗಳು ಬಂದಿವೆ

ಅಧ್ಯಕ್ಷರ ಮೇಲೆ ಕಲ್ಲೆಸೆದರು!

ಅಮೃತಸರದಲ್ಲಿ ಜರಗಲಿರುವ ಅಹರಾರ್ ವೃಂದದ ಪರಿಷತ್ತಿನ ಅಧ್ಯಕ್ಷರನ್ನು ಮೆರವಣಿಗೆಯಲ್ಲಿ ಕೊಂಡೊ ಯ್ಯುತ್ತಿರುವಾಗ, ಅವರನ್ನು ವಿರೋಧಿಸುವವರು ಅವರ ಮೇಲೆ ಕಲ್ಲುಗಳನ್ನು ಎಸೆದರು ಬಹಳ ಕ್ಷೋಭೆಯು ಉಂಟಾಗುವ ಸಂಭವವಿದ್ದುವು ಆದರೆ ಪೋಲೀಸರು ಕ್ಲಪ್ತ ಸಮಯದಲ್ಲಿ ಬಂದೋಬಸ್ತು ನಡೆಯಿಸಿದರು

ಶ್ರೀ ಜವಾಹರಲಾಲ ನೆಹರುಗಳವರ ಮುಂಬಾಯಿ ಸಂದರ್ಶನ.

ವಿಶೇಷ ಸಿದ್ಧತೆಗಳು ನಡೆಯುತ್ತವೆ.

ಮುಂಬಾಯಿ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಯವರು ರಾಷ್ಟ್ರಸಭಾಪತಿ ಶ್ರೀ ನೆಹರುಗಳವರ ಸಂದರ್ಶನ ಸಮಾ ರಂಭಗೋಸ್ಕರ ವಿಶೇಷ ತರದ ಕಾರ್ಯಕ್ರಮ ವನ್ನು ಸಿದ್ಧಪಡಿಸಿರುವರು ಶ್ರೀ ನೆಹರುಗಳವರು ಮುಂದಿನ ವಾರಕ್ಕೆ ಅಲ್ಲಿಗೆ ತೆರಳುವರು ಆರು ದಿವಸ ಗಳ ತನಕ ಅಲ್ಲಿದ್ದು ನಂತರ ಪೂನೆಗೆ ಪ್ರಯಾಣ ಬೆಳೆಸು ವರು. ಅನೇಕ ಕಡೆಗಳಲ್ಲಿ ಇವರಿಗೆ ಬಿನ್ನವತ್ತಳೆಗಳನ್ನು ಅರ್ಪಿಸಲು ನಿರ್ಧಾರವಾಗಿದೆ ತಾ ೩೧ರಲ್ಲಿ ಪೂನೆಗೆ ತೆರಳಿ ಮಹಾರಾಷ್ಟ್ರ ಪ್ರಾಂತೀಯ ಕಾಂಗ್ರೆಸ್ ಕಮಿ ಟಿಯ ಸಭೆಯಲ್ಲಿ ಭಾಗವಹಿಸುವರು ಇಲ್ಲಿ ಮುಂದಿನ ಕಾಂಗ್ರೆಸ್ಸ ಸ್ಥಳದ ನಿರ್ಣಯವಾಗುವುದು.

ಬ್ರಿಟಿಷ್ ಲಿಬರಲ್ ಪಾರ್ಟಿ ಮತ್ತು ಫ್ರಾನ್ಸಿನ ಸೋಷಿಯಲಿಸ್ಟರು

ಎಂ. ಬ್ಲುಂ. ಮತ್ತು ಆಟ್ಲೀಯವರ ಸಮಾಲೋಚನೆ

ಬ್ರಿಟಿಷ್ ಲೇಬರ್‌ಪಾರ್ಟಿಯ ಮುಖಂಡರಾದ ಮೇಜರ್ ಆಟ್ಲೀಯವರೂ ಫ್ರಾನ್ಸಿನ ಉಗ್ರವಾದಿ ಪಂಗ ಡದ ಮುಖಂಡರಾದ ಎಂ ಲಿಯಾನ್ ಬ್ಲುಂರವರೂ (ಇವರು ಫ್ರಾನ್ಸಿನ ಮುಖ್ಯ ಮಂತ್ರಿಗಳಾಗಿರುವರು) ಮಾತುಕತೆ ನಡೆಸುತ್ತಿದ್ದಾರೆ ಇದರಿಂದ ಫ್ರಾನ್ಸಿಗೂ ಬ್ರಿಟಿಷ್‌ಲೇಬರಿಗೂ ಒಂದು ರೀತಿಯ ಸಂಬಂಧವೇರ್ಪ ಟ್ಟಂತಾಗಿದೆ. ಲಂಡನಿನ ಲೇಬರ್ ಆವರಣದಲ್ಲಿ ಮೇಜರ್ ಆಟ್ಲೀಯವರು ಎಂ ಬ್ಲುಂರವರನ್ನು ಸಂಸ್ಥೆ ನನ್ನು ಇನ್ನು ಮುಂದೆಯೂ ಬಿಗಿಯಾಗಿ ಹಿಡಿಯಬೇಕೆಂ ದು ಒತ್ತಾಯಪಡಿಸುತ್ತಿದ್ದಾರೆಂದು ಗೊತ್ತಾಗಿದೆ

ಎಂ ಬ್ಲುಂರವರು ಮೇಜರ್ ಆಟ್ಲೀಯವರಿಗೆ ಹೇಳಿದುದರಲ್ಲಿ ಬ್ರಿಟಿಷ್ ಲೇಬರ್‌ಪಾರ್ಟಿ ಒಪ್ಪುವುದಾ ಗಿಯೂ, ಇಟೆಲಿಯ ಮೇಲೆ ನಿರ್ಬಂಧನ ಜಾರಿಮಾಡಿದ ವಿಷಯದಲ್ಲಿ ಯಾವ ಮನೋಭಿಪ್ರಾಯವನ್ನು ಹೊಂದಿ ದೆಯೋ ಅದರಲ್ಲಿ ತನಗೆ ಸಂಪೂರ್ಣ ಒಪ್ಪಿಗೆಯಿದೆ ಯೆಂದೂ, ಇಟೆಲಿ ಅಬಿಸೀನಿಯಾ ಗಲಭೆಯಲ್ಲಿ ಲೀಗು ತನ್ನ ಬಲವನ್ನು ಸ್ಥಾಪಿಸಬೇಕೆಂದು ತನಗೆ ಆಶೆಯಿರುವು ದೆಂದೂ ತಿಳಿಸಿದರು

ಇನ್ನು ಮುಂದೆ ಬ್ರಿಟಿಷ್ ಲೇಬರ್‌ಪಾರ್ಟಿಗೂ ಫ್ರಾನ್ಸಿನ ಸೋಷಿಯಲಿಸ್ಟರಿಗೂ ಸಂಬಂಧವಿರಬೇಕೆಂದು ನಿರ್ಧಾರವಾಯಿತು

ತಪನ ತಾಪ ದಿಂದ

ಬರಿದೆ ಮರುಗದಿರಿ

ಅಕೃತ್ರಿಮವಾದ ಕಾರ್ಬೋಲಿಕ್ ಗ್ಲಿಸರಿನ್ ಸಾಬೂನು ... ಪೆಟ್ಟಿಗೆಯಲ್ಲಿ ಮಾರಲ್ಪಡುತ್ತದೆ

ತಪನ ತಾಪದಿಂದ ನಿಮ್ಮ ಚರ್ಮವು ಉರಿಯುವುದಾದರೆ ಅದನ್ನು ಆರಿಸಲು ವೈದ್ಯರನ್ನು ಕೇಳಿರಿ. ಅವರು ನಿಜವಾಗಿಯೂ ನಿಮಗೆ ಇರಾಸ್ಮಿಕ್ ಕಾರ್ಬೋಲಿಕ್ ಗ್ಲಿಸರಿನ್ ಸಾಬೂನನ್ನು ಉಪಯೋಗಿಸಲು ಹೇಳುವರು

ಇಂತಹ ವಿಚಿತ್ರ ಗುಣಗಳುಳ್ಳ ಈ ಸಾಬೂನಿನಲ್ಲಿ ಕಾರ್ಬೋಲಿಕ್ ದ್ರವ ಮತ್ತು ಗ್ಲಿಸರಿನ್ ಇವೆರಡೂ ಸಮ್ಮಿಳಿತವಾಗಿವೆ ಆದ್ದರಿಂದಾಗಿ ಇದು ಯಾವ ಚರ್ಮವ್ಯಾಧಿಗಳನ್ನು ಹೋಗಲಾಡಿಸಲೂ ಬಲ್ಲುದಲ್ಲದೆ ದೇಹಕ್ಕೆ ತಂಪನ್ನು ಕೊಡುವುದು ತುಂಬುದಿಕೆ, ಕಜ್ಜಿ ... ಇವುಗಳೆಲ್ಲವನ್ನು ನಾಶಮಾಡುವುದು

ಸ್ನಾನಕ್ಕೆ ಇದು ಬಹಳ ಫಲಕಾರಿ ಇದರ ಪರಿಮಳವಾದ ನೊರೆಯು ದೇಹವನ್ನು ಶುಚಿಯಾಗಿಡುವುದು

THE ERASMIC CO. LTD., LONDON, ENGLAND

X-ECG 493-403

ERASMIC 36% CARBOLIC GLYCERINE SOAP

ಸಾಬೂನು ತೆಗೆದ ನಂತರ ಇದನ್ನು ... ಪೆಟ್ಟಿಗೆಯಾಗಿ ಮಾಡಬಹುದು.

ಬಾ ಬೂ ಲಿ ನ್

ಇದು ಚಿಕ್ಕ ಶಿಶುಗಳಿಗಾಗಿಯೇ ತಯಾರಿಸಲ್ಪಟ್ಟುದು ಸೋಡಿಯಮಿನ ಲವಣ, ಮೆಗ್ನೀಶಿಯಮ್ ಪೊಟೇಶಿಯಮ್ ಮತ್ತು ಬಡಿಶೇಪ, ಓಮ ಮತ್ತು ಮೆಂಥಲ್ ಇವುಗಳ ಮಧುರವೂ ರುಚಿಕರವೂ ಆದ ಮಿಶ್ರಣದಿಂದ ತಯಾರಿಸಲ್ಪಟ್ಟಿದೆ. ಚಿಕ್ಕಮಕ್ಕಳ ಉದರಶೂಲೆಯನ್ನು ನಿವಾರಿಸಿ, ಮಕ್ಕಳ ಕರುಳುಗಳನ್ನು ಸ್ವಚ್ಛವಿರಿಸಿ, ಬಲಗೊಳಿಸಿ ಕಾಪಾಡುವುದು

[illegible]

ಬಾಟ್ಲಿ 1ಕ್ಕೆ 14 ಆಣೆ.

ಪೋಸ್ಟ್ ಖರ್ಚು ಪ್ರತ್ಯೇಕ

ಬಾಬ್ ಕೆಮಿಕಲ್ ವರ್ಕ್ಸ್ ಬೊಂಬಾಯಿ ಮತ್ತು ಕಲ್ಕತ್ತಾ.

ಎರಡಾಣೆ ಅಂಚೆ ಚೀಟನ್ನು ಕಳುಹಿಸುವವರಿಗೆ ಒಂದು ಸ್ಯಾಂಪಲ್ ಬಾಟ್ಲಿ ಕಳುಹಲಾಗುವುದು

ದಕ್ಷಿಣ ಕನ್ನಡ ಜಿಲ್ಲೆಗೆ ಏಜಂಟರು – ಪೋಪ್ಯುಲರ್ ಸ್ಟೋರ್ಸ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ ವಾರಪತ್ರಿಕೆಗೆ

ಇಂದೇ ಚಂದಾದಾರರಾಗಿರಿ.

ಉತ್ತಮ ಬಾಳುವಿಕೆಯ ಮತ್ತು ಅಗ್ಗವಾದ

ಮೋಟರ ಬಸ್ಸು ವ ಕಾರುಗಳ ಉಪಯೋಗದ ಸಾಮಾನುಗಳು

Motor Acces ories Of Approved Manufacture Always in Stock.

Exide Batteries Uncharged		Rs. 20-0-0
Fully Charged		Rs. 24-0-0
Genuine Lockheed Hydraulic Brake fluid Quart tins factory Sealed		Rs 2-12-0
Genuine Lockheed	" locally filled	Rs 2-4-0

All Hydraulic Brake parts held in stock and available at Bombay Prices less 5% discount.

Chevrolet Springs of approved American Make available at less than Bombay Prices

Brake liners, Automobile lamp bulbs, Bronze bushings and bars, Bolts and Nuts of S. A. E. threads, Special tools, Drilling Machines, Spanner sets of all types.

An Enquiry with us will save you money

ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಕೊಡಿಯಾಲಬೈಲು, ಮಂಗಳೂರು

The Canara Public Conveyance Company Ltd., Kodialbail, Mangalore.

ಶಿಕ್ಷಣ ಸಪ್ತಾಹಗಳಿಗೆ ಸರಕಾರದ ಸಾಹಾಯ್ಯ.

ಲೇಖಕರು—ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ.

ಕಾರ್ಯಸಾಧನೆಗೆ ಪ್ರಚಾರವು ಒಂದು ಮುಖ್ಯ ಉಪಾಯವೆಂದು ತಿಳಿಯಲ್ಪಟ್ಟಿದೆ. ಸಾಧಿಸಬೇಕಾದ ಕಾರ್ಯವು ಮಹತ್ವಪೂರ್ಣವಾಗಿದ್ದರೆ ಮಾತ್ರ ಅದು ಸಫಲವಾಗುವದೆನ್ನಲಾಗುವುದಿಲ್ಲ. ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕಾಗಿದೆ. ಆದರೆ ೫೦ ವರ್ಷಗಳ ಸತತ ಪ್ರಯತ್ನಗಳಿಂದ ಮೇಲೆಯೂ ನಾವು ಅದರ ನೆರಳನ್ನು ಕೂಡ ಕಂಡಿರುವುದಿಲ್ಲ. ಯಾಕೆ? ಜನರು ಅದರ ಅವಶ್ಯಕತೆಯನ್ನು ಇನ್ನೂ ಚೆನ್ನಾಗಿ ಮನಗಂಡಿರುವುದಿಲ್ಲ. ಪರದೇಶೀ ಸರಕಾರದಿಂದಲೇ ನಮಗೆ ಕಲ್ಯಾಣವೆನ್ನುವ ಜನರೂ ಇನ್ನೂ ಸಾಕಷ್ಟು ನಮ್ಮ ದೇಶದಲ್ಲಿ ಇರುತ್ತಾರೆ. ಆದುದರಿಂದ ಪ್ರಚಾರದ ಮೂಲಕಾರ್ಯ ಮಹತ್ವವು ಜನರ ಅನುಭವಕ್ಕೆ ಬಂದ ಮೇಲೆ, ಕಾರ್ಯದ ಸಫಲತೆಗೆ ಅತ್ಯಾವಶ್ಯಕವಾಗಿರುವ ಜನರ ಸಹಾಯ ಸಹಾನುಭೂತಿಗಳು, ಪ್ರಯತ್ನವಿಲ್ಲದೆ ಅಥವಾ ಸ್ವಲ್ಪ ಪ್ರಯತ್ನಮಾತ್ರದಿಂದ ದೊರೆತು ಯಶಃಪ್ರಾಪ್ತಿಯಾಗುವದು. ಕಾಂಗ್ರೆಸಿನಂಥ ಮಹಾ ಸಂಸ್ಥೆಯು ಕೂಡಾ ಸ್ವರಾಜ್ಯ ಸಾಧನೆಗಾಗಿ ಪರದೇಶಗಳಲ್ಲಿ ತನ್ನ ಧ್ಯೇಯೋದ್ದೇಶ ರೀತಿ ನೀತಿಗಳ ಪ್ರಚಾರಮಾಡುವುದರ ಮೂಲಕ ಅವರ ಯಥೋಚಿತ ಸಹಾಯಸಹಾನುಭೂತಿಗಳನ್ನು ಪಡೆಯುವ ಆವಶ್ಯಕತೆಗಳನ್ನು ಮನಗಂಡು ಆ ಕಾರ್ಯಕ್ಕಾಗಿ ತಕ್ಕ ವ್ಯವಸ್ಥೆಗಳನ್ನು ಮಾಡಲಿರುವದು.

ರಾಜಕೀಯ ಸಾಮಾಜಿಕ, ಸಾಂಪತ್ತಿಕ ಮೊದಲಾದ ವಿಚಾರಗಳಲ್ಲಿ ಪ್ರಚಾರವು ಹೇಗೆ ಅವಶ್ಯಕವಾಗಿದೆಯೋ ಹಾಗೆ ಶಿಕ್ಷಣವಿಚಾರಗಳಲ್ಲಿಯೂ ಪ್ರಚಾರವು ಅತ್ಯಗತ್ಯವಾಗಿರುವದು. ಶಿಕ್ಷಣಪ್ರಗತಿಯು ಚೆನ್ನಾಗಿ ಆಗಬೇಕಾದರೆ, ವಿದ್ಯೆಯ ಮಹತ್ವವನ್ನು ತಿಳಿಯದಿರುವ ಜನರಿಗೆ ಅದನ್ನು ಹೇಳಿಕೊಡಬೇಕಾಗಿದೆ. ಈ ಕಾರ್ಯವು ಸರಕಾರದಿಂದಲೂ ಪ್ರಜಾ ಪ್ರಮುಖರಿಂದಲೂ ಆಗಬೇಕು. ಅಮೆರಿಕಾ ಇಂಗ್ಲೆಂಡ್ ಮುಂತಾದ ದೇಶವಿದೇಶಗಳಲ್ಲಿ ಶಿಕ್ಷಣ ಪ್ರಚಾರ ಮಾಡುವುದಕ್ಕೋಸ್ಕರ ಅಲ್ಲಲ್ಲಿಯ ಸರಕಾರಗಳೂ ಪ್ರಜಾಪ್ರಮುಖರೂ ಶಿಕ್ಷಣ ಪ್ರಚಾರಕ್ಕಾಗಿ ನಾನಾ ಉಪಾಯಗಳನ್ನು ಕೈಕೊಳ್ಳುತ್ತಾರೆ. ಅವುಗಳಲ್ಲಿ ಶಿಕ್ಷಣಸಪ್ತಾಹವು ಮುಖ್ಯವಾಗಿದೆ.

ಪ್ರದರ್ಶನ, ನಾಟಕ, ಕೀರ್ತನ, ಭಾಷಣ, ಸಿನೇಮಾ ಮೊದಲಾದ ವಿವಿಧ ವಿನೋದಾವಳಿಗಳಿಂದ ಶಿಕ್ಷಣ ಸಪ್ತಾಹವು ನಡೆಯುತ್ತದೆ. ಈ ಬಗೆಯ ಮನೋರಂಜಕ ಕಾರ್ಯಕ್ರಮವು ಕೆಲವು ಮೈಲುಗಳ ಅಂತರದೊಳಗೆ ವಾಸಿಸಿಕೊಂಡಿರುವ ಜನರನ್ನು ಸಪ್ತಾಹವು ಆಚರಿಸಲ್ಪಡುವಲ್ಲಿಗೆ ಆಕರ್ಷಿಸುತ್ತದೆ. ಅಲ್ಲಿಗೆ ಬಂದ ಜನರು ಮನೋರಂಜನೆ ಮಾಡಿಕೊಂಡು ಸಂತೋಷಿಸುತ್ತಿರುವಾಗಲೇ ಶಿಕ್ಷಣದ ಮಹತ್ವವನ್ನು ತಿಳಿಕೊಳ್ಳುತ್ತಾರೆ. ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಆವಶ್ಯಕತೆಯನ್ನು ಮನಗಾಣುತ್ತಾರೆ.

ಇತರರಿಗಿಂತ ನಮಗೆ ಇಂಥಾ ಶಿಕ್ಷಣ ಸಪ್ತಾಹಗಳ ಆವಶ್ಯಕತೆಯು ಬಹಳ ಇರುತ್ತದೆ. ೧೯೩೨–೩೩ರಲ್ಲಿ ಮದ್ರಾಸು ಸಂಸ್ಥಾನದ ಲೋಕಲ ಬೋರ್ಡುಗಳ ವ್ಯವಹಾರ ಕ್ಷೇತ್ರದಲ್ಲಿ ಶಾಲೆಗೆ ಹೋಗುವ ಪ್ರಾಯದ ಒಟ್ಟು ಸಂಖ್ಯೆಯಲ್ಲಿ ಸೇಕಡಾ ೬೦ರಂತೆ ಗಂಡು ಮಕ್ಕಳೂ, ಸೇಕಡಾ ೮೫ರಂತೆ ಹೆಣ್ಣುಮಕ್ಕಳೂ ಯಾವ ಶಾಲೆಗೂ ಹೋಗದೆ ಇದ್ದರು. ಆದರೆ ೧೯೩೩–೧೯೩೪ರಲ್ಲಿ ಈ ಸಂಖ್ಯೆ ೫೯ ಮತ್ತು ೮೪ಕ್ಕೆ ಇಳಿಯಿತು. ಅಂದರೆ ಆ ವರ್ಷ ಶಾಲೆಗೆ ಹೋಗುವ ಪ್ರಾಯದ ಪ್ರತಿ ೧೦೦ ಗಂಡುಮಕ್ಕಳಲ್ಲಿ ೪೧ ಮಂದಿ ಮತ್ತು ಪ್ರತೀ ೧೦೦ ಹೆಣ್ಣುಮಕ್ಕಳಲ್ಲಿ ೧೯ ಮಂದಿ ಮಾತ್ರ ಯಾವುದಾದರೊಂದು ಶಾಲೆಗೆ ಹೋಗುತ್ತಿದ್ದರು. ಇದರಿಂದ ನಮ್ಮ ಪ್ರಾಂತ್ಯದಲ್ಲಿ ಶಿಕ್ಷಣವು ಎಷ್ಟು ಮಂದಗತಿಯಿಂದ ಸಾಗುತ್ತಿದೆಯೆಂದು ಊಹಿಸಬಹುದು.

ಇಷ್ಟು ಮಾತ್ರವಲ್ಲ, ೧೯೩೩–೩೪ರಲ್ಲಿ ೧ರಿಂದ ೫ರ ವರೆಗಿನ ೫ ತರಗತಿಗಳಲ್ಲಿ ಓದುತ್ತಿದ್ದ ಪ್ರತಿ ೧೦೦ ಗಂಡು ಮಕ್ಕಳಲ್ಲಿ ೬೦ಕ್ಕೆ ಕಡಿಮೆಯಾಗದೆಯೂ, ಪ್ರತಿ ೧೦೦ ಹೆಣ್ಣು ಮಕ್ಕಳಲ್ಲಿ ೩೦ಕ್ಕೆ ಕಡಿಮೆಯಾಗದೆಯೂ, ಮೊದಲಿನ ೧, ೨, ೩ನೇ ತರಗತಿಗಳಲ್ಲಿ ಓದುತ್ತಿದ್ದರು. ಅದ್ದರಿಂದ ೧ರಿಂದ ೫ರ ವರೆಗಿನ ತರಗತಿಗಳಲ್ಲಿ ಓದುವ ಪ್ರತಿ ೧೦೦ ಗಂಡುಮಕ್ಕಳಲ್ಲಿ ೮೦ಕ್ಕೆ ಮೀರದೆಯೂ ಪ್ರತಿ ೧೦೦ ಹೆಣ್ಣು ಮಕ್ಕಳಲ್ಲಿ ೩೦ಕ್ಕೆ ಮೀರದೆಯೂ ವಿದ್ಯಾರ್ಥಿಗಳು ಮೇಲಿನ ಮೂರು ತರಗತಿಗಳಲ್ಲಿ ಓದುತ್ತಿದ್ದರೆಂದು ಅರ್ಥವಾಯಿತು. ಇದರಿಂದ ಹುಡುಗರ ಪಟ್ಟಿಗೆ ಕಡಿಮೆಯಾಗಿಯೂ ಹುಡುಗಿಯರ ಪಟ್ಟಿಗೆ ಹೆಚ್ಚಾಗಿಯೂ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ನಮ್ಮ ಶಕ್ತಿಸಂಪತ್ತುಗಳ ಎಷ್ಟು ಅನಾವ್ಯಯವಾಗುತ್ತಿರುವುದೆಂಬುದನ್ನು ಕಂಡುಕೊಳ್ಳಬಹುದು. ಮೊದಲಿನ ೨ ತರಗತಿಗಳಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ೬೦ ಆಗಿದ್ದರೆ ಮುಂದಿನ ಮೂರು ತರಗತಿಗಳಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ ೩೦ ಮಾತ್ರ! ಬೋರ್ಡು ಶಾಲೆಗಳಲ್ಲಿ ಮಾತ್ರ ಹೀಗೆ ಇರುವದೆಂದಲ್ಲ, ಖಾಸಗಿ ಶಾಲೆಗಳ ಸ್ಥಿತಿಯು ಪ್ರಾಯಶಃ ಇದಕ್ಕಿಂತ ಕನಿಷ್ಠವಾಗಿರುತ್ತದೆ.

ಈ ಪರಿಸ್ಥಿತಿಯ ಅವಲೋಕನದಿಂದ ನಮಗೆ ಗೊತ್ತಾಗುವುದೇನು? ಹೆತ್ತವರು ಶಿಕ್ಷಣದ ಮಹತ್ವವನ್ನು ತಿಳಿದು ತಮ್ಮ ಮಕ್ಕಳನ್ನು ಪಾಠಶಾಲೆಗಳಿಗೆ ಕಳುಹಿಸಿಕೊಡುತ್ತಿರುವದಿಲ್ಲ. ಮಕ್ಕಳು ಮನೆಗಳಲ್ಲಿ ತಮಗೆ ತೊಂದರೆ ಕೊಡುತ್ತಿರುವರೆಂದೋ ಅಥವಾ ಉಪಾಧ್ಯಾಯರ ದಾಕ್ಷಿಣ್ಯಕ್ಕೆ ಒಳಗಾಗಿಯೋ ಅಥವಾ ನೆರೆಕರೆಯವರು ಹಿಯ್ಯಾಳಿಸುವರೆಂದೋ ಅವರು ಮಕ್ಕಳನ್ನು ಒಂದೆರಡು ವರ್ಷದ ವರೆಗೆ ಪಾಠಶಾಲೆಗಳಿಗೆ ಕಳುಹಿಸುತ್ತಿರುತ್ತಾರೆ. ಯಾವ ಕಾರಣದಿಂದಾದರೂ ಕೂಡ, ಹೀಗೆ ಮಾಡಿದ್ದರಿಂದ ಯಾರಿಗೂ ಏನೂ ಪ್ರಯೋಜನವಾದಂತಾಗುವುದಿಲ್ಲ. ಎರಡು ವರ್ಷಗಳ ವರೆಗೆ ಕಲಿತ ವಿದ್ಯೆಯು ಮಕ್ಕಳಿಗೆ ಭವಿಷ್ಯ ಜೀವನದಲ್ಲಿ ಯಾವ ಪ್ರಯೋಜನಕ್ಕೂ ಬೀಳುವದಿಲ್ಲ. ಅವರು ಕೆಲವು ವರ್ಷಗಳ ನಂತರ ಸಂಪೂರ್ಣ ನಿರಕ್ಷರಸ್ಥರಾಗಿಯೇ ಇರುತ್ತಾರೆ.

ಖಾಸಗಿ ಶಾಲೆಗಳಿಗೂ ಬೋರ್ಡು ಶಾಲೆಗಳಿಗೂ ಹಣದ ಅಭಾವವು ತುಂಬಾ ಇರುತ್ತದೆ. ಈ ಕಾರಣದಿಂದ ೧೯೩೩–೩೪ರ ತನಕ ಲೋಕಲ್ ಬೋರ್ಡುಗಳ ಆಡಳಿತೆಗೆ ಒಳಪಟ್ಟ ೧೧೧೨ ಅಂದರೆ ಸೇಕಡಾ ೬೮ ರಷ್ಟು ಶಾಲೆಗಳಿಗೆ ಸ್ವಂತ ಕಟ್ಟೋಣಗಳಿರಲಿಲ್ಲ. ಆ ಶಾಲೆಗಳು ಅಕೃಷ್ಟಕರ ಬಾಡಿಗೆಯ ಮನೆಗಳಲ್ಲಿ ನಡೆಯುತ್ತಿದ್ದುವು. ಖಾಸಗಿ ಶಾಲೆಗಳ ಪಾಡು ಇದಕ್ಕಿಂತ ಕೆಟ್ಟದ್ದಾಗಿರಬೇಕು. ಲೋಕಲ್ ಬೋರ್ಡುಗಳಿಗೇ ತಮ್ಮ ಶಾಲೆಗಳಿಗೆ ಸ್ವಂತ ಕಟ್ಟೋಣಗಳನ್ನು ಒದಗಿಸಲಿಕ್ಕಾದರೂ ಈಗಣ ಪರಿಸ್ಥಿತಿಯಲ್ಲಿ ೨೦–೩೦ ವರ್ಷಗಳಾದರೂ ಬೇಕಾಗಬಹುದು.

ಜನರು ಶಿಕ್ಷಣದ ಮಹತ್ವವನ್ನು ತಿಳಿದಿದ್ದರೆ ಹೀಗೆ ಎಂದೂ ಆಗುತ್ತಿರಲಿಲ್ಲ. ಜನರ ಸಹಕಾರ ಸಹಾಯ ಸಹಾನುಭೂತಿಗಳು ಈಗಿನದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಅವಶ್ಯವಾಗಿ ದೊರೆಯುತ್ತಿದ್ದವು. ಅದ್ದರಿಂದ ಶಿಕ್ಷಣ ಸಪ್ತಾಹದಂಥ ಪ್ರಚಾರ ಸಾಧನೋಪಾಯಗಳ ಮೂಲಕ ಜನರು ಶಿಕ್ಷಣದ ಮಹತ್ವವನ್ನು ತಿಳಿದು ಅವರು ತಾವಾಗಿ ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಿಕೊಡುವಂತೆಯೂ ಶಿಕ್ಷಣ ಪ್ರಚಾರಕಾರ್ಯದಲ್ಲಿ ಸಹಾನುಭೂತಿಯನ್ನು ತೋರಿಸಿ ಸಹಾಯ–ಸಹಕಾರಗಳನ್ನು ಕೊಡುವಂತೆಯೂ ಮಾಡುವದು ಸರಕಾರದ ಮತ್ತು ಪ್ರಜಾಪ್ರಮುಖರ ಕರ್ತವ್ಯವಾಗಿದೆ ಎಂದು ಪುನಃ ಹೇಳಬೇಕಾಗಿದೆ.

ಆದರೆ, ನಮ್ಮ ಪ್ರಾಂತಿಕ ಸರಕಾರವು ಈ ವಿಷಯದಲ್ಲಿ ತಾನು ಮಾಡಬೇಕಾದ ಕಾರ್ಯವನ್ನು ಮಾಡದೆ ಇದ್ದುದು ಮಾತ್ರವಲ್ಲ, ಮಾಡಲಿಕ್ಕೆ ತಯಾರಾಗಿದ್ದವರನ್ನು ಕೂಡ ತಡೆದಿರುವುದು ಕಂಡುಬಂದಿದೆ. ಲೋಕಲ್ ಬೋರ್ಡುಗಳು ಶಿಕ್ಷಣ ಸಪ್ತಾಹಗಳಿಗೆ ಧನಸಹಾಯ ಮಾಡಕೂಡದೆಂದು ಹುಕುಂ ಕೊಟ್ಟು, ಅವು ಈ ಬಾಬಿನಲ್ಲಿ ಏನನ್ನೂ ಖರ್ಚುಮಾಡದಂತೆ ಅವುಗಳ ಕೈಗಳನ್ನು ಕಟ್ಟಿರುತ್ತದೆ. ಶಿಶುಸಪ್ತಾಹ, ಆರೋಗ್ಯ ಸಪ್ತಾಹಗಳಿಗೆ ತನ್ನ ಆರೋಗ್ಯ ಇಲಾಖೆಯ ಮೂಲಕ ಹಣ ಖರ್ಚುಮಾಡಿ ಆರೋಗ್ಯ ಪ್ರಚಾರಮಾಡಲಿಕ್ಕೆ ಮುಂದಾಗುವ ಸರಕಾರವು ಶಿಕ್ಷಣಪ್ರಚಾರ ಮಾಡಲಿಕ್ಕೆ ಇರುವ ಶಿಕ್ಷಣ ಸಪ್ತಾಹಗಳ ಸಂಬಂಧ ಯಾಕೆ ಕೃಪಣತನವನ್ನು ತೋರಿಸಬೇಕೋ ಗೊತ್ತಾಗುವುದಿಲ್ಲ. ಹಣಸಹಾಯ ಮಾಡುವ ಸ್ಥಿತಿಯಲ್ಲಿರುವ ಲೋಕಲ್ ಬೋರ್ಡುಗಳು ಮಾತ್ರ ಶಿಕ್ಷಣಸಪ್ತಾಹಗಳಿಗೆ ಹಣಮಂಜೂರು ಮಾಡುವುದಾದ್ದರಿಂದ ಹಣದ ಅಭಾವವನ್ನು ನೀಗಿಸುವುದಕ್ಕೆ ತಾನು ಹೀಗೆ ಮಾಡಿದೆನೆಂದು ಸರಕಾರವು ಹೇಳುವದಾದರೆ ಆ ಮಾತಿನಲ್ಲಿ ತಥ್ಯವಿರುವುದಿಲ್ಲ. ಲೋಕಲ್ ಬೋರ್ಡುಗಳು ಶಿಕ್ಷಣ ಸಪ್ತಾಹಗಳಿಗೆ ಸ್ವಲ್ಪ ಸ್ವಲ್ಪ ಹಣ ಖರ್ಚುಮಾಡಿದ್ದಾದರೆ, ಕಡಿಮೆ ವೆಚ್ಚದಿಂದ ಹೆಚ್ಚು ಮಕ್ಕಳಿಗೆ ಶಿಕ್ಷಣಕೊಡುವ ಅನುಕೂಲ ಪರಿಸ್ಥಿತಿಯನ್ನು ಬರಮಾಡಿ ಹೇರಳ ಹಣವನ್ನು ಉಳಿಸಬಹುದು. ಸರಕಾರದ ಈಗಿನ ಧೋರಣೆಯು Penny wise Pound foolish ಎಂಬಂತಾಗಬಹುದೋ ಎಂಬ ಸಂದೇಹವನ್ನು ಉಂಟುಮಾಡುತ್ತದೆ. ಒಂದು ಕಾಸಿನ ಆಶೆಗೆ ಹೋಗಿ ಒಂದು ರೂಪಾಯಿ ಕಳಕೊಳ್ಳುವದು ಬುದ್ಧಿವಂತಿಕೆಯ ಲಕ್ಷಣವಲ್ಲ. ಸರಕಾರವು ಲೋಕಲ್ ಬೋರ್ಡುಗಳಿಗೆ ಕೊಟ್ಟ ಈ ಹುಕುಮನ್ನು ಹಿಂತೆಗೆದು, ಅವುಗಳು ಶಿಕ್ಷಣ ಪ್ರಚಾರ ಕಾರ್ಯಕ್ಕೆ ಪೂರ್ಣರೂಪದಿಂದ ಕೈಕೊಡುವಂತೆ ಅನುಕೂಲತೆಗಳನ್ನು ಒದಗಿಸಿಕೊಡಬೇಕು. ಅಗತ್ಯವೆಂದು ನಮಗೆ ತೋರುತ್ತದೆ.

ದ. ಕ. ಜಿಲ್ಲಾ ಬೋ. ಉಪಾಧ್ಯಾಯ—ಉಪಾಧ್ಯಾಯಿನಿಯರ ವಿಶೇಷ ಸಭೆ

ತಾ. ೧೦ ೫ ೩೬ನೇ ದಿನ ಪೂರ್ವಾಹ್ನ ಗಂಟೆ ೧ಂಕ್ಕೆ ಮಂಗಳೂರು ಮುನಿಸಿಪಲ್ ಬೆಯರ್ ಮ್ಯಾನರ್ವ ಮಿ. ೫ೀ ಬೆನೆಟ್ ನೊರೊನ್ಹಾ ಅವರ ಡಾಕ್ಟರ್ ಬಿ. ಲಕ್ಷ್ಮಿ ಅಧ್ಯಕ್ಷತೆಯಲ್ಲಿ ಗವರ್ನಮೆಂಟ್ ಟ್ರೈಯಿಂಗ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಜರಗಿ ಈ ಕೆಳಗಿನ ಠರಾವುಗಳು ಪಾಸಾದುವು.

೧. ಜಿ. ಬೋ. ಬಜೆಟ್ ಕಮಿಟಿಯವರು ೧೯೩೬—೩೭ ವರುಷಗಳ ಬಗ್ಗೆ ಎಲಿಮೆಂಟರಿ ಶಾಲಾಧ್ಯಾಪಕರಿಗೆ ಸಂಬಳದಲ್ಲಿ ರೂಪಾಯಿ ಮೇಲೆ ಎರಡಾಣೆ ಕಡಿತಮಾಡಬೇಕೆಂತ ಶಿಫಾರಸು ಮಾಡಿದ್ದಾರಾಗಿ ಕೇಳಿ ಈ ಸಭೆಯು ತುಂಬಾ ವಿಷಾದಪಡುತ್ತದೆ.

೨. ಮೊನ್ನೆ ಡಿ. ಬೋರ್ಡಿನವರು ಬೋರ್ಡಿನ ಇತರ ಸಂಸ್ಥೆಗಳ ಮೇಲೆ ಕಡಿತ ಇಟ್ಟಂತೆಯೇ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಮೇಲೆಯೂ ಕಡಿತ ಇಟ್ಟು ಸಂಬಳದಲ್ಲಿ ಯಾವ ತರದ ಕಡಿತವೂ ಇಲ್ಲದಂತೆ ನಿರ್ಣಯಿಸಿ ಡೆಫಿಸಿಟ್ ಬಜೆಟನ್ನೇ ಗವರ್ನಮೆಂಟಿಗೆ ಕಳುಹಿಸಿಕೊಟ್ಟು ಗವರ್ನಮೆಂಟಿನಿಂದಲೇ ದ್ರವ್ಯಸಹಾಯವನ್ನು ಹೊಂದುವಂತೆ ಬೋರ್ಡು ಗವರ್ನ್ಮೆಂಟನ್ನು ಒತ್ತಾಯಪಡಿಸಬೇಕಾಗಿ ಈ ಸಭೆಯು ಪ್ರಾರ್ಥಿಸುತ್ತದೆ.

೩. ಮೇಲಿನ ೨ನೇ ಠರಾವಿನ ಕುರಿತು ಒಂದು ಮೆಮೋರಿಯಲನ್ನು ತಯಾರಿಸಿ ಡಿಸ್ಟ್ರಿಕ್ಟ್ ಬೋರ್ಡಿಗೂ ಪ್ರತಿಯೊಬ್ಬ ಬೋರ್ಡಿನ ಮೆಂಬರರಿಗೂ ಕಳುಹಿಸಿಕೊಡಬೇಕಾಗಿ ನಿರ್ಣಯಿಸಲಾಯಿತು.

೪. ಉಪಾಧ್ಯಾಯರ ಸಂಕಷ್ಟವು ಪ್ರತಿಯೊಬ್ಬ ಬೋರ್ಡು ಮೆಂಬರರ ಅವಗಾಹನೆಗೆ ಬರುವಂತೆ ಆಯಾ ಸೆಂಟರಿನ ಉಪಾಧ್ಯಾಯರು ಸಂಬಂಧಪಟ್ಟ ಸರ್ಕಲಿನ ಮೆಂಬರರ ಸಹಾನುಭೂತಿಯನ್ನು ಪಡೆಯುವಂತೆ ಮನಃಪೂರ್ವಕ ಪ್ರಯತ್ನಮಾಡಬೇಕಾಗಿಯೂ ಆ ಕುರಿತು ನಡೆದ ಪ್ರಯತ್ನದ ಫಲಿತಾಂಶವನ್ನು ಇದೇ ತಾ. ೨೦ರ ಒಳಗೆ ಸಂಘದ ಕಾರ್ಯದರ್ಶಿ (ವಿ ಬಾಬುಶೆಟ್ಟಿ, ಬಿ.ಟಿ.) ಯವರಿಗೆ ತಿಳಿಸಬೇಕಾಗಿ ನಿರ್ಣಯಿಸಲಾಯಿತು.

೫. ತಾ. ೨೫ ೫–೩೬ನೇ ಸೋಮವಾರ ಬೆಳಿಗ್ಗೆ ಗಂಟೆ ೧೦ಕ್ಕೆ ಡಿ. ಬೋ. ಬಜೆಟ್ ಮೀಟಿಂಗು ಜರಗುವುದರಿಂದ ಸದ್ರಿ ಮೀಟಿಂಗಿನ ಸಮಯ ಜಿಲ್ಲೆಯ ಎಲ್ಲಾ ಬೋರ್ಡು ಶಾಲೆಯ ಉಪಾಧ್ಯಾಯ ಉಪಾಧ್ಯಾಯಿನಿಯರು ಡಿ. ಬೋ. ಆಫೀಸಿನ ವಠಾರದಲ್ಲಿ ಬಂದು ಸೇರಬೇಕಾಗಿಯೂ ತಾವೆಲ್ಲರೂ ರಜೆಯಿಲ್ಲದ ಶಾಲೆಗಳ ಉಪಾಧ್ಯಾಯರು ಉಪಾಧ್ಯಾಯಿನಿಯರು ಶಾಲೆಯನ್ನು ಮುಚ್ಚಿ (ಮನ್‌ಸೂನ್ ರಜಾಕಾಲದಲ್ಲಿ ಒಂದು ದಿನ ಶಾಲೆ ನಡೆಸಿ ಭರ್ತಿಮಾಡುವ ಶರತ್ತಿನಲ್ಲಿ) ತಪ್ಪದೆ ಎಲ್ಲರೂ ಬರಬೇಕಾಗಿ ನಿರ್ಣಯಿಸಲಾಯಿತು.

ಕಾರ್ಯದರ್ಶಿಯವರ ವಿನಂತಿ — ಉಪಾಧ್ಯಾಯ ಬಂಧುಗಳೇ ಕಣ್ಣು ತೆರೆಯಿರಿ. ಜಾಗ್ರತರಾಗಿರಿ! ಇದೇ ಬರುವ ೧೫ ೨೫ನೇ ದಿನ ನಮ್ಮ ಭಾಗ್ಯವು ನಿರ್ಧರವಾಗಲಿರುವುದು. ಉದಾಸೀನ ಮಾಡಿದರೆ ಕಾರ್ಯವು ಕೆಟ್ಟು ಹೋಗುವುದು. ಪ್ರತಿಯೊಂದು ತಾಲೂಕಿನ ಉಪಾಧ್ಯಾಯ ಉಪಾಧ್ಯಾಯಿನಿಯರು ನಂಬ್ರ ೨ನೇ ನಿರ್ಣಯವು ಮಂಜೂರಾಗುವಂತೆ ಬೋರ್ಡು ಮೆಂಬರರ ಬೆಂಬಲವನ್ನು ಅಗತ್ಯವಾಗಿ ಪಡೆಯಬೇಕು. ಇದೇ ಈಗ ನಾವು ಮಾಡತಕ್ಕ ಪ್ರಯತ್ನ. ಬೋರ್ಡಿನ ಸಹಾನುಭೂತಿಯು ಈ ಪ್ರಯತ್ನದಿಂದಲೂ ನಮ್ಮ ಕಡೆಗೆ ಒಲಿಯದಿದ್ದರೆ ಅದೇ ದಿನ (ತಾ. ೨೫ಕ್ಕೆ) ಮುಂದಿನ ಕಾರ್ಯಧೋರಣೆಯ ಕುರಿತು ನಿಶ್ಚಯಿಸಬೇಕಾಗುವುದು. ನಮ್ಮ ಜಯವು ೨೫ನೇ ತಾರೀಕಿನ ದಿನದ ಸಭೆಯ ಹಾಜರಿಯ ಸಂಖ್ಯೆಯ ಮೇಲೆ ಹೊಂದಿಕೊಂಡಿರುವುದು.

ಜೆ. ಸಿ. ಸಿಕೇರ ಬ್ರದರ್ಸ್,

ಜವುಳಿ, ನೂಲು, ರಂಗು, ಕೆಮಿಕಲ್ಸ್ ವಗೈರೆಯ ಹೋಲ್‌ಸೇಲ್ ಮತ್ತು ರಿಟ್ಯೆಲ್ ವ್ಯಾಪಾರಿಗಳು.

ಮಾರ್ಕೆಟು ರಸ್ತೆ, ಮಂಗಳೂರು.

ಮೇಲಿನ ಶಾಪಿನಲ್ಲಿ ನಮ್ಮ ಜೆಪ್ಪಿನ ಮಾರ್ನಮಿಕಟ್ಟೆಯ ಬಳಿಯಲ್ಲಿರುವ ಸ್ವಂತ ಮಿಶ್ಶನ್ ಮಗ್ಗದ ನೇಯಿಗೆ ಕಾರ್ಖಾನೆಯಲ್ಲಿ ತಯಾರಿಸಲ್ಪಡುವ ಖಾತ್ರಿ ರಂಗಿನ ನೂಲು, ಮರ್ಸ್ರೈಜ್ಡ್, ಸಿಲ್ಕು, ರೇಶ್ಮೆ ವಗೈರೆಯ ನಾನಾ ತರದ ಚಟೋದಾದ ಅಂಚಿನ ಶೀರೆಗಳು ಮೊಳ 8ರಿಂದ 12, 14, 16, 18ರ ವರೆಗಿನವುಗಳು ಕಡಿಮೆ ದರದಲ್ಲಿ ಮಾರಾಟಕ್ಕಿವೆ. ಇದಲ್ಲದೆ ಸ್ವಂತವಾಗಿಯೇ ತಯಾರಿಸಲ್ಪಟ್ಟ ಚೇಕ್ಸ್, ಪಂಚೆ, ಮುಂಡು, ದೋತ್ರ, ರುಮಾಲು ವಗೈರೆಗಳೂ, ಸ್ವದೇಶಿ ಮತ್ತು ಇಂಗ್ಲಿಷು ಮಿಲ್ಲುಗಳ ಕೋಟಿಂಗ್ಸ್, ಶರ್ಟಿಂಗ್ಸ್, ಚೇಕ್ಸ್, ದೋತಿ, ಕೋರ, ಮಲ್ಲು, ತುವಾಲ್ ಮುಂಡ್ರಿ, ಮುಂಡು ವಗೈರೆ ಎಲ್ಲಾ ರಖಂ ಮ್ಹಾಲುಗಳೂ ನಮ್ಮಲ್ಲಿ ಅಗ್ಗವಾಗಿ ದೊರಕುತ್ತವೆ. ನೈಗೆಯ ಕೈಗಾರಿಕೆಗೆ ಬೇಕಾದ ಎಲ್ಲಾ ತರದ ಖಾತ್ರಿ ರಂಗಿನ ರಂಗಿಸಿದ ನೂಲುಗಳೂ, ರಂಗಿಸದ ನೂಲುಗಳೂ, ರೇಶ್ಮೆ, ಮರ್ಸ್ರೈಜ್ಡ್, ಆರ್ಟಿಫಿಸಿಯಲ್ ನೂಲು ವಗೈರೆಗಳೂ, ಲಾಲಿ, ಅಚ್ಚು, ರೆಕ್ಕೆ, ಗುಮ್ಮೆ ವಗೈರೆ ಎಲ್ಲಾ ತರದ ಮಗ್ಗದ ಸಾಮಾನುಗಳೂ, ರಂಗು ಹಾಕುವ ಕೈಗಾರಿಕೆಗೆ ಬೇಕಾದ ರಂಗು ಮತ್ತು ಕೆಮಿಕಲ್ಸ್‌ಗಳೂ ನಮ್ಮಲ್ಲಿ ಸುಲಭ ದರದಲ್ಲಿ ದೊರಕುತ್ತವೆ.

ಜಪ್ಪು ನೇಯಿಗೆ ಕಾರ್ಖಾನೆಯ ಮಿಶ್ಶನ್ ಮಗ್ಗದ ಶೀರೆ, ಇದೀ ಹಿಂದೂಸ್ಥಾನದ ಕಥೋಲಿಕ್ ಕೈಗಾರಿಕಾ ಪ್ರದರ್ಶನದಲ್ಲಿ ಪದಕ ಮತ್ತು ಪತ್ರ ಪಡೆದಂಥಾ ಶೀರೆ, ಭಾರೀ ಶೀರೆ ಎಂದು ಎಲ್ಲೆಲ್ಲೂ ನಮ್ಮ ಗಿರಾಕಿಗಳಿಂದ ಸ್ತುತಿಸಲ್ಪಡುವ ನಮ್ಮ ಮ್ಹಾಲನ್ನು ನೀವು ಸಹಾ ಪಡೆದು, ಅದರ ಖಾತ್ರಿ ರಂಗು, ಅಂದ ಚಂದ ಮತ್ತು ಪ್ರಯೋಜನವನ್ನು ಪರೀಕ್ಷಿಸಿರಿ.

ನಮ್ಮ ರಂಗಿನ ಕಾರ್ಖಾನೆಯಲ್ಲಿ ಎಲ್ಲಾ ತರದ ನೂಲು ವ ವಸ್ತ್ರಗಳಿಗೆ ಖಾತ್ರಿ ರಂಗನ್ನು ಹಾಕಿಸಬಹುದು. ವ್ಯಾಪಾರಸ್ಥರಿಗೆ ತುಂಬಾ ಅನುಕೂಲವಿದೆ.

ಹೆಡ್ ಆಫೀಸು, ಕಾರ್ಖಾನೆ ಮತ್ತು ರಂಗಿನ ಕಾರ್ಖಾನೆಯ ವಿಳಾಸ—   ಶಾಪುಗಳು—

ಜೆ. ಸಿ ಸಿಕೇರ ಬ್ರದರ್ಸ್, ಮಾರ್ನಮಿಕಟ್ಟೆ ರೋಡ್, ಜೆಪ್ಪು, ಕಂಕನಾಡಿ ಪೋಸ್ಟ್, ಮಂಗಳೂರು.

ಜೆ. ಸಿ ಸಿಕೇರ ಬ್ರದರ್ಸ್, ಮಾರ್ಕೆಟು ರೋಡ್, ಮಂಗಳೂರು, ದ. ಕ.

227 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ.

ತನ್ನ ಮಗನನ್ನೆ ಗಲ್ಲಕ್ಕೇರಿಸಿದನು

ಪತ್ತೇದಾರ ವಿಷಾದಮಯ ಕತೆ.

ಫ್ರಾನ್ಸ್ ದೇಶದ ಸುವಿಖ್ಯಾತ ಪತ್ತೇದಾರನು ಇವಾಗಲೆ ಅಂತರ್ಧಾನನಾದನು. ಸ್ವಪಕ್ಷ, ಪರಪಕ್ಷವೆಂಬ ಭೇದಭಾವವಿಲ್ಲದೆ ರಾಜ್ಯದಲ್ಲಿಯ ದಂಗೆ ಖೋರರನ್ನು ಬಹಳೇ ವಿಚಕ್ಷಣತೆಯಿಂದ ಪತ್ತೆ ತೆಗೆದು ತನ್ನ ಕಾರ್ಯಪಟುತ್ವವನ್ನು ಪ್ರಾಮಾಣಿಕತೆಯನ್ನು ಸ್ಥಾಪಿಸಿದ ವೀರನು. ಕಟ್ಟಕಡೆಗೆ ತನ್ನ ಮಗನನ್ನೆ ಗಲ್ಲಕ್ಕೇರಿಸಿದನು. ಇದೇ ಅವನ ಮರಣಕ್ಕೆ ಕಾರಣಭೂತವಾಯಿತು.

ಇವನ ಹೆಸರು ಜೀನ್ ಲೇಟರ್ ಎಂದು. ಎಲ್ಲರೂ ಇವನು ಪತ್ತೇದಾರ ಶಾಖೆಯ ಮುಖ್ಯ ಅಧಿಕಾರನು ಆಗುವನೆಂದು ಬಯಸಿದ್ದರು. ಫ್ರೆಂಚ್ ಸರಕಾರವು ಇವನಿಗೆ ಆ ಪದವಿಯನ್ನು ಸ್ವೀಕರಿಸುವಂತೆ ಕೇಳಿಕೊಂಡಿದ್ದರು. ಆದರೆ ಅಕಸ್ಮಾತ್ ಅವನು ತನ್ನ ಇದ್ದ ಕೆಲಸಕ್ಕೆ ರಾಜಿನಾಮೆಯನ್ನಿತ್ತುದು ಎಲ್ಲರಿಗೂ ಆಶ್ಚರ್ಯವಾಗಿ ಕಂಡಿತು. ಸರಕಾರದವರಿಗೆ ಮಾತ್ರ ಅದರ ಕಾರಣವು ಗೊತ್ತಾಗದಿರಲಿಲ್ಲ. ಅವನ ಮರಣಾನಂತರ ಎಲ್ಲವೂ ವಿದಿತವಾಯಿತು.

ಜೀನ್ ಲೇಟರ ಮಗನು ತೀರ ಚಿಕ್ಕವನಾಗಿರುವಾಗಲೇ ಅವನ ತಾಯಿಯು ಮಗನೊಡನೆ, ತನ್ನ ಇಷ್ಟಬಂದ ಕಾಮುಕ ಪುರುಷನೊಡನೆ ಪರಾರಿಯಾದಳು. ಆ ಪುರುಷನು ಪ್ರಚಂಡ ಚೋರ ಶಿಖಾಮಣಿ. ಕೆಲ ಕಳವುಗಳಿಂದಲೆ ಆತನ ಜೀವನಹರಣವಾಗುತ್ತಿತ್ತು. ಅದೇ ದುಸ್ಸಂಗದಲ್ಲಿ ಬೆಳೆದ ಮಗನೂ ಅದೇ ಚೋರಿಯನ್ನು ಅಭ್ಯಾಸಿಸಿ ದೊಡ್ಡವನಾಗುತ್ತಲೆ ಒಂದು ಪುರಾತನ ಸಂಘದ ಸದಸ್ಯನಾದನು.

ಒಂದು ಸಲ ಈ ತಂಡದವರು ಮುದಿ ದಂಪತಿಗಳನ್ನು ಕೊಲೆಮಾಡಿ ಅವರ ಸೊತ್ತುಗಳನ್ನು ಸೂರೆಗೊಂಡರು. ಫ್ರೆಂಚ ಸರಕಾರದ ಕೆಲವು ದಿವಸಗಳ ಪತ್ತೇದಾರರ ಸಂಶಯದ ನಿಮಿತ್ತ ಗಾಸ್ಟನ್ ಎಂಬವನನ್ನು ಸೆರೆಹಿಡಿದರು. ಆದರೆ ಇನ್ನೆಲ್ಲರೂ ಅವನು ನಿರಪರಾಧಿಯೆಂದು ವಾದಿಸಿದರು. ಫ್ರೆಂಚ ಸರಕಾರವು ಗೊಂದಲಕ್ಕೆ ಬಿತ್ತು. ಅದ್ದರಿಂದ ಅವರು ಜೀನ್ ಲೇಟರನನ್ನೇ ನಿಜವಾದ ಅಪರಾಧಿಯನ್ನು ಸೆರೆಹಿಡಿಯಲು ಅಪ್ಪಣೆ ಕೊಟ್ಟರು.

ಕೆಲವೇ ದಿನಗಳಲ್ಲಿ ಜೀನನು ಅಪರಾಧಿತನದ ರಾಹಿತ್ಯವನ್ನು ಸ್ಥಾಪಿಸಿದ್ದಲ್ಲದೆ ನಿಜವಾದ ಕೊಲೆಗಾರನ ಪತ್ತೆಯನ್ನು ಹಚ್ಚಿದನು. ಅವನೇ ನವ ಜವಾನ ಜೋರ್ಜ ವನೋರ್ನ್ ಎಂಬಾತನು ಕೊಲೆಗೆ ರುಜುವಾತುಗಳು ಸ್ಪಷ್ಟವಾಗಿದ್ದದರಿಂದ ಫ್ರೆಂಚ್ ನ್ಯಾಯಾಧೀಶರು ಜೋರ್ಜನನ್ನು ಗಲ್ಲಕ್ಕೇರಿಸುವಂತೆ ತೀರ್ಪನ್ನು ಕೊಟ್ಟರು. ಜೀನ್ ಲೇಟನನ್ನು ಅಷ್ಟು ಬೇಗನೆ ನಿಜವಾದ ಕೊಲೆಗಾರನನ್ನು ಗೊತ್ತುಹಚ್ಚಿ ನಿರಪರಾಧಿಯೊಬ್ಬನ ಪ್ರಾಣವನ್ನು ರಕ್ಷಿಸಿದಕ್ಕಾಗಿ ಫ್ರೆಂಚ ಸರಕಾರವೂ ಅಲ್ಲದೆ ಜನರೂ ಅವನನ್ನು ತುಂಬಾ ಹೊಗಳಿದರು. ಅವನನ್ನು ಉಚ್ಚ ಪದವಿಗೆ ಏರಿಸುತ್ತಾರೆಂದು ಎಲ್ಲರೂ ವಹಿಸಿದರು. ಆದರೆ ಅಕಸ್ಮಾತ ಅವನೇ ತನ್ನ ಕೆಲಸಕ್ಕೆ ರಾಜಿನಾಮೆ ಕೊಟ್ಟುದನ್ನು ಕಂಡು ಎಲ್ಲರೂ ಆಶ್ಚರ್ಯಪಟ್ಟರು.

ಸರಕಾರದವರಿಗೆ ಮಾತ್ರ ಅದರ ಕಾರಣವು ತಿಳಿಯಿತು. ಕೊಲೆಗಾರನ ಪತ್ತೆಮಾಡಿ ನೋಡಿದಾಗ ಕೊಲೆಪಾತಕನು ತನ್ನ ಮಗನೆಂದೇ ಅವನಿಗೆ ತಿಳಿದುಬಂತು. ಆದರೂ ಹಿಂಜರಿಯದೆ ಪ್ರಮಾಣಕ್ಕೆ ಮುಂತಲವುಂಟಾಗಲೆಂದು ಭಾವಿಸಿ ತನ್ನ ಮಗನನ್ನು ಸರಕಾರದ ವಶ ಒಪ್ಪಿಸಿದನು.

TEST YOUR EYES

By the Electro Ophthalmoscope.



All Varities of
Frames & Lenses.
At
The Mangalore Trading Association Ltd
Sight Testing Ophthalmic Opticians,
Car Street, MANGALORE



Distributors for South Kanara

Raghavendra Ranga Pai, Car Street Mangalore

ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ—ನಿತ್ರಾಣಕ್ಕೆ ಅತ್ಯಂತ ಗುಣಕಾರಿ

ಮಹಾಮದನ ಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ

ಹಿಮಸಾಗರ ತೈಲ—ನಿದ್ರಾ ನಾಶಕ್ಕೆ ಅತೀ ಉಪಯುಕ್ತ

ಮಹಾಮಾಷ ತೈಲ—ಪಕ್ಷವಾತಕ್ಕೆ ಅತ್ಯಂತ ಗುಣಕಾರಿ

ಗರ್ಭಪಾಲ—ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ.

ಗುಡ್ಡಪಿಪ್ಪಲಿ—ಲಿವರ್ ರೋಗಕ್ಕೆ ಅತ್ಯುತ್ತಮ.

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದಕ್ಷಿಣ ಕನ್ನಡ.

ನಿರುದ್ಯೋಗದ ಸಮಸ್ಯೆ

ಲೇಖಕ:- ಯಂ. ಬಿ. ನರ್ಸಪ್ಪ, ಮಂಗಳೂರು.

ಅಮೇರಿಕ, ಜರ್ಮನಿ ಮತ್ತು ಇಂಗ್ಲೆಂಡು ಇತ್ಯಾದಿ ದೇಶಗಳ ನಿರುದ್ಯೋಗಿಗಳ ಸಂಖ್ಯೆಗಳು ನಮಗೆ ಆಗಾಗ್ಗೆ ದೊರಕುತ್ತಿದ್ದಾಗ್ಯೂ ನಮ್ಮ ವಿಶಾಲ ಭಾರತದಲ್ಲೆಷ್ಟು ನಿರುದ್ಯೋಗಿಗಳಿದ್ದಾರೆಂದು ತಿಳಿಯದಾಗಿದೆ. ಕಾರಣವೇನು? ಅವುಗಳೆಲ್ಲಾ ಸ್ವತಂತ್ರ ದೇಶಗಳು. ತಮ್ಮ ದೇಶದಲ್ಲಾಗುವ ಪ್ರತೀ ಒಂದು ವಿದ್ಯಮಾನಗಳು ಪ್ರತೀ ಒಬ್ಬ ಪ್ರಜೆಗೆ ಅರಿಯುವ ಸ್ಥಿತಿಯಲ್ಲಿರುತ್ತವೆ. ಅಸಂಖ್ಯಾತವಾದ ನಮ್ಮ ದೇಶದ ನಿರುದ್ಯೋಗಿಗಳ ಸಂಖ್ಯೆಗಳು ಗೊತ್ತಾದದ್ದೇ ಆದರೆ ಅದು ಬಾಕಿ ದೇಶಗಳ ಎಲ್ಲಾ ನಿರುದ್ಯೋಗಿಗಳ ಸಂಖ್ಯೆಗಳಿಗಿಂತ ಅಧಿಕವಾಗಬಹುದು. ಭಾರತ ಮಾತೆಯು ಅಂಥಾ ನಿರುದ್ಯೋಗಿಗಳ ಸಂಖ್ಯೆಯನ್ನು ಪರದೇಶಿಗಳಿಗ್ಯಾಕೆ ತಿಳಿಸಬೇಕೆಂಬ ಅಭಿಪ್ರಾಯದಿಂದಿರಬಹುದು. ಅಲ್ಲದೆ ವಿದೇಶಗಳಿಗೆ ಸದಾ ಅನ್ನ ಕೊಡುತ್ತಿರುವ ಭಾರತಮಾತೆಯು ತನ್ನ ಮಕ್ಕಳಿಗೆಲ್ಲಾ ಅನ್ನವಿಲ್ಲವೆಂದು ಹೇಳಿಸಿಕೊಳ್ಳುವುದಾದರೂ ಹೇಗೆ? ಅಲ್ಪಸ್ವಲ್ಪ ದೇಶಧುರೀಣರುಗಳಿಂದ ನಮ್ಮ ದೇಶದ ನಿರುದ್ಯೋಗಿಗಳ ಸಂಖ್ಯೆಯು ತಿಳಿದಿರುವುದಾದರೂ ಅವು ಅಪೂರ್ಣವಾಗಿರುವುದೆಂದು ಹೇಳಬಹುದು.

ನಿಜವಾದ ಸಂಗ್ತಿಗಳಿಂದ ತಿಳಿದುಬರುವಂತೆ ಒಂದು ಶತಮಾನದ ಕೆಳಗೂ ನಮ್ಮ ದೇಶದಿಂದ ವಿದೇಶಗಳಿಗೆ ನಮ್ಮ ಪ್ರತಿಯೊಂದು ಕೈಗಾರಿಕೆ ಸಾಮಾನುಗಳು ರಫ್ತಾಗುತ್ತಿದ್ದುವು. ಅಂಥಾ ಸಮಯದಲ್ಲಿ ಈಗ ತಲೆ ಎತ್ತಿ ನಿಂತಿರುವ ಜಪಾನು, ಜರ್ಮನಿ, ಅಮೇರಿಕ ಇಂಗ್ಲಾಂಡು ಇತ್ಯಾದಿ ದೇಶಗಳು ಅನಾಗರಿಕ ಸ್ಥಿತಿಯಲ್ಲಿದ್ದು ಪ್ರತೀ ಒಂದು ಸಾಮಾನುಗಳನ್ನು ನಮ್ಮ ದೇಶದಿಂದ ತರಿಸಿಕೊಳ್ಳುತ್ತಿದ್ದುವು. ವ್ಯಾಪಾರವು ಬಹಳವಾಗಿ ನಡೆಯುತ್ತಿದ್ದು ಒಳ್ಳೆ ಸಂಪತ್ತು ಸಮೃದ್ಧಿಯಾಗಿತ್ತು. ಆಗ ನಮ್ಮ ಭಾರತವು ಸುವರ್ಣಭೂಮಿ ಎಂದು ಹೆಸರುಗೊಂಡಿತ್ತು. ಅಂಥಾ ಸುವರ್ಣಭೂಮಿಯು ಈಗ ಯಾವ ಸ್ಥಿತಿಯಲ್ಲಿದೆ? ಆಗಿನ ಧನಾಢ್ಯರೂ ಬಲಾಢ್ಯರೂ ಎಲ್ಲಿ? ಈಗಿನ ನಾಮಾಂಕಿತ ಧನಾಢ್ಯರೂ, ನಿಸ್ತೇಜರೂ, ಗುಲಾಮರೂ ಎಲ್ಲಿ? ಅಜ, ಗಜಾಂತರವಾಗಿರುತ್ತದೆ ಸುವರ್ಣಭೂಮಿಯು ಸುವರ್ಣವನ್ನು ಹರಿಸುತ್ತಲೇ ಇದೆ

ಕ್ರಮೇಣ ವಿದೇಶೀಯರು ನಮ್ಮ ಕೈಗಾರಿಕೆಗಳಲ್ಲಿ ಒಂದೊಂದನ್ನೇ ಕಲಿತು ಬಹು ಬೇಗನೇ ಉತ್ತಮ ಸ್ಥಿತಿಗೆ ಬಂದು ಅವರ ದೇಶಗಳು ಇತ್ತೀಚೆಗೆ ತಲೆ ಎತ್ತಿ ನಿಂತಿವೆ. ಆ ಪೈಕಿ ಜಪಾನೂ, ಜರ್ಮನಿಯೂ ಮುಖ್ಯವಾಗಿವೆ ವಿದೇಶೀಯರ ಪೈಪೋಟಿಯಿಂದಲೂ, ಅವರವರ ಸ್ವದೇಶ ಪ್ರೇಮದಿಂದಲೂ ನಮ್ಮ ಕೈಗಾರಿಕೆಗಳು ಒಂದೊಂದೇ ಬಿದ್ದುಹೋಗಿ ಈಗೀಗ ನಾಮಾವಶೇಷವಾಗಿ ಹೋಗಿವೆಯಲ್ಲದೆ ಸಂಪೂರ್ಣ ಪರದೇಶಿ ವಸ್ತುಗಳನ್ನೇ ಹೊಂದುವ ಸ್ಥಿತಿಯಲ್ಲಿದ್ದೇವೆ ಅಲ್ಲದೆ, ಪರದೇಶಿ ವಸ್ತುಗಳಿಲ್ಲದಿದ್ದರೆ ನಮ್ಮ ಯಾವ ಕೆಲಸಗಳೂ ನಡೆಯದ ಸ್ಥಿತಿಯಲ್ಲಿದ್ದೇವೆ. ಮೂವತ್ತೈದು ಕೋಟಿ ಜನಸಂಖ್ಯೆಯನ್ನು ಹೊತ್ತಿರುವ ಈ ವಿಶಾಲಭಾರತವು ಪರದೇಶೀಯರ ಸಾಮಾನುಗಳನ್ನು ಪಡೆಯುವುದಾದರೆ ನಮ್ಮ ಉದ್ಯೋಗವೆಲ್ಲಿ ಉಳಿಯಿತು? ಅಲ್ಲದೆ ವಿದೇಶಿಯರು ಉದ್ಯೋಗಹೊಂದಿ ಮೆರೆಯುವುದೇನಾಶ್ಚರ್ಯ? ಈ ದೆಶೆಯಿಂದ ನಿರುದ್ಯೋಗವು ನಮ್ಮ ದೇಶದಲ್ಲಿ ಹೆಚ್ಚಾಗುತ್ತಾ ಬಂದು ಈಗೀಗ ಪರಮಾವಧಿಗೆ ಬಂದಿರುತ್ತದೆ. ಇದಕ್ಕೆ ನಮ್ಮವರ ಅಸಡ್ಡೆಯೂ, ಕೂಟುಂಬ ಸ್ಥಿತಿಯೂ, ಸೋಮಾರಿತನವೂ, ಮುಖ್ಯ ಕಾರಣವೆಂದು ಹೇಳಬಹುದು. ಭಾರತದ ನಿರುದ್ಯೋಗದ ಸ್ಥಿತಿಗೆ ಭಾರತೀಯರನ್ನೇ ಯಾಕೆ ಕಾರಣರೆಂದು ಹೇಳಬಾರದು?

ಬಡ ಭಾರತದಲ್ಲಿ ಹೊಟ್ಟೆಗಿಲ್ಲದೆ ಸಾವಿರಾರು ಜನರು ಸಾಯುತ್ತಿರುವರಾದರೂ ಅವರಲ್ಲನೇಕರು ಹೊಟ್ಟೆಗೆ ಬೇಕಾದುದಕ್ಕಿಂತ ಅಧಿಕವಾಗಿ ತಿಂದು ಸಾಯುವವರೂ ಇದ್ದಾರೆ ಅದೇ ರೀತಿ ಸಂತೋಷದಿಂದ ಸಾಗಿಸುವ ಒಂದು ಕೆಲಸವಿರುವಾಗ ಹೆಚ್ಚಿನ ಮಹನೀಯರು ಜೊತೆಗೆ ಇನ್ನೂ ಅನೇಕ ತರದ ಉದ್ಯೋಗಗಳನ್ನು ವಹಿಸಿಕೊಳ್ಳುತ್ತಾರೆ. ಅಂದರೆ ಹಣಗಾರನಾಗಬೇಕೆಂಬ ಉದ್ದೇಶವೂ, ತಾನೊಬ್ಬ ಆಢ್ಯ ಮನುಷ್ಯನೆನಿಸಿಕೊಂಡಿರಬೇಕೆಂಬ ಕಾಂಕ್ಷೆಯೂ ಇರುತ್ತದೆ. ಇದರಿಂದ ಅನೇಕ ನಿರುದ್ಯೋಗಿಗಳು ತಲೆ ಎತ್ತುತ್ತಾರೆ. ಉದ್ಯೋಗ ಹೊಂದಿರುವ ಶ್ರೀಮಂತರು ನಾಜೂಕಾದ ವಿದೇಶಿ ವಸ್ತುಗಳನ್ನು ಹೊಂದಿ, ಅವುಗಳಲ್ಲೇ ತಲ್ಲೀನರಾಗುವರು. ಈಗಿನ ವ್ಯವಹಾರವೇ ವಿದೇಶೀ ಸ್ಥಿತಿಯಲ್ಲಿರುವುದರಿಂದ ಪರದೇಶೀ ಪೋಷಾಕಿನಲ್ಲೇ ಇದ್ದು ಪರದೇಶಿಯರೆಂದೆನ್ನುವ ಉಮೇದ್ವಾರಿಗಳಾಗಿರುತ್ತಾರೆ. ಹೆಚ್ಚಿನ ಹಣವನ್ನು ಪರದೇಶೀ ಪ್ರವಾಸದಲ್ಲಿಯೂ, ವಿಲಾಸಗಳಲ್ಲಿಯೂ ಸುರಿಸಿ ವಿದೇಶೀಯ ಬೊಕ್ಕಸವನ್ನು ತುಂಬಿಸುತ್ತಾರೆ. ಪಾಶ್ಚಿಮಾತ್ಯರ ನಕಲಿಯನ್ನು ಹೊಂದುತ್ತಿದ್ದಾರೆ. ಅಂದರೆ ಪಾಶ್ಚಿಮಾತ್ಯರೇ ಉತ್ತಮರೆಂಬ ಸ್ಥಿತಿಯಿರುವುದರಿಂದ ತಾವು ಜನರ ಆದರ ಸತ್ಕಾರಗಳಿಗೆ ಯೋಗ್ಯರೆಂದೆನ್ನಿಸಿಕೊಳ್ಳುವರು ಆದರೆ ಇದು ಹಣವೇ ಆ ರೀತಿ ಮಾಡುವುದೆಂದು ತಿಳಿಯಲಾಗದು. ಇದು ಭಾರತೀಯರಿಗೆ ಭೂಷಣವೆ? ಎಲ್ಲರೂ ಅದೇ ಸ್ಥಿತಿಯಲ್ಲಿರಲು ಸಾಧ್ಯವೇ? ಅಂತಹ ಸ್ಥಿತಿಯು ಈವತ್ತಿಗೆ ಬಂದಿದೆಯೆ? ಎಂಬುದನ್ನು ನೋಡಿಕೊಳ್ಳುವುದಿಲ್ಲ, ಇದರಿಂದ ಮತ್ತೂ ನಮ್ಮ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ಜಾಸ್ತಿಯಾಗಲು ಕಾರಣವಾಯಿತು

ಇನ್ನೂ ಅನೇಕ ಸಂಭಾವಿತರು ತಮ್ಮ ಐಶ್ವರ್ಯದ ಉದ್ಯೋಗದ ಶಕ್ತಿ ಪ್ರದರ್ಶನದಿಂದ ತಮ್ಮ ಮಕ್ಕಳು, ನೆಂಟರಿಷ್ಟರು ಇವರುಗಳಿಗೆನೇ ಉದ್ಯೋಗ ದೊರಕಿಸಿ ಕೊಡುವರು ಇದರಿಂದ ತಮ್ಮ ಕುಟುಂಬ ಮಾತ್ರವಲ್ಲದೆ ಸ್ವಸಮಾಜವೇ ಐಶ್ವರ್ಯವಂತರಾದ್ದಾಗುತ್ತದೆ ಒಂದೊಂದು ದೊಡ್ಡ ಕುಟುಂಬವನ್ನು ಸರ್ವ ವಿಲಾಸಗಳಿಂದ ನಡೆಸುವ ಉದ್ಯೋಗವು ಒಬ್ಬರಿಗಿರುವುದಾದರೂ ಪ್ರತೀ ಒಬ್ಬ ಮೆಂಬರರಿಗೆ ಉದ್ಯೋಗ ದೊರಕಿಸಿಕೊಟ್ಟರೆ ಅವರ ಶ್ರೀಮಂತತನದ ತುಲನೆ ಎಷ್ಟರ ವರೆಗಾಗುತ್ತದೆಂದು ಊಹಿಸಬಹುದು. ಇದರಿಂದ ಬಡ ಜನಾಂಗವು ಅಂದರೆ ಹೊಟ್ಟೆ ಪಾಡಿಗಾಗಿ ಕೆಲಸ ಮಾಡುವವರಿಗೆ ಕೆಲಸ ದೊರೆಯಲಾರದು ಆದುದರಿಂದ ಬಡ ಜನಾಂಗವು ಉದ್ಯೋಗ ರಹಿತ ಸ್ಥಿತಿಯಲ್ಲಿದ್ದು ಅವರನ್ನು ನಂಬಿಕೊಂಡ ಅಸಂಖ್ಯಾತ ಬಡ ಸಂಸಾರಗಳು ಉಪವಾಸವಿರಬೇಕಾಗುತ್ತದೆ. ಶ್ರೀಮಂತರ ಜನಾಂಗವೇ ಸರಕಾರವನ್ನು ನಡೆಸುತ್ತಿರುವುದರಿಂದ ಸರಕಾರದ ಸಹಾಯವೂ ಅವರ ಕೈಯಲ್ಲೇ ಬರುವುದು ಹೆಚ್ಚಲ್ಲ

ಇನ್ನು ಅನುಕೂಲವುಳ್ಳ ಶ್ರೀಮಂತರು ವ್ಯವಸಾಯ, ಕೈಗಾರಿಕೆಗಳಿಗಾಗಿ ಹಣವನ್ನು ವಿನಿಯೋಗಪಡಿಸಿ ಕ್ರಮೇಣ ತಮ್ಮ ಮೂಲ ಧನವನ್ನೂ, ಕಿಂಚಿತ್ ಲಾಭವನ್ನೂ ಪಡೆಯಬಹುದು. ಆದರೆ ಅವರಿಗೆ ಅದೆಲ್ಲಿ ಧಾರಾಳ ಬುದ್ಧಿಯು ಉತ್ಪನ್ನವಾಗಬೇಕು? ಶೀಘ್ರ ಸಮಯದಲ್ಲಿ ದುಬಾರಿ ಲಾಭ ಹೊಂದುವ ಮಿಲ್ಲು ಬೇಂಕ್, ವಿದೇಶೀ ಸಾಮಾನುಗಳ ಏಜನ್ಸಿ ಇವಕ್ಕನೇ ಹಣವು ಸುರಿದು ಒಂದಕ್ಕೆರಡು ಲಾಭವಾಗುತ್ತದೆ. ಸೂಕ್ಷ್ಮ ರೀತಿ ವಿಚಾರಿಸಿದರೆ ಇದೆಲ್ಲಾ ಪರದೇಶಿಯರ ಪ್ರಯೋಜನಕ್ಕೆ ಅನುಕೂಲವೇ ಹೊರತು, ಬಡ ಜನಾಂಗವಾದ ಭಾರತೀಯರಿಗೆ ಇದರಿಂದ ಏನೂ ಪ್ರಯೋಜನವಿರಲಾರದು. ಜನಸಾಮಾನ್ಯರ ಪ್ರಯೋಜನವನ್ನು ನೋಡಿಕೊಳ್ಳುವ ಶ್ರೀಮಂತರು ಬೆರಳೆಣಿಕೆಗೆ ದೊರಕುವರೋ ಇಲ್ಲವೊ ಎಂದು ಹೇಳಲು ಸಾಧ್ಯವಾಗಿರುತ್ತದೆ. ಹೆಚ್ಚಿನ ಶೀಘ್ರ ಲಾಭ ನಡೆಯುವ ಅಭಿಲಾಷೆಯಿರುವ ಶ್ರೀಮಂತರ ಹಣವು ವಿದೇಶೀ ಪಾಲು ಭಂಡವಾಳದಲ್ಲಿರುವುದರಿಂದ ಅದರ ಹೆಚ್ಚಿನ ಲಾಭವು ವಿದೇಶೀಯರಿಗೆ ದೊರೆತು ಅಲ್ಲಿ ಅವರಿಗೆ ಉದ್ಯೋಗಕ್ಕೆ ಅನುಕೂಲವಾಗಿ ಆ ಹೇತುವಿನಿಂದ ನಮ್ಮಲ್ಲಿ ಮತ್ತೂ ಹೆಚ್ಚಿನ ನಿರುದ್ಯೋಗಕ್ಕೆ ಕಾರಣವಾಯಿತು. ಅಲ್ಲದೆ ಇನ್ನೂ ಕಾರಣವಾಗುತ್ತಲೇ ಇದೆ. ಇವು ಎಂದಿಗೆ ಸುಧಾರಣೆ ಸ್ಥಿತಿಗೆ ಬರುವುದು?

ಮಿಲ್ಲುಗಳ ವಿಚಾರವಾದರೋ ಪ್ರತ್ಯೇಕವಾಗಿರುತ್ತವೆ. ಅವುಗಳಲ್ಲಿ ಸಾವಿರಗಟ್ಟಲೆ ಜನರಿಗೆ ಉದ್ಯೋಗ ದೊರಕುವುದಾದರೂ, ಅಂಥಾ ಸಾವಿರಾರು ಜನರ ಕೆಲಸಗಳು ಹಳ್ಳಿಮೂಲೆಗಳಲ್ಲಿರುವ ಲಕ್ಷಾಂತರ ಜನರು ನಿರುದ್ಯೋಗ ಸ್ಥಿತಿಯಲ್ಲಿರುವರು. ಶ್ರೀಮಂತರ ಸ್ವಭಾವದಂತೆ ಮಿಲ್ಲುಗಳಲ್ಲಿ ಕೆಲಸಮಾಡುವ ಕೂಲಿಗಳಿಗೆ ಸರಿಯಾದ ಮಜೂರಿ ಸಿಕ್ಕದೆ ಹಲವು ಸಲ ಮಾಲಿಕರಿಗೂ ಕೂಲಿಗಳಿಗೂ ವೈಮನಸ್ಸುಗಳುಂಟಾಗುವ ಸ್ಥಿತಿಗಳೂ ಬರುತ್ತವೆ. ಅಂದರೆ ಕೂಲಿಗಳು ಮಾಡುವ ಪ್ರತೀ ಒಂದು ರೂಪಾಯಿಯ ಕೆಲಸವು ಯಜಮಾನನಿಗೆ ಎರಡಾಣೆಯಲ್ಲಿ ಸಿಕ್ಕುವಂತಿದೆ. ಯಜಮಾನನ ಬೊಕ್ಕಸವು ಇದರಿಂದ ಬಹು ಬೇಗನೇ ತುಂಬುತ್ತದೆ. ಮಿಲ್ಲುಗಳ ಕೂಲಿಯು ದಿನ ೧ಕ್ಕೆ ೮ ವ ೧೦ ಆಣೆ ಹೊಂದುವನಾದರೂ ಅವನ ಹಿಂದುಗಡೆ ನಾಲ್ಕೈದು ಜನರ ಕುಟುಂಬವನ್ನು ಪೋಷಿಸುವ ಭಾರವನ್ನು ಹೊತ್ತಿರುತ್ತಾನೆ. ಅವನೊಬ್ಬನ ಹೊಟ್ಟೆಗೆ ಸಾಕಾಗುವುದಾದರೂ ಬಾಕಿಯವರ ಹೊಟ್ಟೆ ತಣಿಸುವ ಸ್ಥಿತಿಯಲ್ಲಿರಲಾರದು. ಇದರಿಂದ ನೌಕರಿ ಇದ್ದು ಪ್ರಯೋಜನವೇನು?

ಪೈಪೋಟಿಗಳಿಂದ ಮಿಲ್ಲುಗಳ ಮಾಲಿಕರು ಕೋಟಿಗಟ್ಟಲೆ ಹಣವನ್ನು ಕಳಕೊಳ್ಳುವರಾದರೂ ಕಷ್ಟಪಟ್ಟು ದುಡಿಯುವ ಕೂಲಿಗಳಿಗೆ ಸರಿಯಾದ ಮಜೂರಿಯನ್ನು ಕೊಡುವುದಿಲ್ಲ ಅಲ್ಲದೆ ೩, ೪ ಜನರು ಮಾಡುವ ಕೆಲಸವನ್ನು ಹೆಚ್ಚು ಸಮಯದಲ್ಲಿ ಒಬ್ಬನಿಂದಲೇ ಮಾಡಿಸಿ ಕಟ್ಟರೆಲ್ಲಾ ಕತ್ತರಿ ಪ್ರಯೋಗ ಮಾಡುತ್ತಾರೆ ಹೊಟ್ಟೆ ಪಾಡಿಗಾಗಿ ಕೆಲಸ ಮಾಡುವ ಕೂಲಿಗಳು ಅದನ್ನು ಸಹಿಸಿಕೊಳ್ಳದೆ ಉಪಾಯವಿರುವುದಿಲ್ಲ. ಹೀಗಿದೆ ಈಗಿನ ಪ್ರಪಂಚ ಸ್ಥಿತಿಗಳು

ಮಿಲ್ಲುಗಳ ದೆಸೆಯಿಂದ ಈ ರೀತಿ ಕತ್ತರಿ ಪ್ರಯೋಗಗಳು ನಡೆಯುತ್ತಿವೆ ಮಾತ್ರವಲ್ಲದೆ ಹಳ್ಳಿಗಳಲ್ಲಿರುವ ಕೈಮಗ್ಗಗಳು ನಾಮಾವಶೇಷವಾಗುತ್ತಾ ಬರುತ್ತಿವೆ. ಮಿಲ್ಲು ವಸ್ತ್ರಗಳ ಪೈಪೋಟಿನಿಂದ ಊರ ಕೈಮಗ್ಗಗಳ ವಸ್ತ್ರಗಳು ಗಿರಾಕಿಗಳಿಗೆ ಬೇಡವಾಗಿವೆ. ಅಂದರೆ ಅಗ್ಗವಾದದ್ದು ಯಾವದುಂಟು ಎಂಬುದನ್ನು ನೋಡಿಕೊಳ್ಳುತ್ತಾರಲ್ಲದೆ ಅದರಿಂದ ಎಷ್ಟರ ಮಟ್ಟಿಗೆ ನಷ್ಟವುಂಟೆಂಬುದನ್ನು ನೋಡಿಕೊಳ್ಳುವುದಿಲ್ಲ. ಮಿಲ್ಲುಗಳ ದೆಸೆಗಳಿಂದ ಸಾವಿರಾರು ಕೈಮಗ್ಗಗಳೇ ನಾಶವಾಗಿ ಅವುಗಳಲ್ಲಿ ಕೆಲಸಮಾಡುವ ಲಕ್ಷಗಟ್ಟಳೆ ಜನರು ನಿರುದ್ಯೋಗಿಗಳಾಗಿರುವರು. ಈ ಸ್ಥಿತಿಗಳು ತಿಳಿದೂ, ತಿಳಿಯದಂತೆ ವರ್ತಿಸುವ ಈಗಿನ ಆಢ್ಯ ಮನುಷ್ಯರಿಗೆ ಏನನ್ನ ಬೇಕೋ ತಿಳಿಯದು. ಇದರಿಂದ ಹಣವಾದರೋ ಚಿನ್ನದ ರೂಪದಿಂದ ಪ್ರತೀ ದಿನ ವಿದೇಶಿಗಳಿಗೆ ಸಾಗುತ್ತಲೇ ಇರುತ್ತದೆ. ಇವು ನಮ್ಮ ದೇಶದಲ್ಲೇ ನಿಲ್ಲುವ ಕಾಲವು ಎಂದಿಗೆ ಬರುತ್ತದೆ?

ಪರದಾಸ್ಯದ ತವರು ಮನೆಯಾಗಿರುವ ನಮ್ಮ ಭಾರತದಲ್ಲಿ ಯಾವದೊಂದು ಸ್ವತಂತ್ರತೆಯ ಉದ್ಯೋಗವನ್ನು ಮಾಡಲು ಎಡೆಯಿಲ್ಲ. ಮಾಡಿದರೂ ಪ್ರೋತ್ಸಾಹ ದೊರಕುವುದಿಲ್ಲ. ಖಾದಿ ಸಾಮಾನು, ಬೆಂಕಿಪೆಟ್ಟಿಗೆ ಇತ್ಯಾದಿಗಳು ನಮ್ಮ ಬಡಸಂಸಾರಗಳಿಂದ ಮಾಡಲ್ಪಡುವುದಾದರೂ ಅದಕ್ಕೆ ತಳಸರ ಪ್ರೋತ್ಸಾಹವಿರುವುದಿಲ್ಲ. ಆಗಲೇ ಸಾಬೂನು ಮತ್ತು ಬೆಂಕಿ ಪೆಟ್ಟಿಗೆಗಳಿಗೆ ಹೆಚ್ಚಿನ ತೆರಿಗೆ ಹೊರಿಸಿರುವುದರಿಂದ ಅವು ಕ್ರಮೇಣ ಕಮ್ಮಿಯಾಗುತ್ತಲೇ ಬಂದು ಹೆಚ್ಚಿನ ಜನರು ಅದನ್ನು ನಂಬಿ ಮೋಸಹೋಗುವ ಸ್ಥಿತಿಗೆ ಬಂದಿರುತ್ತಾರೆ. ಖಾದಿಯೇನೋ ಅಲ್ಪ ಸ್ವಲ್ಪ ಸುಧಾರಿಸುವುದಾದರೂ ನಮ್ಮವರ ಪ್ರೋತ್ಸಾಹವೇ ದಿನಹೋದಷ್ಟಕ್ಕೆ ಕಮ್ಮಿಯಾಗುತ್ತಾ ಬರುತ್ತಿದೆ. ಮುಂಚೆ ಅದನ್ನು ಧರಿಸುತ್ತಿದ್ದವರು ಈಗೀಗ ಬಿಡುತ್ತಾ ಬರುವರು ಮಾತ್ರವಲ್ಲ ಬಾಕಿಯವರನ್ನು ಧರಿಸದಂತೆ ಮಾಡುವರು. ಅಲ್ಲದೆ ಹಾಕಿಕೊಳ್ಳುವವರಿಗೆ ಕುಚೇಷ್ಟೆ ಕೂಡಾ ಮಾಡಲು ಹೇಸುವುದಿಲ್ಲ. ಹೀಗಾದರೆ ನಮ್ಮ ಏಳ್ಗೆಯಾಗುವುದು ಎಂದು?

ಎಷ್ಟೋ ಬಡ ಸಂಸಾರಗಳು ನಿರುದ್ಯೋಗದಿಂದ ಪರಿತಪಿಸುವುದನ್ನು ಕಂಡು ಮಹಾತ್ಮಾಜೀಯವರು ಒಬ್ಬೊಬ್ಬರಿಗೆ ಒಂದೊಂದು ಹಿಡಿ ಅನ್ನವನ್ನಾದರೂ ಕೊಡುವ ಎಂದು ಅಖಿಲ ಭಾರತ ಚರಕ ಸಂಘವೆಂದು ಮಾಡಿ ಅದರ ಮುಖಾಂತರ ಸಾವಿರಾರು ಜನರಿಗೆ ಒಂದೊಂದು ಹೊತ್ತು ಊಟಮಾಡಲು ಬಾಕಿ ಅನುಕೂಲವಿರುವ ಭಾರತೀಯರಾದ ನಾವು ಅವರು ಶ್ರಮಪಟ್ಟು ಮಾಡುವ ಖಾದಿಯನ್ನು ಧರಿಸಿದರೆ ಮಾತ್ರ ಸಾಧ್ಯವಾಗುವುದು. ಹಾಗೆ ನಾವು ಖಾದಿಯನ್ನು ಸ್ವಲ್ಪ ಹಣ ಜಾಸ್ತಿ ಕೊಟ್ಟಾದರೂ ಪಡೆದಲ್ಲಿ ಎಷ್ಟೋ ನಿರುದ್ಯೋಗಿಗಳಿಗೆ ಕೆಲಸ ಕೊಟ್ಟಂತಾಗುವುದು. ಮಾತ್ರವಲ್ಲ ಅವರಿಗೆ ಸಿಕ್ಕುವ ಪ್ರತೀ ಒಂದು ತುತ್ತು ಅನ್ನವು ನಾವು ಕೊಟ್ಟ ದಾನಧರ್ಮವಾಗುವುದು. ಆದುದರಿಂದ ಇನ್ನಾದರೂ ಖಾದಿಗೆ ಹೆಚ್ಚಿನ ಪ್ರೋತ್ಸಾಹ ಸಿಗುವುದೆಂದು ಆಶಿಸಬಹುದೇ? ಅಭಿಮಾನವಿರುವ ಪ್ರತೀ ಒಬ್ಬ ಭಾರತೀಯನಿಗೆ ಖಾದಿ ಧರಿಸುವುದು ಭೂಷಣವಲ್ಲವೆ? ಅದೊಂದು ಸ್ವತಂತ್ರತೆಯ ಚಿಹ್ನೆಯಲ್ಲವೇ?

ನಿರುದ್ಯೋಗ ಸಮಸ್ಯೆಯನ್ನು ಯಾವ ರೀತಿಯಲ್ಲಾದರೂ ಬಗೆಹರಿಸಬೇಕಾದರೆ ದೇಶಕ್ಕೆ ಸ್ವಾತಂತ್ರ್ಯ ಸಿಗದೆ ಸಾಧ್ಯವಾಗಲಾರದು ಸ್ವಾತಂತ್ರ್ಯ ಸಿಕ್ಕಿದರೂ ಒಂದೇ ಸಲ ನಿರುದ್ಯೋಗ ಸಮಸ್ಯೆಯು ಬಗೆ ಹರಿಯಲಾರದು. ಸ್ವದೇಶ ಪ್ರೇಮ, ಸ್ವದೇಶಿ ವಸ್ತುಗಳ ಪ್ರೋತ್ಸಾಹ ಸಂಘಟನೆ ಇವು ವೃದ್ಧಿ ಹೊಂದಿದಂತೆ ಕ್ರಮೇಣ ಸುಲಭವಾಗಬಹುದು. ಸ್ವಾರ್ಥತ್ಯಾಗೀ ಧುರೀಣರು ಮುಂದಕ್ಕೆ ಬರಬೇಕು. ಶ್ರೀಮಂತ ಜನಾಂಗದ ಹಣಕ್ಕೆ ಭದ್ರತೆ ದೊರಕಬೇಕು. ಅಂಥಾ ಹಣವು ದೇಶದಲ್ಲೇ ವಿನಿಯೋಗವಾಗಬೇಕು. ವಿವಿಧ ಕೋಮುಗಳಿಂದ ತುಂಬಿರುವ ಭಾರತದ ಧುರೀಣರು ಪರಸ್ಪರ ಅನ್ಯೋನ್ಯರಾಗಬೇಕು. ಒಂದೇ ಅಭಿಪ್ರಾಯವು ನೆಲೆನಿಲ್ಲಬೇಕು. ಕೈಗಾರಿಕೆ, ವ್ಯಾಪಾರ, ವ್ಯವಸಾಯ ಇವೆಲ್ಲಾ ಸ್ವದೇಶದ್ದೇ ಆಗಿದ್ದು ಜನರಿಗೆ ಅವುಗಳಲ್ಲಿ ಆಕರ್ಷಣವಿರಬೇಕು. ಬಡವ ಬಲ್ಲವರಿಗೆ ಸರಿಸಮಾನ ಹಕ್ಕಿರಬೇಕು. ವಿದ್ಯಾಪ್ರಚಾರವಾಗಬೇಕು. ಗಂಡಸರಿಗೂ, ಹೆಂಗಸರಿಗೂ ಬೇಕಾದ ಒಳ್ಳೆ ವಿದ್ಯೆಗಳು ದೊರಕಬೇಕು. ಹೀಗಾದರೆ ಮತ್ತೆ ಭಾರತಮಾತೆಯು ತೇಜಸ್ಸಿನಿಂದ ಮೆರೆಯುವುದರಲ್ಲಿ ಸಂದೇಹವಿಲ್ಲ. ಅಂತೇ ಆಗಲೆಂದು ಭಾರತ ಜನಾಂಗದೊಡನೆ ವಿನಯಪೂರ್ವಕ ವಂದನೆ

N.I.P.
Petral (Ready Delivery)
Kerosene & Diesel Oils.
FOR RATES AND AGENCY TERMS APPLY
International Oil Co Ltd
JIJI HOUSE RAVELIN STREET FORT BOMBAY.

ಸರಕಾರದವರಿಂದ ಅಚ್ಚಿನ ಛಾಪಿಸಲ್ಪಟ್ಟ ಪ್ರಸಿದ್ಧವಾದ

ಸ್ಥಾಪನಾ 1909

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಿಫಾ ಅಥವಾ ಆರೋಗ್ಯಬಿಂದು.

ಪ್ರವಾಸಮಿತ್ರ ಮೂರ್ತಿಮಂತವೈದ್ಯ

ರೋಗದ ನಾಮಗಳು – ಕ್ಷಯ ರೋಗ, ದಾಣಂತಿರೋಗ ಹಡೆದ ನಂಜು, ದಮ್ಮು ಅಡಗ್ಗೆ ಕಾಲರಾ, (ಮಾರಿಕಾ,) ಪ್ಲೇಗು ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮಲ ರೋಗ, ಗಂಡುಮಾಲೆ, ನಾರಹುಣ್ಣು, ಶಸ್ತ್ರಘಾಯ, ಶಿವಶೂಲೆ, ಮೂಗಿನೊಳಗಿನ ಪಿನಸ ಮೊದಲಾದುವುಗಳು, ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ, ಹೊಟ್ಟೆ ಶೂಲೆ, ಸಣ್ಣ ಕೂಸುಗಳಿಗೆ ಆದ ರೋಗಗಳ ಅರಿವು, ಮುಟ್ಟುದೋಷ ಹೊಟ್ಟೆಯೊಳ್ದರ್ದಾಗೋಣ ಕೋಡಗೆದ್ದು ಮೈ ಹೊರಬೀಳೋಣ, ದುತ್ತ ಡಾಕ್ಟರರಿಗೂ ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣಬರುವುದು ಅನೇಕ ರೋಗಗಳಿಗೆ ಒಂದೇ ಔಷಧವೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು ಅಂಥವರು ಒಂದು ಸಾರಿ ತಂದು ಮಾಡಬೇಕು ಸ್ಥಾಪನಾ ಅಂದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತವೆ ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ ಇದೀ ಕರ್ನಾಟಕದಲ್ಲೆಲ್ಲಾ ಹೋಗುತ್ತವೆ

೧। ತೊಲೆ ಬಾಟ್ಲಿ ಒಂದಕ್ಕೆ ರೂ ೨ ... ಉದ್ದೇಶಿ ... ತರಹದ ಬಾಟ್ಲಿ ಒಂದಕ್ಕೆ ... ಚಿಕ್ಕ ಬಾಟ್ಲಿ ಒಂದೇ ಸಾರಿ ... ಡಜನ ತರಿಸಿಕೊಳ್ಳುವವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು ಟಪ್ಪಾಲ ಖರ್ಚು ಹೆಚ್ಚು ಆದ ಕಾರಣ ಈ ಪ್ರಕಾರ ವ್ಯವಸ್ಥೆ ಮಾಡಿದೆ ಟಪ್ಪಾಲ ಖರ್ಚು ೧೧ ಆಣೆ. ೧। ತೊಲೆ ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು ಟಪ್ಪಾಲ ಖರ್ಚು ೧೧ ಆಣೆ ಬೀಳುವುದು ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ – ಸಣ್ಣ ಬಾಟ್ಲಿ ಒಂದೇ ಬೇಕಿದ್ದರೆ ... ಟಪ್ಪಾಲ ಖರ್ಚು ೮ ಆಣೆ ಬರುವುದು ಕಷಿಷ್ಟ ಪಕ್ಷಕ್ಕೆ ಎರಡು ರೂಪಾಯಿಯ ಔಷಧ ತರಿಸಿಕೊಂಡರೆ ಕಳಿಸುತ್ತೇವೆ ... ಖರ್ಚು ೮ ಆಣೆ ಬೀಳುವುದು.

ತಿಳಿಸಿಕೊಳ್ಳುವ ಪ್ರಮಾಣ—ಅನುಭವ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು ... ಕೂಡ ಕಳಿಸುವೆವು ಔಷಧವು ವಿಟ್ಟಿಯಾಗಿ ಹೊರಟರೆ ಉಳಿದ ಬಾಟ್ಲಿ ಪರತ ತೆಗೆದುಕೊಂಡು ಹಣ ತಿರುಗಿ ಕೊಡುವೆವು ಬೇಕಾದವರು ತಮ್ಮ ವಿಳಾಸ ಕನ್ನಡ ಮರಾಠಿ ಇಂಗ್ಲೀಷ ಗಳಲ್ಲಿ ಸ್ಪಷ್ಟ ಬರೆಯಬೇಕು. ತಮ್ಮ ಹೆಸರು ತಂದೆಯ ಹೆಸರು ... ಪೋಸ್ಟಾಫೀಸು ... ಜಿಲ್ಲಾ ಸ್ಟೇಟು ಎಲ್ಲಾ ಖುಲಾಸ ಬರೆಯಬೇಕು

ನಮ್ಮ ವಿಳಾಸ – ಎಚ್. ಎಂ ಮುಲ್ಲಾ, ಸಂಪಾದಕ ಅರ್ಕಶಿಫಾ ಹೆಡ್ ಆಫೀಸು ಪೊ ಶಹಾಪೂರ [ಬೆಳಗಾವಿ]

New Era Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ)

ಇಲ್ಲಿ ಟ್ಯಾಯ್‌ಪ್‌ರ್ಯಾಟಿಂಗ್ ಮೊದಲಾದ ಕಮರ್ಶಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment

Details may be had on application to the Manager

ಡಾಕ್ಟರ ವಾಮನ ಗೋಪಾಳರವರ

ಬಿಹಿಡಾಯಿಜ್ಡ ಸಾರ್ಸಪರಿಲಾ

ಕೆಟ್ಟ ರಕ್ತಕ್ಕೆ ಪರಮೌಷಧ

೪೫ ವರ್ಷದ ಅನುಭವ

ಉಪಯೋಗಿಸಿದವರೇ ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ

ಫೊಸ್ಫರಸ್ ಗುಳಿಗೆಗಳು

ಅಶಕ್ತತೆ ದುಬಾರಿ

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ ಮುಂಬಾಯಿ ೨

ಸ್ಟೋಕಿಸ್ಟ– ... ಮಂಗಳೂರು

(ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ)

ಜುಬಿಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಸ್

ಮಡಿಕೇರಿಗುಡ್ಡೆ, ಮಂಗಳೂರು

ನಮ್ಮ ಕಾರ್ಖಾನೆಯಲ್ಲಿ ನಿಮ್ಮ ಚುನಾವಣೆಗೆ ಬೇಕಾಗುವ ಖಾತ್ರಿ ಒಳ್ಳೇದ ನಮೂನೆವಾರ ಶೀರೆಗಳೂ, ದೋತಿಗಳೂ, ಟುವಾಲುಗಳೂ, ಚಾದರು– ವಲ್ಲಿಗಳೂ, ಕೋಟಿಂಗ್ ಮತ್ತು ಶರ್ಟಿಂಗ್ ಇತ್ಯಾದಿ ಎಲ್ಲಾ ಬಗೆಯ ಮಹಾಲು ತಯ್ಯಾರು ಆಗುತ್ತವೆ ಸಿಲ್ಕು ಶೀರೆಗಳೂ, ಸಿಲ್ಕು ಕೋಟಿಂಗುಗಳೂ ನಮ್ಮಲ್ಲಿ ಚಲೋವಾಗಿ ತಯ್ಯಾರು ಆಗುತ್ತದ ನಿಮಗೆ ಬೇಕಾಗುವ ಯಾವ ತರದ ಜವಳಿಯನ್ನೂ ಮಾಫಕ ದರದಲ್ಲಿ ಒದಗಿಸಿಕೊಡಬಹುದು

ಎಲ್ಲಾ ಜವಳಿ ಬೆಲೆಗೆ ಮೀರಿ! ಬಣ್ಣದಲ್ಲಿ ಪವನು! ಬಾಳಿಕೆಯಲ್ಲಿ ಪವನು!

ಸ್ವತಹಾ ಖರೀದಿಸಿ ಖಾತ್ರಿಮಾಡಿಕೊಳ್ಳಿರಿ

ನಮ್ಮ ಮಹಾಲನ್ನು ರಥಬೀದಿಯಲ್ಲಿರುವ ಸಾಹುಕಾರ ರಾಘವೇಂದ್ರ ರಂಗ ಶೈಯವರಲ್ಲಿ ಬಂದು ನೋಡಿಕೊಳ್ಳಿರಿ.

ಜುಂ. ವೆಂಕಟೇಶ ರಂಗ ಶೈ, ಪ್ರೊಪ್ರೈಟರ್.

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ

ಕಸ್ತೂರಿ ಬಂಗಾರ ಮಿಶ್ರಿತವಾದುದು

ರಕ್ತ ವೃದ್ಧಿಯನ್ನೂ ಧಾತುವೃದ್ಧಿಯನ್ನೂ ಉಂಟುಮಾಡಿ ಮಾನಸಿಕ ಶಕ್ತಿಯನ್ನು ಹೆಚ್ಚಿಸಿ ಸುಖನಿದ್ರೆ ಕೊಡುವುದು.

ಡಬ್ಬಿ 1ಕ್ಕೆ ರೂ. 3—0 -0.

ಚವನ ಪ್ರಾಶ್ಯ

ಇದು ಅತ್ಯಂತ ಶಕ್ತಿವರ್ಧಕ ರಸಾಯನ ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ ಪೌಂಡು 1ಕ್ಕೆ ರೂ 2-8-0. ½ಕ್ಕೆ ರೂ 1 5-0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ

ಬಾಟ್ಲಿ 1ಕ್ಕೆ ರೂ 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಫ್ಲುಯೆಂಜಾ, ನಿಮೋನಿಯಾ ಮೊದಲಾದ ಜ್ವರಗಳಿಗೆ ದಿವ್ಯೌಷಧ.

ಬಾಟ್ಲಿ 1ಕ್ಕೆ ರೂ 1 – 8 – 0

ಮೇಹಕುಠಾರ

20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8- 0

ದಂತ ಕಾಂತಿ ಚೂರ್ಣ

ಆಗಾಗ ಹಲ್ಲು ನೋವು ಆಗುವುದು, ವಸಡುಗಳು ಬಾತುಕೊಳ್ಳುವುದು ಹಲ್ಲಿನಿಂದ ಕೀವು ವ ರಕ್ತ ಬರುವುದನ್ನು ನಿಲ್ಲಿಸಿ ಹಲ್ಲುಗಳನ್ನು ಶುಭ್ರಪಡಿಸುವುದು—

ಡಬ್ಬಿ 1ಕ್ಕೆ ರೂ. 0-2-6. 12ಕ್ಕೆ ರೂ 1-12-0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು.

ನಮ್ಮ ಔಷಧಿ ಸಿಕ್ಕುವ ಸ್ಥಳ:

1 ಡಾಕ್ಟರ್ ಬಿ. ಎಚ್. ಪದ್ಮನಾಭ ಶೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು. 4 ವಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.

ESTD. 1906.

The Canara Banking Corporation Udipi Ltd.

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

The First Indigenous & Cosmopolitan Bank of S. K. District.

Capital Authorised, issued & Subscribed	Rs.	3,50,000	0	0
Paid up Capital	„	2,87 585	0	0
Reserves	„	3,70,106	0	0

29-4-1936

FIXED DEPOSITS UP TO 5%

Head office:—UDIPI, S. K

Branches:—1 Udipi, 2 Coondapoor, 3 Car Street, Mangalore, 4. Shimoga, 5. Madras 6. Bunder Mangalore, 7 Mercara & 8 Virarajendrapet.

THE BOMBAY LIFE ASSURANCE COMPANY, LIMITED.

KOCHIKAR BROTHERS, Madras Branch Secretaries and Chief Agents for Bombay City & Suburbs

ANNOUNCEMENT:—We have the pleasure to inform all our Constituents, Agents and Policy-holders that we have taken up a Newly Erected Bungalow "Soumyalayam" in Puthiyara on the Taluq Office Road opposite Puthiyara Post Office and are opening our Calicut Branch Office in the said Building on 14—8—1936 The present Office of Mr C Sankaran Nair our Malabar District Agent, situated in Huzur Road, will cease to exist and will merge in our New Branch Office This has been necessitated by the vast expansion of our business in Malabar and the adjacent districts, as the New Premises are very well situated and more spacious and thus we hope to render better service to our Policyholders Our patrons and well wishers are requested to pay a visit to the "Soumyalayam at their early convenience All correspondence and remittances and cheques should be addressed to

Messrs **KOCHIKAR BROTHERS,**
Bombay Life Office, Puthiyara Post (Calicut—Malabar)

We have also registered our telegraphic address as "Kochikar—Calicut" for the convenience of our constituents

ಪ್ರಕಟಣೆ-ಸದರಿ ಭಿಮಾ ಕಂಪೆನಿಯು ತನ್ನ ಏಜಂಟರಿಗೂ, ಪೋಲಿಸಿದಾರರಿಗೂ ಈ ಮೂಲಕ ತಿಳಿಯುಪಡಿಸುವದೇನೆಂದರೆ—ತಾ 14 8-36ರಿಂದ ಕಲ್ಲಿಕೋಟೆಯಲ್ಲಿರುವ ನಮ್ಮ ಮಲಬಾರ ಡಿಸ್ಟ್ರಿಕ್ಟ್ ಏಜಂಟರಾದ ಮಿ। ಸಿ ಶಂಕರನಾಯರ್ ರವರ ಹಜೂರ ರಸ್ತೆಯ ಬಳಿ ಇರುವ ಆಫೀಸನ್ನು ಪುತಿಯಾರ ಪೋಸ್ಟು ಆಫೀಸಿನ ಎದುರಿರುವ ಹೊಸತಾಗಿ ಕಟ್ಟಿಸಿದ ದಿವ್ಯವಾದ ಸೌಮ್ಯಾಲಯಮ್ ಎಂಬ ಬಂಗ್ಲೆಯಲ್ಲಿ ತೆರೆಯೋಣಾಗುವುದು ಇನ್ನು ಮುಂದೆ/ಸಂಬಂಧಪಟ್ಟ ಲಿಖಿತಪತ್ರಗಳನ್ನು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು

ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್,
ಬೊಂಬೈ ಲೈಫ್ ಆಫೀಸ್, ಪುತಿಯಾರಾ ಪೋಸ್ಟು, (ಕಲ್ಲಿಕೋಟೆ ಮಲಬಾರು)

ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ತಂತಿಯ ವಿಳಾಸವನ್ನು ಕೊಚ್ಚಿಕಾರ—ಕಲ್ಲಿಕೋಟೆ ಎಂಬುದಾಗಿ ಮಾಡಿದೆ

Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ ಭುಜ, ಹಲ್ಲು ವೇದನೆಗಳಿಗೂ ಎದೆನೋವು ಶ್ವಾಸ ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ. ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ 5 ವರ್ಷಗಳ ಮೌಲ್ಯವೇತನದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ. ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

ವಾರ್ಷಿಕ ಚಂದಾ ೩ ರೂಪಾಯಿ
ಬಿಡಿ ಸಂಚಿಕೆಗೆ ಒಂದಾಣೆ.

Regd. No. M. 8406

ಟಪ್ಪಾಲು ಹಾಸಲು ಸೇರಿ ರೂ.3-13-0

P
for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR—
RAMA SNUFF
The charm of Snuff Users!

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in the
THE BOMBAY LIFE
Mad... Branch Secretaries
Kochikar Brothers,
Udipi Mangalore Bangalore Madras Bombay ...

ESTABLISHED 1906

(ಕೀರ್ತಿಶೇಷ ಪಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥
ದೊರೆಯಲನುಪಮರತ್ನಗಳ್ ಸಾ । ಗರವ ಮಥಿಸಲು ಸುರರಿಗದರಿಂ ಹರುಷವಾಯಿತೆ ಮತ್ತೆ ವಿಷದ ಸುಡುಕ ಬರುತಿರುವ ॥
ಗರಲಕವರಂಜದರೆ ಸುಧೆಯನ । ಪಡೆದು ... ದರ ತೆರದಿ ಕೃಶಿತರೆ, ತೆರಳ ಬಲ್ಲರೆ ತೋರಿದ ಧೀರರು ನಿಶ್ಚಿತಾರ್ಥವನು ॥

ಪುಸ್ತಕ ೩೦. | ಮಂಗಳೂರು ತಾ. ೨೨ನೇ ಶುಕ್ರವಾರ ಮೇ ೧೯೩೬ (22-5-'36) | ಸಂಚಿಕೆ ೨೦

ಶ್ರೀ। ಜೆ. ಸಿ. ಕುಮಾರಪ್ಪನವರು
ಅಖಿಲಭಾರತ ಹಳ್ಳಿ ಕೈಗಾರಿಕಾ ಸಂಘದ
ಕಾರ್ಯದರ್ಶಿಯವರು

ಶ್ರೀಯುತ ಎಮ್. ಆರ್. ಮಸಾನಿ
ಸೋಶಿಯಲಿಷ್ಟ್ ಲೀಡರ್

ಬುದ್ಧನ ಜನ್ಮದಿನಾಚರಣೆಯ ದಿನ
ಟೋಕಿಯೋ ಪ್ರಾಂತದಲ್ಲಿ ಮಿಸ್ ಹಂಕೊ ಎಂಬ ಆನೆಯು ತನ್ನ ಸಂಬಂಧಿಕರ
ಗೋರಿಯ ಬಳಿ ಬಂದು ಆದರಪೂರ್ವಕ ವಂದಿಸುವ ದೃಶ್ಯ

ಟಿಪ್ಪಣಿಗಳು
NOTES.

ಹಳ್ಳಿ, ಬೇಸಾಯ, ಜಾನುವಾರುಗಳು, ಒಕ್ಕಲಿಗಾರಿಕೆ ಇವುಗಳ ಕಡೆಗೆ ಎಲ್ಲರೂ ಕಣ್ಣು ರುಗಿಸುವ ಹಾಗೆ ನಮ್ಮ ವೈಸ್ರಾಯರು ಈಗ ಾಡಿರುವುದು ಸ್ತುತ್ಯವಾಗಿದೆ. "ಭೂಮಿ ಯನ್ನು ನೋಡಿಕೊಳ್ಳಿರಿ!" ಎಂದು ಇದು ರೆಗೆ ಆಕಾಶದ ಕಡೆಗೆ ಕಣ್ಣಿಟ್ಟು ನಿರಾಶಾರಾಗಿ ವರಿಗೆ ಎಲ್ಲ ಮುಖಂಡರೂ ಬೋಧಿಸುತ್ತಿ ಾರೆ.

o o o o

"ಹುಟ್ಟಿದರೂ ಭೂಮಿಯಲ್ಲಿ; ಕೊನೆಗೆ ಹನವೋ, ದಫನವೋ ಭೂಮಿಯಲ್ಲಿ. ಡುವೆ ಮಾತ್ರ ಈ ಆಕಾಶ ರಾಜ್ಯದ ಹಂಬಲ ೀಡ. ಮಣ್ಣಲ್ಲಿ ಹುಟ್ಟಿ, ಮಣ್ಣಲ್ಲಿ ಬೆಳೆದು ಣ್ಣಾಗತಕ್ಕವನು ಮನುಷ್ಯನು" ಎಂದು, ಂಗಾಳ ಹಣಮಾಡಿದ ಸಂಸ್ಕೃತ್ತರೂ, ಕಾಸೂ ಲ್ಲದೆ ಸೋತು ಕುಂಟ ಸಂತಪ್ತರೂ ಆಗಿರುವ ಲ್ಲರೂ ಇತರರಿಗೆ ತತ್ವಜ್ಞಾನ ಬೋಧಿಸು ದ್ದಾರೆ.

o o o o

"ಕುರಿಯಂತೆ ಒಂದನ್ನೊಂದು ಹಿಂಬಾಲಿ ಯೆ ಎಲ್ಲರೂ ಗುರಿಯಿಲ್ಲದೆ ಹಾಳಾಗುವ ನ್ನಾಂಗ ನಮ್ಮದು" ಎಂದೂ "ಬೀಡಿ ಅಂಗಡಿ ತೆರೆದರೂ ಒಬ್ಬ ಗುಮಾಸ್ತನ (ಹಜೂರು) ಸಂಬ ಳಕ್ಕಿಂತ ಹೆಚ್ಚಿಗೆ ದುಡಿಯಬಹುದೆಂದು ನೀವು ತಿಳಿದಿಲ್ಲ" ಎಂದು ತಮ್ಮ ಸುಪುತ್ರನಿಗೆ ಸುಮಾ ರು ೧೫೦ ರೂಪಾಯಿ ಸಂಬಳದ ಒಂದು ಉದ್ಯೋಗ ಸಿಗುವಂತೆ ಪ್ರಯತ್ನಿಸುತ್ತಿದ್ದ ನಿವೃತ್ತ ಆಫೀಸ ರೊಬ್ಬರು, ಅವರ ನೆರೆಮನೆಯ ಗೃಹಸ್ಥರಿಗೆ ಅವರ ಮಗನ ಸಲುವಾಗಿಯೆ ಬೋಧಿಸುತ್ತಿ ದ್ದಾರೆ.

o o o o

ನಿಜವಾಗಿಯೂ ಹಳ್ಳಿಗಳಿಗೆ ಹೋಗುವ ಶಿಕ್ಷಿತ ಯುವಕರಿಗೆ ಪ್ರಯೋಜನವಿದೆ; ಅವ ರಿಂದಲೂ ಹಳ್ಳಿಗಳಿಗೆ ಪ್ರಯೋಜನವಿದೆ; ಆದರ್‍ಎ—

o o o o

ಈಗ ದೊರೆವ ವಿದ್ಯಾಭ್ಯಾಸ ಕ್ರಮದಿಂದ ಶಿಕ್ಷಿತರು ನಗರಗಳಲ್ಲಿನ ದೂಳನ್ನಾದರೂ ತಿಂದು ಬದುಕುವರೇ ಹೊರತು, ಗ್ರಾಮಗಳಲ್ಲಿ ಜೀವಿಸಲಾರರು. ಅದಕ್ಕೇನೆನ್ನಲಿ? ದೊರೆತ ವಿದ್ಯಾಭ್ಯಾಸವು ಅವರನ್ನು ಅಷ್ಟು ಚೆನ್ನಾಗಿ ತಿದ್ದಿ ನಾಗರಿಕರನ್ನಾಗಿ ಮಾಡಿಟ್ಟಿದೆ. ಅವರಿಗೆ ಗ್ರಾಮಸ್ಥರೆನ್ನಿಸಲು ಯೋಗ್ಯತೆಯಿಲ್ಲ, ತುಚ್ಛೀ ಕಾರ.

o o o o

ಶಿಕ್ಷಿತನಾದವನು ಹಳ್ಳಿಯಲ್ಲಿರುವನಾದರೆ ಆತನಿಗೆ, ಅಲ್ಲಿ ಒಂದು ಹೋಟ್ಲು, ಐಯ್ಸ್ ಕಾರ್ಖಾನೆ, ರೇಡಿಯೊ, ಸಿನೆಮಾ, ಟೆನ್ನಿಸ್ ಆಟಕ್ಕಾಗಿ ಜಾಗ, ಇಂಗ್ಲಿಷು ನೊವೆಲುಗಳು, ಬಸ್ಸು ಸರ್ವಿಸು, ಸಚಿತ್ರ ಇಂಗ್ಲಿಷು ಪತ್ರಿಕೆ ಗಳು,—ಇಷ್ಟಾದರೂ ಅಲ್ಲಿ ಅಗತ್ಯ. ಅದರಲ್ಲಿ ಒಂದು ಹೇರ್ ಕಟ್ಟಿಂಗ್ ಸಾಲೂನ್ ಮತ್ತು ಒಂದು ಲೊಂಡ್ರಿ ಇದ್ದರೆ ಸಾಕು. ಇದು ಹಳ್ಳಿ ಯಲ್ಲಿ ಸ್ಥಾಪನೆಹೊಂದುವ ತನಕ ಶಿಕ್ಷಿತರನ್ನು ಹಳ್ಳಿಗೆ ಕಳುಹಿಸುವುದು ತಪ್ಪು.

o o o o

ನೂತನ ನಾಗರಿಕ ಭಾವನೆಗಳನ್ನು ಕಲಿಸಿ ಕೊಟ್ಟು, ಸನ್ಯಾಸಿಯಂತೆ ಈಗ ಹಳ್ಳಿಗೆ ಹೋಗಿ ಜೀವನ ಮಾಡೆಂದರೆ, ಅದೇನು ಒಪ್ಪತಕ್ಕ ವಿಚಾ ರವೆ?

o o o o

ಶಿಕ್ಷಿತರನ್ನು ಹಳ್ಳಿಗೆ ಕಳುಹುವುದೂ, ಮಹಾಪರಾಧಿಗಳನ್ನು ಅಂಡಮಾನಕ್ಕೆ ಕಳುಹು ವುದೂ ಒಂದೇ ಎಂದೊಬ್ಬರ ಹಿಂದಣ ಮಾತು. ಇಪ್ಪತ್ತನಾಲ್ಕೆ ತಾಸಿನೊಳಗೆ ಶಿಕ್ಷಿತ ನಾಗರಿಕನು 'ಬೇಸರ' ರೋಗದಿಂದ ಹಳ್ಳಿಯಲ್ಲಿ ಸ್ವರ್ಗಸ್ಥ ನಾಗುವನು.

o o o

ನಗರವಾಸದಿಂದ ಬೇಸರಗೊಂಡು ಹವಾ ಬದಲಾವಣೆಗೆ ಹಳ್ಳಿಗೆ ಹೋದೊಬ್ಬ ಮಹನೀ ಯನು, ಅಲ್ಲಿ ರಾತ್ರಿಕಾಲವನ್ನು ಕಳೆದ ವಿಧಾ ನವು ವಿಚಿತ್ರವಾಗಿದೆ. ೧೦ ಘಂಟೆಗೆ ಶಯನ; ಕಣ್ಣು ಮುಚ್ಚಿತು; ಒಂದು ಪ್ರಾಣಿಯು ವಿಮಾ ನದ ರಭಸದಿಂದ ಅವನ ತಲೆಯ ಮೇಲೆ ಕೂತಿದ್ದು, ಎಚ್ಚರಿಸಿ, ಅವನು ಬೇಟೆಯಾಡುವ ವಿನೋದಸುಖವನ್ನು ಅನುಭವಿಸುವಂತೆ ಮಾ ಡಿತು.

o o o o

ಅದಾದ ನಂತರ, ಕತ್ತೆ ಅರಚಿಕೊಂಡಿತು. ಅದು ಸೂತ್ರಧಾರನ ವಾಕ್ಯದಂತಾಗಿ, ಅದರ ಹಿಂದೆಯೆ ನೂರಾರು ಕಸಕಪ್ಪೆಗಳ ಬಳಿಯಿಂದ ಸಾವಿರಾರು ನಾಯಿಗಳು ಕೂಗಿಟ್ಟುವು. ಈ ಮಧುರವಾದ ಗೋಳಾಟವನ್ನು ಲಾಲಿಸಿದರೆ, ಜೋಗುಳದಂತೆ ಎಣಿಸಬೇಕೆಂದರೆ, ಅದು ಹೇ ಗಾಗಬೇಕು?

o o o o

ಇದನ್ನು ಮುಗಿಸಿದ ಬಳಿಕ, ಗ್ರಾಮ ದೇವತೆಯು ಸೊಳ್ಳೆಗಳನ್ನು ಸಂಚಾರಕ್ಕೆ ಬಿಟ್ಟಿತು. ಎರಡು ತಾಸಿನಲ್ಲಿ ಮೂರು ಸೊಳ್ಳೆ ಗಳನ್ನು ಕೊಲ್ಲುವ ಹಾಗಾದರೂ, ನೂರು ಸೊಳ್ಳೆಗಳಿಂದ ಕಚ್ಚಿಸಿಕೊಳ್ಳಬೇಕಾಯಿತು. ಇನ್ನಿಷ್ಟು ಸಮಯದೊಳಗೆ ಕೋಳಿ ಕೂಗಿತು. ಬೆಳಗಾಯಿತು!

o o o o

ಕವಿ, ದಿವಾಳಿಖೋರ, ತತ್ವಜ್ಞಾನಿ, ಸನ್ಯಾಸಿ ಇವರಿಗಲ್ಲದೆ ಹಳ್ಳಿ ಯಾರಿಗಾದೀತು? ನಮ್ಮ ಸುಶಿಕ್ಷಿತ ನಾಗರಿಕರಿಗೆ ನಗರಗಳೂ ಅದರ ದೂಳೂ, ನಿರುದ್ಯೋಗವೂ ಯಥೇಷ್ಟ.

ಸರ್ಪದ ವಿಚಿತ್ರ ಕಾರ್ಯ.

ಮುಲ್ತಾನದ ಒಬ್ಬ ಹಳ್ಳಿಯವನು ಪ್ರಕ ಟಿಸಿರುವ ವಿಚಿತ್ರ ಸಂಗತಿಯು ಆಶ್ಚರ್ಯವನ್ನು ಉಂಟುಮಾಡಿರುತ್ತದೆ.

"ಬಸ್ತಿನಿಕಿ" ಎಂಬ ಹಳ್ಳಿಯಲ್ಲಿ ನಬಿ ಖುರ್ಸ್ ಎಂಬೊಬ್ಬನ ಮನೆಗೆ ದೊಡ್ಡ ಸರ್ಪ ವೊಂದು ಬಂದಿತು. ಸರ್ಪವು ನೇರವಾಗಿ ಒಂದು ಕೊಠಡಿಯೊಳಗೆ ಹೋಯಿತು. ಮನೆ ಯವರೆಲ್ಲರೂ ನೋಡುತ್ತಿರುವಂತೆಯೇ ಕೊಠ ಡಿಯ ಬಾಗಿಲು ತಾನಾಗಿಯೇ ಮುಚ್ಚಿಕೊಂಡು ಬಿಟ್ಟಿತು. ಎಷ್ಟು ಪ್ರಯತ್ನಪಟ್ಟರೂ ತೆಗೆಯು ಲಾಗಲಿಲ್ಲ.

ಅನಂತರ ಸ್ವಲ್ಪ ಹೊತ್ತಿನ ಮೇಲೆ ಬಾ ಗಿಲು ತಾನಾಗಿಯೇ ತೆರೆದುಕೊಂಡಿತು. ಒಳಗೆ ಎಲ್ಲೆಲ್ಲಿ ಹುಡುಕಿದರೂ ಸರ್ಪದ ಸುಳಿವೇ ಇಲ್ಲ. ಅಷ್ಟು ದೊಡ್ಡ ಹಾವು ಎಲ್ಲಿ ಮಾಯ ವಾಯಿತೋ ಯಾರಿಗೂ ತಿಳಿಯಲಿಲ್ಲ.

ಮನೆಯವರು ಹೀಗೆ ಆಶ್ಚರ್ಯಚಕಿತ ರಾಗಿ ಹುಡುಕುತ್ತಿರುವಾಗ ಒಂದು ಬೀರುವಿನ ಮೇಲೆ ಕುರಾನ ಗ್ರಂಥದ ಪ್ರತಿಯು ಒಂದು ಕಾಣಸಿಕ್ಕಿತು. ಅದಕ್ಕೆ ಮೊದಲು ಇವರ ಮನೆಯಲ್ಲಿ ಕುರಾನ್ ಪುಸ್ತಕವೇ ಇರಲಿಲ್ಲ.

ಇದೇನೋ ದೈವಲೀಲೆಯೆಂದು ಬಗೆದು ಅವರಾರೂ ಆ ಗ್ರಂಥವನ್ನು ಮುಟ್ಟಲೇ ಇಲ್ಲ. ಆದರೆ ಮಾರಣೆ ದಿನ ಬೆಳಗ್ಗೆ ನೋಡಿದರೆ ಅಲ್ಲಿದ್ದ ಕುರಾನ್ ಇಲ್ಲವೇ ಇಲ್ಲ! ಎಲ್ಲೋ ಮಾಯವಾಗಿ ಬಿಟ್ಟಿತು.

ಈಗ ಹಳ್ಳಿಯವರು ಈ ಕೆಲಸವನ್ನು ಮಾಡಿರುವುದು ಆ ಸರ್ಪವೇ ಎಂದು ತಿಳಿದಿರು ವುದಲ್ಲದೆ, ಅದಕ್ಕೆ ಅಮಾನುಷ ಶಕ್ತಿ ಇದೆ ಎಂಬುದಾಗಿ ನಂಬಿಕೊಂಡಿದ್ದಾರೆ.

ಯುರೋಪಿನಲ್ಲಿ

ಇಟಲಿಯ ಗೆಲುವು ಮತ್ತು ಅಬಿಸೀನಿಯ ಸೋಲು ಇದರಿಂದ ಯುರೋಪು ಖಂಡದಲ್ಲಿ ಒಂದು ವಿಚಿತ್ರವಾದ ಪರಿಸ್ಥಿತಿಯು ಏರ್ಪಟ್ಟಿದೆ. ಲೀಗಿನ ಹಿರಿಯ ಮತ್ತು ಬಲಯುತವಾದ ಸದಸ್ಯ ಜನಾಂಗಗಳು ಮೊದಲಿನಿಂದಲೂ ಬಹಳ ಕುಟಿಲವಾದ ನೀತಿಯನ್ನು ಅನುಸರಿಸುತ್ತ ಬಂದವು. ಇಟಲಿಯು ಅಬಿಸೀನಿಯದಲ್ಲಿ ಅಧರ್ಮ ಯುದ್ಧವನ್ನುಹೂಡಿದರೂ ಸಹ ಬ್ರಿಟನ್ನಾಗಲಿ ಫ್ರಾನ್ಸಾಗಲಿ ಇಟಲಿಯ ಮೇಲೆ ಅಂತರರಾಷ್ಟ್ರೀಯ ನಿಯಮಗಳಿಗೆ ತಕ್ಕಂತೆ ತಕ್ಕ ಕಾರ್ಯಕ್ರಮಗಳನ್ನು ನಡೆಸಲಿಲ್ಲ. ಇದು ಬಹಳ ಹಳೆಯ ಕಥೆ. ವಿನಾಶವನ್ನು ನೋಡುತ್ತ ಲೀಗ್ ಜನಾಂಗಗಳು ಕುಳಿತವು. ಇಟಲಿಯು ಅಬಿಸೀನಿಯವನ್ನು ಸಂಪೂರ್ಣವಾಗಿ ಆಕ್ರಮಿಸಿ ಬಿಟ್ಟಿತು. ಮುಸಲೋನಿಯು ವಿಜಯೋನ್ಮತ್ತನಾಗಿ ಇಟಲಿಯ ಅರಸರನ್ನು ಅಬಿಸೀನಿಯ ಚಕ್ರವರ್ತಿಯನ್ನಾಗಿ ಮಾಡಿಬಿಟ್ಟನು. ದಂಡನಾಯಕ ಬಡೋಗ್ಲಿಯೋರವರನ್ನು ಅಬಿಸೀನಿಯದ ವೈಸರಾಯರನ್ನಾಗಿ ನೇಮಿಸಿಬಿಟ್ಟನು. ರಾಸ್ ತಫಾರಿಯು ದೇಶಭ್ರಷ್ಟನಾದನು. ಇಷ್ಟಾದರೂ ಲೀಗಿನ ಹಿರಿಯ ರಾಷ್ಟ್ರಗಳವರು 'ಅಬಿಸೀನಿಯ ದೇಶದ ಪ್ರತಿನಿಧಿಗಳಿಗೆ ಲೀಗಿನಲ್ಲಿನ್ನೂ ಸದಸ್ಯತ್ವ ಹೋಗಿಲ್ಲ. ಇಟಲಿಯ ಮೇಲೆ ಆಪದಿಗ್ಬಂಧನ ಬಾಣಪ್ರಯೋಗ ಮಾಡಲೇ ಬೇಕು. ೧೫-೬-೩೬ನೆಯ ದಿನ ಈ ವಿಚಾರ ವಿಮರ್ಶೆಗಾಗಿ ಲೀಗ್ ಸಮಿತಿಯು ಕೂಡುತ್ತದೆ.'

ಇತ್ಯಾದಿ ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಲೀಗ್ ಸತ್ತು ಎಷ್ಟೋ ದಿನಗಳಾದರೂ ಬ್ರಿಟನ್ ಫ್ರಾನ್ಸು ಮುಂತಾದ ರಾಷ್ಟ್ರಗಳನ್ನೂ ವೇಷಧಾರಿಗಳಾಗಿ ನಟನೆ ಮಾಡುತ್ತಿರುವುದನ್ನು ನೋಡಿದರೆ ಐರೋಪ್ಯ ರಾಜನೀತಿಯು ಎಂತಹ ಆಳವಾದ ಗುಂಡಿಗೆ ಬಿದ್ದಿದೆಯೆಂಬುದು ಸೂಚಿತವಾಗುತ್ತದೆ.

ಒಂದು ಅರ್ಥದಲ್ಲಿ ಲೀಗ್ ಇನ್ನೂ ಜೀವತವಾಗಿಯೇ ಇದೆ. ಅಬಿಸೀನಿಯ ಸರ್ವಸ್ವವನ್ನೂ ಇಟಲಿಯು ಅನುಭವಿಸಲು ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನುಗಳು ಅವಕಾಶವನ್ನು ಕೊಡುವಂತಿಲ್ಲ.

'ಬಾಹುಬಲದಿಂದ ನೀನು ಅಬಿಸೀನಿಯವನ್ನು ಗೆದ್ದರೂ ಭೇದೋಪಾಯದಿಂದ ನಾವು ಸಹ ಅಬಿಸೀನಿಯವನ್ನು ಗೆಲ್ಲಬಲ್ಲೆವು.'

ಎಂಬದಾಗಿ ಗ್ರೇಟ್‌ಬ್ರಿಟನ್ ಫ್ರಾನ್ಸುಗಳು ಒಳಗೊಳಗೆ ಅಂದುಕೊಳ್ಳುತ್ತಿವೆ. ಅಬಿಸೀನಿಯ ದೇಶದ ಸೂರೆಯಲ್ಲಿ ಹಂಚಿಕೆಯು ಹೀಗಾಗಲೇ ಬೇಕೆಂಬುದನ್ನು ನಿರ್ಧರಿಸುವುದಕ್ಕಾಗಿ ಲೀಗ್ ಸಮಿತಿಯು ಸೇರಲಿದೆ. ರಾಸ್ ತಫಾರಿಯು ಇನ್ನೂ ಅಬಿಸೀನಿಯ ಚಕ್ರವರ್ತಿಯಾಗಿಯೆ ಇರುವನೆ ಇಲ್ಲವೆ, ಅಬಿಸೀನಿಯನ್ನರ ಸ್ವಾತಂತ್ರ್ಯವಿನ್ನೂ ಉಳಿದಿದೆಯೆ ಇಲ್ಲವೆ, ಇಟಲಿಯವರು ಹೂಡಿದ ಅಧರ್ಮ ಯುದ್ಧವು ಸಾಧುವಾದುದೇ ಅಲ್ಲವೆ ಈ ವಿಚಾರಗಳೆಂದೂ ಲೀಗ್ ಸಮಿತಿಯ ಮುಂದೆ ಬರುವ ಹಾಗೆ ನಮಗೆ ತೋರುವುದಿಲ್ಲ. ಒಂದು ವೇಳೆ ಲೀಗ್ ಸಮಿತಿಯು ಕೂಡುವುದಾದರೆ ಅಲ್ಲಿ ನಡೆಯುವುದು ಗ್ರೇಟ್ ಬ್ರಿಟನ್, ಫ್ರಾನ್ಸ್, ಇಟಲಿಗಳಲ್ಲಿ ಹೊಡೆದಾಟ ಮಾತ್ರ. ಹೊಡೆದಾಟದ ಫಲವಾಗಿ ಬಹುಬೇಗ ಯುರೋಪಿನಲ್ಲೆಲ್ಲ ಘೋರ ಸಂಗ್ರಾಮವಾಗುವ ಸೂಚನೆಗಳು ಎದ್ದು ಕಾಣುತ್ತಿವೆ.

ಲೀಗ್ ಸಂಸ್ಥೆಯು ದುರ್ಬಲವಾದುದೆಂದೂ ಸಣ್ಣ ಸಣ್ಣ ರಾಷ್ಟ್ರಗಳಿಗೆ ಅದು ಸಹಾಯಕ ಸಾಧನವಾಗದೆ ಬಲಯುತವಾದ ರಾಷ್ಟ್ರಗಳ ಸ್ವಾರ್ಥ ಸಾಧನವಾಗಿದೆಯೆಂದೂ, ಸಣ್ಣಪುಟ್ಟ ರಾಷ್ಟ್ರಗಳಿಗೆಲ್ಲ ಅನುಭವಕ್ಕೆ ಬಂದಿದೆ. ಆ ಕಾರಣದಿಂದಲೆ ಅವೆಲ್ಲ ಒಂದಾಗಿ ಬಲಯುತವಾದ ರಾಷ್ಟ್ರಗಳನ್ನು ಪ್ರತಿಭಟಿಸುವ ಪ್ರಯತ್ನದಲ್ಲಿವೆ.

ಮತ್ತೊಂದು ವಿಷಯವೆಂದರೆ ಜರ್ಮನಿಯು ರೈನ್‌ಲ್ಯಾಂಡ್ ಕ್ಷೇತ್ರಗಳಲ್ಲಿ ಸೈನ್ಯವ್ಯೂಹಗಳನ್ನು ರಚಿಸಿಕೊಂಡದ್ದು. ಇದರಿಂದ ಒಂದು ಕಡೆ ಫ್ರಾನ್ಸಿಗೂ ಇನ್ನೊಂದು ಕಡೆ ರಷ್ಯಕ್ಕೂ ಮಹಾಭಯವುಂಟಾಗಿದೆ. ಅಷ್ಟೆ ಅಲ್ಲದೆ ಜರ್ಮನಿಯು ಇಂದಿನ ಉದ್ಧಟತನಕ್ಕೆ ಗ್ರೇಟ್ ಬ್ರಿಟನ್ನು ಜರ್ಮನಿಯ ಬೆನ್ನು ತಟ್ಟುತ್ತಿರುವುದೂ ಕಾರಣವೆಂಬ ಭಾವನೆಯು ಸಾಮಾನ್ಯವಾಗಿ ಎಲ್ಲರಲ್ಲೂ ಉಂಟಾಗಿದೆ.

ಈ ಚಲನ ವಲನಗಳನ್ನೆಲ್ಲ ಕಂಡರೆ ಯುರೋಪಿನಲ್ಲಿ ಬಹುಬೇಗ ಬಾಂಬೊಂದು ಸಿಡಿಯುವುದೆಂದೂ, ಅದು ವಿಶ್ವವನ್ನೆಲ್ಲ ವ್ಯಾಪಿಸುವುದೆಂದೇ ಹೇಳಬೇಕಾಗುತ್ತದೆ.

(ವಿಶ್ವ ಕರ್ನಾಟಕ)

ಬಿಝೆಂಟ್ ಮತ್ತು ಗಾಂಧಿಜಿಯವರಿಗಾಗಿ ಜವಾಹರಲಾಲರು ತಮ್ಮ ಪಿತರನ್ನು ವಿರೋಧಿಸಿದುದು

ಯಾವತ್ತೂ ದುಡುಕಿಲ್ಲದೆ ವೀರತ್ವದಿಂದ ನಾಯಕತ್ವವನ್ನು ವಹಿಸಿದರು

'ಅವರು ರಾಜಕೀಯದಲ್ಲಿ ಸಮತಾವಾದಿಗಳು. ಧರ್ಮದಲ್ಲಿ ಅಹಿಂಸಾ ಪ್ರೇಮಿಗಳು. ಕಾರಾಗ್ರಹವಾಸವನ್ನು ಗ್ರಂಥಗಳನ್ನು ಬರೆಯುವುದರಲ್ಲಿ ಕಳೆದರು. ಈ ಗ್ರಂಥಗಳಲ್ಲಿ ಅವರ ಜೀವಮಾನದ ಅನೇಕ ಪ್ರಕಾಶಮಾನ ಸಂಗತಿ ಹೊರಸೂಸಿವೆ' ಎಂದು ಕೃಷ್ಣದೇವ ಪ್ರಸಾದ ಡಿಂಬನರು, 'ನ್ಯೂ ಕೊಲ್' ಎಂಬ ಪತ್ರಿಕೆಯಲ್ಲಿ ಶ್ರೀ ಜವಾಹರಲಾಲರ ಜೀವನ ಚರಿತ್ರೆಯಲ್ಲಿ ಬರೆದಿರುವರು.

'ದಿವಂಗತ ಬಿಝೆಂಟರು, ಹೋಮ್ ರೂಲ್ ಚಳವಳ ಪ್ರಾರಂಭಿಸಿದಾಗ, ಅವರು ಅದರಲ್ಲಿ ಹೃತ್ಪೂರ್ವಕ ಭಾಗವಹಿಸಿದರು. ಅಂದಿನ ತನಕ ರಾಜಕೀಯ ವಿಚಾರಗಳಲ್ಲಿ ಬುದ್ಧಿ ಬದಲಾವಣೆ ಮಾಡದಿರುವ ಪಂಡಿತ ಮೋತಿಲಾಲ ನೆಹರುಗಳವರು, ಮಗನ ಈ ವರ್ತನೆಯನ್ನು ಕಂಡು ಬಹಳ ಅಸಮಾಧಾನ ಹೊಂದಿದರು. ಆದರೆ ಶ್ರೀ ಜವಾಹರಲಾಲರು ದುಡುಕದವರು, ತಂದೆ ಮಗ ಇಬ್ಬರಿಗೂ, ಈ ವಿಚಾರ ಬುದ್ಧಿಭೇದ ಉಂಟಾಗಿ, ಕಲಹ ಉಂಟಾಗುವ ಸಂಭವಗಳು ಉಂಟಾಗಿದ್ದವು.

'ಮಹಾತ್ಮಾ ಗಾಂಧಿಯವರು 1919ರಲ್ಲಿ ಸತ್ಯಾಗ್ರಹ ಚಳವಳವನ್ನು ಪ್ರಾರಂಭಿಸಿದಾಗ, ತನ್ನ ಪಿತನ ಇಚ್ಛೆಗೆ ವಿರೋಧವಾಗಿ ಅದರಲ್ಲಿ ಭಾಗಿಗಳಾದರು.'

'1919 21ರಲ್ಲಿ ನಡೆದ್ದ ಊಧ ಕೈತರ ಚಳವಳಿಯಲ್ಲಿ ಶ್ರೀ ಜವಾಹರರು ಬಹಳ ಪರಿಶ್ರಮಿಸಿದರು. ಧೋತಿಯನ್ನು ಧರಿಸಿ, ಕಾಲ್ನಡೆಯಲ್ಲಿ, ದಿನಂಪ್ರತಿ ಅನೇಕ ಮೈಲು ನಡೆಯುತ್ತಿದ್ದರು. ಈ ಸಮಯದಲ್ಲಿ, ಕೀಳುತರದ ಆಹಾರದ ಮೇಲೆ ದಿನ ಕಳೆದರು. ಇವರ ಮೇಲಿನ ವರ್ತನೆಯು ಎಲ್ಲರನ್ನೂ ಬೆರಗುಗೊಳಿಸಿತು.'

ಹಿಂದೂದೇಶವು ಬ್ರಿಟನಿಗೆ ಲಾಭದಾಯಕವಾಗಿದೆ

ಓರ್ವ ಬ್ರಿಟಿಷ ಅರ್ಥ ಶಾಸ್ತ್ರಜ್ಞರ ಸರಳ ನಿವೇದನ

ಹಿಂದೂದೇಶವು ಯಾವ ರೀತಿಯಲ್ಲಿ ಬ್ರಿಟನಿಗೆ ಲಾಭದಾಯಕವಾಗಿರುತ್ತದೆಂದು, ಅಲ್ಲಿನ 'ಡೈಲಿ ಹೆರಾಲ್ಡ್' ಪತ್ರಿಕೆ ಆರ್ಥಿಕ ಸಂಪಾದಕರಾದ ಫ್ರೆನ್ಸಿಸ್ ವಿಲ್ಲಿಯಮ್ಸರು ಒಂದು ಸರಳವಾದ ಪ್ರಕಟಣೆಯನ್ನು ಮಾಡಿರುವರು.

ಬ್ರಿಟಿಷರಿಗೆ ಪ್ರಪಂಚದ ವಿವಿಧ ದೇಶಗಳ ರಾಜಕೀಯಗಳಲ್ಲಿ ಅಧಿಕಾರವಿರುವುದು ಬ್ರಿಟನಿನ ವ್ಯಾಪಾರದ ಶ್ರೇಯಸ್ಸಿಗೆ ಕಾರಣವೆಂದು ಇವರ ಅಭಿಪ್ರಾಯ.

'ಬ್ರಿಟನ್ನಿನ ವಸಾಹತುಗಳ ಕಡೆಗಿನ ವರ್ತನೆಯು ಸ್ವಾರ್ಥ ಬುದ್ಧಿಯಿಂದ ಕೂಡಿದಾಗಿರುತ್ತದೆ. ತನ್ನ ವ್ಯಾಪಾರವನ್ನು ಇವುಗಳ ಮೂಲಕ ಹೇಗೆ ಉದ್ಧರಿಸಬೇಕೆಂಬುದೊಂದು ಆಲೋಚನೆ ಇವರಿಗಲ್ಲದೆ, ಬೇರೆ ವಿಚಾರಗಳಿಗೆ ಅವರು ಅಷ್ಟು ಮಹತ್ವ ಕೊಡುವುದಿಲ್ಲ.

"ಹಿಂದೂದೇಶವು ಬ್ರಿಟಿಷ ಸಾಮಾನುಗಳಿಗೆ ಅತ್ಯಂತ ದೊಡ್ಡದಾದ ಮಾರ್ಕೇಟಾಗಿರುತ್ತದೆ. ತನ್ನ ವ್ಯಾಪಾರದ ಅಭಿವೃದ್ಧಿಗೆ ಮುಖ್ಯ ಸೋಪಾನವಾಗಿರುವ, ಹಿಂದೂ ದೇಶವನ್ನು, ತಮ್ಮ ಲಾಭಕ್ಕಾಗಿ ಉಪಯೋಗಿಸುವ ರಾಜಕೀಯವೆ ಬ್ರಿಟಿಷ ಸಾರ್ವಭೌಮತೆಯು ಅನುಸರಿಸುತ್ತದೆ. ಹಿಂದೆ, ಓರ್ವ ಬ್ರಿಟಿಷ ಪ್ರಸಿದ್ಧ ಪುರುಷರು, ನಾವು ಹಿಂದೂದೇಶವನ್ನು ವಶೀಕರಿಸಿದುದು, ಹಿಂದೂದೇಶದ ಹಿತಕ್ಕಾಗಲ್ಲ' ಎಂದು ಆಡಿದ ಮಾತುಗಳಲ್ಲಿ ಹೆಚ್ಚು ಸತ್ಯವಿದೆ.

'ಆದರೆ ನಮ್ಮ ಕೆಲವು ಮತಪ್ರಸಾರಕರು, ನಾವು ಹಿಂದೂದೇಶವನ್ನು ಹಿಡಿದುದು ಭಾರತೀಯರನ್ನು ಹಲವು ವಿಚಾರಗಳಲ್ಲಿ ಸುಧಾರಣೆ ಮಾಡಲೋಸುಗವೆಂದು ಸಾರುತ್ತಿದ್ದಾರೆ. ಇದು ಬರೇ ಕಪಟ ಮಾತಾಗಿರುತ್ತದೆ. ನಾವು ಹಿಂದೂದೇಶವನ್ನು ವಶೀಕರಿಸಿದುದು ನಮ್ಮ ಲಾಭಕ್ಕಾಗಿ, ನಮ್ಮ ವ್ಯಾಪಾರದ ಉನ್ನತಿಗಾಗಿ. ಶಸ್ತ್ರದಿಂದ ಹಿಡಿದ ಹಿಂದೂದೇಶವನ್ನು ಶಸ್ತ್ರದಿಂದಲೆ ಸಲಹಬೇಕೆಂಬುದೆ ನಮ್ಮ ನಿಜವಾದ ಇಚ್ಛೆಯಾಗಿರುತ್ತದೆ.'

ಇವರು ಭಾಷಣವನ್ನು ಕೇಳುತ್ತಿದ್ದ ಕೆಲ ಮಂದಿಗಳು ಗುಟ್ಟನ್ನು ರಟ್ಟುಮಾಡುವದಕ್ಕಾಗಿ ದೂಷಣಾ ಸ್ವರಗಳನ್ನು ಹೊರಡಿಸಲು,

'ನೀವು ದೂಷಣಾ ಸ್ವರಗಳನ್ನು ಹೊರಡಿಸಬಹುದು. ಮತಪ್ರಚಾರ ಕಾರ್ಯದಲ್ಲಿ ನನಗೆ ಆಸಕ್ತಿಯಿದೆ. ಆದರೆ ಭಾರತೀಯರ ಹಿತಕ್ಕಾಗಿ ನಾವು ಹಿಂದೂದೇಶವನ್ನು ಹಿಡಿದಿದ್ದೇವೆ, ಎಂದು ಹೇಳುವಷ್ಟು ಕಪಟವು ನನ್ನಲ್ಲಿಲ್ಲ.'

'ಬ್ರಿಟನಿನ ರಫ್ತುವಿನ ಶೆ 46 86 ಅಂಶವು ಬ್ರಿಟಿಷ ಸಾಮ್ರಾಜ್ಯಕ್ಕೆ ಸಲ್ಲುತ್ತಿದೆ. ಹೀಗಿರುವಾಗ ಬ್ರಿಟಿಷ ಸಾರ್ವಭೌಮತೆ ಕ್ರಮವು ವ್ಯಾಪಾರಕ್ಕೆ ಆಧಾರವಾಗಿದ್ದೆ, ಎಂಬ ಸಂಗತಿಯು ಸುಳ್ಳೆಂದು ಹೇಗೆ ಹೇಳಲಿ.

WARNING

ಉದರವೇದನೆಯಿರುವವರಿಗೆ ಎಚ್ಚರಿಕೆ!

ಪ್ರತಿಯೊಂದು ತಾಜಾ ಬಿಲ್ಲೆಯ ಮೇಲೆ ಈ ಕೆಂಪು ಮುದ್ರೆಯಿದೆಯೋ ನೋಡಿ.

Alex C. Maclean
SEE THAT THIS SEAL IS UNBROKEN

ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಇರುವ ಪ್ರತಿಯೊಂದು ತಾಜಾ ಬಿಲ್ಲೆಯ ಮೇಲೆ ಸೀಲಿನ ಮುದ್ರೆಯು ಅದರ ತಲೆಯಲ್ಲೂ ಬುಡದಲ್ಲೂ ಇದೆ.

Alex C. Maclean

ಎಂ. ಸಹಿಯು ಇಲ್ಲದ ಬಿಲ್ಲೆ, ಮ ಬಾಟಲಿಗಳ ಮೇಲಿದೆ
ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್
15 ನಂಕ ರಾಮ ಚೆಟ್ಟಿಸ್ಟ್ರೀಟ್, ಮದ್ರಾಸು



ಅಜೀರ್ಣ, ಅಮ್ಲ, ಅಗ್ನಿಮಾಂದ್ಯ ವಾತ, ಎದೆಯುರಿ, ಜಠರಾಗ್ನಿ ಮತ್ತು ಉದರ ಬಾಧೆಗಳ ಹಲವು ರೋಗಗಳನ್ನು ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರ್ ಅತ್ಯದ್ಭುತಕರವಾಗಿ ಗುಣಪಡಿಸುವುದರ ಫಲವಾಗಿ ಮಾರ್ಕೆಟಿಗೆ ಹಲವು ನಕಲಿ ಮಾಲುಗಳು ಬಂದಿವೆ, ಆದುದರಿಂದ Alex C. Maclean ಎಂಬ ದಸ್ತಖತಿರುವ ಮೂಲವಸ್ತುವನ್ನೇ ಪಡೆಯುವಂತೆ ಎಚ್ಚರಿಕೆ!

ಮೆಕ್ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನು ಸಮಾಕೂಲವಾದ ಸೂತ್ರಗಳ ಮೇಲೆ ಆಧರಿಸಿಟ್ಟು ತಯಾರಿಸಲಾಗುತ್ತದೆ. ಯಾವ ಬಗೆಯ ಅಸಮರ್ಥತೆಯೂ, ಅಶುದ್ಧತೆಯೂ ಅದನ್ನು ಪರಿಪೂರ್ಣ ನಿಷ್ಪ್ರಯೋಜಕವನ್ನಾಗಿ ಮಾಡುವುದು ಖಂಡಿತ. ಕೆಲವು ನಕಲಿ ಮಾಲುಗಳ ಕ್ರಿಯವನ್ನು ಗಣಿಸುವಾಗ ಮೆಕ್‌ಲೀನ್ಸ್ ಲಿಮಿಟೆಡ್‌ನವರು ತಮ್ಮ ತಯಾರಿಯಲ್ಲಿಟ್ಟ ಜಾಗ್ರತೆಯು ಅತ್ಯಗ್ರ ತಯಾರಿಯಲ್ಲಿಡಲಾಗಲಿಲ್ಲವೆಂದು ವ್ಯಕ್ತವಾಗುತ್ತದೆ. ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನಲ್ಲಿ ಅತ್ಯುತ್ಕೃಷ್ಟ ಸಾರವನ್ನೇ ಪ್ರಯೋಗಿಸಲಾಗಿದೆ. ಅದರ ಮಿಶ್ರಣ ಕಾರ್ಯವನ್ನು ಅನುಭವಿಕರಾದ ಕೆಮಿಸ್ಟರರು ಆರೋಗ್ಯ ಸೂತ್ರಗಳನ್ನು ಲಕ್ಷಿಸಿಯೇ ಮಾಡುವರು.

ತಾಜಾ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರನ್ನೇ ಕೊಡುವಂತೆ ಎಚ್ಚರಿಕೆ. Alex C. Maclean ಎಂಬ ದಸ್ತಖತಿದೆಯೋ ನೋಡಿ. ಇದನ್ನು ಬಿಡಿಯಾಗಿ ಮಾರುವುದಿಲ್ಲ. ಬಾಟ್ಲಿಯಲ್ಲಿ ಪೌಡರಿನ ರೂಪದಲ್ಲಿ ಮಾರಲಾಗುತ್ತದೆ. ಸ್ಥಳೀಕ ಕೆಮಿಸ್ಟರಿಂದಾಗಲೀ, ಸ್ಟೋರುಗಳಲ್ಲಾಗಲೀ ದೊರೆಯಲು ಕಷ್ಟವಾದರೆ—

ಮಾರ್ಟಿನ್ ಎಂಡ್ ಹೆರಿಸ್, ಲಿಮಿಟೆಡ್.
ಇಲ್ಲಿಗೆ ಬರೆಯಿರಿ

546

ಬರುವ ಮಹಾಯುದ್ಧದಲ್ಲಿ ಹಿಂದೂದೇಶದ ಭಾಗ

ಅದರಿಂದ ಹಿಂದೂದೇಶಕ್ಕೆ ಯಾವತ್ತೂ ಪ್ರಯೋಜನವಾಗುವಂತಿಲ್ಲಾ

ಇನ್ನೊಂದು ಮಹಾ ಯುದ್ಧದ ಸಂಭವದಲ್ಲಿ ಹಿಂದೂದೇಶಕ್ಕೆ ಆದಾಯದ ಯಾವ ಪ್ರಯೋಜನಗಳು ದೊರಕುವವು?

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು 'ಕಾಂಗ್ರೆಸ್ಸ ಸೋಶಲಿಸ್ಟ' ಎಂಬ ಪತ್ರಿಕೆಯಲ್ಲಿ, ಮೇಲಿನ ವಿಚಾರದಲ್ಲಿ ಹೀಗೆ ಬರೆದಿರುವರು.

'ಮುಂದಕ್ಕೆ ಸಮಸ್ತ ಜಗವು ಇನ್ನೊಂದು ಮಹಾಯುದ್ಧದ ಅನುಸಂಕಟದಲ್ಲಿ ಸಿಲುಕಿದರೂ ಅದರಿಂದ, ಸದ್ಯದಲ್ಲಿ ರೂಢಿಗೆ ಬರುವ ರಾಜಶಾಸನದಲ್ಲಿ ಯಾವತ್ತೂ ಮಾರ್ಪಾಟುಗಳು ನಡೆಯುವವೆ? ಇದರಿಂದ, ಭಾರತೀಯ ತನ್ನ ಉದ್ದೇಶಗಳನ್ನು ಸಾಧಿಸುವ ಹೊಸ ಹಾದಿಗಳನ್ನು ಹುಡುಕದಂತೆ, ಅವರ ದೃಷ್ಟಿಯು ಆ ವಿಚಾರಗಳಿಂದ ತಪ್ಪುವಂತೆ ಬ್ರಿಟಿಷರು ಸಾಧಿಸರೆ?

'ಈಗಿನ ಸ್ಥಿತಿಗಳನ್ನು ಬದಲಾಯಿಸುವ ಮೇಲಿನ ಪ್ರಶ್ನೆಗಳಿಗೆ ಯೋಗ್ಯವಾದ ಉತ್ತರಗಳನ್ನು ನಾವು ಬೇರೊಂದು ಕಡೆಯಲ್ಲಿ ಹುಡುಕಬೇಕಾಗಿದೆ. ಬ್ರಿಟಿಷರಿಂದ ಒಳ್ಳೆ ಹಾವಭಾವಗಳಲ್ಲಿ ನವರಾಜ ಶಾಸನದಲ್ಲಿ ಕಾಂಗ್ರೆಸ್ಸು ಅಧಿಕಾರ ಸೂತ್ರವನ್ನು ವಹಿಸುವುದು ಮಹಾತ್ಮಾಜಿಯವರು ವಿರೋಧಿಸುವರಂತೆ. ಈ ಹಾವಭಾವ ಯಾವದು?

'ಸ್ವಯಂಪ್ರಭುತ್ವದ ರಾಜ್ಯರಚನೆ ಕರಾರು, ಶಾಸನಗಳನ್ನು ರದ್ದುಮಾಡುವಿಕೆ, ಗ್ರಾಮಾಭ್ಯುದಯ ಕಾರ್ಯಗಳಿಗೆ ಸಹಾಯದ್ರವ್ಯ, ಈ ಹಾವಭಾವವಾಗಿದ್ದರು. ಕಾಂಗ್ರೆಸ್ಸಿನ ವರ್ತನೆಯು ಬದಲಾವಣೆಯಾಗುವುದೆ? ಸದಾಕಾಲ ನರಳುತ್ತಿರುವ ಈ ಭರತಖಂಡಕ್ಕೆ ಈ ಹಾವಭಾವದಿಂದ ಯಾವತ್ತೂ ಉಪಕಾರವು ದೊರಕುವಂತಿಲ್ಲ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಎರಡು ಸೈಜಿನಲ್ಲಿ ದೊರೆಯುತ್ತದೆ **ಲೋಧ್ರ** ರೂ. 3 ಮತ್ತು 1—10—0

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದ್ರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು -

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಜಾಹೀರಾತು.

ಎಲ್ಲಾ ಆಯುರ್ವೇದಿಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಅಲಾಖೆಯಲ್ಲಿ ಯೋಗ್ಯ ಸಿದ್ಧಾಂತದಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ನಾವು ನಿಶ್ಚಯಿಸಿ ಸ್ವಾನುಭವ ಹೊಂದಿದ ಎಲ್ಲಾ ಔಷಧ ದೂರಿಕೆಗಳನ್ನು ಸುಲಭ ಬೆಲೆಗೆ ವಿಕ್ರಯಮಾಡತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉಪಾದಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟ್ ಮಂಗಳೂರು, ದ. ಕ.

ರೈಲು ಬಂಡಿಗಳ ಸಮಯ.

ಗಾಡಿಗಳು,	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9-50	ಸಂಜೆ 4-2[?]
ಮಿಕ್ಸೆಡ್	,, 5-55	ರಾತ್ರಿ 8-5[?]
ಫಾಸ್ಟ್ ಪೆಸೆಂಜರ್	ಮ. 12-45	ಮ. 2-4[?]
ಕಿಟಲ್	ಸಂಜೆ 5-25	ಬೆಳಿಗ್ಗೆ 9-2[?]
ಕಾಂಞಂಗಾಡ್ ಪೆಸೆಂಜರು	ಬೆ. 8-25	ಮ. 1-2[?]
ಕಾಸರಗೋಡು ಪೆಸೆಂಜರು	ಸಂಜೆ 8.20	

Estd 1920] THE [1920ರಲ್ಲಿ ಸ್ಥಾಪಿತವಾದದ್ದು.

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರ್ಯಾಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ:

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ.

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ.

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ.

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು.

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವುವು.

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು.

Puttur,
Dated 10 – 4 – 1935.

G. N. Lakshman Pai,
Secretary.

ದಕ್ಷಿಣ ಹಿಂದೂಸ್ಥಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅವರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ. ಗೋಪಾಲಾಚಾರ್ಲುರವರ

ಜೀವಾಮೃತ.

ಜೀವಾಮೃತವು ಬಲಹೀನತೆಯಿಂದುಂಟಾಗುವ ನೋವುಗಳನ್ನು ನಿವಾರಿಸಿ ಶರೀರಕ್ಕೆ ಸಂಪೂರ್ಣ ಆರೋಗ್ಯವನ್ನೂ ಶಕ್ತಿವೃದ್ಧಿಯನ್ನೂ ಉಂಟುಮಾಡಿ, ನರಗಳ ಪಟುತ್ವವನ್ನೂ, ಮಾಂಸಪುಷ್ಟಿಯನ್ನೂ, ಹೆಚ್ಚಾದ ಬಲ, ತೇಜಸ್ಸು, ಜ್ಞಾಪಕಶಕ್ತಿಗಳನ್ನೂ ವೃದ್ಧಿಪಡಿಸುವುದು.

ಜೀವಾಮೃತವು ಆರೋಗ್ಯವನ್ನು ಪುನರುತ್ಪತ್ತಿಮಾಡುವ ಪ್ರಾಣದಾಯಕವೆನ್ನಬಹುದು.

ತಯಾರಿಸುವವರು— ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು.

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು:— ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ESTD. 1906

CANARA BANK

LIMITED.

Head Office: MANGALORE.

Subscribed Capital	6,00,000
Paid up Capital	3,33,000
Reserves	4,50,000
Deposits	61,92,000
Working Capital	73,40,000

OFFICES:

Bombay-Fort, Bombay-Mandvi, Hubli, Calicut Cochin, Ernakulam, Alleppey, Bagalore, Chikmagalur, Mangalore-Bunder, Mangalore-City, Kasaragod, Puttur, Udipi, Karkala Coondapoor, Ganguli, Buntwal, Davanagere & Moolky.

ALL KINDS OF BANKING BUSINESS UNDERTAKEN.

ಚಿತ್ರಾಹುತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾ ಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ. ಎಂ. ನರಸಿಂಗರಾವ್, ಬಿ. ಎ. ಎಂ. ಎಲ್. ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ. ಬೆಲೆ ಆಣೆ 3.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್‌ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ.

ಶಾರದಾ ಛಾಪಖಾನೆ ಮಂಗಳೂರು.

ಬನ್ನಿರಿ ಅಥವಾ ಬರೆಯಿರಿ.

'ಸೂರ್ಯ ಆತ್ಮಾಜಗತಃ'

ಸೂರ್ಯನು ಅಕ್ಷಯ ಇದು ನಿಶ್ಚಯವೇ? ಇವನಲ್ಲಿರತಕ್ಕ ಮಹತ್ತರ ಶಕ್ತಿಗಳ್ಯಾವುವು? ಎಂದು ವಿಚಾರ ಮಾಡಿದಲ್ಲಿ ಮೊದಲನೆಯದಾಗಿ ಪ್ರಪಂಚಕ್ಕೆಲ್ಲಾ ಬೆಳಕು ಮತ್ತು ಶಾಖವನ್ನೂ ಕೊಟ್ಟು ಸಸ್ಯ ಮತ್ತು ಪ್ರಾಣಿವರ್ಗಗಳ ಪುಷ್ಟಿಗೂ ಬೆಳವಣಿಗೆಗೂ ಸಹಾಯಕನಾಗಿರುವವನಾರು? ಆ ಮಹಾ ಮಹಿಮನಲ್ಲವೇ? ಈಗಿನ ವೈದ್ಯರೂ "ಶಾಖವಾದ ಬಿಸಿಲಿಗೆ ಒಡ್ಡಿದ ದೇಹದಲ್ಲಿರುವ ವಿಷಕ್ರಿಮಿಗಳು ನಾಶವಾಗುವುವು" ಎಂದು ಅಭಿಪ್ರಾಯಪಟ್ಟಿದ್ದಾರೆ. ಇಂಗ್ಲೆಂಡ್ ಮೊದಲಾದ ಶೀತ ರಾಜ್ಯಗಳಲ್ಲಿ (Sun Lath) ಬಿಸಿಲಿಗೆ ದೇಹಗಳನ್ನು ಒಡ್ಡಿ ದೇಹದ ಕಾಂತಿಯನ್ನೂ ಆರೋಗ್ಯವನ್ನೂ ಹೆಚ್ಚಿಸಿಕೊಳ್ಳುತ್ತಿದ್ದಾರೆ ನಮ್ಮ ದೇಶದ ರೈತರೂ ಬಿಸಿಲಿನಲ್ಲಿ ಕೆಲಸ ಮಾಡುವುದರಿಂದ ಪುಷ್ಟರಾಗಿರುವರು

ಪ್ರಾಣಿ ಮತ್ತು ಸಸ್ಯಗಳ ಬೆಳವಣಿಗೆಗೆ ಮುಖ್ಯ ಆಧಾರವಾದ ಆಮ್ಲಜನಕವು ಸಮೃದ್ಧಿಯಾಗಿ ದೊರಕುವುದು ಸೂರ್ಯಕಿರಣಗಳ ಸಹಾಯದಿಂದಲ್ಲವೇ? ಸೂರ್ಯಕಿರಣಗಳ ಸಹಾಯದಿಂದ ಸಸ್ಯಗಳ ಹಸುರೆಲೆಗಳು ಅಂಗಾರಾಮ್ಲವನ್ನು ವಿಭಾಗಿಸಿ ಆಮ್ಲಜನಕವನ್ನು ಪ್ರಾಣಿಗಳ ಉಪಯೋಗಕ್ಕೆ ಬಿಡುವುದು ಪ್ರಾಣಿ ಮತ್ತು ಸಸ್ಯ ವರ್ಗಗಳಿಗೆ ಬೇಕಾದ ನೀರೂ ಮಳೆಯ ರೂಪದಲ್ಲಿ ಸೂರ್ಯಕಿರಣಗಳಿಂದ ಸಮುದ್ರ ಮತ್ತು ಸರೋವರಗಳ ನೀರೂ ಕಾದು ಆವಿಯಾಗಿ ಹೋಗಿ ಬೀಳುವುದು

ರಾತ್ರಿಯಲ್ಲಿ ಚಂದ್ರನ ಬೆಳಕು ಕೂಡ ಸೂರ್ಯನ ಪ್ರತಿಬಿಂಬವಲ್ಲವೇ? ಋತುಗಳ ಉತ್ಪತ್ತಿಗೂ ಸೂರ್ಯನಾರಾಯಣನೇ ಕಾರಣಕರ್ತನಲ್ಲವೇ? ಋತುಧರ್ಮಗಳು ಸರಿಯಾಗಿ ನಡೆದು ಪೈರುಗಳ ಬೆಳವಣಿಗೆಗೂ ಅದರಿಂದ ಪ್ರಾಣಿಗಳ ಜೀವನಕ್ಕೂ ಅನುಕೂಲಿಸಿಲ್ಲವೇ? ಒಟ್ಟಿನಲ್ಲಿ ಸೂರ್ಯನಾರಾಯಣನಿಲ್ಲದಿದ್ದರೆ ಪ್ರಪಂಚದ ಸ್ಥಿತಿಯು ಯಾವ ರೀತಿಯಲ್ಲಿರುತ್ತಿತ್ತು. ಆದರಿಂದಲೇ ಶ್ರೀಮದ್ಭಗವದ್ಗೀತೆಯಲ್ಲಿ ಪ್ರಪಂಚವು ನನ್ನಿಂದಲೇ ಸೃಷ್ಟಿಸಲ್ಪಟ್ಟು ನನ್ನಲ್ಲಿಯೇ ಲೀನವಾಗುವುದು ಎಂದು ಶ್ರೀಕೃಷ್ಣ ಪರಮಾತ್ಮನು ಹೇಳಿದ್ದಾನೆ. ಈ ಪ್ರಪಂಚದ ಆಟಪಾಟಗಳೂ, ಕುಣಿತ ಮೆರೆತಗಳೂ, ಜನನ ಮರಣಗಳೂ ಎಲ್ಲವೂ ಆ ಪರಮಾತ್ಮನದೇ ಆಗುತ್ತದೆಯಲ್ಲವೇ?

ಅಂಥಾ ಸೂರ್ಯನಾರಾಯಣನ ಆರಾಧನೆ (ಸೂರ್ಯನಮಸ್ಕಾರ) ಬಹಳ ಮುಖ್ಯವಾದುದೆಂದು ಜನಗಳಿಗೆ ತೋರ್ಪಡಿಸಲು ಈ ದೊಡ್ಡ ಗೋಳಾಕಾರವಾದ ಭೂಮಿಯು ಸೂರ್ಯನ ಸುತ್ತಲೂ ಪ್ರದಕ್ಷಿಣೆ ಮಾಡುತ್ತಿದೆ. ಈ ಪ್ರದಕ್ಷಿಣೆ ಪ್ರಪಂಚದ ಜೀವರಾಶಿಗಳಿಗೆ ರಾತ್ರಿ ವಿಶ್ರಾಂತಿಗೂ ಹಗಲು ದುಡಿಯುವುದಕ್ಕೂ ಅನುಕೂಲಿಸಿದೆ

ಯಾತರ ಮೇಲೂ ನಿಂತಿಲ್ಲದ ಈ ಬ್ರಹ್ಮಾಂಡವನ್ನು ಸೂರ್ಯಪರಮಾತ್ಮನು ಆಕರ್ಷಿಸಿ ಒಂದು ಗೊತ್ತಾದ ಪಥದಲ್ಲಿ ಪ್ರದಕ್ಷಿಣೆ ಮಾಡುವಂತೆ ವಿಧಿಸಿಲ್ಲವೇ? ಇದೂ ಅಲ್ಲದೆ ಇತರ ಗ್ರಹಗಳು ತಮ್ಮ ತಮ್ಮ ಪಥದಲ್ಲಿ ಸುತ್ತುತ್ತಿರುವಂತೆ ಮಾಡಿಲ್ಲವೇ? ಇದರಿಂದಲೇ ಸೂರ್ಯ ನಾರಾಯಣನು ಮಹಾಮಹಿಮನೆಂದು ವಿಧಿತವಾಗುವುದಿಲ್ಲವೇ? ಇಂಥಾ ಪರಮಾತ್ಮನನ್ನು ಸ್ತುತಿಸದಿರುವುದು ಕೃತಘ್ನತೆ ತೋರ್ಪಡಿಸಿದಂತಲ್ಲವೇ? ಇದರಿಂದ ಸಮಸ್ತ ಜೀವರಾಶಿಗಳೂ ಕರ್ಮಕ್ಕೆ ತಕ್ಕ ಫಲಹೊಂದಿ ಬೆರಳನ್ನು ಸುಟ್ಟುಕೊಂಡ ಮಗುವಿನಂತೆ ದುಷ್ಟ ಮಾರ್ಗಗಳಿಗೆ ಹೋಗದೆ ಸನ್ಮಾರ್ಗದಿಂದ ಆ ಪರಮಾತ್ಮನಲ್ಲಿ ಐಕ್ಯತೆಯಾಗಲು ಅನುಕೂಲಿಸಲು ಏರ್ಪಟ್ಟಿಲ್ಲವೇ? ಜ್ಞಾನಿಗಳು ತಮ್ಮ ದಿವ್ಯಜ್ಞಾನ ಚಕ್ಷುಸ್ಸಿನಿಂದ ಪ್ರಕೃತಿದೇವತೆಯನ್ನು ವಿಮರ್ಶಿಸಿ ಈ ಪ್ರಪಂಚದ ಕರ್ಮಠರಿಗೆ ಬೋಧಿಸುತ್ತಿರುವುದು, ಜ್ಞಾನ ವಿಜ್ಞಾನಗಳು ಒಂದನ್ನೊಂದು ಅಗಲದೆ ಇರುವುದು.

ಪ್ರಕೃತಿಯಲ್ಲಿಯೂ ಅರುಣೋದಯಕ್ಕೆ ಮುಂಚೆ ಪಕ್ಷಿಗಳು ತಮ್ಮ ಭಾಷೆಯಲ್ಲಿ ತಮ್ಮ ಸಂತೋಷವನ್ನು ತೋರ್ಪಡಿಸುತ್ತಾ ಪರಮಾತ್ಮನನ್ನು ಸ್ತುತಿಸುವುದು ನಮ್ಮ ಮಹರ್ಷಿಗಳು ಕೂಡ ಉಷಃಕಾಲಕ್ಕೆ ಎದ್ದು ವಿಂದು ಪರಮಾತ್ಮನನ್ನು ಸ್ತುತಿಸಿ ಮಹದಾನಂದವನ್ನು ಹೊಂದಿ ಮೋಕ್ಷವನ್ನು ಹೊಂದಿದ್ದಾರೆ

ಉಷಃಕಾಲಕ್ಕೆ ಎದ್ದು ಸ್ವಲ್ಪ ವ್ಯಾಯಾಮ ಮಾಡಿ ನಂತರ ತಣ್ಣೀರು ಸ್ನಾನಮಾಡಿ ಆ ಪರಮಾತ್ಮನನ್ನು ಸ್ತುತಿಸಿ ನಮ್ಮ ಜೀವನ ಕಾರ್ಯಗಳಿಗೆ ಉಜ್ಜುಗಿಸುವುದು ಎಷ್ಟು ಆನಂದಕರ! ಇದರಿಂದ ಲವಲವಿಕೆ, ದೇಹದಾರ್ಢ್ಯ, ಚಟುವಟಿಕೆ ಹೆಚ್ಚಾಗುತ್ತದೆ ಇದಕ್ಕೆ ವಿರೋಧವಾದ ಅಂದರೆ ಸೂರ್ಯೋದಯಾ ನಂತರ ಹಾಸಿಗೆ ಬಿಟ್ಟು ಏಳುವುದಾದರೆ ಸೋಮಾರಿತನ, ದೇಹಾಲಸ್ಯ, ಬುದ್ಧಿ ಮಡಚು ಮೊದಲಾದ ಪ್ರಕೃತಿ ವಿರುದ್ಧ ಗುಣಗಳನ್ನು ಹೋಲಿಸಿ ನೋಡಿ. ಇದೇ ಒಂದು ಸ್ವರ್ಗ, ಒಂದು ನರಕವಲ್ಲವೇ? ಈ ಸ್ವರ್ಗ ನರಕಕ್ಕಿಂತ ಬೇರೆ ಒಂದು ಇದೆಯೇನು?

ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು 'ತಪಾಮ್ಯಹ ಮಹಂವರ್ಷಂ-ನಿಗೃಹ್ಣಾಮ್ಯುತ್ಸೃಜಾಮಿಚ। ಅಮೃತಂಚೈವ ಮೃತ್ಯುಶ್ಚ ಸದಸಚ್ಚಾಹ ಮರ್ಜುನ॥' ಎಂದು ಅರ್ಜುನನಿಗೆ ಬೋಧಿಸಿದ್ದಾನೆ.

ತಾತ್ಪರ್ಯ:—ನಾನೇ ಸೂರ್ಯರೂಪದಿಂದ ತಾಪವನ್ನುಂಟುಮಾಡುವೆನು, ಜಲವನ್ನು ಆಕರ್ಷಿಸಿ ಪುನಃ ವರ್ಷಿಸುವೆನು. ಅಮೃತ ಸ್ವರೂಪನೂ, ಮೃತ್ಯುವೂ, ಸದಸತ್ಸ್ವರೂಪನೂ ಆಗಿರುವೆನು' ಎಂದು ಭಗವಂತನು ಹೇಳಿದ್ದಾನೆ ಪ್ರಪಂಚದಲ್ಲಿ ಎಲ್ಲರಿಂದಲೂ ಪೂಜಾರ್ಹವಾದ ಪ್ರತಿ ಶಿಲ್ಪಕಗಳೂ, ವಿದ್ಯಾವಂತರ ಸಹಾಯದಿಂದ ಪೂಜಾರ್ಹವನ್ನು ತಿಳಿದನಿತ್ಯಜೀವನಕ್ಕೆ ಯೋಗ್ಯವಾಗಿರುವುದು 'ಇದೇ ಆನಂದ' ಇದೇ ಮೋಕ್ಷಕ್ಕೆ ದಾರಿ!

ತಾರಾನಾಥ

ಸನ್‌ಲೈಟ್ ಸಾಬೂನು ಬಟ್ಟೆಗಳನ್ನು ಕೆಡಿಸದೆ ಕಾಪಾಡುವುದರ ಕಾರಣಗಳು :

ಬಟ್ಟೆಗಳ ಸಲವೆಗೆ ಅಗ್ಗವಾದ ಕಠಿನ ಸಾಬೂನುಗಳನ್ನು ಉಪಯೋಗಿಸಿ, ಅವುಗಳನ್ನು ಎತ್ತಿ ಒಗೆಯುವುದರಿಂದ ಬಟ್ಟೆಗಳಿಗೆ ಛೇದವುಂಟಾಗುವುದು. ಸನ್‌ಲೈಟು ಅವುಗಳಲ್ಲಿರುವ ಮಲಿನತೆಯನ್ನು ಸುಲಭವಾಗಿ ನೀಗಿಸಿ ಬಟ್ಟೆಗಳಿಗೆ ಏನೂ ಹಾನಿಯಿಲ್ಲದೆ ಸಲವೆಮಾಡುವುದು ಆದುದರಿಂದಲೇ ಬಟ್ಟೆಗಳು ಬಹಳಕಾಲ ಬಾಳಿಕೆ ಬರುವುವು ಈ ಚಿತ್ರಪಠಗಳು ಸನ್‌ಲೈಟು ಮತ್ತು ಅಗ್ಗವಾದ ಸಾಬೂನುಗಳು ಮಾಡುವ ಸಲವೆಗಳ ವ್ಯತ್ಯಾಸವನ್ನು ತೋರಿಸುವುವು

SUNLIGHT SOAP

ದೇಹ ಶುಭ್ರಕ್ಕೂ ಬಟ್ಟೆಗಳ ಸಲವೆಗೂ

S K 11918-299A LEVER BROTHERS (INDIA) LIMITED KANARESE

ನೀವು ಎಂದಾದರೂ ಬಿಹಾರ ರಸಾಯನಿಕ ವೈದ್ಯಶಾಲೆಯ ಕೇಶಪುಷ್ಪಸಾರಕೂಡಿದ ಮಹಾ ಭೃಂಗರಾಜತೈಲ್ಯ ಉಪಯೋಗಿಸಿರುವಿರೋ?

ನಿಮ್ಮ ಬೋಳು ತಲೆಯನ್ನು ಇದರ ಉಪಯೋಗದಿಂದ ವಿಪುಲವಾದ ಕೂದಲಿನಿಂದ ರಂಜಿಸುವುದು, ಅನೇಕರು ಕೂದಲು ಉದುರುವುದರಿಂದ ಮರುಕಪಡುವರು ಅಂಥವರು ಒಂದು ಸೀಸೆ ಮೇಲೆ ಕಾಣಿಸಿದ ತೈಲವನ್ನು ಉಪಯೋಗಿಸಿ ದಿನದಿನಕ್ಕೂ ಉದುರುವ ಕೂದಲಿಗೆ ತಡೆಮಾಡಿ ಬಂಧುಮಿತ್ರರಿಂದ ಶ್ಲಾಘಿಸಲ್ಪಡಿರಿ. ಇದು ಪ್ರತಿ ದಿನದ ಲೇಪನೆಯಿಂದ ಉದುರಿಹೋಗುವ ಕೂದಲನ್ನು ತಡೆಕಟ್ಟುವುದು ವಿಶೇಷವಾಗಿ ಬೆಳೆದು ಕೂದಲಿಗೆ ಹೊಳಪನ್ನು ಕೊಟ್ಟು ಅಕಾಲದಲ್ಲಿ ನರೆತ ಕೂದಲು ಕಪ್ಪಾಗಿಸುವುದು ಇದು ಶಾಸ್ತ್ರೋಕ್ತವಾಗಿ ತಯಾರಿಸಿರುವದರಿಂದ, ತಲೆ ತಿರುಗುವಿಕೆ, ಕಣ್ಣಿನ ದೋಷ, ನಿದ್ರಾಹೀನತೆ, ಸ್ಮೃತಿನಾಶ, ಇವುಗಳನ್ನು ಗುಣವಾಗುವುದಲ್ಲದೆ, ಮೂಳೆಯ ಕೆಲಸದ ಶ್ರಮ, ಸ್ತ್ರೀಯರಿಗೂ, ಧೈರ್ಯಕ್ಕೆ ಪ್ರಯೋಜನವಾಗಿದೆ ಸೀಸೆ ಒಕ್ಕೆ ೧—೧೨—೦.

ವಿಳಾಸ —Behar Chemical Works,
Shree Gauranga Bhavan, BHAGALPUR.
ಏಜಂಟರು— ಷಾ ಕಂಪೆನಿ, ಮಂಗಳೂರು, ದ. ಕ.

ಬೇಸಿಗೆಕಾಲದ ಕಾಲುನೋವಿಗೆ ಸಾಂಬಕನ್ನು ಹಚ್ಚಿರಿ.

ಬೇಸಿಗೆ ಕಾಲದಲ್ಲಿ ಅನೇಕ ಕಾಲು ನೊಂದುಹೋಗುವುದು, ಕಾಲು ಒಡೆಯುವುದು ಉಂಟು. ಅದರಿಂದ ಉಂಟಾದ ನೋವು ಬಹಳ ವಿಪರೀತವಾಗಿರುತ್ತದೆ. ಇಂತಹ ನೋವಿನಿಂದ ಪಾರಾಗಲು ಬೇಕಾದರೆ ಶುದ್ಧ ವನಸ್ಪತಿಗಳಿಂದ ತಯಾರಿಸಲ್ಪಟ್ಟ ಸಾಂಬಕನ್ನು ರಾತ್ರಿಕಾಲ ಮಲಗುವ ಸಮಯದಲ್ಲಿ ಕಾಲಿಗೆ ಚೆನ್ನಾಗಿ ಹಚ್ಚಿರಿ. ಸಾಂಬಕದಲ್ಲಿರುವ ವಿಷಘ್ನ ತೈಲಗಳು ರೋಮ ಕೂಪಗಳ ಮೂಲಕ ಚರ್ಮದೊಳಗೆ ಹೊಕ್ಕು ಅಲ್ಲಿಯ ವಿಷಾಣುಗಳನ್ನು ಕೊಂದು ಕಾಲು ಬಾತುಹೋಗುವಿಕೆ, ಒಡೆದು ಹೋಗುವಿಕೆ ಮುಂತಾದ್ದು ಮೊದಲಾದುವುಗಳನ್ನೆಲ್ಲಾ ಯಾವ ರೋಗವೂ ಕಲೆಗಳಿಲ್ಲದೆ ಗುಣಪಡಿಸುತ್ತದೆ. ಎಲ್ಲಾ ಔಷಧಿ ಅಂಗಡಿಗಳಲ್ಲೂ ಡಬ್ಬಿಗೆ ರೂ. 1 ಅಥವಾ ರೂ. 2-4 0ಕ್ಕೆ ಮಾರಲ್ಪಡುತ್ತದೆ.



ಸಾಂಬಕ್
Zam Buk

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿಯಲ್ಲೇ ಕೊಡಿರಿ!

ಪ್ರಕಟಣೆ.

ಕಾರ್ಕಳ ಹೆಣ್ಣು ಬಾಲಿಕಾ ಪಾಠಶಾಲೆಯಲ್ಲಿ Secondary grade Trained ಉಪಾಧ್ಯಾಯಿನಿ ಒಬ್ಬಳು ಮತ್ತು Higher Elementary grade Trained ಉಪಾಧ್ಯಾಯಿನಿಯರು ಇಬ್ಬರು ಈ ಪ್ರಕಾರ ಮೂವರು ಉಪಾಧ್ಯಾಯಿನಿಯರು ಬೇಕಾಗಿರುತ್ತಾರೆ. ಸದರಿ ಹುದ್ದೆಗಳನ್ನು ಅಪೇಕ್ಷಿಸುವರು ತಮ್ಮ ಸರಿಯಾದ ವಿಳಾಸಕೊಟ್ಟು ಈ ಕೆಳಗೆ ಸಹಿ ಮಾಡಿದವರ ಬಳಿಗೆ ತಾ॥ 30-5-36ರ ಒಳಗೆ ತಲಪುವಂತೆ ತಮ್ಮ ಅರ್ಜಿಗಳನ್ನು ಬರೆದುಕೊಳ್ಳುವುದು.

ಕಾರ್ಕಳ, 15-5-36. **K. Soiru Prabhu,** *President,*
Sri Venkatramana Temple Board of Education.
Karkala.

Wanted

as active partners, on co-operative basis, educated young men for employment in an agricultural and industrial colony on a monthly allowance of Rupees ₹ 8-0. Cash security of Rs. 100 is essential along with the applications to:

Kanjarpane Gopalkrishnaya,
Sullia Post, South Kanara.

ಕಾರ್ಯಸಿದ್ಧಿ ಮಂತ್ರ

ಯಾರೇ ಆಗಲಿ, ಗಂಡಸರಾಗಲಿ, ಹೆಂಗಸರಾಗಲಿ, ಹುಡುಗರಾಗಲಿ, ಈ ಮಂತ್ರವನ್ನು ಸಿದ್ಧಿ ಮಾಡಿಕೊಂಡ ಮೇಲೆ [illegible] ರಾತ್ರಿಯಲ್ಲಿ ಜಪಿಸಿದರೆ ಅವರ ಮನೋಭಿಲಾಷೆಗಳೆಲ್ಲವೂ ನೆರವೇರುವುವು. ಇದರ ಸಹಾಯದಿಂದ ಕಳೆದ ಪದಾರ್ಥಗಳ ಪತ್ತೆ [illegible] ಸಂಬಂಧಗಳಿಗೆ [illegible] ಮನೋಭಿಲಾಷೆಗಳನ್ನೂ, ಭೂತಭವಿಷ್ಯತ್ [illegible] ತಿಳಿಯಬಹುದು, [illegible] ಕಾರ್ಯಸಿದ್ಧಿ ಮಂತ್ರವು [illegible] ಕಳುಹಿಸಲ್ಪಡುವುದು. [illegible]

ಕಾರ್ಯಸಿದ್ಧಿ ಆಶ್ರಮ. 211 ವಿಶ್ವೇಶ್ವರ ಪುರಂ,
ಬೆಂಗಳೂರು ಸಿಟಿ. (S. I.)

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ.
ಹೊಸ ರಾಶಿ ಅಕ್ಕಿ ...	3— 4	3— 0
ಹೊಸ ಮುಸ್ತಿ ...	3—10	4— 8
ಗುಮ್ಮ ಸುಗ್ಗಿ ...	3— 8	3—12
ಊರ ಅವ್ವಲ್ ಬೆಳ್ತಿಗೆ ...	4— 0	4— 8
ರಂಗೂನು ಬೆ. ಗೋ. ಚೀಲ...	6— 4	7— 0
ಎಲ್ಲೂರು ಬೆ. ಮು. ಚೀಲ...	4— 4	4— 8
ಗೋಧಿ ಗೋಣಿ ಚೀಲ ...	8 — 8	10— 4
ತೊಗರಿ ಗೋಣಿ ಚೀಲ ...	9 —0	9 — 8
ಹುರುಳಿ ಗೋಣಿ ಚೀಲ ...	5— 4	5 —12
[illegible] ಗೋಣಿ ಚೀಲ ...	7 — 4	9 — 8
[illegible] ಗೋಣಿ ಚೀಲ...	11— 0	15— 8
ಉದ್ದು ಗೋಣಿ ಚೀಲ ...	9— 8	10 — 0
ಹೆಸರು ಗೋಣಿ ಚೀಲ ...	9— 4	9—12
ಊರುಬೆಲ್ಲ ಖಂಡಿ ಚೀಲ ...	30— 0	35— 0
ಉಪ್ಪು ಗೋಣಿ ಚೀಲ ...	4— 8	4— 8
ಕೊಬ್ರಿ ಖಂಡಿ ಚೀಲ ...	60— 0	70— 0
ಕೊಬ್ರಿ ಹಿಂಡಿ ಖಂಡಿ ಚೀಲ...	28— 0	29— 0
ಎಳ್ಳಿಂಡಿ ಖಂಡಿ ಚೀಲ ...	32 — 8	33—12
ಕೊಬ್ರಿ ಎಣ್ಣೆ ಮುಡಿ ಚೀಲ...	4—15	6— 0
ಎಳ್ಳೆಣ್ಣೆ ಮುಡಿ ಚೀಲ ...	7— 0	7— 0
ಹರಳೆಣ್ಣೆ ಪೆಟ್ಟಿಗೆ ಚೀಲ...	6— 5	6— 5
[illegible] ಸಕ್ಕರೆ ಮು. ಚೀಲ...	3— 9	3 — 9
ಮೆಣಸು ...	2— 8	4— 0
ಸಾಸಿವೆ ಮುಡಿ ಚೀಲ ...	5 — 8	6— 0
ಕಾಳುಮೆಣಸು ಖ. ಚೀಲ ...	102— 8	105—
[illegible] ಚೀಲ...	38— 0	39— 0
ಗೇರುಬೀಜ ಮು. ಚೀಲ ...	3— 8	3 — 10
[illegible] ಖಂಡಿ ಚೀಲ ...	35— 0	37— 8
[illegible] ಮು. ಚೀಲ...	9— 12	9— 14
[illegible] ಮು. ಚೀಲ	12— 8	14— 0
[illegible] ಸೇರು ಚೀಲ ...	17— 8	18— 0
[illegible] ಮು. ಚೀಲ...	10— 0	10—
[illegible] ಚೀಲ ...	22— 8	22— 8
[illegible] ಖಂಡಿ ಚೀಲ	20— 0	25— 0
[illegible] ಖಂಡಿ ಚೀಲ	145— 0	150— 4
[illegible] ಖಂಡಿ ಚೀಲ...	175— 0	185— 0
[illegible] ...	25— 0	26 — 8

ಸ್ತನೋಸ್ತೇಧಃ

STHANO STHEDAH THE MALAYALA OUSHADHA CO. POST - CHALAPURAM, MALABAR

ಮಲೆಯಾಳಿ ಸ್ತ್ರೀಯರ ರಹಸ್ಯವು

[illegible]

[illegible]

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟ್ ಚಾಲಾಪುರಂ, ಮಲಬಾರು.

[illegible]

[illegible]

[illegible] ವಿದ್ಯಾದಾಯಿನೀ ಸೊಸೈಟಿ

[illegible] ರೂ. 50,000. [illegible] ರೂ. 20,000. [illegible]

[illegible]

23	[illegible]	[illegible]	[illegible]	[illegible]	[illegible]	[illegible]	
24	[illegible]	[illegible]	[illegible]	[illegible]	[illegible]	[illegible]	
25	[illegible]	[illegible]	[illegible]	[illegible]	[illegible]	[illegible]	
26	[illegible]	[illegible]	[illegible]	[illegible]	[illegible]	[illegible]	
27	[illegible]	[illegible]	[illegible]	[illegible]	[illegible]	[illegible]	
28	[illegible]	[illegible]	[illegible]	[illegible]	[illegible]	[illegible]	
29	[illegible]	[illegible]	[illegible]	[illegible]	[illegible]	[illegible]	

ಪ್ರೌಢಾವಸ್ಥೆಯೂ ಸೂರ್ಯನ ಬೆಳಕೂ

ಹಿಂದೂದೇಶದ ಬಾಲಕ ಬಾಲಕಿಯರೂ ಬಹು ಬೇಗನೆ ಪ್ರೌಢ ದೆಸೆಯನ್ನು ತಾಳಲು ಕಾರಣವೇನು?

ಇದರ ಕಾರಣವು ಬಹುಶಃ ಇಲ್ಲಿಯ ಅತಿರೇಕ ಉಷ್ಣದ ಸ್ಥಿತಿಯಿಂದಾಗಿ ಎಂದು ತಿಳಿದು ಬಂದಿದೆ. ಈ ಉಷ್ಣವು ನಮಗೆ ಡಿ ಆಹಾರ ಸತ್ವವನ್ನು ಸಮೃದ್ಧಿಯಾಗಿ ಕೊಡುತ್ತದೆ. ಡಾ। ಎಫ್. ಡಬ್ಲ್ಯು. ಕೊಹ್ ಎಂಬವರ ಸಿದ್ಧಾಂತ ಪ್ರಕಾರ ಈ ಡಿ ಆಹಾರ ಸತ್ವವು ಪ್ರೌಢ ದೆಸೆಯನ್ನು ಬಹು ಬೇಗನೆ ಕಂಡುಹಿಡಿದಿರುವರು ಎಂದೂ, ಇದ್ದರಿಂದಲೇ ಹೆತ್ತವರಿಗಿಂತಲೂ ಮಕ್ಕಳು ಬಹು ಬೇಗನೆ ಪ್ರೌಢ ದೆಸೆಯನ್ನು ತಾಳುತ್ತಾರೆಂದೂ, ಅವರು ಅಭಿಪ್ರಾಯ ಪಡುತ್ತಾರೆ.

ಮೊದಲು ಯೂರೋಪು ದೇಶಗಳಲ್ಲಿ ಹುಡುಗಿಯರು 23 ವರ್ಷಗಳಲ್ಲಿ, ಹುಡುಗರು 25 ವರುಷಗಳಲ್ಲಿ ಪ್ರೌಢಾವಸ್ಥೆಯನ್ನು ತಾಳುತ್ತಿದ್ದರೆ ಈಗ ಹುಡುಗಿಯರು 17 ವರ್ಷಗಳಲ್ಲೂ ಹುಡುಗರು 20 ವರುಷಗಳಲ್ಲಿ ಪ್ರೌಢಾವಸ್ಥೆಯನ್ನು ತಾಳುತ್ತಾರೆ. ಇದಕ್ಕೆ ಕಾರಣ ಅವರು ಡಿ ಆಹಾರ ಸತ್ವವನ್ನು ಹೆಚ್ಚಾಗಿ ತೆಗೆದುಕೊಳ್ಳುವುದರಿಂದಾಗಿ ಎಂದು ತಿಳಿದು ಬಂದಿದೆ.

ಶ್ವಾಸಕೋಶಗಳನ್ನು ಹೇಗೆ ಆರೋಗ್ಯವಾಗಿಡಬಹುದು.

ಶ್ವಾಸಕೋಶದ ಬಾಧೆಯನ್ನು ನೀಗಬೇಕಾದರೆ ಶ್ವಾಸಕೋಶಗಳ ಸ್ಥಿತಿ ಸ್ಥಾಪಕ (Elastic) ಶಕ್ತಿಯು ಸರಿಯಾಗಿರುವಂತೆ ಮಾಡಬೇಕು. ಇದರ ವಿಷಯ ಲಂಡನ್ ನಗರದ ಡಾಕ್ಟರರೊಬ್ಬರು ಹೀಗೆ ಅಭಿಪ್ರಾಯ ಪಡುತ್ತಾರೆ.

ನಮ್ಮ ಇಡೀ ದೇಹದಲ್ಲಿ ರೋಗಾಣುಗಳು ಸಂಚರಿಸುತ್ತವೆ. ಎಲ್ಲಿಯಾದರೂ ಸ್ಥಳವನ್ನು ಹುಡುಕುವುದೆ ಇವುಗಳ ಮುಖ್ಯ ಕೆಲಸವು. ಮನುಷ್ಯನು ಗಟ್ಟಿಮುಟ್ಟಾಗಿರುವಾಗ ಈ ಅಣುಗಳಿಂದ ಯಾವ ಬಾಧೆಯೂ ಇಲ್ಲದು. ಆದರೆ ಎಲ್ಲಾದರೂ ನಾವು ಎಡರಿಬಿದ್ದೆವೆಂದರೆ, ಇವುಗಳು ಆ ಸಂದರ್ಭದ ಒಳ್ಳೇ ಉಪಯೋಗವನ್ನು ಪಡೆದು ತಮ್ಮ ಪ್ರತಾಪವನ್ನು ತೋರಿಸಿಯೇ ಬಿಡುತ್ತವೆ. ಇಂತಹ ಅಣುಗಳು ಶ್ವಾಸಕೋಶಗಳಲ್ಲೂ ಇವೆ. ನಮ್ಮ ಶ್ವಾಸಕೋಶಕ್ಕೆ ಸ್ಥಿತಿಸ್ಥಾಪಕ ಶಕ್ತಿ ಇರುವ ವರೆಗೆ ಈ ಅಣುಗಳಿಂದ ಯಾವ ಕಾರ್ಯವನ್ನು ಮಾಡಲು ಸಾಧ್ಯವಿಲ್ಲ. ಅದಕ್ಕೆ ತಕ್ಕ ಕೊಡುವ ಬಂಡೆಯಲಿ ಈ ಅಣುಗಳು ನಮ್ಮ ಮೂಗಿನಲ್ಲಿರುವುದನ್ನು ಪಡೆಯುತ್ತವೆ. ಅದ್ದರಿಂದ ಪ್ರಪಂಚದಲ್ಲಿ ಮಾನವನಿಗೆ ಬರುವ ಎಷ್ಟೋ ರೋಗಗಳು ಬರಬಹುದಾದ ಇಷ್ಟು ರೋಗಗಳು ಒಳಗಿನಿಂದಲೇ ಉತ್ಪನ್ನವಾಗಬಹುದಾಗಿದೆ.

[illegible]

ದೊಂಬರಾಟದ ನೂತನ ದೃಶ್ಯ.

[illegible]

[illegible]

[illegible]

Now Running:-

ONE OF THE GREATEST JUNGLE THRILLER EVER PRODUCED

"Call of the Savage"

A UNIVERSAL SERIA[illegible] OF 24 REELS [illegible]

ಇದುವರೆಗೆ ಎಂದೂ ಕಂಡಿರದ ಭೀಕರ ಕಾಡುಪ್ರಾಣಿಗಳೊಂದಿಗೆ [illegible]

ಒಂದೇ ಬಾರಿ 24 ರೀಲುಗಳು **ಕೋಲ್ ಒಫ್ ದಿ ಸೆವೇಜ್** ಒಂದೇ ಬಾರಿ 24 ರೀಲುಗಳು

ನೂತನ ಚಿತ್ರ.

Next Attraction

There is true love-thrill-Pathos-Struggle Songs Every thing!

Missing a Picture like this means

Missing one's Sweetheart and one's true love

SEE WHAT IT MEANS

"The more we love, the better we are and the greater our love is the dearer we are to God"

SEE AND HAVE [illegible]

LOVE PATH

ಪ್ರೇಮ ಪಥ

ಮಧೂಕರ್ ಗುಪ್ತೆ, ಶಾಂತೀಲಾಲ, ಕಮಲಾಬಾಯಿ, ಹೀರಾಭಾಯಿ

[illegible]

ಶ್ರೀ ಕೃಷ್ಣಾ ಸಿನೆಮಾ, ಮಂಗಳೂರು.

ಬೇಸಿಗೆಕಾಲದ ಕಾಲುನೋವಿಗೆ

ಝಾಂಬಕನ್ನು ತಿಕ್ಕಿರಿ

ಬೇಸಿಗೆ ಕಾಲದಲ್ಲಿ ಆಗಾಗ ಕಾಲು ನೊವುವುಂಟಾಗುವುದು, ಕಾಲು ಒಡೆಯುವುದು ಉಂಟು ಅದರಿಂದ ಉಂಟಾದ ನೋವು ಬಹಳ ವಿಷಮ ತರದ್ದಾಗಿರುತ್ತದೆ ಇಂತಹ ನೋವಿನಿಂದ ಪಾರಾಗ ಬೇಕಾದರೆ ಶುದ್ಧ ವನಸ್ಪತಿಗಳಿಂದಲೇ ತಯಾರಿಸಲ್ಪಟ್ಟ ಝಾಂಬಕನ್ನು ರಾತ್ರಿಕಾಲ ಮಲಗುವ ಸಮಯ್ಯದಲ್ಲಿ ಕಾಲಿಗೆ ಚೆನ್ನಾಗಿ ತಿಕ್ಕಿರಿ ಝಾಂಬಕಿನಲ್ಲಿರುವ ಔಷಧೀಕ ತೈಲಗಳು ರೋಮ ಕೂಪಗಳ ಮೂಲಕ ಚರ್ಮದೊಳ ಹೊಕ್ಕು ಅಲ್ಲಿಯ ವಿಷಾಣುಗಳನ್ನು ಕೊಂದು ಕಾಲು ಬಾತುಹೋಗುವಿಕೆ, ಒಡೆದು ಹೋಗುವಿಕೆ ತುರಿಗಜ್ಜಿ ಮೊದಲಾದುವುಗಳನ್ನೆಲ್ಲಾ ಯಾವುದೊಂದೂ ಕಲೆಗಳಿಲ್ಲದೆ ಗುಣಪಡಿಸುತ್ತದೆ ಎಲ್ಲಾ ಔಷಧಿಯ ಅಂಗಡಿಗಳಲ್ಲೂ ಕರಡಿಗೆಯೊಂದಕ್ಕೆ ರೂ 1 ಅಥವಾ ರೂ 2-4 0ಕ್ಕೆ ಮಾರಲ್ಪಡುತ್ತದೆ

ಝಾಂಬಕ್

Zam Buk

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿಯಲ್ಲೇ ಕೊಡಿರಿ!

ಪ್ರಕಟಣೆ.

ಕಾರ್ಕಳ ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ Secondary grade Trained ಉಪಾಧ್ಯಾಯಿನಿ ಒಬ್ಬಳು ಮತ್ತು Higher Elementary grade Trained ಉಪಾಧ್ಯಾಯಿನಿಯರು ಇಬ್ಬರು ಈ ಪ್ರಕಾರ ಮೂವರು ಉಪಾಧ್ಯಾಯಿನಿಯರು ಬೇಕಾಗಿರುತ್ತಾರೆ ಸದರಿ ಹುದ್ದೆಗಳನ್ನು ಅಪೇಕ್ಷಿಸುವರು ತಮ್ಮ ಸರಿಯಾದ ವಿಳಾಸಕೊಟ್ಟು ಈ ಕೆಳಗೆ ಸಹಿ ಮಾಡಿದವರ ಬಳಿಗೆ ತಾ 30-5-36ರ ಒಳಗೆ ತಲಪುವಂತೆ ತಮ್ಮ ಅರ್ಜಿಗಳನ್ನು ಬರೆಕೊಳ್ಳುವುದು

ಕಾರ್ಕಳ, 15-5-36 } **K Solru Prabhu,**
President
Sri Venkatramana Temple
Board of Education
Karkala.

Wanted

is active partners, on co-operative basis educated young men for employment in an agricultural and industrial colony on a monthly allowance of Rupees 7 8-0 Cash security of Rs 100/- is essential along with the applications to

Kanjarpane Gopalkrishnaya,
Sullia Post South Kanara

ಕಾರ್ಯಸಿದ್ಧಿ ಮಂತ್ರಂ

ಯಾರೇ ಆಗಲಿ, ಗಂಡಸರಾಗಲಿ, ಹೆಂಗಸರಾಗಲಿ, ಹುಡುಗರಾಗಲಿ, ಈ ಮಂತ್ರವನ್ನು ಸಿದ್ಧಿ ಮಾಡಿಕೊಂಡು ಮಲಗುವುದಕ್ಕೆ ಮುಂಚೆ ರಾತ್ರಿಯಲ್ಲಿ ಜಪಿಸಿದರೆ ಅವರ ಮನೋಭಿಲಾಷೆಗಳೆಲ್ಲವೂ ನೆರವೇರುವುವು ಇದರ ಸಹಾಯದಿಂದ ಕಳೆದ ಪದಾರ್ಥಗಳ ಪತ್ತೆ ಹಚ್ಚುವಿಕೆಯು ದೂರವಾದ ಸಂಬಂಧಿಗಳೊಡನೆ ಸಂಭಾಷಣೆಯೂ, ಇತರರ ಮನೋಭಿಪ್ರಾಯಗಳನ್ನು ಭೂತಭವಿಷ್ಯದ್ವರ್ತಮಾನಗಳೆಲ್ಲವನ್ನೂ ಸುಲಭವಾಗಿ ತಿಳಿಯಬಹುದು ಕೇವಲ ಒಂದು ರೂಪಾಯಿಯನ್ನು ಮನಿಯಾರ್ಡರ್ ಮೂಲಕ ಕಳುಹಿಸುವವರಿಗೆ ಈ ಕಾರ್ಯಸಿದ್ಧಿ ಮಂತ್ರವು ಅಂಚೆ ವೆಚ್ಚವಿಲ್ಲದೆ ಕಳುಹಿಸಲ್ಪಡುವುದು ವಿ ಪಿ ಮಾಡುವುದಿಲ್ಲ ವ್ಯವಸ್ಥಾಪಕ

ಕಾರ್ಯಸಿದ್ಧಿ ಆಶ್ರಮ 211 ವಿಶ್ವೇಶ್ವರ ಪುರಂ

ಬೆಂಗಳೂರು ಸಿಟಿ. (S I)

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ ಅ	ರೂ ಅ
ಹೊಸ ದಾರಿ ಅಕ್ಕಿ	— 4	3— 0
ಹೊಸ ಮುಸ್ತಿ	3—10	4— 8
ಗುಡ್ಡೆ ಸುಗ್ಗಿ	,— 6	3—12
ಊರ ಅವ್ವಲ್ ಬೆಳ್ತಿಗೆ	4— 0	4— 8
ರಂಗೂನು ಬೆ ಗೋ ರಿಕ್ಕೆ	6— 4	7— 0
ಎಲ್ಲೂರು ಬೆ ಮು ರಿಕ್ಕೆ	4— 4	4— 8
ಗೋದಿ ಗೋಣಿ ರಿಕ್ಕೆ	8 — 6	10— 4
ತೊಗರಿ ಗೋಣಿ ರಿಕ್ಕೆ	9 —0	9 — 6
ಹುರುಳಿ ಗೋಣಿ ರಿಕ್ಕೆ	5— 4	5 —12
ಕಡಲೆ ಗೋಣಿ ರಿಕ್ಕೆ	7 — 4	9 — 8
ತೊಗರಿಬೇಳೆ ಗೋಣಿ ರಿಕ್ಕೆ	11— 0	15— 6
ಉದ್ದು ಗೋಣಿ ರಿಕ್ಕೆ	9— 8	10 — 0
ಹೆಸರು ಗೋಣಿ ರಿಕ್ಕೆ	9— 4	9—12
ಊರುಬೆಲ್ಲ ಖಂಡಿ ರಿಕ್ಕೆ	30 — 0	35— 0
ಉಪ್ಪು ಗೋಣಿ ರಿಕ್ಕೆ	4— 8	4— 8
ಕೊಬ್ಬರಿ ಖಂಡಿ ರಿಕ್ಕೆ	60— 0	70— o
ಕೊಬ್ಬರಿ ಹಿಂಡಿ ಖಂಡಿ ರಿಕ್ಕೆ	28— 0	29— o
ಎಳ್ಳಿಂಡಿ ಖಂಡಿ ರಿಕ್ಕೆ	32 — 8	33—12
ಕೊಬ್ಬರಿ ಎಣ್ಣೆ ಮಣ ರಿಕ್ಕೆ	4—15	6— 0
ಎಳ್ಳೆಣ್ಣೆ ಮಣ ರಿಕ್ಕೆ	7— o	7— 0
ಚಿಮಿಣಿಎಣ್ಣೆ ಪೆಟ್ಟಿಗೆ ರಿಕ್ಕೆ	6— 5	6— 5
ದೋರಿನ ಸಕ್ಕರೆ ಮ ರಿಕ್ಕೆ	3— 9	3 — 9
ಮೆಣಸು	2— 8	4— 0
ಸಾಸಿವೆ ಮುಡಿ ರಿಕ್ಕೆ	5 — 8	6— 0
ಕಾಳುಮೆಣಸು ಖ ರಿಕ್ಕೆ	102— 8	105—
ಮೆಂತ್ಯೆಬೀಜ ಮಣರಿಕ್ಕೆ	38— 0	39— o
ಗೇರುಬೀಜ ಮು ರಿಕ್ಕೆ	3— 8	3 — 10
ಕಟ್ಟಿಗೆ ಖಂಡಿ ರಿಕ್ಕೆ	35— o	37— 8
ಕಾಂಪ್ರುಕಗಳು ಮ ರಿಕ್ಕೆ	9— 12	9— 14
ಕಾಂಪ್ರುಶಾಸ್ತ್ರಗಳು ಮ ರಿಕ್ಕೆ	12— 8	14— o
ಚಿಪ್ಪಡೆಕ್ಕೆ ಸೇರು ರಿಕ್ಕೆ	17— 8	18— 0
ಹಿಪ್ಪೆ ಕಾಡು ಮು ರಿಕ್ಕೆ	10— 0	10—
ಪದನು ರಿಕ್ಕೆ	22— 6	22— 8
ಹುಣಸೆ ಹುಳಿ ಖಂಡಿ ರಿಕ್ಕೆ	20— o	25— 0
ನೇಟಿವ್ ಕಾಫಿ ಖಂಡಿ ರಿಕ್ಕೆ	145— 0	150— 4
ಪ್ಲಾಂಟರ ಕಾಫಿ ಖಂಡಿ ರಿಕ್ಕೆ	175— o	185— 0
ಮುಡಿಕೇರಿ ಏಲಕ್ಕಿ	25— o	26 — 8

ಸ್ತನೋ ಸ್ತೇಧಃ

STHANO STHEDAH THE MALAYALA OUSHADHA CO
POST - CHALAPURAM MALABAR

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು. ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು ಮನುಷ್ಯನು ಹೆಂಗಸೊರ್ವಳನ್ನು ಕಂಡೊಡನೆಯೆ ಅವನ ದೃಷ್ಟಿಯು ತಲೆಯ ಮುಖದಿಂದ ಸರಿದು ಸ್ತನದ ಬಳಿ ನಿಲ್ಲುವು—ಅವುಗಳು ಉಬ್ಬಿ ಗೋಲಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣವಾಪಸು.

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ ಸ್ತನೋ ಸ್ತೇಧಾದಿಂದ ಸಾಧ್ಯ ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದಾರುಣವಾದ ಚಿಂತೆಯಿಂದಲೂ ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ ಅವುಗಳು ಜೋಲು ಬಿದ್ದಿದ್ದರೂ ಸರಿಯಾಗಿ ಬೆಳೆಯದೆ ಇದ್ದರೂ **ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ,** ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲುದು ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪುಷ್ಟತೆಯನ್ನೂ ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಜನಮನಾಕರ್ಷಕಗಳನ್ನಾಗಿ ಮಾಡುವುದು ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು ಅಂತಹ ಗುಣವನ್ನು ನೀವೂ ಪಡೆಯಿರಿ

ಸ್ತನೋ ಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ 3 ನಂಬ್ರ 21 (ಹೊರಗೆ ಲೇಪಿಸುವ ಮದ್ದು) ರೂ 3
ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು

ಇದಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ

1 ಮುಟ್ಟುದೋಷ, 2 ಸಂತತಿ ಪ್ರತಿಬಂಧಕ 3 ಧಾತುಪುಷ್ಟಿ, 4 ಲಿಂಗವೃದ್ಧಿ 5 ಸ್ತ್ರೀರೋಗ, 6 ಕ್ಷಯ ಸಂಹಾರಿ, 7 ವಾತರೋಗ

ಅಲಭ್ಯ ಲಾಭ! **ಸುವರ್ಣ ಸಂದರ್ಭ!**

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ

ತೆಗೆಯುವ ತಾರೀಕು 8-6-1936 ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ

ಸೋಡ್ತಿಯ ಮೊಬಲಗು: ರೂ. 50,000.

ಒಟ್ಟು ಬಹುಮಾನಗಳ ಸಂಖ್ಯೆ: 1778. ಮೌಲ್ಯ ರೂ. 20,000.

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಮೆನೇಜರ್— ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

ವಿ ಸೂ—ಯಾವ ಕಾರಣದಿಂದಲಾದರೂ ಸೋಡ್ತಿ ತೆಗೆಯುವ ತಾರೀಕನ್ನು ಮುಂದರಿಸೋದಾಗುವುದಿಲ್ಲ

ಶಾಲಿವಾಹನ ಶಕ ೧೮೫೮ನೆಯ ಯುವ ಸಂವತ್ಸರದ ಜ್ಯೇಷ್ಠ ಶು ೩ ಶನಿವಾರದಿಂದ ಜ್ಯೇಷ್ಠ ಶು ೯ ಶುಕ್ರವಾರದ ವರೇಗಿನ ಪಂಚಾಂಗ.(೧೯೩೬ನೇಯ ವೃಷಭ ಬೇಶ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	[illegible]
23	ಶನಿ	೩	೪೨	ಮೃಗಶಿರಾ	೩	೧೦	
24	ರವಿ	೪	೪೧	ಆರ್ದ್ರಾ	೪	೧೧	
25	ಸೋಮ	೫	೪೦	ಪುನರ್ವಸೂ	೩	೧೨	
26	ಕುಜ	೬	೪೧	ಪುಷ್ಯ	೫	೧೩	
27	ಬುಧ	೭	೪೩	ಆಶ್ಲೇಷಾ	೮	೧೪	
28	ಗುರು	೮	೪೬	ಮಘೆ	೧೨	೧೫	
29	ಶುಕ್ರ	೯	೫೧	ಹುಬ್ಬ	೧೭	೧೬	

ಪ್ರೌಢಾವಸ್ಥೆಯೂ ಸೂರ್ಯನ ಬೆಳಕೂ

ಹಿಂದೂದೇಶದ ಬಾಲಕ ಬಾಲಕಿಯರೂ ಬಹು ಬೇಗನೆ ಪ್ರೌಢ ದೆಸೆಯನ್ನು ತಾಳಲು ಕಾರಣವೇನು?

ಇದರ ಕಾರಣವು ಬಹುಶಃ ಇಲ್ಲಿಯ ಅತಿರೇಕ ಉಷ್ಣದ ಸ್ಥಿತಿಯಿಂದಾಗಿ ಎಂದು ತಿಳಿದು ಬಂದಿದೆ. ಈ ಉಷ್ಣವು ನಮಗೆ ಡಿ ಆಹಾರ ಸತ್ವವನ್ನು ಸಮೃದ್ಧಿಯಾಗಿ ಕೊಡುತ್ತದೆ ಡಾ। ಎಫ್ ಡಬ್ಲ್ಯು ಕೋಚ್ ಎಂಬವರ ಸಿದ್ಧಾಂತ ಪ್ರಕಾರ ಈ ಡಿ ಆಹಾರ ಸತ್ವವು ಪ್ರೌಢ ದೆಸೆಯನ್ನು ಬಹು ಬೇಗನೆ ಕಂಡುಹಿಡಿದಿರುವರು ಎಂದೂ, ಇದರಿಂದಲೆ ಹೆತ್ತವರಿಗಿಂತಲೂ ಮಕ್ಕಳು ಬಹು ಬೇಗನೆ ಪ್ರೌಢ ದೆಸೆಯನ್ನು ತಾಳುತ್ತಾರೆಂದೂ, ಅವರು ಅಭಿಪ್ರಾಯ ಪಡುತ್ತಾರೆ

ಮೊದಲು ಯೂರೋಪು ದೇಶಗಳಲ್ಲಿ ಹುಡುಗಿಯರು 23 ವರ್ಷಗಳಲ್ಲೂ, ಹುಡುಗರು 25 ವರುಷಗಳಲ್ಲೂ ಪ್ರೌಢಾವಸ್ಥೆಯನ್ನು ತಾಳುತ್ತಿದ್ದರೆ ಈಗ ಹುಡುಗಿಯರು 17 ವರ್ಷಗಳಲ್ಲೂ ಹುಡುಗರು 20 ವರುಷಗಳಲ್ಲೂ ಪ್ರೌಢಾವಸ್ಥೆಯನ್ನು ತಾಳುತ್ತಾರೆ ಇದಕ್ಕೂ ಕಾರಣ ಅವರು ಡಿ ಆಹಾರ ಸತ್ವವನ್ನು ಹೆಚ್ಚಾಗಿ ತೆಗೆದುಕೊಂಡುದರಿಂದಾಗಿ ಎಂದು ತಿಳಿದು ಬಂದಿದೆ

ಶ್ವಾಸಕೋಶಗಳನ್ನು ಹೇಗೆ ಆರೋಗ್ಯವಾಗಿಡಬಹುದು.

ಶ್ವಾಸಕೋಶದ ಬಾಧೆಯನ್ನು ನೀಗಬೇಕಾದರೆ ಶ್ವಾಸಕೋಶಗಳ ಸ್ಥಿತಿ ಸ್ಥಾಪಕ (Elastic)ಶಕ್ತಿಯು ಸರಿಯಾಗಿರುವಂತೆ ಮಾಡಬೇಕು ಇದರ ವಿಷಯ ಲಂಡನ್ ನಗರದ ಡಾಕ್ಟರರೊಬ್ಬರು ಹೀಗೆ ಅಭಿಪ್ರಾಯ ಪಡುತ್ತಾರೆ

ನಮ್ಮ ಇಡೀ ದೇಹದಲ್ಲಿ ರೋಗಾಣುಗಳು ಸಂಚರಿಸುತ್ತವೆ ನೆಲೆಯೂರಲೂ ಸ್ಥಳವನ್ನು ಹುಡುಕುವುದೆ ಇವುಗಳ ಮುಖ್ಯ ಕರ್ತವ್ಯ. ಮನುಷ್ಯನು ಗಟ್ಟಿಮುಟ್ಟಾಗಿರುವಾಗ ಈ ಅಣುಗಳಿಂದ ಯಾವ ಬಾಧೆಯು ತಟ್ಟದು. ಆದರೆ ಎಲ್ಲಾದರೂ ನಾವು ಎಡರಿಬಿಟ್ಟೆವೆಂದರೆ, ಇವುಗಳು ಆ ಸಂದರ್ಭದ ಒಳ್ಳೇ ಉಪಯೋಗವನ್ನು ಪಡೆದು ತಮ್ಮ ಪ್ರತಾಪವನ್ನು ತೋರಿಸಿಯೇ ಬಿಡುತ್ತವೆ ಇಂತಹ ಅಣುಗಳು ಶ್ವಾಸಕೋಶಗಳಲ್ಲೂ ಇವೆ ನಮ್ಮ ಶ್ವಾಸಕೋಶಕ್ಕೆ ಸ್ಥಿತಿಸ್ಥಾಪಕ ಶಕ್ತಿ ಇರುವ ವರೆಗೆ ಈ ಅಣುಗಳಿಂದ ಯಾವ ಕಾರ್ಯವನ್ನು ಮಾಡಲು ಸಾಧ್ಯವಿಲ್ಲ ಅದಕ್ಕೆ ತುಸು ದೋಷ ಬಂತೆಂದರೆ ಈ ಅಣುಗಳು ಸಮಯಾನುಕೂಲತೆಯನ್ನು ಪಡೆಯುತ್ತವೆ. ಆದ್ದರಿಂದ ಪ್ರಪಂಚದಲ್ಲಿ ಮಾನವನಿಗೆ ಹೊರಗಿನಿಂದ ಎಷ್ಟು ರೋಗಗಳು ಬರಬಹುದೊ ಅಷ್ಟೆ ರೋಗಗಳು ಒಳಗಿನಿಂದಲೂ ಉತ್ಪನ್ನವಾಗಬಹುದಾಗಿದೆ

ಶ್ವಾಸಕೋಶಗಳಲ್ಲಿದ್ದ ಗಾಳಿಯು ಯಾವಾಗಲೂ ಖಾಲಿಯಾಗುವುದಿಲ್ಲ. ಒಂದು ದೊಡ್ಡ ಶ್ವಾಸವನ್ನು ತೆಗೆದುಕೊಂಡ ನಂತರ ನಾವು ಗಾಳಿಯನ್ನು ಬಿಟ್ಟರೂ ಆಗಲು ಎಲ್ಲಾ ಗಾಳಿಯು ಶ್ವಾಸಕೋಶದಿಂದ ಹೊರಬರುವುದಿಲ್ಲ ಸ್ವಲ್ಪ ಗಾಳಿಯು ಗಾಳಿ ಚೀಲಗಳಲ್ಲಿ ಉಳಿಯುತ್ತದೆ ಈ ಉಳಿದ ಗಾಳಿಯು ನಾವು ದೊಡ್ಡ ಶ್ವಾಸವನ್ನು ತೆಗೆದುಕೊಳ್ಳದಿರುವಾಗ ಶ್ವಾಸಕೋಶಗಳನ್ನು ತುಂಬುವರೇ ಸಹಾಯ ಮಾಡುವುದು

ಕೆಲವೊಂದು ವೇಳೆ ಆರೋಗ್ಯವಂತನಾಗಿರುವಾಗಲೂ ಒಳಗೆ ತೆಗೆದುಕೊಂಡ ಗಾಳಿಯು ಶ್ವಾಸಕೋಶದ ಎಲ್ಲಾ ಭಾಗಗಳನ್ನು ತುಂಬಲು ಸಾಕಾಗುವುದಿಲ್ಲ ಇದೆಲ್ಲವೂ ಆಲಸ್ಯದಿಂದ ಉಂಟಾಗುವ ರೋಗಗಳು ದಿವಸಾಗಲೂ, ದೀರ್ಘ ಶ್ವಾಸಗಳನ್ನು ತೆಗೆದು ಅನಂತರ ಅದನ್ನು ಬಿಟ್ಟರೆ ಶ್ವಾಸಕೋಶದ [illegible] ಪ್ರಾರಂಭವಾಗುವುದು

ಶ್ವಾಸಕೋಶಗಳಲ್ಲಿ ಗಾಳಿಯನ್ನು ತುಂಬಬೇಕಾದರೆ ನಮ್ಮ ನಗುಲಿನ ಎಲುಬುಗಳನ್ನು ಮೇಲಕ್ಕೆ ಎಳೆದು ಹೊಟ್ಟೆಯ ಸ್ನಾಯುಗಳನ್ನು ಉಬ್ಬಿಸಬೇಕು ಈ ಹೊಟ್ಟೆಯ ಸ್ನಾಯುಗಳು ಗಾಳಿ ತುಂಬಿಸುವ ಯಂತ್ರಗಳಂತಿವೆ ಆದ್ದರಿಂದ ಇನ್ನು ಮುಂದೆ ಗಾಳಿಯನ್ನು ಸೇದುವಾಗ ಪಕ್ಕೆಲುಬುಗಳನ್ನು ಮೇಲಕ್ಕೆತ್ತುವುದಕ್ಕಿಂತಲೂ ಈ ಹೊಟ್ಟೆಯ ಸ್ನಾಯುಗಳನ್ನು ಉಬ್ಬಿಸುವುದೇ ಉತ್ತಮ ಕೆಲಸವಾಗಿರುವುದು

ಡೊಂಬರಾಟದ ನೂತನ ದೃಶ್ಯ.

ಆಟಗಾರನು ಕೋಲುಗಳ ಮೇಲೆ ಹೊಟ್ಟೆಯನ್ನು ಆನಿಸಿ ನಿಂತು ತಲೆಯ ಮೇಲೆ ಕೆಲವು ಮಡಕೆಗಳನ್ನು ವಿಚಿತ್ರ ಪೂರ್ವಕವಾಗಿ ಆಧರಿಸಿರುವನು.

ವಿಮಾನುಗಳು ನಡೆಯಬಲ್ಲವು.

ಇದನ್ನು ಯಾರೂ ನಂಬದಿದ್ದರೂ, ಸತ್ಯ ಸ್ಥಿತಿಯನ್ನೇ ಹೇಳಿರುವುದಾಗಿದೆ ಸಯ್ಯಾಮ ದೇಶದಲ್ಲಿ ವಿಮಾನುಗಳು ದಡವನ್ನು ದಾಟಿ ಹೊರಗೆ ನಡೆದು ಬರುವುದನ್ನು ಸ್ವತಹ ಡಾಕ್ಟರರೊಬ್ಬರು ಕಂಡಿರುವರು. 150 ವರುಷಗಳಿಂದಲೂ ವಿಜ್ಞಾನಿಗಳು ಪರಿಶ್ರಮಪಟ್ಟಾಗ್ಯೂ ಕಂಡುಹಿಡಿಯಲಾಗದ ಈ ವಿಚಿತ್ರವು ಈಗ ಲೀಗ ಜನತೆಯ ಗೋಚರಕ್ಕೆ ಬಂದಿದೆ.

ಡಾಕ್ಟರ್ ಹ್ಯೂಗ್ ಎಂ ಸ್ಮಿತ್ ಎಂಬವರು ಸಂಯುಕ್ತ ಅಮೇರಿಕದ ಸಹಾಯಕ ಕಮಿಶನರಾಗಿದ್ದರು ಮೀನುಗಳ ಜೀವನ ಚರಿತ್ರೆಯನ್ನು ಅರಿಯಲು ಇವರಿಗೆ ಬಹಳ ಲವಲವಿಕೆ. ಅಂತೆ ಪ್ರತಿ ದಿವಸವೂ ಸಮುದ್ರ ಅಥವಾ ನದಿ ಕಿನಾರೆಗಳಿಗೆ ಹೋಗಿ ಮೀನುಗಳ ಹಾರಾಟ ಕುಣಿದಾಟ ಇವುಗಳನ್ನು ನೋಡುವುದೇ ಇವರ ಕೆಲಸವಾಗಿತ್ತು ಮೀನುಗಳ ಜಾತಿಗಳಲ್ಲಿ ಅನಾಬಾಸ್ ಎಂಬ ಜಾತಿಯ ಮೀನುಗಳು ಮನುಷ್ಯರ ಹಾಗೆ ನಡೆಯಬಲ್ಲವು ಒಂದು ಮೀನು ಸಾಧಾರಣ 800 ಅಡಿ ನಡೆದುದನ್ನು ಇವರು ಸ್ವತಹ ಕಂಡಿರುವರಾಗಿ ಹೇಳುತ್ತಾರೆ ಒಂದು ಸಲ ಒಬ್ಬ ಬೆಸ್ತರವನು ಈ ಮೀನುಗಳನ್ನು ಒಂದು ಬುಟ್ಟಿಯಲ್ಲಿ ಹಾಕಿ ಬೇರೆ ಅಗತ್ಯದ ಕೆಲಸವಿರುವುದರಿಂದ ಬುಟ್ಟಿಯನ್ನು ಮನೆಯ ಅಂಗಳದಲ್ಲಿಟ್ಟು ಹೋಗಿಬಿಟ್ಟನು ಬುಟ್ಟಿಯಲ್ಲಿರುವ ವಿಮಾನುಗಳೆಲ್ಲಾ ಮೆಲ್ಲನೆ ಬುಟ್ಟಿಯಿಂದ ಹೊರಬಂದು, ಹತ್ತಿರವಿರುವ ಕೆರೆಗಳನ್ನು ಸೇರಿತು ಇದನ್ನು ಡಾಕ್ಟರರು ಪ್ರತ್ಯಕ್ಷ ನೋಡಿದ ಸಂಗತಿ ನಡೆಯುವಾಗ ಪಕ್ಕೆಲುಬುಗಳಲ್ಲಿರುವ [illegible] ಅವಯವವು ಅವರ [illegible] ನೆರವಾಗುತ್ತದಂತೆ

Now Running:-

ONE OF THE GREATEST JUNGLE THRILLER EVER PRODUCED

"Call of the Savage"

A UNIVERSAL SERIAL OF 24 REELS WILL BE RELEASED AT A SRETCH

ಇದುವರೆಗೆ ಎಂದೂ ಕಂಡಿರದ ಭೀಕರ ಕಾಡುಮೃಗಗಳಿಂದ—ಭೀಕರತರ ಕಾದಾಟಗಳಿಂದ ರೋಮಾಂಚಕ ದೃಶ್ಯಗಳಿಂದಕೂಡಿದ ಚಿತ್ರವು ಇದೀಗ ಪ್ರದರ್ಶಿಸಲ್ಪಡುತ್ತಿದೆ.

ಒಂದೇ ಬಾರಿ 24 ರೀಲುಗಳು **ಕೋಲ್ ಒಫ್ ದಿ ಸೆವೇಜ್** ಒಂದೇ ಬಾರಿ 24 ರೀಲುಗಳು

Next Attraction

ನಂತರದ ಚಿತ್ರ.

There is true love— thrill:Pathos-Struggle-Songs—Every thing!

Missing a Picture like this means

Missing one's Sweetheart and one's true love

SEE WHAT IT MEAMS

"The more we love, the better we are, and the greater our love is the dearer we are to God!

SEE AND HAVE A BRIGHT DAY

(J Pavl i)

LOVE PATH

– ಅಥವಾ –

ಪ್ರೇಮ ಪಥ

ನಿಮ್ಮ ನಚ್ಚಿನ ನಟರು:—

ಮಧೂಕರ್ ಗುಪ್ತೆ, ಶಾಂತೀಲಾಲ, ಕಮಲಾಬಾಯಿ, ಹೀರಾಭೀಮ್

ಪ್ರೇಮದ ಗುಟ್ಟನ್ನರಿಯಬೇಕೆನ್ನುವಿರಾದರೆ-ಪ್ರೇಮವೆಂದರೇನೆಂದು ತಿಳಿಯಬೇಕೆನ್ನುವಿರಾದರೆ ಪ್ರೇಮಪಥವನ್ನು ನೋಡಿರಿ!

ಶ್ರೀ ಕೃಷ್ಣಾ ಸಿನೆಮ, ಮಂಗಳೂರು.

ನಮ್ಮ ಸಾಪ್ತಾಹಿಕ ಕಥೆ:—

“ನಿಯಮಕ್ಕೆ ಒಂದು ಅಪವಾದ”*

ಲೇಖಕ: — ಶ್ರೀ “ರಸಿಕರಂಜನ”

“ನೀವು ಎಷ್ಟೇ ಹೇಳಿ, ವೇಣು” ಸಾಮಣಿ, ಅರ್ಧ ಘಂಟೆಯವರೆಗಿನ ಚರ್ಚೆಯ ಕೊನೆಯಲ್ಲಿ, ಒಂದು ಸಿಗರೇಟನ್ನು ಹೊತ್ತಿಸುತ್ತ, ಎಂದೆನು; “ಕರುಣೆಯ ಮುಂದೆ ಕುಲಗೌರವದ ಮಾತು ಎಷ್ಟು ಮಾತ್ರಕ್ಕೂ ನಿಲ್ಲದು!”

“ಆದ್ದರಿ ನನ್ನ ಅನುಭವಕ್ಕೆ ಬಂದ ಒಂದು ಸಣ್ಣ ಸಂಗತಿಯನ್ನು ಕೇಳು, ಮಹಾರಾಯಾ!” ನಾನು ಎಂದೆನು, “ಮತ್ತು ನಿನ್ನ ಖಂಡಿತಾಭಿಪ್ರಾಯವನ್ನು ಆ ಮೇಲೆಕ್ಕೇ ಕಾದಿಡುವಷ್ಟು ದಯೆದೋರು!”

“ಸಣ್ಣದಲ್ಲದಿದ್ದರೆ ಎಷ್ಟೇ ದೊಡ್ಡ ಸಂಗತಿಯನ್ನಾದರೂ ಕೇಳಲು ನಾನು ಯಾವಾಗಲೂ ತಯಾರೀ ಆಗಿರುವೆನಲ್ಲ! ಅನುಮಾನವೇಕೆ? ಹೇಳಿಬಿಡು ಅದನ್ನು,” ಸಾಮಣಿ ಎಂದನು

“ಸರಿ,” ಎಂದು ನಾನು ಮೊದಲು ಮಾಡಿದೆನು.

೦ ೦ ೦

ಈ ದಿನ ಬೆಳಿಗ್ಗೆ ಹತ್ತು ಘಂಟೆಯ ಹೊತ್ತಿಗೆ ಕಾರಿನಲ್ಲಿ ಬಂದ ಆ ಹೆಟ್–ಬೂಟ್–ಸೂಟ್–ವಾಲನನ್ನು ಕಂಡಿರುವೆಯಲ್ಲ?

ಅವನನ್ನು ನೋಡಿಯೇ ನನಗೆ ಈ ಪ್ರಶ್ನೆಯು ಮೂಡಿತ್ತು. ಈಹೊತ್ತು ಬಂದಂತೆಯೇ ಅವನು ಐದು ವರ್ಷಗಳ ಕೆಳಗೆ ಒಮ್ಮೆ, ಕಾರಿನಲ್ಲೇ, ನನ್ನ ದವಾಖಾನೆಗೆ ಬಂದಿದ್ದನು. ಆಗಲೂ ಅವನ ಮುಖವು ಈ ದಿನದಂತೆಯೇ ಕಳೆಗುಂದಿತ್ತು. ಆದರೆ ಆಗ ದುಃಖದಿಂದ ಹಾಗಾಗಿದ್ದರೆ ಈಗ ಮಾತ್ರ ಬೇರೆ ಕಾರಣದಿಂದ. ಅದೇನೆಂದು ನೀನೇ ತಿಳಿಯುವಿ

ಅವನ ಹೆಸರು ರಮಾಕಾಂತ ಪಾಲ. ಆಗ ಅವನು ಸುಮಾರು ಇಪ್ಪತ್ತೈದು ವರ್ಷದವನಾಗಿದ್ದನು. ಆ ದಿನ ಅವನು ಬಂದವನೇ ಗಲಿಬಿಲಿಯಿಂದ, “ನನ್ನ ತಂಗಿಯು ಹೊಟ್ಟೆನೋವಿನಿಂದ ಕಕ್ಕಾಬಿಕ್ಕಿಯಾಗಿರುವಳು. ಈಗಲೇ ಬಂದು ಚಿಕಿತ್ಸೆಮಾಡಬೇಕು. ಅಗತ್ಯವಿರುವ ಔಷಧಿಗಳನ್ನೆಲ್ಲಾ ಹಿಡಿದುಕೊಳ್ಳಿರಿ!” ಎಂದು ಕೇಳಿಕೊಂಡನು

ನಾನು, ನನಗಾಗಿ ಕಾದುಕೊಂಡಿದ್ದ ಇತರ ರೋಗಿಗಳನ್ನು ತಡೆಯಹೇಳಿ, ಒಡನೆಯೇ ನನ್ನ ಹೆಂಡ್‌ಬೇಗಿನಲ್ಲಿ ಅವಶ್ಯವಿರುವ ಔಷಧಿಗಳನ್ನೂ, ಇಂಜೆಕ್ಷನ್ ಸಾಮಗ್ರಿಗಳನ್ನೂ, ತುಂಬಿಕೊಂಡು ಪಾಲನ ಕಾರಿನಲ್ಲಿ ಹಾರಿದೆನು

೨

ಪಾಲನನ್ನು ನಾನು ದಾರಿಯಲ್ಲಿ ನನ್ನಷ್ಟಕ್ಕೇ ಸೂಕ್ಷ್ಮವಾಗಿ ನೋಡಿಕೊಂಡೆನು

ಅವನು ಬಹಳ ಬೆಲೆಬಾಳುವ ಪೋಷಾಕಿನಲ್ಲಿದ್ದನು. ಅವನ ಕೈಬೆರಳಿಗೆ ಬಹು ಮೌಲ್ಯದ ದೊಡ್ಡ ವಜ್ರದ ಉಂಗುರವಿತ್ತು. ಅವನ ಕಾರೂ ಸ್ವಂತವಾಗಿದ್ದು, ಹೆಚ್ಚು ಕ್ರಯದ್ದಾಗಿತ್ತು

ಪಾಲನು ನಾನು ಮೊದಲು ಎಣಿಸಿದ್ದಕ್ಕಿಂತಲೂ ಹೆಚ್ಚಿನ ಗಲಿಬಿಲಿಯಲ್ಲಿದ್ದನೆಂದು ನನಗೆ ಕ್ರಮೇಣ ತೋರಿತು. ಅವನ ಮುಖವು ದುಃಖ, ಭಯ, ಅಧೈರ್ಯ ಮುಂತಾದ ಭಾವಗಳ ಸಂಮಿಶ್ರಣದಿಂದ ಕಾಡಿಕೊಂಡಿತ್ತು. ನಾನು ರೋಗಿಯನ್ನು ಕುರಿತು ಹೆಚ್ಚಿನ ಸಂಗತಿಯನ್ನು ತಿಳಿಯಬಯಸಿದೆನು.

“ನಿಮ್ಮ ತಂಗಿ ಗರ್ಭಿಣಿಯೇ?”

“ಇಲ್ಲ ಅವಳು ಇನ್ನೂ ಅವಿವಾಹಿತೆ”

“ಅವಳಿಗೆ ಯಾವುದಾದರೂ ದೀರ್ಘಕಾಲದ ರೋಗವಿದೆಯೇ?”

“ಇಲ್ಲ, ಇಲ್ಲ. ಅವಳು ನಿನ್ನೆ ರಾತ್ರಿಯವರೆಗೆ ಪೂರ್ಣ ಸೌಖ್ಯದಲ್ಲೇ ಇದ್ದಳು.”

“ಹಾಗಾದರೆ ಹೊಟ್ಟೆನೋವು ಅಜೀರ್ಣದಿಂದ ಬಂದಿರಬಹುದು; ಅದಕ್ಕೆ ಇಷ್ಟು ಗಾಬರಿಯೇಕೆ?”

“ಗಾಬರಿ? ಎಲ್ಲಿಯ ಗಾಬರಿ? ನನ್ನ ಸ್ವಭಾವವೇ ಹೀಗೆ, ಮನೆಯಲ್ಲಿ ಯಾರಿಗೂ ಅಸೌಖ್ಯವಾದರೆ ಅವರಿಗೆ ಸೌಖ್ಯವಾಗುವವರೆಗೆ ನನಗೆ ಸಮಾಧಾನವಿರದು”

“ಆದರೂ ಸಾಮಾನ್ಯ ಹೊಟ್ಟೆನೋವಿಗಾಗಿ ಅಷ್ಟೊಂದು ಅಸಮಾಧಾನಪಡಲೇಕೆ?”

“ಸಾಮಾನ್ಯ? ಅಯ್ಯೋ, ಅವಳ ಕಳವಳವನ್ನು ನೋಡಬೇಕು, ಆಗಲೇ ಸಾಮಾನ್ಯವೋ, ಅಸಾಮಾನ್ಯವೆಂದು ತಿಳಿಯುವುದು!”

ಹೌದೇ? ಬಹಳ ತ್ರಾಸಪಡುತ್ತಿರುವಳೇ?”

“ಅಯ್ಯೋ, ಅದನ್ನು ಬಣ್ಣಿಸಲಾಗದು ಇಗೋ ಮನೆ ಬಂತಲ್ಲ, ನೀವು ಅವಳನ್ನು ನೋಡಿಯೇ ತಿಳಿಯುವಿರಿ”

೩

ಪಾಲನ ಮನೆಯು ಹಲವು ಮಾಳಿಗೆಗಳ ಕಟ್ಟೋಣವಾಗಿತ್ತು. ಇದನ್ನೆಲ್ಲ ನೋಡಿ ಪಾಲನು ಕಲ್ಕತ್ತೆಯ ಅಗ್ರಗಣ್ಯ ಪಂಕ್ತಿಯವನಾಗಿರಬೇಕೆಂದು ಊಹಿಸಿದೆನು.

ಮನೆಯನ್ನು ಹೊಕ್ಕು, ಅದರ ಒಳಗಿನ ವೈಭವ ಮುಂತಾದುವನ್ನು ನೋಡಿದ ಮೇಲೆ ನನ್ನ ಊಹನೆಯು ಸರಿಯಾದುದೇ ಎಂದು ತಿಳಿದುಕೊಂಡೆನು. ಎಲ್ಲಿ ನೋಡಿದರೂ ರಾಜವೈಭವವು ಕಣ್ಣನ್ನು ಕುಕ್ಕುತ್ತಿತ್ತು

ಪಾಲನು ನನ್ನನ್ನು ನೇರಾಗಿ ರೋಗಿಯು ಮಲಗಿದ್ದ ಕೋಣೆಗೆ ಕರೆದೊಯ್ದನು

ಅವಳು ಸಾಧಾರಣ ಇಪ್ಪತ್ತು ವರ್ಷ ಪ್ರಾಯದವಳಾಗಿದ್ದು, ಅದ್ವಿತೀಯ ಸೌಂದರ್ಯವತಿಯಾಗಿದ್ದಳು

ಅವಳು ಒಂದು ಮಂಚದ ಮೇಲೆ ಕಳವಳಿಸುತ್ತಾ ಮಲಗಿದ್ದಳು. ಸುತ್ತಲೂ ನಾಲ್ಕೈದು ಮಂದಿ ಹೆಂಗಸರು ಬೇರೆ ಬೇರೆ ಪ್ರಾಯದವರು, ಉತ್ಕೃಷ್ಟ ಪೋಷಾಕಿನಲ್ಲಿದ್ದವರು, ಅವಳ ಶುಶ್ರೂಷೆ ಮಾಡುತ್ತಾ ಕುಳಿತಿದ್ದರು

ನನ್ನನ್ನು ನೋಡುತ್ತಲೇ ಆ ಹೆಂಗಸರೆಲ್ಲಾ ಅತ್ತ ಸರಿದರು. ನಾನು ರೋಗಿಯ ಬಳಿಗೆ ಹೋಗಿ ಚಿಹ್ನೆಗಳಿಗಾಗಿ ಪರೀಕ್ಷಿಸಿ ನೋಡಿದೆನು

ಅವಳನ್ನು ವಿಚಾರಿಸಿ ಹೊಟ್ಟೆನೋವಿನ ಕಾರಣವನ್ನು ಶೋಧಿಸತೊಡಗಿದೆನು

“ನೀವು ನಿನ್ನೆ ರಾತ್ರಿ ಅಥವಾ ಈಹೊತ್ತು ಬೆಳಿಗ್ಗೆ ನಿತ್ಯದಲ್ಲಿ ತಿನ್ನದಂತಹ ವಿಶೇಷವಾದ ತಿಂಡಿಯನ್ನೇನಾದರೂ ತಿಂದಿರುವಿರಾ?”

“ಇಲ್ಲ, ಇಲ್ಲ!”

“ತಿಂದುದರಲ್ಲಿಯಾಗಲಿ, ಕುಡಿದುದರಲ್ಲಿಯಾಗಲಿ ಏನಾದರೂ ರುಚಿಭೇದ ಕಂಡಿತ್ತೇ?”

“ಇಲ್ಲ. ಆದರೆ ಈಹೊತ್ತಿನ ಕೊಫಿ ಸ್ವಲ್ಪ ಸ್ಟ್ರೊಂಗ್ ಇತ್ತು. ಅಯ್ಯೋ, ಉಸ್ಸೋ!”

“ಎಂದರೆ, ಹೆಚ್ಚು ಕಹಿಯಾಗಿತ್ತೇ?”

“ಹೌದು, ನಿಜ!”

“ಅದನ್ನು ಕುಡಿದ ಮೇಲೆಯೇ ಹೊಟ್ಟೆನೋವು ಸುರುವಾಗಿತ್ತೇ, ಮೊದಲೇ ಇತ್ತು?”

“ಮೊದಲಿರಲಿಲ್ಲ; ಆಮೇಲೆಯೇ ಅಯ್ಯೋ, ಅಯ್ಯೋ!”

೪

ರೋಗಿಯ ಕಣ್ಣುಗಳನ್ನು ಪರೀಕ್ಷಿಸುತ್ತಲೇ ನನ್ನ ಸಂಶಯವು ಬಲವಾಯಿತು. ಆಗಲೇ ಚಿಕಿತ್ಸೆಯ ಆವಶ್ಯಕತೆಯು ದೂರವಾಗುತ್ತಾ ಬಂದಿತ್ತು. ಆದರೂ ಬಲವಾದ ಕೆಲವು ಇಂಜೆಕ್ಷನ್‌ಗಳನ್ನು ಕೊಟ್ಟೆನು. ಹೆಚ್ಚು ಸಮಯ ಕಾಯ್ದರೂ ಏನೂ ಪ್ರಯೋಜನತೋರಲಿಲ್ಲ.

ಅಷ್ಟರಲ್ಲಿ ನನಗೆ ನನ್ನ ಪರಿಸ್ಥಿತಿಯ ವಿಷಯ ಯೋಚನೆಯುಂಟಾಯಿತು. ಪಾಲನ ಮನೆತನದವರು ಧಾರಾಳಿ ಹಣವಿದ್ದವರು. ರೋಗಿಯ ವಿಷಯಕವಾದ ನನ್ನ ಅನುಮಾನಗಳು ನಿಜವಾದ ಪಕ್ಷದಲ್ಲಿ ಮುಂದೆ ಮೊಕದ್ದಮೆಯಾದರೆ ನಾನು ಪಾಲನವರಿಗೆ ವಿರೋಧವಾಗಿ ಸಾಕ್ಷ್ಯ ಕೊಡಬೇಕಾಗುವುದು. ಇದರಿಂದ ನಾನು ಅವರ, ಹಾಗೂ ಅವರಿಗೆ ಬೇಕಾದವರ ದ್ವೇಷವನ್ನು ಸಾಧಿಸಿದಂತಾಗುವುದು. ಅವರಿಗೆ ಬೇಕಾದಂತೆ, ಮನಸ್ಸಾಕ್ಷಿಗೆ ವಿರುದ್ಧವಾಗಿ ಸಾಕ್ಷ್ಯ ಹೇಳಲು ನನ್ನ ಮನಸ್ಸು ಒಪ್ಪದು. ಆದುದರಿಂದ ಈ ಉಭಯ ಸಂಕಟದಿಂದ ತಪ್ಪಿಸಿಕೊಳ್ಳುವುದೇ ಒಳ್ಳೆಯದೆಂದು ನನಗೆ ತೋರಿತು

ರೋಗಿಯು ಕೊನೆಯ ಅವಸ್ಥೆಯನ್ನು ಸಮೀಪಿಸುತ್ತಾ ಇದ್ದಂತೆಯೇ ನಾನು ಪಾಲನನ್ನು ಏಕಾಂತದಲ್ಲಿ ಕಂಡೆನು

“ನನಗೆ, ರೋಗಿಗೆ ವಿಷಪ್ರಯೋಗವಾಗಿರುವುದೆಂದು ಖಚಿತವಾಗಿದೆ. ನನ್ನಿಂದಾದಷ್ಟು ಪ್ರಯತ್ನ ಮಾಡಿರುವೆನು. ಆದರೆ ಎಲ್ಲವೂ ಕೈಮೀರಿದೆ. ಇನ್ನು ನನಗೆ ಅಪ್ಪಣೆ ಕೊಡಿ”

‘ವಿಷಪ್ರಯೋಗವೆಂದಿರಾ? ಅದು ಹೇಗೆ ಸಾಧ್ಯ?”

‘ಕ್ಷಮಿಸಿ, ಆದರೆ ಆ ಪ್ರಶ್ನೆ ನನಗೆ ಸಂಬಂಧಪಟ್ಟದ್ದಲ್ಲ. ಇನ್ನೊಂದು ಮಾತು. ಈ ವಿಷಯವಾಗಿ ಮುಂದೆ ತೊಂದರೆ ಒದಗುವಂತಿದೆ. ಆದರೆ ದಯಮಾಡಿ ನನ್ನನ್ನು ಇದರಿಂದ ಬಿಡುಗಡೆಮಾಡಿರಿ. ನಾನು ಅವರ ಚಿಕಿತ್ಸೆಗೆ ಕೈಯನ್ನೇ ಹಾಕಿಲ್ಲವೆಂದೆಣಿಸಿ ಅದರಂತೆಯೇ ನಡೆಯುವೆನು. ನೀವು ಮಾತ್ರ ನಿಮಗೆ ಬೇಕಾದ ಬೇರೊಬ್ಬ ಡೊಕ್ಟರರಿಂದ ಈ ವಿಷಯದಲ್ಲಿ ನಿಮಗೆ ಬೇಕಾದಂತೆ ಮಾಡಿಸಿಕೊಳ್ಳಿ. ಆತ್ಮಸಾಕ್ಷಿಗೆ ವಿರುದ್ಧವಾಗಿ ಸಾಕ್ಷ್ಯಕೊಡುವ ಅವಶ್ಯಕತೆಯನ್ನು ಮಾತ್ರ ನನಗೆ ತಂದೊಡ್ಡಬೇಡಿ!”

ಪಾಲನು ಏನನ್ನೋ ಮಾತಾಡಲು ಬಾಯಿತೆರೆಯುವುದರೊಳಗೆ ನಾನು ಕೋಣೆಯಿಂದ ಹೊರಗೆ ಬಂದೆನು

೫

ರಮಾಕಾಂತ ಪಾಲನ ತಂಗಿ ವಿಮಲೆಯು ಹಾಗೆಯೆ ಸ್ವಲ್ಪ ಸಮಯದಲ್ಲೇ ಇಹಲೀಲೆಯನ್ನು ಮುಗಿಸಿದಳೆಂದು ತಿಳಿದೆನು

ನನ್ನ ಊಹನೆಯಂತೆ ಈ ಸಂಬಂಧವಾಗಿ ಪೋಲೀಸ್ ಖಾತೆಗೆ ತಲ್ಲಿ ಅರ್ಜಿಗಳು ಹೋಗಿ ಪೋಲೀಸ್ ತನಿಖೆಯಾಗಿ, ಮೊಕದ್ದಮೆಯೂ ಆಯಿತು

ಪಾಲನ ವಿರೋಧವಾಗಿ, ಕಾಳೀಚರಣನೆಂಬ ಯುವಕನೊಬ್ಬನು ಬಲವಾದ ಸಾಕ್ಷ್ಯ ಕೊಟ್ಟನು. ಅವನ ವಾಙ್ಮೂಲದಿಂದ ಕೆಲವು ಸತ್ಯಾಂಶಗಳು ಪ್ರಕಟವಾದುವು. ವಿಮಲೆಗೂ ಅವನಿಗೂ ಪರಸ್ಪರ ಪ್ರೇಮವಿತ್ತು. ಅವರಿಬ್ಬರೂ ಕೋಲೆಜಿನಲ್ಲಿ ಒಟ್ಟಿನಲ್ಲೇ ಓದುತ್ತಿದ್ದರು. ಇಬ್ಬರೂ ಮದುವೆಯಾಗಲು ಬಯಸಿದ್ದರು. ಆದರೆ ಕಾಳೀಚರಣನು ಹೀನಜಾತೀಯನೆಂಬ ಆಕ್ಷೇಪದಿಂದ, ಕುಲಗೌರವಪಾಲನೆಗಾಗಿ, ವಿಮಲೆಯ ಮನೆಯವರು ಇದಕ್ಕೆ ಪ್ರತಿಕೂಲರಾಗಿದ್ದರು. ಆದರೂ ಅವರಿಬ್ಬರೂ ಈಚೆಗೆ ಒಟ್ಟಿಗೇ ಸುತ್ತಾಡುತ್ತಿದ್ದರು. ಅಲ್ಲದೆ ಮದುವೆಯಾಗುವೆನೆಂದು ಮನೆಯವರನ್ನು ಹೆದರಿಸುತ್ತಿದ್ದರು. ಇದರಿಂದ ಜನರು ಪಿಸುಗುಟ್ಟತೊಡಗಿದ್ದರು. ಇದಾದ ಕೆಲವು ದಿನಗಳಲ್ಲೇ ವಿಮಲೆಯ ಮರಣವು ಆಕಸ್ಮಾತ್ತಾಗಿ ಉಂಟಾಗಿತ್ತು

ಆದರೆ ಪಾಲನಿಗೆ ಅವನ ಐಶ್ವರ್ಯವು ಸಹಾಯಮಾಡಿತು. ಅವನು ಬೇರೊಬ್ಬ ಡೊಕ್ಟರರ ಸುಳ್ಳುರುಜುವಾತಿನ ಬಲದಿಂದಲೂ, ಇತರ ಕೃತಕ ಸಾಕ್ಷ್ಯಗಳ ಆಧಾರದಿಂದಲೂ, ಮೊಕದ್ದಮೆಯಿಂದ ಪಾರಾದನು, ಅಂತೂ ಕುಲಗೌರವವನ್ನು ಪಾಲಿಸಿದನು.

೦ ೦ ೦

“ಈ ಸತ್ಯಘಟನೆಯು ಪ್ರಕಟಿಸುವ ಪ್ರಕೃತಿ ನಿಯಮದ ಮುಂದೆ ನಿನ್ನ ವಾದವೆಲ್ಲಿ ನಿಲ್ಲುವುದು, ಸಾಮಣಿ?” ನಾನು ಕೇಳಿದೆ

“ಇದು ನಿಯಮವು ಹೇಗಾಗುವುದು, ವೇಣು? ನಿಜವಾದ ನಿಯಮಕ್ಕೆ ಒಂದು ಅಪವಾದ”ವಷ್ಟೆ” ಕೈಯೊಳಗಿನ ಸಿಗರೆಟಿನ ತುಂಡನ್ನು ಆಚೆಗೆ ಎಸೆಯುತ್ತ ಎಂದ, ಸಾಮಣಿ

*An Exception to the Rule

ಹೊಟ್ಟೆಗಳನ್ನು ತಿನ್ನಬೇಕಾಗಿಲ್ಲ

ಹೊಟ್ಟೆಗಳನ್ನು ತಿನ್ನಲು ಅಸಹ್ಯಪಡುವವರು ಕೆಳಗೆ ನಮೂದಿಸಿದ ಆಹಾರವನ್ನು ಸೇವಿಸಬಹುದು

ಬೆಣ್ಣೆ, ಜೇನುತುಪ್ಪ, ಕಲ್ಲುಸಕ್ಕರೆ, ಸರಿಸಮಾನ ಪ್ರಮಾಣದಲ್ಲಿ ತೆಗೆದುಕೊಂಡು ಸರಿಯಾಗಿ ಕಲುಕಿಸಿ ಬೆಳಿಗ್ಗೆ ಎದ್ದೊಡನೆ ತಿನ್ನಬೇಕು. ಒಂದು ಚಾ ಚಮಚೆ ಸೇವನೆಯು ದೊಡ್ಡವರಿಗೆ ಸಾಕು. ಸಣ್ಣ ಮಕ್ಕಳಿಗೆ ಅದೇ ಪ್ರಕಾರ ಕಮ್ಮಿ ಮಾಡುತ್ತ ಹೋಗಬೇಕು.



ಸದ್ಯದಲ್ಲಿ ಶ್ರೀ ಕೃಷ್ಣ ಸಿನೆಮ ಮಂದಿರದಲ್ಲಿ ಪ್ರದರ್ಶಿಸಲಿರುವ “ಪ್ರೇಮ ಪಥ” ಚಲಚ್ಚಿತ್ರದ ಒಂದು ದೃಶ್ಯ.

ಯುದ್ಧ ಯಾ ಶಾಂತಿಯ ಹೆಬ್ಬಾಗಿಲು.

ಯೂರೋಪಿನ ರಾಜಕೀಯ ರಂಗದಲ್ಲಿ ಬೆಲ್ಜಿಯಮ್ಮಿನ ಸ್ಥಾನ.

"ಆನೆಗಳು ಜಗಳವಾಡುತ್ತಿರುವಾಗ, ಹುಲ್ಲು ಹಾಳಾಗುವುದು" ಎಂಬುದು ಬೆಲ್ಜಿಯಂ ಕೊಂಗೋದ ನಿವಾಸಿಗಳ ಗಾದೆಯಾಗಿರುತ್ತದೆ.

೮,೦೦೦,೦೦೦ ಜನಸಂಖ್ಯೆ ಇರುವ ಸಣ್ಣ ಬೆಲ್ಜಿಯಂ, ಅವತ್ತಿಗೆ ಅನೇಕ ಶತಮಾನಗಳಿಂದ ಯೂರೋಪಿನ ಇತರ ಜನಾಂಗಗಳು ಜಗಳವಾಡುತ್ತಿರುವಾಗ ನೋಡುವ ಗಾದೆಯ ಹುಲ್ಲಿನ ಅವಸ್ಥೆಯನ್ನು ಅನುಭವಿಸುತ್ತಿದೆ.

೧೯೧೪–೧೮ರಲ್ಲಿ, ಅವರು ೨೬೭,೦೦೦ದ ಒಂದು ದಂಡನ್ನು ಸಿದ್ಧಪಡಿಸಿದರು. ೧೦೦,೦೦೦ ಜನರು ಮಡಿದರು. ೧೧,೭೫೨ ಚದರ ಮೈಲು ಭೂಪ್ರದೇಶವು ಲಯವಾಯಿತು. ಸಮಸ್ತ ದೇಶವು ದಂಡೆತ್ತಿಬರುವವರ ಹಿಂಸಾಕೃತ್ಯಕ್ಕೊಳಗಾಯಿತು.

ಹಿಟ್ಲರನು ರ್ಹೈನ್‌ಲೇಂಡಿನಲ್ಲಿ ಮುತ್ತಿಗೆಯ ದಂಡಯೋಜನೆ ನಡೆಯಿಸಿದುದರಿಂದ, ಬೆಲ್ಜಿಯಮ್ ಮತ್ತೊಮ್ಮೆ ಜರ್ಮನಿ–ಫ್ರಾನ್ಸು ಯುದ್ಧರಂಗವಾಗುವ ಸಂಭವಗಳು ಒದಗಿವೆ. ಹಿಟ್ಲರನೊಡನೆ ವ್ಯವಹರಿಸಲು, ಬೆಲ್ಜಿಯಮ್ಮು ಫ್ರಾನ್ಸು–ಬ್ರಿಟನು ಮಧ್ಯದಲ್ಲಿ ಸಮವರ್ತಿಗಳಾದರು.

ತಮಗೆ ಈಗ ಒದಗಿದ ಸ್ಥಿತಿಯಿಂದ ಪಾರಾಗಲು, ಬೆಲ್ಜಿಯನರು, ಅಲ್ಲಿನ ಸ್ತ್ರೀ(?)ವಿದ್ಯಾ ಕುಶಲರೂ ಧನಾಢ್ಯರೂ ಆದ ಡಾ। ಪೋಲ್ ವೆನ್ ಜೀಲೆಂಡ ಮೇಲೆ ಹೊಂದಿಕೊಂಡಿರುವರು.

ವೆನ್ ಜೀಲೆಂಡರು ಕಳೆದ ೧೯೧೪ರಿಂದ ಭಾವೀ ರಾಜಕೀಯ ಕುಶಲರೆಂಬ ಪ್ರಸಿದ್ಧತೆಯನ್ನು ಹೊಂದಿರುವರು. ಈಗ ರೂಢಿಯಲ್ಲಿರುವ ಅನ್ಯಾಯಕರವೆನಿಸುವ ವರ್ಸಾಯಿ ಒಪ್ಪಂದವನ್ನು ರದ್ದುಮಾಡಿ, ಯೂರೋಪಿನ ಶಾಂತಿಗೆ ಯೋಗ್ಯವೆನಿಸುವ ಒಪ್ಪಂದವನ್ನು ರಚಿಸುವುದು ಅವರ ಉದ್ದೇಶವಾಗಿರುತ್ತದೆ.

ಜರ್ಮನಿಯ ವಿಚಾರದಲ್ಲಿ ಫ್ರಾನ್ಸು ಅನೇಕ ಅನ್ಯಾಯಗಳನ್ನು ನಡೆಯಿಸಿರುತ್ತದೆಂದು ಇವರ ಅಭಿಪ್ರಾಯ. ರಾಜಕೀಯ ವಿಚಾರಗಳಲ್ಲಿ ಫ್ರೆಂಚರನ್ನು ಬಾಲದಂತೆ ಅನುಸರಿಸುವ ಬದಲಾಗಿ, ಬೆಲ್ಜಿಯಮ್ಮು ಶಾಂತಿ ಯಾ ಯುದ್ಧದ ಹೆಬ್ಬಾಗಿಲಾಗಿ ಮಾಡುವುದು ಇವರ ಧ್ಯೇಯವಂತೆ. ಶಾಂತಿಗೋಸ್ಕರ ಜರ್ಮನಿಯೊಡನೆ ಯೋಗ್ಯ ಒಪ್ಪಂದಗಳನ್ನು ಬೆಳೆಯಿಸಲು ಸಿದ್ಧರಿದ್ದಾರೆ.

ಜರ್ಮನಿಯು ರ್ಹೈನ್ ಲೇಂಡಿನಲ್ಲಿ ದಂಡಯೋಜನೆಯನ್ನು ನಡೆಯಿಸುವುದೆಂಬ ಆಲೋಚನೆಯು ಬೆಲ್ಜಿಯಮ್ಮಿನಲ್ಲಿ ಬಹಳ ಹಿಂದಿನಿಂದಿತ್ತು. ಆದರೆ, ಜರ್ಮನಿಯ ಆಕ್ರಮಣದ ಸಂಭವದಲ್ಲಿ ಬ್ರಿಟನಿನ ಸಹಕಾರದ ವಾಗ್ದಾನ ಮಾಡುದರಿಂದ ಅದು ಸುಮ್ಮನೆ ಕುಳಿತುಬಿಟ್ಟಿತು. ಈಗ ಬೆಲ್ಜಿಯಮ್ಮಿನ ಸ್ಥಿತಿಯು ಬಹಳ ಕನಿಷ್ಠತರದ್ದಾಗಿರುತ್ತದೆ.

ಇತ್ತಂಡದವರೊಡನೆ ಒಪ್ಪಂದಗಳನ್ನು ಬೆಳೆಯಿಸುವ ಡಾ। ವೆನ್ ಜೀಲೆಂಡರ ಪ್ರಯತ್ನಗಳನ್ನು ನೋಡಿದರೆ ಅದಕ್ಕೆ ಯಾವತ್ತೂ ಕಲಹಗಳಲ್ಲಿ ಭಾಗವಹಿಸುವ ಇಚ್ಛೆಯಿರುವುದಿಲ್ಲವೆಂದು ವ್ಯಕ್ತವಾಗುತ್ತದೆ. ಶಾಂತಿಸ್ಥಾಪನೆಯ ಯೋಜನೆಗಳನ್ನೂ ಯುದ್ಧಕಾರಣಗಳನ್ನೂ ಗೆಲ್ಲುವೆವೆಂಬ ಭರವಸೆಯು ಬೆಲ್ಜಿಯಮ್ಮಿನ ಮಂತ್ರಿ ಜೀಲೆಂಡರಲ್ಲಿದೆ.

ಆದರೆ, ಜೀಲೇಂಡರು, ಬೆಲ್ಜಿಯಮ್ಮಿನ ಗಡಿಗಳಲ್ಲಿ ೬೫,೦೦೦ ಸೈನಿಕರಿರುವ ದಂಡನ್ನು ಇರಿಸಿದ್ದಾರೆ. ಎಲ್ಲೆಲ್ಲಿಯೂ ಅನೇಕ ತರದ ಯುದ್ಧಸನ್ನಾಹಗಳನ್ನು ಮಾಡಿರುವರು.

ನಾಸಿಕದಲ್ಲಿ ನೀರಿನ ಕ್ಷಾಮ!

ನಾಸಿಕ ನಗರ ಮತ್ತು ಅದರ ಆಸುಪಾಸಿನಲ್ಲಿ ನೀರಿನ ಕ್ಷಾಮವು ತಲೆದೋರಿರುತ್ತದೆ. ನಗರಸಭೆಯು ನೀರಿನ ಸರಬರಾಯಿಯನ್ನು ಸಂಪೂರ್ಣವಾಗಿ ಮುಚ್ಚುವ ಸ್ಥಿತಿ ಒದಗಿರುತ್ತದೆ. ನಗರದಲ್ಲಿರುವ ನೀರಿನ ಟಂಕುಗಳೆಲ್ಲ ಬತ್ತಿಹೋಗಿವೆ. ಈಗ ಅಲ್ಲಲ್ಲಿರುವ ಉಪಯೋಗಿಸಲ್ಪಡದ ಬಾವಿಗಳನ್ನು ದುರುಸ್ತಿಪಡಿಸುವ ಕೆಲಸವು ನಡೆಯುತ್ತದೆ.

ರಾಮಾಯಣದ ಕುರಿತು ಗದ್ದಲ.

ರಾಮನು ದೇವನೊ ಬರೇ ಮಾನವನೊ?

ಕುಂಭಕೋಣಂ ಎಂಬಲ್ಲಿ ಓರ್ವ ಶಾಸ್ತ್ರೀಯರು ರಾಮಾಯಣ ಪಠನಮಾಡುತ್ತಿರುವಾಗ, ತನ್ನದೆ ರೀತಿಯಲ್ಲಿ ಅರ್ಥಹೇಳಿದರು. ಅವರ ಅಭಿಪ್ರಾಯದ ಪ್ರಕಾರ ರಾಮನು ನಮ್ಮಂತೆಯೇ ಒಂದು ವ್ಯಕ್ತಿ ಎಂದು. ಈ ಸಂಗತಿಯು ಅಲ್ಲಿನ ಇತರ ಪಂಡಿತರಿಗೆ ತಿಳಿಯಲು, ಅವರು ಬಹಳ ರೇಗಿದರು. ಶಾಸ್ತ್ರಿಗಳನ್ನು ಚರ್ಚೆಗೆ ಕರೆದರು. ಚರ್ಚೆ ನಡೆದ ಸ್ಥಳವು ಅಲ್ಲಿನ ಶಂಕರಾಚಾರ್ಯರ ಮಠ. ನಿವೃತ್ತ ಜಡ್ಜಿಯಾದ ಶ್ರೀ ಕೆ. ಎಸ್. ರಾಮಸ್ವಾಮಿ ಅಯ್ಯಂಗಾರರು ಈ ಚರ್ಚೆಯ ಅಧ್ಯಕ್ಷರಾದರು. ಆದರೆ, ಶಾಸ್ತ್ರಿಗಳದೊಂದು ಶರ್ತವಿತ್ತು. ಚರ್ಚೆಯಲ್ಲಿ ಸೋತವನು, ತನ್ನ ಬ್ರಹ್ಮೋಪದೇಶ ಚಿಹ್ನವನ್ನು ಕಡಿದುಹಾಕಿ, ಬೆಂಕಿಯಲ್ಲಿ ಹಾರಬೇಕೆಂದು. ಎದುರು ಪಂಗಡದವರು ಇದಕ್ಕೆ ಒಪ್ಪಲಾರದೆ ಹೋದರು. ಶಾಸ್ತ್ರಿಗಳನ್ನು ಕೆಡವಲು ಪ್ರಯತ್ನಗಳು ನಡೆದವು. ಗದ್ದಲ ಉಂಟಾಯಿತು. ಶಾಸ್ತ್ರಿಗಳು ಮಠದ ಆಫೀಸು ಕೋಣೆಯನ್ನು ಸೇರಬೇಕಾಯಿತು. ಕೊನೆಗೆ ಶಾಂತಿಪಾಲಕರು ಬರಲು, ಶಾಸ್ತ್ರಿಗಳನ್ನು ಪಾರಿ ಸಮೀಪ ಮನೆಗೆ ಕಳುಹಿಸಲಾಯಿತು.

ರೂಸ್‌ವೆಲ್ಟರೇ ಮತ್ತೆ ಜಯಶೀಲರಾಗುವರು.

ಮುಂದಿನ ನವಂಬರ ತಿಂಗಳಲ್ಲಿ ನಡೆಯಲಿರುವ ಅಮೇರಿಕಾ ರಾಷ್ಟ್ರಾಧ್ಯಕ್ಷ ಚುನಾವಣೆಗಳಲ್ಲಿ ಡೆಮೊಕ್ರೆಟ್ ಪಂಗಡದ ಉಮೇದ್ವಾರರಾಗಿ ನಿಂತಿರುವ ಪ್ರೆಸಿಡೆಂಟ್ ರೂಸ್‌ವೆಲ್ಟರಿಗೇ ಮತ್ತೆ ವಿಜಯವಾಗಬಹುದು ಎಂಬ ಸೂಚನೆಯಿದೆ. ಈಗ ನಡೆಯುತ್ತಿರುವ ಚುನಾವಣೆಯಲ್ಲಿ ಇವರು ಬಹಳ ಮತವನ್ನು ಪಡೆದು ಸದಸ್ಯತನವನ್ನು ಪಡೆದಿರುವರು. ರೂಸ್‌ವೆಲ್ಟರ ದೇಶದ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವ ನವೀನ ಯೋಜನೆಯ ಒಂದೊಂದೆ ಭಾಗವು ಸುಪ್ರೀಮ್ ಕೋರ್ಟಿನವರ ಇಚ್ಛೆಯಿಂದಾಗಿ ಕಳಚಿ ಬೀಳುತ್ತದೆ.

ಆಸ್ಟ್ರಿಯಾದಲ್ಲಿ ಮಂತ್ರಿಮಂಡಳದ ಬದಲಾವಣೆ.

ಆಸ್ಟ್ರಿಯಾ ಸರಕಾರದ ಮಂತ್ರಿಮಂಡಳದ ಬದಲಾವಣೆಯಾಗಿರುತ್ತದೆ. ಇಟೇಲಿಯ, ಮುಸಲೀನಿಯ ಪ್ರೇರಣೆಗೊಳಗಾದ ಮಂತ್ರಿಮಂಡಳವು ವಿಸರ್ಜಿಸಿಕೊಂಡಿದೆ. ಜರ್ಮನಿಗೆ ಬೇಕಾದ ಮಂತ್ರಿಮಂಡಳವು ಅಧಿಕಾರಕ್ಕೆ ಬಂದಿರುತ್ತದೆ. ಈ ಮುಂಚಿನ ಮಂಡಳದ ನಾಯಕರಾದ ಪ್ರಿನ್ಸ್ ಸ್ಟಾರೆಮ್‌ಬರ್ಗನವರು ಈ ಕುರಿತು ಮುಸಲೀನಿಯೊಡನೆ ಆಲೋಚಿಸಲು ಇಟಲಿಗೆ ತೆರಳಿರುವರು. ಇವರಿಬ್ಬರ ಸಂಭಾಷಣೆಯು ಬಹಳ ರಹಸ್ಯದಲ್ಲಿ ನಡೆಯುತ್ತದೆ. ಆಸ್ಟ್ರಿಯದ ಮೇಲೆ ಜರ್ಮನಿಗೂ ಇಟಲಿಗೂ ಕಣ್ಣಿರುವುದರಿಂದ, ಈಗಿನ ಸ್ಥಿತಿಯಿಂದ ಇಟಲಿ–ಜರ್ಮನಿಗಳೊಳಗೆ ಕಲಹವು ಪ್ರಾರಂಭವಾಗುವಂತಿದೆ.

ಕೊಲೊಂಬೊದಲ್ಲಿ ಭಯಂಕರ ಮಳೆ

24 ತಾಸಿನೊಳಗೆ 11·73 ಇಂಚುಗಳು.

ಇದೇ ತಾ. ೧೯ರಲ್ಲಿ, ಮಧ್ಯರಾತ್ರಿಯಿಂದ ಕೊಲೊಂಬೊದಲ್ಲಿ ಮಳೆಯು ಪ್ರಾರಂಭವಾಗಿರುತ್ತದೆ. ೨೪ ಗಂಟೆಗಳೊಳಗೆ ೧೧·೭೩ ಇಂಚು ಮಳೆಯು ಸುರಿದಿರುತ್ತದೆ. ಈ ರೀತಿ ಮಳೆ ಸುರಿದುದು ಇದೇ ಪ್ರಥಮ ಬಾರಿ. ಕೊಲೊಂಬೋ ನಗರದಲ್ಲಲ್ಲದೆ ಸಿಲೋನಿನ ಇತರ ಕಡೆಗಳಲ್ಲಿಯೂ ಭಯಂಕರ ಮಳೆಯು ಸುರಿದಿರುತ್ತದೆ. ಅನೇಕ ಕಡೆಗಳಲ್ಲಿ ನೆರೆಯು ಉಂಟಾಗಿರುತ್ತದೆ. ಸಿಲೋನಿನ ಮಳೆಗಾಲವು ಬೇಗನೇ ಪ್ರಾರಂಭವಾಗುವುದು.

ಎಲ್ಲಾ ಸರಕಾರಿ ಉದ್ಯೋಗಸ್ಥರೂ ಅದನ್ನು ಓದತಕ್ಕದ್ದು

ಶ್ರೀ ಜವಾಹರಲಾಲರ ಜೀವನಕತೆಯನ್ನು

"ಎಲ್ಲಾ ಸರಕಾರೀ ಉದ್ಯೋಗಸ್ಥರೂ, ಮುಖ್ಯವಾಗಿ ಇಂಡಿಯಾ ಸರಕಾರದ ಉದ್ಯೋಗಸ್ಥರೆಲ್ಲರೂ ಈಗಿನ ರಾಷ್ಟ್ರಾಧಿಪತಿಯವರ ಜೀವನಕಥೆಯನ್ನು ಓದತಕ್ಕದ್ದು" ಎಂದು ಕಲ್ಕತ್ತೆಯ ಪ್ರಸಿದ್ಧ 'ಸ್ಟೇಟ್ಸ್‌ಮೆನ್' ಪತ್ರಿಕೆಯು ಶಫಾರಸು ಮಾಡಿರುವುದು.

"ಈ ಗ್ರಂಥವು ಕ್ರಾಂತಿಕಾರರೊಬ್ಬರಿಂದ ರಚಿಸಲ್ಪಟ್ಟದಾದರೂ, ಅದು ಕ್ರಾಂತಿಮಯ ಪುಸ್ತಕವಲ್ಲ. ಅದು ಅತೀ ಚಲ್ಲೋದಾದ ರೀತಿಯಲ್ಲಿ ಬರೆಯಲ್ಪಟ್ಟಿದೆ."

ವಿಟಮಿನ್‌ಗಳನ್ನು ರಾಶಿಯಾಗಿ ಸಿದ್ಧಪಡಿಸುವುದು.

ಮನುಷ್ಯನ ಆರೋಗ್ಯದ ಮುಖ್ಯ ಆಧಾರಗಳಾಗಿರುವ ವಿಟಮಿನ್‌ಗಳನ್ನು ರಾಶಿರಾಶಿಯಾಗಿ ತಯಾರಿಸುವ ಯೋಜನೆಯು ರಷ್ಯಾದಲ್ಲಿ ನಡೆಯುತ್ತದೆ. ಆ ಬಗ್ಗೆ ಅನೇಕ ಕಾರ್ಖಾನೆಗಳು ಕಾರ್ಯಗೈಯುತ್ತವೆ. ಜನಾಂಗಕ್ಕೆ ಬೇಕಾದ ವಿಟಮಿನ್‌ಗಳನ್ನು ಈ ರೀತಿ ಒದಗಿಸಿ, ಅದು ಆರೋಗ್ಯಕರವಾಗಿ ಬೆಳೆಯುವಂತೆ ಮಾಡುವುದೇ ಅವರ ಮುಖ್ಯ ಉದ್ದೇಶ. ಇದರಿಂದಾಗಿ, ಈ ಮೊದಲು ಜನರನ್ನು ಬಹಳವಾಗಿ ಹಿಂಸಿಸುವ ಅನೇಕ ರೋಗಗಳ ಹಾವಳಿಯು ಕಡಿಮೆಯಾಗಿರುತ್ತದೆ. ಜನರು ಸೇವಿಸುವ ಸರ್ವ ಆಹಾರಗಳೊಡನೆ ಈ ಆರೋಗ್ಯದಾಯಕ ವಿಟಮಿನ್‌ಗಳನ್ನು ಸೇರಿಸಲು ಅವಕಾಶ ದೊರಕಿದಂತಾಗಿದೆ.

ಶ್ರೀ ಸಪ್ರೂರವರಿಗೆ ಲೋರ್ಡ್ ಪದವಿ.

ದಿ ರೈಟ್ ಹೊನರೇಬಲ್ ಸರ್ ತೇಜ ಬಹದ್ದೂರ್ ಸಪ್ರೂರವರಿಗೆ ಸಾರ್ವಭೌಮರು ಪಟ್ಟಾಭಿಷೇಕೋತ್ಸವದ ಸಮಯದಲ್ಲಿ ಲೋರ್ಡ್ ಪದವಿಯನ್ನು ದಯಪಾಲಿಸುವುದಾಗಿ ವದಂತಿ ಇದೆ.

ಭಾರತವಿಜ್ಞಾನಶಾಸ್ತ್ರವೇತ್ತರ ಸಮ್ಮೇಲನ

ಭಾರತವಿಜ್ಞಾನ ಶಾಸ್ತ್ರವೇತ್ತರ ಸಮ್ಮೇಲನ ೧೯೩೭ರ ಜನವರಿ ತಿಂಗಳಲ್ಲಿ ನಡೆಯುವುದಾಗಿ ತಿಳಿದುಬರುತ್ತದೆ. ಸ್ಥಳವು ಇನ್ನೂ ನಿರ್ಣಯವಾಗಲಿಲ್ಲ. ಈಸಮ್ಮೇಲನದಲ್ಲಿ ಬ್ರಿಟಿಷ್ ವಿಜ್ಞಾನ ಶಾಸ್ತ್ರಜ್ಞರ ಪ್ರಸಿದ್ಧ ರೋಯಲ್ ಸೊಸೈಟಿಯ ಪ್ರತಿನಿಧಿಗಳು ಭಾಗವಹಿಸುವರಂತೆ. ನವನೈಸರಾಯರಾದ ಲೋರ್ಡ್ ಲಿನ್‌ಲಿತ್ ಗೋರವರು ಇದರ ಪೋಷಕರಾಗಿರುವರು.

ಜೈಲಿನಲ್ಲಿ ಶ್ರೀ। ಸುಭಾಸ್‌ಬೋಸರಿಗೆ ತೊಂದರೆಗಳು.

ಸೆಕೆ ಜಾಸ್ತಿ, ವ್ಯಾಯಾಮವಿಲ್ಲ. ಸರಕಾರದ ಉತ್ತರ ನಿರೀಕ್ಷಣೆ.

ಅಮೃತ ಬಜಾರ್ ಪತ್ರಿಕೆಯ ಸಂಪಾದಕರಾದ ಶ್ರೀ ತುಷಾರ ಕಾಂತಿಘೋಷ್, ಇವರಿಗೆ ಶ್ರೀ ಬೋಸರವರು ಯರವಾಡಾ ಜೈಲಿನಿಂದ ೧೪ನೇ ತಾರೀಕಿನಲ್ಲಿ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿ, ತಮಗೆ ಸೆಕೆಯಿಂದ ಬಹಳ ತೊಂದರೆಯಾಗುತ್ತಿತ್ತೆಂದೂ, ತಮಗೆ ವ್ಯಾಯಾಮಕ್ಕೆ ಅವಕಾಶವಿಲ್ಲವೆಂದೂ ತಿಳಿಸಿದ್ದಾರೆ. ವ್ಯಾಯಾಮಕ್ಕಾಗಿ ಜೈಲಿನಲ್ಲಿಯೇ ವಾಕ್ (ತಿರುಗಲು) ಮಾಡಲು ಅವಕಾಶ ಕೊಡಬೇಕೆಂದೂ ಸರಕಾರಕ್ಕೆ ಅವರು ಬರೆದಿದ್ದಾರೆ.

ಒಟ್ಟಾವಾ ಒಪ್ಪಂದದ ಮುಕ್ತಾಯ

ಒಟ್ಟಾವಾ ಒಪ್ಪಂದವನ್ನು ಇದೇ ಮೇ ತಾ. ೧೩ನೇ ದಿನದಿಂದ ಮುಕ್ತಾಯಗೊಳಿಸಿದೆ ಎಂಬುದಾಗಿ ಟ್ರೇಡ್ ಬೋರ್ಡಿಗೆ ತಿಳಿಸಲಾಗಿದೆ. ಅಂದಮೇಲೆ, ಬರುವ ನವಂಬರ ತಾ. ೧೩ರಿಂದ ಒಪ್ಪಂದವು ಜ್ಯಾರಿಯಲ್ಲಿರುವುದಿಲ್ಲ. ಏಕೆಂದರೆ ಆರು ತಿಂಗಳ ಅವಧಿಯನ್ನು ಕೊಡಬೇಕೆಂಬ ನಿಬಂಧನೆಯೊಂದು ಇತ್ತು. ಇಂಡೊ–ಜಪಾನ್ ವ್ಯಾಪಾರ ಒಪ್ಪಂದದ ಕುರಿತು ಈಗ ಆಲೋಚನೆ ನಡೆಯುತ್ತಿದೆ.

ಜೆ. ಸಿ. ಸಿಕೇರ ಬ್ರದರ್ಸ್,

ಜವುಳಿ, ನೂಲು, ರಂಗು, ಕೆಮಿಕಲ್ಸ್ ವಗೈರೆಯ ಹೋಲ್‌ಸೇಲ್ ಮತ್ತು ರಿಟೈಲ್ ವ್ಯಾಪಾರಿಗಳು.

ಮಾರ್ಕೆಟು ರಸ್ತೆ, ಮಂಗಳೂರು.

ಮೇಲಿನ ಶಾಪಿನಲ್ಲಿ ನಮ್ಮ ಜೆಪ್ಪಿನ ಮಾರ್ಣಮಿಕಟ್ಟೆಯ ಬಳಿಯಲ್ಲಿರುವ ಸ್ವಂತ ವಿಕ್ಟರ್ ಮಗ್ಗದ ನೇಯಿಗೆ ಕಾರ್ಖಾನೆಯಲ್ಲಿ ತಯಾರಿಸಲ್ಪಡುವ ಖಾತ್ರಿ ರಂಗಿನ ನೂಲು, ಮರ್ಸ್ರೈಜ್ಡ್, ಸಿಲ್ಕು, ರೇಶ್ಮೆ ವಗೈರೆಯ ನಾನಾ ತರದ ಚಲೋದಾದ ಅಂಚಿನ ಸೀರೆಗಳು ಮೊಳ 6ರಿಂದ 12, 14, 16, 18ರ ವರೆಗಿನವುಗಳು ಕಡಿಮೆ ದರದಲ್ಲಿ ಮಾರಾಟಕ್ಕಿವೆ. ಇದಲ್ಲದೆ ಸ್ವಂತವಾಗಿಯೇ ತಯಾರಿಸಲ್ಪಟ್ಟ ಚೇಕ್ಸ್, ಪಂಚೆ, ಮುಂಡು, ದೋತ್ರ, ರುಮಾಲು ವಗೈರೆಗಳೂ, ಸ್ವದೇಶಿ ಮತ್ತು ಇಂಗ್ಲಿಷು ಮಿಲ್ಲುಗಳ ಕೋಟಿಂಗ್ಸ್, ಶರ್ಟಿಂಗ್ಸ್, ಚೇಕ್ಸ್, ದೋತಿ, ಕೋರ, ಮಲ್ಲು, ಟುವಾಲ್ ಮುಂದ್ರಿ, ಮುಂಡು ವಗೈರೆ ಎಲ್ಲಾ ತಮಂ ಮ್ಯಾಲುಗಳೂ ನಮ್ಮಲ್ಲಿ ಅಗ್ಗವಾಗಿ ದೊರಕುತ್ತವೆ. ನೈಗೆಯ ಕೈಗಾರಿಕೆಗೆ ಬೇಕಾದ ಎಲ್ಲಾ ತರದ ಖಾತ್ರಿ ರಂಗಿನ ರಂಗಿಸಿದ ನೂಲುಗಳೂ, ರಂಗಿಸದ ನೂಲುಗಳೂ, ರೇಶ್ಮೆ, ಮರ್ಸ್ರೈಜ್ಡ್, ಆರ್ಟಿಸಿಸಿಯಲ್ ನೂಲು ವಗೈರೆಗಳೂ, ಲಾಳಿ, ಅಚ್ಚು, ರೆಕ್ಕೆ, ಗುಮ್ಮೆ ವಗೈರೆ ಎಲ್ಲಾ ತರದ ಮಗ್ಗದ ಸಾಮಾನುಗಳೂ, ರಂಗು ಹಾಕುವ ಕೈಗಾರಿಕೆಗೆ ಬೇಕಾದ ರಂಗು ಮತ್ತು ಕೆಮಿಕಲ್ಸ್‌ಗಳೂ ನಮ್ಮಲ್ಲಿ ಸುಲಭ ದರದಲ್ಲಿ ದೊರಕುತ್ತವೆ.

ಜಪ್ಪು ನೇಯಿಗೆ ಕಾರ್ಖಾನೆಯ ವಿಕ್ಟರ್ ಮಗ್ಗದ ಸೀರೆ, ಇದೀ ಹಿಂದೂಸ್ಥಾನದ ಕೆಥೋಲಿಕ್ ಕೈಗಾರಿಕಾ-ಪ್ರದರ್ಶನದಲ್ಲಿ ಪದಕ ಮತ್ತು ಪತ್ರ ಪಡೆದಂಥಾ ಸೀರೆ, ಭಾರೀ ಸೀರೆ ಎಂದು ಎಲ್ಲೆಲ್ಲೂ ನಮ್ಮ ಗಿರಾಕಿಗಳಿಂದ ಸ್ತುತಿಸಲ್ಪಡುವ ನಮ್ಮ ಮ್ಯಾಲನ್ನು ನೀವು ಸಹಾ ಪಡೆದು, ಅದರ ಖಾತ್ರಿ ರಂಗು, ಅಂದ ಚಂದ ಮತ್ತು ಪ್ರಯೋಜನವನ್ನು ಪರೀಕ್ಷಿಸಿರಿ.

ನಮ್ಮ ರಂಗಿನ ಕಾರ್ಖಾನೆಯಲ್ಲಿ ಎಲ್ಲಾ ತರದ ನೂಲು ವ ವಸ್ತ್ರಗಳಿಗೆ ಖಾತ್ರಿ ರಂಗನ್ನು ಹಾಕಿಸಬಹುದು. ವ್ಯಾಪಾರಸ್ಥರಿಗೆ ತುಂಬಾ ಅನುಕೂಲವಿದೆ.

ಹೆಡ್ ಆಫೀಸು, ಕಾರ್ಖಾನೆ ಮತ್ತು ರಂಗಿನ ಕಾರ್ಖಾನೆಯ ವಿಳಾಸ— | ಶಾಖೆಗಳು—

ಜೆ. ಸಿ. ಸಿಕೇರ ಬ್ರದರ್ಸ್, ಮಾರ್ಣಮಿಕಟ್ಟೆ ರೋಡ್, ಜೆಪ್ಪು, ಕಂಕನಾಡಿ ಪೋಸ್ಟ್, ಮಂಗಳೂರು.

ಜೆ. ಸಿ. ಸಿಕೇರ ಬ್ರದರ್ಸ್, ಮಾರ್ಕೆಟು ರೋಡ್, ಮಂಗಳೂರು, ದ. ಕ. | 227 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ,

ಅನುಕ್ರಮಣಿಕೆ

ಕಥೆಗಳು ... ೨
ಸೋದರ ಅತ್ತೆಗಳು ... ೩
ಶ್ರೀಮಂತರನ್ನು ಹೇಗೆ ಆರೋಗ್ಯವಾಗಿಡ ಬಹುದು! ೬
ಸೀಯರಿಗೆ ಒಂದು ಆಪಾದ ... ೮
ವಿವಿಧ ಸಮಾಚಾರಗಳು ... ೧೩
ಅಗ್ರಲೇಖ
ಎಲಿಮೆಂಟರಿ ಶಾಲೆಗಳಿಗೆ ಗ್ರೇಂಟು ಅಲ್ಲ, ಗ್ರೆಚ್ಯುಯಿಟಿ ೧೦
ಸ್ಫುಟವಿಚಾರಗಳು ,,
ಬೆಂಗಳೂರು, ತಾಲೂಕುಗಳಿಂದ ... ೧೧
ವರ್ತಮಾನ ಸಂಗ್ರಹ
ವಣಿಜ ವೃತ್ತ ... ೯
ಸಂಪಾದಕರ ಟಪ್ಪಾಲುಪೆಟ್ಟಿಗೆ ... ೧೬
ರಾಷ್ಟ್ರವೀರ ಶ್ರೀ ಬಾಬು ಸುಭಾಷ್ಚಂದ್ರಬೋಸರು ೧೪

ಸ್ವದೇಶಾಭಿಮಾನಿ.

ತಾ. ೨೨ನೇ ಶುಕ್ರವಾರ ಮೇ ೧೯೪೬

ಎಲಿಮೆಂಟರಿ ಶಾಲೆಗಳಿಗೆ ‘ಗ್ರೇಂಟು’ ಅಲ್ಲ, ‘ಗ್ರೆಚ್ಯುಯಿಟಿ!

ವಿದ್ಯಾಇಲಾಖೆಯ ಮುಖಾಂತರ ಸರಕಾರವು ಖಾಸಗಿ ಶಾಲೆಗಳಿಗೆ ಕೊಡುವ ಸಹಾಯವು, ‘ಗ್ರೇಂಟು’ ಎಂಬ ಉಂಬಳಿ ಅಥವಾ ದತ್ತಿಯನ್ನು ಸೂಚಿಸುವ ಶಬ್ದಕ್ಕೆ ಸರಿಯಾಗಿರದೆ, ‘ಗ್ರೆಚ್ಯುಯಿಟಿ’ ಎಂಬ ಉಪಕಾರತೆಯಿಂದ ಕೊಡುವ ದಾನಕ್ಕೆ ಸರಿಯಾಗಿದೆ ಎಂದೊಬ್ಬರು ಬಹಳ ನೊಂದವರಾಗಿ ಬರೆದಿರುತ್ತಾರೆ. ಹಲವು ವರ್ಷ ಸರ್ವೀಸು ಮಾಡಿದವನಿಗೆ, ಪೆನ್ಶನು ಕೊಡುವುದಾದರೆ, ಸಾವಿರ ರೂಪಾಯಿ ಬೇಕಾಗುವಲ್ಲಿ, ನಾವೂ ಅವನ ಸರ್ವೀಸನ್ನು ಗಣನೆಗೆ ತಂದವರೆಂದು ತೋರಿಸುವ ಔದಾರ್ಯದಿಂದ ನೂರು–ಇನ್ನೂರು ರೂಪಾಯಿಯ ಗ್ರೆಚ್ಯುಯಿಟಿ ಕೊಟ್ಟು ಮೆರೆವ ಇಲಾಖೆಗಳುಂಟು. ಅದರಂತೆ, ಸರಕಾರದ ಧನಸಹಾಯವು ‘ಗ್ರೇಂಟು’ ಎಂಬ ಹೆಸರಿಂದ ಹಂಚುವಂತಾಗಿದೆಯಾದರೂ, ಅದು ಕೇವಲ ‘ಗ್ರೆಚ್ಯುಯಿಟಿ’ಯೇ ಆಗಿದೆ ಎಂದು ತೋರುವುದು ನಿಜ.

ಕೊಯಮ್ಮುತ್ತೂರು ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನವರು ಸರಕಾರಕ್ಕೆ ಒಂದು ನಿರ್ಣಯವನ್ನು ಕಳಿಸಿಕೊಟ್ಟಿರುವರು; ಅದನ್ನು ಸರಕಾರವು ಸರಿಯಾಗಿ ಪರ್ಯಾಲೋಚಿಸುವುದರಲ್ಲಿ ಪ್ರಯೋಜನಹೊಂದುವುದು. ಏಕೆಂದರೆ, ಎಲ್ಲ ಕೌನ್ಸಿಲುಗಳೂ ಅಂತೆಯೆ ಭಾವಿಸಿರುವುವು; ಅಥವಾ ಅದಕ್ಕಿಂತಲೂ ಕಠಿನ ಮಾತುಗಳಲ್ಲಿ!

“ದೇಶದಲ್ಲಿರುವ ನಿರಕ್ಷರತೆಯನ್ನು ಹೋಗಲಾಡಿಸುವುದರಲ್ಲಿ ಅತಿ ವಿಶೇಷ ಸಹಾಯವನ್ನು ಖಾಸಗಿ ಶಾಲೆಗಳು ಮಾಡುತ್ತಿವೆ ಎಂದು ಸರಕಾರವು ಹೇಳುವ ಶಿಫಾರಸಿಗೂ, ಇಂತಹ ಖಾಸಗಿ ಶಾಲೆಗಳು ಬದುಕಿಕೊಳ್ಳಲು ಅಕ್ಕಗಕ್ಕ ಸಹಾಯವಾದ ಗ್ರೇಂಟುಗಳನ್ನು ಪ್ರತಿವರ್ಷವೂ ಇನ್ನೂ ಇನ್ನೂ ಕಡಿಯುತ್ತ ಬರುವ ಶಿಫಾರಸಿಗೂ ಅಜಗಜಾಂತರ ವ್ಯತ್ಯಾಸ ತೋರುತ್ತಿರುವುದು.

“ಉಂಬಳಿಯಾಗಿ ಕೊಡಬೇಕಾಗಿರುವ ‘ಗ್ರೇಂಟು’ ಸಿಗುವ ಬದಲಾಗಿ ‘ಗ್ರೆಚ್ಯುಯಿಟಿ’ಯಾಗಿ ಇಷ್ಟು ದಾನಕೊಡುತ್ತಿರುವ ಸರಕಾರದ ಕ್ರಮವನ್ನು ನೋಡಿದರೆ, ಮೆಲ್ಲನೆ ಖಾಸಗಿ ಶಾಲೆಗಳು ದ್ರವ್ಯಸಹಾಯವಿಲ್ಲದೆ ಅಳಿದು ಹೋಗಲೆಂಬ ಉದ್ದೇಶವನ್ನೇನೋ ಸರಕಾರವು ಇಟ್ಟುಕೊಂಡಿರುವುದೆಂಬಂತೆ ಕಾಣುತ್ತಿದೆ.

“ಏಪ್ರಿಲ್ ತಿಂಗಳ ಆರಂಭಾಗದಲ್ಲಿ ಪ್ರತಿವರ್ಷವೂ, ಸರಕಾರವು ಅನುಗ್ರಹವನ್ನಿಟ್ಟು, ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನವರು ಕಳುಹಿರುವ ಬಜೇಟನ್ನು ಪರಾಂಬರಿಸಿ, ತಾವು ಕೊಡುವರೆ ಸಿದ್ಧವಿರುವ ಹಣವೆಷ್ಟೆಂಬುದನ್ನು ತಿಳಿಸಿದರೆ ಚೆನ್ನಾಗುತ್ತಿದ್ದಿತು.

“ಹೀಗೆ ಮಾಡುವುದರಿಂದ, ವರ್ಷದ ಕೊನೆಗೆ, ಆ ಕಷ್ಟವನ್ನೆ ಹಲವು ಮೆನೆಜರರೂ ಉಪಾಧ್ಯಾಯರೂ ಅನುಭವಿಸುವ ಹಾಗೆ ಗ್ರೇಂಟಿನ ಕಡಿತಾಯವಾದುದನ್ನು ತಿಳಿಸುವ ಚಾಲ್ತಿ ವಿಧಾನವನ್ನು ರದ್ದುಮಾಡಿದಂತಾಗುವುದು; ಕೋಡಿನ ಪ್ರಕಾರ, ತಮಗೆ ಇಂತಿಷ್ಟು ಗ್ರೇಂಟು ದೊರೆವುದಾಗಿ ಭಾವಿಸಿ, ಅದರಂತೆ ವ್ಯಯಿಸಿದ ಶಾಲೆಗಳಿಗೆ ಈಗಣ ರೀತಿಯಲ್ಲಿ ಉಂಟಾಗುವ ಮೋಸವನ್ನು ತಪ್ಪಿಸಬಹುದು.”

ಸರಕಾರವು ಕೌನ್ಸಿಲುಗಳಿಂದ ಬಜೇಟುಗಳನ್ನು ತರಿಸಿಕೊಂಡು, ಈ ರೀತಿಯಾಗಿ ಕಡಿತಾಯದಿಂದ ಸಂಕ್ಷೇಪಮಾಡಿ, ವರ್ಷದ ಕೊನೆಗೆ ತನ್ನ ದುಃಖಕರವಾದ ತೀರ್ಮಾನವನ್ನು ಪ್ರಕಟಿಸುವುದು, ಇನ್ನಾವ ಇಲಾಖೆಯಲ್ಲೂ ರೂಢಿಯಲ್ಲಿಲ್ಲ.

ಛಾಪಿಸಿರುವ ಒಂದು ಕೋಡು ಇದೆಯಾದರೂ, ಅದರಲ್ಲಿ ನ್ಯಾಯಪ್ರಕಾರವಾಗಿ ನಮೂದಿಸಿರುವ ಮೊಬಲಗಿಗಿಂತ ಎಷ್ಟು ಕಡಮೆಯಾಗಿ ತನಗೆ ಸಿಗಬಹುದೋ ಎಂಬುದನ್ನು ನಿರ್ಧರಿಸಿ ತಿಳಿಯಬಲ್ಲ ಯಾವ ಶಾಲಾ ಮೆನೆಜರನೂ ಇಲ್ಲ. ಯಾವನೊಬ್ಬ ಸರಕಾರೀ ಆಫೀಸರನು, ತನಗೆ ಈ ವರ್ಷ ದೊರೆವ ಸಂಬಳ ಇಷ್ಟೇ ಎಂದು ತಿಳಿದು ಇದ್ದು, ಅದರಂತೆ ವ್ಯಯಿಸುತ್ತ ಹೋದಬಳಿಕ, ವರ್ಷದ ಕೊನೆಗೆ ಅವನ ಸಂಬಳವು ಇಂತಿಷ್ಟು ಕಡಮೆಯಾಗಿದೆ ಎಂದು ಎಂದಾದರೂ ತಿಳಿಸಿದ್ದುಂಟೆ? ತಿಳಿಸಿದ್ದರೆ ಅವನು ಹೇಗೆ ಜೀವನಮಾಡುತ್ತಿದ್ದನು? ವಿದ್ಯಾ ಇಲಾಖೆಯಲ್ಲಿ ಯಾವ ಆಫೀಸರರಾದರೂ ಹೀಗೆ ಅನುಭವಿಸಿದ್ದಿದೆಯೆ?

ಖಾಸಗಿ ಏಡೆಡ್ ಶಾಲೆಗಳ ವಿಷಯವಾಗಿ ಬಾಯ್ತುಂಬ ಕೊಂಡಾಡುತ್ತಲೇ ಶಾಲ್ಯ ಹರಣ ಮಾಡುವ ಇಲಾಖಾಧಿಪತಿಗಳು, ಛಾಪಾ ಕೋಡಿನ ಪ್ರಕಾರ ನ್ಯಾಯವಾಗಿ ಶಾಲೆಗಳಿಗೆ ಸಿಗಬೇಕಾಗಿರುವ ಹಣದಲ್ಲಿ, ೧೨॥ ರಿಂದ ೧೮॥ ತನಕ ಕಡಿತಾಯ ಮಾಡುವುದರಲ್ಲಿ ಏನರ್ಥವಿದೆ?

ನಮ್ಮ ದೇಶದ ನಿಜವಾದ ಸಂಪತ್ತು ಯಾವುದು? ದೇಶದ ಸೇವೆಗಾಗಿ ವಿಚಕ್ಷಣತೆಯಿಂದಲೂ ಗೌರವ ಬುದ್ಧಿಯಿಂದಲೂ ಕೆಲಸ ಮಾಡತಕ್ಕ ನೌಕರರು! “ಪ್ರಶ್ನಾಪತ್ರಗಳು ಮೊದಲೇ ಸಿಗುವಂತೆ ಆಶಿಸದಂತೆಯೂ, ಪ್ರಶ್ನೆಗಳು ಎಲ್ಲೆಲ್ಲಿಯೂ ಗುಜುಗುಜು ಕೇಳಿಸುತ್ತಿದ್ದರೂ ಅವುಗಳಿಗೆ ಕಿವಿಕೊಡದಂತೆಯೂ, ಇರಬೇಕಾದುದು ಮಹಾ ನಿಸ್ಪೃಹತೆಯ ಅತ್ಯಿ ಗೌರವಕರವಾದ ಗುಣವೆಂದು ವಿದ್ಯಾರ್ಥಿಗಳಿಗೆ ಕಲಿಸಿಕೊಡುತ್ತ ಅವರನ್ನು ಜನಾಂಗಸೇವೆಗಾಗಿ ತರಬೇತುಮಾಡುವುದು ಶಾಲೆಗಳ ಕರ್ತವ್ಯವೆಂದು ನಮಗೆ ಡೈರೆಕ್ಟರರು ವಾಸ್ತವಿಕ ವಿಚಾರ ಹೇಳಿರುವರು. ಹೀಗೆಲ್ಲ ಗೌರವಬುದ್ಧಿಯಿಂದ ಶಾಲೆಗಳು ಕೆಲಸಮಾಡುವಾಗ, ಇಲಾಖಾ ಅಧಿಕಾರಿಗಳು ಅವುಗಳನ್ನು ಗೌರವದಿಂದ ನೋಡಬೇಡವೇ?

ಮುದ್ರಿತವಾದ ಒಂದು ಧರ್ಮಶಾಸ್ತ್ರವಿರುತ್ತಾ, ಅದರಂತೆ ಗ್ರೇಂಟುಗಳು ಸಿಗದೆ, ಅದಕ್ಕಿಂತ ಎಷ್ಟೋ ಕಡಮೆಯಾಗಿ ಗ್ರೇಂಟು ಮಂಜೂರಾಗುವುದೇಕೆ? ಧರ್ಮಶಾಸ್ತ್ರವನ್ನು ಮಾಡಿಕೊಟ್ಟವರೇ ಅದನ್ನು ಮೀರುವುದೆ? ಒಂದು ಸಲ ಬಜೇಟನ್ನು ಒಪ್ಪಿಸಿದ ಕೂಡಲೆ, ಎಷ್ಟು ಸಂಕ್ಷೇಪವಾಗಿದೆ ಎಷ್ಟು ಹಣ ಸಿಗುವುದು ಎಂಬುದನ್ನು ಸಾಮಾನ್ಯವಾಗಿ ಪಬ್ಲಿಕ್ ಸಂಸ್ಥೆಗಳೆಲ್ಲವೂ ತಿಳಿಯುವುವು; ಖಾಸಗಿ ಸಂಸ್ಥೆಗಳಿಗೂ ಇದನ್ನು ತಿಳಿಸಿದರಾಗದೆ? ಶಾಲೆಗಳು ಬೇಡುತ್ತಿರುವುದು ಶನಿವಾರದ ಧರ್ಮವನ್ನಲ್ಲ, ವಿಧಿಪ್ರಕಾರವಾಗಿ ವಿನಿಯೋಗಕ್ಕೆ ಬಿಟ್ಟದೆಂಬ ಉಂಬಳಿಯ ಪಾಲ್ಯವನ್ನು!

ಸ್ಫುಟವಿಚಾರಗಳು

ಸಿವಲ್ಲಾ ಮ್ಯುನಿಸಿಪಾಲಿಟಿಯು ಒಂದು ಮಾದರಿ

ಇಡೀ ಶಹರಿನ ಸೊಬಗನ್ನೆ ಕೆಡಿಸುವ ರೀತಿಯಲ್ಲಿ ನಾನಾ ಬಗೆಯ ನೋಟೀಸುಗಳನ್ನು ಎಲ್ಲೆಲ್ಲಿಯೂ ಹಚ್ಚುವರಾದ ಕಾರಣ, ಸಿನೆಮಾ ಗೃಹಗಳ ಮೆನೆಜರುಗಳಿಗೆ ಸಿವಲ್ಲಾ ಮ್ಯುನಿಸಿಪಾಲಿಟಿಯ ಅಧಿಕಾರಿಯು ಎಚ್ಚರಿಕೆ ಹುಟ್ಟಿಸುವ ಸರ್ಕ್ಯುಲಾರನ್ನು ಕಳಿಸಿರುವನು. “ನಗರದ ಸೌಂದರ್ಯವನ್ನು ಹಾಳುಮಾಡದಂತೆ ಪ್ರಯತ್ನಿಸಲು ನೀವು ನನ್ನೊಡನೆ ಸಹಕರಿಸಬೇಕು. ಸಿಕ್ಕವರ ಮನೆಗೋಡೆಗಳಿಗೆ, ಎಲೆಕ್ಟ್ರಿಕ್ ಸರಿಗೆಯ ಕಂಬಗಳಿಗೆ, ನಾನಾ ಕಟ್ಟಡಗಳಿಗೆ ನೋಟೀಸುಗಳನ್ನು ಹಚ್ಚುವುದು ಸೌಂದರ್ಯಗಳನ್ನು ಕೆಡಿಸುವುದಾಗಿದೆ. ಯಾವ ಯಾವ ಸ್ಥಳಗಳಿಗೆಲ್ಲ ಈ ನೋಟೀಸುಗಳು ಹಚ್ಚಲಾಗಿರುವುದೋ, ಆ ನೋಟೀಸುಗಳು ಎಂತಹವು ಎಲ್ಲಿಂದ ಬಂದಿವೆ ಎಂದು ಮೊದಲಾಗಿ ಮ್ಯುನಿಸಿಪಲ್ ನೌಕರರು ಬರೆದುಕೊಳ್ಳುವರು. ತಾನು ಹಚ್ಚಿದುದಿಲ್ಲವೆಂದು ಸಿನೆಮದ ಮೆನೆಜರರು ಹೇಳಬಹುದು. ಅದನ್ನು ಹಚ್ಚಲು ಇತರರಿಗೆ ದೊರೆವಂತೆ ಮಾಡಿದಾಗಲಿ, ಅವರು ಅದನ್ನು ಹಚ್ಚಿಸಿದ ಅಪರಾಧಕ್ಕೆ ಗುರಿಯಾಗುವರು. ಪ್ರತಿ ಒಬ್ಬರು ತಾವು ತಯಾರಿಸುವ ನೋಟೀಸುಗಳೆಷ್ಟು, ಆಳುಗಳಿಗೆ ಅವನ್ನು ಹಚ್ಚುವರೆ ಏನು ಸೂಚನೆ ಕೊಡಲಾಗಿದೆ ಎಂಬುದನ್ನು ಕೂಡಲೆ ನನಗೆ ತಿಳಿಸಬೇಕು. ಯಾವ್ಯಾವ ಸ್ಥಳಗಳಲ್ಲಿ ನೋಟೀಸು ಹಚ್ಚಿಸುವ ಇರಾದೆ ಇದೆಯೋ ಅದನ್ನು ಮೊದಲಾಗಿ ನನಗೆ ತಿಳಿಸಿದರೆ, ಈ ಊರಲ್ಲಿರುವ ಮೂರು ಸಿನೆಮಗಳ ನೋಟೀಸುಗಳೂ ಒಂದೇ ಬೋರ್ಡಿಗೆ ಹಚ್ಚುವರೆ ನಾನು ವ್ಯವಸ್ಥೆಮಾಡಲೊಪ್ಪುವೆನು” ಎಂದೇ ಈ ಸರ್ಕ್ಯುಲಾರು. ನೋಟೀಸು ಹಚ್ಚಲೂ ಒಂದು ವಿಧಿಯಿಲ್ಲ; ಹಚ್ಚಿದುದನ್ನು ಹರಿಯುವುದು; ಅದರ ಮೇಲೆ ಮತ್ತೊಂದನ್ನು ಹಚ್ಚುವುದು; ಹಚ್ಚುವವರೊಳಗೇ ಕಚ್ಚಾಟ, ಇತ್ಯಾದಿಗಳ ನಿರ್ಮೂಲನಕ್ಕೆ ಮ್ಯುನಿಸಿಪಲ್ ಸಹಾಯವೂ ನಾಗರಿಕತೆಯ ಕುರುಹೂ ಹೇಗಾದರೂ ಇರಬೇಡವೆ?

ಮಳೆಗಾಲದ ಪ್ರಾರಂಭ.

ಇದೇ ತಾ. ೧೯ನೆಯ ಬೆಳಿಗ್ಗೆ ೩ ಗಂಟೆಯಿಂದ ೯ರತನಕ ಕೊಲೊಂಬೋ ನಗರದಲ್ಲಿ ಹನ್ನೊಂದುಮುಕ್ಕಾಲು ಇಂಚು ಮಳೆ ಸುರಿಯಿತೆಂದು ಪ್ರಕಟವಾಗಿದೆ. ಇದು ಮಳೆಗಾಲದ ಪ್ರಾರಂಭವೆಂದೇ ಹೇಳಲು ಅಡ್ಡಿಯಿಲ್ಲವೆಂದು ತೋರುತ್ತಿದೆ. ಕೊಲೊಂಬೊದಲ್ಲಿ ಯಾವುದೊಂದು ದಿನ ಇಷ್ಟು ಮಳೆ ಬಿದ್ದುದಿಲ್ಲವೆಂದೂ ಹೇಳಲಾಗಿದೆ. ಇದರಿಂದ ತಾ. ೨೫ರೊಳಗೆ ಖಂಡಿತವಾಗಿಯೂ ಇಲ್ಲಿ ಮಳೆ ಪ್ರಾರಂಭಿಸಲೇ ಬೇಕೆನ್ನುವರು. ಕಠಿನವಾಗಿ ಗಾಳಿ ಬೀಸುತ್ತ ಮೋಡಗಟ್ಟಿರುವುದೂ ಇಲ್ಲಿ ಲಕ್ಷಣವಾಗಿದೆ. ಮೈಯನ್ನು ಉರಿಸುವಂತಹ ಸೆಕೆಯೂ ಇದೆ. ಸಮುದ್ರದ ಗರ್ಜನೆಯು ಚೆನ್ನಾಗಿದೆ. ಕಾಲಕ್ರಮದಂತೆ, ಎಷ್ಟೋ ಕಡೆ ಭಾವಿನೀರು ಆರಿ, ಕುಡಿಯುವುದಕ್ಕೂ (ಮೀಯುವ ವಸ್ತ್ರಒಗೆಯುವ ಮಾತಿರಲಿ) ನೀರು ಕಡಮೆಯಾಗಿ ಮ್ಯುನಿಸಿಪಲ್ ಭಾವಿಗಳ ಸಂಖ್ಯೆ ಸಾಲದುದಾಗಿಯೂ ಇರುವಲ್ಲಿ ಬಿಕ್ಕಟ್ಟು ತೋರಿಸುವುದಾಗಿಯೂ ಇರುವಾಗ ಮಳೆಯು ಬೇಗನೆ ಸುರಿಯದೆ ಇದ್ದರೆ ಮಹಾಬಾಧೆಯುಂಟಾಗದಿರದು. ಮಳೆಗೆ ಸುಸ್ವಾಗತ; ಮದುವೆ ಮುಂಜಿಗಳ ಚಪ್ಪರಗಳು ಇನ್ನೂ ತಲೆಯೆತ್ತಿರುವಾಗ, ಮಳೆ ಸುರಿದರೆ ಬೆಂಕಿಯಾರಿಸುವ ಇಂಜಿನೇ ಇಲ್ಲದ ನಮ್ಮ ಊರಿಗೆ ಸುಖವೇ ಹೊರತು ಕಷ್ಟವೆಂದಿಗೂ ಆಗದು.

“ಸರಕಾರವು ಜನತೆಗೆ ತನ್ನ ಮನೋಅಭಿಪ್ರಾಯವನ್ನು ವಿಶ್ವಾಸದಿಂದ ತಿಳಿಸಿದರೆ ತಪ್ಪೇನು? ಕೆಲಸಮಾಡಿಸಿಯಾದಬಳಿಕ, ಕೊಡಬೇಕಾಗಿದ್ದ ನಿರಖಿನಿಂದ, ಕಳೆದುಕೊಡುತ್ತಿರುವುದು ಇಷ್ಟೆಂದು, ಕೊನೆಗೆ ತಿಳಿಸುವ ಈ ಔದಾರ್ಯದ, ಬಾಯುಪಚಾರದ ಕೊಂಡಾಟದ, ಜೇಬು ಬರಿದಾಗಿಸುವ ಕಾರ್ಯತಂತ್ರದ ಹಂಚಿಕೆಯೇಕೆ?” ಎಂಬುದೇ ಕೊಯಮ್ಮುತ್ತೂರು ಕೌನ್ಸಿಲಿನ, ಹಾಗೂ ಇಂತಹ ಎಲ್ಲ ಕೌನ್ಸಿಲುಗಳ ದೂರು.

ಎಸ್ ಎಸ್. ಎಲ್. ಸಿ. ಪ್ರಶ್ನಾ ಪತ್ರಗಳ ಕಳವು.

ಕರ್ನೂಲು ಹೈಸ್ಕೂಲಿನ ಒಬ್ಬ ವಿದ್ಯಾರ್ಥಿ ಕರ್ನೂಲು ಕೋಲ್ ಮೆಮೋರಿಯಲ್ ಹೈಸ್ಕೂಲಿನ ತೆಲುಗು ಪಂಡಿತರು, ಗುಂತಕಲಿನ ರೈಲ್ವೆ ಮೈಲ್ ಏಜಂಟರು, ಮದ್ರಾಸಿನಲ್ಲಿರುವ ಡೈರೆಕ್ಟರರ ಒಬ್ಬ ಟೈಪಿಸ್ಟ್, ಒಬ್ಬ ಮಾರ್ವಾಡಿಯ ಗುಮಾಸ್ತ, ಇಷ್ಟು ಮಂದಿಯೂ ಇನ್ನು ಮೂವರೂ ಈ ಅಪರಾಧದಲ್ಲಿ ಸೇರಿರುವರಾಗಿ ವಿಚಾರಣೆಯಾಗುತ್ತಿದೆ. ಡೈರೆಕ್ಟರರ ಆಫೀಸಿನ ಗುಮಾಸ್ತನು ಪ್ರಶ್ನಾಪತ್ರಗಳನ್ನು ಹಾಕಿಡುವ ಲಕ್ಕೋಟಿಗಳನ್ನೂ, ಸೆಕ್ರೆಟರಿಯವರ ಮೊಹರಿನ ಗುರುತುಗಳನ್ನು ಬೇರೆ ತಯಾರಿಸಿಟ್ಟು, ಮತ್ತೊಬ್ಬನ ಮೂಲಕ ಲಕ್ಕೋಟೆಯೊಳಗೆ ಅಂಟಿಸುವ ಚೀಟುಗಳನ್ನು ಪಡೆದು, ಒಡೆದ ಲಕ್ಕೋಟೆಗಳಿಗೆ ಪುನಃ ವಿಳಾಸ ಹಚ್ಚಲು ಲೇಬಲುಗಳನ್ನು ಪಂಡಿತರು ಛಾಪಿಸಿಕೊಟ್ಟು, ಆ ವಿದ್ಯಾರ್ಥಿಯೇ ಮೊದಲಾದವರ ಪಂತಿಗೆ ಹಣದಿಂದ ಇಷ್ಟೆಲ್ಲ ಕಾರ್ಯಭಾರವು ನೆರವೇರಿತೆಂದು ಪೋಲೀಸರ ಹೇಳಿಕೆ. ಗುಂತಕಲ್ಲಿನ ಡಿಪ್ಯೂಟಿ ಇನ್ಸಪೆಕ್ಟರರಿಗೆ ತಲುಪಬೇಕಾಗಿದ್ದ ಲಕ್ಕೋಟೆಯನ್ನು ಒಡೆದುದಾಗಿಯೂ, ಇವರೊಳಗೊಬ್ಬನು ಎಲ್ಲ ನಿಜಸ್ಥಿತಿಯನ್ನು ಸರಕಾರಕ್ಕೆ ಅರಿಕೆ ಮಾಡಿರುವನಾಗಿಯೂ ತಿಳಿದು ಬಂದಿದೆ. ಪ್ರಶ್ನಾಪತ್ರಗಳ ಮಾರಾಟದಿಂದ 800 ರೂಪಾಯಿ ಹುಟ್ಟಿರುವುದಾಗಿ ಗೊತ್ತಾಗಿದೆ. ಇನ್ನು ಕೆಲವು ಅಪರಾಧಿಗಳನ್ನು ಕೈದು ಮಾಡಿಲ್ಲ. ಅಪರಾಧಿಗಳಲ್ಲಿ ಕೆಲವನ್ನು ಈಗ ಜಾಮೀನಿನ ಮೇಲೆ ಬಿಟ್ಟಿರುವರು.

ಬೆಂಗಳೂರು ಹೊಗೆಸೊಪ್ಪಿನ ಕಾರ್ಖಾನೆ

ಯಲ್ಲಿ ಕೆಲಸ ಮಾಡುವವರು ಈಗ ಮುಷ್ಕರ ಹಿಡಿದಿರುವರು. ಇವರಿಗೆ ಎಷ್ಟೋ ವರ್ಷಗಳಿಂದ ದಿನಕ್ಕೆ ರೂ. ೧–೮–೦ರ ಕೂಲಿ ಇದ್ದಿತೆಂದೂ, ಇತ್ತೀಚೆಗೆ ಕೆಲಸಗಾರರ ಸಂಖ್ಯೆಯನ್ನೂ ಮಜೂರಿಯನ್ನೂ ಇಳಿಸಿದ್ದಾರೆಂದೂ, ತಿಳಿದು ಕೆಲಮಂದಿ ಮುಷ್ಕರ ಹಾಕಿದರು. ಇತರರು ಕೆಲಸಮಾಡಬೇಕಾದರೆ, ಮುಷ್ಕರ ಹಿಡಿದವರು ಕೆಲಸಕ್ಕೆ ಬರಬೇಕೆಂದೂ ಹಾಗೆ ಅವರು ಬಾರದಿದ್ದರೆ ಇವರನ್ನು ಮನೆಗೆ ಕಳಿಸುವರೆಂದೂ ಆಡಳಿತದ ನೋಟೀಸು. ಹೆಂಗಸರು ಕೆಲಸ ಬಿಟ್ಟರೆ ಊಟಕ್ಕಿಲ್ಲದ ಮೋಸವಾಗುವ ಕಾರಣ, ಇನ್ನು ಕೆಲಸ ಮಾಡುತ್ತಿದ್ದರು; ಅವರನ್ನು ಕೆಲಸಕ್ಕೆ ಇಟ್ಟುಕೊಂಡರೂ ಕಷ್ಟ, ಬಿಟ್ಟರೂ ಕಷ್ಟ, ಎಂದು ಆಡಳಿತವು ತಿಳಿದು ಕೆಲ ಪಂಜಾಬಿ ಕೆಲಸದವರಿಂದಲೂ, ಪೋಲೀಸರಿಂದಲೂ ಅಲ್ಲಿಂದ ಹೊರಗೆಡವಿದರು. ಇದನ್ನು ಅದುವರೆಗೆ ಮುಷ್ಕರ ಹಿಡಿದಿರದ ಗಂಡಸರು ನೋಡಿ ತಾವೂ ಕೆಲಸಕ್ಕೆ ಹೋಗುವುದಿಲ್ಲವಾಗಿ ನಿಶ್ಚಯಿಸಿ, ಹೆಂಗಸರ ಸಹಾಯಕ್ಕೆ ಬರಲು ಹೋರಾಟವಾಯಿತು. ಮುಷ್ಕರಗಾರರಿಗೂ ಪಂಜಾಬಿಯವರಿಗೂ ಪೋಲೀಸರಿಗೂ ಗಾಯಗಳಾಗಿವೆ, ೩೦೦೦ ಮಂದಿ ಈಗ ಕೆಲಸವಿಲ್ಲದೆ ಅಲೆದಾಡುತ್ತಿರುವರು. ಸಂಧಾನಕ್ಕೆ ಪ್ರಯತ್ನಗಳಾದುವು; ಸಂಧಾನವಾಗುವುದರಲ್ಲಿತ್ತು. ಅಷ್ಟರಲ್ಲಿ ಪುನಃ ಆಡಳಿತದವರು ವಿಪರೀತ ಬುದ್ಧಿ ತೋರಿಸಿ, ಸಂಧಾನವಾಗದಾಯಿತು. ಈಗ ಕೆಲಸಗಾರರು ಬ್ರಿಟಿಷ ರೆಸಿಡೆಂಟರಿಗೆ ಮನವಿಮಾಡಿದ್ದು, ಅವರ ಅಪ್ಪಣೆ ಕಾಯುತ್ತಿರುವರು.

ತಾಲೂಕುಗಳಿಂದ

ಹಿರಿಯಡ್ಕ:— ಸ್ಥಳೀಯ ಆರ್ಯಸಮಾಜದ ವರ ಪ್ರಯತ್ನದಿಂದ ಇಲ್ಲಿ ತೆರೆಯಲ್ಪಟ್ಟ ಹಿಂದೀ ವರ್ಗದ ಪ್ರಾಥಮಿಕ ಪರೀಕ್ಷೆಯ ಸರ್ಟಿಫಿಕೇಟು ಹಂಚುವ ಸಮಾರಂಭವು ಇದೇ ತಾ. ೧೬–೫–೪೬ನೇ ರವಿವಾರ ಅಪರಾಹ್ನ ಘಂಟೆ ೪ಕ್ಕೆ ಸರಿಯಾಗಿ ಶ್ರೀ ವೀರಭದ್ರ ದೇವಸ್ಥಾನದ ಸುತ್ತುಪೌಳಿಯಲ್ಲಿ ಮ ರಾ, ರಾ, ಧ, ಶ, ಜಿಲ್ಲಾ ಬೋರ್ಡು ಮೆಂಬರ್, ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು ವಿಷಯಸೂಚಿಯ ನಿಯಮದಂತೆ ದೇವತಾ ಪ್ರಾರ್ಥನೆ, ವರದಿವಾಚನ ಮೊದಲಾದ ಕಾರ್ಯಕ್ರಮಗಳು ಮುಗಿದೊಡನೆ ಶ್ರೀ ಕಟಪಾಡಿ ಶ್ರೀನಿವಾಸ ಶೆಟ್ಟರವರು ಡಾ। ಅನ್ಸಾರಿಯವರ ನಿಧನಕ್ಕಾಗಿ ಸಂತಾಪ ಸೂಚಿಸಿ, ಹಿಂದೀಯ ಮಹತ್ವವನ್ನು ವಿವರಿಸಿದರು. ಅದಾಗಿ ಅಧ್ಯಕ್ಷರು ತನ್ನ ಸುರಸ ಭಾಷಣವೀಯುತ್ತ, ಶ್ರೀ ಡಾ। ಅನ್ಸಾರಿಯವರ ನಿಧನಕ್ಕಾಗಿ ಸಂತಾಪಸೂಚಕವಾದ ಠರಾವನ್ನು ಮಂಜೂರು ಮಾಡಿ ಆ ಮೇಲೆ, ಶ್ರೀ ಉಪ್ಪುಂದ ಪರಮೇಶ್ವರ ವೈದ್ಯರವರು ಕರ್ಣಾನಂದಕರವಾದ ತನ್ನ ಗಾನದಿಂದ ಸಭಿಕರ ಮನಸ್ಸನ್ನು ತನ್ನ ಕಡೆಗೆ ಸೆಳೆಯುವಂತೆ ಮಾಡಿದ್ದು ಅತ್ಯಂತ ಶ್ಲಾಘನೀಯ. ಕೊನೆಯದಾಗಿ ಅಧ್ಯಕ್ಷರಿಗೂ, ಶ್ರೀ ವೈದ್ಯರಿಗೂ ಧನ್ಯವಾದಗಳನ್ನು ಸಲ್ಲಿಸುವುದರ ಮೂಲಕ ಸಭೆಯು ಕೊನೆಗೊಂಡಿತು

ಇದೇ ತಾ. ೬—೫—೩೬ರಿಂದ ೧೧—೫—೩೬ರ ತನಕ ಸ್ಥಳೀಯ ಶ್ರೀ ವೀರಭದ್ರ ಸನ್ನಿಧಾನದಲ್ಲಿ ವಾರ್ಷಿಕ ವಿಧಿ ನಡೆಯತಕ್ಕ ರಥೋತ್ಸವ ಇತ್ಯಾದಿ ಉತ್ಸವಗಳು ಬಹಳ ವಿಜೃಂಭಣೆಯಿಂದ ಜರಗಿಸಲ್ಪಟ್ಟವು ಉತ್ಸವ ಕಾಲದಲ್ಲಿ, ಪರಮಸಂಸ್ಕೃತಿ ಪ್ರಸ್ತಾವನೆಗಳು ಸಿಂಹಳಕವಾಗಿ ತಮ್ಮ ಮತಪ್ರಚಾರ ಕಾರ್ಯವನ್ನು ಸಾಂಗವಾಗಿ ನೆರವೇರಿಸುತ್ತ, ನವ ಕ್ರೈಸ್ತರಾಗಿ ಹೋಗುತ್ತಿದ್ದರು ಆದರೆ ಈ ವರ್ಷ ಸ್ಥಳೀಯ ಆರ್ಯಸಮಾಜದ ಕಡೆಯಿಂದ ಶ್ರೀಯುತ ಮುಲ್ಕಿ ಶಂಕರನಾರಾಯಣ ಸಾಮಗರವರೂ ಉಡುಪಿ ಆರ್ಯಸಮಾಜದ ಶ್ರೀಯುತ ಮಂಜುನಾಥ ಶ್ಯಾನುಭೋಗರವರೂ ಆರ್ಯಮತ ತತ್ವ ಮತ್ತು ಮಹತ್ವದ ಕುರಿತು ಭಾಷಣಗಳ ಮೂಲಕ ಜನತೆಗೆ ಮನದಟ್ಟು ಮಾಡುತ್ತ ಜನತೆಯ ಪ್ರೇಮವನ್ನು ಸಂಪೂರ್ಣ ತಮ್ಮ ಕಡೆಗೆ ಸೆಳೆದುಕೊಂಡುದರಿಂದ ಮಿಶ್ಶನರಿಗಳಿಗೆ ತಮ್ಮ ಪ್ರಚಾರ ಕಾರ್ಯವನ್ನು ನೆರವೇರಿಸಲು ಎಷ್ಟೆಂದೂ ಸಾಧ್ಯವಾಗಲಿಲ್ಲ ಶ್ರೀಯುತರೀರ್ವರೂ ಉತ್ತಮ ಯತ್ನಗಳಿಂದ ಮಾಡಿದ ಪ್ರಚಾರ ಕಾರ್ಯಕ್ಕಾಗಿ ಆರ್ಯಮತಾಭಿಮಾನಿಗಳೆಲ್ಲರೂ ಶ್ರೀಯುತರೀರ್ವರಿಗೂ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸುತ್ತಾರೆ

ಸಾಸ್ತಾನ:— ಶ್ರೀ ಪದ್ಮಸಾಲಿ ವೈಶ್ಯಸಮಾಜಸೇವಾ ಯುವಕ ಸಂಘದ ಚಾಲ್ತಿ ವರ್ಷದ ವಾರ್ಷಿಕ ಮಹಾಸಭೆಯು ಇದೇ ಮೇ ತಾ. ೨೩ನೇ ಶನಿವಾರ ಸಂಘದ ಸೇವಾಸದನದಲ್ಲಿ ಜರಗಲಿರುವುದರಿಂದ ಸದರಿ ಸಭೆಗೆ ಊರ ಪರವೂರ ಸರ್ವ ಸದಸ್ಯರೂ ಸಕಾಲದಲ್ಲಿ ಬಿತ್ತಯಿಸಿ, ಸಭೆಯ ಕಾರ್ಯಕ್ರಮಗಳಲ್ಲಿ ಸಹಭಾಗಿಗಳಾಗಿ ಯಶಸ್ವಿಗೊಳಿಸಬೇಕಾಗಿ ವಿನಂತಿ

ರಾಷ್ಟ್ರಪತಿಗಳಾದ ಪಂಡಿತ ಜವಾಹರಲಾಲ ನೆಹರುಗಳ ಆಜ್ಞೆಪ್ರಕಾರ ದಿವಂಗತ ಡಾಕ್ಟರ್ ಅನ್ಸಾರಿಯವರ ದಿನವು ಇಲ್ಲಿಯೂ ಕಾಂಗ್ರೆಸ್ ಕಮಿಟಿಯ ಕಡೆಯಿಂದ ಇದೇ ತಿಂಗಳ ತಾ ೧೭ನೇ ಆದಿತ್ಯವಾರ ದಿನ ಆಚರಿಸಲ್ಪಟ್ಟಿತು ಸಾಯಂಕಾಲ ಶ್ರೀಯುತ ಕೆ ಈಶ್ವರಯ್ಯನ ಅಧ್ಯಕ್ಷತೆಯಲ್ಲಿ ಆರ್ಯಸಮಾಜದ ಮಂದಿರದಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿ ಶ್ರೀಗಳಾದ ಎಂ ಎಸ್ ಅಧಿಕಾರಿಯವರೂ, ಅಚ್ಯುತರಾವ್ ಇವರೂ ದಿವಂಗತ ಅನ್ಸಾರಿಯವರ ಗುಣಕಥನ ಮಾಡಿ ಅವರ ನಿಧನದಿಂದ ದೇಶಕ್ಕೆ ಉಂಟಾದ ಅಪಾರವಾದ ನಷ್ಟವನ್ನು ವಿವರಿಸಿ ಹೇಳಿದ ತರುವಾಯ ದಿವಂಗತರ ಅಕಾಲನಿಧನದಿಂದ ಉಂಟಾದ ಸಂತಾಪವನ್ನು ಮತ್ತು ಮೃತರ ಕುಟುಂಬದವರೊಡನೆ ಸಭೆಯ ಅಂತಃಕರಣಪೂರ್ವಕವಾದ ಸಹಾನುಭೂತಿಯನ್ನು ವ್ಯಕ್ತಪಡಿಸುವ ಠರಾವು ಸಭಿಕರೆಲ್ಲರೂ ಎದ್ದುನಿಂತು ಸರ್ವಸಮ್ಮತದಿಂದ ಮಂಜೂರು ಮಾಡಲ್ಪಟ್ಟಿತು.

ಪುತ್ತೂರು:— ಇಲ್ಲಿಯ ಬೋರ್ಡು ಹೈಸ್ಕೂಲಿನ ಫಿಸಿಕಲ್ ಇನ್ಸ್‌ಪೆಕ್ಟರ್ ಶ್ರೀಯುತ ಎಂ ಬಾಳಿಗ ನಾಯಕತ್ವದಲ್ಲಿ ಹೈಸ್ಕೂಲಿನ ವಿದ್ಯಾರ್ಥಿಗಳ ಕೂಟವೊಂದು ಇಲ್ಲಿಯ ಕೆಲವು ಉತ್ಸಾಹಿ ಹಳೇ ವಿದ್ಯಾರ್ಥಿಗಳ ಜತೆಯಲ್ಲಿ ಇದೇ ಕಳೆದ ತಾ. ೭, ೮, ೯ಕ್ಕೆ ಸೇಲಂನಲ್ಲಿ ಜರಗಿದ್ದ ಪ್ರಾಂತಿಕ ವಿದ್ಯಾವರ್ಧಕ ಮಹಾಸಭೆಗಳಿಗೆ ಮತ್ತು ವ್ಯಾಯಾಮ ವಿದ್ಯಾವರ್ಧಕದ ಮಹಾಸಭೆಗಳಿಗೆ ಲಾಠೀ ಮತ್ತು ಲೇಜಿಂ ಪ್ರದರ್ಶನಕ್ಕಾಗಿ ಆಮಂತ್ರಿಸಲ್ಪಟ್ಟು ಹೋಗಿದ್ದರು ಈ ದಳವು ತಾರೀಖು ೭ನೇ ಬೆಳಗ್ಗೆ ಇಲ್ಲಿಂದ ಹೊರಟು ಮಂಗಳೂರಿನಿಂದ ರೈಲು ಹತ್ತಿ ತಾ. ೮ರ ಬೆಳಗ್ಗೆ ಸೇಲಮಿಗೆ ತಲಪಿ ಬೆಳಗ್ಗೆ ೯॥ ಗಂಟೆಗೆ ಜರಗಿದ್ದ ವ್ಯಾಯಾಮ ವಿದ್ಯಾವರ್ಧಕ ಸಭೆಗೆ ಹಾಜರಾಗಿದ್ದರು, ಅಲ್ಲದೆ ಅಂದೇ ಸಂಜೆ ೫-೦ಕ್ಕೆ ಡಾಕ್ಟರ್ ಜೆ. ಎಫ್ ಎಂಡ್ರ್ಯೂಸ್ ಅಸಿಸ್ಟಾಂಟ್ ಫಿಸಿಕಲ್ ಡ್ಯಾರೆಕ್ಟರ್ ಟು ದಿ ಗವರ್ನಮೆಂಟ್ ಒಫ್ ಮದ್ರಾಸ್ ಇವರ ನಾಯಕತ್ವದಲ್ಲಿ ಜರಗಿದ ವ್ಯಾಯಾಮ ಪ್ರದರ್ಶನದಲ್ಲಿ ಲಾಠೀ ಮತ್ತು ಲೇಜಿಮನ್ನು ಸಂಗೀತ ದೊಡಗೂಡಿ ಯಶಸ್ವಿಯಾಗಿ ಪ್ರದರ್ಶಿಸಿ ಆ ಪ್ರಾಂತ್ಯದವರಿಗೆ ಹೊಸದಾಗಿರುವ ಈ ವಿಷಯವನ್ನು ತೋರಿಸಿಕೊಟ್ಟರು. ಈ ಸಂದರ್ಭದಲ್ಲಿ ನಮ್ಮ ಪುತ್ತೂರಿನ ಈ ದಳಕ್ಕೆ ಇತರ ಭಾಗವಹಿಸಿದ ಎಲ್ಲಾ ದಳಗಳಿಗಿಂತಲೂ ಹೆಚ್ಚಿನ ವಿಶೇಷ ಬಹುಮಾನಗಳು ಸಿಕ್ಕಿವೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇವೆ

ಬರುತ್ತಾ ಮರುದಿನ ಸೇಲಮಿನಿಂದ ೬ ಮೈಲು ದೂರವಿರುವ ಮಾಯಮ್ಮಗುಡಿ ಗುಹೆ ಸೇಲಮಿನ ನೀರು ಒದಗಿಸುವ ನೀರಿನ ಕೊಳವನ್ನೂ, ಸೇಲಮಿನ ಮಾರ್ಕೆಟ್ಟು ವಗೈರೆಯನ್ನು ತಾ, ೮ಕ್ಕೆ ನೋಡಿದರು ತಾ, ೯ಕ್ಕೆ ೩೦ ಮೈಲು ದೂರವಿರುವ ಮೆಟ್ಟೂರು ಆಣೆಕಟ್ಟು ಅಲ್ಲಿನ ಇತರ ಎಲ್ಲಾ ಕೆಲಸಗಳನ್ನು ನೋಡಿಕೊಂಡು ಅಲ್ಲಿಂದ ತಿರುಗಿ ಸೇಲಮಿಗೆ ಬಂದರು ಅಂದೇ ರಾತ್ರಿ ಅಲ್ಲಿಂದ ಎಲ್ಲರೂ ಪೋದನೂರು ಜಂಕ್ಷನಿನಲ್ಲಿ ಇಳಿದುಕೊಂಡು ಕೊಯಮತ್ತೂರಿಗೆ ಹೋಗಿ ಅಲ್ಲಿ ಕೆಲವರು ಅಲ್ಲಿನ ಎಗ್ರಿಕಲ್ಚರಲ್ ಕೋಲೇಜು ಫೋರೆಸ್ಟ್ ಕೋಲೇಜು ಇತ್ಯಾದಿಗಳನ್ನೂ ಇನ್ನು ಕೆಲವರು ಊಟಿಯಿಂದ ಕೂನೂರು ವೆಲ್ಲಿಂಗ್‌ಟನ್ಸ್ ಮುಂತಾದ ಪ್ರದೇಶಗಳನ್ನು ನೋಡಿ ಅಂದೇ ರಾತ್ರಿ ರೈಲು ಹತ್ತಿ ಮರು ದಿನ ಕಾಸರಗೋಡಿನಲ್ಲಿ ಇಳಿದು ತಾ ೧೨ಕ್ಕೆ ಬಸ್ಸು ಮೂಲಕ ಪುತ್ತೂರಿಗೆ ಬಂದು ಮುಟ್ಟಿದರು ಈ ಸಂದರ್ಭದಲ್ಲಿ ಈ ದಳದವರಿಗೆ ಆಹಾರವಿಹಾರಗಳಲ್ಲಿಯೂ ಮತ್ತು ಅನೇಕ ಇತರ ಸಹಾಯಗಳನ್ನು ಮಾಡಿದ ನಮ್ಮ ಜಿಲ್ಲೆಯವರಾದ ಸೇಲಂ ಇಲೆಕ್ಟ್ರಿಕಲ್ ಇಂಜಿನಿಯರ್ ಮ. ರಾ ರಾ। ಮೊಳಹಳ್ಳಿ ಸಂಜೀವರಾವ್ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರ್ ಮ. ರಾ। ... ನಾಯಕ್‌ರವರಿಗೂ ಮತ್ತು ಡಾಕ್ಟರ್ ಎಂಡ್ರ್ಯೂಸ್‌ರವರಿಗೂ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ ಮತ್ತು ಕೊಯಿಮುತ್ತೂರು ಪಯಣೆಯಲ್ಲಿ ಅಲ್ಲಿಯ ಸೆಕೆಂಡರಿ ಅಮುಕ್ತರಿಗಾದ ಪ್ರಕಾರ ಲಾಠೀ ಲೇಜೀ ಮತ್ತು ಕತ್ತಿ ಆಟಗಳ ಪ್ರದರ್ಶನಗಳ ಜರಗಿದವು ಇದಕ್ಕಾಗಿಯೂ ಅವರಿಗೂ ನಮ್ಮ ವಂದನೆಗಳನ್ನು ಅರ್ಪಿಸುವೆವು ಮಂಗಳೂರಲ್ಲಿ ನಮಗೆ ಸಹಾಯ ಮಾಡಿದ ಜಿಲ್ಲಾ ಡಿಸ್ಟ್ರಿಕ್ಟ್ ರಜಿಸ್ಟ್ರಾರ್ ರಾ ಕಣ್ಣನ್ನಾಯರ್‌ರವರಿಗೂ ಮತ್ತು ಇತರ ಎಲ್ಲಾ ವಿಷಯಗಳಲ್ಲಿ ಸಹಾಯಮಾಡಿದ ಶ್ರೀಯುತ ಬಿ ನಾರಾಯಣ ಬಾಳಿಗ ಮತ್ತು ಡಾಕ್ಟರ್ ಶ್ರೀಧರರಾವ್‌ರವರಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ ಇದೇ ದಳದವರು ಇನ್ನು ಕೆಲವು ಸ್ಕೌಟ್ ಬಾಲಕರೊಡಗೂಡಿ ಇದೇ ಕಳೆದ ಎಪ್ರಿಲ್ ತಿಂಗಳಲ್ಲಿ ಕೆ ದಾರಿಯಾಗಿ ಜಮಾಲ್‌ಗಢ ಮುಂತಾದ ಪ್ರದೇಶಗಳನ್ನು ನೋಡಿ ಹಿಂತಿರುಗಿರುತ್ತಾರೆ

ವಿಟ್ಲ:— ಸ್ಥಳೀಯ ಹಾಯರ್ ಎಲಿಮೆಂಟರೀ ಹುಡುಗರ ಶಾಲೆಗೆ ಐದಾರು ವರ್ಷಗಳ ಹಿಂದೆ ಪುತ್ತೂರಿನಿಂದ ವರ್ಗವಾಗಿ ಬಂದ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಅಧ್ಯಾಪಕರಾದ ರಾ। ಕೆ ಎಸ್ ಗಟ್ಟಿಯವರಿಗೆ ಕಳ್ಳನಬೊಳುತೂರು ಶಾಲೆಗೆ ಮುಖ್ಯೋಪಾಧ್ಯಾಯರಾಗಿ ವರ್ಗವಾಯಿಸಿದ್ದನ್ನು ಕೇಳಿ ವಿದ್ಯಾರ್ಥಿಗಳೂ ಇನ್ನಿತರ ಉಪಾಧ್ಯಾಯರೂ ತಮ್ಮ ತಮ್ಮ ಸಂತಾಪ ಸೂಚಿಸಲು ಕಳೆದ ತಿಂಗಳಾಂತ್ಯದಲ್ಲಿ ಸಭೆಕೂಡಿದ್ದರು ಇವರ ಬೋಧನೆಯು ಶಾಂತರೀತಿಯದಿದ್ದು ಹುಡುಗರಲ್ಲಿ ಚೆನ್ನಾಗಿ ಪರಿಣಾಮ ಕೊಡುವಂತಾಗಿದ್ದಿತು ಈ ವರ್ಷದ ಬೊಂಬಾಯಿ ಯುನಿವರ್ಸಿಟಿಯ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕೂತುಕೊಂಡಿದ್ದಾರೆ ಇವರು ಅದರಲ್ಲಿ ತೇರ್ಗಡೆಯಾಗಿ ಬಿಟ್ಟು ಶಾಲೆಗೆ ಪುನಃ ವರ್ಗವಾಗಿ ಬರಲೆಂದು ನಮ್ಮ ಹಾರೈಕೆ

ಮೂಲ್ಕಿ:— ಸ್ಥಳೀಯ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿಶಾಲೆಯ ನವಮ ವರ್ಷ ವರ್ಧಂತ್ಯುತ್ಸವವು ಇದೇ ಕಳೆದ ತಾ ೮—೫—೩೬ನೇ ಶುಕ್ರವಾರ ಸಾಯಂಕಾಲ ಗಂಟೆ ೬ಕ್ಕೆ ಮನೋರಮಾ ಹೋಟೆಲಿನಲ್ಲಿ ಯಶಸ್ವಿಯಾಗಿ ಜರಗಿತು ಗಂಟೆ ೫ಕ್ಕೆ ಅಂದಿನ ಸಭಾಧ್ಯಕ್ಷರು, ಶಾಲಾ ಮೆನೇಜರ್, ಶಾಲಾ ಸಿಬಂದಿ ಮತ್ತು ವಿದ್ಯಾರ್ಥಿಗಳೊಡಗೂಡಿ ಒಂದು ಗ್ರೂಪ್ ಫೋಟೋ ಚಿತ್ರವು ತೆಗೆಯಲ್ಪಟ್ಟಿತು ಗಂಟೆ ೬ಕ್ಕೆ ಸಭಾಕಾರ್ಯ ಪ್ರಾರಂಭವಾಯಿತು, ಊರಿನ ಅನೇಕ ಮಹನೀಯರು ದಯಮಾಡಿಸಿದ್ದರು, ಸ್ಥಳೀಯ ಬೋರ್ಡು ಹೈಸ್ಕೂಲಿನ ಮುಖ್ಯ ಉಪಾಧ್ಯಾಯ ಮ॥ ರಾ॥ ಕೆ. ಕೃಷ್ಣರಾವ್ ಅವರ್ಗಳ್ ಬಿ. ಎ ಎಲ್. ಟಿ. ಯವರು ಸಭಾಧ್ಯಕ್ಷರಾಗಿದ್ದರು, ಶಾಲಾ ವಿದ್ಯಾರ್ಥಿಗಳಿಂದ ಶ್ರೀ ದೇವತಾ ಪ್ರಾರ್ಥನೆ, ಸ್ವಾಗತ ಹಾಡು ಇತ್ಯಾದಿಗಳು ನಡೆದ ಮೇಲೆ ಸದರಿ ಶಾಲಾ ಮುಖ್ಯ ಉಪಾಧ್ಯಾಯರೂ ಲೇಖಕರೂ ಆಗಿರುವ ಶ್ರೀ। ಬಿ. ಭೋಜರಾಯರು ಶಾಲೆಯ ೯ನೇ ವಾರ್ಷಿಕ ವರದಿಯನ್ನು ಓದಿಹೇಳಿದರು ಕೂಡಿದ ಸಭಿಕರ ಪೈಕಿ ಶ್ರೀ। ಬಿ. ಸಂಜೀವ ಆಚಾರಿಯವರು ಶಾಲೆಯ ಅಸ್ತಿತ್ವ ಧ್ಯೇಯ ಇತ್ಯಾದಿಯ ಕುರಿತು ಸ್ವಲ್ಪದರಲ್ಲೇ ತಿಳಿಯಪಡಿಸಿದರು. ಸಮಾರಂಭಕ್ಕೂ ಸಂಸ್ಥೆಗೂ ಶುಭವನ್ನೆ ಕೋರಿಬಂದ ಸಂದೇಶಗಳು ಓದಿಹೇಳಲ್ಪಟ್ಟವು ನಂತರ ಸಭಾಧ್ಯಕ್ಷರ ಮೂಲಕ ಕೆಲವೊಂದು ವಿದ್ಯಾರ್ಥಿಗಳಿಗೆ ಪಾರಿತೋಷಕಗಳು ಹಂಚಲ್ಪಟ್ಟವು ಆದಾಗಲು ಸಭಾಧ್ಯಕ್ಷರ ಅಮೂಲ್ಯ ಭಾಷಣವು ನಡೆಯಿತು

ಇಲ್ಲಿಯ ಬಪ್ಪನಾಡು ಸಹಕಾರ ಸಂಘದ ವಾರ್ಷಿಕ ವಿಧಿ ಮಹಾಸಭೆಯು ಇದೇ ಬರುವ ತಾ ೨೩—೫—೩೬ನೇ ಶನಿವಾರ ಅಪರಾಹ್ನ ಗಂಟೆ ೩ಕ್ಕೆ ಶ್ರೀ ಬಪ್ಪನಾಡು ದೇವಸ್ಥಾನದ ಮುಂದುಗಡೆ ಜರಗಲಿರುವುದು

ಘನ ವೈಸರಾಯರ ಸಂದೇಶವನ್ನು ಓದಿಹೇಳುವ ಪೋಲೀಸ್ ಪೆರೇಡ್ ತಾರೀಖು ೧೧—೫—೧೯೩೬ರಲ್ಲು ಪೂರ್ವಾಹ್ನ ಗಂಟೆ ೧೧ಗೆ ಇಲ್ಲಿಯ ಪೋಲಿಸ್ ಮೈದಾನದಲ್ಲಿ ನಡೆಯಿತು ಸ್ಥಳೀಯ ಅಧಿಕಾರಿಗಳೂ ಊರ ಕೆಲವೊಂದು ಮಹನೀಯರೂ ಭಾಗವಹಿಸಿದ್ದರು ಪೋಲಿಸ್ ಸಬ್ ಇನ್ಸ್‌ಪೆಕ್ಟರರೂ ಸದರಿ ಸಂದೇಶವನ್ನು ಓದಿಹೇಳಿದರು

ಕಾಡುಮಠ:— ಇಲ್ಲಿ ಕಳೆದ ತಾ ೪ರ ಪ್ರಭಾತದಲ್ಲಿ ಶ್ರೀ। ಶಿವಸಂಕಪ್ಪ ಶೆಟ್ಟರು ಬಯಲಾಟಕ್ಕೆ ಕಟೀಲು ಮೇಳದವರನ್ನು ಬರಮಾಡಿ ಆಟವಾಡಿಸಿದರು. ಒಕ್ಕಲುಗಳಿಂದ ಒಂದು ರಾತ್ರಿ ಇತ್ತು ಆಟವಾಡಿಸಿದ್ದೇನೋ ಎಂದು ಆದರೆ ಅವರನ್ನು ಬರಮಾಡಿಸಿದ್ದು ಎಷ್ಟರಮಟ್ಟಿಗೆ ಸರಿ ಬಹುಶಃ ಮೇಳದವರ ಕಡೆಯಿಂದ ಆ ಸುಳ್ಳು ಪ್ರಚಾರದ ಒರೆದು ಧರ್ಮ ಆಳುತ್ತಿಲ್ಲವೆಂದು ನಂಬಿರುವ ಈ ಊರ ಜನರಿಂದ ಆ ಸಂಗತಿ ತಿಳಿಯದವರು ಆದು ಜನಮಿತ್ರಲ್ಲವೆಂದು ಭಾವಿಸಬೇಕಾಗಿ ಪ್ರಾರ್ಥನೆ

(ಕಾಡುಮಠದ ಒಕ್ಕಲು ನಿವಾಸಿ)

ಕಾಸರಗೋಡು — ಬಿ ವಿ ಆನಂದವರ್ಮಿ ಮದ್ರಾಸ ನ್ಯಾಯವಿಧಾಯಕ ಸಭೆಗೆ ಕಾಸರಗೋಡು ಮತ್ತು ಪುತ್ತೂರು ತಾಲೂಕುಗಳ ಮಹಮ್ಮದೀಯರ ಸ್ಥಾನಕ್ಕೆ ಕೆಲ ಒಕ್ಕಲಿಗರ ಪ್ರೇರಣೆ ಮೇರೆಗೆ ಸಹ ಜನಾಬ್ ಮಹಮ್ಮದ್ ಶಿರೂರು ಸಾಹೇಬರವರು ಉಮೇದವಾರರಾಗಿರುವರು

ಪಾಣೆಮಂಗಳೂರು:— ಆಲಡ್ಕ ಇಬ್ರಾಹಿಮ್ಮಾ ಮಹಜಿದಿಗೆ ಅತೀ ಹತ್ತಿರವಾಗಿ ಈಗ ಶರಾಬು ಅಂಗಡಿ ಇಟ್ಟದ್ದು ಅನ್ಯಾಯವಾಗಿರುತ್ತದೆ

ಇಲ್ಲಿಯ ಅಸುಪಾಸು ಗ್ರಾಮಗಳ ಕೆಲ ಯುವಕರು ಸಹಾ ಸೇರಿಕೊಂಡು ತಾ ೧೪—೫—೩೬ನೇ ದಿನ ಹಂಗಾಮಿ ಕಾಂಗ್ರೆಸು ಕಮಿಟಿಯೊಂದನ್ನು ಸ್ಥಾಪಿಸಿ ಕಾಯಂ ಊರ್ಜಿತಕ್ಕೆ ಪ್ರಯತ್ನಪಡುತ್ತಿರುವರು

ಕಲ್ಲಡ್ಕ:— ದಿ ಮುಸ್ಲಿಂ ಜಮಾತ್ ಎಲ್ ಸಂಘದ ೬ನೇ ವಾರ್ಷಿಕೋತ್ಸವವು ತಾ, ೨೦—೫—೩೬ನೇ ಬುಧವಾರ ಮಧ್ಯಾಹ್ನ ೨ ಗಂಟೆಗೆ ನಡೆಯಲಿಕ್ಕಿರುವುದು

ಕುಂದಾಪುರ:— ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನದ ಛತ್ರಕೇರಿಯಲ್ಲಿ ಇದೇ ತಾ ೧೭ರಲ್ಲು ಬೆಂಕಿ ತಾಗಿ ೫ ಹಟ್ಟಿಕೊಟ್ಟಿಗೆಗಳು ಪೂರ್ಣ ಸುಟ್ಟು ಹೋದುವು ಪಂಪಿನ ಮೂಲಕ ಕೂಡಲೇ ನೀರು ಹಾಯಿಸಿ ಬೆಂಕಿಯನ್ನು ಆರಿಸಿದರು ಇಲ್ಲವಾದರೆ ಮನೆಗಳ ಸಾಲಿಗೇ ದೊಡ್ಡ ಅಪಾಯವುಂಟಾಗುತ್ತಿತ್ತು, ಆದರೂ ರೂ. ೭೦೦ಕ್ಕೆ ಕಡಿಮೆಯಾಗದಷ್ಟು ನಷ್ಟವಿದೆಯೆಂದು ತಿಳಿದುಬರುತ್ತದೆ

ಸಿಕೆ ಕಾಲದ ರಜೆ ಸಂಬಂಧ ಮುಚ್ಚಿದ್ದ ಸ್ಥಳೀಯ ಮುನ್ಸಿಫ್ ಕೋರ್ಟು ಇದೇ ಬರುವ ಜೂನ್ ೩ಂಗಳ ತಾ ೧೮ರಲ್ಲಿ ತೆರೆಯುವದು. ಸ್ಥಳೀಯ ಹೈಸ್ಕೂಲು ಜೂನ್ ತಾ ೮ರಲ್ಲು ಪ್ರಾರಂಭವಾಗುವುದು

ಮಾನ್ಯ ಡಿ। ಬೋರ್ಡು ಪ್ರೆಸಿಡೆಂಟರಾದ ದಿವಾನ್ ಬಹದ್ದೂರ್ ಮಹಾಬಲ ಹೆಗ್ಗಡೆಯವರು ಇದೇ ಕಳೆದ ತಾ ೬ರಲ್ಲು ಕುಂದಾಪುರಕ್ಕೆ ಚಿತ್ತೈಸಿ ಅಲ್ಲಿಂದ ಬೈಂದೂರು, ವರಟ್ಟೆ ಮೊದಲಾದ ಕಡೆಗಳಿಗೆ ತೆರಳಿ, ಇದೇ ಕಳೆದ ತಾ ೧೧ರಲ್ಲಿ ಉಡುಪಿ ಕಡೆಗೆ ಹೊರಟು ಹೋಗಿರುವರು

ಮಂಗಳೂರು.

ಸ್ಥಳೀಯ ಉಡುಪಿ ಶ್ರೀ ಕೃಷ್ಣಭವನದ ಹೊಸತಾಗಿ ಕಟ್ಟಿಸಿದ ಊಟದ ಹೋಟೇಲಿನ ಪ್ರಾರಂಭೋತ್ಸವವು ಇದೇ ಮೇ ತಾ. ೨೨ರಲ್ಲಿ ಸಂಜೆ ಗಂಟೆ ೬ ೩೦ಕ್ಕೆ ಜರಗುವುದು

ಸ್ಥಳೀಯ ಬಿಸೆಂಟ್ ಹೆಮ್ಮಕ್ಕಳ ಶಾಲೆಯ ಆಶ್ರಯದಲ್ಲಿ ತೆರೆದ "ವಿದ್ಯಾ ವಿಹಾರ" ಭವನವು ಜೂನ್ ತಾ, ೧೧ರಿಂದ ಊಟವಸತಿಗಳನ್ನೇರ್ಪಡಿಸುವುದು ಸ್ಥಳಾವಕಾಶವಿದ್ದಲ್ಲಿ ಹೊರಗಿನ ಶಾಲಾ ಹೆಮ್ಮಕ್ಕಳನ್ನು ಈ ವಿಹಾರಭವನದಲ್ಲಿ ಭರ್ತಿಮಾಡಿ ಕೊಳ್ಳಲಾಗುವುದು ತತ್ಸಂಬಂಧ ಅರ್ಜಿಗಳನ್ನು ಬಿಸೆಂಟ ಹೆಮ್ಮಕ್ಕಳ ಶಾಲಾ ಗೌರವ ಸುಪರಿಂಟೆಂಡೆಂಟರವರ ವಿಳಾಸಕ್ಕೆ ರವಾನಿಸುವುದು

ಬೆಂಗಳೂರಿನ "ವಿಮಾ ವಾಣಿಜ್ಯ" (ಮಾಸಪತ್ರಿಕೆ)ಯ ಪ್ರಥಮ ವಾರ್ಷಿಕ ಸಂಚಿಕೆಯು ಸಮನೋಹರವಾದ ಪುಸ್ತಕವಾಗಿ ಮೇ ತಾ ೩೧ರಲ್ಲಿ ಹೊರಬೀಳುವುದು ಪ್ರಗಲ್ಭ ಲೇಖಕರ ಉದ್ಬೋಧಕ ಲೇಖನಗಳಿಂದಲೂ ಕವನಗಳಿಂದಲೂ, ಚಿತ್ರಗಳಿಂದಲೂ ತುಂಬಿರುವುದು ಪ್ರತಿ ೧ಕ್ಕೆ ಆಣೆ ೪,

ಈ ಮುನ್ಸಿಪಾಲಿಟಿಯ ೧೯೩೬-೩೭ನೇ ಇಸವಿಯ ಮತದಾರರ ಪಟ್ಟಿಯನ್ನು ತಿದ್ದುವ ಸಂಬಂಧ ಈ ಕುರಿತಾದ ಕಾರ್ಯಕ್ರಮವು ಹೀಗಿದೆ–ಪ್ರಿಲಿಮಿನರಿ ಪಟ್ಟಿಯ ಪ್ರಕಟಣೆಯ ತಾರೀಖು ಇದೇ ಮೇ ತಾ ೧೫ ಈ ಪಟ್ಟಿಯು ಪರಿಶೋಧನೆಗಾಗಿ ಮುನ್ಸಿಪಲ್ ಆಫೀಸಿನಲ್ಲಿಯೂ ತಾಲೂಕು ಆಫೀಸಿನಲ್ಲಿಯೂ ಇರಿಸಿದುವ ಅವಧಿಯ ತಾರೀಖು ಇದೇ ಜೂನ್ ತಾ ೧೮ ವರೇಗೆ ಆಕ್ಷೇಪಣೆಗಳು ಇಲೆಕ್ಷನ್ ಆಫೀಸಿಗೆ ತಲಪತಕ್ಕ ತಾರೀಖು ಇದೇ ಜೂನ್ ತಾ ೧ ಅಥವಾ ಅಷ್ಟರೊಳಗೆ ಆಕ್ಷೇಪಣೆಗಳ ಹಕ್ಕುಗಳ ಪ್ರಕಟಣೆ ಇದೇ ಜೂನ್ ತಾ ೫ ತಿದ್ದುಪಡಿ ಅಧಿಕಾರಿಗಳು ಕೆಲಸಮಾಡಲು ಆರಂಭಿಸುವ ತಾ ಜೂನ್ ೧೦ ಮತದಾರರ ಅಖೈರು ಪಟ್ಟಿಯ ಪ್ರಕಟಣೆಯು ಜೂನ್ ತಾ. ೩೦

ನಗರದ ಸುಪ್ರಸಿದ್ಧ ವರ್ತಕರೂ ದಿ ಸಿನಿಮಾ ಎಂಟರ್‌ಪ್ರೈಸಸ್ ಲಿಮಿಟೆಡ್‌ನ ಕಾರ್ಯದರ್ಶಿಗಳೂ ಆದ ಶ್ರೀಮಾನ್ ಜಿ ಎಸ್ ಲಕ್ಷ್ಮಣ ಪೈಗಳು ಮದ್ರಾಸು ವಿಶ್ವವಿದ್ಯಾನಿಲಯದಲ್ಲಿ ವಿದ್ವಾನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ

ನಮ್ಮ ಹೊಸ ಪ್ರಾಂತಿಕ ಸಭಾಸದನಗಳ ಸದಸ್ಯರನ್ನು ಚುನಾಯಿಸಲು ಹಕ್ಕಿರುವ ಓಟರ್ ಎಲ್ಲ ಮತದಾರರು ತಮ್ಮ ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಒಪ್ಪಿಸಿ ತಮ್ಮ ಮತದಾನದ ಹಕ್ಕನ್ನು ಸ್ಥಾಪಿಸಿಕೊಳ್ಳಲು ಹಿಂದೆ ಕೊಟ್ಟ ಅವಕಾಶವು ಸಾಲದೆಂದು ಕಂಡುಬಂದು, ಆ ಅವಕಾಶವನ್ನು ಇದೇ ಜೂನ್ ತಾ ೨೦ರ ವರೆಗೂ ನಮ್ಮ ಸರಕಾರವು ಮುಂದುವರಿಸಿದೆ ಎಂದೂ ಈ ಅವಧಿಯಲ್ಲಿ ಹಿಂದುಳಿದಿರುವ ಯೋಗ್ಯತೆಯುಳ್ಳ ಮತದಾರರು ರಿಜಿಸ್ಟ್ರೇಶನ ಆಫೀಸರ್ ತಹಸಿಲ್ದಾರ್ ಡೆ। ತಹಸಿಲ್ದಾರ್ ಅಸಿ ರಿಜಿಸ್ಟ್ರೇಶನ್ ಆಫೀಸರ್ ಇವರಲ್ಲಿ ಇಂತಹ ಅರ್ಜಿಗಳನ್ನು ಹಾಜರುಪಡಿಸಬೇಕೆಂದೂ ಬಂಟ್ವಾಳ ಹೊಸದುರ್ಗ ಮತ್ತು ಬೆಳ್ತಂಗಡಿ ಡೆ। ತಹಸಿಲ್ದಾರರುಗಳು ಈ ಅರ್ಜಿಗಳನ್ನು ಸ್ವೀಕರಿಸಲು ಅಲ್ಲಲ್ಲಿ ಹಳ್ಳಿಗಳಲ್ಲಿ ಸಂಚಾರ ಬೆಳಸಲು ಅಪ್ಪಣೆ ಹೊಂದಿರುತ್ತಾರೆ ಎಂದೂ ತಿಳಿದುಬರುತ್ತದೆ

ಐದನೇ ಜೋರ್ಜರ ಸ್ಮಾರಕನಿಧಿಗಾಗಿ ಇಷ್ಟರ ವರೆಗೆ ರೂಪಾಯಿ ೯೫೭–೩–೯ ವಂತಿಗೆ ವಸೂಲಾಗಿದೆ

ತೀಯ ಮಹಿಳಾ ಶಕ್ತಿಸಂಘ:— ಇದೇ ತಿಂಗಳ ತಾ ...೪ನೇ ಆದಿತ್ಯವಾರ ೯ ಗಂಟೆಗೆ "ಮಹಾಶಕ್ತಿ ಪೂಜೆ" ವಿಷಯ ಭಾಷಣವಿರುವುದು

ಕೊಂಚಾಡಿ — ಇಲ್ಲಿಯ ಶ್ರೀ ರಾಮಾಶ್ರಮ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಕಳೆದ ಮೇ ತಾ ೧೭ನೇ ಆದಿತ್ಯವಾರ ಸಂಜೆ ಗಂಟೆ ೫ಕ್ಕೆ ಮಂಗಳೂರು ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರಾದ ರಾ। ಎಚ್, ಸಂಜೀವರಾಯರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ಡಿ। ಬೋರ್ಡು ಪ್ರೆಸಿಡೆಂಟರನ್ನು ಸತ್ಕರಿಸುವುದಕ್ಕಾಗಿ ಕುಂದಾಪುರದ ಕಂಟ್ರಾಕ್ಟರರು ಒಂದು ಟೀಪಾರ್ಟಿಯನ್ನು ಇಲ್ಲಿಯ ಸಬ್ ಕಲೆಕ್ಟರವರಾದ ಮ॥ ರಾ॥ ವರ್ಗೀಸ್ ಐ, ಸಿ, ಎಸ್, ಅವರ್ಗಳ್ ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದರು ಈ ಟೀಪಾರ್ಟಿಗೆ ಕುಂದಾಪುರದ ಪ್ರಮುಖ ಮಹನೀಯರೆಲ್ಲರೂ ದಯಮಾಡಿಸಿದ್ದರು,

[illegible] V ನೇ ಜಾರ್ಜರ ಸ್ಮಾರಕ ನಿಧಿಗೆ ಧನಸಹಾಯಮಾಡಿದ ಮಹನೀಯರುಗಳು.

ಮಂಗಳೂರು—ಎಂ. ಪ್ಯಾಸ್ ಎಂಡ್ ಸನ್ಸ್ ರೂ. ೫, ಬಾಷಾ ಅಣ್ಣರು ರೂ. ೫, ಕೆನರಾ ಆಟೋಮೊಬಿಲ್ಸ್ ೧—೮—೦, ಬಾಯಲ್ ಪ್ರೋಟೀನ್ ಹೌಸ್ ರೂ. ೨, ರಾವ್ ಬಹದ್ದೂರ್ ಯು. ಅನಂತರಾಯರು ರೂ. ೧೦, ರಾಮಚಂದ್ರ ಶೇಟ್, ಜುವೆಲರ್ ರೂ. ೨, ಸಿದಾಸ್ ಎಂಡ್ ಸನ್ಸ್, ರೂ. ೫, ಮಾರ್ಕೆಲ್ ಡಿಸೋಜ (ಸೋಡ ಕಂಪೆನಿ) ರೂ. ೧, ತಾಜ್ ಮಹಾಲ್ ಹೋಟೇಲ್, ರೂ. ೮, ಕೆ. ಕೃಷ್ಣರಾವ್, ಉಡುಪಿ ಕೃಷ್ಣಭವನ, ರೂ. ೫, ಖಾನ್ ಸಾಹೇಬ್ ಎಂ. ಸುಲ್ತಾನ್ ಮೈದಿನ್ ಮಿಸ್ತ್ರಿ ಸಾಹೇಬ್, ರೂ ೧೦, ಕೆ. ಅಬ್ದುಲ್ ಖಾದರ್ ಬಾಬನ್ ಸಾಹೇಬ್, ಗೋಕರ್ಣಕಟ್ಟಿ, ರೂ ೪, ಎಂ. ಕಾಯುದ್ದೀನ್ ಸಾಹೇಬ್, ರೂ ೨, ಸೈಯದ್ ಅಬ್ದುಲ್ಲ ಫರಾಕ್ ಕೋಯ ಸಾಹೇಬ್, ರೂ ೨, ಖತ್ರಿ ಅಯುಬ್ ಅಲ್ಲಾ ರಖ್ಖಾ ಶೇಟ್, ರೂ ೧, ಎಸ್. ಎಂ. ಸೈಯದ್ ಮಹಮ್ಮದ್ ಸಾಹೇಬ್, ರೂ ೫, ಅಬ್ದುಲ್ ಖಾದರ್ ಅಸಾದಿ ಸಾಹೇಬ್, ರೂ ೫, ಎ. ಎಂ. ಖಾನ್, ಮಹೆಗಾಂ, ಅಮೀನ ದೀದಿ, ರೂ ೫, ಕೆ. ಹನುಮಪ್ಪ, ರೂ ೨, ಶಿವಶಂಕರ ಶೇಟ್, ರೂ ೨, ಡಾ। ಎಂ. ಶಿವರಾವ್, ರೂ ೫, ಯು. ಸಿ ಎಸ್. ಭಟ್, ರೂ ೫, ವಿ. ರಾಮಸ್ವಾಮಿ, ಇಲೆಕ್ಟ್ರಿಕ್ ಇಂಜಿನೀಯರ್, ರೂ ೫, ಶ್ರೀಮತಿ ಯು. ಮನೋರಮ ಬಾಯಿ, ರೂ ೧, Mrs. ಪಿ. ಗಿರಿಜಾಬಾಯಿ, ರೂ ೨, ಬಿ. ಸೋಮಶೇಖರ ರಾವ್, ರೂ ೩, ಡಿ. ಅನಂತ ರಾವ್, ರಿಟಾಯರ್ಡ್ ಡೆಪ್ಯುಟಿ ಕಲೆಕ್ಟರ್, ರೂ ೨, Mrs. ಯು. ಲಲಿತಾ ಬಾಯಿ, ರೂ. ೧೦, ಡಾ। ಸಿ. ರ್ಯಾಟ್, ರೂ ೫, Mrs. ರೂತ್ ಮಸ್ಕರೇನ್ಸ್ ರೂ ೧, Mrs ಎಲ್. ಡಿ ಸೋಜ, ರೂ ೧, Mrs. ಲೀಲಾ ಬಾಯಿ, ರೂ ೧, ಗೋಷನ್ ಆಸ್ಪತ್ರೆಯ ಕೆಲವು ರೋಗಿಗಳಿಂದ ರೂ. ೩—೮—೩, ಪರಮೇಶ್ವರಿ ರೂ ೧, ಶ್ರೀಮತಿ ರೀಲಾ, ರೂ ೧, ಕೆಲವು ಲೇಬರ್ ವಾರ್ಡಿನ ರೋಗಿಗಳಿಂದ ರೂ. ೦—೧೪—೦, ಗೋಷನ್ ಆಸ್ಪತ್ರೆಯ ಕೆಲಸಗಾರರಿಂದ (ಕೂಲಿ) ಆಣೆ ೧೪, Mrs ವಿಮಲಾ ಬಾಯಿ, ರೂ ೧, ಟಿ. ವೇನ್, ರೂ ೧೦, ಜೆ ಫೌಲರ್, ರೂ ೧೦, ಎಚ್. ಗಿಬ್ಸನ್, ರೂ ೧೦, ಪಿ. ಎಸ್. ಪಿಂಟೋ, ರೂ ೧೦, ಡಿ. ರಸೆಲ್, ರೂ ೧೦, ಡಿ. ಪಿ. ಆಡಮ್ಸ್, ರೂ. ೧೦, ಅಲ್ಪ್ ಸ್ಟೀಂಬೌಮ್, ರೂ ೧೦, ಡಬ್ಲ್ಯು. ಜಾಫರಿಸ್, ರೂ ೧೦, A Mudie ರೂ ೧೦, ಜಿ. ಎಲ್. ಮಾರ್ಟಿನ್, ರೂ ೧೦, ಸಿ ಎಸ್. ಕೋನಿ, ರೂ ೧೦, ಎಸ್. ಕಿರ್ವನ್, ರೂ ೧೦, ಬಿ ಗೋಪಾಲ ಕೃಷ್ಣಯ್ಯ, ರಿಟಾಯರ್ಡ್ ಸಬ್ ಜಡ್ಜ್, ರೂ. ೨, ಶಾಂತಪ್ಪ ಅಜ್ಜಂತಾಯ, ರೂ ೨, ದಾಮು ಬ್ಯಾರಿ ರೂ ೨, ಕೆ ಸುಬ್ರಹ್ಮಣ್ಯ, ರೂ ೧, ಎಸ್ ಕೃಷ್ಣಯ್ಯ ರೂ. ೨, ಜೋಸಫನ ಟಿ ಮೈದಿನ್‌ಕುಟ್ಟಿ ಬ್ಯಾರಿ, ರೂ ೧, ಐತು ಶೆಟ್ಟಿ, ಆಣೆ ೮ ವೆಂಕ ಶೆಟ್ಟಿ ಆಣೆ ೮, ಮುಂಡಪ್ಪ ಭಂಡಾರಿ, ರೂ ೧, ಸುಬ್ಬಯ ಮಾಲ್ ರೂ ೨, ಕೃಷ್ಣ ಭಟ್, ರೂ ೧, ಸಾಲೆತ್ತೂರು ಅಮೃತ ರಾವ್, ರೂ ೨, ರಾವ್ ಎಂಡ್ ರಾವ್, ರೂ ೫, ಕೆ. ಅನಂತ ನಾರಾಯಣ ಪ್ರಭು, ರೂ ೨, ಎಂ. ಕೃಷ್ಣ ನಾಯಕ್ ಎಂಡ್ ಸನ್ಸ್, ರೂ ೫, ಗೋಷನ್ ಸ್ಟಾಫ್ ನಿಂದ ರೂ. ೨—೧೩—೬, Mrs. ತಿಂಮ್ಯಾಕೋಸ್ ರೂ. ೨, ಕೆ. ಸರಹರಿ ರಾವ್, ಕಾಂಚನಭಾಗ್, ರೂ ೫, ಜೆ. ಎಸ್. ಸುವರ್ಣ, ರೂ ೨, ಆರ್. ವಾಸುದೇವ ರಾವ್ ರೂ ೧, ಎಸ್. ಯು. ಪಿ. ನಾಯಕ್, ರೂ ೧, ಎ. ನಾರಾಯಣ ರಾವ್, ಆಣೆ ೪, ಜೆ. ಜೆ. ಡಿಸೋಜಾ, ಆಣೆ ೪, ಕೆ. ನರಸಪ್ಪ, ಆಣೆ ೪, ಎಂ ವಾದಿರಾಜ ೮ ಆಣೆ, ಕೆ. ವೆಂಕಟ್ರಾಯ ಶೆಣೈ ಆಣೆ ೪, ಬಿ. ವೆಂಕಟೇಶ ಶೆಣೈ, ಆಣೆ ೩, ಬಿ. ಹರಿಶ್ಚಂದ್ರ, ಆಣೆ ೪, ಕೆ. ನಾರಾಯಣ ಶೆಟ್ಟಿ, ರೂ ೧, ಹಮ್ಮದ್ ಹುಸ್ಸೈನ್ ಖಾನ್, ಆಣೆ ೮, ಯು. ಬಾಲಕೃಷ್ಣರಾವ್, ಎಂಟಾಜ್, ಬಿ. ಜೆ. ಪಿಂಟೋ, ಆಣೆ ೪, ಎ. ಜೆ ಪಿರೇರಾ, ಆಣೆ ೪, ಮಹಮ್ಮದ್ ಇಬ್ರಾಹಿಮ್, ಆಣೆ ೪, ಎಂ. ಬಿ. ಶಂಕರರಾವ ರೂ ೩, ಆಣೆ ಅರಂತೆ ಕೊಟ್ಟವರು:—ಎಂ. ಹುಸೇನ್ ಸಾಹೇಬ್, ಡಬ್ಲ್ಯು. ಎಕ್ಸ್. ಡಿ. ಸಿಕೇರ, ಎಂ. ಪುಟ್ಟಣ ಭಟ್, ಎಸ್. ಆರ್. ಮಾಥೀಯಸ್ ಆಣೆ ೪, ಪಿ. ಚಂದು ಶೆಟ್ಟಿ, ಆಣೆ ೨, ಕೆ. ವಿ. ಕುಂಞಪ್ಪ ಆಣೆ ೨, ಎಂ. ಅಬ್ದುಲ್ಲ ರಹಿಮಾನ್ ಆಣೆ ೪, ೨ ಆಣೆ ಕೊಟ್ಟವರು:— ಬಿ. ರಾಮರಾವ್, ಸಂಜೀವರಾವ್, ಪಿ. ಮಹಾಬಲ ಶೆಟ್ಟಿ, ಎಂ. ಅಬ್ದುಲ್ ರಹಿಮಾನ್ ಸಾಹೇಬ್; ಎಂ. ಅಬ್ದುಲ್ ವಹಾಬ್, ಯು. ಅಣ್ಣಯ್ಯ, ಬಂಟ್ವಾಳ ವೆಂಕಟ್ರಾವ್ ಶಾಳಿಗೆ ರೂ ೩, ಕಾರ್ಕಳ ಸದಾಶಿವರಾವ್ ರೂ ೧೫,

ಎಂ. ವೆಂಕಟೇಶ ಪೈ, ಬಿ. ವೀರಪ್ಪ, ರೂ. ೫, ಸುಬ್ಬ [illegible] ರೂ. ೨, ಯು. ಕೃಷ್ಣಪ್ಪ ರೂ ೧೦, ಎಚ್. ಸದಾಶಿವರಾವ್, ರೂ ೧, ಬಿ. ಸರ್ವೋತ್ತಮ ಶೆಣೈ ರೂ ೧, ಎ. ಪಿ. ಜನಾರ್ದನ, ಆಣೆ ೮, ಎಂ. ಶಿವರು ದ್ರೀನ್ ಶರೀಫ್, ಆಣೆ ೮, ಎ. ಇ. ದಾಸ್ ಆಣೆ ೮, ಎ. ಲಕ್ಷ್ಮಣರಾವ್, ರೂ ೧, ಕೆ. ಎ. ಶೆಟ್ಟಿ, ಆಣೆ ೮, ಎಚ್. ಸಾಲಿನ್ಸ್, ಆಣೆ ೮, ಯು. ಸುಬ್ಬ, ಆಣೆ ೪, ಎಂ. ಗೋಪಾಲ ರಾವ್, ರೂ ೩, ಎಚ್. ನಾಗೇಶರಾವ್ ೨—೪—೦, ಎಂ. ಜೆ. ಡಿ. ಸಲ್ದಾನ್, ರೂ ೨, ಕೆ. ನಾರಾಯಣ ರಾವ್, ಆಣೆ ೮, ಎಂ. ಮಾಧವ ಭಟ್ ೦—೧೦—೦, ಪಿ. ಶಂಕರನಾರಾಯಣ, ಆಣೆ ೧೨, ಎಂ. ಅಬ್ಬುಸಾಹೇಬ ಆಣೆ ೮, ಜೆ. ಅಹಮದ್, ಆಣೆ ೮, ಬಿ. ಪಿ. ಬಾಯ, ೮, ೮, ಕೆ. ಶ್ರೀನಿವಾಸ ಕಾಮತ್, ಆಣೆ ೩, Mrs. ಸಿ. ಆರ್. ಚಾರ್ಲ್ಸ್, ರೂ ೨೫, ಯು. ಸ್ಪೀವಟ್, ಬ್ಯಾರಿಸ್ಟರ್, ರೂ ೫, ದಕ್ಷಿಣ ಕನ್ನಡ ಆರ್ಮ್ಡ್ ರಿಸರ್ವ್ ಹೆಡ್ ಕಾನ್ಸ್ಟೇಬಲರು ಮತ್ತು ಪೋಲೀಸ್ ಕಾನ್ಸ್ಟೇಬಲರಿಂದ ರೂ. ೬—೧೩—೦, ಸಬ್ ಇನ್ಸ್‌ಪೆಕ್ಟರ್ ಡಬ್ಲ್ಯು. ಜೆ. ಡಿ ಸೋಜ, ರೂ ೧, ಡಬ್ಲ್ಯು. ಆರ್. ಸುನೀಲ್, ಸಬ್ ಇ॥ ರೂ ೧, ಎಂ ಎಸ್ ಭಂಡಾರಿ, ರೂ. ೫, ಬಿ. ರಾಮಣ್ಣ ಶೆಟ್ಟಿ, ರೂ ೫, ಬಿ. ನಾರಾಯಣ ರಾವ್, ರೂ ೩, ಜಿ. ಶಿವರಾವ್, ರೂ ೩, ಬಿ. ಕೃಷ್ಣರಾವ್, ರೂ ೧, ಜಿಲ್ಲಾ ಪೋಲೀಸ್ ಆಫೀಸಿನ ಕ್ಲಾರ್ಕರಿಂದ ರೂ. ೪—೧೦—೦, ಸೈಂಟ್ ಅಗ್ನೆಸ್ ಕಾಲೇಜ್, ಸೈಂಟ್ ಮೇರಿಸ್ ಸ್ಕೂಲ್, ಹೋಲಿ ಏಂಜೆಲ್ಸ್ ಸ್ಕೂಲ್, ಸೈಂಟ್ ಎನ್ನಿಸ್ ಸ್ಕೂಲ್, ಲೇಡಿ ಹಿಲ್ ಸ್ಕೂಲ್ ಇವರಿಂದ ಒಟ್ಟು ರೂ. ೫೦, ಮಂಗಳೂರಿನ ಲಾರ್ಡ್ ಬಿಷೋಪರು ರೂ ೩೦, ದಿ ರೆಕ್ಟರ್ ಇವರು ರೂ. ೨೫, Mrs. ಎಲ್ ರೋಡ್ರಿಗ್ಸ್, ರೂ ೧೫, ಡಾ ಎಸ್. ಶ್ರೇಸ್ಸ, ರೂ ೧೫, ರಾವ್ ಬಹದ್ದೂರ್ ಎ. ಪಿ ಎಫ್. ಸಲ್ದಾನ, ರೂ ೧೦, ರಾವ್ ಸಾಹೇಬ್ ಎ. ಎಲ್. ಪಿಂಟೋ, ರೂ ೧೦, ಮೆಸರ್ಸ್ ಸಿ. ಎಫ್. ಎಕ್ಸ್ ಸಲ್ದಾನಾ ಎಂಡ್ ಸನ್ಸ್, ರೂ ೧೦, ದಿ ಬಹದ್ದೂರ್ ಎಸ್ ಎಲ್. ಮಾತಾಯಸ್, ರೂ ೮, ಡಿ ಫಾ। ಎಂ ಮಿನೇಜಸ್ ರೂ ೫, ರಾವ್ ಬಹದ್ದೂರ್ ಸಿ ಡಿ ಜೆ ಪಿಂಟೋ, ರೂ ೫, ರಾವ್ ಸಾಹೇಬ್ ವಿಕ್ಟರ್ ಕುಲಾಸೊ ರೂ ೫, ದಿ ಫಾ। ಜುಲಿಯನ್ ಡಿ. ಸೋಜ, ರೂ ೪, ಖಾನ್ ಸಾಹೇಬ್ ಇ ಸಿ ಎಂ ಮಸ್ಕರೇಂಞಾಸ್ ರೂ ೩, ಡಾ। ಜೆ. ಟಿ ಪ್ರಭು, ರೂ ೩, ಎಂ. ಅಣ್ಣಪ್ಪ, ರೂ ೩, ರಾವ್ ಸಾಹೇಬ್ ಡಾ। ಬಿ. ಕೊಲಾಸೊ, ರೂ ೩, ಜೆ. ಎಂ. ಪಿಂಟೋ, ರೂ ೩, ದಿ ಫಾ। ಎ. ಇ. ಸಿ. ಕೊಲಾಸೊ, ರೂ ೨, ಎ ರಾಘವೇಂದ್ರ ರಾವ್ ರೂ ೫, ಎ ಎ. ಲೋಬೋ, ರೂ ೫, ಜೆ ಡಿ. ಜೇಮ್ಸ್ ರೂ ೧೫, ಎಂ ಎರ್. ಬಂಗೇರ, ರೂ ೫, ಪಿ ಎಸ್ ನಾಯಕ್, ರೂ. ೩, ಎಂ ಗೋವಿಂದ ನಾಯರ್, ಆಣೆ ೪, ಎಂ ಲಕ್ಷ್ಮಯ್ಯ ಶೆಟ್ಟಿ ಎಂಡ್ ಸನ್ಸ್ ರೂ ೫, ಯು. ಜೆ ಶೆಂಟೆ, ರೂ ೫, ಎಂ. ಪದ್ಮನಾಭ ರಘುನಾಥ ಪೈ ಎಂಡ್ ಕೋ, ರೂ ೫, ಟಿ. ಬಿ. ಬೋಗಿ, ರೂ ೧, ಎಂ ಸುಂದರಿ ಬಾಯಿ ಯಾನೆ ಲಕ್ಷ್ಮೀದೇವಿ ರೂ ೧೦, ಎಂ. ಲೋಬೊ ರೂ. ೫, ಜೆ ಆರ್. ಇಲಿಯಟ್ ರೂ. ೨, ಕೆ. ಅಂತಪ್ಪ, ರೂ ೨, ಮಂಗಳೂರು ಟೌನ್ ಹೆಡ್ ಕನ್ಸ್ಟೇಬಲರು ಮತ್ತು ಪೋಲೀಸ್ ಕನ್ಸ್ಟೇಬಲರಿಂದ—ರೂ ೯—೧೩—೦, ಎಂ ಶಾಮರಾವ್, ರೂ ೨, ಎಂ ರಘುವೇಂದ್ರ ರಾವ್, ರೂ ೧, ಎಚ್. ಶಂಕರ ರಾವ್, ರೂ ೩, ಜನಾಬ್ ಕೆ ಬಿ ಅಲಿ ಅಹಮದ್ ಸಾಹೇಬ್, ೨, ಎಂ. ಗಣೇಶರಾವ್, ರೂ ೧, ಎಸ್. ಎಂ. ಬಿ. ಸೈಯ್ಯದ್ ಮಹಮ್ಮದ್ ಸಾಹೇಬ್ ಎಂಡ್ ಕೋ, ರೂ ೩, ಕೆ ಹುಸೈನಬ್ಬ ರೂ. ೩, ಎಂ ನುರುದ್ದೀನ್ ಸಾಹೇಬ್, ರೂ ೧, ಎಸ್. ಎಂ. ಸೈಯ್ಯದ್ ಅಬ್ದುಸ್ಸಾಲಾಂ ಸಾಹೇಬ್ ರೂ ೨, ಎಸ್. ಎಸ್. ಶಕ್ತಿ, ರೂ ೧, ಶ್ರೀ ವೆಂಕಟರಮಣ ದೇವಸ್ಥಾನ ಮುಲ್ಕಿ, ರೂ ೬೦, ಯು. ವಾಮನ ಶೆಣೈ, ರೂ ೧, ಚಂದು ಯಾನೆ ವೆಂಕಟ್ರಮಣ ಕಾಮತ್, ರೂ ೨, ಯು. ಕೃಷ್ಣರಾವ್, ರೂ. ೨, ಯು. ಪುರುಷೋತ್ತಮ ಶೆಣೈ ರೂ. ೧, ಪಕೀಲ ಕೋಟಿ ಶೆಟ್ಟಿ ರೂ. ೧, ಎನ್. ಮಹಾಬಲ ಶೆಟ್ಟಿ, ರೂ ೧, ನಾಗ. ಶೆಟ್ಟಿ, ರೂ ೧, ಅಣ್ಣು ಪೂಜಾರಿ, ರೂ ೨, ತಿಮ್ಮಪ್ಪ ಪೂಜಾರಿ, ರೂ ೧, ಸುಬ್ಬಯ ಶೆಟ್ಟಿ, ರೂ ೨, ಬಿರ್ಮಯ ಶೆಟ್ಟಿ, ರೂ ೧। ಕೊರಗಶೆಟ್ಟಿ, ರೂ ೨, ಕೆ. ವಾಸುದೇವರಾವ್, ರೂ ೨, ಚೊಂಬ ಶೆಟ್ಟಿ ರೂ ೨, ಗೋಪಾಲ ಶೆಟ್ಟಿ, ರೂ ೧; ಪದ್ಮನಾಭ ಶೆಟ್ಟಿ, ರೂ ೧, ಬೆಂಜಮಿನ್ ಡಿ. ಸೋಜ, ರೂ ೧, ಉಲ್ಲಾಳ ಮಂಜು ನಾಥ ಪೈ ೮ ಆಣೆ, ಕೊರಗ ಬ್ಯಾರಿ ರೂ ೨, ಡಿ. ಡಿ. ಕೋಸ್ತಾ, ಆಣೆ ೮, ಸಾಲ್ವದೋರ್ ಕ್ವಾಡ್ರಸ್, ಆಣೆ ೮, ಲುವಿಸ್ ಸೆಬಾಸ್ಟಿಯನ್ ಆಣೆ ೮, ಸಿ. ಭೀಮರಾವ್ ರೂ ೨,

ವೈಕುಂಟ ಶಾನ್‌ಭಾಗ, ರೂ ೨, ಎಚ್ ನಾರಾಯಣ ಶೆಟ್ಟಿ, ರೂ ೨, ಹಸೆನಬ್ಯಾರಿ, ಆಣೆ ೪, ದೇವರಾಜ ಹೆಗ್ಡೆ, ರೂ ೧, ಕೊರಗಪೂಜಾರಿ ೪ ಆಣೆ, ಕೆ. ಶ್ರೀನಿವಾಸ ಮಲ್ಯ ೪ ಆಣೆ, ಯು. ನರಸಿಂಹ ಶೆಣೈ, ರೂ ೨, ಡಾ। ಎಂ ಉಮೇಶರಾವ್, ರೂ ೫, ರಾಮಣ್ಣ ಶೆಟ್ಟಿ ಆಣೆ ೪, ಕೃಷ್ಣಬಾಳಿಗ ರೂ ೧, ಎ. ಎಸ್ ಅಸಾದಿ ಸಾಹೇಬ್ ರೂ ೧, ಪಿ. ಇ. ದಾಮೋದರ ಕಾಮತ್ ರೂ ೨, ಎಸ್. ಬಾಬುರಾವ್ ರೂ. ೧, ಕೆ. ಸರ್ವೋತ್ತಮ ಮಲ್ಯ, ಆಣೆ ೮, ಬಿ. ರಾಮಕೃಷ್ಣರಾವ್ ರೂ ೨, ಕೆ. ಸುಬ್ಬಣ್ಣ ಶಾನ್‌ಭಾಗ, ರೂ. ೫, ಆಣೆ ಆರಂತೆ ಕೊಟ್ಟವರು—ದೇಜು ಶೆಟ್ಟಿ, ಸಾಲ್ವದೋರ್ ಅರಂಞ, ವಿಟ್ಟಪ್ಪ ಮಲ್ಯ, ಬಲ್ತು ಅರಂಞ, ಅಣ್ಣಯಬಾರಿ, ಮಾರ್ಕೆಲ್ ಡಿ. ಸೋಜ, ಸಿಪ್ರಿಯಾನ ಪಿಂಟೋ, ಬಾಬುರಾಯ ಆಚಾರಿ, ಮಥ್ಯಾಸ್ ಸೋಜ,

ನಮ್ಮ ಭಾರತ ದೇಶ

ನಮ್ಮ ಭಾರತದೇಶವು ಇಡೀ ಜಗತ್ತಿನಲ್ಲಿ ಹೊನ್ನಿನ ನಾಡೆಂದೆನಿಸಿಕೊಂಡಿರುತ್ತದೆ. ಅಲ್ಲದೆ ಅಲ್ಲಿ ಬೆಳೆದ ವೈಭವಶಾಲಿಗಳು, ಖನಿಜಗಳು, ಇಲ್ಲಿಯಷ್ಟು ಫಲವತ್ತಾದ ಪ್ರದೇಶಗಳು ಅನ್ಯದ ಕಡೆಗಳಲ್ಲಿಯೂ ಇರುವುದಿಲ್ಲ, ಎಂಬಂತದ್ದು ಚರಿತ್ರಾಕಾರರಿಂದ ತಿಳಿದುಬರುತ್ತದೆ. ಇಲ್ಲಿಯ ಪ್ರಜೆಗಳು ಕೇವಲ ಸಾತ್ವಿಕರು. ಹಿಂದಿನ ಕಾಲದಲ್ಲಿ ಈಗಿನಂತೆ ನವನಾಗರಿಕತೆಯು ಇರಲಿಲ್ಲ. ಬಾಹ್ಯಾಡಂಬರಕ್ಕೆ ಅವರಿಗೆ ಪ್ರಿಯವಿಲ್ಲದೆ ಆಂತರಿಕ ಕಾರ್ಯಗಳಲ್ಲಿ ಉತ್ಸುಕರಾಗಿದ್ದರು. ಕಾಲಕ್ರಮೇಣ ನಮ್ಮ ಸಾತ್ವಿಕತ್ವವನ್ನು ಕಂಡು ಈ ಹೊನ್ನಿನ ನಾಡಿನ ಮರ್ಮವನ್ನು ತಿಳಿದು ಇತರ ದೇಶದ ರಾಜರುಗಳು ನಮ್ಮ ಭರತಖಂಡದ ಮೇಲೆ ದಂಡೆತ್ತಿ ಬಂದು, ಇಲ್ಲಿಯ ಅನೇಕ ಭಾಗಗಳನ್ನು ಆವರಿಸಿದರು. ಅಲ್ಲದೆ ಸಾತ್ವಿಕರಾಗಿದ್ದ ನಮ್ಮವರಿಗೆ ಹಲಕೆಲವು ಸಲಹೆಗಳನ್ನಿತ್ತು ಮತಾಂತರಗೊಳಿಸಿದರು. ನಮ್ಮಲ್ಲಿಯ ಕೆಲವರು ಈ ತೊಂದರೆಗಳನ್ನು ಸಹಿಸಲಾರದೆ ಬೆಟ್ಟಗುಡ್ಡಗಳಲ್ಲಿ ಹೋಗಿ ನೆಲಸಿದರು. ಅನೇಕರು ದಿಕ್ಕು ತೋಚದೆ ಅಗ್ನಿಪ್ರವೇಶಗಳನ್ನು ಮಾಡಿದರು. ಇನ್ನು ಕೆಲವರು ವಿಧಿಯಿಲ್ಲದೆ ಮತಾಂತರಗೊಂಡರು. ಕೆಲವರು ದಂಡೆತ್ತಿ ಬಂದ ಅರಸುಗಳಿಗೆ ತಕ್ಕಂತೆ ವರ್ತಿಸಿ ಅವರ ಹೇಳಿಕೆಯಂತೆ ಇರುತ್ತಾ ದಂಡೆತ್ತಿ ಬಂದ ಅರಸುಗಳ ಆಸ್ಥಾನದಲ್ಲಿ ಸೇರಿಕೊಂಡು ಅರಸರಿಗೆ ಮನೋರಂಜಕರಾಗಿದ್ದು ಮೊಲೆತೊತ್ತಿನವಾದ ಅರಸುಮಕ್ಕಳನ್ನು ಅಂತರಂಗದಲ್ಲಿಯೇ ಬೇಕಾದ ಸಲಕರಣೆಗಳನ್ನು ಒದಗಿಸಿಕೊಂಡು ಪುನಃ ತಮ್ಮ ಪೂರ್ವದ ಅಧಿಕಾರವನ್ನು ಒದಗಿಸಿ ಕೊಟ್ಟು ಸ್ವಾತಂತ್ರ್ಯದಿಂದ ಆಳಿದ ವಿಷಯಗಳೇ ವಂಶಾವಳಿಗಳನ್ನು ಅನೇಕರು ಚರಿತ್ರೆಗಳ ಮೂಲಕ ತಿಳಿದರಬಹುದು. ಈ ಹಲಕೆಲವು ವಿಚಾರಗಳನ್ನು ಸಾವಿರಾರು ವರ್ಷ ದೂರದಲ್ಲಿದ್ದ ಪಾಶ್ಚಾತ್ಯರು ತಿಳಿದು ಅನಾಗರೀಕರಾದ ಈ ಭರತಖಂಡದವರಲ್ಲಿ ಅನಾಗರೀಕತೆಯು ಯನ್ನು ಬಿಡುವಂತೆ ಸಲುವಾಗಿ ವ್ಯಾಪಾರವನ್ನು ಈ ಭರತಖಂಡದೊಂದಿಗೆ ಪ್ರಥಮತಃ ಪ್ರಾರಂಭಿಸಿದರು. ಅಲ್ಲಿಯ ಕೆಲವು ನೋಟುಕ್ಕೆಂದವಾದ ವಸ್ತುಗಳನ್ನು ಇಲ್ಲಿಗೆ ತಂದೊತ್ತಿ, ಇಲ್ಲಿಯ ಮುಖ್ಯ ಮುಖ್ಯವಾದ ವಸ್ತುಗಳನ್ನು ತಮ್ಮ ದೇಶಕ್ಕೆ ಒಯ್ದರು. ಕಾಲಕ್ರಮೇಣ ನಮ್ಮ ಅರಸುಗಳ ಆಸ್ಥಾನಕ್ಕೆ ಸೇರಿಕೊಳ್ಳಲಾರಂಭಿಸಿದರು—ಪ್ರಜೆಗಳಿಗೂ ಅರಸುಗಳಿಗೂ ಜಗಳಗಳನ್ನು ತಂದೊಡ್ಡಿದ್ದಲ್ಲದೆ ಇತರ ಅರಸುಗಳಲ್ಲಿ ಅಂತರಂಗ ವ್ಯವಹಾರಗಳನ್ನು ನಡೆಸಿ, ಶಾಂತಿಸಂಧಾನಗಳನ್ನು ನಡೆಸಿ ರಾಜ್ಯಕ್ರಮೇಣ ಇಡೀ ಭರತಖಂಡವನ್ನೇ ಸ್ವತಃ ಆಳಲಾರಂಭಿಸಿದರು. ಹೀಗೆ ನಮ್ಮ ಭರತಖಂಡವು ಪರಾಧೀನವಾಗಿ ಈಗಾಗಲೇ ೨೦೦ ವರ್ಷಗಳ ಕಾಲವಾಗುತ್ತಾ ಬಂದಿದೆಯಷ್ಟೆ.

ಈ ಪಾಶ್ಚಾತ್ಯರ ಆಳ್ವಿಕೆಯಿಂದ ನಮ್ಮ ದೇಶದಲ್ಲಿ ಅನೇಕ ತೆರನಾದ ಸೌಕರ್ಯಗಳು ಎಂದರೆ ದೂರ ಪ್ರದೇಶಗಳಿಗೆ ಶೀಘ್ರದಲ್ಲಿ ವರ್ತಮಾನಗಳನ್ನು ತಿಳಿಸುವ ಬಗ್ಗೆಯೂ ಶೀಘ್ರದಲ್ಲೇ ತಲ್ಪುವ ಬಗ್ಗೆಯೂ, ಪ್ರಯಾಣಗಳಿಗೆ ತಕ್ಕ ಅನುಕೂಲತೆಗಳನ್ನೂ, ನಮ್ಮ ನಮ್ಮಲ್ಲಿಯೇ ಕಲಹಗಳೇರ್ಪಟ್ಟ (ತಮ್ಮಿಂದ ಮೇಲ್ಪಂಕ್ತಿ ಹಾಕಲ್ಪಟ್ಟ) ಲ್ಲಿ ಶಾಂತಿಯನ್ನು ಪಾಲಿಸುವ ಬಗ್ಗೆ ಕೆಲವು ಕಾನೂನುಗಳನ್ನೂ, ಭೇದೋಪಾಯಗಳ ಮುಖಾಂತರ ಉಂಟಾದ (ತಮ್ಮಿಂದ ಕಲ್ಪಿತವಾದ) ಬಡತನ ರೋಗರುಗಳೆಂಬ ಭಾವನೆಯಿಂದ ಉಂಟಾಗುತ್ತಿರುವ ನಿರು-

ದ್ಯೋಗ ಮತ್ತು ಇವುಗಳ ಫಲಿತಾಂಶದಿಂದುಂಟಾಗುವ ಕಳ್ಳತನ ಇಂಥವುಗಳನ್ನು ಕಾಯುವ ಬಗ್ಗೆ ಬೇಕಾದ ಕಾನೂನು, ಕಾಲಾಳುಗಳ ಏರ್ಪಾಟು, ಈ ಬಗ್ಗೆ ನ್ಯಾಯಾಸ್ಥಾನ ಇವೆಲ್ಲವೂ ಹೆಚ್ಚಿನ ಖರ್ಚಿನಿಂದಲೂ ಮಹನೀಯರಿಂದಲೂ ಏರ್ಪಡಿಸಲಾಗಿರುತ್ತವೆ. ಇವೆಲ್ಲವೂ ಹೇಗೆ ಏರ್ಪಡಿಸಲ್ಪಟ್ಟಿತೆಂಬುದು ಆಶ್ಚರ್ಯಕರವಲ್ಲವೇ? ಇವುಗಳ ಮೂಲವನ್ನು ತಿಳಿಯುವ ವಿಧವಾದರೂ ಹೇಗೆಂಬುದನ್ನು ಯೋಚಿಸಬೇಕಲ್ಲವೇ? ನಮ್ಮ ಮೇಲೆ ಹೊರಿಸಲಾಗಿರುವ ತೆರಿಗೆಗಳ ಉತ್ಪತ್ತಿಯೇ ಆಗಿರುತ್ತದೆ. ಅಲ್ಲದೆ ನಮ್ಮಿಂದ ೩೦ ಕೋಟಿ ರೂಪಾಯಿಗಳಿಗೆ ಪರದೇಶಗಳಿಗೊಯ್ಯಲ್ಪಟ್ಟ ಹತ್ತಿಯ ಮಾರಾಟದಿಂದ ಅದೇ ಹತ್ತಿಯಲ್ಲಿ ಮೂರನೇ ಒಂದಂಶದಿಂದ ತಯಾರಾದ ಬಟ್ಟೆಯನ್ನೇ ನಮ್ಮ ದೇಶಕ್ಕೆ ಪುನಃ ೬೦ ಕೋಟಿ ರೂಪಾಯಿಗಳಿಗೆ ನಮಗೆ ಮಾರುತ್ತಾ ಬಂದರು. ಅಂದಿನಿಂದ ಬೆಳೆದ ಬೆಳೆಯ ಫಲವನ್ನೆಲ್ಲಾ ಈ ಬಟ್ಟೆಗಾಗಿ ಪರಕೀಯರಿಗೆ ತೆರುತ್ತಾ ಬಂದೆವು. ಬಟ್ಟೆಯ ಕಲೆಯೊಂದಲ್ಲದೆ ಇತರ ಉದ್ಯೋಗಗಳೂ ಮೂಲೆಗೊತ್ತಿನವಾದವು. ವ್ಯವಸಾಯಗಾರರಾದ ರೈತರು ಹೊಲಗದ್ದೆಯಿಂದ ಮೇಲು ಖರ್ಚಿಗೆ ಸಂಪಾದಿಸಿಕೊಂಡು ಸುಖವಾಗಿದ್ದರು. ಅನೇಕ ರೈತರು ಈ ಕಲೆಯೇ ಇಲ್ಲವಾದುದರಿಂದ ತಮ್ಮ ಹೊಟ್ಟೆ, ಬಟ್ಟೆಗೆ ಸಾಲದೆ, ಕಂದಾಯ ಕೊಡಲಾರದೆ ದಿವಾಳಿಯಾದರು. ಹೊಟ್ಟೆಯ ಪಾಡು ಹಿಡುಕಿಕೊಂಡು ಹಳ್ಳಿಗಳನ್ನು ತ್ಯಜಿಸಿ ಪಟ್ಟಣಗಳ ಕಡೆ ಹೊರಟರು. ಅಂದಿನಿಂದ ಈ ವಿಷಯ ನಿರುದ್ಯೋಗ ಸ್ಥಿತಿಯು ಹೆಚ್ಚುತ್ತಲೇ ಬರುತ್ತಿದೆ. ೧೮೮೮ರಲ್ಲಿ ಸರ್ ವಿಲ್ಲಿಯಮ್ ಹಂಟರ್ ಎಂಬ ಪ್ರಸಿದ್ಧ ಇತಿಹಾಸಗಾರನು "ಹಿಂದೂದೇಶದಲ್ಲಿ ಅರ್ಧಪಾಲು ಜನರಿಗೆ ಇಡೀ ವರ್ಷದಲ್ಲಿ ಒಂದು ಸಾರಿಯಾದರೂ ಹೊಟ್ಟೆತುಂಬ ಊಟವೆಂದರೆ ತಿಳಿಯದು ೪ ಕೋಟಿ ಜನರು ಪ್ರತಿನಿತ್ಯವೂ ಅರೆಹೊಟ್ಟೆಯಿಂದ ಜೀವಿಸುವರು. ನಾನು ಇದನ್ನು ಸ್ಪಷ್ಟವಾಗಿ ಹೇಳುವೆನು" ಎಂದು ಬರೆದಿರುವರು.

ಇತ್ತೀಚೆಗೆ ದೇಶದ ಸ್ಥಿತಿಗತಿಗಳನ್ನರಿತ ನಮ್ಮ ದೇಶದ ಮುಂದಾಳುಗಳು (ಸ್ವಾತಂತ್ರ್ಯಾಭಿಮಾನಿಗಳು) ದೇಶದಲ್ಲಿಯ ಶಾಂತಿಸ್ಥಾಪನೆ ಸ್ವಾತಂತ್ರ್ಯ, ಐಕ್ಯಮತ್ಯ ಹಿಂದೂದೇಶದ ಪುನರುದ್ಧಾರದೆಡೆಗೆ ಗಮನಕೊಟ್ಟು ಕಳೆದ ಐವತ್ತು ವರ್ಷಗಳಿಂದಲೂ ತಮ್ಮೆಲ್ಲನೇಕರು ತನು-ಮನ-ಧನಗಳೆಲ್ಲವನ್ನೂ ತ್ಯಾಗ ಮಾಡಿರುವುದು ಪ್ರತ್ಯಕ್ಷವಾಗಿ ಕಂಡುಬರುತ್ತದೆ. ನಮ್ಮ ಸನಾತನ ಧರ್ಮವನ್ನು ಪಾಶ್ಚಾತ್ಯ ಶಿಕ್ಷಣದಿಂದ ಮರೆತೆವು. ಸ್ವದೇಶ, ಸ್ವಜನ, ಸ್ವಸಂಸ್ಕೃತಿ, ದೇಶದ ಶೃಂಗಾರಕೆ ಪ್ರಜಾಭಿಮಾನ, ಕೃಷಿ ಗುರುಹಿರಿಯರಲ್ಲಿ ಭಯಭಕ್ತಿ, ಇವೇ ಮೊದಲಾದುವುಗಳ ಕಡೆ ಗಮನವು ಮರೆತವು. ಹಣದ ಸಂಪಾದನೆಯೇ ಮುಖ್ಯ ಧ್ಯೇಯವೆನಿಸಿತು.

ಇತ್ತೀಚೆಗೆ ನಮ್ಮಲ್ಲಿ ಅನೇಕ ಸಂಘಗಳು ಏರ್ಪಟ್ಟಿರುವುದೂ ಏರ್ಪಡುತ್ತಿರುವುದೂ ಸರಿಯಷ್ಟೆ. ಇವುಗಳು ಸಾರ್ವಜನಿಕವಾಗಿರುತ್ತವೆ. ಇವುಗಳಲ್ಲಿಯೂ ಎರಡು ತೆರನಾದ ದೃಷ್ಟಿ. ಒಂದು ಬಡತನ, ಇನ್ನೊಂದು ಸಿರಿತನ. ಸಾಮಾನ್ಯವಾಗಿ ಸಂಘಗಳ ಚಾಲಕರು ಸಿರಿವಂತರೇ ಆಗಿರುತ್ತಾರೆ. ಇಲ್ಲವಾದರೆ ಧನಸಹಾಯವು ಸಿಕ್ಕುವುದೇ ಇಲ್ಲ. ಸಂಘಗಳ ಉದ್ದೇಶವು ಸರ್ವರನ್ನೂ ನಿಷ್ಪಕ್ಷಭಾವದಿಂದ ಕಷ್ಟಕ್ಕೆ ಗುರಿಯಾಗಿರುವವರನ್ನು ಮೇಲೆಗೆ ತರುವುದೇ ಮುಖ್ಯ ಧ್ಯೇಯ! ಆದರೆ ನಮ್ಮಲ್ಲಿಯ ಸಂಘಗಳೆಂದರೆ ಅನೇಕವು ಚಾಲಕರ ಸ್ವಪ್ರಯೋಜನ, (ತನ್ನ ಸುಖ ಲೋಲುಪ್ತಗಳಿಗೆ) ಅಹಂಭಾವ, ಸಿರಿತನದ ಕಡೆ ದೃಷ್ಟಿ, ರೀತಿ ನೀತಿಗಳ ಮತ್ತು ಪರೋಪಕಾರಗಳ ಕಡೆ ಗಮನವಿಲ್ಲದೇ ಇರುವುದು, ಶಾಸ್ತ್ರವಿರುದ್ಧವಾಗಿ ನಡೆಯುವುದು ಇವೇ ಆಗಿರುತ್ತದೆಯಲ್ಲದೆ ಸಾರ್ವಜನಿಕ ಸಂಸ್ಥೆಯೆಂದು ತಿಳಿದು ಪರಸ್ಪರರು ಸಾರ್ವಜನಿಕ ಕಾರ್ಯಕರ್ತರುಗಳು ಬಂದರೆ ಸದ್ರಿಯವರನ್ನು ತಿರಸ್ಕಾರ ಭಾವದಿಂದ ನೋಡುವುದು, ಪ್ರೋತ್ಸಾಹ ಕೊಡದೆ ಇರೋಣ, ವೈಯುಕ್ತಿಕವನ್ನು ಭಾವಿಸೋಣ ಇವೇ ಮೊದಲಾದ ಕಾರಣಗಳಿಂದಲೂ, ಪುರಜನರ ಐಕ್ಯಮತ್ಯವೂ ಸಹಕಾರವೂ, ಸಿರಿವಂತರ ಸಹಕಾರವೂ ಪ್ರೋತ್ಸಾಹ ಸಹಕಾರ ಮನ್ನಣಾಸಹಾಯಗಳೂ ರಾಷ್ಟ್ರದೇಳಿಗೆಯ ಬಗ್ಗೆ ಇಲ್ಲದಿರೋಣದರಿಂದಲೂ ನಮ್ಮ ಭಾರತಮಾತೆಯ ಶೃಂಖಲಾಬದ್ಧತೆಗೆ ಕಾರಣವಾಗಿರುತ್ತದೆಯಾದ್ದರಿಂದ ನಮ್ಮಲ್ಲಿಯ ಸಂಘಶಕ್ತಿಗಳನ್ನು ಹೆಚ್ಚಿಸಿ, ರಾಷ್ಟ್ರದೇಳಿಗೆ ಕಾರ್ಯಗಳ ಬಗ್ಗೆ ಪಾತ್ರರುತ ವ್ಯಸನ್ಯಗಳನ್ನಿತ್ತು ಎಲ್ಲರೂ "ಇದೇ ಭ್ರಾತೃವಾತ್ಸಲ್ಯದಿಂದ ಸಿರಿತನ ಬಡತನಗಳನ್ನಿತ್ತ ಸದಾ ಕಾರ್ಯತಃ ಕರ್ತವ್ಯಮುಖರಾಗುವುದು ಮುಖ್ಯವಲ್ಲವೇ?

"ನಿಶ್ಚಲ ದೇಶಭಕ್ತ."

OUR ENGLISH COLUMN

'Smile Awhile'

"You see, even the fishes think you're a worm"

o o o o

Rightol

There is one word in the English language that is always pronounced wrong

What word is that?

'WRONG', of course.

o o o o

Patience for Patients

Old Doctor What do you want, my lad?

Young Physician -I want a little advice on how to succeed in this profession

Old Doctor Just have patience my son have patience

o o o o

Children's Questions

The teacher was giving the class a lecture on 'gravity'

"Now, children," he said, 'it is the law of gravity that keeps us on this earth"

"But please, teacher" inquired one small child, 'how did we stick on before the the law was passed?"

o o o o

Why Study?

The more you study,
The more you know,
The more you know,
The more you forget,
The more you forget,
The less you know,
So why study?

o o o o

You can't fool him

Teacher Now, Ram, tell me which month has 28 days in it?

Ram -They all have.

o o o o

He· If I had known we were going through a tunnel, I'd have kissed you.

His Girl:-Heavens! Wasn't that you?

A Medical Truth

Husband:-Somehow, I'm always getting a cold in my head

Wife -(tartly) Well, you know, a cold always settles in the weakest part of the body according to the doctors

o o o o

Not always

My son, if you want to learn anything begin at the bottom!

How about swimming, dad?

o o o o

Cure for Sleeplessness

"I tried a remedy for insomnia last night that a friend gave me, to start counting 1, 2, 3, 4 as soon as I lay down. I got up to a million."

"And you fell asleep?"

"No, it was time to get up."

Odd Truths.

Earth's Tail

According to Carl Stromer, the famous Norwegian astronomer, the earth has, like comets, got a tail, and in order to keep it is constantly losing the gases of its atmosphere,

Sky's Colour

Is the sky really blue, or does it only appear so? If there were no atmosphere the sky would appear black Moisture turns this to various shades of blue—the dryer the atmosphere the deeper the blue

Tongue of the Giraffe

The tongue of the giraffe is nearly a foot and a half long

Deepest Ocean

The deepest known spot in the ocean is near the Philippines about 40 miles off the north east of Mindanao. Great depths where found to be numerous in this region, but the record sounding showed the amazing result of 9780 meters, or 400 feet more than six miles The greatest ocean depths hitherto known was found by the U S cable steamer, 'Nero in 1901 This spot was to the south of the Island of Guam, and the deep sea lead indicated 9,635 meters just a little less than 6 miles

Light Speed

Light is said to travel at a speed of 186,000 miles a second

By 'OWL'

ಅವಳ ವೇದನೆಯು ಜೀವನದ ಸುಖವನ್ನೇ ಹಾಳುಮಾಡಿತು..

ಒಂದೊಂದು ತಡವೆ ಕೆಲವು ಗಂಟೆಗಳ ವರೆಗೆ ಮಲಗಿಯೇ ಬಿಡಬೇಕಾಗುತಿತ್ತು.

ಕ್ರುಶ್ಯನ್ ಲವಣವು ಇದನ್ನೆಲ್ಲಾ ಶಮನಮಾಡಿತು.

ಅವಳ ತಲೆನೋವು ಎಷ್ಟು ಉಗ್ರವಾಗಿತ್ತೆಂದರೆ,ಅದು ಕಣ್ಣನ್ನು ಸರಿಯಾಗಿ ಬಿಡಲು ಬಿಡುತ್ತಿರಲಿಲ್ಲ. ತಲೆನೋವಿನಿಂದಾಗಿ ದೃಷ್ಟಿಗೆ ಬಾಧಕ ಬರುತ್ತದೋ ಎಂಬ ಹೆದರಿಕೆಯು ಅವಳನ್ನು ತತ್ತರಿಸುತ್ತಿತ್ತು ಅವಳಿಗೆ ಗೊತ್ತಿದ್ದ ಮಟ್ಟಿಗೆ ಎಲ್ಲಾ ಮದ್ದು ಸೇವಿಸಿಯೋ ಲೇಪಿಸಿಯೋ ಆಯಿತು ಆದರೆ ಗುಣಮುಖವಾಗಲಿಲ್ಲ ಅವಳು ಸ್ವಂತವಾಗಿ ಹೇಳುವ ಕತೆಯನ್ನು ಇತರ ಶಿರೋವೇದನೆಯ ಬೇಗೆಯಿಂದ ಒಳಲುತ್ತಲಿರುವವರೂ ಕೇಳಿ ಲಾಭ ಪಡೆಯಿರಿ

'ಕಳೆದ ವೈಶಾಖ ಮಾಸದ ವರೆಗೆ ಈ ಶಿರೋವೇದನೆಯ ಬಾಧೆಯಿಂದ ಬಳಲುತ್ತಿದ್ದೆ ಆ ವೇದನೆಯ ಸಮಯದಲ್ಲಿ ಕಣ್ಣುಗಳನ್ನು ಸಹಾ ಬಿಡಲಾಗುತ್ತಿರಲಿಲ್ಲ ಕೆಲವು ಗಂಟೆಗಳ ತನಕ

ಹೀಗೆ ಬಿದ್ದಿರಬೇಕಾಗಿತ್ತು ಈ ಕ್ರುಶ್ಯನ ಲವಣವನ್ನು ಕಳೆದ 12 ವರ್ಷಗಳಿಂದ ಲೂ ಸೇವಿಸಿ ಗುಣಲಾಭವನ್ನು ಪಡೆದ ನನ್ನ ಅತ್ತಿಗೆಯು, ನನಗೂ ಅದನ್ನೆ ಸೇವಿಸಲು ಹೇಳಿದಳು. ಅಂತೆಯೇ ನಾನು ಅದನ್ನು ಸೇವಿಸಲು ಪ್ರಾರಂಭಿಸಿದೆನು ಈಗ ಕೆಲವು ತಿಂಗಳಿಂದ ತಲೆನೋವೆಂಬುದೇ ಇಲ್ಲ. ಇನ್ನದು ಬರಲಾರದೆಂದು ನನಗೆ ಖಾತ್ರಿಯಾಗಿದೆ, ಭವಿಷ್ಯದಲ್ಲಿ ಇದನ್ನೆ ಔಷಧಿಯಾಗಿ ಸೇವಿಸುವೆನು ''

Mrs .M. W.

ತಲೆನೋವಿಗೆ ಕಾರಣವು ಅಸ್ವಸ್ಥ ಹೊಟ್ಟೆ ಕರುಳಲ್ಲಿ, ಹೊರಗೆ ಬಾರದೆ ನಿಂತ ಕೊಳೆಕಶ್ಮಲಗಳೇ ಇದಕ್ಕೆಲ್ಲ ಕಾರಣ. ಅದರಿಂದ ಉಂಟಾಗುವ ವಿಷವು ರಕ್ತದಲ್ಲಿ ಸೇರಿ ನಮ್ಮ ದೇಹದಲ್ಲಿ ಹರಿವ ಶುದ್ಧರಕ್ತವನ್ನು ಹಾಳುಗೈಯ್ಯುತ್ತದೆ ಹೊಟ್ಟೆಯಲ್ಲಿ ಕಶ್ಮಲಗಳು ನಿಲ್ಲದಂತೆ ಮಾಡಿರಿ, ಅಂದರೆ ನೋವು ತನ್ನಷ್ಟಕ್ಕೆ ಗುಣವಾಗುವುದು. ಇದೇ ಕೆಲಸವನ್ನು ಕ್ರುಶ್ಯನ ಲವಣವು ಮಾಡುತ್ತದೆ ಕ್ರುಶ್ಯನ ಲವಣವು ನಿಮ್ಮ ದೇಹದೊಳಗಿನ ಎಲ್ಲಾ ಭಾಗಗಳನ್ನು ಸ್ವಚ್ಛವಾಗಿರಿಸುತ್ತದೆ ವಾತ ಮತ್ತು ಇನ್ನಿತರ ರೋಗಗಳಿಗೂ ಕ್ರುಶ್ಯನ್ ಲವಣವು ಪರಮೌಷಧಿ

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ಕ್ರುಶ್ಯನ ಲವಣವು ಮಾರಲ್ಪಡುತ್ತದೆ.

ನಿರ್ಮಲವಾದ ಆಹಾರವು ಸೌಖ್ಯದ ಹಾದಿ

ರಷ್ಯಾನ್ ಸರಕಾರದ ದಿವ್ಯ ವಿಚಾರವು

ದೇಹಾರೋಗ್ಯವನ್ನು ಅನೇಕ ವಿಧದಿಂದ ಕೆಡಿಸಿಕೊಳ್ಳಬಹುದು, ಅವುಗಳಲ್ಲಿ ಕೆಟ್ಟ ಆಹಾರಗಳ ಭುಂಜನೆಯೊಂದು ಇಂತಹ ಆಹಾರದಿಂದಲೆ ಜಗತ್ತಿನ ಹಲವೆಡೆಗಳಲ್ಲಿ ರೋಗಗಳು ಆಗಾಗ ತಲೆದೋರಿ ಜನತೆಯಲ್ಲಿ ಶಿಥಿಲತೆಯನ್ನೂ ನಿರ್ಬಲತೆಯನ್ನೂ ಹುಟ್ಟಿಸಿವೆ ಬಡತನಕ್ಕೂ ಇದೇ ಕಾರಣವೆಂದೂ ಹೇಳಬಹುದು ಆಹಾರದ ವಿಷಯ ಒಳ್ಳೇ ಜಾಗ್ರತೆ ತೆಗೆದುಕೊಂಡವರು ರಷ್ಯಾ ದೇಶದವರು. ಆದಕ್ಕಾಗಿ ಎಲ್ಲಾ ಗವರ್ನಮೆಂಟಿನವರೂ ಅವರನ್ನು ಕೊಂಡಾಡುತ್ತಿರುವರು.

ರಷ್ಯಾದೇಶದಲ್ಲಿ ಸರ್ವಸಾಧಾರಣವಾಗಿ ಎಲ್ಲರೂ ಈಗ ಹೊಟೇಲುಗಳಲ್ಲಿ ಊಟಮಾಡುತ್ತಿರುವರು. ಕಾರಣ ಈ ಹೊಟೇಲುಗಳಲ್ಲಿ ಎಲ್ಲರ ಜೀರ್ಣಕ್ಕೂ ಸರಿಯಾಗುವ ಆಹಾರಗಳನ್ನೇ ಸಿದ್ಧಪಡಿಸುವ ಕ್ರಮವಿಟ್ಟಿರುವರು. ಮನುಷ್ಯನ ದೇಹ ಪ್ರಕೃತಿಗೆ ಬೇಕಾದ ಆಹಾರ, ಅಸೌಖ್ಯವಿರುವಾಗ ತೆಗೆದುಕೊಳ್ಳಬೇಕಾದ ಆಹಾರ, ಕೂಲಿಕಾರರು ತೆಗೆದುಕೊಳ್ಳುವ ಆಹಾರ ಹೀಗೆ ತರತರದ ಆಹಾರಗಳು ಒಂದೇ ಬೆಲೆಗೆ ಮಾರಲ್ಪಡುವುವು. ಪ್ರತಿ ಒಂದು ಹೊಟೇಲಿನಲ್ಲೂ ಒಬ್ಬ ವೈದ್ಯನಿರುತ್ತಾನೆ ಅವನ ಕೆಲಸವೆಂದರೆ ಊಟಮಾಡಲು ಬಂದವನನ್ನು ಪರೀಕ್ಷಿಸಿ ಅವನಿಂದ ಜೀರ್ಣಿಸಲು ಆಗುವಂತಹ ಆಹಾರಗಳನ್ನು ನೇಮಿಸುವುದು. ಈ ಹೊಟೇಲುಗಳಿಗೆಲ್ಲಾ ಇಂತಹ ಪ್ರತ್ಯಪ್ರತ್ಯೇಕ ಆಹಾರಗಳನ್ನು ಸರ್ಬರಾಯಿಸುವರೇ ಬೇರೆ. ಬೇರೆ ಗೃಹವಿದೆ ಪ್ರತಿ ಹೊಟೇಲುಗಳಿಗೂ ಇಲ್ಲಿಂದಲೆ ಊಟಗಳೂ ತಿಂಡಿ ತೀರ್ಥಗಳೂ ರವಾನಿಸಲ್ಪಡುತ್ತವೆ. ಈ ಆಹಾರಗಳನ್ನು ತಯಾರಿಸುತ್ತಿರುವಾಗ ಡಾಕ್ಟರರು ಅದನ್ನೆಲ್ಲಾ ಪರೀಕ್ಷಿಸಲಿದೆ. ಸೋಶಿಯಲಿಸ್ಟ ಲೀಡರರಾದ ಶ್ರೀ। ಮುಸಾಲಿನಿಯವರೂ ರಷ್ಯಾ ದೇಶದವರ ಈ ವಿಚಾರವಿಗಾಗಿ ತುಂಬಾ ಅಭಿವಂದನೆಗಳನ್ನು ಅರ್ಪಿಸಿದ್ದಾರೆ ಅಸೌಖ್ಯದ ವರೆಗೆ ಬೇರೆ ಆಹಾರ: ಆದರೆ ಇವುಗಳಬೆಲೆಯು ಮಾತ್ರ ಒಂದೇ.

ಶ್ರೀ ಸುಭಾಷ್ಚಂದ್ರ ಬೋಸರಿಗೆ ಜೈಲಿನಿಂದ ಬಿಡುಗಡೆ!

ಸಂಸ್ಥಾನದ ಪ್ರಜೆಗಳಿಗೆ ಕಾಂಗ್ರೆಸ್ ಸಹಾಯ ಮಾಡಬೇಕು.

ಪಂಡಿತ ಜವಾಹರಲಾಲರ ಭಾಷಣ.



ಸಂಸ್ಥಾನ ಪ್ರಜೆಗಳ ಸಮ್ಮೇಳನದ ಆಶ್ರಯದಲ್ಲಿ ಈ ದಿನ ಮೆ. ತಾ ೧೬ರಲ್ಲಿ ಪಂಡಿತ ಜವಾಹರಲಾಲ ನೆಹರೂರವರು ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿದರು. ಮುಂಬಾಯಿಯ ಮೇಯರರಾದ ಮಿ। ಜಮ್ನಾದಾಸ್ ಮೆಹತಾರವರು ಅಧ್ಯಕ್ಷತೆಯನ್ನು ವಹಿಸಿದ್ದರು.

ಪಂಡಿತ ಜವಹರಲಾಲರು ಮಾತನಾಡುತ್ತಾ, ಹಿಂದೂದೇಶವನ್ನು ಬ್ರಿಟಿಷ್ ಇಂಡಿಯಾ ಮತ್ತು ಇಂಡಿಯನ್ ಇಂಡಿಯಾ (ದೇಶೀಯ ಸಂಸ್ಥಾನಗಳು) ಎಂಬುದಾಗಿ ಶಾಶ್ವತವಾಗಿ ವಿಭಾಗಿಸುವುದಕ್ಕಾಗುವುದಿಲ್ಲ. ಇದು ಬರೇ ಕೃತಕವಾದ ವಿಭಾಗ. ಕಾಂಗ್ರೆಸು ಸ್ವಾತಂತ್ರ್ಯಕ್ಕಾಗಿ ಹೊಡೆದಾಡುತ್ತಿರುವುದು ಇಡೀ ದೇಶಕ್ಕಾಗಿಯೇ; ಅಂದಮೇಲೆ, ಸಂಸ್ಥಾನಗಳಲ್ಲಿ ನಿರಂಕುಶಪ್ರಭುತ್ವವು ಅವನ್ನು ಕಾಂಗ್ರೆಸು ಸಹಿಸಲಾರದು. ಸಂಸ್ಥಾನಗಳಲ್ಲಿ ನಿರಂಕುಶ ಪ್ರಭುತ್ವವು ಬರಬೇಕಾದರೆ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಸಂಸ್ಥಾನದ ಪ್ರಜೆಗಳೇ ಅದರ ಜವಾಬ್ದಾರಿ ಅದಲ್ಲ, ಸಂಸ್ಥಾನ, ಪ್ರಜೆಗಳ ಜವಾಬ್ದಾರೀ ಎಂದು ಹೇಳಿಬಿಟ್ಟು ಕಾಂಗ್ರೆಸು ಸುಮ್ಮನಿರುವುದಕ್ಕೆ ಆಗುವುದಿಲ್ಲ. ಕಾಂಗ್ರೆಸು ಸಂಸ್ಥಾನಪ್ರಜೆಗಳಿಗೆ ಸಹಾಯ ಮಾಡಬೇಕೆಂದು ಹೇಳುವ ಹಾಗಿಲ್ಲ. ಬ್ರಿಟಿಷ್ ಇಂಡಿಯಾದ ಒಂದು ಪ್ರಾಂತ್ಯದಲ್ಲಿ ಯಾವುದಾದರೂ ಕದನ ನಡೆದರೆ ಅಗ್ಗ ಆ ಪ್ರಾಂತ್ಯದ ಜನರೇ ಅದರ ಹೊರೆಯನ್ನು ಹೊರಬೇಕು. ಅದೇ ರೀತಿಯಲ್ಲಿಯೇ ಸಂಸ್ಥಾನಗಳಲ್ಲಿ ನಡೆಸಬೇಕಾದರೆ ಕದನಕ್ಕೆ ಸಂಸ್ಥಾನಪ್ರಜೆಗಳು ಅವರ ಹೊರೆಯನ್ನು ಹೊರಬೇಕು. ಇಷ್ಟೇ ಅದರ ತತ್ವ. ಕಾನ್ಸ್ಟಿಟ್ಯೂಯೆಂಟ್ ಅಸೆಂಬ್ಲಿಯು ಸೇರಿಸಲ್ಪಟ್ಟದ್ದಾಗ ಸಂಸ್ಥಾನ ಪ್ರಜೆಗಳಿಗೆ ಮೂಲಭೂತ ಹಕ್ಕುಗಳನ್ನು ಕೊಡುವರೆಂಬುದಾಗಿ ನಾನು ಭರವಸೆಯೀಯುತ್ತೇನೆ"— ಎಂಬುದಾಗಿ ಹೇಳಿದರು.

ರಾಷ್ಟ್ರಧ್ವಜವನ್ನು ರಕ್ಷಿಸುವುದೇ ನಮ್ಮ ಕೆಲಸ

ರಾಷ್ಟ್ರಧ್ವಜಾರೋಹಣ ಸಮಾರಂಭ.

ಪಂಡಿತ ಜವಾಹರಲಾಲರು ಕಾಂಗ್ರೆಸ್ ಭವನದಲ್ಲಿ ರಾಷ್ಟ್ರೀಯ ಧ್ವಜಾರೋಹಣ ಮಹೋತ್ಸವವನ್ನು ಮಾಡಿದರು. ಈ ಸಂದರ್ಭದಲ್ಲಿ ಅವರು ಸ್ವಯಂಸೇವಕರಿಗೂ ಪ್ರೇಕ್ಷಕರಿಗೂ ರಾಷ್ಟ್ರಧ್ವಜದ ಅಂಕಿತವನ್ನು ಕುರಿತು ಹೇಳುತ್ತ, ಇದು ೧೫ ವರ್ಷಗಳಿಂದ ಬಹಳ ಮಹತ್ವ ಪೂರಿತವಾದುದಾಗಿದೆಯೆಂದರು. ಅದನ್ನು ರಕ್ಷಿಸುವುದೇ ನಮ್ಮ ಕೆಲಸ. ಅದನ್ನು ಮೇಲೆ ಹಾರಿಸುತ್ತಲೇ ಇರಬೇಕೆಂದರು.

ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಶ್ರೀಯುತ ನೆಹರುಗಳು ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿದರು. ತಾವು ತಿಳಿದಿರುವ ಸೋಶಿಯಲಿಸಂ ತತ್ವವನ್ನೂ, ಅದನ್ನು ಇಂಡಿಯಾದ ಸ್ಥಿತಿಗೆ ಹೇಗೆ ಅನ್ವಯಿಸಬೇಕೆಂಬ ವಿಷಯವನ್ನೂ ಅವರು ವಿವರಿಸಿದರು.

ತಾ. ೧೬ರಲ್ಲಿ, ಸಂಜೆ ಪಂ। ಜವಾಹರಲಾಲನೆಹರೂರವರು ಪ್ರಮುಖ ಪೌರರುಗಳನ್ನೂ ವಾಯಿದುಗಳನ್ನೂ ಸಂದರ್ಶಿಸಿ ಸಿವಿಲ್ ಲಿಬರ್ಟೀಸ್ (ವ್ಯಕ್ತಿ ಸ್ವಾತಂತ್ರ್ಯ) ಯೂನಿಯನ್ನನ್ನು ಮಾಡಲು ಯತ್ನಿಸುವರು.

ಕಾಂ। ಕೆಲಸಗಾರರೊಡನೆ ಜವಾಹರಲಾಲರ ಮಾತುಕತೆಗಳು.

ಮುಂಬಾಯಿಯ ಕಾಂಗ್ರೆಸ್ ಕೆಲಸಗಾರರೊಡನೆ ಶ್ರೀ ಜವಾಹರಲಾಲರು ಕಾಂಗ್ರೆಸ್ಸಿನ ಎಲ್ಲಾ ಕಾರ್ಯಕ್ರಮಗಳನ್ನು ಕುರಿತು ಚರ್ಚಿಸಿದರು. ಅಖಿಲ ಭಾರತ ಗ್ರಾಮ ಸಂಘಟನಾ ಸಂಘ, ಕಾಂಗ್ರೆಸ್ ಸದಸ್ಯತ್ವವನ್ನೂ ಜಾಸ್ತಿ ಮಾಡುವುದು, ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಸಂಪೂರ್ಣ ಜಯವಾಗುವಂತೆ ಮಾಡಬೇಕಾದ ಏರ್ಪಾಟು, ಹರಿಜನ ಚಳವಳಿಕ್ಕೆ ಬೆಂಬಲ, ಪ್ರಜಾಸಮುದಾಯದಲ್ಲಿ ಹೆಚ್ಚು ಸಂಬಂಧವನ್ನು ಏರ್ಪಡಿಸುವುದು, ರೈತಾಪಿ ಜನರ ಸಮಸ್ಯೆ, ಯುದ್ಧ ನಿರೋಧ ಪ್ರಚಾರ ಇವುಗಳನ್ನೆಲ್ಲಾ ಚರ್ಚಿಸಿದರು.

ಮಹಮ್ಮದಿಯರಿಗೆ ಜವಾಹರಲಾಲರ ಬುದ್ಧಿವಾದ.

ಮುಂಬಾಯಿಯಲ್ಲಿ ನಡೆದ ಮುಸ್ಲಿಮರ ಸಭೆಯಲ್ಲಿ ಶ್ರೀ। ಜವಾಹರಲಾಲರು ಭಾಷಣಮಾಡುತ್ತಾ, ಹಿಂದೂಗಳೂ ಮುಸ್ಲಿಮರೂ ಅನಾವಶ್ಯಕವಾದ ಕಲಹಗಳನ್ನು ಬಿಟ್ಟುಬಿಡಬೇಕೆಂದೂ, ರಾಜಕೀಯ ಸ್ವಾತಂತ್ರ್ಯ ಸಾಧನೆಗಾಗಿ ಯತ್ನಿಸಬೇಕೆಂದೂ ಬುದ್ಧಿವಾದವನ್ನು ಹೇಳಿದರು.

'ಇನ್ನೊಬ್ಬನಾಗಿದ್ದರೆ ರಾಜಿನಾಮೆ ಕೊಡುತ್ತಿದ್ದನು'

"ಅಧ್ಯಕ್ಷನಾದ ನನಗೆ ಲಕ್ನೋದಲ್ಲಿ ವಿರೋಧವು ಪ್ರಬಲವಾಗಿತ್ತು. ನನ್ನ ಅಭೀಷ್ಟಗಳಾವುವೂ ನೆರವೇರಲಿಲ್ಲ. ಮತ್ತಾರಾದರೂ ನನ್ನ ಸ್ಥಾನದಲ್ಲಿರುತ್ತಿದ್ದರೆ ಅವರು ಬಹುಶಃ ರಾಜಿನಾಮೆ ಕೊಡುತ್ತಿದ್ದರು. ಆದರೆ, ನಾನು ನನ್ನ ಕೈಲಾದಷ್ಟು ಕೆಲಸಮಾಡಲು ಆಲೋಚಿಸಿದ್ದೇನೆ" ಎಂದು ಶ್ರೀ। ಜವಾಹರಲಾಲ ನೆಹರುಗಳು ಮುಂಬಾಯಿಯಲ್ಲಿ ಒಂದು ಭಾಷಣದಲ್ಲಿ ಹೇಳಿದರು.

ವಿಶೇಷ ಸೂಚನೆ

ಚಕ್ರಬಂಧ ಒಗಟು ಸಂಖ್ಯೆ ೨ರ ಉತ್ತರವನ್ನು ಸ್ವೀಕರಿಸುವ ಕೊನೆಯ ದಿನವನ್ನು ಜೂನ್ ತಾ. ೨೫ಕ್ಕೆ ಮುಂದರಿಸಲಾಗಿದೆ.

ಸಂಚಾಲಕ, "ಸ್ವಧರ್ಮರಂಗ"

ಟ್ರೇಡ್ ಯೂನಿಯನ್ ಕಾ ಅಧಿವೇಶನ

ಇದೇ ತಾ. ೧೭ಕ್ಕೆ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಅಧಿವೇಶನವು ಮುಂಬಾಯಿಯಲ್ಲಿ ಶ್ರೀ ಜವಾಹರಲಾಲರು ಇದ್ದು ಜರಗಿತು. ಮಜೂರರ ಅಭ್ಯುದಯಕ್ಕೆ ಸಂಬಂಧಪಟ್ಟ ಅನೇಕ ಠರಾವುಗಳ ಮಂಜೂರಾದುವು.

ಪಂ। ಜವಾಹರಲಾಲರು ಈ ಅಧಿವೇಶನದಲ್ಲಿ ಹಾಜರಿದ್ದು ನವರಾಜಶಾಸನವನ್ನು ಖಂಡಿಸುವ ಠರಾವಿಗೆ ಬೆಂಬಲವಿತ್ತು ಉತ್ಸಾಹದ ಭಾಷಣವಿತ್ತರು.

ಭಾರತ ಮಜೂರರ ಸಂಘಗಳಲ್ಲಿ ಮುಖ್ಯವಾದುವುಗಳು ಎರಡು. ಅಖಿಲಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ, ಅಖಿಲಭಾರತ ಟ್ರೇಡ್ ಯೂನಿಯನ್ ಫೆಡರೇಶನ್. ಇವೆರಡನ್ನು ಒಟ್ಟು ಕೂಡಿಸಿ, ಟ್ರೇಡ್ ಯೂನಿಯನ್‌ನಲ್ಲಿ ಐಕ್ಯವುಂಟಾಗುವಂತೆ, ಶ್ರೀ ಗಿರಿಯವರು ಒಂದು ಠರಾವು ತಂದಿರುವರು.

ಶ್ರೀ। ಜವಹರಲಾಲರೂ, ಮುಂಬಾಯಿ ವರ್ತಕಮಂಡಳವೂ

ಮುಂಬಾಯಿಯಲ್ಲಿ ಶ್ರೀ। ಜವಾಹರಲಾಲರು ಒಂದು ವರ್ತಕರ ಸಭೆಯಲ್ಲಿ ಭಾಷಣಮಾಡಿದರ. ಶ್ರೀ। ನೆಹರುಗಳವರು ಸಮತವಾದ ಸೂತ್ರಗಳನ್ನು ಟೀಕಿಸಿ, ಮುಂಬಾಯಿ ವರ್ತಕಸಂಘದ ಶ್ರೀ ಹಿರಾಚಂದರೆಂಬವರು ಭಾರಿ ವಿಮರ್ಶೆ ಮಾಡಿದ್ದರು. ಭಾರಿ ಕೋಲಾಹಲ ಎಬ್ಬಿಸಿದ್ದರು. ಇವರನ್ನು ಪ್ರತಿಭಟಿಸಿ ಶ್ರೀ। ಜವಾಹರಲಾಲರು ಹೀಗೆಂದರು—

ಶ್ರೀ। ಸರಾಫರು, ಅವರ ಒಡನಾಡಿಗಳು ಒಂದು ಕಡೆ ಕಾಂಗ್ರೆಸ್ಸನ್ನೂ, ಇನ್ನೊಂದುಕಡೆ ಸರಕಾರವನ್ನೂ ಸಂತೃಪ್ತಿಗೊಳಿಸುವ ಬದಲು ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ವಿಷಯದಲ್ಲಿ ತಮ್ಮ ಅಭಿಪ್ರಾಯವೇನೆಂದು ಖಚಿತವಾಗಿ ತಿಳಿಸಲಿ. ನೆಗ್ಗ ಸೌಮ್ಯವಾದವು ತಪ್ಪೆಂದು ಜನರಿಗೆ ಮನದಟ್ಟುಮಾಡಿಕೊಡಲಿ. ಎಲ್ಲೋ ಅಲ್ಪಸ್ವಲ್ಪ ಮಂದಿ ದೊಡ್ಡ ಬಂಡವಾಳಸ್ಥರು ನನ್ನ ಭಾಷಣಕ್ಕೆ ವಿರೋಧವನ್ನು ತೋರಪಡಿಸಿದ್ದಾರೆ. ಭಾರತ ವರ್ತಕರ ನೇಕರು ನನ್ನ ಅಭಿಪ್ರಾಯಗಳನ್ನು ಅನುಮೋದಿಸಿದ್ದಾರೆ".

ಅರ್ಕಾಟದಲ್ಲಿ ಕೊಲೆ.

ಇಲ್ಲಿಯ ಶಾಲೆಯ ಅಧ್ಯಾಪಕರೊಬ್ಬರು ಶಾಲೆಗೆ ಬರುತ್ತಿದ್ದ ಎಂಟು ವರ್ಷದ ಜೈನಬಾಲಕನೊಬ್ಬನ ಕತ್ತು ಹಿಸುಕಿ ಕೊಂದು, ಕುತ್ತಿಗೆಯಲ್ಲಿದ್ದ ೧೫ ಪವನು ಬೆಲೆ ಬಾಳುವ ಅಲಂಕಾರವನ್ನು ಕದ್ದಿರುವರಾಗಿ ತಿಳಿದು ಬರುತ್ತದೆ. ಕೊಲೆಮಾಡಲ್ಪಟ್ಟ ಬಾಲಕನು ಶ್ರೀಮಂತ ಜೈನಮನೆತನದವನಾಗಿದ್ದು, ಶಾಲಾ ಮೆನೇಜರರ ಹತ್ತಿರದ ಸಂಬಂಧಿಕನಾಗಿಯೂ, ಹೇರಳ ಆಸ್ತಿಯ ಹಕ್ಕುದಾರನಾಗಿರುವುದಾಗಿದ್ದನೆಂದೂ, ಈ ಹೇಯ ಕೆಲಸವನ್ನು ಮಾಡಿದ ಉಪಾಧ್ಯಾಯರು ಶ್ರೀಮಂತ ಬಂಟರ ಮನೆತನದವನೊಬ್ಬನಾಗಿರುವನೆಂದೂ ತಿಳಿಯಲಾಗಿದೆ. ಪಿಕಲಾಟದಲ್ಲಿ ಸಿಕ್ಕಿದ ಉಪಾಧ್ಯಾಯರು ತನ್ನ ತಪ್ಪನ್ನೊಪ್ಪಿರುವುದು ಸ್ಪಷ್ಟ.

ಉಡುಪಿ.

ಮದ್ರಾಸ್ ಎಸೆಂಬ್ಲಿಗೆ ಹೊಸ ಚುನಾವಣೆಯ ಪಟ್ಟಿಯನ್ನು ತಯಾರಿಸುವ ಬಗ್ಗೆ ಮತದಾರರಾಗಲು ಅರ್ಹರಿರುವವರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ದಾಖಲುಮಾಡಿಸುವ ವ್ಯಾಯಿದೆಯನ್ನು ಮದ್ರಾಸು ಸರಕಾರದವರು ಇದೇ ತಾ ೩೧ರಿಂದ ಜೂನ್ ತಿಂಗಳ ತಾರೀಕು ೨೦ರ ವರೆಗೆ ಮುಂದರಿಸಿಯದೆಯಷ್ಟೆ! ಸಂಬಂಧಪಟ್ಟ ಆಫೀಸರುಗಳಿ ಎಸೆಂಬ್ಲಿಗೆ ನಿಲ್ಲತಕ್ಕ ಉಮೇದ್ವಾರರಾಗಲಿ ರೈತರ ಸಂಘದವರಾಗಲಿ ಕಾಂಗ್ರೆಸ್ ಕಮ್ಮಿಟಿಯವರಾಗಲಿ ಈ ಸಂಗತಿಯನ್ನು ಜಿಲ್ಲೆಯೊಳಗೆಲ್ಲಾ ಬಹಿರಂಗವಾಗಿ ತಿಳಿಯಪಡಿಸುವ ಹಾಗೂ ಅರ್ಹರಿದ್ದವರನ್ನೆಲ್ಲಾ ಆಯಾಯ ಕಡೆಗಳಲ್ಲಿ ಸರಕಾರದಿಂದ ನೇಮಕವಾದೆಡೆಗಳಲ್ಲಿ ಸದರಿ ಆಫೀಸರರಲ್ಲಿ ಹಾಜರಾಗಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳು ದಾಖಲಾಗುವಂತೆ ಅರ್ಜಿಗಳನ್ನೂ ಬೇರೆ ವಿವೇಚನೆಯನ್ನೂ ಮಾಡಬೇಕಾಗಿರುತ್ತದೆ. ಅಲ್ಲದೆ ಇಂತಹ ಅರ್ಹತೆಯುಳ್ಳವನ್ನು ಆದಷ್ಟು ಜಟ್ಟಿಗಿ ಬರಮಾಡಿ ಇವರಿಗೆ ಸದರಿ ಆಫೀಸುಗಳಲ್ಲಿ ಮರ್ಯಾದೆಯಿಂದ ಕಂಡು ಮತದಾರರೆಂದರೆ ಅಂಟಾ ಗೌರವಾನ್ವಿತರೆಂದು ಭಾವಿಸಿ ಇವರು ನಿರೀಕ್ಷಿಸುವ ಕಾರ್ಯಗಳಲ್ಲಿ ಸಹಕಾರ ಸಹಾಯ ಭೂತಿಗಳನ್ನು ತೋರಿಸುವಂತೆ ಮೇಲಾಧಿಕಾರಿಗಳೂ ಸೂಚನೆಗಳನ್ನು ದಯಪಾಲಿಸಿದರಾಗುತ್ತಿತ್ತು. ಮದ್ರಾಸಿನಲ್ಲಿ ಕಾಂಗ್ರೆಸಿನವರು ಕೈಕೊಂಡಿರುವಂತೆ ನಮ್ಮ ಜಿಲ್ಲೆಯ ಕಾಂಗ್ರೆಸ್ ಕಮ್ಮಿಟಿಯವರಾದರೂ ಇಂತಹ ವ್ಯವಸ್ಥೆಯನ್ನು ಕೂಡಲೇ ನಡಿಸಿದರೆ ತಕ್ಕದು.

ಬೋರ್ಡ್ ಆಫೀಸಿನ ಮುಂದಿನ ವಾಯವ್ಯ ಮೂಲೆಯ ಆರು ಸೆಂಟ್ಸ್ ಸ್ಥಳ ಖಾಲಿ ಜಾಗವನ್ನು ಬಹಿರಂಗವಾಗಿ ಏಲಂ ಹಾಕುವ ಇರಾದೆಯಿದೆಯೆಂದು ತಿಳಿದುಬರುತ್ತದೆ. ರಸ್ತೆಗಳ ಸಂದಿನಲ್ಲಿನ ಈ ಜಾಗದಲ್ಲಿ ಖಾಸಗಿ ಅಥವಾ ಇತರ ಕಟ್ಟಡಗಳು ಒಂದಲ್ಲಿ ಕಚೇರಿ ಕಟ್ಟಡಕ್ಕೆ ಅಡ್ಡವಾಗುವುದಲ್ಲದೆ, ವಿಶಾಲ ಮೈದಾನದ ಅಂದವೂ ಕೆಟ್ಟು ಎಷ್ಟೋ ಅಡ್ಡಿಗಳಾಗುವುದರಲ್ಲಿ ಸಂದೇಹವಿಲ್ಲ. ಸರಕಾರದವರು ಇದರಿಂದ ಸ್ವಲ್ಪ ಜಾಗವನ್ನು ರಸ್ತೆ ಅಗಲಮಾಡುವುದಕ್ಕೂ ಉಳಿದುದನ್ನು ವಿಹಾರ ತೋಟವನ್ನು ಮಾಡುವುದಕ್ಕೂ ನೂತನವಾಗಿ ಸ್ಥಾಪಿತವಾದ ಮ್ಯುನಿಸಿಪಾಲಿಟಿಗೆ ಕೊಟ್ಟುಬಿಟ್ಟರೆ ಸಾರ್ವಜನೋಪಯುಕ್ತವೂ ಕಚೇರಿ ಮತ್ತೂ ಮಹಾರಕ್ಕಿದು ಅಂದವೂ ಆಗಿರುವುದಷ್ಟೆ! ಆದ್ದರಿಂದ ಸರಕಾರದವರು ಸದ್ರಿ ಜಾಗವನ್ನು ಏಲಂ ಮಾಡುವ ಇರಾದೆಯನ್ನು ರದ್ದುಮಾಡಲೆಂದೂ ಸಾಧ್ಯವಿದ್ದಲ್ಲಿ ಮುನಿಸಿಪಾಲಿಟಿಗೆ ಕೊಡಿಸಬೇಕೆಂದೂ ಹಾರೈಕೆ.

ಕಾಂಗ್ರೆಸಿನವರು ತಮ್ಮ ಉಮೇದ್ವಾರಿಕೆಯನ್ನು ಸ್ವೀಕರಿಸುವುದಾದರೆ ಕುಂದಾಪುರ ಡಿವಿಜನಿನಿಂದ ಮದ್ರಾಸು ಎಸೆಂಬ್ಲಿಗೆ ತಾನೊಬ್ಬ ಉಮೇದ್ವಾರನಿರುವೆನೆಂದು ಶ್ರೀ। ಕಾರ್ಕಳ ನಾಗಪ್ಪ ಹೆಗ್ಡೆರು ತಿಳಿಸುತ್ತಾರೆ. ಇವರು ಕಾರ್ಕಳ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಹಲವು ವರ್ಷಗಳಿಂದೂ ಕಾಂಗ್ರೆಸ್ ಅಭಿಮಾನಿಗಳೂ ಖಾದಿಧಾರಿಗಳೂ ಆಗಿರುವರಲ್ಲದೆ ಹಿಂದೊಮ್ಮೆ ಮದ್ರಾಸು ಕೌನ್ಸಿಲಿಗೆ ಆರಿಸಲ್ಪಟ್ಟದ್ದಾಗ ಕಾಂಗ್ರೆಸುಪಾರ್ಟಿಯ ಶಿಸ್ತಿನಂತೆ ವರ್ತಿಸಿದವರೂ ಆಗಿರುತ್ತಾರೆ.

ನಿಮಗೆ ಬೇಕಾಗಿರುವ

ವಜ್ರಗಳು

ಸಾವಕಾರ ಶ್ರೀನಿವಾಸ ರಂಗ ಪೈ,
ಸಾವಕಾರ ಮಹಾಲ್,
ರಥಬೀದಿ, ಮಂಗಳೂರು.
ಇವರಲ್ಲಿ ದೊರೆಯುತ್ತವೆ.

ತಮ್ಮನ ಮನೆಯಲ್ಲಿ ನಿರ್ಬಂಧ

ಅವರ ಶಕ್ತಿಯು ಬಹಳ ಇಳಿದಿರುತ್ತದೆ

ಶ್ರೀ। ಸುಭಾಷ್‌ಚಂದ್ರ ಬೋಸರನ್ನು ಮೊನ್ನೆಯ ದಿವಸ ಲಕ್ನೋ ಮಾರ್ಗವಾಗಿ ಕರ್ಸಿಯಾಂಗ್ ಎಂಬಲ್ಲಿಗೆ ಸಾಗಿಸಲಾಯಿತೆಂದೂ ಅಲ್ಲಿ ಇವರನ್ನು ಅವರ ಸಹೋದರರಾದ ಶ್ರೀ। ಶರಚ್ಚಂದ್ರ ಬೋಸರ ಮನೆಯಲ್ಲಿರಿಸಲಾಗುವುದೆಂದೂ ಅಮೃತಬಜಾರ ಪತ್ರಿಕೆಯು ತಿಳಿಸುತ್ತದೆ. ಶ್ರೀ। ಬೋಸರ ಸಹೋದರರೂ ಕೂಡಾ ಈಗ್ಗೆ ಕೆಲವು ದಿವಸಗಳ ವರೆಗೆ ಬಂಧನದಲ್ಲಿದ್ದು ಬಂದಿರುತ್ತಾರೆ. ಸುಭಾಷ್‌ಚಂದ್ರ ಬೋಸರನ್ನು ಕರೆದೊಯ್ಯುತ್ತಿರುವ ಸಮಾಚಾರವು ಲಕ್ನೋಕ್ಕೆ ತಿಳಿದು ಬಂದ ಕೂಡಲೇ ಶ್ರೀ। ಮೋಹನಲಾಲ್ ಸಕ್ಸೇನ ಎಂ ಎಲ್ ಎ ಯವರೇ ಮೊದಲಾದ ಅನೇಕ ಮಂದಿ ಕಾಂಗ್ರೆಸ್ ಸದಸ್ಯರು ಛಾರ್ಭಾಗ್ ರೈಲ್ವೆ ಸ್ಟೇಷನ್ನಿಗೆ ಬಂದರು. ಆದರೆ ಅವರನ್ನು ಕಾಣಲಾಗಲಿಲ್ಲ. ಆ ಮೇಲೆ ಸಿಟಿ ಸ್ಟೇಷನಿನಲ್ಲಿ ಶ್ರೀ। ಬೋಸರು ಒಂದು ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿ ಕುಳಿತಿರುವುದು ಕಂಡು ಬಂತು. ಇವರು ಬಿ ಅಂಡ್ ಎನ್ ಡಬ್ಲ್ಯು ರೈಲ್ವೆಯ ಅಪರ್ ಗಾನ್ ಪ್ಯಾಸೆಂಜರ್ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದರು. ಅವರನ್ನು ಬಂಗಾಳ ಪೋಲೀಸಿನವರು ಕರೆದೊಯ್ಯುತ್ತಿದ್ದರು. ಇವರು ಬಹಳ ಕ್ಷೀಣವಾಗಿ ಹೋಗಿರುತ್ತಾರೆಂದು ಕಂಡುಬಂದಿದೆ.

'ಮತಭೇದ ಪ್ರಶ್ನೆಯಿಂದ ದೂರವಿರಿ'

ಕಾಂಗ್ರೆಸಿನಲ್ಲಿ ಒಡಕು ಹುಟ್ಟಿಸಬೇಡಿ

ಮುಂಬಾಯಿ ಶ್ರೀ। ಜವಹರಲಾಲರ ಭಾಷಣ

ಶ್ರೀ। ಜವಹರಲಾಲರು ಮುಂಬಾಯಿಯಲ್ಲಿ ಶ್ರೀಮತಿ ಸರೋಜಿನಿದೇವಿಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯೊಂದರಲ್ಲಿ ಭಾಷಣ ಮಾಡಿದರು. ಹಿಂದೂ ಮುಸ್ಲಿಮ ಐಕ್ಯಮತ್ಯವು ಈಗ ಅತ್ಯವಶ್ಯಕವಾಗಿ ಆಗಬೇಕಾಗಿದೆಯೆಂದರು. ಸಣ್ಣ ಸಣ್ಣ ವಿಷಯಗಳಿಗೋಸ್ಕರ ಒಬ್ಬರನ್ನೊಬ್ಬರು ಕಾದಾಡುವುದು ಹಿತಕರವಲ್ಲವೆಂದು ಹಿಂದೂಗಳಲ್ಲಿಯೂ ಮುಸ್ಲಿಮರಲ್ಲಿಯೂ ಬೇಡಿಕೊಂಡರು. ಮುಖ್ಯವಾಗಿ ಈಗಿನ ಕೋಮುತೆಯು ಆರ್ಥಿಕ ಸಂಬಂಧವಾದುದೆಂದೂ ಇದು ಸಮಾಜಿಕವಾದಲ್ಲಿ ಕೋಮುವಾರು ಸಮಸ್ಯೆಯು ಪರಿಹಾರವಾಗುವುದೆಂದೂ ಹೇಳಿದರು.

ಅಧಿಕಾರ ಸ್ವೀಕರಣ ವಿಚಾರದಲ್ಲಿ ಕಾಂಗ್ರೆಸು ಒಪ್ಪಿಗೆಯ ತೀರ್ಮಾನವಿತ್ತರೆ ಸಮತಾವಾದಿಗಳು ಏನುಮಾಡಬೇಕೆಂದು ಕೇಳಿದ ಪ್ರಶ್ನೆಗೆ ಪಂಡಿತರು ಕಾಂಗ್ರೆಸ್ಸಿನಲ್ಲಿ ಒಡಕನ್ನು ಹುಟ್ಟಿಸಬೇಡಿ. ಒಂದು ವೇಳೆ ಅಧಿಕಾರ ಸ್ವೀಕಾರಕ್ಕೆ ಕಾಂಗ್ರೆಸ್ಸು ಪಕ್ಷಪಾತ ತೋರಿ ಒಪ್ಪಿಕೊಂಡರೂ ಸಮತಾವಾದಿಗಳು ತಮ್ಮ ಕಾಂಗ್ರೆಸ್ ಕಾರ್ಯಕ್ರಮವನ್ನು ನಿಲ್ಲದೆ ಮುಂದುವರಿಸಬೇಕು ಎಂದರು.

ನೀರಿನ ಕೊಳವೆಗಾಗಿ ಕಲಹ

ಶಾಹಿದ್ ಘಂಜಿನ ಹತ್ತಿರ ಸಿಕ್ಖ ಮುಸ್ಲಿಮ ಗಲಭೆ

ಶಾಹಿದ್ ಘಂಜಿನ ಕೇಂದ್ರದಲ್ಲಿರುವ ಒಂದು ನೀರಿನ ಕೊಳವೆಯ ಉಪಯೋಗದ ಕುರಿತು ಕೆಲಮಂದಿ ಸಿಕ್ಖರಿಗೂ ಮುಸ್ಲಿಮರಿಗೂ ಕಲಹವುಂಟಾಗಿ ಗಲಭೆಯುಂಟಾಯಿತು. ಆದರೆ ಈ ಗಲಭೆಗೆ ಮತವಿಚಾರ ಸಂಬಂಧವಿರುವುದಿಲ್ಲ. ಅನೇಕ ಮುಸ್ಲಿಮರಿಗೂ ಸಿಕ್ಖರಿಗೂ ಗಾಯಗಳಾಗಿವೆ. ಗಲಭೆಯು ಶಾಹಿದ್ ಘಂಜಿನ ಹತ್ತಿರ ನಡೆದುದರಿಂದ ಪೋಲೀಸರು ಬಹಳ ಬಂದೋಬಸ್ತು ವಿಲೆವಾರಿಯನ್ನು ನಡೆಯಿಸಿದರು. ಮೂರು ಮಂದಿ ಸಿಕ್ಖರನ್ನು ಕೈದುಮಾಡಲಾಗಿದೆ.

ಇಟಲಿಯಾನರ ಭಯಂಕರ ಕೃತ್ಯ

ದರೋಡೆಕಾರರಿಗೆ ಶಿಕ್ಷೆ!

ಅಡಿಸ್ ಅಬಾಬದಲ್ಲಿ ಉಂಟಾದ ಗಲಭೆ ದರೋಡೆ ಇತ್ಯಾದಿಗಳನ್ನು ನಿಲ್ಲಿಸುವ ಉದ್ದೇಶದಿಂದ ಅದಕ್ಕೆ ಕಾರಣರಾದ ಅಪಾದಿತರನ್ನು ೪) ಯಾ ೪೦ರ ಪಂಗಡಗಳಾಗಿ ಮಾಡಿ ಮೆಶೀನು ಗನ್ನುಗಳಿಂದ ಕೊಲೆಮಾಡಿದರು ಮತ್ತು ಅಲ್ಲೇ ಮಾರ್ಗದ ಬದಿಯಲ್ಲಿ ಹೂಳಿಡಲ್ಪಟ್ಟರು. ಅನೇಕ ಹಬಸಿ ನಾಯಕರು ಇಟಲಿಯಾನರಿಗೆ ಶರಣಾಗತರಾಗಿರುವರು. ಎಥಿಯೋಪಿಯಾದಲ್ಲಿರುವ ಪಾಶ್ಚಾತ್ಯರಲ್ಲಿ 300 ಮಂದಿಗಳನ್ನು ಇಟಲಿಯಾನರು ಗಡಿಪಾರು ಮಾಡುವರಂತೆ.

ಬೊಲಿವಿಯಾದಲ್ಲಿ ಗಲಭೆ

ಬೊಲಿವಿಯಾದ ಸಂಗ್ರಾಮಿಕರು ಅಲ್ಲಿಯ ಈಗಿನ ಸರಕಾರವನ್ನು ಸಂಪೂರ್ಣ ನಿರ್ನಾಮಮಾಡಿ, ತಾವೇ ಅಧಿಕಾರಕ್ಕೆ ಬಂದಿರುವರು. ಅನೇಕರ ಕೊಲೆಯಾಗಿರುತ್ತದೆ. ನವಸರಕಾರವು ಸಮತಾವಾದ ಸೂತ್ರವನ್ನು ಅನುಸರಿಸುವುದಂತೆ.

ಬಿಸಿಲಿನ ತಾಪದಿಂದ

ಉರಿಯುವ ಚರ್ಮಕ್ಕೆ ಶಾಂತತೆಯನ್ನೀಯಲು ಬಯಸುವಿರಾ?

ಹಾಗಾದರೆ
ಇತ್ತ ಗಮನಿಸಿರಿ

ಉಷ್ಣವಲಯಗಳಲ್ಲಿ ಅತಿದೀರ್ಘವಾದ ಉಷ್ಣದಿಂದಾಗಿ ಚರ್ಮವು ಉರಿಯುವುದು ಮೈಗಳಲ್ಲಿ ಸಣ್ಣ ಪುಟ್ಟ ಬೊಕ್ಕೆಗಳೂ ತಲೆದೋರುವುವು ಇವನ್ನೆಲ್ಲಾ ನಾಶಗೊಳಿಸಿ ತಂಪು ಶಾಂತತೆಯನ್ನೂ ದೇಹಕ್ಕೆ ಕಂಪನ್ನೂ ಕೊಡುವ ಸಾಬೂನುಗಳಲ್ಲಿ ಇರಾಸ್ಮಿಕ್ ಗ್ಲಿಸರಿನ್ ಕಾರ್ಬಾಲಿಕ್ ಸಾಬೂನಿಗೆ ಮಿಕ್ಕಿದುದು ಯಾವುದೂ ಇಲ್ಲ. ಕಾರ್ಬಾಲಿಕ್ ದ್ರಾವಕವೂ ಗ್ಲಿಸರಿನೂ ಮಿಶ್ರಿತವಾಗಿರುವುದರಿಂದ ಇದು ಚರ್ಮ ವ್ಯಾಧಿಗಳನ್ನೆಲ್ಲಾ ಅಣಗಿಸಲು ಬಲ್ಲುದು ತುಂಬ ಕಜ್ಜಿ, ಹುಳ ಮೇಯುವಿಕೆ ಕೆರೆಯುಂದಾಗಿ ಬರುವ ಇನ್ನಿತರ ರೋಗಗಳಿಗೆಲ್ಲಾ ಇದು ದಿವ್ಯೌಷಧ.

ತೈಲಾಭ್ಯಂಜನಕ್ಕೂ ಇದು ಉಪಯೋಗಿಸಿ ಇದರ ಸುವಾಸನಯುಕ್ತ ನೊರೆಯು ದೇಹವನ್ನು ಶುಚಿಯಾಗಿಡುವುದು

ERASMIC 36% CARBOLIC GLYCERINE SOAP

λ ECG 494-409 THE ERASMIC CO. LTD., LONDON ENGLAND

ಸಾಬೂನು ತೆಗೆದ ನಂತರ ಇದನ್ನು ಪೀಠದಲೆಯ ಪೆಟ್ಟಿಗೆಯಾಗಿ ಮಾಡಬಹುದು.

Notice.

In the District Court of South Kanara

O P No. 60/1936.

In the matter of Abdulla and Baduva Kunhi – Minors.

Duleikamma—widow of Suribail Abbunhi Beary – residing at Suribail in Kolnad village, Puttur Taluk - Petitioner

The abovenamed petitioner has filed the above petition praying that she or some other fit and proper person may be appointed guardian of the person and property of the said minors The said petition, stand posted to 7-7-1936, at 11 A M for hearing before the abovementioned court Any person interested may appear in person or by pleader and oppose the said petition on or before the said date

Mangalore 16-5-36

K. P. Gopalkrishna Rao,
Vakil for Petitioner

Notice.

In the District Court of South Kanara

O P No 59 1936

In the matter of Abdulla and Mammade (minors)

Asyumma—widow of Beeron Moidine Beary—& daughter of Mogral Puthoor Panjada Mahammada Beary—residing at Suribail in Kolnad village, Puttur Taluk— Petitioner

The abovenamed petitioner has filed the above petition praying that she or some other fit and proper person may be appointed guardian of the person and property of the said minors The said petition stands posted to 7-7-'36 at 11 A M for hearing, before the abovementioned court Any person interested may appear in person or by pleader and oppose the said petition on or before the said date

Mangalore 16-5-1936

K P Gopalkrishna Rao,
Vakil for Petitioner

N.I.P.

Petral (Ready Delivery)
Kerosene & Diesel Oils
FOR RATES AND AGENCY TERMS APPLY
International Oil Co Ltd.
JIJI HOUSE RAVELIN STREET FORT BOMBAY.

ಸಕಲೇಶಪುರದ ಕಡೆಗೆ ಹೋಗುವ ಪ್ರಯಾಣಿಕರಿಗೆ ಹೊಸ ಸೌಕರ್ಯ.

ಮಂಗಳೂರಿನಿಂದ ಹತ್ತು ಘಂಟೆಗೆ ಸಕಲೇಶಪುರಕ್ಕೂ, ಸಕಲೇಶಪುರದಿಂದ 12 ಘಂಟೆಗೆ ಮಂಗಳೂರಿಗೂ, ಹೊರಡುವ ನೂತನವಾದ ಒಂದು ಸರ್ವಿಸು ಇತ್ತೀಚೆಗೇನೆ ಪ್ರಾರಂಭವಾಗಿರುತ್ತದೆ

ಇದರಿಂದ ಉಡುಪಿ, ಮೂಲ್ಕಿ, ಕಾರ್ಕಳ, ಮೂಡಬಿದ್ರೆ, ಕಿನ್ನಿಗೋಳಿ, ಮೊದಲಾದ ಕಡೆಗಳಿಂದ ಬೆಳಿಗ್ಗೆ ಹೊರಟು ಆದೇ ದಿನ ಮಧ್ಯಾಹ್ನ ಘಂಟೆ ೪॥ಗೆ ಸಕಲೇಶಪುರಕ್ಕೆ ಹೋಗಲಿಕ್ಕೆ ಅನುಕೂಲವಾಗಿರುತ್ತದೆ ಮಂಗಳೂರು, ಬಂಟವಾಳ, ಪುತ್ತೂರು ಮೊದಲಾದ ಸ್ಥಳಗಳಿಂದ ಮಧ್ಯಾಹ್ನದ ಊಟ ತೀರಿಸಿ ಹೊರಡಲು ಅನುಕೂಲವಾಗಿರುತ್ತದೆ

ಅಲ್ಲದೆ,

ಸಕಲೇಶಪುರದಿಂದ ಆದೇ ದಿನ ಬೇಲೂರು, ಚಿಕ್ಕಮಗಳೂರು, ಮೂಡುಗೆರೆಗೂ, ಹಾಸನಕ್ಕೆ ಹೋಗಿ ರೈಲು ಹತ್ತಿ ಮೈಸೂರಿಗೂ ಹೋಗಲು ಈ ಸಮಯವು ಬಹಳ ಅನುಕೂಲವಿದೆ

ಹಾಗೆಯೇ,

ಚಿಕ್ಕಮಗಳೂರು, ಬೇಲೂರು, ಮೂಡಗೆರೆ, ಹಾನಬಾಳ, ಚಂಗಡಹಳ್ಳಿ, ಶುಕ್ರವಾರಸಂತೆ ಮೊದಲಾದ ಸ್ಥಳಗಳಿಂದ ಬೆಳಿಗ್ಗೆ ಹೊರಟೂ, ಹಾಸನದಿಂದ ಊಟ ತೀರಿಸಿಯೂ, ಮಂಗಳೂರು, ಪುತ್ತೂರು, ಬಂಟವಾಳ, ಇತ್ಯಾದಿ ಸ್ಥಳಗಳಿಗೆ ಆದೇ ದಿನ ಸಾಯಂಕಾಲ ತಲಪಲು ಅತೀ ಅನುಕೂಲವಾಗಿದೆ.

The Canara Public Conveyance Co., Ltd., Kodialbail Mangalore.

The Sakaleshwara Motor Service Ltd., Saklaspur.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಪತ್ರಲೇಖಕರ ಅಭಿಪ್ರಾಯಗಳಿಗೆ ನಾವು ಹೊಣೆಗಾರರಲ್ಲ.—ಸಂ. ಸ್ವ.

ಹೊಸದುರ್ಗದಲ್ಲಿ ಮತಾಂತರದ ಗಲಾಟೆ.

ಸ್ವದೇಶಾಭಿಮಾನಿ ಪತ್ರಿಕಾ ಸಂಪಾದಕರೇ,

ನಿಮ್ಮ ತಾ. ೮—೫—೩೬ನೇ ಸಂಚಿಕೆಯ ಸ್ವದೇಶಾಭಿಮಾನಿಯಲ್ಲಿ ಮೇಲ್ಕಂಡ ಶಿರೋನಾಮೆಯಲ್ಲಿ ಹೊಸದುರ್ಗ ನಿವಾಸಿಯು ಅಲ್ಲಿಯ ಕೆಥೊಲಿಕ ಗುರುಗಳ ವಿಷಯದಲ್ಲಿ ಅಲ್ಲಸಲ್ಲದ ಸಂಗತಿಗಳನ್ನು ಬರೆದಿರುತ್ತಾರೆ. ಯಥಾರ್ಥವಾದ ವಿಷಯಗಳನ್ನು ಸಮಸ್ತ ಜನರ ತಿಳುವಳಿಕೆ ಬಗ್ಗೆ ಈ ಕೆಳಗೆ ಕೊಟ್ಟಿರುತ್ತೇನೆ.

೧. ಹೊಸದುರ್ಗದಲ್ಲಿ ೫೦ಕ್ಕಿಂತ ಹೆಚ್ಚು ಮಂದಿ ಕೆಥೊಲಿಕ ಕ್ರೈಸ್ತರು ಇರುತ್ತಾರಲ್ಲದೆ ಹೊಸದುರ್ಗ ನಿವಾಸಿಯು ಹೇಳುವಂತೆ ಬರೇ ೫ ಜನರು ಮಾತ್ರ ಇರುವುದಿಲ್ಲ.

೨. ಹರಿಜನರು ಸ್ವತಾವಾಗಿಯೇ ಗುರುಗಳ ಬಳಿಗೆ ಬರುತ್ತಾರಲ್ಲದೆ ಗುರುಗಳು ಮನೆಮನೆಗೆ ಹೋಗಿ ಅವರನ್ನು ಪುಸಲಾಯಿಸುತ್ತಾರೆಂತ ಗುರುಗಳ ಮೇಲೆ ಹೊರಿಸಿದ ಆರೋಪಣೆಯು ತೀರಾ ಸುಳ್ಳು.

೩. ಅಪ್ರಾಯಸ್ಥರನ್ನು ಅವರ ಹೆತ್ತವರ ಇಲ್ಲವೇ ರಕ್ಷಕರ ಸಂಗಡವೇ ಕೆಥೋಲಿಕ ಮತಕ್ಕೆ ಸೇರಿಸುತ್ತಾರಲ್ಲದೆ, ಹಿರಿಯರ ಒಪ್ಪಿಗೆ ಇಲ್ಲದೆ ಅವರನ್ನು ಬಲಾತ್ಕಾರದಿಂದ ಎಂದಿಗೂ ಮತಾಂತರಗೊಳಿಸಲಿಲ್ಲ. ಸತ್ಯಸ್ಥಿತಿ ಹೀಗಿರುತ್ತಾ ಅಪ್ರಾಯಸ್ಥರ ಹಿರಿಯರಿಗೂ ಗುರುಗಳಿಗೂ ಆಗಾಗ್ಗೆ ಜಗಳಾಟ ನಡೆಯುತ್ತಲೇ ಇದೆಯೆಂತ ಹೊಸದುರ್ಗ ನಿವಾಸಿಯು ಹೇಳುವಂಥಾದ್ದು ಬರೇ ಕಾಲ್ಪನಿಕ ಮಾತಾಗಿರುತ್ತದೆ.

೪. ಈ ವರೆಗೆ ತಮ್ಮ ಅಂಕೆಯಲ್ಲಿಟ್ಟುಕೊಂಡು ತಮಗೆ ಇಷ್ಟಬಂದಂತೆ ನಡಿಸಿಕೊಂಡು ಬಂದಂಥಾ ನಿರ್ಗತಿಕರಾದ ಹರಿಜನರು ತಮ್ಮ ಸ್ವೇಚ್ಛೆಯಿಂದ ಕೆಥೊಲಿಕ ಮತಕ್ಕೆ ಸೇರುವಾಗ ಸದರಿ ಹರಿಜನರ ಮೇಲೆ ಇತರ ಜಾತಿಯ ಹಿಂದೂಗಳಿಗೆ ಇಷ್ಟರ ವರೆಗೆ ಇರುತ್ತಿದ್ದ ತಮ್ಮ ಅಧಿಕಾರವು ತಪ್ಪಿಹೋಗುತ್ತದೆಂಬ ಭೀತಿಯ ಒಂದೇ ನೆವನದಿಂದ ತಲ್ಲಣಗೊಂಡು ಸುಳ್ಳು ಆರೋಪಣೆಗಳಿಂದ ತುಂಬಿರುವ "ಹೊಸದುರ್ಗದಲ್ಲಿ ಮತಾಂತರದ ಗಲಾಟೆ" ಎಂಬ ಶಿರೋನಾಮೆಯ ಲೇಖನವನ್ನು ಹೊಸದುರ್ಗ ನಿವಾಸಿಯು ಬರೆದದ್ದಾಗಿರುತ್ತದೆ.

ವಾಚಕರಲ್ಲೊಬ್ಬ.

ಬೇಡ ರೂಪಾಯಿಗೆ ಆಣೆ ಹದಿನಾಲ್ಕು

ಪ್ರಾಥಮಿಕ ಶಾಲಾ ಶಿಕ್ಷಕರು ಮುಂದಿನ ಭಾವೀ ಜನಾಂಗದ ಊರುಗೋಲು ಎಂಬ ಮಾತು ಸರ್ವರಿಂದಲೂ ಹೊರಹೊರಡುತ್ತಲಿದೆ. ಅಂಥಾ ಜನಾಂಗವನ್ನು ಬೆಳೆಸತಕ್ಕ ಬೋಧಕವರ್ಗವು ಬಹು ಅಲ್ಪ ಸಂಬಳದಿಂದ ಪ್ರಯಾಸಹೊಂದಿ ತಮ್ಮ ಜೀವಮಾನದ ಚಕ್ರವನ್ನು ಮುಂದರಿಸುತ್ತಲಿರುವರು. ಎಂದರೆ ಒಂದೆರಡು ವರ್ಷಗಳ ಕೆಳಗೆ ಬೋರ್ಡು ಶಾಲಾ ಅಧ್ಯಾಪಕರುಗಳನ್ನು ತಾಲೂಕು ಬೋರ್ಡಿನವರು ಹಿಡಿದುಕೊಂಡು ಅವರು ತೆರುತ್ತಿದ್ದ ಸಂಬಳದಿಂದ ಕಾಲಕಾಲಕ್ಕೆ ಅರೆಹೊಟ್ಟೆಯಿಂದಲಾದರೂ ಅಲ್ಪ ಸಂತೋಷದಲ್ಲಿ ಇದ್ದು ತಾವು ಕೈಕೊಂಡ ಕಾರ್ಯದಲ್ಲಿ ತಲ್ಲೀನರಾಗಿದ್ದರು.

ಆದರೆ ತಾಲೂಕು ಬೋರ್ಡಿಗೆ ತಮ್ಮ ಅಧೀನಕ್ಕೆ ಒಳಪಟ್ಟ ಸಂಸ್ಥೆಗಳನ್ನು ಕ್ರಮಪ್ರಕಾರ ನ್ಯಾಯರೀತಿಯಿಂದ ಆಳಲು ಸಾಧ್ಯವಿಲ್ಲ. ಈ ಬೋರ್ಡು ಬರೇ ಖರ್ಚಿನ ದಾರಿ. ಆದುದರಿಂದ, ಇದು ಮಾಡತಕ್ಕ ಯಾವತ್ತೂ ಕೆಲಸವನ್ನು ಜಿಲ್ಲಾ ಬೋರ್ಡಿಗೆ ಒಪ್ಪಿಸಿದ್ದಲ್ಲಿ ಅದು ನ್ಯಾಯಮಾರ್ಗದಿಂದ ಯಾವತ್ತೂ ಕೆಲಸವನ್ನು ಮಾಡುವದು ಎಂಬ ಒಂದು ಭಾವನೆಯನ್ನು ತಳೆದು ಹಚ್ಚಿಕೊಂಡು ತಾಲೂಕು ಬೋರ್ಡನ್ನು ಮುಚ್ಚಿಬಿಟ್ಟರು. ಆಗ್ಯೆ ನಮಗೊಂದು ಸಂತೋಷವು ತುಂಬಿತು. ಎಂದರೆ ತಾಲೂಕು ಬೋರ್ಡಿನ ಆಡಳಿತಕ್ಕಿಂತ ಜಿಲ್ಲಾ ಬೋರ್ಡಿನವರ ಆಡಳಿತವು ಸುಖಕರವಾಗಿ ಪರಿಣಮಿಸುವದು, ಈ ಬೋರ್ಡಿಗೆ ಸಂಬಂಧಪಟ್ಟ ಮೆಂಬರರು ಅಧ್ಯಕ್ಷರು ಹೆಚ್ಚಿನ ಯೋಗ್ಯತೆಯುಳ್ಳವರು, ಬಡವರ ಸುಖದುಃಖಗಳನ್ನು ತಿಳಿದವರು, ಇವರಿಂದಲಾದರೂ ಈ ಬಡಶಿಕ್ಷಕ ವರ್ಗವು ಉದ್ಧಾರವಾದೀತೆಂಬುದೇ ಕಾರಣ.

ಆದರೆ, ಪ್ರಕೃತ ಬಂದೊದಗಿ ನಿಂತ ಕಾರಣವೆಂದರೆ ಸಂತೋಷಸಾಗರವಲ್ಲ, ದುಃಖ ಸಮುದ್ರ. ಶಾಲೆಗಳ ಆಡಳಿತವು ಜಿಲ್ಲಾ ಬೋರ್ಡಿಗೆ ಬಂದ ಅಲ್ಪಕಾಲದಲ್ಲೇ ಪ್ರತಿ ಉಪಾಧ್ಯಾಯರ ಸಂಬಳದಲ್ಲಿ ರೂಪಾಯಿಗೆ ೧೫ ಆಣೆ ಮಾತ್ರ ಕೊಡುವ ನಿರ್ಧಾರ ಆಯ್ತು. ಈ ನಿರ್ಧಾರದಲ್ಲೇ ಒಂದು ವರ್ಷ ನೂಕಲ್ಪಟ್ಟಿತು. ಈಗ ಬಾಲ್ಕಿ ವರ್ಷದ ಆದಾಯ ಖರ್ಚಿನ ಲೆಕ್ಕ ನೋಡಲಾಗಿ ರೂಪಾಯಿಗೆ ಒಂದಾಣೆ ಕಡಿತವು ಸಾಕಾಗುವುದಿಲ್ಲ. ರೂಪಾಯಿ ಮೇಲೆ ಆಣೆ ೨ರಂತೆ ಶಸ್ತ್ರಪ್ರಯೋಗವಾಗಬೇಕೆಂದು ದಯಾಳು ಬೋರ್ಡು ನಿರ್ಧರಿಸಿದೆಯಂತೆ. ಹೀಗಾದ್ದಲ್ಲಿ ಈ ಬಡ ಉಪಾಧ್ಯಾಯ ವರ್ಗದ ಬಾಳು ಹಾಳೇ ಸರಿ. ತಾಲೂಕು ಬೋರ್ಡಿನ ಆಡಳಿತಕ್ಕೆ ಈ ಪ್ರಾಥಮಿಕ ಶಾಲೆಗಳು ಒಳಗಾಗಿ ಇರುವಾಗ ಅಧ್ಯಾಪಕ ಅಧ್ಯಾಪಕಿಯರ ಸಂಬಳದ ದರವು ಬೇರೆ ಬೇರೆಯಾಗಿರದೆ ಒಂದೇ ತೆರನಾಗಿತ್ತು. ಆದರೆ ಅದು ತಪ್ಪಿ ಜಿಲ್ಲಾ ಬೋರ್ಡಿನ ಆಡಳಿತಕ್ಕೆ ಒಳಗಾದ ಉತ್ತರಕ್ಷಣದಲ್ಲೇ ಹೊಸ ಸ್ಕೇಲು ಪ್ರಕಾರ ಉಪಾಧ್ಯಾಯಿನಿಯರಿಗೆ ಉಪಾಧ್ಯಾಯರಿಗಿಂತ ರೂಪಾಯಿ ೫ ಹೆಚ್ಚಿಸಿ ಅವರ ಗ್ರೇಡನ್ನೇ ಬೇರ್ಪಡಿಸಿದರು. ಬೋರ್ಡಿನಲ್ಲಾಗಲೀ ಸರಕಾರದಲ್ಲಾಗಲೀ ಹಣವಿಲ್ಲವೆಂದು ಬೊಬ್ಬೆ ಏಳುತ್ತಿರುವ ಈ ಕಾಲದಲ್ಲಿ, ಈ ಐದು ರೂಪಾಯಿ ಹೆಚ್ಚಿಗೆ ತೆತ್ತುದು ಅವರಲ್ಲಿರುವ ಯಾವ ತರದ ಹೆಚ್ಚಿನ ಯೋಗ್ಯತೆಗೆ ಎಂಬುದನ್ನು ಬಲ್ಲವರಾರು? ಹೆಂಗಸು ಸಮಯ ಪೂರ್ಣ ಸಂಬಳದ ಮೇಲೆ ಸಿಕ್ಕುವ ಕೆಲವು ತಿಂಗಳ ರಜೆಯ ರಿಯಾಯಿತಿಯು ಸಾಲದ್ದಕ್ಕೆ ಈ ಮೇಲಿನ ರಿಯಾಯಿತಿಯೂ ಕೂಡಾ ಅವಶ್ಯವೇ? ಈ ತೆರನಾಗಿ ರೂಪಾಯಿ ೫ರಂತೆ ಹೆಚ್ಚಿಗೆ ಕೊಡುವುದರಿಂದ ನಮ್ಮ ಜಿಲ್ಲೆಯಲ್ಲಿರುವ ಸುಮಾರು ೨೦೭ ಅಧ್ಯಾಪಕಿಯರಿಗೆ ವರುಷಕ್ಕೆ ೧೨೪೨೦ ರೂಪಾಯಿ ಕಣ್ಮುಚ್ಚಿದ ವ್ಯಯವಾಗುತ್ತದೆ. ಅದನ್ನು ಹೀಗೆ ಹೆಚ್ಚಿಗೆ ಕೊಡದೆ ಸಮಾನದೃಷ್ಟಿಯಿಂದ ನೋಡಿ ಬೇರೆ ಬೇರೆ ಗ್ರೇಡಿನಿಂದ ಬೇರ್ಪಡಿಸದ್ದಲ್ಲಿ ಮೇಲಿನ ಉಳಿತಾಯವು ಬೋರ್ಡಿಗೆ ಆದಾಯವಾದಂತಾಗುವುದು.

ಇನ್ನೂ ಉಳಿತವನ್ನು ತೋರಿಸಿಕೊಡಬೇಕೆಂದಿದ್ದರೆ, ವಿದ್ಯಾಭಿವೃದ್ಧಿಯ ಆವಶ್ಯಕತೆ, ಹಳ್ಳಿ ನಿವಾಸಿಗಳಿಗೆ ತಮ್ಮ ಮಕ್ಕಳು ವಿದ್ಯಾವಂತರಾಗಬೇಕೆಂದಿದ್ದರೆ ಅವರು ತಮ್ಮ ತನುಮನಧನಗಳಿಂದ ಅದನ್ನು ಸಹಕರಿಸಬೇಕೆಂಬುದು ಎಲ್ಲರೂ ಒಪ್ಪತಕ್ಕ ಮಾತು ಹೀಗಿರುತ್ತಾ, ಈಗ ನಮ್ಮ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಬೋರ್ಡಿನಿಂದ ಬಾಡಿಗೆ ಕೊಡಲ್ಪಟ್ಟು ನಡಿಸಲ್ಪಡುವ ಶಾಲಾ ಕಟ್ಟಡಗಳು ೩೪೫ ಇವೆ. ಇವುಗಳಿಗಾಗಿ ಬೋರ್ಡು ವರ್ಷಕ್ಕೆ ೧೯೨೯೮ ರೂಪಾಯಿ ಹೊರಗೆ ತೆರುತ್ತಿದೆ. "ಪ್ರಕೃತ ಬೋರ್ಡು ಬರಿದಾಗಿದೆ. ನಿಮಗೆ ಕಟ್ಟೋಣದ ಬಾಡಿಗೆ ಕೊಡಲು ಸಾಧ್ಯವಿಲ್ಲ" ಎಂದು ಬೋರ್ಡು ಪ್ರಸಿಡೆಂಟರು ಸಹ ಸರ್ವರನ್ನು ಸಭೆಯಲ್ಲಿ ಮುಂಚೂಣಿಯಾಗಿ ಕಟ್ಟೋಣದ ಮ್ಯಾನೇಜರಿಗೆ ಇತ್ತರೆ, ಆಯಾಯ ಕಟ್ಟೋಣದ ಮ್ಯಾನೇಜರು "ಬಾಡಿಗೆಯನ್ನು ತೆರದಿದ್ದಲ್ಲಿ ಕಟ್ಟೋಣ ಕೊಡಲು ಸಾಧ್ಯವಿಲ್ಲ"ವೆಂದು ಎಷ್ಟರವೂ ಹೇಳಲಾರರು. ಎಂದರೆ ಕಟ್ಟೋಣಕ್ಕಾಗಿ ಖರ್ಚುಮಾಡಿದ ಹಣದ ಎಷ್ಟೋ ಪಾಲು ಹೆಚ್ಚಿಗೆ ಹಣವನ್ನು ಇದು ಮೊದಲೇ ಬಾಡಿಗೆ ರೂಪದಲ್ಲಿ ಆ ಮ್ಯಾನೇಜರು ಪಡೆದಿರುವರು.

ಇನ್ನೂ ಒಂದು ವಿಷಯವನ್ನು ಎತ್ತಿಹೇಳುವುದಾದರೆ ಪ್ರತಿ ಜಿಲ್ಲಾ ಬೋರ್ಡಿಗೆ ಒಬ್ಬ ಪ್ರಸಿಡೆಂಟರು ಅವರಿಗೊಬ್ಬ ಸರ್ವಜ್ಞರಾದ ಸೆಕ್ರೆಟರಿಯವರು ಇರುತ್ತಾ ಈ ಬೋರ್ಡು ಆಫೀಸಿಗೆ ೩ನೇ ಇನ್ಸ್‌ಪೆಕ್ಟರ್ ಗ್ರೇಡಿನ ಆಫೀಸರರ ಆವಶ್ಯಕತೆಯು ಇರಬಹುದೇ? ಒಂದೊಮ್ಮೆ ಆ ಮಹನೀಯರು ಅಗತ್ಯವಿದ್ದರೆ ಅವರಿಗೆ ಗವರ್ನಮೆಂಟಿನಿಂದ ತಲಬನ್ನು ಏಕೆ ಕೊಡಬಾರದು? ಅದರ ಬದಲಾಗಿ ಅವರಿಗೆ ಕೊಡುವ ತಲಬು ಎಜುಕೇಶನಲ್ ಫಂಡಿನಿಂದ ಇವರಿಗೆ ತಿಂಗಳೊಂದಕ್ಕೆ ಸುಮಾರು ೧೫೦ ರೂಪಾಯಿಗಳನ್ನು ಸರಕಾರವು ಕೊಟ್ಟರೆ ಎಜುಕೇಶನಲ್ ಫಂಡಿನ ಮೇಲೆ ಸ್ವಲ್ಪವಾದರೂ ಒಳಿತಾಗಲಾರದೇ?

ಆದುದರಿಂದ ಈ ಮೇಲಿನ ೩ ವಿಷಯಗಳನ್ನು ಕಡಿಮೆ ಮಾಡಲಾಗಿ ಎಜುಕೇಶನಲ್ ಫಂಡಿನಲ್ಲಿ ವರುಷಕ್ಕೆ ಸುಮಾರು ೩೩೨೫೦ ರೂಪಾಯಿ ಉಳಿತಾಯವಾಗುವದು. ಇಷ್ಟು ಉಳಿತವು ಆದಾಯವಾಗಲಿಕ್ಕಿರುವ ಸಂದರ್ಭ ಬಂದಲ್ಲಿ ಈಗ ಬೋರ್ಡು ಆಲೋಚಿಸಿರುವ ಇನ್ನೊಂದಾಣೆಯ ಶಸ್ತ್ರಪ್ರಯೋಗವು ಅಗತ್ಯವಿರದೆಂದೇ ಭಾವನೆ. ಈ ಬಗ್ಗೆ ದಯಾಳು ಬೋರ್ಡು ಪ್ರಸಿಡೆಂಟರೂ ಬೋರ್ಡು ಮೆಂಬರರೂ ಬಡವರ ಕಡೆಗೆ ತಮ್ಮ ಕೃಪಾದೃಷ್ಟಿಯನ್ನಾದರೂ ಇಟ್ಟು ಅವರಿಗೆ ಈಗ ಕೊಡುತ್ತಿರುವ ರೂಪಾಯಿಗೆ ೧೫ ಆಣೆಯ ಬದಲಾಗಿ ೧೪ ಆಣೆಯಂತೆ ತೆರದೆ ತಮ್ಮ ಕೆಲಸಗಾರರನ್ನು ಕೃಪಾದೃಷ್ಟಿಯಿಂದ ಕಾಪಾಡಿ ಅವರ ಗೋಳಿಗೆ ಒಳಗಾಗರೆಂದು ಈ ಮೂಲಕ ಅರಿಕೆಮಾಡುವ—ಬಡ ಉಪಾಧ್ಯಾಯರ ಹಿತೈಷಿ.

ಕುಂದಾಪುರ ಡಿವಿಜನಿನ ಮಹಾಜನರಲ್ಲಿ ವಿನಂತಿ.

ಇನ್ನು ಕೆಲವು ತಿಂಗಳುಗಳಲ್ಲಿಯೇ ನಡೆಯಲಿಕ್ಕಿರುವ ಮದ್ರಾಸು ಲೆಜಿಸ್ಲೇಟಿವ್ ಎಸೆಂಬ್ಲಿ ಮತ್ತು ಕೌನ್ಸಿಲ್ ಚುನಾವಣೆಗೆ ವೋಟರರ ಪಟ್ಟಿಯನ್ನು ಈಗ ಸರಕಾರದವರು ತಯಾರಿಸುತ್ತಾರೆ. ಎಸೆಂಬ್ಲಿಗೆ ನಮ್ಮ ಡಿವಿಜನಿಗೆ ಜನರಲ್ ವೋಟರರ ಸಮುದಾಯಕ್ಕೆ ಒಂದು ಮೆಂಬರಿಕೆಯ ಸ್ಥಾನವಿದೆ. ಕಾಂಗ್ರೆಸ್ ಎಂಬುದು ಯಾವ ಜಾತೀಯತೆಯ ಸಂಕುಚಿತತೆಗೂ ಒಳಗಾಗದೆ ಸರ್ವರನ್ನೂ ಒಂದೇ ರೀತಿಯಲ್ಲಿ ಕಾಣುವ ದೇಶೀಯ ಹಾಗೂ ಮುಖ್ಯವಾಗಿ ಬಡವರ ಹಿತಕ್ಕಾಗಿ ಕಾದಾಡುವ ಏಕಮಾತ್ರ ಸಂಸ್ಥೆಯಾಗಿರುತ್ತದೆ. ನ್ಯಾಯವಿಧಾಯಕ ಸಭೆಗಳಿಗೆ ಇದುವರೆಗೆ ಕಾಂಗ್ರೆಸಿನವರು ಪ್ರವೇಶಿಸದೆ ಇದ್ದುದರಿಂದ ಸ್ವಾರ್ಥಿಗಳು ಅವುಗಳ ಒಳಗೆ ಹೊಕ್ಕು ಅಧಿಕಾರಗಳನ್ನು ಸ್ವಾಧೀನಪಡಿಸಿಕೊಂಡು ದೇಶಕ್ಕೆ ದ್ರೋಹಕರವಾದ ಕೆಲಸಗಳನ್ನು ಮಾಡುತ್ತಿದ್ದರು. ಇದನ್ನು ತಡೆಗಟ್ಟುವುದಕ್ಕಾಗಿ ಕಾಂಗ್ರೆಸಿನವರು ನ್ಯಾಯವಿಧಾಯಕ ಸಭೆಗಳ ಒಳಗೆ ಪ್ರವೇಶಮಾಡಿ ಅಲ್ಲಿ ಜನರ ಕಡೆಯಿಂದ ಸರಕಾರದವರೊಡನೆ ಹೋರಾಡಬೇಕಾಗಿ ನಿಶ್ಚಯಿಸಿದ್ದಾರೆ. ಆದುದರಿಂದ ನಮ್ಮ ಹಾಗೂ ದೇಶದ ಕಡೆಯಿಂದ ಕೆಲಸಮಾಡುವವನಾಗಿ ನಿಸ್ವಾರ್ಥಿಯಾದ ಬಡವರ ಕಷ್ಟವನ್ನೇ ತನ್ನ ಕಷ್ಟವೆಂದು ತಿಳಿಯುವ ಕಾಂಗ್ರೆಸಿನ ಧ್ಯೇಯಕ್ಕೆ ವಿರೋಧವಾಗಿ ನಡೆಯದ ಕೆಲಸ ಮಾಡಲು ಸಮರ್ಥನಾದ ಮತ್ತು ಜನರ ಕಡೆಯಿಂದ ಕೆಲಸಮಾಡುವ ಒಳ್ಳೇ ಸುಶಿಕ್ಷಿತರಾದ ಸಾರ್ವಜನಿಕ ಹಾಗೂ ಕಾಂಗ್ರೆಸ್ ಕೆಲಸಗಳಲ್ಲಿ ನುರಿತ ಮತ್ತು ಉತ್ಸಾಹವುಳ್ಳ ಜನರಿಗೇನೇ ನಮ್ಮ ಮತಗಳನ್ನು ಕೊಡುವುದು ನಮ್ಮ ಕರ್ತವ್ಯವಿರುತ್ತದೆ. ಅಂಥಾ ಮನುಷ್ಯರು ಯಾವ ಜಾತಿಯವರೇ ಆಗಲಿ ಪರವಿಲ್ಲ. ಗೌರವಕ್ಕೋಸ್ಕರ ಅಥವಾ ಸ್ವಸಮರ್ಥನೆಗೋಸ್ಕರ ಮತ್ತು ಎಸೆಂಬ್ಲಿ ಮೆಂಬರಿಕೆ ಪಡೆವುದು ತಮ್ಮವರಿಗೆ ಉದ್ಯೋಗವನ್ನು ಒದಗಿಸಿಕೊಡುವುದಕ್ಕೋಸ್ಕರ ಎಂಬ ಆಶೆಯಿಂದ ಬರುವವರಿಗೆ ನಮ್ಮ ವೋಟುಗಳನ್ನು ಕೊಡುವುದು ಕೇವಲ ತಪ್ಪು. ನಮ್ಮ ಜಿಲ್ಲಾ ಬೋರ್ಡಿನ ಹಾಗೆ ಆಗದೆ ಕಾಂಗ್ರೆಸಿನವರು ಒಳ್ಳೇ ಧ್ಯೇಯವುಳ್ಳ ಮಹನೀಯರನ್ನೇ ನಮ್ಮ ಡಿವಿಜನಿಗೆ ನಿಲ್ಲಿಸಿಯಾರು ಎಂಬ ಭರವಸೆಯಿದೆ. ಕಾಂಗ್ರೆಸಿನವರಿಗೆ ಕೊಟ್ಟ ಪ್ರತಿಯೊಂದು ವೋಟೂ ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಾಗಿ ಆಗಿರುತ್ತದೆ. ವೋಟು ಕೊಡುವ ಯೋಗ್ಯತೆಯು ಒಂದು ಅಧಿಕಾರ ಮತ್ತು ಜವಾಬ್ದಾರಿಕೆಯ ಕೆಲಸವಾಗಿರುತ್ತದೆ. ಈ ಸಾರಿ ಹೆಚ್ಚು ಜನರಿಗೆ ವೋಟುಕೊಡುವ ಅಧಿಕಾರವು ಇದೆ. ೨೧ ವರ್ಷ ಪ್ರಾಯ ಮುಗಿದ ಬಹಳ ಪ್ರತಿಯೊಬ್ಬ ಸ್ತ್ರೀಪುರುಷರಿಗೂ ವೋಟು ಕೊಡುವ ಅಧಿಕಾರವಿದೆ. ವೋಟು ಕೊಡುವುದಕ್ಕೆ ಬೇಕಾದ ಯೋಗ್ಯತೆಗಳು ಮುಂತಾದ ವಿವರಾಂಶವನ್ನು ಶ್ರೀಯುತ ರಂ. ಕೃಷ್ಣ ಕಾರಂತರು ಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ. ಹೆಚ್ಚಿನ ವಿವರವನ್ನು ಪ್ರತಿ ಗ್ರಾಮದ ಪಟೇಲರಲ್ಲಿರುವ ಎಪ್ರಿಲ್ ೨೩ನೇ ತಾರೀಕಿನ ಜಿಲ್ಲಾ ಗಜೇಟಿನಲ್ಲಿ ನೋಡಬಹುದು. ವೋಟು ಕೊಡಲಿಕ್ಕೆ ಅರ್ಹತೆಯುಳ್ಳ ಪ್ರತಿ ಒಬ್ಬ ಸ್ತ್ರೀಪುರುಷರೂ ತಮ್ಮ ಹೆಸರುಗಳನ್ನು ವೋಟರರ ಪಟ್ಟಿಯಲ್ಲಿ ಸೇರುವಂತೆ ಅರ್ಜಿ ಮಾಡುವುದು ಅವರ ಕರ್ತವ್ಯವಿರುತ್ತದೆ. ಅರ್ಜಿ ಫೋರ್ಮುಗಳು ತಹಸಿಲ್ ದಾರರಲ್ಲಿಯೂ ಅರ್ಜಿಗಳನ್ನು ಪಡೆಯುವ ಬಗ್ಗೆ ಅಧಿಕಾರಿಗಳು ಅಲ್ಲಲ್ಲಿ ಜಿಲ್ಲಾ ಗಜೇಟಿನಲ್ಲಿ ಕಾಣಿಸುವಂತೆ ಮೊಕ್ಕಾಂ ಮಾಡುವಲ್ಲಿಯೂ ನನ್ನ ಆಫೀಸಿನಲ್ಲಿಯೂ ದೊರೆಯುತ್ತವೆ. ಅವುಗಳನ್ನು ಕೈಬರಹದ ಫೋರ್ಮಿನಲ್ಲಿಯೂ ನಕಲು ತೆಗೆದು ಅಥವಾ ಹಾಗೆಯೇ ಛಾಪೆ ಮಾಡಿಸಿ ಬರುವ ಜೂನ್ ೩೦ ತಾರೀಕಿನ ಒಳಗೆ ತಹಸಿಲ್ದಾರರವರ ಹತ್ತಿರ ಬರಹ ಗೊತ್ತುಂಟುಯೆಂಬ ಸಟಿಪಿನ ಮೇಲೆ ವೋಟು ಕೊಡುವ ಯೋಗ್ಯತೆಯುಳ್ಳವರು ಸ್ವತಹ ಕೊಡತಕ್ಕದ್ದು ಅಥವಾ ಅಧಿಕಾರಿಗಳು ಅಲ್ಲಲ್ಲಿ ಮೊಕ್ಕಾಂ ಮಾಡುವ ಕಡೆಗಳಲ್ಲಿ ಕೊಡಬಹುದು. ಬರಹ ಗೊತ್ತಿದ್ದವರು ರೆಜಿಸ್ಟ್ರೇಶನ್ ಆಫೀಸರ್ ಅಥವಾ ತಹಸಿಲ್ದಾರರ ಮುಂದೆ ಸ್ವಹಸ್ತಾಕ್ಷರದಿಂದ ಅರ್ಜಿಯ ಕಲಮುಗಳನ್ನು ತುಂಬಿಸಿ ಹಾಜರು ಮಾಡಬೇಕು ಅಥವಾ ಪಟೇಲರ ಮುಂದೆ ತಮ್ಮ ಸ್ವಹಸ್ತಾಕ್ಷರದಿಂದ ಬರೆದು ಪಟೇಲರ ಸರ್ಟಿಫಿಕೇಟು ಸಹಿ ಹಾಜರುಮಾಡತಕ್ಕದ್ದು.

ಅರ್ಜಿಗಳನ್ನು ತೆಗೆದುಕೊಳ್ಳುವರೆ ಸಂಬಂಧಪಟ್ಟ ಆಫೀಸರರು ಕಾರ್ಕಳ ತಾಲೂಕಿನಲ್ಲಿ ಈ ಕೆಳಗೆ ವಿವರಿಸಿರುವ ಸ್ಥಳಗಳಲ್ಲಿ ಮತ್ತು ತಾರೀಕುಗಳಲ್ಲಿ ಮೊಕ್ಕಾಂ ಮಾಡುವರು. ಅಲ್ಲಿ ಅರ್ಜಿಗಳನ್ನು ಹಾಜರುಮಾಡಬಹುದು. ಆದುದರಿಂದ ವೋಟುಕೊಡುವ ಅರ್ಹತೆಯುಳ್ಳವರೆಲ್ಲರೂ ಅರ್ಜಿಮಾಡಬೇಕಾಗಿ ವಿದ್ಯಾವಂತರೆಲ್ಲರೂ ವೋಟುಕೊಡಲಿಕ್ಕೆ ಅರ್ಹರಾದ ಪ್ರತಿ ಗ್ರಾಮದಲ್ಲಿ ಪ್ರತಿಯೊಬ್ಬರ ಹೆಸರೂ ಪಟ್ಟಿಯಲ್ಲಿ ಸೇರುವಂತೆ ಅವರ ಅರ್ಜಿ ಕೊಡಿಸಬೇಕಾಗಿಯೂ ವಿನಂತಿ.

ಕಾರ್ಕಳ ೧೫—೫—೩೬ ಎಂ. ಎಸ್. ಅಧಿಕಾರಿ.

ಫೋರ್ಟು ಆರ್ಯಸಮಾಜ, ಮುಂಬಾಯಿ.

ಇದರ ನವಮ ವಾರ್ಷಿಕ ಮಹೋತ್ಸವವು ಕಳೆದ ತಾ. ೯ ಮತ್ತು ೧೦ನೇ ಶನಿವಾರ ರವಿವಾರಗಳಲ್ಲಿ ಮುಂಬಾಯಿ ಕೋಟೆಯೊಳಗಣ ಬಾಯಿ ಕಬೀಬಾಯಿ ಹೈಸ್ಕೂಲಿನ ಡ್ರಿಲ್ ಹೋಲಿನಲ್ಲಿ ಮುಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷ ಹಾಗೂ ಗಿರ್ಗಾಂ ಆರ್ಯಸಮಾಜದ ಅಧ್ಯಕ್ಷರಾದ ಶ್ರೀಮಾನ್ ನಗಿನ್‌ದಾಸ್ ಟಿ ಮಾಸ್ತರ್ ಬಿ ಎ ಎಲ್. ಎಲ್. ಬಿ ಹೈಕೋರ್ಟು ಸೋಲಿಸಿಟರ್‌ರವರ ಸನ್ನಾಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ತಾ ೯ನೇ ಶನಿವಾರ ಸಾಯಂಕಾಲ ಗಂಟೆ ೬ ೩೦ಕ್ಕೆ ೨೪೯ನೇ ಫ್ರಿಯರ್ ರೋಡಿನಲ್ಲಿರುವ ಸಮಾಜ ಮಂದಿರದಿಂದ ನಗರಕೀರ್ತನೆಯ ಮೆರವಣಿಗೆ ಹೊರಟು, ಬಜಾರ್ ಗೇಟ್ ರಸ್ತೆ, ಎಲ್ಫಿನ್‌ಸ್ಟನ್ ಸರ್ಕಲ್ ಅಪೊಲೋ ಸ್ಟ್ರೀಟ್ ದಲಾಲ್ ಸ್ಟ್ರೀಟ್ ಮೇಡೋ ಸ್ಟ್ರೀಟ್‌ಗಾಗಿ ಕಾವಸ್ಜಿ ಪಟೇಲ್ ರಸ್ತೆಯ ದ್ವಾರದ ಸರ್ ಫಿರೋಜ್ ಶಹಾ ರಸ್ತೆಯನ್ನು ದಾಟಿ, ಬೋರಾಬಜಾರ್ ಸ್ಟ್ರೀಟಿನಿಂದ ಕಬೀಬಾಯಿ ಹೋಲಿನಲ್ಲಿ ಸಮಾಪ್ತಿಗೊಂಡಿತು.

ತಾ ೧೦ನೇ ರವಿವಾರ ಪೂರ್ವಾಹ್ನ ಗಂಟೆ ೮ಕ್ಕೆ ಬೃಹದ್ ಯಜ್ಞವೈದಿಕ ಧ್ವಜವಂದನೆ ಹಾಗೂ ಸ್ವಾಮಿ ಓಂಕಾರ ಸಚ್ಚಿದಾನಂದ ಮಹಾರಾಜ್ ಮತ್ತು ಪಂಡಿತ ಪದ್ಮಾಭಾಯಿ ಶರ್ಮರವರ ಧರ್ಮೋಪದೇಶವು ನಡೆಯಿತು. ಆಮೇಲೆ ಮಧ್ಯಾಹ್ನೋತ್ತರ ಗಂಟೆ ೩ ೩೦ಕ್ಕೆ ವಾರ್ಷಿಕ ಅಧಿವೇಶನವು ಪ್ರಾರಂಭವಾಗಿ ಪಂಡಿತ ಪದ್ಮಾಬಾಯಿ ಶರ್ಮರವರ ಅರ್ಥಗರ್ಭಿತ ಉಪನ್ಯಾಸವು ಕೊನೆಗೊಂಡ ನಂತರ ಅಗಲೀ ದೊರೆತ ಡಾಕ್ಟರ್ ಎಂ ಎ ಅನ್ಸಾರಿಯವರ ಮರಣವಾರ್ತೆಯನ್ನು ಕೇಳಿ ಸಭೆಯು ದುಃಖಸೂಚನೆಯನ್ನು ಪ್ರದರ್ಶಿಸಿತಲ್ಲದೆ ಅಧ್ಯಕ್ಷರ ಹೇಳಿಕೆಮೇರೆಗೆ ಡಾಕ್ಟರರ ಮೃತ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲೆಂದು ಪರಮಪಿತ ಪರಮಾತ್ಮನೊಡನೆ ಪ್ರಾರ್ಥಿಸಿದ್ದಾಯಿತು. ಅಧ್ಯಕ್ಷರು ತನ್ನ ಸಮಯೋಚಿತ ಭಾಷಣದಲ್ಲಿ "ಹಿಂದೂಸ್ಥಾನದಲ್ಲಿ ಅಜ್ಞಾನಾಂಧಕಾರತೆಯು ತುಂಬಿಕೊಂಡು ಹಿಂದೂ ಜಾತಿಯು ಅಧಃಪತನಕ್ಕಿಳಿದು ಎಷ್ಟೋ ಮಂದಿ ಭಾರತಮಾತೆಯ ಪುತ್ರರು ಪರಕೀಯ ಮತಸ್ಥರ ಧರ್ಮ (ಕ್ರೈಸ್ತಧರ್ಮ)ಕ್ಕೆ ಮತಾಂತರ ಹೊಂದುವಾಗ ಮಹರ್ಷಿ ದಯಾನಂದ ಸರಸ್ವತಿಯವರು ವೈದಿಕ ಧರ್ಮದ ಪುನರುದ್ಧಾರಗೈದು ಹಿಂದೂ ಸನಾತನವನ್ನು ಅಧಃಪತನದಿಂದ ಮೇಲೆತ್ತಿದರು. ಮನುಷ್ಯಮಾತ್ರರೆಲ್ಲರೂ ಸರಿಸಮಾನರು, ಹುಟ್ಟಿನಿಂದ ಉಚ್ಚ ನೀಚವೆಂಬ ಭಾವವನ್ನು ತೊಡೆದುಹಾಕಿ ವಿಶ್ವಬಂಧುತ್ವವನ್ನು ಕಲಿಸುವರೆ ಸಾರಿದರು. ಆರ್ಯಸಂಸ್ಕೃತಿ ಮತ್ತು ವಿಶ್ವಧರ್ಮವಾದ ಆರ್ಯಧರ್ಮದ ಧ್ವಜಪತಾಕೆಯು ಸೂರ್ಯಚಂದ್ರರಿರುವ ವರೆಗೆ ಚಿರಸ್ಥಾಯಿಯಾಗುವಂತೆ ತನ್ನ ಸರ್ವ ಭೋಗ ಭಾಗ್ಯಗಳನ್ನೂ ಬಂಧುಬಳಗವನ್ನೂ ತ್ಯಜಿಸಿ ಅಹರ್ನಿಶಿ ಪ್ರಯತ್ನಪಟ್ಟು ಕೊನೆಗೆ ಭಾರತಿಯ ಬಲಿದಾನವೇದಿಯಲ್ಲಿ ತನ್ನ ದೇಹವನ್ನೇ ಸಮರ್ಪಣೆಗೈದರು. ಆರ್ಯಸಮಾಜದ ತತ್ವಗಳಲ್ಲಿ ಸಜೀವದ ಸತ್ಯತೆಯಿದೆ. ಇಂದಿಗೆ ಲಕ್ಷಾಂತರ ಜನರು ಆರ್ಯಸಮಾಜದ ನಿಯಮಗಳನ್ನರಿತು ತಮ್ಮ ಜೀವನವನ್ನು ಸಾರ್ಥಕಗೊಳಿಸಲುದ್ಯುಕ್ತರಾಗಿರುತ್ತಾರೆ" ಎಂದು ಆರ್ಯಸಮಾಜವು ದೇಶಕ್ಕೆ ಮತ್ತು ಮನುಷ್ಯ ಸಮಾಜಕ್ಕೆ ಮಾಡುವ ಉಪಕಾರವನ್ನು ತಿಳಿಸಿ ಹೇಳಿದರು.

ಅನಂತರ ಸ್ವಾಮಿ ಓಂಕಾರ ಸಚ್ಚಿದಾನಂದಜೀ ಮಹಾರಾಜ ಸ್ವಾಮಿ ಜಗದೀಶ್ವರಾನಂದಜೀ ಪಂಡಿತ ವಿಜಯಶಂಕರಜೀ ಮತ್ತು ಶ್ರೀಯುತ ಪಿ ಸತ್ಯಾರ್ಥಿ ಸಿದ್ಧಾಂತ ವಿಶಾರದ ಮೊದಲಾದ ವಿದ್ವನ್ಮಣಿಗಳು ಆರ್ಯಸಮಾಜದ ಸಿದ್ಧಾಂತ ಕಾರ್ಯಕ್ಷೇತ್ರದಲ್ಲಿ ಆರ್ಯಸಮಾಜವು ಕೈಕೊಂಡ ಕೆಲಸವೇ ಮುಂತಾದ ವಿಷಯಗಳಲ್ಲಿ ಸಭಿಕರಿಗೆ ಮನದಟ್ಟುವಂತೆ ಬೋಧಿಸಿದರು. ಶ್ರೀಯುತ ಎಂ ಸಿ ಮಲ್ಲಪ್ಪನವರು ಫೋರ್ಟು ಆರ್ಯಸಮಾಜದ ಉತ್ಸಾಹಿ ಕಾರ್ಯಕರ್ತರನ್ನು ಪ್ರಶಂಸಿಸಿ ಆರ್ಥಿಕ ಅನಾನುಕೂಲತೆಯು ಕಾರ್ಯರಂಗದಲ್ಲಿ ಅವರನ್ನು ಬಹಳವಾಗಿ ಕಾಡುತ್ತದೆಂದು ಸೂಚಿಸಿ ಸಮಾಜದ ನಿಧಿಗೆ ಧನಸಹಾಯ ಮಾಡಬೇಕೆಂದು ಮನವಿ ಮಾಡಿಕೊಂಡರು.

ಕಾರ್ಯಕ್ರಮಗಳ ಮಧ್ಯೆ ಮಧ್ಯೆ ಶ್ರೀಮಾನ್ ಮಹದೇವ ಪ್ರಸಾದಜಿಯವರ ಭಜನಾ ನಾದವೂ, ಶ್ರೀಮತಿ ತಾರಾದೇವಿಯವರ ಗಾಯನವೂ ಮತ್ತು ಎಂ ಪಿ ಶ್ರೀಯಾಸರ ವ್ಯಾಯಾಮ ದೇಖಾವೆಯೂ ಇತ್ತು. ಕೊನೆಗೆ ಎಲ್ಲಾ ಕಾರ್ಯಗಳಲ್ಲಿ ಸಹಾಯಮಾಡಿದ ಸ್ವಯಂ ಸೇವಕರಿಗೆ ಧನ್ಯವಾದಗಳನ್ನರ್ಪಿಸಿ ಶಾಂತಿಪಾಠದೊಡನೆ ಸಭೆಯು ವಿಸರ್ಜನೆಯಾಯಿತು.

ಧಾರವಾಡ

ಸಾಧಾರಣ ಸಭೆಯ ನೋಟೀಸು

ಇದೇ ತಾ ೨೮-೫-೩೬ನೇ ರವಿವಾರ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆಯನ್ನು ಹಾವೇರಿಯಲ್ಲಿ ಸರಿಯಾಗಿ ಮಧ್ಯಾಹ್ನ ೩ ಗಂಟೆಗೆ ಇಡಬೇಕೆಂದು ಗೊತ್ತಾಗಿದೆ ೨ ಸಭೆಯಲ್ಲಿ ಕೆಳಗಿನ ವಿಷಯಗಳು ಚರ್ಚಿಸಲ್ಪಡುವವು ಹಾಗೂ ಅದೇ ಸಮಯದಲ್ಲಿ ಲಖನೌ ಕಾಂಗ್ರೆಸಿನಲ್ಲಿ ಪಾಸಾದ ಹೊಸ ಘಟನೆಯ ಪ್ರಕಾರ ಕರ್ನಾಟಕದ ಲಖ್ನೌ ಕಾಂಗ್ರೆಸ್ ಪ್ರತಿನಿಧಿಗಳು (ಅಂದರೆ ಈ ವರುಷ ಪ್ರಾಂತಿಕ ಕಾ ಕಮಿಟಿಯ ಸಭಾಸದರು) ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಗೆ ಕರ್ನಾಟಕದಿಂದ ಇಪ್ಪರು ಪ್ರತಿನಿಧಿಗಳನ್ನು ಆರಿಸುವ ಕೆಲಸವು ನಡೆಯುವುದು)

ವಿಷಯಗಳು.

೧ ಹೊಸ ಕಾಂಗ್ರೆಸ್ ಘಟನೆಯ ಮೇರೆಗೆ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಘಟನೆಯಲ್ಲಿ ಮಾಡತಕ್ಕ ಹಾಗೂ ಇತರ ಮಾರ್ಪಾಟುಗಳ ವಿಚಾರ ೨ ಇಪ್ಪರು ಎ ಐ ಸಿ ಸಿ ಸಭಾಸದರ ಚುನಾವಣೆ ೩ ಕ ಪ್ರಾ ಕಾಂ ಕಮಿಟಿಯ ಕೌನ್ಸಿಲಿಗೆ ನಾಲ್ವರು ಹೆಚ್ಚಿನ ಸಭಾಸದರನ್ನು ಆರಿಸುವದು ೪ ಪಾರ್ಲಿಮೆಂಟರಿ ಬೋರ್ಡಿನ ಚುನಾವಣೆ ೫ ಕಾರವಾರ ರಿಲೀಫ್ ಕಮಿಟಿಯ ವಿಚಾರ ೬ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕ್ಕಾಗಿ ನಿಧಿ ಕೂಡಿಸುವುದು ೭ ಬೆಂಗಳೂರು ಕೆಂಟೋನ್‌ಮೆಂಟು ಕಾಂ ಕಮಿಟಿಯ ಕೆಲಸದ ವಿಚಾರ ೮ ಸ್ವಯಂಸೇವಕ ದಳದ ವಿಚಾರ ೯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರ ವಿಷಯಗಳು

ಎ ಐ ಸಿ ಸಿ ಯ ಚುನಾವಣೆಯು—(ಅ) ಲಖನೌ ಕಾಂಗ್ರೆಸಿನ ಪ್ರತಿನಿಧಿಗಳಷ್ಟೇ ಈ ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಲ್ಲಬಹುದು (ಬ) ತಮ್ಮ ಪೂರ್ಣ ಹೆಸರು ತಾವು ಆರಿಸಲ್ಪಟ್ಟ ಮತದಾರ ಸಂಘ ತಮ್ಮ ವಿಳಾಸ ಇವುಗಳನ್ನು ತಮ್ಮ ಉಮೇದ್ವಾರಿಕೆಯ ಪತ್ರಿಕೆಯಲ್ಲಿ (Nomination Paper) ಬರೆದ ಉಮೇದುವಾರರು ಪತ್ರಿಕೆಯನ್ನು ಪ್ರಾಂತಿಕ ಕಾ ಕ ಯ ಕಚೇರಿಗೆ ಮೇ ತಾ ೨೬ನೇ ಮಧ್ಯಾಹ್ನದೊಳಗಾಗಿ ಮುಟ್ಟುವಂತೆ ಕಳಿಸಬೇಕು (ಕ) ಚುನಾವಣೆಯು ಸಭೆಯ ಮನೆಯಲ್ಲಿಯೇ ಆಗತಕ್ಕದ್ದು ಅಂಚೆ ಮೂಲಕ ಆಗಲಾರದೆಂದು ಮೇಲಧಿಕಾರಿಗಳ ನಿರ್ಣಯ ಕೊಟ್ಟಿದ್ದಾರೆ ಆದುದರಿಂದ ಮತಕೊಡಬೇಕೆನ್ನುವವರು ಸಭೆಗೆ ಬಂದೇ ತೀರಬೇಕು (ಡ) ಚುನಾವಣೆಯು ಪರಿಮಾಣ ಪದ್ಧತಿಯಿಂದ (Proportional representation) ನಡೆಯುವುದು

ಠರಾವು ಇಲ್ಲವೆ ಸೂಚನೆಗಳು —ಸಭೆಯ ಮುಂದೆ ಠರಾವುಗಳನ್ನು ಇಡುವ ಇಚ್ಛೆಯುಳ್ಳವರು ಇಲ್ಲವೆ ಸದ್ಯದ ಘಟನೆಯಲ್ಲಿ ಏನಾದರೂ ಮಾರ್ಪಾಟುಗಳನ್ನು ಸೂಚಿಸುವುದಿದ್ದರೆ ಅವುಗಳನ್ನು ಕೆಳಗಿನವರಲ್ಲಿ ಸ್ಪಷ್ಟವಾಗಿ ಬರೆದು ೨೦ರೊಳಗೆ ಕಚೇರಿಗೆ ಮುಟ್ಟುವಂತೆ ಕಳಿಸಬೇಕು

ರಂಗನಾಥ ದಿವಾಕರ,
ಗೌ. ಕಾರ್ಯದರ್ಶಿ

TEST YOUR EYES

By the Electro Ophthalmoscope.

All Varities of
Frames & Lenses.
At
The Mangalore Trading Association Ltd
Sight Testing Ophthalmic Opticians
Car Street MANGALORE

Distributors for South Kanara
Raghavendra Ranga Pai, Car Street Mangalore
ಕುಂದಾಪುರ ಪ್ರವರ್ತಕರು:—ಕಾಮತ್ಸ್ ಸ್ವದೇಶೀ ಎಂಪೋರಿಯಂ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯು, ಕಟಪಾಡಿ, ದ ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು

ಮೃತ್ಯುಂಜಯಾಸವ—ನಿತ್ರಾಣಕ್ಕೆ ಅತ್ಯಂತ ಗುಣಕಾರಿ
ಮಹಾಮದನ ಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ
ಹಿಮಸಾಗರ ತೈಲ—ನಿದ್ರಾ ನಾಶಕ್ಕೆ ಅತೀ ಉಪಯುಕ್ತ
ಮಹಾನಾರಾಯಣ ತೈಲ—ಪಕ್ಷವಾತಕ್ಕೆ ಅತ್ಯಂತ ಗುಣಕಾರಿ
ಗರ್ಭಪಾಲ—ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ
ಗುಡಪಿಪ್ಪಲಿ—ಲಿವರ್ ರೋಗಕ್ಕೆ ಅತ್ಯುತ್ತಮ

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯು, ಕಟಪಾಡಿ, ದಕ್ಷಿಣ ಕನ್ನಡ.

ರಾಷ್ಟ್ರವೀರ

ಶ್ರೀ ಬಾಬು ಸುಭಾಶ್ಚಂದ್ರ ಭೋಸರು

ಲೇಖಕ:—ಯಂ ಬಿ ನರ್ಸಪ್ಪ, ಮಂಗಳೂರು.

ಆಧುನಿಕ ಭಾರತದಲ್ಲಿ ಮನೋ-ವಾಕ್-ಕಾಯಗಳಲ್ಲಿ ಪುರುಷತ್ವವನ್ನು ತೋರಿಸಿದ ಸ್ವಾರ್ಥತ್ಯಾಗಿ ಧುರೀಣರೆಂದರೆ ಶ್ರೀ ಜವಾಹರ ಲಾಲ ಹಾಗೂ ಸುಭಾಶ್ಚಂದ್ರ ಭೋಸರು ಇವರಿಬ್ಬರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಗುಣ ಅಧಿಕವಿರುತ್ತದೆ. ಇವರಲ್ಲಿ ಲೇಬರ್ (ಕೂಲಿ) ಜನಾಂಗವನ್ನು ಆಕರ್ಷಿಸಿದವರು ಸುಭಾಷ್ ಬಾಬುಗಳು, ಇವರಲ್ಲಿ ಅಚ್ಚ ಬಂಗಾಳಿ ರಕ್ತವು ಹರಿಯುತ್ತಿರುವುದರಿಂದ ಸ್ವಲ್ಪ ತೀವ್ರವಾದಿಗಳಾಗಿದ್ದಾರೆ. ಇದರಿಂದಲೇ ಇವರ ಸ್ವದೇಶ ಪ್ರೇಮವು ಎಷ್ಟರ ಮಟ್ಟಿಗಿದೆ ಎಂದು ತಿಳಿಯಬಹುದು. ಪ್ರಚಲಿತ ಭಾರತಕ್ಕೆ "ಬುದ್ಧನಂತಹ ಯೋಗಿಯು ಅಗತ್ಯವಿಲ್ಲ ಶಿವಛತ್ರಪತಿಯಂತಹ ನಾಯಕನ ಅಗತ್ಯವುಂಟೆಂಬ ಅಭಿಪ್ರಾಯವುಳ್ಳವರಾಗಿರುವರು

ಅಗರ್ಭ ಶ್ರೀಮಂತತನ, ಸಂಪೂರ್ಣ ವಿದ್ಯೆಯ ಗೌರವ, ಆದರ ಸತ್ಕಾರಗಳು ಬಂಗಾಳದ ಭೋಸ್ ಮನೆತನಗಳಿಗೆ ಸಲ್ಲತಕ್ಕಂಥಾದ್ದು ಕಾರಣ ಬಂಗಾಳದ ಭೋಸ್ ಮನೆತನಗಳು ಯಥಾವಾಗಲೂ ಪ್ರಸಿದ್ಧಿ ಹೊಂದುತ್ತಿರುವುವು ಅವರಲ್ಲಿ ಸುಭಾಶ್ಚಂದ್ರ ಭೋಸರ ಮನೆತನವು ಪ್ರಾಮುಖ್ಯವಾದದ್ದು ಎಳೆಂಟು ಜನ ಅಣ್ಣ ತಮ್ಮಂದಿರಿದ್ದು ಒಬ್ಬರನ್ನೊಬ್ಬರು ಆದರಿಸುತ್ತಿರುವರಲ್ಲದೆ ಒಬ್ಬರಿಂದೊಬ್ಬರು ಬುದ್ಧಿವಂತರೂ ಸಮಾಜ ಸೇವಕರೂ, ಸ್ವಾತಂತ್ರ್ಯಯುತರೂ ಆಗಿರುವರು ಈ ಅಣ್ಣತಮ್ಮಂದಿರಲ್ಲಿ ಪ್ರಸಿದ್ಧಿಗೆ ಬಂದವರೆಂದರೆ ಮೊದಲನೆಯವರು ಸುಭಾಶ್ಚಂದ್ರ ಭೋಸರು ಎರಡನೆಯವರು ಇವರ ಅಣ್ಣ ಶರಶ್ಚಂದ್ರ ಭೋಸರು ಶರಶ್ಚಂದ್ರ ಭೋಸರು ಪ್ರಸಿದ್ಧ ವಕೀಲರಾಗಿ ತಿಂಗಳೊಂದಕ್ಕೆ ಸುಮಾರು ಇಪ್ಪತ್ತು ಸಾವಿರ ಸಂಪಾದನೆ ಹೊಂದುತ್ತಿದ್ದರು ಆದರೆ ಅವರನ್ನು ಸುಭಾಷ್ ಬಾಬುಗಳ ಜೊತೆ ಬಂಧನದಲ್ಲಿಟ್ಟು ಇತ್ತೀಚೆಗೆ ಕಳೆದ ವರ್ಷ ಯಾವದೊಂದೂ ಕಷ್ಟ ಇಲ್ಲವೆಂದು ಸಾಬೀತಾಗಿ ಬಿಡಲ್ಪಟ್ಟು ಈಗ ಸ್ವತಂತ್ರರಾಗಿರುವರು ಇವರು ಕೂಡಾ ದೇಶಸೇವೆಗಾಗಿ ದುಮುಕುತ್ತಿದ್ದರು ಆದರೆ ಕುಟುಂಬದ ಭಾರ ಹೊತ್ತಿರುವುದರಿಂದ ತತ್ಕಾಲಕ್ಕೆ ವಕಾಲತನ್ನು ಕೈಕೊಂಡಿರುವರು ಸುಭಾಷರೆಂದರೆ ತಾಯಿತಂದೆಯರಿಗೂ ಅಣ್ಣತಮ್ಮಂದಿರಿಗೂ ಬಹಳ ಪ್ರೇಮ ಅಂಥಾ ಸಾತ್ವಿಕ ಗುಣವು ಅವರಲ್ಲಿದೆ ಅಂಥಾ ಸದ್ಗುಣಸಂಪನ್ನರು ಇಂದು ಜೈಲಿನ ಸರಳುಗಳ ಮಧ್ಯದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವರು

ಸುಭಾಷರು ಸಣ್ಣ ಪ್ರಾಯದಲ್ಲೇ ಸಕಲ ವಿದ್ಯೆಗಳನ್ನು ಕಲಿತು ಐ ಸಿ ಯಸ ಪಾಸಾಗಿ ಒಂದು ಕಡೆ ಅಸಿಸ್ಟಾಂಟ್ ಕಮಿಶನರ ಕೆಲಸವನ್ನು ಹೊಂದಿದ್ದರು ಭಾರತಮಾತೆಯ ಒಳ್ಳೆ ತಕ್ಕಂಬಂತೆ ಬಹು ಬೇಗನೇ ಆಳರಸರ ನೌಕರಿಯನ್ನು ತ್ಯಜಿಸಿ ದೇಶಸೇವೆಗಿಳಿದರು ಅಂಥಾ ನೌಕರಿಯಲ್ಲೇ ಇದ್ದಿದ್ದರೆ ಈಗ ಹೈಕೋರ್ಟ್ ಜಡ್ಜ ಪದವಿ ಯಾ ಅದಕ್ಕಿಂತಲೂ ಉತ್ತಮತರದ ನೌಕರನಾಗಿ ಬೀವಿಯಲ್ಲಿರಲಹುದಿತ್ತು ಆದರೆ ಅಂಥಾ ಬಾಲಹಿಡಿಯುವ ನೌಕರಿಯು ತನಗೆ ಅಗತ್ಯವಿಲ್ಲವೆಂದು ತೋರಿ ಭಾರತದ ಸ್ವಾತಂತ್ರ್ಯ ಸಮರಕ್ಕೆ ದುಮುಕಿದರು. ಅಂದಿನಿಂದ ಇವರಲ್ಲಿ ಆಳರಸವಾಗಿ ಭೇದಬುದ್ಧಿಯು ಉತ್ಪನ್ನವಾಗಿ ಅದು ಇತ್ತೀಚೆಗೆ ಪರಮಾವಧಿಗೆ ಮುಟ್ಟಿರುತ್ತದೆ ಅಂಥಾ ಬೇಧಬುದ್ಧಿಯು ಎಷ್ಟರವರೆಗಿದೆ ಎಂದರೆ ಮಾತಾಡಿದರೆ ತಪ್ಪು, ಬರೆದರೆ ತಪ್ಪು, ಚಲಿಸಿದರೆ ತಪ್ಪು, ಈ ಸ್ಥಿತಿಗೆ ಬಂದಿರುತ್ತದೆ ಆದರೆ ಸ್ವಾತಂತ್ರ್ಯ ರಕ್ತವು ಕದಿಯುತ್ತಿರುವುದರಿಂದ ಬಂಗಾಳದ ಸಿಂಹನು ಇದಕ್ಕೆ ಸೊಪ್ಪು ಹಾಕುತ್ತಿರುವುದಿಲ್ಲ ತನ್ನ ದೇಹವನ್ನೇ ಭಾರತ ಮಾತೆಗೆ ಧಾರೆ ಬರೆದು ಕೊಟ್ಟಿರುವುದರಿಂದ ಅವರಿಗೆ ಇನ್ನಿತರ ಭಯವೆಲ್ಲಿಂದ ಬರಬೇಕು?

ಇದೇ (ಭಾರತದ) ಬಂಗಾಳದ ತರುಣ ಸಾಮ್ರಾಜ್ಯವನ್ನೇ ತನ್ನ ಕಡೆಗೆ ಆಕರ್ಷಿಸಿರುತ್ತಾರೆ ಬಂಗಾಳದ ಕಾಂಗ್ರೆಸ್ಸಿನ ನಾಯಕರೂ, ಪ್ರಪಂಚದಲ್ಲಿ ಪ್ರಸಿದ್ಧಿ ಹೊಂದಿದ ಕಲ್ಕತ್ತಾ ನಗರ ಸಭೆಯ ಅಧ್ಯಕ್ಷರೂ ಆಗಿ, ಅಪ್ರತಿಮ ದೇಶಸೇವೆಯನ್ನು ಮಾಡಿರುವರು 1928ರಲ್ಲಿ ಕಲ್ಕತ್ತದಲ್ಲಾದ ರಾಷ್ಟ್ರಸಭೆಯ ಅಧ್ಯಕ್ಷ ಪದವಿಯು ಕೀರ್ತಿಶೇಷ ಮೋತಿ ಲಾಲ ನೆಹರೂರವರಿಗೆ ದೊರಕಿತು ಆ ಸಮಯದಲ್ಲಿ ಸುಭಾಷರು ಸ್ವಯಂಸೇವಕ ದಳದ ನಾಯಕರಿಗೆ ಅಂಥಾ ಮುಖ್ಯವಾದ ರಾಷ್ಟ್ರಸಭೆಯ ಕಾರ್ಯಕಲಾಪಗಳನ್ನು ಸಂಗವಾಗಿ ನೆರವೇರಿಸಿದ್ದರು ಅಂಥಾ ಶಿಸ್ತು ನಿಯಮಗಳನ್ನು ಮೋತಿಲಾಲರೇ ಹೊಗಳಿರುವರೆಂದರೆ ಮತ್ತೇನು? ಅಂಥಾ ದಳಪತಿಯ ಚಿತ್ರವು

ಈಗಲೂ ಭಾರತದ ಕಣ್ಣಿನ ಮುಂದೆ ನಿಂತಿರುವುದೆಂದರೆ ಹೆಚ್ಚಾಗಲಾರದು ಅಂಥಾ ಅಪ್ರತಿಮ ಭಾರತ ವೀರನು ಇಂದು ಕತ್ತಲೆ ಕೋಣೆಯೊಳಗೆ ಭಾರತಮಾತೆಯ ವಿಷಯದಲ್ಲಿ ಚಿಂತಿಸುತ್ತಿರುವನು ಹಾ! ಭಾರತ ಪುತ್ರನೇ ನೀನೇ ಧನ್ಯ

ಲಾಹೋರ ಕಾಂಗ್ರೆಸಿನ ನಂತರ ಉಂಟಾದ ಜಾಗೃತಿಯಿಂದ ಇಡೀ ದೇಶದಲ್ಲಿ ಸಂದರ್ಭೋಚಿತ ಕಾಯಿದೆಭಂಗವು ಶುರುವಾಯಿತು ಆ ಭಾಗವಹಿಸುವಲ್ಲಿಯೂ ಶ್ರೀ ಸುಭಾಷರು ತನ್ನ ಪಾಲಿನ ಸೇವೆಯನ್ನು ಮಾಡಿದರು ಕಲ್ಕತ್ತದ ಒಂದು ಕಡೆಯಲ್ಲಿ ಮೀಟಿಂಗು ನಡೆಯುತ್ತಿತ್ತು ಸುಭಾಷರೂ ಅದರಲ್ಲಿದ್ದರು ಪೋಲೀಸರು ಮೀಟಿಂಗನ್ನು ಚದರಿಸುವ ಭರದಲ್ಲಿ ಸುಭಾಷರಿಗೆ ಕೈಗೆ ಲಾಠಿಪೆಟ್ಟು ಬಿತ್ತು ಅಂಥಾ ನೋವನ್ನು ಹೊಂದಿಯೂ ಸುಭಾಷರು ಹಸನ್ಮುಖರಾಗಿದ್ದು ದೇಶಸೇವೆಯ ಕಾರ್ಯದಲ್ಲಿ ಇದಕ್ಕಿಂತ ಹೆಚ್ಚಿನ ಪೆಟ್ಟನ್ನು ತಿನ್ನಲೂ ನಾನು ತಯಾರಿದ್ದೇನೆ'' ಎಂಬ ಮಾತನ್ನು ಆಡಿದ್ದರು ಅಂಥಾ ಅಹಿಂಸಾ ಮೂರ್ತಿಯನ್ನು ಹಿಂಸಾತುರನೆಂದು ಆರೋಪಮಾಡಿ ಬಂಗಾಳ ಸರಕಾರವು ದ್ವೇಷವನ್ನು ಸಾಧಿಸುತ್ತಲೇ ಇದೆ ಅಂಥಾ ತ್ಯಾಗಮೂರ್ತಿಯು ಇಂದು ಜೈಲಲ್ಲಿ ಕೊಳೆಯುತ್ತಿರುವುದು ಪರದಾಸ್ಯದ ಬಲೆಯೊಳಗೆ ಬಿದ್ದು ನರಳುತ್ತಿರುವ ಭಾರತೀಯರಾದ ನಮಗೆ ಅವಮಾನವಹುದು ಆದರೆ ನಮ್ಮಲ್ಲಿ ಅವರನ್ನು ಬಿಡಿಸುವ ಶಕ್ತಿಯುದೆಯೇ? ಆಳರಸರ ಹೃದಯ ಪರಿವರ್ತನವಾಗದೆ ಸಾಧ್ಯವಿಲ್ಲ ಇವರ ಅಣ್ಣ ಶರಶ್ಚಂದ್ರ ಭೋಸರ ಮೇಲಿನ ಆರೋಪದಂತೆ ಕಡೆಗೆ ಸರಿಯಾದ ತಪ್ಪುಗಳು ಕಾಣದೆ ಬಂಧವಿಮುಕ್ತ ಮಾಡಲೂಬಹುದು

ಕರಾಚಿ ಕಾಂಗ್ರೆಸ್ಸಿನ ನಂತರ ಉಂಟಾದ, ಕಾಯಿದೆಭಂಗ ಚಳವಳದ ಸಮಯ ಇವರು ಅಣ್ಣತಮ್ಮಂದಿರಿಬ್ಬರೂ ಬಂಧಿಸಲ್ಪಟ್ಟು ಯಾವುದೋ ಪುರಾತನವಾದ ರೆಗ್ಯುಲೇಶನ್ ಪ್ರಕಾರ ತಮಗೆ ಕುಶಿಬಂದ ಸಮಯದ ವರೇಗೆ ಜೈಲಲ್ಲಿಟ್ಟರು ಅದರೊಳಗೆ ಸುಭಾಷರಿಗೆ ಉದರ ರೋಗವು ಪ್ರಾಪ್ತಿಯಾಗಿ ಅವರನ್ನು ಪರದೇಶಕ್ಕೆ ಹೋಗಲು ಬಿಟ್ಟುಬಿಟ್ಟರು ಆದರೆ ಜಹಜು ಹತ್ತುವ ವರೇಗೆ ಸ್ವಾತಂತ್ರ್ಯತೆ ಇರಲಿಲ್ಲ ಆಸ್ಟ್ರೀಯಾ ದೇಶದ ವಿಯನ್ನಾದಲ್ಲಿ ಆರೋಗ್ಯಲಾಭವನ್ನು ಹೊಂದುತ್ತಿದ್ದರು ಅವರ ಜೊತೆಗೆ ಶ್ರೀ ವಿಟ್ಠಲ ಬಾಯಿ ಪಟೇಲರು ಸೇರಿಕೊಂಡರು ಭಾರತ ಮಾತೆಯ ಇಬ್ಬರು ಸುಪುತ್ರರು ಜೊತೆ ಸೇರಿ ವಿದೇಶಗಳಲ್ಲಿ ಭಾರತ ಮಾತೆಯ ಸೇವೆಯನ್ನು ಮಾಡುತ್ತಿದ್ದರು ವಿಟ್ಠಲ ಬಾಯಿ ಪಟೇಲರೂ ಆರೋಗ್ಯಲಾಭಕ್ಕಾಗಿ ವಿದೇಶಕ್ಕೆ ಹೋದವರು ಅಮೇರಿಕದ ವರೇಗೂ ಹೋಗಿ ಪ್ರಚಲಿತ ಭಾರತದಲ್ಲಿ ನಡೆಯುವ ವಿಷಯಗಳನ್ನು ಮುಂದಿಟ್ಟು ಮಾಡಿದ್ದರು ಆದರೆ ಅವರ ಅನಾರೋಗ್ಯವು ಬಹು ಬೇಗನೇ ಕೆಟ್ಟು ಹೋಯಿತು ಅಂಥಾ ಎಸೆಂಬ್ಲಿ ಅಧ್ಯಕ್ಷರೂ ದೇಶಸೇವೆಯ ನೆವನದಿಂದ ಆಳರಸರ ಬಂಧನಕ್ಕೊಳಗಾಗಿದ್ದರು ಶ್ರೀ ಸುಭಾಷರು ಇವರಿಗೆ ಅಚ್ಚುಮೆಚ್ಚಿನವರಾದರು ಸುಭಾಷರ ವಾಕ್ಪಟುತ್ವ, ಬುದ್ಧಿ ಕೌಶಲತೆ, ಧೀರತ್ವವನ್ನು ನೋಡಿ ತಲೆದೂಗಿದರು ದೇಶ, ವಿದೇಶಗಳಲ್ಲಿ ಕೂಡಾ ನಿರ್ಭಯರಾಗಿ ನಡೆಯುತ್ತಿರುವ ಸುಭಾಷರಲ್ಲಿ ಮನಸೋತರು ತನ್ನಲ್ಲಿರುವ ಒಬ್ಬ ಬುದ್ಧಿಯನ್ನು ಸುಭಾಷರಿಗೆ ಧಾರೆ ಎರೆದು ಕೊಟ್ಟಿರುವರೆಂದ ಹೇಳಬಹುದು ಹೆಚ್ಚೇಕೆ ತನ್ನ ಹಣದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ವಿದೇಶಗಳಲ್ಲಿ ನಮ್ಮ ದೇಶಕ್ಕಾಗಿ ಪ್ರಚಾರ ಕಾರ್ಯ ಮಾಡಲು ವಿನಿಯೋಗಿಸುವಂತೆ ವೀಲು ಮಾಡಿದ್ದರು ಆದರೆ ಸದರಿ ಹಣವು ಸುಭಾಷರಿಗೆ ಇನ್ನು ದೊರಕಲಿಲ್ಲ

ದೇಶ ಧುರೀಣರ ಅಸ್ವಾಸ್ಥ್ಯರೋಗದ ಸಮಯ ವಿದೇಶದಲ್ಲಿ ಕೂಡಾ ಸುಭಾಷರು ತನ್ನ ಕೈಲಾದಷ್ಟು ಸಹಾಯ ಮಾಡುತ್ತಿದ್ದರು ಕೀರ್ತಿಶೇಷ ವಿಟ್ಠಲ ಬಾಯಿ ಪಟೇಲರ ಅಂತಿಮ ಕಾಲದಲ್ಲಿ ತನ್ನ ಆರೋಗ್ಯವನ್ನು ಕೂಡಾ ಲಕ್ಷಿಸದೆ ಹಗಲಿರುಳು ಪರಿಚಾರಕರಂತೆ ಕೆಲಸ ಮಾಡಿದ್ದರು ದೇಶದ ಅಪ್ರತಿಮ ವೀರನನ್ನು ಉಳಿಸುವ ಉದ್ಯಮದಲ್ಲಿ ಬಹಳ ಪ್ರಯತ್ನ ಮಾಡಿದ್ದರು ಆದರೆ ಕಾಲನ ಮುಂದೆ ಮಾನವರ ಶಕ್ತಿಯು ಎಲ್ಲಿ ನಿಲ್ಲುವುದು? ಮೃತ್ಯುವು ಪಟೇಲರ ಜೀವವನ್ನು ಸೆಳೆದೇಬಿಟ್ಟಿತು ಹತ್ತಿರದ ಬಂಧುಗಳು ಸತ್ತರೂ ಅಂಥಾ ದುಃಖ ಬರುತ್ತಿರಲಿಲ್ಲ ಅದಕ್ಕಿಂತಲೂ ಮಿಕ್ಕಿದ ದುಃಖವನ್ನು ಸುಭಾಷರು ಸಹಿಸಿಕೊಂಡರು ಮೃತರ ಕಳೇಬರವನ್ನು ಭಾರತೀಯರಿಗೆ ತೋರಿಸುವ ಸಾಹಸ ಕಾರ್ಯವನ್ನು ಬಹಳ ಜತನದಿಂದ ಮಾಡಿ ಹಿಂದುಸ್ಥಾನಕ್ಕೆ ಕಳುಹಿಸಿ ಕೊಟ್ಟರು ಇದರಿಂದಂತೂ ಭಾರತೀಯರಿಗೆ ಸುಭಾಷರಲ್ಲಿ ಅತ್ಯಧಿಕ ಪ್ರೇಮವು ಉಂಟಾಯಿತು ರಾಷ್ಟ್ರಪತಿ ಜವಹರಲಾಲರ ಧರ್ಮಪತ್ನಿ ಕೂಡಾ ಆರೋಗ್ಯ ಲಾಭಕ್ಕಾಗಿ ವಿಯನ್ನಕ್ಕೆ ಹೋದ ಸಮಯದಲ್ಲಿ ತನ್ನಿಂದ ಕೂಡಿದ ಸಹಾಯವನ್ನು ಮಾಡಿದ್ದರು. ಇದರಿಂದ ದೇಶದ ಎಡಬಲ ಕಣ್ಣುಗಳಂತಿರುವ ಇಬ್ಬರು ತರುಣ ವೀರರು ಜೊತೆ ಸೇರುವಂತಾಗಿ ಮುಂಚಿನಿಂದ ಇದ್ದ ಮನಕ್ಲೇಷವು ದೂರವಾಗಿ ಒಬ್ಬರನ್ನೊಬ್ಬರು ಅನ್ಯೋನ್ಯ ಭಾವದಿಂದಿರುವಂತಾಯಿತು. ಧನ್ಯ ಭಾರತಮಾತೆಯೇ ನೀನು ಧನ್ಯ ಇಂಥಾ ಲೋಕ ಪೂಜಿತ ಪುತ್ರರನ್ನು ಪಡೆದು ನೀನ ವಿದೇಶಗಳ ನಗರ ಸಭೆಗಳ ಮಾನಪತ್ರ, ಅಧ್ಯ ಧುರೀಣರ ಸಭೆಗಳಿಗೆ ಆಮಂತ್ರಣ ವಿಶ್ವವಿದ್ಯಾಲಯಗಳಲ್ಲಿ ಭಾಷಣ, ಹೋದಲ್ಲಿ ರಾಜಸತ್ಕಾರ, ಅಲ್ಲಲ್ಲಿಯ ಸರಕಾರ ಮೇಲುದ್ಯೋಗಸ್ತರೊಡನೆ ಹಸ್ತಲಾಘವ, ಇವುಗಳಿಂದ ಸತ್ಕೃತರಾದ ಸುಭಾಷರಿಗೆ ತನ್ನ ನಿಜ ಮಾತೆಯ ಮಡಿಲಲ್ಲಿ ಕಾಲೂರಲು ಸಾಧ್ಯವಿಲ್ಲ ವಿದೇಶಗಳಲ್ಲಿ ಎಲ್ಲಿ ಹೋದರೂ ತಡೆಯಿಲ್ಲ ಯಾವ ಪ್ರಚಾರ ಕಾರ್ಯವನ್ನು ಮಾಡಿದರೂ ಬಂಧಕವಿಲ್ಲ ಯಾವ ಪುಸ್ತಕವನ್ನೂ, ಲೇಖನವನ್ನೂ ಬರೆದರೂ ಪ್ರತಿಬಂಧಕವಿಲ್ಲ ಅವರನ್ನು ನೋಡಲು ಕೂಡಾ ಭಾರತೀಯರಿಗೆ ಅನುಕೂಲವಿಲ್ಲ. ಹೆಚ್ಚೇಕೆ ಹಿಂದುಸ್ಥಾನಕ್ಕೆ ಕಾಲಿಟ್ಟೊಡನೆಯೇ ಸೆರೆಮನೆ ಪ್ರಾಪ್ತಿ ಇದು ಆಳರಸರ ಶಾಂತಿಪ್ರಿಯ ನಡತೆಗಳು!

ನ್ಯಾಯವಿಧಾಯಕ ಸಭೆಯಲ್ಲಿ ಕೆಲವೇ ಸಮಯದ ಮುಂಚೆ ಬಂದ ಪ್ರಶ್ನೆಗಳಲ್ಲಿ ಸುಭಾಷರು ವಿದೇಶದಿಂದ ಹಿಂದೂದೇಶಕ್ಕೆ ಬಂದಲ್ಲಿ ಅವರಿಗೆ ಯಾವ ತರದ ಬಂಧನವೂ ಇಲ್ಲದೆ ಸ್ವತಂತ್ರರಾಗಿರುವರೆಂದು ಭರವಸೆ ಇತ್ತು. ಆದರೆ ಅದೇ ಸುಭಾಷರು ಲಕ್ನೋ ಕಾಂಗ್ರೆಸ್ಸಿಗೆ ಬಂದು ಅಧ್ಯಕ್ಷ ಜವಾಹರಲಾಲರ ಜೊತೆ ದೇಶ ಸೇವೆಯನ್ನು ಮಾಡುವೆನೆಂದು ಹಿಂದೂದೇಶಕ್ಕೆ ಹೊರಡುವ ಸಮಯಕ್ಕೆ ಕೂಡಲೇ ಬಂತು ನೋಟೀಸು ಏನೆಂದು? ಹಿಂದುಸ್ಥಾನಕ್ಕೆ ಕಾಲಿಟ್ಟರೆ ಕೋಣೆಯೊಳಗೆ ಹಾಕುತ್ತೇವೆಂದು ಹಾ! ಪರದಾಸ್ಯದ ಪ್ರಭಾವವೇ ಪಂಜರದಲ್ಲಿರುವ ಹುಲಿಯು ಏನು ಮಾಡಬಲ್ಲದು? ಅಂಕುಶ ಹಿಡಿದು ಕೂತಿರುವ ಮಾವತನಿಗೆ ದೊಡ್ಡ ಶಕ್ತಿವುಳ್ಳ ಆನೆಯು ಏನು ಮಾಡಬಲ್ಲದು? ತಮ್ಮ ತಮ್ಮ ಶಕ್ತಿಯು ತಮತಮಗೆ ಗೊತ್ತಿರುವುದರಿಂದಲೇ ಕಾರ್ಯಗಳು ಹಾಗಿ ಹೋಗುತ್ತವೆ

ಹಿಂದುಸ್ಥಾನಕ್ಕೆ ಹೊರಟು ಬರುವ ಸುಭಾಷರಿಗೆ ಜೈಲ ಪ್ರಾಪ್ತವಾಗುತ್ತದೆಂದು ತಿಳಿದ ಭಾರತವು ಒಂದೊಮ್ಮೆ ಆಶ್ಚರ್ಯವನ್ನು, ಖೇದವನ್ನೂ ಹೊಂದಿತು ಅಧ್ಯಕ್ಷ ಧುರೀಣರಿಗೆ ಏನು ಮಾಡುವುದೆಂದು ಗೊತ್ತಾಗಲಿಲ್ಲ ಆರೋಗ್ಯದ ನಿಮಿತ್ತ ಸುಭಾಷರ ವಿದೇಶದಲ್ಲೇ ಇದ್ದು ಸಾಧ್ಯವಾದಷ್ಟು ದೇಶಸೇವೆ ಮಾಡಲೆಂದು ಕೆಲವರೂ ಅವರು ಹಿಂದುಸ್ಥಾನದಲ್ಲಿ ಹೆಚ್ಚಿನ ಭಾರತಸೇವೆ ನಡೆಯಬಹುದೆಂದು ಕೆಲವರೂ, ಅಭಿಪ್ರಾಯ ಪಟ್ಟರೆ ಹೊರತು ಒಬ್ಬರೂ ಅವರಿಗೆ ತಿಳಿಸುವ ಧೈರ್ಯ ಮಾಡಲಿಲ್ಲ ರಾಷ್ಟ್ರಪತಿ ಜವಾಹರರು ಅವರನ್ನು ಬರಲು ಆ ಮೇಲೆ ತಿಳಿಸಿದರೂ ... ಚೆಯೇ ದೇಶ ಪ್ರೇಮಿ ಸುಭಾಷರ ತನ್ನ ಜನ್ಮಮಾತೆಯ ಸೇವೆಯನ್ನು ಮಾಡಲು ತನ್ನ ಸರ್ವ ಭಾರವನ್ನೂ ಮಾತೆಗೆ ಅರ್ಪಿಸಿ ಹೊರಟೇ ಬಿಟ್ಟರು ಹಡಗಿನಲ್ಲಿ ಅಲ್ಲಲ್ಲಿ ಬಂಧನದ ಎಚ್ಚರಿಕೆ ಕೊಟ್ಟರೂ ಕ್ಯಾಪ್ಟನನ ಕಡೆಯಿಂದ ಸಾಧ್ಯವಾಗಲಿಲ್ಲ ಅಂತೂ ಬೊಂಬಾಯಿಗೆ ಸ್ಟೀಮರು ಮುಟ್ಟಿದೊಡನೆ ದೊಡ್ಡ ಮಿಲಿಟರೀ ಸೈನ್ಯದೊಡನೆ ಬಂತೆ ಬಂಧಿಸಿ ಈಗ ಗಾಂಧಿಜಿಯಿಂದ ಪ್ರಸಿದ್ಧ ಹೊಂದಿದ ಯರವಾಡಾ ಜೈಲಿನ ಸೋಭತಿಯಾಗಿರುವರು ದೈವಲೀಲೆ ಅಗಾಧವಾಗಿರುವುದಲ್ಲವೇ ಇಲ್ಲದಿದ್ದರೆ ಇಲ್ಲದ ನೆವನವನ್ನು ಹಿಡಿದು ಸುಭಾಷರನ್ನು ಬಂಧಿಸಬೇಕೇ? ದೇಶದ ಸ್ವಾತಂತ್ರ್ಯಕ್ಕಾಗಿ ಕೆಲಸಮಾಡುವ ಒಂದೇ ತಪ್ಪಲ್ಲದೆ ಅವರಲ್ಲಿ ಬೇರೆ ಯಾವ ದ್ರೋಹದ ಕೆಲಸವಿರುವುದಿಲ್ಲ ಪರದಾಸ್ಯದಿಂದ ನರಳುತ್ತಿರುವ ಅವರವರ ಕರ್ತವ್ಯವಲ್ಲವೇ? ಆದರೆ ಹಿಂದುಸ್ಥಾನದಲ್ಲಿ ಮಾತ್ರ ಅದು ರಾಜದ್ರೋಹವಾಗುವುದು ಸಾಮ್ರಾಜ್ಯವಾದೀ ಆಳರಸರಿಗೆ ಇದು ಯುಕ್ತವಾದ್ದೆಂದು ತೋರಬಹುದು ಆದರೆ ಪ್ರಪಂಚವು ಇವನ್ನು ಧಿಕ್ಕರಿಸುವುದು. ಆಗಲೇ ಪಾರ್ಲಿಮೆಂಟಿನ ಸದಸ್ಯರಲ್ಲಿ ಕೆಲವರು ಕೂಡಾ ವಿರೋಧವನ್ನು ಸೂಚಿಸಿರುವರು.

ಇದೇ ಕಳೆದ ತಾ 10ನೇ ಆದಿತ್ಯವಾರವು ಸಮಗ್ರ ಭಾರತದಲ್ಲಿ ಸುಭಾಷರ ಬಂಧನದ ದಿನವೆಂದು ಆಚರಿಸಿತು, ದೇಶದ ಮೂಲೆ ಮೂಲೆಗಳಲ್ಲಿಯೂ, ಸಭೆ ಜರಗಿಸಿ ಏಕಕಂಠದಿಂದ ಬಂಧನವನ್ನು ವಿರೋಧಿಸಿತು ಸುಭಾಷರ ಗುಣಕಥನ, ಅವರ ದೇಶಪ್ರೇಮ, ಧೀರತ್ವವನ್ನು ಬಾಯಿ ತುಂಬಾ ಹೊಗಳಿದರು ಅವರ ಬಂಧನಕ್ಕಾಗಿ ಪರಿತಪಿಸಿದರು ಪರದಾಸ್ಯದ ನೆರಳಲ್ಲಿರುವ ಭಾರತೀಯರಾದ ನಾವು ಇನ್ನೇನು ಮಾಡಲಾಪೆವು ಆಳರಸರ ಮನೋಪರಿವರ್ತನವಾಗಲು ಇಷ್ಟು ಸಾಕಾಗದೇ? ದೇಶದ ಮೇಲ್ಮೆಯೇ ತನ್ನ ಧ್ಯೇಯವೆಂದೂ, ಭಾರತವನ್ನು ಉದ್ಧರಿಸಲೋಸುಗವೇ ತಾನು ಪ್ರವಾಸಿಯಾಗಿ ಹಿಂದೂಸ್ಥಾನಕ್ಕೆ ಬಂದಿರುವುದೆಂತಲೂ, ಎಲ್ಲಾ ಕೋಮಿನವರೊಡನೆಯೂ ಎಲ್ಲಾ ಪಾರ್ಟಿಯವರಲ್ಲಿಯೂ ತನ್ನ ಸಹಾನುಭೂತಿ ಇದೆಯೆಂದೂ ಸಂದೇಶ ಕೊಟ್ಟ ಈಗಿನ ವೈಸರಾಯರು ಸುಭಾಷರ ಬಂಧವಿಮೋಚನೆ ಮಾಡುವರೆಂದು ಆಶಿಸಬಹುದೇ? ಅಂತೆಯೇ ಆಗಲೆಂದು ಪ್ರಾರ್ಥನೆ.

ಸರಕಾರದಲ್ಲಿ ರಜಿಸ್ಟರ ಮಾಡಲ್ಪಟ್ಟ ಪ್ರಸಿದ್ಧವಾದ

ರೋಗದ ನಾಮಗಳು.—ಕ್ಷಯ ರೋಗ, ಬಾಲಂತಿರೋಗ, ಹಡೆದ ನಂಜು, ದಮ್ಮು, ಅಜಗ್ಗೆ ಕಾಲರಾ, (ಮಾರಿಕಾ,) ಪ್ಲೇಗು, ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮಲ ರೋಗ, ಗಂಡುಮಾಲೆ, ನಾರಹುಣ್ಣು, ಶಸ್ತ್ರಘಾಯ, ಕಿವಿಶೂಲೆ, ಮೂಗಿನೊಳಗಿನ ಪಿನಸಿ ಮೊದಲಾದುವುಗಳು, ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ, ಹೊಟ್ಟೆ ಶೂಲೆ, ಸಣ್ಣ ಕೂಸುಗಳಿಗೆ ಆದ ರೋಗಗಳು, ಅಂಸಿ, ಮುಟ್ಟು ದೋಷ, ಹೊಟ್ಟೆ ದೊಡ್ಡದಾಗೋಣ, ಕೋಡಗಿಡುವು ಮೈ ಹೊರಬೀಳೋಣ, ಮತ್ತು ಡಾಕ್ಟರರಿಗೂ, ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಅರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣಬರುವುದು. ಅನೇಕ ರೋಗಗಳಿಗೆ ಒಂದೇ ಔಷಧವೆಂದರೆ ಜನರಿಗೆ ಹಾಸ್ಯ ಉಂಟಾಗಬಹುದು, ಅಂಥವರು ಒಂದು ಸಾರಿ ತಂದು ಪ್ರಯೋಗಿಸಬೇಕು, ಸ್ಥಾಪನಾ ಅಂದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ. ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತವೆ.

ಸ್ಥಾಪನಾ 1909.

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರವಾಸಮಿತ್ರ ಮೂರ್ತಿಮಂತವೈದ್ಯ

೧ ತೊಲೆ ಬಾಟ್ಲಿ ಒಂದಕ್ಕೆ ರೂ. ೨ ನಮೂನೆ ಉದ್ದೇಶಿ ೫, ಅ ತೂಕದ ಬಾಟ್ಲಿ ಒಂದಕ್ಕೆ ೮ ಆ. ಚಿಕ್ಕ ಬಾಟ್ಲಿ ಒಂದೇ ಸರಿ ಒಂದು ಡಜನ್ ತರಿಸಿಕೊಳ್ಳುವವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು. ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು. ಟಪ್ಪಾಲ ಖರ್ಚು ಹೆಚ್ಚು ಆದ ಕಾರಣ ಈ ಪ್ರಕಾರ ವ್ಯವಸ್ಥೆ ಮಾಡಿದೆ. ಟಪ್ಪಾಲ ಖರ್ಚು ೧೧ ಆಣೆ. ೧ ತೊಲೆ ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಕಮಿಶನ್ ಸಿಗುವುದು, ಟಪ್ಪಾಲ ಖರ್ಚು ೧೧ ಆಣೆ ಬೀಳುವುದು. ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ. ಸಣ್ಣ ಬಾಟ್ಲಿ ಒಂದೇ ಬೇಡಿದರೆ ಕಳಿಸಬಾರದು. ಟಪ್ಪಾಲ ಖರ್ಚು ೮ ಆಣೆ ಒದುವುದು. ಕನಿಷ್ಟ ಪಕ್ಷಕ್ಕೆ ಎರಡು ರೂಪಾಯಿಯ ಔಷಧ ತರಿಸಿಕೊಂಡರೆ ಕಳಿಸುತ್ತೇವೆ. ಟ ಖರ್ಚು ೮ ಆಣೆ ಬೀಳುವುದು.

ತಿಳಿಸ್ಬಿಲ್ಲುವ ಪ್ರಮಾಣ—ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು. ಬಾ. ಯ ಕೂಡ ಕಳಿಸುವೆವು. ಔಷಧವು ಯಿಟ್ಟಿಯಾಗಿ ಹೋದರೆ ಉಳಿದ ಬಾಟ್ಲಿ ಪರತ ತೆಗೆದುಕೊಂಡು ಹಣ ತಿರುಗಿ ಕೊಡುವೆವು. ಬೇಡುವವರು ತಮ್ಮ ವಿಳಾಸ ಕನ್ನಡ, ಮರಾಠಿ, ಇಂಗ್ಲೀಷ ಗಳಲ್ಲಿ ಸ್ಪಷ್ಟ ಬರೆಯಬೇಕು. ತಮ್ಮ ಹೆಸರು ತಂದೆಯ ಹೆಸರು, ಅಡ್ಡ ಹೆಸರು, ಇರುವ ಗ್ರಾಮ, ಪೋಸ್ಟಾಫೀಸ ತಾಲೂಕು ಜಿಲ್ಹಾ ಸ್ಟೇಟ ಎಲ್ಲಾ ಖುಲಾಸ ಬರೆಯಬೇಕು.

ನಮ್ಮ ವಿಳಾಸ – ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕಶಫಾ ಹೆಡ್ ಆಫೀಸ, ಪೋ. ಶಹಾಪೂರ [ಬೆಳಗಾಂವಿ]

New Era Technical School.

Near Market Square, Udipi.

Commercial classes-approved by the Madras Government-New session opens in June.

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ.)

ಇಲ್ಲಿ ಟೈಪ್‌ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc., in guaranteed colours. Silk Sarees & Coatings a Speciality. Work is conducted under the supervision of Textile experts. We undertake special orders to suit individual tastes.

Please inspect our goods at:

Raghavendra Ranga Pai, Car Street, Mangalore.

We deal in grey & Coloured Yarns Dyes Chemicals & Handloom accessories.

M. Venkatesha Ranga Pai,

Proprietor

ಡಾಕ್ಟರ ವಾಮನ ಗೋಪಾಳರವರ

ಐಹಿಹಾಯಿಡ್ಡ ಸಾರ್ಸಪರಿಲಾ ಕೆಟ್ಟ ರಕ್ತಕ್ಕೆ ಪರಮೌಷಧ ೪೫ ವರ್ಷದ ಅನುಭವ ಉಪಯೋಗಿಸಿದವರೇ ಹೇಳಿದ್ದಾರೆ

ಡಾ॥ ಗೌತಮ ರಾವ್ ಕೇಶವರವರ ಫೊಸ್ಫರಸ್ ಗುಳಿಗೆಗಳು ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಥಾಕುರದ್ವಾರ ಮುಂಬಾಯಿ ೪

ಸ್ಟೊಕಿಸ್ಟ – ಪಾ ಕಂಪೆನಿ ಮಂಗಳೂರು

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ]

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ, ಕಲ್ಪದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಉರಿಯುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನು, ಜೀರ್ಣಶಕ್ತಿಯನ್ನು ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ, ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕ ಶಕ್ತಿಯನ್ನೂ ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು.

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.



ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ. ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಅಗತ್ಯವಿಲ್ಲ.

ಬಾಟ್ಲಿ 1ಕ್ಕೆ ರೂ 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‌ಫ್ಲುಯೆಂಜಾ ನಿಮೋನಿಯಾ ಜ್ವರ ಗೆಡ್ಡೆ ಇವುಗಳ ಮೇಲೆ ದಿವ್ಯ ಔಷಧ.

ಬಾಟ್ಲಿ 1ಕ್ಕೆ ರೂ. 1 8—0.

ಚವನ ಪ್ರಾಶ್ಯ

~~ಇದು ಅತ್ಯುತ್ತಮ ಶಕ್ತಿವರ್ಧಕ ರಸಾಯನ. ಸರ್ವ ಶರೀರ ನರಗಳ ದೌರ್ಬ~~ಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ. 2-8-0. ½ಕ್ಕೆ ರೂ 1-5-0.

ಮೇಹಕುಠಾರ

ಮೂತ್ರ ಮಾಡುವಾಗ ಉರಿ, ಕೀವು ಬರುವುದು, ಮೂತ್ರ ತಡೆಯಲಿಕ್ಕೆ ~~ಸಾಧ್ಯವಿಲ್ಲದಿರುವಿಕೆ, ಸೊಂಟ ನೋವು ಮತ್ತು 20 ನಮೂನೆಯ ಮೇಹ~~ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8—0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 2 ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:

1 ಡಾಕ್ಟರ್ ಬಿ. ಎಚ್. ಪದ್ಮನಾಭ ಶೈ, ಚಿಕ್ಕಮಂಗಳೂರು. 3. ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು. 4. ವಿ. ಬಿ. ಕಾಮತ್ ಮಡಿಕೇರಿ.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು. 5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.
6. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ESTD· 1906·

The Canara Banking Corporation Udipi Ltd.

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

The First Indigenous & Cosmopolitan Bank of S. K. District.

Capital Authorised, issued & Subscribed	Rs.	3,50,000	0	0
Paid up Capital	„	2,88,320	0	0
Reserves	„	3,70,694	0	0

16-5-1936

FIXED DEPOSITS UP TO 5%

Head office:—UDIPI, S K

Branches:—1 Udipi, 2 Coondapoor, 3 Car Street, Mangalore, 4 Shimoga, 5 Madras 6 Bunder Mangalore, 7 Mercara & 8 Virarajendrapet.

THE BOMBAY LIFE ASSURANCE COMPANY, LIMITED.

KOCHIKAR BROTHERS, Madras Branch Secretaries and Chief Agents for Bombay City & Suburbs

ANNOUNCEMENT:—We have the pleasure to inform all our Constituents Agents and Policyholders that we have taken up a Newly Erected Bungalow "Soumyalayam" in Puthiyara on the Taluq Office Road opposite Puthiyara Post Office and are opening our Calicut Branch Office in the said Building on 14 9—1936 The present Office at Mr C Sarlas in Nair our Malabar District Agent, situated on Huzur Road will cease to exist and will merge in our New Branch Office This has been necessitated by the vast expansion of our business in Malabar and the adjacent districts as the New Premises are very well situated and more spacious and thus we hope to render better service to our Policyholders Our patrons and well wishers are requested to pay a visit to the "Soumyalayam at their early convenience All correspondence and remittances and cheques should be addressed to

Messrs **KOCHIKAR BROTHERS,**

Bombay Life Office, Puthiyara Post (Calicut—Malabar)

We have also registered our telegraphic address as Kochikar Calicut for the convenience [illegible]

ಪ್ರಕಟಣೆ-ನಮ್ಮ ವಿಭಾಗದ ಪಾಲಿಸಿಯು ತನ್ನ ಎಜಂಟರೂ ಪ್ರೋಲಿಸಿದಾರರಿಗೂ ಈ ಕೆಳಗೆ ತಿಳಿಯಪಡಿಸ ಪದೇನೆಂದರೆ—ತಾ. 14 9 36ನೇ ದ ಕಲ್ಲಿಕೋಟೆಯಲ್ಲಿ ನಮ್ಮ [illegible] ಹುಜೂರ ರಸ್ತೆಯ ಒಳ ಇರುವ ಆಫೀಸನ್ನು ಪುತಿಯಾರ ಪೋಸ್ಟು ಆಫೀಸ [illegible] ವಿಶ್ವವಾದ ಸೌಮ್ಯಾಲಯ ಎಂಬ ಬಂಗ್ಲೆಯಲ್ಲಿ ತೆರೆಯಲಾಗುವುದು ಇನ್ನುಮುಂದೆ ಸಂಬಂಧಪಟ್ಟ ಲೆಖ್ಖಪತ್ರಗಳನ್ನು ಕೆಳಗಿನ ವಿಳಾಸಕ್ಕೆ ಬರೆಯ ತಕ್ಕದು.

ಮೆಸರ್ಸ ಕೊಚ್ಚಿಕಾರ್ ಬ್ರದರ್ಸ್

ಬೊಂಬೈ ಲೈಫ್ ಆಫೀಸ್ ಪುತಿಯಾರಾ ಪೋಸ್ಟ್ (ಕಲ್ಲಿಕೋಟೆ [illegible])

ಎಲ್ಲರಿಗೂ ಅನುಕೂಲವಾಗ ಬಂತೆ ನಮ್ಮ ತಂತಿಯ ವಿಳಾಸವನ್ನು ಕೊಚ್ಚಿಕಾರ—ಕಲ್ಲಿಕೋಟೆ ಎಂಬುದಾಗಿ ಇರಿಸಿದೆ

Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ ಉಳುಕು ಸ್ನಾಯುಗಳ ಭಾಜ, ಹಲ್ಲುವೇದನೆಗಳಿಗೂ ಎದೆನೋವು [illegible] ಗಳು, ವಾತ ಕೊಳ್ಳುವುದು ಚೇಳ ವಿಷ ಮುಂತಾದ ಬೇನೆ, ಪಕ್ಷವಾತ ಮೊದಲಾದ

ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತ [illegible], ಹುಳಕಡ್ಡಿ, ಪಿತ್ತ ಉಪದ್ರವ ತಲೆಹುಣ್ಣು ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪೋ, ಬೊಂಬಾಯಿ ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಛ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ—ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ

ಮೊದಲನೇ ೮ ವರ್ಷಗಳ ಮೌಲ್ಯವೀಕಣದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು!

ಅವರಿಗೆ ವಿಫುಲವಾದ ಸೌಕರ್ಯಗಳಿವೆ. — ಯಥೋಚಿತವಾದ ಪುರಸ್ಕಾರಗಳಿವೆ — ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ—ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

Regd. No. M. 8406.

ಟಪ್ಪಾಲು ಹಾಸಲು ಸೇರಿದ ೩-೧೨-೦.

for Quality Snuff
H. Rama Rao and Sons
High Class Snuff Manufacturers
RAMA SNUFF
The choice of Snuff Users

ಸ್ವದೇಶಾಭಿಮಾನಿ
SWADESHABHIMANI

LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in
THE BOMBAY LIFE
Pikale Brothers.

ESTABLISHED 1906

(ದಿವಂಗತ ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು)

ಪ್ರತಿ ಶುಕ್ರವಾರವೂ ಮಂಗಳೂರಿನ ಕೊಡಿಯಾಲಬೈಲ್ ಪ್ರೆಸ್ಸಿನಲ್ಲಿ ಪ್ರಕಟವಾಗುವ ವಾರಪತ್ರಿಕೆ

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷ್ವನ ಸುಡುತ ಬರುತಿರ ನ ॥

ಗರಲಕವರಂಜದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳಬಲ್ಲರೆ ಕೊರೆದು ಧೀರರು ನಿಶ್ಚಿತಾರ್ಥವನು ।

ಪುಸ್ತಕ ೩೦, ಮಂಗಳೂರು ತಾ. ೨೯ನೇ ಶುಕ್ರವಾರ ಮೇ ೧೯೩೬ (29-5-'36) ಸಂಚಿಕೆ ೨೨



NOTE

"School Zone" ಎಂದು ಮಾರ್ಗದ ಬದಿಗೆ ನೋಟಿಸು ಹಚ್ಚಿರುವಷ್ಟು ಅವರೂ ಪ್ರದೇಶಗಳಲ್ಲಿಯೂ, ಮಾರ್ಗದ ದುರುಸ್ತಿಗಾಗಿ ಜಲ್ಲಿಯನ್ನೂ ಮಣ್ಣನ್ನೂ ಬದಿಯಲ್ಲೆಲ್ಲ ಒಟ್ಟಿರುವ ಸಾಧನೆಯಿಂದ, ಆ ಮಕ್ಕಳ ಸಂಚಾರವು ಭದ್ರವಾಗುವ ಹಾಗೆ ಮಾಡಲಾಯಿತೆಂಬ ವಿಚಿತ್ರ ವಿಶ್ವಾಸವಾದರೂ ಯಾವ ಆಫೀಸರನ ತಲೆಯಲ್ಲಿ ಮೂಡಿದ್ದಿರಬಹುದು?

o o o o o

ಮಾರ್ಗಗಳೆಲ್ಲವೂ ಅಗಲವಾಗಿಲ್ಲ, ಅದಕ್ಕೇನುಮಾಡೋಣ? ಇಕ್ಕಟ್ಟಾದ ಮಾರ್ಗಗಳನ್ನು ಮಳೆಗಾಲದ ದುರುಸ್ತಿಗೆ ಒಳಪಡಿಸಲೇಬೇಕು, ನಿಜ. ಆದರೆ, ಇಕ್ಕಟ್ಟಾದ ಮಾರ್ಗಗಳನ್ನು ಮಳೆಗಾಲದಲ್ಲಿ ದುರುಸ್ತಿಮಾಡುವಾಗ, ಅವೇ ಮಾರ್ಗಗಳ ಪಾರ್ಶ್ವಗಳಲ್ಲಿ ಮಣ್ಣಿನ ರಾಶಿಯನ್ನಿಡುವುದರಿಂದ, ಮಾರ್ಗಗಳನ್ನೆ ಮಾತ್ರವಲ್ಲದೆ, ಸಂಚಾರಿಗಳನ್ನೂ ದುರುಸ್ತಿಮಾಡಬೇಕಾದೀತಲ್ಲ! ಮೇಸ್ತ್ರಿಗಳಿಗೆ ಮಾತ್ರವಲ್ಲದೆ, ಡಾಕ್ಟರುಗಳಿಗೂ ಹೆಚ್ಚಿನ ಉದ್ಯೋಗಕೊಡುವ ಈ ಮೆಹರ್‌ಬಾನಿ ಏತಕ್ಕೆ?

o o o o o

ಜಿಲ್ಲಾ ಬೋರ್ಡುಗಳಿಗೂ ಮ್ಯುನಿಸಿಪಾಲಿಟಿಗಳಿಗೂ ಈ ವರ್ಷ ಪುಸ್ತಕ ಭಂಡಾರಗಳಿಗಾಗಿ ರೂ. ೧೦,೦೦೦ವನ್ನು ಸರಕಾರವು ಸೆಂಕ್ಷನುಮಾಡಿಯದೆ. ಪ್ರತಿ ಭಂಡಾರಕ್ಕೆ ರೂ ೮೦ಕ್ಕೆ ಮಿಕ್ಕಿ ಸಹಾಯ ಸಿಗದು; ಭಂಡಾರವೂ ತನ್ನ ಭಂಡಾರದಿಂದ ಅಷ್ಟೇ ಮೊಬಲಗನ್ನಾದರೂ ಸ್ವತಃ ವ್ಯಯಿಸಬೇಕು, ಕಟ್ಟಡ ಸಿಬ್ಬಂದಿ ಮೊದಲಾದುವಕ್ಕೆ ಈ ಗ್ರಾಂಟು ಸಿಗದು. ಸರಿ. ಪುಸ್ತಕಗಳಾವುವು ಎಂದು ಜಿಲ್ಲಾ ಎಡ್ಯುಕೇಶನಲ್ ಆಫೀಸರರೇ ನಿರ್ಧರಿಸಬೇಕು.

o o o o o

ಪಂಡಿತ ಜವಾಹರಲಾಲರು ಬರೆದ ಆತ್ಮಕಥೆಯನ್ನು ಬ್ರಿಟಿಷರೇ ಪ್ರಕಟಿಸಿದ್ದಾರೆ; ಬ್ರಿಟಿಷರೇ ಹೊಗಳಿದ್ದಾರೆ; ಬ್ರಿಟಿಷ ಪತ್ರಿಕೆಗಳೂ ವಿಮರ್ಶಿಸಿವೆ; ಮಾರುತ್ತಿರುವವರಲ್ಲಿ ಅವರೂ ಇದ್ದಾರೆ ಇಂತಹ 'ಆತ್ಮಕಥೆ'ಯಿಂದ ಭಾರತವಾಸಿಯರ ನೂತನ ಮನೋಧರ್ಮವು ಪ್ರಕಟವಾಗಿದೆ ಎಂದೇ ಸರ್ವರೂ ಕೊಂಡಾಡುತ್ತಾರೆ. ಸುಮಾರು ೨೫ ಪುಸ್ತಕಭಂಡಾರಗಳಿಗೆಂದು ಕೊಟ್ಟಿರುವ ಈ ೧೦,೦೦೦ ರೂಪಾಯಿಗಳ ಸಹಾಯ ದ್ರವ್ಯದಿಂದ, ೨೫ ಪ್ರತಿ ಆತ್ಮಕಥೆಯನ್ನು ತರಿಸಬೇಕೆಂದು ಬರೆದುಕೊಂಡರಾಗದೆ?

o o o o o

ಬೋರ್ಡು ಶಾಲಾ (ಎಲಿಮೆಂಟರಿ) ಉಪಾಧ್ಯಾಯರ ಸಂಬಳದ ಕಡಿತವು ರೂಪಾಯಿಯಲ್ಲಿ ಒಂದಾಣೆಯಿಂದ ಎರಡಾಣೆಗೆ ಏರಿ, ಒಂದೂವರೆಗೆ ಇಳಿಯಿತು ಇಳಿಯಿತೆಂಬ ಉಪಾಧ್ಯಾಯರು ತೃಪ್ತರಾಗಿರುವಂತಿದೆ, ಏಕೆಂದರೆ ಇಳಿಯಿತಲ್ಲವೋ ಎಂದು. ವ್ಯಾಪಾರದಲ್ಲಿ ಡಿಸ್ಕೌಂಟು ಸಿಕ್ಕಿದ ಹಾಗೆ. ನಾಲ್ಕಾಣೆಯ ಸಾಮಾನಿಗೆ ಎಂಟಾಣೆ ಎಂದು ಕ್ರಯ ಹಾಕಿ, ಆರಾಣೆಗೆ ಮಾರಿದರೆ ಕಡಿಮೆ ಕ್ರಯಕ್ಕೆ ದೊರೆತಂತಾಗಲಿಲ್ಲವೆ?

o o o o o

ನಿರರ್ಥಕ ಶಾಲೆಗಳ ನಿರ್ಮಾಣದಿಂದ ಹಣವುಳಿಸಬಹುದುವುದು ನಿಜ; ಆದರೆ ಅವಲ್ಲಿ ಕೆಲಸಮಾಡುತ್ತಿದ್ದ ಉಪಾಧ್ಯಾಯರ ಜೀವನವನ್ನು ಉಳಿಸುವಂತಾಗಬೇಕು. ಇಲ್ಲದಿದ್ದಲ್ಲಿ, ನಿರ್ಜೀವ ಶಾಲೆಯ ಜತೆಗೆ ಸಜೀವ ಉಪಾಧ್ಯಾಯನೂ ನಿರ್ನಾಮಹೊಂದುವನಲ್ಲ! ಪರದೇಶಗಳಿಗೆ ರಫ್ತಾಗುವ ಕಾಫಿ ಕಡಿಮೆಯಾಗುತ್ತ ಬಂದಿರುವುದು ಶೋಚನೀಯ ನಿಜ; ಹಲವು ಕಾರಣಗಳು ಇರಬಹುದು. ಐದು ಮನೆಗಳಿಗೆ ಒಂದರಂತೇನೋ ಹೊಟೆಲುಗಳಿರುವ ಗ್ರಾಮುಗಳು ನಮ್ಮಲ್ಲಿರುವಾಗ, ಪರದೇಶಗಳಿಗೆ ಕಾಫಿ ರಫ್ತಾಗುವುದೇ ವಿಚಿತ್ರ

o o o o o

ಫ್ರೆಂಚರ ರೈಲ್ವೆಯ ಮೂಲಕವಾಗಿ ದೇಶದಿಂದ ಪಲಾಯನಮಾಡಿ ಬಂದ ಅಬಿಸೀನಿಯದ ಚಕ್ರವರ್ತಿಯವರು ಇಂಗ್ಲೆಂಡಿನಲ್ಲಿ ಬಂದು ಸದ್ಯಕ್ಕೆ ಉಳಕೊಳ್ಳುವರು. ಫ್ರಾನ್ಸಿನಲ್ಲೇಕೆ ಅಲ್ಲ? ಫ್ರಾನ್ಸು ಇಟಲಿಗೆ ಹತ್ತಿರವೆಂದು ಅಷ್ಟು ಬೆದರಿಕೆಯೆ? ಅತಿ ಸುಧಾರಿತ ಆತಿಥ್ಯಕ್ರಮಗಳು ಫ್ರಾನ್ಸಿನಲ್ಲಿರುವಾಗ, ಅವನ್ನೇಕೆ ತ್ಯಜಿಸಿದರು? ಪ್ರಕಟವಾಗಿಲ್ಲ.

o o o o o

ಯುದ್ಧ ಮುಗಿದಬಳಿಕ ಯುದ್ಧ ಸನ್ನಾಹಗಳ ಪ್ರತಿಬಂಧವೇತಕ್ಕೆ ಎಂದು ಚಿಲಿರಾಜ್ಯವು ಜನಾಂಗಸಂಘಕ್ಕೆ ಪ್ರಶ್ನೆ ಹಾಕಿದೆ ಎಲ್ಲ ಪ್ರತಿನಿಧಿಗಳೂ ಈ ವಿಷಯವನ್ನು ಜೂನ್ ತಿಂಗಳ ಮೂರನೆ ವಾರದಲ್ಲಿ ಚರ್ಚಿಸುವರು. ಕುದುರೆಯನ್ನು ಕಳೆದುಕೊಂಡ ಬಳಿಕ, ಲಾಯಕ್ಕೊಂದು ಬೀಗ ಮುದ್ರೆ ಏತಕ್ಕೆ?



ಶಾಂತಿ

"ಸುಖದುಃಖಗಳ ತೆರೆಯ
ಹರಿದು ಮುಂಬರಿಯುವಳು"
ಬರಲಿಲ್ಲ ವೀ ವರೆಗೆ
ಬರುವಳೆಂದೋ

ಕ್ಷಣಿಕ ಸುಖವೆನಗಿರಲು
'ಶಾಂತಿ! ನಿನ್ನನು ಮರೆತೆ'
ನಿನ್ನ ಕೂಡುವ ಕಾಲ-
ವಾವುದಿಂದು?

ದುಗುಡ ಜಡದೇಹವನು
ನಡುಗಿಸುತಲಿದ್ದಾಗ
ನಿನ್ನನೇ ಹಾರೈಸಿ
ಬಳಲಿರುವೆನು.

ನಿನ್ನಿರವು ಇಂದೆನ್ನ
ಮನದಲ್ಲಿ ಮೂಡಿಹುದು.
ಒಂದೊಮ್ಮೆ ಬಾರಿಲ್ಲಿ;
ಬಾಕಿಯೇನು?

ಎತ್ತ ನೋಡಿದರಲ್ಲಿ
ಸುತ್ತ ತಿರುಗಿದರಲ್ಲಿ
ನೀನಿರ್ಪ ತಾಣವನು
ಕಾಣೆನಲ್ಲಾ!

ದೂರದಲಿ ಕತ್ತಲೆಯ
ಮರೆಯಲ್ಲಿ ಮಿರುಗುವೆಯೊ?
ಚಿತ್ರಕಾಶದ ಹೃದಯ-
ದಲ್ಲಿರುವೆಯೋ?

ಮೃತ್ಯುಮುಖದಲ್ಲೊರಗಿ
ಜೀವನವ ಹೀರುವೆಡೆ
ಮನೆಮಾಡಿಕೊಂಡಿರುವ
ದೇವಿಯೇನು?

ಸುಖ-ಸರಳ ಜೀವನದ
ಸಂತೋಷ ಸಂಭ್ರಮದ
ರಾಣಿಯಾಗಿರುವೆಯೇ,
ಶಾಂತಿ, ನೀನು?

ನಿನ್ನ ಸೇವೆಯಲೆನ್ನ
ನಾವು-ನೋವುಗಳೆಲ್ಲ
ಮಣ್ಣು ಪಾಲಾಗಲೆಂ-
ದಾಕಾಂಕ್ಷೆಯು.

"ಪರಿಶುದ್ಧ ಹೃದಯದಲಿ
ತೃಪ್ತಿಸಿಂಹಾಸನದಿ
ಕುಳಿತುಕೊಳ್ಳುವೆನೆಂಬು-
ದೇ ಕಾಂಕ್ಷೆಯು"

—'ಗೋಪಬಾಲ'
ಪುತ್ತೂರುಂಡೆ, ಮಂಗಳೂರು,

ಅಧಿಕಾರ ಸ್ವೀಕಾರವೂ ಕೋಮುವಾರು ತೀರ್ಪೂ.

ಲೇಖಕ:—ಎಂ. ಬಿ. ನರ್ಸಪ್ಪ, ಮಂಗಳೂರು.

ಅಧಿಕಾರ ಸ್ವೀಕಾರದ ಪ್ರಶ್ನೆಯೂ ಕೋಮುವಾರು ತೀರ್ಪಿನ ಗಲಭೆಯೂ ಈತ್ತಾಲಕ್ಕೆ ಭಾರತಕ್ಕೆ ದೊಡ್ಡ ಸಮಸ್ಯೆಯಾಗಿ ನಿಂತಿದೆ. ಸಮಗ್ರ ಭಾರತವು ಕೋಮುವಾರು ತೀರ್ಪಿನ ವಿಷಯಕ್ಕೆ ಹೇಗೆ ಅನುಕೂಲವಾಗಿಲ್ಲವೋ ಹಾಗೆಯೇ ಅಧಿಕಾರ ಸ್ವೀಕಾರ ಪ್ರಶ್ನೆಗೂ ಅನುಕೂಲವಾಗಿಲ್ಲ.

ಅಚ್ಚ ಸ್ವದೇಶ ಭಕ್ತರು ಅಧಿಕಾರ ಸ್ವೀಕಾರದಂತಹ ಆಳರಸರ ಬಾಲ ಹಿಡಿಯುವ ನೌಕರಿಗಳು ಅಗತ್ಯವಿಲ್ಲವೆಂದು ಅಭಿಪ್ರಾಯ ಪಡುವರು. ಆದರೆ ಈ ಧುರೀಣರು ಅಧಿಕಾರ ಸ್ವೀಕಾರದ ಅಪೇಕ್ಷೆವುಳ್ಳ ಇತರರ ವಾಕ್ಪಟುತ್ವಕ್ಕೆ ಬಲಿಬೀಳುವರು. ಇದರಿಂದ ಅವರಲ್ಲಿ ಉಭಯ ಸಂಕಟಗಳು ತಾಂಡವ ಮಾಡುತ್ತವೆ. ಅಂದರೆ ಅಧಿಕಾರ ಸ್ವೀಕಾರವು ಪ್ರಯೋಜನಕಾರಿಯೇ, ಯಾ ನಾಚಿಕೆಕರವೋ ಎಂಬುದರ ತುಲನೆಯನ್ನು ಮಾಡಲು ಅಸಮರ್ಥರಿರುವರು. ನೋಡದ ವಸ್ತುಗಳನ್ನು ಒಂದು ಸಲ ನೋಡಿಬಿಡುವ ಎಂಬ ಅಪೇಕ್ಷೆವುಂಟಾಗುವುದು ಸಹಜವಾಗಿರುವಂತೆ ಹೊಸತಾಗಿ ಅಧಿಕಾರಸ್ವೀಕಾರ ಮಾಡುವ ವಿಷಯವೂ ಒಂದು ಆತುರದ ಸಂಗತಿಯಾಗಿದೆ. ಸಮಗ್ರ ಭಾರತದಲ್ಲಿ ಅಧಿಕಾರ ಸ್ವೀಕಾರ ಬೇಕೋ, ಬೇಡವೋ ಎಂಬುದರ ತುಮುಲ ಯುದ್ಧವು ಕಳೆದೆರಡು ವರ್ಷಗಳಿಂದ ಪ್ರಾರಂಭವಾಗಿ ಅದು ಈಗ ಪರಮಾವಧಿಗೆ ಬಂದಿರುತ್ತದೆ. ಆದರೆ ಇನ್ನೂ ಇತ್ಯರ್ಥವಾಗದೆ ಬಾಕಿವುಳಿದಿದೆ.

ಭಾರತದ ಸ್ವಾತಂತ್ರ್ಯ ಯುದ್ಧದ ಯೋಧರೆಲ್ಲಾ ಹೆಚ್ಚಾಗಿ ವಕಾಲತನ್ನು ವಹಿಸಿಕೊಂಡಿದ್ದವರೇ ಎಂದು ಹೇಳಿದರೆ ತಪ್ಪಾಗಲಾರದು. ಇವರಿಗೆ ಕೋರ್ಟಿನಲ್ಲಿ ನಡೆಯುತ್ತಿದ್ದ ಪ್ರತೀ ಒಂದು ವಿದ್ಯಮಾನಗಳು ತಿಳಿದು ಆ ಮೂಲಕ ವಿದೇಶಗಳಲ್ಲಾಗುವ ಪ್ರತೀ ಒಂದು ರಾಜಕೀಯ ವಿಚಾರಗಳ ಅನುಭವವಾಗುತ್ತಿತ್ತು. ಸ್ವತಂತ್ರ ಹೊಂದಿದ ಪ್ರತೀ ಒಂದು ದೇಶದ ಪ್ರತೀ ಒಂದು ಜೀವರಾಶಿಗೂ ಸ್ವತಂತ್ರತೆ ಇರುತ್ತದೆ. ಇವನ್ನೆಲ್ಲಾ ಸಂಗ್ರಹಿಸಿ ಸ್ವತಂತ್ರಹೀನ ಭಾರತದ ವಿಷಯ ಮರುಗಿ ಈ ವಿಷಯ ನಾವೇಕೆ ಸಾಧಿಸಬಾರದು? ಎಂಬ ಭಾವನೆಯು ಬಂದದ್ದು ಹೆಚ್ಚಲ್ಲ. ಈ ಬಗ್ಗೆ ರಾಷ್ಟ್ರೀಯ ಸಭೆಯು ಉತ್ಪನ್ನವಾಯಿತು. ಆಗಿನ ಹೆಚ್ಚಿನ ವಕೀಲರು ತಮ್ಮ ಕೆಲಸದಲ್ಲಿ ಬೇಕಾದಷ್ಟು ಹಣವೂ ಇದ್ದು ಅವರಿಗೆ ಹಣದ ಅಭಾವವೂ ಇರಲಿಲ್ಲ. ಇದರಿಂದ ಭಾರತದ ಸ್ವಾತಂತ್ರ್ಯ ರವಿಯು ತನ್ನ ಅರುಣ ಕಿರಣವನ್ನು ತೋರಿಸಿದ್ದು ಸಹಜವೇ ಸರಿ.

ಆಗಿನ ಅಚ್ಚ ಸ್ವದೇಶ ಪ್ರೇಮೀ ವಕೀಲರು ತಮ್ಮ ವಕಾಲತೆಂದರೆ ಬಡಜನರ ರಕ್ತವನ್ನು ಹೀರಿ ಆಳರಸರ ಬೊಕ್ಕಸವನ್ನು ತುಂಬಿಸುವುದಲ್ಲದೆ ತಮ್ಮ ವಿಲಾಸಗಳಿಗೆ ಕೂಡಾ ಬೇಕಾಗುವ ಹಣವು ಬಡಜನರ ಕಷ್ಟದ ಜೀವನದ ದುಡ್ಡೆಂಬುದನ್ನು ಮನಗಂಡರು. ಯಾವಾಗ ಅಂಥಾ ವಿವೇಕೋದಯವಾಯಿತೋ ಅಂದೇ ನಮ್ಮ ವಕಾಲತುಗಳಿಗೆ ತಿಲಾಂಜಲಿಯನ್ನು ಕೊಟ್ಟು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಇಳಿದಿದ್ದರು. ಅಂಥಾ ಮುಖಂಡರು ಜ್ಯೋತಿಗಳಂತೆ ಬೆಳಗಿ ಸಮಗ್ರ ಭಾರತವನ್ನು ಎಚ್ಚರಿಸಿದರು. ಈಗ ಅಂಥಾ ಮುಖಂಡರ ಭಾವಚಿತ್ರಗಳಿರದ ಮನೆಗಳಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಭಾರತವು ಜಾಗ್ರತವಾಯಿತು. ಇಂಥಾ ಸಮಯದಲ್ಲಿ ಮಿಕ್ಕಿದ ದೇಶಸೇವಕರು ತಮ್ಮ ತಮ್ಮ ಮಿಣುಗು ಬೆಳಕನ್ನು ಸೇರಿಸಿ ಬೆಳಕನ್ನು ಇನ್ನಷ್ಟು ಜಾಸ್ತಿ ಪಡಿಸಿ ದೇಶವನ್ನು ಎಚ್ಚರಿಸಿದರು. ಇಂಥಾ ಮಹನೀಯರು, ಆಗ ತಮ್ಮ ಪ್ರಯೋಜನಕ್ಕಾಗಿಯೇ ಆಳುವ ಆಳರಸರ ವಕ್ರದೃಷ್ಟಿಗೆ ತುತ್ತಾಗುವುದು ಹೆಚ್ಚಲ್ಲ. ಆಗಲೇ ಆಳರಸರ ಸೋಭತಿಗಳಾಗಿ ಅಮೂಲ್ಯ ದೇಹವನ್ನು ಭಾರತಕ್ಕಾಗಿ ಅಹುತಿಕೊಟ್ಟರು. ತಮ್ಮ ಸಕಲ ಹಣದ ರಾಶಿಗಳನ್ನು ಭಾರತದ ಬಡ ಪ್ರಜೆಗಳ ಪ್ರಯೋಜನಕ್ಕಾಗಿ ವಿನಿಯೋಗಿಸಿದ್ದರು. ಇದರಿಂದ ಅವರವರ ಅಮರ ಕೀರ್ತಿಯು ಇನ್ನಷ್ಟು ಬೆಳಗಿತು. ಅಂಥದರಲ್ಲಿ ಉಳಿದುಳಿದ ಅಚ್ಚ ಧುರೀಣರು ಈಗಲೂ ಭಾರತದಲ್ಲಿ ಕಂಗೊಳಿಸುತ್ತಿರುವುದರಿಂದಲೇ ಎಚ್ಚೆತ್ತ ಭಾರತವು ತನ್ನ ನಿಟ್ಟನ್ನು ಸಡಲಿಸದೆ ಜಾಗ್ರತೆಯಿಂದಲೇ ಇರುವಂತಾಯಿತು.

ಇತ್ತೀಚೆಗೆ ದೇಶದ ಬಂಗಾರವು ಪರದೇಶಗಳಿಗೆ ಸಾಗಿಸಲ್ಪಟ್ಟು ಗಿಲೀಟಿನ ಬಂಗಾರವು ರಾಶಿ ರಾಶಿಯಾಗಿ ತಲೆ ಎತ್ತುತ್ತಿರುವಂತೆ, ಈಗೀಗ ಸೋಗಿನ ಧುರೀಣರು ಭಾರತದಲ್ಲಿ ಜಾಸ್ತಿಯಾಗುತ್ತಾ ಬರುತ್ತಿರುತ್ತಾರೆ. ಅತ್ತ ಕಡೆ ಹಣ ಸಂಪಾದನೆಯೂ ಬೇಕು. ಈ ಕಡೆ ದೇಶಸೇವೆಯ ಸೋಗೂ ಬೇಕಾಗಿದೆ. ಒಂದು ಕಡೆಯಲ್ಲಿ ಆಡಿದ ಮಾತು ಮತ್ತೊಂದು ಕಡೆಯಲ್ಲಿ ಬೇರೆಯೇ ಇರುತ್ತದೆ. ಆದರೆ ನಾಲಗೆಯು ಹುಶಾರಾಗಿರುವುದರಿಂದ ಇವು ಯಾವುದೂ ಬಾಕಿಯವರಿಗೆ ಗೊತ್ತಾಗಲು ಸಾಧ್ಯವಾಗುವುದಿಲ್ಲ. ಅಂದರೆ ಇತರರನ್ನು ತನ್ನ ಸವಿಮಾತುಗಳಿಂದ ಮರಳುಗೊಳಿಸುವರು. ವಾಕ್ಚತುರತೆ ಇಲ್ಲದವರು ಅಂಥಾ ಕೆಲಸಗಳಿಗೆ ಪ್ರವೇಶವಾಗುವುದೇ ಇಲ್ಲ. ಕೌನ್ಸಿಲ್ ಪ್ರವೇಶದಲ್ಲಿ ಓಟುಗಳ ರಾಶಿಯು ಇಂಥವರ ಪ್ರಯತ್ನದಿಂದಲೇ ಜಾಸ್ತಿಯಾಗುವುದು ದೊಡ್ಡದಲ್ಲ. ಅದಕ್ಕೆ ಕೊರತೆ ಇಲ್ಲದ್ದರಿಂದಲೇ ಕೌನ್ಸಿಲ್ ಪ್ರವೇಶಕ್ಕೂ, ಅಧಿಕಾರ ಸ್ವೀಕಾರಕ್ಕೂ ಪ್ರವೇಶವಾಗುವನೆಂದು ಆಡುತ್ತಿರುವುದು ಹೆಚ್ಚಲ್ಲ. ಅಚ್ಚ ಧುರೀಣರು ಬಹುಸಂಖ್ಯಾಕರ ಮಾತುಗಳನ್ನು ಅಲಗಳೆಯಬಾರದೆಂಬ ಅಭಿಪ್ರಾಯದಿಂದ ಮೌನವೇ ಅರ್ಧ ಸಮ್ಮತಿವೆಂಬಂತೆ ಕಾರ್ಯ ಮಾಡುವವರಿದ್ದರೆ ಮಧ್ಯ ತಮ್ಮ ಆಕ್ಷೇಪ ಯಾಕೆ ಬೇಕು? ಎಂದು ತಟಸ್ಥರಾಗಿ ಇಲ್ಲವೇ ಸಹಾನುಭೂತಿ ತೋರಿಸುತ್ತಿರುವುದು ಅಭಿಮಾನವೇ ಸರಿ. ಭಾರತದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ಹೆಣಗಾಡುವ ಸಂಸ್ಥೆಯೆಂದರೆ ಅದು ಹಿಂದೀ ರಾಷ್ಟ್ರೀಯ ಸಭೆಯು. ಇದರಲ್ಲಿ ದೇಶದ ಅಂತರಾಳವನ್ನು ಅರಿತು ನುರಿತವರೇ ಇರುವರೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಸ್ವತಂತ್ರ ದೇಶದಲ್ಲಿ ಇಂಥಾ ಸಂಸ್ಥೆ ಇರುತ್ತಿದ್ದರೆ ಅದು ದೇಶದಲ್ಲಿ ಪ್ರತೀ ಒಂದು ಸಂಪತ್ಕಿಂತಲೂ ಪ್ರಾಮುಖ್ಯತೆಯನ್ನು ಹೊಂದುತ್ತಿದ್ದಿತು. ಅಲ್ಲದೆ ಆ ಸಭೆಯಿಂದಲೇ ಆ ದೇಶದ ಸರಕಾರವು ನಡೆಯುತ್ತಿತ್ತು. ಆದರೆ ಪಾರತಂತ್ರ್ಯದಿಂದ ಪರಿತಪಿಸುವ ಭಾರತದಲ್ಲಿ ಮಾತ್ರ ಅಂಥಾ ದೇಶೀಯ ಸಂಸ್ಥೆಯು ಆಳರಸರ ವಕ್ರದೃಷ್ಟಿಗೆ ಗುರಿಯಾಗಿ ಆಗಾಗ್ಯೆ ನ್ಯಾಯ ಬಾಹಿರ ಸಂಸ್ಥೆಯೆಂದೂ ಕರೆಯಲ್ಪಟ್ಟಿತ್ತು.

ಕಳೆದ ಎಸೆಂಬ್ಲಿ ಪ್ರವೇಶದ ಚಳವಳದಲ್ಲಿ ಅನೇಕ ಧುರೀಣರು ತಲೆಯೆತ್ತಿ ಕಾಂಗ್ರೆಸ್ಸಿನೊಡನೆ ಸಹಕರಿಸಿದರು. ಮಹಾತ್ಮಾಜೀಯರ ಸೂತ್ರ ಚಾಲನೆಯಿಂದಲೇ ಕಾಂಗ್ರೆಸಿನ ಅಚ್ಚ ಧುರೀಣರೂ ತಮ್ಮಿಂದಾದ ಕಾರ್ಯವನ್ನು ಮಾಡಿ ಪ್ರವೇಶಿಸವವರಿಗೆ ದಾರಿ ಬಿಡಿಸಿಕೊಟ್ಟರು. ಹಾಗೂ ತತ್ಕಾಲಕ್ಕೆ ಎಸೆಂಬ್ಲಿಯಲ್ಲಿರುವ ಪಾರ್ಟಿಗಳಲ್ಲಿ ಕಾಂಗ್ರೆಸ್ಸು ಪಾರ್ಟಿಯೇ ಅಧಿಕ ಸಂಖ್ಯೆಯುಳ್ಳದ್ದೂ, ಸಭ್ಯತನದ್ದೂ, ಶಿಸ್ತು ನಿಯಮಗಳಿಗೆ ಒಳಗಾಗಿದ್ದೂ ಇರುವುದೆಂದು ಹೇಳಿದರೆ ಹೆಚ್ಚಾಗಲಾರದು. ಅಂತೇ ಅದು ರಾಷ್ಟ್ರೀಯ ಒಂದು ಅಂಗವಾಗಿರುತ್ತದೆ.

ರಾಷ್ಟ್ರ ಸಭೆಯಿಂದ ಆರಿಸಲ್ಪಟ್ಟವರಾಗಲೀ, ಇತರರಾಗಲೀ ನ್ಯಾಯವಿಧಾಯಕ ಸಭೆಗೆ ಯಾ ಕೌನ್ಸಿಲುಗಳಿಗೆ ಹೋಗಿ ದೇಶಹಿತ ಕಾರ್ಯವನ್ನು ಮಾಡಲು ಸಾಧ್ಯವಾಗಲಾರದು. ಸಾಮ್ರಾಜ್ಯಶಾಹೀ ಆಳರಸರು ತಮ್ಮ ಪ್ರಯೋಜನಕ್ಕಿರುವ ವಿಷಯಗಳನ್ನೇ ನ್ಯಾಯವಿಧಾಯಕ ಸಭೆಗಳಲ್ಲಿ ಮಂಡಿಸಿ ಅದನ್ನು ಒಪ್ಪಿಸುತ್ತಾರೆ. ಅದು ಸಭೆಯಲ್ಲಿ ತಿರಸ್ಕೃತವಾದರೂ ವೈಸರಾಯರ ವಿಶೇಷ ಅಧಿಕಾರದಿಂದ ಅದು ಸರ್ಟಿಫ್ಯಾ ಆಗಿಯೇ ಬಿಡುತ್ತದೆ. ದೇಶ ಹಿತಕ್ಕೆ ತರುವ ಮಸೂದೆಗಳನ್ನು ಸ್ವೀಕರಿಸುವುದೇ ಕಷ್ಟವಾಗಿರುವಾಗ್ಯೆ ಅದು ಪಾಸಾಗಿರುವುದೆಂದು? ಒಂದು ವೇಳೆ ಬಹು ಸಂಖ್ಯಾಕರಿಂದ ಪಾಸಾದರೂ ಅದು ಅಸೆಂಬ್ಲಿ ಹಾಲಿನಲ್ಲೇ ಹೊರತು ಅದರಿಂದ ಮುಂದೇನೂ ಪ್ರಯೋಜನವಾಗುವುದಿಲ್ಲ. ಆದರೆ ಇದರಿಂದ ಪ್ರಯೋಜನವೆಂದರೆ ಸಮಗ್ರ ಹಿಂದೂಸ್ಥಾನವು ಅಸೆಂಬ್ಲಿ ಮತ್ತು ಕೌನ್ಸಿಲುಗಳಲ್ಲಿ ನಡೆಯುವ ವಿದ್ಯಮಾನಗಳು ಅರಿಯುತ್ತದೆ. ಅಲ್ಲದೆ ಕಾನೂನು, ಆಳರಸರ ಸ್ವಭಾವ, ಭಾರತದಲ್ಲಿ ಅವರು ಯಾಕೆ ಇರುವುದು, ಅವರ ಮನೋಭಿಪ್ರಾಯವೇನೆಂಬುದು ಹಳ್ಳಿ ಮೂಲೆಗಳಿಗೂ ಗೊತ್ತಾಗುತ್ತದೆ. ಈ ಮುಂಚೆ ಅಂಥಾ ಸಂಗ್ತಿಗಳು ಕೆಲವು ವಿದ್ಯಾಭ್ಯಾಸಿಗಳಿಗೆ ಮಾತ್ರ ಗೊತ್ತಾಗುತ್ತಿತ್ತು. ಅದು ಕೂಡಾ ಅಲ್ಲವೇ ಇದರಿಂದ ಬಡ ಪ್ರಜೆಗಳಿಗೆ ಯಾವ ಪ್ರಯೋಜನವಿಲ್ಲವೆಂದೇ ರಾಷ್ಟ್ರಸಭೆಯವರು ಕೌನ್ಸಿಲ್ ಪ್ರವೇಶ ಹಾಗೂ ಅಧಿಕಾರ ಸ್ವೀಕಾರಕ್ಕೆ ಬಹಿಷ್ಕಾರ ಹಾಕಿದ್ದಾಗಿರುತ್ತದೆ. ಆದರೆ ರಾಷ್ಟ್ರೀಯ ಸಭೆಯವರು ಕಾಯಿದೆಭಂಗವನ್ನು ಮನ್ನಾಪಡಿಸಿರುವುದರಿಂದ ತತ್ಕಾಲಕ್ಕೆ ಕೌನ್ಸಿಲ್ ಪ್ರವೇಶ ಮಾಡಿ ದೇಶಕ್ಕೆ ಪ್ರಯೋಜನ ದೊರಕಿಸಿಕೊಡುವವರಿದ್ದರೆ ಪ್ರವೇಶಿಸಲೆಂದು ಮನಸ್ಸು ಮಾಡಿತು. ಇದರಿಂದ ಕೆಲವು ಧುರೀಣರ ಸಂಖ್ಯೆ, ಹಣ ಇವಿಷ್ಟು ಸರಿಯಾಗಿ ಹೋಯಿತೇ ವಿನಹ ಯಾವದೊಂದು ಪ್ರಯೋಜನವೂ ಭಾರತಕ್ಕೆ ಉಂಟಾಗಲಿಲ್ಲ.

ಈಗ ಅಧಿಕಾರ ಸ್ವೀಕಾರದ ಪ್ರಶ್ನೆಯೊಂದು ಬಾಕಿ ಉಳಿದಿದೆ. ಇವುಗಳನ್ನು ಕೌನ್ಸಿಲ್ ಪ್ರವೇಶ ಮಾಡಿ ಅದರಲ್ಲಿ ಸ್ವಲ್ಪ ವಿಲಾಸ ಹೊಂದಿದವರು ಆಶೆ ಪಡುತ್ತಿರುತ್ತಾರೆ. ಅಲ್ಲದೆ ವಾಕ್ಚತುರತೆಯೂ ಸಾಕಷ್ಟು ಇದೆ. ಅಧಿಕಾರ ಸ್ವೀಕಾರ ಮಾಡಿ ತಿಂಗಳ ಅಖೈರಿಗೆ ನೋಟುಗಳ ಸಂಖ್ಯೆಗಳನ್ನು ಲೆಖ್ಖ ಮಾಡಿ ಜೇಬಿನಲ್ಲಿಟ್ಟು ತರತರದ ವಿಲಾಸ ಹೊಂದಿ ಸುಖಲೋಲುಪರಾಗಿರುವ ಎಂದು, ಕೆಲವರೂ, ಆಳರಸರ ಕಡೆ ಸಹಾನುಭೂತಿ ತೋರಿಸಿ ಆಂಗ್ಲ ವಿದ್ಯಾಭ್ಯಾಸವನ್ನು ಹೊಂದಿದ ತಮ್ಮ ಪುತ್ರರಿಗೆ ಘನ ಪದವಿ ದೊರಕಿಸಿ ಆ ರೀತಿಯಲ್ಲಿ ಸುಖಪಡುವಾ ಎಂದು ಹಲವರೂ ಇರುವರು. ಬಾಕಿ ಉಳಿದವರಲ್ಲಿ ಕೆಲವರು ದೇಶಸೇವೆಗಾಗಿಯೇ ಹೋಗುವವರೂ ಇದ್ದಾರೆಂದು ಹೇಳಬಹುದು. ಅಂಥಾ ಮಹನೀಯರು ಯಾರು ಯಾರೆಂದು ಅವರ ಕೆಲಸ ನೋಡಿಯೇ ತಿಳಿಯಬೇಕಾಗಿದೆ. ಅಲ್ಲದೆ ತಾನು ಇಂತಿಂಥಾ ಕಾರ್ಯ ಮಾಡುತ್ತೇನೆ ಅಧಿಕಾರ ಸ್ವೀಕಾರದ ಮುಖಾಂತರ ಸ್ವಾತಂತ್ರ್ಯ ದೊರಕಿಸಿ ಕೊಡುತ್ತೇನೆ ಎಂದು ಹೇಳುವ ಮಾತುಗಳು ಮಾತಿನಲ್ಲೇ ಅಡಕವಾಗಿದೆಯಲ್ಲದೆ ಕಾರ್ಯತಃ ಅದು ಕಷ್ಟಸಾಧ್ಯವಾಗಿದೆ. ಈಗಿನ ವಿದ್ಯಮಾನಕ್ಕೆ ಆರಂಭ ಶೂರರಂತಹರ ಒಣ ಪೌರುಷವೇ ತಕ್ಕುದಾಗಿರುತ್ತದೆ. ಮತ್ತೆ ಅವಸಾನವೂ ಅವರಿಂದಲೇ ಬಂದು ಬಿಡುವುದೂ ಸಹಜವೇ ಆಗಿರುತ್ತದೆ. ಇವು ಈಗ ಆಗಾಗ್ಯೆ ನಡೆಯುತ್ತಿರುವ ಸೀನರಿಗಳು. ಒಂದು ಅಧಿಕಾರದ ಮೇಲೆ ಇನ್ನೊಬ್ಬರ ಅಧಿಕಾರವು ನಡೆಯುತ್ತಿರುವುದರಿಂದ ಅವರ ಸೂತ್ರ ಪ್ರಕಾರವೇ ಸಕಲ ಕಾರ್ಯಗಳು ನಡೆಯುತ್ತಿವೆ. ಹೊಸ ಅಧಿಕಾರಿಗಳು ವಿರುದ್ಧವಾಗಿ ನಡೆದಲ್ಲಿ ಅಂಥಾ ಸೂತ್ರದ ದಾರವು ತುಂಡರಿಸಲ್ಪಟ್ಟು ಮಂತ್ರಿಗಳು ಮುಗ್ಗರಿಸಿ ಬೀಳಬೇಕಾಗುವುದು. ಇಲ್ಲವೇ ಕಾಲಿಗೆ ಬುದ್ಧಿ ಹೇಳಬೇಕು. ವಸ್ತುಸ್ಥಿತಿ ಈ ರೀತಿಯಲಿರುವುದರಿಂದ ಹೊಸಬರಿಗೆ ಕಾಂಗ್ರೆಸ್ಸಿನ ಕಡೆಯಿಂದ ಹೋದರೂ ಕುರ್ಚಿಯು ಆಳರಸರ ಪಾಲಿನದ್ದು. ಅದುದರಿಂದ ಮನಸ್ಸು ಪಕ್ಕನೆ ಆ ಕಡೆಗೆ ಎಳೆಯುವುದು ಹೆಚ್ಚಲ್ಲ. ಇದು ಎಲ್ಲರಿಗೂ ತಿಳಿದ ವಿಷಯವೇ ಆಗಿರುತ್ತದೆ. ಕೌನ್ಸಿಲ್ ಮತ್ತು ಮಂತ್ರಿ ಸರಕಾರದಲ್ಲಿ ಸೂತ್ರಸಾಗರ ಕೈವಾಡವೇ ನಡೆಯುವುದೆಂದು ಗೊತ್ತಿದ್ದು ಗೊತ್ತಿಲ್ಲದವರಂತೆ ಆಚರಿಸುತ್ತಿರುವುದು ಸ್ವಲ್ಪ ಸಂಶಯಾಸ್ಪದವೇ ಆಗಿರುತ್ತದೆ. ಇನ್ನು ಶ್ರೀ ಸತ್ಯಮೂರ್ತಿಯಂಥಹರು "ರಾಜಿನಾಮೆಯನ್ನು ಕಿಶೆಯೊಳಗಿಟ್ಟುಕೊಂಡೇ ಮಂತ್ರಿಪದವಿಯನ್ನು ಸ್ವೀಕರಿಸುವುದು" ಎಂದು ಹೇಳುತ್ತಾರೆ. ಅದು ಎಷ್ಟರ ವರೇಗೆ ಜಯಪ್ರದವಾಗುವುದೋ ತಿಳಿಯದಾಗಿದೆ. ಒಂದು ಸಲ ಒಳ್ಳೆಯದೆಂದು ಪ್ರವೇಶಿಸುವುದು ಮತ್ತೊಂದು ಸಲ ಅದು ಸರಿಯಲ್ಲವೆಂದು ಹೊರಗೆ ಬರುವುದು ಇದು ಅಷ್ಟೊಂದು ಸಮಂಜಸವಾಗಿ ತೋರಲಾರದು. ಅಲ್ಲದೆ ಸಾವಿರಗಟ್ಟಲೆ ಹಣವು ಪ್ರತೀ ತಿಂಗಳಲ್ಲಿ ದೊರಕುತ್ತಿರುವಾಗ್ಯೆ ಅದನ್ನು ಬಿಟ್ಟುಬಿಡುವ ಮನಸ್ಸು ಸುಲಭದ್ದಲ್ಲ. ಒಂದು ವೇಳೆ ಕಾಂಗ್ರೆಸ್ಸು ತಮ್ಮ ಮೆಂಬರರನ್ನು ಅಧಿಕಾರ ಬೇಡ ಹೊರಗೆ ಬನ್ನಿರಿ ಎಂದು ಕರೆಯುವಾಗ್ಯೆ ಆ ಮೆಂಬರರು ಹೊರಗೆ ಬಾರದಿದ್ದರೆ ಏನು ಕ್ರಮ ಜರಗಿಸುವರೋ ಅದು ಮೊದಲೇ ಗೊತ್ತಿಲ್ಲದಾಗಿದೆ. ಕಾರಣ ಸರ್ವ ಅಧಿಕಾರವೂ ಸರಕಾರಕ್ಕಿರುವುದರಿಂದ ಅಂಥಾ ಮೆಂಬರರಿಗೆ ಯಾವದರ ಯೋಚನೆಯೂ ಇರಲಾರದು. ಆದರೂ ಕೌನ್ಸಿಲ್ ಮತ್ತು ಎಸೆಂಬ್ಲಿ ಪ್ರವೇಶದ ಸಮಯ ಕಾಂಗ್ರೆಸ್ಸು ತನ್ನ ಅಪವಾದವನ್ನು ತಪ್ಪಿಸಿಕೊಂಡಂತೆ ಅಧಿಕಾರ ಸ್ವೀಕಾರದ ಪ್ರಶ್ನೆಗೂ ಮುದ್ರೆ ಒತ್ತಬಹುದು. ದೂರದ ಬೆಟ್ಟ ನುಣ್ಣಗೆ ಎಂಬಂತೆ ಅಧಿಕಾರ ಸ್ವೀಕಾರವು ಪ್ರಯೋಜನಕಾರಿಯೆಂದು ತೋರಬಹುದು. ಎಷ್ಟೇ ಬೇಧಭಾವವಿದ್ದರೂ ಕಾಂಗ್ರೆಸ್ಸಿನ ಮರ್ಯಾದೆಯನ್ನು ಉಳಿಸಬೇಕಾಗಿದ್ದರೆ ಅಧಿಕಾರಸ್ವೀಕಾರದ ವಿರೋಧಿಗಳು ತಟಸ್ಥರಾಗಿ ನಿಲ್ಲುವುದು, ಕಾಂಗ್ರೆಸ್ಸಿನ ನಿಯಮಗಳಿಗೆ ಅನುಸರಿಸಿ ನಡೆಯುವುದೂ ಮುಖ್ಯ ಕರ್ತವ್ಯವು. ಆದರೆ ದೇಶದ ಸ್ಥಿತಿಯು ಹತ್ತಿಪ್ಪತ್ತು ವರ್ಷಗಳ ಮೊದಲಿನ ಸ್ಥಿತಿಗೆ ಹಿಂದಿರುಗಿ ಹೋಗುತ್ತದೋ ಎಂಬ ಸಂಶಯಗಳು ಅನೇಕ ಧುರೀಣರಲ್ಲಿ ಬರುತ್ತಲಿವೆ. ಈ ಅಧಿಕಾರ ಸ್ವೀಕಾರದ ಪ್ರಶ್ನೆಯು ಎಂದಿಗೆ ಕೊನೆಗೊಳ್ಳುವುದೋ ಅದೂ ತಿಳಿದಿಲ್ಲ.

ಕೋಮುವಾರು ತೀರ್ಪು—

ಇನ್ನೊಂದ ಕಡೆ ಕೋಮುವಾರು ತೀರ್ಪಿನ ಗಲಭೆಯು ದೇಶಕ್ಕೊಂದು ದೊಡ್ಡ ತಡೆಯಾಗಿ ನಿಂತಿರುತ್ತದೆ. ಆಳರಸರು ತಮ್ಮ ಬುದ್ಧಿ ಚಾತುರ್ಯದಿಂದ ಮಂಗ್ಯನ ಬಲ್ಲ ತಾಗಿಸಿದಂತೆ ಆಯಾಯ ಜಾತಿಗಳಿಗೆ ಜಾತಿವಾರು ಸೀಟುಗಳನ್ನು ಪ್ರತ್ಯೇಕಿಸಿಟ್ಟಿದ್ದಾರೆ. ಅದು ಇನ್ನೂ ಕಾರ್ಯರೂಪದಲ್ಲಿ ಬಾರದೆ ಕಾಗದಗಳಮೇಲೆಯೇ ಇದೆ. ಆದರೆ ಅದಕ್ಕಾಗಿ ಎರಡು ಮೂರು ವರ್ಷಗಳು ಹೇಳ ಹೆಸರಿಲ್ಲದೆ ಅಳಿದುಹೋಯಿತು. ಅಷ್ಟರಲ್ಲೇ ಸ್ವಾರ್ಥಪರ ಹಿಂದೂ ಮುಸಲ್ಮಾನ ಬಂಧುಗಳ ಕಚ್ಚಾಟಕ್ಕೆ ಪ್ರಾರಂಭವಾಗಿ ಬಂಗಾಳ ಮತ್ತು ಪಂಜಾಬಿನಲ್ಲಿ ಅದು ಉಗ್ರರೂಪ ತಾಳಿದೆ. ಅಲ್ಲವೆ ಪರಸ್ಪರ ದ್ವೇಷ ಸಾಧಿಸಿ ಇತ್ತ ಜಗಳವರು. ನಷ್ಟಹೊಂದುವರಲ್ಲದೆ ಅಂಥಾ ಚಿಲ್ಲರೆ ಗಲಾಟೆಯಿಂದ ದೇಶವನ್ನೇ ಚಿಂತಾ ಸಾಗರದಲ್ಲಿ ಮುಳುಗಿಸುತ್ತಿರುವರು. ಅತ್ತ ಧುರೀಣರಿಗಿದು ಸರಿದೋರುವುದಿಲ್ಲ. ದೇಶದಲ್ಲಿ ಆರ್ಥಿಕ ದುಸ್ಥಿತಿಯು ದಿನೇ ದಿನೇ ಜಾಸ್ತಿಯಾಗುತ್ತಿರುವಾಗ್ಯೆ ಅಂಥಾ ಹೊಟ್ಟೆ ಹೊರಕೊಳ್ಳುವ ಉದ್ಯಮಕ್ಕೆ ಮನಗೊಡದೆ ಕಚ್ಚಾಟದಲ್ಲೇ ಇದ್ದು ಚಿಕ್ಕಗಳ ರೊಟ್ಟಿ ತುಂಡುಗಳ ಪಾಲಿನ ದೆಸೆಯಿಂದ ಕೋತಿಯು ಹೊಟ್ಟೆ ತುಂಬಿಸಿದಂತೆ ನಮ್ಮೀ ಜಗಳದಿಂದ ಪಾಶ್ಚಿಮಾತ್ಯರ ಬೊಕ್ಕಸವು ತುಂಬುತ್ತಲೇ ಇರುತ್ತದೆ. ಇಂಥಾ ಚಿಲ್ಲರೆ ಕೆಲಸಗಳಿಗೆ ನಾವು ಹೊಡೆದಾಡದೆ ದೇಶಹಿತಕ್ಕಾಗಿ ಅನ್ಯೋ

(ಅವೇ ಪುಟವನ್ನು ನೋಡುವುದು.)

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಎರಡು ಸೈಜಿನಲ್ಲಿ ದೊರೆಯುತ್ತದೆ **ಲೋಧ್ರ** ರೂ 3 ಮತ್ತು 1—10—0

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದ್ರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು –

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಜಾಹೀರಾತು.

ಎಲ್ಲಾ ಆಯುರ್ವೇದಿಯ ಪಂಡಿತರ ಅವಗಾಹನೆ ಬಗ್ಗೆ—

ನಮ್ಮ ಫಾರ್ಮಸಿ ಇಲಾಖೆಯಲ್ಲಿ ಯೋಗ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ನಿಘಂಟುಗಳ ಆಧಾರದಿಂದ ನಾವು ನಿಶ್ಚಯಿಸಿ ಸ್ವಾನುಭವ ಹೊಂದಿದ ಎಲ್ಲಾ ಔಷಧ ಮೂಲಿಕೆಗಳನ್ನು ಸುಲಭ ಬೆಲೆಗೆ ವಿಕ್ರಯವಾಗಿ ತ್ತೇವೆ. ಈ ಧರ್ಮಸಂಸ್ಥೆಯ ಉದ್ದೇಶಕ್ಕೆ ಎಲ್ಲಾ ಆಯುರ್ವೇದೀಯ ಪಂಡಿತರು ಉದಾರಾಶ್ರಯ ಕೊಡಬೇಕಾಗಿ ಕೋರಿಕೆ.

ಸೆಕ್ರೆಟರಿ

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಪೋಸ್ಟ್ ಮಂಗಳೂರು, ದ. ಕ

ರೈಲು ಬಂಡಿಗಳ ಸಮಯ.

ಗಾಡಿಗಳು	ಹೊರಡುವ ಘಂಟೆ	ತಲಪುವ ಘಂಟೆ
ಮೈಲು	ಬೆಳಿಗ್ಗೆ 9 50	ಸಂಜೆ 4 20
ಮಿಕ್ಸೆಡ್	,, 5 55	ರಾತ್ರಿ 8 50
ಫಾಸ್ಟ್ ಪೆಸೆಂಜರ್	ಮ. 12 45	ಮ 2 40
ಶಿಟಲ್	ಸಂಜೆ 5 25	ಬೆಳಿಗ್ಗೆ 9-25
ಕಾಂಞಂಗಾಡ್ ಪೆಸೆಂಜರು	ಬೆ 8 25	ಮ 1 20
ಕಾಸರಗೋಡು ಪೆಸೆಂಜರು	ಸಂಜೆ 3 20	

Estd 1920] **THE** [1920ರಲ್ಲಿ ಸ್ಥಾಪಿತವಾದದ್ದು

Kanara Enterprise Ltd.,

PUTTUR

ದಿ ಕೆನರಾ ಎಂಟರ್‌ಪ್ರ್ಯಾಜ್ ಲಿಮಿಟೆಡ್,

ಪುತ್ತೂರು.

ಠೇವಣಾತಿಗಳ ದರ:

ನಿರಖು ಠೇವಣಾತಿಗಳು:—3 ತಿಂಗಳಿಗೆ ಶೇಕಡಾ 5ರಂತೆ, 6 ತಿಂಗಳಿಗೆ ಶೇಕಡಾ 6ರಂತೆ, 12 ತಿಂಗಳಿಗೆ ಶೇಕಡಾ 6½ರಂತೆ

"ಸೇವಿಂಗ್ಸ್ ಬೇಂಕ್"—ಎಂಬ ಸಂಚಯ ಠೇವಣಾತಿಗಳು ಶೇಕಡಾ 4ರಂತೆ

"ಚಾಲ್ತಿ ಠೇವಣಾತಿಗಳು"—ಶೇಕಡಾ 2½ರಂತೆ

ಯೋಗ್ಯ ಜವಾಬ್ದಾರಿಗಳ ಮೇಲೆ ಸುಲಭ ದರದ ಬಡ್ಡಿಯಲ್ಲಿ ಸಾಲಗಳು ಕೊಡಲ್ಪಡುವವು

ಬೇಂಕಿನ ಇತರ ಎಲ್ಲಾ ವಹಿವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿ ಬಗ್ಗೆ ಬೇಂಕಿಗೆ ಬರೆಕೊಳ್ಳುವುದು

Puttur,
Dated 10—4—1935

G. N. Lakshman Pai,
Secretary

ದಕ್ಷಿಣ ಹಿಂದೂಸ್ತಾನದಲ್ಲಿ ಆಯುರ್ವೇದವನ್ನುದ್ಧರಿಸಿದ ಅಪರ ಧನ್ವಂತರಿ ವೈದ್ಯರತ್ನ ಪಂಡಿತ

ಡಿ ಗೋಪಾಲಾಚಾರ್ಲುರವರ

ಬಾಲಭಾಸ್ಕರ

(ಗವರ್ನಮೆಂಟ್ ರಿಜಿಸ್ಟರ್ಡ್)

ಮಕ್ಕಳ ಲಿವರ್ ಮತ್ತು ಸ್ಪ್ಲೀನ್

(ಯಕೃತ್, ಪ್ಲೀಹೋದರ) ವ್ಯಾಧಿಗಳಿಗೂ ಇತರ ಉದರ ವ್ಯಾಧಿಗಳಿಗೂ ಸಿದ್ಧೌಷಧವು ವ್ಯಾಧಿಗಳ ವಿಷಯವನ್ನು ತಿಳಿಸಿದರೆ ಉತ್ತಮ ಸಲಹೆಯು ದ ಗುಣಮಾಡಲ್ಪಡುವುದು

ಕ್ಯಾಟಲಾಗು ಉಚಿತವಾಗಿ ಕೊಡಲಾಗುತ್ತದೆ.

ತಯಾರಿಸುವವರು — ಆಯುರ್ವೇದಾಶ್ರಮ, ಪೋ. ಬೋಕ್ಸ್ 287, ಮದರಾಸು

ಮೈಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರರು — ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ, 92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಜೆ. ಸಿ. ಸಿಕೇರ ಬ್ರದರ್ಸ್,

ಜವುಳಿ, ನೂಲು, ರಂಗು, ಕೆಮಿಕಲ್ಸ್ ವಗೈರೆಯ ಹೋಲ್‌ಸೇಲ್ ಮತ್ತು ರಿಟೈಲ್ ವ್ಯಾಪಾರಿಗಳು.

ಮಾರ್ಕೆಟು ರಸ್ತೆ, ಮಂಗಳೂರು

ಮೇಲಿನ ಶಾಪಿನಲ್ಲಿ ನಮ್ಮ ಜೆಪ್ಪಿನ ಮಾರ್ಣಮಿಕಟ್ಟೆಯ ಬಳಿಯಲ್ಲಿರುವ ಸ್ವಂತ ಮಿಶ್ಯನ್ ಮಗ್ಗದ ನೇಯಿಗೆ ಕಾರ್ಖಾನೆಯಲ್ಲಿ ತಯಾರಿಸಲ್ಪಡುವ ಖಾತ್ರಿ ರಂಗಿನ ನೂಲು, ಮರ್ಸ್ರೈಜ್ಡ್, ಸಿಲ್ಕು, ರೇಶ್ಮೆ ವಗೈರೆಯ ನಾನಾ ತರದ ಚಲೋದಾದ ಅಂಚಿನ ಶೀರೆಗಳು ಮೊಳ 6ರಿಂದ 12, 14, 16, 18ರ ವರೆಗಿನವುಗಳು ಕಡಿಮೆ ದರದಲ್ಲಿ ಮಾರಾಟಕ್ಕಿವೆ ಇದಲ್ಲದೆ ಸ್ವಂತವಾಗಿಯೇ ತಯಾರಿಸಲ್ಪಟ್ಟ ಚೇಕ್ಸ್, ಪಂಚೆ, ಮುಂಡು, ದೋತ್ರ, ರುಮಾಲು ವಗೈರೆಗಳೂ, ಸ್ವದೇಶಿ ಮತ್ತು ಇಂಗ್ಲಿಷು ಮಿಲ್ಲುಗಳ ಕೋಟಿಂಗ್ಸ್, ಶರ್ಟಿಂಗ್ಸ್, ಚೇಕ್ಸ್, ದೋತಿ, ಕೋರ, ಮಲ್ಲು, ತುವಾಲ್ ಮುಂಡು, ಮುಂಡು ವಗೈರೆ ಎಲ್ಲಾ ರಖಂ ಮಾಲುಗಳೂ ನಮ್ಮಲ್ಲಿ ಅಗ್ಗವಾಗಿ ದೊರಕುತ್ತವೆ ನೈಗೆಯ ಕೈಗಾರಿಕೆಗೆ ಬೇಕಾದ ಎಲ್ಲಾ ತರದ ಖಾತ್ರಿ ರಂಗಿನ ರಂಗಿಸಿದ ನೂಲುಗಳೂ, ರಂಗಿಸದ ನೂಲುಗಳೂ, ರೇಶ್ಮೆ, ಮರ್ಸ್ರೈಜ್ಡ್, ಆರ್ಟಿಫಿಸಿಯಲ್ ನೂಲು ವಗೈರೆಗಳೂ, ಲಾಳಿ, ಅಚ್ಚು, ರೆಕ್ಕೆ, ಗುಮ್ಮೆ ವಗೈರೆ ಎಲ್ಲಾ ತರದ ಮಗ್ಗದ ಸಾಮಾನುಗಳೂ, ರಂಗು ಹಾಕುವ ಕೈಗಾರಿಕೆಗೆ ಬೇಕಾದ ರಂಗು ಮತ್ತು ಕೆಮಿಕಲ್ಸ್‌ಗಳೂ ನಮ್ಮಲ್ಲಿ ಸುಲಭ ದರದಲ್ಲಿ ದೊರಕುತ್ತವೆ

ಜಪ್ಪು ನೇಯಿಗೆ ಕಾರ್ಖಾನೆಯ ಮಿಶ್ಯನ್ ಮಗ್ಗದ ಶೀರೆ, ಇಡೀ ಹಿಂದೂಸ್ಥಾನದ ಕಥೋಲಿಕ್ ಕೈಗಾರಿಕಾ ಪ್ರದರ್ಶನದಲ್ಲಿ ಪದಕ ಮತ್ತು ಪತ್ರ ಪಡೆದಂಥಾ ಶೀರೆ, ಭಾರೀ ಶೀರೆ ಎಂದು ಎಲ್ಲೆಲ್ಲೂ ನಮ್ಮ ಗಿರಾಕಿಗಳಿಂದ ಸ್ತುತಿಸಲ್ಪಡುವ ನಮ್ಮ ಮಾಲನ್ನು ನೀವು ಸಹಾ ಪಡೆದು, ಅದರ ಖಾತ್ರಿ ರಂಗು; ಅಂದ ಚಂದ ಮತ್ತು ಪ್ರಯೋಜನವನ್ನು ಪರೀಕ್ಷಿಸಿರಿ

ನಮ್ಮ ರಂಗಿನ ಕಾರ್ಖಾನೆಯಲ್ಲಿ ಎಲ್ಲಾ ತರದ ನೂಲು ವ ವಸ್ತ್ರಗಳಿಗೆ ಖಾತ್ರಿ ರಂಗನ್ನು ಹಾಕಿಸಬಹುದು ವ್ಯಾಪಾರಸ್ಥರಿಗೆ ತುಂಬಾ ಅನುಕೂಲವಿದೆ.

ಹೆಡ್ ಆಫೀಸು, ಕಾರ್ಖಾನೆ ಮತ್ತು ರಂಗಿನ ಕಾರ್ಖಾನೆಯ ವಿಳಾಸ—
ಜೆ. ಸಿ. ಸಿಕೇರ ಬ್ರದರ್ಸ್,
ಮಾರ್ನೆಮಿಕಟ್ಟೆ ರೋಡ್, ಜೆಪ್ಪು, ಕಂಕನಾಡಿ ಪೋಸ್ಟ್, ಮಂಗಳೂರು.

ಶಾಖೆ—
ಜೆ. ಸಿ. ಸಿಕೇರ ಬ್ರದರ್ಸ್,
ಮಾರ್ಕೆಟು ರೋಡ್, ಮಂಗಳೂರು; ದ. ಕ.

'ಸ್ವದೇಶಾಭಿಮಾನಿ'

ವಾರಪತ್ರಿಕೆಗೆ ಚಂದಾದಾರರಾಗಿರಿ

ಚಿತ್ರಾಹುತಿ ಸಮೇತ

ಋಗ್ವೇದಿಸಂಧ್ಯಾವಂದನೆ

ವೈಷ್ಣವರಿಗೆ–ಊರ್ಧ್ವಪುಂಡ್ರ–ಮುದ್ರಾಧಾರಣ ವಿಧಿ, ಸ್ಮಾರ್ತರಿಗೆ ಭಸ್ಮಧಾರಣ ವಿಧಿ, ಕೂಡಿ ಎಂ ನರಸಿಂಗರಾವ್, ಬಿ. ಎ ಎಂ ಎಲ್ ಇವರಿಂದ ರಚಿತವಾದ ಪ್ರತಿಪದಾರ್ಥ ಟೀಕಾ ಸಹಿತ **ಬೆಲೆ ಆಣೆ 3.**

30 60 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.

ಕಾಫಿ ಎಸ್ಟೇಟುಗಳಿಗೆ ಬೇಕಾಗಿರುವ

ಚೆಕ್ ರೋಲು

ಮೂರು ಸೈಜಿನಲ್ಲಿ ಸಿಕ್ಕುತ್ತವೆ

ಶಾರದಾ ಛಾಪಖಾನೆ ಮಂಗಳೂರು.

ಬನ್ನಿರಿ ಅಥವಾ ಬರೆಯಿರಿ

ಸಹವಿದ್ಯಾಭ್ಯಾಸ

ಶ್ರೀ ಕಡೂರು ಶ್ರೀಪಾದ, ಮೈಸೂರು.

ನಮ್ಮ ನಾಡಿನ ವಿದ್ಯಾಭ್ಯಾಸ ಕ್ರಮಗಳಲ್ಲಿ ಸಹವಿದ್ಯಾಭ್ಯಾಸವನ್ನು ಜಾರಿಗೆ ತರಬೇಕು ಎಂಬುದು ನಮ್ಮ ಸುಧಾರಕರ ತಲೆಯಲ್ಲಿ ಹೊಕ್ಕಿರುವ ವಿಷಯಗಳಲ್ಲೊಂದಾಗಿದೆ. ಎಲ್ಲ ವಿಷಯಗಳಲ್ಲಿಯೂ ಹಿಂದುಳಿದಿದ್ದ ಭಾರತದಲ್ಲಿ ಎಲ್ಲೆಲ್ಲಿಯೂ ಈಗ ನವಚೈತನ್ಯವುಂಟಾಗಿ ರಾಜಕೀಯ, ಆರ್ಥಿಕ, ಸಾಮಾಜಿಕ ಭಾಗಗಳಲ್ಲೆಲ್ಲ ಸುಧಾರಣೆಗಳ ಆಂದೋಲನವೇ ನಡೆದಿದೆ. ಈ ಆಂದೋಲನವು ಮುಂದೆ ಯಾವ ರೀತಿ ಪರಿಣಮಿಸಿ, ಯಾವ ರೂಪವನ್ನು ಹೊಂದುವುದೆಂಬುದನ್ನು ಈಗ ಹೇಳಲಾಗುವುದಿಲ್ಲ. ಈಗ ಒಂದೂವರೆ ಶತಮಾನಗಳಿಂದ ಪಾಶ್ಚಾತ್ಯರಲ್ಲಿ ಬಿರುಸಾಗಿ ನಡೆದುಬಂದ ಕೆಲವು ಸುಧಾರಣೆಗಳು ಒಳ್ಳೆಯವಾಗ, ಮತ್ತೆ ಕೆಲವು ಒಟ್ಟಿನ ಅಖಂಡ ಜನಾಂಗಕ್ಕೆ ಕೆಡುಕನ್ನುಂಟುಮಾಡುತ್ತಿರುವುದು ಎಂದು ಅಲ್ಲಿನ ಸುಧಾರಕರಿಗೆ ಇತ್ತೀಚೆಗೆ ಮನವರಿಕೆಯಾಗುತ್ತಿದೆ. ಅಂತಹ ಕೆಡುಕು ಮಾಡಿದುವುಗಳಲ್ಲಿ ಸ್ತ್ರೀಸ್ವಾತಂತ್ರ್ಯದ ತಪ್ಪು ತಿಳುವಳಿಕೆ, ಪಾಶ್ಚಾತ್ಯರಲ್ಲಿ ಈಗ ನಡೆಯುತ್ತಿರುವ ಸಹವಿದ್ಯಾಭ್ಯಾಸ ಕ್ರಮ, ಮತವಿಲ್ಲ-ದೇವರಿಲ್ಲ ಎಂಬ ನಂಬಿಕೆ ಇವು ಕೆಲವೆಂದು ಹೇಳಬಹುದು ಜರ್ಮನಿಯ ಹಿಟ್ಲರ್, ಇಟಲಿಯ ಮುಸೊಲಿನಿ, ಅಮೆರಿಕದ ವಿಲ್ ಡ್ಯೂರೆಂಟ್, ಇಂಗ್ಲೆಂಡಿನ ಬರ್ನಾರ್ಡ್ ಷಾ ಮುಂತಾದವರು ಈ ಕೆಲವು ಸುಧಾರಣೆಗಳ ದುಷ್ಪರಿಣಾಮವನ್ನು ತಿಳಿದಿರುವವರಲ್ಲಿ ಕೆಲವರು ಪ್ರಾಚೀನ ಭಾರತದಲ್ಲಿ ಸ್ತ್ರೀಯರಿಗಿದ್ದ ಸ್ವಾತಂತ್ರ್ಯ, ಮರ್ಯಾದೆ, ಜ್ಞಾನ, ಗೃಹಿಣೀತ್ವದಲ್ಲಿ ಮತ್ತು ಮಾತೃತ್ವದಲ್ಲಿ ಅವರ ಕರ್ತವ್ಯಪಾಲನೆ, ಜನರಿಗೆ ಅವರಲ್ಲಿದ್ದ ಪೂಜ್ಯಭಾವ, ಅವರ ಪತಿವ್ರತಾ ಧರ್ಮ-ಇವು ಇಡೀ ಪ್ರಪಂಚಕ್ಕೇ ಮೇಲ್ಪಂಕ್ತಿಯಾಗಿ ಬರಲು ಸಾಧ್ಯ, ಅದರಿಂದ ಜನಾಂಗದ ಕಲ್ಯಾಣವಾಗಬಹುದು ಎಂಬುದು ಆ ವಿಷಯಗಳನ್ನು ಸರಿಯಾಗಿ ತಿಳಿದುಕೊಂಡ ಪ್ರತಿಯೊಬ್ಬರಿಗೂ ಬರುವುದು ಹಿಂದೂ ಮತಭಾವನೆಗಳಲ್ಲಿ ಕ್ರೈಸ್ತ, ಮಹಮ್ಮದೀಯ, ಬೌದ್ಧ ಮುಂತಾದ ಪ್ರಪಂಚದ ಎಲ್ಲಾ ಮತಭಾವನೆಗಳಿಗೂ, ಸ್ಥಾನವಿದೆ, ದೇವರಿದ್ದಾನೆ ಎಂದು ನಂಬಲು ಸುಲಭವಾಗಿ ಗ್ರಹಿಸಬಹುದಾದ ಅನೇಕ ನಿದರ್ಶನಗಳಿವೆ, ಎಂಬ ಸಂಗತಿಯನ್ನು ಇಡೀ ಪ್ರಪಂಚಕ್ಕೇ ಕನ್ನಡಿಯಲ್ಲಿ ಮುಖ ತೋರಿಸುವಂತೆ ಸ್ವಾಮಿ ವಿವೇಕಾನಂದರು ತೋರಿಸಿರುವರು ಇವುಗಳನ್ನೆಲ್ಲಾ ಯೋಚಿಸಿ ನೋಡಿದರೆ, ನಮ್ಮ ಪ್ರಾಚೀನ ನಾಗರೀಕತೆಯಲ್ಲಿ, ಈಗಿನ ಕಾಲಕ್ಕೆ ತಕ್ಕ ಹಾಗೆ ಅದಕ್ಕೆ ಹೊಸರೂಪವನ್ನು ಕೊಟ್ಟರೆ ಮುಂದೆ ಇಡೀ ಪ್ರಪಂಚಕ್ಕೇ ಮೇಲ್ಪಂಕ್ತಿಯಾಗುವಂತಹ ಕ್ರಮಗಳಿವೆಯೆಂದು ತೋರಿಬರುವುದು ಅಂತಹ ಕ್ರಮಗಳನ್ನು ಹುಡುಕಿ, ಈಗಿನ ಪಾಶ್ಚಾತ್ಯ ಸುಧಾರಣಾ ಕ್ರಮಗಳಿಂದ ಒಳ್ಳೊಳ್ಳೆಯವುಗಳನ್ನು ಆಯ್ದು ಸೇರಿಸಿಕೊಂಡು, ನಮ್ಮ ನಾಡಿನ ನಡೆ, ನುಡಿ, ಸಮಾಜ ಪರಿಸ್ಥಿತಿಗಳಿಗೆ ಅನುಗುಣವಾಗಿ ತಿದ್ದಿಕೊಂಡು, ಮುಂದೆ ಅದರಿಂದ ಕೆಡುಕಾಗದ ಹಾಗೆ ಜಾಗರೂಕರಾಗಿದ್ದು ಹಲವು ಸುಧಾರಣೆಗಳನ್ನು ತರುವುದು ನಮ್ಮ ಸುಧಾರಕರ ಕರ್ತವ್ಯವಾಗಿದೆ ಮಹಾತ್ಮಾ ಗಾಂಧಿಯವರು ಹೇಳುವಂತೆ ನಮ್ಮ ಸುಧಾರಣೆಗಳು ಸತ್ಯಶೋಧನೆಯವಾಗಿರಬೇಕು, ನಿರ್ಮಲವಾಗಿರಬೇಕು, ಸುಧಾರಕರು ನೈತಿಕ ಪರಿಶುದ್ಧತೆಯಿಂದಲೂ, ತಿಳಿಮನಸ್ಸಿನ ಸೇವಾದೃಷ್ಟಿಯಿಂದಲೂ ಕೆಲಸ ಮಾಡಬೇಕು.

ಸಹವಿದ್ಯಾಭ್ಯಾಸದ ವಿಷಯವಾಗಿ ಆಲೋಚಿಸುವ ಮೊದಲು ಅದರ ಅರ್ಥವೇನು ಎಂಬುದನ್ನು ತಿಳಿಯಬೇಕಾಗುವುದು. ಆಕ್ಸ್‌ಫರ್ಡ್ ನಿಘಂಟುವಿನಲ್ಲಿ (Oxford English Dictionary) "ಅದು ಹುಡುಗರಿಗೂ ಹುಡುಗಿಯರಿಗೂ ಒಟ್ಟಿಗೆ ಕೊಡುವ ವಿದ್ಯಾಭ್ಯಾಸ (It is the Education of boys and girls together)" ಎಂದಿದೆ. 'ಒಟ್ಟಿಗೆ' ಎಂಬ ಪದದ ಅರ್ಥವು ಎಲ್ಲರಲ್ಲಿಯೂ ತುಂಬಾ ಜಿಜ್ಞಾಸೆಗೆ ಎಡೆಗೊಟ್ಟಿದೆ. ಹಲವರು ಹಲವು ಬಗೆಯಾಗಿ ಅದಕ್ಕೆ ಅರ್ಥ ಮಾಡುವರು. ಕೆಲವರು "ಶಾಲೆಗಳಲ್ಲಿ ಒಂದು ಮೂಲೆಯಲ್ಲಿ ಹುಡುಗರೂ ಮತ್ತೊಂದು ಮೂಲೆಯಲ್ಲಿ ಹುಡುಗಿಯರೂ ಕುಳಿತು ಪಾಠ ಕೇಳಬೇಕು. ಅವರು ಶಾಲೆಯಲ್ಲಿರುವ ವರೆಗೂ ಉಪಾಧ್ಯಾಯನು ಅವರಿಬ್ಬರೂ ಒಟ್ಟಿಗೆ ಸೇರದ ಹಾಗೆ ಜಾಗರೂಕತೆಯಿಂದ ನೋಡಿಕೊಳ್ಳಬೇಕು" ಎನ್ನುವರು. ಇನ್ನು ಕೆಲವರು "ಕೊಡುವ ವಿದ್ಯಾಭ್ಯಾಸವು ಒಟ್ಟಿಗೆ (Education together)" ಇರಬೇಕು ಎನ್ನುವರು "ಹುಡುಗರೂ ಹುಡುಗಿಯರೂ ಓದುಬರಹಗಳಿಗೆ ಮಾತ್ರ ಒಟ್ಟುಸೇರದೆ, ಒಬ್ಬರೊಬ್ಬರನ್ನು ಚೆನ್ನಾಗಿ ಅರಿತುಕೊಂಡು, ಬಳಕೆಯಿಂದ ಒಟ್ಟು ಜೀವಿಸಬೇಕು ಮುಂದೆ ಗಂಡಹೆಂಡಿರಾಗಿ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾ, ಇಬ್ಬರೂ ಸಂಸಾರ ನಿರ್ವಹಣದಲ್ಲಿ ಸಮನಾದ ಜವಾಬ್ದಾರಿಯನ್ನು ಹೊರಲು ಶಕ್ತರಾದ ಉತ್ತಮ ಪ್ರಜೆಗಳಾಗಲು ಸಹಾಯಕವಾದ ಅಭ್ಯಾಸ ಕ್ರಮಗಳಿರಬೇಕು" ಎಂದು ಅವರ ಅಭಿಪ್ರಾಯ ಇದೇ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾ ಬಿ ಎ ಹಾವರ್ಡ್ (B A, Howard) ಎಂಬವರು "ಸಹವಿದ್ಯಾಭ್ಯಾಸದಲ್ಲಿ ಹುಡುಗರ ಮತ್ತು ಹುಡುಗಿಯರ ವಿಷಯವಾಗಿ ಸಮಭಾವನೆಯಿರಬೇಕು ಎಂದರೆ ಇಬ್ಬರಿಗೂ ಒಟ್ಟಿಗೆ ಸಮವಾದ ಶಿಕ್ಷಣವನ್ನು ಕೊಡಬೇಕು ಶಾಲೆಯ ಒಳಗೂ ಹೊರಗೂ ಇಬ್ಬರೂ ಒಂದುಗೂಡಿ ಸ್ವತಂತ್ರವಾಗಿ ಓದಲು ಆಡಲು ಅವಕಾಶ ಕೊಡಬೇಕು" ಎಂದು ಹೇಳುವರು ಈ ಎರಡರಲ್ಲಿ ಮೊದಲನೆಯ ಕ್ರಮವು ಕಾಶಿಯ ಹಿಂದೂ ವಿಶ್ವವಿದ್ಯಾನಿಲಯ, ಶಾಂತಿನಿಕೇತನದ ವಿಶ್ವಭಾರತಿ ಮುಂತಾದ ಒಂದೆರಡು ಶಾಲೆಗಳನ್ನು ಬಿಟ್ಟು ನಮ್ಮ ನಾಡಿನ ಉಳಿದ ಎಲ್ಲಾ ಶಾಲೆಗಳಲ್ಲಿಯೂ ಅನುಸರಿಸಲ್ಪಡುತ್ತಿರುವುದು ಎರಡನೆಯ ಕ್ರಮವು ಸಾಮಾನ್ಯವಾಗಿ ಪಾಶ್ಚಾತ್ಯರಲ್ಲಿ ತುಂಬಾ ಬಳಕೆಯಲ್ಲಿರುವುದು

ಸಹವಿದ್ಯಾಭ್ಯಾಸದ ಅನೇಕವಾದ ಈ ಕ್ರಮಗಳಲ್ಲಿ ಆಯಾಯ ಜನಾಂಗದ ಸಾಮಾಜಿಕ ಪರಿಸ್ಥಿತಿಗಳಿಗನುಸಾರವಾಗಿ ತಕ್ಕ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ ಜನಾಂಗದಲ್ಲಿ ಬಳಕೆಯಲ್ಲಿರುವ ವಿವಾಹಪದ್ಧತಿಗಳು, ಸ್ತ್ರೀ ಸ್ವಾತಂತ್ರ್ಯದ ದೃಷ್ಟಿ, ಜನರಲ್ಲಿ ರೂಢವಾಗಿರುವ ರೀತಿ ನಡತೆಗಳು ಇವುಗಳ ಮೇಲೆ ಸಹವಿದ್ಯಾಭ್ಯಾಸವು ತುಂಬಾ ಪರಿಣಾಮಕಾರಿಯಾಗುವುದು ಮೇಲ್ಕಂಡ ಎರಡು ಬಗೆಯ ಸಹವಿದ್ಯಾಭ್ಯಾಸ ಕ್ರಮಗಳ ಇದುವರೆಗಿನ ಪರಿಣಾಮವನ್ನು ನೋಡಲು, ಒಂದೂ ನಮ್ಮ ನಾಡಿನ ಪರಿಸ್ಥಿತಿಗೆ ಸರಿಬಾರಲಾರದೆಂದು ತಿಳಿಯಬೇಕಾಗುತ್ತದೆ ಇವೆಲ್ಲವನ್ನು ಬಿಟ್ಟು ನಮ್ಮ ನಾಡಿನ ಬಹುಭಾಗದ ಜನರು ನಂಬಿಕೆಯಿಟ್ಟಿರುವ ಏಕಪತ್ನೀವ್ರತ (Monogamy) ಪದ್ಧತಿಯ ಪರಿಶುದ್ಧತೆಗೂ, ಪಾತಿವ್ರತ್ಯ, ಸ್ತ್ರೀತ್ವದ ಪೂಜ್ಯತೆ ಇವುಗಳನ್ನು ಅಭಿವೃದ್ಧಿಪಡಿಸುವುದಕ್ಕೂ, ನಮ್ಮ ಸ್ತ್ರೀಯರು ಆದರ್ಶಗೃಹಿಣಿಯರು ಮತ್ತು ಆದರ್ಶ ಮಾತೆಯರಾಗುವುದಕ್ಕೂ ಸಹಾಯವಾಗುವ ಒಂದು ಆದರ್ಶ ಪದ್ಧತಿಯನ್ನು ನಾವು ಈಗ ಹುಡುಕಬೇಕಾಗಿದೆ. ಅದು ನೈತಿಕವಾಗಿಯೂ, ಬೌದ್ಧಿಕವಾಗಿಯೂ ಆರ್ಥಿಕವಾಗಿಯೂ ಪರಿಶುದ್ಧವಾಗಿ ಉತ್ತಮ ಫಲವನ್ನು ಕೊಡುವುದಾಗಿರಲಿ. ಇದನ್ನನುಸರಿಸಿದರೆ ಇಡೀ ವಿಶ್ವಕ್ಕೇ ಕಲ್ಯಾಣವಾಗುವುದೆಂದು ತಿಳಿಸುವ ಒಂದು ಪದ್ಧತಿಯು ನಮ್ಮಲ್ಲಿ ಆಚರಣೆಗೆ ಬರಲು ಅವಕಾಶವಿದೆ. ಅಂತಹ ಪದ್ಧತಿಯೊಂದನ್ನು ಹುಡುಕುವುದು ನಮ್ಮ ಸುಧಾರಕರ ಈಗಿನ ಕರ್ತವ್ಯ.

ಯಾವ ವಿಧವಾದ ಸಹವಿದ್ಯಾಭ್ಯಾಸಗಳು ನಮಗೆ ಅಗತ್ಯವೆಂಬುದನ್ನು ಯೋಚಿಸುವ ಮೊದಲು, ಪಾಶ್ಚಾತ್ಯರಲ್ಲಿಯೂ ನಮ್ಮಲ್ಲಿಯೂ ಈಗಿರುವ ಕ್ರಮಗಳು ನಮಗೆ ಸರಿಯಾಗಿರಲು ಅವುಗಳ ನ್ಯೂನತೆಗಳೇನು ಎಂಬುದನ್ನು ನೋಡುವ. ಪಾಶ್ಚಾತ್ಯರ ಈಗಿನ ಕ್ರಮಗಳು ಅಲ್ಲಿ ಒಂದೂವರೆ ಶತಮಾನಗಳಿಂದೀಚೆಗೆ ನಡೆದ ಸ್ತ್ರೀ ಸ್ವಾತಂತ್ರ್ಯ ಚಳುವಳಿಯ ಪರಿಣಾಮವೆನ್ನಬಹುದು. ಆರ್ಥಿಕ ದೃಷ್ಟಿಯೂ, ಜ್ಞಾನಾಭಿವೃದ್ಧಿಯ ದೃಷ್ಟಿಯೂ ಇದಕ್ಕೆ ಅಲ್ಪಸ್ವಲ್ಪ ಕಾರಣಗಳಾಗಿದ್ದರೂ, ಮುಖ್ಯವಾಗಿ ಗಂಡಸರಿಗಿರುವಷ್ಟೆ ರಾಜಕೀಯ, ಆರ್ಥಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ಹೆಂಗಸರೂ ಸಮಾನವಾಗಿ ಅನುಭವಿಸಲು ಅರ್ಹರು ಎಂಬುದೇ ಕಾರಣವು. ಯಂತ್ರಯುಗಕ್ಕೆ ಮೊದಲು ಸ್ತ್ರೀ ಸ್ವಾತಂತ್ರ್ಯಕ್ಕೆ ಸಾಕಷ್ಟು ಬೆಂಬಲ ದೊರೆಯಲಿಲ್ಲ ಹತ್ತೊಂಬತ್ತನೆಯ ಶತಮಾನದ ವೀನಿಂಗರ್ (Weininger) ಷೋಪನ್ ಹಾರ್ (Schopenhaur), ನೀಟ್ಷೆ (Nietzsche) ಮೊದಲಾದ ಮೇಧಾವಿಗಳು ಕೂಡ "ಹೆಂಗಸರಿಗೆ ಆತ್ಮವಿಲ್ಲ, ಅವರು ಗಂಡಸಿನ ಅಧೀನದಲ್ಲಿಯೇ ಇರಬೇಕು" ಎಂದು ಅಭಿಪ್ರಾಯಪಟ್ಟಿದ್ದರು ಯಂತ್ರಯುಗದ ಪ್ರಾರಂಭದೊಂದಿಗೆ ಸ್ತ್ರೀ ಸ್ವಾತಂತ್ರ್ಯದ ಹಸಿವೂ ಪ್ರಾರಂಭವಾಯಿತು ಸ್ತ್ರೀಯರ ಶಾಂತಸ್ವಭಾವ ಸಹನಶೀಲತೆ, ವಿಧೇಯತೆ ಇವುಗಳು ಯಂತ್ರದ ಮಾಲೀಕರ ಮನಸ್ಸನ್ನು ಮೆಚ್ಚಿಸಿದುವು ದುಡುಕು ಸ್ವಭಾವದ ಕೋಪಿಗಳಾದ ಒರಟು ಗಂಡಸರನ್ನು ಕೆಲಸ ಕಾರ್ಯಗಳಿಗೆ ಅವರು ಮೆಚ್ಚದಾದರು "ಈಗೊಂದು ಶತಮಾನದ ಹಿಂದೆ ಇಂಗ್ಲೆಂಡಿನಲ್ಲಿ ಗಂಡಸರಿಗೆ ನಿರುದ್ಯೋಗ ಸಮಸ್ಯೆಯು ಹೆಚ್ಚು ತೊಂದರೆ ಕೊಟ್ಟಿತು, ಜಾಹೀರಾತುಗಳೆಲ್ಲಾ ಕಾರ್ಖಾನೆಗಳ ಕೆಲಸಕ್ಕೆ ಹೆಂಗಸರನ್ನೂ ಮಕ್ಕಳನ್ನೂ ಆಹ್ವಾನಿಸಿದುವೇ ವಿನಾ ಗಂಡಸರನ್ನು ಕರೆಯಲಿಲ್ಲ"+

೧೮೩೪ರಲ್ಲಿ ಪಾರ್ಲಿಮೆಂಟಿನ ಸದಸ್ಯರಾದ ಯಂತ್ರದ ಮಾಲೀಕರು ಹೆಂಗಸರನ್ನು ತಮ್ಮ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಹೆಚ್ಚಾಗಿ ಎಳೆಯುವ ಉದ್ದೇಶದಿಂದ ಪಾರ್ಲಿಮೆಂಟಿನಲ್ಲಿ ಒಂದು ಶಾಸನವನ್ನು ತಂದು, ಅದರಲ್ಲಿ ಯಶಸ್ಸನ್ನೂ ದೊರಕಿಸಿದರು ಅದರಿಂದ ಹೆಂಗಸರಿಗೆ ತಾವು ಗಳಿಸಿದ ಹಣವನ್ನು ಗಂಡಸರಿಗೆ ಕೊಡದೆ ತಾವೇ ಅದಕ್ಕೆ ಅಧಿಕಾರಿಗಳಾಗುವ ಹಕ್ಕು ದೊರೆಯಿತು ಕೈಗಾರಿಕೆಯೊಂದರಲ್ಲಿಯೇ ಅಲ್ಲದೆ ವ್ಯಾಪಾರದಲ್ಲೂ ಹೆಂಗಸರು ಗಂಡಸಿನೊಂದಿಗೆ ಅಂಗಡಿಗಳಲ್ಲಿ ಸಮತ್ವದಿಂದ ಕುಳಿತರು ಸಹವಿದ್ಯಾಭ್ಯಾಸದಲ್ಲಿಯೂ ಹೆಂಗಸರಿಗೆ ಸಮವಾದ ಹಕ್ಕು ದೊರೆಕಿತು ಸಾಹಿತ್ಯ, ವಿಜ್ಞಾನ, ಇತಿಹಾಸ ಎಲ್ಲಾ ವಿಷಯಗಳಲ್ಲೂ ಅವರು ಗಂಡಸರನ್ನು ಮೀರುವಷ್ಟು ಜ್ಞಾನವಡೆದರು ಈಗ ಇಂಗ್ಲೆಂಡಿನ ಕಾರ್ಖಾನೆಗಳಲ್ಲಿ ಗಂಡಸರ ನಾಲ್ಕರಷ್ಟು ದೇಶದ ಒಟ್ಟು ಸ್ತ್ರೀ ಸಂಖ್ಯೆಯ ಅರ್ಧದಷ್ಟು ಹೆಂಗಸರು ಕೆಲಸ ಮಾಡುತ್ತಿರುವರು ಸ್ತ್ರೀ ಸ್ವಾತಂತ್ರ್ಯದಲ್ಲಿ ಅತಿ ಹೆಚ್ಚಿನ ಮಟ್ಟದಲ್ಲಿರುವ ರಷ್ಯದ ಸಂಖ್ಯಾಚಿತ್ರಗಳನ್ನು ನೋಡಿದರಂತೂ ಆಶ್ಚರ್ಯವಾಗುವುದು ೧೯೩೦ರಲ್ಲಿ ಕಾರ್ಖಾನೆಗಳಲ್ಲಿ ಸೇರಿಸಲ್ಪಟ್ಟ ೪೯ ಮಿಲಿಯ (೪ ಕೋಟಿ ೯೦ ಲಕ್ಷ) ಜನರಲ್ಲಿ ೧೧ ಮಿಲಿಯ ಹೆಂಗಸರಿರುವರು ಇದು ೧೯೨೦ರ ಸಂಖ್ಯೆಗೆ ನೂರಕ್ಕೆ ೧೦೦ ಪಾಲು ಹೆಚ್ಚಿದೆ ಇವರಲ್ಲಿ ವಿವಾಹಿತ ಹೆಂಗಸರು ೩ ಮಿಲಿಯಕ್ಕಿಂತ ಹೆಚ್ಚಾಗಿದ್ದು ೧೯೨೦ರ ಸಂಖ್ಯೆಗೆ ನೂರಕ್ಕೆ ೨೪೯ ಪಾಲು ಹೆಚ್ಚಿರುವರು ಭೌತಿಕಶಾಸ್ತ್ರ ಮಂತ್ರಗಳಲ್ಲಿಯೂ ಕೃಷಿಯಲ್ಲಿಯೂ ೧೦೦ಕ್ಕೆ ೭೩ ಜನ ಹೆಂಗಸರಿದ್ದಾರೆ. ಇದರ ಪರಿಣಾಮವೇನು? ನಾವು ಹೆಂಗಸರಿಗೆ ಅತ್ಯಮೂಲ್ಯವೆಂದು ಪರಿಗಣಿಸುವ ಗೃಹಿಣೀಧರ್ಮ ಎಲ್ಲರಿಗೂ ಮರೆತುಹೋಯಿತು. ನಮ್ಮ ಮನೆ, ನಮ್ಮ ಮಕ್ಕಳು ಎಂಬ ಅಭಿಮಾನವು ಅಳಿದುಹೋಯಿತು. ಗಂಡಸರೂ ಹೆಂಗಸರೂ ಹಳ್ಳಿಯ ತಮ್ಮ ಮನೆಮಠಗಳನ್ನು ಬಿಟ್ಟು ಕೃಷಿಜೀವನವನ್ನು ಮರೆತು ನಗರಗಳಿಗೆ ಬಂದರು ರಾತ್ರಿ ಹೊತ್ತಿನಲ್ಲಿ ಮಾತ್ರ ವಾಸಿಸಲನುಕೂಲವಾದ ಕೋಣೆ (Boxes and Dormitories)ಗಳಲ್ಲಿ ವಾಸಿಸತೊಡಗಿದ್ದರು. 'ಮಕ್ಕಳಿದ್ದರೆ ಮನೆ, ಆದುದರಿಂದ ಮಕ್ಕಳೇ ಬೇಡ' ಎಂಬ ಭಾವನೆ ಮೊಳೆತು, ಈಗ ಬಹಳವಾಗಿ ಪ್ರಚಾರದಲ್ಲಿರುವ ಸಂತಾನನಿರೋಧ ಪ್ರಯೋಗಗಳು (Contraceptives) ರೂಢಿಯಾದುವು ವಿವಾಹಪದ್ಧತಿಗಳೂ ಬಹು ವಿಚಿತ್ರವಾದ ಬದಲಾವಣೆಗಳನ್ನು ಹೊಂದಿದುವು. ವಿವಾಹವು ಸಂತಾನ ಪ್ರಾಪ್ತಿಗಲ್ಲ, ಬರೀ ಕಾಮವಾಸನೆಯನ್ನು ತೃಪ್ತಿಪಡಿಸುವುದಕ್ಕೆ ಎಂಬ ಭಾವನೆ ಮೂಡಿತು. "ಗಂಡಸು ತನಗಿಂತಲೂ ಬುದ್ಧಿಶಕ್ತಿಯಲ್ಲಿ ಕಡಿಮೆಯಾದವಳನ್ನೆ ಪ್ರೀತಿಸಬಲ್ಲನು, ಹೆಂಗಸು ತನಗಿಂತಲೂ ಹೆಚ್ಚಾದವನನ್ನು ಪ್ರೀತಿಸಬಲ್ಲಳು ಕಾರಣ ತನ್ನಷ್ಟೇ ತಿಳುವಳಿಕೆಯುಳ್ಳ ಹೆಂಗಸಿನ ಸಹವಾಸದಲ್ಲಿ ಗಂಡಸು ಸುಖವನ್ನು ಕಾಣಲಾರನು"* ಇದರ ಪರಿಣಾಮವಾಗಿ ವಿದ್ಯಾವಂತರಾದ, ಸ್ವಾತಂತ್ರ್ಯಪ್ರಿಯರಾದ ಹೆಂಗಸರನ್ನು ಮದುವೆಯಾಗಲು ಗಂಡಸರು ಹಿಂಜರಿದರು ಈಗ "ಅಮೇರಿಕದಲ್ಲಿ ವಿಶ್ವವಿದ್ಯಾಲಯದ ಪದವೀಧರರಾದ ಹೆಂಗಸರಲ್ಲಿ ನೂರಕ್ಕೆ ೬೦ ಜನರು ಅವಿವಾಹಿತರಾಗಿರಲು ಬಯಸುವರು"‡ ಸೋನಿಯ ಕೊವಾಲೆವಸ್ಕಿ (Sonia Kovalevsky) ಎಂಬ ವಿಜ್ಞಾನ ಪರಿಶೋಧಕಳು ತನ್ನನ್ನು ಯಾರೂ ಮದುವೆಯಾಗುವುದಿಲ್ಲವೆಂದು ಪರಿತಪಿಸುತ್ತಾ "ಏಕೆ ನನ್ನನ್ನು ಯಾರೂ ಪ್ರೀತಿಸಲಾರರು? ಸಾಮಾನ್ಯರಾದ ಮೂಢ ಹೆಂಗಸರು ಕೂಡ ಪ್ರೀತಿಸಲ್ಪಡುವರು, ನನ್ನನ್ನೇಕೆ ಯಾರೂ ಪ್ರೀತಿಸಲಾರರೂ"† ಎಂದಿರುವಳು. ಅಮೇರಿಕದ ಹೈಸ್ಕೂಲುಗಳಲ್ಲಿ ಸಹವಿದ್ಯಾಭ್ಯಾಸವನ್ನು ಪಡೆಯುತ್ತಿರುವ ಹುಡುಗ ಹುಡುಗಿಯರ ನೈತಿಕ ದುರ್ವರ್ತನೆಗಳ ವಿಷಯವಾಗಿ ಜಡ್ಜ್ ಲಿಂಡ್ಸೆ (Judge Lindsey) ಯವರ ಅಭಿಪ್ರಾಯಗಳನ್ನು ಕನ್ನಡಿಯಾಗಲು ಗೌಡಾದವರು ತಮ್ಮ ಅಂಕಲ್ ಸಾಮ್ (Uncle Sham) ಎಂಬ ಪುಸ್ತಕದಲ್ಲಿ ಬಹಳ ಘೋರವಾಗಿ ವರ್ಣಿಸಿರುವರು ಅವರು ಸಿನೇಮಾಗಳ ಮೂಲಕದ ದಾಚರಣೆಗಳನ್ನು ಕಲಿತು, ಮೋಟಾರುಗಳಲ್ಲಿ ಹೊರಗೆ ಹೋಗಿ (Drives), ದುರಾಶೆಗಳನ್ನು ಪೂರೈಸಿಕೊಂಡು ಬರುತ್ತಿರುವುದನ್ನು ಕೆಲವು ಹುಡುಗ ಹುಡುಗಿಯರ ಸಾಕ್ಷ್ಯಗಳಿಂದ ಎತ್ತಿ ಬಣ್ಣಿಸಿರುವರು

ಗಂಡ ಹೆಂಡಿರ ಅಶಾಂತತೆಯ ಪರಿಣಾಮವಾಗಿ ಇಂದು ಅಮೇರಿಕದಲ್ಲಿ ಪ್ರತಿಯೊಂದು ವಿವಾಹಕ್ಕೂ ನಾಲ್ಕು ವಿವಾಹ ವಿಚ್ಛೇದನಗಳಾಗುತ್ತಿವೆ ಕೆಲವು ಗಂಟೆಗಳ ಹಿಂದೆ ವಿವಾಹವಾದವರಲ್ಲಿ ಒಡಕು ಹುಟ್ಟಿ ಈಗ ವಿವಾಹ ವಿಚ್ಛೇದಕ್ಕಾಗಿ ನ್ಯಾಯಾಸ್ಥಾನಕ್ಕೆ ಬರುತ್ತಿರುವ ದಂಪತಿಗಳನ್ನು ಅಲ್ಲಿ ನಿತ್ಯವೂ ನೋಡಬಹುದು "೧೯೨೧ಕ್ಕಿಂತ ೧೯೨೨ರಲ್ಲಿ ಸರಕಾರದವರು ಕೊಡುವ ವಿವಾಹ ಸಮ್ಮತಿಯು (Marriage Licence) ನೂರಕ್ಕೆ ೨೦ರಷ್ಟು ಕಡಿಮೆಯಾಗಿದೆ ಇದಕ್ಕೆ ಅನುಮತಿಯಿಲ್ಲದೆ ಜರಗುವ ವಿವಾಹಗಳು (Unlicenced Marriages) ಹೆಚ್ಚಿದುದೇ ಕಾರಣ"× "ಬಹು ಬೇಗ ವಿಚ್ಛೇದವಾಗದ ವಿವಾಹಗಳು, ಕಳಂಕಿತರಾಗದ ಕನ್ಯೆಯರ ಹಾಗೆ ಅಪರೂಪವಾಗಿರುವುವು"‡ ಯಾವ ಕೆಲಸಕ್ಕೂ ಕೂಡ ಗಂಡ

+J L. Hammond "The Town Labourer"

*Dr' Will Durant "Mansions of Philosophy" p. 203.

‡A. Siegfried "America comes of age" p 111

†H. Ellis Studies in Philosophy of Sex" Vol VI, p. 141.

(೧೮ನೇ ಪುಟಕ್ಕೆ ಮುಂದುವರಿಯುವುದು)

ಬಿಸಿಲಿನ ಜಳದಿಂದುಂಟಾದ ಅನೇಕಾನೇಕ ಚರ್ಮ ವ್ಯಾಧಿಗಳಿಗೆ

ಸ್ಯಾಂಬಕನ್ನು ತಿಕ್ಕಿ ಗುಣಲಾಭ ವನ್ನು ಪಡೆಯಿರಿ.

ಉಗ್ರವಾದ ಬಿಸಿಲಿನಿಂದ ಬಹುತೇಕ ಜನರು ನಾನಾ ತರದ ಚರ್ಮ ವ್ಯಾಧಿಗಳಿಂದ ನರಳುತ್ತಿದ್ದೆ. ಅವುಗಳಿಂದಾಗಿ ಮೈಯಲ್ಲೆಲ್ಲಾ ಜ್ವಾಲೆ ಎದ್ದಂತಾಗಿ ನಿಮ್ಮ ಸುಖವ್ಯಾದರೂ ಎಡೆಯಿಲ್ಲದಂತೆ ಮಾಡುತ್ತದೆ. ಇದಕ್ಕೆಲ್ಲಾ ಸ್ಯಾಂಬಕನ್ನು ಉಪಯೋಗಿಸಿ ಶೀಘ್ರವಾಗಿ ಗುಣಲಾಭವನ್ನು ಪಡೆಯಿರಿ. ಉರಿಯುವ ಭಾಗಗಳಲ್ಲಿ ಸ್ಯಾಂಬಕನ್ನು ತಿಕ್ಕಿದರೆ ಕೂಡಲೇ ತಂಪನ್ನೀಯುವುದಲ್ಲದೆ, ದೇಹಕ್ಕೆ ಶಾಂತಿಯನ್ನೂ ಸುಖವನ್ನೂ ಕೊಡುವುದು. ರಾತ್ರಿ ಮಲಗುವಾಗ ಸ್ಯಾಂಬಕನ್ನು ತಿಕ್ಕಿ ಮಲಗಿದಿರೆಂದರೆ ಮುಂಜಾನೆ ಏಳುವಾಗ ಖಾತ್ರಿಯಾಗಿ ಗುಣ ಪಡೆಯುವಿರಿ. ಎಲ್ಲಾ ಔಷಧಿಯ ಅಂಗಡಿಗಳಲ್ಲೂ ರೂ. 1 ಅಥವಾ 2—4—0ಕ್ಕೆ ದೊರೆಯುತ್ತದೆ

ಇದರಲ್ಲಿ ಪ್ರಾಣಿಗಳ ಕೊಬ್ಬಿನ ಮಿಶ್ರಣವಿಲ್ಲ.

ಸ್ಯಾಂಬಕ್

Zam Buk

ನಿಮ್ಮ ಜಾಹೀರಾತನ್ನು

ಸ್ವದೇಶಾಭಿಮಾನಿಯಲ್ಲೇ ಕೊಡಿರಿ!

ನೀವು ಎಂದಾದರೂ ಬಿಹಾರ್ ರಸಾಯನಿಕ ವೈದ್ಯಶಾಲೆಯ ಕೇಶಪುಷ್ಪಸಾರಕೂಡಿದ ಮಹಾ ಭೃಂಗರಾಜತೈಲ್ಯ ಉಪಯೋಗಿಸಿರುವಿರೋ?

ನಿಮ್ಮ ಟೋಳು ತಲೆಯನ್ನು ಇದರ ಉಪಯೋಗದಿಂದ ವಿಪುಲವಾದ ಕೂದಲಿನಿಂದ ರಂಜಿಸಬಹುದು.

ಅನೇಕರು ಕೂದಲು ಉದುರುವದರಿಂದ ಮರುಗಪಡುವರು. ಅಂಥವರು ಒಂದು ಸೀಸೆ ಮೇಲೆ ಕಾಣಿಸಿದ ತೈಲವನ್ನು ಉಪಯೋಗಿಸಿ ದಿನದಿನಕ್ಕೂ ಉದುರುವ ಕೂದಲಿಗೆ ತಡೆಮಾಡಿ, ಬಂಧುಮಿತ್ರರಿಂದ ಶ್ಲಾಘಿಸಲ್ಪಡಿರಿ.

ಇದು ಪ್ರತಿ ದಿನದ ಲೇಪನೆಯಿಂದ ಉದುರಬೇಕುವ ಕೂದಲನ್ನು ತಡೆಗಟ್ಟುವದು. ವಿಪುಲವಾಗಿ ಬೆಳೆದು ಕೂದಲಿಗೆ ನಿಲುವೆಯನ್ನು ಕೊಟ್ಟು ಅಕಾಲದಲ್ಲಿ ನರೆತ ಕೂದಲು ಕಪ್ಪಾಗುವದು. ಇದು ಶಾಸ್ತ್ರೋಕ್ತವಾಗಿ ತಯಾರಿಸಿದುವದರಿಂದ, ತಲೆ ತಿರುಗುವಿಕೆ, ಹಿರ್‌ಕಣ್ಣ ನೋವು ಕಣ್ಣು ಮಂಜು, ಸ್ಮತಿನಾಶ, ಇರುಳುಗಣ್ಣು ಗುಣವಾಗುವದು. ಮಾನಸಿಕ ಕೆಲಸದ ಪುರುಷರಿಗೂ, ಸ್ತ್ರೀಯರಿಗೂ, ಬೇಸಿಗೆ ಕಾಲಕ್ಕೆ ವರಪ್ರದಾನವಾಗಿದೆ

ಸೀಸೆ ೧ಕ್ಕೆ ೦—೧೨—೦ ವಿಳಾಸ:—**Behar Chemical Works,**

Shree Gauranga Bhavan, BHAGALPUR.

ಏಜಂಟರು— ಷಾ ಕಂಪೆನಿ, ಮಂಗಳೂರು, ದ. ಕ.

Wanted

as active partners, on co-operative basis, educated young men for employment in an agricultural and industrial colony on a monthly allowance of Rupees 7-8-0 Cash security of Rs 100/- is essential along with the applications to

Kanjarpane Gopalkrishnaya,
Sullia Post, South Kanara

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ.	ರೂ. ಆ
ಹೊಸ ರಾಶಿ ಅಕ್ಕಿ	3— 4	3— 0
ಹೊಸ ಮುಡ್ಡಿ	3—10	4— 6
ಗುಡ್ಡು ಸುಗ್ಗಿ	3— 8	3—12
ಊರ ಅಪ್ಪಲ್ ಬೆಲ್ತಿಗೆ	4— 0	4— 8
ರಂಗೂನು ಬಿ. ಗೋ ೧ಕ್ಕೆ	6— 4	7— 0
ಎಲ್ಲೂರು ಬಿ ಮು. ೧ಕ್ಕೆ	4— 4	4— 8
ಗೋದಿ ಗೋಣಿ ೧ಕ್ಕೆ	8 — 8	10— 4
ತೊಗರಿ ಗೋಣಿ ೧ಕ್ಕೆ	9 —0	9 — 8
ಹುರುಳಿ ಗೋಣಿ ೧ಕ್ಕೆ	5— 4	5 —12
ಕಡಲೆ ಗೋಣಿ ೧ಕ್ಕೆ	7 — 4	9 — 8
ತೊಗರಿಬೇಳೆ ಗೋಣಿ ೧ಕ್ಕೆ	11— 0	15— 8
ಉದ್ದು ಗೋಣಿ ೧ಕ್ಕೆ	9— 8	10 — 0
ಹೆಸರು ಗೋಣಿ ೧ಕ್ಕೆ	9— 4	9—12
ಊರುಬೆಲ್ಲ ಖಂಡಿ ೧ಕ್ಕೆ	30— 0	35— 0
ಉಪ್ಪು ಗೋಣಿ ೧ಕ್ಕೆ	4— 8	4— 8
ಕೊಬ್ರಿ ಖಂಡಿ ೧ಕ್ಕೆ	60— 0	70— 0
ಕೊಬ್ರಿ ಹಿಂಡಿ ಖಂಡಿ ೧ಕ್ಕೆ	28— 0	29— 0
ಎಳ್ಳಿಂಡಿ ಖಂಡಿ ೧ಕ್ಕೆ	32 — 8	33—12
ಕೊಬ್ರಿ ಎಣ್ಣೆ ಮುಡಿ ೧ಕ್ಕೆ	4—15	6— 0
ಎಳ್ಳೆಣ್ಣೆ ಮುಡಿ ೧ಕ್ಕೆ	7— 0	7— 0
ಹರಳೆಣ್ಣೆ ಪೆಟ್ಟಿಗೆ ೧ಕ್ಕೆ	6— 5	6— 5
ಮೋರಿಸ ಸಕ್ಕರೆ ಮು. ೧ಕ್ಕೆ	3— 9	3 — 9
ಮೆಣಸು	2— 8	4— 0
ಸಾಸಿವೆ ಮುಡಿ ೧ಕ್ಕೆ	5 — 8	6— 0
ಕಾಳುಮೆಣಸು ಖ ೧ಕ್ಕೆ	102— 8	105—
ಯೇಲಕ್ಕಿ ಬೀಜ ಮುಡಿ ೧ಕ್ಕೆ	38— 0	39— 0
ಗೇರುಬೀಜ ಮು. ೧ಕ್ಕೆ	13— 8	8 — 10
ಕಪ್ಪಿನ ಖಂಡಿ ೧ಕ್ಕೆ	35— 0	37— 8
ಕಾಂಡ್ಲಾಕಗಡು ಮು. ೧ಕ್ಕೆ	9— 12	9— 14
ಕಾಂಡ್ಲುಕಾಶ್ರಗಳು ಮು. ೧ಕ್ಕೆ	12— 8	14— 0
ಅಡಕೆಬೆಳ್ಳಿ ಸೇರು ೧ಕ್ಕೆ	17— 8	18— 0
ಹಿಪ್ಪೆ ಕಗಡು ಮು. ೧ಕ್ಕೆ	10— 0	10—
ಹವಸು ೧ಕ್ಕೆ	22— 8	22— 8
ಹುಣಸೆ ಹುಳಿ ಖಂಡಿ ೧ಕ್ಕೆ	20— 0	25— 0
ನೇಟಿವ್ ಕಾಫಿ ಖಂಡಿ ೧ಕ್ಕೆ	145— 0	150— 4
ಫಿಟೇರಿ ಕಾಫಿ ಖಂಡಿ ೧ಕ್ಕೆ	175— 0	185— 0
ಮಡಿಕೇರಿ ಏಲಕ್ಕಿ	25— 0	26 — 8

ಸ್ತನೋ ಸ್ತೇಧಃ

STHANO STHEDAH THE MALAYALA OUSHADHA CO. POST – CHALAPURAM, MALABAR

ಮಲೆಯಾಳಿ ಸ್ತ್ರೀಯರ ರಹಸ್ಯವು

ಈಗ ತಾನೆ ಬಯಲಿಗೆ ಬಂತು ಮನುಷ್ಯರನ್ನು ಆಕರ್ಷಿಸುವಂತಹುದು ಏನೆಂದು ಅವರಿಗೆ ಗೊತ್ತು. ಮನುಷ್ಯನು ಹೆಂಗಸರ್ವರಳನ್ನು ಕಂಡೊಡನೆಯೆ ಅವನ ದೃಷ್ಟಿಯು ಆಕೆಯ ಮುಂಭಾಗದ ಸರಿಯಾ ಸ್ತನದ ಬಳಿ ನಿಲ್ಲುವುದು—ಅವುಗಳು ಉಬ್ಬಿ ಗೋಲಕಾರವಾಗಿ ತಾರುಣ್ಯಭಾವವನ್ನು ಸೂಚಿಸುತ್ತವೆಯೆ?

48 ದಿನಗಳಲ್ಲಿ ಮನೋಹರವಾದ ಸ್ತನಗಳನ್ನು ಪಡೆಯುವಿರಿ. ಇಲ್ಲವಾದರೆ ಹಣವಾಪಸು.

ಇದೆಲ್ಲವೂ ಮಲೆಯಾಳಿಗಳ ರಹಸ್ಯಮಯ ಔಷಧವಾದ 'ಸ್ತನೋ ಸ್ತೇಧ'ದಿಂದ ಸಾಧ್ಯ. ನಿಮ್ಮ ಸ್ತನಗಳು ಅಸೌಖ್ಯದಿಂದಲೂ ದಾರುಣವಾದ ಚಿಂತೆಯಿಂದಲೂ ಪ್ರಾಯವು ಕಳೆದುದರಿಂದಲೂ ರಕ್ತಹೀನವಾಗಿ ನೋಡಲು ಅಸಹ್ಯವಾಗಿದ್ದರೂ, ಅವುಗಳು ಜೋಲು ಬಿದ್ದಿದ್ದರೂ, ಸರಿಯಾಗಿ ಬೆಳೆಯದೆ ಇದ್ದರೂ, ದಿ ಮಲೆಯಾಳ ಔಷಧ ಕಂಪೆನಿ, ಚಾಲಾಪುರಂ, ಇವರು ನಿಮ್ಮನ್ನು ಈ ಸಂಕಷ್ಟದಿಂದ ಬಹು ಬೇಗನೆ ಪಾರುಮಾಡಬಲ್ಲರು. ಅವರ ಔಷಧವು ಜೋಲುಬಿದ್ದ ಸ್ತನಗಳನ್ನು ಪುಷ್ಟವಾಗಿಯೂ, ಬೆಳೆಯದ ಸ್ತನಗಳನ್ನು ಎದೆತುಂಬ ಬೆಳೆಯುವಂತೆಯೂ, ಗೋಲಾಕಾರವಾಗಿಯೂ ಮನೋಹರವಾಗಿಯೂ ಮಾಡಬಲ್ಲದು. ದೇಹದೊಳಗೆ ಹೋಗುವ ಔಷಧಿಯು ಶರೀರ ವೃದ್ಧಿಯನ್ನೂ ಸ್ತನಗಳ ಪುಷ್ಟಿಯನ್ನೂ, ಹೊರಗೆ ಲೇಪಿಸುವ ಮದ್ದು ಚರ್ಮ ರಂಧ್ರಗಳನ್ನು ಸೇರಿ, ರಕ್ತಪ್ರವಾಹವನ್ನು ಸರಿಗೊಳಿಸಿ ಸ್ತನಗಳನ್ನು ಅನಮಾನಾಕರ್ಷಕಗಳನ್ನಾಗಿ ಮಾಡುವುದು. ಮಾತ್ರವಲ್ಲದೆ ಚರ್ಮಕ್ಕೆ ದಿವ್ಯವಾದ ಕಾಂತಿಯನ್ನೂ ಕೊಡುವುದು. ಇದರಿಂದ ಸಾಧಕ ವಿನಹ ಬಾಧಕವಿಲ್ಲ. ಮಲೆಯಾಳಿ ಸ್ತ್ರೀಯರೆಲ್ಲರೂ ಇದನ್ನು ಉಪಯೋಗಿಸಿ ತುಂಬಾ ಗುಣಲಾಭವನ್ನು ಹೊಂದಿರುವರು. ಅಂತಹ ಗುಣವನ್ನು ನೀವೂ ಪಡೆಯಿರಿ.

ಸ್ತನೋ ಸ್ತೇಧ ನಂಬ್ರ 20 (ತಿನ್ನುವ ಔಷಧ) ರೂ 3, ನಂಬ್ರ 21. (ಹೊರಗೆ ಲೇಪಿಸುವ ಮದ್ದು) ರೂ 3
ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಕಂಪೆನಿಗೆ ಬರೆದುಕೊಳ್ಳಿ

ದಿ ಮಲೆಯಾಳ ಔಷಧ ಕಂಪೆನಿ, ಪೋಸ್ಟು ಚಾಲಾಪುರಂ, ಮಲಬಾರು

ಇದಲ್ಲದೆ ಬೇರೆ ಔಷಧಗಳೂ ಕೆಳಗಿನ ರೋಗಗಳಿಗಾಗಿ ತಯಾರಿಸಲ್ಪಡುತ್ತವೆ.
1. ಮುಟ್ಟುದೋಷ 2. ಸಂತತಿ ಪ್ರತಿಬಂಧಕ, 3 ಧಾತುಪುಷ್ಟಿ, 4 ಲಿಂಗವೃದ್ಧಿ, 5. ಸ್ತ್ರೀರೋಗ, 6. ಕ್ಷಯ ಸಂಹಾರಿ, 7 ವಾತರೋಗ,

ಅಲಭ್ಯ ಲಾಭ! ಸುವರ್ಣ ಸಂದರ್ಭ!

ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳಿತೆಯೊಳಗಿರುವ

ಇಡ್ಯ ವಿದ್ಯಾದಾಯಿನೀ ಶಾಲಾ ಸಹಾಯಾರ್ಥವಾಗಿ ಏರ್ಪಡಿಸಿದ

ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ

ತೆಗೆಯುವ ತಾರೀಕು: 3-6-1936. ಟಿಕೆಟಿನ ಬೆಲೆ: ನಾಲ್ಕಾಣೆ ಮಾತ್ರ

ಸೋಡ್ತಿಯ ಮೊಬಲಗು: ರೂ. 50,000.

ಒಟ್ಟು ಬಹುಮಾನಗಳ ಸಂಖ್ಯೆ: 1778. ಮೌಲ್ಯ ರೂ. 20,000.

ವಿದ್ಯಾಭಿಮಾನಿಗಳೆಲ್ಲರೂ ಅಗತ್ಯವಾಗಿ ಪ್ರೋತ್ಸಾಹಿಸಬೇಕಾದ ಉದ್ಯಮ.

ಮೆನೇಜರ್— ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್ (ದ. ಕ.)

ಪಿ. ಸೂ—ಯಾವ ಕಾರಣದಿಂದಲಾದರೂ ಸೋಡ್ತಿ ತೆಗೆಯುವ ತಾರೀಕನ್ನು ಮುಂದರಿಸಲಾಗುವುದಿಲ್ಲ.

ಶಾಲಿವಾಹನ ಶಕ ೧೮೫೮ನೆಯ ಯುವ ಸಂವತ್ಸರದ ಜ್ಯೇಷ್ಠ ಶು। ೧೦ ಶನಿವಾರದಿಂದ ಜ್ಯೇಷ್ಠ ಶು। ೧೫ ಶುಕ್ರವಾರದ ವರೇಗಿನ ಪಂಚಾಂಗ.(೧೯೩೬ನೇಯ ವೃಷಭ ಚೇರಿ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೂರ್ಯೋದಯ	ವಿಶೇಷ
30	ಶನಿ	೧೦	೫೫	ಉತ್ತರ	೨೩	೧೬	[illegible]
31	ರವಿ	೧೧	೬೦	ಹಸ್ತ	೪೦	೧೮	
1	ಸೋಮ	೧೧	೦	ಚಿತ್ರ	೪೬	೧೯	
2	ಕುಜ	೧೨	೫	ಸ್ವಾತಿ	೪೨	೨೦	
3	ಬುಧ	೧೩	೯	ವಿಶಾಖಾ	೪೮	೨೧	
4	ಗುರು	೧೪	೧೩	ಅನುರಾಧಾ	೫೨	೨೨	
5	ಶುಕ್ರ	೧೫	೧೫	ಜ್ಯೇಷ್ಠ	೫೫	೨೪	

ನಮ್ಮ ಸಾಪ್ತಾಹಿಕ ಕಥೆ:—

ಸಮಾಜದ ಮೇಲೆ ಪ್ರತೀಕಾರ

ಲೇಖಕ:— ಶ್ರೀ "ರಸಿಕರಂಜನ"

'ನಿನಗೆ ಛಲದಂಕ ರಾಮರಾಯರ ಪರಿಚಯವಿತ್ತೇ?' ನಾಮಣಿಯು, ತಾನು ಓದುತ್ತಿದ್ದ ಸಣ್ಣದೊಂದು ಪುಸ್ತಕದ ಕಡೆಯಿಂದ ತನ್ನ ದೃಷ್ಟಿಯನ್ನು ನನ್ನ ಕಡೆಗೆ ತಿರುಗಿಸುತ್ತ, ಕೇಳಿದನು.

'ಪರಿಚಯ? ಯಾಕೆ, ಅವರು ನನ್ನ ಅಚ್ಚುಮೆಚ್ಚಿನ ಗೆಳೆಯರೇ ಆಗಿದ್ದರು. ನಿನಗೆ ಹೇಗೆ ತಿಳಿಯಿತು?' ನಾನು ಕುತೂಹಲದಿಂದ ಕೇಳಿದೆ.

'ನಿನ್ನ ಈ ಪುಸ್ತಕದಲ್ಲಿ ಇರುವ ಅವರ ಈ ನಕ್ಷೆಯೇ ಅದನ್ನು ಮುಕ್ತಕಂಠವಾಗಿ ಸಾರುತ್ತಿರುವಾಗ ನನಗೆ ಅದು ತಿಳಿದುದರಲ್ಲಿ ಆಶ್ಚರ್ಯವೇನಿದೆ?' ಎನ್ನುತ್ತ, ನಾಮಣಿಯು ರಾಮರಾಯರ ನಕ್ಷೆಯನ್ನು ಆ ಪುಸ್ತಕದೊಳಗಿಂದ ಎತ್ತಿ ತೋರಿಸಿದನು.

'ಓಹೊ! ಸರಿ. ನಾನು ಇಲ್ಲಿಗೆ ಬಂದಂದಿನಿಂದಲೂ, ಎಂಟು ವರ್ಷಗಳ ವರೆಗೆ, ವಾರಕ್ಕೆ ಒಂದು ಸಲವಾದರೂ ನನ್ನ ದವಾಖಾನೆಗೆ ಅವರು ತಪ್ಪದೆ ಬರುತ್ತಿದ್ದರು. ಅಂತಹ ಒಂದು ಸಂದರ್ಭದಲ್ಲೇ ಅವರು ಅದನ್ನು ನನಗೆ ಕೊಟ್ಟಿದ್ದರು,' ನಾನು ಎಂದೆನು.

'ಅವರು ನಿನ್ನ 'ಪೇಶಂಟ್' ಆಗಿದ್ದರೇ?' ನಾಮಣಿಯು ಒಂದು ಸಿಗರೇಟನ್ನು ಹೊತ್ತಿಸಿ, ದಮ್ಮು ತೆಗೆದುಕೊಳ್ಳುತ್ತ, ಕೇಳಿದನು.

'ಪೇಶಂಟ್?' ಯಾಕೆ, ಅವರು ಅಷ್ಟು ಸಲ ಇಲ್ಲಿಗೆ ಬರುತ್ತಿದ್ದರೂ, ಅವರಿಗೆ ಒಮ್ಮೆಯಾದರೂ, ಎಂತಹ ಔಷಧಿಯ ಆವಶ್ಯಕತೆಯೂ ಉಂಟಾಗಿರಲಿಲ್ಲ. ಯಾವಾಗ ನೋಡಿದರೂ ನಿರ್ರೋಗಿಯಾಗಿದ್ದು, ನಗುಮೊಗದಿಂದ ಕೂಡಿಯೇ ಬಂದು ಹೋಗುತ್ತಿದ್ದರು. ಅಂತೂ, ಅವರು ನನ್ನಿಂದ ಪಡೆಯುತ್ತಿದ್ದುದಕ್ಕಿಂತಲೂ ಹೆಚ್ಚಿನ ಪ್ರಯೋಜನವನ್ನು ನಾನೇ ಅವರಿಂದ ಪಡೆಯುತ್ತಿದ್ದೆನು,' ನಾನು ಹೇಳಿದೆ.

'ಯಾವ ವಿಷಯದಲ್ಲಿ?' ನಾಮಣಿ ವಿಚಾರಿಸಿದನು.

'ಯಾವ ವಿಷಯದಲ್ಲಿ ಎಂದೇನು? ಪ್ರಪಂಚದೊಳಗಿನ ಪ್ರತಿಯೊಂದು ವಿಷಯದಲ್ಲಿಯೂ ಎಂದು ಸರಾಗವಾಗಿ ಹೇಳಬಹುದು. ಅವರ ಲೌಕಿಕ ಜ್ಞಾನವು ಅಷ್ಟು ಅಗಾಧ, ಅವರ ಪ್ರಾಪಂಚಿಕ ಅನುಭವ ಅಷ್ಟು ವಿಶಾಲವಾಗಿತ್ತು. ಮೊತ್ತಮೊದಲಂತೂ, ಮೆಡಿಕಲ್ ಕಾಲೇಜ್ ಶಿಕ್ಷಣದಿಂದ ಹೊಸತಾಗಿ ಹೊರಬಂದಿದ್ದ ನನಗೆ, ಕೂಪದಿಂದ ಈಚೆಗೆ ಬಂದ ಮಂಡೂಕನಷ್ಟೇ ಪ್ರಪಂಚ ಜ್ಞಾನವಿದ್ದುದು ಸಹಜವಷ್ಟೆ! ಆಗತಾನೇ ಆಕಸ್ಮಿಕ ಯೋಗದಿಂದ ದೊರಕಿದ ರಾಮರಾಯರ ಗೆಳೆತನವು ನನಗೆ ಅಪರಿಮಿತ ಉಪಕಾರಕ್ಕೆ ಬಿತ್ತು. ಹೆಚ್ಚೇಕೆ?— ಅವರಿಂದಲೇ ನಾನೊಬ್ಬ ಲೌಕಿಕ ಮನುಷ್ಯನಾದೆನೆಂದು ಎನ್ನಲು ಆಕ್ಷೇಪವಿರದು!' ನಾನು, ವಿಶದಪಡಿಸಿದೆನು.

'ನಿನಗೆ ಮೊದಲು ಅವರು ಹೇಗೆ ಗಂಟುಬಿದ್ದರು?' ನಾಮಣಿಯ ಸಹಜ ಪ್ರಶ್ನೆ.

'ಅದೆಲ್ಲಾ ಒಂದು ದೊಡ್ಡ ಕಥೆಯೇ ಆಗಿರುವುದು,' ಎಂದು ನಾನು ಮೊದಲು ಮಾಡಿದೆ.

೨

ನಾನು ಆಗ ಈ ಕಲ್ಕತ್ತೆಯಲ್ಲಿ ದವಾಖಾನೆಯನ್ನು ತೆರೆದು ಕೆಲವು ತಿಂಗಳಾಗಿತ್ತಷ್ಟೆ. ಒಂದು ದಿನ ರಾಮರಾಯರು ಇಲ್ಲಿಗೆ ಬಂದು ತಮ್ಮ ಭೇಟಿ ಚೀಟಿ (Visiting card)ನ್ನು ಕೊಟ್ಟು ಮಾತುಕತೆಗೆ ತೊಡಗಿದರು. ಭೇಟಿಚೀಟಿನಿಂದ ಅವರು ನಮ್ಮ ಕಡೆಯವರೆಂದೂ, ಇಲ್ಲಿಯ ಒಬ್ಬ ಕಮಿಷನ್ ಏಜಂಟರೆಂದೂ ತಿಳಿದುಕೊಂಡೆನು.

'ತಮ್ಮ ಹೆಸರಿನಿಂದ ತಾವು ನಮ್ಮೂರ ಕಡೆಯವರೆಂದು ತಿಳಿದೆನು. ಪರಸ್ಥಳದಲ್ಲಿ ಈ ರೀತಿ ಸಲಿಗೆಯಿಂದ ವರ್ತಿಸುತ್ತಿದ್ದುದಕ್ಕಾಗಿ ಕ್ಷಮಿಸುವಿರಷ್ಟೆ?' ರಾಮರಾಯರು ಎಂದರು.

'ಅದಕ್ಕೇನು! ತಾವೂ ನಮ್ಮೂರ ಕಡೆಯವರೆಂದು ತಿಳಿದು ಸಂತೋಷವಾಯಿತು. ನಾನು ಇಲ್ಲಿ, ಅಪರಿಚಿತರ ಮಧ್ಯದಲ್ಲಿ, ಇರುವಾಗ ತಮ್ಮಂತಹ ಅನುಭವಿಕರು ಆಗಿಂದಾಗ ಬಂದು ನಮಗೆ ಯೋಗ್ಯ ಸಲಹೆ ಸೂಚನೆಗಳನ್ನು ಕೊಡುತ್ತಿದ್ದರೆ ನಾವು ಧನ್ಯರೇ ಸ್ವಿ!' ನಾನು ಎಂದೆ.

'ನಾನು ಇಪ್ಪತ್ತು ವರ್ಷಗಳಿಂದಲೂ ಇಲ್ಲಿದ್ದುಕೊಂಡು ಇಲ್ಲಿಯ ಸ್ಥಿತಿಗತಿಗಳನ್ನು ಸ್ವಲ್ಪಮಟ್ಟಿಗೆ ತಿಳಿಯುವಂತಾಗಿದೆ. ನನ್ನ ಈ ಅನುಭವದಿಂದ ತಮಗೆ ಪ್ರಯೋಜನವಾಗುವಂತಿದ್ದರೆ ನನ್ನ ಜನ್ಮ ಸಾರ್ಥಕವೆಂದೇ ಎಣಿಸಬೇಕು!' ಅವರು ಔದಾರ್ಯದಿಂದ ಎಂದರು.

ಅಂದಿನ ಸಂಭಾಷಣೆಯಿಂದ ರಾಮರಾಯರು ನಮ್ಮ ಮಂಗಳೂರಿನವರೇ ಎಂದು ತಿಳಿಯಿತು. ಆದರೆ ಅವರು ತನ್ನ ವಿಷಯವಾಗಿ ಹೆಚ್ಚಿನ ಪರಿಚಯ ಮಾಡಿಕೊಡಲಿಲ್ಲ. ಹಾಗೆಯೇ ಒಂದು ಘಂಟೆ ಸಮಯ ಆ ಮಾತು, ಈ ಮಾತು ಆಡಿ ಕಡೆಗೆ ನಾವು ಬೀಳ್ಕೊಂಡೆವು.

ಆ ಮೇಲೆ ಅವರು, ಕೆಲವು ದಿನಗಳ ವರೆಗೆ, ಪ್ರತಿದಿನವೂ ಬಂದು ಮಾತಾಡಿ ಹೋಗತೊಡಗಿದರು. ಅವರು, ಒಂದೊಂದು ಸಲ ಏನನ್ನೋ ವಿಚಾರಿಸಲು ಬಾಯೆತ್ತಿ, ಹಾಗೆಯೇ ಅನುಮಾನಿಸಿ, ಸುಮ್ಮನಾಗುತ್ತಿದ್ದರು. ಅವರ ಮಾತುಕತೆಯಲ್ಲಿ ನಮ್ಮೂರ ಪ್ರಸಂಗವೇ ಹೆಚ್ಚಾಗಿ ಬರುತ್ತಿತ್ತು. ಊರಿನ ಮುಖ್ಯ ಪುರುಷರ ವಿಷಯ, ಮುಖ್ಯ ಘಟನೆಗಳ ವಿಚಾರ, ಮುಖ್ಯ ಸಂಸ್ಥೆಗಳ ಸಮಾಚಾರ ಮುಂತಾದುವನ್ನು ನನಗೆ ತಿಳಿದಿರುವಷ್ಟರ ಮಟ್ಟಿಗೆ ಅವರಿಗೆ ತಿಳಿಯ ಹೇಳಿದೆನು. ಅವರು ಇಪ್ಪತ್ತು ವರ್ಷಗಳಿಂದ ಮಂಗಳೂರಲ್ಲಿ ಕಾಲಿಡದಿದ್ದುದೇ ಅವರ ಆ ಕುತೂಹಲಕ್ಕೆ ಕಾರಣವಾಗಿತ್ತು. ಆದರೆ ಅಷ್ಟು ವರ್ಷದಿಂದಲೂ ಊರಿಗೆ ಹೋಗದಿದ್ದುದರ ಕಾರಣವನ್ನು ನಾನು ಕೇಳಿದಷ್ಟಕ್ಕೆ ಅವರು ಏನೋ ಅಸಮಾಧಾನಕರ ಉತ್ತರಕೊಟ್ಟು, ತಪ್ಪಿಸಿಕೊಳ್ಳುತ್ತಿದ್ದರು.

೩

ಒಂದು ದಿನ ನಾವಿಬ್ಬರೂ ಮಾತಾಡುತ್ತ ಕುಳಿತಿದ್ದೆವು. ಪ್ರಸಂಗವಶಾತ್ತಾಗಿ ನಾನು ಅವರಿಗೆ ಮದುವೆಯಾಗಿದೆಯೋ ಎಂದು ಕೇಳಿದೆನು. ಆಗ ಅವರ ಕಣ್ಣುಗಳಿಂದ ಎರಡು ನೀರ ಹನಿಗಳು ಉದುರಿದುವು. ನಾನು ಅವರಿಗಾದ ದುಃಖವನ್ನು ನೋಡಿ ಆ ಪ್ರಶ್ನೆ ಕೇಳಿದುದಕ್ಕಾಗಿ ಪಶ್ಚಾತ್ತಾಪ ಪಟ್ಟೆನು.

"ಸ್ವಾಮಿ, ಮದುವೆಯಾಗುವುದಕ್ಕೂ ಭಾಗ್ಯಬೇಕು. ಆ ಭಾಗ್ಯವಿದ್ದರೂ ಕೂಡ, ಮದುವೆಯಾದ ಮೇಲೆ ದಾಂಪತ್ಯ ಸುಖ ಅನುಭವಿಸಿಕೊಂಡಿರುವುದಕ್ಕೂ ಭಾಗ್ಯಬೇಕು. ಏನು ಮಾಡಲಿ, ನನಗೆ ಆ ಭಾಗ್ಯವಿದ್ದೂ ಈ ಭಾಗ್ಯವಿಲ್ಲದಂತಾಗಿದೆ!" ರಾಮರಾಯರು, ಹಲುಬುತ್ತಾ ಕಣ್ಣೀರು ಸುರಿಸತೊಡಗಿದರು.

ನಾನು ತಬ್ಬಿಬ್ಬಾದೆನು.

"ತಮಗೆ ಈ ರೀತಿ ಗಾಯಕ್ಕೆ ಉಪ್ಪು ಎರಚಿದುದಕ್ಕಾಗಿ ನನ್ನನ್ನು ಕ್ಷಮಿಸಿ!" ಎಂದು ನಾನು ಬೇರೆ ಪ್ರಸಂಗ ಎತ್ತಲು ಯೋಚಿಸಿದೆನು.

"ಸ್ವಾಮಿ, ನಾನು ಭಾಗ್ಯಹೀನ! ನನಗೆ ಆಪ್ತರು ಯಾರೂ ಇಲ್ಲ. ಊರಿನಲ್ಲಿ ಕೆಲವರಿದ್ದರೂ, ನನಗೆ ಅವರು ಇರದಂತೆಯೇ ಆಗಿದೆ. ನನ್ನ ಎದೆಯ ಕಳವಳವನ್ನು ಬಿಚ್ಚಲು ನನಗೆ ಯಾರೂ ಇಲ್ಲ. ಆದರೆ ತಮಗೆ ಕೇಳುವ ತಾಳ್ಮೆ ಇದ್ದರೆ, ಅದನ್ನು ಹೇಳಿ, ನನ್ನ ಎದೆಯನ್ನು ಸ್ವಲ್ಪ ಹಗುರವಮಾಡಿಕೊಳ್ಳುವೆನು!" ರಾಯರು ಎಂದರು.

"ಅದರಿಂದ ತಮಗೆ ನೋವಾಗದ ಪಕ್ಷಕ್ಕೆ ಎಷ್ಟನ್ನಾದರೂ ಕೇಳಲು ನನಗೆ ತಾಳ್ಮೆಯಿರದೇನು?" ನಾನು ಎಂದೆ.

"ಸ್ವಾಮೀ! ನಾನು ಭಾಗ್ಯಹೀನನೆಂದೆ, ಭಾಗ್ಯಹೀನ! ನನಗೆ ಹೆಣ್ಣನ್ನು ಪಡೆಯುವ ಭಾಗ್ಯವಿತ್ತು; ಅದೂ ಭಾಗ್ಯವಂತರ ಮನೆಯ ಹೆಣ್ಣನ್ನು. ನಮಗೂ ಮನೆಯಲ್ಲಿ ಸುಮ್ಮನೆ ಇದ್ದುಕೊಂಡು ತಿನ್ನುವಷ್ಟು ಉತ್ಪನ್ನವಿತ್ತು. ಆದರೆ ಮಾಡುವುದೇನು? ನನಗೆ ಸ್ವಲ್ಪ ಛಲ ಜಾಸ್ತಿ. ಚಿಕ್ಕಂದಿನಿಂದಲೂ ನನಗೆ ಹಾಗೆ, ಅದಕ್ಕಾಗಿ ನನಗೆ 'ಛಲದಂಕ' ಎಂಬ ಅಡ್ಡ ಹೆಸರು ಕೂಡ ಬಂದಿತ್ತು. ಅದೇ ನನಗೆ ಎದುರು ನಿಂತಿತು.

"ನನ್ನ ಮಾವ, ಪಾಪ, ಭಂಗಾರದಂತಹ ಮನುಷ್ಯ! ಬಹುಶಃ ತಮಗವರ ಗುರುತು ಇದೆಯೋ ಏನೋ. ನಾಗವಲ್ಲಿ ನಾರಾಯಣರಾಯರೆಂದು ಅವರ ಹೆಸರು."

"ಇಲ್ಲ; ನನಗೆ ಅವರ ಪರಿಚಯವಿಲ್ಲ. ಆದರೆ ಆ ಹೆಸರು ಕೇಳಿ ಬಲ್ಲೆನು."

"ಸ್ವಿ! ಅವರೀಗ ಬದುಕಿರುವರೋ ಇಲ್ಲ ಎಂದು ನನಗೆ ಇನ್ನೂ ಗೊತ್ತೇ ಇಲ್ಲ. ತಮಗೇನಾದರೂ ತಿಳಿದಿದೆಯೋ ವಿಚಾರಿಸಬೇಕೆಂದು ಎಷ್ಟೋ ಸಲ ಬಾಯಿ ತೆರೆದೆ. ಆದರೆ ಮಾತೇ ಹೊರಡಲಿಲ್ಲ. ಈ ಹೊತ್ತು ತಾವಾಗಿಯೇ ಮಾತೆತ್ತಿದುದರಿಂದ ಧೈರ್ಯ ಬಂತು!" ಎಂದು ನನ್ನ ಜವಾಬನ್ನು ನಿರೀಕ್ಷಿಸಿ ಮಾತು ನಿಲ್ಲಿಸಿದರು.

"ಅವರು ಸ್ವರ್ಗಸ್ಥರಾಗಿದ್ದಾರೆಂದು ಕೆಲವು ವರ್ಷಗಳ ಹಿಂದೆಯೇ ಕೇಳಿದ ನೆನಪು ಕಾಣುತ್ತದೆ," ನಾನು ಸ್ವಲ್ಪ ಯೋಚಿಸಿ ಹೇಳಿದೆ.

"ಅವರ ಆತ್ಮಕ್ಕೆ ಶಾಂತಿಯಿರಲಿ! ಹೌದು, ಆ ಪುಣ್ಯಾತ್ಮ ಒಮ್ಮೆ ಏನೋ ಮಾತಾಡುವಾಗ, ನನ್ನ ಹಿತಕ್ಕಾಗಿಯೇ ಸ್ವಲ್ಪ ಜರೆದು ಮಾತಾಡಿದರು. ನನಗೆ, ಪ್ರಾಯದ ಕೊಬ್ಬಿನಿಂದ, ಪಿತ್ತ ನೆತ್ತಿಗೇರಿತು. ನಮ್ಮ ಸ್ಥಿತಿಯು ಅವರ ಸ್ಥಿತಿಗಿಂತಲೂ ನಿಕೃಷ್ಟವಾದುದರಿಂದಲೇ ಅವರು ಹೀಗೆ ಮಾತಾಡುವಂತಾಯಿತೆಂದು ನನಗೆ ತೋರಿತು. ನನ್ನ ಛಲದಂಕ ಸ್ವಭಾವವು ತನ್ನ ಕೆಲಸವನ್ನು ಮಾಡಿಬಿಟ್ಟಿತು. ನಾನು ಹತ್ತು ಸಾವಿರ ರೂಪಾಯಿಯನ್ನು ಗಂಟುಕೂಡಿಸದೆ ತಿರುಗಿ ಊರಲ್ಲಿ ಕಾಲಿಡಲಾರೆನೆಂದು ಭಾಷೆ ಹಾಕಿಕೊಂಡೆನು. ಗಂಡನೆಂದರೇನೆಂದು ತಿಳಿಯುವಷ್ಟು ಪ್ರಾಯಕ್ಕೂ ಬಾರದ ಆ ಹೆಂಡತಿಯನ್ನು ಆ ಹಸುಗೂಸನ್ನು ಬಿಟ್ಟು, ಯಾರಿಗೂ ಹೇಳದೆ ಊರನ್ನು ಬಿಟ್ಟು ನೇರಾಗಿ ಇಲ್ಲಿಗೆ ಬಂದೆನು.

"ಇಲ್ಲಿಯ ಹಾಡು ಏನೆಂಬುದು ತಮಗೆ ಗೊತ್ತಿದೆಯಷ್ಟೆ! ನನ್ನ ವಿದ್ಯೆಯಿಂದ ಹತ್ತು ಸಾವಿರ ರೂಪಾಯಿ ಬಿಟ್ಟು, ಅಷ್ಟೇ ಕಾಸನ್ನಾದರೂ ಕೂಡಿಸಿಡಲು ಹತ್ತು ಜನ್ಮಗಳೂ ಸಾಲವು. ಆದರೆ ನನ್ನ ಪ್ರತಿಜ್ಞೆಯನ್ನು ಮೀರಲಿಕ್ಕೂ ಸಾಧ್ಯವಿಲ್ಲ. ಅದಕ್ಕಾಗಿ, ಇನ್ನೂ ಸಾಯಲೀಸದೆ ಬದುಕಲಾರದೆ ನರಳಿಕೊಂಡಿರುವೆನು," ಅವರು, ಮಾತು ನಿಲ್ಲಿಸಿ, ಕಣ್ಣು ಒರಸಿಕೊಳ್ಳತೊಡಗಿದರು.

ನಾನು ಅವರಿಗೆ ಬಹಳವಾಗಿ ಹೇಳಿ ನೋಡಿದೆನು. ಇನ್ನೂ ಅವರ ತಪ್ಪನ್ನು ಸರಿಪಡಿಸಲು ಸಮಯ ಮೀರಿಲ್ಲವೆಂದೆನು. ಆದರೆ ಅವರು ತನ್ನ ಛಲವನ್ನು ಕೊನೆಗೂ ಬಿಡಲಿಲ್ಲ. "ಹತ್ತು ಸಾವಿರ ರೂಪಾಯಿ ದೊರಕಿದರೆ ತಾನೇ ಊರಿಗೆ ಹೋದೇನು. ಇಲ್ಲವೇ ಇಲ್ಲಿಯೇ ಸತ್ತೇನು," ಎಂದು ಖಂಡತುಂಡವಾಗಿ ಎಂದರು. ಕಡೆಗೂ ಅವರ ಮಾತಿನಂತೆಯೇ ಮಾಡಿದರು.

೪

"ರಾಮರಾಯರು ಅಷ್ಟು ರೂಪಾಯಿಯನ್ನು ಹೇಗೆ ಸಂಪಾದಿಸಿದರು? ಅವರಿಗೆ ಸೋಡ್ತಿಯಲ್ಲೇನಾದರೂ ಸಿಕ್ಕಿತೇ?" ನಾಮಣಿ ಕೇಳಿದನು.

"ಎಲ್ಲಿಯ ಹಣ? ಯಾವ ಸೋಡ್ತಿ?" ನಾನು ಆಶ್ಚರ್ಯದಿಂದ ಚಕಿತನಾಗಿ, ಕೇಳಿದೆ.

"ಹಾಗಾದರೆ, ಅವರು ಹಣವಿಲ್ಲದೆಯೆ, ತಮ್ಮ ಭಾಷೆಯನ್ನು ಮೀರಿ ಊರಿಗೆ ಹೋದರೇ?" ತಿರುಗಿ ನಾಮಣಿಯ ಪ್ರಶ್ನೆ.

"ಅವರು ಊರಿಗೆ ಹೋದರೆಂದು ನಿನಗೆ ಯಾರು ಹೇಳಿದರು?" ನಾನು, ಮತ್ತಷ್ಟು ಆಶ್ಚರ್ಯದಿಂದ ಕೇಳಿದೆ.

"ಯಾರೇಕೆ? ನಾನೇ ಅವರನ್ನು ಅಲ್ಲಿ ಮೊನ್ನೆಯ ವರೆಗೆ ಕಂಡಿರುವೆನು. ತನ್ನ ನಾಲ್ವತ್ತು ವರ್ಷ ಪ್ರಾಯದ ತರುಣ ಪತ್ನಿಯೊಡನೆ ನೂತನವಾಗಿ ಸಂಸಾರ ಹೂಡಿಕೊಂಡು, ಮಾವನ ಸೊತ್ತಿಗೆಲ್ಲಾ ಯಜಮಾನನಾಗಿ ಬಾಳುತ್ತಿರುವರು!" ನಾಮಣಿ ನನ್ನ ಮೇಲೆ ತನ್ನ ಬಾಂಬನ್ನು ಎಸೆದನು.

"ರಾಮ! ರಾಮ! ಹಾಗಾದರೆ ಮಹತ್ತರವಾದ ಮೋಸವಾಗಿರುವುದು, ಛಲದಂಕ ರಾಮರಾಯರು, ಎರಡು ವರ್ಷಗಳ ಹಿಂದೆ, ನನ್ನ ಕಣ್ಣ ಮುಂದೆಯೇ, ಡಬ್ಲ್ ನ್ಯುಮೋನಿಯಾ ಜ್ವರದಿಂದ, ತೀರಿಕೊಂಡಿರುವರು!" ನಾಮಣಿಯ ಮೇಲೆ ನನ್ನ ಬಾಂಬನ್ನು ಎಸೆದೆನು.

"ಹಾಗಾದರೆ ಈಗಿನ 'ಛಲದಂಕ'ನು ಕಪಟ ವೇಷಧಾರಿ!" ಕೈಯೊಳಗಿನ ಸಿಗರೆಟನ್ನು ನೆಲಕ್ಕೆ ಒಡೆಯುತ್ತ ಎಂದ, ನಾಮಣಿ.

"ಅದರಲ್ಲಿ ಅನುಮಾನವೇನು?" ನಾನು ದೃಢವಾಗಿ, ಎಂದೆನು.

"ಈಗೇನು ಮಾಡಲಿ?" ನಾಮಣಿ ಯೋಚನೆಗೆ ತೊಡಗಿದನು.

'ಆ ಕಪಟಿಯನ್ನು ಪೋಲೀಸರ ಕೈಯಲ್ಲಿ ಕೊಡು, ಮತ್ತು ಆ ಪಾಪದವಳನ್ನು ನಿರಾಶೆ, ಅಪಮಾನ ದುಃಖಗಳಿಗೆ ಈಡುಮಾಡಿಕೊಂದು ಬಿಡು!' ನಾನು ವ್ಯಂಗ್ಯವಾಗಿ, ಎಂದೆನು.

ನಾಮಣಿಯು ಸ್ವಲ್ಪ ಸಮಯ ಏನೂ ಮಾತಾಡಲಿಲ್ಲ; ಕಡೆಗೆ ಇನ್ನೊಂದು ಸಿಗರೇಟನ್ನು ಹೊತ್ತಿಸಿ, ಮೇಲಿಂದ ಮೇಲೆ ದಮ್ಮನ್ನು ಸೇದುತ್ತ, ತನ್ನ ಕುರ್ಚಿಯೆಂಬ ನ್ಯಾಯಪೀಠದಿಂದ ತೀರ್ಪು ಕೊಟ್ಟನು:

'ನೀನೆಂದುದು ಸರಿ, ವೇಣು. ಮೀರಿದ ಪ್ರಾಯದಲ್ಲಾದರೂ ಅವಳಿಗೆ ದಾಂಪತ್ಯ ಜೀವನದ ತೃಪ್ತಿ ದೊರೆಯಲಿ, ಪುನರ್ವಿವಾಹವನ್ನು ಎಂತಹ ಸಂದರ್ಭದಲ್ಲೂ ನಿಷೇಧಿಸುವ ಸಮಾಜದ ಮೇಲೆ ಇದೊಂದು ಪ್ರತೀಕಾರವಾಗಲಿ!'

'ತಥಾಸ್ತು!' ಎಂದು ನಾನು ನಾಮಣಿಯ ತೀರ್ಪಿಗೆ ತಲೆಬಾಗಿದೆನು.

ಮೋಟಾರು ಕಾರನ್ನು ಕೊಂಡುಕೊಳ್ಳುವಷ್ಟು ಧನಾಢ್ಯನು ತಾನಲ್ಲ

ದೇಶದ ಕಡು ಗರೀಬರಲ್ಲಿ ನಾನೂ ಒಬ್ಬನಾಗಿರುವೆನು.

ಎಂದು ಜವಾಹರಲಾಲರು ನುಡಿದರು.

ಜವಾಹರಲಾಲರು ಶ್ರೀಮಂತರೆಂಬ ಸಮಾಚಾರವನ್ನು ಎಲ್ಲರೂ ಕೇಳಿ ಬಲ್ಲರು. ಅದಕ್ಕಾಗಿಯೇ ಸಾವಿರಗಟ್ಟಳೆ ಮೋಟಾರ ವ್ಯಾಪಾರಿಕರು ಅವರನ್ನು ಒಂದು ಮೋಟಾರು ಕಾರು ಕೊಂಡುಕೊಳ್ಳಲು ಬೇಡಿದರು. ಅದಕ್ಕಾಗಿ ಪಡೆದ ಅರ್ಜಿಗಳನ್ನು ಲೆಕ್ಕಮಾಡುವರೆ ಕೆಲವು ದಿವಸಗಳು ತಾಗಿದುವಂತೆ. ಇವುಗಳಲ್ಲಿ ಹೆಚ್ಚಿನವುಗಳು ಮದ್ರಾಸಿನಿಂದ ಬಂದವುಗಳಾಗಿದ್ದವು. ಇವುಗಳನ್ನೆಲ್ಲಾ ಓದಿ ನೋಡಿದ ರಾಷ್ಟ್ರಸಭಾಧ್ಯಕ್ಷರು 'ನನಗೆ ಕಾರಿನ ಅಗತ್ಯವೂ ಇಲ್ಲ, ಮತ್ತು ಅದನ್ನು ಕೊಂಡುಕೊಳ್ಳುವಷ್ಟು ಧನಾಢ್ಯನು ನಾನಾಗಿರುವುದಿಲ್ಲ. ಅಂತೂ ನಾವೊಂದನ್ನು ಕೊಂಡುಕೊಂಡರೂ ಸರಕಾರದವರು ಒಂದಲ್ಲ ಒಂದು ಕಾರಣದಿಂದ ನನ್ನಿಂದ ಅದನ್ನು ಸೆಳೆಕೊಳ್ಳಲೂಬಹುದು. ಆದ್ದರಿಂದ ನನ್ನನ್ನು ಕ್ಷಮಿಸಿರಿ' ಎಂದು ಹೇಳಿದರು.

NOTICE

As per notice dated 28-4-'36 given to me by Mr. E. Danner, closing down his firm in Mangalore and cancelling my Power-of Attorney and also terminating my services with his firm, I herewith beg to announce that I have given up my services with his firm of E. Danner & Co., as from the 1st June 1936.

Mangalore 28-5-1936 K. Govinda Pal,

OUR ENGLISH COLUMN

Odd Truths.

Wonders of the Heavens

There are 18 stars of the first magnitude. These are at least 211,000 times farther from the earth than is the sun, and their light takes over 3 years to reach us. There are 55 of the second magnitude. Their light takes over 6 years to reach us; 170 of the third magnitude their light reaching us in, over 9 years; 500 of the fourth magnitude, their light taking 36 years to traverse the intervening space, are visible to the naked eye. Of these there are about 6,000. A 9-foot telescope reveals stars of the twelfth magnitude, about 10,000,000 in number. An 18 foot telescope reveals about 43,000,000 stars including those of the 13th magnitude, whose light takes 2,700 years to reach us. Each of these stars is thought to be the centre of a Solar system like our own. Our Solar system consists of the sun and the following planets revolving round it: Mercury, nearest the sun is 35,000,000 miles distant, Venus, 66,000,000 miles; the Earth 91,000,000 miles; Mars 139,000000 miles; the Asteroid about 266,000,000 miles, Jupiter neraly 476,000,000 miles; Saturn 872,000,000 miles; Uranus 17,54000 miles and Neptune 2746000,000 miles from the sun.

What is a billion

What is a billion and how long would you require to count a billion? A billion is a million times a million, and some idea of the immensity of this figure can be gauged from the fact that no person could live long enough to count it. For supposing you could count to 200 in a minute, 9512 years, 342 days, 5 hours and 20 minutes would pass before you accomplished this task.

Our Body

The following chemical analysis of the human body was quoted by a famous American doctor:

"An average man's body weighing 10 stones is composed of enough water to fill a ten-gallon barrel, enough fat for seven bars of soap, enough carbon for nine thousand lead pencils, enough phosphorus to make two thousand two hundred matchheads, sufficient magnesium for one dose of salt, enough iron to make a medium sized nail, sufficient lime to white wash a chicken-coop, and enough sulphur to rid a dog of fleas.

Hardest stone

Without doubt the diamond is the hardest stone. It is even harder than steel. It is not the hardest substance in existence all the same, being beaten in this respect by the metal tantalum.

By: 'OWL'

'Smile Awhile'

Quick Acknowledgment

He: -And so you accepted that young mailing clerk?

She: -How could I help it! He addressed me rapidly, then enveloped me in his arms, stamped a kiss on my lips, and sealed it with a hug.

o o o o

In the Right Place

A dandy in company wanted his servant, and so he called out, "where 's that blockhead of mine?" A lady present answered, "On your shoulders, sir."

o o o o

Humbug

Two boys once thought to play a trick on Charles Darwin (of Evolution Theory fame) They took the body of a centipede, the wings of a butterfly, the legs of a grasshopper, and the head of a beetle, and glued these together to form a weird monster. With the composite creature in a box they visited Darwin.

"Please, sir, will you tell us what sort of a bug this is?" the spokes-man asked.

The naturalist gave a short glance at the exhibit and a long glance at the boys.

"Did it hum?" he inquired solemnly. The boys replied enthusiastically, in one voice, 'Oh, yes, sir."

"Well, then", Darwin declared 'it is a hum-bug."

o o o o

Maiden Speach

The unhappy man explained the cause of his wretchedness.

"I've never made a speech in my life. But last night at the dinner at the club they insisted on my making some remarks and I got up, and began, like this.

"As I was sitting on my thought, a seat struck me!"

ಕೆನರಾ ಬ್ಯಾಂಕ್ ಲಿಮಿಟೆಡ್,
ಕುಂದಾಪುರ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನ ಆಭರಣಗಳ ಆಡವಿನ ಮೇಲೆ ಸದ್ರಿ ಬೇಂಕಿನಿಂದ ಪಡೆದ ಸಾಲಗಳ ಅಸ್ಲು ಬಡ್ಡಿ ವಗೈರೆಯನ್ನು ಕೊಡದೆ ಆ ಕುರಿತು ರಜಿಸ್ತ್ರಿ ನೋಟಿಸುಗಳು ಕೊಟ್ಟಾಗ್ಯೂ ಬೇಂಕಿಗೆ ಬರತಕ್ಕ ಹಣವನ್ನು ಪಾವತಿ ಮಾಡದೆ ಇರುವುದರಿಂದ ಸದ್ರಿಯವರ ಸಾಲಗಳಿಗೆ ಜವಾಬ್ದಾರಿಯಿರುವ ಡಾಗಿಣಗಳನ್ನು ಇದೇ ಬರುವ ಜೂನ್ ತಿಂಗಳ ತಾ. 17ನೇ ಬುಧವಾರ ಹಗಲು ಘಂಟೆ 12ಕ್ಕೆ ಯಾ ಬೇಂಕಿನವರಿಗೆ ಯುಕ್ತ ತೋರುವ ಬೇರೆ ಯಾವುದಾದರೂ ಒಂದು ದಿವಸ ಪುನಹ ನೋಟೀಸು ವಗೈರೆ ಕೊಡದೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುವು ಎಂತ ಈ ಮೂಲಕ ತಿಳಿಯಪಡಿಸೋಣಾಗುತ್ತದೆ

ಸಾಲದ ನಂಬ್ರ 404/33 ಸಾಲ ಪಡಕೊಂಡ ತಾರೀಕು 23-6-1933 ಹೆಸರು ಯಡಾಡಿ ವಾಸುದೇವ ರಾವ್, ಸುಬ್ರಾಯರ ಮಗ ಅಸ್ಲು ರೂ 85

ಸಾಲದ ನಂಬ್ರ 481/33 ಸಾಲ ಪಡಕೊಂಡ ತಾ. 2-8-'33 ಹೆಸರು ಯಡಾಡಿ ವಾಸುದೇವರಾವ್ ಸುಬ್ರಾಯರ ಮಗ ಅಸ್ಲು ರೂ 25

ಸಾಲದ ನಂಬ್ರ 688/'33 ಸಾಲ ಪಡಕೊಂಡ ತಾ 2-11-'33 ಹೆಸರು ಯಡಾಡಿ ವಾಸುದೇವರಾವ್ ಸುಬ್ರಾಯರ ಮಗ ಅಸ್ಲು ರೂಪ್ಯಾ 40

ಸಾಲದ ನಂಬ್ರ 454/'33 ಸಾಲ ಪಡಕೊಂಡ ತಾ 19-7-'33 ಹೆಸರು ಕಳಂಜಿ ಪುಟ್ಟಯ್ಯ ಉಗ್ರಾಣಿ-ವೆಂಕಟ ಮಣ ಉಗ್ರಾಣಿ ಮಗ ಅಸ್ಲು ರೂ 80

ಸಾಲದ ನಂಬ 492/34 ಸಾಲ ಪಡಕೊಂಡ ತಾ 28-7-34 ಹೆಸರು ಕಳಂಜಿ ಪುಟ್ಟಯ್ಯ ಉಗ್ರಾಣಿ-ವೆಂಕಟ್ರಮಣ ಉಗ್ರಾಣಿ ಮಗ ಅಸ್ಲು ರೂ 75

ಸಾಲದ ನಂಬ್ರ 157/35 ಸಾಲ ಪಡಕೊಂಡ ತಾ 15-3-35 ಹೆಸರು ಕಳಂಜಿ ಪುಟ್ಟಯ್ಯ ಉಗ್ರಾಣಿ-ವೆಂಕಟ್ರಮಣ ಉಗ್ರಾಣಿ ಮಗ ಅಸ್ಲು ರೂ. 150

Office of the Bank
Coondapoor,
23-5-'36

S. R. Achar,
Agent.

(೩ನೇ ಪುಟದಿಂದ ಮುಂದುವರಿದುದು)

ನ್ಯವಾಗಿ ನಮ್ಮ ಆರ್ಥಿಕ ಸುಧಾರಣೆಯನ್ನು ಮಾಡಿಕೊಳ್ಳಬೇಕಾಗಿದೆ ಒಕ್ಕಟ್ಟಿನಲ್ಲಿ ಬಲವಿದೆ ಎಂಬುದನ್ನು ತೋರಿಸಬೇಕು ಇಲ್ಲವಾದರೆ ನಮ್ಮ ಅಧೋಗತಿಯಾಗಿ ದೇಶವು ದುಃಸ್ಥಿತಿಗಿಳಿಯುವುದು. ಹಿಂದು ಮುಸಲ್ಮಾನರ ಐಕ್ಯವೇ ಭಾರತದ ಭಾಗ್ಯವು.

ದೇಶದ ದುರ್ಭಾಗ್ಯವೋ ಎಂಬಂತೆ ಇತ್ತೀಚಿಗೆ ದೇಶದ ಧುರೀಣರುಗಳು ಒಬ್ಬೊಬ್ಬರೇ ಕಣ್ಮರೆಯಾಗುತ್ತಿರುವರು. ಹಿಂದೂ ಮುಸಲ್ಮಾನರ ಐಕ್ಯಮತ್ಯಕ್ಕಾಗಿ ಹಗಲಿರುಳೂ ಕೆಲಸ ಮಾಡಿ ಒಂದು ಸಲ ಎಸೆಂಬ್ಲೀ ಅಧ್ಯಕ್ಷ ಪದವಿಗೆ ಏರುವ ಗೌರವ ಹೊಂದಿದ ಶ್ರೀ ಅನ್ಸಾರಿಯವರು ಪರಂಧಾಮನೈದಿದ ಶೋಕವು ಪೂರ್ತಿ ಆಗುವ ಮುಂಚೆಯೇ ಬಡವ ಐಕ್ಯರ್ಯವಂತರ ಕಾಮಧೇನುವೂ, ಅಪ್ರತಿಮ ದೇಶಸೇವಕರೂ ಆಗಿದ್ದ ಡಾ॥ ಅನ್ಸಾರಿಯವರ ನಿಧನವು ಸಮಗ್ರ ಭಾರತಕ್ಕೆ ವಜ್ರಘಾತವಾದಂತಾಯಿತು. ಇದರಿಂದ ಪ್ರಗತಿ ಮಾರ್ಗಕ್ಕೆ ಇಳಿಯುವ ಬಹು ದೊಡ್ಡ ಮುಸಲ್ಮಾನ ಬಂಧುವು ಇನ್ನು ಮುಂದಕ್ಕೆ ದೇಶಕ್ಕೆ ದೊರಕಲಾರರೋ ಎಂಬಂತಿದೆ. ಇನ್ನು ಅವರ ಸ್ಥಾನವನ್ನು ಪಡೆಯಬೇಕಾದರೆ ಈಗ ಆಳರಸರ ಶೋಭತಿಗಳಿಂದ ಗಡಿನಾಡಿನ ಗಾಂಧಿ ಎಂದು ಕರೆಯಲ್ಪಡುವ ಖಾನ್ ಅಬ್ದುಲ್ ಗಫರ ಖಾನರೊಬ್ಬರೇ ಯೋಗ್ಯರು. ಜೈಲಿನ ಸರಳುಗಳ ಮಧ್ಯದಲ್ಲಿ ಭಾರತಕ್ಕಾಗಿ ಹಗಲಿರುಳು ಪರಿತಪಿಸುತ್ತಿರುವರು. ಈಗ ಅವರ ಸಮ್ಮಿಲನವು ಅಗತ್ಯಬೇಕಾಗಿದೆ. ಆಳರಸರ ಹೃದಯ ಪರಿವರ್ತನ ಹೊಂದಿ ಖಾನರ ಬಿಡುಗಡೆಯಾಗಬಹುದೇ? ಅವರ ಸೇವೆಯು ಭಾರತಕ್ಕೆ ಬಹು ಬೇಗನೇ ದೊರಕಬಹುದೆಂದು ಆಶಿಸಬಹುದೇ? ಅಂತೇ ಆಗಲೆಂದು ಪ್ರಾರ್ಥನೆ.

೩೦ ವರ್ಷಗಳ ತನಕ ಉದರ ವೇದನೆಯಿಂದ ಬಾಧೆ!

ವಿಪರೀತವಾದ ಅಜೀರ್ಣದಿಂದಲೂ ಉದರಬಾಧೆಯಿಂದಲೂ ಪೀಡಿಸಲ್ಪಡುವವರ ಅನುಲಕ್ಷ್ಯಕ್ಕರ್ಹವಾದ ಒಂದು ವಿಷಯವಿದೆ. ಹಲವು ವರ್ಷಗಳಿಂದಲೇ ನೋವಿನಿಂದ ಬಾಧಿಸಲ್ಪಡುತ್ತಿರುವಿರಾದರೆ, ಫಲವಿಲ್ಲದೆ ಅನೇಕ ಔಷಧಿಗಳನ್ನು ಪ್ರಯೋಗಿಸಿ ದಣಿದಿರುವಿರಾದರೆ ನೀವು ಮಿ॥ M ರವರು ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಸೇವಿಸಿದಂತೆ ಸೇವಿಸಿದರೆ ನೀವು ಇನ್ನೂ ಗುಣ ಹೊಂದುವಿರಿ

ಆದರೆ ಅವರೇ ತನ್ನ ಕಥೆಯನ್ನು ಹೇಳಲಿ. ಪತ್ರವಿಲ್ಲದೆ—' ಮೂವತ್ತು ವರ್ಷಗಳಿಂದ ನಾನು ಉದರ ಬಾಧೆಯಿಂದ ಪೀಡಿಸಲ್ಪಡುತ್ತಿದ್ದೆ. ನನ್ನನ್ನು ಹಲವು ಸಲ ಪರೀಕ್ಷಿಸಲಾಯಿತು. ಹಲವು ಔಷಧಿಗಳನ್ನು ಪರಿಣಾಮವೇನೂ ಇಲ್ಲದೆ ಸೇವಿಸಿದೆ. ಆರು ತಿಂಗಳ ತನಕ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನು ಸೇವಿಸಿದ ನಂತರ—ನಾನು ನಿಜವಾಗಿ ಹೇಳುತ್ತೇನೆ—ನನಗೆ ಇದರ ಬಾಧೆಯೇ ಇಲ್ಲ—ಅಲ್ಲದೆ ಈಗ ಈ ಪೌಡರನ್ನು ಸೇವಿಸುವುದೂ ಇಲ್ಲ. ಈ ವಿಷಯವನು ಪ್ರತಿಜ್ಞಾಬದ್ಧನಾಗಿ ಪುನಃ ಪುನಃ ಹೇಳಲೂ ನನ್ನ ಅಡ್ಡಿಯಿಲ್ಲ.

ಈ ಮೆಕ್‌ಲೀನ್ ಬ್ರೇಂಡ್ ಸ್ಟೊಮಕ್ ಪೌಡರು ಇಷ್ಟು ಬೇಗ ಶೀಘ್ರವಾಗಿ ಗುಣವನ್ನು ತರುವುದಾದರೆ ಅದನ್ನು ಪ್ರಯೋಗಿಸಿ ಪರೀಕ್ಷಿಸದಿರಬಾರದು!

ಆದರೆ ಕೆಲವು ಅಂಗಡಿಗಳ ವಾಸಿಗಾಗಿ ಕೀಳು ತರಗತಿಯ ವಸ್ತುವನ್ನು ಪಡೆದು ಅಪಾಯಕ್ಕೆ ಗುರಿಯಾಗಬೇಡಿ. ತಿಂಸ್ಥ ಮುದ್ರೆಯಿರುವ ಉತ್ತಮ ಮೆಕ್‌ಲೀನ್ ಬ್ರೇಂಡ್ ಸ್ಟೋಮಕ್ ಪೌಡರನ್ನೇ ನಮ್ಮ ಕೆಮಿಸ್ಟರಿಂದ ಪಡೆಯಿರಿ. ಸೀಲು, ರಕ್ಷಾಪತ್ರ ಮತ್ತು ಬಿಲ್ಲೆಗಳ ಮೇಲೆ

Alex. C. Maclean

ಎಂಬ ದಸ್ಕತು ಇದೆ

ಸ್ಥಳೀಯ ಕೆಮಿಸ್ಟರಿಂದ ಅಥವಾ ಸ್ಟೋರುಗಳಿಂದ ಇದನ್ನು ಪಡೆಯುವರೆ ಕಷ್ಟವಿರುವುದಾದರೆ—

ಮಾರ್ಟಿನ್ ಎಂಡ್ ಹೆರಿಸ್ ಲಿಮಿಟೆಡ್,
೧೫ ಸರಕುಂಡಾಮ ಚೆಟ್ಟಿ ಸ್ಟ್ರೀಟ್, ಮದ್ರಾಸು,
ಇಲ್ಲಿಗೆ ಬರೆಯಿರಿ.

ಹೆದ್ದಾರಿಗಳ ಮಸೂದೆಗಳು.

ಮುನ್ನುಡಿ

ಮನುಷ್ಯಸಮಾಜದಸುಖವು ಅದರ ಆಯಾ ಯ ಅಂಗಗಳ ಸಂಪರ್ಕ ಮತ್ತು ಅನ್ಯೋನ್ಯ ಭಾವಗಳ ಮೇಲೆ ಹೊಂದಿಕೊಂಡಿವೆ ಮತ್ತು ಅವುಗಳ ಕಾರ್ಯಗಳು ಸುಸೂತ್ರವಾಗಿ ನಡೆಯುವುದರ ಮೇಲೆ ಹೊಂದಿಕೊಂಡಿವೆ

ಈ ಮೇಲಿನ ಅಭಿಪ್ರಾಯವನ್ನು ನಡೆಸುಸಲು ಹಿಂದೂದೇಶದ ಸೇಫ್ಟಿಫಸ್ಟ್ ಎಸೋಸಿಯೇಶನ್ ಸಂಸ್ಥೆಯವರು, ವಿವಿಧ ಮೋಟಾರು ಸಂಘಗಳೊಡನೆ ಪರ್ಯಾಲೋಚಿಸಿ ರೋಡು ಗಳನ್ನು ಉಪಯೋಗಿಸುವವರ ಸಂರಕ್ಷಣೆಯ ಮಸೂದೆಗಳನ್ನು ಮಾಡಿರುವುವು

ಮಸೂದೆಗಳು ರೋಡುಗಳಲ್ಲಿ ವಾಹನಗಳನ್ನು ನಡಿಸುವವರಿಗೂ ಇನ್ನಿತರರಿಗೂ ಸಂಬಂಧಪಟ್ಟವುಗಳಾಗಿದ್ದು ಸಮಾಜದ ಒಳಿತಕ್ಕಾಗಿರುತ್ತವೆ

ಎಲ್ಲಾ ಅನುಕೂಲತೆಗಳಿಗಾಗಿ ರೋಡುಗಳನ್ನು ಉಪಯೋಗಿಸುವ ಪ್ರತೀ ಒಂದು ಮಾನವ ಸಮಾಜಕ್ಕೆ ಅಂಥಾ ಅನುಕೂಲತೆಗಳು ಎಲ್ಲಾ ತರದ ಕೆಲಸಗಳಲ್ಲೂ ದೊರಕಬೇಕೆಂಬ ಇಚ್ಛೆಯೇ ಮಸೂದೆಯದ್ದಾಗಿದೆ

ಮುಖ್ಯವಾಗಿ ಶಾಲಾ ಉಪಾಧ್ಯಾಯರಿಗೂ, ಭಾವೀ ಜನಾಂಗವಾದ ವಿದ್ಯಾರ್ಥಿಗಳಿಗೂ ನನ್ನ ಸಲಹೆ ಏನೆಂದರೆ ಈ ಮೇಲಿನ ಮಸೂದೆಯಂತೆ ತಮ್ಮ ತಮ್ಮ ಗುಣ ನಡತೆಗಳನ್ನು ಹೆಚ್ಚಿಸಿ ಹೆರವರಿಗೆ ತೊಂದರೆಯಾಗದಂತೆ ಮತ್ತು ನಿಸಹಾಯಕರಾಗದೆ ತಮ್ಮ ಜೀವಮಾನದಲ್ಲಿ ಸುಖವನ್ನು ಹೊಂದಬೇಕು

ಸಾಹಸ ಶೌರ್ಯಕ್ಕಾಗಿಯೇ ಜೀವನವನ್ನು ಹೊಂದಿದ್ದೇವೆ ನಿಸಹಾಯತೆಯನ್ನು ಕಮ್ಮಿ ಮಾಡಲು ಸ್ವಸಂರಕ್ಷಣೆಯ ಮಸೂದೆಯನ್ನು ಸರಿಯಾಗಿ ಪರ್ಯಾಲೋಚಿಸಿ ತಮ್ಮ ತಮ್ಮ ಕರ್ತವ್ಯವು ಪ್ರತೀ ಒಬ್ಬನಿಗೆ ಅನುಕೂಲವಾಗುವಂತಿರಬೇಕು ಸಮಾಜದ ಸರಿಕರಿಯವರಿಗೂ ಅಲ್ಲದೆ ಎಲ್ಲಾ ಸಮಾಜಕ್ಕೂ ಅದರ ಸುಖವು ದೊರಕುವಂತಾಗಬೇಕು

ವಿಲ್ಲಿಂಗಡನ್,
ವೈಸರಾಯರ ಅರಮನೆ ಹೊಸಡೇಹಲಿ

ಸಂರಕ್ಷಣೆಯ ಮಸೂದೆಗಳು

ಈ ಕೆಳಗೆ ವಿವರಿಸುವ ಸಂರಕ್ಷಣೆಯ ಮಸೂದೆಗಳು ಪ್ರತೀ ಒಬ್ಬ ಮೋಟಾರು ಚಾಲಕನಿಗೂ ಸೈಕಲ್ ಸವಾರಿಗೂ ಮತ್ತು ಪಾದಚಾರಿಗೂ ಸಂಬಂಧಪಡುವಂತಾದ್ದಾಗಿದೆ ಈ ಮಸೂದೆಗಳನ್ನು ಸುರಕ್ಷಿತವಾಗಿ ರೋಡುಗಳಲ್ಲಿ ಸಂಚರಿಸುವರೆ ಅನುಕೂಲವಾಗುವಂತೆ ಪ್ರಯತ್ನಿಸಬೇಕು ಅಂಥವರು ಇಂಡಿಯಾದಲ್ಲೂ ಬರ್ಮಾದಲ್ಲೂ ಇರುವ ಅನೇಕ (Automobile Association) (ಮೋಟರು ವಾಹನಗಳಿಗೆ ಸಂಬಂಧಪಟ್ಟ ಸಂಸ್ಥೆಗಳು) ಸಲಹೆಗಳನ್ನು ಹೊಂದಬಹುದು

ಅಂಥಾ ಮಸೂದೆಗಳಿಂದ ಮಾರ್ಗಗಳಲ್ಲಿ ಸಂಚರಿಸುವವರು ತಮ್ಮ ತಮ್ಮ ನಡತೆಗಳನ್ನು ಮುಂದಟ್ಟ ಮಾಡಿಕೊಂಡಿರಬೇಕು. ಅಕಸ್ಮಾತ್ ಸಂಭವಿಸಬಹುದಾದ ಅನಾಹುತಗಳಿಗೆ ಒಬ್ಬರನ್ನೊಬ್ಬರು ಜವಾಬ್ದಾರರಾಗುವರು ಮೋಟಾರು ನಡಿಸುವ, ಸೈಕಲ್ ನಡಿಸುವ ಹಾಗೂ ಪಾದಚಾರಿಯಾಗಿ ನಡೆಯುವಾಗ ನಾವು ಬಹಳ ಜಾಗ್ರತೆಯನ್ನು ತೆಗೆದುಕೊಳ್ಳಬೇಕಲ್ಲದೆ ಸಂಭವಿಸುವ ಅಪಘಾತಗಳಿಂದ ತಾವು ಅನುಭವಿಸುವ ಕೋರ್ಟುಗಳ ತೊಂದರೆಯನ್ನು ತಪ್ಪಿಸಲು ಇಂಥಾ ಮಸೂದೆಗಳು ಸಹಕಾರಿಗಳಾಗಿವೆ.

ಮಸೂದೆಗಳಲ್ಲಿರುವ ರೂಲ್ಸುಗಳು ಸಾಧಾರಣವಾಗಿ ಅವರವರ ಎಚ್ಚರಿಕೆ ಮಟ್ಟಿಗೆ ಮಾತ್ರ ರೂಪಿಸಿರುತ್ತವೆ ಮುಖ್ಯತಾ ರೋಡುಗಳಲ್ಲಿ ಸಂಭವಿಸಬಹುದಾದ ಅಪಘಾತಗಳನ್ನು ತಪ್ಪಿಸುವ ಉದ್ದೇಶದಿಂದಲೇ ಈ ಸಂರಕ್ಷಣೆ ಮಸೂದೆಯನ್ನು ಮಾಡಿರುವದಲ್ಲದೆ ಮಾರ್ಗಗಳನ್ನು ಎಲ್ಲರ ಪ್ರಯೋಜನಕ್ಕಾಗಿ ಇರಲು ಯೋಗ್ಯದ್ದನ್ನಾಗಿ ಮಾಡಲೂ ಆಗಿದೆ ಇಂಥಾ ಮಸೂದೆಗಳು ಜನಸಾಮಾನ್ಯರಿಗಾಗಿದೆಯಲ್ಲದೆ ಅವರವರ ಸ್ವಂತ ರಕ್ಷಣೆಯ ಅನುಕೂಲತೆಗಳಿಗಾಗಿವೆ

ಸಂರಕ್ಷಣೆಯ ಮಸೂದೆಗಳು ಅನುಭವಸ್ಥರಿಂದ ಮಾಡಲ್ಪಟ್ಟಿರುವುದಲ್ಲದೆ ಅಂಥಾ ಮಸೂದೆಗಳು ರೋಡನ್ನು ಉಪಯೋಗಿಸುವ ವಾಹನಗಳ ಮ್ಹಾಲಿಕರಿಂದ ಒಪ್ಪಿಗೆಯನ್ನು ಪಡೆದಂತಾದ್ದಾಗಿರುತ್ತವೆ ಇವುಗಳಿಗೆ ಕಾನೂನುಗಳು ಇಲ್ಲದಿರಬಹುದಾದರೂ, ರೋಡುಗಳಲ್ಲಿ ಅಪಾಯ ಹೊಂದುವ ಮನುಷ್ಯನ ರಕ್ಷಣೆಗಾಗಿ ಸಹಾಯಮಾಡಲು ಸಹಾಯಕಾರಿಯಾಗಿವೆ

ಇಂಥಾ ಸಂರಕ್ಷಣೆಯ ಮಸೂದೆಗಳನ್ನು ರೋಡಿನಲ್ಲಿ ಉಪಯೋಗಿಸುವ ಪ್ರತೀ ಒಬ್ಬನು ತಿಳಿದಿರಬೇಕಲ್ಲದೆ ಜನಸಂದಣಿ ಜಾಸ್ತಿ ಇರುಗುವಲ್ಲಿಯೂ, ಶಾಲಾ ಮಠಾರವಿರುವ ಪತೀ ಗಲ್ಲಿಗಳಲ್ಲಿಯೂ ಇಂಥಾ ಮಸೂದೆಗಳನ್ನು ಜನಸಾಮಾನ್ಯರು ತಿಳಿಯುವುದು ಅತೀ ಅಗತ್ಯವಾಗಿದೆ

ಮೋಟಾರು ನಡಿಸುವವರ ಅವಗಾಹನಗೆ

1 **ಮೋಟಾರು ನಡಿಸುವವರು—** ಯಾವಾಗಲೂ ದಯಾಳುಗಳಾಗಿರಬೇಕು. ಜೋರಾಗಿ ನಡಿಸುವ ಚತುರತೆಯನ್ನು ತೋರಿಸುವಾಗ್ಗೆ ತನ್ನ ಮೇಲೆ ಹೆಚ್ಚಿನ ಜವಾಬ್ದಾರಿವುಂಟೆಂದು ನೆನಸಬೇಕು ಅಲ್ಲದೆ ತಾನು ಸಂಚರಿಸುವ ರೋಡಿನಲ್ಲಿ ನಡೆಯುವ ಗೂ ಹಕ್ಕುಂಟೆಂಬುದನ್ನು ತಿಳಿದಿರಬೇಕು

ಅಕಸ್ಮಾತ್ ಇಕ್ಕಡೆಗಳಿಂದ ಎರುವ ಸಣ್ಣ ಮಕ್ಕಳ ಮೇಲೆ ನಿಮ್ಮ ನಿಗಾ ಇರಲಿ

ಮಾರ್ಗಗಳು ಪುರಾತನದ್ದಾಗಲೀ ಹೊಸದಾಗಲೀ ಅವು ಪತೀ ಒಬ್ಬರಿಗೂ ಉಪಯೋಗಿಸುವರೆ ಸಂಬಂಧಿಸಿದವುಗಳೆಂಬ ಆಲೋಚನೆ ಇರಲಿ

2. **ಸ್ಟಾರ್ಟಿಂಗ್—** ಪ್ರತೀ ಸಲ ಬಸ್ಸನ್ನು ಚಲಿಸುವಾಗ್ಗೆ ಪ್ರಥಮದ್ದಾಗಿ ಬ್ರೇಕುಗಳು ಸರಿ ಇರುವುದೋ ಎಂಬುದನ್ನು ನೋಡುವ ಅಭ್ಯಾಸವಿರಬೇಕು

ಬ್ರೇಕುಗಳ ಸರಿಯಿಲ್ಲವಾಗಿದ್ದರೆ ಕೂಡಲೇ ಅದನ್ನು ಸರಿಪಡಿಸಬೇಕು

3. **ಸಿಗ್ನಲ್—** ನೀವು ಯಾವಾಗ ಬಸ್ಸನ್ನು ನಿಲ್ಲಿಸುವ ಪ್ರಸಂಗ ಬರುತ್ತದೋ ಆಗ ಬಸ್ಸನ್ನು ನಿಧಾನವಾಗಿ ನಡಿಸಿ ನಿಮ್ಮ ಡ್ರ್ಯಾವಿಂಗ್ ಲ್ಯಾಸನ್ನಿನಲ್ಲಿ ನಮೂದಿಸಿದಂತೆ ಸಿಗ್ನಲ್ (ನಿಶಾನಿ) ಮಾಡಿರಿ ಎದುರುಗಡೆ ಇರುವ ನಿಮ್ಮ ನಿಗಾವನ್ನು ಬದಲಾಯಿಸಬೇಡಿರಿ

ಜನಸಂದಣಿ ಇರುವ ಪಟ್ಟಣಗಳಲ್ಲಿ ಸಾಧಾರಣ ರೋಡುಗಳಲ್ಲಿಯೂ, ಎಚ್ಚರಿಕೆ ನೋಟೀಸು ಇರುವಲ್ಲಿಯೂ ಸಿಗ್ನಲ್ ಮಾಡುವುದನ್ನು ಮರೆಯಬೇಡಿರಿ.

4. **ಬಿಳಿ ನಿಶಾನಿ.** ಮೂಲೆ ಮಾರ್ಗಗಳಲ್ಲಿ ಹಾಕಿರುವ ನಿಶಾನಿಗಳನ್ನು ನೋಡಿ ಕೂಡಲೇ ನಿಧಾನವಾಗಿ ಹೋಗಿರಿ. ಇಲ್ಲವೇ ಎದುರುಗಡೆಯಿಂದ ಬರುವ ಸಂಚಾಲಕರಿಗೆ ಅನುಕೂಲವಾಗುವಂತೆ ನಿಮ್ಮ ಬಸ್ಸನ್ನು ನಿಲ್ಲಿಸಿರಿ.

5. **ಸ್ಪೀಡ್—** ರೋಡಿನ ಕಂಡಿಶನ್ ಮೇರೆಗೆ ನಿಮ್ಮ ಸ್ಪೀಡನ್ನು ಏಕಪ್ರಕಾರವಾಗಿಯೂ, ಹವಾಗುಣಕ್ಕೆ ಸರಿಯಾಗಿರುವಂತೆಯೂ, ಪರಿಸ್ಥಿತಿಗನುಸಾರವಾಗಿಯೂ ನಡಿಸಿರಿ

6. **ಮೂಲೆ ರೋಡುಗಳಲ್ಲಿ—** ನಿಮ್ಮ ಬಸ್ಸನ್ನು ಟರ್ನ್ ಮಾಡುವಾಗ, ಎರಡೂ ಕಡೆಗಳಲ್ಲಿ ಸಾಕಾದಷ್ಟು ಸ್ಥಳವಿದೆಯೋ ಎಂಬುದನ್ನೂ, ಎದುರುಗಡೆ ಬರುವ ವಾಹನಗಳಿಂದ ಏನೊಂದು ತೊಂದರೆಯಾಗದ ಸ್ಥಿತಿಯಲ್ಲಿದೆಯೋ ಎಂಬುದನ್ನೂ ನೋಡಿಕೊಳ್ಳಿರಿ

ಸಪೂರವಾದ ಮಾರ್ಗಗಳಲ್ಲಿ ಟರ್ನ್ ಮಾಡಲಿಕ್ಕಿರುವುದಾದರೆ ಪಾಸ್ಸಾಗಲು ತೊಂದರೆಯಾಗುವಂತಿದ್ದರೆ ಬಸ್ಸನ್ನು ಸ್ವಲ್ಪ ಹಿಂದುಗಡೆ ತೆಗೆದುಕೊಂಡು ಮುಂದಕ್ಕೆ ಹೋಗಲನುಕೂಲ ಮಾಡಿ ಮುಂಸಾಗಬೇಕು

ರ್‍ಯಾಟ್ ಸ್ಯಾಡಿಗೆ ತಿರುಗಿಸುವ ಸಂದರ್ಭ ಬಂದರೆ ಮಾರ್ಗದ ಮಧ್ಯಕ್ಕೆ ಕೂಡಲೇ ಹೋಗಿ ಹಿಂದುಗಡೆಯಲ್ಲಿರುವ ಜನರು ನಿಮ್ಮ ಎಡಕಡೆಗೆ ಹೋಗುವಂತೆ ಮಾಡಿ ನಂತರ ಜಾಗ್ರತೆಯಿಂದ ಟರ್ನ್ ಮಾಡಿ ಹೋಗಬೇಕು

7. **ಕನ್ನಡಿಗಳು—** ನಿಮ್ಮ ಹಿಂದುಗಡೆಯಲ್ಲಿ ನಿಮ್ಮನ್ನು ಹಿಂದಕ್ಕೆ ಹಾಕಿ ಮುಂದು ಹೋಗಬೇಕೆಂದ ಬರುವ ವಾಹನಗಳನ್ನು ನೋಡಲು ಕನ್ನಡಿಯು ಬಹಳ ಪ್ರಯೋಜನಕಾರಿಯಾಗಿದೆ

8 **ಹಿಂಬಾಲಿಸುವುದು—** ರೋಡುಗಳ ಒಳ್ಳೆಯ ಸ್ಥಿತಿಯಲ್ಲಿಯೂ, ನಿಮ್ಮ ಬಸ್ಸನ್ನು ಹಿಂಬಾಲಿಸಿ ಮುಂದಕ್ಕೆ ಹೋಗುವಂತೆ ವಿಶಾಲವಾಗಿಯೂ ಇದ್ದಲ್ಲಿ ಹಿಂಬಾಲಿಸಬಹುದು. ಆದರೆ ಎರಿನಲ್ಲಿಯೂ, ಸಂಕಗಳ ಮೇಲೆಯೂ ಒಂದನ್ನೊಂದು ಹಿಂಬಾಲಿಸುವುದು ಅಪಾಯಕರ ಎಂಬುದನ್ನು ಮರೆಯಬಾರದು

ಹಿಂಬಾಲಿಸುವಾಗ ಮುಂದಕ್ಕೆ ಇರುವ ಬಸ್ಸಿನ ವ ಕಾರಿನ ಸರಿಯಾದ ಸಿಗ್ನಲ್ಲನ್ನು ಅಂದರೆ ಸೂಚನೆಯನ್ನು ಕೇಳಿದೊಡನೆ ಎಡದ ಮೇಲೆ ನೀವು ಮುಂದರಿಸುವ ಆಲೋಚನೆಯನ್ನು ಮಾಡಬೇಕು

ಕ್ರಾಸ್ ರೋಡಿನಲ್ಲಾಗಲಿ ಜಂಕ್ಷನ್ ರೋಡಿನಲ್ಲಾಗಲೀ ತಿರುವು ಇರುವ ರೋಡಿನಲ್ಲಾಗಲೀ (ಅಂಥಾ ರೋಡುಗಳಲ್ಲಿ ಮಗುಗಳನ್ನು ಅಂದರೆ ಅನುಕೂಲಗಳನ್ನು ಮಾಡಿಕೊಡುವ ಮುಖ್ಯ ಸ್ಥಳಗಳ ಹೊರತು) ಹಿಂಬಾಲಿಸಿ ಮುಂದಕ್ಕೆ ಹೋಗಬಾರದು

ಮುಂದರಿಸಿ ಹೋದ ನಂತರ ರೋಡಿನ ಎಡಗಡೆಗೆ ಬಂದ ಹಿಂದಗಡೆ ಬರುವ ಯಾವತ್ತೂ ವಾಹನಗಳಿಗೆ ತೊಂದರೆಯಾಗದಂತೆ ಸ್ಥಳ ಬಿಟ್ಟುಕೊಡಬೇಕು ಅಲ್ಲದೆ ಎಷ್ಟಕ್ಕೂ ನಿಲ್ಲಿಸಬಾರದು

ರೋಡಿನ ಬಲಗಡೆಯ ಸ್ಯಾಡು ಎದುರುಗಡೆ ಬರುವ ವಾಹನಗಳಾದ್ದಾಗಿದೆ ಎಂಬುದನ್ನು ತಿಳಿದಿರಬೇಕು

ಟ್ರಾಮು, ಕಾರುಗಳು ಎಡಕ್ಕೆಯ ಸ್ಯಾಡಿನ ರೋಡಿನಲ್ಲಿ ಬರುವದರ ಹೊರತು ಬಾಕಿ ಎಲ್ಲಾ ಟ್ರಾಮು ಕಾರುಗಳನ್ನು ಪಾಸಾಗಿ ಹೋಗುವಂತೆ ಅನುಕೂಲ ಮಾಡಿಕೊಡಬೇಕು. ಅಲ್ಲದೆ ಪೆಸೆಂಜರರು ಹತ್ತುವಾಗಲೂ, ಇಳಿಯುವಾಗಲೂ ಬೇಕಾದ ಸಮಯದ ವರೆಗೆ ನಿಧಾನಿಸಬೇಕು.

ಪಾದಚಾರಿಗಳಾದ ಮನುಷ್ಯರನ್ನು, ಸೈಕಲ್ ಸವಾರರನ್ನು ಮತ್ತು ಪ್ರಾಣಿಗಳನ್ನು ಪಾಸ್ ಮಾಡಿ ಹೋಗುವ ಸಂದರ್ಭದಲ್ಲಿ ಅವರಿಗೆ ಪಾಸಾಗಿ ಹೋಗುವರೆ ಅವರಿಗೆ ಸರಿಯಾದ ಸಮಯವನ್ನು ಕೊಡಬೇಕು. ಸ್ಥಳ ಖಾಲಿಯಾದೊಡನೆ ಜಾಗ್ರತೆಯಿಂದ ಪಾಸಾಗಿ ಹೋಗಬೇಕು ಮಳೆಗಾಲದಲ್ಲಿ ಪಾದಚಾರಿಗಳಾಗಿ ಹೋಗುವ ಮೇಲೆ ವಿವರಿಸಿದವರಿಗೆ ಕೆಸರು ವಗೈರೆ ಹಾರದಂತೆ ನೋಡಿಕೊಳ್ಳಬೇಕು.

ಇನ್ನೊಬ್ಬ ಡ್ರೈವರರು ನಿಮಗಿಂತ ಪಾಸಾಗಿ ಹೋಗಬೇಕೆಂದು ಅಪೇಕ್ಷೆ ಪಟ್ಟರೆ ಎಡಬದಿಗೆ ಸಂದು ಸರಿದು ಹಿಂದುಗಡೆ ಬರುವ ಡ್ರೈವರರಿಗೆ ನಿಶಾನಿ ಕೊಟ್ಟು ಅವರನ್ನು ಮುಂದಕ್ಕೆ ಹೋಗುವಂತೆ ಅನುಕೂಲ ಮಾಡಿಕೊಡಬೇಕು.

9 **ಅವಸರ ಪಡುವಿಕೆ—** ಎದುರಿಗೆ ಬೇರೊಂದು ರೋಡಿನಲ್ಲಿ ಬಸ್ಸು ನಡಿಸಿಕೊಂಡು ಬರುವವರಿಗಿಂತ ನೀವು ಮುಂದಾಗಿ ಪಾಸಾಗಿ ಹೋಗಬೇಕೆಂತಿದ್ದರೆ ಕೂಡಲೇ ದುಡುಕದೆ ಎದುರಿಗೆ ಬರುವವರಿಗೆ ಏನುಮಾಡುವುದೆಂಬುದನ್ನು ತಿಳಿಯಪಡಿಸಲು ಅವರಿಗೆ ಅನುಕೂಲತೆ ಮಾಡಿಕೊಟ್ಟು ಹ್ಯಾಗೆ ಹೋಗುವುದೆಂಬುದನ್ನು ನಿಶ್ಚಯ ಮಾಡಿಕೊಳ್ಳಬೇಕು ಅವಸರದಲ್ಲಿ ಹೋಗಿ ಬಿಟ್ಟರೆ ಭಯಂಕರವಾದ ಅಪಘಾತಗಳಿಗೆ ತುತ್ತಾಗಬೇಕಾದೀತು

10. **ಬೇರೆ ವಾಹನಗಳನ್ನು ಹಿಂಬಾಲಿಸುವುದು—** ಹಿಂದುಗಡೆ ನಡಿಸಿಕೊಂಡು ಬರುವ ಮೋಟಾರ ಡ್ರೈವರರು ಮುಂದುಗಡೆ ಹೋಗುವ ಟ್ರಾಮು ಕಾರನ್ನು ಹಿಂಬಾಲಿಸಬಾರದು. ಕಾರಣ ಟ್ರಾಮು ಕಾರುಗಳು ಫಕ್ಕನೆ ನಿಲ್ಲುತ್ತವೆ ಇಲ್ಲವೇ ನಾದುರುಸ್ತಿಯಾಗುತ್ತದೆ ನೀವು ಬಹಳ ಸಮೀಪವಾಗಿದ್ದು ಸದ್ರಿ ಟ್ರಾಮು ಕಾರು ಯಾವಾಗ ನಿಲ್ಲುತ್ತದೆಂದು ತಿಳಿಯದೆ ಟ್ರಾಮು ಕಾರು ನಿಲ್ಲಿಸಲ್ಪಟ್ಟರೆ ನಿಮಗೆ ಫಕ್ಕನೆ ನಿಲ್ಲಿಸಲು ಸಾಧ್ಯವಾಗಲಾರದು.

ನೀವು ಮೋಟಾರ್, ಗಾಡಿ ಯಾ ಇತರ ವಾಹನಗಳನ್ನು ನಡಿಸುವಾಗ್ಗೆ ಮುಂದೆ ಹೋಗುವ ವಾಹನಕ್ಕೂ ನಿಮ್ಮ ವಾಹನಕ್ಕೂ ಸಾಕಷ್ಟು ಸ್ಥಳವಿರಬೇಕು ಹಾಗೆ ನಿಮಗೆ ಮುಂದಾಗಿ ಹೋಗಬೇಕಾದ ಅಗತ್ಯವಿದ್ದರೆ ಎಡಗಡೆಗೆ ಸರಿದು ಪಾಸಾಗಿ ಹೋಗಬಹುದು.

11. **ಮೂಲೆಗಳಲ್ಲಿ ಮತ್ತು ಟರ್ನಿಂಗಿನಲ್ಲಿ—** ಡ್ರೈವ್ ಮಾಡುವಾಗ ಯಾವಾಗಲೂ ಎಡಬದಿಯಲ್ಲಿಯೇ ಹೋಗುತ್ತಿದ್ದು ಎಡಗಡೆ ಬರುವ ವಾಹನಗಳಿಗೆ ಸರಿಯಾದ ಅನುಕೂಲತೆ ಸಿಕ್ಕುವಂತೆ ನೋಡಬೇಕು ಅಲ್ಲದೆ ಅಂಥಾ ಸ್ಥಳಗಳಲ್ಲಿ ಹೋಗುವಾಗ್ಗೆ ಜೋರಾಗಿ ಹೋಗದೆ ಧೀಮಸವಾಗಿ ಹೋಗಿ ಸ್ವಲ್ಪ ಅಗದುಂ ಜಾಗ್ರತೆಯಿಂದಿರಬೇಕು.

12 **ಕ್ರೊಸ್ ರೋಡು ಮತ್ತು ಜಂಕ್ಷನ್‌ಗಳಲ್ಲಿ—** ನೀವು ಕ್ರಾಸ್ ಯಾ ಜಂಕ್ಷನ್ ರೋಡುಗಳಲ್ಲಿ ಹೋಗುವಾಗ ನಿಮ್ಮ ಬಸ್ಸನ್ನು ನಿಧಾನವಾಗಿ ನಡಿಸಬೇಕಲ್ಲದೆ ಬಹಳ ಸೂಕ್ಷ್ಮ ದೃಷ್ಟಿಯುಳ್ಳವರಾಗಿರಬೇಕು ಎಡಗಡೆಯ ಎದುರ ಬದಿಯಲ್ಲಿ ಬರುವ ವಾಹನಗಳಿಗೆ ಬರಲು ಅವಕಾಶಕೊಡಬೇಕು ಒಮ್ಮಾರ್ಗದಲ್ಲಿ ಇದಕ್ಕೆ ವಿರೋಧವಾದ ರೂಲ್ಸು ಈ ರೀತಿಯಲ್ಲಿ ಜಾರಿಯಲ್ಲಿರುತ್ತದೆ ಎಡಗಡೆಯಿಂದ ಎದುರುಗಡೆ ಬರುವ ವಾಹನಗಳಿಗೆ ದಾರಿ ಬಿಟ್ಟುಕೊಡಿರಿ " ಸಾಧಾರಣ ರೋಡುಗಳಲ್ಲಿದ್ದರೆ ನೀವು ನಿಧಾನವಾಗಿ ಹೋಗಬಹುದು.

13. **ಸಪೂರದ ಗಲ್ಲಿಗಳಲ್ಲಿ ಮತ್ತು ರಸ್ತೆಗಳಲ್ಲಿ—** ಸಪೂರವಾದ ಗಲ್ಲಿಗಳಲ್ಲಿ ಬಹಳ ನಿಧಾನವಾಗಿ ಹೋಗಿರಿ. ಕಾರಣ ಅಲ್ಲಿ ಯಾವಾಗಲೂ ಜನಸಂದಣಿ ಇರುತ್ತದೆ.

ಮುಂದರಿಯುವುದು.

ಅನುಕ್ರಮಣಿಕೆ

ಕತೆಗಳು . . . ೨
ಧಿಕಾರ ಸ್ವೀಕಾರವೂ ಕೋಡುವವರು ಕರ್ಮ ೪
ಕವಿಕ್ಯಾಖ್ಯಾನ . . . ೫
ದ್ರೋಹದ ಮೇಲೆ ಪ್ರತೀಕಾರ . . . ೬
ಎಂಥ ಸಮಾಚಾರಗಳು . . . ೮
ಅಗ್ರಲೇಖ
ಲಂಕೇಶಯರು ಏನಂತೆ? . . . ೧೦
ಸ್ಫುಟವಿಚಾರಗಳು . . . ,,
ಮಂಗಳೂರು, ತಾಲೂಕುಗಳಿಂದ . . . ೧೧
ವರ್ತಮಾನ ಸಂಗ್ರಹ
ಜವಾಹರಲಾಲರ ಜೀವನಚರಿತ್ರೆಯಲ್ಲಿರುವ ಕೆಲವು ಕೌತುಕಮಯ ದೃಶ್ಯಗಳು . . . ೧೪
ವನಿತಾ ವೈಭವ . . . ೯
ಸಂಪಾದಕರ ಟಪ್ಪಾಲುಪೆಟ್ಟಿಗೆ . . . ೧೬

ಸ್ವದೇಶಾಭಿಮಾನಿ

ತಾ. ೨೯ನೇ ಶುಕ್ರವಾರ ಮೇ ೧೯೩೬

ಲಂಕೇಶಯರು ಏನಂತೆ?

ಹತ್ತೀ ವ್ಯಾಪಾರವನ್ನು ಕುರಿತಾಗಿ, ಇಂಗ್ಲೆಂಡಿನಲ್ಲಿರುವ ವಾಣಿಜ್ಯ ಸಂಬಂಧಗಳ ಸಂಘದ ಪ್ರತಿನಿಧಿಗಳು ಬ್ರಿಟಿಷ ವಾಣಿಜ್ಯ ಇಲಾಖಾ ಅಧ್ಯಕ್ಷರನ್ನು ಕಳೆದವಾರ ಕಂಡು ನಿವೇದಿಸಿಕೊಂಡುದರಲ್ಲಿ, ಇಂಡಿಯಾ ಸರಕಾರವು ನಿರ್ಧರಿಸಿರುವ ನೂತನ ಸುಂಕದ ವಿಧಿಗಳನ್ನು ಕುರಿತಾದ ಪ್ರಸ್ತಾಪವಿದ್ದಿತು. ಲಂಕೇಶಯರಿನ ವರ್ತಕರು ಈ ಸುಂಕಗಳನ್ನು ಕುರಿತು ಎತ್ತಿದ ಆಕ್ಷೇಪಗಳನ್ನೂ, ಬ್ರಿಟಿಷ ಹತ್ತೀ ವ್ಯಾಪಾರವನ್ನು ಕುರಿತಾಗಿ ನಮ್ಮ ವರ್ತಕರು ಎತ್ತುವ ಆಕ್ಷೇಪಗಳನ್ನು ತಿಳಿಯುವುದು ಆವಶ್ಯಕವಾಗಿದೆ

ಮೆಂಚೆಸ್ಟರಿನ (ಲಂಕೇಶಯರಿನ) ವರ್ತಕರ ದೂರು ಇತ್ತೀಚೆಗೆ ಬಹಳವಾಗಿ ಕೇಳಬರುವಂತಾಗಿದೆ ಕಳೆದ ಹತ್ತು ವರ್ಷಗಳಿಂದೀಚೆಗೆ ಹಿಂದೂದೇಶವು ಮೆಂಚೆಸ್ಟರು ಬಟ್ಟೆಯನ್ನು ಕೊಂಡುಕೊಳ್ಳುವುದು ಕಡಮೆಯಾಗುತ್ತ ಬರುತ್ತಿದೆ ಮಹಾಯುದ್ಧದ ಹಿಂದಣ ಹತ್ತು ವರ್ಷಗಳಲ್ಲಿ ಸರಾಸರಿಯಾಗಿ ಪ್ರತಿವರ್ಷವೂ ೨೫೦ ಕೋಟಿ ಚದರಗಜ ಬಟ್ಟೆಯನ್ನು ನಾವು ಕೊಂಡುಕೊಳ್ಳುತಿದ್ದೆವು, ೧೯೩೫ರಲ್ಲಿ, ಈ ಬಟ್ಟೆಯು ಬರೀ ೫೮ ಕೋಟಿ ಚದರಗಜವಾಗಿದೆ,—ಎಂದರೆ ಸೇಕಡಾ ೨೦ರಷ್ಟು ಮಾತ್ರವಾಗಿದೆ

ಇದೇಕೆ ಹೀಗಾಗಿದೆ ಎಂಬುದನ್ನು ಲಂಕೇಶಯರು ತಿಳಿದುಕೊಳ್ಳಲು ಪ್ರಯತ್ನಪಡುವುದಿಲ್ಲ ರಾಜಕೀಯ ಚಳವಳಿಂದಾಗಿಯೋ ಕಾಂಗ್ರೆಸ್ಸಿನ ಪಾಟದಿಂದ ತಾನೆ, ಈ ಪರಿಮಾಣದಲ್ಲಿ ಅದು ಕಡಮೆಯಾಯಿತೆಂದೇ ಅವರ ನಂಬುಗೆ "ನಮ್ಮ ವ್ಯಾಪಾರವು ನಮ್ಮದೇ ಆಗಿರತಕ್ಕುದಾಗಿದ್ದಿತು, ಅದು ಕಡಮೆಯಾಗುತ್ತಲಿರುವುದು ಸರಿಯಲ್ಲ" ಎಂಬುದು ಅವರ ಅಭಿಮತ ಆದರೆ, ಲೋಕದಲ್ಲಿ ದಾಂಪತ್ಯವು ಸಹ ವಿಚ್ಛೇದ ಹೊಂದುವುದೆಂಬುದು ಕಾನೂನು ಸಮ್ಮತವೇ ಆಗಿದೆ. ಆದರೆ, ಲಂಕೇಶಯರಿನ ಅಭಿಪ್ರಾಯದಲ್ಲಿ "ನಮ್ಮೊಡನೆ ವ್ಯಾಪಾರವನ್ನು ಕಡಮೆ ಮಾಡಿ ಬರುವ ವರೆಗೆ ನಾವೂ ನಮ್ಮ ಸೌಕರ್ಯಗಳನ್ನು ಕಡಮೆಮಾಡ ಬಲ್ಲೆವು ಎಚ್ಚರ ವಿರಲಿ!" ಎಂದಿದೆ

ಇದು ಲಂಕೇಶಯರಿಗೆ ಹಿತವಾದ ಕಾರ್ಯಧರ್ಮವಾಗಿಲ್ಲ. ಇದರಿಂದ ಮೆಂಚೆಸ್ಟರಿಗೆ ಹೆಚ್ಚಿನ ಅಭ್ಯುದಯವು ಉಂಟಾಗಲಾರದು. ನಮ್ಮ ದೇಶಕ್ಕೆ ಅಲ್ಲಿಂದ ಬರುವ ವಸ್ತ್ರವು ಕಡಮೆಯಾಗಿದೆ ಎಂದೊಡನೆಯೆ, ನಾವು ಇತರ ರಾಷ್ಟ್ರಗಳಿಂದ ಹೆಚ್ಚಿನ ಬಟ್ಟೆ ತರಿಸಿಕೊಂಡು ಮೆಂಚೆಸ್ಟರನ್ನು ಅಣಗಿಸಲು ಪ್ರಯತ್ನಿಸುತ್ತೇವೆಂದು ಅದು ತಿಳಿಯಬಾರದು ಬ್ರಿಟಿಷ ಬಟ್ಟೆಯ ವ್ಯಾಪಾರದ ಭಾರವು ಹಿಂದೀಯರ ಮೇಲೆ ಬಹಳವಾಗಿದೆ; ಸಹಿಸಲಾರದಾಗಿದೆ ಆದರೆ, ಈ ವ್ಯಾಪಾರವನ್ನು ಕುರಿತಾಗಿ ನಮ್ಮ ಮತ್ತು ಬ್ರಿಟಿಷ ವರ್ತಕರೊಳಗೆ ಏನಾದರೊಂದು ಕರಾರು ಉಂಟಾದರೆ, ಅದೂ ಉತ್ತಂಡಗಳಿಗೂ ತೃಪ್ತಿಕರವಾದ ಕರಾರು ಆಗಿದ್ದರೆ, ಮಾತ್ರ, ಈ ರೀತಿಯ ಅಭಿಪ್ರಾಯ ಮಾತನಾಡಬಹುದೇ ವಿನಾ, ಅನ್ಯಥಾ ಇಲ್ಲ ಒತ್ತಾಯದಿಂದ ಬ್ರಿಟಿಷರು ತಮ್ಮೊಡನೆಯೆ ಹಿಂದೀಯರು ವ್ಯಾಪಾರವನ್ನು ಹೆಚ್ಚಿಸಿ ಬರಬೇಕೆಂದು ದೂರ ಹತ್ತಿದರೆ ಹತ್ತಿಯ ವ್ಯಾಪಾರವು ದೂರವಾದೀತು! ಪರದೇಶಗಳಿಂದ ಇಲ್ಲಿಗೆ ಬರುವ ಬಟ್ಟೆ ಕಡಿಮೆಯಾಗಿರಲು ಕಾರಣವೆಂದರೆ, ನಮ್ಮ ಸರಕಾರವು ಅಂತಹ ಬಟ್ಟೆಯ ಮೇಲೆ ಹೊರುವ ಸುಂಕವೇ ಕಾರಣ, ಬ್ರಿಟಿಷರಿಗೆ ಕಡಮೆ ಸುಂಕವೂ ಇತರರಿಗೆ ಹೆಚ್ಚಿನ ಸುಂಕವೂ ವಿಧಿಸಲ್ಪಡುತ್ತಿದೆ ಇದರಿಂದ ಹಿಂದೀ ಗಿರಾಕಿಯ ತಲೆಗೇ ಏಟುಬೀಳುವ ಹಾಗಾಗಿದೆ ಇತರ ರಾಷ್ಟ್ರಗಳಿಗಿಂತ ಇಂಡಿಯಕ್ಕೆ ಹೆಚ್ಚಿನ ವ್ಯಾಪಾರದ ರಿಯಾಯತಿ ಇದೆ ಎನ್ನುವುದೂ ಅಷ್ಟು ಸಮಂಜಸವಾಗಿಲ್ಲ ಹಾಗೆಂದು ಇದಕ್ಕಾಗಿ, ನಮ್ಮನ್ನು ಬೆದರಿಸುವುದರಿಂದಲೂ ಲಾಭವಿರದು ಏಕೆಂದರೆ, ನಾವೇ ಈಗಲೂ ಲಂಕೇಶಯರಿಗೆ ಮುಖ್ಯ ಗಿರಾಕಿಗಳು'

ಇಂಗ್ಲೆಂಡಿಗೆ ಸುಂಕದ ರಿಯಾಯತಿ ತೋರಿಸಿ ಇತರ ರಾಷ್ಟ್ರಗಳೊಡನೆ ವ್ಯಾಪಾರ ಕುಂದಿಸಿ ಬರುವುದು ನಮ್ಮ ಎಸೆಂಬ್ಲಿಗೆ ಸರಿತೋರಿದೆ ಒಟ್ಟೊವಾ ಕರಾರು ಇನ್ನು ರದ್ದಾಗಲೆಂದ ಸಮರ್ಥನೆ ಮಾಡಿದೆ ಹಿಂದೀ ಬ್ರಿಟಿಷವ್ಯಾಪಾರವು ಹೆಚ್ಚುತ್ತ ಬರಬೇಕಾದಲಿ, ನಾವು ನಮ್ಮ ಪೂರ್ಣಾಂತಃಕರಣದಿಂದ ಸಹಾಯ ಮಾಡಲು ಸಿದ್ಧರೇ ಆಗಿದ್ದೇವೆ, ಹಾಗೆಂದು ಲಂಕೇಶಯರಿನೊಡನೆ ಮಾತ್ರವೇ ಅಲ್ಲದೆ ಯಾವತ್ತು ಬ್ರಿಟಿಷ ಕೈಗಾರಿಕೆಗಳೊಡನೆಯೂ ನಾವು ಸಹಕರಿಸಲೆಳಸುವೆವು ಆದರೆ, ಲಂಕೇಶಯರು ಮಾತ್ರ ತಾವೇ ಅಭ್ಯುನ್ನತದ ಶಿಖರದಲ್ಲಿರುವವರೆಂದು ಸುಮ್ಮನೆ ಭಾವಿಸಲಾರಂಭ ಸ್ವಲ್ಪ ಕೆಳ ತಳಕ್ಕೆ ಇಳಿದು ಸಮಾನ ಭೂಮಿದದ ವರ್ತಿಸಲೊಪ್ಪಬೇಕು

ಬ್ರಿಟಿಷರು ತಮ್ಮ ಕೈಗಾರಿಕೆಗಳ ಅಭಿವೃದ್ಧಿಗಾಗಿ ಯಾವ ವಿಧಾನಗಳನ್ನು ಕೈಗೊಂಡಿರುವರೋ, ಅವೇ ವಿಧಾನಗಳನ್ನು ಕೈಕೊಳ್ಳಬೇಕಾಗಿ ನಮ್ಮ ಎಸಂಬ್ಲಿಯು ಎಣಿಸಿದೆ ಒಳದೇಶದಲ್ಲಿ ವ್ಯಾಪಾರವು ಹೆಚ್ಚಬೇಕಾದರೆ ಏನು ಮಾಡಬೇಕೆಂದ ಬ್ರಿಟಿಷರು ವಿಧಿಸಿ, ಈಗ ಇಂಗ್ಲೆಂಡಿಗೆ ಬೇಕಾಗುವ ಹತ್ತಿ ಬಟ್ಟೆಯಲ್ಲಿ ಸೇಕಡಾ 88ನ್ನು ಇಂಗ್ಲೆಂಡಿನಲ್ಲೀ ತಯಾರಿಸುತ್ತಿರುವರು ನಾವೂ ನಮ್ಮ ದೇಶದ ಜನರಿಗೆ ಬೇಕಾಗುವ ಎಲ್ಲ ಹತ್ತೀ ಬಟ್ಟೆಯಲ್ಲಿ ಸೇಕಡಾ 88ರಷ್ಟಾದರೂ ಸಿಗುವ ಹಾಗೆ ಪ್ರಯತ್ನಪಡುವುದರಲ್ಲಿ ಮೆಂಚೆಸ್ಟರಿನವರು ನಮ್ಮ ಮೇಲೆ ಕೋಪಿಸಿಕೊಳ್ಳುವುದಕ್ಕೇಸದೆ?

ಸ್ಫುಟವಿಚಾರಗಳು

ಪೊಪ್ಯುಲರ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್

ನಮ್ಮ ಜಿಲ್ಲೆಯಲ್ಲಿ ಹುಟ್ಟಿ, ಕರ್ನಾಟಕದಲ್ಲೆಲ್ಲ ತನ್ನ ಕಾರ್ಯಕ್ಷೇತ್ರವನ್ನು ಹರಡಿ, ದಿನೇ ದಿನೇ ವೃದ್ಧಿ ಹೊಂದುತ್ತ ಬರುತ್ತಿರುವ ಈ ಈ ವಿಮಾ ಸಂಘದ, ೧೯೩೫ನೇ ಡಿಸೆಂಬರಿಗೆ ಅಂತ್ಯವಾದ ವರ್ಷದ ಕಾರ್ಯಕಲಾಪಗಳ ವರದಿಯನ್ನು ಓದಿ ತೃಪ್ತರಾಗಿದ್ದೇವೆ ಕಳೆದ ವರ್ಷದಲ್ಲಿ ಸುಮಾರು ಎಂಟು ಲಕ್ಷ ರೂಪಾಯಿ ಮೊಬಲಗಿನ ೬೨೫ ವಿಮಾ ಕರಾರುಗಳಿಗಾಗಿ ಅರ್ಜಿಗಳು ಬಂದಿವೆ, ಐನ ಆಯವು ರೂಪಾಯಿ ೫೬,೦೦೦; ರೂ. ೬೪,೦೦೦ ವಿಮಾ ಫಂಡಿಗಾಗಿ ಪ್ರತ್ಯೇಕಿಸಲ್ಪಟ್ಟಿದೆ; ಸುಮಾರು ೬೦೦೦೦ ರೂ. ಮೊಬಲಗಿನ ಸರಕಾರೀ ಭದ್ರತಾಪತ್ರಗಳಲ್ಲಿ ಠೇವಣಾತಿ ಇಡಲಾಗಿದೆ, ಬರೀ ಎರಡು ಸಾವಿರ ರೂಪಾಯಿಗಳಷ್ಟು ಜೀವವಿಮಾ ಮೊಬಲಗನ್ನು ಕಳೆದ ವರ್ಷ ಮೃತ ವಿಮಾದಾರರ ಸಲುವಾಗಿ ತೆರ ಬಂದಿದೆ. ಇದರಿಂದ, ಜೀವವಿಮೆ ಮಾಡುವುದರಲ್ಲಿ, ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡರೂ, ಬಹಳ ಜಾಗರೂಕತೆಯಿಂದ ಅರ್ಜಿದಾರರ ವೈದ್ಯಕೀಯ ಪರೀಕ್ಷೆಯ ರಿಪೋರ್ಟುಗಳನ್ನು ಪರಿಶೀಲನ ಮಾಡುತ್ತಾರೆಂದೂ, ಹಣವನ್ನು ಅಷ್ಟೆ ಜತನದಿಂದ ವಿನಿಯೋಗಿಸುತ್ತಾರೆಂದೂ ವಿದಿತವಾಗುತ್ತಿದೆ ಸರಕಾರದ ಭದ್ರತಾಪತ್ರಗಳ ಮೌಲ್ಯವು ಈಗ ಹೆಚ್ಚಿದ್ದು, ಸೇಕಡಾ ೨೪ರಷ್ಟು ನಫೆಯೂ ಇದೆ ಎಂಬುದೂ ಸಂತೃಪ್ತಿಕರವೂ, ಆಡಳಿತದವರ ವಿವೇಕವನ್ನು ಸೂಚಿಸುವುದೂ ಆಗಿದೆ ಇಡೀ ಹಿಂದೂಸ್ಥಾನದಲ್ಲಿ ಹೆಸರುವಾಸಿಯನ್ನು ಶಾಖೆಗಳ ಮೂಲಕವಾಗಿ ಪಡೆಯುತ್ತ ಬರುವ ಈ ಸಂಘವು ಇನ್ನೂ ಇನ್ನೂ ಅಭಿವೃದ್ಧಿ ಹೊಂದುತ್ತ ನಮ್ಮ ಜಿಲ್ಲೆಗೂ ಜನರಲ್ಲಿನ ಕಾರ್ಯ ನೈಪುಣ್ಯ ಹೆಚ್ಚಿನ ಕೀರ್ತಿ ತರುವುದಾಗಲೆಂದು ಬಯಸುತ್ತೇವೆ

ಹಾಲನ್ನುಳಿಸಿ, ಮಗುವನ್ನು ಕೊಲ್ಲದಿರಿ!

ಎಂಬುದು ಇಂದಿನ ಗೃಹಸೂತ್ರವಾಗಬೇಕಾಗಿದೆ. ಮಕ್ಕಳಿಗೆ ಹಾಲಿನಂತಹ ಸಂಜೀವನವೇ ಮತ್ತೊಂದಿಲ್ಲ ಇದನ್ನು ಪ್ರತ್ಯಕ್ಷ ವ್ಯವಹಾರದಿಂದ ಎಲ್ಲರಿಗೂ ತಿಳಿಸಲು, ಅನುಕೂಲವಾಗುವಂತೆ ನಿವ್ಯೂ ಮ್ಯುನಿಸಿಪಾಲಿಟಿಯು ಅಲ್ಲಿನ ೧೨೦ ಬಡ ಶಾಲಾಮಕ್ಕಳಿಗೆ ದಿನಕ್ಕೆ ಒಂದು ರಾತ್ಲ ಹಾಲನ್ನು ಮೂರು ತಿಂಗಳ ವರೆಗೆ ಧರ್ಮಾರ್ಥವಾಗಿ ಕೊಟ್ಟು ಪರೀಕ್ಷೆ ಮಾಡಬೇಕೆಂದಿದೆ ನಮ್ಮ ಮೈಸೂರು ಯ... ಈ ನವೀನ ಉದ್ಯಮಕ್ಕೆ ಸ್ವಸ್ತಿವಾಚನವನ್ನು ಹೇಳುವಾಗ, ಎಳೆಯ ವಯಸ್ಸಿನಲ್ಲಿ ಹಾಲಿನಂತಹ ಉತ್ತಮ ದೇಹದಾರ್ಢ್ಯವನ್ನು ಉಂಟುಮಾಡತಕ್ಕ ಪದಾರ್ಥವಿಲ್ಲ, ಅದಲ್ಲದೆ ಎಳೆಯ ವಯಸ್ಸಿನಲ್ಲಿ ಮಕ್ಕಳ ದೇಹದ ಬೆಳವಣಿಗೆಯ ಸ್ಥಿತಿಯ ಮೇಲೆ ಮುಂದಣ ಜೀವದ ಜೀವನವು ಆಧಾರ ಹೊಂದುವುದಾಗಿದೆ ಎಂದು ಹೇಳಿರುವುದೂ ವಾಸ್ತವ ವಿಚಾರವೇ ಏಕೆಂದರೆ ವಿದ್ಯಾಭ್ಯಾಸ ಪತ್ತು ವೈದ್ಯಕೀಯ ಸಹಾಯಗಳನ್ನು ಎಲ್ಲೆಲ್ಲಿಯೂ ಒದಗಿಸಲು ಮಾಡುವ ಪ್ರಯತ್ನಗಳಿಗಾಗಿ ಎಷ್ಟು ಹೇರಳವಾಗಿ ಹಣವನ್ನು ವ್ಯಯಿಸಿದರೂ, ದೇಹದಾರ್ಢ್ಯವಿಲ್ಲದೆ ಇವೆಲ್ಲ ಪ್ರಯತ್ನಗಳ ಪ್ರಯೋಜನವು ಮಕ್ಕಳಿಗೆ ಸಿಗದಂತಾಗುವುದು ಮೈಸೂರಿಯೇ ಈ ಬಗೆಯಾಗಿ ಮಕ್ಕಳಿಗೆ ಹಾಲನ್ನು ಹೆಚ್ಚಾಗಿ ಸಿಗುವಂತೆ ಪ್ರಯತ್ನಗಳಾಗಬೇಕೆಂದು ಅಪ್ಪಣೆ ಕೊಡಿಸಿರುವ ಪ್ರಯುಕ್ತ, ಎಲ್ಲೆಲ್ಲಿಯೂ ಸಾಧ್ಯವಿದ್ದಷ್ಟು ಪ್ರಯತ್ನಗಳಿಂದ ಸ್ಥಳೀಯ ಬೋರ್ಡುಗಳು ಪ್ರಯತ್ನಿಸಲು ತೊಡಗದಿರವು ಹೀಗಾದಲ್ಲಿ, ಹೆಚ್ಚು ಹಾಲು ಕೊಡುವ ದನಗಳನ್ನು ಸಾಕಲೂ ಹೆಚ್ಚಿನ ಆಸಕ್ತಿಯುಂಟಾಗುವುದು, ಬೋರ್ಡುಗಳು ಇವುಗಳ ಕಡೆಗೆ ಹೆಚ್ಚಿನ ಲಕ್ಷ್ಯವನ್ನೂ ಕೊಡತೊಡಗಬಹುದು ಅಂತೂ ಗೋಧನದ ಕಡೆಗೆ ಸಿಗಾ ಹೆಚ್ಚಿದಂತೆ ದೇಶವಾಸಿಗಳಿಗೆ ಕಲ್ಯಾಣವಾಗುವುದೆಂಬ ವಚನವು ಕಣ್ಣ ಮುಂದೆ ಸಲ್ಲುವುದು

ಸಿವಿಲ್ ಲಿಬರ್ಟೀಸ್ ಯೂನಿಯನ್

ಆತ್ಮ ಸ್ವಾತಂತ್ರ್ಯದ ಸಂಘವೊಂದನ್ನು ಸೃಷ್ಟಿಸಿ, ಯಾವ ಬಗೆಯಲ್ಲಾದರೂ ಅಂತಹ ಸ್ವಾತಂತ್ರ್ಯವನ್ನು ಅಪಹರಿಸಲಾಗದಂತೆ ತಡೆವ ಪ್ರಯತ್ನಗಳನ್ನು ಮಾಡಬೇಕೆಂದು, ಪಂಡಿತ ಮೋತಿಲಾಲ ನೆಹರೂರವರು ಎಲ್ಲ ಪಕ್ಷಗಳ ಮುಖಂಡರಿಗೆ ಪತ್ರದ್ವಾರಾ ಬರೆದು ಕೊಂಡರು ಸರ್ ಸಪ್ರೂರವರೇ ಅದನ್ನು ಖಂಡಿಸಿ, ಕೊಂಗ್ರೆಸ್ ಪಕ್ಷವು ತನ್ನ ಕಾರ್ಯಕ್ರಮವನ್ನು ಬದಲಾಯಿಸಬೇಕೆಂದೂ, ಎಲ್ಲ ಪಕ್ಷಗಳು ಸೇರಿ ಇಂತಹ ಸಂಘವೊಂದನ್ನು ಸ್ಥಾಪಿಸುವುದು ಸಾಧ್ಯವಾದರೂ ಅವರೊಳಗೆ ಪಕ್ಷಭೇದದಿಂದ ಹೋರಾಟವುಂಟಾಗಬಹುದೆಂದೂ ಅಭಿಪ್ರಾಯ ಬರೆದರು ಜನತೆಯಲ್ಲಿ ಒಂದು ಪಕ್ಷಕ್ಕೂ ಸರಕಾರಕ್ಕೂ ಭಾವನಾಭೇದವುಂಟಾಗುತ್ತಲೇ ಸ್ವಾತಂತ್ರ್ಯಾಪಹಾರದ ಪ್ರಶ್ನೆ ಉಂಟಾಗಬಹುದಾಗಿಯೂ, ಆಗ ಸರಕಾರದ ಕಾರ್ಯಕ್ರಮವನ್ನು ಟೀಕಿಸಿದ ಕೂಡಲೆ ಆ ಟೀಕಾಟದಿಂದ ಹಗೆತನವು ಉಂಟಾಗಬಹುದಾಗಿಯೂ, ಸ್ವಾಭಾವಿಕ ಕಾರ್ಯಕಾರಣ ಸಂಬಂಧದಿಂದ ಹೇಳಬರುತ್ತಿದೆ ಸರಕಾರದ ಕಾರ್ಯಕ್ರಮವನ್ನು ಟೀಕಿಸಿದವರೆಲ್ಲ ಕೂಡಲೆ ರಾಜದ್ರೋಹಿಗಳಾಗುವುದಿಲ್ಲ, ಅದಕ್ಕೊಂದು ಮಿತಿಯಿದೆ ಅದನ್ನಾದರೂ ನಿರ್ಧರಿಸುವ ಬಗೆಗೆ ಎಲ್ಲ ಪಕ್ಷಗಳು ಒಂದಾಗುವುದುತ್ತಮ, ಯಾವುದೊಂದು ಪಕ್ಷದವರಾದರೂ ಕ್ರಾಂತಿಕರವಾದ ಚಳವಳಿಯನ್ನು ಮಾಡುವುದಕ್ಕೆ ಸರಕಾರವು ಬಿಡಬಾರದಾಗಿದೆ ಆದರೆ ಸರಕಾರವೂ ಒಂದು ಸರ್ವಮಾನ್ಯವಾದ ರೀತಿಯಲ್ಲಿ ಅಂತಹ ಮಿತಿಮೀರಿದ ಚಳವಳಿಯನ್ನು ಎದುರಿಸಬೇಕಾಗಿದೆ ಹೀಗಿರುವುದರಿಂದ, ಎಲ್ಲ ಪಕ್ಷಗಳೂ ಈ ವಿಚಾರಗಳನ್ನು ವಿಮರ್ಶಿಸುವುದಕ್ಕೂ, ಜನತೆಯ ಸ್ವಾತಂತ್ರ್ಯವನ್ನು ಸರಕಾರದ ಕಾರ್ಯಕ್ರಮವನ್ನು ಕಾಪಾಡುವುದಕ್ಕೂ ಒಂದು ಅಖಿಲ ಭಾರತದ ಸಂಘವನ್ನು ಸ್ಥಾಪಿಸಿದರಾಗದೆ?

ಅಬಿಸೀನಿಯವು ಈಗ ಭಾವಿಸುವುದೇನೆಂದು?

ಯುರೋಪೀಯ ಸುಧಾರಣೆಯೆಂದರೆ,—ಹೇರಳವಾಗಿ ಧ್ವಂಸಮಾಡುವ ಮದ್ದು ಗುಂಡುಗಳು, ವಿಷವಾತ, ಅಗ್ನಿದ್ರವ, ಕರಾರು ಮತ್ತು ಕಟ್ಟಗಳ ಮುರಿದಾಟ, ಎಂದೇ ಅಬಿಸೀನಿಯವು ಈಗ ಭಾವಿಸದಿರದು ಇಟಲಿಯು ಒಳನುಗ್ಗುವಾಗಲೇ ಅನ್ಯಾಯವನ್ನು ಮಾಡಿತು, ಅದು ಅನ್ಯಾಯವನ್ನು ಮಾಡಿತೆಂದ ಹೇಳಿದ ಮಹಾರಾಷ್ಟ್ರಗಳೇ ಯಾವ ನ್ಯಾಯವನ್ನು ಬೇಗನೆ ಮಾಡಲಾರದೆ ಹೋದವು ಬ್ರಿಟನ್ನೂ ಫ್ರಾನ್ಸೂ ಖಂಡಿತ ನುಡಿದು ಸರಿಯಾಗಿ ಇಟಲಿಯನ್ನು ಎಚ್ಚರಿಸಿದ್ದದೆ, ಲೀಗಿನ ಗೌರವ ಉಳಿಯುತ್ತಿದ್ದಿತು ಇಟಲಿಯೂ ಮುಂದರಿಯುತಿರಲಿಲ್ಲ ಅಬಿಸೀನಿಯಕ್ಕೂ ಸಹಾಯಸಂಪತ್ತು ದೊರೆಯುತ್ತಿದ್ದಿತು ಈಗ? ಅವೆರಡು ರಾಷ್ಟ್ರಗಳೂ ಬಹು ಸ್ಪಷ್ಟವಾಗಿ ಸಂತಪಿಸುತಿರುವಂತೆ ಹೇಳುತ್ತಿವೆ ಆದರೂ ಲೀಗನ್ನು ಬಲಪಡಿಸಿ ಇನ್ನಾದರೂ ಯುದ್ಧರಂಗಕ್ಕೆ ಇಳಿಯುವುದು ಕಷ್ಟವಾಗುವಂತೆ ಮಾಡಲು ಸಿದ್ಧವಾಗಿಲ್ಲ ಈ ಇತಿಹಾಸದಲ್ಲಿ, ಕಣ್ಣದಿರಲ್ಲಿ ನಿಂತಿರುವುದೆಂದರೆ, ಅಬಿಸೀನಿಯದ ಧೈರ್ಯವೂ ಸಾಹಸವೂ ಮಾತ್ರವಲ್ಲದೆ ಸ್ವಾಧೀನ ರಾಷ್ಟ್ರಗಳೆಂಬುವುಗಳ ನೀಚ ಇಟಲಿಯು ಅನ್ಯಾಯ ಮಾಡಿತೆಂದು ನಿರ್ಣಯಿಸುವುದಕ್ಕಾದರೂ ಎಷ್ಟು ತಿಂಗಳ ತನಕ ಸಭೆಗಳು ನಡೆದುವು' ಇಟಲಿಗೆ ಯುದ್ಧಸರಂಜಾಮುಗಳು ಸಿಗದಂತಾಗಬೇಕೆನ್ನುವುದಕ್ಕೆ ಎಷ್ಟು ಸಭೆಗಳು ಬೇಕಾದುವು' ಎಷ್ಟು ವಿಳಂಬ, ಆತುರ ಕಾನೂನಿನ ವಿಮರ್ಶೆ'ಒಳಗಿಂದೊಳಗೆ ಸಂಧಾನಕ್ಕಾಗಿ ಎಷ್ಟು ಪ್ರಯತ್ನಗಳು, ಶರ್ತಗಳು' ಜನವರಿಯಿಂದ ಫ್ರೆಂಚರು ಒಂದಲ್ಲ ಇನ್ನೊಂದು ಕಾರಣ ಕೊಟ್ಟು ಯಾವ ನಿರ್ಣಯ ಮಾಡಲೂ ಸಮಯವನ್ನೆ ಕಾರಣದಿರುವರು ಇಂಗ್ಲಿಷ ಮಂತ್ರಿಗಳು ಸೈಗುಡದೆ ನಿವಾರ್ಹವಿಲ್ಲವಾಗಿದೆ ಮುಂದೇನು ಮಾಡಬೇಕಾದರೂ ಫ್ರೆಂಚರ ಹೊಸ ಮಂತ್ರಿಮಂಡಲವು ಸೇರಿದ ಬಳಿಕವೇ ಸಾಧ್ಯ' ಲೀಗಿಗೆ ವಿರುದ್ಧವಾಗಿ ನಡೆದವರನ್ನು ಸರ್ವ ಜನಾಂಗಗಳೂ ಶಿಕ್ಷಿಸಬೇಕೆಂದು ಇಂಗ್ಲೆಂಡು ಎನ್ನುತ್ತಿದೆ ಇದೀಗ ಇಂಗ್ಲೆಂಡಿಗೆ ಪರೀಕ್ಷಾ ಸಮಯವಾಗಿದೆ ಫ್ರಾನ್ಸು ಇಂಗ್ಲೆಂಡಿನೊಡನೆ ಸೇರಿ, ಈ ಸಮಸ್ಯೆಯನ್ನು ಬಿಡಿಸಲಾರದಾದರೆ, ಅದಕ್ಕಾಗಿ ಇಂಗ್ಲೆಂಡನ್ನು ತಾನು ಹೇಳುವ ಧರ್ಮ ಮಾರ್ಗಕ್ಕೆ ಫ್ರಾನ್ಸನ್ನು ಬಲಾತ್ಕರಿಸಲಾರರೇ, ಇಬ್ಬರಿಗೂ ಅವರೊಡನೆ ಲೀಗಿಗೂ ಗಂಡಾಂತರವಿದೆ

ತಾಲೂಕುಗಳಿಂದ.

ಉಡುಪಿ:— ಇದೇ ವರ್ಷದ ತಿಂಗಳಲ್ಲಿ ಜರಗಿದ ಎಸ್. ಎಸ್. ಎಲ್. ಸಿ ಪರೀಕ್ಷೆಯ ಫಲಿತಾಂಶಗಳು ಸ್ಥಳೀಯ ಕ್ರಿಶ್ಚನ್ ಹ್ಯಾಸ್ಕೂಲಿನಲ್ಲಿ ಪರೀಕ್ಷೆಗೆ ಕಳುಹಲಾದ ೪೨ರಲ್ಲಿ ೬, ಬೋರ್ಡು ಹೈಸ್ಕೂಲಿನಲ್ಲಿ ೩೯ರಲ್ಲಿ ೧೯, ಸ್ಯೆಂಟ್ ಸಿಸಿಲಿಯಾ ಹ್ಯಾಸ್ಕೂಲಿನಲ್ಲಿ ೧೩ರಲ್ಲಿ ೮, ಕಲ್ಯಾಣಪುರದ ಮಿಲಾಗ್ರಿಸ್ ಹ್ಯಾಸ್ಕೂಲಿನಲ್ಲಿ ೩೨ರಲ್ಲಿ ೧೬ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವರು

ಕ್ರಿಶ್ಚನ್ ಹ್ಯಾಸ್ಕೂಲಿನ ಫಲಿತಾಂಶವು ಮಾತ್ರ ಈ ವರ್ಷದ ಮಟ್ಟಿಗೆ ಅತ್ಯಂತ ಕನಿಷ್ಠವಾಗಿದೆ ಇದರ ಕಾರಣವು ಮೂರು ವರ್ಷಗಳ ಹಿಂದೆ ಅಸಿಸ್ಟೆಂಟ್ ಸಹಾಯ ಉಪಾಧ್ಯಾಯರನ್ನು ಶಾಲಾ ಕೆಲಸದಿಂದ ನಿವೃತ್ತಗೊಳಿಸಿದ ಅಚಾತುರ್ಯ ಹಾಗೂ ಜನತೆಯಲ್ಲಿ ಉಂಟಾದ ವೈಮನಸ್ಸಿನಿಂದಾಗಿ ೧೯೩೪ನೇ ಜೂನ್ ತಿಂಗಳಲ್ಲಿ ಶಾಲಾಧಿಕಾರಿಗಳು ವರ್ಷಾವಧಿ ಪ್ರೊಮೋಶನನ್ನು ಬಹು ಶಿಥಿಲ ರೀತಿಯಿಂದ ನಿರ್ವಹಿಸಿದ ಮತ್ತು ಅಂದು ಹೊಸ ಪ್ರವೇಶಕ್ಕೆ ಬಂದ ವಿದ್ಯಾರ್ಥಿಗಳನ್ನು ಮನಬಂದಂತೆ ನಡೆಸಿದರ ಪರಿಣಾಮವಾಗಿದೆ ೩೦ ವರ್ಷಗಳ ಪೂರ್ವದಲ್ಲಿ ಇದೇ ಶಾಲೆಯ ಸ್ಥಿತಿಯು ಸಮಾಧಾನಕರವಾಗಿಲ್ಲದಾಗಿದೆ ಪಾದರರು ಮನೇಜರಾಗಿ ಬಂದೊಡನೆ ಶಾಲಾಪಳಿತವು ಸುಗಮಗಮವಾಗಿ ಫಲಿತಾಂಶಗಳು ಉತ್ತಮವಾಗಿ, ಇಡೀ ಜಿಲ್ಲೆಯಲ್ಲೇ ಕ್ರಿಶ್ಚನ್ ಹ್ಯಾಸ್ಕೂಲು ಪ್ರಥಮ ಶ್ರೇಣಿಗೇರಿ ಬಂದುದು ಇತ್ತೀಚಿನ ವರೆಗೂ ಅನುಭವಿಸಿ ಬಂದಿತ್ತು. ಈಗ್ಗೆ ಮೂರು ವರ್ಷಗಳಿಂದ ಅಧಿಕಾರಿಗಳ ಧೋರಣೆಗಳ ಬದಲಾವಣೆಯಿಂದ (೧೯೩೪ರಲ್ಲಿ IV ಫೋರ್ಮಿನ ೩೯ ವಿದ್ಯಾರ್ಥಿಗಳಲ್ಲಿ ೩೮ ಪಾಸು ಮಾಡಲ್ಪಟ್ಟಿದ್ದರು) ಈ ವರ್ಷ ಅದರ ಪರಿಣಾಮವು ಪ್ರತ್ಯಕ್ಷಕ್ಕೆ ಬಂದಿರುತ್ತದೆ ಇದನ್ನು ಹೊಸ ಮುಖ್ಯೋಪಾಧ್ಯಾಯರು ಶಾಲೆಯ ಹಿತದೃಷ್ಟಿಯಿಂದ ಸರಿಪಡಿಸದಿದ್ದಲ್ಲಿ ಶಾಲೆಯ ಹೆಸರು ಇನ್ನೂ ಅಧೋಗತಿಗಿಳಿಯುವುದರಲ್ಲಿ ಸಂದೇಹವಿಲ್ಲ

ಮ್ಯುನ್ಸಿಪಲ್ ಹೆಲ್ತ್ ಆಫೀಸರರು ಮತ್ತೀರ್ವರು ನೌಕರರೊಂದಿಗೆ ಸ್ಥಳೀಯ ರೋಮನ್ ಕೆಥೋಲಿಕ ಇಗರ್ಜಿಯ ವಠಾರದಲ್ಲಿ ನಿಲ್ಲಿಸಿಟ್ಟ ಅಂಗಡಿಗಾರರ ಚಪ್ಪರವನ್ನು ಅವನಾಗಲೀ ಬೇರೆ ಯಾರಾಗಲೀ ಅಂಗಡಿಯಲ್ಲಿಲ್ಲದ ವೇಳೆಯಲ್ಲಿ ಕಿತ್ತಿಸ್ತಗೆದು ಕುಳಿದು ಪುಡಿ ಪುಡಿ ಮಾಡಿ ಹೋದರು ಮ್ಯುನಿಸಿಪಲ್ ಜಾಗದಲ್ಲಿ ಅತ್ರಮವೆ ಮಾಡಿದೆಯೆಂಬುದೇ ನೆವನ ಹೀಗೆ ಎಷ್ಟೋ ಅತ್ರಮಣಗಳು ಬಡವರು ಶ್ರೀಮಂತರು ಮಾಡಿದ್ದು ಬಹಳವಿರಬಹುದು ಆದರೆ ಇದನ್ನು ನಿವಾರಿಸಲಿಕ್ಕೆ ಮ್ಯುನಿಸಿಪಲ್ ಆಕ್ಟಿನಲ್ಲಿ ಕ್ರಮವಿರಬೇಕೆಂದು ನಮ್ಮ ಊಹೆ ಈ ಬಗ್ಗೆ ವ , ೨೮ ರೂಟ ಮತ್ತು ಈ ನೌಕರರ ಮೇಲೆ ದಾವಾ ಮಾಡುವುದೆಂದು ನಿಶ್ಚಯವಾಗಿತ್ತು ಆದರೆ ರಾ। ವಕೀಲ ವಿಠ್ಠಲ ಕಾಮತರವರ ಮಧ್ಯಸ್ತಿಕೆಯಿಂದ ಅಪಾದಿತರು ಬಾಯ್ಸಿರಿ ವಕೀಲರ ಸಮಕ್ಷಮ ಕ್ಷಮಾಪಣೆ ಬೇಡಿದ್ದರಿಂದ ಅಲ್ಲಿಗೆ ದಾವೆಯು ನಿಲ್ಲಿಸಲ್ಪಟ್ಟಿತು ಅಂದರೆ ನಮ್ಮೂರಿಗೆ ಮ್ಯುನ್ಸಿಪಲ್ ಆದೀತವು ತೀರ ಹೊಸತಾಗಿ ಇಟ್ಟಿತೆ, ಪದ್ಧತಿ ಕಾನೂನುಗಳು ಶಿಕ್ಷಿತರಿಗೆ ಕೂಡ ವೇದ್ಯವಾಗಿರುವುದಿಲ್ಲವಾಗಿ ಅಶಿಕ್ಷಿತ ಸಾಮಾನ್ಯ ಜನರ ಪಾಡೇನು? ಮ್ಯುನಿಸಿಪಾಲಿಟಿಯವರು ಆಗಿಂದಾಗ ಟಮಕಿ ಮೂಲಕ ಅನೇಕ ಪ್ರಕಟಣೆಗಳನ್ನು ಜಾಹೀರು ಮಾಡುತ್ತಿರುವರು ಇದು ಕೆಲವೇ ಕೇರಿ ರಸ್ತೆಗಳಲ್ಲಿ ಮಾತ್ರ ಜಾಹೀರು ಏನೆಂದು ಸ್ಪಷ್ಟವಾಗುವುದಿಲ್ಲ ಕರಪತ್ರಗಳ ಮೂಲಕ ಪಟ್ಟಣದಲ್ಲೆಲ್ಲಾ ಸಾಮುಗೊಂದುಗಳಲ್ಲೂ ಮನೆ ಅಂಗಡಿಗಳಲ್ಲೂ ಜಾಹೀರು ಮಾಡಬೇಕಲ್ಲದೆ ಸದ್ರಿ ಪ್ರಕಟಣೆಗಳನ್ನು ಆಯಾಯ ಸಾರ್ವಜನಿಕ ಜಾಗಗಳಲ್ಲಿ ಗೋಡೆಗೆ ಹಚ್ಚಬೇಕು ಅಂತೂ ಮ್ಯುನಿಸಿಪಾಲಿಟಿಯ ಸರ್ವ ಸಿಬಂದಿಯವರೂ ದಯಾದೃಷ್ಟಿಯಿಂದ ಪುರವಾಸಿಗಳನ್ನು ನಯನಾಡಿ ದಾಕ್ಷಿಣ್ಯದಿಂದ ನಡೆಸಿಕೊಂಡು ಬರಬೇಕಲ್ಲದೆ ತಾವು ನಾಗರಿಕರ ನೌಕರರಾಗಿ ಅವರ ಸೌಕರ್ಯ ಹಿತಗಳಿಗಾಗಿ ನಿಯಮಿಸಲ್ಪಟ್ಟಿದ್ದೇನೆಂಬ ಅರಿತಿರಬೇಕಷ್ಟೆ.

ಪರಲುಗಳಿಂದ ಸೀಟುಗಳನ್ನು ವಿಂಗಡಿಸಿರುವ ಬಸ್ಸುಗಳು ಹೆಚ್ಚುತ್ತಿವೆ, ಇನ್ನು ಬಂತು ಮಳೆಗಾಲ, ಮಾನ್ಯ ಸರಕಾರವಾಗಲೀ, ಬಸ್ಸು ಮ್ಹಾಲೀಕರಾಗಲೀ ಕಿವಿಗೊಳ್ಳಲಾರರೆ?

ಪಾದೆಬೆಟ್ಟು:— ಇದೇ ತಿಂಗಳ ತಾರೀಕು ೨೨ನೇ ಶುಕ್ರವಾರ ಪಡುಬಿದ್ರೆ ನಡಿಸಾಲು ಮಾಗಣೆಯಲ್ಲಿರುವ ಪಾದೆಬೆಟ್ಟು ಕುಟ್ಟಿಗುಡ್ಡೆ ಶಾಲೆಯು ನಡೆಯುತ್ತಿರುವಾಗ ಮಧ್ಯಾಹ್ನ ಸುಮಾರು ೩॥ ಘಂಟೆಗೆ ಬಂದ ಸಿಡಿಲಿನ ರಭಸಯು ಶಾಲೆಗೆ ತಾಗಿ ಮೂರು ನಾಲ್ಕು ಮಕ್ಕಳಿಗೆ ಸ್ಮೃತಿಯು ತಪ್ಪಿಹೋಗಿತ್ತು. ನಾಲ್ಕು ಮಕ್ಕಳಿಗೆ ಕಣ್ಣಿಗೆ ಪೆಟ್ಟಾಗಿ ಕಣ್ಣು ಕಾಣುವುದಿಲ್ಲ, ಬೇರೆ ಅಪಾಯ ಏನೂ ಆಗಲಿಲ್ಲ.

ಬೈಂದೂರು:— ಬೈಂದೂರು ತಾಲೂಕು ಶಿರೂರಿನ ಶಾಲಾ ಉಪಾಧ್ಯಾಯರಾಗಿರುವ ಶ್ರೀಯುತ ಎಂ. ಮಂಜುನಾಥ ಕಡಿಯಾಳರು ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲಾ ಉಪಾಧ್ಯಾಯಿನಿಯರಾದ ಶ್ರೀಮತಿ ಎಚ್. ರತ್ನಾಬಾಯಿಯವರನ್ನು ಕಳೆದ ತಾರೀಕು ೨೨-೫-೧೯೩೬ನೇ ಶುಕ್ರವಾರ ಬೆಳಿಗ್ಗೆ ೧೦ ಘಂಟೆಗೆ ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಬಂಧು ಮಿತ್ರರೊಡಗೂಡಿ ಪಾಣಿಗ್ರಹಣಮಾಡಿಕೊಂಡಿರುವರೆಂಬುದನ್ನು ತಿಳಿಸಲು ತುಂಬಾ ಸಂತೋಷ ಪಡುತ್ತೇನೆ ಶ್ರೀದೇವರು ವಧೂವರರನ್ನು ಆಶೀರ್ವದಿಸಲೆಂದು ಪ್ರಾರ್ಥಿಸುತ್ತೇನೆ

ಉಚ್ಚಿಲ:— ಇದೇ ತಿಂಗಳ ತಾರೀಕು ೧೮ನೇ ಚಂದ್ರವಾರ ಉಚ್ಚಿಲ ಸರಸ್ವತೀ ಮಂದಿರ ಹಿಂದೂ ಎಲಿಮೆಂಟರಿ ಶಾಲೆಯ ೪ನೇ ವಾರ್ಷಿಕೋತ್ಸವವು ಶ್ರೀಯುತ ಸುರತ್ಕಲ್ ಭೋಜ ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು, ಪೂರ್ವಾಹ್ನ ಘಂಟೆ ೧೦॥ರಿಂದ ೧೦-೧೫ರ ವರೆಗೆ ಶಾಲಾ ಬಾಲಿಕಿಯರ ದೇವರ ಪ್ರಾರ್ಥನೆಯೂ, ಆ ಮೇಲೆ ಘಂಟೆ ೧೧ ೩೦ರ ವರೆಗೆ ಬಾಲ ಬಾಲಕಿಯರ ವಿವಿಧ ವಿನೋದ ಸಂದ್ಯಾಟಗಳೂ ನಡೆದು, ಮಕ್ಕಳಿಗೆ ಉಪಾಹಾರ ತಿಂಡಿ ತೀರ್ಥಗಳನ್ನು ಹಂಚಿದ ಮೇಲೆ ಘಂಟೆ ೧೨-೩೦ರ ವರೆಗೆ ಸಭಿಕರ ಭಾಷಣಗಳೂ ನಡೆದುವು ಘಂಟೆ ೧ಕ್ಕೆ ಅಧ್ಯಕ್ಷರ ಭಾಷಣವು ಮುಗಿದ ಮೇಲೆ ಸಭೆಯು ಮಂಗಳ ಗೀತೆಯೊಂದಿಗೆ ಮುಕ್ತಾಯವಾಯಿತು ಅಪರಾಹ್ನ ಘಂಟೆ ೩ರಿಂದ ೩ರ ತನಕ ಶ್ರೀಯುತ ಭೋಜ ಐತಾಳರವರು ಸದ್ರಿ ಶಾಲೆಯಲ್ಲಿ ಮಾತಾ ಪಿತೃ ಭಕ್ತ ಪುಂಡರೀಕ್ಷ್ಯ ಎಂಬ ಹರಿಕಥೆಯನ್ನು ಎಲ್ಲರೂ ಮೆಚ್ಚುವಂತೆ ಹಾಡಿ ತೋರಿಸಿದರು

ಬೆಳ್ಳ — ಇಲ್ಲಿ ಯಾರೋ ಒಬ್ಬನು ರಾತ್ರಿಯಲ್ಲಿ ಮಲಗಿದ್ದ ಸಮಯದಲ್ಲಿ ಶೀಲನ್ ಕೆಥೋಲಿಕನ ಮನೆಗೆ ಬೆಂಕಿ ಕೊಟ್ಟು ಓಡಿಹೋಗಿದ್ದಾರೆ ಪ್ರಾಣಕ್ಕೆ ಅಪಾಯವಾಗಲಿಲ್ಲ ಸುಮಾರು ೩೦೦ ರೂಪಾಯಿಯ ಮೇಲೆ ನಷ್ಟವಾಗಿದೆ

ಮೂಡಬಿದ್ರಿ:— ಪಡುಕೊಣಜೆ ಲೇಬರ ಶಾಲೆಯಲ್ಲಿ ೧೯ ೫ ೩೬ರಲ್ಲು ಆದಿದ್ರಾವಿಡರ ಒಂದು ಸಭೆಯು ಮ॥ ರಾ॥ ರಾ॥ ಬಿ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಸಭೆಗೆ ಮೂಡಬಿದ್ರಿ ಹರಿಜನ ಭಜನಾಸಂಘದವರೂ ಆಸ್ಪತ್ರೆಯ ಕಂಪೌಂಡರರೂ ವಕೀಲರಾದ ಅಪ್ಪಿ ಶೆಲ್ಲರೂ ಮತ್ತು ಇತರ ಮೇಲುಜಾತಿಯವರೂ ಹಾಜರಿದ್ದರು ಲೇಬರ ಶಾಲಾ ಮಾಸ್ತರ ಕೆ ರಾಮಚಂದ್ರರೂ ಜೆ ಅಬ್ದುಲ್ ರಹಿಮಾನ ಸಾಹೇಬರೂ ಶಾಲಾ ಬಾಲಕರಿಂದ ಭಜನೆಯನ್ನು ಮಾಡಿಸಿದ ಮೇಲೆ ಮ॥ ರಾ॥ ರಾ॥ ಶಾಂತಪ್ಪ ಆಚ್ರಿಗಳೂ ರಾಮಚಂದ್ರರೂ ಶಾಲಾ ಏಳಿಗೆಯ ವಿಷಯ ಭಾಷಣವಿತ್ತರು ಸಭಾಧ್ಯಕ್ಷರು ಅಸ್ಪೃಶ್ಯತಾ ನಿವಾರಣೆ ಮದ್ಯಪಾನ ನಿಷೇದದ ವಿಷಯ ಮಾತನಾಡಿದ ನಂತರ ಹರಿಜನ ಬಾಲಕರಿಗೆ ಸ್ವೀಟು ಸಾಮಾನುಗಳನ್ನು ಹಂಚಿದರು ಈ ಸಭೆಗೆ ತುಂಬಾ ಪ್ರೋತ್ಸಾಹವನ್ನಿತ್ತ ವಕೀಲ ಅಪ್ಪು ಶೆಲ್ಲಿ, ಕೆ ಅಮ್ಮು ಅಪ್ಪ ಕೆ ಗುರುವಪ್ಪ ರಾಮಣ್ಣ ನಾಯಕ, ಅಣ್ಣು ಸೇರಿಗಾರ ಇವರೆಲ್ಲರಿಗೆ ಉಪಾಧ್ಯಾಯರು ವಂದನೆಗಳನ್ನು ಸಮರ್ಪಿಸಿದ ನಂತರ ರಾಜಗೀತದೊಡನೆ ಸಭೆಯು ಅಂತ್ಯಪಡಿಸಲಾಯಿತು.

ಕಾಸರಗೋಡು— ಇಲ್ಲಿ ಸುಮಾರು ೧ ತಿಂಗಳಿಂದ ಶ್ರೀ ಶಂಕರನಾರಾಯಣ ಪ್ರಸಾದಿಕ ಯಕ್ಷಗಾನ ನಾಟಕ ಸಭಾ, ಕೋಳ್ಯೂರು, ಇವರು ತಮ್ಮ ನಾಟಕಗಳನ್ನು ಜನರಂಜಕವಾಗುವಂತೆ ಪ್ರದರ್ಶಿಸುತ್ತಿದ್ದಾರೆ ಇದೇ ಕಳೆದ ತಾರೀಕು ೧೮ನೆಯ ದಿನ ನಡೆದ 'ಶೂರ್ಪನಖಾ ವಿವಾಹ', 'ಕಾರ್ತವೀರ್ಯಾರ್ಜುನನ ವಧಾ' ಎಂಬ ನಾಟಕದ ಸಂದರ್ಭದಲ್ಲಿ ನಟವರ್ಗದವರೊಬ್ಬರಾದ ಶ್ರೀ ವಿಠ್ಠಲ ಶಾಸ್ತ್ರಿ ಎಂಬವರಿಗೆ ಇಲ್ಲಿನ ಡಾಕ್ಟರರಾದ ಶ್ರೀಮಾನ್ ಜಿ. ಶ್ರೀನಿವಾಸ ರಾಯರು ಸುವರ್ಣ ಪದಕವನ್ನಿತ್ತು ಪ್ರೋತ್ಸಾಹಿಸಿದರು ಶ್ರೀಯುತ ಡಾಕ್ಟರರು 'ಜಿ ಎಸ್ ರಾವ್' ಎಂಬ ಹೆಸರಿನಿಂದ ಅನೇಕ ಇಂಗ್ಲಿಷ್ ಪತ್ರಿಕೆಗಳಲ್ಲಿ ಕಥಾ, ಕಾದಂಬರಿ ಮುಂತಾದ ಲೇಖನಗಳನ್ನು ಬರೆಯುತ್ತಿದ್ದು ಪ್ರಸಿದ್ಧರಾದವರು ಮಾತ್ರವಲ್ಲದೆ ಇವರ ಕೆಲವು ಕಥೆಗಳನ್ನು ಸಿನೆಮಾ ಕಂಪೆನಿಯವರು ಸ್ವೀಕರಿಸಿಕೊಂಡು ಪ್ರದರ್ಶಿಸುತ್ತಿದ್ದಾರೆಂದೂ ಕೇಳಿರುತ್ತೇವೆ. ಅಂಥಾ ಪ್ರತಿಭಾಶಾಲಿಗಳಾದ ಇವರ ಕೈಯಿಂದ ಈ ಬಗೆಯ ಸಂಭಾವನೆಯನ್ನು ಪಡೆದ ವಿಷಯವು ಈ ನಾಟಕ ಸಂಘಕ್ಕೆ ಗೌರವಾಸ್ಪದವಾದುದಾಗಿದೆ ಈ ಸಂಭಾವನೆಯ ಸಂದರ್ಭದಲ್ಲಿ ಶ್ರೀಯುತ ಡಾಕ್ಟರ ಪರವಾಗಿ ಕರ್ನಾಟಕ ಪಂಡಿತರಾದ ಶ್ರೀ ವಿದ್ವಾನ್ ಸುರತ್ಕಲ್ ಸುಬ್ಬರಾಯರು ನಾಟಕ ಸಂಸ್ಥೆಯವರ ಕಾರ್ಯದಕ್ಷತೆಯನ್ನೂ, ಶ್ರೀಯುತ ವಿಠ್ಠಲ ಶಾಸ್ತ್ರಿಗಳ ಮನಮೋಹಕವಾದ ಅಭಿನಯ, ಚಾತುರ್ಯ ವಾಕ್ಸಾಮರ್ಥ್ಯಾದಿಗಳನ್ನು ಸುರಸವಾಗಿ ಶ್ಲಾಘಿಸಿ ಭಾಷಣವಿತ್ತರು ಇದುವಾಯ ಪದಕಧಾರಿಗಳಾದ ವಿಠ್ಠಲ ಶಾಸ್ತ್ರಿಗಳು ತಾನು ಸಂಭಾವನೆಗೆ ಅನರ್ಹನಾಗಿದ್ದರೂ ಉದಾರಬುದ್ಧಿಯಿಂದ ತನ್ನನ್ನೀ ಬಗೆಯಿಂದ ಪ್ರೋತ್ಸಾಹಿಸಿದುದಕ್ಕಾಗಿ ಶ್ರೀ ಡಾಕ್ಟರರವರಿಗೆ ವಂದನೆಯನ್ನರ್ಪಿಸಿದರು ಅಂತೂ ನಾಟಕವು ಯಶಸ್ವಿಯಾಗಿ ಕೊನೆಗೊಂಡಿತು ಸುಧಾರಿತ ಜನವರ್ಗದ ಆತ್ಮಾದರಕ್ಕೆ ಪಾತ್ರವಾಗುವಂತೆ ಉತ್ತಮ ವ್ಯವಸ್ಥೆಯಿಂದ ನಾಟಕಗಳನ್ನು ಪ್ರದರ್ಶಿಸಿ, ಯಕ್ಷಗಾನ ಕಲಾಭಿವೃದ್ಧಿಯನ್ನು ಹಾರೈಸುತ್ತಿರುವ ಈ ಸಂಸ್ಥೆಯು ಇನ್ನುಮುಂದೆಯೂ ಕನ್ನಡಿಗರ ಯಥೋಚಿತ ಪ್ರೋತ್ಸಾಹಕ್ಕೆ ಪಾತ್ರವಾಗಿ, ರಾರಾಜಿಸುತ್ತಿರುವಂತೆ ಶ್ರೀ ಭಗವಂತನು ಅನುಗ್ರಹಿಸಲಿ!

ಮಂಗಳೂರು.

ಮಂಗಳೂರು ಸಿಟಿ ಆರ್ಯಸಮಾಜದ ವಿಶೇಷ ಮಹಾಸಭೆಯು ಮೇ ತಾ. ೧೭ರಲ್ಲಿ ಜರಗಿ ಮುಂದಿನ ವರುಷದ ಬಗ್ಗೆ ಈ ಕೆಳಗೆ ಕಾಣಿಸಿದಂತೆ ಅಧಿಕಾರಿಗಳನ್ನು ಚುನಾಯಿಸಲಾಯಿತು ಎಂದು ಕಾರ್ಯದರ್ಶಿಯವರು ತಿಳಿಸುತ್ತಾರೆ. ಅಧ್ಯಕ್ಷ—ಶ್ರೀಯುತ ತಲಚೇರಿ ರಂಗರಾವ್, ಬಿ. ಎ. ಬಿ ಎಲ ಕಾರ್ಯದರ್ಶಿ—ಬಪ್ಪಿ ಮಾಸಪ್ಪ ಶೆಟ್ಟಿ, ಮತ್ತು ಕೆ. ಟಿ ಸಾಲಿಯಾನ್ ಕೋಶಾಧಿಕಾರಿ—ಎಮ್. ಎಸ್ ನಾಯಕ್

ಮಂಗಳೂರು ಟೌನಿನ ಹುಡುಗರ ಶಾಲೆಯ ಎಸ್. ಎಸ್ ಎಲ್ ಸಿ ಪರೀಕ್ಷಾ ಫಲಿತಾಂಶ ೧೯೩೬—ಸೈಂಟ್ ಎಲೋಸಿಯಸ್ ಕೋಲೇಜು ಪರೀಕ್ಷೆಗೆ ಕೂತುಕೊಂಡ ವಿದ್ಯಾರ್ಥಿಗಳು ೧೦೮ ಪಾಸಾದವರ ಸಂಖ್ಯೆ ೫೩. ಶೇಕಡಾ ೪೮ ಕೆ ಇ ಎಮ್ ಹೈಸ್ಕೂಲ್ ಪರೀಕ್ಷೆಗೆ ಕೂತುಕೊಂಡ ವಿದ್ಯಾರ್ಥಿಗಳು ೩೫ ಪಾಸಾದವರ ಸಂಖ್ಯೆ ೧೩ ಶೇಕಡಾ ೩೭ ಕೆನರಾ ಹೈಸ್ಕೂಲ್, ಪರೀಕ್ಷೆಗೆ ಕೂತುಕೊಂಡ ವಿದ್ಯಾರ್ಥಿಗಳು ೧೦೬ ಪಾಸಾದವರ ಸಂಖ್ಯೆ ೩೬ ಶೇಕಡಾ ೩೪ ಗವರ್ನ್‌ಮೆಂಟ್ ಕೋಲೇಜ್, ಪರೀಕ್ಷೆಗೆ ಕೂತುಕೊಂಡ ವಿದ್ಯಾರ್ಥಿಗಳು ೩೦ ಪಾಸಾದವರ ಸಂಖ್ಯೆ ೯ ಶೇಕಡಾ ೩೯ ಗಣಪತಿ ಹೈಸ್ಕೂಲ್ ಪರೀಕ್ಷೆಗೆ ಕೂತುಕೊಂಡ ವಿದ್ಯಾರ್ಥಿಗಳು ೭೫ ಪಾಸಾದವರ ಸಂಖ್ಯೆ ೧೬, ಶೇಕಡಾ ೨೧

ದಿವಂಗತ Vನೇ ಜೋರ್ಜರ ಸ್ಮಾರಕ ನಿಧಿಗೆ ಧನಸಹಾಯ ಮಾಡಿದವರು —ರೈ। ಫಾ। ಎಮ್ ಎಸ್ ಫೆರ್ನಾಂಡಿಸ್ ರೂ ೧—೮—೦ ಕೆ ಸಂಜೀವ ರಾವ್ ೮ ೮ ಇ ಸುಬ್ರ(ತ್ರ)ಮ ಕಾಮತ್ ೮ ೮, ತೋಮಸ್ ಸಿಕ್ವೇರ ೮ ೮ ಮುಧರ ಪೂಜಾರಿ ೮ ೮ ಅಪೋಲಿನ್ ಪಿಂಟೊ ೮ ೪ ಅಣ್ಣಪ್ಪ ಶೆಟ್ಟಿ ರೂ ೧ ಎಸ್ ನರಸಿಂಹ ಪೈ ರೂ ೨ ಸೀತಾರಾಮ ಬಲ್ಯಾಯ ೮ ೮ ಬಿ ವಿಟ್ಠಲ್ ರಾವ್ ೮ ೪ ವಿ ಎಸ್ ವಿಶ್ವನಾಥ ಐಯ್ಯರ್ ರೂ ೨ ಅಣ್ಣಯ್ಯ ಪೂಜಾರಿ ರೂ ೧ ಕುಂಟ್ಟ ಪೂಜಾರಿ ರೂ ೧ ಕೂನರ್ಾಡ್ ಕೃಷ್ಣರಾವ್ ರೂ ೧ ವಿಲ್‌ಫ್ರೆಡ್ ಮಾರ್ಟಿಸ್ ರೂ ೧ ಪಿ. ಡಿ ಪ್ರಭು ರೂ ೧ ಡಾ। ವಿ ಕೆ ಬಲ್ಲಾಳ್ ರೂ ೧ ಕೆ ನಾರಾಯಣ ೮ ೪ ಚಂದು ಕುಟ್ಟಿ ೮ ೪ ಕೆ ಗಿರಿಯಪ್ಪ ೮ ೪ ರಾಮರಾವ್ ರೂ ೧ ಮಿಸ್ ಕವೆಲಿನ್ನಾ ರೂ ೧ ಮಿಸ್ ಇ ಬ್ರಿಟ್ಟೊ ರೂ ೨ ಶ್ರೀಮತಿ ವಾಲ್ಲಿ ಮಾಧವ ಪ್ರಭು ರೂ ೫ ಇಬ್ಬರು ಉದಾರದಾರರಿಂದ ನಾಲ್ಕಾಣೆ ಪ್ರಕಾರ ೮ ೮

ನಮ್ಮ ಜಿಲ್ಲಾ ಸರ್ಜನರಾದ ಶ್ರೀ ಎಚ್ ಸದಾಶಿವ ರಾಯರ ಪುತ್ರಿ ಶ್ರೀಮತಿ ಸುಶೀಲಾಬಾಯಿಯವರನ್ನು ಇಲ್ಲಿಯ ನಿವೃತ್ತ ಟೆಲಿಗ್ರಾಫ್ ಸುಪರಿಂಟೆಂಡೆಂಟರಾದ ಶ್ರೀ ಅಮ್ಮೆಂಬಳ ರಾಮರಾಯರ ಪುತ್ರ ಶ್ರೀಮಾನ್ ಕಮಲಾಕರ ರಾಯರಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ಬೆಳಸಿದ ಸಂದರ್ಭದಲ್ಲಿ ಒಂದು ಟಾರ್ಪಾಟಿಯ ಸತ್ಕಾರವು ಕಳೆದ ತಾ ೨೪-೫-೩೬ನೇ ಆದಿತ್ಯವಾರ ನಡೆಯಿತು ಈ ಶುಭಕಾರ್ಯದ ಕಾಲವನ್ನು ಕೆಲವು ಸಮಯದ ಹಿಂದೆಯೇ ನಿರ್ದಿಷ್ಟಮಾಡಿ ಹೇಳಿದ್ದ ನಮ್ಮ ಜಿಲ್ಲೆಯ ಪ್ರಸಿದ್ಧ ಜ್ಯೋತಿಷಿಗಳಾದ ಪಣಂಬೂರು ಪ್ರಾಧ್ಯ ಶ್ರೀ ಗುಡ್ಡೆ ಮನೆ ಗಣಪತಿ ಐತಾಳರಿಗೆ ಸಮ್ಮೆಸರ್ಜನರು ಅವರ ಜ್ಯೋತಿಷ್ಯ ಪಾಂಡಿತ್ಯಕ್ಕೆ ಸಂತೋಷಪಟ್ಟು ಅವರಿಗೆ ಜತೆ ಜರಿಯ ಶಾಲುಗಳೊಡನೆ ದ್ರವ್ಯ ಸಂಭಾವನೆಯನ್ನು ಮಾಡಿ ಅವರನ್ನು ಸನ್ಮಾನಿಸಿದರು. ಶ್ರೀ ಐತಾಳರು ಪ್ರಶಂಸಾಪೂರ್ವಕ ಮಂಗಳಾಶೀರ್ವಾದ ವಾದವನ್ನು ಮಾಡಿದರು. ಗವರ್ನ್‌ಮೆಂಟ್ ಕೋಲೇಜಿನ ಪ್ರೊಫೆಸರಾದ ಮೂರ್ತಿ ಮಂಜುನಾಥರಾಯರು ಐತಾಳರ ವಿದ್ವತ್ತಿನ ಕುರಿತು ಪ್ರಶಂಸಿಸಿ ಭಾಷಣವಿತ್ತರು. ಹೀಗೆಯೇ ಶ್ರೀ ಐತಾಳರು ವಿವಾಹ ಸಮಯದ ಭವಿಷ್ಯವನ್ನು ನಿಷ್ಕರ್ಷೆಯಾಗಿ ಹೇಳಿ ಬಂದೇ ವರ್ಷದಲ್ಲಿ ಇದು ಕೂಡಾ ಮೂರು ಸಲ ಬಹುಮಾನವನ್ನು ಪಡೆದಿರುವರು. ಎಂಬ ಸಂಗತಿಯನ್ನು ತಿಳಿಸಲು ತುಂಬಾ ಸಂತೋಷ.

ಬಂಟ್ವಾಳ— ಇಲ್ಲಿಯ ಆಸ್ಪತ್ರೆಯಲ್ಲಿ ೧೮ ವರ್ಷಗಳಿಂದ ಕೆಲಸ ಮಾಡಿ ಜನಪ್ರಿಯನಾಗಿದ್ದ ಕಂಪೌಂಡರ್ ಶ್ರೀ ಜಿ. ಆರ್ ಶೆಣೈಯವರಿಗೆ ಕಾರ್ಕಳಕ್ಕೆ ವರ್ಗವಾಯಿತು, ಆ ಕುರಿತು ೨೩-೫-೩೬ರಲ್ಲು ಇಲ್ಲಿಯ ಹಲವು ಅಭ್ಯಗ್ರಹಸ್ತರು, ವಿಕ್ಟೋರಿಯಾ ಮುದ್ರಾಶಾಲೆಯ ಪ್ರೊಪ್ರೈಟರ್ ಶ್ರೀ ಬಿ. ಕೃಷ್ಣ ಪ್ರಭುಗಳ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿ, ಶ್ರೀ ಶೆಣೈಯವರನ್ನು ಸನ್ಮಾನಿಸಿದರು.

ಮೇ ತಾ ೨೨ನೇ ಶುಕ್ರವಾರ ಪ್ರಕಟವಾದ ಸ್ವದೇಶಾಭಿಮಾನಿಯಲ್ಲಿ ಬೇಡ ರೂಪಾಯಿಗೆ ಆಸೆ ಹದಿನಾಲ್ಕು ಎಂಬ ಶಿರೋನಾಮೆಯ ಲೇಖನಕ್ಕೆ ಉತ್ತರವಾಗಿ ಒಂದು ಬಾತ್ಮಿಯು ನಮ್ಮ ಹಸ್ತಗತವಾಗಿದೆ ಸ್ಥಳ ಸಂಕೋಚದ ದೆಸೆಯಿಂದ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು ಸಂ. ಸ್ವ.

೧೯೩೫ನೇ ಇಸವಿಯ ಹೊಸ ಗವರ್ನ್‌ಮೆಂಟ್ ಒಫ್ ಇಂಡಿಯಾ ಆಕ್ಟಿನನುಸಾರವಾಗಿ ಬರುವ ೧೯೩೬ನೇ ಇಸವಿಯ ಆರಂಭದಲ್ಲಿ ಮದ್ರಾಸು ನ್ಯಾಯವಿಧಾಯಕ ಮಂಡಲಿ(Madras Legislative Assembly)ಗೆ ನಡೆಯಲಿಕ್ಕಿರುವ ಚುನಾವಣೆಯಲ್ಲಿ ದಕ್ಷಿಣಕನ್ನಡ ಜಿಲ್ಲೆಗಿರುವ ಯಾವದಾದರೊಂದು ಸ್ಥಾನಕ್ಕಾಗಲೀ ಕಾಂಗ್ರೆಸಿನವರು ಈ ವರೆಗೆ ಉಮೇದ್ವಾರರನ್ನು ಚುನಾಯಿಸಿರುವುದಿಲ್ಲ ಸ್ಥಳೀಯ ಕಾಂಗ್ರೆಸ್ ಕಮಿಟಿಯು ಪ್ರತಿಯೊಂದು ಸ್ಥಾನಕ್ಕೂ ತಕ್ಕ ಸಮಯದಲ್ಲಿ ಉಮೇದ್ವಾರರುಗಳನ್ನು ಹಾಕಲಿಕ್ಕಿರುವುದರಿಂದ ಕಾಂಗ್ರೆಸ್ ಅಭಿಮಾನಿಗಳು ಉಮೇದ್ವಾರರುಗಳಿಗೇನೆ ಸರ್ವರೂ ಸಹಾಯಮಾಡಿ ತಮ್ಮ ಮತದಾನವೂ ಮಾಡಬೇಕಲ್ಲದೆ ಮುಂಚಿತವಾಗಿ ಇನ್ನಿತರರಿಗೂ ಭರವಸೆಕೊಡಬಾರದಾಗಿ ವಿನಂತಿಯಿದು ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ

ಸ್ಥಳೀಯ ಶ್ರೀ ಕೃಷ್ಣಾ ಸಿನೇಮಾದಲ್ಲಿ ತಾ ೨೮ರಿಂದ ಸಮಾಜದ ಕಾರ್ಯಸರ್ಪವನ್ನು ತೋರಿಸುವ ಭೀಕರ ಸಮಾಜ ಚಿತ್ರದ 'ಕಾಲಾ ನಾಗಾ' ಎಂಬ ಚಿತ್ರವು ಪ್ರದರ್ಶಿಸಲ್ಪಡುವುದು ಇದರಲ್ಲಿ ದುಲಾರಿ ವಿಲಿಯಮ್ಸನ್ ಜಮಶೆಡ್ಜಿ ಗಜ್ನವಿ ಕೆಮಿಸ್ಟ್ ಮುಂತಾದವರು ಅಭಿನಯಿಸಿರುವರು.

ಇಲ್ಲಿಯ ಡಿ। ಮುನ್ಸೀಫರಾದ ಶ್ರೀ। ಸಿ ಕುಂಞರಾಮ ಮೆನೋನ್ ಇವರು ಪಾಲ್ಘಾಟಿಗೆ ವರ್ಗಹೊಂದಿ ಅವರ ಬದಲಿಗೆ ಕೊಯಮುತ್ತೂರು ಹೆಡ್ ಕ್ವಾರ್ಟರಿಂದ ಶ್ರೀ। ವೆಂಕಟ್ರಮಣ ಅಯ್ಯರ್ ಬಿ ಎ ಇವರು ಬರುವರೆಂದು ಕೇಳಿದ ಬರುತ್ತದೆ.

ನಮ್ಮ ಜಿಲ್ಲೆಯಲ್ಲಿ ಡಿ। ಕಲೆಕ್ಟರರೂ, ಜಿ ಬೋರ್ಡಿನ ಕಲೆಕ್ಟರ್ ಪ್ರೆಸಿಡೆಂಟಿನ ಸಹಾಯಕರೂ ಆಗಿದ್ದ ಮಿ। ಅಬ್ರಹಾಂರವರು ಕೊಯಮುತ್ತೂರಿನ ಮ್ಯುನ್ಸಿಪಲ್ ಕಮಿಷನರರಾಗಿ ಅತ್ತ ತೆರಳಿರುವರು, ಅವರನ್ನು ಬೀಳ್ಕೊಡಲು ಇಲ್ಲಿನ ರೈಲ್ವೇ ಸ್ಟೇಷನಿನಲ್ಲಿ ಬಹುಜನರು ನೆರೆದು ಬಂದಿದ್ದರು,

ಜಿಲ್ಲಾ ಬೋರ್ಡಿನ ಅಧಿವೇಶನವು ಇದೇ ತಾ ೨೫ನೇ ಬೆಳಿಗ್ಗೆ ೧೧ ೩೦ ಗಂಟೆಗೆ ಅವರ ಅಧಿವೇಶನದಲ್ಲಿ ಅಧ್ಯಕ್ಷರಾದ ದಿವಾನ್ ಬಹದ್ದೂರ್ ಬಿ ಎಂ. ಹೆಗ್ಡೆಯವರ ನೇತೃತ್ವದಲ್ಲಿ ಜರಗಿತು

ಮಂಗಳೂರು ಮಹಿಳಾ ಸಭೆಯ ಆಶ್ರಯದಲ್ಲಿ ಇದೇ ತಾ. ೩೦ನೇ ಶನಿವಾರ ಸಾಯಂ ಘಂಟೆ ೬ರಿಂದ ೮ರ ವರೆಗೆ ಎನ್ ಎಂ ಅಡ್ಯಂತಾಯ, ಬಿ ಎಸ್. ಸಿ (ಎಡಿನ್) ಇವರು ದಕ್ಷಿಣಾದಿ ಮತ್ತು ಹಿಂದೂಸ್ಥಾನೀ ಗಾಯನ ಕಛೇರಿಯನ್ನು ಇಲ್ಲಿಯ ಕೆನರಾ ಹೈಸ್ಕೂಲಿನ ಹೋಲಿನಲ್ಲಿ ನಡೆಸುವರು, ಗಾಯನ ಪ್ರೇಮಿಗಳಿಗೆ ಇದು ಅತ್ಯಪರೂಪ ಸಂದರ್ಭ! ಪ್ರವೇಶ ದರ—೮ ೧ ಆಣೆ ೮.

ಶಾಹಿದ್‌ಗಂಜ್ ದಾವೆಯು ನಿರ್ಣಯವಾಯಿತು.

೧೭೬೨ರಿಂದ ಅದು ಮಸೀದಿಯಾಗಿಲ್ಲವೆಂದು ನ್ಯಾಯಾಧೀಶರ ತೀರ್ಮಾನ.

೧೭೬೨ರಿಂದ ಶಾಹಿದ್‌ಗಂಜ್ ಮಸೀದಿಯನ್ನು ಮಸೀದಿಯನ್ನಾಗಿ ಉಪಯೋಗಿಸುತ್ತಿರಲಿಲ್ಲವೆಂದೂ, ಅಲ್ಲಿಂದ ಅದರಲ್ಲಿ ಮುಸ್ಲಿಮರಿಗೆ ಪ್ರಾರ್ಥನೆ ನಡೆಯಿಸಲು ಅವಕಾಶಮಾಡಿಕೊಡಬೇಕೆಂದೂ ತಂದ ವ್ಯಾಜ್ಯವನ್ನು ಸೆಶನ್ಸ್ ಜಡ್ಜರು, ಡಿಸ್‌ಮಿಸ್ ಮಾಡಿರುವರು

ಗುರುದ್ವಾರ ನ್ಯಾಯಮಂಡಳದ ತೀರ್ಪಿನ ಅನುಸಾರವಾಗಿಯೂ, ಗುರುದ್ವಾರ ಕಾನೂನಿನ ನಿಯಮಗಳ ಪ್ರಕಾರವಾಗಿಯೂ ಈ ದಾವೆಗೆ ಅವಕಾಶವೇ ಇಲ್ಲವೆಂದು ಜಡ್ಜರು ಅಭಿಪ್ರಾಯಪಟ್ಟಿರುವರು

ಲಾಹೋರಿನಲ್ಲಿ ಇನ್ನೊಂದು ಗಲಭೆಯೇ?

ಕೋರ್ಟಿನ ತೀರ್ಪಿನ ಪರಿಣಾಮ.

ಮೇಲಿನ ರೀತಿಯ ಕೋರ್ಟಿನ ತೀರ್ಪು ಹೊರಬಿದ್ದು, ಲಾಹೋರಿನ ಕೋಮುವಾರು ಪರಿಸ್ಥಿತಿಯು, ಇನ್ನೂ ವೃದ್ಧಿ ಹೊಂದಿರುತ್ತದೆ

ಪೋಲೀಸ್ ಅಧಿಕಾರಿಯವರು, ಗಲಭೆ ಸಂದರ್ಭದಲ್ಲಿ ಇಡೀ ಪೋಲೀಸ ದಳವನ್ನೆ ಸಿದ್ಧಪಡಿಸಿದ್ದರು ಸೈನಿಕರ ಸಹಾಯ ಪಡೆಯೊಂದು ಕರೆಯಲಾಗಿದೆ ಕೋರ್ಟಿನ ಮಹಾದ್ವಾರವನ್ನು ಬಹಳ ಜಾಗ್ರತೆಯಿಂದಲೂ ಎಚ್ಚರಿಕೆಯಿಂದಲೂ ಕಾಯಲ್ಪಟ್ಟಿತು

ಅಜ್ಮೀರ್ ಹಿಂದೂ ಮುಸ್ಲಿಮ ಕಲಹ.

ಒಂದು ಅಂಗಡಿಯ ಒಬ್ಬ ಹಿಂದೂ ನೌಕರನಿಗೂ ಮುಸ್ಲಿಂ ನೌಕರನಿಗೂ ಉಂಟಾದ ಜಗಳವು ಕೋಮುವಾರು ಕಲಹದಲ್ಲಿ ಪರಿಣಮಿಸಿದೆ ಈ ಜಗಳದ ನಿಮಿತ್ತ ಹಿಂದೂ ಮುಸ್ಲಿಂ ಜನರು ಗುಂಪುಸೇರಿ ಜಗಳವಾಡಲಾರಂಭಿಸಿದರು ಅನೇಕರಿಗೆ ಗಾಯಗಳಾಗಿದೆ ಇದನ್ನು ಸಮಾಧಾನಪಡಿಸಲು ಬಂದ ಯುರೋಪಿಯನ್ ಅಧಿಕಾರಿಗೂ ಏಟುಗಳು ಬಿದ್ದಿವೆ ಪೋಲೀಸ ತನಿಖೆಯು ನಡೆಯುತ್ತದೆ

ಪುತ್ರನೆಂದು ಮೋಸಮಾಡಿದ

ಕಾಂಗ್ರೆಸ್ ಎಂಬಲ್ಲಿನ ಅತುರ್ ಶಹರಿನಲ್ಲಿ ಧನಾಢ್ಯಳಾದ ಒಬ್ಬ ವಿಧವೆಯನ್ನು ಓರ್ವ ಸಾಧುವು ತಾನು ಆಕೆಯ ಮಗನೆಂದು ಮೋಸಪಡಿಸಿದ ವಾರ್ತೆಯು ಬಂದಿರುತ್ತದೆ

ಆ ವಿಧವೆಯ ಮಗನು, ಕೆಲ ಸಮಯದ ಹಿಂದೆ ಮನೆಗಳನ್ನು ತ್ಯಜಿಸಿ ಎಲ್ಲಿಗೋ ಪರಾರಿಯಾಗಿದ್ದನು ಬಹಳ ಸಮಯ ವಿಧವೆ ಮಗನನ್ನು ಕಳಕೊಂಡ ವಿಚಾರದಲ್ಲಿ ಬಹಳ ವ್ಯಥೆಯಿಂದ ದಿವಸಗಳನ್ನು ಕಳೆದಳು ಒಂದಾನೊಂದು ದಿವಸ ಮೇಲಿನ ಸಾಧುವು ಅಲ್ಲಿಗೆ ಬರುವವನಾದ ವಿಧವೆಯೊಡನೆ ತಾನೆ ಆಕೆಯ ಮಗನೆಂದು ಹೇಳಿದ. ಅವಳನ್ನು ಆ ವಿಚಾರದಲ್ಲಿ ತಕ್ಕ ಸಾಕ್ಷಿಗಳನ್ನು ರುಜುಪಡಿಸಿ ನಂಬಿಸಿದ ಮೋಸವನ್ನು ತಿಳಿಯದ ವಿಧವೆಯು ಈತನನ್ನು ತನ್ನ ಮಗನಾಗಿ ಸ್ವೀಕರಿಸಿದಳು ತನ್ನ ದುಃಖವನ್ನು ತ್ಯಜಿಸಿ ಸಂತೋಷ ಪಡಲಾದಳು ಸ್ವಲ್ಪ ಸಮಯದ ನಂತರ ಅಲ್ಲಿ ಶ್ರೀಮಂತ ವಕೀಲರೊಬ್ಬರ ಮಗಳನ್ನು ತಂದು ಈತನಿಗೆ ವಿವಾಹ ಮಾಡಿದಳು ಹೀಗೆ ಸುಖದಿಂದ ಇವರು ವಾಸಮಾಡುತ್ತಿದ್ದರು ಆದರೆ ಒಂದು ದಿವಸ ಈತನ ಕಪಟ ಮಗನಿಗೆ ಒಂದು ಕಾಗದ ಬಂತು ಅದು ಆ ಸಾಧುವಿನ ಅಣ್ಣನಿಂದಾಗಿತ್ತು ಈ ಕಾಗದವು ವಿಧವೆಯ ಕೈಗೆ ಸಿಕ್ಕಿ ಗುಟ್ಟು ರಟ್ಟಾಯಿತು ಈಗ ಸಾಧುವಿನ ಮೇಲೆ ದಸ್ತಗಿರಿ ನಡೆಯುತ್ತದೆ

ವಿಮಾನ ಅಪಘಾತ

ಬ್ರಿಟಿಶ ವಿಮಾನ ಪಡೆಯ ಎರಡು ವಿಮಾನಗಳು ಪೆನಾಂಗ್ ಸಮೀಪದಲ್ಲಿ ಡಿಕ್ಕಿಹೊಡೆದ ಪರಿಣಾಮವಾಗಿ, ಅದರಲ್ಲಿದ್ದ ಜನರು ಮೃತರಾಗಿರುವರು, ವಿಮಾನಗಳಿಗೆ ಏನೂ ಹಿಂದಿಷ್ಟು ಜಖಮ್ ಆಗದಿದ್ದರೂ ಅದರಲ್ಲಿದ್ದ ವ್ಯಕ್ತಿಗಳು ಮೃತರಾದದ್ದು ಆಶ್ಚರ್ಯಕರವಾಗಿದೆ

ಪ್ರೌಢವಿವಾಹದಿಂದುಂಟಾಗುವ ಹಾನಿಗಳು.

ಮಾನಸಿಕ ಹಾಗೂ ಶಾರೀರಿಕ ದೃಷ್ಟಿಯಿಂದ ದುರ್ಬಲರಾದ ಮಕ್ಕಳ ಜನನವಾಗುವುದಕ್ಕೆ ಹಿಂದೂದೇಶದಲ್ಲಿ ಈಗ ಪ್ರಚಾರದಲ್ಲಿರುವ (ಶಾರದಾ ಬಿಲ್ಲು ಇವುಗಳ ದೆಸೆಯಿಂದಾಗಿ ಹಿಂದೆ ಹೋಗುತ್ತಲಿದೆ) ಬಾಲ್ಯವಿವಾಹವು ಕಾರಣವೆಂದು ಪ್ರಸಿದ್ಧ ಪುರುಷರು ಹೇಳುತ್ತಿರುವುದನ್ನು ಕೇಳಬಹುದು. ಅವರೀ ಮಾತುಗಳಲ್ಲಿ ಸತ್ಯಾಂಶವೆಷ್ಟಿದೆಯೆಂಬುದನ್ನು ಪರಿಶೀಲಿಸಿ ಹೇಳಬೇಕಲ್ಲದೆ, ದೊಡ್ಡ ಮನುಷ್ಯರು ಹೇಳುತ್ತಾರೆಂದು ಹೇಳಿ ಅಲ್ಲರಂತೆ ಅನುಸರಿಸುತ್ತ ಬರುವುದರಲ್ಲಿ ಅರ್ಥವೇ ಇಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ

ಹಿಂದೂದೇಶದಲ್ಲಿ ಪ್ರಾರಂಭದಿಂದಲೂ ಪ್ರೌಢ ವಿವಾಹವು ಪ್ರಚಾರದಲ್ಲಿತ್ತೆಂದು ಅನಂತರ ಮೊಗಲರ ಹಾವಳಿಯಿಂದಾಗಿ, ಮಾನಿನಿಯರ ಮಾನರಕ್ಷಣಾರ್ಥವಾಗಿ ಎಳೇ ಪ್ರಾಯದಲ್ಲಿ ಹುಡುಗಿಯರನ್ನು ಯೋಗ್ಯನಾದವನಿಗೆ ಮದುವೆಮಾಡಿಕೊಡುವುದು ಪ್ರಚಾರಕ್ಕೆ ಬಂತೆಂತಲೂ ಜನರಾಡುವುದನ್ನು ನಾವು ಕೇಳಬಹುದು ಆದರೆ ನಿಜವಾದ ಸಂಗತಿಯು ಹೀಗಿರುವುದಿಲ್ಲ ನಾವು ಪ್ರೌಢ ವಿವಾಹವು ಆಗಿನ ಕಾಲದಲ್ಲೂ ಪ್ರಚಾರದಲ್ಲಿದ್ದಿಲ್ಲವೆಂದು ನುಡಿದೊಡನೆ ಚಾರುವಾಕರು" ಪ್ರಚಾರದಲ್ಲಿತ್ತು ಎಂದು ಮುಂತಾಗಿ ಹೇಳದೆ ಬಿಡಲಾರರು ಸ್ವಯಂವರ ಇತ್ಯಾದಿಗಳು ಆಗುತ್ತಿದ್ದವು ಹೆಣ್ಣುಮಕ್ಕಳು ಉಚಿತವಯಸ್ಸಿನಲ್ಲಿ ತನಗಿಷ್ಟನಾದ ರಾಜಪುತ್ರನನ್ನು ಪತಿಯೆಂದು ಸ್ವೀಕರಿಸುತ್ತಿದ್ದಳು ಎಂದು ಮುಂತಾಗಿ ಹೇಳದೆ ಇರಲಾರರು ಅಂಥ ಘಟನಾದಿಗಳು ಇಷ್ಟನ್ನು ಮಾತ್ರ ಹೇಳಲು ಸಮರ್ಥರು ಆಗಿನ ಕಾಲದ ರಾಜರು ಮಹಾ ಅಧಿಕಾರಿಗಳೂ ಸತ್ಯಶಾಲಿಗಳೂ ಆಗಿದ್ದರು ಪವಿತ್ರ ಕುಲಗಳಲ್ಲಿ ನಮ್ಮ ಉದ್ಭವವಾಗಿದೆ ಎಂಬ ಹೆಮ್ಮೆ ಹೆಚ್ಚು ಇದನು ಎಲ್ಲರಲ್ಲಿ ನೆಲಸಿತ್ತು ಹೀಗೆ ಹೆಚ್ಚಿಯಿಂದ ಕೂಡಿದ ರಾಜರ ಹೆಣ್ಣುಮಕ್ಕಳಿಗೆ ವಿವಾಹವು ಬೇಗನೇ ಆಗುವುದು ಅಸಂಭವವೇ ಸರಿ ಏಕೆಂದರೆ ಹೆಣ್ಣುಮಗಳ ತಂದೆತಾಯಿಗಳು ಮಗಳ ಕೈಹಿಡಿಯಲು ಮುಂದೆ ಬರುತ್ತಿರುವ ರಾಜಕುಮಾರರಲ್ಲಿ ಹೆಚ್ಚು ಜನರನ್ನು ನೀವು ನಮ್ಮ ಸರಿಸಮಾನರಲ್ಲ ನಮ್ಮ ಕುವರಿಗೆ ಅನುರೂಪರಾದ ವರರಲ್ಲವೆಂದು ಮುಂತಾಗಿ ತಿಳಿಸಿಬಿಡುತ್ತಿದ್ದರು ಹೀಗಾಗಿ ತಾರುಣ್ಯದಲ್ಲಿ ಕಾಲಿಟ್ಟಮೇಲೆಯೇ ಅವರ ವಿವಾಹವಾಗುತ್ತಿತ್ತು ಹೀಗೂ ಆಗದೆ ಹೋದರೆ ಸ್ವಯಂವರವನ್ನು ನೆರವೇರಿಸಿ ಹುಗಳನ್ನು ದಾನಮಾಡುತ್ತಿದ್ದರೇ ಹೊರತು ಹುಗಳನ್ನು ಪ್ರೌಢವಯಸ್ಕೆಯಾಗುವ ತನಕ ಇಟ್ಟುಕೊಳ್ಳುವ ರೀತಿ ಇರಲಿಲ್ಲ. ಆದುದರಿಂದ ಅಲ್ಲಿ ರಾಜರನ್ನು ಹೊರತು ಉಳಿದ ಜನರಲ್ಲಿ ಬಾಲ್ಯವಿವಾಹವೇ ಪ್ರಚಾರದಲ್ಲಿತ್ತು ಬಾಲ್ಯ ವಿವಾಹವು ಪ್ರಚಾರದಲ್ಲಿ ಬರುವದಕ್ಕೆ ಇಲ್ಲಿನ ವಾತಾವರಣವೂ ನೈಸರ್ಗಿಕ ಗುಣಗಳೂ ಹವಾಮಾನವೂ ಕಾರಣವಾಗಿದೆ ಇಲ್ಲಿ ಸೂರ್ಯನ ಪ್ರಕಾಶವು ಅತೀವ್ರವಾಗಿದೆ ಬಹಳ ಉಷ್ಣವಾಗಿದೆ ಆದುದರಿಂದ ತರುಣತರುಣಿಯರಲ್ಲಿ ವಿಷಯಲಾಲಸೆಗಳು ಬೇಗ ಪ್ರಾಯದಲ್ಲೇ ಮೊಳೆಯುತ್ತವೆ ಯುರೋಪ್ಯ ಹಿಂಡದ ಹೆಚ್ಚನವುಗಳು ಚಳಿಯಾಗಿದ್ದ ಕಾರಣ ಅಲ್ಲಿ ವಿಷಯಲಾಲಸೆಗಳು ನಮ್ಮ ದೇಶದಲ್ಲಿ ಉಂಟಾಗುವ ಪ್ರಾಯದಲ್ಲಿ ಉಂಟಾಗುವುದಿಲ್ಲ ಅಲ್ಲಿ ತರುಣಿಯರು ೨೦ ವರ್ಷಗಳನ್ನು ದಾಟಿದ ನಂತರವೇ ಮದುವೆಯಾಗುತ್ತಾರೆಂದು ಹೇಳಿ ಇಲ್ಲಿನ ಎಲ್ಲ ತರುಣಿಯರೂ ಅವರನ್ನು ಅನುಸರಿಸಿದರೆ ಹಿಂದೂದೇಶದ ಅವಸ್ಥೆಯು ವಿಪರೀತಾವಸ್ಥೆಗೆ ಮುಟ್ಟುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲ ದುರಾಚಾರಗಳು ಅನೀತಿಯ ವ್ಯವಹಾರಗಳು, ಭ್ರೂಣಹತ್ಯೆ ಬಾಲಹತ್ಯೆಗಳು ಬಳಕೆಗೆ ಬಂದು, ಪಾತಿವ್ರತ್ಯದ ಪತನವಾಗದೆ ಇರದು ಹಿಂದೂದೇಶದ ಮಹಿಳೆಯರನ್ನು ಅವರ ಪತಿಭಕ್ತಿ ಪಾತಿವ್ರತ್ಯ ಪ್ರಭಾವಗಳಿಗಾಗಿ ಬೇರೆ ಇತರ ಜನಾಂಗದವರು ಅವರಿಗೆ ಮಾನ್ಯತೆಯನ್ನು ಸಲ್ಲಿಸುತ್ತಾರೆ ಅದನ್ನು ಕಳಕೊಂಡಿತೆಂದರೆ, ಹಿಂದೂದೇಶದ ಭವಿತವ್ಯವು ಭಯಾನಕ ಸ್ಥಿತಿಗೆ ತಲಪುವುದರಲ್ಲಿ ಆಶ್ಚರ್ಯವೇನೂ ಕಂಡುಬರಲಾರದು ಬೇರೆ ದೇಶದ ಸ್ತ್ರೀಯರು ಮಾಡುತ್ತಾರೆಂದು ನಮ್ಮ ನಾಡಿನ ನಾರಿಯರೂ ಅದನ್ನು ಬಳಕೆಗೆ ತರುವುದರಲ್ಲಿ ಉದ್ಯುಕ್ತರಾಗುವುದು 'ಹುಲಿಯ ಬಣ್ಣಕ್ಕೆ ನೋಡಿ ನರಿಯು ಮೈಸುಟ್ಟುಕೊಂಡಂತೆ'ಯಲ್ಲದೆ ಮತ್ತೇನೂ ಅಲ್ಲ

"ಟೆಲಿಯ ಸಿರಿ ಮೋಳಿಕೆಯಲ್ಲೀ ಆಯುಕ್ತದ"ದೊಂದು ನಾಡಿನವರ ಮಾತು ಪ್ರೌಢವಿದ್ಯಾಲಯಗಳನ್ನು ಹೊಕ್ಕು ಪ್ರಪಂಚದ ಜ್ಞಾನವನ್ನು ಚೆನ್ನಾಗಿ ತಿಳಕೊಂಡು, ಪ್ರೌಢಪ್ರಾಯದಲ್ಲಿ ಪತಿಗೃಹವನ್ನು ಪ್ರವೇಶಿಸಿದ ಮಹಿಳೆಯರ ಗುಣದೋಷಗಳೇ ಹಿಂದೂದೇಶಕ್ಕೆ ಪ್ರೌಢವಿವಾಹಕ್ಕೆ ಪ್ರೋತ್ಸಾಹಕೊಟ್ಟಲ್ಲಿ ಆಗತಕ್ಕ ಅನಾಹುತಗಳನ್ನು ಸೂಚಿಸುತ್ತವೆ. ಪ್ರೌಢವಿದ್ಯಾಲಯಗಳನ್ನು ಪ್ರವೇಶಿಸುವ ಅವಿವಾಹಿತ ಸ್ತ್ರೀಯರ ನಡತೆಯು ಅಷ್ಟು ನಾಜೂಕಾಗಿರುವುದಿಲ್ಲ ಕಾಲೇಜುಗಳಲ್ಲಿ ಅವರು ಪುರುಷರೊಡನೆ ನಡಕೊಳ್ಳುವ ರೀತಿಯು, ಹೊರಗಿನ ಸುಶಿಕ್ಷಿತ ಹಾಗೂ ಅಶಿಕ್ಷಿತ ಜನರು ಅವರ ವಿಷಯವಾಗಿ ಹರಡಿಸುವ ಕಟ್ಟುಕೆಲವು ವೇಳೆ ನಿಜವಾದ ಕಥೆಗಳೂ ಅವರು ಅಷ್ಟು ಯೋಗ್ಯ ನಡೆಯವರಲ್ಲವೆಂಬುದನ್ನು ದೃಢೀಕರಿಸುತ್ತವೆ. ಹಲಕೆಲವು ವೇಳೆಗಳಲ್ಲಿ ಅವರ ಮನಸ್ಸು ತರಗತಿಯ ಅಥವಾ ಶಾಲೆಯ ಹುಡುಗನೊಬ್ಬನ ಮೇಲೆ ನೆಡುವುದುಂಟು ಅಂಥಾ ಸ್ತ್ರೀಯನ್ನು ತಾಯಿತಂದೆಗಳು ಮುಂದೆ ಯಾವನೊಬ್ಬನಿಗೆ ಮದುವೆಮಾಡಿಕೊಡುತ್ತಾರೆಂದೂಹಿಸೋಣ ಆವಳ ಮನಸ್ಸು ಬೇರೊಬ್ಬನಲ್ಲಿ ನಟ್ಟಿರುವುದರಿಂದಾದ ಕಾರಣ ಅವಳು ಶಾಸ್ತ್ರೋಕ್ತರೀತಿಯಲ್ಲಿ ಮದುವೆಯಾದವನನ್ನು ತ್ಯಜಿಸಿ ಮನಸೋವರಿಸಿದ್ದವನಲ್ಲಿಗೆ ಓಡಿಹೋಗಿ ಉಭಯಕುಲಕ್ಕೆ ಕಲಂಕವನ್ನು ತರುವವಳಾಗುವಳು ಎಂಬುದು. ಸತ್ಯವಾದ ಮಾತಲ್ಲವೇ! ಅಂಥಾ ಸ್ತ್ರೀಯರ ನಡತೆಯಿಂದಾಗಿ ಪ್ರೌಢ ಅವಿವಾಹಿತೆಯರು, ಒಬ್ಬನಲ್ಲಿ ನೇಹ ಮತ್ತೊಬ್ಬನನ್ನು ಪ್ರೀತಿಸಿ ಇನ್ನೊಬ್ಬನೊಡನೆ ರಮಿಸತಕ್ಕವರೆಂಬ ಆರೋಪವು ಬರುವುದು. ಹಿಂದಿನ ಸ್ತ್ರೀಯರಂತೆ ಈಗಿನವರು ಇಂದ್ರಿಯಗಳನ್ನು ಜಯಿಸಿದವರಲ್ಲ ತಾರುಣ್ಯದಲ್ಲಿ ಕಾಮವಿಕಾರಗಳು ಹೆಚ್ಚಿರುತ್ತವೆ. ವಯಸ್ಸಿನಲ್ಲಿ ಕ್ರಾಂತಿಯನ್ನೆಬ್ಬಿಸುವ ಈ ವಿಕಾರಗಳನ್ನು ತಡೆಕೊಳ್ಳಲಾರದೆ ಅನೀತಿಯ ವ್ಯವಹಾರಗಳಲ್ಲಿ ಉದ್ಯುಕ್ತರಾಗಿ ಉಭಯಸಂಕಟದಲ್ಲಿ ಬೀಳುವುದಿದೆ, ಬಿದಿದ್ದಾರೆ

ಮೇಲಿನದನ್ನು ಪುರುಷರ ಕುರಿತಾಗಿಯೂ ಹೇಳಬಹುದು ಮೊಳೆತ ರಾಗಗಳನ್ನು ತಡೆದು ಹಿಡಿಯಲಾರದವರಾಗಿ ಹೇಯವಾದ ಕಾರ್ಯಗಳಲ್ಲಿ ತೊಡಗಿ ತೇಜಸ್ಸನ್ನೂ ಶಕ್ತಿಯನ್ನೂ ಬುದ್ಧಿಯನ್ನೂ ಅಸಂಖ್ಯಾತ ತರುಣರು ಕಳಕೊಂಡಿರುವರು ವಿಕೃತ ವೀರ್ಯರೂ ನಿಸ್ತೇಜರೂ ತರುಣರೂ ಆಗುವುದಕ್ಕೆ ಇದು ಕಾರಣ ಬಾಲ್ಯ ವಿವಾಹದಿಂದಾಗಿ ಉಂಟಾಗತಕ್ಕ ಹಾನಿಗಿಂತ ಈ ರೀತಿಯಿಂದ ಹಾಳಾಗುವುದು ವಿಪರೀತವಾದುದೇ ಹೆಂಡತಿಯರನ್ನು ನಿರ್ವೀರ್ಯರಿಂದ ತರುಣರು ಸಮಾಧಾನಪಡಿಸಲಾಗದೆ ಹೋಗುವರು ಇದರಿಂದಾಗಿ ಗಂಡಹೆಂಡಿರೊಳಗೆ ವೈಮನಸ್ಸುಂಟಾ ಎವುದು ಕಾಮುಕತಾದೆಯನ್ನು ತಣಿಸಿಕೊಳ್ಳುವುದಕ್ಕಾಗಿ ಹಾದರಮಾಡುವ ಸಂಭವವೂ ಇದೆ, ಇವೆಲ್ಲವೂ ಪ್ರೌಢವಿವಾಹದಿಂದಾಗಿ ಬಂದ ಅನಾಹುತಗಳು ಪ್ರೌಢವಿವಾಹದಿಂದಾಗಿ ಬಂದ ಅನಾಹುತಗಳೇ ಸಾಕು (ವಿವಾಹ ವಿಚ್ಛೇದ) ಇನ್ನು ಅವು ಬರುವುದೇ ಬೇಡ

ಕಿವಿಗೊಡುವುದಕ್ಕೆ ಗಿಡವು ಎಳತಾಗಿರಬೇಕು ಅಂತೆಯೇ ಸತಿಪತಿಯರೊಳಗೆ ಭೇದಭಾವವು ತಲೆದೋರದಿರಬೇಕಾದರೆ ಪ್ರೇಮಮಯ ಜೀವನವು ಕಾಣಬೇಕಾದರೆ ಹೆಂಗಳೆಯರನ್ನು ಎಳೆಯ ಪ್ರಾಯದಲ್ಲೇ ವಿವಾಹವೆಂಬ ಜೀವನದಿಂದ ಜೋಡಿಸಬೇಕು

ಬಿ ಕೆ ಬಿ.

"ಗೌಡ ಸಾರಸ್ವತ ಬ್ರಾಹ್ಮಣ ಸ್ಕಾಲರ್‌ಶಿಪ್ ಲೀಗ್" ಮುಂಬಾಯಿ.

ಈ ಮೇಲಿನ ಸಂಸ್ಥೆಯಿಂದ ಸಹಾಯಪಡೆಯಬಹುದ ಕಾರವಾರ ಮತ್ತು ದಕ್ಷಿಣಕನ್ನಡ ಜಿಲ್ಲೆಯ ಗೌಡ ಸಾರಸ್ವತ ವಿದ್ಯಾರ್ಥಿಗಳು. ತಾ ೧೫—೬—೧೯೩೬ರೊಳಗಾಗಿ O/o ದಿ ಸಾರಸ್ವತ ಬ್ರಾಹ್ಮಣ ಸಮಾಜ ೩೬೪ ಚರ್ನಿ ರೋಡ್ ಗಿರಿಗಾಂವ ಮುಂಬಾಯಿ ಈ ಪತ್ತೆಯ ಮೇಲೆ ಸಂಸ್ಥೆಯ ಕಾರ್ಯದರ್ಶಿಗಳ ಕಡೆಗೆ ಅರ್ಜಿ ಮಾಡಬೇಕು ಅರ್ಜಿಯ ಛಾಪಿ ಫೋರ್ಮುಗಳು ಕಾರ್ಯದರ್ಶಿಗಳ ಕಡೆಗೆ ಇಲ್ಲವೆ ಅಲ್ಲಲ್ಲಿಯ ಸ್ಥಾನಿಕ ಪ್ರತಿನಿಧಿಗಳ ಕಡೆಗೆ ದೊರಕುತ್ತವೆ ಹ್ಯಾಸ್ಕೂಲಿನಲ್ಲಿ ಕಲಿಯುವವರಿಗೆ ಮಾತ್ರ ಸಹಾಯಪ್ರದಾನಮಾಡಲಾಗುತ್ತದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಪದ್ಮಶಾಲಿಗರ ಸಾಮಾಜಿಕ ಸಂಘ, ಮುಂಬಾಯಿ.

ಈ ಮೇಲಿನ ಸಂಘವು ಕಳೆದ ಜನವರಿ ತಿಂಗಳ ತಾ. ೫ರಲ್ಲಿ ಹಲವು ಸ್ವಜಾತಿ ಬಂಧುಗಳಿಂದ ಸ್ಥಾಪಿಸಲ್ಪಟ್ಟಿತು ಪದ್ಮಶಾಲಿಗರ ಸಮಾಜದವರಲ್ಲಿ ವಿದ್ಯಾಭಿರುಚಿಯನ್ನು ಮತ್ತು ಸಮಾಜದ ಮುಂದೇಳಿಗೆಗಾಗಿ ಪ್ರಯತ್ನಿಸುವುದೇ ಈ ಸಂಘದ ಸಾಮಾನ್ಯ ಮತ್ತು ಪ್ರಥಮ ಉದ್ದೇಶವಾಗಿರುತ್ತದೆ ಈ ಸಂಘದ ಗೌರವ ಸೇವೆಯ ಪದಾಧಿಕಾರಿಗಳು —ಎ ಬಿ ಶೆಟ್ಟಿಗಾರ ಅಧ್ಯಕ್ಷ ಕೆ ಸಿ ಶೆಟ್ಟಿಗಾರ ಕಾರ್ಯದರ್ಶಿ ಮತ್ತು ಎಸ್ ಕೃಷ್ಣಪ್ಪ ಎಸ್ ಶೆಟ್ಟಿಗಾರ ಕೋಶಾಧಿಕಾರಿ

The MAN behind the RUPEE

is a power to be reckoned with in every phase of modern life People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires

Create and substantiate a good impression by opening an account in

CANARA BANK
LIMITED.

ಜವಾಹರಲಾಲರ ಜೀವನ ಚರಿತ್ರೆಯಲ್ಲಿರುವ ಕೆಲವು ಕೌತುಕಮಯ ದೃಶ್ಯಗಳು

ಪೂಜ್ಯ ಪಿತಾಜಿಯವರ ವಿಷಯ ತನ್ನ ಅಭಿಪ್ರಾಯಗಳು

ಗಾಂಧಿಜೀಯವರ ಗುಣಗಾನ.

ಪಂಡಿತರ ಜೀವನ ಚರಿತ್ರೆಯ ಕೆಲವು ಪ್ರತಿಗಳು ಈಗ ಹಿಂದೂದೇಶವನ್ನು ಸೇರಿವೆ. ಅವರಲ್ಲಿ ಅನೇಕಾನೇಕ ಹೃದಯಂಗಮವಾದ ಚಿತ್ರಗಳನ್ನು ಜವಾಹರಲಾಲರು ಬಣ್ಣಿಸಿರುವರು. ಓದುವಾಗ ತುಂಬಾ ಸಂತೋಷವೂ ಸ್ಫೂರ್ತಿಯೂ ಉಂಟಾಗುತ್ತದೆ ತನ್ನ ತಂದೆಯವರ ವಿಷಯ ಒಳ್ಳೆ ಅರ್ಥಗರ್ಭಿತ ವಾಕ್ಯಗಳಿಂದ ಬರೆದಿರುವರು. ಅವರಲ್ಲಿ ತನ್ನ ತಂದೆಯವರ ಮೇಲಿನ್ನ ಪೂಜ್ಯಭಾವನೆಯು ಇದರಿಂದ ವ್ಯಕ್ತವಾಗುತ್ತದೆ.

'ಪೂಜ್ಯರಾದ ತಂದೆಯವರು ಎಂತಹ ಕೂಟಗಳಿಗೆ ಹೋದರೂ, ಅಲ್ಲಿ ಅವರಿಗೆ ಸನ್ಮಾನವು ದೊರೆಯುತ್ತಿತ್ತು. ಎಲ್ಲರೂ ಅವರನ್ನು ನಯಭಯ ಭಕ್ತಿಗಳಿಂದ ಕಾಣುತ್ತಿದ್ದರು. ಇದೆಲ್ಲವೂ ಹೊರ ಹೊಮ್ಮುತ್ತಿರುವ ಅವರ ಪ್ರತಿಭೆಯಿಂದಲೇ ಎಂದು ಬೇರೆ ಹೇಳಬೇಕಾಗಿಲ್ಲ. ಸಾಧು ಸ್ವಭಾವವು ಅವರಲ್ಲಿ ಇಲ್ಲವೆಂದಿಲ್ಲ, ಆದರೆ ಯಾರಾದರೂ ತನ್ನ ಮತಕ್ಕೆ ವಿರುದ್ಧವಾಗಿ ಆಡಿದವರನ್ನು ನಿಷ್ಕಾರಣವಾಗಿ ಗಲಭೆ ಮಾಡುವವರನ್ನೂ ಅವರು ತನ್ನ ಜೀವಮಾನಕಾಲದಲ್ಲಿ ಹೀಗೆ ಹೋಗಗೊಡಲಿಲ್ಲ. ಹೋದ ಕಡೆಗಳಲ್ಲಿ ತನ್ನ ಕತ್ತನ್ನೆ ಮೇಲಕ್ಕೆತ್ತಿ ನಿರ್ಭೀತಿಯಿಂದ ಹೊರಬರುತ್ತಿದ್ದರು ಅವರ ಧೈರ್ಯವೆಂದರೆ ಅದನ್ನು ವರ್ಣಿಸಿ ತೀರದು

ಅಗಲವಾದ ಹಣೆ ಅವುಡು ಕಟ್ಟಿದಂತಿರುವ ತುಟಿಗಳು, ದೃಢತೆಯನ್ನು ರುಜುಗೊಳಿಸುವ ಕಣ್ಣುಗಳು ಇವುಗಳನ್ನೆಲ್ಲವನ್ನು ನೋಡುವಾಗ ಇವರೊಬ್ಬ ರೋಮನ ಚಕ್ರವರ್ತಿಗಳೋ ಎಂಬ ಭಾವನೆಯು ಹುಟ್ಟುವುದು. ಇವರ ಭಾವಚಿತ್ರವನ್ನು ಕಂಡ ಇಟಲಿಯವರು ಇವರೊಬ್ಬ ರೋಮಿಯ ಜನರೋ ಎಂದು ನೆನಸಿದರಂತೆ

ತಲೆ ನರೆತ ಮೇಲೆ ಅವರ ಪ್ರತಿಭೆಯು ಇನ್ನಷ್ಟು ಹೆಚ್ಚಿತು ಆ ಬಿಳಿ ಕೂದಲೇ ಅವರ ಶೋಭೆಯನ್ನು ಹೆಚ್ಚಿಸಿತೋ ಎಂದು ಇನ್ನೂ ನನಗೆ ಸಂಶಯವಾಗಿದೆ. ಅಂತೂ ಅವರ ಆಚಾರ ವಿಚಾರಗಳಲ್ಲೂ ಕೊಂಚ ಬದಲಾವಣೆಗಳು ಆಗ ತೊಡಗಿದವು ಅವರ ಆಗಿನ ಗುಣಗಳನ್ನು ನೋಡಿದರೆ ಪ್ರಪಂಚದಲ್ಲಿ ಅವರಷ್ಟು ಆದರ್ಶನೀಯ ಪುರುಷನು ಈಗ ಎಷ್ಟು ಹುಡುಕಿದರೂ ಸಿಗಲಿಕ್ಕಿಲ್ಲವೆಂದೇ ನೆನಸುತ್ತೇನೆ ಅವರನ್ನೇ ಬಹಳ ಹೊಗಳಿ ಬರೆದಿರುವೆನೆಂದು ಎಲ್ಲರೂ ಭಾವಿಸಬಹುದು. ಆದರೆ ಅವರ ವಿಷಯವಾಗಿ ನನ್ನ ಮನಸ್ಸು ಎಷ್ಟು ತುಂಬಿದೆ ಎಂದರೆ ಅದನ್ನು ಈ ಲೇಖಣಿಕೆಯಿಂದ ಚಿತ್ರಿಸುವರೆ ಸಾಧ್ಯವಿಲ್ಲ. ಮಾತೆಯು ಬಹಳ ಹೀನಾವಸ್ಥೆಯನು ತಾಳಿರುವಾಗ ಮಾತೆಯ ಸುತರು ನಿರ್ವೀರ್ಯರಾಗಿರುವಾಗ ಅವರಂತಹ ದೇಹದಾರ್ಢ್ಯತೆಯೂ, ಮನೋಬಲವೂ ಜ್ಞಾನವಂತರೂ ಆದ ಪುರುಷರ ಬಲವು ನಮಗೆ ಬೇಕಾಗಿತ್ತು ಮಾತೆಯು ಅವರ ನಿಧನದಿಂದ ಗರಿಬಳೆ ಸರಿ ಎಂದು ಖೇದವಾಗುತ್ತಿದೆ.

ದೇಶಬಂಧು ಚಿತ್ತರಂಜನ ದಾಸರ ವಿಷಯ ಮಾತಾಡುವಾಗಲೂ ತನ್ನ ತಂದೆಯವರೊಡನೆ ಅವರನ್ನು ಹೋಲಿಸುತ್ತಾರೆ.

ಚಿತ್ತರಂಜನ ದಾಸರಿಗೂ, ತನ್ನ ತಂದೆಯವರಿಗೂ ಬಾಲ್ಯಾರಭ್ಯದಿಂದಲೂ ಸ್ನೇಹಾಂಕುರ ಬೆಳೆಯಿತು. ಅಂದಿನಿಂದಲೂ ಅವರು ಏಕಮತೆಯ ಪುತ್ರರಾಗಿ ಇರಲಾರಂಭಿಸಿದರು ಹಲವು ಸಂಗತಿಗಳಲ್ಲಿ ಮಾತ್ರ ಅವರ ವಿಷಯಗಳು ಸರಿಹೋಗದೆ ಇದ್ದರೂ, ಬೇರಾವ ವಿಷಯಗಳಲ್ಲೂ ಒಬ್ಬರನ್ನು ಇನ್ನೊಬ್ಬರು ಬಿಟ್ಟು ಹಾಕುತ್ತಿರಲಿಲ್ಲ. ತನ್ನ ತಂದೆಯವರು ದೇಶಬಂಧು ದಾಸರಿಗಿಂತ ೮ ವರ್ಷಕ್ಕೆ ಹಿರಿಯವರಾದರೂ ದೇಹದಲ್ಲಾಗಲಿ ತ್ರಾಣದಲ್ಲಾಗಲಿ ಆರೋಗ್ಯದಲ್ಲಾಗಲಿ ದೇಶಬಂಧುಗಳಿಗಿಂತ ಇವರೆ ಮಿಗಿಲಾಗಿದ್ದರು ಇಬ್ಬರಿಗೂ ಸರಿಸಮಾನವಾದ ವಿದ್ಯಾಭ್ಯಾಸವೂ ತರಬೇತಿಯು ದೊರೆತಿದರೂ, ಅವರ ಸಾಧನೆಗಳು ಪ್ರತ್ಯೇಕವಾಗಿದ್ದವು. ದಾಸರು ವಕೀಲರಾಗಿದ್ದರೂ, ಪ್ರತಿಭೆಯುಳ್ಳ ಕವಿಗಳಾಗಿದ್ದರು. ಇವರು ಬಂಗಾಳಿಯಲ್ಲಿ ತುಂಬಾ ಕವನಗಳನ್ನು ಬರೆದಿದ್ದಾರೆ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಕೊಡುವ ಸಾಮರ್ಥ್ಯವು ಇವರಲ್ಲಿ ತುಂಬಾ ಇತ್ತು. ದೈವಭಕ್ತಿಯು ಇವರಲ್ಲಿ ಅಚ್ಚಳಿಯದೆ ಇತ್ತು.

ನನ್ನ ತಂದೆಯವರಲ್ಲಿ ಕಾರ್ಯತತ್ಪರತೆ ಮಡಿ ತೋರಿಸುವ ಸ್ಪೂರ್ತಿ ಹೆಚ್ಚು. ಪದ್ಯದಲ್ಲಿ ಅಭಿರುಚಿ ಹೆಚ್ಚಿಲ್ಲವಾದರೂ ಗದ್ಯದಲ್ಲಿ ತುಂಬಾ ಆಸಕ್ತಿ ಸಂಚಾಲಕರ ಬುದ್ಧಿಚಾತುರ್ಯವು ಇವರಲ್ಲಿ ತುಂಬಾ ಇತ್ತು ವ್ಯಾಖ್ಯಾನದಲ್ಲಿ ಇವರ ಖ್ಯಾತಿಯು ಹೆಚ್ಚು ಸರ್ವಸಾಧಾರಣ ಮಟ್ಟಿಗೆ ಇವರಿಗೆ ಪ್ರತಿಸ್ಪರ್ಧಿಗಳಾರೂ ಇರಲಿಲ್ಲ. ದೇಶಬಂಧುಗಳೂ, ನನ್ನ ತಂದೆಯವರೂ ಕೆಲವೊಂದು ವಿಷಯಗ್ಗಳಲ್ಲಿ ಅಲ್ಲದೆ ಉಳಿದ ಎಲ್ಲಾ ಕಾಂಗ್ರೆಸ್ ಕೆಲಸಗಳಲ್ಲಿ ಐಕ್ಯಮತ್ಯದಿಂದ ಕೆಲಸ ಮಾಡುತ್ತಿದ್ದರು ಎಷ್ಟರ ವರೆಗೆಂದರೆ ಒಬ್ಬರು ಇನ್ನೊಬ್ಬರ ಹೆಸರನ್ನು ಸಂದರ್ಭವಶಾತ್ ಉಪಯೋಗಿಸಲೂ ಹೆದರುತ್ತಿರಲಿಲ್ಲ ಇವರ ಕೂಡುವಿಕೆಯಿಂದ ಭಾರತ ಮಾತೆಯ ಸ್ಥಿತಿಯು ಸ್ವಲ್ಪ ಉತ್ತಮವಾಯಿತೆಂದೂ ಭಾರತೀಯರ ಜಾಗೃತಿಯನ್ನು ತಳೆದರೆಂದೂ ಖಂಡಿತವಾಗಿಯೂ ಹೇಳಬಲ್ಲೆನು- ದೇಶೋದ್ಧಾರವನ್ನು ತಾವಿಬ್ಬರೂ ಅದಷ್ಟು ಮಟ್ಟಿಗೆ ಮಾಡಬಹುದು ಎಂಬ ನಿಶ್ಚಯವು ಅವರಲ್ಲಿತ್ತು

ಗಾಂಧಿಜೀಯವರಿಗೆ ಸನ್ಮಾನ

ಗಾಂಧಿಜೀಯವರ ವಿಷಯ ಬಹಳ ಪೂಜ್ಯಭಾವದಿಂದಲೂ ಪ್ರೀತಿ ಪುರಸ್ಸರವಾಗಿಯೂ ಬರೆದಿರುತ್ತಾರೆ ನಿಜವಾಗಿಯೂ ಸಮಗ್ರ ಭಾರತಕ್ಕೆ ಒಬ್ಬನೆ ಮುಂದಾಳೆಂದು ಭಾವಿಸಿದರೆ ಅವರೇ ಗಾಂಧಿಜೀಯವರು ಎಂದು ಜವಾಹರಲಾಲರು ತನ್ನ ಜೀವನ ಚರಿತೆಯಲ್ಲಿ ಉಲ್ಲೇಖಿಸಿರುವರು

'ಗಾಂಧಿಜೀಯವರು ಪ್ರಜಾಶಾಸನಾಧಿಕಾರಿಗಳೋ ಅಲ್ಲವೋ ಆದರೆ ಅವರು ಸಮಗ್ರ ಭಾರತದ ರೈತ ಜನರ ಪರವಾಗಿ ತುಂಬಾ ಕಷ್ಟಪಟ್ಟಿರುತ್ತಾರೆ ದೇಶವನ್ನು ಉದ್ಧಾರ ಗೈಯ್ಯಬೇಕಾದರೆ ಏನೇನು ಮಾಡಬೇಕೆಂದು ಆಮೂಲಾಗ್ರವಾಗಿ ಪರ್ಯಾಲೋಚಿಸಿ ಅದರ ಕೆಲಸವನ್ನು ಬುಡದಿಂದಲೇ ಮಾಡಲು ತೊಡಗಿದ್ದಾರೆ. ದೇಶದ ಸೌಖ್ಯಸಂಪತ್ತು ಶಕ್ತಿ ಇದೆಲ್ಲವೂ ಹಳ್ಳಿಗಳ ಮೇಲೆ ಹೊಂದಿಕೊಂಡಿರುವದು. ಆ ಹಳ್ಳಿಯನ್ನು ಉದ್ಧಾರ ಮಾಡಿದವೆಂದರೆ ದೇಶೋದ್ಧಾರವಾಗುವುದರಲ್ಲಿ ಸಂಶಯವಿಲ್ಲವೆಂಬ ಅವರ ಹೇಳಿಕೆಯಲ್ಲಿ ಹುರುಳಿದೆ ಅವರೇ ಇಡೀ ಜಗತ್ತಿನ ಕಣ್ಣೆಂದು ಹೇಳಬಹುದು ಸಮಸ್ತ ಭಾರತದ ಸುಖದುಃಖಗಳನ್ನರಿವ ಶಕ್ತಿಯೂ ಅದನ್ನು ಪರಿಹರಿಸುವ ಶಕ್ತಿಯೂ ಅವರಲ್ಲಿ ತುಂಬಿತುಳುಕಾಡುತ್ತಿದೆ ಬ್ರಹ್ಮಚರ್ಯ ವ್ರತವನ್ನು ಪಾಲಿಸಿ ದೇಶಕ್ಕೆ ಅದರಿಂದ ಹಿತಲಭಿಸುವದೆಂಬುದನ್ನು ಪ್ರತ್ಯಕ್ಷಪ್ರಮಾಣವಾಗಿ ತೋರಿಸಿದರು ಅವರ ಪ್ರತಿಭೆಯನ್ನು ವರ್ಣಿಸಲು ನಾನು ಅಶಕ್ತನು ಯಾರು ಅವರ ಬಳಿಯಲ್ಲಿದ್ದರೊ, ಅವರು ಅವರಿಂದ ಆಕರ್ಷಿಸಲ್ಪಡುತ್ತಾರೆ ಜನಭೀಡತೆಯಲ್ಲಿ ಅವರ ಮಾತು ವೇದವಾಕ್ಯ. ಹಿಂದೂದೇಶವನ್ನೇಕೆ ಇಡೀ ಜಗತ್ತನ್ನೆ ತನ್ನ ಸೌಜನ್ಯದಿಂದ ಅಂಕಿತದಲ್ಲಿಟ್ಟುಕೊಂಡಿದ್ದಾರೆ

ಅಮೃತಬಜಾರ್ ಪತ್ರಿಕೆಯ ಸಂಪಾದಕರಾದ ದಿವಂಗತ ಶ್ರೀ ಮೋತಿಲಾಲ ಘೋಷರು ಮೃತ್ಯುಮುಖದಲ್ಲಿರುವಾಗ ಗಾಂಧಿಜೀಯವರು ಅವರನ್ನು ಕಾಣಲು ಹೋದರು ಸಂಗಡ ಜವಾಹರಲಾಲರೂ ತೆರಳಿದರು. ಮೋತಿಲಾಲ ಘೋಷರು ಗಾಂಧಿಯವರನ್ನು ಕಂಡು ತನ್ನ ಕಾರ್ಯದಲ್ಲಿ ಯಶಸ್ವಿಯಾಗೆಂದು ಹರಸಿದರು. ಅಲ್ಲದೆ ನಾನಿನ್ನು ಹೇಗಾದರೂ ಈ ಲೋಕದಿಂದ ಹೋಗುತ್ತಿರುವೆನು. ಯಾವ ಪ್ರದೇಶಕ್ಕೆ ತೆರಳುವನೆಂಬ ಭಾವನೆ ಇಲ್ಲವಾದರೂ ಬ್ರಿಟಿಷರ ಆಳ್ವಿಕೆ ಇಲ್ಲದ ಪ್ರದೇಶವನ್ನು ಸೇರುವನೆಂಬ ಸಂತೋಷವು ನನ್ನಲ್ಲಿ ಉಕ್ಕೇರಿ ಬರುತ್ತಿದೆ. ಎಂದು ಪುಲಕಿತರಾಗಿ ನುಡಿದರು

ಜನಬ್ ಎಂ. ಎ ಜಿನ್ನಾರ ವಿಷಯವೂ ಕೆಲವು ಕೌತುಕಮಯ ವಿಷಯಗಳನ್ನು ಒರೆದಿರುತ್ತಾರೆ.

ನವೀನ ಕಾಂಗ್ರೆಸ್ಸಿನ ಶಿಬಂಧಿಗಳು ಇವರಿಗೆ ಸೇರುತ್ತಿರಲಿಲ್ಲ ಖದ್ದರ ಉಡುಪನ್ನು ಧರಿಸಿದ್ದವರನ್ನು ಕಂಡಕೂಡಲೆ ಇವರ ಉಸಿರು ಬಂದಾಗುತ್ತಿದ್ದಿತು ಹಿಂದೀಯರು ಎಬ್ಬಿಸಿದ ಚಳವಳವು ಅವರಿಗೊಂದು ಅಪಹಾಸ್ಯವಾಗಿ ಕಂಡುಬರುತ್ತಿತ್ತು ಅವರ ಮತ್ತು ಹಿಂದೂಗಳ ಅಭಿಪ್ರಾಯಗಳಲ್ಲಿ ಅಜಗಜಾಂತರ ವ್ಯತ್ಯಾಸಗಳು ತಲೆದೋರಿದುವು. ಒಂದು ಸಲ ಉತ್ತೇಜನಪೂರ್ವಕವಾಗಿ ಅವರು ನುಡಿದುದೇನಂದರೆ ಕಾಂಗ್ರೆಸ್ಸಿಗೆ ಸದಸ್ಯರನ್ನು ಭರ್ತಿಮಾಡುವಿರಾದರೆ ಮೆಟ್ರಿಕ್ ಪಾಸಾದವರನ್ನೆ ಹೆಕ್ಕಿ ತೆಗೆಯಿರಿ ಎಂದು. ಅವರು ಮನಃಪೂರ್ವಕವಾಗಿ ಇದನ್ನು ಹೇಳಿದರೋ ಅಥವಾ ಬೇರಾವ ನಿರ್ಧಿಷ್ಟ ಕಾರಣಗಳಿಂದ ನುಡಿದರೊ ಎಂಬುದನ್ನು ಇಷ್ಟರವರೇಗೆ ಸರಿಯಾಗಿ ನನಗೆ ತಿಳಿಯಲಾಗಲಿಲ್ಲ. ಬಹುಶಃ ಜನತೆಯಲ್ಲಿ ಸಮಾನತ್ವವನ್ನು ಉದ್ದೀಪನಗೊಳಿಸಲೋಸುಗವಾಗಿ ಹೀಗೆ ಅಂದರೆಂದು ಕಾಣುತ್ತದೆ ಆದ್ದರಿಂದ ಅವರು ಕಾಂಗ್ರೆಸನ್ನು ಬಿಟ್ಟು ಒಬ್ಬಂಟಿಗರಾಗಿ ಕೆಲಸ ಮಾಡ ತೊಡಗಿದರು ಆದರೆ ಕಡೆಗೆ ಕೋಮುವಾರು ಪ್ರಶ್ನೆಯೇಳುವಾಗ ಇವರು ಎದೆತಟ್ಟಿ ಮುಂದೆ ಬಂದುದು ನಮಗೆಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು ಭಾರತ ಮಾತೆಯ ಅದೃಷ್ಟವು ಕೊಂಚ ಉದ್ಧಾರಾವಸ್ಥೆಯಲಿದೆ ಎಂದು ತುಸು ಸಂತೋಷವಾಯಿತು.

ಗೊಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊಡ್ರೆಜ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪ್ರಜ್ಞರೂ, ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದೊಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನುಗಳನ್ನು ಆಮದು ಮಾಡಲುಪಕ್ರಮಿಸಿದರು

ಗೊಡ್ರೆಜ್

ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಟೆಂಪಲ್ ಒಫ್ ಕೊಮರ್ಸ್ ಇದಕ್ಕೂ ಜರ್ಮನ್ ಬಬ್ಲಿಕ್ ಲಬೊರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ,

ಮೈಕೊಸ್ಕೋಪಿ ಎಂಡ್ ಬೆಕ್ಟೀರಿಯೋಲೊಜಿ ಇದಕ್ಕೂ ರಸಾಯನಶಾಸ್ತ್ರಿಗಳಾಗಿರುವ

ಡಾ| ಜಿಫ್ರೇಡ್ಸ್ ಎಂಬವರು:—"ನಾನು ಗೊಡ್ರೆಜ್ ವೆಜಿಟೇಬಲ್ ಟ್ವೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ ಅಭಿಪ್ರಾಯದಂತೆ ಅವುಗಳು ಸ್ಟೆಫ್ಲೋಕೊಕಸ್ ಮತ್ತು ಸ್ಟ್ರೆಪ್ಟೊಕಕಸ್ ಎಂಬ ಕ್ರಿಮಿಗಳನ್ನೂ ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯುದೆ-ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ" ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ನ್ ಎಂಬವರು:—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧೆ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಿಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ" ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕ್ಸನ್‌ಸನ್‌ರವರು:—"ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ" ಎಂದರು.

ಸಾಹಿತ್ಯಸಭೆಯ ಮಾಜಿ ಅಧ್ಯಕ್ಷರಾದ

ಡಾ॥ ಎಂ ಎ. ಅನ್ಸಾರಿ, ಎಂ. ಡಿ. ಎಂ. ಎಸ್.**ರವರು:**—"ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ. ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ. ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ. ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ" ಎಂದಿರುವರು.

ಫೆಕ್ಟರಿ:—**ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಲ್‌ಹೌಸಿ, ರೋಡ್, ಮುಂಬಾಯಿ.

ಸೋಲ್ ಏಜಂಟರು:—**ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

ಶಾಹಿದ್‌ಗಂಜ್ ದಾವೆಯು ತೀರ್ಮಾನವಾಯಿತು.

೧೭೬೨ರಿಂದ ಅದು ಮಸೀದಿಯಾಗಿಲ್ಲವೆಂದು ನ್ಯಾಯಾಧೀಶರ ತೀರ್ಮಾನ.

೧೭೬೨ರಿಂದ ಶಾಹಿದ್‌ಗಂಜ್ ಮಸೀದಿಯನ್ನು ಮಸೀದಿಯನ್ನಾಗಿ ಉಪಯೋಗಿಸುತ್ತಿರಲಿಲ್ಲವೆಂದೂ, ಆದ್ದರಿಂದ ಅದರಲ್ಲಿ ಮುಸ್ಲಿಮರಿಗೆ ಪ್ರಾರ್ಥನೆ ನಡೆಯಿಸಲು ಅವಕಾಶಮಾಡಿಕೊಡಬೇಕೆಂದೂ ತಂದ ವ್ಯಾಜ್ಯವನ್ನು ಸೆಷನ್ಸ್ ಜಡ್ಜರು, ಡಿಸ್‌ಮಿಸ್ ಮಾಡಿರುವರು.

ಗುರುದ್ವಾರ ನ್ಯಾಯಮಂಡಳದ ತೀರ್ಪಿನ ಅನುಸಾರವಾಗಿಯೂ, ಗುರುದ್ವಾರ ಕಾನೂನಿನ ನಿಯಮಗಳ ಪ್ರಕಾರವಾಗಿಯೂ ಈ ದಾವೆಗೆ ಅವಕಾಶವೇ ಇಲ್ಲವೆಂದು ಜಡ್ಜರು ಅಭಿಪ್ರಾಯಪಟ್ಟಿರುವರು.

ಲಾಹೋರಿನಲ್ಲಿ ಇನ್ನೊಂದು ಗಲಭೆಯೇ?

ಕೋರ್ಟಿನ ತೀರ್ಪಿನ ಪರಿಣಾಮ.

ಮೇಲಿನ ರೀತಿಯ ಕೋರ್ಟಿನ ತೀರ್ಪು ಹೊರಬಲು, ಲಾಹೋರಿನ ಕೋಮುವಾರು ಪರಿಸ್ಥಿತಿಯು, ಇನ್ನೂ ವೃದ್ಧಿಹೊಂದಿರುತ್ತದೆ

ಪೋಲೀಸ್ ಇಲಾಖೆಯವರು, ಗಲಭೆ ಸಂದರ್ಭದಲ್ಲಿ ಇಡೀ ಪೋಲೀಸ ದಳವನ್ನೆ ಸಿದ್ಧಪಡಿಸಿದ್ದರು ಸೈನಿಕರ ಸಹಾಯ ಪಡೆಯಲೆಂದು ಕರೆಯಲಾಗಿದೆ. ಕೋರ್ಟಿನ ಪಕ್ಷವನ್ನು ಬಹಳ ಜಾಗ್ರತೆಯಿಂದಲೂ ಎಚ್ಚರಿಕೆಯಿಂದಲೂ ಕಾಯಲ್ಪಟ್ಟಿತು

ಅಜ್ಮೀರ್ ಹಿಂದೂ ಮುಸ್ಲಿಮ ಕಲಹ.

ಒಂದು ಅಂಗಡಿಯ ಒಬ್ಬ ಹಿಂದೂ ನೌಕರನಿಗೂ ಮುಸ್ಲಿಂ ನೌಕರನಿಗೂ ಉಂಟಾದ ಜಗಳವು ಕೋಮುವಾರು ಕಲಹದಲ್ಲಿ ಪರಿಣಮಿಸಿದೆ ಈ ಜಗಳದ ನಿಮಿತ್ತ ಹಿಂದೂ ಮುಸ್ಲಿಂ ಜನರು ಗುಂಪು ಸೇರಿ ಜಗಳವಾಡಲಾರಂಭಿಸಿದರು ಅನೇಕರಿಗೆ ಗಾಯಗಳಾಗಿವೆ. ಇದನ್ನು ಸಮಾಧಾನಿಸಲು ಬಂದ ಯುರೋಪಿಯನ್ ಅಧಿಕಾರಿಗೂ ಏಟುಗಳು ಬಿದ್ದಿವೆ ಪೋಲೀಸ ತನಿಖೆಯು ನಡೆಯುತ್ತದೆ

ಪುತ್ರನೆಂದು ಮೋಸಮಾಡಿದ

ಕಾಂಗೇಲೀ ಎಂಬಲ್ಲಿನ ಅಕುರ್‌ಶಕೂರಿನಲ್ಲಿ, ಧನಾಢ್ಯಳಾದ ಒಬ್ಬ ವಿಧವೆಯನ್ನು ಓರ್ವ ಸಾಧುವು ತಾನು ಆಕೆಯ ಮಗನೆಂದು ಮೋಸಪಡಿಸಿದ ವಾರ್ತೆಯು ಬಂದಿರುತ್ತದೆ

ಆ ವಿಧವೆಯ ಮಗನು, ಕೆಲ ಸಮಯದ ಹಿಂದೆ ಮನೆಗಳನ್ನು ತ್ಯಜಿಸಿ ಎಲ್ಲಿಗೋ ಪಲಾಯನಮಾಡಿದ್ದನು ಬಹಳ ಸಮಯ ವಿಧವೆ ಮಗನನ್ನು ಕಳಕೊಂಡ ವಿಚಾರದಲ್ಲಿ ಬಹಳ ವ್ಯಥೆಯಿಂದ ದಿವಸಗಳನ್ನು ಕಳೆದಳು ಒಂದಾನೊಂದು ದಿವಸ ಮೇಲಿನ ಸಾಧುವು ಅಲ್ಲಿಗೆ ಬರುವವನಾದ. ವಿಧವೆಯೊಡನೆ ತಾನೆ ಆಕೆಯ ಮಗನೆಂದು ಹೇಳಿದ. ಅದಳನ್ನು ಆ ವಿಚಾರದಲ್ಲಿ, ಕೆಲ್ಲ ಸಾಕ್ಷಿಗಳನ್ನು ರುಜುಪಡಿಸಿ ನಂಬಿಸಿದ ಮೋಸವನ್ನು ತಿಳಿಯದ ವಿಧವೆಯು ಈತನನ್ನು ತನ್ನ ಮಗನಾಗಿ ಸ್ವೀಕರಿಸಿದಳು ತನ್ನ ದುಃಖವನ್ನು ತ್ಯಜಿಸಿ, ಸಂತೋಷ ಪಡಹತ್ತಿದಳು ಸ್ವಲ್ಪ ಸಮಯದ ನಂತರ ಅಲ್ಲಿ ಶ್ರೀಮಂತ ಪಟೇಲರೊಬ್ಬರ ಮಗಳನ್ನು ತಂದು, ಈತನಿಗೆ ವಿವಾಹ ಮಾಡಿದಳು ಹೀಗೆ ಸುಖದಿಂದ ಇವರು ವಾಸಮಾಡುತ್ತಿದ್ದರು ಆದರೆ ಒಂದು ದಿವಸ ಈತನ ಕಪಟ ಮಗನಿಗೆ ಒಂದು ಕಾಗದ ಬಂತು ಅದು ಆ ಸಾಧುವಿನ ಅಣ್ಣನಿಂದಾಗಿತ್ತು, ಈ ಕಾಗದವು ವಿಧವೆಯ ಕೈಗೆ ಬಿತ್ತು, ಗುಟ್ಟು ರಟ್ಟಾಯಿತು. ಈಗ ಸಾಧುವಿನ ಮೇಲೆ ದಸ್ತಗಿರಿ ನಡೆಯುತ್ತದೆ

ವಿಮಾನ ಅಪಘಾತ.

ಬ್ರಿಟಿಷ ವಿಮಾನ ಪಡೆಯ ಎರಡು ವಿಮಾನಗಳು ಪೆಸಾರ್‌ಗ್ ಸಮೀಪದಲ್ಲಿ ಡಿಕ್ಕಿಹೊಡೆದ ಪರಿಣಾಮವಾಗಿ, ಅದರಲ್ಲಿದ್ದ ಜನರು ಮೃತರಾಗಿರುವರು. ವಿಮಾನಗಳಿಗೆ ಏನೂ ಒಂದಿಷ್ಟು ಜಖಮ್ ಆಗದಿದ್ದರೂ ಅದರಲ್ಲಿರುವ ವ್ಯಕ್ತಿಗಳು ಮೃತರಾದದ್ದು ಆಶ್ಚರ್ಯಕರವಾಗಿದೆ.

ಪ್ರೌಢ ವಿವಾಹದಿಂದುಂಟಾಗುವ ಹಾನಿಗಳು.

ಮಾನಸಿಕ ಹಾಗೂ ಶಾರೀರಿಕ ದೃಷ್ಟಿಯಿಂದ ದುರ್ಬಲರಾದ ಮಕ್ಕಳ ಜನನವಾಗುವುದಕ್ಕೆ ಹಿಂದೂದೇಶದಲ್ಲಿ ಈಗ ಪ್ರಚಾರದಲ್ಲಿರುವ (ಶಾರದಾ ಬಿಲ್ಲು ಇವುಗಳ ದೆಸೆಯಿಂದಾಗಿ ಹಿಂದೆ ಹೋಗುತ್ತಲಿವೆ) ಬಾಲ್ಯವಿವಾಹವು ಕಾರಣವೆಂದು ಪ್ರಸಿದ್ಧ ಪುರುಷರು ಹೇಳುತ್ತಿರುವುದನ್ನು ಕೇಳಬಹುದು. ಅವರೀ ಮಾತುಗಳಲ್ಲಿ ಸತ್ಯಾಂಶವೆಷ್ಟಿದೆಯೆಂಬುದನ್ನು ಪರಿಶೀಲಿಸಿ ನೋಡಬೇಕಲ್ಲದೆ, ದೊಡ್ಡ ಮನುಷ್ಯರು ಹೇಳುತ್ತಾರೆಂದು ಕೇವಲ ಅಜ್ಞರಂತೆ ಅನುಸರಿಸುತ್ತ ಬರುವುದರಲ್ಲಿ ಅರ್ಥವೇ ಇಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ.

ಹಿಂದೂದೇಶದಲ್ಲಿ ಪ್ರಾರಂಭದಿಂದಲೂ ಪ್ರೌಢ ವಿವಾಹವು ಪ್ರಚಾರದಲ್ಲಿತ್ತೆಂದು ಅನಂತರ ಮೊಗಲರ ದಾಳಿಯಿಂದಾಗಿ, ಮಾನಿನಿಯರ ಮಾನರಕ್ಷಣಾರ್ಥವಾಗಿ ಎಳೇ ಪ್ರಾಯದಲ್ಲಿ ಹುಡುಗಿಯರನ್ನು ಯೋಗ್ಯನಾದವನಿಗೆ ಮದುವೆಮಾಡಿಕೊಡುವುದು ಪ್ರಚಾರಕ್ಕೆ ಬಂತೆಂತಲೂ ಜನರಾಡುವುದನ್ನು ನಾವು ಕೇಳಬಹುದು ಆದರೆ ನಿಜವಾದ ಸಂಗತಿಯು ಹೀಗಿರುವುದಿಲ್ಲ ನಾವು ಪ್ರೌಢ ವಿವಾಹವು ಆಗಿನ ಕಾಲದಲ್ಲೂ ಪ್ರಚಾರದಲ್ಲಿದ್ದಿಲ್ಲವೆಂದು ನುಡಿದೊಡನೆ "ಚಾರುವಾಕರು" ಪ್ರಚಾರದಲ್ಲಿತ್ತು ಎಂದು ಮುಂತಾಗಿ ಹೇಳದೆ ಬಿಡಲಾರರು ಸ್ವಯಂವರು ಇತ್ಯಾದಿಗಳು ಆಗುತ್ತಿದ್ದವು ಹೆಣ್ಣುಮಗಳು ರಾಜಸಭೆಯಲ್ಲಿ ತನಗಿಷ್ಟನಾದ ರಾಜಪುತ್ರನನ್ನು ಪತಿಯೆಂದು ಸ್ವೀಕರಿಸುತ್ತಿದ್ದಳು ಎಂದು ಮುಂತಾಗಿ ಹೇಳದೆ ಇರಲಾರರು ಅಂಥ ಹಟವಾದಿಗಳು ಇಷ್ಟನ್ನು ಮಾತ್ರ ಹೇಳಲು ಸಮರ್ಥರು ಆಗಿನ ಕಾಲದ ರಾಜರು ಮಹಾ ಅಭಿಮಾನಿಗಳೂ ಸತ್ವಶಾಲಿಗಳೂ ಆಗಿದ್ದರು ಪವಿತ್ರ ಕುಲಗಳಲ್ಲಿ ನಮ್ಮ ಉದ್ಭವವಾಗಿದೆ ಎಂಬ ಹೆಮ್ಮೆ ಹೆಚ್ಚು ಕಡಮೆ ಎಲ್ಲರಲ್ಲೂ ನೆಲಸಿತ್ತು ಹೀಗೆ ಹೆಮ್ಮೆಯಿಂದ ಕೂಡಿದ ರಾಜರ ಹೆಣ್ಣುಮಕ್ಕಳಿಗೆ ವಿವಾಹವು ಬೇಗನೇ ಆಗುವುದು ಅಸಂಭವವೇ ಸರಿ. ಏಕೆಂದರೆ ಹೆಣ್ಣುಮಗಳ ತಂದೆತಾಯಿಗಳು ಮಗಳ ಕೈಹಿಡಿಯಲು ಮುಂದೆ ಬರುತ್ತಿರುವ ರಾಜಕುಮಾರರಲ್ಲಿ ಹೆಚ್ಚು ಜನರನ್ನು ನೀವು ನಮ್ಮ ಸರಿಸಮಾನರಲ್ಲ ನನ್ನ ಕುವರಿಗೆ ಅನುರೂಪರಾದ ವರರಲ್ಲವೆಂದ ಮುಂತಾಗಿ ತಳ್ಳಿಬಿಡುತ್ತಿದ್ದರು ಹೀಗಾಗಿ ತಾರುಣ್ಯದಲ್ಲಿ ಕಾಲಿಟ್ಟಮೇಲೆಯೆ ಅವರ ವಿವಾಹವಾಗುತ್ತಿತ್ತು ಹೀಗೆ ಆಗದೆ ಹೋದರೆ ಸ್ವಯಂವರವನ್ನು ನೆರವೇರಿಸಿ ಮಗಳನ್ನು ದಾನಮಾಡುತ್ತಿದ್ದರೇ ಹೊರತು ಪುರಜನ್ನು ಸಾಧವಯಸ್ಕೆಯು ಗುಣ ತನಗೆ ಇಷ್ಟಕೊಳ್ಳುವ ಆಕೆ ಅಥವಾ ಆಕೆ ರಿಂದ ಅಲ್ಲ ರಾಜರನ್ನು ತೊರೆದು ಉಳಿದ ಜನರಲ್ಲಿ ಬಾಲ್ಯ ವಿವಾಹವೇ ಪ್ರಚಾರದಲ್ಲಿತ್ತು ಬಾಲ್ಯ ವಿವಾಹವು ಪ್ರಚಾರದಲ್ಲಿ ಬರುವದಕ್ಕೆ ಇಲ್ಲಿನ ವಾತಾವರಣವೂ ನೈಸರ್ಗಿಕ ಗುಣಗಳೂ ಹವಾಮಾನವೂ ಕಾರಣವಾಗಿದೆ ಇಲ್ಲಿ ಸೂರ್ಯನ ಪ್ರತಾಪವು ಅತೀವ್ರವಾದ ಬಹಳ ಪ್ರಖರವಾಗಿದೆ ಆದಕಾರಣ, ತರುಣತರುಣಿಯರಲ್ಲಿ ವಿಷಯಲಾಲಸೆಗಳು ಚಿಕ್ಕ ಪ್ರಾಯದಲ್ಲೇ ಮೊಳೆಯುತ್ತವೆ ಐರೋಪ್ಯ ಖಂಡದ ಹೆಚ್ಚಿನವುಗಳು ಶೀತರಾಜ್ಯಗಳಾದ ಕಾರಣ ಅಲ್ಲಿ ವಿಷಯಲಾಲಸೆಗಳು, ನಮ್ಮ ದೇಶದಲ್ಲಿ ಉಂಟಾಗುವ ಪ್ರಾಯದಲ್ಲಿ ಉಂಟಾಗುವುದಿಲ್ಲ ಅಲ್ಲಿ ತರುಣಿಯರು ೨೦ ವರ್ಷಗಳನ್ನು ದಾಟಿದ ನಂತರವೇ ಮದುವೆಯಾಗುತ್ತಾರೆಂದು ಹೇಳಿ ಇಲ್ಲಿನ ಎಲ್ಲ ತರುಣಿಯರೂ ಅವರನ್ನು ಅನುಸರಿಸಿದರೆ ಹಿಂದೂ ದೇಶದ ಅವಸ್ಥೆಯು ವಿಪರೀತಾವಸ್ಥೆಗೆ ಮುಟ್ಟುವುದರಲ್ಲಿ ಎಳ್ಳಷ್ಟು ಸಂಶಯವಿಲ್ಲ ದುರಾಚಾರಗಳು ಅನೀತಿಯ ವ್ಯವಹಾರಗಳು, ಭ್ರೂಣಹತ್ಯೆ ಬಾಲಹತ್ಯೆಗಳು ಬಳಕೆಗೆ ಬಂದು, ಪಾತಿವ್ರತ್ಯದ ಪತನವಾಗದೆ ಇರದು ಹಿಂದೂದೇಶದ ಮಹಿಳೆಯರನ್ನು ಅವರ ಪತಿಭಕ್ತಿ, ಪಾತಿವ್ರತ್ಯ ಪ್ರಭಾವಕ್ಕಾಗಿ ಬೇರೆ ಇತರ ಜನಾಂಗದವರು ಅವರಿಗೆ ಮಾನ್ಯತೆಯನ್ನು ಸಲ್ಲಿಸುತ್ತಾರೆ ಅದನ್ನು ಕಳಕೊಂಡರೆಂದರೆ, ಹಿಂದೂದೇಶದ ಭವಿತವ್ಯವು ಭಯಾನಕ ಸ್ಥಿತಿಗೆ ತಲಪುವುದರಲ್ಲಿ ಆಶ್ಚರ್ಯವೇನೂ ಕಂಡುಬರಲಾರದು ಬೇರೆ ದೇಶದ ಸ್ತ್ರೀಯರು ಮಾಡುತ್ತಾರೆಂದು ನಮ್ಮ ನಾಡಿನ ನಾರಿಯರೂ ಅದನ್ನು ಬಳಕೆಗೆ ತರುವುದರಲ್ಲಿ ಉದ್ಯುಕ್ತರಾಗುವುದು 'ಹುಲಿಯ ಬಣ್ಣಕ್ಕೆ ಸೋತು ನರಿಯು ಮೈಸುಟ್ಟುಕೊಂಡಂತೆ'ಯಲ್ಲದೆ ಮತ್ತೇನೂ ಅಲ್ಲ.

"ಬೆಳೆಯ ಸಿರಿ ಮೊಳಕೆಯಲ್ಲೇ ಕಾಣುತ್ತದೆ"ದೊಂದು ನಾಡಿನವರ ಮಾತು ಪ್ರೌಢವಿದ್ಯಾಲಯಗಳನ್ನು ಹೊಕ್ಕು ಪ್ರಪಂಚದ ಜ್ಞಾನವನ್ನು ಚೆನ್ನಾಗಿ ತಿಳಕೊಂಡು, ಪ್ರೌಢ ಪ್ರಾಯದಲ್ಲಿ ಪತಿಗೃಹವನ್ನು ಪ್ರವೇಶಿಸಿದ ಮಹಿಳೆಯರ ನಡವಳಿಕೆ ಹಿಂದೂದೇಶಕ್ಕೆ ಪ್ರೌಢವಿವಾಹಕ್ಕೆ

ಪ್ರೋತ್ಸಾಹಕೊಟ್ಟಲ್ಲಿ ಅಗಣಿತ ಅನಾಹುತಗಳನ್ನು ಸೂಚಿಸುತ್ತವೆ. ಪ್ರೌಢವಿದ್ಯಾಲಯಗಳನ್ನು ಪ್ರವೇಶಿಸುವ ಅವಿವಾಹಿತ ಸ್ತ್ರೀಯರ ನಡತೆಯು ಅಷ್ಟು ನಾಚಿಕೆಗಾಗಿರುವುದಿಲ್ಲ. ಕಾಲೇಜುಗಳಲ್ಲಿ ಅವರು ಪುರುಷರೊಡನೆ ನಡಕೊಳ್ಳುವ ರೀತಿಯು, ಹೊರಗಿನ ಸುಶಿಕ್ಷಿತ ಹಾಗೂ ಅಶಿಕ್ಷಿತ ಜನರು ಅವರ ವಿಷಯವಾಗಿ ಹರಡಿಸುವ ಕಟ್ಟುಕಥೆಗಳು ಕೆಲವು ವೇಳೆ ನಿಜವಾದ ಕಥೆಗಳೂ ಅವರು ಅಷ್ಟು ಯೋಗ್ಯ ನಡೆಯುವರಲ್ಲವೆಂಬುದನ್ನು ದೃಢೀಕರಿಸುತ್ತವೆ ಹಲಕೆಲವು ವೇಳೆಗಳಲ್ಲಿ ಅವರ ಮನಸ್ಸು ತರಗತಿಯ ಅಥವಾ ಶಾಲೆಯ ಹುಡುಗನೊಬ್ಬನ ಮೇಲೆ ನೆಡುವುದುಂಟು. ಅಂಥಾ ಸ್ತ್ರೀಯನ್ನು ತಾಯಿತಂದೆಗಳು ಮುಂದೆ ಯಾವನೊಬ್ಬನಿಗೆ ಮದುವೆಮಾಡಿಕೊಡುತ್ತಾರೆಂದೂ ಹಿಸೋಣ ಅವಳ ಮನಸ್ಸು ಬೇರೊಬ್ಬನಲ್ಲಿ ನಟ್ಟಿರುವುದರಿಂದಾದ ಕಾರಣ ಅವಳು ಶಾಸ್ತ್ರೋಕ್ತರೀತಿಯಲ್ಲಿ ಮದುವೆಯಾದವನನ್ನು ತ್ಯಜಿಸಿ ಮನಸಾವರಿಸಿದ್ದವನಲ್ಲಿಗೆ ಓಡಿಹೋಗಿ ಉಭಯಕುಲಕ್ಕೆ ಕಲಂಕವನ್ನು ತರುವವಳಾಗುವಳು ಎಂಬುದು ಸತ್ಯವಾದ ಮಾತಷ್ಟೇ! ಅಂಥಾ ಸ್ತ್ರೀಯರ ಕೆಟ್ಟ ನಡತೆಯಿಂದಾಗಿ ಪ್ರೌಢ ಅವಿವಾಹಿತೆಯು, ಒಬ್ಬನಲ್ಲಿ ನೇಹ ಮತ್ತೊಬ್ಬನನ್ನು ಪ್ರೀತಿಸಿ ಇನ್ನೊಬ್ಬನೊಡನೆ ರಮಿಸತಕ್ಕವರೆಂಬ ಆರೋಪವು ಬರುವುದು. ಹಿಂದಿನ ಸ್ತ್ರೀಯರಂತೆ ಈಗಿನವರು ಇಂದ್ರಿಯಗಳನ್ನು ಜಯಿಸಿದವರಲ್ಲ ತಾರುಣ್ಯದಲ್ಲಿ ಕಾಮವಿಕಾರಗಳು ಹುಟ್ಟಿರುತ್ತವೆ ಮನಸ್ಸಿನಲ್ಲಿ ಕ್ರಾಂತಿಯನ್ನೆಬ್ಬಿಸುವ ಈ ವಿಕಾರಗಳನ್ನು ತಡಕೊಳ್ಳಲಾರದೆ ಅನೀತಿಯ ವ್ಯವಹಾರಗಳಲ್ಲಿ ಉದ್ಯುಕ್ತರಾಗಿ ಉಭಯಸಂಕಟದಲ್ಲಿ ಬೀಳುವುದಿದ್ದೆ, ಬಿದಿದ್ದಾರೆ

ಮೇಲಿನದನ್ನು ಪುರುಷರ ಕುರಿತಾಗಿಯೂ ಹೇಳಬಹುದು ಮೊಳಕೆ ರೋಗಂಗಳನ್ನು ತಡೆದು ಓಡಿಯಾಡಿದವರಾಗಿ ಹೇಯವಾದ ಕಾರ್ಯಗಳಲ್ಲಿ ತೊಡಗಿ ತೇಜಸ್ಸನ್ನೂ ಶಕ್ತಿಯನ್ನೂ ಬುದ್ಧಿಯನ್ನೂ ಅಸಂಖ್ಯಾತ ತರುಣರು ಕಳಕೊಂಡಿರುವರು. ವಿಕೃತ ವೀರ್ಯರೂ ನಿಸ್ತೇಜರೂ ತರುಣರೂ ಆಗುವುದಕ್ಕೆ ಇದು ಕಾರಣ ಬಾಲ್ಯ ವಿವಾಹದಿಂದಾಗಿ ಉಂಟಾಗತಕ್ಕ ಹಾನಿಗಿಂತ ಈ ರೀತಿಯಿಂದ ಹಾಳಾಗುವುದು ವಿಷಾದಕರವಾದುದೇ! ಹೆಂಗಸಿಯರನ್ನು ನಿರ್ವೀರ್ಯರಾದ ತರುಣರು ಸಮಾಧಾನಪಡಿಸಲಾರದೆ ಹೋಗುವರು ಇದರಿಂದಾಗಿ ಗಂಡಹೆಂಡಿರೊಳಗೆ ವೈಮನಸ್ಸುಂಟಾಗುವುದು ಕಾಮಬಾಧೆಯನ್ನು ತಣಿಸಿಕೊಳ್ಳುವುದಕ್ಕಾಗಿ ವ್ಯಾಭಿಚಾರಮಾಡುವ ಸಂಭವವೂ ಇದೆ ಇವೆಲ್ಲವೂ ಪ್ರೌಢ ವಿವಾಹದಿಂದಾಗಿ ಬಂದ ಅನಾಹುತಗಳು. ಪ್ರೌಢವಿವಾಹದಿಂದಾಗಿ ಬಂದ ಅನಾಹುತಗಳೇ ಸಾಕು (ವಿವಾಹ ವಿಚ್ಛೇದ) ಇನ್ನು ಅವು ಬರುವುದೇ ಬೇಡ

ಅನುಸರಿಸುವುದಕ್ಕೆ ನಿಜವು ಎಚ್ಚತ್ತಿರಬೇಕು ಅಂತೆಯೇ ಸತಿಪತಿಯರೊಳಗೆ ಬೇಧಭಾವವು ತಲೆದೋರದಿರಬೇಕಾದರೆ ಪ್ರೇಮಮಯ ಜೀವನವು ಕಾಣಬೇಕಾದರೆ ಹೆಂಗಳೆಯರನ್ನು ಎಳೆಯ ಪ್ರಾಯದಲ್ಲೇ ವಿವಾಹವೆಂಬ ಜೀವನದಿಂದ ಜೋಡಿಸಬೇಕು.

ಬಿ. ಕೆ. ಬಿ

"ಗೌಡ ಸಾರಸ್ವತ ಬ್ರಾಹ್ಮಣ ಸ್ಕೊಲರ್‌ಶಿಪ್ ಲೀಗ್" ಮುಂಬಾಯಿ.

ಈ ಮೇಲಿನ ಸಂಸ್ಥೆಯಿಂದ ಸಹಾಯಪಡಬಿಚ್ಛಿಸುವ ಕಾರವಾರ ಮತ್ತು ದಕ್ಷಿಣಕನ್ನಡ ಜಿಲ್ಲೆಯ ಗೌಡ ಸಾರಸ್ವತ ವಿದ್ಯಾರ್ಥಿಗಳು, ತಾ ೩೦—೬—೩೬ರೊಳಗಾಗಿ C/o ವಿ ಸಾರಸ್ವತ ಬ್ರಾಹ್ಮಣ ಸಮಾಜ ೩೬೪ ಚರ್ನಿರೋಡ್ ಗಿರಗಾಂವ ಮುಂಬಾಯಿ ಈ ಪತ್ತೆಯ ಮೇಲೆ ಸಂಸ್ಥೆಯ ಕಾರ್ಯದರ್ಶಿಗಳ ಕಡೆಗೆ ಅರ್ಜಿ ಮಾಡಬೇಕು ಅರ್ಜಿಯ ಛಾಪಿ ಫೋರ್ಮುಗಳು ಕಾರ್ಯದರ್ಶಿಗಳ ಕಡೆಗೆ ಇಲ್ಲವೆ ಅಲ್ಲಲ್ಲಿಯ ಸ್ಥಾನಿಕ ಪ್ರತಿನಿಧಿಗಳ ಕಡೆಗೆ ದೊರಕುತ್ತವೆ ಹ್ಯಾಸ್ಕೂಲಿನಲ್ಲಿ ಕಲಿಯುವವರಿಗೆ ಮಾತ್ರ ಸಹಾಯಮಾಡಲಾಗುತ್ತದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಪದ್ಮಸಾಲಿಗರ ಸಾಮಾಜಿಕ ಸಂಘ, ಮುಂಬಾಯಿ.

ಈ ಮೇಲಿನ ಸಂಘವು ಕಳೆದ ಜನವರಿ ತಿಂಗಳ ತಾರೀಖಿನಲ್ಲಿ ಹಲವು ಸ್ವಜಾತಿ ಬಾಂಧವರಿಂದ ಸ್ಥಾಪಿಸಲ್ಪಟ್ಟಿತು ಪದ್ಮಸಾಲಿಗರ ಸಮಾಜದವರಲ್ಲಿ ವಿದ್ಯಾಭಿರುಚಿಯನ್ನು ಮತ್ತು ಸಮಾಜದ ಮುಂದೇಳಿಗೆಗಾಗಿ ಪ್ರಯತ್ನಿಸುವುದೇ ಈ ಸಂಘದ ಮುಖ್ಯ ಪ್ರಥಮ ಉದ್ದೇಶವಾಗಿರುತ್ತದೆ ಈ ಸಂಘದ ಇಸವಿಯ ಅಧಿಕಾರದಾರರು ಎ ಬಿ ಶೆಟ್ಟಿಗಾರ ಅಧ್ಯಕ್ಷ ಕೆ ಸಿ ಶೆಟ್ಟಿಗಾರ ಕಾರ್ಯದರ್ಶಿ ಮತ್ತು ಎಸ್ ಕೃಷ್ಣಪ್ಪ ಎಸ ಶೆಟ್ಟಿಗಾರ ಕೋಶಾಧಿಕಾರಿ

The MAN behind the RUPEE

is a power to be reckoned with in every phase of modern life People incline to pay respectful attention to the person who is powered with a bulky

BANK ACCOUNT

What you amount to in the eyes of others depends a good deal on how much capital you are believed to have or how much you can produce if occasion requires

Create and substantiate a good impression by opening an account in

CANARA BANK
LIMITED.

ಪಂಡಿತರ ಜೀವನ ಚರಿತ್ರೆಯ ಕೆಲವು ಪ್ರತಿಗಳು ಈಗ ಹಿಂದೂದೇಶವನ್ನು ಸೇರಿವೆ. ಅವರಲ್ಲಿ ಅನೇಕಾನೇಕ ಹೃದಯಂಗಮವಾದ ಚಿತ್ರಗಳನ್ನು ಜವಾಹರಲಾಲರು ಬಣ್ಣಿಸಿರುವರು ಓದುವಾಗ ತುಂಬಾ ಸಂತೋಷವೂ ಸ್ಫೂರ್ತಿಯೂ ಉಂಟಾಗುತ್ತದೆ ತನ್ನ ತಂದೆಯವರ ವಿಷಯ ಒಳ್ಳೆ ಅರ್ಥಗರ್ಭಿತ ವಾಕ್ಯಗಳಿಂದ ಬರೆದಿರುವರು ಅವರಲ್ಲಿ ತನ್ನ ತಂದೆಯವರ ಮೇಲಿದ್ದ ಪೂಜ್ಯಭಾವನೆಯು ಇದರಿಂದ ವ್ಯಕ್ತವಾಗುತ್ತದೆ

'ಪೂಜ್ಯರಾದ ತಂದೆಯವರು ಎಂತಹ ಕೂಟಗಳಿಗೆ ಹೋದರೂ, ಅಲ್ಲಿ ಅವರಿಗೆ ಸನ್ಮಾನವು ದೊರೆಯುತ್ತಿತ್ತು ಎಲ್ಲರೂ ಅವರನ್ನು ನಯಭಯ ಭಕ್ತಿಗಳಿಂದ ಕಾಣುತ್ತಿದ್ದರು ಇದೆಲ್ಲವೂ ಹೊರ ಹೊಮ್ಮುತ್ತಿರುವ ಅವರ ಪ್ರತಿಭೆಯಿಂದಲೇ ಎಂದು ಬೇರೆ ಹೇಳಬೇಕಾಗಿಲ್ಲ ಸಾಧು ಸ್ವಭಾವವು ಅವರಲ್ಲಿ ಇಲ್ಲವೆಂದಿಲ್ಲ, ಆದರೆ ಯಾರಾದರೂ ತನ್ನ ಮತಕ್ಕೆ ವಿರುದ್ಧವಾಗಿ ಆಡಿದವರನ್ನೂ ನಿಷ್ಕಾರಣವಾಗಿ ಗಲಭೆ ಮಾಡುವವರನ್ನೂ ಅವರು ತನ್ನ ಜೀವಮಾನಕಾಲದಲ್ಲಿ ಹೀಗೆ ಹೋಗಗೊಡಲಿಲ್ಲ ಹೋದ ಕಡೆಗಳಲ್ಲಿ ತನ್ನ ಕತ್ತನ್ನೆ ಮೇಲಕ್ಕೆತ್ತಿ ಸಿಂಹೀಣಿಯಿಂದ ಹೊಕ್ಕು ಬರುತ್ತಿದ್ದರು ಅವರ ಧೈರ್ಯವೆಂದರೆ ಅದನ್ನು ವರ್ಣಿಸಿ ತೀರದು

ಅಗಲವಾದ ಹಣೆ ಅವುಡು ಕಚ್ಚಿದಂತಿರುವ ತುಟಿಗಳು. ದೃಢತೆಯನ್ನು ಸೂಚಿಸುವ ಕಣ್ಣುಗಳು ಇವುಗಳನ್ನೆಲ್ಲವನ್ನು ನೋಡುವಾಗ ಇವರೊಬ್ಬ ರೋಮನ ಚಕ್ರವರ್ತಿಗಳೋ ಎಂಬ ಭಾವನೆಯು ಹುಟ್ಟುವುದು ಇವರ ಛಾಯಾಚಿತ್ರವನ್ನು ಕಂಡ ಇಟಲಿಯವರು ಇವರೊಬ್ಬ ರೋಮಿಯ ಜನರೊ ಎಂದು ನೆನಸಿದರಂತೆ

ತಲೆ ನರೆತ ಮೇಲೆ ಅವರ ಪ್ರತಿಭೆಯು ಇನ್ನಷ್ಟು ಹೆಚ್ಚಿತು ಆ ಬಿಳೀ ಕೂದಲೇ ಅವರ ಶೋಭೆಯನ್ನು ಹೆಚ್ಚಿಸಿತೊ ಎಂದು ಇನ್ನೂ ನನಗೆ ಸಂಶಯವಾಗಿದೆ ಅಂತೂ ಅವರ ಆಚಾರ ವಿಚಾರಗಳಲ್ಲೂ ಕೊಂಚ ಬದಲಾವಣೆಗಳು ಆಗ ತೊಡಗಿದವು ಅವರ ಆಗಿನ ಗುಣಗಳನ್ನು ನೋಡಿದರೆ ಪ್ರಪಂಚದಲ್ಲಿ 'ಅವರಷ್ಟು ಆದರ್ಶನೀಯ ಪುರುಷನು ಈಗ ಎಷ್ಟು ಹುಡುಕಿದರೂ ಸಿಗಲಿಕ್ಕಿಲ್ಲವೆಂದೇ ನೆನಸುತ್ತೇನೆ ಅವರನ್ನೇ ಬಹಳ ಹೊಗಳಿ ಬರೆದಿರುವೆನೆಂದು ಎಲ್ಲರೂ ಭಾವಿಸಬಹುದು ಆದರೆ ಅವರ ವಿಷಯವಾಗಿ ನನ್ನ ಮನಸ್ಸು ಎಷ್ಟು ತುಂಬಿದೆ ಎಂದರೆ ಅದನ್ನು ಈ ಲೇಖಣಿಯಿಂದ ಚಿತ್ರಿಸುವರೆ ಸಾಧ್ಯವಿಲ್ಲ ಮಾತೆಯು ಬಹಳ ಹೀನಾವಸ್ಥೆಯನ್ನು ತಾಳಿರುವಾಗ ಮಾತೆಯ ಸುತರು ನಿರ್ವೀರ್ಯರಾಗಿರುವಾಗ ಅವರಂತಹ ದೇಹದಾರ್ಢ್ಯತೆಯೂ, ಮನೋಬಲವೂ ಜ್ಞಾನವಂತರೂ ಆದ ಪುರುಷರ ಬಲವು ನಮಗೆ ಬೇಕಾಗಿತ್ತು ಮಾತೆಯು ಅವರ ನಿಧನದಿಂದ ಗರೀಬಳೆ ಸರಿ ಎಂದು ಬೋಧವಾಗುತ್ತಿದೆ

ದೇಶಬಂಧು ಚಿತ್ತರಂಜನ ದಾಸರ ವಿಷಯ ಮಾತಾಡುವಾಗಲೂ ತನ್ನ ತಂದೆಯವರೊಡನೆ ಅವರನ್ನು ಹೋಲಿಸುತ್ತಾರೆ "

ಚಿತ್ತರಂಜನ ದಾಸರಿಗೂ, ತನ್ನ ತಂದೆಯವರಿಗೂ ಬಾಲ್ಯಾರಭ್ಯದಿಂದಲೂ ಸ್ನೇಹಾಂಕುರ ಬೆಳೆಯಿತು. ಅಂದಿನಿಂದಲೂ ಅವರು ಏಕಮತೀಯ ಪುತ್ರರಾಗಿ ಇರಲಾರಂಭಿಸಿದರು ಹಲವು ಸಂಗತಿಗಳಲ್ಲಿ ಮಾತ್ರ ಅವರ ವಿಷಯಗಳು ಸರಿಹೋಗದೆ ಇದ್ದರೂ, ಬೇರಾವ ವಿಷಯಗಳಲ್ಲೂ ಒಬ್ಬರನ್ನು ಇನ್ನೊಬ್ಬರು ಬಿಟ್ಟು ಹಾಕುತ್ತಿರಲಿಲ್ಲ ತನ್ನ ತಂದೆಯವರು ದೇಶಬಂಧು ದಾಸರಿಗಿಂತ 9 ವರ್ಷಕ್ಕೆ ಹಿರಿಯವರಾದರೂ ದೇಹದಲ್ಲಾಗಲಿ ತ್ರಾಣದಲ್ಲಾಗಲಿ ಆರೋಗ್ಯದಲ್ಲಾಗಲಿ ದೇಶಬಂಧುಗಳಿಗಿಂತ ಇವರೆ ಮಿಗಿಲಾಗಿದ್ದರು ಇಬ್ಬರಿಗೂ ಸರಿಸಮಾನವಾದ ವಿದ್ಯಾಭ್ಯಾಸವೂ ತರಬೇತಿಯು ದೊರಕಿದರೂ, ಅವರ ಸಾಧನೆಗಳು ಪ್ರತ್ಯೇಕವಾಗಿದ್ದವು ದಾಸರು ವಕೀಲರಾಗಿದ್ದರೂ, ಪ್ರತಿಭೆಯುಳ್ಳ ಕವಿಗಳಾಗಿದ್ದರು. ಇವರು ಬಂಗಾಳಿಯಲ್ಲಿ ತುಂಬಾ ಕವನಗಳನ್ನು ಬರೆದಿದ್ದಾರೆ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಕೊಡುವ ಸಾಮರ್ಥ್ಯವು ಇವರಲ್ಲಿ ತುಂಬಾ ಇತ್ತು ದೈವಭಕ್ತಿಯು ಇವರಲ್ಲಿ ಅಚ್ಚಳಿಯದೆ ಇತ್ತು.

ಜವಾಹರಲಾಲರ ಜೀವನ ಚರಿತ್ರೆಯಲ್ಲಿರುವ ಕೆಲವು ಕೌತುಕಮಯ ದೃಶ್ಯಗಳು

ಪೂಜ್ಯ ಪಿತಾಜಿಯವರ ವಿಷಯ ತನ್ನ ಅಭಿಪ್ರಾಯಗಳು

ಗಾಂಧಿಜೀಯವರ ಗುಣಗಾನ

ನನ್ನ ತಂದೆಯವರಲ್ಲಿ ಕಾರ್ಯತತ್ಪರತೆಯನ್ನು ತೋರಿಸುವ ಸಪ್ರಿರ್ತಿ ಹೆಚ್ಚು ಪದ್ಯದಲ್ಲಿ ಅಭಿರುಚಿ ಹೆಚ್ಚಿಲ್ಲವಾದರೂ ಗದ್ಯದಲ್ಲಿ ತುಂಬಾ ಆಸಕ್ತಿ ಸಂಚಾಲಕರ ಬುದ್ಧಿ ಚಾತುರ್ಯವು ಇವರಲ್ಲಿ ತುಂಬಾ ಇತ್ತು ವ್ಯಾಖ್ಯಾನದಲ್ಲಿ ಇವರ ಖ್ಯಾತಿಯು ಹೆಚ್ಚು ಸರ್ವಸಾಧಾರಣ ಮಟ್ಟಿಗೆ ಇವರಿಗೆ ಪ್ರತಿಸ್ಪರ್ಧಿಗಳಾರೂ ಇರಲಿಲ್ಲ ದೇಶಬಂಧುಗಳೂ, ನನ್ನ ತಂದೆಯವರೂ ಕೆಲವೊಂದು ವಿಷಯಗಳಲ್ಲಿ ಅಲ್ಲದೆ ಉಳಿದ ಎಲ್ಲಾ ಕಾಂಗ್ರೆಸ್ ಕೆಲಸಗಳಲ್ಲಿ ಐಕ್ಯಮತ್ಯದಿಂದ ಕೆಲಸ ಮಾಡುತ್ತಿದ್ದರು ಎಷ್ಟರ ವರೆಗೆಂದರೆ ಒಬ್ಬರು ಇನ್ನೊಬ್ಬರ ಹೆಸರನ್ನು ಸಂದರ್ಭವಶಾತ್ ಉಪಯೋಗಿಸಲೂ ಹೆದರುತ್ತಿರಲಿಲ್ಲ ಇವರ ಕೂಡುವಿಕೆಯಿಂದ ಭಾರತ ಮಾತೆಯ ಸ್ಥಿತಿಯು ಸ್ವಲ್ಪ ಉತ್ತಮವಾಯಿತೆಂದೂ ಭಾರತೀಯರ ಜಾಗ್ರತಿಯನ್ನು ತಳೆದರೆಂದೂ ಖಂಡಿತವಾಗಿಯೂ ಹೇಳಬಲ್ಲೆನು- ದೇಶೋದ್ಧಾರವನ್ನು ತಾವಿಬ್ಬರೂ ಆದಷ್ಟು ಮಟ್ಟಿಗೆ ಮಾಡಬಹುದು ಎಂಬ ನಿಶ್ಚಯವು ಅವರಲ್ಲಿತ್ತು

ಗಾಂಧಿಜೀಯವರಿಗೆ ಸನ್ಮಾನ

ಗಾಂಧಿಜೀಯವರ ವಿಷಯ ಬಹಳ ಪೂಜ್ಯಭಾವದಿಂದಲೂ ಪ್ರೀತಿ ಪುರಸ್ಸರವಾಗಿಯೂ ಬರೆದಿರುತ್ತಾರೆ ನಿಜವಾಗಿಯೂ ಸಮಗ್ರ ಭಾರತಕ್ಕೆ ಒಬ್ಬನು ಮುಂದಾಳುವೆಂದು ಭಾವಿಸಿದರೆ ಅವರೇ ಗಾಂಧಿಜೀಯವರು ಎಂದು ಜವಾಹರಲಾಲರು ತನ್ನ ಜೀವನ ಚರಿತೆಯಲ್ಲಿ ಉಲ್ಲೇಖಿಸಿರುವರು

'ಗಾಂಧಿಜೀಯವರು ಪ್ರಜಾಶಾಸನಾಧಿಕಾರಿಗಳೋ ಅಲ್ಲವೋ ಆದರೆ ಅವರು ಸಮಗ್ರ ಭಾರತದ ರೈತ ಜನರ ಪರವಾಗಿ ತುಂಬಾ ಕಷ್ಟಪಟ್ಟಿರುತ್ತಾರೆ ದೇಶವನ್ನು ಉದ್ಧಾರ ಗೈಯ್ಯಬೇಕಾದರೆ ಏನೇನು ಮಾಡಬೇಕೆಂದು ಆಮೂಲಾಗ್ರವಾಗಿ ಪರ್ಯಾಲೋಚಿಸಿ ಅದರ ಕೆಲಸವನ್ನು ಬುಡದಿಂದಲೇ ಮಾಡಲು ತೊಡಗಿದ್ದಾರೆ. ದೇಶದ ಸೌಖ್ಯಸಂಪತ್ತು ಶಕ್ತಿ ಇದೆಲ್ಲವೂ ಹಳ್ಳಿಗಳ ಮೇಲೆ ಹೊಂದಿಕೊಂಡಿರುವದು. ಆ ಹಳ್ಳಿಯನ್ನು ಉದ್ಧಾರ ಮಾಡಿದೆವೆಂದರೆ ದೇಶೋದ್ಧಾರವಾಗುವುದರಲ್ಲಿ ಸಂಶಯವಿಲ್ಲವೆಂಬ ಅವರ ಹೇಳಿಕೆಯಲ್ಲಿ ಹುರುಳಿದೆ ಅವರೇ ಇಡೀ ಜಗತ್ತಿನ ಕಣ್ಣೆಂದು ಹೇಳಬಹುದು ಸಮಸ್ತ ಭಾರತದ ಸುಖದುಃಖಗಳನ್ನರಿವ ಶಕ್ತಿಯೂ ಅದನ್ನು ಪರಿಹರಿಸುವ ಶಕ್ತಿಯೂ ಅವರಲ್ಲಿ ತುಂಬಿತುಳುಕಾಡುತ್ತಿದೆ ಬ್ರಹ್ಮಚರ್ಯ ವ್ರತವನ್ನು ಪಾಲಿಸಿ ದೇಶಕ್ಕೆ ಅದರಿಂದ ಹಿತಲಭಿಸುವದೆಂಬುದನ್ನು ಪ್ರತ್ಯಕ್ಷಪ್ರಮಾಣವಾಗಿ ತೋರಿಸಿದರು ಅವರ ಪ್ರತಿಭೆಯನ್ನು ವರ್ಣಿಸಲು ನಾನು ಅಶಕ್ತನು ಯಾರು ಅವರ ಬಳಿಯಲ್ಲಿದ್ದರೊ, ಅವರು ಅವರಿಂದ ಆಕರ್ಷಿಸಲ್ಪಡುತ್ತಾರೆ ಜನಭೀಡತೆಯಲ್ಲಿ ಅವರ ಮಾತು ವೇದವಾಕ್ಯ ಹಿಂದೂದೇಶವನ್ನೇ ಇಡೀ ಜಗತ್ತನ್ನೆ ತನ್ನ ಸೌಜನ್ಯದಿಂದ ಅಂಕಿತದಲ್ಲಿಟ್ಟುಕೊಂಡಿದ್ದಾರೆ

ಅಮೃತಬಜಾರ್ ಪತ್ರಿಕೆಯ ಸಂಪಾದಕರಾದ ದಿವಂಗತ ಶ್ರೀ ಮೋತಿಲಾಲ ಘೋಷರ ಮೃತ್ಯುಮುಖದಲ್ಲಿರುವಾಗ ಗಾಂಧಿಜೀಯವರು ಅವರನ್ನು ಕಾಣಲು ಹೋದರು. ಸಂಗಡ ಜವಾಹರಲಾಲರೂ ತೆರಳಿದರು ಮೋತಿಲಾಲ ಘೋಷರು ಗಾಂಧಿಯವರನ್ನು ಕಂಡು ತನ್ನ ಕಾರ್ಯದಲ್ಲಿ ಯಶಸ್ವಿಯಾಗೆಂದು ಹರಸಿದರು ಅಲ್ಲದೆ ನಾನಿನ್ನು ಹೇಗಾದರೂ ಈ ಲೋಕದಿಂದ ಹೋಗುತ್ತಿರುವೆನು ಯಾವ ಪ್ರದೇಶಕ್ಕೆ ತೆರಳುವನೆಂಬ ಭಾವನೆ ಇಲ್ಲವಾದರೂ ಬ್ರಿಟಿಷರ ಆಳ್ವಿಕೆ ಇಲ್ಲದ ಪ್ರದೇಶವನ್ನು ಸೇರುವನೆಂಬ ಸಂತೋಷವು ನನ್ನಲ್ಲಿ ಉಕ್ಕೇರಿ ಬರುತ್ತಿದೆ ಎಂದು ಪುಲಕಿತರಾಗಿ ನುಡಿದರು

ಜನಬ್ ಎಂ ಎ ಜಿನ್ನಾರ ವಿಷಯವೂ ಕೆಲವು ಕೌತುಕಮಯ ವಿಷಯಗಳನ್ನು ಬರೆದಿರುತ್ತಾರೆ.

ನವೀನ ಕಾಂಗ್ರೆಸ್ಸಿನ ನಿಬಂಧಗಳು ಇವರಿಗೆ ಸೇರುತ್ತಿರಲಿಲ್ಲ ಖದ್ದರ ಉಡುಪನ್ನು ಧರಿಸಿದ್ದವರನ್ನು ಕಂಡಕೂಡಲೆ ಇವರ ಉಸಿರು ಬಂದಾಗುತ್ತಿದ್ದಿತು ಹಿಂದೀಯರು ಎಬ್ಬಿಸಿದ ಚಳವಳಿವು ಅವರಿಗೊಂದು ಅಪಹಾಸ್ಯವಾಗಿ ಕಂಡುಬರುತ್ತಿತ್ತು ಅವರ ಮತ್ತು ಹಿಂದೂಗಳ ಅಭಿಪ್ರಾಯಗಳಲ್ಲಿ ಅಜಗಜಾಂತರ ವ್ಯತ್ಯಾಸಗಳು ತಲೆದೋರಿದುವು ಒಂದು ಸಲ ಉತ್ತೇಜನ ಪೂರ್ವಕವಾಗಿ ಅವರು ನುಡಿದುದೇನಂದರೆ ಕಾಂಗ್ರೆಸ್ಸಿಗೆ ಸದಸ್ಯರನ್ನು ಭರ್ತಿಮಾಡುವಿರಾದರೆ ಮೆಟ್ರಿಕ್ ಪಾಸಾದವರನ್ನೆ ಹೆಕ್ಕಿ ತೆಗೆಯಿರಿ ಎಂದು ಅವರು ಮನಃಪೂರ್ವಕವಾಗಿ ಇದನ್ನು ಹೇಳಿದರೋ ಅಥವಾ ಬೇರಾವ ನಿರ್ದಿಷ್ಟ ಕಾರಣಗಳಿಂದ ನುಡಿದರೊ ಎಂಬುದನ್ನು ಇಷ್ಟರ ವರೇಗೆ ಸರಿಯಾಗಿ ನನಗೆ ತಿಳಿಯಲಾಗಲಿಲ್ಲ ಬಹುಷ ಜನತೆಯಲ್ಲಿ ಸಮಾನತ್ವವನ್ನು ಉದ್ದೀಪನಗೊಳಿಸಲೋಸುಗವಾಗಿ ಹೀಗೆ ಅಂದರೆಂದು ಕಾಣುತ್ತದೆ ಅದ್ದರಿಂದ ಅವರು ಕಾಂಗ್ರೆಸನ್ನು ಬಿಟ್ಟು ಒಬ್ಬಂಟಿಗರಾಗಿ ಕೆಲಸ ಮಾಡ ತೊಡಗಿದರು ಆದರೆ ಕಡೆಗೆ ಕೋಮುವಾರು ಪಕ್ಷಿಯೇಳುವಾಗ ಇವರು ಎದೆತಟ್ಟಿ ಮುಂದೆ ಬಂದುದು ನಮಗೆಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತು ಭಾರತ ಮಾತೆಯ ಅದೃಷ್ಟವು ಕೊಂಚ ಉದ್ಧಾರಾವಸ್ಥೆಯಲಿದೆ ಎಂದು ತುಸು ಸಂತೋಷವಾಯಿತು.

ಗೊಡ್ರೆಜರ ಭಾರತಸಿದ್ಧವಾದ ವೆಜಿಟೇಬಲ್ ಟ್ರೊಲೆಟ್ ಸಾಬೂನುಗಳನ್ನು ಜರ್ಮನ್ ವರ್ತಕರು ಆಮದುಮಾಡುತ್ತಿರುವರು.

ಗೊಡ್ರೆಜ್ ಟ್ರೊಲೆಟ್ ಸಾಬೂನುಗಳ ಕುರಿತಾಗಿ ಚರ್ಮರೋಗ ಪರೀಕ್ಷಾ ಪಜ್ಞರೂ ಹೆಸರುವಾಸಿಗಳಾದ ರಸಾಯನಜ್ಞರೂ ಕ್ರಿಮಿರೋಗ ಪರಿಶೋಧಕರೂ, ಜೀವಾಣುರೋಗ ಶಾಸ್ತ್ರಪರಿಣತರೂ ಆದ ಒಬ್ಬ ಡಾಕ್ಟರರು ಕೊಂಡಾಡಿದುದನ್ನು ಕೇಳಿ ಜರ್ಮನ್ ವರ್ತಕರು ತಮ್ಮ ದೇಶಿಗರ ಉಪಯೋಗಕ್ಕಾಗಿ ಗೊಡ್ರೆಜ್ ಸಾಬೂನ ಗಳನ್ನು ಆಮದು ಮಾಡಲು ಪ್ರಕ್ರಮಿಸಿದರು

ಗೊಡ್ರೆಜ್

ವೆಜಿಟೇಬಲ್ ಟ್ರೊಲೆಟ್ ಸಾಬೂನುಗಳ ಕುರಿತಾಗಿ

ಇಂಗ್ಲಿಷ್, ಜರ್ಮನ್ ಮತ್ತು ಭಾರತೀಯ ವಿಜ್ಞಾನಿಗಳು ಏನೆನ್ನುವರೆಂದು ಓದಿರಿ:

ಬರ್ಲಿನ್ ಚೇಂಬರ್ ಆಫ್ ಕೊಮರ್ಸ್ ಇದರಲ್ಲಿ ಜರ್ಮನ್ ಪಬ್ಲಿಕ್ ಲೆಬೊರೆಟರಿ ಫೋರ್ ಎಕ್ಸ್‌ಪರಿಮೆಂಟಲ್ ಕೆಮಿಸ್ಟ್ರಿ

ಮೈಕೊಸ್ಕೋಪಿ ಎಂಡ್ ಬೆಕ್ಟೆರಿಯೋಲೊಜಿ ಇದರಲ್ಲಿ ರಸಾಯನಶಾಸ್ತ್ರಗಳಾಗಿರುವ

ಡಾ| **ಟಿಫ್ರೆಚ್ಸ್ ಎಂಬವರು** —' ನಾನು ಗೊಡ್ರೆಜ್ ವೆಜಟೇಬಲ್ ಟ್ರೊಲೆಟ್ ಸಾಬೂನುಗಳನ್ನು ಪರೀಕ್ಷಿಸಿರುವೆನು ನನ ಅಭಿಪ್ರಾಯದಂತೆ ಅವುಗಳು ಸ್ಟೆಫ್ಫ್ಯಾಕೊಕಸ್ ಮತ್ತು ಸ್ಟೆಫಿಲೊಕಕಸ್ ಎಂಬ ಕ್ರಿಮಿಗಳನ್ನು ಸನ್ನಿಪಾತ ಜ್ವರ ಮತ್ತು ಇತರ ಹಾನಿಕರ ರೋಗಗಳ ಕ್ರಿಮಿಗಳನ್ನೂ ಕೊಲ್ಲುವ ಶಕ್ತಿಯಿದೆ ಅಂಟುರೋಗಗಳು ತಗಲದಂತೆ ಮಾಡುವ ಗುಣವು ಅವುಗಳಿಗಿದೆ'' ಎಂದಿರುವರು

ಜರ್ಮನಿಯ ಚರ್ಮರೋಗ ಶೋಧಕರಾದ

ಹೆರ್ ಕಾರ್ಲ್ ಉಸುರ್ನ್ ಎಂಬವರು:—"ಸುದೀರ್ಘವಾಗಿ ನಾನೇ ಉಪಯೋಗಿಸಿಯೂ ರಾಸಾಯನಿಕ ಶೋಧ ಮಾಡಿಯೂ, ಯಾವ ಅಂಜಿಕೆಯೂ ಇಲ್ಲದೆ ನಾನು ನಿಮ್ಮ ವೆಜಟೇಬಲ್ ಸಾಬೂನುಗಳಿಗೆ ಆರೋಗ್ಯ ಮತ್ತು ಸೌಂದರ್ಯ ವರ್ಧನೆಗೊಳಿಸುವ ಸಾಬೂನುಗಳೆಂಬ ಗೌರವಸ್ಥಾನವನ್ನು ಕೊಡಬಯಸುವೆ'' ಎಂದರು

ಮುಂಬಾಯಿಯ ಸರಕಾರೀ ಕೆಮಿಕಲ್ ಎನಲೈಸರರಾದ

ಮೇಜರ್ ಡಿಕೆನ್‌ಸನ್‌ರವರು:—"ಗೋಡ್ರೆಜ್ ಸಾಬೂನುಗಳು ಎಲ್ಲಾ ವಿಧಗಳಲ್ಲೂ ಸಮರ್ಪಕವಿದೆ'' ಎಂದರು

ರಾಷ್ಟ್ರಸಭೆಯ ಮಾಜಿ ಅಧ್ಯಕ್ಷರಾದ

ಡಾ| **ಎಂ ಎ. ಅನ್ಸಾರಿ**, ಎಂ ಡಿ ಎಂ. ಎಸ್ ರವರು:—"ಗೋಡ್ರೆಜ್ ಸಾಬೂನುಗಳ ಕುರಿತು ಪ್ರಶಸ್ತಿಯನ್ನೀಯಲು ನನಗೆ ಅತ್ಯಾನಂದವಾಗುತ್ತದೆ ಕಳೆದ ಹತ್ತು ವರ್ಷಗಳಿಂದ ನಾನದನ್ನು ಉಪಯೋಗಿಸುತ್ತಲಿರುವೆ ಯುರೋಪಿನಲ್ಲಾಗಲೀ ಇತರ ಯಾವ ದೇಶದಲ್ಲಾಗಲೀ ಸಿದ್ಧವಾಗುವ ಅತ್ಯುತ್ಕೃಷ್ಟ ಸಾಬೂನುಗಳಿಗಿಂತಲೂ ಇವು ಉತ್ಕೃಷ್ಟವಾಗಿದೆಯೆಂದು ಹೇಳಬಲ್ಲೆ. ಅದರ ಪ್ರಶಸ್ತಿಯ ದೃಷ್ಟಿಯಿಂದಲೂ ಅವುಗಳು ಭಾರತಸಿದ್ಧವೆಂಬ ದೃಷ್ಟಿಯಿಂದಲೂ ನಾನವುಗಳನ್ನು ಭಾರತೀಯರಿಗೆ ಶಿಫಾರಸು ಮಾಡಲು ಬಯಸುತ್ತೇನೆ'' ಎಂದಿರುವರು.

ಫೆಕ್ಟರಿ:— **ಗೋಡ್ರೆಜ್ ಸೋಪ್ಸ್ ಲಿಮಿಟೆಡ್,** ಡಲ್‌ಹೌಸಿ, ರೋಡ್, ಮುಂಬಾಯಿ.

ಸೋಲ್ ಏಜಂಟರು:— **ನಾದಿರ್ ಷಾ, ಪ್ರಿಂಟರ್ ಎಂಡ್ ಕೊ.,**

121 ಎಸ್‌ಪ್ಲನೇಡ್ ರೋಡ್, ಫೋರ್ಟ್ ಮುಂಬಾಯಿ.

'ಆಹಾರಗಳಲ್ಲಿ ಹಾಲು ಅತ್ಯುತ್ತಮವಾದುದು'

ವೈಸರಾಯರ ಪ್ರಶಂಸೆ.

ವೈಸ್‌ರಾಯ್ ಮಾರ್ಕ್ವಿಸ್ ಲಿನ್‌ಲಿತ್‌ಗೋರವರು ತಾ. ೨೫ರಲ್ಲಿ ಮಹೋಬ್ರದಲ್ಲಿರುವ . ಹಳ್ಳಿವಾಡಗಳನ್ನು ಪರೀಕ್ಷಿಸಿ ಸಿದ್ಧಾಂತವನ್ನು ಪುನಃ ಸೇರಿದರು.

ಸಿಮ್ಲಾ ಪೌರಸಭೆಯವರು ಪಟ್ಟಣದ ಅನಾರೋಗ್ಯಕರವಾದ ಶಿಶುಗಳ ಸರಿಯಾದ ಆರೈಕೆಗಳನ್ನು ಮಾಡಲು ನಿರ್ಮಿಸಿರುವ ವ್ಯವಸ್ಥೆಯನ್ನು ಕಣ್ಣಾರೆ ಕಂಡು ಆ ಕಾರ್ಯಸಾಧನೆಗಳ ಕುರಿತಾಗಿ ಹೊಗಳಿ ಮಾತಾಡಿದರು.

"ಮನುಷ್ಯನ ಜೀವಮಾನದಲ್ಲಿ ಯಾವಾಗಲೂ ಮೆದುಳು ಮತ್ತು ಶರೀರಾವಯವಗಳು ಸುಸ್ಥಿತಿಯಲ್ಲಿದ್ದು ಸರಿಯಾದ ಕೆಲಸಮಾಡಲು ಆರೋಗ್ಯಕರವಾದ ಆಹಾರ ಪದಾರ್ಥಗಳು ಅತ್ಯವಶ್ಯಕ. ಸರಿಯಾದ ಆಹಾರಪದಾರ್ಥಗಳು ಸದಾ ದೊರಕುವಂತಾಗಲು ವರ್ಷಾವಧಿ ಬೆಳೆಯು ಸರಿಯಾಗಿ ಆಗಬೇಕು. ಆದುದರಿಂದ ಹಳ್ಳಿಗಳ ಕೃಷಿಕರನ್ನು ಸದಾ ಹೊಸತರದ ಅನುಭವವನ್ನು ಕೊಟ್ಟು ಪ್ರೋತ್ಸಾಹಿಸುವುದು ಉತ್ತಮ. ದನದ ಹಾಲು ಮನುಷ್ಯನ ಭುಂಜಿಸುವ ಆಹಾರಗಳಲ್ಲಿ ಮುಖ್ಯವಾದುದು. ತಾಯಿಗೆ ಮಗುವನ್ನು ಹೆರುವುದಕ್ಕೆ ಮುಂಚೆಯೂ, ಹೆತ್ತಮೇಲೆಯೂ ಮತ್ತು ಮಗುವಿಗೆ ಬಾಲ್ಯದಲ್ಲಿಯೂ ಶರೀರಾರೋಗ್ಯದ ಮತ್ತು ಅವಯವಗಳ ಬೆಳವಣಿಗೆ ಹಾಲೇ ಮುಖ್ಯವಾದದ್ದು" ಎಂಬುದು ಪೌರಸಭೆಯನ್ನು ಅಂದು ಪ್ರಶಂಸಿಸಲಿರುವಾಗ ಕೊಟ್ಟ ಭಾಷಣದ ಮುಖ್ಯಾಂಶವಾಗಿರುವುದು.

ಇಥಿಯೋಪಿಯದ ಆರ್ಥಿಕ ಪುನರ್ವ್ಯವಸ್ಥೆ

ಇಟೇಲಿಯು ಇಥಿಯೋಪಿಯದ ಆರ್ಥಿಕ ಪುನರ್ವ್ಯವಸ್ಥೆಯನ್ನು ಕೈಗೊಂಡಿರುತ್ತದೆ. ಬೇಂಕ್ ಒಫ್ ಇಟೇಲಿಯ ಒಂದು ಶಾಖೆಯು ಇಲ್ಲಿ ತೆರೆಯಲ್ಪಟ್ಟಿದೆ. ಇಟೇಲಿಯ ಚಲಾವಣೆ ನಾಣ್ಯವಾದ ಲಾಯರು ಇಲ್ಲಿ ಪ್ರಸಿದ್ಧಿಗೆ ಬಂದಿರುತ್ತದೆ. ಸರ್ವ ವ್ಯಾಪಾರದಲ್ಲೆಲ್ಲಾ ಇದೇ ನಾಣ್ಯವು ಉಪಯೋಗವಾಗಬೇಕೆಂದು ಕಟ್ಟಾಜ್ಞೆಗಳು ಹೊರಟಿವೆ. ಎಥಿಯೋಪಿಯಾ ಬ್ಯಾಂಕು ಸದ್ಯದಲ್ಲೆ ಮುಚ್ಚಲ್ಪಡುವುದು. ಹಳ್ಳಿಗಳಲ್ಲೂ ರೈತರು ಇಟೇಲಿಯನ ನಾಣ್ಯವನ್ನು ಸ್ವೀಕರಿಸಿ, ತಮ್ಮ ಲೇವಾದೇವಿಯನ್ನು ಪ್ರಾರಂಭಿಸಿರುವರು.

ಅಂಡಮಾನು ಅಂದವಾದ ಸ್ವರ್ಗವೇ ಸರಿ.

ಅವಶ್ಯತೆಯು ಅವಶ್ಯವಾಗುವಂಥ ಕಲ್ಪಿತ ಕಥೆಗಳನ್ನು ಹುಟ್ಟಿಸಬೇಕು. ಇದು ಎಲ್ಲರಿಗೂ ತಿಳಿದಿರುವ ವಿಷಯ. ಹಾಗೆಯೇ ರಾಜಕಾರ್ಯಗಳು ಅನಾವಶ್ಯವಾದರೂ ಅವಶ್ಯವಾಗುವಂತೆ ರಾಜಕೀಯ ಕಲ್ಪಿತ ಕಥೆಗಳನ್ನು ಹುಟ್ಟಿಸಬೇಕಾಗುವುದು. ಆದುದರಿಂದ ಸರ್ ಹೆನ್ರಿ ಕ್ರೈಕರೆಂಬ ಬ್ರಿಟಿಷ ಪ್ರತಿನಿಧಿಗಳೊಬ್ಬರು ಅಂಡಮಾನವು ಅಂದವಾದ ಸ್ವರ್ಗವೇ ಸರಿ ಎಂದು ಹೇಳಿದಲ್ಲಿ ಏನೂ ಆಶ್ಚರ್ಯವಾಗದು. ಹಿಂದೂದೇಶದಿಂದ ಅಲ್ಲಿ ಸೇರಿಸಲ್ಪಟ್ಟ ಕೈದಿಗಳು ಒಳ್ಳೆಯ ಸುಖವನ್ನನುಭವಿಸುವರಂತೆ. ದ್ವೀಪದಲ್ಲೆಲ್ಲಾ ಸಾಂಪತ್ತಿಕ ಸ್ಥಿತಿಯು ಉತ್ತಮವಾಗಿರುವುದಂತೆ. ಸರಕಾರದವರು ಅವರನ್ನು ಅಪ್ರತಿಮ ನಾಗರಿಕರನ್ನಾಗಿ ಮಾಡಿರುವುದಂತೆ. ಇದೆಲ್ಲವು ಇವರು ಕಣ್ಣಾರೆ ಕಂಡದ್ದು. ಆದರೆ ಇದನ್ನು ಪರಾಂಬರಿಸಿ ನೋಡುವವರಾರು?

ಗಾಂಧೀಜಿಯವರ ಪ್ರೇಮಶಿಷ್ಯಳು ಮೃತಳಾದಳು

ಬೆಟೂಲಿನಲ್ಲಿರುವ ಖಾದಿ ಆಶ್ರಮದಲ್ಲಿ ಶ್ರಮಪಡುತ್ತಿದ್ದ ಗಾಂಧೀಜಿಯವರ ಪ್ರೇಮ ಶಿಷ್ಯಳಾದ ಶ್ರೀಮತಿ ತಾರಾಬಾಯಿಯವರು ಕಠಿಣ ಕಾಯಿಲೆಯಿಂದ ಹಲವು ದಿನ ನರಳಿ, ತಾ. ೨೪ರಲ್ಲಿ ಹರಿದ್ವಾರದಲ್ಲಿ ಮೃತಳಾದಳೆಂದು ಹೇಳಲು ಬಹಳ ವಿಷಾದಿಸುವೆವು.

ಈಕೆಯು ಕೆನಡಾ ದೇಶಸ್ಥಳು. ಗಾಂಧೀಜಿಯವರ ಸತ್ಯ ಚರಿತ್ರೆಯನ್ನು ಕೇಳಿ ಹಿಂದೂದೇಶಕ್ಕೆ ಬಂದ ಹಿಂದೂದೇಶದಲ್ಲಿರುವ ಬಡತನವನ್ನು ನೋಡಿ ಮಾತೃದೇಶವನ್ನಾದರೂ ತ್ಯಜಿಸಿ, ತನ್ನ ಹಿಂದೂ ಮಿತ್ರರ ಸೇವಾಕಾರ್ಯದಲ್ಲಿ ತೊಡಗಿದಳು. ಹಿಂದೂದೇಶದವರು ಸ್ವಾತಂತ್ರ್ಯರಾಗಲು ಪಡುವ ಶ್ರಮವನ್ನೂ, ಇಡೀ ಜಗತ್ತಿಗೆ ಶಾಂತಿದಾಯಕವಾಗಿರುವ ಗಾಂಧಿತತ್ವವನ್ನೂ ವಿದೇಶಗಳಿಗೆ ಸಾರುವಳು. ಈಕೆಯ ನಿಜವಾದ ಹೆಸರು ಮಿಸ್ ಮೇರಿ ಅಲ್ಲಿ ಚೆಸ್ಲಿ ಎಂದು.

ಗಾಂಧೀಜಿಯವರು ಈ ಶೋಕಸಮಾಚಾರವನ್ನು ಕೇಳಿ ಸಮುಸ್ತ ಹಿಂದೂದೇಶಕ್ಕೆ ಆಕೆಯಿಂದಾದ ಅಪಾರ ಸೇವೆಯನ್ನೂ ಆಕೆಯ ಗುಣವನ್ನೂ ಶ್ಲಾಘಿಸಿ, ಶೋಕ ಸೂಚನೆ ಮಾಡಿರುವರು.

ಬ್ರಿಟಿಷ ಪೋಲೀಸರ ಮೇಲೆ ಕಲ್ಲುಗಳನ್ನೆಸೆದರು.

ಪೋಲೀಸರು ಹೆಂಗಸರ ಮೇಲೆ ಗುಂಡು ಹಾರಿಸಿದರು!

ಯೆಹೂದ್ಯ ಜಹಜುಗಳ ಮೇಲೆ ಅರಬ್ಬಿಯವರು ಗುಂಡುಹಾರಿಸಿದರು.

ಅರಬ್ಬಿ ಹೆಂಗಸರು ಪೆಲೆಸ್ಟೈನ್ ಗಲಭೆಗಳಲ್ಲಿ ಪ್ರವೇಶಿಸಿದ್ದಾರೆ. ಅವರು ಈ ದಿನ ಬ್ರಿಟಿಷ ಪೋಲೀಸ ಪಡೆಯೊಂದರ ಮೇಲೆ ಕಲ್ಲುಗಳನ್ನು ಎಸೆದರು. ಬ್ರಿಟಿಷ್ ಕಾನ್ಸ್‌ಟೇಬಲನೊಬ್ಬನಿಗೆ ವಿಶೇಷ ಗಾಯಗಳಾದುವು. ಪೋಲೀಸಿನವರು ಹೆಂಗಸರ ತಲೆ ಮೇಲೆ ಗುಂಡುಹಾರಿಸಬೇಕಾಯಿತು. ಆದರೆ, ಆಕಸ್ಮಾತ್ತಾಗಿ ಒಂದು ಗುಂಡು ಒಬ್ಬಳಿಗೆ ತಗಲಿ ಅವಳು ಮೃತಳಾದಳು.

ರಿಚರ್ಡ್ ಬೊನಾರ್ಟ್ ಎಂಬ ಯೆಹೂದ್ಯರಿಗೆ ಸೇರಿದ ಜಹಜೊಂದು ಹಾಳಾದವನ್ನು ಸಮೀಪಿಸುತ್ತಿರುವಾಗ ಇನ್ನೂ ಅದು ಹೆರುಸಲೇಂ ಅಧಿಕಾರಕ್ಕೊಳಪಟ್ಟ ಪ್ರದೇಶಕ್ಕೆ ಬರುವ ಮುಂಚಿತವಾಗಿಯೇ ಅದರ ಮೇಲೆ ಅರಬ್ಬಿಗಳು ಸ್ಟೀಂಲಾಂಚುಗಳಲ್ಲಿ ಕುಳಿತು ಬಾಂಬುಗಳನ್ನೆಸೆದರು. ಆ ಜಹಜು ಟೆಲಾವಿವ್‌ಗೆ ಹೊರಟುಹೋಯಿತು. ಪೋಲೀಸಿನವರು ಆ ಸ್ಟೀಂ ಲಾಂಚುಗಳನ್ನು ವಶಪಡಿಸಿಕೊಂಡಿದ್ದಾರೆ.

ಬ್ರಿಟಿಷ ಪೋಲೀಸ್ ಪಡೆಯು ವಿನಾಶವಾಗುವಿದರಲ್ಲಿತ್ತು

ಮೇ ೨೬. ಗೃಲಿಲ ಪ್ರದೇಶದಲ್ಲಿ ಟಾಬೂರ ಗುಡ್ಡದ ತಳದಲ್ಲಿ ೧೦ ಜನರನ್ನೊಳಗೊಂಡಿದ್ದ ಬ್ರಿಟಿಷ್ ಪೋಲಿಸ್ ಪಡೆಯೊಂದು ಸಂಪೂರ್ಣವಾಗಿ ವಿನಾಶವಾಗುತ್ತಿದರಲ್ಲಿತ್ತು.

ಯೆಹೂದ್ಯರಿಗೆ ಸೇರಿದ ಒಂದು ಹೊಲದ ಆತಿಕ್ರಮ ಪ್ರವೇಶಮಾಡುತ್ತಿದ್ದ ಮೂವರು ಅರಬಿಗಳನ್ನು ಪೋಲೀಸಿನವರು ದಸ್ತಗಿರಿಮಾಡಿದರು. ಅವರನ್ನು ಠಾಣೆಗೆ ಕರೆದೊಯ್ಯುತ್ತಿರುವಾಗ ೨೫೦ ಜನ ಅರಬ್ಬಿಗಳು ಕುದುರೆ ಸವಾರಿಗಳಾಗಿ ತಮ್ಮ ಸಮೀಪಕ್ಕೆ ಬರುತ್ತಾ ಮತ್ತು ತಮ ಮೇಲೆ ಗುಂಡುಹಾರಿಸುತ್ತಿರುವುದನ್ನು ನೋಡಿದರು. ಪೋಲೀಸರು ಲೂಯಿಸ್‌ಗನ್ ಎಂದು ಕರೆಯಲ್ಪಡುತ್ತಿರುವ ಬಂದೂಕಿನಿಂದ ಸೂರದಿಂದಲೇ ಅರಬ್ಬಿಗಳ ಮೇಲೆ ಗುಂಡುಗಳನ್ನು ಹಾರಿಸಿದರು. ಆದರೆ ಅರಬಿಗಳು ತಮ್ಮನ್ನು ಸುತ್ತರಿಸಲು ಪ್ರಯತ್ನಿಸುತ್ತಿರುವುದನ್ನು ಕಂಡು ತಮ್ಮಲ್ಲಿಯೂ ಮದ್ದುಗುಂಡುಗಳು ಕಡಿಮೆಯಾಗಿರುವುದನ್ನು ತಿಳಿದುಕೊಂಡು ಅಬೋಲ್ ದಾರ್ ಮುಖ್ಯ ಠಾಣ್ಯಕ್ಕೆ ಹಿಂತಿರಿದರು. ಅಲ್ಲಿಂದ ಸೈನ್ಯಸಹಾಯವನ್ನು ಪಡೆದುಬಂದು ಅರಬ್ಬಿಗಳನ್ನೋಡಿಸಿದರು. ಅರಬ್ಬಿಗಳು ತಮ್ಮಲ್ಲಿ ಸತ್ತವರನ್ನೂ ಗಾಯಗೊಂಡವರನ್ನೂ ಎತ್ತಿಕೊಂಡು ಪಲಾಯನಮಾಡಿದರು.

'ನೀವೇನೂ ಮಾಡಿ, ನಾವು ಜಗ್ಗುವುದಿಲ್ಲ'—ಬ್ರಿಟಿಷ ಹೈಕಮಿಶನರ ಭಾಷಣ

'ಮ್ಯಾಂಡೇಟಿನ ನಿಯಮಗಳ ಪ್ರಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ಬ್ರಿಟಿಷ ಸರಕಾರವು ಎಳ್ಳಷ್ಟೂ ಹಿಮ್ಮುಖವಾಗುವುದಿಲ್ಲ. ನಿಮ್ಮ ಮುಷ್ಕರಗಳಾಗಲೀ, ನಿಮ್ಮ ಕೊಲೆಗಳಾಗಲೀ, ನಮ್ಮನ್ನು ಜಗ್ಗಿಸಲಾರವು ಎಂದು ಸರ್ ವೊಕೋಪ್‌ರವರು ಟೆಲಅವಿವ್‌ನಲ್ಲಿ ಎಂಜಿನಿಯರ್ ಡೇ ಮಹೋತ್ಸವದ ಆಚರಣೆಯ ಸಂದರ್ಭದಲ್ಲಿ ಹೇಳಿದರು.

ಶಾಸನಬದ್ಧರಾಗಿ ನಡೆದುಕೊಳ್ಳುತ್ತಿರುವ ನಾಗರಿಕರು ತೋರಿಸುತ್ತಿರುವ ಸಹನೆ ಮೊದಲಾದುವನ್ನೂ ಅವರು ಪ್ರಶಂಸಿಸಿದರು.

ಯೆಹೂದ್ಯನೊಬ್ಬನು ಸತ್ತುಬಿದ್ದಿದ್ದನು.

ತಾ. ೨೫ನೇ ಪ್ರಾತಃಕಾಲ, ಬ್ರಿಟಿಷ್ ಯೋಧರನ್ನು ಸಮಾಧಿಮಾಡಿರುವ ಸ್ಮಶಾನದ ಬಳಿ ಇರುವ ಮೌಂಟ್ ಸ್ಕೋಪಸ್ ಎಂಬ ಗುಡ್ಡದ ಮೇಲೆ ಯೆಹೂದ್ಯನೊಬ್ಬನು ಗುಂಡಿನೇಟಿಗೆ ತುತ್ತಾಗಿ ಸತ್ತುಬಿದ್ದಿದ್ದನು.

ತಾ. ೨೫ರಲ್ಲಿ ನೆಬ್ಲಸಿನ ಸರಕಾರೀ ಆಸ್ಪತ್ರೆಯ ಸಮೀಪದಲ್ಲಿರುವ ಪಟಾಕಿ ಕಾರ್ಖಾನೆಯೊಂದರಲ್ಲಿ ಮದ್ದು ಸಿಡಿದು ಒಬ್ಬ ಹೆಂಗಸೂ ಇಬ್ಬರು ಮಕ್ಕಳೂ ಭಸ್ಮೀಭೂತರಾದರು.

ಯೂರೋಪಿನಲ್ಲಿ ಇನ್ನೊಂದು ಯುದ್ಧವಾಗುವುದಿಲ್ಲ.

ಮುಸಲೆನಿಯ ಭರವಸೆ.

"ಬ್ರಿಟನಿನಿಂದ ನಾನಾವುದನ್ನೂ ಬೇಡುವುದಿಲ್ಲ. ನಮ್ಮಿಂದ ಸಾಧ್ಯವಾದ ಮಟ್ಟಿಗೆ ಬ್ರಿಟನಿಗೆ ಯೋಗ್ಯ ಭರವಸೆಗಳನ್ನು ಕೊಡಲು ನಾನು ಸಿದ್ಧನಿದ್ದೇನೆ" ಎಂದು ಮುಸಲೆನಿಯು ಫ್ರೆಂಚ ಪತ್ರಿಕೆಯ ಬಾತ್ಮಿದಾರರಿಗೆ ತಿಳಿಸಿದ್ದಾರೆ. ಇಟೇಲಿಯು ಎಬಿಸೀನಿಯವನ್ನು ಸೇರಿಕೊಂಡಿರುವುದನ್ನು ಬ್ರಿಟಿಷರು ಅಂಗೀಕರಿಸುವುದಾದರೆ, ಬ್ರಿಟನಿನ ಪೂರ್ವ ಆಫ್ರಿಕಾದ ವಸಾಹತುಗಳನ್ನಾಗಲಿ, ಈಜಿಪ್ಟ್ ದೇಶವನ್ನಾಗಲಿ ಮುಟ್ಟುವುದೇ ಇಲ್ಲವೆಂದು ಇಟೇಲಿಯು ಭರವಸೆಕೊಡಲು ಸಿದ್ಧವಿದೆಯೆ? ಎಂದು ಕೇಳಿದ ಬಾತ್ಮಿದಾರರ ಪ್ರಶ್ನೆಗೆ, ಮೇಲಿನದು ಮುಸಲೆನಿಯ ಉತ್ತರವಾಗಿರುತ್ತದೆ.

"ಯೂರೋಪಿನಲ್ಲಿ ಯುದ್ಧವಾಗುವುದೇ ಇಲ್ಲ" ಎಂದು ಮುಸಲೇನಿಯ ಅಭಿಪ್ರಾಯವಾಗಿರುತ್ತದೆ. ಇವರು ಯೂರೋಪಿನ ಶಾಂತಿಗಾಗಿ ತಮ್ಮ ಶಕ್ತಿ ಮೀರಿ ಪ್ರಯತ್ನಿಸುವರೆಂದು ಹೇಳಿದರು.

"ಶಾಂತಿಯು ನೆಲಸಬೇಕಾದರೆ ವಿವಿಧ ಜನಾಂಗಗಳ ಹಿತಾಹಿತಗಳನ್ನು ಸಮದೂಗಿಸಿ ಎಲ್ಲರೂ ಸಂತುಷ್ಟರಾಗಿರುವಂತೆ ಮಾಡಬೇಕು." ಎಂದು ಮುಸಲೆನಿಯ ಮಾತು.

ಮುಸಲೆನಿಯ ಸಾಮ್ರಾಜ್ಯ ಗೌರವ.

ರೋಮಿನಲ್ಲಿ ಹಬ್ಬ

ತಮಗೆ ಒದಗಿದ ಜಯದ ಸಂತೋಷವನ್ನು ವ್ಯಕ್ತಪಡಿಸಲು, ಇಟೇಲಿಯ ಫೆಸಿಯಿಷ್ಟ್ ದಂಗಡೆಯವರು ಒಂದು ಭಾರಿ ಪೆರೇಡನ್ನು ಜರಗಿಸಿದರು. ಈ ಪೆರೇಡಿನ ಉತ್ಸವಕ್ಕಾಗಿ ನಗರವು ಬಾವುಟಗಳಿಂದಲೂ ತೋರಣಗಳಿಂದಲೂ ಅಲಂಕೃತವಾಗಿದ್ದಿತು. ಮುಸಲೇನಿಯು ಅಶ್ವಾರೂಢನಾಗಿ ಪ್ರಮುಖ ಸೇನಾನಾಯಕರಿಂದಲೂ ಸಚಿವರಿಂದಲೂ ಆವೃತನಾಗಿದ್ದನು. ಮುಸಲೇನಿಯು ತನ್ನ ಅರಮನೆಯ ಅಂಗಳದಿಂದ ಪೆರೇಡಿಗಾಗಿ ನೆರೆದ ಬಾಲಕ ಬಾಲಿಕೆಯರನ್ನೂ ತರುಣರನ್ನೂ ಯೋಧರನ್ನೂ ಕೆಳಗಿನ ರೀತಿ ಸಂಬೋಧಿಸಿದನು. "ನನ್ನ ಯೋಧ ಬಂಧುಗಳೇ, ಇದುವರೆಗೆ ನೀವು ನ್ಯಾಯವಾದ ರೀತಿಯಲ್ಲಿ ಮುಂದುವರಿದಿರುತ್ತೀರಿಯೇ"? "ಹೌದು" ಎಂದು ಏಕಕಂಠದಿಂದ ನೆರೆದವರಿಂದ ಉತ್ತರ ಬಂತು.

"ಇನ್ನು ಮುಂದೆಯೂ ನೀವು ಇದೇ ರೀತಿಯಲ್ಲಿ ವರ್ತಿಸುವೆವು ಎಂದು ಈ ದಿವಸ ನಾನು ಭರವಸೆಕೊಡುವೆನು. ನೀವು ನಾಳಿನ ಸೈನಿಕರು. ನಿಮ್ಮ ಸಹಕಾರದಿಂದ ನಮ್ಮ ಆಕ್ರಾಧಿಪತ್ಯವನ್ನು ರಕ್ಷಿಸಿಕೊಳ್ಳಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇನೆ" ಎಂದು ಮುಸಲೆನಿಯು ಘೋಷಿಸಿದನು.

ಈಜಿಪ್ಟಿನಲ್ಲಿ ರಾಜಕೀಯ ಬಂದಿಗಳ ಬಿಡುಗಡೆ.

ನಿರುದ್ಯೋಗ ನಿವಾರಣಾ ಕಾರ್ಯಗಳು.

ಈಜಿಪ್ಟಿನ ಹೊಸ ಶಾಸನಸಭೆಯ ಅಧಿವೇಶನವು ಪ್ರಾರಂಭವಾಗಿರುತ್ತದೆ. ನವೀನ ಸರಕಾರದ ಮುಖಂಡರಾದ ನಹಾಸ್ ಪಾಶಾರವರು ರಾಜನಿರೂಪವನ್ನು ಓದಿದರು. ಆಂಗ್ಲ—ಇಜಿಪ್ಟ್ ಸಂಧಾನಗಳು ಶಾಂತಿಯುತವಾಗಿ ನಡೆಯುತ್ತಿರುವುದಾಗಿಯೂ, ತೊಡಕುಗಳೆಲ್ಲವೂ ಪರಿಹರಿಸಿಕೊಳ್ಳಲು ಸಾಧ್ಯವಾಗುವುದಾಗಿಯೂ, ರಾಜನಿರೂಪದಲ್ಲಿ ತಿಳಿಸಲಾಗಿದೆ. ಈಜಿಪ್ಟಿನ ಸ್ವಾತಂತ್ರ್ಯವು ಸಾಧಿಸಲ್ಪಟ್ಟು ಆಂಗ್ಲ ಈಜಿಪ್ಟ್ ಮೈತ್ರಿಯು ಗಾಢವಾಗಿರುವಂತೆ ಒಪ್ಪಂದವು ಶೀಘ್ರದಲ್ಲಿ ಆಗತಕ್ಕದ್ದಿದೆ ಎಂದು ಪ್ರಭುಗಳು ತಮ್ಮ ನಿರೂಪದಲ್ಲಿ ವ್ಯಕ್ತಗೊಳಿಸಿದ್ದಾರೆ. ಕೆಲಸಗಾರರಿಗೆ ಸಹಾಯ, ಕೃಷಿಕರಿಗೆ ಸಾಲ, ನಿರುದ್ಯೋಗಿಗಳಿಗೆ ಕೆಲಸ ಇವುಗಳ ಕುರಿತು, ನಿರೂಪದಲ್ಲಿ ತುಂಬಾ ಭರವಸೆಗಳಿವೆ. ೧೯೩೦ರ ಈಚೆ ಮೂರು ವರುಷ ಒಳಗಿನ ರಾಜಕೀಯ ಅಪರಾಧಗಳಿಗಾಗಿ ಬಂದಿಗಳಾಗಿರುವವರನ್ನೆಲ್ಲಾ ಬಿಡುಗಡೆಮಾಡಲಾಗುವುದಂತೆ.

ಮಿ. ಸಿ. ಎ. ಕಿಂಗ್‌ರವರ ಮರಣ.

ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಎಂಜಿನೀಯರಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಮಿ. ಸಿ. ಎ. ಕಿಂಗ್ ಮೃತರಾದರು. ಇವರು ೧೭ ವರ್ಷಗಳ ಕಾಲ ಈ ವಿಶ್ವವಿದ್ಯಾಲಯದಲ್ಲಿ ಕೆಲಸಮಾಡಿದರು.

'ಭಾರತದಲ್ಲಿ ಪ್ರಜಾಸತ್ತೆಯಿಲ್ಲ; ಸರಕಾರವು ನಿರಂಕುಶವಾಗಿದೆ'.

ಪ್ರಜಾ ಸ್ವಾತಂತ್ರ ಸಂರಕ್ಷಣಾ ಸಂಘವು ಶಾಸನಾತೀತವಲ್ಲ.

ಸರ್ ಸಪ್ರೂರವರಿಗೆ ಜವಾಹಲಾಲರ ಭರವಸೆ!

"ಪ್ರತಿಯೊಂದು ಸರಕಾರವೂ ಅದ್ದು, ತನ್ನ ಮೇಲೆ ಪ್ರಬಲವಾದ ಟೀಕೆಗಳಾಗದಂತೆಯೂ, ತನಗೆ ಬಲವತ್ತರವಾದ ವಿರೋಧವಿಲ್ಲದಂತೆಯೂ ನಡೆಸಲು ಹೊರಡುವುದು. ಪ್ರಜಾಧಿಪತ್ಯವು ಪದೇ ಪದೇ ಸರಕಾರವನ್ನು ಅಡ್ಡಿಪಡಿಸಿ, ಸರಕಾರವು ಮಿತಿಮೀರಿದ ನಿರಂಕುಶಾಧಿಕಾರವನ್ನು ಹೊಂದದಂತೆ ತಡೆಯುತ್ತಿದ್ದರೇನೇ ಪ್ರಜಾಸತ್ತೆಯ ಭಾವನೆಯು ಹರಡುವುದು ಸಾಧ್ಯ. ಭಾರತದಲ್ಲಾದರೋ, ಪ್ರಜಾಸತ್ತೆ ಇಲ್ಲವೇ ಇಲ್ಲವೆನ್ನಬಹುದು. ಅದರಿಂದ ಸರಕಾರವು ನಿರಂಕುಶಾಧಿಪತ್ಯವನ್ನು ತಾಳಿದೆ. ಸರಕಾರದ ಲಂಗುಲಗಾಮಿಲ್ಲದ ನಿರಂಕುಶಾಧಿಕಾರವನ್ನು ಅಡ್ಡಿಪಡಿಸಲೇನಾದರೂ ಮಾಡಬೇಕೆಂದು ನಾನು ಕಾತರನಾಗಿದ್ದೇನೆ. ನಾವು ಸ್ಥಾಪಿಸಬೇಕೆಂದಿರುವ ಪ್ರಜಾ ಸಂರಕ್ಷಣಾ ಸಂಘವು ಅವಶ್ಯವಾಗಿ ನ್ಯಾಯಬದ್ಧವಾಗಿರುವುದು, ಶಾಸನಬದ್ಧವಾಗಿರುವುದು. ಇದಕ್ಕೂ ಸರಕಾರಕ್ಕೂ ಘರ್ಷಣವಾಗುವುದಿಲ್ಲ" ಎಂದು ಪಂಡಿತ ಜವಾಹರಲಾಲರು ಸರ್ ತೇಜ್ ಬಹದ್ದೂರ್ ಸಪ್ರೂರವರಿಗೆ ಪತ್ರ ಬರೆದಿದ್ದಾರೆ.

ಆಸ್ಟ್ರಿಯಾದಲ್ಲಿ ನಾಜಿಗಳ ಹಾವಳಿ.

ಆಯುಧಗಳನ್ನು ಕದಿಯಲು ಪ್ರಯತ್ನ

ಮೇಲಿನ ಆಸ್ಟ್ರಿಯಾ ಪ್ರದೇಶದ ವಾಲ್ಸೆಂಬರ್ಗ್‌ನಲ್ಲಿರುವ ಹೀಂವೆಹರ್ ದಳದ ಮುಖಂಡರಾದ ಪ್ರಿನ್ಸ್ ಸ್ಟಾರೆಂಬರ್ಗರ ಅರಮನೆಯಲ್ಲಿ ಅವರ ದಳದ ಶಸ್ತ್ರಾಸ್ತ್ರಗಳಿರುವುವಾಗಿ ನಾಜಿಗಳು ನಂಬಿಕೊಂಡು, ಅದನ್ನು ಕದಿಯುವ ಸಲುವಾಗಿ ಅರಮನೆಗೆ ನುಗ್ಗಲೆತ್ನಿಸಿದರು. ಪೋಲೀಸಿನವರಿಗೆ ಈ ವಿಷಯವು ಹೇಗೋ ಮೊದಲೇ ತಿಳಿದಿತ್ತಾಗಿದ್ದುದರಿಂದ, ಅವರು ನಾಜಿಗಳನ್ನು ಅರಮನೆಯ ಎದುರಿರುವ ಮೈದಾನದಲ್ಲೇ ತಡೆಗಟ್ಟಿದರು. ನಾಜಿಗಳು ತಮ್ಮ ಪ್ರಯತ್ನಕ್ಕೆ ಭಂಗವುಂಟಾದುದನ್ನು ನೋಡಿ, ಪೋಲೀಸಿನವರ ಮೇಲೆ ಗುಂಡುಹಾರಿಸಿದರು. ಕತ್ತರಿಣಾಮವಾಗಿ ನಾಜಿಪಂಗಡದವನೊಬ್ಬನು ಮೃತನಾದನು. ಈ ಸಮಯ ಸ್ಟಾರೆಂಬರ್ಗರವರು ಅರಮನೆಯಲ್ಲಿರಲಿಲ್ಲ. ಮುಕ್ಕೊಂದು ನಾಜಿಗಳು ತಮ್ಮ ಉದ್ದೇಶವನ್ನು ಸಾಧಿಸಲು ಯತ್ನಿಸುವರೆಂದು ಪೋಲೀಸರು ಅರಮನೆಯನ್ನು ಕಾವಲುಮಾಡುತ್ತಿರುವರು. ಕೆಲವು ಮಂದಿ ನಾಜಿಗಳನ್ನು ದಸ್ತಗಿರಿ ಮಾಡಿದ್ದಾರೆ. ಇದು ಆಸ್ಟ್ರಿಯಾವನ್ನು ನಾಜಿಜರ್ಮನಿಗೆ ಸೇರಿಸಲು ನಾಜಿಗಳ ಪ್ರಯತ್ನದ ಪರಿಣಾಮವಾಗಿರುತ್ತದೆ.

ಅಬಿಸೀನಿಯಾ ಚಕ್ರವರ್ತಿಗಳು ಇಂಗ್ಲಾಂಡಿಗೆ ತೆರಳುವರು

ಅಬಿಸೀನಿಯಾ ಚಕ್ರವರ್ತಿಯವರು ಇಂಗ್ಲೆಂಡನ್ನು ಸೇರುವ ವಿಚಾರ ಬ್ರಿಟಿಷ ಸರಕಾರದ ಸದಸ್ಯರಲ್ಲಿ ಕೆಲವು ಪರಸ್ಪರ ಭೇದಗಳು ಉಂಟಾಗಿದ್ದವು. ಆದರೆ ಈ ಪ್ರಶ್ನೆಯು ಪಾರ್ಲಿಮೆಂಟಿನ ಇತ್ಯರ್ಥಕ್ಕೆ ಒಳಗಾಗಿ ಚಕ್ರವರ್ತಿಯವರು ಇಂಗ್ಲಾಂಡಿಗೆ ಬರಬಹುದೆಂದಾಗಿದೆ. ಚಕ್ರವರ್ತಿಯವರು, ಜೆರುಸಲೇಮಿನಿಂದ ಬ್ರಿಟಿಷ ಯುದ್ಧ ನೌಕೆಯ ಮೇಲೆ ಆತ್ತಕಡೆಗೆ ಹೊರಟಿರುವರು.

For your
DIAMONDS
Enquire at—
SOWKAR MAHAL,
Srinivas Ranga Pai,
Car Street, Mangalore.

ಚರ್ಮದ ಉರಿಯನ್ನು ಈ ಪರಿಹಾರಿ ಸಾಬೂನಿನಿಂದ ತಣಿಸಿರಿ

ಕೆಲವೊಂದು ವೇಳೆ ಅತೀ ಉಷ್ಣದಿಂದ ಚರ್ಮದ ಉರಿತವು ದ್ವಿಗುಣಿತವಾಗುವುದುಂಟು ಆಗ ಅದರ ವೇದನೆಯು ಬಣ್ಣಿಸಲಸಾಧ್ಯ. ಅಂತಹ ಸಂದರ್ಭದಲ್ಲಿ ಇರಾಸ್ಮಿಕ್ ಗ್ಲಿಸರಿನ್ ಸಾಬೂನನ್ನು ಉಪಯೋಗಿಸಲು ಮರೆಯಬೇಡಿರಿ

ಈ ಸಾಬೂನಿನಲ್ಲಿ ಅತ್ಯದ್ಭುತವಾದ ಲಕ್ಷಣಗಳಿವೆ. ಇದರಲ್ಲಿ ಕಾರ್ಬಾಲಿಕ್ ದ್ರಾವಕವೂ, ಗ್ಲಿಸರಿನೂ ಮಿಶ್ರವಾಗಿದ್ದುದರಿಂದ ಅದರಿಂದ ಉದ್ಭವಿಸುವ ಪರಿಹಾರಿ ನೊರೆಯು ದೇಹದೊಳಗಿನ ರಂಧ್ರಗಳ ಮೂಲಕ ಒಳಹೊಕ್ಕು, ವಿಷಾಣುಗಳನ್ನು ಕೊಂದು ದೇಹಕ್ಕೆ ತಂಪನ್ನೀಯುವುದು.

ಡಾಕ್ಟರರೂ, ಚರ್ಮವ್ಯಾಧಿಗಳ ಹುಳುಕನ್ನು ಕಂಡಲ್ಲಿ ಅಂಥವರಿಗೆ ಈ ಸಾಬೂನನ್ನೇ ಶಿಫಾರಸು ಮಾಡುತ್ತಾರೆ. ಇದನ್ನು ದಿನಾಲೂ ಉಪಯೋಗಿಸಿದಿರಾದರೆ ಯಾವ ಚರ್ಮರೋಗಗಳಿಗೂ ನೀವು ಬಲಿ ಬೀಳಲಾರಿರಿ. ಇರಾಸ್ಮಿಕ್ ಕಾರ್ಬಾಲಿಕ್ ಗ್ಲಿಸರಿನ್ ಸಾಬೂನು ತೈಲಾಭ್ಯಂಜನಕ್ಕೂ ಇದು ಬಹಳ ಉಪಯೋಗಕಾರಿಯಾಗಿದೆ.

ERASMIC
36% CARBOLIC GLYCERINE SOAP

THE ERASMIC CO. LTD., LONDON, ENGLAND

K-ECG 495-403

ಸಾಬೂನು ತೆಗೆದ ನಂತರ ಇದನ್ನು ವೀಳ್ಯದೆಲೆಯ ಪೆಟ್ಟಿಗೆಯಾಗಿ ಮಾಡಬಹುದು.

ಬಾಬೂಲಿನ್

ಇದು ಚಿಕ್ಕ ಶಿಶುಗಳಿಗಾಗಿಯೇ ತಯಾರಿಸಲ್ಪಟ್ಟಿದೆ. ಸೋಡಿಯಮಿನ ಲವಣ, ಮೆಗ್ನೆಶಿಯಮ್ ಪೊಟೇಶಿಯಮ್ ಮತ್ತು ಬಡಿಶೇಪ, ಓಮ ಮತ್ತು ಮೆಂಥಲ್ ಇವುಗಳ ಮಧುರವೂ ರುಚಿಕರವೂ ಆದ ಮಿಶ್ರಣದಿಂದ ತಯಾರಿಸಲ್ಪಟ್ಟಿದೆ ಚಿಕ್ಕಮಕ್ಕಳ ಉದರಶೂಲೆಯನ್ನು ನಿವಾರಿಸಿ, ಮಕ್ಕಳ ಕರುಳುಗಳನ್ನು ಸ್ವಚ್ಛವಿರಿಸಿ, ಬಲಗೊಳಿಸಿ ಕಾಪಾಡುವುದು

ವಾಂತಿ, ವಾಯುಕಟ್ಟು ಇವುಗಳಿಗೂ ಉಪಯೋಗಿಸಲ್ಪಡಬಹುದಾದ ಆರೋಗ್ಯ ಔಷಧ. ಮಕ್ಕಳಿಗೆ ಹಲ್ಲು ಮೂಡುವ ಕಾಲದಲ್ಲಾಗುವ ತೊಂದರೆಗಳನ್ನೆಲ್ಲಾ ನಿಲ್ಲಿಸುವುದು. ಅನುಪಾನ ಪತ್ರಿಕೆಯೊಂದಿಗಿದೆ.

ಬಾಟ್ಲಿ 1ಕ್ಕೆ
14 ಆಣೆ.

ಪೋಸ್ಟೇಜು
ಪ್ರತ್ಯೇಕ.

ಬಾಬ್ ಕೆಮಿಕಲ್ ವರ್ಕ್ಸ್ ಮುಂಬಾಯಿ ಮತ್ತು ಕಲ್ಕತ್ತಾ.

ಎರಡಾಣೆ ಅಂಚೆ ಚೀಟನ್ನು ಕಳುಹಿದವರಿಗೆ ಒಂದು ಸ್ಯಾಂಪಲ್ ಬಾಟ್ಲಿ ಕಳುಹಿಸಲಾಗುವುದು

ದಕ್ಷಿಣ ಕನ್ನಡ ಜಿಲ್ಲೆಗೆ ಏಜಂಟರು - ಪ್ರೂಸ್ಪಲರ್ ಸ್ಟೋರ್ಸ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ ವಾರಪತ್ರಿಕೆಗೆ

ಇಂದೇ ಚಂದಾದಾರರಾಗಿರಿ.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ ಸರ್ವೀಸು,

ಚಿಕ್ಕಮಗಳೂರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಮೈಸೂರು ಮತ್ತು ಮುಂಬಾಯಿ ಪ್ರಾಂತ್ಯಗಳಲ್ಲಿ ಸಂಚರಿಸಲಿಕ್ಕೆ ಅನುಕೂಲವಾದ ಮೋಟರ ಸರ್ವೀಸುಗಳು.

ಮುಂಬಾಯಿಯಿಂದ - ಪೂನಾ - ಬೆಳಗಾಂವ - ಧಾರವಾಡ - ಹುಬ್ಬಳ್ಳಿ - ಗೋವಾ ಇವೆಲ್ಲ ಕಡೆಗಳಿಂದ,

ಮಂಗಳೂರಿಗೆ - ಪುತ್ತೂರು - ಉಡುಪಿ - ಕಾರ್ಕಳ - ಬೆಳ್ತಂಗಡಿ - ವೇಣೂರು - ಬಂಟವಾಳ ಮೊದಲಾದ

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಿಗೆ

ಶೀಘ್ರ ಪ್ರಯಾಣ- ಅನುಕೂಲ ಸೌಕರ್ಯ- ಅತ್ಯಲ್ಪ ಖರ್ಚು- ಸುಂದರವಾದ ನೋಟ.

ಅಲ್ಲದೆ

ಮೈಸೂರಿನ ಅರಸರ ಶೆಕೆಕಾಲದ ವಾಸಸ್ಥಾನವಾದ ಮತ್ತು ರಬ್ಬಣದ ಗಸಿಯಾದ ಕೆಮ್ಮಣ್ಣು ಗುಂಡಿ - ಯಾತ್ರಾಸ್ಥಳವಾದ ಬಾಬಾ ಬುಡಾನಗಿರಿ - ಕೈಗಾರಿಕೆಯ ಕೇಂದ್ರವಾದ ಭದ್ರಾವತಿ - ಶಿಲಾಶಿಲ್ಪದ ಬೇಲೂರು, ಹಳೆಬೀಡು - ಮಲೆನಾಡಿನ ಸಂಪತ್ತಾಗಿರುವ ಪ್ರಚಂಡ ಪಶ್ಚಿಮ ಘಟ್ಟಗಳು -

ಇವೆಲ್ಲ ನೋಟಗಳ ಅನುಭವವಾಗಬೇಕಾದರೆ ನಮ್ಮ ಸರ್ವೀಸುಗಳಲ್ಲಿ ಸಂಚರಿಸಿರಿ

Chikmagalur Public Conveyance Motor Service,

CHIKMAGALUR.

ಸಂಪಾದಕರ ಟಪ್ಪಾಲು ಪೆಟ್ಟಿಗೆ.

ಬಾತ್ಮೀದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.—ಸಂ. ಸ್ವ.

ಮೂಡಬಿದ್ರೆಯ ವಾಚನಾಲಯ.

ಅಯ್ಯಾ ಸ್ವದೇಶಾಭಿಮಾನಿಯೇ,

ನಮ್ಮ ಈ ವಾಚನಾಲಯವನ್ನು ಕೆಲವು ಉತ್ಸಾಹೀ ತರುಣರು ಸ್ಥಾಪಿಸಿ ಅದನ್ನು ಸಾರ್ವಜನಿಕರಿಗೆ ಒಪ್ಪಿಸಿರುತ್ತಾರೆ. ಆದರೂ ಸಾರ್ವಜನಿಕರು ಮಾತ್ರ ಅದು ತಮ್ಮದೆಂದು ಮನಃಪೂರ್ವಕ ಒಪ್ಪಿಕೊಂಡಂತೆ ತೋರುವುದಿಲ್ಲ. ಸ್ಥಾಪಕರೂ ತಮ್ಮ ಅಭಿಪ್ರಾಯಗಳನ್ನೇ ಮಾನ್ಯವೆಂತ ಗ್ರಹಿಸಿ, ಎಲ್ಲರೂ ಅದರಂತೆ ನಡೆಯಬೇಕೆಂಬ ಆತುರವುಳ್ಳವರಾಗಿದ್ದಾರೆ. ಈ ವಾಚನಾಲಯಕ್ಕಾಗಿ ಶ್ರದ್ಧೆಯಿಂದ ಕೆಲಸ ಮಾಡುವವರು ೪ ಯಾ ೫ ಮಂದಿ ಎಂದರೆ ತಪ್ಪಾಗದು. ದುರ್ದೈವವಶಾತ್ ಇತ್ತೀಚೆಗೆ ಅವರಲ್ಲಿಯೂ ಮನಸ್ಕ್ಲೇಶಗಳು ಬಂದು ಭಿನ್ನಾಭಿಪ್ರಾಯಗಳಾಗಿ ಪತ್ರಿಕೆಗಳ ವಿಷಯ ಚರ್ಚೆ ಬಂದು ವಾಚನಾಲಯದ ಅಭಿವೃದ್ಧಿಗೆ ತಡೆಯುಂಟಾಗುವುದೋ ಎಂಬ ಭೀತಿಯುಂಟಾಗಿದೆ. ತಮ್ಮ ಅಭಿಪ್ರಾಯಗಳೇ ಗೆಲ್ಲಬೇಕೆಂಬ ಇರಾದೆಯಿಂದ ವ್ಯಕ್ತಿಪರವಾಗಿ ದ್ವೇಷವನ್ನು ಕಟ್ಟಿಕೊಂಡು ಹಟಸಾಧಿಸಿ ವೈಮನಸ್ಯವನ್ನು ಹೆಚ್ಚಿಸಿಕೊಳ್ಳದೆ ಎಲ್ಲರೂ ವಾಚನಾಲಯದ ಅಭಿವೃದ್ಧಿಯನ್ನು ಕೋರಿ ಮುಂದಿನಂತೆ ಸಹೋದರಭಾವದಲ್ಲಿ ನಡೆಯಲೆಂದು ಭಗವಂತನಲ್ಲಿ ನನ್ನ ಪ್ರಾರ್ಥನೆ.

ಇಷ್ಟರ ವರೆಗೆ ಪ್ರತಿ ವರ್ಷವೂ ತರಿಸುತ್ತಿದ್ದ ವಿನೋದಪರವಾದ My Magazine ಮತ್ತು Merry Magazine ಗಳನ್ನು ಈ ವರ್ಷ ವಾಚನಾಲಯದಲ್ಲಿ ಇಡಲೇ ಕೂಡದೆಂದು ಠರಾವು ಮಾಡಿದುದರ ಕಾರಣವು ರಹಸ್ಯವಾಗಿದೆ. ವಾಚನಾಲಯದ ಸ್ಥಾಪಕರಲ್ಲೊಬ್ಬರು ಈ ಪತ್ರಿಕೆಗಳನ್ನು ತೀವ್ರವಾಗಿ ಖಂಡಿಸಿ, ಅವನ್ನು ಉಚಿತವಾಗಿ ಕೊಟ್ಟರೂ ಇಡಬಾರದೆಂದು ಹಟಸಾಧಿಸಿದರೆಂದು ಕೇಳಲು ಆಶ್ಚರ್ಯವಾಗುತ್ತಿದೆ. ಕಾರಣ, ಅವರೇ ಈ ಪತ್ರಿಕೆಗಳನ್ನು ವಾಚನಾಲಯದಿಂದಲೇ ಈ ವರ್ಷ ತರಿಸುವರಾಗಿ ಕೆಲವು ವಾಚಕರಿಗೆ ಮಾತುಕೊಟ್ಟಿದ್ದರಂತೆ. ಆಡಳಿತ ಮಂಡಳಿಯವರು ಈ ವರ್ಷ ಅವನ್ನು ತರಿಸುವ ಆಲೋಚನೆಯನ್ನೇ ಮಾಡದುದರಿಂದ ಅವನ್ನು ತರಿಸುವ ಬಗ್ಗೆ ಪ್ರತ್ಯೇಕವಾಗಿ ವಂತಿಗೆಯಿಂದ ಆಡಳಿತ ಮೆಂಬರರೊಬ್ಬರು ಹಣವನ್ನು ಶೇಖರಿಸಿದರಂತೆ. ಅವರ ಈ ವರ್ತನೆಕ್ಕಾಗಿ, ಅವನ್ನು ವಾಚನಾಲಯದಲ್ಲಿ ಇಡಲೇ ಕೂಡದೆಂದು ವಿರೋಧಿಗಳು ಹಟಸಾಧಿಸಿದುದರ ಉದ್ದೇಶವು ವಾಚನಾಲಯದ ಹಿತದೃಷ್ಟಿಯಿಂದ ಯೋಗ್ಯವಲ್ಲವೆಂದು ದೃಢವಾಗಿ ಹೇಳಬಹುದು. ಶಾಲಾ ಮಕ್ಕಳಿಗೆ ಉಪಯೋಗಕ್ಕೆ ಬೀಳುವ 'Children's Corner' 'Do you know' ಮೊದಲಾದ ವಿಷಯಗಳು ಎಲ್ಲರೂ ಗಮನಿಸತಕ್ಕ ಸ್ವಾಮಿ ಶಿವಾನಂದ ಸರಸ್ವತಿಯವರ ಲೇಖನಗಳೂ ಒಳಗೊಂಡಿರುವ My Magazine ಇದನ್ನು ವಾಚನಾಲಯದಲ್ಲಿ ಇಡಲೇಬಾರದೆಂದು ಆಡಳಿತ ಮಂಡಳಿಯವರಿಂದ ಮಾಡಿದ ಠರಾವಿನ ಅರ್ಥವೇನು? ಬೇರವರು ಕೊಟ್ಟರೂ ಪುಕಾರು ಬಿಡೆ ಎಂಬಂತೆ ವಾಚನಾಲಯಕ್ಕೆ ಧರ್ಮಾರ್ಥವಾಗಿ ಅಂಥ ಪತ್ರಿಕೆಯನ್ನು ಕೊಟ್ಟರೂ ಇಡಲೇ ಬಾರದೆಂದು ಹಟಸಾಧಿಸುವವರ ಗುಟ್ಟನ್ನು ತಿಳಿಯದೆ ಆಡಳಿತ ಮಂಡಳಿಯವರು ನಿಶ್ಚಯಿಸಿದುದು ತುಂಬಾ ಶೋಚನೀಯ.

ಇತಿ,
'ನ್ಯಾಯಪ್ರಿಯ'

ಮೆ॥ ರಾ॥ ಸಿ. ಪಿ. ಸಿ. ಮೋಟರು ಕಂಪೆನಿಯ ಜನರಲ್ ಮೆನೇಜರರವರ ಸನ್ನಿಧಾನಕ್ಕೆ—

ಅಯ್ಯಾ, ಇದೇ ತಾ. ೧೪—೫—೩೬ನೇ ರಾಷ್ಟ್ರಬಂಧು ವಾರಪತ್ರಿಕೆಯ ೧೩ನೇ ಪುಟದ ೧—೨ನೇ ಕಲಮಿನಲ್ಲಿ ಮತ್ತು ಇನ್ನಿತರ ಕೆಲವು ವಾರ ಪತ್ರಿಕೆಗಳಲ್ಲಿಯೂ ಪುತ್ತೂರು ತಾಲೂಕು ಹಿರೇಬಂಡಾಡಿ ಗ್ರಾಮದ ಯಾವನಾದರೂ ತಮ್ಮ ಸರ್ವೀಸಿನಲ್ಲಿ ಕೆಲಸ ಬಾರದೆ, ಎಡ್ರಿಯಾಸ್ ಗೆ ಹಾರುತ್ತಾ ತಾ. ೩—೫—೩೬ರಲ್ಲಿ ಮಾತ್ರ ಜಿನೋ ಸಂದರ್ಭ ಒದಗಿ ತಮ್ಮ ಸರ್ವೀಸಿನಲ್ಲಿ ಬಂದ ಮಲ್ಲಾರು ಹೂವಪ್ಪ ಗೌಡರೆಂಬ ಮಹನೀಯರು ಬರಕೊಂಡ ಲೇಖನವೊಂದನ್ನು ಕಂಡೆನು.

ಸದ್ರಿ ದಿವಸ ಮೇಲಿನ ಮಹನೀಯರು ತನ್ನ ವಾಸಗೃಹವಾದ ಉಪ್ಪಿನಂಗಡಿಗೆ ಹೋಗುವುದರ ಪುತ್ತೂರಿನಿಂದ ಬಸ್ಸು ಬರುವಾಗ ಕಂಡ ಪಿ. ಪಿ. ಮುಹಮ್ಮದ್, ಏಜಂಟರು ಆಫೀಸಿನಲ್ಲಿ ಇಳಕೊಂಡು ಎಷ್ಟು ಹೊತ್ತಾದರೂ ತನಗೆ ಇನ್ನೂ ಕೆಲಸವಿದೆ, ಇನ್ನೂ ನಿಲ್ಲಿಸಬೇಕೆಂತ ಹೇಳಿಕೊಂಡೇ ಬಾರದೆ ಅಲ್ಲಿಯೇ ಇದ್ದುಕೊಂಡು, ಸರ್ವೀಸು ಬೋಗಾಯನಕೆರೆಯಿಂದ ವಾಪಾಸು ಹೋದ ನಂತರ ಎಡ್ರಿಯವರ ಜತೆ ಸೇರಿಕೊಂಡು ಪತ್ರಿಕೆಗಳಲ್ಲೆಲ್ಲಾ ಕೃತಕವಿಷಯಗಳನ್ನು ಬರೆದಿರುವದು ನೋಡುವಾಗ ಆಶ್ಚರ್ಯಕರವಾಗಿರುತ್ತದೆ. ಸದ್ರಿ ಹೂವಪ್ಪ ಗೌಡರು ತನ್ನ ಕೆಲಸ ತೀರಿಸಿಕೊಂಡು ಸಂಜೆಯ ಪುತ್ತೂರು—ಸುಬ್ರಹ್ಮಣ್ಯ ಶಂಕರ ವಿಟ್ಠಲ ಸರ್ವೀಸಿನಲ್ಲಿ ಕಂಚಿದಿಂದ ಬೋಗಾಯನಕೆರೆಗೆ ಹೋಗಿರುತ್ತಾರೆ.

ಆ ದಿವಸ ಸದಂಯವರು ಟಿಕೇಟು ಒಬ್ಬಂದ ಪಡಕೊಂಡು, ಟಿಕೇಟು ನಿಜವಾಗಿಯೂ ಕೊಟ್ಟವರಲ್ಲವಾದ ಪಾಂಡುರಂಗ ಮಲ್ಯರೆಂಬವರು ತನಗೆ ಟಿಕೇಟು ಕೊಟ್ಟದ್ದು ಎಂತ ಹಸಿಹಸಿ ಸುಳ್ಳು ವಾರ್ತೆಯನ್ನು ಬರೆಯುವ ಶ್ಯಾನುಭೋಗಿ ಪರೀಕ್ಷೆ ವಗೈರೆ ಪಾಸಾಗಿ ಬರುದಾಂತಿತರಾದ ಸದ್ರಿ ಹೂವಪ್ಪ ಗೌಡರು ಹೇಳುವ ನಿಜತ್ವವು ಎಷ್ಟರಮಟ್ಟಿಗೆ ಇದೆಯೆಂಬುದು ಎಂತಹ ಮನುಷ್ಯನಿಗಾದರೂ ಅರಿಯದಿರುವುದೇ?

ತನ್ನ ತಪ್ಪಿನಿಂದಾಗಿ ತನ್ನ ಕೆಲಸಗಳು ನಿರ್ನಾಮ ವಗೈರೆ ಆಗಿ ಕಷ್ಟಪಡಬೇಕಾದರೆ ಯಾರನ್ನಾದರನ್ನು ದೂರಿಕೊಂಡು ಎಡ್ರಿಯವರ ದುರ್ಬೋಧನೆಯಿಂದ ಕೃತಕ ಮಾರುದ್ಧ ಲೇಖನಗಳನ್ನು ಬರಕೊಂಡರೆ ಪ್ರಯೋಜನವಾದೀತೇ? ಇತಿ

ಕೆ. ವೆಂಕಟ್ರಮಣಯ್ಯ.

ಡಿ॥ ಬೋ॥ ಎಲಿಮೆಂಟರಿ ಉಪಾಧ್ಯಾಯರಿಗೆ ರೂಪಾಯಿ ಮೇಲೆ ೧॥ ಕಡಿತ.

ಉಪಾಧ್ಯಾಯರಿಗೆ ಕಳೆದ ವರ್ಷದಿಂದ ೧ ಆಣೆ ಕಡಿತದ ಬದ್ಲಿಯು ದೊರೆಯಿತು. ಬಜೆಟು ಕಮಿಟಿಯವರು ೨ ಆಣೆ ಕಡಿತಕ್ಕೆ ಶಿಫಾರಸು ಮಾಡಿದ್ದರು. ½ ಆಣೆ ಕಡಿಮೆ ಆಗಲಿಕ್ಕೆ ರಾ॥ ಡಾಕ್ಟರ್ ವಿಟ್ಠಲ್ ಸೆಟ್ರಿ ಮನಃಪೂರ್ವಕವಾದ ಪ್ರಯತ್ನವೇ ಕಾರಣ. ರೂಪಾಯಿ 1½ ಆಣೆ ಕಡಿತವಾಗಿ ಸೂಚನೆ ತಂದವರು ರಾ॥ ರಾ॥ ಬಿ. ಜಿ ಅಚಾಂಕ್ ಇವರು. ಅದನ್ನು ವಿರೋಧಿಸಿ 1 ಆಣೆಗಿಂತ ಜಾಸ್ತಿಯಾಗಿ ಆಗಲೇಬಾರದಾಗಿ ಸೂಚನೆ ತಂದವರು ಡಾ॥ ವಿಟ್ಠಲ್ ಸೆಟ್ರಿ. ೨ ಸೂಚನೆಗಳು ಓಟಿಗೆ ಬಿದ್ದಲ್ಲಿ ೪ ಓಟುಗಳು ವಿಟ್ಠಲ ಸೆಟ್ರಿ ಕಡೆಗೆ ಕಡಿಮೆಯಾದವು. ಉಪಾಧ್ಯಾಯರ ಪ್ರಯತ್ನವು ಕಡಿಮೆ. ಆದ್ದ ಓಟುಗಳಿಂದ ನಾವು ಸೋಲು ಕಾರಣ ನಮ್ಮ ಕಡೆಗೆ ನಿಂತು ಮನಃಪೂರ್ವಕವಾದ ಪ್ರಯತ್ನವಿತ್ತ ರಾ॥ ರಾ॥ ವಿಟ್ಠಲ ಸೆಟ್ರಿಗೂ ಅವರ ಸೂಚನೆಗೆ ಓಟು ಕೊಟ್ಟ ಮೆಂಬರರಿಗೂ ನಮ್ಮ ಸಂಘವು ಮನಃಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ. ಇನ್ನು ನಾವು ಬೋರ್ಡಿನ ಮುಂದೆ ಒದ್ದಾಡಿ ಉಪಯೋಗವಿಲ್ಲ. ಸರಕಾರದ ಮುಂದೆ ನಮ್ಮ ಪ್ರಯತ್ನವನ್ನು ಬಲವಾಗಿ ಸಾಗಿಸಬೇಕು. ಇಡೀ ಜಿಲ್ಲೆಯ ಉಪಾಧ್ಯಾಯರು ಒಂದೇ ರೀತಿಯ ಪ್ರತಿಭಟನವನ್ನು ಸಾಗಿಸಬೇಕು. ವಿನಹಾ ಒಂದೊಂದು ತಾಲೂಕಿನವರು ಒಂದೊಂದು ರೀತಿಯಿಂದ ಮುಂದರಿಸಿ ಉಪಯೋಗವಿಲ್ಲ. ಪ್ರತಿ ಒಬ್ಬ ಉಪಾಧ್ಯಾಯ ಉಪಾಧ್ಯಾಯಿನಿಯರೂ ಪ್ರತ್ಯಪ್ರತ್ಯೇಕವಾಗಿ ಮೆಮೋರಿಯಲನ್ನು ಸರಕಾರಕ್ಕೆ ಕಳುಹಿಸಬೇಕು. ಜರ್ಪಿನ ಮಟ್ಟಿಗೆ ಸಹಾಯವಾಗುವದಾದರೆ ಮೆಮೋರಿಯಲನ್ನು ತಯಾರಿಸಿ ಕೊಡಲು ಸಿದ್ಧನಿರುವೆನು. ಕೂಡಲೇ ತಿಳಿಸಿ ಈ ಕಾರ್ಯವು ತ್ವರೆಯಿಂದ ಆಗಬೇಕಾಗಿದೆ

ವಿ. ಬಾಬು ಶೆಟ್ಟಿ,
ಕಾರ್ಯದರ್ಶಿ

ಆದರ್ಶ ವಿವಾಹ.

ಮಂಗಳೂರಲ್ಲಿ ಬಂಟರ ವಧುವನ್ನು ಬ್ರಾಹ್ಮಣರನು ವಿವಾಹವಾದುದು ಇದೊಂದು ಆದರ್ಶವಿವಾಹವೆಸಲು ಕೆಲವರು ಸಂದೇಹಪಡುವರಾದರೂ, ಮನುಷ್ಯತ್ವದೃಷ್ಟಿಯಿಂತ ಯೋಚಿಸುವುದಾದರೆ, ಇದು ಶಾಸ್ತ್ರವಿರುದ್ಧ ವಿವಾಹವಲ್ಲವೆಂದೆನ್ನುವುದು ಅತಿಶಯೋಕ್ತಿಯಾಗದು. ರಾಜಾಧಿರಾಜರಲ್ಲಿ ನಡೆದರೆ ಮಾತ್ರ ಸರಿ, ಸಾಮಾನ್ಯರಲ್ಲಿ ಹೀಗಾದರೆ ನಿಂದಾಸ್ಪದವೆಂದೆನ್ನುವ ತಿರುಳ್ಳಿದ ಮಾತುಗಳು ಅಂತಿರಲಿ. ಸಚ್ಚರಿತ ವ್ಯಾಗ್ಧಿಗಳು ಯಾರೇ ಇರಲಿ, ನ್ಯಾಯದ ಮೇರೆಯನ್ನು ದಾಟಿ ನಡೆಯದು, ಹಾಗೆಯೇ ಮಾತಿನಲ್ಲಿ ನಡೆಯಂತೆ ನುಡಿ, ನುಡಿಯಂತೆ ನಡೆ, ಹೀಗಿದ್ದಲ್ಲಿ ಕೊರತೆಯೇನು?

ಪ್ರಸ್ತುತದ ಆಚಾರಗಳ ಈ ದ್ವಿಕುಟುಂಬಗಳು ರಾಜಕುಟುಂಬಗಳಲ್ಲದಿದ್ದರೂ ಸದ್ಯ ಕುಟುಂಬಗಳೆಂದೆನ್ನಲು ಸಂದೇಹವಿಲ್ಲ. ಆದರೆ, ಇಂಥಾ ಕರ್ತವ್ಯಗಳು ಕೃತಕರ್ತವ್ಯವೆಂದು (ಸುವೃತ್ತವೆಂದು) ತೋರಬೇಕಾದರೆ, ಬ್ರಹ್ಮರ್ಷಿಗಳಾದ ಶುಕ್ರಾಚಾರ್ಯರ ಮಗಳಾದ ದೇವಯಾನೆಯನ್ನು ಯಾಯಾತಿ ಚಕ್ರವರ್ತಿಗೆ ಧಾರೆಯೆರೆದು ಕೊಟ್ಟಂತೆ ಓರ್ವ ಬ್ರಾಹ್ಮಣವಧುವನ್ನು ಅಬ್ರಾಹ್ಮಣವರನಿಗೆ ವಿವಾಹವಾಗಬೇಕು. ಆಗ ಮಾತ್ರ ಭೇದಾಭೇದದ ಮಾತುಗಳು ಅಲ್ಲಲ್ಲೇ ಅವಸಾನಹೊಂದುವವು. ಅಂಥಾ ಯೋಗ್ಯ ವರನು ಅಬ್ರಾಹ್ಮಣವರ್ಗದಲ್ಲಿ ಇಲ್ಲವೆಂದೆನ್ನಲಾಗದು. ಸಚ್ಚರಿತ ವ್ಯಾಗ್ಧಿಗಳು, ವಿದ್ಯಾವಂತರು, ಶ್ರೇಷ್ಠ ತರಗತಿಯ ಉದ್ಯೋಗಿಗಳು, ರೂಪಲಾವಣ್ಯದಲ್ಲಿ ಯೋಗ್ಯರು, ಧನಾಢ್ಯಮನೆತನಗಳೇ ಮೊದಲಾದ ಯಾವ ಸಂಗತಿಗಳಲ್ಲಿಯೂ ಅಬ್ರಾಹ್ಮಣ ವರ್ಗದಲ್ಲಿ ಕೊರತೆ ಇಲ್ಲ. ಆಂತೂ ಇಂತಹ ಲಗ್ನವು ಆಗಿಯೇ ತೀರಬೇಕು. ಶ್ರೀಯುತ ಕಾರಾಂತರಂತೆ ಆಡುವಂಥವುಗಳನ್ನು ಮಾಡಿ ತೋರಿಸುವುದೇ ಕರ್ತವ್ಯ.

ಯದ್ಯದಾಚರತಿ ಶ್ರೇಷ್ಠ ಸ್ತತ್ತದೇವೇ ತರೋಜನಃ ।
ಸಯತ್ಪ್ರಮಾಣಂ ಕುರುತೇ ಲೋಕಸ್ತದನು ವರ್ತತೇ ॥

ಎಂಬ ಈ ಗೀತೋಕ್ತಿಯು ಯುದ್ಧರಂಗದ ಮಹಾವೀರ ಯೋದ್ಧನಾದ ಅರ್ಜುನನೊಬ್ಬನಿಗಾಗಿ ಮಾತ್ರ ಧರ್ಮಸ್ಥಾಪನಾಚಾರ್ಯ ಕೃಷ್ಣ ಭಗವಾನನು ನುಡಿದದ್ದಲ್ಲವಷ್ಟೇ? ಹೀಗಿರುವಲ್ಲಿ ಆದರ್ಶರೂಪವಾದ ಈ ರೀತಿಯ ಯಾವ ಪ್ರಮಾಣವಾಕ್ಯಗಳಿರುವವೋ ಅಂಥವುಗಳು ಕೃತಿಯಲ್ಲಿ ಬರಬೇಕು. ಕಾಲಗತಿಯು ಇಂತಹ ಕೃತಿಗಳನ್ನು ಮಾಡಿಯೇ ಮಾಡಿಸುವುದು ನಿಜ. ಆದಾಗ್ಯೂ ಕರ್ತವ್ಯಶಾಲಿಗಳು ಭಯಭೀತಿಗಳನ್ನು ಬದಿಗೊತ್ತಿ ಶ್ರೀ ಕಾರಂತರಂತೆ ಮುಂದುವರಿಯಬೇಕು. ಸಮಾಜ ಸುಧಾರಣೆ ಎಂದರೆ ಬರೀ ಉಪನ್ಯಾಸವಾಗಿದ್ದರೆ ಸಾಲದು. ಸಾಧ್ಯಾಸಾಧ್ಯಗಳನ್ನು ಪರಿಹರಿಸಿಕೊಳ್ಳುವುದಿದ್ದರೆ ಆರ್ಯ ಸಮಾಜ ಬ್ರಹ್ಮಸಮಾಜ ಮುಂತಾದವುಗಳು ಈ ಕಾರಣಗಳನ್ನು ಗಮನಕ್ಕೆ ತಂದುಕೊಳ್ಳಲಾರದೇಕೆ? ಎಂಬುದೆ ಈ ಚಿಕ್ಕ ಲೇಖನದ ಉದ್ದೇಶ. ಇದಕ್ಕೂ ವಿಶೇಷವಾಗಿ ಈ ವಿಷಯಗಳನ್ನು ಯಾವ ಬ್ರಾಹ್ಮಣ ಪಂಡಿತ ಮಹಾಶಯರುಗಳು ಎದುರಿಸುವರೋ ನೋಡೋಣ.

ಶ್ರೀ ಕಾರಂತರ ವಿಷಯಕ್ಕೆ ಬರೆಯುವುದೇ ಒಂದು ದಾಸ್ಯ. ಅವರು ತಾನು ಮಾಡುವೆಯಾಗುವುದಿಲ್ಲ. ಬ್ರಹ್ಮಚಾರಿಯಾಗಿಯೇ ಇರುವೆನೆಂದಿದ್ದರಂತೆ. ಈ ಮಾತು ನಿಜವಾಗಿದ್ದರೆ, ಭಕ್ತ್ಯಾದರಿಯಿಂಬ ಮಹಾಯೋಗಿಯ ಸುಭಾಷಿತೋಕ್ತಿಯಂತೆ ಅವರಿಗೆ ಕ್ಷಮೆ ಇರಲಿ.

ಮತ್ತೇನು ಬಂಧ ದರನೇ ಭುಜಿಸಂತ ಥೀರಃ ಕೇತಿರ್ ಪ್ರಂದರ ಮೃಗರಾಜ ಪತೀನ ದಕ್ಷಃ । ಕಿಂತು ಬ್ರವೀಮಿ ಬಲಿನಾಂ ಪುರತಃ ಪ್ರಸಹ್ಯ ಕಂದರ್ಪದರ್ಪದಲನೇ ವಿರಲಾ ಮನುಷ್ಯಾಃ ॥ ಅಂದರೆ, ಮದೋನ್ಮತ್ತವಾದ ಮದ್ದಾನೆಯ ಕುಂಭಸ್ಥಳವನ್ನು ಒಡೆಯತಕ್ಕ ವೀರನೂ, ಈ ಭೂಮಿಯಲ್ಲಿರುವನು. ಹಾಗೆಯೇ ಮೃಗರಾಜನಾದ ಸಿಂಹವನ್ನು ಸದೆಬಡಿಯುವ ದಕ್ಷನೂ ಈ ಲೋಕದಲ್ಲಿರುವನು. ಆದಾಗ್ಯೂ ಬುದ್ಧಿ (ಜ್ಞಾನ) ಬಲವೂ ಕಾಯಬಲವೂ ಕೂಡಿರುವ ಲೋಕದ ಜನರ ಮುಂದೆ ಘಂಟಾಘೋಷವಾಗಿ ಹೇಳುವುದೇನೆಂದರೆ ಕಂದರ್ಪದರ್ಪವನ್ನು ಜಯಿಸತಕ್ಕ ವೀರರು ಬಹು ವಿರಳ ಇನ್ನು

ವಿಶ್ವಾಮಿತ್ರ ಪರಾಶರ ಪ್ರಭೃತಯೋ ವಾತಾಂಬುಪರ್ಣಾಶನಾ ಸ್ತೇಪಿ ಸ್ತ್ರೀಮುಖ ಪಂಕಜಂ ಸುಲಲಿತಂ ದೃಷ್ಟ್ವೈವ ಮೋಹಂಗತಾಃ । ಶಾಲ್ಯನ್ನಂ ಸಘೃತಂ ಪಯೋದಧಿಯುತಂ ಯೇ ಭುಂಜತೇಯೇ ಮಾನವಾಃ । ತೇಷಾಮಿಂದ್ರಿಯ ನಿಗ್ರಹೋಯದಿ ಭವೇತ್ ವಿಂಧ್ಯ ಸ್ತರೇತ್ ಸಾಗರೇ ॥

ಗಾಳಿ, ನೀರು, ತರಗೆಲೆಗಳನ್ನೇ ಆಹಾರವನ್ನಾಗಿ ಮಾಡಿಕೊಂಡಿರುವ ಇಂತಿಂಥಾ ಋಷಿಗಳೇ ಸುಲಲಿತವಾದ ಸ್ತ್ರೀಯರ ರೂಪವನ್ನು ಕಂಡಮಾತ್ರದಲ್ಲಿ ಮೋಹಗತರಾಗಿ ತಥಭ್ರಷ್ಟರಾಗಿರುವಲ್ಲಿ ಷಡ್ರಸಾನ್ನವನ್ನುಂಡು ಹಂಸತೂಲಿಕಾ ತಲ್ಪದಲ್ಲಿ ಶಯನಮಾಡಿಕೊಂಡಿರತಕ್ಕ ಕೇವಲ ಮನುಷ್ಯಮಾತ್ರರು ಸ್ತ್ರೀಸುಖವನ್ನು ಜಯಿಸಬಹುದು ಎಂಬ ವಚನವನ್ನು ನಂಬುವದಾದರೆ ವಿಂಧ್ಯಪರ್ವತವನ್ನು ಸಮುದ್ರದಲ್ಲಿ ಹಾಕಿದ್ದಲ್ಲಿ ಅದು ಮುಳುಗದೆ ತೇಲುವದೆಂದರೂ ನಂಬಬಹುದು.

ಇಂತಿ,
ಓರ್ವ ಹಿಂದೂಸಮಾಜವಾದಿ.

ಜಿಲ್ಲಾ ಕಾಂಗ್ರೆಸು ಕಮಿಟಿಯ ಸಭೆ.

ತಾ. ೨೧—೫—೧೯೩೬ನೇ ಸಾಯಂಕಾಲ ಗಂಟೆ ೫—೩೦ಕ್ಕೆ ಕಾಂಗ್ರೆಸು ಆಫೀಸಿನಲ್ಲಿ ಡಾಕ್ಟರ್ ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸು ಕಮಿಟಿಯ ವರದಿ

ಡಾಕ್ಟರ್ ಅನ್ಸಾರಿಯವರ ಅಕಾಲನಿಧನದ ಕುರಿತು ಈ ಸಭೆಯು ತನ್ನ ದುಃಖವನ್ನು ವ್ಯಕ್ತಗೊಳಿಸುತ್ತದೆ.

1. ಎಫಿಲಿಯೇಶನ್ ಫೀ ಇನ್ನೂ ಬಾರದಿರುವ ತಾಲೂಕು ವ ಟೌನ್ ಕಾಂಗ್ರೆಸು ಕಮಿಟಿಗಳಿಗೆ ಸದ್ರಿ ಫೀಯನ್ನು ಕೊಡಲು ಜೂನ್ ಆಖೈರುವರೆಗೆ ವ್ಯಾಡೆ ಮುಂದರಿಸಬೇಕಾಗಿ ನಿರ್ಣಯಿಸಲಾಯಿತು.

2. ಈಗ ನಿದ್ರಾವಸ್ಥೆಯಲ್ಲಿರುವ ತಾಲೂಕು ವ ಟೌನ್ ಕಾಂಗ್ರೆಸ್ ಕಮಿಟಿಗಳನ್ನು ಸರಿಪಡಿಸುವ ಅಥವಾ ಪುನಃ ಸ್ಥಾಪನೆ ಮಾಡುವ ಬಗ್ಗೆ ಜಿಲ್ಲಾ ಕಮಿಟಿಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯರು ಈ ಜಿಲ್ಲೆಯಲ್ಲಿ ಪ್ರವಾಸ ಬೆಳಸಿ ಕೆಲಸವನ್ನು ವ್ಯವಸ್ಥೆಗೊಳಿಸಬೇಕು.

3. ಕಾಂಗ್ರೆಸಿನಲ್ಲಿ ಮಾಡಿರುವ ತಿದ್ದುಪಡಿಗಳ ಪ್ರಕಾರ ಜಿಲ್ಲಾ ಕಮಿಟಿಯ ಘಟನೆಯಲ್ಲಿ ಅಗತ್ಯವಾಗಿ ಮಾರ್ಪಾಟುಗಳನ್ನು ಮಾಡಬೇಕು

4. ಕೆ ಪಿ ಸಿ ಸಿಗೆ ಹೆಚ್ಚಿಗೆ ಸದಸ್ಯರನ್ನು ಸೇರಿಸುವ ವಿಚಾರದಲ್ಲಿ ನಮ್ಮ ಜಿಲ್ಲೆಯಿಂದ ಶ್ರೀಯುತ ಬಿ ಅನಂತ ರೈಯವರನ್ನು ಸೇರಿಸಬೇಕೆಂದು ಕೆ. ಪಿ. ಸಿ ಸಿಗೆ ತಿಳಿಸಬೇಕಾಗಿ ನಿರ್ಣಯಿಸಲಾಯಿತು.

5. ಲಕ್ನೋ ಕಾಂಗ್ರೆಸಿನಲ್ಲಿ ಮಂಜೂರಾದ ಠರಾವುಗಳನ್ನು ನಮ್ಮ ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಪ್ರಚಾರಮಾಡುವುದಕ್ಕೂ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಶೀಘ್ರಕಾಲದಲ್ಲಿ ಸರಿಯಾಗಿ ನಡಿಸುವುದಕ್ಕೂ ಅಧ್ಯಕ್ಷರು ಒಬ್ಬ ಇಡೀ ಸಮಯದ ಕೆಲಸಗಾರನನ್ನು ನೇಮಿಸಬೇಕಾಗಿಯೂ ಇಂಥ ಕೆಲಸಗಾರನಿಗೆ ತಿಂಗಳೊಂದರ ರೂ 30/- ಸಂಬಳವನ್ನಾಗಿಯೂ ರೂಪಾಯಿ 15ನ್ನು ತಿಂಗಳೊಂದರ ಕಾಯಂ ಬತ್ತೆಯನ್ನಾಗಿಯೂ ಕೊಡಬಹುದಾಗಿಯೂ ನಿರ್ಣಯಿಸಲಾಯಿತು

6. ಸ್ವಯಂಸೇವಕರ ದಳವನ್ನು ಪುನಃ ವ್ಯವಸ್ಥೆ ಮಾಡಿ ಭದ್ರಗೊಳಿಸುವ ಕುರಿತು ಕೆ. ಪಿ. ಸಿ. ಸಿ.ಯಿಂದ ಬಂದ ಪತ್ರದಲ್ಲಿ ಕೇಳಿದ ಮಾಹಿತಿಯನ್ನು ತಾಲೂಕು ಕಮಿಟಿಗಳಿಂದ ಸಂಗ್ರಹಿಸಿ ಕಳುಹಿಸಬೇಕೆಂದು ನಿರ್ಣಯಿಸಲಾಯಿತು

7. ಹೊಸ ವರ್ಷದಿಂದ ಇಷ್ಟರವರೆಗಿನ ಲೆಕ್ಕ ಪರಿಶೋಧನೆಮಾಡಿ, ಲೆಕ್ಕ ಓದಿ ಮಂಜೂರು ಮಾಡಲ್ಪಟ್ಟಿತು

8. ಈ ಕಮಿಟಿಯವರು ಜಿಲ್ಲಾ ಬೋರ್ಡು ಚುನಾವಣೆ ಬಗ್ಗೆ ಈ ತಿಂಗಳ ನೇಮಿಸಿದ ಓಡೀಕ್ ಬೋರ್ಡಿನ ಕೆಲಸವು ಈಗ ಮುಗಿದಿರುವುದರಿಂದಲೂ ಇನ್ನು ಅದರ ಅಗತ್ಯ ಕಾಣದೆ ಇರುವುದರಿಂದಲೂ ಪಿವಿಕ್ ಬೋರ್ಡನ್ನು ಈ ಕಮಿಟಿಯು ಈ ಮೂಲಕ ಅಂತ್ಯಗೊಳಿಸುತ್ತದೆ ಮತ್ತು ಅದರ ಸ್ವಾಧೀನವಿರುವ ರಿಕಾರ್ಡು ವ ಹಣವನ್ನು ಈ ಕಮಿಟಿಗೆ ಒಪ್ಪಿಸುವಂತೆ ಪಿವಿಕ್ ಬೋರ್ಡು ಅಧ್ಯಕ್ಷರಿಗೆ ತಿಳಿಸಬೇಕಾಗಿ ನಿರ್ಣಯಿಸಲಾಯಿತು

9. ತೆರವಾಗಿ ಸ್ಥಾಪಿಸಲ್ಪಡಲಿಕ್ಕಿರುವ ಕರ್ನಾಟಕ ಪ್ರಾಂತ್ಯದ ಪಾರ್ಲಿಮೆಂಟರಿ ಬೋರ್ಡಿಗೆ ನಮ್ಮ ಜಿಲ್ಲೆಯಿಂದ ಶ್ರೀಯುತ ಕಾರ್ನಾಡ್ ಸದಾಶಿವರಾವ್ ಶ್ರೀಮತಿ ಕಮಲಾದೇವಿ, ಮತ್ತು ಡಾಕ್ಟರ್ ಯು ಪಿ ಮಲ್ಯ ಈ ಮೂವರನ್ನು ಸದಸ್ಯರನ್ನಾಗಿ ನೇಮಿಸಲ್ಪಟ್ಟಿತು

10. ಸದ್ಯದಲ್ಲಿ ನಡೆಯಲಿಕ್ಕಿರುವ ಕೌನ್ಸಿಲ್ ಆಫ್ ಸ್ಟೇಟ್ಸ ಚುನಾವಣೆಗಳ ಕುರಿತು ಕಾಂಗ್ರೆಸು ಕಡೆಯ ಉಮೇದ್ವಾರರ ನಿಲುವಿಗಾಗಿ ಈ ಕಮಿಟಿಯವರು ಏನು ಮಾಡಬಹುದು ನೋಡಿ ಈ ವಿಚಾರದಲ್ಲಿ ಅಗತ್ಯವುಳ್ಳ ಕೆಲಸವನ್ನು ಮುಂದರಿಸಬೇಕು.

11. ೧೯೩೫ನೇ ಇಸವಿ ಹೊಸ ಗವರ್ನ್‌ಮೆಂಟು ಆಫ್ ಇಂಡಿಯಾ ಆಕ್ಟಿಗನುಗುಣವಾಗಿ ಓಟು ಕೊಡಲು ಅರ್ಹರಾದ ಎಲ್ಲಾ ಜನರ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ಸೇರಿಸುವರೆ ಈಗಿನಿಂದಲೇ ಕೆಲಸಮಾಡಬೇಕಾಗಿಯೂ ಅಗತ್ಯವುಳ್ಳ ಫಾರಂಗಳನ್ನು ಪ್ರಿಂಟಿಂಗ್ ಮಾಡಿಸಬೇಕಾಗಿಯೂ ನಿರ್ಣಯಿಸಲಾಯಿತು.

12. ರೈತರ ಪ್ರತ್ಯೇಕವಾದ ಸಂಘಗಳನ್ನು ಘಟನೆ ಮಾಡುವ ಬಗ್ಗೆ ಒಂದು ಸ್ಕೀಮನ್ನು ತಯಾರಿಸುವರೆ ಈ ಕೆಳಗಿನ ಉಪಕಮಿಟಿಯನ್ನು ನೇಮಿಸಲಾಯಿತು.

(೧) ಶ್ರೀಯುತ ಶ್ರೀನಿವಾಸ ಮಲ್ಯ (೨) ಶ್ರೀಮತಿ ಕಮಲಾದೇವಿ, (೩) ಎ ಎಸ್ ಶೆಟ್ಟಿ ಇವರನ್ನು ಬೇಗನೆ ಸದ್ರಿ ಸ್ಕೀಮನ್ನು ಈ ಕಮಿಟಿಗೆ ಒಪ್ಪಿಸಬೇಕಾಗಿ ನಿರ್ಣಯಿಸಲಾಯಿತು

13. ಜಿಲ್ಲಾ ಬೋರ್ಡು ಕಾಂಗ್ರೆಸ್ ಪಾರ್ಟಿಯ ಶಿಸ್ತನ್ನು ಕುರಿತು ವಿಚಾರಿಸಿ, ಈ ಕಮಿಟಿಗೆ ತಿಳಿಸುವ ಬಗ್ಗೆ ಈ ಕೆಳಗಿನ ಉಪಕಮಿಟಿಯನ್ನು ನೇಮಿಸಲ್ಪಟ್ಟಿತು

(೧) ಡಾಕ್ಟರ್ ಯು ಪಿ ಮಲ್ಯ, (೨) ಶ್ರೀಯುತ ಎಮ್ ಉಮೇಶರಾವ್, (೩) ಎಂ ಎಸ್ ಅಧಿಕಾರಿ, (೪) ಶ್ರೀಯುತ ಭೋಜರಾವ್ ಬೋಳಾರ, (೫) ಶ್ರೀಯುತ ಎ ಎಸ್ ಶೆಟ್ಟಿ

ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬಾಯಿ

ಈ ಮೇಲಿನ ಮಂಡಳಿಯ ೧೯೩೫ನೇ ಇಸವಿಯ ಮೆಂಬರರ ವಾರ್ಷಿಕ ಮಹಾಸಭೆಯು ಇದೇ ತಿಂಗಳ ೫ನೇ ದಿನ ಮಧ್ಯಾಹ್ನ ಘಂಟೆ ೩ಕ್ಕೆ ಮಂಡಳಿಯ ಅಧ್ಯಕ್ಷರಾದ ಶ್ರೀ ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಮೊಗವೀರ ಶಾಲಾ ಮಂದಿರದಲ್ಲಿ ಜರಗಿತು.

ದಿವಂಗತರಾದ ಸಂಘದ ಮೆಂಬರರ ಕುರಿತು ದುಃಖ ಪ್ರದರ್ಶನ ಮಾಡಿದ ಬಳಿಕ ಕಾರ್ಯನಿರ್ವಾಹಕ ಸಭೆಯವರಿಂದ ತಯಾರಿತವಾದ ೧೯೩೫ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ವಸಮ್ಮತದಿಂದ ಸ್ವೀಕರಿಸಲಾಯಿತು. ೧೯೩೬ನೇ ಇಸವಿಯ ಕಾರ್ಯನಿರ್ವಾಹಕ ಸಭೆಗೆ ೧೫ ಮಂದಿ ಮೆಂಬರರನ್ನೂ ೨ ಜನ ಲೆಕ್ಕಪರಿಶೋಧಕರನ್ನೂ ಸರ್ವಾನುಮತದಿಂದ ಆರಿಸಲಾಯಿತು. ಶ್ರೀ ಬೈಕಂಪಾಡಿ ವೆಂಕಟ ಮೆಂಡನ್ ಇವರ ಸೂಚನೆಗೆ ಶ್ರೀ ಎಂ. ನರ್ಸು ಸುವರ್ಣರ ಅನುಮೋದನೆಯಂತೆ "ಮೊಗವೀರ ಜಾತಿಯಲ್ಲಿ ಇತ್ತೀಚೆಗೆ ಮೇಳೈಸಿದಂತೆ ಹರಡುತ್ತಾ ಬರುವ ಸ್ತ್ರೀ ಧನ ಅಥವಾ ವರದಕ್ಷಿಣೆ, ಇದನ್ನು ನಮ್ಮ ಈ ಬಡ ಜಾತಿಯಲ್ಲಿ ಪೂರ್ಣ ನಿಲ್ಲುಹಾಕುವಂತೆ ಈ ಮಂಡಳಿಯವರು ಹಲವು ವಿಧದ ಪ್ರಯತ್ನಗಳಿಂದ ಸಾಧಿಸಿ ಬಡ ಕುಟುಂಬಿಗಳ ದುಃಖವನ್ನು ಪರಿಹರಿಸಬೇಕಾಗಿ ಈ ಸಭೆಯು ನಿರ್ಧರಿಸುತ್ತದೆಂಬ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು. ಹಾಜರಿದ್ದವರ ಪೈಕಿ ಅನೇಕ ಮಹನೀಯರು ಮಂಡಳಿಯ ವಿವಿಧ ವಿಷಯಗಳ ಕುರಿತು ಮಾತನಾಡಿದ ಬಳಿಕ ಅಧ್ಯಕ್ಷರು ಮಂಡಳಿಯ ಮುಂದಿನ ಅಭಿವೃದ್ಧಿಯ ಕುರಿತು ಅನೇಕ ಸೂಚನೆಗಳನ್ನಿತ್ತರು. ಇದಾದ ಬಳಿಕ ಸಭೆಯು ಕೊನೆಗೊಂಡಿತು.

ಮೊಗವೀರ ಫ್ರೀ ರೀಡಿಂಗ್ ರೂಮ್ ಮತ್ತು ಲೈಬ್ರರಿ

೩೯ ಪೆರಿನ್ ನರ್ಸ್ ಮುಂಬಾಯಿ.

ಇದು ಕನ್ನಡ ಇಂಗ್ಲೀಷು ಭಾಷೆಗಳ ಅನೇಕ ಉಪಯುಕ್ತ ಪುಸ್ತಕ ಮತ್ತು ಪತ್ರಿಕೆಗಳನ್ನೊಳಗೊಂಡ ಮಂದಿರವು. ಆಫೀಸಿಗೆ ಸೇರಿದ ಒಂದು ಪ್ರತ್ಯೇಕ ಕೋಣೆಯಲ್ಲಿದ್ದು ಇದುವರೆಗೆ ... ಇದರ ಪ್ರಯೋಜನವನ್ನು ... ವರ್ಷದಲ್ಲಿ ಸುಮಾರು ೩೦೦ ಸರ್ತಿ ಪುಸ್ತಕಗಳನ್ನು ಹೊರಗೆ ಓದಲು ಕೊಡಲಾಗಿದೆ. ಈಗಿನ ಕಾಲಕ್ಕೆ ಒಪ್ಪುವ ನವೀನ ಗ್ರಂಥ ಭಂಡಾರವೆಂದು ತೋರಬೇಕಾದರೆ ಇನ್ನೂ ಹಲವು ಗ್ರಂಥಗಳು ಅಗತ್ಯ. ವಿದ್ಯಾಭಿಮಾನಿಗಳು ... ಉಪಯುಕ್ತವಾದ ಪುಸ್ತಕಗಳನ್ನಾಗಲೀ ಹಣವನ್ನಾಗಲೀ ಅತ್ಯಾದರದಿಂದ ಸ್ವೀಕರಿಸುವೆವು. ಈ ವರ್ಷದಲ್ಲಿ ಶ್ರೀ ಬೋಳೂರು ಮಂಜುನಾಥ ಕರ್ಕೇರರು ಗೌರವಾರ್ಥ ಲೈಬ್ರರಿಯನರಾಗಿದ್ದು, ತನ್ನ ಕೆಲಸವನ್ನು ಬಹಳ ಶ್ರದ್ಧೆಯಿಂದಲೂ ಚತುರತೆಯಿಂದಲೂ ನಿರ್ವಹಿಸಿರುವರು.

TEST YOUR EYES

B the Electro Ophthalmoscope.



All Varities of
Frames & Lenses.
AT
The Mangalore Trading Association Ltd.
Sight Testing Ophthalmic Opticians,
Car Street, MANGALORE



Distributor for South Kanara —
Raghavendra Ranga Pai, Car Street Mangalore.
ಕುಂದಾಪುರ ಪ್ರವರ್ತಕರು:— ಕಾಮತ್ಸ್ ಸ್ವದೇಶೀ ಎಂಪೋರಿಯಂ.

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃತ್ಯುಂಜಯ — ನಿದ್ರಾನಾಶಕ್ಕೆ ಅತ್ಯಂತ ಗುಣಕಾರಿ.
ಮಹಾಮದನ ಕಾಮೇಶ್ವರೀ ಲೇಹ್ಯ—ನಪುಂಸಕತ್ವ, ಧಾತುಕ್ಷೀಣತೆಗೆ.
ಹಿಮಸಾಗರ ತೈಲ—ನಿದ್ರಾ ನಾಶಕ್ಕೆ ಅತೀ ಉಪಯುಕ್ತ.
ಮಹಾಮಾಷ ತೈಲ—ಪಕ್ಷವಾತಕ್ಕೆ ಅತ್ಯಂತ ಗುಣಕಾರಿ.
ಗರ್ಭಪಾಲ—ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ.
ಗುಡಪಿಪ್ಪಲಿ—ಲಿವರ್ ರೋಗಕ್ಕೆ ಅತ್ಯುತ್ತಮ.

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದಕ್ಷಿಣ ಕನ್ನಡ.

(... ... ಮುಂದುವರಿದುದು.)

... ಹೆಂಗಸರು ಒಬ್ಬರನ್ನೊಬ್ಬರು ಅವಲಂಬಿಸದೆ ಇರಬಹುದಾದುದರಿಂದ ಜನರು ವಿವಾಹ ಜೀವನವನ್ನೇ ಅಪೇಕ್ಷಿಸದೆ ಸ್ವೇಚ್ಛಾಚಾರಿಗಳಾಗಿರಲು ಬಯಸುವರು (Promicuity). ಇಂತಹ ಸ್ವೇಚ್ಛಾಚಾರಿಗಳನ್ನು ಪಾಶ್ಚಾತ್ಯರಲ್ಲಿ ನಾವು ಈಗ ಹೇರಳವಾಗಿ ಕಾಣಬಹುದು. ಅವರಲ್ಲಿ ಒಬ್ಬ ಗಂಡಸು ಹೆಂಗಸನ್ನೊಲಿದು ಅವರು ಕೆಲವು ಕಾಲ ಒಟ್ಟಿಗಿರಬೇಕಾದರೆ ಇಬ್ಬರೂ ಒಂದು ಕೋಣೆಯನ್ನು (Box) ಗೊತ್ತುಮಾಡಿಕೊಳ್ಳುವರು. ದಿನ ಬೆಳಗಾದರೆ ಅವನೊಂದು ಕಡೆ ಇವಳೊಂದು ಕಡೆ ಕೆಲಸಕ್ಕೆ ಹೋಗುವುದು; ಊಟ ಉಪಚಾರಗಳೆಲ್ಲ ಹೊಟೇಲುಗಳಲ್ಲಿ; ತಿರುಗಿ ಅವರು ಸೇರಬೇಕಾದರೆ ಸಂಜೆಗೆ ರಾತ್ರಿಯಲ್ಲಿ ಅಪೆರ (Opera), ನಾಟ್ಯಶಾಲೆ (Dancing Balls), ಎಲ್ಲೂ ಹೋಗದಿದ್ದರೆ ಇಬ್ಬರೂ ಒಟ್ಟಿಗಿದ್ದು ತಿರುಗಿ ಬೆಳಗ್ಗೆ ಯಥಾಪ್ರಕಾರ ಹೊರಡುವುದು. ಅವರ ಮನೆಯ ಸಾಮಾನುಗಳೆಂದರೆ ಒಂದು ಮಂಚ, ಒಂದೆರಡು ಮೇಜು ಕುರ್ಚಿಗಳು, ಬಟ್ಟೆಬರೆಯ ಬೀರು ಒಂದು, ಅಲಂಕಾರ ದ್ರವ್ಯಗಳ ಪೆಟ್ಟಿಗೆಯೊಂದು—ಇಷ್ಟೆ. ಅಕಸ್ಮಾತ್ತಾಗಿ ಮಕ್ಕಳಾದರೆ ಕಾಪಾಡುವವರು ಯಾರು, ಹೆಂಗಸೋ ಗಂಡಸೊ? ಗಂಡಸು ಅದು ಹೆಂಗಸಿನ ಕರ್ತವ್ಯವೆನ್ನುವನು; ಹೆಂಗಸು 'ನಿನಗಿರುವಷ್ಟು ಸ್ವಾತಂತ್ರ್ಯ ನನಗೂ ಇದೆ ಅದು ನಿನ್ನ ಕರ್ತವ್ಯವೇಕಾಗಬಾರದು?' ಎನ್ನುವಳು ಮಕ್ಕಳಾದರೆ ತಾನೇ ಈ ಜಗಳ? ಅಲ್ಲದೆ ಮಕ್ಕಳನ್ನು ಇಂತಹ ನಗರಗಳಲ್ಲಿ ಸಾಕುವುದೂ ಕಷ್ಟ ಕಾರಣ ಅವು ಬೇಡವೇ ಬೇಡ—ಎಂದು ಸಂತಾನನಿರೋಧ ಪ್ರಯೋಗಗಳ ಉಪಯೋಗ ಹಾಗಿರಲು ಇಬ್ಬರಿಗೂ ಮನಸ್ಸು ಹಳಸಿದಾಗ ಭಿನ್ನಾಭಿಪ್ರಾಯಗಳಿಂದ ಒದಗಬಹುದಾದ ಅಶಾಂತತೆಯನ್ನು ಶಮನಮಾಡುವ ಶಿಶುಸಂರಕ್ಷಣೆ, ಗೃಹಕೃತ್ಯನಿರ್ವಹಣ ಮೊದಲಾದ ಸಾಧನೆಗಳಿಲ್ಲದಿರುವುದರಿಂದ—ಶಾಸನದ ಅನುಮತಿ ಪಡೆದಿದ್ದೇ ಆದರೆ ವಿಚ್ಛೇದೂ, ಇಲ್ಲವಾದರೆ ಅವನ ದಾರಿ ಅವನಿಗೆ, ಇವಳ ದಾರಿ ಇವಳಿಗೆ ಆ ಮೇಲೆ ಮತ್ತೊಬ್ಬ ಸಂಗಾತಿಯನ್ನು ಹುಡುಕುವುದು ಇದು ಈಗಿನ ಪಾಶ್ಚಾತ್ಯರ ಸ್ತ್ರೀಸ್ವಾತಂತ್ರ್ಯದ ಮತ್ತು ಅದರ ಅಂಗವಾದ ಸಹವಿದ್ಯಾಭ್ಯಾಸದ ಪರಿಣಾಮ.

ಸುಧಾರಣೆಯ ಮಾತನ್ನೆತ್ತುವವರೆಲ್ಲರೂ ತಮ್ಮ ಎಲೆಯನ್ನು ಮೊದಲು ನೋಡಿಕೊಂಡೇ ಮುಂದರಿಯಬೇಕು ನಮ್ಮಲ್ಲಿ ಸ್ತ್ರೀಯರು ಪುರುಷರ ಅಧೀನರು ಎಂಬ ಪರಿಗಣನೆಯಿಂದ ಎಲ್ಲೆಲ್ಲಿಯೂ ಅಶಾಂತತೆ ನೆಲೆಗೊಂಡಿದೆ ಒಂದು ಗಾಡಿಯ ನೊಗವನ್ನು ಸಮವಾಗಿ ಹೊರುವ ಎರಡು ಎತ್ತುಗಳಂತೆ ಸಂಸಾರ ನಿರ್ವಹಣದ ಹೊಣೆಯನ್ನು ಸಮವಾಗಿ ಹೊತ್ತ ಗಂಡಹೆಂಡಿರಲ್ಲಿ ಉತ್ತಮ ಅಧಮ ಎಂಬ ಭೇದ ಭಾವನೆಯ ಮೂಲಕ ಶಾಂತಿಭಂಗವಾಗಿದೆ ಅಜ್ಞಾನ ಬಡತನ, ರೂಢಮೂಲವಾಗಿ ನೆಲೆಗೊಂಡಿರುವ ಕೆಲವು ಸಾಮಾಜಿಕ ಅಸಹ್ಯ ಅಭ್ಯಾಸಗಳು—ಇವುಗಳಿಂದ ಜನಸಾಮಾನ್ಯರಲ್ಲಿ ಅನೇಕ ದುರಾಚಾರಗಳು ನೆಲೆಗೊಂಡಿವೆ ಅನೇಕ ಕಾರ್ಖಾನೆಗಳಿರುವ ಮುಂಬೈ ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಕೂಲಿಕಾರರಲ್ಲಿಯೂ ಸಾಮಾನ್ಯ ಜನರಲ್ಲಿಯೂ ಅಕ್ರಮ ಕೂಟಗಳೂ, ಅನೈತಿಕ ನಡವಳಿಕೆಗಳೂ ಹೆಚ್ಚಾಗಿ ಸಮಾಜ ಪರಿಸ್ಥಿತಿಯು ಘೋರವಾಗಿರುವುದು ಮಿಸ್ ಮೇಯೋರಂತಹ ಪರದೇಶದವರು ರಾಕ್ಷಸ ರೂಪದಲ್ಲಿ ನಮ್ಮನ್ನು ಚಿತ್ರಿಸಲು ಎಡೆಗೊಡುವಂತಾಗಿದೆ. ಎಲ್ಲಾ ನೈತಿಕ ಅಧೋಗತಿಯ ಕಾರಣವನ್ನು ಒಟ್ಟಿನಲ್ಲಿ ಹೇಳುವುದಾದರೆ, ನಮ್ಮಲ್ಲಿ ಬಹು ಜನರಲ್ಲಿ ನೆಲಸಿರುವ ಅಜ್ಞಾನ, ಜೀವನಕ್ಕೆ ಸರಾಸರಿ

N.I.P.

Petral (Ready Delivery)
Kerosene & Diesel Oils.
FOR RATES AND AGENCY TERMS APPLY
International Oil Co Ltd.
JIJI HOUSE, RAVELIN STREET, FORT BOMBAY.

ತಲೆಗೆ ಒಂದೂ ಕಾಲಾಣೆಯಂತೆ ಉತ್ಪತ್ತಿ ಬರುವ ಕಟ್ಟುತರವಾದ ಬಡತನ, ಹಿಂದಿನಿಂದಲೂ ರೂಢಮೂಲವಾಗಿ ನೆಲಸಿ ಬರುತ್ತಿರುವ ವೇಶ್ಯಾವೃತ್ತಿ, ಬಾಲವೈಧವ್ಯ, 'ನ ಸ್ತ್ರೀಸ್ವಾತಂತ್ರ್ಯಮರ್ಹತಿ' ಎಂದು ಸಹಧರ್ಮಿಣಿ ಎನಿಸಿಕೊಂಡ ಸ್ತ್ರೀಯನ್ನು ಪಶುಸಮಾನಳಾದ ಅಡಿಯಾಳೆಂದು ಪರಿಗಣಿಸುವ ಪುರುಷನ ಮನೋಭಾವನೆ ಮತ್ತು ಇತ್ತೀಚೆಗೆ ಪಶ್ಚಿಮದಿಂದ ಅಜ್ಞಾನಿಗಳ ಮೇಲೆ ಬಲವಾಗಿ ಬೀಸುತ್ತಿರುವ ಅವರ ನಾಗರಿಕತೆ ಪ್ರಗತಿಗಳ ಗಾಳಿ ಇವುಗಳೆಂದು ಹೇಳಬಹುದು

ನಮ್ಮಲ್ಲಿ ಈಗ ಬಳಕೆಯಲ್ಲಿರುವ ಸಹವಿದ್ಯಾಭ್ಯಾಸಕ್ರಮವೂ ಸಮರ್ಪಕವಾಗಿಲ್ಲವೆಂದು ಹೇಳಬಹುದು ಅದರಲ್ಲಿ ದೋಷಗಳು ಪಾಶ್ಚಾತ್ಯರಷ್ಟಿಲ್ಲದಿದ್ದರೂ ಹೆಚ್ಚಾಗಿ, ಅದು ಆ ದಾರಿಯನ್ನೆ ಹಿಡಿಯುತ್ತಿದೆಯೆಂದು ಧಾರಾಳವಾಗಿ ಹೇಳಬಹುದು ಅದನ್ನು ವಿಸ್ತಾರವಾಗಿ ವಿವರಿಸುವುದಕ್ಕಿಂತ ಸಹ ವಿದ್ಯಾಭ್ಯಾಸದ ಪರಿಣಾಮವನ್ನು ವಿದ್ಯಾರ್ಥಿವಿದ್ಯಾರ್ಥಿನಿಯರ ನಡುವೆ ಕುಳಿತಾಗಲಿ, ಅವರ ಅಂತರ್ಯ ಜೀವನವನ್ನು ಪರೀಕ್ಷಿಸಿಯಾಗಲಿ ನೋಡಬಹುದು

ಅವರಲ್ಲಿಯೆ ಆಗಲಿ ನಮ್ಮಲ್ಲಿಯೆ ಆಗಲಿ, ಜನತೆಯೆಲ್ಲ ಈ ರೀತಿ ಕೆಟ್ಟು ಹೋಗಿಲ್ಲ ಸುಖಶಾಂತಿಮಯವಾದ ಸಂಸಾರಗಳು ಅಲ್ಲಿಯೂ ಇವೆ ಆದರ್ಶ ಸಾಮಾಜಿಕ ಪದ್ಧತಿಗಳೂ ಸದ್ಗುಣಗಳೂ ಒಳ್ಳೆಯ ನಡವಳಿಕೆಗಳೂ ಅಲ್ಲೂ ಇವೆ, ಇಲ್ಲೂ ಇವೆ ಅಂತಹವನ್ನೇ ಜನಜಾಗೃತಿಯಾಗಬಹುದಾದ ಸುಧಾರಣೆಗಳನ್ನೇ ಆಯ್ದು ಜಾರಿಗೆ ತರಬೇಕಾದದ ನಮ್ಮ ಈಗಿನ ಕರ್ತವ್ಯವಾಗಿದೆ

ನಮ್ಮಲ್ಲಿ ಹಿಂದೆ ಸಹ ವಿದ್ಯಾಭ್ಯಾಸ ಪದ್ಧತಿಯು ಇರಲಿಲ್ಲವೆಂದು ಹೇಳಲಾಗ ಮದಿಲ್ಲ ನಮ್ಮಲ್ಲಿದ್ದ ವಿದ್ಯಾಭ್ಯಾಸ ಕ್ರಮಗಳೆಲ್ಲಾ ಸಹ ವಿದ್ಯಾಭ್ಯಾಸ ಕ್ರಮಗಳೇ ಪ್ರತ್ಯೇಕ ವಿದ್ಯಾಭ್ಯಾಸವು ಇರಲಿಲ್ಲವೆಂದೇ ಹೇಳಬಹುದು. ನಮ್ಮ ಇತಿಹಾಸದಲ್ಲಿ ಹುಡುಕಿದರೆ ಅದ್ವಿತೀಯ ಪಂಡಿತರಾದ ಗಾರ್ಗೇಯಿ, ಮೈತ್ರೇಯಿ, ಲೀಲಾವತಿ ಲಕ್ಷ್ಮೀಬಾಯಿ ಮುಂತಾದ ಸ್ತ್ರೀರತ್ನಗಳು ಇರುವುವು ಅವರ ವಿದ್ಯಾಭ್ಯಾಸಕ್ಕೆ ಅವರಿಗಾಗಿ ಪ್ರತ್ಯೇಕ ಶಾಲೆಗಳಿರಲಿಲ್ಲ ಅವರು ಪುರುಷರೊಂದಿಗೇ ಗುರುಕುಲದಲ್ಲಿ ಕಲಿತು ಪಂಡಿತರಾದವರೇ, ಉತ್ತರರಾಮ ಚರಿತ್ರೆಯಲ್ಲಿ ಅತ್ರೇಯಿ ಎಂಬ ಸ್ತ್ರೀಯು ತಾನು ಅಗಸ್ತ್ಯನ ಆಶ್ರಮದಿಂದ ವಿದ್ಯಾಭ್ಯಾಸಕ್ಕಾಗಿ ವಾಲ್ಮೀಕಿಯ ಆಶ್ರಮಕ್ಕೆ ಹೋಗುತ್ತಿದ್ದೇನೆ ಎಂದು ಹೇಳುತ್ತಿರುವಳು. ನಮ್ಮಲ್ಲಿ ಅನೇಕ ಮಹಿಳೆಯರು ರಣವಿದ್ಯೆಯನ್ನು ಕಲಿತು ತಮ್ಮ ಅದ್ವಿತೀಯ ರಣಕೌಶಲ್ಯವನ್ನು ತೋರಿರುವುದನ್ನು ನಾವು ಕೇಳಿದ್ದೇವೆ ಅವರೆಲ್ಲರೂ ಗಂಡಸರೊಂದಿಗೆ ಕಲಿತವರಲ್ಲದೆ ಅವರಿಗಾಗಿ ಪ್ರತ್ಯೇಕ ಶಿಕ್ಷಣವಿರಲಿಲ್ಲ, ಆದರೆ ಅವರು ಸಹವಿದ್ಯಾಭ್ಯಾಸವನ್ನು ಪಡೆಯುತ್ತಿರುವ ಈಗಿನ ಪಾಶ್ಚಾತ್ಯರಷ್ಟು ಪೂಜ್ಯಗೃಹಿಣೀತ್ವವನ್ನು ದ್ವೇಷಿಸುವವರು ಆಗಿರಲಿಲ್ಲ

ಇದೀಗ ಪ್ರಪಂಚದಲ್ಲಿಯ ಎರಡು ಬಗೆಯ ಸಹವಿದ್ಯಾಭ್ಯಾಸ ಕ್ರಮಗಳಿಂದಾದ ದುಷ್ಪರಿಣಾಮಗಳನ್ನು ನೋಡಿದುದಾಯಿತು ಮುಂದಿನ ಬರಹದಲ್ಲಿ ನಮ್ಮ ಸಮಾಜ ಪರಿಸ್ಥಿತಿಗೆ ಅನುಕೂಲವಾಗಬಹುದಾದ ಸಹವಿದ್ಯಾಭ್ಯಾಸ ಕ್ರಮಗಳು ಹೇಗಿರಬೇಕು ಎಂಬುದನ್ನು ಯೋಚಿಸೋಣ

(ಜಯಕರ್ಣಾಟಕ)

+Judge Lindsay "A Report on Marriage Licences"

*Dr. Will Durant "Mansions of Philosophy" p. 122.

ಸ್ಪರ್ಧಾರಂಗ

ಸಂಚಾಲಕ:— ಶ್ರೀ "ರಸಿಕರಂಜನ"

ಗೆಲ್ಲಿ! ಪಡೆಯಿರಿ!

೧೦ ರೂಪಾಯಿ ಬಹುಮಾನ!

ಪ್ರಥಮ ಬಹುಮಾನ: ರೂ ೫, ದ್ವಿತೀಯ ಬಹುಮಾನ: ರೂ ೩;
ತೃತೀಯ ಬಹುಮಾನ. ರೂ ೨,
ವಿಶೇಷ ಬಹುಮಾನ: ಒಂದು ವರ್ಷದ "ಸ್ವದೇಶಾಭಿಮಾನಿ"

ಚಕ್ರಬಂಧ ಒಗಟು ಸಂಖ್ಯೆ ೨.

ಉತ್ತರ ಸ್ವೀಕರಿಸುವ ಕೊನೆಯ ದಿನ – 15-6-936



ಹೆಸರು

ವಿಳಾಸ

ಸಲಹೆಗಳು:—

ಎಡದಿಂದ ಬಲಕ್ಕೆ		ಮೇಲಿಂದ ಕೆಳಕ್ಕೆ	
1	ಒಂದು ಮೃ	2	ರಾಜ
೪	ಸಾರಿ	೩	ಒಬ್ಬ ಋಷಿ
೫	ಪದ್ಮ	4	ಆಂದಳ
7	ಮನ್ಮಥ	6	ಅರಣ್ಯ
9	ಯುದ್ಧ	೮	[illegible]
೧1	ನ್ಯಾಯ	10	ಸೇನಾಪತಿ
1೩	ಪರ್ವತ	11	ಸಾಯಂಕಾಲ
15	[illegible]	12	ಗಂಡು ಕುರಿ
16	ಒಂದು ಸಂಖ್ಯೆ	13	ಅಂತು
17	ಶರೀರದ ಒಂದು ಭಾಗ	14	ಹೊಳೆ

ವಿಶೇಷ ಸೂಚನ.—

ಈ ಒಗಟಿನಲ್ಲಿ ಬರಬಹುದಾದ ಶಬ್ದಗಳು: ಅಜ, ಅರು, ಕಚ ಕಟಿ, ಕಣ್ವ, ಕದನ, ಕರ, ಕಂತಕ ಕುಪಸ ಕಲ್ಪ, ಗಜ, ಗಲಿತ, ಗಳಿತ, ಜನಪ, ಬಗರು ತಿಲಕ, ತಿಳಕ, ದಲಪ, ದಳಪ, ನರ, ನದಿ, ನಲಿನ, ನಳಿನ, ನಾರ, ನೀರ, ನೂರು, ಬನ, ಮಾರು, ರತಿಪ, ವನ, ಸನಕ, ಸತಿ, ಸಲ, ಸಂಕಟ, ಸುಚಿ, ಸಂಧ್ಯಾ, ಸಂಧ್ಯೆ

ನಿಯಮಗಳು—೧ ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೇ ಸ್ಪಷ್ಟವಾದ ಅಕ್ಷರಗಳಲ್ಲಿ ಹೆಸರು ವಿಳಾಸ ಸಹಿತ ಬರೆದು ಕಾಲಾಣೆಯ ನಾಲ್ಕು ಟಪ್ಪಾಲು ಚೀಟುಗಳೊಂದಿಗೆ ತಾ 15-6-1936ರೊಳಗೆ ತಲುಪುವಂತೆ ಕಳುಹಿಸಬೇಕು. ೨ ಹೆಚ್ಚು ಉತ್ತರ ಕಳುಹಿಸುವವರು ಮೊದಲನೆಯ ಉತ್ತರವನ್ನು ಮೇಲಿನ ಚಕ್ರಬಂಧದಲ್ಲಿಯೂ, ಉಳಿದ ಉತ್ತರಗಳನ್ನು ಪ್ರತ್ಯೇಕ ಕಾಗದಗಳ ಮೇಲೆಯೂ ಬರೆದು, ಪ್ರತಿ ಆರು ಉತ್ತರಗಳಿಗೆ ಕಾಲಾಣೆಯ ಹದಿನಾರು ಚೀಟುಗಳೊಡನೆ ಕಳುಹಿಸತಕ್ಕದ್ದು ೩ ತಾ 15 6 '36ರೊಳಗೆ ಸ್ವೀಕೃತವಾದ ಉತ್ತರಗಳಲ್ಲಿ, ನಾವು 'ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಉಡುಪಿ, ಲಿಮಿಟೆಡ', ಮಂಗಳೂರು ಶಾಖೆ'ಯ ಏಜಂಟರೊಡನೆ ಮೊಹರುಮಾಡಿ ಭದ್ರತೆಯಲ್ಲಿರುವ ಉತ್ತರದೊಡನೆ ಅಕ್ಷರಶಃ ಹೋಲುವ ಉತ್ತರಕ್ಕೆ ಅಥವಾ ಉತ್ತರಗಳಿಗೆ ಮೊದಲನೆಯ ಬಹುಮಾನವನ್ನೂ, ಒಂದು ತಪ್ಪಿನ ಉತ್ತರಗಳಿಗೆ ಎರಡನೆಯ ಬಹುಮಾನವನ್ನೂ, ಎರಡು ತಪ್ಪಿನ ಉತ್ತರಗಳಿಗೆ ಮೂರನೆಯ ಬಹುಮಾನವನ್ನೂ ಕೊಡಲಾಗುವುದು ಈ ರೀತಿಯ ಉತ್ತರಗಳು ಬಾರದ ಪಕ್ಷದಲ್ಲಿ ಅತ್ಯಂತ ಕಡಿಮೆ ತಪ್ಪಿನ ಉತ್ತರಗಳಿಗೇ ರೂ ೧೦ನ್ನು ಸರಿಯಾಗಿ ಹಂಚಿಕೊಡಲಾಗುವುದು ೪ ಅತ್ಯಂತ ಹೆಚ್ಚು ಉತ್ತರ ಕಳುಹಿಸುವವರಿಗೆ ಒಂದು ವರ್ಷದ "ಸ್ವದೇಶಾಭಿಮಾನಿ"ಯ ವಿಶೇಷ ಬಹುಮಾನ ದೊರೆಯುವುದು ೫ ಎಲ್ಲಾ ಸಂದರ್ಭಗಳಲ್ಲಿಯೂ ಈ 'ಸ್ಪರ್ಧಾರಂಗ'ದ ಸಂಚಾಲಕರ ಇತ್ಯರ್ಥವೇ ಕೊನೆಯ ಇತ್ಯರ್ಥವಾಗಿರುವುದು

ಸಂಚಾಲಕ, "ಸ್ಪರ್ಧಾರಂಗ",

'ಸ್ವದೇಶಾಭಿಮಾನಿ' ಕಾರ್ಯಾಲಯ, ಮಂಗಳೂರು

ಸರಕಾರದಲ್ಲಿ ರಿಜಿಸ್ಟರ ಮಾಡಲ್ಪಟ್ಟ ಪ್ರಸಿದ್ಧವಾದ

ರೋಗದ ನಾಮಗಳು—ಕ್ಷಯ ರೋಗ, ಬಾಣಂತಿರೋಗ, ಹಡೆದ ನಂಜು, ದಮ್ಮು, ಅತಗ್ಗೆ ಕಾಲರಾ, (ಮಾರಿರಾ,) ಪ್ಲೇಗು, ಇನ್ ಫ್ಲುಯಂಜಾ ಜ್ವರ, ಅನೇಕ ಪ್ರಕಾರದ ಜ್ವರ, ಗುಲ್ಮರೋಗ, ಮೂಲ ರೋಗ, ಗಂಡುಮಾಲೆ, ನಾರಹುಣ್ಣು, ಶಸ್ತ್ರಘಾಯ, ಶಿವಶೂಲಿ, ಮೂಗಿ ನೊಳಗಿನ ಪಿನಸಿ ಮೊದಲಾದುವುಗಳು, ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ, ಹೊಟ್ಟೆ ಶೂಲೆ, ಸಣ್ಣ ಕೂಸುಗಳಿಗೆ ಆದ ರೋಗಗಳ, ಅಂವಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋಣ, ಕೋಣಗೆಮ್ಮು, ಮೈ ಹೊರಟೀಳೋಣ, ಮತ್ತು ಡಾಕ್ಟರರಿಗೂ, ವೈದ್ಯರಿಗೂ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯಬಿಂದುವಿನಿಂದ ಖಾತ್ರಿಯಾಗಿ ಗುಣಬರುವುದು, ಅನೇಕ ರೋಗಗಳಿಗೆ ಒಂದೇ ಔಷಧವಂದರೆ ಜನರಿಗೆ ಆಶ್ಚರ್ಯ ಉಂಟಾಗಬಹುದು, ಅಂಥವರು ಒಂದು ಸಾರಿ ಕಂಡು ಮನಗಾಣಬೇಕು ಸ್ಥಾಪನಾ ಅಂದಿನಿಂದ ಇಲ್ಲಿಯ ವರೆಗೆ ಮೂರು ನಾಲ್ಕು ಲಕ್ಷ ಬಾಟ್ಲಿಗಳು ಖರ್ಚಾಗಿರುತ್ತವೆ ಇದರ ಬಗ್ಗೆ ನಮಗೆ ಬಹಳ ಶಿಫಾರಸು ಮಾಡಬೇಕಾಗಿಲ್ಲ ಇದೀ ಕರ್ನಾಟಕದಲ್ಲೆಲ್ಲಾ ಹೋಗುತ್ತವೆ

ಸ್ಥಾಪನಾ 1909

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕೆಶಫಾ ಅಥವಾ ಆರೋಗ್ಯಬಿಂದು.

ಪ್ರವಾಸಮಿತ್ರ ಮೂರ್ತಿಮಂತವೈದ್ಯ

೧ ತೊಲೆ ಬಾಟ್ಲಿ ಒಂದಕ್ಕೆ ರೂ. ೨ ನಮೂನೆ ಉದ್ದೇಶಿ ೫ ಅ ತೊಲದ ಬಾಟ್ಲಿ ಒಂದಕ್ಕೆ ೮ ಅ. ಚಿಕ್ಕ ಬಾಟ್ಲಿ ಒಂದೇ ಸರಿ ಒಂದು ಡಜನ್ ತರಿಸಿಕೊಳ್ಳುವರಿಗೆ ಐದು ಬಾಟ್ಲಿ ಕಮಿಶನ್ ಕೊಡುವೆವು ಮೊದಲಿಗೆ ಡಜನಿಗೆ ನಾಲ್ಕು ಬಾಟ್ಲಿ ಕಮಿಶನ್ ಇತ್ತು ಟಪ್ಪಾಲ ಖರ್ಚು ಹೆಚ್ಚು ಆದ ಕಾರಣ ಈ ಪ್ರಕಾರ ವ್ಯವಸ್ಥೆ ಮಾಡಿದೆ. ಟಪ್ಪಾಲ ಖರ್ಚು ೧೦ ಆಣೆ ೧ ತೊಲೆ ಬಾಟ್ಲಿ ಒಂದೇ ಸಲ ಮೂರು ತರಿಸಿಕೊಂಡರೆ ಒಂದು ದೊಡ್ಡ ಬಾಟ್ಲಿ ಮತ್ತು ಒಂದು ಚಿಕ್ಕ ಬಾಟ್ಲಿ ಫ್ರೀ ಆಗಿ ಸಿಗುವುದು ಟಪ್ಪಾಲ ಖರ್ಚು ೧೦ ಆಣೆ ಬೀಳುವುದು ಡಜನಿನ ಒಳಗೆ ಚಿಕ್ಕ ಬಾಟ್ಲಿಗಳನ್ನು ತರಿಸಿದರೆ ಕಮಿಶನ್ ಸಿಗಲಿಕ್ಕಿಲ್ಲ. ಸಣ್ಣ ಬಾಟ್ಲಿ ಒಂದೇ ಬೇಕಾದರೆ ಕಳಿಸಲಾಗದು ಟಪ್ಪಾಲ ಖರ್ಚು ೮ ಆಣೆ ಬರುವುದು ಕನಿಷ್ಟ ಪಕ್ಷಕ್ಕೆ ಎರಡು ರೂಪಾಯಿಯ ಔಷಧ ತರಿಸಿಕೊಂಡರೆ ಕಳಿಸುತ್ತೇವೆ ಟಿ ಖರ್ಚು ೮ ಆಣೆ ಬೀಳುವುದು

ತಕ್ಕೊಳ್ಳುವ ಪ್ರಮಾಣ—ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಛಾಪಿಸಿದೆವು ಬಾ ಯ. ಕೂಡ ಕಳಿಸುವೆವು ಔಷಧವು ಪೊಟ್ಟಿಯಾಗಿ ತೋರಿದರೆ ಉಳಿದ ಬಾಟ್ಲಿ ಪರತ ತೆಗೆದುಕೊಂಡು ಹಣ ತಿರುಗಿ ಕೊಡುವೆವು ಬೇಡುವವರು ತಮ್ಮ ವಿಳಾಸ ಕನ್ನಡ, ಮರಾಠಿ, ಇಂಗ್ಲೀಷುಗಳಲ್ಲಿ ಸ್ಪಷ್ಟ ಬರೆಯಬೇಕು ತಮ್ಮ ಹೆಸರು ತಂದೆಯ ಹೆಸರು, ಅಡ್ಡ ಹೆಸರು, ಇರುವ ಗ್ರಾಮ, ಪೋಸ್ಟಾಫೀಸು ತಾಲೂಕು, ಜಿಲ್ಲಾ ಸ್ಟೇಟ ಎಲ್ಲಾ ಖುಲಾಸ ಬರೆಯಬೇಕು

ನಮ್ಮ ವಿಳಾಸ – ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕೆಶಫಾ ಹೆಡ್ ಆಫೀಸು, ಪೋ ಶಹಾಪೂರ [ಬೆಳಗಾಂವಿ]

New Era Technical School.

Near Market Square, Udipi.

Commercial classes-approved by the Madras Government-New session opens in June

ನ್ಯೂ ಈರಾ ಟೆಕ್ನಿಕಲ್ ಸ್ಕೂಲ್

ಸಂತೆಕಟ್ಟೆ, ಉಡುಪಿ

(ಮದ್ರಾಸು ಸರಕಾರದಿಂದ ಅಂಗೀಕರಿಸಲ್ಪಟ್ಟಿದೆ)

ಇಲ್ಲಿ ಟೈಪ್‍ರೈಟಿಂಗ್ ಮೊದಲಾದ ಕಮರ್ಶಿಯಲ್ ಪಾಠಗಳು ಕಲಿಸಲ್ಪಡುತ್ತವೆ.

Join our 'Special Commercial Course' and insure against unemployment. Details may be had on application to the Manager

Jubilee Textile Industrials,

MERCARA HILL, MANGALORE.

We manufacture all up to date Sarees, Dhothis, Bed Sheets, Bath & face Towels, table covers, Coatings & Shirtings etc, in guaranteed colours Silk Sarees & Coatings a Speciality Work is conducted under the supervision of Textile experts. We undertake special orders to suit individual tastes

Please inspect our goods at:

Raghavendra Ranga Pai, Car Street, Mangalore.

We deal in grey & Coloured Yarns Dyes Chemicals & Handloom accessories.

M. Venkatesha Ranga Pai,

Proprietor

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್
ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೬೦ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಫಾಕುರದ್ವಾರ, ಮುಂಬಯಿ ೪

ಸ್ಟೋಕಿಸ್ಟ್ – ಡಾ ಕಂಪನಿ ಮಂಗಳೂರು

[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿ]

ನಿಮ್ಮ ಮಿತ್ರರನ್ನು

ಸ್ವದೇಶಾಭಿಮಾನಿಯ

ಚಂದಾದಾರರನ್ನಾಗಿ ಮಾಡಿರಿ

1876ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಗಳು.

ಧಾತುಪುಷ್ಟಿ ಲೇಹ

(ಸುವರ್ಣ ಸಾಲಾಮಿಶ್ರಿ, ಕಲ್ಮದ, ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ, ಇವುಗಳನ್ನೆಲ್ಲ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ದೇಹಪುಷ್ಟಿಯನ್ನೂ, ಸಂಭೋಗ ಶಕ್ತಿಯನ್ನೂ, ಜ್ಞಾಪಕ ಶಕ್ತಿಯನ್ನೂ ವೃದ್ಧಿಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ಕಾಂತಿಯನ್ನೂ ಉಂಟುಮಾಡುವುದು

ಬಾಟ್ಲಿ ಒಂದಕ್ಕೆ ರೂ. 2—8—0. ಮೂರು ಬಾಟ್ಲಿಗಳಿಗೆ ರೂ. 7—0—0.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರಿಗೆ ಅಮೋಘವಾದ ಶಕ್ತಿವರ್ಧಕ ರಸಾಯನ ಎರಡು ತಿಂಗಳ ತನಕ ಸೇವಿಸಿದರೆ ಬೇರೆ ಔಷಧಿ ಆಗತ್ಯವಿಲ್ಲ

ಬಾಟ್ಲಿ 1ಕ್ಕೆ ರೂ 1—8—0.

ಮಲೇರಿಯಾ ನಿವಾರಿಣಿ

ಚಳಿಜ್ವರ, ಮಲೆಜ್ವರ, ಇನ್‍ಫ್ಲುಯೆಂಜಾ, ನಿಮೋನಿಯಾ ಜ್ವರ ಗಿಡ್ಡ ಇವುಗಳ ಮೇಲೆ ದಿವ್ಯ ಔಷಧ.

ಬಾಟ್ಲಿ 1ಕ್ಕೆ ರೂ. 1 -8- 0.

ಚವನ ಪ್ರಾಶ್ಯ

ಇದು ಅತ್ಯುತ್ತಮ ಶಕ್ತಿವರ್ಧಕ ರಸಾಯನ. ಸರ್ವ ತರದ ನರಗಳ ದೌರ್ಬಲ್ಯಕ್ಕೂ ಧಾತು ಕ್ಷೀಣತೆಗೂ, ಕೆಮ್ಮು, ಕಫ, ಉಬ್ಬಸ, ಕ್ಷಯ, ಎದೆನೋವು ಇವುಗಳಿಗೆ ದಿವ್ಯೌಷಧ. ಪೌಂಡು 1ಕ್ಕೆ ರೂ. 2-8-0. ½ಕ್ಕೆ ರೂ. 1-5-0.

ಮೇಹಕುಠಾರ

ಮೂತ್ರ ಮಾಡುವಾಗ ಉರಿ, ಕೀವು ಬರುವುದು. ಮೂತ್ರ ತಡೆಯಲಿಕ್ಕೆ ಸಾಧ್ಯವಿಲ್ಲದಿರುವಿಕೆ, ಸೊಂಟ ನೋವು ಮತ್ತು 20 ನಮೂನೆಯ ಮೇಹ ರೋಗಗಳಿಗೆ ದಿವ್ಯ ಔಷಧ.

ಡಬ್ಬಿ 1ಕ್ಕೆ ರೂ. 2—8—0.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ ೨ ಮಂಗಳೂರು

ನಮ್ಮ ಔಷಧಿ ಸಿಕ್ಕುವ ಸ್ಥಳ:

1. ಡಾಕ್ಟರ್ ಬಿ. ಎಚ್. ಪದ್ಮನಾಭ ಶೈ, ಚಿಕ್ಕಮಂಗಳೂರು.
2. ಶ್ರೀರಾಮ ಸ್ಟೇಶನರಿ ಹೌಸ್, ಶ್ರೀರಾಮಪೇಟೆ, ಕಾಸರಗೋಡು.
3. ಡಾಕ್ಟರ್ ಶ್ರೀನಿವಾಸ ಶೈ, ಪುತ್ತೂರು.
4. ವಿ. ಬಿ. ಕಾಮತ್ ಮಡಿಕೇರಿ.
5. ಮೆಸರ್ಸ್ ಕಾಮತ್ ಎಂಡ್ ಕೋ., ಗಿರಿಗಾಂ ಮುಂಬಾಯಿ.
6. ಕೆ. ಶ್ರೀನಿವಾಸ ಹೆಗ್ಡೆ ಮರ್ಚೆಂಟ್ ತೀರ್ಥಹಳ್ಳಿ.

ESTD. 1906.

The Canara Banking Corporation Udipi Ltd.

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಉಡುಪಿ, ಲಿಮಿಟೆಡ್.

The First Indigenous & Cosmopolitain Bank of S. K, District.

Capital Authorised, issued & Subscribed Rs.	3,50,000	0 0
Paid up Capital	„ 2,88,320	0 0
Reserves	„ 3,70,694	0 0

16-5-1936

FIXED DEPOSITS UP TO 5%

Head office:—UDIPI, S. K

Branches:—1. Udipi, 2 Coondapoor, 3 Car Street, Mangalore, 4 Shimoga, 5 Madras 6. Bunder Mangalore, 7 Mercara & 8. Virarajendrapet.

THE BOMBAY LIFE ASSURANCE COMPANY, LIMITED.

KOCHIKAR BROTHERS, Madras Branch Secretaries and Chief Agents for Bombay City & Suburbs

ANNOUNCEMENT:— We have the pleasure to inform all our Constituents, Agents and Policy holders that we have taken up a Newly Erected Bungalow "Soumyalayam" in Puthiyara on the Taluq Office Road opposite Puthiyara Post Office and are opening our Calicut Branch Office in the said Building on 11—3—1936. The present Office of Mr. C. Sankaran Nair our Malabar District Agent, situated in Huzur Road, will cease to exist and will merge in our New Branch Office. This has been necessitated by the vast expansion of our business in Malabar and the adjacent districts, as the New Premises are very well situated and more spacious and thus we hope to render better service to our Policyholders. Our patrons and well wishers are requested to pay a visit to the "Soumyalayam at their early convenience. All correspondence and remittances and cheques should be addressed to

Messrs **KOCHIKAR BROTHERS,**
Bombay Life Office, Puthiyara Post (Calicut—Malabar)

We have also registered our telegraphic address as "Kochikar" Calicut for the convenience of our constituents.

ಪ್ರಕಟಣೆ-ಸದರಿ ವಿಮಾ ಕಂಪೆನಿಯು ತನ್ನ ಏಜಂಟರಿಗೂ, ಪೋಲಿಸಿದಾರರಿಗೂ ಈ ಮೂಲಕ ತಿಳಿಯಪಡಿಸುವದೇನೆಂದರೆ—ತಾ 14 3-36ರಿಂದ ಕಲ್ಲಿಕೋಟೆಯಲ್ಲಿರುವ ನಮ್ಮ ಮಲಬಾರ ಏಜೆಂಟರಾದ ಮಿ॥ ಸಿ ಶಂಕರನಾಯರ್ ರವರ ಹಜೂರ ರಸ್ತೆಯ ಬಳಿ ಇರುವ ಆಫೀಸನ್ನು ಪುತಿಯಾರ ಪೋಸ್ಟು ಆಫೀಸಿನ ಎದುರಿನ ಹೊಸತಾಗಿ ಕಟ್ಟಿಸಿದ ದಿವ್ಯವಾದ ಸೌಮ್ಯಾಲಯಮ್ ಎಂಬ ಬಂಗ್ಲೆಯಲ್ಲಿ ತೆರೆಯಲಾಗುವುದು. ಇನ್ನು ಮುಂದೆ ಸಂಬಂಧಪಟ್ಟ ಟಪ್ಪಾಲುಪತ್ರಗಳನ್ನು ಕೆಳಗಿನ ವಿಳಾಸಕ್ಕೆ ಬರೆಯ ತಕ್ಕದ್ದು

ಮೆಸರ್ಸ್ ಕೊಚ್ಚಿಕಾರ್ ಬ್ರದರ್ಸ್,
ಬೊಂಬೈ ಲೈಫ್ ಆಫೀಸ್, ಪುತಿಯಾರಾ ಪೋಸ್ಟ್, (ಕಲ್ಲಿಕೋಟೆ ಮಲಬಾರು)

ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ತಂತಿಯ ವಿಳಾಸವನ್ನು ಕೊಚ್ಚಿಕಾರ್—ಕಲ್ಲಿಕೋಟೆ ಎಂಬುದಾಗಿ ಮಾಡಿದೆ

Regd)

ಅಮೃತಾಂಜನ

ತಲೆನೋವು, ಶಿರೋವೇದನೆ ಉಳುಕು, ಕುತ್ತಿಗೆ ಭುಜ ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ವಾತುಕೊಳ್ಳುವುದು ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ ರಕ್ತ ಉಪದ್ರವ, ತಲೆಹುಣ್ಣು ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ ಮದರಾಸು, ಕಲ್ಕತ್ತಾ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

AMRUTANJAN DEPOTS LTD. BOMBAY MADRAS CALCUTTA

ಬ್ರಿಟಿಷ್ ಕರ್ನಾಟಕದಲ್ಲಿ ಇದೇ ಮೊದಲನೆಯದು!

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮಾಪ್ರಪಂಚದಲ್ಲಿ ಯೋಗ್ಯ ಸ್ಥಾನವನ್ನೂ ಉಚ್ಚ ಗೌರವವನ್ನೂ ಸಂಪಾದಿಸಿರುವ, ಕನ್ನಡಿಗರದೇ ಆದ ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಎಂಬೀ ಸಂಸ್ಥೆಯಲ್ಲಿ ತಪ್ಪದೆ ವಿಮೆಯನ್ನಿಳಿಸಿ ನಾಡಿನ ವಾತ್ಸಲ್ಯ – ಅಭಿಮಾನಗಳನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿರಿ.

ಮೊದಲನೇ 5 ವರ್ಷಗಳ ಮೌಲ್ಯವೀಕ್ಷಣದ ಫಲಿತಾಂಶ ಇದೇ ಈಗ ಪ್ರಕಟವಾಗಿದೆ ಪ್ರತಿಯೊಂದು ಸಾವಿರ ರೂಪಾಯಿಗಳ ವಿಮಾಪತ್ರದ ಮೇಲೆ

ವರ್ಷ ಒಂದರ ರೂಪಾಯಿ 10/-ರ ಬೋನಸ್ ಹಂಚಲಾಗುವುದು.

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ, ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು'

ಅವರಿಗೆ ವಿಪುಲವಾದ ಸೌಕರ್ಯಗಳಿವೆ. ಯಥೋಚಿತವಾದ ಪುರಸ್ಕಾರಗಳಿವೆ. ತಪ್ಪದೆ ವ್ಯವಹಾರ ಬೆಳೆಸಿರಿ.

ಮಾಹಿತಿ ಪತ್ರ, ವಿವರಣೆಯ ಹಸ್ತಕಾದಿಗಳಿಗೆ— ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆದು ಕೇಳಿ.

Edited Printed & Published by ... Kamath at the Sharada Press, Car Street, Mangalore